ನವಯುಗ

ಸಂಪುಟ ೪೪] ಏಪ್ರಿಲ್ ೧, ೬೫ [ಸಂಚಿಕೆ ೩೧



Phone No. 226
ಫೋನ್ ಸಂಖ್ಯೆ: 226

NAVAYUGA

leading nationalist weekly

೨೦ ಪೈಸೆ

ವಾರದ ಕತೆ

ಗೆದ್ದೂ ಸೋತಾಗ...

೧

ಬರೆದವರು
ಶ್ರೀ ಪಿ. ಕೆ. ಶೆಟ್ಟಿ, ಕರೋಪಾಡಿ.

ರಾಜಣ್ಣ ವರ್ಗವಾಗಿ ಬಂದಂದಿನಿಂದ ರಮೆಯ ದಿನಚರಿಯಲ್ಲಿ ಹೆಚ್ಚು ಹೆಚ್ಚಿಗೂ ವಿಶೇಷ ಬದಲಾವಣೆಯಾಗಿದ್ದುದನ್ನು ಕಾಣಬಹುದಿತ್ತು. ಯಾವುದೋ ಒಂದು ವಿಚಾರದಲ್ಲಿ ಆಕೆ ಮುಳುಗಿದ್ದಳು. ಒಮ್ಮೆ ಬಹಳ ಸ್ಫೂರ್ತಿಯಿಂದ ಆಕೆಯ ವದನ ಪ್ರಫುಲ್ಲಿತಗೊಂಡರೆ, ಇನ್ನೊಮ್ಮೆ ಯಾವುದೋ ಭಯವು ಅವಳನ್ನು ಮ್ಲಾನವದನೆಯನ್ನಾಗಿಸುತ್ತಿತ್ತು. ಒಮ್ಮೊಮ್ಮೆ ರೆಜಿಸ್ಟರ್‌ಗಳು ಹಾಗೂ ಫೈಲ್‌ಗಳು ಬುಡದಿಂದ ತುದಿ ತನಕ ತಮ್ಮ ಪುಟಗಳನ್ನು ತಿರುವಿಕೊಳ್ಳುವಂತೆ ವರ್ತಿಸುತ್ತಿದ್ದಳು. ಮಗುದೊಮ್ಮೆ ರಾಜಣ್ಣನ ದಿವ್ಯ ಆಕೃತಿಯನ್ನು ತದೇಕ ದೃಷ್ಟಿಯಿಂದ ಈಕ್ಷಿಸಿ ಮುದಗೊಳ್ಳುವಳು. ಇಂತಹ ವೇಳೆಗಳಲ್ಲಿ ಸಮಯ ಸಾಗಿದುದು ಆಕೆಗೆ ತಿಳಿಯುತ್ತಲೇ ಇರಲಿಲ್ಲ.

ದಿನಗಳುರುಳಿದಂತೆಲ್ಲ ಅವರೊಳಗೆ ಮಾತುಕತೆಗಳು ಬೆಳೆದು ಸಲುಗೆ ಬೆಳೆಯಿತು. ಒಂದು ಶನಿವಾರ ಉಳಿದವರೆಲ್ಲರೂ ತಮ್ಮ ತಮ್ಮ ಕೆಲಸಗಳನ್ನು ಮುಗಿಸಿ ಹೊರಟು ಹೋಗಿದ್ದರು. ರಮೆಯೂ ರಾಜಣ್ಣನೂ ತಮ್ಮ ರೆಕಾರ್ಡುಗಳು ಬಹಳ ಹಿಂದೆ ಬಿದ್ದು ವರಿಷ್ಠರ ಒತ್ತಾಯ ಬಿದ್ದುದರಿಂದ, ಅಂದು ಅವುಗಳನ್ನು ಒಂದು ಸಂಪೂರ್ಣದ ಘಟ್ಟಕ್ಕೆ ಮುಟ್ಟಿಸಲು ನಿಶ್ಚಿತ ಸಮಯಕ್ಕಿಂತಲೂ ಹೆಚ್ಚು ಸಮಯ ಆಫೀಸಿನಲ್ಲಿ ಉಳಿದಿದ್ದರು.

ಬೇರೆ ಯಾರೂ ಅಲ್ಲಿರಲಿಲ್ಲ.

ರಾಜಣ್ಣನ ಕುರ್ಚಿಯ ಬಳಿಗೆ ಸರಿದಿದ್ದ ರಮಾ ತನ್ನ ದೇಹದ ಅರ್ಧ ಭಾರವನ್ನು ಕುರ್ಚಿಯ ಕೈಗಳಿಗೂ ಇನ್ನೊಂದು ಕೈಯನ್ನು ರಾಜಣ್ಣನ ಹೆಗಲಿಗೂ ಕೊಟ್ಟು, ಯೋಚಿಸುವ ಭಾವದಿಂದ ಆತನೊಡನೆ ಮಾತಾಡತೊಡಗಿದ್ದಳು. ರಾಜಣ್ಣ ಉಭಯ ಸಂಕಟದಲ್ಲಿ ಸಿಕ್ಕಿದವನಂತೆ, ಏನು ಮಾಡಲೂ ತೋಚದ ಸಂಕೋಚ ಪಡುತ್ತಾ—"ನೋಡಿ ರಮಾ, ನೀವು ಎಲ್ಲ ಬಗೆಯಲ್ಲೂ ನನಗಿಂತ ಹಿರಿಯರು. ನೀವು ವಿವಾಹಿತೆಯಲ್ಲದೆ ಒಂದು ಮಗುವಿನ ತಾಯಿ ಕೂಡಾ. ನಾನು ಅವೆಲ್ಲವುಗಳಿಗೂ ಹೊರಗಿನವ. ನಮ್ಮೊಳಗೆ ಈ ತೆರನ ಚೆಲ್ಲಾಟಕ್ಕೆ ಅಸ್ಪದವಿರಬಾರದು".

ಎಂದು ನುಡಿಯುತ್ತಿದ್ದಂತೆ ರಮಾ ಒಂದೇ ಸವನೆ ಆತನ ಕೈಗಳನ್ನು ಬಲವಾಗಿ ತನ್ನ ಬಳಿಗೆ ಎಳೆಯುವಾಗ ರಾಜಣ್ಣ ಕುರ್ಚಿಯಿಂದೆದ್ದು. ಹಿಂದೆ ಸರಿದು ಕೈ ಕೊಸರಿ ತನ್ನ ಮಾತು ಮುಂದುವರಿಸಿದ: "ಇದು ಪಾಪ! ನಿಮ್ಮ ಮನಸ್ಸಿನಲ್ಲಿ ಹುದುಗಿ ಹೊಗೆಯಾಡುತ್ತಿರುವ ಕಾರ್ಯ ಮಹಾ ಪಾಪ! ವಿವಾಹಿತೆಯಾಗಿ ಸುಪುತ್ರವತಿಯಾಗಿರುವ ನಿಮ್ಮನ್ನು ಬಹುವಾಗಿ ಪ್ರೀತಿಸುವ ನಿಮ್ಮ ಪತಿಗೆ ನಿಮ್ಮ ಈ ಹೇಯ ಕೃತ್ಯದ ಅರಿವಾದರೆ ನಿಮ್ಮ ಮುಂದಿನ ದಾರಿ ನೆಟ್ಟಗುಳಿದೀತೇ? ಹೆಚ್ಚೇಕೆ ನನಗೂ ಇದರಿಂದ ಕೇಡೇ ಸಂಭವಿಸಬಹುದು. ನಾಲ್ಕು ಜನರ ಮುಂದೆ ನಾವೆಂತು ಮುಖವೆತ್ತಲು ಸಾಧ್ಯ? ಆಲೋಚಿಸದೆ ದುಡುಕಬೇಡಿ."

"ನನ್ನ ರಾಜ್, ನೀವು ನನ್ನ ಪ್ರಾಣ ರಾಜ್! ಇದೊಂದು ಬಾರಿ ಇಂತಹ ಮಾತು ಆಡಬೇಡಿ. ನನ್ನ ಹೃದಯಕ್ಕದರಿಂದ ಅತೀವ ವೇದನೆಯಾಗುತ್ತಿದೆ; ದಮ್ಮಯ್ಯ! ಸಹೋದ್ಯೋಗಿಯಾಗಿ ಕೆಲಸ ಮಾಡಲು ತೊಡಗಿದ ಕ್ಷಣದಿಂದ ನಿಮ್ಮಲ್ಲಿ ನನಗುದಿಸಿದ ಅನುರಾಗವನ್ನು ನಾನು ಹೇಗೆ ಹೊರಗೆಡಹಲಿ? ದಿನದ ಪ್ರತಿ ಕ್ಷಣವೂ ನಿಮ್ಮ ನೆನಪು ನನ್ನನ್ನು ಕಾಡಿದರೆ ನಾನು ಹೇಗೆ ಕೆಲಸ ಮಾಡಲಿ; ಹೇಗೆ ದಿನ ಕಳೆಯಲಿ, ಉಣ್ಣುವಾಗಲೂ ತಿನ್ನುವಾಗಲೂ ನೀವು ಬಳಿಯಿರುತ್ತಿದ್ದರೆ... ಎಂದು ನನ್ನ ಆತ್ಮ ಇಚ್ಛಿಸುತ್ತಿರುತ್ತದೆ. ನೀವು ನನ್ನೆದುರು ಕುಳಿತಿದ್ದರೆ ಎಲ್ಲಿಲ್ಲದ ಸ್ಫೂರ್ತಿ ನನ್ನ ಧಮನಿಗಳಲ್ಲಿ ಹರಿಯುತ್ತಿರುವಂತೆ ಭಾಸವಾಗುತ್ತಿದೆ. ಏಕೆ ಹೀಗೆ? ಎಂದು ನಿಮಗೆ ಅದರ ಅರ್ಥವಾಗದು ರಾಜ್. ಯಾವುದೋ ಒಂದು ರಹಸ್ಯವನ್ನು ಅರಿಯ ಬಯಸುವ ನಿಮ್ಮ ಕುಡಿ ನೋಟದ ಆಕರ್ಷಣೆ ನನ್ನನ್ನು ನಿರ್ವಚನಳನ್ನಾಗಿಸುತ್ತದೆ."

"ರಮಾ, ನಿಮ್ಮ ಮಾತುಗಳೆಲ್ಲಾ ನನ್ನಲ್ಲಾಡುವ ಮಾತುಗಳಲ್ಲ. ಸಂಸಾರದ ತೊಳಲಾಟಕ್ಕೆ ಇನ್ನೂ ಇಳಿಯದ ನನ್ನನ್ನು ತಪ್ಪು ದಾರಿ ತುಳಿಸುವುದು ನಿಮಗೆ ಶ್ರೇಯಸ್ಸನ್ನುಂಟು ಮಾಡುವಂತಹದಲ್ಲ. ಒಂದು ವೇಳೆ ನಾನು ಎಡವಿದರೆ ನೀವೇ ಸತ್ಪಥವನ್ನು ತೋರಿಸಬೇಕಿತ್ತು. ಆದರೆ ಇಂದು ನೀವು...." ಎಂದು ಹೇಳುವಷ್ಟರಲ್ಲಿ ಆಕೆ, "ರಾಜ್, ನೀವು ಏನೆಂದರೂ ನಾನು ನಿಮ್ಮನ್ನು ಬಿಡಲಾರೆ" ಎಂದು ಮುಂದುವರಿದು ಆತನನ್ನು ತನ್ನ ತೋಳೆಡೆಗೆ ಸೇರಿಸಿಯೇ ಬಿಟ್ಟಳು. ರಾಜಣ್ಣನ ದೇಹದಲ್ಲಿ ವಿದ್ಯುತ್ ಸಂಚರಿಸಿತು. ಸಂಯಮವೆಂಬ ಮುಗಿಲು ಕರಗಿ ನೀರಾಯಿತು. ಉದ್ವೇಗದ ತೊರೆ ತುಂಬಿ ಹರಿಯಿತು. ಆತನ ತೋಳುಗಳೂ ಯಾರ ಆಜ್ಞೆಯನ್ನೂ ಕಾಯದೆ ಆಕೆಯನ್ನು ಬಳಸಿಕೊಂಡವು. ಅರಸುಗಿಳಿ ಮಾಗಿದ ತೊಂಡೆಯನ್ನು ಸವಿದು ಮನ ದಣಿಯಿತು.

ಅವರು ಪರಸ್ಪರರ ತೋಳ್ಬಂಧನದಲ್ಲಿ ಅದೆಷ್ಟು ಸಮಯ ಬಂಧಿಸಲ್ಪಟ್ಟರೋ ಅವರಿಗೇ ಅರಿವಿರಲಿಲ್ಲ.

ಉರಿಬಿಸಿಲು ತಣಿಯಿತೆನ್ನುವ ಸೂಚನೆಯನ್ನೀಯಲೋ ಎಂಬಂತೆ ಹೊರಾಂಗಣದ ಮಾಮರದಿಂದ ಉದುರಿ ಬಿದ್ದಿದ್ದ ದರಗೆಲೆಗಳನ್ನು ಹಾರಿಸಿ ಸದ್ದೆಸಗುತ್ತಾ ಬೀಸಿ ಬಂದ ಮಂದಾನಿಲ ದಢಾರೆಂದು ಆಫೀಸಿನ ಕಿಟಕಿಯ ಬಾಗಿಲನ್ನು ಮುಚ್ಚಿದಾಗಲೇ ಅವರಿಗೆ ಎಚ್ಚರಾದುದು!

"ಯಾರಾದರೂ ಬಂದರೇ?" ಎಂದು ಭಯಭ್ರಾಂತನಾಗಿ ರಾಜಣ್ಣ ಕೈಕೊಸರಿ ದೂರ ಸಂದು ತನ್ನ ಮೇಜಿನ ಬಳಿ ಬಂದು ಕುರ್ಚಿಯಲ್ಲಿ ಕುಳಿತು ತನ್ನ ತಲೆಯನ್ನು ಮೇಜಿಗಾನಿಸಿ, ನೆಲವನ್ನೇ ದಿಟ್ಟಿಸುತ್ತಿದ್ದ.

ಉಗುಳುವ ನೆಪಮಾಡಿ ಹೊರ ಜಗಲಿಗೆ ಬಂದು, ಸುಮ್ಮನೆ ಉಗುಳುವಂತೆ ನಟಿಸಿ, ಹೊರಗೆ ಯಾರೂ ಇರದುದನ್ನು ನಿಶ್ಚಯಿಸಿ ಒಳ ನಡೆದಳು ರಮಾ.

ರಾಜಣ್ಣನ ಹಣೆಯಿನ್ನೂ ಮೇಜಿನ ಅಂಚಿನಿಂದ ಮೇಲೆ ಎತ್ತಲ್ಪಟ್ಟಿರಲಿಲ್ಲ. ಹೊಸ ಅನುಭವ—ಅವನಿಗೆ ನಾಚಿಕೆಯನ್ನು ಉಂಟು ಮಾಡಿತ್ತು.

'ನಾಚಿಕೆಯಾಯಿತೇನು ನನ್ನ ರಾಜ್?"

"..... ...."

"ಏನು ನನ್ನಲ್ಲಿ ಸಿಟ್ಟೇ ನನ್ನ ಮನೋಹರನಿಗೆ?"

ಆಗಲೂ ನಿರುತ್ತರ...

"ರಾಯರ ಮೌನವ್ರತದಲ್ಲಿದ್ದಾರೋ?"

ಮೌನವೇ ಅದಕ್ಕುತ್ತರ.

'ರಾಜ್, ನೋಡಿ ಅದು ಯಾರು ಬಂದಿರುವುದು; ನೋಡಿ' ಎಂದಾಗ ಆತ ಒಮ್ಮೆ ದಾರಿಯೆಡೆಗೆ ನೋಡಿದರೆ ಯಾರೂ ಬಂದಿರಲಿಲ್ಲ. ಆತನ ಮುಖ ಕೆಂಪಾಗಿತ್ತು—ನಾಚಿಕೆಯಿಂದ.

"ಇಷ್ಟಪ್ಪಾ, ಇನ್ನು ಆ ನಾಚಿಕೆಯನ್ನೆಲ್ಲಾ ಮನೆಯಲ್ಲಿ ತೆಗೆದಿರಿಸಿ ಬರಬೇಕು. ಇಲ್ಲವಾದರೆ ನಾನೇ ಅದನ್ನು ಓಡಿಸುವೆನೆನ್ನುತ್ತಾ ಆಕೆ ಅವನಿಗೆ ಕಚಕುಳಿಯಿಡತೊಡಗಿದಳು.

ಈಗ ರಾಜಣ್ಣನ ಪ್ರತಿಭಟನೆ ಮಾಯವಾಗಿತ್ತು.

ದಿನಗಳುರುಳಿದುವು ರಾಜಣ್ಣ—ರಮೆಯರ ಪ್ರೇಮ ವ್ಯವಹಾರ ಈಗ ಬಹಳ ಮುಂದುವರಿದಿತ್ತು. ಆಫೀಸಿನ ನಿಕಟವರ್ತಿಗಳೂ ಇವರ ಚೆಲ್ಲಾಟಗಳ ಸಂದೇಹವನ್ನು ಗುರುತಿಸಿದ್ದರು.

o o o o

ರಮೇಶ ದಸರಾಕ್ಕೆ ಊರಿಗೆ ಬಂದಿದ್ದ. ಅವನ ದುಡಿಮೆಯ ಊರು ಬಹುದೂರ.

ರಾಜಣ್ಣ-ರಮೆಯರ ಆಫೀಸಿನ ಬಳಿಯಲ್ಲಿಯೇ ಕಟ್ಲೆರಿ ವ್ಯಾಪಾರಿ ಚಂದು. ಪ್ರಾರಂಭದಲ್ಲಿ ಬೀಡಾ-ಬೀಡಿ ಮಾರುತ್ತಿದ್ದು, ಅದರಲ್ಲೇ ತುಸು ಲಾಭ ಸಂಪಾದಿಸಿ, ಕೈಯಲ್ಲಿ ನಾಲ್ಕು ಕಾಸು ಓಡಾಡ ತೊಡಗಿದ ಬಳಿಕ ತನ್ನ ವ್ಯಾಪಾರವನ್ನು ತುಸು ವಿಸ್ತರಿಸಿದ್ದ ಚಿಕ್ಕಂದಿನಿಂದಲೇ ಚಂದು ಶೃಂಗಾರಿ. ಈಗ ವಿವಾಹವಾಗಿ ಮೂರು-ನಾಲ್ಕು ಮಕ್ಕಳ ಅಪ್ಪ ಆತನಿದ್ದರೂ, ಮೊದಲಿನ ಶೃಂಗಾರ ಪ್ರಿಯತೆ ಆತನನ್ನಿಂದೂ ಬಿಟ್ಟಿರಲಿಲ್ಲ. ಒಬ್ಬಾಕೆ ತರುಣಿ ದಾರಿಯಲ್ಲಿ ಸಾಗುತ್ತಿದ್ದರೆ ಅವಳನ್ನು ಅಡಿಯಿಂದ ಮುಡಿತನಕ ನೋಡಿ, ತನ್ನ ಗಿರಾಕಿಗಳಿಗೆ ಆಕೆಯ ಸೌಂದರ್ಯವನ್ನು ವರ್ಣಿಸದಿದ್ದರೆ ಆತನಿಗೆ ಕ್ಷೇಮವಿಲ್ಲ. ಅದರಿಂದಲೇ ಅವನಿಗೆ ಮಹದಾನಂದ! ಒಬ್ಬಾತ ತನ್ನ ಸಹೋದರಿಯನ್ನು ಆಕೆಯ ಗಂಡನ ಮನೆಗೆ ಕರೆದೊಯ್ಯುತ್ತಿದ್ದರೆ, ಚಂದುವಿನ ಯೋಜನೆಯೇ ಬೇರೆ—ಆಕೆ ಅವಳ ತಂದೆ ತಾಯಿಗಳಿಗೆ ಕೈಗೊಟ್ಟು ಇವನೊಂದಿಗೆ ಪರಾರಿಯಾಗುವವಳೆಂದು. ಪಾಪ! ಅವರ ಸಂಬಂಧದ ವಿಚಾರ ಅವನಿಗೆ ತಿಳಿಯದು. ಅವನ ಕೋತಿ ಬುದ್ಧಿಗೆ ಹೊಳೆಯುವುದು ಒಂದೇ ವಿಚಾರ—ಹೆಣ್ಣು ಮತ್ತು ಗಂಡುಗಳ ನಿರ್ಮಾಣ ಕೇವಲ ಲೈಂಗಿಕ ವಿಚಾರಕ್ಕೆಂದು.

ರಾಜಣ್ಣ ರಮೆಯರ ವ್ಯವಹಾರವೂ ಚಂದುವಿನ ಗರುಡ ದೃಷ್ಟಿಗೆ ಬೀಳದಿರಲಿಲ್ಲ. ರೂಪಸಿಯಾದ ರಮೆಯನ್ನು ಆತ ಅದೆಷ್ಟೋ ಬಾರಿ ಆಸೆಗಣ್ಣಿನಿಂದ ನೋಡಿ

(ಹದಿನೈದನೇ ಪುಟ ನೋಡಿರಿ)

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ
ಹಗಲೆನ್ನದೆ ಇರುಳೆನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು
ಹನ್ನೆರಡು ಕಥೆಗಳ ಸಂಕಲನ
ಬರೆದವರು
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ, ರೂ. 1-50
ರೂ. 1-75 ಮನಿಯೊರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.
ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

Phone No. 226

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ: ದ. ಕನ್ನಡ.

ಸಂಚಾಲಕ—ಸಂಪಾದಕರು:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರ ಬೆಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ನೀಗ್ರೋಗಳಿಗೆ ಸಮಾನ ನಾಗರಿಕಾಧಿಕಾರವನ್ನು ದೊರಕಿಸಲು ಹೆಣಗುತ್ತಿರುವ ಅಮೆರಿಕನ್ ಅಧ್ಯಕ್ಷ

ಲಿಂಡನ್ ಜಾನ್ಸನ್

ಸಂಪುಟ ೪೪ | ಉಡುಪಿ | Vol. 44

ಸಂಚಿಕೆ ೩೧ | ೧—೪—೧೯೬೫ | No. 31

ವಚನ ಸುಧೆ

ವೇದೋ ಽಸಿ| ಯೇನ ತ್ವಂ ದೇವ ವೇದೋ ದೇವೇಭ್ಯೋ ವೇದೋಭವಃ||

(—ಯಜುರ್ವೇದ ೨—೨೨)

O ದಿವ್ಯವಾದ ವೇದವೇ, ನೀನು ಜ್ಞಾನಸ್ವರೂಪವು, ಇದರಿಂದ ನೀನು ವಿದ್ವಾಂಸರಿಗೆ ಜ್ಞಾನ ನೀಡು.

OO ಮಗುವು ಜ್ಞಾನರೂಪವು. ಅದು ಎಲ್ಲ ಜ್ಞಾನವನ್ನು ಪಡೆಯುತ್ತದೆ ಜ್ಞಾನಿ ಗುರುಗಳೊಡನೆ ಜ್ಞಾನಗಳಿಸಿ ದೊಡ್ಡ ಜ್ಞಾನಿಯೂ ಶ್ರೇಷ್ಠವೂ ಆಗುವುದು. ವೇದವೇ ಅದರ ಕೈದೀವಿಗೆ; ಈ ವೇದದಿಂದಲೇ ಎಲ್ಲರೂ ಜ್ಞಾನಗಳಿಸಿದ್ದಾರೆ.

ಸಿಂಹಳದ ಹೊಸ ಸರಕಾರ

ಸಿಂಹಳದಲ್ಲಿ ಕಳೆದ ವರ್ಷ ಡಿಸೆಂಬರ ತಿಂಗಳಲ್ಲಿ ಶ್ರೀಮತಿ ಸಿರಿಮಾವೊ ಭಂಡಾರನಾಯಿಕೆಯವರ ಸರಕಾರವು ಪತಿತವಾದ ಬಳಿಕ ಮೊನ್ನೆ ನಡೆದ ಸಾರ್ವತ್ರಿಕ ಚುನಾವಣೆಯ ಪರಿಣಾಮವು ಕುತೂಹಲಕಾರಕವಾಗಿಯೇ ಇತ್ತು. ಶ್ರೀಮತಿಯವರ ಲಂಕಾ ಫ್ರೀಡಂ ಪಕ್ಷವು ನಿಚ್ಚಳವಾಗಿ ಸೋಲನ್ನೊಪ್ಪಿದುದಲ್ಲದೆ ಇತರ ಪಕ್ಷಗಳ ಸಹಾಯ—ಸಹಕಾರಗಳಿಂದಲೂ ಅವರು ಸರಕಾರ ರಚಿಸುವ ಪ್ರಯತ್ನ ಮಾಡಿಯೂ ಅಸಫಲರಾದರು. ಎಸೆಂಬ್ಲಿಯ ೧೫೧ ಸ್ಥಾನಗಳಲ್ಲಿ ೬೬ನ್ನು ಮಾತ್ರ ಗಳಿಸಿದ್ದರೂ ಇತರರ ಸಹಕಾರದಿಂದ ಸುಮಾರು ೧೦೦ ಸದಸ್ಯರ ಬೆಂಬಲವನ್ನು ಪಡೆದು ಯುನೈಟೆಡ್ ನೇಶನಲ್ ಪಕ್ಷದ ಡಡ್ಲೆ ಸೇನಾನಾಯಕೆಯವರು ಸರಕಾರ ಸ್ಥಾಪಿಸಲು ಸಮರ್ಥರಾದರು. ಉಳಿದ ಪಕ್ಷಗಳ ಬೆಂಬಲವೇ ಬೆಂಗೋಲಾಗಿ ರಚಿತವಾದ ಸಿಂಹಳದ ಈ ಹೊಸ ಸರಕಾರವು ಹೇಗೆ ಕಾರ್ಯನಿರ್ವಹಿಸಬಲ್ಲುದು, ಎಂದು ಕಾದು ನೋಡಬೇಕಾಗಿದೆ.

ಶ್ರೀಮತಿ ಭಂಡಾರನಾಯಿಕೆಯವರು ಸೋತುಹೋಗಲು ಕಾರಣವೇನು? ಚುನಾವಣೆಯಲ್ಲಿ ಅವರ ಪಕ್ಷವು ಸೋತು ಹೋದರೂ ತಮಗೆ ಅವರ ಸರಕಾರವೇ ಬೇಕು ಎನ್ನುವ ಘೋಷಣೆ ಮಾಡುತ್ತ ಪ್ರದರ್ಶನ ಮಾಡಿದ ನಾಗರಿಕರೂ ಅಲ್ಲಿದ್ದರಾದರೂ ಅವರ ಇಚ್ಛೆಯನ್ನು ಈಡೇರಿಸುವುದು ಸಿರಿಮಾವೊರವರಿಗೆ ಸಾಧ್ಯವಾಗಲಿಲ್ಲ ಏಕೆ? ಹಿಂದೆ ಅವರ ಸರಕಾರವು ಬಿದ್ದು ಹೋಗುವುದಕ್ಕೆ ಇದ್ದ ಕಾರಣವೇ ಇಂದೂ ಅವರ ಸೋಲಿಗೆ ಪ್ರೇರಕವಾಯಿತೆನ್ನಬಹುದು. ಭಂಡಾರನಾಯಿಕೆಯವರ ಸರಕಾರವು 'ತಟಸ್ಥನೀತಿ'ಯನ್ನು ಅನುಸರಿಸುತ್ತಿದ್ದರೂ ಅದು ಪರಿಶುದ್ಧ ತಾಟಸ್ಥ್ಯವಾಗಿರಲಿಲ್ಲ. ಪ್ರಾಯಶಃ ಅವರು ಕಮ್ಯುನಿಜಂನತ್ತ ಅಧಿಕವಾಗಿ ವಾಲಿಕೊಂಡಿದ್ದರೆನ್ನಬೇಕು. ಅವರ ಕಾಲದಲ್ಲಿ ಸಿಂಹಳವು ರಾಷ್ಟ್ರೀಕರಣದತ್ತ ಹೆಚ್ಚಿನ ಗಮನ ಹರಿಸಿತ್ತೆಂಬುದನ್ನು ನಾವು ಮರೆಯಬಾರದು. ತನ್ನ ಸಹೋದ್ಯೋಗಿಗಳ ಅಭಿಪ್ರಾಯಗಳನ್ನು ಅವರು ಬಹುವಾಗಿ ಕಡೆಗಣಿಸುತ್ತಿದ್ದುದರಿಂದಲೇ ಮಂತ್ರಿಮಂಡಳದಲ್ಲಿ ಬಿಕ್ಕಟ್ಟು ತಲೆದೋರಿತ್ತು. ಮೊನ್ನೆ ನಡೆದ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷವು ಸಂಪೂರ್ಣವಾಗಿ ನಾಮಾವಶೇಷವಾಗಿರುವುದನ್ನು ಕಾಣುವಾಗ, ಅಲ್ಲಿ ಕಮ್ಯುನಿಜಂಗೆ ಯಾವ ವಿಧದ ಬೆಂಬಲವೂ ಇಲ್ಲವೆಂಬುದು ಕಂಡುಬರುತ್ತದೆ. ಭಂಡಾರನಾಯಿಕೆಯವರು ಕಮ್ಯುನಿಸ್ಟ್ ಚೀನಾದೊಡನೆ, ಭಾರತದ ಗಡಿಯನ್ನು ಮೀರಿ ಆಕ್ರಮಣಶೀಲ ಮನೋವೃತ್ತಿಯನ್ನು ತೋರಿದ್ದ ಕೆಂಪು ಚೀನಾದೊಡನೆ ತೀರ ಸಖ್ಯವನ್ನು ತೋರಿಸುತ್ತಿದ್ದುದರಿಂದಲೇ ಅವರ ಬಗ್ಗೆ ರಾಜಕಾರಣ ಪಟುಗಳಲ್ಲಿ ಸದಭಿಪ್ರಾಯ ಮೂಡುವುದು ಸಾಧ್ಯವಾಗಲಿಲ್ಲ. ತಟಸ್ಥ ನೀತಿಯ ಸೋಗಿನಲ್ಲಿ ಕಮ್ಯೂನಿಜಂನತ್ತ ಒಲವು ತೋರುತಿದ್ದುದರಿಂದಲೇ ಅವರು ಸೋತು ಹೋದರೆಂದರೂ ತಪ್ಪಲ್ಲ. ಸಿಲೋನನ್ನು ತನ್ನ ಬಗಲಲ್ಲಿ ತುರುಕಿಸಿಕೊಳ್ಳಲು ಕೆಂಪು ಚೀನಾವು ಬಹಳಷ್ಟು ಅಲ್ಲೆಯಾಡುತಿತ್ತು. ಭಾರತದ ಆಕ್ಕಪಕ್ಕಗಳಲ್ಲಿ ಪಾಕಿಸ್ತಾನವನ್ನು ದಕ್ಷಿಣದಲ್ಲಿ ಸಿಂಹಳವನ್ನೂ ತನಗೆ ಬೇಕಾದಂತೆ ಕುಣಿಸಲು ಅದು ಸಮರ್ಥವಾಯಿತೆಂದರೆ, ಒಳಗಿರುವ ದೇಶದ್ರೋಹಿಗಳ ಸಹಾಯದಿಂದ ಭಾರತವನ್ನು ಬಗ್ಗುಬಡೆಯಬಹುದೆಂಬ ಹೇರಾಸೆ ಅದಕ್ಕಿತ್ತು. ಸಿಂಹಳೀಯರು, ಇದನ್ನು ಅರಿತುಕೊಂಡರು; ಕಮ್ಯುನಿಜಂನ ತಲೆ ಮೆಟ್ಟಿದರು. ಆದರೆ, ಭಾರತ ವಿರೋಧವನ್ನೇ ತಮ್ಮ ನೀತಿಯಾಗಿಟ್ಟುಕೊಂಡ ಪಾಕಿಸ್ತಾನಿಗಳಿಗೆ ಇಂತಹ ಬುದ್ಧಿ ಬರಲಿಲ್ಲ. ಮತ್ತೆ ಅಯ್ಯೂಬ ಖಾನರನ್ನೂ ಅವರ ಕೈಗೊಂಬೆ ಪಕ್ಷವನ್ನೂ ಅತ್ಯಧಿಕ ಬಹುಮತದಿಂದ ಆರಿಸಿಕೊಂಡರು.

ಪಾಕಿಸ್ತಾನದಲ್ಲಿ ಹಳೆಯವರೇ ಮತ್ತೆ ಅಧಿಕಾರಕ್ಕೆ ಬಂದುದರಿಂದ ಅದರ ನೀತಿಯಲ್ಲಿ ಯಾವ ಬದಲಾವಣೆಯನ್ನೂ ನಾವು ನಿರೀಕ್ಷಿಸುವುದು ಸಾಧ್ಯವಿಲ್ಲ. ಚೀನಾದ ನಾಗರ ಹಾವಿನೊಡನೆ ಅದು ಸರಸವಾಡುತ್ತ ಭಾರತಕ್ಕೆ ತಲೆಬೇನೆಯನ್ನೇ ತಂದಿತ್ತು. ತಾನು ತೃಪ್ತಿ ಪಡೆಯಬಲ್ಲುದು. ಭಾರತದ ಉನ್ನತಿಯನ್ನು, ಅದರ ಸರ್ವಾಂಗೀಣ ಅಭಿವೃದ್ಧಿಯನ್ನು ಕಂಡು ಸಹಿಸಲಾರದ ಅದು ಯಾವುದೇ ರೀತಿಯಿಂದ ಪ್ರಗತಿಯನ್ನು ಕುಂಠಿತಗೊಳಿಸಲು ಉದ್ದೇಶಿಸಿದೆ. ಆದರೆ, ಇದು ನಮಗೆಲ್ಲ ಮೊದಲೇ ಗೊತ್ತು. ಆದುದರಿಂದ ಇದಕ್ಕೆ ತಕ್ಕ ಉಪಾಯಗಳನ್ನು ನಾವು ಆಗಿಂದಲೇ ಕೈಗೊಂಡಿದ್ದೇವೆ. ಸಿಂಹಳದಲ್ಲಿ ಹೊಸತಾಗಿ ಅಧಿಕಾರ ಗದ್ದುಗೆಯೇರಿದ ಸೇನಾನಾಯಕೆಯವರು ಭಾರತದ ಮಿತ್ರರು. ಪ್ರಧಾನಿಯಾಗಿದ್ದ ಅವರಿಗೂ ಅನುಭವವಿದೆ. ತಮ್ಮ ಮೊದಲ ಹೇಳಿಕೆಯಲ್ಲಿ ಅವರು ಭಾರತಕ್ಕೆ ಅನುಕೂಲವಾದ ನಿಲುವನ್ನೇ ತಳೆದಿದ್ದಾರೆ; ಒಂದು ರೀತಿಯಿಂದ ಭಾರತವನ್ನು ಗುರುವೆಂದೂ ಒಪ್ಪಿದ್ದಾರೆ. ತನ್ನ ಸರಕಾರವು ಭಾರತದಂತೆಯೇ ಪರಿಶುದ್ಧ ತಾಟಸ್ಥ್ಯ ನೀತಿಯನ್ನು ಅನುಸರಿಸುವುದಲ್ಲದೆ ಭಾರತ—ಚೀನಾ ಗಡಿ ವಿವಾದದಲ್ಲಿ ಭಾರತವನ್ನೇ ಬೆಂಬಲಿಸುವುದೆಂದೂ ದೃಢಪಡಿಸಿದ್ದಾರೆ. ಇದೇ ಭರವಸೆಯಡಿಯಲ್ಲಿ ಭಾರತ-ಸಿಂಹಳಗಳ ಸಂಬಂಧವೂ ದೃಢವಾಗಿ ಉಳಿಯುವುದೆಂದು ವಿಶ್ವಾಸಪಡುವುದು ಸಾಧ್ಯವಾಗಿದೆ. ಸಿಂಹಳದಲ್ಲಿರುವ ಭಾರತೀಯ ಮೂಲದ ನಾಗರಿಕರ ಪ್ರಶ್ನೆ ಮತ್ತು ಈ ವಿಷಯದಲ್ಲಿ ಮಾಜಿ ಪ್ರಧಾನಿ ಭಂಡಾರನಾಯಿಕೆಯವರು ಭಾರತದೊಡನೆ ಮಾಡಿಕೊಂಡ ಒಡಂಬಡಿಕೆ – ಮೊದಲಾದುವೂ ನ್ಯಾಯಯೋಗ್ಯವಾಗಿ ಕಾರ್ಯಾಚರಣೆಗೆ ಬರುವುವೆಂದು ನಂಬಬಹುದು.

ಕೇರಳದ ಹಗರಣ

ಕೈಲಾಗದವನು ಚಡಪಡಿಸುವವನಂತೆ ನಂಬೂದಿರಿ ಪಾಡರ ಕತೆಯಾಗಿದೆಯಿಂದು. ಕೇರಳದಲ್ಲಿ ಹೇಗಾದರೂ ಅಧಿಕಾರ ಸೂತ್ರ ಹಿಡಿಯಬೇಕೆನ್ನುವ ಅವರ ಹೇರಾಸೆಯು ಸ್ವಪ್ನ ಕುಸುಮವೇ ಆಯಿತು. ರಾಜ್ಯಪಾಲರ ವರದಿಯನ್ನು ಕೂಲಂಕುಷವಾಗಿ ಅಧ್ಯಯನ ಮಾಡಿದ ಬಳಿಕ ಅಲ್ಲಿ ರಾಷ್ಟ್ರಪತಿ ಆಡಳಿತವನ್ನೇ ಘೋಷಿಸುವುದು ಅನಿವಾರ್ಯವಾಯಿತು. ಇದು ಸಂವಿಧಾನದ, ಪ್ರಜಾಪ್ರಭುತ್ವದ ಕೊಲೆ ಎಂದು ಅಗದವರು

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ

"ನಗರ ಸಭಾಸದಸ್ಯರು ಅನ್ನ ಸತ್ಯಾಗ್ರಹ ಕೈಗೊಂಡು ತಾತ್ವಿಕ ವಿಜಯಗಳಿಸಿದ್ದು ಮಾತ್ರವಲ್ಲ, ನಗರಕ್ಕೆ ೧೦೦೦ ಕ್ವಿಂಟಲ್ ಅಕ್ಕಿಯನ್ನು ಪೂರೈಸುವ ಭರವಸೆಯನ್ನು ಸರಕಾರದಿಂದ ಪಡೆದರು.

ಅದು ನಿಜ ಸ್ವಾಮಿ, ಆ ಭರವಸೆಯನ್ನು ಕಾರ್ಯರೂಪಕ್ಕೆ ತರೋದು ಡಿ. ಸಿ. ಅಲ್ವೆ? ಬಂದ ಅಕ್ಕಿಯನ್ನು ಹಂಚುವವರು ಸ್ವಾಹಾ ಸಮಿತಿಯವರೇ ಅಲ್ವೆ?....'

ಗೇಹ ರಾಜ್ಯದಲ್ಲಿ

ಸತ್ಯಾಗ್ರಹವಲ್ಲ, ಮದ್ಯಾಗ್ರಹ

"ನೋಡೀಂದ್ರೆ...ನಿಮ್ಮ ಟೋಪ್ಪಿಯುವ್ರ ಬುದ್ಧಿ ಎಷ್ಟೆ ಹೋದ್ರೂ ಒಂದೇ...'

"ಅಲ್ವೇ ಏಕಾಏಕಿಯಾಗಿ ಟೋಪಿಯವ್ರ ಮೇಲೆ ಹಾರ್ತಾ ಇದ್ದೀಯಲ್ಲಾ? ಅಲ್ಲ, ಇವತ್ತಿನ ದಿನ ಟೋಪಿಯವ್ರಾದ್ರೂ ಯಾರಿದ್ದಾರೇಂತ?'

'ಇವತ್ತು ಇಲ್ಲಿದ್ರೂ ಒಂದು ದಿನವಿತ್ತು ನೋಡಿ, ಟೋಪಿಯಿಡೋದಂದ್ರೇನೇ ಅಭಿಮಾನಪಡೋ ದಿನ...'

"ಅದು ಇಂದಿಗೂ ಇದೆಯೆನ್ನು...."

'ಮತ್ತೀಗ ತಾನೇ ಅಂದ್ರಿ, ಈಗ ಯಾರೂ ಟೋಪಿಯಿಡೋದಿಲ್ಲಾಂತ?"

'ಟೋಪಿಯಿಡೋದಿಲ್ಲಾಂತ ನಾನೆಲ್ಲಿ ಅಂದಿದ್ದೆ ಟೋಪಿಯವ್ರು ಇಲ್ಲಾಂತಂದ್ರೆ..'

'ಅಂದ್ರೆ, ಬೇರೆಯವ್ರಿಗೆ ಟೋಪಿಯಿಡೋವ್ರು ಇದ್ದಾರೇಂತಾಯ್ತು....'

"ಬೇರೆ ಯಾವ್ರಿಗೇಂತೇನು? ತಮಗೂ ಇಟ್ಟುಕೊಳ್ಳೋರಿದ್ದಾರೆ. ಮತ್ತೆ ನೋಡು, ಇಟ್ಟುಕೊಳ್ಳೋರು ಇರುವಾಗ ಇಡೋಕೆ ಯಾಕಂತೆ ಸಂಕೋಚ?"

"ಒಳ್ಳೇ ಮಾತಾಯ್ತು ನಿಮ್ದು. ಅಲ್ಲಾ ಹಾಗಾದಮೇಲೆ ಏನೂ ಮಾಡೋಕೆ ಹಿಂಜರಿಯೋದಿಲ್ಲ."

"ಯಾರು?"

"ಯಾರಂತೆ ಮತ್ತೆ? ಮತ್ಯಾರು, ನೀವು ಮತ್ತು ನಿಮ್ಮಂತವರು...."

"ಏನಾಯ್ತೇ ಇಂದು ನಿನಗೆ?"

"ಏನಾಗೋದೇನು? ಏನೂ ಆಗಿಲ್ಲ. ಗಾಬ್ರಿಯಾಗಬೇಡಿ...."

"ಅಲ್ವೆ, ನಿನ್ನ ಮಾತಿನ ಧಾಟಿ ನೋಡೋವಾಗ ಅದೇಕೋ ಎದೆ ಡಡಡಡಾನ್ನುತ್ತೆ..."

"ಮತ್ತೇನೂ ಆಗೋದಿಲ್ವೆ ನಿಮಗೆ? ನಿಮ್ಮ ನೀತಿ-ಕ್ರಮಗಳನ್ನ ಕಾಣೋವಾಗ ನನ್ನ ತಲೇನೇ ಉರುಳಿದಂತಾಗುತ್ತೆ..."

"ಏ ಏ, ಬೇಡ ಕಣೇ...."

"ಏಕೆ? ಏನಾಯ್ತು?"

"ಅಲ್ವೆ, ನಿನ್ನ ತಲೆ ಉರುಳಿ ಬಿದ್ರೆ ಮತ್ತೆ ..."

"ಹೌದು, ನಿಮ್ಮ ಎದೆ ಡಡಡಾಂತನ್ನಬಹುದಂತೆ, ನನ್ನ ತಲೆ ಮಾತ್ರ ಉರುಳಬಾರದು. ಒಳ್ಳೇ ಕತೆಯಾಯ್ತಲ್ಲ ಇದು...."

"ಯಾವುದು?"

"ಅದೇ ಆಗ್ಲೇ ಅಂದೆನಲ್ಲ ನಿಮ್ಮ ಟೋಪಿಯವ್ರ ಬುದ್ಧಿ.."

"ಏನಪ್ಪಾ ಅದು? ಎಂತಹ ಬುದ್ಧಿ? ಯಾರ ಬುದ್ಧಿ...."

"ಮತ್ತ್ಯಾರದ್ದು? ನೋಡಿ, ನಿಮ್ಮ ಶಾಸ್ತ್ರಿ ಇದ್ದಾರಲ್ಲಾ..'

'ಯಾರಪ್ಪಾ ಅದು? ಯಾವ ಶಾಸ್ತ್ರಿ?

"ಪಾಪ ಏನೂ ಗೊತ್ತಿಲ್ಲ ನಿಮಗೆ..."

"ಹ್ಞಾ, ತಿಳೀತು ಬಿಡು, ನೀನನ್ನೋದು ಪ್ರಧಾನ ಮಂತ್ರಿ ಶಾಸ್ತ್ರಿಯವ್ರ ಸುದ್ದಿ ಅಲ್ವೆ?"

"ಹೌದೌದು ಅವ್ರದ್ದೇ. ನೋಡಿ...."

"ನೋಡೋಕೆ ಅವ್ರೆಲ್ಲಿದ್ದಾರೆ?"

"ಇದ್ದಾರೆ ಅಲ್ಲಿ ಡಿಲ್ಲಿಯಲ್ಲಿ...."

"ಹಳ್ಳಿಯಲ್ಲಿರೋ ನಾನು ನೋಡೋದು ಹೇಗೆ?"

"ನೋಡಿ, ಹೋಗಿ ಡಿಲ್ಲಿಗೆ...."

"ಅಲ್ವೆ, ಇಂದಿನ ಅಕ್ಕಿಗೆ ಚೀಲಾ ಹಿಡಿದುಕೊಂಡು ನ್ಯಾಯ ಬೆಲೆಯ ಅಂಗಡಿಗೆ ಹೋಗೋದೋ. ಡ್ಯೂಟಿಗೆ ಹೋಗೋದೋ ನೀನೆಂದಂತೆ ನಂದಾರನ್ನು ಕಾಣುವುದಕ್ಕೆ ಡಿಲ್ಲಿಗೆ ಹೋಗೋದೋ.."

"ಎಲ್ಲಿಗಾದ್ರೂ ಹೋಗಿ...."

"ಅಂದ್ರೆ, ನಾನು ಮನೇಲಿರಬಾರದು.."

"ಹುಸು ಬಾಯಿಮುಚ್ಚೀಂದ್ರೆ...'

"ತೆರೆದೇ ಇಪ್ರಿ ಸ್ವಲ್ಪ ಧೂಳು ನಾಲ್ಕು ನುಸಿಯಾದ್ರೂ ಹೊಟ್ಟೆ ಸೇರಿ, ಆಹಾರಾಭಾವ ನೀಗಿಸಲು ಅಳಿಲ ಸೇವೆಯಾದ್ರೂ ಸಲ್ಲುತ್ತೆ..."

"ಅಲ್ಲಾ ತಲೆಕೆಟ್ಟಿದೆಯೇನು ಇಂದು?

"ನಿನ್ನೆ ತಾನೇ ಕ್ಷೌರ ಮಾಡ್ಸಿದ್ದು, ಈಗ ತಾನೇ ತಲೆ ಬಾಚಿರೋದು...."

"ಅಲ್ಲ, ಮತ್ತೇರಿದವರಂತೆ ಏನೇನೋ ಆಡ್ತಾ ಇದ್ದೀರಲ್ಲಾ?'

"ಮದ್ಯವಿಲ್ಲದೆ ಮದವೇರಿದ ಮದನಾಂಗ ಅಂತ ನೀನು ಅನ್ನೋದೆ?"

'ನಿಮ್ಮನ್ನ ಮದನಾಂಗ ಅನ್ನೋಂಗೆ ನಿಜಕ್ಕೂ ಮದವೇರಿರಬೇಕು....

'ಸದ್ಯ, ಅದಕ್ಕೂ ಇರೋ ನಿರ್ಬಂಧ ಹೋಗೋ ಲಕ್ಷಣವಿಲ್ಲ...."

"ಅದನ್ನೇ ಅಂದದ್ದು ನಾನು. ನೋಡಿ, ಟೋಪಿಯವ್ರು ಅಧಿಕಾರಕ್ಕೆ ಬಂದೊಡನೆಯೇ ಆದರ್ಶವೆಂದು ಮದ್ಯಪಾನ ಪ್ರತಿಬಂಧ ಮಾಡಿದ್ರು..."

"ಹೌದು, ಅದು ಗಾಂಧೀ ದೇಶಕ್ಕೆ ತೋರಿಸಿದ ಆದರ್ಶ..."

"ಮತ್ತೆ ಈಗ ಅದನ್ನು ನಮ್ಮ ರಾಜ್ಯದಲ್ಲಿ ಸಡಿಲುಗೊಳಿಸುತ್ತಾರಂತೆ ನೋಡಿ...."

"ಯಾರು ಅಂದದ್ದೇ ಹಾಗೆ?"

"ಯಾರು ಯಾಕೆ, ಒಬ್ಬೊಬ್ಬರು ಒಂದೊಂದು ರೀತಿ ಹೇಳ್ತಾರಂತ."

"ಏನೆಂದು?"

"ಗೊತ್ತಿಲ್ವೇ ನಿಮಗೆ?"

"ಅಲ್ಲಾ ನಿನ್ನ ಬಾಯಿಂದಲೇ ಕೇಳೋಣ."

'ಮತ್ಯಾಕಿಲ್ಲ. ಇರೋ ವಿಷ್ಯದಲ್ಲಿ ನೀವೆಷ್ಟು ತಿಳ್ಕೊಂಡಿದ್ದೀರಿ ಕೇಳೋಣಾಂತ...'

"ಅಂದ್ರೆ, ಉಪಾಧ್ಯಾಯರು ಮಕ್ಕಳಿಗೆ ಪ್ರಶ್ನೆ ಕೇಳುವಂತೆ...."

"ಹ್ಞಾಂ, ಹಾಗೇ ಅನ್ನಿ..."

"ಇಲ್ಲ, ನಾನೇನೂ ಅನ್ನಲಾರೆ..."

'ಯಾಕೆ?"

"ಯಾರ ಶಿಷ್ಯಳಾದ್ರೂ ನಿಮ್ಮ ಶಿಷ್ಯೆಯಾಗಲಾರೆ."

"ಅಲ್ವೆ, ಯಾರು ಯಾರೋ ಬಂದು ನನ್ನ ಶಿಷ್ಯತ್ವವನ್ನು ಸ್ವೀಕರಿಸಲು ಕಷ್ಟಪಡುವಾಗ ನೀನು ಮಾತ್ರ...."

'ಅಲ್ರಿ, ನಿಮ್ಮ ಶಿಷ್ಯತ್ವ ಸ್ವೀಕರಿಸಿದ್ರೆ, ಎಲ್ರ ಮೇಲಿನ ಸಿಟ್ನು ನನ್ನ ಮೇಲೆ ತೀರ್ಸಿದರೇಂದ್ರೆ...."

"ಹ್ಹೆ.. ಹ್ಹ ..ಹ್ಹೆ...."

"ಏನು? ಯಾಕೆ ಅಂತಹ ನಗು?"

"ಮತ್ಯಾಕೂ ಇಲ್ಲ; ಒಂದು ಮಾತು ನೆನಪಿಗೆ ಬಂತು..."

"ಹೌದು. ನಿಮಗೆ ನೆನಪಾಗೋದೊಂದೇ ಮಾತು...."

"ಹೌದೇ, ಅದೇ ಶಿವಪ್ರೇರಣೆ...."

"ಏನಪ್ಪಾ ಅದು ಅಂತಹುದು?"

"ಅದು ಶಿವಪ್ರೇರಣೆ ಅಂದೆನಲ್ಲಾ...."

"ಅಂದ್ರೆ ಅದನ್ನ ಹೇಳಬಾರ್ದೆ?"

"....ಹಾಗೇನೂ ಇಲ್ಲ. ಆದ್ರೂ..."

"ಏನಂತೆ? ಅಂದುಬಿಡಿ."

"ಶಿವಪ್ರೇರಣೆಯನ್ನ ನುಡೀಬೇಕಾದ್ರೆ ನೈವೇದ್ಯ, ಕಾಣಿಕೆಯೆಲ್ಲಾ ಇಡ್ಬೇಕು.."

"ಇಡೋಣವಂತೆ, ಹೇಳಿಬಿಡಿ...'

"ಇಟ್ಟು ಬಿಡು..."

"ಇವತ್ತು ತಾರೀಕು ೨೮ ಅಂತ ಗೊತ್ತಿಲ್ವಾ ನಿಮ್ಮ ಶಿವನಿಗೆ? ಮೊದಲನೇ ಪೇಡಿ ಬರ್ಲಿ.. ಎಲ್ಲಾ ಇಡೋಣ..."

'ಮೊದಲು ಕಾಣಿಕೆ ಮತ್ತೆ ಪ್ರಸಾದ...'

"ಒಳ್ಳೆ ಪಂಡರು ಆಡುವಾಂಗೆ ಆಡ್ತೀರಲ್ಲಾ...."

"ಪಂಡರಿಲ್ಲಾ ಹುಂಡರು. ಅವ್ರ ಸುದ್ದಿ ಯತ್ತಬೇತ...."

'ನೀವೂ ಹಾಗೇನೇ ಅನ್ನಿ. ಅಲ್ವಾದ್ರೆ..'

"ಸಾರ್ಥಕವಾಯ್ತು ಕಣೇ ನಿನ್ನ ಕೈಹಿಡಿದದ್ದಕ್ಕೆ. ಇದಕ್ಕೇ ಅನ್ನೋದು ನೋಡು, ಸಾವಿರ ಜನರಿಗೆ ಸಾಹುಕಾರ ಮನೆ ಹೆಂಡ್ತಿಗೆ ಕಿಸ್ಸಾರ'

'ಓ, ತಿಳೀತು ಬಿಡಿ ನಿಮ್ಮ ಶಿವಪ್ರೇರಣೆ..."

"....ಅಯ್ಯೋ ಘಾತವಾಯಿತು, ಘಾತವಾಯಿತು.."

'ಏನು?....'

"...ಏನೂ ಇಲ್ಲ ಬಿಡು. ೧ನೆ ತಾರೀಕಿಗಾದ್ರೂ ಕಾಣಿಕೆಯಿಡೋದಕ್ಕೆ ಮರೀಬೇಡ...'

"ಇನ್ನೂ ಇದೆಯಲ್ಲಾ ನಾಲ್ಕು ದಿನ? ಆಗ ನೋಡೋಣವಂತೆ...ಅಂತೂ ನನ್ನನ್ನ ನೀವು ಏನೂ ಮಾಡೋಲ್ಲಾಂತ ನಿಮಗೆ ಶಿವಪ್ರೇರಣೆಯಾಯ್ತಲ್ಲಾ ಅದೇ ಸಂತೋಷ..."

"ಹಾಗಾದ್ರೆ ಹೇಳಬಹುದಲ್ಲಾ ಏನೂಂತ?"

"ಓಹೋ ಅದಕ್ಕೇನಡ್ಡಿ? ನೋಡಿ ಒಬ್ರು ಅಂತಾರೆ ಮದ್ಯಪಾನ ಪ್ರತಿಬಂಧ ಸಂಪೂರ್ಣ ಯಶಸ್ವಿಯಾಗಿದೇಂತ...."

'ಹ್ಞಾಂ.. ಆಗಿದೇನ್ನು ..."

"ಮತ್ತೊಬ್ರು ಅಂತಾರೆ ಶಾಸನದ ಉಲ್ಲಂಘನೆಯ ಪ್ರಕರಣಗಳನ್ನು ಕಡಿಮೆ ಮಾಡಲು ಶಾಸನವನ್ನೇ ಸಡಿಲುಗೊಳಿಸುವ ಬಗ್ಗೆ ವಿಚಾರ ಮಾಡ್ತೇವೇಂತ..."

"ಹ್ಞಾಂ.. ಕ್ರಿಮಿನಲ್ ಪ್ರೊಸೀಜರನ್ನೇ ತಿದ್ದುಪಡಿ ಮಾಡಿದ್ರೆ ಅಪರಾಧಗಳೇ ಇಲ್ಲವಾಗಬಹುದು...."

"ನಾನು ಹೇಳೋದು ಕೇಳಿ ಮೊದ್ಲು. ಈಗ ೧೬ ಜಿಲ್ಲೆಗಳಲ್ಲಿರುವ ಪಾನಪ್ರತಿಬಂಧವನ್ನು ಉಳಿದ ಮೂರು ಜಿಲ್ಲೆಗಳಿಗೂ ವಿಸ್ತರಿಸಬೇಕು ಅನ್ನುತ್ತಾರೆ ಮತ್ತೆ ಕೆಲವರು. ಆ ಮೇಲೆ ನೋಡಿ, ನಮ್ಮ ಯಶೋಧರಮ್ಮ ಇದ್ದಾರಲ್ಲಾ...."

"ನಿನ್ನ ಯಶೋಧರಮ್ಮ..'

"ಹೌದು, ಸಮಾಜ ಕಲ್ಯಾಣದ ಮಂತ್ರಿ..."

'ಹ್ಞಾಂ ತಿಳೀತು ಬಿಡು, ಪಾನಪ್ರತಿಬಂಧವನ್ನ ಸಡಿಲಿಸಿದರೆ, ತಾನು ತಾತ್ವಿಕ ಸಿದ್ಧಾಂತ ರಕ್ಷಣೆಗಾಗಿ ರಾಜಿನಾಮೆ ನೀಡ್ತೇನೆ ಅಂತಾರೆ ಅಲ್ವೆ?"

"ಹೌದು ನೋಡಿ, ತತ್ವಗಳೆಲ್ಲ ಇರುವುದು ನಮಗೆ ಮಾತ್ರ; ನಿಮಗೆ ಅದು ಯಾವುದೂ ಇಲ್ಲ....'

"ಅದು ನ್ಯಾಯವೇ ನೋಡು..."

'ಯಾಕೆ?'

'ಯಾಕೇಂತಂದ್ರೆ.... ಹಿಂದಿನವ್ರು ಹಾಗೇ ಮಾಡಿದ್ದಾರೆ.'

"ಹೌದಪ್ಪ, ನಿಮ್ಮ ಬುದ್ಧಿ ಕಳ್ಳು ಕುಡಿದ ಮಂಗನವ್ಹಾಂತ ಅಪ್ರಿಗೆ ಗೊತ್ತಿತ್ತು...."

"ಅಲ್ವೆ, ಈಗ ಮಂಗನಿಗೆ ಬಿಡು, ಭೂತಪ್ರೇತಗಳಿಗೂ ಕಳ್ಳು ಕಳಪೆಯಾಗಿದೆಯಲ್ವೆ?"

'ಹೌದು ನರಭೂತಗಳಿಗಾದ ಮೇಲೆ ತಾನೇ ಆ ಭೂತಗಳಿಗೆ ಉಳಿಯೋದು?'

"ಅಂದ್ರೆ, ನಿನಗೂ ಎಲ್ಲವೂ ಗೊತ್ತು."

'ಆದೇಸಿದ್ರೂ ಗಾಂಧೀ ಭಕ್ತರಾದ ನಿಮ್ಮ ಟೋಪಿಯವ್ರು ಆ ಶಾಸನವನ್ನು ಕಟ್ಟುನಿಟ್ಟಾಗಿ ಅನುಶಾಸನಕ್ಕೆ ತರೋ ಯತ್ನವನ್ನು ಮಾಡಬೇಕೇ ಹೊರತು...'

"ಹೆದರ ಬೇಡ್ವೆ....ನಿನ್ನ ಯಶೋಧರಮ್ಮ ರಾಜೀನಾಮೆ ಕೊಡಬೇಕಾದೀತೂಂತ ನಿನಗೆ ಗಾಬರಿ ಅಲ್ವೆ?'

(ಹದಿಮೂರನೇ ಪುಟ ನೋಡಿರಿ)

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರ: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಒಂದು ಸವಿನೆನಪು

ಕನ್ನಡದ ಕವಿಪುಂಗವರನ್ನು ಕಂಡು ಹೆದರಿದಾಗ . . .

ಲೇಖಕರು
ಶ್ರೀ ಮಜಿಬೈಲು ಭಾಸ್ಕರ ಭಂಡಾರಿ.

ಆಗಿನ್ನೂ ಹದಿನಾರರ ಹರೆಯ; ಪಂಜ ಶ್ರೀಯ ಗುರುದೇವಿ ಪಂಡಿತಾ ರಮಾಬಾಯಿ; ವಿದ್ವಾನ್ ಗಮಕ ವಿದುಷಿ, ಮಂಜೇಶ್ವರ ಇವರೊಂದಿಗೆ ಕನ್ನಡದ ಪ್ರಥಮ ರಾಷ್ಟ್ರಕವಿಗಳನ್ನು ಕಂಡು ಕಣ್ತಣಿಕ ಬೇಕೆಂದ. ಆನಂದ ಉತ್ಸಾಹಗಳಿಂದ ಶಾಲೆ ಬಿಟ್ಟೊಡನೆಯೇ ಹೊರಟೆನು. ಅದಕ್ಕಿಂತಲೂ ಒಂದು ವರ್ಷದ ಹಿಂದೆ ನನ್ನ ಪ್ರಥಮ ಕೃತಿಯಾದ "ಮುಮುಕ್ಷಂದ"ವನ್ನು ಅಚ್ಚು ಹಾಕಿಸಿದಾಗ, ಪ್ರತಿಯೊಂದನ್ನು ಶಾಲೆಯಿಂದಲೇ ರಾಷ್ಟ್ರಕವಿಗಳಿಗೆ ಟಪ್ಪಾಲು ಮೂಲಕ ಕಳುಹಿಸಿದ್ದೆ. ಮರು ಟಪ್ಪಾಲಿಗೇ ಅದರ ಗುಣಾವಗುಣಗಳ ಸಂಪೂರ್ಣ ವಿವರಣೆಗಳೊಂದಿಗೆ ಆಶೀರ್ವಚನ, ಪ್ರೋತ್ಸಾಹಗಳೂ ಸೇರಿದ ಅವರ ಪತ್ರ ನೇರಳೆ ಮಸಿಯಿಂದ ರೂಪವೆತ್ತು ನನ್ನ ಕೈಸೇರಿತು. ಆ ಬಳಿಕವೂ ನಾನು ಆಗಾಗ ಸಂಶಯ ನಿವಾರಣೆಗಾಗಿ ಅಥವಾ ಹೆಚ್ಚಿನ ಅನುಭವಕ್ಕಾಗಿ ಅವರಿಗೆ ಪತ್ರ ಬರೆದುದುಂಟು. ಆದರೆ ಅವರನ್ನು ಪ್ರತ್ಯಕ್ಷವಾಗಿ ಕಾಣುವ ಗೋಜಿಗೆ ಆ ತನಕ ಹೋಗಿರಲಿಲ್ಲ. ಕಾರಣವಿಷ್ಟೆ. ನನ್ನ ಕೆಲವು ಕವಿ ಮಿತ್ರರು, ಪೈಗಳಲ್ಲಿ ಹೋದರೆ "ನೀವೆಲ್ಲಾ ಕವಿಗಳು! ಎಂತಹ ಕವಿಗಳು? ಸಿಕ್ಕಿದಂತೆ ಮೂರುಗೆರೆ ಬರೆದು ಕವಿ ಎಂದು ಹೌಹಾರುತ್ತೀರಾ? ನೀವು ಕವಿಗಳಲ್ಲ ಕಪಿಗಳು!" ಎಂದು ಗದರಿಸುತ್ತಾರೆ ಎಂದು ನನ್ನನ್ನು ಬೆದರಿಸಿದ್ದರು. ಅದಕ್ಕಾಗಿ ನನ್ನ ಈ "ಒಂದು ಒಂದು ಒಂದೂ... ಹಾಠ ಓದು ಎಂದು, ಎರಡು, ಎರಡು, ಎರಡೂ...." ಎಂಬ ಶಿಶು ಗೀತಾವಳಿಯನ್ನು ಎತ್ತಿಕೊಂಡು 'ಇದು ನನ್ನ ಕವನಗಳು' ಎಂದು ಹೇಗೆ ತೋರಿಸಲಿ? ಒಂದು ವೇಳೆ ತೋರಿಸಿದೆನೆನ್ನುವ, ಅಂತಹ ರಾಷ್ಟ್ರಕವಿಗಳಿಗೆ ಅದನ್ನ ಕಣ್ಣೆತ್ತಿ ನೋಡಲಿಕ್ಕಾದರೂ ಸಮಯವಿದ್ದೀತೇ, ಇದ್ದರೂ ಆದರದಿಂದ ನೋಡಿಯಾರೆ; ಅಥವಾ ಇನ್ನು ಕೆಲವು ಮಹಾ ಕವಿಗಳು ಕೃತಿಯೊಂದನ್ನೂ ಎತ್ತಿಕೊಂಡು ಹೋಗಿ 'ಮುನ್ನುಡಿ ದಯಪಾಲಿಸಬೇಕು' ಎಂದಾಗ 'ಇಟ್ಟು ಹೋಗಿ' ಎಂದು ತಿರುಗಿ ಹೋಗಿ ಕೇಳಿದಾಗ 'ಎಲ್ಲೋ ಕಾಣುವುದಿಲ್ಲ' ಎನ್ನುವಂತೆ ನನ್ನ ಸ್ಥಿತಿಯಾದೀತೇ ಅಥವಾ ಗದರಿಸಿ ಬಿಡುವರೇ ಎಂಬಿವೆಲ್ಲಾ ಸಂಶಯಗಳು ನನ್ನನ್ನು ಕಾಡಿಸಿ ಪೀಡಿಸಿದ್ದುವು. ಆದರೆ ಈ ದಿನ ಮಾತ್ರ ನನಗಾವ ಹೆದರಿಕೆ ಬೆದರಿಕೆಗಳೂ ಇಲ್ಲದಂತೆ ನೋಡಿಕೊಳ್ಳುವ ತಾಯಿ ರಮಾಬಾಯಿಯವರಿದ್ದರು. ಆದುದರಿಂದ ನಿರ್ಭಯನಾಗಿ, ಇಬ್ಬರೂ ಪೈಯವರ ಮನೆಯ ದಾರಿ ಹಿಡಿದೆವು.

ಹಾಗೆ ಮುಂದೆ ಸಾಗಿದಂತೆ ನನ್ನ ಕಲ್ಪನಾ ಸಾಮ್ರಾಜ್ಯದ ತುಂಬಾ 'ಕನ್ನಡ ರಾಷ್ಟ್ರಕವಿ'ಗಳೇ ವಿಶ್ವರೂಪ ತಾಳಿದ್ದರು ಗಂಭೀರ ಮುಖ ಮುದ್ರೆಯ ಆಧುನಿಕ ಉಡಿಗೆ ತೊಡಿಗೆಗಳ ವೈಭವದಿಂದ ರಂಜಿಸುವ ವ್ಯಕ್ತಿಯ ಚಿತ್ರವೊಂದು ಕಣ್ಮುಂದೆ ಕುಣಿದಾಡುತ್ತಿತ್ತು. ಯೋಚನೆಯ ಸುಳಿಯಲ್ಲಿಯೇ ದಾರಿ ಸಾಗಿದುದು ಗೊತ್ತಾಗಲಿಲ್ಲ. ಪೈಯವರ ಮನೆಯ ಆವರಣಕ್ಕೆ ಕಾಲಿಡುತ್ತಲೇ ಅದಾವುದೊ, ಒಂದು ಸ್ಫೂರ್ತಿ ನನ್ನ ದೇಹದಾದ್ಯಂತ ಕೋಲ್ಮಿಂಚಿನಂತೆ ಹರಿದು ಮರೆಯಾಯಿತು. ಹತ್ತಿರದಲ್ಲಿ ಮೊರೆ ಮೊರೆದು ಗರ್ಜಿಸುವ ಮಹಾಸಾಗರ, ಸಮೀಪದಲ್ಲೇ ಕೇಳಿ ಬರುವ ಇಗರ್ಜಿ, ಮಸೀದಿ, ದೇವಾಲಯಗಳ ಪವಿತ್ರ ನಾದಗಳಿಗೆ ಕಿವಿಗೊಟ್ಟು, ವೃಕ್ಷ ಸಂತತಿಗಳಿಂದಾ ಕೃತವಾಗಿ, ತಂಗಾಳಿಗೆ ಮೈಯೊಡ್ಡಿನಿಂತ ಆ ಮನೆ ಪುರಾತನ ಋಷ್ಯಾಶ್ರಮಗಳ ಕಲ್ಪನೆಯನ್ನು ತರುತ್ತಿತ್ತು. ಹೊಸ್ತಿಲು ದಾಟುತ್ತಲೇ, ಮುಖ ಮಂಟಪದಲ್ಲಿ ದುಂಡು ಮುಂಡಿನ ಗಿಡ್ಡ ಅಂಗಿಯ ಸಾದಾ ವ್ಯಕ್ತಿಯೊಂದು ಕುಳಿತಿತ್ತು. ಅವರೇ ಕನ್ನಡದ ರಾಷ್ಟ್ರಕವಿ, ಬಹು ಭಾಷಾ ಬೃಹಸ್ಪತಿ, ಪಾಶ್ಚಾತ್ಯ ಪೌರಾತ್ಯ ಸಾಹಿತ್ಯ ಸಂಸ್ಕೃತಿಗಳ ಸಂಗಮ ಸ್ಥಾನವಾಗಿರಬಹುದೆಂದು ನಾನೆಂದೂ ನೆನಸಿರಲಿಲ್ಲ. ಆದರೆ ಪೈಗಳ ಘನತೆ ತೇಜಸ್ಸುಗಳ ಮುಂದೆ ನನ್ನ ಅಜ್ಞಾನಾಂಧಕಾರಕ್ಕೆ ಬಾಳುವೆಯೆಲ್ಲಿ?

"ಇವರೇ ನಿಮ್ಮ ರಾಷ್ಟ್ರಕವಿಗಳು ಚೆನ್ನಾಗಿ ನೋಡು!" ಎಂದು ರಮಾ ಬಾಯಿಯವರೆಂದಂತೆ ನನ್ನೆದೆ "ಧಸ್" ಎಂದಿತು.

"ಏನು ಬಂದಿರಿ?" ಎಂದರು ಪೈಗಳು ತಮ್ಮ ನಿತ್ಯದ ಪಂಡಿತನಿಂದ ಹಿಡಿದು ಪಾಮರನ ವರೆಗೆ ಪ್ರಶ್ನಿಸುವ ಸೌಜನ್ಯ ಸಹಾನುಭೂತಿಗಳಿಂದ.

"ಹೀಗೆಯೇ ತಮ್ಮನ್ನು ಕಾಣುವಾ ಅಂತ ಬಂದೆ" ತೊದಲುತ್ತಾ ನಾನಂದೆ.

'ನನ್ನನ್ನು?' ಪ್ರಶ್ನಿಸಿದರು ಪೈಗಳು ಸಹಜಾಶ್ಚರ್ಯದಿಂದ.

'ಹೌದು' ತಲೆ ತುರಿಸುತ್ತಾ ಹೇಳಿದೆ.

"ನನ್ನನ್ನು ನೋಡುವುದೇನು? ನಾನು ನಿಮ್ಮಂತೆಯೇ ಒಬ್ಬ ಮನುಷ್ಯ. ಆದರೆ ಸ್ವಲ್ಪ ಹಳೆಯವನಿರಬಹುದು! ನನಗಿಂತಲೂ ಹಳೆಬರು ಇನ್ನೂ ಅನೇಕರಿದ್ದಾರೆ!" ಎಂದು ಗೊಳ್ಳನೆ ನಕ್ಕರು! ತಿರುಗಿ ಗಂಭೀರರಾಗಿ "ತುಸು ಮುಂದೆ ಹೋಗಿ ಮದನಂತೇಶನಿದ್ದಾನೆ! ಅವನನ್ನು ನೋಡಿದರೆ ಇಹದಲ್ಲಿ ಸುಖ ಪರದಲ್ಲಿ ಶಾಂತಿ! ನನ್ನನ್ನು ನೋಡುವುದೇನು?" ಎಂದರು.

ನಾನು ಮಾತಿಲ್ಲದೆ ನಿಂತೇ ಇದ್ದೆ. ಅಷ್ಟರಲ್ಲಿ ರಮಾ ಬಾಯಿಯವರು,

"ಇವನೇ ಆ "ಮುಮುಕ್ಷಂದ" ಎಂಬ ಪುಸ್ತಕ ಬರೆದವ" ಎಂದರು.

ಓಹೋ! ಹೌದು ಅದು ಕಳೆದ ತಿಂಗಳ ಒಂಭತ್ತನೇ ತಾರೀಕಿಗೆ ಇಲ್ಲಿ ಬಂದಿದೆ. ಎನ್ನುತ್ತಾ ಸರಸರನೆ ಒಳಗೆ ಹತ್ತಿ ಆ ಪುಸ್ತಕವನ್ನು ಕೆಲವು ಕಲೆಂಡರು ಹಾಳೆಗಳನ್ನು ತಂದರು. ಅವರ ಆಗಿನ ವಯಸ್ಸನ್ನೂ ಅವರ ಸ್ಮರಣಾ ಶಕ್ತಿಯನ್ನೂ ಕಂಡ ನನಗೆ ಆದ ಆಶ್ಚರ್ಯಕ್ಕೆ ಪಾರವಿರಲಿಲ್ಲ.

ಪುಸ್ತಕ ಬಿಡಿಸುತ್ತಾ —

"ಇದು ಯಾವ ಕನ್ನಡ ನಿಮ್ಮದು?" ಅಂದರು ಬಳಿಕ ಅವರೇ ಮುಂದುವರಿಯುತ್ತಾ ಬಹುಶಃ ಆ ನವಭಾರತದ ಕನ್ನಡವಿರಬೇಕು. ಅವರಿಗೆ ನೂರು ಬಾರಿ ಹೇಳಿದೆ ಕನ್ನಡದ ಕೊಲೆ ಮಾಡಬೇಡಿರೆಂದು ಮತ್ತೆ, ನನಗೇಕೆ? ಎನ್ನುತ್ತಾ ಆ ಕೆಲೆಂಡರು ಹಾಳೆಗಳಲ್ಲಿ ಗುರುತು ಹಾಕಿದ ಪುಟಗಳನ್ನು ತೆಗೆದು ಅಲ್ಲಲ್ಲಿನ ತಪ್ಪುಗಳನ್ನು ಎತ್ತಿ ತೋರಿಸಿದರು. ಒಂದೆರಡು ಕಡೆ ಉತ್ತಮ ಭಾವನೆಗಳಿದ್ದಲ್ಲಿ 'ಬೇಷ್'! ನಿಮ್ಮಲ್ಲಿ ಕವಿತಾ ಶಕ್ತಿ ಚೆನ್ನಾಗಿದೆ. ಆದರೆ ಅದು ಇನ್ನೂ ಕಾಯಿಯಾಗಿದೆ. ಈಗಿನ ಸಮಾಜಕ್ಕೆ ಕಾಯಿಯನ್ನು ಹಣ್ಣು ಮಾಡಿ ತಿನ್ನುವಷ್ಟರ ಸಹನೆಯಿಲ್ಲ! ಹಣ್ಣೇ ಕೊಡಬೇಕು! ಅದೂ ಸುಲಿದೆ! ಕೊಟ್ಟರೆ ಸರಿ! ಆದ ದರಿಂದ ಹೀಗೆಯೇ ಕವನಿಸುತ್ತಾ ಹೋಗಿ. ಪುಸ್ತಕ ಪ್ರಕಟನೆಗೆ ಕೈಹಾಕಬೇಡಿ. ನನ್ನ "ಗಿಳಿವಿಂಡು" ನಾನು ಬರೆದ ಮೂವತ್ತು ವರ್ಷಗಳ ನಂತರ ಪ್ರಕಟವಾಯಿತು. ಅದರ ಕವಿತೆಯೊಂದನ್ನು ಒಮ್ಮೆ ಪತ್ರಿಕಾ ಸಂಪಾದಕನೊಬ್ಬನಿಗೆ ಕಳುಹಿಸಿದಾಗ ಆತ ಅದರ ಹಿಂಬದಿಯಲ್ಲಿ ಅದರಲ್ಲಿರುವ ತಪ್ಪುಗಳನ್ನು ಗುರುತಿಸಿ ಹಿಂದೆ ಕಳುಹಿಸಿದ. ಅದಕ್ಕೆ ನಾನು ಬರೆದ ಉತ್ತರ ಇದು "ನನ್ನ ಈ ಕವಿತೆಯನ್ನು ತಿದ್ದುವ ಸಲುವಾಗಿ ತಮಗೆ ಕಳುಹಿಕೊಡಲಿಲ್ಲ ಪ್ರಕಟಿಸುವ ಸಲುವಾಗಿ!" ಅದೇ ವ್ಯಕ್ತಿ ಮದ್ರಾಸು ಸರಕಾರ "ರಾಷ್ಟ್ರಕವಿ"ಯೆಂಬ ನಾಮದ ವರ್ಷ ದೀಪಾವಳಿ ಸಂಚಿಕೆಗೆ ಲೇಖನವೊಂದು ಕೊಡಬೇಕೆಂದು ಬಂದ. ಅದೇ ಕವಿತೆಯನ್ನು ಎತ್ತಿ ಕೊಟ್ಟೆ— ಅದು ಪ್ರಕಟವಾಯಿತು! ಆದುದರಿಂದ ಬರೆದುದೆಲ್ಲಾ ಪ್ರಕಟವಾಗಲಿಲ್ಲವೆಂದು ಚಿಂತಿಸಬೇಡಿ ಬರೆಯುವುದು ನಮ್ಮ ಧರ್ಮ. ಪ್ರಕಟ ವಾಚಕರಿಗಾಗಿ, ಅದು ಅವರನ್ನೇ ಹೊಂದಿಕೊಂಡಿದೆ. ಎನ್ನುತ್ತಾ ಈ ಪುಸ್ತಕಗಳನ್ನು ಓದಿ ಇನ್ನೂ ಹೆಚ್ಚಿನ ಅನುಭವ ಪಡೆಯಿರಿ" ಎನ್ನುತ್ತಾ ಒಂದು ಪಟ್ಟಿಯನ್ನೇ ಕೊಟ್ಟರು. ಮಾತ್ರವಲ್ಲದೆ ಹೆಚ್ಚಾಗಿ ವಿದ್ವಾಂಸರೇ ತಪ್ಪಿ ಬರೆಯುವ

(ಹನ್ನೆರಡನೇ ಪುಟ ನೋಡಿರಿ)

ಸಿಂಡಿಕೇಟ್ ಬ್ಯಾಂಕು

ನಿಮ್ಮ ಠೇವಣಾತಿಗಳ ಮೇಲೆ ಇನ್ನೂ ಹೆಚ್ಚಿನ ಬಡ್ಡಿ ಈಯುವುದು.

ನಿಮ್ಮ ಹಿತಾಸಕ್ತಿಗಳನ್ನು ದಕ್ಷತೆಯಿಂದ ಕಾಯುವುದು!

ಚಾಲ್ತಿಯಲ್ಲಿರುವ ಬಡ್ಡಿ ದರಗಳು

ಕೆಳಗೆ ಕಾಣಿಸಿದ ಅವಧಿಗೆ ಅಥವಾ ಹೆಚ್ಚಿಗೆ	ಕೆಳಗೆ ಕಾಣಿಸಿದ ಅವಧಿಗಿಂತ ಕಡಿಮೆ	ಬಡ್ಡಿ ದರ
91 ದಿವಸಗಳು	6 ತಿಂಗಳು	$5\frac{1}{8}$ %
6 ತಿಂಗಳು	1 ವರ್ಷ	$5\frac{5}{8}$ %
1 ವರ್ಷ	2 ವರ್ಷ	$6\frac{1}{8}$ %
2 ವರ್ಷ	3 ವರ್ಷ	$6\frac{3}{8}$ %
3 ವರ್ಷ	5 ವರ್ಷ	$6\frac{5}{8}$ %
5 ವರ್ಷ	7 ವರ್ಷ	$7\frac{1}{8}$ %
7 ವರ್ಷ	9 ವರ್ಷ	$7\frac{3}{8}$ %
9 ವರ್ಷ	ಮತ್ತು ಹೆಚ್ಚಿಗೆ	$7\frac{5}{8}$ %

ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟಿನ ಮೇಲೆ ಸೇಕಡಾ 4 ಬಡ್ಡಿ ಕೊಡಲಾಗುವುದು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು : ಮಣಿಪಾಲ

ಶಾಖೆಗಳು: 200ಕ್ಕೂ ಮಿಕ್ಕಿ.

ಚಲಾವಣಾ ನಿಧಿ: ರೂ. 70 ಕೋಟಿಗೂ ಮಿಕ್ಕಿದೆ.

ವಿಶ್ವವ್ಯಾಪೀ ಬ್ಯಾಂಕಿಂಗ್ ಬಗ್ಗೆ....... ....

— ಸಶಸ್ತ್ರ ಕ್ರಾಂತಿಯ ಪುರಸ್ಕರ್ತ —

ಹತಭಾಗ್ಯ ಲಾಲಾಹರದಯಾಳ್

ಬರೆದವರು
ಶ್ರೀ ಪಂಡಿತ ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಭಾರತ ದೇಶವನ್ನು ಬ್ರಿಟಿಷರ ಬಂಧನದಿಂದ ಬಿಡಿಸಲು ಸಶಸ್ತ್ರ ಹೋರಾಟ ನಡೆಸಿದ ಕ್ರಾಂತಿ ವೀರರಲ್ಲಿ ದೇಶಭಕ್ತ ಲಾಲಾಹರದಯಾಳ್ ಒಬ್ಬರು. ಕ್ರಾಂತಿಕಾರಿ ಯೋಜನೆಯನ್ನು ಸಂಘಟಿಸಿದವರಲ್ಲಿ ಇವರು ಇತಿಹಾಸ ಪ್ರಸಿದ್ಧರು. ಇವರು ಎಂತಹ ಕಠಿಣ ವಿಷಯವನ್ನಾದರೂ ಕೂಡ ಒಮ್ಮೆ ಓದಿದರೆ ಅದನ್ನು ಚಿರಕಾಲ ಸ್ಮರಣೆಯಲ್ಲಿರಿಸಿಕೊಳ್ಳುವ ಪ್ರಜ್ಞಾವಂತರಾಗಿದ್ದರು, ಬಹು ಭಾಷಾವಿದರಾಗಿದ್ದರು.

ಪ್ರಾರಂಭಿಕ ಜೀವನ

ಲಾಲಾಹರದಯಾಳರು ಕ್ರಿ.ಶ.೧೮೮೪ರಲ್ಲಿ ದಿಲ್ಲಿಯಲ್ಲಿ ಜನಿಸಿದರು. ೧೯೦೩ರಲ್ಲಿ ಹರದಯಾಳರು ಪಂಜಾಬ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಎಂ. ಎ. ಯಲ್ಲಿ ಸರ್ವಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ಆ ಮೇಲೆ ಇತಿಹಾಸದಲ್ಲಿಯೂ ಪರೀಕ್ಷೆ ಕೊಟ್ಟು ಪಾಸಾದರು. ಅಪಾರವಾದ ಬುದ್ಧಿ ಶಕ್ತಿಯನ್ನು ನೋಡಿ ಬ್ರಿಟಿಷ್ ಸರಕಾರವು ಉಚ್ಚ ಶಿಕ್ಷಣಕ್ಕಾಗಿ ೨೦೦ ಪೌಂಡು ವಾರ್ಷಿಕ ವಿದ್ಯಾರ್ಥಿ ವೇತನ ಕೊಟ್ಟು ಇಂಗ್ಲೆಂಡಿಗೆ ಕಳುಹಿಸುವುದಾಗಿ ಇವರಿಗೆ ತಿಳಿಸಿತು. ಆದರೆ ಹರದಯಾಳರು ಸರಕಾರದ ಈ ಕೊಡುಗೆಯನ್ನು ನಿರಾಕರಿಸಿದರು. ಈ ಕುರಿತು ಅವರು ಭಾರತ ಮಂತ್ರಿಗೆ ಬರೆದ ಪತ್ರದಲ್ಲಿ "ಯಾವ ಜನಾಂಗವು ತನ್ನ ಕೋವಿ-ಗುಂಡುಗಳ ಬಲದಿಂದ ಭಾರತದ ಪ್ರಜೆಗಳನ್ನು ತನ್ನ ಗುಲಾಮರನ್ನಾಗಿ ಮಾಡಿಟ್ಟಿರುವುದೋ ಆ ಜನಾಂಗ (ಬ್ರಿಟಿಷರು)ವು ಕೊಡುವ ಯಾವುದೇ ಸಹಾಯವನ್ನಾಗಲೀ ಅಥವಾ ಉದ್ಯೋಗವನ್ನಾಗಲೀ ನಾನೆಂದಿಗೂ ಸ್ವೀಕರಿಸಲಾರೆನು" ಎಂದು ನಿರ್ಭಯವಾಗಿ ಉಲ್ಲೇಖಿಸಿದ್ದರು. ಸ್ವಪ್ರಯತ್ನದಿಂದಲೇ ಲಂಡನ್ನಿಗೆ ಹೋಗಿ ಆಕ್ಸ್‌ಫೋರ್ಡಿನ ಸೈಂಟ್ ಜೋನ್ಸ್ ಕಾಲೇಜನ್ನು ಸೇರಿ ಇತಿಹಾಸದ ವಿಶೇಷ ಅಧ್ಯಯನ ಮಾಡತೊಡಗಿದರು. ಆಗ ಇಂಗ್ಲೆಂಡಿನಲ್ಲಿ ಭಾರತದ ರಾಜನೈತಿಕ ಕ್ರಾಂತಿಕಾರಿ ದಲದ ಪ್ರಖ್ಯಾತ ವ್ಯಕ್ತಿ "ಶ್ಯಾಮಜಿ ಕೃಷ್ಣವರ್ಮ" ಎಂಬವರು ಭಾರತದ ಸ್ವಾತಂತ್ರ್ಯ ಪ್ರಾಪ್ತಿಗಾಗಿ ಸಶಸ್ತ್ರ ಹೋರಾಟದ ಯೋಜನೆಯಲ್ಲಿ ನಿರತರಾಗಿದ್ದರು. ಇವರ ಸಂಪರ್ಕ ಲಾಲಾ ಹರದಯಾಳರಿಗೆ ದೊರಕಿತು. ಅವರೊಂದಿಗೆ ಸೇರಿ ಭಾರತದ ಬಂಧವಿಮೋಚನೆಗಾಗಿ ತನ್ನ ಭಾವೀ ಜೀವನವನ್ನರ್ಪಿಸುವ ನಿರ್ಧಾರ ಮಾಡಿದರು. ಕೆಲಕಾಲ ಇಂಗ್ಲೆಂಡಿನಲ್ಲಿದ್ದು ಭಾರತಕ್ಕೆ ಬಂದು "ಸೈಂಟ್ ಸ್ಟೀಫನ್ಸ್ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಯಲ್ಲಿದ್ದರು. ಆದರೆ ಇವರ ಹೃದಯದಲ್ಲಿ ಹಿಂದೂಸ್ಥಾನದ ಬಂಧವಿಮೋಚನೆಯ ಕಾಂಕ್ಷೆ ಬಲವತ್ತರವಾಗಿದ್ದುದರಿಂದ ಅಧ್ಯಾಪಕ ವೃತ್ತಿಯನ್ನು ತ್ಯಜಿಸಿ ತನ್ನನ್ನು ಸಂಪೂರ್ಣವಾಗಿ ರಾಜಕೀಯ ಕ್ಷೇತ್ರಕ್ಕೆ ಸಮರ್ಪಿಸಿದರು.

ಸಮರ ಭೂಮಿಯಲ್ಲಿ

ಹರದಯಾಳರು ಸರಳವಾದ ದೇಶೀಯ ಉಡಿಗೆಗಳನ್ನು ಧರಿಸತೊಡಗಿದರು; ತನ್ನ ಭಾಷಣ ಮತ್ತು ಲೇಖನಗಳಲ್ಲಿ ಬ್ರಿಟಿಷ ಸರಕಾರದ ಶಾಸನವನ್ನು ಬಲವಾಗಿ ವಿರೋಧಿಸತೊಡಗಿದರು. ದೇಶದಲ್ಲೆಲ್ಲಾ ಹರಡಿಸಿದ ರಾಜಕೀಯ ಕ್ರಾಂತಿಕಾರಿ ಯೋಜನೆಗಳಿಂದ ಬ್ರಿಟಿಷ ಸರಕಾರಕ್ಕೂ ಭೀತಿಯುಂಟಾಗಿ ಇವರ ಬಂಧನಕ್ಕೆ ಸಿದ್ಧತೆ ಮಾಡತೊಡಗಿತು. ಇನ್ನಿಲ್ಲಿ ಉಳಿದರೆ ತನ್ನ ಎಲ್ಲಾ ಕಾರ್ಯ ಯೋಜನೆ ಮಣ್ಣುಪಾಲಾಗುವುದೆಂದು ತಿಳಿದು ವಿದೇಶಕ್ಕೆ ತೆರಳಲು ನಿಶ್ಚೈಸಿ ಇಲ್ಲಿ ತನ್ನ ಸ್ವಾತಂತ್ರ್ಯ ಸಮರದ ಕ್ರಾಂತಿಯು ಯಶಸ್ವಿಯಾಗಿ ಮುಂದುವರಿದು ಬ್ರಿಟಿಷ್ ಸರಕಾರವನ್ನು ಸದೆಬಡಿಯುವಂತಹ ಪ್ರಬಲವಾದ ಒಂದು ಗುಪ್ತ ದಲವನ್ನು ಸಂಘಟಿಸಿ ಅದಕ್ಕೆ ಬೇಕಾದ ಸಂಪೂರ್ಣ ನಿರ್ದೇಶನಗಳನ್ನಿತ್ತು ತಾನು ವಿದೇಶದಿಂದ ಕಾಲ ಕಾಲಕ್ಕೆ ರಹಸ್ಯವಾಗಿ ಶಸ್ತ್ರಾಸ್ತ್ರಗಳನ್ನು ಕಳುಹಿಸುವುದಾಗಿ ಆಶ್ವಾಸನೆ ಇತ್ತು ೧೯೦೮ರಲ್ಲಿ ಇಂಗ್ಲೆಂಡಿಗೆ ತೆರಳಿದರು.

ಇಂಗ್ಲೆಂಡಿನಲ್ಲವರು ಎರಡು ವರ್ಷವಿದ್ದು ಹಿಂದೂಸ್ಥಾನದಿಂದ ಬ್ರಿಟಿಷ್ ಸರಕಾರವನ್ನು ಕಿತ್ತೊಗೆಯಲಿಕ್ಕೆ ಸಮರ್ಥವಾದ ಒಂದು ಸಶಸ್ತ್ರ ಕ್ರಾಂತಿಕಾರಿ ಹೋರಾಟದ ವಿಸ್ತೃತ ಯೋಜನೆಯನ್ನು ಸಿದ್ಧಗೊಳಿಸುವುದರಲ್ಲಿ ನಿರತರಾದರು. ಅಲ್ಲಿಯೂ ಇವರ ಬಂಧನದ ಸಿದ್ಧತೆಯಾದುದು ತಿಳಿದು ಬರಲು ಒಂದು ರಾತ್ರಿ ರಹಸ್ಯವಾಗಿ ಲಂಡನಿನಿಂದ ಹೊಲ್ಯಾಂಡಿಗೆ ಪಲಾಯನ ಮಾಡಿ ಅಲ್ಲಿ ಒಂದು ವರ್ಷವಿದ್ದು ಅಲ್ಲಿಂದ ಅಮೇರಿಕಕ್ಕೆ ತೆರಳಿದರು.

ಅಮೇರಿಕದಲ್ಲೇನಾಯಿತು?

೧೯೧೧ರಲ್ಲಿ ಅಮೇರಿಕಕ್ಕೆ ಹೋದ ನಂತರ ಸಾನ್ ಫ್ರಾನ್ಸಿಸ್ಕೋದ ಒಂದು ವಿಶ್ವವಿದ್ಯಾಲಯದಲ್ಲಿ ಭಾರತೀಯ ದರ್ಶನ ಶಾಸ್ತ್ರದ ಪ್ರಾಧ್ಯಾಪಕರಾಗಿ ಕೆಲಸ ಮಾಡತೊಡಗಿದರು. ಅಲ್ಲಿಯೇ ಇವರು "ಗದರ್" (ಕ್ರಾಂತಿ) ಎಂಬ ಎಂದು ಪಕ್ಷವನ್ನು ಸಂಘಟಿಸಿ "ಕ್ರಾಂತಿ" ಎಂಬ ಒಂದು ಪತ್ರಿಕೆಯನ್ನು ಹೊರಡಿಸಿದರು. ಇದರ ಪ್ರಧಾನ ಸಂಪಾದಕತ್ವದ ಹೊಣೆಯನ್ನು ಸ್ವತಃ ಹರದಯಾಳರೇ ವಹಿಸಿಕೊಂಡರು. ಭಾರತದಿಂದ ಬ್ರಿಟಿಷರನ್ನು ಹೊರಗಟ್ಟಲು ಸಶಸ್ತ್ರ ಕ್ರಾಂತಿಕಾರಿ ಹೋರಾಟವನ್ನು ಬಲಗೊಳಿಸುವುದೇ ಈ ಪತ್ರಿಕೆಯ ಉದ್ದೇಶವಾಗಿತ್ತು. ಹರದಯಾಳರು ಅಮೇರಿಕದಲ್ಲಿರುವ ಎಲ್ಲಾ ಭಾರತೀಯರನ್ನು ಒಂದುಗೂಡಿಸಿ ಅಲ್ಲಿಯೂ ಒಂದು ದಲವನ್ನು ಸಂಘಟಿಸಿ ಭಾರತದಿಂದ ಬ್ರಿಟಿಷರನ್ನು ಹೊರದಬ್ಬಲು ಸಶಸ್ತ್ರ ಹೋರಾಟದ ಯೋಜನೆಯನ್ನು ಸಿದ್ಧಗೊಳಿಸಿದರು. ಇವರ ಪಾರ್ಟಿಯಲ್ಲಿ ಧರ್ಮ ಮತ್ತು ಸಂಪ್ರದಾಯಕ್ಕೆ ಸ್ವಲ್ಪವೂ ಸ್ಥಾನವಿರಲಿಲ್ಲ; ಪ್ರತಿಯೊಬ್ಬ ಭಾರತೀಯನೂ ಇದರ ಸದಸ್ಯನಾಗಲು ಅವಕಾಶವಿತ್ತು. ಹಿಂದೂಸ್ಥಾನದಲ್ಲಿ ಒಂದು ಸಂಪೂರ್ಣ ಸ್ವತಂತ್ರ ಪ್ರಜಾತಂತ್ರ ಸರಕಾರವನ್ನು ಸ್ಥಾಪಿಸುವುದೇ ಈ ಪಾರ್ಟಿಯ ಮೂಲ ಉದ್ದೇಶವಾಗಿತ್ತು. ೧೯೧೪ರ ಪ್ರಾರಂಭದ ತನಕ ಲಾಲಾ ಹರದಯಾಳರು ಅಮೇರಿಕೆಯಲ್ಲಿ ಸರ್ವತ್ರವೂ ತನ್ನ ಪಕ್ಷದ ಪ್ರಚಾರವನ್ನು ಪ್ರಬಲವಾಗಿ ಮಾಡಿದರು. ಅಲ್ಲಿನ ಶ್ರಮಜೀವಿಗಳ ಮುಖಂಡರ ಸಂಪರ್ಕ ಬೆಳೆಸಿದರು. ಇವರು; ಅಮೇರಿಕ ಸರಕಾರದಿಂದ ಬಂಧಿಸಲ್ಪಟ್ಟರು, ಆದರೆ ಒಂದು ಸಾವಿರ ಡಾಲರ್ ಜಾಮೀನಿನಲ್ಲಿ ಬಿಡುಗಡೆಗೊಳಿಸಲಾಯಿತು. ಬಂಧಮುಕ್ತರಾದ ಕೂಡಲೇ ಪಕ್ಷದ ಪ್ರಮುಖರು ಇವರಿಗೆ, ತಾವು ಪ್ರಕೃತದ ಪರಿಸ್ಥಿತಿಯಲ್ಲಿ ಅಮೇರಿಕದಿಂದ ಹೊರಗಿರುವುದರಿಂದ ಪಕ್ಷದ ಪ್ರಗತಿಗೆ ತುಂಬಾ ಅನುಕೂಲವಿದೆಯೆಂಬುದನ್ನು ಮನಗಟ್ಟು ಮಾಡಿ ಇವರನ್ನು ಬಹಳ ಗುಪ್ತವಾಗಿ ಸ್ವಿಜರ್ಲೆಂಡಿಗೆ ಕಳುಹಿಸಿಕೊಟ್ಟರು.

ಸಮರ ನೌಕೆ ಹೊರಟಿತು

ಭಾರತಲ್ಲಿಯೂ ಇವರ ಪಕ್ಷದ ವತಿ

(ಹನ್ನೊಂದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

			ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	....	5½
6 ತಿಂಗಳಿಂದ	12 ತಿಂಗಳ ಕೆಳಗೆ	....	6
12 ತಿಂಗಳಿಂದ	24 ತಿಂಗಳ ಕೆಳಗೆ	....	6½
24 ತಿಂಗಳಿಂದ	36 ತಿಂಗಳ ಕೆಳಗೆ	....	6¾
36 ತಿಂಗಳಿಂದ	48 ತಿಂಗಳ ಕೆಳಗೆ	.... ..	7
48 ತಿಂಗಳಿಂದ	60 ತಿಂಗಳ ಕೆಳಗೆ	....	7¼
60 ತಿಂಗಳಿಂದ	84 ತಿಂಗಳ ಕೆಳಗೆ	....	7¾
84 ತಿಂಗಳಿಂದ	120 ತಿಂಗಳ ಕೆಳಗೆ	....	8
ಸೇವಿಂಗ್ಸ್	ಖಾತೆಯ	ಮೇಲೆ	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

ಶ್ರೀ ಕೆ.ಕೆ. ಶೆಟ್ಟಿ, ಎಂ.ಎಲ್.ಸಿ.ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಯುಗಾದಿಯ ಸುದಿನದಿಂದ

ಮಿಥ್ಯಾವಾದಕ್ಕೆ ಮಿತಿ ಇರಲಿ

ಬರೆದವರು: ಶ್ರೀ ಶಿವಶಂಕರ.

ಮಿಥ್ಯಾವಾದಕ್ಕೆ ಎಳ್ಳುನೀರು ಬಿಟ್ಟು, ಪ್ರತ್ಯೇಕತೆ ಹಾಗೂ ಭಿನ್ನಭಾವನೆಗಳ ಮಿಥ್ಯಬೆಟ್ಟವನ್ನು ಕೆಡವಿ ಹಾಕಿ, ಭಾರತೀಯರೆಲ್ಲರೊಂದಾಗಿ ಇಂದು ಬೇವು—ಬೆಲ್ಲವನ್ನು ಸವಿದಲ್ಲಿ! ಆಹಾ! ಅದೆಷ್ಟು ಚೆನ್ನಾಗಿದೆ ಈ ಗಾಳಿಗೋಪುರ, ಈ ಗಗನ ಕುಸುಮ! ಈ ಗಗನ ಕುಸುಮವು ಕಾವೋ—ಲಿಂಗನ ಅಮೃತ—ಪುಷ್ಪಕ್ಕಿಂತಲೂ ಚೆನ್ನಾಗಿರಬಹುದು. ಆದರೆ ಇದು ನಿಜವಾಗಿ ಗಗನ ಕುಸುಮವೇನು? —ಅಥವಾ ಮಿಥ್ಯ ಗಗನ ಕುಸುಮವೇ?

ಬಿಸ್ತ ಕಾವೋ—ಲಿಂಗನಾದರೋ ತನ್ನ 'ಅಮೃತ-ಪುಷ್ಪ' ಅಲ್ಲದೆ 'ಸ್ವರ್ಗ ಫಲ'ಗಳಿಂದಾಗಿ ಚೈನಾದ ಚಕ್ರವರ್ತಿಯೂ ಗಿದ್ದ. ನಾವು ಈ ಗಗನ ಕುಸುಮವನ್ನು ನಂಬಿಕೊಂಡು ಅದೇನಾಗಲು ಸಾಧ್ಯ? ಅದೇನಾದರೂ ಆಗುವದಿದ್ದಲ್ಲಿ ಎಪ್ರಿಲ್ ದಿನಾಂಕ ೧ರಂದು ಮಾತ್ರ. ಆದರೆ ಬೇವು-ಬೆಲ್ಲ ತಿನ್ನುವ ದಿನ ಎಪ್ರಿಲ್ ಎರಡರಂದು.

ಬಿಸ್ತನೋರ್ವನು ಚೈನಾದ ಚಕ್ರವರ್ತಿಯಾಗಿದ್ದ ಸಂದರ್ಭ ಕ್ರಾಂತಿ ನಡೆಸಿ ಅಧಿಕಾರಕ್ಕೆ ಬಂದ ತಾನು ಅದೇತಕ್ಕೆ ಏಷ್ಯಾದ ಚಕ್ರವರ್ತಿಯಾಗಬಾರದೆಂಬ ದುರಾಕಾಂಕ್ಷೆಯಿಂದ ಚೌ-ಎನ್-ಲೈ ಮತ್ತು ಮಾವೋತ್ಸೆಟುಂಗ್ ಅಕ್ಕಪಾಸಿನ ರಾಷ್ಟ್ರಗಳ ಮೇಲೆ ಆಕ್ರಮಣ ನಡೆಸಿಕೊಂಡು ಬರುತ್ತಿದ್ದಾರೆ. ಅವರೂ ನೆಪೋಲಿಯನ್, ಹಿಟ್ಲರ್, ಮುಸಲೋನಿ ಮುಂತಾದವರ ಹೆಜ್ಜೆಗಳಲ್ಲೇ ಮುಂದಕ್ಕೆ ಹೋಗುತ್ತಿದ್ದಾರೆ. ಆ ದುರಾಕಾಂಕ್ಷೆಯಿಂದ ಅವರು ಭಾರತದ ಮೇಲೆ ನಗ್ನ ಆಕ್ರಮಣ ನಡೆಸಿರುವರಲ್ಲದೆ, ಪಾಕಿಸ್ಥಾನಿಗಳ ಬೆನ್ನು ತಟ್ಟಿ ಬಿಟ್ಟಿದ್ದಾರೆ. ಅಲ್ಲದೆ ಭಾರತದೊಳಗೆನೇ ಇರುವ ಹಿತಶತ್ರುಸದೃಶ ಕಮ್ಯೂನಿಸ್ಟರನ್ನು ಉಪಾಯಾಂತರದಿಂದ ಚೈನಾಕ್ಕೆ ಕರೆಸಿ ಗೆರಿಲ್ಲಾ ಯುದ್ಧ ರೀತಿಯನ್ನು ಕಲಿಸಿಕೊಟ್ಟಿದ್ದಾರೆ. ಬೇಂಕ್ ಓಫ್ ಚೈನಾದ ಮೂಲಕ ಇಲ್ಲಿಯ ಕಮ್ಯೂನಿಸ್ಟ್ ಪಕ್ಷಕ್ಕೆ ಹಣ ಸಹಾಯ ಮಾಡುತ್ತಿದ್ದರಲ್ಲದೆ ಕಾಂಗ್ರೆಸ್ಸಿನ ಕೆಲ ನಾಯಕರನ್ನು ಬಲೆಗೆ ತೆಗೆದುಕೊಳ್ಳಲಿಕ್ಕಾಗಿ ಹಣವನ್ನು ಮುಂಗಡವಾಗಿ ಕೊಟ್ಟಿದ್ದರು. ಕಳ್ಳತನದಿಂದ ನೇಪಾಲದ ಮೂಲಕ ಇನ್ನು ಹಲವಾರು ಸಾಮಗ್ರಿಗಳನ್ನು ಕಳುಹಿಸಿಕೊಡುತ್ತಿದ್ದಾರೆ. ಅಷ್ಟೇ ಅಲ್ಲ. ಇದೀಗ ಪುನಃ ಸಮುದ್ರ ದಾರಿಯನ್ನುಪಯೋಗಿಸಲೂ ಆರಂಭಿಸಿದ್ದಾರೆ. ಭಾರತದ ಕೆಲ ದ್ವೀಪಗಳನ್ನು ಹಿಡಿದು ಸೇನಾನೆಲೆಯನ್ನಾಗಿ ಮಾಡಲು ಗಮನಿಸುತ್ತಿದ್ದಾರೆ. ಸಿಲೋನನ್ನು ಬುಟ್ಟಿಯಲ್ಲಿ ಹಾಕಿಕೊಳ್ಳಲು ಹೊಂಚು ಹಾಕುತ್ತಿದ್ದಾರೆ. ಅಲ್ಲಿ ಅದೆಂತೋ ಜರಳೆ ಮೀಸೆ ಒಳಗೆ ಬಿಡುವಂತೆ ಅವರೂ ಕಾಲಿಟ್ಟಿರುವರು. ತಮ್ಮ ರಾಯಭಾರಿ ಕಛೇರಿಯನ್ನು ಅದಕ್ಕಾಗಿ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಕೇರಳದಲ್ಲಿ ಚುನಾವಣೆ ನಡೆದಾಗ ಸಿಲೋನಿನ ಮೂಲಕ ಚುನಾವಣಾ ಸಾಹಿತ್ಯವು ಭಾರೀ ಪ್ರಮಾಣದಲ್ಲಿ ಬಂದಿತ್ತು. ಅವು ಸಿಂಹಳದಿಂದ ಬಂದಿದ್ದುವು. ತಮಿಳು, ಮಲೆಯಾಳಂ ಹಾಗೂ ಆಂಗ್ಲೇಯ ಭಾಷೆಗಳಲ್ಲಿ ಅಚ್ಚು ಹಾಕಿಸಿದ್ದ ಸಾಹಿತ್ಯಗಳು ಸಿಕ್ಕಿವೆಯೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ. ಅಂದರೆ ಲಂಕೆಯನ್ನು ಅಂಕೆಯಲ್ಲಿಟ್ಟುಕೊಳ್ಳಲು ಅವರು ಅಧಿಕಾಧಿಕ ಪ್ರಯತ್ನಿಸುತ್ತಿದ್ದಾರೆ. ಸಿಲೋನಿನ ಮೂಲಕ ಕೇರಳ ಚುನಾವಣೆಗೆ ನಿಧಿಯೂ ಬಂದಿದೆ ಎನ್ನಲಾಗುತ್ತಿದೆ. ಇದರ ಪ್ರತಿಫಲವೆಂಬಂತೆ ಈಗ ಸಿಂಹಳದವರಿಗೂ ತಲೆನೋವು ಬಂದಿವೆ. ಇನ್ನೇನು ಮಾಡುವುದೆಂದು? ಚೈನೀ ಕಮ್ಯೂನಿಸ್ಟರ ಗೆಳೆತನದಿಂದಾಗಿ ಹಿಂದೆ ಅಲ್ಲಿ ಮಂತ್ರಿಮಂಡಳ ಉರುಳುತ್ತದೆ. ಪುನಃ ಅವರು ಹಸ್ತಕ್ಷೇಪ ನಡೆಸಿದಲ್ಲಿ ಪರಿಣಾಮವೇನಾದೀತು? ಸಿಂಹಳದಲ್ಲಿರುವ ಕೆಲವು ದೇಶೀಯ ಪಕ್ಷಗಳ ಗಮನ ಅತ್ತ ಹೋಗುತ್ತದೆ.

ಇತ್ತ, ಭಾರತದಲ್ಲಿರುವ ಕಮ್ಯೂನಿಸ್ಟರಿಗೆ ಅವರು ಅನೇಕಾನೇಕ ರೀತಿಗಳಿಂದ ಧನ ಸಹಾಯ ಹಾಗೂ ಶಸ್ತ್ರ ಸಹಾಯ ಮಾಡುತ್ತಿದ್ದಾರೆ. ಹಿಂದೆಯೇ ತಿಳಿಸಿರುವಂತೆ ಅವರಿಗೆ ಗೆರಿಲ್ಲಾ ಯುದ್ಧ ರೀತಿಯಲ್ಲಿ ಪಳಗಿಸಲಾಗಿರುತ್ತದೆ. ಭಾರತ ಸರಕಾರದ ಕಣ್ತಪ್ಪಿಸಿಕೊಂಡು ಚೈನಾಕ್ಕೆ ಹೋಗಿ ಗೆರಿಲ್ಲಾ ಯುದ್ಧ ರೀತಿಯನ್ನು ಕಲಿತುಕೊಂಡು ಬಂದವರು ಬಂಗಾಲದ ಬಳಿ ಬೀಡು ಬಿಟ್ಟಿದ್ದರು. ಅಲ್ಲಿಗೆ ರಹಸ್ಯವಾಗಿ ಭಾರತದ ಹಲವಾರೆಡೆಗಳಿಂದ ಅತ್ಯಂತ ನಂಬಿಗಸ್ಥ ಕಮ್ಯೂನಿಸ್ಟರನ್ನು ತರಬೇತಿಗಾಗಿ ಕಳುಹಿಸಲಾಗಿತ್ತು. ಅಲ್ಲಿಂದ ಬಂದಿದ್ದ ಒಂದು ತಂಡ ಆಂಧ್ರದ ಕೆಲವೆಡೆಗಳಲ್ಲಿ ಕಳೆದ ಸಲ ಹತ್ಯಾಕಾಂಡ ನಡೆಸಿರುವದನ್ನು ಜನತೆ ಮರೆತಿರಲಾರದು. ಅದೇನೋ ಆದ್ಯಾವ ದೇವರು ಕಣ್ಣು ತೆರೆದರೋ ಏನೋ, ಭಾರತ ಸರಕಾರ ಕೆಲ ಕಮ್ಯೂನಿಸ್ಟರನ್ನು ಬಂಧಿಸಿತು. ಕೆಲವರನ್ನು ಹೊರಗೆಯೇ ಬಿಟ್ಟಿತು. ಹೊರಗಿರುವವರಿಗೆ ಒಳಗಿರುವವರನ್ನು ಕಂಡು ಮಾತಾಡಲು ಅದೇನೂ ಅಡೆತಡೆಯಿಲ್ಲ! ಅವರು ಚುನಾವಣೆಗೂ ನಿಲ್ಲಬಹುದು. ಆದರೆ ಹೊರಗೆ ಬರಬಾರದು ಅಷ್ಟೇ! ಕಾರಾಗೃಹದೊಳಗಿದ್ದುಕೊಂಡೇ ಅವರು ಸರಕಾರವನ್ನು ರಚಿಸಿದರಲ್ಲ! ಅವರಿಗೆ ಬೇಕಾದ ಸಾಮಗ್ರಿಗಳನ್ನು ಕಳುಹಿಸಿಕೊಡಲು ಸರಕಾರ ಏರ್ಪಾಡು ಮಾಡೀತೇ? ಆದರೆ, ಕೇರಳದಲ್ಲಿ ಮತ್ತೆ ರಾಷ್ಟ್ರಪತಿ ಆಳಿಕೆ ಘೋಷಿಸಿರುವುದರಿಂದ ಈ ಪ್ರಶ್ನೆ ಏಳುವುದಿಲ್ಲವೆನ್ನಿ. ಹಾಗಿದ್ದರೂ ಹೊರಗಿದ್ದವರು ಸುಮ್ಮಗುಳಿಯುವರೇನು? ಭಾಷಾ ಬಡಿದಾಟ ಆರಂಭವಾದಾಗ ಅವರು ತಮ್ಮ ಬಾಲ ಬಿಚ್ಚಿದರು. ಎಲ್ಲೆಲ್ಲೂ ಗಲಭೆ ಉಂಟಾಗಲಿ, ಧಾಳಿ ನಡೆಯಲಿ, ಊರಿಗೆ ಊರೇ ಹೊಗೆಯಲ್ಲಿ ಮುಚ್ಚಿಹೋಗಲಿ, ಆಗ ಆ ಕತ್ತಲೆಯಲ್ಲಿ ನುಸುಳಿಕೊಂಡು ಚೈನಿ ಕಮ್ಯೂನಿಸ್ಟರು ಬರಲೆಂದು ಅವರು ಅತ್ಯಾಚಾರಕ್ಕೆ ಅತ್ಯಾನಂದದಿಂದ ಮುಂದಾದರು "ಭಾರತ್ ಬಂಧ್" ಕನಸು ಕೇವಲ ಕನಸಾಗಿಯೇ ಉಳಿದಾಗ ಈ ವಿಷ ಸರ್ಪ ತಲೆ ಹೊರಗೆ ಹಾಕಲು ಬಿಲ ಹುಡುಕುತ್ತಿತ್ತು. ಭಾಷಾ ಬಡಿದಾಟದ ಹುತ್ತ ಅದಕ್ಕೊಳ್ಳೆಯ ಆಶ್ರಯಸ್ಥಾನವಾಯಿತು. ಅಲ್ಲಿಂದದು ಬುಸುಗುಟ್ಟಲಾರಂಭಿಸಿತು, ಆಗಲೂ ಈ ಕಾಳಿಂಗನ ಮರ್ದನ ನಡೆಯಲಿಲ್ಲವಾದರೂ ಸ್ವಲ್ಪ ಮಟ್ಟಿಗೆ ಬಾಲ ತುಂಡಾಯಿತು. ಆದರ ಅಸಲು-ಬಡ್ಡಿ ತೀರಿಸಿಕೊಳ್ಳುವ ಸಲುವಾಗಿ ಪುನಃ ಭಾರೀ ಪ್ರಮಾಣದಲ್ಲಿ ದಂಗೆ ಏಳಲು ಅವರು ಪ್ರಯತ್ನಿಸುತ್ತಿದ್ದಾರೆ. ಆಂಧ್ರ ಪ್ರದೇಶದ ಕೆಲವೆಡೆಗಳಲ್ಲಿ ಸುತ್ತಾಡಿಕೊಂಡು ಬಂದಿರುವ ಕಾಂಗ್ರೆಸ್ ಧುರೀಣರೊಬ್ಬರು ಇದರ ವಿವರಣೆಯನ್ನಿತ್ತಿರುವರು. ನಂಬಲರ್ಹ ವಲಯಗಳಿಂದ ಗುಪ್ತ ವರದಿ ಬಂದಿರುವಾಗ ಅವರು ಹೇಳಿರುವರು. ಭಾರತದ ಗೃಹಮಂತ್ರಿ ಶ್ರೀ ಗುಲ್ಜಾರೀಲಾಲ ನಂದಾ ಅದೇನು ಕಮ್ಮಿಯೇ? ಕಮ್ಯೂನಿಸ್ಟರ ಕಾರಸ್ಥಾನದ ವರದಿ ತನ್ನ ಕೈಯೊಳಗಿದೆನ್ನುತ್ತಾರೆ. ಹಾಗಾದರೆ ಅದೇತಕ್ಕೆ ಯುಕ್ತ ಕ್ರಮ ಕೈಗೊಂಡಿಲ್ಲವೆಂದು ಕೇಳಿದರೆ ಸಮಯ ಸನ್ನಿಹಿತವಾಗಿಲ್ಲವೆನ್ನುತ್ತಾರೆ!

ಗೋವಾದಲ್ಲಿ 'ಗೋವಿಂದ' ಅನಿಸಿಕೊಂಡ ಕಾಂಗ್ರೆಸ್ಸು ಕೇರಳದಲ್ಲಾದರೂ ಹೀಗಾಗಬಾರದೆಂದು, ಕಮ್ಯೂನಿಸ್ಟರ ಬಂಧನವೆಂಬ ಹಾಸ್ಯ ನಾಟಕವನ್ನಾಡಿತು. ಆದರಿಂದ ಕಾಂಗ್ರೆಸ್ಸು ಕಥಾನಾಯಕನ ಪಾತ್ರವನ್ನು ಚೆನ್ನಾಗಿ ಆಡದೆ ಹಾಸ್ಯಗಾರನ ಪಾತ್ರವನ್ನು ಮಾತ್ರ ಚೆನ್ನಾಗಿ ಆಡಿತು. ಚುನಾವಣಾ ಕಣದಲ್ಲಿದ್ದ ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಪಟ್ಟಿಗಳಿಬ್ಬರೂ ನೆಲಕ್ಕುರುಳಿರುವರಾದರೂ ತಮ್ಮ ಮೀಸೆಗೆ ಮಣ್ಣು ತಾಗಿಲ್ಲವೆನ್ನುತ್ತಿದ್ದಾರೆ. ಜಡಿಯಲ್ಲಿ ಬಿದ್ದುಕೊಂಡಿದ್ದರೂ ಮೂಗು ಮೇಲೆನ್ನುವ ಜಾತಿಗೆ ಸೇರಿದವರು! ಅದನ್ನು ತಿಳಿಯದೇ ಇಂತಹ ಹಾಸ್ಯ ನಾಟಕದ ಆಗತ್ಯವಿಲ್ಲವೆಂದು 'ನವಯುಗ' ಎಚ್ಚರಿಕೆ ಇತ್ತಿತ್ತು. ಚುನಾವಣೆಗೆ ಕೇವಲ ಕೆಲವೇ ದಿನಗಳಿರುವಾಗ ಕಮ್ಯೂನಿಸ್ಟರನ್ನು ಬಂಧಿಸಿಡುವದು ಸರಿಯಲ್ಲ. ಅಂದರೆ ಬಂಧಿಸಿ ಒಳಗಿಟ್ಟುಕೊಂಡು ರಾಜ ಭೋಗಕ್ಕಡೆ

(ಹತ್ತನೇ ಪುಟ ನೋಡಿರಿ)

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ.ಎಲ್.ಐತಾಳ, ಎಂ.ಬಿ.ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

ಇದು ನಿ

ಪ್ರಪಂಚದಲ್ಲಿ

೧

...ನಾವು ವಾಸಿಸುತ್ತಿರುವ ಈ ಪ್ರಪಂಚವು ಮಾಯೆ ಎಂದು ಉಲ್ಲೇಖಿಸಿದ್ದರು ಕೆಲವು ಪ್ರಾಚೀನ ಆಚಾರ್ಯರು. ಅವರ ಹೇಳಿಕೆಯನ್ನು ಅದೇ ಕಾಲದಲ್ಲಿಯೇ ಖಂಡಿಸುವವರೂ ಇದ್ದರು. ಪ್ರಕೃತಿಯು ಮಾಯೆಯೆಂದು ಅದರ ಬಂಧನವನ್ನು ಮಾಯಾಪಾಶವೆಂದೂ ಹೇಳುವವರು ಇಂದಿಗೂ ಇದ್ದಾರೆ. ಆದರೆ ಈ ಪ್ರಕೃತಿಯು ಬರಿಯ ಮಾಯೆಯಲ್ಲ ಇದು ವಿಚಿತ್ರ ಸತ್ಯವಾಗಿದೆಯೆನ್ನುವುದು ತಪ್ಪೆಂದು ಹೇಳುವಂತಿಲ್ಲ. ಮಾಯೆಯೆಂದು ಪ್ರಕೃತಿಯನ್ನು ಬಿಟ್ಟು ಬಿಟ್ಟಲ್ಲಿ ಮಾನವನು ಇಂದಿನ ಸ್ಥಿತಿಗತಿಗೆ ಖಂಡಿತಕ್ಕೂ ಬರುತ್ತಿರಲಿಲ್ಲ. ಪ್ರಕೃತಿ ಸತ್ಯವಾದುದು; ಅದನ್ನು ಸಂಪೂರ್ಣವಾಗಿ ಅರಿತುಕೊಳ್ಳುವ ಪ್ರಯತ್ನ ಮಾಡಿದರೆ, ಅದರಿಂದ ಸುಖವು ಲಭಿಸುವುದು. ಈ ಸುಖವು 'ಪರ ಪೀಡನದಿಂದ ದೊರೆಯಬಾರದು, ಪರೋಪಕಾರದಿಂದ ಸಿಗುವಂತಾಗಬೇಕು.

ಕ್ಷಣ ಕ್ಷಣಕ್ಕೂ ಪ್ರಕೃತಿಯು ಸ್ವರೂಪ ಬದಲಾಯಿಸಿರುತ್ತದೆ; ಆದುದರಿಂದಲೇ ಅದರ ಅಧ್ಯಯನದಲ್ಲಿ ಆಸಕ್ತಿ, ಕುತೂಹಲ ಹೆಚ್ಚು. ಕ್ಷಣವೊಂದರಲ್ಲೇ ಯುಗಾಂತರದ ಪರಿವರ್ತನೆಯನ್ನು ನಾವು ಪ್ರಕೃತಿಯಲ್ಲಿ ಕಾಣಬಹುದು. ಆದುದರಿಂದಲೇ ಪ್ರಕೃತಿಯು ಚಿತ್ರ ವಿಚಿತ್ರವಾದುದು, ಅದರ ಅಧ್ಯಯನವು ಪರಿಪೂರ್ಣವಾಗುತ್ತ ಬಂದಂತೆ, ಅದರ ಸತ್ಯದರ್ಶನದ ಅರಿವೂ ನಮಗಾಗುತ್ತ ಬರುತ್ತದೆ. ಇಲ್ಲಿನ ಕೆಲವು ಚಿತ್ರಗಳು ಈ ಮಾನವನ ವಾಸಸ್ಥಾನವಾದ ಪ್ರಕೃತಿಯ ವಿಚಿತ್ರತೆಯನ್ನು ತೋರಿಸುತ್ತವೆ.

ಪ್ರಪಂಚದಲ್ಲಿ ಇಂದು ಸರ್ವಶಕ್ತಿವಂತ, ಸುಸಂಪನ್ನ ರಾಷ್ಟ್ರವೊಂದಿದ್ದರೆ, ಅದು ಅಮೆರಿಕೆ. ಜಗತ್ತಿನ ಹೆಚ್ಚಿನ ರಾಷ್ಟ್ರಗಳು ತಮ್ಮ ಆಗುಹೋಗುಗಳಿಗೆ ಅಮೆರಿಕೆಯ ಮುಖವನ್ನೇ ನೋಡುತ್ತಿವೆ. ಜನಜೀವೃದ್ಧ ದೇಶವಾದ ಭಾರತದ ಮಟ್ಟಿಗಂತೂ ಅಮೆರಿಕೆಯು ಕುಬೇರನ ಭಂಡಾರದಂತಿದೆ. ನಮ್ಮ ಒಂದಲ್ಲ ನೂರು ಯೋಜನೆಗಳು ಅಮೆರಿಕೆಯ ನೆರವಿನಿಂದಲೇ ಪೂರ್ಣ ಸ್ವರೂಪವನ್ನು ಪಡೆಯುತ್ತಿವೆ. ಅಂದರೆ, ನಮ್ಮ ಸಮಸ್ಯೆಗಳಿಗೆ ಪರಿಹಾರ ಹೇಳಲು ಅಮೆರಿಕೆಯು ನೆರವಾಗುತ್ತಿದೆ. ಅಮೆರಿಕೆಯಲ್ಲಿ ಸಮಸ್ಯೆಗಳೇ ಇಲ್ಲವೇನು? ಇದ್ದೇ ಇವೆ. ಮೊದಲನೆಯ ಚಿತ್ರವನ್ನು ನೋಡಿರಿ. ಇಲ್ಲಿ ಕೆಲವು ಮಕ್ಕಳನ್ನು ನಾವು ಕಾಣಬಹುದು. ಎರಡನೆಯ ಮಹಾಯುದ್ಧಾನಂತರದ ಏರಿಳಿತಗಳ ಕಾಲದಲ್ಲಿ ಜನಿಸಿದವರಿವರು. ಇವರೀಗ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಅವಕಾಶ ಕಾಯುತಿದ್ದಾರೆ. ಇವರಿಗೆ ಉಚ್ಚ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡುವುದೇ ಇಂದು ಅಮೆರಿಕೆಯ ತಲೆ ತಿನ್ನುವ ಸಮಸ್ಯೆಯಾಗಿದೆ. ಸುಮಾರು ೫೦ ಲಕ್ಷ ಯುವಕ ಯುವತಿಯರು ಅಮೆರಿಕೆಯ ಪದವಿ ತರಗತಿಗಳಲ್ಲಿ ಓದುತ್ತಿದ್ದಾರೆ. ೫೨೦ ಲಕ್ಷ ಮಕ್ಕಳು ಶಾಲೆಗಳಲ್ಲಿ ಶಿಕ್ಷಣ ಪಡೆಯುತಿದ್ದಾರೆ. ವಿದ್ಯಾಭ್ಯಾಸದ ಸೌಕರ್ಯಗಳು ಅಷ್ಟೊಂದು ವಿಸ್ತೃತವಾಗಿದ್ದರೂ ಅಮೆರಿಕೆಯೂ ಸಮಸ್ಯೆಯನ್ನೆದುರಿಸಬೇಕಾಗಿದೆ ಎಂಬುದು ವಿಚಿತ್ರವಾದರೂ ಸತ್ಯವಲ್ಲವೆ?

ಭಾರತದ ಶಿಖರದಲ್ಲಿದೆ ಲಡಾಖ್. ಇಲ್ಲಿ ನಡೆದಿದೆ ಶತ್ರು ಕೆಂಪು ಚೀನೀಯರ ಕ್ರೂರಾಕ್ರಮಣ. ಎರಡು ವರುಷಗಳ ಮೊದಲು ಗುಂಡು-ಟ್ಯಾಂಕರುಗಳ ಸ್ಫೋಟವೂ ನಡೆದಿತ್ತು. ಅಲ್ಲಿ ನೆಲಸಿರುವ ಭಾರತೀಯರ ಜೀವನ ಕ್ರಮದಲ್ಲಿಯೂ ಏರುಪೇರುಗಳಾಗಿದ್ದುವು. ಜನಸಾಮಾನ್ಯರು ಆಕ್ರಮಣವಾದೊಡನೆಯೇ ಊರು ಬಿಟ್ಟು ಸುರಕ್ಷಿತ ಪ್ರದೇಶಗಳಿಗೆ ಧಾವಿಸುತಿದ್ದರು. ಆದರೆ, ಲಡಾಖದ ಧೀರ ಪ್ರಜೆಗಳೂ ಹಾಗೆ ಮಾಡಲಿಲ್ಲ. ಲಡಾಖದಲ್ಲಿರುವವರು ಲಾಮಾಗಳು ಮತ್ತು ಗೋಂಪಾಗಳು, ಹಿಮಾಲಯದ ಬೆಟ್ಟಗಳ ಇಳಿಜಾರುಗಳಲ್ಲಿ ಇವರು ಇಂದಿಗೂ ಸಂತೋಷದಿಂದಲೇ ನೆಲಸುತ್ತಿದ್ದಾರೆ, ವಿಶ್ವಸ್ಥರಾಗಿ ನಡೆದುಕೊಂಡು ಬರುತ್ತಿದ್ದಾರೆ. ಭಾರತ ಸರಕಾರದ ಆಶ್ರಯದಲ್ಲಿ ನವಜೀವನ ಮತ್ತು ನವಾಕಾಂಕ್ಷೆಗಳಿಂದ ಕೂಡಿ ಬಾಳುತ್ತಿದ್ದಾರೆ. ಹೊಸತಾಗಿ ತೆರೆದ ಕೈಗಾರಿಕಾ ಕೇಂದ್ರವೊಂದರಲ್ಲಿ ಲಡಾಖಿಗಳು ನಿಶ್ಶಂಕೆಯಿಂದ ಕಾರ್ಯತತ್ಪರರಾಗಿರುವುದನ್ನು ಎರಡನೆಯ ಚಿತ್ರದಲ್ಲಿ ನೋಡಬಹುದು.

ಸಾಮಾನ್ಯ ಜನರು ಅಂಜಿ ಅಡಗಿಕೊಂಡಿರುತ್ತಿದ್ದ ವೇಳೆಯಲ್ಲಿಯೂ ಕೆಚ್ಚೆದೆಯ ಲಡಾಖೀ ರೈತನೊಬ್ಬನು ತನ್ನ ದಿನಚರ್ಯೆಯಂತೆ ಹಿಮಾಚ್ಛಾದಿತ ಗದ್ದೆ

೨

ತಿಳಿದಿರಲಿ

ಚಿತ್ರ ಸತ್ಯಗಳು

ಯಲ್ಲಿ ಕಂಬಗಳನ್ನು ಮೇಯಿಸುತ್ತ ಇರುವುದನ್ನು ಮೂರನೆಯ ಚಿತ್ರದಲ್ಲಿ ಕಾಣಬಹುದು. ಇವೆರಡೂ ವಿಚಿತ್ರ ಸತ್ಯ ಸಂಗತಿಗಳು; ಅತಿಶಯೋಕ್ತಿಯಲ್ಲ.

ಪ್ರಕೃತಿಯ ಶಕ್ತಿಗಳಲ್ಲಿ ಶಕ್ತಿಶಾಲಿ ಅಣು ಶಕ್ತಿ. ಪ್ರಕೃತಿಯು ಮಾಯೆಯೆಂದು ಕಣ್ಣು ಮುಚ್ಚಿ ಕುಳಿತಿದ್ದರೆ, ಈ ಅದ್ಭುತ ಶಕ್ತಿಯು ಪರಿಜ್ಞಾನವೇ ಮಾನವನಿಗಿರುತ್ತಿರಲಿಲ್ಲ. ಪ್ರಕೃತಿಯ ಸತ್ಯ ಶೋಧಕರ ಅನವರತ ಶ್ರಮದ ಪರಿಣಾಮವಾಗಿ ಅಣು ಶಕ್ತಿಯು ಆವಿಷ್ಕಾರವಾಗಿದೆ. ಇದನ್ನು ಮಾರಕಾಸ್ತ್ರವನ್ನಾಗಿ ಬಳಸದೆ ಮಾನವ ಕಲ್ಯಾಣಕ್ಕೆ ಉಪಯೋಗಿಸುವ ಕಾರ್ಯ ವೇಗ ಎಡೆಬಿಡದೆ ಸಾಗುತ್ತಿದೆ. ವಿಚಿತ್ರ ಸತ್ಯವಾದ ಇದೂ ಇಂದು ಸಾಧ್ಯವೆನಿಸಿದೆ. ನಾಲ್ಕನೆಯ ಚಿತ್ರದಲ್ಲಿ ಅಮೇರಿಕೆಯ ಯಾಂಕಿಯಲ್ಲಿ ಅಣುಶಕ್ತಿ ಇಂಧನದ ಪೂರೈಕೆಯ ಮಾರ್ಗವನ್ನು ತಂತ್ರಜ್ಞನೊಬ್ಬನು ಸೂಕ್ಷ್ಮ ಪರಿಶೀಲನೆಗೆ ಗುರಿಮಾಡಿದ್ದಾನೆ. ಈ ಶಕ್ತಿಯಿಂದಲೇ ಆಧುನಿಕ ಯಂತ್ರೋದ್ಯಮಗಳು ಬೆಳೆದು ಬರಲು ಸಾಧ್ಯವಾಗುವುದು.

ಪಿಯಾನೋ ಪಾಶ್ಚಾತ್ಯ ದೇಶಗಳ ಪ್ರಸಿದ್ಧ ವಾದ್ಯ. ಕೆಲ ಸಮಯಕ್ಕೆ ಮೊದಲು ಅಮೇರಿಕೆಯ ರೋಚೆಸ್ಟರ್‌ನಲ್ಲಿ ಪಿಯಾನೋಗಳ ಪರ್ವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಇದರಲ್ಲಿ ಭಾಗವಹಿಸಿದರು ಬರೇ ಪ್ರಸಿದ್ಧ ಪಿಯಾನೋ ವಾದಕರಲ್ಲ; ಆರಿಂದ ೧೬ ವಯಸ್ಸಿನ ಪುಟ್ಟ ಮಕ್ಕಳೂ ಉತ್ಸಾಹದಿಂದ ಪಾತ್ರವಹಿಸಿದ್ದರು. ಮಕ್ಕಳೂ ಪಿಯಾನೋ ಬಾರಿಸುವಲ್ಲಿ ನಿಷ್ಣಾತರಾಗುತ್ತಾರೆಂದು ಹೇಳಿದರೆ, ವಿಚಿತ್ರವಾಗಿ ತೋರಬಹುದು. ಆದರೆ, ಅದು ಸತ್ಯಸಂಗತಿ. ಐದನೆಯ ಚಿತ್ರದಲ್ಲಿ ಪರ್ವ ದಿನದಂದು ಓರಣವಾಗಿಟ್ಟ ೬೮ ಪಿಯಾನೋಗಳನ್ನು ನೋಡಬಹುದು.

೨

ಪ್ರಪಂಚ ಜಡವಲ್ಲ; ಸಚೇತನವೇ. ಆದರ ಚೈತನ್ಯವನ್ನು ನಾವು ಅರಿತುಕೊಂಡಿಲ್ಲವಷ್ಟೆ. ಯಾವುದೇ ಒಂದು ಪ್ರಕೃತಿ ಸತ್ಯವನ್ನು ಮೊದಲಾಗಿ ಮಾನವ ಕಂಡುಕೊಂಡಾಗಲೇ ಅದು ವಿಚಿತ್ರ ಸತ್ಯವಾಗುವುದು. ಈ ಜಗತ್ತು ಈ ಬಗೆಯ ಅನಂತ ವಿಚಿತ್ರ ಸತ್ಯಗಳಿಂದ ತುಂಬಿಕೊಂಡಿದೆ. ಅದನ್ನು ಅರಿತುಕೊಳ್ಳುವಲ್ಲಿ ವಿಜ್ಞಾನವು ಪ್ರಯತ್ನಿಸುತ್ತಿದೆ; ತನ್ನ ಸಾಧನೆಯಲ್ಲದು ಯಶಸ್ಸನ್ನೂ ಗಳಿಸುತ್ತಿದೆ. ಇದು ಭೌತಿಕ ಉನ್ನತಿಯೆಂದನ್ನಬಹುದಾದರೂ ಆಧ್ಯಾತ್ಮಿಕೋನ್ನತಿಯನ್ನದು ಅವಹೇಳನ ಮಾಡುವುದಿಲ್ಲ. ಮಾನವನ ಮಂಗಲಕ್ಕಾಗಿಯೇ ಪ್ರಕೃತಿಯ ಸತ್ಯಶೋಧನೆಯಾಗಬೇಕು. ಅದರಿಂದ ಸಮಸ್ಯಾ ಪರಿಹಾರವಾಗಬೇಕು.

೫





ಹಿಡಿತವಿಲ್ಲದ ಸಿಟ್ಟು ಮನುಷ್ಯನನ್ನು ಕುರೂಪಿಯಾಗಿ, ಪ್ರಾಣಿಸಮಾನನಾಗಿ ತಳಿಗೇಡಿಯಾಗಿ ತೋರಿಸುವಷ್ಟು ಯಾವ ಶರೀರದ ನ್ಯೂನತೆ, ವಿದ್ಯೆ, ಸಂಸ್ಕೃತಿಗಳ ಅಭಾವ ತೋರಿಸಲಾರದು.

೦ ೦ ೦

ಸಮಕಾಲೀನರು ವ್ಯಕ್ತಿಯ ಸಾಧನೆಗಿಂಥಾ ಅತನ ವ್ಯಕ್ತಿತ್ವವನ್ನು ಹೊಗಳುತ್ತಾರೆ. ಆದರೆ ಚರಿತ್ರಕಾರರು ವ್ಯಕ್ತಿಯ ವ್ಯಕ್ತಿತ್ವಕಿಂಥಾ ಆತನ ಯೋಗ್ಯತೆಯನ್ನು ತಿಳಿಯುತ್ತಾರೆ.

ನಮ್ಮ ಜನ!

(ಚುಟುಕ)

ಹಳ್ಳಿಯಲ್ಲಿ ಇರುವ ಜನ
ನಗರ ಸೇರಿ ಭಾರಿ ಹಣ
ಗಳಿಸಬಹುದು ಎಂಬ ಘನ
ಉದ್ದೇಶದಿ ದುಡಿಯೆ—ಹಣ!

—ಶಾಂತಾ ಕುಮಾರಿ,
ಮಂಗಳೂರು

ಮಿಥ್ಯವಾದಕ್ಕೆ ಮಿತಿ ಇರಲಿ

(ಏಳನೇ ಪುಟದಿಂದ)

ಮಾಡಿ ಕೊಡ ಕೂಡದು. ಅಪರಾಧಿಗಳ ವಿಚಾರಣೆ ನಡೆಯಲಿ. ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ. ದೇಶ ದ್ರೋಹಿಗಳ ದಮನವಾಗಲೆಂದು 'ನವಯುಗ' ನುಡಿದಿತ್ತು. ನಂದಾರವರ ನಾಟಕ ಕೂಟ ಆ ರೀತಿ ವರ್ತಿಸಲಿಲ್ಲ. ಅದು ಕೈ ತೋರಿಸಿ ಅಶುಭ ನುಡಿಗಳನ್ನು ಲಾಲಿಸಿತು. ಇನ್ನಾದರೂ ಅವರು ಕಣ್ಣು ತೆರೆದು ಭ್ರಷ್ಟಯ ಲೋಕದಿಂದ ಭೂಲೋಕಕ್ಕೆ ಬಂದಾರೇ? ಇದು ಭಾರತೀಯರ ಹಗಲು ಕನಸೇನು?

ಕೇರಳದಲ್ಲಿ ಕಮ್ಯೂನಿಸ್ಟರಿಗೆ ನಲ್ವತ್ತು ಸ್ಥಾನ ಸಿಕ್ಕಿರುವದು ಚೈನೀ ಕಮ್ಯೂನಿಸ್ಟರ ಪಾಲಿಗೆ ನಲ್ವತ್ತು ಸಾವಿರ ಚದರ ಕಿಲೋಮೀಟರು ತಮ್ಮ ವಶಕ್ಕೆ ಬಂದಂತಾಗಿದೆ. ಸ್ಥಾನ ಸಿಕ್ಕಿರುವದು ಕೇರಳದಲ್ಲಾದರೂ ವೈಭವ ನಡೆದದ್ದು ಚೈನಾದಲ್ಲಿ! ಅಲ್ಲಿ ಹಬ್ಬವನ್ನೇ ಆಚರಿಸಲಾಯಿತು. ಇನ್ನೂ ಒಂದಿಪ್ಪತ್ತು ಸ್ಥಾನ ಸಿಕ್ಕಿರುತ್ತಿದ್ದಲ್ಲಿ ಚೈನಾದಲ್ಲಿ ಇಪ್ಪತ್ತು ದಿನ ಹಬ್ಬ ಆಚರಿಸಲಾಗುತ್ತಿತ್ತೋ, ಏನೋ? ಅಬ್ಬಾ! ಅವರ ಸಡಗರ ಹೇಳತೀರದು! ಅಷ್ಟು ಸ್ಥಾನ ಸಿಕ್ಕಿದೆಯಾದರೂ ಸರಕಾರ ರಚಿಸಲು ಸಾಧ್ಯವಾಗದಿರುವ ಕಾರಣ ಚೈನೀ ಕಮ್ಯೂನಿಸ್ಟರು ಸ್ವಲ್ಪ ತಣ್ಣಗಾಗಿದ್ದಾರೆ. ಗಡಿಯಲ್ಲಿ ಸಿದ್ಧವಾಗಿರುವ ಚೈನಿ ಸೇನೆ ಸ್ವಲ್ಪ ಬಾಲ ಬಿಚ್ಚಿದ್ದಲ್ಲೂ ಉಳಿದ ಕಮ್ಯೂನಿಸ್ಟರಿಗೆ ಅಪಾಯವಾಗ ಬಹುದೆಂಬ ಭಯದಿಂದ ಅವರು ಈಗ ಬೇರೆ ವೇಷ ಹಾಕಿಕೊಂಡಿದ್ದಾರೆ. ಪಾಕಿಸ್ಥಾನಿಗಳ ಬೆನ್ನು ತಟ್ಟಿ ಮುಂದಕ್ಕೆ ಬಿಟ್ಟಿದ್ದಾರೆ. ಈ ಮತಾಂಧರು ಮದೋನ್ಮತ್ತರಾಗಿ ಕಿರುಕುಳ ಕೊಡಲಾರಂಭಿಸಿರುವರು.

ನಮ್ಮ ಸರಕಾರ ಏನು ಮಾಡುತ್ತಿದೆ?

ಪಾಕಿಸ್ತಾನಿಗಳ ಪೈಶಾಚಿಕ ಪೀಡೆಯ ಕುರಿತು ಲೋಕಸಭೆಯಲ್ಲಿ ಬಿಸಿ ಬಿಸಿ ವಾಗ್ಯುದ್ಧ ನಡೆದಾಗ ಮಂತ್ರಿಮಂಡಳದ ಪರವಾಗಿ ಸಂಬಂಧಪಟ್ಟ ಸಚಿವ ಶ್ರೀ ಸ್ವರಣ ಸಿಂಘರು ಅಲ್ಲಿಂದಲೇ ಪಾಕಿಸ್ತಾನಕ್ಕೆ ಎಚ್ಚರಿಕೆಯನ್ನಿತ್ತರು. ಭಾರತ ಭೂಪ್ರದೇಶದ ಪ್ರತಿಯೊಂದು ಅಂಗುಲ (ಇಂಚು)ವನ್ನೂ ಕಾಪಾಡಲಾಗುವದೆಂದೂ ಕೂಚ್-ಬಿಹಾರ್ ಪ್ರದೇಶದಲ್ಲಿ ಪಾಕಿಸ್ತಾನವು ಅದುವರೆಗೆ ವಶಪಡಿಸಿಕೊಂಡಿಲ್ಲವೆಂದೂ ಅವರು ಆಗ ಸದಸ್ಯರಿಗೆ ತಿಳಿಸಿದರು. ಒಂದಂಗುಲವೆಂದೊಡನೆ ಜನಮನ ಸೆಳೆದುಕೊಳ್ಳುತ್ತಿದ್ದ ಜವಾಹರಲಾಲಜೀಯರಚಿತ್ತ ಹೊಳೆಯುತ್ತಿದೆ. ಅವರೂ ಅದೇ ರೀತಿ ಹೇಳುತ್ತಿದ್ದರು. ಆಗ ಕೆಲವರು "ನಿಮ್ಮ ಒಂದು ಅಂಗುಲಕ್ಕೆ ಅದೆಷ್ಟು ಮೈಲು"ಗಳೆಂದು ಕೇಳುತ್ತಿದ್ದರ. ಇಂದು ಅದಕ್ಕೆ ಬೇರೆಯೇ ಅರ್ಥ ಬರುತ್ತಿದೆ. ಕೆಲವು ವಾರಗಳ ಹಿಂದೆ ಪತ್ರಿಕೆಯಲ್ಲಿ ಒಂದು ಸರಕಾರಿ ಜಾಹಿರಾತು ಪ್ರಕಟವಾಗಿತ್ತು. ಅದು ಈಗಿನ ತೂಕಗಳಿಗೆ ಸಂಬಂಧಪಟ್ಟ ಜಾಹೀರಾತು. ಅದರಲ್ಲಿ ಸೇರು ಅಥವಾ ರಾತ್ಲುಗಳೆಂದು ನ್ಯಾಯ ಬಾಹಿರ ತೂಕಗಳೆಂದೂ, ಆ ತೂಕಗಳನ್ನುಪಯೋಗಿಸುವ ವ್ಯಾಪಾರಿ ಶಿಕ್ಷಾರ್ಹನೆಂದೂ, ಕೊಂಡುಕೊಳ್ಳುವವರಿಗೆ ಒಡನೆ ಶಿಕ್ಷೆ ಸಿಗುತ್ತದೆಂದೂ ತಿಳಿಸಲಾಗಿತ್ತು. ಸೇರು ಅಥವಾ ರಾತ್ಲುಗಳಂತೆ ಅಂಗುಲ ಕೂಡಾ ಇಂದು ನ್ಯಾಯ ಬಾಹಿರ ಅಳತೆಗೋಲಲ್ಲವೇ? ಶ್ರೀ ಸ್ವರಣ ಸಿಂಘರು ಉದ್ದೇಶಪೂರ್ವಕವಾಗಿ ಈ ಶಬ್ದವನ್ನುಪಯೋಗಿಸಿರುವರೇ? ಸರಕಾರ ಅಥವಾ ಈಗಿನ ಮಂತ್ರಿಮಂಡಲ ಅಂಗುಲ ಲೆಖ್ಖದಲ್ಲಿ ಭೂಪ್ರದೇಶವನ್ನು ಬಿಟ್ಟು ಕೊಡುವದಿಲ್ಲ, ಬದಲು ಕಿಲೋ ಮೀಟರ್ ಲೆಖ್ಖದಲ್ಲಿ ಬಿಟ್ಟು ಕೊಡುತ್ತದೇನು? ಹೌದು. ಅಂಗುಲದ ಮಾತು ಕೇಳಿದ ಭಾರತೀಯರಿಗೆ ಒಡನೆ ಶಿಕ್ಷೆ ದೊರಕಿರುತ್ತದೆ. ದೇಶದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲಾರದ ಪ್ರಜೆಗಳೆಂಬ ಅಪಮಾನದ ಶಿಕ್ಷೆಗೆ ಹಾಗೂ ಪವಿತ್ರ ವಾಕ್ಷಲ್ಯಮಯ ಭಾರತಮಾತೆಯನ್ನು ಅನ್ಯರ ಆಕ್ರಮಣಕ್ಕೊಳಗಾಗಲು ಬಿಟ್ಟಿರುವ ಪಾಪದ ಶಿಕ್ಷೆಗಿಂದು ಒಳಗಾಗಿರಬೇಕಾಗಿರುತ್ತದೆ ಅವರು.

ಹೀಗಿರುವಾಗ ಭಾರತೀಯರೆಲ್ಲರೊಂದಾಗಿ ಇಂದು ಬೇವು-ಬೆಲ್ಲವನ್ನು ಸವಿಯುವದು ಕನಸಿನ ಮಂಡಿಗೆ ಸಂತಿದೆ. ಅದು ಅಸಾಧ್ಯವೆನ್ನುವದು ಸರಿಯಲ್ಲ. ಆ ದಾರಿಯಲ್ಲಿ ಸರಕಾರವಾದರೋ ಮಿಥ್ಯ ವಾದಕ್ಕೆ ಬಲಿಯಾಗುತ್ತದೆ. ಚಾಂದ್ರಮಾನ ಅಥವಾ ಸೌರಮಾನ ಯುಗಾದಿಯಿಂದ ಹೊಸ ವರುಷ ಆರಂಭಿಸದೆ ಆಟು ಬೇರೆಯೇ ದಿನದಿಂದ ಹೊಸ ವರ್ಷವನ್ನಾರಂಭಿಸುತ್ತದೆ; ಎಲ್ಲಿ ಜಾತೀಯತೆಯು ಲೇಪ ತಾಗೀತೋ ಎಂದು. ನಿಧರ್ಮಿಯ ರಾಷ್ಟ್ರವೆಂಬುದನ್ನು ಎತ್ತಿ ತೋರಿಸಬೇಕಲ್ಲಾ? ಪ್ರತಿಯೊಂದು ವಿಷಯದಲ್ಲಿ ಹೀಗೆಯೇ ಇದೆ ನಮ್ಮ ಸ್ಥಿತಿ. ಒಂದಂಗುಲ ನೆಲವನ್ನು ಬಿಡಲಾರೆವೆಂದು ಇಂದೂ ಹೇಳುತ್ತಿದ್ದೇವೆ. ಗಡಿಯಲ್ಲಿ ಮಾತ್ರ ಅದೇನು ನಡೆಯುತ್ತಿದೆ—ಗಡಿಬಿಡಿ. ಹೌದು, ಈ ಮಂತ್ರಿಮಂಡಳ ಗಡಿಯನ್ನು ಬಿಡುತ್ತಿದೆ.

ಆಕ್ರಮಣಗಾರರಿಗೆ ಅದರ ಅನುಭವವಾಗಿರುತ್ತದೆ. ಮಾನವ ರಕ್ತದ ರುಚಿ ನೋಡಿದ ಹುಲಿ ಮತ್ತೆ ಮಾನವನನ್ನೇ ಹುಡುಕುತ್ತದೆ. ಹಾಗೆಯೇ ಆಕ್ರಮಣಗಾರರು ಕಾಶ್ಮೀರದಲ್ಲಿ, ಕೂಚ್-ಬಿಹಾರಿನಲ್ಲಿ, ಜಲಪಾಯಿಗುರಿಯಲ್ಲಿ, ಕಚ್ಛಿನಲ್ಲಿ ಮುಂದೆ ಬರುತ್ತಿದ್ದಾರೆ.

ಇಂದಿನ ಪರ್ವದಿನದಲ್ಲಿ ಮಿಥ್ಯವಾದಕ್ಕೊಂದು ಪೂರ್ಣ ವಿರಾಮ ಹಾಕಿ ಬಿಡೋಣ. ರಾಷ್ಟ್ರದ ಗೌರವದ ಮುಂದೆ ಎಲ್ಲವೂ ಕಿಂಚಿತ್ತೆನ್ನುವ ಧ್ಯೇಯ ನಮ್ಮ ಮುಂದೆ ಇರಲಿ. ಆಗ ಮಾತ್ರ ಬೇವು-ಬೆಲ್ಲವನ್ನು ಸವಿಯಲು ಸಾಧ್ಯ. ಇಲ್ಲದಿದ್ದಲ್ಲಿ ಕೇವಲ ಬೇವು ಮಾತ್ರ ಜನತೆಯ ಪಾಲಿಗೆ. ಅದಕ್ಕೊಂದು ಮಿತಿ ಇರಲಿ.

ಬರಲಿ ನಿದ್ದೆ

ಹೃದಯ ವೀಣೆ ಮಿಡಿದು ನುಡಿವ
ಬಯಕೆ ಹುಟ್ಟಿದೆ।
ಉಷೆಯು ಬೇಡ, ನಿಶೆಯು ಬೇಕು
ಭಾವ ನೆಟ್ಟಿದೆ ॥೧॥

ತಿಳಿವು ಸಾಕು, ಮರವೆ ಬೇಕು
ಹರಿಸೆ ಚಿಂತೆಯ।
ಇಳಿಸ ಬೇಕು ಮಾನವಿರದ
ಬಾಳ ಕಂತೆಯ ॥೨॥

ಸಕ್ಕದಳವು ಮಿಥ್ಯೆಯಾಳವು
ಪ್ರೇತ ನರ್ತನ।
ಕಾಣಲಾರೆ ಕಲ್ಲದಿರುವ
ಪ್ರೀತಿ ವರ್ತನ ॥೩॥

ಬಸವ ನನ್ನ ಸುಡುವ ಬನ್ನ
ಹನಿವು ಶಾಂತವು।
ಮುಗಿಸಬೇಕು ಬರಿದು ಬೇಗ
ಕರ್ಮ ಕಾಂಡವ ॥೪॥

ಬದುಕು ಬರಡು ದೇಹ ಕೊರಡು
ಬಹಳ ತೇದಿದೆ।
ಸುಖದ ನೆಂಟು, ಕನಸ ಗಂಟು
ಬರಿದೆ ಯೋದಿದೆ ॥೫॥

ಕಾಡ ಸುಟುವ ಕಾಂಬರಿಲ್ಲ
ಜೀವ ನೊಂದಿದೆ।
ಬರಲಿ ನಿದ್ದೆ ಬಯಕೆ ಗೆದ್ದೆ
ಬಟ್ಟೆ ಹೊಂದಿದೆ ॥೬॥

—ಪಿ. ಶಾಮ ಭಟ್, ಪೆರಡಾಲ.

ಕೆದಕದಿರು ವಿರಹವನು

ಸಂಜೆಯಿದ್ದಿತು ಹೊನ್ನ
ಕುಡಿಕೆ ಮುಚ್ಚಳ ತೆರೆದು
ಕಿರಣ ಗಂಗೆಯು ಇಳೆಗೆ
ಜಾರಿದಂತೆ
ಕೋಟಿ ಕುಸುಮಗಳರಳಿ
ನಗುತಲಿದ್ದುವು ಬನದಿ
ಇಂದ್ರ ಚಾಪದ ಚೂರು
ಚೆಲ್ಲಿದಂತೆ.

ಬಣ್ಣ ಬಣ್ಣದ ಬೆಳಕು
ಕಣ್ಣಬಿಟ್ಟಿತ್ತಲ್ಲಿ
ಮಧುರ ಭಾವಗಳೆಲ್ಲ
ನುಡಿಯು ವಂತೆ
ರೂಪರಾಗಿ ಪತಂಗ
ಮೇಳ ನಡೆದಿತ್ತಲ್ಲಿ
ಪ್ರಣಯ ಪ್ರಕರಣ ಚಿತ್ರ
ಚಲನದಂತೆ.

ಆ ಪುಷ್ಪ ಆ ಭೃಂಗ
ಮಿಲನರಂಗದ ನಡುವೆ
ನಿಂತು ನೋಡುವ ಆ—
ಕೃತಿಯದೇನು?
ಹೊನ್ನ ಸಂಜೆಯು ಹೋತ್ತು
ಪ್ರಿಯತಮನ ಕಾದಿರುವ
ಹೆಣ್ಣಲ್ಲ, ಹೂವಲ್ಲ
ಅವಳು ಹೆಣ್ಣು.

ಕಾಡದಿರು ಓ ವಿಧಿಯೆ
ಕೆದಕದಿರು ವಿರಹವನು
ಬೇಗ ಕಳುಹಿಸು ಅವಳ
ಇನಿಯನನ್ನು
ಕತ್ತಲಾದರೆ ಮತ್ತೆ
ಕಾಣಲಾರದು ಕಣ್ಣು
ಕೊಲ್ಲದಿರು ಹೆಣ್ತನದ
ಸಹನೆಯನ್ನು.

—"ಸಾಗರ್"

In the Court of the Munsif cum Magistrate, Belthangady.

S. C. No. 5/1965.

Between

Sankappa Kambli *Plaintiff*

and

Allu Rego.............*Defendant*

To the defendant. Sri Allu Rego s/o Rai Rego, residing at Mithabettu of Hosangady Village, Belthangady Taluk, P. O. Perinje, S. Kanara.

Please take notice that the above suit filed by the plaintiff for the realisation of the plaint amount due to him has been posted to 9-4-65 for your notice. If you fail to appear on 9-4-1965 before this Court in the said suit the same will be decided in your absence.

(By order of the Court)

(*Sd.*) B. K. R. Ballal
Advocate for the Plaintiff

Belthangady,
Date 26-3-65.

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ:, ಸಾದಾ ಪ್ರತಿ ರೂ. ೧·

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1·50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ಹತಭಾಗ್ಯ ಲಾಲಾಹರದಯಾಲ್

೨

(ಆರನೇ ಪುಟದಿಂದ)

ಯಿಂದ ಸಶಸ್ತ್ರ ಹೋರಾಟದ ಗುಪ್ತ ಸಿದ್ಧತೆಯು ಪೂರ್ಣವಾಗಿತ್ತು. ಪ್ರಥಮ ಮಹಾಯುದ್ಧ ಪ್ರಾರಂಭವಾದ ಕೂಡಲೇ ಗದರ್ ಪಾರ್ಟಿಯ ಮುಖಂಡತ್ವದಲ್ಲಿ "ಕೋಮಾಗಾಟಾಮಾರು" ಎಂಬ ಹೆಸರಿನ ಒಂದು ಯುದ್ಧ ಹಡಗನ್ನು ಸಜ್ಜುಗೊಳಿಸಲಾಯಿತು. ಇದರಲ್ಲಿನ ೩೫೦ ಮಂದಿ ಭಾರತೀಯರು ಸಶಸ್ತ್ರ ಹೋರಾಟದಲ್ಲಿ ಪೂರ್ಣ ತರಬೇತಿ ಪಡೆದವರಿದ್ದರು. ಎಲ್ಲಾ ವಿಧದ ಅತ್ಯಂತ ಶಕ್ತಿಶಾಲಿ ಶಸ್ತ್ರಾಸ್ತ್ರಗಳು ಆರು ತಿಂಗಳ ತನಕ ಬೇಕಾಗುವಷ್ಟು ಸಂಗ್ರಹಿಸಲ್ಪಟ್ಟ ಮಹಾಯುದ್ಧ ಪ್ರಾರಂಭವಾಗುತ್ತಲೇ ಈ ಹಡಗು ಅಮೇರಿಕೆಯಿಂದ ಹೊರಟಿತು. ಬಹಳ ಪ್ರಯಾಸದಿಂದ ದೊಡ್ಡ ಪರ್ಯಟನ ಮಾಡಿ ನೌಕೆಯು ಕಲ್ಕತ್ತೆಗೆ ಬಂದು "ಬಜ್ ಬಜ್" ಎಂಬಲ್ಲಿ ತಂಗಿತು. ಬ್ರಿಟಿಷ್ ಗುಪ್ತದಳಕ್ಕೆ ಒಬ್ಬ ಭಾರತೀಯ ಮುಸಲ್ಮಾನ ವ್ಯಕ್ತಿಯಿಂದ ಇದರ ಪೂರ್ಣ ವಿವರ ಮೊದಲೇ ದೊರಕಿದ್ದ ಕಾರಣ ಕಲ್ಕತ್ತೆಯ ಸಶಸ್ತ್ರ ಪೋಲೀಸು ದಳವು ನೌಕೆಯನ್ನು ಮುತ್ತಿ ಅದರಲ್ಲಿದ್ದ ೩೫೦ ಮಂದಿಯನ್ನೂ ಹೊರ ಬರುವಂತೆ ನಿರ್ಬಂಧ ಪಡಿಸಿತು. ಆದರೆ ಕೆಲವು ವೀರರು ಸಮುದ್ರಕ್ಕೆ ಹಾರಿ ಬಹಳ ಸಾಹಸದಿಂದ ಈಜಾಡಿ ತಲೆ ಮರೆಸಿಕೊಂಡರು. ಕೆಲವರು ಬಂಧನಕ್ಕೊಳಗಾದರು. ಅಂತ್ಯದಲ್ಲಿ ಅನೇಕರು ಫಾಸಿಗೇರಿಸಲ್ಪಟ್ಟರು. ಕೆಲವರು ಅಜನ್ಮ ಕಾರಾಗೃಹವಾಸಕ್ಕೆ ಸೇರಿಸಲ್ಪಟ್ಟರು. ಈ ಪ್ರಕಾರ ಭಾರತೀಯ ಸ್ವಾತಂತ್ರ್ಯ ಸಂಪಾದನೆಗಾಗಿ ಲಾಲಾಹರದಯಾಲರು ಕೈಕೊಂಡ ಈ ಮಹಾನ್ ಯೋಜನೆಯು ಒಬ್ಬ ದೇಶದ್ರೋಹಿಯ ತಿಳಿಗೇಡಿತನದಿಂದ ವಿಫಲವಾಯಿತು.

ಯುರೋಪಿನಲ್ಲೆಲ್ಲಾ ಮಹಾಯುದ್ಧದ ಭಯಂಕರ ಜ್ವಾಲೆ ಹರಡಿಕೊಂಡಿತ್ತು. ಇತ್ತ ಸ್ವಿಟ್ಜರ್ಲೆಂಡಿನಲ್ಲಿದ್ದ ಲಾಲಾ ಹರದಯಾಲರು ಕಲ್ಕತ್ತೆಯಲ್ಲಿ ತನ್ನ ಪ್ರಥಮ ಯೋಜನೆಯು ವಿಫಲವಾದುದರಿಂದ ಧೈರ್ಯಗುಂದಲಿಲ್ಲ; ಅವರು ಪ್ರತಿಯೊಂದು ಸನ್ನಿವೇಶವನ್ನೂ ತನ್ನ ಹೋರಾಟಕ್ಕಾಗಿ ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದರ ಪೂರ್ಣ ಅನುಭವವುಳ್ಳ ಮಹಾ ಮೇಧಾವಿಗಳಾಗಿದ್ದರು. ರಹಸ್ಯವಾಗಿ ಸ್ವಿಟ್ಜರ್ಲೆಂಡಿನಿಂದ ಜರ್ಮನಿಗೆ ತೆರಳಿ ಜರ್ಮನ್ ಸರಕಾರದ ವರಿಷ್ಠ ಅಧಿಕಾರಿಗಳ ಸಂಪರ್ಕ ಬೆಳೆಸಿ ಭಾರತದ ಸ್ವಾತಂತ್ರ್ಯ ಸಮರಕ್ಕೆ ಜರ್ಮನ್ ಸರಕಾರದ ಸಹಾಯ ಪಡೆಯುವ ಪ್ರಯತ್ನ ಕೈಕೊಂಡರು. ಬ್ರಿಟಿಷರನ್ನು ಎಲ್ಲಾ ವಿಧಾನಗಳಿಂದಲೂ ಕಂಗೆಡಿಸುವ ಉದ್ದೇಶದಿಂದ ಜರ್ಮನ್ ಸರಕಾರವು ಲಾಲಾ ಹರದಯಾಲರಿಗೆ ಬೇಕಾದಷ್ಟು ಆಧುನಿಕ ಶಸ್ತ್ರ ಸಾಮಗ್ರಿಗಳನ್ನು ಕೊಡುವುದಾಗಿ ತೀರ್ಮಾನಿಸಿತು. ಇದರ ವ್ಯವಸ್ಥೆಗಾಗಿ ಇವರು ಜರ್ಮನಿಯಲ್ಲಿ "ಭಾರತೀಯ ರಾಷ್ಟ್ರೀಯ ದಲ"ವೆಂಬ ಒಂದು ಸಮರ ಸಮಿತಿಯನ್ನು ಸಂಘಟಿಸಿ ಅದಕ್ಕೆ ಜರ್ಮನ್ ಸರಕಾರದ ಮಾನ್ಯತೆಯನ್ನು ದೊರಕಿಸಿಕೊಂಡರು. ಈ ಸಮಿತಿಗೆ ಜರ್ಮನಿಯ ಪ್ರಧಾನ ಸೈನಿಕ ಕಾರ್ಯಾಲಯದ ನೇರ ಸಂಪರ್ಕ ಇರುವಂತೆ ಭದ್ರವಾದ ವ್ಯವಸ್ಥೆ ಮಾಡಿದರು. ಜ್ಯೂರಿಚ್‌ನಲ್ಲಿದ್ದ "ಅಂತಾರಾಷ್ಟ್ರೀಯ ಭಾರತ ಸಹಯೋಗ ಸಮಿತಿ"ಯ ಅಧ್ಯಕ್ಷ "ಶ್ರೀ ಸಿಳ್ಳೆ" ಇವರನ್ನು ಈ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದರು. ಲಾಲಾಹರದಯಾಲರು ಜರ್ಮನ್ ಚಕ್ರವರ್ತಿ "ವಿಲಿಯಮ್ ಕೈಸರ್"ರ ಭೇಟಿ ಮಾಡಿ ಹಿಂದೂಸ್ಥಾನದಿಂದ ಬ್ರಿಟಿಷರನ್ನು ಓಡಿಸುವ ತನ್ನ ಸ್ವಾತಂತ್ರ್ಯ ಸಂಗ್ರಾಮವು ಯಶಸ್ವಿಯಾಗುವಂತೆ ಬೇಕಾದಾಗಲೆಲ್ಲಾ ಸರ್ವವಿಧದ ಸಹಾಯ ದೊರಕುವಂತೆ ಅವರಿಂದ ವಾಗ್ದಾನ ಪಡೆಕೊಂಡರು.

ಆದರ್ಶ ಸಮಾಜ

೪೪ ತಿಂಗಳನ್ನು ಲಾಲಾಹರದಯಾಲರು ಜರ್ಮನಿಯಲ್ಲಿ ಕಳೆದರು. ಈ ಅವಧಿಯಲ್ಲಿ ಇವರು ತನ್ನ ಧ್ಯೇಯ ಪೂರ್ತಿಗಾಗಿ ಟರ್ಕಿ, ಸ್ವಿಟ್ಜರ್ಲೆಂಡ, ಸ್ವೀಡನ್, ಆಸ್ಟ್ರಿಯಾ, ಹಂಗೇರಿ ಮತ್ತು ಇತರ ಯುರೋಪೀಯ ದೇಶಗಳ ಪರ್ಯಟನ ಮಾಡಿದರು. ಜರ್ಮನಿಯಲ್ಲಿರುವಾಗ ಇವರು ಮಾಡಿದ ಎಲ್ಲಾ ಕಾರ್ಯಕಲಾಪಗಳ ವಿಸ್ತೃತ ವೃತ್ತಾಂತವು "ಜರ್ಮನಿ ಮತ್ತು ಟರ್ಕಿಯಲ್ಲಿ ನಲ್ವತ್ತನಾಲ್ಕು ತಿಂಗಳು" ಎಂಬ ಇವರ ಪುಸ್ತಕದಲ್ಲಿ ದೊರಕುವುದು. ಲಾಲಾಹರದಯಾಲರು ಒಂದು ಆದರ್ಶ ಸಮಾಜವಾದಿ ತತ್ವಾನುಯಾಯಿಯಾಗಿದ್ದರು. ಕ್ರಾಂತಿಕಾರಿ ಮುಂದಾಳುಗಳಲ್ಲಿ ಈ ತತ್ವಗಳನ್ನೇ ಅನುಸರಿಸಿಕೊಂಡಿದ್ದರು. ಅಮೇರಿಕದಲ್ಲಿರುವಾಗಲೇ "ವೈಜ್ಞಾನಿಕ ಸಮಾಜವಾದ" ತತ್ವವನ್ನು ಲಾಲಾಹರದಯಾಲರು ಚೆನ್ನಾಗಿ ಅಧ್ಯಯನ ಮಾಡಿಕೊಂಡಿದ್ದರು.

೧೯೧೮ರಲ್ಲಿ ಜರ್ಮನಿಯು ಯುದ್ಧದಲ್ಲಿ ಸೋತ ನಂತರ ತಾನು ಜರ್ಮನಿಯಲ್ಲಿರುವುದು ಅಪಾಯಕರ ಮತ್ತು ಫ್ರಾನ್ಸ್, ಬ್ರಿಟನು ಮತ್ತು ಅಮೇರಿಕ ಸರಕಾರಗಳು ತನಗೆ ಪೂರ್ಣ ಪ್ರತಿಕೂಲವಾಗಿವೆ ಎಂಬ ವಿಷಯವು ಹರದಯಾಲರಿಗೆ ಗೊತ್ತಾಯಿತು. ಕೂಡಲೇ ಇವರು ಜರ್ಮನಿಯಿಂದ ಸ್ವಿಟ್ಜರ್ಲೆಂಡಿಗೆ ತೆರಳಿದರು. ಈ ಸಮಯದಲ್ಲಿ ಇವರ ದೇಹಾರೋಗ್ಯವೂ ಕೆಟ್ಟು ಹೋಗಿ ಎಂದಿನಂತೆ ಕಠಿಣ ಪರಿಶ್ರಮ ಮಾಡಲು ಅಶಕ್ತರಾದರು. ಆರೋಗ್ಯ ಸಂಪಾದನೆ ಮತ್ತು ಪೂರ್ಣ ವಿಶ್ರಾಂತಿ ಪಡೆಯಲು ಪುನಃ ಅಮೇರಿಕಕ್ಕೆ ತೆರಳಿದರು; ಆದರೆ ಅಲ್ಲಿಯೂ ಇವರ ದೇಹಸ್ವಾಸ್ಥ್ಯ ಸುಧಾರಣೆಯಾಗದೆ ಕೆಟ್ಟು ಹೋಯಿತು. ಭಾರತೀಯ ಸ್ವಾತಂತ್ರ್ಯ ಪ್ರಾಪ್ತಿಗಾಗಿ ತನ್ನ ದೇಶವನ್ನು ಅಗಲಿ, ಬಂಧು ಬಾಂಧವರನ್ನು ತ್ಯಜಿಸಿ, ಗೃಹವಿಹೀನರಾಗಿ ಕೊನೆತನಕವೂ ದೇಶ-ದೇಶಾಂತರದಲ್ಲಿ ಅಲೆದಾಡಿ ಬ್ರಿಟಿಷ್ ಸರಕಾರದೊಡನೆ ಹೋರಾಡಿದ ಈ ಮಹಾನ್ ಕ್ರಾಂತಿ ವೀರ ಭಾರತಾಂಬೆಯ ಸುಪುತ್ರ ಸಿಭ್ಭೀಕ ರಾಷ್ಟ್ರವಾದಿ, ದೇಶಭಕ್ತ ಲಾಲಾಹರದಯಾಲರು ಅಮೇರಿಕದ ಒಂದು ಆಸ್ಪತ್ರೆಯಲ್ಲಿ ಕ್ರಿ. ಶ. ೧೯೩೯ ಮಾರ್ಚ್ ೪ರಂದು ತನ್ನ ಇಹಲೋಕ ಯಾತ್ರೆಯನ್ನು ಕೊನೆಗೊಳಿಸಿದರು. ಹಿಂದೂಸ್ಥಾನದ ರಾಜಕೀಯ ಕ್ರಾಂತಿಕಾರಿ ಮುಖಂಡರಲ್ಲಿ ದೇಶಭಕ್ತ ಲಾಲಾಹರದಯಾಲರು, ವಿದೇಶದಲ್ಲಿ ವಾಸಿಸುತ್ತಿದ್ದ ಭಾರತೀಯರನ್ನು ಭಾರತದ ಸ್ವಾಧೀನತೆಗಾಗಿ ಶಿಸ್ತುಬದ್ಧರಾಗಿ ಐಕ್ಯಸೂತ್ರದಲ್ಲಿ ಸಂಘಟಿಸಿದ ಅತಿ ಶ್ರೇಷ್ಠ ಮುಖಂಡರಾಗಿದ್ದರು. ಲಾಲಾಹರದಯಾಲರು ಭಾರತದ ಸ್ವಾತಂತ್ರ್ಯ ಪ್ರಾಪ್ತಿಗೋಸ್ಕರ ನಿರಂತರ ಮಾಡಿದ ಪರಿಶ್ರಮದ ಮಹಾತ್ಮ್ಯಗಳನ್ನು ವಿವರಿಸುವಾಗ ಜರ್ಮನಿಯ ಪ್ರಖ್ಯಾತ ವಿದ್ವಾಂಸರೊಬ್ಬರು ತನ್ನ ಒಂದು ಲೇಖನದಲ್ಲಿ "ದೇಶ ಭಕ್ತ ಲಾಲಾಹರದಯಾಲರು ವಿದೇಶಗಳಲ್ಲಿ ಭಾರತೀಯ ಕ್ರಾಂತಿಕಾರಿ ಆಂದೋಲನವನ್ನೂ ವಿಕಾಸಿಸಗೊಳಿಸುವುದರಲ್ಲಿ ಅಗ್ರಭಾಗವನ್ನು ವಹಿಸಿದ್ದರು. ಇಂತಹ ನಿಸ್ಸೀಮ ದೇಶ ಭಕ್ತರನ್ನೂ ಪಡೆದ ಭಾರತ ದೇಶದ ಮಹಾನ್ ಭಾಗ್ಯವಲ್ಲಿ" ಎಂದು ಉಲ್ಲೇಖಿಸುತ್ತಾರೆ.

"ಅಸ್ಮಾಕಂ ವೀರಾ ಉತ್ತರೇ ಭವಂತು"

ಸುವರ್ಣಮಹೋತ್ಸವ

ದ. ಕ. ಕೇಂದ್ರ ಸಹಕಾರಿ ಬ್ಯಾಂಕಿನ ಸುವರ್ಣ ಮಹೋತ್ಸವವು ತಾ. 14ರಂದು ಸಹಕಾರ, ಪಂಚಾಯತಿ ರಾಜ್ಯ ಹಾಗೂ ಅಭಿವೃದ್ಧಿ ಸಚಿವ ಶ್ರೀ ರಾಮಕೃಷ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಮಂಗಳೂರು ಪುರಭವನದಲ್ಲಿ ನೆರವೇರಿತು. ಪ್ರಾರಂಭದಲ್ಲಿ ಬ್ಯಾಂಕಿನ ಅಧ್ಯಕ್ಷ ಶ್ರೀ ಪ್ರಭಾಕರ ರಾಯರು ಸ್ವಾಗತಿಸಿದರು. ಉಪಾಧ್ಯಕ್ಷ ಶ್ರೀ ಬಿ. ನಾರಾಯಣ ನಾಯ್ಕರವರು ಸಂದೇಶಗಳನ್ನೋದಿದರು. ಬ್ಯಾಂಕಿನ ಪ್ರಥಮ ಅಧ್ಯಕ್ಷ ಶ್ರೀ ಬಿ. ರಾಮರಾಯರ ಭಾವಚಿತ್ರ ಅನಾವರಣಗೈದ ಬಳಿಕ ಶ್ರೀ ವಿ. ಎಸ್. ಪಾಟೀಲ, ಎಂ. ಎಲ್. ಎ. ರವರು ಸುವರ್ಣ ಮಹೋತ್ಸವದ ವಿಶೇಷ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಆಹಾರ ಕಾರ್ಪೊರೇಶನಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಮಾತನಾಡುತ್ತ ಸಹಕಾರಿ ಸಂಸ್ಥೆಗಳೆಂದರೆ ಸರಕಾರೀ ವಿಭಾಗಗಳೆಂಬ ತಪ್ಪು ಕಲ್ಪನೆ ಜನತೆಯಲ್ಲೂ, ಅಧಿಕಾರಿ ವರ್ಗದವರಲ್ಲೂ ಬೇರೂರಿದೆಯೆಂದೂ, ಸಹಕಾರೀ ಸಂಸ್ಥೆಗಳ ನಿಜವಾದ ಪ್ರಯೋಜನ ದೊರಕಬೇಕಾದರೆ ಈ ತಪ್ಪು ಕಲ್ಪನೆ ನಿವಾರಣೆಯಾಗಿ ಈ ಸಂಸ್ಥೆಗಳು ತಮ್ಮ ಕಾಲಲ್ಲೇ ನಿಲ್ಲುವಂತಾಗಬೇಕೆಂದೂ ನುಡಿದರು. ಮುಂದುವರಿಯುತ್ತಾ ಅವರು ರೈತನಿಗೆ ನೀಡಿದ ಸಾಲವು ಆತನಿಗೆ ಪೂರ್ಣ ಪ್ರಯೋಜನ ದೊರಕಿಸಿ ಕೊಡುವಂತಾಗಬೇಕೆಂದೂ ಹೇಳಿದರು.

ಅಧ್ಯಕ್ಷರು ಮಾತನಾಡುತ್ತಾ ಭೂ ಅಡಮಾನ ಬ್ಯಾಂಕುಗಳಿಂದ ಸಾಲ ಪಡೆಯಲು ಅರ್ಜಿ ಹಾಕಿದ ಮೂರು ತಿಂಗಳೊಳಗೆ ಈ ಸಾಲ ದೊರೆಯುವಂತಹ ಏರ್ಪಾಡು ಮಾಡಲಾಗುವುದೆಂದೂ, ರೈತನಿಗೆ ನೀಡಬೇಕಾದ ಸಾಲ, ಒದಗಿಸಬೇಕಾದ ಯಂತ್ರ ಸಹಾಯ ಸಲಕರಣೆಗಳು ಹಾಗೂ ಆತನ ಉತ್ಪಾದನೆಗಳಿಗೆ ಮಾರುಕಟ್ಟೆ ದೊರಕಿಸುವಿಕೆ ಈ ಎಲ್ಲಾ ಹೊಣೆಗಾರಿಕೆಗಳನ್ನು ಸಹಕಾರೀ ಸಂಘವೇ ವಹಿಸಲಿರುವುದೆಂದೂ, ಈ ನಿರ್ಧಾರಗಳು ಎಪ್ರಿಲ್ 1ರಿಂದ ಜ್ಯಾರಿಗೆಯಾಗುವುದೆಂದೂ ಹೇಳಿದರು. ಮುಂದುವರಿಯುತ್ತಾ ಅವರು ಸಾಲ ನೀಡುವಾಗ ಈ ಸಾಲದ ಉದ್ದೇಶವೇನೆಂದು ಅರಿತುಕೊಂಡು, ಅಂತಹ ಉದ್ದೇಶ ಪೂರೈಕೆಗೆ ಸಾಕಾಗುವಷ್ಟು ಸಹಾಯ ನೀಡಬೇಕೆಂದೂ, ಈ ರೀತಿ ನೀಡಲಾದ ಸಾಲದ ಪರಿಪೂರ್ಣ ಉಪಯೋಗವಾಗುವಂತೆ ಪ್ರಯತ್ನಿಸಬೇಕೆಂದೂ ಹೇಳಿದರು.

ನಗರ ಸಭಾಧ್ಯಕ್ಷ ಶ್ರೀ ಜಿ. ನೇಮಿರಾಜ ಕುರೆ ರಾಯರು ಭಾಷಣ ಮಾಡಿದ ಬಳಿಕ ಶ್ರೀ ಎಸ್. ನರ್ಸಪ್ಪಯ್ಯ, ಎಂ. ಎಲ್. ಸಿ. ಇವರು ವಂದನಾರ್ಪಣೆಗೈದರು.

ನಚಿಕೇತ'ರ

ಹೃದಯಸ್ಪರ್ಶಿ

ನವೀನ ಕಾದಂಬರಿಗಳು

ಹಸುರು ಹಂಸ

ಬೆಲೆ: ರೂ. ಎರಡು.

ಋಣ ಯಾತ್ರೆ

ಬೆಲೆ ರೂ 1-50 ನ. ಪೈಸೆ.

ಭಾವಾರ್ಚನೆ

ಬೆಲೆ ರೂ. 2—00

ಪ್ರತಿಗಳು ಸಿಗುವ ಸ್ಥಳ:

ನವಯುಗ ಪ್ರೆಸ್, ಉಡುಪಿ

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಪೆಪ್ಪರ್ ಮಿಠಾಯಿ, ಶರಬತ್ತು ಮೊದಲಾದ 'ಬಿಕ್ಕೊ'ರವರ ಹಣ್ಣು ಹಂಪಲುಗಳ ತಯಾರಿಕೆಗಳು ಎಲ್ಲೆಲ್ಲಿಯೂ ಪ್ರಸಿದ್ಧಿ ಪಟ್ಟಿವೆ.



ನುಡಿಚಿತ್ರ

ಪರಮಾಣು ಯುಗೋದ್ಘಾಟಕ – ಐನ್‌ಸ್ಟೀನ್

ನ್ಯೂಯಾರ್ಕ್ ನಗರದಲ್ಲಿ ರಿವರ್‌ಸೈಡ್ ಚರ್ಚಿನ ಬಿಳಿ ಗೋಡೆಗಳ ಮೇಲೆ, ೬೦೦ ಸಾರ್ವಕಾಲಿಕ ಮಹಾ ಪುರುಷರ ಆಕೃತಿಗಳನ್ನು ಸುಣ್ಣ ಕಲ್ಲಿನಲ್ಲಿ ಕೆತ್ತಲಾಗಿವೆ. ಒಂದು ಸಾಲು ವಿಜ್ಞಾನಿಗಳಿಗೆ ಮೀಸಲಾಗಿದೆ. ೧೪ ವಿಜ್ಞಾನಿಗಳ ಆಕೃತಿಗಳನ್ನು ಕೆತ್ತಲಾಗಿದೆ. ಆಲ್ಬರ್ಟ್ ಐನ್‌ಸ್ಟೀನ್‌ರ ಪ್ರತಿಮೆಯ ಕೆಳಗಡೆ "ಇವರು ತಮ್ಮ ಕಾಲಮಾನದ ಅತಿ ಸಮರ್ಥ ವಿಜ್ಞಾನಿಯಷ್ಟೇ ಅಲ್ಲದೆ, ವಿವೇಕಿಯೂ ಆಗಿದ್ದರು" ಎಂದು ಉಲ್ಲೇಖಿಸಲಾಗಿದೆ.

ಗಣಿತ ಮತ್ತು ಭೌತಿಕ ವಿಜ್ಞಾನದಲ್ಲಿ ಐಂದ್ರಜಾಲಿಕನಂತೆ ಪ್ರಭಾವ ಬೀರಿದ, ಈ ಜರ್ಮನ್ ಸಂಜಾತ ಅಮೇರಿಕನ್ ವಿಜ್ಞಾನಿ ವಿಶ್ವದ ಬಗೆಗೆ ಮಾನವನ ಕಲ್ಪನೆಯನ್ನು ಬದಲಾಯಿಸಿದರು. ಪರಮಾಣು ಯುಗದ ಬಾಗಿಲ ಬೀಗವನ್ನು ತೆರೆದರು. ವೈಜ್ಞಾನಿಕ ಪ್ರತಿಭೆಯಲ್ಲಿ ಅವರು ಇತಿಹಾಸದಲ್ಲಿ ಕೈಬೆರಳಲೆಣಿಸಬಹುದಾದಷ್ಟೆ ಪೈಥಾಗರಸ್ ಮತ್ತು ಆರ್ಕಿಮಿಡಿಸ್, ಕೋಪರ್ನಿಕಸ್ ಮತ್ತು ನ್ಯೂಟನ್‌ರಿಗೆ ಸಮಾನಸ್ಥಾನವನ್ನು ಪಡೆದಿದ್ದಾರೆ.

ಐನ್‌ಸ್ಟೀನರ ಕಾರ್ಯವನ್ನು "ವಿಜ್ಞಾನದ ಇದು ವರೆಗಿನ ಮುನ್ನಡೆಗಳಲ್ಲಿ ಅತಿ ದೊಡ್ಡದು" ಎಂದು ವರ್ಣಿಸಲಾಗಿದೆ. ಅವರ ಸಾಪೇಕ್ಷವಾದದ ಪ್ರಸಿದ್ಧ ತತ್ವವನ್ನು ಪ್ರಥಮತಃ ಮಂಡಿಸಿದ ೩೦ ಪುಟಗಳ ಪ್ರಬಂಧವನ್ನು "ಶತಮಾನದ ಅತಿ ಮುಖ್ಯ ದಾಖಲೆ" ಎನ್ನಲಾಗಿದೆ.

ಒಂದು ಪೆನ್ಸಿಲ್, ಒಂದು ಗೀಚುವ ಪುಸ್ತಕ ಇದಿಷ್ಟೇ ಐನ್‌ಸ್ಟೀನರ ಉಪಕರಣಗಳಾಗಿದ್ದುವು; ಅವರ ಪ್ರಯೋಗಾಲಯವಿದ್ದುದು ಅವರ ಟೊಪ್ಪಿಯ ಅಡಿಯಲ್ಲಿ. ಆದರೂ ಅವರು ಟೆಲಿಸ್ಕೋಪಿಗಿಂತ ಹೆಚ್ಚು ದೂರ, ಸೂಕ್ಷ್ಮದರ್ಶಕಗಿಂತ ಹೆಚ್ಚು ಸೂಕ್ಷ್ಮವಾಗಿ ನೋಡಿದರು. ಅವರು ಗೋಚರ ಮತ್ತು ಅಗೋಚರ ಅಡ್ಡ ರಸ್ತೆಗಳಿಗೆ ಏಕಾಂತ ವೈಭವದಲ್ಲಿ ಸಂಚರಿಸಿದರು.

೧೮೭೯ನೆಯ ಮಾರ್ಚ್ ೧೪ರಂದು ಬವೇರಿಯಾದ ಉಲ್ಮ್‌ನಲ್ಲಿ ಜನಿಸಿದ ಐನ್‌ಸ್ಟೀನ್ ಬಾಲಕನಾಗಿದ್ದಾಗ ಕವಿತೆಗಳನ್ನು ಬರೆಯುತ್ತಿದ್ದರು. ಶಾಲೆಯಲ್ಲಿ ಅವರು ಸಂಕೋಚ ಸ್ವಭಾವದ, ಹಿಂಜರಿಯುವ ಬಾಲಕನಾಗಿದ್ದರು. ಶಾಲೆಯಲ್ಲಿ ಉತ್ತೀರ್ಣರಾದನಂತರ ಅವರು ಸ್ವಿಟ್ಸರ್ಲೆಂಡಿನಲ್ಲಿ ನೆಲಸಿದರು, ಅಲ್ಲಿ ಸರಕಾರದ ಪೇಟೆಂಟ್ ಆಫೀಸಿನಲ್ಲಿ ಪರೀಕ್ಷಕನ ಹುದ್ದೆಯನ್ನು ಪಡೆದರು. ಆಫೀಸಿನಲ್ಲಿದ್ದಾಗ ಅವರು ತಮ್ಮ ವಿಚಾರಗಳನ್ನು ಕಾಗದ ಚೂರುಗಳಲ್ಲಿ ಗೀಚುತ್ತಿದ್ದರು. ಸಂಜೆ ಮಗುವಿನ ಗಾಡಿಯನ್ನು ಮಾರ್ಗದಲ್ಲಿ ತಳ್ಳುತ್ತಿದ್ದಾಗ, ಅವರು ಆಗಾಗ್ಗೆ ಸ್ವಲ್ಪ ಹೊತ್ತು ನಿಂತು, ಗಣಿತ ಸಂಕೇತಗಳ ಸಾಲುಗಳನ್ನು ಬರೆದಿಡುತ್ತಿದ್ದರು.

ಆ ಕ್ಲಿಷ್ಟಾರ್ಥದ ಸಂಕೇತಗಳಿಂದ ಶತಮಾನದ ಅತ್ಯಂತ ಆಸ್ಫೋಟಕ ವಿಚಾರಗಳು ಹೊಮ್ಮಿದುವು. ೧೯೦೫ರಲ್ಲಿ, ತಮಗೆ ಕೇವಲ ೨೬ ವರ್ಷ ವಯಸ್ಸಾಗಿದ್ದಾಗ ತಮ್ಮ ಬರಹಗಳನ್ನು ಅವರು ೫ ಪ್ರಬಂಧಗಳಲ್ಲಿ ಪ್ರಕಟಿಸಿದರು. ಐದನೆಯದು ಈ ಪ್ರಬಂಧಗಳಲ್ಲಿ ಅತಿ ಚಿಕ್ಕದು. "ದ್ರವ್ಯದ ಜಡತ್ವವು ಅದರಲ್ಲಿರುವ ಚೈತನ್ಯಾಂಶವನ್ನು ಅವಲಂಬಿಸಿದೆಯೇ" ಎಂಬುದು ಈ ಪ್ರಬಂಧದ ಹೆಸರು. ಪರಮಾಣು ಯುಗದ ಗಣಿತ ರಹಸ್ಯ ಈ ಪ್ರಬಂಧದಲ್ಲಿತ್ತು.

ಪ್ರತಿಯೊಂದು ಪ್ರಬಂಧವೂ ಶ್ರೇಷ್ಠ ಮಟ್ಟದ್ದಾಗಿತ್ತು. ಅವುಗಳಲ್ಲಿ ಅವರ ಸಾಪೇಕ್ಷವಾದದ ಮೌಲಿಕ ಸಿದ್ಧಾಂತವಿತ್ತು. ಅಷ್ಟೇ ಅಲ್ಲದೆ ಬೆಳಕು, ಚೈತನ್ಯ, ಚಲನೆ, ಕ್ವಾಂಟಂ ತತ್ವ ಮತ್ತು ಇದು ವರೆಗೆ ರಹಸ್ಯವಾಗಿ ಉಳಿದಿರುವ ಫೋಟೋ ಎಲೆಕ್ಟ್ರಿಕ್ ಪರಿಣಾಮಕ್ಕೆ ಸಂಬಂಧಿಸಿದ ನಮ್ಮ ಅಭಿಪ್ರಾಯಗಳನ್ನು ಮಾರ್ಪಡಿಸುವ ತತ್ವಗಳೂ ಇದ್ದುವು. ಈ ಇತಿಹಾಸ ಮಹತ್ವದ ಪ್ರಬಂಧಗಳು ವೈಜ್ಞಾನಿಕ ಪ್ರಪಂಚದಲ್ಲಿ ದಿಗ್ಭ್ರಮೆಯನ್ನುಂಟು ಮಾಡಿ, ವಿಜ್ಞಾನಿಗಳ ವಿಸ್ಮಯಕ್ಕೆ ಕಾರಣವಾದವು.

ರಾತ್ರಿ ಕಳೆಯುವುದರೊಳಗೆ, ಸ್ವಿಟ್ಸರ್ಲೆಂಡಿನ ಪೇಟೆಂಟ್ ಆಫೀಸಿನ ಗುಮಾಸ್ತರು ಪ್ರಪಂಚದ ಪ್ರಖ್ಯಾತ ವಿಜ್ಞಾನಿಯಾದರು. ಅವರ ಸೇವೆಯನ್ನು ಪಡೆಯಲು ವಿಶ್ವವಿದ್ಯಾನಿಲಯಗಳು ಸ್ಪರ್ಧಿಸಿದವು. ೧೯೧೩ರಲ್ಲಿ ಅವರು ಬರ್ಲಿನ್ನಿನ ಪ್ರಸಿದ್ಧ ಕೈಸರ್ ವಿಲ್‌ಹೆಲ್ಮ್ ಇನ್ಸ್ಟಿಟ್ಯೂಟಿನಲ್ಲಿ ಪ್ರಾಧ್ಯಾಪಕರಾದರು. ೧೯೧೫ರಲ್ಲಿ ಅವರು ತಮ್ಮ ಮುಂಚಿನ ತತ್ವವನ್ನು ವಿಸ್ತರಿಸಿ, ಸಾಪೇಕ್ಷವಾದದ ಸಾರ್ವತ್ರಿಕ ತತ್ವವನ್ನು ನಿರೂಪಿಸಿದರು. ೧೯೨೧ರಲ್ಲಿ ಭೌತ ವಿಜ್ಞಾನದಲ್ಲಿ ನೋಬೆಲ್ ಬಹುಮಾನ ಪಡೆದರು.

ಐನ್‌ಸ್ಟೀನ್ ಅವರು ವೈಮಾರ್ ರಿಪಬ್ಲಿಕ್ ಆಡಳಿತವಿದ್ದಾಗ ಜರ್ಮನಿಯಲ್ಲಿ ಸುಖಿಯಾಗಿದ್ದರು. ಬರ್ಲಿನ್ನಿನಲ್ಲಿ ೧೦೦ ಬಡ ಕುಟುಂಬಗಳಿಗೆ ಪೋಷಣೆ ನೀಡುತ್ತಿದ್ದರು, ತಮ್ಮ ದೋಣಿಯಲ್ಲಿ ಜಲಯಾನ ಮಾಡುತ್ತಿದ್ದರು ಆದರೆ ಹಿಟ್ಲರ್ ಅಧಿಕಾರಕ್ಕೆ ಬಂದಾಗ, ಐನ್‌ಸ್ಟೀನ್‌ರು ದೇಶಭ್ರಷ್ಟರಾಗಬೇಕಾಯಿತು. ೧೯೩೩ರಲ್ಲಿ ಜರ್ಮನಿಯಿಂದ ಹೊರಟು ಫ್ರಾನ್ಸಿಗೆ ಹೋದರು, ಅಲ್ಲಿಂದ ಬೆಲ್ಜಿಯಂಗೆ ವಲಸೆ ಹೋದರು. ಅಮೇರಿಕದ ನ್ಯೂಜೆರ್ಸಿಯ ಪ್ರಿನ್ಸ್‌ಟನ್‌ನ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್‌ಡ್ ಸ್ಟಡೀಸ್‌ನವರು ಅವರಿಗೆ ಜೀವಮಾನ ಪರ್ಯಂತ ಪ್ರಾಧ್ಯಾಪಕ ಪದವಿಯನ್ನು ನೀಡಿದರು, ಅವರು ಅದನ್ನು ಸ್ವೀಕರಿಸಿದರು. ೧೯೫೫ರಲ್ಲಿ ನಿಧನರಾಗುವ ವರೆಗೆ ಪ್ರಿನ್ಸ್‌ಟನ್‌ನಲ್ಲಿ ವಾಸಿಸಿದರು. ೧೯೪೦ರಲ್ಲಿ ಅವರು ಅಮೇರಿಕದ ನಾಗರಿಕತ್ವವನ್ನು ಪಡೆದರು.

ಮಾನವತಾ ಪ್ರೇಮಿಯಾದ ಈ ವ್ಯಕ್ತಿ ಮಾನವರ ಹಿತದಲ್ಲಿ ಗಾಢವಾಗಿ ಆಸಕ್ತಿಯುಳ್ಳವರಾಗಿದ್ದರು ಹಣದ ಆಸೆ ಸ್ವಲ್ಪವೂ ಇರಲಿಲ್ಲ. ಧನಿಕರಾಗುವ ಅನೇಕ ಅವಕಾಶಗಳನ್ನು ಅವರು ತಿರಸ್ಕರಿಸಿದರು. ನೋಬೆಲ್ ಬಹುಮಾನದಿಂದ ದೊರೆತ ಹಣವನ್ನೆಲ್ಲ ಪರೋಪಕಾರಿ ಸಂಸ್ಥೆಗಳಿಗೆ ಕೊಟ್ಟರು.

ನಾಜಿ ಆಡಳಿತದಿಂದ ಓಡಿಹೋದ ಈ ಶಾಂತಿಪ್ರಿಯ ವ್ಯಕ್ತಿ ಉಗ್ರ ಸ್ವಾತಂತ್ರ್ಯ ಪ್ರೇಮಿಯಾಗಿದ್ದರು. ಎಲ್ಲ ರೀತಿಯ ಸುಲಿಗೆ, ಶೋಷಣೆಗಳ ದ್ವೇಷಿಯಾಗಿದ್ದರು. "ನನಗೆ ಆಯ್ಕೆ ಮಾಡಲು ಸಾಧ್ಯವಿರುವ ವರೆಗೆ, ನಾನು ರಾಜಕೀಯ ಸ್ವಾತಂತ್ರ್ಯ ಸಹನೆ ಮತ್ತು ಎಲ್ಲ ನಾಗರಿಕರಿಗೆ ಶಾಸನಬದ್ಧ ಸಮಾನತೆ ಇರುವ ದೇಶದಲ್ಲಿ ಮಾತ್ರವೇ ವಾಸಿಸುವೆ" ಎಂದವರು ಹೇಳಿದರು.

೭೬ನೆಯ ವಯಸ್ಸಿನಲ್ಲಿ ಐನ್‌ಸ್ಟೀನ್ ಮೃತರಾದಾಗ, ಪ್ರಧಾನಮಂತ್ರಿ ನೆಹರೂ ಹೀಗೆಂದರು: "ಅವರು ವಾಸ್ತವವಾಗಿ, ಅಸತ್ಯ ಅಥವಾ ಅನ್ಯಾಯದೊಡನೆ ಸಂಧಾನ ಮಾಡಲೊಪ್ಪದ, ಸತ್ಯಾನ್ವೇಷಿಯಾಗಿದ್ದರು. ಅವರು ಛಾಯೆಗಳ ಕತ್ತಲೆಯ ಜ್ಯೋತಿ ಕಿರಣವಾಗಿದ್ದರು, ಪರಿಸ್ಥಿತಿಗಳ ಒತ್ತಡದಿಂದ ದುರ್ಬಲವಾಗುವವರಿಗೆ ಶಕ್ತಿಯ ನೆಲೆಯಾಗಿದ್ದರು."

ಕನ್ನಡದ ಕವಿಪುಂಗವರನ್ನು ಕಂಡು ಹೆದರಿದಾಗ...

(ಐದನೇ ಪುಟದಿಂದ)

"ಖಂಡಿತ", "ಅನಾನುಕೂಲ", "ಕೂಲಂಕುಷ" ಮೊದಲಾದ ತಪ್ಪುಗಳನ್ನು ತಿಳಿಸಿ, ಅದರ ಸರಿಯಾದ ರೂಪಗಳಾದ "ಕಂಡಿತ" "ಅನನುಕೂಲ" "ಕೂಲಂಕಷ" ಮೊದಲಾದುವುಗಳನ್ನು ತಿಳಿಸಿದರು. ನಾಮಪದಗಳಿಗೆ "ಯಿಸು" ಪ್ರತ್ಯಯ ಸೇರಿಸಿ ಉದಾ: ಕವನ – ಕವನಿಸು, ಕ್ರಿಯಾಪದವನ್ನು ಹೇಗೆ ರೂಪಿಸಬಹುದೆಂದು ತಿಳಿಸಿದರು.

ಅಷ್ಟರಲ್ಲಿ ತಿಂಡಿ ಕಾಫಿಗಳು ಸಿದ್ಧವಾಗಿ ಬಂದುವು ಪೈಗಳೂ ನಮ್ಮೊಡನೆ ಕುಳಿತು ಉಪಾಹಾರವನ್ನು ಸ್ವೀಕರಿಸುತ್ತಿದ್ದಂತೆಯೇ ಕನ್ನಡ ಸಾಹಿತ್ಯ, ದೇಶದ ಪ್ರಚಲಿತ ಸಮಸ್ಯೆಗಳು, ಕಾಸರಗೋಡಿನ ಸಂಕಷ್ಟಗಳು, ಭಗವದ್ಗೀತೆ ಎಲ್ಲವೂ ಒಂದರ ಬಳಿಕೊಂದರಂತೆ ಅವರ ಮಾತಿನಲ್ಲಿ ಬಂದು ನಮ್ಮ ವಿಚಾರಶಕ್ತಿಯನ್ನು ಕೆರಳಿಸುತ್ತಾ ನನಗೆ ಹೊತ್ತು ಹೋದದ್ದೇ ತಿಳಿಯಲಿಲ್ಲ. ಹಾಗೆಯೇ ಮುಂದುವರಿಯುತ್ತಾ "ನಿಮ್ಮ ಊರು?"

"ಇಲ್ಲೇ ಹತ್ತಿರದಲ್ಲೇ... ಒಂದೆರಡು ಮೂರು ಮೈಲುಗಳಾಗುತ್ತವೆ" ಎಂದೆ.

"ಒಂದೆರಡು ಮೂರು ಆರು ಮೈಲುಗಳಾಗುತ್ತವೋ?" ಎಂದರು ಪೈಗಳು ನಗುತ್ತಾ.... ಮತ್ತದಕ್ಕೆ ಹೆಸರಿಲ್ಲವೊ... ಹೆಸರಿಲ್ಲದೂರು ನಿಮ್ಮದು" ಎಂದು ಪರಿಹಾಸ್ಯ ಮಾಡಿದರು.

"ಹೆಸರಿಲ್ಲದೆ ಊರುಂಟೇ.. 'ಮಜಿಬೈಲು" ಎಂದೆ.

"ಓಹೋ ಮಜಿಬೈಲೇ" ಎಂದರು ಪೈಗಳು ಆ ಊರಿನ ಚಿರಪರಿಚಿತರಂತೆ.

"ಹೌದು...."

"ಆ ಮಹಾ ಮಾಂತ್ರಿಕ ಅಪ್ಪಯ ಆಳ್ವರೂ ಮಜಿಬೈಲಿನವರು!"

"ಹೌದು ಅವರು ನನ್ನ ಮುತ್ತಜ್ಜ. ಅವರಿದ್ದ ಮನೆಯಲ್ಲಿಯೇ ನಾವೀಗ ವಾಸವಾಗಿರುವುದು" ಎಂದೆ ನಾನು.

"ನನಗೆ ಈಗಲೂ ಅವರ ನೆನಪಿದೆ; ದೊಡ್ಡ ಭೀಮಕಾಯ ಅವರದು. ಅವರೂ ಅವರ ಅಣ್ಣ ಕಿಂಞಣ್ಣ ಆಳ್ವರೂ ಆಗಾಗ ನಮ್ಮ ಮನೆಗೆ ಬರುವುದಿತ್ತು. ನಮ್ಮ ಹಿರಿಯರಿಗೆ ಅವರೆಂದರೆ ಬಹಳ ಪ್ರೀತಿ. ಅವರು ಬಂದರೆಂದರೆ ಸರಿ, ನಾವೆಲ್ಲರೂ ಮಕ್ಕಳು ಅವರ ಸುತ್ತುಗಟ್ಟುತ್ತಿದ್ದೆವು. ಆಗ ಅವರು ತನ್ನ ಕೋಟಿನ ಕಿಸೆಗೆ ಕೈ ಹಾಕುತ್ತಾ

"ನಿನಗೇನು ಬೇಕು?, ನಿನಗೆ? ನಿನಗೆ? ಎಂದು ಒಬ್ಬೊಬ್ಬರನ್ನೇ ಪ್ರಶ್ನಿಸುತ್ತಿದ್ದರು.

"ಲಾಡು" "ಮಿಠಾಯಿ" "ಹೋಳಿಗೆ" "ಬಾಳೆ ಹಣ್ಣು" ಎಂದು ಒಬ್ಬೊಬ್ಬರು ಒಂದೊಂದನ್ನು ಕೇಳುತ್ತಿದ್ದೆವು.

"ಇಕೋ,....ಇಗೋ..." ಎಂದು ಕೇಳಿದುದೆಲ್ಲಾ ಕೊಡುತ್ತಿದ್ದರು. ಏನು ಶಕ್ತಿಯೋ ದೇವರೇ ಬಲ್ಲ" ಎಂದರು."

"ಹೌದು ನನಗೂ ನೋಡಿದ ನೆನಪಿದೆ. ಒಮ್ಮೆ ನಮ್ಮ ಮನೆಯಲ್ಲಿ ಯಾವುದೋ ಕಾರ್ಯಕ್ಕೆ ನಿಂಬೆ ಹಣ್ಣು ಬೇಕಾಗಿತ್ತು. ನಾವು ಹೋಗಿ ತರಲೇ ಎಂದು ಹೊರಟು ನಿಂತಾಗ "ಬೇಡ ಬೇಡ" ಎನ್ನುತ್ತಾ ಮುಚ್ಚುವ ಕೈ ತೆಗೆಯುವುದರೊಳಗೆ ನಿಂಬೆ ಹಣ್ಣು! ಎಂದರು ಹಿಂದಿನ ಘಟನೆಯೊಂದನ್ನು ಜ್ಞಾಪಿಸಿಕೊಳ್ಳುತ್ತಾ ರಮಾಬಾಯಿಯವರು.

'ಮತ್ತವರು ಸತ್ತುದುದು ಹೇಗೆ... ಹೌದು ಆ ನಿತ್ಯಾನಂದನಲ್ಲಿ ಪಂಥ ಹೂಡಿ ಅಲ್ಲವೇ...?

ಹೌದೆಂದು ತಲೆಯಾಡಿಸಿದೆ.

ಹೊತ್ತು ತುಂಬಾ ಮೀರಿ ಹೋಗಿತ್ತು. ತಡವಾಗುತ್ತದೆ, ಮನೆಗೆ ಇನ್ನೂ ತುಂಬಾ ನಡೆಯಬೇಕು ಎನ್ನುತ್ತಾ ಹೊರಟು ನಿಂತೆ. ಪೈಯವರು ಏನನ್ನೋ ಜ್ಞಾಪಿಸುತ್ತಾ ಇನ್ನೊಮ್ಮೆ ಒಳಗೆ ಹತ್ತಿದರು. ಬರುತ್ತಲೇ ಒಂದಿಷ್ಟು ದೇವರ ಪ್ರಸಾದವನ್ನು ನನ್ನ ಕೈಗಿತ್ತು— "ನಮ್ಮ ಕಾಲ ಹೇಗೂ ಕಳೆಯಿತು! ಇನ್ನು ನೀವಾದರೂ ಮುಂದೆ ಬರಬೇಕು! ಮನಸ್ಸಿನಷ್ಟರಮಟ್ಟಿಗೆ ಸಾಹಿತ್ಯರಸಿಕ ಆಗುತ್ತೀರಿ ಹೋಗಿ!' ಎಂದು ಹರಸಿದರು. ಭಕ್ತಿ, ಗೌರವಗಳಿಂದ ಪ್ರಸಾದ ಸ್ವೀಕರಿಸಿ ನಮಸ್ಕರಿಸುತ್ತಿದ್ದಂತೆಯೇ ಅವರ ಸೂಕ್ಷ್ಮ ಹೃದಯ, ಸರಳತೆ ಸೌಜನ್ಯಗಳಿಗೆ ನನ್ನ ಮನಸ್ಸು ಮಾರುಹೋಗಿಗಿತ್ತು.

ದಾರಿಯುದ್ದಕ್ಕೂ ಪೈಗಳ ಭವ್ಯ ವ್ಯಕ್ತಿತ್ವದ ಗುಣಗಾನ ಮಾಡುತ್ತಿತ್ತು ನನ್ನ ಮನಸ್ಸು. ಇಂದೇನೋ ಅವರು ಕಣ್ಮರೆಯಾಗಿದ್ದರೂ, ಅವರನ್ನು ನೆನಸಿದಾಗ ಅವರೊಡನೆ ನಡೆಸಿದ ಆ ಮೊದಲ ಮಾತುಕತೆಯ ಸವಿನೆನಪು ಮರುಕಳಿಸುತ್ತದೆ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಸತ್ಯಾಗ್ರಹವಲ್ಲ, ಮದ್ಯಾಗ್ರಹ

(ನಾಲ್ಕನೇ ಪುಟದಿಂದ)

'ಅಪ್ರಿಗೆ ನಿಮ್ಮ ಮಂತ್ರಿಪಟ್ಟ ಇದ್ರೂ ಒಂದೇ ಇಲ್ದಿದ್ರೂ ಒಂದೇ. ಯಾರಿಗೆ ಬೇಕು ಹೇಳಿ ಇಂತಹ ನೀತಿಯಿಲ್ಲದವ್ರ ಸಹವಾಸ?

"ಅಂಜಬೇಡ ರಮಣೀ; ಅಳುಕಬೇಡ, ಪಾನಪ್ರತಿಬಂಧವನ್ನು ಕಿತ್ತು ಹಾಕೋದಿದಿಲ್ಲ, ಸಡಿಲುಗೊಳಿಸೋದೂ ಇಲ್ಲ ಈಗ ಬಿಗಿಯಾಗಿರೋದನ್ನು ತಾನೇ ಸಡಿಲು ಮಾಡೋದು?'

"ಶಾಸ್ತ್ರಿ, ನಿಮ್ಮ ಉಪವಾಸ...."

'ಇದ್ರಲ್ಲಿ ಉಪಹಾಸವೇನು ಬಂತೆ?'

'ಇಲ್ಲವ್ಗಾ, ಈಗ ಭಾರೀ ಬಿಗಿಯಾಗಿದೆ, ಕಳ್ಳ ಬಟ್ಟಿಯವ್ರು. ನಮ್ಮ ದಕ್ಷ ರೀತಿಯಲ್ಲಿ ಸೇವೆ ಸಲ್ಲಿಸೋ ಪೋಲೀಸಿನವ್ರು, ನಮ್ಮ ಸ್ವತಂತ್ರ ಭಾರತದ ಸುಸಂಸ್ಕೃತ ಪ್ರಜೆಗಳು ಎಲ್ರೂನೂ ಒಂದು ಸೇರಿ ಮದ್ಯಾಗ್ರಹ ಹೂಡಿಯಾರು; ಇರುವ ಸ್ಥಿತಿಯನ್ನು ತಪ್ಪಿಸಿಪ್ರಿ..."

"ಅಂದ್ರೆ ... ಎಂತಹ ಮದ್ಯಾಗ್ರಹ ಅದು?"

"ಅದೇ ನೋಡು, ಭಟ್ಟಿಯವ್ರ ಶಾಪ ಕೊಟ್ಟಿದ್ದನ್ನ ಕುಡೀಯೋದಿಲ್ಲ ಜನಾಂತ ಮದ್ಯ ತಯಾರಿ ಮಾಡೋದನ್ನೇ ನಿಲ್ಲಿಸಿಯಾರು; ಪೋಲೀಸಿನವ್ರು ದುಡ್ಡು ಕೊಟ್ಟು ಯಾಕೆ ಕುಡೀಬೇಕು, ಕಿಸೆಗೆ ಚಕ್ರ ಹಾಕ ಬೇಕೂಂತ ಆಗ್ರಹ ಮಾಡ್ಯಾರು..'

"ಇನ್ನು ಜನಗಳು?"

"ಇದುವರೆಗೆ ದೊರೆಯುತಿದ್ದ ರುಚಿಕರವಾದುದು ಸಿಗೋದಿಲ್ಲಾಂತ ಕುಡಿಯೋದನ್ನೇ ನಿಲ್ಲಿಸಿಯಾರು— ಇದು ಮೂರೂ ಆದ್ರೆ ಆಗ ಮದ್ಯಾಗ್ರಹವಾಗುತ್ತೆ. ಸತ್ಯಾಗ್ರಹಕ್ಕೆ ಸರಕಾರ ಬಗ್ಗುವಂತೆ ಈ ಮದ್ಯಾಗ್ರಹಕ್ಕೂ ಒಗ್ಗೀ ಬಗ್ಗುತ್ತೆ. ಮತ್ತೆ ಪ್ರತಿಬಂಧವನ್ನೇ ಇಲ್ವಾದ್ರೂ ಅನಿರ್ಬಂಧ ಪ್ರತಿಬಂಧವನ್ನ ಹೇರಿ, ನ್ಯಾಯ ಬೆಲೆಯ ಅಂಗಡಿಗಳಲ್ಲಿ ಕಲ್ಲು ಮಣ್ಣು ತುಂಬಿದ ವಾಸನೆಯಕ್ಕಿ ಮಾರುವಂತೆಯೇ ಈಗಿನ ಕಳ್ಳ ಭಟ್ಟಿಯಲ್ಲಿ ತಯಾರಾಗುವಂತಹ ಅಮೃತ ಪೇಯವನ್ನು ಮಾರುವ್ಯ ವ್ಯವಸ್ಥೆ ಮಾಡಿದರೂ ಮಾಡಬಹುದು."

"ಅದಕ್ಕೇ ನೋಡಿ ನಾನು ಮೊದಲೇ ಅಂದದ್ದು...."

"ಏನೂಂತ?"

"ನಿಮ್ಮ ಟೋಪಿ ಗುವ್ರ ಬುದ್ಧಿ ಇದೇಂತ. ಗಾಂಧೀಜಿಯವರ ರಚನಾತ್ಮಕ ಕಾರ್ಯಗಳಲ್ಲಿ ಇದೊಂದನ್ನು ಒಂದು ರೀತಿಯಿಂದಾದರೂ ಮಾಡುತಿದ್ರಿ ಈಗ ಅದನ್ನು..."

"ಅದೂ ನ್ಯಾಯಾನ್ನ. ಪ್ರತಿ ಬಂಧ ಇದ್ದಂತೆಯೇ ಪಾನ ನಡೆಯುತ್ತಿರುವಾಗ .."

'ಅದೂ ನಿಜಾನ್ನಿ—ಆದ್ರೂ ನೋಡಿ, ಅಪರಾಧ ಮಾಡಬಾರದೂಂತ ನಿಯಮವಿದ್ರೂ ಅವು ನಡೆಯುತ್ತಲೇ ಇವೆ, ಹಾಗೆಂತ ನ್ಯಾಯ ಶಾಸ್ತ್ರವನ್ನೇ ಕಿತ್ತು ಹಾಕಿ ಬಿಡುವುದೆ?"

'ಆ ಕಾಲವೂ ಬರಬಹುದು...ಅದು ಬಂದಾಗಲೇ ಕಲ್ಕ್ಯವತಾರಾಂತ ಅನ್ನುತ್ತಾರೆ."

'ಯಾರು?'

"ಮತ್ತ್ಯಾರು? ಭವಿಷ್ಯೋತ್ತರ ಪುರಾಣಗಳು."

'ನಿಮ್ಮ ಆ ಪುರಾಣದಲ್ಲಿ ಏನೇನಿಲ್ಲಾ ಹೇಳಿ."

"ಎಲ್ಲವೂ ಇದೆ.'

"ಹೌದು, ಅದೊಂದು ಪುರಾಣ, ಅದನ್ನ ಮೊದಲು ಬಲಿಗೆ ಹಾಕಿ. ನೀವೇ ಅಂದಿದ್ರಿ -ಪುರಾಣಮಿತ್ಯೇವ ನ ಸಾಧು ಸರ್ವಂ' ಅಂತ...."

"ಪರ್ವಾಗಿಲ್ವೇ ನೀನು..."

"ಮತ್ತೆ ನೀವು...."

"ನಾನೂನೂ, ಸದ್ಯ ನೋಡು, ಯಾವ ಗಾಬ್ರೀನೂ ಆಗ ಬೇಡ, ಟೇಕಚಂದವರದಿ, ಕೇಂದ್ರ ಸರಕಾರದ ನಿಲುವು—ಎಲ್ಲ ಹೊಂದಿಕೊಂಡೇ ಕಾನೂನು ಆಗುತ್ತೆ ಈ ವಿಷಯದಲ್ಲಿ. ಕಾರ್ಯದಲ್ಲಲ್ಲವಾದ್ರೂ, ಹೆಸರಲ್ಲಿ ಗಾಂಧೀಜಿಗೆ ಗೌರವ ನೀಡದೆ ಹೋದ್ರೆ....'

"ಅದ್ಕೇ ಇರ್ಬೇಕು, ಟೋಪಿಯನ್ನ ಬಿಟ್ಟು ಟೋಪಿಯಲ್ಲಿ ಟೋಪಿಯವ್ರು ಅದನ್ನು....

'ಸಾಕು ಕಣೇ ಮಾತ .... ನಿನಗೆ ಸಮಾಧಾನ ಹೇಳಿದೆನಲ್ಲಾ, ಈಗ ನಿನ್ನ ಸರದಿ....'

"ಅಯ್ಯಪ್ಪ ಮತ್ತೇನು ಮಾಡೋದು? ಏನು ಬರುತ್ತೆಯೋ ಅದ್ರಲ್ಲೇ ತೃಪ್ತಿಪಡೋದು...."

"ಈ ವಾಸನೆ ಬರೋ ಅಕ್ಕಿ, ಬಾಡಿ ಹೋಗಿರೋ ತರಕಾರಿ, ಬೇಯದ ಬೇಳೆ, ಹಸಿ ಕಟ್ಟಿಗೆ, ಎಣ್ಣೆ ಡಾಲ್ಡಾ ತುಂಬಿರೋ ತುಪ್ಪ...

'ಹೊಗೆ ತುಂಬಿದ ಗೂಡು...."

'ಹೌದು, ಇತ್ಯಾದಿತ್ಯಾದಿಗಳಿಂದ ತೃಪ್ತಿ ಪಡುವಂತೆಯೇ....'

'ಇವತ್ತು ಕಂಟಿದ ಹಾಲೇ ಗತಿ ನಿನಗೆ...'

'ಹ್ಹೂ ಅದಾವ್ರೆ ಇದು,ಸದ್ಯ ಬಂಲಿ..'

'ಹ್ಹ....ಹ್ಹ....ಹ್ಹ....'

— ಗೋರಾ.

ಚಂದಾದಾರರಲ್ಲಿ

ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 43ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 44ನೆ ಹೊಸ ವರ್ಷಾರಂಭವಾಗಿದೆಯಷ್ಟೆ! ಈ ಅವಧಿಗೆ ಯಾ ಅನಂತರ ಚಂದಾ ಅವಧಿ ಮುಗಿಯುವವರೂ ಚಂದಾ ಹಣಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಅದಷ್ಟು ತ್ವರ್ಯ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿ ಆ ಳಕಳಿಯಿಂದ ವಿನಂತಿಸುತ್ತೇವೆ. ಚಂದಾಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚೂ ಇಲ್ಲದೆ ಪಾವತಿ ಮಾಡ ಬಹುದು, ಇಲ್ಲವೆ ಮನಿಯಾರ್ಡರು ಮಾಡಬಹುದು ವಿ.ಪಿ. ಮಾಡಿದರೆ 70 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣ ಕಳುಹಿಸಿ ಕೊಡುವಂತೆ ಇನ್ನೊಮ್ಮೆ ವಿನ್ನವಿಸುತ್ತೇವೆ. ಇಲ್ಲವಾದರೆ ನಾವು ಅನಿವಾರ್ಯವಾಗಿ ಕ್ರಮಶಃ ವಿ.ಪಿ. ಮಾಡಬೇಕಾತ್ತದೆ. ಅದನ್ನ ದಯಮಾಡಿ ಸ್ವೀಕರಿಸುವಂತೆ ಕೇಳಿಕೊಳ್ಳುತ್ತೇವೆ.

ಕ. ಹೊನ್ನಯ್ಯ ಶೆಟ್ಟಿ
ಸಂಚಾಲಕ—ಸಂಪಾದಕ

ಜನತಾ ಉವಾಚ

ಶ್ರೀ ರಾಘವೇಂದ್ರ ಸ್ವಾಮಿಗಳ ಕಾಲವಿಚಾರ. (ಜಿಜ್ಞಾಸೆ)

ಶ್ರೀ ರಾಘವೇಂದ್ರ ಸ್ವಾಮಿಗಳು ಸಂಸ್ಕೃತದಲ್ಲಿ ಗ್ರಂಥಗಳನ್ನು ಬರೆದಿದ್ದಾರೆ. ಕನ್ನಡದಲ್ಲಿ ಅವರು ಬರೆದ ಕೀರ್ತನೆಯಿದೆ, ಅವರು ವೃಂದಾವನಸ್ಥರಾಗಿ ಭಕ್ತರ ಮನೋಭೀಷ್ಟಗಳನ್ನು ನೀಡುತ್ತಿದ್ದಾರೆಂಬುದು ಸುಪ್ರಸಿದ್ಧವು. ಅವರು ಜೀವಿಸಿದ್ದ ಕಾಲ ವಿಚಾರದಲ್ಲಿ ಎರಡು ತರದ ವಾದಗಳಿದ್ದು, ಅವುಗಳಲ್ಲಿ ಯಾವುದು ಹೇಗೆ—ಏಕೆ ಸರಿಯೆಂದು ತಿಳಿಯುವ ಬಗ್ಗೆ ಜಿಜ್ಞಾಸೆಯಿದು.

೧. ಅಖಿಲ ಭಾರತ ಮಧ್ವಮಹಾಮಂಡಲದ ವತಿಯಿಂದ ಪ್ರಕಟವಾಗುತ್ತಿರುವ 'ತತ್ತ್ವವಾದ'ದಲ್ಲಿ (ಸಂ. 3.ಸಂ.9 1956ರ ಸಪ್ಟಂಬರ) ಪ್ರಕಟವಾದ ಒಂದು ಲೇಖದ ಸಾರವಿದು:

1) ಶ್ರೀ ರಾಘವೇಂದ್ರ ಸ್ವಾಮಿಗಳು —ವೆಂಕಣ್ಣಯ್ಯ— ಜನಿಸಿದ ಕಾಲವೆಂದರೆ ಇಸ್ವಿ 1578:

2. ಅವರ ಸನ್ಯಾಸಗ್ರಹಣ ಕಾಲ ಇಸ್ವಿ 1622 ರುಧಿರೋದ್ಗಾರಿ ಫಾಲ್ಗುಣ ಶುದ್ಧ ಬಿದಿಗೆ.

3. ಅವರ ನಿರ್ಯಾಣ ಕಾಲ—ವೃಂದಾವನ ಪ್ರವೇಶ ಕಾಲ —ಇಸ್ವಿ 1678 ವಿರೋಧಿ ಸಂವತ್ಸರದ ಶ್ರಾವಣ ಶುದ್ಧ ಬಿದಿಗೆ. ಅಂತೂ 1578- 1678 ಅವರ ಜೀವನ ಕಾಲಾವಧಿಯಾಗಿದೆ.

೨. ಅಖಿಲ ಭಾರತ ಮಾಧ್ವ ಮಹಾಮಂಡಲದ ಎರಡನೆಯ ಸಮ್ಮೇಲನಾವಸರದಲ್ಲಿ ಕೊಯಮುತ್ತೂರಲ್ಲಿ ಪ್ರಕಟವಾದ ವಿಶೇಷಾಂಕದಲ್ಲಿರುವ (ಪುಟ 95) ಲೇಖದ ಸಾರವಿದು:

1. ಶ್ರೀ ರಾಘವೇಂದ್ರ ಸ್ವಾಮಿಗಳ—ವೆಂಕಣ್ಣನವರ-ಜನನ ಕ್ರಿ. ಶ. 1523 ಶುಭಕೃತ್ ಫಾಲ್ಗುಣ ಶುಕ್ಲ ಸಪ್ತಮಿ ಗುರುವಾರ ಮೃಗಶಿರಾ ನಕ್ಷತ್ರ (ಇಸ್ವಿ 1601–2)

2. ಅವರ ಸನ್ಯಾಸ ಗ್ರಹಣಕಾಲ ಇಸ್ವಿ 1627 ಪ್ರಭವ

3. ಅವರ ವೃಂದಾವನ ಪ್ರವೇಶ ಕಾಲ–ಇಸ್ವಿ 1671 ವಿರೋಧಿಕೃತ್ ಶ್ರಾವಣ ಕೃಷ್ಣ ದ್ವಿತೀಯಾ ಶುಕ್ರವಾರ.

ಈ ಎರಡು ಹೇಳಿಕೆಗಳಲ್ಲಿ ಯಾವುದು ಹೆಚ್ಚು ಆಧಾರಯುಕ್ತವಾಗಿದೆ, ಸರಿಯಾಗಿದೆಯೆಂದು ಚಾರಿತ್ರಿಕ ಆಧಾರಗಳೊಡನೆ ಬಲ್ಲವರು ಬರೆಯಬೇಕಾಗಿದೆ. ಶ್ರೀ ಮಧ್ವಾಚಾರ್ಯರು ಅವತರಿಸಿದ ಹಾಗೂ ನಿರ್ಯಾಣದ ಕಾಲ ವಿಚಾರದಲ್ಲಿ ಅನೇಕ ವಾದಗಳಿವೆ: ಉತ್ತರಾದಿ ಮಠೀಯ ಗುರು ಪರಂಪರೆಯಿಂದ ತಿಳಿವಂತೆ ಇ. 118-9—1198-9. ಉಡುಪಿ ಮಠಗಳ ಕೆಲವು ಗುರು ಪರಂಪರೆಯಿಂದ ತಿಳಿದಂತೆ ಇ. 1919-1200—1278-9. ಶ್ರೀ ನಾ. ಶ್ರೀ ರಾಜ ಪುರೋಹಿತರ ವಾದ ಇಸ್ವಿ 1199—1257. ಶ್ರೀ ಮಧುರೆ ಶ್ರೀನಿವಾಸಾಚಾರ್ಯರ ವಾದ: ಇ. 1205—1293. ಶ್ರೀ ಸಿ. ಎಂ. ಪದ್ಮನಾಭಾಚಾರ್ಯ, ಎಂ. ಗೋವಿಂದ ಪೈ, ಬಿ. ಎನ್. ಕೃಷ್ಣಮೂರ್ತಿ ಶರ್ಮ, ಬಿ. ಎ. ಸಾಲೆತೂರ್ ಅವರ ವಾದಗಳು: ಇಸ್ವಿ 1238 –1318.

ಈ ನಾನಾ ತರದ ವಿವಾದಗಳಿಗೆ ಅವರು ಆದರಿಸಿದ ಕೆಲವು ಆಧಾರಗಳೇ ಕಾರಣ, ಅದರ ಆಧಾರಗಳಲ್ಲಿ ಯಾವುದು ಪ್ರಬಲಾಧಾರವೆಂದು ವಿವೇಚಿಸಿ, ಅನೇಕ ವಾದಗಳಲ್ಲಿ ಉಡುಪಿ ಮಠೀಯ ವಾದದಂತೆ ಶ್ರೀ ಮಧ್ವಾಚಾರ್ಯರು ಇಸ್ವಿ 1220—1276ರಲ್ಲಿದ್ದರೆಂದು ತಿಳಿಯುವುದ ಸೂಕ್ತವೆಂದು ಕಾಣುತ್ತದೆ. (ಸಾಹಿತ್ಯದ ಹಿನ್ನೆಲೆ, ಪುಟ 42-51 ಡಾ. ಪಿ. ಕೆ. ಗೋಡೆ ಸಂಶೋಧನಾಗ್ರಂಥ ನೋಡಿ)

ಇಂತಹ ವಾದಗಳ ಬಗ್ಗೆ ಕೇವಲ ಆಸ್ತಿಕತೆಯು ಸಾಲದು, ಸಾಧಾರ ವಿವೇಚನೆಯು ಅವಶ್ಯವೆಂದು ವಿನಂತಿಸುತ್ತೇನೆ.

ವೆಂಕಟರಾಯಾಚಾರ್ಯ, ಸುರತ್ಕಲ್ಲು.

ಪಣಂಬೂರು ಬೈಕಂಪಾಡಿ ಗ್ರಾಮಸ್ಥರ ಸಭೆ

"ಇನ್ನೂ ಹೆಚ್ಚಿನ ೧೫೦೦ ಎಕರೆ ಭೂಮಿಯನ್ನು ಯಾವ ಸಂದರ್ಭದಲ್ಲೂ ಸರಕಾರಕ್ಕೆ ಬಿಟ್ಟು ಕೊಡಲಾರೆವು" ಎಂಬ ನಿರ್ಧಾರವನ್ನು ಕಳೆದ ತಾ. ೧೪-೩-೬೫ರಂದು ಪಣಂಬೂರು_ಬೈಕಂಪಾಡಿ ಗ್ರಾಮರಕ್ಷಣಾ ಸಮಿತಿಯ ಆಶ್ರಯದಲ್ಲಿ ಸೇರಿದ ಬೃಹತ್ ಸಭೆಯಲ್ಲಿ ಗ್ರಾಮದ ಜನತೆ ಕೈಕೊಂಡು ಈ ಕುರಿತು ತಮ್ಮ ಚಳವಳವನ್ನು ಮುಂದುವರಿಸುವ ನಿರ್ಧಾರ ಮಾಡಿದರು.

ಸಮಿತಿಯ ಗೌರವ ಕಾರ್ಯದರ್ಶಿ ಶ್ರೀ ಕೆ. ಚಂದ್ರಶೇಖರ ಶೆಟ್ಟಿಯವರು ಈ ವರೆಗಿನ ಕಾರ್ಯಕಲಾಪಗಳ ವರದಿಯನ್ನು ಸಭೆಯ ಮುಂದಿಡುತ್ತಾ, ಮೊದಲನೆಯ ಹಂತದಲ್ಲಿ ೧೨೦೦ ಎಕ್ರೆಯ ಸ್ವಾಧೀನತೆಯಿಂದ ಒಕ್ಕಲೆಬ್ಬಿಸಿದವರು ತಮ್ಮ ತಮ್ಮ ಮನೆ ಸಾಮಾನುಗಳನ್ನು ತೆಗೆದುಕೊಂಡು ಹೋಗುವ ಸವಲತ್ತನ್ನು ಪುನಃ ಸರಕಾರ ಕೊಟ್ಟುದಕ್ಕೆ ಕೃತಜ್ಞತೆ ಸೂಚಿಸಿ, ಈ ೧೨೦೦ ಎಕ್ರೆಯ ನಿವಾಸಿಗಳು ಆದಷ್ಟು ಬೇಗ ಪುನರ್ವಸತಿಯ ಸ್ಥಳಕ್ಕೆ ಹೋಗುವ ನಿರ್ಧಾರ ಮಾಡಿರುವರು ಎಂದರು. ನಂತರದ ೧೫೦೦ ಎಕರೆಯ ಸ್ವಾಧೀನತೆಗೆ ಜನತೆಯ ವಿರೋಧ ಸರಕಾರದ ಗಮನಕ್ಕೆ ಬಂದು ತಜ್ಞರ ಸಮಿತಿಯೊಂದನ್ನು ಪುನಃ ಕಳುಹಿಸಿತಾದರೂ ಇದುವರೆಗೆ ಆ ಸಮಿತಿಯ ವರದಿ ಬಂದಿಲ್ಲ ಎಂದು ಹೇಳಲಾಗುತ್ತಿದೆ. ಕಳೆದ ಜನವರಿಯಲ್ಲಿ ಗ್ರಾಮರಕ್ಷಣಾ ಸಮಿತಿಯವರು ಕೇಂದ್ರ ಸರಕಾರಕ್ಕೆ ಮಂತ್ರಿಯವರನ್ನು ಕಂಡಾಗಲೂ ಇದೇ ಉತ್ತರ ದೊರೆಯಿತು ಎಂದು ತಿಳಿಸಿ, ತಜ್ಞರ ಸಮಿತಿಯ ನೇಮಕ ಕೇವಲ ಚಳವಳವನ್ನು ಶಾಂತಗೊಳಿಸಲು ಮಾಡಿರುವ ಉಪಾಯವೋ ಎಂಬ ಸಂಶಯ ಮೂಡುತ್ತಿದೆ ಎಂದರು.

ಸಭಿಕರಲ್ಲಿ ಶ್ರೀಗಳಾದ ಟಿ. ಎ. ಕರ್ಕೇರ, ನರಸಿಂಹ ಐತಾಳ, ಸದಾನಂದ ಪೈ ಹಾಗೂ ಇನ್ನಿತರ ಗ್ರಾಮಸ್ಥರು ಮಾತನಾಡಿ, ಈ ಕುರಿತು ಚಳವಳವನ್ನು ಮುಂದುವರಿಸಬೇಕೆಂದು ತಿಳಿಸಿ, ಸರಕಾರವು ಜನತೆಯ ಅಭಿಪ್ರಾಯವನ್ನು ನಿರ್ಲಕ್ಷಿಸಿ, ಮತ್ತು ತನ್ನ ಹಟವನ್ನೇ ಮುಂದೊತ್ತಿದರೂ, ಒಕ್ಕಟ್ಟಿನಿಂದ ಸರಕಾರದ ಈ ನಿರ್ಧಾರವನ್ನು ಪ್ರತಿಭಟಿಸುವ ಅಭಿಪ್ರಾಯ ವ್ಯಕ್ತಪಡಿಸಿದರು.

ಅಧ್ಯಕ್ಷಸ್ಥಾನದಿಂದ ಶ್ರೀ ಪಿ. ವಿ. ಐತಾಳರು ಮಾತನಾಡುತ್ತಾ, ಕೇಂದ್ರ ಸರಕಾರವು ಕೈಗಾರಿಕಾ ನಿವೇಶನಕ್ಕೆ ಈ ೧೫೦೦ ಎಕ್ರೆ ಭೂಮಿ ಬೇಕೆನ್ನುತ್ತಿದೆ. ರಾಜ್ಯ ಸರಕಾರದ ಮುಖ್ಯಮಂತ್ರಿಗಳು ಭೂಮಿ ಸ್ವಾಧೀನತೆ ಮಾಡಿಯೇ ಬಿಡುತ್ತೇವೆ ಎಂಬ ಪಣ ತೊಟ್ಟಿದ್ದಾರೆ. ಇದರಲ್ಲಿ ವಿವೇಕ ಹಾಗೂ ವಿವೇಚನೆಗಳಿಗೆ ಎಡೆಕೊಡದೆ ಹರದ ಪ್ರಭಾವವೇ ಹೆಚ್ಚಿನಿಸಿರುವಂತೆ ಕಾಣುತ್ತದ ಎಂದು ತಿಳಿಸಿ, ಈ ಭಾಗದ ಗ್ರಾಮಸ್ಥರ ಅಭಿಪ್ರಾಯಕ್ಕೆ ವಿರುದ್ಧವಾಗಿ, ಈ ರೀತಿಯ ವಶೀಕರಣ ಮಾಡುವುದು ಪ್ರಜಾಸತ್ತೆಗೆ ಒಂದು ಅಪಮಾನ ಎಂದು ಹೇಳಿದರು. ಜನರು ಒಕ್ಕಟ್ಟಿನಿಂದ ಹೋರಾಡಿದರೆ ಸರಕಾರವು ಇಂದಲ್ಲ ನಾಳೆ ಈ ವಿಷಯ ಪುನರಾಲೋಚಿಸಬೇಕು ಎಂದು ಹೇಳಿದರು.

ಎಲ್ಲೆಲ್ಲಿ ಏನೇನು?

ರಾಷ್ಟ್ರಕವಿ ಪೈಯವರ ಜನ್ಮ ದಿನಾಚರಣೆ

ಮಂಗಳೂರು: ಕಳೆದ ತಾ. 23 ರಂದು, ತ. ರಾ. ಸು. ರವರ ಅಧ್ಯಕ್ಷತೆಯಲ್ಲಿ ದಿವಂಗತ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳ ಜನ್ಮ ದಿನಾಚರಣೆಯು ಸರಕಾರೀ ಕಾಲೇಜಿನಲ್ಲಿ ಸ್ಥಳೀಯ ಕನ್ನಡ ಸಂಘದ ಆಶ್ರಯದಲ್ಲಿ ನೆರವೇರಿತು. ಪ್ರಾರಂಭ

(ನಾಲ್ಕನೇ ಪುಟದಿಂದ)

ಅಂದರೂ ಇದಕ್ಕಿಂತ ಉತ್ತಮವಾದ ಮಾರ್ಗ ಬೇರೊಂದಿರಲಿಕ್ಕಿಲ್ಲ. ಏಕೆಂದರೆ, ರಾಜ್ಯಪಾಲರ ವರದಿಯು ಕೇರಳದಲ್ಲಿ ಯಾವುದೇ ಪಕ್ಷವು ತಾನಾಗಲಿ ಇತರ ಪಕ್ಷಗಳ ಸಹಾಯದಿಂದಾಗಲೀ ಸುಭದ್ರ ಸರಕಾರ ರಚಿಸುವುದು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿದೆ. ರಾಜ್ಯಪಾಲರು ಸರಿಯಾಗಿ ವಿವೇಚನೆ ಮಾಡಿಲ್ಲವೆಂದು ದೂರುವವರು ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು ಎಂಬುದನ್ನು ನೆನಪಿಸಿಕೊಳ್ಳಬೇಕು. ಕೇರಳದ ಜಗಳ ಇಷ್ಟಕ್ಕೇ ಮುಗಿಯಲಿಲ್ಲ. ನಂಬೂದರಿ ಪಾಡರು ಪ್ರಜಾಸತ್ತೆಯ ಉಳಿವಿಗಾಗಿ ಇನ್ನು ವ್ಯಾಪಕವಾದ ಹೋರಾಟ ಪ್ರಾರಂಭ ಮಾಡಲಿರುವರಂತೆ. ತನ್ನ ಪಕ್ಷದವರ ಬಂಧ ವಿಮೋಚನೆಗಾಗಿ ಮತ್ತು ಕೇರಳದಲ್ಲಿ ರಾಷ್ಟ್ರಪತಿ ಆಳಿಕೆಯ ವಿರುದ್ಧವಾಗಿ ಉಗ್ರ ಚಳವಳಿಯನ್ನು ನಡೆಸಲಿರುವರಂತೆ. ಅವರ ಈ ಬಗೆಯ ಬೆದರಿಕೆ ಮೊದಲೂ ಬಂದಿದೆ. ಎಡಕಮ್ಯೂನಿಸ್ಟರದೇಶದ್ರೋಹದ ಸಾಕ್ಷ್ಯಗಳು ಕೇಂದ್ರ ಸರಕಾರದ ಬಳಿ ಸಾಕಷ್ಟು ಇವೆಯೆನ್ನುತ್ತಾರೆ ನಂದಾ ಜಿ. ಇದೇ ಸಂದರ್ಭದಲ್ಲಿ ದೇಶದ್ರೋಹಿಯಾದ ಈ ಪಕ್ಷವನ್ನೇ ಪ್ರತಿಬಂಧಿಸುವ ವಿಚಾರವಾಗಿಯೂ ಆಲೋಚನೆ ನಡೆಯುತ್ತಿದೆ. ದೇಶ ರಕ್ಷಣೆಗಾಗಿ ಮತ್ತು ದೇಶದ್ರೋಹಿಗಳನ್ನು ಹತ್ತಿಕ್ಕುವುದಕ್ಕಾಗಿ ಎಂತಹ ಉಗ್ರಕ್ರಮ ಕೈಗೊಂಡರೂ ಸರಕಾರಕ್ಕೆ ಎಲ್ಲ ದೇಶಪ್ರೇಮಿಗಳ ಬೆಂಬಲ ಖಂಡಿತಕ್ಕೂ ಇದೆ.

ಕಾರ್ಕಳ ಮುನ್ಸಿಫ಼ ಕೋರ್ಟಿನಲ್ಲಿ

R.E.P. 665/1964

O.S. 304/1963.

ಲೂಯಿಸ್ ಡಿ. ಸೋಜ — ಅರ್ಜಿದಾರ,

ಡಿಯಾಗ ಡಿ. ಸೋಜ ವಗೈರೆ — ಎದುರು.

7. ಅಸ್ಸಿ ಸೋಜ ಬಾಯಿ, 8. ಅಲ್ಬರ್ಟ್ ಡಿ. ಸೋಜ, 9 ಪೌಲಿನ ಸೋಜ ಬಾಯಿ, 10. ಡಿಯಾಗ ಸೋಜ, 11. ಗ್ರೆಗೋರಿ ಸೋಜ — ಜಾಕಿ ಸೋಜರ ಮಕ್ಕಳು, ಕಾರ್ಕಳ ತಾಲ್ಲೂಕು ಕುಕ್ಕುಂದೂರು ಗ್ರಾಮದ ಕೊಜ್ಜ ಎಂಬಲ್ಲಿರುವವರು.

ಸದ್ರಿ ಎದ್ರಿರಾದ ನಿಮಗೆ ಈ ಮೂಲಕ ತಿಳಿಸುವದೇನೆಂದ್ರೆ—

ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಯಿರುವ ಸ್ಥಿರಾಸ್ತಿಗಳನ್ನು ಲೀಲಾಂ ಅಪೇಕ್ಷಿಸಿ ಅರ್ಜಿದಾರನು ದಾಖಲು ಮಾಡಿದ ಲೀಲಾಂ ಯಿಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವ ಕುರಿತು ನಿಮಗೆ ನೋಟೀಸಿನ ಬಗ್ಗೆ ಸದ್ರಿ ಅನ್ಯಾಜ್ಞಾರಿಯು ತಾರೀಕು 9—4—65ಕ್ಕೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಗ್ಗೆ 10 ಘಂಟೆಗೆ ಸದ್ರಿ ಕೋರ್ಟ ಮುಂದೆ ನೀವು ಸ್ವಾಜ್ಯಾಗಿ ಹಾಜರಾಗಿ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನವಾಗುವದು ಎಂದ ಕೋರ್ಟ ಹುಕುಂ ಪ್ರಕಾರ ತಿಳಿಸಿರುತ್ತೆ.

K. V. Kamath,

Advocate for Petitioner.

ಕಾರ್ಕಳ, 27.3.65

ದಲ್ಲಿ ಸಂಘದ ಅಧ್ಯಕ್ಷ ಶ್ರೀ ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರು ಅತಿಥಿಗಳನ್ನು ಸ್ವಾಗತಿಸಿದರು. ನಂತರ ಮುಖ್ಯ ಅತಿಥಿ ಶ್ರೀ ಟಿ. ಎನ್. ಬಾಲಕೃಷ್ಣರು ಮಾತನಾಡುತ್ತಾ, ನಮ್ಮ ಕರ್ನಾಟಕದಲ್ಲಿ ನಮ್ಮದೇ ಆದ ಸ್ಟುಡಿಯೋ ಇರುವುದು ಅಗತ್ಯವೆಂದು ನುಡಿದರು. ಅಧ್ಯಕ್ಷರು ಮಾತಾಡುತ್ತಾ ಮಂಜೇಶ್ವರ, ಕಾಸರಗೋಡು ಕರ್ನಾಟಕ ಸೇರುವಂತೆ ಮಾಡಿದರೇ ಮಂಜೇಶ್ವರ ಗೋವಿಂದ ಪೈಗಳಿಗೆ ಯಥಾರ್ಥವಾದ ಶ್ರದ್ಧೆ ಸಲ್ಲಿಸಿದಂತಾಗುವುದು. ಅಲ್ಲದೆ ಮಂಜೇಶ್ವರದ ಅವರ ನಿವಾಸವನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಮಾಡಬೇಕು ಎಂದು ನುಡಿದರು. ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಬಾಲಕೃಷ್ಣ ಶೆಟ್ಟರು ವಂದನಾರ್ಪಣೆಗೈದರು.

ಬೀಳ್ಕೊಡುವ ಸಮಾರಂಭ

ಸುರತ್ಕಲ್ : ವಿದ್ಯಾದಾಯಿನೀ ಹೈಸ್ಕೂಲಿನ 10ನೇ ತರಗತಿಯ ವಿದ್ಯಾರ್ಥಿಗಳು ಅಧ್ಯಾಪಕರನ್ನು ಬೀಳ್ಕೊಡುವ ಸಮಾರಂಭವು ತಾ. 22.3.65ರಂದು ಶ್ರೀ ಯಚ್. ದಾಮೋದರ ರಾವ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಬಿ ವಿ. ಕೃಷ್ಣಯ್ಯ ಮತ್ತು ಶ್ರೀ ಪಿ. ಶ್ರೀನಿವಾಸ ರಾವ್ ಇವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ವಿದ್ಯಾರ್ಥಿ ನಾಯಕನು ತಮ್ಮ ಜೊತೆ ಸಂಸ್ಥೆಯ ನೆನಪಿಗೋಸ್ಕರ "ಪೆವಿಲಿಯನ್" ಕಟ್ಟಿಸಲು ರೂ. 157-25ನ್ನು ಮತ್ತು ತರಗತಿ ವಿದ್ಯಾರ್ಥಿಗಳ ಭಾವಚಿತ್ರವನ್ನು ತರಗತಿಯ ಪರವಾಗಿ ಮುಖ್ಯೋಪಾಧ್ಯಾಯರಿಗಿತ್ತನು. ವಿದ್ಯಾರ್ಥಿಗಳ ಪರವಾಗಿ ಕೆಲವರು ತಮ್ಮ ಗುರುಗಳ ಗುಣಕಥನ ಮಾಡಲು, ಉಪಾಧ್ಯಾಯರ ಪರವಾಗಿ ಶ್ರೀ ಯಂ. ಶಂಕರನಾರಾಯಣ ರಾಯರು ಭಾಷಣವಿತ್ತರು. ಮುಖ್ಯೋಪಾಧ್ಯಾಯರು—ನೀತಿಯ ನೆಲೆಗಟ್ಟಿಲ್ಲದವನ ಬಾಳು ಎಂದಿಗೂ ಸುಗಮವಾಗದು ಎಂದು ಶಿಸ್ತು, ವಿದ್ಯೆ, ಮುಂದಿನ ಜೀವನ — ಇವೇ ಮೊದಲಾದ ವಿಷಯಗಳ ಮೇಲೆ ಮಾತಾಡಿ ವಿದ್ಯಾರ್ಥಿಗಳಿಗೆ ಶುಭವನ್ನು ಕೋರಿದರು. ಅಧ್ಯಕ್ಷರು ಶಾಲೆಯ ಕಡೆಗೆ ವಿದ್ಯಾರ್ಥಿಗಳ ಕರ್ತವ್ಯದ ಕುರಿತು ಭಾಷಣ ಮಾಡಿ ವಿದ್ಯಾರ್ಥಿಗಳಿಗೆ ಯಶವನ್ನು ಕೋರಿದರು.

ಶ್ರೀ ಬೆಳ್ಯಪ್ಪರಿಗೆ ಸನ್ಮಾನ

ಕೊಡಗಿನ ರಾಜಕೀಯ ಕ್ಷೇತ್ರದ ಮೂಲ ಪುರುಷರೂ, ಸ್ವಾತಂತ್ರ್ಯ ಸಂಗ್ರಾಮದ ವೀರ ಯೋಧರೂ ಆದ ಶ್ರೀ ಪಿ. ಐ. ಬೆಳ್ಯಪ್ಪನವರು ನಾಡಿಗಾಗಿ ಮಾಡಿದ ಅನುಪಮ ಸೇವೆಯನ್ನು ಸ್ಮರಿಸಿ ಅವರಿಗೆ ಸಾರ್ವಜನಿಕ ನಿಧಿಯೊಂದನ್ನು ಅರ್ಪಿಸುವ ಸಮಾರಂಭವು ಕಳೆದ ತಾ. 13ರಂದು ಮಡಿಕೇರಿಯ ಕೊಡವ ಸಮಾಜ ಕಟ್ಟಡದಲ್ಲಿ ಜನರಲ್ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಅತಿಥಿಗಳಿಗೆ ಹಾರಾರ್ಪಣೆ ಸಂದ ಬಳಿಕ ಶ್ರೀ ಪೂವಯ್ಯನವರು ಸ್ವಾಗತಿಸುತ್ತಾ ಅತಿಥಿಗಳ ಪರಿಚಯ ಮಾಡಿದರು. ಶ್ರೀ ಬಿ. ಪಿ. ಬೋಪಯ್ಯನವರು ಬಿನ್ನವತ್ತಳೆಯನ್ನೋದಿ ಸಮರ್ಪಿಸಿದರು. ಸಭಾಧ್ಯಕ್ಷರು ನಿಧಿಯನ್ನು ಅರ್ಪಿಸಿದರು. ಶ್ರೀ ಕೆ. ಪಿ. ಕರುಂಬಯ್ಯನವರು ಅತಿಥಿಗಳ ಗುಣಗಾನಗೈದರು. ಅಧ್ಯಕ್ಷರೂ ಶ್ರೀ ಬೆಳ್ಯಪ್ಪನವರ ಸೇವೆಯನ್ನು ಶ್ಲಾಘಿಸಿ ಅವರಿಗೆ ಆಯುರಾರೋಗ್ಯವನ್ನು ಹಾರೈಸಿದರು. ಶ್ರೀ ಪಿ. ಐ. ಬೆಳ್ಯಪ್ಪನವರು ಕೃತಜ್ಞತೆಗಳೊಂದಿಗೆ ತಮಗೊಪ್ಪಿಸಿದ ನಿಧಿಯನ್ನು ಅಮ್ಮತ್ತಿಯಲ್ಲಿ ಕಟ್ಟಲ್ಪಡುವ ಆರೋಗ್ಯ ಕೇಂದ್ರ-ಇಂಡಿಯ ಆಸ್ಪತ್ರೆಗೆ ದಾನವಿತ್ತರು.

ಜೀರ್ಣೋದ್ಧಾರ ಮತ್ತು ರಥೋತ್ಸವ

ಉಡುಪಿ ಪಟ್ಟಣದ ತೆಂಕು ಸರಹದ್ದಿನ ಬಡಗಬೆಟ್ಟು ಗ್ರಾಮದ ಶ್ರೀ ಪಟ್ಟಾಸಾರ ಮರ್ದಿನಿ ಅಮ್ಮನವರ ದೇವೀ ಮಂದಿರವನ್ನು ಜೀರ್ಣೋದ್ಧಾರಗೊಳಿಸಲಾಗಿದ್ದು ಬ್ರಹ್ಮಕಲಶ, ಅಷ್ಟಬಂಧ, ರಥೋತ್ಸವ ಮೊದಲಾದ ಪುಣ್ಯಕಾರ್ಯಗಳು 24.3.65ರಿಂದ ಪ್ರಾರಂಭವಾಗಿದ್ದು ತಾ. 6.4.65ರ ವರೆಗೆ ನಡೆಯಲಿವೆ. ಈ ಪುಣ್ಯಕಾರ್ಯಗಳಲ್ಲಿ ಸರ್ವರೂ ಸಹಕರಿಸಿ ಶ್ರೀ ಮುಡಿ ಗಂಧ ಪ್ರಸಾದಗಳನ್ನು ಪಡೆದು ಶ್ರೀ ದೇವಿಯ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಟ್ರಸ್ಟಿ, ಎಡ್ವಕೇಟ್ ಬೈಲೂರು ವಾಸುದೇವರಾಯರು ವಿನಂತಿಸುತ್ತಾರೆ.

ರಥೋತ್ಸವ

ಹಿರಿಯಡ್ಕ, ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನದಲ್ಲಿ ತಾ. 15.4-65ರಿಂದ ತಾ. 20.4.65ರ ವರೆಗೆ ರಥೋತ್ಸವದ ಕಾರ್ಯಕ್ರಮಗಳು ಮಾಮೂಲು ಮೇರೆಗೆ ಜರಗುವುದೆಂದೂ ಸರ್ವರೂ ಬಂದು ಶ್ರೀ ಮುಡಿ ಗಂಧ ಪ್ರಸಾದಗಳನ್ನು ಸ್ವೀಕರಿಸಿ ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕೆಂದೂ ಮೆನೇಜಿಂಗ್ ಟ್ರಸ್ಟಿ ಶ್ರೀ ಎ. ಜಗಂಜೀವ ಆಳ್ವರು ವಿನಂತಿಸುತ್ತಾರೆ.

ನಿಧನ

ಮೂಲ್ಕಿ. ಇಲ್ಲಿನ ಪ್ರಸಿದ್ಧ ಬಂಟರ ಮನೆತನಕ್ಕೆ ಸೇರಿದ ಕಕ್ವಗುತ್ತು ಚಂದ್ರಮ್ಮ ಶೆಡ್ತಿಯವರು ತನ್ನ 80ನೇ ವರ್ಷ ಪ್ರಾಯದಲ್ಲಿ ತನ್ನ ಸ್ವಂತ ಮನೆಯಲ್ಲಿ ತಾ. 19-3-65ನೇ ಶುಕ್ರವಾರ ರಾತ್ರಿ ದೈವಾಧೀನರಾದರೆಂದು ತಿಳಿಸಲು ತುಂಬಾ ದುಃಖಪಡುತ್ತೇವೆ. ಮೃತರ ಆತ್ಮಕ್ಕೆ ಶಾಂತಿ ದೊರೆಕಲೆಂದು ಪ್ರಾರ್ಥಿಸುತ್ತೇವೆ.

ಪುಸ್ತಕ ಬ್ಯಾಂಕ್ ಉದ್ಘಾಟನೆ

ಮಣಿಪಾಲ, ಮಾ. ೧೬— ಬೆಂಗಳೂರಿನ ವಿದ್ಯಾರ್ಥಿ ಸಹಾಯ ಸಂಘ, ಬೆಂಗಳೂರು ರೋಟರಿ ಕ್ಲಬ್ ಮತ್ತು ಉಡುಪಿ ರೋಟರಿ ಕ್ಲಬ್ ಸೇರಿ ೧೦,೫೦೦ ರೂ. ಕೊಟ್ಟು ಇಲ್ಲಿಯ ಕಸ್ತೂರಬಾ ಮೆಡಿಕಲ್ ಕಾಲೇಜಿನಲ್ಲಿ ಆರಂಭಿಸಿರುವ ಪುಸ್ತಕಗಳ ಬ್ಯಾಂಕನ್ನು ಭಾರತ ವೈದ್ಯಕೀಯ ಸಂಘದ ಮೈಸೂರು ರಾಜ್ಯ ಶಾಖೆಯ ಮಾಜಿ ಅಧ್ಯಕ್ಷ ಮೇಜರ್ ಜನರಲ್ ಎಸ್. ಎಲ್. ಭಾಟಿಯಾರವರು ಇಂದು ಉದ್ಘಾಟಿಸಿದರು. ಬಡ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಒದಗಿಸುವುದಕ್ಕಾಗಿ ಪುಸ್ತಕ ಬ್ಯಾಂಕುಗಳ ಯೋಜನೆಯನ್ನು ಬೆಂಗಳೂರು ರೋಟರಿ ಕ್ಲಬ್ ಆರಂಭಿಸಿತೆಂದೂ ರಾಮನಾರಾಯಣ ಚೆಲ್ಲಾರಾಂ ಧರ್ಮಾರ್ಥ ಟ್ರಸ್ಟಿನವರು ಮುಂದುವರಿಸಿದರೆಂದೂ ಮೇಜರ್ ಜನರಲ್ ಭಾಟಿಯಾರು ತಿಳಿಸಿದರು.

ರೋಟರಿ ಕ್ಲಬ್ ಅಧ್ಯಕ್ಷ ಡಾ। ಎ. ಕೃಷ್ಣರಾವ್‌ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀ ರಮೇಶ ಪೈಯವರು ಮೇ. ಜ. ಭಾಟಿಯಾರವರನ್ನು ಸಭೆಗೆ ಪರಿಚಯ ಮಾಡಿಕೊಟ್ಟರು. ಡಾ। ಶಿವರಾಮನ್‌ರವರು ಈ ಪುಸ್ತಕ ಬ್ಯಾಂಕಿನ ಬೆಳವಣಿಗೆಯನ್ನು ವಿವರಿಸಿದರು.

ಚಲಚ್ಚಿತ್ರ ಕಲಾವಿದರ ನಾಟಕ ಉದ್ಘಾಟನೆ

ಮಂಗಳೂರು: ಶ್ರೀ ತ. ರಾ. ಸು. ರವರು ಕಳೆದ ತಾ. 20ರಂದು ರಾತ್ರಿ ಮಂಗಳೂರಿನ ಪುರಭವನದಲ್ಲಿ ಮದ್ರಾಸಿನ ಕರ್ನಾಟಕ ಚಲಚ್ಚಿತ್ರ ಕಲಾವಿದರ ಸಂಘದವರು ಏರ್ಪಡಿಸಿರುವ ನಾಟಕ ಪ್ರದರ್ಶನಗಳ ಉದ್ಘಾಟನೆಯನ್ನು ನೆರವೇರಿಸುತ್ತಾ ಮಂಗಳೂರಿನಲ್ಲಿ ರಚನೆಯಾಗಿರುವ ಪುರಭವನವು ಕಲಾವಿದರಿಗೆ ಅನುಕೂಲವಾಗಿರುವುದೆಂಬ ಸಂತೋಷವಿರುವುದಾದರೂ ಅದು ಕಲಾವಿದರಿಂದ ವಸೂಲು ಮಾಡುತ್ತಿರುವ ರೂ. 300/- ಬಾಡಿಗೆ ಅತಿರೇಕವಾಗಿದೆ ಎಂದೂ, ನಾಟಕ ಪ್ರದರ್ಶನಗಳಿಗೆ ಅನುಕೂಲವಾಗುವಂತೆ ರಂಗಮಂಟಪದ ಸುಧಾರಣೆಯಾಗಬೇಕೆಂದೂ ನುಡಿದರು.

ಅಧ್ಯಕ್ಷಸ್ಥಾನದಿಂದ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಮಾತಾಡುತ್ತಾ, ಚಾಡಿಗೆಯ ವಿಷಯದಲ್ಲಿ ಶ್ರೀ ತ. ರಾ. ಸು. ರವರನ್ನು ಸಮರ್ಥಿಸಿದರು. ಮುಂದುವರಿಯುತ್ತಾ ಅವರು ಮದ್ರಾಸಿನ ಚಿತ್ರ ಕಲಾವಿದರ ಪ್ರಯತ್ನಕ್ಕೆ ಶುಭ ಕೋರಿದರು. ಕಲಾವಿದರ ಪರವಾಗಿ ಕೃಷ್ಣಗೋಪಾಲರು ಧನ್ಯವಾದ ಸಮರ್ಪಿಸಿದರು.

ನೃತ್ಯ ಪ್ರದರ್ಶನ

ಕಾಪು : ತಾ. 21-3-1965ರಂದು ಜರಗಿದ ಕಾಪು ಫ್ರೆಂಡ್ಸ್ ಕ್ಲಬ್ಬಿನ ಸಹಾಯಾರ್ಥ ನಾಟಕದ ಅಂಗವಾಗಿ, ಕಾಪು ಮಹಿಳಾ ಸಮಾಜದ ಶಾಸ್ತ್ರೀಯ ಸಂಗೀತ ಭರತನಾಟ್ಯ ತರಗತಿಯ ಮಕ್ಕಳಾದ ಕುಮಾರಿ ಕುಮುದ, ವೀಣಾ, ಶೋಭಾ, ಶೀಲಾ, ಇವರಿಂದ ಅಲರಿಪು, ಜತಿಸ್ವರ ಹಾಗೂ, ನೃತ್ಯ ಅಭಿನಯಗಳಾದ ನಟನಂ ಆಡಿನಾರ್, ಕ್ಷೀರಸಾಗರ ಶಯನ ಮತ್ತು ಕಾಳಿಂಗಮರ್ದನ ನೃತ್ಯ ಕಾರ್ಯಕ್ರಮವು ಯಶಸ್ವಿಯಾಗಿ ಜರಗಿತು. ಇದಕ್ಕೆ ಸಂಗೀತಕ್ಕೆ ಶ್ರೀಮತಿ ತುಳಸಿಯಮ್ಮ, ಮೃದಂಗ ಗಣಪತಿ ಶೆಟ್ಟಿ, ಹಾರ್ಮೋನಿಯಂ ಎಂ. ಎಸ್. ಶೆಟ್ರು ಸಹಕರಿಸಿದ್ದರು.

ಸೇತುವೆಯ ಉದ್ಘಾಟನೆ

ಕಳೆದ ತಾ. 27ರಂದು ನೇತ್ರಾವತಿ ನದಿಯ ಮೇಲೆ ಉಪ್ಪಿನಂಗಡಿ ಗುರುವಾಯನಕೆರೆ ರಸ್ತೆಯಲ್ಲಿ ನಿರ್ಮಿಸಲಾದ ಸೇತುವೆಯ ಉದ್ಘಾಟನೆಯು ಮಂತ್ರಿ ಶ್ರೀ ವೀರೇಂದ್ರ ಪಾಟೀಲರ ಅಧ್ಯಕ್ಷತೆಯಲ್ಲಿ ಕೇಂದ್ರ ಮಂತ್ರಿ ಶ್ರೀ ಬಿ. ಆರ್. ಭಗತ್‌ರವರಿಂದ ಉದ್ಘಾಟಿಸಲ್ಪಟ್ಟಿತು. ಆರಂಭದಲ್ಲಿ ಸುಪರಿಂಟೆಂಡಿಂಗ್ ಇಂಜಿನಿಯರ್ ಶ್ರೀ ಡಬ್ಲ್ಯು. ಟಿ. ಎಸ್. ಸಲ್ದಾನರು ಸ್ವಾಗತಿಸಿದ ಬಳಿಕ, ಶ್ರೀ ಬಿ. ಆರ್. ಭಗತ್ ಮತ್ತು ಶ್ರೀ ಪಾಟೀಲರಿಗೆ ತಮ್ಮ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಗಳ ಕುರಿತು ಮನವಿಗಳ ನ್ನರ್ಪಿಸಲಾಯಿತು. ಶ್ರೀ ಭಗತ್‌ರವರು ಉದ್ಘಾಟಿಸುತ್ತಾ ಪ್ರಕೃತಿ ಸೌಂದರ್ಯದ ಬೀಡಾದ ಪಶ್ಚಿಮ ಕರಾವಳಿ ಪ್ರದೇಶವನ್ನು ಭಾರತದ ಅತ್ಯುತ್ತಮ ಪ್ರವಾಸೀ ಆಕರ್ಷಣೆಯಾಗಿ ಮಾಡಬಹುದಾಗಿದೆ ಎಂದರು. ಅಧ್ಯಕ್ಷರು ಮಾತನಾಡುತ್ತಾ ಮಲೆನಾಡು ಪ್ರದೇಶದ ಅಭಿವೃದ್ಧಿ ರಾಜ್ಯದ ಅಭಿವೃದ್ಧಿಯಾಗಿದೆ ಎಂದು ನುಡಿದರು.

ಉಡುಪಿ ನಗರ ಸಭಾಸದಸ್ಯರ ಅನ್ನ ಸತ್ಯಾಗ್ರಹ ಮುಕ್ತಾಯ

ಉಡುಪಿ, ಸರಕಾರ ನಿಶ್ಚಯಿಸಿದ ದರದಲ್ಲಿ ಜನತೆಗೆ ಬಂದಿಷ್ಟಾದರೂ ಅಕ್ಕಿ ದೊರೆಯಬೇಕೆಂಬ ಕೇಳಿಕೆಯನ್ನು ಮುಂದಿಟ್ಟುಕೊಂಡು, ಉಡುಪಿ ನಗರ ಸಭಾಸದಸ್ಯರು ಕೈಕೊಂಡಿದ್ದ ಅನ್ನ ಸತ್ಯಾಗ್ರಹವನ್ನು ಕಳೆದ ತಾ. ೨೪ರ ಮುಂಜಾನೆ, ರಾಜ್ಯದ ಕಂದಾಯ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ಕೊಟ್ಟ ಆಶ್ವಾಸನೆಯ ಮೇರೆಗೆ ಮುಕ್ತಾಯಗೊಳಿಸಿದರು. ಜುಲೈ ೧ರಿಂದ ನಗರದಲ್ಲಿ ಅನಿರ್ಬಂಧಿತ ರೇಶನಿಂಗ್ ಜ್ಯಾರಿಗೊಳಿಸಲಾಗುವುದೆಂದೂ, ಪರಿಸ್ಥಿತಿ ಕೆಟ್ಟರೆ ಅದಕ್ಕೆ ಮೊದಲೇ ರೇಶನಿಂಗ್ ಜ್ಯಾರಿಗೊಳಿಸುವ ಆಲೋಚನೆ ಮಾಡಲಾಗುವುದೆಂದೂ, ಆ ತನಕ ತಿಂಗಳಿಗೆ ಒಂದು ಸಾವಿರ ಕ್ವಿಂಟಲ್ ಅಕ್ಕಿಯಂತೆ ಯೋಗ್ಯ ದರದಲ್ಲಿ ವಿತರಣೆ ಮಾಡಲು, ಶಿವಮೊಗ್ಗದಿಂದ ಅಕ್ಕಿಯ ರವಾನಿಗೆ ಪರವಾನಿಗೆ ಕೊಡಲಾಗುವುದೆಂದೂ ಸಚಿವರು ಆಶ್ವಾಸನೆಯಿತ್ತಿರುವರೆಂದು ತಿಳಿದುಬರುತ್ತದೆ.

ಸತ್ಯಾಗ್ರಹದಲ್ಲಿ ಸಹಕರಿಸಿದವರಿಗೆ ಕೃತಜ್ಞತೆ ಸೂಚಿಸಲು ಹಾಗೂ ಇದರಿಂದಾದ ತಪ್ಪು ಕಲ್ಪನೆಯ ಕುರಿತು ಸ್ಪಷ್ಟೀಕರಣ ನೀಡಲು, ಕಳೆದ ತಾ. ೨೮ರಂದು ರಥಬೀದಿಯಲ್ಲಿ ಸಾರ್ವಜನಿಕ ಸಭೆ ಜರಗಿತ್ತು. ಶ್ರೀ ಯೋಗೀಶ್ವರ ಹೆಬ್ಬಾರರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಪಿ. ರಂಗನಾಥ ಶೆಣೈ, ಸೀತಾರಾಮ ಕಾಮತ್, ಪದ್ಮನಾಭ ರಂಗ ಸೆಟ್ಟಿಗಾರರೇ ಮೊದಲಾದವರು ಈ ಸಂದರ್ಭ ಮಾತಾಡಿದರು. ಶ್ರೀ ನರಸಿಂಹ ಪಾಂಗಣ್ಣಾಯರು ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.

ಧನ್ಯವಾದಾರ್ಪಣೆ

ನವಯುಗದ ಪ್ರಚಾರಾರ್ಥವಾಗಿ ಕಳೆದ ವಾರ ಭದ್ರಾವತಿಗೆ ಶ್ರೀ ರಘುರಾಮ ಶೆಟ್ಟಿ, ಡಾ। ಚಂದ್ರಶೇಖರ ಇವರೊಂದಿಗೆ ತೆರಳಿದಾಗ ಅಲ್ಲಿ ಶ್ರೀಗಳಾದ ಎಂ. ಮಹಾಬಲ ಶೆಟ್ಟಿ (ಶ್ರೀರಾಮ ಸ್ಟೋರ್ಸ್), ಶೇಖರ ಆಳ್ವ, ಸಿ. ಆನಂದ ಶೆಟ್ಟಿ, ಡಾ। ಯು. ಕರುಣಾಕರ ಮೊದಲಾದವರು ಸೌಹಾರ್ದತೆಯಿಂದ ಸಹಕರಿಸಿರುವುದಕ್ಕಾಗಿ ನಮ್ಮ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ. ಅಲ್ಲದೆ ಉಡುಪಿಯಲ್ಲಿ ಸಹಕರಿಸಿದ ಡಾ। ಕೆ. ಜಿ ಶೇಕ ಮೊದಲಾದವರಿಗೂ ನಾವು ಆಭಾರಿಗಳಾಗಿದ್ದೇವೆ.

ಕೆ. ಹೊನ್ನಯ್ಯ ಶೆಟ್ಟಿ,

ಸಂಚಾಲಕ-ಸಂಪಾದಕ.

ಗೆದ್ದೂ ಸೋತಾಗ . . .

(ಎರಡನೇ ಪುಟದಿಂದ)

ದ್ದ. ರಮೆ ಮಾತ್ರ ಇವನೆಡೆಗೆ ಒಮ್ಮೆಯೂ ಕಣ್ಣೆತ್ತಿಯೂ ನೋಡಿರಲಿಲ್ಲ. ಇದರಿಂದ ರಮೆಯಲ್ಲಿ ಆತನಿಗೆ ತುಂಬಾ ಒಲವುಂಟಾಗಿ ಇದರ ಫಲವಾಗಿ ಯಾವುದನ್ನೂ ಮಾಡಲಾರದೆ ಚಡಪಡಿಸುತ್ತಿದ್ದ. ಅವಳನ್ನು ಸಿಕ್ಕಿಸಿ ಹಾಕುವ ಕಾರ್ಯಕ್ಕೆ ಹೊಂಚು ಹಾಕುವುದು ಅವನ ದಿನನಿತ್ಯದ ವ್ಯಾಪ್ತಿಯಾಯಿತು.

ರಮೇಶ ರಜೆಯಲ್ಲಿ ಬಂದ ಮರುದಿನ ಚಂದುವಿನ ಅಂಗಡಿಯ ಮುಂಭಾಗದಲ್ಲಿ ಹೋಗುತ್ತಿದ್ದಾಗ ಕರೆದು ಕೈಯೆತ್ತಿ ನಮಸ್ಕಾರ ಸೂಚಿಸಿ, ಬನ್ನಿರೆಂದು ಕೂತುಕೊಳ್ಳಿಸಿ ಸೇದಲು ಸಿಗರೇಟೊಂದನ್ನಿತ್ತ. ರಮೇಶ ಸಿಗರೇಟು ಸೇದತೊಡಗಿದ.

"ನಿಮ್ಮ ರಜೆ ಯಾವಾಗ ಮುಗಿಯುವುದು ಸಾರ್?"

"ನಾಳೆಯದೊಂದೇ. ನಾಡಿದ್ದು ಹೋಗಬೇಕು."

"ಅಂದ ಹಾಗೆ... ನಿಮಗೂ ಇದೇ ಊರಿಗೆ ವರ್ಗಾಯಿಸಿಕೊಳ್ಳಲು ಬರುವುದಿಲ್ಲವೇ?"

"ಉದ್ಯೋಗದಲ್ಲಿರುವ ಪತಿಪತಿಗಳು ಒಂದೇ ಊರಿನಲ್ಲಿ ದುಡಿಯುತ್ತಿದ್ದರೆ ಆದರಿಂದ ಸಂಸಾರ ಬಹಳ ಚೆನ್ನಾಗುವುದು. ಮಿತವ್ಯಯಕ್ಕೆ ಅನುಕೂಲ. ಮಕ್ಕಳ ವಿದ್ಯಾಭ್ಯಾಸಕ್ಕೂ ಒಳ್ಳೆಯದು." ಎಂದು ಚಂದು ಬಾ ಸಲಹೆಗಳು ಬಂದುವು. ಚಂದುವಿನಿಂದ.

ರಮೇಶ ಸಿಗರೇಟು ಸೇದುತ್ತ ಚಂದುವಿನ ಮಾತುಗಳನ್ನು ಕೇಳುತ್ತಿದ್ದ. ಒಂದು ದೃಷ್ಟಿಯಲ್ಲಿ ಅದು ನಿಜವಾಗಿಯೂ ತೋರಿತು.

"ಸ್ವಾಮಿ, ನೀವು ನನ್ನ ಆತ್ಮೀಯರೆಂಬುದರಿಂದ ನಿಮ್ಮಲ್ಲಿ ಒಂದು ಗುಪ್ತ ವಿಚಾರವನ್ನು ಸೂಚಿಸ ಬಯಸುತ್ತೇನೆ. ಅನ್ಯಥಾ ಭಾವಿಸಬಾರದು. ನಾನು ಎಲ್ಲಾ ಹೆಂಗಸರನ್ನೂ ನನ್ನ ಮನೆಯ ಹೆಂಗಸರಂತೇ ಭಾವಿಸುವವ. ಅವರ ಗೌರವ ಬೇರೆ ನನ್ನ ಮನೆಯವರ ಗೌರವ ಬೇರೆಯೆಂದು ತಿಳಿಯುವವ ನಾನಲ್ಲ." ಎಂದಾಗ ರಮೇಶ "ಅಂದರೆ....?" ಎನ್ನಲೇಬೇಕಾಯಿತು..

"ಕೇಳಿ ನಿಮ್ಮ ಮಡದಿಯ ಕತೆಯಿದು. ಅಕೆಯ ವ್ಯವಹಾರಗಳು ಈಗ ಬಹಳ ಹೀನ ಸ್ಥಿತಿಗೆ ಇಳಿದಿದೆಯೆಂದರೆ ಹೆಚ್ಚಲ್ಲ. ಕಾಣದೂರಿನಲ್ಲಿ ನೀವು ದುಡಿಯುತ್ತಿದ್ದರೆ ಅವರು ಇಲ್ಲಿನ ಆಫೀಸಿನಲ್ಲಿ ಕೆಲವರೊಡನೆ ಚೆಲ್ಲಾಟಕ್ಕೆ ತೊಡಗಿರುವುದು ಬಹಳ ಹೇಯ."

"ಕೆಲವರೊಡನೆ ಚೆಲ್ಲಾಟ?" ರಮೇಶ ಉದ್ವೇಗದಿಂದ ಸಿಡಿಲೆರಗಿದಂತೆ ಎಂದವನೇ ಸಂಶಯ ಪಿಶಾಚಿಯ ಬಲೆಯೊಳಗೆ ಕಟ್ಟುಬಿದ್ದು ಕುತೂಹಲನಾಗಿ ಆಲಿಸತೊಡಗಿದ. ನಿರಪರಾಧಿ ರಾಜಣ್ಣನ ಬಗೆಗೆ ಹತ್ತು ಹಲವು ಅಪರಾಧಗಳ ಕೆಸರನ್ನೇ ಚೆಲ್ಲಿ ರಮೆಗೂ ಆತನಿಗೂ ಬಹಳ ಒಳ್ಳೆಯದಿದೆಯೆಂದೂ, ಆ ವಿಷಯವಾಗಿ ಈ ಪೇಟೆಯಲ್ಲಿ, ಹೆಚ್ಚೇಕೆ ಊರಲ್ಲೆಲ್ಲಾ ಸುದ್ದಿ ಹರಡಿದೆಯೆಂದೂ ತನ್ನ ಭಂಡಾರದಲ್ಲಿದ್ದ ಎಲ್ಲಾ ಶಬ್ದಗಳನ್ನೂ ಖರ್ಚು ಮಾಡಿದ ಚಂದು.

ರಮೇಶ ಕಿವಿಗೊಡುತ್ತಿದ್ದಂತೆ ದಿಗ್ಭ್ರಾಂತನಾದ. ತನ್ನ ಪತ್ನಿಯ ಬಗೆಗೆ ತನ್ನ ಇದಿರಲ್ಲೇ ಇಷ್ಟು ಧೈರ್ಯದಿಂದ ಆಡಿದ ಚಂದುವಿನ ಮಾತುಗಳು ಖಂಡಿತ ನಿಜವಿರಲೇ ಬೇಕೆಂದು ಅವನಿಗೂ ಅನಿಸದಿರಲಿಲ್ಲ. ಆತ ಮುಂದೆ ಅಲ್ಲಿ ನಿಲ್ಲಲು ಇಚ್ಛೆ ಪಡದೆ ನೇರ ತನ್ನ ಬಿಡಾರದೆಡೆಗೆ ನಡೆದ. ಆಗ ಅವನಲ್ಲಿ ಯಾವುದೋ ಒಂದು ದೃಢ ನಿರ್ಧಾರ ನೆಲೆಗೊಂಡಂತಿತ್ತು.

ಚಿಕ್ಕ ಮಗು ರಾಜಣ್ಣನ ಬರವನ್ನು ನೋಡಿ, ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತಾ ಓಡೋಡಿ ಬಂದು ಅವನ ಕಾಲಿಗೆ ತೆಕ್ಕೆ ಬಿದ್ದು, "ಪಪ್ಪಾ, ನನಿಗೆ ಬಿಸ್ಕತ್ತು ಉಂಟಾ?" ಎಂದು ಕೈನೀಡಿ ಯೋಚಿಸಿದರೂ ಆತನ ಗಮನ ಮಗುವಿನ ಬೇಡಿಕೆಯ ಕಡೆಗೆ ಹರಿಯಲಿಲ್ಲ. ಬಂದವನೇ ದೀರ್ಘ ನಿಟ್ಟುಸಿರು ಬಿಡುತ್ತಾ ಧೊಪ್ಪನೆ ಆರಾಮ ಕುರ್ಚಿಯಲ್ಲಿ ಒರಗಿಕೊಂಡ. ಆತನ ಗಂಭೀರತೆ ರಮೆಯನ್ನೂ ಸಂಶಯಕ್ಕೆಡೆ ಮಾಡಿತು. ಆಕೆಯೂ ಮೌನವಾಗಿಯೇ ತನ್ನ ಕೆಲಸದಲ್ಲಿ ತೊಡಗಿದ್ದಳು.

ಜ್ವರ ಪೀಡಿತೆಯಾದ ಮುದುಕಿಯೊಬ್ಬಳು ಮಾಳಿಗೆಯಿಂದ 'ಕೆರ್, ಕೆರ್' ಎಂದು ಕೆಮ್ಮುತ್ತಿದ್ದುದು ಕೇಳುತ್ತಿತ್ತು.

ರಾತ್ರಿ ರಮೇಶ ಊಟವನ್ನೂ ಮಾಡಲಿಲ್ಲ. ವಿಚಾರಿಸಿದಾಗ ತನ್ನ ಆರೋಗ್ಯ ಸರಿಯಿಲ್ಲವೆಂದು ಉತ್ತರಿಸಿದ್ದ.

ಮರುದಿನ ಮುಂಜಾನೆ ಬೇಗನೆದ್ದು ತನ್ನ ಉದ್ಯೋಗದೆಡೆಗೆ ಸಾಗಿದ್ದ ರಮೇಶ. ಏಕೆ ಹೀಗೆ ಎಂದು ತಿಳಿಯದ ರಮೆಯೂ ಅಂದ ತನ್ನ ಆಫೀಸಿಗೆ ಸಾಗಿದ್ದಳು. ಆಕೆಯ ವರ್ತನೆಯಲ್ಲಿ ಕಾಸು ಅಳುಕು ಬೆರೆತಿತ್ತು.

○ ○ ○

ಒಂದು ವಾರ ಕಳೆದ ಮೇಲೆ ರಮೇಶ ರಾತ್ರಿಯ ಕಾಲ ತನ್ನ ಮನೆಗೆ ಅನಿರೀಕ್ಷಿತವಾಗಿ ಆಗಮಿಸಿದ. ತಿಂಗಳ ಬೆಳಕು ಹಾಲಿನಂತೆ ನೆಲವನ್ನು ಹರಡಿತ್ತು.

ರಮೇಶ ಮೆಲ್ಲನೆ ತಾನು ಮಲಗುವ ಮನೆಯೆಡೆಗೆ ನಡೆದರೆ, ಅಲ್ಲಿಯ ದೃಶ್ಯವನ್ನು ನೋಡಲಾರದೆ ಹಿಂದೆ ಸರಿದ.

ಜಗಲಿಗೆ ಬಂದು ಆರಾಮ ಕುರ್ಚಿಗೊರಗಿದರೆ, ಆತನಿಗೆ ಇದೂ ಒಪ್ಪಲಿಲ್ಲ. "ರಾಜಣ್ಣನನ್ನು ಥಳಿಸಲೇ? ಅವನೇಕೆ ಅಪರಾಧಿ? ಈಕೆಯ ಒಪ್ಪಿಗೆ ವಿನಾ ಆತ ಇಲ್ಲಿ ಬಂದಿರಲಾರ. ಇನ್ನು ಆಕೆ! ಆಕೆಯ ಸುಖಕ್ಕೇಕೆ ನಾನು ಅಡ್ಡಿ ಬರಲಿ? ಬೇಡ ಯಾವುದೂ ಬೇಡ. ನನ್ನ ದಾರಿ ನನಗೆ. ಇನ್ನು ನಾನೀ ಊರಿಗೆ ನನ್ನ ಮುಖದೋರಿಸ ಬಾರದು. ನನ್ನ ಮತ್ತು ರಮೆಯ ಸಂಬಂಧ ಇಂದಿಗೇ ಕಡಿದು ಹೋಗಲಿ," ಎನ್ನುತ್ತಾ ಆತ ಬಂದ ದಾರಿಯಲ್ಲೇ ಹೆಜ್ಜೆ ಹಾಕತೊಡಗಿದ.

ಮರುದಿನವೇ ರಮೆಗೆ ಒಂದು ದೀರ್ಘ ಪತ್ರ ಬರೆದು ವಿವರವನ್ನು ತಿಳಿಸಿದ. ಅದನ್ನು ಓದಿದ ರಮೆಗೆ ತನ್ನ ಗುಟ್ಟು ಬಯಲಾಯಿತೆಂದು ಆಕಾಶವೇ ಕಳಚಿ ತಲೆಗೊರಗಿದಂತಾಯಿತು.

ಋಷಿ ಬೋಧೋತ್ಸವ

ಮಂಗಳೂರು ಆರ್ಯ ಸಮಾಜದ ವಾರ್ಷಿಕ ಋಷಿ ಬೋಧೋತ್ಸವ ಮತ್ತು ಸ್ವಾಮಿ ಶ್ರದ್ಧಾನಂದ ಆಶ್ರಮದ ವಾರ್ಷಿಕೋತ್ಸವವು ಎಂ. ಜಿ. ಎಂ. ಕಾಲೇಜ್ ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರ್ಥನೆಯಾದ ಬಳಿಕ ಆಶ್ರಮದ ಅಧ್ಯಕ್ಷ ಡಾ| ಕೆ. ಬಿ. ಶೆಟ್ಟರು ಸ್ವಾಗತಿಸಿ ಸಂದೇಶಗಳನ್ನೋದಿದರು. ಶ್ರೀ ಮಂಜು ಬಂಟ್ವಾಳರು ಆಶ್ರಮದ ವರದಿಯನ್ನೋದಿದರು. ಬಳಿಕ ಬಹುಮಾನ ವಿತರಣೆ ನಡೆಯಿತು. ಸ್ವಾಮಿ ಸತ್ಯಾನಂದಜಿಯವರು ಋಷಿ ಬೋಧೋತ್ಸವ ಮತ್ತು ಅದರ ಮಹತ್ವದ ಕುರಿತೂ ಶ್ರೀ ಪಿ. ಕೆ. ನಾರಾಯಣರು ಸ್ವಾಮಿ ದಯಾನಂದ ಸರಸ್ವತಿಯವರ ಜೀವನ ಮತ್ತು ರಾಷ್ಟ್ರ ನಿರ್ಮಾಣದ ಕಾರ್ಯಗಳ ಕುರಿತೂ ಮಾತನಾಡಿದರು. ಅಧ್ಯಕ್ಷರು ಮಾತನಾಡುತ್ತಾ ಅನ್ಯಮತೀಯರಿಂದ ನಾವು ಸಂಘಟನೆಯನ್ನು ಕಲಿಯಬೇಕು. ಒಟ್ಟಾಗಿ ಬಾಳುವ ಸೂತ್ರವನ್ನು ಕಲಿತಾಗಲೇ ಪ್ರಗತಿ ಸಾಧ್ಯವೆಂದು ನುಡಿದರು. ಬಳಿಕ ಸಂಗೀತ ಕಾರ್ಯಕ್ರಮ ನಡೆಯಿತು.

ಉಪನಯನ ಸಮಾರಂಭ

ಕಿನ್ನಿಗೋಳಿ, "ಯುಗಪುರುಷ"ದ ಸಂಪಾದಕ ಶ್ರೀ ಕೊಡತ್ತೂರು ಅನಂತಪದ್ಮನಾಭ ಉಡುಪರ ಪುತ್ರ ಚಿ| ನಯನಾಭಿರಾಮನ ಉಪನಯನ ಸಮಾರಂಭವು ತಾ. 7-3-65ರಂದು ನೆರವೇರಿತು. ಉಡುಪಿಯ ಫಲಿಮಾರು ಮಠಾಧೀಶರಾದ ಶ್ರೀ ಶ್ರೀ ರಘುವಲ್ಲಭ ತೀರ್ಥ ಶ್ರೀಗಳವರ ಉಪಸ್ಥಿತಿಯಲ್ಲಿ ಅಮೂಲ್ಯ ಮಂತ್ರೋಪದೇಶನೊಂದಿಗೆ ಜರಗಿದ ಈ ಸಮಾರಂಭದಂದು ಸಾಯಂಕಾಲ ಶ್ರೀ ಕೆ. ಯಸ್. ಪದ್ಮನಾಭಾಚಾರ್ಯರ ಹಾಗೂ ಶ್ರೀ ಬಾಲಕೃಷ್ಣಾಚಾರ್ಯರೇ ಮೊದಲಾದ ಬಳಗದವರ ಸುಶ್ರಾವ್ಯ ವೃಂದಗಾನದ ಕಾರ್ಯಕ್ರಮದ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು. ಈ ಉಪನಯನ ಸಂಸ್ಕಾರದ ನೆನಪಿಗಾಗಿ ತಾ. 9-3-65ರಂದು ವಟುವು ವಿದ್ಯಾಭ್ಯಾಸಗೈಯುತ್ತಿರುವ ಪೊಂಪೈ ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ಹಂಚಲಾಯಿತು.

ವಿದ್ಯಾರ್ಥಿಗಳ ವಿದಾಯ

ಮಣಿಪಾಲ, ತಾ 16 ಪದ್ಮಶ್ರೀ ಡಾ| ಟಿ ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಪ್ರೌಢಶಾಲಾ 10ನೇ ತರಗತಿಯ ವಿದ್ಯಾರ್ಥಿಗಳ ವಿದಾಯ ಸಮಾರಂಭವು ನೆರವೇರಿತು. ಕುಮಾರ ವಾಸುದೇವ ರಾವ್ ಸ್ವಾಗತಿಸಿದ ಬಳಿಕ, ಕು| ದೇವಪ್ಪ ಕುಲಾಲ ಮತ್ತು ಕುಮಾರಿ ಪ್ರೈನಾ ಆರ್. ಹೆಗ್ಡೆಯವರು ವಿದ್ಯಾರ್ಥಿಗಳ ಪರವಾಗಿ ಭಾಷಣವಿತ್ತರು. ಉಪಾಧ್ಯಾಯರ ಪರವಾಗಿ ನರ್ಸ ಶ್ರೀ ಡಿ. ಟಿ. ಶಿಲ್ವ, ಬಿ ಆನಂದ ರಾವ್, ಬಿ. ಎಲ್. ನೆಲ್ಲಿ ಪ್ರಭಾಕರ ಮನೆರಾ ಮತ್ತು ಸುಸಾನ್ ಫ್ರೆಡ್ ಮೇನಾರವರು ವಿದ್ಯಾರ್ಥಿಗಳಿಗೆ ಶುಭ ಕೋರಿದರು. ಮುಖ್ಯೋಪಾಧ್ಯಾಯ ಶ್ರೀ ಕೆ. ರಾಮ ರಾಯರು ವಿದ್ಯಾರ್ಥಿಗಳನ್ನು ಹರಸಿದ ಬಳಿಕ ಅಧ್ಯಕ್ಷರು ವಿದ್ಯೆಗೆ ಮಾಡುವ ಖರ್ಚು ಎಷ್ಟು ಉತ್ತಮವಾದುದು ಎಂಬುದನ್ನು ವಿವರಿಸಿ ಭಾಷಣ ಮಾಡಿದರು. ಕೊನೆಗೆ ಕು| ಬಿ. ಕೆ. ಆಚ್ಯುತ ಧನ್ಯವಾದಗಳನ್ನಿತ್ತರು.

ಕಾರ್ಕಳ ಮುನ್ಸಿಫ್ ಕೋರ್ಟು

O.S. No. 551/1964.

1. S. ಅನಂತ ತಂತ್ರಿ—ಪುಟ್ಟ ಯಾನೆ ನರಸಿಂಹ ತಂತ್ರಿ ಮಗ, ಬಡಗ ಯಡಪದವು ಗ್ರಾಮ 2. ಬಾಬುರಾಯ, ವೆಂಕಟ್ರಮಣ ಭಟ್ರ ಮಗ. 3 ಪದ್ಮಾವತಿ ಅಮ್ಮ, ವೆಂಕಟ್ರಮಣ ಭಟ್ರ ಮಗಳು—ಸಜೀಪಮೂಡ ಗ್ರಾಮಸ್ಥರು.—ವಾದಿರು.

ಮತ್ತು

1. ಸುಬ್ರಹ್ಮಣ್ಯ ತಂತ್ರಿ; 2. ಕೃಷ್ಣ ತಂತ್ರಿ; 3. ಶ್ರೀನಿವಾಸ ತಂತ್ರಿ—ವಿಷ್ಣುಮೂರ್ತಿ ತಂತ್ರಿರ ಮಕ್ಕಳು, ಬಡಗ ಯಡಪದವು ಗ್ರಾಮಸ್ಥರು. —ಪ್ರತಿವಾದಿಗಳು.

ಇವರೊಳಗೆ

3ನೇ ಪ್ರತಿವಾದಿ ಶ್ರೀನಿವಾಸ ತಂತ್ರಿಗಳಿಗೆ—

ವಾದಿರು ನಿಮ್ಮ ಮೇಲೆ ಕೂಡಾ 1961-1962, 1962-1963 ಈ ವರುಷಗಳ ಅತನಾರ್ತದ ಬಾಬ್ತು ಬಹ ಮೊಬಲಗಿನ ವ್ಸಲಿಯ ಬಗ್ಗೆ ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 12.4.1965ನೇ ಬೆಳಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಇಟ್ಟಿರುವದರಿಂದ, ಸದರಿ ದಾವೆಯ ವಿಷಯದಲ್ಲಿ ನಿಮ್ಮ ಉದಾಹರಣೆಯು ಇರುವಲ್ಲಿ ನೀವು ಸ್ವತಹ ಅಥವಾ ವಕೀಲರ ಮುಖಾಂತ್ರ ಹಾಜರು ಆಗಿ, ಜ್ಯಾಹೀರು ಮಾಡಿಕೊಳ್ಳಬಹುದಾಗಿಯೂ, ತಪ್ಪಿದರೆ ಸದರಿ ದಾವೆಯು ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ ಕೋರ್ಟು ಹುಕುಮು ಪ್ರಕಾರ ಈ ಮೂಲಕ ನಿಮಗೆ ತಿಳಿಯಪಡಿಸಲಾಗುತ್ತದೆ.

S. Rajagopal Achar,
Advocate for Plaintiffs.

Karkal, 23 3-65.



READ &
ADVERTISE IN
NAVAYUGA WEEKLY

NAVAYUGA 1-4-1965
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧-೪-೬೫ರಿಂದ ೭-೪-೬೫ರ ವರೆಗೆ

೧. ಮೇಷ

ನಿಮ್ಮ ಹೆಚ್ಚಿನ ಸಂಕಲ್ಪಗಳೆಂದು ಕಾರ್ಯರೂಪಕ್ಕೆ ಬರಲಿವೆ. ಪರಿಶ್ರಮಕ್ಕುಚಿತವಾದ ಫಲವು ಲಭಿಸುವುದರಿಂದಾಗಿ ದಿನಯಾಪನೆಯು ಸುಗಮವಾಗುವದು. ಚಿಕ್ಕ ಪುಟ್ಟ ಗೃಹಚ್ಛಿದ್ರಾದಿಗಳಿಂದಾಗಿ ಮನಸ್ಸಿಗೆ ನೆಮ್ಮದಿ ದುರ್ಲಭವಾದೀತಾದರೂ ಬಂಧುಮಿತ್ರಾದಿಗಳ ಸಹಕಾರವುಳ್ಳ ನಿಮಗೆ ಸರ್ವತ್ರ ಮಾನಾದರಗಳು ಲಭಿಸಲಿವೆ. ನಿರೋಗಿಗಳಾದ ನಿಮಗೆ ತಾ. 3, 4. 7 ಈ ದಿನಗಳು ಸುಖ ಲಾಭದಾಯಿಗಳಾಗಿವೆ.

೨. ವೃಷಭ

ಮನೋದೌರ್ಬಲ್ಯವುಳ್ಳ ನಿಮಗೆ ಯಾವೊಂದು ಹೊಸ ಉದ್ಯಮವನ್ನು ಕೈಗೊಳ್ಳಲಾಗದಿದ್ದರೂ ಹಿಡಿದ ಕೆಲಸದಲ್ಲೇ ನಿರೀಕ್ಷೆಗೂ ಮಿಕ್ಕ ಫಲ ಲಾಭವಾಗುವದು. ವಕೀಲ ವೈದ್ಯ ವ್ಯಾಪಾರೀ ವರ್ಗಕ್ಕೀ ಕಾಲವು ಅತೀವ ಅನುಕೂಲವಾಗಿದೆ. ಕೆಲವೊಮ್ಮೆ ಕುಜನರ ಬಲೆಗೆ ಸಿಲುಕಿ ವೃಥಾ ಖರ್ಚು ಜನನಿಂದೆಗೆ ಗುರಿಯಾಗುವ ಸಂಭವವಿದೆ. ಆಪ್ತಬಂಧುಗಳ ವಿಯೋಗ ದುಃಖಿತರನ್ನಾಗಲಿರುವಿರಿ. ತಾ. 1, 2, 5, 6 ಈ ದಿನಗಳು ಸುಖಮಯವಾಗಲಿವೆ.

೩. ಮಿಥುನ

ಕರ್ತವ್ಯದಕ್ಷರಾದ ನಿಮಗೆ ಮೇಲಿಂದ ಮೇಲೆ ವಿಘ್ನ ವಿಡಂಬರಗಳು ಪ್ರಾಪ್ತವಾದರೂ ಹಿಡಿದ ಕಾರ್ಯವನ್ನು ಅರ್ಧದಲ್ಲಿ ಕೈಬಿಡಲಾರಿರಿ. ನಿಮ್ಮ ಸಾಹಸಕ್ಕೆ ಶತ್ರುಜನರು ಕೂಡ ತಲೆದೂಗಲಿರುವರು. ದುಡಿಮೆಯ ಬಹ್ವಂಶವನ್ನು ಸದ್ವಿನಿಯೋಗ ಮಾಡಲಿರುವಿರಿ. ಎಷ್ಟೇ ಮಿತಭಾಷಿಯಾಗಿದ್ದರೂ ವಾಗ್ಕಲಹವು ಅನಿವಾರ್ಯವೆನಿಸಲಿದೆ. ತಾ. 1, 2, 3, 4, 7 ಈ ದಿನಗಳಲ್ಲಿ ನಿಮ್ಮ ಬಯಕೆಗಳು ಪೂರ್ಣವಾಗಲಿವೆ.

೪. ಕರ್ಕಟ

ಸುರಾಸುರ ಗುರುಗಳಾದ ಗುರು ಶುಕ್ರರ ಪೂರ್ಣಾನುಗ್ರಹಕ್ಕೆ ಪಾತ್ರರಾದ ನಿಮಗೆ ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವದಲ್ಲದೆ ಮನಸ್ಸಿಗೆ ನೆಮ್ಮದಿಯುಂಟಾದೀತು. ಸಾಂಪತ್ತಿಕ ಪರಿಸ್ಥಿತಿಯು ನಿರೀಕ್ಷೆಗಿಂತಲೂ ಮಿಕ್ಕಿ ಸುಧಾರಿಸಲಿದೆ. ಆದರೆ ನಿಷ್ಠುರ ಭಾಷಿಗಳಾದ ನಿಮಗೆ ಹಲಕೆಲವರೊಡನೆ ವಾಕ್ಕಲಹವಾದೀತು. ಹಣದ ಲೇವಾದೇವಿ ನಿಮಿತ್ತ ಕೋರ್ಟುಕಛೇರಿಗಳಿಗೆ ತಿರುಗುವ ಪ್ರಸಂಗ ಬರಲಿದೆ. ತಾ. 3ರಿಂದ 6ರ ವರೆಗಿನ ದಿನಗಳಲ್ಲಿ ಬಹು ತೆರದಿಂದ ಧನಾಗಮವಾದೀತು.

೫. ಸಿಂಹ

ದೈವವು ತೀರ ದುರ್ಬಲವಾಗಿರುವುದರಿಂದ ನಿಮಗಿಂದು ಎರೆಹುಳವು ಕೂಡ ಹಾವಾಗಿ ಪರಿಣಮಿಸಲಿದೆ. ಪ್ರತೀಕಾರಾಸಕ್ತರಾದ ಶತ್ರುವರ್ಗದವರಿಂದಾಗಿ ನಾನಾ ತೆರದ ನಷ್ಟಗಳುಂಟಾದಾವು. ಈ ಹಿಂದೆ ಪುರಸ್ಕೃತರಾದ ಸ್ಥಳದಲ್ಲಿ ನೀವಿಂದು ತಿರಸ್ಕೃತರಾಗುವಿರಿ. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದರೂ ಮನಸ್ಸಿಗೆ ಸ್ವಾಸ್ಥ್ಯವಿರದು. ವಾರಾಂತ್ಯದ 3 ದಿನಗಳು ಇದ್ದುದರಲ್ಲಿ ಅನುಕೂಲವಾಗಿವೆ.

೬. ಕನ್ಯಾ

ಸಾಂಸಾರಿಕ ತಾಪತ್ರಯಗಳು ದಿನದಿಂದ ದಿನಕ್ಕೆ ಹೆಚ್ಚಲಿವೆ. ಮಾತ್ರವಲ್ಲ ನಿಮ್ಮ ಆರೋಗ್ಯವೂ ಕೂಡ ದೋಷತ್ರಯದಿಂದಾಗಿ ಕೆಡುವ ಸಂಭವವಿದೆ. ಶ್ರಮವಹಿಸಿ ದುಡಿವ ನಿಮಗೆ ಸಾಕಷ್ಟು ಫಲವು ಲಭಿಸೋಣದರಿಂದ ಹಣದ ಬಿಕ್ಕಟ್ಟು ಕಾಣಿಸಲೊಲ್ಲದು. ವಿಶೇಷತಃ ಸ್ತ್ರೀವರ್ಗದವರ ಕೂಡೆ ಕಲಹವಾಗಲಿದೆ. ತಾ. 1, 2, 7 ಈ ದಿನಗಳು ಕಿಂಚಿತ್ ನೆಮ್ಮದಿಯನ್ನು ಕೊಡಲಿವೆ.

೭. ತುಲಾ

ಹಿಂದಿನ ಸುಖಸೌಕರ್ಯಗಳನ್ನು ನೆನೆನೆನೆದು ಚಿಂತಿಸುವ ಕಾಲವಿಂದು ಬಂದಿದೆ. ತಾನೊಂದು ಬಗೆದರೆ ದೈವವೊಂದೆಣಿಸಿತೆಂಬ ಗಾದೆಯಂತೆ ಪ್ರತಿಯೊಂದು ಕಾರ್ಯಗಳಲ್ಲೂ ವಿಪರೀತ ಫಲವನ್ನೇ ಅನುಭವಿಸಬೇಕಾಗಿ ಬರುವದು. ಆತ್ಮೀಯರು ಕೂಡ ವಿರೋಧಿಗಳ ಸಾಲಿನಲ್ಲಿ ಸೇರಲಿರುವರು. ಇದ್ದುದರಲ್ಲೊಂದು ತೃಪ್ತಿಯೆಂದರೆ ಧನಪತಿಯು ಲಾಭಗತನಾದ್ದರಿಂದ ಹಣದ ತಗಾದೆ ಕಾಣಿಸದು. ತಾ. 1, 2, 3, 4 ಈ ದಿನಗಳು ಇತರ ದಿನಗಳಿಗಿಂತ ಲೇಸು.

೮. ವೃಶ್ಚಿಕ

ನಿಮ್ಮ ಮನಸ್ಸು ಗಾಳಿಗೆದುರಾಗಿಟ್ಟ ದೀಪದಂತೆ ಅತೀವ ಚಪಲವಾಗಲಿದೆ. ಮನೆಯಲ್ಲಿ ತಂದೆ ಮಕ್ಕಳಿಗೂ ಗಂಡಹೆಂಡಿರಿಗೂ ಪರಸ್ಪರ ವೈಮನಸ್ಸು ಕಲಹಗಳುಂಟಾದಾವು. ನೌಕರಿವರ್ಗದವರು ಅಧಿಕಾರಿಗಳ ಕೋಪಕ್ಕೆ ಗುರಿಯಾಗುವ ಸಂಭವವಿದೆ. ಆದರೆ ಬೃಹಸ್ಪತಿಯ ಅನುಗ್ರಹವೆಂಬ ಕವಚವು ಸರ್ವತ್ರ ನಿಮ್ಮನ್ನು ಕಾಪಾಡುವದು. ತಾ. 3, 4, 5, 6 ಉತ್ತಮ.

೯. ಧನು

ಶ್ರಮಕ್ಕೆ ತಕ್ಕ ಫಲವು ದೊರೆತೇ ತೀರುವುದರಿಂದಾಗಿ ದಿನಯಾಪನೆಯು ಕಷ್ಟವಾಗಲಾರದು. ನಿರಾಮಯವಾದ ಸಂಸಾರದಲ್ಲಿ ಏನೊಂದೂ ಕೊರತೆಗಳಿರಲೊಲ್ಲವು. ಆದರೆ ನಿಮ್ಮ ತನುಮನಗಳಿಗೆ ಮಾತ್ರ ಇಂದು ಸುಖವಿರದು. ಸ್ವಜನ ವಿರೋಧ ವಿಯೋಗಗಳಿಗೆರವಾದ ನಿಮಗೆ ರಾಜಕೀಯ ರಂಗದಲ್ಲಿ ಪ್ರತಿಪಕ್ಷಗಳಿಂದ ಪರಾಭವವುಂಟಾದೀತು. ಪ್ರವಾಸದಲ್ಲಿ ಕಷ್ಟನಷ್ಟಗಳು ಪ್ರಾಪ್ತವಾಗುವ ಯೋಗವಿದೆ. ವಾರಾಂತ್ಯದ 3 ದಿನಗಳು ಗೃಹಸುಖ ಭೋಗ ಲಾಭದಾಯಿಗಳಾಗಿವೆ.

೧೦. ಮಕರ

ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯೊಂದಿರಲಿ ಎಂಬ ಲೋಕೋಕ್ತಿಯಂತೆ ನೀವಿಂದು ಯಾವ ಕಾರ್ಯಸಾಧನೆಗೂ ಹಿಂಜರಿಯಲಾರಿರಿ. ನಿಮ್ಮ ಸಾಹಸಕ್ಕನುಗುಣವಾದ ಫಲವು ಲಭಿಸಿಯೇ ತೀರುವದು. ಶತ್ರುವರ್ಗದವರು ಹಲವಾರು ತೆರದಿಂದ ವಿಘ್ನವಿಡಂಬರಗಳನ್ನೊಡ್ಡಲಿರುವರು. ಕಜ್ಜಿ ತುರಿ ಮೊದಲಾದ ಚರ್ಮರೋಗಗಳು ಕಾಣಿಸಲಿವೆ. ಗೃಹಸ್ಥಾಶ್ರಮಿಗಳಿಗೆ ಅಚಿರದಲ್ಲೇ ಸುತಮುಖದರ್ಶನ ಯೋಗವಿರುವುದು. ತಾ. 1, 2, 7 ಈ ದಿನಗಳು ಸಾಕಷ್ಟು ಅನುಕೂಲವಾಗಿವೆ.

೧೧. ಕುಂಭ

ಗಂಡಹೆಂಡಿರ ಜಗಳ ಉಂಡು ಮಲಗುವ ತನಕವೆಂಬ ಗಾದೆಯ ಮಾತು ಇಂದು ನಿಮ್ಮ ಅನುಭವಕ್ಕೆ ಬರಲಿದೆ. ಗೃಹ ತಾಪತ್ರಯಗಳಿಂದ ಮುಕ್ತರಾಗಿದ್ದರೂ ಮನಸ್ಸಿಗೆ ನೆಮ್ಮದಿಯಿರದು. ದೈನಂದಿನದ ಖರ್ಚಿನ ಮಟ್ಟಿಗೆ ನಿಮಗೇನೂ ಕೊರತೆಯಿರದು. ಬಂಧುಮಿತ್ರಾದಿಗಳ ಸಹಕಾರವು ಚೆನ್ನಾಗಿದ್ದರೂ ಪ್ರತಿಪಕ್ಷಗಳಿಂದ ಪರಾಭವ ಹೊಂದುವ ಸಂಭವವಿದೆ. ತಾ. 3, 4 ಇದ್ದುದರಲ್ಲಿ ಉತ್ತಮ ದಿನಗಳಾಗಿವೆ.

೧೨. ಮೀನ

ಹಿಂದು ಮುಂದಿನ ಯೋಚನೆಯಿಲ್ಲದೆ ಕಾರ್ಯಕ್ಷೇತ್ರದಲ್ಲಿ ಒಂದೊಮ್ಮೆಗೇ ದುಡುಕಿ ಕೆಲವೊಂದು ನಷ್ಟಕ್ಕೊಳಗಾಗುವಿರಿ. ಅಯೋಗ್ಯ ವ್ಯಯವಾಗುವುದರಿಂದ ಖರ್ಚಿನ ನಿರ್ವಹಣೆಗಾಗಿ ಸಾಲ ಮಾಡಬೇಕಾದ ಪರಿಸ್ಥಿತಿ ಬಂದೀತು. ಮನೋರೋಗದಿಂದ ಬಳಲುತ್ತಿದ್ದ ನಿಮಗೆ ಸಂಸಾರದಲ್ಲೂ ಸುಖವಿರದು. ಅಧಿಕಾರಿ ವರ್ಗದವರ ವಕ್ರದೃಷ್ಟಿಗೆ ಗುರಿಯಾದ ನಿಮಗೆ ಸ್ಥಾನ ಚಲನೆಯ ಸಂಭವವಿದೆಯೆಂದರೂ ತಪ್ಪಾಗಲೊಲ್ಲದು. ತಾ. 1, 2, 5, 6 ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳಿಗವಕಾಶವಿರದು.

ಹೃದಯ ವಿಡಿತದಿಂದ ಉಂಟಾಗುವ ಅಸುಮಧುರ ಸಂಗೀತವು ಸ್ವರ್ಗದವರೆಗೂ ಮುಟ್ಟುವುದಲ್ಲದೆ, ಎಲ್ಲಾ ಸಂಗೀತಗಳಲ್ಲಿ ಹಿರಿದೆನಿಸುವದು.

o o o

ನಮ್ಮಲ್ಲಿ ಸ್ವಲ್ಪ ಸಂಗೀತ ವಾಸನೆ ಇಲ್ಲದಿದ್ದರೆ ಯಾವ ಸಂಗೀತವೂ ರುಚಿಸದು; ನಮ್ಮಲ್ಲಿ ಸ್ವಲ್ಪ ಘನತೆ ಇಲ್ಲದಿದ್ದರೆ, ಯಾವ ಘನತೆಯೂ ತಿಳಿಯದು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O.P. 7/1965.

ಭಿರ್ಮಯ್ಯ ಸೆಟ್ಟಿ — ಅರ್ಜಿದಾರ.

ನೋಟೀಸು

ಮೃತ ಬಿಕ್ರಗುತ್ತು ಅಂತಯ್ಯ ಸೆಟ್ರ ಪೊರ್ ಬಾಕಿ ವಸೂಲಿ ಬಗ್ಗೆ—

ಅರ್ಜಿದಾರರು ಮೃತ ಬಿಕ್ರಗುತ್ತು ಅಂತಯ್ಯ ಸೆಟ್ರ ವಾರಿಸುದಾರರಾಗಿ ಯೂನಿಯನ್ ಟೀ ಎಸ್ಟೇಟಿಗೆ ಲೇಬರ್ಸ್ ಸಪ್ಲೈ ಮಾಡಿದ ಬಗ್ಗೆ ಪರಿಹಾರ ಧನ ವಸೂಲು ಮಾಡುವ ಬಗ್ಗೆ ಅರ್ಜಿದಾರರ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ರೂ. 3,140/- ಕಾಣಿಸಿ ದಾಖಲು ಮಾಡಿದ ಮೇಲಿನ ಅರ್ಜಿಯು ತಾ. 17-4-65ಕ್ಕೆ ಇಡಲಾಗಿಯದೆ. ಆಕ್ಷೇಪ ಹೇಳತಕ್ಕವರು ಸದ್ರಿ ತಾ. 17-4-65 ನೇ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಸದ್ರಿ ಅರ್ಜಿಯಲ್ಲಿ ಹಾಜರಾಗಿ ಮನವಿ ಮಾಡಿಕೊಳ್ಳತಕ್ಕದ್ದು ಎಂಬುದಾಗಿ ಈ ಮೂಲಕ ತಿಳಿಸಲಾಗಿಯದೆ.

(By order of the Court)

ಶ್ರೀ ಪಿ. ಶಿವಾಜಿ ಸೆಟ್ಟಿ,
ಬಿ.ಎ., ಎಲ್.ಎಲ್.ಬಿ.,
ಅರ್ಜಿದಾರರ ಎಡ್ವಕೇಟ್.

ಉಡುಪಿ, ತಾ. 22-3-65.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಪಥ್ಯ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.



Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪] ಏಪ್ರಿಲ್ ೮, ೬೫ [ಸಂಚಿಕೆ ೩೨

one No.
ನ್ ಸಂಖ್ಯೆ 226

leading nationalist weekly

೨೦
ಪೈಸೆ

ಕಥಾ ಪ್ರಪಂಚ

ಸುಂದರಿಯ ಸನಿಯದಲ್ಲಿ

ಬರೆದವರು
ಶ್ರೀ ಮಾಮಾ ಪನಾಸಕರ್.

ಶಿವಾಜಿ ಪಾರ್ಕಿನ ಸುಂದರ ವಾತಾವರಣದಲ್ಲಿ ಮಧ್ಯಮ ವರ್ಗದ ಒಂದು ಕುಟುಂಬದಲ್ಲಿ ಹುಟ್ಟಿ ಬೆಳೆದ ರಮೇಶನಿಗೆ ಅಂದು ಸ್ವರ್ಗವೇ ಧರೆಗಿಳಿದು ಬಂದಷ್ಟು ಆನಂದವಾಗಿತ್ತು! ಎಸ್. ಎಸ್. ಸಿ. ಪಾಸಾಗಿ ವಿದ್ಯಾರ್ಜನೆ ಮುಂದುವರಿಸುವಿಕೆಗೆ ಧನಬಲವಿಲ್ಲದರಿಂದ ತಂದೆ ಉಮೇಶರಾಯರು ಎಲ್ಲಾದರೂ ನೌಕರಿಗೆ ಪ್ರಯತ್ನ ಮಾಡು ಎಂಬ ಸಲಹೆಯನ್ನು ಎರಡು ವರ್ಷದ ಹಿಂದೆಯೇ ಎಸ್. ಎಸ್. ಸಿ. ಯಲ್ಲಿ ಉತ್ತೀರ್ಣನಾದಾಗ ಹೇಳಿದ್ದರು.

ವರ್ಷ ಎರಡು ಸಂದರೂ ರಮೇಶನಿಗೆ ನೌಕರಿ ಬಗ್ಗೆ ಕರೆಯ ಪತ್ರ ಕೂಡಾ ಬಂದಿರಲಿಲ್ಲ. ಅರ್ಜಿ ಗುಜರಾಯಿಸಲು ಯೋಗಿಸಿದ ಕಾಗದಗಳನ್ನು ಒಟ್ಟು ಹಾಕಿದಲ್ಲಿ ರದ್ದಿವಾಲ (ಹಳೆ ಪತ್ರಿಕೆ ಕೊಳ್ಳುವವನು) ಕನಿಷ್ಟ ಐವತ್ತು ಪೈಸೆಯಾದರೂ ನೀಡುತ್ತಿದ್ದಿರಬಹುದು ಮತ್ತು ಉಪಯೋಗಿಸಿದ ಶಾಯಿ ಬೇರೆ ಖರ್ಚು! ಎಲ್ಲದಕ್ಕೂ ಹೆಚ್ಚು ಅರ್ಜಿಯನ್ನು ಟಪಾಲು ದ್ವಾರಾ ಕಳಿಸಲು ತಗಲಿದ ಖರ್ಚು, ವಿಪರೀತವಾಗಿ ಇತ್ತೀಚಿಗೆ ಅವನಿಗೇ ಬೇಸರ ಬಂದಿತ್ತು.

ಆದರೂ ಕೊನೆಯ ಪತ್ರವೆಂದು, ಶಾನ. ಅಂದು ಕಂಡ ಸಂಜೆಯ ಪತ್ರಿಕೆಯ ಜಾಹೀರಾತು ಒಂದರ ವಿಳಾಸಕ್ಕೆ ಅರ್ಜಿಯೊಂದನ್ನು ಹಾಕಿದ್ದ. ಆ ಜಾಹೀರಾತಿನಲ್ಲಾದರೊ, ಯಾವ ಖಚೇರಿಯಲ್ಲಿ ಕೆಲಸ ಎಂದು ನಿರ್ದಿಷ್ಟವಿರಲಿಲ್ಲ.

ಇಂದು ರಮೇಶನಿಗೆ ಪೂರ್ವ ಸಂದರ್ಶನ ಕರೆಯೋಲೆ ಬಂದಿತ್ತು. ಫೋರ್ಟಿನಲ್ಲಿಯ ಒಂದು ಫಾಯರ್ ಇನ್ಶ್ಯೂರೆನ್ಸ್ ಕಂಪೆನಿಯಲ್ಲಿ ಕ್ಲಾರ್ಕನ ಕೆಲಸ! ನೂರ ಐವತ್ತು ರೂಪಾಯಿ ತಿಂಗಳೊಂದರ ಸಂಬಳ. ಅದೇ ಸಂತಸವಾಗಿತ್ತು ರಮೇಶನಿಗೆ! ಮರುಭೂಮಿಯಲ್ಲಿ ನಡೆದು ಹೋಗುತ್ತಿದ್ದವನಿಗೆ ಒಂದು ಗುಟುಕು ನೀರು ಕರೆದುಕೊಟ್ಟರೆ ಎಷ್ಟು ಆನಂದವಾಗುತಿತ್ತೋ ಅದಕ್ಕೂ ಹೆಚ್ಚಿನ ಆನಂದವಾಗಿತ್ತು.

ನಿಶ್ಚಿತ ದಿನದಂದು ಬೆಳಗ್ಗೆ ಒಂಭತ್ತು ಗಂಟೆಗೆ ಸ್ನಾನತೀರಿಸಿ ದೇವರ ಪಟಗಳಿಗೆ ನಮಸ್ಕರಿಸಿ ತಂದೆ ತಾಯಿ.ಗಳ ಪಾದಮುಟ್ಟಿ ನಮಸ್ಕರಿಸಿ ತನ್ನ ಎಸ್.ಎಸ್. ಸಿ. ಸರ್ಟಿಫಿಕೇಟ್ ಹಿಡಿದು ಫೋರ್ಟಿನತ್ತ ಹೋಗುವ ಬಸ್ಸಿನ ನಿಲ್ದಾಣಕ್ಕೆಬಂದ. ಅಲ್ಲಿಯ ಜನ ಸಮೂಹ ಕಂಡು ಉಕ್ಕಿಬಂದ ಸಂತಸ ಒಮ್ಮೆಗೆ ಇಳಿಯಿತು.ಕಾರಣ ಮತ್ತೇನಿಲ್ಲ! ಅಲ್ಲಿ ನಿಂತ 'ಕ್ಯೂ' ಅದಲ್ಲೋ ಆಚೆ ಬೀದಿಯಲ್ಲಿ ಕೊನೆಗೊಂಡಿದೆ! ಅದರಲ್ಲಿ ನಿಂತರೆ ಬಹುಶಃ ಆತನಿಗೆ ಅಂದು ಬಸ್ಸು ಸಿಗಲಾರದು. ಆದರೂ ಪ್ರತಿ ಐದು ಮಿನಿಟುಗಳಿಗೊಮ್ಮೆ ಬಸ್ಸುಗಳು ಓಡಾಡುವುದರಿಂದ 'ಕ್ಯೂ'ನ ಬೆನ್ನು ಹತ್ತಿ ನಿಂತು ಸಮಾಧಾನದ ಉಸಿರು ಬಿಟ್ಟ ರಮೇಶ್!

ನಾಲ್ಕೈದು ಬಸ್ಸುಗಳು ಹೋದ ನಂತರ ಆತನಿಗೆ ಕೊನೆಗೂ ಬಸ್ಸೊಂದರಲ್ಲಿ ಪ್ರಯಾಣ ಮಾಡುವ ಸೌಲಭ್ಯ ದೊರೆಯಿತು. ಆಫೀಸಿಗೆ ತಲಪಲು ಎಷ್ಟೆಂದರೂ ಸುಮಾರು ಅರ್ಧ ಗಂಟೆ ಅಥವಾ ಮುಕ್ಕಾಲು ಘಂಟೆ ಬೇಕಾಗಬಹುದು. ಆಗಲೇ ಹತ್ತು ಹೊಡೆದಿತ್ತು. ಹನ್ನೊಂದು ಘಂಟೆಗೆ ಹಾಜರಾಗಲು ಬರೆದಿದ್ದರಿಂದ ರಮೇಶನಿಗೆ ಆತ್ಮತೃಪ್ತಿಯಾಯ್ತು.

ಬಸ್ಸಿನೊಳಗೆ ಹಲವು ರೀತಿಯ ಹಲವು ವ್ಯಕ್ತಿಗಳು ನಿಶ್ಶಬ್ದವಾಗಿ ರಸ್ತೆಯನ್ನು ಗಮನಿಸುತ್ತಾ ಕುಳಿತ್ತಿದ್ದರು.

ರಮೇಶನಂತೆ ಇತರರೂ ಬೇರೆ ಬೇರೆ ಕೆಲಸಕ್ಕಾಗಿ ನಡೆದಿರುವ ಜನರೂ ಇದ್ದಿರಬಹುದು. ಅಥವಾ ನಿತ್ಯದ ಕೆಲಸಕ್ಕಾಗಿ ಹೋಗುವವರಿರಲೂ ಬಹುದು, ವ್ಯಾಪಾರಿಗಳಿರಲೂಬಹುದು. ರಮೇಶ ಮಾತ್ರ ಕೆಲಸದ ಬಗ್ಗೆ ತನ್ನ ಯೋಗ್ಯತೆಯನ್ನು ಶ್ರುತಪಡಿಸಲು ಹೋಗುತ್ತಿದ್ದುದೇನೊ ಸತ್ಯ. ಅದೇ ವಿಚಾರವಾಗಿ ಬಸ್ ಹತ್ತಿದ್ದ ರಮೇಶನಿಗೆ ಎರಡು ಜಡೆಯ ಆ ಹುಡುಗಿಯತ್ತ ದೃಷ್ಟಿ ಹೋಗದೆ ಇರಲಿಲ್ಲ.

ಆಕೆ ನಿಜವಾಗಿಯೂ ಸುಂದರಿ. ದುಂಡು ಮುಖದ ಮಂದ ಹಾಸಿನಿಯ ಆ ಎರಡು ಜಡೆಯ-ಘಮಘಮಿಸುವ ಪುಷ್ಪಗಳು ತನಗೆ ಕರೆಯಿತ್ತುವೊ ಎಂಬಂತೆ ರಮೇಶನಿಗೆ ಭಾಸವಾಯ್ತು. ಅಂತೂ ಅವಳ ಪಕ್ಕದಲ್ಲಿದ್ದ ಆಸನದಲ್ಲಿ ಆಸೀನನಾದ.

ಇದೆಲ್ಲಾ ಒಂದರೆ ನಿಮಿಷದಲ್ಲಿ ಚಿತ್ರಪಟಲದಲ್ಲಿ ಬಂದು ಮಾಯವಾಗಿ ನಡೆದು ಹೋಗಿತ್ತು. ಟಿಕೆಟ್ ಕೊಡುವರೇ ಕಂಡಕ್ಟರ ಮಹಾಶಯ ಬಂದಾಗಲೇ ರಮೇಶನಿಗೆ ತಾನು ಬಸ್‌ನಲ್ಲಿದ್ದೇನೆ ಎಂದು ಅರಿವಾಯ್ತು.

"ಎಲ್ಲಿಗೆ?"

"ಫ್ಲೋರಾ ಫೌಂಟನ್"

"ನಾಲ್ವತ್ತು ಪೈಸೆ"

ರಮೇಶ ನಾಲ್ವತ್ತು ಪೈಸೆಯಿತ್ತ. ಹಣದ ಪಾಕೀಟು ಧರಿಸಿದ ಪ್ಯಾಂಟಿನ ಕಿಸೆಯಲ್ಲಿದ್ದರಿಂದ ಪಾಕೀಟು ಕಿಸೆಯಿಂದ ತೆಗೆಯುವಾಗಲೂ ನೀಡುವಾಗಲೂ ಬದಿಗೆ ಸರಿಯುವಾಗ ಪಕ್ಕದಲ್ಲಿ ಕುಳಿತ್ತಿದ್ದ ಆ ಸುಂದರಿಯ ಕಾಲುಗಳು ರಮೇಶನ ಕೈಗಳಿಗೆ ಸ್ಪರ್ಶವಾಗದೆ ಇರಲಿಲ್ಲ.

ಅದುವರೆಗೆ ಸುಂದರಿ ತನ್ನಷ್ಟಕ್ಕೆ ತಾನು ಯಾವುದೊ ಒಂದು ಪತ್ರಿಕೆಯನ್ನು ಓದುತ್ತಿದ್ದಳು. ರಮೇಶನತ್ತ ನೋಡಿದಳು. ರಮೇಶನೂ ಅವಳತ್ತ ನೋಡಿದ. ಎರಡು ಜೋಡು ಕಣ್ಣುಗಳು ಒಂದನ್ನೊಂದು ತಿಳಿದುವು. ಆದರೆ ಮಾತನಾಡಲಿಲ್ಲ. ಆಕೆ ಪುನಃ ಪತ್ರಿಕೆಯತ್ತ ದೃಷ್ಟಿ ಹಾಯಿಸಿದಳು. ಆತ ತನ್ನ ಎರಡೂ ಕೈಗಳನ್ನು ತನ್ನಿದಿರಿನ ಸೀಟಿನ ಹಿಂಭಾಗವನ್ನು ಹಿಡಿಯುತ್ತ ಗಂಭೀರವಾಗಿ ಕುಳಿತನು. ಬಸ್ಸು ಮಾತ್ರ ಯಾವುದನ್ನೂ ಗಮನಿಸದೆ ಎಲ್ಲಿ ನಿಲ್ಲಬೇಕೋ ಅಲ್ಲಿ ನಿಂತು ದಾರಿಗರನ್ನು ಕೊಂಡೊಯ್ಯುತ್ತಿತ್ತು.

ಬಸ್ಸು ಆಗಾಗಲೆ ಶಿವಾಜಿ ಪಾರ್ಕಿನಿಂದ ವರ್ಲಿಗೆ ಬಂದಿತ್ತು. ವರ್ಲಿಯ ಆ ಮುನಿಸಿಪಲ್‌ನವರ ಅವ್ಯವಸ್ಥೆಯ ಗಟಾರ ಬಗ್ಗೆ ಕಸಿಕರವುಂಟಾಗಿ ತಳಮುಳಗೊಂಡು ಮೂಗು ಮುಚ್ಚಿಕೊಂಡ ರಮೇಶ. ಉಳಿದ ಪ್ರಯಾಣಿಕರೂ ಅವನನ್ನೇ ಅನುಸರಿಸಿದರೇನೋ ಸರಿ. ಆದರೆ ಆಕೆ, ಆ ಸುಂದರಿ ಮಾತ್ರ ತಾನು ಓದುವುದರಲ್ಲಿಯೇ ತನ್ಮಯಳಾಗಿದ್ದಳು.

ವರ್ಲಿ ಬಿಟ್ಟು ಬಸ್ಸು ಮುಂದೆ ಹೋಯಿತು. ರಮೇಶ ಧೈರ್ಯದಿಂದ ಆ ಸುಂದರಿಯೊಡನೆ ಕೇಳಿಯೇ ಬಿಡಬೇಕೆನಿಸಿತು. ಆದರೆ ಬಾಯಿ ಮಾತ್ರ ಮಾತನಾಡಲಿಲ್ಲ. ಮತ್ತೆ ಸುಮ್ಮನಾದ. ಕಣ್ಣು ಮಾತ್ರ ಅವಳತ್ತ ನಟ್ಟಿದ್ದ ರಮೇಶ.

ಅವಳತ್ತ ನೋಡುತ್ತಿದ್ದ ಕಣ್ಣುಗಳು ಮೆಲ್ಲಮೆಲ್ಲನೆ ಅವಳು ಹಿಡಿದುಕೊಂಡು ಓದುತ್ತಿರುವ ಪುಸ್ತಕದ ಮೇಲೆ ಹೊರಳಿತು.

ಅದೊಂದು ವಿದೇಶ ಪತ್ರಿಕೆ—ಲೈಫ್! ಅದರಲ್ಲಿಯ ಚಿತ್ರಗಳನ್ನು ನೋಡಿ ಕೊನೆಯ ಪುಟವನ್ನು ಮಗುಚಿ ಹಾಕಿದ್ದಳು ಆ ಸುಂದರಿ. ಆ ಕೊನೆಯ ಪುಟ ಮಗುಚುವಾಗಲೇ ರಮೇಶ್ ಆ ಪುಸ್ತಕದತ್ತ ಕಣ್ಣು ಹಾಯಿಸಿದ್ದ. ಆಗಲೇ ಆ ಸುಂದರಿ ಪುನಃ ರಮೇಶನತ್ತ ನೋಡಿದ್ದಳು.

"ಲೈಫ್ ನೋಡಿದ್ದೀರಾ?" ಆ ಸುಂದರಿ ಕೇಳಿದಳು.

ರಮೇಶನಿಗೆ ಒಂದು ಸಲ ವಿದ್ಯುತ್ ಪ್ರವಾಹ ಬಡಿದಂತೆ ಆಯ್ತು. ಹೌದು ಅದೇ ಸುಂದರಿ ಲೈಫ್ ನೋಡಿದ್ದೀರಾ ಎಂದು ಕೇಳುತ್ತಿದ್ದಾಳೆ! ರಮೇಶನಿಗೆ ಏನು ಹೇಳುವುದು ಎಂದು ಗೊತ್ತಾಗಲಿಲ್ಲ. ಆದರೂ ಮೂಕ ಭಾಷೆಯಲ್ಲಿ "ಇಲ್ಲ" ಎಂದು ತಲೆಯಾಡಿಸಿದನು.

"ಹಾಗಾದರೆ ತೆಗೆದುಕೊಳ್ಳಿ...ಆದರಲ್ಲಿ ನಮ್ಮ ಪ್ರಧಾನಿ ನೆಹರೂರವರ ಅಂತಿಮ ಯಾತ್ರೆಯ ವಿವರಗಳನ್ನೊಳಗೊಂಡು ಅನೇಕ ಬಣ್ಣ ಬಣ್ಣದ ಚಿತ್ರಗಳಿವೆ. ಅವನ್ನು ನೋಡಿದರೆ ಯಾರಿಗಾದರೂ ಮರುಕಬಾರದಿರದು." ಎನ್ನುತ್ತಾ ಆಕೆ, ಅದೇ ಆ ಸುಂದರಿ ತನ್ನ ಮೃದುವಾದ ಹಸ್ತದಿಂದ ರಮೇಶನತ್ತ ನೀಡಿದಳು.

ಎಂತಹ ಅನುಭವ! ಅವಳ ಕೋಮಲವಾದ ಆ ಕೈ ತನ್ನ ಕೈ ಸ್ಪರ್ಶವಾದ ಆ ಕ್ಷಣಿಕ ಸುಖಾನುಭವ!

ತಂದೆ ಮೊದಲೇ ಹೇಳಿದ್ದರು.—

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ
ಹೊಸ ಬಡ್ಡಿ ದರಗಳು

			ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	....	5½
6 ತಿಂಗಳಿಂದ	12 ತಿಂಗಳ ಕೆಳಗೆ	....	6
12 ತಿಂಗಳಿಂದ	24 ತಿಂಗಳ ಕೆಳಗೆ	....	6½
24 ತಿಂಗಳಿಂದ	36 ತಿಂಗಳ ಕೆಳಗೆ	....	6¾
36 ತಿಂಗಳಿಂದ	48 ತಿಂಗಳ ಕೆಳಗೆ	.... ..	7
48 ತಿಂಗಳಿಂದ	60 ತಿಂಗಳ ಕೆಳಗೆ	....	7¼
60 ತಿಂಗಳಿಂದ	84 ತಿಂಗಳ ಕೆಳಗೆ	....	7¾
84 ತಿಂಗಳಿಂದ	120 ತಿಂಗಳ ಕೆಳಗೆ	....	8
ಸೇವಿಂಗ್ಸ್ ಖಾತೆಯ ಮೇಲೆ			4

ದಿ ಪಾಂಗಾಳ ನಾಯಕ್
ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.



Phone No. 226

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ನೋಟೀಸು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ವಾಪತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರನನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಮಗು ಬೆಳೆಯುವುದಕ್ಕೆ ಮೊದಲೇ ಹುಟ್ಟಬಹುದು. ಈ ಬಗೆಯ ಮಗುವಿಗೆ ರಬ್ಬರ್ ಬಾಟಲಿಯಿಂದ ಹಾಲು ಕುಡಿಸಲಾಗುತ್ತದೆ. ಟೆಹರಾನ (ಇರಾಣ)ದ ಮಿಡ್‌ವೈಫರೀ ಸಂಸ್ಥೆಯಲ್ಲಿ ಹೀಗೆ ಹಾಲೂಡುವ ವಿಧಾನದಲ್ಲಿ ತರಬೇತಿ ನೀಡುತ್ತಾರೆ, ಯುನಿಸೆಫ್‌ನ ನೆರವಿಂದ.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೩೨	೮—೪—೧೯೬೪	No. 32

ತಂತಿಯ ಮೇಲೆ

ಕಾಶ್ಮೀರದ ಹುಲಿಯೆಂದು ಹೆಸರಾದ ಶೇಖ ಅಬ್ದುಲ್ಲರವರನ್ನು ಬಂಧನದಿಂದ ಬಿಡುಗಡೆ ಮಾಡುವ ಕಾಲಕ್ಕೆ ಸಂಬಂಧಿಸಿದವರು ಕಟ್ಟಿಕೊಂಡಿದ್ದ ಕನಸು ಒಂದಾದರೆ, ಮುಕ್ತಿಯ ನಂತರ ಆಗುತ್ತಿರುವ ನನಸು ಬೇರೊಂದು. ಭಾರತ—ಪಾಕಿಸ್ತಾನಗಳ ನಡುವೆ ಸುಮಧುರ ಸಂಬಂಧವು ಸ್ಥಾಪಿತವಾಗುವುದರಿಂದಲೇ ಕಾಶ್ಮೀರದ ಪ್ರಶ್ನೆಯು ಇತ್ಯರ್ಥವಾಗುವುದು ಸಾಧ್ಯವೆಂದು ಘೋಷಿಸಿ, ಆ ಬಗ್ಗೆ ಅನುಕೂಲ ವಾತಾವರಣವನ್ನು ಕಲ್ಪಿಸಲು ತಾನು ಪ್ರಯತ್ನಿಸುವುದಾಗಿ ಶೇಖ ಅಬ್ದುಲ್ಲಾ ಅಂದು ಹೇಳಿದ್ದರು. ಪರಿಸ್ಥಿತಿಯು ತಿಳಿಗೊಳ್ಳಬೇಕೆಂಬ ಸದುದ್ದೇಶದಿಂದಲೇ ಅಬ್ದುಲ್ಲಾ ಮತ್ತವರ ಅನುಯಾಯಿಗಳ ಬಿಡುಗಡೆಯಾಯಿತು; ಅವರ ಮೇಲೆ ಹೇರಲಾಗಿದ್ದ ಅಪವಾದನೆಗಳನ್ನೂ ರಾಜ್ಯ ಸರಕಾರ ಹಿಂತೆಗೆದುಕೊಂಡಿತ್ತು.

ಆದರೆ, ಪಂಜರದಿಂದ ಹೊರಬಂದ ಹುಲಿ ಮಾಡಿದುದೇನು? ಬಿಡುಗಡೆಯ ಸಮಯ ಹಲವು ರಾಜಕೀಯ ಮುತ್ಸದ್ದಿಗಳು ವ್ಯಕ್ತಪಡಿಸಿದ ಒಂದೊಂದೇ ಮಾತು ಈಗ ಸತ್ಯವಾಗುತ್ತ ಬರುತ್ತಿದೆ. ನೆಹರು ನಿಧನಾನಂತರ ಶೇಖರ ಒಂದೊಂದೇ ಮಾತು ತಂಟೆ ಮೂಡಿಸುತ್ತ ಬರುತ್ತಿದೆ. ಪಾಕಿಸ್ತಾನ ಸಂದರ್ಶಿಸಿದ ನಂತರ ಅವರ ವರ್ತನೆಯಲ್ಲಿ ಬಹಳಷ್ಟು ಪರಿವರ್ತನೆಯಾಯಿತು. ಹಜ್‌ಯಾತ್ರೆಯ ನೆವನದಿಂದ ವಿದೇಶ ಯಾತ್ರೆ ಕೈಗೊಂಡ ಅವರು ಯಾವ ತೀರ್ಥಸ್ಥಳವನ್ನು ಸಂದರ್ಶಿಸಿದರು ಮತ್ತಲ್ಲಿ ಎಂತಹ ಪುಣ್ಯ ಗಳಿಸಿಕೊಂಡರು ಎಂಬುದು ಎಲ್ಲರಿಗೂ ಗೊತ್ತು. ತಾನು ಹೋದಲ್ಲಿ ಬಂದಲ್ಲಿ ಭಾರತದ ಬಗ್ಗೆ ಅನಪೇಕ್ಷಿತ ದುರಭಿಪ್ರಾಯ ಮೂಡುವಂತಹ ಮಾತುಗಳನ್ನು ಆಡಿದುದು ಅವರಂತಹರಿಗೆ ಉಚಿತವಲ್ಲ. ಪ್ರತ್ಯೇಕ ಕಾಶ್ಮೀರವನ್ನು ಬಯಸದೆ, ಕಾಶ್ಮೀರಿಗಳಿಗೆ ಸ್ವಯಂ ನಿರ್ಣಯಾಧಿಕಾರ ನೀಡಬೇಕೆಂದು ವಾದಿಸುವ ಶೇಖರು ಕಾಶ್ಮೀರದ ಇಂದಿನ ಸ್ಥಿತಿಗತಿಯನ್ನೂ ರಾಜಕೀಯ ಸ್ಥಿತ್ಯಂತರಗಳನ್ನೂ ಆಳವಾಗಿ ಅಭ್ಯಸಿಸಿ ಮಾಡಿದ್ದರೆ, ಅವರ ಬಾಯಿಂದ ಇಂತಹ ಅಪ್ರಿಯ ವಾಕ್ಯಗಳು ಹೊರಡುತ್ತಿರಲಿಲ್ಲ. ಶೇಖರು ಬ್ರಿಟನ್ನಿನಲ್ಲಿ ತನ್ನ ಬೇಳೆಯನ್ನು ಬೇಯಿಸಲು ಪರಿಮಿತ ಸಾಹಸ ಮಾಡಿದರು; ಆದರೆ, ಅದು ಬಹುಮಟ್ಟಿಗೆ ವ್ಯರ್ಥವಾಯಿತೆಂದೇ ಹೇಳಬೇಕು.

ಶೇಖ ಅಬ್ದುಲ್ಲಾರು ತನ್ನ ಈ ಯಾತ್ರೆಯಲ್ಲಿ ಒಂದು ಅದ್ವಿತೀಯ ಸಾಧನೆ ಮಾಡಿದ್ದಾರೆ. ಭಾರತದ ಶತ್ರು ಕೆಂಪು ಚೀನೀಯ ಪ್ರಧಾನಿ ಚೌ-ಎನ್-ಲಾಯ್‌ರವರೂ ಇದೇ ಸಂದರ್ಭದಲ್ಲಿ ವಿದೇಶ ಸಂಚಾರಕ್ಕೆ ಹೊರಟು ಅಲ್ಜೀರ್ಸಿನಲ್ಲಿ ಶೇಖರನ್ನು ಕಂಡರು. ಅವರಿಬ್ಬರೊಳಗೆ ಕಾಶ್ಮೀರ ಸಂಬಂಧವಾಗಿ ಬಹಳಷ್ಟು ಮಾತುಕತೆ ನಡೆಯಿತೆಂದೂ ಶೇಖರಿಗೆ ಪೀಕಿಂಗಿನ ಹಾರ್ದಿಕ ಆಹ್ವಾನ ದೊರೆಯಿತೆಂದೂ ತಿಳಿಯುತ್ತದೆ. ಕೈಗೂಡಿ ಬಂದ ಈ ಅವಕಾಶವನ್ನು ಅವರು ಕಳೆದುಕೊಳ್ಳುವ ಇಚ್ಛೆ ಮಾಡಿಲ್ಲವೆಂದೂ ಭಾರತಕ್ಕೆ ಮರಳದೇನೇ ಪೀಕಿಂಗಿಗೆ ತೆರಳಿ ಅಲ್ಲಿಯೇ "ಪ್ರತಿ ಸರಕಾರ" ಸ್ಥಾಪಿಸುವ ಇರಾದೆಯಲ್ಲಿದ್ದಾರೆಂದೂ ಗೊತ್ತಾಗಿದೆ. ಇದೆಲ್ಲ ಎಷ್ಟು ಮಟ್ಟಿಗೆ ಸತ್ಯವೆಂದು ಈಗಾಗಲೇ ಹೇಳುವಂತಿಲ್ಲವಾದರೂ ಸಮೂಲದಹಿತವಾದುದೆಂದು ಭಾವಿಸುವುದೂ ಕಷ್ಟ. ಏಕೆಂದರೆ, ಶೇಖರ ನೀತಿಯೀಗ ಸಂಪೂರ್ಣ ಬದಲಾಗಿದೆ. ಭಾರತ-ಪಾಕಿಸ್ತಾನಗಳಲ್ಲಿ ಸಹೋದರ ಪ್ರೇಮ ಹುಟ್ಟಿಸಲು ಸೊಂಟಕಟ್ಟಿದ ಅವರೀಗ, ಭಾರತ ವಿರೋಧಿ ನೀತಿಯನ್ನೇ ಅನುಸರಿಸುತ್ತಿದ್ದಾರೆ. ಕಾಶ್ಮೀರದ 'ಅನಿರ್ಧಾರಿತ ಸ್ಥಿತಿ' (?)ಗೆ ದಿವಂಗತ ಪ್ರಧಾನಿ ನೆಹರುರವರೇ ಕಾರಣವೆಂದೀಗ ಅವರು ಎದೆತಟ್ಟಿ ಹೇಳುತ್ತಾರೆ. ಭಾರತದ ಇಂದಿನ ಆಡಳಿತವನ್ನು ಅವರು ಏನೇನೂ ಮೆಚ್ಚುವುದಿಲ್ಲವಂತೆ. ಇದರ ಒಳಗುಟ್ಟು ಏನು? ಪಾಕಿಸ್ತಾನದ ಅಯ್ಯೂಬಖಾನರು ಶೇಖರಿಗೆ ಒತ್ತಾಸೆ ನೀಡುತ್ತಿದ್ದಾರೆ. ತನ್ನ ಭಾರತ ದ್ವೇಷದ ಪರಿಣಾಮವಾಗಿರುವ ವಿರೋಧಿ ನೀತಿಯ ಪ್ರಚಾರಕ್ಕೆ ಶೇಖರನ್ನು ಉಪಯೋಗಿಸುತ್ತಿದ್ದಾರೆ. ಇವರನ್ನು ಕಾಣಲು ಚೌ-ಎನ್-ಲಾಯ್ ಕೂಡ ಹತ್ತಿರ ಬಂದಿದ್ದಾರೆ. ಪಾಕಿಸ್ತಾನದೊಡನೆ ಇಲ್ಲದ ಗಡಿಯ ಬಗ್ಗೆ ಅನ್ಯಾಯದ ಒಡಂಬಡಿಕೆಯನ್ನು ಮಾಡಿಕೊಂಡ ಅವರು ಶೇಖರಿಂದಲೂ ಭಾರತದ ಮೇಲೆ ತನ್ನ ಉಗ್ರಕೋಪವನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸುತ್ತಿದ್ದಾರೆ. ಇದುವರೆಗೆ ತನಗೆ ಕಾಲೂರುವ ಅವಕಾಶ ಕೊಡುತ್ತಿದ್ದ ಸಿಂಹಳದಲ್ಲಿ ಡಡ್ಲಿ ಸೇನಾನಾಯಕೆಯವರು ಗದ್ದುಗೆಯೇರಿದುದರಿಂದ ತನಗಲ್ಲಿ ಅವಕಾಶವಿಲ್ಲವೆಂದು ತಿಳಿದು ಚೌ ಪಾಕಿಸ್ತಾನವನ್ನೆ ಆಯ್ದುಕೊಂಡಿದ್ದಾರೆ. ಕಾಶ್ಮೀರದ ಮೇಲೆ ಪಾಕಿಸ್ತಾನವೂ ಹಕ್ಕು ಸ್ಥಾಪಿಸಲು ಮುಂದೆ ಬರುತ್ತಿರುವುದರಿಂದ ಈ ವಿವಾದದ ಲಾಭವನ್ನು ತಾನು ಪಡೆದುಕೊಳ್ಳಲು ಅವರು ಮುಂದಾಗಿದ್ದಾರೆ. ಚೀನಾ—ಭಾರತದ ಗಡಿಯು ಕಾಶ್ಮೀರದ ಸುತ್ತ ಇರುವುದರಿಂದ, ಕಾಶ್ಮೀರದ ಕಲ್ಲು ಕಲ್ಲೂ ಪರಿಚಿತವಾಗಿರುವ ಶೇಖ ಅಬ್ದುಲ್ಲರನ್ನು ಸದ್ಯ ತನ್ನ ಕೆಂಪು ಜೋಳಿಗೆಯೊಳಗಿರಿಸಿಕೊಂಡಾದರೂ ಭಾರತವನ್ನು ಬಗ್ಗುಬಡೆಯುವ ಮಹತ್ವಾಕಾಂಕ್ಷೆ ಅವರದು. ಆಯರ 'ಬುರುಡೆ'ಯಲ್ಲಿ ಕಾಶ್ಮೀರದ ಹುಲಿ ಬಹುಪಾಲಿಗೆ ಬಿದ್ದಿದೆ. ಒಮ್ಮೆ ಸಿಕ್ಕಿಕೊಂಡರೆ ಮತ್ತೆ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ.

ಭಾರತ ಸರಕಾರವು ಶೇಖರ ಚೀನಾ ಯಾತ್ರೆಯನ್ನು ಮೆಚ್ಚುವುದಿಲ್ಲ. ಪಾಕ್ ಪಾಸ್‌ಪೋರ್ಟನ್ನು ಪಡೆದು ಶೇಖ್ ಅಲ್ಲಿಗೆ ಹೋಗುತ್ತಾರಂತೆ. ಪ್ರಧಾನಿ ಶಾಸ್ತ್ರಿಯವರು ಹೇಳಿರುವಂತೆ ಒಂದುವೇಳೆ ಶೇಖರು ಚೀನಾಕ್ಕೆ ತೆರಳಿದರೆಂದರೆ, ಭಾರತವು ಸುಮ್ಮನಿರುವುದು ಸಾಧ್ಯವಿಲ್ಲ. ಈಗಾಗಲೇ ತನ್ನ ಅಪ್ರಿಯ ಮಾತುಗಾರಿಕೆಯಿಂದ ಭಾರತದ ಬಗ್ಗೆ ವಿಸ್ತೋಧಾಭಿಪ್ರಾಯ ಮೂಡುವಂತೆಸಗಿರುವ ಶೇಖರು ಚೀನಾಕ್ಕೆ ಪಯಣವಿತ್ತರೆಂದರೆ, ಅದು ಅನ್ಯಾಯದ ಪರಮಾವಧಿಯಾಗುವುದು. ಇದನ್ನು ಯಾವ ಸರಕಾರವೂ ಸಹಿಸದು. ಶಾಸ್ತ್ರಿ ಸರಕಾರ ಈ ಸಂಬಂಧದಲ್ಲಿ ತೀವ್ರ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು, ದೇಶದ ಗೌರವ, ಪ್ರತಿಷ್ಠೆಗಳನ್ನು ಕಾದುಕೊಂಡು ಬರಬೇಕು.

ಅಜಿತಪ್ರಸಾದ

ವಚನ ಸುಧೆ

ತೇಜೋಽಸಿ ತೇಜೋ ಮಯಿ ಧೇಹಿ
ವೀರ್ಯಮಸಿ ವೀರ್ಯಂ ಮಯಿ ಧೇಹಿ
ಬಲಮಸಿ ಬಲಂ ಮಯಿ ಧೇಹಿ ॥

(ಯಜುರ್ವೇದ, ೧೯—೯)

ಪರಮಾತ್ಮ, ನೀನು ತೇಜಸ್ವಿಯು ನನ್ನಲ್ಲಿ ತೇಜಸ್ಸನ್ನು ಸ್ಥಾಪಿಸು; ನೀನು ವೀರನು; ನನ್ನಲ್ಲಿ ವೀರವನ್ನು ತುಂಬು. ನೀನು ಬಲವಂತನು, ನನ್ನಲ್ಲಿ ಬಲವನ್ನು ಕೊಡು. ಪರಮಾತ್ಮನು ತೇಜೋವಂತನೂ ವೀರ್ಯವಂತನೂ ಆಗಿದ್ದಾನೆ. ಆತನ ಉಪಾಸನೆಯಿಂದಲೇ ತೇಜಸ್ಸು, ವೀರ್ಯ ಮತ್ತು ಬಲಗಳು ನಮಗೆ ಬರುತ್ತವೆ. ಆದುದರಿಂದ ಎಲ್ಲರೂ ಭಗವಂತನನ್ನು ಆರಾಧಿಸಬೇಕು.

ರಾಜ್ಯಪಾಲ ಪದವಿಗೆ ಯಾರನ್ನು ಆಯ್ದುಕೊಳ್ಳಬೇಕು ಎಂಬ ಬಗ್ಗೆ ಹೆಚ್ಚಿನ ನಿಯಮಾವಳಿಯಿಲ್ಲ. ಮೊದ ಮೊದಲು ಚುನಾವಣೆಗಳಲ್ಲಿ ಸೋತ ಮಂತ್ರಿಗಳನ್ನೇ ಆರಿಸಲಾಗುತ್ತಿತ್ತು; ಇದು ಸರಿಯ

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ



"ಆಹಾರದ ಸಮಸ್ಯೆ ಈಗ ಬಹಳಷ್ಟು ಸುಧಾರಿಸಿದೆಯೆಂದು ಆಹಾರ ಮಂತ್ರಿಗಳು ಹೇಳುತ್ತಿದ್ದಾರೆ...."

"ರೂಪಾಯಿಯೊಂದು ಕೊಟ್ಟು ಕಿಲೋ ಅಕ್ಕಿ ಪಡೆದುಕೊಳ್ಳುವ ತಾಕತ್ತು ಜನತೆಯಲ್ಲಿ ಬಂದಿದೆ ಯೆನ್ನುತ್ತಾರಂತೆ ಅರ್ಥ ಮಂತ್ರಿಗಳು...."

ಗೇಹ ರಾಜ್ಯದಲ್ಲಿ

ಪಾಪ, ಮಾತ್ರವಲ್ಲ ಭೂಟೇನೂ..

"ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡ.."

"ಏನ್ರೀ ಇದು, ಹೊಸ್ತಿಲು ದಾಟುತ್ತಲೇ ಶುರು ಮಾಡಿದ್ರಿ ನಿಮ್ಮ ಪುರಾಣವನ್ನ..."

"ಇದು ಪುರಾಣವಲ್ವೇ, ಆಧುನಿಕ ಮಾತ್ರವಲ್ಲ, ಅತ್ಯಾಧುನಿಕ..."

"ಈ ಮುಸ್ಸಂಜೆ ವೇಳೆಯಲ್ಲೇ ಬಂದು ಶನೀಶ್ವರ ಶನೀಶ್ವರಾಂತ ಬಡಬಡಿಸುತ್ತೀರಲ್ಲಾ..."

"ಅಲ್ವೆ, ಬರೇ ಶನೀಶ್ವರ ಅನ್ನಿಲ್ಲ ನೋಡು.."

"ನೋಡೋದೇನು ಬಂತು? ಕೇಳಿದ್ದೇನೆ ನಿಮ್ಮ ಅತ್ಯಾಧುನಿಕ ಪುರಾಣವನ್ನ...."

"ಯಾವುದಪ್ಪಾ ಅದು?"

"ಯಾವುದೂಂತಂದ್ರೆ? ಅಲ್ಲಾ, ಪುರಾಣ ಓದಿದವರಿಗೆ ಅವ್ರ ಹೆಸರೇನೂಂತ ಗೊತ್ತಿಲ್ವೆ?"

"ಓದಿದವ್ರಿಗೆ ಗೊತ್ತೂಂತ ತಿಳ್ಕೊ. ಆದ್ರೆ ಕೇಳಿದವ್ರಿಗೆ ಇಲ್ಲವೆ ಅಂತ?"

"ರಾಮೇಶ್ವರದಲ್ಲಿರೋದು ರಾಮನಾಥನಲ್ವೆ?"

"ಇದ್ದರೂ ಇರಬಹುದು..."

"ಅದೇನು ಹಾಗೆ ಅನ್ನುತ್ತೀರಿ?"

"ರಾಮನಾಥನೋ ರಮಾನಾಥನೋ.."

"ಅಂತೂ ನಿಮ್ಮ ಶನೀಶ್ವರ ಇಲ್ಲಲ್ಲಾ...."

"ಇಲ್ಲದೇ ಎಲ್ಲಿ ಹೋಗ್ತಾನೆ?"

ಅಲ್ರಿ ರಾಮ ರಾಮಾಂತ ಹೇಳ್ತಾ ಇದ್ರೆ ಶನೀಶ್ವರ ಹತ್ರಕೂಡ ಸುಳಿಯೋಲ್ಲ ನೋಡಿ.."

"ಅದ್ಕೂನೂ ರಾಮೇಶ್ವರನಿಗೂ ಸಾಡೇಸಾತ್ ತಪ್ಪಿಲ್ಲ ನೋಡು...."

'ಹೌದಪ್ಪ, ಸಾಡೇಸಾತಲ್ಲ, ಅವನಿಗೆ ಬಡಿದದ್ದು ಚೌದಹ..'

'ಭಲೇ, ಭಲೇ.."

"ಏನಿದು ಹಾಗಂತೀರಿ? ..."

"ಅಲ್ವೆ, ಇಷ್ಟು ಬೇಗ್ನೇ ನೀನು ಹಿಂದಿಯನ್ನ ಕಲಿತು ಬಿಟ್ಟೆಯಲ್ಲಾಂತ...'

'ಹೋಗ್ರಿ ನೀವು? ."

"ಎಲ್ಲಿಗೆ ಹೋಗೋದ.?...."

'ಎಲ್ಲಿಗೂ ಇಲ್ವಾನ್ರಿ ಹೋಗಿ ಮತ್ತೆ ರಾಮೇಶ್ವರಕ್ಕೆ...'

'ಅದಕ್ಕೇ ಅಂದೆನಲ್ಲಾ ಅಲ್ಲಿಗೂ ಶನೀಶ್ವರನ ಕಾಟ ತಪ್ಪಿಲ್ಲಾಂತ...'

"...ಹೂಂ. ಏನೋ ಅಂದು ಬಿರುಗಾಳಿಯದ್ದು ಒಮ್ಮೆ ಶನಿ ಬಡಿದ್ರೂ ಈಗ ಸರಿಯಾಗ್ತಾ ಇದೆಯಲ್ಲ...'

"....ಓ...ಹ್ಞೂಂ....ಅದು ಸರೀನ್ನಿ. ನಾನನ್ನೋದು ಅದಲ್ಲ, ಆ ರಾಮೇಶ್ವರಾನೂ ಅಲ್ಲ; ನಮ್ಮ ಶೇಖ ಸಾಹೇಬ್ರು ಇದ್ದಾರಲ್ಲಾ...."

"ಯಾವ ಸಾಹೇಬ್ರುವರು?"

"ಅದೇ ನಮ್ಮ ಕಾಶ್ಮೀರದ..'

"ಹೋ. ಅವ್ರು, ಹಜ್ ಯಾತ್ರೆಗೆ ಹೋದವ್ರು.."

'ಹ್ಞೂಂ. ಅವ್ರೇ...'

"ಏನಾಯಿತಂತೆ ಅವ್ರಿಗೆ?"

"ಆಗೋದೇನು? ನಮ್ಮ ಸರಕಾರ ಅವರ ಮೇಲೆ ಸಹಾನುಭೂತಿ ತೋರಿಸಿ ಹಜ್ ಯಾತ್ರೆಗೆ ಹಾಗೂ ವಿದೇಶಗಳಲ್ಲಿರುವ ಅವರ ಬಂಧುಗಳನ್ನು ಕಾಣೋದಕ್ಕೇಂತ ಪಾಸ್‌ಪೋರ್ಟ್ ಕೊಟ್ಟಿತು...."

"ಹ್ಞಾ...ಅವ್ರು ಯಾತ್ರೆಯನ್ನು ಮುಗಿಸಿದ್ರು. ಮತ್ತೆಲ್ಲಿಯೋ ಅವ್ರು ಆ ಕೆಂಪಿನವರನ್ನ ಕಂಡರಂತಲ್ಲಾ...."

"ಹೌದು ಕಣೇ, ಆಲ್ಜೀರ್ಸಿನಲ್ಲಿ ."

"ಅಂದ್ರೆ ಉತ್ತರ ಆಫ್ರಿಕಾದಲ್ಲಿ....'

"ಹ್ಞೂಂ.. ಭೂಮಧ್ಯ ಸಮುದ್ರವಿದೆಯಲ್ಲಾ.. ಅದರ ತಟದಲ್ಲಿ...."

"ಅದೇ ನೋಡಿ, ಏನೋ ಆಫ್ರೇಷ್ಯಾಗಳ ಸಮ್ಮೇಳನವೊಂದು ಅಲ್ಲೇ ನಡೆಯೋದೂಂತ...."

"ಹೌದು ಕಣೇ, ಹೌದು ಪರ್ವಾಗಿಲ್ಲ ನೀನು. ಪತ್ರಿಕೆ ಓದೋದ್ರಲ್ಲಿ ಮಾತ್ರವಲ್ಲ ಓದಿದ್ದನ್ನ ನೆನಪಿನಲ್ಲಿಡೋದ್ರಲ್ಲೂ ನೀನು ಜಾಣೆ.."

"ನನ್ನ ಮುಖಸ್ತುತಿ ಇರ್ಲಿ ಹಾಗೆ.... ಇಲ್ಲಿ, ಅಲ್ಲಿ ಶೇಖ—ಲಾಯ್‌ರು ಏನು ಮಾತಾಡಿದ್ರಂತೆ?"

'ಏನೂಂತ ಹೇಗೆ ಗೊತ್ತಾಗಬೇಕು? ಅಂತೂ ಕಾಶ್ಮೀರಕ್ಕೆ ಸ್ವಯಂ ನಿರ್ಣಯಾಧಿಕಾರ ಕೊಡಬೇಕು ಎಂಬುದನ್ನ ಒಪ್ಪಿರಬಹುದು. ಆದ್ರೆ ಮೇಲೆ....'

"... ಹೌದು... ಪೀಕಿಂಗಿಗೆ ಬರಬೇಕೂಂತ ಆಮಂತ್ರಣವಿತ್ತು ..'

"ಇದು ನಿನಗ ಗೊತ್ತು..."

"ಗೊತ್ತಿಲ್ಲದೆ ಏನು? ನಮ್ಮ ಪಾರ್ಲಿಮೆಂಟಿನಲ್ಲಿ ಆ ಬಗ್ಗೆ ಪ್ರಶ್ನೆಗಳ ಸುರಿಮಳೆ ಆಯ್ತಲ್ವೆ? ಅಂತೂ ಶಾಸ್ತ್ರಿ ಭಾರೀ ಪೇಚಿನಲ್ಲಿ ಸಿಕ್ಕಿಬಿದ್ರು

'ಅಷ್ಟರಿಂದ್ಲೇ ಅಲ್ಲ, ಈ ವಿಚಾರದಲ್ಲಿ ಹೇಗೆ ಮುಂದರಿಯಬೇಕೂಂತ ಯೋಚನೆ..."

"ಅಲ್ರಿ, ಅವ್ರಿಗೆ ಚೀನಾಕ್ಕೆ ಹೋಗಬೇಕಾದರೆ, ಅನುಮತಿ ಕೊಡಬೇಕಲ್ಲಾ..."

'ಅದು ಸರಿಯೇ. ಭಾರತವು ಪಾಸ್‌ಪೋರ್ಟ್ ಕೊಡದಿದ್ರೆ ತಾನು ಕೊಡತ್ತೇನೆಂದು ಭುಟ್ಟೋ ಘೋಷಿಸಿದ್ದಾರೆ..."

"ಅಲ್ರಿ, ಒಂದು ದೇಶದವ್ರಿಗೆ ಇನ್ನೊಂದು ದೇಶದವ್ರು...."

"ಅದಕ್ಕೇನಂತೆ? ಅದೆಲ್ಲ ಪಾಕಿಸ್ತಾನಕ್ಕೆ ಅಭ್ಯಾಸ..."

"ಯಾಕೆ? ಯಾರಿಗೆ ಅವ್ರು ಕೊಟ್ಟಿದ್ದಾರೆ?"

ಹಿಂದೊಮ್ಮೆ ಯಾರೋ ಮೊರೊಕ್ಕೊದವನಿಗಂತೆ...."

ಅಂದ್ರೆ, ನಿಮ್ಮ ರಾಜಕಾರಣದಲ್ಲಿ ಹೀಗೂ ಆಗುತ್ತೆ..."

"ರಾಜಕಾರಣದಿಂದ ಏನೇನೋ ಆಗುತ್ತಂತೆ ಇದೊಂದು ಆಗೋದು ಹೆಚ್ಚೇನು?'

"ಅಲ್ಲಾ ಏನೇನೋ ಅಂದ್ರಿ?"

"ಏನೇನೋ ಅಂದ್ರೆ ಏನೇನೋ..."

ಸಾಕು ಬಿಡೀಂದ್ರೆ....ಕುಸು ವಿವರಿಸಿ ಹೇಳಿ..."

"ಹೇಳೋದಕ್ಕೇನು? ಚೌ ಎನ್ ಲಾಯ್ ಅಯೂಬಖಾನರನ್ನು ಬುಟ್ಟಿಗೆ ಹಾಕಿಕೊಂಡರು. ಈಗ ಭಾರತವು ಹೊರಬಿಟ್ಟ ಕಾಶ್ಮೀರದ ಹುಲಿಯನ್ನು ತನ್ನ ಪಂಜರದಲ್ಲಿ ಬಂಧಿಸಲು ಹಂಚಿಕೆ ಹಾಕುತ್ತಿದ್ದಾರೆ...."

"ಇದರಿಂದ ಲಾಭ?"

"ಲಾಭವೇನು? ಭಾರತಕ್ಕೆ ತಲೆನೋವು ತರಿಸೋದು.."

"ಈಗ ಇತ್ತಿರೋ ತಲೆನೋವು ಸಾಕಾಗದೂಂತ..?"

'ಈಗಿನ ತಲೆ ನೋವಿನಿಂದ ಭಾರತ ಅದಕ್ಕೆ ತಲೆ ತಗ್ಗಿಸಲಿಲ್ಲ ನೋಡು.."

'ಏನೋಪ್ಪಾ, ಪಾಪ, ನೆಹರು ಇರುವಾಗ ಹೀಗೆಲ್ಲಾ ಇರಲಿಲ್ಲ..."

'ಹೌದು. ಬ್ರಿಟಿಷರು ಇರುವಾಗ ಪಾಕಿಸ್ತಾನವೇ ಇರಲಿಲ್ಲ..."

'ಅಲ್ರಿ, ಮೊನ್ನೆ ಒಬ್ರು ಹೇಳಿದ್ರಂತೆ.'

'ಏನು?'

'[illegible] ಸುಮಾರಿನೊಳಗೆ ಪಾಕಿಸ್ತಾನವೆಂಬುದೇ ಹೋಗಿ ಅಖಂಡ ಭಾರತ ಆಗುತ್ತಂತೆ.."

"ಇರಬಹುದನ್ನು. ನಾಳೆ ಏನಾಗುತ್ತೇಂತ ಇವತ್ತು ಹೇಗೆ ಹೇಳುವುದು?

"ಯಾಕೆ? ಅವ್ರು ಹೇಳ್ಲಿಲ್ಲಾ?"

"ಹೇಳಿದ್ದಾರೆ. ಅದರ ಸತ್ಯಾಸತ್ಯತೆಯನ್ನ ಕಾದೇ ನೋಡಬೇಕಷ್ಟೆ...."

'ಹ್ಞೂಂ - ನಿನಗೆ ಭವಿಷ್ಯದಲ್ಲಿ ನಂಬಿಕೆಯಿಲ್ಲ.."

"ಇಲ್ಲದೆ ಉಂಟೆ?"

"ಮತ್ತೆ ಹೀಗೆಲ್ಲ ಅನ್ನುತ್ತೀರಲ್ಲಾ?"

'ಅಲ್ವೆ, ವರ್ತಮಾನವನ್ನು ಎದುರಿಸಿಯೇ ಭವಿಷ್ಯವನ್ನು ನಂಬಬೇಕು ತಾನೆ?

"ಅದು ಸರೀನ್ನಿ. ಅಲ್ಲಾ, ಶಾಸ್ತ್ರಿಗಳವರು ಭಾರಿ ಸಂಕಟಕ್ಕೆ ಗುರಿಯಾದರಲ್ಲಾ! ಪಾಪ...."

"ಒಮ್ಮೊಮ್ಮೆ ಹೀಗೂ ಆಗುತ್ತೆ...."

'ಅವ್ರು ಶೇಖ ಸಾಹೇಬ್ರಿಗೆ ಎಚ್ಚರಿಕೆ ನೀಡಿದ್ದಾರಂತಲ್ಲಾ..."

"ಎಚ್ಚರಿಕೆ ನೀಡಿದ್ದಾರೆ. ಆದರೆ, ಎಲ್ಲರೂ ತನಗೆ ಪರವಾಗಿದ್ದಾರೆಂದು ಗರ್ಜಿಸುತ್ತಿರುವ ಹುಲಿಯನ್ನ ಏನು ಮಾಡೋದು?"

"ಎಲ್ಲರೂ ಅಂದರೆ ಯಾರ.?'

'ಹುಲಿಯ ಭಾಷೆಯಲ್ಲೇ ಹೇಳುವುದಾದರೆ ಕೆಂಪು ಚೀನಾದ ಲಾಯ್, ಅಲ್ಜೀರ್ಸಿನ ಬೆನ್‌ಬೆಲ್ಲಾ ಮತ್ತು ಕ್ಯಾರೋದ..'

'ಸುಳ್ಳು, ಖಂಡಿತಕ್ಕೂ ಸುಳ್ಳು...'

'ಯಾವುದು?'

'ನೀವನ್ನೋದು.'

"ಯಾಕೆ?'

"ಯಾರು ಹೇಗೆಂದ್ರೂ ಕ್ಯಾರೋದ ನಸ್ಸೀರ ಹೇಳಲಿಕ್ಕಿಲ್ಲ...'

'ಅಷ್ಟೊಂದು ವಿಶ್ವಾಸವೇ ನಿನಗೆ.'

'ಮತ್ತೆ? ಹಾಗೆಲ್ಲಾ ಅವ್ರು ಹೇಳ್ಲಿಕ್ಕಿಲ್ಲ."

"ಇದ್ದರೂ ಇರಬಹುದು...."

"ಅಂತೂ ಹುಲಿ ಕೆಂಪಿನವ್ರ ಬಲೆಯಲ್ಲಿ ಬೀಳೋದು ನಿಶ್ಚಯ. ಅಯ್ಯೋ ಪಾಪ.."

"ಓಡಿಸೋಕೆ ಭುಟ್ಟೋ ತಯಾರಾಗಿದ್ದಾರೆ...."

'ಅದನ್ನ ನೋಡುತ್ತ ನಿಂತಿರೋಕೆ ಭಾರತ..."

'ಛೆ..ಛೆ. ಎಂತಹ ಮಾತಿದು? ಶೇಖರ ಮಾತುಗಳು ಭಾರತಕ್ಕೆ ಬಗೆದ ದ್ರೋಹವೆಂದು ಕಾಶ್ಮೀರದ ಪ್ರಧಾನಿ....'

'ಅಲ್ರಿ, ಪ್ರಧಾನಿಯೆಲ್ಲಿ? ಮುಖ್ಯಮಂತ್ರಿ ಅಲ್ವೆ?'

"ಕೆಲವು ದಿನಗಳಲ್ಲಿ ಹಾಗಾಗುತ್ತೆ.

"ಅದ್ಯಾಕೆ? ಈಗಲೇ ವಿಧೇಯಕ ಮಂಜೂರಾಗಿದೆಯಂತಲ್ಲಾ..."

"ಅದು ಜಾರಿಗೆ ಬಂದಿಲ್ಲಾನ್ನು..."

'ಓ ಹಾಗೋ...ಏನಂತಾರೆ ಅವ್ರು!'

"ಅದೇ ಅಂದೆನಲ್ಲಾ? ಆ ಹುಲಿಯ ಮೇಲೆ ಎಂತಹ ಕ್ರಮ ಕೈಗೊಂಡರೂ ಸರಿಯೇ ಅನ್ನುತ್ತಾರೆ ."

'ಈಗ ಏನ ಮಾಡುತ್ತಾರೇಂತ.."

"ತಡೆ. ಅವಸರ ಮಾಡಬೇಡ. ಇಷ್ಟರಲ್ಲೇ ಹೊರಬೀಳುತ್ತೆ...."

"ಅಲ್ರಿ, ಪಾಕಿಸ್ತಾನದ ಅಯ್ಯೂಬರು ಭುಟ್ಟೋರೊಡನೆ ಸೋವಿಯತ್ತಿಗೆ ಹೋಗಿದ್ದಾರಂತಲ್ಲ? ಯಾಕೆ?"

"ಯಾಕೇಂತಂದ್ರೆ .. ಸೌಹಾರ್ದ ಸಂದರ್ಶನ."

"ಬರೇ ಅಷ್ಟೇ ಇರಲಾರದು...."

'ಏನೋ, ಇರಬಹುದು, ತನ್ನ ಬೇಳೆಯನ್ನ ಅಲ್ಲಿಯೂ ಬೇಯಿಸುವ ಮಹತ್ವಾಕಾಂಕ್ಷೆ"

'ಏನಾಯಿತಂತೆ ಅಲ್ಲಿ?"

"ಆಗೋದೇನು? ಬೇಳೆಗೆ ಎಸರೇ ಸಿಗಲಿಕ್ಕಿಲ್ಲ..."

"ಯಾಕೆ ಹಾಗಂತೀರಿ?"

"ನೋಡು, ಪತ್ರಿಕಾ ವರದಿಯಂತೆ ಈ ಗಣ್ಯ ಅತಿಥಿಗಳಿಗೆ ನೀರಸವಾದ ಸ್ವಾಗತ ದೊರೆಯಿತಂತೆ..."

"ಅಂದ್ರೆ ಅವ್ರೂ ತಮ್ಮ ಮಾತನ್ನ ಉಳಿಸಿದ್ರು.."

'ಯಾವ ಮಾತು?"

"ಕಾಶ್ಮೀರದ ವಿಷಯದಲ್ಲಿ ಭಾರತಕ್ಕೆ ಬೆಂಬಲ ನೀಡುವ ವಿಚಾರ...."

(ಹದಿಮೂರನೇ ಪುಟ ನೋಡಿರಿ)

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ.

O S. No. 4/65.

ಪೀರಿ ಡಿ'ಸೋಜ ಬ್ಯಾ ಕೂಡಾ
—ವಾದಿಗಳು.

ಮತ್ತು

ಸವರಿನ್ ಡಿ'ಸೋಜ ಬ್ಯಾ ಕೂಡಾ
— ಪ್ರತಿವಾದಿಗಳು.

ಯವರೊಳಗೆ

ಸದ್ರಿ ವ್ಯಾಜ್ಯದ 5 ಮತ್ತು 6ನೇ ಪ್ರತಿವಾದಿಗಳಿಗೆ—

(5) ಲೋರೆನ್ಸ್ ಜಿ. ಡಿ'ಸೋಜ, ಪೀಟರ್ ಡಿ'ಸೋಜರ ಮಗ. (6) ಡ್ಯಾನಿಸ ಡಿ'ಸೋಜ, ಪೀಟರ್ ಡಿ'ಸೋಜರ ಮಗಳು, ಉಡುಪಿ ತಾಲ್ಲೂಕು ಮೂಡನಿಡಂಬೂರು ಗ್ರಾಮದ ಅಂಬಲಪಾಡಿ—

ವಾದಿಗಳು ಪ್ಲೇಂಟು ಸ್ವತ್ತುಗಳಿಗೆ ಮಾಡಿದ ಮೇಲ್ಕಂಡ ದಾವೆಯು ತಾ 20-4-1965ಕ್ಕೆ ಸದ್ರಿ 5 ಮತ್ತು 6ನೇ ಪ್ರತಿವಾದಿರ ಹಾಜರಾತಿ ಬಗ್ಗೆ ಇಟ್ಟಿರುವುದ್ರಿಂದ ಅದ್ರಕ್ಕೆ ಬಾಧಿಸುವುದಿದ್ದರೆ ಮೇಲಿನ ತಾರೀಕು ಹಗಲು ಘಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಯಪಡಿಸಿದೆ.

P V. Acharya,
Vakil for Plaintiffs

ಉಡುಪಿ, 31-3-65.

ವಿವೇಚನೆ

ಕನ್ನಡ ಸಾಹಿತ್ಯಕ್ಕೆ ಸ್ತ್ರೀಯರ ಕಾಣಿಕೆ

ಲೇಖಕಿಯರು: ಬಿ. ಕುಮಾರಿ ಕೈಯ್ಯ, ಬಳ್ಳುಂಜೆ.

ಗುಂಪು ಕಟ್ಟಿಕೊಂಡು ಜೀವಿಸುತ್ತಿದ್ದ ಕಾಲದಿಂದ ಆರಂಭವಾಗಿ ಇಂದಿನ ಈ ಪ್ರಜಾಪ್ರಭುತ್ವದ ವರೆಗಿನ ಮಾನವ ಜೀವನದಲ್ಲಿ ಉಂಟಾಗುತ್ತಿರುವ ಪ್ರತಿಯೊಂದು ವ್ಯತ್ಯಾಸಗಳಲ್ಲಿಯೂ ಸ್ತ್ರೀಯು ಸಹಭಾಗಿಯಾಗಿದ್ದಾಳೆ. ಅದೇ ರೀತಿ ಸಂಸ್ಕೃತಿಯ ಪ್ರತೀಕದಂತಿರುವ ಸಾಹಿತ್ಯ ವೃಕ್ಷವನ್ನು ಬೆಳೆಸಲು ಸೇರಿರುವ ಕಾರ್ಯದಲ್ಲಿ ಪುರುಷರೊಂದಿಗೆ ಸ್ತ್ರೀಯರೂ ಜತೆಗೂಡಿದ್ದಾರೆ. ಕೇವಲ ಕನ್ನಡ ಸಾಹಿತ್ಯಕ್ಕೆ ಮಾತ್ರ ಸ್ತ್ರೀಯರು ಸೇವೆ ಸಲ್ಲಿಸಿರುವುದಲ್ಲದೆ ಸರ್ವ ಸಾಹಿತ್ಯಕ್ಕೂ ಮೂಲಾಧಾರವೆನಿಸಿದ ಸಂಸ್ಕೃತ ಸಾಹಿತ್ಯದಲ್ಲಿ ಕೂಡಾ ಅವರು ಅದ್ಭುತ ಕ್ರಾಂತಿ ಎಸಗಿದ್ದಾರೆ. ಕ್ರಿಸ್ತಪೂರ್ವ ಸಾವಿರಾರು ವರ್ಷದ ಹಿಂದಿನವಳಾದ ಘೋಷೆಯಿಂದ ಹಿಡಿದು ಈ ಇಪ್ಪತ್ತನೆಯ ಶತಮಾನದ ವರೆಗೆ ಸ್ತ್ರೀಯರು ಆಗಾಗ ಅಲ್ಪಸ್ವಲ್ಪ ಕಾಣಿಕೆಯಿಂದ ಸಾಹಿತ್ಯ ಸಂಪತ್ತನ್ನು ಉಜ್ವಲವಾಗಿ ಬೆಳಗಿಸುತ್ತಾ ಬಂದಿದ್ದಾರೆ. ಅವರಲ್ಲಿ ಕನ್ನಡತಿಯರು ಅನೇಕರು. ಇಂಥವರಲ್ಲಿ ವಿಜಯಾಂಬಿಕೆ, ಗಂಗಾದೇವಿ, ತಿರುಮಲಾಂಬಿಕೆ ಅಗ್ರಸ್ಥಾನ ಪಡೆದಿದ್ದಾರೆ.

ವಿಜಯಾಂಬಿಕೆ ರಾಜಾಶ್ರಯದಲ್ಲಿ ಬೆಳೆದವಳು. "ಕೌಮುದೀ ಮಹೋತ್ಸವ" ಈಕೆಯಿಂದ ಬರೆಯಲ್ಪಟ್ಟ ಶ್ರೇಷ್ಠ ನಾಟಕ ಅಲ್ಲದೆ ಸುಭಾಷಿತ ಗ್ರಂಥಗಳಲ್ಲಿಯೂ ಅವಳ ಅನೇಕ ಬಿಡಿ ಪದ್ಯಗಳು ದೊರೆತಿವೆ. ಕೌಮುದೀ ಮಹೋತ್ಸವ ರಾಜಕುಮಾರ ಕಲ್ಯಾಣವರ್ಮ ಹಾಗೂ ರಾಜಕುಮಾರಿ ಕೀರ್ತಿಮತಿ ಇವರ ಮಿಲನದ ಸುಂದರವಾದ ಕಥೆಯನ್ನೊಳಗೊಂಡಿದೆ. ನಾಟಕದ ತುಂಬೆಲ್ಲ ಕವಯಿತ್ರಿ ತನ್ನ ಕಲಾ ನೈಪುಣ್ಯವನ್ನು ತೋರ್ಪಡಿಸಿದ್ದಾಳೆ.

ವಿಜಯಾಂಬಿಕೆಯ ಏಳು ಶತಮಾನಗಳ ಅನಂತರ ಗಂಗಾದೇವಿ ಎಂಬ ನಾಮಾಂಕಿತ ಕವಯಿತ್ರಿಯೋರ್ವಳು ಬೆಳಕಿಗೆ ಬಂದಳು. ಈಕೆಯಿಂದ ರಚಿಸಲ್ಪಟ್ಟ "ಮಧುರಾ ವಿಜಯ" ಸುಂದರ ಕಾವ್ಯ ಹಾಗೂ ಇತಿಹಾಸ ಪ್ರಸಿದ್ಧ ಕಥೆಯೂ ಆಗಿದೆ. ತನ್ನ ಪತಿ ಕಂಪಣನ ದಿಗ್ವಿಜಯಕ್ಕೆ ಕಾವ್ಯದ ಮೆರುಗು ಕೊಟ್ಟು ವರ್ಣಿಸಿದ ಈ ಇತಿಹಾಸ ಪ್ರಸಿದ್ಧ ಕಾವ್ಯಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ತನ್ನದೇ ಆದ ಸ್ವಂತ ಕಲ್ಪನೆಯನ್ನು ಸುಂದರವಾಗಿ ನಿರೂಪಿಸುವುದರಲ್ಲಿ ಗಂಗಾದೇವಿ ಬಲು ಜಾಣೆ.

ತಿರುಮಲಾಂಬಿಕೆ ಗಂಗಾದೇವಿಯ ಅನಂತರದವಳು. ಗಂಗಾದೇವಿಯಂತೆ ಇವಳಿಗೂ ತನ್ನ ಪತಿಯ ಜೀವನವೇ ಕಾವ್ಯವಸ್ತುವಾಯಿತು. ಈಕೆಯ ಕಾವ್ಯ ಕೂಡಾ ಐತಿಹಾಸಿಕ ದೃಷ್ಟಿಯಿಂದ ಅಮೂಲ್ಯವಾಗಿದೆ. ಇವಳ ಸ್ಮರಣ ಶಕ್ತಿ ಅತಿ ತೀಕ್ಷ್ಣ. ಈಕೆ ಸರ್ವ ಶಾಸ್ತ್ರ ಪಾರಂಗತಳು. "ವರದಾಂಬಿಕಾ ಪರಿಣಯ" ಈಕೆಯ ಕೃತಿರತ್ನ. ಚಂಪೂ ಕಾವ್ಯವನ್ನು ರಚಿಸಿದ ಸ್ತ್ರೀಯರಲ್ಲಿ ತಿರುಮಲಾಂಬಿಕೆ ಮೊದಲನೆಯವಳು. ಕೊನೆಯವಳೂ ಇವಳೇ. ನಿಸರ್ಗ ಪ್ರೇಮಿಯಾಗಿದ್ದಳೆಂಬುದು ಈಕೆ ಮಾಡಿದ ನಿಸರ್ಗದ ವರ್ಣನೆಯಿಂದ ತಿಳಿದು ಬರುತ್ತದೆ. ಮುಗಿಲು ಕುಂಕುಮದ ಕರಡಿಗೆ. ರವಿ ಅದರ ಮುಚ್ಚಳ. ತುಂಟ ಬಾಲ ಚಂದಿರ ಅದನ್ನು ತೆರೆದು ಬಿಟ್ಟನಂತೆ. ಆಗೇನು ಕೇಳುವುದು? ಮುಗಿಲೆಲ್ಲ ಕುಂಕುಮವೆ ಕುಂಕುಮ ಎಂದು ಸೂರ್ಯಾಸ್ತವನ್ನು ಸುಂದರವಾಗಿ ವರ್ಣಿಸಿದ್ದಾಳೆ.

ಕನ್ನಡ ಸಾಹಿತ್ಯ ನಾನಾ ಪ್ರಕಾರವಾಗಿ ಬೆಳೆದಿದೆ. ಅದರಲ್ಲಿ ವಚನ ಸಾಹಿತ್ಯವು ತನ್ನದೇ ಆದ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಈ ವಚನಕಾರರಲ್ಲಿ ಪುರುಷರಿಗಿಂತಲೂ ಹೆಚ್ಚಿನ ಮಹಿಳೆಯರು ವಚನಕಾರ್ತಿಯರೆಂಬುದನ್ನು ಕೇಳಿದರೆ ನಮಗೆ ಹೆಮ್ಮೆಯುಂಟಾಗುತ್ತದೆ. ಅನುಭವದ ಸಾರವನ್ನು ಹಿರಿದಾದ ಮಾತಿನ ಅರ್ಥವನ್ನು ಕಿರಿದಾದ ಮಾತಿನಲ್ಲಿ ತಿಳಿಯಪಡಿಸುವ ಹೃದಯಂಗಮವಾಗಿ ಮನಮುಟ್ಟುವಂತೆ ನಡೆದಿರುವುದನ್ನು ನಾವು ವಚನಗಳಲ್ಲಿ ಕಾಣಬಹುದು. ಈ ವಚನಕಾರರು ತಮ್ಮ ವಚನಗಳ ಮೂಲಕ ಧರ್ಮಬೋಧೆ ಸಾಹಿತ್ಯ ಪ್ರೇಮ, ಅನುಕಂಪ, ಭಕ್ತಿ, ಪಾರವಶ್ಯತೆ ಮುಂತಾದುವುಗಳನ್ನು ವಿಕಾಸಗೊಳಿಸಿದ್ದಾರೆ.

ವಚನ ಕಾರ್ತಿಯರಲ್ಲಿ ಅಕ್ಕಮಹಾದೇವಿ ವೈರಾಗ್ಯದ ಪರಾಕಾಷ್ಠೆಯನ್ನು ಮುಟ್ಟಿ ಚಿರಂತನವಾಗಿದ್ದಾಳೆ. ಈಕೆ ೧೨ನೆಯ ಶತಮಾನದ ಮಹಾ ಜ್ಯೋತಿ. ತೇಜೋಮೂರ್ತಿ. ಅಲ್ಲಮಪ್ರಭುವಿನಿಂದ 'ಸ್ವೈ' ಎನಿಸಿಕೊಂಡು ಭಕ್ತಿ ಭಂಡಾರಿ ಬಸವಣ್ಣನವರಿಂದ 'ಉಘೇ' ಎನಿಸಿಕೊಂಡು 'ಶ್ರೀ' ಶೈಲದ ಕದಳಿಯಲ್ಲಿ ಶ್ರೀ ಚೆನ್ನಮಲ್ಲಿಕಾರ್ಜುನನಲ್ಲಿ ಐಕ್ಯವಾದ ಮಹಾ ಜೀವ ಜ್ಯೋತಿ, ಅಕ್ಕ ಮಹಾದೇವಿಯ ವಚನಗಳು ದ್ರಾಕ್ಷಾಪಾಕದಂತಿವೆ. ಭಾವನಾ ಪರಿಪೂರ್ಣವಾದ ಘನ ವಿಚಾರವನ್ನೊಳಗೊಂಡ ತನ್ನ ಕೃತಿಯನ್ನು ಚೆನ್ನಮಲ್ಲಿಕಾರ್ಜುನನಿಗೆ ಅರ್ಪಿಸಿದ್ದಾಳೆ. ಗುರುತರವಾದ ವಿಷಯವನ್ನು ಸರಳವಾದ ನುಡಿಯಲ್ಲಿ ವಿವರಿಸಿದ ಅಕ್ಕನ ವಚನಾಮೃತ ಇಂತಿದೆ.

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಂಗಳಿಗೆ ಅಂಜಿದೊಡೆಂತಯ್ಯಾ
ಸಮುದ್ರದ ತಡಿಯಲೊಂದು
ಮನೆಯ ಮಾಡಿ ತೆರೆಗಳಿಗೆ
ಅಂಜಿದೊಡೆಂತಯ್ಯಾ
ಸಂತೆಯಲೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯಾ,
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯಾ,
ಲೋಕದೊಳಗೆ
ಹುಟ್ಟಿದ ಬಳಿಕ ಸ್ತುತಿ ನಿಂದೆಗಳು
ಬಂದಡೆ
ಕೋಪವ ತಾಳದೆ ಸಮಾಧಾನಿ
ಯಾಗಿರಬೇಕು.



ನಿಮ್ಮ ಭವಿಷ್ಯ
ಉತ್ತಮವಾಗಲು
ಭರವಸೆ

ಕೆನರಾ ಬ್ಯಾಂಕಿನ ಸೇವಿಂಗ್ಸ್ ಪಾಸ್ ಬುಕ್ ನಿಮ್ಮ ಭವಿಷ್ಯದ ಅಭ್ಯುದಯಕ್ಕೆ ರಹದಾರಿಯಾಗಿದೆ
ಈಗ ನೀವು ತೆರಿಗೆ ಬಾಬಿನಲ್ಲೂ ಉಳಿತಾಯ ಮಾಡಬಲ್ಲಿರಿ. ಆದುದರಿಂದ ನಿಮ್ಮ ಕ್ರಮಬದ್ಧವಾದ ಉಳಿತಾಯದೊಡನೆ ಈ ತೆರಿಗೆ ಉಳಿಕೆಯನ್ನು ಕೂಡಿಸಿ
ನಿಮ್ಮ ಉಳಿತಾಯವೆಲ್ಲವನ್ನೂ ಕೆನರಾ ಬ್ಯಾಂಕ್‌ನಲ್ಲಿ ಕೂಡಿಡಿ.

ಶೇ. 4 ರಷ್ಟು | ಕೆನರಾ ಬ್ಯಾಂಕ್ ಈಗ ನಿಮ್ಮ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್‌ಗಳ ಮೇಲೆ ವರ್ಷಕ್ಕೆ ಶೇ. 4 ರಂತೆ ಆಕರ್ಷಕ ಬಡ್ಡಿ ನೀಡುತ್ತದೆ.

ಇಂದೇ ಉಳಿತಾಯ ಮಾಡಿ, ಹೆಚ್ಚಿಗೆ ಉಳಿಸಿ, ಹೆಚ್ಚಿಗೆ ಗಳಿಸಿ.
ವಿವರಗಳಿಗೆ ಹತ್ತಿರದ ಕೆನರಾ ಬ್ಯಾಂಕ್ ಶಾಖೆಯೊಡನೆ ವ್ಯವಹರಿಸಿ.
ನಿಮ್ಮ ಸಮೀಪದಲ್ಲಿಯೇ ಒಂದು ಶಾಖೆಯಿದೆ.

ಕೆನರಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1906)
ಆಡಳಿತ ಕಚೇರಿ: ಬೆಂಗಳೂರು — ರಿಜಿಸ್ಟರ್ಡ್ ಆಫೀಸ್: ಮಂಗಳೂರು
ವಿಶ್ವಾದ್ಯಂತ ಪ್ರತಿನಿಧಿಗಳು — ಭಾರತದಲ್ಲಿ 235ಕ್ಕೂ ಹೆಚ್ಚು ಶಾಖೆಗಳು

ಕನ್ನಡ ಸಾಹಿತ್ಯದ ಮುಡಿಯ ಮಾಣಿಕ್ಯವಾಗಿ ಮೆರೆದವಳು ಅಕ್ಕ ಮಹಾದೇವಿ. ಅಧ್ಯಾತ್ಮದ ಬೆಳಕಿನಿಂದ ಜ್ಞಾನಜ್ಯೋತಿಯಾಗಿ ಪ್ರಪಂಚಕ್ಕೆ ಬೆಳಕಾಗಿ ಕೊನೆಗೆ ಜಗಜ್ಜ್ಯೋತಿಯಲ್ಲಿ ಐಕ್ಯವಾದ ಜೀವಪ್ರಭೆ ಅಕ್ಕನದು. ವೇದ, ಶಾಸ್ತ್ರ, ಪುರಾಣಗಳಲ್ಲಿ ಹೇಳಿದ ನುಡಿ ತನ್ನ ಜೀವನದಲ್ಲಿ ಅನುಭವಕ್ಕೆ ಬಂದಾಗ ಮಾತ್ರ ಸತ್ಯ. ಹೇಳುವ ವಿಷಯದ ಭಾವನೆ ತೀವ್ರವಾದಾಗ ಕಲ್ಪನೆ ಉಜ್ವಲವಾದಾಗ ಕಾದ ಹಾಲು ಕೆನೆಗಟ್ಟುವಂತೆ ಅನುಭವ ಕೆನೆಗಟ್ಟಿ ನಿಲ್ಲುವ ಕಾವ್ಯ, ಮತತತ್ವ ಇವುಗಳ ತ್ರಿವೇಣಿ ಸಂಗಮವೆ ಈ ವಚನಗಳಲ್ಲಿ ಅದಂತೆ ಕಂಡುಬರುತ್ತದೆ. ಪತಿಭಕ್ತಿಯಿಂದ ಹಿಡಿದು ದೈವಭಕ್ತಿಯವರೆಗೆ ಮಹಿಳೆಯ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಭಾರತೀಯ ಇತಿಹಾಸದಲ್ಲಿ ಅದ್ವಿತೀಯ ಸ್ಥಾನವನ್ನು ಗಳಿಸಿ ಅನುಪಮ ಕಾಣಿಕೆಯನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ತೇಜೋಪುಂಜವಿದು. ದಾಸಶ್ರೇಷ್ಠರಾದ ಪುರಂದರ ದಾಸರು ಹೊಲೆಯನಾರು ಎಂದಾಗ ಜಾತಿಯಿಂದಲ್ಲ ಹೊಲೆಯ ನೀತಿಯಿಂದ ಎಂದಂತೆ ಭವಿಯಾರು ಎಂದಾಗ ಅರಿಷಡ್ವರ್ಗಾದಿಗಳೇ ಭವಿಗಳು. ಅದನ್ನು ಕಳೆದವರೇ ಶರಣರು ಎಂದು ಹೇಳಿದ್ದಾರೆ. ಸಂಸಾರ ನಿರಸನವನ್ನು ಅಕ್ಕ ಬಹು ಮನೋಜ್ಞವಾಗಿ ವರ್ಣಿಸಿದ್ದಾಳೆ. ಮಾಯದಮದ ಜೀವದ ಜಂಜಡ, ಸಂಸಾರ ನಿರಸನ ಬಿಟ್ಟೆನೆಂದರೆ ಬಿಡದೀ ಮಾಯೆ, ಬಿಡದಿದ್ದರೆ ಬೆಂಬತ್ತಿತು ಮಾಯೆ ಹರಿಯ ನುಂಗಿತ್ತು ಮಾಯೆ, ಅಜನ ನುಂಗಿತ್ತು ಮಾಯೆ, ಚಂದ್ರನ ನುಂಗಿತು ಮಾಯೆ, ಈ ಎಲ್ಲಾ ಮಾತುಗಳಿಂದ ಸಂಸಾರದ ಸುಖವನ್ನು ನಶ್ವರವೆಂದೂ ಕ್ಷಣ ಭಂಗುರವೆಂದೂ ಸಾರಿದ್ದಾಳೆ. ಅವಳ ಆದರ್ಶ ಜೀವನ ನುಡಿದ ವಚನ ಇಂದಿನ ಮಾನವನಿಗೆ ದೇವರನ್ನು ಕಾಣಲು ದಾರಿಯ ದೀಪವಾಗಿ ಪ್ರಜ್ವಲಿಸುತ್ತಿದೆ.

ರಾಣಿ ಮಹಾದೇವಿಯಮ್ಮ, ಅಕ್ಕ ಮಹಾದೇವಿಯ ಅನಂತರದವಳು. ಸಿರಿಸಂಪತ್ತನ್ನು ತ್ಯಾಗಮಾಡಿ ಭಕ್ತಿಯನ್ನೇ ಕೃತಿಯ ಮೂಲವಸ್ತುವನ್ನಾಗಿರಿಸಿಕೊಂಡು ದಾಸೋಹದಲ್ಲಿ ಜೀವನ್ಮುಕ್ತಿಯನ್ನು ಪಡೆದಾಕೆ ಇವಳು.

ಗುರುವಿಂಗೆ ತನುಹೋಯ್ತು,
ಜಂಗಮಕ್ಕೆ ಧನಹೋಯ್ತು.
ಲಿಂಗಕ್ಕೆ ಮನಹೋಯ್ತು, ಇಂತೀ
ಲಕ್ಷದಲ್ಲಿ ಲಕ್ಷಿಸಿ ನೀವು
ಕೈಲಾಸಕ್ಕೆ ಹೋದಿರೆನೆಂಬ
ಕಲ್ಲೆದೆಗ ನಾನಂಜುವೆ
ಎನ್ನಯ ಪ್ರಿಯ ಇಮ್ಮಡಿ ನಿ
ಕಳಂಕ ಮಲ್ಲಿಕಾರ್ಜುನ.

ಮಹಾ ದೇವಿಯಮ್ಮನ ವಚನಗಳು ಕೆಲವೇ ಆದರೂ ವಚನ ಸಾಹಿತ್ಯದಲ್ಲಿ ಅವುಗಳ ಸ್ಥಾನ ಮಹತ್ವದ್ದಾಗಿದೆ.

ಭಕ್ತಿ ಭಂಡಾರಿ ಬಸವಣ್ಣನವರ ಪತ್ನಿ ನೀಲಾಂಬಿಕೆ ಅನುಭವ ಮಂಟಪದಲ್ಲಿ ಮಿಂಚಿದವಳು. ವೀರಶೈವ ಕವಿಗಳನೇಕರು ಈಕೆಯ ಕುರಿತು ಕವನಗಳನ್ನು ರಚಿಸಿದ್ದಾರೆ. ಈಕೆಯ ವಚನ ಮುದ್ರಿಕೆ "ಬಸವ ಪ್ರಿಯ ಕೂಡಲ ಸಂಗಮದೇವ" ಎಂದಿದ್ದು ಹಲವು ವಚನಗಳು ಮಾತ್ರ ಉಪಲಬ್ಧವಿದೆ.

ಬಸವಣ್ಣನವರ ಹಿರಿಯ ಸಹೋದರಿ ನಾಗಲಾಂಬಿಕೆ ಶ್ರೇಷ್ಠ ವಚನಕಾರ್ತಿಯೂ ಆಗಿದ್ದಳು. ನಾಗಲಾಂಬಿಕೆ ನಡೆಸಿದ ಕಾರ್ಯ ಅತ್ಯಂತ ಮಹತ್ವದ್ದಾಗಿದೆ.

ಶರಣೆ ಕೊಟ್ಟಣದ ಸೋಮವ್ವೆ ಕೊಟ್ಟಣದ ಕಾಯಕದಲ್ಲಿ ಮುಕ್ತಿಯನ್ನು ಕಂಡಳು. ಇತರರಿಗೆ ಕಾಣುವ ದಾರಿಯನ್ನು ತೋರಿಸಿಕೊಟ್ಟಳು. ಇವರಂತೆಯೇ ಹಡಪದ ಲಿಂಗಮ್ಮ, ರೆಮ್ಮವ್ವೆ, ಬೊಂಡಾದೇವಿ, ವೀರಮ್ಮ, ಲಕ್ಷ್ಮವ್ವ ಮಸಣಮ್ಮ, ರಾಯಮ್ಮ; ಕಾಳವ್ವೆ, ಸತ್ಯಕ್ಕ ಮೊದಲಾದವರು ಕನ್ನಡ ಸಾಹಿತ್ಯಕ್ಕೆ ಅತ್ಯುತ್ತಮ ಸೇವೆ ಸಲ್ಲಿಸಿದ್ದಾರೆ. ಲೋಕಾನುಭವವನ್ನು ಕವಿಗಳು ಸಾಕಷ್ಟು ಉಪಮೆಗಳನ್ನು ಕೊಟ್ಟು ವರ್ಣಿಸಿದ್ದಾರೆ. ಅದು ಒಮ್ಮೊಮ್ಮೆ ಮಿಠಾಯಿಯಂತೆ ಮಧುರವಾಗಿರುವುದು. ಮತ್ತೊಮ್ಮೆ ಉಪ್ಪಿನಕಾಯಿಯ ತುಂಡಿನಂತೆ ಖಾರವಾಗಿರುವುದು. ಇಂಥ ಉದಾಹರಣೆಗಳ ಮೂಲಕ ವರ್ಣಿಸಿರುವುದನ್ನು ನಾವು ಈ ವಚನಗಳಲ್ಲಿ ಕಾಣಬಹುದು.

ವಚನ ಕಾರ್ತಿಯರ ತರುವಾಯ ೧೭ನೆಯ ಶತಮಾನದಲ್ಲಿ ಸಂಚಿಯ ಹೊನ್ನಮ್ಮ ಶೃಂಗಾರಮ್ಮ, ಚೆಲುವಾಂಬೆ, ಹೆಳವನ ಕಟ್ಟೆ ಗಿರಿಯಮ್ಮ ಮುಂತಾದವರು ಸಾಹಿತ್ಯ ಪೋಷಕರಾದರು. ಸಂಚಿಯ ಹೊನ್ನಮ್ಮ ಗೃಹಿಣಿಯ ಕೈ ಹಿಡಿಯಂತಿರುವ ಹದಿಬದೆಯ ಧರ್ಮ ಎಂಬ ದೊಡ್ಡ ಗ್ರಂಥವನ್ನು ರಚಿಸಿದಳು. ಗೃಹಿಣಿಯ ರೀತಿ ನೀತಿಗಳ್ಯಾವುವು ಆಕೆಯ ಕರ್ತವ್ಯವಾವುದು ಎಂಬುದನ್ನು ಸೊಗಸಾಗಿ ರೂಪಿಸಿದ್ದಾಳೆ. ಅಲ್ಲದೆ ಸ್ತ್ರೀಯನ್ನು ಅಣ್ಣ ತಮ್ಮಂದಿರು ಮಾತಾಪಿತರು ಯಾವ ರೀತಿಯಲ್ಲಿ ನಡೆಸಿ ಕೊಡಬೇಕೆಂಬುದನ್ನು ಕೂಡಾ ವರ್ಣಿಸಿದ್ದಾಳೆ. ಸಂಚಿಯ ಹೊನ್ನಮ್ಮ ಕನ್ನಡಿಗರ ಅಚ್ಚು ಮೆಚ್ಚಿನ ಸಾಹಿತಿ ಎನಿಸಿಕೊಂಡಿದ್ದಾಳೆ. ಮಾತ್ರವಲ್ಲದೆ ಸ್ತ್ರೀ ಸಾಹಿತಿಗಳಿಗೆ ಸ್ಫೂರ್ತಿಯ ಬುಗ್ಗೆ ಹಾಗೂ ಉತ್ತಮ ಮಾದರಿ ಎನಿಸಿಕೊಂಡಿದ್ದಾಳೆ. ಹೆಳವನ ಕಟ್ಟೆ ಗಿರಿಯಮ್ಮ ಚಂದ್ರಹಾಸನ ಕಥೆ, ಸೀತಾ ಕಲ್ಯಾಣ, ಉದ್ದಾಲೀಕನ ಕಥೆ ಎಂಬ ಸಾಂಗತ್ಯ ಗ್ರಂಥವನ್ನೂ ಕೆಲವು ಹಾಡುಗಳನ್ನೂ ಬರೆದಿದ್ದಾಳೆ. ಸಹಜವಾದ ದುಃಖವನ್ನು ಪ್ರದರ್ಶಿಸುವುದರಲ್ಲಿ ಗಿರಿಯಮ್ಮ ನುರಿತವಳು. ಚಂದ್ರಹಾಸನ ಕಥೆಯಲ್ಲಿ ಒರವ ದಾಸಿ ಚಂದ್ರಹಾಸನನ್ನು ಕುಂತಳಪುರಕ್ಕೆ ಎತ್ತಿಕೊಂಡು ಹೋಗುವಾಗ

ಅವನ ದಸ್ಥಿತಿಗಾಗಿ
ತಿರಿದು ಹಾಕುವಳ್ ಪಾಲ್ಗಿಣ್ಣೆಯ
ಶಿಶುವಿಗೆ
ಬರೆದು ಪೋಷಣೆಯ ಮಾಡುವಳು,
ತರಳೆಗೆ ಬೇಕಾದುದಿಲ್ಲದಿರಲ್ ದಾಸಿ
ಮರುಗುತಿರ್ದಳ್ ಮನದೊಳಗೆ||

ದೇಶಾಧಿಪತಿಯ ಗರ್ಭದಿ ಜನಿಸಿ ಬಂದು ನಿನಗೀಗ ಹಾಸುವ ವಸ್ತ್ರಗಳಿಲ್ಲ. ದೀಪ ತೂಗುವರೆ ತೊಟ್ಟಿಲು ಇಲ್ಲವೆನುತ ಬಳಲಿ ತೂಗುವಳೊಮ್ಮೆ. ಕರುಣಾಜನಕ ಪರಿಸ್ಥಿತಿಯನ್ನು ನೈಜ ರೀತಿಯಲ್ಲಿ ಚಿತ್ರಿಸುವುದರಲ್ಲಿ ಗಿರಿಯಮ್ಮ ಜಾಣೆ. ಈಕೆ ಶ್ರೀರಂಗನಾಥನ ಭಕ್ತಳಾಗಿದ್ದ ಕಾರಣ ಅನೇಕ ಭಕ್ತಿಯ ಗೀತೆಗಳನ್ನು ರಚಿಸಿರುವಳು. ಹರಪನ ಹಳ್ಳಿ ಭೀಮವ್ವ ಕೂಡಾ ಅನೇಕ ಭಕ್ತಿಯ ಗೀತೆಗಳನ್ನು ರಚಿಸಿರುವಳು.

೧೮೫೦ರ ಸುಮಾರಿಗಿದ್ದ ಕವಯಿತ್ರಿ ಸಿ. ಆರ್. ಚೆಲ್ಲಮ್ಮ ಮೈಸೂರಿನ ಮಹಾರಾಣಿ ಬಾಲಿಕಾ ಪಾಠಶಾಲೆಯ ಅಧ್ಯಾಪಿಕೆ. "ರಾಜ ಕಳಾನಿಧಿ," "ರುಕ್ಮಿಣೀ ಪರಿಣಯ", "ಗೀತಾಲಹರಿ" ಹಾಗೂ "ಪಾರಿಜಾತಾಪಹರಣ' ಅವರ ಕೃತಿ ರತ್ನಗಳು. ಇದರಲ್ಲಿ ರಾಜಕಳಾನಿಧಿ, ರಾ

(ಹನ್ನೆರಡನೇ ಪುಟ ನೋಡಿರಿ)

VB-21 ೫

ಬಡ್ಡಿ ದರಗಳ ಏರಿಕೆ

4½%
ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್‌ಗಳ ಮೇಲೆ

8%
9 ವರ್ಷ ಅಥವಾ ಹೆಚ್ಚಿನ ಅವಧಿಗೆ

7½%
7 ವರ್ಷಗಳಿಂದ 9 ವರ್ಷಗಳೊಳಗಿನ ಅವಧಿಗಳಿಗೆ

7¼%
5 ವರ್ಷಗಳಿಂದ 7 ವರ್ಷಗಳೊಳಗಿನ ಅವಧಿಗಳಿಗೆ

7%
3 ವರ್ಷಗಳಿಂದ 5 ವರ್ಷಗಳೊಳಗಿನ ಅವಧಿಗಳಿಗೆ

6¾%
2 ವರ್ಷಗಳಿಂದ 3 ವರ್ಷಗಳೊಳಗಿನ ಅವಧಿಗಳಿಗೆ

6½%
1 ವರ್ಷದಿಂದ 2 ವರ್ಷಗಳೊಳಗಿನ ಅವಧಿಗಳಿಗೆ

6%
6 ತಿಂಗಳಿಂದ 1 ವರ್ಷದೊಳಗಿನ ಅವಧಿಗಳಿಗೆ

5½%
91 ದಿನಗಳಿಂದ 5 ತಿಂಗಳೊಳಗಿನ ಅವಧಿಗಳಿಗೆ

ವಿಜಯ ಬ್ಯಾಂಕಿನಲ್ಲಿ ಉಳಿತಾಯ ಮಾಡಲು ಇದೀಗ ಸುಸಮಯ

ವಿಜಯ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಕಚೇರಿ: ವಿಜಯ ಬ್ಯಾಂಕ್ ಬಿಲ್ಡಿಂಗ್ ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು-3
ನಿಮ್ಮ ಸೇವೆಗಾಗಿ 52 ಕಚೇರಿಗಳನ್ನು ಹೊಂದಿರುವ ಬ್ಯಾಂಕು
ವಿವರಗಳಿಗೆ ನಿಮ್ಮ ಸಮೀಪದ ಕಚೇರಿಯಲ್ಲಿ ವ್ಯವಹರಿಸಿ

ವೀರವಾಣಿ

ಚೈನೀಯರಿಗೆ ಭಾರತೀಯರೇತಕ್ಕೆ ಬೆದರಬೇಕು?

ಬರೆದವರು: ಶ್ರೀ ಶಿವಶಂಕರ.

ದೇಶದಾದ್ಯಂತ ಗೊಂದಲವೆಬ್ಬಿಸಿ ಗಡಿಯಲ್ಲಿ ತಂಗಿರುವ ಚೈನೀ ಕಮ್ಯೂನಿಸ್ಟ್ ಸೈನಿಕರಿಗೆ ಪಚ್ಚೆಗುರುತು ತೋರಿಸಲು ಇಲ್ಲಿರುವ ದೇಶ ದ್ರೋಹಿ ಕಮ್ಯೂನಿಸ್ಟರು ಹಲವಾರು ಬಾರಿ ಪ್ರಯತ್ನ ನಡೆಸಿರುವದನ್ನು ಅದ್ಯಾರಿಂದಲೂ ಇಷ್ಟು ಬೇಗನೆ ಮರೆತುಬಿಡಲು ಸಾಧ್ಯವಿಲ್ಲ. ಕೇರಳ ಘಟನೆಯಿಂದಾಗಿ ಕೆರಳಿರುವ ಕಮ್ಯೂನಿಸ್ಟರು ಕಾರಾಗೃಹದ ಕದಗಳನ್ನು ಕಡಿದೊಗೆಯುವದಾಗಿ ಕಂಡಾಬಟ್ಟೆ ಘೋಷಣೆಗಳನ್ನು ಹಾಕುತ್ತಿದ್ದಾರೆ. ಅವರ ಮುಂದಾಳು ಕೇರಳದೆಲ್ಲೆಡೆ ಸಭೆ ಮೆರವಣಿಗೆ ಪತ್ರಿಕೆಗಳ ಪ್ರದರ್ಶನಗಳನ್ನು ನಡೆಸಿದರು; ರಾಜ್ಯಪಾಲರನ್ನು ಕಂಡರು. ದೆಹಲಿಗೆ ಧಾವಿಸಿ ಗೃಹಮಂತ್ರಿಯವರನ್ನೂ ಹಾಗೂ ಹಂಗಾಮಿ ರಾಷ್ಟ್ರಾಧ್ಯಕ್ಷರನ್ನು ಕಂಡರು. ಬೆದರಿಕೆಯ ಮಾತುಗಳನ್ನಾಡಿದರು, ಇಲ್ಲೊಂದು ಹಿಡಿ ಸ್ಥಾನ ಸಿಕ್ಕಿದಕ್ಕಾಗಿ ಚೈನಾದಲ್ಲಿ ಚೆನ್ನಾಗಿ ಉತ್ಸವವನ್ನಾಚರಿಸಲಾಯಿತು. ಅಷ್ಟೇ ಅಲ್ಲ ಚೈನಿ ಚೇಲಾಗಳ ನಾಲಗೆಯೂ ಈಗೀಗ ಉದ್ದವಾಗುತ್ತ ಬರುತ್ತಿದೆ. ಚೈನೀ ಕಮ್ಯೂನಿಸ್ಟರಿಗೂ ಇಲ್ಲಿರುವ ಚೈನೀ ಚೇಲಾ ಕಮ್ಯೂನಿಸ್ಟರಿಗೂ ಇರುವ ಸಂಬಂಧ ಕುರಿತು ಗೃಹಮಂತ್ರಿ ಶ್ರೀ ನಂದಾ ಅವರಾಗಲೇ ಬಹಳಷ್ಟು ಜನತೆಗೆ ತಿಳಿಯ ಪಡಿಸಿದ್ದಾರೆ. ಪರಿಸ್ಥಿತಿ ಹಾಗಿದೆಯಾದರೂ ಈ ಚೈನಿ ಚೇಲಾಗಳೀಗ ಹೊಸ ಆಟಕ್ಕಾರಂಭಿಸಿದ್ದಾರೆ.

ಕಮ್ಯೂನಿಸ್ಟರನ್ನು ಬಂಧಿಸಿಟ್ಟಿರುವ ಕಾರಾಗೃಹಗಳನ್ನು ಒಡೆದು ಹಾಕುವದಾಗಿ ಕಮ್ಯೂನಿಸ್ಟರು ಘೋಷಿಸಿದ್ದಾರೆ. ಅಲ್ಲದೆ ಚುನಾವಣೆಯ ಸಮಯ ಇನ್ನೊಂದು ಪತ್ರವನ್ನು ಪ್ರಕಟಿಸಿದ್ದರು ಅದರಲ್ಲಿ ಕಾಂಗ್ರೆಸ್ ಮುಖಂಡರಿಗೆ ಹಾಗೂ ಅಧಿಕಾರಿಗಳಿಗೆ ಮುಂದಕ್ಕೆ ಅದೇನು ಶಿಕ್ಷೆಕೊಡಲಾಗುವುದೆಂಬುದನ್ನು ಪ್ರಕಟಿಸಿದ್ದರು. ಅವರಿಗೆ ಅಷ್ಟು ಧೈರ್ಯ ಬರಲು ಕಾರಣವೇನು?

ಸ್ವಭಾವತಃ ಚೈನೀಯರು ಬಹಳ ಕ್ರೂರಿಗಳೆಂಬುದನ್ನು "ನವಯುಗ" ಆದಾಗಲೇ ತಿಳಿಸಿರುತ್ತದೆ. ಕಮ್ಯೂನಿಸ್ಟರಂತೂ ಹೇಳಿ ಕೇಳಿ ಕ್ರೂರಿಗಳಾಗಿದ್ದಾರೆ. ಅವರು ಯಾವ ಕ್ರೂರ ಕೃತ್ಯಕ್ಕೂ ಹೇಸುವವರಲ್ಲ, ತಮಗಿರುವದು ಉಕ್ಕಿನ ಹೃದಯವೆಂದು ಅವರೇ ಹೆಗ್ಗಳಿಕೆಯನ್ನಾಡಿಕೊಳ್ಳುತ್ತಿದ್ದಾರೆ. ಅವರಿಗಿರುವುದು ಉಕ್ಕಿನ ಹೃದಯವಲ್ಲದಿದ್ದರೂ ಪಾಷಾಣ ಹೃದಯವೆಂಬುದನ್ನಾದರೂ ಅಲ್ಲಗಳೆಯುವಂತಿಲ್ಲ. ಸ್ವಭಾವತಃ ಕ್ರೂರಿಗಳಾಗಿರುವವರಿಗೆ ಅಂತಹನ್ನೇ ಕಾರ್ಯ ಪ್ರಣಾಳಿಕೆಯುಳ್ಳ ಪಕ್ಷದ ಗಾಳಿ ಸೋಂಕಿದರೆ ಹೇಗಾದೀತು? ಮಂಗನಿಗೆ ಕಳ್ಳು ಕುಡಿಸಿ, ಮೈ ಮೇಲೆ ಒಂದಿಷ್ಟು ಬೆಲ್ಲನೀರು ಹಾಕಿ ಇರುವೆಗಳನ್ನು ಬಿಟ್ಟು ಕೈಯಲ್ಲಿ ಕೊಳ್ಳಿ ಕೊಟ್ಟರೆ ಹೇಗಾದೀತು? ಚೈನೀ ಕಮ್ಯೂನಿಸ್ಟರ ಪರಿಸ್ಥಿತಿಯೂ ಹಾಗೆಯೇ ಇದೆ. ಅದನ್ನು ಕಂಡು ಆನಂದ ತುಂದಿಲರಾಗಿ ವ್ಯವಹರಿಸುತ್ತಿರುವ ಇಲ್ಲಿಯ ಕಮ್ಯೂನಿಸ್ಟರು ಅವರ ಆಗಮನವನ್ನೇ ಎದುರು ನೋಡುತ್ತಿದ್ದಾರೆ. ಒಂದಿಷ್ಟೂ ಲಜ್ಜೆಪಡದೆ ಅದನ್ನು ಅಡಿ ತೋರಿಸುತ್ತಿದ್ದಾರೆ. ಡಾರ್ಜಿಲಿಂಗ್ ಹಾಗೂ ಇತರ ಗುಡ್ಡ ಪ್ರದೇಶಗಳಲ್ಲಿ ಅವರೆಂತು ಮುಗ್ಧ ಜನರನ್ನು ಮೋಸಗೊಳಿಸಿದ್ದರೆಂಬುದನ್ನು 'ನವಯುಗ' ಹಿಂದೆಯೇ ತಿಳಿಸಿರುತ್ತದೆ. ಅವರಲ್ಲಿ ಜನತೆಯನ್ನು ಬೆದರಿಸಿ ಹಣ ಶೇಖರಿಸಿರುವರು. ಚೈನೀ ಮುಕ್ತಿ ಸೇನೆ ಬರುತ್ತಾ ಇದೆಯೆಂದೂ, ಹಣದ ರಶೀದಿ ತೋರಿಸಿದಲ್ಲಿ ಅವರೇನೂ ಮಾಡುವದಿಲ್ಲವೆಂದೂ ಅದಿಲ್ಲದಿದ್ದಲ್ಲಿ ಶಿಕ್ಷಿಸುತ್ತಾರೆಂದು, ಹೇಳಿ ಧನ ಸಂಗ್ರಹ ಮಾಡಿರುವರು, ಜನತೆಗೆ ಮೋಸ ಮಾಡಿರುವರು, ದೇಶಕ್ಕೆ ದ್ರೋಹ ಮಾಡಿದ್ದಾರೆ. ಅನಂತರ ಭಾಷಾ ಬಡಿದಾಟದ ಸಮಯವೂ ಅಂತಹದ್ದೇ ಬಂಬಡವನ್ನು ಬಾರಿಸಿದ್ದಾರೆ. ಚೈನಾದಲ್ಲಿ ಹಿಂದೆ ಚೈನೀ ಭಾಷೆಯಲ್ಲೇ ಎಲ್ಲಾ ನಡೆಯುತ್ತಿತ್ತು. ಅವರೆ ಕಮ್ಯೂನಿಸ್ಟರು ಅಧಿಕಾರ ಲಗಾಮನ್ನು ಕೈಯಲ್ಲಿ ತೆಗೆದುಕೊಂಡೊಡನೆ ತಮಗೆ ಸಹಾಯ ಮಾಡಿದ್ದ ರಷ್ಯನ ಭಾಷೆಗಳಲ್ಲಿ ಎಡೆಮಾಡಿಕೊಟ್ಟರು. ಆದರೆ ಇತ್ತೀಚೆಗೆ ಇಂಗ್ಲೀಷಿಗೆ ಆ ಸ್ಥಾನವನ್ನು ಕೊಟ್ಟು, ರಷ್ಯನ್ ಭಾಷೆಗೆ ಸ್ಥಾನ ಕೊಟ್ಟಿರುವದಿಲ್ಲ. ಆದುದರಿಂದ ಇಲ್ಲೂ ಚೈನೀ ಕಮ್ಯೂನಿಸ್ಟರ ಆಳ್ವಿಕೆ ಬಂತೆಂದರೆ ಆಂಗ್ಲ ಭಾಷೆ ಅನವರತ ಇರುತ್ತದೆಂದೂ ಅವರು ಆಂಗ್ಲ ಭಾಷಾವ್ಯಾಮೋಹಿಗಳಿಗೆ ಹೇಳುತ್ತ ಬಂದಿದ್ದರು. ಅನಂತರ ಅವರಿಗೆ ಸಂಧರ್ಭ ಸಿಕ್ಕಿದುದು ಕೇರಳ ಚುನಾವಣೆ. ಇಲ್ಲಂತೂ ಅವರು ಬಹಳುದ್ದಕ್ಕೆ ತಮ್ಮ ನಾಲಗೆಯನ್ನು ಬಿಟ್ಟಿದ್ದಾರೆ. ಭಾರತ ಸರಕಾರ ಅದೇಕೆ ಸುಮ್ಮಗಿದೆಯೋ, ಗೊತ್ತಾಗುವದಿಲ್ಲ. ಬಹುಶಃ ಇನ್ನೊಂದು ಚುನಾವಣೆಯ ಸಮಯವನ್ನು ಎದುರು ನೋಡುತ್ತಿರಬಹುದು.

ಹಿಂದಿನಿಂದಲೂ ಕಮ್ಯೂನಿಸ್ಟರಿಗೆ ಆ ಸ್ವಾಜ್ಯೋತಿ ಜವಾಹರಲಾಲಜೀಯವರ ಹೆಸರನ್ನು ದುರುಪಯೋಗಪಡಿಸುದರಿಂದರೆ ಎಲ್ಲಿಲ್ಲದ ಆಸೆ. ತಾವೇ ಜವಾಹರಲಾಲಜೀಯವರ ಪರಂಪರೆಯವರೆಂದು, ಅವರು ಹೇಳಿಕೊಳ್ಳಲಿಕ್ಕೂ ಹೇಸಲಿಕ್ಕಿಲ್ಲ. ಜವಾಹರಲಾಲಜೀಯವರು ಭಾರತ ಹಾಗೂ ಚೈನಾದ ಜನ ಸಂಖ್ಯೆಯ ಕುರಿತು ಆಗಾಗ ಹೇಳುತ್ತಿದ್ದದುಂಟು. ಆದರೆ ಕೆಲವು ವಾರ್ತೆಗಳ ಬಾಯಿ ಮುಚ್ಚಿಸಲಿಕ್ಕಾಗಿ ಅಷ್ಟೇ. ಚೈನೀಯರ ಬಲವನ್ನು ಕ್ಷಣಿಕವೂನವೆಂದು ಬಗೆಯುತ್ತಿದ್ದವರಿಗಾಗಿ ಅವರು ಹಾಗೆ ಹೇಳುತ್ತಿದ್ದರು. ಭಾರತದಲ್ಲಿರುವದು ನಲ್ವತ್ತು ಕೋಟಿ ಜನಸಂಖ್ಯೆ, ಆದರೆ ಚೈನಾದಲ್ಲಿ ಅರುವತ್ತು ಕೋಟಿ ಜನ ಸಂಖ್ಯೆ ಇದೆ. ಆದುದರಿಂದ ಅವರ ಮಾನವ ಬಲವನ್ನು ನಿರ್ಲಕ್ಷಿಸವಂತಿಲ್ಲವೆಂದು ನೆಹ್ರೂಜೀ ನುಡಿಯುತ್ತಿದ್ದರು. ಕಮ್ಯೂನಿಸ್ಟರೂ ಅದೇ ಧೈರ್ಯದಿಂದಿದ್ದಾರೆ. ಚೈನಾದ ಆಕ್ರಮಣವನ್ನೆದುರಿಸಲು ಭಾರತೀಯರಿಗೆ ಸಾಧ್ಯವೇ ಇಲ್ಲವೆಂದು ಅಪಪ್ರಚಾರ ನಡೆಸುತ್ತಿದ್ದಾರೆ. ಭಾರತದ ಬಲ ಅದೇನಿದೆ? ತಾತನ ಕಾಲದ ಗುಂಡು ತಾನೇ, ಚೈನಾದ ಬಳಿ ಅಣುಗುಂಡೇ ಇದೆ ಚೈನಾದ ಎದುರಿಗೆ ಭಾರತ ಯಾವ ಮೂಲೆಗೆ? ಈ ರೀತಿ ಮುಗ್ಧ ಜನತೆಯನ್ನು ಮೋಸಗೊಳಿಸಬಹುದು, ಅಷ್ಟೆ. ಭಾರತದ ಉಜ್ವಲ ಪರಂಪರೆಯ ಮೇಲೆ ಅಭಿಮಾನ ಹಾಗೂ ನಂಬಿಕೆ ಇಲ್ಲದಿರುವವರು, ಮಾತ್ರ ಅದಕ್ಕೆ ತಲೆದೂಗಬಹುದು, ಅಷ್ಟೆ. ನೆಹರೂಜೀಯವರು ಹೇಳಿದ್ದಕ್ಕೆ 'ನವಯುಗ' ಅದಾಗಲೇ ಉತ್ತರವಿತ್ತಿರುತ್ತದೆ. ಈಗ ಕಮ್ಯೂನಿಸ್ಟರು ಮಾಡುತ್ತಿರುವ ಈ ಕಲ್ಲಿವಿಷ್ಯು ಕೇಳಿದಾಗಲೆಲ್ಲ ಕಳೆದ ಸಲ ಚೈನೀಯರನ್ನೆದುರಿಸಿದಾಗ ನಡೆದ ಘಟನೆಯೊಂದರ ಜ್ಞಾಪಕ ಬರುತ್ತದೆ. ಅದನ್ನು 'ಸಲೀರಾ'ರು ಕಥೆಯ ರೂಪದಲ್ಲಿ ಬರೆದಿರುವರು. ಆಂಗ್ಲೇಯ ಭಾಷೆಯಲ್ಲಿದ್ದ ಆ ಕಥೆಯ ಸಾರವನ್ನು ಇಲ್ಲಿ ಕೊಡಲಾಗಿರುತ್ತದೆ.

ಆ ಘಟನೆ ನಡೆದದ್ದು ಗಡಿನಾಡಿನಲ್ಲಿ ಆಗ ಭಾರತೀಯ ಸೈನಿಕರು ಅಧಿಕಾರಿಗಳ ಅಪ್ಪಣೆ ಮೇರೆಗೆ ಹಲವಾರೆಡೆಗಳಲ್ಲಿ ಹಿಂದಕ್ಕೆ ಬಂದಿದ್ದರು. ಅಂತಹ ಸಮಯದಲ್ಲಿ ಒಂದು ಸೈನಿಕ ಕಂದಕದಲ್ಲಿ ಶಾರ್ದೂಲ ಸಿಂಘ, ಮಣೀರಾಮ ಮುಂತಾದವರಿದ್ದರು. ಅವರು ದೂರದೃಷ್ಟಿ ಕೊಳವೆಯ ಮೂಲಕ ಚೈನೀ ಸೈನಿಕರ ಚಲನವಲನಗಳ ಮೇಲೆ ದೃಷ್ಟಿ ಇಟ್ಟುಕೊಂಡಿದ್ದರು. ಶಾರ್ದೂಲ ಸಿಂಘರಿಗೆ ಎಲ್ಲಿಲ್ಲದ ಉತ್ಸಾಹ. ಚೈನೀಯರನ್ನು ಮುಖತಃ ಕಾಣಬೇಕು. ಅವರೊಡನೆ ಹೋರಾಡಬೇಕು. ಅದಕ್ಕಾಗಿ ತಕ್ಕ ಸಿದ್ಧತೆಯಲ್ಲಿ ಅವರಿದ್ದರು.

ಒಂದು ದಿನ ಚೈನಿ ಕಮ್ಯೂನಿಸ್ಟರು ಆ ಕಂದಕದ ಸಮೀಪಕ್ಕೇನೇ ಬಂದರು. ಭಾರತೀಯ ಸೈನ್ಯದ ಆ ವಿಭಾಗದ ಅಧಿಕಾರಿಯು ತಮ್ಮ ಬಳಿ ಇರುವ ಶಸ್ತ್ರದ ಪರಿಚಯ ಮಾಡಿಕೊಂಡರು. ಅವರ ಬಳಿ ಸ್ವಲ್ಪವೇ ಮದ್ದುಗುಂಡಿತ್ತು. ಅದು ಮುಗಿದಲ್ಲಿ ನಂತರ-? ಬಂದೂಕಿನ ಹಿಡಿಯಿಂದಲೇ ಚೈನೀಯರನ್ನು ಹೊಡೆದಟ್ಟುವದಾಗಿ ಶಾರ್ದೂಲ ಸಿಂಘರು ಅಧಿಕಾರಿಗೆ ತಿಳಿಸಿದರು. ಅಧಿಕಾರಿ ನಗುತ್ತ "ನೀವು ಹಾಗೆ ಮಾಡಬಹುದು, ನಿಮ್ಮ ಹೆಸರಿಗೆ ತಕ್ಕಂತೆ"ಂದರು.

(ಹತ್ತನೇ ಪುಟ ನೋಡಿರಿ)

ಸಿಂಡಿಕೇಟ್ ಬ್ಯಾಂಕು

ನಿಮ್ಮ ಠೇವಣಾತಿಗಳ ಮೇಲೆ ಇನ್ನೂ ಹೆಚ್ಚಿನ ಬಡ್ಡಿ ಈಯುವುದು.

ನಿಮ್ಮ ಹಿತಾಸಕ್ತಿಗಳನ್ನು ದಕ್ಷತೆಯಿಂದ ಕಾಯುವುದು.

ಚಾಲ್ತಿಯಲ್ಲಿರುವ ಬಡ್ಡಿ ದರಗಳು

ಕೆಳಗೆ ಕಾಣಿಸಿದ ಅವಧಿಗೆ ಅಥವಾ ಹೆಚ್ಚಿಗೆ	ಕೆಳಗೆ ಕಾಣಿಸಿದ ಅವಧಿಗಿಂತ ಕಡಿಮೆ	ಬಡ್ಡಿ ದರ
91 ದಿವಸಗಳು	6 ತಿಂಗಳು	$5\frac{1}{8}$ %
6 ತಿಂಗಳು	1 ವರ್ಷ	$5\frac{3}{8}$ %
1 ವರ್ಷ	2 ವರ್ಷ	$6\frac{1}{8}$ %
2 ವರ್ಷ	3 ವರ್ಷ	$6\frac{3}{8}$ %
3 ವರ್ಷ	5 ವರ್ಷ	$6\frac{5}{8}$ %
5 ವರ್ಷ	7 ವರ್ಷ	$7\frac{1}{8}$ %
7 ವರ್ಷ	9 ವರ್ಷ	$7\frac{3}{8}$ %
9 ವರ್ಷ	ಮತ್ತು ಹೆಚ್ಚಿಗೆ	$7\frac{5}{8}$ %

ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟಿನ ಮೇಲೆ ಸೇಕಡಾ 4 ಬಡ್ಡಿ ಕೊಡಲಾಗುವುದು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು : ಮಣಿಪಾಲ

ಶಾಖೆಗಳು: 200ಕ್ಕೂ ಮಿಕ್ಕಿ.

ಚಲಾವಣಾ ನಿಧಿ: ರೂ. 70 ಕೋಟಿಗೂ ಮಿಕ್ಕಿದೆ.

ವಿಶ್ವವ್ಯಾಪೀ ಬ್ಯಾಂಕಿಂಗ್ ಬಗ್ಗೆ....... ....

ಇದೊಂದ

ಇಲ್ಲಿ ಅಂಗವಿಕಲ



೧

೨

೩

ಶಾರೀರಿಕವಾಗಿ ದುರ್ಬಲರಿರುವವರಿಗಿಂತಲೂ ಅಂಗವಿಕಲರ ಪ್ರಶ್ನೆ ದೊಡ್ಡದು. ಶರೀರದ ಹಲವಾರು ಅಂಗಾಂಗಗಳಲ್ಲಿ ಎಲ್ಲವೂ ಸರಿಯಾಗಿದ್ದರೇನೇ ಅವನು ಮಾನವನೆನ್ನಲು ಅರ್ಹ; ಯಾವುದೇ ಒಂದಂಗವು ಅಸಮರ್ಪಕವಾಗಿದ್ದರೆ, ಅಂತಹನ ಪಾಡು ನಾಯಿ ಪಾಡನ್ನೂ ಮೀರಿಸುತ್ತದೆ. ಆದರೆ, ಇಂದು ಅಂಗವಿಕಲರ ಯೋಗಕ್ಷೇಮದ ಬಗ್ಗೆ ಹಲವಾರು ಪ್ರಯೋಗಗಳಾಗಿವೆ. ಓರ್ವ ಸಾಮಾನ್ಯ ನಾಗರಿಕನಂತೆಯೇ ಒಬ್ಬ ಅಂಗವಿಕಲನೂ ಸಕಲ ಸೌಲಭ್ಯಗಳನ್ನೂ ಪಡೆಯಬಲ್ಲನು. ಭೌತಿಕಾಂಗ ವಂಚಿತನಾದರೂ ಯಾವ ದೃಷ್ಟಿಯಲ್ಲೂ ಹೀನನಲ್ಲ; ಸಾಧಿಸಿದರೆ, ಆತನೂ ಎಲ್ಲ ಕಾರ್ಯಗಳನ್ನೂ ಮಾಡಬಲ್ಲನು ಎಂಬುದು ಇಂದು ಪ್ರಯೋಗ ಮತ್ತು ಪ್ರಯತ್ನಗಳಿಂದ ಸಿದ್ಧವಾಗಿದೆ. ಅಮೆರಿಕೆಯು ಇತರ ವಿಚಾರಗಳಲ್ಲಿ ಪ್ರಪಂಚದಲ್ಲಿ ಉಳಿದ ದೇಶಗಳಿಗಿಂತ ಮುಂದಿರುವಂತೆಯೇ ಈ ದಿಸೆಯಲ್ಲೂ ಬಹಳಷ್ಟು ಅಗ್ರಗಾಮಿಯಾಗಿದೆ. ಅಂಗವಿಕಲರನ್ನೇ ಕೆಲಸಕ್ಕೆ ಸೇರಿಸಿಕೊಳ್ಳುವ ಒಂದು ಕಂಪೆನಿ ಇದೆ. ಇದರ ಸಂಪೂರ್ಣ ಲಾಭಾಂಶವೂ ಅದರ ನೌಕರರಿಗೇನೇ ಸೇರುತ್ತದೆ. ಇಂತಹ ಒಂದು ಆದರ್ಶ ಕಂಪೆನಿಯ ಸಂಸ್ಥಾಪಕ ಹೆನ್ರಿ ವಿಸ್ಕಾರ್ಡಿ ಜೆ ಆರ್.

ಚಿತ್ರ ೧: ಹೆನ್ರಿ ವಿಸ್ಕಾರ್ಡಿ, ಜೆ ಆರ್

ಹುಟ್ಟಿನಿಂದ ಅಶಕ್ತನಾಗಿ ನಿರಾಶನಾಗಿ ಅವತರಿಸಿದ ಹೆನ್ರಿ ವಿಸ್ಕಾರ್ಡಿ, ಜೆ ಆರ್. ನು ತನ್ನ ದುರ್ಬಲತೆಗಳನ್ನು ನೀಗಿಸಿದುದು ಮಾತ್ರವಲ್ಲ, ಸಾಮಾನ್ಯ ಮಾನವರಂತೆ ಶಾರೀರಿಕ ಸಂಪತ್ತನ್ನೂ ಗಳಿಸಿಕೊಂಡನು. ನೂರಾರು ಅಂಗವಿಕಲರಿಗೆ ಹೊಸ ಆಶೆ ಹುಟ್ಟಿಸಿ, ನವ ಜೀವನದ ಪಥವನ್ನು ತೋರಿಸಿದ. ಆತನ ಸ್ಫೂರ್ತಿಯುಕ್ತ ಜೀವನದ ಕತೆ ಹೀಗಿದೆ.

ಚಿತ್ರ ೨: ಜನನ

೧೯೧೨ನೆ ಮೇ ೧೦ರಂದು ಹೆನ್ರಿ ವಿಸ್ಕಾರ್ಡಿ, ಜೆ. ಆರ್. ಜನಿಸಿದನು. ಮಗುವನ್ನು ಹೊತ್ತು ತಂದ ದಾದಿ ನ್ಯೂಯಾರ್ಕ್ ನಗರದ ಆಸ್ಪತ್ರೆಯ ವರಾಂಡಕ್ಕೆ ಪಾದಾರ್ಪಣ ಮಾಡಿದ ಗಳಿಗೆಯು ಮಗುವಿನ ಹೆತ್ತವರಿಗೆ ಉಲ್ಲಾಸ ಸಂತೋಷಗಳನ್ನು ತಂದುಕೊಟ್ಟಿತು. ಏಕೆಂದರೆ, ಕುಟುಂಬವನ್ನು ಉದ್ಧರಿಸಬಲ್ಲ ಈ ಮಗು ಅವರಿಗೆ ಚೊಚ್ಚಲ ಕೂಸಾಗಿತ್ತು.

ಚಿತ್ರ ೩. ಭಯಾವೇಶ

ದಾದಿಯು ತನ್ನ ಮೆತ್ತಗಿನ ಸ್ವರದಲ್ಲಿ ಹುಟ್ಟಿದ ಗಂಡು ಕೂಸಿನ ಕಾಲುಗಳು ಸಾಕಷ್ಟು ಬೆಳೆದು ಬಂದಿಲ್ಲ. ಹುಟ್ಟುವ ಮಕ್ಕಳು ಹೀಗಿರುವುದು ಅತ್ತಿಯ ಹೂವಿನಂತೆ ಬಹಳ ಅಪರೂಪವೆಂದು ವಿವರಿಸಿದಾಗ ಆ ದಂಪತಿಗಳ ಹರ್ಷವು ಭಯಾವೇಶದಲ್ಲಿ ಪರಿವರ್ತನೆಗೊಂಡಿತು; ಅವರು ಬೆಚ್ಚಿಬಿದ್ದರು.

ಚಿತ್ರ ೪: ಬಾಲ್ಯ

ಹೆನ್ರಿಯ ಬಾಲ್ಯವು ಅಪರೇಶನ್‌ಗಳಲ್ಲಿಯೇ ಕಳೆಯಿತು. ಒಂದರ ಮೇಲೊಂದೆಂಬಂತೆ ಡಾಕ್ಟರರು ಹಲವು ಅಪರೇಶನ್ ಮಾಡಿದರು. ಕೊನೆಗೂ ಅವರ ಸಾಹಸ ವ್ಯರ್ಥವಾಗಲಿಲ್ಲ. ಅವನು ಮೆಲ್ಲ ಮೆಲ್ಲನೆ ನಡೆಯಲು ಸಮರ್ಥನಾದ. ಇದಕ್ಕೆ ಮೊದಲಾದರೂ ಹೆನ್ರಿ ತಾನು ಅಂಗವಿಕಲನೆಂದು ವ್ಯಸನ ಪಡುತ್ತಿರಲಿಲ್ಲ.

ಚಿತ್ರ ೫: ಉತ್ಸಾಹ

ಹನ್ನೆರಡು ವರ್ಷಗಳ ಶಾಲಾ ಶಿಕ್ಷಣವನ್ನು ಹೆನ್ರಿಯು ೮ ವರ್ಷಗಳಲ್ಲೇ ಮುಗಿಸಿದ. ತನ್ನ ತಂದೆಯು ಸತ್ತುಹೋದ ಬಳಿಕ ಉದರಪೋಷಣೆಯ ಕಾರ್ಯದಲ್ಲಿ ತಾಯಿಗೆ ಸಹಾಯ ಮಾಡಲು ಆತ ಬಾಸ್ಕೆಟ್ ಬಾಲ್ ಆಟಗಳಲ್ಲಿ ರೆಫರಿಯಾಗಿ ನಿಲ್ಲತೊಡಗಿದ. ಬಿಡುವಿನ ಸಮಯದಲ್ಲಿ ದುಡಿಯುತ್ತಿದ್ದ ಹೆನ್ರಿ ಪದವೀಧರನಾದ ಮೇಲೂ ಪೂರ್ಣಾವಧಿಯ ಉದ್ಯೋಗಕ್ಕೆ ಸೇರಿದ; ರಾತ್ರಿ ಹೊತ್ತು "ಲಾ" ಕಲಿಯ ತೊಡಗಿದ.

ಚಿತ್ರ ೬: ವಿಜಯೋತ್ಸವ

೨೭ನೆಯ ವಯಸ್ಸಿನಲ್ಲಿ ಇನ್ನೂ ಹಲವು ಅಪರೇಶನ್‌ಗಳು ನಡೆದುವು. ಕಾಲುಗಳಿಗೆ ಕೃತಕಾಂಗಗಳನ್ನು ಜೋಡಿಸುವುದು ಸಾಧ್ಯವಾಯಿತು. ಆಗ ಆತ ಇತರ ಮನುಷ್ಯರಂತೆಯೇ ಕಾಣತೊಡಗಿದ. ತನ್ನ ಕಾಲುಗಳನ್ನು ಸರಿಯಾಗಿಯೇ ಬಳಸಿಕೊಳ್ಳಲು ಆತ ಕಲಿತುಕೊಂಡ. ಮೋಟಾರು ಕಾರುಗಳನ್ನು ಬಿಡಲು, ನಾವೆ ನಡೆಸಲು, ಕಲಿತುಕೊಂಡ. ಮಾತ್ರವಲ್ಲ, ನೃತ್ಯವನ್ನೂ ಅಭ್ಯಾಸ ಮಾಡಿದ.

ಚಿತ್ರ ೭: ಕೆಲಸ

ಈಗ ಹೆನ್ರಿ ಬಹಳಷ್ಟು ತೃಪ್ತನಾಗಿದ್ದುದರಿಂದ, ತನ್ನ ಕಾರ್ಯಗಳಲ್ಲಿ ಹೆಚ್ಚಿನ ಉತ್ಸಾಹವನ್ನು ತೋರಿಸತೊಡಗಿದ. ತಾನು ದುಡಿಯುತ್ತಿದ್ದ ಗವರ್ನ್‌ಮೆಂಟ್ ಏಜನ್ಸಿಯ ನ್ಯೂಯಾರ್ಕ್ ಕಾರ್ಯಾಲಯದಲ್ಲಿ ಆತ ಮುಖ್ಯಸ್ಥನಾದ. ತನ್ನಂತೆಯೇ ಅಂಗವಿಕಲರೂ ಅಸಮರ್ಥರೂ ಆಗಿರುವ ಇತರರಿಗೂ ಸದವಕಾಶಗಳನ್ನು ಕಲ್ಪಿಸಿಕೊಡಬೇಕು—ಎಂಬ ವಿಚಾರವೇ ಹೆನ್ರಿಯ ಮನಸ್ಸಿನಲ್ಲಿ ಹಗಲಿರುಳು ಪಡಿದನಿಗುಡುತ್ತಿತ್ತು.

ಚಿತ್ರ ೮: ಸಮರಾಂಗಣ

ದ್ವಿತೀಯ ಜಾಗತಿಕ ಸಂಗ್ರಾಮದಲ್ಲಿ ನಾನಾ ಕಾರಣಗಳಿಂದ ಅಂಗವಿಕಲರಾದ ಹಲವರಲ್ಲಿ ಆಶೆಯನ್ನು ಚಿಗುರಿಸಲು ಹೆನ್ರಿ ಸಹಾಯಕನಾದ. ಯುದ್ಧವು ಸ್ಫೋಟವಾದುದೇ ತಡ, ಹೆನ್ರಿಯು ಸಶಸ್ತ್ರ ಸೇನಾ ಪಡೆಯನ್ನು ಸೇರಿಕೊಳ್ಳಲು ಭಗೀರಥ ಪ್ರಯತ್ನ ಮಾಡಿದ. ಆದರೆ, ಆತನದರಲ್ಲಿ ಸೋತು ಹೋದ. ಹಾಗಿದ್ದರೂ ರೆಡ್‌ಕ್ರಾಸ್ ಸಂಸ್ಥೆಯು ಆತನಿಗೆ ಪ್ರವೇಶವಿತ್ತಿತು. ಅವನನ್ನು ವಾಲ್ಟರ್ ರೀಡ್ ಆಸ್ಪತ್ರೆಗೆ ಕಳಿಸಿಕೊಟ್ಟಿತು.

ಚಿತ್ರ ೯: ಸಂಸಾರಿ

ಯುದ್ಧವು ಕೊನೆಗೊಂಡಿತು. ಹೆನ್ರಿಯು ದೊಡ್ಡ ಕಂಪೆನಿಯೊಂದರ ಅಧಿಕಾರಿಯಾದ; ವಿವಾಹವನ್ನೂ ಮಾಡಿಕೊಂಡ. ೧೯೪೯ರಲ್ಲಿ ಅಶಕ್ತರಿಗೆ ಉದ್ಯೋಗ ದೊರಕಿಸಿ ಕೊಡಲು ನೆರವು ನೀಡುವ ಉದ್ದೇಶದಿಂದ 'ಜಸ್ಟ್ ವನ್ ಬ್ರೇಕ್' ಎಂಬ ಸಂಸ್ಥೆಯು ಅಸ್ತಿತ್ವಕ್ಕೆ ಬಂದಿತು. ಇದಕ್ಕೆ ಮಾರ್ಗದರ್ಶನ ನೀಡುವ ಅವಕಾಶವು ಆತನ ಪಾಲಿಗೆ ಬಂತು. ಇದನ್ನು ಸ್ವೀಕರಿಸುವುದರಿಂದ ಆತನ ಆದಾಯಕ್ಕೆ ಬಲವಾದ ಏಟು ಬೀಳುತ್ತಿತ್ತು. ಆದರೂ ಸಹಾಯ ಮಾಡಬೇಕೆಂಬ ತೀವ್ರಾಸೆಯ ಒತ್ತಡದಿಂದ ಆತನು ಈ ಹೊಸ ಪದವನ್ನು ಒಪ್ಪಿಕೊಂಡ.

ಚಿತ್ರ ೧೦: ಪರಿಣಾಮಗಳು

ಹೆನ್ರಿಯ ಸಂಸ್ಥೆಯು ಅಸಾಧಾರಣ ಪ

೪

೫

೬

೭

ಕಥೆ

...ಷ್ಟೇ ಉದ್ಯೋಗ

೧೦ ೧೧ ೧೨

...ರಿಣಾಮ ಮಾಡಿತು. ವ್ಯಕ್ತಿಯ ಅಶಕ್ತತೆಗೆ ಹೊಂದಿಕೊಂಡು ಸಾಧ್ಯವಾದ ಉದ್ಯೋಗಗಳನ್ನೇ ದೊರಕಿಸಿಕೊಟ್ಟ ಉದಾಹರಣೆಗಾಗಿ, ಹೋಟೇಲುಗಳಲ್ಲಿ ಬಿಸಿಯಾದ ತಟ್ಟೆಗಳನ್ನು ಕೈಯಲ್ಲಿ ಮುಟ್ಟುವುದು ಸಾಧ್ಯವಿಲ್ಲ. ಹಾಗಾಗಿ ಅವುಗಳು ಒಡೆದು ಹೋಗುವ, ಕೆಳಗೆ ಬೀಳುವ ಸಂದರ್ಭಗಳು ಅಧಿಕ. ಉಕ್ಕಿನ ಕೃತಕ ಕೈಯಿರುವ ಮನುಷ್ಯನು ಈ ಕೆಲಸಕ್ಕೆ ತಕ್ಕವನೆಂದು ಸಿದ್ಧನಾದ.

ಚಿತ್ರ ೧೧. ಸಾಮರ್ಥ್ಯ

೧೯೫೨ರ ಆಗಸ್ಟದಲ್ಲಿ ಹೆನ್ರಿಯು ಒಬ್ಬ ನೌಕರನ ಸಹಾಯದಿಂದ ಒಂದು ಕಾರಖಾನೆಯನ್ನು ಸ್ಥಾಪಿಸಿದ. ಇದು ಆತನ ಹಲವು ವರ್ಷಗಳ ಕನಸನ್ನು ನನಸು ಮಾಡಿತು. ಇದರ ಹೆಸರು ಎಬಲಿಟೀಸ್ ಐಎನ್‌ಸಿ. ಅಂಗವಿಕಲರನ್ನಷ್ಟೇ ಈ ಸಂಸ್ಥೆ ತನ್ನಲ್ಲಿ ಉದ್ಯೋಗಕ್ಕೆ ಸೇರಿಸಿಕೊಳ್ಳುತ್ತದೆ. ಇದರ ಲಾಭಾಂಶವೆಲ್ಲವೂ ನೌಕರರ ಹಿತಗಳಿಗೆ, ಸಂಶೋಧನೆಗಳಿಗೆ ಮತ್ತು ಸಂಸ್ಥೆಯ ಒಡಾವಣೆಗೆ ಬಳಸಲ್ಪಡುತ್ತದೆ.

ಚಿತ್ರ ೧೨: ಬೆಳವಣಿಗೆ

೧೯೫೭ರಲ್ಲಿ ಈ ಸಂಸ್ಥೆಯಲ್ಲಿ ೩೧೮ ಅಂಗವಿಕಲರು ಕೆಲಸ ಮಾಡುತ್ತಿದ್ದರು. ಬೆಲೆ ಮತ್ತು ಅರ್ಹತೆಯ ತಳಹದಿಯಲ್ಲಿ ಈ ಸಂಸ್ಥೆ ಸ್ಪರ್ಧಿಸುತ್ತಿತ್ತು. ಕೆಲಸದ ಸಮರ್ಪಕತೆಯು ಎಲ್ಲರನ್ನೂ ದಂಗು ಬಡಿಸುತ್ತಿತ್ತು. ತನ್ನ ಉಗ್ರ ಸ್ವಪ್ನವನ್ನು ಸತ್ಯವಾಗಿಸುವಲ್ಲಿ ಹೆನ್ರಿಯು ಸಂಪೂರ್ಣ ಯಶಸ್ವಿಯಾಗಿದ್ದನು.

ಚಿತ್ರ ೧೩: ಬಿಡುಗಡೆ

ಎಬಿಲಿಟೀಸ್, ಐ ಎನ್ ಸಿ ಯಲ್ಲಿ ಒಂದೇ ಉದ್ಯೋಗ ಬಲ್ಲವರಿಗೆ ಸ್ಥಾನವಿಲ್ಲ. ಕನಿಷ್ಠ ಮೂರರಲ್ಲಾದರೂ ಪ್ರತಿ ನೌಕರನೂ ಪೂರ್ಣ ಜ್ಞಾನ ಪಡೆದಿರಬೇಕು. ಇಲ್ಲಿನ ಕುಶಲ ನೌಕರರು ಬೇರೆಡೆಯಲ್ಲಿ ಉದ್ಯೋಗಾವಕಾಶವನ್ನು ಪಡೆಯುತ್ತಲೂ ಇದ್ದಾರೆ. ಇಂತಹ ಸಂದರ್ಭದಲ್ಲಿ ಹೆನ್ರಿಯು ಸಂತೋಷದಿಂದ ಅವರನ್ನು ಬೀಳ್ಕೊಡುತ್ತಾನೆ. ತೆರವಾದ ಸ್ಥಾನಕ್ಕೆ ಮತ್ತೊಬ್ಬ ಅಂಗವಿಕಲನನ್ನು ನೇಮಿಸುವ ಅವಕಾಶ ದೊರೆಯುತ್ತದೆ.

ಚಿತ್ರ ೧೪: ಸಾಧನೆ

ಕೆಲವೇ ವರ್ಷಗಳಲ್ಲಿ ಎಬಿಲಿಟೀಸ್ ಐ ಎನ್ ಸಿ. ಯು ಭೀಮಾಕಾರವನ್ನು ತಾಳಿದೆ. ಆದರ ವ್ಯಾಪಾರವು ೩-೪ ಮಿಲಿಯ ಡಾಲರ್‌ಗಳನ್ನೂ ಮೀರಿ ನಿಂತಿದೆ. ಉದ್ದಿಮೆಯ ಪ್ರದೇಶವಾದರೂ ಮಳೆಗಾಲದ ಹುಲ್ಲಿನಂತೆ ಬೆಳೆದಿದೆ. ಮೂವತ್ತಕ್ಕೂ ಹೆಚ್ಚಿನ ಸಂಸ್ಥೆಗಳೊಡನೆ ಅದೀಗ ಸಂಬಂಧವಿರಿಸಿದೆ.

ಚಿತ್ರ ೧೫: ಭವಿಷ್ಯ

ಹೆನ್ರಿಯ ಸಂಸ್ಥೆಗೆ ಉಜ್ವಲ ಭವಿಷ್ಯವಿದೆ. ಇದರ ನೌಕರರಲ್ಲಿ ಹೆಚ್ಚಿನವರು ಇತರ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಪಡೆಯುತ್ತಿದ್ದಾರೆ. ಇದರಿಂದಾಗಿಯೇ ಎಬಿಲಿಟೀಸ್ ಬೇರೆ ಅಂಗವಿಕಲರನ್ನು ತನ್ನಲ್ಲಿ ಸೇರಿಸಿಕೊಳ್ಳುವುದು ಸಾಧ್ಯವಾಗಿದೆ. ಹೆನ್ರಿ ವಿಸ್ಕಾರ್ಡಿ, ಜೆ ಆರ್ ಇಂದು ಎಲ್ಲೆಲ್ಲಿಯೂ ಸನ್ಮಾನಿತನಾಗಿದ್ದಾನೆ. ಆತನ ಸಾಹಸದ ಕತೆ ಉಳಿದವರಿಗೊಂದು ಮಾದರಿಯೆನಿಸಿದೆ.

ಕಂದನ ಬಯಕೆ...

ಅಮ್ಮನೀ ಗುಮ್ಮನ ಕರೆಯದಿರು ನಾನು ||
ಸುಮ್ಮನೆ ಆಡುವೆ ದಮ್ಮಯ್ಯಾ || ಪ ||

ಚಂದ್ರನ ಕೊಡಿಸು ಚಂದದಿ ನೋಡುವೆ|
ಆಂದದೊಳವನೊಳಾಡುವೆನು ||
ಅಂಬರದಾರವ ಚಂದದಿ ತೊಲಗಿಸ ।
ಚಂದ ಮಾಮನ ತಂಸಿಕೊಡು || ೧ ||

ಹಣ್ಣು ಬೇಡ ಚಿನ್ನವು ಬೇಡ|
ಬಣ್ಣ ಬಣ್ಣದ ಗಿಣಿಯೂ ಬೇಡ||
ಮಣ್ಣಿನ ಈ ಸಣ್ಣ ಆಟಿಕೆ ಯಾಕೆ|
ಹುಣ್ಣಿಮೆ ಚಂದ್ರನು ಒಂದೇ ಸಾಕು || ೨ ||

ಜೋಗುಳ ಹಾಡಿ ತೂಗಲು ಬೇಡ|
ರಾಗದ ಸಿನ್ನೆಯ ಹಾಡೂ ಬೇಡ
ನಗುಮುಖದಿಂದಲಿ ಗಗನದೊಳೋಡುವ |
ಗಗನ ಗಾಮಿಯ ತರಿಸಿಕೊಡು || ೩ ||

ಇಂದು ನೀ ಚಂದ್ರನ ತಂದು ಕೊಡದಿರೆ|
ಮುಂದಕೆ ಎಂದು ಬೆಳೆಯುವೆನು ||
ಅಂದು ನಾ ಮುಂದಕೆ ಸಾಗುತಲೊಂದಿನ |
ಚಂದ್ರಲೋಕವ ಸೇರುವೆನು || ೪ ||

ಅವನೊಳು ಕೂಡಿ ಅವನೊಳು ಆಡಿ |
ಅವನಾ ನೀತಿಯ ಕಲಿಯುವೆನು ।
ಅವನಾ ಗುಣವನು ಕಲಿಯುತಲೊಂದಿನ
"ಅವನಿ"ಗೆ ಬೆಳಕನು ತರುವೆನು || ೫ ||

—ಕೆ. ಚಂದ್ರಶೇಖರ, ಪುತ್ತೂರು.



೯ ೧೩ ೧೪ ೧೫

ಚೈನೀಯರಿಗೆ ಭಾರತೀಯರೇತಕ್ಕೆ ಬೆದರಬೇಕು?

(ಏಳನೇ ಪುಟದಿಂದ)

ಚೈನೀಯರಂತೂ ಬಹಳ ಸಮೀಪಕ್ಕೇನೇ ಬಂದಿದ್ದರು; ಕಣ್ಣಿಗೆ ಕಾಣುತ್ತಿದ್ದರು. ಶಾರ್ದೂಲ ಸಿಂಘರ ಬಂದೂಕು ಅಗ್ನಿಯನ್ನೇ ಕಾರುತ್ತಿತ್ತು. ಅವರು ಮುಂದಿನ ಸಾಲಿನಲ್ಲಿದ್ದರು.

"ಇನ್ನೆಷ್ಟು ಸಮಯದ ವರೆಗೆ ಬರಬಹುದು ಈ ಮದ್ದುಗುಂಡು" ಅಧಿಕಾರಿ ಕೇಳಿದನು. "ಇನ್ನು ಐದು ನಿಮಿಷಕ್ಕೆ ಸಾಕು."

"ಹಿಂದಕ್ಕೆ ಹೋಗಲು ಸಿದ್ಧರಾಗಿರಿ" ಅಧಿಕಾರಿ ಅಜ್ಞೆ ಕೊಡುತ್ತಿದ್ದಂತೆ, ಕಂದಕವನ್ನು ಕಂಡು ಹಿಡಿದ ಚೈನಿ ಸೈನಿಕರು ಕೆಳಗಿಹಾರಿದರು.

ಹಿಂದಕ್ಕೆ ಹೋಗಲು ಅಧಿಕಾರಿ ಅಪ್ಪಣೆ ಕೊಟ್ಟಿದ್ದರು, ಶತ್ರುವು ಮೈಮೇಲೆ ಬಂದುಬಿಟ್ಟಿದ್ದಾನೆ! ಉಭಯ ಸಂಕಟದಲ್ಲಿ ಸೈನಿಕರು ಸಿಲುಕಿದ್ದರು. ಯಾರತ್ತವೂ ಗಮನ ಕೊಡದೆ ಶಾರ್ದೂಲ ಸಿಂಘ ಆಗ ಮದ್ದುಗುಂಡಿನತ್ತವೂ ಲಕ್ಷ್ಯ ಕೊಡಲಿಲ್ಲ. ಅವರು ಹಿಂದೆಯೇ ತಿಳಿಸಿದ್ದಂತೆ ಬಂದೂಕದ ಹಿಡಿಯಿಂದಲೇ ಚೈನಿ ಸೈನಿಕರಿಗೆ ಪ್ರಹಾರವನ್ನೀಯಲಾರಂಭಿಸಿದರು. ಆದರೆ ಅವರೊಬ್ಬರೇ ಅದೆಷ್ಟು ಸಮಯ ಶತ್ರುಗಳನ್ನು ತಡೆಯಲು ಸಾಧ್ಯ? ಶತ್ರುಗಳಾದರೋ ಇರುವೆ ಸಾಲಿನಂತೆ ಬರುತ್ತಿದ್ದಾರೆ!

ಮುಂದೇನಾಯ್ತು? ಅವರಿಗದ್ಯಾವದರ ಅರಿವೂ ಇರಲಿಲ್ಲ. ಅವರು ಕಣ್ಣು ತೆರೆದು ನೋಡಿದಾಗ ತೇಜಪುರದಲ್ಲಿ ಒಂದು ಆಸ್ಪತ್ರೆಯಲ್ಲಿದ್ದರು. ಆ ಅಧಿಕಾರಿಯು ಪಕ್ಕದಲ್ಲೇ ಇದ್ದನು. ಅವರು ಕಣ್ಣು ತೆರೆದಿರುವದನ್ನು ಕಂಡ ಅಧಿಕಾರಿಯು, "ಯೋಧನೇ, ಚೆನ್ನಾಗಿ ಹೋರಾಡಿರುವೆ. ಎಂಟು ಜನರನ್ನು ಯಮಸದನಕ್ಕೆ ಅಟ್ಟಿಬಿಟ್ಟೆ." ಎಂದರು.

ಶಾರ್ದೂಲ ಸಿಂಘರು ಮೆಲ್ಲನೆ ಮುಗುಳ್ನಕ್ಕರು. ಅವರು ವೈದ್ಯರತ್ತ ತಿರುಗಿ "ಆದಷ್ಟು ಬೇಗನೇ ನನ್ನನ್ನು ಗುಣಪಡಿಸಿರೆಂದರು.

"ಹೌದು, ಹೌದು. ಆದಷ್ಟು ಬೇಗನೆ ಗುಣವಾಗಬೇಕು. ಕೆಲವೇ ದಿನಗಳಲ್ಲಿ ನೀವು ಮನೆಗೆ ಹೋಗಬಹುದೆಂದು ಧೈರ್ಯವನ್ನಿತ್ತರು ವೈದ್ಯರು.

"ವೈದ್ಯರೇ, ನನಗೆ ಬೇಗನೇ ಗುಣವಾಗಬೇಕು. ನಾನು ಕೇವಲ ಎಂಟು ಜನರನ್ನು ಮಾತ್ರ ಮುಗಿಸಿದ್ದೇನೆ. ಇನ್ನು ಬಹಳಷ್ಟು ಜನರನ್ನು ಮುಗಿಸಿ ಬಿಡಬೇಕಾಗಿದೆ. ಆದುದರಿಂದ ಬೇಗನೆ ಗುಣಪಡಿಸಿರಿ." ಮಾತಿನೊಂದಿಗೆ ದೀರ್ಘ ನಿಟ್ಟುಸಿರನ್ನು ಅವರು ಬಿಟ್ಟರು. ವೈದ್ಯರಂತೂ ಭಾವನಾರೂಪಕ್ಕೆ ತೆರಳಿದರು. ಶಾರ್ದೂಲ ಸಿಂಘ ನಂತರ ಉಸಿರಾಡಲೇ ಇಲ್ಲ."

ಸಕಲೇಶರವರ ಈ ಚಿಕ್ಕ ಕಥೆಯ ಪ್ರಕಾರ ಎಂಟು ಜನ ಚೈನೀಯರಿಗೆ ಓರ್ವ ಭಾರತೀಯನು ಸಾಕೆಂದಾಗುತ್ತದೆ ಕಮ್ಯೂನಿಷ್ಟರು ಈಗ ಲೆಖ್ಖ ಹಾಕಲಿ. ಎಂಟು ಜನ ಚೈನೀ ಕಮ್ಯೂನಿಷ್ಟರಿಗೆ ಓರ್ವ ಭಾರತೀಯ ಬೇಕಾದರೆ ಅರುವತ್ತು ಕೋಟಿ ಚೈನೀಯರಿಗೆ ಏಳೂವರೆ ಕೋಟಿ ಭಾರತೀಯರು ಸಾಕು. ಭಾರತದಲ್ಲಿ ನಲ್ವತ್ತು ಕೋಟಿ ಜನ ವಸತಿ ಇದೆ. ಅದರಲ್ಲಿ ಚೈನಿ ಜೇಲುಗಳತ್ತ ಅಥವಾ ಕಮ್ಯೂನಿಷ್ಟರ ಹಾಗೂ ಇತರ ಪಂಚಮ ಸ್ತಂಭೀಯರ ಸಂಖ್ಯೆಯೂ ಸೇರಿಕೊಂಡಿದೆ. ಅಂತಹವರ ಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳದಿದ್ದರೂ ಉಳಿದವರ ಸಂಖ್ಯೆಯೇ ಏಳೂವರೆ ಕೋಟಿಗೂ ಮೇಲಾಗುತ್ತದೆ. ಹಾಗಾದಲ್ಲಿ ನಾವೇತಕ್ಕೆ ಅವರಿಗೆ ಬೆದರಬೇಕು? ಜನಸಂಖ್ಯೆಯ ವಿಷಯದಲ್ಲಿಯೂ ನಾವು ಅವರಿಗೆ ಬೆದರಬೇಕಾಗಿರುವದಿಲ್ಲ. ಮಾತ್ರ ಉಳಿದದ್ದೆಂದರೆ ಅಣುಗುಂಡು ಮಾತ್ರ ಅದನ್ನೆಂತು ಶಾಂತಿಪ್ರಿಯ ಭಾರತ ಎದುರಿಸಬೇಕೆಂಬುದನ್ನು 'ನವಯುಗ' ಆದಾಗಲೇ ಸ್ಪಷ್ಟವಾಗಿ ತಿಳಿಸಿರುತ್ತದೆ.

ಚೈನೀಯರಿಗೆ ಭಾರತೀಯರು ಬೆದರಬೇಕಾಗಿಲ್ಲ. ಹಾಗೆಂದೊಡನೆ ನಾವು ಹಾಯಾಗಿರಬಹುದೆಂದಲ್ಲ. ದೇಶ ದೇಶಗಳ ಹೊರಗೂ ಶತ್ರುಗಳು ನಮ್ಮನ್ನು ನುಂಗಿ ನೀರು ಕುಡಿಯಲು ಹೊಂಚು ಹಾಕುತ್ತಿದ್ದಾರೆ. ರಾಷ್ಟ್ರೀಯರೆಲ್ಲರೂ ಸಂಘಟನೆಯ ಸೂತ್ರದಲ್ಲಿ ಪೋಣಿಸಲ್ಪಟ್ಟಲ್ಲಿ ಮಾತ್ರ ಸಾರ್ವೋರ್ವ ವಿರಾಟ ಪುರುಷನಂತೆ ಎದ್ದು ನಿಂತು ಶತ್ರುಗಳನ್ನೆದುರಿಸ ಬಹುದು.

ಚೀಣಾದರ್ಶನ

ಚೀಣಾದಲ್ಲಿ ದೇವಾಲಯಗಳ ದುರ್ಗತಿ

ಚೀಣಾದಲ್ಲಿ ಇಂದು ದೇವಾಲಯಗಳು ಪಕ್ಷದ ಕಾರ್ಯಚಟುವಟಿಕೆಗಳ ಕೇಂದ್ರಗಳಾಗಿವೆ, ಮಹತ್ವದ ಧಾರ್ಮಿಕ ಸಮಾರಂಭಗಳಲ್ಲಿಯೂ ಈ ದೇವಾಲಯಗಳಲ್ಲಿ ಇತರರಿಗೆ ಪ್ರವೇಶವಿಲ್ಲ.

ಶಂಘಾಯಿಯ 'ನನ್‌ನ್‌ಕಿಂಗ್‌ ರಸ್ತೆಯಲ್ಲಿ ಚೀಣೀಯರ 'ಶಾಂತಿ ದೇವತೆ'ಯ ಮಂದಿರವಾದ "ರೆಡ್‌ ಟೆಂಪಲ್‌" ಇದೆ. ಇದಕ್ಕೆ ಚೀಣೀ ಭಾಷೆಯಲ್ಲಿ "ಲಂಗ್‌ ಮಿಯಾವ್‌" ಎಂದೂ ಹೆಸರು. ಚೀಣೀಯರ ಹೊಸ ವರ್ಷದ ದಿನದಂದು ಬೆಳಗ್ಗೆ ದೇವಾಲಯವನ್ನು ಸಂದರ್ಶಿಸಲು ಅಲ್ಲಿಗೆ ಹೋದ ಯಾತ್ರಿಕನೊಬ್ಬನು ದೇವಾಲಯದಲ್ಲಿ ಎರಡು ಪಹರೆದಳಗಳಿದ್ದುದನ್ನು ಕಂಡನು. ಈ ಎರಡು ದಳಗಳಲ್ಲಿ ಒಂದು ಮಹಿಳೆಯರದು, ಇನ್ನೊಂದು ಯುವಜನರ ತಂಡ. ಈ ತಂಡಗಳು ತಮ್ಮ ಪಯೋಮಾನದ ಜನರಿಗೆ, ಚೀಣೀ ಮೂಢನಂಬಿಕೆಗಳನ್ನು ಹೋಗಲಾಡಿಸಲು ಸುದೀರ್ಘ ಉಪನ್ಯಾಸ ಮಾಡುತ್ತಿದ್ದರು. ದೇವಾಲಯದಲ್ಲಿ ಅಂಗವಿಕಲರಿಗೆ ಮತ್ತು ವೃದ್ಧರಿಗೆ ಮಾತ್ರ ಪ್ರವೇಶವಿತ್ತು. ಅಂದು ಅವರೂ ನಿರಾಶರಾಗಿ ಹಿಂತಿರುಗಬೇಕಾಯಿತು.

ದೇವಾಲಯದ ಗರ್ಭಗುಡಿಯಲ್ಲಿ ಯಾವ ಪೂಜೆ ಪುನಸ್ಕಾರಗಳೂ ನಡೆದಿರಲಿಲ್ಲ. ಖಾಡಾ ವೇಷ ಭೂಷಣಗಳನ್ನು ಧರಿಸಿದ ಸೇವಕ ವರ್ಗದವರು ಪಕ್ಷದ ಧ್ಯೇಯಗಳನ್ನು ಘೋಷಿಸುತ್ತಿದ್ದರು. ಅವರು ದೇವಾಲಯವನ್ನು ಮುಹಾದ್ವಾರದ ಮೂಲಕ ಪ್ರವೇಶಿಸಿ ನೇರವಾಗಿ ಹಿಂದಿನ ಬಾಗಿಲಿಗೆ ತೆರಳಿ ಅಲ್ಲಿಂದ ಹೊರಗೆ ಹೋಗುವಂತೆ ಜನರಿಗೆ ನಿರ್ದೇಶಿಸುತ್ತಿದ್ದರು.

ಅದೇ ದಿನ ಮಧ್ಯಾಹ್ನ ಸಂದರ್ಶಕನು 'ಬಬ್ಲಿಂಗ್‌ ವೆಲ್‌' ದೇವಾಲಯವನ್ನು ಸಂದರ್ಶಿಸಿದರು. ಅಲ್ಲಿ ಯಾವ ಪಹರೆ ದಳವೂ ಇರಲಿಲ್ಲ. ದೇವಾಲಯದ ಗರ್ಭಗುಡಿಯಲ್ಲಿ ಕೆಲವು ಮಂದಿ ಮಹಿಳೆಯರಿದ್ದರು, ಹರಟೆಯಲ್ಲಿ ತಲ್ಲೀನವಾಗಿದ್ದ ಮಿಡ್ಲ್‌ಸ್ಕೂಲ್‌ ವಿದ್ಯಾರ್ಥಿಗಳ ತಂಡವೊಂದು ಈ ಮಹಿಳೆಯರು ದೇವಾಲಯದ ಹಿಂಬಾಗಿಲಿನಿಂದ ಹೊರಗೆ ಹೋಗಬೇಕೆಂದು ಅವರಿಗೆ ನಿರ್ದೇಶನ ನೀಡುತ್ತಿತ್ತು. ಈ ದೇವಾಲಯದಲ್ಲಿಯೂ ಯಾವ ಅರ್ಚನೆಗಳೂ ನಡೆಯುತ್ತಿರಲಿಲ್ಲ. ಕೆಂಪು ಮೇಣಬತ್ತಿಗಳೂ ಉರಿಯುತ್ತಿರಲಿಲ್ಲ.

ಸಂದರ್ಶಕನು "ಜಡೆಬುದ್ಧ" ದೇವಾಲಯಕ್ಕೆ ಸಂದರ್ಶನ ನೀಡಿದಾಗ ದೇವಾಲಯದ ಬಾಗಿಲು ಮುಚ್ಚಿದ್ದಿತು. ಅಲ್ಲಿ ಪಹರೆ ಕಾಯುತ್ತಿದ್ದ ಪೋಲೀಸ ಅಧಿಕಾರಿಯನ್ನು ಈ ಬಗ್ಗೆ ವಿಚಾರಿಸಿದಾಗ ದೇವಾಲಯದಲ್ಲಿ ಮುಂದಿನದವರೆಗೂ ಯಾರಿಗೂ ಪ್ರವೇಶಕ್ಕೆ ಅನುಮತಿ ನೀಡುವುದಿಲ್ಲವೆಂದು ಅವನು ತಿಳಿಸಿದನು.

ಸಂದರ್ಶಕನು, ಹೊಸ ವರ್ಷದ ದಿನವು ಆರಂಭವಾಗುವ ಮುನ್ನ "ಸಿಟಿ ಟೆಂಪಲ್‌"ನ್ನು ಸಂದರ್ಶಿಸಲು ತೆರಳಿದ. ಆ ದೇವಾಲಯದ ಬಾಗಿಲು ಮುಚ್ಚಿದ್ದಿತ್ತು. ಮರುದಿನ ಬೆಳಗ್ಗೆ ನೋಡಿದಾಗಲೂ ದೇವಾಲಯದ ಬಾಗಿಲು ಮುಚ್ಚಿಯೇ ಇದ್ದಿತು.

ದೇವಾಲಯದ ಬಾಗಿಲು ಎಷ್ಟು ಹೊತ್ತಾದರೂ ತೆರೆಯದ್ದರಿಂದ ಅವನು ನಿರಾಶನಾಗಿ ಹೊರಟು ಹೋದನು. ದಿನದಲ್ಲಿ ಒಂದು ಕ್ಷಣಹೊತ್ತು ತೆರೆಯಲಾಗದ್ದಕೆಂದು ಆದರೆ ಯುವಜನರ ತಂಡಗಳು ದೇವಾಲಯಕ್ಕೆ ಮುತ್ತಿಗೆ ಹಾಕಿ ದೇವಾಲಯದ ಒಳಕ್ಕೆ ಜನರೂ ಪ್ರವೇಶಿಸದಂತೆ ಪ್ರತಿಬಂಧಿಸಿದರೆಂದೂ ಅವನಿಗೆ ತಿಳಿದುಬಂದಿತು.

ಕವಿತಾವಿತಾನ

ಅಧ್ಯಾತ್ಮ ಕೇಸರಿ

ಧೀರ ಗಂಭೀರ ನಿರ್ಘೋಷವದು ಕೇಳಿಸಿತು
ಅಧ್ಯಾತ್ಮ ಕೇಸರಿಯ ದೀಪ್ತಗರ್ಜನೆ ಮೊಳಗಿ,
ಮೇಘ ಮಂದ್ರ ಧ್ವನಿಯ ಸಾಗರದ ಬಿರುದನಿಯು
ಮೊರೆಸಿತು, ಚೈತನ್ಯ ರಸಧಾರೆ ಹರಿಯಿತು.
ಭರತ ದೇಶದ ದಿಗ್ದಿಗಂತಗಳ ದುಂದುಮಿಸಿ,
ಪಡದನಿಯ ನೊಡಮಿಸುತ, ಪಾಶ್ಚಾತ್ಯ ದೇಶಗಳ
ಅಜ್ಞಾನ ಮೌಢ್ಯವನ್ನೋಡಿಸುತ ಝೂಡಿಸಿತು: —

"ಉತ್ತಿಷ್ಠತ! ಜಾಗ್ರತ! ಪ್ರಾಪ್ಯ ವರಾನ್ನಿಬೋಧತ!
ಏಳಿರೈ, ಎಚ್ಚರಿರಿ, ಗುರುಜನರ ನಿಲ್ಲದಿರಿ.
ಕ್ಲೈಬ್ಯವನು ತೊಡೆದಟ್ಟಿ, ಸೆಂಟವನು ಬಿಗಿಕಟ್ಟಿ!
ಕ್ಷುದ್ರವಹ ಹೃದಯ ದೌರ್ಬಲ್ಯವನು ಬಿಟ್ಟುಬಿಡಿ!
ತರುಣರೇ! ಎದ್ದೇಳಿ, ನರಸಿಂಹರೆಂದೆನಿಸಿ!
ನಿಮ್ಮ ಧಮನಿಗಳಲ್ಲಿ ಬಿಸಿರಕ್ತ ಹೊನಲಿಡಲಿ!
ಮಾಂಸಖಂಡಗಳೆಲ್ಲ ಕಬ್ಬೊನ್ನಿನಂತಿರಲಿ!
ನಿಮ್ಮ ನರನಾಡಿಗಳು ಉಕ್ಕಿನಂತುಬ್ಬಿರಲಿ!
ಮೃತ್ಯುವನು ಲೆಕ್ಕಿಸದೆ ಎದೆಯುಬ್ಬಿ ಮುನ್ನುಗ್ಗಿ!"

ಆರ್ಷವಾಣಿಯ ಸನಾತನ ಧರ್ಮ ಹಿಂದೊಮ್ಮೆ
ನಾಸ್ತಿಕರ ಚಾರ್ವಾಕ ಪಾಖಂಡ ಪಂಡಿತರ
ಹಿಡಿತಕೊಳಗಾಗಿ "ಮಾಂ ತ್ರಾಹಿ" ಎಂದೆನುವಾಗ,
ವೀರ ಶಂಕರ ಪರಿವ್ರಾಜಕಾಚಾರ್ಯವರ
ಅವತಾರವೆಸಗಿ ಧರ್ಮ ಧ್ವಜವ ಮೇಲೆತ್ತಿ,
ಅಧ್ಯಾತ್ಮದ ದ್ವೈತ ಬ್ರಹ್ಮಜಯ ಸಾದಿಂತೆ,
ಬಳಿಕ ದಶ ಶತಮಾನ ಕಳೆಯಲ್ಕೆ ಮತ್ತೊಮ್ಮೆ
ಮ್ಲೇಚ್ಛ ಪಾದಾಘಾತದಿಂದ ನುಗ್ಗಾಗಿರುವ
ಭಾರತೀಯರ ಧರ್ಮತತ್ವ ಸಂಸ್ಕೃತಿಯನ್ನು
ಈ ವೀರ ಸನ್ಯಾಸಿ ನೆಲೆಗೊಳಿಸಿ ರಕ್ಷಿಸಿದ,

'ದೀನ ಮಾನವ ಸೇವೆ ಮಾಧವನ ವರಪೂಜೆ'—
ಯೆಂಬ ಪಾವನ ಮಂತ್ರವನ್ನು ಪಠಿಸುತಲಿವನು
ದೀನ ದಲಿತ ದರಿದ್ರರಲ್ಲಿ ದೇವನ ಕಂಡು,
ಕಣ್ಣೀರಿನಭಿಷೇಕ ಗೈದ ಬೆಳೆಸಿದನೊಲಿದು,

ಜ್ಞಾನ ದೀಧಿತಿಗಿವನು ಚಂಡಕರ ಮಾರ್ತಾಂಡ,
ಮಾನವ ಪ್ರೇಮಗಂಗೆಗೆ ಜನ್ಮಗಂಗೋತ್ರಿ.
ಭಕ್ತಿಸುಧೆ ವೈವೇಕ್ತ ಸಿದ್ಧ ಸಾಧಕನೀತ,
ಜ್ಞಾನ ಕ್ರಿಯೇಚ್ಛೆಗಳು ವಶವಾದ ಕತದಿಂದ
ಶಕ್ತಿ ತ್ರಿವೇಣಿಗಳ ಸಂಗಮೇಶ್ವರನಿವನು.

ಮೂಲ ಮೂರ್ತಿಯ ತೆರದಿ ದಕ್ಷಿಣೇಶ್ವರ ಸಾಧು
ಇದ್ದಕ್ಕಿಯೇ ಇದ್ದು, ಭಕ್ತಜನ ಶಿಷ್ಯರಿಗೆ
ಬೋಧನಾನುಗ್ರಹಂ ಗೈದ ಪಾಂಗಿನಲೀತ
ಶ್ರೀ ವಿವೇಕಾನಂದ ಸುಂದರೋತ್ಸವ ಮೂರ್ತಿ—
ಯಂತೆ ಭಕ್ತರ ಬಳಿಗೆ ಪಾದಯಾತ್ರೆಯ ಬೆಳಸಿ
ಸರ್ವಧರ್ಮ ಸಮನ್ವಯಂ ಗೈದು, ಭಾರತದ
ಶುಭ್ರ ಧವಲಿಮ ಕೀರ್ತಿ ಎತ್ತೆತ್ತಲೂ ಬೀರಿ
ನವಯುಗದ ನೂತನ ಸುಚೇತನಕೆ ರವಿಯಾಗಿ
ಜಳ ಬೇಗ ಮೆರೆದನಧ್ಯಾತ್ಮ ಕೇಸರಿಯಾಗಿ!

—ಶ್ರೀ ಅಮ್ಮೆಂಬಳ ಶಂಕರನಾರಾಯಣ ನಾವಡ, ಕೋಟೇಶ್ವರ.

ವಿವೇಚನೆ

ದಿನವೊಂದಕ್ಕೆ ಬರೀ ಹದಿನೈದು ನಿಮಿಷ.......

ಬರೆದವರು: ಶ್ರೀ 'ಪ್ರಿಯದರ್ಶಿ'

ಯಾವ ನಿಮಿಷದಲ್ಲಿಯೂ ಅವಸರ ಬರುವ ಎಂದು ಬಡ ಬಡಿಸುವ ನನ್ನ ಗೆಳೆಯರೊಬ್ಬರಿದ್ದಾರೆ. ಅವರಿಗೆ ಒಂದೇ ಒಂದು ನಿಮಿಷವನ್ನೂ ಓದುವುದಕ್ಕಾಗಿಯೇ ಮೀಸಲಾಗಿರಿಸಲು ಸಾಧ್ಯವಾಗಿಲ್ಲ. "ಓದಬೇಕೆಂಬ ಆಕಾಂಕ್ಷೆ ನನಗಿದ್ದರೂ ಓದಲು ವೇಳೆಯೇ ಇಲ್ಲವಲ್ಲ" ಎಂದು ಅವರು ಪರಿತಪಿಸುತ್ತಾರೆ.

ನಿಜವಾಗಿಯೂ ಓದಲು ವೇಳೆಯೇ ಇಲ್ಲವೆ? ದಿನದ ಇಪ್ಪತ್ತನಾಲ್ಕು ಗಂಟೆಗಳಲ್ಲಿ— ಒಂದು ಸಾವಿರದ ನಾಲ್ಕುನೂರ ನಲವತ್ತು ನಿಮಿಷಗಳಲ್ಲಿ—ಕೇವಲ ಒಂದು ಹದಿನೈದು ನಿಮಿಷವನ್ನು ಓದುವುದಕ್ಕಾಗಿ ಮೀಸಲಾಗಿ ಇಡಲಿಕ್ಕಾಗುವುದಿಲ್ಲವೆ? ಹದಿನೈದು ನಿಮಿಷಗಳೇನು, ಒಂದು ತಾಸನ್ನಾದರೂ ಓದಲಿಕ್ಕಾಗಿಯೇ ತೆಗೆದಿರಿಸಬಹುದು. ಆದರೆ ಅದಕ್ಕೆ ಮುಖ್ಯವಾದದ್ದು ಶಾಂತಿ, ಮತ್ತು ತಾಳ್ಮೆ ಮಾತ್ರ.

ವಿಲಿಯಂ ಓಸ್ಲರ್ ಎಂಬುವವರು ಓರ್ವ ಪ್ರಖ್ಯಾತ ವೈದ್ಯರಾಗಿದ್ದರು, ಉಪಾಧ್ಯಾಯರಾಗಿದ್ದರು! ಅವರು ಪ್ರತಿನಿತ್ಯ ಹದಿನೈದು ನಿಮಿಷಗಳನ್ನು ರಾತ್ರಿ ಮಲಗುವುದಕ್ಕೆ ಮುನ್ನ ಓದುವುದರಲ್ಲಿ ಕಳೆಯುತ್ತಿದ್ದರು. ಎಷ್ಟೇ ವೇಳೆಯಾಗಿರಲಿ ಹದಿನೈದು ನಿಮಿಷಗಳನ್ನು ಓದುತ್ತ ಕಳೆಯದಿರುತ್ತಿರಲಿಲ್ಲ.

ಹನ್ನೊಂದು ಗಂಟೆಗೆ ಹಾಸಿಗೆಯ ಮೇಲೆ ಅಡ್ಡಾದರೆ ಹನ್ನೊಂದು ಹದಿನೈದು ನಿಮಿಷದವರೆಗೂ ಓದುತ್ತಿದ್ದರು. ಎರಡು ಗಂಟೆ ಸರಿ ರಾತ್ರಿಯಲ್ಲಿ ಮಲಗಿದರೂ ಎರಡೂ ಹದಿನೈದರವರೆಗೆ ಓದುತ್ತಿದ್ದರು.

ಹದಿನೈದು ನಿಮಿಷಗಳಲ್ಲಿ ಏನನ್ನು ತಾನೆ ಓದಲಿಕ್ಕಾಗುತ್ತದೆ ಎಂದು ಮೂಗು ಮುರಿಯಬಹುದು.

ನೀವು ಓರ್ವ ಸಾಧಾರಣ ಓದುಗರಾದರೆ ನಿಮಿಷ ಒಂದಕ್ಕೆ ಮೂರು ನೂರು ಪದಗಳನ್ನು ಓದಬಹುದು. ಮನರಂಜನೆಗಾಗಿ ಅಥವಾ ವೇಳೆಯನ್ನು ಕಳೆಯುವುದಕ್ಕೆ ಓದುವುದಾದರೆ ಇನ್ನೂ ಸ್ವಲ್ಪ ವೇಗವಾಗಿ ಓದಲೂ ಬಹುದು.

ಈಗ ನೀವು ಲೆಕ್ಕಹಾಕಿರಿ. ನಿಮಿಷ ಒಂದಕ್ಕೆ ಮುನ್ನೂರು ಪದಗಳಂತೆ ಓದಿದರೆ ಹದಿನೈದು ನಿಮಿಷಗಳಲ್ಲಿ ೪೫೦೦ ಪದಗಳನ್ನು ಓದಿರುತ್ತೀರಿ. ಒಂದು ವಾರದ ಏಳುದಿನಗಳಲ್ಲಿ ೩೧೫೦೦ ಪದಗಳನ್ನೂ, ವರ್ಷದ ಮೂರುನೂರಅರವತ್ತೈದು ದಿನಗಳಲ್ಲಿ ೧೬೪೨೫೦೦ ಪದಗಳನ್ನು ಓದಿ ಮುಗಿಸಿರುತ್ತೀರಿ!

ಸಾಮಾನ್ಯವಾಗಿ ಮನುಷ್ಯರಿಗೋಸ್ಕರವೇ ಬರೆಯಲ್ಪಟ್ಟ ಪುಸ್ತಕಗಳಲ್ಲಿ ೭೫,೦೦೦ ಪದಗಳಿರುತ್ತವೆ. ಅಂದರೆ ನೀವು ಪ್ರತಿನಿತ್ಯ ಕೇವಲ ಹದಿನೈದು ನಿಮಿಷಗಳನ್ನು ಓದುತ್ತ ಕಳೆದರೆ ವರ್ಷದ ಕೊನೆಯಲ್ಲಿ ಸುಮಾರು ಇಪ್ಪತ್ತು ಎರಡು ಪುಸ್ತಕಗಳನ್ನು ಓದುತ್ತೀರಿ!

ಆಶ್ಚರ್ಯವೇನೆಂದರೆ. "ಬಿಡುವಿಲ್ಲ" ಎಂದು ಕೊಳ್ಳುವ ಅನೇಕ ಮಂದಿ ಒಂದು ವರ್ಷಕ್ಕೆ 5 ಪುಸ್ತಕಗಳನ್ನು ಓದಿದರೆ ಹೆಚ್ಚು. ಅಷ್ಟನ್ನೂ ಓದದವರೂ ಸಿಕ್ಕುವರು. ಅನೇಕ ಮಂದಿ ಕೇವಲ ದಿನದಲ್ಲಿ ಹದಿನೈದು ನಿಮಿಷಗಳನ್ನು ಓದುವುದರಲ್ಲಿ ತೊಡಗಿಸುವುದರಿಂದ ಎಷ್ಟು ಪುಸ್ತಕಗಳನ್ನು ಓದಬಹುದೆಂಬ ಕಲ್ಪನೆಯೇ ಅಂತವರಿಗೆ ಇರುವುದಿಲ್ಲ.

"ನನಗೀಗ ಓದಲು ಬಿಡುವು ತಾನೇ ಎಲ್ಲಿದೆ?" ಎಂದು ನೀವು ಕೇಳಬಹುದು. ಇಂದು ಇದ್ದಂತೆ ನಾಳೆ ಇರುವುದಿಲ್ಲ. ದಿನದಿಂದ ದಿನಕ್ಕೆ ನೀವು ಬೆಳೆಯುತ್ತಾ ಹೋಗುವಿರಿ. ಅಂದರೆ ನೀವು ಇಂದು ಇರುವುದಕ್ಕಿಂತ ಬಹುಶಃ ಹೆಚ್ಚು, ಹೆಚ್ಚು ವೇಳೆಯಲ್ಲಿ ಕಾರ್ಯ ತತ್ಪರರಾಗುತ್ತೀರಿ ಎಂದಾಯಿತು! ಆದ್ದರಿಂದ ನಾಳೆಗಿಂತ ಇಂದೇ ನೀವು ವಿರಾಮದಲ್ಲಿರುತ್ತೀರಿ. ಇಂದಿನ ವಿರಾಮದಲ್ಲೇ ಹದಿನೈದು ನಿಮಿಷಗಳನ್ನು ಮಾತ್ರವೇ ಓದುವುದಕ್ಕಾಗಿಯೇ ಮೀಸಲಾಗಿಡುವ ಹವ್ಯಾಸ ಪ್ರಾರಂಭಿಸುವುದು ಒಳಿತು!

ಓದುವುದಕ್ಕಾಗಿ ವೇಳೆಯನ್ನು ತೆಗೆದಿರಿಸುವುದೆಂತು? ಅನೇಕ ಮಾರ್ಗಗಳಿವೆ.

ನೀವು ಊಟ ಮಾಡುವುದಕ್ಕೆ ಸರಾಸರಿ ಇಪ್ಪತ್ತು ನಿಮಿಷಗಳನ್ನು ತೆಗೆದುಕೊಳ್ಳುವಿರಿ. ಆಗ ಒಂದು ಪುಸ್ತಕ ತೆಗೆದುಕೊಂಡು ಓದತೊಡಗಿರಿ. ಮಾತು, ಕತೆ, ಊಟದ ಸಂಗಡವೇ ನಿಮ್ಮ ಓದು ಸಾಗುತ್ತದೆ. ಹೆಚ್ಚೆಂದರೆ ಒಂದೈದು ನಿಮಿಷ ಹೆಚ್ಚು ವೇಳೆ ಊಟಕ್ಕೆ ತಗಲಬಹುದು.

ನಿಮ್ಮ ಕಛೇರಿಗೆ ಅಥವಾ ಶಾಲೆಗೆ ಮೋಟಾರಿನಲ್ಲಿ ಪ್ರಯಾಣ ಮಾಡುವಿರಿ ಎಂದಿಟ್ಟುಕೊಳ್ಳೋಣ. ಆಗೇನು ನಿಮಗೆ ಯಾವ ಅಡಚಣೆಯೂ ಇರಲಾರದು. ಪುಸ್ತಕ ಒಂದನ್ನು ಓದ ತೊಡಗಿರಿ. ಏಕಾಗ್ರತೆಯಿಂದ ಓದಿರಿ. ಕೆಲವು ನಿಮಿಷಗಳಲ್ಲಿ ನೀವು ಇಳಿಯಬೇಕಾದ ಸ್ಥಳ ಬರುತ್ತದೆ. ಪುಸ್ತಕವನ್ನು ಮುಚ್ಚಿ ಆರಾಮವಾಗಿ ಇಳಿದು ನಿಮ್ಮ ಕೆಲಸಕ್ಕೆ ಹೋಗಿರಿ.

ಪ್ರತಿನಿತ್ಯ ಒಂದೇ ದಾರಿಯಲ್ಲಿ ನೀವು ಗಾಬರಿಯಿಲ್ಲದಾಗ ಓಡಿಯಾಡುತ್ತಿದ್ದರೆ ರಸ್ತೆಯೂ ನಿಮ್ಮ ಓದಿಗೆ ಸಹಾಯಕವಾಗುತ್ತದೆ ಆರಾಮವಾಗಿ ಓದುತ್ತ ನೀವು ಮುಂದೆ ಸಾಗಬಹುದು ಪ್ರತಿನಿತ್ಯ ಓಡಾಡುವ ರಸ್ತೆಯಾದ್ದರಿಂದ ಎಡವುದು, ಬೀಳುವುದು, ದಾರಿ ತಪ್ಪಿ ಹಳ್ಳಕ್ಕೆ ಇಳಿಯುವುದು ಬಹಳ ಕಡಿಮೆ!

ದಿನದ ಅವಸರದ ಕೆಲಸವೆಲ್ಲಾ ಮುಗಿದ ಬಳಿಕ ಮಲಗುವುದೊಂದೆ ಉಳಿದಿರುತ್ತದೆ. ಆಗಲೂ ನಿಮಗೆ ಅವಸರವೇನಿರುವುದಿಲ್ಲ. ಹಾಸಿಗೆಯ ಮೇಲೆ ಮಲಗಿಕೊಂಡು ಹದಿನೈದು ನಿಮಿಷಗಳನ್ನು ಓದುತ್ತ ಕಳೆಯಿರಿ.

ಆದರೆ ನೀವು ಓದಲಿಕ್ಕೆಂದೇ ಇಷ್ಟು ವೇಳೆ ನಿಗದಿ ಮಾಡಿಕೊಂಡ ಬಳಿಕ ಪ್ರತೀನಿತ್ಯ ಚಾಚೂ ತಪ್ಪದೆ ನಡೆದುಕೊಳ್ಳುವುದು ಮುಖ್ಯ.

ಇದಕ್ಕೆಲ್ಲಾ ಮುಖ್ಯವಾಗಿ ಬೇಕಾದುದು "ಓದಬೇಕೆಂಬ" ಆಸೆಯೇ ಅದನ್ನು ಯಾವ ಗಲೂ ಹಸಿರಾಗಿಯೇ ಉಳಿಸಿಕೊಳ್ಳಬೇಕಾದುದು ಅತಿ ಮುಖ್ಯ. ಆಸೆಯೊಂದರ ಅಂಕುರಾರ್ಪಣೆಯಾದ ನಂತರ ಅದಕ್ಕೆ ನೀರು ಹಾಕಿ ಕಾಲ, ಕಾಲಕ್ಕೆ ಗೊಬ್ಬರವನ್ನು ಹಾಕಿ ಬೆಳೆಸುವ ಶಕ್ತಿ ತಂತಾನೆ ಬರುತ್ತದೆ.

ಓದುವುದರಿಂದ ದಂಡವೇನಿಲ್ಲ. ಓದಿದ್ದನ್ನೆಲ್ಲಾ ನಾವು ಅನುಸರಿಸಬೇಕೆಂಬ ನಿಯಮವೂ ಯಾರಿಂದಲೂ ಒತ್ತಾಯವಾಗಿ ಬರುವುದಿಲ್ಲ. ಓದಿರಿ! ಓದಿದ ನಂತರ ಮರೆಯಬೇಡಿ. ಅದರಲ್ಲಿನ ಒಳಿತನ್ನು ನಮ್ಮ ಒಳಿತಿಗಾಗಿ ಪರಿವರ್ತಿಸುವದೇ ನಾವು ಓದಿದ್ದಕ್ಕೆ ಅರ್ಪಿಸಿದ ಕಾಣಿಕೆ. ಒಳಿತು, ಕೆಡುಕು ಎಂಬ ದನ್ನೂ ವಿಂಗಡಿಸಿಕೊಂಡೇ ಓದುವುದಕ್ಕೆ ತೊಡಗಬೇಡಿರಿ. ಕೆಡುಕಿನಲ್ಲಿ ಒಳಿತನ್ನು ಕಾಣಿರಿ. ಒಳಿತಿನಲ್ಲಿ ಮತ್ತಷ್ಟನ್ನು ಕಾಣಿರಿ.

ಯೋಚಿಸಿರಿ! ಕೇವಲ ಹದಿನೈದು ನಿಮಿಷಗಳು ಒಂದು ದಿನಕ್ಕೆ ಓದಿಗಾಗಿ ಮೀಸಲು. ಒಂದು ತಿಂಗಳಿಗೆ ಎರಡು ಪುಸ್ತಕಗಳು. ಒಂದು ವರ್ಷದಲ್ಲಿ ಇಪ್ಪತ್ತು ಪುಸ್ತಕಗಳು.... ನಿಮ್ಮ ಜೀವಿತದ ಹತ್ತಾರು ವರ್ಷಗಳಲ್ಲಿ...?

IN THE COURT OF THE MUNSIF OF KARKALA.

R.I.A. 964/1964
O.S 636. /1963.

Between

Deju Moolya & others.
Petitioners-Plaintiffs.
and
Nagu Hengsu & others
Respondents-Defendants

To the 2nd respondent Korapalu Hengsu, Daughter of Boggu Moolya, Savya village of Belthangadi Taluk.

Please take notice that the above petitioners have applied for final decree for partition etc. in terms of the preliminary decree and that the same stands posted for your appearance to 9-4-1965. If you fail to appear on that day at 10 A.M. before the said Court you will be declared ex-parte and the petition will be heard and decided in your absence.

P. Ramachandra Rao,
Pleader for Petitioners.
Karkal, Dated 27-3-65

ಅವಳ ಉತ್ತರ

ಕೆ. ಆನಂದ, ವೇಣೂರು.

ನಲ್ಲನೆ ನಿನಗೆ ಕೋಪವು ಬಂತೆ
ನನ್ನಯ ಮೇಲೀಗ||
ವಿರಹವು ಒಂದು ಚಿಂತೆಯು ಎಂದು
ಗೊತ್ತಿದೆ ಎನಗಿಲ್ಲ || ೧ ||

ಅಂದಿನ ದಿನ ನೀವೆನ್ನನು ಬೈದು
ಹಂಗಿಸಿದುದು ಏಕೆ||
ತವರಿಗೆ ಎನ್ನನು ಕಳಿಸಿದ ಬಳಿಕ
ಪತ್ರವ ಬರೆದಿಲ್ಲ || ೨ ||

ಮೊದಲಿನ ಎನ್ನಯ ಪತ್ರಕೆ ನಿಮ್ಮ
ಉತ್ತರವೇಕಿಲ್ಲ||
ಪ್ರೇಮ ಪತ್ರವು ಪಟ ಪಟವಿತ್ತು
ಇಂದೇಕೆ ಹಾಗಿಲ್ಲ || ೩ ||

ತೋಟದಿ ಅರಳಿದ ಹೂವನು ಮುಡಿಯಲು
ಬರುವೆನು ಬಲು ಬೇಗ||
ಹಗಲಿರುಳೆಲ್ಲ ಎನ್ನನು ನೆನೆದು
ಕೊರಗಲು ಬೇಡೀಗ || ೪ ||

ಇಂದೋ ನಾಳೆಯೊ ಬಂದೇ ಬರುವೆ
ಇಲ್ಲಿಯೆ ನಿಲ್ಲದೆಯೆ||
ಹೃದಯದರಸನ ಮರೆಯೆನು ನಾನು
ಅನವರತ ಕಾಲ || ೫ ||

ಬರಡು ಗೊಂಡ ಹೃದಯಕೆ ನಾನು
ಅಮೃತವನೆರೆವೆ||
ಆದರೊಂದಿಗೆ ಪ್ರೇಮದ ತೊರೆಯ
ತುಂತುರುಗಳ ಬಿಡುವೆ. || ೬ ||

ನಿಮ್ಮಯ ಮನದ ಬೇಸರವೆಲ್ಲ
ಹರಿಯಲಿ ಈಗೀಗ||
ನಾ ಬರುವಂಥ ಹೊತ್ತಿಗೆ ಎಲ್ಲ
ಸರಿಯಲಿ ಅದು ಎಲ್ಲ. || ೭ ||

ಚಂಚಲವಿತ್ತು ಎನ್ನಯ ಕಣ್ಣು
ಹಿಂದಿನ ಸಮಯದಲಿ||
ನಿಮ್ಮನು ಪಡೆದ ಬಳಿಕದು ಈಗ
ಸ್ಥಿರವಾಗಿರುತಿಹುದು || ೮ ||

ಬೇಗನೆ ಬಂದು ಹರಿಸುವೆ ನಿಮ್ಮ
ಮನಸಿನ ಅನುತಾಪ||
ಆದರದಿಂದಲಿ ಹಿಗ್ಗಿಸಿಕೊಳ್ಳಿ
ನಿಮ್ಮಯ ಚೆಲು ರೂಪ || ೯ ||

ಮಂಗಳೂರು ಬಂದರು ನಿವೇಶನ

ಶ್ರೀ ಟಿ. ಜಿ. ರಾಮಕೃಷ್ಣ, ಸ್ಪೆಶಲ್ ಡೆಪ್ಯುಟಿ ಕಮಿಶನರ್, ಹಾರ್ಬರ್ ಎಂಡ್ ರೈಲ್ವೇಸ್, ದ. ಕ. ಮಂಗಳೂರು ಇವರು, ಮಂಗಳೂರು ನಿರ್ಮಿತು ಬಂದರು ನಿವೇಶನದಿಂದ ಸ್ಥಳಾಂತರಗೊಳ್ಳುವ ಕುಟುಂಬಕ್ಕೀಯಲಾಗುವ ನೆರವು ಮತ್ತು ರಿಯಾಯಿತಿಗಳನ್ನು ಮೈಸೂರು ಸರಕಾರವು ಅಂತಿಮವಾಗಿ ರೂಪಿಸಿನೆಯೆಂದೂ ತಣ್ಣೀರುಬಾವಿ ಮತ್ತು ಪಣಂಬೂರು ಗ್ರಾಮ ಬಂದರು ನಿವೇಶನಕ್ಕೆ ಭೂ ಸ್ವಾಧೀನತೆ ಕಾಯಿದೆಯನ್ವಯ ಭೂಮಿಯನ್ನು ಸರಕಾರ ಸ್ವಾಧೀನಪಡಿಸುತ್ತದೆಂದು ಈ ಮುಂಚೆಯೇ ಸರಕಾರೀ ಗಜೇಟಿನಲ್ಲಿ ಪ್ರಕಟಿಸಲಾಗಿದೆಯೆಂದೂ ತಿಳಿಸಿದ್ದಾರೆ. ದ. ಜನರು ಜಿಲ್ಲಾ ಸ್ಪೆಶಲ್ ಡೆಪ್ಯುಟಿ ಕಮಿಶನರ್ ಇವರು ನಿರ್ಧರಿಸಿದ ಅವಧಿಯೊಳಗೆ ಅಂದರೆ ತಾ 15.4.65ರೊಳಗೆ ಮಂಗಳೂರು ಹಾರ್ಬರ್ ಪ್ರಾಜೆಕ್ಟ್, ಛೀಫ್ ಇಂಜಿನಿಯರ್ ಮತ್ತು ಅಡ್ಮಿನಿಸ್ಟ್ರೇಟರ್ ಯಾ ಅವರಿಂದ ಅಧಿಕಾರ ಹೊಂದಿದ ಅಧೀನರಿಗೆ ತೃಪ್ತಿಕರವಾದ ಗೊಡಾಸ್ತು ಸಹಿ ಕಟ್ಟಡದ ಭೂಮಿಯನ್ನು ಬಿಟ್ಟುಕೊಟ್ಟಲ್ಲಿ ಈ ಕೆಳಗೆ ನಮೂದಿಸಿರುವ ವಿಶೇಷ ರಿಯಾಯಿತಿಯನ್ನು ಕೊಡಲಾಗುವುದಾಗಿ ಮೈಸೂರು ಸರಕಾರವು ತಿಳಿಸುತ್ತದೆಂದೂ ಹೀಗೆ ಮನೆಗಳನ್ನು ಬಿಟ್ಟುಕೊಡುವ ಕಾರ್ಯವನ್ನು ಮಂಗಳೂರು ಎಡಿಶನಲ್ ಸ್ಪೆಶಲ್ ಲ್ಯಾಂಡ್ ಎಕ್ವಿಸಿಶನ್ ಆಫೀಸರ್ ಅಥವಾ ಅವರಿಂದ ಅಧಿಕಾರ ಪಡೆದ ಅಧೀನರ ಸಮಕ್ಷಮದಲ್ಲಿ ಮಾಡತಕ್ಕದ್ದೆಂದೂ ಅವರು ಸೂಚಿಸಿದ್ದಾರೆ. ಈ ರಿಯಾಯಿತಿಯು ಅವರ ಕಟ್ಟಡಗಳಿಗೆ ಕೊಡುವ ಪರಿಹಾರ ದ್ರವ್ಯದ ಹೊರತು ಹೊರತು ಆಗಿರುತ್ತದೆಂದೂ, ಅದರ ಸಹಿ ಕಟ್ಟಡ ಸಾಮಗ್ರಿಗಳನ್ನು ತಾ. 20.4.65ರೊಳಗೆ ಕೊಂಡು ಹೋಗತಕ್ಕದೆಂದು ಅವರ ಪ್ರಕಟಣೆಯಲ್ಲಿದೆ.

ಕನ್ನಡ ಸಾಹಿತ್ಯಕ್ಕೆ ಸ್ತ್ರೀಯರ ಕಾಣಿಕೆ

(ಆರನೇ ಪುಟದಿಂದ)

ಜ್ಯಾಂಗ ಅನೂತ್ಯ ಬಾಂಧವೀಯ, ರಾಜವೃತ್ತಿ, ಪ್ರಜಾರಂಜನ, ಸಭಾರಂಜನ ಇತ್ಯಾದಿಗಳನ್ನೊಳಗೊಂಡ ಪ್ರೌಢ ಕೃತಿ. ಇದಕ್ಕೆ ಅಚ್ಚು ಹಾಕಿಸುವ ಯೋಗ ತನ್ನಲ್ಲಿ ಇಲ್ಲವೆಂದೂ ಮಹಾಜನರು ಉದಾರ ಚಿತ್ತದಿಂದ ಅಚ್ಚು ಹಾಕಿಸಬೇಕೆಂದೂ ಕೇಳಿಕೊಂಡಿದ್ದಾಳೆ.

ಗುಲಬರ್ಗದಲ್ಲಿದ್ದ ಗಣಪಕ್ಕ ಕೂಡಾ ಉತ್ತಮ ಸಾಹಿತ್ಯ ಆರಾಧಕಿ, ಗೋಕರ್ಣ ಮಹಾತ್ಮೆ, ಕೃಷ್ಣನ ಹುಟ್ಟು ಎಂಬ ಯಕ್ಷಗಾನ ಇತ್ಯಾದಿಗಳನ್ನು ರಚಿಸಿದ್ದಾರೆ. ತೀರಾ ಬಡಜೀವಿಯಾದ ಗಣಪಕ್ಕ ಅತಿ ಸಾಹಸದಿಂದ ಇಂಥ ಶ್ರೇಷ್ಠ ಕಾಣಿಕೆಯನ್ನರ್ಪಿಸಿದ್ದರೂ, ಅದನ್ನು ಅಚ್ಚುಮಾಡಿಸುವ ಉದಾರಚಿತ್ತ ಯಾರಲ್ಲೂ ಉದಯವಾಗಲಿಲ್ಲ.

ಸಾಹಿತ್ಯವು ಪರಿಸರ, ಸಂಸ್ಕಾರ ಹಾಗೂ ನಿರೂಪಣಾ ಶಕ್ತಿಗಳನ್ನವಲಂಬಿಸಿದೆ. ಪ್ರಾಚೀನನಿಬಂಧನೆಯನ್ನು ಇಂದಿನವರು ನಿರ್ಲಕ್ಷಿಸುತ್ತಿರುವ ಕಾರಣ ಇಂದಿನ ಶತಮಾನದ ಸಾಹಿತ್ಯವು ಒಂದು ಹೊಸ ಹಾದಿಯನ್ನು ಹಿಡಿದಿದೆ. ಸಣ್ಣ ಕತೆ ಭಾವಗೀತೆಗಳು ತಲೆದೋರಿವೆ. ಅಂತೂ ಸಾಹಿತ್ಯದಲ್ಲಿ ಅವಸ್ಥಾ ಭೇದಗಳು ಕಂಡುಬರುವುದು ಅನಿವಾರ್ಯವೇ ಸರಿ. ಆದರೆ ಇಂದಿನ ಸ್ತ್ರೀ ತಾನು ಸ್ತ್ರೀ ಎಂಬ ನೈಚ್ಯಾನುಸಂಧಾನದಿಂದ ಆಸ್ಥೈರ್ಯದಿಂದ ಸಾಹಿತ್ಯ ಸೇವೆ ಮಾಡಬೇಕಾಗಿಲ್ಲ. "ಸ್ತ್ರೀ" ಬರೆದ ಲೇಖನವೆಂದು ಸಂಕುಚಿತ ಮನೋವೃತ್ತಿಯಿಂದ ನೋಡುವ ಕಾಲವೂ ಇದಲ್ಲದ ಕಾರಣ ಲೇಖಿಕೆ ಬಂಧುವರ್ಗ ದಿನದಿಂದ ದಿನಕ್ಕೆ ಅಭಿವೃದ್ಧಿಯನ್ನು ಪಡೆಯುತ್ತಿದೆ, ಎಂಬುದೊಂದು ಕನ್ನಡಿಗರಿಗೆ ಹೆಮ್ಮೆಯ ವಿಷಯ.

ದಾರಿದ್ರ್ಯ ಅಜ್ಞಾನಗಳನ್ನು ಕಿತ್ತೆಸೆದು ಸಂಸ್ಕೃತಿ ಸಮೃದ್ಧಿಯನ್ನು ಜನತೆಯಲ್ಲಿ ತುಂಬುವುದೇ ಸಾಹಿತ್ಯದ ಗುರಿ. ಮನದ ಹಿಂದಿನ ಪರದೆಯೊಳಗೆ ಇಣಿಕಿ ನೋಡಿ ಸತ್ಯವನ್ನೂ ತಥ್ಯವನ್ನೂ ಕಂಡು, ಹಿಡಿದು ಹೃದಯಂಗಮವಾದ ರೀತಿಯಲ್ಲಿ ಚಿತ್ರಿಸುವ ಕೆಲಸ ಸಾಹಿತಿಯದು. ಕೊಡಗಿನ ಗೌರಮ್ಮ, ಇಂತಹ ಹೃದಯಂಗಮವಾದ ಕೃತಿ ಕಾಣಿಕೆಯನ್ನು ಕನ್ನಡಕ್ಕಿತ್ತು ತೆರವನ್ನು ತುಂಬಿದರು. ಶ್ರೀಮತಿ ಗೌರಮ್ಮನವರ "ಪುನರ್ವಿವಾಹ" ಎಂಬ ಕೃತಿಯಲ್ಲಿ ಕಥಾನಾಯಕ ವಿಧುರ ಯುವಕನ್ನು ತಾನು ವರಿಸಲಿರುವ ವಧು ಬಾಲ ವಿಧವೆಯೆಂದು ತಿಳಿದಾಗ ಹಿಂಜರಿದ ವಿಚಾರವನ್ನು ವ್ಯಂಗ್ಯವಾಗಿ ಚಿತ್ರಿಸಿದ್ದಾರೆ.

ಇನ್ನೊಂದು ಬಹು ಮುಖ್ಯವಾದ ವಿಷಯವನ್ನು ವಾಚಕರ ಗಮನಕ್ಕೆ ತರುವುದು ಅತ್ಯಗತ್ಯವಾಗಿದೆ. ಕನ್ನಡನಾಡಿನಲ್ಲಿ ಕಾವೇರಿಯಿಂದ ಭೀಮೆಯ ವರೆಗೆ ಹರಡಿದ್ದ 'ಜನಪದ ಸಾಹಿತ್ಯದ ಬಹುಭಾಗ ಸ್ತ್ರೀಯರಿಂದ ನಿರ್ಮಿತವಾದವುಗಳು. ಕನ್ನಡನಾಡಿನ ಸಂಸ್ಕೃತಿಯ ಪ್ರತೀಕದಂತಿರುವ ನಿರ್ಮಲ ಮನಸ್ಸಿನ ಹೆಣ್ಣುಮಕ್ಕಳ ಹೃದಯದಿಂದ ಹೊರಬಂದುವು. ಜನಪದ ಸಾಹಿತ್ಯ ಸ್ತ್ರೀಯರು ಕನ್ನಡ ಸಾಹಿತ್ಯ ಮಾತೆಗರ್ಪಿಸಿದ ಹೀರಾವಳಿ.

ಕನ್ನಡದಲ್ಲಿ ಕಾದಂಬರಿಗಳನ್ನು ಬರೆದ ಮಹಿಳೆಯರ ಸಂಖ್ಯೆ ಹೆಚ್ಚಲ್ಲವಾದರೂ ಬರೆದ ಕಾದಂಬರಿಗಳು ಸ್ವಾರಸ್ಯಯುತವಾಗಿ ವಾಚಕರ ಮನಸ್ಸನ್ನು ಸೆರೆಹಿಡಿಯಲು ಶಕ್ತವಾದವುಗಳು. ಗಾಂಧೀಜಿಯವರಿಂದ ಭಾರತದ ಕೋಗಿಲೆ ಎಂಬ ಬಿರುದನ್ನು ಪಡೆದು ಪರಕೀಯ ಭಾಷೆಯಲ್ಲೂ, ತಾಯ್ನುಡಿಯಲ್ಲಿಯೂ ಸಾಹಿತ್ಯ ನಿರ್ಮಾಣ ಮಾಡಿ ಪರದೇಶಿಯರಿಂದ ಹೊಗಳಲ್ಪಟ್ಟಂತಹ ಕೃತಿಯನ್ನು ರಚಿಸಿ ಭಾರತದ ನಾರಿಯರಿಗೆ ಭೂಷಣಪ್ರಾಯ ಎನಿಸಿಕೊಂಡವರು ಶ್ರೀಮತಿ ಸರೋಜಿನಿ ನಾಯ್ಡು. ಶ್ರೀಮತಿ ಉಮಾದೇವಿ ರಾಷ್ಟ್ರದ ವಿಭಜನೆಯಿಂದುಂಟಾದ ಸಾಮಾಜಿಕ ಸಮಸ್ಯೆಯ ಚಿತ್ರವನ್ನು ಸ್ವೈಜ ರೀತಿಯಲ್ಲಿ ಚಿತ್ರಿಸಿದ್ದಾರೆ.

ಶ್ರೀಮತಿ ಲಲಿತಾಂಬಾ ಕೌಟುಂಬಿಕ ಜೀವನ ಚಿತ್ರಣದ ಮೂಲಕ ಸಾಮಾಜಿಕ ಸಮಸ್ಯೆಗಳಿಗೆ ರೂಪುಕೊಟ್ಟಿದ್ದಾರೆ. ಶ್ರೀಮತಿಯರಾದ ಶಾಂತದೇವಿ ಮಾಳವಾಡ ಖ್ಯಾತನಾಮ ಲೇಖಿಕಿ. ಸಾಮಾಜಿಕ ವಿಷಯಗಳಲ್ಲೂ ಮಕ್ಕಳ ಮನೋವಿಶ್ಲೇಷಣೆಯ ಕಲವು ಲೇಖನಗಳೂ ಕನ್ನಡ ಸಾಹಿತ್ಯ ವಾಹಿನಿಯೊಂದಿಗೆ ನಿರಂತರವಾಗಿ ಹರಿಯುತ್ತಿದೆ. ಉತ್ತರ ಕರ್ನಾಟಕದವರೇ ಆದ ಶ್ರೀಮತಿ ಚಂದ್ರಿಕಾ ಕೊಪ್ಪರ ಗೀತಾದೇವಿ ಕುಲಕರ್ಣಿ, ಸರಸ್ವತೀ ದೇವಿ ಗೌಡರ, ಚಂಪಾ ಮಹಿಷಿ ಮುಂತಾದವರು ಕನ್ನಡ ಸಾಹಿತ್ಯಾರಾಧಕರು. ಶ್ರೀಮತಿ ಸರೋಜಿನಿ ದೇವಿ ಮಹಿಷಿ ಸುಪ್ರಸಿದ್ಧ ಲೇಖಕರೂ ಭಾಷಣ ಕರ್ತರೂ ಆಗಿ, ಆಧುನಿಕ ಮಹಿಳೆಯರಿಗೆ ಆದರ್ಶದ ಮಟ್ಟದಲ್ಲಿದ್ದಾರೆ. ಸರಸ್ವತೀ ದೇವಿ ಗೌಡರು ಐತಿಹಾಸಿಕ ಮಹಿಳೆಯರ ಹಲವು ಚಿತ್ರಗಳನ್ನೂ ಬಿಡಿಸಿದ್ದಾರೆ. ಅಲ್ಲದೆ ಮಹಿಳಾ ಜೀವನದ ಸಮಸ್ಯೆಗಳನ್ನು ವಿಶ್ಲೇಷಿಸಿ ಮತ್ತೊಂದು ಕೃತಿಯನ್ನು ರಚಿಸಿರುವರು.

ಶ್ರೀಮತಿ ಕೊಪ್ಪರದ ಲೇಖನಿ ಪತ್ರಿಕಾ ವ್ಯವಸಾಯದಲ್ಲಿ ಉತ್ತಮ ಫಸಲನ್ನು ನೀಡುತ್ತಿದೆ. ಎಂ. ಕೆ. ಜಯಲಕ್ಷ್ಮಿ ಅಮ್ಮನವರ ಕಥೆ ನಾಟಕಗಳೆರಡೂ ರಸಿಕ ಹೃದಯಿಗಳ ಕುತೂಹಲವನ್ನು ಕೆರಳಿಸುತ್ತಿದೆ.

ಶ್ರೀಮತಿಯರಾದ ವಾಣಿ, ಎಚ್. ಯನ್. ಕಾತ್ಯಾಯಿನಿ ಸರಸ್ವತಿ ಬಾಯಿ ರಾಜವಾಡೆ, ಜಯಲಕ್ಷ್ಮಿ ಆರ್. ಶ್ರೀನಿವಾಸನ್, ರಾಜಲಕ್ಷ್ಮಿ ಮುಂತಾದವರು ಸುತ್ತುಮುತ್ತಲಿನ ಮಾನವ ಜೀವನದಲ್ಲಿ ಉಂಟಾಗುತ್ತಿರುವ ಕ್ರಾಂತಿಯನ್ನು ಕೂಲಂಕುಷವಾಗಿ ಅರಿತು ಚಿತ್ರಿಸಿದ್ದಾರೆ. ಸಮಸ್ಯೆಯ ತೀವ್ರ ಅರಿವು ಇವರ ಕೃತಿಗಳಲ್ಲಿ ಮೂಡಿ ಬಂದ ಕಾರಣ ಶಕ್ತಿಯುತ ಬರಹಕ್ಕೆ ಇದೊಂದು ಸ್ಫೂರ್ತಿಯಾಗಿದೆ. ವೈದ್ಯಕೀಯ ವೃತ್ತಿಯಲ್ಲಿದ್ದು ಎರಡು ಮೂರು ಕಾದಂಬರಿಗಳ ಹೊತ್ತಿಗೆಯನ್ನರ್ಪಿಸಿದ್ದಾರೆ ಶ್ರೀಮತಿ ಅನುಪಮಾ ನಿರಂಜನ.

ಎಳವೆಯಲ್ಲಿಯೇ ಬಹುಮುಖದ ಪ್ರತಿಭೆಯನ್ನು ತೋರಿದ ಶ್ರೀಮತಿ ಶಂಕರ್ ಅನುಸೂಯಾ ತ್ರಿವೇಣಿಯವರ ಕೃತಿಗಳು ಸಾಹಿತ್ಯ ಮಾತೆಗರ್ಪಿಸಿದ ಅಮೌಲಿಕ ಕಾಣಿಕೆಯಾಗಿದೆ. ತ್ರಿವೇಣಿಯವರ ಒಟ್ಟು ಕಾದಂಬರಿಗಳ ಸಂಖ್ಯೆ ಇಪ್ಪತ್ತೆರಡು. ಅದರಲ್ಲಿ ಮೊತ್ತ ಮೊದಲನೆಯದು ಅಪಸ್ವರ. ಕೊನೆಯ ರಚನೆ ಶರಪಂಜರ. ಹೆಣ್ಣಿನ ಪರಾವಲಂಬನ ನಿಷ್ಠೆ, ತ್ಯಾಗ ಇವುಗಳನ್ನು ಕಲ್ಲು ಕರಗಿಸುವ ರೀತಿಯಲ್ಲಿ ಚಿತ್ರಿಸುವುದರಲ್ಲಿ ತ್ರಿವೇಣಿಯವರ ಲೇಖನಿ ಮೊನೆಯಾಗಿದೆ. ಹೆಣ್ಣು ಎಷ್ಟು ವಿದ್ಯಾವಂತೆಯಾದರೂ ಆಕೆಯ ಸ್ಥಾನ ಗಂಡಿನ ಹೃದಯದಲ್ಲಿ ಎಂಬ ಸುಂದರವಾದ ಚಿತ್ರಣವಿದೆ ಅಪಸ್ವರದಲ್ಲಿ. ತ್ರಿವೇಣಿಯವರಿಗೆ ಬಹುಮುಖದ ಪ್ರತಿಭೆಯನ್ನು ಒದಗಿಸಿದ ಕೃತಿ 'ಬೆಕ್ಕಿನ ಕಣ್ಣು' ಮಲತಾಯಿಯ ಕಿರುಕುಳದಿಂದ ಬೆಂದ ಹುಡುಗಿ ಮನೋರೋಗಿಯಾಗಿ ಕಡೆಗೆ ಹೇಗೆ ಅದರಿಂದ ಮುಕ್ತಳಾದಳು ಎಂಬ ಮನೋವೇದಕವಾದ ಕಥೆ ಎಂಥವರ ಮನಸ್ಸನ್ನೂ ಕರಗಿಸಬಲ್ಲುದು. ತ್ರಿವೇಣಿ ದೊಡ್ಡ ಮನಶ್ಶಾಸ್ತ್ರಜ್ಞೆ. ಇವರ ನಿರೀಕ್ಷಣೆ ವಿಶ್ಲೇಷಣೆ ಬಹು ಸೂಕ್ಷ್ಮ. ಮಕ್ಕಳಿಲ್ಲದ ದುಃಖ ತ್ರಿವೇಣಿಯವರನ್ನು ಕೊರಗಿಸುತ್ತಿತ್ತು. ಮಗುವಾಗುವ ಯೋಗ ಒದಗಿ ಬಂದರೂ ಆ ಕಾಲ ಹೆರಿಗೆಯಿಂದ ಮಗು ತೀರಿಹೋಗಿತ್ತು. ಆ ಸಂದರ್ಭ 'ಅತಿಥಿ ಬರಲಿಲ್ಲ' ಎಂಬ ಹೃದಯ ವಿದ್ರಾವಕ ಕಥೆಯೊಂದನ್ನು ಬರೆದು ಮುಗಿಸಿದರು. ಮತ್ತೆ ಇದರ ಪುನರಾವರ್ತನೆ. ಅವರು ಬಯಸಿದ ಅತಿಥಿಯ ಆಗಮನವೇನೋ ಆಯಿತು. ಆದರೆ ಅತಿಥೇಯಳೇ ಇಲ್ಲದ ಹಾಗಾಯ್ತು. ಹನ್ನೊಂದು ದಿವಸದ ಹಾಲು ಹಸುಳೆಯನ್ನು ಬಿಟ್ಟು ತ್ರಿವೇಣೀ ಕಣ್ಣು ಮುಚ್ಚಿದರು. ಕೇವಲ ಮೂವತ್ತೈದು ವರ್ಷ ವಯಸ್ಸಿನ ಈ ಅಂತರದೊಳಗೆ ಗೃಹಿಣಿಯಾಗಿದ್ದುಕೊಂಡು ಸಾಹಿತ್ಯಕ್ಕೆ ಅಸಾಧಾರಣ ಸೇವೆ ಸಲ್ಲಿಸಿದ ತ್ರಿವೇಣಿ ವ್ಯಕ್ತಿ ಅಲ್ಲ, ಅದೊಂದು ದಿವ್ಯ ಶಕ್ತಿ. ಇಂಥಾ ಶಕ್ತಿಯನ್ನು ಮೆರೆಸಿ ಬೆಳೆಸಿಕೊಂಡಿರುವ ಭಾಗ್ಯ ಕನ್ನಡಿಗರಿಂದ ಅನಿರೀಕ್ಷಿತವಾಗಿ ವಂಚಿತವಾಗಿ ಹೋಯ್ತು. ತ್ರಿವೇಣಿ ಹಾಗೂ ಜಯಲಕ್ಷ್ಮಿ ಅಮ್ಮ ಇವರೀರ್ವರ ಅಕಾಲ ಮರಣದಿಂದ ಸಾಹಿತ್ಯ ಕಣಜ ಬರಡಾಯ್ತು ತುಂಬಿಕೊಳ್ಳಲಾಗದ ಸಂಪತ್ತೊಂದು ನಮ್ಮಿಂದ ವಂಚಿತವಾಯ್ತು.

ಅನಾದಿ ಕಾಲದಿಂದಲೂ ಸ್ತ್ರೀಯರು ಸಾಹಿತ್ಯ ಸೇವೆ ಸಲ್ಲಿಸುತ್ತ ಬಂದಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಅನುಪಮ ಕೊಡುಗೆಯನ್ನಿತ್ತಿದ್ದಾರೆ. 'ಸ್ತ್ರೀ' ಎಂದರೆ ಮನೆಯೊಳಗಿನ ಸೊತ್ತು ಎಂದು ತಿಳಿದುಕೊಂಡಿದ್ದ ಕಾಲದಿಂದಲೂ ಎತ್ತರದಿಂದ ಧುಮುಕುವ ಪ್ರವಾಹದಂತೆ ಪ್ರತಿಭೆಯ ಬಲದಿಂದ ಅವರ ಸಾಹಿತ್ಯ ವಾಹಿನಿ ಧುಮುಕಿದೆ. ಹಾಗಿರುವಾಗ್ಯೆ ಈ ಸುಧಾರಿತ ಸಮಾಜದಲ್ಲಿ ಸ್ತ್ರೀಯರಿಂದ ಕನ್ನಡ ಸಾಹಿತ್ಯ ಪ್ರಜ್ವಲಿಸಲು ಹೆಚ್ಚು ಕಾಲ ಕಾಯಬೇಕಾಗಿಲ್ಲ. ಸುಶಿಕ್ಷಿತ ಮಹಿಳೆ ಸಮಾಜ ನಿಂದೆಗೆ ಹಿರಿಯರ ಸಂಪ್ರದಾಯಕ್ಕೆ ಎಷ್ಟಕ್ಕೂ ತಲೆ ತಗ್ಗಿಸುವುದಿಲ್ಲ ಮಾತ್ರವಲ್ಲ ವೇಷ, ಭೂಷಣ ರೀತಿ, ನೀತಿ, ನಡಾವಳಿಕೆಗಳಲ್ಲಿಯೂ ಪುರುಷನನ್ನು ಅನುಸರಿಸುತ್ತಾಳೆ. ಇಂಥ ಪರಿಸರದಲ್ಲಿ ಸ್ತ್ರೀಯರಿಂದ ಸಾಹಿತ್ಯ ಬೆಳಗಲು ಹೆಚ್ಚು ಸಮಯಾವಕಾಶ ಅವಶ್ಯವಿಲ್ಲ.

ಪ್ರತಿಭಾ ಸಂಪನ್ನೆಯರಾದ ಸ್ತ್ರೀ ಸಾಹಿತಿಗಳು ಸಾಹಿತ್ಯ ಮಾತೆಯ ಸುವರ್ಣ ಗರ್ಭದಲ್ಲಿ ಜನಿಸಿ ಕನ್ನಡ ಸಾಹಿತ್ಯವನ್ನು ಬೆಳಗಿಸಲಿ. ಅತಿ ಹೆಚ್ಚಿನ ಕೃತಿಗಳು ಸ್ತ್ರೀಯರಿಂದ ರಚಿಸಲ್ಪಟ್ಟು ಸಾಹಿತ್ಯ ಕಣಜವನ್ನು ತುಂಬಿಸಿ ಕೊಡಲಿ. ಸಿರಿಗನ್ನಡ ಮೊಳಗಲಿ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ನಚಿಕೇತ'ರ
ಹೃದಯಸ್ಪರ್ಶಿ
ನವೀನ ಕಾದಂಬರಿಗಳು

ಹಸುರು ಹಂಸ
ಬೆಲೆ: ರೂ. ಎರಡು.

ಋಣ ಯಾತ್ರೆ
ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ
ಬೆಲೆ ರೂ. 2—00

ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಮಹಿಳಾಮಂಡಳ

ಭಾಗ್ಯಶಾಲಿನಿ—ಭಾರತೀಯ ಮಹಿಳೆ

ಹೆಣ್ಣಿನ ಸ್ಥಾನ ಅಡಿಗೆಯ ಕೋಣೆಯಲ್ಲೇ; ಹೆಣ್ಣು ಗಂಡಸಿನ ಗುಲಾಮಳು ಎಂದೆಲ್ಲಾ ಗಂಡಸು ಹೆಂಗಸಿನ ಬಗ್ಗೆ ಹೇಳುವ ಕಾಲ ಜಗತ್ತಿನಿಂದಲೇ ಹಾರಿ ಹೋಗುತ್ತಿದೆ. ಮುಕ್ಕಾಲು ಶತಮಾನದ ಹಿಂದೆ, ಡಚ್ ಸಿಂಹಾಸನವು ಸ್ತ್ರೀ ಉತ್ತರಾಧಿಕಾರಿಯೊಬ್ಬಳ ಕೈಗೆ ಬಂದಿತು. ಅಂದಿನಿಂದ ಇಂದಿನ ವರೆಗೂ, ಅಲ್ಲಿ ಆ ಸಿಂಹಾಸನಕ್ಕೆ ಮಹಿಳೆಯರೇ ಬರುತ್ತಿದ್ದಾರೆ. ಹಿಂದೆ ಸ್ತ್ರೀ ಕುಲಕ್ಕೆ ಅಲ್ಲಿನ ಪುರುಷರು ಎಸಗಿದ ಪಾಪಕ್ಕೆ ಇದು ಪ್ರಾಯಶ್ಚಿತ್ತವೋ, ಏನೋ!

ಎಪ್ಪತ್ತೈದು ವರ್ಷಗಳ ಹಿಂದೆ, ನೆದರ್‌ಲೆಂಡ್ಸಿನ ಸಿಂಹಾಸನದ ಸ್ಥಿತಿಗತಿಗಳನ್ನೇ ಬದಲಿಸುವಂತಹ ಘಟನೆಯೊಂದು ನಡೆಯಿತು. ಆಗ ಆ ದೇಶವನ್ನು ಆಳುತ್ತಿದ್ದ ರಾಜನು ಹಾಸಿಗೆ ಹಿಡಿದು ನರಳಿದಾಗ, ಇನ್ನೂ ಪ್ರಾಯದವಳೇ ಆಗಿದ್ದ ರಾಣಿ ಎಮ್ಮಾ ವಿಧಿಯಿಲ್ಲದೆ, ರಾಜ್ಯಸೂತ್ರಗಳನ್ನೂ ಕೈಗೆ ತೆಗೆದುಕೊಂಡಳು. ವ್ಯಾಧಿಯು ವಿಷಮಿಸಿ ರಾಜನು ಮೃತನಾದ. ಆದರೆ, ಸಿಂಹಾಸನದ ಉತ್ತರಾಧಿಕಾರಿಣಿಯೂ, ಏಕೈಕ ಪುತ್ರಿಯೂ ಆದ ರಾಜಕುಮಾರಿ ವಿಲ್ ಹೆಲ್ಮಿನಾಗೆ ಆಗ ತೀರಾ ಚಿಕ್ಕವಯಸ್ಸು. ಅವಳು ಪ್ರಾಪ್ತವಯಸ್ಕಳಾಗಿ ಸಿಂಹಾಸನವನ್ನೇರಲು ಬೇಕಾಗಿದ್ದ ಎಂಟು ವರ್ಷಗಳ ಕಾಲ, ರಾಣಿ ಎಮ್ಮಾ ಮಗಳ ಪರವಾಗಿ ರೀಜೆಂಟ್ ಆಗಿ ರಾಜ್ಯಭಾರ ನಡೆಸಿದಳು. ಅದರ ನಂತರ ೧೮೯೮ರಿಂದ ೧೯೪೮ರವರೆಗೆ, ವಿಲ್ ಹೆಲ್ಮಿನಾ ರಾಣಿಯಾದಳು! ಅವಳ ನಂತರ, ವಿಲ್‌ಹೆಲ್ಮಿನಾಳ ಹಿರಿಯ ಮಗಳಾದ ಜೂಲಿಯಾನ ಪಟ್ಟವೇರಿದಳು. ಈಗ ಮುಂದಿನ ರಾಣಿಯಾಗಿ ರಾಜಕುಮಾರಿ ಬೀಟ್ರಿಕ್ಸ್ ಬೆಳೆಯುತ್ತಿದ್ದಾಳೆ.

ವಿಲ್‌ಹೆಲ್ಮಿನಾ ಹುಟ್ಟಿದ್ದು ೧೮೮೦ರಲ್ಲಿ. ಆಗ ಡಚ್ಚರು 'ಪೂ! ರಾಜನಿಗೆ ಹೆಣ್ಣೇ ಹುಟ್ಟಿತೇ?' ಎಂದು ಬೇಸರದ ಉದ್ಗಾರ ತೆಗೆದಿದ್ದರು. ಅದೇ ೫೮ ವರ್ಷಗಳ ನಂತರ, ಎಂದರೆ ೧೯೩೮ರಲ್ಲಿ ಬೀಟ್ರಿಕ್ಸ್ ರಾಜಕುಮಾರಿ ಜನ್ಮತಾಳಿದಾಗ "ಅಂತೂ ನಮ್ಮಲ್ಲಿ ಹೆಣ್ಣು ಹುಟ್ಟಿತೇ? ನಮ್ಮ ಅದೃಷ್ಟ!' ಎಂದು ಅದೇ ಡಚ್ಚರು ಆನಂದದ ಉದ್ಗಾರ ತೆಗೆದ, ಸಂತಸದಿಂದ ಹಾರಾಡಿ ಕುಣಿದಾಡಿದರು. ಈ ಎರಡೂ ಕಾಲಗಳಲ್ಲಿ ಹಾಲೆಂಡಿನಲ್ಲಿ ಮಹಿಳೆಯರ ಸ್ಥಾನ ಹೇಗಿತ್ತು ಎಂಬುದನ್ನು ಇದರಿಂದ ಅರಿತು ಕೊಳ್ಳಬಹುದಾಗಿದೆ.

೧೮೮೦ರ ಮುನ್ನ ಹೆಣ್ಣಿನ ಬಾಳು ಕಣ್ಣೀರೇ ಎಂದು ಅಲ್ಲಿಯೂ ಭಾವಿಸಲಾಗಿತ್ತು. ೧೯೩೮ರ ನಂತರ ಹೆಣ್ಣು ಗಂಡಿಗಿಂತ ಕಡಿಮೆಯಿಲ್ಲವೆಂಬ ಪರಿಸ್ಥಿತಿಯು ಅಲ್ಲಿ ಹುಟ್ಟಿಕೊಂಡಿತು. ಸಮಾಜದಲ್ಲಿ ಸ್ತ್ರೀಯರಿಗೆ ತಮ್ಮ ಸಮಾನವಾದ ಸ್ಥಾನವನ್ನು ಕೊಡಬೇಕೆಂದು ಡಚ್ಚರು ಅರಿತುಕೊಂಡರು. ಇಂದು ಡಚ್ ಮಹಿಳೆಯರು ಪುರುಷ ವರ್ಗದವರ ಸರಿಸಮಾನ ಸ್ಥಾನಗಳಲ್ಲಿ ಮೆರೆಯುತ್ತಿದ್ದಾರೆ.

ಹಿಂದಿನ ಡಚ್ ಇತಿಹಾಸವನ್ನು ಅವಲೋಕಿಸಿದಲ್ಲಿ, ಡಚ್ ಮಹಿಳೆಯ ಸ್ಥಾನಮಾನಗಳು ಅಷ್ಟೊಂದು ಕೇವಲವಾಗಿರಲಿಲ್ಲವೆಂದು ತಿಳಿದುಬರುವುದು. ಗಂಡ ಹೆಂಡತಿಯರು ಒಂದುಗೂಡಿಯೇ ವ್ಯಾಪಾರ ವ್ಯವಹಾರಗಳನ್ನು ನಡೆಸುತ್ತಿದ್ದರು. ಸ್ತ್ರೀಯರ ಸ್ಥಿತಿಯು ಹೀನ ಸ್ಥಿತಿಗಿಳಿದದ್ದು ಫ್ರಾನ್ಸಿನ ಮಹಾ ವಿಪ್ಲವದ ನಂತರವೇ. ಆಗ, ಉಕ್ಕಿ ಬಂದ ಫ್ರೆಂಚ್ ಸೈನ್ಯವು ನೆದರ್‌ಲೇಂಡ್ಸನ್ನು ಕೈವಶ ಮಾಡಿಕೊಂಡಿತು. ೧೮೧೩ರಲ್ಲಿ, ಫ್ರೆಂಚರನ್ನು ನೆದರ್‌ಲೇಂಡ್ಸಿನಿಂದ ಓಡಿಸಲಾದರೂ, ನೆಪೋಲಿಯನ್ನನ ನ್ಯಾಯಾಂಗವೇ ಅಲ್ಲಿ ಉಳಿದುಕೊಂಡಿತು.

ನೆಪೋಲಿಯನ್ನನಿಗೆ ಹೆಣ್ಣೆಂದರೆ ಕಸಕ್ಕಿಂತ ಕಡೆ ಎಂದು ಇತಿಹಾಸಜ್ಞರು ತಿಳಿಸಿದ್ದಾರೆ. ಅವನ ಪ್ರಕಾರ, ಹೆಂಗಸರನ್ನು ಸಣ್ಣ ಮಕ್ಕಳು ಮತ್ತು ಹುಚ್ಚರು ಮುಂತಾದವರ ವರ್ಗಕ್ಕೆ ಸೇರಿಸಲಾಗಿತ್ತು. ಅವನ ಕಾನೂನಿನಲ್ಲಿ ಹೆಣ್ಣಿಗೆ ಸ್ಥಾನವೂ ಇರಲಿಲ್ಲ! ಸ್ವಾತಂತ್ರ್ಯವೂ ಇರಲಿಲ್ಲ. ತಂದೆ, ಗಂಡ, ಮಗ—ಈ ಮೂವರಲ್ಲಿ ಯಾರಾದರೊಬ್ಬರ ಒಪ್ಪಿಗೆಯಿಲ್ಲದೆ, ಹೆಂಗಸರು ಹೊಸಲು ದಾಟುವುದು ಸಹಾ ಅವನ ಕಾಲದಲ್ಲಿ ಸಾಧ್ಯವಿರಲಿಲ್ಲ. ಒಟ್ಟಿನಲ್ಲಿ ಆ ಕಾಲದ ಡಚ್ ಹೆಂಗಸರು ಜೀವಂತ ನರಕ ವೇದನೆಯನ್ನು ಅನುಭವಿಸುತ್ತಿದ್ದರು.

ಫ್ರೆಂಚರ ಆಡಳಿತ ತೊಲಗಿದ ಮೇಲೆ, ಡಚ್ ಸ್ತ್ರೀಗೆ ಸ್ವಲ್ಪ ಉಸಿರಾಡಲು ಸಾಧ್ಯವಾಯಿತು. ಆದರೆ, ಆಗಲೂ, ಅವಳಿಗೆ ಹೇಳಿಕೊಳ್ಳುವಂತಹ ಸ್ವಾತಂತ್ರ್ಯವೇನೂ ದೊರಕಲಿಲ್ಲ. ಕೆಲ ವರ್ಷ ಕಾಲ ಮೈಗೆ ಒಗ್ಗಿಹೋಗಿದ್ದರಿಂದ ಡಚ್ ಗಂಡಸು ಹೆಣ್ಣನ್ನು ತನ್ನ ಆಜ್ಞಾನುವರ್ತಿಯಾಗಿ ಇಟ್ಟುಕೊಳ್ಳುವುದಕ್ಕೇ ಇಚ್ಛಿಸಲಾರಂಭಿಸಿದ. ಮುಂದಿನ ಕೆಲಕಾಲದ ವರೆಗೂ ಸ್ತ್ರೀಯರು ಕೆಲಸಕ್ಕೆ ಹೋಗುವುದಂತಿರಲಿ, ವಿದ್ಯಾಭ್ಯಾಸಕ್ಕೆ ಹೋಗಲು ಸಹಾ ಕಷ್ಟವಾಗಿತ್ತು.

ಈ ಮಧ್ಯೆ ಅಲ್ಲಿ ಔದ್ಯೋಗಿಕ ಕ್ರಾಂತಿಯುಂಟಾಯಿತು. ಗೃಹಕೈಗಾರಿಕೆಗಳಲ್ಲಿ ತಯಾರಿಸಲಾಗುತ್ತಿದ್ದ ಬಹುಶೇಕ ವಸ್ತುಗಳನ್ನು ಕಾರ್ಖಾನೆಗಳಲ್ಲಿ ತಯಾರಿಸಲಾರಂಭಿಸಲಾಯಿತು. ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಹೇರಳವಾಗಿ ಕಾರ್ಮಿಕರು ಬೇಕಾಗಿ ಬಂದಾಗ, ಸುಮ್ಮನೆಯೇ ಕುಳಿತಿದ್ದ ಹೆಂಗಸರ ಮೇಲೆ ಕಣ್ಣು ಬಿತ್ತು. ಅವರೂ ಕೆಲಸಕ್ಕೆ ಹೋಗಬಹುದೆಂದಾಯಿತು. ಅವರೂ ಪುರುಷ ಕಾರ್ಮಿಕರ ಸರಿಸಮಾನತೆಯನ್ನು ಸಂಪಾದಿಸತೊಡಗಿದರು.

ಇದೇ ಕಾಲದಲ್ಲಿ, ಬ್ರಿಟನ್ ಮುಂತಾದೆಡೆಗಳಲ್ಲಿ ಸ್ತ್ರೀ ಸ್ವಾತಂತ್ರ್ಯ ಚಳುವಳಿಯು ಸ್ವಲ್ಪ ತೀವ್ರ ಕ್ರಮವಾಗಿಯೇ ನಡೆಯುತ್ತಿತ್ತು. ಡಚ್ಚರು ಸ್ವಲ್ಪ ನಿಧಾನವಾಗಿ ಯೋಚಿಸುವವರಾದ್ದರಿಂದ, ಅವರು ಅಷ್ಟೇನೂ ಉಗ್ರವಲ್ಲದ ರೀತಿಯಲ್ಲಿ ಸುಧಾರಣೆಗಳನ್ನು ತರಲಾರಂಭಿಸಿದರು. ಬ್ರಿಟನ್ನಿನಲ್ಲಿಯಂತೂ, ವಿಶ್ವವಿದ್ಯಾಲಯಗಳಲ್ಲಿ ಸ್ತ್ರೀಯರಿಗೆ ಪ್ರವೇಶ ದೊರಕಿಸಿ ಕೊಡುವ ವಿಷಯದಲ್ಲಿ ಕೈ ಕೈ ಹತ್ತಿ, ಕೆಲವಾರು ಸಾವುನೋವುಗಳೂ ಉಂಟಾದವು. ಹಾಲೆಂಡಿನಲ್ಲಿ, ೧೮೭೧ರಲ್ಲಿ, ಮೊಟ್ಟಮೊದಲ ಬಾರಿಗೆ, ಅಲೆಟ್ಟಾ ಜೇಕಬ್ಸ್ ಎಂಬ ತರುಣಿಗೆ ಅನುಮತಿ ದೊರಕಿತು. ಪ್ರಥಮ ಮಹಾಯುದ್ಧದ ನಂತರ, ಡಚ್ ಮಹಿಳೆಯು ಮತ ನೀಡುವ ಹಕ್ಕನ್ನು ಪಡೆದಳು. ಯುದ್ಧ ಕಾಲದಲ್ಲಿ ಸ್ತ್ರೀಯರು ಸಲ್ಲಿಸಿದ್ದ ಸಹಕಾರಕ್ಕೆ ಪಾರಿತೋಷಕದಂತೆ ಈ ಅಧಿಕಾರವನ್ನು ಅವರಿಗೆ ಕೊಡಲಾಯಿತು.

ಮೊದಲನೆಯ ಮತ್ತು ಎರಡನೆಯ ಮಹಾಯುದ್ಧಗಳ ನಡುವಣ ಕಾಲದಲ್ಲಿ, ಅವಿವಾಹಿತ ಸ್ತ್ರೀಯರೆಲ್ಲಾ ಕೆಲಸ ಮಾಡಬಾರದೆಂಬ ಕಾನೂನನ್ನು ಅಲ್ಲಿ ಜಾರಿಗೆ ತರಲಾಯಿತು. ಆದರೆ, ಮತ್ತೆ ೧೯೩೩ರಲ್ಲಿ ಅಲ್ಲಿ ನಿರುದ್ಯೋಗ ಹೆಚ್ಚಾದಾಗ ಅವರಿಗೆ ಕೆಲಸಗಳು ದೊರಕುವುದು ದುಸ್ತರವಾಯಿತು. ಹಾಗೂ, ಹೀಗೂ ಇದೇ ಪರಿಸ್ಥಿತಿಯು ಎರಡನೆಯ ಮಹಾಯುದ್ಧ ಮುಗಿಯುವ ವರೆಗೆ ತಳ್ಳಿಕೊಂಡು ಬಂದಿತು. ಅದಾದ ಮೇಲೆ ಡಚ್ ಮಹಿಳೆಯು ಗಂಡಸಿನ ಸರಿಸಮಾನ ಹಕ್ಕುಗಳನ್ನು ಪಡೆದಳು. ಇದಕ್ಕೆ ಮುನ್ನ, ಡಚ್ ಮಹಿಳೆಯು ವಿದೇಶೀಯನನ್ನು ಮದುವೆಯಾದಳೆಂದರೆ, ಡಚ್ ಪೌರತ್ವವನ್ನು ಕಳೆದುಕೊಳ್ಳುತ್ತಿದ್ದಳು. ಈಗ, ಅದಕ್ಕೂ ವಿನಾಯತಿಯು ದೊರೆತಿದೆ. ಈಗಿನ ಡಚ್ ಮಹಿಳೆಯು ರಾಜಕೀಯ, ಸಾಮಾಜಿಕ ವಿಷಯಗಳಲ್ಲಿ ಸಹ ತೀವ್ರ ಮುನ್ನಡೆಯನ್ನು ಸಾಧಿಸಿದ್ದಾಳೆ ಕೂಡಾ. ಇಂತಹ ಮಹತ್ತರ ಜಯವನ್ನು ಸಾಧಿಸಿದ ಡಚ್ ಮಹಿಳೆಯು ಹೋರಾಟಕ್ಕೆ ರಾಣಿಯೇ ಮುಖಂಡಳಾಗಿದ್ದಳೆಂಬುದನ್ನು ಅಲ್ಲಿಯ ಮಹಿಳೆಯರು ಎಂದಿಗೂ ಮರೆಯುವುದಿಲ್ಲ!

ಸ್ವತಂತ್ರ ಭಾರತದಲ್ಲಿ ಯಾವ ಹೋರಾಟವೂ ಇಲ್ಲದೆ ಸ್ತ್ರೀಯರು ಪುರುಷರೊಡನೆ ಸಮಾನತೆಯನ್ನು ಹೊಂದಿದ್ದಾರೆ. ಭಾರತೀಯ ಮಹಿಳೆಯರು ನಿಜಕ್ಕೂ ಭಾಗ್ಯಶಾಲಿಗಳು!

ಪಾಪ ಮಾತ್ರವಲ್ಲ, ಘಾಟೀನೂ....

(ನಾಲ್ಕನೇ ಪುಟದಿಂದ)

"ಹ್ಞಾಂ.... ಅದು ಸರಿಯೇ .. ಪಾಪ, ಅಯ್ಯೂಬ ಖಾನರು ಅಲ್ಲಿ ನಿರಾತಂಕರಾಗಿಯೇ ಮಲಗಲಿದ್ದಾರೇನ್ನು...."

"ನೀರಸ ಸ್ವಾಗತ ಎಂದಿರಲ್ಲಾ, ಅದು ಹೇಗೆ?"

"ಹೇಗೇಂತಂದ್ರೆ? ಸಾಂಪ್ರದಾಯಿಕ ಗೌರವ ರಕ್ಷೆ ಇತ್ತೂನ್ನು. ಆದರೆ ಗುಂಡುಗಳು ಮೌನವಾಗಿಯೇ ಇದ್ದವಂತೆ...."

"ಹ್ಞಾಂ.... ಆಮೇಲೆ?'

"ಧ್ವಜಗಳು ಹಾರಾಡುತ್ತಿದ್ದರೂ ಜಯಕಾರ ಹಾಕುವವರಿರಲಿಲ್ಲವಂತೆ..."

'ಭಾರೀ ತಮಾಷೆಯಿದೆಯಮ್ಮ. ಯಾಕೆ?'

'ಎಲ್ಲರೂ ತಂತಮ್ಮ ಕಾರ್ಯಗಳಿಗೆ ಹೊರಟು ಹೋಗಿದ್ದರಂತೆ...'

'ಮತ್ತೆ?'

'ಹವೆಯೇನೋ ಉತ್ತಮವಾಗಿತ್ತು. ಸೂರ್ಯನೂ ನೀಲಾಕಾಶದಲ್ಲಿ ಹೊಳೆಯುತ್ತಿದ್ದ. ಪಾಕ್—ಸೋವಿಯತ್ ಧ್ವಜಗಳು ಹಾರಾಡುತ್ತಿದ್ದುದಲ್ಲದೆ ಅಯ್ಯೂಬರಾಗಮನದ ಬೇರೆ ಯಾವ ಸೂಚನೆಗಳೂ ಕಂಡು ಬರಲಿಲ್ಲ.... ಪತ್ರಕಾರರು ಟಾಸ್ ಸಂದೇಶವನ್ನೇ ಕಾಯುತ್ತಿದ್ದರು.... ಆದಾದರೂ ಬರೇ ೨೦೦ ಪದಗಳ ವರದಿಯಿತ್ತಷ್ಟು."

"ಅಂದ್ರೆ, ಅಯ್ಯೂಬಖಾನರ ಆಗಮನವನ್ನು ಯಾರೂ ಲಕ್ಷ್ಯಿಸಲಿಲ್ಲ. ಕೇಳಿ ಹೇಳಿಕೆ ನೀಡಿಸಿಕೊಂಡವನ ಕತೆ ಪೂರ್ತಿ ಪಾಪ...."

"ಅಲ್ಲ, ಈಗ ಪಾಪ ಯಾರೂಂತ?"

'ಯಾಕೆ?'

"ನೋಡು, ಆಗ ಅಂದೆ ಕೇಳು ಪಾಪಾಂತ, ಮತ್ತೊಮ್ಮೆ ಅಂದೆ ಶಾಸ್ತ್ರಿ ಪಾಪಾಂತ, ಈಗ ಜನ್ಸನ್ ಖಾನ ಪಾಪಾಂತ .."

"ಅವರವರ ವಿಷಯದಲ್ಲಿ ಅವರವ್ರು ಪಾಪವೇ ಅಲ್ವೇ!"

"ಅಂದ್ರೆ ನಾನೂ ಪಾಪಾಂತಾಯ್ತು.

'ಹೌದು, ನೀವೂ ಒಂದು ಪಾಪ!"

"ಯಾರಿಗೆ?'

"ಅಂದೆ?"

"ಅಂದ್ರೆ ಏನು? ನೀನು ಇರೋದೂ ಪಾಪ ಅಲ್ವೆ?"

'ಶ್ಶ್ .. ಯಾರಾದ್ರೂ ಕೇಳಿಸಿಕೊಳ್ಳಿಯಾರು ಮತ್ತೆ...."

'ಮತ್ತೆ ಏನು? ಈಗ್ಲೆ . . ."

'ಅಲ್ಲ, ಅಲ್ಲ.. ನೀವು ಭಾರೀ ಘಾಟಿ..

'ಮತ್ತೆ ನೀನು?'

"ನನ್ನನ್ನ ನಾನೇ ಏನು ಹೇಳಿಕೊಳ್ಳೋದು? ನೀನೇ ಅನ್ನು...."

"ಹ್ಞಾಂ.. ನೀನೂ ನನ್ನ ಹಾಗೆಯೇನ್ನು."

"ಸನ್ಯ ಅಷ್ಟೇ ಅಂದಿರಲ್ಲಾ...."

'ಮತ್ತೇನನ್ನ ಬೇಕಿತ್ತು?'

"ಏನೂ ಇಲ್ಲ, ತುಸ ಹತ್ತಿರ ಬನ್ನಿ..."

"ಬಂದೆ..'

"ಸರಿ.. ಹೇಳ್ತೀನೆ...."

"ಅಬ್ಬಾ, ಭಾರೀ ಘಾಟಿ ಕಾಣೇ ನೀನು .."

"ಹೌದು, ನಿಮ್ಮ ಹಾಗೇನೇ ಅಲ್ವೆ?'

"ಹ್ಞಾಂ..ಹ್ಞಾಂ..."

— ಗೋರಾ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S.C. 386/64.

ವಾದಿ: ನಾರಾಯಣ ಸೋಮಯಾಜಿ, ಚಂದ್ರ ಸೋಮಯಾಜರ ಮಗ, ಉಡುಪಿ ತಾಲೂಕು ಕಾರ್ಕಡ ಗ್ರಾಮ.

ಪ್ರತಿವಾದಿರು: 1. ಬಸವ ಮರಕಾಲ (ಮೃತ), ಗುರುವ ಮರಕಾಲನ ಅಳಿಯ.
2. ಬಸವಿ ಹೆಂಗ್ಸು, 1ನೇ ಪ್ರತಿವಾದಿಯ ಹೆಂಡತಿ.

ಸಪ್ಲಿಮೆಂಟು: 3. ಕಾಡ ಯಾನೆ ಚೀರ.
4. ನಾಲಿಂಗ — 1, 2ನೇ ಪ್ರತಿವಾದಿರ ಮಕ್ಕಳು.
5. ಬಸವ—1, 2ನೇ ಪ್ರತಿವಾದಿರ ಅಳಿಯ. ಉಡುಪಿ ತಾಲೂಕು ಕಾವಡಿ ಗ್ರಾಮದಲ್ಲಿರುವವರು. P. O. ಬಾರಕೂರು.

ಮೇಲ್ಕಂಡ ಪ್ರತಿವಾದಿರಿಗೆ ತಿಳಿಯಪಡಿಸುವುದೇನೆಂದರೆ —

ನಿಮ್ಮ ಪೈಕಿ 1, 2ನೇಯವರು ವಾದಿಗೆ ತಾ. 31-5-1961ರಲ್ಲಿ ತಮ್ಮ ಕುಟುಂಬದ ಬಗ್ಗೆ ರೂ 200/- ಪ್ರತಿಫಲ ಪಡೆದು ಆ ಬಗ್ಗೆ ಬರೆಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ಬಾಕಿ ಹಣಗಳ ಬಗ್ಗೆ ವಾದಿಯು ನಿಮ್ಮ ಮೇಲೆ ಮೇಲ್ಕಂಡ ದಾವಾ ಮಾಡಿದ್ದಾಗಿರುತ್ತದೆ. ಸದ್ರಿ ದಾವೆಯನ್ನು ತನಿಖೆ ಬಗ್ಗೆ ತಾ. 22-4-1965ಕ್ಕೆ ಇಟ್ಟಿರುತ್ತಾರೆ. ನೀವು ಸದ್ರಿ ದಾವೆಯಲ್ಲಿ ಆಕ್ಷೇಪಗಳನ್ನೇನಾದರೂ ಹೇಳುವುದಿದ್ದರೆ ಆ ದಿವಸ ಹಗಲು 11 ಗಂಟೆಗೆ ಕೋರ್ಟಿನಲ್ಲಿ ಹಾಜರಿದ್ದು ಕೋರ್ಟಿನವರ ಮುಂದೆ ಹೇಳಿಕೊಳ್ಳತಕ್ಕದ್ದು. ಇಲ್ಲವಾದರೆ ದಾವೆಯು ನಿಮ್ಮ ಗೈರುಹಾಜರಿಯಲ್ಲಿ ಎಕ್ಸ್‌ಪಾರ್ಟಿಯಾಗಿ ತೀರ್ಮಾನಿಸಲ್ಪಡುವುದು. ತಿಳಿದಿರಲಿ.

(By order of the Court)

(Sd.) ಎ. ಎಸ್. ಎಸ್. ಹೆಬ್ಬಾರ್,
ವಾದಿ ಕಡೆ ಎಡ್ವೊಕೇಟ್.

ಕುಂದಾಪುರ, 31-3-1965.

ಎಲ್ಲೆಲ್ಲಿ ಏನೇನು?

ಉಡುಪಿ ಆಹಾರ ಸಮಿತಿ

ಉಡುಪಿಯಲ್ಲಿ ಆಹಾರದ ಗಂಭೀರ ಪರಿಸ್ಥಿತಿಯನ್ನು ಗಮನಿಸಿ ಅಸಹಾಯಕ ಬಡ ಜನರ ಸಹಾಯಾರ್ಥವಾಗಿ ನ್ಯಾಯ ಬೆಲೆಯ ಅಂಗಡಿಗಳ ಮೂಲಕ ಅಕ್ಕಿಯ ಸಾಮಾನ್ಯ ಆವಶ್ಯಕತೆಯನ್ನು ಪೂರೈಸಲು ಇದೇ ಮಾರ್ಚ 22ರಿಂದ ಈ ಸಮಿತಿಯು ಪ್ರಯತ್ನಿಸುತ್ತಿದ್ದುದು ಸಾರ್ವಜನಿಕರಿಗೆ ತಿಳಿದ ವಿಷಯವಾಗಿದೆ. ಈ ಹತ್ತು ದಿನಗಳಲ್ಲಿ ಸಮಿತಿಗೆ ರೂ. 4,271-20 ನಷ್ಟವಾಗಿರುವುದು. ಈ ಅವಧಿಯಲ್ಲಿ ಖರೀದಿಸಿದ 233.85 ಕ್ವಿಂಟಾಲ್ ಅಕ್ಕಿಯ ಬೆಲೆ ರೂ. 23,405-00ರಲ್ಲಿ 31-3-65ರ ಕೊನೆಗೆ ಉಳಿದ 36.53 ಕ್ವಿಂಟಾಲ್ ಅಕ್ಕಿಯ ನ್ಯಾಯಬೆಲೆ ರೂ. 2,995.46 ಕಳೆದು ಉಳಿದ ಮೊಬಲಗು ರೂ. 20,409.54, ನ್ಯಾಯ ಬೆಲೆಯಲ್ಲಿ ಮಾರಿದ 196.97 ಕ್ವಿಂಟಾಲ್ ಅಕ್ಕಿಯ ಮೊಬಲಗು ರೂ. 14,254176, ಕೂಲಿ ಮತ್ತಿತರ ಖರ್ಚು ರೂ. 113.42 ಸೇರಿ ಐನ್ ನಷ್ಟ ರೂ. 4271.20. ಅಂಗಡಿ, ಸಿಬಂಧಿ, ಸಾಗಾಟವೇ ಮೊದಲಾದ ವ್ಯವಸ್ಥೆಗಳು ಧರ್ಮಾರ್ಥವಾಗಿ ಸಮಿತಿಗೆ ದೊರಕಿದುದರಿಂದ ನಷ್ಟವನ್ನು ಕಡಿಮೆಗೊಳಿಸಲು ಸಾಧ್ಯವಾಯಿತು. ಆದರೆ ಪರಿತರ ಪದ್ಧತಿಯು ಜ್ಯಾರಿಗೆ ಬರುವ ತನಕ ಈ ಜವಾಬ್ದಾರಿಯನ್ನು ನಿರ್ವಹಿಸಲು ಸಂಘ ಸಂಸ್ಥೆಗಳ ಹಾಗೂ ಸಾರ್ವಜನಿಕರ ಸಹಾಯವು ಆಗತ್ಯವಿದೆ. ಅಕ್ಕಿಯುಳ್ಳವರು ನ್ಯಾಯ ಬೆಲೆಯಲ್ಲಿ ಅಕ್ಕಿಯನ್ನು ಒದಗಿಸಿ, ಅಥವಾ ಕೊರತೆಯನ್ನು ನೀಗಿಸಲು ನಗದು ಸಹಾಯ ನೀಡಿ ಅದಾ ಮಾರ್ಕೆಟ್ ಧಾರಣೆಯಲ್ಲಿ ಅಕ್ಕಿ ಖರೀದಿಸುವ ಶಕ್ತಿಯುಳ್ಳವರು ನ್ಯಾಯ ಬೆಲೆಯ ಅಂಗಡಿಯಲ್ಲಿ ಅಕ್ಕಿಯನ್ನು ಪಡೆಕೊಳ್ಳದೆ ಸಹಕರಿಸಬೇಕಾಗಿ ಸಮಿತಿ ಅಧ್ಯಕ್ಷ ಶ್ರೀ ಎಂ. ಮಧ್ವರಾಜ್, ಎಂ.ಎಲ್.ಎ. ಇವರು ವಿನಂತಿಸುತ್ತಾರೆ.

ಸತ್ಕಾರ ಸಮಾರಂಭ

ಮಲ್ಪೆ:— ಶ್ರೀ ಎಮ್. ಮಧ್ವರಾಜ, ಎಮ್.ಎಲ್.ಎ. ಇವರ ಸಹೋದರ ಶ್ರೀ ವಿಟ್ಠಲ್ ರಾಜ್‌ರವರ ವಿವಾಹವು ಚಿ. ಸೌ. ಹರಿಣೀಶಾ ಇವರೊಡನೆ ಜರಗಿದುದರ ಸಂತೋಷಾರ್ಥವಾಗಿ ಕಳೆದ ತಾ. ೧೪ರಂದು ಉಡುಪಿಯ ಕಲ್ಪನಾ ಥಿಯೇಟರಿನಲ್ಲಿ ಸತ್ಕಾರ ಸಮಾರಂಭವು ನಡೆಯಿತು. ಈ ಸತ್ಕಾರ ಕೂಟಕ್ಕೆ ಊರಿನ ಅನೇಕ ಗಣ್ಯ ಮಹನೀಯರು ಆಗಮಿಸಿ ವಧೂವರರಿಗೆ ಶುಭ ಕೋರಿದರು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ.

S.C. 761/1964.

ವಾದಿ: ಸುಬ್ರಾಯ ಉಡ್ಪ.

ಪ್ರತಿವಾದಿ: ಎಪ್ರೋಜಿನ್ ಶಿಲ್ವ ಬಾಯಿ ಕೂಡಾ. 2. ಲೂಸಿ ಬಾಯಿ—ಜೇಸಿಸ್ ಶಿಲ್ವರ ವಿಧವೆ.
4. ಜೆರೋಮ್ ಶಿಲ್ವ,
5. ಸುಸ್ಸ ಬಾಯಿ,
6. ಮೆರಿನ್ ಶಿಲ್ವ ಬಾಯಿ,
8. ಯಲೀಜ್ ಶಿಲ್ವ ಬಾಯಿ
— ಗ್ರಿಗೋರಿ ಶಿಲ್ವರ ಮಕ್ಕಳು

2ನೇಯವಳು ಬಡೇರಹೋಬಳಿ ಗ್ರಾಮದ ಪ್ಯಾಂಕ್ಸ ಹಾಡಿಯಲ್ಲಿಯೂ ಮಿಕ್ಕವರು ಕೋಟೇಶ್ವರ ಗ್ರಾಮದಲ್ಲಿಯೂ ಇರುತ್ತಾರೆ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ—

ನೀವು ಕೂಡಾ ಪ್ರತಿವಾದಿರಿಂದ ವಾದಿಗೆ ಬರತಕ್ಕ ಶೋಭಕೃತು ಸಂ|ರದ ಮೂಲಗೇಣಿ ಬಾಕಿಗೆ ವಾದಿಯು ಮಾಡಿದ ಮೇಲಿನ ದಾವೆಯು ತಾ. 21-4-65ಕ್ಕೆ ತಪ್ಸಿಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪವಿದ್ದರೆ ಆ ದಿನ ಬೆಳಿಗ್ಗೆ 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿರುತ್ತದೆ.

(By order of the Court)

T. Tejappa Shetty,
Advocate for Plff.

Coondapur, 2-4-65.

ಬೀಳ್ಕೊಡುವ ಸಮಾರಂಭ

ಕಟಪಾಡಿ: ಮಾರ್ಚ ೨೭ರಂದು ಸ್ಥಳೀಯ ಅಂಬಾಡಿ ಪಿ.ವಿ.ಎಸ್. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ೭ನೇ ದರ್ಜೆಯ ಮಕ್ಕಳ ಬೀಳ್ಕೊಡುವ ಸಮಾರಂಭವು ಮುಖ್ಯೋಪಾಧ್ಯಾಯರಾದ ಶ್ರೀ ಕೆ. ರಾಮರಾವ್ ಆಗಳಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳಿಂದ ದಾನವಾಗಿ ಕೊಡಲ್ಪಟ್ಟ ಗಾಂಧೀಜಿಯ ತೈಲಚಿತ್ರದ ಅನಾವರಣವನ್ನು ಪಂಚಾಯತ್ ಸೆಕ್ರೆಟರಿ ಅನಂತರಾಮರು ಗೈದರು. ಅಧ್ಯಕ್ಷರು ಭಾಷಣಗೈಯುತ್ತಾ ಮಕ್ಕಳನ್ನು ಹರಸಿದರು.

ಚಾರ್ಟರ್ ಅರ್ಪಣಾ ಸಮಾರಂಭ

ಶಿವಮೊಗ್ಗ:— ಶಿವಮೊಗ್ಗದ ಲಯನ್ಸ್ ಕ್ಲಬ್ಬಿಗೆ ಹೊಸತಾಗಿ ಚಾರ್ಟರನ್ನು ಅರ್ಪಿಸುವ ಸಮಾರಂಭವು ಕಳೆದ ತಾ. ೩-೪-೬೫ರಂದು ನೆರವೇರಿತು. ಈ ಸಮಾರಂಭಕ್ಕೆ ಸ್ಥಳೀಯ ಲಯನ್ಸ್ ಕ್ಲಬ್ಬಿನ ಸದಸ್ಯರಲ್ಲದೆ, ಸುತ್ತು ಮುತ್ತಲಿನ ಕ್ಲಬ್ಬುಗಳ ಸದಸ್ಯರೂ ಬಹು ಸಂಖ್ಯೆಯಲ್ಲಿ ನೆರೆದಿದ್ದರು.

ಶಿವಮೊಗ್ಗ ಲಯನ್ಸ್ ಕ್ಲಬ್ಬಿನ ಅಧ್ಯಕ್ಷರಾಗಿ ಶ್ರೀ ಕೃಷ್ಣಪ್ರಭುಗಳು ಕಾರ್ಯವೆಸಗುತ್ತಿದ್ದಾರೆ. ಹಾಗೂ ಒಂದನೇ ಉಪಾಧ್ಯಕ್ಷರಾಗಿ ಡಾ|| ಎಚ್. ಎಸ್. ಹೆಗ್ಡೆಯವರು ಕಾರ್ಯ ನೋಡುತ್ತಿದ್ದಾರೆ. ಶ್ರೀ|| ಹೆಗ್ಡೆಯವರು ದಕ್ಷಿಣಕನ್ನಡಿಗರಾಗಿದ್ದು, ಚಾರ್ಟರ್ ಸಮಾರಂಭದ ಯಶಸ್ಸಿಗೆ ಬಹುವಾಗಿ ಶ್ರಮಿಸಿದ್ದರು.

ಉಡುಪಿಯಲ್ಲಿ ಕನಕದಾಸರ ಚತುಶ್ಶತಮಾನೋತ್ಸವದ ಸಿದ್ಧತೆ

ಉಡುಪಿಯಲ್ಲಿ ಎಪ್ರಿಲ್ ತಿಂಗಳ ತಾ. 24, 25 ಮತ್ತು 26ರಂದು ಕನಕದಾಸರ ನಾಲ್ಕನೇ ಶತಮಾನೋತ್ಸವವನ್ನು ವೈಭವಪೂರ್ಣವಾಗಿ ನೆರವೇರಿಸುವ ಸಲುವಾಗಿ ಡಾ| ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಉತ್ಸವದ ಆಚರಣಾ ಸಮಿತಿಯನ್ನು ರಚಿಸಲಾಯಿತು.

(ಮೂರನೇ ಪುಟದಿಂದ)

ಲ್ಲವೆಂದು ಜನಾಭಿಪ್ರಾಯ ಬಂದ ಮೇಲೆ ಈಗ ಗೆದ್ದವರನ್ನು ಆಯ್ದುಕೊಳ್ಳಲಾಗುತ್ತಿದೆ. ಇದರಿಂದಾಗಿ ಮರು ಚುನಾವಣೆಯನ್ನು ನಡೆಸುವುದು ಅಗತ್ಯವಾಗುತ್ತದೆ. ಇದರ ವೆಚ್ಚ ಅನವಶ್ಯಕವೆನ್ನುವರೂ ಇದ್ದಾರೆ.

ಕರ್ನಾಟಕದ ಮರು ಚುನಾವಣೆಯಲ್ಲಿ ಲೋಕ ಸಭೆಗೆ ಆಯ್ಕೆ ಹೊಂದಿದ್ದ ಕೇಂದ್ರದ ಹಿಂದಿನ ಆಹಾರ ಮಂತ್ರಿ ಅಜಿತಪ್ರಸಾದ ಜೈನರು ಕೊನೆಗೂ ಕೇರಳಕ್ಕೆ ರಾಜ್ಯಪಾಲರಾಗಿ ಹೋದರು. ಆಹಾರ ಪ್ರಶ್ನೆಯನ್ನು ಬಗೆಹರಿಸಲಾರದೆ ಆದು ಹೊರಬಂದ ಜೈನರು ಆಹಾರಪರಿಸ್ಥಿತಿಯು ತೀರಾ ಕಗ್ಗಂಟಾಗಿರುವ ಕೇರಳದಲ್ಲಿ ರಾಜ್ಯಪಾಲರಾಗಿದ್ದಾರೆ; ಅಲ್ಲಿ ಅಧ್ಯಕ್ಷರಾಳಿಕೆಯಿರುವುದರಿಂದ ಸರಕಾರದ ಎಲ್ಲ ಕಾರ್ಯಕ್ರಮಗಳನ್ನೂ ನಿರ್ವಹಿಸುವ ಹೊಣೆಗಾರಿಕೆ ಹೊತ್ತಿದ್ದಾರೆ. ಎಡ ಕಮ್ಯೂನಿಸ್ಟರ ತೀವ್ರ ಚಳವಳಿದ ಭೀತಿ, ರಾಷ್ಟ್ರಪತಿ ಆಳಿಕೆಗಿರುವ ವಿರೋಧ, ಆಹಾರ ಸಮಸ್ಯೆ—ಇವುಗಳಿಂದ ಹದಗೆಟ್ಟ ಕೇರಳದಲ್ಲಿ ಜೈನರು ಯಶಸ್ವಿಯಾದಾರೇ ಎಂದು ಕೇಳುವವರಿದ್ದಾರೆ. ಪ್ರಧಾನಿಗಳೊಡನೆ, ಕೇರಳದ ಎಂ. ಪಿ.ಗಳೊಡನೆ ಸಂಪೂರ್ಣ ಪರ್ಯಾಲೋಚನೆ ನಡೆಸಿದ ನಂತರವೇ ಅವರು ಈ ಪದವನ್ನು ಸ್ವೀಕರಿಸಿದುದರಿಂದ, ಯಶಸ್ವಿಯಾಗುವ ಧೈರ್ಯ ಅವರಿಗಿದೆ. ಪ್ರಜಾಸ್ವಾತಂತ್ರ್ಯ ಸರಕಾರವು ಅಯಶಸ್ವಿಯಾದ ಕೇರಳದಲ್ಲಿ ರಾಷ್ಟ್ರಪತಿಯಾಳಿಕೆಯಾದರೂ ಯಶ ಪಡೆಯಲಿ.

ವಿಕ್ಟೋರಿಯಾ ಜ್ಯೂಬಿಲೀ ಯೂನಿಯನ್ ಕ್ಲಬ್ಬಿನ ಡಾ| ಯು. ಸುಂದರರಾಮ ಪೈ ಸ್ಮಾರಕ ರಂಗಮಂಟಪದಲ್ಲಿ ಈ ಮೂರು ದಿನಗಳ ಸಮಾರಂಭವನ್ನು ಜರಗಿಸಲಾಗುವುದು. ಸಾರ್ವಜನಿಕರ ಸರ್ವ ಸಹಕಾರದಿಂದ ಈ ಸಮಾರಂಭವು ಜರಗಲಿರುವುದು. ಸುಮಾರು 20 ಸಾವಿರ ರೂ.ಗಳ ವೆಚ್ಚದಲ್ಲಿ ಕನಕದಾಸ ಗುಡಿಯನ್ನು ರಚಿಸಲಾಗುವುದು. ಅಲ್ಲದೇ ಕನಕದಾಸ ಮೂರ್ತಿಯೊಂದನ್ನು ಕನಕನ ಗುಡಿಯಲ್ಲಿರಿಸಲಾಗುವುದು. ಮಧ್ವರಾಜರು ಇದನ್ನು ಒದಗಿಸುವರೆಂದು ತಿಳಿದುಬಂದಿದೆ. ಈ ಉತ್ಸವದ ಅಂಗವಾಗಿ ಕನಕದಾಸರ ಭಜನಾ ಮಂದಿರವನ್ನು ಸ್ಥಾಪಿಸಬೇಕೆನ್ನುವುದನ್ನೂ ಸಮಿತಿ ಪರ್ಯಾಲೋಚಿಸಿತು. ಕೊನೆಯಲ್ಲಿ ಶ್ರೀ ಮಧ್ವರಾಜರು ವಂದನೆಗಳನ್ನರ್ಪಿಸಿದರು.

ಹೊಸ ರಾಷ್ಟ್ರೀಯ ದಿನಾಚರಣೆ

ಮುಂಡಾಜೆ: ತಾ. 28-3-65ರಂದು ನಡೆದ ಸ್ಥಳೀಯ ಯುವಕ ಮಂಡಲದ ವಾರ್ಷಿಕೋತ್ಸವದಲ್ಲಿ ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್, ಅವರು ಬರೆದ, ಬೆಳ್ತಂಗಡಿ ತಾಲ್ಲೂಕು ಮಟ್ಟದ ನಾಟಕ ಸ್ಪರ್ಧೆಯಲ್ಲಿ ಸಾವಿರಾರು ಜನರ ಮೆಚ್ಚಿಕೆ ಗಳಿಸಿದ ಪ್ರಥಮ ಸ್ಥಾನವನ್ನು ಪಡೆದ "ಇದು ನಮ್ಮ ಸ್ವಾತಂತ್ರ್ಯವೇ?" ಎಂಬ ಹೊಸ ರಾಷ್ಟ್ರೀಯ ನಾಟಕವು ಇಲ್ಲಿಯ ಯುವಕ ಮಂಡಲದವರಿಂದ ಪ್ರದರ್ಶಿಸಲ್ಪಟ್ಟಿತು. ಸಾವಿರಾರು ಸಂಖ್ಯೆಯಲ್ಲಿ ನೆರೆದ ಕಲಾಪ್ರೇಮಿಗಳ ಮುಂದೆ ಪ್ರದರ್ಶಿಸಲ್ಪಟ್ಟ ಈ ನಾಟಕವು ಹೃದಯಸ್ಪರ್ಶಿಯಾಗಿದ್ದು "ನಾಟ್ಯಕಲಾ ವಿಶಾರದ", "ಅಭಿನಯ ಭೂಷಣ" ಮಾನ್ಯ ಶ್ರೀ ಎಂ. ರಂಗನಾಥ ಭಟ್ಟರ ತುಂಬು ಹೃದಯದ ಆಶೀರ್ವಾದವನ್ನು ಪಡೆಯಿತು.

In the Munsiff's Court of Coondapoor

O. S. No .157 of 1960

R. E. P. No 496 of 1964

Keshava Shanbhag ... Petitioner

versus

Seetharama Hebbara (deceased) & others ... Respondents.

To

5. Mahalaxmiamma, wife of Lamminarayana Hebbara, 569/II Cross, Hanumantha Nagar. Bangalore-19.
6. Sooryanarayana Hebbar, son of Seetharama Hebbar, C/o Sri Krishna Bhavan, Kargal.
7. Laxminarayana Hebbar, son of Seetharama Hebbar, Teacher, Board Elementary School, Brahmavar.
8. Kamalamma, wife of Rama Janardhana Hegde, Board School, Konar (North Kanara)

Notice of attachment

Please take notice that the ten shares numbered 813 to 822 of The Karnataka Theatre Ltd. Mangalore, standing in the name of late See Seetharama Hebbar, the 1st—defendant in the above suit, along with all accrued and unpaid dividends, including the dividends of Rs. 40/- for the year 1963-64 have been attached by an order of the court passed in the above execution petition and you are therefore prohibited and restrained until further orders of the court, from making any transfer of the said shares or from receiving payment of any dividends thereon. The above execution petition stands posted to 8—4—1965.

(By order of court)

K. R. Shanbhogue,
Advocate for Petitioner.

ಯಕ್ಷಗಾನ

ಮಡಂತ್ಯಾರು: ಇಲ್ಲಿ ಬೆಳ್ತಂಗಡಿ ತಾಲೂಕು ಮಟ್ಟದಲ್ಲಿ ನಡೆದ ಯಕ್ಷಗಾನ ಸ್ಪರ್ಧೆಯಲ್ಲಿ ಸಾವಿರಾರು ಜನರ ಮೆಚ್ಚಿಕೆ ಗಳಿಸಿದ ಶ್ರೀ ಯು. ವಾಸುದೇವ ನಾಯಕರು ಬರೆದ "ಯಕ್ಷಗಾನ ಯುವಕ ಮಂಡಲ" ಎಂಬ ಯಕ್ಷಗಾನ ಸಾಹಿತ್ಯದ ನೂತನ ಕೃತಿಯು ಪ್ರಥಮ ಸ್ಥಾನ ಪಡೆದು ಶ್ರೀ ಧರ್ಮಸ್ಥಳ ಯುವಕ ಮಂಡಲದ ಕಲಾವಿದರು ಪ್ರಥಮ ಪುರಸ್ಕಾರವನ್ನು ಪಡೆದರು.

ಈ ಯಕ್ಷಗಾನ ಕೃತಿಯಲ್ಲಿ—ರಾಷ್ಟ್ರೀಯ ಅಭಿವೃದ್ಧಿ ವಿಸ್ತರಣಾ ಯೋಜನೆಯ ಪ್ರತಿಯೊಂದು ಚಟುವಟಿಕೆಗಳನ್ನೂ ಸಹಾ ಹೃದಯಂಗಮವಾಗಿ ನಿರೂಪಿಸಲಾಗಿದ್ದು ಇದು ಒಂದು ನೂತನ ಪ್ರಯೋಗವಾಗಿದೆ.

ವಂದನಾರ್ಪಣೆ

ಕಳೆದ ವಾರದಲ್ಲಿ ನವಯುಗದ ಪ್ರಚಾರಾರ್ಥವಾಗಿ ತೆರಳಿದಾಗ ಶಿವಮೊಗ್ಗಾದಲ್ಲಿ ಡಾ| ಎಚ್. ಎಸ್. ಹೆಗ್ಡೆ, ಶ್ರೀ ಅನಂತ ಪದ್ಮನಾಭ, ಶ್ರೀ ಸಿ. ಕೆ. ಜನಾರ್ದನ ನೆಲ್ಲಿ, ಕಡೂರಲ್ಲಿ ಡಾ| ಎ. ಎಸ್. ಕೋಟ್ಯಾರಿ, ಗುಬ್ಬಿಯಲ್ಲಿ ಡಾ|| ಕೆ. ಪಿ. ಭಾಸ್ಕರ, ಚಿಕ್ಕಮಗಳೂರಲ್ಲಿ ಶ್ರೀ ವಿದ್ಯಾಸಾಗರ ಇವರೇ ಮೊದಲಾದವರು ಸಹಕರಿಸಿ ಪ್ರೋತ್ಸಾಹಿಸಿದ್ದಾರೆ. ಡಾ| ಚಂದ್ರಶೇಖರ, ಶ್ರೀ ಕೆ. ರಘುರಾಮ ಶೆಟ್ಟಿ, ಡಾ| ಎ. ಎಂ. ಶೆಟ್ಟಿ ಮೊದಲಾದವರು ಸಂಚಾರ ಕಾರ್ಯದಲ್ಲಿ ನೆರವಾಗಿದ್ದಾರೆ. ಇವರೆಲ್ಲರಿಗೂ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಪರಿಷ್ಕರಣ ಕಾರ್ಯಕ್ಕೆ ನೆರವಾದ ಡಾ| ಕೆ. ಪಿ. ಭಾಸ್ಕರ ಇವರಿಗೆ ನಾವು ಋಣಿಗಳಾಗಿದ್ದೇವೆ.

ಕೆ. ಹೊನ್ನಯ್ಯ ಶೆಟ್ಟಿ,
ಸಂಚಾಲಕ-ಸಂಪಾದಕ.

In the Court of the Munsif of Karkala

O P No. 6/1965

1. Ramadevi Amma, Widow of K Vishwanatha Bhat.
2. K Srimathi Acharya
3. K Ananthrama Bhat
4. Bharati Bhat
5. Kumari Sharada, minor, by guardian mother 1st Petitioner

(2–5: children of K. Vishwanatha Bhat)

Residing at Kunjoor of Yellur village, Udipi Taluk —Petitioners.

The Peitioners have applied Succession certificate for Rs. 663-94 due under Policy no. 23638 of Life Insurance of India—Unit -United India Life Assurance Co., Ltd; and Rs. 353-00 due under Policy No. 170896 of L. I. C. of India Unit:- The Bharath Insurance Co Ltd due to the late K. Vishwanatha Bhat praying for the grant of Succession certificate in favour of the 1st petitioner. If anybody has objection for the grant of the same, he may file his counter and contest the petition before the above Court on 14—4—1965 at 11 A. M. and if there is no objection from anybody the succession certificate will be granted to the 1st petitioner as prayed for in the petition.

V. V. Upadhyaya,
Advocate for Petitioners

Karkala, 5-4-1965

ನವಯುಗಕ್ಕೆ,

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಸುಂದರಿಯ ಸನಿಯದಲ್ಲಿ

(ಎರಡನೇ ಪುಟದಿಂದ)

"ನಾಗೂ, ಒಳ್ಳೆಯ ಕೆಲಸಕ್ಕಿದ ಮೇಲೆ ನಿನಗೆ ಯೋಗ್ಯಳಾದ ಕನ್ಯೆಯೊಡನೆ ವಿವಾಹ ಮಾಡಿಸಿ ನನ್ನ ಕರ್ತವ್ಯ ಮುಗಿಸುವೆ."

"ಹೌದು! ಆ ತಂದೆ ಹೇಳಿದ ಕನ್ಯೆ ಇವಳೇ ಆಗಬಹುದಿತ್ತು" ಎಂದಿತು ರಮೇಶನ ಮನಸ್ಸು.

ರಮೇಶ ಒಮ್ಮೆ ಅವಳತ್ತ ನೋಡಿದ. ಅವಳೂ ತನ್ನತ್ತ ನೋಡುತ್ತಿದ್ದಳು.

"ಏಕೆ, ನೋಡುವುದಿಲ್ಲವೆ? ನೋಡಿ. ಹೇಗೂ ಇನ್ನು ಸುಮಾರು ಹೊತ್ತು ಬಸ್ಸಿನಲ್ಲಿ ಕೂರಬೇಕಲ್ಲ!" ಎಂದಳು ಆ ಸುಂದರಿ.

"ಕ್ಷಮಿಸಬೇಕು...... ಒಂದು ವಿಷಯ ಕೇಳಬೇಕು" ರಮೇಶ ತಡೆದ ಬಾಯಿಯಿಂದ ಕೇಳಿದ.

"ಏನು, ಕೇಳಿ." ಸುಂದರಿ ನಸುನಗುತ್ತ ಹೇಳಿದಳು.

"ನಿಮ್ಮ ಹೆಸರು........"

"ಅಷ್ಟೆ ತಾನೆ! ನನ್ನ ಹೆಸರು ಲತಾ..."

"ಶಾಲೆಗೆ ಹೋಗುತ್ತೀರಾ...."

"ಇಲ್ಲ."

ಮಾತು ಅಲ್ಲಿಗೆ ನಿಂತಿತು. ಮುಂದೆ ಏನು ಕೇಳುವುದು ಎಂದು ಗೊತ್ತಿದ್ದರೂ ಕೇಳಲಾಗಲಿಲ್ಲ. ಕೈಗಳಲ್ಲಿದ್ದ ಪತ್ರಿಕೆಯತ್ತ ದೃಷ್ಟಿ ಹಾಯಿಸಿ ಪತ್ರಿಕೆಯ ಹಾಳೆಗಳನ್ನೊಮ್ಮೆ ತಿರುವಿ ನೋಡಿದ.

"ನಿಮ್ಮನ್ನು ಮೊದಲು ಕಂಡಾಗ ನನಗೆ ಮೊದಲು ಸಂತೋಷವಾಯ್ತು." ಸುಂದರಿ ಲತಾ ನುಡಿದಳು.

ರಮೇಶನಿಗೆ ಈಗಂತೂ ತಾನು ಭಾಗ್ಯವಂತನೆಂದು ಭಾಸವಾಯ್ತು.

ರಮೇಶ ಏನೂ ಉತ್ತರ ಕೊಡಲಿಲ್ಲ. ಬಸ್ಸು ಮುಂದೆ ಮುಂದೆ ಸಾಗುತಿತ್ತು. ಇನ್ನು ಎರಡೇ ನಿಮಿಷದಲ್ಲಿ ಫ್ಲೋರಾ ಫೌಂಟನ್ ಬರುತ್ತದೆ. ತನ್ನ ಆಫೀಸು ಹುಡುಕಬೇಕು, ತಾನು ಕೆಲಸದ ಅಭ್ಯರ್ಥಿಯಾಗಿ ಹೋಗಿದ್ದೇನೆ ಎಂದು ರಮೇಶನಿಗೆ ತಿಳಿದುದು, ಬಸ್ಸಿನಾತ ಒಮ್ಮೆಗೆ ಅನಿರೀಕ್ಷಿತ ಬ್ರೇಕ್ ಹಾಕಿದಾಗಲೇ! ಬಸ್ಸಿನ ಮುಂದುಗಡೆ ಅದಾರೋ ಒಬ್ಬ ಮುದುಕ ಬೀಳುವುದನ್ನು ತಪ್ಪಿಸಲು ಬಸ್ಸಿನ ಡ್ರೈವರ ಹಾಕಿದ ಬ್ರೇಕು. ಆ ರಭಸಕ್ಕೆ ಬಸ್ಸಿನಲ್ಲಿ ಕೂತವರೆಲ್ಲರೂ ಒಮ್ಮೆಗೆ ಅಲುಗಾಡಿದರು. ರಮೇಶನಂತೂ ಎರಡು ಕೈಗಳನ್ನು ಎದುರಿನ ಸೀಟಿನ ಹಿಂಭಾಗಕ್ಕೆ ಬಿಗಿಯಾಗಿ ಹಿಡಿದುಕೊಂಡಿದ್ದರಿಂದ ಅಲುಗಾಡಲಿಲ್ಲ. ಆದರೆ ಆ ಸುಂದರಿ—ಲತಾ ಮಾತ್ರ ರಮೇಶನ ಆ ಕಬ್ಬಿಣದಂತಿರುವ ಕೈಗಳ ಮೇಲೆ ಮುಗ್ಗರಿಸದೆ ಇರಲಿಲ್ಲ. ಆ ರಭಸದಲ್ಲಿ ಆಕೆಯ ಸೆರಗೂ ಜಾರಿ ಅವನ ಕೈಗಳ ಮೇಲೆ ಬಿತ್ತು.

ಲತಾ ಲಜ್ಜಿತಳಾಗಿ ಸೆರಗನ್ನು ಎಳೆದು ಸರಿಪಡಿಸಿಕೊಂಡಳು. ಸೌಂದರ್ಯಾನುಭವವನ್ನು ಮಾಡುತ್ತಿದ್ದ ರಮೇಶನಿಗೆ ಆಕೆಯ ಹೃದಯದ ಮಿಳಿತವನ್ನು ಅರಿಯುವ ಸಂದರ್ಭವೂ ಒದಗಿತು. ಅಂತೂ ಆಕೆ ಸುಂದರಿ. ಆಕೆಯೇ ತನ್ನ ಅರ್ಧಾಂಗಿನಿ ಆಗ ಬೇಕು ಎಂದು ಕೊಳ್ಳುತ್ತಿದ್ದ ರಮೇಶ.

ಫ್ಲೋರಾ ಫೌಂಟನ್ ಬಂದಿತ - ಬಸ್ಸಿನಲ್ಲಿದ್ದವರೆಲ್ಲ ಇಳಿದರು. ರಮೇಶ ಮಾತ್ರ ಏಳಲೇ ಇಲ್ಲ. ಇದು ವರೆಗೆ ಜತೆಯಾಗಿ ಬಂದು ನಾವೀಗ ಬೇರೆ ಬೇರೆಯಾಗುತ್ತಿದ್ದೇವೆಯಲ್ಲಾ ಎಂಬುದೇ ಚಿಂತೆಯಾಗಿತ್ತು ಅವನಿಗೆ.

"ಫ್ಲೋರಾ ಫೌಂಟನ್ ಬಂತು. ಇನ್ನು ಇಳಿಯುವ". ಎಂದಳು ಆ ಸುಂದರಿ—ಲತಾ.

"ಹೌದೆ!" ಎಂದು ರಮೇಶ ಎದ್ದ. ಬಸ್ಸಿನಿಂದ ಇಳಿದ ಲತಾ ಅವನನ್ನು ಅನುಸರಿಸಿದಳು.

"ಒಂದು ವಿಷಯ. ನೀವು ಬೇಸರಿಸದಿದ್ದರೆ ಮಾತ್ರ ಹೇಳುವೆ...." ಲತಾ ಕೇಳಿದಳು.

"ಏನು? ನಿನಗಾಗಿ ನಾನು ಏನು ಮಾಡಬೇಕಾದರೂ ಸಿದ್ಧನಿದ್ದೇನೆ—"

"ನನ್ನ ಮನೆಯ ವರೆಗೆ ಬರಬೇಕು. ಅದಕ್ಕೂ ಮೊದಲು ಒಂದು ಖರೀದಿ ಇದೆ. ಅದನ್ನು ಮುಗಿಸಿ ಹೋಗಬೇಕು."

ರಮೇಶನಿಗೆ ತಾನು ಹೊರಟ ಕೆಲಸದ ಪರಿವೆಯೇ ಇರಲಿಲ್ಲ. ಹೆಚ್ಚೇಕೆ ಮರೆತೇ ಹೋಗಿತ್ತು ಎಂದರೂ ಸರಿಯೆ!

"ಸರಿ" ಎಂದು ಒಪ್ಪಿಕೊಂಡ ರಮೇಶ. ತನಗೇನೂ ಪರಿಚಯವಿರದ ಆ ಸುಂದರಿಯ ಹತ್ತಿರ ಅರ್ಧ-ಮುಕ್ಕಾಲು ಘಂಟೆಯ ತನಕ ಕುಳಿತುಕೊಳ್ಳುವ ಭಾಗ್ಯ, ಆ ಮೇಲೆ ನಡೆದ ಕಣ್ಣುಗಳ ಯುದ್ಧ ಮತ್ತು ಆಕಸ್ಮಿಕ ಬ್ರೇಕ್‌ನಿಂದಾಗಿ ನೋಡಲು ದೊರೆತ ಆ ಸೌಂದರ್ಯ....ಮೊದಲಾದುವುಗಳನ್ನು ನೆನೆ ನೆನೆದು ಸಂತೋಷಗೊಂಡ ರಮೇಶನಿಗೆ ಇದೀಗ ಅವಳೊಡನೆ ಖರೀದಿಗಾಗಿ ಹೊರಡುವ ಯೋಗ! ಆ ಮೇಲೆ ಅವಳ ಮನೆಯಲ್ಲಿ ಭೆಟ್ಟಿಯ ಸೌಭಾಗ್ಯ!

ರಮೇಶ—ಲತಾ ಇಬ್ಬರೂ ಒಂದು ಔಷಧಿ ಅಂಗಡಿಯತ್ತ ಹೋಗಿ ಔಷಧಿ ಪಡೆದದ್ದಾಯಿತು. ಆದರೆ ಆ ಔಷಧಿಯ ಬೆಲೆ ಎಣಿಸಿದುದಕ್ಕಿಂತಲೂ ವಿಪರೀತವಾದ ದರಿಂದ ಅವಳೊಡನೆ ಹಣವಿದ್ದುದು ಸಾಲದಾಯಿತು.

ತನ್ನ ಬಿಗರೆಕಂಗಳನ್ನು ರಮೇಶನತ್ತ ಹಾಯಿಸಿದಳು ಲತಾ. ರಮೇಶನಿಗೆ ಅರ್ಥವಾಯ್ತು. ಆ ಔಷಧಿ ಪಡಕೊಂಡು ಹೊರಡಲನುವಾದಳು.

ಲತಾ ನಕ್ಕಳು. ರಮೇಶನೂ ನಕ್ಕ—ಇಬ್ಬರೂ ಹೊರಬಂದರು.

"ನಿಮ್ಮ ಮನೆಯೆಲ್ಲಿ?" ರಮೇಶ ಕೇಳಿದ.

"ಇಲ್ಲೇ ಚರ್ಚ್‌ಗೇಟ್‌ನಲ್ಲಿ."

"ಮತ್ತೇಕೆ ಶಿವಾಜಿ ಪಾರ್ಕನಿಂದ ಬಂದಿರಿ?"

"ಶಿವಾಜಿಪಾರ್ಕನಲ್ಲಿ ಡಾಕ್ಟರರಲ್ಲಿ ಬಂದಿದ್ದೆ. ಅವರು ಈ ಔಷಧಿ ಪಡಕೊಳ್ಳುವರೇ ಸಲಹೆ ಇತ್ತರು. ಅಲ್ಲದೆ ಆ ಔಷಧಿ ಇಲ್ಲಿ ಮಾತ್ರ ದೊರೆಯುವುದೆಂದೂ ಹೇಳಿದ್ದರು"

"ಮನೆಯಲ್ಲಿ ಯಾರಿಗೆ ಆರೋಗ್ಯವಿಲ್ಲ?" ರಮೇಶ ಕುತೂಹಲದಿಂದ ಕೇಳಿದ

"ಮತ್ಯಾರಿಗೆ? ಮನೆಯವರಿಗೆ ಆಗಾಗ್ಗೆ ಖಾಯಿಲೆ ಬರುತ್ತದೆ. ಈಗ ಬಂದ ಖಾಯಿಲೆ ಬಂದು ಮೂರು ದಿನವಾಯ್ತು. ನೀವು ಸಕಾಲದಲ್ಲಿ ಬಂದುದರಿಂದ ನನಗೆ ಈ ಔಷಧಿ ಪಡೆಯುವರೇ ಆಯ್ತು" ಲತಾ ಸಮಾಧಾನದ ನಿಟ್ಟುಸಿರು ಬಿಟ್ಟಳು.

ರಮೇಶ ಮತ್ತು ಲತಾ ಆಗಾಗಲೇ ಚರ್ಚಗೇಟ್ ತಲುಪಿದ್ದರು. ಲತಾಳ ಮನೆಯೂ ಬಂದಿತ್ತು. ಇಬ್ಬರೂ ಒಳ ಪ್ರವೇಶಿಸಿದರು.

"ನೋಡೀಂದ್ರೆ—ರಮೇಶ್ ಬಂದಿದ್ದಾನೆ" ಲತಾ ನುಡಿದಳು.

ರಮೇಶನಿಗೆ ಆಶ್ಚರ್ಯವಾಯ್ತು.

"ನನ್ನ ಹೆಸರು ನಿನಗೆ ಹೇಗೆ ಗೊತ್ತು?"

"ನೀವು ಉಮೇಶರಾಯರ ಮಗನಲ್ಲವೆ? ಶಿವಾಜಿ ಪಾರ್ಕನಲ್ಲಿ ಪ್ಲಾಟ್ ನಂ. ೯ರಲ್ಲಿ ವಾಸಿಸುವವರಲ್ಲವೆ?" ಲತಾ ಕೇಳಿದಳು.

"ಹೌದು" ರಮೇಶ ಉತ್ತರಿಸಿದ.

"ಸರಿ. ಆ ಉಮೇಶರಾಯರು ಇವರಿಗೆ ದೂರದ ಸಂಬಂಧ. ಅದ್ಯಾವುದೋ ನನಗೊತ್ತಿಲ್ಲ" ಎಂದು ತನ್ನ ಪತಿದೇವನತ್ತ ಕೈ ಮಾಡಿ ತೋರಿಸಿದಳು ಲತಾ.

ರಮೇಶನ ಆಶಾಗೋಪುರ ಕುಸಿದು ಬಿದ್ದಿತ್ತು. ತಾನು ತನ್ನ ಪ್ರೇಯಸಿಯನ್ನಾಗಿ, ಹೃದಯ ರಾಣಿಯನ್ನಾಗಿ ಆರಿಸಿದ ಆ ಸುಂದರಿಗೆ ಆಗಾಗಲೇ ಮದುವೆ ಆಗಿತ್ತು. ಹೆಚ್ಚೇಕೆ ಅವನ ದೂರದ ಸಂಬಂಧ ಬೇರೆ!

ಲತಾ ಮುಂದುವರಿಸಿದಳು—"ಅವರು ಮೊದಲೇ ಹೇಳಿದ್ದರು. ಶಿವಾಜಿ ಪಾರ್ಕಿಗೆ ಹೋದಾಗ ಅಗತ್ಯವಾಗಿಯೂ ನಿಮ್ಮಲ್ಲಿ ಹೋಗಿ ಬರಬೇಕೆಂದು. ಆದರೆ ಬಸ್ಸಿಗಾಗಿ ಕ್ಯೂ ಬೆಳೆದರೆ ನನಗೆ ಇಲ್ಲಿ ಬರಲು ತಡವಾಗಬಹುದೆಂದು ಎಣಿಸಿ ಬಸ್ ಹತ್ತಿ ಬಂದುಬಿಟ್ಟೆ. ಪರಮಾತ್ಮನ ದಯೆಯಿಂದ ನೀವು ಅದೇ ಬಸ್ಸಿನಲ್ಲಿ, ಅದರಲ್ಲೂ ನನ್ನ ಪಕ್ಕದಲ್ಲಿ ಕೂತು ಬರುವ ಭಾಗ್ಯ ಒದಗಿ ಬಂತು. ನನ್ನ ಪರಿಚಯ ನಿಮಗಿಲ್ಲ. ಕಾರಣ ನಾನು ಬರುವಾಗ ನೀವು ಶಾಲೆಗೆ ಹೋಗುತ್ತಿದ್ದ ಸಮಯದಲ್ಲಿ ಬಂದಿರಬಹುದು. ಅಲ್ಲದೆ ನಾನು ಬರುವುದೂ ಕಡಿಮೆ. ಆದುದರಿಂದ ನನ್ನ ಪರಿಚಯ ಕಡಿಮೆ—ಅವರ ಪರಿಚಯ ನಿಮಗಿರಲೇ ಬೇಕು" ಅಂದುಕೊಂಡು ಚಹಾ ತಯಾರಿಸಲು ಹೊರಟಳು ಆ ಸುಂದರಿ—ಲತಾ.

ಹೌದು ಲತಾಳ ಪತಿದೇವ ಜಯರಾಮನ ಪರಿಚಯ ಅವನಿಗೆ ಗೊತ್ತೇ ಇತ್ತು. ಮೂರು ವರ್ಷದ ಹಿಂದೆ ಅವನು ೧೪-೧೫ರ ತರುಣಿಯೊಬ್ಬಳನ್ನು ಮದುವೆ ಆಗಿದ್ದ. ಆದರೆ ಆ ಮದುವೆಗೆ ರಮೇಶನ ತಂದೆ ಮಾತ್ರ ಹೋಗಿದ್ದರು. ರಮೇಶನಿಗಂತೂ ಪರೀಕ್ಷೆ ಇದ್ದುದರಿಂದ ಹೋಗಲಾಗಲಿಲ್ಲ. ತಾಯಿಗೆ ಸೌಖ್ಯವಿರಲಿಲ್ಲ.

ಜಯರಾಮನಿಗೆ ರಮೇಶನು ಬಂದುದನ್ನು ಕಂಡು ಸಂತಸವಾಯ್ತು. ಪರಮಾತ್ಮನ ದಯೆಯಿಂದ ಗುಣಮುಖನಾದನು. ಆದರೆ ರಮೇಶ ಮಾತ್ರ ತಾನು ಬಂದ ಕೆಲಸ ನಡೆದ ಘಟನೆ ಚಿತ್ರಿಸಿಕೊಂಡಾಗ ಕೈಗೆ ಬಂದ ತುತ್ತು ಬಾಯಿಗೆ ಧಕ್ಕಲಿಲ್ಲವಲ್ಲ ಎಂದು ಮರುಗಿದನು.

ಏಳು ದಿನಗಳ ನಂತರ—ಜಯರಾಮ ಉಮೇಶರಾಯರನ್ನು ಕಂಡು ಹೇಳಿದ—ನಾನು ಕೆಲಸ ಮಾಡುವಲ್ಲಿನ ಮಿಲ್ಲಿನಲ್ಲಿ ಒಬ್ಬ ಕ್ಲಾರ್ಕ ಬೇಕಾಗಿದ್ದಾನೆ. ನಿಮ್ಮ ಮಗನ ಹೆಸರು ಕೊಟ್ಟಿದ್ದೇನೆ. ನಾನು ಈ ದಿನ ರಾತ್ರಿ ಹೋಗುವಾಗ ಅವನು ನನ್ನ ಜತೆ ಬರಲಿ."

ರಮೇಶ ಜಯರಾಮನೊಡನೆ ಹೊರಟ

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11-ಬಿ ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು:

● ಶಾಸ್ತ್ರೀಯ ನೇತ್ರಪರೀಕ್ಷೆ—ಲಂಡನ್ನಿನಲ್ಲಿ ನೇತ್ರ ಪರೀಕ್ಷೆಯ ಪದವಿ ಪಡೆದವರಿಂದ

● ಮೆಳ್ಳುದೃಷ್ಟಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ

ಇವಲ್ಲದೆ. ● ಅತ್ಯಾಧುನಿಕ ಫ್ರೇಮುಗಳು= ● ಅತ್ಯುತ್ತಮ ಗ್ಲಾಸುಗಳು

● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು.



NAVAYUGA 8-4-1965

Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೮-೪-೬೫ರಿಂದ ೧೪-೪-೬೫ರ ವರೆಗೆ

೧. ಮೇಷ

ಸಂತತ ಉದ್ಯಮಿಗಳಾದ ನಿಮ್ಮ ಬಯಕೆಗಳು ನಿರಾತಂಕವಾಗಿ ನೆರವೇರಲಿವೆ. ವ್ಯವಹಾರ ಕುಶಲರೂ ಕಾರ್ಯದಕ್ಷರೂ ಆದ ನಿಮಗೆ ನೆರೆಹೊರೆಯವರ ನೆರವೂ ಬಂಧುಗಳ ಸಹಕಾರವೂ ಲಭಿಸುವುದರಿಂದ ಪ್ರಬಲರಾದ ವಿರೋಧಿ ವರ್ಗವನ್ನು ಪರಾಭವಗೊಳಿಸುವಿರಿ. ಆದರೆ ರಾಜಕೀಯ ರಂಗದಲ್ಲಿ ಮಾತ್ರ ನಿಮಗೆ ದೈವವು ವಿಮುಖವಾಗಿರುವುದು. ಸಾಂಸಾರಿಕ ತಾಪತ್ರಯಗಳಿಂದಾಗಿ ಮನಸ್ಸಿಗೆ ನೆಮ್ಮದಿಯಿರದು. ತಾ 8, 9, 14 ಈ ದಿನಗಳು ಸುಖಭೋಗಗಳನ್ನೀಯುವವು.

೨. ವೃಷಭ

ಪ್ರಯೋಜನಗಳ ಅಭಾವದಿಂದಾಗಿ ನೀವಿಂದು ಹೆಚ್ಚಿನ ಕಾಲವನ್ನು ನಿರುದ್ಯೋಗದಿಂದ ಕಳೆವಿರಿ. ದುಡಿಮೆಗಿಂತ ದ್ವಿಗುಣವಾಗಿ ಖರ್ಚುಗಳು ಪ್ರಾಪ್ತವಾಗುವುದರಿಂದ ಹಣದ ಬಿಕ್ಕಟ್ಟು ಹೆಚ್ಚಲಿದೆ. ಸ್ವಜನ ವಿರೋಧ ವಿಯೋಗಗಳಿಗೆ ಗುರಿಯಾದ ನಿಮ್ಮ ಆರೋಗ್ಯವು ಕಫದೋಷದಿಂದ ಕೆಡಲಿದೆ. ಪ್ರವಾಸದಲ್ಲಿ ನಾನಾ ತರದ ವಿಘ್ನ ವಿಡಂಬರಗಳು ಬರಲಿವೆ. ಹೆಚ್ಚಿನ ಗೃಹತಾಪತ್ರಯಗಳಿಂದ ಮುಕ್ತರಾದ ನಿಮಗೆ ತಾ. 10, 11 ಇದ್ದುದರಲ್ಲಿ ಉತ್ತಮವಿವೆ.

೩. ಮಿಥುನ

ಎಂತಹ ದುಃಸಾಧ್ಯವಾದ ಕಾರ್ಯವೂ ಇಂದು ನಿಮಗೆ ತೃಣಸಮವೆನಿಸುವದು. ವ್ಯಾಪಾರ ವ್ಯವಹಾರಗಳಲ್ಲಿ ಅದ್ವಿತೀಯರೆನಿಸಿದ ನಿಮಗೆ ಭೂ ಸಂಬಂಧವಾಗಿ ಹೆಚ್ಚಿಗೆ ಧನ ಲಭಿಸಲಿದೆ. ವಿಶೇಷತಃ ಕೋರ್ಟು ಕಛೇರಿಗಳ ವ್ಯವಹಾರಗಳಲ್ಲಿ ವಿಜಯಶ್ರೀಯು ನಿಮ್ಮನ್ನೇ ಅವಲಂಬಿಸಲಿರುವಳು. ದುಡಿಮೆಯಲ್ಲಿನ ಹೆಚ್ಚಿನ ಭಾಗವನ್ನು ಸದ್ವಿನಿಯೋಗ ಮಾಡುವಿರಿ. ಚಿಕ್ಕಪುಟ್ಟ ಕಾರಣಗಳಿಂದಾಗಿ ಬಂಧು ಜನರೊಳು ಮನಸ್ತಾಪವುಂಟಾಗಲಿವೆ. ತಾ. 8, 9, 12, 13 ಈ ದಿನಗಳಲ್ಲಿ ನಿಮ್ಮ ಬಯಕೆಗಳು ಪೂರ್ಣವಾಗುವವು.

೪. ಕರ್ಕಟ

ನಿಮ್ಮ ಧನಪತಿಯಾದ ರವಿಯು ಉಚ್ಚನಾಗಿ ಕರ್ಮ ಸ್ಥಾನದಲ್ಲೂ ಭಾಗ್ಯಪನಾದ ಗುರುವು ಲಾಭದಲ್ಲೂ ಕುಳಿತ ಕಾರಣ ಇಂದು ನಿಮ್ಮ ಆರ್ಥಿಕ ಭಾಗವು ಅತೀವ ವೃದ್ಧಿ ಹೊಂದಲಿದೆ. ಹಿಂದಿನ ಸಾಲಕಡಗಳಿಂದ ಮುಕ್ತರಾಗಿ ನಿಶ್ಚಿಂತೆಯಿಂದ ಕಾಲ ಕಳೆವಿರಿ. ಆದರೆ ಎಷ್ಟೇ ಮಿತಭಾಷಿಯಾದರೂ ವಾಕ್ಕಲಹವು ಅನಿವಾರ್ಯವಾದೀತು. ಶತ್ರುಜನರ ಕಾಟದಿಂದ ಮುಕ್ತರಾಗಿದ್ದರೂ ಗೃಹತಾಪತ್ರಯಗಳಿಂದ ಪೀಡಿತರಾಗುವಿರಿ. ತಾ. 10, 11, 14 ಈ ದಿನಗಳಲ್ಲಿ ಮೃಷ್ಟಾನ್ನ ಭೋಜನ ಭೋಗಗಳು ಲಭಿಸುವವು.

೫. ಸಿಂಹ

ಸದ್ಯ ನಿಮ್ಮ ಅದೃಷ್ಟವು ಚೆನ್ನಾಗಿಲ್ಲವು. ಉದ್ಯೋಗದಲ್ಲಿ ಸಾಕಷ್ಟು ಪ್ರತಿಫಲವು ದೊರೆಯದೆ ದಿನಯಾಪನೆಯು ಸ್ವಲ್ಪ ಕಷ್ಟಕರವಾದೀತು. ಪತ್ನೀಪುತ್ರರ ವಿರಹಕ್ಕೆ ನೀವಿಂದು ಗುರಿಯಾಗಲಿರುವಿರಿ. ಹೆಚ್ಚಿನ ಸಮಯವನ್ನು ಪ್ರವಾಸದಲ್ಲಿ ಕಳೆಯಬೇಕಾಗಿ ಬರಲಿದೆ. ದಸ್ತಾವೇಜು ವ್ಯವಸಾಯಿಗಳಿಗೆ ಆಕಸ್ಮಿಕ ಧನ ಲಾಭದ ಯೋಗವಿದೆ. ಶತ್ರುಜನರ ಕಾಟದಿಂದ ಮುಕ್ತರಾದ ನಿಮಗೆ ತಾ. 8, 9, 12, 13 ಈ ದಿನಗಳು ಸ್ವಲ್ಪ ಅಪಾಯಗಳಾಗಿ ಪರಿಣಮಿಸಲಿವೆ.

೬. ಕನ್ಯಾ

ಎಂತಹ ಪ್ರತಿರೋಧವಿದ್ದರೂ ಚಿಕ್ಕಪಡೆ ಕಾರ್ಯರಂಗದಲ್ಲಿ ಮುನ್ನಡೆವ ನಿಮಗೆ ಪ್ರಯತ್ನಕ್ಕೆ ತಕ್ಕ ಫಲವು ಲಭಿಸಲಿರುವದು. ವ್ಯಾಪಾರ ವ್ಯವಹಾರಾದಿಗಳಲ್ಲಿ ನಿರೀಕ್ಷೆಯಂತೆ ಫಲಲಾಭವಾಗುವದು. ಆದರೆ ರಾಜಕೀಯ ರಂಗದಲ್ಲಿ ಪ್ರತಿಪಕ್ಷಿಗಳಿಂದ ಪರಾಜಯವುಂಟಾದೀತು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈ ಸಮಯವು ತುಂಬ ಅನುಕೂಲವಾಗಿ ಪರಿಣಮಿಸಲಿದೆ. ಪಿತ್ಥದೋಷವು ಆಗಾಗ ಕಾಣಿಸಲಿವೆ. ತಾ. 8, 9, 10, 14 ಈ ದಿನಗಳಲ್ಲಿ ನಿರೀಕ್ಷಿಸಿದ ಗುರಿಯನ್ನು ಸೇರಲಿರುವಿರಿ.

೭. ತುಲಾ

ಪಂಚಮದ ಶನಿಯು ಪಂಚನಕ್ಷಿ ನೀರು ಕುಡಿಸ್ಯಾನು ಎಂಬ ಗಾದೆಯಂತೆ ಇಂದು ನಿಮ್ಮ ಪರಿಸ್ಥಿತಿಯುಂಟಾಗಲಿದೆ. ಆಪ್ತೀಯರ ವಿರಹ ಬಂಧುಜನರ ವಿರೋಧಕ್ಕೆ ನೀವಿಂದು ಗುರಿಯಾಗುವ ಸಂಭವವಿದೆ. ವ್ಯಾಪಾರ ವ್ಯವಹಾರಾದಿಗಳಲ್ಲಿ ನಷ್ಟ ಸೋಲುಗಳುಂಟಾದರೂ ಹಣದ ಬಿಕ್ಕಟ್ಟುಂಟಾಗಲಾರದು. ಸ್ತ್ರೀ ವರ್ಗದೊಡನೆ ಕಲಹದ ನಿಮಿತ್ತ ಅಪಮಾನಕ್ಕೆ ಗುರಿಯಾಗುವ ಸಂಭವವಿದೆ. ಗೃಹ ತಾಪತ್ರಯಗಳಿಂದ ಮುಕ್ತರಾದ ನಿಮಗೆ ತಾ. 10ರಿಂದ 13ರ ವರೆಗಿನ ದಿನಗಳು ಅನಿಷ್ಟಕಾರಿಗಳಾಗಲಾರವು.

೮. ವೃಶ್ಚಿಕ

ಕರ್ಮಪತಿಯಾದ ರವಿಯು ಉಚ್ಚನಾಗಿ ಉಪಚಯ ಸ್ಥಾನಕ್ಕಿಂದು ಪ್ರವೇಶಿಸಲಿರುವನು. ಮಾತ್ರವಲ್ಲ, ಧನಪತಿಯ ಅನುಗ್ರಹವೂ ನಿಮಗಿಂದು ಪ್ರಾಪ್ತವಾಗಿರುವುದರಿಂದ ನಿಮ್ಮ ಕಾರ್ಯಕಲಾಪಗಳೆಲ್ಲವೂ ನಿರೀಕ್ಷಿಸಿದಂತೆ ಗುರಿಯನ್ನು ಸೇರಲಿವೆ. ಆದರೆ ಮನೋದೌರ್ಬಲ್ಯದಿಂದಾಗಿ ನೀವು ಸೋಮಾರಿಗಳಾಗುವ ಸಂಭವವಿದೆ. ಗೃಹೋಪಕರಣಗಳಿಗೇನೂ ಕೊರತೆಯಿಲ್ಲವಾದರೂ ಮನೆಯಲ್ಲಿ ನಿಮಗೆ ಸುಖ ನೆಮ್ಮದಿಯಿರದು. ವಾರಾಂತ್ಯದ 3 ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿವೆ.

೯. ಧನು

ನಿಮ್ಮ ಭಾಗ್ಯಪನಾದ ರವಿಯಿಂದು ಉಚ್ಚನಾಗಿದ್ದರೂ ಕರ್ಮಪತಿಯಾದ ಬುಧನು ನೀಚನಾಗಿಹನು. ಆದ ಕಾರಣ ಹೀನ ವೃತ್ತಿಯಿಂದಾಗಿ ನಿಮಗಿಂದು ಹೆಚ್ಚಿನ ಧನಲಾಭವಾಗಲಿರುವುದು. ಗೃಹ ತಾಪತ್ರಯಗಳಿಂದ ಮುಕ್ತರಾದ ನಿಮಗೆ ಶತ್ರುಜನರ ಕಾಟವು ಇರಲೊಲ್ಲದು. ಆದರೆ ಪಿತ್ಥದೋಷದಿಂದುಂಟಾದ ದೇಹಾಲಸ್ಯ ಒಂಘು ಪರಹಾದಿಗಳಿಂದ ದುಃಖಿತರಾದ ನಿಮಗೆ ವಾರದ ಆದ್ಯಂತ ದಿನಗಳು ಅನುಕೂಲವಾಗಿ ಪರಿಣಮಿಸಲಿವೆ.

೧೦. ಮಕರ

ಸುಖಲಾಭಪತಿಯಾದ ಅಂಗಾರಕನು ಅಷ್ಟಮದಲ್ಲಿದ್ದು, ಭಾಗ್ಯಪನಾದ ಬುಧನು ನೀಚನಾಗಿದ್ದರೂ ಸುರಗುರುವಿನ ಪೂರ್ಣದೃಷ್ಟಿಯೆಂಬ ರಕ್ಷಾಕವಚ ಯುಕ್ತರಾದ ನಿಮಗೆ ಹೆಚ್ಚಿನ ಅನಿಷ್ಟಗಳೇನೂ ಉಂಟಾಗಲಾರವು. ಸ್ವಂತ ಆರೋಗ್ಯದತ್ತ ಹೆಚ್ಚಿನ ಗಮನವಿರಲಿ. ಪ್ರವಾಸಾದಿಗಳನ್ನು ಸದ್ಯಕ್ಕೆ ಕೈಬಿಡುವುದೊಳ್ಳಿತು. ವ್ಯಾಪಾರಿಗಳಿಗೂ ನೌಕರಿವರ್ಗದವರಿಗೂ ಪರಿಶ್ರಮಕ್ಕುಚಿತವಾದ ಫಲ ಲಭಿಸಲಿದೆ. ಆರ್ಥಿಕ ಬಿಕ್ಕಟ್ಟಿನಿಂದ ಮುಕ್ತರಾದ ನಿಮಗೆ ವಾರಾಂದಿಯ 3 ದಿನಗಳು ಅನುಕೂಲವಾಗಿವೆ.

೧೧. ಕುಂಭ

ಕಳೆದ ದಿನಗಳಿಗಿಂತ ಇಂದಿನ ವಾರವು ನಿಮಗೆ ಸ್ವಲ್ಪ ನೆಮ್ಮದಿಯನ್ನೀಯಲಿದೆ. ನಿಮ್ಮ ಉದ್ಯೋಗ ವ್ಯವಹಾರಗಳು ನಿರೀಕ್ಷಿಸಿದ ಫಲವನ್ನೀಯುವುದರಿಂದ ಹಣದ ಬಿಕ್ಕಟ್ಟು ನಿಮಗಿರದು. ವಿನಾಕಾರಣ ಬಂಧುಜನರ ಆಗ್ರಹಕ್ಕೆ ನೀವಿಂದು ಗುರಿಯಾಗಲಿರುವಿರಿ. ಅರ್ಧಾಂಗಿಯ ಕೂಡೆ ಅನುದಿನ ಕಲಹವಾದೀತು. ತ್ರಿದೋಷ ಜನಿತವಾದ ಕಾಹಿಲೆಗೆ ಅವಕಾಶವಿದೆ. ತಾ. 10ರಿಂದ 13ರ ವರೆಗಿನ ದಿನಗಳಲ್ಲಿ ಧನವಸನಗಳ ಲಾಭವಾಗಲಿದೆ.

೧೨. ಮೀನ

ಧನಪತಿಯೂ ಭಾಗ್ಯಪತಿಯೂ ಆದ ಅಂಗಾರಕನು ಉಪಚಯ ಸ್ಥಾನದಲ್ಲಿದ್ದು ಧನಸ್ಥಾನದಲ್ಲಿ ರವಿಯೂ ಉಚ್ಚನಾಗಿ ಕುಳಿತಿಹ ಕಾರಣ ಆರ್ಥಿಕ ವಿಚಾರದಲ್ಲಿ ನೀವಿಂದು ನಿಶ್ಚಿಂತರಾಗಿರುವಿರಿ. ವಿಶೇಷತಃ ಕೋರ್ಟು ಕಛೇರಿಗಳ ವ್ಯವಹಾರಗಳಲ್ಲಿ ನಿಮ್ಮ ಬಯಕೆಯಂತೆ ಕಾರ್ಯವು ಸಿದ್ಧಿಸಲಿದೆ. ಉದ್ಯೋಗಿಗಳಿಗೆ ಅಧಿಕಾರಿ ವರ್ಗದವರ ಕೋಪದಿಂದಾಗಿ ಸ್ಥಾನಚಲನೆಯ ಪ್ರಸಂಗವು ಉಂಟಾದೀತು. ವಾರಾಂತ್ಯದ 3 ದಿನಗಳು ಸುಖ ನೆಮ್ಮದಿಯನ್ನೀಯುವವು.

NOTICE

In the Civil Judge's Court,
Mangalore.

S. C. 339/64

B. K. Ratnaker Ballal ... Plaintiff
Siddappa Shetty etc... Defendants.

To

5th Deft, Arkakirthi Shetty,
S/o Padmaraja Shetty,
Hosamane, Nandikoor Village,
Udipi Taluk. P. O. Nandikoor.

Please take notice that the above suit filed against you and others for arrears of rent stands posted to 24—4—1965 for your appearance and if you fail to appear on that date either in person or through a lawyer the suit will be decided exparte.

/ By Order of the Court /

Sd. N. Mahabala,
B. A. B. L.,
Advocate for Plaintiff.

Mangalore, 29-3-65.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೇಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

Edited, Printed & Published by K. H. Shetty at the Navayuga Press, Udipi, S. India.

నవయుగ

Phone No. 226

NAVAYUGA

leading nationalist weekly

౨౦ పైసె

ಕಥಾ ಪ್ರಪಂಚ

ತೃಣಮಪಿ ನ ಚಲತಿ ತೇನ ವಿನಾ..

ಕಥೆಗಾರರು: ಶ್ರೀ ಕೃಷ್ಣರಾಜ.

ಮೇಲೆ ಸೂರ್ಯ ಸುಡುತ್ತಿದ್ದ. ಕೆಳಗೆ ಗಾಳಿಯ ಉಸಿರೇ ಇಲ್ಲ. ವಾಹನದ ದುಗುಡದೊಂದಿಗೆ ವಾತಾವರಣದ ಬಿಸಿಯೂ ಸೇರಿ ಉಷಾಳ ಮುಖ ಕೆಂಪಾಗಿತ್ತು. ರಸ್ತೆಯಲ್ಲಿನ ರಂಗಿನ ಚಿತ್ತಾರ ಇನ್ನೂ ಇತ್ತು. ದೂರದ ಆ ಚೌಕದಲ್ಲಿ ಬಣ್ಣದ ಸೀಸೆ ಹಿಡಿದು ನಿಂತಿರುವ ಹುಡುಗರ ಕಣ್ಣು ತಪ್ಪಿಸಿ ಹೋಗಬೇಕು ಎಂದುಕೊಂಡು ಹತ್ತಿರದ ದಾರಿ ಹಿಡಿದು ಸಾಗ ಹತ್ತಿದಳು ಉಷಾ. ಬಿಡುವಿಲ್ಲದ ಕೆಲಸದಿಂದಾಗಿ ಮೈ ಅಸ್ವಸ್ಥವಾಗಿದ್ದರೆ ಯೋಚನೆಗಳ ಜಂಜಾಟದಿಂದ ಮನವೂ ಹಿತದಲ್ಲಿರಲಿಲ್ಲ. ಎಲ್ಲರಿಗೂ ಹೋಲಿ ಹಬ್ಬಕ್ಕೆ ರಜೆ ಇದ್ದರೆ ನಮಗೆ ಸ್ಪೆಷಲ್ ಡ್ಯೂಟಿ—ಥೂ ಸಾಕಪ್ಪ ಈ ಕೆಲಸ—ಎಂದುಕೊಂಡಳು ಉಷಾ. ಇವತ್ತು ಬೆಳಿಗ್ಗೆ ಉಷಾಳಿಗೆ ಮುರಳಿಯ ಮೇಲೆ ಬಹಳ ಸಿಟ್ಟು ಬಂದಿತ್ತು. ಅಷ್ಟೊಂದು ಹುಡುಗಿಯರ ಎದುರಿಗೆ ತಮಾಷೆ ಮಾಡಿ ಮತ್ತೆ ಸಾಯಂಕಾಲ ಪಾರ್ಟಿಗೆ ಬರಬೇಕು ಅಂತ ಆಹ್ವಾನ ಬೇರೆ. ಥೂ ಈ ಗಂಡಸರೇ ಹಾಗೆ ಹಿಂದೆ ಮುಂದೆ ನೋಡೋಲ್ಲ. ನಾನ್ಯಾಕೆ ಹೋಗಬೇಕು ಪಾರ್ಟಿಗೆ? ನನಗೇನು ಹುಚ್ಚೇ! (ಆಸೆಯೇನೋ ಇದೆ. ಆದರೂ ಹೋಗಬಾರದು... ಹೋಗಲೇ ಬಾರದು.)

"ನಮಸ್ಕಾರ ಡಾಕ್ಟರ್"— ಪಾರ್ವತಮ್ಮನವರ ಕರೆ ಉಷಾಳ ಯೋಚನೆಗೆ ಬ್ರೇಕ್ ಹಾಕಿತು.

"ಓ! ನಮಸ್ಕಾರಮ್ಮಾ"

"ಅಂತೂ ಡಾಕ್ಟರ್, ನಮಗೊಬ್ಬ ಪುಟ್ಟ ಕೃಷ್ಣ ಬಂದ್ಹಾಗಾಯ್ತು. ಎಲ್ಲಾ ನಿಮ್ಮ ಉಪಕಾರ ಡಾಕ್ಟರ್. ನಾನೆಂದೂ ಮರೆಯೋ ಹಾಗಿಲ್ಲ."

"ಛೆ ಛೆ ನಮ್ಮದೇನಮ್ಮ, ಎಲ್ಲಾ ಆ ಭಗವಂತನದು. ಅಂತೂ ಕಮಲಾ, ಮಗೂ ಸುಖವಾಗಿ ಮನೆ ಸೇರಿದರೆ ಅದೇ ನಂಗೆ ಸಂತೋಷ."

"ನೀವಿರೋವಗರ್ೂ ನಮಗೇನೂ ಭಯವಿಲ್ಲ. ಅಂತೂ ನಿಮ್ಮಂಥ ಒಳ್ಳೇ ಸ್ನೇಹಿತರು ಇರೋ ಕಮಲೂನೇ ಪುಣ್ಯವಂತೆ. ನಾನ್ಬರ್ಲ ಡಾಕ್ಟರ್?"

'ಆಗಲಮ್ಮ, ನಮಸ್ಕಾರ."

ಕಮಲಳ ಅತ್ತೆ ಪಾರ್ವತಮ್ಮ ಆಸ್ಪತ್ರೆಯ ಕಡೆ ಹೊರಟರು. ಉಷಾಳ ಯೋಚನೆ ಅವರಿಗಿಂತ ಮುಂಚೆ ಕಮಲಳನ್ನು ಮುಟ್ಟಿತ್ತು.

ಕಮಲೂ ಪುಣ್ಯವಂತೆ—ನಿಜ. ಇಂಜಿನೀಯರ್ ಗಂಡ. ಮುದ್ದು ಮಗು ಒಂದರ ತಾಯಿ ಕಮಲಾ ಉಷಾಳ ಕ್ಲಾಸ್‌ಮೇಟ್ ಆಗಿದ್ದಳು—ಹೈಸ್ಕೂಲ್ ವರೆಗೆ. ಈಗ ಕಮಲ—ಅಬಾರ್ಷನ್ ಆದ ಮೂರೂ ಉಳಿದಿದ್ದರೆ ನಾಲ್ಕು ಮಕ್ಕಳ ತಾಯಿ. ತಾನು? ಇನ್ನೂ ಇಪ್ಪತ್ತೊಂಬತ್ತರ ತರುಣಿ! ನಗು ಬಂತು ಉಷಾಳಿಗೆ. ಎಷ್ಟು ವ್ಯತ್ಯಾಸ! ಕಮಲೂ ಏನೋ ಪುಣ್ಯವಂತೆ ನಿಜ! ಆದರೆ ತನ್ನ ಭಾಗ್ಯಕ್ಕೆ ಏನು ಕಮ್ಮಿ ಎನ್ನಿಸಿತು. ಆದರೆ... ಆದರೆ.... 'ಇದೊಂದಿದೆಯಲ್ಲ' ಎಂದು ಕಾಲಿನ ಮೇಲೆ ನೆರಿಗೆಯಾಗಿದ್ದ ಸೀರೆಯನ್ನು ಸರಿಮಾಡಿಕೊಂಡು ಮುಂದೆ ಹೊರಟಳು.

ತನ್ನ ಪುಣ್ಯಕ್ಕೆ ಏನು ಕಡಿಮೆಯೇ! ಹಾಗಾದರೆ ಈ ಬೆಳಿಗ್ಗೆ ಕಮಲ ತನ್ನ ಕೂಸನ್ನು ಎದೆಗವಚಿಕೊಂಡು ಮಲಗಿದ್ದನ್ನು ನೋಡಲಾರದೆ ಏಕೆ ಬಂದೆ? ಎಂದು ಕೇಳಿತು ಮನ. ನಿಜ—ಏನಾಗಿತ್ತು ತನಗೆ? ಎಷ್ಟೋ ತಾಯಿ ಮಕ್ಕಳನ್ನು ನೋಡಿದ್ದ ತಾನು, ತನ್ನ ವಯಸ್ಸಿನ ಸ್ನೇಹಿತೆ ಅನುಭವಿಸುತ್ತಿರುವ ಮಾತೃತ್ವದ ಅಮೃತ ದೂಟವನ್ನು ನೋಡಲಾರದಷ್ಟು ದುರ್ಬಲ ಮನದವಳಾದೆನೇ! ಛೆ! ಎನ್ನಿಸಿತು ಉಷಾಳಿಗೆ.

ಆದರೆ, ತಾನೂ ಅವಳ ಹಾಗೆ ಆಗಲೇ ಮದುವೆಯಾಗಿದ್ದರೆ! ಛೆ - ಹೇಗಾಗುವುದು?.... ಇದೊಂದಿದೆಯಲ್ಲಾ....ಊನ... ಆದರೂ... ಆದರೂ... ತನ್ನ ರೂಪಕ್ಕೇನಾಗಿದೆ? ತಾನೊಪ್ಪಿದ್ದಿದ್ದರೆ ದಮ್ಮಯ್ಯಂತ ತಗೊಂಡ್ಹೋಗ್ತಾ ಇದ್ರು ಅಂತ ರಂಗಮ್ಮನೇ ಹೇಳ್ತಿರಲಿಲ್ಲವೇ? ಹಾಗೇನಾದರೂ ನಾನೊಪ್ಪಿ ಮದುವೆ ಆಗಿದ್ದರೆ— ಆ ಸೋದರ ಮಾವನ ಮಗ— ಅದೇ ಅಪ್ಪ ಹೇಳ್ತಿದ್ದರಲ್ಲಾ...ಅವನೇ ನನ್ನ ಗಂಡ ಆಗ್ತಿದ್ದ. ಈ ವೇಳೆಗೆ ತಾನೂ ನಾಲ್ಕು ಮಕ್ಕಳ ತಾಯಿ.......ಯೋಚನೆಯ ಗಾಳಿಯಲ್ಲಿ ತೂರಿತು ಮನ.

ಈ ಇಂಜೆಕ್ಷನ್ ಕೊಡುವ ಕೈ ಸೌಟು ಹಿಡಿಯುತ್ತಿತ್ತು...ಮೊದಲನೇ ಮಗ ಶಾಲೆಯಿಂದ ಬರೋ ಹೊತ್ತು....ಆಫೀಸಿನಿಂದ ಬರೋ ಅವರಿಗೆ ತಿಂಡಿಯಾಗಬೇಕು... ಕೈಗೆ ಪುರುಸೊತ್ತೇ ಇಲ್ಲ...ಅಯ್ಯೋ ಆ ಮೂರನೇದು ಅಂಗಳದಲ್ಲೇ ಮಾಡಿದೆಯಲ್ಲಾ....ಎರಡು ವರ್ಷದ ಕೋಣ...ಥೂ ಸಾಕಪ್ಪ ಸಂಸಾರ........'ಅಮ್ಮಾ ತಿಂಡೀ ಕೊಡೇ...." ಅಡುಗೆಯ ಮನೆಯಲ್ಲಿ ಓಲಗ. 'ಅಯ್ಯೋ ರಾಮ ಸಾಕಾಗಿ ಹೋಗುತ್ತೆ" ಎಂದುಕೊಳ್ಳುವಾಗಲೇ 'ಅತ್ತೇ ಪೆಪ್ಪರ್‌ಮಿಂಟ್ ತಂದಿದೀರಾ?..."—ಸಾವಿತ್ರಮ್ಮನವರ ನಾಲ್ಕನೇ ಕೂಸು ಕಿಟ್ಟು ಉಷಾಳ ಮೈ ಅಲ್ಲಾಡಿಸಿ ಕೇಳಿದ. ಆಗಲೇ ಎಚ್ಚರ...'ಇಲ್ಲಪ್ಪ ಮರೆತ್ಹೋಯ್ತು. ನಾಳೆ ಖಂಡಿತಾ ಕೊಡ್ತೀನಿ...ಎಲ್ಲಿ ಒಂದು ಮುದ್ದು ಕೊಡು ನೋಡೋಣ".

'ಊಂ ...ಹೋಗಿ ಅತ್ತೇ. ಬಲೀ ಅಂಡಾಬಂಡ ದಮ್ಮಕ್ಕೇ ಮುದ್ದು ಕೊಡಬೇಕಂತೆ.... ಊಂ...ನಾಕೊಡೋಲ್ಲ.... ಎನ್ನುತ್ತಾ ಓಡಿಯೇ ಬಿಟ್ಟ— ಕಿಟ್ಟ. 'ಅಮ್ಮ ಕಾಫಿ ಕೊಡಮ್ಮ"....ಮೂರು ಮಕ್ಕಳೂ ಧ್ವನಿಗೂಡಿಸಿ ಹಾಡುತ್ತಿದ್ದವು, ಸಾವಿತ್ರಮ್ಮನವರ ಅಡುಗೆ ಮನೆಯಲ್ಲಿ.

ಥೂ ಏನೇನೋ ಹುಚ್ಚು ಕಲ್ಪನೆಗಳ ಹೊಯ್ದಾಟದಲ್ಲಿ ರೂಮಿನವರೆಗೆ ಬಂದಿದ್ದೇ ತಿಳೀಲಿಲ್ಲ....ನಾಲ್ಕೈದು ದಿನದಿಂದ ಯಾಕೆ ಹೀಗಾಗಿದೆ ಎಂದುಕೊಳ್ಳುತ್ತಾ ತನ್ನ ರೂಮು ಸೇರಿ ಹಾಸಿಗೆಯ ಮೇಲೆ ಉರುಳಿದಳು.

ಸೌಮ್ಯವಾಗಿ ಬುದ್ಧನ ಮೂರ್ತಿ ಸ್ಟ್ಯಾಂಡಿನ ಮೇಲೆ ತಪಸ್ಸು ಮಾಡುತ್ತಿತ್ತು. 'ತೃಣಮಪಿ ನ ಚಲತಿ ತೇನ ವಿನಾ" ಎಂದು ಬರೆದಿದ್ದ ಹಲಗೆ ಬುದ್ಧನ ಪಾದದಡಿಯಿಂದ ದಿಟ್ಟಿಸಿ ನೋಡುತ್ತಿತ್ತು. ಕ್ಯಾಲೆಂಡರ್ Today January 24 ಎನ್ನುತ್ತಿದೆ. ಓ! ಇವತ್ತು 24. ನಾಳೆಯೇ ಅಲ್ಲವೇ ರೂಪಳ ಮದುವೆ ಎಂದುಕೊಂಡು ಡ್ರಾಯರಿನಿಂದ ಆಮಂತ್ರಣ ಪತ್ರಿಕೆಗಳನ್ನು ಹೊರತೆಗೆದಳು. ದೊಡ್ಡ ಅಕ್ಷರಗಳಲ್ಲಿ ಶೃಂಗಾರವಾಗಿ ಬರೆದಿತ್ತು Chi Sow Dr. Rupa with Chi Ra. Dr. Mohan Rao. M. D., ಎಂದು. ಅಂತೂ ರೂಪಾ ತಾನು ಪ್ರೀತಿಸಿದವನನ್ನ ಮದುವೆಯಾಗುತ್ತಾಳೆ. ಮಂಗಳೂರಿನಲ್ಲಿ ಒಟ್ಟಿಗೆ ಕ್ಲಿನಿಕ್ ತೆಗೀತಾರಂತೆ. ಸಖವಾಗಿ ಇರ್ತಾರೆ. ಮಂಗಳೂರು..ಬೀಚು..ಯೋಚಿಸುತ್ತಾ ಕೈ ನಿರ್ಜೀವವಾಗಿದ್ದ ಕಾಲಿನ ಮಾಂಸ ಖಂಡಗಳ ಮೇಲೆ ಓಡಾಡಿತು. ತಾನು ಕುಂಟಿ...ಆದರೆ ಆ ಊನದ ಇರುವಿಕೆಯೇ ಮರೆತಂತೆ ಆಗಿತ್ತು ಅವಳಿಗೀಗ.... ಆದರೂ ....ನನ್ನ ಕಾಲು ಹೀಗೆ ಇರದೇ ಹೋಗಿದ್ದರೆ... ಎಷ್ಟೋ ದಿನಗಳ ಹಿಂದೆಯೇ ಇಂಥಾದ್ದೇ ಒಂದು ಆಮಂತ್ರಣ ಪತ್ರಿಕೆ.. ಈ ಹೆಸರುಗಳ ಬದಲು ನನ್ನ ಮತ್ತು ಅವರ ಹೆಸರು.... ಹೀಗೆ ಅಂದವಾಗಿ... ಛೆ ಛೆ ಎಂಥಾ ಯೋಜನೆ.... ನನ್ನ ಕಾಲು ಹೀಗಿರುವುದೇ.... ಒಳ್ಳೆಯದಾಯ್ತು ಇಲ್ಲದಿದ್ದರೆ ನಾನಿಲ್ಲಿ ಇರ್ತಿದ್ದೆನೇ?

ನಾಳೆ ರೂಪಳಿಗೆ ಗ್ರೀಟಿಂಗ್ಸ್ ಟೆಲಿಗ್ರಾಂ ಕಳುಹಿಸಬೇಕು. Wish you a happy Wedded life ಅಂತ Happy Wedded life? ಓ! ಎಷ್ಟು ಚೆನ್ನಾಗಿದೆ, ಈ ಪದಗಳ ಗುಂಪು ಎನ್ನಿಸಿತು.

ಥೂ ಏನಾಯ್ತು ನನ್ನ ಆದರ್ಶಗಳಿಗೆ! ಪರಿಶುದ್ಧವಾದ ಮನಸ್ಸಿನಿಂದ. 'ದೇಶ ಸೇವೆ ಮಾಡುತ್ತೇನೆ ಅಂತ ಕೊಚ್ಚಿ ಕೊಳ್ಳುತ್ತಿದ್ದ ಮನಸ್ಥೈರ್ಯ ಎಲ್ಲಿ ಹೋಗಿದೆ? ಛೆ, ಮದುವೆ, ಸಂಸಾರ ಎಲ್ಲಾ ಸ್ವಾರ್ಥದ ರೂಪಗಳು. ನಾನು ಬೀಳೊಲ್ಲ ಈ ಪಾಪಕೂಪಕ್ಕೆ, ನಾನು ಖಂಡಿತಾ ಮದುವೆ ಯಾಗೋಲ್ಲ. ನಿಜವಾಗ್ಲೂ ಇಲ್ಲ. "ನೀನ್ಯಾಕೆ ಹೀಗೆ ಬಾರಿ ಬಾರಿಗೂ ಹೇಳಿಕೊಳ್ಳುತ್ತಿ. ಯಾರೂ ನಿನ್ನನ್ನು ಮದುವೆ ಆಗು ಎಂದಿಲ್ಲವಲ್ಲ?'—ಮೇಲಿನ ಬುದ್ಧನ ಮೂರ್ತಿ ನಗುತ್ತ ಹೇಳಿದಂತಾಯ್ತು "ಹೌದು. ಯಾರೂ ನನ್ನ ಕೇಳಿಲ್ಲ. ಆದರೂ ನನಗೇಕೆ ಈ ಯೋಚನೆ ಏಕೆ?...

"ಉಷಾ, ಮನಸ್ಸಿನ ಆಳದಲ್ಲಿರುವ ಭಾವನೆಗಳನ್ನು ಬಲವಂತವಾಗಿ ಹುದುಗಿಟ್ಟರೆ ಯಾವಾಗಲಾದರೂ ಒಮ್ಮೆ ಅದು ಜ್ವಾಲಾಮುಖಿಯಂತೆ ಸ್ಫೋಟವಾಗುತ್ತೆ" --ಪ್ರೊಫೆಸರ್ ರಾವ್ ಹೇಳಿದ್ದ ಮಾತಲ್ಲವೇ?... ಹಾಗೆ ಸ್ಫೋಟವಾಗುವ ಕಾಲ ಬಂತೇ ಈಗ! ಢಣ್-ಢಣ್-ಢಣ್-ಢಣ್-ಢಣ್— ಐದು ಹೊಡೆದು 'ಹೌದು' ಎಂದಿತು ಗಡಿಯಾರ.

ಹೌದು, ಐದು ಘಂಟೆಗೇ ಮುರಳೀಧರ ಪಾರ್ಟಿಗೆ ಬರಬೇಕು ಎಂದು ಹೇಳಿ

(ಪನ್ನೆರಡನೇ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

			ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	....	5½
6 ತಿಂಗಳಿಂದ	12 ತಿಂಗಳ ಕೆಳಗೆ	....	6
12 ತಿಂಗಳಿಂದ	24 ತಿಂಗಳ ಕೆಳಗೆ	....	6½
24 ತಿಂಗಳಿಂದ	36 ತಿಂಗಳ ಕೆಳಗೆ	....	6¾
36 ತಿಂಗಳಿಂದ	48 ತಿಂಗಳ ಕೆಳಗೆ	....	7
48 ತಿಂಗಳಿಂದ	60 ತಿಂಗಳ ಕೆಳಗೆ	....	7¼
60 ತಿಂಗಳಿಂದ	84 ತಿಂಗಳ ಕೆಳಗೆ	....	7¾
84 ತಿಂಗಳಿಂದ	120 ತಿಂಗಳ ಕೆಳಗೆ	....	8
ಸೇವಿಂಗ್ಸ್	ಖಾತೆಯ ಮೇಲೆ	... .	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Phone No. 226

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦
ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿಯರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ರಿಪೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಮಹಾರಾಜರಾಗಿದ್ದರೂ ಪ್ರಜಾಪ್ರಭುತ್ವದಲ್ಲಿ ಅಚಲ ವಿಶ್ವಾಸವಿರುವ, ಭಾರತೀಯ ಸಂಸ್ಕೃತಿ, ದರ್ಶನಗಳ ಭಂಡಾರ, ಮದ್ರಾಸಿನ ರಾಜ್ಯಪಾಲ ಶ್ರೀ ಜಯಚಾಮರಾಜ ಒಡೆಯರ್.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೩೩	೧೫—೪—೧೯೬೫	No. 33

ಅಯ್ಯೂಬರ ನಿಲುಮೆ

ಕಾಶ್ಮೀರದ ಮೇಲೆ ಕಣ್ಣಿಟ್ಟುಕೊಂಡಿರುವ ಪಾಕಿಸ್ತಾನದ ಅಧ್ಯಕ್ಷ ಅಯ್ಯೂಬ ಖಾನರು ತನ್ನ ವಿದೇಶ ಮಂತ್ರಿ ಜಡ್. ಎ. ಭುಟ್ಟೋರವರೊಡನೆ ಸೋವಿಯತ್ತನ್ನು ಸಂದರ್ಶಿಸಿ ಮರಳಿದರು. ಸೌಹಾರ್ದದ ಹಸರಿನಲ್ಲಿ ನಡೆದ ಈ ಸಂದರ್ಶನದ ಪರಿಣಾಮ ಮಾತ್ರ ಅಯ್ಯೂಬರು ಬಯಸಿದಂತೆ ಆಗಲಿಲ್ಲ; ಈ ಮೊದಲು ಭದ್ರತಾ ಸಮಿತಿಯಲ್ಲಿ ಕಾಶ್ಮೀರದ ವಿಷಯವಾಗಿ ಮಂಡಿಸಲಾಗಿದ್ದ ಗೊತ್ತುವಳಿಗಳು ರಶ್ಯದ ವಿಟೋದಿಂದಾಗಿ ತಿರಸ್ಕೃತವಾಗಿದ್ದುವು. ರಶ್ಯದ ಇಂಥಹ ನಿಲುವಿಗೆ ಕಾಶ್ಮೀರವು ಭಾರತ ಒಕ್ಕೂಟದ ಅವಿಭಾಜ್ಯ ಅಂಗವೆಂಬ ಅದರ ದೃಢ ಅಭಿಪ್ರಾಯವೇ ಕಾರಣವಾಗಿದೆ. ಹಾಗಿರುವಾಗ ಏನಾದರೂ ಮಾಡಿ, ರಶ್ಯದ ಸಹಾನುಭೂತಿಯನ್ನು ಗಳಿಸಿಕೊಳ್ಳುವ ಮಹತ್ವಾಕಾಂಕ್ಷೆ ಅವರಲ್ಲಿತ್ತು. ಕ್ರೆಮ್ಲಿನಿನಲ್ಲಾದ ಮಹತ್ವಪೂರ್ಣ ಬದಲಾವಣೆಯಿಂದ ತುಸು ಸ್ಫೂರ್ತಿಗೊಂಡ ಖಾನರು ಇಂಥಹ ಸಾಹಸಕ್ಕೆ ಈಗ ಮುಂದಾದರು.

ನೀರಸವಾದ ಸ್ವಾಗತವನ್ನು ಪಡೆದಿದ್ದ ಫೀಲ್ಡ್ ಮಾರ್ಶಲ್ ಅಯ್ಯೂಬ ಖಾನರೂ ಅವರ ಸಹಚರರೂ ತಲೆಕೆಳಗೆ ಕಾಲು ಮೇಲೆ ಮಾಡುವಷ್ಟು ತಾವು ಸಮರ್ಥರಾದೇವೆಂದು ನಂಬಿದ್ದರು. ಕಾಶ್ಮೀರದ ಕೇಸರಿ ಶೇಖ ಅಬ್ದುಲ್ಲಾರವರು ವಿದೇಶ ಸಂಚಾರ ಮಾಡುತ್ತ ಭಾರತದ ಮೇಲೆ ಮಾಡುತ್ತಿರುವ ಅಪವಾದನೆಗಳೂ ಕಾಶ್ಮೀರದ ಜನತೆಗೆ ಸ್ವಯಂ ನಿರ್ಣಯಾಧಿಕಾರ ನೀಡಬೇಕೆಂಬುದರ ಬಗ್ಗೆ ನೀಡುತ್ತಿರುವ ಹೇಳಿಕೆಗಳೂ ತಮಗೆ ಅನುಕೂಲ ವಾತಾವರಣವನ್ನು ನಿರ್ಮಿಸಬಹುದೆಂಬ ಕಲ್ಪನೆ ಅವರಿಗಿದ್ದಿರಬೇಕು. ಆದರೆ, ಸೋವಿಯತ್ತಿನ ಸರಕಾರದ ನಾಯಕತ್ವದಲ್ಲಿ ಪರಿವರ್ತನೆಯಾದರೂ ಅದರ ನೀತಿಯಲ್ಲಿ ಯಾವ ಮಹತ್ವದ ಬದಲಾವಣೆಯೂ ಆಗಲಿಲ್ಲವೆಂಬುದು ಅಯ್ಯೂಬರ ಗಮನಕ್ಕೆ ಈಗ ತಾನೇ ಬಂದಿರಬೇಕು. ಅಂತೂ ಪಾಕ್ ಸರಕಾರದ ನೇತಾರರು ಮೋಸ್ಕೋವಿನಲ್ಲಿರುವ ಪಾಕ್ ಪತ್ರಿಕಾ ಪ್ರತಿನಿಧಿಗಳ ಮುಂದೆಯೇ ಭಾರತಕ್ಕೆ ಸಹಸ್ರನಾಮ ಹಾಕಿ ತೃಪ್ತಿಪಡಬೇಕಾಯಿತು. ಅವರ ತಂತ್ರ ರಶ್ಯದಲ್ಲಿ ಸಫಲವಾಗಲಿಲ್ಲ. ತಾವು ಮುಖ್ಯ ವಿಷಯವೆಂದು ಎತ್ತಿಕೊಂಡ ಸಂಗತಿಯಲ್ಲಿ ಅವರು ಸಂಪೂರ್ಣ ಅಸಫಲರಾಗಿಯೇ ಬಂದರು. ಪ್ರಾಯಶಃ ಅಯ್ಯೂಬಖಾನರು ಉಂಡ ಮೊದಲನೇ ಸೋಲು ಇದಾಗಿರಬಹುದು. ಏಕೆಂದರೆ, ಇದಕ್ಕೆ ಮೊದಲು ಪಾಶ್ಚಾತ್ಯ ರಾಷ್ಟ್ರಗಳ ಬೆಂಬಲವನ್ನು ಪಡೆದುಕೊಳ್ಳ ಹೊರಟಾಗ ಅಲ್ಲಿ ಅರೆಡೆಯ ಆಶೆಯಾದರೂ ಲಭಿಸಿತ್ತು.

ಇತ್ತೀಚೆಗಿನ ದಿನಗಳಲ್ಲಿ ಭಾರತ-ಪಾಕಿಸ್ತಾನಗಳ ಗಡಿಯಲ್ಲಿ ಗುಂಡಿನ ಹಾರಾಟ ನಡೆಯುತ್ತಿರುವುದು ನಿತ್ಯ ಸಂಗತಿಯೆನಿಸಿದೆ. ಈಗೀಗ ದೊಡ್ಡ ಪ್ರಮಾಣದ ತಂಟೆಯ ವಾತಾವರಣವು ತಲೆದೋರುತ್ತಿದೆ. ಕಚ್ಛ ಸೀಮೆಯಲ್ಲಿ ಪರಿಸ್ಥಿತಿಯು ತೀವ್ರವಾದುದರಿಂದ ಭಾರತವು ಆ ಪ್ರದೇಶಕ್ಕೆ ಸೇನೆಯನ್ನೂ ಕಳಿಸಬೇಕಾಗಿ ಬಂದಿದೆ. ಸಮರ ವಿರಾಮದ ಬಗ್ಗೆ ಮಾತುಕತೆಗಳು ನಡೆಯುತ್ತವೆಯೆನ್ನುತ್ತಿರುವಾಗಲೇ ಗುಂಡು ಹಾರುತ್ತಿರುವುದು ತೀರ ವಿಲಕ್ಷಣವೆನ್ನಲೇ ಬೇಕು. ಭಾರತದೊಡನೆ ಸ್ನೇಹದಿಂದಿರಲು ಪಾಕಿಸ್ತಾನ ಬಯಸುವುದಂತೆ. ಈ ತಂಟೆಗಳು ಅದಕ್ಕೆ ಹೇಗೆ ಸಹಕಾರಿಯಾದಾವು? ಅಯ್ಯೂಬ ಖಾನರು ಹೃತ್ಪೂರ್ವಕವಾಗಿ ಸೌಹಾರ್ದವನ್ನು ಬಯಸುವುದಾದರೆ, ಗಡಿಯಲ್ಲಿ ಗೊಂದಲ ನಡೆಯದಂತೆ ಎಚ್ಚರ ವಹಿಸಬೇಕು. ಬಾಯಿಮಾತಿನಲ್ಲಿ ಸಂಧಾನ ಸ್ನೇಹವೆನ್ನುತ್ತ ಕಾರ್ಯದಲ್ಲಿ ವಿಪರೀತ ಆಚರಿಸುತ್ತಿರುವ ಪಾಕ್ ನಾಯಕರು ಭಾರತದ ಬಗ್ಗೆ ಮಾತ್ಸರ್ಯದ ಭಾವನೆಯನ್ನೇ ಅನುಸರಿಸುತ್ತಿದ್ದಾರೆನ್ನ ಬೇಕು. ಇತ್ತೀಚೆಗೆ ಅವರು ನಡೆಸಿದ ಸೀಮೋಲ್ಲಂಘನದಲ್ಲಿ ಅಮೇರಿಕೆಯಿಂದ ಕಮ್ಯೂನಿಸ್ಟ್ ರಾಷ್ಟ್ರದ ಆಕ್ರಮಣದ ವಿರುದ್ಧ ಬಳಸಲು ಪಡೆದುಕೊಂಡ ಶಸ್ತ್ರಾಸ್ತ್ರಗಳೂ ಉಪಯೋಗಿಸಲ್ಪಟ್ಟವೆಯೆಂದು ಸ್ಪಷ್ಟವಾಗಿದೆ. ಇಷ್ಟರಿಂದಲೇ ನಾವು ತಿಳಿಯಬಹುದು, ಪಾಕಿಸ್ತಾನದ ಅಂತರ್ಯವೇನೆಂಬುದನ್ನು. ಹತ್ತಿರದ ಕಮ್ಯೂನಿಸ್ಟ್ ರಾಷ್ಟ್ರಗಳೆಂದರೆ, ಕೆಂಪು ಚೀನಾ ಮತ್ತು ಸೋವಿಯತ್ ರಶ್ಯಗಳು. ರಶ್ಯದಿಂದ ಆರ್ಥಿಕ ಸಹಾಯವನ್ನು ಬಯಸುತ್ತಿರುವ ಪಾಕ್ ಚೀನಾದೊಂದಿಗೆ ಚೆನ್ನಾಟವಾಡುತ್ತಿದೆ. ಭಾರತ-ಚೀನಾಗಳ ನಡುವಣ ವಿರಸದಿಂದ ತಾನು ಲಾಭ ಪಡೆಯಲು ತವಕಪಡುತ್ತಿರುವ ಪಾಕಿಸ್ತಾನವು ಅಮೇರಿಕನ್ ಶಸ್ತ್ರಾಸ್ತ್ರಗಳನ್ನು ಭಾರತದ ವಿರುದ್ಧ ಅನ್ಯಾಯವಾಗಿ ಬಳಸುವುದು ವಿಸ್ಮಯವಲ್ಲ. ಆರಂಭದಿಂದಲೇ ಪಾಕಿನ ಇತ್ತೀಚೆಗಿನ ನೀತಿಯನ್ನು ಅಭ್ಯಸಿಸಿದ ಅಮೇರಿಕೆಯು ಅದನ್ನು ಸ್ವಾರ್ಥದೃಷ್ಟಿಯಿಂದ ಕಂಡರೆ ಅಚ್ಚರಿಯಲ್ಲ. ತಾನು ನೀಡಿದ ಸೈನಿಕ ನೆರವನ್ನು ಅಮೆರಿಕೆ ಹಿಂತೆಗೆದು ಕೊಳ್ಳುವ ದಿನವು ಸದ್ಯದಲ್ಲೇ ಬಂದರೂ ಅಚ್ಚರಿಯಿಲ್ಲ. ಅಮೆರಿಕೆಯು ತನ್ನ ಶಸ್ತ್ರಾಸ್ತ್ರಗಳು ದುರುದ್ದೇಶಗಳಿಗೆ ಉಪಯೋಗವಾಗುತ್ತಿರುವುದನ್ನು ಅವಶ್ಯ ಮನಗಾಣಬೇಕು. ದಿ| ಪ್ರಧಾನಿ ನೆಹರೂರವರು ಮೊದಲಿಗೇನೇ ವ್ಯಕ್ತಪಡಿಸಿದ್ದ ಸಂದೇಹವಿಂದು ಸತ್ಯವಾಗುತ್ತಿರುವುದನ್ನು ಮನವರಿಕೆ ಮಾಡಿಕೊಂಡು ಅವಶ್ಯಕ ಕಾರ್ಯಕ್ರಮಗಳನ್ನು ತ್ವರಿತವಾಗಿ ತೆಗೆದುಕೊಳ್ಳಬೇಕು.

ವಚನ ಸುಧೆ

ಸತ್ಯಂ ವದ॥..
(ತೈತ್ತಿರೀಯೋಪನಿಷದ್, ೧.೧೧)

೧ ಸತ್ಯವಾದುದನ್ನೇ ನುಡಿ.

೧೧ ಯಾವಾಗಲೂ ಸತ್ಯವನ್ನೇ ಆಡು. ಎಂದೆಂದಿಗೂ ಅಸತ್ಯವನ್ನಾಡಬೇಡ. ಸತ್ಯ ನುಡಿಯುವುದರಿಂದ ಪರಮಾತ್ಮನು ಪ್ರಸನ್ನನಾಗುತ್ತಾನೆ; ಮಾನವನ ಉನ್ನತಿಯಾಗುತ್ತದೆ ಸತ್ಯವಂತನಲ್ಲಿ ಎಲ್ಲರೂ ವಿಶ್ವಾಸವಿಡುತ್ತಾರೆ.

ಅತೃಪ್ತ ಕಾಂಗ್ರೆಸ್ಸಿಗರು

ಕರ್ನಾಟಕದಲ್ಲಿರುವ ಅತೃಪ್ತ ಕಾಂಗ್ರೆಸಿಗರು ಕಾಂಗ್ರೆಸ್ ಪಕ್ಷವನ್ನು ತ್ಯಜಿಸಿ ಪ್ರತಿಪಕ್ಷವೊಂದನ್ನು ಕಟ್ಟುವ ನಿರ್ಧಾರಕ್ಕೆ ಬಂದಿದ್ದಾರೆ. ಈ ನಿಯೋಜಿತಪಕ್ಷವನ್ನು ಅಖಿಲ ಭಾರತದ ತಳಹದಿಯಲ್ಲೇ ಕಟ್ಟುವ ಇರಾದೆಯನ್ನು ಅವರು ಇಟ್ಟುಕೊಂಡಿದ್ದಾರೆ. ಕೇರಳದಲ್ಲಿ ಈಗಾಗಲೇ ಹುಟ್ಟಿಕೊಂಡಿರುವ ಕೇರಳ ಕಾಂಗ್ರೆಸ್ಸು ಇವರಿಗೆ ಮಾದರಿಯೆನಿಸಬಹುದು. ಸರ್ವಸಾಮಾನ್ಯವಾಗಿ ಎಲ್ಲ ರಾಜ್ಯಗಳಲ್ಲಿಯೂ ಅತೃಪ್ತ ಕಾಂಗ್ರೆಸಿಗರು ದೊರೆಕಬಹುದಾದುದರಿಂದ ಕರ್ನಾಟಕ ಕಾಂಗ್ರೆಸಿಗರ ಪ್ರಯತ್ನ ಸಫಲವಾದರೂ ಆಗಬಹುದು. ಕಾಂಗ್ರೆಸ್‌ಗೆ ಪ್ರಬಲ ಪ್ರತಿಪಕ್ಷ ಬೇಕು ಎಂಬ ಕಾರಣದಿಂದ ಇವರು ಹೊರಬರುವುದಾದರೆ ಈ ಮೊದಲೇ ಸಿಡಿದು ಬಂದ ಒಂದಲ್ಲ ಹಲವು ಪಕ್ಷಗಳ ದುರವಸ್ಥೆಯನ್ನು ಕಾಣಬೇಕು. ಕಾಂಗ್ರೆಸ್ಸಿನಷ್ಟೇ ಹಿರಿಮೆ ಹೊಂದಿ ಬ್ರಿಟನ ಮೊದಲಾದ ಪ್ರತಿಪಕ್ಷಗಳಿಗೆ ಸೇರಿದ ಮಹಾನುಭಾವರು ಮತ್ತೆ ಕಾಂಗ್ರೆಸಿ

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ

"ನಿಯತನಾಮದಲ್ಲಿ ನಿಶ್ಶಬ್ದನಾಗಿ ನಾಂಧಾನದ ಮಾತುಕತೆಗೆ ಮುಂದಾದುದು ಜನರ ಕುತಂತ್ರವೆಂದು ಕೆಂಪು ಚೀನಾ ಹೇಳಿದೆಯಂತೆ."

"ರಕ್ತ ನದಿ ನೋಡಬಯಸುವವರಿಗೆ ಸಂಧಾನವು ಕುತಂತ್ರವೆಂದು ಕಾಣುವುದು ಸಹಜವೇ ಅಲ್ಲವೇ?"

ಗೇಹ ರಾಜ್ಯದಲ್ಲಿ

ಬಿಳಿಯ ಕಾಗದದ ಹುಲಿಗಳು

"ಓ, ಆವಾಗ್ಲೇ ಬಂದು ಬಿಟ್ಟೀರಾ...."

"........."

"ಅಲ್ಲಾ, ಏನಂತೆ ಇವತ್ತು ಭಾರೀ ಬೇಗನೇ ಬಂದಿರೋದೂಂತ?"

'... .. .."

"ಯಾಕೆ ಮಾತಾಡೋದಿಲ್ವಾ?"

"ಮಾತಾಡೋದು? ಯಾರ ಹತ್ರ?'

"ಅಯ್ಯೋ, ಕಣ್ಣ ಮುಂದೆ ಮೂರ್ತಿ ಮತ್ತಾಗಿ ನಿಂತಿದ್ದೇನಲ್ಲಾ........?"

"ಆ ಉತ್ಸವ ಮೂರ್ತಿ ಸವಾರಿ ಮ ಗೀತೂಂತ ತೋರುತ್ತೆ....'

'ಏನಿದು ಈ ಅವತಾರಾಂತ?"

'ಅವತಾರಾಂತೆ ಅವತಾರ! ಅಲ್ಲಾ, ನೀವೆಲ್ಲಾ ಏನು ಆಡಿದ್ರೂ ಏನು ಮಾಡಿದ್ರೂ ನಾವು ಕಣ್ಣು ಮುಚ್ಚಿ ನೋಡ್ತಾನೇ ಇರ್ಬೇಕು ಅಲ್ವೆ?'

"ಅಲ್ಲಾ, ಹೀಗೆಲ್ಲಾ ಅನ್ನೋಕೆ ಈಗ ಆದದ್ದಾದ್ರೂ ಏನೂಂತ?"

"ಇನ್ನೇನು ಆಗ್ಬೇಕು? ಮನೆಗೆ ಬಂದು ಹಾಯಾಗಿ ಬಿದ್ದಿರೋಣಾಂತಿದ್ರೆ ಇಲ್ಲಿ ಗುಡಿಗೆ ಬೀಗ ಮುದ್ರೆ...'

'ಯಾವಾಗ್ಲೂ ಬರೋ ಹೊತ್ತಿನೊಳಗೆ ಮರಳಬಹುದೂಂತ ಎಣ್ಸಿ ಜಾತ್ರೆಗೆ ಹೋಗಿದ್ದೆ...."

'ಹೌದಪ್ಪ, ನೀವು ಜಾತ್ರೆಗೂ ಹೋಗ್ತೀರಿ, ಯಾತ್ರೆಗೂ ಹೋಗ್ತೀರಿ. ಮನೆ ಬಾಗಿಲಿಗೆ ಬಂದವ್ರು ಬೇಗ ನೋಡಿ ಮರಳಿ ಹೋದ್ರೆ ಸರಿ....'

"ಹಾಗೆಲ್ಲಾ ಸಂಜೇ ಹೊತ್ತಿಗೆ ಬರೋ ಮಹಾನುಭಾವರಾದ್ರೂ ಯಾರೂಂತ?'

"ಯಾರೂ ಇಲ್ವೆ? ನಿನ್ನ ಮುಂದೆ...."

'ಪಾಪ, ಏನೋ ಸೂರ್ಯ ಪಡುಗಡೆ ಮೂಡುವುದರಲ್ಲಿರಬೇಕು; ಇಲ್ವಾದ್ರೆ...."

"ಸಾಕು ಕಣೇ, ಸಾಕು ನಿನ್ನ ಮಾತು. ಅಲ್ಲಾ, ಹೋಗುತ್ತಿದಿದ್ರೂ ಮಧ್ಯಾಹ್ನವೇ ಹೇಳಬಾರದಾಗಿತ್ತೆ?'

"ಸಂಜೆ ಬಂದ ಲಲಿತಮ್ಮ ಹೇಳಿದ್ರು; ಹ್ಞಾಂ ಅಂದೆ....'

'ಅದನ್ನೇ ನೋಡು ಕಲಿಕಾಲ ಅನ್ನೋದು. ಹೆಂಡ್ತಿಯು ತಾಳಕ್ಕೆ ಸರಿಯಾಗಿ ಗಂಡ ಕುಣಿಯುತ್ತಿರಬೇಕು. ಆಕೆ ಜಾತ್ರೆಗಾದ್ರೂ ಹೋಗ್ಲಿ ಸವಾರಿಯಾದ್ರೂ ಹೊರಡ್ಲಿ, ಅಥವಾ ಏನೇನೋ ಮಾಡುತ್ತಿರ್ಲಿ ಆಡುತ್ತಿರ್ಲಿ. ಸರ್ವಾಧಿಕಾರ ಅಲ್ವೆ ಆಕೆಗೆ?"

'...ಶ್ಶೂ......ಏನಿದೂಂತ? ಅಲ್ಲಾ ಇದಕ್ಕೆ ಮೊದ್ಲು ನಾನೆಲ್ಲಿ ಹೇಳದೆ ಹೋಗಿದ್ದೆ? ಏನೋ ಯಾರದ್ದೋ ಹರಕೆಯಂತೆ; ಅಪರೂಪದ ಬೆಳ್ಳಿ ರಥ ಎಳೆಯುತ್ತಾರಂತೆ ಅಂದ್ರು. ಒತ್ತಾಯ ಮಾಡಿದ್ರು. ಮತ್ತೆ ಮಾಡೋದಾದ್ರೂ ಏನು? ಇದಕ್ಕೆಲ್ಲಾ ಕೋಪಿಸಿಕೊಂಡ್ರೆ......"

"ಇಲ್ವೇ, ಯಾಕೆ ಕೋಪಿಸಿಕೊಳ್ಬೇಕು? ಅಥವಾ ಕೋಪ ಮಾಡಿ ಮಾಡೋದಾದ್ರೂ ಏನು? ಹಿಂದಿನವ್ರು ಮಾಡಿರೋ ಗಾದೆ ಎಂದೂ ತಪ್ಪಾಗೋಲ್ಲ........"

"....ಸಾಕೊಂಡ್ರೆ...."

"ಸಾಕು ಸಾಕು, ಯಾರು ಮತ್ತೆ ಬೇಕೆಂದವ್ರು?"

"ಮತ್ತೆ ಯಾಕೆ ಇನ್ನೂ ಬಡಬಡಿಸುತ್ತೀರಾ?"

'ಹೌದಪ್ಪ, ನೀವು ಮಾಡೋದೆಲ್ಲಾ ನ್ಯಾಯ, ಧರ್ಮ. ನಾವು ಆಡೋದು ಮಾತ್ರ ಬಡಬಡಿಕೆ ಅಲ್ವೆ?"

"ಯಾರು ಹಾಗೆಂದ್ರು? ಸಾಕು ಬಿಡಿ ತಪ್ಪಾಯ್ತು."

'ತಪ್ಪಾಯ್ತೂಂತ ಅಂದ ಮಾತ್ರಕ್ಕೆ ಏನೂ ನಡೀಲೇ ಇಲ್ಲಾ?'

"ನಿಮ್ಮ ವಕೀಲರ ಪ್ರಶ್ನೆಗಳಿಗೆ ನಾನೇನೂ ಉತ್ತರ ಹೇಳಲಾರೆ."

'ವಕೀಲರ ಪ್ರಶ್ನೆಯಂತೆ ವಕೀಲರದ್ದು..."

"................"

"ಪಾಪ ಪಾಪಾಂತ ಸಲಿಗೆ ಕೊಟ್ರೆ ಮತ್ತೆ ನಾಯಿ ಹಾಂಗೆ ತಲೆಯೇರೋಕೆ ಹೊರಡ್ತಾರೆ. ಅಲ್ಲಾ, ದುಡಿದು ಬಳಲಿ ಹಾಯಾಗಿ ಬಂದಿರೋ ಗಂಡನನ್ನ ಬಂದ ಕೂಡ್ಲೇ ಉಪಚರಿಸೋದು ಬಿಟ್ಟು....'

'..............."

'ನಗರ ಸಂಚಾರವೇ ನಿಮಗೆ ಹೆಚ್ಚಿನದಾಯ್ತು..."

'ಮಾತಾಡೇ ಈಗ, ನಿನ್ನ ನಾಲಗೆ ಎಷ್ಟು ಉದ್ದವಿದೆ ತೋರಿಸು .....'

'ನಿಮ್ಮ ದಮ್ಮಯ್ಯ ಇನ್ನು ಮುಂದೆ ಹೀಗೆಲ್ಲಾ ಮಾಡೊಲ್ಲ. ಇಗೊಳ್ಳಿ ಮೊಸ್ಲು ಒಂದು ಲೋಟ..."

"ನಿನ್ನ ಹಾಲೂನೂ ಬೇಡ, ನೀರೂನೂ ಬೇಡ...'

'ಹಾಗನ್ನ ಬೇಡೀಂದ್ರೆ.... ಯಾರಾದ್ರೂ ದಾರಿಹೋಕರು, ನೆರೆಮನೆಯವ್ರು ಕೇಳಿದ್ರೆ..."

"ಕೇಳಿದ್ರೆ ಕೇಳಲಿ. ಅಂದುಕೋಬಹುದು, ಹೆಂಡ್ತಿ ಮುಖಕ್ಕೆ ಮಂಗಳಾರ್ತಿಯಾಗುತ್ತೇಂತ!"

"ಹೌದು, ನನ್ನ ಮುಖಕ್ಕೆ ಮಂಗಳಾರ್ತಿಯಾದ್ರೆ ನಿಮಗೆ ಸಂತೋಷ ಅಲ್ವೆ? ಮಾಡಿ ಹಾಗಾದ್ರೆ; ಸಾಲ್ದಿದ್ರೆ ಇಗೊಳ್ಳಿ ಹಿಡಿಸೂಡಿ..."

"ತಿನ್ನುತ್ತೀಯಾ?"

"ನೀವು ಕೊಡ್ತಿರಂತೆ ಮತ್ತೆ ನಾನು ತಿನ್ನೋದು ಏನು ಹೆಚ್ಚು?

'ಎಷ್ಟು ತಿಂತೀಯ!"

'ನೀವು ಕೊಟ್ಟಷ್ಟು..."

ಅಷ್ಟೂ ತಿನ್ನೋಕೆ ನಿನ್ನಲ್ಲಿ ತಾಕತ್ತು ಇರಬೇಕಲ್ಲಾ?"

"ತಾಕತ್ತೇನು? ನಿಂತು ತಿನ್ನೋಕಾಗದಿದ್ರೆ ಬಿದ್ದು ತಿನ್ನೋದು.... ಮತ್ತೆ ಇದ್ದೇ ಇದೆಯಲ್ಲಾ...."

"ಅಬ್ಬಾ ನಿನ್ನ ಧೈರ್ಯವೆ?'

"ತಪ್ಪಾಯ್ತೂಂತ ಕಾಲು ಹಿಡಿದ್ರೂ ಅರ್ಥವಾಗದವರ ಮುಂದೆ ಧೈರ್ಯಂ ಸರ್ವತ್ರ ಸಾಧನಂ..."

'ಸರಿಯಾಗಿಲ್ಲ ಕಣೇ ನೀನ ?"

'ನಿಮ್ಮ ಸಿಫಾರಿಕೆಲ್ಲಾ ಯಾರಿಗೂ ಬೇಡ. ಬೇಗ ಹಾಲು ಕುಡೀರಿ, ಕೈಕಾಲು ತೊಳ್ಕೊಂಡು ಬನ್ನಿ....'

'ಅದು ಸರೀನ್ನು. ಹಾಲೂನು ಕುಡಿಯೋಣ. ಆದ್ರೆ ನಾನು ಬೇಗ ಬಂದು ಬಿಟ್ಟೆ ಯಾಕೆ ಗೊತ್ತೇನು?'

'ಗೊತ್ತು ಗೊತ್ತು ..."

"ಯಾಕೇಂತ ಹೇಳು ನೋಡೋಣ...'

"ಗೊತ್ತೂಂದೆನಲ್ಲಾ? ಹೇಳಿ ಆಗ ಬೇಕಾದ್ದೂ ಏನು?"

"ಬಾಯಿ ಬಿಟ್ಟು ಹೇಳು ನಾನು ಹೌದೋ ಅಲ್ವೋಂತ ಹೇಳ್ತೇನೆ...."

"ನೀವೇ ಯಾಕೇಂತನ್ನಿ. ನಾನೇ ನಿರ್ಣಯ ಹೇಳ್ತೇನೆ....'

'ಪ್ರಶ್ನೆ ಕೇಳಿದೋಂವ ನಾನು. ಉತ್ರ ಹೇಳುವವ್ಳು ನೀನಾಗ ಬೇಕು...."

'ಹೇಳದಿದ್ರೆ...?'

'ನಿನಗೆ ಗೊತ್ತಿಲ್ಲಾಂತ ಲೆಕ್ಕ...."

"ಅದು ಹಾಗೇನೆ? ಅಂದ್ರೆ ನಾನೀಗ ಹೇಳಬೇಕು...'

"ಇಲ್ವಾದ್ರೆ ಸೋತೆ ಅನ್ನ ಬೇಕು..."

"ಅಲ್ಲಾ, ಸೋತೆ ಅನ್ನೋದೂಂದ್ರೆ ಭಾರೀ ಸುಲಭವೆ?"

"ಹಾಗಾದ್ರೆ ಉತ್ರ ಹೇಳು..."

"ಹೇಳೋಲ್ಲ..."

"ನಿಂಗೆ ಗೊತ್ತಿಲ್ಲ...'

"ನೋಡಿ ಗೊತ್ತಿಲ್ಲ ಗೊತ್ತಿಲ್ಲಾಂತ ಸುಂಸುಮ್ನೆ ಅನ್ನಬೇಡಿ...."

"ನೀನೂ ಹಾಗೇನೇ..."

"ಹೇಗೆ?'

'ಗೊತ್ತಿದೇಂತ ಸುಂಸುಮ್ನೆ ಅನ್ನಬೇಡ."

"ನನಗೆ ಗೊತ್ತಿದೆ..."

"ಹೇಳು...."

"ಹೇಳಿದ್ರೆ ಏನು ಕೊಡ್ತೀರಿ?"

"ಕೊಡೋದು? ನನ್ನನ್ನೇ ಕೊಟ್ಟು ಬಿಟ್ಟಿದ್ದೇನೆ. ಮತ್ತೆ ಬೇರೆ ಕೊಡೋದಾದ್ರೂ ಏನು?"

"ಏನೂ ಇಲ್ವೆ?"

"ಏನಿದೇಂತ? ಹೇಳು..."

'ಏನೂ ಇಲ್ದಿದ್ರೆ ಬೈಗಳು......ಪೆಟ್ಟು...'

'ಹಾಗೆಲ್ಲಾ ಅನ್ನಬೇಡ ಮತ್ತೆ....'

"ಮತ್ತೆ ಏಕೆ? ಈಗಲೇ ಅಂದೆನಲ್ಲಾ...."

"ಅದೇ ಅಂತಹ ಮಾತಾಡ ಬೇಡಾಂತ...."

"ನೀವು ಬೈಯ್ತೀರಂತೆ ಹೊಡೀತೀರಂತೆ, ನಾನು ಮಾತ್ರ ಹೇಳಬಾರದು...."

"ಯಾಕೆ ಹೇಳ್ಬೇಕೂಂತ?'

"ಯಾಕೆ ಹೇಳಬಾರದೂಂತ?"

"ಅಲ್ಲ. ನೀನು ಹೇಳಿದ್ರೂ ಅಷ್ಟೆ ಬಿಟ್ರೂ ಅಷ್ಟೇ ಅನ್ನು..."

"ಅಂದ್ರೆ ಮಾನ ಬಿಟ್ಟವ್ರೂಂತಾಯ್ತು?....

'ಯಾಕೆ?"

'ಯಾಕೇಂತಂದ್ರೆ, ಹೇಳ್ಲೇ ಬೇಕೇನ?'

"ಹ್ಞಾಂ, ಹೇಳಿಬಿಡು...."

"ನೋಡಿ, ನಮ್ಮ ಸೀತಾರಾಮು ಇದ್ದನಲ್ಲಾ..."

"ಹೌದು ಆ ಪ್ರೈಮರಿ ಸ್ಕೂಲ್ ಮೇಸ್ಟ್ರು ಅಲ್ವೆ?"

"ಮೇಸ್ಟ್ರು ಅಂದ್ರೆ ನಿಮಗೆ ಅಷ್ಟೂ ಸಸಾರ ಅಲ್ವೆ?"

'ಯಾರು ಹಾಗಂದ್ರು? ಭಾರೀ ಗೌರವ. ಅದಿರ್ಲಿ, ಯಾಕೆ ಬಂದಿದ್ದ?"

"ಅದು ದೊಡ್ಡ ರಾಮಾಯಣ..."

"ಏನಂತೆ?"

'ಅವನ ಮೆನೇಜಮೆಂಟಿಗೆ ತಿಂಗ್ಳಿಗೆ ಐದು ರೂಪಾಯಿ ಬಿಡಬೇಕಂತೆ, ಅದಕ್ಕೆ ಒಪ್ಪಿಕೊಳ್ಳದಿದ್ರೆ ಶಾಲೆ ಬಿಡಬೇಕಂತೆ. ಈ ವಿಚಾರವನ್ನು ಯಾರಿಗೂ ಹೇಳ್ಬಾರ್ದಂತೆ, ಹೇಳಿದ್ರೂ ಪರ್ವಾಗಿಲ್ಲಾಂತೆ"

'ಏನಂತೆ ನೋಟೀಸು ಕೊಟ್ಟಿದ್ದಾರಾ?'

"ಬಾಯ್ದೆರೆಯಾಗಿ...,"

"ಅಂದ್ರೆ ಬಿಳಿ ಕಾಗದದ ಹುಲಿ..."

'ನಿಮ್ಮ ಹಾಗೇನೇ ಆಯ್ತೂನ್ನಿ. ಮ ಬಣ್ಣದ ಕಾಗದದ ಹುಲಿ ಬೇರೆ ಇದೆಯೇನು?'

'ಲಿಖಿತವಾಗಿ ಕೊಟ್ರೆ ಅದು ಬಣ್ಣದ ಕಾಗದದ ಹುಲಿಯಾಗುತ್ತೆ..."

"ಮತ್ತೆ ನಿಜ ಹುಲಿ...."

"ಇದು ಇಲ್ವೇ ಇಲ್ಲ ನೋಡು. ಹುಲಿಗಳ ಜಾತಿಯೇ ನಾಶವಾಗಿ ಹೋಗಿರುವಾಗ ಅದು ಇಲ್ಲಿ ಅಷ್ಟು ಎಷ್ಟು ಕಾಣಸಿಗುತ್ತೆ?'

'ಅಂದ್ರೆ ಮೆನೇಜುಮೆಂಟಿಗೆ ಏನು ಮಾಡೋದಕ್ಕೂ ಸಾಧ್ಯವಿಲ್ಲ..."

"ಸಾಧ್ಯ ಇರಬಹುದು. ಆದ್ರೆ ಅದರಲ್ಲಿ ಸಫಲವಾಗುವುದು ಮಾತ್ರ ಕಷ್ಟ. ಅಲ್ಲಾ, ಈ ಬಡ ಮೇಸ್ಟ್ರು ಸಂಬಳದಲ್ಲಿ ಪಾಲು ತೆಗೆದುಕೊಳ್ಳೋದು ಯಾವ ನ್ಯಾಯಾಂತ....'

'ನಿಮ್ಮ ಭ್ರಷ್ಟಾಚಾರ ತುಂಬಿದ ರಾಜ್ಯದಲ್ಲಿ ಇದು ವಿಶೇಷವೇನಂತೆ? ಅದ್ರ ಮೇಲೆ ಸರಕಾರವೇ ಇದಕ್ಕೆ ಬೆಂಬಲ ನೀಡುತ್ತಂತೆ..."

'ಹೇಗೆ?"

"ಏನೋ ಅವರಿಗೆ ಮೈಂಟೆನನ್ಸೋ, ಕಂಪನ್ಸೇಶನೋ ಕೊಡೋದಿಲ್ಲಂತೆ. ಕೊಟ್ರು ಕಾಸಿನ ಮಜ್ಜಿಗೆಯಂತೆ...."

"ಅದಕ್ಕೆ ಮೇಸ್ಟ್ರುಗಳ ರಕ್ತ ಹೀರೋದೆ?"

'ನೌಕರರು ಲಂಚಕ್ಕೆ ಕೈಚಾಚಿದಂತೆ ಇವ್ರೂ..."

"ಅಲ್ಲಾ, ಸರಕಾರ ತಮಗೆ ಅನ್ಯಾಯ ಮಾಡಿದೇಂತ, ಅದಕ್ಕೆ ತಾವು ಬೇರೆಯವ್ರಿಗೆ ಅನ್ಯಾಯ ಮಾಡೋ ಬುದ್ಧಿ ಚೆನ್ನಾಗಿಲ್ಲಾ ನೋಡು.."

'ಮತ್ತೆ ಮಾಡೋದಾದ್ರೂ ಏನು? ನಿಮ್ಮ ಸರಕಾರ ಯಾಕೆ ಅನ್ಯಾಯ ಮಾಡಬೇಕೂಂತ?"

'ಅನ್ಯಾಯವನ್ನ ಪ್ರತಿಭಟಿಸಬೇಕು.."

'ಅಂದ್ರೆ, ರೈಲು ಕಂಬಿ ಮುರೀಬೇಕು, ಎಸ್. ಟಿ. ಗಾಡಿ ತಡೀಬೇಕು, ತಂತಿ ಕಂಬ ಉರುಳಿಸಬೇಕು, ಕಛೇರಿ ಬಾಗಿಲು ಮುರೀಬೇಕು...."

'ಹಾಂಗಲ್ವೆ. ನ್ಯಾಯವಾದ ರೀತಿಯಲ್ಲಿ...'

"ಅಲ್ರಿ, ನ್ಯಾಯಕ್ಕೆ ತಲೆ ಬಾಗುವ ಬುದ್ಧಿ ನಿಮ್ಮ ಸರಕಾರಕ್ಕೆ ಇದ್ರೆ ತಾನೆ?"

'ಯಾಕೆ ಹಾಗಂತೀಯ?"

'ಮತ್ತೆ ಯಾವ ವಿಚಾರದಲ್ಲಿ ಏನೇ ಇರ್ಲಿ. ಈ ವಿಚಾರದಲ್ಲಂತೂ ಹಾಗೇನೇ. ಆದ್ರಿಂದ್ಲೆ, ಮೇಸ್ಟ್ರು ಸಂಬಳಕ್ಕೆ ಕತ್ತಿ ಹಾಕ್ತಾರೆ ಮೆನೇಜರ್ರು...'

"ಅಂದ್ರೆ ಅಲ್ಲಿನೂ ಭ್ರಷ್ಟಾಚಾರ...'

"ನಿಮ್ಮ ನಂದಾಗೆ ತಿಳಿಸಿ ಬಿಡಿ ಇದನ್ನ. ಕಂಠಿ, ಭಗಲಾ ಎಲ್ರಿಗೂ ಹೇಳಿ.

(ಐದಿಮೂರನೇ ಪುಟ ನೋಡಿರಿ)

ಅಭಿಪ್ರಾಯ

ಇಂದು ಸಾಹಿತ್ಯ ಎತ್ತ ಸಾಗಿದೆ?

ಬರೆದವರು: ಶ್ರೀ ಕೆ. ಬಾಲಕೃಷ್ಣ ಆಚಾರ್ಯ, ಬಿ. ಎ.

ಇಂದು "ನವೀನತೆಯ" ಸೋಗಿನಲ್ಲಿ ಮರೆಹೊಕ್ಕು, ನಮ್ಮ ಪ್ರಾಚೀನ ಕನ್ನಡ ಸಾಹಿತ್ಯದ ವೈಶಿಷ್ಟ್ಯ ಮರೆಯಾಗಿದೆ. "ಕನ್ನಡ ಸಾಹಿತ್ಯ" ಹಿಂದೆ ಪ್ರಸಿದ್ಧ ಕವಿಗಳ ಕಾವ್ಯ ಪ್ರತಿಭೆಯಿಂದ ಮೆರೆವಿದ್ದಾಗ್ಯೂ ಇಂದು ನವೀನತೆಯ ಹೆಸರಿನಲ್ಲಿ ಘನತೆಯನ್ನು ಕಳೆದು ಕೊಂಡಿದೆ.

ಇಂದು ಸಾಹಿತ್ಯವೇನೋ ಹಿಂದಿನ ಪ್ರಾಸ ನಿಯಮಗಳ ಕಟ್ಟುನಿಟ್ಟುಗಳಿಂದ ಮುಕ್ತವಾಗಿ, ಸ್ವತಂತ್ರವಾಗಿ ಸಾಗುತ್ತಿರುವುದು ನಿಜ. ಆದರೆ ಜನತೆಯ ಅಭಿರುಚಿಯು ಮಟ್ಟುಕ್ಕಿಳಿದು, ಜನತೆಯನ್ನು ತೃಪ್ತಿಗೊಳಿಸುವ ಉದ್ದೇಶದಿಂದ ಸಾಹಿತ್ಯ ಜನ ಮಟ್ಟಕ್ಕಿಳಿದಿದೆ. ಇದು ಶೋಚನೀಯ. ಸಾಹಿತ್ಯ ಸಾಧ್ಯವಾದಷ್ಟು ಆದರ್ಶವಾಗಿರಬೇಕು. ಇದರಿಂದ ಜನತೆಗೆ "ಕಾವ್ಯಾನಂದ" ದೊರೆಯಬೇಕು. ಸಹಜವಾದರೂ, ಜನತೆಯ ರುಚಿಗಳಿಗೆ ಗಮನವೀಯದೆ, ಸಾಹಿತ್ಯ ಗ್ರಂಥಗಳು ಉನ್ನತ ವಟ್ಟದಲ್ಲಿ ಮುನ್ನಡೆಯಬೇಕು. ಸಾಹಿತಿಯು ತನ್ನ ಮನೋಭಾವನೆಗಳನ್ನು ಸಾಹಿತ್ಯಿಕವಾಗಿ ಒಡಮೂಡಿಸಬೇಕೇ ಹೊರತು ಕೇವಲ ಜನತೆಯತ್ತ ತನ್ನ ಪ್ರತಿಭೆಯನ್ನು ತಿರುಗಿಸಬಾರದು. ಕಾವ್ಯವೆಂಬುದು ಕವಿಯ ಪ್ರತಿಭೆಯ ಪ್ರತೀಕ. ಇದೀಗ ಜನಮನರಂಜನೆಯೇ ಕಾವ್ಯದ ಹಿರಿಯ ಗುರಿಯಾಗಿರುದರಿಂದ ಹಿಂದಿನ ಪರಂಪರೆ ಇದು ಮಾಸಿ ಹೋಗಿದೆ. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ 'ನವೀನತೆ'ಯ ಗಾಳಿ ಸೋಂಕಿದೆ.

ಮೊದಲನೆಯದು ಇಂದಿನ ಗದ್ಯ ಸಾಹಿತ್ಯ! ಹಿಂದೆ ಹಳಗನ್ನಡ ಗದ್ಯ ಸಾಹಿತ್ಯಗಳ ಘನತೆ ಇಂದಿನ ಕಾದಂಬರಿಗಳ ಮಟ್ಟದಲ್ಲಿ ಮರೆಯಾಗಿದೆ. ಸಣ್ಣ ಕಥೆಗಳು, ಕಾದಂಬರಿಗಳು ಹುಟ್ಟುವುದಕ್ಕೆ ಮುಖ್ಯ ಕಾರಣ—ಆಂಗ್ಲ ಸಾಹಿತ್ಯದ ಪ್ರಭಾವ. ಜನತೆಯ ಅಭಿರುಚಿಗೆ ತಕ್ಕಂತೆ ಸಾಮಾಜಿಕ, ಐತಿಹಾಸಿಕ, ಪತ್ತೇದಾರಿ ಕಾದಂಬರಿಗಳು ಹುಟ್ಟಿದ್ದು, ಅವುಗಳಲ್ಲಿ ಹಿಂದಿನ ಗದ್ಯ ವೈಭವ ಕಂಡು ಬರುವುದಿಲ್ಲ. ಕಾದಂಬರಿಗಳ ರಚನೆಗಾಗಿ ಹೆಚ್ಚಿನ ಪ್ರತಿಭೆ ಅವಶ್ಯವಿಲ್ಲ. ಇಂದು ಪ್ರತಿಭೆಯಿಂದ ಕೂಡಿದ ಗ್ರಂಥಗಳೇ ಕಡಿಮೆಯೆನ್ನಬಹುದು.

ಇಂದು ಗೀತಾ ನಾಟಕಗಳೇ ವಿಪುಲವಾಗಿವೆ. ಹಿಂದಿನ ಸಂಸ್ಕೃತ ನಾಟಕಗಳಲ್ಲಿ ಮೊದಲು ಪ್ರಸ್ತಾವನೆ, ನಾಂದಿ, ಸೂತ್ರಧಾರ ಪ್ರವೇಶ ಇತ್ಯಾದಿ ಭಾಗಗಳಿದ್ದರೆ, ಈಗಿನ ನಾಟಕಗಳಲ್ಲಿ ಇದಾವುದೂ ಇರದೆ, ಕೂಡಲೇ ನಾಟಕದ ಕಥಾ ಭಾಗವೇ ಆರಂಭವಾಗುವುದು. ನೃತ್ಯ ನಾಟಕಗಳೂ ರಚಿತವಾಗಿವೆ.

ಇಂದಿನ ಸಾಹಿತ್ಯ ಪ್ರಕಾರಗಳತ್ತ ಗಮನ ಹರಿಯಿಸಿದರೆ, ವಿಮರ್ಶಾತ್ಮಕ ಲೇಖನಗಳಲ್ಲಿ ಮಾತ್ರ ಲೇಖಕರ ನಿಜವಾದ ಕಾವ್ಯ ಪ್ರತಿಭೆ ವ್ಯಕ್ತವಾಗುವುದು

"ಕಣ್ಣು ಬಣ್ಣಗಾರ, ಕಿವಿಯೇ ಕವಿ" ಎಂದು ಬೇಂದ್ರೆ ಹೇಳಿದಂತೆ, ಮನಸ್ಸಿನಲ್ಲಿ ಒಡಮೂಡಿದ ಭಾವನೆಗಳೇ ಸಾಹಿತ್ಯ ಗ್ರಂಥಗಳಲ್ಲಿ ಪ್ರಕಟಿತವಾಗಿರಬೇಕು.

"Literature is one which expresses the feelings of the author"— ಲೇಖಕರ ಭಾವನೆಗಳನ್ನು ಒಡಮೂಡಿಸುವುದೇ ಸಾಹಿತ್ಯ!

'ಯಕ್ಷಗಾನ ಸಾಹಿತ್ಯ"ದಲ್ಲಿ ಇದೀಗ 'ಮೂಕ ಯಕ್ಷಗಾನ" ಪ್ರಯೋಗ ಆರಂಭವಾಗಿದೆ. ಇದನ್ನು ಪ್ರಯೋಗಿಸಿದವರು ಶ್ರೀ ಶಿವರಾಮ ಕಾರಂತರು. ಅರ್ಥಕ್ಕೆ ಪ್ರಾಧಾನ್ಯವಿರದೆ, ಕೇವಲ ಅಭಿನಯದ ಮೂಲಕ ಭಾವನೆಗಳನ್ನು ವ್ಯಕ್ತಪಡಿಸುವುದು. ಆದರೆ ಇದು ಹೊಸ ಪ್ರಯೋಗವಾದರೂ, ಜನ ಸಾಮಾನ್ಯರಿಗೆ ನೃತ್ಯಾಭಿನಯದ ವೈವಿಧ್ಯದ ಅರಿವಾಗಲಾರದು. ವಿದ್ಯಾವಂತ ಜನತೆಗೆ ತಿಳಿಯಬಹುದಾದರೂ, ಜನ ಸಾಮಾನ್ಯರಿಗೆ ಅದು ರುಚಿಸದು. ವಿದೇಶೀಯರಿಗೆ ನಮ್ಮ ಯಕ್ಷಗಾನ ಸಂಪತ್ತಿನ ಮಹತ್ವವನ್ನು ತಿಳಿಸುವುದು ಈ ಹೊಸ ಪ್ರಯೋಗದ ಉದ್ದೇಶವಾದರೂ, ಹಿಂದಿನ ಯಕ್ಷಗಾನ ಪರಂಪರೆಗೆ ಇದು ಸ್ವಲ್ಪ ಅಭಾಸವಾಗಬಹುದು. ಈ ಮೂಕ ಯಕ್ಷಗಾನ ಸ್ವಲ್ಪ ಮಟ್ಟಿಗೆ ಕೇರಳದ 'ಕಥಕ್ಕಳಿ"ಯಂತಿದ್ದು, ಪ್ರತಿಯೊಬ್ಬ ಪಾತ್ರಧಾರ ಭಾಗವತರ ಪದ್ಯಕ್ಕೆ ಅರ್ಥ ಹೇಳುವ ಬದಲು, ಅಭಿನಯದ ಮೂಲಕ ಭಾವನೆಯನ್ನು ಹೊರಗೆಡಹುತ್ತಾನೆ. ಕನ್ನಡ ಭಾಷೆಯನ್ನರಿಯದ ವಿದೇಶೀಯರಿಗೆ ಇದು ಅನುಕೂಲವಾಗಬಹುದೇ ಹೊರತು, ಇದು ನಿಜವಾದ ಯಕ್ಷಗಾನ ಕಲೆಯಾಗಿರಲಾರದು.

ಶಾಸ್ತ್ರೀಯ ಗ್ರಂಥಗಳನ್ನು ಪರಿಶೀಲಿಸಿದರೆ, ಯಾವುದೇ ವಿಷಯವಿದ್ದರೂ, ಹಿಂದಿನ ಪ್ರಾಚೀನ ಗ್ರಂಥಗಳಲ್ಲಿ ಆಧಾರವಿದೆಯೇ ಹೊರತು, ಸ್ವತಂತ್ರ ಆಧುನಿಕ ಶಾಸ್ತ್ರ ಗ್ರಂಥಗಳು ಹುಟ್ಟಿಲ್ಲ. ಅಲಂಕಾರ ಗ್ರಂಥಗಳಾದರೂ ಸರಿಯೇ! ಕನ್ನಡ ಭಾಷೆಯಲ್ಲಿ ಮೂಲ ಗ್ರಂಥಗಳಾವುವೂ ಇಲ್ಲ. ಕನ್ನಡದಲ್ಲಿ ಬರೆದ ಲಾಕ್ಷಣಿಕ ಗ್ರಂಥಗಳಿಗೆಲ್ಲಾ ಸಂಸ್ಕೃತ ಗ್ರಂಥಗಳೇ ಮೂಲಾಧಾರ! ಆದರೂ ಚಿಂತೆಯಿಲ್ಲ. ಇಡೀ ಭಾರತ ಒಂದೇ ಅಲ್ಲವೆ? ಸಂಸ್ಕೃತ ತಾಯಿ. ಕನ್ನಡ ಆಕೆಯ ಸಾಕುಮಗಳು.

ಸಾಹಿತ್ಯ ಮಟ್ಟ ಕೆಳಗಿಳಿಯುತ್ತಿರುವ ಈ ಕಾಲದಲ್ಲಿ ಹಿಂದಿನ ಶಾಸ್ತ್ರೀಯ ಮಟ್ಟವನ್ನು ಉಳಿಸಿ ಕೊಳ್ಳುವುದು ಅವಶ್ಯ!

ಪದ್ಯ ಸಾಹಿತ್ಯದಲ್ಲೂ ಹೀಗೆಯೇ! ಇಂದು ಆಂಗ್ಲ ಕವಿತೆಗಳ ಪ್ರಭಾವಕ್ಕೊಳಗಾಗಿ ಅನೇಕ ಭಾವಗೀತೆಗಳು, ಪ್ರೇಮ ಗೀತೆಗಳು ಹುಟ್ಟಿವೆ. ಈ ಕವಿತೆಗಳಲ್ಲಿ ಛಂದಸ್ಸಿನ ನಿಯಮಗಳನ್ನು ಅನುಸರಿಸದಿದ್ದು, ಛಂದಶ್ಶಾಸ್ತ್ರಕ್ಕಿಂತಲೂ, ಕಾವ್ಯ ಪ್ರತಿಭೆಗಿಂತಲೂ, ಭಾವನೆಗಳಿಗೇನೇ ಪ್ರಾಧಾನ್ಯ ಕೊಡಲಾಗಿದೆ. ಪ್ರಾಸ ನಿಯಮಗಳೂ, ಛಂದೋಲಂಕಾರಗಳೂ ಪ್ರಯೋಗಿಸಲ್ಪಟ್ಟಿಲ್ಲ. ಜನತೆಯ ಅಭಿರುಚಿಗಳಿಗೆ ತಕ್ಕಂತೆ ಕವಿತೆಗಳು ರೂಪುಗೊಂಡಿವೆ.

ಹಲವಾರು ಶತಮಾನಗಳಿಂದ ನಡೆದು ಬಂದಿರುವ ನಮ್ಮ ಸಾಹಿತ್ಯ ಪರಂಪರೆಯನ್ನುಳಿಸಿ, ಅದನ್ನು ಜನಪ್ರಿಯ ಮಟ್ಟಕ್ಕಿಳಿಸದೆ, ಸಾಹಿತ್ಯ ಮಟ್ಟದಲ್ಲಿಯೇ ಅಭಿವೃದ್ಧಿಗೊಳಿಸುವುದು ನಮ್ಮಂತಹ ಕನ್ನಡಿಗರ ಪವಿತ್ರ ಕರ್ತವ್ಯ. ಕನ್ನಡ ಸಾಹಿತ್ಯ ಬೆಳೆಯಲಿ! ಕನ್ನಡ ಮಾತೆಯ ಸಂಪತ್ತು ಅಭಿವೃದ್ಧಿ ಹೊಂದಲಿ!

ಆಗ ಏ. ಸೀ ಯವರು ಹೇಳಿದ—

"ಏನ ಚೆಲುವಿನ ನಾಡು! ಚೆಲುವು ಚೆಲ್ಲುವ ನಾಡು! ಕನ್ನಡದ ನಾಡು! ನಮ್ಮೊಲುಮೆಯೂ ನಾಡು! ನಮ್ಮಿನಿಯ ನಾಡು!"

—ಎನ್ನುವ ಮಾತು ಸತ್ಯವಾದೀತು! "ಸಿರಿಗನ್ನಡಂ ಗೆಲ್ಗೆ!"

In the Court of the Munsif of Coondapoor.

O S. No. 145/1965

Between:

Ramanna Shetty ... Plaintiff

and

Sheenappa Shetty and others ... Defendants

To all concerned.

Please take notice that the plaintiff above named had filed a suit on behalf of all the creditors to the effect that the alienation of the properties by Sooramma Shedthy and others in favour of Sheenappa Shetty is a sham and colourable transaction and with intent to defruad the creditors. The said suit is posted to 24-4-65 before the above court. All persons who are interested in the subject matter of the suit are requested to appear before the above court on the above said date at 11 A.M either in person or through a duly instructed pleader.

By order of the court,

Sd. K. Ramappayya,
B. A. B. L.,
Advocate for plaintiff.

Coondapoor, 3 - 4—1965.

ಸಿಂಡಿಕೇಟ್ ಬ್ಯಾಂಕು

ಬ್ಯಾಂಕಿಂಗ್ ಕ್ಷೇತ್ರದ ಹಲವಾರು ವಿಭಾಗಗಳಲ್ಲಿ ಕಾರ್ಯಶಾಲಿಯಾದ ಆದ್ಯ ಸಂಸ್ಥೆಯಾಗಿದೆ. ದಿನಾ ಉಳಿತಾಯದ ಯೋಜನೆಗಳು, ಇನ್ವೆಸ್ಟರ್ಸ್ ಏಜನ್ಸಿ, ಗ್ರಾಮೀಣ ಬ್ಯಾಂಕಿಂಗ್ ಮತ್ತು ಹಲವು ಇತರ ಯೋಜನೆಗಳು. ಈಗ ಅದು ಕೃಷಿ ಆರ್ಥಿಕ ವಿಭಾಗದಲ್ಲಿ ನೂತನ ಪ್ರಯತ್ನವನ್ನು ಕೈಗೊಂಡಿದ್ದು, ಕೃಷಿಯ ಅಭಿವೃದ್ಧಿಗಾಗಿ ಅಲ್ಪ ಕಾಲಿಕ, ಮಧ್ಯ ಕಾಲಿಕ ಮತ್ತು ದೀರ್ಘಕಾಲಿಕ ಉತ್ಪಾದನಾ ಸಾಲಗಳ ವ್ಯವಸ್ಥೆಯನ್ನು ರೂಪಿಸಿದೆ. ಆಹಾರದ ಉತ್ಪಾದನೆಯಲ್ಲಿ ಅಧಿಕ ಉತ್ಪಾದನೆಯ ಪ್ರಯತ್ನದಲ್ಲಿ ಸಿಂಡಿಕೇಟು ತನ್ನ ಸಂಪೂರ್ಣ ಸಹಕಾರ ಮತ್ತು ಬೆಂಬಲವನ್ನು ನೀಡುವುದು.

ಪಾವತಿಯಾದ ಭಂಡವಾಳ

ಮತ್ತು ಕಾದಿಟ್ಟ ನಿಧಿ	:	ರೂ. 175 ಕೋಟಿಗೂ ಹೆಚ್ಚು.
ಠೇವಣಿಗಳು	:	ರೂ. 51 ಕೋಟಿಗೂ ಹೆಚ್ಚು.
ಗಿರಾಕಿಗಳು	:	8 ಲಕ್ಷಕ್ಕಿಂತ ಹೆಚ್ಚಿಗೆ.
ಶಾಖೆಗಳ ಸಂಖ್ಯೆ	:	200ಕ್ಕೂ ಮಿಕ್ಕಿದೆ.
ಚಲಾವಣಾ ಸಂಪತ್ತು	:	ರೂ. 70 ಕೋಟಿಗಿಂತ ಹೆಚ್ಚು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು : ಮಣಿಪಾಲ

READ & ADVERTISE IN NAVAYUGA WEEKLY



ಪರಿಚಯ

ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು

೧

ಶ್ರೀ ಕೆ. ವೆಂಕಟರಾಯಾಚಾರ್ಯ, ವಿದ್ವಾನ್.

ಇದೇ ಬರುವ ಮೇ ತಿಂಗಳಲ್ಲಿ (2-4) ಕಾರವಾರದಲ್ಲಿ ನೆರೆಯುವ ಅಖಿಲ ಭಾರತ 45ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಿಯೋಜಿತ ಅಧ್ಯಕ್ಷರಾಗಿ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರ ಹೆಸರನ್ನು ಕೇಳಿ ಮನಸ್ಸಿನಲ್ಲಿ ಅತ್ಯಾನಂದವೂ ಆಶ್ಚರ್ಯವೂ ಉಂಟಾಗದವರಲ್ಲಿ ನಾನೊಬ್ಬನು. 'ಪೂಜ್ಯ ಪೂಜಾವ್ಯತಿಕ್ರಮ"ವಾಗದಂತೆ ಕನ್ನಡ ಸಾರಸ್ವತ ಪ್ರಪಂಚದ ಧುರೀಣರು ವರ್ತಿಸಿದರೆಂಬುದು ಅತ್ಯಾನಂದದ ಕಾರಣವಾದರೆ; ಈ ಮೊದಲು ದಕ್ಷಿಣ ಕನ್ನಡ ಜಿಲ್ಲೆಯ ಐದು ಮಂದಿ ಮಹನೀಯರು, ಐದು-ಹತ್ತು ವರ್ಷಗಳ ಅಂತರದಲ್ಲಿ ಅನುಕ್ರಮವಾಗಿ ಅಧ್ಯಕ್ಷರಾದರೆಂಬುದು ಆಶ್ಚರ್ಯದ ನಿದಾನವಾಗಿದೆ. ಈ ಮಾತಿನಲ್ಲಿ ಅನ್ಯಾರ್ಥ ತಿಳಿವಂತಿಲ್ಲ. ಇವರಾರು ಮುಂದಿಯಲ್ಲಿ ಪ್ರತಿಯೊಬ್ಬರು ಒಂದಲ್ಲ ಒಂದು ತೆರದಲ್ಲಿ, ಸ್ವವೈಶಿಷ್ಟ್ಯದಿಂದ ಸಾಹಿತ್ಯಾಂಬೆಯ 'ಮುಡಿಯ" ಹೆಚ್ಚಿಸಿದವರು, ಹೆಚ್ಚುಗೊಂಡವರೆಂಬುದೇ ಇದರ ಮೂಲಾರ್ಥವಾಗಿದೆ.

ಆವುದೊಂದು ಹಳ್ಳಿಯ, ಪಟ್ಟಣದ, ರಾಜ್ಯದ, ದೇಶದ ಒಂದು ಮೂಲೆಯೆಲ್ಲಾಗುವ ಸಭೆಗೆ ಆದಾವನೂ ಉದ್ಘಾಟಕ ಅಧ್ಯಕ್ಷನಾಗಬಲ್ಲನು. ವಿದ್ಯಾ ವಿಚಾರದ ಪ್ರಮಾಣವು ಅಲ್ಲಿಗೆ ಬೇಕಾಗಿರಲಿಕ್ಕಿಲ್ಲ. ಬೇರಾವುದೋ ಪ್ರಬಲತೆಯ ಕಾರಣದಿಂದ ಅದು ಸಾಧ್ಯವಿದೆ. ಪರಂತು, ಅಖಿಲ ಕನ್ನಡ ಸಾಹಿತ್ಯ ಕ್ಷೇತ್ರದ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ನಡೆವ ಸಾಹಿತ್ಯ ಗೋಷ್ಠಿಗೆ ಒಂದಾನೊಂದು ವಿಭಾಗದಲ್ಲಿ ಮಾತ್ರ ಹೆಚ್ಚುಗಾರಿಕೆಯವನು ಅಧ್ಯಕ್ಷನಾಗಲೂ ಬಹುದು. ಸಾಹಿತ್ಯ ಸಮ್ಮೇಲನದ ಅಧ್ಯಕ್ಷತೆಯ ಸಂಪ್ರಾಪ್ತಿಗೆ ಒಂದಲ್ಲದ--ಅನೇಕಶಃ ಸಾಹಿತ್ಯ ವಿಭಾಗಗಳಲ್ಲಿ ಮೇಲು ಹಂತದ ಪಸಿರಬೇಕೆಂಬ ದೇ ಅರ್ಥವಾಗುತ್ತದೆ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು ಆ ಮೇರೆಗೆ ಅನೇಕ ರೀತಿಯಲ್ಲೂ ಸುಪ್ರಸಿದ್ಧರೆಂಬುದನ್ನೇ ಇದು ಧ್ವನಿಯಿಸುತ್ತದೆಯಲ್ಲವೇ?

ಇವರ ಜೀವನ-ಕೃತಿಗಳ ಪರಿಚಯಾತ್ಮಕ ಲೇಖನ ಪುಸ್ತಿಕೆಗಳು ಆಗಾಗ ಒಂದೆರಡು ಬಂದಿವೆ. 1959ರಲ್ಲಿ ಶ್ರೀ ಬಡೆಕ್ಕಿಲ ಕೃಷ್ಣ ಭಟ್ಟರು ಚಿಕ್ಕ ಪುಸ್ತಕದಲ್ಲಿ ಇವರ ಕಾವ್ಯಗಳ—ಸಾರವನ್ನು ಭಕ್ತಿಯಿಳಿಸಿದ್ದಾರೆ. ಶ್ರೀ ಭೀಮ ಭಟ್ಟರು 1956ರಲ್ಲಿ ಒಂದು ಲೇಖನದಲ್ಲಿ ಇವರ ಕವಿತೆಗಳ ಚಿಕ್ಕ ಪರಿಚಯ ಬರೆದಿದ್ದಾರೆ. ಇದೀಗ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು ಅಧ್ಯಕ್ಷರಾಗಿ ಆಯ್ಕೆಗೊಂಡಾಗ ಶ್ರೀ ಜಿ. ವೆಂಕಟಸುಬ್ಬಯ್ಯನವರು 'ಪ್ರಜಾವಾಣಿ" ಯಲ್ಲಿ ತುಸ ಸ್ಥೂಲವಾಗಿ ಜೀವನ ಪರಿಚಯ ಮಾಡಿ ಬರೆದರು. 'ಸಂಯುಕ್ತ ಕರ್ನಾಟಕ"ದಲ್ಲಿ ಶ್ರೀ ನಾರಾಯಣ ಕಲ್ಲೆಯವರು ತುಸ ಬರೆದರು. 'ಜನಪ್ರಗತಿ'ಯಲ್ಲಿ ಶ್ರೀ ಕಲ್ಲೆ ಎನ್. ಶಿವೋತ್ತಮರಾಯರು ಶ್ರೀ ಶಂಕರ ಭಟ್ಟರ ಜತೆ ಇದ್ದುದರಿಂದ ಮತ್ತೊಂದು ಜೀವನ ಪರಿಚಯ ಬರೆದರು. (ಇವಿಷ್ಟು ನನಗೆ ತಿಳಿದು ಬಂದುವು, ಬೇರೆಯವರೂ ಬರೆದಿರಬಹುದೇ ಎಂದು ತಿಳಿದಿಲ್ಲ) ಅಲ್ಲಿ ಇವರ ಕತೆ, ಕವಿತೆ, ನಾಟಕ, ಕಾದಂಬರಿಗಳ ಹೆಸರು ಮಾತ್ರ ಕೆಲವೆಡೆ ಬಂದಿವೆ. ಪರಂತು, ಗದ್ಯ ಪ್ರಬಂಧಗಳ ಪ್ರಸ್ತಾವನೇ ಹೆಚ್ಚಾಗಿ ಇಲ್ಲ; ಗದ್ಯ ಪ್ರಬಂಧಗಳು ಒಟ್ಟಿಗೆ ಆಗಿ ಮುದ್ರಣವಾದರೆ ಓದುಗರಿಗೆ ಅವುಗಳ ಪರಿಜ್ಞಾನ ಸಾಧ್ಯವಾದೀತು! (ಇದೀಗ ಶ್ರೀ ಮುಳಿಯ ಕೇಶವ ಭಟ್ಟರ ಮೂಲಕ ಬೆಂಗಳೂರಲ್ಲಿ ಶ್ರೀ ಶಂಕರ ಭಟ್ಟರ ಕೆಲವು ಗದ್ಯ ಪ್ರಬಂಧಗಳ ಸಂಕಲನವಾಗುತ್ತಿದೆಯೆಂದು ಕೇಳುತ್ತೇವೆ.) ಇದೀಗ ಒಂದೆರಡು ಗದ್ಯ ಪ್ರಬಂಧಗಳ ಒಂದೆರಡು ವಾಕ್ಯಾಂಶಗಳನ್ನು ವಾಚಕರ ಮುಂದಿಡ ಬಯಸುವೆನು. **ಪತ್ರಿಕೆ—ಲೇಖನಗಳ** ವಿಚಾರವಿದ :

"ಒಂದೆಡೆ ಪತ್ರಿಕಾ ಸಂಪಾದಕರು ಪ್ರತಿಭಾ ಸಂಪನ್ನ ಲೇಖಕರ ಅಭಾವದಿಂದ ಹಾಹಾಕಾರವೆಬ್ಬಿಸುವಾಗ, ಇನ್ನೊಂದೆಡೆ ಪತ್ರಿಕೆಗಳ ಮೇಲೆ ಪತ್ರಿಕೆಗಳು ಏಳುತ್ತಿರುವುದೂ ಬೀಳುತ್ತಿರುವುದೂ 'ಹೊಸಗನ್ನಡದ ವಿಶಿಷ್ಟ ಲಕ್ಷಣ'ವೆಂದು ಕಾಣುತ್ತದೆ— ಆದರೆ "ಲೇಖಕ ವರ್ಗಕ್ಕೆ ಇದು ದೊಡ್ಡ ಗಂಡಾಂತರ"ವೆಂದು ನಾನು ಹೇಳದಿರಲಾರೆನು. ಏಕೆಂದರೆ ಪತ್ರಿಕಾ ಸಂಪಾದಕರ ಪತ್ರಗಳನೇಕ ಬಂದು ಬಿಡುವುವು. ಇಷ್ಟರಿಂದಲೆ ಲೇಖಕನು ತನ್ನ ಕೀರ್ತಿ ದಿಗಂತವ್ಯಾಪ್ತವಾಯಿತೆಂದು ಹಿರಿಹಿಗ್ಗಿದರೆ ಅವನು ಹುಚ್ಚನೆ ಸರಿ."

"ನಿಜವಾದ ಲೇಖಕನು ಸಂಪಾದಕರ ಸಹಾಯವನ್ನು ಅಪೇಕ್ಷಿಸುವನು. ಅವನದು ನಿಷ್ಕಾಮ ಕರ್ಮ."

"ಲೇಖಕ ವರ್ಗವೆ ವಾಚಕ ವರ್ಗವನ್ನು ಸಿದ್ಧಗೊಳಿಸಬೇಕೆಂಬ ಅಭಿಪ್ರಾಯವೂ ಅನೇಕರಿಗೆ ಮಾನ್ಯವಾಗಿದೆ."

"ವ್ಯವಹಾರದಲ್ಲಿ ಹೇಗೋ ಹಾಗೆ ಬರೆವಣಿಗೆಯಲ್ಲೂ ಮಿತವ್ಯಯವು ಅತ್ಯಂತ ಅವಶ್ಯವೆ ಸರಿ"

"ಬರೆವಣಿಗೆಯೆಂದರೆ ಜ್ಞಾನವಿಕಾಸದ ಬಾಹ್ಯಸ್ವರೂಪವಾಗಿದೆ". "ಹೊಸ ವಿಷಯಗಳಿಲ್ಲದೆ ಬರೆದ ಲೇಖನವು ಲೇಖನವಲ್ಲ, 'ಅಕ್ಕರದ ಹೋಲಿಗೆ'!" (ಉದಯಭಾರತ. ಪುಟ ೩೬—೩೭).

'ತಾಳಮದ್ದಳೆ'ಯೆಂಬ ಪ್ರಬಂಧವು ಮಂಗಳೂರು 'ಮಿತ್ರಮಂಡಲಿ'ಯ 'ತರಂಗ'ದಿಂದ ಎತ್ತಿದ್ದು. 1940ರಲ್ಲಿ ಅದೊಂದು ಪಠ್ಯ ಪುಸ್ತಕದಲ್ಲಿತ್ತು. ಶ್ರೀ ಭಟ್ಟರು ವಿಚಕ್ಷಣ ರೀತಿಯಲ್ಲಿ ಆ ವಿಷಯದ ಮೇಲೆ 'ಕ್ಷ' ಕಿರಣ ಬೀರಿದ್ದಾರೆ; ಈಗಿನ ನವಸುಧಾರಣೆಯ ಸೋಗಿನ ಬಗ್ಗೆ ಆಗಲೇ ತಕ್ಕಷ್ಟು ವ್ಯಂಗ್ಯವಾಗಿ ಆಡಿದ್ದಾರೆ. ಆ ಬರೆಹವು 'ಗ್ರಹಚಿಕಿತ್ಸೆ'ಯಂತೆ ಪರಿಣಾಮಕಾರಿಯಾಗಿದೆ. ಅದರ ಕೆಲವು ವಿಚಾರಗಳಿವು: "ಮಲೆಯಾಳದ 'ಕಥಕ್ಕಳಿ'ಯು ಮೂಕನರ್ತನ.... ಕನ್ನಡಿಗರು ಸ್ವಭಾವತಃ ವಾಚಾಲರೆಂದು ತೋರುತ್ತದೆ. ಆದುದರಿಂದ ಮಾತನ್ನು ಬೆರಸಿ, ವೇಷಧಾರಿಗಳ ಅರ್ಥ ಹೇಳುವ ಪದ್ಧತಿಯನ್ನಿಟ್ಟು, ಭಾವದ್ಯೋತನೆಗೆ ವಾಗ್ವೈಖರಿಯನ್ನಿತ್ತು ಈ ಕಲೆಯ ಬೆಡಗನ್ನು ಗುಡುಗಿಸಿದರು. ನಮ್ಮದು ಬಯಲಾಟ, ಭಾಗವತರಾಟಗಳೆಂಬ ಅಭಿಧಾನವನ್ನು ಪಡೆಯಿತು" (ಇಲ್ಲಿ ವಾಚಾಲರೆಂದ ಡೇಕೆಂದರೆ, ಇಂದಿನ ಅರ್ಥದಾರಿಗಳು ವಿಪರೀತಾರ್ಥ ಹೇಳುತ್ತ ಇದಿರಾಳಿನ ಮುಖಭಂಗ ಮಾಡುವ, ಗಾನೂನಿನ ಒರೆಗಲ್ಲಿಗೆ ಹಚ್ಚುವ ರೀತಿಯದು ಎನ್ನುವುದನ್ನು ಮುಂದೆ ವಿಸ್ತರಿಸಿದ್ದಾರೆ.)

"ಭಾಗವತರ ಆಟವನ್ನು ತಾಳಮದ್ದಳೆಯಾಗಿ ಮಾರ್ಪಡಿಸಿದ ಯಶಸ್ಸು ದಕ್ಷಿಣ ಕನ್ನಡಿಗರಿಗೇ ಸೇರಿದುದೆಂದು ತೋರುತ್ತದೆ"ಯೆಂದು ಯಥಾರ್ಥ ಕೂಟವನ್ನು ತುಸ ಸೂಚಿಸಿ; ಮತ್ತೆ ಅದರ ಅನರ್ಥವನ್ನು ಬಹಳ ವಿಸ್ತರಿಸಿದ್ದಾರೆ. ಇಂದು ಇಲ್ಲಿ ಸುಧಾರಣೆ ಬೇಕೆನ್ನುವವರಿಗೆ 25 ವರ್ಷಗಳ ಹಿಂದೆ ಶ್ರೀ ಭಟ್ಟರು 'ಮೋಡಿ'ಯ ಮಾತಗಳಿಂದ ಎಚ್ಚರಿಸಿದ್ದಾರೆಂದು ಹೇಳಬಹುದು.

"ಪ್ರಬಂಧದ ಗುರಿ ವಿಮರ್ಶೆಯಾಗಿದೆ. ಅದು ವಿಧಿ ನಿಷೇಧಾತ್ಮಕ ರೂಪವಾಗಿರುವುದಿಲ್ಲ"ವೆಂದು 'ಕನ್ನಡದಲ್ಲಿ ಪ್ರಬಂಧ ವ್ಯವಸಾಯ'ವೆಂಬ ಬರೆಹದಲ್ಲಿ ಹೇಳಿದುದು ಲೇಖಕರಿಗೆ ಗಮನೀಯವಾಗಿದೆ.

ಶ್ರೀ ಶಂಕರ ಭಟ್ಟರು ಕಾವ್ಯಖಂಡಗಳನ್ನು, ಸಣ್ಣ ಕತೆಗಳನ್ನು, ಕಾದಂಬರಿಗಳನ್ನು, ನಾಟಕಗಳನ್ನು, ಪ್ರಬಂಧಗಳನ್ನು ವಿಮರ್ಶಾತ್ಮಕ ಬರೆದಿದ್ದಾರೆ ಆದರೆ, ಇವರು "ಕನ್ನಡದ ಅತ್ಯಂತ ಸುಪ್ರಸಿದ್ಧ ಕವಿಗಳು" ಎಂದು ಸುಪ್ರಸಿದ್ಧರಾಗಿದ್ದಾರೆ! ಅಂತೆ, ಇವರೊಬ್ಬ "ಆದರ್ಶ ಗದ್ಯ ಪ್ರಬಂಧಕಾರ"ರೆಂದು ಇವರ ಬರೆಹಗಳಿಂದ ತಿಳಿಯುತ್ತದೆ. ಶ್ರೀ ಎ. ಬಿ. ಶೆಟ್ಟರ "ನವಯುಗ"ದಲ್ಲಿ ಮೊದಲು ಸೇರಿದ್ದ ಶ್ರೀ ಭಟ್ಟರು "ರಾಷ್ಟ್ರಬಂಧು" ಪತ್ರಿಕೆಯ "ಬೆಳ್ಳಿ ಹಬ್ಬ"ದವರೆಗ (1953ರವರೆಗ) ಅದರ ಸಂಪಾದಕರಾಗಿದ್ದು; ಅನಂತರ "ರಾಷ್ಟ್ರಮತ" ಪತ್ರಿಕೆಯನ್ನು ಈ ಹನ್ನೆರಡು ವರ್ಷಗಳಿಂದ ನಡೆಯಿಸುತ್ತಿದ್ದಾರೆ. ಇವರೊಬ್ಬ 'ಕನ್ನಡದ ಹಿರಿಯ ಪತ್ರಿಕಾ ವ್ಯವಸಾಯಿ!"

ಶ್ರೀ ಶಂಕರ ಭಟ್ಟರು ಕೇವಲ ವಾಚಾಲರಲ್ಲ; ತನ್ನಷ್ಟಕ್ಕೆ ತಾನು ಸಾಹಿತ್ಯ ದೇವಿಯ ಆರಾಧಕರಾಗಿ, ಸಂತೃಪ್ತರಾಗಿದ್ದಾರೆ. ಇವರು ಈ ಬಹು ಮುಖ ಸಾಹಿತ್ಯ ಸೇವೆಯ ಫಲವಾಗಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರೆಂದೇ ಹೇಳಿದರೆ ಸತ್ಯಪೂರ್ಣವಾಗುತ್ತದೆ!

1931ರಲ್ಲಿ ಕಾರವಾರದಲ್ಲಾದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಶ್ರೀ ಮುಳಿಯ ತಿಮ್ಮಪ್ಪಯ್ಯನವರು ನಿಯುಕ್ತರಾಗಿದ್ದರು. ಇದೀಗ 1965ರಲ್ಲಿ ಕಾರವಾರದ ಸಾಹಿತ್ಯ ಸಮ್ಮೇಳನಕ್ಕೆ ಶ್ರೀ ಮುಳಿಯದವರ ಶಿಷ್ಯರಾದ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು ಅಧ್ಯಕ್ಷರಾಗಿ ನಿಯುಕ್ತರಾದುದು ಅತರ್ಕಿತೋಪನತಾಂನದಾಶ್ಚರ್ಯವಲ್ಲವೆಂದು ಹೇಳುತ್ತೇವೆ!

ಶ್ರೀ ಭಟ್ಟರು ಇನ್ನು ಮುಂದಿನ ನಿವೃತ್ತ ಜೀವನದಲ್ಲಿ ಹೆಚ್ಚಿಗೆ-ಹಿಂದಿನಂತೆ-ಸಾಹಿತ್ಯ ನಿರ್ಮಾಣದಲ್ಲಿ ಸಾಗುವಂತೆ ಶ್ರೀ ದೇವರು ಅವರಿಗೆ ಸರ್ವಶಕ್ತಿಯನ್ನು ನೀಡಲೆಂದು ಆತನಲ್ಲಿ ಬೇಡುವೆನು! ಇತ್ಯಲಮ್!

ಶಾಲಾ ವರ್ಧಂತಿ

ಮಂಜೇಶ್ವರ, ಮಾ. 31 : ಪ್ರತಿಯೊಂದು ಶಾಲೆಯೂ ಅದರ ಅನುಕೂಲಕ್ಕೆ ತಕ್ಕಂತೆ ಪಾಠಕ್ರಮವನ್ನು ಅಳವಡಿಸಿಕೊಳ್ಳುವ ಸ್ವಾತಂತ್ರ್ಯ ಹೊಂದಬೇಕೆಂದು ಮಣಿಪಾಲ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕಲ್ಯಾಡಿ ರಾಮರಾವ್ ನಿನ್ನೆ ಇಲ್ಲಿ ಅಭಿಪ್ರಾಯಪಟ್ಟರು.

ಸ್ಥಳೀಯ ಕಿರಿಯ ಬುನಾದಿ ಶಾಲೆಯ ವರ್ಧಂತ್ಯುತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಾ ವಿದ್ಯಾಭ್ಯಾಸವನ್ನು ಹೊರೆ ಎಂದೆ ಭಾವಿಸದೆ ಮನಃಪೂರ್ವಕವಾಗಿ ವ್ಯಾಸಂಗ ನಡೆಸಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ಮಾಡಿದರು.

ಶಾಲೆಯ ವ್ಯವಸ್ಥಾಪಕರಾದ ಶ್ರೀ ಟಿ. ಗಣೇಶ ಪೈಯವರು ಎಲ್ಲರನ್ನೂ ಸ್ವಾಗತಿಸಿದರು. ಮುಖ್ಯೋಪಾಧ್ಯಾಯರಾದ ಶ್ರೀ ಎಚ್. ಎ. ಪಿ. ಕೆದಿಲಾಯ ವರದಿಯನ್ನೋದಿದರು.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಎಲ್ಲರೂ ಕೇಳುತ್ತಾರೆ

ಆಕ್ರಮಣದ ಬಿಸಿ ಸರಕಾರಕ್ಕೆ ತಾಗಿದೆಯೇ?

ಬರೆದವರು: ಶ್ರೀ ಶಿವಶಂಕರ.

ಭಾರತೀಯ ಸರಕಾರದ ತೇದಿಯಂತೆ ಇದೀಗ ವೈಶಾಖ ಆರಂಭ ಆಗುತ್ತದೆ. ಇತರ ಪದ್ಧತಿಯಂತೆ ಅಥವಾ ಜನತೆಯ ಲೆಖ್ಖದಂತೆ ವೈಶಾಖ ಇನ್ನೂ ಆರಂಭವಾಗಿಲ್ಲ ಚೈತ್ರ ಮುಗಿದಿಲ್ಲ. ತಪಿಳು ಕಲಾಚಾರ ಪ್ರತ್ಯೇಕವೆನ್ನುವವರಿಗೂ ಇದು ಚಿತ್ರಮಾಸವಿದೆ! ಏನೇ ಇರಲಿ. ಬಿಸಿಲು ಅಧಿಕವಾಗುತ್ತ ಬರುತ್ತಿದೆ. ಇದು ನೈಸರ್ಗಿಕ ವಿಧಿ.

ಅತ್ತ ಕಮ್ಯೂನಿಸ್ಟ್ ಚೈನಾವು ತೀರ್ಥಕ್ಷೇತ್ರ ಬಧ್ರಿನಾಥದ ವರೆಗೂ ಬಂದಿರುವ ಸುದ್ಧಿ ಪ್ರಕಟವಾಗಿರುತ್ತದೆ. ಕಚ್ಛ್ ಮತ್ತು ಕೂಚ್-ಬಿಹಾರ್ ಪ್ರದೇಶಗಳಲ್ಲಿ ಪಾಕಿಸ್ಥಾನ ಮುಂದುವರಿರುತ್ತದೆ. ಕಾಜ್ ಹೆಸರಿನಲ್ಲಿ ಹೊರ ದೇಶಗಳಿಗೆ ಹೋರ ಹೋಗಿರುವ ಶೇಖ್ ಅಬ್ದುಲ್ಲಾ ಅಪಪ್ರಚಾರದ ಮಿತಿ ಮೀರಿದ್ದಾನೆ. ಆತನು ಕಮ್ಯೂನಿಸ್ಟ್ ಚೈನಾದ ಪ್ರಧಾನಿ ಚಾ ಎನ್-ಲ್ಯಾಯೊಂದಿಗೆ ಮಾತುಕತೆ ನಡೆಸಿದ್ದು, ಚೈನಾಕ್ಕೆ ಹೋಗಲು ಸಿದ್ಧತೆ ನಡೆಸುತ್ತಿದ್ದಾನೆ. ದೇಶದೊಳಗಿರುವ ಕಮ್ಯೂನಿಸ್ಟರು ಭಾರೀ ಪ್ರಮಾಣದಲ್ಲಿ ದಂಗೆ ಏಳಲು ಹಂಚಿಕೆ ನಡೆಸುತಿದ್ದಾರೆ. ಕೇವಲ ಕೆಲವರನ್ನು, ಅದೂ ಚಿನ್ನಾವಣೆಯ (ಸೆರೆ)ಮನೆಗಳಲ್ಲಿ ಬಂದಿಸಿ, ಉಳಿದವರನ್ನು ಹೊರಗೆ ತಿರುಗಾಡಲು ಬಿಟ್ಟಿರುವದರಿಂದಲೂ, ಇತರರನ್ನು ಬಹಿರಂಗವಾಗಿ ದೇಶದ್ರೋಹಿ ಚಟುವಟಿಕೆ ನಡೆಸಲು ಬಿಟ್ಟಿರುವದರಿಂದಲೂ ಸರ್ಕಾರವು ಹಾಗೂ ಶ್ರೀ ಎನ್. ಸಿ. ಚಟರ್ಜಿಯಂತಹ ಮೇಲ್ಪಂಕ್ತಿಯ ನ್ಯಾಯವಾದಿಗಳೂ ಏನೇನೋ ಮಾತಾಡುವಂತಾಗಿರುತ್ತದೆ. ಮುಸ್ಲಿಂ ಲೀಗಿನವರಂತೂ ಎಲ್ಲಾ ರೀತಿಯ ದೇಶದ್ರೋಹಿ ಕುಕೃತ್ಯಗಳಲ್ಲಿ ಭಾಗ ವಹಿಸುತ್ತಿದ್ದು ಕೇರಳದ ಹಲವಾರೆಡೆಗಳಲ್ಲಿ, ಭೋಪಾಲದಲ್ಲಿ ದಂಗೆ ಏಳಲಾರಂಭಿಸಿದ್ದಾರೆ. ಅಲ್ಲಿ ವಾಸಿಸುತ್ತಿರುವ ಹಿಂದೂಗಳ ಹೀನ ಸ್ಥಿತಿಯು ಕರುಣಾ ಜನಕವಿದೆ. ಉತ್ತರದ ಗಡಿಯಲ್ಲಿ ಶತ್ರುಗಳಿದ್ದರು ಭುಜಕ್ಕೆ ಭುಜಕೊಟ್ಟು ಕೊಂಡು ಭಾರತವನ್ನು ಗುಳುಂಕರಿಸಲು ಹೊಂಚು ಹಾಕುತ್ತಿರುವಾಗ, ಇತ್ತ, ಭಾರತದೊಳಗಿರುವ ಅವರ ಪಂಗಡದವರೂ ಕೈಕೈ ಜೋಡಿಸಿಕೊಂಡು ಅವರಿಗೆ ಸುಸ್ವಾಗತವನ್ನೀಯಲು ಸಮಯ ನೋಡುತ್ತಿದ್ದಾರೆ. ಈ ಆಕ್ರಮಣದ ಬಿಸಿ ಭಾರತ ಸರಕಾರಕ್ಕಿನ್ನಾದರೂ ತಾಗಿದೆಯೇ? ನಿಜವಾಗಿ ಅವರಿಗೆ ಚೈತ್ರಮಾಸ ಆರಂಭವಾಗಿದೆಯೇ? ಅನ್ಯ ರಾಷ್ಟ್ರ ಸಂಪರ್ಕ ಶಾಖೆಯ ಸಚಿವರು ಹಾಗೂ ಮಾಜಿ ರಕ್ಷಣಾ ಮಂತ್ರಿಗಳಿಂದೂ ಒಂದಿಂಚಿನ ಮಾತುಗಳನ್ನೇ ಆಡುತ್ತಿದ್ದಾರೆ. ಇಂಚು ಇಂದು ನಡೆಯದ ಆಳತೆ ಇವೆ. ಹಾಗೆಯೇ ಅವರ ಮಾತು ಕೂಡಾ ಬೆಲೆ ಇಲ್ಲದ್ದೇನು? ಚೈನಿ ಕಮ್ಯೂನಿಸ್ಟರು ಆಗಾಗ ಧಾಳಿ ನಡೆಸುತ್ತಿರುವ ಫಾರ್ಮೋಸಾ ಚಿಯಾಂಗ್ ಕೈಶೇಖರದೋ ಒಂದಿಂಚಿನ ಮಾತನ್ನಾಡದೆ ಪೆಕಿಂಗ್ ಪಟ್ಟದ ಕುರಿತು ಪಟ್ಟಾಗಿ ಹೇಳುತ್ತಿದ್ದಾರೆ. ಆಡಳಿತ ಲಗಾಮನ್ನು ಪುನಃ ಕೈಯಲ್ಲಿ ತೆಗೆದುಕೊಳ್ಳುವೆನೆಂದು ಹೇಳುತ್ತಿದ್ದಾರೆ. ನಮ್ಮ ಇಂದಿನ ಸರಕಾರವಾದರೋ ಕಳೆದುಕೊಂಡಿರುವ ಪ್ರದೇಶಗಳನ್ನು ಪುನಃ ಪಡೆದುಕೊಳ್ಳುವ ಮಾತೆತ್ತುವದಂತೂ ದೂರ ಇರಲಿ, ಒಂದಿಂಚಿನ ಮಾತುಗಳನ್ನಾಡುತ್ತ, ಮಾತುಕತೆಗೆ ಬಂದಲ್ಲಿ ತಿಗತ್ಯವಿದ್ದಲ್ಲಿ ಇನ್ನೊಂದಿಷ್ಟು ಭೂಪ್ರದೇಶವನ್ನು ಬಿಟ್ಟುಕೊಟ್ಟು ಸಂಧಾನ ಮಾಡಿಕೊಳ್ಳಲು ತವಕಪಡುತ್ತಿದೆ.

ಫಾರ್ಮೋಸಾ ಪುಟ್ಟ ದ್ವೀಪವೆಂಬುದನ್ನು ಕಳೆದ ವಾರ ತಿಳಿದುಕೊಂಡಿದ್ದು ಕರ್ನಾಟಕಕ್ಕಿಂತಲೂ ಅದು ಚಿಕ್ಕ ಪ್ರದೇಶವಿದೆನ್ನುವದು ಗಮನೀಯ ವಿಷಯವಿದೆ. ೧೮೯೫ರಲ್ಲಿ ನಡೆದ ಚೈನಾ—ಜಪಾನು ಜಗಳದಲ್ಲಿ ಫಾರ್ಮೋಸಾವನ್ನು ಜಪಾನಿಯರು ಹಿಡಿದುಕೊಂಡರು. ೧೯೪೫ರಲ್ಲಿ ಮಹಾಯುದ್ಧ ಮುಗಿದಾಗ ಫಾರ್ಮೋಸಾ ಪುನಃ ಚೈನಾಕ್ಕೆ ಸೇರಿತು. ಅಂದರೆ ಅದನ್ನು ಜಪಾನಿಗಳು ನೂರು ಇಪ್ಪತ್ತು ವರ್ಷಗಳಿಗಿಂತಲೂ ಮೇಲು ಮುಷ್ಟಿಯಲ್ಲಿಟ್ಟುಕೊಂಡಿದ್ದರು. ೧೯೪೯ರಲ್ಲಿ ಚಿಯಾಂಗ್ ಕೈ-ಶೇಖರು ಅಲ್ಲಿ ತನ್ನ ಕುಮಿಂಗ್ ಟಾಂಗ್ ಸರಕಾರವನ್ನು ಸ್ಥಾಪಿಸಿದರು. ಅದರ ರಾಜಧಾನಿ ಟ್ಯಾಪೆ. ಆ ದ್ವೀಪದಲ್ಲಿರುವ ಅತ್ಯಂತ ದೊಡ್ಡ ನಗರವದು. ಟ್ಯಾಪಾವಿನ ಪ್ರಾಂತ್ಯ ಸರಕಾರ ಇರುವದು ಟ್ಯಾಚುಂಗಿನಲ್ಲಿ. ಅಲ್ಲಿಂದ ಟ್ಯಾಪೆಗೆ ಇರವ ದೂರ ಇನ್ನೂರು ಕಿಲೋ ಮೀಟರುಗಳು. ಚೈನಿ ಗಣರಾಜ್ಯದ ಸಂಭ್ರಮ. ಹಾಗೂ ಉತ್ಸವಗಳು ನಡೆಯುವದು ಟ್ಯಾಪೆಯಲ್ಲಿ. ರಾಷ್ಟ್ರಾಧ್ಯಕ್ಷರ ಅರಮನೆ ಹಾಗೂ ರಾಷ್ಟ್ರೀಯ ಪ್ರತಿನಿಧಿ ಸಭಾಭವನ ಇರುವದೂ ಅಲ್ಲೇ. ಅಲ್ಲಿ ಎಲ್ಲಾ ಶಾಖೆಯ ಸಚಿವರಿಗೂ ಪ್ರತ್ಯೇಕ ಸಚಿವಾಲಯಗಳಿವೆ. ಟ್ಯಾಚುಂಗಿನಲ್ಲಿರುವ ಪ್ರಾಂತ್ಯ ಸರಕಾರಕ್ಕೆ ಓರ್ವ ಪ್ರಮುಖ ಅಥವಾ ಗವರ್ನರ್ ಇದ್ದಾನೆ; ಅಲ್ಲದೆ, ಪ್ರಾಂತ್ಯ ವಿಧಾನ ಸಭೆಯೂ ಇದ್ದು, ಪ್ರಾಂತ್ಯ ಸರಕಾರದ ಸಂಭ್ರಮ ಹಾಗೂ ಕಾರುಭಾರುಗಳೆಲ್ಲಾ ಅಲ್ಲೇ ನಡೆಯುತ್ತವೆ.

ಫಾರ್ಮೋಸಾದಲ್ಲಿ ಜನತೆಯ ಗಮನ ಸೆಳೆದಿರುವದು ಅಲ್ಲಿನ ಆರ್ಥಿಕ ಅಭಿವೃದ್ಧಿ ಹಾಗೂ ಸೈನಿಕ ಸಿದ್ಧತೆ. ವ್ಯಾಪಾರ ದೃಷ್ಟಿಯಲ್ಲೂ ಫಾರ್ಮೋಸಾ ಬಹಳಷ್ಟು ಅಭಿವೃದ್ಧಿ ಹೊಂದಿರುತ್ತದೆ. ಅಲ್ಲಿ ಆಹಾರ ವಸ್ತುಗಳು ಅಧಿಕ ಇವೆ. ಅಲ್ಲಿಂದ ಹಲವಾರು ತರದ ವಾಹನಗಳನ್ನೂ ವಿದ್ಯುತ್ಸಂಕಗಳನ್ನೂ ರಫ್ತು ಮಾಡಲಾಗುತ್ತಿದೆ.

ಫಾರ್ಮೋಸಾವನ್ನು ಅಮೇರಿಕದ ಕೈಗೊಂಬೆಯೆಂದು ಕೆಲವರು ಹೇಳುವದುಂಟು, ಆದರದು ಸತ್ಯಕ್ಕೆ ಸ್ವಲ್ಪ ದೂರದ ವಿಷಯವಿದೆ. ಆದರೆ ಚಿಯಾಂಗ್ ಕೈ-ಶೇಖ್ ಅಮೇರಿಕದ ಆತುರೆಗೆ ಕೈಯೊಡ್ಡಲಿಲ್ಲವೆಂದಲ್ಲ. ಬೇಕಾದಷ್ಟು ನೆರವನ್ನು ಪಡೆದುಕೊಂಡಿದ್ದಾರೆ. ಆದರೆ ದೇಶವನ್ನು ಅಮೇರಿಕಕ್ಕೆ ಮಾರಿರುವದಿಲ್ಲ. ತನ್ನ ಕಾಲ ಮೇಲೆ ತಾನು ನಿಲ್ಲಲು ಶಕ್ತವಾದೊಡನೆ ಅಮೇರಿಕದ ಸಹಾಯವನ್ನೂ ನಿಲ್ಲಿಸಿ ಬಿಟ್ಟಿರುವರು. ಯಾಂತ್ರಿಕ ತಜ್ಞರಲ್ಲಿ ಈಗ ಅಲ್ಲಿರುವವರು ಚೈನೀಯರೇ ಬಹಳ ಮಂದಿ, ಅಮೇರಿಕದವರು ಬಹಳ ಸ್ವಲ್ಪ ಮಂದಿ. ಸೈನಿಕ ವಿಭಾಗಗಳಲ್ಲೂ ಹಾಗೆನೇ—ಎಲ್ಲವೂ ಚೈನೀಯರ ಕೈಯಲ್ಲೇ ಇದೆ.

ಕ್ವೆಮಾಯಿ ದ್ವೀಪಕ್ಕೆ ಹೋದರೆ ಫಾರ್ಮೋಸಾ ಸರಕಾರದ ಸೈನಿಕ ಶಕ್ತಿಯ ಪರಿಚಯ ಮಾಡಿಕೊಳ್ಳಬಹುದು. ಇಲ್ಲಿಂದ ಕೇಂದ್ರ ಚೈನಾಕ್ಕೆ ಇರುವದು ನಾಲ್ಕು ಸಾವಿರ ಮೀಟರುಗಳ ಅಂತರ. ಈ ದ್ವೀಪದ ಒಟ್ಟು ವಿಸ್ತೀರ್ಣ ನೂರ್ನಲವತ್ತು ಚದರ ಕಿಲೋ ಮೀಟರುಗಳು, ಅಲ್ಲಿಯ ಜನ ಸಂಖ್ಯೆ ೫೧,೦೦೦. ಚೈನಿ ಗಣರಾಜ್ಯದ ಒಂದೊಂದು ಉತ್ತಮ ಸೈನಿಕ ಕೇಂದ್ರ. ಇದರ ಅರಿವು ಚೈನಿ ಕಮ್ಯೂನಿಸ್ಟರಿಗೆ ಇದ್ದೇ ಇದೆ. ಹೇನಾದರೂ ಮಾಡಿ ಕ್ವೆಮಾಯಿಯನ್ನು ನಾಶಮಾಡಿಬಿಡಬೇಕೆಂದು ಕಮ್ಯೂನಿಸ್ಟರು ಬಹಳ ಪ್ರಯತ್ನ ನಡೆಸಿದ್ದಾರೆ. ೧೯೪೯ರಲ್ಲಿ ನೂರು ಇಪ್ಪತ್ತು ಸಾವಿರ ಕಮ್ಯೂನಿಸ್ಟ್ ಸೈನಿಕರು ಅಕಸ್ಮಾತ್ ಒಮ್ಮೆಲೇ ಅಲ್ಲಿ ಬಂದಿಳಿದರು. ರಾಷ್ಟ್ರೀಯ ಚೈನೀಯರು ನೂರು ಹದಿಮೂರು ಸಾವಿರ ಕಮ್ಯೂನಿಸ್ಟರನ್ನು ಸಂಹರಿಸಿದರು. ಮತ್ತೆ ಉಳಿದವರನ್ನು ಬಂಧಿಸಿದರು. ಪೆಟ್ಟಿನ ರುಚಿ ಕಂಡ ಕಮ್ಯೂನಿಸ್ಟರು ಆ ನಂತರ ಅಲ್ಲಿಳಿಯುವ ಗೋಜಿಗೆ, ಸಾಹಸಕ್ಕೆ ಕೈಹಾಕಿರುವದಿಲ್ಲ. ಆದರೂ ದೂರದಿಂದ ಗುಂಡುಗಳಿಂದ ಹಾಗೂ ಸ್ಪೋಟಕಾಸ್ತ್ರಗಳಿಂದ ಆಕ್ರಮಣ ನಡೆಸುತ್ತಿದ್ದಾರೆ.

ಭಾರತೀಯರಿಗೆ ಇದೊಂದು ಉತ್ತಮ ಪಾಠ ಇದೆ,—ಆದರೆ ಅದು ಕಲಿಯಲು ಮನಸ್ಸುಳ್ಳವರಿಗೆ ಮಾತ್ರ. ಆರಂಭದಲ್ಲೇ ಚೈನಿ ಕಮ್ಯೂನಿಸ್ಟ್ ಡ್ರೇಗನ್ ನಮ್ಮತ್ತ ನಾಲಿಗೆ ಚಾಚಿದಾಗ ಅದರ ತಲೆಯ ಮೇಲೆ ಪ್ರಹಾರ ಕೊಡುತ್ತಿದ್ದಲ್ಲಿ ಅದು ನಂತರ ನಮ್ಮ ಸುದ್ದಿಗೆ ಬರುತ್ತಿರಲಿಲ್ಲ. ನಮ್ಮ ಅಂದಿನ ಪ್ರಧಾನಿಗಳು ನೈಜ ವಿಷಯವನ್ನು ಮರೆಮಾಚಿದರು. ಅಂದಿನ ರಕ್ಷಣಾ ಮಂತ್ರಿಗಳು ಅದನ್ನು ಗುಟ್ಟು ಮಾಡಿದರು. ಅವರು ಬಹಳಷ್ಟು ದೂರ ಬಂದ ಮೇಲೆ ರಸ್ತೆ ವಗೈರೆಗಳನ್ನು ಸಿದ್ಧಗೊಳಿಸಿಕೊಂಡ ಮೇಲೆ ಏನೋ ಗಡಿಬಿಡಿ ಎಂದರು. ಆಗಲೇ ಅವರು ಬಹಳಷ್ಟು ಗಡಿ ಪ್ರದೇಶವನ್ನು ಬಿಟ್ಟಿದ್ದರು. ಅವರ ರುಚಿಯನ್ನು ಕಮ್ಯೂನಿಸ್ಟರು ಕಂಡಿದ್ದಾರೆ. ಆ ನಂತರ ನಮ್ಮ ಧೀರ ಸೈನಿಕರ ಕೈ ಮೇಲಾದಾಗ ಅವರು ತಾವೇ ತಾವಾಗಿ ಕಣದಿಂದ ಕಾಲ್ತೆಗೆದರು. ಕಮ್ಯೂನಿಸ್ಟರಿಗೆ ಭಯ ಇರುವದು ಗುಂಡ ಪ್ರಯೋಗದ್ದು ಮಾತ್ರ. ಒಳ್ಳೆಯ ಮಾತುಗಳಿಗೆ ಅವರು ಮಣಿಯುವವರಲ್ಲ. ಬುದ್ಧಿವಾದದ ಮಾತುಗಳೆಲ್ಲಾ ಅವರ ಪಾಲಿಗೆ ಬಂಡವಾಳಶಾಹಿಗಳ ಬಂಡಾಯವಿದೆ. ಅಹಿಂಸೆಯ ಅಪರಾವತಾರ ಕಾಂಗ್ರೆಸ್ಸ್ ಸರಕಾರ ಶಾಂತಿ ಶಾಂತಿ ಶಾಂತಿ ಸಂಧಾನವೆನ್ನುತ್ತಿದ್ದಲ್ಲಿ ಅವರು ಶಾಂತಿಯನ್ನು ಕದಡಿ ಭೂದಾನಕ್ಕೆ ಒರಲೆಂದು ಕೈ ನೀಡುತ್ತಿದ್ದಾರೆ.

(ಹತ್ತನೇ ಪುಟ ನೋಡಿರಿ)

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ

ಯತುಭೇದ ಮೊದಲಿಲ್ಲದೆ

ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು

ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ. ರೂ. 1-50

ರೂ. 1-75 ಮನಿಯೊರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ



ನೋಡಿದ ಸುಖದ ಸುಪ್ಪತ್ತಿಗೆ

ಸಂಪತ್ತಿನ ಸುಪ್ಪತ್ತಿಗೆಯ ದೇಶವೆಂದರೆ, ಅಮೆರಿಕೆ. ಇನ್ನೂರು ವರ್ಷಗಳಿಗೆ ಮೊದಲು ಬ್ರಿಟಿಷ ವಸಾಹತುವಾಗಿದ್ದ ಅಮೆರಿಕೆಯಿಂದು ದೊಡ್ಡ ರಾಷ್ಟ್ರವಾಗಿದೆ; ಪ್ರಪಂಚದ ಎಲ್ಲ ದೇಶಗಳ ಮೇಲೂ ಪ್ರಭಾವ ಬೀರಬಲ್ಲ ದೇಶವಾಗಿದೆ. ರಾಜಕಾರಣದಲ್ಲಿ, ಸಾಮಾಜಿಕೋನ್ನತಿಯಲ್ಲಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಇನ್ನು ಸರ್ವಾಂಗೀಣವಾಗಿ ಮುಂದುವರಿದಿದೆ ಅದು. ಆದುದರಿಂದಲೇ ಅಮೆರಿಕೆಯು ಎಲ್ಲರನ್ನೂ ತನ್ನತ್ತ ಆಕರ್ಷಿಸುತ್ತದೆ; ಬೇರೆ ಬೇರೆ ದೇಶಗಳ ನಾಗರಿಕರು ಬೇರೆ ಬೇರೆ ಕಾರಣಗಳನ್ನು ಮುಂದಿಟ್ಟು ಅಮೆರಿಕನ್ ಸಂದರ್ಶನವನ್ನು ಮಾಡುತ್ತಾರೆ. ನೀವೂ ಸಾಧ್ಯವಾದರೆ ಅಮೆರಿಕೆಯನ್ನು ಸಂದರ್ಶಿಸಿರಿ. ಅದಕ್ಕೆ ಪೂರ್ವಭಾವಿಯಾಗಿ ನ್ಯೂಯಾರ್ಕ ನಗರದ ಕೆಲವೊಂದು ದೃಶ್ಯಗಳನ್ನು ಇಲ್ಲಿಯೇ ನೋಡಿರಿ. ಪ್ರತ್ಯಕ್ಷ ದರ್ಶನ ಮಾಡಲು ಅಸಮರ್ಥರಾದವರು ಚಿತ್ರಗಳಲ್ಲಾದರೂ ಅದನ್ನು ಕಂಡು ಆನಂದಿಸಿರಿ.

ಚಿತ್ರ ೧: ಪಾದಾರ್ಪಣ

ಅತ್ಲಾಂತಿಕ ಸಾಗರದ ತೆರೆಗಳನ್ನು ಸೀಳುತ್ತ ಅಮೆರಿಕೆಯ ಉಗಿ ಹಡಗವೊಂದು ಮಹಾ ಬಂದರು ನ್ಯೂಯಾರ್ಕನ್ನು ತಲಪುತ್ತಿದೆ. ಆಕಾಶದಲ್ಲಿ ಸೂರ್ಯನು ತೇಜಸ್ವಿಯಾಗಿಯೇ ಬೆಳಗುತಿದ್ದಾನೆ. ಯಾತ್ರಾರ್ಥಿ ವಿದ್ಯಾರ್ಥಿಯೊಬ್ಬನು ಆ ಹಡಗದ ಯಾತ್ರಿಕರಲ್ಲಿ ಒಬ್ಬನು. ಇತರ ಹುಡುಗರಂತೆಯೇ ಆತ ಅಮೆರಿಕೆಯ, ಅಮೆರಿಕನ್ನರ ಬಗ್ಗೆ ಹಲವಾರು ಕಥೆಗಳನ್ನು ಕೇಳಿದ್ದ. ಇದನ್ನು ಕಣ್ಣಾರೆ ಕಾಣಬೇಕು, ಅಲ್ಲಿನ ಜನರೊಡನೆ ಬೆರೆಯಬೇಕು, ಅವರ ಜೀವನ ಕ್ರಮವನ್ನು ಅರಿತುಕೊಳ್ಳಬೇಕು — ಎಂಬ ಆತುರವೇ ಆತನನ್ನು ಎಳೆದು ತಂದಿದೆ. ಪುಣ್ಯಕ್ಕೆ ಆತನಿಗೆ ಅಮೆರಿಕನ್ ಸಂದರ್ಶನ ಮಾಡುವ ಸದವಕಾಶ ಪ್ರಾಪ್ತವಾಯಿತು. ಆತ ಅಮೆರಿಕೆಯ ನೆಲದಲ್ಲಿ ಪಾದಾರ್ಪಣ ಮಾಡಿದ.

ಚಿತ್ರ ೨: ಸ್ವಾತಂತ್ರ್ಯದ ಒಸಗೆ

ಮೊತ್ತಮೊದಲು ಸಂದರ್ಶಕನ ದೃಷ್ಟಿಗೆ ಬಿದ್ದುದು ಸ್ವಾತಂತ್ರ್ಯದ ಒಸಗೆ ಅಥವಾ ಸ್ವಾತಂತ್ರ್ಯ ಪ್ರತಿಮೆ. ಸ್ವಾತಂತ್ರ್ಯದ ಹೆಗ್ಗುರುತೇ ತನ್ನ ಕಣ್ಣುಗಳಿಗೆ ಮೊದಲು ಗೋಚರವಾದುದು ಆತನ ಉತ್ಸಾಹಕ್ಕೆ ಗರಿ ಮೂಡಿಸಿತು. ಎಲ್ಲ ರಂಗಗಳಲ್ಲಿಯೂ ನಾಗರಿಕರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆಯೆಂಬುದನ್ನೇ ಈ ವಿಗ್ರಹ ಸಾರಿ ಹೇಳುವಂತೆ ಉನ್ನತವಾದ ಪೀಠದ ಮೇಲೆ ನಿಂತಿದೆ. ಈ ಆದರ್ಶ ಕೃತಿಯೆಲ್ಲಿಂದ ಬಂತು ಎಂದಾತ ಪೃಚ್ಛಿಸಿದ. ೧೮೮೬ರಲ್ಲಿ ಫ್ರೆಂಚರಿಂದ ಉಡುಗೊರೆಯಾಗಿ ಇದು ದೊರೆಯಿತು. ಇದನ್ನು ನಿಲ್ಲಿಸಲು ಬೇಕಾದ ಪೀಠವನ್ನು ಅಮೆರಿಕನ್ ವಿದ್ಯಾರ್ಥಿಗಳೇ ಪೆನ್ನಿ ಪೆನ್ನಿ ಕೂಡಿಸಿ ತಯಾರಿಸಿಕೊಟ್ಟರು. ಇಂದು ಈ ವಿಗ್ರಹವು ಸರ್ವ ಜನಮನಾಕರ್ಷಕವಾಗಿದೆ.

ಚಿತ್ರ ೩: ನ್ಯೂಯಾರ್ಕ

ತುಸು ದೂರ ದೃಷ್ಟಿ ಹಾಯಿಸಿದಾಗ ಆತನಿಗೆ ಕಂಡುದು ನ್ಯೂಯಾರ್ಕ ನಗರ ದಿಗಂತದಲ್ಲಿ. ಪ್ರಪಂಚದ ಮಹಾನಗರಗಳಲ್ಲಿ, ಬಂದರುಗಳಲ್ಲಿ ಇದು ಒಂದು. ಇಲ್ಲಿರುವ ಜನರು ಬರಿಯ ಅಮೆರಿಕನ್ನರಲ್ಲ. ಇಡಿಯ ಅಮೆರಿಕೆಯಂತೆಯೇ ಜಗತ್ತಿನ ಎಲ್ಲ ದೇಶದ ಜನರನ್ನೂ ಇಲ್ಲಿ ಕಾಣಬಹುದು. ರೋಮಿನಲ್ಲಿರುವ ಇಟೇಲಿಯನರಿಗಿಂತ ನ್ಯೂಯಾರ್ಕ ನಗರದ ಇಟೇಲಿಯನರ ಸಂಖ್ಯೆ ಹೆಚ್ಚು. ಹಾಗೆಯೇ ಡಬ್ಲಿನಿಗಿಂತ ಅಧಿಕ ಐರಿಷರೂ ಟೆಲ್‌ಅವೀವ್‌ನಲ್ಲಿರುವುದಕ್ಕಿಂತ ಹೆಚ್ಚು ಜ್ಯೂಗಳೂ ನ್ಯೂಯಾರ್ಕ ನಗರದಲ್ಲಿದ್ದಾರೆ. ಒಂದು ಮಾತನ್ನು ನಾವು ಮರೆಯಬಾರದು. ಇಲ್ಲಿರುವ ಯಾವ ಮೂಲದವನೇ ಇರಲಿ, ಅವನು ಇತರರಿಗೆ ಸಮಾನನಾಗಿರುವನು; ಅವರಂತೆಯೇ ಸ್ವತಂತ್ರನು. ಇದೇ ಅಮೆರಿಕದ ಒಂದು ಪ್ರಮುಖ ವೈಶಿಷ್ಟ್ಯ.

ಚಿತ್ರ ೪: ಬೀದಿಯಲ್ಲಿ

ನಗರದ ದೂರ ನೋಟವನ್ನು ಕಂಡು ಆನಂದಿಸಿದ ಸಂದರ್ಶಕ ಮುಂದುಗಡೆಯ ಬೀದಿಯಲ್ಲಿ ತನ್ನ ಗೆಳೆಯನೊಂದಿಗೆ ನಡೆಯುತ್ತಾನೆ. ಆತನಿಗೆ ತನ್ನ ಸಂದರ್ಶನದ ಕಾರ್ಯಕ್ರಮವನ್ನು ಗೊತ್ತುಮಾಡಬೇಕಾಗುತ್ತದೆ. ಅದಕ್ಕೆಂದೇ ಆತ ಅಂತಾರಾಷ್ಟ್ರೀಯ ಮಂದಿರದತ್ತ ಕಾಲು ಬೆಳೆಸುತ್ತಾನೆ.

ಚಿತ್ರ ೫: ಅಂತಾರಾಷ್ಟ್ರೀಯ ಮಂದಿರ

ಸಂದರ್ಶಕ ತನ್ನ ಸ್ನೇಹಿತನನ್ನು ಕೂಡಿ ಮಂದಿರವನ್ನು ಮುಟ್ಟುತ್ತಾನೆ. ಅಲ್ಲಿ ಆವಶ್ಯಕ ಮಾಹಿತಿಯನ್ನು ಸಂಗ್ರಹಿಸಿಕೊಳ್ಳುತ್ತಾನೆ. ದ್ರವ್ಯವಹಾರವನ್ನು ಅಲ್ಲಿ ಕಂಡ ಆತ ನಿಜಕ್ಕೂ ಪ್ರಫುಲ್ಲಿತನಾಗುತ್ತಾನೆ.

ಚಿತ್ರ ೬: ಪ್ರಮುಖ ಬೀದಿಯಲ್ಲಿ

ತನ್ನ ಕಾರ್ಯಕ್ರಮದ ಸ್ಥೂಲ ರೂಪರೇಷೆಯನ್ನು ನಿಶ್ಚಯಿಸಿದ ಆತ ನ್ಯೂಯಾರ್ಕ ಮಹಾನಗರದ ಮುಖ್ಯ ಬೀದಿಯ ಸೌಂದರ್ಯವನ್ನು ಆಸ್ವಾದಿಸುತ್ತ, ತಲೆದೂಗುತ್ತ ಮುಂದುವರಿಯುತ್ತಾನೆ.

ಚಿತ್ರ ೭: ಸಬ್‌ವೇಗಳು

ನ್ಯೂಯಾರ್ಕಿನ ಸಬ್‌ವೇಗಳು ಸಂದರ್ಶಕನನ್ನು ನಗರದ ಒಳಗೆ ಕರೆದುಕೊಂಡು ಹೋಗುತ್ತವೆ. ಸುಮಾರು ೨೦೦ ಮೈಲುಗಳಷ್ಟು ಒಳಮಾರ್ಗಗಳಿವೆ. ಸಾಮಾನ್ಯವಾಗಿ ವಾರದ ಪ್ರತಿ ದಿನವೂ ಈ ದಾರಿಯಲ್ಲಿ ೪೦ ಲಕ್ಷ ದಾರಿಹೋಕರು ದಾರಿ ನಡೆಯುತ್ತಾರೆ. ಒಂದು ಮಿಲಿಯಕ್ಕೂ ಮೀರಿದ ಪ್ರಯಾಣಿಕರನ್ನು ಬಸ್ಸುಗಳು ಒಯ್ಯುತ್ತವೆ.

ಚಿತ್ರ ೮: ಮೋಡುಭವನ

ಪ್ರಪಂಚದ ಅತಿ ಎತ್ತರವಾದ ಕಟ್ಟಡ ಎಂಪಾಯರ್ ಸ್ಟೇಟ್ ಬಿಲ್ಡಿಂಗ್ ಇರುವುದು ಇದೇ ನಗರದಲ್ಲಿ. ಇದರ ಎತ್ತರ ೧,೪೭೨ ಅಡಿಗಳು. ೨೫ ಸಾವಿರ ಒಕ್ಕಲುಗಳಿಗೆ ಇದು ಆಶ್ರಯವಿತ್ತಿದೆ. ೭೫ ಎಲೆವೇಟರ್‌ಗಳೂ ೧೦೨ ಉಪ್ಪರಿಗೆಗಳೂ ಈ ಮೇರು ಭವನದಲ್ಲಿವೆ. ಇದು ಯಾವೊಂದು ಸಂಸ್ಥೆಗೂ ಸೇರಿದ್ದಲ್ಲ; ಒಬ್ಬನೇ ಒಬ್ಬ ವ್ಯ

೧



೨



೩



೪



೧೦



೧೧

೧೨



೧೩

ದ ನಗರ

ನ್ಯೂಯಾರ್ಕ್

ಕ್ಕಿಯ ಆಸ್ತಿಯಿದು. ವಾರಕ್ಕೆ ನಾಲ್ಕು ಡಾಲರ್‌ಗಳ ವೇತನ ಪಡೆದು ಕಾರಖಾನನಾಗಿ ಜೀವನ ಯಾಪನೆಗೆ ತೊಡಗಿದ ಓರ್ವ ೧೯೩೦ರಲ್ಲಿ ಈ ಕಟ್ಟಡಕ್ಕಾಗಿ ೫೧೦ ಲಕ್ಷ ಡಾಲರ್‌ಗಳನ್ನು ಕೊಟ್ಟುಬಿಟ್ಟ!

ಚಿತ್ರ ೯: ಯುಕ್ತರಾಷ್ಟ್ರಸಂಘ

ಸಂಯುಕ್ತ ರಾಷ್ಟ್ರ ಸಂಘದ ಹೆಸರನ್ನೂ ಶಾಂತಿ, ಆರೋಗ್ಯ, ಶಿಕ್ಷಣ, ಜನ ಕಲ್ಯಾಣ ಕಾರ್ಯಗಳಲ್ಲಿ ಅದು ತೋರಿಸುತ್ತಿರುವ ಆಸಕ್ತಿಯನ್ನೂ ಅರಿಯದವರು, ಪ್ರಪಂಚದಲ್ಲಿಯೇ ಇಲ್ಲವೆನ್ನಬಹುದು. ಇಂತಹ ಮಹಾಸಂಸ್ಥೆಯ ಕಾರ್ಯಾಲಯದ ಕಟ್ಟಡವು ಆಧುನಿಕ ಕನ್ನಡಿ ಮತ್ತು ಉಕ್ಕಿನದ್ದಾಗಿದೆ. ತನ್ನ ನೋಡಬಂದವರೆಲ್ಲರನ್ನೂ ಏಕಪ್ರಕಾರವಾಗಿ ಆಕರ್ಷಿಸುವ ಇದನ್ನು ಕಂಡವನು "ಅತಿ ಸುಂದರ" ಎಂಬ ಉದ್ಗಾರ ತೆಗೆದಿರಲಾರನು.

ಚಿತ್ರ: ೧೦ ಯಾತ್ರಿಕರ ಆಕರ್ಷಣೆ

ಪ್ರತಿದಿನವೂ ಸುಮಾರು ೧೧,೦೦೦ ಜನರು ಯುಕ್ತರಾಷ್ಟ್ರ ಸಂಘವನ್ನು ಸಂದರ್ಶಿಸುತ್ತಾರೆ. ಯು. ಎನ್. ಕೌನ್ಸಿಲಿನ ಮಂದಿಯನ್ನು ಆರು ಭಾಷೆಗಳಲ್ಲಿ ಅನುವಾದಿಸಿ ಸಾರ್ವಜನಿಕ ಭಾಷಣದಂತೆ ಪ್ರಸಾರ ಮಾಡಲಾಗುವುದು. ಸಂದರ್ಶಕರನ್ನು ಭವನದ ಸುತ್ತ ತಿರುಗಿಸಲು ಮಾರ್ಗದರ್ಶಕರಿದ್ದಾರೆ. ಉಪಾಹಾರ ಕೋಣೆಗಳೂ ಅಲ್ಲಿವೆ. ಸಂದರ್ಶಕರು ಅಲ್ಲಿಯೇ ಸಿಬ್ಬಂದಿಯೊಡನೆ ಉಣಬಹುದು. ಯು. ನೋ.ದ ವಿಚಾರವಾಗಿ ಚರ್ಚೆ ನಡೆಸಬಹುದು.

ಚಿತ್ರ ೧೧: ಅನ್ಯರಂಗಗಳು

ಶಾಂತಿ ಸಂರಕ್ಷಣೆಯೊಂದೇ ಯುಕ್ತ ಸಂಸ್ಥೆಯ ಉದ್ದೇಶವಲ್ಲ. ಇಡಿಯ ಜಗತ್ತಿನ ಅಭ್ಯುತ್ಥಾನಕ್ಕಾಗಿ ಅದು ಸರ್ವಪ್ರಕಾರವಾಗಿ ಕಾರ್ಯತತ್ಪರವಾಗಿದೆ. ಲೋಕದಿಂದ ಮಲೇರಿಯಾ ಉಚ್ಚಾಟನೆ ಮಾಡಲು ಜಾಗತಿಕ ಆರೋಗ್ಯ ಸಂಸ್ಥೆ ಟೊಂಕ ಕಟ್ಟಿದೆ. ಎಲ್ಲ ದೇಶಗಳ ಮಕ್ಕಳಿಗೆ ಯುನಿಸೆಫ್ ನೆರವು ನೀಡುತ್ತಿದೆ. ಸಾಂಸ್ಕೃತಿಕೋನ್ನತಿಗಾಗಿ ಯುನೆಸ್ಕೊ ಮಾಡುತ್ತಿರುವ ಸೇವೆಯನ್ನು ಯಾರಿಂದ ಮರೆಯಲಾದೀತು? ಯು. ನೋ.ದ ರಚನಾತ್ಮಕ ಕಾರ್ಯಗಳು ಒಂದೆರಡಲ್ಲ, ನೂರಾರು!

ಚಿತ್ರ ೧೨ ಕಾರ್ನಿಗೀ ಭವನ

ಯು. ನೋ.ವನ್ನು ನೋಡಿದ ಮೇಲೆ ಸಂದರ್ಶಕನು ಕಾರ್ನಿಗೀ ಭವನದತ್ತ ಬರಬೇಕು. ಅಮೆರಿಕನ್ ಮಹಾದಾನಿ ಆ್ಯಂಡ್ರ್ಯೂ ಕಾರ್ನಿಗೀಯ ಉದಾರತೆಯಿಂದ ೧೮೯೧ರಲ್ಲಿ ಈ ಭವನವು ನಿರ್ಮಾಣಗೊಂಡಿತು. ಇಲ್ಲಿ ಪ್ರತಿ ವರ್ಷ ಸಾವಿರಕ್ಕೂ ಹೆಚ್ಚಿನ ಕಾರ್ಯಕ್ರಮಗಳು ನಡೆಯುತ್ತವೆ. ೭,೫೦,೦೦೦ ಜನರು ಇದರಲ್ಲಿ ಭಾಗವಹಿಸುತ್ತಾರೆ. ಈ ಭವನವು ಸಂಗೀತ ಕಲಾವಿದರನ್ನು ಸದಾ ತನ್ನತ್ತ ಸೆಳೆಯುತ್ತಲೇ ಇರುತ್ತದೆ. ಅಮೆರಿಕನರ ಕಲಾಭಿರುಚಿಯನ್ನಳೆಯಲು ಇದೊಂದೇ ಮಾನದಂಡ ಸಾಕು.

ಚಿತ್ರ ೧೩: ಟೈಮ್ಸ್ ಚೌಕ

ಮನೋರಂಜನಾಕೇಂದ್ರವೆಂದು ಹೆಸರಾದ ಈ ಚೌಕವು ಥಿಯೇಟರು, ರೆಸ್ಟಾರೆಂಟ್, ಹೋಟೇಲು ಮತ್ತು ಸ್ಟೋರ್‌ಗಳ ತವರ್ಮನೆ. ಕಗ್ಗತ್ತಲೆಯ ರಾತ್ರಿಕಾಲದಲ್ಲಿಯೂ ಬೆಳ್ಳಂ ಬೆಳಕಾಗಿದನ್ನಿಡುತ್ತದೆ. ವಿದ್ಯುದ್ದೀಪ. ಇದೇ ಚೌಕದಲ್ಲಿ 'ದಿನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯ ಕಾರ್ಯಾಲಯವೂ ಇದೆ.

ಚಿತ್ರ ೧೪: ಕೊಲಂಬಿಯಾ ವಿಶ್ವವಿದ್ಯಾಲಯ

ಸಂದರ್ಶಕನು ತನ್ನ ಗೆಳೆಯನೊಂದಿಗೆ ಕೊಲಂಬಿಯಾ ವಿಶ್ವವಿದ್ಯಾಲಯದ 'ಲೋ ಲೈಬ್ರೆರಿ'ಯ ಮುಂದೆ ನಿಲ್ಲುತ್ತಾನೆ. ೧೭೫೪ರಲ್ಲಿ ಪ್ರಾರಂಭವಾದ ಈ ವಿಶ್ವವಿದ್ಯಾಲಯವು ಶಿಕ್ಷಣ ಕ್ಷೇತ್ರದಲ್ಲಿಯೇ ಅಗ್ರಗಣ್ಯ ಸಂಸ್ಥೆಯಾಗಿದೆ. ಸುಮಾರು ೪೦,೦೦೦ ವಿದ್ಯಾರ್ಥಿಗಳು ವರ್ಷಂಪ್ರತಿ ಕೊಲಂಬಿಯಾಕ್ಕೆ ಬರುತ್ತಾರೆ.

ಚಿತ್ರ ೧೫: ಸ್ಟೋಕ್ ಎಕ್ಸ್‌ಚೇಂಜ್

ಕೆಳಗಿನ ನ್ಯೂಯಾರ್ಕಿನಲ್ಲಿ ಯಾರಾದರೂ ವಾಲ್‌ಸ್ಟ್ರೀಟನ್ನು ನೋಡಬಹುದು. ಇಲ್ಲಿಯೇ ಇರುವುದು ನ್ಯೂಯಾರ್ಕ್ ಸ್ಟೋಕ್ ಎಕ್ಸ್‌ಚೇಂಜ್. ಅಮೆರಿಕೆಯ ಆರ್ಥಿಕ ರಂಗದ ಕೇಂದ್ರವಿದು. ಅಮೆರಿಕದ ಕಾರ್ಪೊರೇಶನ್‌ಗಳು ಹೊರಡಿಸುವ ಸ್ಟೋಕುಗಳಲ್ಲಿ ಮುಕ್ಕಾಲು ಮೂರು ವೀಸಪಾಲನ್ನು ವ್ಯಕ್ತಿಗಳೇ ಹೊಂದಿದ್ದಾರೆ. ಚಿಕ್ಕ ಹಣ ತೊಡಗಿಸುವವರಿಗೆ ಅನುಕೂಲವಾಗುವಂತೆ ಅಮೆರಿಕೆಯಲ್ಲಿ ಕಂತುಗಳ ರೂಪದಲ್ಲಿಯೇ ಹಣಪಾವತಿ ಮಾಡಲು ಅನುಕೂಲವಾಗುವಂತೆ ಸ್ಟೋಕುಗಳನ್ನು ಬಿಡುಗಡೆಮಾಡಲಾಗುತ್ತಿದೆ.

ಚಿತ್ರ ೧೬: ಜನತಾ ಬಂಡವಳಶಾಹಿ

ಅಮೆರಿಕೆಯ ಪ್ರತ್ಯೇಕ ಕೆಲಸಗಾರನೂ ಸ್ಟೋಕನ್ನು ಹೊಂದಿರುತ್ತಾನೆ, ಸೇವಿಂಗ್ಸ್ ಬ್ಯಾಂಕ್ ಎಕೌಂಟನ್ನು ತೆರೆದಿರುತ್ತಾನೆ; ಜೀವವಿಮೆ ಮಾಡಿರುತ್ತಾನೆ. ಅಥವಾ ಯಾವುದಾದರೊಂದು ವಿಧದ ನಿವೃತ್ತಿ ವೇತನ ಪಡೆಯಲು ಅರ್ಹನಾಗಿದ್ದಾನೆ. ಚಿಕ್ಕ ವ್ಯಾಪಾರವೂ ಅಮೆರಿಕೆಯ ಆರ್ಥಿಕ ರಂಗದಲ್ಲಿ ಗಣನೀಯ ಸ್ಥಾನವನ್ನು ಪಡೆದಿದೆ. ಪ್ರತಿ ಅಮೆರಿಕನ್ ನಾಗರಿಕನೂ ತನ್ನ ಖಾಸಗಿ ವ್ಯಾಪಾರ ವಾಣಿಜ್ಯಗಳನ್ನು ಬೆಳೆಸಿಕೊಳ್ಳಲು ಸರ್ವತಂತ್ರ ಸ್ವತಂತ್ರನಾಗಿದ್ದಾನೆ.

ಚಿತ್ರ ೧೭: ಉಡುಗೆ ನಗರ

ಪ್ರಪಂಚದಲ್ಲೇ ಖ್ಯಾತಿಗಳಿಸಿದ ಉಡುಗೆಗಳ ಕೇಂದ್ರವೊಂದು ನ್ಯೂಯಾರ್ಕ್ ನಗರದಲ್ಲಿದೆ. ಹೆಂಗಸರ ಉಡುಗೆಗಳಲ್ಲಿ ನೂರಕ್ಕೆ ಎಪ್ಪತ್ತೈದರಷ್ಟು ನಿರ್ಮಾಣವಾಗುವುದು ಇದೇ ಕೇಂದ್ರದಲ್ಲಿ. ಅಮೆರಿಕನ್ ಕೆಲಸಗಾರರ ವೇತನವು ಉತ್ತಮವಾಗಿದೆ. ಈ ಉಡುಗೆ ನಗರದ ಕೆಲಸಗಾರರೂ ಒಳ್ಳೆಯ ಸಂಬಳವನ್ನು ಪಡೆಯುತ್ತಾರೆ. ಮನಮೆಚ್ಚುವಂತೆ ಕಾರ್ಯವೆಸಗುತ್ತಾರೆ; ಜನ ಮೆಚ್ಚುಗೆಯನ್ನು ಗಳಿಸುತ್ತಾರೆ.

ಚಿತ್ರ ೧೮: ಪ್ರಕಟಣೆಗಳು

ಅಮೆರಿಕನ್ ಜನತೆಯಿಂದ ಯಾವ ವಿಷಯವೂ ಸಾಮಾನ್ಯವಾಗಿ ಬಚ್ಚಿಡಲಾಗುತ್ತಿಲ್ಲ. ಸಂವಿಧಾನವು, ಅವರಿಗೆ ಸಂಪೂರ್ಣ ಅಭಿಪ್ರಾಯ ಪ್ರಕಟನೆ ಮತ್ತು ಪತ್ರಿಕಾ ಸ್ವಾತಂತ್ರ್ಯವನ್ನು ಕೊಡಮಾಡಿದೆ. ನ್ಯೂಯಾರ್ಕ್ ನಗರದಿಂದ ಹೊರಡುವ ೫೫ ದಿನಪತ್ರಿಕೆಗಳು ೧೧೦ ಲಕ್ಷ ಪತ್ರಿಕೆಗಳನ್ನು ೧೧ ಬೇರೆ ಬೇರೆ ಭಾಷೆಗಳಲ್ಲಿ ಪ್ರತಿದಿನವೂ ಮಾರುತ್ತವೆ!

೬



೭

೮



೯





೧೫

೧೬



೧೭

೧೮

ಆಕ್ರಮಣದ ಬಿಸಿ ಸರಕಾರಕ್ಕೆ ತಾಗಿದೆಯೇ ?

(ಏಳನೇ ಪುಟದಿಂದ)

ರಾಷ್ಟ್ರೀಯ ಕಮ್ಯೂನಿಸ್ಟರು ತಮ್ಮ ಸೈನಿಕ ಶಕ್ತಿಯನ್ನು ರಹಸ್ಯದ ವಿಷಯವನ್ನಾಗಿ ಪರಿಗಣಿಸಿರುವದಿಲ್ಲ. ಅವರ ಬಳಿ ೩,೬೦,೦೦೦ ಪದಾತಿಗಳಿದ್ದಾರೆ. ಇನ್ನೂರು ವಿಮಾನಗಳಿವೆ ಹಾಗೂ ಕೆಲ ಹಡಗುಗಳಿವೆ. ಕಮ್ಯೂನಿಸ್ಟರ ಕಪಿಮುಷ್ಟಿಯಿಂದ ಕರಾವಳಿಯನ್ನು ರಕ್ಷಿಸುವ ಸಲುವಾಗಿ ಗಣರಾಜ್ಯ ಸರಕಾರವು ಬಹಳ ಲಕ್ಷ್ಯ ಕೊಟ್ಟಿರುತ್ತದೆ.

ಗಣರಾಜ್ಯ ಸರಕಾರದಲ್ಲಿ ಅಂತರಾಷ್ಟ್ರೀಯ ಶಾಖೆಯ ಅಮಾತ್ಯ ಶ್ರೀಯುನ್.

ಇದು ಫಾರ್ಮೋಸಾ ಸರಕಾರದ ಸ್ಪಷ್ಟ ಚಿತ್ರ. ಚಿಯಾಂಗ್ ಕೈಶೇಖರು ತಾನು ಪೂರ್ಣ ಚೈನಾದ ಅಧ್ಯಕ್ಷನಾಗುವ ಕಾಲ ದೂರ ಉಳಿದಿಲ್ಲವೆನ್ನುತ್ತಿದ್ದಾರೆ. ಚೈನೀಯರನ್ನು ಕಮ್ಯೂನಿಸ್ಟ್ ಕರಡಿಯ ಕೈಯಿಂದ ತಾನು ತಪ್ಪಿಸಿಯೇ ತೀರುವೆನೆಂದು ಹೇಳುತ್ತಿದ್ದಾರೆ. ಹಾಗಿರುವಾಗ ಭಾರತ ಸರಕಾರವು ಚೈನಿ ಕಮ್ಯೂನಿಸ್ಟರಿಗೆ ಸಂಯುಕ್ತ ರಾಷ್ಟ್ರಸಂಘದಲ್ಲಿ ಸ್ಥಾನ ತೆಗೆಯಿಸಿ ಕೊಡಲು ಪ್ರಯತ್ನಿಸುವದನ್ನು ಅವರು ಮೆಚ್ಚಲು ಸಾಧ್ಯವೇನು? ತಾಟಸ್ಥ್ಯ ಘೋಷಣೆಯನ್ನು ಹಾಕುತ್ತಿರುವ ನಮಗೇಕೆ ಈ ಬರಬರಾಟ? ಸ್ಥಾನ ತೆಗೆಯಿಸಿಕೊಡಲು ಮಾವನಾಗಲೀ ಚಾ-ಎನ್-ಲ್ಯಾಯಾಗಲೀ ನಮ್ಮ ಬಳಿ ಕೇಳಿಕೊಂಡಿರುವರೇ? ನಾವೇ ನಮಗೆ ಬೇಡವಾದ ವಿಷಯದಲ್ಲಿ ತಲೆ ಹಾಕಿದ್ದೇವೆ. ಅದರ ಪ್ರತಿಫಲವನ್ನು ಜನತೆ ಅನುಭವಿಸಬೇಕಾಗುತ್ತದೆ.

ನಾವು ಚೈನಿ ಕಮ್ಯೂನಿಸ್ಟರಿಗೆ ಸ್ಥಾನ ತೆಗೆಯಿಸಿ ಕೊಡುವ ವಿಷಯದಲ್ಲಿ ತಾಟಸ್ಥ್ಯ ನೀತಿಯನ್ನನುಸರಿಸಿದಲ್ಲಿ ಗಣರಾಜ್ಯ ಸರಕಾರವು ನಮ್ಮ ಸಹಾಯಕ್ಕೆ ಬಂದೀತೇ? ಬಂದೀತು! ಆದರದಕ್ಕೊಂದು ಮಿತಿ ಇದ್ದೇ ಇರುತ್ತದೆ. ಫಾರ್ಮೋಸಾ ಸರಕಾರವು ನಮ್ಮ ಮೇಲೆ ಬಾರಿ ಆಕ್ರಮಣ ನಡೆಸದೆ ಇದ್ದರೂ ಹಿಂದೆಯೇ ತಿಳಿಸಿದ್ದಂತೆ ಅವರು ಒಂದೇ ರೀತಿಯ ಗರಿಗಳುಳ್ಳ ಹಕ್ಕಿಗಳಿದ್ದಾರೆ! ಚೈನೀಯರೆಂದರೆ ಎಲ್ಲಾ ಚೈನೀಯರೂ ಒಂದೇ. ಅವರೊಳಗೆ ಇರುವ ಬಿಕ್ಕಟ್ಟಿನ ಕುರಿತು "ನವಯುಗ" ಆದಾಗಲೇ ಪ್ರಕಟಿಸಿರುತ್ತದೆ.

ಫಾರ್ಮೋಸಾ ಸರಕಾರವೂ ಟ್ರಿವಿಸ್ಟ ಪವನ್ನು ಚೈನಾದ ಅಂಗವೆಂದೇ ಪರಿಗಣಿಸುತ್ತದೆ. ಮಂಗೋಲಿಯಾವು ಚೈನಾದ ಅಂಗವಾಗಿರುವಂತೆ ಟ್ರಿವಿಸ್ಟಪವೂ ಇವೆಯಂತೆ. ಆದರೆ ಮಂಗೋಲಿಯಾಕ್ಕೆ ಸ್ವಾಯತ್ತಾಧಿಕಾರ ಇರುವಂತೆ ಟ್ರಿವಿಸ್ಟಪಕ್ಕೂ ಇವೆ. ಅವರು ಕಮ್ಯೂನಿಸ್ಟರು ನಡೆಸಿರುವ ನರಮೇಧಕ್ಕೆ ವಿರುದ್ಧವಿದ್ದಾರೆ. ಅಧಿಕಾರಾಸನದಿಂದ ದೂರ ಇರುವ ವರೆಗೆ ಎಲ್ಲರೂ ಹಾಗೆಯೇ ಹೇಳುವುದುಂಟು. ಲಗಾಮು ತನ್ನ ಕೈಗೊಮ್ಮೆ ಬಂದರೆ ತೀರಿತು. ಆಗ ಗೊತ್ತಾಗುತ್ತದೆ ಅವರ ಬಣ್ಣ.

ಭಾರತದ ಮೇಲೆ ಕಮ್ಯೂನಿಸ್ಟ ಚೈನೀಯರು ಆಕ್ರಮಣ ನಡೆಸಿರುವದನ್ನ ಫಾರ್ಮೋಸಾ ಸರಕಾರ ಖಂಡಿಸಿರುತ್ತದೆ. ಚೈನಾವು ಬಹಳ ಹಿಂದಿನ ಕಾಲದಿಂದಲೂ ಭಾರತದ ಸ್ನೇಹಿತನಾಗಿದೆ. ಕಮ್ಯೂನಿಸ್ಟರ ಕರಾಳ ಶಾಸನದ ಇತಿಶ್ರೀಯಾಗಿ ಗಣರಾಜ್ಯ ಸರಕಾರದ ಕೈ ಮೇಲಾದಾಗ ಎಲ್ಲಾ ವಿವಾದಗಳು ಪರಿಹಾರವಾಗುತ್ತವೆಂದು ಅಂತರಾಷ್ಟ್ರೀಯ ಶಾಖೆಯ ಸಚಿವರು ಸೂಚಿಸಿದ್ದಾರೆ.

ಚೈನಾಕ್ಕೂ ಭಾರತಕ್ಕೂ ಸ್ನೇಹತ್ವ-ಬಾಂಧವ್ಯ ಇದ್ದೇ ಇದೆ. ಆದರೆ ಅದು ಭಾರತದ ಬಲಾಬಲದ ಮೇಲೆ ಹೊಂದಿಕೊಂಡಿದೆಂಬುದನ್ನು "ನವಯುಗ" ಆದಾಗಲೇ ಸ್ಪಷ್ಟವಾಗಿ ಸೂಚಿಸಿರುತ್ತದೆ.

ಗಣರಾಜ್ಯ ಸರಕಾರ ಬಂದಲ್ಲಿ ಗಡಿವಿವಾದ ಆದೆಷ್ಟರ ಮಟ್ಟಿಗೆ ಇತ್ಯಾರ್ಥವಾದೀತು? ಕಮ್ಯೂನಿಸ್ಟರ ಆಕ್ರಮಣವನ್ನು ಅವರು ಒಪ್ಪಲಿಕ್ಕೆ ಸಿದ್ಧವಿಲ್ಲದಿದ್ದರೂ ಅವಿಸ್ಟಪ ಭಾರತದ ಅಂಗವೆನ್ನಲು ಅವರು ಸಿದ್ಧರಿಲ್ಲ. ಇತರ ಕೆಲ ಪ್ರದೇಶಗಳ ವಿಷಯದಲ್ಲೂ ಹಾಗೆಯೇ ಅವರು ಒಂದೇ ರೀತಿಯ ಪಕ್ಕದ ಹಕ್ಕಿಗಳಿದ್ದಾರೆಂಬುದನ್ನು ಮುಸ್ತಾಧ ಭಾರತೀಯರು ಮರೆಯಲೇ ಬಾರದು. ಭಾರತದ ಒಲವು ತಮ್ಮತ್ತ ಇರಬೇಕೆಂಬುದಕ್ಕಾಗಿ ಅವರು ನಮ್ಮ ಮೇಲೆ ಅನುಕಂಪ ಇರುವವರಂತೆ ಕೆಲವೊಮ್ಮೆ ಆಡುತ್ತಾರಾದರೂ ಚೈನೀ ರಕ್ತ ಅವರ ಧಮನಿ-ಅಭಿಧಮನಿಗಳಲ್ಲಿ ಹರಿಯುತ್ತಿರುವದರಿಂದ ಆಕ್ರಮಣಕ್ಕೆ ಅವರು ಅಂಜುವವರಾಗಿಲ್ಲ. ದಿಲ್ಲಿ ಗದ್ದುಗೆಯ ಮೇಲೆ ದುರ್ಬಲ ಸರಕಾರ ಇರುವ ವರೆಗೆ ಅವರೂ ಬಾರೀ ಆಕ್ರಮಣ ನಡೆಸದಿದ್ದರೂ ಚಿಕ್ಕಪ್ರಮಾಣದಲ್ಲಾದರೂ ಆಕ್ರಮಣ ನಡೆಸುವರೆಂಬುದರಲ್ಲಿ ಸಂದೇಹವೇ ಇಲ್ಲ.

ಚೈನಿ ಕಮ್ಯೂನಿಸ್ಟರಾದರೂ ಆರಂಭದಲ್ಲಿ ಹೇಳಿದ್ದೇನು? ಅಮೇರಿಕದ ಆಟದ ಗೊಂಬೆ ಕೈಶೇಕ್ ಸರಕಾರ ಪ್ರಕಟಿಸಿರುವ ಭೌಗೋಲಿಕ ಚಿತ್ರವನ್ನೇ ನಾವು ಪ್ರಕಟಿಸಿರುವದಾಗಿಯೂ, ಮುಂದಿನ ಮುದ್ರಣದಲ್ಲಿ ಗಡಿರೇಖೆಯನ್ನು ಸ್ಪಷ್ಟವಾಗಿ ಸೂಚಿಸುವೆವೆಂದೂ ಹೇಳಿದ್ದರು. ಮುಂದಿನ ಮುದ್ರಣದಲ್ಲಿ ಗಡಿರೇಖೆಯನ್ನು ಮತ್ತೂ ಮುಂದಕ್ಕೆ ತೋರಿಸಿದ್ದಲ್ಲದೆ ಸೈನಿಕರೂ ಬಹಳಷ್ಟು ಮುಂದಕ್ಕೆ ಬಂದಿದ್ದರು. ಕೈಶೇಖ್ ಸರಕಾರವು ಭೂಪಟದಲ್ಲಿ ಆ ರೀತಿ ತೋರಿಸಿದ್ದರೂ ಸೈನಿಕರಿಂದ ಆಕ್ರಮಣ ನಡೆಸಲಿಲ್ಲ. ಭೂಪಟದ ಹೆಚ್ಚು ಕಮ್ಮಿಗಳನ್ನು ಮಾತುಕತೆಗಳ ಮೂಲಕ ಒಂದುವೇಳೆ ಬಗೆಹರಿಸಿಕೊಳ್ಳಬಹುದಾದರೂ, ಆಕ್ರಮಣಕ್ಕೆ ಮುಂದಾಗಿರುವವರ ಮುಂದೆ ಅದೇನೂ ಶಾಂತಿಯ ಮಾತುಕತೆ ನಡೆಯಬಹುದು. ಇದನ್ನು ಇನ್ನಾದರೂ ನಮ್ಮ ಸರಕಾರ ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಆಕ್ರಮಣದ ಬಿಸಿ ಸರಕಾರಕ್ಕೆ ತಾಗಿಲ್ಲವೆಂದರೆ ಅದರ ಚರಿತ್ರೆ ಬಹಳ ದಪ್ಪನೆಯದಾಗುತ್ತದೆ. ಭಾರತೀಯ ಸರಕಾರಕ್ಕೆ ಅದು ಶೋಭಿಸದು.

ನಚಿಕೇತ'ರ

ಹೃದಯಸ್ಪರ್ಶಿ

ನವೀನ ಕಾದಂಬರಿಗಳು

ಹಸುರು ಹಂಸ

ಬೆಲೆ: ರೂ. ಎರಡು.

ಋಣ ಯಾತ್ರೆ

ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ

ಬೆಲೆ ರೂ. 2-00

ಪ್ರತಿಗಳು ಸಿಗುವ ಸ್ಥಳ:

ನವಯುಗ ಪ್ರೆಸ್, ಉಡುಪಿ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಚಿವ ಸಮಿತಿಯಿಂದ

ಭಾಷಾಪ್ರಶ್ನೆಗೆ ಪರಿಹಾರಮಾರ್ಗ

ಆಂತರಿಕ ಕೋಲಾಹಲಕ್ಕೆ ಕಾರಣೀಭೂತವಾದ ಭಾಷಾ ಸಮಸ್ಯೆಯನ್ನು ಹೇಗೆ ಪರಿಹಾರ ಮಾಡಬೇಕು ಎಂಬುದರ ಬಗ್ಗೆ ಪ್ರಧಾನಿ ಶಾಸ್ತ್ರಿಯವರು ತುಂಬ ವಿವೇಚಿಸಿದರು. ಈ ವಿಷಯದಲ್ಲಿ ಅವರು ತೀರ ಮಂದಗಾಮಿಯೇ ಆಗಿದ್ದಾರೆಂದರೂ ತಪ್ಪಲ್ಲ. ಭಾಷಾ ಪ್ರಶ್ನೆಯ ಮೇಲೆ ಮದ್ರಾಸನೇ ಮೊದಲಾದೆಡೆಗಳಲ್ಲಿ ಗೊಂದಲವೆದ್ದಾಗಲೂ ಶಾಸ್ತ್ರಿಯವರು ನಾಲಗೆ ಬಿಗಿಹಿಡಿದಿದ್ದರು. ಪರಿಸ್ಥಿತಿಯು ವಿಕೋಪಕ್ಕೆ ಹೋದಾಗ, ಅದನ್ನು ಹಾಗೆ ಬಿಡಲೇ ಬೇಕಾಯಿತು. ದಿವಂಗತ ಪ್ರಧಾನಿ ನೆಹರುರವರು ದಕ್ಷಿಣದ ರಾಜ್ಯಗಳಿಗೆ ಇತ್ತಿದ್ದ ಭರವಸೆಯನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರಲಾಗುವುದೆಂದು ಅವರು ಘೋಷಿಸಿದರು. ಎದ್ದಿದ್ದ ಗೊಂದಲ ಒಮ್ಮೆಗೆ ಶಾಂತವಾಯಿತು.

ಭಾಷಾ ಪ್ರಶ್ನೆಯನ್ನು ಪರಿಹರಿಸಲು ಒಂದೊಂದು ವರ್ಗದವರು ಒಂದೊಂದು ಅಭಿಪ್ರಾಯ ಪಡುತ್ತಾರೆ. ಆಶ್ವಾಸನ ಮಾತ್ರ ಸಾಕೆಂಬಲ್ಲಿಂದ ಸಂವಿಧಾನ ತಿದ್ದುಪಡಿಯ ವರೆಗೂ ಇವರ ವಾದ ಮುಂದುವರಿಯುತ್ತಿದೆ. ಇದರಿಂದಲೇ ಈ ಪ್ರಶ್ನೆ ಎಷ್ಟೊಂದು ಗಂಭೀರವಾದುದೆಂದು ತಿಳಿಯಬಹುದು. ಯಾರು ಏನೇ ಹೇಳಿದರೂ ಪ್ರಧಾನಿಯವರು ತನ್ನ ನಿಲುವೇನೆಂಬುದನ್ನು ಇನ್ನೂ ಹೇಳಲಿಲ್ಲ. 'ನೆಹರೂ ಆಶ್ವಾಸನ'ವನ್ನಷ್ಟೇ ಅವರು ಪುನರುಚ್ಚರಿಸಿದ್ದಾರೆ! ಕೆಲವರಿಗೆ ಅವರ ಈ ಗಂಭೀರ ಮೌನವು ಅಪ್ರಿಯವೆನಿಸಿದರೂ ಈ ಮೌನತೆಯಿಂದಲೇ ಅವರು ಸಮಸ್ಯಾ ಪರಿಹಾರಕ್ಕೆ ಮಾರ್ಗದರ್ಶನ ಮಾಡಿದ್ದಾರೆನ್ನಬಹುದು.

ಇತ್ತೀಚೆಗೆ ಅಧಿಕೃತ ಭಾಷಾ ಸಂಬಂಧದಲ್ಲಿ ಎಲ್ಲರಿಗೂ ನ್ಯಾಯವೊದಗಿಸಿಕೊಡಬಹುದಾದ ವಿಧಾನವನ್ನು ಕಂಡು ಹಿಡಿಯಲು ಒಂದು ಕ್ಯಾಬಿನೆಟ್ ಸಚಿವರ ಸಮಿತಿಯನ್ನು ರಚಿಸಲಾಯಿತು. ಗೃಹಮಂತ್ರಿ ಗುಲ್ಜಾರೀಲಾಲ ನಂದಾರು ಇದರ ಅಗ್ರೇಸರರು. ನೆಹರೂ ಆಶ್ವಾಸನವನ್ನು ಕಾರ್ಯರೂಪಕ್ಕೆ ತರುವಂತೆ ನೋಡಿಕೊಳ್ಳುವುದು ಈ ಸಮಿತಿಯ ಮುಖ್ಯ ಕೆಲಸ. ಅಖಿಲ ಭಾರತ ಸೇವೆಗಳಲ್ಲಿ ಭಾಷಾ ತಳಹದಿಯಲ್ಲಿ ಸ್ಥಾನ ಹಂಚಿಕೆ ಮತ್ತು ಸೇವೆಗಳ ಪರೀಕ್ಷೆಗಳಿಗೆ ಪ್ರಾದೇಶಿಕ ಭಾಷಾ ಮಾಧ್ಯಮದ ಸೌಲಭ್ಯ ಕೊಡುವುದು— ಹೀಗೆ ಎರಡು ಇತರ ವಿಚಾರಗಳನ್ನೂ ಸಮಿತಿಯು ಪರ್ಯಾಲೋಚಿಸ ಬೇಕಾಗಿದೆ. ಈ ಸಮಿತಿಯು ಸಿಫಾರಸನ್ನು ಆಧರಿಸಿಯೇ ಪ್ರಧಾನಿಯವರು ಈ ದಿಸೆಯಲ್ಲಿ ಮುಂದುವರಿಯುವರು.

ಸಮಿತಿಯ ವರದಿ—ಸಲಹೆಗಳನ್ನು ಕೇಂದ್ರ ಸಚಿವ ಸಂಪುಟ, ರಾಜ್ಯಗಳ ಮುಖ್ಯಮಂತ್ರಿಗಳು ಸಂಪೂರ್ಣ ಪರಿಶೀಲಿಸಿದ ಬಳಿಕವೇ ತನ್ನ ನಿರ್ಧಾರವನ್ನು ಶಾಸ್ತ್ರಿಯವರು ಕೈಗೊಳ್ಳುವರು. ಎಂದರೆ, ಸಮಸ್ಯೆಯನ್ನು ಬಿಡಿಸುವಲ್ಲಿ ಯಾರ ಅಭಿಪ್ರಾಯ ಹೇಗಿದೆ ಎಂಬುದರ ಕೂಲಂಕಷ ತಿಳುವಳಿಕೆಯಾದ ಮೇಲೆಯೇ ಪ್ರಧಾನಿಯವರು ಪರಿಹಾರ ಸೂತ್ರವನ್ನು ಜನತೆಯ ಮುಂದಿಡುವರು. ಇದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಸಚಿವ ಸಂಪುಟದ ಅಭಿಪ್ರಾಯವನ್ನು ಅವರು ಮೊದಲಾಗಿ ತಿಳಿದುಕೊಂಡು ಮುಂದುವರಿಯುವರು.

ದೃಢ ನಿಲುವೆಯನ್ನು ಶಾಸ್ತ್ರಿ ವಹಿಸುತ್ತಿಲ್ಲವೆಂದು ಕೆಲವರು ದೂರಬಹುದಾದರೂ ಇಂದಿನ ಪರಿಸ್ಥಿತಿಯಲ್ಲಿ ಇದಕ್ಕಿಂತ ಸೂಕ್ತವಾದ ಕ್ರಮ ಬೇರೊಂದಿಲ್ಲವೆನ್ನಬೇಕು. ಏಕೆಂದರೆ, ಸ್ಪಷ್ಟವಾಗಿ ನೇರಕ್ರಮವನ್ನು ಕೈಗೊಂಡರೆ, ಪರಿಣಾಮ ವಿಕಟವಾದೀತು. ಈ ಹಿಂದಿನಂತೆಯೇ ಮತ್ತೆ ಗೊಂದಲ ತಲೆದೋರೀತು. ಕಠಿನ ಪ್ರಶ್ನೆಗಳನ್ನು ಬಿಟ್ಟುಗೊಡುವುದಿಲ್ಲವೆಂಬ ಸದಭಿಪ್ರಾಯವನ್ನೂ ಸದ್ಯ ಶಾಸ್ತ್ರಿಯವರ ಕ್ರಮ ಮೂಡಿಸಬಲ್ಲದು.

ನಿಯುಕ್ತವಾದ ಉಪಸಮಿತಿಯು ಕಾರ್ಯಪ್ರಣಾಲಿಯೇನು ಎಂಬುದನ್ನು ನಿರ್ಧರಿಸಿರುವುದಿಲ್ಲ. ಸಮಿತಿಯ ಇತರ ಸದಸ್ಯರಾರು ಎಂಬುದೂ ಇಷ್ಟರಲ್ಲೇ ಹೊರಪಡಬೇಕಾಗಿದೆ. ಅಂತೂ ಮೇ ತಿಂಗಳಲ್ಲಿ ಪ್ರಧಾನಿಯವರು ಸೋವಿಯತ್ ಸಂದರ್ಶನಕ್ಕೆ ಹೊರಡುವುದಕ್ಕೆ ಮೊದಲು ಈ ಸಮಸ್ಯೆಯ ಪರಿಹಾರಾಂಶದಲ್ಲಿ ಒಂದು ಮೈಲುಗಲ್ಲನ್ನು ಮುಟ್ಟುವುದು ಸಾಧ್ಯವಾದರೂ ಆಗಬಹುದು.

ಆಂತರಿಕ ಶಾಂತಿಗೆ ಕಾರಣವಾಗಬಹುದಾದ ಭಾಷಾ ಸಮಸ್ಯಾ ಪರಿಹಾರವು ಬೇಗನೇ ಸಾಧ್ಯವಾಗಲೆಂದು ಎಲ್ಲರೂ ಹಾರೈಸುತ್ತಾರೆ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction Madras.

ವಿವೇಚನೆ

ಸಂಸ್ಕೃತಿ ಯಾವುದು?

ಬರೆದವರು: ಶ್ರೀ. ಸ. ನಾರಾಯಣ.

ಆ ಸೇತು ಹಿಮಾಚಲ ಪರ್ಯಂತ ವ್ಯಾಪಿಸಿರುವ ಬೃಹತ್ ಭಾರತದಲ್ಲಿ ಅಸಂಖ್ಯಾತ ಧರ್ಮ, ಭಾಷೆ, ಜನಾಂಗ, ಸಂಸ್ಕೃತಿ ಆಚಾರ-ವಿಚಾರಗಳು ಬಳಕೆಯಲ್ಲಿರಬಹುದು. ಮೂಲತಃ ವಿವೇಚಿಸುವಲ್ಲಿ ಭಾರತದ ಸಂಸ್ಕೃತಿಗಳು ಹತ್ತಲ್ಲ ಒಂದೇ ಆಗಿದೆ. ಅದು ಏಕೈಕ 'ಭಾರತೀಯ ಸಂಸ್ಕೃತಿ'

ಸಂಸ್ಕೃತಿಯ ಅರ್ಥ ಅಗಾಧವಾದುದು. ಅಷ್ಟೇ ವಿಶಾಲವಾದುದು. ಅಂದರೆ ವ್ಯಕ್ತಿಯಿಂದ ಹಿಡಿದು ರಾಷ್ಟ್ರದ ವರೆಗೆ ಎಲ್ಲ ಹಂತಗಳಲ್ಲಿ ವ್ಯಕ್ತಿ, ಸಂಸಾರ, ಸಮಾಜ, ಸರಕಾರ, ರಾಷ್ಟ್ರಗಳ ವರೆಗೆ ಎಲ್ಲ ಕ್ಷೇತ್ರಗಳಲ್ಲಿಯೂ ಸ್ವಾರ್ಥಕ್ಕೆ, ಸ್ವಪ್ರತಿಷ್ಠೆಗೆ ಅವಕಾಶವಿಲ್ಲದೆ ಎಲ್ಲರೂ ಒಂದೇ 'ಸರ್ವೇಜನಾಃ ಸುಖಿನೋಭವಂತು" ಎಂಬ ವಾಕ್ಯವನ್ನು ಅನುಸರಿಸಿ ಬಾಳಿದುದು ನಮ್ಮ ಪರಂಪರೆಯ ಸತ್‌ಸಂಸ್ಕೃತಿ.

ತನ್ನ ಸುಖದ ಯೋಜನೆಯಲ್ಲಿಯೇ ಪರರಿಗೆ ಅಹಿತವಾಗದಂತೆ ಪರಸ್ಪರ ಸಹಕಾರ ಮತ್ತು ಅನ್ಯೋನ್ಯ ಭಾವನೆಗಳ ಬಾಳುವೆಯು ಮತ್ತೊಂದು ರೂಪ ನಮ್ಮ ಸಂಸ್ಕೃತಿ. ಉಡುಗೆ ತೊಡುಗೆ. ಊಟೋಪಚಾರ, ಆದರಾತಿಥ್ಯ, ಜೀವನ, ಕಲೆ ವಿ. ಕೈಲ್ಲ ವ್ಯವಹಾರಗಳಲ್ಲಿಯೂ ನಮಗೆ ಸಂಸ್ಕೃತಿ ಗೋಚರವಾಗುತ್ತದೆ.

ಶತಶತಮಾನಗಳ ಪೂರ್ವದಲ್ಲಿಯೇ ನಮಗೆ ಸಂಸ್ಕೃತಿಯ ಪರಿಚಯವಿತ್ತು ಎನ್ನುವ ಅಂಶ ಬೆಳಕಿಗೆ ಬರುತ್ತದೆ. ಇದಕ್ಕೆ ಉತ್ತಮ ಉದಾಹರಣೆಗಳು ಹರಪ್ಪಾ-ಮಹೆಂಜದಾರೋಗಳಿಂದ ಪಡೆಯಬಹುದು. ವಿಶ್ವದ ವಿವಿಧ ರಾಷ್ಟ್ರಗಳು ಅನಾಗರಿಕ ಜೀವನವನ್ನು ನಡೆಸುತ್ತಿದ್ದ ಕಾಲದಲ್ಲಿ ಭಾರತೀಯರು ಸುಸಂಸ್ಕೃತ ನವನಾಗರಿಕ ಜೀವನ ನಡೆಸುತ್ತಿದ್ದರು. ಇದು ಸತ್ಯ ಸಂಗತಿ ಆದರೂ ನಮಗೆ ಈ ವಿಷಯದಲ್ಲಿ ಆಸಕ್ತಿಯಿಲ್ಲ.

ನಮ್ಮ ಸಂಸ್ಕೃತಿಯ ಅರಿವು ನಮಗಾಗಿಲ್ಲ. ಸಂಸ್ಕೃತಿ ಎಂದರೆ ಒಂದು ವಿಧದಿಂದ 'ಆತ್ಮ ದರ್ಶನ"ವೆಂದೂ ಹೇಳಬಹುದು. ವ್ಯಕ್ತಿ ಸಂಸ್ಕೃತಿ ಒರುವುದು ಹುಟ್ಟಿನಿಂದಲ್ಲ. ಸಂಸ್ಕಾರದಿಂದ ತಪಸ್ಸಿನಿಂದ.

ನಮಗೆ ಇಂದು ಸಂಸ್ಕೃತಿಯ ದರ್ಶನ, ಸತ್ಯದರ್ಶನ ಕನಸಿನ ಕಂತೆ. ಸಂಸ್ಕೃತಿಯ ಹಂಬಲ ವ್ಯಕ್ತಿ, ಸಂಸಾರ, ಸಮಾಜ ಸರಕಾರ ಗಳಿಸಿಲ್ಲ. ಹಾಗಾದರೆ ಸಂಸ್ಕೃತಿಯ ಪ್ರಸಾರ ಹೇಗಾಗಬೇಕು? ಅದರ ತಿರಿವು ಹೇಗಾಗಬೇಕು? ಪ್ರತಿ ವ್ಯಕ್ತಿಯ ಮನಸ್ಸಿನಲ್ಲಿಯೂ ಮೂಡಿ ಬೆಳೆಯಬೇಕು ಸಂಸ್ಕೃತಿಯ ಬೆಳಕು.

ಸಂಸ್ಕೃತಿಯ ರೂಪರೇಷೆ ಸರಳ, ಅಷ್ಟೇ ಮಧುರ ಅಷ್ಟೇ ಸೂಕ್ಷ್ಮ. ಒಂದು ಬಾರಿ ಮನ ಪಟಲದ ಮೇಲೆ ಸಂಸ್ಕೃತಿಯ ನೆರಳು ಬಿದ್ದರೆ ಅದೆಂದಿಗೂ ಮರೆಯಾಗಲಾರದು. ಸಂಸ್ಕೃತಿಯ ಹೊಳೆ ಮಾನವ ಸಮಾಜದ ಮಲಿನತೆಯನ್ನು ತೊಳೆಯುವ ಪಾವನ ಗಂಗೆ. ಈ ಜಲದಲ್ಲಿ ಪಾವಿತ್ರ್ಯವಿದೆ. ಆತ್ಮ ದರ್ಶನ, ಪರಿಂಗಿತ ಸಂಗ್ರಹಣ, ನಿಸ್ವಾರ್ಥ ಭಾವ, ಸರಳತೆ, ಸಮನ್ವಯ ದೃಷ್ಟಿ, ಸತ್ಯಾನ್ವೇಷಣೆ ಎಲ್ಲವೂ ಸಂಸ್ಕೃತಿಯ ಪ್ರವಾಹದಲ್ಲಿ ವಿಳೀನವಾಗಿವೆ.

ಅಂತರಾತ್ಮ ದರ್ಶನ ಸಂಸ್ಕೃತಿಯ ಮೊದಲ ಹೆಜ್ಜೆ ಎಂದು ಧಾರಾಳವಾಗಿ ಹೇಳಬಹುದು.

ಪಶ್ಚಿಮದ ನವನಾಗರಿಕತೆಯ ತುತ್ತ ತುದಿಯಲ್ಲಿರುವ ಶ್ರೀಮಂತ ರಾಷ್ಟ್ರಗಳ ಜನತೆ ಭಾರತೀಯರನ್ನು ಮೆಚ್ಚಿಕೊಂಡುದು ಅವರನ್ನು ಗೌರವಿಸಿದುದು ಬಡತನದ ರಾಷ್ಟ್ರದವರೆಂದಲ್ಲ. ಸ್ನೇಹಾಭಿಲಾಷಿಗಳೆಂದಷ್ಟೇ ಅಲ್ಲ; ಸುಸಂಸ್ಕೃತ ಜನಾಂಗವೆಂದು. ಭಾರತೀಯ ಸಂಸ್ಕೃತಿಯ ದರ್ಶನ ಅವರನ್ನು ಮರುಳು ಮಾಡಿದುದು ಆಶ್ಚರ್ಯ ಮಾತಲ್ಲ, ಪಶ್ಚಿಮದ ರಾಷ್ಟ್ರಗಳು ಕತ್ತೆತ್ತಿ ಭಾರತದ ಕಡೆಗೆ ನೋಡುತ್ತಿರುವುದು ನಮ್ಮ ಉನ್ನತ ಪರಂಪರೆಯ ಸಂಸ್ಕೃತಿಯ ಸತ್ ಶರ್ದನಕ್ಕಾಗಿ.

ಭಾರತದ ವೇದಾಂತ. ಸಂಸ್ಕೃತಿಗಳ ರಾಯಭಾರಿಗಳಾಗಿ ವಿಶ್ವವನ್ನೇ ಬೆರಗುಗೊಳಿಸಿದ ವಿವೇಕಾನಂದರ ಜೀವನ— ಹಾಗೂ ಸಾಧನೆಯ ಸ್ಮರಣೆ ಅಪ್ರಸ್ತುತವಲ್ಲ. ಮಹಾತ್ಮ ಗಾಂಧಿ ರಾಮಕೃಷ್ಣ, ಅರವಿಂದ, ನೆಹರು, ರಾಧಾಕೃಷ್ಣನ್ ಇವರ ಸಾಧನೆಯ ಪ್ರತಿಫಲ ಅಸಾಧಾರಣವಾದುದು.

ಭಾರತದ ಸಂಸ್ಕೃತಿಯ ಬೆಳಕು ವಿಶ್ವದ ಮೂಲೆ ಮೂಲೆಗಳಲ್ಲಿ ಬೆಳಗಿದೆ ಉಳಿದಿದೆ.

ನಮ್ಮದು ಸಂಸ್ಕೃತ ರಾಷ್ಟ್ರ. ಸಂಸ್ಕೃತಿಯ ಕೀರ್ತಿಯನ್ನು ದಶ ದಿಕ್ಕುಗಳಿಗೆ ಹರಡಿದ ರಾಷ್ಟ್ರ—ಎಂಬುದಷ್ಟೇ ಹೆಮ್ಮೆಯ ಸಂಗತಿ. ಇಂದು ನಿಜವಾಗಿಯೂ ನಮ್ಮ ಸಂಸ್ಕೃತಿಯನ್ನು ನಾವು ಉಳಿಸಿಕೊಂಡಿದ್ದೇವೆ? ನಮ್ಮಲ್ಲಿ ಉಳಿದಿದೆಯೋ? ಎಂಬ ಪ್ರಶ್ನೆಯನ್ನು ಹಾಕಿಕೊಂಡರೆ ಉತ್ತರವೇ ದೊರೆಯದು. ಸಹಜ.

ದಾಸ್ಯದಿಂದ ಮುಕ್ತರಾದೆವು. ಆದರೆ ನಮಗೆ ನಿಜವಾದ ಮಾನಸಿಕ ವಿಚಾರ ಸ್ವಾತಂತ್ರ್ಯ ದೊರಕಲಿಲ್ಲ. ದಾಸ್ಯದ ಚಿಹ್ನೆ ಹಾಗೇ ಉಳಿದಿದೆ. ಭಾರತೀಯರಿಗೆ ಸಂಪತ್ತು, ಜ್ಞಾನ, ವಿವೇಚನೆ, ಶಕ್ತಿ, ಸೌಲಭ್ಯಗಳೆಲ್ಲವೂ ಇವೆ. ಆದರೆ ಅವುಗಳನ್ನು ಬಳಸಿಕೊಂಡು ಬೆಳೆಯುವ ಭಾವನೆ ಇಲ್ಲ ಇದೇ ದೊಡ್ಡ ಕೊರತೆ.

ವ್ಯಕ್ತಿಯಿಂದ ರಾಷ್ಟ್ರದ ವರೆಗೆ ಎಲ್ಲಿಯೂ ನಮ್ಮನ್ನು ನಾವರಿತುಕೊಳ್ಳುವ ಪ್ರಯತ್ನ ನಡೆದಿಲ್ಲ. ದುರದೃಷ್ಟಕರ ಸಂಗತಿ. ಸ್ವಸ್ವರೂಪ ದರ್ಶನವಾಗಬೇಕು. ಶಕ್ತಿಯನ್ನು ಕಾಣಬೇಕು. ಬೆಳಕು ಮಾಡಬೇಕು. ಇದಕ್ಕೆ ವಿದ್ಯೆಯೊಂದೇ ಮುಖ್ಯ ಸಾಧನ

ಶಾಲೆ ಕಾಲೇಜುಗಳು ಇಂದು ಕಲಿಸುತ್ತಿರುವ ವಿದ್ಯೆ ಹೊಟ್ಟೆ ತುಂಬಿಸಿಕೊಳ್ಳಲು ಉದ್ಯೋಗಗಳನ್ನು ಪರಿಚಯ ಮಾಡಿಕೊಡುವ ವಿದ್ಯೆಗಳಾಗಿವೆಯೇ ಹೊರತು, ಧರ್ಮ ಸಂಸ್ಕೃತಿಗಳನ್ನು ಅರಿಯಲು ಅನುವು ಮಾಡಿಕೊಟ್ಟಿಲ್ಲ. ಜ್ಞಾನದ ಜ್ಯೋತಿ ಪ್ರಜ್ವಲಿಸಬೇಕು. ಜ್ಞಾನದ ಬೆಳಕಿನಲ್ಲಿ ವ್ಯಕ್ತಿ ಸುಸಂಸ್ಕೃತನೂ ಆಗಬಲ್ಲ ವಿಶ್ವಮಾನವನೂ ಆಗಬಲ್ಲ.

ಪಾಶ್ಚಾತ್ಯರು ಭಾರತೀಯರ ಮನ, ಸತ್ಯ ಸಂಸ್ಕೃತಿಗಳ ಅನ್ವೇಷಣೆ ನಡೆಸಿದ್ದಾರೆ. ಸಾಕಷ್ಟು ಫಲವನ್ನು ಪಡೆದಿದ್ದಾರೆ. ಇಂದಿನ ಭಾರತೀಯರಿಗೆ ಧರ್ಮ-ಸಂಸ್ಕೃತಿಗಳ ಸ್ವರೂಪದ ದರ್ಶನವನ್ನು ಅವರು ಮಾಡಿಕೊಡಬೇಕಾಗಿದೆ. ನಮ್ಮ ಶಕ್ತಿಯ ಅರಿವು ಬೇರೆಯವರಿಂದ ನಮಗಾಗಬೇಕಾಗಿದೆ. ವೇದ ವೇದಾಂತಗಳ ಸಾರಸ ಕೃತ್ಯದ ತಿರುಳನ್ನು ಪಶ್ಚಿಮದ ಪಂಡಿತರು ಮಾಡಿಕೊಡಬೇಕಾಯಿತು. ಭಾರತದ ಧರ್ಮ— ಸಂಸ್ಕೃತಿ ಕೃಪಣನ ಗಂಟಾಯಿತು. ನಮ್ಮ ಆಲಸಿಕೆಗೆ, ನಿಸ್ತೇಜತ್ವ ಇದಕ್ಕೂ ಹೆಚ್ಚಿನ ಉದಾಹರಣೆ ಬೇಕಿಲ್ಲ ಮ್ಯಾಕ್ಸ್ ಮುಲ್ಲರ್, ಫರ್ಗೂಸನ್ ಮ್ಯಾಕ್ಡೊನಾಲ್ಡ್ ಮೊದಲಾದ ಪಂಡಿತರ ಪ್ರಯತ್ನ ನಿಜಕ್ಕೂ ಅಭಿನಂದನೀಯ.

ನಮ್ಮ ಸಂಸ್ಕೃತಿಯನ್ನು ಪಾಶ್ಚಾತ್ಯರು ಕಲಿಯುತ್ತಿದ್ದಾರೆ. ನಾವು ಅವರ ಸಂಸ್ಕೃತಿಯನ್ನು ಕಲಿಯುತ್ತಿದ್ದೇವೆ; ಅನಗತ್ಯ ಹಾಗೂ ಅನವಶ್ಯಕವಾದುದನ್ನು ಮಾತ್ರ ಯಾವುದು ಬೇಕಾಗಿದೆಯೋ, ಯಾವ ಶಕ್ತಿ, ಜ್ಞಾನ, ಅನುಭವ ಅವಶ್ಯವಿದೆಯೋ ಅದು ನಮಗೆ ಕೈಗೂಡುತ್ತಿಲ್ಲ. ಸೂಟು ಬೂಟು, ಸುರಾಪಾನ, ಫ್ಯಾಷನ್‌ಗಳನ್ನು ಧಾರಾಳವಾಗಿ ಕಲಿಯುತ್ತಿದ್ದೇವೆ ಶೋಚನೀಯ.

ಭಾರತದಲ್ಲಿ ಸ್ವಾತಂತ್ರ್ಯಗಳಿಸಿದ ನಂತರ ಸ್ವಾರ್ಥ ಸಾಧಕರ ಸಂಖ್ಯೆಯೂ ಬೆಳೆಯಿತು. ಅದಕ್ಕೆ ತಕ್ಕಂತೆ ಬಡ ಭಾರತದ ಅಜ್ಞಾನಿಜನಗಳೂ ಮರುಳಾದರು. ರಾಜಕಾರಣದ ಉರೆಯಲ್ಲಿ, ಸೇವೆಯ ಹೆಸರಿನಲ್ಲಿ ರಾಷ್ಟ್ರವನ್ನೇ ಮಾರಲು ಹಿಂದೂ ಮುಂದೂ ನೋಡದಂತಹ ದೇಶಭಕ್ತರು ಬೆಳೆದರು.

ಸಂಸ್ಕೃತಿಯ ವಿಕಾಸವಾಗಲಿಲ್ಲ. ವಿನಾಶವಾಯಿತು. ಸಾಕಷ್ಟು ಸಂಸ್ಕೃತಿ ಯಾರಲ್ಲಿದೆ? ಇದೆಯೋ? ಪುಣ್ಯಕ್ಕೆ ಈ ಬಗ್ಗೆ ಗಣತಿ ಮಾಡಿಲ್ಲ.

ನಮ್ಮ ಸಂಸ್ಕೃತಿಯ ಅರಿವು ನಮಗಾಗಬೇಕಾದುದು ಅವಶ್ಯಕ. ಪಾಶ್ಚಾತ್ಯರ ಬೆಡಗಿನ 'ಫ್ಯಾಷನ್" ನಮಗೆ ಯಾವ ಬಗೆಯಲ್ಲಿಯೂ ಅನುವು ಮಾಡಿ ಕೊಡಲಾರದು. ಭಾರತೀಯರ ಭಾರತದ ಉದ್ಧಾರ ಭಾರತೀಯರಿಂದ ಭಾರತದ ಧರ್ಮ, ಸಂಸ್ಕೃತಿಗಳಿಂದಲೇ ವಿನಾ ಅಮೇರಿಕಾದ ಡಾಲರಿನಿಂದಾಗಲಿ, ರಷ್ಯಾದ ಕಮ್ಯೂನಿಜಂನಿಂದಾಗಲಿ ಆಗಲಾರದು.

ನಮ್ಮ ಧರ್ಮ, ಸಂಸ್ಕೃತಿ, ಸತ್ಯದರ್ಶನದ ಚಿಂತನೆ ನಮ್ಮಲ್ಲಿ ಮೂಡಬಾರದೇಕೆ?

ಭಾಷಣ ಸ್ಪರ್ಧೆ

ದಕ್ಷಿಣ ಕನ್ನಡ ಜಿಲ್ಲೆಯ ಹ್ಯಾಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳಲ್ಲಿ ಗಾಂಧೀ ವಿಚಾರಗಳ ಅಧ್ಯಯನದ ಕುರಿತು ಅಭಿರುಚಿ ಹುಟ್ಟಿಸಲು ಹಾಗೂ ಪ್ರಕೃತ ಗಾಂಧೀಯ ಕುರಿತಾದ ಅವರ ವಾಸ್ತವಿಕ ತಿಳುವಳಿಕೆಯ ಸಮೀಕ್ಷೆಗಾಗಿ ಮಂಗಳೂರಿನ ಗಾಂಧೀ ತತ್ತ್ವ ಪ್ರಚಾರ ಕೇಂದ್ರವು ಭಾಷಣ ಸ್ಪರ್ಧೆಯೊಂದು ಕಳೆದ ಫೆಬ್ರವರಿ ತಿಂಗಳಲ್ಲಿ ಏರ್ಪಡಿಸಿತ್ತು.

ತಾ. 28.2.65ರಂದು ಪೂರ್ವಾಹ್ನ ಗಾಂಧೀ ತತ್ತ್ವ ಪ್ರಚಾರ ಕೇಂದ್ರದ ಸಹಕಾರದಲ್ಲಿ ನಡೆದ ಈ ಸ್ಪರ್ಧೆಯಲ್ಲಿ ಹ್ಯಾಸ್ಕೂಲು ವಿದ್ಯಾರ್ಥಿಗಳಲ್ಲಿ ಪ್ರಥಮ ಸ್ಥಾನವನ್ನು ಉಡುಪಿ ಕ್ರಿಶ್ಚಿಯನ್ ಹ್ಯಾಸ್ಕೂಲಿನ ವಿದ್ಯಾರ್ಥಿ ಪಿ. ಮಾಧವರಾಜ ಆಚಾರ್ಯರೂ ಎರಡನೇ ಸ್ಥಾನವನ್ನು ಬೋರ್ಡ್ ಹ್ಯಾಸ್ಕೂಲು ಕೋಟೇಶ್ವರದ ವಿದ್ಯಾರ್ಥಿ ವೇದವ್ಯಾಸ ಉಡುಪ ಮತ್ತು ಜೈನ್ ಹ್ಯಾಸ್ಕೂಲು ಮೂಡಬಿದ್ರಿಯ ವಿದ್ಯಾರ್ಥಿ ಇಗ್ನೇಷಿಯಸ್ ಇವರೂ ಮೂರನೇ ಸ್ಥಾನವನ್ನು ಜೈನ್ ಹ್ಯಾಸ್ಕೂಲ್ ಮೂಡಬಿದ್ರಿಯ ವಿದ್ಯಾರ್ಥಿನಿ ಕುಮಾರಿ ಪ್ರೇಮಾ ಇವರೂ ಕಾಲೇಜು ವಿದ್ಯಾರ್ಥಿಗಳ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಕಾರ್ಕಳ ಶ್ರೀ ಭುವನೇಂದ್ರ ಕಾಲೇಜಿನ ವಿದ್ಯಾರ್ಥಿ ಶ್ರೀ ಪ್ರಭಾಕರ ಜೋಶಿಯವರೂ ಎರಡನೇ ಸ್ಥಾನವನ್ನು ಉಡುಪಿಯ ಎಸ್. ಎಂ. ಎಸ್. ಪಿ. ಸಂಸ್ಕೃತ ಕಾಲೇಜಿನ ವಿದ್ಯಾರ್ಥಿ ವಾಸುದೇವ ಶಾಸ್ತ್ರಿಯವರೂ ಮೂರನೇ ಸ್ಥಾನವನ್ನು ಕಾರ್ಕಳ ಶ್ರೀ ಭುವನೇಂದ್ರ ಕಾಲೇಜಿನ ವಿದ್ಯಾರ್ಥಿ ವಿಶ್ವನಾಥ ಆರ್. ನಾಯಕರೂ ಪಡೆದಿರುವರು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ.

R. E. P. 503/1964

ಉಡ್ಪಿ ಕೋರ್ಟ್ S. C. No 371/1960.

ರಾಮಚಂದ್ರ ಕೆದ್ಲಾಯ ವಾದಿ-ಅರ್ಜಿದಾರ

ಮಿಸಿಸ್ ಸ್ಟಿಫನ್ ಎಫ್. ಬಾಯಿ

ಪ್ರತಿವಾದಿಳು-ಎದ್ರಿಳು.

ಉಡುಪಿ ತಾಲೂಕು ಬಾಳ್ಕುದ್ರು ಗ್ರಾಮದ ಕಿಣಿಯರ ಕುದ್ರಲ್ಲಿರುವ ಇಗ್ನೇಶಿಯಸ್ ಗ್ರಿಗೋರಿ ಲುವಿಸರ ವಿಧವೆ ಮಿಸಿಸ್ ಸ್ಟಿಫನ್ ಎಫ್. ಬಾಯಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ಸದ್ರಿ ದಾವೆಯ ವಾದಿಯು ಪ್ರತಿವಾದಿಯ ಮೇಲೆ ಉಡುಪಿ ಡಿ. ಮು. ಕೋರ್ಟಿನಲ್ಲಿ ಮೇಲ್ಕಂಡ S.C No 371/1960ನೇಗೆ ಡಿಕ್ರಿ ಪಡೆದು ಸದ್ರಿ ಡಿಕ್ರಿಯ ಮೇಲೆ ಈ ಕೋರ್ಟಿನಲ್ಲಿ ಮೇಲಿನ ಅಮಲಿಜಾರಿ ನಡಿಸಿ ಅತನ ಜಾಬ್ತಾ ಸ್ಥಿರ ಆಸ್ತಿ ಜಪ್ತಿ ಮಾಡಿಸಿ ಯೇಲಂ ಯಿಸ್ತಿಹಾರು ದಾಖಲು ಮಾಡಿ ಯೇಲಂ ಯಿಸ್ತಿಹಾರಿನ ಶರ್ತಗಳು ನಿರ್ಣಯಿಸುವ ಕುರಿತು ನೋಟೀಸಿನ ಕೆಲಸವು ತಾ. 22.4.1965ಕ್ಕೆ ಯಿಡೋಣಾಗಿಯುದೆ. ಆದುದರಿಂದ ಸದ್ರಿ ತಾರೀಕಿನ ದಿವಸ ಪ್ರತಿವಾದಿಯು ಸ್ವತಹಾ ಆಗಲೀ ಯಾ ವಕೀಲರ ಮೂಲಕವಾಗಲೀ ಹಾಜರಾಗದಿದ್ದ ಪಕ್ಷದಲ್ಲಿ ಅತನ ಗೈರ ಹಾಜರಿಯಲ್ಲಿ ತೀರ್ಮಾನಿಸಲಾಗುವದೆಂತ ಈ ಮೂಲಕ ತಿಳಿಸಲಾಗಿರುತ್ತದೆ.

G. Ramakrishna Rao,
B. A., LL. B.,
Advocate.

ತಾರೀಕು 6-4-1965.
ಕುಂದಾಪುರ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: **ಸುದರ್ಶನ ಟೈಲ್ ವರ್ಕ್ಸ್**, ಬೋಳಾರ, ಮಂಗಳೂರು-೧

ತೃಣಮಪಿ ನ ಚಲತಿ ತೇನ ವಿನಾ . . .

(ಎರಡನೇ ಪುಟದಿಂದ)

ದ್ರೆ, ಆದರೆ ಅವನ್ಯಾಕೆ ಹೋಗಬೇಕು? ಅವರು ಅಮೆರಿಕಾಕ್ಕೆ ಹೋದರೆ ತನಗೇನು? ಅದೂ ಅಲ್ದೆ ಇಷ್ಟತ್ತು ಬೆಳಿಗ್ಗೆ ಎಲ್ಲಾ ಹುಡುಗಿಯರ ಮುಂದೆ 'ಉಷಾ ದೇವಿಯರ ಮುಖ ನೋಡಿದ್ರೆ ಇವಳ್ದು ಹೋಲಿ ಅಂತ ಗೊತ್ತಾಗುತ್ತೆ! ಅಂತೂ ಈ ಈಶ್ವರನ್ನ ಮನ್ಮಥನ ಬಾಣದಿಂದ ದೇವರೇ ಕಾಪಾಡಬೇಕು' ಅಂತ ಅನ್ನೋದೇ? ಎಷ್ಟು ಸೊಕ್ಕು? ಅವರು ಲೆಕ್ಚರರ್ ಆಗಿದ್ದರೆ ಹಾಗೆಲ್ಲಾ ಅನ್ನೋಕೇನು ಅಧಿಕಾರ ಅವರಿಗೆ? (ಅದ್ಯಾಕೆ ಅವನನ್ನ "ಅವರು" ಅಂತ ಯೋಚಿಸ್ಬೇಕು.... ಹೋಗಲಿ ಗುರು ತಾನೇ! 'ಅವನು' ಅನ್ನೋಕೆ ಒಪ್ಪೋಲ್ಲ ಮನಸ್ಸು.)

ಅವರೇನೋ ನಮ್ಮೂರಿನಲ್ಲೇ ಮನೆ ಮಾಡಿದ್ದಾರಂತೆ. ನನ್ನ ತಂದೆಗೂ ಅವರಿಗೂ ಗುರುತಾಗಿದೆಯಂತೆ, ಅಮೆರಿಕಾಕ್ಕೆ ಹೋಗುವ ಮೊದಲು ಮದುವೆಯೂ ಆಗಿಬಿಡುತ್ತೆ ಅಂತ ವೀಣಾ ಹೇಳ್ತಿದ್ಳು...... ಏನ್ಬೇಕಾದ್ರೂ ಆಗಲಿ, ಅಮೆರಿಕಾಕ್ಕಾದರೂ ಹೋಗಲಿ, ಅಂಡಮಾನಕ್ಕಾದರೂ ಹೋಗಲಿ, ಅದರಿಂದ ನಂಗೇನು? ನಾನೇನು ಅವರನ್ನ Love ಮಾಡ್ತೀನೆಯೇ? (ಅದಲಿಕ್ಕೆ!) ಎನ್ನಿಸಿತು. "ಇಲ್ಲವೇ? ಹಾಗಾದರೆ ಅವರ ಹೆಸರು ಕೇಳಿದ ಕೂಡ್ಲೆ ನನ್ನೆದೆ ಯಾಕೆ ಬಡ್ಕೊಳ್ಳುತ್ತೆ? ನಿನ್ನ ನಿರ್ಧಾರಗಳ— ಪ್ರತಿಜ್ಞೆಗಳ ಕೋಟೆಯ ಗೋಡೆಗಳನ್ನ ಒಡೆದು ಒಳಗಿರುವ ನಿಜ ಸ್ವರೂಪವನ್ನು ತೋರಿಸಲಿಕ್ಕೆ ಹೊರಟಿದೆಯಲ್ಲಾ ಆ ಹೆಸರು! ಅದ್ಯಾಕೆ? ಎಲ್ಲರೂ 'Bore' ಎನ್ನುವ ಅವರ ಕ್ಲಾಸುಗಳಲ್ಲಿ ಬೆಳ್ಳಿ ಬೊಂಬೆಯ ಹಾಗೆ ಬಿಟ್ಟ ಕಣ್ಣು ಬಿಟ್ಟು ಅವರನ್ನೇ ನೋಡ್ತಾ ಇರ್ತೀಯಲ್ಲ. ಅದ್ಯಾಕೆ?" — ಮನಸ್ಸಿನ ಮೂಲೆಯೊಂದು ಪ್ರಶ್ನೆ ಕೇಳಿತು. "ನಂಗೇನು ಗೊತ್ತು ಅದೆಲ್ಲಾ. ನಾನಂತೂ ಅವರನ್ನ ಪ್ರೀತಿಸಿಲ್ಲ. ಪ್ರೀತಿಸೋಲ್ಲ"—"ಅಯ್ಯೋ ಹುಚ್ಚಿ. ಇದಕ್ಕೆ ಕಣೇ Love ಅನ್ನೋದು. ಆ ಕವಿಗಳ 'ಪ್ರೀತಿ' ಅಂತಾರಲ್ಲಾ ಅದೆ!"

ನಂಗಂತೂ ಗೊತ್ತಿಲ್ಲಪ್ಪಾ. ಖಂಡಿತ ನಾನೇನೂ ಅವರನ್ನ ಪ್ರೀತಿಸೊಲ್ಲ. ಅವರಲ್ಲೇನು ಅಂದವೇ ಚಂದವೇ ತನ್ನಂಥಾ ರತಿ ಮೋಹಿಸೋಕೆ. ಅವರೂ ತನ್ನಂಥಾ ಕುಂಟಿಯನ್ನ ಯಾಕೆ ಮದುವೆಯಾದಾರು"...ಆದರೆ...ಆದರೆ....ಎಂಟು ವರ್ಷದ ಹಿಂದೆ ಅದೇಕೆ ಅವರೇ ನನ್ನನ್ನು ಕೇಳಲು ಬಂದಿದ್ದರು? ಏನೋ.. ಈ ಗಂಡಸರೇ ಹಾಗೆ ಮಹಾ ಒಗಟು...ಅಂತೂ ಎಲ್ಲರೂ ಮಹಾ ಠಕ್ಕರು....ಅಪ್ಪನೂ ಹಾಗೇ ಅಲ್ಲವೇ ಹೇಳ್ತಿದ್ದದ್ದು.

ಹೌದು, ಉಷಾಳ ತಂದೆ ಮಹಾ ಮಡಿವಂತರು. ತಾಯಿ ಇಲ್ಲದ ಉಷಾ ನಾಲ್ಕು ವರ್ಷದ ಮಗುವಾಗಿದ್ದಾಗ 'ಪೋಲಿಯೋ' ರೋಗಕ್ಕೆ ತನ್ನ ಕಾಲನ್ನು ಬಲಿಕೊಟ್ಟ ಮೇಲಂತೂ ಮಗಳು ಎಂದರೆ ಪ್ರಾಣ ಅವರಿಗೆ. ಯಾವಾಗಲೂ ಭಾರತ - ಭಾಗವತಗಳ ಕಥೆಗಳನ್ನೇ ಹೇಳಿ ಮಗಳ ಮನಸ್ಸು ಬೇರೆ ದಾರಿಗೆ ಹೋಗದಂತೆ ಯತ್ನಿಸುತ್ತಿದ್ದರು. ಬೇರೆ ಗಂಡಸರು ಅಂದರೆ ಉಷಾ ನಡುಗಬೇಕು. ಹಾಗೆ ಆಕೆಯ ಬುದ್ಧಿ ಬೆಳೆದಿತ್ತು. ಇಡೀ ಪುರುಷ ಸಮಾಜದ ಮೇಲೆಯೇ ಅವರಿಗೆ ರೊಚ್ಚಿದ್ದಿತು ಅಂತ ಕಾಣುತ್ತೆ. ಆದರೂ ಅನೇಕ ವೇಳೆ ಜಗಳ ಮಾಡಿ ಮನೆಬಿಟ್ಟು ಹೋದ ತನ್ನ ಭಾವ ಮೈದುನ ಮತ್ತು ಉಷಾಳ ಭಾವಿಪತಿಯಾಗಬೇಕಾಗಿದ್ದ ಅವರ ಮಗನ ವಿಷಯ ಹೇಳುತ್ತಿದ್ದರು ..ಎಲ್ಲವೂ ಒಗಟಾಗಿತ್ತು ಉಷಾಳಿಗೆ.

ತನ್ನ ಓರಗೆಯ ಹುಡುಗಿಯರ ಜೂಟಾಟದಿಂದ ಉಷಾ ಹೊರಗೆ, ಕಾಲು ಕಳೆದುಕೊಂಡ ಉಷಾಳಿಗೆ 'ಕಲ್ಲು ಮಣ್ಣು' ಆಟಕ್ಕೆ ಎಲ್ಲಿದೆ ಪ್ರವೇಶ? ಅಂತೂ ಒಂಟಿಯಾಗಿಯೇ ಬೆಳೆದಳು. ಅವಳ ಒಂಟಿ ಜೀವನದಲ್ಲಿ ಮತ್ತೊಂದು ಜೀವ ಪ್ರವೇಶಿಸಿತು. ಅದೇ 'ಶಾಲಿ ಒಂದು ಪುಟ್ಟ ನಾಯಿ ಮರಿ.'

ಶಾಲಿಗೆ ತಿಂಡಿ ಕೊಡುವುದು—ಅದರೊಟ್ಟಿಗೇ ಆಡುವುದು. ಬೇಸರವಾದಾಗ ನೀತಿ ಕಥೆಗಳನ್ನು ಓದುವುದು...ಇಷ್ಟೇ ಅವಳ ದಿನಚರಿ. ಸ್ಕೂಲಿನಲ್ಲಿಯೂ ಅಷ್ಟೆ. ಎಲ್ಲಾ ಚಟುವಟಿಕೆಗಳಿಂದಲೂ ಉಷಾ ದೂರ. ಹುಡುಗಿಯರ ಹತ್ತಿರವೇ ಮಾತನಾಡದವಳು ಹುಡುಗರ ಹತ್ತಿರ ಮಾತಾಡಿಯಾಳೇ! ಅದರಲ್ಲೂ ಆ ತುಂಟ ರಾಮು ತಾನು ನಡೆಯುವ ಹಾಗೆ ನಡೆಯುತ್ತಿದ್ದುದನ್ನು ನೋಡಿದ ದಿನ ರಾತ್ರಿಯೆಲ್ಲಾ ಶಾಲಿಯನ್ನು ತಬ್ಬಿಕೊಂಡು ಅತ್ತಿದ್ದಳು. ಉಷಾಳಿಗೂ ನಿದ್ರೆ ಇಲ್ಲ. ಶಾಲಿಗೂ ನಿದ್ರೆ ಇಲ್ಲ. ಆಗಲೇ ಅನ್ನಿಸಿತ್ತು— ಗಂಡಸರೆಲ್ಲಾ ಕೆಟ್ಟವರು, ಅವರ ಸಹವಾಸ ಮಹಾ ಪಾಪ ಅಂತ. ನಾನಂತೂ ಯಾವ ಗಂಡಸನ್ನೂ ಮದುವೆಯಾಗೋಲ್ಲ—ಅಂತ ತೀರ್ಮಾನಿಸಿಕೊಂಡು ಬಿಟ್ಟಿದ್ದಳು. ಅವಳಿಗಿದ್ದ ಊನ ಅವಳಿಗೆ ಸಹಾಯಕವಾಗುತ್ತಿತ್ತು. ಕುಂಟಿಯನ್ನ ಯಾರು ಮದುವೆಯಾಗ್ತಾರೆ? ಆದ್ದರಿಂದ ತಾನು ದೇಶ ಸೇವೆ ಮಾಡುತ್ತೇನೆ. ಈ ಗಂಡಸರ ಸಹವಾಸವೇ ಬೇಡ ಎಂದುಕೊಂಡು ಮೆಡಿಕಲ್ ಕಾಲೇಜ್ ಸೇರಿದ್ದಳು.

ಆದರೆ ಆಕೆಯ ಕನಸಿನಲ್ಲಿನ ಆ ಮಹಾ ಮೆಡಿಕಲ್ ಕಾಲೇಜೇ ಬೇರೆ. ಇಲ್ಲಿ ಆಕೆ ನೋಡಿದ್ದೇ ಬೇರೆ! ಸಂಸ್ಕೃತಿಯ ಗುಡಿ—ಚೆನ್ನಾಗಿ ಕಲಿಯಬೇಕೆಂದು ಬರುವವರು ಎಷ್ಟು ಜನ? ದಯೆಯ ಮೂರ್ತಿಯಾಗಿರಬೇಕಂತೆ ಡಾಕ್ಟರು-ನರ್ಸುಗಳು! ಆದರೆ ಕೆಲವರ ಹೃದಯದ ಮೂಲೆ ಮೂಲೆಗೆ ಟಾರ್ಜ್‌ಲೈಟ್ ಬಿಟ್ಟು ನೋಡಿದರೂ ದಯೆಯ ನೆರಳೂ ಸಿಗಲಿಲ್ಲ.

ಗಂಡಸರ ಹತ್ತಿರ ಮಾತನಾಡುವುದೂ ಪಾಪ ಎಂಬ ಮನೋಭಾವವಾಗಿತ್ತು ಉಷಾಳದ್ದು. ಆದರೆ ಇಲ್ಲಿ ಎಲ್ಲರೂ ನಗುನಗುತ್ತಾ ಪಟ್ಟಾಂಗ ಹೊಡೆಯುವುದನ್ನು ನೋಡಿ ಮೊದಮೊದಲು ನಂಬಲೂ ಆಗಲಿಲ್ಲ ಅವಳಿಗೆ. ಅದರಲ್ಲೂ consion ಅಂತ ಹೇಳಿಕೊಂಡು ಲಲ್ಲೆ ಹೊಡೆಯುವ ಜೋಡಿಯನ್ನು ನೋಡಿದರಂತೂ ಮೈ ಉರಿಯುತ್ತಿತ್ತು.

ಅದೆಲ್ಲಾ ಮೊದಮೊದಲು. ಈಗ— ಇತ್ತೀಚೆಗೆ ಅದೆಲ್ಲಾ ತಪ್ಪಲ್ಲ ಎಂದು ಎಂದು ಬಾಯಿ ಬಿಟ್ಟು ಹೇಳದಿದ್ದರೂ ಅದು "ಸಹಜ" ಎಂದು ಮನ ಒಪ್ಪಿಕೊಂಡಿತ್ತು. ರೂಪಾ ತನ್ನ Class mate ಮೋಹನ್ ರಾವ್‌ನ್ನು ಪ್ರೀತಿಸುವ ವಿಷಯ ತಿಳಿದಾಗ Best of Luck' ಎಂದು ಹೇಳ ಬೇಕು ಅಂತನಿಸಿದ್ದರೂ ಹೇಳಿರಲಿಲ್ಲ, ಮನಸ್ಸು ರೂಪಾಳ ನಿರ್ಧಾರದ ಬಗ್ಗೆ ಒಪ್ಪಿಗೆ ಕೊಟ್ಟಿದ್ದರೂ ನಾಲಿಗೆ ಹಿಂಜರಿಯುತಿತ್ತು. "ಅವಳು ಬೇಕಾದರೆ ಪ್ರೀತಿಸಲಿ ನನಗೇನು? ನಾನು ಮಾತ್ರ ಯಾರ ಪ್ರೀತಿಯ ಬಲೆಗೂ ಬೀಳದಿದ್ದರೆ ಸರಿ, ಅಷ್ಟೆ ತಾನೆ! ಯಾರ LOVE ಕೂಡಾ ಇಲ್ಲದೆ ನಾನು ಬದುಕ ಬಲ್ಲೆ, ನೋಡ್ತಾ ಇರಿ" ಎಂದು ತನ್ನ ಸ್ನೇಹಿತೆಯರ ಮುಂದೆ ಕೊಚ್ಚಿಕೊಂಡಿದ್ದರೂ ಮನಸ್ಸಿನ ಮುಂದೆ ಭೂತಾಕಾರವಾಗಿ ಉಳಿದಿತ್ತು ಪ್ರಶ್ನೆ—"ಸಾಧ್ಯವೇ" ಪ್ರಪಂಚದಲ್ಲಿ ಅದರಿಂದ ಮುಕ್ತರಾದವರು ಯಾರು? ಬಹುಶಃ ಮಹಾ ಯೋಗಿಗಳಿರಬೇಕು ಅಷ್ಟೆ. ಆದರಲ್ಲೂ ಕೆಲವು ಯೋಗಿಗಳು ಭೋಗಿಗಳಾಗುತ್ತಿಲ್ಲವೇ?

ಉಷಾಳಿಗೆ ತನ್ನ ತಂದೆಯ ಸಂಗತಿ ತಿಳಿಸಿದಾಗ ಆಶ್ಚರ್ಯವಾಗಿತ್ತು. ಅಷ್ಟೊಂದು ಮಡಿವಂತರಿಂದ ತನ್ನ ತಂದೆ ಮೊದಲು ಹೇಗಿದ್ದರು! ಕೆಲಸದ ರಂಗಮ್ಮ ಮೊನ್ನೆ ಮೊನ್ನೆ ಯಾರೊಡನೆಯೂ ಹೇಳ್ತಿರಲಿಲ್ಲವೇ! ಅವರು ಮೊದಲು ದೊಡ್ಡ ವ್ಯಭಿಚಾರಿಯಾಗಿದ್ದರಂತೆ. ಅಮ್ಮನನ್ನು ಕಡೆಗಣಿಸಿ ಯಾರದ್ದೋ ಮೋಹಪಾಶಕ್ಕೆ ಸಿಲುಕಿ ಅಮ್ಮನ ಬಾಳನ್ನೇ ಹಾಳುಮಾಡಿದ್ದರಂತೆ. ಅಮ್ಮ ಸತ್ತ ನಂತರ ಬುದ್ಧಿ ಬಂತಂತೆ! ಅದಕ್ಕಾಗಿಯೇ ಈಗ ತನ್ನ ಮನದ ಓಟದ ಹಾದಿಯುದ್ದಕ್ಕೂ ಕಬ್ಬಿಣದ ಬೇಲಿಯನ್ನು ಹಾಕುತ್ತಿರುವುದು, ಆ ದೇವರ ಕೃಪೆ ಇಲ್ಲದೆ ಒಂದು ಹುಲ್ಲು ಕಡ್ಡಿಯೂ ಅಲ್ಲಾಡದು ಮಗೂ ಎಂದು ಆಗಾಗ್ಗೆ ಹೇಳುತ್ತಿರುತ್ತಾರಲ್ಲಾ! ಅವರು ಎಂಥೆಂಥಾ ಜನರಿದ್ದಾರೆ! ಥೂ ಈ ಸಂಸಾರದಲ್ಲಿ ಏನು ಸುಖವಿದೆ? ಇದು ಸಂಸಾರವಲ್ಲಪ್ಪ ನರಕ—ಮಹಾ ನರಕ. ಆದರೆ ಈ ನರಕದಲ್ಲಿ ಮುಳುಗಿದವರೇ ಸುಖಿ ಏದೆ ಅಂತಂದ್ರಲ್ಲಾ ಪ್ರೊ. ರಾವ್ "ಮಗೂ ಯಾವುದು ನರಕ, ಯಾವುದು ಸ್ವರ್ಗ! ಈ ಜೀವನದಲ್ಲಿ ನಡೆಯಲೇ ಬೇಕಾದ ಕೆಲವು ಕರ್ಮಗಳಿವೆ. ಅದರಂತೆ ನಾವು ನಡೀಲೇ ಬೇಕು. ಪ್ರಕೃತಿ ಸಹಜವಾದ ಭಾವನೆಗಳನ್ನು ಬಲವಂತವಾಗಿ ಹತ್ತಿಕ್ಕಿದರೆ ಅದು ಮಹಾ ಅಪಾಯ. ಆ ಭಾವನೆಗಳ ಉಪಯೋಗವನ್ನು ಸರಿಯಾಗಿ ಮಾಡಿಕೊಳ್ಳಲಿ ಅಂತಾನೇ ಷೋದಕ ಕರ್ಮಗಳು ಅಂತ ಹಿರಿಯರು ಮಾಡಿರೋದು. ಯಾರೂ ಪೂರ್ಣವಾಗಿ ಶುದ್ಧನಾಗಿಲ್ಲ. ಅದು ಸಾಧ್ಯವೂ ಇಲ್ಲ. ಅದಕ್ಕೆ ನಾನು ಹೇಳೋದು ನಿನ್ನ ಕಾಮನೆಗಳನ್ನು ಪರಿಶುದ್ಧತೆಯ ವಸ್ತ್ರ ಮುಚ್ಚಿ ಮರೆ ಮಾಡಬೇಡ. ಪರಿಶುದ್ಧ ಎಂದು ಹೇಳಿ ಆತ್ಮವಂಚನೆ ಮಾಡಿಕೊಳ್ಳುವ ಯೋಗಿಗಿಂತ ಜಗದ ಅರ್ಥವನ್ನು ತಿಳಿದು ಸುಖ ದುಃಖಗಳನ್ನು ಅನುಭವಿಸಿ ಪ್ರಪಂಚದ ಜಂಜಾಟದಲ್ಲಿ ಮುಳುಗಿ ಕಡೆಗೆ ದೇವರಿಗೆ ಶರಣಾಗುವ ಭೋಗಿಯೇ ಲೇಸು. ಅವನನ್ನು ಕಂಡರೆ ದೇವರಿಗೆ ಹೆಚ್ಚು ಪ್ರೀತಿ. ಆಟವಾಡಿಕೊಂಡು ಮೈಯಲ್ಲಿ ಮಣ್ಣಾಗಿ ಬರುವ ಕಂದನನ್ನು ಆಲಂಗಿಸಲು ತಾಯಿಗೆಷ್ಟು ಆನಂದ—ಅಲ್ಲವೇ ನಮ್ಮ?"

ಅಂತೂ ಮಾತಿನ ಕಡೆಗೋಲು ಮನಸ್ಸನ್ನು ಆಲ್ಲೋಲ ಕಲ್ಲೋಲ ಮಾಡಿತ್ತು. ಆದರೂ ಮನಸ್ಸು ಸೋಲಲು ಒಪ್ಪಲಿಲ್ಲ.

(ಹದಿನೈದನೇ ಪುಟ ನೋಡಿರಿ)



ಶ್ರೀ ಕೆ.ಕೆ. ಶೆಟ್ಟಿ, ಎಂ.ಎಲ್.ಸಿ.ಯವರ ಸರ್ವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಇದು ನಿಮಗೂ ಗೊತ್ತಿರಲಿ

ಚಿಪ್ಪು ಮೀನು ಕೋತಿಯ ಆಹಾರವಾಗಿತ್ತು

ಮನುಷ್ಯನಿಗೆ ಸಾಗರವು ನೀಡುತ್ತಿರುವ ಆಹಾರ ವಸ್ತುಗಳಲ್ಲಿ ಚಿಪ್ಪು ಮೀನು ಸಹ ಒಂದು. ಸತ್ವಪೂರ್ಣವೂ ಹೆಚ್ಚಿನ ರುಚಿಯಿಂದಲೂ ಕೂಡಿದ ಈ ಮೀನನ್ನು ಬೇಯಿಸದೆಯೋ, ಹುರಿಯದೆಯೋ ತಿನ್ನಬಹುದು. ಇದನ್ನು ಜೀರ್ಣ ಮಾಡಿಕೊಳ್ಳಲು ಕಷ್ಟವಿಲ್ಲ. ಇಡೀ ಜಗತ್ತಿನಲ್ಲಿ, ಹಾಲೆಂಡಿನಲ್ಲಿ ಉತ್ಪತ್ತಿಯಾಗುವಷ್ಟು ಚಿಪ್ಪು ಮೀನುಗಳು ಬೇರೆಲ್ಲೂ ಆಗುವುದಿಲ್ಲ.

ತುಂಬಾ ರುಚಿ, ತುಂಬಾ ಸತ್ವದಿಂದ ಕೂಡಿದುದು ಎಂದು ಹೆಸರುವಾಸಿಯಾಗಿರುವ ಚಿಪ್ಪು ಮೀನು ಅಷ್ಟೇ ಬೇಗನೆ ಜೀರ್ಣವೂ ಆಗುವುದರಿಂದ ಪ್ರಸಿದ್ಧಿಯಾಗಿದೆ. ಇವುಗಳ ಪ್ರಸಿದ್ಧಿಗೆ ಮತ್ತೊಂದು ಮುಖ್ಯ ಕಾರಣ, ಇವರ ಲಿಂಗ ಪರಿವರ್ತನೆ. ಋತುಕಾಲದಲ್ಲಿ ಈ ಆಯಿಸ್ಟರ್ ಮೀನು ಗಂಡು ಹೆಣ್ಣಾಗುವುದು; ಹೆಣ್ಣು ಗಂಡಾಗುವುದು. ಕೆಲವು ಸಾರಿ, ಒಂದೇ ಋತುವಿನಲ್ಲಿ ಒಂದು ಹೆಣ್ಣು ಗಂಡಾಗಿ, ಮತ್ತೆ ಹೆಣ್ಣಾಗಿ ಪರಿವರ್ತನೆಗೊಳ್ಳುವುದೂ ಉಂಟು. ಒಂದು ಹೆಣ್ಣು ಆಯಿಸ್ಟರ್—ತಾತ್ಕಾಲಿಕ ಹೆಣ್ಣು ಎಂದು ಕರೆಯುವುದೇ ಸೂಕ್ತವಾಗಿದೆ. ಅದು ಜೀವಿತ ಕಾಲದಲ್ಲಿ ಎಂಟು, ಒಂಭತ್ತು ಬಾರಿ ತತ್ತಿಗಳನ್ನಿಕ್ಕುತ್ತದೆ. ಅವುಗಳ ಸಂಖ್ಯೆ ಎಷ್ಟು ಗೊತ್ತೇ? ಸುಮಾರು ೮೦ ಲಕ್ಷ! ಗಂಡು ಮೀನಂತೂ ಕೋಟ್ಯಂತರ ಬೀಜಾಣುಗಳನ್ನು ಉತ್ಪತ್ತಿ ಮಾಡುತ್ತದೆ.

ಸುಮಾರು ೩೦ ಕೋಟಿ ವರ್ಷಗಳ ಹಿಂದೆ, ಚಿಪ್ಪು ಮೀನು ಕೇವಲ ಕೋತಿಗಳ ಆಹಾರವಾಗಿತ್ತು. ಆಗ ಅದು ಮನುಷ್ಯನು ಅತಿ ಪ್ರೀತಿಯಿಂದ ಬಯಸುವ ಆಹಾರ ವಸ್ತುವಾಗಿದೆ. ಹಾಗಿದ್ದರೂ ಪ್ರಮಾದವಾದ ವ್ಯತ್ಯಾಸವೇನೋ ನಡೆದು ಹೋದಂತೆ ಯಾರೂ ಭಾವಿಸಬೇಕಾದ್ದಿಲ್ಲ. ಯಾಕೆಂದರೆ, ಚಾರ್ಲ್ಸ್ ಡಾರ್ವಿನ್ನನ ಸಿದ್ಧಾಂತದಂತೆ, ಮನುಷ್ಯ ಮಂಗನ ವಂಶಜನಷ್ಟೇ! ಆದ್ದರಿಂದಲೇ, ಮಂಗ ಇಚ್ಛಿಸಿದ್ದನ್ನು ಮನುಷ್ಯನೂ ಇಚ್ಛಿಸುತ್ತಿದ್ದಾನೆ. ಆದರೆ, ಇದರ ಜನಪ್ರಿಯತೆಯು ಹೀಗೆಯೇ ಉಳಿಯುವುದೋ ಎಂಬುದು ಕಾದು ನೋಡಬೇಕಾದ ವಿಷಯ. ಯಾವಾಗಲೂ ನೆದರ್ ಲೇಂಡ್ಸಿನಲ್ಲಿ ಅತಿ ಪ್ರಸಾರದಲ್ಲಿರುವ ವಿಷಯವು ಬಹು ಬೇಗ ಬಿದ್ದು ಹೋಗುತ್ತದೆ. ಕಾರುಗಳು ಹೆಚ್ಚುತ್ತಲೇ, ಡಚ್ಚರು ಸೈಕಲ್ ಸವಾರಿಯೇ ಉತ್ತಮವೆಂದು ಹೇಳಲಾರಂಭಿಸಿದ್ದಾರೆ. ಪ್ರಥಮ ದರ್ಜೆಯ ಹೋಟೆಲುಗಳಲ್ಲಿ ಇಳಿದುಕೊಳ್ಳುವುದಕ್ಕಿಂತ ಗುಡಾರ ಹಾಕಿಕೊಂಡು ಇಳಿದುಕೊಳ್ಳುವುದೇ ದೊಡ್ಡಸ್ತಿಕೆಯೆನ್ನಲಾರಂಭಿಸಿದ್ದಾರೆ. ಹಾಗೆಯೇ, ಆಯಿಸ್ಟರಿಗೂ ಅಧೋಗತಿ ಬಂದರೂ ಅಚ್ಚರಿಯಿಲ್ಲ!

ವರ್ಷಪೂರ್ತಿಯಕ್ಕೆ ಮೂರು ಕೋಟಿ ಆಯಿಸ್ಟರ್‌ಗಳನ್ನು ಉತ್ಪಾದಿಸುವ ಹಾಲೆಂಡಿಗೆ ಇಡೀ ಜಗತ್ತಿನಲ್ಲಿ ಎರಡನೆಯ ಸ್ಥಾನವಿದೆ. ಫ್ರಾನ್ಸಿಗೆ ಪ್ರಥಮ ಸ್ಥಾನ! ಫ್ರಾನ್ಸಿನಲ್ಲಿ ಈ ಉದ್ಯಮವು ೧೯ನೇ ಶತಮಾನದಿಂದಲೇ ಪ್ರಸಿದ್ಧಿಯಾಗಿದೆ. ಅಲ್ಲಿ, ಆಗ ರಾಜನಾಗಿದ್ದ ಮೂರನೇ ನೆಪೋಲಿಯನ್ನನಿಂದ ಈ ಉದ್ಯಮಕ್ಕೆ ಪೂರ್ಣ ಬೆಂಬಲವು ದೊರಕಿತ್ತು. ೧೮೭೦ರಿಂದ, ಹಾಲೆಂಡಿನ ಜೀಲೆಂಡ್ ಸಂಸ್ಥಾನದ ಯರ್ಸೇಕ್ ಎಂಬುದು ಆಯಿಸ್ಟರ್ ಉತ್ಪಾದನಾ ಕೇಂದ್ರವಾಗಿ ಬೆಳಗುತ್ತಿದೆ. ಚಿಪ್ಪು ಮೀನು ಬೆಳೆಯುವುದೆಂದರೆ ನಿತ್ಯ ಗಂಡವನ್ನೆದುರಿಸುವುದೆನ್ನಬಹುದು. ಮೊಟ್ಟೆಯೊಡೆದು ಹೊರ ಬಂದ ಮೀನು ಮತ್ತೆ ಚಿಪ್ಪನ್ನು ಕಟ್ಟುವ ಕಾಲದಲ್ಲಿ ಅದನ್ನು ಹಲವು ವಿಧವಾದ ರೋಗಗಳು ಕಾಡಬಹುದು. ಗೂಡು ಕಟ್ಟುವ ಮುನ್ನ, ಅವುಗಳನ್ನು ಸಮುದ್ರದ ಇತರ ಜಲಚರಗಳೂ, ದೊಡ್ಡ ಮೀನುಗಳೂ ತಿಂದು ಹಾಕುವುವು—ಹೀಗೆ, ವ್ಯಾಧಿ, ಶತ್ರುಗಳಿಂದ ಇವುಗಳಲ್ಲಿ ಹೆಚ್ಚಿನವು ನಾಶವಾಗುತ್ತವೆ. ಈ ಉದ್ಯಮದಲ್ಲಿರುವವರು ಇಂತಹವುಗಳಿಂದ ಆಯಿಸ್ಟರ್‌ಗಳಿಗೆ ಪೂರ್ಣ ರಕ್ಷಣೆಯನ್ನೊದಗಿಸುತ್ತಾರೆ.

ಚಿಪ್ಪು ಮೀನುಗಳ ವಾಸ ಸ್ಥಳಗಳನ್ನು ಶುದ್ಧವಾಗಿಡುವುದರಲ್ಲಿ ವಿಜ್ಞಾನಿಗಳು ಹೆಚ್ಚಿನ ಸಹಕಾರವನ್ನು ನೀಡುತ್ತಿದ್ದಾರೆ. ಇವರು ಕಂಡು ಹಿಡಿದಿರುವ ಹೊಸ ವಿಧಾನಗಳಿಂದ ಚಿಪ್ಪು ಮೀನುಗಳಿಗೆ ರೋಗದ ಭಯವೇ ಇಲ್ಲ. ಇವುಗಳಿರುವ ಜಾಗಕ್ಕೆ ದೊಡ್ಡ ಮೀನುಗಳು ಬರಲೂ ಸಾಧ್ಯವಿಲ್ಲದಂತೆ, ವಿಜ್ಞಾನಿಗಳು ತಡೆಗಳನ್ನು ಕಂಡು ಹಿಡಿದಿದ್ದಾರೆ. ಇದ್ದಕ್ಕಿದ್ದಂತೆ ಸಮುದ್ರ ಕ್ಷೋಭೆಯು ಏರ್ಪಟ್ಟಿತೆಂದರೆ, ಉಕ್ಕಿ ಬರುವ ಅಲೆಗಳು ಆಯಿಸ್ಟರ್ ಗೂಡುಗಳನ್ನು ಕೊಚ್ಚಿಕೊಂಡು ಹೋಗದಂತೆ, ಈ ವೈಜ್ಞಾನಿಕ ವಿಧಾನಗಳು ತಡೆಯುತ್ತವೆ.

ಹಾಲೆಂಡಿನ ಈ ಉದ್ಯಮಕ್ಕೆ ಹೊಸ ಗಂಡಾಂತರವು ಕಾದಿದೆ. ಈ ಆಯಿಸ್ಟರ್‌ಗಳ ಕೇಂದ್ರ ಸ್ಥಾನವಾದ ಊಸ್ಟರ್‌ಷೆಲ್ಡ್ ಎಂಬುದನ್ನು ಮುಚ್ಚಿಬಿಡುವ ಸಂಭವವಿದೆ. ೧೯೫೩ರಲ್ಲಿ ಚಂಡಮಾರುತವು ಬೀಸಿ, ಈ ವಿಭಾಗದ ಮೂಲಕ ಪ್ರಳಯವಾದದ್ದೇ ಇದಕ್ಕೆ ಕಾರಣ, ಈ ಭಾಗದ ಸಮುದ್ರದಲ್ಲಿ ವೇಗವಿಲ್ಲ. ಅಲ್ಲದೆ ಆಯಿಸ್ಟರುಗಳಿಗೆ ಬೇಕಾದ ಸಸ್ಯಾಹಾರ ಇಲ್ಲಿ ದೊರಕುವುದು. ಈ ವಿಭಾಗವನ್ನು ಮುಚ್ಚಿದಲ್ಲಿ, ಬೇರೆಲ್ಲಾದರೂ ಕೃತಕವಾಗಿ ಈ ಸೌಕರ್ಯಗಳನ್ನು ಸೃಷ್ಟಿಸಿಕೊಳ್ಳಬಹುದೇ ಎಂಬುದೇ ಸಂದೇಹ. ಒಂದು ವೇಳೆ ಇದನ್ನು ಮುಚ್ಚಿ ಹಾಕಿದಲ್ಲಿ ಇದನ್ನೇ ನಂಬಿರುವವರು ಮತ್ತೆ ಈ ಉದ್ಯಮವನ್ನು ಆರಂಭಿಸುವುದು ಶಂಕಾಸ್ಪದವಾಗಿದೆ. ಹಾಲೆಂಡಿನ ಈ ಅತಿ ಸಮೃದ್ಧ ಉದ್ಯಮದಿಂದ ಅಲ್ಲಿನ ಪ್ರಜೆಗಳಿಗೆ ಸುಖವೇನೂ ಇಲ್ಲ. ಹೇಗೆಂದರೆ, ಆಯಿಸ್ಟರ್ ಉದ್ಯಮಿಗಳು ತಾವು ಉತ್ಪಾದಿಸಿದ್ದರಲ್ಲಿ ೯೦%ನ್ನು ರಫ್ತು ಮಾಡುತ್ತಿದ್ದಾರೆ. ಅಲ್ಲಿನ ರಫ್ತಿನ ಹೆಚ್ಚಳದಲ್ಲಿ ಇದನ್ನು ಮಾತ್ರ ಉಲ್ಲೇಖಿಸುವಂತಿಲ್ಲ, ಹಾಲು ಬೆಣ್ಣೆಗಳಿಗೆ ಹೆಸರಾಂತ ಹಾಲೆಂಡಿನಲ್ಲಿ ಅವುಗಳನ್ನು ಅಲ್ಲಿ ಉಪಯೋಗಿಸುವುದಕ್ಕಿಂತ ರಫ್ತು ಮಾಡುವುದೇ ಹೆಚ್ಚು.

ಎಡಗೈಯಲ್ಲಿ ಆಯಿಸ್ಟರ್, ಬಲಗೈಯಲ್ಲಿ ಚಾಕು; ಚಾಕುವಿನಿಂದ ಚಿಪ್ಪನ್ನು ಬಿಡಿಸಲಾಗುವುದು, ಮೆಣಸು, ನಿಂಬೆರಸ, ಬೆಣ್ಣೆ, ಬ್ರೆಡ್ ದ್ರಾಕ್ಷಾರಸ ಮುಂತಾದುವುಗಳನ್ನು ಅದಕ್ಕೆ ಸೇರಿಸಿದರೆ..ಬರೆಯುವಾಗಲೇ "ಹ್ಞ" ಎಂದು ಚಪ್ಪರಿಸುತ್ತಿರುತ್ತಾರೆ, ಡಚ್ಚರು. ಹಿಂದೆ ರೋಮನ್ನರಿಗೂ ಇದು ಅತ್ಯಂತ ಪ್ರೀತಿಯ ಪದಾರ್ಥವಾಗಿತ್ತಂತೆ. ವೈಟೆಲ್ಲಿಯಸ್ ಎಂಬ ರೋಮನ್ನನು ಒಟ್ಟಿಗೆ ಒಂದು ಸಾವಿರ ಆಯಿಸ್ಟರ್‌ಗಳನ್ನು ತಿಂದು ವಿಕ್ರಮ ಸ್ಥಾಪಿಸಿದ್ದಾನೆ. ಇದಾಗಿ, ಎಷ್ಟೋ ಶತಮಾನಗಳಾಗಿ ಹೋಗಿದ್ದರೂ, ಇದನ್ನು ಮುರಿಯುವ ಹೊಟ್ಟೆಬಾಕರು ಇನ್ನೂ ಹುಟ್ಟಿಕೊಂಡಿಲ್ಲ!

— — —

ಬಿಳಿಯ ಕಾಗದದ ಹುಲಿಗಳು

(ನಾಲ್ಕನೇ ಪುಟದಿಂದ)

ಮುಂದುವರೆಸು ಕಾಲೇಜು, ಹೈಸ್ಕೂಲುಗಳನ್ನೆ ಸರಕಾರ ವಹಿಸಿಕೊಳ್ಳುವುದಕ್ಕೆ ಮೊದಲಿಗೆ ಎಲ್ಲ ಖಾಸಗಿ ಪ್ರಾಥಮಿಕ ಶಾಲೆಗಳ ಆಡಳಿತೆಯನ್ನ ತೆಗೆದುಕೊಳ್ಳಲಿ. ಇದರಿಂದ ತುಂಬಾ ಲಾಭವಾಗುತ್ತೆ ...'

"ಯಾರಿಗೆ?"

"ಯಾರಿಗೇಂತಂದ್ರೆ? ನಿಮ್ಮ ರಾಜ್ಯಕ್ಕೆ .."

"ಏನೂಂತ ...?"

'ಕೇಳಿ, ಮೊದಲನೆಯದಾಗಿ ಭ್ರಷ್ಟಾಚಾರವು ಪರಿಣಾಮಕಾರಿಯಾಗಿ ನಿವಾರಣೆಯಾಗುತ್ತೆ; ಏಕೆಂದರೆ, "ಮೆನೇಜರ"ರೆಂಬ ಏಜಂಟನಿರುವುದಿಲ್ಲ, ಕಮಿಶನ್ ಹೊಡಿಯೋಕೆ..."

"ಹ್ಞಾಂ .. ಮತ್ತೆ....'

"ಮೇಸ್ಟ್ರುಗಳಿಗೂ ಉದ್ಯೋಗದಲ್ಲಿ ಬೇಕಷ್ಟು ಭದ್ರತೆ, ಅನ್ಯಾಯವನ್ನು ಪ್ರತಿಭಟಿಸುವ ಕೆಚ್ಚು ಹುಟ್ಟುತ್ತೆ..."

"ಮತ್ತೆ...."

"ಊರವರ ಬಗೆಗೆ ಮಕ್ಕಳ ಬಗೆಗೆ ಅಧ್ಯಾಪಕರು ಯಾವ ಕಾಳಜಿಯನ್ನೂ ವಹಿಸಬೇಕಾಗಿಲ್ಲವಾದುದರಿಂದ ಸಂಪೂರ್ಣ ಸ್ವತಂತ್ರ ಸಾರ್ವಭೌಮರಾಗುತ್ತಾರೆ .."

"ಮುಂದೇನಾದರೂ ಇದೆಯೆ?"

"ಇಲ್ಲದೆ ಮತ್ತೆ! ಎಲ್ಲಕ್ಕೂ ಹೆಚ್ಚಾಗಿ ಬಹಳ ಮುಂದುವರಿದ ಈ ಜಿಲ್ಲೆ ಬೀದರ —ಗುಲಬರ್ಗಾಗಳಿಗೆ ಸಮಾನವಾಗುವಂತೆ ವಿಂಶತಿವರ್ಷೀಯ ಯೋಜನೆಯೊಂದನ್ನು ತಯಾರಿಸಿದ್ರೆ ಅದು ಸಂಪೂರ್ಣ ಯಶಸ್ವಿಯಾಗುತ್ತೆ ... ಎಲ್ಲಾ ಜಿಲ್ಲೆಗಳ ವಿದ್ಯಾಮಟ್ಟ, ಪರೀಕ್ಷಾ ಫಲಿತಾಂಶ ಏಕ ಸಮವಾಗಿಯೇ ನಿಲ್ಲುವುದರಿಂದ ದೂರಿಗಾರೂ ಇಲ್ಲ...."

"ಸಂಶ್ಯವಿಲ್ಲ ಕಣೇ, ನಿನ್ನನ್ನೇ ಮಂತ್ರಿ ಮಾಡೋಣ..."

'ನಿಮ್ಮ ಸರ್ಕಾರ ಹೋದ ಮೇಲೆ ತಾನೇ ನಾನು ಮಂತ್ರಿಯಾಗೋದು? ನೀವು ಹೋಗೋದೂ ಬೇಡ, ನಾನು ಮಂತ್ರಿಯಾಗೋದೂ ಬೇಡ...."

"ಯಾಕೆ?"

'ಮಂತ್ರಿಯಾಗದೇನೇ ನಿಮ್ಮ ಸರಕಾರದಲ್ಲಿ ಬೇಕಷ್ಟು ಅಧಿಕಾರ ಇರೋವಾಗ ..."

'ಹ್ಞಾಂ... ಸರಿಯಪ್ಪಾ..."

'ಅಯ್ಯೋ, ಹಾಲು ಕುಡೀಲೇ ಇಲ್ಲಾ ...."

ಹೃದಯೈಕ್ಯ

"ನಿನ್ನವಳು ನಾನೆಂದೆ
ನನ್ನವಳು ನೀನಲ್ಲ!
ನನ್ನ ನಿನ್ನಯ ಹೃದಯ ಬೆರೆಯಬೇಕೆ?
ಭೇದ ತೋರಿಯಬೇಕೆ?
ನನ್ನವಳು ನೀನಾಗಿ,
ನಿನ್ನವನು ನಾನಾಗಿ,
ನನ್ನ ನಿನ್ನಯ ಪ್ರೇಮ ಬಲಿಯಬೇಕೆ?
ಜಗದಿ ಮೆರೆಯಬೇಕೆ?
ನನ್ನ ಹೃದಯದ ಸಿಂಹ
ವಿಷ್ಟರವ ನೀನೇರಿ
ಹೃದಯ ಸಾಮ್ರಾಜ್ಞಿ ನಿನಗಾಗಬೇಕೆ?
ನನ್ನನಾಳಬೇಕೆ?
ನಿನ್ನ ಹೃದ್ಮಂದಿರದಿಂದ
ಶಿವಲಿಂಗ ನಾನಾಗಿ
ನಿನ್ನ ಅರ್ಚನೆ ಸೇವೆ ಕೊಳ್ಳಬೇಕೆ?
ವರವ ನೀಡಬೇಕೆ?
ನಿನ್ನ ಮನ 'ಬೇಕೆ'ನಲು
ಎನ್ನ ನುಡಿಗಳ ಕೇಳು
ಸಹಜ, ಸಿರಿ ಸುಖಕೆ ಮನಪೂಲಿಸು
ಬಹುದು!
ಎಣಿಸಿ ನಲಿಯಬಹುದು!
ಅದೊಡದು ನಶ್ವರವು
ಅದು ನನಗೆ ಬೇಕಿಲ್ಲ
ನನಗೆ ನಿನ್ನ ಪವಿತ್ರ ಪ್ರೇಮ ಬೇಕು!
ಅದರ ಸುಖವೆ ಸಾಕು!
ಪಟ್ಟದರಸಿಯು ಸೀತೆ
ಪಟ್ಟ ಸುಖಗಳ ತೊರೆದು
ಉಟ್ಟು ನಾರುಡ ನನಕೆ ನಡೆಯೆ ರಾಮ!
ತಂದೆಗಾಗಿ ಗಣಧಾಮ.
ಪಟ್ಟ ನೀನಿರುವಲ್ಲಿ
ನೆಷ್ಟು ಕಷ್ಟಗಳು ಬೆದರಿ
ಎಂದ ಸೀತೆಯೆ ಅವಳು ಆದರ್ಶ ಸತಿಯು!
ಪತ್ನಿ ಇಹಪರಕೆ ಗತಿಯು!
ಕಪಟ ಜೂಜಾಟದಲಿ
ನೃಪತಿ ಧರ್ಮಜ ಸೋಲೆ
ವನವಾಸ ಗೈದಿದರು ಪಾಂಡು ಸುತರು!
ವೀರ ಧರ್ಮಯುತರು!
ನೃಪತಿ ತಾನಾದರೂ
ತವರು ಮನೆ ಸೇರಿದರೊ?
ಪಾಂಚಾಲೆಯವಳೆಂದು! ವೀರ ನಾರಿ!
ಅವಳೆ ಪತಿಗೆ ದಾರಿ!
ಅಂತೆ ನಳ ದಮಯಂತಿ
ಪಿಂತೆ ಸತಿ ಸಾವಿತ್ರಿ!
ಯಂತಿರಲು ಬಯಸುವೆಯ? ನೀನು
ನನ್ನವಳು!
ಇಲ್ಲ? ಹಗಲು ಇರುಳು!
ಯುಗಧರ್ಮಕೊಳಗಾಗಿ
ಆಡಂಬರವ ಬಯಸಿ
ಹೃದಯೈಕ್ಯ ಮರೆಯುವೆಯ? ಒಳಿತು
ಮರೆತುಬಿಡು!
ನನ್ನ ನೆನಪೆ ಬಿಟ್ಟುಬಿಡು!

—ಭಾಸ್ಕರ ಭಂಡಾರಿ ಮಜಿಬೈಲು

"ಓ... ನೂತನ ಭರದಲ್ಲಿ....'

"ಸಿಟ್ಟೇನಾ ಮಾಯವಾಯ್ತು..."

"ಛಿ ..ತಳ್ಳಿ ..."

"ಸಾಕು, ಬನ್ನಿ ಬೇಗ.."

"ಹ್ಞಾಂ ..."

— ಗೋರಾ.

(ಮೂರನೇ ಪುಟದಿಂದ)

ನಕ್ಷೆ ಸೇರಿಕೊಳ್ಳುತ್ತಿದ್ದಾರೆಂಬುದನ್ನು ಮರೆಯಬಾರದು. ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸುವುದಕ್ಕೆ ಈ ದಿನ ಹಲವಾರು ಮಹನೀಯರೇ ಹೊರ ಬರುವರೆಂದರೆ, ಅದು ಸಾಧ್ಯವಾಗದು. ಪಕ್ಷದ ಶುದ್ಧೀಕರಣವನ್ನು ಹೊರಗಿದ್ದು ಮಾಡುವುದಕ್ಕಿಂತ ಒಳಗಿದ್ದೇ ಮಾಡಬಹುದಾದ ಅವಕಾಶಗಳು ಹೆಚ್ಚು. ಪ್ರಜಾ ಪ್ರಭುತ್ವದಲ್ಲಿ ಅಭಿಪ್ರಾಯ ಸ್ವಾತಂತ್ರ್ಯ, ಪಕ್ಷ ಕಟ್ಟುವ ಸ್ವಾತಂತ್ರ್ಯ ಇದೆ. ಆದರೆ, ಈ ಬಗೆಯ ಸ್ವಾತಂತ್ರ್ಯವನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಭಿನ್ನಾಭಿಪ್ರಾಯದ ಕಾಂಗ್ರೆಸಿಗರು ತಮ್ಮ ನಿರ್ಧಾರವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಮೊದಲು ನೂರು ಬಾರಿ ಆಲೋಚಿಸಬೇಕು. ಒಂದು ಪಕ್ಷವೊಂದಕ್ಕೆ ಜನ್ಮವಿತ್ತರೆ ಮಾತ್ರ ಸಾಲದು. ಅದನ್ನು ಬೆಳೆಸಿ ಬರುವ ಶಕ್ತಿಯನ್ನೂ ಹೊಂದಿರಬೇಕು. ಅತೃಪ್ತರಲ್ಲಿ ಈ ಬಗೆಯ ಶಕ್ತಿ ಇದ್ದೀತೇ?

ಕಾರ್ಕಳ ಮುನ್ಸಿಫ಼ ಕೋರ್ಟಿನಲ್ಲಿ

O. S. No 43/1965.

T. ರಗುನಾಥ ಹೆಗ್ಡೆ - ವಾದಿ.

ಮತ್ತು

ಗಿರಿಯಣ್ಣ ಹೆಗ್ಡೆ ಸಹಾ —ಪ್ರತಿವಾದಿರು.

ಇವರೊಳಗೆ

ಈ ಮೊಲ್ಕ ಸದ್ರಿ ದಾವೆಯ 1ನೆ ಪ್ರತಿವಾದಿ ಗಿರಿಯಣ್ಣ ಹೆಗ್ಡೆ—ನರಿಯಣ್ಣ ಹೆಗ್ಡೆರ ಅಳಿಯ ಕಾರ್ಕಳ ತಾಲ್ಲೂಕು ದುರ್ಗ ಗ್ರಾಮದ ಜರವತ್ತು ಎಂಬಲ್ಲಿರುವವರು ಇವರಿಗೆ ಈ ಮೊಲ್ಕ ತಿಳಿಸುವದೇನಂದ್ರೆ—

ವಾದಿರು ನೀವು ಕೂಡಾ 2 ಜನರ ಮೇಲೆ ಮಾಡಿದ ಮೇಲಿನ ದಾವಾ ನಂಬ್ರ ಬಗ್ಗೆ ತಾರೀಕು 10–6–65ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10-30 ಗಂಟೆಗೆ ನೀವು ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉದಪರ್ಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ಹಾಜರು ಮಾಡಿ ಮೇಲಿನ ದಾವಾ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(By order of the Court)

N. M Adyanthaya,

Advocate for Plaintiff

Karkala, 10-4-65

ಕುಂದಾಪುರ ಮುನ್ಸಿಫ಼್ ಕೋರ್ಟಿನಲ್ಲಿ.

S. C. 75/64.

ವಾದಿ: H. ಲಕ್ಷ್ಮೀನಾರಾಯಣಯ್ಯ (ರಿಸೀವರ್)

ಪ್ರತಿವಾದಿ: 1. ಅತ್ರ ಸಟ್ಟಿಗಾರ ಸ್ರ
2. ಭಾಗಿ ಸಡ್ತಿ

ಈ ಮೊಲ್ಕ ಎರಡನೇ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ:—

ದಾವಾ ಸ್ವಳದ ಬಾಬ್ತು ಬರತಕ್ಕ ಗೇಣಿ ಬಾಕಿ ಬಗ್ಗೆ ವಾದಿಯು ಫಾಲ್ಕ್ರಾಣಿಸಿದ ದಾವೆ ದಾಖ್ಲು ಮಾಡಿರುತ್ತಾನೆ. ಸದ್ರಿ ದಾವೆಯು ತಾ 31-5-65ಕ್ಕೆ ತನಿಗೆ ಇದೆ. ನಿಮ್ಮದೇನಾದರೂ ಆಕ್ಷೇಪ ಇದ್ದಲ್ಲಿ, ಆ ದಿವ್ಸ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿ ಕೊಳ್ಳತಕ್ಕದ್ದು. ತಪ್ಪಿದಲ್ಲಿ ex parte decree ಆಗುತ್ತದೆ.

ಹುಕುಂ ಪ್ರಕಾರ

K. ರಾಮಪ್ಪಯ್ಯ,

Advocate for Plaintiff

ಎಲ್ಲೆಲ್ಲಿ ಏನೇನು?

ಎಂ. ಜಿ. ಎಂ. ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ಚುನಾವಣೆ

ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ಚುನಾವಣೆ ಇತ್ತೀಚೆಗೆ ನಡೆದು ಶ್ರೀ ಎನ್. ಎಸ್. ಪ್ರಭು ಅಧ್ಯಕ್ಷ, ಶ್ರೀ ಬಿರ್ನಾಡಿ ವಿಲಿಯಂ ಪಿಂಟೊ, ಯು. ರಾಮದಾಸ ಆಚಾರ್ಯ, ಕೆ. ಅನಂತ ಕೃಷ್ಣ ಪೈ, ಉಪಾಧ್ಯಕ್ಷರುಗಳು; ಕೆ. ಚಂದ್ರಕಾಂತ ಆಚಾರ್—ಕಾರ್ಯದರ್ಶಿ, ಎಂ. ರಾಮಚಂದ್ರ ರಾವ್—ಜೊತೆ ಕಾರ್ಯದರ್ಶಿ; ಶ್ರೀ ರತ್ನಾಕರ ಪೈ—ಖಜಾಂಚಿಯಾಗಿ ಆರಿಸಲ್ಪಟ್ಟರು.

ರೋಟರಿ ಸಭೆ

ಮಣಿಪಾಲ, ಎಪ್ರಿಲ್ ೫—ನಮ್ಮ ದೇಶದಲ್ಲಿ ಆರೋಗ್ಯ ಸ್ಥಿತಿ ಸುಧಾರಿಸಬೇಕಾದರೆ ಜನರಲ್ಲಿರುವ ಮೂಢ ನಂಬಿಕೆಗಳು ನಿರ್ನಾಮವಾಗುವುದರ ಅಗತ್ಯವೆಂದು ಮಂಗಳೂರು ರೋಟರಿ ಕ್ಲಬ್ಬಿನ ಅಧ್ಯಕ್ಷ ಡಾ। ಎಂ. ಪಿ. ಪೈ ನಿನ್ನೆ ಇಲ್ಲಿ ತಿಳಿಸಿದರು.

ಜನರಿಗೆ ಸರಿಯಾದ ಶಿಕ್ಷಣ ಕೊಡುವುದೊಂದೇ ಇದಕ್ಕಿರುವ ಪರಿಹಾರವೆಂದು ಅವರು ಸ್ಥಳೀಯ ರೋಟರಿ ಕ್ಲಬ್ ಹಾಗೂ ಭಾರತೀಯ ವೈದ್ಯಕೀಯ ಸಂಘದ ಸ್ಥಳೀಯ ಶಾಖೆಯ ಆಶ್ರಯದಲ್ಲಿ ವಿಶ್ವ ಆರೋಗ್ಯ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡುತ್ತಾ ಸೂಚಿಸಿದರು.

ಈಚೆಗೆ ತಾವು ಅಮೇರಿಕದಲ್ಲಿ ಪ್ರವಾಸ ಮಾಡಿದ್ದನ್ನು ಡಾ। ಪೈ ಪ್ರಸ್ತಾಪಿಸಿ ಭಾರತದಲ್ಲಿರುವಂತೆಯೆ ಅಮೇರಿಕದಲ್ಲೂ ಮಹಿಳೆಯರಿಗೂ ವಿಶೇಷ ಗೌರವ ತೋರಿಸಲಾಗುತ್ತಿದೆ ಎಂದರು. ಪ್ರಾಚೀನ ಸಂಸ್ಕೃತಿಗಳ ಪೈಕಿ ಇಂದಿಗೂ ಉಳಿದುಕೊಂಡಿರುವ ಭಾರತೀಯ ಸಂಸ್ಕೃತಿಯ ಬಗ್ಗೆ ಅಮೇರಿಕದ ಜನರಿಗೆ ಬಹಳ ಆದರವಿದೆ ಎಂದು ನುಡಿದರು.

ಭಾರತೀಯ ವೈದ್ಯಕೀಯ ಸಂಘದ ಉಡುಪಿ ಶಾಖೆಯ ಅಧ್ಯಕ್ಷ ಡಾ। ಕೆ ಎಲ್. ಐತಾಳ, ಕಸ್ತೂರಬಾ ಹೆರಿಗೆ ಆಸ್ಪತ್ರೆಯ ವೈದ್ಯಕೀಯ ಅಧಿಕಾರಿ ಡಾ। ಸುಲೋಚನಾ ಮತ್ತು ಕಸ್ತೂರಬಾ ಜನರಲ್ ಆಸ್ಪತ್ರೆಯ ಮುಖ್ಯಾಧಿಕಾರಿ ಡಾ। ಸಿ. ಎಚ್. ಶಿವರಾಮನ್ ರವರು ಮಾತನಾಡಿದರು.

ಶಾಲಾ ವರ್ಧಂತ್ಯುತ್ಸವ

ಅಂಜಾರು ಬೋರ್ಡ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು ತಾ. ೨-೪-೧೯೬೫ರಂದು ಜರಗಿತು. ಶ್ರೀ ಜಗಂಜೀವ ಹೆಗ್ಡೆಯವರು ಧ್ವಜಾರೋಹಣಗೈದರು. ಹಿರಿಯಡಕ ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ಯಂ ಭಂಡಾರಿ ಬಿ. ಎ., ಬಿ. ಟಿ. ಇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಂ. ರಾಘವೇಂದ್ರ ಅಧ್ಯಾಪಕರು ಸ್ವಾಗತ ಭಾಷಣವನ್ನೂ, ಮುಖ್ಯೋಪಾಧ್ಯಾಯರಾದ ಯಂ. ಯಂ. ಜತ್ತನ್ನರವರು ವರದಿ ವಾಚನವನ್ನೂ, ಮುದ್ರಾಡಿ ಕೃಷ್ಣಯ್ಯ ಸೆಟ್ಟರು ಸಂಯೋಜಿತ ಭಾಷಣವನ್ನೂ, ಮಾಡಿದ ಮೇಲೆ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ವಿ. ಗೋವಿಂದರಾಜ ಹೆಗ್ಡೆಯವರು ಶಾಲೆಯ ಪ್ರಗತಿ ವಿಚಾರವಾಗಿ ಮಾತನಾಡಿದರು. ಡಾ। ಯು. ಚಂದ್ರಶೇಖರರು ಬಹುಮಾನ ವಿತರಣೆಗೈದರು. ಆ ಮೇಲೆ ಮನರಂಜನೆಯ ಕಾರ್ಯಕ್ರಮಗಳು ಜರಗಿದವು.

ಯಕ್ಷಗಾನ

..ದೇಲಂಪಾಡಿ: ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಮಂದಿರದಲ್ಲಿ ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರಿಂದ ರಚಿಸಲ್ಪಟ್ಟ "ಕಂಜಾಕ್ಷಿ ಕಲ್ಯಾಣ" ಎಂಬ ಕಥಾಭಾಗದ ಯಕ್ಷಗಾನ ಕೂಟವು ದಿನಾಂಕ ೨೭ರಂದು ನಡೆಯಿತು.

ಶ್ರೀ ಕಲ್ಲಡ್ಕ ಬಾಬು ರೈಗಳಿಂದ ಆಣಿಗೊಳಿಸಲ್ಪಟ್ಟ ಈ ಕಾರ್ಯಕ್ರಮದಲ್ಲಿ ಸರ್ವಶ್ರೀ ಕೀ. ವ. ಕೇಶವ, ಬಂಟ್ವಾಡಿ ಅಣ್ಣಯ್ಯ ಗೌಡ, ಬಿ. ಪಿ. ವಿನೋದ, ಕುಂಬ್ಳೆ ಜತ್ತಪ್ಪ ರೈ, ಪರಮೇಶ್ವರ ಭಟ್. ದಿ. ಶ್ರೀಧರ, ಕೆ. ಬಿ. ರೈ ಮೊದಲಾದವರು ಭಾಗವಹಿಸಿದ್ದರು.

ವಿದಾಯ ಸತ್ಕಾರ ಸಮಾರಂಭ

ಉಡುಪಿ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲಾ 7ನೇ ತರಗತಿಯ ವಿದ್ಯಾರ್ಥಿಗಳ ವಿದಾಯ ಕೂಟವು ತಾ. 20ರಂದು ಶಾಲಾ ಮೆನೇಜರ್ ಶ್ರೀ ಜಗನ್ನಾಥ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸಾಂಸ್ಕೃತಿಕ ಮಂತ್ರಿಯು ಸ್ವಾಗತಿಸಿದನು. ಮಕ್ಕಳಿಂದ ಭಾಷಣವಾದ ಬಳಿಕ ಉಪಾಧ್ಯಾಯರುಗಳಲ್ಲಿ ಶ್ರೀ ನಾರಾಯಣ ಬಲ್ಲಾಳರು, ರತ್ನಾಕರ ಅಡಿಗರು ಬುದ್ಧಿವಾದ ಹೇಳಿ ಶುಭಕೋರಿದರು. ಮುಂದೆ ೭ನೇ ತರಗತಿಯ ಮಕ್ಕಳಿಂದ ಶಾಲೆಗೆ ಕೊಡಲ್ಪಟ್ಟ ಒಟ್ಟು ಸುಮಾರು ರೂ. ೮೦ ಮೌಲ್ಯದ ಒಂದು ಕೆಮೆರಾ, ಆಟದ ಪಾತ್ರೆಗಳನ್ನು ಮುಖ್ಯಮಂತ್ರಿ ಶಾಲಾ ಮೆನೇಜರರಿಗೆ ಅರ್ಪಿಸಿದನು. ಅಧ್ಯಾಪಕ ಶ್ರೀ ರಘುನಾಥ ರಾಯರು ಮಕ್ಕಳು ಇದಕ್ಕಾಗಿ ಸ್ವಬುದ್ಧಿಯಿಂದ ಸಂಗ್ರಹಿಸಿ ಕೊಟ್ಟ ಹಣದ ಲೆಕ್ಕಪತ್ರ ಒಪ್ಪಿಸಿ ಹಿತವಚನ ನುಡಿದರು. ಶಾಲಾ ಮುಖ್ಯೋಪಾಧ್ಯಾಯರು ಕಾಲೋಚಿತ ಹಿತ ವಚನಗಳನ್ನು ಹೇಳಿದರು. ಅಧ್ಯಕ್ಷರ ಭಾಷಣ, ಭಾವ ಚಿತ್ರ, ಉಪಹಾರಗಳಾದ ಬಳಿಕ ಶಾಲಾ ಮುಖ್ಯಮಂತ್ರಿ ಪ್ರಮೋದ್ ಕುಮಾರರವರಿಂದ ಧನ್ಯವಾದ ಸಮರ್ಪಣೆಯಾಯಿತು.

ಶಾಲಾ ವಾರ್ಷಿಕೋತ್ಸವ

ಬಂಗಾಡಿ, ಎಪ್ರಿಲ್. 3—ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು ತಾರೀಕು 3-4-65ರಲ್ಲಿ ಶ್ರೀ ಯು. ಮಹಾಬಲ ಶೆಟ್ಟಿ, ಪಂಚಾಯತ್ ಎಕ್ಸ್ಟೆನ್ಶನ್ ಆಫೀಸರ್, ಬೆಳ್ತಂಗಡಿ ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿತು.

ಬೆಳಿಗ್ಗೆ ಶ್ರೀ ಬಿ ಪಿ. ಇಬ್ರಾಹಿಂ ಮಾಸ್ತರರು ಧ್ವಜಾರೋಹಣ ಮಾಡಿದರು. ಸಂಜೆ ನಡೆದ ಸಭೆಯಲ್ಲಿ ಬಂಗಾಡಿ ಪಂಚಾಯತ್ ಅಧ್ಯಕ್ಷರಾದ ಶ್ರೀ ಕೆ. ಯುವರಾಜ ಅಜ್ರಿಯವರು ಸ್ವಾಗತ ಭಾಷಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ಗೋಪಾಲ ಶಣೈಯವರು ಶಾಲಾ ವರದಿಯನ್ನೋದಿದರು. ಬೆಳ್ತಂಗಡಿ ಶ್ರೇಣಿಯ ಶಾಲಾ ಹಿರಿಯ ಪರೀಕ್ಷಾಧಿಕಾರಿಗಳಾದ ಶ್ರೀ ಎಚ್. ಪಿ. ಗಡಿಯಾರರು ಬಹುಮಾನ ವಿತರಣೆ ಮಾಡಿದರು. ಶ್ರೀ ಯು. ವಾಸುದೇವ ನಾಯ್ಕರು, ಶ್ರೀ ಯಂ ಕೊರಗ ಅರಿಗ, ಶ್ರೀ ಎಚ್. ವಿ. ಗಡಿಯಾರ್ ಮೊದಲಾದವರು ಭಾಷಣ ಮಾಡಿದರು. ಅಧ್ಯಕ್ಷರ ಭಾಷಣದ ನಂತರ ವಿವಿಧ ವಿನೋದಾವಳಿಗಳು ಪ್ರದರ್ಶಿಸಲ್ಪಟ್ಟವು. ಶ್ರೀ ಕೆ. ಯುವರಾಜ ಅಜ್ರಿಯವರು ಧನ್ಯವಾದ ಸಮರ್ಪಿಸಿದರು.

ಬಂಟರ ಯಾನೆ ನಾಡವರ ಸಂಘ

ಮಂಗಳೂರು: ನಮ್ಮ ಸಂಘದ ವಾರ್ಷಿಕ ಮಹಾಸಭೆಯು ತಾ. 25-4-65ರಲ್ಲಿ ಶ್ರೀ ಬಿ. ರಾಜೀವ ಭಂಡಾರಿಯವರ ಅಧ್ಯಕ್ಷತೆಯಲ್ಲಿ ಜರಗುವುದು. ತಾವು ಸಭೆಗೆ ದಯಮಾಡಿ ಒದಗಬೇಕಾಗಿ ಸಂಘದ ಆಡಳಿತ ಕಮಿಟಿಯ ಪರವಾಗಿ ಕಾರ್ಯದರ್ಶಿ ಶ್ರೀ ಕೆ. ಸುಂದರರಾಮ ಶೆಟ್ರು ವಿನಂತಿಸುತ್ತಾರೆ.

ಕ್ಲಬ್ಬಿನ ವಾರ್ಷಿಕೋತ್ಸವ

ಶಿವಾರ್: ಸ್ಥಳೀಯ ರಿಕ್ರಿಯೇಶನ್ ಕ್ಲಬ್ಬಿನ ವಾರ್ಷಿಕೋತ್ಸವವು ತಾ. 3-4-65 ರಂದು ಡಾ। ಎಂ. ಎಸ್. ಶೆಟ್ರು ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿತು. ಸಂಘದ ಅಧ್ಯಕ್ಷ ಡಾ। ವೈ. ಆರ್. ಶೆಟ್ರು ಸ್ವಾಗತ ಭಾಷಣವನ್ನೂ ಕಾರ್ಯದರ್ಶಿ ಶ್ರೀ ಸಚ್ಚಿದಾನಂದ ಆಚಾರ್ಯರವರು ವರದಿವಾಚನವನ್ನೂ, ಶ್ರೀ ಕೆ. ವಾಸುದೇವ ಶೆಟ್ರು ಸಂದೇಶವಾಚನವನ್ನೂ ಮಾಡಿದರು. ಅಧ್ಯಕ್ಷರು ಬಹುಮಾನ ವಿತರಣೆ ಮಾಡಿದ ಮೇಲೆ ಕಾಲೋಚಿತ ಭಾಷಣವಿತ್ತರು. ಶ್ರೀ ಎಲ್. ಮೆಂಡೋನ್ಸರು ಧನ್ಯವಾದವಿತ್ತರು. ಮನರಂಜನಾ ಕಾರ್ಯಕ್ರಮದ ಅಂಗವಾಗಿ ಕನ್ನಡ ಸಂಗೀತ ನಾಟಕವು ಪ್ರದರ್ಶಿಸಲ್ಪಟ್ಟಿತು. ಡಾ। ಯು. ಕೆ. ಆಚಾರ್ ಧನ್ಯವಾದವಿತ್ತರು.

ಮಧ್ಯಾಹ್ನ ಜರಗಿದ ವಾರ್ಷಿಕ ಸಭೆಯಲ್ಲಿ ಡಾ। ಯು. ಕೆ. ಆಚಾರ್ (ಅಧ್ಯಕ್ಷ), ಶ್ರೀ ದಿ. ಜಯರಾಮ ಶೆಟ್ಟಿ (ಉಪಾಧ್ಯಕ್ಷ), ಶ್ರೀ ಎಸ್. ಎನ್. ಸೀತಾರಾಮ ಹೆಗ್ಡೆ (ಕಾರ್ಯದರ್ಶಿ ಮತ್ತು ಕೋಶಾಧಿಕಾರಿ), ಶ್ರೀ ಎಂ. ನಾಗೇಶ (ಉಪ ಕಾರ್ಯದರ್ಶಿ) ಶ್ರೀ ಎಲ್. ಮೆಂಡೋನ್ಸ, ಡಾ। ಕೆ. ಆರ್. ವೆಂಕಟಕೃಷ್ಣ ಶ್ರೀ ಕೆ. ಆರ್. ಹೆಗ್ಡೆ (ಸದಸ್ಯರು), ಶ್ರೀ ಐ. ಡಿ. ಮೆಲ್ಲೊ (ಗೌರವ ಲೆಕ್ಕ ಪರಿಶೋಧಕರು) ರನ್ನೊಳಗೊಂಡ ಹೊಸ ಆಡಳಿತ ಮಂಡಳಿಯು ಸರ್ವಾನುಮತದಿಂದ ಆರಿಸಲ್ಪಟ್ಟಿತು. ಡಾ। ಕೆ. ಆರ್. ವೆಂಕಟಕೃಷ್ಣನವರು ಕ್ಲಬ್ಬಿನ ಸದಸ್ಯರಿಗೆ ಭೋಜನಕೂಟ ಏರ್ಪಡಿಸಿದ್ದರು.

ಕುಂದಾಪುರ ಮುನ್ಸೀಫ್ ಕೋರ್ಟಿನಲ್ಲಿ

S. C. 53/65

ನರಸಿಂಹ ಶೆಟ್ಟಿ .ವಾದಿ.

ಮತ್ತು

ಕಾಳು ಹೆಂಗ್ಸು ಸಹಾ—ಪ್ರತಿವಾದಿರು

ಹಾಲೀ ಕುಂದಾಪುರ ತಾಲೂಕು ದೇವಲ್ಕುಂದ ಗ್ರಾಮದಲ್ಲಿರುವ 1ನೇ ಪ್ರತಿವಾದಿಳು ಕಾಳು ಹೆಂಗ್ಸಿನ ಮಗ 2ನೇ ಪ್ರತಿವಾದಿ ರಾಮುಗೆ ಈ ಮೊಲ್ಕ ತಿಳಿಸುವುದೇನಂದರೆ:-

ಪ್ರತಿವಾದಿರು ತಾ 27—1—62ರಲ್ಲಿ ರೂಪಾಯ್ 146-00ಕ್ಕೆ ವಾದಿಗೆ ಬರ್ಸಿಕೊಟ್ಟ ದಿಮಾಂಡು ನೋಟಿನ ಹಣದ ವಸೂಲೀ ಬಗ್ಗೆ ವಾದಿ ಮೇಲಿನ ದಾವೆ ಹೂಡಿದ್ದು, ಸದ್ರಿ ದಾವೆಯು ತಾ 23-4-65ಕ್ಕೆ ಅಖೈರ ತನಿಖೆಗೆ ಇಟ್ಟಿರುತ್ತದೆ ಆ ಬಾಬಿನಲ್ಲಿ ಏನಾದರೂ ಆಕ್ಷೇಪವಿದ್ದಲ್ಲಿ ಆ ದಿವಸ ಹಗಲು 11 ಗಂಟೆಗೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು ಎಂಬ ಸಂಗ್ತಿ ಕೋರ್ಟು ಅಪ್ಪಣೆ ಮೇರೆಗೆ ತಿಳಿಸಲಾಗಿಯದೆ.

ಬಿ. ಕುಶಲ ಹೆಗ್ಡೆ
ವಾದಿಕಡೆ ಎಡ್ವಕೇಟ್

ಕುಂದಾಪುರ. 8—4—65

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O S. 596/64. R.I.A 1428/64.
R I A. 1429/64.

ಅಂಣಪ್ಪ ಭಂಡಾರಿ —ವಾದಿ.

ತ್ಯಾಂಪಣ್ಣ ಶೆಟ್ಟಿ ಕೂಡಾ —ಪ್ರತಿವಾದಿರು.

ಪ್ರತಿವಾದಿರು 11. ಉಗ್ಗ ಶೆಟ್ಟಿ, ಅಕ್ಕಮ್ಮ ಹೆಂಗ್ಸಿನ ಮಗ, ಕಾಸರಗೋಡು ತಾಲ್ಲೂಕು ಉಪ್ಪಳ ಗ್ರಾಮದ ಕೊಡಕೋಡು ಎಂಬಲ್ಲಿ.

62. ಉಗ್ಗ ಶೆಟ್ಟಿ, ಪೂವಕ್ಕೆ ಹೆಂಗ್ಸಿನ ಮಗ, ಮಂಗಳೂರು ತಾಲ್ಲೂಕು ಮಂಗಳೂರು ಕಸಬ ಪೈಕಿ ಬಾಜಿಲಕೇರಿ

63. ಮಂಜಪ್ಪ ಶೆಟ್ಟಿ, ಪಮ್ಮಕ್ಕೆ ಮಗ, ಬೆಳ್ತಂಗಡಿ ತಾಲ್ಲೂಕು ಪಟ್ರಮೆ ಗ್ರಾಮ

67. ಮಂಜಕ್ಕೆ, ಸಂಕಮ್ಮ ಹೆಂಗ್ಸಿನ ಮಗಳು, ಬಂಟ್ವಾಳ ತಾಲ್ಲೂಕು ಗೋಳ್ತಮಜಲು ಗ್ರಾಮದ ಬಡಕಬೈಲು.

76. ಚಂದಕ್ಕೆ; 77. ಅತ್ತಪ್ಪ; 78. ರಘು; 79. ಲಲಿತ—67ನೇಯವಳ ಪ್ರಾಯಸರ ಮಕ್ಕಳು ಗಾರ್ಡಿಯನ್ 67ನೇ ಮಂಜಕ್ಕೆ.

68. ಪೂವಕ್ಕೆ, ಸಂಕಮ್ಮನ ಮಗಳು, ಬಂಟ್ವಾಳ ತಾಲ್ಲೂಕು ವೀರಕಂಭ ಗ್ರಾಮದ ಕಲಮಲ ಎಂಬಲ್ಲಿ.

80. ಲೀಲು; 81 ವಿಟ್ಠಲ; 82. ದೇವಕಿ; 83. ಗುಲಾಬಿ—68ನೇ ಪೂವಕ್ಕೆಯ ಪ್ರಾಯಸರ ಮಕ್ಕಳು ಗಾರ್ಡಿಯನ್ 68ನೇ ಪೂವಕ್ಕೆ—ಇವರಿಗೆ.

ಅಡವಿನ ಬಡ್ಡಿ ಬಗ್ಗೆ ವಾದಿ ಮಾಡಿದ ಮೇಲ್ತೋರುವ ವ್ಯಾಜ್ಯವು ಮ ಗಾರ್ಡಿಯನ್ ಅರ್ಜಿಗಳು ನಿಮ್ಮ ಹಾಜ್ರತಿ ಬಗ್ಗೆ ಈ ಕೋರ್ಟಿನಲ್ಲಿ ತಾ. 23-1-65ಕ್ಕೆ ಇಟ್ಟಿರುವದ್ರಿಂದ ಆ ದಿವ್ಸ ಬೆಳಿಗ್ಗೆ 11 ಘಂಟೆಗೆ ನೀವು ಸ್ವತಹಾ ಯಾ ವಕೀಲ್ ದ್ವಾರ ಹಾಜರಾಗಿ ಉದಪರಿಸದಿದ್ದರೆ ನಿಮ್ಮ ಗೈರುಹಾಜರಿಯಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವದು.

By order of Court.

A AMMU SHETTY,

Advocate for Plaintiff.

ಪುತ್ತೂರು, 27.3.65.

ತೃಣಮಪಿ ನ ಚಲತಿ ತೇನ ವಿನಾ....

(ಹನ್ನೆರಡನೇ ಪುಟದಿಂದ)

ಮತ್ತೆ ಘಂಟೆ ಹೊಡೆಯಿತು. ಓ! ಆಗಲೇ ಆರು ಘಂಟೆ. ಕಡೆಗೂ ತಾನು ಪಾರ್ಟಿಗೆ ಹೋಗಲಿಲ್ಲ. ಆದರೂ ಅದೇಕೋ ಬೇಜಾರು. ಸಿನೆಮಾಕ್ಕೆ ಹೋಗೋಣ ಎಂದು ತೋರಿತು. ಬೇಗ ಬೇಗ ಮುಖ ತೊಳೆದುಕೊಂಡು ತಾನು ಬರುವುದು ಹೊತ್ತಾಗೋದ್ರಿಂದ ಊಟಕ್ಕೆ ಕಾಯುವುದು ಬೇಡವೆಂದು ಹೇಳಿ ಗಾಯತ್ರಿ ಟಾಕೀಸ್ ಕಡೆಗೆ ಹೊರಟಳು. 'Lovers must learn' ಅಂತೆ ಇವತ್ತು ಸಿನೆಮಾ. ಯಾವುದೋ ಒಂದು ಎಂದುಕೊಂಡು ಒಳಗೆ ಹೋಗಿ ಕುಳಿತಳು.

ದೀಪ ಆರಿತು. ಬಣ್ಣ ಬಣ್ಣದ ವ್ಯಕ್ತಿಗಳು ಓಡಾಡುತ್ತಿವೆ. ಆದರೆ ಸ್ಥಿಮಿತವಿಲ್ಲ ಮನಸ್ಸು ಬೇರೆ ಸಿನೆಮಾ ನೋಡುತ್ತಿತ್ತು. ಮುರಳೀಧರನ ಟೀಪಾರ್ಟಿಯ ಸಿನೆಮಾ.

ಗೊಳ್ ಎಂದು ನಗುತ್ತಿತ್ತು ಜನಸಂದಣಿ. ಬಾಲ್ಯನಿಯಿಂದ ನಗುವ ದಂಪತಿಗಳ ಕಿಲಕಿಲ ನಗು. ಗಂಡು, ಹೆಣ್ಣು, ಪ್ರೇಮ, ಮದುವೆ ಅದರ ಆಚರಣೆ–ಹೀಗೆಸಾಗಿತ್ತು ಸಿನೆಮಾ ಅವರಲ್ಲಿ ಮತ್ತೆ ಜಗಳ. ಕಡೆಗೆ ಎಲ್ಲಾ ಸುಖವಾಗಿ ಮುಗಿದಿತ್ತು. ಏನೋ Lovers must learn ಅಂತೆ. ತನಗೇಕೆ? ತಾನೇನು ಲೌವರೇ ಕಲಿಯಲಿಕ್ಕೆ, ಅನಿಸಿತು (ಅಲ್ಲವೇ? ಎಂದು ಏಳುತ್ತಿದ್ದ ಪ್ರಶ್ನೆಯನ್ನು ಅಲ್ಲೇ ಅದುಮಿದಳು).

ಹೊರಗೆ ದೊಡ್ಡದೊಂದು ಮೆರವಣಿಗೆ 'ಹೋ' ಎಂದು ಕೂಗುತ್ತಾ ಮನ ಬಂದಂತೆ ಹಾಡುತ್ತಾ ಮನ್ಮಥನ ಬೊಂಬೆಯನ್ನು ಹಿಡಿದುಕೊಂಡು ಹೊರಟಿತ್ತು. ಹುಡುಗರ ದಂಡು—ಮನ್ಮಥನ ದಹನಕ್ಕಾಗಿ.

ಕಾಮನನ್ನು ಸುಡುತ್ತಾರಂತೆ! ಎಂಥಾ ಮೂರ್ಖತೆ ಎಂದು ಕೊಳ್ಳುತ್ತಾ ಮನೆಗೆ ಬಂದಳು. ಬಾಗಿಲು ತೆಗೆದ ಕುಸುಮಳ ಹತ್ತಿರ ತಾನು ಊಟ ಮಾಡುವುದಿಲ್ಲ, ಹಸಿವಿಲ್ಲ ಎಂದು ಹೇಳಿ ರೂಮಿಗೆ ಬಂದು ಹಾಸಿಗೆಯ ಮೇಲೆ ಉರುಳಿದಳು.

ಸೌಮ್ಯಮೂರ್ತಿ ಬುದ್ಧ ದೇವ ಎಂದಿನಂತೆಯೇ ತಪಸ್ಸು ಮಾಡುತ್ತಿದ್ದ ಸ್ಟ್ಯಾಂಡಿನ ಮೇಲೆ ಕುಳಿತು ಪಕ್ಕದ ರೂಮಿನಿಂದ ಕೇಳಿ ಬರುತ್ತಿತ್ತು—ವಿಶ್ವಶಾಂತಿ ಎಂಬುದು ಬರೀ ಭ್ರಾಂತಿ. ಏಕೆಂದರೆ ಪ್ರತಿಯೊಬ್ಬ ಮನುಷ್ಯನ ಅಂತರಂಗ ಎನ್ನುವ ಯುದ್ಧ ರಂಗದಲ್ಲಿ ಕಾಮಕ್ರೋಧಾದಿ ಅರಿಷಡ್ವರ್ಗಗಳ ಪಾಶವೀ ಬಣಕ್ಕೂ ಸತ್ಯಧರ್ಮಾದಿ ಸಾತ್ವಿಕ ಗುಣಗಳ ಬಣಕ್ಕೂ ನಡೆಯುತ್ತಿರುವ ನಿರಂತರ ಯುದ್ಧವನ್ನು ತಡೆಯಲಸಾಧ್ಯ. ಆದ್ದರಿಂದ.... ವೆಂಕಟ್ಟನಾಳಿನ ಯಾವುದೋ ಡಿಬೇಟಿಗೆ ಉರು ಹೊಡೆಯುತ್ತಿದ್ದ ಭಾಷಣವನ್ನು. ಅಬ್ಬ! ಎಷ್ಟು ನಿಜ. ನಾನೇ ಸಾಕ್ಷಿ ಆ ಮಾತಿಗೆ ಎನ್ನಿಸಿತು ಉಷಾಳಿಗೆ.

ಬೇಡ ಬೇಡವೆಂದರೂ ಕಾಡಿ ಬರುವ ಯೋಚನೆಗಳಿಂದ ಮುಕ್ತಿ ಇಲ್ಲವೇ! ಇಲ್ಲ, ಖಂಡಿತಾ ಮುಕ್ತಿ ಇಲ್ಲ. ಏನೇ ಆಗಲಿ ನಾನು ಶರಣಾಗಲೇ ಬೇಕು 'ಆತನಲ್ಲಿ'.

ಆದರೆ ಎರಡು ವರ್ಷದ ಹಿಂದೆ ಮುರಳೀಧರ ಇತ್ತ ಆಹ್ವಾನವನ್ನು ತಿರಸ್ಕರಿಸಿದ್ದೆಯಲ್ಲಾ. ಈಗ ಹೇಗೆ ಪುನಃ ಕೇಳುತ್ತಿ?

ಮತ್ತೆ ಇನ್ನೇನು ಒಂದೆರಡು ವಾರದೊಳಗೆ ಅವರು ಅಮೇರಿಕಾಕ್ಕೆ .... ಅದರೊಳಗೆ ಅವರಿಗೆ ಮದುವೆ ಬೇರೆ ಆಗುತ್ತಂತೆ. ಇವತ್ತು ರಾತ್ರಿಯೇ ಅವರೂರಿಗೆ ನಮ್ಮೂರಿಗೆ ಹೋಗ್ತಾರೆ ..ದೇವರೇ .. ಹೊರಟೇ ಹೋಗ್ತಾರೆ....ಎಂದುಕೊಳ್ಳುತ್ತಾ ಮೇಲೆ ನೋಡಿದಳು.

ಬುದ್ಧನ ಮೂರ್ತಿ ಅದರ ಪಾದದಡಿಯಲ್ಲಿ ಹಲಗೆ....ನೂರಾರು ಬಾರಿ ಭಾರೀ ಭಾರೀ ಪ್ರತಿಜ್ಞೆ ಮಾಡಿದ್ದೇನಲ್ಲಾ ಈ ಮೂರ್ತಿಯ ಮುಂದೆ. ಅದೇ ಪ್ರಶಾಂತ ಮುಖದಿಂದ ಎಂಥಾ ಶಾಂತಿ ಬರುತ್ತಿದೆ. ಅಬ್ಬ! ತಡೆಯಲಾರೆ. ಮೈಗೆ ಮಂಜು ಸುರಿದ್ಹಾಗೆ ಆಗ್ತಾ ಇದೆ.

ಕೂಡಲೆ ಎದ್ದು ಹೋಗಿ ಸ್ಟ್ಯಾಂಡಿನಿಂದ ಆ ಮೂರ್ತಿಯನ್ನು ತೆಗೆದು ಬೀರುವಿನಲ್ಲಿಟ್ಟಳು. ಅಲ್ಲಿಯೇ ಮೂಲೆಯಲ್ಲಿತ್ತು ರಾಧಾಕೃಷ್ಣರ ವಿಗ್ರಹ. ವಿಮಲ ತನ್ನ ಹುಟ್ಟು ಹಬ್ಬದ ದಿನ ಕೊಟ್ಟ ಉಡುಗೊರೆ—ದಂತದಲ್ಲಿ ಮಾಡಿದ್ದು. ಶ್ರೀಕೃಷ್ಣನ ಮಧುರ ಸನ್ನಿಧಾನದಲ್ಲಿ ರಾಧೆ ಮೈಮರೆತು ಆಸನಾಗಿಯೆ ನಿಂತಿದ್ದಾಳೆ—ತನ್ನ ಕೈಯ ಮಾಲೆಯನ್ನು ಆತನ ಕೊರಳಿಗರ್ಪಿಸಿ. ಜಗಕ್ಕೆ ಅಮರ ಪ್ರೇಮಸಂದೇಶ ಬೀರುವ ಗಂಭೀರ ಮಂದಹಾಸದಿಂದ ನಿಂತಿರುವ ಮುಕುಂದನ ಕೈ ಆಕೆಯ ಸೊಂಟವನ್ನು ಬಳಸಿದೆ. ಕೆಳಗೆ ವಿಮಲ ಬರೆದ ಚೀಟಿ ಇನ್ನೂ ಇದೆ. ತುಂಟಿ ವಿಮಲ ಏನೇನೋ ಬರೆದಿದ್ದಾಳೆ.

"ಮುರಳಿದನಿಯೂ ಮೋಹಮಾಯ ಕರೆವತಾ ಗೋಪರಾಯ" ಎಂದು. ಈ ಪ್ರೆಸೆಂಟ್ ಬೇಡವೆಂದರೂ ಬಿಟ್ಟಿರಲಿಲ್ಲ ವಿಮಲ. ಅದನ್ನು ತಂದು ಬೀರುವಿನಲ್ಲಿ ಮುಚ್ಚಿಟ್ಟಿದ್ದಳು. ಅದು ಯಾರಿಗೂ ಕಾಣಬಾರದು, ತನಗೂ ಎಂದು. (ಆದರೆ ಎಷ್ಟೋಸಲ ಮೆಲ್ಲನೆ ಬಾಗಿಲು ತೆಗೆದು ಅದನ್ನು ಕದ್ದು ನೋಡುತ್ತಿದ್ದಳು)

ಮೆಲ್ಲನೆ ಅದನ್ನೆತ್ತಿ ತಂದು ಬುದ್ಧ ದೇವನಿದ್ದ ಸ್ಟ್ಯಾಂಡಿನ ಮೇಲೆ ಇಟ್ಟಳು. ಈಗ ಇದರ ಕೆಳಗೆ ಆ ಅದೇ ಹಲಗೆ—"ತೃಣಮಪಿ ನ ಚಲತಿ ......"-ಅಬ್ಬ! ನಿರಾಳವಾಯಿತು ಈಗ ಮನಸ್ಸಿಗೆ.

ರಾತ್ರಿ ಹನ್ನೆರಡು ಹೊಡೆದಿದ್ದರೂ ನಿದ್ರೆ ಇಲ್ಲ. ಥೂ ಬಹಳ ಸೆಖೆ ಎಂದು ದೀಪ ಆರಿಸಿ ಕಿಟಿಕಿ ಬಾಗಿಲು ತೆರೆದಳು. ಪಕ್ಕದ ಮೈದಾನದಲ್ಲಿ ದೊಡ್ಡ ಬೆಂಕಿ ಉರಿಯುತ್ತಿತ್ತು. "ಉರಿಯುತ್ತಿದ್ದಾನೆ ಕಾಮ" ಎಂದುಕೊಂಡು ಮಲಗಿದಳು.

ಪ್ರಶಾಂತವಾದ ವಾತಾವರಣದಲ್ಲಿ ಇದ್ದಕ್ಕಿದ್ದ ಹಾಗೆ ಗಲಭೆ– ಪಕ್ಷಿಗಳ ಕಲರವದಿಂದ. ಇದುವರೆಗೂ ನಿರ್ಲಿಪ್ತನಾಗಿದ್ದ ಶಿವನ ತಪಸ್ಸಿಗೆ ಅಡ್ಡಿಯಾಯಿತು. ಮದನನ ಪುಷ್ಪಶರಗಳು ಶಂಭುವಿನ ಚಿತ್ತವನ್ನು ಕದಡಿದವು. ಪೂಜೆಗೆಂದು ಬಂದ ಗಿರಿಜೆಯನ್ನು ಚಂಚಲ ದೃಷ್ಟಿಯಿಂದ ನೋಡಿದ. ಕೂಡಲೆ ಸ್ಥಿತಿಯ ಅರಿವಾಯ್ತು. ಸುತ್ತಲೂ ನೋಡಿದ, ಮೂಲೆಯಲ್ಲಿ ನಿಂತಿದ್ದಾನೆ ಕಾಮ. ಕೋಪದ ಕಿಡಿ ಹಾರಿತು—ಹಣೆಗಣ್ಣಿನಿಂದ. ಮನ್ಮಥ ಉರಿದ! ಓಹ್...ಅದೆಂಥ ಬೆಂಕಿ! ಸ್ವರ್ಗ-ಭೂ-ಪಾತಾಳಗಳಿಗೂ ಹಬ್ಬಿತು. ಎಲ್ಲಾ ಉರಿಯುತ್ತಿದೆ. ಎಲ್ಲರೂ ಉರಿಯುತ್ತಿದ್ದಾರೆ! ಅವರ ಕಣ್ಣುಗಳನ್ನು ನೋಡಿ! ಮೈಗೆ ಹತ್ತಿದ ಉರಿ ಕಣ್ಣಿನಿಂದ ನಾಲಿಗೆ ಚಾಚುತ್ತಿದೆ! ಅಬ್ಬ ನನ್ನ ಮೈಗೂ ಬೆಂಕಿ. ಅಯ್ಯೋ ಉರಿ– ಉರಿ. ನಾನು ಉರಿಯಿಂದ ನರಳುತ್ತಿದ್ದರೂ ಇವರೆಲ್ಲಾ ನಗ್ತಿದ್ದಾರೆ ... ಪಾಪಿಗಳ .... ದೇವರೇ. .ಕಾಪಾಡು.... ಆ್ಞ ...ಇದೇನು? ಮೂರು ಇಂಚಿನ ರಾಧಾಕೃಷ್ಣರ ವಿಗ್ರಹ ಬೆಳೆಯುತ್ತಿದೆ. ಮೂರಡಿ ಆಯಿತು ಈಗ ಆಳೆತ್ತರ! ಅಬ್ಬ! ಅದೆಷ್ಟು ಎತ್ತರ! ದೇವಾ ನೀನಾದರೂ ಕಾಪಾಡು! ನೀನೇ ಗತಿ—ನಿನ್ನ ಕಾಲಿಗೆ ಬಿದ್ದೆ. ಗಟ್ಟಿಯಾಗಿ ತಬ್ಬಿಕೊಂಡೆ... ಆ್ಞ.... ಆಶ್ಚರ್ಯ.... ಮೈ ಉರಿಯುತ್ತಿದ್ದರೂ ಮನಸ್ಸು ತಂಪಾಯಿತಲ್ಲಾ! ದೇವಾ ನಿನ್ನ ಪಾದದಡಿಯೇ ಇರಬೇಕು.

"ಅತ್ತೆ— ಪೋಸ್ಟ್‌ಮ್ಯಾನ್ ಬಂದಿದ್ದಾನೆ. ಟೆಲಿಗ್ರಾಂ ಬಂದಿದೆಯಂತೆ. ಏಳಿ ಅತ್ತೆ" ಎಂದು ಕಿಟ್ಟ ಎಬ್ಬಿಸಿದ.

ಗಟ್ಟಿಯಾಗಿ ದಿಂಬನ್ನು ತಬ್ಬಿಕೊಂಡಿದ್ದ ಉಷಾ ಕಣ್ಣುಬಿಟ್ಟಳು. "ಆ್ಞ ಟೆಲಿಗ್ರಾಂ? ಬಂತೆ" ಎನ್ನುತ್ತಾ ಕೂಡಲೆ ಮೇಲೆದ್ದು ಸೀರೆ ಸೆರಗನ್ನು ಸರಿಪಡಿಸಿಕೊಂಡು ಬಾಗಿಲ ಬಳಿಗೋಡಿದಳು. ಸಹಿ ಮಾಡಿ ಟೆಲಿಗ್ರಾಂ ಪಡೆದು ಅವರು ಒಡೆದು ಓದಿದಳು.

"Muralidhara Serious—accident— Start Immediately"—Venkateshiah.

ಗಾಬರಿಯಾಯಿತು. ಮುರಳೀಧರಗೆ ಅಪಘಾತವೇ! ಹಾಗಾದರೆ ಅಪ್ಪ ಯಾಕೆ ಟೆಲಿಗ್ರಾಂ ಕೊಡಬೇಕು? ಒಂದೂ ಅರ್ಥವಾಗಲಿಲ್ಲ—ಕೂಡಲೆ ಹೊರಡಬೇಕೆಂಬುದೊಂದನ್ನು ಬಿಟ್ಟು.

ಲಗುಬಗೆಯಿಂದ ಹೊರಟಳು, ಸಣ್ಣ ಕೈಚೀಲವೊಂದನ್ನು ಹಿಡಿದುಕೊಂಡು ಬೇಗನೆ ಬಸ್‌ಸ್ಟ್ಯಾಂಡಿಗೆ ಬಂದಳು. ಇನ್ನೇನು ಕಾಲು ಘಂಟೆಗೆ ಬೆಂಗಳೂರಿಗೆ ಹೋಗೋ ಎಕ್ಸ್‌ಪ್ರೆಸ್ ಹೊರಡುತ್ತೆ. ಬಸ್ಸಿನಲ್ಲಿ ಕುಳಿತಳು. ಮನಸ್ಸು ಯಾವಾಗಲೋ ಮಂಡ್ಯ ಸೇರಿತ್ತು. ಈ ಬಸ್ಸು ಮಾತ್ರ ಬಹಳ ನಿಧಾನ. ಥೂ ಎಂದು ಕೊಂಡಳು. ಎಷ್ಟು ಸಾರಿ 'ದೇವರೇ" ಅಂತಂದು ಕೊಂಡಳೋ ಅವಳಿಗೇ ಲೆಕ್ಕವಿಲ್ಲ.

ಅಂತೂ ಮಂಡ್ಯ ಸೇರಿದಾಗ ಬಿಸಿಲೇರಿತ್ತು. ಬೇಗ ಬೇಗನೆ ಮನೆ ಸೇರೋಣವೆಂದರೆ ಈ ಕುಂಟ ಕಾಲೊಂದು. ಥೂ ಎಂದುಕೊಂಡು ಗಾಡಿ ಮಾಡಿಕೊಂಡು ಮನೆಗೆ ಬಂದಳು.

ಬಾಗಿಲಲ್ಲೇ ತಂದೆ ಇದ್ದಾರೆ. ಅವರ ಮುಖ ಬಾಡಿದ ಹಾಗಿದೆಯಲ್ಲಾ...ಹಾದೆ?...."ಓ ಬಾರಮ್ಮ. ಆಗಲೇ ಬಂದು ಬಿಟ್ಟೆಯಾ? ಕಾಗದ ಹಾಕಿದ್ರೆ ನಾ ಸ್ಟ್ಯಾಂಡಿಗೆ ಬರ್ತಿದ್ದೆನಲ್ಲ...' ಎಂದರು.

'ಇದೇನಪ್ಪ ಹೀಗಂತೀರಿ? ಮುರಳಿಗೆ ಹ್ಯಾಗಿದ್ದಾರೆ" ನೀವೇ ಬಾ ಅಂತ ತಾರು ಕೊಟ್ಟಿದ್ದಿರಲ್ಲ. ಎನ್ನುತ್ತಾ ಕೈಯಲ್ಲಿದ್ದ ತಾರು ಕೊಟ್ಟಳು. ಅದನ್ನೋದಿ ಅವರು ನಗುತ್ತಾ 'ಓ! ಎಲ್ಲಾ ಆವನ ಕೆಲಸ— ಮುರಳೀದು! ತುಂಟ ಹುಡುಗ ಮದುವೆ ನಿಶ್ಚಯವಾಗಿದೆ ಬೇಗ ಬಾ ಅಂತ ತಾರು ಕೊಡು ಅಂದ್ರೆ...."

"ಆ್ಞ ಮದುವೆ!"

"ಹೌದಮ್ಮ. ಅವನೇ ನಿನ್ನ ಸೋದರಮಾವನ ಮಗ ಮುರಳೀಧರ. ಮಿಲಿಟರಿ ಸರ್ವೀಸಿನಿಂದ ರಿಟೈರಾದ ಮೇಲೆ ನಮ್ಮಲ್ಲೇ ಬಂದರು ಅವರ ತಂದೆ—ಹಿಂದಿನ ಜಗಳವನ್ನೆಲ್ಲಾ ಮರೆತು. ಹಿಂದಿನ ಮಾತನ್ನು ಉಳಿಸಿಕೊಂಡದ್ದಾಯಿತು. ಮುರಳಿ ಎಲ್ಲಾ ಹೇಳಿದ ನಿನ್ನ ಪರಿಚಯ— ಮದುವೆಗೆ ನಿನ್ನ ಒಪ್ಪಿಗೆ ಎಲ್ಲಾ —ಅಮೇರಿಕಕ್ಕೆ ಹೋಗೋ ಮುಂಚೆ ಎಲ್ಲಾ ಮುಗಿಸಿ..."

—ಇನ್ನೂ ಏನೇನೋ ಹೇಳುತ್ತಿದ್ದರು ಅಪ್ಪ. ಒಂದೂ ಕೇಳಲಿಲ್ಲ ಅವಳಿಗೆ. ಸುಮ್ಮನೆ ಮಾತನಾಡದೆ ಕುರ್ಚಿಯ ಮೇಲೆ ಕುಸಿಯುವ ವೇಳೆಗೆ ಓಡುತ್ತಾ ಬಂತು 'ಶಾಲಿ' ತನ್ನ ಯಜಮಾನಿಯನ್ನು ನೋಡಲು. ಅದರ ಹಿಂದೆಯೇ ಅದರ ಮೂರು ಪುಟ್ಟ ಮರಿಗಳೂ ಓಡಿ ಬಂದವು. 'ಓ! ಶಾಲಿ. ಬಾರೆ ತಾಯಿ' ಎನ್ನುತ್ತಾ ಒಂದು ಕೈಯಿಂದ ಅದರ ತಲೆಯನ್ನು ಮತ್ತೊಂದು ಕೈಯಿಂದ ತನ್ನ ಕುಂಟು ಕಾಲನ್ನೂ ನೇವರಿಸುತ್ತಿದ್ದಂತೆಯೇ ಅವಳಿಗೆ ರಾಧಾಕೃಷ್ಣರ ವಿಗ್ರಹದ ನೆನಪಾಯಿತು ಅದರ ಪಾದದಡಿಯಲ್ಲಿದ್ದ 'ಆ' ವಾಕ್ಯಕ್ಕೆ ಹೊಸ ಅರ್ಥ ಕಲ್ಪಿಸಿ ಮನದ ಮುರಳಿ ಹಾಡುತ್ತಿತ್ತು.

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.

ಬೆಲೆ: ಸಾದಾ ಪ್ರತಿ ರೂ. ೧

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."

—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

NAVAYUGA 15-4-1965

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೫-೪-೬೫ರಿಂದ ೨೧-೪-೬೫ರ ವರೆಗೆ

೧. ಮೇಷ

ಹೊಸ ವರ್ಷವು ನಿಮ್ಮಲ್ಲಿ ನವಚೈತನ್ಯವನ್ನು ತುಂಬಲಿದೆ. ಯಾವ ಕಾರ್ಯವೂ ನಿಮಗೆ ತೃಣಸಮವೆನಿಸುವದು. ಜನತೆಯ ಸಹಕಾರವನ್ನು ಪಡೆದ ನಿಮಗೆ ಸವತ್ರ ಸ್ಥಾನಮಾನಾದರಗಳು ಲಭಿಸಲಿವೆ. ಆರ್ಥಿಕ ಮುಗ್ಗಟ್ಟಿನಿಂದ ನೀವು ಮುಕ್ತರಾಗಿದ್ದರೂ ಸಾಂಸಾರಿಕ ತಾಪತ್ರಯಗಳಿಂದ ಪೀಡಿತರಾಗುವಿರಿ. ಮಕ್ಕಳ ಆರೋಗ್ಯವು ಚೆನ್ನಾಗಿರದು. ಅಧಿಕಾರಿಗಳ ಕಿರುಕುಳದಿಂದಾಗಿ ನೌಕರಿ ಜನರಿಗೆ ನೆಮ್ಮದಿಯಿರದು. ವಾರದ ಆದಿಯ 3 ದಿನಗಳು ಸುಖದಾಯಿಗಳಾಗಿವೆ.

೨. ವೃಷಭ

ಮನೋದೌರ್ಬಲ್ಯದಿಂದ ಬಳಲುತ್ತಿದ್ದ ನಿಮಗೆ ಇಂದಿನ ದಿನಗಳು ಸ್ವಲ್ಪ ಕಷ್ಟದಾಯಿಯಾಗಿ ಪರಿಣಮಿಸಲಿದೆ. ಪರಿಶ್ರಮಕ್ಕೆ ತಕ್ಕ ಫಲ ಸಿಗದಿದ್ದುದರಿಂದ ಏರುತ್ತಿರುವ ಖರ್ಚುವೆಚ್ಚಗಳನ್ನು ನಿರ್ವಹಿಸಲು ಹೆರವರ ಕೂಡೆ ಸಾಲ ಕಡ ಮಾಡಬೇಕಾಗಿ ಬರಲಿದೆ. ವಿಶೇಷತಃ ವಿದ್ಯೋಪಜೀವೀ ಜನತೆಗೆ ತೊಡಕು ತೊಂದರೆಗಳು ಹೆಚ್ಚಲಿರುವವು. ಗೃಹ ತಾಪತ್ರಯಗಳು ಕಾಣಸಲಾರವಾದರೂ ದೇಹಾಲಸ್ಯವು ಹೆಚ್ಚುವ ಸಂಭವವಿದೆ ತಾ. 16ರಿಂದ 20ರ ವರೆಗಿನ ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

೩. ಮಿಥುನ

ನಿಮ್ಮ ಸಂಕಲ್ಪಗಳೆಂದು ನಿರ್ವಿಘ್ನದಿಂದ ಪೂರ್ತಿಯಾಗಲಿವೆ. ಸ್ವಯಂಶಕ್ತರಾದ ನಿಮಗೆ ಸೋದರರ ನೆರವು ಲಭಿಸುವುದರಿಂದ ರಾಜಕೀಯ ಕ್ಷೇತ್ರದಲ್ಲಿ ಪ್ರಬಲರಾದ ಇದಿರಾಳಿಗಳನ್ನು ಪರಾಭವಗೊಳಿಸುವಿರಿ. ಬಂಧುಜನರ ವಿರೋಧಕ್ಕೆ ಪಾತ್ರರಾದ ನೀವು ಜನಾಪವಾದಕ್ಕೂ ಸಿಲುಕಲಿರುವಿರಿ. ಸ್ವಯಂಶಕ್ತರಾದ ನಿಮಗೆ ವಾರಾಂತ್ಯದ 4 ದಿನಗಳಲ್ಲಿ ವಿಜಯ ಧನಲಾಭ ಕೀರ್ತಿಗಳೂ ಲಭಿಸಲಿವೆ.

೪. ಕರ್ಕಟ

ನೀವೆಷ್ಟೇ ಮಿತಭಾಷಿಯಾಗಿದ್ದರೂ ಜನತೆಯ ಕೂಡೆ ಕಲಹ ನಿಷ್ಠುರಗಳಾಗಲಿವೆ. ವ್ಯಾಪಾರೀವರ್ಗಕ್ಕೆ ಹೆಚ್ಚಿನ ನಷ್ಟ ಸೋಲುಗಳುಂಟಾಗುವವು. ನಿಮ್ಮ ಹೆಚ್ಚಿನ ಕಾರ್ಯಕಲಾಪಗಳಿಗೆ ವಿರೋಧಿಗಳಿಂದ ತೊಂದರೆ ಬಗೆಲಿದೆ. ಆದರೂ ನಿಮ್ಮ ಯತ್ನಕ್ಕೆ ತಕ್ಕ ಫಲ ಲಾಭವಿರುವುದರಿಂದ ದಿನಯಾಪನೆಯು ಸುಲಭವಾದೀತು. ವ್ಯವಹಾರ ಚತುರರಾದ ನಿಮಗೆ ವಾರದ ಆದ್ಯಂತ ದಿನಗಳು ಅನುಕೂಲವಾಗಿವೆ.

೫. ಸಿಂಹ

ಧನಲಾಭಪತಿಯಾದ ಬುಧನಿಂದು ನೀಚನಾಗಿದ್ದರೂ ನಿಮ್ಮ ಭಾಗ್ಯಸ್ಥಾನದಲ್ಲಿ ಉಚ್ಚ ರವಿ ಮತ್ತು ಶುಕ್ರರು ಸೇರಿರುವುದರಿಂದ ಆರ್ಥಿಕ ಭಾಗದಲ್ಲಿ ನಿಮಗೇನೂ ಕೊರತೆ ಕಾಣಿಸದು. ಶ್ರಮಜೀವೀ ವರ್ಗದವರಿಂದ ವಿಶೇಷತಃ ವೈದ್ಯ ವಕೀಲ ವೃತ್ತಿಯವರಿಗೆ ಹೆಚ್ಚಿನ ಧನಲಾಭವಾಗಲಿವೆ. ವ್ಯಾಪಾರದಲ್ಲಿ ನಿರೀಕ್ಷಿಸಿದ ಗುರಿಯನ್ನು ಸೇರುವಿರಿ. ಆದರೆ ಪಿತ್ಥದೋಷದಿಂದ ಆರೋಗ್ಯ ಕೆಟ್ಟೀತು. ತಾ. 16, 17 ಮಾತ್ರ ನಿಮ್ಮ ಇಷ್ಟಾರ್ಥಗಳನ್ನು ಪೂರೈಸಲಿವೆ.

೬. ಕನ್ಯಾ

ಕಷ್ಟ ಸಹಿಷ್ಣುಗಳಾದ ನಿಮಗೆ ಎಂತಹ ದುಃಸಾಧ್ಯವಾದ ಕಾರ್ಯವೂ ತೃಣ ಸಮವೆನಿಸೀತು. ಶತ್ರುಜನರ ಕಾಟವು ವಿಶೇಷವಾಗಿದ್ದರೂ ಆರಂಭಿಸಿದ ಕಾರ್ಯವನ್ನೆಂದಿಗೂ ಮಧ್ಯದಲ್ಲಿ ಕೈಬಿಡಲಾರಿರಿ. ಬಂಧುಮಿತ್ರರ ನೆರವಿಂದು ಸಾಕಷ್ಟು ಲಭಿಸುವುದರಿಂದ ದಿನಯಾಪನೆಯು ಸುಗಮವಾದೀತು. ಆದರೂ ಗೃಹತಾಪತ್ರಯ ಕೋರ್ಟು ವ್ಯವಹಾರಗಳು ನಿಮ್ಮ ಮನಶ್ಶಾಂತಿಯನ್ನು ಕೆಡಿಸಲಿವೆ. ತಾ. 15, 18, 19, 20 ಈ ದಿನಗಳಲ್ಲಿ ಗೃಹಸುಖ, ಧನಲಾಭಗಳು ಲಭಿಸಲಿವೆ.

೭. ತುಲಾ

ಧನಲಾಭಪತಿಗಳಾದ ಕುಜರವಿಗಳು ಪರಸ್ಪರ ಸ್ಥಾನ ವಿನಿಮಯದಿಂದ ಲಾಭ ಮತ್ತು ಉಚ್ಚ ಸ್ಥಾನಗಳನ್ನಾಕ್ರಮಿಸಿರುವುದರಿಂದ ಈ ವಾರದಲ್ಲಿ ಹಲವಾರು ತೆರದಿಂದ ನಿಮಗೆ ಧನಲಾಭವಾಗಲಿದೆ. ಹಿಂದಿನ ಸಾಲ ಕಡಗಳಿಂದ ಮುಕ್ತರಾಗಿ ನಿಶ್ಚಿಂತೆಯಿಂದ ಕಾಲ ಕಳೆವಿರಿ. ಸೋದರ ವರ್ಗದೊಳು ಕಲಹ ಮನಸ್ತಾಪಗಳುಂಟಾದಾವು. ಗುರು ಹಿರಿಯರ ಆಗ್ರಹಕ್ಕೆ ಪಾತ್ರರಾದ ನಿಮಗೆ ತಾ. ತಾ. 16, 17, 21 ಈ ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿವೆ.

೮. ವೃಶ್ಚಿಕ

ಶನಿಗುರುಗಳ ನೇರ ದೃಷ್ಟಿಯು ನಿಮ್ಮ ಮೇಲಿರುವ ಕಾರಣ ಯಾವೊಂದು ತೆರದ ಅನರ್ಥ ಅಪಾಯಗಳೂ ನಿಮಗಿಂದು ಪ್ರಾಪ್ತವಾಗಲಾರವು. ದಕ್ಷರಾದ ನಿಮಗೆ ಕೋರ್ಟು ಕಛೇರಿಗಳ ವ್ಯವಹಾರಗಳಲ್ಲೂ ರಾಜಕೀಯ ಕ್ಷೇತ್ರಗಳಲ್ಲೂ ವಿಜಯವು ಸುಲಭ ಸಾಧ್ಯವಿಹುದು. ಗೃಹ ತಾಪತ್ರಯಗಳಿಂದ ಮನಸ್ಸಿಗೆ ನೆಮ್ಮದಿ ದುರ್ಲಭವಾದೀತು. ತಾ. 15, 18, 19, 20 ಈ ದಿನಗಳಲ್ಲಿ ಮಿತ್ರರ ಭೆಟ್ಟಿ ಸುಭೋಜನ ದೊರೆಯಲಿದೆ.

೯. ಧನು

ನಿಮ್ಮ ದೈವವು ದಿನದಿಂದ ದಿನಕ್ಕೆ ಕೃಷ್ಣಪಕ್ಷದ ಚಂದ್ರನಂತೆ ಕ್ಷೀಣಿಸುತ್ತ ಬರುತ್ತಿದೆ. ಹಿಂದಿನ ಸುಖಸೌಕರ್ಯಗಳು ಸ್ಥಾನಮಾನಗಳು ಇಂದು ನಿಮಗೆ ಲಭಿಸಲಾರವು. ಮಾತ್ರವಲ್ಲ, ಕಫ ಪಿತ್ಥ ದೋಷದಿಂದ ಆರೋಗ್ಯವೂ ಹಾಳಾಗಲಿದೆ. ಮಕ್ಕಳ ಮೂಲಕ ಧನಾಗಮವಾಗುವ ಯೋಗವಿದೆ. ಬಲಿಯರಾದ ಶತ್ರುವರ್ಗದವರನ್ನು ದಮನಿಸಲು ಶಕ್ತರಾದ ನಿಮಗೆ ತಾ. 15, 16, 17, 21 ಈ ದಿನಗಳು ಅನುಕೂಲವಾಗಿವೆ.

೧೦. ಮಕರ

ಭಾಗ್ಯಪನಾದ ಬುಧನು ನೀಚನಾಗಿದ್ದು ಲಾಭಪತಿಯಾದ ಅಂಗಾರಕನೂ ಅಷ್ಟಮದಲ್ಲಿಹ ಕಾರಣ ಈ ವಾರದಲ್ಲಿ ನಿಮಗೆ ಹಣದ ಅಡಚಣೆ ವಿಶೇಷವಾಗಲಿದೆ. ವಿರೋಧಿಗಳ ಉಪಟಳದಿಂದ ಹೆಚ್ಚಿನ ಕಾರ್ಯವನ್ನು ಅರ್ಧದಲ್ಲೇ ಕೈಬಿಡುವ ಪ್ರಸಂಗಗಳೂ ಬರಬಹುದು. ಆದರೂ ಜನತೆಯ ಸಹಕಾರ ಸಹಾನುಭೂತಿಯು ನಿಮ್ಮ ಮೇಲಿರುವುದರಿಂದ ಸಕಾಲದಲ್ಲಿ ನಿಮಗವರು ನೆರವಾಗಲಿರುವರು. ತಾ 16ರಿಂದ 20ರ ವರೆಗಿನ ದಿನಗಳು ಸುಖಾಂತಗಳಾಗಿ ಪರಿಣಮಿಸಲಿವೆ

೧೧. ಕುಂಭ

ಹಿಂದಿನ ಶಕ್ತಿ ಉತ್ಸಾಹಗಳು ನಿಮ್ಮಲ್ಲಿಂದು ಇಲ್ಲವಾದರೂ ದಿನಯಾಪನೆಗೆ ಸಾಕಷ್ಟು ದುಡಿಯಲಿರುವಿರಿ. ಉದ್ಯೋಗ ವ್ಯಾಪಾರಾದಿಗಳಲ್ಲಿ ಪರಿಶ್ರಮವು ಸಾರ್ಥಕವೆನಿಸುವದು. ಪ್ರವಾಸಿಗಳಿಗೆ ತೀರ್ಥಕ್ಷೇತ್ರಾದಿಗಳ ದರ್ಶನ ಯೋಗವಿದೆ. ರಾಜಕೀಯದಲ್ಲಿ ಕೊಂಚ ವಿಘ್ನ ವಿದ್ರೋಹಗಳು ಬಂದರೂ ಪರಿಣಾಮವು ನಿಮ್ಮಂತೆಯೇ ಆಗಲಿದೆ. ಆರೋಗ್ಯದತ್ತ ಕೊಂಚ ನಿಗಾ ವಹಿಸಿರಿ. ವಾರಾಂತ್ಯದ 3 ದಿನಗಳು ಅನುಕೂಲವಾಗಿವೆ.

೧೨. ಮೀನ

ಆಯಕ್ಕಿಂತ ದ್ವಿಗುಣವಾಗಿ ವ್ಯಯಗಳು ಪ್ರಾಪ್ತವಾಗುವುದರಿಂದ ನೀವೆಷ್ಟೇ ದುಡಿದರೂ ದಿನಾಂತ್ಯದಲ್ಲಿ ಕೈ ಬರಿದಾಗಲಿದೆ. ಮಾತ್ರವಲ್ಲ, ಕೆಲವೊಮ್ಮೆ ಸಾಲ ಮಾಡುವ ಪರಿಸ್ಥಿತಿಯುಂಟಾದೀತು ಗೃಹ ತಾಪತ್ರಯಗಳಿಂದಾಗಿ ಮನಸ್ಸಿಗೆ ನೆಮ್ಮದಿಯಿರಲಾರದು. ಹಿರಿಯವರ ಶನಿಯಿಂದಾಗಿ ಅನಿರೀಕ್ಷಿತ ಅನರ್ಥಗಳು ಪ್ರಾಪ್ತವಾಗಲಿವೆ. ಆದರೂ ಸಾಹಸಿಗಳಾದ ನಿಮಗೆ ವಾರದ ಅದ್ಯಂತ ದಿನಗಳು ಸುಖ ನೆಮ್ಮದಿಯನ್ನು ಕೊಡಲಿವೆ.

ಕನಕದಾಸರ ಸ್ಮಾರಕ ಕೀರ್ತನೆ ಸ್ಪರ್ಧೆ

ಉಡುಪಿ, ಮಾರ್ಚ 31: ಉಡುಪಿಯಲ್ಲಿ ಇದೇ ಎಪ್ರಿಲ್ ತಾ 24, 25, ಮತ್ತು 26ರಂದು ರಾಜ್ಯಮಟ್ಟದಲ್ಲಿ ಜರಗಲಿರುವ ಶ್ರೀ ಕನಕದಾಸರ ಚತುರ್ಥ ಶತಮಾನೋತ್ಸವದ ಅಂಗವಾಗಿ ದಾಸರ ಕೀರ್ತನೆಗಳನ್ನು ಹಾಡುವ ಸ್ಪರ್ಧೆಯೊಂದನ್ನು ಏರ್ಪಡಿಸಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸಲು ವೃತ್ತಿಪರ ಸಂಗೀತಗಾರರನ್ನುಳಿದು, ಇತರರೆಲ್ಲಾ ಪ್ರವೇಶವಿದ್ದು, ಪ್ರವೇಶ ಧನ ರೂಪಾಯಿ ಒಂದು ಆಗಿರುತ್ತದೆ. ಪ್ರಥಮ ಮೂರು ಸ್ಥಾನಗಳನ್ನು ಪಡೆದವರಿಗೆ ರೂ. 100, ರೂ. 75 ಮತ್ತು ರೂ. 50ರ ಮೂರು ನಗದು ಬಹುಮಾನಗಳಲ್ಲದೆ, ನಿರ್ಣಾಯಕರ ದೃಷ್ಟಿಯಲ್ಲಿ ಯೋಗ್ಯ ಕಂಡ ಸ್ಪರ್ಧಾಳುಗಳಿಗೆ ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಉತ್ತಮ ವಿದ್ವಾಂಸರಿಂದ ಕೂಡಿದ ನಿರ್ಣಾಯಕ ಸಮಿತಿಯು ಸ್ಪರ್ಧೆಯಲ್ಲಿ ಸ್ಥಾನವನ್ನು ನಿರ್ಧರಿಸುವುದು.

ಸ್ಪರ್ಧೆಯಲ್ಲಿ ಭಾಗವಹಿಸುವವರು ಕೇವಲ ಕನಕದಾಸರ ಕೀರ್ತನೆಗಳನ್ನು ಆರಿಸಿ, ಯಾವುದೇ ಪದ್ಧತಿ ಅಥವಾ ವೈಖರಿಯಲ್ಲಿ ಹಾಡಬಹುದು. ಸ್ಪರ್ಧಾಳುಗಳು ಯಾವ ಹಿಮ್ಮೇಳ ಅಥವಾ ಸಂಗಡಿಗರ ನೆರವಿಲ್ಲದೆ, ಶ್ರುತಿ ಹಿಡಿದು ಹಾಡತಕ್ಕದ್ದು. ಸ್ಪರ್ಧೆಯು ಎಪ್ರಿಲ್ 25 ಮತ್ತು 26ರಂದು ಪೂರ್ವಾಹ್ನ ಉಡುಪಿಯ ವಿ. ಜೆ. ಯು. ಕ್ಲಬ್ಬಿನ ಮರಾರದಲ್ಲಿ ನಿರ್ಮಿತವಾಗಲಿರುವ ಕನಕ ಮಂಟಪದಲ್ಲಿ ಜರಗಲಿದ್ದು, ಸ್ಪರ್ಧೆಯ ನಿಶ್ಚಿತ ದಿನ, ಸಮಯ ಮತ್ತಿತರ ವಿವರಗಳನ್ನು ಸ್ಪರ್ಧಾಳುಗಳಿಗೆ ಪ್ರತ್ಯೇಕ ತಿಳಿಸಲಾಗುವುದು. ಭಾಗವಹಿಸಲಿಚ್ಛಿಸುವವರು ಪ್ರವೇಶ ಧನ ರೂ. 1 ಸಹಿತ ತಮ್ಮ ಹೆಸರು ಮತ್ತು ವಿಳಾಸವನ್ನು ಕಾರ್ಯದರ್ಶಿ, ಶ್ರೀ ಕನಕದಾಸರ ಉತ್ಸವ ಸಮಿತಿ, ಕೇರಾಫ್ ಸಂಗೀತ ಸಭಾ, ಉಡುಪಿ ಇವರಿಗೆ ಏಪ್ರಿಲ್ ತಾ. 18ರೊಳಗೆ ತಲಪುವಂತೆ ಕಳುಹಿಸತಕ್ಕದ್ದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ —
ಡಾ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ —
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ ಎರಡೂವರೆ (ಟ ಖ, ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ. ಎರಡು (ಟ ಖ. ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ,
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

Edited, Printed & Published by K. H. Shetty at the Navayuga Press, Udipi, S. India.

ನವಯುಗ

Phone No
ಫೋನ್ ಸಂಖ್ಯೆ : 226

NAVAYUGA

leading nationalist weekly

೨೦ ಪೈಸೆ

ಕಥಾ ಪ್ರಪಂಚ

ಬರಿಯ ನಾಲ್ಕಾಣೆಯಿಂದ . . .

ಅನುವಾದ
ಶ್ರೀ ಬಿ. ನರಸಿಂಗರಾವ್.

ಬಿಂಪೋರಿನ ಮಹಾರಾಜರಿಗೆ ಆಟದಲ್ಲೇನೂ ವಿಶೇಷ ಆಸಕ್ತಿಯಿರಲಿಲ್ಲ. ಇತರ ಪಾಳೇಗಾರರೊಡನೆ, ಐ. ಸಿ. ಎಸ್. ಆಫೀಸರರೊಡನೆ ಆಗಾಗ ಅವರು ಜಿಮಖಾನೆಯ ಟೆನಿಸ್ ಪಂದ್ಯವನ್ನು ವೀಕ್ಷಿಸಲು ಹೋಗುತ್ತಿದ್ದರು. ಆಟವನ್ನು ನೋಡುತ್ತಾ ವೀಕ್ಷಕರಲ್ಲಿದ್ದ ಕೆಲ ಆಫೀಸರರು, ಶ್ರೀಮಂತರು ಪ್ರಸನ್ನರಾಗುತ್ತಿದ್ದುದನ್ನು ಕಂಡು ಮಹಾರಾಜರಿಗೂ ಆಟದಲ್ಲಿ ಒಂದು ತರದ ಆಸಕ್ತಿ ಕುದುರಿತ್ತು.

ಸೆಕ್ರೆಟರಿಯ ಹೇಳಿಕೆಯನ್ನನುಸರಿಸಿ ಮಹಾರಾಜರು ಟೆನಿಸ್ ಸಿಂಗಲ್ಸ್‌ನಲ್ಲಿ ವಿಜೇತನಿಗೆ ಟ್ರೊಫಿಯನ್ನು ಘೋಷಿಸಿದರು. ಆಟವು ಮುಗಿಯುತ್ತಲೆ ಇತರರೊಡನೆ ಮಹಾರಾಜರೂ ಆಟಗಾರರ ಹಸ್ತಲಾಘವ ಮಾಡಿದರು. ಇದರಿಂದ ರಾಜರಿಗೆ ಒಂದು ವಿಧದ ತೃಪ್ತಿಯುಂಟಾಗಿತ್ತು.

ಆಟದ ಮರುದಿನ ಸೆಕ್ರೆಟರಿ ಮಹಾಶಯರು ರಾಜರಿಗೆ ಆ ದಿನದ ಇಂಗ್ಲಿಷ್ ದೈನಿಕವನ್ನು ತಂದು ತೋರಿಸಿದರು. ಮಹಾರಾಜರ ಚಿತ್ರವು ಅದರಲ್ಲಿ ಮುದ್ರಿತವಾಗಿತ್ತು. ಚಿತ್ರದಲ್ಲಿ ಸಿಂಗಲ್ಸ್ ವಿಜೇತ ಶ್ರೀ ಇರ್ಶಾದನೊಡನೆ ಮಹಾರಾಜರು ಕೈಕುಲುಕುತಿದ್ದರು. ಪತ್ರಿಕೆಯ ಎರಡು ಕಲಮಿನಲ್ಲಿ ರಾಜರ ಉದಾರತೆಯನ್ನೂ, ಆಟದಲ್ಲಿ ಪ್ರಕಟಿಸಿದ ಆಸಕ್ತಿಯನ್ನೂ ಪ್ರಶಂಸಿಸಲಾಗಿತ್ತು. ಅಂದಿನಿಂದ ರಾಜರಿಗೆ ಆಟದಲ್ಲಿ ಆಸಕ್ತಿಯು ಅಧಿಕವಾಗತೊಡಗಿತು. ಟೆನಿಸ್ ಆಟದಲ್ಲಿ ಉಪಯೋಗಿಸಲ್ಪಡುತಿದ್ದ ಇಂಗ್ಲಿಷ್ ಶಬ್ದಗಳು ಮಹಾರಾಜರ ನಾಲಿಗೆಯಲ್ಲಿ ಕುಣಿಯತೊಡಗಿದವು. ಟೆನಿಸ್ ಬೋಲ್‌ನ ಭಾರ, ಅದನ್ನು ತಯಾರಿಸುವ ಕಂಪೆನಿಯ ಹೆಸರು ರಾಜರು ಸೆಕ್ರೆಟರಿಯೊಡನೆ ವಿಚಾರಿಸಿ ತಿಳಿದುಕೊಂಡರು. ಯಾವುದಾದರೂ ಪತ್ರಿಕೆಯಲ್ಲಿ ಟೆನಿಸ್‌ನ ಕುರಿತು ಸಮಾಚಾರವನ್ನು ಅಕ್ಷರ ಜ್ಞಾನವಿಲ್ಲದ ಮಹಾರಾಜರು ಸೆಕ್ರೆಟರಿಯಿಂದ ಓದಿಸಿ ಕೇಳುತಿದ್ದರು. ಪ್ರಯಾಣ ಮಾಡುತ್ತಿರುವಾಗ ಟೆನಿಸ್ ರ್ಯಾಕೆಟ್ ರಾಜರ ಒಡನಾಡಿಯೇ ಆಯಿತು. ಸಂಜೆಯಾಗುತ್ತಲೇ ಮಸ್ಸೋರಿಯ ತಮ್ಮ ಅರಮನೆಯಿಂದ ರಾಜರು ತಮ್ಮ ಬಣಗಿ ಶಿಥಿಲವಾದ ಶರೀರವನ್ನು ಉಣ್ಣೆಯ ಕೋಟಿನಿಂದ ಮುಚ್ಚಿ ಇತರ ಆಫೀಸರರೊಡನೆ ರಿಕ್ಷಾ ಸವಾರರಾಗಿ ಟೆನಿಸ್ ಮೈದಾನಿಗೆ ಹೊರಡುವುದು ರೂಢಿಯಾಗಿತ್ತು. ಈಗ ಅವರನ್ನು 'ಟೆನ್ನಿಸ್‌ನ ರಕ್ಷಕ' ಎಂಬ ಬಿರುದನ್ನು ಇತ್ತು ಗೌರವಿಸಲಾಗಿತ್ತು.

ಇರ್ಶಾದ್ ಹುಸೇನನಿಗೆ ತನ್ನ ಜೀವನದ ಅತ್ಯಮೂಲ್ಯ ಪ್ರಿಯ ವಸ್ತು ಟೆನ್ನಿಸ್ ರ್ಯಾಕೆಟ್ ಆಗಿತ್ತು. ಕಾಲೇಜ್ ಟೂರ್ನಿಯಲ್ಲಿ ವಿಜೇತನಾಗಿ ಪುರಸ್ಕಾರ ರೂಪವಾಗಿ ಆ ಬೆಲೆಬಾಳುವ ರ್ಯಾಕೆಟ್ ಆತನಿಗೆ ದೊರಕಿತ್ತು. ಇದೇ ರ್ಯಾಕೆಟ್ ಆತನಿಗೆ ಸಮಾಜದ ಆಢ್ಯ, ಗೌರವಾನ್ವಿತ ವ್ಯಕ್ತಿಗಳ ಗೆಳೆತನವನ್ನೂ ಗಳಿಸಿ ಕೊಟ್ಟಿತು. ದೊಡ್ಡದೊಡ್ಡ ಐ. ಸಿ. ಎಸ್. ಆಫೀಸರರು, ತಾಲೂಕುದಾರರು ನಗು-ನಗುತ್ತಾ ಆತನೊಡನೆ ಹಸ್ತಲಾಘವ ಮಾಡುತಿದ್ದರು. ವಿಶ್ವವಿದ್ಯಾಲಯದ ಪರೀಕ್ಷೆಯಲ್ಲಿ ಹೆಚ್ಚಿನ ಬುದ್ಧಿವಂತಿಕೆಯನ್ನು ಪ್ರಕಟಿಸದಿದ್ದರೂ, ಒಬ್ಬ ಪ್ರಮುಖ ವಿದ್ಯಾರ್ಥಿಯೇ ಆಗಿದ್ದನು. ಮನೆಯಲ್ಲಿ ದಾರಿದ್ರ್ಯವು ಅಟ್ಟಹಾಸಗೈಯುತ್ತಿದ್ದರೂ ಸಂಪನ್ನರ, ಮಹಾರಾಜರ ಆದರಕ್ಕೆ ಆತನು ಪಾತ್ರನಾಗಿದ್ದನು. ಜಸ್ಟಿಸ್ ವಿಲ್ಸನ್‌ನು ಆತನ ಕೈಕುಲುಕಿದ್ದರೆ, ಕಲೆಕ್ಟರ್ ಮಹಾರಾಯರು ಆತನಿಗೆ ಶೇಕ್‌ಹೇಂಡ್ ಕೊಟ್ಟಿದ್ದರು. ಬಿಂಪೋರಿನ ಮಹಾರಾಜರು ಚಹಪಾನಕ್ಕೆ ಆತನನ್ನು "ಕಾರ್ಲಟನ್" ಹೋಟೆಲಿಗೆ ಆಮಂತ್ರಿಸಿದ್ದರೆ, ಬಿಲ್ಲೂರಿನ ನವಾಬರು ಆತನನ್ನು "ರೋಯಲ್"ನಲ್ಲಿ ಸತ್ಕರಿಸಿದ್ದರು.

ಟೆನಿಸ್ ಆಟದಲ್ಲಿ ಇರ್ಶಾದನು ವಿಜಯಿಯಾದರೂ ಜೀವನದ ಸಮಸ್ಯೆಯು ಬಗೆಹರಿಯಲಿಲ್ಲ. ಅದೊಂದು ಗೆಲ್ಲಲಾರದ ಆಟವೇ ಆಗಿತ್ತು. ಮನೆಯ ಹಿರಿಯ ಹುಡುಗನಾಗಿದ್ದ ಆತನಿಗೆ ಕುಟುಂಬವನ್ನು ಸಲಹುವ ಭಾರವನ್ನು ಹೊರದೆ ನಿರ್ವಾಹವೇ ಇರಲಿಲ್ಲ. ಇರ್ಶಾದನು ತಂದೆ ಮಿಂಯಾ ಶಾಹನ್‌ಶಾಹ ಹುಸೇನರು ಕಲೆಕ್ಟರ ಕಛೇರಿಯಲ್ಲಿ ಒಬ್ಬ ಕಾರಕೂನರಾಗಿದ್ದರು. ನವಾಬರ ಕಾಲದಲ್ಲಿದ್ದ ಆ ಸಡಗರವೇನೂ ಈಗ ಇರಲಿಲ್ಲ; ಬದಲಾಗಿ ಹೊಟ್ಟೆ ಹೊರೆಯುವುದೇ ಒಂದು ಪ್ರಶ್ನೆಯಾಗಿತ್ತು. ತಂದೆಯವರಿದ್ದಷ್ಟು ಸಮಯ ಮನೆಯನ್ನು ಸಾಕಷ್ಟು ಚಲೋ ರೀತಿಯಲ್ಲಿ ನಡೆಸಿಕೊಂಡು ಬಂದಿದ್ದರು. ಮಕ್ಕಳಿಗೆ ಶಿಕ್ಷಣವಿತ್ತು. ಕುಟುಂಬ ಹಳಿದು ಹೋಗುವುದನ್ನು ತಡೆದಿದ್ದರು. ತಂದೆಯ ಆಶಾದೀಪವಾಗಿದ್ದ ಇರ್ಶಾದನನ್ನು ಭವಿಷ್ಯದೆಡೆಗೆ ನಡೆಸುವ ಮೊದಲೇ ಅಲ್ಲಾನು ಅವರನ್ನು ತನ್ನೆಡೆಗೆ ಕರೆದಿದ್ದನು!

ಸಿಂಹವು ಹಸಿವಿನಿಂದಾದರೂ ಸತ್ತೀತು ಆದರೆ ಹುಲ್ಲನ್ನೆಂದಿಗೂ ತಿನ್ನಲಾರದು. ಸಮಾಜದಲ್ಲಿ ಗೌರವಿತನಾದ ಒಬ್ಬ ವ್ಯಕ್ತಿಯು ಹಸಿವನ್ನು ಸಹಿಸಿಯಾದರೂ ತಲೆಯೆತ್ತಿ ಬಾಹ್ಯ ಆಡಂಬರಗಳಿಂದ ನಡೆಯುವುದು ಲೋಕ ರೂಢಿ. ತಂದೆಯ ಮರಣದ ನಂತರ ಮನೆಯಲ್ಲಿ ಹಲವಾರು ಕಷ್ಟಗಳಿದ್ದರೂ ಇರ್ಶಾದನೂ, ಆತನ ತಮ್ಮಂದಿರೂ ತಮ್ಮ ಮೊದಲಿನ ಆಡಂಬರದಿಂದ ಮುಕ್ತರಾಗಲಿಲ್ಲ. ಮನೆಯ ಅವಸ್ಥೆಯಾದರೋ ಭೀಕರವಾಗಿತ್ತು. ಹೆಂಗಸರು ಬಟ್ಟೆಯ ಕೊರತೆಯಿಂದ ರಸ್ತೆಗಿಳಿಯುವುದೇ ಕಷ್ಟವಾಗಿತ್ತು. ಇದ್ದ ಅಲ್ಪ-ಸ್ವಲ್ಪ ಬಟ್ಟೆಗಳನ್ನು ತೇಪೆ ಹಾಕಿ ಹೊಲಿದು ಮಾರ್ಕೆಟ್ಟಿಗೆ ಹೋಗುತಿದ್ದರು. ಟಾಂಗಾವು ಮನೆಯ ಬಾಗಿಲ ಎದುರುಗಡೆಯೇ ನಿಲ್ಲುತಿತ್ತು. ಹಾಲಿನ ವರ್ಣದ ಪರದೆಯಿಂದ ಮುಚ್ಚಲ್ಪಟ್ಟ ಆ ಟಾಂಗಾದಲ್ಲಿ ಕುಳಿತು ಅವರು ಪೇಟೆಯೆಡೆಗೆ ಹೋಗುತಿದ್ದರು. ಮನೆಯಲ್ಲಿ ನೆಂಟರಿಷ್ಟರಿದ್ದಲ್ಲಿ ಮಾರ್ಕೆಟಿನಿಂದ ವೀಳ್ಯವನ್ನೂ ತಂಬಾಕನ್ನೂ ತರಲು ಹೆಂಗಸರು ಮರೆಯಲಿಲ್ಲ.

ಮನೆಯ ಮುಂದುಗಡೆ ತರಕಾರಿ ಮಾರುವವನು ಬಂದು "ತರಕಾರಿ ಬೇಕೆ" ಎಂದು ಕೇಳಿದರೆ ಮಾರ್ಕೆಟಿನಿಂದ ಪಡಕೊಂಡಿದ್ದೇವೆ ಎಂಬ ಉತ್ತರ ದೊರಕುತಿತ್ತು. ಮೀನು ಮಾರುವವನಿಗೆ—ಮಾಂಸ ಖರೀದಿ ಮಾಡಿದ್ದೇವೆ ಎಂಬ ಉತ್ತರ ಸಿಕ್ಕುತಿತ್ತು. ಕಸಾಯಿಗೆ ಮೀನನ್ನು ಪಡಕೊಂಡಿದ್ದೇವೆ ಎಂಬ ಉತ್ತರ ದೊರಕುತಿತ್ತು. ಈಗೀಗ ಫೇರಿಗಳು ವೃಥಾ ಮನೆಯ ಮುಂದೆ ಬೊಬ್ಬೆ ಹೊಡೆಯುತ್ತಿರಲಿಲ್ಲ. ಮನೆಯಲ್ಲಿ ಹಣದ ಅಡಚಣೆಯಿಂದ ಸಾಲ ತೆಗೆಯುವ ಪರಿಸ್ಥಿತಿಯುಂಟಾದುದರಿಂದ ವೀಳ್ಯಕೊಳ್ಳುವುದನ್ನೇ ನಿಲ್ಲಿಸಿದ್ದರು.

ಊರಿನ ವ್ಯಾಪಾರಿ ಲಾಲಾ ಮಹಾದೇವ ಪ್ರಸಾದರಲ್ಲಿ ಸುಮಾರು ರೂ.೮೦೦ ಸಾಲವು ಇರ್ಶಾದನಿಗೆ ಇತ್ತು. ತಂದೆಯಾದರೋ ಆರು ತಿಂಗಳಿಗೆ ಅಥವಾ ವರ್ಷಕ್ಕೊಂದಾವರ್ತಿ ಏನಾದರೂ ಏರ್ಪಾಡು ಮಾಡಿ ಸಾಲವನ್ನು ತೀರಿಸುತಿದ್ದರು. ತನ್ನ ಮಗನ ಶಿಕ್ಷಣ ಪೂರ್ತಿಯಾದ ಮೇಲೆ ಒಂದು ನೌಕರಿ ದೊರೆತೊಡನೆ ಸಾಲವನ್ನು ತೀರಿಸುವ ಹಂಬಲ ತಂದೆಯಲ್ಲಿತ್ತು. ಈಗ ಮೊದಲಿನ ಸಾಲಕ್ಕೆ ಇನ್ನೂ ಕೂಡುತ್ತಾ ಹೋಗುತಿತ್ತು. ಚತುರ ಲಾಲಾನು ತಂದೆಯ ಹೆಸರಿನಲ್ಲಿದ್ದ ಸಾಲ ಪತ್ರವನ್ನು ಮಗ ಇರ್ಶಾದನ ಹೆಸರಿಗೆ ಬದಲಾಯಿಸಿ ಬಿಟ್ಟಿದ್ದನು. ಲಾಲಾನ ಒತ್ತಡದಿಂದ ಕೊನೆಗೆ ಇರ್ಶಾದನು ಮನೆಯನ್ನು ಆತನಿಗೇನೇ ಮಾರಿ ೮೦೦ ರೂ. ಇದ್ದ ಸಾಲವನ್ನು ೩೦೦ ರೂ.ಗಳಿಗೆ ಇಳಿಸಿದನು.

ತಮ್ಮ ಏಕೈಕ ಆಧಾರವಾಗಿದ್ದ ಆ ಗುಡಿಸಲು ಲಾಲಾಜಿಯ ವಶಕ್ಕೆ ಹೋದುದು ಇರ್ಶಾದನನ್ನಲ್ಲದೆ ಮನೆಯ ಇತರರನ್ನು ಕಳವಳಕ್ಕೀಡುಪಡಿಸಿತು. ಆದರೆ ಮನೆಯನ್ನು ಪುನಃ ಸ್ವಾಧೀನ ಪಡಿಸಿಕೊಳ್ಳಲು ಕೋರ್ಟು ಕಛೇರಿಗೆ ಹೋಗಲು ಇರ್ಶಾದನೊಡನೆ ಹಣವಾದರೂ ಎಲ್ಲಿ? ತನ್ನ ಮನೆಯ ತುಂಡೊಂದರಲ್ಲೇ ಬಿಡಾರ ಹೂಡಿದ್ದವರಿಂದ ದೊರೆತ ಹಣದಿಂದ ಬಾಡಿಗೆಯನ್ನು ಕೊಡಬೇಕಾಯಿತು. ಬಾಡಿಗೆ ಕೊಟ್ಟು ಉಳಿದ ಹಣದಿಂದ ಹೇಗಾದರೂ ಜೀವನರಥವನ್ನು ಸಾಗಿಸುತಿದ್ದ— ಇರ್ಶಾದ್. ಲಾಲಾ ಪ್ರಸಾದರೂ ಒಬ್ಬ ವ್ಯಕ್ತಿಯಾಗಿದ್ದರು; ಕೊಂಚ ದಯೆಯೂ ಅವರಲ್ಲಿತ್ತು. ೫-೬ ವರ್ಷ ಕಳೆದು ಇರ್ಶಾದನು ತನ್ನ ಬಿ. ಎ. ಪದವಿಯನ್ನು ಪಡೆಯುವವರೆಗೆ ಸಾಲದ ಕುರಿತು ಒಂದು ಮಾತನ್ನೂ ಎತ್ತುವುದಿಲ್ಲವೆಂದು ಇರ್ಶಾದನ ತಂದೆಗೆ ಮಾತು ಕೊಟ್ಟಿದ್ದರು.

ಬಿ. ಎ. ಪಾಸಾದರೂ, ಟೆನಿಸ್ ಮೈದಾನದಲ್ಲಿ ಹೆಸರುಗಳಿಸಿದ್ದರೂ ನೌಕರಿ ದೊರೆಯುವ ಒಗಟು ಬಗೆಹರಿಯಲಿಲ್ಲ. ನೌಕರಿ ಸಿಗುವುದು ಬಹಳ ಕಷ್ಟದ ಕೆಲಸವೆಂದು ಆತನಿಗೆ ಗೊತ್ತಿತ್ತು. "ನೌಕರಿ ದೊರೆತರೂ, ಸಿಗುವುದಾದರೂ ಏನು? ಎಲ್ಲೊ ಲೆಕ್ಕ ಮಾಡಿ ನೂರೋ, ನೂರೈವತ್ತೋ ರೂಪಾಯಿಗಳು ದೊರೆಯುತಿದ್ದುವು!

(ಹನ್ನೆರಡನೇ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7¾
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	... ...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Phone No. 226

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಅಮೇರಿಕನ್ ಮಕ್ಕಳಿಗೆ ಸಿನಿಮಾ ನಟ ಶಿವಾಜಿಗಣೇಶನ್‌ರ ಪ್ರೀತಿಯ ಕಾಣಿಕೆ 'ಕಮಲಾ' ಒಂಭತ್ತು ತಿಂಗಳಿನ ಈ ಆನೆ ಮರಿಯನ್ನು ಅಮೇರಿಕದ ಇಂಡಿಯಾನಾ ಪೋಲಿಸ್ ಮೃಗಾಲಯದಲ್ಲಿರಿಸಲು ಸಿದ್ಧಪಡಿಸಲಾಗಿದೆ.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೩೪	೨೨—೪—೧೯೬೫	No. 34

ಸುಕರ್ಣೊ-ಚೌ ಪ್ರತಿಷ್ಠೆ

ಬಾಡುಂಗದಲ್ಲಿ ತಟಸ್ಥ ರಾಷ್ಟ್ರಗಳ ಸಮ್ಮೇಳನವೊಂದು ನಡೆದು ಹತ್ತು ವರ್ಷಗಳು ಸಂದುವು. ಸಾವಿರಾರು ಚಿಕ್ಕಪುಟ್ಟ ದ್ವೀಪ ಸಮುದಾಯ ಇಂಡೋನೇಶ್ಯದಲ್ಲಿ ನಡೆದಿದ್ದ ಈ ಸಮ್ಮೇಳನದ ಹತ್ತನೆಯ ವಾರ್ಷಿಕೋತ್ಸವವೀಗ ಆರಂಭವಾಗಿದೆ, ಅರುವತ್ತೊಂದು ದೇಶಗಳ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸುತ್ತಾರೆ. ಇಂಡೋನೇಶ್ಯದ ಅಧ್ಯಕ್ಷ ಡಾ| ಸುಕರ್ಣೊ ಮತ್ತು ದರ ವಿದೇಶ ವ್ಯವಹಾರಗಳ ಮಂತ್ರಿ ಸುಬಾಂದ್ರಿಯೊರವರು ವಿಶೇಷ ಚಟುವಟಿಕೆಗಳನ್ನು ಪ್ರದರ್ಶಿಸ ಹತ್ತಿದ್ದಾರೆ. ಇತಿಹಾಸ ಪ್ರಸಿದ್ಧವಾದ ಬಾಡುಂಗ ಸಮ್ಮೇಳನವು ಮೊದಲಬಾರಿಗೆ ಸೇರಿದಾಗ, ಅಲ್ಲಿ ಆಗಿನ ಭಾರತೀಯ ಪ್ರಧಾನಿ ದಿ| ಜವಾಹರಲಾಲರು ಪ್ರಮುಖ ಪಾತ್ರ ವಹಿಸಿದ್ದರು. ತಟಸ್ಥ ರಾಷ್ಟ್ರಗಳು ಪಂಚಶೀಲ ತತ್ತ್ವಗಳನ್ನು ಪಾಲಿಸುವುದರಿಂದಲೇ ತಮ್ಮ ಉನ್ನತಿಯನ್ನು ಮಾಡಿಕೊಳ್ಳುವುದು ಸಾಧ್ಯವೆಂದು ಭಾರತ ಮನವರಿಕೆ ಮಾಡಿತ್ತು, ಇಂಡೋನೇಶ್ಯವೂ ಅಂದು ಈ ನೀತಿಯನ್ನು ಸಮರ್ಥಿಸಿಕೊಂಡಿತ್ತು.

ಆದರೆ, ಅಂದಿನ ಪರಿಸ್ಥಿತಿ ಇಂದು ಉಳಿದಿದೆಯೆನ್ನುವಂತಿಲ್ಲ. ಏಕೆಂದರೆ, ಆಗ್ನೇಯ ಏಶ್ಯಾದಲ್ಲಿ ಅಂದಿನಿಂದೀಗ ಅನೇಕ ರಾಜಕೀಯ ಬದಲಾವಣೆಗಳು ಆಗಿಹೆತ್ತಿವೆ. ಇಂಡೋನೇಶ್ಯದ ವಿದೇಶ ನೀತಿಯೂ ಅಲ್ಪಸ್ವಲ್ಪ ತನ್ನ ನಿಲುವೆಯನ್ನು ಬದಲಾಯಿಸಿದೆ. ಮಲೇಶ್ಯಾದೊಡನೆ ತಾನು ಇಟ್ಟುಕೊಂಡಿರುವ ವಿರೋಧದಿಂದಾಗಿ ಅದಕ್ಕೆ ಮುಂದೇನು ಮಾಡಬೇಕೆಂಬುದೇ ತೋಚುವುದಿಲ್ಲವೆನ್ನಬೇಕು. ಕೆಂಪು ಚೀನಾದ ಆಕ್ರಮಣ ನೀತಿ, ಸಾಮ್ರಾಜ್ಯವಾದತನಗಳು ಅಫ್ರೀಕ್ಯಾಕ್ಕೆ ಗಂಡಾಂತರ ಕಾರಕವಾಗಿವೆ. ನಿರ್ಲಿಪ್ತ ದೇಶ ಭಾರತದ ಮೇಲೆ ಚೀನಾವು ಆಕ್ರಮಣ ಮಾಡಿರುವುದರಿಂದ ಮತ್ತು ಸಂಧಾನ ಮಾರ್ಗದ್ವಾರವನ್ನು ಅದು ಮುಚ್ಚುತ್ತಲೇ ಇರುವುದರಿಂದ ಆಕ್ರಮಣದ ಭೀತಿ ಹೆಚ್ಚುತ್ತಲಿದೆ. ಪಾಕಿಸ್ತಾನವೂ ಗಡಿಯಲ್ಲಿ ಹಿಂಸಾಕೃತ್ಯಗಳನ್ನು ಪ್ರಚೋದಿಸುತ್ತಿರುವುದು ಮಾತ್ರವಲ್ಲ, ಆಕ್ರಮಣ ನೀತಿಯನ್ನೂ ಅನುಸರಿಸ ಹತ್ತಿದೆಯೆಂಬುದಕ್ಕೆ ಕಚ್ಛ—ಸಿಂಧ, ಜಾಂಜರ ಕೋಟೆ, ತ್ರಿಪುರ ಕಾಶ್ಮೀರ ಮೊದಲಾದೆಡೆ ನಡೆಯುತ್ತಿರುವ ಘಟನೆಗಳೇ ಸಾಕ್ಷಿ. ಪಂಜಾಬದ ಮುಖ್ಯ ಮಂತ್ರಿ ರಾಮಕಿಶನರ ಮೇಲೆ ಗುಂಡು ಹಾರಿಸಲು ಪಾಕಿಸ್ತಾನಿಗಳು ಮಾಡಿದ ಸಂಚು ವಿಫಲವಾದರೂ ಇದರ ಹಿಂದೆ ನಿಗೂಢ ರಹಸ್ಯವಡಗಿದೆಯೆನ್ನಲೇಬೇಕು. ಅಷ್ಟು ಮಾತ್ರವಲ್ಲದೆ, ಗಡಿತಂಟೆಗಳನ್ನು ಪರಿಹರಿಸಲು ಮಾತುಕತೆಗಳನ್ನು ತೊಡಗುವುದಕ್ಕೂ ಪಾಕಿಸ್ತಾನವು ಅನಾಸ್ಥೆಯನ್ನೇ ತೋರಿಸುತ್ತಿದೆ. ಆಕ್ರಮವಾಗಿ ಭಾರತವನ್ನು ಆಕ್ರಮಿಸುವಲ್ಲಿ ಕೆಂಪು ಚೀನಾವನ್ನೇ ಪಾಕಿಸ್ತಾನವೂ ಅನುಸರಿಸುತ್ತಿದೆ; ಅದರ ಮೊಂಡು ವಾದವನ್ನೇ ಇದು ನೆಚ್ಚಿ ಹಿಡಿಯುತ್ತಿದೆ. ಹೀಗೆ ಭಾರತದ ಉದ್ದವಾದ ಗಡಿಗುಂಟವೂ ಆಕ್ರಮಣದ ಕರಾಳ ಛಾಯೆ ಹರಡಿದೆ.

ವಿಯೆತ್‌ನಾಮದಲ್ಲಿನ ದುರ್ಘಟನೆಗಳು ಇನ್ನೂ ಶಾಂತವಾಗಿಲ್ಲ. ಅಮೇರಿಕೆ—ಕೆಂಪು ಚೀನಾಗಳು ಪರಸ್ಪರ ಪ್ರತಿಷ್ಠೆಯನ್ನೇ ಎತ್ತಿಹಿಡಿಯುವುದಕ್ಕೆ ಹವಣಿಸುತ್ತಿವೆ. ಅಲ್ಲಿಯೂ ಕೆಂಪು ಚೀನಾದ ಕೈವಾಡ ಸಾಕಷ್ಟು ಕೆಲಸ ಮಾಡುತ್ತಿದೆ. ನಾಗಾ ಬಂಡುಗಾರರಿಗೆ ಭಾರತದ ವಿರುದ್ಧವೆತ್ತಲು ಅದು ಶಸ್ತ್ರಾಸ್ತ್ರಗಳನ್ನು ಒದಗಿಸುತ್ತಿದೆಯೆಂದು ವರದಿ. ತನ್ನ ಶಕ್ತಿಯಿಂದಾಗಿ ಆಗ್ನೇಯ ಏಶ್ಯದಲ್ಲಿ ಮಾತ್ರವಲ್ಲ, ಅಫ್ರೀಕ್ಯಾದಲ್ಲೇ ಹಿರಿಯಣ್ಣನಾಗಬೇಕೆಂಬ ಮಹತ್ವಾಕಾಂಕ್ಷೆ ಅದರದ್ದು. ಅದರ ಶಕ್ತಿಗೆ ಹೆದರಿಯೋ, ಅಥವಾ ಸಂಚಿನಲ್ಲಿ ಸಿಲುಕಿಯೋ, ಸುಕರ್ಣರೂ ಬಾಲವಾಡಿಸ ಹತ್ತಿದ್ದಾರೆ. ಕೊಲಂಬೋ ರಾಷ್ಟ್ರಗಳ ಸಮ್ಮೇಳನದಲ್ಲಿಯೂ ಆಕ್ರಮಣವನ್ನು ಆಕ್ರಮಣವೆಂದು ಒಪ್ಪಲಾರದ ಸುಕರ್ಣರು ಭಾರತದ ಬಗ್ಗೆ ಪೂರ್ಣ ಸದಭಿಪ್ರಾಯ ತಾಳಿದ್ದಾರೆಂದು ಹೇಳಲಾಗುವುದಿಲ್ಲ. ಕೆಂಪು ಚೀನಾದ ನೀತಿಯಿಂದ ಮಂತ್ರಮುಗ್ಧರಾದವರಂತೆ ಅವರು ಈಗೀಗ ವರ್ತಿಸತೊಡಗಿದ್ದಾರೆ. ಅಂದರೆ, ಪೂರ್ವ ದೇಶಗಳಲ್ಲಿ ರಶ್ಯವನ್ನು ಏಕಾಕಿಯಾಗಿ ಬಿಟ್ಟು, ಚೀನಾದ ಹಿರಿತನದಲ್ಲಿ ಶಕ್ತಿಕೂಟವೊಂದನ್ನು ರಚಿಸಿಕೊಳ್ಳುವ ಹವಣಿಕೆಯೂ ಅವರದ್ದಿರಬಹುದು. ಬರ್ಮಾವು ಇತ್ತೀಚೆಗೆ ತಳೆದಿರುವ ಗಂಭೀರ ಮೌನ, ಪಾಕಿಸ್ತಾನದ ಗಾಳಿಪಟ ಹಾರಾಟಗಳು ಇದನ್ನೇ ಸಮರ್ಥಿಸುವಂತಿವೆ. ಸಿಂಹಳವನ್ನೂ ಬಲೆಯಲ್ಲಿ ಸಿಲುಕಿಸಲು ಪ್ರಯತ್ನಿಸಿ ಬಹುಪಾಲು ಯಶಸ್ವಿಯಾದ ಆ ಇತ್ತೀಚೆಗಿನ ಚುನಾವಣೆಗಳಿಂದಾಗಿ ಸೋಲಲೇ ಬೇಕಾಯಿತು.

ಹಾಗಿರುವಾಗ, ಇಂದು ಬಾಡುಂಗ ಸಮ್ಮೇಳನದ ದಶವಾರ್ಷಿಕೋತ್ಸವದ ವೈಶಿಷ್ಟ್ಯಗಳೇನು ಎಂದು ಯಾರಾದರೂ ಕೇಳಬಹುದು. ಹತ್ತು ವರ್ಷಗಳಿಗೆ ಮೊದಲು ಸಹ ಅಸ್ತಿತ್ವದ ತತ್ತ್ವವನ್ನು ಒಪ್ಪಿಕೊಂಡ ದೇಶಗಳಲ್ಲಿ ಕೆಲವು ಅದನ್ನು ಸಮಾಧಿ ಮಾಡಿವೆಯೆನ್ನುವಾಗ, ಸಾಧಿಸಬಹುದಾದ ಚರಮ ಪುರುಷಾರ್ಥವಾವುದೂ ಇರಲಾರದು. ಆದರೂ ಕೆಂಪು ಚೀನಾವು ಇಂಡೋನೇಶ್ಯನ್ ವೇದಿಕೆಯ ಮೇಲೆ ತನ್ನ ಶಕ್ತಿ—ಸಾಮರ್ಥ್ಯಗಳನ್ನು ಪ್ರದರ್ಶಿಸಿ ಅವರನ್ನು ಬೆದರಿಸುವ ಸಾಹಸ ಮಾಡಬಹುದು; ಸುಕರ್ಣರಿಗೆ ಇದುವೇ ಬೇಕಾಗಿದ್ದರೆ, ಈ ಉದ್ದೇಶ ಸಾರ್ಥಕವಾಗಬಹುದು.

ವಚನ ಸುಧೆ
ಧರ್ಮಂ ಚರ|
(ತೈತ್ತಿರೀಯೋಪನಿಷತ್, ೧—೧೧)
೧ ಧರ್ಮದ ಆಚರಣೆಯನ್ನು ಮಾಡು.
೧೧ ಧರ್ಮನಿಯಮಗಳನ್ನು ಪಾಲಿಸು. ಯಾವ ಸಮಯದಲ್ಲೇ ಇರಲಿ ಅಧರ್ಮವನ್ನಾಚರಿಸಬೇಡ. ಧರ್ಮಾಚರಣೆಯಿಂದ ಮಾನವನು ಉಚ್ಚನೆನಿಸುತ್ತಾನೆ. ಅಧರ್ಮಾಚರಣೆಯಿಂದಾತನು ಪತಿತನಾಗುತ್ತಾನೆ.

ಯಾಕೆ ಹೀಗೆ?

ಇದೇ ಬೇಸಗೆಯಲ್ಲಿ ಪ್ರಧಾನ ಮಂತ್ರಿ ಶಾಸ್ತ್ರಿಯವರು ಎರಡು ಮಹಾ ರಾಷ್ಟ್ರಗಳನ್ನು ಸಂಚರಿಸಲಿದ್ದರು. ಸೋವಿಯತ್ ರಶ್ಯ ಮತ್ತು ಅಮೇರಿಕೆಗಳ ಆಹ್ವಾನವನ್ನವರು ಸ್ವೀಕರಿಸಿದ್ದರು. ಆದರೆ, ಮೊನ್ನೆ ಅಮೇರಿಕನ್ ಅಧ್ಯಕ್ಷ ಜಾನ್ಸನ್ನರು ಸಂಚಾರವನ್ನು ಮುಂದಿನ ಶರತ್ಕಾಲದ ವರೆಗೆ ಮುಂದುವರಿಸಬೇಕೆಂದು ಕೇಳಿಕೊಂಡರು. ಪಾಕಿಸ್ತಾನದ ಅಧ್ಯಕ್ಷ ಅಯ್ಯೂಬ ಖಾನರೂ ಸದ್ಯದಲ್ಲಿಯೇ ಅಮೇರಿಕೆಗೆ ಹೋಗಲಿದ್ದರು. ಅವರ ಕಾರ್ಯಕ್ರಮವೂ ಮುಂದುವರಿಯಿತು. ತನಗೆ ಜೂನ್ ತಿಂಗಳಲ್ಲಿ ವಿಪರೀತ ಕೆಲಸವಿರುವುದರಿಂದ ಸಂಚಾರವನ್ನು ಮುಂದೆ ಹಾಕಬೇಕೆಂದು ಜಾನ್ಸನ್ ಹೇಳಿದ್ದಾರೆ. ಇದ್ದರೂ ಇರಬಹುದು. ಭಾರತ-ಪಾಕಿಸ್ತಾನಗಳ ನಡುವೆ ಪುತ್ತೆದ್ದಿರುವ ಗಡಿತಂಟೆಗಳು ಯಾವ ಮಟ್ಟದಲ್ಲಿ ನಿಂತಾವೆಂದು ತಿಳಿಯಲು ಅವರು ಅವಕಾಶ ಬಯಸಿ ಹೀಗೆ ಹೇಳಿದ್ದರೂ ಇರಬಹುದು. ಏಕೆಂದರೆ, ಭಾರತದ ಸೇರಿಯಾಳುಗಳಿಗೆ ಸಿಕ್ಕ ಪಾಕ್ ಸೈನಿಕರ ಹೇಳಿಕೆಯಂತೆ ಅಮೇರಿಕೆಯಿಂದ ಕಮ್ಯೂನಿಸ್ಟ ಆಕ್ರಮಣ ವಿರೋಧಿಸಲು ಪಡೆದಿದ್ದ ಶಸ್ತ್ರಾಸ್ತ್ರಗಳನ್ನು ಈ ಗಡಿಘರ್ಷಣೆ—ಆಕ್ರಮಣಗಳಲ್ಲಿ ಪಾಕ್ ಬಳಸಿದೆ. ಇದರಿಂದಾಗಿ ಭಾರತವು ಅಮೇರಿಕೆ

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ



'ಆಕ್ರಮಣ ತೆರವು ಮಾಡದೆ ಮಾತುಕತೆ ಇಲ್ಲ ಅಂತ ಶಾಸ್ತ್ರಿ ಗುಡುಗಿದರೆ, ಪಾಕಿಸ್ತಾನ ಕೇಳಬೇಕಲ್ಲಾ ಸ್ವಾಮೀ? ನಾವು ಹೋಗಲಿಕ್ಕೆ ಬಂದವರಲ್ಲ, ಇರಲಿಕ್ಕೆ ಅಂತ ಅವರು ಅನ್ನದೇ ಬಿಟ್ಟಾರೆ?"

ಗೇಹ ರಾಜ್ಯದಲ್ಲಿ

ಅನ್ಯಥಾ ಶರಣಂ ನಾಸ್ತಿ

"ಏ, ತುಸ ಬೇಗ ಬಾಂದ್ರೆ...."

"ಬಂದೇ ಬಂದೇ ಬಂದೇ..."

'ಇನ್ನೂ ಬಂದೇಂತ ಅಡುಗೆ ಮನೆಯೊಳಗಡೆಯಿಂದ್ಲೇ ಕೇಳಿಸ್ತದೆಯಲ್ಲಾ....'

"ಮತ್ತೆಲ್ಲಿ ಬೀದಿ ಬಾಗ್ಲಿನಿಂದ ಕೂಗಬೇಕೂಂತೀರಾ?"

"ಅಲ್ನೇ, ಬಾಂದ್ರೆ...."

'ಅಯ್ಯೋ, ನಿಮ್ದೊಂದು... ಹಾಲು ಒಲೇಲಿಟ್ಟಿದ್ದೇನೆ.... ಉಕ್ಕಿ ಹೋದ್ರೆ ಮತ್ತೆ ನಿಮ್ಗೆ ನೀರೇ ಗತಿ.."

'ಏನೂಂದೆ? ಹಾಲಿಟ್ಟಿದೀಯೊ, ಅಕೋ, ಕರಟು ವಾಸನೆ ಬರೋಕೆ ಶುರುವಾಯ್ತು.... ಹೋಗೇ... ಅಲ್ಲಾ, ಎಂಥ ಹುಡುಗೀಂತ...."

'ಬಾರದಿದ್ರೆ ಬರ್ಲಿಲ್ಲಾಂತಾಯ್ತು; ಬರುವಾಗ ಹೋಗೂಂತಾಯ್ತು......ನಿಮ್ಮದೊಂದು ಮರ್ಜಿ...'

"ಮರ್ಜಿ ಗಿರ್ಜಿ ಮತ್ತೆ ನೋಡೋಣ, ಒಳಗೆ ಹೋಗಿ ಹರಿಯಲಿರುವ ಹಾಲನ್ನಾದ್ರೂ ತಡೆ..."

"ಆಯ್ತಪ್ಪ, ನನಗೆ ಮತ್ತೇನು ಕೆಲ್ಸ? ನಿಮ್ಮ ತಾಳಕ್ಕೆ ಸರಿಯಾಗಿ ಕುಣಿಯೋದೊಂದೇ ತಾನೆ? ಅಂತೂ ಹೆಂಗಸಾಗಿ ಹುಟ್ಟೋದು ನೋಡಿ, ಭಾರಿ ಕಷ್ಟ..."

"ಏನೋಪ್ಪ, ಹಾಲೂಂತಂದ್ರೆ ನೀರಿಗೂ ತಡೆಯಾಗಿ ಭಾವಿಸ್ತಾರಲ್ಲಾ ಇವ್ರು? ಈ ಬಗೆಯ ಗೃಹಿಣಿಯರಿರುವಾಗ ಗೊಲ್ಲಗಿತ್ತಿಯರು ಮಾಡೋದ್ರಲ್ಲಿ ಅನ್ಯಾಯವೇನಿದೇಂತ....ಓ ಬಂದುಬಿಟ್ಯೆಯಾ...?"

"ಮತ್ತೆ ಮಾಡೋದಾದ್ರೂ ಏನು? ನಿಮ್ಮ ಅಜ್ಞೆ ಇದೆಯಲ್ಲ?

"ನಮ್ಮದೂ ಒಂದು ಅಜ್ಞೆ....ಅಲ್ಲ ಇದ್ದ ಹಾಲೆಲ್ಲಾ ಒಲೇ ಪಾಲಾಯ್ತು ಅಲ್ವೆ?"

"ಹ್ಞೂಂ....ಅರೆವಾಸಿ..."

"ಇನ್ನುಳಿದದ್ದು ಬೆಕ್ಕಿನ...."

"ಓ, ಬಂದೆ, ಬಾಯಿ ಮುಚ್ಚಿ ಬರ್ತೀನಿ..."

"ಹಾಗೇ ಒಲೆ ಆರ್ಸಿಯೂ ಬಂದ್ಬಿಡು ಮತ್ತೆ...."

"ಎಲ್ಲಾ ಆಯ್ತು... ಇನ್ನು ನಿಮ್ದು ಏನಾದ್ರೂ ಇದ್ರೆ ಹೇಳಿ...."

'ನಮ್ದೇನಿರೋದು? ಎಲ್ಲಾ ನಿಮ್ದೇನೆ... ಅಂತೂ ನನ್ನಂಥವನ ಕೈ ಹಿಡಿದು ನೀನು ಗೆದ್ದೆ."

'ಪಾಪ, ನೀವು ಕೊಟ್ಟಿರೋ ಭಾಗ್ಯವನ್ನು ಏನು ಹೇಳೋದು?"

"ಮತ್ಯಾರಿಗೆ ತಾನೇ ಈ ಬಗೆಯ ಭಾಗ್ಯವಿದೆ?"

"ಹೌದಪ್ಪ ಯುಗಾದಿಗೊಂದು ಸೀರೇನಾದ್ರೂ ತನ್ನೀಂದ್ರೆ ಇಲ್ಲಾಂದು ಬಿಟ್ರೆ..."

"ನೋಡಿನೋಡಿದ ಸೀರೆ ತರೋದಕ್ಕೆ ಯುಗಾದಿಯೇನು? ಆಷಾಢವೇನು?"

"ಹೋಗ್ಲಿ ತಿಂಡಿಗಿಂಡಿ ಗಡದ್ದಿನಲ್ಲಿ ಮಾಡೋಣಾಂತಂದ್ರೆ..."

"ಅಲ್ವೆ, ನಿತ್ಯ ತಿಂಡಿ ತಿನ್ನೋ ಇಂದಿನ ದಿನದಲ್ಲಿ ನಿನ್ನ ಯುಗಾದಿ ಕಡುಬೇನು ಮಹಾಂತ...."

"ಅಂತೂ ಏನು ಕೇಳಿದ್ರೂ ನಿಮ್ಮ ಹತ್ತಿರ ಆದರ್ಶ ಪ್ರತಿ ಇದ್ದೇ ಇದೆಯೆನ್ನಿ..."

"ನೋಡು ಒಂದು ಕಾಲವಿತ್ತು, ತಿಂಡೀಂತಂದ್ರೆ ಮರು ಮರೀಚಿಕೆಯಾಗಿತ್ತು. ಹೋಟೇಲುಗಳ ಈ ಯುಗದಲ್ಲಿ ನಿತ್ಯ ಸಿಹಿ—ಖಾರ, ಕಡುಬು, ದೋಸೆ..."

"ಸಾಕು ಬಿಡೀಂದ್ರೆ, ಅವೆಲ್ಲಾ ನಿಮ್ಗೆ ಗಂಡಸರಿಗಾಯ್ತು, ನಮ್ಗೇನು ಬಂತು?"

'ಬರದೇನು? ನೀವೇನು ಕಡಮೆಯಲ್ಲಿದ್ದೀರಾ? ಪೇಟೆಗೆ ಹೋದ್ರೆ ಮಸಾಲೆ ಹೊಡೆಯದೆ ಕಾಲೇ ಎಳೆಯೋದಿಲ್ಲ...'

"ಹೌದಪ್ಪ, ಬಾರಿ ಕೊಡ್ಸಿರೋರು..."

"ಕೊಡ್ಸದೇ ಇದ್ರೆ ಬಿಡೋರು ನೀವು.."

"ಹ್ಞೂಂ, ಆಯ್ತಲ್ಲ...."

"ಆಗೋದೇನು ಬಂತೆ? ಅಂತೂ ಒಂದು ಮಾತು ಸತ್ಯ...."

"ಯಾವುದದು?"

"ಈಗಿನ ಕಾಲದಲ್ಲಿ ದುಡ್ಡು ಭಾರೀ ಅಗ್ಗಾಂತ....'

"ಅಗ್ಗ ಅಗ್ಗಾಂತ ಬಾಯಲ್ಲಿ ಮಾತ್ರ ಅಂದ್ರೆ ಲಾಭವೇನಂತೆ? ಯುಗಾದಿ ಸೀರೆಗೆ ಮಾತ್ರ ಅದು ತುಟ್ಟಿಯಾಯ್ತು ಅಲ್ವೆ?"

"ಹಾಗಲ್ವೆ ನಾನಂದದ್ದು...."

"ಮತ್ತೆ?"

"ಹಿಂದಿನ ಕಾಲದಲ್ಲಿ ಎಳ್ಳು ಬಿಸಾಡಿ ಹೋದ್ರೂ ಅದನ್ನು ಆರಿಸಿ ಎತ್ತುತಿದ್ರು ...ಈಗಿನಕಾಲದಲ್ಲಿ "

"ರೂಪಾಯಿ ನೋಟು ಹೋದ್ರೂ ಹೋಗ್ಲೀಂತಾರೆ ಅಲ್ವೆ?

ಹಾಗೇನೇ ಅನ್ನು. ಅದಕ್ಕಿಂತ್ಲೂ ಇದಿರಲ್ಲಿ ಇರುವೆ ಹೋಗಬಾರದು, ಹಿಂದೆ ಆನೆ ಹೋದ್ರೂ ಪರ್ವಾಗಿಲ್ಲಾಂದ್ರೆ ಸರಿಹೋದೀತು...."

"ಯಾಕೆ ಹಾಗಂತೀರಿ?"

ನೋಡು, ನಿನ್ನನ್ನೇ ಉದಾಹರಣೆಗೆತ್ತಿಕೊಳ್ಳೋಣ....ಯಾರಾದ್ರೂ ಮನೆಬಾಗಿಲಿಗೆ ಬಂದು ಭಿಕ್ಷೆ ಕೇಳಿದ್ರೆ ಪೈಸೆ ಕೊಡಬೇಕಾದ್ರೆ ರಾದ್ಧಾಂತ ಮಾಡೋಳು ಅಲ್ವೆ?'

'ಅಲ್ರಿ, ಯಾರನ್ನಾದ್ರೂ ಬರಿಗೈಯಲ್ಲಿ ಕಳಿಸಿದ್ದುಂಟೆ?'

"ಅದಿಲ್ಲಾನ್ನು. ಮುಷ್ಟಿ ಅಕ್ಕಿಯನ್ನೇ ಕೊಡುತ್ತೀನ್ನ...'

"ಹೌದು..."

'ಮತ್ತೆ ಕೆಲವ್ರು ನೋಡು, ಅಕ್ಕಿ ಬೇಡ, ಪೈಸೆ ಬೇಕೆನ್ನುತ್ತಾರೆ. ಅವ್ರಿಗೆ....'

"ಯಾಕ್ರಿ ಅವ್ರಿಗೆ ಕೊಡ್ಬೇಕು? ನಾನು ಕೊಡೋದ ಮುಷ್ಟಿ ಅಕ್ಕಿ..."

"ಅದೇ ನೋಡು, ಮುಷ್ಟಿಗೆ ಹತ್ತು ಪೈಸೆ ಬೀಳೋ ಈ ಕಾಲದಲ್ಲೂ ನೀನು ಅಕ್ಕಿ ಬೇಡಾಂತನ್ನೋವ್ರಿಗೂ ದಾನ ಮಾಡ್ತೀಯಲ್ಲಾ..."

"ಓ.... ಅದು ಹೌದೂಂದ್ರೆ...."

'ಇನ್ನೂ ನೋಡು, ಗೌಳಿಗಿತ್ತಿಗೆ ಹಾಲಿಗೆ ಎರಡು ಪೈಸೆ ಹೆಚ್ಚು ಕೊಡೋಕೆ ಚೌಕಾಶಿ ಮಾಡುವವಳು ನೀನು...."

'ಬೆಲೆಯೇರಿಸ್ತಾನೆ ಹೋದ್ರೆ ಮತ್ತೆ..."

"ಆದ್ರೆ ಆಕೆ ನಾಲ್ಕು ಪೈಸೆಯಷ್ಟು ನೀರು ಸೇರಿಸಿದ್ರೂ ನೀನು ಮಾತಾಡೋ ಹಾಂಗಿಲ್ಲ ಅಲ್ವೆ?"

'ಹ್ಞಾಂ ...ಗೊತ್ತಾಯ್ತು ಬಿಡಿ..."

'ಅಲ್ವೆ, ಆ ನೀರು ಹಾಲನ್ನ ಕಾಯಿಸುವಾಗ್ಲೂ ಅರೆವಾಸಿಯನ್ನ ಸಲೀಸಾಗಿ ಬೆಂಕಿಗೆ ಎರೆದೆಯಲ್ಲಾ ಯಾರ ಪ್ರೀತ್ಯರ್ಥವಾಗಿ?"

(ಹದಿನಾರನೇ ಪುಟದಿಂದ)

RECORD YEAR

1963		1964
Rs. 72.48 CRORES	DEPOSITS	Rs. 88.24 CRORES
Rs. 1 CRORE	PAID-UP CAPITAL	Rs. 1 CRORE
Rs. 1.11 CRORES	RESERVES	Rs. 1.23 CRORES
Rs. 20.63 CRORES	INVESTMENTS	Rs. 22.28 CRORES
Rs. 42.27 CRORES	ADVANCES	Rs. 58.59 CRORES
Rs. 75.56 CRORES	WORKING FUNDS	Rs. 92.48 CRORES
Rs. 24.12 LAKHS	NETT PROFITS	Rs. 34.66 LAKHS

OUR GREATEST ASSET

Your Complete Confidence in us for over 58 years

CANARA BANK LIMITED

(Estd. 1906)

Admn. Office: BANGALORE   Regd. Office: MANGALORE

Correspondents all over the world   Over 235 Branches in India

ಪರಿಚಯ

ಅನಾಗರಿಕ ಧರ್ಮಪಾಲರು

ಮೂಲ: ಪಾಲ್ಪೋಲಾ ರಾಹುಲ

ಅನು: ಕೆ. ನಾರಾಯಣಾಚಾರ್, ಶಿರೋಮಣಿ, ವಿದ್ವಾನ್, ಕಣ್ಣತೀರ್ಥ.

ಬಹು ದೊಡ್ಡ ಬುದ್ಧಮತ ಪ್ರಚಾರಕರೆಂದು ಚರಿತ್ರೆಯಲ್ಲಿ ಹೆಸರು ಪಡೆದ ಅನಾಗರಿಕ ಧರ್ಮಪಾಲರು ಇಹಲೋಕವನ್ನು ತ್ಯಜಿಸಿ ಇಂದಿಗೆ ೧೦೨ ವರ್ಷಗಳು ಸಂದವು. ಅವರ ಜನ್ಮಶತಾಬ್ದಿಯು ಕಳೆದ ೧೯೬೪ನೇ ಸಪ್ಟಂಬರ ತಿಂಗಳಲ್ಲಿ ಬುದ್ಧ ಪ್ರಪಂಚದಲ್ಲೆಲ್ಲಾ ಆಚರಿಸಲ್ಪಟ್ಟಿತ್ತು.

ಧರ್ಮಪಾಲರ ಕೆಲಸದ ಮಹತ್ವ ಮತ್ತು ಬೆಲೆಯನ್ನೂ ಬುದ್ಧ ಪ್ರಪಂಚವು ಅವರನ್ನು ಸ್ಮರಿಸಿ ಏಕೆ ಗೌರವಿಸುತ್ತಿದೆ ಎಂಬುದನ್ನೂ, ವಿಶೇಷವಾಗಿ ಇಂಡಿಯಾ ಮತ್ತು ಸಿಲೋನು ಅವರಿಗೆ ಏಕೆ ಋಣಿಯಾಗಿದೆ ಎಂಬುದನ್ನು ತಿಳಿದು ಅಭಿನಂದಿಸುವುದಕ್ಕೆ ನಾವು ಅವರು ಹುಟ್ಟಿ ಕೆಲಸ ಮಾಡಿದ ಕಾಲ ಮತ್ತು ಅದರ ಹಿನ್ನೆಲೆಯನ್ನು ಅಭಿಪ್ರಾಯ ಮಾಡಿಕೊಳ್ಳಬೇಕು.

೧೬ನೇ ಶತಮಾನದ ಆರಂಭದಿಂದ ಸುಮಾರು ೧೫೦ ವರ್ಷಗಳ ತನಕ ಸಿಲೋನಿನ ಸಮುದ್ರ ತೀರದ ಪ್ರಾಂತಗಳನ್ನು ಪೋರ್ತುಗೀಸರು ಹಿಡಿದು ಆಳುತ್ತಿದ್ದರು. ಆ ಮೇಲೆ ೧೭ನೇ ಶತಮಾನದ ಮಧ್ಯಕಾಲದಿಂದ ಆರಂಭಿಸಿ ಸುಮಾರು ೧೫೦ ವರ್ಷಗಳ ತನಕ ಡಚ್ಚರು ಪೋರ್ತುಗೀಸರನ್ನು ಓಡಿಸಿ ಆಳುತ್ತಿದ್ದರು. ೧೮ನೇ ಶತಮಾನದ ಅಂತ್ಯಕಾಲಕ್ಕೆ ಬ್ರಿಟಿಷರು ಆ ರಂಗವನ್ನು ಪ್ರವೇಶಿಸಿ ಡಚ್ಚರನ್ನು ಸೋಲಿಸಿ ಸಿಲೋನಿನಲ್ಲಿ ಅವರ ಸ್ವಾಧೀನವಿದ್ದ ಎಲ್ಲಾ ಪ್ರದೇಶಗಳನ್ನು ಹಿಡಿದುಕೊಂಡರು. ೧೮೧೫ರಲ್ಲಿ ಸಮಗ್ರ ದ್ವೀಪವು ಬ್ರಿಟಿಷರ ಅಂಕಿತಕ್ಕೆ ಒಳಗಾಯಿತು. ೨೫ ಶತಮಾನಗಳಷ್ಟು ದೀರ್ಘವಾದ ಸಿಲೋನಿನ ಚರಿತ್ರೆಯಲ್ಲಿ ಸಮಗ್ರ ಸಿಲೋನ್ ದೇಶವು ಪರರಾಷ್ಟ್ರೀಯರ ಸ್ವಾಧೀನಕ್ಕೆ ಒಳಗಾದುದು ಇದೇ ಮೊದಲಾಗಿತ್ತು. (೧೯೪೮ರಲ್ಲಿ ಸಿಲೋನ್ ಸಂಪೂರ್ಣ ಸ್ವತಂತ್ರವಾಯಿತು)

ಧರ್ಮಪಾಲರು ಜನಿಸುವುದಕ್ಕೆ ಮೊದಲಿನ ಪರಕೀಯರ ಆಳಿಕೆಯ ಸುಮಾರು ಮೂರೂವರೆ ಶತಮಾನಗಳಲ್ಲಿ, ಬೌದ್ಧಮತವೂ, ಬೌದ್ಧ ಪದ್ಧತಿಗಳೂ, ಸಂಪ್ರದಾಯಗಳು ಮತ್ತು ಸಂಸ್ಥೆಗಳೂ ಕಡೆಗಣಿಸಲ್ಪಟ್ಟಿದ್ದವು. ಪರಕೀಯರ ಪದ್ಧತಿ, ವೇಷಭೂಷಣ, ಆಚಾರ ಮತ್ತು ಹೆಸರುಗಳು ಕೂಡ ಬಳಸಲ್ಪಟ್ಟವು. ಸಾಮಾಜಿಕ ಮತ್ತು ಔದ್ಯೋಗಿಕ ಆಶ್ರಯಗಳನ್ನು ಕ್ರಿಶ್ಚಿಯನರು ಹಿಡಕೊಂಡಿದ್ದರು. ಬೌದ್ಧರಿಗೆ ಸ್ಥಾನವೇ ಇರಲಿಲ್ಲ. ಕ್ರಮೇಣ ದೇಶವು ಬಹು ಹೀನಸ್ಥಿತಿಗೆ ಇಳಿಯಿತು. ದೇಶೀಯ ವಸ್ತುಗಳು ಮತ್ತು ಬೌದ್ಧರು ಯಾತಕ್ಕೂ ಬಾರದವರೆಂದು ಅವಹೇಳನೆಗೆ ಗುರಿಯಾದರು. ವಿಶೇಷವಾಗಿ ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆದವರು ಹೀಗೆ ತಿರಸ್ಕಾರ ಭಾವನೆಯನ್ನು ತಳೆದರು.

ಇಂತಹ ದೇಶಾಭಿಮಾನವಿಲ್ಲದ ಸಿಲೋನಿನಲ್ಲಿ ಧರ್ಮಪಾಲರು ೧೮೬೪ನೇ ಸಪ್ಟಂಬರ ತಿಂಗಳ ತಾ. ೧೭ರಲ್ಲಿ ಜನ್ಮವೆತ್ತಿದರು. ಅವರು ಕೊಲೊಂಬೋ ನಗರದ ಒಂದು ಸಿಂಹಳೀಯ ಬೌದ್ಧ ಕುಟುಂಬದ ಒಬ್ಬ ಶ್ರೀಮಂತರ ಹಿರಿಯ ಮಗನಾಗಿ ಹುಟ್ಟಿದ್ದರು. ಆ ಕಾಲದ ಹೊಸ ಫೇಶನ್ನಿಗೆ ಅನುಸಾರವಾಗಿ ಆ ಮಗುವಿಗೆ 'ದಾವಿದ್' ಎಂದು ಹೆಸರಿಡಲಾಯಿತು (ಅವರ ತಂದೆಯವರು ಡೋನ್ ಕೆರೋಲಿಸ್ ಹೇವಾವಿತರಣರು) ದಾವಿದ್ ಹೇವಾವಿತರಣನ ವಿದ್ಯಾಭ್ಯಾಸವು ಕೊಲೊಂಬೋ ನಗರದ ಪ್ರಮುಖವಾದ ಕ್ರಿಶ್ಚಿಯನ್ ಮಿಶನರಿ ಶಾಲೆಗಳಲ್ಲಿ ನಡೆಯಿತು. ಅವನ ತಂದೆಯವರು ಅವನು ಸಿವಿಲ್ ಸರ್ವೀಸು ವೃತ್ತಿಗೆ ಸೇರಬೇಕೆಂದು ಬಯಸಿದ್ದರು.

ಆದರೆ ೧೮೮೦ರಲ್ಲಿ ಅಮೇರಿಕದ ಬೌದ್ಧ ತತ್ವಜ್ಞಾನಿಯಾದ ಕರ್ನಲ್ ಎಚ್. ಎಸ್. ಒಲ್ಕೋಟರ ಸಿಲೋನಿಗೆ ಬಂದು ಬೌದ್ಧಮತದ, ಬೌದ್ಧ ಸಂಸ್ಕೃತಿಯ ಮತ್ತು ವಿದ್ಯಾಭ್ಯಾಸದ ಪುನರುಜ್ಜೀವನಕ್ಕೆ ಕೆಲಸ ಮಾಡಲು ತೊಡಗಿದರು. ೧೬ ವರ್ಷ ಪ್ರಾಯದ ದಾವಿದನು ಕೂಡಲೆ ಒಲ್ಕೋಟರ ಕಡೆಗೆ ಆಕರ್ಷಿತನಾಗಿ ಅವರ ಕಾರ್ಯಕಲಾಪಗಳಲ್ಲಿ ಸೇರಿದನು.

ಸಿಲೋನಿನ ಹಳ್ಳಿಗಳಲ್ಲಿ ಅನೇಕ ವರ್ಷ ಸಾಮಾಜಿಕ, ಧಾರ್ಮಿಕ ಮತ್ತು ವಿದ್ಯಾಭ್ಯಾಸಗಳ ಕೆಲಸವನ್ನು ಮಾಡಿದ ನಂತರ ಜನತೆಯಲ್ಲಿರುವ ಶೋಚನೀಯ ಪರಿಸ್ಥಿತಿಯು ಅವನಿಗೆ ಚೆನ್ನಾಗಿ ತಿಳಿದು ಬಂತು. ಒಬ್ಬ ದೇಶಭಕ್ತನು ಜನಾಂಗವನ್ನು ಉಳಿಸುವದಕ್ಕೋಸ್ಕರ ಮಾಡಬೇಕಾಗಿರುವಂತೆ ನಾನು ನಮ್ಮ ಸಾಹಿತ್ಯ-ಭೂಮಿ-ಮತ್ತು ಅತಿ ಮಹತ್ತರವಾದ ಧರ್ಮ ಇವುಗಳ ಉದ್ಧಾರಕ್ಕಾಗಿ ಕೆಲಸ ಮಾಡಬೇಕೆಂದು ಅವನು ನಿರ್ಣಯಿಸಿದನು.

೧೮೯೧ರಲ್ಲಿ ೨೭ ವರ್ಷದ ವಯಸ್ಸಿನಲ್ಲಿ ದಾವಿದನು ಪ್ರಾಪಂಚಿಕ ಆಕಾಂಕ್ಷೆಗಳ

(ಹತ್ತನೇ ಪುಟ ನೋಡಿರಿ)



ನಿಮ್ಮ ಉಳಿತಾಯದೊಂದಿಗೆ ಕಣ್ಮುಚ್ಚಿ ವ್ಯವಹರಿಸಿ ದುಡುಕಬೇಡಿ

ಉಳಿತಾಯಕ್ಕೆ ಆರಂಭಿಸುವ ಮುನ್ನ ಕಣ್ತೆರೆದು ನೋಡಿ

ಆಗ ವಿಜಯ ಬ್ಯಾಂಕ್ ನಿಮ್ಮ ಉಳಿತಾಯಕ್ಕೆ ಹೆಚ್ಚು ಬಡ್ಡಿ – ವರ್ಷಕ್ಕೆ ಶೇ. 4½ ಯಷ್ಟು – ಕೊಡುವುದನ್ನು ಅರಿಯುವಿರಿ.

ಇದು ನಿಮ್ಮ ಆಸಕ್ತಿ ಕೆರಳಿಸದೇ?

ಆದ್ದರಿಂದ ನಿಮ್ಮ ಉಳಿತಾಯದ ವಿಷಯದಲ್ಲಿ ಕುರುಡುತನದಿಂದ ದುಡುಕಿ ವ್ಯವಹರಿಸಬೇಡಿ.

ನೀವು ಹೆಚ್ಚಿಗೆ ಗಳಿಸಬಲ್ಲಂತಹ ಕಡೆ ಉಳಿತಾಯವನ್ನಿಡಿ,

ತಕ್ಷಣ ವಿಜಯ ಬ್ಯಾಂಕ್‌ನಲ್ಲಿ ಒಂದು ಸೇವಿಂಗ್ಸ್ ಬ್ಯಾಂಕ್ ಲೆಕ್ಕವನ್ನು ತೆರೆದು ಹೆಚ್ಚಿನ ಬಡ್ಡಿ ಗಳಿಸಿ. ಇದು ನಿಮಗಾಗಿ ನಿಮ್ಮ ಹಣಕ್ಕಾಗಿ ಇರುವ ಬ್ಯಾಂಕು

ವಿಜಯ ಬ್ಯಾಂಕಿನ 52 ಕಚೇರಿಗಳೆಲ್ಲದರಲ್ಲೂ ದಕ್ಷತೆಯಿಂದ, ಸೌಜನ್ಯದಿಂದ ನಿಮಗೆ ಸೇವೆ ಸಲ್ಲಿಸಲಾಗುವುದು.

ವಿವರಗಳಿಗೆ ನಿಮ್ಮ ಹತ್ತಿರದ ಶಾಖೆಯಲ್ಲಿ ಕೇಳಿರಿ

ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ ವಿಜಯ ಬ್ಯಾಂಕ್ ಬಿಲ್ಡಿಂಗ್

ಲೈಟ್ ಹೌಸ್ ಹಿಲ್ ರೋಡು, ಮಂಗಳೂರು-3

VB-20 KAN.

Vijaya Bank Offices

Mysore State BANGALORE— 1 1834, III Cross, Sampige Road, Malleshwaram—Phone 26369 2 19, Cambridge Road, Ulsoor—Phone 74804 3 35, Kempegowda Road, Phone 22395 * MANGALORE—1 Light House Hill Road 2. Hampankatta * BHATKAL * BRAHMAVAR * BYNDOOR * CHAMARAJNAGAR * COONDAPOOR * DHARWAR * DODBALLAPUR * GONIKOPAL * KARKALA * KAUP * KOLAR * KOLLEGAL * KRISHNARAJPET * MADDUR * MAGADI * MERCARA * MUDIGERE * MYSORE * NANJANGUD * PUTTUR * UDIPI * HUBLI * GADAG * NELAMANGALA * MALAVALLI * CHENNAPATNA * KANAKAPURA * RAMANAGARAM

Bombay: "Hassan Chambers", Parsee Bazar Street, Fort

Kerala State CHALAPURAM—CALICUT * MATTANCHERRY—COCHIN * BROADWAY—ERNAKULAM * ROUND CIRCLE—TRICHUR * KUTHUPARAMBA * KALLAI—NEW MAHE * KALPETTA * KANHANGAD * KASARAGOD * KOTTAKKAL * MANJERI * MANNARGHAT * PERINTALMANNA * PONNANI * TIRUR * TRIPUNITHURA * TALIPARAMBA * TELLICHERRY

ವಿವೇಚನೆ

ಕೀರ್ತನೆಗಳ ಕನಕದಾಸರು

ಲೇಖಕರು
ಡಾ| ರಂ. ಶ್ರೀ. ಮುಗಳಿ

ಕನಕದಾಸರ ಕೀರ್ತನೆಗಳು ಪುರಂದರದಾಸರಷ್ಟು ಪ್ರತ್ಯಕ್ಷವಾಗಿ ಇಲ್ಲವೇ ಪ್ರತೀತಿಯಲ್ಲಿ ಹೇರಳವಾಗಿರದೆ ಇದ್ದರೂ ಭಕ್ತ ಕವಿಯ ಸರ್ವ ಪ್ರಕಾರದ ಭಾವ ಸಂಪತ್ತಿಯನ್ನು ಒಳಗೊಂಡಿರುತ್ತದೆ. ಜೊತೆಗೆ ಪುರಂದರದಾಸರಿಗಿಂತಲೂ ಹೆಚ್ಚು ಸ್ವತಂತ್ರವಾದ ವಿಮರ್ಶನ ಧೈರ್ಯವನ್ನು ಪ್ರಕಟಗೊಳಿಸಿರುತ್ತವೆ.

ಭಕ್ತ ಕವಿಯ ಭಾವ ಸಂಪತ್ತಿಯ ಮೂಲ ಉಗಮ ಪರಮಾತ್ಮನ ಅಸ್ತಿತ್ವದ ಅನುಭಾವ ಮತ್ತು ನಿತಾಂತ ಶ್ರದ್ಧೆ, ಅದರಿಂದ ಪ್ರಾಪ್ತವಾಗುವ ನಿರ್ಭೀತಿ — ನಿಶ್ಶಂಕೆಗಳಲ್ಲಿರುತ್ತದೆ. ಒಂದು ದೃಷ್ಟಿಯಿಂದ ಈ ನಿರ್ಭೀತಿ ನಿಶ್ಶಂಕೆಗಳೇ ಆಂತರಿಕ ಅನುಭಾವದ ಬಾಹ್ಯ ಆವಿಷ್ಕಾರಗಳೆಂದು ಹೇಳಬಹುದು. ಒಮ್ಮೊಮ್ಮೆ ಮಾತಿನ ಮೋಸಗಾರಿಕೆಯಿಂದ ಇಂಥ ಆವಿಷ್ಕಾರಗಳನ್ನು ಅಭಿವ್ಯಕ್ತಗೊಳಿಸಬಹುದು. ಆದರೆ, ಯಾವ ಮಾತಿನ ಹಿಂದೆ ಮೋಸವನ್ನರಿಯದ ಅನುಭಾವವು ನೆಲೆಯಾಗಿ ನಿಂತಿದೆ ಎಂಬುದನ್ನು ಮಾತರಿವವರು ಅರಿತುಕೊಳ್ಳಬಹುದು. ಉದಾಹರಣೆಗೆ "ಕಲ್ಲಿಣಿಸದಿರು ಕಂಡ್ಯ ತಾಳು ಮನವೆ ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ" ಈ ಕೀರ್ತನೆಯನ್ನು ಅವಲೋಕಿಸಬೇಕು. ಪರಮಾತ್ಮನು ಎಲ್ಲರನ್ನು ಸಲಹುವನು ಎಂಬ ವಿಷಯದಲ್ಲಿ ಕನಕದಾಸರು ಹೇಳಿದ್ದು ಏನೋ ರೂಢಿಯ ಮಾತಲ್ಲ, ಒಂದು ಸತ್ಯವಾದ ಅನುಭವವೆಂಬುದನ್ನು ಈ ಕೀರ್ತನೆಯ ಪ್ರತಿಯೊಂದು ನುಡಿ ಎದೆಯ ಮೇಲೆ ಕೈಯಿಟ್ಟು ಸಾರುತ್ತದೆ. ಅನುಭವಕ್ಕೆ ಪೋಷಕವಾಗಿ ಕೊಟ್ಟಿರುವ ಬೆಟ್ಟದ ತುದಿಯಲ್ಲಿ ಹುಟ್ಟಿದ ವೃಕ್ಷ, ನವಿಲಿನ ಚಿತ್ರ ಬಣ್ಣ, ಪವಳದ ಲತೆಯ ಕೆಂಪು, ಸವಿಮಾತಿನ ಗಿಳಿಯ ಹಸುರು, ಕಲ್ಲಿನಲ್ಲಿ ಹುಟ್ಟಿ ಕೂಗುವ ಕಪ್ಪೆ ಈ ನಿದರ್ಶನಗಳು ಸಮರ್ಪಕವಾಗಿ ಸಹಜ ರಮ್ಯವಾಗಿ ಬಂದಿರುತ್ತವೆ. ಇವೆಲ್ಲಾ ಹಳೆಯ ಕಾಲದ ಭಾವಿಕರ ಮನವರಿಕೆ ಸರಿ, ಇಂದಿನ ಬುದ್ಧಿವಂತನಿಗೆ ಒಪ್ಪಿತವಾಗಲಾರವು ಎಂದು ಕೆಲವರು ಹೇಳಬಹುದು. ಇಂದಿನ ಅನ್ನಾನ್ನದೆಸೆ, ಉಪವಾಸ ಸಾವು. ಇವುಗಳನ್ನು ನೋಡಿದರೆ, ದೇವರು ಸಲಹುವುದಿಲ್ಲ ಎಂಬುದಕ್ಕೆ ಸಂಶಯವಿಲ್ಲ ಎಂದು ವ್ಯಂಗವಾಗಿ ಹೇಳುವಂತಾಗಿದೆ. ಆದರೆ, ಭಕ್ತ ಕವಿಯ ಮನೋಗತವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ನಿಸರ್ಗ ಪ್ರಕ್ರಿಯೆಯಲ್ಲಿ ಸಹಜ ಸಿದ್ಧವಾಗಿ ಪೋಷಕ ಸತ್ವವಿರುವುದನ್ನು ನೋಡಿದರೆ ಪ್ರಾಣಿ ಮಾತ್ರದ ರಕ್ಷಣೆಗೆ ಪರಮಾತ್ಮನು ಏರ್ಪಡಿಸಿದ ವ್ಯವಸ್ಥೆಯೊಂದಿದೆ ಎಂಬುದರ ಅರಿವಾಗುತ್ತದೆ. ಆದರೆ, ಸುಮ್ಮನೆ ತೆರೆದ ಬಾಯಲ್ಲಿ ತುತ್ತು ಬೀಳಲಾರದು. ಪ್ರಯತ್ನವು ಅವಶ್ಯವಾಗಿರುತ್ತದೆ. ಮನುಷ್ಯನು ತನ್ನ ಪ್ರಯತ್ನಕಾರ್ಯದಲ್ಲಿ ಆತ್ಯಾಪೆ ಅನ್ಯಾಯಗಳನ್ನು ತೋರಿ, ತನ್ನ ಕಾಲ ಮೇಲೆ ತಾನು ಕಲ್ಲುಹಾಕಿ ಕೊಳ್ಳುತ್ತಾನೆ; ದೇವರನ್ನು ಶಪಿಸುತ್ತಾನೆ. ತಾಯಿ ಕೊಡುವ ಸವಿಯೂಟವನ್ನು ತಮ್ಮ ಜಗಳದಲ್ಲಿ ಮಣ್ಣುಪಾಲು ಮಾಡುವ ಮಕ್ಕಳು ತಾಯಿಯನ್ನು ಬಯ್ಯುವಂತೆ ಅನೇಕರ ರೀತಿಯಾಗುತ್ತದೆ. ಅಲ್ಲದೆ 'ಎಲ್ಲರನು ಸಲಹುವನು' ಅಂದರೆ 'ಎಲ್ಲರ ಸೋಮಾರಿಗಳಾದರೂ ಸಲಹುವನು" ಎಂದು ಅರ್ಥವಲ್ಲ. ಒಂದೊಂದು ಸಲ ದುಡಿಯುವವರಿಗೂ ದೊರಿಯಲಿಕ್ಕಿಲ್ಲ. ಅಂಥಲ್ಲಿ ಶಿಕ್ಷೆಯಲ್ಲಿಯೂ ರಕ್ಷೆಯನ್ನು ಪರಮಾತ್ಮನು ಇಟ್ಟಿರುವನೆಂಬ ತಿಳಿವು ಭಕ್ತನಿಗೆ ಪ್ರಾಪ್ತವಾಗಿರುತ್ತದೆ.

ಅಂತೆಯೇ ಕನಕದಾಸರು ಪರಮಾತ್ಮನಲ್ಲಿ ಪೂರ್ತಿಯಾಗಿ ನಂಬಿಕೆಯಿಟ್ಟು ಮನಃಪೂರ್ವಕವಾಗಿ ಅವನಲ್ಲಿ ಶರಣು ಹೋಗಿದ್ದಾರೆ, ಅದರಲ್ಲಿಯೇ ತಮ್ಮ ಸಾಫಲ್ಯವನ್ನು ಕಂಡಿದ್ದಾರೆ. ಈ ಸರ್ವಸಮರ್ಪಣ ಭಾವವು, "ತನು ನಿನ್ನದು ಜೀವನ ನಿನ್ನದು ರಂಗ, ಅನುದಿನದಲಿ ಬಹ ಸುಖ ದುಃಖ ನಿನ್ನವಯ್ಯ" ಎಂಬ ಹಾಡಿನಲ್ಲಿ ಸಹಜ ಸ್ಫೂರ್ತವಾಗಿ ಉಕ್ಕಿ ಬಂದಿದೆ. ಕಿವಿಯಿಂದ ಕೇಳುವುದೆಲ್ಲ, ನೋಡುವ ನೋಟವೆಲ್ಲ, ಪರಿಮಳದ ಲೇಪಿಸಿಕೊಂಬುದೆಲ್ಲ, ರುಚಿಗೊಳ್ಳುವ ರುಚಿಯೆಲ್ಲ—ಎಲ್ಲವೂ ನಿನ್ನದು ಎಂದು ಅವರು ನಮ್ರರಾಗಿ ಹೇಳುತ್ತಾರೆ. ಕೊನೆಗೆ, ಮಾಯಾಪಾಶದ ಬಲೆಯೊಳು ಸಿಕ್ಕಿತೊಳಲುವ ಕಾಯ ಪಂಚೇಂದ್ರಿಯ ಗತಿ ನಿನ್ನದು, ಕಾಯಜಪಿತ ಕಾಗಿನೆಲೆಯಾದಿ ಕೇಶವರಾಯ ನೀನಲ್ಲದೆ ನರರು ಸ್ವತಂತ್ರರೆ" ಎಂದು ಕೇಳಿದ್ದಾರೆ. ಈ ಭಾವವು ಇಂದಿನ ಬುದ್ಧಿನಿಷ್ಠರಿಗೆ ಅರ್ಥವಾಗುವುದು ಕಷ್ಟ. ಅರ್ಥವಾಗದೆ ಹೋದರೆ, ಕನಕದಾಸರ ಇಂಥ ಕೀರ್ತನೆಗಳ ಸ್ವಾರಸ್ಯವು ಅವರಿಗೆ ತಿಳಿಯಲಾರದು. ಮನುಷ್ಯನಿಗೆ ಇರುವ ಸ್ವಾತಂತ್ರ್ಯವೆಲ್ಲ ಮರ್ಯಾದಿತವಾದದ್ದು. ಅಮರ್ಯಾದವಾದ, ಸರ್ವತಂತ್ರವಾದ ಸ್ವಾತಂತ್ರ್ಯವು ಪರಮಾತ್ಮನೊಬ್ಬನಿಗೇ ಇರುತ್ತದೆ. ನರರು ಸ್ವತಂತ್ರರೇ ಅಲ್ಲ ಎಂದು ಅರ್ಥವಲ್ಲ, 'ನೀನಲ್ಲದೆ ನರರು ಸ್ವತಂತ್ರರೆ?" ಎಂಬ ಕನಕದಾಸರ ಪ್ರಶ್ನೆಯ ಅರ್ಥವೆಂದರೆ. ನಿನ್ನ ಪ್ರೇರಣೆಯಿಂದಲೇ ನರರು ಸ್ವತಂತ್ರರಾಗಿರುತ್ತಾರೆ. ಈ ಸ್ವಾತಂತ್ರ್ಯವನ್ನು ಮಾಯಾ ಪಾಶದ ಬಲೆಯಲ್ಲಿ ಸಿಲುಕಿಕೊಳ್ಳುವುದರಕ್ಕೆ ಬಳಸಬಹುದು; ಈಶ್ವರಾರ್ಪಣ ಬುದ್ಧಿಯಿಂದ ಕರ್ಮಯೋಗ ಸಾಧನೆಯಲ್ಲಿ ಬಳಸಬಹುದು. ಎರಡಕ್ಕೂ ಅದರದರ ಫಲವಿರುತ್ತದೆ. ಎರಡನೆಯ ಸಾಧನೆಯನ್ನೇ ಕನಕದಾಸರು ಎತ್ತಿಹಿಡಿಯುತ್ತಾರೆ.

ಹಲವಾರು ಕೀರ್ತನೆಗಳಲ್ಲಿ ಮೇಲಿನಂತಿರುವ ಅನುಭಾವದ ಮತ್ತು ಭಕ್ತಿಯ ನಿದರ್ಶನಗಳನ್ನು ನಾವು ಕಾಣುತ್ತೇವೆ. ಉದಾಹರಣೆಗೆ, "ಇಷ್ಟು ದಿನ ಈ ವೈಕುಂಠ ಎಷ್ಟು ದೂರವೆನುತಿದ್ದೆ", "ಹರಿಯೆ ನಿನ್ನ ಪರಮಾರ್ಥ ನಿರುತದಿಂದಲಿ ಎನಗೆ ದೊರಕಿತು", "ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು", "ತೊರೆದು ಜೀವಿಸಬಹುದೆ ಹರಿ ನಿನ್ನ ಚರಣವ", "ನಿನ್ನಿಂದ ನಾನೇ ಜನಿಸಿ ಬಂದೆನೇ' ಎಂಬುವನ್ನು ಅವಲೋಕಿಸಬೇಕು ಇವುಗಳಲ್ಲಿ ಎಷ್ಟು ಸರಳವಾಗಿ ಮತ್ತು ಹೃದಯಸ್ಪರ್ಶಿಯಾಗಿ ಕನಕದಾಸರು ತಮ್ಮ ಅನುಭವಗಳನ್ನು ಮೂಡಿಸಿದ್ದಾರೆ! "ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು' ಎಂಬುದು ಪರಮಾತ್ಮನಲ್ಲಿ ಭಕ್ತಿ ಅವರಲ್ಲಿ ಉಂಟುಮಾಡಿದ ಸಂತೃಪ್ತಿಯನ್ನು ಬಣ್ಣಿಸುತ್ತದೆ. 'ಮುಕುತರಾದರು ಎನ್ನ ನೂರೊಂದು ಕುಲದವರು ಮುಕುತಿ ಮಾರ್ಗಕ್ಕೆ ಯೋಗ್ಯನಾನಾದೆನೋ, ಅಕಳಂಕ ಶ್ರೀ ಹರಿ ಭುಕುತಿಗೆ ಮನಬೆಳೆದು ರುಕುಮಿಣಿ ಅರಸ ಕೈವಶವಾದ ಎನಗೇ, ಇಂದೆನ್ನ ಜೀವಕ್ಕೆ ಸಕಲ ಸಂಪದವಾಯಿತ್ತು ಮುಂದೆನ್ನ ಜನ್ಮ ಸಫಲವಾಯಿತು, ತಂದೆ ಶ್ರೀಕಾಗಿನೆಲೆಯಾದಿ ಕೇಶವರಾಯ ಬಂದು ದೆನ್ನ ಹೃದಯದಲಿ ನೆಲೆಯಾಗಿ ನಿಂತ||" ಈ ನುಡಿಗಳಲ್ಲಿ ಕಾಣಲಿಕ್ಕೆ ಕಾವ್ಯವೇನೂ ಇಲ್ಲ. ಆದರೆ, ನೇರವಾದ, ಶ್ರೇಷ್ಠವಾದ ಆಂತರಿಕ ಅನುಭವವೇ ಲ್ಲಿ ಉಕ್ಕಿ ಬಂದ ನಿರಾಭರಣ ಸುಂದರವಾದ ಕಾವ್ಯವಾಗಿದೆ. ಕನಕದಾಸರ ಕೀರ್ತನೆಗಳ ಸ್ವಾರಸ್ಯವೆಲ್ಲ ಇಂಥ ಸಾಫಲ್ಯದ ಸಹಜ ಆವಿಷ್ಕಾರದಲ್ಲಿರುತ್ತದೆ. ಸಾಮಾನ್ಯವಾಗಿ ಎಲ್ಲ ದಾಸ ವಾಙ್ಮಯಕ್ಕೂ ಈ ಉಕ್ತಿ ಅನ್ವಯಿಸುತ್ತದೆ.

ಕನಕದಾಸರ ಇತರ ಕೀರ್ತನೆಗಳಲ್ಲಿ ದೇವತಾ ಸ್ತುತಿ, ನಾಮಸ್ಮರಣೆಯ ಹಾಡುಗಳಿವೆ. ಆದರೂ ಅವು ಹೆಚ್ಚಿನ ಪ್ರಮಾಣದಲ್ಲಿಲ್ಲ. ನೀತಿ ಅಥವಾ ತತ್ತ್ವವು ಮುಖ್ಯವಾದ ಕೀರ್ತನೆಗಳು ಮಾತ್ರ ಹೇರಳವಾಗಿವೆ. ಅವುಗಳಲ್ಲಿ ಜಾನಪದ ಶೈಲಿಯನ್ನು ಹೆಚ್ಚಾಗಿ ಬಳಸಿ ಬರೆದ ಬೋಧಕವಾದ ಕೆಲವು ಕೀರ್ತನೆಗಳು ಪರಿಣಾಮಕಾರಕವಾಗಿರುತ್ತವೆ. "ಸಾರಿ ದೂರಿ ಹೇಳಿತೇನಿ", ಏನು ಇಲ್ಲದ ಎರಡು ದಿನದ ಸಂಸಾರ", "ಹಿಂಬದಲ್ಲಿರುವ ಜೀವಕಂಬ ಸೂತ್ರ ಗೊಂಬೆಯಂತೆ" ಈ ಮೊದಲಾದುವನ್ನು ಗಮನಿಸಬೇಕು.

"ಬೆಳ್ಳಿ ಬಂಗಾರಿಟ್ಟುಕೊಂಡು ಒಳ್ಳೆ ವಸ್ತ್ರ ಹೊದ್ದುಕೊಂಡು ಚಳ್ಳವಳ್ಳಿ ಗೊಂಬೆಯಂತೆ ಆಡಿ ಹೋಯಿತು, ಹಳ್ಳ ಹರಿದು ಹೋಗುವಾಗ, ಗುಳ್ಳೆ ಬಂದು ಒಡೆಯುವಂತೆ ಉಳ್ಳಪೊರೆಯಂತೆ ಸಂಸಾರದಾಟವು", 'ನಾಯಿ ಬಾಯಿ ಅರಿವೆಯಂತೆ ನಾನಾ ಕೋಟಲೆಯಲ್ಲಿ ಬಿದ್ದು", "ಹಲವು ಜನುಮದಿ ತಾಯಿ ಎನಗಿತ್ತ ಹಾಲು ನಲಿದಂಬಾಗಿ ಹನಿ ನೆಲಕೆ ಬಿದ್ದುದು ಕೂಡಿ ಆಳೆಯ ಕ್ಷೀರಾಂಬುಧಿಗೆ ಕಮ್ಮಿಗಿಲೋ" ಈ ಅವತರಣಗಳಲ್ಲಿ ಕನಕದಾಸರು ಪಡೆದ ಜಾನಪದ ಶೈಲಿಯ ಹಿಡಿತ ಮತ್ತು ಕಲ್ಪನೆಯ ಸ್ವತಂತ್ರ ಸೂಕ್ಷ್ಮತೆ ಇವು ಮೆಚ್ಚುವಂತಿವೆ.

ಅವರ ಹಲವಾರು ಕೀರ್ತನೆಗಳಲ್ಲಿ ಸಮಾಜದ ವಿಮರ್ಶೆ ಮತ್ತು ಜನ ಜೀವನ ಚಿತ್ರವು ಸಾಕಷ್ಟು ಖಂಡಿತವಾದ ರೀತಿಯಲ್ಲಿ ಬಂದಿರುತ್ತದೆ. ಅಂದಿನ ಸಮಾಜದಲ್ಲಿಯ ದಂಭಾಚಾರ, ಅನ್ಯಾಯ — ಅಸತ್ಯ ಮುಂತಾದುವನ್ನು ಅವರು ಕಡೆ ನುಡಿದಿದ್ದಾರೆ. ಇತರ ದಾಸರಿಗಿಂತ ಅವರ ವಿನುಶೇ ವಿಡಂಬನೆಗಳು ಒಂದು ತೂಕ ಹೆಚ್ಚೆಂದು ಹೇಳಬಹುದು.

ಒಟ್ಟಿನಲ್ಲಿ 'ಕೀರ್ತನೆಗಳ ಕನಕದಾಸರು" ಕನ್ನಡಿಗರ ನಿತ್ಯ ಕೀರ್ತಿಗಳಿಗೆ ಮತ್ತು ಗೌರವಕ್ಕೆ ಪಾತ್ರರಾಗಿದ್ದಾರೆ. ಅವರ ಕೀರ್ತನೆಗಳನ್ನು ಅರ್ಥ ಮಾಡಿಕೊಂಡು ಅಂತಃಕರಣದಲ್ಲಿ ಕೊರೆದಿಟ್ಟುಕೊಂಡು ಆಚರಣೆಯಲ್ಲಿ ತರುವ ಪ್ರಯತ್ನದಲ್ಲಿಯೇ ಅವರ ನಿಜವಾದ ಸ್ಮರಣೆಯಿರುತ್ತದೆ.

ಬಾಲಾಶ್ರಮದ ಹಾವಳಿಯ ಕತೆಯೇ?
ವೇಶ್ಯಾಪುತ್ರಿಯ ಮಾನಾಪಹಾರದ ಚಿತ್ರವೇ?
ಯಾವುದು?

ಸನ್ಯಾಸಿಯ ಸೋಗಿನಲ್ಲಿ!

ಸನ್ಯಾಸದ ಹೆಸರಿನಲ್ಲಿ ವಿನ್ಯಾಸವೇ?
ವೇಶ್ಯಾಪುತ್ರಿಯರಿಗೆ ನೀತಿಯ ಜೀವನ ನಡೆಸುವ ಹಕ್ಕಿಲ್ಲವೇ?
ಈ ಪ್ರಶ್ನೆಗಳಿಗೆ ತಕ್ಕ ಉತ್ತರ ಬೇಕೆಂದಿದ್ದರೆ
ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಇವರ
ಈ ವಿಷಾದಾಂತ ಕಾದಂಬರಿಯನ್ನೋದಿರಿ
ಬೆಲೆ: 0 75 ಪೈಸೆ ಮಾತ್ರ. ಟ. ಖ. ಪ್ರತ್ಯೇಕ.
ಸಿಗುವ ಸ್ಥಳಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

ಭಯಪಡಬೇಕಾಗಿಲ್ಲ

ಕ್ರೂರತ್ವ ಮತ್ತು ಕಮ್ಯೂನಿಸಂ ಕೈಕುಲುಕಿಸಿಕೊಂಡಾಗ..

ಬರೆದವರು: ಶ್ರೀ ಶಿವಶಂಕರ.

ಜನ್ಮತಃ ಅಥವಾ ಸ್ವಭಾವತಃ ಚೈನೀಯರು ಕ್ರೂರಿಗಳೆಂದು 'ನವಯುಗ' ಪ್ರಕಟಿಸಿದಾಗ ಕೆಲವರ ಮನಸ್ಸಿನಲ್ಲಿ ಪ್ರಶ್ನೆಗಳ ಅಲೆಗಳೆದ್ದಿರುತ್ತವೆ. ಚೈನೀಯರೆಲ್ಲರೂ ಕ್ರೂರಿಗಳಾಗಿರಲದೆಂತು ಸಾಧ್ಯ? ಚಂಗಿಸಖಾನ, ಮಾವೊತ್ಸೆ-ಟುಂಗ್, ಚೌ ಎನ್-ಲೈ ಅಥವಾ ಚೆನ್-ಈ ಕ್ರೂರಿಗಳೆಂದೊಡನೆ ಚೈನೀಯರೆಲ್ಲರನ್ನೂ ಕ್ರೂರಿಗಳೆನ್ನುವದು ಸರಿಯೇ? ಮುಂತಾದ ಪ್ರಶ್ನೆಗಳೇಳುವದು ಸ್ವಾಭಾವಿಕ ಇದೆ.

ಸ್ವಭಾವತಃ ಚೈನೀಯರು ಕ್ರೂರಿಗಳೆನ್ನುವದರಲ್ಲಿ ಸಂದೇಹವಿಲ್ಲ. ಹಾಗೆಂದೊಡನೆ ಕಟುಕನಿಗೆ ಹೃದಯವಿಲ್ಲವೆನ್ನಲು ಸಾಧ್ಯವೇ? ಅದೇ ರೀತಿ ಚೈನೀಯರಿಗೆ ಕೂಡಾ. ಈ ಚೆಂಗೀಸಖಾನ್, ಮಾವೊ ಮುಂತಾದವರು ಹಾಗೂ ಸೈನಿಕರು ಬಂದದ್ದಾದರೂ ಎಲ್ಲಿಂದ? ಆ ಸಮಾಜದ ಗರ್ಭದಿಂದ ತಾನೇ? ಅದರಿಂದ ಚಂಗೀಸಖಾನ್ ಮುಂತಾದವರು ಸಮಾಜಕ್ಕೆ ಅಪವಾದವಲ್ಲ, ಆದರ ಬದಲು ಅತ್ಯಂತಪರಮಾವಧೀಯೇ ಸರಿ.

ಕನ್‌ಫೂಷಿಯಸ್ ಹಾಗೂ ಬುದ್ಧನ ಅನುಯಾಯಿಗಳು ಕ್ರೂರಿಗಳೆಂದರೆ ನಂಬಲು ಸಾಧ್ಯವೇನು? ಕನ್‌ಫೂಷಿಯಸನ ಚೈನಾ ಇಂದು ಅಸ್ತಿತ್ವದಲ್ಲಿರುವದಿಲ್ಲ. ಅಲ್ಲದೆ ಚೈನಾ ನಮ್ಮ ಮೇಲೆ ಇದೇ ಪ್ರಪ್ರಥಮ ಬಾರಿ ಆಕ್ರಮಣ ನಡೆಸಿರುವದಲ್ಲ. ಮಹಾಭಾರತ ಕಾಲದಲ್ಲೂ ಅದು ಮಲಿತು ನಿಂತಿತ್ತು. ನಮ್ಮ ಗಾಂಡೀವಧಾರಿ ಧೀರರು ಡ್ರೇಗನನ ಬಾಲವನ್ನು ಹಿಡಿದು ಗರಗರನೆ ಸುತ್ತಿ ಅದನ್ನು ಹತೋಟಿಯಲ್ಲಿಟ್ಟುಕೊಂಡಿದ್ದರು. ಇಂತಹ ಆಕ್ರಮಣ ಹಲವಾರು ಬಾರಿ ನಡೆದಿರುತ್ತದೆ. ಆದರ ಫಲವನ್ನು ಅವರು ಅನುಭವಿಸಿದ್ದಾರೆ. ಆದರೆ ಅಂದು ಡ್ರೇಗನನಿಗೆ ಜಯಕಾರ ಹಾಕುವವರು ಭಾರತದಲ್ಲಿ ಇದ್ದಿರಲಿಲ್ಲ. ಭಾರತೀಯರಿಗೆ ದ್ರೋಹ ಬಗೆಯುವವರು ಅಂದು ಇದ್ದಿರಲಿಲ್ಲ. ಅಂದು ಪೃಥ್ವಿ ಪೂಜೆ ಅಂಧಶ್ರದ್ಧೆಯ ಚಿಹ್ನೆಯಾಗಿರಲಿಲ್ಲ. ಅದು ಮಾತೃ ಭೂಮಿಯ ಮೇಲಣ ಮಮತೆಯ ಚಿಹ್ನೆಯಾಗಿತ್ತು. ಇಂದು ಭಾರತ ಭಕ್ತಿಸ್ತೋತ್ರ ಹಾಡುವವನ್ನು ಜಾತೀಯವಾದಿಗಳೆನ್ನಲಾಗುತ್ತಿದೆ! ಅಧಃಪತನದ ಹಾದಿಯಲ್ಲಿ ಅದೆಷ್ಟು ಕ್ಷಿಪ್ರಗತಿಯಲ್ಲಿ ನಾವು ಪ್ರಗತಿ ಹೊಂದಿದ್ದೇವೆ!

ಬುದ್ಧನು ಅಹಿಂಸಾವಾದವನ್ನು ಪ್ರಚಾರ ಮಾಡಿರುವನಾದರೂ ಬೌದ್ಧಮತಾವಲಂಬಿಗಳೆಲ್ಲರೂ ಅಹಿಂಸಾವಾದಿಗಳಾಗಿದ್ದರೆನ್ನುವದನ್ನು ಇತಿಹಾಸ ಒಪ್ಪುವದಿಲ್ಲ. ಭಾರತದಲ್ಲೇ ನಡೆದುದಾದರೂ ಏನು? ಆಕ್ರಮಣಗಾರನು ತಾನು ಬೌದ್ಧಮತಾವಲಂಬಿಯೆಂದು ಹೇಳಿಕೊಂಡು ಆಕ್ರಮಣ ನಡೆಸಿದಾಗ ಇಲ್ಲಿದ್ದ ಬೌದ್ಧರು ಆಕ್ರಮಣಗಾರರನ್ನು ಆಲಿಂಗಿಸಿಕೊಂಡಿಲ್ಲನೇನು? ಮಾತೃ ಭೂಮಿಗೆ ದ್ರೋಹ ಬಗೆದಿಲ್ಲವೇನು? ಇಂದಿನ ಕಮ್ಯೂನಿಸ್ಟರು ಅದನ್ನೇ ನಡೆಸುತ್ತಿದ್ದಾರೆ. ಆಕ್ರಮಣಗಾರನು ಕಮ್ಯೂನಿಸ್ಟನಿರುವದರಿಂದ ಇವರು ಸ್ವಾಗತಿಸುತ್ತಿದ್ದಾರೆ; ದೇಶ ದ್ರೋಹಕ್ಕೂ ಅವರು ಹೇಸುವದಿಲ್ಲ.

ಕನ್‌ಫೂಷಿಯಸನ ಅಥವಾ ಬುದ್ಧನ ತತ್ವಗಳನ್ನು ಅರಿತುಕೊಂಡು ಅದರಂತೆ ಎಲ್ಲರೂ ವರ್ತಿಸುತ್ತಾರೆನ್ನುವದು ಸರಿಯಲ್ಲ. ಹಾಗೆಯೇ ಕನಫೂಷಿಯಸ್ ಅಥವಾ ಬೌದ್ಧ ಮತಾವಲಂಬಿಗಳು ಹಿಂಸೆಗೆ ಹಿಂಜರಿಯುತಿದ್ದು ಅಹಿಂಸೆಯ ಆಗರವೆನ್ನುವದೂ ಸರಿಯಲ್ಲ, ಬೌದ್ಧ ಮತವನ್ನೆ ಜಗತ್ತಿನಾದ್ಯಂತ ಹಬ್ಬಿಸಬೇಕೆನ್ನುವರಿಗೆ ಹಿಂಸೆ ಅಥವಾ ಅಹಿಂಸೆ ಅಷ್ಟು ಪ್ರಾಮುಖ್ಯವಲ್ಲ. ಹಾಗೆಯೇ ಕಮ್ಯೂನಿಸಮನ್ನು ಜಗತ್ತಿನಾದ್ಯಂತ ಹಬ್ಬಿಸಬೇಕೆನ್ನು ಅದ್ಯಾವ ಕ್ರೂರ ಅಥವಾ ವೈನರ ಕುಕೃತ್ಯಕ್ಕೂ ಹೇಸುವದಿಲ್ಲ.

ಇರಬಹುದು. ಆದರೂ ಚೈನೀಯರೆಲ್ಲರನ್ನೂ ಆಕ್ರಮಣಗಾರರು ಹಾಗೂ ಕ್ರೂರಿಗಳೆನ್ನುವದು ಸರಿಯೇ? ಅದಕ್ಕೆ ಅಪವಾದ ಇರಬಹುದು, ಅಷ್ಟೇ. ಅಂದರೆ ಹಳ್ಳಿಯ ಮುಗ್ಧ ಜನತೆ ಹಾಗೂ ಅಧ್ಯಾತ್ಮಿಕತೆಯನ್ನು ಅರಗಿಸಿಕೊಂಡಿರುವವರು ಅದಕ್ಕೆ ಅಪವಾದವಾಗಿ ಇರಬಹುದು, ಆದರೆ ಚೈನಾದಲ್ಲಿ ಆ ಎರಡು ಗುಂಪುಗಳು ಇಂದು ಸುತ್ತಿಗೆಯ ಪೆಟ್ಟಿಗೆ ಬಾಯಿತೆರೆಯುವುದಿಲ್ಲ.

ಚೈನಾದ ಕ್ರಾಂತಿಗೆ ಶ್ರೀ ಎಂ. ಎನ್. ರಾಯ್ ಮುಂತಾದ ಭಾರತೀಯರು ಸಹಾಯ ಮಾಡಿದ್ದರೂ ಕೂಡಾ ಕೊನೆಯಲ್ಲಿ ಅವರಿಗೇನೇ ಸುತ್ತಿಗೆಯ ಪೆಟ್ಟಿನ ರುಚಿಯನ್ನು ಅಲ್ಲಿನ ಆಡಳಿತ ಯಂತ್ರ ತೋರಿಸಿಕೊಟ್ಟಿತು. ಅನಂತರ ಚಿಯಾಂಗ-ಕೈ-ಶೇಖರನ್ನು ಓಡಿಸಿ ಕಮ್ಯುನಿಸ್ಟ್ ಪಕ್ಷವೇ ಗದ್ದುಗೆಯನ್ನೇರಿತು. ರಷ್ಯಾದಲ್ಲಿ ಕಮ್ಯುನಿಸ್ಟ್ ಪಕ್ಷ ಆಡಳಿತ ಲಗಾಮನ್ನು ಕೈಯಲ್ಲಿ ತೆಗೆದುಕೊಂಡಿರುತ್ತದೆ. ಈಚೆ ಚೈನಾದಲ್ಲಿ ಕಮ್ಯೂನಿಸ್ಟ್ ಕುಡುಗೋಲಿದೆ. ನಡುವೆ ಇರುವ ಭಾರತೀಯರ ಅವಸ್ಥೆ ಏನು? ಅದರೂ ಒಂದೆಡೆಯಿಂದ ಆಕ್ರಮಣ ನಡೆಸುವ ಯೋಚನೆ (ತಾತ್ವಿಕವಾಗಿ ಕೂಡಾ ಇರಬಹುದು.) ಸುತ್ತಿಗೆಯನ್ನು ಇನ್ನೊಂದೆಡೆ ಆಕ್ರಮಣ ನಡೆಸಿರುವ ಕುಡುಗೋಲನ್ನು ಎಡ ಕೈಗಳಿಂದ ಎದುರಿಸಿ ಹಿಡಿದು ಮಣ್ಣು ಮುಕ್ಕಿಸಿ ಬಿಡುವ ಸಾಮರ್ಥ್ಯ ಉಳ್ಳ ಹಾಗೂ ಅವರನ್ನು ತಾಮಸಿಕ ಕಮ್ಯೂನಿಜಮಿನಿಂದ ಬಿಡುಗಡೆಗೊಳಿಸಿ ಹಿಂದೂತ್ವದ ಜ್ಯೋತಿಯನ್ನು ತೋರುವ ಭಾರತೀಯರು ಬೆದರಬೇಕಾಗಿರುವದಿಲ್ಲ.

ಪೀಕಿಂಗಿನಿಂದ ಪಲಾಯನ ಮಾಡಿ ಫಾರ್ಮೋಸದಲ್ಲಿ ಪಾದ ಬಿಟ್ಟಿರುವ ಚಿಯಾಂಗ ಕೈ ಶೇಖರು ಕೂಡಾ ಕ್ರೂರಿಗಳೇನೆಂದೀಗ ಕೆಲವರು ಕೇಳಬಹುದು. ನಿಜವಾಗಿ ಅವರು ಕ್ರೂರಿಗಳರದೆ ಬೆಣ್ಣೆಯಂತಹ ಹೃದಯ ಉಳ್ಳವರಾಗಿದ್ದಲ್ಲಿ ಇಷ್ಟು ದಿನ ಕಮ್ಯೂನಿಸ್ಟರ ಆಕ್ರಮಣವನ್ನೆದುರಿಸಿ ನಿಂತಿರಲು ಸಾಧ್ಯವಾಗುತ್ತಿರಲಿಲ್ಲ. ಅದು ಅವರವರ ವಿಷಯವಾಯಿತು. ಸಮ್ಮತ್ತ ಅವರ ಧೋರಣೆ ಏನು? ಭಾರತಕ್ಕೂ ಫಾರ್ಮೋಸಕ್ಕೂ ಸಂಬಂಧವಿದೆಯೇ? ಅಂತಹ, ರಾಯಭಾರಿಗಳದ್ದು, ವ್ಯಾವಹಾರಿಕ ಸಂಬಂಧವೇನೂ ಇರುವುದಿಲ್ಲ. ಅಲ್ಲದೆ ಸಂಯುಕ್ತರಾಷ್ಟ್ರ ಸಂಘದಲ್ಲಿ ಚೈನಿ ಕಮ್ಯೂನಿಸ್ಟರಿಗೆ ಸ್ಥಾನ ಕೊಡಿಸಲು ಭಾರತ ಪ್ರಯತ್ನಿಸುತ್ತಿರುವಾಗ ಅವರು ತಮ್ಮತ್ತ ನಿಜವಾಗಿ ಸ್ನೇಹವಿಂದಿರಲು ಸಾಧ್ಯವೇನು?

ಆದರೂ ಪರಿಸ್ಥಿತಿ ಅಷ್ಟು ಹದಗೆಟ್ಟಿರುವದಿಲ್ಲ. ನಾವು ಮಿಥ್ಯಾವಾದದ ಇತಿಶ್ರೀ ಮಾಡಿಕೊಂಡಲ್ಲಿ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಸಾಧ್ಯವಿದೆ. ಇದು ಅನುಭವಿಗಳ ಅರ್ಥಪೂರ್ಣ ಅಭಿಪ್ರಾಯವಿದೆ.

ಸಾಧಾರಣ ಹತ್ತು ತಿಂಗಳ ಹಿಂದೆ ಇಲ್ಲಿಯ ಕೆಲ ಸಂಸತ್ ಸದಸ್ಯರು ಹಾಗೂ ಇತರ ರಾಜಕೀಯ ಪ್ರಮುಖರು ಫಾರ್ಮೋಸಾಕ್ಕೆ ಹೋಗಿ ಬಂದಿರುವರು. ಅದರಲ್ಲಿ ಭಾರತೀಯ ಜನಸಂಘ, ಸ್ವತಂತ್ರ ಪಾರ್ಟಿ ಅಲ್ಲದೆ ದ್ರಾವಿಡ ಮುನ್ನೇತ್ರ ಕಳ್ಗಮಿನ ಸದಸ್ಯರಿದ್ದರು. ಸ| ಶ್ರೀ ಅಟಲ ಬಿಹಾರಿ ವಾಜಪೇಯಿ (ರಾಜ್ಯ ಸಭಾ ಸದಸ್ಯ), ಬ್ರಜರಾಜ ಸಿಂಘ (ಲೋಕ ಸಭಾ ಸದಸ್ಯ) ಮತ್ತು ಬಲರಾಜ ಮಧೋಕ್ (ಮಾಜಿ ಲೋಕ ಸಭಾ ಸದಸ್ಯ) ಭಾರತೀಯ ಜನ ಸಂಘದ ಮುಖಂಡರು. ಸ| ಶ್ರೀ ದಯಾಬಾಯಿ ಪಟೇಲ್, ಸುಂದರಮಣಿ ಪಟೇಲ, ಸೋಲಾಂಕಿ ಮತ್ತು ರೆಡ್ಡಿ ಸ್ವತಂತ್ರ ಪಾರ್ಟಿಯ ಪ್ರಮುಖರು. ಸ| ಶ್ರೀ ಮನೋಹರನ್ ಮತ್ತು ರಾಜಾರಾವ್ ದ್ರಾವಿಡ ಮುನ್ನೇತ್ರ ಕಳ್ಗಮಿನ ಮುಂದಾಳುಗಳು. ಇವರಲ್ಲಿ ಭಾರತೀಯ ಜನಸಂಘದ ಶ್ರೀ ಬಲರಾಜ ಮಧೋಕರು ದಿಲ್ಲಿಯಲ್ಲಿ ಐತಿಹಾಸಿಕ ಪ್ರಾಧ್ಯಾಪಕರಾಗಿದ್ದಾರೆನ್ನುವದು ಗಮನೀಯ ವಿಷಯವಿದೆ.

(ಹನ್ನೊಂದನೇ ಪುಟ ನೋಡಿರಿ)

ಸಿಂಡಿಕೇಟ್ ಬ್ಯಾಂಕ್

ನಿಮ್ಮ ಠೇವಣಾತಿಗಳ ಮೇಲೆ ಇನ್ನೂ ಹೆಚ್ಚಿನ ಬಡ್ಡಿ ಈಯುವುದು.

ನಿಮ್ಮ ಹಿತಾಸಕ್ತಿಗಳನ್ನು ದಕ್ಷತೆಯಿಂದ ಕಾಯುವುದು!

ಸೇವಿಂಗ್ಸ್ ಬ್ಯಾಂಕ್ ಖಾತೆ

ವಿಶೇಷ ಸವಲತ್ತುಗಳು

ನಿಮ್ಮ ಖಾತೆಯಲ್ಲಿರುವ ಹಣದ ಮೊತ್ತ 4%ರ ಸಲೆಯಲ್ಲಿ ಬಡ್ಡಿಯನ್ನು ಗಳಿಸಿರುತ್ತದೆ.

ಹಣವನ್ನು ಮರಳಿ ಪಡೆಯುವಾಗ ಅತ್ಯಧಿಕವೆಂದರೆ ಇಂತಿಷ್ಟೆ ಪಡೆಯಬೇಕು ಎನ್ನುವ ನಿರ್ಬಂಧವಿಲ್ಲ. ಮುಂಚಿತವಾಗಿ ಸೂಚಿಸಬೇಕಾದ ಆಗತ್ಯವೂ ಇಲ್ಲ. ಒಂದು ವರ್ಷದಲ್ಲಿ 150 ಬಾರಿ ಹಣವನ್ನು ಮರಳಿ ಪಡೆಯಬಹುದು ಎಂದು ಮಾತ್ರ ನಿಯಮಗೊಳಿಸಲಾಗಿದೆ.

ಕನಿಷ್ಟ 5 ರೂ.ಗಳ ಮೊತ್ತದಿಂದಲೂ ನಿಮ್ಮ ಖಾತೆಯನ್ನು ತೆರೆಯಬಹುದು ಮತ್ತು ನಿಮ್ಮ ಖಾತೆಗೆ ನೀವು ಬರಿದೆ 25 ಪೈಸೆಗಳನ್ನು ಕೂಡಾ ಜಮಾ ಮಾಡಬಹುದು.

ಒಂದು ವಾರದಲ್ಲಿ ರೂ. 1,500/-ಗಳ ತನಕದ ಮೊತ್ತಕ್ಕೆ ಪ್ರುಕ್ಕಟೆ ರವಾನೆಯ ವ್ಯವಸ್ಥೆಯನ್ನು ಮಾಡಲಾಗಿದೆ.

ಚೆಕ್ ಮೂಲಕ ವ್ಯವಹಾರದ ಸೌಕರ್ಯಗಳನ್ನು ಒದವಿಸಲಾಗಿದೆ. ನಿಮ್ಮ ಎಲ್ಲಾ ಪಾವತಿಗಳನ್ನು ನೀವು ನಿರಾಯಾಸವಾಗಿ ಚೆಕ್ಕುಗಳ ಮೂಲಕವೇ ಮಾಡಬಹುದು.

ನಮ್ಮ ಅಧಿಕಾರಿಗಳು ನಿಮಗೆ ಶೀಘ್ರ ಮತ್ತು ಸೌಜನ್ಯಪೂರ್ಣವಾದ ಸೇವೆಯನ್ನು ಸಲ್ಲಿಸಬಲ್ಲರು.

— ವಿವರಗಳಿಗೆ ದಯವಿಟ್ಟು ನಿಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ —

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ

ಶಾಖೆಗಳು: 200ಕ್ಕೂ ಮಿಕ್ಕಿ.

ಚಲಾವಣಾ ನಿಧಿ: ರೂ. 70 ಕೋಟಿಗೂ ಮಿಕ್ಕಿ.













ನಿ - ವಾಶಿಂಗ್‌ಟನ್

ನ್ನು ಅರಸುವವರಿಗೂ ಜಲಯಾನವೇ ಪ್ರಮುಖ ಸಾಧನವಾಗಿತ್ತು. ಆದರೆ, ಗಾಳಿಯ ಅನುಕೂಲತೆಯನ್ನು ಹೊಂದಿಕೊಂಡೇ ಅವರ ಹಾಯಿಹಡಗ ತನ್ನ ಯಾತ್ರೆಗೆ ಹೊರಡಬೇಕಾಗಿತ್ತು. ಬಿರುಗಾಳಿಯೇ ಮೊದಲಾದ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸುವ ಶಕ್ತಿಯೂ ಅಂದಿನ ಜಲಯಾನಗಳಲ್ಲಿರಲಿಲ್ಲ. ೧೮೦೭ರಲ್ಲಿ ಅಮೆರಿಕನ್ ಸಂಶೋಧಕನಾದ ರಾಬರ್ಟ್ ಫಲ್ಟನ್ ಎಂಬವನೊಂದು ಶೋಧವನ್ನು ಮಾಡಿ ಮಾನವ ಪ್ರಗತಿಗೊಂದು ಮೈಲುಗಲ್ಲು ಹಾಕಿದನು. ಅವನು ಉಗಿಹಡಗವನ್ನು ನಿರ್ಮಿಸಿದನು. ಇದನ್ನು ಕ್ಲಾರ್ಮೋಂಟ್ ಎಂದಾತ ಕರೆದನು. ಅಂದಿನಿಂದ ಮಾನವನಿಗೆ ಹತ್ತು ಕೈಗಳ ಶಕ್ತಿ ಬಂತಿತು.

ಚಿತ್ರ ೮: ಸಂಚಾರ ಸ್ವಾತಂತ್ರ್ಯ

ಜಾರ್ಜ್ ವಾಶಿಂಗ್‌ಟನ್ ಸೇತುವೆಯು ನ್ಯೂಯಾರ್ಕ್ ಮತ್ತು ನ್ಯೂಜೆರ್ಸಿ ರಾಜ್ಯಗಳನ್ನು ಜೋಡಿಸುತ್ತದೆ. ಒಂದು ರಾಜ್ಯದಿಂದ ಇನ್ನೊಂದು ರಾಜ್ಯವನ್ನು ಪ್ರವೇಶಿಸಬೇಕಾದರೆ, ಇಲ್ಲಿ ಯಾವ ಕಾಗದ ಪತ್ರಗಳನ್ನೂ ತೋರಿಸಬೇಕಾಗಿಲ್ಲ. ಏಕೆಂದರೆ, ಅಮೆರಿಕೆಯಲ್ಲಿ ಸಂಪೂರ್ಣ ಸಂಚಾರ ಸ್ವಾತಂತ್ರ್ಯವಿದೆ. (ಭಾರತದಂತೆಯೇ) ಯಾವ ಆತಂಕವೂ ಇಲ್ಲದೆ ಅಮೆರಿಕನ್ನರು ಅಮೆರಿಕೆಯ ರಾಜ್ಯಗಳಲ್ಲಿ ಸಂಚಾರ ಮಾಡಬಹುದು, ನೆಲಸಬಹುದು, ದುಡಿಯಬಹುದು, ಸಂದರ್ಶನ ನೀಡಬಹುದು.

ಚಿತ್ರ ೯: ನ್ಯೂಜೆರ್ಸಿ ಟರ್ನ್‌ಪೈಕ್

ವಾಶಿಂಗ್‌ಟನ್ ಸೇತುವೆಯನ್ನು ದಾಟಿದ ಮೇಲೆ ನ್ಯೂಜೆರ್ಸಿ ಮಾರ್ಗದಲ್ಲಿ ಓಡಬಹುದು. ಇದು ವಾಷಿಂಗ್‌ಟನ್ನಿಗೆ ಮುಟ್ಟಿಸುತ್ತದೆ. ೧೧೮ ಮೈಲುದ್ದವಿರುವ ಇದು ಅಮೆರಿಕೆಯ ದೊಡ್ಡ ಹೈವೇಗಳಲ್ಲಿ ಒಂದು. ನಗರ ವಾಹನಗಳು ಇಲ್ಲಿ ಸದಾ ಸಂಚರಿಸುತ್ತಿರುತ್ತವೆ. ದೊಡ್ಡ ದೊಡ್ಡ ಔದ್ಯಮಿಕ ಕ್ಷೇತ್ರಗಳೂ ಈ ಮಾರ್ಗದ ಇಕ್ಕಡೆಗಳಲ್ಲಿರುತ್ತದೆ. ಹಾಗಿದ್ದರೂ ಇಲ್ಲಿ ವಾಹನಗಳ ವೇಗಕ್ಕೆ ನಿಯಂತ್ರಣವಿಲ್ಲ. ಗಂಟೆಗೆ ೬೦ ಮೈಲುಗಳ ವೇಗದಲ್ಲಿ ಈ ಮಾರ್ಗದಲ್ಲಿ ವಾಹನಗಳನ್ನು ದೌಡಾಯಿಸಬಹುದು. ಮೋಟಾರು ಮಾಲಿಕರು ಅಲ್ಪ ಮಟ್ಟದ ಕರಗಳನ್ನು ತೆರುತ್ತಾರೆ.

ಚಿತ್ರ ೧೦: ಸರ್ವಿಸ್ ಸ್ಟೇಶನ್

ಉರುವಲು ತುಂಬುವುದಕ್ಕೋಸ್ಕರ ಮಾರ್ಗ ಪಕ್ಕದಲ್ಲಿ ಸರ್ವಿಸ್ ಸ್ಟೇಶನ್‌ಗಳಿವೆ. ಇಲ್ಲಿನ ನೌಕರರ ಸ್ನೇಹ-ಸೌಹಾರ್ದವು ಯಾರನ್ನಾದರೂ ಮುಗ್ಧಗೊಳಿಸಬೇಕು. ವಿಂಡ್‌ಶೀಲ್ಡನ್ನು ಆತನು ಒರಸುತ್ತಾನೆ, ನೀರು, ಎಣ್ಣೆ, ಬ್ಯಾಟರಿ ಮೊದಲಾದುವನ್ನೂ ಸರಿ ನೋಡುತ್ತಾನೆ. ತನ್ನ ಸೇವೆಯಿಂದ ವಾಹನದ ಒಡೆಯರನ್ನು ತೃಪ್ತಿಪಡಿಸುತ್ತಾನೆ. ಸೇವೆಯು ಸುಲಭದರದಲ್ಲಿ ಸಂಪೂರ್ಣವಾಗಿರಬೇಕು ಮಾತ್ರವಲ್ಲ, ಗಿರಾಕಿಗಳನ್ನು ಮೆಚ್ಚಿಸುವಂತಹುದೂ ಆಗಿರಬೇಕು—ಇದು ಅಮೆರಿಕನ್ "ಸೇವಾಕೇಂದ್ರ"ದ ಕರ್ಮಚಾರರ ಗುರಿ.

ಚಿತ್ರ ೧೧: ಭವನ ನಿರ್ಮಾಣ

ಅಮೆರಿಕದಲ್ಲಿ ನಿವಾಸ ಪ್ರದೇಶಗಳಿವೆ. ಇಲ್ಲಿ ಸಾವಿರಾರು ಮನೆಗಳಿವೆ. ಇವುಗಳಲ್ಲಿ ವಾಸಿಸುವವರು ಯಾರು? ಸಾಮಾನ್ಯ ಅಮೆರಿಕನ್ನರು. ವಿವಿಧ ಕೆಲಸಗಳಲ್ಲಿ ತೊಡಗಿರುವವರು ಅಥವಾ ಆಯ್ದುಕೊಂಡ ಉದ್ಯೋಗಗಳಲ್ಲಿರುವವರು ಇಲ್ಲಿರುತ್ತಾರೆ. ಪ್ರತಿ ವರ್ಷವೂ ಅಮೆರಿಕೆಯಲ್ಲಿ ಒಂದು ಮಿಲಿಯದಷ್ಟು ಹೊಸಮನೆಗಳು ಕಟ್ಟಲ್ಪಡುತ್ತವೆ. ನೂರಕ್ಕೆ ೫೫ರಷ್ಟು ಅಮೆರಿಕನ್ನರು ಸ್ವಂತಮನೆಯನ್ನು ಹೊಂದಿರುತ್ತಾರೆ. ಅಲ್ಲಿನ ಕೃಷಿಭೂಮಿಯಲ್ಲಿಯೂ ಸೇ. ೮೮ರಷ್ಟು ವೈಯಕ್ತಿಕ ಹಿಡುವಳಿಯ ವರ್ಗಕ್ಕೇ ಸೇರಿದೆ.

ಚಿತ್ರ ೧೨: ಆಟೊಮೊಬೈಲ್ಸ್

ಔದ್ಯಮಿಕ ಕ್ಷೇತ್ರವನ್ನು ದಾಟಿ ಹೋಗುತ್ತಿರುವಾಗ ನಾವು ಕಾರಖಾನೆಯ ಮುಂದುಗಡೆ ಬಹಳ ಸಂಖ್ಯೆಯಲ್ಲಿ ಕಾರುಗಳು ತಂಗಿರುವುದನ್ನು ನೋಡಬಹುದು. ಇವು ಯಾರವು ಎಂದು ಯಾರಾದರೂ ಕೇಳುವುದು ಸಹಜ. ಇವೆಲ್ಲವೂ ಕಾರಖಾನೆಯ ನೌಕರ ವರ್ಗದವು ಎಂದಾಗ ವಿಸ್ಮಯಪಡಬೇಕಾಗಿಲ್ಲ. ಏಕೆಂದರೆ, ಅಮೆರಿಕೆಯಲ್ಲಿ ಮೋಟಾರು ಕಾರುಗಳು ರಾಜಭೋಗದ ದ್ಯೋತಕವಾಗಿ ಉಳಿದಿಲ್ಲ; ಜೀವನದ ಅವಿಭಾಜ್ಯ ಅಂಗ. ಅಮೆರಿಕೆಯಲ್ಲಿ ೫೬ ಮಿಲಿಯಕ್ಕೂ ಮಿಕ್ಕಿದ ಪ್ಯಾಸೆಂಜರ್ ಕಾರುಗಳಿವೆ. ಇವುಗಳಲ್ಲಿ ಪ್ರತಿಯೊಂದೂ ವರ್ಷವೊಂದಕ್ಕೆ ಹತ್ತು ಸಾವಿರ ಮೈಲುಗಳಷ್ಟು ಓಡುತ್ತವೆ.

ಚಿತ್ರ ೧೩: ವಾಷಿಂಗ್‌ಟನ್

ಅಮೆರಿಕನ್ ರಾಜಧಾನಿಯ ಚಿತ್ರಗಳನ್ನು ಕಂಡೇ ಮುಗ್ಧರಾದವರು ಅಧಿಕ ಜನರು. ಏಕೆಂದರೆ, ಎಲ್ಲರಿಗೂ ವಾಷಿಂಗ್‌ಟನ್ ಯಾತ್ರೆ ಮಾಡುವ ಅವಕಾಶ ದೊರೆಯಲಾರದು. ಆದರೂ ನಗರವನ್ನು ಕಣ್ಣಾರೆ ಕಂಡಾಗ ಪ್ರೇಕ್ಷಕನು ತನ್ನನ್ನೇ ಮರೆಯುವನು. ಅಮೆರಿಕನ್ ಸ್ವಾತಂತ್ರ್ಯ ಸಮರದ ನಾಯಕ ಜಾರ್ಜ್ ವಾಷಿಂಗ್‌ಟನ್ನನ ಸವಿಸ್ಮರಣೆಗಾಗಿ ಈ ನಗರದ ನಾಮಕರಣವಾಗಿದೆಯೆಂದು ಎಲ್ಲರೂ ಬಲ್ಲರು. ೧೭೯೦ರಲ್ಲಿ ಪೀರೀ ಚಾರ್ಲ್ಸ್ ಎಂಬ ಫ್ರೆಂಚನು ಇದರ ನಕಾಶೆಯನ್ನು ತಯಾರಿಸಿದನು. ಇಲ್ಲಿನ ಅಮೆರಿಕನ್ ಕುಟುಂಬಗಳು ತಮ್ಮೊಡನೆ ಸಂಚಾರಿಯನ್ನೂ ನಿಶ್ಚಿಸಿಕೊಳ್ಳುತ್ತಾರೆ.

ಚಿತ್ರ ೧೪: ದಿ ಬಾರ್ಕರ್ಸ್

ದಿ ಬಾರ್ಕರ್ಸ್ ಕುಟುಂಬವು ಯಾತ್ರಾರ್ಥಿಯನ್ನು ಸ್ವಾಗತಿಸಿತು. ಬಾರ್ಕರರು ಇಂಜನಿಯರ್. ಅವರ ಪತ್ನಿ, ೧೮ ವರ್ಷದ ಮಗ ಜಿಮ್ ಮತ್ತು ೧೬ ವರ್ಷದ ಪೆಟ್ಟಿ—ಇಷ್ಟೇ ಜನ ಅಲ್ಲಿರುವವರು. ಯಾತ್ರಾರ್ಥಿಯು ಸ್ವಾಗತದಿಂದಲೇ ತೃಪ್ತಿ ಹೊಂದುತ್ತಾನೆ. ಸಾಮಾನ್ಯ ಅಮೆರಿಕನ್ನರು ಹೇಗೆ ಜೀವಿಸಿಕೊಂಡಿರುತ್ತಾರೆ ಎಂದು

(ಹದಿನೂರನೇ ಪುಟ ನೋಡಿರಿ)

೬



೭

೮



೯



೧೫

೧೬

೧೭

೧೮

ಅನಾಗರಿಕ ಧರ್ಮಪಾಲರು

(ಐದನೇ ಪುಟದಿಂದ)

ನ್ನು ಪರಿತ್ಯಾಗ ಮಾಡಿ, ಪರಸೇವೆಗಾಗಿ ತನ್ನ ಜೀವನವನ್ನರ್ಪಿಸಲು ತಂದೆತಾಯಿಗಳಿಂದ ಅನುಮತಿ ಪಡೆದನು. ಅವನು ತನ್ನ ಮೊದಲಿನ ಹೆಸರನ್ನು ಬಿಟ್ಟು ಧರ್ಮಪಾಲನೆಂಬ ಹೆಸರನ್ನು ಸ್ವೀಕರಿಸಿದನು. ಧರ್ಮವೆಂದರೆ ಇಲ್ಲಿ ಬುದ್ಧೋಪದೇಶ-ನ್ಯಾಯ ನಿಯಮವೆಂದರ್ಥ. ಹಾಗೆಯೇ ಅವನು ಅನಾಗರಿಕ—ಮನೆಮಾರು ಇಲ್ಲದವನಾದನು. ಅಂದಿನಿಂದ ಅನಾಗರಿಕ ಧರ್ಮಪಾಲರು ಮಾನವ ಸಮುದಾಯದ ಕಲ್ಯಾಣಕ್ಕಾಗಿ ಬುದ್ಧನ ಕರುಣಾಪೂರ್ಣವಾದ ಉಪದೇಶಗಳಿಗೆ ಅನುಸಾರವಾಗಿ ತನ್ನ ಜೀವನವನ್ನರ್ಪಿಸಿದನು.

ಅವರು, ಪರಕೀಯ ಶಾಸಕರ ಮುಂದೆ ತಲೆ ತಗ್ಗಿಸದೆ ಸ್ವಾಭಿಮಾನದಿಂದ ನೆಟ್ಟಗೆ ನಿಲ್ಲಬೇಕು, ಪರಕೀಯ ದುರಭ್ಯಾಸ ಪದ್ಧತಿಗಳನ್ನು ಬಿಡಬೇಕು, ತಮ್ಮ ಧರ್ಮ, ದೇಶ, ಸಂಸ್ಕೃತಿಗಳ ಮೇಲೆ ಅಭಿಮಾನ ಇಡಬೇಕು, ಆರ್ಥಿಕ ಅಭಿವೃದ್ಧಿಗೆ ಬಹು ಪ್ರಯತ್ನಪಡಬೇಕು ಮತ್ತು ಬುದ್ಧನ ಉಪದೇಶವನ್ನು ಅನುಸರಿಸಬೇಕು, ಹೀಗೆ ಜನರಿಗೆ ಬೋಧನೆ ಕೊಡುತ್ತಾ, ಪಟ್ಟಣದಿಂದ ಪಟ್ಟಣಕ್ಕೆ ಹಳ್ಳಿಯಿಂದ ಹಳ್ಳಿಗೆ ಸಂಚರಿಸಿ ಒಂದ ವಿಧದ ಧಾರ್ಮಿಕ ರಾಷ್ಟ್ರೀಯತೆಯನ್ನು ಉಪದೇಶ ಮಾಡಿದರು. ಅದು ಶತಶತಮಾನಗಳಿಂದ ದಲಿತರಾಗಿ ಪೀಡಿತರಾಗಿದ್ದ ಆಲಸ ಮೂಢರಾದ ಜನತೆಯನ್ನು ಚೇತರಿಸಿ ಎಬ್ಬಿಸಿತು. ಜನತೆಯಲ್ಲಿ ಅವರು ಸ್ವಾಭಿಮಾನದ ಭಾವನೆಯನ್ನು ತುಂಬಿಸಿದರು.

ಧರ್ಮಪಾಲರು ೧೮೯೧ರಲ್ಲಿ ಮೊದಲಾಗಿ ಇಂಡಿಯವನ್ನು ಸಂದರ್ಶಿಸಿದರು. ಬುದ್ಧನು ಹುಟ್ಟಿ ಬೆಳೆದ ಭೂಮಿಯಲ್ಲೇ ಬುದ್ಧ ಮತವು ಹೆಚ್ಚಾಗಿ ಮಾಯವಾಗಿತ್ತು. ಸುಮಾರು ೮೦೦ ವರ್ಷಗಳಿಂದ ಅದು ಮರೆಯಲ್ಪಟ್ಟಿತ್ತು. ಬುದ್ಧನ ಜೀವನಕ್ಕೆ ಸಂಬಂಧಿಸಿದ ಪವಿತ್ರ ಸ್ಥಳಗಳು ಮೂಲೆಪಾಲಾಗಿ ಅಲಕ್ಷ್ಯಿಸಲ್ಪಟ್ಟಿದ್ದವು. ಬುದ್ಧಗಯೆಯ (ಬುದ್ಧನು ದಿವ್ಯ ಜ್ಞಾನೋದಯವನ್ನು ಪಡೆದ ಸ್ಥಳ) ದೇವಾಲಯದ ಶೋಚನೀಯ ಪರಿಸ್ಥಿತಿಯನ್ನು ಕಂಡಾಗ ಧರ್ಮಪಾಲರ ಹೃದಯವು ಕರಗಿ ಹೋಯಿತು. ಆವಾಗ ಅದು ಒಬ್ಬ ಹಿಂದೂ ಮಹಂತನ ಸ್ವಾಧೀನದಲ್ಲಿತ್ತು. ಬುದ್ಧನ ಆ ಸುಂದರ ಶಿಲಾ ಪ್ರತಿಮೆಯ ಮುಂದೆ ಕೆಳಗೆ ಮೊಣಕಾಲೂರಿ ಕುಳಿತು ಧರ್ಮಪಾಲರು, ಬುದ್ಧಗಯೆ ಮತ್ತು ಇತರ ಬೌದ್ಧರ ಪವಿತ್ರ ಸ್ಥಳಗಳನ್ನು ತಿರುಗಿ ತಾವು ಪಡೆಯಬೇಕೆಂದೂ, ಇಂಡಿಯದಲ್ಲಿ ಬುದ್ಧ ಮತವನ್ನು ಪುನಃ ಪ್ರಸಾರ ಪಡಿಸಿ ನೆಲೆಗೊಳಿಸಬೇಕೆಂದೂ ದೃಢ ನಿರ್ಧಾರ ಮಾಡಿದರು.

ಈ ನಿರ್ಧಾರದೊಡನೆ ಅವರು ೧೮೯೧ರಲ್ಲಿ ಸಿಲೋನಿಗೆ ತಿರುಗಿ ಹೋಗಿ ಕೊಲೊಂಬೋದಲ್ಲಿ ಮಹಾಬೋಧಿ ಸೊಸೈಟಿಯನ್ನು ಸ್ಥಾಪಿಸಿದರು. (ಬುದ್ಧನು ಯಾವುದರ ಕೆಳಗೆ ಜ್ಞಾನೋದಯವನ್ನು ಪಡೆದನೋ ಅಂತಹ ಬುದ್ಧಗಯೆಯಲ್ಲಿರುವ ಮರವನ್ನು ಬೋಧಿ ವೃಕ್ಷವೆಂದು ಹೇಳುತ್ತಾರೆ.) ೧೮೯೨ರಲ್ಲಿ "ಮಹಾಬೋಧಿ" ಪತ್ರಿಕೆಯನ್ನು ಹೊರಡಿಸಿದರು. ಅದೀಗ ಒಂದು ಪ್ರಮುಖ ಅಂತಾರಾಷ್ಟ್ರೀಯ ಬೌದ್ಧ ಪತ್ರಿಕೆಯಾಗಿದೆ.

ಅನಾಗರಿಕ ಧರ್ಮಪಾಲರು ೧೮೯೩ರಲ್ಲಿ ಶಿಕಾಗೋ ನಗರದಲ್ಲಿ ಜರಗಿದ ಜಾಗತಿಕ ಧರ್ಮ ಸಮ್ಮೇಳನಕ್ಕೆ ಅದರ ಅಧ್ಯಕ್ಷರಾದ ಡಾ। ಆರ್. ಬರ್ರೋಸರಿಂದ ಆಮಂತ್ರಿತರಾಗಿ ಹೋದರು. ಆ ಪರಿಷತ್ತಿನಲ್ಲಿ ಅವರು ಅತ್ಯಂತ ಯಶಸ್ಸನ್ನು ಪಡೆದು ಭೂಷಿತರಾದರು. ಸಿಲೋನಿನಿಂದ ಹೋದ ಈ ತರುಣ ಬೌದ್ಧ ಪ್ರಚಾರಕರು ಏಸು ಕ್ರಿಸ್ತನೊಡನೆ ಹೋಲಿಸಲ್ಪಡುವಷ್ಟರ ಮಟ್ಟಿಗೆ ಅಲ್ಲಿ ತಮ್ಮ ಪ್ರಬಲ ಪ್ರಭಾವವನ್ನು ಬೀರಿದರು.

ಆ ಜಾಗತಿಕ ಧಾರ್ಮಿಕ ಪರಿಷತ್ತು ನಡೆದ ನಂತರ ಅನಾಗರಿಕ ಧರ್ಮಪಾಲರು ಒಬ್ಬ ಅಂತಾರಾಷ್ಟ್ರೀಯ ವ್ಯಕ್ತಿಯಾದರು. ಅವರ ಮಹಾಬೋಧಿ ಸೊಸೈಟಿಯ ಉದ್ದೇಶಗಳು ಇಂಡಿಯ ಮತ್ತು ಸಿಲೋನಿಗೆ ಮಾತ್ರ ಸೀಮಿತವಾಗಿರಲಿಲ್ಲ. ಅವರು ಬುದ್ಧಮತವನ್ನು ಪ್ರಚಾರ ಮಾಡುತ್ತ ಏಶ್ಯ, ಯುರೋಪ್ ಮತ್ತು ಅಮೇರಿಕಾ ಮುಂತಾದ ಬಹು ದೇಶಗಳಲ್ಲಿ ಸೊಸೈಟಿಯ ಶಾಖೆಗಳನ್ನು ಸ್ಥಾಪಿಸುತ್ತಾ ಪ್ರಪಂಚದ ಸುತ್ತಲೂ ಅನೇಕ ಸಂಚಾರಗಳನ್ನು ಮಾಡಿದರು. ಅವರು ಈಗ ಪಶ್ಚಿಮ ದೇಶದಲ್ಲಿರುವ ಬುದ್ಧಮತದ ಪ್ರೇರಣಕ್ಕೆ ದಾರಿ ಮಾಡಿಕೊಟ್ಟ ಪ್ರಮುಖ ಅಗ್ರಗಾಮಿಗಳಾಗಿದ್ದರು.

ಅವರ ಕೆಲಸವು ಕೇವಲ ಧಾರ್ಮಿಕ ಮಾತ್ರವಾಗಿರಲಿಲ್ಲ. ಸಾಮಾಜಿಕ, ಸಾಂಸ್ಕೃತಿಕ, ವಿದ್ಯಾ ವಿಷಯಕ ಮತ್ತು ಲೋಕ ಕಲ್ಯಾಣಕಾರಕವೂ ಆಗಿತ್ತು. ಅವರು ರಾಜಕೀಯ ರಂಗದಲ್ಲಿ ಎಂದೂ ಕೆಲಸ ಮಾಡದಿದ್ದರೂ, ಅತ್ಯಂತ ದೇಶಭಕ್ತರಾಗಿ ಇಂಡಿಯ ಮತ್ತು ಸಿಲೋನ್ ಇವೆರಡು ದೇಶಗಳಿಗೂ ಸ್ವಾತಂತ್ರ್ಯವು ದೊರೆಯಬೇಕೆಂದು ಏನೂ ಹಿನ್ನೆಟ್ಟದೆ ಪ್ರತಿಪಾದಿಸುತ್ತಿದ್ದರು.

ಬುದ್ಧನು ತಮ್ಮವನೆಂದು ತಿಳಿದು, ಬುದ್ಧಮತ ಮತ್ತು ಬೌದ್ಧ ಸಂಸ್ಕೃತಿಯು, ಮಾನವವರ್ಗಕ್ಕೆ ತಾನು ಕೊಟ್ಟ ಬಹುದೊಡ್ಡ ಕೊಡಿಗೆಯೆಂದು ಭಾರತವು ಹೆಮ್ಮೆ ಪಡುವುದು ಸಹಜವೆನ್ನುವಂತೆ ಧರ್ಮಪಾಲರು ಭಾರತಕ್ಕೆ ಸಹಾಯ ಮಾಡಿದರು. ಈಗ ಬುದ್ಧ ಮತವು ಇಂಡಿಯದಲ್ಲಿ ಒಂದು ಧರ್ಮವಾಗಿ ನೆಲೆಸಿದೆ. ಮತ್ತು ವೈಶಾಖೀ ದಿನವು (ಬುದ್ಧನ ಜನನ, ಜ್ಞಾನೋದಯ ಮತ್ತು ನಿರ್ವಾಣಗಳನ್ನು ಸ್ಮರಿಸಲಿಕ್ಕಿರುವ ಮೇ ತಿಂಗಳಲ್ಲಿ ಬರುವ ಹುಣ್ಣಿಮೆಯ ದಿನ) ಒಂದು ರಾಷ್ಟ್ರೀಯ ರಜಾ ದಿನವಾಗಿದೆ. ಇಂಡಿಯದ ರಾಷ್ಟ್ರ ಧ್ವಜದಲ್ಲಿ ಈಗ ಬುದ್ಧನ ಧರ್ಮ ಚಕ್ರವು ಇರುತ್ತದೆ. ಬೌದ್ಧ ಮಹಾ ಚಕ್ರವರ್ತಿಯಾದ ಅಶೋಕನ ಸಿಂಹ ಚಿಹ್ನೆಯು ಇಂಡಿಯಾ ರಾಜ್ಯದ ಅಧಿಕೃತ ಮುದ್ರೆಯಾಗಿರುತ್ತದೆ;

ಒಮ್ಮೆ ಮೂಲೆಪಾಲಾಗಿದ್ದು ಈಗ ಪ್ರಪಂಚದ ನೂರಾರು, ಸಾವಿರಾರು ಜನರಿಂದ ಸಂದರ್ಶಿಸಲ್ಪಡುವ ಬುದ್ಧಗಯೆ—ಸಾರನಾಥ—ಕುಶೀನರ—ಸಾಂಚೀ ಮತ್ತು ಇತರ ಬೌದ್ಧರ ಪವಿತ್ರ ಸ್ಥಳಗಳು ಊರ್ಜಿತ ಸ್ಥಿತಿಯಲ್ಲಿರುವುದು, ಸಾಕ್ಷಾತ್ ಧರ್ಮಪಾಲರ ಪರಿಶ್ರಮದ ಫಲವಾಗಿದೆ.

ಧರ್ಮಪಾಲರು ಅನಾಗರಿಕರಾಗಿದ್ದು ಪ್ರಪಂಚ ವಿಚಾರವನ್ನು ತೊರೆದು ಬೌದ್ಧ ಧರ್ಮ ಮತ್ತು ಮಾನವ ವರ್ಗದ ಸೇವೆಗೆ ಜೀವಿತವನ್ನು ಅರ್ಪಿಸಿದವರಾಗಿದ್ದರೂ ಸಾಮಾನ್ಯ ಮನುಷ್ಯರಂತೆಯೇ ಇದ್ದರು. ಅವರು ಬೌದ್ಧ ಭಿಕ್ಷುವಾಗಿ ತನ್ನ ಜೀವಿತವನ್ನು ಅಂತ್ಯಗೊಳಿಸಲು ಬಯಸಿ ೧೯೩೧ರಲ್ಲಿ ಬೌದ್ಧ ಭಿಕ್ಷುಗಳ ಸಂಘವನ್ನು ಸೇರಿದರು. ೧೯೩೩ನೇ ಎಪ್ರಿಲ್ ತಾ. ೨೯ರಲ್ಲಿ ಅವರು ಸಾರನಾಥದಲ್ಲಿ (ಬುದ್ಧನು ತನ್ನ ಪ್ರಥಮೋಪದೇಶವನ್ನು ಮಾಡಿದ ಸ್ಥಳ) ಮರಣ ಹೊಂದಿದರು. ಭಾರತದಲ್ಲಿ ಬುದ್ಧ ಮತ ಪ್ರಚಾರಕ್ಕೆ ೨೫ ಬಾರಿ ತಾನು ಪುನರ್ಜನ್ಮ ಪಡೆಯುವೆನೆಂದು ಅವರು ಮರಣ ಕಾಲದಲ್ಲಿ ನಿರ್ಣಯ ಮಾಡಿಕೊಂಡಿದ್ದರು.

(ಕಹಾನಿಯಾ ಪತ್ರಿಕೆಯಿಂದ)

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

R.E.A. 908/64. R.E.P. 155/64.
O.S. 222/62.

ಶಂಕರ ಭಟ್ಟ —ಅರ್ಜಿದಾರ-ವಾದಿ.
ಮೂಮಕ್ಕ ಕೂಡಾ—ಎದುರು-ಪ್ರತಿವಾದಿರು.

3ನೇ ಎದುರು ಕಾಂತಪ್ಪ ರೈ, ದೇವಪ್ಪ ರೈ ಅವರ ಮಗ, ಪುತ್ತೂರು ತಾಲೂಕು ಪಡುವನ್ನೂರು ಗ್ರಾಮದ ಆಣಿಲೆ ಮನೆಯಲ್ಲಿ—ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ಅಪ್ಲಿಕ್ಯಾರಿಯು 1ನೇ ಎದುರಿಯು ಹಾಲಿ ಮೃತಪಟ್ಟಿದ್ದರಿಂದ ನಿಂಮನ್ನು ಅವರ ವಾರೀಸುದಾರರ ನೆಲೆಯಲ್ಲಿ ಕಕ್ಷಿಯಲ್ಲಿ ಸೇರಿಸಬೇಕಾಗಿ ಮಾಡಿದ ಮೇಲಿನ ಅರ್ಜಿಯು ತಾ. 5-6-65ಕ್ಕೆ ಇಟ್ಟಿರುವುದರಿಂದ ಅದಕ್ಕೆ ಆಕ್ಷೇಪಣೆ ಇದ್ದರೆ ಸದ್ರಿ ದಿವಸ ಮುಜಫ್ಫರು ಕೋರ್ಟು ಮುಂದೆ ನೀವು ಸ್ವತಃ ಯಾ ವಕೀಲರ ದ್ವಾರಾ ಹಾಜರಾಗಿ ಉದಪಡಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಿದೆ.

(*Sd.*) C. V. Shastry,
Advocate for Petitioner.

ಪುತ್ತೂರು, ತಾ. 14-4-65.

ಶಿರ್ತಾಡಿ ಯುವಕ ಮಂಡಲದ ವಾರ್ಷಿಕೋತ್ಸವ

ಶಿರ್ತಾಡಿ ಯುವಕ ಮಂಡಲದ ವಾರ್ಷಿಕೋತ್ಸವವು ತಾ. 4ರಂದು ಉಡುಪಿಯ ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮಂಡಲದ ಅಧ್ಯಕ್ಷ ಶ್ರೀ ಕೆ. ಹರಿದಾಸ ಭಟ್ ಇವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಎಚ್. ಧರ್ಮರಾಜ ಬಲಿಪರವರು ವಾರ್ಷಿಕ ವರದಿ ಮತ್ತು ಕುಮಾರಿ ಪುಷ್ಪ ಶೆಟ್ಟಿಯವರು ಮಹಿಳಾ ಮಂಡಲದ ವರದಿಯನ್ನೋದಿದರು. ಶ್ರೀ ವಿಶ್ವನಾಥ ಭಟ್‌ರವರು ಸಂದೇಶಗಳನ್ನೋದಿದರು. ಎಸ್. ಎಲ್. ನಾರಾಯಣ ಭಟ್ಟರವರು ಯುವಕ ಸಂಘದ ವತಿಯಿಂದ "ಕುಸುಮ" ಎಂಬ ಹಸ್ತಪತ್ರಿಕೆಯ ಉದ್ಘಾಟನೆ ಮಾಡಿದರು. ಶ್ರೀಗಳಾದ ಶಿರ್ತಾಡಿ ವಿಲಿಯಂ ಪಿಂಟೊ ಹಾಗೂ ಎಸ್. ಧರ್ಮಸಾಮ್ರಾಜ್ಯ ಇವರು ಸಂದರ್ಭೋಚಿತ ಮಾತುಗಳನ್ನಾಡಿದರು. ಶ್ರೀ ರಾಮ ಬೇಕಲ್‌ರವರು ಧನ್ಯವಾದ ಅರ್ಪಿಸಿದರು.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,
ಹೆ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

**ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!**

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರ: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1=50)

ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಕ್ರೂರತ್ವ ಮತ್ತು ಕಮ್ಯೂನಿಸಂ ಕೈಕುಲುಕಿಸಿಕೊಂಡಾಗ......

(ಏಳನೇ ಪುಟದಿಂದ)

ಪಾರ್ಮೋಸಾ ಒಂದು ದ್ವೀಪವಿದೆ. ಅದರ ವಿಸ್ತೀರ್ಣ ಸುಮಾರು ಇಪ್ಪತ್ತ ಮೂರು ಸಾವಿರ ಚದರ ಕಿಲೋ ಮೀಟರುಗಳು. ಅಲ್ಲಿರುವ ಜನಸಂಖ್ಯೆ ಸಾಧಾರಣ ಹದಿನೆರಡು ಮಿಲಿಯ. ಇಷ್ಟು ಚಿಕ್ಕ ದ್ವೀಪ ಮತ್ತು ಇಷ್ಟು ಸ್ವಲ್ಪ ಜನರು ಕೇಂದ್ರದಿಂದ ಸಿಡಿದು ಕಮ್ಯೂನಿಜಮಿನ ಹಟ್ಟುವಿಕೆಯನ್ನೆದುರಿಸುತ್ತಿದ್ದಾರೆ. ಚೈನೀ ಕಮ್ಯೂನಿಸ್ಟರು ಸಾಧ್ಯವಾದಾಗಲೆಲ್ಲ ಈ ದ್ವೀಪವನ್ನು ನಾಶಮಾಡಿಬಿಡಲು ಸ್ಫೋಟಕಾಸ್ತ್ರಗಳನ್ನು ದುರುಪಯೋಗಿಸುತ್ತಿದ್ದಾರೆ. ಆದರೂ ಇವರು ಬೆದರಿರುವದಿಲ್ಲ ನಮ್ಮ ದೇಶದ ವಿಸ್ತೀರ್ಣವಾದರೂ ಏನು? ನಮ್ಮ ಜನಸಂಖ್ಯೆಯಾದರೂ ಎಷ್ಟು ನಮ್ಮ ಭೌಗೋಲಿಕ ಪರಿಸ್ಥಿಯಾದರೂ ಹೇಗಿದೆ? ಆದರೂ ನಾವು ನಡುಗುತ್ತಿದ್ದೇವೆ. ಹಿಂದಿನ ಪ್ರಧಾನಿಯವರು ಕೂಡಾ ಚೈನಾದ ಜನಬಲವನ್ನು ಮರಿಯಲು ಸಾಧ್ಯವಿಲ್ಲವೆಂದು ತಮ್ಮ ಜನತೆಗೇನೇ ಹೇಳುತ್ತಿದ್ದರು! ಇಂದೂ ಇಂತಹ ಕುಪ್ರಚಾರಗಳು ಅಡೆತಡೆ ಇಲ್ಲದೆ, ನಡೆಯುತ್ತಿವೆ ಆ ರೀತಿ ಸಂಖ್ಯಾಬಲವನ್ನು ಭೂತಗನ್ನಡಿಯಲ್ಲಿ ತೋರಿಸಿಕೊಂಡು ಕಮ್ಯೂನಿಸ್ಟ್ ಚೈನಾ ಮುಂದಕ್ಕೆ ಬರುತ್ತಿದೆ. ಭಾರತದ ಮಾನವನ್ನು ಮಾನಸರೋವರದಲ್ಲಿ ಮುಳುಗಿಸಿ ಬಿಟ್ಟು, ಅದರ ಭದ್ರತೆಗೆ ಸುರಂಗವಿಡಲು ಇದೀಗ ಬದ್ರಿನಾಥ ಕ್ಷೇತ್ರದಲ್ಲಿ ಬಂದಿಳಿದಿದ್ದಾರೆ. ಇದರಿಂದ ಚೈನೀಯರು ಸ್ವಭಾವತಃ ಕ್ರೂರಿಗಳೆಂಬುದು ಚೆನ್ನಾಗಿ ಗೊತ್ತಾಗುತ್ತದೆ.

ಪಾರ್ಮೋಸಾವು ಚೈನಾ ದೇಶದ ಒಂದು ಪ್ರಾಂತ್ಯವಿದೆ. ನಮ್ಮ ಹಾಗೆ ಒಂದು ಸ್ವತಂತ್ರ ಸಾರ್ವಭೌಮ ರಾಷ್ಟ್ರವಿರುವದಿಲ್ಲ. ಹಾಗಿದ್ದೂ ಕಮ್ಯೂನಿಸ್ಟ್ ಕರಾಳ ದೈತ್ಯನಿಗೆ ಕಾಲಿಡಲವಕಾಶ ಕೊಡಕೂಡದೆಂದು ಅವರು ಪ್ರಯತ್ನಿಸುತ್ತಿದ್ದಾರೆ. ನಮ್ಮ ಸ್ಥಿತಿ ಹಾಗಿರುವದಿಲ್ಲವೆಂದು ನಮ್ಮ ಜವಾಬ್ದಾರಿ ಎರಡು ಪಾಲು ಜಾಸ್ತಿ. ಒಂದು, ನಮ್ಮ ಮೇಲೆ ಆಕ್ರಮಣ ನಡೆದಿರುತ್ತದೆ. ಹೂಣರ, ಶಕರ, ಯವನರ, ಮ್ಲೇಂಚರ, ಮೊಗಲರ, ಕ್ರೈಸ್ತಯನರ ಆಕ್ರಮಣವನ್ನು ನಾವು ಎದುರಿಸಲಿಲ್ಲವೇನು? ನಾವು ಶರಾರಿಗಳ ವಂಶದವರಲ್ಲವೇನು? ಇಂದು ಚೈನೀ ಕಮ್ಯೂನಿಸ್ಟರ ಆಕ್ರಮಣವನ್ನೆದುರಿಸಬೇಕಾಗಿರುತ್ತದೆ. ಆದಕ್ಕಾಗಿ ಕಟಿಬದ್ಧರಾಗಬೇಕಾಗಿದೆ. ಆದಕ್ಕಾಗಿ ಸೌರಾಷ್ಟ್ರದ ಯುಗಾದಿಯಂತಹ ಪರ್ವಕಾಲದಲ್ಲಿ ಹಾಗೂ ಇಂದಿನ ಪ್ರಶಾಂತ ವಾತಾವರಣದಲ್ಲಿ ದ್ವಿಗುಣಿತ ಉತ್ಸಾಹದಿಂದ ಭಾರತೀಯರು ಮುಂದೆ ಬರಬೇಕಾಗಿರುತ್ತದೆ. ಇದು ಒಂದು ಕಲ್ಲು ಮುಳ್ಳಿಂದ ನೆಲದ ಪ್ರಶ್ನೆಯಲ್ಲ. ನಮ್ಮ ಸ್ವಾಭಿಮಾನ ಹಾಗೂ ಗೌರವದ ಪ್ರಶ್ನೆ ಇದೆ. ಅದನ್ನು ಸಹಿಸಿಕೊಳ್ಳಲು ಸಾಧ್ಯವಿದೆ ಏನು? ಚಿಯಾಂಗ್ ಕೈ ಶೇಖರಿಗೆ ಈ ಪ್ರಶ್ನೆಯಿಲ್ಲ. ಅವರು ಮರಳಿ ಗದ್ದುಗೆಯನ್ನೇರಲು ಚಾತಕ ಪಕ್ಷಿಯಂತೆ ಸಮಯವನ್ನೆದುರು ನೋಡುತ್ತಿದ್ದಾರೆ; ಕಮ್ಯೂನಿಸಮಿನ ಗೋರಿಕಟ್ಟಲು ಪ್ರಯತ್ನಿಸುತ್ತಿದ್ದಾರೆ. ಅವರಿಗಿಂತ ನಾವದೆಂತು ಹೀನರಿದ್ದೇವೆ? ಇಂಗ್ಲೀಷರನ್ನು, ಫ್ರೆಂಚರನ್ನು ಅಲ್ಲದೆ ಪೈಶಾಚಿಕ ಪೋರ್ಚುಗೀಸರನ್ನು ನಾವು ಹೊಡೆದಟ್ಟಿಲ್ಲವೇನು? ಈ ಚೈನೀ ಕಮ್ಯೂನಿಸ್ಟರು ನಮಗದೆಂತು ಸಾಟಿ?

ಜಗತ್ತಿನ ಧಾರ್ಮಿಕ ರಾಜಧಾನಿ ಹಾಗೂ ಗುರುವಾಗಿದ್ದ ಪವಿತ್ರ ಭಾರತವನ್ನು ಅವತರಿಸಿಕೊಳ್ಳಸಿದ್ದಾರೆಂದು ಚೈನೀ ಕಮ್ಯೂನಿಸ್ಟರು ಕಮ್ಯೂನಿಸಂ ಹೇಳಿಕೇಳಿ ಭೌತಿಕವಾದ ಹಾಗೂ ಹೊಟ್ಟೆಗಿಂತ ಬೇರೆ ದೇವರಿಲ್ಲವೆನ್ನುವ ಭ್ರಮೆಯನ್ನು ಹರಡಿಸುವ ಅಜ್ಞಾನದಾಗಾರವಿದೆ. ಹಿಂದೆಯೂ ಆಗಾಗ ಹೀಗಾಗುತಿತ್ತು. ಆಗ ಶ್ರೀ ಶಂಕರಾಚಾರ್ಯ, ಸಮರ್ಥ ರಾಮದಾಸ, ಚಾಣಕ್ಯ, ವಿದ್ಯಾರಣ್ಯ ಗುರುಗೋವಿಂದಸಿಂಹ ಮುಂತಾದ ಸಮರ್ಥ ಆಧ್ಯಾತ್ಮಿಕ ಶಕ್ತಿಯೂ ಮಹೋದಯವಾಗುತಿತ್ತು. ಆ ಪೂರ್ಣ ಚಂದ್ರನೆದುರು ಭೌತಿಕ ವಾದದ ಹಾಗೂ ಪಾಶವೀ ದುಃಶಕ್ತಿ ಮಿಂಚು ಹುಳಗಳ ಲಟ ನಡೆಯುತ್ತಿರಲಿಲ್ಲ. ಆದರೆ ಇಂದು? ನಮ್ಮ ಆತ್ಮ ವಿಸ್ಮೃತಿಯಿಂದಾಗಿ ಮಿಂಚು ಹುಳುಗಳ ಮಿನುಗಾಟದೆದುರು ಭಾರತೀಯತ್ವದ ಪೂರ್ಣಚಂದ್ರನು ಮಿಥ್ಯವಾದದ ಮೋಡದಲ್ಲಿ ಮಸುಕಿ ಹೋಗಿದ್ದಾನೆ. ಆದರೆ ಇದೆಷ್ಟು ದಿನ? ಅಲ್ಲದೆ ಸ॥ ಶ್ರೀ ಕೌಂಡಿಣ್ಯ ವಿವೇಕಾನಂದರ ರಾಮತೀರ್ಥರನ್ನು ಭಾರತೀಯರು ಜ್ಞಾಪಿಸಿಕೊಂಡಲ್ಲಿ ಕ್ರೂರತ್ವ ಮತ್ತು ಕಮ್ಯೂನಿಸಂ ಕೈ ಕುಲುಕಿಸಿಕೊಂಡಾಗ ಭಯಪಡಬೇಕಾಗುವದಿಲ್ಲ.

ರೂಪಕ ಕಥೆ

ಅವ್ಯಕ್ತ ಅರ್ಹತೆ

ಬರೆದವರು

ಶ್ರೀ ಪಿ. ಕೆ. ಶೆಟ್ಟಿ, ಕರೋಪಾಡಿ.

ರಾಯರು ತನ್ನ ಐದಾರು ವರ್ಷದ ಚಿರಂಜೀವಿಯ ಕೈಹಿಡಿದು ರಸ್ತೆಯಲ್ಲಿ ನಡೆದು ಬರುತ್ತಿದ್ದರು. ಮಗು ತನ್ನ ಸಹಜವಾದ ಕುತೂಹಲ ಪ್ರವೃತ್ತಿಯ ಮೇರೆಗೆ ಕಂಡುದಕ್ಕೆಲ್ಲಾ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸುತ್ತಿತ್ತು. ರಾಯರು ಐಶ್ವರ್ಯದೊಂದಿಗೆ ವಿದ್ಯಾ ಸಂಪತ್ತನ್ನೂ ಪಡೆದಿದ್ದರಾದುದರಿಂದ ಮಗು ಕೇಳುತ್ತಿದ್ದ ಪ್ರತಿ ಪ್ರಶ್ನೆಗಳಿಗೂ ಕೂಡಲೇ ಉತ್ತರಿಸಿ ಮಗುವಿಗೆ ಸಮಾಧಾನ ಮಾಡುತ್ತಿದ್ದರು.

ಅವರು ಹಾಗೆಯೇ ಮುಂದೆ ಸಾಗುತ್ತಿರುವಾಗ ಅವರಿಗಿದಿರಾಗಿ ಒಂದು ವ್ಯಕ್ತಿ ಬರುತ್ತಿತ್ತು. ಸುಮಾರು ಐವತ್ತು ಕಳೆದಿರಬಹುದಾದ ಆ ವ್ಯಕ್ತಿ ಖಾದಿಯ ಸಾದಾ ಉಡುಪನ್ನೇ ಧರಿಸಿದ್ದು, ಸ್ವದೇಶ ಪ್ರೇಮದ ಮಾದರಿಯನ್ನು ಸಾರುವಂತಿತ್ತು.

ರಾಯರೂ ಆ ವ್ಯಕ್ತಿಯೂ ಪರಸ್ಪರ ಸಮೀಪವಾದರು. ರಾಯರನ್ನು ಕಂಡ ಆ ವ್ಯಕ್ತಿ ಅವರೊಡನೆ ಮಾತಾಡುವುದಕ್ಕಾಗಿ ನಗುಮುಖದಿಂದ ತಯಾರಾಯಿತು. ಆದರೆ ರಾಯರಿಗೆ ಆ ವ್ಯಕ್ತಿಯಲ್ಲಿ ಮಾತಾಡುವುದು ತನ್ನ ಅಪಾರ ಗೌರವಕ್ಕೆ ಕುಂದೆಂದು ತೋರಿತೋ ಏನೋ! ತನ್ನ ಕೂಲಿಂಗ್ ಗ್ಲಾಸಿನೆಡೆಯಿಂದ ಓರೆಯಾಗಿ ಆ ವ್ಯಕ್ತಿಯನ್ನು ನೋಡದವರಂತೆ ನೋಡಿ, ಮಗುವನ್ನು ಎಳೆದು ಮುಂದೆ ಸಾಗಿಯೆ ಬಿಟ್ಟರು ರಾಯರು.

ಆದರೆ ರಾಯರ ಮಗು ಆ ವ್ಯಕ್ತಿಯನ್ನು ಗಮನಿಸದೆ ಇರಲಿಲ್ಲ.

ಮಗು ಕೇಳಿತು, "ಅದು ಯಾರಪ್ಪಾ, ನಮ್ಮನ್ನು ನೋಡಿ ನಗುತ್ತಾ ಹೋದದ್ದು?"

ರಾಯರು, "ಅದು ನಿನ್ನ ಸಣ್ಣತ್ತೆ ಹೋಗುವ ಹೈಸ್ಕೂಲಿನ ಹೆಡ್ ಮಾಸ್ಟ್ರು"! ಎಂದರೇ ಹೊರತು ಅದೇ ಹೆಡ್ಮಾಸ್ಟ್ರು ತಾನು ಹೈಸ್ಕೂಲಿಗೆ ಮಣ್ಣು ಹೊರುತ್ತಿದ್ದಾಗ ತನಗೂ ಮೂರು-ನಾಲ್ಕು ವರ್ಷ ಪಾಠ ಹೇಳಿದ್ದರೆಂಬುದನ್ನು ಹೇಳಲಿಲ್ಲ.

ರಾಯರು ನಡೆಯುತ್ತಲೇ ಇದ್ದರು. ಮಗು ಅವರನು ಅನುಸರಿಸುತ್ತಲೇ ಇತ್ತು.

ಈಗ ಇನ್ನೊಂದು ವ್ಯಕ್ತಿ ಅವರಿಗಿದಿರಾಯಿತು. ಆ ವ್ಯಕ್ತಿಯನ್ನು ಕಂಡೊಡನೆ ರಾಯರು ತನ್ನೆರಡೂ ಕೈಗಳನ್ನು ಮೇಲೆತ್ತಿ ಜೋಡಿಸಿ—"ನಮಸ್ಕಾರ ಸಾರ್" ಎಂದರು. ಆ ವ್ಯಕ್ತಿಯೂ ತನ್ನ ಸ್ಥೂಲ ಶರೀರಕ್ಕೆ ತುಸೂ ತ್ರಾಸವಾಗದಂತಹ ಅತಿ ಸುಲಭ ಕ್ರಮದಲ್ಲಿ ಪ್ರತಿ ನಮಸ್ಕಾರ ಸಲ್ಲಿಸಿತು. ರಾಯರು ಆ ವ್ಯಕ್ತಿಯನ್ನು ನೋಡಿ ಮುಗುಳ್ನಕ್ಕು ಕಣ್ಸನ್ನೆಯಿಂದಲೇ ತಾನು ಹೋಗುವುದಾಗಿ ಸೂಚಿಸಿ ಮುಂದೆ ಹೆಜ್ಜೆಯಿರಿಸಿದರು. ಅವರನ್ನು ಅನುಸರಿಸಿ ಮಗು ಬರುತ್ತಿತ್ತು!

ಮಗು ಕೇಳಿತು, "ಅದು ಯಾರಿಗಪ್ಪಾ ನೀನು ನಮಸ್ಕಾರ ಮಾಡಿದ್ದು?" ರಾಯರೆಂದರು, "ಅದು ನಮ್ಮ ರಾಜ್ಯದ ಗಡಿಯಲ್ಲಿ ಅಕ್ಕಿ ಹೋಗದಂತೆ ಕಾಯುವ ಪೋಲಿಸು ಅಲ್ಲವಾ? ಮೊನ್ನೆ ನೋಡು ರಾತ್ರಿ ನಮ್ಮಲ್ಲಿಗೆ ಊಟಕ್ಕೆ ಬಂದದ್ದು.... ಅದು ಇವರೇ."

"ಇವರು ಅವರೆಯೋ?" ಎಂದ ಮಗುವಿನ ಮೊಗದಲ್ಲಿ ಮನಸ್ಸಿಗಾದ ಪ್ರತಿಕ್ರಿಯೆಯ ಯಾವ ಛಾಯೆಯೂ ಮೂಡಿ ಬರಲಿಲ್ಲ.

ಉಪಯುಕ್ತವಾದ ಕೆಲವು ಪುಸ್ತಕಗಳು

		ರೂ. ನ.
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ	(ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು	(ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಅನು: ಕು.ಶಿ.ಹರಿದಾಸ ಭಟ್)	2=00
ಹಿರೋಶಿಮಾದಿಂದ ಜಿನೇವ	(ಯು. ಆರ್. ಆಚಾರ್ಯ)	1=50
ಮೋಹದ ಮಹಾಜಾಲ	(ವೀರಪ್ಪ ಯಗಟಿ)	1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ	(ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ಏಶಿಯದ ಸಂಪತ್ತು	(ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು	(ಅನು: ಕು.ಶಿ.ಹರಿದಾಸ ಭಟ್)	1=75
ಕುಲವಿಲ್ಲದ ಹೆಣ್ಣು	(ಪಿ ವೆಂಕೋಬಾಚಾರ್ಯ)	1=50
ಚಿತ್ರಾಂಗದೆ	(ಅನು: ಕೆ. ಕೆ. ಶೆಟ್ಟಿ)	0=60
ರವೀಂದ್ರರ ಕತೆಗಳು	(ಹನುಮಂತ ರಾವ್ ಮಾಂಜ್ರೇಕರ)	0=90
ಹಸುರು ಹಂಸ	(ನಚಿಕೇತ)	2=00
ಭಾವಾರ್ಚನೆ	(ನಚಿಕೇತ)	1=25
ಋಣ ಯಾತ್ರೆ	(ನಚಿಕೇತ)	1=50
ಗೀತೆಯ ಕೈಗನ್ನಡಿ	(ಹೊಸಕೆರೆ ಚಿದಂಬರಯ್ಯ)	1=00

ವಿವರವಾದ ಕೆಟಲಾಗಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಾದರ ಸ್ವೀಕಾರ

ಶ್ರೀ ರಾಮರಕ್ಷಾ ಸ್ತೋತ್ರ—ಪ್ರಕಾಶಕರು: ಶ್ರೀ ಮಹಾಬಲಾನಂದ ಸ್ವಾಮಿ; ಶ್ರೀ ನಿತ್ಯಾನಂದ ಮಂದಿರ, ನಿತ್ಯಾನಂದ ರೋಡ್, ಶಿರಸಿ, ಉ. ಕ.; ಪುಟ ೨೦; ಬೆಲೆ ರೂ. ೦-೨೫

ನೂರು ರೂಪಾಯಿ- ನೋಟು (ನಾಟಕ)—ಲೇಖಕರು: ಶ್ರೀ ಗೋಪಾಲಕೃಷ್ಣ ಪಿ. ನಾಯಕ; ಪ್ರಕಾಶಕರು: ಸಾಹಿತ್ಯ ಭಂಡಾರ, ಹುಬ್ಬಳ್ಳಿ; ಪುಟ ೩೮; ಬೆಲೆ: ರೂ. ೦-೫೦.

ಆ ರಾತ್ರಿ (ಸಾಮಾಜಿಕ ನಾಟಕ)—ಲೇಖಕರು; ಶ್ರೀ ಗೋಪಾಲಕೃಷ್ಣ ಪಿ. ನಾಯಕ; ಪ್ರಕಾಶಕರು: ಆನಂದ ಗ್ರಂಥ ಮಾಲಾ, ಹುಬ್ಬಳ್ಳಿ, ಪುಟಗಳು ೮೮; ಬೆಲೆ: ೦-೮೭.

ಅಬ್ಬಾ ಏನು ಹುಡುಗಿ (ನಾಟಕ)—ಲೇಖಕರು: ಶ್ರೀ ಗೋಪಾಲಕೃಷ್ಣ ಪಿ. ನಾಯಕ; ಪ್ರಕಾಶಕರು: ವಿಜಯ ಭಾರತಿ, ಅಂಕೋಲೆ, ಉ. ಕನ್ನಡ; ಪುಟಗಳು ೩೬; ಬೆಲೆ ೦-೭೫.

ಬರಿಯ ನಾಲ್ಕಾಣೆಯಿಂದ . . .

(ಎರಡನೇ ಪುಟದಿಂದ)

ಆವನು ಈ ಹಣದಿಂದ ಸಂಸಾರ ಸಲಹುವುದಾದರೂ ಹೇಗೆ?" ಎಂದು ತಂದೆಯು ಯೋಚಿಸಿದ್ದನು.

ಈರ್ಶಾದನು ಕಾಲೇಜು ಶಿಕ್ಷಣ ಮುಗಿಸಿ ಟೆನಿಸ್ ಆಟಗಾರನಾಗಿ ಹಲವಾರು ಗೌರವಾನ್ವಿತ ವ್ಯಕ್ತಿಗಳೊಡನೆ ಸಖ್ಯ ಬೆಳೆಸಿಕೊಂಡನು. ಇದನ್ನು ತಿಳಿದ ಆತನ ಕೆಲವು ಗೆಳೆಯರು ಹೇಳುತಿದ್ದರು—"ವಾಹ್! ನಿನಗೆ ನೌಕರಿಯ ಚಿಂತೆಯಾದರೂ ಏನು! ರಾಜಾ—ನವಾಬರ ಗೆಳೆಯನಾಗಿದ್ದೀಯೋ ನೀನು! ಡೆಪ್ಯುಟಿ ಲೆಕ್ಟರರೋ ನಿನ್ನ ಕೈ ಒಳಗೆಯೇ ಇದ್ದಾರೆ" ಇದೆಲ್ಲವನ್ನು ತಿಳಿದಿದ್ದ ಈರ್ಶಾದನು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದ. ಆದರೂ ಶಿಫಾರಸು ಪತ್ರವಿದ್ದರೆ ಕೆಲಸ ದೊರಕಲು ಅಷ್ಟೊಂದು ಕಷ್ಟವಿಲ್ಲವೆಂದು ಅವನಿಗೆ ತಿಳಿದಿತ್ತು.

ನೌಕರಿಗಾಗಿ ಆಲೋಚಿಸುತ್ತಾ ಈರ್ಶಾದನು ಸರ್ಕಾರಿ ನೌಕರಿಯ ಬದಲು ರಾಜರಮನೆಯಲ್ಲೇ ಕೆಲಸ ಪಡೆಯುವ ನಿಶ್ಚಯಮಾಡಿದನು. ಆಗಾಗ ಆತನಿಗೆ ಬಿಲ್ಲೂರಿನ ನವಾಬ, ಬಿಂದೋಡಿನ ರಾಜರ ನೆನಪಾಗುತಿತ್ತು. ಇಷ್ಟೊಂದು ದೊಡ್ಡ ಘನತೆಯುಳ್ಳಿರುವ ವ್ಯಕ್ತಿಗಳಿಂದ ಲಾಭ ಪಡೆಯದಿರುವುದು ಮೂರ್ಖತನವೆಂದೂ ಆತನ ಗೆಳೆಯರು ಹೇಳುತಿದ್ದರು. ಈ ರಾಜ ಮಹಾರಾಜರಲ್ಲಿ ಮೆನೇಜರ್, ಸೆಕ್ರೆಟರಿಗಳಿಗೆ ಏನೂ ಕೊರತೆಯಿಲ್ಲ. ರಾಜ ಮಹಾರಾಜರ ಕರುಣೆಯಿಂದ ಅವರ ಸಂಬಂಧಿಕರಾದರೋ ಸುಖಸಂತೋಷದಿಂದಲೇ ಜೀವಿಸುತಿದ್ದಾರೆ. ಈ ರಾಜರುಗಳಲ್ಲಿ ತನಗೊಂದು ೪೦೦ ರೂಪಾಯಿ ಮಾಸಿಕ ವೇತನ ದೊರೆಯುವ ನೌಕರಿಯ ಚಿಂತೆಯಾದರೂ ಏನು?

ಬಿಂದೋಡಿನ ಮಹಾರಾಜರು ಮುಸ್ಸೋರಿಯಲ್ಲಿದ್ದಾರೆಂದು ಈರ್ಶಾದನಿಗೆ ತಿಳಿದಿತ್ತು. ಸಮಾಚಾರ ಪತ್ರಗಳ ಸ್ಪೋರ್ಟ್ಸ್ ಕಾಲಮಿನಲ್ಲಿ ಮಹಾರಾಜರ ಹೆಸರು ವಿರಾಜಿಸುತಿದ್ದುದನ್ನು ಕಂಡಿದ್ದನು. ಸಾಹಸಮಾಡಿ ಒಂದು ಪತ್ರವನ್ನು ರಾಜರಿಗೆ ಕಳುಹಿಸಿಕೊಡುವ ಉಪಾಯವನ್ನು ಆತನು ಮಾಡಿದನು. "ಒಂದು ವೇಳೆ ಕೊಂಚ ಕೆಲಸದ ನಿಮಿತ್ತ ಅತ್ತ ಬರುವವನಿದ್ದರೆ. ರಾಜರಲ್ಲಿಗೂ ಅವಶ್ಯ ಭೇಟಿ ಕೊಡಬೇಕೆಂದಿದ್ದೇನೆ" ಎಂದು ಬರೆದನು ಇದಕ್ಕೆ ಪ್ರತ್ಯುತ್ತರವಾಗಿ ರಾಜರು ಈರ್ಶಾದನು ಅವಶ್ಯವಾಗಿಯೂ ಮುಸ್ಸೋರಿಗೆ ಆಗಮಿಸಿ ತನ್ನಲ್ಲಿ ಅತಿಥಿಯಾಗಬೇಕೆಂದು ಭಿನ್ನವಿಸಿಕೊಂಡರು

○ ○ ○

ಜೀವನದಲ್ಲಿ ದೊರಕುವ ಸುಸಂಧರ್ಭವನ್ನು ದುರುಪಯೋಗಪಡಿಸುವುದು ಮೂರ್ಖತನ. ಮುಸ್ಸೋರಿಗೆ ಹೋಗಲು ದೊರೆತ ಈ ಅವಕಾಶವನ್ನು ಈರ್ಶಾದನು ಒಳ್ಳೇ ರೀತಿಯಲ್ಲಿ ಉಪಯೋಗಿಸಿಕೊಂಡನು. ಲಾಲಾಜಿಯವರಲ್ಲಿ ಅಂಗಲಾಚಿ ಬೇಡಿ ಕೊಂಚ ರೂಪಾಯಿಗಳನ್ನು ಸಾಲ ಪಡೆಕೊಂಡನು. ಎರಡು ಹೊಸ ಪೇಂಟನ್ನೂ ಕೋಟನ್ನೂ ಹೊಲಿಸಿದನು. ಟೆನಿಸ್ ಆಡುವಾಗ ಧರಿಸುವ ಉಣ್ಣೆಯ ಕೋಟನ್ನೂ ಆತನು ಪಡೆಕೊಂಡನು; ಅಂದವಾಗಿ ಮಡಿ ಮಾಡಿದನು. ಟೆನಿಸ್ ರ್ಯಾಕೆಟ್ಟಿಗೆ ಪಾಲಿಷ್ ಬಳಿದನು. ಮಿತ್ರನೊಬ್ಬನಿಂದ ಸೂಟ್-ಕೇಸನ್ನು ಎರವಲು ಪಡೆಕೊಂಡನು, ಮುಸ್ಸೋರಿಗೆ ಲಕ್ನೋದ ಮೂರನೆಯ ಕ್ಲಾಸ್‌ನಲ್ಲಿ ಪ್ರಯಾಣಿಸಲು ಎಂಟು ರೂಪಾಯಿ ಬೇಕಾಗಿತ್ತು. ಆತನಲ್ಲಿ ಈಗ ಕೇವಲ ಹದಿನೇಳು ರೂಪಾಯಿ ಉಳಿದಿತ್ತು. ಎಂಟು ರೂಪಾಯಿಯಲ್ಲಿ ಟಿಕೇಟನ್ನು ಪಡೆದ ಮೇಲೆ. ಕಿಸೆಯಲ್ಲಿ ಕೇವಲ ಒಂಭತ್ತು ರೂಪಾಯಿ ಉಳಿಯಿತು,

ಈರ್ಶಾದನು ಮುಸ್ಸೋರಿಯನ್ನು ತಲುಪಿದನು. ಕೈಯಲ್ಲಿದ್ದ ಚಿಕ್ಕ ಸೂಟ್ ಕೇಸನ್ನು ಆತನು ಹೊತ್ತುಕೊಂಡು ಹೋಗಬಹುದಿತ್ತು. ಅವನು ಮಹಾರಾಜರ ಮನೆಗೆ ಹೋಗಬೇಕಿದ್ದುದರಿಂದ ಕಾರಿನಲ್ಲಿ ಪ್ರಯಾಣ ಮಾಡುವುದೇ ಉಚಿತವಾಗಿತ್ತು. ಆದರೆ ಸ್ಟೇಶನ್‌ನಲ್ಲಿ ಕಾರಿರಲಿಲ್ಲವಾದುದರಿಂದ ರಿಕ್ಷಾ ಒಂದರಲ್ಲಿ ಹೊರಡುವ ಯೋಚನೆ ಮಾಡಿದನು. ಈರ್ಶಾದನನ್ನು ತಮ್ಮ ಗಾಡಿ-ತಮ್ಮ ಗಾಡಿಯೆಂದು ರಿಕ್ಷಾವಾಲರು ಸೆಳೆದುಕೊಂಡರು.

ಅರಮನೆಯನ್ನು ತಲುಪುತ್ತಲೇ ರಾಜನು ಈರ್ಶಾದನನ್ನು ಹಾರ್ದಿಕವಾಗಿ ಸ್ವಾಗತಿಸಿದನು. ಹಾಲ್‌ನಲ್ಲಿ ಕುಳಿತಿದ್ದ ಮಹನೀಯರಿಗೆ ರಾಜರು ಆತನ ಪರಿಚಯ ಮಾಡಿದರು. ಹೊಗಳುತ್ತಾ ರಾಜರು—"ಟೆನಿಸ್‌ನ್ನು ಆಡುವ ಆ ವಿಚಿತ್ರ ರೀತಿಯಲ್ಲಿ, ರೆಕೆಟ್‌ನ್ನು ತಿರುಗಿಸುವ ಕೈಚಳಕದಲ್ಲಿ ಲಕ್ನೋದಲ್ಲಿ ಯಾರೂ ಇವರನ್ನು ಮೀರಲಾರರು."

ಈರ್ಶಾದನೊಡನೆ ಬಂದ ಕೂಲಿಯೂ, ರಿಕ್ಷಾವಾಲನೂ ಅಲ್ಲೇ ಒಂದೆಡೆ ನಿಂತು ತಮ್ಮೆಡೆಗೆ ಯಾವಾಗ ಗಮನಹರಿಯುವುದೋ ಎಂದು ಪ್ರತೀಕ್ಷಿಸುತಿದ್ದರು. ಆತನ ಮನಸ್ಸಿನಲ್ಲಿ ಕೂಡ ಆ ಇಬ್ಬರಿಗೆ ಹಣ ನೀಡುವ ಚಿಂತೆಯೂ ಇದ್ದೇ ಇತ್ತು; ಆದರೆ ಆ ಪರಿಸ್ಥಿತಿಯಲ್ಲಿ ಈ ವಿಷಯಕ್ಕೆ ಹೆಚ್ಚಿನ ಗಮನ ಕೊಡುವುದು ಸರಿಯೆನಿಸಲಿಲ್ಲ. ರಾಜನ ಮನಸ್ಸು ಆ ಕೂಲಿಯೆಡೆಗೆ ಕೇಂದ್ರೀಕೃತವಾದೀತೆಂದು ಅವನು ಸುಮ್ಮನಿದ್ದನು, ಆದರೆ ರಾಜರು ಅತ್ತ ಆಗ ಮನಹರಿಸದ ಕಾರಣ ಆತನು ಅಲ್ಲೇ ನಿಂತಿದ್ದ ರಾಜನ ಸೇವಕನೊಡನೆ ಕೂಲಿಗಳಿಗೆ ಹಂಚಲು ಐದು ರೂಪಾಯಿಯನ್ನು ಕೊಟ್ಟನು. ಡ್ರೈವರನು ಅದನ್ನು ಪಡೆಯುತ್ತಲೆ ಕೂಲಿಯು ರಾಜಸೇವಕನೊಡನೆ "ರಾಜನ ಕಡೆಯಿಂದ ಏನಾದರೂ... ಬಕ್ಷೀಸು..." ಎಂದು ಉದ್ಗಾರವೆತ್ತಿದನು. ಆದರೆ ಸೇವಕನು ಇದನ್ನೇನೂ ಗಮನಿಸದೆ—"ನಾಕು, ನಡೀರಿ ಹೊರಗೆ.... ಡ್ರೈವರ್! ಅದರಿಂದ ಕೂಲಿಗೂ ಕೊಂಚ ಕೊಟ್ಟು ಬಿಡು" ಎಂದನು. ಕೊಟ್ಟ ಐದು ರೂಪಾಯಿಯಲ್ಲಿ ಏನಾದರೂ ಉಳಿದರೆ ಜೇಬಿನಲ್ಲಿಡೋಣ ಎಂಬ ಆಸೆಯಿಂದ ಇದ್ದ— ಈರ್ಶಾದ್. ಆದರೆ ಡ್ರೈವರ್ ಮತ್ತು ಕೂಲಿ ನೋಟು ಹಾರಿಸಿ ನಡೆದೇ ಬಿಟ್ಟರು. ಈರ್ಶಾದನಿಗೆ ಚಿಂತೆಯಾದರೂ ಹೊರಗೆ ಪ್ರದರ್ಶಿಸಲಿಲ್ಲ.

ರಾಜನ ಅರಮನೆಯಲ್ಲಿ ಈರ್ಶಾದನಿಗೆ ಪ್ರತ್ಯೇಕ ಕೋಣೆಯು ಏರ್ಪಾಡು ಮಾಡಿದರು. ಆತನು ರಾಜನೊಂದಿಗೆ ಕುಳಿತು ಮೇಜಿನ ಮೇಲಿರಿಸಿದ ಭೋಜನ ಸ್ವೀಕರಿಸುತಿದ್ದನು; ಚಹಸೇವಿಸುತಿದ್ದನು. ಭಾರೀ ಬೆಲೆ ಬಾಳುವ ಸಿಗರೇಟ್ ಅಂತೂ ಆತನ ಕೈಯಲ್ಲೇ ಇರುತಿತ್ತು. ಸಿಗರೇಟ್ ಸೇದುವ ಅಭ್ಯಾಸ ಈರ್ಶಾದನಿಗೆ ಇಲ್ಲದಿದ್ದರೂ ದಾಕ್ಷಿಣ್ಯಕ್ಕೆ ಕಟ್ಟುಬಿದ್ದೋ ಯಾ ಭಾಹ್ಯ ಆಡಂಭರಕ್ಕೋ ಕಷ್ಟಪಟ್ಟು ಒಂದೆರಡು ಸಿಗರೇಟ್ ಸೇದುತಿದ್ದ. ಸಂಜೆಯಾಗುತ್ತಲೇ ರಾಜನೊಡನೆ ರಿಕ್ಷಾಸವಾರನಾಗಿ ಟೆನಿಸ್ ಮೈದಾನಕ್ಕೆ ಹೊರಡುತಿದ್ದನು. ಮೈದಾನವನ್ನು ತಲುಪಿದಾಗ ಅಲ್ಲಿ ನಿಂತ ಪ್ರೇಕ್ಷಕರಲ್ಲಿ ಹಲವಾರು ಗಣ್ಯ ವ್ಯಕ್ತಿಗಳೂ ಇದ್ದರು.

ರಾತ್ರಿ ಸಮಯದಲ್ಲಿ ಈರ್ಶಾದನು ರಾಜನೊಂದಿಗೆ 'ಹ್ಯರ್‌ಮಸ್' 'ಸೆವ್ಯೆಯ್', 'ಶಾರ್ಲ್‌ವಾಲ್' ಔತಣ ಕೂಟದಲ್ಲೂ, ನೃತ್ಯ ಕೂಟದಲ್ಲೂ ಭಾಗ ವಹಿಸಿದನು. ಪ್ರತಿ ದಿನವೂ ರಾಜನ ಬೊಕ್ಕಸದಿಂದ ಲೆಕ್ಕವಿಲ್ಲದಷ್ಟು ಹಣವು ಪಾರ್ಟಿ, ಡಾನ್ಸ್ ಮತ್ತು ಡ್ರಿಂಕ್ಸ್‌ನಲ್ಲಿ ಖರ್ಚಾಗುವುದು ಆತನ ಗಮನಕ್ಕೆ ಬಂತು. ಈ ಮಹಾ ಸಿರಿವಂತನಿಂದ ಈರ್ಶಾದನಿಗೆ ತಿಂಗಳಿಗೆ ೩—೪ ನೂರು ರೂಪಾಯಿ ದೊರೆಯುವುದಾದರೂ ಏನು ಮಹಾ? ಆದರೆ ರಾಜನೊಡನೆ ನೌಕರಿಯ ವಿಷಯ ಬಾಯಿ ಬಿಟ್ಟು ಕೇಳುವುದು ಹೇಗೆ ಎಂಬುದೇ ಪ್ರಶ್ನೆಯಾಗಿತ್ತು. ಈರ್ಶಾದನು ಬಾರಿ ಸಿರಿವಂತನೆಂದು ತಿಳಿದ ರಾಜರು ಆತನಿಗೋಸ್ಕರ ಎಷ್ಟೊಂದು ಹಣವನ್ನು ಚೆಲ್ಲುತಿದ್ದರು! ಆದರೆ ಈಗ ಈರ್ಶಾದನು ನೌಕರಿಯ ವಿಷಯ ವಿಚಾರಿಸಿದಲ್ಲಿ ಆತನ ಘನತೆಗೆ ಕುಂದು ಬರುವುದೆಂದು ತಿಳಿದು ಸುಸ್ತಾಗಿ ಕುಳಿತನು. ಎಂದಾದರೂ ರಾಜರು ಏಕಾಂತದಲ್ಲಿರುವಾಗ ಈ ವಿಷಯವನ್ನು ಚರ್ಚಿಸಲು ಸಂಧರ್ಭವನ್ನು ಆತನು ಎದುರು ನೋಡುತಿದ್ದನು. ಸಂಧರ್ಭವಂತೂ ದೊರಕುತಿತ್ತು. ಆದರೆ ಈರ್ಶಾದನಿಗೆ ಧೈರ್ಯಮಾತ್ರ ಬರುತ್ತಿರಲಿಲ್ಲ. ತನ್ನ ಬಡತನದ ಅರಿವು ಎಷ್ಟೆಯಾದರೂ ರಾಜರಿಗೆ ತಿಳಿದರೆ ತನಗೆ ಸಿಗುವ ಆತಿಥ್ಯದಲ್ಲಿ ಕೊರತೆಯುದ್ಭವಿಸುವುದು ಖಂಡಿತ ಎಂದು ಈರ್ಶಾದ್ ತಿಳಿದಿದ್ದ.

ಆದುದರಿಂದ ತಾನು ರಾಜರೊಡನೆ ಭಿಕ್ಷೆ ಬೇಡಲು ಕೈಯೊಡ್ಡಲಾರೆಯೆಂದು ಮನಸ್ಸನ್ನು ಗಟ್ಟಿಪಡಿಸಿದನು. ಅವನು ನೌಕರಿ ಮಾಡಲು ತಯಾರಿದ್ದನು; ಆದರೆ ರಾಜನ ಮನೆಯ ಬೆವರಿಳಿಸಿ ದುಡಿಯುವ ನೌಕರಿಯೊಂದೂ ಇರಲಿಲ್ಲ. ಬದಲು ರಾಜರ ಮನೆಯಲ್ಲಿ 'ಆಲಸ್ಯ'ದ ಅರ್ಕ ನಡೆಯುತಿತ್ತು, 'ಐಶ್ ಆರಾಮದ' ಸತ್ಕಾರ ನಡೆಯುತಿತ್ತು. ಐಶ್ವರ್ಯದ ಪೂಜೆಯಲ್ಲಿತ್ತು. ಆದರೆ ರಕ್ತವನ್ನು ಬೆವರು ಮಾಡಿ

(ಹದಿನೈದನೇ ಪುಟ ನೋಡಿರಿ)

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ

ಋತುಭೇದ ನೋಡಲಿಲ್ಲದೆ

ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು

ಶ್ರೀ ಎನ್. ಗೋಪೀಚಂದ ರಾವ್

ಪುಟಗಳು 126 ಬೆಲೆ. ರೂ. 1-50

ರೂ. 1-75 ಮನಿಯೊರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ

ಅನಥಾ ಶರಣಂ ನಾಸ್ತಿ

(ನಾಲ್ಕನೇ ಪುಟದಿಂದ)

"ಹ್ಞಾಂ...ಸಿಕ್ಕಿತು ನಿಮಗೆ ಇವತ್ತೊಂದು ನೆವನ...ಅಲ್ಲಾ, ಬೇಗ ಬಾ ಬೇಗ ಬಾ ಅಂತ ರೇಗಾಡಿದೋರು ನೀವೇ ಅಲ್ವೆ? ಇಲ್ವಾದ್ರೆ ನಾನು ಬಿಸ್ತಿರ್ಲಿಲ್ಲ; ಹಾಲೂ ಉಕ್ಕುತ್ತಿರಲಿಲ್ಲ...."

"ತುಸು ಎಚ್ಚರವಿರಬೇಕು ನೋಡು...'

"ಹೌದಪ್ಪಾ ನಾವೆಲ್ಲಾ ನಿದ್ರೆ ಮಾಡ್ತಿರೋರು...."

"ಹಾಗಲ್ವೆ, ಮನೆಯನ್ನ ಸುಧಾರಿಸಿಕೊಂಡು ಹೋಗೋದು ವ್ಯರ್ಥವಾಗಿ ವಸ್ತುಗಳನ್ನು ಹಾಳಾಗಗೊಡಬಾರದೂಂತ ಹೊನ್ನಮ್ಮ ಅಂದಿದ್ಳಾಳೆ."

"ಹೊನ್ನಮ್ಮನೂ ಅನ್ನುತ್ತಾಳೆ, ಚೆನ್ನಮ್ಮನೂ ಅನ್ನುತ್ತಾಳೆ... ಅಂದ್ರೆ ನೋಡಿ ....ನಿಮ್ಮ ಕನಕದಾಸರು ಏನೂ ಅನ್ನೋದಿಲ್ವೆ?"

"ಹ್ಹ ಹ್ಹ... ನನ್ನ ಕನಕದಾಸನೆ? ಹ್ಞಾಂ ಹೌದಪ್ಪ, ಕನಕದಾಸ ನನ್ನವನೂ ಹೌದು..."

"ಅಲ್ರಿ, ನಿಮ್ಮ ಘನ ಸರಕಾರಕ್ಕೆ ಈ ದಾಸರ ಮೇಲೆ ಯಾಕೆ ಅಷ್ಟೆಲ್ಲಾ ಕರುಣ ಬಂತೂಂತ."

"ಯಾಕೆ ಹಾಗೆ ಕೇಳ್ತೀಯ?"

"ಅಲ್ರಿ, ಕಳೆದ ವರ್ಷ ಪುರಂದರದಾಸರಿಗೆ ನಾಲ್ಕು ಶತಮಾನೋತ್ಸವ ಮಾಡಿದರು. ಈ ವರ್ಷ ಕನಕದಾಸರಿಗೆ. ಮತ್ತೆ ಮುಂದಿನ ವರ್ಷ .."

"ಹ್ಞಾಂ....ಯಾರಾದರೂ ಸಿಕ್ಕುತ್ತಾರೇನ್ನ ..."

'ಇಲ್ಲ. ಒಂದ್ವೇಳೆ ಸಿಗದಿದ್ರೆ ಯಾರನ್ನಾ ಎಳ್ಕೊಂಡು ಬರ್ತಾರೇನ್ನಿ... ನಾನು ಕೇಳೋದು ಅವ್ರಿಗೂ ಈ ಸರಕಾರಕ್ಕೂ ಯಾವ ಸಂಬಂಧಂತ?"

"ಸಾಂಸ್ಕೃತಿಕ ಕಾರ್ಯಕ್ರಮಗಳನ್ನ ಏರ್ಪಡಿಸಿ, ಸಾಂಸ್ಕೃತಿಕೋನ್ನತಿಯನ್ನು ಸಾಧಿಸುವುದು ಸರಕಾರದ ಕರ್ತವ್ಯವಲ್ಲವೆ?"

'ಹೌದ್ರಿ, ಅದಕ್ಕೆ ಈ ದಾಸರೇ ಸಿಗುತ್ತಾರೆ ಯಾಕೇಂತ? ಇದುವರೆಗೆ ಸತ್ತು ಹೋಗಿದ್ದ ಇವರನ್ನು ನಾಲ್ಕು ನೂರನೆಯ ವರ್ಷ ಸಮಾಧಿಯಿಂದ ಎತ್ತಿ ಗೋವೆಯಲ್ಲಿ ಸಂತ ಕ್ಸೇವಿಯರನ ಅವಶೇಷವನ್ನು ಪ್ರದರ್ಶಿಸಿದಂತೆ...'

'ಛಿ...ಛಿ.. ಏನಿದು ಮಾತು? ಹೀಗೆಲ್ಲಾ ನೀನೂಂದ್ರೆ ನಿನ್ನಪ್ಪಾಂತ ತಿಳ್ಕೊಂಡು ಅಪಾಂತ್ರ ಮಾಡಬೇಡ ಮತ್ತೆ..."

ಅಪಾಂತ್ರವೇನು ಬಂತು? ನಿಮ್ಮ ಸರಕಾರಕ್ಕೂ ದಾಸ ಪರಂಪರೆಗೂ ಸಾಮ್ಯವಿದೆ...."

ನೋಡೋಣ, ಹೇಗೇಂತ?'

"ಮನೆ ಮನೆಗೆ ತಿರುಗಿ ಓಟು ಬೇಡುತ್ತಾರೆ; ಹಣ ಕೂಡಿಸ್ತಾರೆ. ಮತ್ತೆ ಲೆಕ್ಚರ್ರು ಕೊಡ್ತಾರೆ. ದೇಶೋದ್ಧಾರಕರೆಂತ ಅನ್ನಿಸ್ಕೋತಾರೆ. ಸಮಾಜ ಸೇವಕ; ಬಡವರ ಬಂಧು ಏನು ಬೇಕಾದ್ರೂ ಹೀಗೆ ಬೇಕಾದ್ರೂ ಆಗ್ತಾರೆ, ಹಾಗೇ ಮಾತಾಡ್ತಾರೆ, ಕೆಲ್ಸ ಮಾಡ್ತಾರೆ...."

'ಸಾಕನ್ಮಾ ನಿನ್ನ ನಾಲಿಗೆ ಬಾರಿ ಸಡಿಲಾಯ್ತು...ದಾಸರು ಪರಮಾತ್ಮ ಭಾವನೆಯಿಂದ ಬದುಕುತ್ತಾರೆ..."

"ಹೌದು, ನಿಮ್ಮ ಮಂತ್ರಿಗಳೂ ಜನತಾ ಜನಾರ್ದನ ಭಾವನೆಯಿಂದ ಬದುಕುತ್ತಾರೆ. ಆದರೆ ಜನಾರ್ದನ ಅಂದ್ರೆ ಸಜ್ಜನರ ದಮನ ಮಾಡುವವನಾಂತ..."

"ಅಲ್ವೆ, ಹೀಗೆಲ್ಲಾ ನೀನು ರೇಗಾಡೋಕೆ ಆಗಿರೋದಾದ್ರೂ ಏನು?"

'ನೋಡಿ, ಪೇಟೆಯಲ್ಲಿ ಸಾಮಾನಿನ ಬೆಲೆ ಯಾವುದೂ ಇಳೀಲಿಲ್ಲ. ಏರುತ್ತಾನೇ ಇದೆ. ಆದ್ರೂ ನಿಮ್ಮ ಮಂತ್ರಿಗಳು ವಾದಿಸ್ತಾರೆ ಜೀವನ ವೆಚ್ಚ ಸೂಚಿ ಒಂದೇ ತಿಂಗಳಲ್ಲಿ ೧೧ ಅಂಶಗಳಷ್ಟು ಇಳಿದಿದೇಂತ...'

"ಓ ಈಗ ತಿಳಿಯಿತು ಬಿಡು. ನಿನ್ನೆ ತಮ್ಮ ರಾಯರು ಬಂದಿದ್ರೂಂತ ತೋರುತ್ತೆ...."

"ಏನ, ಬರಬಾರದೆ?"

"ಬರಬಾರ್ದೂಂತ ನಾನಂದನೆ?"

"ಮತ್ತೆ...."

'ಅತನದೇ ಉಪದೇಶವಿದೂಂತ..."

"ನಾಕು ಬಿಡೀಂದ್ರೆ... ಉಪದೇಶ ಮಾಡೋಕೆ ಅತನೇನು ದಾಸನೆ? ಮುತ್ತಿಯೆ?"

"ಎರಡೂ ಅಲ್ಲವಮ್ಮ, ಸುಂಕುಮ್ನೆ ಕೋಪಿಸ್ಬೇಡಾ..."

"ಅಥವಾ ಉಪದೇಶ ಕೇಳೋಕೆ ನಾನೇನು ಬುದ್ಧಿಗೇಡಿಯೆ?"

"ಅಲ್ಲವಮ್ಮ, ಬುದ್ಧಿ ಜಾಸ್ತಿಯಾಗಿರೋಳು...."

'ಆದದ್ರಿಂದ್ಲೆ ಈ ಎಲ್ಲಾ ತೊಂದರೆ....'

"ಏನಾಯಿತ್ತಗತೆಂದ್ರೆ? ಅರ್ಧ ಕುಡ್ತೆ ಹಾಲು ಬೆಂಕಿಗೆ ಸುರಿದು ಹೋದ್ದು ಅಲ್ವೆ? ಅಲ್ಲಿ, ಇನ್ನ ಮುಂದೆ ನಾನು ಒಳಗಿದ್ರೆ ನೀವು ಕರೀಬಾರ್ದು, ನಾನು ಬರಬಾರ್ದು ..."

'ಇಲ್ಲವಮ್ಮ, ತುಸ ಜಾಗ್ರತೆ ವಹಿಸಿಕೋಬೇಕೂಂದೆ ಅಷ್ಟೆ. ಇಲ್ಲಿ ಆದದ್ದು ಆಗಿ ಹೋಯ್ತಲ್ಲ? ತುಸು ಬಾಯಾರಿದೆ. ಅರಿದ್ರೆ ಹಾಲನ್ನ...."

"ಪಾಪ, ಇವತ್ತು ಹಾಲಿಲ್ಲ. ನನ್ನ ಪಾಲು ಬೆಂಕಿ ಕುಡಿದಿದೆ. ನಿಮ್ದು ಬೆಕ್ಕು ಹಾರ್ಸಿದೆ...."

"ಸಾಕೇ ನಿನ್ನ ತಮಾಷೆ....'

'ಹೌದು, ನಾನು ಏನೆಂದ್ರೂ ನಿಮಗದು ತಮಾಷೇನೇ....'

"ಮತ್ತೆ ಏನಾಗಬೇಕೂ....ಹ್ಞಾಂ... ಹ್ಹ....ಹ್ಹ..."

"ಸಾಕು ಬಿಡೀಂದ್ರೆ....ನೋಡಿ, ಯಾರೋ ಬಂತ್ತಾ ಇದ್ದಾರೆ....'

"ಯಾರು ಯಾರು ಯಾಕೆ ಬರ್ತಾರೆ ನಿನ್ನ ಮನೆಗೆ?"

'ಹ್ಞಾಂ... ಬನ್ನಿ ಅಳಿದುಳಿದ ಕರಟು ಹಾಲನ್ನಾದ್ರೂ...'

'ಆದಾದ್ರೆ ಅಟು, ಅನ್ಯಥಾ ಶರಣಂ ನಾಸ್ತಿ. ಮತ್ತೇನು ಮಾಡೋಣ....'

"ಹಾಗೇ ನೋಡಿ ಇಂದು ಎಲ್ಲರ ಪಾಡು!"

"ಹ್ಹ ಹ್ಹ...ಹ್ಹ....'

"ಹ್ಞಾಂ..."

—ಗೋರಾ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. P. No. 17/1965.

1. ಅಕ್ಕು ಪೂಜಾರ್ತಿ; 2. ನರ್ಸಿ ಪೂಜಾರ್ತಿ; 3. ಕೊಸು ಪೂಜಾರ್ತಿ; 4. ಬಾಬು ಪೂಜಾರಿ; 5. ಗಿರಿಯ ಪೂಜಾರಿ; 6. ಅಕ್ಕಣಿ ಪೂಜಾರ್ತಿ—(7. ಕುಸ್ಸ; 8. ಬೊಗ್ಗು; 9. ಗೌರಿ; 10. ಶೇಖರ—ಮ್ಯಾನರ್ರು) —ಅರ್ಜಿದಾರರು.

ಮೇಲ್ಕಂಡ ಅರ್ಜಿಯ 1ನೇ ಅರ್ಜಿದಾರರ ಮಗ, 2ರಿಂದ 5ನೇ ಅರ್ಜಿದಾರರ ಸಹೋದರ 6ನೇ ಅರ್ಜಿದಾರರ ಗಂಡ ವ 7ರಿಂದ 10ನೇ ಮ್ಯಾನರ ಅರ್ಜಿದಾರರ ತಂದೆ ಯೀಗ ಮೃತ ಸೂರಪ್ಪ ಪೂಜಾರಿಗೆ ಸಿಂಡಿಕೇಟ್ ಬ್ಯಾಂಕ್ ಕಾಪು ಬ್ರಾಂಚಿನ ಫಿಕ್ಸೆಡ್ ಡಿಪೋಜಿಟ್ ನಲ್ಲಿರುವ ಮೊಬಲ್ಲು ರೂ. 2884-65ನ್ನು ಪಡಿಯುವ ಬಗ್ಗೆ ಅರ್ಜಿದಾರರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಕೋರಿ ಅರ್ಜಿದಾರರು ದಾಖಲು ಮಾಡಿದ ಮೇಲಿನ ಅರ್ಜಿಯು ತಾ. 16-6-65ಕ್ಕೆ ಇಟ್ಟಿದೆ. ಅಕ್ಷೇಪ ಹೇಳತಕ್ಕವರು ಸದ್ರಿ ತಾ. 16-6-65ನೇ ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಂಡ ಕೋರ್ಟಿನ ಎದುರಿಗೆ ಹಾಜ್ರಾಗಿ ಮನವಿ ಮಾಡಿಕೊಳ್ಳಬೇಕು.

(Sd.) GRATIAN C. REGO,
Vakil for Petitioner.

ಉಡುಪಿ, ತಾ. 14-4-65.

ಅಮೆರಿಕನ್ ರಾಜಧಾನಿ— ವಾಶಿಂಗ್‌ಟನ್

(ಒಂಭತ್ತನೇ ಪುಟದಿಂದ)

ಇಲ್ಲಿ ಪ್ರತ್ಯಕ್ಷ ಕಾಣಬಹುದು. ಜಿಮ್ಮನು ನಗರದ ಆರು ವಿಶ್ವವಿದ್ಯಾಲಯಗಳಲ್ಲಿ ಒಂದರಲ್ಲಿ ವಿಜ್ಞಾನದಲ್ಲಿ ಪದವಿಗಾಗಿ ಓದುತ್ತಾನೆ. ಪೆಟ್ಟಿಯು ಹೈಸ್ಕೂಲ್ ಕೊನೆಯ ವರ್ಷದಲ್ಲಿದ್ದಾಳೆ.

ಚಿತ್ರ ೧೫: ಅತಿಥಿಗೃಹ

ಬಾರ್ಕರರು ಅತಿಥಿಯನ್ನು ಅತಿಥಿ ಗೃಹಕ್ಕೊಯ್ದರು. ಅವರ ಮನೆಯು ಮೊದಲಿಗೆ ಮೂರು ಬೆಡ್‌ರೂಮ್‌ಗಳಿಂದ ಕೂಡಿತ್ತು. ಪೆಟ್ಟಿಯು ಜನಿಸಿದ ನಂತರ ಬಾರ್ಕರರು ಅತಿಥಿ ಗೃಹವೊಂದನ್ನು ಸೇರಿಸಿದರು. ಸಂತುಷ್ಟನಾದ ಯಾತ್ರಾರ್ಥಿ ಬಾರ್ಕರರೊಂದಿಗೆ ಭೋಜನ ಸ್ವೀಕರಿಸಿದನು. ಇಲ್ಲಿನ ಊಟವು ಕೆಲರಿಯಲ್ಲಿ ಕಡಿಮೆಯಾದರೂ ಶಕ್ತಿಯಲ್ಲಿ ಹೆಚ್ಚಿನದು. ಅಡಿಗೆ ಮನೆಗೆ ಎಲ್ಲರೂ ತಮ್ಮ ತಮ್ಮ ತಾಟುಗಳನ್ನು ಒಯ್ಯುತ್ತಾರೆ; ಅವುಗಳನ್ನು ತೊಳೆಯುವುದರಲ್ಲಿಯೂ ಸಹಕರಿಸುತ್ತಾರೆ.

ಚಿತ್ರ ೧೬: ಅಮೆರಿಕನ್ ಗೃಹ

ಅಡಿಗೆಮನೆಯಲ್ಲಿನ ಕೆಲಸಗಳು ಅಲ್ಲಿ ಕಡಿಮೆ. ಮೈಮುರಿಯ ದುಡಿಯುವ ಅಗತ್ಯ ಇಲ್ಲಿಲ್ಲ. ಬಾರ್ಕರ್ ತಮ್ಮ ಮನೆಯ ಮುಂದೆ ತೋಟವೊಂದನ್ನು ಎಳಿಸಿದ್ದಾರೆ ಬಿಡುವಿನ ಸಮಯವನ್ನವರು ಇಲ್ಲಿ ಕಳೆಯುತ್ತಾರೆ.

ಚಿತ್ರ ೧೭: ಕುಟುಂಬ ಯೋಜನೆ

ಬಾರ್ಕರರದು ಮಧ್ಯಮ ವರ್ಗದ ಕುಟುಂಬ. ಅವರಿಗೆ ಸ್ವಂತ ಮನೆಯಿದೆ. ಅವರಿಗೆ ವೃದ್ಧಾಪ್ಯ ವೇತನದ ಸೌಲಭ್ಯವಿದೆ. ತನ್ನ ಅಕಾಲ ಮೃತ್ಯು ಅಥವಾ ಅಸಹಾಯಕ ಪರಿಸ್ಥಿತಿಯಲ್ಲಿ ಕುಟುಂಬ ರಕ್ಷಣೆಗಾಗಿ ಜೀವವಿಮೆಯಿದೆ. ಮಕ್ಕಳ ಶಿಕ್ಷಣದ ವ್ಯವಸ್ಥೆಯನ್ನೂ ಅವರು ಜೀವ ವಿಮಾ ಪಾಲಿಸಿಯ ಆಶ್ರಯದಿಂದಲೇ ಮಾಡಿದ್ದಾರೆ. ಮಕ್ಕಳು ಹುಟ್ಟಿದೊಡನೆಯೇ ಅವುಗಳ ಹೆಸರಲ್ಲಿ ವಿಮೆ ಮಾಡಿದ್ದರವರು.

ಚಿತ್ರ ೧೮: ಟೆಲಿವಿಜನ್

ಬಾರ್ಕರ್ಸರದು ಬಿಡುವಿಲ್ಲದ ಕುಟುಂಬ. ಒಂದು ಕ್ಷಣವೂ ತೆರವಿಲ್ಲ. ಓದಿನಿಂದ ತೊಡಗಿ ಸಾಮಾಜಿಕ ಸೇವೆಯವರೆಗೂ ಅವರ ಆಸಕ್ತಿ ಹರಿಯುತ್ತದೆ. ಟೆಲಿವಿಜನ್ನೇ ಅವರಿಗೆ ಮನರಂಜನೆಯ ಸಾಧನ. ನಾಟಕ, ಪ್ರಹಸನ, ಸಂಗೀತ ಮೊದಲಾದುವೆಲ್ಲವನ್ನೂ ಅವರು ಟೆಲಿವಿಜನ್ನಿನಿಂದಲೇ ವೀಕ್ಷಿಸುತ್ತಾರೆ. ಮಗಳು ಪೆಟ್ಟಿ ಅವರಿಗೆ ಸಹಾಯಕಳಾಗಿದ್ದಾಳೆ.

ಪಾಂಗಾಳ ನಾಯಕ್ ಬ್ಯಾಂಕ್ ಲಿ.

೨೧ ಶಾಖೆಗಳುಳ್ಳ, ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್‌ನ ೧೯೬೪ನೆ ಇಸವಿಗೆ ಸಂಬಂಧಿಸಿದ ಲಾಭನಷ್ಟ ವರ್ಷದ ಸಾಲಮೂಲ, ಆಯವ್ಯಯಗಳ ವರದಿಯು ನಮ್ಮ ಕೈಸೇರಿದೆ. ಇದನ್ನು ಅವಲೋಕಿಸುವಾಗ ಬ್ಯಾಂಕು ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಿರುವುದು ಗೋಚರವಾಗುತ್ತದೆ. ಬ್ಯಾಂಕಿನ ಪಾವತಿಯಾದ ಬಂಡವಾಳವು ರೂ. ೯,೯೭,೫೫೬ ಇದ್ದು ಕಾಯ್ದಿಟ್ಟ ನಿಧಿಯು ರೂ. ೨,೮೦,೦೦೦ವಿದೆ. ಹಿಂದಿನ ವರ್ಷದಲ್ಲಿ ಒಟ್ಟು ಠೇವಣಾತಿಯು ರೂ. ೧೫೪ ಲಕ್ಷವಿದ್ದರೆ, ವರದಿ ವರ್ಷದಲ್ಲದು ೧೮೩ ಲಕ್ಷಗಳಿಗೇರಿದೆ. ಅಂದರೆ, ಸೇ. ೧೯ರಷ್ಟು ಒಂದೇ ವರ್ಷದಲ್ಲಿ ಹೆಚ್ಚಿದೆ. ಇದು ಬ್ಯಾಂಕಿನ ಹೆಚ್ಚುತ್ತಿರುವ ಜನಪ್ರಿಯತೆಯನ್ನು ತೋರಿಸುತ್ತದೆ. ಹಾಗೆಯೇ ಬ್ಯಾಂಕು ನೀಡಿದ ಸಾಲದ ಮೊತ್ತವೂ ಸುಮಾರು ರೂ. ೮ ಲಕ್ಷದಷ್ಟು ಹೆಚ್ಚಿದೆ. ತನ್ನ ವ್ಯವಹಾರದಲ್ಲಿ ಅದು ಒಟ್ಟು ೧,೩೭,೫೫೫ ರೂಪಾಯಿಗಳ ಉಳಿತಾಯವನ್ನು ತೋರಿಸಿದೆ. ತನ್ನ ಪಾಲುದಾರರಿಗೆ ಆದಾಯ ಕರಿಗೆ ಗೊಳಪಟ್ಟು ಸೇ. ೫ರಂತೆ ಲಾಭಾಂಶ ಹಂಚಲು ಈ ವರ್ಷ ಸಮರ್ಥವಾಗಿದೆ. ಹಿಂದಿನ ವರ್ಷದ ಒಟ್ಟು ಲಾಭವನ್ನು ನೋಡುವಾಗ ಇದು ಗಣನೀಯ ಸಾಧನೆಯೆನ್ನಲೇ ಬೇಕು.

ಬ್ಯಾಂಕುಗಳ ಆಕಾರವು ಚಿಕ್ಕದಾದಂತೆ ಅವುಗಳು ಹಣ ತೊಡಗಿಸುವುದರ ಮೇಲೆ ರಿಜರ್ವ್ ಬ್ಯಾಂಕಿನ ಹತೋಟಿ ತುಂಬ ಇರುತ್ತದೆ. ಇದರಿಂದಾಗಿಯೇ ಈ ಬ್ಯಾಂಕು ತನ್ನ ಚಲಾವಣಾ ನಿಧಿಯಲ್ಲಿ ದೊಡ್ಡ ಪಾಲನ್ನು ಸರಕಾರಿ ಮತ್ತು ನಿರ್ದಿಷ್ಟ ಸಾಲಪತ್ರಗಳಲ್ಲಿಯೇ ತೊಡಗಿಸಬೇಕಾಗುತ್ತದೆ. ಈ ಕಾರಣದಿಂದಲೇ ಹೆಚ್ಚು ಬಡ್ಡಿತೆತ್ತು ಆಕರ್ಷಿಸುವ ಠೇವಣಾತಿಗಳು ಅಧಿಕ ಲಾಭಾಂಶ ಗಳಿಸಲು ಅಸಮರ್ಥವಾಗುತ್ತವೆ. ತನ್ನ ನೌಕರರಿಗೆ ಅವಾರ್ಡು ರೀತ್ಯಾ ವೇತನಾದಿಗಳನ್ನು ಕೊಡಲೇ ಬೇಕಾಗಿರುವುದರಿಂದ ಈ ತರದ ಬ್ಯಾಂಕುಗಳು ಒಂದಲ್ಲ ಹಲವು ಆತಂಕಗಳನ್ನು ಎದುರಿಸ ಬೇಕಾಗುತ್ತದೆ. ಇಂತಹ ಅನನುಕೂಲತೆ— ಆತಂಕಗಳನ್ನು ಎದುರಿಸುತ್ತಲೇ ಪಾಂಗಾಳ ನಾಯಕ್ ಬ್ಯಾಂಕ್ ಮಾಡಿರುವ ಸಾಧನೆಯು ಸ್ತುತ್ಯ. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲೇ ಶಾಖೆಗಳನ್ನು ತೆರೆದಿರುವ ಈ ಬ್ಯಾಂಕು ನಿಜಕ್ಕೂ ಹಳ್ಳಿಗರಲ್ಲಿ ಉಳಿತಾಯ ಪ್ರವೃತ್ತಿಯನ್ನು ಬೆಳೆಸಿದೆ. ಮುಂದಿನ ವರ್ಷಗಳಲ್ಲಿ ಬ್ಯಾಂಕು ಮತ್ತಷ್ಟು ಪ್ರಗತಿ ಸಾಧಿಸಲಿ ಎಂದು ಹಾರೈಸಿ ಜನರಲ್ ಮೆನೇಜರ ಶ್ರೀ ಕೆ. ಎಸ್. ಕಾಮತ್ ಹಾಗೂ ಡೈರೆಕ್ಟರ ಮಂಡಳಿಯವರನ್ನು ಅಭಿನಂದಿಸುತ್ತೇವೆ.

ಎಲ್ಲೆಲ್ಲಿ ಏನೇನು?

ಕನಕದಾಸ ನಾಲ್ಕನೇ ಶತಮಾನೋತ್ಸವ

ಉಡುಪಿ, ರಾಜ್ಯದ ನಗರಾಡಳಿತ ಉಪ ಮಂತ್ರಿ ಹಾಗೂ ಕನಕದಾಸ ಉತ್ಸವದ ರಾಜ್ಯ ಸಮಿತಿ ಉಪಾಧ್ಯಕ್ಷ ಶ್ರೀ ವೈ. ರಾಮಚಂದ್ರರ ಅಧ್ಯಕ್ಷತೆಯಲ್ಲಿ, ಉಡುಪಿ ಸಿ.ಜಿ.ಯು. ಕ್ಲಬ್ಬಿನ ಹಾಲಿನಲ್ಲಿ ಕನಕದಾಸ ಚತುರ್ಥ ಉತ್ಸವ ಸಮಿತಿಯ ಸಭೆಯು ಜರಗಿತು. ಶ್ರೀ ಎಂ. ಮಧ್ವರಾಜ, ಎಂ. ಎಲ್. ಎ. ಇವರು ಸ್ವಾಗತಿಸುತ್ತಾ, ರಾಜ್ಯ ಮಟ್ಟದಲ್ಲಿ ಉಡುಪಿಯಲ್ಲಿ ನೆರವೇರಲಿರುವ ವೈಶಿಷ್ಟ್ಯಪೂರ್ಣ ಉತ್ಸವಕ್ಕಾಗಿ ಎಲ್ಲರೂ ಸಹಕರಿಸಬೇಕೆಂದು ಕೇಳಿಕೊಂಡರು. ಸಭೆಯು ಕಾರ್ಯಕಲಾಪಗಳ ಪಟ್ಟಿಯನ್ನು ಶ್ರೀ ರಾಮಚಂದ್ರರು ಒಪ್ಪಿಸುತ್ತಾ ಕನಕದಾಸರ ನಾಲ್ಕುನೂರನೆಯ ವರ್ಷದ ಆರಾಧನಾ ಉತ್ಸವವು ಉಡುಪಿಯಲ್ಲಿ ನಡೆಯುವುದರ ಹಿರಿಮೆ ಮತ್ತು ವೈಶಿಷ್ಟ್ಯವನ್ನು ವಿವರಿಸಿ, ಕನಕದಾಸರ ಗುಡಿಯು ಬಳಿ ಆಚರಿಸಬೇಕಾದುದರ ಅವಶ್ಯಕತೆಯನ್ನು ಮನಗಾಣಿಸಿದರು.

ಉಡುಪಿಯಲ್ಲಿ ಇದೇ ತಾ. 24, 25 ಮತ್ತು 26ರಂದು ಜರಗಲಿರುವ ಈ ಉತ್ಸವವು ಮೈಸೂರು ರಾಜ್ಯಪಾಲರಿಂದ ಉದ್ಘಾಟಿಸಲ್ಪಡುವುದು ಹಾಗೂ, ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಶ್ರೀ ಮಧ್ವರಾಜರು ಕೊಡಲಿರುವ ಕನಕದಾಸ ಪ್ರತಿಮೆಯನ್ನು ಉದ್ಘಾಟಿಸಲಿರುವರು.

ಸಭೆಯಲ್ಲಿ ಈ ಉತ್ಸವದ ಕಾರ್ಯಕ್ರಮಗಳ ರೂಪುರೇಖೆಗಳನ್ನು ಅಣಿಗೊಳಿಸಲಾಯಿತು. ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಶ್ರೀ ಕೆ. ಕೆ. ಪೈಗಳು ಕಾರ್ಯಕ್ರಮಗಳ ವರದಿಯನ್ನೊಪ್ಪಿಸಿದ ಬಳಿಕ ಶ್ರೀ ಟಿ. ಉಮೇಶ ಪೈಗಳು ವಂದನಾರ್ಪಣೆಗೈದರು.

ಮಹೋತ್ಸವ

ಕಾರ್ಕಳ, ತಾ. 14-4-65— ಕಾರ್ಕಳ ಮಹಾಲಿಂಗೇಶ್ವರ ಗಣಪತಿ ದೇವಸ್ಥಾನದಲ್ಲಿ ತಾ. 6-3-65ರಲ್ಲು ಕಾರ್ಕಳ ನಾರಾಯಣ ಉಪಾಧ್ಯರ ರಾಶಿಪೂಜಾ ಮಹೋತ್ಸವವು 15000 ಜನರ ಅನ್ನ ಸಮರ್ಪಣೆಯೊಂದಿಗೆ ವಿಜೃಂಭಣೆಯಿಂದ ನಡೆಯಿತು. ಮತ್ತು 17-3-65ರಲ್ಲು ಆ ದೇವಸ್ಥಾನದಲ್ಲಿ ವರ್ಷಾವಧಿ ಉತ್ಸವವೂ 6000 ರೂ. ಖರ್ಚಿನಿಂದ ತಯೊರಿಸಿದ ಚಂದ್ರಮಂಡಲ ಒಪ್ಪಿಸುವಿಕೆ, ಕಾರ್ಕಳ ಗುರುರಾಜ ಜೋಯಿಸರ ಖರ್ಚಿನಿಂದ ನಡೆಯಿತು. ತಾ. 10-4-65ರಲ್ಲು 12 ದಿನದ ಭಜನೆ ಮಂಗಳ ಸಮಾರಾಧನೆ, ರಾತ್ರಿ ರಂಗಪೂಜಾ ಮಹೋತ್ಸವವು ಊರವರ ಸಹಕಾರದಿಂದ ನಡೆಯಿತು.

ಶ್ರೀ ಕಡೆಂಗೋಡ್ಲು ಅವರ ಸತ್ಕಾರ ಸಭೆ

45ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರ ಗೌರವಾರ್ಥ ಸತ್ಕಾರ ಸಭೆಯು ಸುರತ್ಕಲ್ಲು ವಿದ್ಯಾದಾಯಿನೀ ಶಾಲೆಯಲ್ಲಿ ತಾ. ೯ರ ಸಂಜೆ ಶ್ರೀ ಉಡುಪಿ ಸೀತಾರಾಮಾಚಾರ್ಯರ ಸಭಾಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಅಮ್ಮೆಂಬಳ ಶಂಕರನಾರಾಯಣ ನಾವಡ, ರಾಮಮೊಳೆಯೂರು ವಿ ಬಾಲಕೃಷ್ಣ ಶೆಟ್ಟಿ, ಎಸ್. ರಂಗಪ್ಪಯ್ಯ ಹೆಬ್ಬಾರ್ ಮತ್ತು ಎಂ. ವಾಸುದೇವ ರಾವ್ ಮೊದಲಾದವರು ಶ್ರೀ ಕಡೆಂಗೋಡ್ಲು ಅವರ ಗುಣಕಥನ ಮಾಡಿದರು. ಶ್ರೀ ಐ. ಕೆ. ನಾರಾಯಣರಾಯರು ಸಭೆಗೆ ಶುಭ ಕೋರಿ ಬಂದ ಸಂದೇಶ ವಾಚನ ಮಾಡಿದರು. ಶ್ರೀ ಪಿ. ಸಿ. ವಾಸುದೇವ ರಾಯರು ಕಾವ್ಯ ವಾಚನ ಮಾಡಿದರು. ಸ್ವಾಗತ ಭಾಷಣ ಮಾಡಿದ ಶ್ರೀ ಕೆ. ವೆಂಕಟರಾಯಾಚಾರ್ಯರು ಕೊನೆಗೆ ಧನ್ಯವಾದ ಸೂಚಿಸಿದರು.

(ಮೂರನೇ ಪುಟದಿಂದ)

ಗೂ ಪ್ರತಿಭಟನೆ ಪಕ್ಷಿಸಿವೆ ರಾವಲ್ಪಿಂಡಿಯು ಪೀಕಿಂಗಿಗೆ ದಿನದಿನಕ್ಕೆ ಹತ್ತಿರವಾಗುತ್ತ ಹೋಗುತ್ತಿರುವುದರಿಂದ ಇದೆಲ್ಲಿ ಹೋಗಿ ಮುಟ್ಟೀತೆಂದ. ರೋಚಿಸಲು ಜಾನ್ಸನ್ನರಿಗೆ ತುಸು ಸುಮುಖವಕಾಶ ಬೇಕಾಗಿರಲೂ ಬಹುದು. ಹೀಗಿಲ್ಲದೆ ಬೇರಾವ ಕಾರಣವಾದರೂ ಇದ್ದಲ್ಲಿ ಅದರಿಂದ ಭಾರತಕ್ಕೆ ತುಸು ಹಾನಿ ತಟ್ಟಿದರೂ ತಟ್ಟಬಹುದು. ಈ ಬಗ್ಗೆ ತೀವ್ರ ಎಚ್ಚರಿಕೆ ಭಾರತ ಸರಕಾರ ವಹಿಸಬೇಕು.

— — —

ಯಕ್ಷಗಾನ

ಕಡಿಯಾಳಿ, ತಾ. 12— ಮಹಿಷ ಮರ್ಧಿನಿ ಅಮ್ಮನವರ ಮಹೋತ್ಸವದ ಸಲುವಾಗಿ ಉಡುಪಿ ಯಕ್ಷಗಾನ ಕಲಾಮಂಡಲದ ಅರ್ಥಧಾರಿಗಳ ಕೂಡುವಿಕೆಯಿಂದ ಶಲ್ಯ ಸಾರಥಿ ಎಂಬ ಯಕ್ಷಗಾನವು ಶ್ರೀ ಕೆ. ನಾರಾಯಣ ಶೆಟ್ಟಿ ಹಾಡುಗಾರಿಕೆ, ಸಗ್ರಿ ಕಿಟ್ಟಾಚಾರಿ ಮತ್ತು ಜಯಂತ ರಾವ್ ಇವರ ಮೃದಂಗವಾದನ, ಶ್ರೀ ಶಿವಪುರ ಶ್ರೀನಿವಾಸ ಪಂಡಿತ, ಕೋಟಿ ಸುಬ್ಬರಾವು, ಸೀತಾನದಿ ಗಣಪಯ್ಯ ಶೆಟ್ಟಿ, ಲಕ್ಷ್ಮೀ ಜನಾರ್ದನ ಭಟ್, ಜನ್ನಿಬೆಟ್ಟು ಗೋಪಾಲ ಶೆಟ್ಟಿ, ವೆಂಕಟಾಚಲ ಭಟ್, ಕೆ. ತಿಮ್ಮ ಶೆಟ್ಟಿ. ಕೆ. ವೆಂಕಪ್ಪ ಶೆಟ್ಟಿ, ಕೆ. ರಾಮ ಶೆಟ್ಟಿ, ಇವರೇ ಮೊದಲಾದ ಕಲಾವಿದರ ಕೂಡುವಿಕೆಯಿಂದ ಯಶಸ್ವಿಯಾಗಿ ಜರಗಿತು. ನಂತರ ಕೆ. ರಾಮಚಂದ್ರ ಉಪಾಧ್ಯಾಯರು ಕಡಿಯಾಳಿ ಮಹೋತ್ಸವದ ಮಹತ್ವವನ್ನು ವಿವರಿಸಿ ಧನ್ಯವಾದ ಸಮರ್ಪಿಸಿದರು.

ವಿದಾಯ ಕೂಟ

ಉಡುಪಿ, ಮೋಡರ್ನ್ ಟ್ಯುಟೋರಿಯಲ್ ಕಾಲೇಜಿನ ವಿದ್ಯಾರ್ಥಿಗಳ ವಿದಾಯ ಕೂಟವು ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಟಿ. ಎ. ವಾಸುದೇವನ್‌ರವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರಗಿತು. ಶ್ರೀ ಡಿಸೋಜಾರವರು ಸ್ವಾಗತಿಸಿದ ಬಳಿಕ ಕಾಲೇಜಿನ ಪರವಾಗಿ ಶ್ರೀ ಶಾಸ್ತ್ರಿಯವರೂ, ಶ್ರೀ ಕೆ ಯಸ್. ರಾಯರೂ ಮಾತನಾಡಿ ವಿದ್ಯಾರ್ಥಿಗಳಿಗೆ ಶುಭ ಕೋರಿದರು. ವಿದ್ಯಾರ್ಥಿಗಳ ಪರವಾಗಿ ಶ್ರೀ ಉಪಾಧ್ಯಾಯರು ಮಾತನಾಡಿದ ಬಳಿಕ ಶ್ರೀ ಟಿ. ಎ. ವಾಸುದೇವನ್‌ರವರು ಸಂಸ್ಥೆಯು ಬೆಳೆದು ಬಂದ ಬಗೆಯನ್ನು ತಿಳಿಸಿ, ಸಂಸ್ಥೆಗೆ ಸಹಕಾರವನ್ನು ಕೋರಿದರು.

ಶಿರಸಿಯಲ್ಲಿ ನಿತ್ಯಾನಂದ ಮಂದಿರ

ಶಿರಸಿ: ನಿತ್ಯಾನಂದ ಸ್ವಾಮೀಜಿಯವರ ಶಿಷ್ಯರಾದ ಶ್ರೀ ಮಹಾಬಲಾನಂದ ಸ್ವಾಮಿಯವರು ಕಳೆದ ಸುಮಾರು ಒಂದೂವರೆ ವರ್ಷಗಳಿಂದ ಇಲ್ಲಿ ನೆಲೆಸಿದ್ದು ಸಾರ್ವಜನಿಕ ನಿಧಿ ಸಂಗ್ರಹದಿಂದ ನಿತ್ಯಾನಂದ ಮಂದಿರವನ್ನು ಸ್ಥಾಪಿಸಿದ್ದರು. ಜನತೆಯಲ್ಲಿ ಧಾರ್ಮಿಕ ಭಾವನೆಯನ್ನು ಉಂಟುಮಾಡಿ ಜನಜಾಗೃತಿಯನ್ನುಂಟುಮಾಡುವಲ್ಲಿ ಮಹಾನಂದ ಸ್ವಾಮಿಯವರು ಕೃತಾರ್ಥರಾಗಿರುವರು.

ಶ್ರೀ ನಿತ್ಯಾನಂದ ಮಂದಿರದಲ್ಲಿ ಶ್ರೀ ರಾಮಾಂಜನೇಯ ದೇವಸ್ಥಾನವನ್ನು ಕೂಡಾ ಸ್ಥಾಪಿಸಲಾಗಿದೆ. ಕಳೆದ ತಾ. ೧೧ರ ರಾಮನವಮಿಯ ದಿನದಂದು, ಈ ದೇವಸ್ಥಾನದಲ್ಲಿ ರಾಮ, ಲಕ್ಷ್ಮಣ, ಸೀತೆಯರ ಮೂರ್ತಿ ಪ್ರತಿಷ್ಠಾಪನಾ ಸಮಾರಂಭವು ಅತಿ ವೈಭವದಿಂದ ಸ್ವಾಮಿಗಳ ನೇತೃತ್ವದಲ್ಲಿ ಜರಗಿತು.

ಧಾರ್ಮಿಕ ಭಾವನೆಯು ಚ್ಯುತಿಗೊಳ್ಳುತ್ತಿರುವ ಇಂದಿನ ದಿನಗಳಲ್ಲಿ ಇಂತಹ ಮಂದಿರಗಳಿಂದ ಧರ್ಮದ ಪುನರುತ್ಥಾನವಾಗುವುದರಲ್ಲಿ ಸಂದೇಹವಿಲ್ಲ. ಶಿರಸಿಯ ನಿತ್ಯಾನಂದ ಮಂದಿರವು ಕ್ರಮೇಣ ಸಾರ್ವಜನಿಕ ಆಕರ್ಷಣೆಯ ಕೇಂದ್ರವಾಗಿ ಜನಾನುರಾಗ ಗಳಿಸುವುದೆಂದು ಹಾರೈಸುತ್ತೇನೆ.

ಶಿರೋಡ್‌ಕರರಿಗೆ ಸತ್ಕಾರ ಸಮಾರಂಭ

ಮಂಗಳೂರಲ್ಲಿ ಕಳೆದ ತಾ. 11ರಂದು, ನಗರ ಸಭಾಪತಿ ಶ್ರೀ ಜಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ, ಸ್ಥಳೀಯ ದೈವಜ್ಞ ಬ್ರಾಹ್ಮಣರ ಸಂಘದ ವತಿಯಿಂದ ಗೋವಾ ವಿಧಾನ ಸಭಾಧ್ಯಕ್ಷ ಶ್ರೀ ಪಿ. ಪಿ. ಶಿರೋಡ್‌ಕರ್‌ರವರನ್ನು ಸನ್ಮಾನಿಸಲು ಸತ್ಕಾರ ಕೂಟವೊಂದನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಶ್ರೀ ಎಸ್. ಎಲ್. ಶೇಟ್‌ರವರು ಸಂಘದ ಪರವಾಗಿ ಮಾನಪತ್ರ ಸಮರ್ಪಿಸಿದರು, ಶ್ರೀ ಶಿರೋಡ್‌ಕರ್ ಹಾಗೂ ಶ್ರೀ ಸೋಮಶೇಖರ ರಾಯರು ಮಾತನಾಡಿದ ಬಳಿಕ ಶ್ರೀ ಎನ್. ಸಂಜೀವ ಶೇಟ್‌ರವರು ವಂದನಾರ್ಪಣೆ ಗೈದರು.

ದೈವಜ್ಞ ಬ್ರಾಹ್ಮಣ ಸಮಾಜದವರಿಂದ ರಜತ ಮಂಟಪ ಸಿಂಹಾಸನ ಸಮರ್ಪಣೆ

ಉಡುಪಿ, ತಾ. 9ರಂದು ಬೆಂಗಳೂರು ಸಿಟಿ ಮೆಜಿಸ್ಟ್ರೇಟ್‌ರವರಾದ ಶ್ರೀ ಜಿ. ಜಿ. ಸಜೆಕರ್‌ರವರ ಅಧ್ಯಕ್ಷತೆಯಲ್ಲಿ, ಉಡುಪಿ ಶ್ರೀ ಸೋದೆ ವಾದಿರಾಜ ಮಠಕ್ಕೆ ಶ್ರೀ ಹಯಗ್ರೀವ ದೇವರ ಸಲುವಾಗಿ ರಜತ ಮಂಟಪವನ್ನೂ, ಗುರುಗಳ ಸಲುವಾಗಿ ರಜತ ಸಿಂಹಾಸನವನ್ನೂ, ಸಮಸ್ತ ದೈವಜ್ಞ ಬ್ರಾಹ್ಮಣ ಸಮಾಜದವರು ಅರ್ಪಿಸಿದರು. ಸಮರ್ಪಣ ಕಾರ್ಯವನ್ನು ಗೋವಾ ಲೆಜಿಸ್ಲೇಟಿವ್ ಎಸೆಂಬ್ಲಿ ಸ್ಪೀಕರ್ ಶ್ರೀ ಪಿ. ಪಿ. ಶಿರೋಡ್‌ಕರ್‌ರವರು ನಿರ್ವಹಿಸಿದರು.

ಆರಂಭದಲ್ಲಿ ಪ್ರಾರ್ಥನೆಯಾದ ಬಳಿಕ ಶ್ರೀ ಎಸ್. ಎಲ್. ಶೇಟ್‌ರವರು ಸ್ವಾಗತಿಸಿ, ಶ್ರೀ ಕೆ. ಕೆ. ಆರ್. ಶೇಟ್‌ರವರು ವರದಿ ರೂಪವಾದ ಭಾಷಣ ಮಾಡಿದರು. ದೇಶದ ಬೇರೆ ಬೇರೆ ಕಡೆಯ ದೈವಜ್ಞ ಬ್ರಾಹ್ಮಣ ಸಮಾಜದ ಪರವಾಗಿಯೂ ತತ್ ಸಮಾಜದ ಇತರ ಸಂಘ ಸಂಸ್ಥೆಗಳ ಪರವಾಗಿಯೂ ಶ್ರೀಗಳವರಿಗೆ ಹಾರಾರ್ಪಣೆಯಾದ ಬಳಿಕ ಶ್ರೀ ಶಿರೋಡ್‌ಕರ್‌ರವರು ಉಡುಪಿ ದೇವಾಲಯಗಳ ನೈರ್ಮಲ್ಯ ಅಚ್ಚುಕಟ್ಟುಗಳಿಗೆ ಮೆಚ್ಚುಗೆ ಸೂಚಿಸಿದರು. ಪರ್ಯಾಯ ಸೋದೆ ಮಠದ ಶ್ರೀ ಶ್ರೀ ವಿಶ್ವೋತ್ತಮ ತೀರ್ಥ ಶ್ರೀ ಪಾದಂಗಳವರು ಅನುಗ್ರಹ ಭಾಷಣ ಮಾಡುತ್ತಾ ಶ್ರೀ ವಾದಿರಾಜ ಸ್ವಾಮಿಗಳ ಮೇಲ್ಮೆಯನ್ನು ವಿವರಿಸಿ ದೈವಜ್ಞ ಬ್ರಾಹ್ಮಣ ಸಮಾಜಕ್ಕೆ ಶ್ರೇಯಸ್ಸನ್ನು ಕೋರಿದರು. ಅಧ್ಯಕ್ಷರು ಮಾತನಾಡುತ್ತಾ, ಕನಕನ ಭಕ್ತಿಗೆ ದೇವರು ಒಲಿದ ಈ ಪುಣ್ಯ ಕ್ಷೇತ್ರವು ಭಕ್ತಿಯ ಮಹಿಮೆಯನ್ನು ಸಾರುತ್ತಿದೆ ಎಂದು ಹೇಳಿದರು.

ಶ್ರೀ ಗಣಪತಿ ಶೇಟ್‌ರವರು ಸಂದೇಶಗಳನ್ನು ಓದಿದರು. ಶ್ರೀ ಮಠದ ಪರವಾಗಿ ಶ್ರೀ ಎಂ. ಎಸ್. ಅನಂತಕೃಷ್ಣಾಚಾರ್ಯರೂ, ದೈವಜ್ಞ ಬ್ರಾಹ್ಮಣರ ಸಮಾಜದ ಪರವಾಗಿ ಶ್ರೀ ಪದ್ಮನಾಭ ಶೇಟ್ ರಾಯ್ಕರರೂ ಧನ್ಯವಾದ ಸಮರ್ಪಿಸಿದರು.

ಕಾರವಾರ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮ

ಮೇ ತಿಂಗಳ ತಾ. ೨, ೩, ೪ ಈ ದಿನಗಳಲ್ಲಿ ಕಾರವಾರದಲ್ಲಿ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಲಿರುವ ೪೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಜರಗಿಸಲಾಗುವುದು.

ಈ ಸಂದರ್ಭದಲ್ಲಿ ಕಾರವಾರದ ಪ್ರಕೃತಿ ಮತ್ತು ಸಂಸ್ಕೃತಿಯ ಪರಿಚಯವನ್ನು ಮಾಡಿಕೊಡುವ ಸ್ಮರಣ ಸಂಪುಟವನ್ನು ಪ್ರಕಟಿಸಲಾಗುವುದು.

ಸಮ್ಮೇಳನದ ಕಾಲಕ್ಕೆ ನಾಲ್ಕು ಸಾಹಿತ್ಯ ಸಮೀಕ್ಷಾ ಸಭೆಗಳನ್ನು ಏರ್ಪಡಿಸಲಾಗುವುದು. ಇವುಗಳಲ್ಲಿಯ ಮೂರು ಗೋಷ್ಠಿಗಳಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಆಗಿರುವ ಕನ್ನಡದ ಬೆಳವಣಿಗೆಯ ಸಾಹಿತ್ಯ ಸಮೀಕ್ಷೆಯನ್ನು ನಡೆಸಬೇಕೆಂದೂ, ವಿವಿಧ ಸಾಹಿತ್ಯ ಪ್ರಕಾರಗಳ ಬಗೆಗೆ ವಿದ್ವಾಂಸರ ವಿಚಾರಪೂರಿತ ಭಾಷಣಗಳನ್ನು ಏರ್ಪಡಿಸಬೇಕೆಂದೂ ನಿಶ್ಚಯಿಸಲಾಗಿದೆ.

ಸಣ್ಣ ಕತೆ, ಕಾದಂಬರಿ, ಕಾವ್ಯ, ವಿಡಂಬನೆ ಮತ್ತು ವಿಮರ್ಶೆಯ ಸಾಹಿತ್ಯ ಪ್ರಕಾರಗಳಿಗೆ ಮಹತ್ವ ಕೊಡಬೇಕೆಂದೂ, ಈ ಕಾರ್ಯಕ್ರಮಗಳಿಗೆ ಆಹ್ವಾನಿತರಾದ ವಿದ್ವಾಂಸರ ಭಾಷಣಗಳನ್ನು ತರುವ ಪರಿಷತ್ತು ಅಚ್ಚು ಮಾಡಿಸಬೇಕೆಂದೂ ತೀರ್ಮಾನಿಸಲಾಗಿ

ಕಾವ್ಯ ಸಮೀಕ್ಷಾ ವಿಭಾಗದಲ್ಲಿ ಕಾವ್ಯವಾಚನಕ್ಕೂ ಏರ್ಪಾಡು ಮಾಡಲಾಗುವುದು. ನಾಲ್ಕನೆಯ ಗೋಷ್ಠಿಯು ಭಾಷಾ ಬಾಂಧವ್ಯಕ್ಕಾಗಿ ಮೀಸಲಾಗಿಡಲಾಗುವುದು. ಇದರಲ್ಲಿ ಪ್ರಾಮುಖ್ಯವಾಗಿ ಕೊಂಕಣಿ, ತುಳು, ತಮಿಳು, ಮರಾಠಿ, ಮಲೆಯಾಳಿ ಮೊದಲಾದ ಸುತ್ತುಮುತ್ತಲಿನ ಭಾಷೆಗಳಲ್ಲಿಯ ಸಾಹಿತಿಗಳನ್ನು ಭಾಷಣಕ್ಕೆಂದು ಆಮಂತ್ರಿಸಲಾಗುವುದು. ಕಾರವಾರ ಸರಕಾರೀ ಹೈಸ್ಕೂಲಿನಲ್ಲಿ ಜರಗಲಿರುವ ಈ ಸಮ್ಮೇಳನವನ್ನು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪ ಅವರು ಉದ್ಘಾಟಿಸಲಿರುವರು.

ಅಭಾರ ಮನ್ನಣೆ

ಇತ್ತೀಚೆಗೆ ನವಯುಗದ ಪ್ರಚಾರಾರ್ಥವಾಗಿ ಸಂಚರಿಸಿದಾಗ ಭಟ್ಕಳದಲ್ಲಿ ಡಾ| ಐ. ವಿಶ್ವನಾಥ ಶೆಟ್ಟಿ ಮತ್ತು ತಹಸೀಲ್ದಾರರು, ಶಿರಾಲಿಯಲ್ಲಿ ಶ್ರೀ ಆರ್. ಪಿ. ಪ್ರಭು, ಅಂಕೋಲಾದಲ್ಲಿ ಡಾ| ರಾಮಕೃಷ್ಣ ಶೆಟ್ಟಿ ಮತ್ತು ಶ್ರೀ ಜಿ ಪಿ. ನಾಯಕ್, ಆವರ್ಸಾದಲ್ಲಿ ಶ್ರೀ ಕಾತ್ಯಾಯಿನಿ ಹೈಸ್ಕೂಲಿನ ಹೆಡ್ ಮಾಸ್ತರರು, ಕಾರವಾರದಲ್ಲಿ ಡಾ| ಬಿ ಆರ್. ರೈ, ಶ್ರೀ ಶ್ರೀನಿವಾಸ ರಾವ್, ಯೆಲ್ಲಾಪುರದಲ್ಲಿ ಡಾ| ಎನ್. ಕೆ. ಹೆಗ್ಡೆ ಮತ್ತು ಡಿ. ತಹಸೀಲ್ದಾರರು, ಶಿರ್ಸಿಯಲ್ಲಿ ಶ್ರೀ ಬಿ. ರಮೇಶ ಶೆಟ್ಟಿ, ಸಿದ್ದಾಪುರದಲ್ಲಿ ಡಾ| ಎಂ ಪ್ರಭಾಕರ ಶೆಟ್ಟಿ ಇವರೇ ಮೊದಲಾದವರು ಸಹಕಾರವಿತ್ತು ನೆರವಾಗಿರುವರು. ಶ್ರೀ ಎನ್. ಮಹಾಬಲ ಶೆಟ್ಟಿ, ತಾಳಗುಪ್ಪ, ಶ್ರೀ ವಿ. ಎ. ದೇಸಾಯಿ, ಆವರ್ಸಾ; ಶ್ರೀ ಯಶವಂತ ಹರಿ ಮರಾಠೆ, ಕಾರವಾರ; ಶ್ರೀ ಕೆ. ಸಂಜೀವ ರಾವ್, ಕಾರವಾರ; ಶ್ರೀ ಎಂ. ಎಲ್. ಶೆಟ್ಟಿ, ಕಾರವಾರ; ಡಾ| ಬಿ. ಆರ್. ರೈ, ಕಾರವಾರ; ಶ್ರೀ ಬಿ. ವಿ. ಶೆಟ್ಟಿ, ಕುಂಬ್ರಿಕೇರಿ; ಶ್ರೀ ಆರ್. ಎನ್. ಶೆಟ್ಟಿ, ಶಿರ್ಸಿ; ಶ್ರೀ ಯು. ಸಂಜೀವ ರಾವ್, ಶಿರ್ಸಿ; ಇವರೇ ಮೊದಲಾದವರು ನವಯುಗದ ಪರಿಷ್ಕರಣಕ್ಕಾಗಿ ಪ್ರೋತ್ಸಾಹಿಸಿರುವರು. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ.

ಕೆ. ಹೊನ್ನಯ್ಯ ಶೆಟ್ಟಿ,
ಸಂಚಾಲಕ-ಸಂಪಾದಕ.

ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 43ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 44ನೆ ಹೊಸ ವರ್ಷಾರಂಭವಾಗಿದೆಯಷ್ಟೆ! ಈ ಅವಧಿಗೆ ಯಾ ಅನಂತರ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಅದಷ್ಟು ತ್ವರಿತ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿ ಕಳಕಳಿಯಿಂದ ವಿನಂತಿಸುತ್ತೇವೆ. ಚಂದಾಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚು ಇಲ್ಲದೆ ಪಾವತಿ ಮಾಡ ಬಹುದು, ಇಲ್ಲವೆ ಮನಿಯಾರ್ಡರು ಮಾಡಬಹುದು. ವಿ.ಪಿ. ಮಾಡಿದರೆ 70 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣ ಕಳುಹಿಸಿ ಕೊಡುವಂತೆ ಇನ್ನೊಮ್ಮೆ ಬಿನ್ನವಿಸುತ್ತೇವೆ. ಇಲ್ಲವಾದರೆ ನಾವು ಅನಿವಾರ್ಯವಾಗಿ ಕ್ರಮಶಃ ವಿ.ಪಿ. ಮಾಡಬೇಕಾಗುತ್ತದೆ. ಅದನ್ನು ದಯಮಾಡಿ ಸ್ವೀಕರಿಸುವಂತೆ ಕೇಳಿಕೊಳ್ಳುತ್ತೇವೆ.

ಮೆನೇಜರ್,
ನವಯುಗ

ಬರಿಯ ನಾಲ್ಕಾಣೆಯಿಂದ . . .

(ಹನ್ನೆರಡನೇ ಪುಟದಿಂದ)

ಹಣಗಳಿಸುವ ನೌಕರಿಯ ಹುಡುಕಾಟದಲ್ಲಿ ... ನಡೆಯುತ್ತಿರಲಿಲ್ಲ. ನೌಕರಿಯ ನೆಪದಿಂದ ಆಟಗಾರ ನೋಗು ಹಾಕಿ ಒಂದ ಈಶರ್ಾದನು ಒಂದು ವಾರವಾದರೂ ತನ್ನ ಕಾರ್ಯದಲ್ಲಿ ನಿಷ್ಫಲನಾದನು. ನೌಕರಿಯು ದೊರಕಿಸುವುದರಲ್ಲಿ ಅಸಮರ್ಥನಾದ ಆತನು ಲಕ್ನೋಗೆ ಹಿಂದಿರುಗುವ ತನ್ನ ಇಚ್ಛೆಯನ್ನು ರಾಜನೊಡನೆ ಪ್ರಕಟಿಸಿದನು.

"ಏನು ಇಷ್ಟೊಂದು ಅವಸರ? ಇನ್ನೂ ಒಂದೆರಡು ವಾರ ಇಲ್ಲೇ ತಂಗಿರು!" ರಾಜರು ಈಶರ್ಾದನ ಇಚ್ಛೆಗೆ ವ್ಯತಿರಿಕ್ತವಾಗಿ ನುಡಿದರು.

ರಾಜರ ಅಭಿಪ್ರಾಯಕ್ಕೆ ಅನುಕೂಲವಾಗುವಂತೆ ಸೆಕ್ರೆಟರಿಯು ಈಶರ್ಾದನನ್ನುದ್ದೇಶಿಸಿ "ನವಾಬ ಸಾಹೇಬರೇ, ಟ್ರೇನಿನಲ್ಲಿ ಈಗ ಭಾರೀ ರಶ್ ಇದೆ. ಸಾಧಾರಣ ಮೂರು ದಿನ ಮೊದಲೇ ಸೀಟ್ ರಿಸರ್ವ್ ಮಾಡದಿದ್ದರೆ ಟ್ರೇನಿನಲ್ಲಿ ಪ್ರಯಾಣ ಮಾಡುವುದೇ ಕಷ್ಟ".

"ಅದೊಂದು ದೊಡ್ಡ ವಿಷಯವೇನು?" ಎಂದು ಈಶರ್ಾದನು ಉತ್ತರ ಕೊಟ್ಟನು. ಈಶರ್ಾದನ ಮನಸ್ಸಿನಲ್ಲಿ ಟಿಕೇಟ್‌ನ್ನು ರಾಜರ ಕಡೆಯಿಂದಲೇ ರಿಸರ್ವ್ ಮಾಡಿಸುವ ಹಂಬಲ ಇತ್ತು. ಟಿಕೇಟ್ ಪಡೆಯಲು ಆತನೊಡನಿದ್ದ ಹಣವಾದರೂ ಏನು? ಕೇವಲ ನಾಲ್ಕು ರೂಪಾಯಿ!

ಸ್ಟೇಶನ್ ಮಾಸ್ಟರ್‌ರಿಗೆ ಫೋನ್ ಮಾಡುವ ಉದ್ದೇಶದಿಂದ ಸೆಕ್ರೆಟರಿಯು ಫೋನಿನತ್ತ ಹೋಗುತ್ತಾ ರಾಜನೊಡನೆ—"ಇಂದು ತಾರೀಕು ಐದು ಆಗಿದೆ—ಬುದ್ಧೀ, ನವಾಬರಿಗೆ ಯಾವ ತಾರೀಕಿನ ಸೀಟನ್ನು ರಿಸರ್ವ್ ಮಾಡಲಿ?"

"ಅಷ್ಟು ಅರ್ಜಂಟೇನೂ ಇಲ್ಲ. ಇನ್ನೂ ಒಂದೆರಡು ದಿನ ತಂಗಿ ಎಂಟನೇ ತಾರೀಕಿಗೆ ಹೋದರಾಗದೇ ಈಶರ್ಾದ್?" ರಾಜರು ಈಶರ್ಾದನನ್ನುದ್ದೇಶಿಸಿ ಕೇಳಿದರು.

ಸೆಕ್ರೆಟರಿಯು ಮುಸ್ಸೋರಿ ಸ್ಟೇಶನ್‌ಗೆ ಮಾಡಿದ ಫೋನ್‌ಗೆ "ಸೀಟೆಲ್ಲಾ ರಿಸರ್ವ್ ಆಗಿರುತ್ತದೆ" ಎಂದು ಉತ್ತರ ಬಂದಿತ್ತು. ಆದರೆ ಸೆಕ್ರೆಟರಿ ಮಹಾಶಯರು ಸ್ಟೇಶನ್ ಮಾಸ್ಟರರಿಂದ ದೊರೆತ ಈ ಅಪಜಯವನ್ನು ಸ್ವೀಕರಿಸಲು ಸಿದ್ಧರಿರಲಿಲ್ಲ. ಕೊಂಚ ಏರಿದ ಸ್ವರದಲ್ಲಿ ಅವರು ಪುನಃ ಸ್ಟೇಶನ್‌ಗೆ ಫೋನ್ ಮಾಡಿದರು—"ಹಲೋ ನಾವು ಬಿಂದ್ರೋಡ ಮಹಾರಾಜರ ಕಡೆಯಿಂದ ಮಾತಾಡುತ್ತಿರೋದು. ನವಾಬ್ ಈಶರ್ಾದ್ ಹುಸೇನ್‌ರಿಗೆ ಎಂಟನೇ ತಾರೀಕಿನಂದು ಲಕ್ನೋಗೆ ಹೋಗಲು ಡೂನ್ ಎಕ್ಸ್‌ಪ್ರೆಸ್ಸಿನಲ್ಲಿ ಸೀಟು ಇದೆಯೋ?"

ಈ ಬಾರಿ ಅನುಕೂಲವಾದ ಉತ್ತರವೇ ದೊರಕಿತ್ತು. ರಾಜನೊಡನೆ ಸೆಕ್ರೆಟರಿಯು—"ಬುದ್ಧೀ, ಈಶರ್ಾದನಿಗೆ ಎಂಟನೇ ತಾರೀಕಿನ ಸೀಟನ್ನು ರಿಸರ್ವ್ ಮಾಡಿರುತ್ತೇನೆ. ಟಿಕೇಟ್‌ನ ದರ ಇಪ್ಪತ್ತೊಂದು ರೂಪಾಯಿ ಎಂಟು ಆಣೆ. ಸೇವಕನನ್ನು ಕಳುಹಿಸಿ ತರುವುದು ಉಚಿತ" ಎಂದನು.

ಈ ಸಂಗತಿಯನ್ನು ಕೇಳಿ ಈಶರ್ಾದನ ಮುಖವು ವಿವರ್ಣವಾಯಿತು. ಆದರೂ ಮುಖದಲ್ಲಿ ದುಃಖದ ಭಾವವನ್ನು ಪ್ರಕಟಿಸದಿರಲು ಪ್ರಯತ್ನಿಸಿದನು. ಆತನಿಗೆ ಪ್ರಥಮ ದರ್ಜೆಯ ಟಿಕೇಟ್ ರಿಸರ್ವ್ ಆಗಿತ್ತು. ೨೧॥ ರೂ. ಆತನೊಡನೆ ಎಲ್ಲಿಂದ ಬಂದೀತು? ಕೊಡಲು ಹಣವಿರಲಿಲ್ಲ, ಕೊಡದಿದ್ದಲ್ಲಿ ಮಾನ-ಮರ್ಯಾದೆ ರಕ್ಷಣೆ ದುಸ್ಸಾಧ್ಯವಾಗಿತ್ತು.

ಈಶರ್ಾದನು ಊರಿಗೆ ಹೊರಡುವ ದಿನ ಬಂದಾಗಿತ್ತು. ರಾಜರು ಮುಸ್ಸೋರಿಯ ಆಟಗಾರರನ್ನು ಆಮಂತ್ರಿಸಿ ಈಶರ್ಾದನೊಡನೆ ಭೋಜನ ಕೂಟ ಏರ್ಪಡಿಸಿದರು. ಹೊಸ-ಹೊಸ ಆಟಗಾರರೊಡನೆ ಪರಿಚಯ ಮಾಡಿಕೊಳ್ಳಲು ರಾಜನಿಗೆ ಇದೊಂದು ಸುಸಂದರ್ಭವೇ ಆಗಿತ್ತು.

ಸಂಜೆ ಮೂರು ಗಂಟೆಗೆ ಈಶರ್ಾದನೊಡನೆ ಸೆಕ್ರೆಟರಿಯು ಸ್ಟೇಶನ್ ಕಡೆ ಹೊರಟನು. ಈಶರ್ಾದನನ್ನು 'ಸನ್ನಿವ್ಯೂ' ವರೆಗೆ ಬೀಳ್ಕೊಟ್ಟು ಸೆಕ್ರೆಟರಿಯು ಹಿಂತಿರುಗಿದನು. ಅಲ್ಲಿಂದ ಬಸ್ಸಿನಲ್ಲಿ ಕುಳಿತಿದ್ದ ಈಶರ್ಾದನಿಗೆ ಕೇವಲ ಒಂದು ರೂಪಾಯಿಯಲ್ಲೇ ಸ್ಟೇಶನ್ ತಲಪಬಹುದಿತ್ತು. ಆದರೆ ಟೇಕ್ಸಿಯು ರಿಸರ್ವ್ ಆಗಿತ್ತು. ಬೇರೆ ನಿರ್ವಾಹವಿಲ್ಲದೆ ಆತನು ಟೇಕ್ಸಿಯಲ್ಲಿ ಹೊರಟನು. ಸ್ಟೇಶನ್ ಮುಟ್ಟಿದ ಕೂಡಲೆ ಡ್ರೈವರನು ಬಾಡಿಗೆಯನ್ನು ಬಾಯಿಯಿಂದ ಕೇಳಲಿಲ್ಲ. ಬದಲಾಗಿ ಒಂದು ರಶೀದಿಯಲ್ಲಿ ಮೂರುವರೆ ರೂಪಾಯಿಯನ್ನು ಬರೆದು, ನವಾಬ'ರ ಕೈಯಲ್ಲಿ ಕೊಟ್ಟನು. ಅನಪೇಕ್ಷಿತ ಭಾವದಿಂದ ಆ ರಶೀದಿಯನ್ನು ಈಶರ್ಾದನು ಪಡೆಕೊಂಡನು. ಕೇವಲ ಮೂರುವರೆ ರೂಪಾಯಿ ಎಂದು ತಿಳಿದು ಈಶರ್ಾದನು ದೀರ್ಘ ಶ್ವಾಸ ಬಿಟ್ಟನು. ಆತನಲ್ಲಿ ಕಿಸೆಯಲ್ಲಿ ಕೇವಲ ನಾಲ್ಕು ರೂಪಾಯಿ ಉಳಿದಿತ್ತು. ಆ ನಾಲ್ಕು ರೂಪಾಯಿಯನ್ನು ಈಶರ್ಾದನು ಬಾಗುತ್ತಾ ಸಲಾಮ್ ಹೊಡೆಯುತ್ತಿರುವ ಡ್ರೈವರನ ಕೈಗಿತ್ತನು. ಉಳಿದ ಎಂಟು ಆಣೆ ಹಿಂದೆ ಪಡೆಯಲು ಯೋಚಿಸಿದ್ದರೂ ಡ್ರೈವರನು ಆ ಕ್ಷಣಕ್ಕೆ ಬದಲಾಗಿ ಎಂಟಾಣೆಗಿಂತಲೂ ಅಧಿಕ ಬೆಲೆಯ ಸಲಾಮನ್ನು ಹೊಡೆದುದರಿಂದ ಗತ್ಯಂತರವಿಲ್ಲದೆ ಸ್ಟೇಶನ್ ಕಡೆ ಹೊರಡಲು ತಯಾರಾದನು.

ಕಾರಿನಲ್ಲಿ ಆಗಮಿಸಿದ್ದ ಈಶರ್ಾದರನ್ನು ಆತನ ಮರ್ಜಿಯನ್ನು ಕಂಡ ಒಬ್ಬ ಕೂಲಿಯು ಕಾರಿನೆಡೆಗೆ ಧಾವಿಸಿದನು. ಹೆಚ್ಚು ಭಾರವಿಲ್ಲದ ಆ ಸೂಟ್ ಕೇಸನ್ನು ಕೂಲಿಯು ಆಜ್ಞೆಯಿಲ್ಲದೆ ಎತ್ತಿಕೊಂಡು ಪ್ರಥಮ ದರ್ಜೆಯ ವಿರಾಮ ಕೋಣೆಯಲ್ಲಿ ತಂದಿರಿಸಿದನು. ಇದು ವರೆಗೆ ಒಂದು ಕಠಿಣ ಅಗ್ನಿ ಪರೀಕ್ಷೆಯಲ್ಲಿ ಜಯಗಳಿಸಿದ ಸಂತೋಷ ಈಶರ್ಾದನಲ್ಲಿತ್ತು. ಆದರೆ ಈಗ ಆ ಕೂಲಿಯಿಂದಾಗಿ ತಾನು ಸೋಲೊಪ್ಪಿಕೊಳ್ಳುವ ಪ್ರಸಂಗ ಬಂದೊದಗಿತು. ಈಶರ್ಾದನು ಇದನ್ನು ಯೋಚಿಸುತ್ತಾ ಆರಾಮ ಕೋಣೆಯಲ್ಲಿ ಬಂದು ಕುಳಿತನು. ಕುಳಿತರೂ ಈಶರ್ಾದನಿಗೆ, ಕೂಲಿಯವನ ಮಜೂರಿಯ ಕಠಿಣವಾದ ಚಿಂತೆಯು ಬಿಡಲಿಲ್ಲ. ಈ ನಾಲ್ಕಾಣೆಯ ಪ್ರಶ್ನೆಯಲ್ಲಿ ನವಾಬರ ಮಾನದ ಪ್ರಶ್ನೆಯಿತ್ತು, ಘನತೆಯ ಪರೀಕ್ಷೆಯಿತ್ತು. ತನ್ನ ಕಿಸೆಗಳಲ್ಲೆಲ್ಲಾ ಕೈಯಾಡಿಸಿದರೂ ಈಶರ್ಾದನಿಗೆ ಒಂದು ಚಿಕ್ಕಾಸು ಕೂಡ ದೊರಿಯಲಿಲ್ಲ. ಇಲ್ಲದ ಹಣವನ್ನು ಆತನು ತರುವುದಾದರೂ ಎಲ್ಲಿಂದ?

ಕೂಡಲೆ ಈಶರ್ಾದನ ಮನಸ್ಸಿಗೆ ಒಂದು ಉಪಾಯ ಹೊಳೆಯಿತು. ಅದನ್ನು ಚಿಂತಿಸಿ ಎಷ್ಟು ಹೊತ್ತು ಕಳೆದನೋ ಯಾರುಬಲ್ಲರು? ಫಲಾಹಾರ ಮಂದಿರದ ಮಾಣಿಯು 'ಚಹ ಬೇಕೆ?' ಕೇಳಲು ತಲೆಯಾಡಿಸಿ ಈಶರ್ಾದನ ಬೇಡವೆಂದನು. ಗಾಡಿಯು ಪ್ಲೇಟ್ ಫಾರಮ್ ಪ್ರವೇಶಿಸುತ್ತಲೇ ಈಶರ್ಾದನು ಲೇಟ್ರಿನ್‌ಗೆ ಪ್ರವೇಶ ಮಾಡಿದನು.

ಅರ್ಧ ಘಂಟೆಯಾಯಿತು...ನಲ್ವತ್ತೈದು ಮಿನಿಟು ಕಳೆಯಿತು...ಪೂರ್ಣ ಘಂಟೆಯೊಂದಾಯಿತು! ಆದರೆ ಈಶರ್ಾದನು ಲೇಟ್ರಿನ್ನಿಗೆ ಹೋದವನು ಕಾಣಲೇ ಇಲ್ಲ. ಕೂಲಿಯು ಆಗಾಗ ಕತ್ತು ನೀಡಿ ಈಶರ್ಾದನ ಆಗಮನವನ್ನೇ ಹಾರೈಸುತಿದ್ದನು. ಗಾಡಿಯು ಸೀಟಿಯೂದಿತು, ಗಾರ್ಡನೂ ಸೀಟಿಯೂದಿದನು, ಹಸುರು ಪತಾಕೆ ತೋರಿಸಿದನು, ಗಾಡಿ ಹೊರಟಿತು. ಆದರೆ ಲೇಟ್ರಿನ್‌ಗೆ ಹೋದ 'ನವಾಬ'ರು ಕಾಣೆಯಾಗಿದ್ದರು! ಇವರನ್ನು ಬಿಟ್ಟು ಬಂಡಿ ಸ್ಟೇಶನ್ ಬಿಟ್ಟಿತು. ಗಾಡಿ ಹೊರಡುತ್ತಲೇ ತಡ ಈಶರ್ಾದ ಲೇಟ್ರಿನ್‌ನಿಂದ ಹೊರಗೆ ಬಂದೇ ಬಿಟ್ಟನು. "ಏನು ಬಂಡಿ ಹೋಯಿತೇ?" ಈಶರ್ಾದನು ಕೂಲಿಯೊಡನೆ ಕೇಳಲು ಆತನು ಹೌದೆಂದು ಉತ್ತರಿಸಿದನು.

ಈಶರ್ಾದನು ಕೂಡಲೆ ಸ್ಟೇಶನ್ ಮಾಸ್ಟರರ ಕೋಣೆಗೆ ಹೋಗಿ "ನಾನು ಸ್ಟೇಶನ್ ತಲುಪುವ ಮೊದಲೇ ಬಂಡಿ ಹೊರಟಿತು" ಎಂದು ಬಿನ್ನವಿಸಿಕೊಂಡನು.

"ಈಗ ನೀವು ದೆಹಲಿ ಎಕ್ಸ್‌ಪ್ರೆಸ್‌ನಲ್ಲಿ ಮುರಾದಾಬಾದ್‌ಗೆ ಹೋಗಿ ಲಾಹೋರ್—ಹೌರಾ ಮೇಲ್‌ನ್ನು ತಲುಪಬಹುದು."—ಎಂದು ಸ್ಟೇಶನ್ ಮಾಸ್ಟರ ಉತ್ತರ ಕೊಟ್ಟರು. "ಆದರೆ ಇದು ಅನಾನುಕೂಲ"—ಎಂದು ಈಶರ್ಾದನು ಮರುತ್ತರ ಕೊಡುತ್ತಾ—"ಇಂದು ಬೇಡ, ನಾನು ನಾಳೆಯೇ ಇಲ್ಲಿಂದ ಡೈರೆಕ್ಟ್ "ಲಕ್ನೋಗೆ ಹೋಗುತ್ತೇನೆ. ನನ್ನ ಪ್ರಥಮ ದರ್ಜೆಯ ಟಿಕೇಟಿನ ಹಣವನ್ನು ಸ್ವಲ್ಪ ಹಿಂದಕ್ಕೆ ಕೊಟ್ಟು ಬಿಡಿ" ಎಂದನು.

ಈಶರ್ಾದನು ಇಂದಿನ ಬದಲು ನಾಳೆ ಪ್ರಯಾಣ ಮಾಡುವುದನ್ನು ಸ್ಟೇಶನ್ ಮಾಸ್ಟರು ವಿರೋಧಿಸಲಿಲ್ಲ. ಆದರೆ ಟಿಕೇಟಿನ ಹಣವು ಆಗಲೇ ದೊರೆಯುವುದು ಕಷ್ಟವಾಗಿತ್ತು. ಆ ಟಿಕೇಟನ್ನು ಲಕ್ನೋ—ಟ್ರಾಫಿಕ್ ಇನ್ಸ್‌ಪೆಕ್ಟರರ ಮುಖಾಂತರ ಕೇಶ ಮಾಡಬೇಕಿತ್ತು. ಅದಕ್ಕೋಸ್ಕರ ಒಂದೆರಡು ದಿನ ಈಶರ್ಾದನಿಗೆ ಸ್ಟೇಶನ್‌ನಲ್ಲೇ ಉಳಕೊಳ್ಳಬೇಕಾದೀತು ಎಂದು ಸ್ಟೇಶನ್ ಮಾಸ್ಟರ್ ಹೇಳಿದರು.

ಇಷ್ಟೊಂದು ತಲೆ ಕೆರೆದು ಮಾಡಿದ ತನ್ನ ಪ್ರಯತ್ನವು ನಿಷ್ಫಲವಾದುದನ್ನು ಕಂಡು ಈಶರ್ಾದನಿಗೆ ವ್ಯಥೆಯೂ, ಆಶ್ಚರ್ಯವೂ ಉಂಟಾಯಿತು. ಆತನು ಆರಾಮ ಕುರ್ಚಿಯ ಮೇಲೇರಿ ಕುಳಿತನು. ಕೂಲಿಯು ವೇಟಿಂಗ್ ರೂಮ್‌ನ ಹೊರಗಡೆ ನಿಂತು ತನ್ನ ಮಜೂರಿಯನ್ನಪೇಕ್ಷಿಸುತಿದ್ದನು. ಆದರೆ ಕೇವಲ ನಾಲ್ಕಾಣೆಯನ್ನು ತೆರಲು ಈಶರ್ಾದನು ಅಸಮರ್ಥನಾಗಿದ್ದನು! ಕೇವಲ ನಾಲ್ಕಾಣೆಯ ರೂಪದಲ್ಲಿ ಈಶರ್ಾದನು ತನ್ನ ಘನ ಅಸ್ತಿತ್ವವನ್ನು ಕಳಕೊಂಡನು. ಆತನ ಮರ್ಯಾದೆಯು ಆ ಬಡ ಕೂಲಿಯ ಕೈಯಿಂದ, ದ, ಅದೂ ಕೇವಲ ನಾಲ್ಕಾಣೆಯ ರೂಪದಲ್ಲಿ ಹೊರಟೇ ಹೋಯಿತು.

(ಮೂಲ: ಯಶಪಾಲ್ ಹಿಂದಿ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧.

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.



'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Directer of Public Instruction Madras.

NAVAYUGA 22—4 -1965
Registered with the Registrar of News Papers for India under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೨೨-೪-೬೫ರಿಂದ ೨೮-೪-೬೫ರ ವರೆಗೆ

೧. ಮೇಷ

ಇಂದು ನಿಮ್ಮ ವ್ಯಾಪಾರ ವ್ಯವಹಾರಗಳು ಸುಸೂತ್ರವಾಗಿ ಸಾಗುವವಲ್ಲದೆ ನಿರೀಕ್ಷೆಗೂ ಮಿಗಿಲಾದ ಲಾಭವನ್ನೀಯಲಿವೆ. ಜನಾನುರಾಗವಂ ಗಳಿಸಿದ ನಿಮಗೆ ಸರ್ವತ್ರ ಸ್ಥಾನಮಾನಗಳು ಲಭಿಸಲಿರುವವು. ಆದರೆ ಸಾಂಸಾರಿಕ ತಾಪತ್ರಯಗಳು ನಿಮ್ಮನ್ನು ನೆಮ್ಮದಿಯಿಂದಿರಗೊಡಲಾರವು. ವಾಚಾಲರಾದ ನಿಮಗೆ ತಾ. 23ರಿಂದ 27ರ ವರೆಗಿನ ದಿನಗಳಲ್ಲಿ ಧನಲಾಭ ಮಾನ ಮನ್ನಣೆಗಳು ದೊರಕಲಿವೆ.

೨. ವೃಷಭ

ಶತ್ರುಜನರಿಂದ ನಿಮ್ಮ ಧನಮಾನಾದಿಗಳಿಗಿಂದು ವಿಶೇಷವಾಗಿ ಹಾನಿ ಸಂಭವಿಸಲಿದೆ. ಗುರುಹಿರಿಯರ ಕೋಪಕ್ಕೆ ಗುರಿಯಾದ ನಿಮಗೆ ಧರ್ಮಕರ್ಮಗಳಲ್ಲಿ ಅನಾಸಕ್ತಿ ಮೂಡಲಿದೆ. ರಾಜಕೀಯ ರಂಗದಲ್ಲಿ ಪ್ರತಿಪಕ್ಷಗಳಿಂದ ಪರಾಜಿತರಾಗುವಿರಿ. ದ್ಯೂತಪ್ರೇಮಿಗಳಿಗೀ ವಾರವು ಇಷ್ಟಾರ್ಥವನ್ನು ನೆರವೇರಿಸಲಿರುವುದು. ಗ್ರಹತಾಪತ್ರಯಗಳಿಂದ ಮುಕ್ತರಾದ ನಿಮಗೆ ವಾರಾಂತ್ಯದ 3 ದಿನಗಳು ಸುಖಕಾರಿಗಳಾಗಿ ಪರಿಣಮಿಸಲಿವೆ.

೩. ಮಿಥುನ

ನಿಮ್ಮ ಅದೃಷ್ಟದ ಕದವಿಂದು ತೆರೆದಿಹುದೆಂದರೆ ಅತಿಶಯೋಕ್ತಿಯೆನಿಸಲಾರದು. ಲಾಭ ಪತಿಯೂ ವಿಕ್ರಮಕಾರಕನೂ ಆದ ಅಂಗಾರಕನು ಉಚ್ಚಯಾದಲ್ಲಿದ್ದು ಲಾಭದಲ್ಲಿ ಉಚ್ಚ ರವಿ ಮತ್ತು ಶುಕ್ರನು ಕೂಡಿರುವುದರಿಂದ ಇಂದು ನಿಮ್ಮ ಎಲ್ಲಾ ಆಕಾಂಕ್ಷೆಗಳೂ ಪೂರ್ಣವಾಗುವವಲ್ಲದೆ ಹೆಚ್ಚಿನ ಧನಲಾಭವಾಗಲಿದೆ. ಸದ್ಧರ್ಮಾಸಕ್ತರಾದ ನಿಮಗೆ ವಾರದ ಆದ್ಯಂತ ದಿನಗಳು ಸರ್ವಾಭೀಷ್ಟಪ್ರದಗಳವೆ.

೪. ಕರ್ಕಟ

ದೇಹಾಲಸ್ಯ ಗೃಹ ತಾಪತ್ರಯಗಳು ನಿಮ್ಮನ್ನು ಸದಾ ಪೀಡಿಸಲಿರುವುದರಿಂದ ಕನಸಿನಲ್ಲೂ ನಿಮಗಿಂದು ಸುಖ ನೆಮ್ಮದಿಯಿರಲಾರದು. ಸಿಕ್ಕಸಿಕ್ಕವರೊಡನೆ ಕಲಹವಾಗುವದು. ಸ್ವಜನ ವಿರಹ ದುಃಖಿತರಾದ ನಿಮಗೆ ವ್ಯಾಪಾರದಲ್ಲೂ ನಷ್ಟ ಸೋಲುಗಳುಂಟಾಗಲಿವೆ. ಆದರೆ ಭಾಗ್ಯಪತಿಯಾದ ಸುರಗುರುವು ಲಾಭ ಸ್ಥಾನಕ್ಕೆ ಬಂದಿರುವುದರಿಂದ ಆರ್ಥಿಕ ಬಿಕ್ಕಟ್ಟು ಎಂದೂ ಕಾಣಿಸಲಾರದು. ವಾರಾದಿಯ 4 ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

೫. ಸಿಂಹ

ಎಂತಹ ಕಾರ್ಯವನ್ನೂ ಸಾಧಿಸಿಯೇ ಬಿಡುವೆನೆಂಬ ಹೊಸ ಹುರುಪು ನಿಮ್ಮಲ್ಲಿಂದು ಕಂಡುಬರಲಿದೆ. ನಿಮ್ಮ ಶಕ್ತಿ ಮೀರಿ ದುಡಿಯುವಿರಿ. ಪ್ರಯತ್ನಕ್ಕೆ ತಕ್ಕ ಫಲವೂ ಲಭಿಸಲಿದೆ. ಕೆಲವೊಂದು ನೂತನ ಸಮಸ್ಯೆಗಳು ನಿಮ್ಮನ್ನು ವಿಚಾರಪರವಶರನ್ನಾಗಿ ಮಾಡುವವು. ವ್ಯವಹಾರ ನಿಮಿತ್ತ ಕೋರ್ಟು ಕಚೇರಿಗಳಿಗೂ ಹೋಗುವ ಪ್ರಸಂಗವೂ ಬರಲಿದೆ. ಪಿತ್ಥ ದೋಷವು ಅಧಿಕವಾದೀತು. ಗೃಹಕೃತ್ಯ ವಿಚಾರದಲ್ಲಿ ನಿಶ್ಚಿಂತೆಯಿಂದಿದ್ದರೂ ದಾಯಾದಿಗಳ ಕಾಟವು ಅಧಿಕವಾಗಲಿದೆ. ತಾ. 23ರಿಂದ 27ರ ವರೆಗಿನ ದಿನಗಳು ಸಾಕಷ್ಟು ಅನುಕೂಲವಾಗಿವೆ.

೬. ಕನ್ಯಾ

ಧನಭಾಗ್ಯಪನಾದ ಶುಕ್ರನು ಅಷ್ಟಮದಲ್ಲಿ ಅಸ್ತನಾಗಿದ್ದರೂ ಸುರಗುರುಗಳ ಬೆಂಬಲವು ಪರಿಪೂರ್ಣವಾಗಿರುವ ನಿಮಗೆ ಈ ವಾರದಲ್ಲಿ ಆರ್ಥಿಕ ತಗಾದೆಯು ಕಂಡುಬರಲೊಲ್ಲದು. ದುಃಸಾಧ್ಯವಾದ ಕಾರ್ಯವನ್ನು ಸುಲಭದಲ್ಲಿ ಕೊನೆ ಹಾಯಿಸುವಿರಿ. ಕೆಲವೊಂದು ದುಷ್ಕಾರ್ಯದಿಂದಾಗಿ ಕೈ ಸದಾ ಬರಿದಾಗಲಿದೆ. ಜನತೆಯ ಸಹಕಾರವು ಸಾಕಷ್ಟಿದ್ದರೂ ರಾಜಕೀಯದಲ್ಲಿ ಪರಾಭವ ಹೊಂದುವಿರಿ. ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಬಯಕೆಗಳು ಪೂರ್ಣವಾಗುವವು.

೭. ತುಲಾ

ಎತ್ತ ನೋಡಿದರೂ ವಿರೋಧ ವಿದ್ರೋಹಗಳೇ ಕಾಣಿಸಲಿವೆ. ಕೆಲವೊಮ್ಮೆ ಆತ್ಮೀಯರೂ ವಿರೋಧಿಗಳ ಸಾಲನ್ನೇ ಸೇರಲಿರುವರು. ಕರ್ತವ್ಯದಕ್ಷರಾದ ನಿಮಗೆ ನೌಕರಿ ಮತ್ತು ರಾಜಕೀಯದಲ್ಲಿ ಪ್ರಗತಿಯುಂಟಾಗುವದು. ಕೆಲವೊಂದು ನಷ್ಟವಾದ ವಸ್ತುಗಳು ಇಂದು ತಾವಾಗಿ ಕೈಸೇರಲಿವೆ. ವ್ಯಾಪಾರದಲ್ಲಿ ಅನಿರೀಕ್ಷಿತ ನಷ್ಟವುಂಟಾದೀತು. ವಾರದ ಆದ್ಯಂತ ದಿನಗಳಲ್ಲಿ ಸಾಕಷ್ಟು ಧನ ವಸನಗಳು ಲಭಿಸುವವು.

೮. ವೃಶ್ಚಿಕ

ಮನೋದೌರ್ಬಲ್ಯವಿಂದು ನಿಮ್ಮಲ್ಲಿ ವಿಶೇಷವಾಗಿ ಕಾಣಿಸಲಿದೆ. ವಿಷಯಾದಿಗಳ ಸಲುವಾಗಿ ಹೆಚ್ಚಿನ ಧನವ್ಯಯವಾದೀತು. ಸತಿಪತಿಗಳಲ್ಲೂ ತಂದೆ ಮಕ್ಕಳಲ್ಲೂ ಸದಾ ಕಲಹ ಮನಸ್ತಾಪಗಳುಂಟಾಗುವದು. ವ್ಯವಹಾರ ಚತುರರೂ ಕರ್ತವ್ಯದಕ್ಷರೂ ಆದ ನಿಮಗೆ ಸಮಾಜದಲ್ಲಿ ಸ್ಥಾನಮಾನಗಳೂ ರಾಜಕೀಯ ರಂಗದಲ್ಲಿ ಯಶಸ್ಸೂ ಲಭಿಸಲಿದೆ. ಆರ್ಥಿಕ ತಗಾದೆಯಿಂದ ಮುಕ್ತರಾದ ನಿಮಗೆ ತಾ. 23, 24, 25 ಈ ದಿನಗಳು ಸುಖದಾಯಿಗಳಾಗಲಿವೆ.

೯. ಧನು

ಈ ಹಿಂದಿನ ಸುಖಸೌಕರ್ಯಗಳು ಇಂದು ಕಾಣಲಾರದಾದರೂ ದಿನಯಾಪನೆಯು ದುಸ್ತರವಾಗಲಾರದು. ಸ್ವಯಂ ಸಮರ್ಥರಾದ ನೀವು ಹೆರವರ ಸಹಾಯವನ್ನು ಬಯಸದೆ ಹಿಡಿದ ಕಾರ್ಯವನ್ನು ಯಶಸ್ವಿಯಾಗಿ ಕೊನೆ ಹಾಯಿಸುವಿರಿ. ಆತ್ಮೀಯರ ವಿಯೋಗ ಬಂಧುಜನರ ವಿರೋಧಗಳಿಗೆ ಗುರಿಯಾದ ನಿಮಗೆ ಹಿಂದಿನ ಸ್ಥಾನಮಾನಗಳು ಇಂದು ಲಭಿಸಲಾರವು. ದೇಹದಲ್ಲಿ ದಿನೇ ದಿನೇ ನಿಶ್ಯಕ್ತಿ ಹೆಚ್ಚಲಿದೆ. ತಾ. 22, 26, 27 ಈ ದಿನಗಳಲ್ಲಿ ಮೃಷ್ಟಾನ್ನ ಭೋಜನ ಭೋಗಗಳನ್ನು ಪಡೆವಿರಿ.

೧೦. ಮಕರ

ಗೃಹತಾಪತ್ರಯಗಳು ನಿಮ್ಮನ್ನು ಸುಖ ನೆಮ್ಮದಿಯಿಂದಿರಲು ಬಿಡಲಾರವು. ಮಿತ್ರವಲ್ಲ ಶತ್ರುಜನರ ಕಾಟವೂ ಅತೀವವಾಗಲಿದೆ. ದೇಹದಲ್ಲಿ ಕಜ್ಜಿ ಹುಣ್ಣು ಮೊದಲಾದ ಚರ್ಮರೋಗಗಳು ಕಾಣಿಸಿಕೊಳ್ಳುವವು. ಶ್ರಮಜೀವಿಗಳಿಗೂ ಸೇವಕ ವರ್ಗಕ್ಕೂ ಇಂದಿನ ಸಮಯವು ಪ್ರತಿಕೂಲವಾಗಿದ್ದರೂ ಬುದ್ಧಿಜೀವಿ ನೌಕರಿ ಜನರಿಗೆ ತುಂಬಾ ಅನುಕೂಲವಾಗಿಹುದು. ಖರ್ಚಿಗೆ ತಕ್ಕ ಆದಾಯವಿರುವುದರಿಂದ ಹಣದ ಸಲುವಾಗಿ ಚಿಂತಿಸಬೇಕಾಗಿಲ್ಲ. ತಾ. 23, 24, 25, 28 ಅನುಕೂಲವಾಗಿವೆ.

೧೧. ಕುಂಭ

ಹೆಚ್ಚಿನ ನಿಮ್ಮ ಸಂಕಲ್ಪಗಳು ಕಾರ್ಯರೂಪಕ್ಕೆ ಒದಗಲಿವೆ. ವಿಶೇಷತಃ ನೌಕರಿ ವ್ಯಾಪಾರಾದಿಗಳಲ್ಲಿ ನಿರೀಕ್ಷೆಗೂ ಮಿಕ್ಕಿ ಫಲಲಾಭವಾಗುವದು. ಅಧಿಕಾರಿಗಳ ಕೃಪಾಕಟಾಕ್ಷಕ್ಕೆ ಪಾತ್ರರಾದ ನಿಮಗೆ ಭಡತಿಯ ಯೋಗವಿರುವದು. ಆದರೆ ಗೃಹ ಸಂಬಂಧೀ ವ್ಯವಹಾರಗಳು ನಿಮ್ಮ ಮನೋನೆಮ್ಮದಿಯನ್ನು ಅಪಹರಿಸುವವು. ಪ್ರವಾಸದಲ್ಲಿ ಪುಣ್ಯ ತೀರ್ಥಕ್ಷೇತ್ರಗಳ ದರ್ಶನವಾಗುವದು. ತಾ. 22, 26, 27 ಈ ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿವೆ.

೧೨. ಮೀನ

ದೇಹಾಲಸ್ಯ ಆರ್ಥಿಕ ಬಿಕ್ಕಟ್ಟುಗಳಿಂದ ಸದಾ ಪೀಡಿತರಾದ ನಿಮಗೆ ಮೇಲಿಂದ ಮೇಲೆ ಅನಿರೀಕ್ಷಿತ ಅಪವಿನರ್ಥಗಳೂ ಪ್ರಾಪ್ತವಾಗಲಿವೆ. ಆಪ್ತೇಷ್ಟ ವರ್ಗದೊಳು ಅವಿಶ್ವಾಸ ಹುಟ್ಟುವ ಸಂಭವವಿದೆ. ವಿದ್ಯೋಪಜೀವಿ ಜನತೆಗೀ ಕಾಲವು ತುಂಬ ತ್ರಾಸದಾಯಿಯಾದೀತು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ತುಂಬ ತೊಂದರೆಗಳುದಿಸಲಿವೆ. ಹಿಡಿದ ಕಾರ್ಯವನ್ನು ಕೊನೆ ಹಾಯಿಸುವ ಅಸಾಧಾರಣ ಶಕ್ತಿಯುಕ್ತರಾದ ನಿಮಗೆ ವಾರಾದಿಯ 4 ದಿನಗಳು ಅನುಕೂಲವಾಗಿವೆ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ನೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ಐತಾಳ್, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಖಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೇಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ.ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಚಿಕೇತ'ರ
ಹೃದಯಸ್ಪರ್ಶಿ
ನವೀನ ಕಾದಂಬರಿಗಳು

ಹಸುರು ಹಂಸ
ಬೆಲೆ: ರೂ. ಎರಡು.

ಋಣ ಯಾತ್ರೆ
ಬೆಲೆ ರೂ. 1-50 ನ. ಪೈಸೆ.

ಭಾವಾರ್ಜನೆ
ಬೆಲೆ ರೂ. 2—00

ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪] ಏಪ್ರಿಲ್, ೨೫, ೬೯ [ಸಂಚಿಕೆ ೩೫

Phone No.
ಫೋನ್ ನಂಬ್ರ: 226

leading nationalist weekly

೨೦
ಪೈಸೆ

ಕಥಾ ಪ್ರಪಂಚ

ತಿಳಿವು ಮೂಡಿದಾಗ

ಬರೆದವರು

ಶ್ರೀ ವಿ. ವಿ. ಗುಳೂರ್.

"ಅಯ್ಯೋ...ಅಮ್ಮ..ಅ ಅ ಅಮ್ಮ.... ಅಯ್ಯಯ್ಯೋ....ಅಮ್ಮಮ್ಮ....ಕಮಲ ಬಂದ್ಯೇನೆ. ಅಯ್ಯೋ ಕಮಲಾ...ಕಮಲಾ.... ನೋವು ..ಅಮ್ಮಮ್ಮ..."

"ಅಣ್ಣಯ್ಯ, ಇಲ್ನೋಡಣ್ಣಯ್ಯ."

ಕಮಲಾ ಬಂದಳು. ಬಂದವಳೇ ಅಣ್ಣನ ದುಸ್ಥಿತಿಯನ್ನು ನೋಡಿ ಕಣ್ಣೀರು ಹಾಕುತ್ತಲೇ ಅವನ ಹಾಸಿಗೆಯ ಪಕ್ಕದಲ್ಲಿ ಕುಳಿತಳು. ಅವನ ಹಣೆಯ ಮೇಲೆ ಕೈಯಿಟ್ಟಳು. ಮೈ ಮುಟ್ಟಿ ನೋಡಿದಳು. ಅವನಿಗೆ ಪ್ರಜ್ಞೆಯೇ ಇರಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ಪ್ರಜ್ಞೆಯೇನೋ ಬಂತು ಆದರೂ ಕಮಲಳನ್ನು ಗುರುತಿಸುವುದಕ್ಕೆ ಸ್ವಲ್ಪ ಸಮಯವನ್ನೇ ತೆಗೆದುಕೊಂಡನು.

"ಕಮಲಾ....ಕಮಲಾ.." ಕ್ಷೀಣ ಸ್ವರದಲ್ಲಿ ಕರೆದನು. ಅವಳ ಹೆಸರನ್ನು ಕರೆಯುವುದಕ್ಕೆ ಅವನು ಪಟ್ಟ ಶ್ರಮದಿಂದಲೇ ಅವಳಿಗೆ ಅರ್ಥವಾಯಿತು ಎಂತಹ ಸ್ಥಿತಿಯಲ್ಲಿದ್ದಾನೆ ತನ್ನಣ್ಣನೆಂದು.

"ಕಮಲಾ, ನನ್ನನ್ನು ಉಳಿಸಿಕೊಳ್ಳಲ್ವೆ ಕಮಲ?" ಅವನು ಕೇಳುತ್ತಲೇ ಅವಳ ಕಣ್ಣಲ್ಲಿ ನೀರು ಬಂತು. ಅದಕ್ಕೆ ಅವಳೇನು ಉತ್ತರಿಸಲು ಸಾಧ್ಯ?

"ಅಣ್ಣಾ, ಧೈರ್ಯಗೆಡ ಬೇಡ. ಎಲ್ಲಕ್ಕೂ ದೇವರಿದ್ದಾನೆ. ಎಲ್ಲಾ ಸರಿ ಹೋಗುತ್ತದೆ."

"ಅಮ್ಮಾ, ಕಮಲಾ ತಾಯಿ, ನಾನು ಹಿಂದೆ ನಿನ್ನನ್ನು ತಿರಸ್ಕರಿಸಿದೆನೆಂದು ನೀನು ಈಗ ನನ್ನನ್ನು ತಿರಸ್ಕರಿಸ ಬೇಡಮ್ಮ". ಅವನ ಕಣ್ಣುಗಳಲ್ಲಿದ್ದ ದೈನ್ಯ ಅವಳಿಗೆ ಅಳುವುದಲ್ಲದೆ ಮತ್ತೇನನ್ನೂ ಮಾಡದಂತೆ ಮಾಡಿತು.

ಅವಳ ಹಿಂದಿನ ಅಣ್ಣಯ್ಯನಿಗೂ ಇಂದಿನ ಅಣ್ಣಯ್ಯನಿಗೂ ಅಜಗಜಾಂತರವಿತ್ತು. ಹಿಂದಿದ್ದ ದೇಹವೂ ಅಸಹ್ಯವೇ ಆಗಿದ್ದರೂ ಅದು ಸಾಹುಕಾರರಿಗೆ ಸಹಜವಾಗಿತ್ತು. ಎದೆ ಹಾಗೂ ಹೊಟ್ಟೆಯನ್ನು ಬೇರ್ಪಡಿಸುವ ರೇಖೆಯೇ ಇರಲಿಲ್ಲ. ಹಾಗೆಯೇ ತೊಡೆ—ಕಾಲುಗಳು, ಹಿಂಗೈ—ಮುಂಗೈ ಇವುಗಳನ್ನು ಎತ್ತಿ ತೋರಿಸುವ ರೇಖೆಗಳೂ ಇರಲಿಲ್ಲ. ಒಂದೇ ಕಡೆ ವಿದ್ಯೆ-ಹಣ ಹೇಗೆ ಇರುವುದಿಲ್ಲವೋ ಹಾಗೆಯೇ ಸೌಂದರ್ಯ—ಹಣಗಳು ಕೂಡ ಇರುವುದಿಲ್ಲ. ಅವರಂತೆ ಸಾಹುಕಾರರ ಶರೀರವನ್ನು ಹೊಂದಿದ್ದ ಕಮಲಳ ಅಣ್ಣ. ಅಂದಿದ್ದುದು ಸಾಹುಕಾರರ ಅಸಹ್ಯಕಾರವಾದ ಶರೀರವಾದರೆ ಇಂದಿರುವುದು ಬಡವರ ಬಡಕಲು ಶರೀರ. ಆ ಗಾತ್ರದ ಎಂಟನೇ ಒಂದು ಭಾಗ ಕೂಡ ಇಲ್ಲ ಈಗ! ಕೈಕಾಲುಗಳೆಲ್ಲಾ ಒಣಗಿ ಹೋಗಿವೆ. ಆ ಹೊಟ್ಟೆ ಎಲ್ಲಿ ಹೋಯಿತೋ ಪರಮಾತ್ಮನೇ ಬಲ್ಲ. ಕಣ್ಣುಗುಡ್ಡೆಗಳು, ದೊಡ್ಡ ಬಾಳಲ್ಲಿ ಹಾಕಿದ ಸಣ್ಣಗಜ್ಜುಗಗಳಂತೆ, ಅಂತರಾಳದಲ್ಲಿ ತಮ್ಮ ಪ್ರಕಾಶವನ್ನು ಕಳೆದುಕೊಂಡು, ಹೂತು ಹೋಗಿದ್ದವು. ಎದೆಯ ಮೂಳೆಗಳನ್ನು ಎಣಿಸಬಹುದಿತ್ತು. ಮೂಳೆಗಳಲ್ಲದೆ ಆ ಶರೀರದಲ್ಲಿ ಮತ್ತೇನೂ ಇಲ್ಲವೇನೋ ಅನ್ನುವ ಹಾಗಿತ್ತು. ಅವನ ಸ್ಥಿತಿಯನ್ನು ನೋಡಿ ಕಮಲಳಿಗೆ ಅತೀ ದುಃಖವಾಯಿತು. ಅವನು ಎಳೆದು, ಎಳೆದು ಬಿಡುತ್ತಿದ್ದ ಉಸಿರು, ಅವನ ಕಣ್ಣುಗಳು, ರೋದನ ಧ್ವನಿ ಎಲ್ಲವೂ ಅವಳಿಗೆ ಭಯವನ್ನು ಉಂಟು ಮಾಡಿದವು. ಯಾವ ಗಳಿಗೆಯಲ್ಲಿ ಏನೋ ಎಂದು ಯೋಚಿಸ ತೊಡಗಿದಳು.

"ಕಮಲೂ ನಿನ್ನ ಗಂಡ ಬರ್ಲಿಲ್ವೆ"?

"ಇಲ್ಲಣ್ಣ"

"ಯಾಕೆ ಬರ್ಲಿಲ್ಲಮ್ಮ. ತೋಳ ಹಳ್ಳಕ್ಕೆ ಬಿದ್ದರೆ ಆಳಿಗೆ ಒಂದು ಕಲ್ಲು. ಎಲ್ಲಾ ಚೆನ್ನಾಗಿದ್ದರೆ ಬಂಧು, ಬಳಗ, ಗಂಡ, ಹೆಂಡತಿ ಎಲ್ಲಮ್ಮ. ಸ್ವಲ್ಪ ಹೀನ ಸ್ಥಿತಿಗೆ ಬಂದರೆ ಯಾರೂ ಆಗುವುದಿಲ್ಲ ನೋಡು".

"ಇಲ್ಲಣ್ಣ. ಅವರಿಗೆ ಏನೋ ಅರ್ಜೆಂಟ್ ಕೆಲಸ ಇತ್ತಂತೆ."

'ಸರೀನಮ್ಮ, ಅವರನ್ನೇನು ನಾನು ಆಕ್ಷೇಪಣೆ ಮಾಡುತ್ತಿಲ್ಲ. ಅಲ್ಲ, ಮಾತಿಗೆ ಹೇಳಿದೆ. ನನ್ನದೇ ನನಗಿಲ್ಲದಾಗ ಬೇರೆಯವರ ಯೋಚನೆ ನನಗ್ಯಾಕಮ್ಮ?"

ಇಷ್ಟು ಮಾತಾಡಿದ್ದರಿಂದ ಅವನಿಗಾದ ಆಯಾಸ ಜೋರಾಗಿ ಮುಖದಿಂದ ಸುರಿಯಲು ಪ್ರಾರಂಭವಾಯಿತು. ಮಧ್ಯೆ ಮಧ್ಯೆ, "ಅಯ್ಯೋ....ಅಯ್ಯಯ್ಯೋ....ಅಮ್ಮಮ್ಮ" ಎಂದು ನರಳಿಕೊಳ್ಳುತ್ತಿದ್ದ. ಕಮಲಳಿಗೆ ತುಂಬಾ ಹೆದರಿಕೆಯೇ ಆಯಿತು. ಆಗಾಗ್ಗೆ ಬಾಯಿಗೆ ಬಂದಂತೆ ಬಡಬಡಿಸುತ್ತಿದ್ದನಾತ.

"ಅಮ್ಮಾ ಕಮಲ, ನೀನೂ ನನ್ನನ್ನು ಉಳಿಸಿಕೊಳ್ಳುವುದಿಲ್ಲವೆ? ಮತ್ತೆ ದೇವರು ಕಣ್ಣು ಬಿಟ್ಟು ನೋಡಿದರೆ ನಿನ್ನ ಋಣವನ್ನು ತೀರಿಸುತ್ತೇನಮ್ಮ". ಅವನ ಬೇಡಿಕೆ ಮಗುವಿನ ಬೇಡಿಕೆಯಂತಿತ್ತು.

"ಅಣ್ಣಾ, ನನ್ನ ಹತ್ತಿರ ಹಣವೆಲ್ಲಿದೆ? ಹಣವಿದ್ದಿದ್ದರೆ ನಿನಗೆ ಔಷಧ, ಉಪಚಾರಗಳನ್ನು ನಾಡಕೆ ಮತ್ತಿನ್ಯಾಂಗೆ ಮಾಡಲಣ್ಣ?"

ಅವಳ ಹತ್ತಿರ ಹಣವಿರಲಿಲ್ಲ, ನಿಜ. ಅವನ ನಿಸ್ತೇಜವಾದ ಕಣ್ಣುಗಳು ತನ್ನಾಕೆಯ ಮೈಮೇಲೆ ಹಾಕಿ ಕೊಂಡಿದ್ದ ಒಡವೆಗಳ ಮೇಲೆಲ್ಲಾ ಚುರುಕಾಗಿ ಒಮ್ಮೆಯೇ ಓಡಾಡಿ ತಮ್ಮ ತುಂಬಾ ನೀರನ್ನು ತುಂಬಿ ಕೊಂಡವು. ಮತ್ತೆ ಅವುಗಳನ್ನು ನೋಡಲಾರದೆ ಮುಚ್ಚಿದವು. ನಿಧಾನವಾಗಿ ಅಂದುಕೊಂಡ, "ದೇವರೇ ಕೈ ಬಿಟ್ಟಿರುವಾಗ ನೀವೆಲ್ಲಾ ಏನು ಮಾಡುತ್ತೀರಿ." ಹೊರಳಲು ಸಾಧ್ಯವಾಗದೆ ಪ್ರಯಾಸದಿಂದ ಒಂದು ಮಗ್ಗುಲಿಗೆ ಹೊರಳಿ ಮತ್ತಷ್ಟು ಜೋರಾಗಿ ಕರುಳು ಇರಿದು ಬರುವಂತೆ ಕೂಗಿದ 'ಅಮ್ಮಮ್ಮ' ಎಂದು ಇದು ಶ್ರೀನಿವಾಸ ಶೆಟ್ಟಿಯ ದುಃಸ್ಥಿತಿ.

o o o

ತನ್ನ ಸರಗಳನ್ನು ಒಮ್ಮೆ ಎಣಿಸಿ ಇಟ್ಟಳು. ತನ್ನ ಕಡಗ, ಬಳೆಗಳು, ಝುಮುಕಿ, ನಾಗಮುರಿ, ಶೇವಂತಿಗೇ ಹೂವು, ಪದಕ ಇನ್ನೂ ಅನೇಕ ಸಣ್ಣ ಪುಟ್ಟ ದೊಡ್ಡ ಎಲ್ಲಾ ಚಿನ್ನದ ವಸ್ತುಗಳನ್ನೂ ಎಣಿಸಿ ನೋಡಿದಳು. ಅವುಗಳನ್ನೆಲ್ಲಾ ನೋಡಿ ಆನಂದಿಸಿದಳು. ಚಿನ್ನದ ಮೇಲೆ ಅದೇನು ಮೋಹ! ಮದುವೆಯಾದಾಗಿನಿಂದಲೂ ಕೂಡಿ ಹಾಕಿದ್ದಳು ಒಂದರ ಮೇಲೆ ಒಂದರಂತೆ ಚಿನ್ನದ ಒಡವೆಗಳನ್ನು. ತಿಂಗಳಿಗೆ ಒಂದಾದರೂ ಒಡವೆ ತಾರದೆ ಹೋದರೆ, ಊಟವನ್ನೇ ಮಾಡುತ್ತಿರಲಿಲ್ಲ. ಇವಳ ಹಠದ ಜತೆಗೆ ಗಂಡನ ಇಷ್ಟದ ಮೇರೆಗೆ ಇವಳ ಭಾರಕ್ಕಿಂತಲೂ ಹೆಚ್ಚಾದ ಚಿನ್ನದ ಒಡವೆಗಳನ್ನು ಮಾಡಿಸಿದ್ದಳು. ಪ್ರತಿ ನಿತ್ಯವೂ ಹೇಗೆ ಅವಳ ಭಾರವು ಏರುತ್ತಿತ್ತೋ ಹಾಗೆ ಅವಳಲ್ಲಿದ್ದ ಚಿನ್ನವೂ ಹೆಚ್ಚಬೇಕಿತ್ತು. ಅದನ್ನು ಅವಳು ಎಂದೂ ಧರಿಸಿದವಳಲ್ಲ. ತನ್ನಲ್ಲಿ ಇಷ್ಟೊಂದು ಒಡವೆಗಳಿವೆಯೆಂದ ಯಾರಿಗಾದರೂ ತಿಳಿದರೇನು ಗತಿ! ಅವನ್ನು ಅವರು ಹಾರಿಸದೇ ಬಿಡುವರೇ? ಅದಕ್ಕಾಗಿ ಅವಳು ಅವುಗಳನ್ನು ಹಾಕಿಕೊಂಡು 'ಮೆರೆಯುತ್ತಿರಲಿಲ್ಲ'. ಎಷ್ಟೇ ಆದರೂ ಬುದ್ಧಿವಂತಳಲ್ಲವೆ? ಗಂಡನ ಹತ್ತಿರ ಇವುಗಳನ್ನೆಲ್ಲಾ ಇಡುವುದೆ? ಅಬ್ಬ! ಒಂದು ಪಕ್ಷ ಅವನೇ ಯಾತಕ್ಕಾದರೂ ಉಪಯೋಗಿಸಿದರೆ? ಹಾಗೆಲ್ಲಾ ಹಾಳು ಮಾಡಿಕೊಳ್ಳಲು, ಅವಳಿಗೆ ಇಷ್ಟವಿರಲಿಲ್ಲ. ಅವುಗಳನ್ನು ಸದಾ ತನ್ನ ಹತ್ತಿರವೇ ಇಟ್ಟುಕೊಂಡಿರುತ್ತಿದ್ದಳು. ಮಗುವನ್ನು ತನ್ನ ಹೊಟ್ಟೆಯಲ್ಲಿ ಇಟ್ಟುಕೊಂಡ ಹೆಣ್ಣು ಸಹ ಅಷ್ಟಾಗಿ ಸಾಕುತ್ತಿರಲಿಲ್ಲ. ಅಷ್ಟು ಹುಷಾರಿನಿಂದ ಅದನ್ನು ನೋಡಿಕೊಳ್ಳುತ್ತಿದ್ದಳು. ಅವಳಿಗೇ ಆಭರಣಗಳನ್ನು ನೋಡಿಕೊಳ್ಳುವುದಕ್ಕೆ ಸಮಯ ಸಾಕಾಗದಿರುವಾಗ ಮತ್ತೆ ಬೇರೆ ಕೆಲಸಗಳಿಗೆ ವೇಳೆಯೆಲ್ಲಿ ಎಂದುಕೊಂಡ ದೇವರು ಅವಳಿಗೆ ಮಕ್ಕಳನ್ನೂ ಕೊಡಲಿಲ್ಲ. ಮಗುವಿಗಿಂತ ಹೆಚ್ಚಾದ ಮಗು ಸಿಕ್ಕಿರುವಾಗ ಅವಳಿಗೆ ಮಕ್ಕಳೇಕೆ? ಒಟ್ಟಿನಲ್ಲಿ ಮಕ್ಕಳಿಗಿಂತ ಹೆಚ್ಚಾಗಿ ಅದನ್ನು ಅವಳು ಸಾಕುತ್ತಿದ್ದಳು. ಹಗಲಿನಲ್ಲಿ ಅದನ್ನು ಪೆಟ್ಟಿಗೆಯಲ್ಲಿ ಇಟ್ಟಿರುತ್ತಿದ್ದಳು. ಆ ಪೆಟ್ಟಿಗೆಗೆ ದಪ್ಪವಾಗಿರುವ ಎರಡು ಬೀಗಗಳನ್ನು ಹಾಕುತ್ತಿದ್ದಳು. ದಿನಕ್ಕೆ ಕನಿಷ್ಠ ಪಕ್ಷ ನಾಲ್ಕು ಸಲವಾದರೂ ಎಣಿಸಿ ನೋಡುತ್ತಿದ್ದಳು. ಅಲ್ಲದೆ ಹತ್ತು ಸಲವಾದರೂ ಮುಟ್ಟಿ ಮುಟ್ಟಿ ಆನಂದ ಪಡುತ್ತಿದ್ದಳು ಅದರ ಬಣ್ಣ ನೋಡಿದರೆ ಅವಳ ಮುಖದ ಬಣ್ಣವೇ ಮಾಸುತ್ತಿತ್ತು. ಅದನ್ನು ನೋಡಿದಾಗ ಶ್ರೀರಾಮನನ್ನು ನೋಡಿದಾಗ ಶಬರಿಗಾದ ಆನಂದ ಅವಳಿಗಾಗುತ್ತಿತ್ತು. ಅವಳೇನು ಹರಿಕತೆಗಳಲ್ಲಿ ಕೇಳಿರಲಿಲ್ಲವೇ? ಚಿನ್ನದ ಮೇಲೆ ಮೋಹವಿಡಬಾರದೆಂದು! ಕೇಳಿದ್ದಳು. ಅನೇಕ ಸಲ ಕೇಳಿದ್ದಳು. ಆಗ ಆ ವಿಷಯದ ಮೇಲೆ ಒಂದು ಸಣ್ಣ ಭಾಷಣವನ್ನೇ ಮಾಡಿದ್ದಳು! "ಭಕ್ತ ಪುರಂದರದಾಸ" ಹರಿಕತೆಯಲ್ಲಿ ಆಗಾಗ್ಗೆ "ಛೀ ಛೀ, ಪಾಪ!" ಅಂದಿದ್ದಳು. ಅದರ ಅರ್ಥ ಅವಳಿಗೊಬ್ಬಳಿಗಲ್ಲದೆ ಮತ್ಯಾರಿಗೂ ಆಗಿರಲಿಲ್ಲ. ಬಹುಶಃ ಅದು ಅವರ ಮೂರ್ಖತೆಗಾಗಿ ತೋರಿಸಿದ ಪಶ್ಚಾತ್ತಾಪವಿರಬೇಕು. ಯಾರಾದರೂ ಹೆಂಗಸರು ಮಾತಿಗೆ ಮಾತು ಬಂದು "ಈ ಜೀವನ ಏನು ಶಾಶ್ವತ" ಅಂದರೆ ಅದಕ್ಕೆ ಅವಳು ಸರಾಗವಾಗಿ ಸೇರಿಸುತ್ತಿದ್ದಳು! "ಒಂದು ಒಡವೆ ಮಾಡಿಸಲಿಲ್ಲ ಮುಟ್ಟಲಿ

(ಹದಿನೈದನೇ ಪುಟ ನೋಡಿರಿ)

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು

ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ. ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳಿಸಲಾಗುವುದು.

ಬರೆಯಿರಿ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

Phone No. 226

Estd. 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಹಾಳೆಯ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಫೋಟೋ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ರವಾನಿಸುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಸುಲಭದಲ್ಲಿ ದೊರೆಯುತ್ತಿರುವ ಅಮೆರಿಕಾದ ಗೋಧಿಯನ್ನೇ ಖರೀದಿಸಿ ಉಪಯೋಗಿಸುತ್ತಿರುವ ಭಾರತದ ಗೃಹಿಣಿ— ಶ್ರೀಮತಿ ಅಂಜನಾ ಪಾಟೀಲ್.

ನವಯುಗ

ಸಂಪುಟ ೪೪	ಉಡುಪಿ	Vol. 14
ಸಂಚಿಕೆ ೩೫	೨೯—೪—೧೯೬೫	No. 35

ವಚನ ಸುಧೆ

ಸ್ವಾಧ್ಯಾಯಾನ್ಮಾ ಪ್ರಮದಃ ॥

(ತೈತ್ತಿರೀಯ ಉಪನಿಷತ್ ೧—೧೧)

೦ ನಿನ್ನ ಅಧ್ಯಯನದಲ್ಲಿ ಆಲಸ್ಯ ತೋರಿಸಬೇಡ.

(೦ ಉತ್ತಮ ಪುಸ್ತಕಗಳನ್ನು ಅಭ್ಯಾಸ ಮಾಡುವುದರಿಂದಲೇ ಉನ್ನತಿ ಹೊಂದ ಬಹುದು. ಆದುದರಿಂದ ಪ್ರತಿಯೊಬ್ಬನೂ ತನ್ನ ಅಭ್ಯಾಸವನ್ನು ಸರಿಯಾಗಿ ಮಾಡಬೇಕು. ಅಧ್ಯಯನ ಮಾಡದಿರುವವರು ದುರವಸ್ಥೆಗೀಡಾಗುವರು, ಮಾಡುವವರು ವಿದ್ವಾಂಸರಾಗಿ ಶ್ರೇಷ್ಠರಾಗುವರು.

ಸತ್ತ ಹೆಗ್ಗಣ ಮತ್ತು ಆದರ್ಶ

ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಮಹತ್ವದ ಕೊಡುಗೆಯೊಂದನ್ನು ಮುಖ್ಯಮಂತ್ರಿ ನಿಜಲಿಂಗಪ್ಪನವರು ಕನ್ನಡಿಗರಿಗೆ ಮುಂದಾಗಿಯೇ ನೀಡಿದ್ದಾರೆ. ಮಾಧ್ಯಮಿಕ ಶಿಕ್ಷಣವನ್ನು ಉಚಿತಗೊಳಿಸಲಾಗುವುದೆಂಬ ಅವರ ಹೇಳಿಕೆಯು ಸ್ವಾಗತಾರ್ಹವಾಗಿದೆ. ಕಡಿಮೆ ವೆಚ್ಚದಲ್ಲಿ ಹೆಚ್ಚು ಹೆಸರು ಬರುವ ಕೆಲಸವಿದು. ಏಕೆಂದರೆ, ಇಂದು ಮಾಧ್ಯಮಿಕ ವಿದ್ಯಾರ್ಥಿಗಳಲ್ಲಿ ಸುಮಾರು ಸೇ. ೧೫ರಷ್ಟು ವಿದ್ಯಾರ್ಥಿಗಳು ಮಾತ್ರ ಶುಲ್ಕ ತೆರುತ್ತಿದ್ದಾರೆ. ಉಳಿದವರೆಲ್ಲರೂ ಶುಲ್ಕ ವಿನಾಯತಿ ಪಡೆಯುತ್ತಿದ್ದಾರೆ. ವಾಸ್ತವಿಕವಾಗಿ ವಾರ್ಷಿಕ ರೂ. ೩,೪೦೦ಕ್ಕಿಂತ ಅಧಿಕ ಆದಾಯವಿರುವವರು ಹೆಚ್ಚು ಸಂಖ್ಯೆಯಲ್ಲಿರುವರಾದರೂ ತಮ್ಮ ಆಯವನ್ನವರು ಕಡಿಮೆಯಾಗಿಯೇ ಘೋಷಿಸಿ ಶುಲ್ಕ ವಿನಾಯತಿಯ ಸಾಲಭ್ಯವನ್ನು ಪಡೆಯುತ್ತಾರೆ. ಇದನ್ನೆಲ್ಲ ಗಮನಿಸುವಾಗ, ಆದಾಯ ಘೋಷಣೆಯಲ್ಲಿ ನಡೆಯುವ ವಂಚನೆಯನ್ನು ಮುಖ್ಯಮಂತ್ರಿಗಳ ಘೋಷಣೆಯು ನೀಗಿಸುತ್ತದೆಯೆಂದು ನಿರೀಕ್ಷಿಸಬಹುದು.

ಈ ಸಂದರ್ಭದಲ್ಲಿ ನಾವು ಕೆಲವೊಂದು ಸಂಗತಿಗಳನ್ನು ಶಿಕ್ಷಣರಂಗದ ವಿರೋಧಾಭಾಸಗಳನ್ನು ನಿರ್ಲಕ್ಷಿಸುವುದು ಸಾಧ್ಯವಿಲ್ಲ. ಮಾಧ್ಯಮಿಕ ಶಾಲೆಗಳಲ್ಲಿ ಅಂದರೆ, ೮, ೯ ಮತ್ತು ೧೦ನೆಯ ತರಗತಿಗಳಲ್ಲಿ ರೂ. ೩,೪೦೦ರ ಆಯಮಿತಿಗೊಳಪಟ್ಟು ಶುಲ್ಕ ವಿನಾಯತಿಯಿದ್ದರೂ ಪ್ರಾಥಮಿಕ ತರಗತಿಯಲ್ಲಿ ಈ ವಿನಾಯತಿಯು ರೂ. ೧,೨೦೦ರ ಆಯಮಿತಿಯನ್ನೇ ಹೊಂದಿಕೊಂಡಿದೆ. ಇದರಲ್ಲಿ ಯಾವ ಬದಲಾವಣೆಯೂ ಆಗಿರುವುದಿಲ್ಲ. ಮುಂದೀಗ, ಮಾಧ್ಯಮಿಕ ಶಿಕ್ಷಣವೇ ಉಚಿತವಾಗುವಾಗಲಂತೂ ಕಡ್ಡಾಯ ಶಿಕ್ಷಣಕ್ಕೆ ಒಳಪಡದ ತರಗತಿಯವರು ಆಯಮಿತಿಗೊಳಪಟ್ಟು ಶುಲ್ಕ ತುಂಬಲೇ ಬೇಕಾಗುತ್ತದೆ. ಈ ದಿಸೆಯಲ್ಲಿ ಏಕನೀತಿಯನ್ನು ಸರಕಾರವು ಅನುಸರಿಸುವುದು ಅಗತ್ಯವಿದೆ. ಮದ್ರಾಸ ಕರ್ನಾಟಕ ವಿಭಾಗದ ಶಿಕ್ಷಣ ಮಟ್ಟವು ಉನ್ನತವಾಗಿದ್ದರೂ ಇಲ್ಲಿನ ಪ್ರಾಥಮಿಕ ಶಿಕ್ಷಣದ ಸುತ್ತ ಜೇಡನ ಬಲೆ ಹರಡಿಕೊಂಡೇ ಇದೆ.

ಶುಲ್ಕ ವಿನಾಯತಿಯಿಂದ ಆಡಳಿತೆಯವರಿಗೆ ಆಗುವ ನಷ್ಟವನ್ನು ಸರಕಾರ ತುಂಬಿಕೊಡುವುದು ಅಗತ್ಯ. ಇಂದು ಮಾಧ್ಯಮಿಕ ಶಾಲೆಗಳಿಗೆ ಈ ಪದ್ಧತಿಯು ಅನ್ವಯವಾಗುತ್ತದೆ. ಆದರೆ, ಪ್ರಾಥಮಿಕ ಶಾಲೆಗಳ ಮಟ್ಟಿಗೆ ಈ ಪರಿಸ್ಥಿತಿಯಿರುವುದಿಲ್ಲ. ಹಾಗಾಗಿ ಆಡಳಿತ ವರ್ಗಕ್ಕೆ ಯಾವುದೇ ರೀತಿಯ ಉತ್ಪತ್ತಿಯಿಲ್ಲವಾದುದರಿಂದ, ಅದು ಅಧ್ಯಾಪಕನ ವೇತನದಲ್ಲೇ ಒಂದು ಪಾಲನ್ನು ಬಯಸುವಂತಹ ಅಕಾಲ ಬಂದಿದೆ. ಹಸಿದವನು ಯಾವ ಪಾಪಕ್ಕೂ ಹೇಸಲಾರನು. ಇಂತಹ ಭೀಕರ ಪರಿಸ್ಥಿತಿ ದೂರವಾಗಬೇಕು. ಶಿಕ್ಷಕರ ಜೀವನ ಮಟ್ಟವನ್ನು ಎತ್ತರಿಸಲು ಆಸಕ್ತಿ ತೋರುವ ಸರಕಾರ, ಅದನ್ನು ಇಳಿಸುವ ಕ್ರೂರ ಶಕ್ತಿಗಳನ್ನು ಹತ್ತಿಕ್ಕಲು ಹಿಂದೆ ಮುಂದ ನೋಡಬಾರದು.

ಶಿಕ್ಷಕರನ್ನು ರಾಜ್ಯ ಸರಕಾರವು ತನ್ನಿತರ ನೌಕರರಿಗಿಂತ ಉತ್ತಮವಾಗಿ ನೋಡಬೇಕು. ಭಾವಿ ಜನಾಂಗ ನಿರ್ಮಾತರು ಅವರು—ಎಂದೆಲ್ಲಾ ವೇದಿಕೆಯ ಮೇಲಿನ ಮಾತುಗಳು ಕೇಳಿ ಬರುತ್ತವೆ. ಅವರ ವೇತನ ಸೌಲಭ್ಯಗಳನ್ನು ಹೆಚ್ಚಿಸಬೇಕು ಎನ್ನುವವರೇ ಬಹುಮಂದಿ. ಅವರ ಬಗ್ಗೆ ಎರಡು ತೊಟ್ಟು ಕಣ್ಣೀರು ಸುರಿಸುವವರೇ ಎಲ್ಲೆಲ್ಲೂ. ಆದರೆ, ಮಂತ್ರಿಗಳ ಕೇಳುವ ಪ್ರಶ್ನೆಯೊಂದೇ "ಶಿಕ್ಷಣವು ಉತ್ಪನ್ನ ತರುವ ರಂಗವಲ್ಲ, ಶಿಕ್ಷಕರ ವೇತನ ಸುಧಾರಣೆಗೆ ಬೇಕಾದ ಹಣವೆಲ್ಲಿಂದ ತರಲಿ?"—ಶಿಕ್ಷಣವು ಅಲ್ಪಕಾಲದ ಯೋಜನೆಯಲ್ಲ. ನಮ್ಮ ಶರಾವತಿ, ಮಂಗಳೂರು ಬಂದರಗಳಂತೆಯೇ ಬಹು ದೊಡ್ಡ ದೀರ್ಘಕಾಲದ ಯೋಜನೆ. ಅದರಿಂದ ಉತ್ಪತ್ತಿ ಬಾಳೆಯ ಗಿಡದಂತೆ ಒಂದು ವರ್ಷದಲ್ಲೇ ದೊರೆಯದು. ಅದಕ್ಕಾಗಿ ತೆಂಗಿನಂತೆ ಸಾಗುವಾನಿಯಂತೆ ಬಹುಕಾಲ ಕಾಯ ಬೇಕು. ಹಣ ತರುವ ಪ್ರಶ್ನೆ ಸರಕಾರದ್ದು. ಶರಾವತಿಯ ನೀರಿನಲ್ಲಿ ಮುಳುಗಿದ ಹಣವೆಲ್ಲಿಂದ ಬಂತು? ಎಂ. ಎಲ್. ಎ. ಗಳ ಹಾಸ್ಟಲಿಗೆ ಎಲ್ಲಿಂದ ಬಂತು? ಮಂತ್ರಿ ಮಾಗಧರ ಸಂಚಾರ ಭತ್ತೆಗೆಲ್ಲಿಂದ ಬಂತು? ಉಚಿತ ಮಾಧ್ಯಮಿಕ ಶಿಕ್ಷಣವನ್ನು ಘೋಷಿಸುವುದಕ್ಕೆ ಧೈರ್ಯ ಮಾಡಿದ ಮಂತ್ರಿಗಳು ಶಿಕ್ಷಕರ ವೇತನ—ಸೌಕರ್ಯಗಳ ಉನ್ನತಿಯ ವಿಷಯದಲ್ಲೂ ಧೈರ್ಯ ತೋರಬೇಕು.

ಸಮೀ ರಾಜ್ಯದಲ್ಲಿ ಹುಟ್ಟಿದ ಮಗುವಿಗೆ ಶಿಕ್ಷಣ ಕೊಡುವ ಹೊಣೆ ಸರಕಾರದ್ದೇ. ಆ ದಿಸೆಯಲ್ಲಿ ನಾವು ಮುಂದುವರಿದಂತಾಯ್ತು. ಮನೆಯಲ್ಲಿ ಸತ್ತ ಹೆಗ್ಗಣಗಳ ರಾಶಿಯನ್ನೇ ಇರಿಸಿ ಹೊರಗಡೆ ಆದರ್ಶದ ಬೆನ್ನು ಮಾತ್ರ ಹಿಡಿಯುವುದರಿಂದಲೇ ಯಾರೂ ತೃಪ್ತಿಪಡಬಾರದು. ಉಚಿತ ಸಾರ್ವಜನಿಕ ಶಿಕ್ಷಣದ ಮುಂದಿನ ಯುಗದಲ್ಲಿ ವಿದ್ಯಾರ್ಥಿಗಳ ದಟ್ಟಣೆಯು ಹೆಚ್ಚುತ್ತಲೇ ಹೋಗುವುದು. ಆಗ, ಅತೃಪ್ತ ಶಿಕ್ಷಕರನ್ನೇ ನಾವು ಸಾಕುತಿದ್ದರೆ, ಸ್ವಾಭಾವಿಕವಾಗಿ ಸ್ವರ್ಗದಿಂದ ಭೂಮಿಗಿಳಿದ ಶಿಕ್ಷಣ ಮಟ್ಟವು ಇದ್ದಲ್ಲೇ ಪಾತಾಳಕ್ಕೆ ಕುಸಿಯುವುದು. ಸರಕಾರದ ಗಮನ ಇತ್ತ ಅಗತ್ಯ ಹರಿಯಲೇಬೇಕು.

ಲಾಯ್ ಡೊಂಬರಾಟ

ಇಂಡೋನೇಶ್ಯದ ದಶಮ ಬಾಂಡುಂಗ ಸಮ್ಮೇಳನೋತ್ಸವದ ವೇಳೆ ಸೇರಿದ ವಿವಿಧ ರಾಷ್ಟ್ರಗಳ ಅಭಿಪ್ರಾಯವನ್ನು ನಾವು ಗಮನಿಸುವುದಾದರೆ, ಅದು ಸುಕರ್ಣರ ವೇದಿಕೆಯೆಂದೇ ಹೇಳಬೇಕು. ಚೀನಾದ ಲಾಯರು ಈ ವೇದಿಕೆಯ ಮೇಲೆ ಆಫ್ರೇಸ್ಯಾ ರಾಷ್ಟ್ರಗಳನ್ನು ಕುಣಿಸಲು ಪ್ರಯತ್ನ ಮಾಡಿದರು. ಸಂಯುಕ್ತ ರಾಷ್ಟ್ರ ಸಂಘದಿಂದ ಸಿಡಿದು ದೂರ ನಿಲ್ಲುವ ತನ್ನ ನಿಲುವೆಯು ದೃಢವಾದುದೆಂದು ಇಂಡೋನೇಶ್ಯವು ಮತ್ತೊಮ್ಮೆ ಬಹಿರಂಗ ಪಡಿಸಿತು. ಇತ್ತೀಚೆಗಿನ ಕೆಲವು ಸಮಯದಿಂದ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪ್ರವೇಶ ದೊರೆತರೂ ಒಂದೇ, ಇಲ್ಲವಾದರೂ ಒಂದೇ ಎಂಬ ತೆರಹದ ನಿರ್ಲಕ್ಷ್ಯತನವನ್ನು ಕೆಂಪು ಚೀನಾ ತೋರಿಸುತ್ತಿದೆ. ಈ ಎರಡು ರಾಷ್ಟ್ರಗಳ ನಾಯಕತ್ವದಲ್ಲಿ ಸಂಯುಕ್ತ ರಾಷ್ಟ್ರ ಸಂಘಕ್ಕೊಂದು ಪ್ರತಿಸಂಸ್ಥೆಯನ್ನು ಕಟ್ಟುವ ದೂರಾಲೋಚನೆಯೊಂದಿದೆಯೆಂದೂ ತಿಳಿಯುತ್ತದೆ. ಬಾಂಡುಂಗದ ವಾರ್ಷಿಕೋತ್ಸವ, ಮುಂದೆ ಆಲ್ಜಿಯರ್ಸ್‌ನಲ್ಲಿ ಸೇರುವ ತಟಸ್ಥರ ಸಮ್ಮೇಳನ ಇವುಗಳ ವೇದಿಕೆಯನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳಲು ಇಂಡೋನೇಶ್ಯ ಮತ್ತು ಕೆಂಪು ಚೀನಾಗಳು ಪ್ರಯತ್ನಿಸುವಂತಿದೆ. ಅಮೆರಿಕೆಯನ್ನು ಪ್ರತಿ ಸಂಸ್ಥೆಯ ಹೆಸರಿನಲ್ಲಾದರೂ ಹಣಿಸಿ, ತನಗೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪ್ರಾತಿನಿಧ್ಯ ಪಡೆಯಲು ಲಾಯರು ನೇಯ್ದು ಡೊಂಬ ಜಾಲವಿದ್ದಿದ್ದರೂ ಇರಬಹುದು. ಜಗತ್ತಿಗೆ ಜಗತ್ತೇ ಕಣ್ಣು ತೆರೆದು ಕೆಂಪು ಚೀನಾದ ಸಾಮ್ರಾಜ್ಯವಾದ ಮತ್ತದರ ಮಾಯೊಡಾಟವನ್ನು ನೋಡಬೇಕಾದ ಕಾಲ ಬಂದಿದೆ.

ನರಸಣ್ಣನ ಸರಸ

"ತಾಲೂಕ ಕಛೇರಿಯಲ್ಲಿ ಚಾಲನ್ ಫಾರ್ಮ್ ಇಲ್ಲವಂತೆ ಇನ್ನೀಗ ಟ್ರೆಜರಿಗೆ ಹಣ ತುಂಬಿಸುವುದಾದರೂ ಹೇಗೆ?"

"ಪೇಟೆಯ ಜೇಬು ತುಂಬಿದರೆ ಸರಕಾರದ ಟ್ರೆಜರಿಯೂ ತುಂಬಬಹುದು."

ಮೂರು

ಗೇಹ ರಾಜ್ಯದಲ್ಲಿ

ಕಲೆ ತುಂಬಿದ ನೀರುಗುಳ್ಳೆ

'ಸಾಕಪ್ಪ ಸಾಕಾಯ್ತು ...'

'ಯಾರೇ ಇದು, ಸಾಕಾಯ್ತೂಂತ ಕೂಗಿ ಕೊಂಡೇ ಬರ್ತೀವ್ರಿ-"

'ಇಲ್ಲ, ಯಾರೂಂತ ಗೊತ್ತಿಲ್ದಿದ್ರೆ ಹೀಗೆ ಕೇಳ್ಬೇಕೆ ತಾಳಿ ಇರ್ತಿತ್ತಿ ನಿಮ್ಗೆಲ್ಲಿ?"

'ಗೊತ್ತಿದ್ರೂ ಏನಂತೆ? ಮಾತಿಗೆಂದು ಕೇಳ್ಬಾರ್ದೇನ?'

'ಅದಲ್ಲಾ ಇರ್ಲಿ ಅಂತೂ ಸಾಕಾಯ್ತು ಕಂಡ್ರಿ.'

'ಏನು ಸಾಕಾಯ್ತು? ಯಾಕದು ಇಷ್ಟು ಬೇಗನೇ ಸಾಕಾಯ್ತು."

'ನೋಡಿ, ನಿಮ್ಮನ್ನ ಕೇಳನಾವೇನೇ ಹೋಗ್ತಾ ಇದ್ವಿ"

"ಹ್ಞಾಂ, ನಾಲ್ಕನೆಯ ಶತಮಾನಾಚರಣೆಯಲ್ಲಿ ಭಾಗವಹಿಸೋದಕ್ಕೆ ..'

'ಮತ್ತೆಲ್ಲಿಗೇಂತ? ಪಾಪ, ಬಹುದೊಡ್ಡ ದಾಸ ಕನಕದಾಸ ಆತನನ್ನು ಕಣ್ಣಿನಿಂದ ಕಾಣೋ ಭಾಗ್ಯ ಬರಲಿಲ್ಲ. ಇಂತಹ ಉತ್ಸವದಲ್ಲಾದ್ರೂ ನೋಡೋಣಾಂತ ಹೋಗ್ತೀ ಅಕ್ಕೆ ನಿಮ್ಮದೊಂದೆ ವ್ಯಾಖ್ಯಾನ'

'ಅಯ್ಯೋ, ನನ್ನ ವ್ಯಾಖ್ಯಾನ ಕೇಳೋಕೆ ಬೇಜಾರಾಗಿ ತಾನೇ ನೀನು ಅಲ್ಲಿನ ವ್ಯಾಖ್ಯಾನಕ್ಕೆ ತೆರಳಿದ್ದು?'

"ವ್ಯಾಖ್ಯಾನವಲ್ರಿ ಅದು, ಉಪನ್ಯಾಸ ಮಾಲೆ?"

"ಇರ್ಲಿ, ಏನೂಂತ ನೀನು ತಿಳಿದುಕೊಂಡೆ?"

"ತಿಳಿಯೋದೇನ? ಕೆಲವ್ರು ಕನ್ನಡ ಅರಿಯದವ್ರು, ಕನ್ನಡ ಭಕ್ತ ಕನಕದಾಸನ ಮೇಲೆ ಭಾರತದ ಬೇರೆ ಬೇರೆ ಸಾಧು ಸಂತರ ಸಾಧನೆಗಳನ್ನು ಆರೋಪಿಸಿ ಮಾತಾಡಿದ್ರಂತೆ"

"ಯಾರು ಹೇಳಿದ್ರು ನಿನಗೆ? ಇಂಗ್ಲಿಷ್ ಭಾಷಣ ನಿನಗ ಅರ್ಥವಾಗುತ್ತೆ?"

ಏನೋ ಅಂದ್ರಪ್ಪ fought for evil evil ಅಂತ. ಮತ್ತೆ ನಮ್ಮ ವಿಮಲು ಇದ್ಳು ನೋಡಿ ಅವಳು ಅಂದ್ಳು."

"ಮತ್ತೆ ಏನಂತೆ?"

"ನಾನು ಉಪನ್ಯಾಸ ಮಾಡೊಲ್ಲಾಂತಂದು ವಕ್ಕು ಮಂತ್ರಿಗಳು ತುಂಬ ಮಾತಾಡಿದ್ರು"

"ಅದೆಲ್ಲಾ ನನಗ್ಯಾಕಪ್ಪ ಒಟ್ಟನಲ್ಲಿ ನಿನಗೆ ಹೇಗೆ ಅನ್ನಿಸ್ತೂಂತ?"

ಭಾಷಣ ಕೇಳಿ ಕೇಳಿ ಕಿವಿ ಹೊಟ್ಟು ಹೋಗುವ ಹಾಗಾಯ್ತು ಇನ್ನೂ ಎರಡು ಭಾಷಣ ಬಾಕಿಯಿದೆಯೆನ್ನುವಾಗ್ಲೇ ಹೊರಟು ಬಿಟ್ಟೆ .."

'ಅಂದ್ರೆ? ಬೇಗ್ನೆ ಎದ್ದುಬಿಟ್ಟೆಯಾ?" ಮತ್ಯಾಕೆ ಬರೋಕೆ ತಡ?'

'ಹಾಗೇ ರಥಬೀದಿಗೊಂದು ಸುತ್ತು ಹಾಕಿ ಬಂದೆನ್ನಿ"

"ಅದೇ ನಿನಗ ಪಸಂದಾಗದೇ ಇರೋದು."

'ಯಾಕೆ?"

"ಆ ಮೇಲೂ ಇತ್ತು ಸ್ವಾರಸ್ಯ"

"ಏನು?"

"ಮತ್ತೇನಿಲ್ಲ. ವೇದಿಕೆಯ ಮೇಲೆ ನಿಂತ ಕೂಡ್ಲೆ ಮಾನವ ಆದರ್ಶದ ಮುದ್ದೆಯಾಗುತ್ತಾನೆ, ಇಳಿದ ಕೂಡ್ಲೆ ಪಾಪ, ಅವನ ಪರಿಸ್ಥಿತಿ ಚಿಂತಾಜನಕ'

"ಅದು ಸಹಜವೇ ಅಲ್ವೆ?"

ಯಾಕೆ?"

"ಯಾಕೇಂತಂದ್ರೆ, ವೇದಿಕೆಯ ಮೇಲೆ ಬಂದು ಕೇಳೋದು ಶ್ರೋತೃಗಳಿಗಲ್ವೆ? ಆಗ ಆತ ತನ್ನನ್ನೆ ತಾನು ಮರೆಯುತ್ತಾನೆ."

"ಅದ್ದರಿಂದ್ಲೆ ಆತ ತನಗೆ ಸಲ್ಲದ ಮಾತುಗಳನ್ನು ಆಡ್ತಾನೆ...ನಾಟಕದ ನಟನಾಗುತ್ತಾನೆ."

"ಹಾಗಂದ್ರ.."

"ನೋಡು ಭರತ ಋಷಿ ಹೇಳಿದ್ದಾರೆ ನಾಟ್ಯ ಶಾಸ್ತ್ರ ಬರೆದವರು. ರಾಮನ ಪಾರ್ಟು ಹಾಕಿದವ ವೇದಿಕೆಗೆ ಬಂದನೆಂದಾಗ, ತಾನು ರಾಮನೇ ಎಂದು ಭಾವಿಸತೊಡಗುತ್ತಾನೆ. ಆನ್ನ ಕಾಲ ರಾಮಾಯಣದ ಕಾಲ ತನ್ನ ವಾತಾವರಣವೇ ಆಗಿನದ್ದು ಎಂದಾತ ಪುರಾಣ ಯುಗದಲ್ಲೇ ತನ್ನ ತಾನು ತಲ್ಲೀನಗೊಳಿಸುತ್ತಾನೆ. ತಾನು ರಾಮನಲ್ಲ, ಬರಿಯ ಪಾತ್ರಧಾರಿಯೆಂಬುದು ಆತನ ಸ್ಮರಣೆಗೇನೇ ಬರುವುದಿಲ್ಲ?'

'ಅಂದರೆ, ರಾಮನಾಗಿಯೇ ಅಭಿನಯಿಸುತ್ತಾನೆ; ಆಗಲೇ ಆತ ಯಶಸ್ವಿನಟನಾಗುತ್ತಾನೆ."

"ಹಾಗೆಯೇ ನೋಡು ನಾಟಕ ಅಭಿನಯ ಪ್ರಧಾನವಾದುದ; ಆದುದರಿಂದ ಅಭಿನಯ ಕೌಶಲ್ಯದಿಂದ ಪ್ರೇಕ್ಷಕರನ್ನು ಮರುಳುಗೊಳಿಸಬಹುದು. ಭಾಷಣದಲ್ಲಿ ಮಾತುಗಾರಿಕೆಯ ಚಮತ್ಕಾರದಿಂದ ಆಕರ್ಷಣ ಮಾಡಬೇಕು."

'ಅಂದರೆ?"

"ಅಂದರೆ ಅದೇ, ಯಾಂಗೆ ಹೇಗೆ ಮಾತಾಡಿದರೆ ಸಂತೋಷವಾಗುತ್ತದೆಯೋ ಹಾಗೆ ಮಾತಾಡಿ ಬಿಡಬೇಕು. ವೇದಿಕೆಯ ನಿರ್ಮಾಣ ಯಾಕೆ ಆಗಿದೆಯೋ ಅದನ್ನು ಸಂಪೂರ್ಣ ಉಪಯೋಗಿಸಿ ಕೊಳ್ಳಬೇಕು."

'ಅದರೆ, ಜನರ ಮುಖನೋಡಿ ಮಾತಾಡ ಬೇಕೂಂತಾಯ್ತು ...'

(ಹದಿಮೂರನೇ ಪುಟ ನೋಡಿ)

ನಿಮ್ಮ ಉಳಿತಾಯದೊಂದಿಗೆ ಕಣ್ಮುಚ್ಚಿ ವ್ಯವಹರಿಸಿ ದುಡುಕಬೇಡಿ

ಉಳಿತಾಯಕ್ಕೆ ಆರಂಭಿಸುವ ಮುನ್ನ ಕಣ್ತೆರೆದು ನೋಡಿ.

ಆಗ ವಿಜಯ ಬ್ಯಾಂಕ್ ನಿಮ್ಮ ಉಳಿತಾಯಕ್ಕೆ ಹೆಚ್ಚು ಬಡ್ಡಿ - ವರ್ಷಕ್ಕೆ ಶೇ. 4½ ಯಷ್ಟು - ಕೊಡುವುದನ್ನು ಅರಿಯುವಿರಿ.

ಇದು ನಿಮ್ಮ ಆಸಕ್ತಿ ಕೆರಳಿಸದೇ?

ಆದ್ದರಿಂದ ನಿಮ್ಮ ಉಳಿತಾಯದ ವಿಷಯದಲ್ಲಿ ಕುರುಡುತನದಿಂದ ದುಡುಕಿ ವ್ಯವಹರಿಸಬೇಡಿ.

ನೀವು ಹೆಚ್ಚಾಗಿ ಗಳಿಸಬಲ್ಲಂತಹ ಕಡೆ ಉಳಿತಾಯವನ್ನಿಡಿ,

ತಕ್ಷಣ ವಿಜಯ ಬ್ಯಾಂಕ್‌ನಲ್ಲಿ ಒಂದು ಸೇವಿಂಗ್ಸ್ ಬ್ಯಾಂಕ್ ಲೆಕ್ಕವನ್ನು ತೆರೆದು ಹೆಚ್ಚಿನ ಬಡ್ಡಿ ಗಳಿಸಿ. ಇದು ನಿಮಗಾಗಿ, ನಿಮ್ಮ ಹಣಕ್ಕಾಗಿ ಇರುವ ಬ್ಯಾಂಕು.

ವಿಜಯ ಬ್ಯಾಂಕಿನ 52 ಕಚೇರಿಗಳೆಲ್ಲದರಲ್ಲೂ ದಕ್ಷತೆಯಿಂದ, ಸೌಜನ್ಯದಿಂದ ನಿಮಗೆ ಸೇವೆ ಸಲ್ಲಿಸಲಾಗುವುದು.

ವಿವರಗಳಿಗೆ ನಿಮ್ಮ ಹತ್ತಿರದ ಶಾಖೆಯಲ್ಲಿ ಕೇಳಿರಿ

ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ: ವಿಜಯ ಬ್ಯಾಂಕ್ ಬಿಲ್ಡಿಂಗ್
ಲೈಟ್ ಹೌಸ್ ಹಿಲ್ ರೋಡು, ಮಂಗಳೂರು-3

VB- 20 KAN.

ವಿಜಯ ಬ್ಯಾಂಕಿನ ಖಚೇರಿಗಳು

ಮೈಸೂರು ರಾಜ್ಯ:— ಬೆಂಗಳೂರು. 1) 1834 III ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ- ಫೋನ್ 26369, 2) ಕೇಂಬ್ರಿಡ್ಜ್ ರಸ್ತೆ, ಅಲಸೂರು, ಫೋನ್ 74801 3) 25, ಕೆಂಪೇಗೌಡ ರಸ್ತೆ, ಫೋನ್ 24395.
ಮಂಗಳೂರು:— 1. ಲೈಟ್ ಹೌಸ್ ಹಿಲ್ ರಸ್ತೆ 2 ಹಂಪನ ಕಟ್ಟೆ, ಭಟ್ಕಳ, ಬ್ರಹ್ಮಾವರ, ಬೈಂದೂರು, ಚಾಮರಾಜನಗರ, ಕುಂದಾಪುರ, ಧಾರವಾಡ, ದೊಡ್ಡಬಳ್ಳಾಪುರ ಗೋಣಿಕೊಪ್ಪಲ್, ಕಾರ್ಕಳ, ಕಾಪು, ಕೋಲಾರ, ಕೊಳ್ಳೇಗಾಲ, ಕೃಷ್ಣರಾಜಪೇಟೆ, ಮದ್ದೂರು, ಮಾಗಡಿ, ಮಡಿಕೇರಿ, ಮೂಡಿಗೆರೆ, ಮೈಸೂರು, ನಂಜನಗೂಡು, ಪುತ್ತೂರು, ಉಡುಪಿ, ಹುಬ್ಬಳ್ಳಿ, ಗದಗ, ನೆಲಮಂಗಲ ಸುಳವಳ್ಳಿ, ಚೆನ್ನಪಟ್ಟಣ, ಕನಕಪುರ, ರಾಮನಗರಂ.

ಮುಂಬಯಿ:— "ಪರ್ಸನ್ ಛೇಂಬರ್ಸ್" ಪಾರ್ಸಿಬಜಾರ್ ಸ್ಟ್ರೀಟ್ ಫೋರ್ಟ್.

ಕೇರಳ ರಾಜ್ಯ:— ಚಲಪುರಂ, ಕ್ಯಾಲಿಕಟ್, ಪುಟ್ಟಂಚೇರಿ, ಕೊಚ್ಚಿನ್ ಬ್ರಾಡ್‌ವೇ—ಎರ್ನಾಕುಲಂ, ರೌಂಡ್‌ಸೌತ್—ತ್ರಿಚೂರ್, ಕೂತುಪರಂಬ, ಕಲ್ಲಾಯಿ- ಕ್ಯಾನೂರ್, ಕಲಪೆಟ್ಟಿ, ಕಾಞ್ಞಂಗಾಡ್, ಕಾಸರಗೋಡ್, ಕೊಟ್ಟಕ್ಕಲ್, ಮಂಜೇರಿ, ಮನ್ನಾರ್‌ಘಾಟ್, ಪೆರಿಂತಲಮನ್ನ, ಪೊನ್ನಾನಿ, ತಿರೂರು, ತ್ರಿಪುನಿಥುರ, ತಳಿಪರಂಬ, ತಲಚೇರಿ

ಉಡುಪಿಯಲ್ಲಿ

ಕನಕದಾಸ

ಬರೆದವರು
ಶ್ರೀ ಎಸ್. ಪದ್ಮನಾಭ ನಾಯಕ್.

ಚಂದ್ರನ ನೆಲೆಯಿಂದಾಗಿ ಉಡುಪಿ ಎಂದು ಪ್ರಸಿದ್ಧವಾದ ಈ ಉಡುಪಿ ನಗರದಲ್ಲಿ ನಾಲ್ಕುನೂರು ವರ್ಷಗಳ ಹಿಂದೆ ಎಂಟು ಮಠ, ಶ್ರೀ ಕೃಷ್ಣ ದೇವಾಲಯ ಮತ್ತು ಅಲ್ಲಲ್ಲಿ ಕೆಲವು ಮಡಿವಂತರ ನಿವಾಸಗಳಲ್ಲದೆ ಉಳಿದ ಕಾರ್ಯಕ್ಷೇತ್ರಗಳಾವುವೂ ಇರಲಿಲ್ಲ.

ಸೋಸಲೆಯಲ್ಲಿ ಶ್ರೀ ವ್ಯಾಸರಾಯ ಯತಿಪುಂಗವರು ತಮ್ಮ ಮಠದಲ್ಲಿ ನಗಾರಿ ಹೊಡೆಯುವರೇ ನಿಯುಕ್ತ ಮಾಡಿದ ತಿಮ್ಮಪ್ಪ ನಾಯಕನೆಂಬ ಒಬ್ಬ ಕುರುಬನು ಮಠದ ಉಳಿದ ಬ್ರಾಹ್ಮಣರ ಮತ್ಸರಕ್ಕೆ ಕಾರಣಕರ್ತನಾಗಿದ್ದನು. ಶ್ರೀ ವ್ಯಾಸರಾಯರು ಮಠದಲ್ಲಿಲ್ಲದಾಗ ಒದಗಿದ ಕಿರುಕುಳಗಳಿಂದ ತಿಮ್ಮಪ್ಪ ನಾಯಕ ಕಳವಳಪಟ್ಟರೂ ಎಲ್ಲವನ್ನು ಸಹಿಸಿ ಏಕಚಿತ್ತದಿಂದ ಗುರು ಸೇವೆ ಮಾಡುತ್ತಿದ್ದ.

ತಿಮ್ಮಪ್ಪ ನಾಯಕ ಓರ್ವ ವೀರಾಗ್ರಣಿ. ಧಾರವಾಡದ ಬಳಿಯ ಶಿಗ್ಗಾವಿ ತಾಲೂಕಿನ ಬಾಡ ('ಬಡ'ವೂ ಇರಬಹುದು) ಎಂಬ ಗ್ರಾಮದಲ್ಲಿ ಬಾಚಮ್ಮ ಮತ್ತು ವೀರಪ್ಪ ನಾಯಕರ ಮಗನಾಗಿ ೧೫೦೮ರಲ್ಲಿ ಜನ್ಮಕ್ಕೆ ಬಂದ. ಮಗುವು ತಿರುಪತಿಯ ತಿಮ್ಮಪ್ಪನ ದಯೆಯಿಂದ ಹುಟ್ಟಿದುದು ಎಂದು ತಂದೆ-ತಾಯಿಗಳು ವಿಶ್ವಾಸಪಟ್ಟು ಮಗುವಿಗೆ ತಿಮ್ಮಪ್ಪ ನಾಯಕ ಎಂದು ಹೆಸರಿಟ್ಟರು.

ತಿರುಪತಿಯ ತಿಮ್ಮಪ್ಪನ ಭಕ್ತರಾದ ಇವರಿಗೆ ಮುಂದೆ ಯೋಗ್ಯ ಧನಕನಕಾದಿಗಳು ಲಭಿಸಿದುವು. ತಿಮ್ಮಪ್ಪ ನಾಯಕನಿಗೆ ಭೂಮಿಯಲ್ಲಿ ಕನಕ ಭಂಡಾರವು ದೊರಕಿದುದರಿಂದ ಕನಕನಾಯಕ ಎಂದು ಕರೆಯಲ್ಪಟ್ಟನು, ಆದರೆ ಪರಮಾತ್ಮನ ಚಿತ್ತವೇ ಬೇರೆ. ಆ ಧನವನ್ನು ಅನುಭವಿಸಿ ಇಹಲೋಕದಲ್ಲಿ ವ್ಯರ್ಥ ಕಾಲ ಕಳೆಯದಂತೆ ಸಕಾಲಿಕ ಎಚ್ಚರಿಕೆಯೋ ಎಂಬಂತೆ ಪರಮಾತ್ಮನು ಆಗಾಗ್ಗೆ ಕನಸಿನಲ್ಲಿ ಎಚ್ಚರಿಸಿ ತನ್ನ ದಾಸನಾಗು ಎಂದು ಹೇಳುತ್ತಿದ್ದನು.

ಯುದ್ಧರಂಗದಲ್ಲಿ ಒಮ್ಮೆ ತೀವ್ರವಾದ ಗಾಯಗಳೊಂದಿಗೆ ಬಿದ್ದಿರಲು ಪರಮಾತ್ಮ ದಾಸನಾಗು ಎಂದು ಕೊನೆಯದಾಗಿ ಎಚ್ಚರಿಸಲು ಅಕ್ಷರಶಃ ತಿಮ್ಮಪ್ಪ ನಾಯಕ ಅಥವಾ ಕನಕನಾಯಕ ಒಪ್ಪಿಕೊಂಡ.

ಆಗಿನ ಕಾಲದಲ್ಲಿ ಕರ್ನಾಟಕದ ಉತ್ತರದಲ್ಲಿ ರಾಮಾನುಜಾಚಾರ್ಯ ದಕ್ಷಿಣದಲ್ಲಿ ಮಧ್ವಾಚಾರ್ಯರ ಮತವು ವಿಶೇಷ ಪ್ರಸಾರದಲ್ಲಿತ್ತು. ಸೋಸಲೆಯಲ್ಲಿ ಶ್ರೀ ವ್ಯಾಸರಾಯ ಮಠವಿತ್ತು. ಅದು ತತ್ವ ಪ್ರಚಾರದ ಕೇಂದ್ರವೂ ಆಗಿತ್ತು.

ಕನಕನಾಯಕ ಈ ಯತಿಪುಂಗವರ ಬಳಿಗೈದಿ, ತನಗೆ ಮಂತ್ರೋಪದೇಶ ಮಾಡಬೇಕೆಂದೂ ಹರಿದಾಸನಾಗುವಂತೆ ಅನುಗ್ರಹಿಸುವಂತೆ ಬೇಡಿಕೊಂಡನು.

ಎಂತಹ ಜ್ಞಾನಿಯಾದರೂ ಕೆಲವೊಮ್ಮೆ ಎಡವಿ ಬೀಳುವುದುಂಟು. ಅದೇ ರೀತಿಯಲ್ಲಿ ಶ್ರೀ ವ್ಯಾಸರಾಯ ಯತಿಗಳಿಗೆ ಕನಕನಾಯಕನ ಯೋಗ್ಯತೆ ಮುಂದಾಗಿ ತಿಳಿಯಲಾಗದೆ—ತವಿಗೆ ಎಂತಹ ಮಂತ್ರವೋ ಎಂದು ತುಚ್ಛೀಕಾರ ಮಾಡಿ ಕೋಣನ ಮಂತ್ರವೇ ನಿನಗೆ ತಕ್ಕುದಾದುದು ಎಂದು ಹೇಳಿದರು. ಗುರುವೆಂದು ಪೂಜ್ಯ ಭಾವದಿಂದಿದ್ದ ಕನಕನಾಯಕ ಕೋಣನ ಮಂತ್ರ ಜಪಿಸುತ್ತ ಮಠದ ಹೊರ ಭಾಗದಲ್ಲಿ ಕುಳಿತೇ ಬಿಟ್ಟ. ಮಠದಲ್ಲಿದ್ದವರೆಲ್ಲರೂ ಈ ಚೋದ್ಯವನ್ನು ಕಂಡು, ಕನಕನ ಮೂಢತೆ ಎಂದು ಕೊಂಡು ತಮಾಷೆ ಮಾಡ ತೊಡಗಿದರು.

ಮಠದ ಹೊರಾಂಗಣದಲ್ಲಿ ದೊಡ್ಡ ಬಂಡೆಯೊಂದು ಇದ್ದುದರಿಂದ ಅಲ್ಲಿ ಯಾವತ್ತೂ ಅಭಿವೃದ್ಧಿ ಮಾಡಲು ಆತಂಕವಿತ್ತು. ಕನಕನು ಕೋಣನ ಮಂತ್ರ ಜಪಿಸಿದುದರ ಫಲವಾಗಿ ಯಮ ಧರ್ಮರಾಜನ ವಾಹನವಾದ ಕೋಣವೇ ಬಂದು ಆ ಬಂಡೆಯನ್ನು ಬೇರೆಡೆಗೆ ಎತ್ತಿ ಬಿಸುಟು ಕನಕ ನಾಯಕನ ಪ್ರಭಾವಕ್ಕೆ ಕಾರಣಮಾಡಿ ಕೊಟ್ಟಿತು.

ಶ್ರೀ ವ್ಯಾಸರಾಯ ಯತಿಗಳಿಗೆ ಈ ಘಟನೆಯಿಂದ ಜ್ಞಾನೋದಯವಾಯಿತು. ಆವರು ಕನಕನ ಯೋಗ್ಯತೆ ತಿಳಿದುಕೊಂಡರು. ಹೀನ ಜಾತಿಯವನಾದುದರಿಂದ ಆತನಿಗೆ ಮಠದ ಪೂಜಾ ಕಾಲದಲ್ಲಿ ನಗಾರಿ ಬಾರಿಸುವ ಕೆಲಸವನ್ನಷ್ಟೆ ಕೊಟ್ಟರು.

ಕನಕನಾಯಕನ ನಿಜವಾದ ಭಕ್ತಿ ಕಂಡು, ಶ್ರೀ ವ್ಯಾಸರಾಯರು 'ಕನಕ', ತೀರ್ಥಯಾತ್ರೆ ಮಾಡಿ ಪುಣ್ಯ ಸಂಪಾದಿಸು. ಉಡುಪಿಗೂ ಹೋಗಿ ಶ್ರೀ ಕೃಷ್ಣನ ದರ್ಶನ ಮಾಡಿ ಬಾ" ಎಂದು ಅಪ್ಪಣೆ ಕೊಡಿಸಿದರು.

ಉಡುಪಿಯಲ್ಲಿ ಆಗ ಸೋದೇ ಮಠದ ಶ್ರೀ ವಾದಿರಾಜ ತೀರ್ಥರು ಪರ್ಯಾಯ ನಡೆಸುತ್ತಿದ್ದರು. ಹಲವು ತೀರ್ಥ ನಗರಗಳನ್ನು ದರ್ಶನ ಮಾಡಿ ಉಡುಪಿಗೆ ಬಂದ ಕನಕ.

ಆದರೆ ಉಡುಪಿಯಲ್ಲಿ ನಿರೀಕ್ಷಿಸಿದಷ್ಟು ಶ್ರೀ ಕೃಷ್ಣನ ದರ್ಶನವಾಗಲಿಲ್ಲ. ಆಗಾಗಲೇ ಕನಕನಾಯಕ ಹಲವು ಪದ ರಚಿಸಿದ್ದು ಉಡುಪಿಯಲ್ಲಿ ಆದ ಅನುಭವದಿಂದ ಇನ್ನೂ ಹಲವು ಪದಗಳನ್ನು ರಚಿಸಿದನು.

ಅಂದಿನ ಕಾಲದಲ್ಲಿ ಉಡುಪಿ ಕೃಷ್ಣನ ದರ್ಶನವಾಗಬೇಕಾದರೆ ಒಳಹೊಕ್ಕು ನೋಡಬೇಕಿತ್ತು. ಅದರಲ್ಲೂ ಸಾಮಾನ್ಯ ಕುರುಬನಿಗೆ ಮತ್ತು ಹರಿಭಕ್ತನಿಗೆ ಒಂದೇ ಸವನೆ ಪ್ರವೇಶ ಸಿಗುವುದು ದುರ್ಲಭವಾಗಿತ್ತು.

ದಷ್ಟಪುಷ್ಟವಾದ ದೇಹ, ಮೋರಿ ತುಂಬಾ ಗಡ್ಡ, ಒಂದು ಕಂಬಳಿ, ಒಂದು ತಂಬೂರಿ ಇವಿಷ್ಟು ಕನಕನ ನಿಜರೂಪ ದರ್ಶನ. ಹಾಗಾಗಿ ಈತ ಯಾವ ಜಾತಿಯವನೆಂದು ತಿಳಿಯುವುದೂ ಕಷ್ಟವಾಗಿತ್ತು.

ಶ್ರೀಕೃಷ್ಣನ ದರ್ಶನ ಭಾಗ್ಯವಿಲ್ಲದೆ ಖಿನ್ನನಾದ ಕನಕ ನಾಯಕ, ಆತನ ದರ್ಶನವಾಗದೆ ಉಡುಪಿ ಬಿಡಲಾರೆ ಎಂದು ಹಟತೊಟ್ಟು ಹೊಟ್ಟೆ ಬಟ್ಟೆಗಿಲ್ಲದೆ ಉಪವಾಸ ಬಿದ್ದು ಶ್ರೀಕೃಷ್ಣ ಮಠದ ಹಿಂದುಗಡೆ ಇರಲು, ಶ್ರೀಕೃಷ್ಣ ತನ್ನ ಆಭರಣಗಳನ್ನು, ಪ್ರತಿದಿನವೆಂಬಂತೆ ಒಂದೊಂದನ್ನೆ, ಕನಕನಿಗೆ ಕೊಟ್ಟು, ಚಿನ್ನ ಭಂಡಾರಿಯಾಗಿದ್ದ ನಾರಾಯಣನಲ್ಲಿ ಕೊಟ್ಟು ಹಣ ಪಡೆದು ಸುಖವಾಗಿರು ಎನ್ನುತ್ತಿದ್ದ.

ಕನಕನಾಯಕನು ಕೂಡಾ ಹಾಗೆ ಮಾಡುತ್ತಿದ್ದ. ಇತ್ತ ದೇವರ ಆಭರಣಗಳು ಕಳವಾದ್ದರಿಂದ ಶೋಧಿಸ ಹೊರಟಾಗ ಕನಕನೇ ಆಭರಣಗಳ ಕಳ್ಳ ಎಂದು ತಿಳಿದುಕೊಂಡು ಆತನನ್ನು ಆ ಕಾಲದ ಕ್ರಮದಂತೆ ಮರಕ್ಕೆ ಕಟ್ಟಿ ಹಾಕಿ ಛಡಿ ಏಟು ಕೊಟ್ಟರು. ಪ್ರಜ್ಞೆ ತಪ್ಪಿದ ಕನಕ ಕೃಷ್ಣ ಧ್ಯಾನದಲ್ಲೆ ಮಲಗಿದ್ದ.

ಇದನ್ನು ಕಂಡು ಶ್ರೀಕೃಷ್ಣ ಪಡುದಿಕ್ಕಿನಿಂದ ಹೊರಳಿಸಿ ಕನಕನ ಬೇನೆಯನ್ನು ಗಣಪಡಿಸಿ ಪಡಗಡೆ ಮುಖ ಮಾಡಿ ನಿಂತು ಕನಕನನ್ನು ನೋಡುತ್ತಾ ನಿಂತ.

ಮಾರುದಿನ ಯಥಾಪ್ರಕಾರ ಪೂಜೆಗೆ ಬ್ರಾಹ್ಮಣರು ಬಂದಾಗ ಪಡು ದಿಕ್ಕಿನಲ್ಲಿ ಕನ್ನ ಹಾಕಿರುವುದನ್ನು ಕಂಡು ಹೌಹಾರಿದರು.

ಆದರೆ ಶ್ರೀ ಮಧ್ವಾಚಾರ್ಯ ಪ್ರತಿಷ್ಠಿತ ಕೃಷ್ಣ ವಿಗ್ರಹವು ಪಡುದಿಕ್ಕಿಗೆ ಮುಖಮಾಡಿರುವುದನ್ನು ಕಂಡು ಶ್ರೀ ವಾದಿರಾಜ ಯತೀಶ್ವರಾದಿಯಾಗಿ ಎಲ್ಲರೂ ವಿಸ್ಮಿತರಾದರು.

ಜ್ಞಾನಿಗಳಾದ ಶ್ರೀ ವಾದಿರಾಜರು ಕನಕನ ಯೋಗ್ಯತೆಯನ್ನು ಅರಿತು ಅಂದಿನಿಂದ ಕನಕನಿಗೆ ಕನಕದಾಸ ಎಂದು ಹೆಸರಿಟ್ಟು ಆತನಿಗೆ ಶ್ರೀ ದೇವರ ತೀರ್ಥ ಪ್ರಸಾದ ಕೊಟ್ಟು ಆಮೇಲೆ ಉಳಿದವರಿಗೆ ಹಂಚುತ್ತಿದ್ದರು.

ಇಂತಹ ಸಂದರ್ಭದಲ್ಲಿ ಕನಕದಾಸರ ಮಹಾತ್ಮೆಯನ್ನು ಜನರ ಮನದಲ್ಲಿ ಬಿಚ್ಚು ಎಬ್ಬಿಸುವರಿಗೆ ಗೊತ್ತು ಮಾಡಲು ಅನೇಕ ಪವಾಡ ಮಾಡಿ ತೋರಿಸಿದರು. ಕನಕ ದಾಸನಿಂದಾಗಿಯೇ ಇಂದಿಗೂ ನಾವು ಶ್ರೀ ಕೃಷ್ಣ ದೇವಾಲಯದ ಪಡು ದಿಕ್ಕಿನಲ್ಲಿರುವ ಕಿಂಡಿಯನ್ನು ಕನಕನ ಕಿಂಡಿ ಎಂದು ಕರೆಯುತ್ತೇವೆ. ಪರ್ಯಾಯಕ್ಕೆ ಒದಗಿದ ಸ್ವಾಮಿಗಳು ತಾವು ಪರ್ಯಾಯಾಧಿಕಾರವನ್ನು ಪಡೆಯುವ ಮೊದಲು ಈ ಕಿಂಡಿಯಿಂದಲೇ ದೂಳಿದರ್ಶನ ಪಡೆದು ಒಳಗೆ ಹೋಗಬೇಕು.

ಇಂತಹ ಮಹಾನುಭಾವನ ಈ ಚರಿತ್ರೆ ಶತಮಾನೋತ್ಸವದ ಸಂದರ್ಭ ಕನಕನಕ ಪ್ರಭಾವಕ್ಕೆ ಕಾರಣ ಕರ್ತನಾದ

(ಹನ್ನೆರಡನೇ ಪುಟ ನೋಡಿರಿ)

ಹನಿಯಾಗಿ ಒಸರುವ ಈ ಝರಿಯು
ಹರಿಯುವ ಮಹಾನದಿಯಾಗುವ ತನಕ
ಯಾರೊಬ್ಬರೂ ಆ ಹನಿಗಳನ್ನು ಲೆಕ್ಕಿಸಲಿಲ್ಲ...........

25 ಪೈಸೆಯ ಚಿಕ್ಕ ನಾಣ್ಯವನ್ನು ಯಾರು ಲೆಕ್ಕಿಸುವರು? ಎಷ್ಟೋ ಬಾರಿ ಅದು ಕಳೆದು ಹೋಗುವುದುಂಟು. ಒಂದು ದಿನ, ಹತ್ತು ವರ್ಷ ವಯಸ್ಸಿನ ಪುಟ್ಟ ಬಾಲನು ಈ ಬಗ್ಗೆ ಏನಾದರೂ ಮಾಡಬೇಕೆಂದು ನಿಶ್ಚಯಿಸಿದನು. ತಾಯಿಯೊಡನೆ ಅವನು, ಉಳಿತಾಯಕ್ಕಾಗಿ ದಿನಾಲು 25 ಪೈಸೆ ಕೊಡಬೇಕೆಂದು ಕೇಳಿದನು, ಆಕೆ ಒಪ್ಪಿದಳು. ಈ ರೀತಿ ಪುಟ್ಟ ಬಾಲನು ನಮ್ಮ ಪಿಗ್ಮಿ ಠೇವಣಿ ಸಂಯೋಜನೆಯ ಅತೀ ಎಳೆಯ ಸದಸ್ಯನಾದನು. ಪ್ರತಿ ದಿನವೂ ನಮ್ಮ ಪಿಗ್ಮಿ ಠೇವಣಿಯ ಸಂಗ್ರಾಹಕನು ಅವನ ಮನೆಯನ್ನು ತಾನಾಗಿಯೇ ಸಂದರ್ಶಿಸಿ 25 ಪೈಸೆಯನ್ನು ಪಡೆಯುತ್ತಲಿದ್ದನು. ಏಳು ವರ್ಷಗಳು ಬಹು ಬೇಗನೇ ಉರುಳಿದವು. ಬಾಲನು ಈಗ ಚಿಕ್ಕವನಾಗಿ ಉಳಿದಿಲ್ಲ. ಹಾಗೆಯೇ ಅವನ 25 ಪೈಸೆ ಕೂಡಾ. ಅವುಗಳು ಅವನೊಂದಿಗೇ ಬೆಳೆದಿವೆ..... 700 ರೂಪಾಯಿ ದೊಡ್ಡ ಮೊತ್ತವಾಗಿದೆ. ಬಾಲನು ಈಗ ಒಂದು ಹೊಸ ವಾಚು, ಒಂದು ಹೊಸ ಸೈಕಲು ತೆಗೆದುಕೊಳ್ಳಬಹುದು—ಅಥವಾ ತನ್ನ ಕಾಲೇಜು ವಿದ್ಯಾಭ್ಯಾಸಕ್ಕೆ ಆ ಹಣವನ್ನು ಉಪಯೋಗಿಸಬಹುದು. ನೀವೆಲ್ಲ ಪುಟ್ಟ ಗೆಳೆಯರು ಅವನಂತೆಯೇ ಆಗುವಿರಿ ತಾನೇ?

FAITHFUL SB FRIENDLY
ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಶಾಖೆಗಳು: 200ರಕ್ಕೂ ಮಿಕ್ಕಿವೆ.
ಚಲಾವಣಾ ಸಂಪತ್ತು: ರೂ. 70 ಕೋಟಿಗೂ ಮಿಕ್ಕಿದೆ.

— ನಮ್ಮಲ್ಲಿ ಖಾತೆ ತೆರೆಯಲು ನಿಮ್ಮಲ್ಲಿರುವ ಯಾವ ಮೊತ್ತವೂ ಚಿಕ್ಕದಲ್ಲ —

ಚೈನಿ ಕಮ್ಯೂನಿಸ್ಟರಿಗೆ ಅರ್ಧ-ಚಂದ್ರ ಪ್ರಯೋಗ

ಬರೆದವರು
ಶ್ರೀ ಶಿವಶಂಕರ

ಚೈನಿ ಕಮ್ಯೂನಿಸ್ಟರಿಗೆ ಅರ್ಧ-ಚಂದ್ರ ಪ್ರಯೋಗವೇ?— ಎಲ್ಲಿ? ಯಾರಿಂದ? ಯಾವಾಗ?... ಹೇಗೆ? ... ಭಾರತದ ನೈಜ ರಾಷ್ಟ್ರೀಯರ ಮನಸ್ಸಿನಲ್ಲಿ ಪ್ರಶ್ನೆಗಳ ಮೇಲೆ ಪ್ರಶ್ನೆ ಎದ್ದಾವು. ಭಾರತದ ಪ್ರಧಾನಿ, ರಕ್ಷಣಾ ಮಂತ್ರಿ, ಅಂತರಾಷ್ಟ್ರೀಯ ಸಂಪರ್ಕ ಶಾಖಾ ಮಂತ್ರಿ.... ಅಧಿಕಾರದ ಪಟ್ಟದಲ್ಲಿ ಆಸೀನರಾಗಿದ್ದು ಒಂದಿಂಚಿನ [ಅಂಗುಲ ಕೂಡಾ ಅಲ್ಲ!] ಮಾತಾಡುತ್ತಿದ್ದಾರೆ. ಆಕ್ರಮಣಗಾರರಿಗೆ ಒಂದಿಂಚನ್ನೂ ಬಿಟ್ಟು ಕೊಡಲಾರೆವೆಂದವರು ಮೊಳ ಉದ್ದ ಭಾಷಣ ಕೊಡುತ್ತಿದ್ದಾರೆ. ಆಕ್ರಮಣಗಾರರಾದರೋ ಒಂದಿಂಚೂ ಹಿಂದಕ್ಕೆ ಹೋಗಿರುವದಿಲ್ಲ. ಹೌದು. ಆದರೂ ಒಂದಿಂಚು ಮುಂದಕ್ಕೆ ಬಂದಿರುವದಿಲ್ಲ. ಅವರು ಕಿಲೋ ಮೀಟರುಗಟ್ಲೆ ಮುಂದಕ್ಕೆ ಬಂದಿದ್ದಾರೆ, ಅಷ್ಟೇ. ಹಾಗಾದರೆ ಮತ್ತಾರು ಅರ್ಧ ಚಂದ್ರ ಪ್ರಯೋಗ ಮಾಡಿದವರು?

ನವಂಬರ ತಿಂಗಳಿನ ಸಂಚಿಕೆಗಳಲ್ಲಿ 'ನವಯುಗ'ವು ಅದೆಂತು ಸಿಂಹಳದ ಮೇಲೆ ಹಿಂದಿನಿಂದಲೂ ಚೈನಾ ಗೃಧ್ರ ದೃಷ್ಟಿಯನ್ನು ಬೀರಿತ್ತೆಂಬುದನ್ನು ವಾಚಕರಿಗೆ ಸ್ಪಷ್ಟವಾಗಿ ಸೂಚಿಸಿತ್ತು. ಆ ಲೇಖನಗಳಲ್ಲಿ ಸಿಂಹಳದ ರಾಜನನ್ನು ಚೈನಿ ಹಡಗು ಕಳ್ಳರು ಕದ್ದೊಯ್ದಿರುವದನ್ನು ವಿವರಿಸಲಾಗಿರುತ್ತದೆ, ಅಲ್ಲದೆ ಆಗಿನ ಪ್ರಧಾನಿ ಸಿರಿಮಾವೋರನ್ನು ಮಾವನ ಪಡೆ ಕದ್ದೊಯ್ದೀತೇ ಎಂಬ ಪ್ರಶ್ನೆಯನ್ನೂ ಕೇಳಲಾಗಿದ್ದು, ಸುಸಂದರ್ಭ ಸಿಕ್ಕಿದಲ್ಲಿ ಚೈನಿ ಕಮ್ಯೂನಿಸ್ಟರು ಇದಕ್ಕೂ ಹೇಸಲಾರರೆಂದು ತಿಳಿಸಿ, ಸದ್ಯ ದೈಹಿಕವಾಗಿ ಅಂತಹ ಕೆಲಸಕ್ಕೆ ಅವರು ಕೈಹಾಕಲಾರರೆಂದೂ ಮಾನಸಿಕ ಪರಿವರ್ತನೆಗೆನೇ ಅವರು ಅತಿ ಮುಖ್ಯತ್ವವನ್ನು ಕೊಡುವರೆಂದೂ ವಿವರಿಸಲಾಗಿತ್ತು. ಚೈನಿ ಕಮ್ಯೂನಿಸ್ಟರ ಚಕ್ಕಂದದಾಟಕ್ಕೆ ಮೋಸಹೋಗಿದ್ದ ಶ್ರೀಮತಿ ಸಿರಿಮಾವೋ ಸ್ವಲ್ಪ ಮಟ್ಟಿಗೆ ಚೈನಿ ಚಪ್ಪಾಳೆಗೆ ಸರಿಯಾಗಿ ಹೆಜ್ಜೆ ಹಾಕಿದ್ದರು. ಅವರು ಭಾರತ-ಚೈನಾ ಒಪ್ಪಂದದ ಹೇರಿಕೆಯಲ್ಲೂ ಚೈನಿ ಪರವಾಗಿಯೇ ವಾದಿಸಿದ್ದರು. ಆದರೆ ಅದನ್ನು ಭಾರತ ಕಹಿಗುಳಿಗೆಯಂತೆ ನುಂಗಿಕೊಂಡಿತ್ತು. "ನವಯುಗ" ಅದನ್ನು ಆವಾಗಲೇ ಬಯಲಿಗೆಳೆದಿತ್ತು.

ಜನತೆ ಅವನ್ನೆಂತು ಸಹಿಸಿಯಾರು? ಕಣ್ಣು ತೆರೆದು ನೋಡಲು ಬರುವವರಿಗೆ ಎಲ್ಲವೂ ಎದುರಿನಲ್ಲಿ ಸ್ಪಷ್ಟವಾಗಿದೆ. ಅಂತೆಯೇ ಅವರು ಚುನಾವಣೆಯಲ್ಲಿ ಚೈನಿ ಕಮ್ಯೂನಿಸ್ಟರಿಗೆ ಅರ್ಧ ಚಂದ್ರ ಪ್ರಯೋಗ ಮಾಡಿದರು.

ಎಂದಿನಂತೆ, ಕಮ್ಯೂನಿಸ್ಟರತ್ತ ಒಲವು ತೋರಿಸುತ್ತಿದ್ದ ಶ್ರೀಮತಿ ಸಿರಿಮಾವೋ ಚುನಾವಣೆಯ ಸಮಯದಲ್ಲೂ ಕಮ್ಯೂನಿಸ್ಟರಿಗೆ ಸ್ನೇಹದ ಕೈಯನ್ನು ಕೊಟ್ಟಿದ್ದರು. ಕೇರಳದ ಚುನಾವಣೆಯ ಸಮಯದಲ್ಲಿ ಸಿಲೋನಿನ ಮೂಲಕ ಭಾರೀ ಪ್ರಚಾರ ಪತ್ರಿಕೆಗಳು ಬಂದಿದ್ದವು. ಅದೇ ತಂತ್ರವನ್ನು ಅವರು ಸಿಂಹಳದಲ್ಲೂ ಆಡಿದರು. ಅದಕ್ಕೆ ಪ್ರತಿಫಲ ಬಹು ಶೀಘ್ರ ಲಭಿಸಿತು.

ದೂತ ನಿವಾಸಗಳನ್ನು ಅಂತರಾಷ್ಟ್ರೀಯ ಸಂಪರ್ಕಕ್ಕಾಗಿ ಕಮ್ಯೂನಿಸ್ಟರು ಉಪಯೋಗಿಸಿಕೊಳ್ಳದೆ, ತಮ್ಮ ಕಾರುಬಾರಿನ ಕಾರ್ಯಾಲಯವನ್ನಾಗಿ ಮಾರ್ಪಡಿಸಿಕೊಳ್ಳುತ್ತಾರೆ. ಇದಕ್ಕೆ ಯಾವ ಕಮ್ಯೂನಿಸ್ಟ್ ದೇಶವೂ ಅಪವಾದವಾಗಿರುವದಿಲ್ಲ. ಈ ಗತಿಯಲ್ಲಿ ಚೈನಾ ಒಂದು ಹೆಜ್ಜೆ ಮುಂದೆ ಹೋಗಿರಬಹುದು, ಅಷ್ಟೆ. ಕಮ್ಯೂನಿಸ್ಟ್ ಚೈನಾದ ದೂತ ನಿವಾಸದಿಂದ ವಿಮಾನ ನಿಲ್ದಾಣಕ್ಕನೇ ವಾಹನಗಳು ಹೋಗುತ್ತಿದ್ದು, ಚೈನಾದಿಂದ (ಹಾಗೂ ಇತರ ದೇಶಗಳಿಂದ) ಬಂದ ಕಮ್ಯೂನಿಸ್ಟರನ್ನು ನೇರ ದೂತ ನಿವಾಸಕ್ಕೇನೇ ಕರೆದುಕೊಂಡು ಹೋಗಲಾಗುತ್ತಿತ್ತು. ದಾರಿಯಲ್ಲಿ ಸಿಕ್ಕಿದರೆ ತಾನೇ ಶೋಧನೆ? ಈ ರೀತಿ ಶ್ರೀಲಂಕೆಯವರ ಕಣ್ಣಿಗೆ ಮಣ್ಣೆರಚುತ್ತಿದ್ದರು ಚೈನಿ ಕಮ್ಯೂನಿಸ್ಟರು. ಈಗ ಅವರ ಬೇಳೆ ಬೇಯುವಂತಿಲ್ಲ. ಸಕಾಲದಲ್ಲಿ ಅಲ್ಲಿಯ ಜನತೆ ಎಚ್ಚತ್ತಿದ್ದಾರೆನ್ನಬಹುದು. ಸರಕಾರವೂ ಅವರ ಸಂಖ್ಯೆಯ ಮೇಲೆ ನಿರ್ಬಂಧ ಹಾಕಿದ್ದು, ಹೆಚ್ಚಿನವರನ್ನು ಆವಾಗಲೇ ಹಿಂದಕ್ಕಟ್ಟಲಾಗಿರುತ್ತದೆ.

ಇತರೆಡೆಗಳಲ್ಲಿ ಒಡಕಿನ ವಿಷ ಬೀಜವನ್ನು ಬಿತ್ತಿ, ಆ ವಿದ್ಯೆಯಲ್ಲಿ, ಪಂಡಿತರೆನ್ನಿಸಿಕೊಂಡಿರುವ ಚೈನಿ ಕಮ್ಯೂನಿಸ್ಟರು ಸಿಂಹಳದಲ್ಲೂ ಆ ವಿಷ ಬೀಜವನ್ನು ಬಿತ್ತಿದ್ದರು. ಇತರೆಡೆಗಳಲ್ಲಿ ಉತ್ತರ—ದಕ್ಷಿಣವೆಂಬ 'ಧ್ರುವ ಮುಖ'ಗಳನ್ನುಂಟು ಮಾಡಿದ್ದ ಕಮ್ಯೂನಿಸ್ಟರು ಸಿಂಹಳದಲ್ಲಿ ಸಿಂಹಳೀಯರು ಮತ್ತು ತಮಿಳರೆಂಬ ಭಿನ್ನತೆಯ ವಿಷ ಬೀಜವನ್ನು ಬಿತ್ತಿದ್ದರು. ನಿಜವಾಗಿ ಅವರೊಳಗೆ ವ್ಯತ್ಯಾಸವಿದೆಯೇ? ಸಿಂಹಳೀಯರು ಮಾತ್ರವಲ್ಲ ತಮಿಳರೂ (ಅವರ ಭಾಷೆಯಲ್ಲೇ ಹೇಳುವದಿದ್ದಲ್ಲಿ, ಇಲ್ಲದಿದ್ದಲ್ಲಿ ಭಾರತೀಯರ) ಆ ಬಲೆಯಲ್ಲಿ ಬಿದ್ದು ಬಿಟ್ಟರು. ಈ ಎರಡು ಪಂಗಡಗಳನ್ನು ಕಮ್ಯೂನಿಸ್ಟರು ಎತ್ತಿ ಕಟ್ಟಿದರು. ಸಿಂಹಳವನ್ನು ತಮಿಳರು ಮುತ್ತಿ ಬಿಡುತ್ತಾರೆಂದು ಸಿಂಹಳೀಯರ ನಡುವೆ ಅವರು ಅಪಪ್ರಚಾರ ನಡೆಸಿದರು. ತನಿತಮಿಳೆಮು (ಪ್ರತ್ಯೇಕ ತಮಿಳು) ತಮಿಳರ ನಡುವೆ ಅಪಪ್ರಚಾರ ನಡೆಸಿದರು. ಶ್ರೀ ಲಂಕೆಯಲ್ಲಿ ಅನ್ಯ ಭಾಷೆ ಅಂಗ್ಲೇಯ ಭಾಷೆಯನ್ನು ಅಧಿಕಾರ ಪಟ್ಟದಿಂದ ಕೆಳಗಿಳಿಸಿದಾಕ್ಷಣ, ತಮಿಳರನ್ನು ಎತ್ತಿಕಟ್ಟಿ ಕಮ್ಯೂನಿಸ್ಟರು ಗಲಾಟೆ ಮಾಡಿದರು. ನಮ್ಮ ಕಣ್ಣೆದುರಿನಲ್ಲೇ ತಮಿಳು ನಾಡಿನಲ್ಲಿ ಅವರೇನು ಮಾಡಿದ್ದರೆಂಬುದನ್ನು ಮರೆಯಲು ಸಾಧ್ಯವಿಲ್ಲ. ಹಾಗೆಯೇ ಶ್ರೀ ಲಂಕೆಯಲ್ಲಿ ಕೂಡಾ. ಅದರ ಕಹಿ ಫಲವನ್ನು ಭಾರತೀಯರು ಅನುಭವಿಸಬೇಕಾಯಿತು. ಇತ್ತ ಜನತೆಯ ಪಡುವ ಭಾಷಾ ಬಡಬಾಗ್ನಿ ಭುಗಿಲೇಳುವಂತೆ ಕಮ್ಯೂನಿಸ್ಟರು ಕರ್ಪೂರ ಸುಟ್ಟಲ್ಲಿ, ಅತ್ತ ಪ್ರಧಾನಿ ಸಿರಿಮಾವೋರವರೊಡನೆ ಸಿಹಿಮಾತುಗಳನ್ನಾಡಿ ಭಾರತೀಯರನ್ನು ಬಡಿದಟ್ಟಲು ಪ್ರೋತ್ಸಾಹಿಸಿದರು. ಮಾವೋನ ಮಾತು ಸಿರಿಮಾವೋಗೆ ಸಿಹಿಯಾಗಿ ಕಂಡು ಬಂತು. ಭಾರತದ ಪ್ರಧಾನಿ ಶ್ರೀ ಲಾಲಬಹದೂರ ಜೀಯವರು ಕೂಡಾ ಹೆಣ್ಣಿನ ಕರುಳೆಂದು ಹಾಯಾಗಿ ಅವರ ಕರಾರಿಗೆ ಕೈ ಎತ್ತಿ ಸಹಿ ಹಾಕಿದರು. ಇಕ್ಕೆಲದ ಜನತೆಗೆ ಇದರ ಅರಿವಾದೀತೇ?

ಏನೋ ಸ್ವಲ್ಪ ಮಟ್ಟಿಗೆ ಅಲ್ಲಿಯ ಜನತೆ ಎಚ್ಚತ್ತಿದ್ದಾರೆನ್ನಲೇ ಬೇಕು ಕಮ್ಯೂನಿಸ್ಟರಿಗೆ—ಪರಿ ಕಮ್ಯೂನಿಸ್ಟರಿಗೆ ಹಾಗೂ ಕಮ್ಯೂನಿಸ್ಟ ವಗೈರೆಗಳಿಗೆ ಅಲ್ಲಿ ಅರ್ಧ ಚಂದ್ರ ಪ್ರಯೋಗವಾಯಿತು. ಆದರೆ ಆದಷ್ಟರಿಂದಲೇ ಅವರನ್ನು ಪೂರ್ಣ ನಾಶಮಾಡಲು ಸಾಧ್ಯವಿಲ್ಲ. ತನ್ನ ಕಾಲಿಗೆ ಚುಚ್ಚಿದ ಮುಳ್ಳಿನ ಗಿಡವನ್ನು ಕಿತ್ತೆಸೆದು ಬಿಟ್ಟು ಚಾಣಕ್ಯನು ಮುಂದಕ್ಕೆ ಹೋಗಲಿಲ್ಲ. ಅದರ ಬೇರುಗಳನ್ನು ಸುಟ್ಟು ಹಾಕಿದನು. ಅಲ್ಲದೆ ಅದಿನ್ನೆಂದಿಗೂ ಚಿಗುರದಂತೆ ಅಮ್ಲವನ್ನು ಸುರಿದು ಬಿಟ್ಟನು. ಕಮ್ಯೂನಿಸ್ಟ ಮುಳ್ಳಿನ ಗಿಡವನ್ನು ಹಾಗೆನೇ, ಕೇರಳದಲ್ಲೇ, ಸಿಂಹಳದಲ್ಲೇ ಅಧಿಕಾರ ಗದ್ದುಗೆಯಿಂದ ಕೆಳಗಿಳಿಸಿದರೆ ಸಾಲದು. ಅವರ ಬುಡವನ್ನು ಕತ್ತರಿಸಬೇಕು. ಈಗಿನ ಸಿಂಹಳದ ಸರಕಾರ ಆ ಪಥದಲ್ಲಿ ಮುನ್ನಡೆದೀತೆ? ಇಲ್ಲದಿದ್ದಲ್ಲಿ ಅವರು ಅದ್ಯಾವದಾದರೊಂದು ವೇಷ ಹಾಕಿಕೊಂಡೆ ಬರುತ್ತಾರೆ. ವೇಷ ಬದಲಾಯಿಸುವದರಲ್ಲಿ ಕಮ್ಯೂನಿಸ್ಟರು ಬಲು ಚುರುಕು. ಅದನ್ನು ನಾವು ಭಾರತದಲ್ಲೇ ಕಂಡಿದ್ದೇವೆ. ಭಾರತೀಯ ಜನ ಸಂಘವನ್ನು ಸೋಲಿಸಲು ಕಮ್ಯೂನಿಸ್ಟ ಪಕ್ಷವು ಕಾಂಗ್ರೆಸ್ಸಿನೊಂದಿಗೆ ಸೇರುತ್ತದೆ. ಕಾಂಗ್ರೆಸ್ಸನ್ನೆದುರಿಸಲು ಅದು ಮುಸ್ಲಿಂ ಲೀಗಿನೊಂದಿಗೂ ಸೇರುತ್ತದೆ. ಅದು ಸ್ವತಂತ್ರ ಪಾರ್ಟಿಯೊಂದಿಗೂ ಸೇರುತ್ತದೆ. ಕಾಂಗ್ರೆಸ್ಸಿನೊಳಗೂ ಕಮ್ಯೂನಿಸ್ಟರು ವೇಷಮರೆಸಿಕೊಂಡು ಇದ್ದೇ ಇದ್ದಾರಲ್ಲಾ!

ಶ್ರೀ ಲಂಕೆಯಲ್ಲೂ ಹಾಗೆನೇ. ಅವರಲ್ಲಿ ಇಂದ್ರಜಿತುವಿನ ವೇಷವನ್ನೂ ಹಾಕುತ್ತಾರೆ, ಮಾರೀಚನ ವೇಷಹಾಕಿಕೊಂಡಿರುತ್ತಾರೆ. ಶೂರ್ಪನಖಿಯ ವೇಷಹಾಕಿಕೊಂಡು ಕೇರಳಕ್ಕೂ ಬರುತ್ತಾರೆ. ಶ್ರೀಮಾನ್ ದಡ್ಲಿ ಸೇನಾನಾಯಕೆಯವರು ಇದನ್ನೆಲ್ಲಾ ತಿಳಿಯದ ದಡ್ಡರೇನಲ್ಲ. ಆದರೂ ಭಾರತೀಯ ಸರಕಾರ ಹೇಗೆ ದಾಳವನ್ನು ಹಾಕುತ್ತದೆನ್ನುವದನ್ನು ಅವರು ನೋಡುತ್ತಿರಬೇಕಾಗುತ್ತದೆ.

ಸಿಂಹಳದ ಪ್ರಧಾನಿ ಶ್ರೀ ಡಡ್ಲಿ ಸೇನಾನಾಯಕೆಯವರೀಗ ಅಂತಹ ವೇಷಗಳನ್ನೆದುರಿಸ ಬೇಕಾಗುತ್ತದೆ. ಅಲ್ಲಿಯ ಕಮ್ಯೂನಿಸ್ಟ ಪಕ್ಷ, ಲಂಕಾ ಸಮ ಸಮಾಜ ಪಾರ್ಟಿ, ಮಾರ್ಕ್ಸ್ ಪಾರ್ಟಿ, ಮುಂತಾದ ಸಮತಾವಾದಿ ಪಕ್ಷಗಳೂ ಹಿಂದೆ ಅಧಿಕಾರದಲ್ಲಿದ್ದ ಶ್ರೀಮತಿ ಸಿರಿಮಾವೋ ಹಾಗೂ ಅವರ ಪಕ್ಷ ಹೀಗೆ ವಿರೋಧಿ ಪಕ್ಷಗಳೆಲ್ಲವೂ ಶ್ರೀಮತಿ ಸಿರಿಮಾವೋರವರ ನೇತೃತ್ವದಲ್ಲಿ ಶ್ರೀಮಾನ್ ಡಡ್ಲಿ ಸೇನಾನಾಯಕೆಯವರನ್ನೆದುರಿಸುತ್ತಿದ್ದಾರೆ. ಶ್ರೀ ಡಡ್ಲಿಯವರಾದರೋ ಅಧಿಕ ಬಲದಿಂದ ಅಧಿಕಾರ ಪಟ್ಟದಲ್ಲಿ ಕುಳಿತುಕೊಂಡಿರುವದಿಲ್ಲ. ಅವರು ಬಹಳ ಜಾಗ್ರತೆಯಿಂದ ವರ್ತಿಸಬೇಕಾಗಿರುತ್ತದೆ. ಕಮ್ಯೂನಿಸ್ಟರಿಗೆ ಸ್ವಲ್ಪ ಕರುಣೆ ತೋರಿಸಿದರೆ ಸಾಕು, ಬೆರಳು ಕೊಟ್ಟರೆ ಕೈ ನುಂಗುವ ಜಾತಿ ಅದು. ಅವರನ್ನು ಸಮಾಧಾನದ ಮಾತುಗಳಿಂದ ಬಗ್ಗಿಸುವುದು ಬಹಳ ಕಷ್ಟ. ಅದರ ಅನುಭವ ಭಾರತೀಯರಿಗೆ ಆಗಿರುತ್ತದೆ. ಸಿಂಹಳ ಹೇಳಿದರೂ ಚೈನಾ ಕೇಳಲಿಲ್ಲ. ನಾಸಿರ್ ಹೇಳಿದಕ್ಕೂ ಸಕಾರ ಸೂಚಿಸಿಲ್ಲವೇ ಮಾವೋ ಮತ್ತಷ್ಟೆ? ಒಂದಿಂಚಿನ ಮಾತಲ್ಲ ಮೈಲುದ್ದದ ಅಥವಾ ಕಿಲೋಮೀಟರುದ್ದದ ಮಾತುಕತೆಗಳಿಗೂ ಒಡಂಬಡುವವರು ಕಮ್ಯೂನಿಸ್ಟರಲ್ಲ. ಆದುದರಿಂದಲೇ ಅವರು ಕರಡಿ, ಡ್ರೇಗನ್ ಮುಂತಾದ ತಕ್ಕ ಚಿಹ್ನೆಗಳನ್ನು ಆರಿಸಿಕೊಂಡಿರುತ್ತಾರೆ. ಅದವರ ಹೃದಯದ ಲಾಂಛನವಿದೆ.

(ಹನ್ನೊಂದನೇ ಪುಟ ನೋಡಿರಿ)

ಶ್ರೀ ಧರ್ಮಸ್ಥಳದ ವ್ಯಾಜ್ಯದಲ್ಲಿ ಶ್ರೀ ರತ್ನವರ್ಮ ಹೆಗ್ಗಡೆಯವರಿಗೆ ಪೂರ್ಣ ಜಯವಾಗಿ ಹೈಕೋರ್ಟಿನ ತೀರ್ಮಾನ —

ಶ್ರೀ ಧರ್ಮಸ್ಥಳ ರತ್ನವರ್ಮ ಹೆಗ್ಗಡೆಯವರು ಮತ್ತು ಶ್ರೀಮತಿ ವಿಮಲ ಬಲ್ಲಾಳ್ ಇವರೊಳಗೆ ನಡೆದ ವ್ಯಾಜ್ಯದಲ್ಲಿ ಕೆಳಗಿನ ಕೋರ್ಟಿನಲ್ಲಿ ವಾದಿಗೆ ಗುಣವಾದ ತೀರ್ಪಿನ ಮೇಲೆ, ಹೈಕೋರ್ಟಿನ ಅಪೀಲಿನಲ್ಲಿ ವಾದಿಯು ಶ್ರೀ ರತ್ನವರ್ಮ ಹೆಗ್ಗಡೆಯವರಿಗೆ ಈ ವರೆಗಿನ ಹೈಕೋರ್ಟು ಖರ್ಚು ಮತ್ತು ಕೆಳಗಿನ ಕೋರ್ಟಿನ ಖರ್ಚು ವಗೈರೆಯನ್ನು ಪೂರ್ತಿಯಾಗಿ ಕೊಡುವುದಲ್ಲದೆ, ಶ್ರೀ ರತ್ನವರ್ಮ ಹೆಗ್ಗಡೆಯವರ ಅಧಿಕಾರವು ಸಿಂಧುವೆಂಬುದಾಗಿ ಹೈಕೋರ್ಟಿನ ಜಸ್ಟಿಸ್ ಶ್ರೀ ಕೊಲ್‌ಘಟ್ಟಿ ಮತ್ತು ಜಸ್ಟಿಸ್ ಶ್ರೀ ಗೋವಿಂದ ಭಟ್ಟರು ತಾ. 21-4-65ರಲ್ಲು ತೀರ್ಮಾನ ಮಾಡಿರುತ್ತಾರೆ. ಎಲ್ಲಾ ವಿವರ ಬೇರೆ ಕಡೆ ಕೊಡಲಾಗಿದೆ.

ಸ್ಥಳ ಪರಿಚಯ

ಚಿತ್ರದುರ್ಗ ನೋಡ ಬಯಸುವಿರಾ...?

ಮಾಡಿಸಿದವರು
ಶ್ರೀ ಸ. ನಾರಾಯಣ, ಚಿತ್ರದುರ್ಗ.

ಚಿತ್ರದುರ್ಗ ಎನ್ನುವ ಹೆಸರೇ ಹೇಳುತ್ತದೆ ಚಿತ್ರಗಳನ್ನು ಒಳಗೊಂಡ ಕೋಟೆ ಎಂಬ ಅರ್ಥವನ್ನು. ಕರ್ನಾಟಕದಲ್ಲಿ ಚಿತ್ರದುರ್ಗದ ಹೆಸರನ್ನು ಕೇಳದಿರುವವರು ಅತಿ ವಿರಳ ಎಂದೇ ಹೇಳಬಹುದು. ಇತಿಹಾಸ ಪ್ರಸಿದ್ಧವಾದ ಚಿತ್ರದುರ್ಗದ ಕೋಟೆ ದೇಶ ವಿದೇಶೀಯ ಪ್ರವಾಸಿಗರಿಗರನ್ನು ಆಕರ್ಷಿಸಿರುವಂತಹದು.

ಪುನರ್ ನಿರ್ಮಿತ ಚಿತ್ರದುರ್ಗ ಪಟ್ಟಣ, ಬೆಟ್ಟದ ತಪ್ಪಲಲ್ಲಿಯೇ ಇದೆ. ಇತಿಹಾಸ ಪ್ರಸಿದ್ಧವಾದ ಹಿಂದಿನ ಕೋಟೆ, ಕೊತ್ತಲ ದೇವಾಲಯಾದಿಗಳನ್ನು ಒಳಗೊಂಡ ಪ್ರದೇಶ ಬೆಟ್ಟಗಳ ಮೇಲೆಯೇ ಇದೆ. ಈ ಪ್ರದೇಶ ಮೇಲುದುರ್ಗ ಎಂಬ ಹೆಸರಿನಿಂದ ಚಿರಪರಿಚಿತವಾಗಿದೆ.

ಕರ್ನಾಟಕದ ಕೇಂದ್ರದಲ್ಲಿರುವ ಒಂದೇ ಒಂದು ಮುಖ್ಯ ಸ್ಥಳವೆಂದರೆ ಚಿತ್ರದುರ್ಗ. ಇದು ಜಿಲ್ಲೆಯ ಮುಖ್ಯ ಸ್ಥಳ. ಹಲವಾರು ಪ್ರಮುಖ ಸರ್ಕಾರಿ ಕಛೇರಿಗಳಿವೆ. ಇಲ್ಲಿಯ ಪ್ರೇಕ್ಷಣೀಯ ಸ್ಥಳಗಳೆಂದರೆ ಮೇಲುದುರ್ಗ, ಮುರುಘರಾಜೇಂದ್ರ ಸ್ವಾಮಿಗಳವರ ಮಠ, ಚಂದ್ರವಳ್ಳಿ ಪಾಲು ಪ್ರದೇಶ. ಅಂಕಳೀಮಠದ ಗುಹಾಂತರ ಕೋಣೆಗಳು, ಜೋಗಿ ಮರಡಿ ಎಂದು ಹೇಳಬಹುದು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಈ ಜಿಲ್ಲೆಯ ರಾಷ್ಟ್ರಾಭಿಮಾನಿಗಳು, ಸ್ವಾತಂತ್ರ್ಯಾಭಿಮಾನಿಗಳು ನಡೆಸಿದ ಚಟುವಟಿಕೆಗಳು ಕರ್ನಾಟಕದಲ್ಲೆಲ್ಲಾ ಚಿರಪರಿಚಿತ. ಚಿತ್ರದುರ್ಗದ ಕೀರ್ತಿ ಹಲಬಗೆಯ ಕಾರಣಗಳಿಂದ ಬೆಳೆದು ಉಳಿದಿದೆ.

ಚಿತ್ರದುರ್ಗ ಎನ್ನುವುದು ನವೀನ ಹೆಸರು ಅರ್ಥಾತ್ ಇತ್ತೀಚಿನ ಹೆಸರು. ಈ ಪ್ರದೇಶ ಪುರಾಣ ಪ್ರಸಿದ್ಧವಾದುದೆಂದೂ ಹೇಳಬಹುದು. ಇತಿಹಾಸ ಪ್ರಸಿದ್ಧ ಎನ್ನುವುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳು ದೊರೆಯುತ್ತವೆ.

ಇಂದಿನ ಚಿತ್ರದುರ್ಗದ ಸುತ್ತಲೂ ಆವರಿಸಿರುವ ಗಿರಿಗಳ ಸಾಲು ಮತ್ತು ವನಪ್ರದೇಶ ಹಿಡಿಂಬನ (ಮಹಾಭಾರತ) ಆವಾಸಸ್ಥಾನ. ಆದರಿಂದ ಆ ಕಾಲದಲ್ಲಿ ಹಿಡಿಂಬವನ ಎನ್ನುವ ಹೆಸರು. ಆಂಧ್ರಭೃತ್ಯರ ಕಾಲದಲ್ಲಿ ಚಂದ್ರವಳ್ಳಿ ಪ್ರದೇಶವೆಂದೂ, ಹೊಯ್ಸಳರ ಕಾಲದಲ್ಲಿ ಪೆರಮಾಳೆ ಪುರವೆಂದೂ, ವಿಜಯನಗರದರಸರ ಆಳ್ವಿಕೆಯ ಕಾಲದಲ್ಲಿ ಚಿತ್ರಕಲ್ ದುರ್ಗವೆಂದೂ ಅನಂತರ ಕಡೆಯದಾಗಿ ಟಿಪ್ಪು ಸುಲ್ತಾನನ ಆಡಳಿತಕ್ಕೆ ಒಳಪಟ್ಟಾಗ ಫರ್ರುಕಾಬಾದ್ ಎಂದೂ ಹೆಸರು ಪಡೆದಿತ್ತು.

ಇಂದು ಚಿತ್ರದುರ್ಗ ಬೆಟ್ಟದ ಅಡಿಯಲ್ಲಿದೆ. ಈ ಬೆಟ್ಟಗಳ ಸಾಲು ನೋಡಲು ರಮ್ಯವಷ್ಟೇ ಅಲ್ಲ, ಹಲವಾರು ಚಾರಿತ್ರಿಕ, ಪುರಾಣ ಪ್ರಸಿದ್ಧ ಸ್ಥಳಗಳೆಂದು ಹೆಸರಾಗಿ ಕಂಗೊಳಿಸಿವೆ. ಬೆಟ್ಟದ ಸಾಲಿಗೆ ಜಿನ್ನಾಲಾದ್ರಿ ಎಂದು ಹೆಸರು. ಈ ಬೆಟ್ಟಗಳು ಹಿಂದೆ ಚಿತ್ರದುರ್ಗವನ್ನು ಆಳಿದ ಪಾಳೆಯಗಾರರಿಗೆ ನೈಸರ್ಗಿಕ ರಕ್ಷಣೆಯನ್ನು ಒದಗಿಸಿವೆ. ಹೈದರಾಲಿಯಂತಹ ಬಲಿಷ್ಠ ಶತ್ರುವಿಗೂ ಅಭೇದ್ಯವಾದ ಕೋಟೆಯನ್ನು ಕಟ್ಟಿ ತಮ್ಮ ರಕ್ಷಣೆಗೆ ವಜ್ರಕವಚದಂತಿದ್ದ ಈ ಗಿರಿಗಳ ಸಾಲು ಹಲವಾರು ಮೈಲಿಗಳ ವರೆಗೂ ಪಸರಿಸಿ ನಿಂತಿವೆ.

ಮದದಿಂದ ಕೊಬ್ಬಿದ ಆನೆಯನ್ನು ತನ್ನ ಬಾಹುಬಲದಿಂದ ಗರ್ವವಡಗುವಂತೆ ಮಾಡಿ ಅದರ ಹಾವಳಿಯನ್ನು ಕಡೆದ ಓರ್ವ ಧೀರನೇ ಇಲ್ಲಿಯ ಪಾಳೆಯಗಾರರ ಮೂಲ ಪುರುಷ. ಈ ಘಟನೆ ನಡೆದದ್ದು ಭಾರತದ ರಾಜಧಾನಿಯಾದ ದೆಹಲಿಯಲ್ಲಿ ತೊಗಲಖ್ ಸಂತತಿಯ ಅರಸರ ಆಳ್ವಿಕೆಯ ಕಾಲದಲ್ಲಿ. ಅನಂತರ ಸಾಹಸಿಯ ಕೆಚ್ಚೆದೆಗೆ ಮೆಚ್ಚಿದ ಅರಸು "ಮದಕರಿನಾಯಕ" ಎಂಬ ಬಿರುದು ಬಿಲ್ಲತ್ತುಗಳನ್ನಿತ್ತು ಸನ್ಮಾನಿಸಿದ್ದನು.

ಜಿನ್ನಾಲಾದ್ರಿ ದುರ್ಗವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ. ೧೩೫೬ರಿಂದ ಸುಮಾರು ೩೧೧ ವರ್ಷಗಳ ಕಾಲ ಅನೇಕ ಪಾಳೆಯಗಾರರು ರಾಜ್ಯಭಾರ ನಡೆಸಿದ್ದಾರೆ. ಚಿತ್ರಕಲ್ ದುರ್ಗ ಎಂದು ಹೆಸರು ಬರಲು ಚಿಕ್ಕನಾಯಕ ಎಂಬ ಪಾಳೆಯಗಾರನೇ ಕಾರಣ ಎಂಬ ಅಂಶವೂ ತಿಳಿದು ಬರುತ್ತದೆ. ಮದಕರಿನಾಯಕನಿಂದಲೇ ಆರಂಭವಾದ ಈ ಆಳ್ವಿಕೆ ಕ್ರಿ. ಶ. ೧೭೭೯ರಲ್ಲಿ ಮೈಸೂರಿನ ಹೈದರಾಲಿಯ ತಂತ್ರದಿಂದ ಅದೇ ಹೆಸರಿನವನ ಅಂದರೆ ಮದಕರಿನಾಯಕನ ಕಾಲದಲ್ಲಿಯೇ ಕೋಟೆ ಸಂಪೂರ್ಣವಾಗಿ ಸೋತು ಹೈದರಾಲಿಯ ಆಳ್ವಿಕೆಗೆ ಒಳಪಡುತ್ತದೆ.

ಪಾಳೆಯಗಾರರು ಗೂಂಡಾ ವೃತ್ತಿಯನ್ನು ಅನುಸರಿಸಿ ಪ್ರಜಾಕಂಟಕರಾಗಿದ್ದ ಕಾಡು ಜನರಲ್ಲ. ಸುಸಂಸ್ಕೃತರು. ಅಂದು ಅವರು ಸಲ್ಲಿಸಿರುವ ಸೇವೆ, ಉತ್ತಮ ಕೆಲಸ ಕಾರ್ಯಗಳು ಇಂದಿಗೂ ಮನಮೆಚ್ಚುವಂತಿವೆ. ಪ್ರತಿಯೊಬ್ಬರೂ ಚಿತ್ರದುರ್ಗದ ಏಳಿಗೆಗೆ ದುಡಿದವರೇ ಆಗಿದ್ದಾರೆ. ಅವರಲ್ಲಿ ದೈವಭಕ್ತಿ, ಧರ್ಮಬುದ್ಧಿ, ನ್ಯಾಯಮಾರ್ಗಾನುಸರಣೆ, ಪ್ರಜಾವಾತ್ಸಲ್ಯ ವಿಶೇಷವಾಗಿಯೇ ಇತ್ತು.

ಚಿತ್ರದುರ್ಗ ಪ್ರದೇಶದ ಅಭಿವೃದ್ಧಿಗೆ ತಮ್ಮ ಶಕ್ತಿ ಮೀರಿ ದುಡಿದಿದ್ದಾರೆ ಪಾಳೆಯಗಾರರು. ಅಂದಿನ ಅವರ ಆಳ್ವಿಕೆಗೆ ಒಳಪಟ್ಟ ಪ್ರದೇಶ ಅಲ್ಪವೂ ಆಗಿರಲಿಲ್ಲ. ಚಿತ್ರದುರ್ಗದ ಪಾಳೆಯಗಾರರ ಏಳಿಗೆಯನ್ನು ಸಹಿಸದ ಹಿತಶತ್ರುಗಳೂ ಇದ್ದರು. ಅಂತಹವರ ಪೈಕಿ ನಿಜಾಮುಲ್ಮುಲ್ಕ್‌ನ, ಮರಾಠರು, ನಿಡಗಲ್ಲು ಮೊದಲಾದ ಪಾಳೆಯಗಳ ಆಡಳಿತಗಾರರು ಮುಖ್ಯರಾದವರು.

ಪಾಳೆಯಗಾರರು ದೈವ ಭಕ್ತರೂ, ಧರ್ಮ ಮಾರ್ಗಾನುಯಾಯಿಗಳೂ ಅಷ್ಟೇ ಅಲ್ಲ, ಕಷ್ಟ ಸಹಿಷ್ಣುಗಳು ಧೈರ್ಯ ಸಾಹಸಗಳ ಯೋಧರು, ಕೆಚ್ಚೆದೆಯ ಕಲಿಗಳು ಎಂಬ ಅಂಶ ಅವರು ಕಟ್ಟಿ ಉಳಿಸಿರುವ ಕೋಟೆ, ನಡೆಸಿದ ಹೋರಾಟ, ಹಲವಾರು ಉತ್ತಮ ಕಾರ್ಯಗಳಿಂದ ಮೇಲಾಗಿ ಶಾಸನಗಳಿಂದ ತಿಳಿಯ ಬರುತ್ತದೆ.

ವರ್ಷಗಳ ಕಾಲ ಶತ್ರು ದಾಳಿನಡೆದರೂ ಪ್ರಜೆಗಳಿಗೆ, ರಾಜಧಾನಿಗೆ ಯಾವ ಬಗೆಯ ತೊಂದರೆಯೂ ಆಗುತ್ತಿರಲಿಲ್ಲ, ತಮ್ಮ ಜಾಣ್ಮೆಯಿಂದ ಸಕಲ ಪೂರ್ವ ಸಿದ್ಧತೆಗಳನ್ನೂ ನಡೆಸಿ ಕೊಂಡಿರುತ್ತಿದ್ದರು. ಅವರು ಕೇವಲ ಶಕ್ತಿವಂತರಷ್ಟೇ ಅಲ್ಲ ಯುಕ್ತಿವಂತರೂ ಆಗಿದ್ದರು.

ಪಾಳೆಯಗಾರರ ಕಾಲದಲ್ಲಿ ನಿರ್ಮಾಣಗೊಂಡು ನಿಂತಿರುವ ಹಲವಾರು ಜಲಾಶಯಗಳು ಇಂದಿಗೂ ಜನತೆಯ ಅನುಕೂಲಕ್ಕೆ ಒದಗಿವೆ. ಅವುಗಳಲ್ಲಿ ತಿಮ್ಮಣ್ಣನಾಯ್ಕನಕೆರೆ, ಗೋಪಾಲ ಸ್ವಾಮಿ ಹೊಂಡ, ಸಿಹಿನೀರ ಹೊಂಡ, ಸಂತೆಯ ಹೊಂಡ ಅತಿ ಮುಖ್ಯವಾದುವು.

ಕೋಟೆಯ ಹಾಗೂ ಹಿಂದಿನ ಪಾಳೆಯಗಾರರ ಕಾಲದ ಆಡಳಿತ ಕಛೇರಿ, ಟಂಕಸಾಲೆ, ಅರಮನೆ, ರಾಜಬೀದಿ ಮೊದಲಾದ ಮುಖ್ಯ ಅವಶೇಷಗಳೂ ಇಂದು ಪ್ರೇಕ್ಷಣಗಮನ ಸೆಳೆದಿವೆ ಬೆಟ್ಟದ ಮೇಲೆ ವಿನಾಯಕನಗುಡಿ, ಗರುಡನ ನೆ, ವರನಾಥ, ಹಿಡಂಬೇಶ್ವರ, ಸಂಪಿಗೆ ಸಿದ್ಧೇಶ್ವರ, ವೇಣುಗೋಪಾಲ, ಕಾಶಿ ವಿಶ್ವನಾಥ, ಫಲ್ಗುಣೇಶ್ವರ, ಮೊದಲಾದವರ ದೇವಾಲಯಗಳಿವೆ. ಈ ದೇವಾಲಯಗಳು ಪುರಾಣ ಕಾಲದ ದೇವಾಲಯಗಳು ಎಂಬ ಪ್ರತೀತಿಯಿದೆ. ಅರಮನೆಗಳ ಎಲ್ಲಾ ಪ್ರದೇಶ, ಗಜಶಾಲೆ, ಧಾನ್ಯ ಶೇಖರಣೆಯ ಕಣಜ, ಮದ್ದು ತಯಾರಿಸುವ ಸ್ಥಳ, ಟಂಕಸಾಲೆ ಮೊದಲಾದವುಗಳು ಹಾಗೂ ಉಯ್ಯಾಲೆ ಕಂಬಗಳು ನೂರಡಿ ಎತ್ತರದ ಏಕ ಶಿಲೆಯ ದೀಪಸ್ತಂಭ ದರ್ಶನ ಯೋಗ್ಯ.

ಶತ್ರುಗಳ ಆಗಮನ ನಿರ್ಗಮನಗಳನ್ನು ತಿಳಿಸಲು ಉಪಯೋಗಿಸುತ್ತಿದ್ದ ಕಾವಲು ಗಾರನ ಉನ್ನತ ಸ್ಥಳ ಕಹಳೆ ಬತೇರಿ. ಕಹಳೆ ಮುನ್ನಾದಿ ಸೈನಿಕರಿಗೆ ಮುನ್ನೆಚ್ಚರಿಕೆಯನ್ನು ಕೊಡುತಿದ್ದ ಸ್ಥಳ ಅತಿ ಉನ್ನತ ಹಾಗೂ ಸಾಹಸಮಯ. ರಾಜ್ಯದ ಪತಾಕೆಯನ್ನು ಹಾರಿಸಲು ಉಪಯೋಗಿಸುತ್ತಿದ್ದ ಝುಂಡಾ ಬತೇರಿ, ಕಾಗಲುಗಾರರ ಅನುಕೂಲಕ್ಕೆ ಶತ್ರುಗಳನ್ನು ಬಂಧಿಸಲು ಉಪಯೋಗಿಸುತ್ತಿದ್ದ ಬಸವನ ಬುರುಜು, ತನ್ನ ದೊರೆಯ ನಾಡನ್ನು ರಕ್ಷಿಸಲು ಒನಕೆ ಹಿಡಿದು ವೀರವನಿತೆಯಾಗಿ ನಿಂತು ತನ್ನ ಆಯುಧಕ್ಕೆ ನೂರಾರು ಜನ ಶತ್ರುಗಳನ್ನು ಬಲಿಯಾಗಿ ಒಪ್ಪಿಸಿದ ಓಬವ್ವನ ಕಿಂಡಿ ದರ್ಶನೀಯ ಸ್ಥಳಗಳು. ಈ ಸ್ಥಳಗಳ ಸಂಚಾರ ಸಾಹಸಮಯ ಮತ್ತು ಆನಂದಮಯ.

(ಹತ್ತನೇ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	... ...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಿಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.

ಏ

ಕನಕದಾ

ಲೇಖಕರು:

ಕನಕದಾಸರ ಸಾಹಿತ್ಯ ನಿರ್ಮಾಣ—ಅವರು ತೋರಿದ ಭಕ್ತಿಮಾರ್ಗ ಇವುಗಳು ಕನ್ನಡ ಸಾಹಿತ್ಯಕ್ಕೊಂದು ಅಮೌಲ್ಯ ಕೊಡುಗೆಗಳಾಗಿವೆ. ಅಂದಿನಿಂದ ಇಂದಿನ ವರೆಗಿನ ೪೦೦ ವರುಷಗಳ ಅವಧಿಯಲ್ಲಿ ಹಲವಾರು ರಾಜಕೀಯ, ಸಾಮಾಜಿಕ, ಸ್ಥಿತ್ಯಂತರಗಳು ಘಟಿಸಿ ಹೋಗಿವೆ. ಹಾಗಿದ್ದರೂ ಕೂಡ ಕನಕದಾಸ ಸಾಹಿತ್ಯ ಇಂದಿಗೂ ನವನವೀನವಾಗಿ ಕಂಗೊಳಿಸುತ್ತದೆ. ೪೦೦ ವರುಷಗಳಲ್ಲಿ ಸಮಾಜವು ಎದುರಿಸಿದ ಸುಧಾರಣೆಗಳಿಂದಲೂ ಅವರ ಸಾಹಿತ್ಯ—ಪ್ರಾಸಂಗಿಕವಾಗಿ ಉಳಿಯದೇ ಇಂದಿಗೂ ಆಧುನಿಕವಾಗಿ ಕಾಣಿಸಿಕೊಂಡಲ್ಲಿ ಸಮಾಜ ಸುಧಾರಣೆಯ ಪ್ರಗತಿಯು ಯಾವ ವೇಗದಲ್ಲಿ ನಡೆದಿದೆ ಎಂಬುದನ್ನು ನಾವು ಕಂಡುಕೊಳ್ಳಬಹುದು. ಕನಕದಾಸರ ವಿಷಯದಲ್ಲಿ ಹಲವಾರು ಸಂಶೋಧಕರು ತಂತಮ್ಮ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರ ಕುಲಗೋತ್ರದ ವಿಷಯವಾಗಿಯೂ ಹಲವಾರು ರೀತಿಯಲ್ಲಿ ಚರ್ಚೆಗಳಾಗುತ್ತಿವೆ. ಅವರು ಕುರುಬರೆ? ತಳವಾರರೇ? ನಾಯಕರೇ? ಬೇಡರೆ? ಎಂಬ ಬೇಡವೆನಿಸಿದ ಸಮಸ್ಯೆಗಳಿಗೆ ಇಂದಿನ ಸಮಾಜದಲ್ಲಿ ಪುನಃ ಸ್ಥಳ ದೊರಕುತ್ತಿದೆ. ನಾಲ್ಕುನೂರು ವರುಷಗಳ ಹಿಂದೆಯೂ ಕನಕದಾಸರು ಇಂತಹ ಪರಿಸ್ಥಿತಿಯನ್ನು ಎದುರಿಸಿದ್ದುದನ್ನು ನಾವು ಮನಗಂಡಿದ್ದೇವೆ. "ಯಾತರವನೆಂದುಸುರಲಿ! ಜಗನ್ನಾಥ ಮಾಡಿದನೊಂದು ರೂಪವಯ್ಯ — ನಿಚ್ಚಕಾಗಿನೆಲೆಯಾದಿ ಕೇಶವನ ಹುಚ್ಚುದಾಸನಿಗೆ ಇನ್ನಾತರ ಕುಲವಯ್ಯ" ಎಂದು ಹೇಳಿ ಕನಕದಾಸರು ಅಂದಿನ ಸನಾತನ ಸಂಪ್ರದಾಯ ಶೀಲರಿಗೆ ಸೌಮ್ಯ ಪ್ರಹಾರವನ್ನು ಕೊಟ್ಟು ಅವರ ಬಾಯಿ ಮುಚ್ಚಿಸಿದ್ದಾರೆ. ಇಂದಿನ ಸಂಶೋಧಕರಿಗೆ ಈ ಉತ್ತರದಿಂದ ಸಮಾಧಾನವಾಗದಿದ್ದಲ್ಲಿ—ದಾಸಪೂರ್ವಾಶ್ರಮದಲ್ಲಿ ಕನಕದಾಸರು ವೃತ್ತಿಯಿಂದ ಕ್ಷತ್ರಿಯರಾಗಿದ್ದರೆಂದು ನಂಬಲು ಸಾಕಷ್ಟು ಪ್ರಮಾಣಗಳಿವೆ. ತಂದೆ ಬೀರಪ್ಪ (ವೀರಪ್ಪ) ತಾಯಿ ಬಾಚಮ್ಮನವರ ಹರಕೆ ಹೊತ್ತು ಪಡೆದ ಏಕಮಾತ್ರ ಪುತ್ರ ತಿಮ್ಮಪ್ಪ (ಕನಕದಾಸರು)ನನ್ನು ತಂದೆ ತಾಯಿಗಳು ರಣರಂಗಕ್ಕೆ ಹೋಗಲು ತಮ್ಮ ಸಮ್ಮತಿಯನ್ನು ನೀಡಬಹುದಾಗಿದ್ದಿತೆ? ಈ ತಂದೆ ತಾಯಿಗಳಲ್ಲಿ ತಲೆತಲಾಂತರಗಳಿಂದ ಹರಿದು ಬಂದ ಕ್ಷಾತ್ರ ತೇಜವೇ ಅವರಿಗೆ ಮಗನನ್ನು ರಣರಂಗಕ್ಕೆ ಕಳುಹಲು ಪ್ರಚೋದನೆಯನ್ನು ನೀಡಿತೆಂದು ಧಾರಾಳವಾಗಿ ನಂಬಬಹುದು. ಕನ್ನಡದ 'ಹಾಲುಮತ' ಇಂದಿನಷ್ಟು ಸಂಕುಚಿತಾವಸ್ಥೆಯನ್ನು ಅಂದು ತಾಳಿರಲಿಲ್ಲ. ಈ ಹಾಲುಮತದ ವಿಶಾಲ ಪ್ರಾಂಗಣದಲ್ಲಿಯೇ ಹಲವಾರು ವರ್ಗಗಳು ಬೇರೆಗೊಂಡು, ರೀತಿನೀತಿಗಳ ರೂಢಿಯಿಂದಾಗಿ, ಪ್ರತ್ಯೇಕತೆಯನ್ನು ಪಡೆದುಕೊಂಡಿರುವ ಶಕ್ಯತೆಯೂ ಇದೆ. ಇಂದಿನ ಚಿನಿವಾಲರು, ಸೊನ್ನೆಗಾರರು ಬದಲಾದ—ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಳ್ಳುವ ಉದ್ದೇಶದಿಂದ ಬೇರೆ ಬೇರೆ ಉದ್ಯೋಗಗಳನ್ನು ಅನುಸರಿಸುತ್ತಿರುವದನ್ನು ನಾವೇ ನೋಡುತ್ತಿದ್ದೇವೆ. ಹಾಗೆಯೇ ಅಂದು ತಮ್ಮ ಉದ್ಯೋಗ ಕಳೆದುಕೊಂಡ ತಳವಾರರಾಗಲೀ ಬೇಡರೇ ಆಗಲಿ, ಜೀವನೋಪಾಯಕ್ಕಾಗಿ ಕುರಿಗಳನ್ನು ಸಾಕುವ ಕೆಲಸವನ್ನು ಕೈಕೊಂಡು ಕುರುಬರಾಗಿರಲೂ ಬಹುದು. ಅಥವಾ ಕುರುಬರಾಗಿದ್ದ, ಬೀರಪ್ಪನು ತಳವಾರನಾಗಿ ಮುಂದೆ ಮಗನ—ಪಾಳ್ಯಗಾರಿಕೆಗೆ ನಾಂದಿ ಹಾಕಿಕೊಟ್ಟಿರಬಹುದು. ಅದೇನೇ ಇದ್ದರೂ ಕನಕದಾಸ ವೀರ ಕ್ಷತ್ರೀಯ ವರ್ಗಕ್ಕೆ ಸೇರಿದವನೆಂಬುದರಲ್ಲಿಯೂವ ಸಂದೇಹವೂ ಇಲ್ಲ. ಇಂದೂರಿನ 'ಹೋಳಕರ' ಮನೆತನವನ್ನು ಕ್ಷತ್ರೀಯರೆಂದು ಪರಿಗಣಿಸಿಲ್ಲವೇ?

ಧೀರೋದಾತ್ತ ಗಾಂಭೀರ್ಯ:—

ವಿಜಯನಗರದ ಸಾಮ್ರಾಜ್ಯ ವೈಭವ ಅತ್ಯುನ್ನತ ಶಿಖರವನ್ನು ಮುಟ್ಟಿದ ಕಾಲದಲ್ಲಿ ಬಾಳಿದ ತಿಮ್ಮಪ್ಪ. ಆ ಸಾಮ್ರಾಜ್ಯದ ಪತನವನ್ನು ಕಣ್ಣಾರೆ ಕಂಡಿದ್ದಾನೆ. ಈ ಇತಿಹಾಸದ ಏರುಪೇರುಗಳಲ್ಲಿ ಪಾಳ್ಯಗಾರ ತಿಮ್ಮಪ್ಪನ ಧೀರ ಗಂಭೀರ ವ್ಯಕ್ತಿ ನೋಡಲು ಸಿಗುತ್ತದೆ. ಒಂದು ಸೈನ್ಯ ಪಡೆಯ ಅಧಿಪತಿಯಾಗಿ ವಿಜಯನಗರದ ರಕ್ಷಣೆಗಾಗಿ ವೀರಯೋಧನಂತೆ ತಿಮ್ಮಪ್ಪ ಹೋರಾಡಿದ್ದಾನೆ. ತನ್ನ ಪ್ರದೇಶದಲ್ಲಿ ಕರ್ತವ್ಯ ದಕ್ಷ ದೊರೆಯಂತೆ, ಆಡಳಿತವನ್ನು ನಡೆಸಿದ್ದಾನೆ. ಕರ್ಮಧರ್ಮ ಸಂಯೋಗದಿಂದ—ಭೂಗತ ಧನದ ಪ್ರಾಪ್ತಿಯೂ ಆಯಿತು. ತನ್ನ ಅರಮನೆಯ ಹತ್ತಿರದ ನೆಲವನ್ನು ಅಗೆಯುತ್ತಿರುವಾಗ ಚಿನ್ನದ ನಾಣ್ಯಗಳ ಒಂದು ದೊಡ್ಡ ಭಾಂಡಾರವು ಸಿಕ್ಕಿತು. ಅಂದಿನಿಂದ ತಿಮ್ಮಪ್ಪ "ಕನಕನಾಯಕನಾದನು". "ಕನಕನಾಯಕನಿಂದ" ಕನಕದಾಸನಾದುದು ಯಾವಾಗ ಎಂಬುದು ಮಾತ್ರ ತಿಳಿಯುವಂತಿಲ್ಲ. ಭಾವುಕರ ದೃಷ್ಟಿಯಲ್ಲಿ ಕೇಶವನು ಸ್ವಪ್ನದಲ್ಲಿ ಕನಕನಾಯಕನಿಗೆ "ದಾಸನಾಗಲು" ಆದೇಶವಿತ್ತನೆಂದೂ—ಅದಕ್ಕೆ ಕನಕನು ಸ್ವಪ್ನಾವಸ್ಥೆಯಲ್ಲಿಯೇ "ತಿರಿದುಂಬುವದಕ್ಕೆ ನಾನೇಕೆ ದಾಸನಾಗಲಿ? ನಾನು ದೊರೆತನ ಮಾಡಬೇಕು" "ತಿಂದುಣ್ಣುವ ದಾಸತ್ವದಿಂದೇನು ಫಲ" ಎಂದು ಉತ್ತರಿಸಿದನೆಂದೂ ಮುಂದೆ ನಡೆದ ಕಾಳಗದಲ್ಲಿ ಕನಕನು ಘಾಯಗೊಂಡು ನೆಲವನ್ನಪ್ಪಿ ಕೊನೆಯುಸಿರನ್ನೆಳೆಯುವ ಸಂದರ್ಭದಲ್ಲಿ ಕೇಶವನು ಕನಕನ ಮೈದಡವಿ, ಅವನಲ್ಲಿ ಮಾನಸಿಕ ಪರಿವರ್ತನೆಯನ್ನುಂಟು ಮಾಡಿದ ನಂತರವೂ, ಆಗಲೇ ಕನಕ ನಾಯಕರು ಕನಕದಾಸರಾದರೆಂದು ಹೇಳಲಾಗುತ್ತದೆ.

ಕನಕ ನಾಯಕರ ಜೀವನೇತಿಹಾಸವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಮೇಲಿನ ನಂಬುಗೆಯಲ್ಲಿ ತಥ್ಯವಿದ್ದುದು ಕಾಣುತ್ತದೆ. ಶೂರನೂ, ದಕ್ಷ ಆಡಳಿತಗಾರನೂ ಆದ ಕನಕನಾಯಕನು, ಕಾಗಿನೆಲೆಯ ಕೇಶವನ ಆರಾಧಕನಾಗಿದ್ದನು. ಯೌವನ, ಸಂಪತ್ತು, ಅಧಿಕಾರ, ಜನಪ್ರಿಯತೆ, ರಾಜಗೌರವ, ಮುಂತಾದ ಲೌಕಿಕ ಖ್ಯಾತಿಯನ್ನು ಗಳಿಸಿದ ಈ ವ್ಯಕ್ತಿಯಲ್ಲಿ ಸಹಜವಾಗಿ ವೈರಾಗ್ಯ ಆವರಿಸುವದು ಸಾಧ್ಯವೆ? ಆದರೆ ಈ 'ಸಾಧ್ಯ'ದ ಹಿನ್ನೆಲೆಯಲ್ಲಿ ನಡೆದ ಇತಿಹಾಸವೇ ಭಾವುಕರ ದೃಷ್ಟಿಯಲ್ಲಿ ಕಾಲಾಂತರದಿಂದ "ಪವಾಡ" ನೆನೆಸಿಕೊಂಡಲ್ಲಿ ಆಶ್ಚರ್ಯವೇನಿಲ್ಲ. ೧೫೬೫ರಲ್ಲಿ ನಡೆದ ರಕ್ಕಸತಂಗಡಿ ಕಾಳಗದಲ್ಲಿ ವಿಜಯನಗರ ಸಾಮ್ರಾಜ್ಯದ ಅವನತಿಯಾಯಿತು. ಈ ಮೊದಲೇ ಕನಕನ ಪ್ರೀತಿಯ ಹೆಂಡತಿಯ ಸಾವು—ತಾಯಿಯ ಸಾವು ಕನಕನಾಯಕನ ಮನಸ್ಸಿನ ಮೇಲೆ ತಡೆಯಲಾಗದ ಆಘಾತವನ್ನೆಸಗಿದ್ದವು. ಯುದ್ಧವೊಂದರಲ್ಲಿ ಉಂಟಾದ ಸೋಲು (ಬಹುಶಃ ಅದೇ ಅವನ ಜೀವನದಲ್ಲಿಯ ಮೊಟ್ಟ ಮೊದಲಿನ ಸೋಲಾಗಿರಬೇಕು) ಅವನ ಘಾಸಿಯಾದ ಮನಸ್ಸಿಗೆ ಮತ್ತೊಂದು ಏಟನ್ನು ಕೊಟ್ಟಿರಬೇಕು. ತದನಂತರದ ಸಾಮ್ರಾಜ್ಯ ಪತನದ ಅಸಹನೀಯ ನೋವು ಈ ಕಷ್ಟ ಪರಂಪರೆಯ ಕಾಳ್ಗಿಚ್ಚಿನಲ್ಲಿ ಬೆಂದು ಹೋದ ಕನಕ ನಾಯಕನಲ್ಲಿ ವೈರಾಗ್ಯದ ಮೊಳಕೆಯೊಡೆದುದು ಸಹಜವಾಗಿದೆ. ತನ್ನ ಆರಾಧ್ಯ ದೇವ ಕಾಗಿನೆಲೆಯ ಆದಿಕೇಶವನ ಅನುಗ್ರಹವನ್ನು ಪಡೆದು ಕನಕದಾಸರಾದುದರಲ್ಲಿ ತುಂಬಾ ಸಹಜತೆಯು ಕಾಣುತ್ತದೆ. ತನ್ನ ಹಿಂದಿನ ಲೌಕಿಕ ವೈಭವಯುಕ್ತ ಜೀವನವನ್ನು ಕಳೆದ ಗತಕಾಲದ ಸ್ಮರಣೆಗಳ ನೆರಳೂ ಕೂಡ ಬೇಡವೆಂಬಂತೆ, ಬಾಡದಲ್ಲಿಯ ಕೇಶವನ ಮೂರ್ತಿಯನ್ನು ಕಾಗಿನೆಲೆಗೆ ತಂದು ಅಲ್ಲಿಯೇ ಪ್ರತಿಷ್ಠಾಪಿಸಿ, ಅವನ ಹೆಸರಿನಲ್ಲಿಯೇ ಕಾವ್ಯಗಳನ್ನು ರಚಿಸುತ್ತ ದಾಸರಾದರು. ಹೀಗೆ ಕನಕನಾಯಕನು ಕನಕದಾಸನಾದನು. ದೊರೆತನದ ಹಂಬಲ ಬಿಟ್ಟು ಹರಿಭಕ್ತನಾದ. ದಕ್ಷಿಣದಲ್ಲಿ ರಾಮಾನುಜರ ವಿಶಿಷ್ಟಾದ್ವೈತ ಮತವು ಪ್ರಬಲಗೊಳ್ಳುತ್ತಿದ್ದ ಸಮಯವದು. ಅದೇ ಕಾಲಕ್ಕೆ ಕರ್ನಾಟಕದಲ್ಲಿ ಮಾಧ್ವ ಸಿದ್ಧಾಂತವೂ ಬೇರೂರಿ ಬೆಳೆದುಕೊಂಡಿದ್ದಿತು. ಕನಕರು ದಾಸರಾದ ಬಳಿಕ ಇಡಿಯ ಕರ್ನಾಟಕವನ್ನಲ್ಲದೇ ತಿರುಪತಿ, ಬೇಲೂರು ಮುಂತಾದ ಪುಣ್ಯ ಕ್ಷೇತ್ರಗಳನ್ನು ಸಂಚರಿಸಿದರು. ತಿರುಪತಿಯಲ್ಲಿಯೂ ಬೇಲೂರಿನಲ್ಲಿಯೂ ಬಹುಕಾಲ ವಾಸವಾಗಿದುದ್ದರಿಂದ, ವಿಶಿಷ್ಟಾದ್ವೈತದ ಪ್ರಭಾವವೂ ಕನಕದಾಸನ ಮೇಲಾಗಿದ್ದುದ್ದರಲ್ಲಿ ಸೋಜಿಗವೇನಿಲ್ಲ. ಅಷ್ಟರಿಂದಲೇ ಅವರು ರಾಮಾನುಜ ಪಂಥವನ್ನು ಸ್ವೀಕರಿಸಿದರೆಂದು ಹೇಳುವದು ಸರಿಯಾಗಲಿಕ್ಕಿಲ್ಲ. ಮಾಧ್ವ ಸಿದ್ಧಾಂತದಲ್ಲಿ ಎರಡು ಕೂಟಗಳಾಗಿ ಹೋದುವು. ಒಂದು ವ್ಯಾಸಕೂಟ ಇನ್ನೊಂದು ದಾಸಕೂಟ — ಅಪ್ರತಿಮ ಪಾಂಡಿತ್ಯವನ್ನು ಪಡೆದು ತತ್ತ್ವ ಪ್ರತಿಪಾದನೆಯಲ್ಲಿ ತೊಡಗಿದವರು ವ್ಯಾಸಕೂಟ ಸಂಪ್ರದಾಯಿಗಳೆಂದೂ. ದೇವರ ಸೇವಕರಾಗಿ, ಕೀರ್ತನಕಾರರಾಗಿ, ಜನರಿಗೆ ತಿಳಿಯುವ ಭಾಷೆಯಲ್ಲಿಯೇ ಪದ್ಯಗಳನ್ನು ಬರೆದು ಭಕ್ತಿಮಾರ್ಗವನ್ನು ಉಪದೇಶಿಸುವ ಜನ ದಾಸಕೂಟದವರೆಂತಲೂ ಪ್ರತೀತಿಯಾಯಿತು. ದಾಸಕೂಟದವರ ಪರಿಶ್ರಮದಿಂದ ಕನ್ನಡ ಸಾಹಿತ್ಯ ಭಾಂಡಾರಕ್ಕೊಂದು ಅಪೂರ್ವ ಲಾಭವೇ ಆಯಿತು. ಜನಮನದ ತಿಳಿಭಾಷೆಗಳಲ್ಲಿಯೇ ಭಕ್ತಿಮಾರ್ಗವನ್ನು ಉಪದೇಶಿಸುವ, ದಾಸ ಸಾಹಿತ್ಯ ನಿರ್ಮಾಣವಾಯಿತು. ಪುರಂದರದಾಸರು, ಈ ಸಾಹಿತ್ಯ ರಚನೆಯಲ್ಲಿ ತೊಡಗಿ, ಕರ್ನಾಟಕ ಸಂಗೀತದ ದ್ರಷ್ಟಾರರಾದರು. ಇವರಂತೆ, ಕನಕದಾಸರೂ ಹಾಡಲು ತಕ್ಕುದಾದ ತಾಳಬದ್ಧ ಕವನಗಳನ್ನು ರಚಿಸಿದರು. ಕನಕದಾಸರು ಪುರಂದರದಾಸರ ಸಮಕಾಲೀನರಾದರೂ, ಅವರ ಪಂಥಾನುಕರಣವನ್ನು ಮಾಡದೇ ತಮ್ಮದೇ ಆದ ಸ್ವಂತ ಮಾರ್ಗವನ್ನು ಹಿಡಿದು ಸಾಹಿತ್ಯ ರಚನೆಯನ್ನು ಮಾಡಿದರು. ದಾಸರು ಸಾಮಾನ್ಯವಾಗಿ ಷಟ್ಪದಿ ಮತ್ತು ಸಾಂಗತ್ಯ ಈ ಎರಡು ಪ್ರಕಾರಗಳನ್ನೇ ಹೆಚ್ಚಾಗಿ ಅವಲಂಭಿಸಿದರು. ಒಂದೊಂದು ಸಲ, ತೀರ ಜಾನಪದ ಪದ್ಧತಿಯನ್ನು ಅವಲಂಬಿಸಿದರು. ತೀರ ಹಿಂದುಳಿದ ಜನಕ್ಕೂ ಅರ್ಥವಾಗುವಂತೆ ದಶಾವತಾರದ ಮಹಿಮೆಯನ್ನು ಕನಕದಾಸರು ರಚಿಸಿದ ಕವನದ ರೀತಿಯನ್ನೇ ನೋಡಿ:—

"ದೇವಿ ನಮ್ಮ ದ್ಯಾವರು ಬಂದರು—
ಬನ್ನೀರೆ ನೋಡ ಬನ್ನೀರೆ
ಕೆಂಗಣ್ಣ ಮೀನನಾಗಿ, ನಮುರಂಗ
ಗುಂಗಾಡಿ ಸೋಮನ ಕೊಂದಾನಮ್ಮಾ
ಗುಂಗಾಡಿ ಸೋಮನ ಕೊಂದೂ
ವೇದವ
ಭಂಗಾರದೊಡಲೋನಿಗಿತ್ತಾನಮ್ಮಾ

ಹೀಗೆ ಮತ್ಸ್ಯಾವತಾರದ ವರ್ಣನೆಯನ್ನು ಮಾಡಿದ್ದಾರೆ.

ಉಡುಪಿಯಲ್ಲಿ ಕನಕದ ... ಜರಗಿದ



ಕನಕದಾಸರ ಶಿಲಾವಿಗ್ರಹವನ್ನು ಅನಾವರಣ ಮಾಡಿದ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು.

ಸ್ವಾಗತ ಸಮಿತಿಯ ಕಾರ್ಯದರ್ಶಿ ಶ್ರೀ ಎಂ. ಮಧ್ವರಾಜ, ಎಂ. ಎಲ್. ಎ.

ವ್ಯಕ್ತಿತ್ವ

ಜೋಶಿ.

ದೇವರು ನೀಡಿದ ತುಂಬು ಜೀವನದ ಸದುಪಯೋಗವನ್ನು ಸಂಪೂರ್ಣವಾಗಿ ಮಾಡಿಕೊಂಡವರೆಂದರೆ ಕನಕದಾಸರೆಂದು ಹೇಳಬಹುದು. ತಮ್ಮ ೯೬ ವರುಷದಲ್ಲಿ ಅರ್ಧ ಜೀವನವನ್ನು ಐಹಿಕ ಸುಖವನ್ನುಪಭೋಗಿಸಿ ಇನ್ನುಳಿದ ಅರ್ಧ ಜೀವನದಲ್ಲಿ ದಾಸರಾಗಿ ಅಪೂರ್ವವಾದ ಸಾಹಿತ್ಯರಚನೆಯನ್ನು ಮಾಡಿ ಕರ್ನಾಟಕದಲ್ಲಿ ಭಕ್ತಿ ಮಾರ್ಗವನ್ನುಪದೇಶಿಸಿದರು. ಅಧುನಿಕ ಯುಗದ ಪ್ರವಾಸದ ಸೌಲಭ್ಯಗಳಿಲ್ಲದ ಅಂದಿನ ಕಾಲದಲ್ಲಿ ಕನ್ನಡ ನಾಡಿನ ತುಂಬೆಲ್ಲ ಕನಕದಾಸರು ಕಾಲ್ನಡಿಗೆಯಲ್ಲಿಯೇ ಸಂಚರಿಸಿದುದು ಒಂದು ದೈವಿಕ ಘಟನೆಯಂತೆ ಕಾಣುತ್ತದೆ.

ದೇವರ ಚಿಂತನೆ, ಸಂಚಾರ ಇವುಗಳ ಜತೆಯಲ್ಲಿ ಕನಕದಾಸರು ೫ ಗ್ರಂಥಗಳನ್ನು ಬರೆದರು. ಮೋಹನ ತರಂಗಿಣಿ, ನಳ ಚರಿತ್ರೆ, ರಾಮಧ್ಯಾನ ಚರಿತ್ರೆ, ಹರಿಭಕ್ತಿಸಾರ, ನರಸಿಂಹ ಸ್ತವನ, ಇವೇ ಆ ಐದು ಗ್ರಂಥಗಳು. ಇವಲ್ಲದೆ ಬಿಡಿಬಿಡಿಯಾಗಿ ಹಲವು ಕವನಗಳನ್ನು ರಚಿಸಿದರು. ಮೇಲ್ಕಾಣಿಸಿದ ಅವರ ಗ್ರಂಥಗಳ ವಿಷಯವಾಗಿ ಅನೇಕ ವಿದ್ವಾಂಸರು ಕೂಲಂಕಷವಾಗಿ ವಿಮರ್ಶಿಸಿದ್ದಾರೆ. ಅವರ ಆ ಗ್ರಂಥಗಳಲ್ಲಿ 'ಮೋಹನ ತರಂಗಿಣಿ'ಯು ಉಷಾ ಪ್ರಣಯ ಲೀಲೆಯ ಕಲಾವಸ್ತುವನ್ನೊಳಗೊಂಡು, ಶೃಂಗಾರರಸದಿಂದ ತುಂಬಿಕೊಂಡು ರಸಯುಕ್ತ ಕಾವ್ಯವಾಗಿದೆ. ಅದಕ್ಕಾಗಿಯೇ ಕೆಲವು ವಿದ್ವಾಂಸರು ಕನಕದಾಸರು ಈ ಕಾವ್ಯವನ್ನು ತಮ್ಮ ಯೌವನಾವಸ್ಥೆಯಲ್ಲಿ ಬರೆದಿರಬೇಕೆಂದು ಊಹಿಸಿದ್ದಾರೆ. ಆ ಶ್ಲೀಲವಲ್ಲದ ಶೃಂಗಾರವನ್ನು ಶುದ್ಧ ಶೃಂಗಾರವೆಂದು ಒಪ್ಪಿಕೊಂಡಾಗ, ಕವಿಯ ವಯಸ್ಸಿನ ಪರಿಣಾಮ ಕಾವ್ಯಗಳ ಮೇಲೆ ಆಗಿಯೇ ತೀರುತ್ತದೆಂದು ನಿರ್ಧಾರವಾಗಿ ಹೇಳುವದು ಕಠಿಣವಾದೀತು. ಕನಕದಾಸರು ಸಾಹಿತ್ಯ ರಚನೆಗೆ ತೊಡಗಿದುದು—ವೈರಾಗ್ಯವೃತ್ತಿಯನ್ನು ತಳೆದು ದಾಸರಾದ ಮೇಲೆಯೇ? "ಶೃಂಗಾರ" ವಸ್ತು ಭಕ್ತ ಕವಿಗಳಿಗೆ ಸಲ್ಲದು ಎಂಬ ನಿಯಮವಿಲ್ಲವಲ್ಲ. ಈ ಸಂದರ್ಭದಲ್ಲಿ ಜಯದೇವ ಕವಿಯ "ಗೀತ ಗೋವಿಂದ"ದಲ್ಲಿಯ ಉತ್ಕಾನ ಶೃಂಗಾರ ಕಾವ್ಯವನ್ನು ಉದಾಹರಣೆಗಾಗಿ ನೋಡಬಹುದು. ಸತ್ಯವಿದ್ದುದು ಶುಭವಾಗಿರುತ್ತದೆ. ಶುಭವಾದುದೆಲ್ಲವೂ ಸುಂದರವಾಗಿರುತ್ತದೆ. ಸೌಂದರ್ಯವು ಶೃಂಗಾರದ ಮೂಲವೂ ಹೌದು ಗುರಿಯೂ ಹೌದು ಇದನ್ನು ಒಪ್ಪಿಕೊಂಡಲ್ಲಿ ಮೇಲಿನ ಊಹೆಯು ಸರಿಯಲ್ಲವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಕನಕದಾಸರು ಪವಾಡ ಪುರುಷರೆ? ಎಂಬ ಇನ್ನೊಂದು ಪ್ರಶ್ನೆ ಅಧುನಿಕ ಯುಗದ ಕನ್ನಡಕವನ್ನು ಧರಿಸಿದವರಿಗೆ ಕಾಡುತ್ತಿದೆ. ಅವರದೇ ದೃಷ್ಟಿಯಿಂದ ವಿಚಾರಿಸಿ ನೋಡಿದಾಗ ಕನಕದಾಸರು ತೋರಿದ ಪವಾಡಗಳಲ್ಲಿ ಒಂದು "ಅದ್ಭುತ ರಮ್ಯ" ಸತ್ಯವು ಕಡೆದು ನಿಲ್ಲುತ್ತದೆ.

"ಕನಕನ ಮೇಲಿನ ವ್ಯಾಸರಾಯರ ಗಾಢ ಪ್ರೀತಿ, ಅವರ ಪಂಡಿತ ವರ್ಗದವರಲ್ಲಿ ಅಸೂಯೆಯನ್ನು ಹುಟ್ಟಿಸಿತು. ಕನಕನ ಮಹಿಮೆಯನ್ನು ಆ ಪತಿತ ಪಂಡಿತರಿಗೆ ಮನವರಿಕೆ ಮಾಡುವುದಕ್ಕೋಸ್ಕರವಾಗಿಯೇ ಒಂದು ವಾರ್ಚಮತ್ಕೃತಿಯ ಪವಾಡವನ್ನು ವ್ಯಾಸರಾಯರು ಕನಕನಿಂದ ಮಾಡಿ ತೋರಿಸಿದರು. ಮೋಕ್ಷಕ್ಕೆ ಯಾರೂ ಹೋಗಲಾರರು "ನಾನು" ಹೋದರೆ, ಮಾತ್ರ ಹೋಗಬಹುದು ಎಂದು ಕನಕದಾಸರು ಹೇಳಿ ಪಂಡಿತರ ಅಜ್ಞಾನವನ್ನು ತೋರಿಸಿಕೊಟ್ಟ ಈ ಪವಾಡವನ್ನು ಯಾರೂ ಒಪ್ಪಿಕೊಳ್ಳಲಿಕ್ಕಿಲ್ಲ? ಅದರಂತೆ, ದೇವರಿಲ್ಲದ ಸ್ಥಳವೇ ಇಲ್ಲವಾದುದರಿಂದ, ಬಾಳೆಯ ಹಣ್ಣನ್ನು ತಿನ್ನಲಾಗಲಿಲ್ಲವೆನ್ನುವ ಕನಕವಾಣಿಯಲ್ಲಿ ಪವಾಡ ರೂಪದಲ್ಲಿ ತ್ರಿಕಾಲಿಕ ಸತ್ಯವು ಹೊರ ಹೊಮ್ಮಿದೆ.

ಈ ಪವಾಡಗಳಲ್ಲಿರುವ ಸಹಜತೆ—ಸಾಧ್ಯತೆಗಳ—ಕನಕನ ಕಿಂಡಿ ಮತ್ತು ಇನ್ನಿತರ ಪವಾಡಗಳಲ್ಲಿ ಕಾಣಿಸಿದ್ದರಿಂದ ಅವುಗಳನ್ನು ಇಂದಿನ ಜನ ಒಪ್ಪಬಹುದೇ ಎಂಬುದು ಇನ್ನೊಂದು ಪ್ರಶ್ನೆ. ಗೂಢತೆ, ಕ್ಲಿಷ್ಟತೆಗಳೇ ಪವಾಡದ ಜೀವಾಳವೆಂದು ನಂಬಿದರೂ ಅಲ್ಲಿಯೂ ಸತ್ಯಾಂಶವಿದ್ದೇ ಇರುತ್ತದೆ. ದೇವದರ್ಶನಕ್ಕೆ ಒಳಗೆ ಪ್ರವೇಶ ಸಿಗದಂತಾಗಲು, ಪಶ್ಚಿಮ ದಿಕ್ಕಿಗೆ ಬಂದು ಗರ್ಭಗುಡಿಯ ಹಿಂಬಾಗದ ಕಿಡಕಿಯ ಬಳಿ ಶ್ರೀ ಕೃಷ್ಣ ಸ್ವಾಮಿಯನ್ನು ಪ್ರಾರ್ಥಿಸಿ ಕವನವನ್ನು ರಚಿಸಿ ಹಾಡಿದರು. ಆಗ ಅವರ ಒಳಗಣ್ಣಿಗೆ ದೇವದರ್ಶನವು ಅಲ್ಲಿಯೇ ಅದೇ ಕಿಂಡಿಯಿಂದ ಆದುದಲ್ಲಿ ಸಂದೇಹ ಉಳಿಯಲಾರದು. ಅವರ ಅಂತಃಚಕ್ಷುವಿಗೆ ಗೋಚರಿಸಿದ ದೇವಮೂರ್ತಿಯ ಸಂಪೂರ್ಣ ಸರಿಯಾದ ವಿವರಣೆಯನ್ನು ಕನಕದಾಸರ ಬಾಯಿಯಿಂದ ಕೇಳಿದ ಪಂಡಿತ ಜನಸಮೂಹವೇ ಅಚ್ಚರಿಗೊಂಡು ದೇವರು ನಿಶ್ಚಿತವಾಗಿ ಮುಖ ತಿರುಗಿಸಿ ಕನಕನಿಗೆ ದರ್ಶನ ಮಾಡಿಸಿದನೆಂದು ನಂಬಿರುವ ಸಂಭವವೂ ಇದೆ. ಅವರ ನಂಬುಗೆ ಮುಂದೆ ಮೂರ್ತಿಯ ಸಾಂಕೇತಿಕ ಪಲ್ಲಟನ ಸರ್ವಜನ ಸಮ್ಮತಿಯಿಂದ ರೂಪುಗೊಂಡಿರಬಹುದಾಗಿದೆ. ತುಂಬು ಜೀವನವನ್ನು ಬಾಳಿದ ಭಕ್ತಿ ಮಾರ್ಗವನ್ನು ದ್ವೇಶಿಸಿ ತಮ್ಮ ನಿತ್ಯ ಜೀವನದಲ್ಲಿ ಭಕ್ತಿ ಮಾರ್ಗದಲ್ಲಿಯೇ ನಡೆದು ಬಂದ ಕನಕದಾಸರ ಕೊನೆಯೂ ಕೂಡ ಅಷ್ಟೇ ಪವಾಡಮಯವಾಗಿದೆ. ತಿರುಪತಿಯ ದೇವಾಲಯವನ್ನು ಪ್ರವೇಶಿಸಿದ ಕನಕದಾಸರು ಬಹಳ ಹೊತ್ತು ಬಾರದಿರಲು, ಮಹಂತರು ಗರ್ಭಗುಡಿಯ ಒಳಗಡೆ ಹೋಗಿ ನೋಡಿದಾಗ ಅಲ್ಲಿ ಅವರಿಗೆ ಕನದಾಸರು ಕಾಣಸಲೇ ಇಲ್ಲ, ಮಹಂತರಿಗೆ ಕಾಣದ ಕನಕ—ಅಂದಿನ ವರೆಗೆ ಪುನಃ ಎಲ್ಲಿಯೂ ಕಾಣಿಸಿ ಕೊಳ್ಳಲಿಲ್ಲ. ಅಂದು ಮಹಂತರಿಗೆ ಕಾಣಿಸಿಕೊಳ್ಳದ ಕನಕದಾಸರು ಭಾರತದ ಸಂತರ ಇತಿಹಾಸದಲ್ಲಿ ಸ್ಥಾನವನ್ನು ಗಳಿಸಿ, ಕನ್ನಾಡಿನ ಜನಪ್ರಿಯ ಭಕ್ತ ದಾಸರಾಗಿ, ಮುಂಬರುವ ಜನಾಂಗಕ್ಕೆ ದೀವಿಗೆಯಾಗಿ ನಿಂತುಕೊಂಡಿದ್ದಾರೆ.

ರ್ಥ ಶತಮಾನೋತ್ಸವದಲ್ಲಿ

ಸ್ವಾಗತ ಮತ್ತು ಉತ್ಸವ ಸಮಿತಿಯ ಅಧ್ಯಕ್ಷ
ಡಾ। ಟಿ. ಎಂ. ಎ. ಪೈ.

ಉತ್ಸವ ಸಮಿತಿಯ ಕಾರ್ಯದರ್ಶಿ
ಶ್ರೀ ಕೆ. ಕೆ. ಪೈ.

ಪರಿಶಿಷ್ಟ 'ಅ' ಕನಕನ ನುಡಿ ನಕ್ಷತ್ರಗಳು

* ನೀನಲ್ಲದೇ ನರರು ಸ್ವತಂತ್ರರೇ?
* ಡಿಂಬದಲ್ಲಿರುವ ಸೂತ್ರಗೊಂಬೆಯಂತೆ.
* ಜಪವ ಮಾಡಿದರೇನು? ತಪವ ಮಾಡಿದರೇನ? ಕಪಟ ಗುಣನ ವಿಪರೀತ ಕಲುಷವಿದ್ದವರು
* ನೇಮವಿಲ್ಲದ ಹೋಮ ಇನ್ಯಾತಕೆ? ರಾಮನಾಮವಿರದ ಮಂತ್ರವ್ಯಾಕೆ.
* ಮೋಸದಿ ಜೀವಗಾಸಿ ಮಾಡಿದ ಪಾಪ ಕಾಶಿಗೆ ಹೋದರೆ ಹೋದೀತೆ?
* ದೊರೆತನವು ಬಂದಾಗ ಕೆಟ್ಟ ನುಡಿಯಲು ಬೇಡ ಸಿರಿಬಂದಕಾಲಕ್ಕೆ ಮೆರೆಯಬೇಡ.
* ಕರವಿಲ್ಲದ ಸತಿಯ ಸಂಗ ತನು ರೋಗ.
* ಸತ್ಯವಂತರ ಸಂಗವಿರಲು ತೀರ್ಥ ವ್ಯಾಕೆ?
* ಒಡಲಿನಾಸೆಗೆ ಜೇನಿನಲಿ ತೊಡಸಿಬಿದ್ದ ನೊಣದಂತೆ ಬಾಯ ಬಿಡುವೆ.
* ಮನವೇ ನೆಚ್ಚದಿರು ಸಂಸಾರ ಈ ಕಾಯಕ್ಕೆ ನೆಲೆಯಿಲ್ಲ.
* ಹುಟ್ಟಿಸಲು ಬೇಡವೆನ್ನು, ಹುಟ್ಟಿಸಿದರೆ ಪಾಲಿಸೆನ್ನ ಇಷ್ಟು ಮಾತ್ರ ಬೇಡಿಕೊಂಬೆ ಸ್ವಾಮಿ.
* ನನ್ನ ದುರ್ವಾಸನೆಯ ಬಿಡಿಸೋ—ಸದ್ಗುಣವೆಂಬ ಧನವ ತುಂಬಿಸೋ.
* ತೊರೆದು ಜೀವಿಸ ಬಹುದೇ ಹರಿ ನಿನ್ನ ಚರಣಗಳ ತಾಯಿತಂದೆಯ ಬಿಟ್ಟು ತಪವ ಮಾಡಲುಬಹುದು ದಾಯಾದಿ ಬಂಧುಗಳ ಬಿಡಲು ಬಹುದು ರಾಯಮುನಿದರೆ ರಾಜ್ಯವ ಬಿಡಬಹುದು ಕಾಯಜಪಿತ ನಿನ್ನಡಿಯ ಬಿಡಲಾಗದು.
* ಒಳಗಣ್ಣಿನಿಂದ ದೇವರ ನೋಡು, ಒಳಮೂಗಿನಲಿ ಲೀಲಾ ವಿಲಾಸ ನೋಡು.
* ತಾಯ್ನಗಲಿದ ಶಿಶುವಿನಂದದಿ ಬಾಯಿ ಬಿಡುವಂತಾಯ್ತು.
* ನೋಡದಿರು ಪರಸತಿಯ, ಕೂಡದಿರಲು ದುರ್ಜನರ ಆಡದಿರು ಬಿರುನುಡಿಯ, ಬೇಡದಿರು ಲೋಭಿಯನು.
* ಕಾಸಿನ ಆಸೆಗೆ ಘಾಸಿಪಟ್ಟೆನು.
* ವರಕವಿಗಳ ಮುಂದೆ ನರಕವಿಗಳ ವಿದ್ಯೆಯು ತೋರಲಾರದು.
* ಬಡತನ ಬಂದಾಗ ನೆಂಟರ ಬಾಗಿಲು ಸೇರಬಾರದು.
* ಪಾಪಿಗಳಿದ್ದಲ್ಲಿ ರೂಪುಳ್ಳ ವಸ್ತುವ ತೋರಬಾರದು.
* ಎಲ್ಲರೂ ಮಾಡುವದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
* ಕುಲ ಕುಲವೆನ್ನುತಿಹರೆ? ಕುಲ ಯಾವುದು ನೋಡಿ ಸಜ್ಜನರೆ?
* ಯಾತರ ಕುಲವಯ್ಯ ಆತನೊಲಿದ ಮೇಲೆ.
* ಯಾತರವನೆಂದು ಮರಳಿ?—ಜಗನ್ನಾಥ ಮಾಡಿದನೊಂದೆ, ರೂಪವಯ್ಯ—ನಿಚ್ಚಕಾಗಿನೆಲೆ ಆದಿಕೇಶವನ ಹುಚ್ಚು ದಾಸನಿಗೆ ಇನ್ಯಾತರ ಕುಲವಯ್ಯ.
* ನಾರಾಯಣ ಎಂಬ ನಾಮದ ಬೀಜವನು ನಾಲಿಗೆಯ ಕೂರಿಗೆಯ ಮಾಡಿ ಬಿತ್ತಿರಯ್ಯ.
* ಆರು ಬಲ್ಲರು ಹರಿಹರಾದಿಗಳ ಮಹಿಮೆಯನು.
* ಬೆಳ್ಳಿಬಂಗಾರಿಟ್ಟುಕೊಂಡು ಒಳ್ಳೆ ವಸ್ತ್ರ ಹೊದ್ದುಕೊಂಡು ಚಳ್ಳಿಪಿಳ್ಳಿ ಗೊಂಬೆಯಂತೆ, ಆಡಿ ಹೋಯಿತು. ಹಳ್ಳ ಹರಿದು ಹೋಗುವಾಗ ಗುಳ್ಳೆ ಒಂದು ಬಡಿಯುವಂತೆ, ಉಳ್ಳ ಮನೆಯಂತೆ ಸಂಸಾರದಾಟವು.

ವೇದಶಾಸ್ತ್ರಪುರಾಣ ಪುಣ್ಯನ । ಹಾದಿಯನು ನಾನರಿಯೆ ತರ್ಕದ । ವಾದದಲಿ ಗುರುಹಿರಿಯರರಿಯದ ಮೂಢಮತಿಯೆನಗೆ ॥ ಆದಿಮೂರುತಿ ನೀನು ನೆರೆ ಕರು । ಣೋದಯನು ಹೃದಯಾಂಗಣದಿ ಜಾಣ್ಣ । ನೋಡಯುವನೆನಗಿತ್ತು ರಕ್ಷಿಸು ನಮ್ಮನನವರತ.

(ಕನಕದಾಸ ವಿರಚಿತ 'ಹರಿಭಕ್ತಿಸಾರ'ದಿಂದ)

ಚಿತ್ರದುರ್ಗ ನೋಡ ಬಯಸುವಿರಾ . . . ?

(ಏಳನೇ ಪುಟದಿಂದ)

ಬೆಟ್ಟದ ಮೇಲಿರುವ ಮುರುಗರಾಜೇಂದ್ರ ಸ್ವಾಮಿಗಳವರ ಮಠ, ರಂಗಯ್ಯನ ಬಾಗಿಲು ಸಂತೆಯ ಬಾಗಿಲುಗಳ ಮೂಲಕ ಹೊರಟ ರಸ್ತೆಯು ಸಂಧಿಸುವ ಸ್ಥಳದಲ್ಲಿರುವ ಪಾಳೆಯಗಾರರ ಕುಲದೇವತೆ ಜಿಸ್ನೂಲಾದ್ರಿ, ನಿವಾಸಿನಿ ಉಕ್ಸವಾಂಬಾ ದೇವಿಯ ಭವ್ಯ ದೇವಾಲಯ ಶಕ್ತಿ, ನಾಹಸಗಳ ಸಂಘಟನೆಯ ನಿರ್ಮಾಣ ಕಾರ್ಯ.

ಏಳು ಸುತ್ತಿನ ಕೋಟೆಯ ನಿರ್ಮಾಣ ಭವ್ಯವಷ್ಟೇ ಅಲ್ಲ ವಿಸ್ಮಯಕಾರಕ. ನಮ್ಮ ಪೂರ್ವಿಕರು ಶಕ್ತಿವಂತರು, ಕುಶಲ ಕಲೆಗಾರರು, ಸಾಹಸಿಗಳು, ಮತ್ತು ಶಿಲ್ಪ ಶಾಸ್ತ್ರ ತಂತ್ರಜ್ಞರು ಎಂಬ ಅಂಶ ಅವರ ಕಾರ್ಯಗಳನ್ನು ಗಮನಿಸಿದಾಗ ಅರಿವಾಗುತ್ತದೆ.

ಚಿತ್ರದುರ್ಗದ ಇತಿಹಾಸ ಮತ್ತು ಕೋಟೆ ಕೊತ್ತಲಗಳ ದರ್ಶನ ಕಾರ್ಯ ಮುಗಿಯಿತು ಎನ್ನುವಂತಿಲ್ಲ. ಅರಿತಷ್ಟೂ ಉಳಿದೇ ಇರುತ್ತದೆ. ವೀಕ್ಷಕರ ಸಂಖ್ಯೆ ನಿತ್ಯವೂ ಇದ್ದೇ ಇರುತ್ತದೆ. ಕೇಂದ್ರ ಸರ್ಕಾರದ ಪ್ರಾಚ್ಯ ವಸ್ತು ಸಂಶೋಧನಾ ಶಾಖೆಯವರು ವೀಕ್ಷಕರ ಅನುಕೂಲಕ್ಕೆ ಕೆಲವು ಕಾರ್ಯಗಳನ್ನು ಕೈಗೊಂಡಿದ್ದಾರೆ. ಈ ದೆಸೆಯಲ್ಲಿ ಇನ್ನೂ ಹೆಚ್ಚು ಕಾರ್ಯ ಅವಶ್ಯಕ.

ಇಲ್ಲಿ ಹಲವಾರು ಓಲೆಯ ಗರಿಗಳು, ತಾಮ್ರ ಶಾಸನಗಳು, ಶಿಲಾಶಾಸನಗಳು, ನಾಣ್ಯ, ಪುರಾತನ ಖಡ್ಗ, ಕೋವಿ, ಶಿರಸ್ತ್ರಾಣ, ಕವಚಗಳು ದೊರೆತಿವೆ. ಚಿತ್ರದುರ್ಗದ ಪೂರ್ಣ ಇತಿಹಾಸಗಳ ಬಗ್ಗೆ ಗಮನ ಹರಿಸಿ ಆ ಬಗೆಗೆ ವಿಶಿಷ್ಟ ಸ್ವರೂಪವನ್ನಿತ್ತು ಚಿತ್ರದುರ್ಗದ ಇತಿಹಾಸವನ್ನು ಬೆಳಕಿಗೆ ತರುವ ಪ್ರಯತ್ನದಲ್ಲಿ ದಿ. ಹುಲ್ಲೂರು ಶ್ರೀನಿವಾಸ ಜೋಯಿಸರ ದುಡಿಮೆ ಉಲ್ಲೇಖನಾರ್ಹ. ಚಿತ್ರದುರ್ಗ ಪ್ರದೇಶದಲ್ಲಿ ಪ್ರಾಚ್ಯ ವಸ್ತು ಸಂಶೋಧನೆಯ ಅವಿಶ್ರಾಂತ ಕಾರ್ಯದಲ್ಲಿ ದಿವಂಗತರ ಹೆಸರು ಚಿರಸ್ಮರಣೀಯ.

ಪ್ರಾಚ್ಯ ವಸ್ತು ಸಂಶೋಧನಾ ಶಾಖೆಯವರ ಕಾರ್ಯಗಳಿಂದ ಚಿತ್ರದುರ್ಗ ಜಿಲ್ಲೆಯ ಇತಿಹಾಸ ಸಾಕಷ್ಟು ಮಟ್ಟಿಗೆ ಬೆಳಕಿಗೆ ಬಂದಿದೆ. ಚಿತ್ರದುರ್ಗದ ರಂಗಯ್ಯನ ಬಾಗಿಲ ಎರಡು ಪಕ್ಕಗಳಲ್ಲಿರುವ ಕೋಣೆಗಳಲ್ಲಿ ಸಂಶೋಧನೆಯಿಂದ ದೊರೆತ ವಸ್ತುಗಳನ್ನು ಸಂಗ್ರಹಿಸಿ ಇಟ್ಟಿದ್ದಾರೆ. ಈ ಪ್ರದರ್ಶನಾಲಯ ಗ್ರಂಥಾಗಾರದಲ್ಲಿ ಆರಂಭವಾಯಿತು. ಇಲ್ಲಿ ಶತಮಾನಗಳ ಪೂರ್ವದ ಅಪರೂಪದ ಸುಂದರ ವಸ್ತುಗಳನ್ನು ಅಂದರೆ ನಾಣ್ಯ, ಮಡಿಕೆ, ಚಿತ್ರ, ಒಡವೆ, ಶಿಲಾಮೂರ್ತಿ ಮೊದಲಾದುವುಗಳನ್ನು ಕಾಣಬಹುದು.

ಈ ಸಂಸ್ಥೆಯ ಜಾಡಿನಲ್ಲಿಯೇ ಹುಲ್ಲೂರು ಪಾಂಡುರಂಗ ಜೋಯಿಸರು ನಡೆಸುತ್ತಿರುವ ಸಂಶೋಧನಾ ಕಾರ್ಯ ಸ್ತುತ್ಯಾರ್ಹ.

ಇವಿಷ್ಟು ಚಿತ್ರದುರ್ಗದ ಕೋಟೆಯ ಸೂಕ್ಷ್ಮ ಪರಿಚಯದ ಚಿತ್ರವಾಯಿತು. ಇನ್ನು ಮುಂದೆ ಚಿತ್ರದುರ್ಗದ ಸುತ್ತಮುತ್ತಲ ಪ್ರೇಕ್ಷಣೀಯ ಸ್ಥಳಗಳ ಅಲ್ಪ ಪರಿಚಯ ಮಾಡಿಕೊಡುವುದು ಅತ್ಯಗತ್ಯ.

ಚಿತ್ರದುರ್ಗದ ಪಶ್ಚಿಮ ದಿಕ್ಕಿನಲ್ಲಿರುವ ಬೆಟ್ಟಗಳ ಸಮೀಪದ ಪ್ರದೇಶದಲ್ಲಿ ಆಕಸ್ಮಿಕ ಕಾರಣ ಒಂದರಿಂದ ಸಂಶೋಧನೆ ನಡೆಸಬೇಕಾಗಿ ಬಂತು. ಈ ಪ್ರದೇಶದ ಶ್ರೀ ಚಂದ್ರವಳ್ಳಿ ಅಥವಾ ಹುಲಿಗೊಂದಿ. ಈ ಪ್ರದೇಶದಲ್ಲಿ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯ ದಿ. ರಾ. ನರಸಿಂಹಾಚಾರ್ಯ ಕೆಲ ಕಾಲಾನಂತರ ದಿ. ಡಾ. ಎಂ. ಹೆಚ್. ಕೃಷ್ಣರವರ ಸಂಶೋಧನೆಯ ಪರಿಣಾಮವಾಗಿ ಕೆಲವು ಅಮೂಲ್ಯ ಸಂಗತಿಗಳು ಬೆಳಕಿಗೆ ಬಂದುವು. ಇಲ್ಲಿ ನಾಣ್ಯ, ಮಣ್ಣಿನ ಪಾತ್ರೆ, ತಳಪಾಯ, ಕಲ್ಲಿನ ಕಾಲುವೆ ಮುಂತಾದುವು ದೊರೆತವು. ನಾಣ್ಯಗಳು ರೋಂ ಮತ್ತು ಜೈನಾರ ವ್ಯಾಪಾರ ಸಂಬಂಧವನ್ನು ಬೆಳಕಿಗೆ ತಂದವು. ಈ ಸ್ಥಳದಲ್ಲಿಯ ಬಂಡೆಯೊಂದರ ಮೇಲೆ ಕರ್ನಾಟಕದ ಪ್ರಥಮ ಚಕ್ರವರ್ತಿ ಕದಂಬರ ಮಯೂರ ಶರ್ಮನ ಶಾಸನವಿದೆ.

ನೆಲದಲ್ಲಿ ಗುಹೆಗಳನ್ನು ಕೊರೆದು ನಿರ್ಮಿಸಿರುವ ಅಂಕಳೀ ಮಠ ಮತ್ತು ಗುಹೆಗಳಲ್ಲಿರುವ ಶತಮಾನಗಳ ಹಿಂದಿನ ಬಣ್ಣ, ಚಿತ್ರವಿಚಿತ್ರ ಕಲಾಕೃತಿಗಳ ನಿರ್ಮಾಣ ವೀಕ್ಷಣಾರ್ಹ. ಹಾಗೆಯೇ ಸುತ್ತಮುತ್ತಲಿನ ಗುಹೆಗಳು, ಪಂಚಲಿಂಗೇಶ್ವರ ದೇವಾಲಯ ಧವಳಪ್ಪನ ಗುಡ್ಡ ವೀಕ್ಷಕರಿಗೊಂದು ನಿಲುಮನೆಗಳಿದ್ದಂತೆ, ಬೃಹತ್ ಬಂಡೆಗಳ ಸಂದುಗಳಲ್ಲಿ ಇಕ್ಕಟ್ಟಾದ ಮತ್ತು ಎದೆ ನಡುಗುವಂತಹ ಸಾಹಸದ ಧವಳಪ್ಪನ ಗುಡ್ಡದ ಆರೋಹಣ ಕಾರ್ಯ ಸಾಹಸಿಗಳಿಗೊಂದು ಸವಾಲು. ಸ್ವಲ್ಪ ವೈಮರೆತರೂ ನೂರಾರು ಅಡಿಗಳ ಆಳದ ಕೊಳ್ಳಗಳಲ್ಲಿರುತ್ತೇವೆ.

ಕೊನೆಯದಾಗಿ ಜೋಗಿ ಮರಡಿ ಮತ್ತು ಹಿಮವತ್ಕೇದಾರ, ಸಮುದ್ರ ಮಟ್ಟದಿಂದ ಸುಮಾರು ಮೂರುಸಾವಿರ ಅಡಿ ಎತ್ತರವಿರುವ ಪ್ರಶಾಂತ ರಮ್ಯ ವನಪ್ರದೇಶ ಜೋಗಿ ಮರಡಿ. ಈ ಸ್ಥಳ ಚಿತ್ರದುರ್ಗ ನಗರಕ್ಕೆ ದಕ್ಷಿಣಕ್ಕೆ ಆರು ಮೈಲಿ ದೂರದಲ್ಲಿದೆ. ಇದು ಚಿತ್ರದುರ್ಗ ಜಿಲ್ಲೆಯ ಉನ್ನತ ಪ್ರದೇಶ. ಬೇಸಗೆಯಲ್ಲಿ ಬಿಸಿಲ ಬೇಗೆಯಿಂದ ವಿಮುಕ್ತರಾಗಲು ಅವಕಾಶ ಕೊಡುವ ಏಕೈಕ ಆರೋಗ್ಯ ಧಾಮ. ಇಲ್ಲಿಂದ ಕಾಣುವ ಗಿರಿಗಳ ಸಾಲು ಕೈಲಾಸವನ್ನೇ ನೆನಪಿಗೆ ತರುತ್ತವೆ.

ಹಿಮವತ್ಕೇದಾರವೂ ಪ್ರಕೃತಿ ದೇವಿಯ ಮಡಿಲಲ್ಲಿರುವ ರಮ್ಯ ತಾಣ. ಇಲ್ಲಿಂದ ಕಾಣುವ ದೃಶ್ಯಗಳು ರಮ್ಯ ಹಾಗೂ ಮನಮೋಹಕ. ಒಂದು ಕಡೆ ಬೃಹತ್ ಬಂಡೆಗಳನ್ನು ಒಳಗೊಂಡ ಬೆಟ್ಟವನ್ನೂ ಮತ್ತೊಂದು ಕಡೆ ನಿಸರ್ಗ ದೇವಿಯ ಸೀರೆಯಂತೆ ಕಾಣುವ ಅಚ್ಚ ಹಸುರು ಗಿಡ ಮರಬಳ್ಳಿಗಳ ಸಮೂಹವನ್ನೂ ಕಾಣಬಹುದು. ಚೇತೋಹಾರಿ ದೃಶ್ಯ ಇಲ್ಲಿದೆ. ಇಲ್ಲಿಯ ಮತ್ತೊಂದು ವೈಶಿಷ್ಟ್ಯವೆಂದರೆ ವರ್ಷದ ಎಲ್ಲ ಕಾಲದಲ್ಲಿಯೂ ಕಲ್ಲಿನಲ್ಲಿ ರೂಪುಗೊಂಡಿರುವ ಬಸವ(ನಂದಿ)ನ ಬಾಯಿಯಿಂದ ನೀರು ಹರಿದು ಬರುವುದು.

ಚಿತ್ರದುರ್ಗದ ಪೂರ್ಣ ಪರಿಚಯ ಮಾಡಿಕೊಡುವ ಸಾಹಸ ಈ ಲೇಖನದ್ದಲ್ಲ. ಇದ ನನ್ನ ಶಕ್ತಿಗೆ ನಿಲುಕಿನ ಅಲ್ಪ ಪ್ರಯತ್ನವಷ್ಟೆ. ಈ ಲೇಖನ ಚಲನ ಚಿತ್ರದಂತಲ್ಲ ರೇಡಿಯೋದಂತಷ್ಟೆ. ಓದುಗರು ಈ ಸ್ಥಳಗಳನ್ನು ಕಂಡರೆ ಬರೆದುದಕ್ಕೂ, ಓದಿದುದಕ್ಕೂ ಸಾರ್ಥಕತೆ ದೊರೆಯಬಹುದು.

(ವಿವಿಧ ಮೂಲಗಳಿಂದ)

ಚೀಣಾ ದರ್ಶನ

ಮಾವೋನ ಅಗಲ ಕೈ

ಪೀಕಿಂಗ್ ಸರ್ಕಾರವು ಚೀಣೀ ಯುವಜನರು ಹೊರ ದೇಶಗಳಲ್ಲಿ ಅಧಿಕ ಪ್ರಮಾಣದಲ್ಲಿ ವಿಧ್ವಂಸಕ ಕಾರ್ಯ ಚಟುವಟಿಕೆಗಳನ್ನು ನಡೆಸುವಂತೆ ಅವರಿಗೆ ತರಬೇತಿ ಕೊಡುವ ಕಾರ್ಯಕ್ರಮವನ್ನು ಇನ್ನಷ್ಟು ಬಲಗೊಳಿಸಿದೆ.

ಪೀಕಿಂಗ್‌ನ ವಿದೇಶಿ ಭಾಷಾ ಶಿಕ್ಷಣ ಸಂಸ್ಥೆಯು ಈಗ 250ಕ್ಕೂ ಹೆಚ್ಚು ಮಂದಿ ಚೀಣೀ ವಿದ್ಯಾರ್ಥಿಗಳಿಗೆ ವಿದೇಶಿ ಭಾಷೆಗಳಲ್ಲಿ ಶಿಕ್ಷಣ ನೀಡುತ್ತಿದೆ. ಸಾಗರೋತ್ತರ ಚೀಣೀಯರ ವ್ಯವಹಾರಗಳ ಮಂಡಲಿ ಮತ್ತು ಪೀಕಿಂಗ್ ನಗರ ಸಭೆಯ ಶಿಕ್ಷಣ ಸಂಸ್ಥೆ ಈ ಎರಡು ಸಂಸ್ಥೆಗಳು ಜಂಟಿ ಸಹಕಾರದಿಂದ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಈ ವಿದೇಶಿ ಭಾಷಾ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲಾಯಿತು.

ಚೀಣೀಯರು ವಿದೇಶಿ ಭಾಷೆಗಳ ಬೋಧನೆಯನ್ನು ವ್ಯಾಪಕಗೊಳಿಸಿರುವುದು ಸಂಬಂಧಿಸಿದ ರಾಷ್ಟ್ರಗಳಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸುವ ಅವರ ಕಾರ್ಯ ಯೋಜನೆಯ ಮುನ್ಸೂಚನೆಯಾಗಿದೆಯೆಂದು ಚೀಣೀ ವ್ಯವಹಾರಗಳ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಹೊರದೇಶಗಳಲ್ಲಿ ಚೀಣೀಯರು ನಡೆಸಿರುವ ಕಾರ್ಯ ಚಟುವಟಿಕೆಗಳು ಸಂಬಂಧಿಸಿದ ರಾಷ್ಟ್ರಗಳ ಮೆಚ್ಚುಗೆಗೆ ಪಾತ್ರವಾಗಿಲ್ಲ.

ಸಾಗರೋತ್ತರ ಚೀಣೀಯರ ವ್ಯವಹಾರಗಳ ಮಂಡಲಿಯ ಅಧ್ಯಕ್ಷರಾದ ಲಿಯಾವೊ—ಚೆಂಗ್ ಚಿ ಅವರು ಈ ಕಾರ್ಯ ಚಟುವಟಿಕೆಗಳ ಉದ್ದೇಶವನ್ನು ವಿವರಿಸುತ್ತ "ನಮ್ಮ ಅಂತರಾಷ್ಟ್ರೀಯ ಸ್ಥಾನಮಾನಗಳು ಹೆಚ್ಚಿರುವುದರಿಂದ ಮತ್ತು ಅಂತರಾಷ್ಟ್ರೀಯ ಸೌಹಾರ್ದ ಅಭಿವೃದ್ಧಿಗೊಂಡಿರುವುದರಿಂದ ಅಧಿಕ ಸಂಖ್ಯೆಯಲ್ಲಿ ಭಾಷಾಂತರಕಾರರು ಅಗತ್ಯವಾಗಿರುವರು" ಎಂದು ಹೇಳಿದ್ದಾರೆ.

ಚೀಣಾದ ವಿವಿಧ ಭಾಗಗಳಲ್ಲಿ ಸ್ಥಾಪಿಸಲಾಗಿರುವ ವಿದೇಶಿ ಭಾಷಾ ಶಿಕ್ಷಣ ಸಂಸ್ಥೆಗಳ ಜಾಲದಲ್ಲಿ ಪೀಕಿಂಗ್‌ನಲ್ಲಿರುವ ಸಂಸ್ಥೆಯೂ ಒಂದಾಗಿದೆ. ಕಳೆದ ವರ್ಷದಲ್ಲಿ ಸ್ಥಾಪಿಸಲಾಗಿರುವ ಈ ಸಂಸ್ಥೆಯು ಈಗ 'ಸ್ವಪರಿಪೂರ್ಣ'ವಾಗಿದೆಯೆಂದು ಚೀಣೀ ಪತ್ರಿಕೆಯೊಂದರಲ್ಲಿ ಪ್ರಕಟವಾದ ಲೇಖನದಿಂದ ವ್ಯಕ್ತಪಟ್ಟಿದೆ. ಈ ಸಂಸ್ಥೆಯಲ್ಲಿ ಈಗ ಏಳು ಮಂದಿ ವಿದೇಶಿ ಶಿಕ್ಷಕರಿರುವರಲ್ಲದೆ ಚೀಣಾದ ಉನ್ನತ ಶಿಕ್ಷಣ ಸಂಸ್ಥೆಗಳ ಶಿಕ್ಷಕರನ್ನು ಈ ಸಂಸ್ಥೆಗೆ ವರ್ಗಾಯಿಸಲಾಗಿದೆ.

ಪೀಕಿಂಗ್ ಸರ್ಕಾರದ ಹೊಸ "ವಿಸ್ತರಣ ಕಾರ್ಯ ನೀತಿಯ" ಪ್ರಕಾರ ಅಧಿಕ ವಿದೇಶಿ ಭಾಷೆಗಳ ಬೋಧನೆಗೆ ವ್ಯವಸ್ಥೆ ಮಾಡಲಾಗಿದ್ದು ಚೀಣಾದ ಪ್ರತಿಯೊಬ್ಬ ವಿದ್ಯಾರ್ಥಿಯು ತಾನು ಆರಿಸಿಕೊಂಡ ಮುಖ್ಯ ವಿಷಯದ ಜೊತೆಗೆ ವಿದೇಶೀ ಭಾಷೆಯೊಂದನ್ನು ಅಧ್ಯಯನ ಮಾಡಲೇಬೇಕೆಂದು ಕಡ್ಡಾಯಗೊಳಿಸಲಾಗಿದೆ.

ಪೀಕಿಂಗ್‌ನ ವಿದೇಶಿ ಭಾಷಾ ಶಿಕ್ಷಣ ಸಂಸ್ಥೆ ಇನ್ನಷ್ಟು ವಿಸ್ತರಣೆಗೊಂಡು ಅಧಿಕ ವಿದೇಶಿ ಭಾಷೆಗಳ ಬೋಧನೆಗೆ ಅವಕಾ

(ಮುಂದಿನ ಪುಟಕ್ಕೆ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

S. C. No. 10/1965.

II ವಾಮನ ಕಾಮತ —ವಾದಿ.

ಮತ್ತು

ನಳಿ ಪೂಜಾರಿ—ಮಂಜು ಪೂಜಾರಿ ಅಳಿಯ, ಉಡುಪಿ ತಾಲೂಕು ಹೊಸೂರು ಗ್ರಾಮ —ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ ಯೂಮೂಲ್ಕ ತಿಳಿಸುವದೇನಂದ್ರೆ—

ಮೇಲ್ಕಂಡ ವಾದಿಯು, ಪ್ರತಿವಾದಿಯಿಂದ ಬರತಕ್ಕ ದಿವಾಂಡು ನೋಟಿನ ಅಸಲು, ಬಡ್ಡಿಗೆ ದಾಖಲ್ಲು ಮಾಡಿದ ಸದ್ರಿ ದಾವೆಯು ತಾರೀಕು 9-6-1965ಕ್ಕೆ ತನ್ನಿ ಬಗ್ಗೆ ಮುದ್ದತಾಗಿಯದೆ. ಆ ಕುರಿತು ಪ್ರತಿವಾದಿಗೆ ಆಕ್ಷೇಪ ಹೇಳತಕ್ಕದ್ದು ಯಿದ್ರೆ ಸದ್ರಿ ದಿವಸ ಮೇಲ್ಕಂಡ ಕೋರ್ಟು ಮುಂದೆ ಪೂರ್ವಾಹ್ನ 11 ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದುಯಂತ ತಿಳಿಸೋಣಾಗಿಯದೆ.

N. V. KAMATH,
Advocate for Plaintiff.

ಉಡುಪಿ, ತಾ. 19-1-1965.

(ಹಿಂದಿನ ಪುಟದಿಂದ)

ತಲೆದೋರಿಸುವುದು ಎಂದು ಸಂಸ್ಥೆಯ ಡೆಪ್ಯುಟಿ ಪ್ರಿನ್ಸಿಪಾಲರು ಹೇಳಿದ್ದಾರೆ.

....ಹೊಸ ಬಗೆಯ, ತುಂಬಾ ಅಪಾಯಕಾರಿಯಾದ ಸಾಮ್ರಾಜ್ಯಶಾಹಿ ರಾಷ್ಟ್ರವೊಂದು ನಮ್ಮ ಬೃಹತ್ ಆಫ್ರಿಕಾ ಖಂಡಕ್ಕೆ ಕಂಟಕಪ್ರಾಯವಾಗಿ ಪರಿಣಮಿಸಿದೆ. ಅದು ನಮ್ಮೊಂದಿಗೆ ಸ್ನೇಹ ಪೌಹಾರ್ದಗಳ ಮಾತನಾಡಿದರೂ ನಮ್ಮ ಫಲಭರಿತವಾದ ಭೂಮಿಯನ್ನು ಆಸೆಗಣ್ಣುಗಳಿಂದ ನೋಡುತ್ತಿದೆ. ಸಮಗ್ರ ಆಫ್ರಿಕಾ ಖಂಡದ ಮೇಲೆ ದಿಗ್ವಿಜಯ ಸಾಧಿಸುವ ಕನಸು ಕಾಣುತ್ತಿದೆ.

ಚೀಣಾ ಸರ್ಕಾರಕ್ಕೆ ತನ್ನ ದೇಶದಲ್ಲಿಯೇ ತನ್ನ ಜನತೆಗೆ ಹೊಟ್ಟೆ ತುಂಬ ಆಹಾರ ಒದಗಿಸಲು, ಸುಭದ್ರ ಆರ್ಥಿಕ ವ್ಯವಸ್ಥೆಯನ್ನು ಸ್ಥಾಪಿಸಲು ಸಾಧ್ಯವಾಗಲಿಲ್ಲ. ಪರಿಸ್ಥಿತಿ ಹೀಗಿರುವಾಗ ತನ್ನ ಅಪಾರ ಜನಸಂಖ್ಯೆಗೆ ವಸತಿ ಕಲ್ಪಿಸಿಕೊಡಲು ಆಹಾರ ಒದಗಿಸಲು ಹೊರದೇಶಗಳನ್ನು ಜಯಿಸುವ ದುರುದ್ದೇಶ ಹೊಂದಿದೆ. ಟಿಬೇಟನ್ನು ವಶಪಡಿಸಿಕೊಂಡದ್ದು ಭಾರತದ ಮೇಲೆ ಆಕ್ರಮಣ ನಡೆಸಿದುದು ಇವು ಚೀಣೀಯರ ಹೊರದೇಶಗಳನ್ನು ವಶಪಡಿಸಿಕೊಳ್ಳುವ ಕಾರ್ಯಕ್ರಮದ ಅಂಗವಾಗಿ ನಡೆದ ದಾಳಿಗಳು.

ಚೀಣೀಯರಿಗೆ ತಮ್ಮ ಗುರಿ ಸಾಧಿಸಿಕೊಳ್ಳಲು ಆಫ್ರಿಕೆಯಲ್ಲಿ ವಾತಾವರಣ ಈಗ ಅನುಕೂಲವಾಗಿ ಕಂಡುಬಂದಿದೆ. ಹೊಸದಾಗಿ ಸ್ವತಂತ್ರವಾದ ಆಫ್ರಿಕದ ಅನೇಕ ರಾಷ್ಟ್ರಗಳು ಕಮ್ಯೂನಿಸ್ಟ್ ಗುಂಪಿನ ರಾಷ್ಟ್ರಗಳೊಂದಿಗೆ ಮೈತ್ರಿಯುತ ಸಂಬಂಧಗಳನ್ನು ಬೆಳೆಸಿಕೊಳ್ಳಲು ಕಾತುರವಾಗಿವೆ. ಚೀಣೀಯರು ಅಷ್ಟೇ ತ್ವರಿತವಾಗಿ ಅವರ ಈ ಅಪೇಕ್ಷೆಗೆ ಉತ್ತೇಜನ ನೀಡುತ್ತಿದ್ದಾರೆ. ಚೀಣೀಯರು ಹೀಗೆ ಪ್ರೋತ್ಸಾಹ ನೀಡುವಾಗ ತಮ್ಮ ದೃಷ್ಟಿಯಿಂದ ಹೆಚ್ಚು ಲಾಭದಾಯಕವಾದ ಹಾಗೂ ಹೆಚ್ಚು ಜನ ಚೀಣೀಯರಿಗೆ ವಸತಿ ಸೌಭಾಗ್ಯಗಳು ದೊರಕಬಲ್ಲ ಪ್ರದೇಶಗಳನ್ನೇ ಗಮನದಲ್ಲಿಟ್ಟುಕೊಂಡಿರುತ್ತಾರೆ.

ಈ ಧ್ಯೇಯ ಸಾಧನೆಗಾಗಿಯೇ ಚೀಣೀಯರು ಕ್ರಾಂತಿಕಾರಿಗಳ ಮುಂದಾಳುಗಳಿಗೆ ಅಗತ್ಯವಾದ ಹಣಕಾಸಿನ ನೆರವು ನೀಡುತ್ತಿದ್ದಾರೆ. ಶಸ್ತ್ರಾಸ್ತ್ರ, ಸಮರ ತಂತ್ರಗಳ ವಿಷಯದಲ್ಲಿ ತರಬೇತಿ ಕೊಡುತ್ತಿದ್ದಾರೆ.

ಕಾಂಗೋವೊಂದನ್ನು ವಶಪಡಿಸಿಕೊಂಡರೆ ಸಮಗ್ರ ಆಫ್ರಿಕೆಯನ್ನೇ ವಶಪಡಿಸಿಕೊಳ್ಳಲು ಸಾಧ್ಯ ಎಂಬುದು ಮಾವೋ ಅವರ "ಸೂಕ್ತಿ". ಕಾಂಗೋ ತಮ್ಮ ವಸಾಹತುಶಾಹಿಗೆ ಖ್ಯಾತವಾಗಿದೆಯೆಂದು ಚೀಣಾದ ಮುತ್ಸದ್ದಿಗಳು ಅಧಿಕಾರದಲ್ಲಿರುವವರೆಗೂ ಕಾಂಗೋದಲ್ಲಿ ಅನೈಕ್ಯಮತ್ಯ ಮುಂದುವರಿಯುವುದೆಂದು ಚೀಣೀಯರು ಭಾವಿಸಿದ್ದಾರೆ.

"ವೆಸ್ಟ್ ಆಫ್ರಿಕನ್ ಪೈಲಟ್" ಮೇಲಿನಂತೆ ಹೇಳಿದೆ.

(ಆರನೇ ಪುಟದಿಂದ)

ಕಮ್ಯೂನಿಸ್ಟರ ಹೃದಯದ ಪರಿಚಯವಾಗಬೇಕಾದರೆ ಆ ಪಕ್ಷದಲ್ಲಿ ಉನ್ನತ ಸ್ಥಾನದಲ್ಲಿದ್ದು ಅತ್ಯಂತ ಹೀನ ಕೃತ್ಯಗಳನ್ನೆಸಗಿ, ಒಂದು ದಿನ ಜ್ಞಾನೋದಯ ಹೊಂದಿದ ವ್ಯಕ್ತಿಗಳ ಪರಿಚಯವಾಗಬೇಕು. ಇತ್ತೀಚೆಗೆ ಶ್ರೀ ವೈದೀಶ್ವರನ್ ಎಂಬವರೊಂದು ಲೇಖನವನ್ನು "ಜನ್ಮಭೂಮಿ" ಆಂಗ್ಲ ವಾರ ಪತ್ರಿಕೆಗೆ ಕೊಟ್ಟಿರುವರು. ಆ ಲೇಖನದಲ್ಲಿ ಅವರು ತನ್ನ ವೃತ್ತಾಂತವನ್ನು ತಿಳಿಸಿದ್ದಾರೆ. ತೆಲಂಗಾಣದಲ್ಲಿ ತಾನು ನಡೆಸಿರುವ ಅಮಾನುಷ ಹೇಯ ಕೃತ್ಯಗಳ ಕುರಿತೂ ತಿಳಿಸಿದ್ದಾರೆ. ಈ ರೀತಿ ಕಮ್ಯೂನಿಸಮ್‌ನ ಕಪಿಮುಷ್ಟಿಯಿಂದ ತಪ್ಪಿಸಿಕೊಂಡು ಹಾರಿಬಂದವರೂ ಇದ್ದಾರೆ. ಆದರೂ ಇಂತವರ ಸಂಖ್ಯೆ ಬಹಳ ಕಮ್ಮಿ. ಆದುದರಿಂದಲೇ ಕಮ್ಯೂನಿಸ್ಟ್ ಕಾಳಿಂಗ [ಭಾರತೀಯರ] ವೇಣುನಾದಕ್ಕೊಲಿಯದು. ಅದರ ಮರ್ದನವಾಗಲೇಬೇಕು. ಇದರಲ್ಲಿ ಸಂದೇಹವೇ ಇಲ್ಲ.

ಹಾಗಿದ್ದರೂ ಭಾರತದ ಗೃಹ ಮಂತ್ರಿಯವರು ಆದೇಕೋ ಮೀನಮೇಷ ಎಣಿಸುತ್ತಿದ್ದಾರೆ. ಭಾರತದ ಕಮ್ಯೂನಿಸ್ಟರ ಜಾತಕ ತನ್ನ ಕೈಯಲ್ಲಿದೆ ಸಂದರ್ಭ ಅವಕಾಶಕ್ಕೆ ಕಾಯುತ್ತಿ ಅದನ್ನು ಹೊರಗೆಡಹುತ್ತೇನೆನ್ನುತ್ತಿದ್ದಾರೆ. ಅವರಿಗೆ ಅದ್ಯಾವಾಗ ಸಂದರ್ಭ ಅವಕಾಶ [ಇನ್ನೊಂದು ಚುನಾವಣೆ] ಕೂಡಿಬರುತ್ತದೋ! ಆ ಅವಕಾಶ ಆದಷ್ಟು ಬೇಗನೆ ಬರಲಿ.

ಇಂತಹ ಭೀಕರ ಪರಿಸ್ಥಿತಿಯಲ್ಲಿ ಭಾರತೀಯ ಜನತೆ ಎಚ್ಚತ್ತೇಳದಿದ್ದಲ್ಲಿ ಮತ್ತೆ ನಾವು ತಲೆ ಎತ್ತುವಂತಿಲ್ಲ. ಈಗ ಚೈನಾವು ನೇರ ಆಕ್ರಮಣ ಮಾಡದೆ ಪಾಕಿಸ್ತಾನಿಗಳ ವೇಷದಲ್ಲಿ ಆಕ್ರಮಣ ಮಾಡುತ್ತಿದೆ. ಪಾಕಿಸ್ತಾನಿ ಪಂಚಮ ಸ್ಥಂಭೀಯರೂ ಇಲ್ಲಿ ಇದ್ದಾರೆ, ಅದನ್ನು ಮರೆಯುವಂತಿಲ್ಲ. ಕಾಂಗ್ರೆಸ್ಸ್ 'ಯಾದವೀ ಕಲಹ'ಕ್ಕೆಡೆ ಕೊಟ್ಟಿರುತ್ತದೆ. ಭಾರತೀಯ ಜನತೆ ಎಚ್ಚತ್ತಿದ್ದು ಇಲ್ಲಿ ಕಮ್ಯೂನಿಸ್ಟರಿಗೆ ಅರ್ಧ ಚಂದ್ರ ಪ್ರಯೋಗ ಮಾಡುವ ಸುದಿನ ಬರಲಿ.

ಯೋಧ ನಾನಾಗ ಬೇಕು

ಯೋಧ ನಾನಾಗ ಬೇಕು | ಭಾರತದ |
ವರ ಯೋಧ ನಾನಾಗ ಬೇಕು ||
ಉತ್ತರದ ಎತ್ತರದ ಹಿಮಗಿರಿಯ
ಹತ್ತಿ ಬಹ
ವಂಚಕರ ಸಂಚುಗಳ ಮುರಿಯ
ಬೇಕು |
ಮಮ ಪುಣ್ಯ ಧರಣಿಯಲಿ ಗಣ್ಯ
ಮರಣವನಪ್ಪಿ
ತರುಣ ವೃಂದಕೆ ಸ್ಫೂರ್ತಿ ತರಿಸ
ಬೇಕು || ಯೋಧ ನಾ....||

'ಅಡಿಯ ಮುಂದಿಡೆ ಸ್ವರ್ಗ, ಅಡಿಯ
ಹಿಂದಿಡೆ ನರಕ'
ವೀರೋಕ್ತಿ ಬಿಸಿ ರಕ್ತ ಹರಿಸ ಬೇಕು ||
'ವೀರಗೊಂದೇ ಮರಣ, ಹೇಡಿಗಿದೆ
ಬಹು ಸಾವು'
ಭಾವೋಕ್ತಿ ನವಶಕ್ತಿ ಬರಿಸಬೇಕು
|| ಯೋಧ ನಾ....||

ಜಾತಿ, ಮತ, ಪಂಥಗಳ ವಿಷಮತೆಯ
ಕಡಿದಿಕ್ಕಿ
ಐಕ್ಯ ಭಾರತ ರಾಷ್ಟ್ರ ಕಾಣಬೇಕು |
ಬಲ ಬೆಳೆಸಿ, ಛಲ ನಿಲಿಸಿ, ಗೆಲಗಾಸಿ
ನೆಲವುಳಿಸಿ
ಭಾರತದ ಸ್ವಾತಂತ್ರ್ಯ ಕಾಯಬೇಕು
|| ಯೋಧ ನಾ....||

ಘನ ಘೋರ ಗಂಭೀರ ಸಿಂಹ
ಘರ್ಜನೆಯಂತೆ
ಭಾರತದ ಜಯಘೋಷ
ಮೊಳಗಬೇಕು |
ವಿಶ್ವಾಂತರಿಕ್ಷದಲಿ ಕೀರ್ತಿಗುಡಿ ಮೇಲೇರಿ
ಭಾರತದ ಸಂತೋಷ ನಲಿಯಬೇಕು
|| ಯೋಧ ನಾ.... ||

ಪಿ. ರಾಮ ಭಟ್, ಪೆರಡಾಲ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧-೮-೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಎಲ್. ಐ. ಸಿ.ಗೆ ರೂ 700 ಕೋಟಿಗೂ ಮಿಗಿಲಾದ ಹೊಸ ವ್ಯವಹಾರ

ಲೈಫ್ ಇನ್‌ಶೂರೆನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾವು ಆರ್ಥಿಕ ಸಂವತ್ಸರ 1964-65ರ ಹೊಸ ವ್ಯವಹಾರವನ್ನು 31-3-1965ರಂದು ಮುಗಿಸಿದ್ದು, ಈ ಅವಧಿಯಲ್ಲಿ ಕಾರ್ಪೊರೇಶನಿಗೆ ರೂ. 746.67 ಕೋಟಿಗಳ ಮೌಲ್ಯದ 16,31,546 ಪ್ರಪೋಸಲುಗಳು ಬಂದಿದ್ದು, ಇದರಲ್ಲಿ ರೂ. 701 ಕೋಟಿ ಮೌಲ್ಯದ 14,44,402 ಪ್ರಪೋಸಲ್‌ಗಳು ಪಾಲಿಸಿಗಳಾಗಿ ಪರಿಣಮಿಸಿವೆ.

ಮಾರ್ಚ್ 31, 1964ರಂದು ಕೊನೆಗೊಂಡ ಆರ್ಥಿಕ ಸಂವತ್ಸರದಲ್ಲಿ ಕಾರ್ಪೊರೇಶನಿಗೆ ರೂ. 757.30 ಕೋಟಿಗಳಷ್ಟು ಮೌಲ್ಯದ 17,51,217 ಪ್ರಪೋಸಲ್‌ಗಳು ಬಂದಿದ್ದು, ಇದರಲ್ಲಿ ರೂ. 702.76 ಕೋಟಿಗಳಷ್ಟು ಮೌಲ್ಯದ 16,46,291 ಪ್ರಪೋಸಲ್‌ಗಳು ಪಾಲಿಸಿಗಳಾಗಿ ಪರಿಣಮಿಸಿತ್ತು.

ಈ ಸಮೀಕ್ಷೆಯ ಅವಧಿಯಲ್ಲಿ ಕಾರ್ಪೊರೇಶನ್ ಜನರಲ್ ವಿಮಾ ವ್ಯವಹಾರವನ್ನು ಕ್ರಮವಾಗಿ ಪ್ರಾರಂಭಿಸಿದ್ದು ಈ ಕ್ಷೇತ್ರದಲ್ಲಿ ಬಂದ ಒಟ್ಟು ಪ್ರೀಮಿಯಮ್ ಆದಾಯ ರೂ. 43 ಲಕ್ಷಗಳಾಗಿರುತ್ತದೆ. ಇದರಲ್ಲಿ ಬೆಂಕಿ 37% ಹಡಗು 20% ಮತ್ತು ಇತರ ವಿಧಗಳ ವಿಮೆಯಿಂದ 43% ಆಗಿರುತ್ತದೆ

ವಾರ್ಷಿಕೋತ್ಸವ

ಹಿರಿಯಡ್ಕ, ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು ತಾ. 7ರಂದು ವಿಧಾನ ಸಭಾ ಸದಸ್ಯ ಶ್ರೀ ಯಂ. ಮಧ್ವರಾಜರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಪೂರ್ವಾಹ್ನ ಡಾ| ಬಿ. ಚಂದಪ್ಪ ಹೆಗ್ಡೆಯವರಿಂದ ಧ್ವಜಾರೋಹಣವಾಯಿತು. ಸಂಜೆ ಶ್ರೀ ರಾಘವೇಂದ್ರ ಮಲ್ಯೆಯವರು ಸ್ವಾಗತ ಭಾಷಣಗೈದರು. ಮುಖ್ಯೋಪಾಧ್ಯಾಯ ಶ್ರೀ ಎಸ್. ಆರ್. ಕೆ. ಸುವರ್ಣರವರು ವರದಿವಾಚನಗೈದರು. ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಎ. ಲಕ್ಷ್ಮೀನಾರಾಯಣರಾಯರು ಹಳೆ ವಿದ್ಯಾರ್ಥಿ ಸಂಘದ ವರದಿ ವಾಚಿಸಿದರು. ಶ್ರೀ ಬಿ. ಶೇಖರ ಶೆಟ್ಟಿ ಸಂದೇಶ ವಾಚಿಸಿದರು. ಶ್ರೀ ಲಕ್ಷ್ಮೀಜನಾರ್ದನ ಭಟ್ ಇವರು ಸ್ವಸ್ತಿವಾಚನಗೈದರು. ಶ್ರೀ ಕೆ. ಎಂ. ಭಂಡಾರಿ ಇವರು ಶಾಲಾ ಮಕ್ಕಳ "ಬಾಲ ಕಿರಣ" ಎಂಬ ಹಸ್ತಪತ್ರಿಕೆಯನ್ನು ಉದ್ಘಾಟಿಸಿದರು. ಶ್ರೀ ಮನೋರಮಾ ಮಧ್ವರಾಜರು ಬಹುಮಾನ ವಿತರಣೆಗೈದರು. ಅಧ್ಯಕ್ಷ ಸ್ಥಾನದಿಂದ ಶ್ರೀ ಮಧ್ವರಾಜರು ಮಾತನಾಡುತ್ತಾ "ಈ ಶಾಲೆಗೆ ತನ್ನ ಸ್ವಂತ ಕೊಡುಗೆಯಾಗಿ ಅಶೋಕ ಸ್ತಂಭವನ್ನೀಯುವೆ" ನೆಂದರು. ಶ್ರೀ ವಿಟ್. ಮಹಾಬಲ ಶೆಟ್ಟಿ ಧನ್ಯವಾದವಿತ್ತರು.

ವಾರ್ಷಿಕೋತ್ಸವ

ಶಿರೂರು ಕಲ್ಲಾಳ—ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು ತಾ. 11ರಂದು ಹಿರಿಯಡ್ಕ ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ಎಂ. ಭಂಡಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಸ್. ಮಹಾಲಿಂಗನವರು ಸ್ವಾಗತ ಭಾಷಣಗೈದರು. ಮುಖ್ಯೋಪಾಧ್ಯಾಯ ಶ್ರೀ ಎಂ. ಆನಂದ ನಾಯಕ್ ವರದಿ ವಾಚನ ಮಾಡಿದರು. ಶ್ರೀ ರಾಘವೇಂದ್ರ ಮಲ್ಯೆಯವರು ಮಾತನಾಡಿದ ಬಳಿಕ ಶ್ರೀ ವೈ. ರಘುರಾಮ ಶೆಟ್ಟಿ ಬಹುಮಾನ ವಿತರಣೆಗೈದರು. ಅಧ್ಯಕ್ಷರು ಮಕ್ಕಳ, ಹೆತ್ತವರ, ಅಧ್ಯಾಪಕರ ಹೊಣೆಯನ್ನು ವಿವರಿಸಿದರು. ಧನ್ಯವಾದವಾದ ಬಳಿಕ, ವಿವಿಧ ಮನರಂಜನಾ ಕಾರ್ಯಕ್ರಮ ನಡೆಯಿತು.

ಸತ್ಕಾರ ಸಮಾರಂಭ

ಕಿದಿಯೂರು, ಇನ್‌ಕಂ ಟೇಕ್ಸ್ ಮತ್ತು ಸೇಲ್ಸ್ ಟೇಕ್ಸ್ ಪ್ರಾಕ್ಟಿಶನರ್ ಶ್ರೀ ಬಿ. ಶಾಮರಾಯರು ತನ್ನ ಷಷ್ಟ್ಯಬ್ಧಿಯ ಸಲುವಾಗಿ ತಾ. 19ನೇ ಸಂಜೆ ತಮ್ಮ ಕಿದಿಯೂರು ನಿವಾಸದಲ್ಲಿ ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು. ಇದಕ್ಕೆ ಉಡುಪಿಯ ಮತ್ತು ಆಸುಪಾಸಿನ ಮಹನೀಯರನೇಕರು ಆಗಮಿಸಿದ್ದರು.

ಇದೇಕೆ ಹೀಗೆ?

ವಸಂತನಿಗೆ ನಿರುತ್ಸಾಹದ ಸ್ವಾಗತ

ತೀರ್ಥ ತೆಗೆದುಕೊಂಡರೆ ಶೀತ, ಆರತಿ ತೆಗೆದುಕೊಂಡರೆ ಉಷ್ಣ ಎಂಬುದೊಂದು ಗಾದೆಯಿದೆ. ಇದೇ ಗಾದೆಯನ್ನು ಋತುಗಳ ವಿಷಯದಲ್ಲೂ ನಾವು ಅನುಸರಿಸುವುದಾದರೆ, ಮಾಗಿ ಬಂದರೂ ಕಷ್ಟ, ವಸಂತ ಬಂದರೂ ಕಷ್ಟ ಎನ್ನಬಹುದು. ಮಾಗಿಯ ಕಾಲ ಬಂದಿತೆಂದರೆ, ಮಕ್ಕಳೆಲ್ಲಾ ಚಾಪೆ ಹಿಡಿಯುತ್ತಾರೆ. ಉಬ್ಬಸದ ರೋಗಿಗಳು ಬಹಳ ಅವಸ್ಥೆ ಪಡತೊಡಗುತ್ತಾರೆ. ವಾತರೋಗ ಪೀಡಿತರಿಗೆ ಮೈಕೈ ಹೆಚ್ಚಾಗಿ ಹಿಡಿದುಕೊಳ್ಳುತ್ತದೆ. ಹಾಗೆಂದು ವಸಂತ ಬಂದಿತೆಂದರೆ ಸುಖವಿದೆಯೇ? ಬೇಡಪ್ಪಾ ಈ ವಸಂತದ ಸಹವಾಸ ಎಂದು ಉದ್ಗಾರ ಎಲ್ಲರ ಬಾಯಲ್ಲೂ. ಗಾಳಿ ಜೋರಾಗಿ ಬೀಸಿದಾಗ ಬೆಂಕಿ ನಾಲ್ಕೂ ದಿಕ್ಕುಗಳಿಗೆ ಹರಡಿಕೊಳ್ಳುವಂತೆ ಬೇಸಗೆಯಲ್ಲಿ ಸಾಂಕ್ರಾಮಿಕ ರೋಗಗಳು ಬಲು ಬೇಗನೇ ಹರಡುತ್ತವೆ. ಅಲ್ಲಿ ಸಿಡುಬು, ಇಲ್ಲಿ ಕಾಲರಾ, ಮತ್ತೊಂದೆಡೆಯಲ್ಲಿ ಪ್ಲೇಗು—ಹೀಗೆ ಒಂದಲ್ಲ ಒಂದು ಸೋಂಕು ರೋಗ ನೂರಾರು ಪ್ರಾಣಹಾನಿಗೆ ಕಾರಣವಾಗುವ ಕಾಲವೆಂದರೆ ವಸಂತ.

ಮಾಗಿಯ ಕಾಲ ಮುಗಿಯಿತು; ವಸಂತ ಕಾಲಿರಿಸಿದ್ದಾನೆ. ಆದರೆ, ಆತನನ್ನು ಸ್ವಾಗತಿಸಬೇಕಾದರೆ, ಇರಬೇಕಾದ ಉತ್ಸಾಹ, ಆನಂದಗಳು ಎಲ್ಲರಲ್ಲಿಯೂ ತೋರುತ್ತಿಲ್ಲ. ಕೆಲವರಂತೂ ನಿರಾಸಕ್ತಿಯಿಂದ "ಯಾವ ಕಾಲ ಬಂದರೆ ನಮಗೇನು? ನಮ್ಮ ಕಷ್ಟ ಕಾಲ ಬೇರೆ ದೂರವಾಗಲಿಲ್ಲ" ಎನ್ನುತ್ತ ಹತಾಶರಂತೆ ಕುಳಿತು ಬಿಡುತ್ತಾರೆ. ಏನೋ ಎಲ್ಲಿಲ್ಲದ ಆಯಾಸ, ಯಾವುದೋ ನಿಶ್ಶಕ್ತಿ ಅವರನ್ನು ಕವಿದ ಮುಂದೆ ಎಂತಹುದೋ ಭೀಕರ ರೋಗ ತಮ್ಮನ್ನು ಮುತ್ತಿಗೆ ಹಾಕಲು ಕಾದಿದೆಯೋನೋ ಎಂಬ ಭಾವನೆಯು ಅವರನ್ನು ಕಾಡತೊಡಗುತ್ತಿದೆ. ಚಳಿಯನ್ನು ಎದುರಿಸಲು ಸಾಧ್ಯವಿಲ್ಲದೆ ಕಂಬಳಿ ಹೊದ್ದುಕೊಂಡು ಮುದುರಿ ಮೂಲೆ ಸೇರುವವರನ್ನು ನಾವು ನೋಡುತ್ತಿರುತ್ತೇವೆ. ಕಳ್ ಕಳ್ಳೆಂದು ಕೆಮ್ಮಿಕೊಂಡು ಮೂಗಿನಿಂದ ಬಳಪದಂತೆ ಸಿಂಬಳ ಸುರಿಸುವ ಮಕ್ಕಳನ್ನು ನಾವು ಕಾಣುತ್ತೇವೆ. ಇಂತಹ ತೊಂದರೆಯೊಂದೂ ಇಲ್ಲದ ವಸಂತವನ್ನೇಕೆ ಇವರು ನಿರುತ್ಸಾಹದಿಂದ ಸ್ವಾಗತಿಸುತ್ತಾರೆ? ಇದಕ್ಕೆ ಉತ್ತರವಿಲ್ಲದಿಲ್ಲ.

ಮನುಷ್ಯ ದೇಹದಲ್ಲಿನ ಜೀವಾಣುಗಳು ಬೇಸಗೆ ಕಾಲದಲ್ಲಿ ಅತಿ ವೇಗದಿಂದ ಬೇರೆಯಾಗುವುವು. ಅಲ್ಲದೆ ಜೀವಸತ್ವಗಳ ಅಭಾವ ಮತ್ತು ವಾತಾವರಣದಲ್ಲಾಗುವ ಅನಿರೀಕ್ಷಿತ ಬದಲಾವಣೆಗಳೂ ಕೆಲ ಮಟ್ಟಿಗೆ ಬೇಸಗೆ ಕಾಲದಲ್ಲಿ ಜನರ ನಿರುತ್ಸಾಹಕ್ಕೆ ಕಾರಣಗಳಾಗುವುವು. ಜೀವಾಣುಗಳು ಏಳು ವರ್ಷಗಳಿಗೊಮ್ಮೆ ಬದಲಾಯಿಸುವುವು. ಒಂದೊಂದು ಜೀವಾಣುವು ಒಡೆದು ಒಂದೊಂದು ಹೊಸ ಜೀವಾಣುವಾಗುವುದು. ನಾವೊಬ್ಬ ಸ್ನೇಹಿತನನ್ನು ಏಳು ವರ್ಷಗಳ ಕಾಲ ನೋಡದೆ, ಅನಂತರ ಕಂಡರೆ 'ಏನಯ್ಯಾ, ಮನುಷ್ಯ ಗುರುತೇ ಸಿಗದ ಹಾಗೆ ಆಗಿದ್ದೀಯಲ್ಲಾ' ಎಂದು ಕೇಳಲು ಇದೇ ಕಾರಣ. ಜೀವಾಣುಗಳು ಛಿದ್ರವಾಗಿ ಹೊಸ ಜೀವಾಣುಗಳು ಉತ್ಪತ್ತಿಯಾಗುತ್ತಿರುವುದೇ ಶರೀರದ ಬೆಳವಿಗೆಗೆ ಕಾರಣ.

ಜೀವಾಣುಗಳಲ್ಲಿ ಹೆಚ್ಚಿನವು ಏಳು ವರ್ಷಗಳ ಕಾಲ ಸಜೀವವಾಗಿದ್ದರೂ ಎಲ್ಲರೂ ಹಾಗಿರುವುದಿಲ್ಲ. ಕೆಲವು ಜೀವಂತವಿರುತ್ತವೆ; ಇನ್ನು ಕೆಲವು ಕೆಲವು ತಾಸುಗಳ ಕಾಲ ಮಾತ್ರ ಇರುತ್ತವೆ. ಜೀವಾಣುಗಳು ನವಚೇತನವನ್ನು ಪಡೆಯುವ ವೇಗವು ಮನುಷ್ಯನ ಶಕ್ತಿಯನ್ನು ಬಾಧಿಸುವುದು. ವಯಸ್ಸಾಗುತ್ತ ಬಂದಂತೆ ಜೀವಾಣುಗಳು ಪುನರುಜ್ಜೀವನ ಪಡೆಯುವ ವೇಗವು ಕುಂದುವುದು. ಪ್ರತಿವರ್ಷವೂ ಋತುಗಳು ಬದಲಾಯಿಸುವಾಗ ವಾತಾವರಣದಲ್ಲಿ ಬದಲಾವಣೆ ಕಂಡುಬರುವಾಗ, ಜೀವಾಣುಗಳ ಚಲನೆಯ ಗತಿಯು ಕುಂದುವುದು ಅಥವಾ ಹೆಚ್ಚುವುದು. ಬೇಸಗೆಗಾಲದಲ್ಲಿ ಜೀವಾಣುಗಳ ಒಡೆಯುವಿಕೆಯಲ್ಲಿ ಹೆಚ್ಚಿನ ವೇಗವಿರುತ್ತದೆ. ಚಳಿಗಾಲದಲ್ಲಿ ಇವುಗಳ ಚಲನೆಯು ಕೊಂಚ ಮಂದವಾಗಿದ್ದು, ಬೇಸಗೆ ಕಾಲದಲ್ಲಿ ಅವು ಶೀಘ್ರಗತಿಯನ್ನು ಪಡೆಯುವಾಗ ದೇಹದಲ್ಲಿ ಹೆಚ್ಚಿನ ಆಯಾಸ ನಿಶ್ಶಕ್ತಿಗಳು ಕಂಡುಬರುತ್ತವೆ.

ಜೀವಸತ್ವಗಳು ಮತ್ತು ಇತರ ಕೆಲವು ಪೋಷಕ ಅಂಶಗಳು ಸಾಕಷ್ಟು ಇಲ್ಲದೆ ಹೋದಾಗಲೂ ವಸಂತ ಬೇಸರ ತಲೆದೋರುವುದು. ಈ ವಿಷಯದಲ್ಲಿ ಆಹಾರದಿಂದಾಗುವ ಪರಿಣಾಮಗಳೂ ಇವೆ. ವರ್ಷವೆಲ್ಲಾ ನಾವು ಹಣ್ಣುಹಂಪಲು, ಹಸುರು ಕಾಯಿಪಲ್ಯಗಳನ್ನು ತಿನ್ನುತ್ತಿದ್ದರೂ ಚಳಿಗಾಲದಲ್ಲಿ ಸ್ವಲ್ಪ ಘನವಾದ ಪದಾರ್ಥಗಳನ್ನು ತಿನ್ನುತ್ತೇವೆ. ಬೇಸಗೆಯ ಕಾಲದಲ್ಲಿ ಹಣ್ಣಿನ ರಸ, ಫ್ರುಟ್ ಸಲಾದ್ ಮುಂತಾದ ಹಗುರಾದುವುಗಳನ್ನು ಸ್ವೀಕರಿಸುತ್ತೇವೆ. ಈ ಕಾರಣದಿಂದ ಬೇಸಗೆಯಲ್ಲಿ ನಾವು ಜೀವಸತ್ವಗಳ ಅಭಾವಕ್ಕೆ ಬಲಿಯಾಗುತ್ತೇವೆ. ಇದರಿಂದಾಗಿಯೇ ನಿಶ್ಶಕ್ತಿ ತಲೆದೋರುವುದು. ದೇಹದಲ್ಲಿ ಶಕ್ತಿ ಕಡಿಮೆಯಿರುವಾಗ ರೋಗಗಳನ್ನೆದುರಿಸುವ ಶಕ್ತಿಯೂ ಕಡಮೆಯಾಗುವುದು. ಶಕ್ತಿ ಕುಂಠಿತವಾಗುವುದರಿಂದಲೇ ಬೇಸಗೆಯಲ್ಲಿ ಉಷ್ಣಾಂಶವು ಹೆಚ್ಚುತ್ತಾ ಬಂದು ಬೇಸರ, ನಿರುತ್ಸಾಹಗಳು ಹೆಚ್ಚಿ ಮುಖ ಸಿರಟಿಕೊಂಡು ಹೋಗಬೇಕೆನ್ನಿಸುವುದು. ಮಾರ್ಚಿ ತಿಂಗಳಲ್ಲಿ ಉಷ್ಣಾಂಶವು ಅಧಿಕವಾಗತೊಡಗುತ್ತದೆ. ಮಳೆ ಬೀಳುವ ತನಕವೂ ಉಷ್ಣದ ಪ್ರಮಾಣ ಇಳಿಯುವುದಿಲ್ಲ. ಆದುದರಿಂದಲೇ ಇದೇ ಅವಧಿಯಲ್ಲಿ ಸಾಂಕ್ರಾಮಿಕ ರೋಗಗಳು ಹೆಚ್ಚಾಗುವವು. ವಯಸ್ಸಾದವರು ಮೃತರಾಗುವುದೂ ಹೆಚ್ಚು.

ಸಾಯುವವರನ್ನು ಬದುಕಿಸುವುದು ಅಸಾಧ್ಯವಾದರೂ ಸಾಂಕ್ರಾಮಿಕ ರೋಗಗಳು ಹರಡದಂತೆ ಜೀವಸತ್ವ ಸಹಿತ ಆಹಾರ ವಸ್ತುಗಳನ್ನು ಅಧಿಕ ಪ್ರಮಾಣದಲ್ಲಿ ಸೇವಿಸುವುದು ಪರಿಣಾಮಕಾರಿಯೆನ್ನಬಹುದು.

ಕನಕದಾಸ

(ಐದನೇ ಪುಟದಿಂದ)

ಶ್ರೀವಾದಿರಾಜರ ಸೋದೆ ಮಠದ ಪೀಠಾಧೀಶ್ವರರ ಪೀಳಿಗೆಯ ಪರ್ಯಾಯ ಕಾಲದಲ್ಲಿಯೇ ನಡೆಯುವುದು ಒಂದು ಸಂತಸದ ವಿಚಾರ. ಅಲ್ಲಿಂದ ಇಲ್ಲಿಗೆ ಸೋದೆ ಮಠದ ಪರ್ಯಾಯವು 25ನೇಯದಾಗಿರುತ್ತದೆ.

ಕನಕದಾಸನಿಂದಾಗಿ ಉಡುಪಿಯ ಕೀರ್ತಿ ಹೆಚ್ಚಿತು. ಕನಕನ ಪ್ರಭಾವವು ಉಡುಪಿಯಿಂದಾಗಿ ಇನ್ನೂ ಹೆಚ್ಚಿತು. ನಾವೂ ಶ್ರೀ ಕೃಷ್ಣನಲ್ಲಿ ಶರಣಾಗೋಣ, ಕನಕನ ವಚನಾಮೃತವನ್ನು ಪಾಲಿಸೋಣ, ಅವನು ಹಾಡಿದ ಪದಗಳನ್ನಾದರೂ ನಾವು ಪ್ರತಿದಿನ ಸ್ಮರಿಸಿ ಕೃತಾರ್ಥರಾಗೋಣ.

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ನಗು ನೀನು ....

ಜಗವೆ ನಿನ್ನೊಡನೆ ನಗುತಲಿಹುದು ....

ತಿಂಗಳ ಬೆಳಕಿನಲ್ಲಿ ಹೊಸದಾಗಿ ಮದುವೆಯಾದ ವಧೂವರರಿಬ್ಬರು ಕುಳಿತು ಸರಸವಾಡುತ್ತಿದ್ದರು.

ಗಂಡ ಪ್ರೇಮಾಧಿಕ್ಯದಿಂದ ಹೇಳಿದ "ಪ್ರಿಯೇ ನಾನು ನಿನ್ನನ್ನು ನನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತೇನೆ. ಆದರೆ ಒಂದು ವಿಷಯ ಮಾತ್ರ ತಿಳಿಸಲು ತುಂಬಾ ಬೇಸರಿಸುತ್ತೇನೆ"

ಪತ್ನಿ "ಅದಾವುದು?"

"ವಿಶೇಷವೇನೂ ಇಲ್ಲ. ನನಗೆ ಒಂದು ಕಣ್ಣು ಸಂಪೂರ್ಣ ಕಾಣಿಸುವುದಿಲ್ಲ. ಅದಕ್ಕಾಗಿಯೇ ನಾನೀ ಕನ್ನಡಕ ಧರಿಸುತ್ತಿದ್ದೇನೆ"

ಪತ್ನಿ ನಿಶ್ಚಿಂತೆಯಾಗಿ ಹೇಳಿದಳು. "ಅದಕ್ಕಾಗಿ ನೀವೇನೂ ಬೇಸರಿಸಬಾರದು. ನನಗೆ ಬಾಯಿಯಲ್ಲಿ ಹಲ್ಲುಗಳಿಲ್ಲ. ಚಿಕ್ಕಂದಿನಲ್ಲಿಯೇ ಹೋಗಿವೆ. ಅದಕ್ಕಾಗಿಯೇ ನಾನೀ ಸೆಟ್ಟುಗಳನ್ನು ಇರಿಸಿಕೊಂಡದ್ದು" ಎಂದಳು ಅವುಗಳನ್ನು ಕಳಚಿ ತೋರಿಸುತ್ತಾ.

o o o

ತಂದೆ: ಡಾಕ್ಟರ್ ಈಗ ಮಾಡಬೇಕಾದ ಒಪರೇಶನ್‌ನಿಂದ ಮಗುವಿಗೇನೂ ಜೀವಕ್ಕೆ ಅಪಾಯವಾಗದಷ್ಟೇ?

ಡಾಕ್ಟರ್: ಅದನ್ನು ನೋಡಲಿಕ್ಕಾಗಿಯೇ ನಾನೀಗ ಒಪರೇಶನ್ ಮಾಡುವುದು.

o o o

"ನಿರುದ್ಯೋಗ ಸಮಸ್ಯೆ ನಿಜವಾಗಿಯೂ ಭೀಕರವಾಯಿತು" ನಾನಂದೆ.

"ನಾನೊಂದು ಪರಿಹಾರ ಸೂತ್ರ ಕಂಡು ಹಿಡಿದಿದ್ದೇನೆ" ನನ್ನ ಗೆಳೆಯ ನಗುತ್ತಾ ನುಡಿದ.

"ಏನದು?"

"ಒಂದು ನಿರ್ಜನ ದ್ವೀಪದಲ್ಲಿ ಎಲ್ಲಾ ಗಂಡಸರನ್ನು ಬಿಟ್ಟು ದೂರದ ಇನ್ನೊಂದರಲ್ಲಿ ಎಲ್ಲಾ ಸ್ತ್ರೀಯರನ್ನು ಇರಗೊಡಿಸಬೇಕು. ಆಗ ಎಲ್ಲರೂ ಒಂದು ದೋಣಿಯೋ ಹಡಗವೊ ಕಡೆಗೆ ತೆಪ್ಪವೊ ರಚಿಸಲು ಪ್ರಯತ್ನಿಸಬಹುದು!"

— ಸಂಗ್ರಹ: ಭಾಸ್ಕರ ಭಂಡಾರಿ, ಮಂಜಿಬೈಲು.

READ &
ADVERTISE IN
NAVAYUGA WEEKLY

ಶ್ರೀ ಧರ್ಮಸ್ಥಳದ ದಾವೆಯಲ್ಲಿ ರತ್ನವರ್ಮ ಹೆಗ್ಗಡೆಯವರಿಗೆ ಪೂರ್ಣ ಜಯ

ಮೈಸೂರು ಹೈಕೋರ್ಟಿನ ತೀರ್ಮಾನ

ಧರ್ಮಸ್ಥಳ, ಎಪ್ರಿಲ್ 22:—ದಿವಂಗತ ಶ್ರೀ ಮಂಜಯ್ಯ ಹೆಗ್ಗಡೆಯವರ ಸ್ವಾಧೀನವಿದ್ದ ಧರ್ಮಸ್ಥಳ ಸಂಸ್ಥೆ ಮತ್ತು ಎಲ್ಲಾ ಸ್ಥಿರಚರ ಸೊತ್ತುಗಳ ಸ್ವಾಧೀನತೆಗೆ, ಅವರ ಮಗಳು ಶ್ರೀಮತಿ ವಿಮಲ ಬಲ್ಲಾಳ—ಇವರು ಈಗಿನ ಹೆಗ್ಗಡೆಯವರಾದ ಶ್ರೀ ರತ್ನವರ್ಮ ಹೆಗ್ಗಡೆಯವರ ಮೇಲೆ ದಾಖಲು ಮಾಡಿದ ದಾವೆಯನ್ನು ಮೈಸೂರು ಹೈಕೋರ್ಟಿನವರು ತಾ. 21-4-1965 ರಲ್ಲು ಕೊಟ್ಟ ತೀರ್ಪು ಪ್ರಕಾರ, ಶ್ರೀ ರತ್ನವರ್ಮ ಹೆಗ್ಗಡೆಯವರ ಖರ್ಚ ಸಮೇತ ಡಿಸ್ ಮಿಸ್ ಮಾಡಲಾಗಿಯದೆ.

ಶ್ರೀ ರತ್ನವರ್ಮ ಹೆಗ್ಗಡೆಯವರ ತೀರ್ಥರೂಪರಾದ ದಿವಂಗತ ಶ್ರೀ ಚಂದಯ್ಯ ಹೆಗ್ಗಡೆಯವರನ್ನೂ, ದಿವಂಗತ ಶ್ರೀ ಮಂಜಯ್ಯ ಹೆಗ್ಗಡೆಯವರನ್ನೂ, ಜತೆಯಾಗಿ ನೆಲ್ಯಾಡಿ ಕುಟುಂಬಕ್ಕೆ ದತ್ತಕ್ಕೆ ತೆಗೆದುಕೊಂಡದ್ದು ಕಾನೂನು ಪ್ರಕಾರ ಅಸಿಂಧು ಎಂತಲೂ, 1918ರಿಂದ ತಾ. 31-8-1955ರಲ್ಲು ಅವರು ಮೃತಪಡುವ ವರೆಗೆ ಶ್ರೀ ಮಂಜಯ್ಯ ಹೆಗ್ಗಡೆಯವರು ಏನೂ ಹಕ್ಕಿಲ್ಲದೆ, ಸಂಸ್ಥೆ, ಮತ್ತು ಸ್ಥಿರಚರ ಸೊತ್ತುಗಳ ಸ್ವಾಧೀನತೆಯಲ್ಲಿದ್ದದ್ದೆಂತಲೂ ಆ ಪ್ರಕಾರ ಸ್ವಾಧೀನತೆ ಇದ್ದದ್ದರಿಂದ ವಿರೋಧಾನುಭವ ಕಾನೂನು ಪ್ರಕಾರ, ಸಂಸ್ಥೆಯಲ್ಲಿ ಮತ್ತು ಸ್ಥಿರಚರ ಸೊತ್ತುಗಳಲ್ಲಿ ಅವರಿಗೆ ಸಂಪೂರ್ಣ ಸ್ವಂತ ಹಕ್ಕು ಸಿದ್ಧಿಸಿಯದೆಂತಲೂ, ಅವರು ಮೃತಪಟ್ಟ ನಂತ್ರ ಆ ಸಂಪೂರ್ಣ ಹಕ್ಕು ಅವರ ಒಬ್ಬಳೇ ಮಗಳಾದ ತನಗೆ ಬಂದಿರುತ್ತದೆಂತಲೂ, ಪಟ್ಟಕ್ಕೆ ಬಂದ ಶ್ರೀ ರತ್ನವರ್ಮ ಹೆಗ್ಗಡೆಯವರಿಗೆ ಸಂಸ್ಥೆಯಲ್ಲಾಗಲಿ, ಸ್ಥಿರಚರ ಆಸ್ತಿಗಳಲ್ಲಾಗಲೀ ಏನೊಂದೂ ಹಕ್ಕಿಲ್ಲವೆಂತಲೂ, ಸುಮಾರು 10 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ತೀರ್ವೆ ಕೊಡುವ ಎ ಮತ್ತು ಬಿ ಶೆಡ್ಯೂಲಿನಲ್ಲಿ ಕಾಣಿಸಿದ ಆಸ್ತಿಗಳನ್ನು ಖಾಸಗಿ ಸ್ವಂತ ನೆಲೆಯಲ್ಲಿಯೂ, ಸಿ. ಮತ್ತು ಡಿ. ಶೆಡ್ಯೂಲಿನಲ್ಲಿ ಕಾಣಿಸಿದ ಆಸ್ತಿ, ವಸ್ತು ಸಂಸ್ಥೆಗಳನ್ನು ಖಾಸಗಿ ಟ್ರಸ್ಟ್ ನೆಲೆಯಲ್ಲಿಯೂ, ತನಗೆ ಸ್ವಾಧೀನ ಬಿಟ್ಟುಕೊಡಬೇಕಾಗಿ ವಾದಿ ಶ್ರೀಮತಿ ವಿಮಲ ಬಲ್ಲಾಳ ಇವರ ದಾವೆ.

ನೆಲ್ಯಾಡಿ ಮನೆತನದ ಪೂರ್ವಸಂಪ್ರದಾಯ ಮತ್ತು ಪದ್ಧತಿ ಪ್ರಕಾರ ಒಬ್ಬರನ್ನು ದತ್ತದ ಮಗನಾಗಿ ಇನ್ನೊಬ್ಬರನ್ನು ಸಾಕಣೆ ಮಗನಾಗಿ ತೆಗೆದುಕೊಳ್ಳುವುದು ಸಮ್ಮತ ಮತ್ತು ಸಿಂಧುವೆಂತಲೂ, ದಿವಂಗತ ಶ್ರೀ ಚಂದಯ್ಯ ಹೆಗ್ಗಡೆಯವರನ್ನು ದತ್ತದ ಮಗನಾಗಿಯೂ, ದಿವಂಗತ ಶ್ರೀ ಮಂಜಯ್ಯ ಹೆಗ್ಗಡೆಯವರನ್ನು ಸಾಕಣೆ ಮಗನಾಗಿಯೂ ತೆಗೆದುಕೊಂಡದ್ದರಿಂದ ಧರ್ಮಸ್ಥಳ ಸಂಸ್ಥೆಯ ಒಂದಂಶವಾದ ಹೆಗ್ಗಡೆತನದ ಪಟ್ಟಕ್ಕೆ ಒಬ್ಬರ ನಂತರ ಇನ್ನೊಬ್ಬರು ಬಂದು ಆಡಳ್ತೆ ನಡೆಸಿದ್ದೆಂತಲೂ, ದಿವಂಗತ ಶ್ರೀ ಮಂಜಯ್ಯ ಹೆಗ್ಗಡೆಯವರು ಮೃತಪಟ್ಟ ನಂತ್ರ ನೆಲ್ಯಾಡಿ ಮನೆತನದ ಹಿರಿಯ ಮೆಂಬರನಾದ ತಾನು ಸ್ಥಳ ರಿವಾಜು ಪ್ರಕಾರವೂ ಮತ್ತು ದೈವ ದೇವರ ಸಮ್ಮತಿಯಿಂದಲೂ ಪಟ್ಟಕ್ಕೆ ಬಂದಿರುತ್ತೇನಾಗಿಯೂ, ದಿವಂಗತ ಮಂಜಯ್ಯ ಹೆಗ್ಗಡೆಯವರು ನೆಲ್ಯಾಡಿ ಮನೆತನಕ್ಕಾಗಲಿ, ತನಗಾಗಲಿ, ಸಂಸ್ಥೆಗಾಗಲಿ, ವಿರೋಧವಾಗಿ ಅನುಭವಿಸಲಿಲ್ಲವೆಂತಲೂ, ಅವರಿಗೆ ಸಂಸ್ಥೆಯಲ್ಲಾಗಲಿ, ಸ್ಥಿರಚರ ಸೊತ್ತುಗಳಲ್ಲಾಗಲೀ ಯಾವತರದ ವ್ಯಕ್ತಿಶಃ ಸ್ವಂತ ಹಕ್ಕು ಸಿದ್ಧಿಸಿರುವುದಿಲ್ಲವೆಂತಲೂ, ಅವರಿಂದ ಅವರ ಮಗಳಾದ ಶ್ರೀಮತಿ ವಿಮಲ ಬಲ್ಲಾಳ್ ಇವರಿಗೆ ಯಾವುದೊಂದು ಹಕ್ಕು ಬಂದಿರುವುದಿಲ್ಲವೆಂತಲೂ, ಧರ್ಮಸ್ಥಳವೆಂದರೆ ವಿವಿಧ ಸಂಸ್ಥೆಗಳು ಒಂದುಗೂಡಿದ ಒಂದು ಸಂಸ್ಥೆಯಾಗಿದ್ದು, ಎಲ್ಲಾ ಸ್ಥಿರಚರ ಸೊತ್ತುಗಳು ಆ ಸಂಸ್ಥೆಯ ಹಕ್ಕಿನದ್ದಾಗಿದ್ದು ಖಾಸಗಿ ಸೊತ್ತಿನಂತೆ ಇದಕ್ಕೆ ವ್ಯಕ್ತಿಶಃ ಹಕ್ಕು ಇರುವುದಿಲ್ಲವೆಂತಲೂ, ಯಾವ ಸಂದರ್ಭದಲ್ಲಿಯೂ, ನೆಲ್ಯಾಡಿ ಕುಟುಂಬಕ್ಕೆ ಅನ್ವಯಿಸಲ್ಪಟ್ಟ ನೆಲ್ಯಾಡಿ ಕುಟುಂಬದ ಮೆಂಬರನಾಗಿ ಪಟ್ಟಕ್ಕೆ ಬಂದು ಧರ್ಮಸ್ಥಳ ಹೆಗ್ಗಡೆಯಾಗಿ ಸಂಸ್ಥೆಯನ್ನು ಮ ಅದರ ಸಕಲ ಸ್ಥಿರಚರ ಸೊತ್ತುಗಳ ಸ್ವಾಧೀನತೆ ಹೊಂದಿ ಅನುಭವಿಸಿದ ಶ್ರೀ ಮಂಜಯ್ಯ ಹೆಗ್ಗಡೆಯವರ ಮಗಳಾದ, ವಾದಿ ಶ್ರೀಮತಿ ವಿಮಲ ಬಲ್ಲಾಳ-ಇವರಿಗೆ ದಿವಂಗತ ಮಂಜಯ್ಯ ಹೆಗ್ಗಡೆಯವರ. ನೆಲ್ಯಾಡಿ ಕುಟುಂಬದ ಮೆಂಬರರೇ ಅಲ್ಲವೆಂತಲೂ, ಅವರಿಗೆ ವಿರೋಧಾನುಭವದಿಂದ ಹಕ್ಕು ಸಿದ್ಧಿಸಿಯದೆಂತಲೂ, ಪ್ರತಿವಾದಿಸಲು ಎಷ್ಟನ್ನಾದರೂ ಹಕ್ಕಿಲ್ಲವೆಂತಲೂ ಸ್ಥಳ ರಿವಾಜು ಮತ್ತು ದೈವದೇವರ ಸಮ್ಮತಿ ಪ್ರಕಾರ ಪಟ್ಟಕ್ಕೆ ಬಂದು ಹೆಗ್ಗಡೆಯಾಗಿರುವ ತನ್ನಿಂದ ಸಂಸ್ಥೆಯನ್ನಾಗಲಿ, ಸ್ಥಿರಚರ ಸೊತ್ತುಗಳನ್ನಾಗಲಿ ಸ್ವಾಧೀನತೆ ಕೇಳುವರೆ ವಾದಿಗೆ ಎಷ್ಟನ್ನಾದ್ರೂ ಹಕ್ಕಿಲ್ಲವೆಂತಲೂ, ವಾದಿಯ ದಾವೆಯನ್ನು ಖರ್ಚ ಸಮೇತ ಡಿಸ್ ಮಿಸ್ ಮಾಡಬೇಕಾಗಿ ಪ್ರತಿವಾದಿಯ ಹೇಳಿಕೆ.

ಈ ದಾವೆಯು 1962ರಲ್ಲು ಮಂಗಳೂರು ಸಬ್ ಕೋರ್ಟಿನಲ್ಲಿ ತನ್ಖೆಗೆ ಬಂದು, ಆಗ ಸಬ್ ಜಡ್ಜರಾಗಿದ್ದ ಶ್ರೀ ಡಿ. ಎಚ್. ಹಂಗಾರ್ಕೆಯವರು, ಸಂಪೂರ್ಣ ಸ್ಥಿರಚರ ಆಸ್ತಿ ಸಂಸ್ಥೆಯ ಹಕ್ಕಿನದ್ದಾದರೂ, ಹೆಗ್ಗಡೆತನದ ಹಕ್ಕು ವಾದಿಗೆ ಸಿದ್ಧಿಸಿದ್ದರಿಂದ, ಸಂಸ್ಥೆ ಮ ಸಕಲ ಸ್ಥಿರಚರ ಆಸ್ತಿಗಳನ್ನು ಪ್ರತಿವಾದಿ ಶ್ರೀ ರತ್ನವರ್ಮ ಹೆಗ್ಗಡೆಯವರ. ವಾದಿಗೆ ಬಿಟ್ಟುಕೊಡಬೇಕೆಂತ, ವಾದಿಯ ಖರ್ಚ ಸಮೇತ ವಾದಿಗನಕ್ಕೆ ತಾ. 22-12-1962ರಂದು ಡಿಕ್ರಿ ಕೊಟ್ಟರು. ಈ ತೀರ್ಪಿನ ಮೇಲೆ ಶ್ರೀ ರತ್ನವರ್ಮ ಹೆಗ್ಗಡೆಯವರು ಮೈಸೂರು ಹೈಕೋರ್ಟಿಗೆ ಅಪೀಲು ಮಾಡಿ, ಅಪೀಲಿನಲ್ಲಿ ನೆಲ್ಯಾಡಿ ಕುಟುಂಬಕ್ಕೆ ಇಬ್ಬರನ್ನು ಜತೆಯಿಂದ ಸ್ವೀಕರಿಸುವುದು, ಕುಟುಂಬದ ಸಂಪ್ರದಾಯ ಮತ್ತು ಪದ್ಧತಿಗೆ ಅನುಗುಣವಾಗಿರುವುದರಿಂದ ನ್ಯಾಯ ಸಮ್ಮತವೂ ಸಿಂಧುವೂ ಆಗಿದೆಯಂತಲೂ, ದಿವಂಗತ ಶ್ರೀ ಮಂಜಯ್ಯ ಹೆಗ್ಗಡೆಯವರಿಗೆ ಸಂಸ್ಥೆಯಲ್ಲಾಗಲಿ, ಸ್ಥಿರಚರ ಆಸ್ತಿಗಳಲ್ಲಾಗಲಿ, ಹೆಗ್ಗಡೆತನದಲ್ಲಾಗಲಿ ವಿರೋಧಾನುಭವದಿಂದ ಏನೊಂದೂ ಹಕ್ಕು ಸಿದ್ಧಿಸಿರುವುದಿಲ್ಲವೆಂತಲೂ, ನೆಲ್ಯಾಡಿ ಕುಟುಂಬದ ಮೆಂಬರನಾಗಿ ಪಟ್ಟಕ್ಕೆ ಬಂದ ಶ್ರೀ ಮಂಜಯ್ಯ ಹೆಗ್ಗಡೆಯವರ ಮಗಳಿಗೆ, ಶ್ರೀ ಮಂಜಯ್ಯ ಹೆಗ್ಗಡೆಯವರು ಕುಟುಂಬದ ಮೆಂಬರರಲ್ಲ ಅವರಿಗೆ ಆಸ್ತಿಯಲ್ಲಿ ಮ ಸಂಸ್ಥೆಯಲ್ಲಿ ಸ್ವಂತ ಹಕ್ಕು ಬಂದದೆಂತ ಹೇಳುವ ಅಧಿಕಾರವಿಲ್ಲವೆಂತಲೂ, ದಿವಂಗತ ಮಂಜಯ್ಯ ಹೆಗ್ಗಡೆಯವರ ನಂತ್ರ, ನೆಲ್ಯಾಡಿ ಕುಟುಂಬದ ಮೆಂಬರನಾಗಿ ಪಟ್ಟಕ್ಕೆ ಬಂದ ಪ್ರತಿವಾದಿ ಶ್ರೀ ರತ್ನವರ್ಮ ಹೆಗ್ಗಡೆಯವರು ಧರ್ಮಸ್ಥಳ ಸಂಸ್ಥೆಯ ಮ ಸ್ಥಿರಚರ ಸೊತ್ತುಗಳ ಸ್ವಾಧೀನತೆಯುಳ್ಳವರು ಸಂಪೂರ್ಣ ಹಕ್ಕುದಾರರೆಂತಲೂ ವಾದಿಗೆ ಯಾವ ನಿವೃತ್ತಿಯೂ ಸಿಕ್ಕಲಾರದೆಂದೂ ವಾದಿಯ ದಾವೆಯನ್ನು ತಾ. 21—4—65ರಂದು ಕೊಟ್ಟ ತೀರ್ಪು ಪ್ರಕಾರ ಖರ್ಚ ಸಮೇತ ಡಿಸ್‌ಮಿಸ್ ಮಾಡಿರುತ್ತಾರೆ.

ಕಲೆ ತುಂಬಿದ ನೀರುಗುಳ್ಳೆ

(ನಾಲ್ಕನೇ ಪುಟದಿಂದ)

"ನೋಡು, ವೃಂದ ಎಂಬೊಬ್ಬ ಸಂತ ಕವಿ ಬರೆದಿದ್ದಾನೆ: ವೇದಿಕೆಯ ಮೇಲೆ ನಿಂತು ಮಾತಾಡ ಬಯಸುವೆಯಾದರೆ, ಮೊದಲು ಮುಂದಿರುವ ಸಭೆಯನ್ನು ನೋಡಿಕೊಳ್ಳು...."

"ಯಾಕಂತೆ?"

"ನೋಡು, ಇಂಗ್ಲಿಷಿನಲ್ಲಿ ಹಾಳೂರು—ಹಾಲೂರು ಒಂದೇ."

"ಕೇಳು, ಸಭೆ ನೋಡದೆ ಆಡಿದ ಶಿಶುಪಾಲನ ಕುತ್ತಿಗೆ ಉರುಳಿತು ನೋಡು."

"ಹ್ಹ ಹ್ಹ.... ಪರವಾಗಿಲ್ರಿ. ಪಾಪ, ಶಿಶುಪಾಲನ ದುರದೃಷ್ಟ. ರಾಜಸೂಯ ಸಭೆಯಲ್ಲಿರೋರೆಲ್ಲಾ ಕೃಷ್ಣನಿಗೆ ಪರವಾದವರೆಂಬುದನ್ನು ತಿಳಿತಿಳಿದೂ ಆತ ಮಾತಾಡಿಬಿಟ್ಟ ನೋಡಿ..."

"ಅದಕ್ಕೇ ಅನ್ನೋದು ಹಾಗೆ..."

"ಮತ್ತೆ ಕೇಳ್ರಿ, ವಿಮಲೂ ಅಂದದ್ದು. ಅವ್ರು ಎಲ್ಲೋ ತಿರುಗಾಡುಕ್ಕೆ ಹೋಗಿದ್ರಂತೆ.... ನೋಡಿ, ಅದೊಂದು ಊರು, ಯಾವುದೋ ಹೇಳಿದ್ರು ..."

"ಇಲ್ಲಿ, ಯಾವುದೋ ಒಂದು ಹಾಳೂರ...."

"ಹಾಳೂರು ಅಲ್ರಿ, ಹಾಲೂರು ಹಾಲೂರು...."

"ಹೌದಪ್ಪ, ಹಾಳೂರು..."

"ಯಾಕೆ ಹಾಗೆ ಅಂತೀರಿ?"

"ಅದೊಂದು ಇಂಗ್ಲಿಷ್ ಹಾಳು ಭಾಷೆ. ನಮ್ಮ ಇಂಗ್ಲಿಷ್ ಮೇಷ್ಟ್ರು ಹೇಳುತಿದ್ರು ರಮೂ ಕಿಲ್ಡ ರಮಾನಾ ಅಂತ...'

"ಪಂಪ್ಯಾಗಿಲ್ವೆ...."

"ಇದ್ರೆ ಏನಂತೆ? ನಾನು ಹೇಳೋದು ಕೇಳಿ...."

'ಹ್ಹೂಂ...."

'ಹಾಲೂರಿನಲ್ಲಿ ಒಂದು ನಾಟಕ ನೋಡಕ್ಕೆ ಹೋದ್ರಂತೆ; ಅಲ್ಲಿಕೊನೆಗೆ ಧನ್ಯವಾದ ಕೊಡೋವ್ರುನಿಮ್ದು ಹಾಲೂರಂತೆ, ಇಲ್ಲಿ ಹಾಲೇ ಸಿಗೋಲ್ಲ. ನಾಟಕ ನೋಡೋ ಶೋಕೀನೂ ಇಲ್ಲ ಅಂತ ದೂರಿದ್ರಂತೆ..."

"ಹ್ಹೂಂ....ಮುಂದೆ?"

'ಮಾರುದಿನ ಹೊಟ್ಲಲ್ಲಿ ಚಾ ಕುಡಿಯೋಕೆ ಆತ ಹೋದಾಗ, ಹಾಲು ಹಾಕ್ದೇನೇ ಹೋಟ್ಲಿನವ ಚಾಯ ಇಕ್ಕಂತೆ. ಇದ್ಯಾಕ್ರೀ ಹೀಗೆ ಅಂದಾಗ, ಹಾಲೂರೀಲಿ ಹಾಲಿಲ್ರೀಂತ ಉತ್ರ ಬಂತಂತೆ!'

"ಸರಿಯಾಗಿಯೇ ಮಾಡಿದ ನೋಡು. ಅಲ್ವಾದ್ರೆ ಯಾವ್ಯಾವುದೋ ಊರೂರು ತಿರುಗಿ ದಿನಯಾಸನೆ ಮಾಡೋವನಿಗೆ ಯಾಕೆ ಬೇಕಿತ್ತಂತೆ ಊರವರ ಸುದ್ದಿ?'

"ನೀವು ಶಿಶುಪಾಲನ ಕಥೆ ಹೇಳಿದಾಗ ನನಗೆ ಇದು ನೆನಪಿಗೆ ಬಂತು...."

'ಎಲ್ಲಾ ಒಂದೇ ಕಣೇ. ಮುಖಕ್ಕೆ ತಕ್ಕ ಮಾತು, ಕಾಲಕ್ಕೆ ತಕ್ಕ ಕೋಲ...."

"ಏನು ಕಾಲವೋ ಏನು ಕೋಲವೋ? ನಿಮ್ಮ ಟೋಪಿಯವ್ರ ಕಾಲದಲ್ಲಿ ಯಾವ ಕೋಲ ಕಟ್ಟಿದ್ರೂ ಸುಖವಿಲ್ಲ..."

'ಯಾಕೆ ಹಾಗಂತೀಯ?'

"ಮತ್ತ್ಯಾಕೆ ನೋಡ್ರಿ... ಕಾಂಗ್ರೆಸ್ಸು ತನ್ನ ನೀತಿಯನ್ನ ಬದಲಾಯಿಸುತ್ತಿದೆ. ಎಲ್ಲ ಪಕ್ಷಗಳ ಧ್ಯೇಯ ಒಂದೇ ಅನ್ನಿ. ಭಾರತದ ಉದ್ಧಾರ. ಅಲ್ರಿ ನೋಡಿ, ಈಗೀಗ ಕಮ್ಯೂನಿಸ್ಟ ಕಾಂಗ್ರೆಸ್‌ಗಳಲ್ಲಿ ಭೇದವೇ ಇಲ್ಲಾಂತಾಗಿ...'

'ಅನ್ನೋವ್ರು ಅಂದುಕೊಳ್ಳಿ. ನಿಂಗೇನು ನಂಗೇನು?'

"ಹೌದ್ರಿ, ಸಮಾಜವಾದ, ಕಲ್ಯಾಣ ರಾಷ್ಟ್ರ, ಸುಖೀ ರಾಜ್ಯ ಪ್ರಜಾಸತ್ತೆ ಸಮಾನತೆ ಇತ್ಯಾದಿ ದೊಡ್ಡ ದೊಡ್ಡ ಮಾತುಗಳನ್ನು ಕೇಳಿದಾಗ ಮುಂದೇನಾದೀತು ಎಂಬ ದರ ಕಲ್ಪನೆಯೇ ಬರೋಲ್ಲ. ಬವಿಷ್ಯದ ಬಗ್ಗೆ ಭದ್ರತೆಯೆಂಬುದೇ ಹುಟ್ಟೊಲ್ಲ....'

"ಅದಕ್ಕೇ ನೋಡು ನೀರ ಮೇಲಣ ಗುಳ್ಳೆ ಜೀವನ ಅನ್ನೋದು ದಾಸರು! ಭವಿತವ್ಯಂ ಭವತ್ಯೇವ ನಾಳೆ ಹುಟ್ಟಿಲ್ಲ. ಇಂದು ಮಾತ್ರ ನಮ್ಮದು...'

"ಶುರುವಾಯ್ತು ನಿಮ್ಮವ್ಯಾಖ್ಯಾನ."

'ಹೋ, ಮತ್ತೆ ಬಿಟ್ಬಿ ಪಾಪ, ವ್ಯಾಖ್ಯಾನ ಕೇಳಿಯನ್ನಾಲಿಸಿ ರಾಣಿಯ ಕರ್ಣಗಳೆಷ್ಟು ನೊಂದಿವೆಯೋ'

"........................."

"ಪಥ ಭ್ರಮಣದಿಂದ ಪಾದಕಮಲಗಳು ಬಳೆಷ್ಟು ಮ್ಲಾನಿತಗಳಾಗಿವೆ! ಉಸ್ಥಿತ ಮಾತ್ರದಿಂದ ಜಘನ ಭಂಗವಾದಂತಿಯಲ್ಲ...."

"ಸಾಕು ಸಾಕು ದಯಾವಂತ, ಸಾಕು ಮಾಡು ನಿನ್ನ ಸುಭಾಷಣವನ್ನು..."

'ಮತ್ತೇನು ಸೇವೆಯನ್ನರ್ಪಿಸಲಿ?'

'ತ್ವರಿತವಾಗಿ ಅಂತಃಪುರದ ಬೀಗವನ್ನು ತೆಗೆ....ವಸ್ತ್ರ ಪರಿವರ್ತಿಸಿ ಉದರ ದೇ

(ಮುಂದಿನ ಪುಟಕ್ಕೆ)

ಉಡುಪಿಯಲ್ಲಿ ವೈಭವದ ಕನಕನ ಚತುಶ್ಶತಮಾನೋತ್ಸವ

ಉಡುಪಿ : ಕನಕದಾಸರು ತುಳಿದು, ನಲಿದ ನೆಲವಾದ ಉಡುಪಿಯಲ್ಲಿ ಅವರ ಚತುಶ್ಶತಮಾನೋತ್ಸವವು ಯಥೋಚಿತವಾದ ಮೂರು ದಿನಗಳ ಕಾರ್ಯಕ್ರಮಗಳಿಂದ, ವೈಭವದಿಂದ ಆಚರಿಸಲ್ಪಟ್ಟಿತು. ಈ ಉತ್ಸವಕ್ಕಾಗಿಯೇ ವಿಕ್ಟೋರಿಯ ಜ್ಯೂಬಿಲಿ ಕ್ಲಬ್ಬಿನ ವಠಾರದಲ್ಲಿ ರಚಿಸಲ್ಪಟ್ಟ 'ವಾದಿರಾಜ ಮಂಟಪ'ದಲ್ಲಿ ಮೈಸೂರಿನ ರಾಜ್ಯಪಾಲ ಶ್ರೀ। ವರಾಹ ವೆಂಕಟಗಿರಿಯವರು ಈ ಉತ್ಸವವನ್ನು ತಾ. ೨೪ರಂದು ಉದ್ಘಾಟಿಸುತ್ತಾ, ಕನಕದಾಸರು ಭಕ್ತ ಶಿರೋಮಣಿಗಳು ಹಾಗೂ ಮಹಾ ಸಂತರು ಎಂದು ಹೇಳಿ ಮಹಾಸಂತರ ಉತ್ಸವಾಚರಣೆಯಿಂದ ನಾವು ಮಾನವರೆಲ್ಲಾ ಒಂದೇ ಎಂಬ ಭಾವನೆ ನಮ್ಮಲ್ಲಿ ಮೂಡಬೇಕಾದುದು ಅಗತ್ಯ ಎಂದರು.

ಕಾರ್ಯಕ್ರಮದ ಮೊದಲು ಅತಿಥಿಗಳು ಕನಕದಾಸರ ಚಿತ್ರದೊಂದಿಗೆ ವೈಭವದಿಂದ ಕನಕನ ಬೀದಿಗಾಗಿ ರಥಬೀದಿಯಲ್ಲಿ ರಚಿಸಲ್ಪಟ್ಟ 'ಕನಕನ ಮಂಟಪ'ಕ್ಕೆ ಮೆರವಣಿಗೆಯಲ್ಲಿ ನಡೆದರು. ಅಲ್ಲಿ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು, ಉಡುಪಿಯ ಎಂ ಎಲ್. ಎ. ಶ್ರೀ। ಎಂ. ಮಧ್ವರಾಜರು ದಾನವಾಗಿತ್ತ ಕನಕದಾಸರ ಶಿಲಾಪ್ರತಿಮೆಯನ್ನು ಅನಾವರಣ ಮಾಡಿದರು. ಈ ಶಿಲಾಪ್ರತಿಮೆಯ ಪ್ರತಿಷ್ಠಾಪನೆಯು ಅದೇ ದಿನ ಮುಂಜಾನೆ ಧಾರ್ಮಿಕ ವಿಧಿ ಪುರಸ್ಸರವಾಗಿ ನಡೆದಿತ್ತು. ಮೆರವಣಿಗೆಯು ತೆಂಕಪೇಟೆ, ಕೋಳದ ಪೇಟೆ ಮಾರ್ಗವಾಗಿ 'ವಾದಿರಾಜ ಮಂಟಪ'ವನ್ನು ಸೇರಿದ ಬಳಿಕ ಕಾರ್ಯಕ್ರಮವು ಪ್ರಾರಂಭವಾಯಿತು.

ಸ್ವಾಗತ ಮತ್ತು ಉತ್ಸವ ಸಮಿತಿಯ ಅಧ್ಯಕ್ಷ ಡಾ। ಟಿ. ಎಂ. ಎ. ಪೈಯವರು ನೆರೆದ ಅಸಂಖ್ಯಾತ ಪ್ರೇಕ್ಷಕ ಹಾಗೂ ಅತಿಥಿ ವೃಂದವನ್ನು ಸ್ವಾಗತಿಸಿದರು. ಶ್ರೀ ಎಂ. ಮಧ್ವರಾಜರು ಕನಕದಾಸ ಉತ್ಸವ ಸಮಿತಿಯ ಪರವಾಗಿ ರಾಜ್ಯಪಾಲರಿಗೆ ಸನ್ಮಾನ ಪತ್ರವನ್ನು ಅರ್ಪಿಸಿದರು. ಮಾನಪತ್ರದಲ್ಲಿ ಉಡುಪಿಯ ತ್ವರಿತದ ಆವಶ್ಯಕತೆಯಾದ ನಳ್ಳಿನೀರಿನ ಸರಬರಾಯಿ ಹಾಗೂ ರೈಲ್ವೆಯ ಕುರಿತು ಪ್ರಸ್ತಾಪಿಸಲಾಗಿತ್ತಲ್ಲದೆ, ಉಡುಪಿ ಹಾಗೂ ಮಲ್ಪೆಗಳನ್ನು ಪ್ರವಾಸಿ ಕೇಂದ್ರಗಳನ್ನಾಗಿ ಮಾಡಬೇಕೆಂದೂ ಸೂಚಿಸಲಾಗಿತ್ತು.

ಉತ್ಸವ ಸಮಿತಿಯ ಕಾರ್ಯದರ್ಶಿ ಶ್ರೀ ಕೆ. ಕೆ. ಪೈಗಳು ಸಮಾರಂಭಕ್ಕೆ ಶುಭಕೋರಿ ಬಂದ ಅಸಂಖ್ಯ ಸಂದೇಶಗಳಲ್ಲಿ ಕೆಲವನ್ನು ಓದಿದರು. ಆ ಬಳಿಕ ರಾಜ್ಯಪಾಲರು ತಮ್ಮ ಉದ್ಘಾಟನಾ ಭಾಷಣ ಮಾಡಿದರು. ಮೈಸೂರು ಸರಕಾರದ ಸಂಸ್ಕೃತಿ ಪ್ರಸಾರ ಶಾಖೆಯ ಡೈರೆಕ್ಟರರಾದ ಶ್ರೀ। ಕೆ ಎಸ್. ಧರಣೇಂದ್ರಯ್ಯನವರು ವರದಿ ಒಪ್ಪಿಸಿದರು.

ಮುಖ್ಯಮಂತ್ರಿ ನಿಜಲಿಂಗಪ್ಪನವರು ಈ ಸಂದರ್ಭದಲ್ಲಿ ಮಾತನಾಡುತ್ತಾ ನಾವೆಲ್ಲರೂ ಮಾನವ ಕುಲದವರೆನ್ನುವುದನ್ನು ಕನಕದಾಸರೇ ಮೊದಲಾದ ಸಂತರು ಸಾರಿದ್ದಾರೆ. ಆದರೆ ಈ ತತ್ವದ ಆಚರಣೆ ಮಾತ್ರ ನಡೆಯುತ್ತಿಲ್ಲ. ದೇವರ ದರ್ಶನಕ್ಕಾಗಿ ಹಾತೊರೆದು ಬರುವ ಭಕ್ತನಿಗೆ ದೇವರ ದರ್ಶನ ನಿರಾಕರಿಸುವ ಗುಡಿಯೊಳಗೆ ದೇವರಿರದೆ ಬರೀ ಶಿಲಾವಿಗ್ರಹ ಮಾತ್ರ ಇರುವುದು. ಈ ತಾರತಮ್ಯ ಭಾವ ಮಾನಸಿಕ ಪರಿವರ್ತನೆಯಿಂದಲೇ ತೊಲಗಬೇಕೆಂದರು. ಕನಕನು ತೋರಿದ ದೀಪ ನಮಗೆ ದಾರಿ ದೀಪವಾಗಲಿ ಎಂದು ಹಾರೈಸಿದರು.

ಕನಕದಾಸರ ತೈಲಚಿತ್ರ ಅನಾವರಣ ಮಾಡಿದ ಡಾ। ಶ್ರೀಮಾಲಿಯವರು ಈ ಸಂದರ್ಭದಲ್ಲಿ ಮಾತನಾಡುತ್ತಾ ಭಾರತದ ಘನತೆ ಹಾಗೂ ಹಿರಿಮೆ ಕನಕದಾಸರಂತಹ ಸಾಧು ಸಂತ ಹಾಗೂ ತತ್ವಜ್ಞಾನಿಗಳಿಂದಲೇ ಹೆಚ್ಚಿದೆ ಎಂದು ಹೇಳಿ ಅವರ ಆದರ್ಶಗಳನ್ನು ಅನುಸರಿಸುವುದು ನಮ್ಮ ಕರ್ತವ್ಯ ಎಂದರು.

ಡಾ। ಪ್ರಭುಶಂಕರ ಹಾಗೂ ಕವಿವರ ಬೇಂದ್ರೆಯವರು ಕನಕದಾಸರಿಗೆ ಶ್ರದ್ಧಾಂಜಲಿಯನ್ನರ್ಪಿಸುತ್ತಾ ಕನಕದಾಸರ ಶ್ರೇಷ್ಠ ವ್ಯಕ್ತಿತ್ವದ ದರ್ಶನ ಮಾಡಿಸಿದರು. ಅಧ್ಯಕ್ಷ ಪೀಠದಿಂದ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದಂಗಳವರು ಮಾತನಾಡುತ್ತಾ ಕನಕನು ಪೂರ್ವಕ್ಕಿದ್ದ ಕೃಷ್ಣನನ್ನು ಪಶ್ಚಿಮಕ್ಕೆ ತಿರುಗಿಸಿ ಭಕ್ತಾಗ್ರೇಸರನಾದನು. ಆ ಕನಕನೇ ಇಂದು ಪಶ್ಚಿಮಕ್ಕೆ ಮುಖ ಮಾಡಿರುವ ಭಾರತೀಯ ಜನತೆಯನ್ನು ಪೂರ್ವಕ್ಕೆ ತಿರುಗಿಸಬೇಕಾಗಿದೆ ಎಂದು ಹೇಳಿ ಅಧ್ಯಾತ್ಮ ಭಾವನೆಯು ಚ್ಯುತಿಗೊಳ್ಳುತ್ತಿರುವ ಇಂದಿನ ದಿನಗಳಲ್ಲಿ ಇಂತಹ ಪುಣ್ಯ ಪುರುಷರ ಉತ್ಸವದ ಆಚರಣೆ ನಮ್ಮಲ್ಲಿ ಧರ್ಮದ ಜಾಗೃತಿಯನ್ನುಂಟುಮಾಡುವಲ್ಲಿ ಸಹಾಯಕವಾಗುವುದು ಎಂದು ಅಪ್ಪಣೆ ಕೊಡಿಸಿದರು.

ಶ್ರೀ ಟಿ. ರಮೇಶ ಪೈಗಳವರು ಧನ್ಯವಾದವಿತ್ತರು. ರಾತ್ರಿ ಗಾನಾಂಜಲಿ ಕಾರ್ಯಕ್ರಮದಲ್ಲಿ ಕುಮಾರಿ ಎಸ್. ಕೆ. ವಸುಮತಿ ಮತ್ತು ಬಳಗದವರಿಂದ ಕೀರ್ತನ ಕಛೇರಿ ನಡೆಯಿತು.

ತಾ. ೨೫ರ "ಆರಾಧನಾ" ಕಾರ್ಯಕ್ರಮವು ಶ್ರೀ ವೈ. ರಾಮಚಂದ್ರರ ಅಧ್ಯಕ್ಷತೆಯಲ್ಲಿ ನಡೆಯಿತು. "ಸಾಹಿತ್ಯಾರಾಧನಾ" ಅಂಗದಲ್ಲಿ ಶ್ರೀ ಬೆಟಗೇರಿ ಕೃಷ್ಣಶರ್ಮ ಹಾಗೂ ಶ್ರೀ ಪಂಢರಿನಾಥಾಚಾರ್ಯ ಗಲಗಲಿಯವರೂ, "ಕಾವ್ಯಾರಾಧನಾ" ಭಾಗದಲ್ಲಿ ಕವಿಗಳಾದ ಕಯ್ಯಾರ ಕಿಂಞಣ್ಣ ರೈ, ಎಸ್. ವೆಂಕಟರಾಜ, ಬನ್ನಂಜೆ ಗೋವಿಂದಾಚಾರ್ಯರು ಭಾಗವಹಿಸಿದ್ದರು. "ಗೀತಾರಾಧನಾ" ಭಾಗದಲ್ಲಿ ಶ್ರೀ ಚಕ್ರಕೋಡಿ ನಾರಾಯಣ ಶಾಸ್ತ್ರಿ ಮತ್ತು ಓ. ಕಾಳಿಂಗ ರಾವ್ ಮತ್ತು ಬಳಗದವರು ಪಾಲುಗೊಂಡರು. ರಾತ್ರಿ ಭದ್ರಗಿರಿ ಕೇಶವದಾಸರಿಂದ "ಭಕ್ತ ಕನಕದಾಸ" ಎಂಬ ಹರಿಕಥೆಯು ನಡೆಯಿತು.

ತಾ. ೨೬ರ "ದರ್ಶನ" ಕಾರ್ಯಕ್ರಮವು ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀ ಮನೋಜ್ಞ ತೀರ್ಥ ಶ್ರೀಪಾದಂಗಳವರ ಪಿಂತನದಲ್ಲಿ ಜರಗಿತು. ಶ್ರೀ ದೇ. ಜವರೇಗೌಡ ಹಾಗೂ ಶ್ರೀ ಎಚ್. ಎಂ. ಶಂಕರನಾರಾಯಣರು ಕನಕನ ವ್ಯಕ್ತಿದರ್ಶನವನ್ನು ಮಾಡಿಕೊಟ್ಟರು. ದಾಸ ಸಾಹಿತ್ಯ ಪ್ರಕಾಶನದಲ್ಲಿ ಮಾಡಿದ ಸೇವೆಗಾಗಿ ಉಡುಪಿಯ ಶ್ರೀ ಪಾವಂಜೆ ಗುರುರಾವ್ ಎಂಡ್ ಸನ್ಸ್ ಇವರಿಗೆ ನಗರ ಸಭಾಪತಿ ಶ್ರೀ ರಂಗನಾಥ ಶೆಣೈಯವರು ಗೌರವ ಸಮರ್ಪಿಸಿ "ದಾಸರ ಕೀರ್ತನೆಗಳು" ಗ್ರಂಥವನ್ನು ಉದ್ಘಾಟನೆ ಮಾಡಿದರು. ಶ್ರೀ। ವೆಂಕಟರಾಮಪ್ಪ ಅವರು ಸಮಾರೋಪ ಭಾಷಣ ಮಾಡಿದರು.

ಕೀರ್ತನ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಂದ ಕನಕದಾಸರ ಕೀರ್ತನೆಗಳ ಹಾಡುಗಾರಿಕೆ ಹಾಗೂ ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದುವು.

(ಹಿಂದಿನ ಪುಟದಿಂದ)

ವರ ಪೂಜೆಯ ಸಿದ್ಧತೆಯನ್ನು ಮಾಡುವೆನು..."

"ಯಥಾಜ್ಞೆ..."

"ಅಲ್ರಿ, ನಿಮಗೆ ನಾಟಕ ಗೀಳೇನೂ ಇಲ್ವೇನಂತ?"

"ಯಾಕೆ?"

"ಬರಿಯ ನಾಟಕದ ಮಾತುಗಳನ್ನೇ..."

"ಜೀವನವೇ ಒಂದು ನಾಟಕವಲ್ವೆ?"

"ಅಲ್ರಿ, ಜೀವನವೊಂದು ಕಲೆ. ಆ ಕಲೆಯನ್ನ ಅರಿಯದವರ್‍ಗೆ ಅದು ಬರಿಯ ನಾಟಕ."

"ಹೇಗೆ ಬೇಕೋ ಹಾಗೆ....ಸಿನೆಮಾದಲ್ಲೂ ಕಲೆಯಿದೆ. ನಾಟಕದಲ್ಲೂ ಕಲೆಯಿದೆ ತಾನೆ?"

"ಕಲೆ ನಾಟಕದಲ್ಲೂ ಇದೆ, ಮನೆಯಲ್ಲೂ ಇದೆ."

"ಇದ್ರೆ ಒರಸಿ ಬಿಡು."

"ಓ, ಇಲ್ಲಾನ್ನುತ್ತೇನೆಯೇ ... ಹೇಗೆ... ಬನ್ನಿ...."

"ಬನ್ನಿಂತಂದಮೇಲೆ ಬಾರದೇ ಇರೋಕ್ಕಿಲ್ಲ?"

"ಅದು ನನಗ್ಗೂ ಗೊತ್ತು."

"ಹೌದು, ನಿನಗೆಲ್ಲಾ ಗೊತ್ತು....."

"ನಿಮಗೂ...."

"ಹ್ಹ ...ಹ್ಹ....?"

—ಗೋರಾ.

ದಾಖಲೆಯ ವರ್ಷ

1963		1964
ರೂ. 72·48 ಕೋಟಿ	ಠೇವುಗಳು	ರೂ. 88·24 ಕೋಟಿ
ರೂ. 1 ಕೋಟಿ	ತೆತ್ತ ಬಂಡವಾಲು	ರೂ. 1 ಕೋಟಿ
ರೂ. 1·11 ಕೋಟಿ	ಕಾಯ್ದಿಟ್ಟದ್ದು	ರೂ. 1·23 ಕೋಟಿ
ರೂ. 20·63 ಕೋಟಿ	ತೊಡಗಿಸಿದ ಹಣ	ರೂ. 22·28 ಕೋಟಿ
ರೂ. 42·27 ಕೋಟಿ	ಮುಂಗಡಗಳು	ರೂ. 58·59 ಕೋಟಿ
ರೂ. 75·56 ಕೋಟಿ	ಚಾಲತಿ ಫಂಡು	ರೂ. 92·48 ಕೋಟಿ
ರೂ. 24·12 ಲಕ್ಷ	ನಿವ್ವಳ ಲಾಭ	ರೂ. 34·66 ಲಕ್ಷ

ನಮ್ಮ ಅತಿ ದೊಡ್ಡ ಆಸ್ತಿ
58 ವರ್ಷಗಳಿಗೂ ಮೇಲ್ಪಟ್ಟು ನೀವು ನಮ್ಮಲ್ಲಿ
ಇಟ್ಟ ಸಂಪೂರ್ಣ ವಿಶ್ವಾಸ

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ : 1906)

ಆಡಳಿತ ಕಚೇರಿ : ಬೆಂಗಳೂರು
ರಿಜಿಸ್ಟರ್ಡ್ ಕಚೇರಿ : ಮಂಗಳೂರು

ವಿಶ್ವವ್ಯಾದ್ಯಂತ ವಾರ್ತಾದಾರರು
ಭಾರತದಲ್ಲಿ 235ಕ್ಕೂ ಮಿಕ್ಕಿ ಶಾಖೆಗಳು

ತಪ್ಪು ಮಾಡಿದಾಗ

(ಎರಡನೇ ಪುಟದಿಂದ)

ಲ್ಲ, ಏನನ್ನು ಶಾಶ್ವತ ಈ ಜೀವ. ಅಷ್ಟರಲ್ಲಿ ಏನಾಗಲಿ ಕೊಂಚವಾದರೂ ಒಡವೆಗಳನ್ನು ಮಾಡಿಸಬೇಡವೆ?"

ಹೊಸ ಒಡವೆಗಳನ್ನು ಕೂಡಿಸುವ ಜೊತೆಗೆ ಹಳೆಯ ಒಡವೆಗಳನ್ನು ಅಡವಿಟ್ಟುಕೊಳ್ಳುವ ವ್ಯಾಪಾರವನ್ನೂ ಮಾಡುತ್ತಿದ್ದಳು. ಅವಳ ಕಣ್ಣುಗಳನ್ನಾದರೂ ಅವಧಾನ ತರಬಹುದಿತ್ತು, ಆದರೆ ಅವಳ ಒಡವೆಗಳನ್ನು ತರಲು ಸಾಧ್ಯವಾಗುತ್ತಿರಲಿಲ್ಲ. ಒಟ್ಟಿನಲ್ಲಿ ಲಕ್ಷ್ಮಮ್ಮ ವೃದಾಸನ ರಂಗಿಯೇ ಆಗಿದ್ದಳು.

○ ○ ○

ಲಕ್ಷ್ಮಮ್ಮ, ಶ್ರೀನಿವಾಸ ಶೆಟ್ಟಿ ಗಂಡ ಹೆಂಡತಿಯರು. ಶ್ರೀನಿವಾಸ ಶೆಟ್ಟಿ ಕುಲಕಸುಬಾದ ಚಿನ್ನ ಬೆಳ್ಳಿಯ ಅಂಗಡಿಯನ್ನು ಇಟ್ಟಿದ್ದನು. ಕೇಳಬೇಕೆ ಹಳೆಯ ಕಾಲ. ಚಿನದ ಸಂಗ್ರಹಣೆ ಬಹಳ ಚೆನ್ನಾಗಿಯೇ ಆಯಿತು. ಹೆಂಡತಿಯ ಚಿನ್ನದ ಆಶೆಗೆ ಗಂಡ ಪುಟ ಕೊಡುತ್ತಿದ್ದನು ಅವಳ ಆಸೆ ಎನ್ನುವ ಹಾವನ್ನು ಇವನ ಇಷ್ಟ ಎನ್ನುವ ಹಾಲಿನಿಂದ ಬೆಳೆಸುತ್ತಿದ್ದನು. ಎಷ್ಟೋ ಜನ ಬಡವರಿಟ್ಟಿದ್ದ ಅಲ್ಪ ಸ್ವಲ್ಪ ಚಿನ್ನವನ್ನೆಲ್ಲಾ ತಂದು ತನ್ನ ಹೆಂಡತಿಯ ಪೆಟ್ಟಿಗೆಯನ್ನು ತುಂಬಿದ. ಕಾಲ ಒಂದೇ ತರಹ ಇರುವುದೇ? ವಿಧಿ ಎನೆಲ್ಲಾ ಆಟವನ್ನು ಆಡಿಸುವುದೋ ಯಾರಿಗೆ ಗೊತ್ತು? ಚಿನ್ನದ ನಿಯಂತ್ರಣ (ಗೋಲ್ಡ್ ಕಂಟ್ರೋಲ್) ಜಾರಿಗೆ ಬಂದದ್ದು ಅವನಿಗೆ ಏಳೂವರೆ ಶನಿಯೇ ಮನೆಗೆ ಬಂದಹಾಗಾಯಿತು. ಇದ್ದಕ್ಕಿದ್ದಹಾಗೆಯೇ ವ್ಯಾಪಾರ ಕಡಿಮೆಯಾಯಿತು. ಹಳೆಯ ಒಡವೆ ಕೊಟ್ಟು ಹದಿನಾಲ್ಕು ಕ್ಯಾರೇಟಿನ ಹೊಸ ಒಡವೆ ಮಾಡಿಸಿಕೊಳ್ಳಲು ಯಾರು ಇಚ್ಛಿಸುತ್ತಾರೆ? ಇದರ ಜೊತೆಗೆ ಅವನ ಕೈ ಕೆಳಗಿನ ಕೆಲಸಗಾರರು ಇವನು ಹಿಂದೆ ತನ್ನ ಸಾಹುಕಾರರೊಡನೆ ವರ್ತಿಸಿದಂತೆಯೇ ಮಾಡಿದರು. ಇದಲ್ಲದೆ ಸರ್ಕಾರ ಕೂಡ ಇವನ ಮೇಲೆ ಕಳ್ಳ ವ್ಯಾಪಾರಕ್ಕಾಗಿ ಕೇಸು ಹಾಕಿತು. ಅದರಿಂದ ತಪ್ಪಿಸಿಕೊಳ್ಳಲು ಮಾಡಿದ ವೆಚ್ಚ ಕಳ್ಳವ್ಯಾಪಾರದಿಂದ ಗಳಿಸಿದ ಹಣ ಎರಡರಷ್ಟಾಯಿತು. ಒಟ್ಟಿನಲ್ಲಿ ನಷ್ಟದ ಮೇಲೆ ನಷ್ಟವಾಗಿ ಅಂಗಡಿಯನ್ನು ಮುಚ್ಚಿದನು. ಈಗ ತಿನ್ನಲು ಉಣ್ಣಲು ಬೇರೆ ಮಾರ್ಗವೇ ಉಳಿಯಲಿಲ್ಲ. ಕೂಡಿಟ್ಟ ಹಣ ಎಷ್ಟು ದಿವಸ ಬಂದೀತು? "ಕುಳಿತು ಉಣ್ಣುವವನಿಗೆ ಕುಡಿಕೆ ಹಣ ಸಾಲದು" ಅನ್ನುವ ಗಾದೆಯಂತಾಯಿತು ಅವನ ಸ್ಥಿತಿ. ಹಣವಿಲ್ಲದೆಯೇ ಅರ್ಧ ಹೆಣವಾದನು. ಅದೇ ಸಮಯದಲ್ಲಿ ಅವನಿಗೆ ಕರುಳಿನ ಕ್ಯಾನ್ಸರ್ ರೋಗ ಬಡಿಯಿತು. ಈ ಕಾಯಿಲೆ ಬರುವ ಹೊತ್ತಿಗಾಗಲೇ ಸಾಧ್ಯವಾದಷ್ಟು ಸಾಲ ಮಾಡಿಯಾಗಿತ್ತು. ಇನ್ನು ಎಲ್ಲಾ ಸಾಲ ಸಿಕ್ಕುವ ಅವಕಾಶವಿರಲಿಲ್ಲ. ಅಲ್ಲದೆ ಖಾಹಿಲೆಯ ಪ್ರಾರಂಭದಲ್ಲಿ ಬಹಳ ಹಣವನ್ನೇ ಖರ್ಚು ಮಾಡಿದ್ದ. ಸರ್ಪದ ವಿಷದಂತೆ ಗಳಿಗೆ ಗಳಿಗೆಗೂ ಖಾಹಿಲೆ ಏರುತ್ತಿತ್ತು. ಅದಕ್ಕಾಗಿ ತೆರಲು ಹಣವಿರಲಿಲ್ಲ. ಯಾವ ಮನುಷ್ಯನ ಹತ್ತಿರ ಹಣ ಕೊಳೆಯುತ್ತಿತ್ತೋ ಅವನಿಗೆ ಈಗ ಬಿಡಿಗಾಸಿಗೂ ಗತಿಯಿಲ್ಲವಾಯಿತು. ಆದರೆ ಲಕ್ಷ್ಮಮ್ಮ ಕಣ್ಣು ಬಿಟ್ಟು ನೋಡಿದ್ದರೆ ಈ ಸಾಲವನ್ನೆಲ್ಲಾ ತೀರಿಸಿ ಇವನ ಖಾಹಿಲೆಯನ್ನೂ ಗುಣಪಡಿಸಿಕೊಳ್ಳಬಹುದಿತ್ತು. ಆದರೆ ಅವಳ ಚಿನ್ನದ ಮೇಲಿನ ಆಸೆ ಇದಕ್ಕೆ ಅಡ್ಡಿ ಬಂತು. ಅವಳ ಈ ಆಸೆ ಅವಳ ಪ್ರಾಣಕ್ಕಿಂತ ಹೆಚ್ಚಾಗಿತ್ತು. ಒಂದು ಪಕ್ಷ ತನ್ನ ಗಂಡ ಖಾಹಿಲೆಯಿಂದ ಮುಕ್ತನಾದರೂ ಸಹ ಮತ್ತೆ ಅಷ್ಟು ಚಿನ್ನವನ್ನು ಗಳಿಸಲಾರ ಎನ್ನುವುದು ಖಚಿತವಾಗಿತ್ತು. ಅವಳು ವೈಧವ್ಯವನ್ನೇನು ಅಪೇಕ್ಷಿಸುತ್ತಿರಲಿಲ್ಲ. ಆದರೆ ಚಿನ್ನವನ್ನು ಹೆಚ್ಚಿಗೆ ಪ್ರೀತಿಸುತ್ತಿದ್ದಳಷ್ಟೆ. ಅವಳೇನು ಪತಿವ್ರತೆಯರ ಚರಿತ್ರೆಯನ್ನು ಓದಿರಲಿಲ್ಲವೆ? ಓದಿದ್ದಳು. ಸತ್ಯವಾನ್ ಸಾವಿತ್ರಿಯರ ಕತೆಯನ್ನು ಕಂಠಪಾಠ ಮಾಡಿದ್ದಳು. ತಾನೂ ಸಹ ತನ್ನ ಗಂಡನನ್ನು ಉಳಿಸಿಕೊಳ್ಳುತ್ತೇನೆಂದು ಪಣತೊಟ್ಟಿದ್ದಳು. ಆದರೆ ಚಿನ್ನವನ್ನು ಮಾರಿಯಲ್ಲ. ಇವಳಿಗೆ ಚಿನ್ನವೂ ಬೇಕು; ಗಂಡನೂ ಉಳಿಯಬೇಕು.

"ಚಿನ್ನಕ್ಕಿಂತ ನಿಮ್ಮ ಪಾತಿವ್ರತ್ಯ ದೊಡ್ಡದಲ್ಲವೆ?' ಅವಳ ನಾದಿನಿ ಕಮಲ ಕೇಳಿದಳು.

"ಅಲ್ಲವೇ ಮತ್ತೆ? ಆದರೆ ನನಗೆ ಈ ಡಾಕ್ಟರುಗಳಲ್ಲಿ ನಂಬಿಕೆಯಿಲ್ಲ. ಸುಮ್ಮನೆ ದುಡ್ಡು ಹಾಳು ಮಾಡಿಸುತ್ತಾರೆ."

"ಹಾಗಂತ, ನಾವು ಸುಮ್ಮನೆ ಕುಳಿತು ಕೊಳ್ಳುವುದಕ್ಕೆ ಆಗುತ್ತದೆಯೆ?"

"ಸುಮ್ಮನೆ ಯಾರಿದ್ದಾರೆ. ದಿನಾಗಲೂ ತುಳಸಿ ಪೂಜೆ ಮಾಡಿ, ತಾಯಿಯನ್ನು ನನ್ನ ಮಾಂಗಲ್ಯ ಭಾಗ್ಯ ಕೋರಿ, ನೇವೇದ್ಯ ಮಾಡಿದ ತೀರ್ಥವನ್ನು ಅವರಿಗೆ ಕುಡಿಸುತ್ತಾ ಇದ್ದೀನಿ"

"ಭಕ್ತಿ, ದೇವರು ಎಲ್ಲಾ ಇರಬೇಕು. ಆದರೂ ಮನುಷ್ಯ ಪ್ರಯತ್ನ ಬೇಕಲ್ಲವೇ ಅತ್ತಿಗೆ?"

"ಮಾಡಿದ್ದಾಗಿದೆಯಲ್ಲ? ಮನುಷ್ಯ ಪ್ರಯತ್ನದಲ್ಲಿ ಏನೇನು ಮಾಡಬಹುದೋ ಅದೆಲ್ಲಾ ಆಗಿದೆ?

"ಡಾಕ್ಟರು ಹೇಳಿದ್ದರಲ್ಲ; ಅಣ್ಣನನ್ನು ವೆಲ್ಲೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಂತ, ಕಡೆಯದಾಗಿ ಅದನ್ನೂ ಮಾಡಿದ್ದರೆ ಆಗಿತ್ತು."

"ಈ ಡಾಕ್ಟರ ಮಾತುಗಳನ್ನು ಕಟ್ಟಿಕೋ. ಅವರು ತಮ್ಮ ಕೈಲಾಗೋಲ್ಲಾ ವೆಲ್ಲೂರಿಗೆ ಕರೆದುಕೊಂಡು ಹೋಗಿ ಅಂತಾರೆ. ಅಲ್ಲಿ ಅವರು ಡೆಲ್ಲಿಗೆ ಹೋಗಿ ಅಂತಾರೆ. ಹೀಗೆ ಇವರ ಮಾತು ಕೇಳುತ್ತಾ ಹೋದರೆ ನರಕಕ್ಕೆ ಹೋಗ ಬೇಕಾದೀತು. ಅಂತೂ ತನ್ನ ನಾದಿನಿಯ ಬಾಯಿ ಮುಚ್ಚಿಸಿ ಬಿಟ್ಟಳು ಲಕ್ಷ್ಮಮ್ಮ.

ಶ್ರೀನಿವಾಸ ಶೆಟ್ಟಿಗೆ ತಾನು ಮಾಡಿದ ಅಪರಾಧ ಈಗ ಅರ್ಥವಾಯಿತು. ಅವಳಿಗೆ ಚಿನ್ನದ ಹುಚ್ಚು ಹತ್ತಿಸಿ ಅವಳನ್ನು ಈಗ ಹಳಿದರೆ ಏನು ಉಪಯೋಗ? ತನ್ನ ಅಪರಾಧವೂ ಅದರಲ್ಲಿ ಏನು ಕಡಿಮೆಯಿಲ್ಲ ಎನ್ನುವುದನ್ನು ಅರ್ಥಮಾಡಿಕೊಂಡ. ಯಾವ ಪ್ರಾಣಿಗೆ ತಾನೇ ತನ್ನ ಜೀವನದ ಮೇಲೆ ಆಸೆಯಿರುವುದಿಲ್ಲ? ಹೆಂಡತಿಯನ್ನು ಬೇಡಿ ಕೇಳಿದ, ಕಾಡಿ ಕೇಳಿದ, ಬೆದರಿಸಿ ಕೇಳಿದ, ಹೆದರಿಸಿ ಕೇಳಿದ, ಯಾವುದಕ್ಕೂ ಅವಳು ಜಗ್ಗಲಿಲ್ಲ. ಸೋತು ಸುಸ್ತಾಗಿ ತನ್ನನ್ನು, ತನ್ನ ಹೆಂಡತಿಯನ್ನು ತನ್ನ ಸಮಾಜವನ್ನೂ, ಎದುರಿಗೆ ಬಂದ ಎಲ್ಲರನ್ನೂ ಹಳಿಯಲು ಉಪಕ್ರಮಿಸಿದ.

○ ○ ○

ಕಮಲ ಬಂದಾಗಿನಿಂದಲೂ ಅವಳ ಚಿಕ್ಕ ಮಗನನ್ನು ಲಕ್ಷ್ಮಮ್ಮನ ಬಳಿಗೆ ಒಂದಲ್ಲ ಒಂದು ಕಾರಣದಿಂದ ನೂಕುತ್ತಿದ್ದಳು. ಮೊದಲು ಮೊದಲು ಲಕ್ಷ್ಮಮ್ಮ ಇದು ತನ್ನ ಆಸ್ತಿಗಾಗಿ ಇವಳು ಹೂಡುತ್ತಿರುವ ಉಪಾಯ ಎಂದು ಕೊಂಡಳು. ಆದರೆ ಅಕ್ಕರೆಯಲ್ಲಿ ಆ ಮಗು ಅವಳನ್ನು ಹಚ್ಚಿಕೊಂಡಿತು. ಅವಳಿಗೂ ಆ ಮುದ್ದು ಮಗುವನ್ನು ನೋಡಿ ವಿಚಿತ್ರ ಆನಂದದ ಅನುಭವವಾಯಿತು. ಅದರ ಆಟ, ಪಾಠ, ತೊದಲು ನುಡಿ, ಲಕ್ಷ್ಮಮ್ಮನ ಗಮನವನ್ನು ಸೆಳೆಯಿತು. ಈ ನಡುವೆ ಒಮ್ಮೊಮ್ಮೆ ಚಿನ್ನವನ್ನು ಮರೆಯಲು ಪ್ರಾರಂಭಿಸಿದಳು ಲಕ್ಷ್ಮಮ್ಮ. ಸ್ವಲ್ಪ ದಿನಗಳಿಂದ ಮೇಲೆ ಆ ಮಗುವನ್ನು ಬಿಟ್ಟಿರುವುದೇ ಕಷ್ಟವಾಯಿತು. ಆಗ ಅವಳಿಗೆ ಅರ್ಥವಾಯಿತು. ತನಗೆ ಸಿಹಿಯಾಗಿಯೂ ಯಾವುದರ ಕೊರತೆಯಿಂದ ತನ್ನ ಮುಖವನ್ನು ಕನ್ನಡಿಯಲ್ಲಿ ನೋಡಿಕೊಂಡಳು ತನಗೇನು ಇನ್ನೂ ಮಕ್ಕಳಾಗುವ ವಯಸ್ಸು ಮೀರಿಲ್ಲ ಎಂದುಕೊಂಡಳು. ಆದರೆ.... ಆದರೆ... ತನ್ನ ಗಂಡನ ಪರಿಸ್ಥಿತಿಯನ್ನು ನೆನಸಿಕೊಂಡ ಒಡನೆಯೇ ತನ್ನ ತಪ್ಪು ಅವಳಿಗೆ ಅರಿವಾಯಿತು. ಆ ಕೂಡಲೆ ಕಮಲಳಿಗೆ, ಉಕ್ಕಿ ಬಂದ ಸಂತೋಷ ದುಃಖಗಳ ಮಿಶ್ರಿತವಾದ ಗದ್ಗದ ಸ್ವರದಿಂದ ತೊದಲುತ್ತ ಹೇಳಿದಳು.

"ಕಮಲ, ಎಷ್ಟಾದರೂ ಖರ್ಚಾಗಲಿ, ನನ್ನ ಚಿನ್ನವೆಲ್ಲವೂ ಹೋದರೂ ಚಿಂತೆಯಿಲ್ಲ. ನಡಿ ಅದನ್ನೆಲ್ಲಾ ಮಾರಿ ಅವರ ಪ್ರಾಣವನ್ನು ಉಳಿಸಿಕೊಡಿ. ವೆಲ್ಲೂರಿಗೇನು, ಎಲ್ಲಿಗಾದರೂ ಸರಿ ಹೋಗಲು ಸಿದ್ಧಳಿದ್ದೇನೆ. ಅವರ ಪ್ರಾಣಕ್ಕಿಂತ ಯಾವುದು ದೊಡ್ಡದು ನನಗೆ?"

ಕಮಲಳಿಗೆ ತನ್ನ ಕಿವಿಯನ್ನೇ ನಂಬಲು ಆಗಲಿಲ್ಲ. ಮತ್ತೆ ಮತ್ತೆ ಅತ್ತಿಗೆಯನ್ನು ಕೇಳಿ ಸ್ಥಿರಪಡಿಸಿಕೊಂಡಳು. ಅತ್ತಿಗೆ ಮತ್ತೆಲ್ಲಿ ಮಾತು ಬದಲಾಯಿಸಿ ಬಿಡುತ್ತಾಳೋ ಎಂದು ಆಗಲೇ ಅವಳನ್ನು ಅಂಗಡಿಯ ಕಡೆ ಕರೆದುಕೊಂಡು ಹೊರಟಳು ಕಮಲ.

○ ○ ○

"ಈ ವಡ್ವೆ ಯಾರ್ಪ್ರೋನಾತ್ತಾಯಿ ಮಾಡ್ಸೋನು? ಎಲ್ಲಾ ಚಿರ್ಕೆ ಹಾಕನ್ನೆ. ಬರೀ ತಾಂಬ್ರಾನೇ ತುಂಬವ್ನಲ್ಲ."

"ಆಚಾರ್ರೇ, ನೀವೇ ಚಲ್ವೆ ಮಾಡಿದ್ದು. ನಮ್ಮ ಅಂಗಡೀಲಿ ನೀವು ಕೆಲ್ಸದಲ್ಲಿದ್ದಾಗ ನಿಮ್ಮ ಕೈಲೆ ನಮ್ಮೆಜಮಾನ್ರು ಮಾಡ್ಸಿದ್ರು.'

"ಯಜಮಾನ್ರು ಎಂಗವರೇ ತಾಯಿ?'

"ಬಹಳ ಸುಸ್ತಾಗಿದಾರೇ ಆಚಾರ್ರೆ ದೇವರೇ ಕಾಪಾಡಬೇಕು."

"ಕಾಪಾಡ್ತಾನೆ ತಾಯಿ. ಖಂಡಿತ ಕಾಪಾಡ್ತಾನೆ. ನಮ್ಗೆಲ್ಲಾ ಅಪ್ರು ತಂದೆ ಆಂಗಿದ್ರು.'

"ಈಗ ಹಣದ ಮುಗ್ಗಟ್ಟು ಬಹಳ ಬಂದಿದೆ,"

"ಛ, ಛೆ, ಈ ಒಡವೆಗಳಿಗೆ ಎಲ್ಲಿ ಹೋದ್ರು ಪಾಪ ನಾನು ಹೇಳಿದ ಬೆಲೆಗಿಂತ ಯಾರೂ ಜಾಸ್ತಿ ಕೊಡಲಾರರು ತಾಯಿ ತನ್ನ ಹತ್ತಿರ ನಿಖರವಾದ ಒಂದೇ ಬೆಲೆ."

ಲಕ್ಷ್ಮಮ್ಮನ ಗಮನ ಈಗ ಒಡವೆಯ ಕಡೆಗಿರಲಿಲ್ಲ. ಅವಳ ಗಂಡನನ್ನು ಉಳಿಸಿಕೊಳ್ಳಲು ಅವಳಿಗೆ ಈಗ ಹಣ ಬೇಕಿತ್ತಷ್ಟೆ. ಅದು ಸಿಕ್ಕಿದರೆ ಸಾಕು. ಅದಕ್ಕಾಗಿ ಅವನು ಕೊಂಡಷ್ಟಕ್ಕೆ ಕೊಟ್ಟಳು. ಕಮಲ ಲಕ್ಷ್ಮಮ್ಮ ಬೇಗ ಬೇಗ ಮನೆಗೆ ಬಂದರು. ರೋಗಿಯನ್ನು ಬಿಟ್ಟು ಹೋಗಿದ್ದ ಅತ್ತ, ಲಕ್ಷ್ಮಮ್ಮನಿಗೆ ತನ್ನ ಗಂಡನಿಗೆ ಈ ಸಮಾಚಾರ ಹೇಳಿ ಸಂತೋಷಪಡಿಸಬೇಕೆನ್ನುವ ಆತುರ. ವೆಲ್ಲೂರಿಗೆ ಹೋಗಲು ಪ್ರಯಾಣಕ್ಕೆ ಎಲ್ಲ ಸಿದ್ಧತೆ ಮಾಡಿಸಿಕೊಳ್ಳಬೇಕು. ಅವಳ ನಡಿಗೆ ಹಕ್ಕಿಗಿಂತ ವೇಗವಾಗಿತ್ತು. ಆದರೆ ಮನೆಗೆ ಮುಟ್ಟುವ ಹೊತ್ತಿನಲ್ಲಿ ಗೂಡಿನಿಂದ ಪಕ್ಷಿ ಹಾರಿಹೋಗಿತ್ತು.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 datop 2-12-1950 of the Director of Public Instruction Madras



NAVAYUGA 29-4-1965
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೨೯-೪-೬೫ರಿಂದ ೫-೫-೬೫ರ ವರೆಗೆ

೧. ಮೇಷ

ಸಾಹಸಿಗಳಾದ ನಿಮಗೆ ಯಾವ ಕಾರ್ಯವೂ ಅಶಕ್ಯವೆನಿಸದು. ಉದ್ಯಮದಲ್ಲಿ ಸಾಕಷ್ಟು ಪ್ರಗತಿಯನ್ನು ಹೊಂದುವಿರಿ. ಪ್ರಬಲರಾದ ಪ್ರತಿಪಕ್ಷಿಗಳನ್ನು ಪರಾಭವಗೊಳಿಸಲು ಶಕ್ತರಾದ ನೀವಿಂದು ಬೇಕಾದ ಸುಖಭೋಗಗಳನ್ನು ಪಡೆದಿರಾದರೂ ಸಾಂಸಾರಿಕ ತಾಪತ್ರಯಗಳು ನಿಮ್ಮನ್ನು ಸುಖ ನೆಮ್ಮದಿಯಿಂದಿರಲು ಬಿಡಲಾರವು. ಸೋದರ ವರ್ಗದವರೊಡನೆ ಉಂಟಾದ ಮನಸ್ತಾಪವು ಕಲಹದಲ್ಲಿ ಪರ್ಯವಸಾನ ಹೊಂದಲಿದೆ. ನಿರೋಗಿಗಳಾದ ನಿಮಗೆ ತಾ. 30, 1, 2, 5 ಈ ದಿನಗಳು ಸುಖ ಭೋಗಗಳನ್ನೀಯುವವು.

೨. ವೃಷಭ

ಶಕ್ತಿ ಮೀರಿ ದುಡಿಯುವಿರಾದರೂ ಹೆಚ್ಚಿನ ನಿಮ್ಮ ಕಾರ್ಯಗಳು ನೀರಲ್ಲಿ ಹೈದ ಹೋಮದಂತೆ ವಿಫಲವಾಗಲಿವೆ. ಆರ್ಥಿಕ ಪರಿಸ್ಥಿತಿಯು ಕೆಟ್ಟಿಹ ಕಾರಣ ದಿನಯಾಪನೆಯು ದುಸ್ತರವಾಗುವದು. ದುಷ್ಟರ ಸಹವಾಸಕ್ಕೆ ಸಿಲುಕಿ ವೃಥಾ ನಷ್ಟ ಜನನಿಂದೆಗೂ ಗುರಿಯಾಗಲಿರುವಿರಿ. ಗೃಹತಾಪತ್ರಯಗಳಿಂದ ಮುಕ್ತರಾದರೂ ಕಫ ದೋಷದಿಂದ ಆರೋಗ್ಯ ಕೆಡಲಿದೆ. ಶ್ರಮಜೀವಿ ವರ್ಗಕ್ಕೆ ಸದ್ಯದ ದಿನಗಳು ಪ್ರತಿಕೂಲವಿವೆ. ತಾ. 29, 3, 4 ಇದ್ದುದರಲ್ಲುತ್ತಮ.

೩. ಮಿಥುನ

ಸುರಗುರುವು ವ್ಯಯ ಸ್ಥಾನಕ್ಕೆ ಬಂದಿದ್ದರೂ ಇತರ ಪ್ರಬಲ ಗ್ರಹರ ಬೆಂಬಲದಿಂದಾಗಿ ನಿಮ್ಮ ಸಂಕಲ್ಪಗಳಿಂದು ಅನಾಯಾಸದಿಂದ ಕಾರ್ಯರೂಪಕ್ಕೆ ಬರಲಿವೆ. ಜನತೆಯ ಸಹಕಾರವು ನಿರೀಕ್ಷಿಸಿದಷ್ಟು ಲಭಿಸಲಾರದಾದರೂ ಸ್ವಯಂಶಕ್ತರಾದ ನೀವು ಪ್ರತಿಪಕ್ಷಿಗಳನ್ನು ಪರಾಜಯಗೊಳಿಸುವಿರಿ. ವಿಶೇಷತಃ ಕೋರ್ಟು ಕಛೇರಿಗಳ ವ್ಯವಹಾರಗಳಲ್ಲಿ ವಿಜಯವು ಕಟ್ಟಿಟ್ಟ ಗಂಟೆನಿಸುವುದು. ತಾ. 3, 4 ಬಿಟ್ಟು ಉಳಿದ ದಿನಗಳು ತುಂಬ ಅನುಕೂಲವಾಗಿವೆ.

೪. ಕರ್ಕಟ

ಹೆಚ್ಚಿನ ಗ್ರಹರು ಪ್ರತಿಕೂಲರಾಗಿರುವುದರಿಂದ ನೀವಿಂದು ವಿಘ್ನ ಪರಂಪರೆಗಳನ್ನು ಎದುರಿಸಬೇಕಾಗಿ ಬರಲಿದೆ. ಪ್ರತೀಕಾರಾಸಕ್ತರಾದ ಶತ್ರು ವರ್ಗದವರಿಗೆ ನಿಮ್ಮ ಕುಟುಂಬದವರೂ ಕೂಡ ನೆರವಾಗುವರು. ಪಿತ್ತೋಷ್ಣ ದೋಷದಿಂದ ಆರೋಗ್ಯಕ್ಕೂ ಧಕ್ಕೆ ಇದೆ. ಬಹುಮುಖಗಳಿಂದ ಖರ್ಚುಗಳು ಪ್ರಾಪ್ತವಾಗುವವಾದರೂ ದೇವ ಮಂತ್ರಿಗಳ ಬೆಂಬಲವುಳ್ಳ ನೀವು ತಾ. 30ರಿಂದ 4ರ ತನಕದ ದಿನಗಳನ್ನು ಸುಖದಿಂದ ಕಳೆಯಿರಿ.

೫. ಸಿಂಹ

ದೈವವಿಂದು ತೀರ ವಿಮುಖವಾಗಿರುವುದು. ಸುಖಭಾಗ್ಯಪತಿಯಾದ ಅಂಗಾರಕನು ಜನ್ಮರಾಶಿಯಲ್ಲಿದ್ದು ಸದಾ ಅನಾರೋಗ್ಯಕ್ಕೆ ಕಾರಣನಾಗುವನು. ಅನಿರೀಕ್ಷಿತ ಪ್ರವಾಸವು ಕಷ್ಟನಷ್ಟಗಳಿಗೆ ನಿಮ್ಮನ್ನು ಗುರಿಮಾಡಲಿರುವುದು. ಹಣದ ವ್ಯವಹಾರ ನಿಮಿತ್ತ ಕೋರ್ಟು ಮನೆಗೆ ತಿರುಗುವ ಪ್ರಸಂಗ ಬರಲಿದೆ. ಗೃಹತಾಪತ್ರಯಗಳು ಹೆಚ್ಚಾಗಿ ಕಾಣಿಸಲಾರವಾದರೂ ಆರ್ಥಿಕ ಚಿಂತೆಗಳು ನಿಮ್ಮನ್ನು ತೊಂದರೆ ಗೊಳಿಸುತ್ತವೆ. ಪೂರ್ವ ದಿಕ್ಕಿನ ಪ್ರವಾಸ ಕಷ್ಟದಿಂದ ದಿನಗಳೆವ ನಿಮಗೆ ವಾರಾಂತ್ಯದ 3 ದಿನಗಳು ಸ್ವಲ್ಪ ಅನುಕೂಲವಾಗಿವೆ.

೬. ಕನ್ಯಾ

ಕರ್ತವ್ಯದಕ್ಷರಾದ ನಿಮಗೆ ದೈವಾನುಕೂಲವು ಚೆನ್ನಾಗಿರುವುದರಿಂದ ಪ್ರತಿಯೊಂದು ಕಾರ್ಯಗಳೂ ನಿರೀಕ್ಷಿಸಿದ ಗುರಿಯನ್ನು ಮುಟ್ಟುವವು. ಆದರೆ ರಾಜಕೀಯ ರಂಗದಲ್ಲಿ ಮಾತ್ರ ಪ್ರತಿಪಕ್ಷಿಗಳ ಕೈಯೇ ಮೇಲಾಗಲಿರುವದು. ವಿಶೇಷತಃ ಭೂ ಸಂಬಂಧವಾದ ವ್ಯವಹಾರದಲ್ಲಿ ನಷ್ಟ ಪರಾಭವಗಳುಂಟಾದಾವು. ಆರ್ಥಿಕ ಪರಿಸ್ಥಿತಿಯು ಹಿಂದಿಗಿಂತ ಉತ್ತಮವಿರುವುದರಿಂದ ದಿನಗಳು ಸುಗಮವಾಗಿ ಸಾಗಲಿವೆ. ವಾರದ ಅದ್ಯಂತ ದಿನಗಳು ನಿಮ್ಮ ಬಯಕೆಗಳನ್ನು ಪೂರ್ಣ ಮಾಡಲಿವೆ.

೭. ತುಲಾ

ಗುರುಹಿರಿಯರ ಕೂಡೆ ವಿನಾ ಕಾರಣ ಕಲಹವುಂಟಾಗಲಿದೆ. ಮಾತ್ರವಲ್ಲ, ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ಸೋಲು ನಷ್ಟಗಳೂ ಪ್ರಾಪ್ತವಾದಾವು. ಬಹುಮುಖದ ವ್ಯವಹಾರವುಳ್ಳ ನಿಮಗೆ ಖರ್ಚಿಗೆ ಸಾಕಾಗುವಷ್ಟು ದುಡಿಮೆಯಿರುವುದರಿಂದ ಆರ್ಥಿಕ ಬಿಕ್ಕಟ್ಟುಂಟಾಗಲಾರದು. ಸ್ವಂತ ಆರೋಗ್ಯದತ್ತ ಸ್ವಲ್ಪ ನಿಗಾವಹಿಸಿರಿ. ಅಪ್ತೇಷ್ಟರ ವಿಯೋಗ ದುಃಖಕ್ಕೆ ಗುರಿಯಾದ ನಿಮಗೆ ವಾರಾದಿಯ 4 ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

೮ ವೃಶ್ಚಿಕ

ಮನೋದೌರ್ಬಲ್ಯವು ನಿಮ್ಮನ್ನಿಂದು ವಿಶೇಷವಾಗಿ ಕಾಡುವದಾದರೂ ಜನತೆಯ ಬೆಂಬಲವು ಚೆನ್ನಾಗಿರುವುದರಿಂದ ದಿನಯಾಪನೆಯು ಅಷ್ಟೊಂದು ಕಷ್ಟವಾಗಲಾರದು. ವಿಷಯಾದಿಗಳ ಕಡೆ ಮನ ಸೋತು ಕೆಲವಂಶ ಧನ ಅಪವ್ಯಯವಾದೀತು. ಉದ್ಯೋಗದಲ್ಲಿ ಸಾಕಷ್ಟು ಪ್ರಗತಿಯನ್ನು ಹೊಂದುವಿರಾದರೂ ಗೃಹತಾಪತ್ರಯಗಳಿಂದಾಗಿ ಮನಸ್ಸಿಗೆ ನೆಮ್ಮದಿಯಿರದು. ವಾರದ ಅದ್ಯಂತ ದಿನಗಳನ್ನು ಬಿಟ್ಟು ಇತರ ದಿನಗಳು ನಿಮಗನುಕೂಲವಿವೆ.

೯. ಧನು

ಪ್ರತಿರೋಧಿಗಳಿಂದ ಹಲವಾರು ತೊಡಕು ತೊಂದರೆಗಳು ಪ್ರಾಪ್ತವಾಗುವವಾದರೂ ಹಿಡಿದ ಕಾರ್ಯವನ್ನು ಮಧ್ಯದಲ್ಲಿ ಕೈಬಿಡದೆ ಮುಂದರಿಸ ಬಲವಾದಿಗಳಾದ ನಿಮಗೆ ಸನ್ಮಿತ್ರರ ನೆರವು ದೊರೆಯಲಿದೆ. ಖರ್ಚಿನ ಭಾಗಗಳು ಹಲವಾರಿದ್ದರೂ ಆರ್ಥಿಕ ವಿಚಾರದಲ್ಲಿ ನಿಶ್ಚಿಂತರಿರುವಿರಿ. ರಾಜಕೀಯೇತರ ಚಟುವಟಿಕೆಗಳಲ್ಲಿ ದಕ್ಷರಾದ ನಿಮಗೆ ವಾರಾಂತ್ಯದ 3 ದಿನಗಳಲ್ಲಿ ಕೀರ್ತಿ ಲಾಭಗಳನ್ನೀಯುವವು.

೧೦. ಮಕರ

ವೃಥಾ ಜನತೆಯೊಡನೆ ನಿಷ್ಠುರ ಕಲಹಗಳಾಗಲಿವೆ. ವಿರೋಧಿ ವರ್ಗದವರು ಸಾಕಷ್ಟು ಕಿರುಕುಳಗಳನ್ನೀಯುವರಾದರೂ ಗುರ್ವನುಗ್ರಹದಿಂದಾಗಿ ನೀವು ಅಪಾಯದಿಂದ ಪಾರಾಗುವಿರಿ. ಉದ್ಯೋಗ ವ್ಯವಹಾರಾದಿಗಳಲ್ಲಿ ಸಾಕಷ್ಟು ಫಲ ಲಭಿಸುವುದರಿಂದ ದಿನಯಾಪನೆಯು ಸುಗಮವಾಗುವದು. ಶ್ರಮಜೀವಿಗಳಿಗೂ ಸೇವಕ ವರ್ಗದವರಿಗೂ ಇಂದಿನ ದಿನಗಳು ಪ್ರತಿಕೂಲವಾಗಿರುವವು. ತಾ. 29, 6 ಈ ದಿನಗಳಲ್ಲಿ ನಿಮ್ಮ ಬಯಕೆಗಳು ಪೂರ್ಣವಾಗಲಿದೆ.

೧೧. ಕುಂಭ

ಹಿಂದಿಗಿಂತ ಇಂದಿನ ದಿನಗಳು ನಿಮಗೆ ಸ್ವಲ್ಪ ಅನುಕೂಲವಾಗಿ ಪರಿಣಮಿಸಲಿವೆ. ನೌಕರಿ ವ್ಯಾಪಾರಾದಿಗಳಲ್ಲಿ ನಿರೀಕ್ಷೆಯಂತೆ ಫಲಲಾಭವಾಗುವದು. ಆದರೆ ಹೆಂಡತಿ ಮಕ್ಕಳ ಅನಾರೋಗ್ಯದ ದೆಸೆಯಿಂದಾಗಿ ದುಡಿಮೆಯ ಬಹ್ವಂಶವು ವೈದ್ಯರ ಕೈಸೇರಲಿದೆ. ವಾತ ದೋಷವು ಆಗಾಗ ಕಾಡಬಂದೀತು. ಆಪ್ತ ಬಂಧುಗಳೊಡನೆ ಮನಸ್ತಾಪಕ್ಕೆಡೆಯುಂಟಾಗುವಂತಹ ಪ್ರಸಂಗಗಳು ಜರಗಲಿವೆ. ತಾ. 30, 1, 2 ಈ ದಿನಗಳಲ್ಲಿ ನಿಮ್ಮ ಕಾರ್ಯಗಳು ಸಫಲವಾಗಲಿವೆ.

೧೨. ಮೀನ

ಕೃಷಿಪಟ್ಟು ದುಡಿವ ನಿಮಗೆ ಇಷ್ಟದಂತೆ ಫಲವು ಲಭಿಸುವದು. ಪ್ರಬಲರಾದ ವಿಪಕ್ಷೀಯರನ್ನು ಪರಾಭವಗೊಳಿಸುವ ಅಸಾಮಾನ್ಯ ಶಕ್ತಿಯುಕ್ತರಾದ ನಿಮಗೆ ಗೃಹಕೃತ್ಯದಲ್ಲಿ ಮಾತ್ರ ಸುಖ ನೆಮ್ಮದಿಯಿರಲಾರದು. ಕೆಲವೊಮ್ಮೆ ಹಿಂದುಮುಂದಿನ ವಿಚಾರ ಮಾಡದೆ ಕಾರ್ಯರಂಗದಲ್ಲಿ ಧುಮುಕಿ ನಷ್ಟ ಮತ್ತು ಅಪಹಾಸ್ಯಕ್ಕೆ ಗುರಿಯಾಗುವ ಸಂಭವವಿದೆ. ಖರ್ಚುಗಳನ್ನು ನಿರ್ವಹಿಸಲು ಸ್ವಲ್ಪ ಕಷ್ಟಸಾಧ್ಯವಾಗುವದಾದರೂ ತಾ. 29, 3, 4 ಈ ದಿನಗಳು ಸುಖಲಾಭಕಾರಿಗಳಾಗಿ ಪರಿಣಮಿಸುವವು.

ನಚಿಕೇತ'ರ
ಹೃದಯಸ್ಪರ್ಶಿ
ನವೀನ ಕಾದಂಬರಿಗಳು

ಹಸುರು ಹಂಸ
ಬೆಲೆ: ರೂ. ಎರಡು.

ಋಣ ಯಾತ್ರೆ
ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ
ಬೆಲೆ ರೂ. 2—00

ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ
ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಚಿಕಿತ್ಸೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ.ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕೆಬಲನ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೨೨] ತಾ|| ಮೇ, ೭, ೬೫ [ಸಂಚಿಕೆ ೧೯

NAVAYUGA

Phone No.
ಫೋನ್ ನಂಬ್ರ: 226

leading nationalist weekly

೨೦
ಪೈಸೆ

ಕಥಾ ಪ್ರಪಂಚ

ಜನ್ಮದಿಂದಲೇ ಬ್ರಾಹ್ಮಣನೆ?

ಅನುವಾದಕರು: ಶ್ರೀ ಕರುಣಾಕರ್ ತೋನ್ಸೆ.

ಮೂಲ: ಧರ್ಮಾನಂದ ಕೋಸಂಬಿ.

ಒಂದಾನೊಂದು ಸಮಯದಲ್ಲಿ ಭಗವಾನ್ ಬುದ್ಧನು ಇಚ್ಛಾನಂಗಲವೆಂಬ ಗ್ರಾಮದ ಉಪವನದಲ್ಲಿ ಇರುತಿದ್ದನು. ಇಚ್ಛಾನಂಗಲದಲ್ಲಿ ಆ ಕಾಲದಲ್ಲಿ ಅನೇಕ ಪ್ರಸಿದ್ಧ ಬ್ರಾಹ್ಮಣರಿದ್ದರು. ಅವರಲ್ಲಿ ವಾಸಿಷ್ಠ ಮತ್ತು ಭಾರಧ್ವಾಜರೆಂಬ ಇಬ್ಬರು ತರುಣ ಬ್ರಾಹ್ಮಣರ ನಡುವೆ "ಮನುಷ್ಯನು ಜನ್ಮದಿಂದ ಶ್ರೇಷ್ಠನಾಗುವನೋ ಕರ್ಮದಿಂದಲೋ" ಎಂಬ ವಾದವೆದ್ದಿತು.

ಭಾರಧ್ವಾಜನು ಗೆಳೆಯನನ್ನು ಕುರಿತು ಹೇಳಿದನು: "ಗೆಳೆಯಾ, ಯಾವನ ತಾಯಿಯ ಕಡೆಯಿಂದ ಮತ್ತು ತಂದೆಯ ಕಡೆಯಿಂದ ಹಿಂದಿನ ಏಳು ತಲೆಮಾರುಗಳು ಶುದ್ಧವಾಗಿರುವುವೋ, ಯಾವನ ಕುಲದಲ್ಲಿ ಏಳು ತಲೆಮಾರುಗಳಿಂದ ವರ್ಣ ಸಂಕರಣವಾಗಿಲ್ಲವೋ, ಅವನೇ ಬ್ರಾಹ್ಮಣ ಶ್ರೇಷ್ಠನು."

"ಮಿತ್ರಾ ಭಾರಧ್ವಾಜ, ಯಾವ ಮನುಷ್ಯನು ಶೀಲ ಸಂಪನ್ನನೂ ಕರ್ತವ್ಯದಕ್ಷನೂ ಆಗಿರುವನೋ ಅವನನ್ನೇ ಬ್ರಾಹ್ಮಣನೆನ್ನಬೇಕಲ್ಲದೆ ಇತರರನ್ನಲ್ಲ..." ಎಂದು ವಾಸಿಷ್ಠನು ಹೇಳಿದನು. ಅವರಿಬ್ಬರಲ್ಲಿ ಈ ಕುರಿತು ಬಹಳ ವಾದ ವಿವಾದವಾಯಿತು. ಒಬ್ಬರನ್ನೊಬ್ಬರು ಸಮಾಧಾನಪಡಿಸಲಾರದೇ ಹೋದರು. ಕೊನೆಗೆ ವಾಸಿಷ್ಠನೇ "ಗೆಳೆಯಾ ಭಾರಧ್ವಾಜ ನಮ್ಮ ವಾದವು ಇಲ್ಲಿ ಮುಗಿಯುವಂತೆಯೇ ಇಲ್ಲ. ಭಗವಾನ್‌ಎಂದು ಕೀರ್ತಿ ಪಡೆದ ಗೌತಮನು ನಮ್ಮ ಗ್ರಾಮದ ಬಳಿಯೇ ಇರುವನು. ಅವನು ಎಲ್ಲರಿಗೂ ಗುರುವಾಗಿದ್ದಾನೆ. ಅವನ ಬಳಿಹೋಗಿ ನಮ್ಮ ವಿಚಾರವನ್ನು ಮುಂದಿಡುವ....ಅವನ ನಿರ್ಣಯವೇ ನಮ್ಮ ಕೊನೆಯ ನಿರ್ಧಾರ ..." ಎಂದನು.

ಅವರಿಬ್ಬರೂ ಬುದ್ಧನ ಕಡೆ ಹೋದರು. ಕುಶಲ ಪ್ರಶ್ನೆಯಾದ ಬಳಿಕ ವಾಸಿಷ್ಠನು ಬುದ್ಧನನ್ನು ಕುರಿತು "ದೇವಾ ಗೌತಮಾ, ನಾವಿಬ್ಬರೂ ಬ್ರಾಹ್ಮಣ ಕುಮಾರರು. ನಮ್ಮಲ್ಲಿ ಜಾತಿ ಭೇಧದ ಕುರಿತು ವಾದ ವಿವಾದವಾಯಿತು. ಜನ್ಮದಿಂದಲೇ ಬ್ರಾಹ್ಮಣನಾಗಲು ಸಾಧ್ಯವೆಂದು ಈತನೆನ್ನುತ್ತಾನೆ. ಆದರೆ ನಾನೆನ್ನುತ್ತೇನೆ ಹುಟ್ಟಿನಿಂದ ಬ್ರಾಹ್ಮಣನಾಗದೆ ಕರ್ಮದಿಂದ ಮಾತ್ರ ಬ್ರಾಹ್ಮಣನಾಗಲು ಸಾಧ್ಯವೆಂದು.... ನಿಮ್ಮ ಕೀರ್ತಿಯನ್ನು ಕೇಳಿ ಪರಿಹಾರಕ್ಕಾಗಿ ನಾವಿಲ್ಲಿಗೆ ಬಂದಿದ್ದೇವೆ," ಎಂದನು.

ಬುದ್ಧ ದೇವನು "ಎಲೈ ವಾಸಿಷ್ಠನೇ ಹುಲ್ಲು, ಗಿಡ, ಮೃಗ ಪಕ್ಷಿಗಳಲ್ಲಿ, ಹುಳು, ಹುಪ್ಪಟೆಗಳಲ್ಲಿ, ಉರಗಗಳಲ್ಲಿ ಕೂಡಾ ಅನೇಕ ಜಾತಿಗಳಿವೆ. ಅವುಗಳ ಭಿನ್ನತ್ವದ ಚಿಹ್ನೆಗಳು ಆಯಾ ಪ್ರಾಣಿ ಸಮುದಾಯದಲ್ಲಿ ಸ್ಪಷ್ಟವಾಗಿ ಕಂಡು ಬರುವುವು. ಆದರೆ ಮನುಷ್ಯರಲ್ಲಿ ಭಿನ್ನತ್ವದ ಚಿಹ್ನೆಗಳು ಕಾಣಲಾರದು. ಕೂದಲು, ಕಿವಿ, ಮೂಗು, ಕಣ್ಣು, ಬಾಯಿ, ತುಟಿ, ಹುಬ್ಬು, ಕತ್ತು, ಹೊಟ್ಟೆ, ಬೆನ್ನು, ಕೈಕಾಲು ಮೊದಲಾದ ಅವಯವಗಳನ್ನು ಪರೀಕ್ಷಿಸಿದರು. ಒಬ್ಬ ಮನುಷ್ಯನು ಇನ್ನೊಬ್ಬನಿಗಿಂತ ಶರೀರಾ ಭಿನ್ನವಾಗಿರಲು ಸಾಧ್ಯವಿಲ್ಲ. ಬಣ್ಣದಲ್ಲಿ ಸ್ವಲ್ಪ ವ್ಯತ್ಯಾಸವಿರಬಹುದೇ ಹೊರತು ಮತ್ತಾವುದರಲ್ಲೂ ಇರಲಾರದು. ಪ್ರಾಣಿಗಳಲ್ಲಿ ಭಿನ್ನ ಜಾತಿಗಳು ದೊರೆಯುವಂತೆ ಮನುಷ್ಯ ಪ್ರಾಣಿಗಳಲ್ಲಿ ದೊರೆಯಲಾರದು. ಆದುದರಿಂದ ಮನುಷ್ಯರಲ್ಲಿ ಜಾತಿ ಭೇಧವನ್ನು ನಿಶ್ಚಿತಗೊಳಿಸಲು ಬರುವುದಿಲ್ಲ. ಕರ್ಮದಿಂದ ಮನುಷ್ಯನ ಜಾತಿಯನ್ನು ಗೊತ್ತು ಹಚ್ಚುವುದು ಸಾಧ್ಯವಿದೆ.

'ಯಾವನೇ ಬ್ರಾಹ್ಮಣನು ದನವನ್ನಿಟ್ಟುಕೊಂಡು ತನ್ನ ಜೀವನ ಸಾಗಿಸುವನೋ ಅವನನ್ನು ಬ್ರಾಹ್ಮಣನೆನ್ನದೆ 'ಗೌಳಿ' ಎನ್ನಬೇಕು. ಶಿಲ್ಪ ಕಲೆಯಿಂದ ಉಪಜೀವಿಕೆ ನಡೆಸುವವ ಶಿಲ್ಪಿಗ, ವ್ಯಾಪಾರ ಮಾಡುವವ ವೈಶ್ಯ, ಚಾಕರಿ ಕೆಲಸ ಮಾಡುವ ದೂತ, ಕಳವಿನಿಂದ ಜೀವನ ನಡೆಸುವವನಾದರೆ ಆತ ಕಳ್ಳ, ಯುದ್ಧ ಕಲೆಯಿಂದ ತನ್ನ ಉದರ ಪೋಷಣೆ ಮಾಡುವಂತಿದ್ದರೆ ಆತ ಯೋಧ, ಯಜ್ಞಯಾಗ, ನಿರ್ವಾಹ ನಡೆಸುವವನು ಯಾಜಕ ಮತ್ತು ರಾಷ್ಟ್ರದ ಮೇಲೆ ಉಪಜೀವನ ನಡೆಸುವವನು ರಾಜನಾಗಲು ಸಾಧ್ಯ. ಇವರಲ್ಲಿ ಯಾವನನ್ನು ಬ್ರಾಹ್ಮಣನೆಂದು ಹೇಳಬರುವಂತಿಲ್ಲ.

"ಎಲ್ಲ ಸಂಸಾರ ಬಂಧನವನ್ನು ಕಡಿದೊಗೆದು, ಯಾವದೇ ಪ್ರಾಪಂಚಿಕ ಸುಖ ದುಃಖಗಳಿಗೆ ಅಧೀನನಾಗದೆ, ಯಾವ ಬಗೆಯ ವಿಷಯಗಳಲ್ಲೂ ಆಸಕ್ತಿ ಇಲ್ಲದೆ ನಿರಾಡಂಬರ ಜೀವನ ಸಾಗಿಸುವವನೇ ಬ್ರಾಹ್ಮಣನೆನ್ನುತೇನೆ. ಇನ್ನೊಬ್ಬರು ಆಡಿದ ಅಪಶಬ್ದಗಳನ್ನು ವಿಧಿಸಿದ ವಧ ಬಂಧಗಳನ್ನು ಸಹಿಸಿಕೊಂಡು, ಕ್ಷಮಾಶೀಲನಾದವನೇ ಬ್ರಾಹ್ಮಣನೆಂದು ನಾನು ಕರೆಯುತ್ತೇನೆ. ಕಮಲ ಪತ್ರದ ಮೇಲಿನ ಜಲಬಿಂದುವಿನಂತೆ, ಇಹಲೋಕದ ವಿಷಯವಾಗಿ ಮಮಕಾರವಿಲ್ಲದೆ ನಿರ್ಲಿಪ್ತನಾಗಿರುವವನನ್ನೇ ನಾನು ಬ್ರಾಹ್ಮಣನೆನ್ನುತ್ತೇನೆ.' ಯಾರು ಜನ್ಮತಃ ಬ್ರಾಹ್ಮಣನಾಗುವುದಿಲ್ಲ. ಅಲ್ಲದೆ ಅಬ್ರಾಹ್ಮಣನೂ ಆಗುವುದಿಲ್ಲ. ಆದುದರಿಂದ ಒಬ್ಬನು ಕರ್ಮದಿಂದಲೇ ಬ್ರಾಹ್ಮಣನಾಗುತ್ತಾನೆ, ಮತ್ತು ಕರ್ಮದಿಂದಲೇ ಅಬ್ರಾಹ್ಮಣನಾಗುತ್ತಾನೆ. ಇಡೀ ಜಗತ್ತು ಕರ್ಮದಿಂದಲೇ ನಡೆದಿದೆ. ಅಚ್ಚನ್ನು ಅವಲಂಭಿಸಿ ರಥವು ನಡೆಯುವಂತೆ ಎಲ್ಲ ಪ್ರಾಣಿಗಳೂ ತಮ್ಮ ಕರ್ಮದಿಂದಲೇ ಬಾಳಿ ಬದುಕುತ್ತವೆ.

ವಾಸಿಷ್ಠ, ಭಾರಧ್ವಾಜರಿಗೆ ಸಂತೃಪ್ತಿಯಾಯಿತು.

ಂಂಂಂ

II

ಒಂದಾನೊಂದು ಸಮಯದಲ್ಲಿ ಭಗವಾನ್ ಬುದ್ಧನು ಶ್ರಾವಸ್ತಿಯ ಅನಾಥ ಪಿಂಡಿಕನ ಆಶ್ರಯದಲ್ಲಿರುತ್ತಿದ್ದನು. ಅದೇ ಸಮಯದಲ್ಲಿ ಬೇರೆಬೇರೆ ದೇಶಗಳಿಂದ ಐನೂರು ಬ್ರಾಹ್ಮಣರು ಯಾವುದೋ ಕಾರ್ಯ ನಿಮಿತ್ತ ಶ್ರಾವಸ್ತಿಗೆ ಬಂದಿದ್ದರು. ಆ ಬ್ರಾಹ್ಮರಿಗೆ "ಈ ಶ್ರಮಣ ಗೌತಮನು ನಾಲ್ಕೂ ವರ್ಣದವರಿಗೂ ಮೋಕ್ಷ ದೊರಕುವುದು ಎಂದು ಪ್ರತಿಪಾದಿಸುತ್ತಾನೆ ಅವನೊಡನೆ ನಾವು ವಾದಿಸಿ ಅವನ ಈ ಮಾತನ್ನು ತಪ್ಪೆಂದು ತೋರಿಸಿಕೊಡಬೇಕು. ಅನಿಸಿತು. ಆದರೆ ಯಾರೂ ಮುಂದೆ ಬರದಾದರು. ಕೊನೆಗೆ ಅಶ್ವಲಾಯನನೆಂಬ ಬ್ರಾಹ್ಮಣ ಕುಮಾರನನ್ನು ಆ ಕಾರ್ಯಕ್ಕೆ ಆರಿಸಲಾಯಿತು.

ಅವನ ಅಧ್ಯಯನವು ಆಗ ಪೂರ್ತಿಯಾಗಿತ್ತು. ನಿಘಂಟು, ಛಂದಃ ಶಾಸ್ತ್ರ ಮೊದಲಾದ ವೇದಾಂಗಗಳ ಸಹಿತವಾಗಿ ಅವನಿಗೆ ನಾಲ್ಕು ವೇದಗಳೂ ಕಂಠಪಾಠವಾಗಿದ್ದುವು. ಆದರೂ ಭಗವಾನ್ ಬುದ್ಧನ ಕೂಡ ವಾದ ಮಾಡುವುದು ಸುಲಭವಲ್ಲವೆಂಬುದು ಅವನಿಗೆ ತಿಳಿದಿತ್ತು. ಆದುದರಿಂದಲೇ ಆತನು ತನ್ನನ್ನು ಆರಿಸಿದಾಗ ಈ ರೀತಿ ಹೇಳಿದನು: "ಸಂಗಾತಿಗಳೇ, ಗೌತಮನು ಧರ್ಮವಾದಿಯಾಗಿದ್ದಾನೆ. ಧರ್ಮವಾದಿಗಳೊಡನೆ ವಾದಿಸುವುದು ಸುಲಭಸಾಧ್ಯವಲ್ಲ. ನಾನು ವೇದಗಳಲ್ಲಿ ಪಾರಂಗತನಿದ್ದರೂ ಗೌತಮನೊಡನೆ ವಾದ ವಿವಾದವನ್ನು ನಡೆಸಲು ಸಮರ್ಥನಲ್ಲ"

ಎಷ್ಟೋ ಸಮಯದ ಬಳಿಕ ಅವನು ಗೌತಮನೊಡನೆ ವಾದ ಮಾಡುವುದು ಕಠಿಣವಿದ್ದರೂ ಒತ್ತಾಯಕ್ಕಾಗಿ ನಿಮ್ಮೊಡನೆ ಬರುವೆನೆಂದು ಒಪ್ಪಿದನು. ಅವರು ಬುದ್ಧನ ಬಳಿಗೆ ಬಂದರು. ಕುಶಲ ಸಮಾಚಾರದ ಬಳಿಕ ಎಲ್ಲರೂ ಬಂದು ಬದಿಯಲ್ಲಿ ಕುಳಿತರು. ಆಗ ಅಶ್ವಲಾಯನನು "ದೇವಾ ಗೌತಮಾ, ಬ್ರಾಹ್ಮಣ ವರ್ಣವೇ ಶ್ರೇಷ್ಠವಾಗಿದೆ. ಇತರ ವರ್ಣಗಳು ಹೀನವಾಗಿವೆ. ಬ್ರಾಹ್ಮಣ ವರ್ಣವೇ ಶುಕ್ಲವಾಗಿದೆ, ಇತರ ವರ್ಣಗಳು ಕೃಷ್ಣ ಆಗಿವೆ. ಬ್ರಾಹ್ಮಣರಿಗೆ ಮಾತ್ರ ಮೋಕ್ಷ ದೊರೆಯಲು ಸಾಧ್ಯ. ಇತರರಿಗೆ ಅದು ದುರ್ಲಭ ಬ್ರಾಹ್ಮಣರು ಬ್ರಹ್ಮ ದೇವನ ದಾಯಾದಿಗಳು." ಎಂದು ಹೇಳಿ ಗೌತಮನ ಅಭಿಪ್ರಾಯವೇನೆಂದು ಕೇಳಿದನು.

ಭಗವಾನ್ ಈ ರೀತಿ ಹೇಳಿದನು: "ಎಲೈ ಅಶ್ವಲಾಯನ ಬ್ರಾಹ್ಮಣ ಹೆಂಗಸರು ಋತುಮತಿಯಾಗುವರು. ಗರ್ಭಿಣಿಯಾಗುವರು; ಮಗುವಿಗೆ ಮೊಲೆಯುಣ್ಣಿಸುವರು. ಈ ರೀತಿ ಬ್ರಾಹ್ಮಣರ ಜನ್ಮವು. ಇತರ ಜಾತಿಯವರಂತೆ ತಾಯಿಯ ಉದರದಿಂದಲೇ ಜನ್ಮಕ್ಕೆ ಬರುತ್ತಿರುವಾಗ ತಾವು ಬ್ರಹ್ಮನ ಮುಖದಿಂದ ಹುಟ್ಟಿರು

(ಹದಿನೈದನೇ ಪುಟ ನೋಡಿರಿ)

8%
ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

			ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	....	$5\frac{1}{2}$
6 ತಿಂಗಳಿಂದ	12 ತಿಂಗಳ ಕೆಳಗೆ	....	6
12 ತಿಂಗಳಿಂದ	24 ತಿಂಗಳ ಕೆಳಗೆ	....	$6\frac{1}{2}$
24 ತಿಂಗಳಿಂದ	36 ತಿಂಗಳ ಕೆಳಗೆ	....	$6\frac{3}{4}$
36 ತಿಂಗಳಿಂದ	48 ತಿಂಗಳ ಕೆಳಗೆ	....	7
48 ತಿಂಗಳಿಂದ	60 ತಿಂಗಳ ಕೆಳಗೆ	....	$7\frac{1}{4}$
60 ತಿಂಗಳಿಂದ	84 ತಿಂಗಳ ಕೆಳಗೆ	....	$7\frac{1}{2}$
84 ತಿಂಗಳಿಂದ	120 ತಿಂಗಳ ಕೆಳಗೆ	....	8
ಸೇವಿಂಗ್ಸ್ ಖಾತೆಯ ಮೇಲೆ		....	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.



Phone No. 226

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಫೋಟೋ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ತಮ್ಮ ಗಗನಯಾತ್ರೆಯ ಸಿದ್ಧತೆಯಲ್ಲಿ ಅಮೆರಿಕದ ಗಗನಯಾತ್ರಿಕರಿಬ್ಬರು.

ನವಯುಗ

ಸಂಪುಟ ೪೪ | ಉಡುಪಿ | Vol. 44

ಸಂಚಿಕೆ ೩೬ | ೬—೫—೧೯೬೫ | No. 36

ವಚನ ಸುಧೆ

ಭೂತ್ಯೈ ನ ಪ್ರಮದಿತವ್ಯಂ||
(ತೈತ್ತಿರೀಯೋಪನಿಷತ್, ೧—೧೧)

O ಉನ್ನತಿಯ ಸಾಧನಾ ಕಾರ್ಯದಲ್ಲಿ ಅಲಸನಾಗಬೇಡ.

OO ಶರೀರ, ಮನಸ್ಸು, ಬುದ್ಧಿ ಮತ್ತು ಆತ್ಮಗಳ ಬಲವನ್ನು ಹೆಚ್ಚಿಸಿಕೊಳ್ಳಬೇಕು. ವ್ಯಾಯಾಮದಿಂದ ಶಾರೀರಿಕ ಬಲ, ಅಧ್ಯಯನದಿಂದ ಮಾನಸಿಕ ಬಲ, ಜ್ಞಾನದಿಂದ ಬೌದ್ಧಿಕ ಬಲ ಮತ್ತು ಸತ್ತ್ವದಿಂದ ಆತ್ಮಬಲಗಳು ಹೆಚ್ಚುತ್ತವೆ. ಆದುದರಿಂದ ಈ ಬಲಗಳನ್ನು ಬೆಳೆಸಿಕೊಂಡು ಶ್ರೇಷ್ಠನಾಗು.

ರಾಷ್ಟ್ರ ರಕ್ಷಣೆಯ ಮಹಾ ಯಜ್ಞ

ಆಕ್ರಮಣಗಾರರು ಯಾರೇ ಇರಲಿ, ಅವರನ್ನು ಹೊರಗಟ್ಟಬೇಕೆಂಬ ಮಹತ್ವದ ನಿರ್ಣಯವನ್ನು ಭಾರತದ ಲೋಕ ಸಭೆಯು ಅಂಗೀಕರಿಸಿ, ಭಾರತೀಯರ ಸ್ವಾತಂತ್ರ್ಯ ರಕ್ಷಣೆಯ ಪ್ರತಿಜ್ಞೆಯನ್ನು ಈ ಬಾರಿಯ ಸಂಸತ್ ಅಧಿವೇಶನದಲ್ಲಿ ಮಾಡಿದುದು ದೇಶದಾದ್ಯಂತ ಜನರ ಸಂತೋಷಕ್ಕೆಡೆಯುಂಟು ಮಾಡಿದೆ. ಈ ನಿರ್ಣಯವು ಬರೇ ಬಾಯಿ ಮಾತಾಗಿ ಉಳಿಯದೆ ಕಾರ್ಯಾಚರಣೆಗೆ ಬಂದರೆ, ಆಗ ಭಾರತೀಯರು ಇನ್ನಷ್ಟು ಆನಂದ ಪಡುವುದರಲ್ಲಿ ಸಂದೇಹವಿಲ್ಲ.

ಸ್ವಾತಂತ್ರ್ಯ ಪಡೆದ ಆರಂಭದಿಂದಲೂ ಭಾರತದ ಸ್ವಾತಂತ್ರ್ಯ ಗಂಡಾಂತರದಲ್ಲೇ ಇತ್ತು. ದೇಶದ ವಿಭಜನೆಯಾಗಿ, ಪಾಕಿಸ್ತಾನದ ಜನ್ಮವಾದದು ಭಾರತಕ್ಕೊಂದು ಶಾಶ್ವತ ತಲೆನೋವಿನ ಸಂಗತಿಯಾಗಿ ಪರಿಣಮಿಸಿತು. ಅಣ್ಣನಲ್ಲಿ ವೈರ ಸಾಧಿಸುವ ತಮ್ಮನಂತೆ, ಪಾಕಿಸ್ತಾನವು ಮೊದಲಿನಿಂದಲೂ ಭಾರತದ ವಿರುದ್ಧ ಕಾರ್ಯಾಚರಣೆಯನ್ನೇ ಕೈಕೊಂಡಿತು. ಕಾಶ್ಮೀರ ವಿವಾದವೇ ಮೊದಲಾದ ಸಮಸ್ಯೆಗಳಲ್ಲದೆ, ಅಲ್ಲಲ್ಲಿ ಕಿರುಕುಳ ಕೊಡುವುದನ್ನು ಪಾಕಿಸ್ತಾನ ಮುಂದುವರಿಸಿ, ಶುದ್ಧ ಆತಿಕ್ರಮಣದ ಧೋರಣೆಯನ್ನು ಮುಂದುವರಿಸಿಕೊಂಡು ಬಂದಿದೆ.

ಭಾರತದ ಉತ್ತರ ಗಡಿಯನ್ನು ಆಕ್ರಮಿಸಿದ ಕಮ್ಯುನಿಸ್ಟ್ ಚೈನಾದೊಡನೆ ಸ್ನೇಹ ಸಂಬಂಧ ಬೆಳೆಸಲು ಪಾಕಿಸ್ತಾನ ಮುಂದಾಯಿತು. ಅಪ್ರೀತಿಯುತವಾದ, ಗಡಿ ಒಪ್ಪಂದವನ್ನು ಚೈನಾದೊಂದಿಗೆ ಮಾಡಿಕೊಂಡಿತು. ಪಾಕಿಸ್ತಾನದ ಅಧ್ಯಕ್ಷರು ಚೀನಾವನ್ನು ಸಂದರ್ಶಿಸುವ ಉದಾರತೆಯನ್ನು ತೋರಿದರು. ಹೀಗೆ ಪ್ರತಿಯೊಂದು ವಿಚಾರದಲ್ಲೂ ಭಾರತದ ವಿರುದ್ಧಾಚರಣೆಯೇ ಪಾಕಿಸ್ತಾನದ ಗುರಿ ಎಂದು ತೋರುವಂತೆ ಅದು ವರ್ತಿಸುತ್ತಿದೆ!

ಕಛ್ ಪ್ರದೇಶದಲ್ಲಿ ಪಾಕಿಸ್ತಾನವು ಭಾರತೀಯ ಪ್ರದೇಶವನ್ನು ಆಕ್ರಮಿಸಿ, ಯುದ್ಧಕ್ಕೆ ನಾಂದಿಯನ್ನು ಹಾಕಿದೆ ಎಂದರೆ ತಪ್ಪೇನಿಲ್ಲ. ಅಂತರಾಷ್ಟ್ರೀಯ ರೇಖೆಯಿಂದ ಹಲವಾರು ಮೈಲುಗಳಷ್ಟು ಮುನ್ನುಗ್ಗಿ, ಭಾರತೀಯ ಕಾವಲು ಪಡೆಯವರನ್ನು ಆಕ್ರಮಿಸುವ ಧಾರ್ಷ್ಟ್ಯವನ್ನು ಪಾಕಿಸ್ತಾನ ತೋರಿದೆ. ಕಮ್ಯುನಿಸಮ್ಮಿನ ವಿರುದ್ಧ ಉಪಯೋಗಿಸಲು ಅಮೆರಿಕೆಯು ಇತ್ತ ಶಸ್ತ್ರಾಸ್ತ್ರಗಳನ್ನು ಈ ಸಂದರ್ಭ ಅದು ಉಪಯೋಗಿಸಿರುವುದು ಒಂದು ಉಲ್ಲೇಖನೀಯ ಸಂಗತಿ! ನಮ್ಮ ಪಾಶ್ಚಾತ್ಯ ಬಂಧುಗಳು ಪಾಕಿಸ್ತಾನದ ಈ ವರ್ತನೆಯನ್ನು ನ್ಯಾಯ ಪಕ್ಷಪಾತಿಗಳಾಗಿದ್ದಲ್ಲಿ ಖಂಡಿಸಬೇಕು.

ಕಛ್ ಪ್ರದೇಶದ ಆಕ್ರಮಣವು ಪೂರ್ವೋದ್ದೇಶಿತ ಎಂಬುದಕ್ಕೆ ಹಲವಾರು ಪುರಾವೆಗಳು ದೊರೆತಿವೆ. ಅತ್ತ ಉತ್ತರದಲ್ಲಿ ಚೀನಾವು ಆಕ್ರಮಣದ ಸಿದ್ಧತೆ ನಡೆಸಿದೆ ಎಂಬ ಮಾತು ಕೇಳಿ ಬರುತ್ತಿದೆ. ಹೀಗೆ ಭಾರತವನ್ನು ಬಿಕ್ಕಟ್ಟಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಕೆಡವಿ ಅದರ ಸ್ವಾತಂತ್ರ್ಯಾಪಹಾರ ಮಾಡಬೇಕೆಂಬುದೇ ಚೀನೀ ಪಾಕಿಸ್ತಾನಗಳ ಉದ್ದೇಶವಿದ್ದಂತೆ ಕಾಣುತ್ತದೆ. ಈ ಸಂದರ್ಭ ನಮ್ಮ ದೇಶದ ಗಡಿ ರಕ್ಷಣೆಯಲ್ಲಿ ಕಾವಲು ಪಡೆಯವರು ಹಾಗೂ ಜವಾನರು ಸುಸಜ್ಜಿತರಾಗಿರುವರೆಂಬುದು ಸಂತಸದ ಸಂಗತಿ. ಮುನ್ನುಗ್ಗಿದ್ದ ಪಾಕಿಸ್ತಾನಿ ಸೇನೆಯನ್ನು ಹಿಮ್ಮೆಟ್ಟಿಸುವುದರಲ್ಲಿ ಬೇರಾಬೈಟ್‌ನಲ್ಲಿ ಸೈನಿಕರು ಯಶಸ್ವಿಗಳಾಗಿದ್ದಾರೆ. ಅವರಿಗೆ ಭಾರತೀಯರ ಸಂಪೂರ್ಣ ಬೆಂಬಲ ಇದೆ ಎಂಬುದು ಸರ್ವವಿದಿತ ಸಂಗತಿ.

ಈ ಮಧ್ಯೆ ಬ್ರಿಟನ್ ಹಾಗೂ ಅಮೆರಿಕಗಳು ಯುದ್ಧ ವಿರಾಮಕ್ಕಾಗಿ ಯತ್ನಿಸುತ್ತಿವೆ. ಆದರೆ ಆಕ್ರಮಣವನ್ನು ತೆರವು ಮಾಡದೆ ಯುದ್ಧವಿರಾಮ ಸೂಚನೆಯನ್ನು ಒಪ್ಪುವುದಿಲ್ಲ ಎಂಬುದಾಗಿ ಪ್ರಧಾನಿಯವರು ಲೋಕ ಸಭೆಯಲ್ಲಿ ಪುನಃ ಪುನಃ ಘೋಷಿಸಿರುವರು. ಭಾರತದ ಗೌರವಕ್ಕೆ ಕುಂದನ್ನು ತರುವಂತಹ ಯಾವುದೇ ಸೂಚನೆಗೆ ಭಾರತವು ಸಮ್ಮತಿಸುವುದಿಲ್ಲ ಎಂದು ಶಾಸ್ತ್ರಿಯವರು ಹೇಳಿರುವುದು ನ್ಯಾಯೋಚಿತವಾಗಿದೆ. ಗಂಭೀರವಾದ ಈ ಪರಿಸ್ಥಿತಿಯಲ್ಲಿ, ದೇಶದ ಸ್ವಾತಂತ್ರ್ಯ ರಕ್ಷಿಸುವಲ್ಲಿ ಜನನಾಯಕ ಶಾಸ್ತ್ರಿಯವರು ದಿವಂಗತ ನೆಹರೂರವರ ದಾರಿಯಲ್ಲೇ ಮುಂದುವರಿಯುತ್ತಿದ್ದಾರೆ. ಅವರೀಗ ಯುದ್ಧಕಾಲದ ಸೇನಾನಿಯಾಗಬೇಕಾಗಿದೆ.

ಭಾರತವೇ ಪಾಕಿಸ್ತಾನಿ ಪ್ರದೇಶವನ್ನು ಆಕ್ರಮಿಸಿ ಯುದ್ಧಕ್ಕೆ ನಾಂದಿ ಹಾಕಿದೆ ಎಂಬ ಪ್ರಲಾಪವನ್ನ ಅಯೂಬರು ಮಾಡುತ್ತಿದ್ದಾರೆ. ಪಾಕಿಸ್ತಾನವು ಶಾಂತಿ ಹಾಗೂ ಸಮಾಧಾನಗಳಿಂದಲೇ ವರ್ತಿಸುತ್ತಿದೆ ಎಂಬ ವಾದ ಅವರದು. ಇವೆಲ್ಲವೂ ಬುಡವಿಲ್ಲದ ಮಾತುಗಳು. ಇತರರೆದುರು ಸಂಭಾವಿತನೆನಿಸಿಕೊಳ್ಳಲು ಪಾಕಿಸ್ತಾನವು ಈ ತಂತ್ರ ಹೂಡಿದೆ.

ಪಾಕಿಸ್ತಾನದ ಈ ವರೆಗಿನ ದುಷ್ಕೃತ್ಯಗಳನ್ನೆಲ್ಲಾ ಹಿರಿಯಣ್ಣನಂತೆ ಕ್ಷಮಿಸಿರುವ ಪಾಶ್ಚಾತ್ಯ ದೇಶಗಳು ಈ ಸಂದರ್ಭದಲ್ಲೂ ಖಂಡ ತುಂಡವಾದ ಧೋರಣೆಯನ್ನು ಅನುಸರಿಸಿಲ್ಲ. ಈ ಸಂದರ್ಭ ಭಾರತದ ಹೊಣೆಗಾರಿಕೆ ವಿಶೇಷವೆನಿಸಿದೆ. ನಿಜವಾದ ಆಕ್ರಮಣಗಾರರು ಯಾರು ಎಂಬುದನ್ನು ಅದೀಗ ಜಗತ್ತಿಗೆ ತೋರಿಸಿಕೊಡಬೇಕಾಗಿದೆ. ಭಾರತದ ಧ್ಯೇಯ ಧೋರಣೆಗಳ ಕುರಿತು ವ್ಯಾಪಕವಾದ ಪ್ರಚಾರ ನಡೆಸಬೇಕಾಗಿದೆ.

ದೇಶದ ಗಂಡಾಂತರ ಪರಿಸ್ಥಿತಿಯಲ್ಲಿ ನಾಗರಿಕರ ಕರ್ತವ್ಯ ಬಹಳವಾದುದು. ಈ ಈ ಸಂದರ್ಭ ಏಕಾಏಕಿ ಶಕ್ತಿಯ ಪ್ರಯೋಗವೂ ಅನರ್ಥಕ್ಕೆ ಕಾರಣವಾದೀತು. ಶಾಂತಿ ಸಮಾಧಾನಗಳಿಂದಲೇ ಸಮಸ್ಯೆಯ ಪರಿಹಾರ ಮಾಡಲು ಸರಕಾರ ಯತ್ನಿಸುತ್ತಿದೆ. ಆದರೆ ಸೂಕ್ತ ಒಡಂಬಡಿಕೆಯಾಗದಿದ್ದಲ್ಲಿ ಭಾರತಕ್ಕೆ ಯುದ್ಧದ ಹೊರತು ಬೇರೆ ಮಾರ್ಗವೇ ಇಲ್ಲ. ದೇಶ ರಕ್ಷಣೆಯ ಈ ಮಹಾ ಯಜ್ಞದಲ್ಲಿ ಸರ್ವರೂ ತ್ಯಾಗಕ್ಕೆ ಸಿದ್ಧರಾಗಿ ಪಾಲುಗೊಳ್ಳಬೇಕಾದ ಪರ್ವಕಾಲ ಈಗ ಬಂದಿದೆ.

ಅಂತರ್ ಜಿಲ್ಲಾ ಸಾಗಾಟ ನಿರ್ಬಂಧ

ಮಳೆಗಾಲ ಇನ್ನು ಆರಂಭವಾಗಿಲ್ಲ. ಆದರೆ ಜಿಲ್ಲೆಯಲ್ಲಿ ಅಕ್ಕಿಯ ಪರಿಸ್ಥಿತಿ ವಿಷಮತೆಗೆ ಮುಟ್ಟಿದೆ. ಈಗಾಗಲೇ ಮುಡಿಗೆ ನಲ್ವತ್ತೈದು ರೂಪಾಯಿಗಳ ವರೆಗೂ ಬೆಲೆ ಏರಿದೆಯೆಂದರೆ ಇನ್ನು ಮಳೆಗಾಲದಲ್ಲಿ ಬೆಲೆ ಯಾವ ಘಟ್ಟ ಮುಟ್ಟೀತೆಂದು ಊಹಿಸಲು ಬರುವುದಿಲ್ಲ. ಈ ಬೆಲೆ ಏರಿಕೆಯು ಕೃತಕವಾದ ಅಭಾವ ಪರಿಸ್ಥಿತಿಯಿಂದ ಉಂಟಾದುದು. ಆಹಾರದ ಕುರಿತು ಸೂಕ್ತ ಧೋರಣೆ ವಹಿಸದಿದ್ದರೆ ಪರಿಸ್ಥಿತಿ ತೀರ ಬಿಗಡಾಯಿಸಬಹುದು.

ರಾಜ್ಯ ಸರಕಾರ ಈ ಸಂದರ್ಭ ತನ್ನ ಆಹಾರ ಧೋರಣೆಯ ಪರಿಣಾಮಗಳನ್ನು ತಿಳಿದು ಧೋರಣೆಯನ್ನು ಪುನರ್ವಿಮರ್ಶಿಸುವ ಕಾಲ ಬಂದಿದೆ. ಅಂತರ್ ಜಿಲ್ಲಾ ಸಾಗಾಟದ ನಿರ್ಬಂಧದಿಂದ ಈ ಅಭಾವ ಪರಿಸ್ಥಿತಿ ಹೋಗುವಂತಿದ್ದರೆ, ಸರಕಾರ ಆ ನಿರ್ಬಂಧವನ್ನು ತೆಗೆದು ಹಾಕುವಲ್ಲಿ ವಿಳಂಬ ಮಾಡಕೂಡದು.

ನರಸಣ್ಣನ ಸರಸ



'ಕಛ್ – ರಣ ಗಡಿಯಲ್ಲಿ ಸ್ವರಕ್ಷಣೆಗಾಗಿ ಅಮೆರಿಕನ್ ಶಸ್ತ್ರಾಸ್ತ್ರಗಳನ್ನು ಪಾಕಿಸ್ತಾನ ಉಪಯೋಗಿಸಿತೆಂಬುವನ್ನು ಒಪ್ಪುವುದಿಲ್ಲವಾದರೂ ಜಾನ್ಸನ್ ಸರಕಾರ ಅಯ್ಯೂಬ ಸರಕಾರಕ್ಕೆ ಮುಂದೆಯೂ ಮಿಲಿಟರಿ ಸಹಾಯ ಒದಗಿಸುವುದಂತಲ್ಲಾ ಇವರ ಗುಟ್ಟೇನೂ ತ?'

"ಒಳಗಿನ ಗುಟ್ಟು ಶಿವನೇ ಬಲ್ಲಾಂತರಲ್ಲಾ..."

ಗೇಹರಾಜ್ಯದಲ್ಲಿ

ಎಲ್ಲಾದ್ರೂ ಕ್ಯಾರೆಟ್ಟು ಹದಿನಾಲ್ಕು



"ಏನು, ಭಾರಿ ಬೇಗನೇ ಬಂದು ಬಿಟ್ರಿ?"

"ಏನೋ ಬಂದೇನ್ನು."

"ಬಂದದ್ದಂತೂ ನಿಜಾನ್ನಿ. ಆದ್ರೆ ಬರೋಕೆ ತಡವಾಗುತ್ತೇಂತ ಅಂದವ್ರು..."

"ಹ್ಞೂಂ, ತಡವಾದ್ರೂ ಆಗಬಹುದೂಂದೆ..."

"ಯಾಕೆ ಸುಮ್ಮ ಸುಮ್ಮಗೆ ಚರ್ಚೆ? ನಾನು ಬೇಗ ಬನ್ನಿ ಅಂದ ದಿನ ತಡ ಮಾಡೋದು, ತಡವಾಗುತ್ತೇಂತ ನೀವೇ ಅಂದ ದಿನ ಬೇಗ ಬರೋದು ನಿಮ್ಮ ಅಭ್ಯಾಸಾನೇ ಆಗಿ ಬಿಟ್ಟಿದೆ."

"ಅಯ್ತಪ್ಪ. ಈಗ, ಬೇಗ ಬಂದದ್ದರಿಂದ ಕೊಳ್ಳೆ ಹೋದದ್ದಾದ್ರೂ ಏನೂಂತ?"

'ಹೇಗೋದೇನು ಬಂತು? ಇದ್ರೆ ತಾನೇ ಹೋಗೋದು!"

'ಅದೂ ನಿಜಾನ್ನು. ತಿಂಗಳ ಕೊನೆಯಾಗುವಾಗ ಇರೋದಾದ್ರೂ ಏನು? ತುಳಿದ್ರೂ ಕಾಸು ಸುರಿಯೋಲ್ಲ..."

'ಇದ್ರೆ ತಾನೇ ತುಳಿಯೋದು, ಸುರಿಯೋದು?"

'ಅಂದ್ರೆ ಏನೂ ಇಲ್ಲಾಂತೀಯ ನೀನು?

'ಖಂಡಿತಕ್ಕೂ ಇಲ್ಲನ್ನಿ. ನೋಡಿ, ಕಳೆದ ತಿಂಗಳ ಕೊನೇ ದಿನ ಒಬ್ಬ ಕಳ್ಳ ಶಾಲೆ ಹೊಕ್ಕನಂತೆ...."

"ಅವನೆಂತವನಂತ?"

"ಯಾಕೆ?'

"ಅಲ್ವೆ, ಶಾಲೆಯಲ್ಲಿ ಕಳ್ಳನಿಗೆ ಸಿಗೋದಾದ್ರೂ ಏನೂಂತ?"

"ನೀವು ಪ್ರಯೋಜನವಿಲ್ಲ...?"

"ಯಾಕೆ?'

'ಯಾಕೇಂದ್ರೆ? ಅವ ಹೊಕ್ಕ ದಿನ ತಿಂಗಳ ಕೊನೆ ದಿನ. ಮೊದಲ ತೇದಿಗೆ ಸಂಬಳ ಕೊಡಲೆಂದು ಹಣ ತಂದಿಟ್ಟಿದ್ದಾರೇಂತ ಅವನ ಊಹೆ....'

'ಹ್ಞಾಂ ಹಾಗೆ. ಹಾಗಾದರೆ ಸರಿಯಾಯ್ತಾನ್ನು. ಮತ್ತೆ ಮುಂದೆ?"

"ಆತ ನಡುರಾತ್ರೆ ಹೊಕ್ಕನಂತೆ. ಆಫೀಸು ಕೋಣೆಯೊಳಗೆ ನುಗ್ಗಿದನಂತೆ. ಅಲ್ಲಿ ಮೇಜಿಗೆ ಬೀಗಾನೇ ಇರ್‍ಲಿಲ್ಲವಂತೆ. ಕಪಾಟಿಗೆ ಬಾಗಿಲೇ ಇರ್‍ಲಿಲ್ವಂತೆ. ಮತ್ತೆಲ್ಲಿ ಹಣ ಇಟ್ಟಿದ್ದಾರೇಂತ ಎಲ್ಲೆಲ್ಲೂ ಹುಡುಕಿ ಹುಡುಕಿ...."

"ಏನು? ಏನೂ ಸಿಗಲಿಲ್ವೆ?"

"ಸಿಗೋದೇನು? ಅಲ್ಲಿನ ಆ ಹಳೆ ರಿಕಾರ್ಡುಗಳು ಮಾತ್ರ. ಅವನ್ನ ಗಜೇಟಿಗೆ ಮಾರಿದರೂ ಕೊಂಡುಕೊಳ್ಳೋರು ಯಾರೂ ಇರ್‍ಲಿಕ್ಕಿಲ್ಲ...."

"ಯಾಕಂತೆ? ಒಳ್ಳೆ ಕ್ರಯವಿದೆಯಲ್ಲಾ ಈಗ?"

"ಕ್ರಯವೇನೋ ಇದೆ. ಆದ್ರೆ ಅಂಗೈಯಗಲದ ಮುಟ್ಟಿದೊಡನೆಯೇ ಹುರಿದ ಹಪ್ಪಳವಾಗುವ ಕಾಗದ ಚೂರು...."

"ಓ, ಹಾಗೆ, ಪಾಪ, ಅವ ಎದ್ದವ್ನೇ ಬೆಕ್ಕಿನ ಮುಖ ನೋಡಿರ್‍ಬೇಕು.....ಮತ್ತೆ ...."

"ಮತ್ತೇನು? ಬಂದ ದಾರಿಗೆ ಸುಂಕವಿಲ್ಲಾಂತ ಹೊರ ಬಂದಾನ್ನಿ. ಆಗ್ಲೇ ಚಂದ್ರನ ನಸುಬೆಳಕಿನಲ್ಲಿ ಆತನಿಗೆ ಗೋಚರಿಸಿದಂತೆ..."

'ಏನು? ಗಂಟು?'

"ಗಂಟಲ್ಲ, ಬಡೆಯುವ ಗಂಟೆ...."

"ಏನು, ಅದಕ್ಕೂ ಕೈಕೊಟ್ಟನೆ?'

'ಅಯ್ಯೋ, ಏನಂತೀರಿ? ಅದು ಗಂಟೆಯಲ್ರಿ, ಏನೋ ಒಂದು ಕಬ್ಬಿಣದ ತುಕ್ಕು ಹಿಡಿದ ತುಂಡು!"

"ಹ್ಞೂಂ, ಅದೂ ಪ್ರಯೋಜನಕ್ಕೆ ಬರಲಿಲ್ಲಾನ್ನು..."

"ಅಲ್ಲೇ ಆತನಿಗೆ ತಾನು ಹೊಕ್ಕದ್ದು ಖಾಸಗಿ ಪ್ರಾಥಮಿಕ ಶಾಲೆ ಎಂತ ತಿಳಿತಂತೆ. ತನ್ನ ಮೂರ್ಖತನಕ್ಕೆ ತಾನೇ ಮರುಕಪಟ್ನಂತೆ...."

"ಯಾಕಾಗಿ? ತನ್ನ ಕೋರಿಯುವುದು ಅವನ ಕೆಲಸ, ಖಾಸ ಶಾಲೆಯಾದರೇನು? ಬಂಡಸಾಲೆಯಾದರೇನು?'

"ಅನು ಸರೀನ್ನಿ. ಇದೇ ಬೋರ್ಡನ್ನು ಮೊದಲೇ ನೋಡುತಿದ್ದರೆ, ವ್ಯರ್ಥ ಶ್ರಮ ಪಡಬೇಕಾದ ಅಗತ್ಯವೇ ಇರಲಿಲ್ಲಾಂತ..'

'ಓ, ಹಾಗೆ. ಅಂದ್ರೆ, ನಿನ್ನ ಅಭಿಪ್ರಾಯ ತಿಳಿತು ಬಿಡು."

"ಏನು?'

"ಮತ್ತೇನು? ಖಾಸ ಶಾಲೆಗಳಲ್ಲಿ ಒಂದನೇ ತಾರೀಕು ವೇತನ ಸಿಗೋದಿಲ್ಲಾಂತ...."

"ಓಹೋ! ಇಷ್ಟೇನೆಯೆ?"

"ಮತ್ತೇನಂತೆ?"

'ನೋಡಿ, ಯಾವುದೇ ಉದ್ಯೋಗದಲ್ಲಿ ಇಂತ ಸಮಯಕ್ಕೆ ವೇತನ ಸಿಗುತ್ತದೇಂತ ಒಂದು ಗ್ಯಾರಂಟಿ ಇದೆ. ಆದ್ರೆ, ಭಾವಿ ಜನಾಂಗ ನಿರ್ಮಾತೃಗಳಿಗೆ ಅಂತಹ ಗ್ಯಾರಂಟಿಯೇ ಇಲ್ಲ. ಅದ್ದರಿಂದ್ಲೇ ಅವರು ನಿರ್ಮಿಸುತ್ತಿರುವ ಜನಾಂಗದಲ್ಲೂ ಗ್ಯಾರಂಟಿಯಿದೆಯೆಂತ ಹೇಗೆ ಹೇಳುವುದು?'

"ಹ್ಞಾಂ...ಅದು ಸರಿಯೇ ಎನ್ನು..."

"ಮತ್ತೆ ನೋಡಿ, ನಿಮ್ಮ ಟೋಪಿ ಸರಕಾರವಿದೆಯಲ್ಲಾ, ಅದಕ್ಕೂ, ಅದರ ಯೋಜನೆ, ಧೋರಣೆಗಳಿಗೂ ಗ್ಯಾರಂಟಿ ಕಡಿಮೆ..."

"ಹೇಗೆ ಅದು?"

"ಹೇಗೇಂದ್ರೆ? ಅಷ್ಟೂ ಗೊತ್ತಾಗೋದಿಲ್ವೆ? ನೋಡಿ ..'

"ನೋಡ್ತಾ ಇದ್ದೇನೆ..."

"ಏನನ್ನು?"

"ಮತ್ತೇನನ್ನು? ರಂಗೇರಿದ ನಿನ್ನ ಮಂಗ ಮುಸುಡನ್ನು...."

"ಸಾಕು ಬಿಡೀಂದ್ರೆ....ಮಂಗ ಮುಸುಡಿನವಳ ಕೈಹಿಡಿದು ನೀವೂ ಹಾಗೇ ಆಗಿದ್ದೀರಲ್ಲಾ...."

"ಏನೋಪ್ಪ...."

"ಅಪ್ಪನನ್ನ ಕೇಳೋಕೆ ಸ್ವರ್ಗಕ್ಕೆ ಹೋಗಬೇಕು ನೋಡಿ...."

"ಅದಕ್ಕೆ ನಾನೇನೋ ತಯಾರು. ಆದರೆ ನಿನ್ನಂತವಳ ಕೈ ಹಿಡಿದ ಮೇಲೆ ನರಕಕ್ಕೆ ಹೋಗಬೇಕಾಗುತ್ತದೋಂತ ಹೆದರಿಕೆ..."

"ಸಾಕೊಂದ್ರೆ, ಶುರುಮಾಡಿದ್ರೆ, ಶಿವಪೂಜೆಯ ನಡುವೆ ಕರಡಿ ಹರಿದಾಗೆ...."

"ನಿನ್ನ ಶಿವಪೂಜೇನೂ ಸಾಕು, ನನ್ನ ಶವ ಮಾಡೋದೂ ಸಾಕು. ದಾಸ್ರು ಸುಮ್ನೆ ಹೇಳ್ಲಿಲ್ಲ ಹೆಂಡತಿ ಪ್ರಾಣ ಹಿಂಡುತೀಂತ...."

'ಹೌದಪ್ಪ, ಅವರೊಬ್ರು ದಾಸ್ರು... ಪಾಪ, ಹೆಂಡತಿ ಇಲ್ಲದಿದ್ರೆ ಗಂಡನೂ ಇರ್‍ತಿರ್‍ಲಿಲ್ಲಾಂತ ಅವ್ರಿಗೆ ಗೊತ್ತಿಲ್ಲಾಂತ ತೋರುತ್ತೆ ...."

"ನಿನಗಾದ್ರೂ ಗೊತ್ತಿದೆಯಲ್ಲಾ?"

'ಯಾರು ಹಾಗೆಂದವ್ರು?"

"ಮತ್ಯಾರು? ನೀನೇ..."

'ನಾನೇನೂ ಹಾಗೆ ಹೇಳ್ಲಿಲ್ಲ....'

"ಹೇಗೆ?"

"ಎಲ್ಲಾ ನಂಗೆ ಗೊತ್ತಿದ್ದೇಂತ..."

"ಮತ್ತೇನೋ ಗ್ಯಾರಂಟಿಲ್ಲಾಂತ ಕದ್ದಿಮುರಿದಾಗೆ ಹೇಳ್ಬಿಟ್ರೆ ನೋಡು...."

"ಓ, ಅದೇ...."

"ಹೌದು, ಹೌದು, ಅದೂನೇ ...'

'ನೋಡಿ, ಅಲ್ಲಲ್ಲ, ಕೇಳಿ, ಮೊದ್ಲು ಅಪ್ಪಟ ಬೆಳ್ಳಿ, ನಾಣ್ಯ ಇತ್ತಂತೆ.... ಈಗ ಅಪ್ಪಟ ಒಂದು ಬಿಟ್ರೆ ಉಳಿದೆಲ್ಲಾ ನಾಣ್ಯಗಳಿವೆ ನೋಡಿ ಅದ್ರಲ್ಲೂ ಗ್ಯಾರಂಟಿ ಏನಿದೆ? ನೋಟು ಮುಂಚಿಕೊಳ್ಳೋಕೆ ಹೋದೆ ಬೇರೆ ಕೊಡ್ರೀಂತಾರೆ. ನಾಣ್ಯ ಒಯ್ದ್ರೆ, ಇದು ಕೊಟ್ಟೆ ಅಂತಾರೆ.."

"ಹ್ಞಾಂ... ಮುಂದೆ?"

'ಮೊನ್ನೆ ಮೊನ್ನೆವರೆಗೆ ಬಂಗಾರದಲ್ಲಾದ್ರೂ ಗ್ಯಾರಂಟಿ ಇತ್ತು. ಈಗ ಈ ನಿಮ್ಮ ಮುರಾರ್ಜಿ ಚಿನ್ನ ಬಂದು ಅದನ್ನೂ ಸ್ವರ್ಗವೇರ್‍ಸಿತು.'

"ಮುಂದೆ?"

"ನೋಡಿ, ನೂರಕ್ಕೆ ಇಂತಿಷ್ಟು ಪಾಲು ಹತ್ತಿ, ಉಣ್ಣೆ, ಮತ್ತೆ ನೈಲನ್, ಟೆರಲಿನ್— ಇನ್ನು ಏನೇನೋ-ಹೀಗೆಲ್ಲಾ ಹದಿನಾಲ್ಕು ಕ್ಯಾರೆಟ್ ಬಂದು ಬಿಟ್ಟಿದೆ ನೋಡಿ, ಬಟ್ಟೆಗಳಲ್ಲಿ...."

"ಹ್ಞೂಂ... ಇನ್ನೂ ಇದೆಯೆ?"

ಇಲ್ಲದೇನಂತೆ, ನಿಮ್ಮ ಯೋಜನೆಗಳು, ಕಾಯದೆ ಕಾನೂನುಗಳು, ಆಡಳಿತ— ವ್ಯವಹಾರಗಳು ಎಲ್ಲದ್ರದ್ದೂ ಇಪತ್ತು ೧೪ ಕ್ಯಾರೆಟ್....ಹಾಗಿರುವಾಗ ಜನ್ರು ಯಾಕೆ ಹಾಗಾಗ್ಬಾರದೂಂತ?"

"ಅಲ್ವೆ ನಿನ್ನ ಪ್ರಶ್ನೆ? ಸರಿಯಾಗಿದೇನ್ನು. ಇಂತಹ ಸವಾಲು ಹಾಕೋ ನೀನೂ ಹಾಗೇನೇನ್ನು."

"ಕೇರಳದಲ್ಲಿ ಮರಿ ಕಾಂಗ್ರೆಸ್ ಹುಟ್ಟಿತ್ತು. ಮೈಸೂರಲ್ಲಿ ಹುಟ್ಟಿದೆ...'

"ನಾಮಕರಣ ಮಾತ್ರ ಬಾಕಿ...."

"ಒಡಿಸ್ಸಾ, ಯು ಪಿ. ಮೊದಲಾದೆಡೆ...'

'ಪ್ರಸವವೇದನೆ.... ಅಲ್ಲಾ ಇದೆಲ್ಲಾ ಯಾಕೇಂತ?"

'ಅಪ್ಪಟ ೧೦೦ಗಾರೆ ಬೇಡ, ೧೪ ಕ್ಯಾರೆಟ್ಟೇ ಸಾಕೂಂತನ್ನೋ ಆಂದೋಲನ ಇದು...."'

"ಅಂದ್ರೆ ಎಲ್ರೂ ಹಾಗೇನೇ ಆಗಬೇಕು.. '

"ಆಗಿದಾಗಿದ್ದಾರೆ. ಇನ್ನು ಆಗೋದೇನು ಬಾಕಿ?"

(ಹದಿಮೂರನೇ ಪುಟ ನೋಡಿರಿ)

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1=50)

ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಪರಿಚಯ

ಅದ್ವೈತ ಸಿಂಧು ಆಚಾರ್ಯ ಶಂಕರ

ಮಾಡಿಸಿದವರು
ಶ್ರೀ ಸ. ನಾರಾಯಣ.

"ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿಯುಗೇಯುಗೇ" ಅಂದರೆ ಧರ್ಮ ಸಂಸ್ಥಾಪನೆಯ ಉದ್ದೇಶ್ಯದಿಂದ ಯುಗಯುಗದಲ್ಲಿಯೂ ಅವತರಿಸುತ್ತೇನೆ' ಎನ್ನುವ ಗೀತೆಯ ವಾಕ್ಯವನ್ನು ಎಲ್ಲರೂ ಕೇಳಿದ್ದೇವೆ. ಭಗವಂತ ಲೋಕಕ್ಕೆ ತಾನಿತ್ತ ವಚನವನ್ನು ಮರೆತಿಲ್ಲ. ನಡೆಸಿ ಕೊಟ್ಟಿದ್ದಾನೆ. ಧರ್ಮ ಹಾಗೂ ಸಾಧುಗಳಿಗೆ ವಿಪತ್ತು ಒದಗಿದಾಗ ಭಗವಂತ ಲೋಕದಲ್ಲಿ ಪ್ರಕಟವಾಗಿ ಕಂಟಕವನ್ನು ಪರಿಹರಿಸಿ ಉದ್ಧಾರ ಮಾಡಿದ್ದಾನೆ. ಅವನು ಯಾವ ರೂಪಿನಿಂದ ಯಾವ ಕಾಲದಲ್ಲಿ ಪ್ರಕಟವಾಗುತ್ತಾನೆ ಎಂಬುದನ್ನು ಅರಿಯುವುದು ಕಷ್ಟ.

ಒಂಭತ್ತನೆಯ ಶತಮಾನದಲ್ಲಿ ಭಾರತದ ಧಾರ್ಮಿಕ, ಆಧ್ಯಾತ್ಮಿಕ, ನೈತಿಕ ಶಕ್ತಿಗಳು ಕಳೆಗುಂದಿದಂತಹ ಸಂದರ್ಭದಲ್ಲಿ ಆಚಾರ್ಯ ಶಂಕರರ ಅವತಾರವಾಯಿತು. ಬೌದ್ಧಿಕ, ನಾಸ್ತಿಕ, ಕರ್ಮಕಾಂಡ ಬೋಧಕರ ಬಹು ಬಗೆಯ ವಾದಗಳಿಂದ ಹಿಂದೂ ಧರ್ಮಕ್ಕೆ ಚ್ಯುತಿ ಬಂದಾಗ ಆಚಾರ್ಯರು ಅವತರಿಸಿ ನಶಿಸಿ ಹೋಗುತ್ತಿದ್ದ ಹಿಂದೂ ಧರ್ಮವನ್ನು ಪುನರುದ್ಧಾರ ಮಾಡುತ್ತಾರೆ.

ಶಂಕರಾಚಾರ್ಯರ ಜೀವನ, ಕಾಲ, ಕೃತಿ ರಚನೆಯ ವಿಷಯವಾಗಿ ಅವರ ಶಿಷ್ಯರುಗಳು ರಚಿಸಿಟ್ಟಿರುವ ಹಲವಾರು ಗ್ರಂಥಗಳು, ಪುರಾಣಗಳು ನಿರ್ದಿಷ್ಟ ಸಾಕ್ಷ್ಯಾಧಾರಗಳನ್ನು ಒದಗಿಸಿ ಕೊಡುತ್ತವೆ. ಆಚಾರ್ಯರು ಕೇರಳ ರಾಜ್ಯದ ಪೂರ್ಣಾ ನದಿ ತೀರದ ಕಲಟಿ ಗ್ರಾಮದಲ್ಲಿ ಶಿವಗುರು ಮತ್ತು ಅವರ ಧರ್ಮಪತ್ನಿ ಆರ್ಯಾಂಬ ಇವರ ಏಕೈಕ ಪುತ್ರರಾಗಿ ವೃಷಾಚಲೇಶ್ವರನ ದಯೆಯಿಂದ ನಂದನ ಸಂವತ್ಸರದ ವೈಶಾಖ ಶುದ್ಧ ಪಂಚಮಿಯಂದು ಜನ್ಮ ತಾಳುತ್ತಾರೆ.

ಬಾಲ್ಯದಲ್ಲಿಯೇ ಶಂಕರರ ಅಸಾಧಾರಣ ಬುದ್ಧಿ ಶಕ್ತಿ, ಧರ್ಮ ಶ್ರದ್ಧೆ, ಭಗವದ್ಭಕ್ತಿ ಪ್ರಕಟವಾಗಿರುತ್ತವೆ. ಐದನೆಯ ವಯಸ್ಸಿನ ವೇಳೆಗೆ ಶಂಕರರ ಉಪನಯನವಾಗುತ್ತದೆ. ಕೆಲದಿನಗಳಲ್ಲಿಯೇ ಅವರ ತಂದೆ ಜೀವನ್ಮುಕ್ತರಾಗುತ್ತಾರೆ. ಶಂಕರರ ದೃಷ್ಟಿ ಸನ್ಯಾಸದ ಕಡೆಗೆ ಹರಿದಿರುವುದನ್ನು ತಾಯಿ ಗಮನಿಸಿ ಮಗನಿಗೆ ಹಲ ಬಗೆಯಲ್ಲಿ ವಿವೇಕ ಹೇಳಿ ಅವನನ್ನು ಗೃಹಸ್ಥಾಶ್ರಮದ ಕಡೆಗೆ ಬರುವಂತೆ ಪ್ರಾರ್ಥಿಸುತ್ತಾರೆ. ಅವರ ಪ್ರಯತ್ನ ನಿಷ್ಫಲವಾಗಿ ಅವತಾರ ಪುರುಷರಾದ ಶಂಕರರು ಒಂದು ಚಾತುರ್ಯದ ಯುಕ್ತಿಯಿಂದ ತಾಯಿಯನ್ನು ಸನ್ಯಾಸಕ್ಕೆ ಒಪ್ಪಿಸುತ್ತಾರೆ.

ಸಕಲ ವೈದಿಕ ವಿದ್ಯೆಗಳಲ್ಲಿ ಪಾರಂಗತರಾದ ಶಂಕರರು, ತಾಯಿಯಿಂದ ಸನ್ಯಾಸಾಶ್ರಮ ಸ್ವೀಕರಿಸಲು ಒಪ್ಪಿಗೆ ಪಡೆದು ತಮ್ಮ ಗುರುವನ್ನು ಹುಡುಕುತ್ತಾ ತೆರಳುತ್ತಾರೆ. ನರ್ಮದಾ ತೀರದಲ್ಲಿದ್ದ ಗೌಡಪಾದರ ಶಿಷ್ಯರಾದ ಗೋವಿಂದ ಯತಿಗಳ ಬಳಿಗೆ ಬಂದ ಶಂಕರರು ತಮ್ಮ ಅಪೇಕ್ಷೆಯನ್ನು ಅವರಿಗೆ ತಿಳಿಸಿ, 'ಸನ್ಯಾಸ ಅನುಗ್ರಹಿಸು'ವಂತೆ ಪ್ರಾರ್ಥಿಸುತ್ತಾರೆ. ಶಿಷ್ಯನ ಪಾಂಡಿತ್ಯ, ಮೇಧಾಶಕ್ತಿ ಪ್ರತಿಭೆ ಗೋವಿಂದ ಯತಿಗಳಿಗೆ ಮನವರಿಕೆಯಾಗುತ್ತದೆ. ಶಂಕರರನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದ ಗೋವಿಂದ ಯತಿಗಳು ಸನ್ಯಾಸ ದೀಕ್ಷೆಯನ್ನು ಅನುಗ್ರಹಿಸುತ್ತಾರೆ. ವೇದಾಂತದ ತತ್ವಗಳನ್ನು ಅಭ್ಯಾಸಿಸಿ ಪಾರಂಗತರಾಗುತ್ತಾರೆ ಶಂಕರರು.

ಬಾಲಕ ಶಂಕರ ಸನ್ಯಾಸಾಶ್ರಮ ಸ್ವೀಕರಿಸಿ ಗುರುವಿನಿಂದ "ಶ್ರೀಮಚ್ಛಂಕರ ಭಗವತ್ಪೂಜ್ಯಪಾದ" ಎಂಬ ಹೆಸರನ್ನು ಪಡೆಯುತ್ತಾರೆ. ಗುರುಗಳ ಅಪ್ಪಣೆಯಂತೆ ಧರ್ಮಪ್ರಚಾರ, ಬ್ರಹ್ಮಸೂತ್ರ, ಉಪನಿಷತ್ತು ಮತ್ತು ಭಗವದ್ಗೀತೆಗೆ ವ್ಯಾಖ್ಯಾನ ರಚಿಸಲು ಕಾಶಿ (ವಾರಣಾಸಿ)ಗೆ ಪ್ರಯಾಣ ಬೆಳೆಸುತ್ತಾರೆ ಆಚಾರ್ಯರು.

ಕಾಶಿಯಲ್ಲಿ ಶಂಕರರಿಗೆ ಮೊದಲನೆಯ ಶಿಷ್ಯ ಲಭಿಸುತ್ತಾನೆ. ಆತ ಚೋಳ ದೇಶದ ವಿಷ್ಣುಶರ್ಮ. ಆತನ ಸನ್ಯಾಸಾಶ್ರಮ ನಾಮ ಸನಂದನ (ಪದ್ಮಪಾದ)ರೆಂದು. ಅವರೊಂದಿಗೆ ಹಸ್ತಾಮಲಕ, ತೋಟಕಾಚಾರ್ಯರಲ್ಲದೆ ಅನೇಕ ಶಿಷ್ಯರು ದೊರೆಯುತ್ತಾರೆ. ಬದರಿಕಾಶ್ರಮ ಯಾತ್ರೆಯಿಂದ ಹಿಂತಿರುಗಿದ ಆಚಾರ್ಯರು ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆಗಳಿಗೆ ವ್ಯಾಖ್ಯಾನ ರಚಿಸಿ ಶಿಷ್ಯರಿಗೆ ವಿವರಿಸುತ್ತಾರೆ.

ಕರ್ಮಕಾಂಡದ ಪ್ರತಿಪಾದಕರಾಗಿದ್ದ ಕುಮಾರಿಲ ಭಟ್ಟರೊಂದಿಗೆ ವಾದಹೂಡಲು ಶಂಕರಾಚಾರ್ಯರು ಪ್ರಯಾಗಕ್ಕೆ ಬಂದಾಗ ಕುಮಾರಿಲ ಭಟ್ಟರು ಅಂತಿಮ ಸ್ಥಿತಿಯಲ್ಲಿದ್ದುದರಿಂದ ಅವರ ಶಿಷ್ಯ ಮಂಡನ ಮಿಶ್ರರಲ್ಲಿಗೆ ತೆರಳುತ್ತಾರೆ. ಮಾಹಿಷ್ಮತಿ ನಗರದ ಮಂಡನಮಿಶ್ರರು ವೇದ ವಾದಗಳಲ್ಲಿ ನಿಸ್ಸೀಮ ಪಂಡಿತರು. ಪ್ರತಿವಾದಿ ಭಯಂಕರ ಎಂದು ಕೀರ್ತಿ ಪಡೆದಿದ್ದ ಮೀಮಾಂಸಕರು.

ಮಂಡನ ಮಿಶ್ರರೊಂದಿಗೆ ಆಚಾರ್ಯ ಶಂಕರರು ನಡೆಸಿದ ವಾದ ಅವರ ಜೀವನದಲ್ಲಿಯೇ ಒಂದು ಪ್ರಮುಖ ಘಟ್ಟ, ಆಚಾರ್ಯರ ಕೀರ್ತಿ ಪತಾಕೆಯನ್ನು ಎತ್ತಿ ಸಾರಿದ ಅಪೂರ್ವ ಘಟನೆ. ಅವರಿಬ್ಬರ ವಾದದಲ್ಲಿ ಮಂಡನಮಿಶ್ರರ ಧರ್ಮಪತ್ನಿ ಉಭಯ ಭಾರತಿದೇವಿಯೇ ತೀರ್ಪುಗಾರಳಾಗಿದ್ದಳು.

ಬಹು ದಿನಗಳ ವಾದದ ನಂತರ ಮಂಡನ ಮಿಶ್ರರು ಪರಾಜಿತರಾಗುತ್ತಾರೆ. ಆದರೆ ಉಭಯ ಭಾರತಿ ದೇವಿಯ ಅಪೇಕ್ಷೆಯಂತೆ ಆಚಾರ್ಯರು ವಾದದಲ್ಲಿ ಪ್ರವೇಶಿಸಲೇ ಬೇಕಾಗುತ್ತದೆ. ಭಾರತಿದೇವಿ ಪ್ರಶ್ನಿಸಿದ ಕಠಿಣ ಪ್ರಶ್ನೆಯೊಂದಕ್ಕೆ ಪ್ರಯಾಸದಿಂದಲೇ ಆಚಾರ್ಯರು ಉತ್ತರಿಸುತ್ತಾರೆ. ಮಂಡನ ಮಿಶ್ರರು ಶಂಕರಾಚಾರ್ಯರ ಮೂಲಕ ಸನ್ಯಾಸ ದೀಕ್ಷೆ ಪಡೆದು ಸುರೇಶ್ವರಾಚಾರ್ಯ ಎನ್ನುವ ಹೆಸರಿನಿಂದ ಪ್ರಖ್ಯಾತರಾಗುತ್ತಾರೆ. ಶೃಂಗೇರಿಯ ಪೀಠದ ಮೊದಲ ಆಚಾರ್ಯರಾಗುತ್ತಾರೆ. ಉಭಯ ಭಾರತಿ ಪತಿಯ ಮಾರ್ಗವನ್ನೇ ಅನುಸರಿಸಿ ಶಂಕರರ ಪರಿವಾರದಲ್ಲಿ ಸೇರಿಕೊಳ್ಳುತ್ತಾಳೆ.

ಶಂಕರ ಸಿದ್ಧಾಂತಕ್ಕೆ ವಾದಕ್ಕೆ ಪ್ರತಿಯಿಲ್ಲದೆಯೂ ಇರಲಿಲ್ಲ. ಆದರೆ ಆಚಾರ್ಯರು ಸರ್ವ ವಿಷಯಗಳನ್ನು ಅನುಭವ ಪ್ರಮಾಣಗಳ ಮೂಲಕ ಮನದಟ್ಟಾಗುವಂತೆ ವಿವರಿಸಿ ವಿರೋಧಿಗಳನ್ನೂ ವಾದಿಗಳನ್ನೂ ಗೆಲ್ಲುತ್ತಿದ್ದರು.

ನಾಸ್ತಿಕತೆಯಿಂದ ದೇವರು ಧರ್ಮವನ್ನೇ ಮರೆತ ನಾಸ್ತಿಕರನ್ನೂ ಉಗ್ರ ಕಾಪಾಲಿಕರನ್ನೂ, ಅಶ್ರದ್ಧೆಯಿಂದ ಧರ್ಮಭ್ರಷ್ಟರಾದವರನ್ನೂ, ಬೌದ್ಧ ಧರ್ಮದ ಮೂಲಕ ಹಿಂದೂಧರ್ಮದ ಬೇರಿಗೆ ಕೊಡಲಿಹಾಕಿದ್ದ ಬೌದ್ಧರನ್ನು ತಮ್ಮ ವೇದಾಂತ ಶಕ್ತಿಯ ಮೂಲಕ ಪ್ರಭಾವಿತರನ್ನಾಗಿ ಮಾಡಿಕೊಂಡು, ಜನತೆಯಲ್ಲಿ ಧರ್ಮ ಜಾಗೃತಿಯನ್ನು ಉಂಟುಮಾಡಿದರು. ಹಿಂದೂ ಧರ್ಮದ ಮೂಲಕ್ಕೆ ಲೋಪ ಬಂದಾಗ ಅವತಾರವೆತ್ತಿ ಹಿಂದೂಧರ್ಮವನ್ನು ಪುನರುದ್ಧಾರಗೊಳಿಸಿದ ಕೀರ್ತಿ ಶಂಕರಾಚಾರ್ಯರದು.

(ಹನ್ನೆರಡನೇ ಪುಟ ನೋಡಿರಿ)

ಮಣ್ಣು ಪರೀಕ್ಷಾ ಸಂಶೋಧನಾಲಯ, ಮಣಿಪಾಲ.

ಧನ, ಕನಕ, ಸೌಭಾಗ್ಯ ಎಷ್ಟಿದ್ದರೇನು?
ಆರೋಗ್ಯವಿದ್ದರೆ ತಾನೇ ಎಲ್ಲವನ್ನೂ ಅನುಭವಿಸಿ ಸುಖಿಯಾಗಬಲ್ಲ ಮಾನವ.

ಅಂತೆಯೇ

ರೈತನಿಗೆ ಏನಿದ್ದರೇನು, ಸಾರವತ್ತಾದ ಮಣ್ಣಿಲ್ಲದಲ್ಲಿ! ಫಲವತ್ತಾದ ಮಣ್ಣು ಒಳ್ಳೆಯ ಬೆಳೆ ಬೆಳೆಸಲು ಅತೀ ಅಗತ್ಯ. ವಿವಿಧ ಪ್ರದೇಶಗಳ ಮಣ್ಣಿನ ಗುಣ ಲಕ್ಷಣ ಮತ್ತು ಸಾರಾಂಶಗಳು ವಿವಿಧವಾಗಿರುವುದು ಸಹಜವಾಗಿದೆ. ಬೇರೆ ಬೇರೆ ಬೆಳೆಗಳಿಗೆ ಅವುಗಳನ್ನು ಬೆಳೆಯುವ ಕಾಲ ಮತ್ತು ಇತರ ಸನ್ನಿವೇಶಗಳಿಗೆ ಹೊಂದಿಕೊಂಡು, ಬೆಳೆಸುವ ಪ್ರದೇಶದ ಮಣ್ಣಿಗೆ ಬೇಕಾಗುವ ಸಾರಾಂಶವನ್ನು ಭರ್ತಿಮಾಡುವುದು ರೈತನ ಮುಖ್ಯ ಕರ್ತವ್ಯ. ಇದಕ್ಕಾಗಿಯೇ ನೀವು ಪೈರು ಬೆಳೆಸುವ ಪ್ರದೇಶದ

ಮಣ್ಣನ್ನು ಪರೀಕ್ಷಿಸಿ

ಅದರ ಉಪಯೋಗವನ್ನು ಪಡೆಯಿರಿ.

ದಕ್ಷಿಣ ಕನ್ನಡ ಜಿಲ್ಲೆಯ ರೈತರ ಹಿತಕ್ಕಾಗಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನವರು ಸಿಂಡಿಕೇಟ್ ಬ್ಯಾಂಕಿನ ಕೃಷಿ ಆರ್ಥಿಕ ನೆರವಿನ ವಿಭಾಗದವರ ಸಹಾಯದಿಂದ ಮಣಿಪಾಲದಲ್ಲಿ ಮಣ್ಣು ಪರೀಕ್ಷಾ ಸಂಶೋಧನಾಲಯವನ್ನು ಸ್ಥಾಪಿಸಿ, ಒಂದು ಮಣ್ಣಿನ ಮಾದರಿಯನ್ನು ಬರೀ ರೂ. 2ರ ಖರ್ಚಿನಲ್ಲಿ ಪರೀಕ್ಷಿಸುವ ಸವಲತ್ತನ್ನು ಒದಗಿಸಿರುತ್ತಾರೆ. ಬೇಂಕಿನ ಕೃಷಿ ಆರ್ಥಿಕ ನೆರವಿನ ವಿಭಾಗದವರು ಪರೀಕ್ಷಿಸಿದ ಮಣ್ಣಿನ ವರದಿಯನ್ನು ಆಧರಿಸಿ ಸೂಕ್ತ ಸಲಹೆಯನ್ನು ಕೊಡಲು ಒಪ್ಪಿರುತ್ತಾರೆ. ಹೆಚ್ಚಿನ ಮಾಹಿತಿಗೆ ದಕ್ಷಿಣ ಕನ್ನಡದಲ್ಲಿರುವ ನಿಮ್ಮ ಹತ್ತಿರದ ಶಾಖೆಯನ್ನು ಸಂದರ್ಶಿಸಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
FAITHFUL · SB · FRIENDLY
ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಚಲಾವಣಾ ನಿಧಿ: ರೂ. 70 ಕೋಟಿಗೂ ಮಿಕ್ಕಿ.
ಶಾಖೆಗಳು: 200ರಕ್ಕೂ ಮಿಕ್ಕಿವೆ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
O.S. No. 257/63.
R.E.P. 375/64.

ಕೃಷ್ಣ ಯಾನೆ ರಮಾಬಾಯಿ — ಅರ್ಜಿದಾರಳು

ಮತ್ತು

ವೆಂಕಪ್ಪಯ್ಯ ಹೆಬ್ಬಾರ — ಶ್ರೀನಿವಾಸ ಹೆಬ್ಬಾರರ ಮಗ, ಉಡುಪಿ ತಾಲ್ಲೂಕು ಕಟ್ಟಿಂಗೆರೆ ಗ್ರಾಮ — ಎದುರಿ

ಇವರೊಳಗೆ

ಸನ್ನಿಯವರಿಗೆ ಮಾಡುವ ತಿಳುವಳಿಕೆ ನೋಟೀಸು —

ಮೇಲ್ಕಂಡ ಅಮಲಜಾರಿಯಲ್ಲಿ ಜವಾಬ್ದಾರ ಎದುರಿಯು ಕೊಡತಕ್ಕ ಹಕ್ಕು ಯೇಲಂ ಬಗ್ಗೆ ಅರ್ಜಿದಾರಳು ಹಾಜರು ಪಡಿಸಿದ — ಯಿಸ್ತಾರು ಕುರಿತು ಎದುರಿಗೆ ಆಕ್ಷೇಪ ಹೇಳತಕ್ಕದ್ದು ಇದ್ದರೆ ತಾ 16-6-1965ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಪೂರ್ವಾಹ್ನ 11 ಗಂಟೆಗೆ ರಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದೆಂದು ಈ ಮೂಲಕ ತಿಳಿಸೋಣಾಗಿದೆ.

V. R. Kidiyur,
Advocate for Petitioner.
ಉಡುಪಿ, 26-4-65.

ರಾಷ್ಟ್ರಪ್ರೇಮ ತುಂಬಿ ಬರಲಿ

ಚೈನೀಯರ ಚಕ್ಕಂದದಾಟಕ್ಕೆ ಸಿಲುಕದ ಸಿಲೋನ್

ಬರೆದವರು: ಶ್ರೀ ಶಿವಶಂಕರ.

ಶ್ರೀಲಂಕೆಯ ಇತಿಶ್ರೀ ಮಾಡಿಬಿಡಬೇಕೆಂದು ಆಂಕೆ ತಪ್ಪಿದ ಚೈನೀ ಕಪಿಗಳು ಅತ್ತ ನೆಗೆದಿರುವ ವಿಷಯ 'ನವಯುಗ' ತನ್ನ ನವಂಬರ ತಿಂಗಳ ಸಂಚಿಕೆಯಲ್ಲಿ ಸ್ಪಷ್ಟಪಡಿಸಿರುತ್ತದೆ. ಚೈನಾ-ಲಂಕೆಯ ಸಂಬಂಧ ಆ ರೀತಿ ಬಲಾ-ಬಲದ ಮೇಲೆ ಹೊಂದಿಕೊಂಡಿದೆಂಬುದು ಆದರಿಂದ ಗೊತ್ತಾಗುತ್ತದೆ. ಹಿಂದೆ ಮಾತ್ರವಲ್ಲ, ಇಂದೂ ಹಾಗೆನೇ. ಶ್ರೀಮತಿ ಸಿರಿಮಾವೋರವರು ಸಿಂಹಳದಲ್ಲಿ ಪ್ರಧಾನಿಯಾಗಿದ್ದಾಗ ಚೈನಾದ ಮಾವೋನ ಸರಕಾರಕ್ಕೂ ಅವರಿಗೂ ಕೆಲ ಒಪ್ಪಂದಗಳಾಗಿದ್ದುವು. ಅದರಲ್ಲಿ ಬಂದರಿನ ಒಡಂಬಡಿಕೆಯೂ ಒಂದು. ಸಿಲೋನಿಗೆ ಸೀದಾ ಹೋಗಲು ಬೇರೆ ದಾರಿ ಇರುವದಿಲ್ಲ. ಆಂಜನೇಯನು ಸೇತುವೆ ಕಟ್ಟಿದ್ದರೂ ಅದುಳಿದಿರುವದಿಲ್ಲ, ನೌಕಾ ಸಂಬಂಧ ಒಂದೇ ದಾರಿ. ಚೈನಿ ಹಡಗುಗಳ್ಳರು ಆದೆಂತು ಆ ದಾರಿಯನ್ನು ದುರುಪಯೋಗಪಡಿಸಿ ಕೊಳ್ಳುತ್ತಿದ್ದರೆಂಬುದು 'ನವಯುಗ' ವಾಚಕರಿಗೆ ಚೆನ್ನಾಗಿ ಗೊತ್ತು. ಪುನಃ ಆ ದಾರಿಯಲ್ಲಿ ನಡೆಯಲು ಅವರು ಶ್ರೀಮತಿ ಸಿರಿಮಾವೋರವರೊಂದಿಗೆ ಮಾತುಕತೆಯಾಡಿದ್ದರು. ಜನತೆಗೆ ಅದೇನು ಜ್ಞಾನೋದಯವಾಯಿತೊ, ಆ ಸಂಬಂಧ ಬೆಳೆಯದಂತೆ ಅವರು ಮುಂಜಾಗರೂಕತೆ ವಹಿಸಿಕೊಂಡರು. ಪುಣ್ಯಕ್ಕೆ ಇಲ್ಲಿಯ ಭಾರತೀಯರಂತೆ ಅವರು ವರ್ತಿಸಲಿಲ್ಲ. ನಮ್ಮಲ್ಲಾದರೋ ಚೈನೀ ಕಮ್ಯೂನಿಸ್ಟರಿಗೂ ಮತ ಬೀಳುತ್ತಿದೆ, ಪಾಕಿಸ್ತಾನಿ ಲೀಗಿಗೂ ಮತ ಬೀಳುತ್ತದೆ. ಅದಕ್ಕೆ ಆಡಳಿತ ಅಂಕುಶವನ್ನು ಅಂಕೆಯಲ್ಲಿಟ್ಟುಕೊಂಡಿರುವವರು ನಡೆದುಕೊಂಡಿರುವ ರೀತಿಯೂ ಕಾರಣವಾಗಿದೆಯಾದರೂ, ಮತದಾನ ಮಾಡುವವರಿಗೆ ಒಂದಿಷ್ಟಾದರೂ ಎಚ್ಚರಿಕೆ ಬೇಡವೇ? ಆಡಳಿತ ಪಟ್ಟದಲ್ಲಿ ಆಸೀನರಾಗಿರುವ ಕಾಂಗ್ರೆಸ್ಸಿಗರಿಗೆ ಚೈನಿ ಕಮ್ಯೂನಿಸ್ಟರ ಚೇಲಾಗಳು ಅತ್ಯಂತ ಪ್ರಗತಿಶೀಲರಾಗಿ ಕಂಡು ಬರುತ್ತಾರೆ. ಹಾಗೆನೇ, ಮುಸ್ಲಿಂ ಲೀಗು ಹಿಂದಿನ ಲೀಗಾಗಿರದೆ ಹೊಸ ಲೀಗಾಗಿಯೂ ಕಂಡು ಬರುತ್ತದೆ. ಅವರು ಕನ್ನಡಕ ಬದಲಾಯಿಸಿಕೊಳ್ಳುತ್ತಿರುತ್ತಾರೆ. ತಮ್ಮ ಕೆಲಸ ಆಗುವ ವರೆಗೆ ಆ ಪಕ್ಷಗಳು ಪ್ರೇಯಸಿಯಂತೆಯೂ, ತಮ್ಮ ಕೆಲಸವಾದ ಮೇಲೆ ವ್ಯಭಿಚಾರಿಣಿಯಂತೆಯೂ ಕಂಡು ಬರುತ್ತವೆ. ಇದರಲ್ಲಿ ತಪ್ಪು ಯಾರದ್ದು? ಕಮ್ಯೂನಿಸ್ಟರಾಗಲೀ ಮುಸ್ಲಿಂ ಲೀಗಿನವರಾಗಲೀ ತಮ್ಮ ಮುಖ್ಯ ಧ್ಯೇಯವನ್ನು ಬದಲಾಯಿಸುವದುಂಟೇ? ಅದಕ್ಕಾಗಿ ಇತರರನ್ನು ತಮ್ಮ ಬಲೆಯೊಳಗೆ ಹಾಕಿಕೊಳ್ಳಲು ಪ್ರಯತ್ನಿಸುತ್ತಾರೆ, ಅಷ್ಟೆ. ಕಾಂಗ್ರೆಸ್ಸಿಗರ ಪ್ರಶಂಸೆಗೆ ಪಾತ್ರರಾಗಿ ಹಾಗೂ ಕಾಂಗ್ರೆಸ್ಸಿನ ಮೇಲಿನ ದ್ವೇಷ ಹಾಗೂ ತಾತ್ಸಾರದಿಂದಾಗಿ ಕಮ್ಯೂನಿಸ್ಟರಿಗೆ ಹಾಗೂ ಮುಸ್ಲಿಂ ಲೀಗಿನವರಿಗೆ ಮತವಿತ್ತವರನ್ನು ಆ ದೃಷ್ಟಿಯಿಂದ, ದೇಶಭಕ್ತರೆನ್ನುವದು ಸರಿಯಾದೀತೇ?

ಶ್ರೀ ಲಂಕೆಯಲ್ಲೂ ಅಂತಹವರು ಇಲ್ಲವೇ ಇಲ್ಲವೆನ್ನುವದು ಸರಿಯಲ್ಲ. ಹಿಂದೆಯೇ ತಿಳಿಸಿರುವಂತೆ ಶ್ರೀಮತಿ ಸಿರಿಮಾವೋರ ಸರಕಾರವು ಚೈನಿ ಮಾವೋನ ಸರಕಾರದೊಂದಿಗೆ ನೌಕಾ ಒಪ್ಪಂದ ಮಾಡಿಕೊಟ್ಟಿತ್ತು. ಒಪ್ಪಂದದ ಪ್ರಕಾರ ಚೈನೀಯರ ಹಡಗಗಳು ಸಿಲೋನಿನ ಬಂದರದಲ್ಲಿ ಬಂದು ತಂಗಬಹುದು. ಅದಕ್ಕೆ ಅಲ್ಲೇನೂ ಅಡೆತಡೆ ಇರಕೂಡದು. ಈ ಒಪ್ಪಂದದಿಂದ ಸಿಲೋನಿಗೆ ಸಹಾಯವಾದೀತೇ? ಇಲ್ಲ, ಶತ್ರುವನ್ನು ಕರೆದು ಬಗಲಲ್ಲಿ ಆಮಂತ್ರಿಸಿದಂತಾದೀತೇ! ಹಿಂದಿನ ಘಟನೆಗಳ ಜ್ಞಾಪಕ ಇರುವವರಿಗೆ ಉತ್ತರದ ಅವಶ್ಯಕತೆ ಇರಲಿಕ್ಕಿಲ್ಲ. ಅದರ ಮರ್ಮವನ್ನು ಜನತೆ ಅರಿತುಕೊಂಡಿದೆ ಎನ್ನಬಹುದು. ಹಾಗಿದ್ದರೂ ಶ್ರೀಮತಿ ಸಿರಿಮಾವೋರವರಾಗಲೀ, ಅವರ ಅಮಾತ್ಯ ಸಂಪುಟದಲ್ಲಿದ್ದ ಸಚಿವರಾಗಲೀ ತಮ್ಮ ತಪ್ಪನ್ನವರೊಪ್ಪಿಕೊಳ್ಳ ಸಿದ್ಧರಿಲ್ಲ. ಶ್ರೀಮತಿ ಸಿರಿಮಾವೋನ ಸಚಿವ ಸಂಪುಟದಲ್ಲಿ ಅರ್ಥ ಅಮಾತ್ಯರಾಗಿದ್ದ ಪಿರೇರಾ ಇಂದೂ ತನ್ನ ಕುದುರೆಗೆ ನಾಲ್ಕೂವರೆ ಕಾಲೆಂದು ಸಾಧಿಸುತ್ತಿದ್ದಾರೆ. ಆ ಒಪ್ಪದದದಿಂದ ಭಾರತದ ರಕ್ಷಣೆಗೆ ಹಾಗೂ ಸಿಂಹಳದ ಸ್ವಾತಂತ್ರ್ಯಕ್ಕೆ ಅಪಾಯವಿದೆನ್ನುವದರಲ್ಲಿಸಿತೂ ಅರ್ಥವಿಲ್ಲವೆಂದು ಅವರಾಡಿರುವರು.

ಭಾರತದ ರಕ್ಷಣೆಗೆ ಅದರಿಂದೇನೂ ಅಪಾಯವಿಲ್ಲವೆ? ಕೇರಳದಲ್ಲಿ ಚುನಾವಣೆ ನಡೆದಾಗ ಭಾರೀ ಪ್ರಮಾಣದಲ್ಲಿ ಕಮ್ಯೂನಿಸ್ಟರ ಪತ್ರಿಕೆ ವಗೈರೆಗಳು ಸಿಲೋನಿನ ಮೂಲಕ ಬಂದಿರುವದೇನೂ ಈಗ ಗುಟ್ಟಾಗಿ ಉಳಿದಿರುವದಿಲ್ಲ. ಹಾಗೆ ಚೈನಿ ಕಮ್ಯೂನಿಸ್ಟ ಸಾಹಿತ್ಯ ಮಾತ್ರ ಕೇರಳಕ್ಕೆ ಬಂದದ್ದೆಂದು ಅದೆಂತು ಹೇಳಲು ಸಾಧ್ಯ? ಚೈನಾದಿಂದ ಹಡಗು ಹಾಗೂ ವಿಮಾನದ ಮೂಲಕ ಅದೇನಾದರೂ ಸಿಂಹಳಕ್ಕೆ ಬಂದಾಗ ಅವನ್ನು ಸೀದಾ ಚೈನೀ ದೂತ ನಿವಾಸಗಳಿಗೊಯ್ಯಲಾಗುತ್ತಿತ್ತು. ಅಂದರೆ ಅದನ್ನೆಲ್ಲೂ ಶೋಧಿಸವಂತಿಲ್ಲ. ಸಿಂಹಳದಿಂದ ಬರುವದಕ್ಕೆ ಇಲ್ಲೇನೂ ಅಂತಹ ಶೋಧನೆ ನಡೆಯುವದಿಲ್ಲ. ಇನ್ನೂ ಪುಸ್ತಕಗಳೆಂದರೆ ಕೇಳಬೇಕೇ? ಆ ಪುಸ್ತಕಗಳ ನಡುವೆ ಅದೆಂತಹ ಚೈನೀ ಚೇಳುಗಳು ಚೈನಿ ಚೇಲಾಗಳಿಗೆ ಬಂದಿವೆಯೋ?—ಕಂಡವರ್ಯಾರು? ಇಲ್ಲದಿದ್ದಲ್ಲಿ, ಹೆದರಿಕೆಲಿಕ್ಕೇನೇ ಇರಲಿ, ಕಾರಾಗೃಹಗಳ ಕದಗಳನ್ನೊಡೆಯುತ್ತೇವೆ. ಮತ್ತು ಕಾಂಗ್ರೇಸ್ಸ್ ಅಧಿಕಾರಿಗಳನ್ನು ಶಿಕ್ಷೆಗೊಳಪಡಿಸುತ್ತೇವೆನ್ನಲು ಕಮ್ಯೂನಿಸ್ಟರಿಗೆ ಧೈರ್ಯಬಂದೀತೇ? ಇನ್ನೂ ಕೆಲ ಕಮ್ಯೂನಿಸ್ಟರು ಭೂಗತರಾಗಿರುವದೂ ಗಮನೀಯ ವಿಷಯವಿದೆ. ಕೆಲವರನ್ನಂತೂ ಸರಕಾರವೇ ಉದ್ದಕ್ಕೆ ಬಿಟ್ಟಿರುತ್ತದೆ. ಅವರ ಬೊಬ್ಬಾಟಕ್ಕೆ ಇತಿ ಮಿತಿಯೇ ಇಲ್ಲ. ಇದರಿಂದ ಸಾಮಾನ್ಯ ಮಾನವನು ದಂಗಾಗುವದರಲ್ಲೇನೂ ಆಶ್ಚರ್ಯವಿಲ್ಲ. ಆ ನೌಕಾ ಒಪ್ಪಂದ ಖಂಡಿತವಾಗಿಯೂ ಭಾರತದ ರಕ್ಷಣೆಗೆ ಸುರಂಗವೇ ಇದೆ.

ಶ್ರೀ ಲಂಕೆಯ ಸ್ವಾತಂತ್ರ್ಯಕ್ಕಂತೂ ಅದು ಅತ್ಯಂತ ಪ್ರಬಲ ಪ್ರಹಾರವಿದೆ. ಹಿಂದೆ ಚೈನಿ ಹಡಗುಗಳ್ಳರು ಸಿಲೋನಿನ ರಾಜನನ್ನು ಬಂಧಿಸಿ ಹಿಡಿದುಕೊಂಡು ಹೋಗಿರುವಂತಹ ಘಟನೆಗಳು ನಡೆದಿವೆ. ಆದರೆ ಇಂದು, ಕಾಲ ಬದಲಾಗಿದೆಂದು ಕೆಲವರು ರಾಗ ಎಳೆಯಬಹುದು. ಇರಬಹುದು, ಕಾಲ ಬದಲಾಗಿರುವದರಿಂದ ಕಾಲು ಹಿಡಿದುಕೊಂಡು ಅವರನ್ನಿಂದು ಸರಸಂನೆ ಎಳೆದುಕೊಂಡು ಹೋಗಬೇಕಾಗಿರುವದಿಲ್ಲ. ಇದ್ದಕ್ಕಿದ್ದ ಅವರ ಮಿದುಳನ್ನು ಅಪಹರಿಸಿದರೆ ಸಾಕು. ತಾಯಿಭೂಮಿ ಹಾಗೂ ಗುರುಭೂಮಿಯಾಗಿರುವ ಭಾರತದತ್ತ ಸ್ನೇಹದಿಂದಿರುವ ಶ್ರೀಮತಿ ಸಿರಿಮಾವೋ ಚೈನಿ ಮಾವೋನೊಂದಿಗೆ ಚೆನ್ನಾಗಿರಲಿಲ್ಲವೇ? ಚೈನಾದ ಮನ ಒಲಿಸಲು ಅವರು ಪ್ರಯತ್ನಿಸಲಿಲ್ಲವೇ? ಹಾಗೆಲ್ಲಾ ಇರುವಾಗ, ಅದು ಸ್ವಾತಂತ್ರ್ಯಕ್ಕೆ ಕುಡುಗೋಲಲ್ಲದೆ ಬೇರೆನ್ನೇನದೆ?

ಚೈನಿ ಚಕ್ರವರ್ತಿ ಯುಂಗ್-ಮೋ ನಡೆಸಿದ ಆಕ್ರಮಣದ ನಂತರ ಕೆಲದಿನಗಳಾದ ಮೇಲೆ ಸಿಂಹಳೀಯರು ಚೈನೀಯರಿಗೆ ಕಪ್ಪಕಾಣಿಕೆಗಳನ್ನು ಕಳುಹಿಸುವದನ್ನು ನಿಲ್ಲಿಸಿದರು. ೧೪೪೫ರಲ್ಲಿ ಸಿಲೋನು ಒಂದು ರಾಯಭಾರಿ ಸಮಿತಿಯನ್ನು ಚೈನಾಕ್ಕೆ ಕಳುಹಿಸಿತು. ಅದಕ್ಕೆ ಮುಂದಾಳಾಗಿದ್ದವರು ಯು-ಪಾ-ಲ-ನೊ-ದಿ-ಲಿ-ಯೂ. ಈ ಹೆಸರು ಏನನ್ನು ಸೂಚಿಸುತ್ತದೆ? ಆ ವ್ಯಕ್ತಿ ಬಹುಶಃ ಜಯಪಾಲ ಮೊದಲಿಯಾರ್ ಅಥವಾ ಗೋಪಾಲ ಮೊದಲಿಯಾರ್ ಇರಬಹುದು. ಈ ಸಮಿತಿ ಹೋಗಿ ಏನು ಮಾಡಿತು? ವಿವರಗಳೆಲ್ಲಾ ಬೆಳಕಿಗೆ ಬಂದಿರುವದಿಲ್ಲ. ಅನಂತರ ಕಪ್ಪಕಾಣಿಕೆಗಳನ್ನು ಕಳುಹಿಸುವದು ನಿಂತು ಹೋಯಿತು.

ಈಗ ನಡೆದದ್ದೂ ಹಾಗೇ ತಾನೇ? ಶ್ರೀಮತಿ ಸರಕಾರ ಇದ್ದಾಗ ಚೈನೀ ಕಮ್ಯೂನಿಸ್ಟರಿಗೆ ಅಡೆತಡೆ ಇರಲಿಲ್ಲ. ಶ್ರೀ ಡಡ್ಲಿ ಸೇನಾಯಕೆಯವರ ಸರಕಾರ ಬಂದೊಡನೆ ಲಗಾಮು ಹಾಕಿದಂತಾಯಿತು. ಈಗ ಚೈನಿ ಕಮ್ಯೂನಿಸ್ಟರು ಅಲ್ಲಿ ಬಾಲ ಅಲ್ಲಾಡಿಸುವಂತಿರಲಿಲ್ಲ.

(ಹನ್ನೊಂದನೇ ಪುಟ ನೋಡಿರಿ)

ಪೆಪ್ಪರ್ ಮಿಠಾಯಿ, ಶರಬತ್ತು ಮೊದಲಾದ 'ಬಿಕ್ಕೊ'ರವರ
ಹಣ್ಣು ಹಂಪಲುಗಳ ತಯಾರಿಕೆಗಳು ಎಲ್ಲೆಲ್ಲಿಯೂ ಪ್ರಸಿದ್ಧಿ ಪಟ್ಟಿವೆ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½% ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಮಹಿಳಾ ಮಂಡಳ

ಗಂಡಿಗಿಂತ ಹೆಣ್ಣೇ ಮೇಲು

ತೊಟ್ಟಿಲು ತೂಗುವ ಕೈ ರಾಜ್ಯವನ್ನು ಆಳಬಲ್ಲುದು, ತಕ್ಕಡಿಯನ್ನೂ ತೂಗಬಲ್ಲುದು. ವ್ಯಾಪಾರಿರಂಗದಲ್ಲಿ ಹೆಣ್ಣು ಗಂಡುಗಳನ್ನೂ ಮಿಂಚಿ ಮುಂದುವರಿದಿದ್ದಾಳೆ, ಕೆಲವೆಡೆ. ಅದೇಕೆ ಮೂಗಿಗೆ ಬೆರಳೇರಿಸಿದಿರಿ? ನಿಜವಾಗಿಯೂ ಹೆಣ್ಣು ಗಂಡಿಗಿಂತ ಒಂದು ಕೈ ಮೇಲಾಗಿಯೇ ಇದ್ದಾಳೆ. ರೂಪಲಾವಣ್ಯ, ಚಾಣಾಕ್ಷತನ, ಚಾಕಚಕ್ಯತೆ, ಅಧಿಕಾರ, ಅಹಂಕಾರ, ದುಂದುಗಾರಿಕೆ—ಹೀಗೆ ಒಂದಲ್ಲ ನೂರು ವಿಷಯಗಳಲ್ಲಿಯೂ—ಒಳ್ಳೆಯ—ಕೆಟ್ಟ ಗುಣಗಳಲ್ಲಿಯೂ ಹೆಣ್ಣೇ ಮೇಲೆನಿಸಿದ್ದಾಳೆ. ಮೊನ್ನೆ ಮೊನ್ನೆಯ ವರೆಗೆ, ಪ್ರಾಯಃ ಅದು ಕಲಿಯುಗದ ಪ್ರಾರಂಭದ ವರೆಗೆ ಇದ್ದಿರಲೂ ಬಹುದು, ಗಂಡಿನ ಗುರುದೆಸೆ ತಾಂಡವವಾಡುತಿತ್ತು. ಅವನು ಹೆಂಗಸನ್ನು ಕಾಲ ಕಸದಂತೆ ನೋಡುತ್ತಿದ್ದನಂತೆ, ಆಕೆಯ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದನಂತೆ. ಆದರೆ. ಇಂದು ಆತನಿಗೆ ಶನಿದೆಸೆ ಹಿಡಿದಂತಿದೆ. ಗಂಡಿನ ಸ್ಥಾನ ಕೀಳಾಗಿದೆ, ಹೆಣ್ಣಿನ ಕೈ ಮೇಲಾಗಿದೆ. ಬೂದಿ ಮುಚ್ಚಿದ ಕೆಂಡದಂತಿದ್ದ ಆವಳ ಸಾಮರ್ಥ್ಯಗಳೆಲ್ಲಾ ಪ್ರಜ್ವಲಿಸಲಾರಂಭಿಸಿವೆ. ವ್ಯಾಪಾರ ಕ್ಷೇತ್ರವೆಂದೇನು, ಎಲ್ಲ ರಂಗಗಳಲ್ಲಿಯೂ ಆಕೆ ಗಂಡನ್ನು ತಳ್ಳಿಹಾಕಿ ತನ್ನ ಪ್ರಭಾವ ಜಮಾಯಿಸತೊಡಗಿದ್ದಾಳೆ.

ಮುಂದ ವರಿದ ಪಶ್ಚಿಮ ಜರ್ಮನಿಯಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ವ್ಯಾಪಾರಿಕ್ಷೇತ್ರದಲ್ಲಿ ಪಾದಾರ್ಪಣ ಮಾಡುತಿದ್ದಾರೆ. ಇದಕ್ಕೆ ಕಾರಣವೇನು? ಎರಡನೆಯ ಜಾಗತಿಕ ಸಮರಾವಧಿಯಲ್ಲಿ ಹೆಚ್ಚಿನ ಪುರುಷರು ಸೇನೆಯಲ್ಲಿ ಭರ್ತಿಹೊಂದಿದುದರಿಂದಾಗಿ ಅವರಸ್ಥಾನಕ್ಕೆ ಸ್ತ್ರೀಯರು ಅನಿವಾರ್ಯವಾಗಿ ಬರಬೇಕಾಯಿತೇ? ಇಂತಹ ಅಸಹಾಯಕ ಪರಿಸ್ಥಿತಿಯ ಅಂತ ಲೆದೋರದೆ ಹೋಗುತಿದ್ದರೆ, ಅವರು ವ್ಯಾಪಾರರಂಗಕ್ಕಿಳಿಯ ುತ್ತಿರಲಿಲ್ಲವೆ?—ಎಂಬ ಸಂದೇಹ ಹುಟ್ಟಬಹುದು. ಈ ಸಂದೇಹದ ಸತ್ಯಾಸತ್ಯತೆಗಳನ್ನು ಕಂಡುಹಿಡಿಯುವುದಕ್ಕಾಗಿ ಮಹಿಳಾ ವಾಣಿಜ್ಯೋದ್ಯಮಿಗಳ ಸಂಘದ ಅಧ್ಯಕ್ಷೆ ಶ್ರೀಮತಿ ಲಿಲ್ಲಿ ಜೋನ್ಸ್‌ರನ್ನು ಸಂದರ್ಶಿಸಿ ಮಾತುಕತೆ ನಡೆಸಿದಾಗ ಅದರಲ್ಲಿ ವಾಸ್ತವಿಕತೆಯೇ ಕಂಡು ಬಂತ .

ಶ್ರೀಮತಿ ಜೋನ್ಸ್‌ರವರು ಡಸ್ಸೆಲ್‌ಡಾರ್ಫ್‌ನಲ್ಲಿರುವ ವಿದ್ಯುತ್ ಶಾಖೋತ್ಪಾದಕ ಯಂತ್ರ ತಯಾರಿಸುವ ಕಾರ್ಖಾನೆಯೊಂದರ ಮಾಲಿಕರು. ಆ ಕಾರ್ಖಾನೆಯಲ್ಲಿ ಸುಮಾರು ೮೦೦ ಕೆಲಸಗಾರರಿದ್ದಾರೆ. ೧೯೧೦ರಲ್ಲಿ ಹುಟ್ಟಿದ ಜೋನ್ಸ್‌ರವರು ಕುಳ್ಳಿಯೂ ಅಲ್ಲ, ಎತ್ತರವೂ ಅಲ್ಲ. ಅವರ ಉಡುಗೆ ಸರಳವಾಗಿರುವಂತೆಯೇ ಮುಖವೂ ಶಾಂತವಾಗಿದೆ. ಅವರ ಕಛೇರಿಯಲ್ಲಿ ಅಷ್ಟೇನೂ ಆಡಂಬರ ಪ್ರದರ್ಶನವಿಲ್ಲ; ಆದರೆ, ಅತ್ಯಂತ ಚೊಕ್ಕಟವಾಗಿತ್ತು. ತನ್ನನ್ನು ಕಾಣ ಬಂದವರನ್ನು ಅವರು ಮಂದಹಾಸದಿಂದಲೇ ಸ್ವಾಗತಿಸುತ್ತಾರೆ, ಆಸನವಿತ್ತು, ಚಹಾ ತರಿಸಿ ಉಪಚರಿಸುತ್ತಾರೆ. ಕೇಳಿದ ಪ್ರಶ್ನೆಗಳಿಗೆ ದೊಡ್ಡ ಕುಟುಂಬವೊಂದರ ತಾಯಿ, ಹಾಗೂ ದೊಡ್ಡ ಸಂಸ್ಥೆಯೊಂದರ ಮಾಲೀಕರು ಎಂಬ ಅಹಂಕಾರ ಎಳ್ಳಷ್ಟೂ ಇಲ್ಲದೆ ಉತ್ತರಿಸುತ್ತಾರೆ.

ವ್ಯಾಪಾರರಂಗದಲ್ಲಿ ಮಹಿಳೆಯರ ಸ್ಥಾನದ ಬಗ್ಗೆ ಅನೇಕರಿಗೆ ಇದ್ದ ಸಂದೇಹಗಳನ್ನು ನಿವಾರಿಸಿಕೊಳ್ಳುವ ಬಗ್ಗೆ ಅವರ ಮುಂದೆ ಪ್ರಶ್ನೆ ಕೇಳಲಾಯಿತು: "ಹೆಂಗಸರು ವ್ಯಾಪಾರೀ ಕ್ಷೇತ್ರವನ್ನು ಪ್ರವೇಶಿಸಿದ್ದು ಆಕಸ್ಮಿಕವೇ? ಯುದ್ಧ ಸಂಭವಿಸದಿದ್ದಲ್ಲಿ ಅವರು ಅದಕ್ಕೆ ಇಳಿಯುತ್ತಿರಲಿಲ್ಲವೆ?"

ಈ ವಿಷಯದಲ್ಲಿ ಆಕಸ್ಮಿಕವೆಂಬುದೇ ಇಲ್ಲ. ಇಂತಹುದೇ ಹಲವು ಭಾರಿ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುವ ಚಾಕಚಕ್ಯತೆ ಅನೇಕ ಮಹಿಳೆಯರಲ್ಲದೆ ವ್ಯಾಪಾರರಂಗಕ್ಕಿಳಿಯುವ ಮಹಿಳೆಯರ ಸಂಖ್ಯೆಯಲ್ಲಿ ದಿನದಿನಕ್ಕೂ ಹೆಚ್ಚಳವಾಗುತ್ತ ಬರುತ್ತಿದೆ. ಇಂದಿನ ವ್ಯಾಪಾರಿ ಪ್ರಪಂಚದಲ್ಲಿ ಹೆಣ್ಣಿಗೆ ಸರಿಸಮಾನವಾದ ಸ್ಥಾನವಿದ್ದೇ ಇದೆ. ನಮ್ಮ ಮಹಿಳಾ ವ್ಯಾಪಾರಿಗಳ ಫೆಡರೇಶನ್ನಿನಲ್ಲಿ ಸದ್ಯಕ್ಕೆ ೭೫೦ ಸದಸ್ಯೆಯರಿದ್ದಾರೆ. ಈ ವರ್ಷ ಆ ಸಂಖ್ಯೆಯು ೮೦೦ನ್ನು ಮುಟ್ಟಬಹುದು, ಅದಕ್ಕಿಂತ ಹೆಚ್ಚಾದರೂ ಆಶ್ಚರ್ಯವಿಲ್ಲ.

"ಈ ಕ್ಷೇತ್ರದಲ್ಲಿ ಸ್ತ್ರೀಯರಿಗೆ ಒಂದೇ ಒಂದು ಸಮಸ್ಯೆಯಿಲ್ಲ. ನಮಗೆ ಸರಿಸಮವಾದ ಸ್ಥಾನವನ್ನು ಸಂಪಾದಿಸಿಕೊಂಡಿದ್ದೇವೆ. ಗಂಡಾಗಲೀ ಹೆಣ್ಣಾಗಲೀ ಮೈಮುರಿದು ದುಡಿದರೆ, ಮುಂದೆ ಬರಲು ಸಾಧ್ಯವಿದೆ. ಹೊಸತಾಗಿ ಯಾರಾದರೂ ವ್ಯಾಪಾರಿ ಕ್ಷೇತ್ರದಲ್ಲಿಳಿದರೆ, ನಾವು ಅವರಿಗೆ ಬೇಕಾದ ಸಲಹೆ ಸೌಲಭ್ಯಗಳನ್ನು ನೀಡುತ್ತೇವೆ. ನಮ್ಮ ಅನುಭವಗಳನ್ನು ಅವರಿಗೆ ತಿಳಿಸಿ ಅವರು ಧೃತಿಗೆಡದಂತೆ ನಾವು ನೋಡಿಕೊಳ್ಳುತ್ತೇವೆ.

ಗಂಡು ನಡೆಸುವ ವ್ಯಾಪಾರೀ ಸಂಸ್ಥೆಗಳು ಮತ್ತು ಹೆಣ್ಣು ನಡೆಸುವ ವ್ಯಾಪಾರೀ ಸಂಸ್ಥೆಗಳ ನಡುವೆ ಅಂತಹುದೇನು ವ್ಯತ್ಯಾಸವಿಲ್ಲ. ಪ್ರತಿಯೊಬ್ಬ ವ್ಯಾಪಾರಿಯೂ, ಹೆಣ್ಣಿರಲಿ ಯಾ ಗಂಡಿರಲಿ, ಲಾಭಕ್ಕಾಗಿಯೇ ಆ ಉದ್ಯಮವನ್ನು ಆಶ್ರಯಿಸುತ್ತಾನೆ. ಅಂದಮೇಲೆ ಸಹಜವಾಗಿಯೇ ಕಷ್ಟಪಟ್ಟು ದುಡಿಯಬೇಕಾಗುತ್ತದೆ. ಆದರೆ, ನನ್ನ ಅನುಭವದಲ್ಲಿ ಗಂಡಿಗಿಂತ ಹೆಣ್ಣು ಏಕಾಗ್ರ ಚಿತ್ತತೆಯಿಂದ ದೀರ್ಘಕಾಲ ದುಡಿಯ ಬಲ್ಲಳು.

"ನಮಗೂ ಕಾರ್ಮಿಕರ ತೊಂದರೆಗಳಿರುತ್ತವೆ. ಕಾರ್ಮಿಕರ ಇಚ್ಛೆಗಳು ಕಾಲಕಾಲಕ್ಕೆ ಬದಲಾವಣೆ ಹೊಂದುತ್ತಿರುತ್ತವೆ. ಅವರಿಗೆ ತಿಳಿಯದಂತೆಯೇ ನಾವು ಅದನ್ನು ಅರಿತುಕೊಳ್ಳುತ್ತಿರಬೇಕು. ಯಾವುದಾದರೊಂದನ್ನು ಅವರು ಇನ್ನೇನು ಕೇಳಲಿದ್ದಾರೆನ್ನುವ ಮೊದಲೇ, ನಾವೇ ಅದನ್ನು ಪರಿಶೀಲಿಸುತ್ತಿರುವುದಾಗಿ ಪ್ರಕಟಿಸಿಬಿಡಬೇಕು. ಆಗ ಕಾರ್ಮಿಕರು ತೃಪ್ತರಾಗಿ ತಮ್ಮ ನಿರೀಕ್ಷೆಗಿಂತ ಕಡಿಮೆ ಕೊಟ್ಟರೂ ಅದನ್ನು ಸ್ವೀಕರಿಸುತ್ತಾರೆ.

ನಾನು ೧೯೩೩ರಲ್ಲಿ ಎಕ್ಸಿಕ್ಯೂಟಿವ್ ಅಸಿಸ್ಟೆಂಟ್ ಆಗಿ ಈ ರಂಗವನ್ನು ಸೇರಿದೆ. ಮೊದಲು ನಾನು ಇತಿಹಾಸ ಅಧ್ಯಾಪಿಕೆಯಾಗಿ ಸೇರಬೇಕೆಂದುಕೊಂಡಿದ್ದೆ. ಕೆಲವು ದಿನಗಳಲ್ಲೇ ನನ್ನ ಮದುವೆಯಾಯಿತು. ಈಗ ಮಕ್ಕಳು, ಮೊಮ್ಮಕ್ಕಳು ತುಂಬಿದ ದೊಡ್ಡ ಕುಟುಂಬ ನಮ್ಮದು."

ಇಂದು ನಮ್ಮ ಭಾರತದಲ್ಲಿಯೂ ಮಹಿಳೆಯರು ದುಡಿಮೆಯ ನಾನಾ ರಂಗಗಳಲ್ಲಿ ದುಡಿಯತೊಡಗಿದ್ದಾರೆ. ಅವರಲ್ಲಿಯೂ ಕ್ರಾಂತಿಕಾರಕ ಪರಿವರ್ತನೆಯಾಗುತ್ತಿದೆ. ಮನೆಯ ಬಾಗಿಲಿಂದ ಹೊರಗೆ ಹೋಗುವ ಮಹಿಳೆಯರನ್ನು ತಡೆಯುವ ಸನಾತನಿಗಳ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ನಾರಿ ಉಭಯಕುಲ ಪರಿಶುದ್ಧೆಯಾಗಿರಬೇಕು; ಪುರುಷರೂ ಅಂತೆಯೇ. ಈ ಪರಿಶುದ್ಧತೆಯನ್ನು ಉಳಿಸಿಕೊಂಡ ಮಹಿಳೆ ಪುರುಷನಂತೆಯೇ ತನ್ನ ಮನಸ್ಸಿಗೆ ಒಪ್ಪುವ ಯಾವರಂಗ ಪ್ರವೇಶಿಸಿದರೇನಂತೆ? ರಾಷ್ಟ್ರೋದ್ಧಾರ–ರಕ್ಷಣಾ ಕಾರ್ಯದಲ್ಲಿ ಆಕೆಯೂ ಪುರುಷನಿಗೆ ಸಮ ಜೋಡಿಯಾಗಿ ನಿಲ್ಲಬಲ್ಲಳು, ನಿಲ್ಲಬೇಕು.

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.

ಬೆಲೆ: ಸಾದಾ ಪ್ರತಿ ರೂ. ೧

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯ ಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."

—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ಯಾಕಾಗಿ…?

— ೧ —

ಶುಭ್ರ ತರಂಗಿತದ ಧವಳಗಿಂ ತಿರಗಳಲಿ
ರವಿ ಬರುವ ಸೌಂದರ್ಯವೇತಕಾಗಿ?
ನಭದಲ್ಲಿ ಕಾರ್ಮುಗಿಲ ವಿವಿಧಆಕೃತಿಗಳಲಿ
ಮಿಂಚು ಬರೆಯುವ ಚಿತ್ರವೇತಕಾಗಿ?

— ೨ —

ಸಪ್ತವರ್ಣಗಳೊಳವಿಂ ಕೂಡಿ ಬಿಲ್ಲಿನ ರೂಪ
ತಾಳಿ ಮರೆಯಾಗುತಿಹುದೇತಕಾಗಿ?
ಸುಪ್ತ ಶಕ್ತಿಯ ಹೊರಗೆ ಎಳೆದು ತರುವಂತಿರುವ
ಚಂದ್ರಮನ ಮೋಹಕತೆಯೇತಕಾಗಿ?

— ೩ —

ಘೋರ್ಗರೆವ ನುಡಿಯಲ್ಲಿ ಗಂಭೀರ ಚಲುತ ಂಬಿ
ಶರಧಿ ವೈಮರೆಸುತಿದೆಯೇತಕಾಗಿ?
ಕಾಗರ್ಾಲ ಮಾಗಿಯ ರಸ ಪಚ್ಚಹಸುರಿಂದೆಸೆಯ—
ತಿರುತಿಹಳು ನಸುನಗುತ ಏತಕಾಗಿ?

— ೪ —

ಇತ್ತ ತಿರುಗಿದರಲ್ಲಿ ಝರಿ ನೀರ ಹನಿಯಲ್ಲಿ
ಮುತ್ತನ್ನು ನಾಚಿಸಿದೆಯೇತಕಾಗಿ?
ಮತ್ತೆ ಚೆಲುವೇ ರೂಪ ತಾಳಿ ಸಿಂತಹ ಕುಸುಮ
ಕಸ್ತೂರಿಯನಾಂತಿಹುದು ಏತಕಾಗಿ?

— ೫ —

ನೋಡೆ, ಬೀಸುವ ಗಾಳಿ ಗಾಲಿ ತಿರವ ಜೋಟಿಟ್ಟು
"ಹೌದೆನುವೆ ತರು, ಏನದೇತಕಾಗಿ"?
ಹಾಡೆ ಕೋಗಿಲೆ, ನವಿಲು ಗರಿ ಬಿಚ್ಚಿ ನಡೆಹಚ್ಚಿ
ಮುದದಿ ಕಾಲ್ಕುಣಿಸುತಿದೆ, ಏತಕಾಗಿ?

— ೬ —

ನೊಜೆ ಹಾಲ ಸವಿಯುಂಡು ಕರುತಾಯ ಬಳಿಯಿರಲು
ಪ್ರೇಮದಿ ತಾರ್ಯ್ಕರುವ ಸವರಿ ಬಾಗಿ,
ಕಲೆ ಕಣ್ಣು ಕಂಡಿದನು, ಕುಂಚವನು ಕೈಗೊಂಡು
'ಪ್ರೇಮಮಯಿ' ಹೊಮ್ಮಿಸಿಹುದೇತಕಾಗಿ?

— ೭ —

ಸೌಂದರ್ಯ ಕಣ್ಸೆಳೆಯೆ, ಆರೆಯಿನಿದನಿ ಮನವ
ಸಂಗೀತದೊಳ್ ಹರಿಸಿತೇತಕಾಗಿ?
ಕಂಡು, ಕೇಳಿದ ಜೀವಿ ಒದನೊಂದು ಹಾಡಾಗಿ
ಹೊಂದಿಸಲವೇಕ್ಷಿಸಿದನೇತಕಾಗಿ?

ಯನ್. ಕೃಷ್ಣ ಮುಕಾರಿ,
ಮಂಗಳೂರು.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 datep 2-12-1950 of the Directer of Public Instruction Madras.

ವಿಚಿತ್ರ ವಿಶ್ವದ

ಚಿತ್ರ: ೧

ನಮ್ಮ ದೇಶದ ಕೆಲವು ರಾಜ್ಯಗಳಲ್ಲಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಪಾಹಾರವನ್ನು ನೀಡುವ ವ್ಯವಸ್ಥೆಯಿದೆ. ಬಡವರ ಮಕ್ಕಳು ಕಡ್ಡಾಯ ಶಿಕ್ಷಣದ ಇಂದಿನ ದಿನಗಳಲ್ಲಿ ಇದರಿಂದ ತುಂಬ ಸಹಾಯ ಪಡೆಯುತ್ತಾರೆ. ಈ ಬಗೆಯ ಉಚಿತ ವ್ಯವಸ್ಥೆಯು ಅಮೆರಿಕೆಯ 'ಕೇರ್' ಸಂಸ್ಥೆ (ಕೊ-ಓಪರೇಟಿವ್ ಫಾರ್ ಅಮೇರಿಕನ್ ರೆಮಿಟನ್ಸಸ್ ಎವ್ರಿವೇರ್) ಸಂಪೂರ್ಣ ಸಹಕಾರದಿಂದ ಆರಂಭವಾಗಿದೆ. ಈ ಸಂಸ್ಥೆಯು ಆವಶ್ಯಕ ಆಹಾರ ಸಾಮಗ್ರಿಗಳನ್ನು ಪ್ರಪಂಚದ ಬೇರೆ ಬೇರೆ ದೇಶಗಳಿಗೆ ಒದಗಿಸುತ್ತದೆ. ಸುಮಾರು ೧೦ ಮಿಲಿಯಕ್ಕೂ ಮಿಕ್ಕಿದಷ್ಟು ಮಕ್ಕಳು ಕೇರ್‌ನಿಂದ ಉಪಕೃತರಾಗಿದ್ದಾರೆ. ಮಧ್ಯಾಹ್ನ ಉಪಹಾರ ವ್ಯವಸ್ಥೆಯಲ್ಲೇನಾದರೂ ಗಡಿಬಿಡಿ, ಗಲಿಬಿಲಿ ಇರುವುದಾದರೆ, ಅದು ಕೇರ್‌ನ ದೋಷವಲ್ಲ; ಆಹಾರ ತಯಾರಿಸುವಲ್ಲಿರುವ ಅವ್ಯವಸ್ಥೆಯೇ ಇದಕ್ಕೆ ಕಾರಣ. ಕೇರ್ ಸಂಸ್ಥೆಯು ಉಚಿತವಾಗಿ ಬೆಲೆಬಾಳುವ ಆಹಾರ ಪದಾರ್ಥಗಳನ್ನು ದಾನವಾಗಿ ನೀಡುತ್ತದೆ; ಅದನ್ನು ತಯಾರಿಸಲು ಶಕ್ತಿಯಿಲ್ಲದ ನಾವು ಸ್ವೀಕರಿಸುತ್ತೇವೆ— ಈ ದುರವಸ್ಥೆ ದೂರವಾಗಬೇಕು.

ಚಿತ್ರ: ೨.

ಮರ ಕಡಿಯುವುದೂ ಒಂದು ಕಲೆ ಎಲ್ಲರೂ ಏಕಸಮವಾಗಿ ಈ ಕಲೆಯಲ್ಲಿ ಪಳಗಿರುವುದಿಲ್ಲ. ಒಬ್ಬನು ಯಾವ ವೇಗದಲ್ಲಿ ಮರ ಕಡಿಯಬಲ್ಲನು? ಅಮೆರಿಕೆಯಲ್ಲಿ ಹತ್ತು ಚದರ ಇಂಚು ದೇವದಾರು ಮರವನ್ನು ೨೩ ಸೆಕೆಂಡುಗಳಲ್ಲಿ ತುಂಡರಿಸುವ ಮಹಾ ವೀರನೊಬ್ಬನಿದ್ದಾನೆ. ಅಕ್ಷನ ದಾಖಲೆಗಳಲ್ಲಿ ಇದೇ ಮೊತ್ತ ಮೊದಲನೆಯದು. ಇದನ್ನು ಸ್ಥಾಪಿಸಿದ ಕೀರ್ತಿ ಡೇವ್‌ಗೀರ್ ಎಂಬವನಿಗೆ ಸೇರಿದೆ.

ಚಿತ್ರ: ೩

ಹೊಗೆಸೊಪ್ಪು ಸೇವನೆಯು ಆರೋಗ್ಯಕ್ಕೆ ಹಾನಿಯನ್ನು ತಂದೀಯುತ್ತದೆಂದು ಎಲ್ಲರಿಗೂ ಗೊತ್ತು. ಆದರೂ ಅದರ ದಾಸ್ಯದಿಂದ ಬಿಡುಗಡೆಯಾಗಲು ಮನಸ್ಸಿದ್ದರೂ ಮಾರ್ಗವಿಲ್ಲದಂತಾಗಿದ್ದಾರೆ ಹೆಚ್ಚಿನವರು. ಗ್ರೇಟ್ ಬ್ರಿಟನ್ನಿನಲ್ಲಿ ಹೊಗೆಸೊಪ್ಪಿನ ವಿರುದ್ಧ ಒಂದು ಬಗೆಯ ಆಂದೋಲನವೂ ಏಳುತ್ತಿದೆ. ಪ್ರಪಂಚದಲ್ಲಿ ಅತ್ಯಧಿಕ ಹೊಗೆ ಸೇದುವ ರಾಷ್ಟ್ರ ಯಾವುದು ಗೊತ್ತೇ ನಿಮಗೆ? ಕಾಮನ್‌ವೆಲ್ತಿನ ರಾಣಿ, ಗ್ರೇಟ್ ಬ್ರಿಟನ್! ಇಲ್ಲಿರುವ ಪ್ರತಿ ನೂರಕ್ಕೆ ೪೨ರಂತೆ ನಾಗರಿಕರು ಹೊಗೆ ಸೇದುತ್ತಾರೆ. ಸಾಮಾನ್ಯ ಇಂಗ್ಲಿಷ್ ನಾಗರಿಕನು ಪ್ರತಿ ವರ್ಷವೂ ೬,೫೦೦ ಸಿಗರೇಟುಗಳನ್ನು ಸೇದಿ ಬೂದಿ ಮಾಡುತ್ತಾನೆ!

ಚಿತ್ರ: ೪

ಸರ್ವ ರಾಷ್ಟ್ರಗಳನ್ನು ಹೆದರಿಸುತ್ತಿರುವುದು, ತನ್ಮೂಲಕ ಅವುಗಳಲ್ಲಿ ಭಯಭಾವನೆಯನ್ನು ಮೂಡಿಸುವುದು ಕಮ್ಯೂನಿಸ್ಟ್ ರಾಷ್ಟ್ರಗಳ ಪರಿಪಾಠ. ಇದರಿಂದಲೇ ಅವು ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಬಲ್ಲವು. ಇದಕ್ಕಾಗಿ ನಡುರಾತ್ರಿಯ ಹೊತ್ತು ಮನೆ ಬಾಗಿಲಿಗೆ ಬಂದು ನಿರಪರಾಧಿಗಳನ್ನು ಬಂಧಿಸಿಕೊಂಡು ಹೋಗುವ ಕ್ರಮ ಜಾರಿಯಲ್ಲಿದೆ.

ಚಿತ್ರ: ೫

ವಿಜ್ಞಾನದ ಮುನ್ನಡೆಯಲ್ಲಿ ಯಾವುದೂ ಅಸಾಧ್ಯವೆಂಬುದಿಲ್ಲ. ಅಮೆರಿಕನ್ ವೈಜ್ಞಾನಿಕರು ತಮ್ಮ ಸಂಶೋಧನೆಯ ಪಥದಲ್ಲಿ ಅಗ್ರಗಾಮಿಗಳಾಗಿಯೇ ಮುಂದುವರಿಯುತ್ತಿದ್ದಾರೆ. ಅಲ್ಲಿನ ಜನರಲ್ ಇಲೆಕ್ಟ್ರಿಕ್ ಕಂಪೆನಿಯ ಅಣುಶಕ್ತಿ ಪ್ರಯೋಗಾಲಯದಲ್ಲಿ ಲೀಥಿಯಮ್ ಫ್ಲೋರ್ಯಾಡಿನಲ್ಲಿ ಚೌಕ ಗುಳ್ಳೆಯನ್ನು ಬೀಸಿದ್ದಾಗಿ. ಇದು ವೈಜ್ಞಾನಿಕಾಧ್ಯಯನಕ್ಕೆ ಬಹಳ ಉಪಕಾರಿಯಾಗುವ ನಿರೀಕ್ಷೆಯಿದೆ.

ಚಿತ್ರ: ೬

ಭಾರತದಲ್ಲಿ ಸಕ್ಕರೆಯ ಅಭಾವ; ಹೆಚ್ಚಿನೆಡೆ ಸಕ್ಕರೆಯು ಕಣ್ಣಿನಲ್ಲಿ ನೋಡುವುದಕ್ಕೇನೇ ಇಲ್ಲವಾಗಿದೆ. ಆದರೆ, ಒಬ್ಬನು ಒಂದು ವರ್ಷದಲ್ಲಿ ೧೨೫ ರಾತಲುಗಳಷ್ಟು ಸಕ್ಕರೆಯನ್ನು ತಿನ್ನುತ್ತಾನೆಯೆಂದರೆ, ಯಾರವನು ಮಹಾರಾಜ ಎಂದು ಆಶ್ಚರ್ಯಪಡುವುದು ಸ್ವಾಭಾವಿಕವೇ. ಇದೇನೂ ಸುಳ್ಳಲ್ಲ. ಕೊಲಂಬಿಯಾದ ಒಬ್ಬೊಬ್ಬನೂ ತಿಂಗಳೊಂದರ ಹತ್ತು ರಾತಲು ಸಕ್ಕರೆ ಬಳಸುತ್ತಾನೆ! ಪ್ರಪಂಚದಲ್ಲೇ ಅತ್ಯಧಿಕ ಸಕ್ಕರೆ ತಿನ್ನುವವ ಎಂದರೆ, ಕೊಲಂಬಿಯನ್ ಪ್ರಜೆ!

ಚಿತ್ರ: ೭

ರಾಷ್ಟ್ರಘಾತುಕ ಚಟುವಟಿಕೆಗಳಲ್ಲಿಯೇ ವ್ಯಸ್ತರಾಗುವುದು ಭಾರತೀಯ ಕಮ್ಯೂನಿಸ್ಟ್ ಪಕ್ಷದ ಕಾರ್ಯಕ್ರಮವೆನಿಸಿದೆ. ಸ್ವಾತಂತ್ರ್ಯವನ್ನು ಅಪಹರಿಸುವುದೇ ಕಮ್ಯೂನಿಜಂನ ನೀತಿಯೆನಿಸಿದೆ ಹಲವೆಡೆ. ಇದರಿಂದಾಗಿ ಇದರತ್ತ ಜನದೊಲವು ಕಡಿಮೆಯಾಗುತ್ತ ಬರುತ್ತಿದೆ. ಹಂಗೇರಿಯಾದ ಸ್ವಾತಂತ್ರ್ಯ ಹೋರಾಟದ ಮುಂದಿನ ವರ್ಷದಲ್ಲಿಯೇ ಇಟೆಲಿಯ ಎರಡು ಲಕ್ಷ ಕಮ್ಯೂನಿಸ್ಟ್ ಸದಸ್ಯರು ಪಕ್ಷತ್ಯಾಗ ಮಾಡಿದರು. ದಿನ ದಿನಕ್ಕೆ ಕಮ್ಯೂನಿಸ್ಟ್ ಸದಸ್ಯರ ಸಂಖ್ಯೆ, ಬೆಂಬಲ ಕಡಿಮೆಯಾಗುತ್ತ ಬರುತ್ತಲಿದೆ.

ಚಿತ್ರ: ೮

ಚಂದ್ರಲೋಕದಲ್ಲಿ ವಾತಾವರಣವೇ ಇಲ್ಲವೆಂಬುದನ್ನು ನಾವು ಲಕ್ಷ್ಯಿಸಿದರೆ, ಅಲ್ಲಿ ಶಬ್ದವನ್ನು ನಾವು ಕೇಳುವಂತೆಯೇ ಇಲ್ಲ. ಮಾತನಾಡುವುದೇ ಕಷ್ಟವಾಗಬಹುದು; ಆದರೆ, ಆಡಿದ ಮಾತು ಕೇಳಿಸಲಾರದು. ಹೀಗಿದ್ದರೂ ಅಲ್ಲಿ ಒಂದು ವಸ್ತುವನ್ನು ಸರಿಯಾಗಿ ವೀಕ್ಷಿಸುವುದು ಸಾಧ್ಯವಿದೆ. ಆದುದರಿಂದಲೇ, ಚಂದ್ರನಲ್ಲಿ ವೀಕ್ಷಣಾಲಯಗಳನ್ನು ಕಟ್ಟಿ, ವಿಶ್ವವನ್ನು ಸರಿಯಾಗಿ ನೋಡುವುದು ಸಾಧ್ಯವೆನಿಸೀತೆಂದು ಜ್ಯೋತಿಷಿಗಳ ಅಭಿಪ್ರಾಯ. ಅದಕ್ಕಾಗಿ ತಕ್ಕ ಕಾರ್ಯಕ್ರಮಗಳನ್ನೂ ಅವರು ಕೈಗೊಳ್ಳುತ್ತಿದ್ದಾರೆ.

ಚಿತ್ರ: ೯

ಕಾಗದದ ಬಳಕೆ ಹೆಚ್ಚಾಗಿರುವುದರಿಂದ, ಅದರ ಉತ್ಪಾದನೆಯೂ ಹೆಚ್ಚುವುದು ಅನಿವಾರ್ಯವಾಗಿದೆ. ಪ್ರಪಂಚದಲ್ಲಿನ ಕಾಡುಗಳು ಮಾಯವಾಗುತ್ತ ಬಂದಂತೆ ಪ

೧

೨

೩

೪

೧೦

೧೧

೧೨

೧೩

ತ್ರ ವಿಚಿತ್ರಗಳು

ಲ್ಪಗಾಗಿ ಹೊಸ ಸಾಧನಗಳನ್ನರಸುವುದು ವಿಜ್ಞಾನಿಗಳ ತಲೆ ಬೇನೆಯಾಗಿದೆ. ಪ್ರಾಚೀನ ಈಗುಪ್ತರು 'ಪ್ಯಾಪಿರಸ್'ನ ಮೇಲೆ ಬರೆಯುತ್ತಿದ್ದರಂತೆ. ಗ್ರೀಕ್ ಮತ್ತು ರೋಮನರೂ ಇವರನ್ನು ಅನುಕರಿಸುತ್ತಿದ್ದರಂತೆ. ಭಾರತದಲ್ಲಿ ಓಲೆಗರಿಯು ಹೆಸರಾದುದು. ಇವೇ ಮೂದರಿಯ ಮರಗಳನ್ನು ನಾಟಿ ಕಾಗದದ ಅಭಾವವನ್ನು ದೂರ ಮಾಡುವ ಸಾಧ್ಯಾಸಾಧ್ಯತೆಗಳನ್ನು ವಿಜ್ಞಾನಿಗಳು ಪರಿಶೀಲಿಸ ಹತ್ತಿದ್ದಾರೆ.

ಚಿತ್ರ: ೧೦

ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿ ಸ್ವಾತಂತ್ರ್ಯವು ನಾಮ ಮಾತ್ರಕ್ಕೆ ಇರುವುದು. ನಾಗರಿಕರ ಪ್ರತಿ ವರ್ತನೆಯ ಮೇಲೆ ಅಲ್ಲಿನ ಪಕ್ಷ, ಸರಕಾರಗಳು ಕಣ್ಣಿಡುತ್ತಿರುತ್ತವೆ. ಉಕ್ಕಿನ ಪರದೆಯ ಹಿಂದೆ ನಡೆಯುವುದು ಯಾರಿಗೂ ಗೋಚರಿಸುವುದಿಲ್ಲ. ಅಧಿಕಾರಿಗಳಿಗೆ 'ನಾಗರಿಕರ ಅಕ್ರಮ'ಗಳನ್ನು ಕಂಡು ಹಿಡಿದು ವರದಿ ಮಾಡಲು ಅಲ್ಲಿ ಪಕ್ಷವು ಕಟ್ಟಿದ ಸಕ್ರಿಯ ಪಡಸ್ಯರ ಪಡೆಗಳಿವೆ. ನಿರಪರಾಧಿ ಕಮ್ಯುನಿಜಂ ವಿರೋಧಿಗಳನ್ನು ಹತ್ತಿಕ್ಕುವುದೇ ಇವುಗಳ ಕರ್ತವ್ಯ. ವ್ಯಕ್ತಿ ಸ್ವಾತಂತ್ರ್ಯವೆಂಬುದನ್ನು ಕಮ್ಯುನಿಜಂ ಒಪ್ಪುವುದಿಲ್ಲ.

ಚಿತ್ರ: ೧೧

ಪ್ರಪಂಚದಲ್ಲಿ ಮೊತ್ತಮೊದಲ ಗ್ರೀನ್ ಷೀಲ್ಡ್ ಉಗಿಗಾಡಿಯು ೧೮೫೫ರಲ್ಲಿ ನಿರ್ಮಿತವಾಯಿತು. ಇದನ್ನು ರೂಪಿಸಿದವನು ಮತ್ತು ಕಟ್ಟಿದವನು ಆರ್. ಓವಿಲ್ಲೀ ಗ್ರೀನ್‌ಷಿಲ್ಡೆಯೆಂಬವನು. ಇವನು ಇಂಗ್ಲೆಂಡಿನ ಗ್ಲಾಸ್ಟೋನ್‌ಬರಿಯವನು. ಈ ಹಳೆಯ ಆಟೊಮೊಬೈಲ್ ಗಾಡಿ ಇಂದಿಗೂ ಚಲಿಸುವ ಸ್ಥಿತಿಯಲ್ಲಿದೆ. ಹಳೆಯುದೆಲ್ಲ ಬಂಗಾರ ಎಂಬ ಗಾದೆಯು ಮಾತು ಈ ಉಗಿ ಗಾಡಿಯ ಮಟ್ಟಿಗೆ ಸತ್ಯವಾಗಿ ಉಳಿದಿದೆ.

ಚಿತ್ರ: ೧೨

ಅತಿ ಶ್ರೇಷ್ಠವಾದ ಹರಳೊಂದಿದೆ. ಇದಕ್ಕೆ ಪ್ರಕಾಶವಿಲ್ಲ. ತಂಪಾದ ಪಚ್ಚೆ ಮಣಿಯಿದು. ಇದರ ಬೆಲೆಯೇನು ಬಲ್ಲಿರಾ? ಒಂದು ಕ್ಯಾರೆಟಿಗೆ ೨೮೦೦ ಡಾಲರ್‌ಗಳಿಗೂ ಹೆಚ್ಚು ಎಂದರೆ, ಸುಮಾರು ೧೫ ಸಾವಿರ ರೂಪಾಯಿಗಳು!

ಚಿತ್ರ: ೧೩

ಚಂದ್ರಲೋಕದಲ್ಲಿ ನಿಂತು ನಾವು ವಾಸಿಸುವ ಭೂಮಿಯತ್ತ ದೃಷ್ಟಿ ಹಾಯಿಸಿದರೆ ಹೇಗೆ ಕಾಣಬಹುದು? ನೀವು ಎಂದಾದರೂ ಕಲ್ಪನೆ ಮಾಡಿದ್ದೀರಾ? ವಿಜ್ಞಾನಿಗಳೂ ಊಹಿಸಿ ಈ ಬಗ್ಗೆ ಒಂದು ನಂಬಿಕೆಯನ್ನು ತಾಳಿದ್ದಾರೆ. ಈ ಭೂಮಿಯು ಕಪ್ಪು ಆಕಾಶದಲ್ಲಿನ ನೀಲಿಗೋಲದಂತೆ ಕಾಣಬಹುದಂತೆ, ಗೋಲದಲ್ಲಿರುವ ಭೂಭಾಗಗಳು ಮೋಡಗಳಿಲ್ಲದ ದಿನಗಳಲ್ಲಿ ಮಾತ್ರ ಮಸುಕು ಮಸುಕಾಗಿ ಗೋಚರವಾಗಬಹುದಂತೆ! ವಿಜ್ಞಾನಿಗಳ ಊಹೆ ಸತ್ಯ ಸಿದ್ಧವಾಗುವ ದಿನ ನಿಕಟ ಭವಿಷ್ಯದಲ್ಲೇ ಬಂದರೂ ಬರಬಹುದು!

ಚಿತ್ರ: ೧೪

ಕಮ್ಯುನಿಜಂ ಪ್ರಚಾರಕ್ಕೆ ಧರ್ಮಾಚರಣೆಯು ಬಲವಾದ ತಡೆಯಾಗಿದೆ. ಸಿಲೋನಿನಲ್ಲಿ ನಾಗರಿಕರು ಕಟ್ಟಾ ಧರ್ಮಭೀರುಗಳಾದುದರಿಂದಲೇ ಅಲ್ಲಿನ ಚುನಾವಣೆಗಳಲ್ಲಿ ಕಮ್ಯುನಿಸ್ಟರು ಸಂಪೂರ್ಣ ಸೋತು ಹೋದರು. ಧರ್ಮ-ದೇವರು ಎಂಬ ಭಾವವನ್ನು ದೂರ ಮಾಡಿದರೆ, ಮನುಷ್ಯ ಪಶುವಾಗುತ್ತಾನೆ. ಆಗಲೇ ಕಮ್ಯುನಿಜಂ ಪ್ರಚಾರ ಸಾಧ್ಯವಾಗುತ್ತದೆ.

ಚಿತ್ರ: ೧೫

ಹಡಗುಗಳಲ್ಲಿ ಸೈರನ್‌ಗಳಿರುತ್ತವೆ. ಆರ್. ಎಂ. ಎಸ್. ಕ್ವೀನ್ ಎಲಿಜಬೆತ್ ಹಡಗದ ಸೈರನ್ ಬಲು ಗಟ್ಟಿಯಾಗಿ ಕೂಗಬಲ್ಲುದು. ಇದರ ಸ್ವರವನ್ನು ಹತ್ತು ಮೈಲುಗಳ ದೂರದಿಂದ ಕೇಳಬಹುದು; ನೂರು ಮೈಲುಗಳ ಅಂತರದಲ್ಲಿ ಸೈರನ್ನಿನ ಧ್ವನಿಯನ್ನು ಗುರುತಿಸಬಹುದು.

ಚಿತ್ರ: ೧೬

೧೯೫೦ರಲ್ಲಿ ತಮ್ಮ ಧರ್ಮಾಚರಣೆಯಲ್ಲಿ ಸರಕಾರ ಹಸ್ತಕ್ಷೇಪ ಮಾಡತೊಡಗಿದುದರಿಂದ ಸಂಪ್ರದಾಯವಾದಿಗಳು ಚೀನಕ್ಕೆ ಹೋಗಿದ್ದರು. ಈಗ ಅದೇ ಕಾರಣಕ್ಕಾಗಿ ಚೀನಾದಿಂದಲೂ ಹೊರ ಬೀಳುತ್ತಿದ್ದಾರೆ. ಹಾಂಗ್‌ಕಾಂಗದಲ್ಲಿ ನೆಲೆಯೂರಿದ್ದಾರೆ ಕೆಲವರು. ಸ್ವತಂತ್ರ ಜಗತ್ತಿನಲ್ಲಿ ನಮಗೆಲ್ಲಾ ಎಡೆ ದೊರಕೀತು, ಎಂದವರು ಯೋಚಿಸುತ್ತಿದ್ದಾರೆ. ಪೆರುಗ್ವೆ ಸರಕಾರವು ಇಂತಹ ೫೦೦ ಜನರಿಗೆ ವೀಸವಿತ್ತು ಭೂಮಿಯನ್ನು ಕೊಡಮಾಡಿದೆ. ಕಮ್ಯುನಿಸ್ಟ್ ದೇಶಗಳಲ್ಲಿ ಧಾರ್ಮಿಕ ಸ್ವಾತಂತ್ರ್ಯವೂ ಇಲ್ಲ.

ಚಿತ್ರ: ೧೭

ಚಂದ್ರನಲ್ಲಿ ಗುರುತ್ವಾಕರ್ಷಣ ಶಕ್ತಿಯು ಕಡಿಮೆ. ಆದುದರಿಂದಲೇ ಭೂಮಿಯಲ್ಲಿ ೫೦೦ ರಾತಲು ಭಾರವನ್ನು ಹೊರಬಲ್ಲವನು ಅಲ್ಲಿ ೩೦೦೦ ರಾತಲನ್ನು ಎತ್ತಬಲ್ಲನು. ಏಳು ವರ್ಷದ ಮಗು ಓಲಿಂಪಿಕ್ ಕ್ರೀಡೆಗಳ ಮೇಲ್ನೆಗೆತದ ದಾಖಲೆಯನ್ನು ಮುರಿಯಬಲ್ಲುದು. ಒಂದು ದೊಡ್ಡ ಪಿರಂಗಿಯು ಚಂದ್ರನ ಸುತ್ತಮುತ್ತಲನ್ನು ಉರಿದು ಬಿಡಬಲ್ಲುದು.

ಚಿತ್ರ: ೧೮

ಮಂಗ ಎಳನೀರು ಬೀಳಿಸುತ್ತಿದೆ ಎನ್ನಬೇಡಿ. ಮಂಗಗಳನ್ನೂ ತಮ್ಮ ನೌಕರ ವರ್ಗದಲ್ಲಿ ಸೇರಿಸಿ ಅವುಗಳಿಂದ ಒಳ್ಳೆಯ ರೀತಿಯ ಕೆಲಸ ಮಾಡಿಸುವಲ್ಲಿ ಮಲಯಾದ ತೋಟಗಾರರು ಯಶಸ್ವಿಯಾಗಿದ್ದಾರೆ. ಒಡೆಯನ ಆಜ್ಞೆಯಂತೆ ಮಂಗನು ತೆಂಗಿನ ಕಾಯಿ ಕೀಳುತಿದ್ದಾನೆ! ತಪ್ಪಿಯೂ ಆತ ತೆಂಗು ಕಡಿಯುವುದಿಲ್ಲ! ಒಡೆಯನು ಕೊಡುವ ಇತರ ಆಹಾರದಿಂದಲೇ ಈ ನೌಕರ ತೃಪ್ತ. ಇತರ ನೌಕರರಂತೆ ವೇತನ, ಸಂಬಳ ಮೊದಲಾದುವುಗಳ ಬಗ್ಗೆ ಈ ನೌಕರ ಇದುವರೆಗೆ ಯೋಚಿಸಿಯೂ ಇಲ್ಲ.

೬

೭

೮

೯



೧೫

೧೬

೧೭

೧೮

ಚಿಂತೆಯೇ ಚಿತೆ

ನೀವು ಎಷ್ಟು ಚಿಂತಿಸುವಿರಿ?

ಈ ಪ್ರಶ್ನೆಗಳಿಗೆ ಉತ್ತರಿಸಿ ಅಳೆಯಿರಿ.

ನಾವು ನಮ್ಮಷ್ಟಕ್ಕೆ ಪ್ರಾಮಾಣಿಕತೆಯಿಂದ ಉತ್ತರಿಸುವುದಾದರೆ ನಮಗೆಲ್ಲರಿಗೂ ಚಿಂತೆ, ವ್ಯಸನ, ಪರಿತಾಪಗಳು ಇವೆ ಎಂಬ ನಿತ್ಯಸತ್ಯವನ್ನು ಒಪ್ಪಲೇಬೇಕಾಗುತ್ತದೆ. ಜಗತ್ತಿಗೆ ತೋರುವಂತೆ ನಾವು ಸದಾ ಹಸನ್ಮುಖಿಗಳಾಗಿ ಕಂಡರೂ ಒಳಗೆ ಏನಾದರೊಂದು ವ್ಯಸನ ಇದ್ದೇ ಇರುತ್ತದೆ. ಈ ಜಗತ್ತಿನಲ್ಲಿರುವ ವರೆಗೆ ಸುಖದುಃಖಗಳಿಂದ ನಿರ್ಲಿಪ್ತರಾಗಿರುವುದು ಅಸಂಭವವಾದರೂ ದುಃಖ, ಸುಖಗಳಿಗೂ ಒಂದು ಮಿತಿ ಇದೆ. ಆ ಮಿತಿಯನ್ನು ಮೀರಿದರೆ ಜೀವನದ ಹಿಡಿತ ತಪ್ಪಿ, ಬಾಳು ಹಾಳಾಗುತ್ತದೆ, ಆ ದೃಷ್ಟಿಯಿಂದ ನೀವು ಎಷ್ಟು ವ್ಯಸನಿಗಳು, ಚಿಂತೆಗೀಡಾದವರು ಎಂಬುದನ್ನು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ ತಿಳಿದುಕೊಳ್ಳಿರಿ.

೧. ನೀವು ಚಿಕ್ಕವರಿದ್ದಾಗ (a) ಏನನ್ನೂ ಸಾಧಿಸಬಲ್ಲೆನೆಂಬ ವಿಶ್ವಾಸವಿದ್ದವರೇ? (b) ನಾಚಿಕೆ ಸ್ವಭಾವದವರೇ? (c) ಸಮ್ಮಿಶ್ರ ಸ್ವಭಾವದವರಾಗಿದ್ದಿರೇ?

(೨) ಪ್ರತಿಫಲವನ್ನು ನೆನೆದು ಹೆದರಿ ನಿಮ್ಮ ಜೀವಮಾನದಲ್ಲಿ ಪ್ರಾಮುಖ್ಯ ಹೆಜ್ಜೆ ಮುಂದಿಡಲು ನೀವು ಸಂಕೋಚಪಟ್ಟಿದ್ದಿದೆಯೇ? (a) ಇಲ್ಲ. (b) ಹೌದು. ಒಂದಕ್ಕಿಂಥಾ ಹೆಚ್ಚು ಬಾರಿ. (c) ಒಮ್ಮೆ ಮಾತ್ರ.

(೩) ನಿಮ್ಮ ಮುಂದಿರುವ ಕರ್ತವ್ಯವನ್ನು ಬಿಟ್ಟು ಭವಿಷ್ಯ ಚಿಂತನೆಯಲ್ಲಿ ತೊಡಗಿರುವಿರಾ? (a) ಆಗಾಗ್ಯೆ, (b) ಇಲ್ಲ, (c) ಎಲ್ಲಾದರೊಮ್ಮೆ.

(೪) ನಿಮ್ಮ ಪರಿಚಯವಿಲ್ಲದ ಹೊಸಬರಿರುವ ಕೋಣೆಗೆ ಹೋದರೆ ನಿಮ್ಮ ಪ್ರಥಮ ಮನೋಭಾವವೇನು? (a) ಉತ್ಸುಕತೆ, (b) ಸಂಕೋಚ, (c) ಯಾವುದೇ ಭಾವದ ಅಭಾವ.

(೫) ಉಗುರು ಕಚ್ಚುವುದು, ಬೆರಳು ಮಡಚುವುದು, ನಿಮ್ಮ ಹಲ್ಲು ಮತ್ತು ತುದಿಗಳನ್ನು ಮುಟ್ಟುತ್ತಿರುವುದು ಈ ಅಭ್ಯಾಸಗಳಿವೆಯೇ? (a) ಇಲ್ಲ. (b) ಇದೆ. (c) ಕ್ಲೇಶ, ಗಡಿಬಿಡಿ ಸಮಯದಲ್ಲಿ ಮಾತ್ರ.

(೬) ದುಃಖದ ವಾರ್ತೆಗಳನ್ನು ಪತ್ರಿಕೆಗಳಲ್ಲಿ ಓದುವಾಗ (a) ಎಲ್ಲಾ ಶಬ್ದಗಳನ್ನು ಏರುವ ದುಃಖದಿಂದ ಓದುವಿರಾ? (b) ಹೆಚ್ಚು ದುಃಖಕ್ಕೆ ಆಸ್ಪದ ಕೊಡದೆ ಓದುವಿರಾ? (c) ಓದದೆ ಬೇರೆ ವಾರ್ತೆಗಳತ್ತ ಹೊರಳುವಿರಾ?

(೭) ನೀವು ಕಷ್ಟಕ್ಕೆ ಬಿದ್ದಾಗ ಇತರರ ಇರುವಿಕೆಯೂ ನೆರವನ್ನು (a) ಅವಶ್ಯಕವೆಂದು ಅಪೇಕ್ಷಿಸದಿದ್ದರೂ ಸ್ವಾಗತಿಸುವಿರಾ? (b) ಅತ್ಯವಶ್ಯಕವೆಂದು ಕಾಣುವಿರಾ? (c) ಹೆಚ್ಚಿನ ಭಾರವೆಂದು ಪರಿಗಣಿಸುವಿರಾ?

(೮) ವಾರಕ್ಕೆ ನಿಮ್ಮ ಗೆಳೆಯರು ಎಷ್ಟು ಸಲ ನಿಮಗೆ ಸಂತೋಷದಿಂದಿರಲು ಹೇಳುತ್ತಾರೆ. (a) ಎಲ್ಲಾದರೊಮ್ಮೆ (b) ಆಗಾಗ್ಯೆ (c) ಇಲ್ಲ.

(೯) ಚಿಂತೆಗೆ ಉತ್ತಮ ಪರಿಹಾರವೆಂದು ಯಾವುದನ್ನು ಭಾವಿಸುವಿರಿ. (a) ಭದ್ರತೆಯೂ ಸುರಕ್ಷಿತ ಜೀವನ, (b) ಕೆಲಸದಲ್ಲಿ ಆಸಕ್ತಿ, (c) ಧಾರ್ಮಿಕ ಚಿಂತನೆ.

ನಿಮ್ಮ ಉತ್ತರಗಳಿಗೆ ಈ ಕೆಳಗಿನಂತೆ ಮಾರ್ಕ್ ಹಾಕಿರಿ.

೧.	a = 0,	b = 10,	c = 5
೨.	a = 5,	b = 15,	c = 10
೩.	a = 15,	b = 0,	c = 10
೪.	a = 5,	b = 15,	c = 0
೫.	a = 0,	b = 15,	c = 5
೬.	a = 15,	b = 5,	c = 0
೭.	a = 5,	b = 15,	c = 15
೮.	a = 10,	b = 15,	c = 0
೯.	a = 15,	b = 5,	c = 5

ಈ ಲೆಕ್ಕದಂತೆ ನಿಮಗೆ ನೂರಕ್ಕಿಂಥ ಹೆಚ್ಚು ಮಾರ್ಕು ಬಂದರೆ ನೀವು ಚಿಂತೆಗೆ ಹೆಚ್ಚು ಆಸ್ಪದ ಕೊಡುತ್ತಿರುವಿರಿ. ಅದು ನಿಮ್ಮ ಜೀವನ, ಶರೀರ, ಹಾಗೂ ಬಾಳ್ವೆಯ ಬಲವನ್ನು ಕುಗ್ಗಿಸುತ್ತಿದೆ. ಚಿಂತಿಸಿ ಫಲವಿಲ್ಲ; ಈ ಬಾಳು ಕೊನೆಗೊಳ್ಳುವ ವರೆಗೆ ಸಾಧಿಸಬೇಕಾದ್ದಿದೆಯೆಂದು ಕಾರ್ಯ ಪ್ರವೃತ್ತರಾಗಬೇಕಿದೆ.

ನಿಮಗೆ ೮೦ರಿಂದ ೧೦೦ರ ವರೆಗೆ ಮಾರ್ಕ್ ಬಂದಿದ್ದರೆ ಅವಶ್ಯಕತೆಗಿಂಥಾ ಹೆಚ್ಚು ಚಿಂತೆ ಮಾಡುವವರು. ನೀವೆಂದು ತಿಳಿಯಬೇಕು. ಇದರಿಂದ ನಿಮ್ಮ ನರ ಹಾಗೂ ಚೇತನಗಳ ದುರ್ವ್ಯಯವಾಗುತ್ತಿದೆ. ಆದ್ದರಿಂದ ಎಚ್ಚರಗೊಳ್ಳಬೇಕಿದೆ.

೫೫ರಿಂದ ೮೦ರ ವರೆಗೆ ಮಾರ್ಕ್ ದೊರಕಿದ್ದರೆ ನೀವು ಸಾಧಾರಣ ಸ್ವಭಾವದವರು. ಚಿಂತೆಗೆ ಆಗಾಗ್ಯೆ ತಲೆ ಹಾಕಿದರೂ ಅದು ನೀವು ನಿಮ್ಮ ಮಟ್ಟಿಗೆ ಸ್ಪಷ್ಟವಾಗಿಲ್ಲದಾಗ ಮಾತ್ರ. ಇತರ ಸಮಯಗಳಲ್ಲಿ ನೀವು ಬಾಳನ್ನು ಹಗುರವಾಗಿ ಕಾಣುವಿರಿ.

೫೫ ಮಾರ್ಕಿಗಿಂಥಾ ಕೆಳಗಿರುವವರನ್ನು ಚಿಂತಿಸುವ ಸ್ವಭಾವದವರೆಂದು ಯಾರೂ ಹೇಳಲಾರರು. ಜೀವನವನ್ನು ಅವರು ಭಾರವಾಗಿಯೂ ಭಾವಿಸಿಲ್ಲ. ಆದರೆ ಪ್ರತಿಯೊಂದನ್ನು ಬೇಜವಾಬ್ದಾರಿಯ ದೃಷ್ಟಿಯಿಂದ ನೋಡುವ ಪ್ರವೃತ್ತಿ ಹೆಚ್ಚದಂತೆ ಎಚ್ಚರಿಕೆ ವಹಿಸಬೇಕು.

—ಸಾಧಾರ.

(ಕೊಡಗು)

ಶ್ರೀ ಕೆ.ಕೆ. ಶೆಟ್ಟಿ, ಎಂ.ಎಲ್.ಸಿ.ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	6=00

ಪ್ರತಿಗಳು ಸಿಗುವ ಸ್ಥಳಗಳು–:
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ದೇಶೋದ್ಧಾರಕ್ಕಾಗಿ ಒಂದಾಗಿ ದುಡಿಯಿರಿ

ಕರೆಯಿತ್ತವರು
ಶ್ರೀ ಬಿ. ರಾಜೀವ ಭಂಡಾರಿ,
ಅಧ್ಯಕ್ಷ, ತಾಲೂಕು ಅಭಿವೃದ್ಧಿ ಬೋರ್ಡು, ಮಂಗಳೂರು.

ದಿವಂಗತ ಎ. ಬಿ. ಶೆಟ್ಟರ ಶ್ರಮದ ಫಲವಾಗಿ ನಮ್ಮ ಸಮಾಜವು ಹೊಸ ಬೆಳಕನ್ನು ಕಂಡಿದೆ. ಸಮಾಜದ ವ್ಯಕ್ತಿಗಳ ಸಂಘಟನೆಯೂ ಬೆಳೆದಿದೆ. ಇದೀಗ ಎಲ್ಲರಲ್ಲಿಯೂ ಹೊಸ ಚೈತನ್ಯ ತುಂಬಿದೆ. ಇದಕ್ಕಾಗಿ ದಿ| ಎ. ಬಿ. ಶೆಟ್ಟರಿಗೆ ನಾವು ಚಿರಋಣಿಯಾಗಿರಲೇ ಬೇಕು.

ನಮ್ಮ ಸಮಾಜವು ಮೂಲತಃ ಕೃಷಿಯನ್ನೇ ಅವಲಂಬಿಸಿಕೊಂಡಿದೆ. ಆದರೂ ಕಾಲಕ್ಕನುಗುಣವಾಗಿ ನಮ್ಮ ಜೀವನ ಕ್ರಮವನ್ನು ಬದಲಾಯಿಸಿಕೊಳ್ಳುವುದು ಅನಿವಾರ್ಯ. ಇತರ ಕ್ಷೇತ್ರಗಳಲ್ಲಿಯೂ ನಾವು ದುಡಿಯುವಂತಾಗಬೇಕು. ಇದನ್ನೇ ಮನಗಂಡ ಎ. ಬಿ. ಶೆಟ್ಟರು ಸಮಾಜದ ಯುವಕರು ವಿದ್ಯಾಭ್ಯಾಸದಲ್ಲಿ ಮುಂದುವರಿದು ಎಲ್ಲ ರಂಗಗಳಲ್ಲಿಯೂ ಗಣ್ಯ ವ್ಯಕ್ತಿಗಳಾಗಿ ಕಾಣಿಸಿಕೊಳ್ಳಬೇಕೆಂದು ಇಂತಹ ಸಂಸ್ಥೆಯನ್ನು ಸ್ಥಾಪಿಸಿದರು. ಇದರಿಂದಾಗಿಯೇ ನಾವೀ ಪ್ರಗತಿಯನ್ನು ಕಂಡಿದ್ದೇವೆ. ಸಂಘವು ನೀಡುತ್ತಿರುವ ಉಚಿತ ವಿದ್ಯಾರ್ಥಿ ವೇತನ, ಕರಾರು ಸಾಲ ಮುಂತಾದುವುಗಳು ಬಡ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಹಾಯಕವಾಗಿವೆ.

ಮಂಗಳೂರಿನಲ್ಲಿ ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿ ಭವನಗಳಿವೆ. ಕುಂದಾಪುರ, ಕಾರ್ಕಳ ಪುತ್ತೂರು ಮತ್ತು ಉಡುಪಿಗಳಲ್ಲೂ ವಿದ್ಯಾರ್ಥಿ ಭವನಗಳಿವೆ. ಮಂಗಳೂರಿನ ಭವನಗಳನ್ನು ಲಾಭದಾಯಕವಾಗಿ ಉಪಯೋಗಿಸಿಕೊಳ್ಳುವ ಬಗ್ಗೆ ನಾವು ತೀವ್ರವಾಗಿ ಪರ್ಯಾಲೋಚನೆ ನಡೆಸುವುದೊಳಿತು.

ಪ್ರಪಂಚವು ಬಹಳ ತೀವ್ರವಾಗಿ ಮುಂದುವರಿಯುತ್ತಿದೆ. ನಾವಿಂದು ಸ್ವತಂತ್ರ ಪ್ರಜಾಪ್ರಭುತ್ವದಲ್ಲಿದ್ದೇವೆ. ಮಾನವನು ಚಂದ್ರಮಂಡಲವನ್ನು ಸುತ್ತಾಡಲು ಪ್ರಾರಂಭಿಸಿರುವಾಗ, ನಾವು ಕೃಷಿಯಿಂದಲೇ ಜೀವನ ಸಾಗಿಸುವುದು ಕಷ್ಟಕರ. ಇನ್ನಿತರ ಉತ್ಪನ್ನದಾಯಕ ಕಸಬುಗಳನ್ನು ಪ್ರಾರಂಭಿಸಲು ನಾವು ಪ್ರಯತ್ನಿಸಬೇಕು. ನಮ್ಮ ಮುಂದಿನ ಪೀಳಿಗೆಯು ಉತ್ತಮ ನಾಗರಿಕರಾಗಿ ಮುಂದುವರಿಯುತ್ತಿರುವ ಸಮಾಜದಲ್ಲಿ ಬಾಳಲು ಅಗತ್ಯವುಳ್ಳ ಸನ್ನಿವೇಶವನ್ನು ನಾವು ರಚಿಸಲು ಸರ್ವ ಪ್ರಯತ್ನ ಮಾಡುವುದು ನಮ್ಮ ಕರ್ತವ್ಯ. ನಮ್ಮಲ್ಲಿ ಹೆಚ್ಚಿನವರು ತಮ್ಮ ಅಮೂಲ್ಯ ಸಮಯವನ್ನು ಕೋರ್ಟು ಕಛೇರಿಗಳಲ್ಲಿ ವ್ಯರ್ಥವಾಗಿ ಕಳೆಯುತ್ತಾರೆ. ವ್ಯಾಜ್ಯಗಳು ಸಮಾಜದ ಅಭಿವೃದ್ಧಿಗೆ ಕಂಟಕಪ್ರಾಯ. ಸರಕಾರದ ಭೂಸುಧಾರಣಾ ಕಾನೂನು ಜ್ಯಾರಿಗೆ ಬರಲಿದೆ. ಇನ್ನೂ ನಾವು ಮನ ಪರಿವರ್ತನೆ ಮಾಡಲು ಮುಂದಾಗದಿದ್ದಲ್ಲಿ ನಮ್ಮ ಸಮಾಜ ಸುಧಾರಣೆಯಾಗಲಾರದು. ಪ್ರಜಾಪ್ರಭುತ್ವಕ್ಕೆ ಹೊಂದಿಕೊಂಡು ಸಮಾಜ ಸೇವೆ ಸಲ್ಲಿಸಲು ಅಗತ್ಯವುಳ್ಳ ಸನ್ನಿವೇಶವನ್ನು ರಚಿಸಲು ನಮ್ಮ ಮುಖಂಡರು, ಸಮಾಜದ ಹಿರಿಯರು ಮುಂದೆ ಬರಬೇಕು.

ಒಗ್ಗಟ್ಟಿನಲ್ಲಿ ಬಲವಿದೆ. ನಮ್ಮ ಸಮಾಜದಲ್ಲೂ ಒಕ್ಕಟ್ಟು, ಅಭಿವೃದ್ಧಿ ಹಾಗೂ ಸಂಘಟನಾ ಬುದ್ಧಿ ಬೆಳೆಯಲು ಜಿಲ್ಲೆಯಾದ್ಯಂತ ಹಾಗೂ ಇನ್ನಿತರ ಕಡೆಗಳಲ್ಲಿ ಸ್ವಯಂ ಪ್ರೇರಣೆಯಿಂದ ನಮ್ಮ ಸಮಾಜದ ಸಂಘಗಳು ಸ್ಥಾಪಿತವಾಗಬೇಕು. ಈಗಾಗಲೇ ಸ್ಥಾಪಿತವಾದ ಕೆಲವು ಸಂಘಟನೆಗಳು ನಮ್ಮ ಕೇಂದ್ರ ಸಂಘಕ್ಕೆ ಸೇರಿಕೊಳ್ಳಬೇಕಾದುದು ಅಗತ್ಯ. ಪ್ರತ್ಯೇಕತೆಯು ಮುಂದಕ್ಕೆ ನಮ್ಮ ಸಮಾಜದ ಅಭಿವೃದ್ಧಿಗೆ ಆತಂಕ ತರುವಂತಾಗದಿರಲೆಂದು ಹಾರೈಸಬೇಕು.

ನಾವಿಂದು ರಾಷ್ಟ್ರದ ಬೆನ್ನೆಲುಬಾಗಿದ್ದೇವೆ. ಅರ್ಥಾತ್ ನಮ್ಮ ದೇಶ ಕೃಷಿ ಪ್ರಧಾನವಾದುದರಿಂದ ಕೃಷಿಯನ್ನೇ ವೃತ್ತಿಯಾಗಿ ಅವಲಂಬಿಸಿರುವ ನಮ್ಮಿಂದ ದೇಶದ ಉದ್ಧಾರವಾಗಬೇಕಾಗಿದೆ. ಇದನ್ನು ನಾವು ಗಮನದಲ್ಲಿಟ್ಟುಕೊಂಡು ನಮ್ಮ ದೇಶದ ಉದ್ಧಾರಕ್ಕಾಗಿ ಕೃಷಿಯ ಉದ್ಯಮದಲ್ಲಿ ಸರಕಾರ ನೀಡುವ ನೆರವುಗಳನ್ನು ಸರಿಯಾಗಿ ಉಪಯೋಗಿಸಿಕೊಂಡು ಕೃಷಿಯ ಅಭಿವೃದ್ಧಿಯ ಮೂಲಕ ದೇಶದ ಅಭಿವೃದ್ಧಿಗೆ ಕಾರಣರಾಗಬೇಕಾದುದು ನಮ್ಮ ಆದ್ಯ ಕರ್ತವ್ಯವೆಂದು ಪ್ರತಿಯೊಬ್ಬರೂ ಜ್ಞಾಪಕದಲ್ಲಿಡತಕ್ಕದ್ದು.

ನಾವು ನಮ್ಮ ಸಮಾಜದ ಏಳಿಗೆಗಾಗಿ ಶ್ರಮಪಟ್ಟು ದುಡಿಯಬೇಕು. ನಮ್ಮ ಸಂಘದ ಇದುವರೆಗಿನ ಪ್ರಗತಿಗೆ ಹೆಮ್ಮೆಪಡುವುದರೊಂದಿಗೆ ಇನ್ನೂ ಪ್ರಗತಿಯತ್ತ ಕೊಂಡೊಯ್ಯಲು ಪ್ರತಿಯೊಬ್ಬನೂ ಶ್ರಮ ಪಡಬೇಕು. ಹಾಗಾಗಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ.

(ತಾ. 25-4-೬೫ರಂದು ಮುಲ್ಕಿಯಲ್ಲಿ ನಡೆದ ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಮಾಡಿದ ಅಧ್ಯಕ್ಷ ಭಾಷಣದ ಸಾರ.)

ಅರಸಿನಮಕ್ಕಿ ಸೇತುವೆ ಉದ್ಘಾಟನೆ

ಕಳೆದ ತಾ. 28ರಂದು, ಶ್ರೀ ಮಾಣೇಲ್ ಶ್ರೀನಿವಾಸ ನಾಯ್ಕ, ಎಂ.ಎಲ್.ಎ., ಇವರ ಅಧ್ಯಕ್ಷತೆಯಲ್ಲಿ, ಪತ್ಯಡ್ಕ ಗ್ರಾಮದ ಶಿಶಿಲಾ ನದಿಗೆ ಕಟ್ಟಲಾದ ಹೊಸ ಸೇತುವೆಯನ್ನು ಆರೋಗ್ಯ ಸಚಿವ ಡಾ| ನಾಗಪ್ಪ ಆಳ್ವರು ಉದ್ಘಾಟಿಸಿದರು. ಆರಂಭದಲ್ಲಿ ಸಾರ್ವಜನಿಕ ಕಾಮಗಾರಿ ಇಲಾಖೆಯ ಪರವಾಗಿ ಶ್ರೀ ಚಬ್ಬಿ, ಜಿ. ಎಸ್. ಸಲ್ಡಾನಾರವರೂ, ಪಂಚಾಯತ್ ಪರವಾಗಿ ಶ್ರೀ ದಂಬೆ ಸುಬ್ರಾಯರೂ ಸ್ವಾಗತಿಸಿದರು. ಡಾ| ಆಳ್ವರವರು ಈ ಸೇತುವೆಯ ನಿರ್ಮಾಣ ಕಾರ್ಯವನ್ನು ಶ್ಲಾಘಿಸಿದರು. ಶ್ರೀ ಬಿ. ನಾರಾಯಣ ನಾಯಕ್, ಶ್ರೀ ನರಸಿಂಹ ಭಟ್ ಇವರು ಮಾತನಾಡಿದರು. ಅಂತ್ಯದಲ್ಲಿ ಉಡುಪಿ ಸಬ್ ಡಿವಿಜನ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀ ರಾಮಕೃಷ್ಣ ಇವರು ವಂದನಾರ್ಪಣೆಗೈದರು.

ಪ್ರಗತಿ ಪಥದಲ್ಲಿ

ಸಿಂಡಿಕೇಟ್ ಬ್ಯಾಂಕ್ ಲಿ.

ದಕ್ಷಿಣ ಭಾರತದಲ್ಲಿ ಮುನ್ನೆ ಮೊತ್ತಾಗಿರುವ ಸಿಂಡಿಕೇಟ್ ಬ್ಯಾಂಕಿನ ೧೯೬೪ನೆ ಇಸವಿಗೆ ಕೊನೆಗೊಳ್ಳುವ ೩೯ನೆಯ ವರ್ಷದ ವಾರ್ಷಿಕ ವರದಿಯು ನಮ್ಮ ಕೈ ಸೇರಿದೆ. ವರದಿ ವರ್ಷದಲ್ಲಿ ಬ್ಯಾಂಕು ಪ್ರಗತಿಯ ಮತ್ತೊಂದು ಮೈಲುಗಲ್ಲನ್ನು ಮುಟ್ಟಿದೆಯೆಂದು ಹೇಳಲೇ ಬೇಕಾಗುತ್ತದೆ. ತೆತ್ತ ಭಂಡವಾಳವು ೯೪ ಲಕ್ಷವಿರುವಾಗ ಕಾಯ್ದಿಟ್ಟ ನಿಧಿಯು ೮೫ ಲಕ್ಷಗಳಷ್ಟಿದೆ. ಇನ್ನು ಅಲ್ಪ ಸಮಯಾವಧಿಯಲ್ಲಿಯೇ ಭಂಡವಾಳದ ಮೊತ್ತವನ್ನೂ ಇದು ಮೀರಿ ನಿಲ್ಲುವುದೆಂದು ಆಶಿಸಬಹುದು. ಬ್ಯಾಂಕಿನ ಬುನಾದಿಯೂ ಭದ್ರವಾಗಿದೆಯೆಂದು ನಾವು ತಿಳಿಯಬಹುದು.

ಹಿಂದಿನ ವರ್ಷಕ್ಕಿಂತ ಒಟ್ಟು ಠೇವಣಾತಿಗಳು ಸೇ. ೧೩ರಷ್ಟು ಹೆಚ್ಚಿ ವರದಿ ವರ್ಷದಲ್ಲಿ ರೂ. ೫೯.೪೫ ಕೋಟಿಗಳಾಗಿದೆ. ೫೦ ಕೋಟಿ ರೂಪಾಯಿಗಳನ್ನು ಠೇವಣಾತಿಯಿರುವ ಕೆಲವೇ ಬ್ಯಾಂಕುಗಳ ಸಾಲಿನಲ್ಲಿ ಸಿಂಡಿಕೇಟೂ ಮುನ್ನಡೆಯ ತೊಡಗಿರುವುದು ಸಂತೋಷದ ಸಂಗತಿ. ಹೊರಗೆ ಕೊಟ್ಟಿರುವ ಸಾಲದ ಮೊತ್ತದಲ್ಲಿ ಸೇ. ೧೭ರಷ್ಟು ಹೆಚ್ಚಳ ತೋರುತ್ತದೆ. ಇದು ಭಂಡವಾಳ, ಕಾಯ್ದಿಟ್ಟ ನಿಧಿ ಮತ್ತು ಠೇವಣಾತಿಗಳ ಒಟ್ಟು ಮೊತ್ತದ ಸೇ. ೬೨ರಷ್ಟಾಗುತ್ತದೆ. ತನ್ನ ವ್ಯವಹಾರದಲ್ಲಿ ೧೯೬೪ರಲ್ಲಿ ಒಟ್ಟು ರೂ. ೪೯ ಲಕ್ಷ ಲಾಭವನ್ನು ಗಳಿಸಿ, ಇಕ್ವಿಟಿ ಪಾಲುದಾರರಿಗೆ ಹಿಂದಿನ ವರ್ಷದಂತೆಯೇ ಸೇ. ೨೦ರಷ್ಟು (ಆದಾಯ ತೆರಿಗೆಗೊಳಪಟ್ಟು) ಡಿವಿಡೆಂಡ್ ಕೊಡಲು ಸಮರ್ಥವಾಗಿದೆ. ಪ್ರಿಫರೆನ್ಸ್ ಶೇರುಗಳ ಮೇಲೆ ಹಿಂದಿನ ಪ್ರಮಾಣವನ್ನೇ ಉಳಿಸಿಕೊಂಡಿದೆ.

ವರದಿ ವರ್ಷದಲ್ಲಿ ಬ್ಯಾಂಕು ಓರಿಯೆಂಟಲ್ ಯೂನಿಯನ್ ಬ್ಯಾಂಕು ಲಿ., ಕೋಟೆ ಮಂಗಲಂ ನಂಬೂದ್ರಿ ಬ್ಯಾಂಕ್ ಲಿ., ಕೋಟಗಿರಿ ಬ್ಯಾಂಕ್ ಲಿ., ಶ್ರೀ ರಂಗರಾಜ ಬ್ಯಾಂಕ್ ಲಿ. ಮತ್ತು ಸೌತ್ ಟ್ರಾವಂಕೂರ್ ಬ್ಯಾಂಕ್ ಲಿ. ಎಂಬ ಐದು ಬ್ಯಾಂಕುಗಳ ಸಾಲ – ಮೂಲ ವ್ಯವಹಾರಗಳನ್ನು ವಹಿಸಿಕೊಂಡು ತನ್ನ ಹಿಂದಿನ ಪರಂಪರೆಯನ್ನು ಮತ್ತಷ್ಟು ಬೆಳೆಸಿಕೊಂಡು ಬಂದಿದೆ. ಇದರಿಂದಾಗಿ ಆರು ಶಾಖೆಗಳು ಹೊಸತಾಗಿ ತೆರೆಯಲ್ಪಟ್ಟವು. ಇದರೊಂದಿಗೆ ಡಿಲ್ಲಿಯನ್ನು ಸೇರಿಸಿ ಮತ್ತೆ ಎಂಟು ಶಾಖೆಗಳನ್ನು ಸಿಂಡಿಕೇಟು ತೆರೆದಿದೆ. ವರ್ಷಾಂತ್ಯದಲ್ಲಿ ಬ್ಯಾಂಕಿನ ೨೦೩ ಶಾಖೆಗಳಲ್ಲಿ ೨೯೮೩ ನೌಕರರು ದುಡಿಯುತಿದ್ದಾರೆ. ಈ ಶಾಖೆಗಳಲ್ಲಿ ೫ ಮಹಿಳೆಯರಿಂದಲೇ ನಡೆಸಲ್ಪಡುತ್ತವೆ.

ಪಿಗ್ಮಿಯೆಂಬ ಅಲ್ಪ ಉಳಿತಾಯದ ಯೋಜನೆಯಿಂದ ತೊಡಗಿ ಇನ್ವೆಸ್ಟರ್ಸ್ ಏಜನ್ಸಿಯೆಂಬ ಭೀಮಾಕಾರದ ಉಳಿತಾಯ ಯೋಜನೆಗಳಿಂದ ಜನಪ್ರಿಯವಾದ ಸಿಂಡಿಕೇಟ್ ಬ್ಯಾಂಕು ವರದಿ ವರ್ಷದಲ್ಲಿ ಎಗ್ರಿಕಲ್ಚರಲ್ ಫಿನಾನ್ಸ್ ಏಜನ್ಸಿ ವಿಭಾಗವೊಂದನ್ನು ತೆರೆದು ವ್ಯವಸಾಯ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುವಲ್ಲಿ ನೆರವು ನೀಡಲು ಮುಂದೆ ಬಂದಿದೆ. ಕೃಷಿ ಭೂಮಿಯ ಮಣ್ಣಿನ ಪರಿಶೀಲನಾ ಯೋಜನೆಯನ್ನೂ ಕೈಗೊಂಡಿದೆ. ಆಹಾರಾಭಾವದ ಇಂದಿನ ದಿನಗಳಲ್ಲಿ ಈ ಉಪಕ್ರಮವು ಪ್ರಶಂಸನೀಯವೆಂದೇ ಹೇಳಬೇಕು.

ಹಿಂದಿನಿಂದಲೂ ಬ್ಯಾಂಕಿನ ಸೌಕರ್ಯವನ್ನು ಜನರ ಮನೆಗೆ ಮುಟ್ಟಿಸುವ ಹೇತುವಿನಿಂದಿದ್ದ ಈ ಬ್ಯಾಂಕು ಬ್ಯಾಂಕಿಂಗ್ ಸೌಕರ್ಯಗಳೇ ದೊರೆಯದಲ್ಲಿ ತನ್ನ ಶಾಖೆಗಳನ್ನು ತೆರೆಯುವಲ್ಲಿ ಆಸಕ್ತಿ ವಹಿಸಿದೆ, ವರದಿ ವರ್ಷದಲ್ಲೂ ಶೆಡ್ಯೂಲ್ಡ್-ಬ್ಯಾಂಕಿಂಗ್ ಸೇವೆಯಿಲ್ಲದ ೯ ಸ್ಥಳಗಳಲ್ಲಿ ಇದು ಶಾಖೆಗಳನ್ನು ತೆರೆದಿದೆ. ಮುಂದೆಯೂ ತನ್ನ ಈ ಆದರ್ಶವನ್ನು ಬ್ಯಾಂಕು ಮುಂದುವರಿಸುವುದೆಂದು ನಂಬಬಹುದು.

ಉಳಿತಾಯ ಪ್ರವೃತ್ತಿಯನ್ನು ಕುದುರಿಸುವುದರಿಂದ ತೊಡಗಿ, ಎಲ್ಲ ತರದ ಬ್ಯಾಂಕಿಂಗ್ ಸೌಕರ್ಯಗಳನ್ನು ಸಿಂಡಿಕೇಟು ಜನತೆಗೆ ಒದಗಿಸುತ್ತದೆ. ದೇಶೋದ್ಧಾರದ ಕಾರ್ಯದಲ್ಲಿಯೂ ರಾಷ್ಟ್ರದ ಪ್ರಚಲಿತ ಸಮಸ್ಯಾ ಪರಿಹಾರದಲ್ಲಿಯೂ ಬ್ಯಾಂಕುಗಳು ಯಾವ ರೀತಿಯಲ್ಲಿ ಭಾಗವಹಿಸಬಹುದೆಂಬುದನ್ನು ಪ್ರತ್ಯಕ್ಷ ತೋರಿಸಿಕೊಟ್ಟಿದೆ. ಮಣಿಪಾಲದಲ್ಲಿ ಹೊಸತಾಗಿ ಪ್ರಧಾನ ಕಾರ್ಯಾಲಯದ ಭವನವನ್ನು ವರದಿ ವರ್ಷದಲ್ಲಿ ನಿರ್ಮಿಸಿಕೊಂಡ ಈ ಬ್ಯಾಂಕಿನ ಆಡಳಿತವೂ ಕಟ್ಟಡದಂತೆಯೇ ಭವ್ಯವಾಗಿರುವುದೇ ಇದಕ್ಕೆ ಕಾರಣ. ದೂರದರ್ಶಿಗಳಾದ ಡಾ॥ ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿರುವ ಡೈರೆಕ್ಟರ್ ಮಂಡಲಿ, ಹಿಂದಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈ (ಈಗ ಉಪಾಧ್ಯಕ್ಷರು) ಮತ್ತು ಚೀಫ್ ಆಫೀಸರ್ ಶ್ರೀ ಕೆ. ಕೆ. ಪೈ ಹಾಗೂ ಇನ್ನಿತರ ಅಧಿಕಾರಿ—ನೌಕರ ವರ್ಗದ ಪ್ರಾಮಾಣಿಕ ದುಡಿಮೆ ಮತ್ತು ಸೇವೆಯಿಂದಲೇ ಬ್ಯಾಂಕು ಇಷ್ಟೊಂದು ಪ್ರಗತಿ ಹೊಂದಲು ಸಾಧ್ಯವೆನಿಸಿದೆ. ಇದೇ ಬಗೆಯ ಆಸಕ್ತಿ—ಸೇವೆಯ ಪರಿಣಾಮವಾಗಿ ಇನ್ನು ಹತ್ತು ವರ್ಷಗಳ ಅವಧಿಯಲ್ಲಿ ರೂ. ೧೦೦ ಕೋಟಿ ಠೇವಣಾತಿಗಳಿರುವ ಬೆರಳೆಣಿಕೆಯ ಭಾರತೀಯ ಬ್ಯಾಂಕುಗಳಲ್ಲಿ ಸಿಂಡಿಕೇಟೂ ಒಂದಾಗಲಿ ಎಂದು ಹಾರೈಸುತ್ತೇವೆ.

ಚೈನೀಯರ ಚಕ್ಕಂದದಾಟಕ್ಕೆ ಸಿಲುಕದ ಸಿಲೋನ್

(ಆರನೇ ಪುಟದಿಂದ)

ಶ್ರೀಮತಿ ಸಿರಿಮಾವೋರ ಮಂತ್ರಿಮಂಡಳವು ಚೈನಿ ಮಾವೋನ ಸರಕಾರದೊಂದಿಗೆ ಈ ರೀತಿ ಒಪ್ಪಂದ ಮಾಡಿಕೊಂಡಾಗ ಚೈನಿ ಕಮ್ಯೂನಿಸ್ಟರಿಗೆ ಬಹಳಷ್ಟು ಸಂತೋಷವಾಗಿದ್ದಿರಬಹುದು – ಯಂಗ್-ಲೋನಿಗೆ ಜಿರಾಫೆಯನ್ನು ಕಂಡಾಗ ಆಗಿದ್ದಷ್ಟು ಸಂತೋಷ ಮಾವೋನಿಗೆ ಆಗಿದ್ದಿರಬಹುದು.

ಹಿಂದೆ ಆಕ್ರಮಣ ನಡೆಸಿದ್ದ ಚೈನೀಯರು ಸಿಲೋನಿನ ಜನನನ್ನು ಹಾಗೂ ಇತರೆಡೆಗಳಿಂದಲೂ ಸಂಪತ್ತನ್ನು ಮಾತ್ರ ಸೂರೆ ಮಾಡಿಕೊಂಡು ಹೋಗಿರುವದಲ್ಲದೆ ಕೆಲ ಪ್ರಾಣಿಗಳನ್ನು ತೆಗೆದುಕೊಂಡು ಹೋಗಿರುವದನ್ನು ಹಿಂದೆಯೇ ತಿಳಿಸಲಾಗಿರುತ್ತದೆ.

ಜಿರಾಫೆಯು ಶುಭಕರ ಪ್ರಾಣಿಯೆಂದು ಚೈನೀಯರು ಭಾವಿಸಿಕೊಂಡಿದ್ದರು. ಸಾಧಾರಣ ಇನ್ನೂರೈವತ್ತು ವರ್ಷಗಳ ಹಿಂದೆ ಅಂತಹದ್ದೇ ಪ್ರಾಣಿ ಚೈನಾದಲ್ಲಿತ್ತು. ಆದರೆ ಈಗ ಅಂತಹ ಪ್ರಾಣಿಗಳು ಕೇವಲ ದಂತಕಥೆಗಳಲ್ಲಿವೆ, ಅಷ್ಟೆ. ಆ ಪ್ರಾಣಿಗಳಿಗೆ ಮಾನವನ ಹೃದಯವಿರುವದಾಗಿ ಅಲ್ಲಿ ಹೇಳಲಾಗುತ್ತಿದೆ. ಅದಕ್ಕೆ ದೇಹ ಕುದುರೆಯದ್ದು; ಮತ್ತು ಬಾಲ ಹೋರಿದ್ದು; ಅಲ್ಲದೆ ಒಂದೇ ಒಂದು ಮಾಂಸಲ ಕೊಂಬು. ಇದು ದಂತ ಕಥೆಯಲ್ಲಿ ಬರುವ ಚೀ-ಲಿನ್ ಪ್ರಾಣಿಯ ವರ್ಣನೆ. ಜಿರಾಫೆಯನ್ನು ಕಂಡ ಚೈನೀ ಯನೆಂಬನು ದರ್ಬಾರಿನಲ್ಲಿ ಹಾಡೊಂದನ್ನು ಹಾಡಿರುವನು. ಪಾಶ್ಚಾತ್ಯ ಸಾಗರದ ಮೂಲೆಯಲ್ಲಿ ಅದು ದೊರಕುತ್ತದೆಂದೂ, ಚೀ-ಲಿನ್‌ನಂತೆಯೇ ಆ ಪ್ರಾಣಿ ಇದೆ, ಸಾಧಾರಣ ಹದಿನೈದು ಅಡಿ ಎತ್ತರವಿದೆ, ದೇಹ ಜಿಂಕೆಯಂತಹದ್ದಿದೆ, ಬಾಲ ಹೋರಿಯದ್ದಿದ್ದು, ಒಂದು ಮಾಂಸಲ ಎಲುಬಿಲ್ಲದ ಕೊಂಬಿದೆ. ಕೆಮ್ಮುಗಿಲು ಅಥವಾ ಎಳೆಗೆಂಪು ಇಬ್ಬನಿಯಂತೆ ಪ್ರಕಾಶಯುಕ್ತ ಕಲೆಗಳಿವೆ. ಅದು ಬಹಳ ಜಾಗರೂಕತೆಯಿಂದ ನಡೆಯುತ್ತಿದೆ, ಅದರ ಸ್ವರ ಘಂಟೆ (ಚೈನೀ ಘಂಟೆ?) ಅಥವಾ ಸಂಗೀತದ ಕೊಳವೆಯಂತಿದೆಂದು ಅವನು ಹಾಡಿರುವನು. ಈ ವಿವರಣೆಗಳ ಶ್ರೀ ವಿಲ್ಲಿಯಮ್ ವಿಲ್ಲೆಟ್ಸರನು ಕೆಲ ಸಮಯದ ಹಿಂದೆ 'ಹಿಂದೂ' ಪತ್ರಿಕೆಗೆ ಕೊಟ್ಟಿರುವ ಲೇಖನದಲ್ಲಿ ಕಾಣಬಹುದು.

ಚೈನೀಯರಿಗೆ ಜಿರಾಫೆಯು ವಿಚಿತ್ರ ಪ್ರಾಣಿ ಇದೆ. ಅದಕ್ಕೆ ಮಾನವ ಹೃದಯ ಇದೆಯೆಂದು ಅವರು ಹೇಳುತ್ತಿದ್ದಾರೆ. ತಾವು ಉತ್ತಮ ಕೊಳ್ಳೆಯನ್ನು ಹೊಡೆದುಕೊಂಡು ಬಂದಿದ್ದೇವೆ ಎನ್ನುವದು ಅವರ ಅಭಿಪ್ರಾಯ. ಆ ಪ್ರಾಣಿಯು ಹಾಗೆಯೇ ಭಾರತೀಯರನ್ನೋ ಸಿಂಹಳೀಯರನ್ನೋ ಹಿಡಿದುಕೊಂಡು ಹೋದಾಗ ಅವರಿಗೆ ಆನಂದವಾಗುವದು ಸ್ವಾಭಾವಿಕ ಇದೆ. ಅಂದರೆ ದೈಹಿಕವಾಗಿ ಅಪಹರಿಸಿಕೊಂಡು ಹೋಗಬೇಕಾಗಿರುವದಿಲ್ಲ. ಇಲ್ಲಿಯ ಜನತೆಯ ಹಾಲು ಮೆದುಳಿನಲ್ಲಿ ಕಮ್ಯುನಿಸಂ ಕಾಲಕೂಟವನ್ನು ಸೇರಿಸಿದರಾಯಿತು. ಅದರ ಪರಿಣಾಮವಾಗಿ ಇಲ್ಲಿನ ಕಮ್ಯುನಿಸ್ಟರು (ಭಾರತ ಹಾಗೂ ಸಿಲೋನಿನ) ಕಾರಾಗೃಹದ ಕದಗಳನ್ನು ಕಡಿದೊಗೆದು, ಗೊಂದಲವೆಬ್ಬಿಸಿ, ಚೈನಿ ಕಮ್ಯೂನಿಸ್ಟರಿಗೆ ಸ್ವಾಗತನೀಯಲು ಮುಂದಾಗುತ್ತಾರೆ. ಉತ್ತರದಲ್ಲಿ ಚೈನಿ ಕಮ್ಯೂನಿಸ್ಟ್ ಅಫೀಮನ್ನು ಸೇವಿಸಿರುವ ಮತಾಂಧ ತಿಯುಂಬ ಬಾರೀ ಆಕ್ರಮಣ ನಡೆಸುತ್ತಿದ್ದಾರೆ.

ಈ ವಿಷಯದಲ್ಲಿ ಸಿಲೋನಿನಲ್ಲಿ ಸ್ವಲ್ಪ ಮಟ್ಟಿಗೆ ಜನಜಾಗ್ರತೆಯಾಗಿದೆಯಾದರೂ ಕೇರಳ ಹಾಗೂ ಅಹಮದಾಬಾದಿನ (ಕರ್ಣಾವತಿ) ಚುನಾವಣೆಗಳ ಫಲಿತಾಂಶಗಳನ್ನು ನೋಡುವಾಗ ದೇಶಪ್ರೇಮಿಗಳ ಎದೆ ಧಸಕ್ಕಾಗುವದರಲ್ಲಿ ಆಶ್ಚರ್ಯವಿಲ್ಲ. ಆದರೆ ಅದರಿಂದ ನಾವೇನೂ ಹೆದರಬೇಕಾಗಿರುವದಿಲ್ಲ, ಎದೆ ಬಡಿದುಕೊಳ್ಳಬೇಕಾಗಿಲ್ಲ, ತಲೆ ಚಚ್ಚಿಕೊಳ್ಳಬೇಕಾಗಿಲ್ಲ. ಅದರ ಜ್ಞಾಪಕವನ್ನುಂಟು ಮಾಡಲಿಕ್ಕಾಗಿಯೋ ಎಂಬಂತೆ ಇದೀಗ ಶ್ರೀ ಶಂಕರಾಚಾರ್ಯರ ಜನ್ಮದಿನದ ಪರ್ವಕಾಲ ಬಂದಿದೆ. ನಮ್ಮಲ್ಲಿ ರಾಷ್ಟ್ರ ಭಕ್ತಿಯ ಜ್ಯೋತಿ ಆರಿ ಹೋಗಕೂಡದೆಂದೇ ಅವರು ದೇಶದ ನಾಲ್ದೆಸೆಗಳಲ್ಲೂ ಮಠಗಳನ್ನು ಸ್ಥಾಪಿಸಿರುವರು. ಅದನ್ನು ಜ್ಞಾಪಿಸಿಕೊಂಡರೆನೇ ಭಾಷಾಭಿನ್ನತೆ ಹಾಗೂ ಜಾತಿಜಗಳಾಟ ವಗೈರೆಗಳ ಮರಣ ಘೋಷವಾದೀತು. ಭಾರತೀಯ ಹೃದಯ ಶುದ್ಧ ಉಪರಂಜಿಯಾದೀತ, ಆಗ ಈ ರಾಷ್ಟ್ರದ ಮೇಲೆ ನಡೆಯುವ ಅದೆಂತಹ ಆಕ್ರಮಣವನ್ನು ಭಾರತೀಯರು ತಡೆಯುವದರಲ್ಲಿ ಸಂದೇಹವಿಲ್ಲ.

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ
ಋತುಭೇದ ವೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ. ರೂ. 1-50

ರೂ. 1-75 ಮನಿಯೂರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಅದ್ವೈತ ಸಿಂಧು ಆಚಾರ್ಯ ಶಂಕರ

(ಐದನೇ ಪುಟದಿಂದ)

ಆಚಾರ್ಯರ ಜೀವಿತ ಕಾಲದಲ್ಲಿ ನಡೆದ ಪವಾಡಗಳು, ಅಪೂರ್ವ ಘಟನೆಗಳು ಹಲವಾರು. ತಮ್ಮ ಯೋಗ ಮತ್ತು ತಪೋ ಶಕ್ತಿಗಳಿಂದ ವಿಶಿಷ್ಟ ವ್ಯಕ್ತಿಗಳಾಗಿಯೇ ಬಾಳಿದರು ಆಚಾರ್ಯರು.

ಭಗವತ್ಪ್ರಾಪ್ತಿಗೆ ಜ್ಞಾನಮಾರ್ಗವೇ ಸುಲಭವಾದುದು ಎಂಬುದನ್ನು ಆಚಾರ್ಯರು ತೋರಿಸಿಕೊಟ್ಟರು. ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗಿನ ಭಾರತಭೂಮಿ ಅವರ ಪಾದಸ್ಪರ್ಶದಿಂದ ಪುನೀತವಾಗಿದೆ. ಭಾರತಾದ್ಯಂತ ಮೂರು ಬಾರಿ ಸಂಚರಿಸಿದ ಆಚಾರ್ಯರು ಧರ್ಮದ ಉದ್ಧಾರ ವೇದಾಂತದ ದರ್ಶನಕ್ಕಾಗಿ ಅನುಪಮ ಸೇವೆಸಲ್ಲಿಸಿದ್ದಾರೆ. ಭಾರತಾದ್ಯಂತ ಹರಡಿ ನಿಂತಿರುವ ಮಠ, ಕ್ಷೇತ್ರ, ದೇವಾಲಯಗಳು ಅವರ ಸೇವೆಯಿಂದ ವಿಜೃಂಭಿಸಿವೆ.

ಹಿಂದೂ ಧರ್ಮದ ಪುನರುದ್ಧಾರಕ್ಕಾಗಿ ಅವಿಶ್ರಾಂತವಾಗಿ ದುಡಿದ ಶಂಕರಾಚಾರ್ಯರು ತಾವು ಆರಂಭಿಸಿ, ಪೋಷಿಸಿ ಬೆಳೆಸಿದ ತತ್ವ, ಧರ್ಮ ಮಾರ್ಗ ಎಂದಿಗೂ ಅಳಿಯಬಾರದು ಮತ್ತು ಅವುಗಳು ಶಾಶ್ವತವಾಗಿ ಉಳಿದು ಕಾರ್ಯದಲ್ಲಿಯೇ ತೊಡಗಿರಬೇಕೆಂದು ಭಾರತದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದರು. ಬದರಿ ಕೇದಾರ, ಪುರಿ ಜಗನ್ನಾಥ, ದ್ವಾರಕಾ ಮತ್ತು ದಕ್ಷಿಣದ ಶೃಂಗೇರಿ ಈ ಮಠಗಳು ಇಂದಿಗೂ ಶಂಕರರ ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿ, ಧರ್ಮೋದ್ಧಾರ, ಜನಜಾಗೃತಿಗಾಗಿ ದುಡಿಯುತ್ತಿವೆ.

ಆಚಾರ್ಯರು ಪ್ರತಿಪಾದಿಸಿದ ಸಿದ್ಧಾಂತ - "ಅದ್ವೈತ ಸಿದ್ಧಾಂತ", ಏಕದಲ್ಲಿ ಅನೇಕವನ್ನೂ, ಅನೇಕದಲ್ಲಿ ಏಕವನ್ನೂ ಕಾಣುವುದೇ ಅದ್ವೈತ ಸಿದ್ಧಾಂತದ ತತ್ವ. "ಅಹಂ ಬ್ರಹ್ಮಾಸ್ಮಿ", "ಅಯಮಾತ್ಮಾ ಬ್ರಹ್ಮ", "ತತ್ವಮಸಿ", ಪ್ರಜ್ಞಾನಂ ಬ್ರಹ್ಮ" ಎಂಬ ನಾಲ್ಕು ಮಹಾವಾಕ್ಯಗಳು ಅದ್ವೈತ ಸಿದ್ಧಾಂತವೆನ್ನುವ ಭವ್ಯ ಭವನದ ಆಧಾರ ಸ್ತಂಭಗಳು. ತಮ್ಮ ಗುರುಗಳಿಂದ ಉಪದೇಶ ಮೂಲಕವಾಗಿ ಬಂದ ಈ ನಾಲ್ಕು ವಾಕ್ಯಗಳನ್ನು ಅವುಗಳ ಅರ್ಥವನ್ನು ಮನನ ಮಾಡಿಕೊಂಡ ಶಂಕರಾಚಾರ್ಯರು ಲೋಕಕ್ಕೆ ಅವುಗಳ ಶಕ್ತಿ, ಸೌಂದರ್ಯ, ಹಿರಿಮೆಗಳನ್ನು ಪರಿಚಯ ಮಾಡಿಸಿ ಪ್ರಕಟಿಸಿದರು.

ವೇದಾಂತಗಳ ಅಂತರ್ಶಕ್ತಿಯ ಪ್ರಕಟಿತ ರೂಪವೇ ಅದ್ವೈತ ಸಿದ್ಧಾಂತ ಎಂದು ಹೇಳಬಹುದು. ಆಚಾರ್ಯರು ಸರ್ವರಿಗೂ ಅರಿವಾಗುವಂತೆ ಬೋಧಿಸಿದ್ದಾರೆ. ತಮ್ಮ ಪಾಂಡಿತ್ಯ ಮತ್ತು ಪ್ರತಿಭೆಗಳ ಮೂಲಕ ಧಾರ್ಮಿಕ ಕ್ಷೇತ್ರಕ್ಕೆ ಆಚಾರ್ಯರು ಸಲ್ಲಿಸಿದ ಸೇವೆ ಅಪಾರವಾದುದು. ಅದರಂತೆಯೇ ಅವರಿಂದ ಸಂಸ್ಕೃತ ವಾಙ್ಮಯಕ್ಕೆ ದೊರೆತಿರುವ ಸೇವೆ ಅಲ್ಪವೇನಲ್ಲ.

ವೇದ ವೇದಾಂತ ದರ್ಶನಾದಿಗಳ ಪೂರ್ಣ ಜ್ಞಾನ ಪಡೆದಿದ್ದು "ಜ್ಞಾನ ಸಿಂಧು" ಎಂದು ಕೀರ್ತಿ ಪಡೆದಿದ್ದ ಆಚಾರ್ಯರು ಬ್ರಹ್ಮಸೂತ್ರ, ಉಪನಿಷತ್ತು ಮತ್ತು ಭಗವದ್ಗೀತೆಗಳಿಗೆ ಸಂಸ್ಕೃತದಲ್ಲಿ ಭಾಷ್ಯ ಬರೆದಿರುವುದಲ್ಲದೆ ಅಸಂಖ್ಯಾತ ಭಗವತ್ ಸ್ತೋತ್ರಗಳನ್ನು ರಚಿಸಿ ಮಹದುಪಕಾರ ಮಾಡಿದ್ದಾರೆ. ಅವರ ಸೇವೆಗೆ ನಾವು ಎಷ್ಟು ಋಣಿಗಳಾಗಿದ್ದರೂ ಸಾಲದು.

ಶಂಕರಾಚಾರ್ಯರಿಗೆ ಹರಿ-ಹರರಲ್ಲಿ ವ್ಯತ್ಯಾಸವೇ ಇಲ್ಲ. ಅವರದು ಭಗವಂತ ಒಬ್ಬನೇ ಎನ್ನುವ ಏಕ ದೃಷ್ಟಿ. 'ಅಹಂ ಬ್ರಹ್ಮಾಸ್ಮಿ' ಎಂದು ಸಾರಿದರು. ಅಂದ ಮಾತ್ರಕ್ಕೆ ದೇವರೇ ಇಲ್ಲ ಎಂಬ ವಾದವಲ್ಲ ಅಥವಾ ನಾಸ್ತಿಕತನವೂ ಅಲ್ಲ, ಒಂದು ವೇಳೆ ಅವರಿಗೆ ದೇವರಲ್ಲಿ ಭಕ್ತಿ ಇರದೆ ಹೋಗಿದ್ದುದಲ್ಲಿ ಪಂಚಾಯತನ ಪೂಜೆಯನ್ನಾದರೂ ಏಕೆ ಏರ್ಪಡಿಸಿ ಪ್ರಚಾರ ಪಡಿಸುತ್ತಿದ್ದರು? ಅಲ್ಲದೆ ಅಸಂಖ್ಯಾತ ಭಗವಂತನ ಶಕ್ತಿ, ಮಹಿಮೆಯ ಸಾರದ ಸ್ತೋತ್ರಗಳನ್ನೇಕೆ ರಚಿಸುತ್ತಿದ್ದರು? ಪಂಚಾಯತನ ಪೂಜೆಯ ಪ್ರಕಾರ ವಿಷ್ಣು, ಶಿವ, ಶಕ್ತಿ, ಗಣಪತಿ, ಸೂರ್ಯ ಇವರು ಅಧಿದೇವತೆಗಳು. ಈ ದೇವತೆಗಳ ಉಪಾಸನೆಯಿಂದ ಮೋಕ್ಷ ಪಡೆಯಬಹುದೆಂದು ಸ್ಪಷ್ಟಪಡಿಸಿದ್ದಾರೆ.

ಶಂಕರಾಚಾರ್ಯರ ಬಗೆಗೆ ಅವರು ಪ್ರಚಾರಕ್ಕೆ ತಂದ ಅದ್ವೈತ ಸಿದ್ಧಾಂತದ ಬಗೆಗೆ ಟಟು ಟೀಕೆ ಮಾಡುವವರ ಸಂಖ್ಯೆಯೂ ಅಲ್ಪವಲ್ಲ, ಅಲ್ಲದೆ ಅವರನ್ನು 'ಪ್ರಚ್ಛನ್ನ ಬೌದ್ಧ' ಎಂದು ಕರೆದವರೂ ಉಂಟು. ಆದರೆ ಅಂತಹವರು ಒಂದು ಬಾರಿ ಆಚಾರ್ಯರ ಪೂರ್ಣ ಜೀವನ, ಸಾಧನೆ, ಸೇವೆ ಸಿದ್ಧಾಂತಗಳನ್ನು ಸಂಕುಚಿತ ಭಾವವನ್ನು ದೂರಮಾಡಿ ಸೂಕ್ಷ್ಮವಾಗಿ ಪರಿಶೀಲಿಸಿದರೆ ಅವರ ತತ್ವ-ಸಿದ್ಧಾಂತಗಳ ಹಿರಿಮೆ ಗೋಚರವಾಗದಿರದು. ಜ್ಞಾನವೆಂದರೆ ಬೌದ್ಧಿಕ ಜ್ಞಾನವಲ್ಲ. ಸ್ವಾನುಭವ ಪೂರ್ಣ ಜ್ಞಾನಾರ್ಜನೆಯ ಜ್ಞಾನವೇ ಶ್ರೇಷ್ಠ ಎಂಬುದೇ ಸಿದ್ಧಾಂತದ ಅಂತರಂಗದ ನುಡಿ.

ತಮ್ಮ ಅಲ್ಪ ಜೀವಿತದ ಕಾಲದಲ್ಲಿ ಆಚಾರ್ಯರು ಶ್ರೇಷ್ಠ ವೇದಾಂತಿಗಳಾಗಿ ಹಿಂದೂ ಧರ್ಮದ ಪುನರುದ್ಧಾರ ಕಾರ್ಯಕ್ರಮವನ್ನೇ ಕೈಗೊಂಡು ಜನಜಾಗೃತಿಗಾಗಿ ಭಾರತಾದ್ಯಂತ ಮೂರು ಬಾರಿ ಸಂಚರಿಸಿ ತಮ್ಮ ಅಪ್ರತಿಮ ಪಾಂಡಿತ್ಯ, ವಾಗ್ವೈಖರಿಗಳಿಂದ ಜನತೆಯನ್ನು ಒಲಿಸಿಕೊಂಡು ಬಹುಬಗೆಯ ಪ್ರತಿಭಾವಂತ ಸನ್ಯಾಸಿಗಳಾಗಿ ದುಡಿದಿರುವರೆ ಎಂಬ ಸಂದೇಹವೂ ಮೂಡುತ್ತದೆ. ಅವರ ಅಪೂರ್ವ ಸಾಧನೆ ಸ್ಪಷ್ಟ ಎಂಬುದು ಅವರ ಸೇವೆಗಳ ಮೂಲಕ ಪ್ರತ್ಯಕ್ಷವಾಗಿಯೇ ಇಂದೂ ಕಾಣಬಹುದು. ಅವರ ಜೀವನದ ಪ್ರಭೆ ಕೇವಲ ಹಣತೆಯ ಬೆಳಕಿನಂತಲ್ಲ ಲೋಕಕ್ಕೆ ತೇಜಸ್ಸನ್ನು ನೀಡುವ ಸೂರ್ಯ ತೇಜದಂತೆ.

ಶ್ರೀ ಶೈಲಗಿರಿಯ ಪ್ರವಾಸದಲ್ಲಿ ಆಚಾರ್ಯರ ಕಾಪಾಲಿಕ ಭೈರವನ ಮನದಾಸೆಯನ್ನು ಅರಿತು ದೇಹ ಅಶಾಶ್ವತ ಎಂದು ಬಗೆದು ತಮ್ಮ ದೇಹವನ್ನೇ ಅರ್ಪಿಸಲು ಸಿದ್ಧವಾದಾಗ ಸನಂದನರು ಯೋಗ ಶಕ್ತಿಯಿಂದ ನರಸಿಂಹ ಸ್ಮರಣೆ ಮಾಡಿ ಅದೇ ಶಕ್ತಿಯ ಬಲದಿಂದ ಗುರುಗಳ ಬಳಿಗೆ ಬಂದು ಕಾಪಾಲಿಕನನ್ನು ವಧೆಗಯ್ಯುತ್ತಾರೆ. ಆಗ ಆಚಾರ್ಯರು ಶಿಷ್ಯನಿಗೆ "ದೇಹ ಅಶಾಶ್ವತ" ಎಂದು ತಿಳಿಸಿದಾಗ ಸನಂದನರು "ನಿಮಗೆ ದೇಹ ಬೇಡವಾಗಿರಬಹುದು, ನಮಗೆ ಈ ಲೋಕಕ್ಕೆ ಬೇಕು" ಎಂದು ಭಕ್ತಿಯಿಂದ ಕೈಮುಗಿಯುತ್ತಾರೆ. ಈ ಘಟನೆ ಅವರಿಂದ ದೂರವಾದ ದೇಹಾಭಿಮಾನವನ್ನು ತೋರಿಸುತ್ತದೆ.

ಕಾಶ್ಮೀರದ ಶಾರದಾ ದೇವಾಲಯದಲ್ಲಿದ್ದ ಸರ್ವಜ್ಞ ಪೀಠದ ಮೇಲೆ ಕುಳಿತು ಕೀರ್ತಿ ಪಡೆದ ಮಹಾನುಭಾವರು ಶಂಕರಾಚಾರ್ಯರು, ತಮ್ಮ ಜೀವಿತ ಕಾಲದಲ್ಲಿ ಭಗವಂತನ ಮಹಿಮೆಯನ್ನು ಲೋಕಕ್ಕೆ ಪ್ರಚುರಪಡಿಸಲು ಅಸಂಖ್ಯಾತ ಸ್ತೋತ್ರ ಮಾಲಿಕೆಗಳನ್ನು ರಚಿಸಿರುವರು. ಅವರ ಸ್ತೋತ್ರಗಳು ಇಂದಿಗೂ ಬಳಕೆಯಲ್ಲಿದ್ದು ಸರ್ವಜನ ಪ್ರಿಯವಾಗಿರುವ ಸಂಗತಿಯನ್ನು ಇಲ್ಲಿ ಸ್ಮರಿಸುವುದು ಅಪ್ರಕೃತವಲ್ಲ.

ಶಂಕರಾಚಾರ್ಯರು ತಮ್ಮ ಜೀವನದಲ್ಲಿ ನಡೆಸಿದ ಕಾರ್ಯ ಮತ್ತು ಸೇವೆ ಅಗಾಧವಾದುವು. ಆದರೆ ಅವರ ಜೀವಿತ ಕಾಲ ಕೇವಲ ಮೂವತ್ತೆರಡು ವರ್ಷಗಳು ಮಾತ್ರ. 'ಬ್ರಹ್ಮ ಸತ್ಯಂ ಜಗನ್ಮಿಥ್ಯಾ' ಎಂಬ ಸಂದೇಶವನ್ನು ಸಾರಿ, ಅದ್ವೈತ ಸಿದ್ಧಾಂತವನ್ನು ಬಿತ್ತರಿಸಿ, ಹಿಂದು ಧರ್ಮದ ಪುನರುದ್ಧಾರ ಮಾಡಿ, ಸಂಸ್ಕೃತ ವಾಙ್ಮಯಕ್ಕೆ ಮಹತ್ವಪೂರ್ಣ ಸೇವೆ ಸಲ್ಲಿಸಿದ ಶಂಕರಾಚಾರ್ಯರು ರಕ್ತಾಕ್ಷಿ ಸಂವತ್ಸರದ ವೈಶಾಖ ಶುದ್ಧ ದ್ವಾದಶಿಯಂದು ಕೇದಾರದ ಗುಹೆಯಲ್ಲಿ ಅದೃಶ್ಯರಾದರು.

ಆಚಾರ್ಯರು ಮಹಿಮಾಪೂರ್ಣ ಭಗವದಂಶ ಸಂಭೂತರಾದ ಸನ್ಯಾಸಿಗಳಷ್ಟೆ ಅಲ್ಲ; ಧರ್ಮ, ಜನತೆ, ರಾಷ್ಟ್ರಗಳನ್ನು ಉದ್ಧರಿಸಿದ ಯುಗಪುರುಷರು. ಇವರ ಜೀವನ ಅನುರತೆಯ ಸಂಕೇತ.

ಸಮಿತಿ ಸ್ಥಾಪನೆ

ಮಂಗಳೂರು, ಶ್ರೀ ರಾಮೋತ್ಸವ ಸಮಿತಿ, ಮಂಗಳೂರು, ದಸರಾ ಮಹೋತ್ಸವ ಸಮಿತಿ ಮತ್ತು ಶ್ರೀ ಗೀತಾ ಜಯಂತಿ ಸಪ್ತಾಹ ಸಮಿತಿ-ಎಂಬ ಮೂರು ಸಂಸ್ಥೆಗಳು ಕಳೆದ ಕೆಲವು ವರ್ಷಗಳಿಂದ ವಿಭಿನ್ನ ಧಾರ್ಮಿಕ, ಸಾಂಸ್ಕೃತಿಕ ಮತ್ತು ಕಲಾತ್ಮಕ ಚಟುವಟಿಕೆಗಳನ್ನು ಮಂಗಳೂರಲ್ಲಿ ನಡೆಸುತ್ತಿದ್ದು ಈ ಮೂರು ಸಂಸ್ಥೆಗಳ ಸಕ್ರಿಯ ಸದಸ್ಯರ ಮಹಾಸಭೆಯೊಂದು ತಾ. 18-4-1965ರಂದು ಫಿಲೊಸಫಿಕಲ್ ಲಾಜಿನಲ್ಲಿ ಡಾ| ಕೆ. ಗಿರಿಧರ ರಾಯರ ಅಧ್ಯಕ್ಷತೆಯಲ್ಲಿ ಜರಗಿ ಆ ಸಂಸ್ಥೆಗಳ ಎಲ್ಲ ಚಟುವಟಿಕೆಗಳನ್ನು ಇನ್ನು ಸುಸಂಘಟಿತವಾಗಿಯೂ ಭೋದಾತ್ಮಕವಾಗಿಯೂ ನಡೆಸುವ ದೃಷ್ಟಿಯಿಂದ ಮಹಾಸಭೆಯಲ್ಲಿ ಹಾಜರಿದ್ದ ಸರ್ವಸದಸ್ಯರ ಒಮ್ಮತದಿಂದ ಮೇಲಿನ ಮೂರು ಸಂಸ್ಥೆಗಳ ಏಕೀಕರಣಗೊಳಿಸಿ ಈ ಏಕೀಕೃತ ಸಮಿತಿಯನ್ನು "ಭಾರತೀಯ ಧಾರ್ಮಿಕ, ಸಾಂಸ್ಕೃತಿಕ ಮತ್ತು ಕಲಾ ಮಹೋತ್ಸವ ಸಮಿತಿ, ಮಂಗಳೂರು" ಎಂದು ಹೆಸರಿಸಲಾಯಿತು. ಈ ಸಮಿತಿಗೆ ಡಾ| ಕೆ. ಗಿರಿಧರ ರಾಯರು ಅಧ್ಯಕ್ಷರಾಗಿಯೂ, ಶ್ರೀ ಕೆ. ದೇವದಾಸ ನಾಯಕರು ಉಪಾಧ್ಯಕ್ಷರಾಗಿಯೂ, ಶ್ರೀ ಎ. ಸುಬ್ರಾಯ ಪೈ ಇವರು ಕೋಶಾಧ್ಯಕ್ಷರಾಗಿಯೂ, ಶ್ರೀ ಕೊಳೂರು ವಾಸುದೇವ ಕಾಮತ್ ಮತ್ತು ಶ್ರೀ ಪಿ. ಸದಾಶಿವ ಭಟ್ಟರು ಜತೆ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

RIA No. 502/64 in
O S. No. 258/64.

ದಾಸ ಹೆಗ್ಗಡೆ —ಅರ್ಜಿದಾರ.

ಮುಹಾಬಲ ಯಾನೆ ನಾಕು ಹೆಗ್ಗಡೆ ಕೂಡಾ ಯದ್ರಿರು.

ಮೇಲಿನ R I A 502/64ರಲ್ಲಿ ನೇಮಕ ಪಟ್ಟ ರಿಸೀವರ್ ಎಡ್ವಕೇಟ್ ಬಿ. ಕೃಷ್ಣ ಭಟ್ಟ—ಈ ಮೂಲಕ ತಿಳಿಯಪಡಿಸುವುದೇನೆಂದರೆ,

R I A 502/64ರಲ್ಲಿ ಕೋರ್ಟಿನವರು ತಾರೀಕು 15-2-65ರಲ್ಲಿ ಮತ್ತು 6-4-65ರಲ್ಲಿ ಮಾಡಿದ ಹುಕುಂ ಪ್ರಕಾರ, ಸದ್ರಿ ಅರ್ಜಿಗೆ ಸೇರಿದ ಉಡುಪಿ ತಾಲೂಕು ಪಡುಗ್ರಾಮದ ಸ. ನಂ. 115/5a 9 70 ಸೆಂಟ್ಸು ಮತ್ತು 115/5A 4 44 ಸೆಂಟ್ಸು ನಲ್ಲಿರುವ ಎಲ್ಲಾ ಗಾಳಿಯ ಮರಗಳನ್ನು ತಾ 9-5-65ನೇ ಆದಿತ್ಯವಾರ ಬೆಳಗ್ಗೆ 11 ಗಂಟೆಗೆ ಸ್ಥಳದಲ್ಲಿ ಏಲಂ ಮಾಡಲಾಗುವುದು. ಅದನ್ನು ಏಲಂನಲ್ಲಿ ವಹಿಸಿಕೊಳ್ಳುವವರು ಅಪೇಕ್ಷೆಯುಳ್ಳವರು, ಏಲಂ ಶರ್ತ ವಗೈರೆಯನ್ನು ರಿಸೀವರರಿಂದ ವಿವರ ಪಡೆಯಬಹುದು.

(*Sd.*) B. Krishna Bhat,
Receiver, Advocate,
Court Back Road, Udipi.

ಉಡುಪಿ, 26-4-65.

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು:

● ಶಾಸ್ತ್ರೀಯ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರಪರೀಕ್ಷೆಯ ಪದವಿ ಪಡೆದವರಿಂದ
● ಮೆಳ್ಳುದೃಷ್ಟಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ
ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು ● ಅತ್ಯುತ್ತಮ ಗ್ಲಾಸುಗಳು
● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು.

ನಮ್ಮ - ನಮ್ಮವರು

ಲಾಲಬಹದೂರ್

ಪ್ರಧಾನಿ ಲಾಲಬಹದೂರ ಶಾಸ್ತ್ರಿಯವರು ಅಧಿಕಾರ ವಹಿಸಿದ ಗಳಿಗೆಯೇ ಅವರ ಮೇಲೆ ಕ್ರೂರ ದೃಷ್ಟಿ ಬೀರುತ್ತಿದ್ದಿರಬೇಕು. ಏಕೆಂದರೆ, ಈ ಹನ್ನೊಂದು ತಿಂಗಳಲ್ಲಿಯೇ ಅವರು ಎದುರಿಸಬೇಕಾಗಿ ಬಂದ ಸಮಸ್ಯೆಗಳು ಒಂದೆರಡಲ್ಲ. ಈ ಅಲ್ಪಾವಧಿಯಲ್ಲಿಯೇ ಎರಡು ಬಾರಿ ಅವಿಶ್ವಾಸ ನಿರ್ಣಯವನ್ನು ಎದುರಿಸಬೇಕಾಯ್ತು. ಸ್ವತಃ ಕಾಂಗ್ರೆಸ್ ಸಂಸ್ಥೆ ಹುಟ್ಟಿ ಬೆಳೆಯುವುದನ್ನು ಕಾಣಬೇಕಾಯ್ತು. ಅಮೆರಿಕೆಯಂತಹ ಮಹಾ ರಾಷ್ಟ್ರದ ಅಧ್ಯಕ್ಷರಿಂದಲೇ ಬಂದ ಆಮಂತ್ರಣವು ಅವರಿಂದಲೇ ಮುಂದೆ ಹಾಕಲ್ಪಟ್ಟ ದುರ್ದೈವದ ಗಳಿಗೆಯನ್ನೂ ಅವರು ನೋಡಬೇಕಾಯ್ತು. ಅಧಿಕೃತ ಭಾಷಾ ವಿವಾದವನ್ನು ಎದುರಿಸಬೇಕಾಯ್ತು. ಶೇಖ ಅಬ್ದುಲ್ಲಾರಿಗೆ ನೀಡಿದ ಪಾಸ್‌ಪೋರ್ಟಿನ ದುರಂತಕ್ಕೆ ಕಾರಣರಾಗಬೇಕಾಯ್ತು. ಆ ಹಾರಾಭಾವ, ಬೆಲೆಯೇರಿಕೆಯ ತಾಂಡವನೃತ್ಯ ವೀಕ್ಷಿಸಬೇಕಾಯ್ತು. ತನ್ನವರಿಂದಲೂ ಟೀಕಿಸಿಕೊಳ್ಳುವ ಯೋಗ ಬಂದಿತ್ತು. ಈಗ ಪಾಕಿಸ್ತಾನವು ದೇಶದ ಭೂಮಿಯ ಮೇಲೆ ಮಾಡುತ್ತಿರುವ ಕ್ರೂರ ಆಕ್ರಮಣವನ್ನೂ ಎದುರಿಸುವ ಕೆಚ್ಚು ತೋರಬೇಕಾಯ್ತು.

ಶಾಸ್ತ್ರಿಯವರದು ಉನ್ನತ ವ್ಯಕ್ತಿತ್ವ. ಆದುದರಿಂದಲೇ ನಿಧಾನವಾಗಿ ಎದುರು ಬಂದ ಕಂಟಕಗಳನ್ನು ದಾಟಿ ಬರುತ್ತಾರೆ. ಪಾಕ್ ಆಕ್ರಮಣದ ವೇಳೆಯಲ್ಲಿ ಅವರು ತಳೆದ ನಿಲುವೆಯು ಎಲ್ಲರನ್ನೂ ವಿಸ್ಮಯಾನಂದ ಸಾಗರದಲ್ಲಿ ಮುಳುಗಿಸಿದೆ; ಶಾಸ್ತ್ರಿಯವರ ಧೀಮಂತತನವನ್ನು, ದೃಢತೆಯನ್ನು ಲೋಕಕ್ಕೆ ಜಾಹೀರು ಮಾಡಿದೆ. ಸಮಯ ಬಂದಾಗ ತಾನು ಕಠೋರನಾಗುವುದೂ ಇದೆಯೆಂದವರ ಉಕ್ತಿಗೊಂದು ಬೆಲೆಯನ್ನೂ ತಂದಿದೆ.



ಡಾ| ಟಿ. ಎಂ. ಎ. ಪೈ

ಪದ್ಮಶ್ರೀ ಡಾ| ಟಿ. ಮಾಧವ ಅನಂತ ಪೈ ಅವರದೆಂದು ವಿಶ್ವ ವ್ಯಕ್ತಿತ್ವ. ಸಿರಿಕಾರವೂ ಮಾಡಲಾರದ ಅದ್ಭುತ ಕಾರ್ಯಗಳನ್ನು ಸಾಧಿಸಿದ ಪವಾಡ ಪುರುಷ. ಕರಾಕರಣೆಯೇ ಇಲ್ಲದ ರಾಜ್ಯ ಕಟ್ಟಬೇಕೆಂಬ ಕನಸುಗಾರ. ಉಡುಪಿ - ಮಣಿಪಾಲ ಹಾಗೂ ಮತ್ತಿತರೆಡೆಯ ವಿದ್ಯಾಸಂಸ್ಥೆಗಳು ಇಂದವರ ಜೀವ. ಹಗಲಿರುಳು ಇವುಗಳಿಗಾಗಿಯೇ ಏಕೆಡೆಮಿ ಆಫ್ ಜನರಲ್ ಎಡ್ಯುಕೇಶನ್ ಸಂಸ್ಥೆಯ ಅಧ್ಯಕ್ಷ-ರಿಜಿಸ್ಟ್ರಾರರಾಗಿ ಅವರು ತಮ್ಮ ಜೀವನವನ್ನೇ ಮೀಸಲಿರಿಸಿದ್ದಾರೆ. ಅಪ್ರತಿಮ ವ್ಯಕ್ತಿಮತ್ವದ ಪದ್ಮಶ್ರೀ ಪೈಯವರಿಗೆ ಎಪ್ರಿಲ್ ೩೦ಕ್ಕೆ ೬೭ ತುಂಬಿತು. ಈ ಶುಭ ಸಂದರ್ಭದಲ್ಲಿ ಅವರ ಘನ ವ್ಯಕ್ತಿತ್ವದ ಮುಂದೆ, ವಿವಿಧ ಕ್ಷೇತ್ರಗಳಲ್ಲಿ ಅವರು ಸಲ್ಲಿಸಿದ ಸೇವೆಯ ಮುಂದೆ, ಇವುಗಳ ಹಿಂದಿರುವ ಸ್ಫಟಿಕ ಹೃದಯದ ಮುಂದೆ ಎಲ್ಲರೂ ಅವಶ್ಯ ಶಿರಬಾಗಲೇ ಬೇಕು.

ಪದ್ಮಶ್ರೀ ಪೈಯವರು ಶರದ ಶತವನ್ನು ಕಾಣಬೇಕು, ಆನಂದ, ಅವರ ಆಶೀರ್ವಾದ ಬಲದಿಂದ ನಮ್ಮ ವ್ಯಕ್ತಿತ್ವದ ವಿಕಾಸವಾಗಬೇಕು ಎಂದು ಎಲ್ಲರೂ ಆಶಿಸುತ್ತಾರೆ.

ಡಾ| ಆಜ್ರಿ ಆನಂದ ಶೆಟ್ಟಿ

ಪಂಡಿತ ತಾರಾನಾಥರ ದಾರಿಯಲ್ಲಿ ಸಾಗಿ ಅವರ ಆದರ್ಶವನ್ನು ಅನುಸರಿಸುತ್ತಿರುವವರಲ್ಲಿ ಡಾ। ಆಜ್ರಿ ಆನಂದ ಶೆಟ್ಟರೂ ಒಬ್ಬರು. ತುಂಗಭದ್ರೆಯ ಪ್ರೇಮ ವಿದ್ಯಾಪೀಠದಲ್ಲಿ ವಿದ್ಯಾಭ್ಯಾಸ ಮುಗಿಸಿದ ಶ್ರೀ ಶೆಟ್ಟರು ೧೯೪೫ರಿಂದ ವೈದ್ಯಕೀಯ ಕ್ಷೇತ್ರದಲ್ಲಿ ದುಡಿದು ಜನಾನುರಾಗ ಗಳಿಸಿದ ಡಾಕ್ಟರರು. ೧೯೫೫ರ ತನಕ ಬಾರ್ಕೂರಲ್ಲಿ ವರ ಕಾರ್ಯಕ್ಷೇತ್ರವಾಗಿತ್ತು. ಅವರು ಕಾಂಗ್ರೆಸಿನಲ್ಲಿ ನಿಷ್ಠಾವಂತ ಸೇವಕರು. ಸಾರ್ವಜನಿಕ ಕಾರ್ಯಕಲಾಪಗಳಲ್ಲಿ ಮಹತ್ವದ ಪಾತ್ರವಹಿಸುವ ವ್ಯಕ್ತಿತ್ವ ಇವರದು. ದ. ಕ. ಜಿಲ್ಲಾ ಕಾಂಗ್ರೆಸಿನ ಕಮಿಟಿಯ ಸದಸ್ಯರಾಗಿ, ಬಾರಕೂರು ಮಂಡಲ ಕಾಂಗ್ರೆಸಿನ ಅಧ್ಯಕ್ಷರಾಗಿ ಅವರು ದುಡಿದಿದ್ದಾರೆ. ಬಾರ್ಕೂರು ಹೈಸ್ಕೂಲಿನ ಸ್ಥಾಪನೆ; ಬನ್ನಾಡಿ ಬನ್ನಾಡಿ ಸೇತುವೆಯ ರಚನೆ; ಬನ್ನಾಡಿ, ಗೋಳಿ ಅಂಗಡಿ ಬನ್ನಾಡಿ ರಸ್ತೆಯ ದುರಸ್ತಿ ಇತ್ಯಾದಿ ಕಾರ್ಯಗಳಲ್ಲಿ ಇವರು. ಜನತೆಯ ಪರವಾಗಿ ಸಂಬಂಧ ಪಟ್ಟವರ ಗಮನ ಸೆಳೆದ ವ್ಯಕ್ತಿ ಶ್ರೀ|| ಶೆಟ್ಟರಾಗಿದ್ದಾರೆ. ಹರಿಜನ ವಿಜಿಲೆನ್ಸ್ ಕಮಿಟಿಯ ಸದಸ್ಯರಾಗಿ ಕೂಡಾ ಇವರು ದುಡಿದಿದ್ದಾರೆ.

ಜನಾನುರಾಗವನ್ನೇ ಸಂಪತ್ತೆಂದು ತಿಳಿದ ಆನಂದ ಶೆಟ್ಟರು ಅದರಲ್ಲೇ ಆನಂದವನ್ನು ಕಾಣುತ್ತಾರೆ. ಕಲೆಯತ್ತವೂ ಇವರು ಒಲವು ಹರಿಯಿಸಿದವರು. ಯಕ್ಷಗಾನ, ನಾಟಕಗಳಲ್ಲಿ ಸ್ವತಃ ಪಾತ್ರವಹಿಸಿದ ಅನುಭವವೂ ಇವರಿಗಿದೆ.

ನಲ್ವತ್ತೈದು ವರ್ಷ ವಯಸ್ಸಿನ ಶ್ರೀ ಶೆಟ್ಟರು ಇಂದು ಭದ್ರಾವತಿಯಲ್ಲಿ ವೈದ್ಯಕೀಯ ವೃತ್ತಿಯನ್ನು ಮುಂದುವರಿಸುತ್ತಿದ್ದಾರೆ. ಇಂದಿಗೂ ಅವರ ಉತ್ಸಾಹ ಕುಂದಿಲ್ಲ. ಅದು ಬತ್ತದ ತೊರೆಯಾಗಿ ಹರಿಯುತ್ತದೆ. ಶ್ರೀ ಶೆಟ್ಟರಿಂದ ಭದ್ರಾವತಿಯ ಜನತೆ ಇನ್ನೂ ಹೆಚ್ಚಿನ ಸೇವೆಯನ್ನು ನಿರೀಕ್ಷಿಸಬಹುದು. ಸೇವೆ ಮಾಡುವ ಸಾಮರ್ಥ್ಯ ಅವರಲ್ಲಿಗೆ, ಅದನ್ನು ಜನತೆ ಉಪಯೋಗಿಸಿಕೊಳ್ಳಬೇಕಷ್ಟೆ.

— — —

ಎಲ್ಲಾದ್ರ ಕ್ಯಾರೆಟ್ಟೂ ಹದಿನಾಲ್ಕು

(ನಾಲ್ಕನೇ ಪುಟದಿಂದ)

"ಆಗದಿದ್ರೂ ಆಗಿಸ್ತಾರೇನ್ನು..."

"ಆ ಕಾಲವೂ ಬರಬಹುದು. ಈಗೀನೋ ಹಳೆಯದನ್ನು ೧೪ ಕ್ಯಾರೆಟ್‌ಗಳಿಗಿಳಿಸಬೇಕೆಂಬ ನಿರ್ಬಂಧವಿಲ್ಲ. ಆದ್ರೆ, ಆ ಕಾಲವೂ ಬಂದೀತೆನ್ನಿ....'

"ಸರಿ........ ೨೨ ಕ್ಯಾರೆಟದ್ದಾಗ ಅಕ್ಕಸಾಲಿಗನ ಪಾಲು ಹೋಗಿ ೧೯-೨೦ ಆಗಿತ್ತು. ಈಗ ೧೪ರ ಕಾಲದಲ್ಲಿ ೧೧ ಮಾತ್ರ....ಅಲ್ವೆ? ನೀನೂ ಹಾಗೇನೆಯೆ?"

'....ಅಬ್ಬಾ, ನೀವೆ?"

'ಯಾಕೆ? ಏನಾಯ್ತು?"

'ಏನೂ ಇಲ್ಲ. ನಿಮ್ಮ ಮಾತು ಕೇಳುವಾಗ ಏನಾಗುತ್ತೆ ಗೊತ್ತೆ?"

"ಇಲ್ಲ...."

"ಬಚಾವಾದೆ ಸದ್ಯ. ನಾನು ನಿಮ್ಮ ಹಾಗೇನೇ."

'ಅಂದ್ರೆ ೧೪ ಕ್ಯಾರೆಟ್ಟು...."

"ಹ್ಞಾಂ..."

"೨೦ ಕ್ಯಾರೆಟ್ಟು?'

"ಹ್ಞಾಂ...."

"೨೪?"

'ಹ್ಞಾಂ...."

'ಪರವ್ವಾಗಿಲ್ಲ ಕಣೇ ನೀನು" ಮಂಗಮುಸುಡಿನವಳಾದ್ರೂ....'

'ಪಾಪ, ನಿಮ್ದು ಹೇಗಿದೇಂತ ತುಸು ನೋಡೋಣ..."

"ನೋಡು ನೋಡು ಸರಿಯಾಗಿ ನೋಡು...'

'ಓ, ಇದು..."

"ಸಾಕು ಬಿಡೇ, ನಿನ್ನೆಯಿಂದ್ಲೂ ಹದಿನಾಲ್ಕು ಕ್ಯಾರೆಟ್ಟಿನ ಗಂಜಿ ಸಿಕ್ಕಿದೆ. ಇಂದು....?"

'ಇಂದಿಗೆ ಅದೇ ಗತಿ. ಈ ವೇಳೆಗಾಲಕ್ಕೆ ನಾಲ್ಕು ಕ್ಯಾರೆಟ್ ಆದ್ರೂ ಆಗಬಹುದೂನ್ನಿ...."

"ನಾಳೆಯ ಚಿಂತೆ ಈಗ ಏಕೆ? ಹೋಗು, ಹಸಿವೆಯಾಗ್ತಾ ಇದೆ..."

"ಆಗ್ಲೇ ಹೇಳ್ಬೇದಿತ್ತೆ'

"ಈಗಂದ್ನೆಲ್ಲಾ...'

'ಹ್ಞಾಂ.... ಬನ್ನಿ ಬೇಗ ...'

'ಮತ್ತೆ ಬಾರ್ದೆ ಉಂಟೆ'

'ಅದು ನಂಗೂ ಗೊತ್ತು. ಹ್ಞಾಂ....'

"ಹ್ಞಾಂ...."

— ಗೋರಾ.

ಕನಕದಾಸ ವಿರಚಿತ ಶ್ರೀ ಹರಿಭಕ್ತಿಸಾರದ

ಕೆಲವು ಪದ್ಯಗಳು

ಶ್ರೀಯರಸ ಗಾಂಗೇಯನುತ ಕಾಂ| ಕೇಯವಂದಿತ ಚರಣಕಮಲದ । ಕಾಯಕಾಂಬಕ ರೂಪಚಿನ್ಮಯ ದೇವಕೀತನಯಾ | ರಾಯ ರಘುಕುಲವರ್ಯ ಭೂಸುರ | ಪ್ರಿಯ ಸುರಾಸುರನಿಲಯ ಚಿನ್ನಿಗ । ರಾಯ ಚತುರೋಪಾಯ ರಕ್ಷಿಸು ನಮ್ಮನನವರತಾ.

ಕ್ಷೀರವಾರಿಧಿಶಯನ ಶಾಂತಾ। ಕಾರ ವಿವಿಧ ವಿಚಾರಗೋಪೀ | ಜಾರ ನವನೀತ ಚೋರ ಚಕ್ರಧಾರ ಭವದೂರಾ | ಮಾರಪಿತ ಗುಣಹಾರ ಸರಸಾ | ಕಾರ ರಿಪುಸಂಹಾರ ತುಂಬುರು | ನಾರದಪ್ರಿಯ ವರದ ರಕ್ಷಿಸು ನಮ್ಮನನವರತಾ.

ವೇದಗೋಚರ ವೇಣುನಾದವಿ | ನೋದ ಮಂದರ ಶೈಲಧರ ಮಧು। ಸೂದನಾಚ್ಯು ಕಂಸದಾನವರಿಪು ಮಹಾಮಹಿಮಾ | ಯಾದವೇಂದ್ರ ಯಶೋಧೆನಂದನ | ನಾಭಬಿಂಬ ಮುಕಳಾತಿಶಯ ಪ್ರ | ಹ್ಲಾದರಕ್ಷಕ ವರದ ರಕ್ಷಿಸು ನಮ್ಮನನವರತಾ.

ಈಗಲೀ ಮರ್ತ್ಯಾದೆಯಲಿ ಶರ ॥ ಣಾಗತರ ಸೇವೆಯೊಳು ಹೆಂಡಿರು ಬಾಳುವರೇನು ಧನ್ಯರೊ ಹರ ಮಹಾದೇವಾ॥ ಭೋಗಭಾಗ್ಯವ ಬಯಸಿ ಮುಕ್ತಿದು ॥ ನೀಗಿ ನಿಮ್ಮನು ಭಜಿಸಲರಿಯದ | ಯೋಗಿಗಳ ಮಾತೇನು ರಕ್ಷಿಸು ನಮ್ಮ ನನವರತಾ.

ಭಕ್ತಿಸಾರದ ಚರಿತ್ರೆಯನ್ನು ಹರಿ। ಭಕ್ತರಾಲಿಸುವಂತೆ ರಚಿಸಿದೆ ॥ ಯುಕ್ತಿಯಲಿ ಬರದೋದಿದವರಿಷ್ಟಾರ್ಥ ಸಿದ್ಧಿಪುದೂ || ವಕ್ತ್ರಗಿದು ನೆಲೆದೋರ ವುದು ಹರಿ । ಭಕ್ತರನು ಲಾಲಿಸುದು ನಿಜಮತಿ। ಭಕ್ತಗೊಲಿವಂದದಲಿ ರಕ್ಷಿಸು ನಮ್ಮ ನನವರತಾ.

———

ದಕ್ಷಿಣ ಕನ್ನಡಿಗರ ಸಂಘದ ವಾರ್ಷಿಕೋತ್ಸವ

ಬೆಂಗಳೂರು, ಕಳೆದ ತಾ. 16ರಂದು ಪೌರ ಆಡಳಿತ ಸಚಿವ ಶ್ರೀ ಕೆ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ, ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ, ದಕ್ಷಿಣ ಕನ್ನಡಿಗರ ಸಂಘದ 6ನೇ ವಾರ್ಷಿಕೋತ್ಸವವು ಜರಗಿತು. ಪ್ರಾರಂಭದಲ್ಲಿ ಕುಮಾರಿ ಎಂ. ಕೆ. ಗೀತಾ ಬಾಳಿಯವರಿಂದ ಪ್ರಾರ್ಥನೆಯಾದ ಬಳಿಕ ಸಂಘದ ಉಪಾಧ್ಯಕ್ಷ ಡಾ| ಪಿ. ಎಸ್. ರೈಯವರು ಸ್ವಾಗತಿಸುತ್ತಾ ವಿದ್ಯಾರ್ಥಿ ನಿಲಯವೊಂದರ ಸ್ಥಾಪನೆಗೆ ನಿವೇಶನವೊಂದನ್ನು ನೀಡುವಂತೆ ಸಚಿವರನ್ನು ಕೇಳಿಕೊಂಡರು. ಮಂತ್ರಿ ಡಾ| ನಾಗಪ್ಪ ಆಳ್ವರವರು ಸಂಘದ ಚಟುವಟಿಕೆಗಳನ್ನು ಶ್ಲಾಘಿಸಿದರು. ಈ ಸಂದರ್ಭದಲ್ಲಿ ಇಲ್ಲಿ ಶ್ರೀ ಡಿ. ವಾದಿರಾಜರವರನ್ನು ಸನ್ಮಾನಿಸಿ ಅವರಿಗೆ ಬೆಳ್ಳಿ ತಟ್ಟೆಯನ್ನು ನೀಡಲಾಯಿತು. ಅಧ್ಯಕ್ಷರು ಮಾತನಾಡುತ್ತಾ ದಕ್ಷಿಣ ಕನ್ನಡಿಗರ ಹೊಂದಿ ಬಾಳುವ ಗುಣವನ್ನು ಶ್ಲಾಘಿಸಿದರು. ಅಂತ್ಯದಲ್ಲಿ ವಿವಿಧ ವಿನೋದಾವಳಿಗಳಾದುವು.

ಚಂದಾಹಣ ಬಾಕಿ ಇರುವವರು ದಯಮಾಡಿ ಬೇಗನೇ ಕಳುಹಿಸಿ ಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಎಲ್ಲೆಲ್ಲಿ ಏನೇನು?

ಡಾ| ಎ. ವಿ. ಬಾಳಿಗಾ ಇನ್‌ಸ್ಟಿಟ್ಯೂಟ್ ಆಫ್ ಸರ್ಜರಿಯ ಶಂಕುಸ್ಥಾಪನೆ

ಮಣಿಪಾಲ, ಎ. ೨೬—ಮುಂಬಯಿಯ ಖ್ಯಾತ ಶಸ್ತ್ರ ಚಿಕಿತ್ಸಕರಾಗಿದ್ದು ಕಳೆದ ವರ್ಷ ನಿಧನರಾದ ಡಾ| ಎ. ವಿ. ಬಾಳಿಗಾರವರು ತಮ್ಮ ಪಾತ್ರವನ್ನು ಧ್ಯೇಯೋತ್ಸಾಹಗಳಿಂದ ನಿರ್ವಹಿಸಿದ ಅಪೂರ್ವ ವ್ಯಕ್ತಿಯಾಗಿದ್ದರೆಂದು ದೆಹಲಿಯ ಹಿಂದಿನ ಮೇಯರ್ ಶ್ರೀಮತಿ ಅರುಣಾ ಅಸಫ್ ಅಲಿಯವರು ಇಲ್ಲಿ ನುಡಿದರು. ಡಾ| ಬಾಳಿಗಾ ನಿಸ್ಪೃಹರೂ, ದೇಶಾಭಿಮಾನಿಯೂ ಆಗಿದ್ದರೆಂದು ಕಸ್ತೂರ ಬಾ ಮೆಡಿಕಲ್ ಕಾಲೇಜ್ ಮತ್ತು ಜನರಲ್ ಆಸ್ಪತ್ರೆಯ ಡಾ| ಎ. ವಿ. ಬಾಳಿಗಾ ಇನ್‌ಸ್ಟಿಟ್ಯೂಟ್ ಆಫ್ ಸರ್ಜರಿಯ ಶಂಕುಸ್ಥಾಪನೆಯನ್ನು ಡಾ| ಬಾಳಿಗಾರವರ ೬೨ನೆ ಜನ್ಮದಿನ ನೆರವೇರಿಸುತ್ತಾ ಅವರು ತಿಳಿಸಿದರು.

ಈ ಗ್ರಾಮಾಂತರ ಪ್ರದೇಶದಲ್ಲಿ ಎಕಾಡೆಮಿ ಆಫ್ ಜನರಲ್ ಎಜುಕೇಶನ್‌ನವರು ಸಂಸ್ಥೆಗಳನ್ನು ಆರಂಭಿಸಿರುವುದನ್ನು ಅವರು ಪ್ರಸ್ತಾಪಿಸಿ ಹಳ್ಳಿಗಳಿಗೆ ಹಿಂದಿರುಗುವಂತೆ ಗಾಂಧೀಜಿಯವರು ಕರೆ ಕೊಟ್ಟದ್ದನ್ನು ಇಲ್ಲಿ ಚೆನ್ನಾಗಿ ಅನ್ವಯಿಸಲಾಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿಧಾನ ಸಭಾಧ್ಯಕ್ಷರಾದ ಶ್ರೀ ಬಿ. ವಿ. ಬಾಳಿಗಾರವರು ಮಾತನಾಡಿ ವಿನಮ್ರತೆಯು ಡಾ| ಬಾಳಿಗರವರಲ್ಲಿ ಎದ್ದು ತೋರುತ್ತಿದ್ದ ಗುಣವಾಗಿತ್ತೆಂದರು. ಅವರ ಕಾರ್ಯ ಅಪರಿಮಿತವಾದುದೂ, ಅವರ ಉತ್ಸಾಹ ಅಮಿತವಾದುದೂ ಆಗಿತ್ತೆಂದರು. ಕಾಲೇಜಿನ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಯವರು ಸ್ವಾಗತ ಭಾಷಣ ಮಾಡಿ ಡಾ| ಬಾಳಿಗರವರಿಗೆ ವೈದ್ಯಕೀಯ ಶಿಕ್ಷಣದಲ್ಲಿ ಬಹಳ ಆಸಕ್ತಿ ಇದ್ದುದಾಗಿಯೂ, ಕಸ್ತೂರ ಬಾ ಮೆಡಿಕಲ್ ಕಾಲೇಜಿಗೆ ಬೇರೆ ಬೇರೆ ಹಂತಗಳಲ್ಲಿ ಅವರು ಪೂರ್ಣ ಸಹಾಯ ಮತ್ತು ಬೆಂಬಲ ಕೊಟ್ಟಿದ್ದರೆಂದರು.

ಈ ಕಾಲೇಜು ಮತ್ತು ಆಸ್ಪತ್ರೆಗೆ ದೊಡ್ಡ ಭವಿಷ್ಯವಿದೆ ಎಂದು ಡಾ| ಬಾಳಿಗರು ನಂಬಿದ್ದರೆಂದು ಸರ್ಜರಿ ವಿಭಾಗದ ಪ್ರಾಧ್ಯಾಪಕರೂ, ಮುಖ್ಯಸ್ಥರೂ ಆದ ಡಾ| ಎಂ. ಪಿ. ಪೈಯವರು ಹೇಳಿದರು. ಅವರ ಉದಾತ್ತ ಧ್ಯೇಯಗಳನ್ನು ಇಲ್ಲಿ ಪಾಲಿಸಲು ಎಲ್ಲ ಪ್ರಯತ್ನಗಳನ್ನೂ ಮಾಡಲಾಗುವುದೆಂದರು. ದಕ್ಷಿಣ ಕನ್ನಡದ ಮೆಡಿಕಲ್ ರಿಲೀಫ್ ಸೊಸೈಟಿಯ ಗೌರವ ಕಾರ್ಯದರ್ಶಿ ಶ್ರೀ ಟಿ. ಎ. ಪೈಯವರು ವಂದನೆಗಳನ್ನು ಅರ್ಪಿಸಿದರು. ಕಸ್ತೂರ ಬಾ ಜನರಲ್ ಆಸ್ಪತ್ರೆಯ ಶಸ್ತ್ರ ಚಿಕಿತ್ಸಾ ವಿಭಾಗವನ್ನು ಮುಂದೆ ಡಾ| ಎ. ವಿ. ಬಾಳಿಗಾ ಇನ್‌ಸ್ಟಿಟ್ಯೂಟ್ ಆಫ್ ಸರ್ಜರಿ ಎಂದು ಕರೆಯಲಾಗುವುದೆಂದು ಘೋಷಿಸಲಾಯಿತು.

ಮಂಗಳೂರಿಗೆ ಹೊಸ ಬಿಶೋಪರು

ಕಳೆದ ತಾ. 23ರಂದು, ರೆ| ಫಾ| ಬೇಸಿಲ್ ಸಾಲ್ವದೋರ್ ಡಿಸೋಜರವರನ್ನು ಮಂಗಳೂರು ಡಾಯೋಸಿಸಿಗೆ ಬಿಶೋಪರನ್ನಾಗಿ ನೇಮಿಸಲಾಗಿದೆಯೆಂದು ತಿಳಿದುಬಂದಿದೆ. ಇವರು ಬಂಟ್ವಾಳದ ಬಳಿ ಮೊಡಂಕಾಪಿನಲ್ಲಿ ಐದು ವರ್ಷ ಅಡಬಡಲ್ಲಿ ಎರಡು ವರ್ಷ ದೇವತಾ ಕಾರ್ಯ ನಿರ್ವಹಿಸಿರುವರು. ಆ ಮೇಲೆ 1959 ರಲ್ಲಿ ಮಂಗಳೂರಿನಲ್ಲಿ ಕೊಡಿಯಾಲ್‌ಬೈಲ್ ಪ್ರೆಸ್ಸಿನ ಮೆನೇಜರರಾಗಿ ದುಡಿಯುತ್ತಿದ್ದರು. ಕೆಥೋಲಿಕ್ ಬೋರ್ಡ್ ಒಫ್ ಎಜುಕೇಶನ್ ಇದರ ಕಾರ್ಯದರ್ಶಿಯಾಗಿಯೂ, ಡಾಯೊಸಿಸ್ ಕೆಟೆಕೆಟಿಕಲ್ ಕೌನ್ಸಿಲಿನ ಕಾರ್ಯದರ್ಶಿಯಾಗಿಯೂ ಇವರು ಸೇವೆ ಸಲ್ಲಿಸಿರುತ್ತಾರೆ. ವೆಟಿಕನ್‌ನಲ್ಲಿ ಪೋಪ್ ಜಗದ್ಗುರುಗಳಿಂದ ಬಹಿರಂಗಗೊಳಿಸಲ್ಪಟ್ಟ ಈ ವಾರ್ತೆಯನ್ನು ತತ್ಸಮಾನ ಕಾಲದಲ್ಲೇ ಮಂಗಳೂರಿನ ಎಲ್ಲಾ ಇಗರ್ಜಿಗಳಲ್ಲೂ ಘಂಟಾಘೋಷದೊಂದಿಗೆ ಸಾರಲಾಯಿತು.

ACKNOWLEDGEMENT

Dr. K. Rajaram Shetty and Smt. Sunanda Shetty convey their sincer thanks to their numerous well wishers and friends for the kind message of greetings, presents and help rendred on the occasion of their wedding on 19th 4-1965 at 12-15 P.M. at the Varadhendra Kala Mandira, Udipi, and express their inability to thank them individually.

ರಾಜ್ಯಪಾಲರ ಭೇಟಿ

ಮಣಿಪಾಲ, ಎ. ೨೩—ಇಂದು ತಾವಿಲ್ಲಿ ಭೇಟಿಯಿತ್ತ ಎಕಾಡೆಮಿ ಆಫ್ ಜನರಲ್ ಎಜುಕೇಶನ್‌ಗೆ ಸೇರಿದ ಸಂಸ್ಥೆಗಳು ನಮ್ಮ ದೇಶದ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಇತರರಿಗೂ ಸಹಾಯಕವಾಗಿದೆ ಎಂದು ಮೈಸೂರಿನ ರಾಜ್ಯಪಾಲರಾದ ಶ್ರೀ ವಿ. ವಿ. ಗಿರಿಯವರು ಇಲ್ಲಿ ನುಡಿದರು.

ಸದಾ ಕಾಲ ನೆನೆಸಿಕೊಳ್ಳುವಂತಹ ಸಾಮಾನ್ಯ ಜನರಿಗೆ ಸಾಧ್ಯವಿಲ್ಲದ ವಿಶ್ವವಿದ್ಯಾನಿಲಯದಂತಹ ಸಂಸ್ಥೆಗಳನ್ನು ಬಹಳ ಚೆನ್ನಾಗಿ ನಡೆಸುತ್ತಿರುವ ಡಾ| ಟಿ. ಎಂ. ಎ. ಪೈಯವರನ್ನು ಅವರು ಅಭಿನಂದಿಸಿ, ಇಲ್ಲಿ ಆಗಿರುವ ಕಾರ್ಯಗಳ ಬಗ್ಗೆ ಭಿನ್ನಾಭಿಪ್ರಾಯಗಳಿರಬಹುದೆಂದರು.

ಎಕಾಡೆಮಿಯ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಟಿ. ಎಂ. ಎ. ಪೈಯವರು ಅರ್ಪಿಸಿದ ಮಾನಪತ್ರಕ್ಕೆ ರಾಜ್ಯಪಾಲರು ಉತ್ತರ ಕೊಡುತ್ತಾ ತಾವು ಪ್ರಸಕ್ತ ಹುದ್ದೆಯಲ್ಲಿರುವ ವರೆಗೆ ಈ ಸಂಸ್ಥೆಗಳ ಬಗ್ಗೆ ವಿಶೇಷ ಆಸಕ್ತಿ ವಹಿಸುವುದಾಗಿ ಹೇಳಿದರು.

ರೋಟರಿ ಧ್ಯೇಯಗಳು ಸರ್ವಮಾನ್ಯವಾಗಿವೆ

ಕಳೆದ ೬೦ ವರ್ಷಗಳಲ್ಲಿ ರೋಟರಿಯು ಪ್ರಪಂಚದಾದ್ಯಂತ ಹರಡಿರುವುದಕ್ಕೆ ಅದರ ಧ್ಯೇಯಗಳು ಸರ್ವಮಾನ್ಯವಾಗಿರುವುದೇ ಕಾರಣವಾಗಿದೆ ಎಂದು ಅಂತರಾಷ್ಟ್ರೀಯ ರೋಟರಿಯ ೩೨೦ನೆ ಜಿಲ್ಲೆಯ ಹಿಂದಿನ ಗವರ್ನರ್ ಶ್ರೀ ಟಿ. ಆರ್. ಎಸ್. ರಾಮನಾಥ ಅಯ್ಯರ್‌ರವರು ತಾ. 27-4-65ರಂದು ಉಡುಪಿ ರೋಟರಿ ಕ್ಲಬ್ಬಿನಲ್ಲಿ ನುಡಿದರು. ಸಾರ್ವಜನಿಕರು ರೋಟರಿ ಸದಸ್ಯರುಗಳ ಕಾರ್ಯವನ್ನು ತೀರ್ಮಾನಿಸುವುದರಿಂದ ರೋಟರಿಯನ್ನರುಗಳು ಸದಾ ಆ ಧ್ಯೇಯಗಳನ್ನು ಪಾಲಿಸಬೇಕೆಂದರು.

ಕರ್ನಾಟಕ ವಿಶ್ವವಿದ್ಯಾನಿಲಯದ ಅಂಕಶಾಸ್ತ್ರ ವಿಭಾಗದ ರೀಡರ್ ಡಾ| ಬಿ. ರಾಮದಾಸ್ ಭಟ್‌ರವರು ಆಸ್ಟ್ರೇಲಿಯ ಮತ್ತು ಅಮೇರಿಕದಲ್ಲಿ ಉಪಾಧ್ಯಾಯರಾಗಿದ್ದು ಪಡೆದ ಅನುಭವದ ಬಗ್ಗೆ ಮಾತನಾಡುತ್ತಾ ಆ ದೇಶಗಳಲ್ಲಿ ವಿದ್ಯಾರ್ಥಿಗಳು ಮನಸ್ಸಿಟ್ಟು ವಿದ್ಯಾಭ್ಯಾಸ ಮಾಡುತ್ತಾರೆಂದೂ, ಉಪಾಧ್ಯಾಯರುಗಳಿಂದ ಕೈಗಾರಿಕೆ ಮತ್ತಿತರ ಸಂಸ್ಥೆಗಳು ಸಲಹೆ ತೆಗೆದುಕೊಳ್ಳುತ್ತಾರೆಂದೂ ತಿಳಿಸಿದರು. ಉಪಾಧ್ಯಕ್ಷರಾದ ಡಾ| ಕೆ. ಎಲ್. ಐತಾಳರವರು ಅಧ್ಯಕ್ಷತೆ ವಹಿಸಿದ್ದರು.

ಶಿರ್ವದಲ್ಲಿ ಕ್ಷಯರೋಗ ಚಿಕಿತ್ಸಾಲಯ

ರಾಜ್ಯದ ಆರೋಗ್ಯ ಸಚಿವ ಡಾ| ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಶಿರ್ವದಲ್ಲಿ ಕ್ಷಯರೋಗ ಚಿಕಿತ್ಸಾಲಯದ ಆರಂಭೋತ್ಸವವು ಕಳೆದ ತಾ. 25ರಂದು ನೆರವೇರಿತು. ಈ ಸಂದರ್ಭದಲ್ಲಿ ಡಾ| ಎಂ. ಡಿ. ದೇಶಮುಖ್‌ರವರು ಕ್ಷಯರೋಗ ಚಿಕಿತ್ಸಾಲಯದ ವಾರ್ಡಿನ ಆರಂಭೋತ್ಸವವನ್ನೂ, ಶ್ರೀ ಎ. ಡಿ. ರಾಜೆಯವರು ಆಪರೇಶನ್ ಥಿಯೇಟರ್‌ನ್ನೂ, ಡಾ| ಎಂ. ಪಿ. ಪೈಯವರು ಕುಟುಂಬ ಯೋಜನಾ ಕೇಂದ್ರವನ್ನೂ ಉದ್ಘಾಟಿಸಿದರು. ಶ್ರೀ ಆಲೂರು ಲಕ್ಷ್ಮೀನಾರಾಯಣ ರಾವ್‌ರವರು ಸ್ಮಾರಕ ಗ್ರಂಥದ ಬಿಡುಗಡೆ ಮಾಡಿದರು. ಈ ಕಟ್ಟಡಗಳ ನಿರ್ಮಾಣಕ್ಕೆ ಅತಿ ಹೆಚ್ಚಿನ ಸಹಾಯವಿತ್ತ ಶ್ರೀ ಎಸ್. ಜೆ. ಕೆ. ಶೆಟ್ಟಿಯವರು ವಿಚಾರಪೂರಿತವಾಗಿ ಮಾತನಾಡಿದರು. ಆರಂಭದಲ್ಲಿ ಡಾ| ವೈ. ಆರ್. ಶೆಟ್ಟರು ಸ್ವಾಗತಿಸಿ, ಶ್ರೀ ಕೆ. ಆರ್. ವಿ. ಕೃಷ್ಣರವರು ವರದಿಯನ್ನೋದಿದರು. ಡಾ| ಎಂ. ಆರ್. ಹೆಗ್ಗಡೆಯವರು ಸಂದೇಶಗಳನ್ನೋದಿದರು.

ಕ್ಷಯರೋಗ ಚಿಕಿತ್ಸಾಲಯವನ್ನು ಉಡುಪಿ ತಾಲೂಕು ಬೋರ್ಡಿಗೆ ಒಪ್ಪಿಸಲಾಯಿತು. ತಾ. ಬೋ| ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ಅದರ ಆಡಳಿತ ಸೂತ್ರವನ್ನು ವಹಿಸಿಕೊಂಡರು. ಕೊನೆಯಲ್ಲಿ ಡಾ| ಮೋಹನದಾಸ ಪೈ ಅವರು ವಂದನಾರ್ಪಣೆಗೈದರು.

ಸೀತಾನದಿ ಸೇತುವೆಯ ಉದ್ಘಾಟನೆ

ಕಳೆದ ತಾ. ೨೫ರಂದು ಹೆಬ್ರಿಯ ಸಮೀಪ ಸೀತಾನದಿಗೆ ಕಟ್ಟಿರುವ ಸೇತುವೆಯ ಉದ್ಘಾಟನೆಯನ್ನು ಆರೋಗ್ಯ ಮಂತ್ರಿ ಡಾ| ಕೆ. ನಾಗಪ್ಪ ಆಳ್ವರವರು ನೆರವೇರಿಸಿದರು. ವಿಧಾನ ಸಭಾ ಸದಸ್ಯ ಶ್ರೀ ಎಸ್. ಎಸ್. ಕೊಳ್ಕೆಬೈಲ್ ಅಧ್ಯಕ್ಷತೆ ವಹಿಸಿದ್ದರು.

ಆರಂಭದಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಶ್ರೀ ಸಲ್ಡಾನರವರು ಸ್ವಾಗತಿಸಿದರು. ಶ್ರೀ ಬೇಳಂಜೆ ವಿಠಲ ಹೆಗ್ಡೆಯವರು ಹೆಬ್ರಿ ಪಂಚಾಯತ್ ಪರಿಯಿಂದ ಬಿನ್ನವತ್ತಳೆಯೊಂದನ್ನು ಸಚಿವರಿಗರ್ಪಿಸಿದರು. ಮಾನ್ಯ ಸಚಿವರು ಮಾತನಾಡುತ್ತಾ, ಬಿನ್ನವತ್ತಳೆಯ ಕೋರಿಕೆಯಂತೆ, ಆರೋಗ್ಯ ಕೇಂದ್ರಕ್ಕೆ ಡಾಕ್ಟರರನ್ನು ಕಳಿಸುವ ವ್ಯವಸ್ಥೆ ಮಾಡುವೆನೆಂದೂ, ಮತ್ತೆಲ್ಲಾ ವಿಚಾರಗಳಲ್ಲಿ ಸಂಬಂಧಪಟ್ಟವರಿಗೆ ತಿಳಿಸಿ ಯೋಗ್ಯ ವ್ಯವಸ್ಥೆ ಮಾಡುತ್ತೇನಾಗಿಯೂ ಭರವಸೆಯಿತ್ತರು.

ಅಧ್ಯಕ್ಷ ಸ್ಥಾನದಿಂದ ಶ್ರೀ ಎಸ್. ಎಸ್. ಕೊಳ್ಕೆಬೈಲ್ ಅವರು ಮಾತನಾಡುತ್ತಾ ಹೆಬ್ರಿಯ ಅಭಿವೃದ್ಧಿಗಾಗಿ ಸಂತಸಪಟ್ಟು, ಅಲ್ಲಿಯ ಅಭಿವೃದ್ಧಿಗಾಗಿ ಶ್ರಮಿಸಿರುವ ಶ್ರೀ ಎಚ್. ಭುಜಂಗ ಬಲ್ಲಾಳರ ಕಾರ್ಯದಕ್ಷತೆಯನ್ನು ಸ್ಮರಿಸಿದರು. ತೀರ್ವ ವಿಚಾರವಾಗಿ, ಜನರಲ್ಲಿರುವ ತಪ್ಪು ಅಭಿಪ್ರಾಯವನ್ನು ಖಂಡಿಸಿ ಈಗಿನ ತೀರ್ವೆ ಹೆಚ್ಚಳವೂ ಅಲ್ಲವೆಂದು ಅವರು ವಿವರಿಸಿದರು. ಕೊನೆಗೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀ ಕರಿಬಸಪ್ಪನವರು ವಂದನೆಗಳನ್ನು ಅರ್ಪಿಸಿದರು.

ವಿದಾಯ ಸಮಾರಂಭ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್‌ನ ಉಡುಪಿ ಲೋಕಲ್ ಆಫೀಸಿನ ಮೆನೇಜರರಾಗಿದ್ದ ಶ್ರೀ ಜೆ. ಯು. ಪ್ರಭು, ಎಂ. ಎ. ಇವರಿಗೆ ಬೆಳಗಾಂವ್ ಮೈನ್ ಶಾಖೆಗೆ ವರ್ಗವಾದ ಪ್ರಯುಕ್ತ ಸ್ಥಳೀಯ ಆಫೀಸಿನ ಸಿಬಂದಿಯವರು ಅವರಿಗೆ ತಾ. 1-5-65ರಂದು ಮಧ್ಯಾಹ್ನ ಭೋಜನ ಸತ್ಕಾರವಿತ್ತು ಗೌರವಿಸಿದರಲ್ಲದೆ ಸಂಜೆ ಉಪಾಹಾರ ಕೂಟವನ್ನು ನೆರವೇರಿಸಿ ವಿದಾಯವಿತ್ತರು. ಶ್ರೀಗಳಾದ ಜಿ. ಎಂ. ಶೆಣೈ, ಎಂ. ಹಸನ್ ಸಾಹೇಬ್, ಪಿ. ಜಿ. ಕುಡುವ, ರ. ಕುಲಾಶೊ, ಎ. ಪಿ. ಪೈ, ಇವರು ಸಂದರ್ಭೋಚಿತ ಭಾಷಣವಿತ್ತು ಶ್ರೀ ಪ್ರಭುಗಳ ಗುಣಗಾನ ಮಾಡಿ ಜಯ ಕೋರಿದರು. ಶ್ರೀ ಪಿ. ವಿಶ್ವನಾಥ ಅವರು ಧನ್ಯವಾದಗಳನ್ನರ್ಪಿಸಿದರು. ಕೊನೆಗೆ ಗ್ರೂಪ್ ಫೊಟೋ ತೆಗೆಯಲಾಯಿತು. ಶ್ರೀ ಪ್ರಭುಗಳು 5 ವರುಷಗಳಿಂದ ಸ್ಥಳೀಯ ಶಾಖೆಯಲ್ಲಿ ದಕ್ಷ ಮೆನೇಜರರಾಗಿ ಜನಾದರಣೀಯರಾಗಿದ್ದರು.

ಕೆನರಾ ಬ್ಯಾಂಕಿನಲ್ಲಿ ಸತ್ಕಾರ ಸಮಾರಂಭ

ರಾಜ್ಯದ ವಿದ್ಯಾ ಇಲಾಖೆಯ ಆಹ್ವಾನದಂತೆ ದ. ಕನ್ನಡ ಜಿಲ್ಲೆಯ ಹೈಸ್ಕೂಲುಗಳಿಂದ ಬೆಂಗಳೂರು ನಗರಕ್ಕೆ ಆಗಮಿಸಿದ ಸಾಧಾರಣ 250ಕ್ಕೂ ಮಿಕ್ಕಿದ ಅಧ್ಯಾಪಕ ವೃಂದದವರ ಗೌರವಾರ್ಥವಾಗಿ ಕೆನರಾ ಬ್ಯಾಂಕಿನಲ್ಲಿ ಕೆಲಸ ಮಾಡುವ ದಕ್ಷಿಣ ಕನ್ನಡ ಜಿಲ್ಲೆಯ ಹೈಸ್ಕೂಲುಗಳ ಹಳೇ ವಿದ್ಯಾರ್ಥಿಗಳು ತಾರೀಕು 28-4-1965ರಂದು ರಾತ್ರಿ ಒಂದು ಭೋಜನ ಕೂಟವನ್ನು ಏರ್ಪಡಿಸಿದ್ದರು. ಸಮಾರಂಭದ ಪ್ರಧಾನ ಸಂಘಟಕರಾದ ಶ್ರೀಮಾನ್ ಎನ್. ಆರ್. ಪ್ರಭು ಹಾಗೂ ಶ್ರೀಮಾನ್ ಕೆ. ಅನಂತ ಕಾಮತರು ಅತಿಥಿಗಳನ್ನು ಸ್ವಾಗತಿಸಿದರು. ಸ್ವಾಗತ ಭಾಷಣದಲ್ಲಿ ಶ್ರೀ ಕೆ. ಅನಂತ ಕಾಮತರು ಬ್ಯಾಂಕು ವ್ಯವಹಾರ ಕ್ಷೇತ್ರದಲ್ಲಿ ನಡೆಸುತ್ತಿರುವ ಅನೇಕ ಮಹತ್ವಪೂರ್ಣವಾದ ಚಟುವಟಿಕೆಗಳನ್ನು ವಿವರಿಸಿದರು. ಅಧ್ಯಾಪಕರ ಪರವಾಗಿ ಶ್ರೀ ಪಿ. ಸಿ. ಕಾರಂತ (ಕುಂದಾಪುರ) ಹಾಗೂ ಶ್ರೀ ಬಿ. ಅಣ್ಣಪ್ಪ ಪೈ (ಮಂಗಳೂರು) ಇವರು ಮಾತನಾಡುತ್ತಾ ಬ್ಯಾಂಕಿನಲ್ಲಿರುವ ತಮ್ಮ ಜಿಲ್ಲೆಯ ಹಳೇ ವಿದ್ಯಾರ್ಥಿಗಳು ನಡೆಸಿದ ಸಮಾರಂಭದ ಬಗ್ಗೆ ಸಂತೋಷ ವ್ಯಕ್ತಪಡಿಸಿ ಶುಭವನ್ನು ಕೋರಿದರು.

ಬ್ಯಾಂಕಿನ ಅನೇಕ ಉನ್ನತಾಧಿಕಾರಿಗಳು ಹಾಗೂ ಇತರ ಆಮಂತ್ರಿತ ಗಣ್ಯ ವ್ಯಕ್ತಿಗಳು ಭಾಗವಹಿಸಿದ ಈ ಯಶಸ್ವೀ ಸಮಾರಂಭದ ಕೊನೆಯಲ್ಲಿ ಶ್ರೀ ಪದ್ಮನಾಭ ಭಟ ಬ್ರಹ್ಮಾವರಕರ್ ಧನ್ಯವಾದಗಳನ್ನು ಅರ್ಪಿಸಿದರು.

ವಾರ್ಷಿಕೋತ್ಸವ

ಉಡುಪಿ: ದಿ ಪ್ರೋಗ್ರೆಸ್ಸಿವ್ ಕಮರ್ಶಿಯಲ್ ಎಂಡ್ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್, ಶಿರಿಬೀಡು, ಉಡುಪಿ, ಇದರ 16ನೇ ವಾರ್ಷಿಕೋತ್ಸವವು ತಾ. 1ರಂದು ವಿಧಾನ ಸಭಾ ಸದಸ್ಯ ಶ್ರೀ ಎಂ. ಮಧ್ವರಾಜ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಸ್ಥೆಯ ಕಾರ್ಯದರ್ಶಿ ಶ್ರೀ ಶಿತಾರ್ಡಿ ವಿಲಿಯಂ ಪಿಂಟೊರವರು ಸ್ವಾಗತ ಭಾಷಣ ಮಾಡುತ್ತಾ ಸಂಸ್ಥೆಯ ಪ್ರಗತಿಯನ್ನು ವಿವರಿಸಿದರು. ಪ್ರಿನ್ಸಿಪಾಲ್ ಶ್ರೀ ಬಿ. ಅಪ್ಪಾಜಿ ರಾವ್‌ರವರು ವಾರ್ಷಿಕ ವರದಿಯನ್ನೋದಿ ಸಾರ್ವಜನಿಕರ ಸಹಾಯವನ್ನು ಕೋರಿದರು. ಕುಮಾರಿ ಪೂರ್ಣಚಂದ್ರಪಾಲ್‌ರವರು ಸಮಾರಂಭಕ್ಕೆ ಶುಭಕೋರಿ ಬಂದ ಸಂದೇಶಗಳನ್ನೋದಿದರು.

ಸಂಸ್ಥೆಯ ಹಳೆಯ ವಿದ್ಯಾರ್ಥಿ ಶ್ರೀ ಸಿ. ರಾಮಚಂದ್ರ ಭಟ್‌ರವರು ಸ್ವಸ್ತಿವಾಚನ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂತಹ ಟೆಕ್ನಿಕಲ್ ಸಂಸ್ಥೆಯ ಆವಶ್ಯಕತೆಯನ್ನು ಒತ್ತಿ ಹೇಳಿದರು. ಚಿಕ್ಕ ಅವಧಿಯೊಳಗೆ ಈ ಸಂಸ್ಥೆ ಪಡೆದ ಅಭಿವೃದ್ಧಿಯನ್ನು ಕಂಡು ತಾನು ಸಂತೋಷಗೊಂಡಿರುವೆನೆಂದು ನುಡಿದರು. ಶ್ರೀ ಲಕ್ಷ್ಮೀನಾರಾಯಣ ಕಾರಂತರು ಧನ್ಯವಾದ ಸಮರ್ಪಿಸಿದರು. ಸಂಸ್ಥೆಯ ವಿದ್ಯಾರ್ಥಿ ಮತ್ತು ಹಳೆವಿದ್ಯಾರ್ಥಿಗಳಿಂದ "ಎಚ್ಚಮ ನಾಯಕ" ಎಂಬ ಚಾರಿತ್ರಿಕ ನಾಟಕ ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು.

ಸಂಸ್ಥಾಪಕರ ದಿನಾಚರಣೆ

ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜ್ಯೂಕೇಶನಿನ ಸ್ಥಾಪಕ ಡಾ| ಟಿ. ಎಂ. ಎ. ಪೈಯವರ ಜನ್ಮ ದಿನಾಚರಣೆ, ಮತ್ತು ಸುಪ್ರೀಂ ಗವರ್ನಿಂಗ್ ಬಾಡಿಯ ಮಹಾಸಭೆಯು ಕಳೆದ ತಾ. 30ರಂದು ಸಂಜೆ ಪದ್ಮಶ್ರೀ ವಿ. ಕೆ. ಗೋಕಾಕ್ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಕಲ್ಪನಾ ಥಿಯೇಟರಿನಲ್ಲಿ ನೆರವೇರಿತು. ವಿವಿಧ ಸಂಘ ಸಂಸ್ಥೆಗಳಿಂದ ಡಾ| ಪೈಗಳಿಗೆ ಹಾರಾರ್ಪಣೆಯಾದ ಬಳಿಕ ಡಾ| ಪೈಗಳು ಸ್ವಾಗತಿಸಿ ಮಹಾಸಭೆಗೆ ಎಕೆಡೆಮಿಯ ಅಭಿವೃದ್ಧಿಪರ ವರದಿಯನ್ನೊಪ್ಪಿಸಿದರು. ಶ್ರೀಗಳಾದ ವೇಲಾಯುಧನ್ ನಾಯರ್, ಕೆ. ಪಿ. ಮಾಧವ ರಾವ್ ಇವರು ಡಾ| ಪೈಗಳ ಸಾಧನೆಗಳನ್ನು ಕೊಂಡಾಡಿ ಅಭಿನಂದನೆ ಸಲ್ಲಿಸಿದರು. ಡಾ| ಪೈಗಳು ಉತ್ತರವಿತ್ತ ಬಳಿಕ ಅಧ್ಯಕ್ಷ ಗೋಕಾಕರು ಅತಿಥಿಗಳ ವಿವಿಧ ಕ್ಷೇತ್ರಗಳ ಮುಖ್ಯವಾಗಿ ವಿದ್ಯಾರಂಗದ ಮಹಾಸಾಧನೆಗಳನ್ನು ಶ್ಲಾಘಿಸಿ ಮಾತನಾಡಿದರು. ಕೊನೆಗೆ ಶ್ರೀ ಟಿ. ರಮೇಶ ಪೈಗಳು ವಂದನಾರ್ಪಣೆಗೈದರು.

ಉದ್ಘಾಟನೆ

ಉಡುಪಿ, ಪಾಸ್ ಟ್ಯುಟೋರಿಯಲ್ ಕೋಲೇಜಿನ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳ ವಾಕ್‌ಚಾತುರ್ಯ ಸಂಘವನ್ನು ಶ್ರೀ ಯು. ಶಿವರಾಯರು ಉದ್ಘಾಟಿಸಿದರು. ಡಾ| ಕೆ. ಕೆ. ಕಲ್ಕೂರರು ಸೊಸೈಟಿಯ ಆವಶ್ಯಕತೆಗಳನ್ನು ವಿವರಿಸಿದರು.

ಬೇಕಾಗಿದ್ದಾರೆ

ಸಾಕಷ್ಟು ಅನುಭವವುಳ್ಳ ಕಂಪೋಸಿಟರ್, ಪ್ರಿಂಟರ್ ಬೇಕಾಗಿದ್ದಾರೆ.

ಪ್ರಿಂಟಿಗ್ ಪ್ರೆಸ್ಸಿನ ಬೇರೆ ಬೇರೆ ವಿಭಾಗಗಳಲ್ಲಿ ತರಬೇತಿಗಾಗಿ 8ನೇ ತರಗತಿವರೆಗೆ ಓದಿದ ಕೆಲವು ಹುಡುಗರನ್ನು ತೆಗೆದು ಕೊಳ್ಳಲಾಗುವುದು ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ

ಜನ್ಮದಿಂದಲೇ ಬ್ರಾಹ್ಮಣನೆ?

(ಎರಡನೇ ಪುಟದಿಂದ)

ವವರು ಎಂದು ಕೇಳುವುದಾದರೂ ಆಶ್ಚರ್ಯವಲ್ಲವೇ?

ಅಶ್ವಲಾಯನ: ದೇವಾ ಗೌತಮ ತಾವು ಏನೇ ಅನ್ನಿರಿ ಆದರೆ ಬ್ರಾಹ್ಮಣರು ಬ್ರಹ್ಮದೇವನ ದಾಯಾದಿಗಳಾಗಿದ್ದಾರೆ. ಇದನ್ನು ಅವರು ಪೂರ್ತಿಯಾಗಿ ನಂಬಿದ್ದಾರೆ.

ಭಗವಾನ್:— ಎಲೈ ಅಶ್ವಲಾಯನ, ಯವನ, ಕಾಂಬೋಜ ಮೊದಲಾದ ಗಡಿನಾಡಿನ ಪ್ರದೇಶಗಳಲ್ಲಿ ಆರ್ಯ ಮತ್ತು ದಾಸ ಎಂಬೆರಡು ವರ್ಣಗಳೇ ಇದ್ದುವು. ಆಗಾಗ ಆರ್ಯನು ದಾಸನಾಗುತ್ತಾನೆ; ಮತ್ತು ದಾಸ ಆರ್ಯನಾಗುತ್ತಾನೆ. ಈ ಮಾತು ನೀನು ಕೇಳಿರಬಹುದು ತಾನೆ...ಅಶ್ವಲಾಯನ ಕೇಳಿರುತ್ತೇನೆ.

ಭಗವಾನ್: ಹಾಗಿದ್ದರೆ ಬ್ರಹ್ಮದೇವನು ಬ್ರಾಹ್ಮಣರನ್ನು ಮುಖದಿಂದ ಹುಟ್ಟಿಸಿದನು ಮತ್ತು ಅವರು ಎಲ್ಲ ವರ್ಣಗಳಲ್ಲಿ ಶ್ರೇಷ್ಠರಾಗಿದ್ದಾರೆ ಎಂದು ಹೇಳಲು ಆಧಾರವೇನು?

ಅಶ್ವಲಾಯನ: ತಮ್ಮ ಹೇಳಿಕೆ ಏನೇ ಇರಲಿ, ಬ್ರಾಹ್ಮಣ ವರ್ಣ ಒಂದೇ ಶ್ರೇಷ್ಠ, ಇತರ ವರ್ಣಗಳು ಹೀನವಾಗಿವೆ ಎಂಬುದು ಬ್ರಾಹ್ಮಣರ ಅಭಿಮತ.

ಭಗವಾನ್:— ಕ್ಷತ್ರಿಯನು, ವೈಶ್ಯನು ಇಲ್ಲವೆ ಶೂದ್ರನು ಪ್ರಾಣಘಾತ, ಕಳವು, ವ್ಯಭಿಚಾರ, ಅಸತ್ಯ ಭಾಷಣ, ಚಾಡಿ, ಅಪಶಬ್ದ, ಬಾಯ್ಬಡಿಕೆ, ಇನ್ನೊಬ್ಬರ ಹಣದ ಮೇಲೆ ದೃಷ್ಟಿಯನ್ನಿಡುವುದು, ದ್ವೇಷ ಬುದ್ಧಿ ಬೆಳೆಸುವುದು; ನಾಸ್ತಿಕತೆಯನ್ನು ಅಂಗೀಕರಿಸುವುದು— ಇಂತಹದರಲ್ಲಿ ತೊಡಗಿದಾತ ದೇಹಾಂತ್ಯದ ಬಳಿಕ ನರಕಕ್ಕೆ ಹೋಗುವನು. ಬ್ರಾಹ್ಮಣನು ಮಾತ್ರ ಇವುಗಳನ್ನೆಸಗಿದರೆ ನರಕಕ್ಕೆ ಹೋಗುವುದಿಲ್ಲವೆಂದು ನಿನಗನ್ನಿಸುವುದೇ?

ಅಶ್ವಲಾಯನ:— ದೇವಾ ಗೌತಮಾ, ಬ್ರಾಹ್ಮಣನಾಗಲಿ, ಬ್ರಾಹ್ಮಣೇತರನೇ ಆಗಲಿ ಪಾಪದ ಪ್ರಾಯಶ್ಚಿತ್ತವನ್ನು ಅನುಭೋಗಿಸಿಯೇ ತೀರಬೇಕು.

ಭಗವಾನ್: — ಯಾವನೇ ಬ್ರಾಹ್ಮಣನು ಪ್ರಾಣಘಾತದಿಂದ ನಿವೃತ್ತನಾದರೆ, ಕಳವು, ವ್ಯಭಿಚಾರವೇ ಮೊದಲಾದ ಹತ್ತು ಪಾಪಗಳಿಂದ ನಿವೃತ್ತನಾದರೆ ಅವನು ಮಾತ್ರ ದೇಹಾವಸಾನದ ಬಳಿಕ ಸ್ವರ್ಗಕ್ಕೆ ಹೋಗುವನು. ಅದೇ ಇತರ ವರ್ಣದ ಜನರು ಈ ಪಾಪಗಳಿಂದ ನಿವೃತ್ತರಾದರೆ ಸ್ವರ್ಗಸ್ಥರಾಗುವುದಿಲ್ಲವೆಂದು ನಿನಗನ್ನಿಸುವುದೇ?

ಅಶ್ವಲಾಯನ: — ಪುಣ್ಯಾಚರಣದ ಫಲವು ಎಲ್ಲರಿಗೂ ಒಂದೇ ಸಮನಾಗಿ ದೊರೆಯುವುದು.

ಭಗವಾನ್:— ಈ ಪ್ರದೇಶದಲ್ಲಿ ದ್ವೇಷ ರಹಿತವಾಗಿ, ಮೈತ್ರೀ ಭಾವನೆಯಿಂದ ಇರಲು, ವೈಶ್ಯ ಕ್ಷತ್ರಿಯ ಶೂದ್ರರಿಗೆ ಹೊರತಾಗಿ, ಬ್ರಾಹ್ಮಣನಿಗೆ ಮಾತ್ರ ಸಾಧ್ಯವಿದೆಯೆಂದು ನಿನಗನ್ನಿಸುವುದೇ?

ಅಶ್ವಲಾಯನ: ನಾಲ್ಕೂ ವರ್ಣದವರಿಗೆ ಮೈತ್ರೀ ಭಾವನೆಯಿಂದಿರಲು ಸಾಧ್ಯವಿದೆ.

ಭಗವಾನ್: — ಹೇ ಅಶ್ವಲಾಯನ; ಒಬ್ಬ ಮೂರ್ಧಾಭಿಷಿಕ್ತ ರಾಜನು ಎಲ್ಲ ಜಾತಿಯ ನೂರು ಪುರುಷರನ್ನು ಒಂದೆಡೆ ಕೂಡಿಸುತ್ತಾನೆ, ಅವರಲ್ಲಿ ಕ್ಷತ್ರಿಯ, ಬ್ರಾಹ್ಮಣ ಮತ್ತು ರಾಜಕುಲದಲ್ಲಿ ಹುಟ್ಟಿದವರನ್ನು ಕುರಿತು ಹೇಳುತ್ತಾನೆ "ಇತ್ತ ಬನ್ನಿರಿ, ಶಾಲ ಇಲ್ಲವೆ ಚಂದನದಂತಹ ಉತ್ತಮ ಗಿಡದ ಕೆತ್ತಿಗಳನ್ನು ತೆಗೆದುಕೊಂಡು ಬೆಂಕಿಯನ್ನು ಹೊತ್ತಿಸಿರಿ." ಎಂದು. ಮತ್ತು ಅವರಲ್ಲಿ ಉಳಿದ, ಚಾಂಡಾಲ, ನಿಷಾಧ ಮೊದಲಾದ ಹೀನ ಕುಲದವರನ್ನು "ಇತ್ತ ಬನ್ನಿರಿ, ನಾಯಿಗೆ ಊಟವನ್ನು ಇಕ್ಕುವ ಕಟ್ಟಿಗೆಯ ಪಾತ್ರೆಯಲ್ಲಿ, ಹಂದಿಗೆ ಊಟವನ್ನು ಕೊಡುವ ಪಾತ್ರೆಯಲ್ಲಿ ಔಡಲದ ಉತ್ತರಾರಣಿಯಿಂದ ಬೆಂಕಿಯನ್ನು ಹೊತ್ತಿಸಿರಿ," ಎಂದನು. ಹೇ ಅಶ್ವಲಾಯನೇ, ಬ್ರಾಹ್ಮಣಾದಿ ಉಚ್ಚವರ್ಣದ ಮನುಷ್ಯನು ಉತ್ತಮ ಕಟ್ಟಿಗೆಯಿಂದ ಹೊತ್ತಿಸಿದ ಬೆಂಕಿಯೊಂದು ಮಾತ್ರ ಶ್ರೇಷ್ಠ ಮತ್ತು ತೇಜಸ್ವಿಯಾಗುವುದು, ಮತ್ತು ಚಾಂಡಾಲಾದಿ ಹೀನ ಕುಲದವರು ಹೊತ್ತಿಸಿದ ಬೆಂಕಿ, ಅದರ ವಿರುದ್ಧವಾಗಿರುವುದೆಂದು, ಅದರಿಂದ ಅಗ್ನಿ ಕಾರ್ಯಗಳು ನಡೆಯಲಾರದೆಂದೂ ನಿನಗನ್ನಿಸುವುದೇ?

ಅಶ್ವಲಾಯನ:—ದೇವಾ, ಮನುಷ್ಯ ಯಾವ ಕುಲದವನೇ ಇರಬಹುದು. ಕಟ್ಟಿಗೆ ಉತ್ತಮವಿರಬಹುದು; ಆದರಿಂದ ಹೊತ್ತಿಸಿದ ಅಗ್ನಿಯಿಂದ ಮಾತ್ರ ಒಂದೇ ಸಮಾನ ಕಾರ್ಯಗಳು ಜರಗುವುವು.

ಭಗವಾನ್:— ಒಬ್ಬ ಕ್ಷತ್ರಿಯ ಕುಮಾರನು ಬ್ರಾಹ್ಮಣ ಕನ್ಯೆಯನ್ನು, ಒಬ್ಬ ಬ್ರಾಹ್ಮಣನು ಕ್ಷತ್ರಿಯ ಕನ್ಯೆಯನ್ನು ಮದುವೆಯಾಗುವನು. ಮತ್ತು ಅವರ ಸಂಬಂಧದಿಂದ ಮಕ್ಕಳಾಗುವರು. ಆಗ ಆ ಮಕ್ಕಳು ಆ ತಾಯ್ತಂದೆಯರಂತಿರದೆ ಬೇರೆ ರೀತಿಯಾಗಿ ಬೆಳೆಯುವುದು ಎಂದು ನಿನಗನ್ನಿಸುವುದೇ?

ಅಶ್ವಲಾಯನ: - ಇಂತ ಮಿಶ್ರವಿವಾಹದಿಂದ ಜನಿಸಿದ ಶಿಶು, ತನ್ನ ತಾಯಿ ತಂದೆಗಳನ್ನೇ ಹೋಲುವುದು, ಅದೂ ಮನುಷ್ಯನಾಗುವುದು. ಅದನ್ನು ಕ್ಷತ್ರಿಯನೆನ್ನಲೂ ಬಹುದು ಯಾ ಬ್ರಾಹ್ಮಣನೆನ್ನಲೂ ಬಹುದು.

ಭಗವಾನ್: — ಆದರೆ ಅಶ್ವಲಾಯನ, ಒಂದು ಹೆಣ್ಣು ಕುದುರೆ ಮತ್ತು ಒಂದು ಗಂಡು ಕತ್ತೆ ಇವುಗಳ ಸಂಬಂಧದಿಂದ ಹುಟ್ಟುವ ಮರಿಯು ತಾಯಿಯಂತೆ ಇಲ್ಲ ತಂದೆಯಂತಿರಲು ಸಾಧ್ಯವೆ? ಅದಕ್ಕೆ ಕುದುರೆ ಅಥವಾ ಕತ್ತೆ ಎನ್ನಲು ಸಾಧ್ಯವೆ?

ಅಶ್ವಲಾಯನ: ದೇವಾ ಅದಕ್ಕೆ ಕುದುರೆ ಯಾ ಕತ್ತೆ ಎಂದೆನ್ನಲು ಸಾಧ್ಯವಿಲ್ಲ. ಅದು ಮೂರನೆಯ ಪ್ರಾಣಿಯಾಗುವುದು. ಅದನ್ನು ನಾವು ಹೇಸರಗತ್ತೆ ಎಂದು ಕರೆಯುತ್ತೇನೆ. ಆದರೆ ಮನುಷ್ಯ ಸಂಬಂಧದಿಂದ ಈ ರೀತಿಯಾಗದು.

ಭಗವಾನ್: ಹೇ ಅಶ್ವಲಾಯನ; ಇಬ್ಬರು ಬ್ರಾಹ್ಮಣ ಅಣ್ಣ ತಮ್ಮಂದಿರಲ್ಲಿ ಒಬ್ಬನು ವೇದ ಪಠನ ಮಾಡಿದ ಒಳ್ಳೆ ಸುಶಿಕ್ಷಿತ, ಮತ್ತೊಬ್ಬ ಅಶಿಕ್ಷಿತ, ಇದ್ದರೆ ಶ್ರಾದ್ಧ ಇಲ್ಲವೇ ಯಜ್ಞದಲ್ಲಿ ಬ್ರಾಹ್ಮಣರು ಮೊದಲು ಯಾವನಿಗೆ ಆಮಂತ್ರಣ ಕೊಡುತ್ತಾರೆ?

ಅಶ್ವಲಾಯನ: ಸುಶಿಕ್ಷಿತನಿದ್ದವನಿಗೇ ಆಮಂತ್ರಣ ಹೋಗುವುದು.

ಭಗವಾನ್: ಈಗ ತಿಳಿ. ಈ ಇಬ್ಬರು ಸಹೋದರರಲ್ಲಿ ಒಬ್ಬನು ದೊಡ್ಡ ವಿದ್ವಾಂಸ ಆದರೆ ದುರಾಚಾರಿ, ಇನ್ನೊಬ್ಬ ವಿದ್ವಾಂಸನಲ್ಲ ಆದರೆ ಅತ್ಯಂತ ಸುಶೀಲ. ಇವರಲ್ಲಿ ಮೊದಲು ಯಾವನನ್ನು ಆಮಂತ್ರಿಸಲಾಗುವುದು?

ಅಶ್ವಲಾಯನ: — ಮೊದಲ ಆಮಂತ್ರಣ ಶೀಲವಂತನಿಗೆ ಹೋಗುವುದು. ದುರಾಚಾರಿ ಮನುಷ್ಯನಿಗೆ ಕೊಟ್ಟ ದಾನವು ಹೇಗೆ ಮಹಾಫಲದಾಯಕವಾಗುವುದು?

ಭಗವಾನ್: — ಹೇ ಅಶ್ವಲಾಯನ ನೀನು ಮೊದಲು ಜಾತಿಗೆ ಮಹತ್ವವನ್ನು ಕೊಟ್ಟೆ. ಆ ಮೇಲೆ ವೇದ ಪಠನಕ್ಕೆ ಮತ್ತು ಈಗ ಶೀಲಕ್ಕೆ ಮಹತ್ವವನ್ನು ಕೊಡುವೆ. ಅರ್ಥಾತ್ ನೀನು ಈಗ ನಾನು ಪ್ರತಿಪಾದಿಸುತ್ತಿದ್ದ ಚಾತುರ್ವರ್ಣ್ಯ ಶುದ್ಧಿಯನ್ನೇ ಅಂಗೀಕರಿಸಿದೆ.

ಎಲ್ಲರೂ ತಲೆ ತಗ್ಗಿಸಿದರು.

೦೦೦೦

III

ಬ್ರಾಹ್ಮಣ ವರ್ಣವೇ ಶ್ರೇಷ್ಠವಾಗಿದೆ. ಮತ್ತುಳಿದ ವರ್ಣಗಳು ಹೀನವಾಗಿವೆ ಎಂದು ಬ್ರಾಹ್ಮಣ ಜಾತಿಯ ಮುಂದಾಳುಗಳು ವರ್ಣಗಳ ಕರ್ತವ್ಯಾಕರ್ತವ್ಯಗಳು ಯಾವುವು ಎಂದು ಹೇಳುವ ಅಧಿಕಾರವನ್ನೂ ಇವರು ತಮ್ಮ ಕಡೆಗೆಯೇ ಇಟ್ಟುಕೊಳ್ಳುತ್ತಿದ್ದರು.

ಒಂದು ಸಲ ಭಗವಾನ್ ಬುದ್ಧನು ಶ್ರಾವಸ್ತಿಯ ಜೇತವನದಲ್ಲಿ ಅನಾಥಪಿಂಡಿಕನ ಆರಾಮದಲ್ಲಿರುತ್ತಿದ್ದನು. ಆಗ ಏಸುಕಾರಿ ಎಂಬ ಬ್ರಾಹ್ಮಣನೊಬ್ಬನು ಅವನ ಕಡೆ ಬಂದು ಬದಿಗೆ ಕುಳಿತನು. ಆ ಮೇಲೆ "ಹೇ ಗೌತಮಾ, ಬ್ರಾಹ್ಮಣರು ನಾಲ್ಕು ಸೇವೆಗಳನ್ನು ಹೇಳುತ್ತಾರೆ. ಬ್ರಾಹ್ಮಣನ ಪರಿಚರ್ಯೆಯನ್ನು ನಾಲ್ಕೂ ವರ್ಣದವರಿಗೆ ಮಾಡಲು ಸಾಧ್ಯವಿದೆ. ಕ್ಷತ್ರಿಯ ವೃತ್ತಿಯನ್ನು ಬೇರೆ ವೈಶ್ಯ ಶೂದ್ರರು ಮಾಡಲು ಸಾಧ್ಯ, ಅಂತೆಯೇ ವೈಶ್ಯನ ಕಾರ್ಯವನ್ನು ಶೂದ್ರನೂ ಮಾಡಬಹುದು. ಆದರೆ ಶೂದ್ರನ ಕೆಲಸವನ್ನು ಶೂದ್ರನೇ ಮಾಡಬೇಕು. ಇತರ ವರ್ಣದ ಜನರು ಆವನ ವೃತ್ತಿಯನ್ನು ಹೇಗೆ ಮಾಡುವುದು?

ಭಗವಾನ್: — ಹೇ ಬ್ರಾಹ್ಮಣಾ, ಬ್ರಾಹ್ಮಣರ ಈ ಹೇಳಿಕೆಗೆ ಎಲ್ಲ ಜನರ ಸಮ್ಮತಿಯಿದೆಯೇ? ಇಂಥ ವೃತ್ತಿಗಳನ್ನು ಹೇಳಲು ಜನರು ಬ್ರಾಹ್ಮಣರಿಗೆ ಅಧಿಕಾರ ಕೊಟ್ಟಿರುವರೇನು?

ಏಸುಕಾರಿ:— ಹೇ ಗೌತಮಾ, ಹಾಗೇನೂ ಇಲ್ಲ.

ಭಗವಂತ:— ಹಾಗಾದರೆ ಮಾಂಸವನ್ನು ತಿನ್ನ ಬಯಸದವನ ಮುಂದೆ ಮಾಂಸವನ್ನು ತಂದಿರಿಸಿ ಅದನ್ನು ಆವನಿಗೆ ಬಲಾತ್ಕಾರವಾಗಿ ತಿನ್ನಿಸಿ ಅದರ ಬೆಲೆಯನ್ನು ಕೊಡೆಂದರೆ ಹೇಗೆ? ಯಾವ ವರ್ಣದ ಮನುಷ್ಯನೇ ಆಗಿದ್ದರೂ, ಯಾವನ ವೃತ್ತಿಯನ್ನು ಮಾಡಿದರೆ ಕಲ್ಯಾಣವಾಗುವುದು, ಅಂಥ ಪರಿಚರ್ಯೆಯನ್ನು ಮಾಡುವುದು ಉತ್ತಮ. ಯಾವ ಮನುಷ್ಯನ ವೃತ್ತಿಯನ್ನು ಕೈಕೊಂಡರೆ ಶ್ರದ್ಧೆ, ಶೀಲ, ಶ್ರುತ, ತ್ಯಾಗ ಮತ್ತು ಪ್ರಜ್ಞೆಗಳ ಅಭಿವೃದ್ಧಿಯಾಗುವುದೋ ಅವನ ಪರಿಚರ್ಯೆಯನ್ನು ಮಾಡತಕ್ಕದ್ದು, ಎಂದೆನ್ನುತ್ತೇನೆ.

ಏಸುಕಾರಿ:— ಭಗವಾನ್, ಬ್ರಾಹ್ಮಣರು, ಭಿಕ್ಷಾಚರ್ಯೆಯ ಧನವನ್ನು ಸ್ವಕೀಯ ಧನವೆನ್ನುವರು. ಬಾಣ ಬತ್ತಳಿಕೆ ಇದು ಕ್ಷತ್ರಿಯನದು, ವ್ಯವಸಾಯ ಮತ್ತು ಗೋರಕ್ಷೆ ಇದು ವೈಶ್ಯನದು ಹಾಗೂ ಕುಡಗೋಲು ಬುಟ್ಟಿ ಶೂದ್ರನದು. ನಾಲ್ಕೂ ವರ್ಣದವರು ತಂತಮ್ಮ ಸ್ವಕೀಯ ಹಣವನ್ನು ಅಲಕ್ಷ್ಯ ಮಾಡಿದರೆ, ಕಾವಲುಗಾರನೇ ಕಳವು ಮಾಡಿದಂತೆ, ಅವರು ಅಕೃತ್ಯಕಾರಿಗಳಾಗುತ್ತಾರೆ. ಈ ಬಗ್ಗೆ ತಮ್ಮ ಅಭಿಪ್ರಾಯವೇನು?

ಭಗವಾನ್,— ಹೇ ಬ್ರಾಹ್ಮಣ, ಈ ನಾಲ್ಕೂ ಧನಗಳನ್ನು ಸಾರಲು ಜನರು ಬ್ರಾಹ್ಮಣರಿಗೆ ಅಧಿಕಾರವನ್ನಿತ್ತಿರುವರೇನು?

ಏಸುಕಾರಿ:— ಇಲ್ಲ.

ಭಗವಾನ್:— ಎಂದಾಗ ಮಾಂಸ ತಿನ್ನದವನನ್ನು ಮಾಂಸ ತಿನ್ನೆಂದು ಒತ್ತಾಯಗೊಳಿಸಿ, ತದನಂತರ ಹಣವನ್ನು ಬೇಡಿದಂತೆ; ಆರ್ಯ ಶ್ರೇಷ್ಠ ಧರ್ಮವೇ ಎಲ್ಲರ ಸ್ವಕೀಯ ಧನದಂತೆ. ಹಾಗೆಯೇ ನಾಲ್ಕು ವರ್ಣಗಳಲ್ಲಿ ಜನಿಸಿದವರನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರನೆನ್ನುತ್ತೇವೆ. ಆದರೆ ಈ ನಾಲ್ಕು ಕುಲಗಳ ಜನರು ಪ್ರಾಣಹಿಂಸೆಯಾದಿಯಾದ ಪಾಪಗಳಿಂದ ಮುಕ್ತರಾಗಿ, ಬ್ರಾಹ್ಮಣನಷ್ಟೆ ಮೈತ್ರೀ ಭಾವದಿಂದ ಇರಲು ಇತರ ವರ್ಣದವರಿಗೆ ಅಸಾಧ್ಯವೆಂದು ನಿನಗನ್ನಿಸುವುದೇ?

ಏಸುಕಾರಿ;— ಇಲ್ಲ.

ಭಗವಂತ.— ನದಿಗೆ ಹೋಗಿ ಸ್ನಾನ ಚೂರ್ಣದಿಂದ ಬ್ರಾಹ್ಮಣನಷ್ಟೆ ತನ್ನ ಮೈಯನ್ನು ಸ್ವಚ್ಛ ಮಾಡಬಲ್ಲನು, ಇತರರಿಗೆ ಅದು ಸಾಧ್ಯವಿಲ್ಲವೆಂದು ನಿನಗನ್ನಿಸುವುದೇ?

ಏಸುಕಾರಿ:— ಇಲ್ಲ.

ಭಗವಾನ್:— ಅದೇ ಪ್ರಕಾರವಾಗಿ, ಎಲ್ಲ ಕುಲಗಳ ಜನರು ಸನ್ಮಾರ್ಗದಲ್ಲಿ ನಡೆದು, ನ್ಯಾಯ ಧರ್ಮದ ಆರಾಧನೆಯನ್ನು ಮಾಡಬಲ್ಲರು.

— — —

In the Court of the Munsif of Udipi.

O.S. No 40 of 1965.

Syndicate Bank Limited, Manipal by its Recovery Officer, M. S. Bhandary.............. ... *Plaintiff*

against

Thungu Marakalthi .. .. *Defendant*

To

The defendant Thungu Marakalthi, daughter of Nandu Marakalthi, wife of Soma Marakala, residing at Adda Bengre of Tonse West Village of Udipi Taluk.

Please take notice that the above plaintiff has filed a suit against you for recovery of the plaint claimed reliefs and that it is posted to 10-6-1965 for notice to you. If you fail to appear before the said Court at 11 A. M. on the day mentioned above, the same will be decided in your absence.

K. VARADARAYA PAI,
Advocate for Plaintiff.

Udipi, Dated 27-6-1965.

NAVAYUGA 6-5-1965
Registered with the Registrar of News Papers for India under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೬-೫-೬೫ರಿಂದ ೧೨-೫-೬೫ರ ವರೆಗೆ

೧. ಮೇಷ

ಭಾಗ್ಯ ಧನಪತಿಗಳಾದ ಗುರು ಶುಕ್ರರು ಧನಸ್ಥಾನದಲ್ಲಿದ್ದು ಲಾಭಪತಿಯಾದ ಶನೈಶ್ಚರನೂ ಲಾಭದಲ್ಲಿ ನಿಂತಿರುವುದರಿಂದ ಈ ವಾರದಲ್ಲಿ ನಿಮ್ಮ ಆರ್ಥಿಕ ಪರಿಸ್ಥಿತಿಯು ತುಂಬ ಸುಧಾರಿಸಲಿದೆ. ನಾನಾ ತೆರದಿಂದ ಧನಾಗಮವಾಗುವದು. ಪ್ರಬಲನಾದ ಇದಿರಾಳಿಯೂ ಇಂದು ನಿಮ್ಮಿದಿರು ನಿಲ್ಲಲಾರನು. ಆದರೆ ನಿಮ್ಮ ದೇಹಾರೋಗ್ಯವು ಅಷ್ಟೊಂದು ಚೆನ್ನಾಗಿರದು ಮಾತ್ರವಲ್ಲ, ಮಕ್ಕಳ ಆರೋಗ್ಯವೂ ಕೆಡಲಿದೆ. ಸೋದರರೊಳು ಪರಸ್ಪರ ಮನಸ್ತಾಪ ಹುಟ್ಟೀತು. ತಾ. 6, 11, 12 ಈ ದಿನಗಳನ್ನು ಬಂಧುಮಿತ್ರರಿಂದ ಕೂಡಿ ಸುಖದಿಂದ ಕಳೆವಿರಿ.

೨. ವೃಷಭ

ನಿಮ್ಮ ಅದೃಷ್ಟವಿಂದು ತೀರಾ ದುರ್ಬಲವಾಗಿದೆ. ಬಹುಮುಖದಿಂದ ಖರ್ಚುವೆಚ್ಚಗಳು ನಿಮ್ಮನ್ನು ಆವರಿಸಲಿವೆ. ತನ್ನಿಮಿತ್ತ ನೀವಿಂದು ಸಾಲ ಕಡಗಳನ್ನು ಕೂಡ ಮಾಡಲಿರುವಿರಿ. ಅಲ್ಲದೆ ಕೆಲವೊಂದು ದುರ್ಜನರ ಸಂಸರ್ಗಕ್ಕೆ ಸಿಲುಕಿ ಧನಮಾನಗಳೆರವಾಗಲಿರುವಿರಿ, ಆಪ್ತಬಂಧುಗಳ ವಿರಹವುಂಟಾಗಲಿದೆ. ದೇಹಾಲಸ್ಯ ಮನೋರೋಗಗಳಿಗೀಡಾದ ನಿಮಗೆ ತಾ. 7, 8 ಮಾತ್ರ ಸ್ವಲ್ಪ ಅನುಕೂಲವಾಗಿ ಕಾಣಿಸಬಹುದು.

೩. ಮಿಥುನ

ನಿಮ್ಮ ಚಿತ್ತಸ್ಥೈರ್ಯ ಧೈರ್ಯ ಸಾಹಸಗಳು ಇಂದು ಅಜೇಯವೆನಿಸಿವೆ. ಎಂತಹ ದುಃಸಾಧ್ಯವಾದ ಕಾರ್ಯವೂ ನಿಮಗಿಂದು ತೃಣಸಮವೆನಿಸುವದು. ಹಿಂದೆ ಹಂಗಿಲಿಗೆಲುವ ಕಣೆ ನಾನಲ್ಲವೆಂಬ ಗಾದೆಯಂತೆ ನೀವಿಂದು ಯಾರೊಬ್ಬರ ನೆರವನ್ನೂ ಬಯಸಲಾರಿರಿ. ನಿಮ್ಮ ಪ್ರಯತ್ನವು ಪೂರ್ಣ ಫಲಕಾರಿಯಾಗಲಿದೆ. ನಿಮ್ಮ ವರ್ಚಸ್ಸು ವಿಶೇಷತಃ ರಾಜಕೀಯ ರಂಗದಲ್ಲಿ ಬೆಳಗಲಿದೆ. ಪ್ರಬಲ ವಿರೋಧಿಗಳನ್ನು ಪರಾಭವಗೊಳಿಸುವ ನಿಮಗೆ ತಾ. 6, 9, 10 ಈ ದಿನಗಳು ವಿಜಯ ಕೀರ್ತಿ ಲಾಭದಾಯಿಗಳಾಗಿವೆ.

೪. ಕರ್ಕಟ

ದೈವಾನುಗ್ರಹ ಸಂಪನ್ನರಾದ ನಿಮ್ಮ ಪರಿಶ್ರಮಕ್ಕಿಂತಲೂ ಹೆಚ್ಚಿನ ಫಲವು ಇಂದು ಲಭಿಸಲಿದೆ. ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳನ್ನು ಪಡೆವಿರಿ. ಆದರೆ ಶತ್ರುಜನರ ಕಾಟವೂ ನಿಮಗಿಂದು ತಪ್ಪಿದ್ದಲ್ಲ. ವ್ಯವಹಾರ ಚತುರರಾದ ನಿಮಗೆ ಯಾವೊಂದು ತರದ ಚಿಂತೆಗೂ ಅವಕಾಶವಿಲ್ಲವು. ತಾ. 7, 8, 11, 12 ಈ ದಿನಗಳಲ್ಲಿ ಮೃಷ್ಟಾನ್ನ ಭೋಜನ ಮಿತ್ರಜನರ ಸಮಾಗಮವು ಆಗಲಿದೆ.

೫. ಸಿಂಹ

ದುರ್ದೈವದ ಪರಾಕಾಷ್ಠವನ್ನು ನೀವಿಂದು ಹೊಂದಿರುವಿರೆಂದರೆ ತಪ್ಪಾಗಲಾರದು. ಸಕಲ ಗ್ರಹರ ಅವಕೃಪೆಗೆ ಪಾತ್ರರಾಗಿರುವ ನಿಮ್ಮ ಪರಿಶ್ರಮವಿಂದು ಗಾಳಿಯ ಕೂಡೆ ಗುದ್ದಾಟವಾಡಿದಂತೆ ವ್ಯರ್ಥವಾಗುವದು. ವ್ಯಾಪಾರ ವ್ಯವಹಾರಗಳಲ್ಲಿ ಆಕಸ್ಮಿಕ ನಷ್ಟ ಸೋಲುಗಳುಂಟಾಗುವವು. ಗೃಹತಾಪತ್ರಯ ದೇಹಾಲಸ್ಯಾದಿಗಳಿಂದಾಗಿ ಸುಖವೆಂಬುದು ನಿಮಗಿಂದು ಕಿರುಕನ ಕನಸಿನಂತಾದೀತು. ತಾ. 6, 9, 10 ಈ ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿ ಕಾಣಿಸುವವು.

೬. ಕನ್ಯಾ

ಕರ್ತವ್ಯದಕ್ಷರಾದ ನಿಮ್ಮ ಭಾಗ್ಯಸ್ಥಾನವಿಂದು ಗುರುಶುಕ್ರರಿಂದಾವೃತವಾಗಿರುವುದರಿಂದ ನಿಮ್ಮ ಎಲ್ಲಾ ಸಾಲ ಕಡಗಳೂ ಇಂದು ವ್ಯಕ್ತವಾಗುವವಲ್ಲದೆ ಸಾಕಷ್ಟು ಆಸ್ತಿಯನ್ನು ಇಂದು ಸಂಗ್ರಹಿಸಲಿರುವಿರಿ. ನೌಕರಿ ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷಿಸಿದ ಗುರಿಯನ್ನು ನಿರಾತಂಕವಾಗಿ ಸೇರುವಿರಿ. ಜನತೆಯ ಸಹಕಾರ ಬಂಧುಜನರ ನೆರವುಳ್ಳ ನಿಮಗೆ ಇಂದಿನ ದಿನಗಳು ಸುಖಸಂತೋಷಗಳಿಂದ ಕಳೆಯಲಿವೆ. ಆದರೆಲ್ಲಾ ತಾ. 6, 7, 8, 11, 12 ಈ ದಿನಗಳು ಅತೀವ ಪ್ರಶಸ್ತವಿವೆ.

೭. ತುಲಾ

ಕಷ್ಟಪಟ್ಟು ದುಡಿಯುವಿರಿ. ಇಷ್ಟದಂತೆ ಫಲವು ಪ್ರಾಪ್ತಿಯಾಗುವದು. ಆದರೇನು? ದುಡಿಮೆಯ ಬಹ್ವಂಶವು ಪರರ ಕೈಸೇರಲಿದೆಯೂ ವ್ಯರ್ಥ ವ್ಯಯವಾಗುವದು. ಗುರುಹಿರಿಯರ ಮುನಿಸಿಗೆ ಗುರಿಯಾಗಲಿರುವಿರಿ, ಹಿತ ಶತ್ರುಗಳ ಸಂಖ್ಯೆ ಹೆಚ್ಚಲಿದೆ ಕಫ ದೋಷದಿಂದಾಗಿ ದೇಹದಾರೋಗ್ಯ ಕೆಡುವದು. ಮನೋರೋಗಕ್ಕೆ ತುತ್ತಾದ ನಿಮಗೆ ತಾ. 7ರಿಂದ 10ರ ವರೆಗಿನ ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

೮. ವೃಶ್ಚಿಕ

ಕೌಟುಂಬಿಕ ಕಲಹವೊಂದನ್ನುಳಿದು ಇತರ ಎಲ್ಲಾ ತಾಪತ್ರಯಗಳಿಂದಲೂ ನೀವಿಂದು ಮುಕ್ತರಾಗುವಿರಿ. ಜನಾನುರಾಗವನ್ನು ಗಳಿಸಿದ ನಿಮಗೆ ಸಮಾಜದಲ್ಲಿ ಗಣನೀಯ ಸ್ಥಾನ ಲಭಿಸುವದು. ಅಲ್ಲದೆ ಕೋರ್ಟುಕಚೇರಿಗಳ ವ್ಯವಹಾರದಲ್ಲೂ ರಾಜಕೀಯದಲ್ಲೂ ವಿಜಯಶ್ರೀಯು ನಿಮ್ಮನ್ನೇ ವರಿಸಲಿರುವಳು. ಮಾನಸಿಕ ದೌರ್ಬಲ್ಯದಿಂದಾಗಿ ಕೆಲವೊಂದು ದುರ್ವ್ಯಯ ಸಂಭವಿಸೀತು. ವಾರಾಂತ್ಯದ 4 ದಿನಗಳು ತುಂಬ ಪ್ರಶಸ್ತವಿವೆ.

೯. ಧನು

ವಿಪತ್ಪರಂಪರೆಗಳು ಸಮುದ್ರದಲೆಗಳಂತೆ ಮೇಲಿಂದ ಮೇಲೆ ಬರಲಿವೆಯಾದರೂ ಎದೆಯೊಡ್ಡಿ ಕರ್ತವ್ಯ ಕ್ಷೇತ್ರದಲ್ಲಿ ಮುಂದುವರಿವ ನಿಮ್ಮ ಎದೆಗಾರಿಕೆಗೆ ನಿಮ್ಮ ವಿರೋಧಿಯೂ ಕೂಡ ತಲೆದೂಗಲಿರುವನು. ಸಾಂಸಾರಿಕ ತಾಪತ್ರಯದಿಂದಲೂ ದೇಹಾಲಸ್ಯದಿಂದಲೂ ಚಿಂತೆಗೀಡಾದ ನಿಮಗೆ ಆರ್ಥಿಕ ಬಿಕ್ಕಟ್ಟು ಕಾಣಿಸಲಾರದು. ವಿದ್ಯೋಪಜೀವಿಗಳಿಗೀ ಕಾಲವು ತುಂಬ ಪ್ರತಿಕೂಲವಿದೆ. ತಾ. 6, 11, 12 ಈ ದಿನಗಳು ಇದ್ದುದರಲ್ಲಿ ಕ್ಷೇಮದಾಯಿಗಳಿವೆ.

೧೦. ಮಕರ

ನಿಸರ್ಗತಃ ಶುಭರಾದ ಬುಧ ಗುರು ಶುಕ್ರರ ಕೃಪಾಕಟಾಕ್ಷಕ್ಕೆ ಪಾತ್ರರಾಗಿರುವ ನಿಮಗೆ ಉದ್ಯೋಗ ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಭವಿತವ್ಯವಿದೆ. ಆರ್ಥಿಕ ಪರಿಸ್ಥಿತಿಯು ಹಿಂದಿಗಿಂತ ವಿಶೇಷ ಸುಧಾರಿಸಲಿದೆ. ಆದರೆ ಶತ್ರುಜನರ ಕಾಟವು ಅಸಹನೀಯವಿಹುದು. ವಾಕ್ಕಲಹ ಭೂ ಸಂಬಂಧ ವ್ಯವಹಾರದಲ್ಲಿ ನಷ್ಟಗಳೂ ಉಂಟಾದಾವು. ವಾರಾದಿಯ 3 ದಿನಗಳು ಅನುಕೂಲವಿವೆ.

೧೧. ಕುಂಭ

ಹೆಂಡತಿ ಮಕ್ಕಳೊಂದಾಗಿ ನಿಮ್ಮನ್ನು ಜಿಗಣೆಗಳಂತೆ ಪೀಡಿಸಲಿರುವರು. ನೀವೆಷ್ಟೇ ಶ್ರಮವಹಿಸಿ ದುಡಿದರೂ ದಿನಾಂತ್ಯದಲ್ಲಿ ಕೈ ಬರಿದಾಗುವದು. ಅತಏವ ಕಾಸು ಇಲ್ಲದ ನರ ಕಲ್ಲಿಗೆ ಸಮನೆಂಬ ಲೋಕೋಕ್ತಿಯು ಇಂದು ನಿಮ್ಮ ಅನುಭವಕ್ಕೆ ಬಂದೀತು. ಅಧಿಕಾರಿವರ್ಗದ ವಕ್ರದೃಷ್ಟಿಗೆ ಗುರಿಯಾದ ನಿಮಗೆ ಸ್ಥಾನಚ್ಯುತಿಯೂ ಉಂಟಾಗುವ ಸಂಭವವಿದೆ. ತಾ. 7ರಿಂದ 10ರ ವರೆಗಿನ ದಿನಗಳು ಇದ್ದುದರಲ್ಲಿ ಕ್ಷೇಮದಾಯಿಗಳು.

೧೨. ಮೀನ

ಕಷ್ಟಸಹಿಷ್ಣುಗಳಾದ ನಿಮಗೆ ದಿನಯಾಪನೆಯು ಸುಗಮವಾಗಲಿದೆ. ಪರಿಶ್ರಮಕ್ಕೆ ತಕ್ಕುದಾದ ಫಲವು ಲಭಿಸುವುದರಿಂದ ಆರ್ಥಿಕ ಬಿಕ್ಕಟ್ಟು ಕಾಣಿಸದು. ಗೃಹತಾಪತ್ರಯದಿಂದ ಮುಕ್ತರಾಗಿ ನೆಮ್ಮದಿಯಿಂದ ಕಾಲ ಕಳೆವಿರಿ. ಏಳೂವರೆ ಶನಿಯು ಅನಿರೀಕ್ಷಿತ ವಿಪತ್ತನ್ನೊಡ್ಡಲಿರುವನು. ಅಪ್ತೇಷ್ಟರೊಳ ವಿನಾಕಾರಣ ಮನಸ್ತಾಪವುಂಟಾದೀತು. ವಾರಾಂತ್ಯದ 4 ದಿನಗಳು ಇಷ್ಟಪ್ರದಗಳಿವೆ.

IN THE COURT OF THE CIVIL JUDGE OF UDIPI.

S. C. S. No. 9 of 1965.

Adiga Gopalakrishna Bhatta —*Plaintiff.*

and

P. N. Padmanabha Biliraya —*Defendant.*

To

The defendant P. N. Padmanabha Biliraya, son of Ananthakrishna Biliraya, residing at Perdur Village of Udipi Taluk, working at Mohan Cafe, Sidlaghatta of Kolar District, Mysore State.

Please take notice that the above plaintiff has filed a suit against you for recovery of pronote amount, and that it is posted to 3-6-1965 for notice to you. If you fail to appear before the said Court at 11 A.M. on the day mentioned above, the same will be decided in your absence.

T. K. KALKUR,
Advocate for Plaintiff.

Udipi, Dated 27-4-1965.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ —
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ —
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ರಿಪೇರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ.ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

Quality Air Cushion
Rubber Stamp

BALMATTA ROAD, MANGALORE.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪] ಮೇ, ೧೩, ೬೫ [ಸಂಚಿಕೆ ೩೭

Phone No.
ಫೋನ್ ನಂಬ್ರ: 226

leading nationalist weekly

೨೦
ಪೈಸೆ

ಕಥಾ ಪ್ರಪಂಚ

ಅಧಿಕಾರ ಜಮಾವಣೆ

ಬರೆದವರು
ಶ್ರೀ ಹಳೆನಾಡು ಸುಬ್ರಾಯ ಭಟ್ಟ.

ಶ್ಯಾಮಣ್ಣ ಮಾಸ್ತರರಿಗೆ ವರ್ಗವಾಗಿ ಬಂದ ಮೊದಲ ದಿನ ಊರಿನ ಗಣ್ಯವ್ಯಕ್ತಿ ಶ್ರೀಪತಿರಾಯರಿಂದ ಆದರದ ಕರೆ ಬಂದಿತ್ತು.

ಮನೆಗೆ ಕರೆಯಿಸಿ ಮಾಡಿಸಿದ ಉಪಚಾರವೆಂಬುದು ರಾಯರ ಶ್ರೀಮಂತಿಕೆಯನ್ನು ತೋರ್ಪಡಿಸುವ ಸಾಧನವೆಂಬುದು ಮಾಸ್ತರ ಗಮನಕ್ಕೆ ಬಾರದೆ ಹೋಗಿರಲಿಲ್ಲ.

ದೊಡ್ಡದಾದ ಸೌಧ; ಸಾಕಷ್ಟು ಆಳುಕಾಳುಗಳು. ಸದಾ ಗಾಂಭೀರ್ಯ ಮುಖಭಾವವುಳ್ಳ ಶ್ರೀಪತಿರಾಯರ ಮುಖದಲ್ಲಿ ಕಪ್ಪಾಗಿ ಹೊಳೆಯುವ ಗಡ್ಡಮೀಸೆ. ತಮ್ಮ ಹಿಂದಣ ಸಾಹಸ ಕಾರ್ಯಗಳನ್ನು ಬಣ್ಣಿಸುವ ವೈಖರಿ. ಇವೆಲ್ಲವೂ ಮಾಸ್ತರರು ತಮ್ಮ ಮುಂದಿನ ಕಾರ್ಯದಲ್ಲಿ ಅನುಸರಿಸಬೇಕಾದ ವಿಚಾರವನ್ನು ಅಪ್ರತ್ಯಕ್ಷವಾಗಿ ಪ್ರತಿಬಿಂಬಿಸುವಂತಿತ್ತು.

ಮೊದಲದಿನದ ಭೇಟಿಯಲ್ಲಿ ಎಲ್ಲದಕ್ಕೂ "ಹೂಂ" ಗುಟ್ಟಿಯೇ ಹೊರ ಹೊರಟಿದ್ದರು, ಮಾಸ್ತರರು.

ವರ್ಗವಾಗಿ ಬರುವ ಮೊದಲೇ ರಾಯರ ಖ್ಯಾತಿ ಸಾಕಷ್ಟು ಮಾಸ್ತರರ ಕಿವಿಗೆ ಬಿದ್ದಿತ್ತು. ತಾನು ಸಾಧ್ಯವಾದಷ್ಟು ಅವರಿಂದ ದೂರ ಉಳಿಯಬೇಕೆಂದೇ ನಿರ್ಧರಿಸಿದ್ದರು. ಆದರೆ ಊರಿನ ಪ್ರತಿಷ್ಠಿತ ವ್ಯಕ್ತಿ ಮೊದಲದಿನ ಕರೆದಾಗ ಒಲ್ಲೆಯೆನ್ನಲಾರದೆ ಒಲ್ಲದ ಮನದಿಂದಲೇ ತೆರಳಿದ್ದರು.

ಹಿಂದಣ ಇಬ್ಬರು ಉಪಾಧ್ಯಾಯರ ವರ್ಗಕ್ಕೂ ಕಾರಣ ರಾಯರಿಂದೇ ವದಂತಿ ಇತ್ತು. ಆ ವದಂತಿಗೆ ಸಾಕಷ್ಟು ಆಧಾರವೂ ಇತ್ತು.

o o o o

ಮೊದಲು ಹಲವು ಕಾಲ ಕೆಲಸ ಮಾಡಿದ ರಂಗಣ್ಣ ಮಾಸ್ತರರು ರಾಯರ ಕೈಗೊಂಬೆಯಾಗಿಯೇ ಇದ್ದಿದ್ದರು.

ರಾಯರ ಒಬ್ಬನೇ ಮಗ 'ರಾಜ' ಕಲಿಯುವುದರಲ್ಲಿ ಹಿಂದುಳಿದಿದ್ದರೂ ತರಗತಿಯಲ್ಲಿ ಮೇಲೇರುತ್ತಿದ್ದ. ಇದಕ್ಕೆ ಶ್ರೀಪತಿರಾಯರ ವರ್ಚಸ್ಸೇ ಕಾರಣವೆಂದು ಬೇರೆ ಹೇಳಬೇಕಾಗಿರಲಿಲ್ಲ.

ಮುಖ್ಯೋಪಾಧ್ಯಾಯರೇ ರಾಯರ ಕೈಗೊಂಬೆಯಾಗಿರುವಾಗ ಇತರ ಸಹಾಯಕರಾರೂ ಆ ಬಗ್ಗೆ ಏನನ್ನೂ ನುಡಿಯುತ್ತಿರಲಿಲ್ಲ.

ಪೋಲೀಸನಲ್ಲಿ ಮುಂದಾಳಾದ ರಾಜ ಒಂದು ದಿನ ತಮ್ಮ ನೆರೆತ ಮಗಳನ್ನೆ ಕೆಣಕಿದಾಗ ಹಿರಿಯ ಅಧಿಕಾರಿಗಳ ಕಾಲ್ಹಿಡಿದು ಮಾನ ಉಳಿಸಿಕೊಳ್ಳಲು ದೂರದ ಊರಿಗೆ ವರ್ಗಮಾಡಿಸಿ ಕೊಂಡರು.

ಅವರ ನಂತರ ಬಂದವರು ಸುಬ್ಬಣ್ಣ ಮಾಸ್ತರು. ಯಾರ ಹಂಗಿಗೂ ಒಳಗಾಗದೆ ಕೆಲವು ಕಾಲ ಕಳೆದರು.

ಆದರೆ ಎಂದಿನಂತೆ ರಾಜ ಮೇಲಕ್ಕೇರದಾಗ ಶ್ರೀಪತಿರಾಯರಿಂದ ಮಾಸ್ತರರಿಗೆ ಕರೆ ಬಂತು.

ಆಗ ತಾನೆ ಚುನಾವಣೆ ನಡೆದು ಕೆಲವೇ ಸಮಯವಾಗಿತ್ತು. ತಾಲೂಕು ಬೋರ್ಡಿನ ಅಧ್ಯಕ್ಷ ಪದವಿ ರಾಯರ ಕೊರಳಿಗೆ ಮಾಲೆ ಹಾಕಿತ್ತು. ಶಾಲೆಗಳ ಮೇಲ್ವಿಚಾರಣೆಯನ್ನೂ ಸರಕಾರ ತಾಲೂಕು ಬೋರ್ಡಿಗೆ ವಹಿಸಿತ್ತು.

ಶ್ರೀಮಂತಿಕೆಯ ಜೊತೆಗೆ ಅಧಿಕಾರ ದೊರಕಿದಾಗ ಸರಕಾರಿ ನೌಕರರನ್ನೆಲ್ಲಾ ಮನೆಯ ಆಳಿನಂತೆ ಕಾಣ ತೊಡಗಿದ್ದರು.

ಮನೆಗೆ ಬಂದ ಮಾಸ್ತರನ್ನು ಬಿಗುಮಾನದಿಂದಲೇ ಸ್ವಾಗತಿಸಿದರು. 'ಮಗನನ್ನು ಮೇಲ್ತರಗತಿಗೆ ಕಳಿಸಬೇಕೆ'ಂದಾಗ ಆದಕ್ಕೊಪ್ಪದ ಮಾಸ್ತರರ ಮೇಲೆ ಹರಿಹಾಯ್ದರು.

ಅದರ ಪರಿಣಾಮ ಮಾಸ್ತರರಿಗೆ ಎಂಟೇ ದಿನಗಳಲ್ಲಿ ತಿಳಿಯಿತು.

ದೂರದ ಮಲೆನಾಡು ಶಾಲೆಯೊಂದಕ್ಕೆ ವರ್ಗಾಯಿಸಿದ ಹುಕುಂ ಕೈಸೇರಿತ್ತು.

ಅವರ ಅನಂತರವೇ ಶ್ಯಾಮಣ್ಣ ಮಾಸ್ತರರು ಬಂದಿದ್ದರು.

ಮಾಸ್ತರರ ವಯಸ್ಸು ಐವತ್ತಕ್ಕೆ ಸಮೀಪಿಸಿತ್ತು. ಕೆಲಸದಲ್ಲಿ ಕಟ್ಟುನಿಟ್ಟಾಗಿಯೇ ಇದ್ದಿದ್ದರು. ಶಿಸ್ತೆಂಬುದು ಜೀವನದಲ್ಲಿ ಹಾಸು ಹೊಕ್ಕಾಗಿತ್ತು.

ಮೊದಲದಿನ ತರಗತಿ ಪ್ರವೇಶ ಮಾಡುವಾಗಲೇ ಮೇಲೆದ್ದು ತೋರಿಸಿದ ವ್ಯಕ್ತಿ ರಾಜ.

ವಿಶೇಷ ತರದ ಉಡುಪು, ವೃಥಕಾಯವಾದ ಶರೀರ. ಸದಾ ತಂಟೆಖೋರ ತನದ ಮುಖಭಾವ.

ಮೂವತ್ತರು ತುಂಬಿದ ಸಂಸಾರದಲ್ಲಿ ಹೋರಾಟ ನಡೆಯಿಸಿಯೇ ಬಣಕಲಾಗಿದ್ದರು. ಚಿಂತೆಯಿಂದಲೇ ಮುಪ್ಪು ಸಮೀಪಿಸಿದಂತಿತ್ತು.

ಬಡ ಶರೀರದ ಮಾಸ್ತರರನ್ನು ನೋಡಿ ರಾಜನ ತುಟಿಗಳಂಚಿನಲ್ಲಿ ಮೆಲುನಗೆಯೊಂದು ಸುಳಿಯದೆ ಹೋಗಲಿಲ್ಲ.

ಆ ನಗುವೆಂಬುದು ಹದ್ದಿನ ಕಣ್ಣಿನ ಮಾಸ್ತರರ ಗಮನಕ್ಕೆ ಬಾರದೆ ಉಳಿಯಲಿಲ್ಲ.

ರಾಜನ ವಿಚಾರ ಸಹಾಯಕರಿಂದ ಆ ರಿತೀ ತರಗತಿ ಪ್ರವೇಶಿಸಿದ್ದರು. ಮೊದಲ ದಿನವೇ ಆತನ ಪರಿಚಯದ ಅರಿವಾಯಿತು.

o o o o

ತಂದೆ-ತಾಯಿಗಳು ಮುದ್ದಿನಿಂದ ಬೆಳೆಸಿದ ಒಬ್ಬನೇ ಮಗನನ್ನು ವರ್ಷ ಹತ್ತರ ನಂತರವೇ ಶಾಲೆಗೆ ಕಳಿಸಿದ್ದರು.

ತಂದೆ ತಾಯಿಗಳ ಪ್ರೀತಿ ಮಗನನ್ನು ಅಡ್ಡದಾರಿಗೆ ಎಳೆಸಿತ್ತು. ಒಂಭತ್ತನೇ ತರಗತಿಯನ್ನು ಪ್ರವೇಶಿಸಿದ ರಾಜನ ವಯಸ್ಸು ಇಪ್ಪತ್ತಕ್ಕೆ ಕಡಿಮೆ ಇರಲಿಲ್ಲ. ಮುಖದಲ್ಲಿ ಚಿಗುರು ಮೀಸೆ ಮೊಳೆತಿತ್ತು.

ಬೇಕೆಂದಾಗ ತರಗತಿ ಪ್ರವೇಶಿಸಿ ಮನಬಂದಾಗ ಹೊರಟು ಹೋಗುತ್ತಿದ್ದ ರಾಜನ ವರ್ತನೆ ಶ್ಯಾಮಣ್ಣ ಮಾಸ್ತರರಿಗೆ ಸಹಿಸಲಾಗಲಿಲ್ಲ.

ಜೀವನದಲ್ಲಿ ಕಲಿಯಬೇಕಾದ ಶಿಸ್ತಿನ ಕೇಂದ್ರ ಶಾಲೆ. ಅಲ್ಲಿಯೇ ಅದರ ಸಮಾಧಿಯಾಗುವುದು ರಾಷ್ಟ್ರ ಘಾತುಕತನವೆಂದೇ ಭಾವಿಸಿದರು.

ರಾಜನನ್ನು ನಾಲ್ಕಾರು ಬಾರಿ ತಮ್ಮ ಆಫೀಸು ರೂಮಿಗೆ ಕರೆಯಿಸಿಕೊಂಡು ಸಾಕಷ್ಟು ಬುದ್ಧಿವಾದವನ್ನೂ ಹೇಳಿದ್ದಾಯಿತು.

ಆದರೆ ಎಲ್ಲವೂ ಕೋಣನ ಮುಂದೆ ವೀಣೆ ಬಾರಿಸಿದಂತೆ ನಿರರ್ಥಕವಾಯಿತು.

ಮಕ್ಕಳೆಲ್ಲರೂ ಆತನಿಗೆ ಹೆದರುತ್ತಲೇ ಇದ್ದರು. ದಿನಕ್ಕೊಂದು ಆರೋಪ ರಾಜನ ಮೇಲಿರುತಿತ್ತು.

ಸಹನಾ ಮೂರ್ತಿ ಎಂದೆನಿಸಿಕೊಂಡ ಮಾಸ್ತರರ ಸಹನೆಯನ್ನೇ ಪರೀಕ್ಷಿಸಿಗಿಟ್ಟತ್ತು.

ಆತನನ್ನು ಸುಧಾರಿಸಲು ಹೆತ್ತವರಿಗೆ ಹೇಳಿದ್ದಾಯಿತು. ಅದರಿಂದಾವ ಪ್ರಯೋಜನವೂ ಕಂಡು ಬರಲಿಲ್ಲ.

ಒಂದು ದಿನ ಮಾಸ್ತರರು ಅಶಾಂತಿಯಿಂದಲೇ ಮನೆಯಿಂದ ಹೊರಟಿದ್ದರು.

ಶಾಲೆಯ ಒಳ ಪ್ರವೇಶಿಸವಾಗಲೇ ಅಳುವಿನ ದನಿ ಕೇಳಿಸಿತು.

ಮಕ್ಕಳನ್ನ ವಿಚಾರಿಸಿದ್ದಾಯಿತು. ಬಡ ಹುಡುಗ ಶಂಕರನ ಮೂಗಿನಿಂದ ರಕ್ತ ಒಸರುತಿತ್ತು. ರಾಜನ ಮುಷ್ಟಿ ಪ್ರಯೋಗವೇ ರಕ್ತ ಒರಲು ಕಾರಣವೆಂಬದು ತಿಳಿಯಿತು.

ಮೊದಲ ದಿನ ಪಕ್ಕದ ಮನೆಯ ಹಿತ್ತಲಿನಿಂದ ಆತನು ಕಿತ್ತಳೆ ಹಣ್ಣನ್ನು ಕದ್ದು ತರಲಿಲ್ಲವೆಂದೇ ಆತನಿಗೆ ರಾಜನಿಂದ ಶಾಸ್ತಿಯಾಗಿತ್ತು.

ವಿಚಾರ ಕೇಳಿದ ಮಾಸ್ತರರ ಕೋಪ ನೆತ್ತಿಗೇರಿತು.

ಕೋಪದ ಭರದಲ್ಲಿ ತಟಯದುರಿತು. ರೋಮಗಳೆಲ್ಲಾ ನಿಮಿರಿ ನಿಂತುವು. ಮೂಲೆ ಹಾಲಾದ ನಾಗರ ಬೆತ್ತವನ್ನೇ ಕೈಗೆತ್ತಿ ಕೊಂಡರು.

ಮಾಸ್ತರರ ವೇಷ ನೋಡಿ ಆ ವೇಳೆಯಲ್ಲಿಯೂ ರಾಜನ ಮುಖದಲ್ಲಿ ನಗೆ ಹೊರ ಸೂಸುತಿತ್ತು.

"ರಾಜ ...!" ಅಬ್ಬರಿಸಿದರು.

"..................."

"ಕತ್ತೆ ! ನಿಲ್ಲಲ್ಲಿ!"

ಕುಳಿತೇ ಇದ್ದನು.

"ಏಳೋ ಕತ್ತೆ!" ಎಂದು ರಟ್ಟೆ ಹಿಡಿದು ಮೇಲೆಬ್ಬಿಸಿದರು.

"ಯಾಕೆ ಹೊಡೆದೆ, ಬೊಗಳೋ ಮೊದಲು."

ಮಾಸ್ತರರ ಆವೇಶ ನೋಡಿ ರಾಜನ ಎದೆ ಢವ ತೊಡಗಿತು.

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ
ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7¾
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	... .	4

ದಿ ಪಾಂಗಾಳ ನಾಯಕ್
ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

ಶ್ರೀ ಸ್ವಾಮಿ ಚಿನ್ಮಯಾನಂದ ಮೀಮಾಂಸೆ

ಗೀತಾ-ದ್ವಿತೀಯಾಧ್ಯಾಯ

ಸಂಗ್ರಹಕರ್ತೆ
ಶ್ರೀಮತಿ ಆನಂದಿ ಸದಾಶಿವ ರಾವ್.

ಆಧುನಿಕ ವಿಜ್ಞಾನ ಯುಗದಲ್ಲಿ ಗೀತಾ, ಉಪನಿಷತ್ತುಗಳಿಂದ ಏನು ಪ್ರಯೋಜನ ದೊರಕೀತು? ನಮ್ಮ ಸಮಸ್ಯೆಗಳ ಪರಿಹಾರ ಅವುಗಳ ಮುಖಾಂತರ ದೊರಕಲು ಸಾಧ್ಯವಾದೀತೇ? ಎಂಬ ಪ್ರಶ್ನೆ ಎಲ್ಲರಲ್ಲೂ ಮೂಡುತ್ತದೆ. ಈ ಜೀವನವನ್ನು ಬಾಳುವುದೇ ಒಂದು ಸಮಸ್ಯೆಯಾಗಿದೆ. ಹಾಗಿರುವಾಗ ಈ ಗೀತಾ ಪಠಣವೆಂಬ ಇನ್ನೊಂದು ಸಮಸ್ಯೆಯನ್ನು ನಮ್ಮ ಕಷ್ಟಗಳೊಡನೆ ಹೊರಲು ಯಾರೂ ಇಚ್ಛಿಸರು. ಆದರಿಂದ ಈ ಗೀತಾ ಪಠಣವನ್ನು, ನಮ್ಮ ಈಗಿನ ಸಮಸ್ಯೆಗಳ ಪರಿಹಾರಕ್ಕೆ ತಕ್ಕುದಾದ ಏನಾದರೂ ಕ್ರಮವನ್ನು ಹುಡುಕಿ ತೆಗೆಯಲು, ಅದನ್ನು ನಮ್ಮ ದಿನನಿತ್ಯದ ವ್ಯಾವಹಾರಿಕ ಜೀವನದಲ್ಲಿ ಉಪಯೋಗಿಸಲು ಸಾಧ್ಯವಿದೆಯೋ ಎಂಬ ಒಂದು ಶೋಧನಾತ್ಮಕ ದೃಷ್ಟಿಯಿಂದ ನೋಡಬೇಕು. ಗೀತೆಯು ಎರಡು ಸಾವಿರ ಯಾ ನಾಲ್ಕು ಸಾವಿರ ವರ್ಷಗಳ ಹಿಂದೆ ಒಬ್ಬ ಕೃಷ್ಣನು, ಒಬ್ಬ ಅರ್ಜುನನಿಗೆ ಭಾರತ ಯುದ್ಧವು ಇದಿರಾದಾಗ ಬೋಧಿಸಿದ ಗ್ರಂಥವಾಗಿರುವುದು. ಆದರೆ ಆ ಒಬ್ಬ ಕೃಷ್ಣನು ಹೇಳಿದ ಮಾತು, ಆ ಒಬ್ಬ ಅರ್ಜುನನ ಸ್ಥಿತಿಯಲ್ಲಿದ್ದವನಿಗೆ ಭಾರತ ಯುದ್ಧವನ್ನು ಇದಿರಿಸಲು ಸಾಧ್ಯವಾಗದೆ ಹತಾಶನಾದಂತವನಿಗೆ ಕೊನೆಗೆ, ತನ್ನ ಪೌರುಷವನ್ನು ಪಡೆಯುವಂತೆ ಮಾಡಿತು ಎಂದ ತಿಳಿದರೆ, ಆ ಗ್ರಂಥವು, ನಮ್ಮ ಇದಿರಾದ ವ್ಯಾವಹಾರಿಕ ಜೀವನದ ಕಷ್ಟ ಪ್ರಸಂಗಗಳನ್ನು ಇದಿರಿಸಲು ನಮಗೆ ಆವಶ್ಯವಿರುವ ಚೈತನ್ಯ, ಉತ್ಸಾಹ, ಶೌರ್ಯವನ್ನು ಕೊಡಬಹುದು

ಹಿಂದಿನ ಕಾಲದಿಂದ ವೈಜ್ಞಾನಿಕ ಪ್ರಗತಿಯಾಗಿದ್ದರೂ, ಮಾನವನು ಬದಲಾಗಿಲ್ಲ. ಅವನ ದೇಹ ರಚನೆ ಬದಲಾಗಿಲ್ಲ. ಆದರಿಂದ ಮಾನವನು ಆ ಕಾಲದಲ್ಲಿ ಇದ್ದಂತೆ ಇರುವನು. ಆದರಿಂದಾಗಿ ಗೀತೆಯು ಆ ಕಾಲದಲ್ಲಿಯು ಮಾನವನಿಗೆ ಉತ್ಸಾಹವನ್ನು ತಿಳುವಳಿಕೆಯನ್ನು, ತನ್ನತನವನ್ನು ತಿಳಿಸಿತೆಂಬಾಗ ಈಗಲೂ ಆ ಕಾರ್ಯವನ್ನು ಮಾಡೀತು ಎನಿಸುವುದು.

ಈಗ ಭಾರತ ದೇಶವು ವಿದೇಶೀ ಸಹಾಯದಿಂದ ತನ್ನ ಆದಾಯ ಹೆಚ್ಚವನ್ನು ಮತ್ತು ಔದ್ಯೋಗಿಕ ಪ್ರಗತಿಯನ್ನು ಪಡೆಯಲು ಪ್ರಯತ್ನಿಸಿ ವಿಫಲವಾಗಿದೆ. ಭಾರತವು ತನ್ನದೇ ಆದ ವಿಶಿಷ್ಟ ಗುಣದ ಕೈಗಾರಿಕಾ, ಮಿತವ್ಯಯದ ಪ್ರಗತಿಯನ್ನು ಭಾರತ ದೇಶದ ಜನಜೀವನ ಮಟ್ಟದ ಸುಧಾರಣೆಯ ಪಥವನ್ನು ಅನುಸರಿಸಬೇಕಾಗಿದೆ. ಅಮೇರಿಕಾ ದೇಶದ ಅನುಕರಣೆಯಾಗಲೀ, ಚೀನಾ ದೇಶದ ಅನುಕರಣೆಯಾಗಲೀ, ಆ ಎರಡು ದೇಶಗಳ ಸಹಾಯವಾಗಲೀ, ಭಾರತಕ್ಕೆ ಹಿತವಾಗದು ಎಂದು ಈಗ ತಿಳಿದು ಬಂದಿದೆ. ಹಾಗಿರುವಾಗ ಸಾಂಸ್ಕೃತಿಕ ರಂಗದಲ್ಲೂ ಭಾರತೀಯ ಸಂಸ್ಕೃತಿಯೇ ನಮಗೆ ಬೇಕು. ಆದಕ್ಕಾಗಿ ನಾವು ಹಿಂದಿನ ಶಾಸ್ತ್ರ ಗ್ರಂಥಗಳನ್ನು ಪುನರ್ವಿಮರ್ಶಿಸಬೇಕಾಗಿದೆ.

ಈಗ ದೇಶದ ಎಲ್ಲಾ ಕಡೆಗಳಲ್ಲೂ ನೈತಿಕ ಪತನದ ಕೂಗು ಕೇಳಬರುತ್ತಿದೆ. ಇದು ಇತರ ಚಾರಿತ್ರ್ಯ, ನಡತೆಯ ಅಧಃಪತನದಿಂದಾಗಿದೆ. ಅದಕ್ಕಾಗಿ ನಡತೆಯನ್ನು ಚಾರಿತ್ರ್ಯವನ್ನು ಪುನರ್ ಘಟಿಸಬೇಕಾಗಿದೆ, ಈ ಗೀತಾಭ್ಯಾಸದಿಂದ ಒಬ್ಬನ ವ್ಯಕ್ತಿತ್ವ, ನಡತೆ ಮತ್ತು ಚಟುವಟಿಕೆಗಳು, ಹಿಂದಿಗಿಂತ ಸುಧಾರಣೆ ಹೊಂದೀತು, ವಿಕಸನವಾದೀತು, ಎಂದು ತಿಳಿದರೆ, ಅದರಿಂದ ನಮ್ಮ ಜೀವನವನ್ನು ಹೆಚ್ಚಿನ ಸುಖ ಶಾಂತಿಯಿಂದ ನಾವು ಬಾಳಲು ಅರಿತರೆ ಅದು ಸಾಕು.

ಈಗ ನಾವು ಜೀವನವನ್ನು ಬಾಳುವ ರೀತಿಯನ್ನು ತಿಳಿದಿಲ್ಲ. ಆದರಿಂದಾಗಿ ಕಷ್ಟ ಪಡುತ್ತಿರೇವೆವು, ಭೌತಿಕ ಶಕ್ತಿ ನಿಯಮಗಳು ಕೂಡಾ ನಮ್ಮಿಂದ ಒಂದಿನಿತು ಉಲ್ಲಂಘಿಸಲ್ಪಟ್ಟರೆ ತಕ್ಷಣ ಅದು ನಮಗೆ ಬುದ್ಧಿ ಕಲಿಸುವುದು.

ಉದಾ:— ಭೂಮಿಯ ಗುರುತ್ವಾಕರ್ಷಣ ಶಕ್ತಿ. ಮತ್ತು ವಿದ್ಯುತ್ ಶಕ್ತಿ. ನಾವು ಅವುಗಳಿಗೆ ವ್ಯತಿರಿಕ್ತವಾಗಿ ಹೋದರೆ, ತಕ್ಷಣ ಅದರ ಪರಿಣಾಮವು ತಿಳಿಯುವುದು, ಒಂದು ವಸ್ತು ಮೇಲಿನಿಂದ ಕೆಳಕ್ಕೆ ಬಿದ್ದೇ ಬೀಳುವುದು. ವಿದ್ಯುತ್ ಶಕ್ತಿಯನ್ನು ಸರಿಯಾಗಿ ಉಪಯೋಗಿಸದೆ ಅದರ ಷಾಕ್ ಹೊಡೆಯುವುದು, ಭೌತಿಕ ರೀತಿ ನಿಯಮಗಳಿಗೆ, ಪ್ರಕೃತಿಯ ಕಾನೂನುಗಳಿಗೆ, ಕಣ್ಣಿಲ್ಲ ಕಿವಿಯಿಲ್ಲ ಅವು ಯಾವ ಮನುಷ್ಯನ ಸ್ಥಾನ, ಮಾನ, ವಿದ್ಯೆಯನ್ನು ಗೌರವಿಸುವುದಿಲ್ಲ. ಕಾನೂನುಗಳಿಗೆ ಸರಿಯಾಗಿ ನಡೆದರೆ ಸರಿ. ಪ್ರತಿಕೂಲವಾಗಿ ನಡೆದರೆ ತಕ್ಷಣ ಅವುಗಳು ತೀರ್ಮಾನ ಕೊಟ್ಟೇಕೊಡುವುವು. ಹಾಗಿರುವಾಗ ಈ ಭೌತಿಕ ವಿಜ್ಞಾನ ಶಾಸ್ತ್ರವನ್ನು ನಾವು ಅರಿತೆವು ಎಂದೂ ಹೇಳುವುದೂ, ತಪ್ಪು, ಕೇವಲ ನಮ್ಮ ಬುದ್ಧಿವಂತಿಕೆಯಿಂದ ಪ್ರಕೃತಿಯ ಕೆಲವೊಂದು ತತ್ವಗಳನ್ನು ಅರಿತು ಅವುಗಳ ನಿಯಮಗಳಿಗೆ ಬಾಗಿಯೇ ನಾವು ನಮ್ಮ ಸೌಕರ್ಯಕ್ಕಾಗಿ, ಅವುಗಳಿಂದ ಪ್ರಯೋಜನ ಪಡೆಯುತ್ತಿರುವೆವು. ಆದರಿಂದಾಗಿ ನಾವು ಪ್ರಕೃತಿಯನ್ನು ಗೆದ್ದೆವು ಎಂದು ಹೇಳಲು ಸಾಧ್ಯವಿಲ್ಲ.

ಒಂದು ನಗರಕ್ಕೆ ನಳ್ಳಿ ನೀರು ಬರಲು ಕೂಡಾ, ನೀರಿನ ಮಟ್ಟದ ನಿಯಮವನ್ನು ಹಾಕಿದ್ದ ಎಲ್ಲಾ ಕೊಳವೆಗಳೂ, ಪರಿಪಾಲಿಸುವುದೇ ಕಾರಣವಾಗಿದೆ; ಹೊರತು ಆ ನಿಯಮವನ್ನು ಉಲ್ಲಂಘಿಸಿದರೆ ನೀರು ನಳ್ಳಿಯಿಂದ ಯಾರು ತಿರುಗಿಸಿದರೂ ಇಳಿಯಲಾರದು. ಹೀಗೆ ನಾವು ಪ್ರಕೃತಿಯ ನಿಯಮಗಳಿಗೆ ತಲೆಬಾಗಿರುವೆವು.

ಭೌತಿಕ ವಿಜ್ಞಾನ ಶಾಸ್ತ್ರದ ನಿಯಮಗಳನ್ನು ವಿಜ್ಞಾನ ಸಾರುವಂತೆ ಉಪನಿಷದ್, ಗೀತಾ ಗ್ರಂಥಗಳು ಮಾನವನ ಅಂತರ್ ಜಗತ್ತಿನ ನಿಯಮಗಳನ್ನು ಸಾರುವುವು. ಅವುಗಳನ್ನು ಅರಿತರೆ ನಮ್ಮ ಬಾಳನ್ನು ನಾವು ಹೆಚ್ಚಿನ ಉತ್ಸಾಹದಿಂದ ಬಾಳಬಹುದು. ನಮ್ಮ ಇದಿರಿನ ಸಮಸ್ಯೆಗಳನ್ನು ಹಿಂದಿನಂತೆ ಹೆಚ್ಚಿನ ಗಲಿಬಿಲಿಯಿಂದ ಇದಿರಿಸದೆ ಕೊಂಚ ಸ್ಥೈರ್ಯದಿಂದ ಇದಿರಿಸಬಹುದು. ಈ ಗ್ರಂಥಗಳನ್ನು ನಮಗೆ ಅಭ್ಯಸಿಸಲು ಸಾಧ್ಯವಿದೆಯೆ? ಎಂದು ನೋಡೋಣ.

ಈಗ ನಮ್ಮ ಮುಂದೆ ಇರುವ ಒಂದೇ ಒಂದು ಸಮಸ್ಯೆ, ನಾವು ಹೇಗೆ ಬದುಕುವುದು ಎಂದು. ಈ ಅನಿಶ್ಚಿತ ವಾತಾವರಣದಲ್ಲಿ ಎಂದು ನಮಗೆ ಏನಾಗುವುದೋ ಎಂದು ಭೀತಿ ಆವರಿಸತೊಡಗಿದೆ. ವಿಜ್ಞಾನದ ಮುನ್ನಡೆಯಿಂದಾಗಿ ಕೆಲವರು ಈಗ ಪ್ರಪಂಚವು ಒಂದು ಸಿಡಿಮದ್ದಿನ ಮೇಲೆ ಇದೆಯೆಂದೂ, ಅದು ಎಂದು ಸ್ಫೋಟನ ಹೊಂದುವುದೆಂದು ತಿಳಿಯದು ಎಂದು ಗಾಬರಿಯ ಮಾತು ಆಡುತ್ತಿರುವರು. ನಮಗೆ ನಾವು ಈ ದಿನ ಹೇಗೆ ಕಳೆಯೇವು ಎಂಬ ಒಂದೇ ಯೋಚನೆ ಅಲ್ಲದೆ ನಾವು ಕಷ್ಟ ಬರುವ ಮುನ್ನ ಒಮ್ಮೆ ಕಣ್ಮುಚ್ಚಿದರೆ ಸಾಕು ಎಂಬ ಅಭಿಪ್ರಾಯವೂ ಇದೆ.

ಇದು ನಮ್ಮಲ್ಲಿ ಮಾತ್ರವಲ್ಲ ಈ ತರಹದ ಸಂದಿಗ್ಧ ವಾತಾವರಣ ಇಡೀ ಪ್ರಪಂಚದ ಎಲ್ಲಾ ಕಡೆಗಳಲ್ಲಿ ಹರಡಿದೆ. ವೈಜ್ಞಾನಿಕ ಮುನ್ನಡೆಯಿಂದ ಸುಖ ಸೌಕರ್ಯಗಳ ಸಂಗ್ರಹಣದಿಂದ ಪ್ರಾಪಂಚಿಕತೆಯ ಪರಮಾವಧಿಯಿಂದ ಇಂತಹ ಭೀತಿ ಮಾನವ ಜನಾಂಗವನ್ನೇ ಆವರಿಸಿದೆ. ಹಣ ಕಾಸು ಮತ್ತು ಸುಖ ಸೌಕರ್ಯಗಳು ಹೆಚ್ಚಿದಂತೆ ಜನರ ಮನದಲ್ಲಿ ಒಂದು ಅನಿಶ್ಚಿತತೆಯ ವಾತಾವರಣ ತುಂಬುವುದು ಸಹಜ. ಇತರ ರಾಷ್ಟ್ರಗಳಲ್ಲಿ ಹಬ್ಬಿದ ಈ ಭೀತಿ ನಮ್ಮ ದೇಶದಲ್ಲೂ ಹರಡಿದೆ. ಅದಕ್ಕಾಗಿ, ಈ ಅನಿಶ್ಚಿತತೆಯ ಭೀತಿಯನ್ನು ಮರೆಯಲು ಜನರು ವಿಷಯ ಲೋಲುಪರಾಗುವುದರಲ್ಲಿ ಆಶ್ಚರ್ಯವಿಲ್ಲ. ತಮ್ಮ ಮನದ ತಳಮಳವನ್ನು ಒಂದು ಕ್ಷಣ ಮರೆಯಲು ಜನರು ಹೀಗೆ ವಿಷಯಾದಿಗಳ ಕಡೆ ಮನಸ್ಸನ್ನು ಹರಿಸಿ ಅದರಲ್ಲಿ ಒಂದು ಕ್ಷಣ ಸುಖ ಸಮಾಧಾನ ಪಡೆಯಲು ಇಚ್ಛಿಸುವರು. ಆದರಿಂದಾಗಿ

(ಹನ್ನೆರಡನೇ ಪುಟ ನೋಡಿರಿ)

ಹಣದ ಗಿಲಿಗಿಲಿ ನಿನಾದವು ನಿಮಗೆ ಮೆಚ್ಚಿಗೆಯಲ್ಲವೇ?

ಜೀವಮಾನದ ಮುಂದಿನ ದಿನಗಳಲ್ಲಿ ನೀವು ಸಂಪತ್ತಿನಲ್ಲಿರುವ ಕಲ್ಪನೆಯು ಎಷ್ಟೊಂದು ಆಹ್ಲಾದಕರವಾದುದು! ಅದಕ್ಕೆ ನೀವು ಮಾಡಬೇಕಾದದ್ದು ಉಳಿತಾಯದ ಯೋಜನೆ. ಪ್ರತೀ ತಿಂಗಳ ಆದಿಯಲ್ಲಿ ಸ್ವಲ್ಪ ಸ್ವಲ್ಪ ಹಣವನ್ನು ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿಸಿರಿ................. ನಿಮ್ಮ ಮಿಗಿತಾಯವು ಬೆಳೆಯುತ್ತಿರುವುದನ್ನು ಅವಲೋಕಿಸಿರಿ. ಕೆಲವು ವರ್ಷಗಳಲ್ಲಿ ನಿಮ್ಮ ಉಳಿತಾಯ ಸಂಕಲದ ನಾದ ಮಾಧುರ್ಯದಿಂದ ರೋಮಾಂಚನಗೊಳ್ಳುವಿರಿ. ಕಾರಣ, ಸುಖಕರವಾದ ಜೀವನದ ಭರವಸೆಯನ್ನು ಅದು ಧ್ವನಿಸುವುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 200ರಕ್ಕೂ ಮಿಕ್ಕಿ.

ಚಲಾವಣಾ ನಿಧಿ: ರೂ. 70 ಕೋಟಿಗೂ ಮಿಕ್ಕಿ.

ಶ್ರೀ ಕೆ.ಕೆ. ಶೆಟ್ಟಿ, ಎಂ.ಎಲ್.ಸಿ.ಯವರ ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು-:
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಕಚ್ ಪ್ರದೇಶದಲ್ಲಿ

ಪಾಕ್ ಆಕ್ರಮಣದ ಕತೆ

ಅಜ್ಞಾತವಾಗಿದ್ದ ಕಚ್ ಇಂದು ಅತಿಜ್ಞಾತವಾಗಿದೆ. ಭಾರತ–ಪಾಕಿಸ್ತಾನ ಘರ್ಷಣೆಯಿಂದಾಗಿ ಇದರ ಹೆಸರು ಎಲ್ಲೆಡೆಯೂ ಹರಡಿದೆ. ಈ ಪ್ರದೇಶವು ೯ ಸಾವಿರ ಮೈಲು ವಿಸ್ತಾರವಿದ್ದರೂ ಬಹು ಭಾಗವು ೬೦೦ ಅಡಿಗಳಿಗೂ ಹೆಚ್ಚು ತಗ್ಗಿನಲ್ಲಿದೆ; ಇಲ್ಲಿ ಏನೂ ಬೆಳೆಯದು; ಏಕೆಂದರೆ ಇದು ಶುಷ್ಕ ಭೂಮಿ. ಒಂದೆಡೆ ಸಿಂಧ್ ಪ್ರಾಂತದ ಒಣ ಸಮುದ್ರ ತೀರ, ಇನ್ನೊಂದೆಡೆ ಅರಬ್ಬೀ ಸಮುದ್ರದ ಒಂದಂಚು. ಈ ಭೂಭಾಗದಲ್ಲಿ ಸಂವತ್ಸರ ೧೨ರಿಂದ ೧೫ ಅಂಗುಲದಷ್ಟು ಮಳೆ ಬರುವುದು. ಕನಿಷ್ಠ ಉಷ್ಣಾಂಶ ಜನವರಿಯಲ್ಲಿ ೪೦ರಿಂದ ೪೫ ಡಿಗ್ರಿಯಷ್ಟು, ಮೇ ತಿಂಗಳಲ್ಲಿ ೯೦-೯೫ ಡಿಗ್ರಿಯಷ್ಟು. ಅತ್ಯಧಿಕ ಉಷ್ಣಾಂಶವೆಂದರೆ ೧೧೦ ಡಿಗ್ರಿ. ಹೀಗಾಗಿ ಕಚ್ ಪ್ರದೇಶ ಕಣ್ಣಿಗೆ ಬಂಡೋ ಬರಡು. ಸಸ್ಯ ಸಂಪತ್ತಿಲ್ಲದ ಕಲ್ಲು ಭೂಮಿ. ಮರಗಳೇ ಇಲ್ಲದ ಬಂಡು ನೆಲ.

ಸಿಂಧದ ಗಡಿ ಉಲ್ಲೇಖ

೧೯೦೭ರಲ್ಲಿ ಕರಾಚಿಯಲ್ಲಿ ಸಿಂಧ ಪ್ರಾಂತಕ್ಕೆ ಸಂಬಂಧಿಸಿದ ಅಧಿಕೃತ ಗಜೆಟಿಯರ್ ಅದರ ಗಡಿಯನ್ನು ಹೀಗೆ ಪ್ರಕಟಿಸಿದೆ: ಪೂರ್ವದಲ್ಲಿ ಮಾರವಾಡ, ಜಯಸಾಲ್ಮಿಡಿ ಮತ್ತು ಭವಾಲ್‌ಪುರ ದೇಶೀಯ ರಾಜ್ಯಗಳ ಗಡಿಗಳು, ಉತ್ತರದಲ್ಲಿ ಪಂಜಾಬ ಪ್ರಾಂತದ ಒಂದಿಷ್ಟು ಭಾಗ ಮತ್ತು ಕಲತಖಾನಗೆ ಸೇರಿದ ಭೂಭಾಗವಾಗಿರುವ ಮರುಭೂಮಿ. ಪಶ್ಚಿಮದಲ್ಲಿ ಕಲತಖಾನ ಪಾಳಯಕ್ಕೆ ಸೇರಿದ ಇತರ ಭೂಭಾಗಗಳು. ಈ ಪ್ರದೇಶದಲ್ಲಿ ಗಡಿ ರೇಖೆಯು ಖಿರ್ತರ ಪರ್ವತ ಶ್ರೇಣಿಯನ್ನು ಹಾದುಕೊಂಡು ಹೋಗುತ್ತದೆ. ಜೊತೆಗೆ ಹಬ್ ನದಿ ಕೂಡ ಗಡಿ ರೇಖೆಯನ್ನು ಸೂಚಿಸುತ್ತದೆ. **ದಕ್ಷಿಣಕ್ಕೆ ಅರಬ್ಬಿ ಸಮುದ್ರ ಮತ್ತು ಕಚ್ ಭೂಭಾಗ.** ಕಚ್ಛ ಪ್ರದೇಶವು ಸಿಂಧ ರಾಜ್ಯಕ್ಕೆ ಸೇರಿದ್ದಲ್ಲವೆಂಬುದು ೧೯೦೭ರಲ್ಲೇ ಘೋಷಿತವಾದಂತಾಯಿತು.

೧೯೦೯ರಲ್ಲಿ ಪ್ರಕಟವಾದ ಇಂಪೀರಿಯಲ್ ಗಜೆಟಿಯರ್ ಆಫ್ ಇಂಡಿಯಾದಲ್ಲಿ ಕೂಡ ಸಿಂಧ ಪ್ರಾಂತದ ಗಡಿಗಳ, ದಕ್ಷಿಣದಲ್ಲಿ ಕಚ್ ಭೂಭಾಗ ಮತ್ತು ಅರಬ್ಬೀ ಸಮುದ್ರಗಳೆಂಬುದು ದೃಢೀಕೃತವಾಗಿದೆ. ೧೯೧೪ರಲ್ಲಿ ಬ್ರಿಟಿಷ್ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಇವರು ಪ್ರಕಟಿಸಿದ ಇಂಪೀರಿಯಲ್ ಗಜೆಟಿಯರಿನ ಪ್ರಕಾರವೂ ಕಚ್ಛವು ಸಿಂಧದ ಗಡಿಯಾಗಿದೆ. ಬ್ರಿಟಿಷ ಸರಕಾರವು ಪ್ರಕಟಿಸಿದ ನಕ್ಷೆಗಳೂ ಸಿಂಧ ಪ್ರಾಂತ್ಯದ ಮತ್ತು ಕಚ್ ದೇಶೀ ರಾಜ್ಯದ ಗಡಿಯನ್ನು ಸ್ಪಷ್ಟವಾಗಿ ಸೂಚಿಸುತ್ತವೆ.

೧೯೧೪ರಲ್ಲಿ ಸಿಂಧ ಪ್ರಾಂತವು ಕಚ್ಛ ರಾಜ್ಯದ ರಾಜರೊಡನೆ ಗಡಿ ಸಂಬಂಧವಾದ ತನ್ನ ಬೇಡಿಕೆಯನ್ನು ಮುಂದಿಟ್ಟಿತು. ಈ ಬೇಡಿಕೆಯು ಕೆಲವು ಸಣ್ಣ ಪುಟ್ಟ ಪ್ರದೇಶಗಳಿಗೆ ಮಾತ್ರ ಅನ್ವಯಿಸಿತ್ತು. ೧೯೧೩ರ ಫೆಬ್ರವರಿ ೨೪ರಂದು ಮುಂಬಯಿ ಪ್ರಾಂತ ಸರಕಾರವು ಕಚ್ಛ ಮತ್ತು ಸಿಂಧಗಳ ಗಡಿಯನ್ನು ಸ್ಪಷ್ಟವಾಗಿ ನಿರ್ಧರಿಸಿತು. ಆಗಲೇ ಗಡಿ ಸೂಚಕ ಕಂಬಗಳನ್ನೂ ನಾಟಲಾಯಿತು. ಸಿಂಧದ ಗವರ್ನರ, ಕಚ್ಛದ ರಾಜರು ಮತ್ತು ಬ್ರಿಟಿಷ್ ಸರಕಾರದ ಪ್ರತಿನಿಧಿಗಳಿಗೆ ತಿಳಿದಂತೆಯೇ ಈ ಕಾರ್ಯ ನಡೆಯಿತು.

ಮೇಲಿನ ನಿರ್ಧಾರದನ್ವಯ ಒಂದು ತ್ರಿಕೋಣಾಕಾರದ ಗಡಿ ಭೂಭಾಗವನ್ನು ಆಗಲೇ ಸಿಂಧಕ್ಕೆ ಬಿಟ್ಟು ಕೊಡಲಾಗಿತ್ತು. ಇಂದಿಗಾದರೂ ಇದು ಸಿಂಧದಲ್ಲಿಯೇ ಇರುವುದು. ೧೯೧೦ರಲ್ಲಿ ಸಿಂಧದಲ್ಲಿದ್ದ ಬ್ರಿಟಿಷ ಕಮಿಷನರರು ಒಂದು ಮಾತನ್ನು ಹೇಳಿದ್ದರು: "ಸಿಂಧ ಮತ್ತು ಕಚ್ಛಗಳ ಮಧ್ಯೆ ಗಡಿ ನಿರ್ಣಯಕ್ಕೆ ಸಂಬಂಧಿಸಿದ ಸಾಕ್ಷಿ ಸಾಹಿತ್ಯ ಸಾಕಷ್ಟು ಇದೆ. ೧೮೫೭ರಿಂದಲೂ ಈ ಬಗ್ಗೆ ದಾಖಲೆಗಳು ಸ್ಥಾಪಿತವಾಗಿವೆ. ಅಂದಿನಿಂದೀಚೆಗೆ ಪ್ರಕಟವಾಗಿರುವ ಎಲ್ಲ ಭೂಪಟಗಳಲ್ಲಿಯೂ ಈ ಗಡಿ ಬಹಳ ಸ್ಪಷ್ಟವಾಗಿಯೇ ತೋರಿಸಲ್ಪಟ್ಟಿದೆ.

೧೯೦೯ರಲ್ಲಿ ಭಾರತೀಯ ದೇಶೀರಾಜ್ಯಗಳು ತಯಾರಿಸಿದ ಒಂದು ಅಧಿಕೃತ ಮನವಿಪತ್ರದಲ್ಲಿ ಭೂಪಟವೊಂದನ್ನು ಪ್ರಕಟಿಸಲಾಗಿತ್ತು. ೧೯೩೯-೪೦ರ ಸರ್ವೇ ಕಾರ್ಯಕ್ರಮಗಳ ಸಾಮಾನ್ಯ ವರದಿಯಲ್ಲೂ ಒಂದು ಭೂಪಟವಿತ್ತು. ಕಚ್ಛದಲ್ಲಿ ಅಸಿಸ್ಟೆಂಟ್ ಪೊಲಿಟಿಕಲ್ ಏಜಂಟ್ ಆಗಿದ್ದ ರೇಕ್ಸರವರ ಒಂದು ಗ್ರಂಥವನ್ನೂ ಇಲ್ಲಿ ಉಲ್ಲೇಖಿಸಬಹುದು. ಈ ಎಲ್ಲಾ ಆಧಾರಗಳಿಂದಲೂ ಕಚ್ ಭೂಭಾಗವೇ ಸಿಂಧದ ದಕ್ಷಿಣಗಡಿಯನ್ನು ನಿರ್ಧರಿಸುತ್ತದೆ ಎಂದು ವ್ಯಕ್ತವಾಗುತ್ತದೆ. ೧೯೩೭, ೩೮ ಮತ್ತು ೪೨ರಲ್ಲಿ ಬ್ರಿಟಿಷ ಸರಕಾರದ ರಾಜಕೀಯ ಇಲಾಖೆಯು ಪ್ರಕಟಿಸಿದ ದಾಖಲೆಗಳೂ ಕಚ್ಛ ಭೂಭಾಗವು ಯಾವ ಕಾಲದಲ್ಲೂ ಸಿಂಧದ ಭಾಗವಾಗಿರಲಿಲ್ಲವೆಂದೂ ಪಾಕಿಸ್ತಾನವು ಮುಂದೆ ಮಾಡುತ್ತಿರುವ ಗಡಿ ವಿವಾದವು ಹುರುಳಿಲ್ಲದುದೆಂದೂ ಗೊತ್ತಾಗುವುದು.

ಪಾಕ್ ಬೇಡಿಕೆಯ ಆರಂಭ

೧೯೪೮ರಲ್ಲಿ ಪಾಕಿಸ್ತಾನವು ಮೊತ್ತ ಮೊದಲಿಗೆ ಆಧಾರರಹಿತ ಬೇಡಿಕೆಯೊಂದನ್ನು ಮುಂದಿಟ್ಟು ಕಚ್ ರಾಣ ಪ್ರದೇಶದ ಕೆಲವು ಭಾಗಗಳನ್ನು ಕೇಳಿತು. ಬ್ರಿಟಿಷ ಸರಕಾರವು ಬಹಳ ಸ್ಪಷ್ಟವಾಗಿ ಮತ್ತೆ ಮತ್ತೆ ಈ ಗಡಿಯನ್ನು ಗೊತ್ತು ಮಾಡಿದೆಯೆಂದ ಮೇಲೆ ಈ ವಿವಾದಕ್ಕೆ ಯಾವ ಆಸ್ಪದವೂ ಇಲ್ಲ. ಆಕ್ರಮಣ ನಡೆಸಿದ ಮಾತ್ರಕ್ಕೆ ಬೇಡಿಕೆಗೆ ಯಾವ ಬಲವೂ ಬರುವುದಿಲ್ಲ. ಅದಕ್ಕೆ ಬದಲಾಗಿ ಇದು ಪಾಕಿಸ್ತಾನದ ಭೂದಾಹವನ್ನು ಮಾತ್ರ ಸೂಚಿಸುತ್ತದೆ.

ಪಾಕಿಸ್ತಾನವು ತನ್ನ ಬೇಡಿಕೆಗೆ ಮುಖ್ಯವಾಗಿ ಮೂರು ಕಾರಣಗಳನ್ನು ಮುಂದಿಟ್ಟಿತ್ತು. ಭಾರತ ಸರಕಾರವು ಇದಕ್ಕೆ ಸಮರ್ಪಕವಾದ ಉತ್ತರವನ್ನೂ ನೀಡಿತ್ತು.

ಪಾಕ್ ಕಾರಣಗಳು

೧. ಕಚ್ಛ ರಾಣದ ಪ್ರದೇಶವನ್ನು ೧೭೬೨ರಲ್ಲಿ ಸಿಂಧದ ದೊರೆ ಆಕ್ರಮಿಸಿಕೊಂಡರು.

೨. ೧೮೭೫ರಲ್ಲಿ ಸಿಂಧದ ಅಧಿಕಾರಿಯೊಬ್ಬನು ಮಾಡಿದ ವರದಿಯ ಮೇರೆಗೆ ಕಚ್—ಸಿಂಧ ಗಡಿಯು ರಾಣ ಪ್ರದೇಶದ ಮಧ್ಯಭಾಗದಲ್ಲಿರುವ ಧರ್ಮಶಾಲಾದಲ್ಲಿತ್ತು.

೩. ರಾಣ ಪ್ರದೇಶವು ಸುತ್ತಲೂ ಭೂಮಿಯಿಂದ ಆವರಿಸಲ್ಪಟ್ಟಿರುವ ಒಂದು ಜಲ ಭಾಗವೂ ಅಲ್ಲ; ಅಥವಾ ಗಡಿ ನಿರ್ಣಯಿಸುವ ಜಲ ಭಾಗವೂ ಅಲ್ಲ. ಅಂತಾರಾಷ್ಟ್ರೀಯ ಗಡಿ ನಿಬಂಧನೆಗಳ ಪ್ರಕಾರ ಈ ಪ್ರಸಂಗದಲ್ಲಿ ಗಡಿಯು ರಾಣ ಪ್ರದೇಶದ ಮಧ್ಯಭಾಗದಲ್ಲಿ ಹಾದು ಹೋಗಬೇಕು.

ಭಾರತದ ಉತ್ತರಗಳು

೧. ಸಿಂಧದ ದೊರೆ ಈ ಪ್ರದೇಶದ ಮೇಲೆ ತನ್ನ ಅಧಿಕಾರವನ್ನುಳಿಸಿಕೊಂಡ ಬಗ್ಗೆ ಯಾವ ಆಧಾರವೂ ಇಲ್ಲ. ಈ ಪ್ರದೇಶದಲ್ಲಿ ನೆಲೆ ನಿಲ್ಲಿಸಿದ್ದ ಸೇನಾಪಡೆಯನ್ನು ಅವನ ನಂತರ ಅವನ ಮಗನು ವಾಪಸು ಕರೆಸಿಕೊಂಡನು.

೨. ಇಡಿ ರಾಣ ಪ್ರದೇಶದ ಮೇಲೆ ಕಚ್ ದರಬಾರಿನ ಅಧಿಕಾರ ಇತ್ತೆಂಬ ಅಂಶವನ್ನು ಸಾರ್ವಭೌಮ ಸರಕಾರ ಯಾವಾಗಲೂ ಅಂಗೀಕರಿಸಿದೆ.

೩. ರಾಣ ಪ್ರದೇಶವನ್ನು ಒಂದು ಜಲಭಾಗವೆಂದು ಪರಿಗಣಿಸುವುದಕ್ಕೆ ಬದಲಾಗಿ ಒಂದು ಕೊಚ್ಚೆ ಪ್ರದೇಶವೆಂದು ಪರಿಗಣಿಸುವುದು ಹೆಚ್ಚು ಸೂಕ್ತವಾಗುತ್ತದೆಯೆಂದು ಭಾರತ ಸರಕಾರದ ವಿದೇಶ ವ್ಯವಹಾರ ಶಾಖೆಯು ೧೯೦೬ರಲ್ಲಿ ನಿರ್ಧರಿಸಿತ್ತು.

ಪರಿಶೀಲನೆ

ಈ ಗಡಿ ವಿಭಾಗವನ್ನು ಭಾರತ-ಪಾಕಿಸ್ತಾನ್ ಪ್ರಧಾನಿಗಳಿಬ್ಬರೂ ಪರಿಶೀಲಿಸಿದ್ದಾರೆ. ೧೯೫೯ರಲ್ಲಿ ಒಂದು ಒಪ್ಪಂದಕ್ಕೆ ಬಂದು ಗಡಿಗುರುತು ಮಾಡುವ ಕಾರ್ಯವನ್ನು ಉಭಯ ರಾಷ್ಟ್ರಗಳ ಸರ್ವೆ ಇಲಾಖೆಗಳಿಗೆ ಒಪ್ಪಿಸಲು ಮತ್ತು ಈ ಬಗ್ಗೆ ಅವು ಪ್ರಥಮ ಗಮನ ಕೊಡುವಂತೆ ಮಾಡಲು ಒಪ್ಪಿದರು. ಇದರಂತೆ ಪಂಜಾಬ— ಪಾಕಿಸ್ತಾನ, ರಾಜಸ್ತಾನ– ಪಶ್ಚಿಮ ಪಾಕಿಸ್ತಾನಗಳ ಗಡಿ ಗುರುತು ಮಾಡಲಾಗಿದೆ. ಭಾರತ ಸರಕಾರದ ಸರ್ವೇ ಇಲಾಖೆಯು ಅನೇಕ ವೇಳೆ ಒತ್ತಾಯ ಮಾಡಿದ್ದರೂ ಪಾಕ್ ಸರ್ವೆ ಅಧಿಕಾರಿಗಳು ಸಭೆಗಳಲ್ಲಿ ಭಾಗವಹಿಸಲು ನಿರಾಕರಿಸುತ್ತ ಬಂದಿದ್ದಾರೆ. ಇದರಿಂದಾಗಿಯೇ ಗುಜರಾತ— ಪಶ್ಚಿಮ ಪಾಕಿಸ್ತಾನಗಳ ಗಡಿಯು ಇನ್ನೂ ಅನಿರ್ಧಾರಿತವಾಗಿಯೇ ಉಳಿದಿದೆ; ಹೀಗಾಗಿಯೇ ಇಂದಿನ ಗಡಿವಿವಾದಕ್ಕೆ ಎಡೆದೊರೆತಿದೆ.

ಪಾಕ್ ಅಸಹಕಾರ

ಕಚ್ಛದ ಮೇಲೆ ಪಾಕಿಸ್ತಾನವು ತನ್ನ ಕೆಟ್ಟ ದೃಷ್ಟಿಯನ್ನು ಇಟ್ಟಿರುವುದೇ ಪಾಕ್ ಅಸಹಕಾರಕ್ಕೆ ಕಾರಣ. ಸಭೆಯಲ್ಲಿ ಮಾತುಕತೆಗೆ ಕುಳಿತಾಗ ಅಧಿಕೃತ ದಾಖಲೆಗಳನ್ನು ಮಾನ್ಯ ಮಾಡಲೇ ಬೇಕಾಗುತ್ತದೆ. ೧೯೬೦ರಲ್ಲಿ ಮಂತ್ರಿ ಮಟ್ಟದ ಮಾತುಕತೆಯ ವೇಳೆಯೂ ಈ ವಿಚಾರ ಮತ್ತೆ ಚರ್ಚೆಗೆ ಬಂತು. ಕಚ್—ಸಿಂಧ ಗಡಿ ವಿಷಯವಾಗಿ ಇನ್ನೂ ಹೆಚ್ಚಿನ ದಾಖಲೆಗಳನ್ನು ಸಂಗ್ರಹಿಸಬೇಕೆಂದು ಉಭಯ ರಾಷ್ಟ್ರಗಳೂ ಆಗ ಒಪ್ಪಿದುವು. ಈ ವಿವಾದವನ್ನು ಕೊನೆಯದಾಗಿ ತೀರ್ಮಾನಿಸಲು ಮುಂದೆ ಮಾತುಕತೆಗಳು ನಡೆಯಬಹುದೆಂದೂ ಆಗ ನಿರ್ಧರಿಸಲಾಗಿತ್ತು.

ಆಗಸ್ತ ೧೨, ೧೯೬೦ರಂದು ಪ್ರಧಾನಿ ನೆಹರು ಈ ಬಗ್ಗೆ ಒಂದು ಹೇಳಿಕೆಯನ್ನು ಪಾರ್ಲಿಮೆಂಟಿನ ಮುಂದೆ ಮಂಡಿಸಿದರು: "ನಮ್ಮ ಮಟ್ಟಿಗೆ ಗಡಿ ವಿವಾದವೇ ಇಲ್ಲ. ಎರಡು ಮೂರು ವರ್ಷಗಳಿಗೆ ಹಿಂದೆ ಈ ಬಗ್ಗೆ ಒಂದಿಷ್ಟು ಮಾತುಕತೆ ನಡೆದಿತ್ತು. ಪಾಕಿಸ್ತಾನವೇ ಈ ಪ್ರಶ್ನೆಯನ್ನು ಎತ್ತಿತ್ತು. ಆದರೆ ನಾವು ಗಡಿವಿವಾದವಿದೆಯೆಂದು ಭಾವಿಸುವುದಿಲ್ಲ."

ಅಧಿಕೃತ ದಾಖಲೆ ಮತ್ತು ನಕ್ಷೆಗಳ ಆಧಾರದ ಮೇಲೆ ಮಾತಾಡಲು ಪಾಕಿಸ್ತಾನ ನಿರಾಕರಿಸುತ್ತದೆ. ಮಿಲಿಟರಿ ಬಲದ ಮೂಲಕ ತನಗೆ ಬೇಕಾಗುವಷ್ಟು ಭೂಮಿಯನ್ನು ಪಡೆದುಕೊಳ್ಳುವುದು ಅದರ ಅಪೇಕ್ಷೆ.

ಅನ್ಯಾಯದ ಆಕ್ರಮಣ

೧೯೫೬ರ ಮೇ ೧೨ರಂದು ಮೂವರು ಪಾಕ್ ರಾಷ್ಟ್ರೀಯರು ಕಚ್ ಪ್ರದೇಶದ ಕಂಜರ ಕೋಟೆ ಬಳಿ ಸುಳಿದಾಡುತ್ತಿರುವುದು ಕಂಡು ಬಂತು. ದಾರಿತಪ್ಪಿ ಇಲ್ಲಿ ಬಂದಿರಬಹುದೆಂದು ಅವರನ್ನು ಬಿಡುಗಡೆ ಮಾಡಲಾಗಿತ್ತು.

೧೯೫೬ ಜನವರಿ ೨೫ರಂದು ಪಾಕಿಸ್ತಾನಿಗಳು ಭಾರತೀಯ ಗಡಿಯೊಳಕ್ಕೆ ಸುಮಾ

(ಹತ್ತನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.
ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.
ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿ. ಆಫೀಸು– "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

Phone No. 226

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ರಿಪೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಸ್ವಾತಂತ್ರ್ಯ ಹೋರಾಟದ ನೇತಾರ ನೇತಾಜಿ. ಇವರು ಇನ್ನೂ ಬದುಕಿದ್ದಾರೆಯೆ ಎಂಬ ಕುರಿತು ಇನ್ನೂ ವಿವಾದ ನಡೆಯುತ್ತಲೇ ಇದೆ.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೩೭	೧೩—೫—೧೯೬೫	No. 37

ಸಮರ ವಿರಾಮ

ಭಾರತ ಮತ್ತು ಪಾಕಿಸ್ತಾನಗಳು ಸಮರ ವಿರಾಮವನ್ನು ಕೈಕೊಂಡು, ತಮ್ಮ ಗಡಿತಂಟೆಯನ್ನು ಶಾಂತ ರೀತಿಯಿಂದ ಬಗೆಹರಿಸಬೇಕೆಂದು ಲೋಕದ ಅನೇಕ ರಾಷ್ಟ್ರನಾಯಕರುಗಳು ಕಳಕಳಿಯ ಕರೆ ಇತ್ತಿರುತ್ತಾರೆ. ಈ ಸಲಹೆ ಸ್ವಾಗತಾರ್ಹವೂ ಹೌದು; ಸ್ವೀಕಾರಾರ್ಹವೂ ಹೌದು. ಭಾರತವಾಸರೂ ಹಿಂದಿನಿಂದಲೂ ವಾದ ವಿವಾದ ಪರಿಹರಿಸುವಲ್ಲಿ ಶಾಂತಯುತ ಮಾರ್ಗಗಳಿಗೇನೇ ಶರಣು ಹೋದ ರಾಷ್ಟ್ರವಾಗಿರುತ್ತದೆ. ಎಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲೂ ಅದು ಪಂಚ ಶೀಲದ ತತ್ವದ ವಿರುದ್ಧ ಹೋದುದಿಲ್ಲ. ಈಗಲಾದರೂ ತನ್ನ ನೆರೆಯ ರಾಷ್ಟ್ರವಾದ ಪಾಕಿಸ್ತಾನದ ಜತೆಗೆ ಆದು ಮೈತ್ರಿ ಭಾವದಿಂದ ಇರಲು ಯತ್ನಿಸುತ್ತಿದೆಯಲ್ಲದೆ ಯುದ್ಧ ಮಾಡುವ ಇಚ್ಛೆ ಸರ್ವಥಾ ಭಾರತ ಸರಕಾರಕ್ಕಿಲ್ಲ. ಇದನ್ನು ನಮ್ಮ ಪ್ರಧಾನ ಮಂತ್ರಿಗಳು ಪದೇ ಪದೇ ಸ್ಪಷ್ಟಪಡಿಸಿದ್ದಾರೆ.

ಆದರೆ ಸಮರ ವಿರಾಮವು ಯಾವ ನಿಟ್ಟಿನಲ್ಲಿ ನಡೆಯಬೇಕೆಂಬುದೊಂದು ಪ್ರಶ್ನೆ. ಪಾಕಿಸ್ತಾನವು ಈಗಾಗಲೇ ಭಾರತದ ನೆಲವನ್ನು ಕಬಳಿಸಿ ಠಾಣ್ಯಗಳನ್ನು ಸ್ಥಾಪಿಸಿದೆ. ಆಕ್ರಮಿತ ಸ್ಥಳವನ್ನು ತೆರವು ಮಾಡದೆ, ಸಮರ ವಿರಾಮದ ಸೂಚನೆ ಸ್ವೀಕಾರಾರ್ಹವಲ್ಲ ಎಂಬುದು ನಮ್ಮ ಸರಕಾರದ ಧೋರಣೆಯಾಗಿದೆ. ಕಳೆದ ಜನವರಿ ೧ರಂದ ಇದ್ದ ಯಥಾಸ್ಥಿತಿಯನ್ನು ಕಾಯ್ದುಕೊಂಡ ಬಳಿಕವೇ ಇತರ ಮಾತುಕತೆಗಳು ಎಂಬ ವಿಚಾರವನ್ನು ನಮ್ಮ ಪ್ರಧಾನಿಗಳು ಸ್ಪಷ್ಟಪಡಿಸಿರುತ್ತಾರೆ. ಭಾರತದ ಗೌರವಕ್ಕೆ ಕುಂದು ತರುವಂತಹದಾವುದೇ ಸಂಧಾನ ಮಾರ್ಗವನ್ನು ಭಾರತ ಸ್ವೀಕರಿಸುವುದಿಲ್ಲ. ಆಕ್ರಮಣ ತೆರವು ಮಾಡದಿದ್ದರೆ, ಅದನ್ನು ತೆರವು ಮಾಡಿಸುವುದು ಹೇಗೆಂಬುದು ಕೂಡಾ ಭಾರತಕ್ಕೆ ತಿಳಿದಿದೆ ಎಂಬರ್ಥದ ಮಾತುಗಳನ್ನು ನಮ್ಮ ಪ್ರಧಾನಿಗಳು ಆಡಿರುತ್ತಾರೆ. ಇದು ನಿಜಕ್ಕೂ ಸ್ವಾಗತಾರ್ಹವಾದ ಹಾಗೂ ಧೀರೋದಾತ್ತ ನಿಲುವಾಗಿದೆ.

ಬ್ರಿಟನಿನ ಪ್ರಧಾನಿ ವಿಲ್ಸನರು ಸೂಚಿಸಿರುವ ತಳಹದಿಯಲ್ಲಿ ಯುದ್ಧ ವಿರಾಮವನ್ನು ಕೈಕೊಳ್ಳಬೇಕೆಂಬುದು ಬ್ರಿಟನಿನ ನಿಲುವಾಗಿದೆ. ಬ್ರಿಟನಿನ ಸೂಚನೆಗಳೇನೆಂಬುದು ಈ ವರೆಗೆ ಬಹಿರಂಗಗೊಳಿಸಲ್ಪಟ್ಟಿಲ್ಲ. ಆದರೆ ಆ ಸೂಚನೆಗಳ ಕುರಿತು ಭಾರತ ಸರಕಾರದ ಅಭಿಪ್ರಾಯವನ್ನು ತಿಳಿಸಲಾಗಿದೆ ಎಂದೂ ಪ್ರಧಾನಿಯವರು ಹೇಳಿರುತ್ತಾರೆ. ಪಾಕಿಸ್ತಾನವಾದರೂ ತನ್ನದೇ ಆದ ಮೊಂಡುವಾದವನ್ನು ಮುಂದಿಟ್ಟುಕೊಂಡು ಹಠಮಾರಿತನದ ಧೋರಣೆಯನ್ನೇ ತಾಳಿದೆ. ತಾನು ಆಕ್ರಮಿಸಿರುವ ಸ್ಥಳವನ್ನು ತೆರವು ಮಾಡುವ ಇಚ್ಛೆ ಅದಕ್ಕಿದ್ದಂತೆ ಕಾಣುವುದಿಲ್ಲ. ಶಾಂತಿ ಮಾರ್ಗದಲ್ಲಿ ಈ ಸಮಸ್ಯೆಯು ಪರಿಹಾರವಾಗದಿದ್ದಲ್ಲಿ, ಭಾರತಕ್ಕೆ ಯುದ್ಧವಲ್ಲದೆ ಬೇರೆ ಮಾರ್ಗವೇ ಇರುವುದಿಲ್ಲ. ಅಂತೂ ದೇಶದ ಸಮಗ್ರತೆಯ ರಕ್ಷಣೆಯಲ್ಲಿ, ಗಡಿಗಳ ಸಂರಕ್ಷಣೆಯಲ್ಲಿ ಭಾರತವು ಪ್ರತ್ಯಕ್ಷ ಯುದ್ಧಕ್ಕಿಳಿಯ ಬೇಕಾದ ಪರಿಸ್ಥಿತಿಯೂ ಬಂದೀತು.

ಭಾರತ — ಪಾಕಿಸ್ತಾನಗಳ ನಡುವೆ ಮಂತ್ರಿ ಮಟ್ಟದ ಸಭೆ ಜರಗಬೇಕು ಹಾಗೂ ಈ ತಂಟೆಯನ್ನು ೧೯೬೦ರ ಒಪ್ಪಂದದನ್ವಯ ಒಂದು ನ್ಯಾಯ ಮಂಡಳದ ಪರಿಶೀಲನೆಗೆ ಒಪ್ಪಿಸಬೇಕೆಂಬ ಸೂಚನೆಯೂ ಇದೆ. ಈ ಸೂಚನೆಯ ಕುರಿತು ಈಗಲೇ ಸರಕಾರವು ತಥಾಸ್ತು ಎಂದಿಲ್ಲ. ಯಥಾಸ್ಥಿತಿ ಕಾಯ್ದುಕೊಂಡ ಬಳಿಕವೇ ಎಲ್ಲಾ ಸೂಚನೆಗಳನ್ನು ಪರಿಶೀಲಿಸಲಾಗುವುದೆಂಬ ತಮ್ಮ ದೃಢ ಸಿದ್ಧಾಂತವನ್ನು ಪ್ರಧಾನಿಯವರು ಸಾರಿರುತ್ತಾರೆ. ಆಕ್ರಮಣಗಾರರ ಬೆದರಿಕೆಗೆ ಸೊಪ್ಪು ಹಾಕುವ ರಾಷ್ಟ್ರ ಭಾರತವಲ್ಲ; ಶಾಂತಿ ಹಾಗೂ ಸಂಧಾನದ ನೆವದಲ್ಲಿ ತನ್ನ ಗೌರವವನ್ನು ಅದೆಂದಿಗೂ ಕಳೆದುಕೊಳ್ಳುವುದಿಲ್ಲ ಎಂದು ಅವರು ಹೇಳಿರುತ್ತಾರೆ. ಭಾರತವು ಶಾಂತಿಪ್ರಿಯ ರಾಷ್ಟ್ರವಾದರೂ, ತನ್ನ ಸಾರ್ವಭೌಮತೆಗೆ ಧಕ್ಕೆ ಬಂದಾಗ ಅದು ಸಮರಕ್ಕಾದರೂ ಸಿದ್ಧವೇ ಎಂದು ಅವರು ನುಡಿದಿದ್ದಾರೆ. ದೇಶದ ಸ್ವಾತಂತ್ರ್ಯ ರಕ್ಷಣೆಯ ಭಾರ ಎಲ್ಲಕ್ಕಿಂತಲೂ ದೊಡ್ಡದೆಂಬುದನ್ನು ಅವರು ಮನವರಿಕೆ ಮಾಡಿಕೊಟ್ಟಿರುತ್ತಾರೆ.

ಈ ಸಂದರ್ಭ ಮಿತ್ರ ರಾಷ್ಟ್ರಗಳು ಉಪದೇಶದ ಮಾತುಕತೆಗಳನ್ನಾಡುತ್ತಿರುವುದೇ ಹೊರತು, ಯೋಗ್ಯ ಕಾರ್ಯದತ್ತ ಮನ ನೀಡುತ್ತಿಲ್ಲ. ಪಾಕಿಸ್ತಾನದ ಅಧ್ಯಕ್ಷ ಆಯೂಬರು ಬಹಿರಂಗ ಸಭೆಯಲ್ಲಿ ಅಮೆರಿಕನ್ ಶಸ್ತ್ರಾಸ್ತ್ರಗಳ ಬಳಕೆಯ ಕುರಿತು ದೃಢೀಕರಿಸಿದರೂ. ಈ ಕುರಿತು ಪಾಕಿಸ್ತಾನದ ವರ್ತನೆಯನ್ನು ಪ್ರಶ್ನಿಸುವ ದಿಟ್ಟತನವನ್ನು ಅಮೆರಿಕ ತೋರಲಿಲ್ಲ! ಕಮ್ಯುನಿಸ್ಟ್ ಚೀನಾದತ್ತ ಕೈ ಚಾಚಿರುವ ಪಾಕಿಸ್ತಾನದ ವರ್ತನೆಯ ಕುರಿತು ಅಮೆರಿಕ ಮೌನ ತಾಳಿರುವುದು ನಿಜಕ್ಕೂ ಆಶ್ಚರ್ಯದ ವಿಚಾರ!

ಪಶ್ಚಿಮ ಗಡಿಯಲ್ಲಿ ಮಾತ್ರವಲ್ಲ ಪೂರ್ವ ಗಡಿಯಲ್ಲೂ ಪಾಕಿಸ್ತಾನವು ಗುಂಡಿನ ಮಳೆ ಸುರಿಸಲಾರಂಭಿಸಿದೆ. ಚೀನಾ—ಪಾಕಿಸ್ತಾನಗಳ ಕೂಟ ತಂತ್ರವಿದೆಂದು ಬೇರೆ ಹೇಳಬೇಕಾಗಿಲ್ಲ. ರಾಷ್ಟ್ರದ ಉತ್ತರ ಹಾಗೂ ಪೂರ್ವ ಪಶ್ಚಿಮ ಗಡಿಗಳು ಈಗ ಗಂಡಾಂತರದಲ್ಲಿವೆ. ಈ ಸಂದರ್ಭ ದೇಶದ ಜನತೆ ಒಂದಾಗಿ ದಿಟ್ಟತನವನ್ನು ತೋರಬೇಕಾದುದು ಅಗತ್ಯ.

ಸಮರ ವಿರಾಮದ ಹೆಸರಲ್ಲಿ ಭಾರತದ ನೆಲವನ್ನು ಬಿಟ್ಟು ಕೊಡುವ ಯಾವ ಸೂಚನೆಗೂ ಭಾರತವು ಒಪ್ಪಕೂಡದು. ಉತ್ತರದಲ್ಲಿ ಚೀನೀಯರ ಏಕಮುಖ ಸಮರ ವಿರಾಮದಿಂದ ನಾವು ಬಹಳಷ್ಟು ನಷ್ಟ ಹೊಂದಿದ್ದೇವೆ. ಪಾಕಿಸ್ತಾನದ ಸಂಚು ಇದೇ ರೀತಿ ಇರಬಹುದು. ಆದರೆ ಸರಕಾರವು ಇದಕ್ಕೆ ಆಸ್ಪದ ಕೊಡದೆ, ಆಕ್ರಮಣಗಾರರನ್ನು ಹೊಡೆದಟ್ಟಿಯೇ ತೀರಬೇಕು. ನಮ್ಮ ಸೇನಾಬಲ, ನಮ್ಮ ಜನಬಲ, ನಮ್ಮ ಮನೋಬಲದಿಂದ ಈ ಕಾರ್ಯವು ಖಂಡಿತಕ್ಕೂ ಸಾಧ್ಯವಿದೆ: "ಆಕ್ರಮಣ ತೆರವು ಮಾಡಿದರೆ ಕೂಡೋಣ—ಇಲ್ಲವಾದರೆ ಕಾದೋಣ" ಎಂಬ ದೃಢ ನಿಲುವೆ ಎಂದೆಂದಿಗೂ ಅಚಲವಾಗಿರಲಿ.

ಕಾಶ್ಮೀರದ ಹುಲಿ

ಕಾಶ್ಮೀರದ ಮಾಜಿ ಪ್ರಧಾನಿ ಶೇಖ್ ಅಬ್ದುಲ್ಲಾರವರನ್ನು ಪುನಃ ಸ್ಥಾನಬದ್ಧತೆಯಲ್ಲಿಡಲಾಯಿತು. ವಿದೇಶದಿಂದ ಮರಳಿ ಬಂದ ಕೂಡಲೇ ಅವರನ್ನು ಬಂಧಿಸಿ ಉದಕಮಂಡಲಕ್ಕೆ ಕರೆದೊಯ್ಯಲಾಗಿದೆ. ಇಲ್ಲಿ ಅವರನ್ನು ಸ್ಥಾನಬದ್ಧತೆಯಲ್ಲಿಡಲಾಗುವುದು.

ಭಾರತದ ಕುರಿತು ಮಿತಿಮೀರಿ ವಿದೇಶ

(ಹದಿನಾಲ್ಕನೇ ಪುಟ ನೋಡಿರಿ)

ವಚನ ಸುಧೆ.

ದೇವ ಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಂ ||

(ತೈತ್ತಿರೀಯ ಉಪನಿಷತ್, ೧-೧೧)

೦ ವಿದ್ವಾಂಸ ಮತ್ತು ತಂದೆ ತಾಯಿಗಳ ಕರ್ತವ್ಯಗಳಲ್ಲಿ ಆಲಸ್ಯ ತೋರಿಸ ಬೇಡ.

೦೦ ತಂದೆ, ತಾಯಿ, ಗುರು ಮತ್ತಿತರ ಶ್ರೇಷ್ಠ ಸಜ್ಜನರ ಆಜ್ಞೆಯನ್ನು ಸದಾ ಪಾಲಿಸು. ಇವರನ್ನು ಸೇವಿಸು. ಇವರಿಗೆ ಯಾವ ಸಂದರ್ಭದಲ್ಲೂ ಕಷ್ಟವೀಯ ಬೇಡ. ಉಚಿತಾಚರಣೆಯಿಂದ ಇವರನ್ನು ಸದಾ ಸಂತುಷ್ಟರನ್ನಾಗಿ ಮಾಡು; ಸನ್ಮಾನಿಸು.

ನರಸಣ್ಣನ ಸರಸ



"ಕಾಶ್ಮೀರದ ಹುಲಿಯನ್ನು ಬಂಧಿಸಿ ಉದಕಮಂಡಲಕ್ಕೆ ಕೊಂಡೊಯ್ದುದೇಕಂತಲ್ಲಾ?"

"ಹೌದು, ಉದಕಮಂಡಲಕ್ಕೆ 'ದಕ್ಷಿಣ ಕಾಶ್ಮೀರ' ಎಂಬ ಅನ್ವರ್ಥ ನಾಮ ಈ ಹುಲಿಯ ದೆಸೆಯಿಂದ ಬರದಿದ್ದರೆ ಸಾಕು!"

ಲಘು ಬರಹ

ಇದು ನೋಡಿ, ವ್ಯಾಪಾರ!

ಲೇಖಕರು:— ಶ್ರೀ ಕು. ಗೋ.

"ಮನೆಯಲ್ಲಿ ಒಂದು ಚೂರೂ ಸಾಮಾನಿಲ್ಲ, ಅಡಿಗೆ ಮಾಡುವುದು ಹೇಗೆ? ಊಟದ ಹೊತ್ತಿಗೆ ಸರಿಯಾಗಿ ಮನೆಗೆ ಬರುತ್ತೀರಿ. ಹಾಗೆಯೇ ಸಾಮಾನುಗಳನ್ನು ತೆಗೆದುಕೊಂಡು ಬರಬಾರದೇ? ಮೂರು ದಿನಗಳಿಂದ ಹೇಳುತ್ತಿದ್ದರೂ, ನನ್ನ ಮಾತು ನಿಮ್ಮ ಕಿವಿಗೆ ಬೀಳಲಿಲ್ಲ. ಇವತ್ತು ಏನು ಮಾಡ್ತೀರಿ ಊಟಾನ ನೋಡ್ತೀನಿ" ಎಂದು ಗುರುಗುಟ್ಟುತ್ತಾ ಮನೆಯಾಕೆ ಬಂದು ವರಾಂಡದಲ್ಲಿ ಕುಕ್ಕರು ಬಡಿದಾಗಲೇ ನನಗೆ ಸಾಮಾನು ತರುವ ಯೋಚನೆಯುಂಟಾಗಿ ಪರ್ಸು, ಎರಡು ಕೈಚೀಲಗಳನ್ನು ಹಿಡಿದುಕೊಂಡು ಮಾರ್ಕೆಟಿಗೆ ಹೊರಡಲನುವಾದೆ, ಸಾಮಾನಿನ ಪಟ್ಟಿ ಅಂದರೆ ಲಿಸ್ಟ್ ನನಗಿಂತಲೂ ಸ್ವಲ್ಪ ಉದ್ದವಾಗಿಯೇ ಇತ್ತು. ಕಾಲಿಗೆ ಚಪ್ಪಲಿ ಸಿಕ್ಕಿಸಿ, ತಲೆಗೆ ರುಮಾಲು ಧರಿಸಿ, ಕಂಕುಳಿಗೆ ಆ ಓಬೀರಾಯನ ಕಾಲದ ಕೊಡೆಯನ್ನು ತುರುಕಿಸಿ, ಪುರಸಲು ಮನಿಪರ್ಸನ್ನು ಜೇಬಿನಲ್ಲಿಟ್ಟು, ಕೈಯಲ್ಲಿ ಚೀಲ ಹಿಡಿದು ಒಂದು ಮೈಲು ದೂರದ ಮಾರ್ಕೆಟಿಗೆ ಯಾವ ಜಟಕಾಗಾಡಿಯ ಸಹಾಯಕ್ಕೂ ಬೀಳದೆ ನಡೆದುಕೊಂಡೇ ಹೋದೆ. ಸಂಬಳದ ಹಣ ಒಂದು ಕಿಸೆ ಸ್ವಲ್ಪ ಭಾರವಾಗಿತ್ತು. ಅದರ ಭಾರವನ್ನು ತುಸು ಕಡಿಮೆ ಮಾಡಿ ಮನೆಯಾಕೆಯ ಮನವನ್ನು ಸಂತೋಷಪಡಿಸಬೇಕೆಂದು ನಿಶ್ಚಯಿಸಿ ಮಾರ್ಕೆಟಿನೊಳಗೆ ನುಗ್ಗಿದೆ.

"ಸೌತೆಕಾಯಿ ಹ್ಯಾಗ್ರೀ?" ಇದು ನನ್ನ ಪ್ರಶ್ನೆ.

'ಬನ್ನಿ ಸ್ವಾಮಿ, ಯಾವುದು ಕೊಡೋಣ? ಚಿಕ್ಕದು ಕೊಡ್ಲೇ, ದೊಡ್ಡದು ಕೊಡ್ಲೇ?"

"—ಇದು ಸೌತೆಕಾಯಿ ವ್ಯಾಪಾರಿಯ ಮರು ಪ್ರಶ್ನೆ.

"ಚಿಕ್ಕದೇ ಕೊಡಪ್ಪಾ, ಹ್ಯಾಗೆ?"

'ತಕೊಳ್ಳಿ ಸ್ವಾಮಿ. ಎಷ್ಟು ಬೇಕು?'

"ಒಂದೆರಡು ಬೇಕಿತ್ತು. ಬೆಲೆ ಹ್ಯಾಗೆ ಹೇಳಪ್ಪಾ!"

"ತಕೊಳ್ಳಿ ಸ್ವಾಮಿ, ಎರಡಕ್ಕೆ ಎಂಟಾಣೆ ಕೊಡಿ"—ಎಂದು ಹೇಳಿ ಎರಡು ಸೌತೆಕಾಯನ್ನು ನನ್ನ ಚೀಲಕ್ಕೆ ಹಾಕಿ ಎಂಟಾಣೆ ಕೇಳಿದ.

"ಎಂಟಾಣೆಯಾದರೆ ನನಗೆ ಬೇಡಪ್ಪ" ಎಂದು ಹೇಳಿ ಸೌತೆಕಾಯನ್ನು ವಾಪಸ್ಸು ಕೊಡ ಹೋದೆ.

"ನಿಮಗೆ ಹ್ಯಾಗೆಬೇಕು ಕೇಳಿ ಸ್ವಾಮಿ. ಕೇಳಿ ಅಂತೆ ಅದಕ್ಕೇನು?"

'ನೋಡಪ್ಪಾ, ಎಂತಕ್ಕೆ ಎರಡಾಣೆ ಕೊಡ್ತೇನೆ, ಕೊಡುವುದಾದರೆ ಕೊಡು'.

"ಹೋಗ್ಲಿ, ಆರಾಣೆ ಕೊಡಿ ಸ್ವಾಮಿ."

"ಊಹೂಂ"

"ಐದಾಣೆ"

'ಊ ಹೂಂ, ಬೇಡ".

"ಹೋಗ್ಲಿ ನಾಲ್ಕಾಣೆ ಕೊಡಿ ಸ್ವಾಮಿ ತೆಗೆದುಕೊಂಡು ಹೋಗಿ'

'ಎರಡಾಣೆಗಿಂತ ಹೆಚ್ಚಾದರೆ ನನಗೆ ಬೇಡವೇ ಬೇಡ".

"ಸ್ವಲ್ಪ ಯೋಚನೆ ಮಾಡಿ ಸ್ವಾಮಿ. ಮೂರಾಣೆಯನ್ನಾದರೂ ಕೊಡಿ".

"ಯಾಕಪ್ಪ ಚೌಕಾಶಿ. ನನಗೆ ಅದೆಲ್ಲಾ ಇಷ್ಟವಿಲ್ಲ".

"ಹೋಗ್ಲಿ ಅಷ್ಟೇ ಕೊಡಿ ಸ್ವಾಮಿ".

ಎರಡಾಣೆಗೆ ಎರಡು ಸೌತೆಕಾಯಿಗಳನ್ನು ತೆಗೆದುಕೊಂಡು, ಮೆಣಸಿನ ಕಾಯಿಯ ಅಂಗಡಿಯತ್ತ ತೆರಳಿದೆ.

"ಬನ್ನಿ ಸ್ವಾಮಿ ಬನ್ನಿ ಎಷ್ಟು ಕೊಡ್ಲಿ?'—ಆಹ್ವಾನವಿತ್ತ ಅಂಗಡಿಯವ.

'ಹೇಗಪ್ಪಾ ಮೆಣಸಿನ ಕಾಯಿ ಮಣ?'

'ಈಗ ಸ್ವಲ್ಪ ಜಾಸ್ತಿಯಾಗಿದೆ ಸ್ವಾಮಿ, ಎಂಟು ರೂಪಾಯಿ ಮಣ!'

"ನಿನ್ನೆ ಅಲ್ಲ ಮೊನ್ನೆ ಮೂರು ರೂಪಾಯಿ ಇತ್ತು. ಇವತ್ತಾಗಲೇ ಎಂಟು ರೂಪಾಯಿ ಆಯ್ತೆ?"

"ಮಾರ್ಕೆಟಿನಲ್ಲಿ ದರ ನಿಲ್ಲೋಲ್ಲ ಸ್ವಾಮಿ, ಇವತ್ತಿದ್ದದ್ದು ನಾಳೆ ಇರೋಲ್ಲ. ಅದಿರಲಿ, ನಿಮಗೆಷ್ಟು ಬೇಕಾಗಿತ್ತು ಮೆಣಸಿನ ಕಾಯಿ?"

"ಕೊಡೋದು ಹ್ಯಾಗೆ ಹೇಳಯ್ಯ"

"ಹೋಗ್ಲಿ, ಏಳುರೂಪಾಯಿ ಮಾಡ್ಕೋಳ್ಳಿ. ಎಷ್ಟು ಕೊಡ್ಲಿ"

"ಬೇಡಪ್ಪಾ ಮೂರು ರೂಪಾಯಿ ಹಾಕುವ ಹಾಗಿದ್ದರೆ ಹಾಕು"

"ಪಡೀರಿ ಸ್ವಾಮಿ ಚೀಲ ಎಷ್ಟು ಹಾಕ್ಲಿ?"

"ಸವ್ವಾ ಸೇರ ಹಾಕು"

"ಬಹುಶಃ ಅವನ ಜಂಘಾಬಲವೇ ಉಡುಗಿ ಹೋಗಿರಬೇಕು. ಇನ್ನೇನುಮಾಡಿಯಾನು? ವ್ಯಾಪಾರ ತಾನೆ! ಸವ್ವಾಸೇರು ಹಾಕಿದ, ಮೂಣಗಟ್ಟಳೆ ತೆಗೆದುಕೊಳ್ಳಲು ನಾನೇನು ಗಾಡಿ ತೆಗೆದು ಕೊಂಡು ಹೋಗಿದ್ದನೇ! ದುಡ್ಡೆಣಿಸಿಕೊಟ್ಟು ಟೊಮ್ಯಾಟೋ ಹಣ್ಣು ಕೊಳ್ಳಲು ಹೋದೆ"

"ಬನ್ನಿ ಬುದ್ಧೀ. ಎಷ್ಟು ಕೊಡ್ಲಿ ಟೊಮ್ಯಾಟೋ? ಹೊಸ್ದು—ದಪ್ಪವಾಗಿದೆ ಹಣ್ಣು ಕೊಡ್ಲೇ ಕಾಯಿ ಕೊಡ್ಲೇ?"

"ಹ್ಯಾಗಮ್ಮಾ ಡಜನ್?"

"ಎಷ್ಟು ಕೊಡ್ಲಿ, ಕೇಳಿ ಸ್ವಾಮಿ"

"ಹ್ಯಾಗೆ ನೀನೇ ಹೇಳಮ್ಮಾ"

"ನೀವೇ ಕೇಳಿ ಸ್ವಾಮಿ"

"ಹನ್ನೆರಡಾಣೆ ಕೊಡ್ತೇನೆ"

"ಬರೋಲ್ಲ ಸ್ವಾಮಿ, ಎಲ್ಲಾ ಕಡೆ ಡಜನ್ ಎರಡೂವರೆ ರೂಪಾಯಿ ಇದೇ ಎರಡು ರೂಪಾಯಿ ಮಾಡ್ಕೊಂಡು ತಕೊಳ್ಳಿ ಸ್ವಾಮಿ"

"ಅದೆಲ್ಲಾ ಬೇಡ, ನಾನು ಕೇಳಿದ ಬೆಲೆಗೆ ಕೊಡುವುದಾದರೆ ಕೊಡು."

"ಅಷ್ಟಕ್ಕೆ ಸಿಗೋಲ್ಲ ಬುದ್ಧಿ"

ಹೋಗಲಿ ಬಿಡು, ಎಂದು ಮುಂದಿನ ಅಂಗಡಿಯತ್ತ ಕಾಲಿಟ್ಟೆ"

"ಅದ್ಯಾಕ್ಸ್ವಾಮಿ ಹೋಗ್ತೀರಾ?"

'ಇನ್ನೇನು ಮಾಡ್ಲಿ? ನಿನ್ನ ಹತ್ತಿರ ಜಗಳವಾಡ್ತಾ ನಿಂತಿರಲೇ?"

'ಒಟ್ಟು ಮಾಡಿದ್ರೆ ಹೆಂಗೆ ಸ್ವಾಮಿ. ಬನ್ನಿ ಒಂದೂವರೆ ರೂಪಾಯಿ ಮಾಡ್ಕೋಂಡು ತಗೊಂಡ್ಹೋಗಿ."

"ಬೇಡಮ್ಮಾ"

"ಧರ್ಮ ಕರ್ಮ ನೋಡಿ ಸ್ವಾಮಿ. ಒಂದು ರೂಪಾಯಿನಾದ್ರೂ ಮಾಡಿ"

"ನನಗೆ ಬೇಡಮ್ಮಾ"

"ಹೋಗ್ಲಿ, ತಗೊಳ್ಳಿ. ಹಿಡೀರಿ ಚೀಲಾನಾ. ಎಷ್ಟು ಡಜನ್ ಹಾಕ್ಲಿ"

"ಡಜನ್ ನನಗ್ಯಾಕತವ್ವಾ. ಒಂದು ಮೂರು ಹಣ್ಣು ಹಾಕು, ಚೆನ್ನಾಗಿರೋದು"

'ಇಷ್ಟಕ್ಕೆ ಇಷ್ಟು ಚೌಕಾಶಿ ಮಾಡಿದ್ರಾ?"—ಎಂದು ನಿಟ್ಟುಸಿರು ಬಿಟ್ಟು ಟೊಮ್ಯಾಟೋ ಹಣ್ಣು ಕೊಟ್ಟಳು.

ಸೌತೆಕಾಯಿ ಆಯ್ತು, ಮೆಣಸಿನಕಾಯಿ ಆಯ್ತು, ಟೊಮ್ಯಾಟೋ ಆಯ್ತು, ಸ್ವಲ್ಪ ಕೋಸು, ಬೀನ್ಸ್, ಕ್ಯಾಬೇಜ್, ಸೊಪ್ಪು ತೆಗೆದುಕೊಳ್ಳೋಣವೆಂದು ಮುಂದಕ್ಕೆ ಕಾಲಿಟ್ಟೆ.

'ಕೋಸು ಹ್ಯಾಗ್ರೀ ಒಂದಕ್ಕೆ?"

"ಎಂಟಾಣೆ ಕೊಡಿ" ಎಂದು ಹೇಳಿ ಒಂದನ್ನು ಕೈಗೆ ಕೊಟ್ಟೇ ಬಿಟ್ಟ.

"ಬೇಡ ತಗೊಳ್ಳಿ' ಎಂದು ವಾಪಸ್ಸು ಕೊಟ್ಟೆ.

'ಚೆನ್ನಾಗಿದೆ ತಗೊಳ್ರೀ"

"ನೀವು ಸರ್ರ್ಯಾಬಟ್ಟೆ ಬೆಲೆ ಹೇಳ್ತೀರಿ"

'ಕೇಳಿ ಸ್ವಾಮಿ ನೀವೇ ಕೇಳಿ. ಒಂದು ಕಾಸಿಗೆ ಕೇಳಿ ಅದಕ್ಕೇನಂತೆ"

"ಎರಡಾಣೆ ಕೊಡ್ತೇನೆ"

"ಬರೋಲ್ಲ ಸ್ವಾಮಿ. ಐದಾಣೆಗಿಂತ ಕಮ್ಮಿ ಕೊಡೋಲ್ಲ"

"ನಿಮ್ಮ ಹತ್ತಿರಾನೇ ಇಟ್ಕೊಳ್ಳಿ. ಬರ್ತೇನೆ' ಎಂದು ಮುಂದಡಿಯಿಟ್ಟೆ.

'ಬನ್ರಿ. ಹಾಗೇ ಹೋಗಿ ಬಿಡ್ತೀರಲ್ಲ. ಒಳ್ಳೆ ಚೌಕಾಶಿಯವರು ಕಂಡ್ರೀ ನೀವು ಹೋಗ್ಲಿ ತಕೊಳ್ಳಿ". ಅತಕೊಟ್ಟ. ನಾನು ಕೊಂಡೆ. ಹಾಗೆಯೇ ಸ್ವಲ್ಪ ಬೀನ್ಸ್, ಕ್ಯಾರೆಟ್, ಮೂಲಂಗಿ, ತೆಂಗಿನಕಾಯಿಗಳನ್ನು ಕೊಂಡೆ ಆನಂತರ ದನಿಯನ್ನು ಉಪ್ಪು ಮೆಣಸು ಈರುಳ್ಳಿ ಇತ್ಯಾದಿಗಳನ್ನು ನಾವು ಚಟಾಕುಗಳ ಅಳತೆಯಲ್ಲಿ ಹತ್ತೆಂಟು ಕಟ್ಟುಗಳಲ್ಲಿ ಕಟ್ಟಿಸಿಕೊಂಡು ಮಾರ್ಕೆಟಿನಿಂದ ಹೊರ ಬರುವಾಗ ಹೂವಾಡಿಗ ಕೂಗುತ್ತಿದ್ದ—'ಮೂರು ಹೂ ಮೂರಾಣೆ, ತುಂಬಾ ಅಗ್ಗ' ಎಂದು. ಅವನ ಪಕ್ಕದವ ಮತ್ತೊಬ್ಬ ನೂರಿಗೆ ಆರಾಣೆ ಎಂದು ಕೂಗುತ್ತಿದ್ದ. ಅಗ್ಗವಾಗಿ ಸಿಗುತ್ತಿದ್ದುದನ್ನೇ ಕೊಳ್ಳೋಣವೆಂದು ಅವನ ಬಳಿಗೆ ಹೋದೆ.

"ನೂರು ಹೇಗಯ್ಯಾ?"

'ಮೂರಾಣೆ ಸ್ವಾಮಿ, ಎಷ್ಟು ಕೊಡ್ಲಿ" ಎಂದು ಮೂರು ಹಾರ ತೊಡಗಿದ. ಆವನಲ್ಲೂ ಚೌಕಾಶಿ ಮಾಡಲು ಮನಸ್ಸಾಗದೆ 'ಒಂದು ನೂರು ಕೊಡು' ಎಂದು ಹೇಳಿ ಜೇಬಿಗೆ ಕೈ ಹಾಕಿದೆ. ಅವನು ಹೂ ಕಟ್ಟಿ ಚೀಲಕ್ಕೆ ಹಾಕಿದಾಗ ದುಡ್ಡು ಕೊಟ್ಟು ಅಗ್ಗವಾಗಿ ಸಿಕ್ಕಿತೆಂದುಕೊಂಡು ಹಿಗ್ಗಿ ಮನೆಯತ್ತ ಹೊರಟಾಗ ಮಧ್ಯಾಹ್ನವಾಗಿತ್ತು.

"ಬರ್ತೀರಾ ಸ್ವಾಮಿ, ಎಲ್ಲಿಗೆ ಹೋಗಬೇಕು?" ಎನ್ನುತ್ತಾ ಗಾಡಿ ಸಾಬಿ ಗಾಡಿ ಹೊಡೆದುಕೊಂಡೇ ನನ್ನ ಬಳಿಗೆ ಬಂದ.

"ಅಗ್ರಹಾರಕ್ಕೆ ಏನು ಕೊಡಬೇಕಯ್ಯ?

'ಎಂಟಾಣೆ ಕೊಡಿ ಸ್ವಾಮಿ'

"ಒಂದು ಮೈಲಿಗೆ ಎಂಟಾಣೆ ಸಾಕೇ?"

"ಒಂದು ರೂಪಾಯಿನೇ ಕೊಡಿ ಸ್ವಾಮಿ, ಆದಕ್ಕೇನಂತೆ?"

(ಹದಿನೂರನೇ ಪುಟ ನೋಡಿರಿ)

ಉಪಯುಕ್ತವಾದ ಕೆಲವು ಪುಸ್ತಕಗಳು

		ರೂ. ನ
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ	(ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು	(ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಅನು: ಕು.ಶಿ.ಹರಿದಾಸ ಭಟ್)	2=00
ಹಿರೋಶಿಮಾದಿಂದ ಜಿನೇವ	(ಯು. ಆರ್. ಆಚಾರ್ಯ)	1=50
ಮೋಹದ ಮಹಾಜಾಲ	(ವೀರಪ್ಪ ಯಗಟಿ)	1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ	(ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ಏಶಿಯದ ಸಂಪತ್ತು	(ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು	(ಅನು: ಕು.ಶಿ.ಹರಿದಾಸ ಭಟ್)	1=75
ಕುಲವಿಲ್ಲದ ಹೆಣ್ಣು	(ಪಿ. ವೆಂಕೋಬಾಚಾರ್ಯ)	1=50
ಚಿತ್ರಾಂಗದೆ	(ಅನು: ಕೆ. ಕೆ. ಶೆಟ್ಟಿ)	0=60
ರವೀಂದ್ರರ ಕತೆಗಳು	(ಹನುಮಂತ ರಾವ್ ಪಾಂಜ್ರೇಕರ)	0=90
ಹಸುರು ಹಂಸ	(ನಚಿಕೇತ)	2=00
ಭಾವಾರ್ಜನೆ	(ನಚಿಕೇತ)	1=25
ಋಣ ಯಾತ್ರೆ	(ನಚಿಕೇತ)	1=50
ಗೀತೆಯ ಕೈಗನ್ನಡಿ	(ಹೊಸಕೆರೆ ಚಿದಂಬರಯ್ಯ)	1=00

ವಿವರವಾದ ಕೆಟಲಾಗಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: **ನವಭಾರತ ಪುಸ್ತಕ ಭಂಡಾರ, ಉಡುಪಿ.**

ವಿವೇಚನೆ

ಜಿರಾಫೆಯ ಜಿಜ್ಞಾಸು ಚೈನಿ ಜನತೆ

ಬರೆದವರು:
ಶ್ರೀ ಶಿವಶಂಕರ

ಚೈನಿ ಜನತೆಗೆ ಜಿರಾಫೆಯ ಮೇಲೆ ಎಲ್ಲಿಲ್ಲದ ಜಿಜ್ಞಾಸೆ ಎನ್ನುವದನ್ನು ಕಳೆದ ವಾರ ನೋಡಿರುವೆವು. ಅವರಿಗೆ ಜಿರಾಫೆಯ ಮೇಲೆ ಜಿಜ್ಞಾಸೆ ಹುಟ್ಟಲು ಕಾರಣವೆಂದರೆ, ಅಲ್ಲಿನ ದಂತಕಥೆಗಳಲ್ಲಿ ಅದೇ ರೀತಿಯ ಒಂದು ಪ್ರಾಣಿಯ ವಿವರಣೆ ಇರುವದೇ ಇದೆ, ಆ ಪ್ರಾಣಿಗೆ ಬಸವಣ್ಣನ ಬಾಲ ಎನ್ನುವದನ್ನು ಓದಿದಾಗ ಭಾರತೀಯರಿಗೆ ಭಾರೀ ಸಂತೋಷವಾಗಿರಬಹುದು. ಅದ್ಯಾಕೋ ಇಲ್ಲಿಯ ಕಾಂಗ್ರೆಸ್ಸಿಗರು ಹೋರಿಗಳನ್ನು ತಮ್ಮ ಚುನಾವಣಾ ಚಿಹ್ನೆಯನ್ನಾಗಿ ಆರಿಸಿಕೊಂಡಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಇದೊಂದು ತಮಾಷೆಯ ವಿಷಯವಾಗಿದೆ. ಕಾಂಗ್ರೆಸ್ಸು ಕಮ್ಯೂನಿಸ್ಟ್ ಪಕ್ಷದ ಬಾಲವಿರುವದಿಲ್ಲ. ಅದರ ಬದಲು ಕಮ್ಯೂನಿಸ್ಟ್ ಪಕ್ಷವು ಕಾಂಗ್ರೆಸ್ಸಿನ ಬಾಲವಿದೆ. ಶ್ರೀ ಜವಾಹರಲಾಲಜೀ ಯವರಿದ್ದಾಗ ಇದು ಸುಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ಶ್ರೀ ಜವಾಹರಲಾಲಜೀಯವರಿಗೆ ಮಾರ್ಕ್ಸ್ ವಾದ ಹಾಗೂ ಕಮ್ಯೂನಿಸಮಿನತ್ತ ಕೊಂಚ ಒಲವಿದ್ದುದರ ಬಂಡವಾಳವನ್ನು ಪ್ರಯೋಗಿಸಿಕೊಂಡು ಈ ಕಮ್ಯೂನಿಸ್ಟರು ಭಾರೀ ಬಂಡ ಬಾರಿಸಲಿಲ್ಲವೇನು? ಅವರನ್ನು ಕಮ್ಯೂನಿಸ್ಟರು ಕೇವಲ ಮುಖವಾಡವನ್ನಾಗಿ ಮಾಡಿಕೊಂಡಿದ್ದರು ಮತ್ತು ತಾವು ಗೋಮುಖವ್ಯಾಘ್ರಗಳಂತೆ ವರ್ತಿಸುತ್ತಿದ್ದರು. ಶ್ರೀ ಮೆನನ್ ಜವಾಹರಲಾಲಜೀಯವರ ಕೂಡಾ, ಅದರ ಅದೃಷ್ಟದಿಂದೆಂಬಂತೆ, ತಮ್ಮ ಬಾಲವನ್ನು ಬಹಳ ಜಾಗರೂಕತೆಯಿಂದ ಕಾಪಾಡಿಕೊಂಡು ಬಂದಿದ್ದರು. ಶ್ರೀ ಜವಾಹರಲಾಲಜೀ ಇಹಲೋಕವನ್ನು ತ್ಯಜಿಸಿದಾಗ ಈ ಬಾಲದ ಗಂಟು ಬಿಚ್ಚಿ ಹೋದಂತಾಯಿತು. ಹಾವಿನ ಬಾಲದಕ್ಷ ಹಿಡಿದು ಅದನ್ನು ತಿರುಗಿಸಿದಲ್ಲಿ ಅದರ ಎಲುಬು ಸಂದುಗಳು ಭಿನ್ನಭಿನ್ನವಾಗುತ್ತವೆ. ಅಂತೆಯೇ ಈ ಕಮ್ಯೂನಿಸ್ಟ್ ಬಾಲವನ್ನು ಹಿಡಿದು ತಿರುಗಿಸಿದ್ದೇ ತಡ, ಕಾಂಗ್ರೆಸ್ಸಿನ ಅನೇಕ ರಹಸ್ಯಗಳು ಹೊರಬರಲಾರಂಭವಾಯಿತು. ಅದಕ್ಕೆ ಚೈನಾದ ಬೇಂಕು ಒಂದು ನಿದರ್ಶನ. ಅದನ್ನು ಅಲ್ಲಿಯೇ ಸರಕಾರ ಬಚ್ಚಿಡಬೇಕಾಯಿತು.

ಈ ಬಾಲದ ಭಾಷೆ ಅದೇನೂ ಹೊಸತಲ್ಲ. ಅದುದರಿಂದಲೇ ಶ್ರೀ ಕೃಷ್ಣಮೆನನ್, ಕೆ. ಡಿ. ಮಾಲವೀಯ, ಮಿಶ್ರ ಮುಂತಾದವರು ಮಿಶ್ರರಾಗಿ ಬಿಟ್ಟಿದ್ದಾರೆ ಕಾಂಗ್ರೆಸ್ಸಿನಲ್ಲಿ.

ಶೆಂಗ್-ಟು ವರ್ಣಿಸಿರುವ ಜಿರಾಫೆಯನ್ನು ಚೈನಾಕ್ಕೆ ಕಳಿಸಿದವರು ಭಾರತದಲ್ಲಿದ್ದವರೆಂಬುದೂ ಗಮನೀಯ ವಿಷಯವಿದೆ. ೧೪೧೪ರಲ್ಲಿ ಸೈಫುದ್ದೀನನು ಬಂಗಾಲವನ್ನಾಳಿಕೊಂಡಿದ್ದನು. ಅವನ ಅಪ್ಪನ ಹೆಸರು ಗಿಯಾಸ್-ಉದ್ದೀನ್. ಇವನ ಕಾಲದಲ್ಲಿ ಯುಂಗ್-ಲೋನಿಂದ ಕಳುಹಿಸಲ್ಪಡುತ್ತಿದ್ದ ರಾಯಭಾರಿಗಳು ಪ್ರತೀ ವರ್ಷ ಬರುತ್ತಿದ್ದರು. ಸೈಫುದ್ದೀನನು ಬಂಗಾಲದ ಆಳ್ವಿಕೆಯನ್ನು ಕೈಯಲ್ಲಿ ತೆಗೆದುಕೊಂಡ ಮೇಲೆ ಚೈನೀ ಚಕ್ರವರ್ತಿ ಯುಂಗ್-ಲೋನಿಗೆ ಒಂದು ಜಿರಾಫೆಯನ್ನು ಕಳುಹಿಸಿದ್ದನು. ಅವರೊಳಗೆ ಅದೆಷ್ಟು ಚಕ್ಕಂದವಿತ್ತೆಂದಲ್ಲಿ ಸೈಫುದ್ದೀನನ ಪಟ್ಟಾಭಿಷೇಕದ ಸಮಯ ಯುಂಗ್-ಲೋನು ಕಪ್ಪಕಾಣಿಕೆಗಳನ್ನು, ರಾಯಭಾರಿಗಳನ್ನು ಕಳುಹಿಸಿದ್ದನು. ಚೈನಾ ಭಾರತವನ್ನು ನುಂಗಲು ಹವಣಿಸುತ್ತಿದೆ. ಜಿರಾಫೆಯ ಬದಲು ಬಂದಿದ್ದ ಅಯೂಬಖಾನನ ತಲೆಯನ್ನು ಚೈನಾ ತಿರುಗಿಸಿದೆ. ಅದರ ಪರಿಣಾಮವಾಗಿ ಅದಿಂದು ಭಾರೀ ಆಕ್ರಮಣಕ್ಕೆ ಮುಂದಾಗಿರುತ್ತದೆ. ತನ್ನ ಪಟ್ಟಾಭಿಷೇಕಕ್ಕಾಗಿ ಬಹಳ ದೂರದಿಂದ ಬಂದಿರುವವನಿಗೆ ನವಾಬನು ಏನೂ ಕೊಡುವದು ಬೇಡವೇ? ಅದಕ್ಕಾಗಿಯೇ ಅವನೊಂದು ಜಿರಾಫೆಯನ್ನು ಕೊಟ್ಟನು. ಚೈನಾಕ್ಕೆ ಅದು ಬಂದೊಡನೆ ಭಾರೀ ಜನತಾ ಸಮೂಹ ಅದರ ದರ್ಶನಕ್ಕಾಗಿ ಧಾವಿಸಿ ಬಂದು ಕಲೆಯಿತು.

ಭಾರತದಲ್ಲಿ ಜಿರಾಫೆ ಎಷ್ಟೇನೂ ಇಲ್ಲವೆಂಬುದು ಮುಖ್ಯ ವಿಷಯ. ಅಂದರೆ ಸೈಫುದ್ದೀನನಿಗೆ ಆ ಜಿರಾಫೆಯು ಆಫ್ರಿಕಾದಿಂದ ಬಂದಿರಬೇಕು. ಚಕ್ರವರ್ತಿಯೋರ್ವನಿಗೆ ಅಂತಹ ಅಪೂರ್ವ ಪ್ರಾಣಿಗಳನ್ನು ಕಳುಹಿಸಿ ಕೊಡುವದರಲ್ಲೇನೂ ಆಶ್ಚರ್ಯ ಇರುವದಿಲ್ಲ. ಆದರೆ ಚೈನೀಯರು ಅದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕಲ್ಲವೇ? ಜಿರಾಫೆಯ ಹೆಸರನ್ನು ಬದಲಾಯಿಸಿ ಚಿಟ್ಟೆ ಹಿಡಿಯುವವೆಂದು ಅವರು ಕಲಿಂಪೊಂಗು ಮುಂತಾದೆಡೆಗಳಲ್ಲಿ ಮೋಸದಿಂದ ಬಂದು ಬೀಡ ಬಿಟ್ಟು, ತಮ್ಮ ಕುಕೃತ್ಯಕ್ಕಾರಂಭಿಸಿದರು. ಅದರ ದುಷ್ಪರಿಣಾಮ ಇಂದು ಸ್ಪಷ್ಟವಾಗಿ ತಿಳಿದು ಬರುತ್ತಿದೆ.

ಏಡನಿಗೆ ಹೋಗಿದ್ದ ಚೆಂಗ್-ಹೋನ ಮಿತ್ರ ಯಾತ್ರಿಕರು ಅಥವಾ ಹಡಗುಗಳವರು ಜಿರಾಫೆಯೊಂದನ್ನು ಚೈನಾಗೆ ತಂದಿರುವದನ್ನು ನವಂಬರ್ ಸಂಚಿಕೆಯಲ್ಲಿ ನೋಡಿರುವೆವು. ಆದರೆ ಚೈನೀಯರು ಜಿರಾಫೆಯನ್ನು ಕಾಣುವದು ಅದುವೇ ಮೊದಲ ಬಾರಿ ಅಲ್ಲ. ಅವರು ಮೊತ್ತಮೊದಲು ಜಿರಾಫೆಯನ್ನು ಕಂಡದ್ದೆಂದರೆ ಸೈಫುದ್ದೀನ್ ಕಳುಹಿಸಿದ್ದ ಜಿರಾಫೆ. ಅನಂತರ ಅಲ್ಲಿಯ ವರ್ತಕರು ಒಂದು ಜಿರಾಫೆಯನ್ನು ತಂದಿದ್ದರು. ಆ ಸಾಲಿನಲ್ಲಿ ಮೂರನೆಯ ಜಿರಾಫೆಯು ಏಡನಿನ ಜಿರಾಫೆ. ಇಲ್ಲಿ ಇನ್ನೊಂದು ತಮಾಷೆಯ ವಿಷಯವೆಂದರೆ ಮಕ್ಕಾದಿಂದಲೂ ಚೈನಾಕ್ಕೊಂದು ಜಿರಾಫೆ ಹೋಗಿತ್ತು. ಅದು ನಾಲ್ಕನೆಯ ಜಿರಾಫೆ. ಅದು ನಡೆದದ್ದು ೧೪೩೩ರಲ್ಲಿ.

ಶ್ರೀಯುತ ವಿಲಿಯಂ ವಿಲ್ಲೆಟ್ಸ್‌ರವರ ಲೇಖನದಲ್ಲಿ ಕಂಡುಬರುವ ಒಂದು ಮುಖ್ಯ ವಿಷಯವೆಂದರೆ ಚೈನೀಯರಿಗೆ ಜಿರಾಫೆಯೊಂದು ಜಿಜ್ಞಾಸೆಯ ಪ್ರಾಣಿಯೇ ಸರಿ. ಅದನ್ನು ಪಡೆಯುವುದಕ್ಕಾಗಿ ಅವರು ಬಹಳ ಪ್ರಯತ್ನಪಟ್ಟಿದ್ದಾರೆ. ಅದು ಅಂದಿನ ಕಾಲ.

ಈ ಕಾಲದಲ್ಲಿ ಅವರು ಜಿರಾಫೆಯ ಬದಲು ಕಾಂಗ್ರೆಸ್ಸಿಗರನ್ನು ಬುಟ್ಟಿಯಲ್ಲಿ ಹಾಕಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಶ್ರೀ ಮೂನ್ ಕರಿಯಪ್ಪ ಹಾಗೂ ಕೆಲ ರಾಷ್ಟ್ರೀಯರು ಎಚ್ಚರಿಕೆ ಕೊಡುತ್ತಿದ್ದರೂ ಪಂಚಶೀಲ ಮಂತ್ರದ ಮೋಹ ಅಥವಾ ಭ್ರಮೆಗೊಳಗಾಗಿ ಶ್ರೀ ಜವಾಹರ್ ಲಾಲಜೀ ಕೂಡಾ ಚೌ-ಎನ್-ಲಾಯಿಯೊಂದಿಗೆ ಚೆನ್ನಾಗಿ ಕಲೆತು 'ಹಿಂದೀ ಚೀನಿ ಭಾಯಿ ಭಾಯಿ' ಎಂದಿದ್ದರು. ಅವರಿಗೆ ಜ್ಞಾನೋದಯವಾದಾಗ ಬೇಗಾಗಿ ಹೋಗಿತ್ತು, ಆಕ್ರಮಣ ನಡೆದು ಹೋಗಿತ್ತು.

ಚೈನೀ ಕಮ್ಯೂನಿಸ್ಟರ ಈ ಕಾರ್ಯಕೃತ್ಯದಲ್ಲಿ ಸಹಾಯ ಮಾಡಲು ಇಲ್ಲಿನ ಕಮ್ಯೂನಿಸ್ಟರು ಹಾತೊರೆಯುತ್ತಿದ್ದಾರೆ. ಸಮಯವನ್ನು ಎದುರು ನೋಡುತ್ತಿದ್ದಾರೆ. ಹಿಂದೆಯೇ ತಿಳಿಸಿರುವಂತೆ ಅವರು ಗೊಂದಲವೆಬ್ಬಿಸಲು ಪ್ರಯತ್ನಿಸುತ್ತಿದ್ದಾರೆ. ತೆಲಂಗಾಣಾದಲ್ಲಿ ತೆಪ್ಪಗಾದ ಕುಹಕಿ ಕಮ್ಯೂನಿಸ್ಟರು ವಿಜಯವಾಡದಲ್ಲಿ ವಿಜಯ ದುಂದುಭಿ ಮೊಳಗಿಸಲು ಪ್ರಯತ್ನಿಸಿದ್ದರು. ಅದೃಷ್ಟವಶಾತ್ ಅವರಿಗದು ಸಾಧ್ಯವಾಗಲಿಲ್ಲ. ಅನಂತರ ಅವರು "ಭಾರತ ಬಂದ್" ಬಡಾಯಿಗಾರಂಭಿಸಿದರು. ಅದರಲ್ಲೂ ಅವರಿಗೆ ದೊರಕಿದ್ದು ಕೇವಲ ಬಡಿತ. ಅದಾದ ಮೇಲೆ ಭಾಷಾ ಬಡಿದಾಟ ಬಂತು. ಅಬ್ಬಾ! ಅವರು ನಡೆಸಿರುವ ಅಮಾನುಷ ಕೃತ್ಯಗಳೇ! — ಮಾನವೀಯತೆಗೇ ನಾಚಿಗೆ ಬರಿಸುವಂತಹವು. ಅವರ ದುರುದ್ದೇಶಕ್ಕಾಗಿ ಚಿಕ್ಕ ಪುಟ್ಟ ಬಾಲಕ ಬಾಲಿಕೆಯರು ಬಲಿಯಾಗಬೇಕಾಯಿತು. ಅದರಿಂದಲೂ ಅವರ ಹೃದಯ ಪರಿವರ್ತನೆ ಆಗಿರುವದಿಲ್ಲ. ಅದು ಪಾಷಾಣ ಹೃದಯ ತಾನೇ!

ಅದೆಲ್ಲಾ ಮುಗಿದ ಮೇಲೆ ಇದೀಗ ಮೇ ದಿನಾಂಕ ಹತ್ತರಂದು ಭಾರೀ ಗಲಾಟೆ ನಡೆಸುವದಾಗಿ ಅವರು ಬಡ ಬಾರಿಸಿದ್ದಾರೆ. ಈ ಸಲ ಕಾರಾಗೃಹದ ಕದಗಳನ್ನೊಡೆಯುವ ವಿಷಯವನ್ನು ಮುಂದಿಕ್ಕಿಟ್ಟುಕೊಂಡಿದ್ದಾರೆ. ಅಂದರೆ ಇದೊಂದು ರೀತಿಯ ಬಂಡಾಯವೇ ಇದೆ. ಅದಕ್ಕೆ ನಿಶ್ಚಯಿಸಿರುವ ದಿನವಾದರೂ ಎಂತಹದು! ಈ ಕುಕೃತ್ಯಕ್ಕೆ ಮೇ ದಿನಾಂಕ ಒಂದನ್ನೇತಕ್ಕೆ ಆರಿಸಿಕೊಳ್ಳಲಿಲ್ಲ? ಮೇ ದಿನಾಂಕ ಒಂದರ "ಮೇಡೇ" ನಮ್ಮ ರಕ್ತಕ್ಕೆ ಹೇಳಿಸಿರುವಂತಹದಲ್ಲ. ಅಂದು ಕಮ್ಯೂನಿಸ್ಟರು ಅಲ್ಲಲ್ಲಿ ತಮ್ಮ ಶಕ್ತ್ಯಾನುಸಾರ ಸಭೆಗಳನ್ನು ಜರಗಿಸುತ್ತಾರೆ. ಅದರಲ್ಲಿ ಸಮಾಜವಾದಿ ಹಾಗೂ ಕಾಂಗ್ರೆಸ್ಸು ಪಕ್ಷಗಳವರೂ ಭಾಗವಹಿಸುತ್ತಿದ್ದಾರೆ! ಅದನ್ನು ಎದುರಿಸುವ ಭಾರತೀಯರೂ ಬಹಳ ಮಂದಿ ಇದ್ದಾರೆ. ಇವರೆಲ್ಲರ ಬಾಯಿ ಮುಚ್ಚಿಸಲು ಅಥವಾ ಭಾರತೀಯರ ಗಮನ ಸೆಳೆದುಕೊಳ್ಳಲಿಕ್ಕಾಗಿಯೇ ಅವರು ಮೇ ದಿನಾಂಕ ಹತ್ತನ್ನು ನಿಶ್ಚಯಿಸಿಕೊಂಡಿದ್ದಾರೆ.

ಮೇ ದಿನಾಂಕ ಹತ್ತು! ಒಡನೆ ನಮ್ಮ ಜ್ಞಾಪಕಕ್ಕೆ ಬರುವದು ೧೮೫೭ರ ಸ್ವಾತಂತ್ರ್ಯ ಸಂಗ್ರಾಮ. ಬ್ರಿಟಿಷರ ಬಾವುಟವನ್ನು ಕಿತ್ತೊಗೆಯಲು ಭಾರತೀಯರು ಎಚ್ಚೆತ್ತಿದ್ದ ದಿನವದು. ಆದರೆ ಕೆಲವು ಕಾರಣದಿಂದಾಗಿ ಅದು ಫಲಗೊಡದೆ ಹೋಯಿತು. ನಿಶ್ಚಯಿಸಿದ್ದ ದಿನಕ್ಕೆ ಮುಂಚಿತವಾಗಿ ಕೆಲವರು ಪ್ರಾಣಾಹುತಿಗೈದರು. ಅವ್ಯವಸ್ಥೆಗೆ ದುರದೃಷ್ಟವಶಾತ್ ಕಾರಣದಿಂದ ಪಂಜಾಬ್ ಹಾಗೂ ಮದ್ರಾಸಿನಲ್ಲಿ ಸಾಕಷ್ಟು ಪ್ರೋತ್ಸಾಹ ಸಿಗದೆ ಹೋಯಿತು. ಇದು ಇತರರ ಮೇಲೆ ಅಪವಾದ ಹೊರಿಸಲಿಕ್ಕಾಗಿ ಉಲ್ಲೇಖಿಸಿರುವದಲ್ಲ. ಒಮ್ಮೆ ಅಚಾತುರ್ಯದಿಂದ ನಡೆದ ತಪ್ಪನ್ನು ತಿದ್ದಿಕೊಳ್ಳಲಿಕ್ಕಾಗಿಯೇ ಇದೆ. ಪುನಃ ಇಂದಿನ ಭೀಕರ ಸನ್ನಿವೇಶದ, ನಾವು ಭಾಷೆ, ಜಾತಿ,

(ಹತ್ತನೆ ಪುಟ ನೋಡಿರಿ)

ಬಾಲಾಶ್ರಮದ ಹಾವಳಿಯ ಕತೆಯೇ?
ವೇಶ್ಯಾಪುತ್ರಿಯ ಮಾನಾಪಹಾರದ ಚಿತ್ರವೇ?
ಯಾವುದು?

ಸನ್ಯಾಸಿಯ ಸೋಗಿನಲ್ಲಿ!

ಸನ್ಯಾಸದ ಹೆಸರಿನಲ್ಲಿ ವಿನ್ಯಾಸವೇ?
ವೇಶ್ಯಾಪುತ್ರಿಯರಿಗೆ ನೀತಿಯ ಜೀವನ ನಡೆಸುವ ಹಕ್ಕಿಲ್ಲವೇ?
ಈ ಪ್ರಶ್ನೆಗಳಿಗೆ ತಕ್ಕ ಉತ್ತರ ಬೇಕೆಂದಿದ್ದರೆ
ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಇವರ
ಈ ವಿಷಾದಾಂತ ಕಾದಂಬರಿಯನ್ನೋದಿರಿ.
ಬೆಲೆ: 0—75 ಪೈಸೆ ಮಾತ್ರ. ಟ. ಖ. ಪ್ರತ್ಯೇಕ.
ಸಿಗುವ ಸ್ಥಳಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

ತ್ರೈಲೋ
ಬೆಂಜಮಿ

೧

೨



೩

ನೆಲದಲ್ಲಿ ಓಡುವ ಮೋಟಾರು ವಾಹನ, ಜಲದಲ್ಲಿ ಹರಿಯುವ ಹಡಗ ಮತ್ತು ಆಕಾಶದಲ್ಲಿ ಹಾರುವ ವಿಮಾನ– ಮೊದಲಾದ ವಾಹನ ಸೌಕರ್ಯವು ಮಾನವನನ್ನು ನಾಗರಿಕತೆಯ ಉನ್ನತ ಹಂತವನ್ನು ಮುಟ್ಟಿಸುತ್ತಿದೆ. ಈ ಬಗೆಯ ಸಕಲ ವಾಹನ ಸಾಧನಗಳಿಗೆ ಶಕ್ತಿಯನ್ನು ಒದಗಿಸುವ ಪೆಟ್ರೋಲಿಯಂ ಇಂದಿನ ಜನಜೀವನದ ಅತ್ಯಂತಾವಶ್ಯಕ ಪದಾರ್ಥಗಳಲ್ಲಿ ಒಂದಾಗಿದ. ಏಕೆಂದರೆ, ಪೆಟ್ರೋಲಿಯಂ ಒಂದಿಲ್ಲವಾದರೆ, ನಾಗರಿಕ ಜಗತ್ತಿನ ಸಂಬಂಧವೇ ಸ್ಥಗಿತಗೊಳ್ಳಬಹುದು. ಈ ಬಗೆಯ ಅದ್ಭುತಶಕ್ತಿಯನ್ನೊದಗಿಸಬಲ್ಲ ಪೆಟ್ರೋಲಿಯಂ ನೆಲದಲ್ಲಿ ದೊರೆಯುವ ಒಂದು ವಸ್ತು. ಕಲ್ಲೆಣ್ಣೆಯೇ ಇದರ ಮೂಲ. ನಾವು ದಿನಾಲೂ ಉರಿಸುವ ದೀಪಕ್ಕೆ ಆಹಾರವಾದ ಕೆರೋಸಿನ್ ಎಣ್ಣೆಯೂ ಇದರ ಉಪವಸ್ತುವೆನ್ನುವಾಗ ಇದರ ಮಹತ್ತಿಕೆಯು ಮನವರಿಕೆಯಾಗದಿರದು.

ಕಲ್ಲೆಣ್ಣೆಯು ಭೂಮಿಗರ್ಭದಲ್ಲಿ ಅನಾದಿ ಕಾಲದಿಂದಲೂ ಇತ್ತು. ಕೆಲವೆಡೆ ಅದು ಊಟೆಯ ರೂಪದಲ್ಲಿ ಹೊರ ಚಿಮ್ಮುತ್ತಲೂ ಇತ್ತು. ಆದರೆ, ಅದರ ಉಪಯೋಗ ಮಾತ್ರ ಅಂದು ತಿಳಿದಿರಲಿಲ್ಲ. ಹಾಗಿದ್ದರೂ ಮಾನವ ಬುದ್ಧಿಯ ಹೋರಾಟದ ಪರಿಣಾಮವಾಗಿ ಕಳೆದ ಒಂದೂಕಾಲು ಶತಮಾನದಲ್ಲಿ ಇದು ಮಾನವನನ್ನು ನಾಗರಿಕತೆಯ ಭವ್ಯ ಅಂತಸ್ತಿಗೆ ಕೊಂಡೊಯ್ದಿದೆ. ಮಾನವ ಕಲ್ಯಾಣಕ್ಕೆ ಕಾರಣವಾಗಿದೆ. ಈ ರೀತಿಯ ಕಲ್ಯಾಣ ಮಾರ್ಗವನ್ನು ಕಡಿಯತೊಡಗಿದವನು ಯಾರು? ಅಮೇರಿಕೆಯ ಬೆಂಜಮಿನ್ ಸಿಲ್ಲಿಮನ್ ಎಂಬವನು.

ಸಿಲ್ಲಿಮನ್ ಕಲ್ಲೆಣ್ಣೆಯಿಂದ ಹೊರಡುವ ಎಲ್ಲಾ ಉಪವಸ್ತುಗಳನ್ನೂ ಅವುಗಳ ಉಪಯೋಗವನ್ನೂ ಜನತೆಗೆ ತಿಳಿಹೇಳಿದನೆಂದು ಹೇಳಲಾಗುವುದಿಲ್ಲ. ಆದರೆ, ತ್ರೈಲೋದ್ಯಮದ ಹುಟ್ಟಿಗೆ ಮತ್ತು ಅದರ ಬೆಳವಣಿಗೆಗೆ ಅತನು ಕಾರಣ ಪುರುಷನು ಎಂತಲೇ ಅವನನ್ನು ತ್ರೈಲೋದ್ಯಮದ ಜನಕನೆಂದು ಕರೆಯುತ್ತೇವೆ.

ಚಿತ್ರ ೧. ಬೆಂಜಮಿನ್ ಸಿಲ್ಲಿಮನ್

ಅಮೇರಿಕೆಯ ಕನೆಕ್ಟಿಕಟ್ ನ್ಯೂ ಹವೆನ್‌ನ ಯೇಲ್ ವಿಶ್ವವಿದ್ಯಾಲಯದ ರಸಾಯನ ಶಾಸ್ತ್ರದ ಪ್ರಾಧ್ಯಾಪಕ ಬೆಂಜಮಿನ್ ಸಿಲ್ಲಿಮನ್ನನು ತ್ರೈಲೋದ್ಯಮದ ಹುಟ್ಟಿಗೆ ಏಕಮೇವ ಹೊಣೆಗಾರ. ತನ್ನ ಸಂಶೋಧನೆಯಿಂದ ಸಿಲ್ಲಿಮನ್ ಹೇಳಿಕೊಳ್ಳುವಂತಹ ಲಾಭವನ್ನೇನೂ ಹೊಂದಲಿಲ್ಲ. ಆದರೆ, ಮಾನವ ಜನಾಂಗಕ್ಕೆ ಪೆಟ್ರೋಲಿಯಂ ಪ್ರಕೃತಿ ಮಾತೆಯಿತ್ತ ವರದಾನವೆಂದು ಸಿದ್ಧಮಾಡಿ ತೋರಿಸಿದ ಮಹಾ ವ್ಯಕ್ತಿಯೆಂಬುದು ಮಾತ್ರ ನಿಸ್ಸಂದೇಹ

ಚಿತ್ರ ೨: ಹಿನ್ನೆಲೆ

ಸಿಲ್ಲಿಮನ್‌ನ ತಂದೆ ಬೆಂಜಮಿನ್. ಈತನು ತನ್ನ ಕಾಲದ ಅಮೇರಿಕನ್ ವಿಜ್ಞಾನಿಗಳಲ್ಲಿ ಎತ್ತಿ ಕಾಣುತ್ತಿದ್ದನು. ಸಿಲ್ಲಿಮನ್ ೧೮೪ ಓರಲ್ಲಿ ನ್ಯೂ ಹಾವನ್‌ನಲ್ಲಿ ಜನಿಸಿದನು. ಎಳವೆಯಲ್ಲೇ ವೈಜ್ಞಾನಿಕ ವಿಷಯಗಳಲ್ಲಿ ಆಸಕ್ತನಾಗಿದ್ದ ಸಿಲ್ಲಿಮನ್ ವೈಜ್ಞಾನಿಕ ಸಲಕರಣೆಗಳನ್ನು ಕುತೂಹಲಚಿತ್ತನಾಗಿ ವೀಕ್ಷಿಸುತ್ತಿದ್ದನು ತನ್ನ ತಂದೆಯು ಕೆಲಸ ಮಾಡುತ್ತಿದ್ದ ಪ್ರಯೋಗಶಾಲೆಯನ್ನು ಹೊಕ್ಕು, ಅಲ್ಲಿನ ಸಾಧನ ಸಲಕರಣಗಳನ್ನು ಆಸಕ್ತಿಯಿಂದ ನೋಡುವುದೆಂದರೆ, ಅತನಿಗೆ ಪಂಚ ಪ್ರಾಣ.

ತಂದೆ ಬೆಂಜಮಿನ್ನನು ಕೂಡ ಮಗನ ಹೃದಯವರಿತಿದ್ದನು ಮತ್ತು ಇದರಿಂದಾಗಿಯೇ ಅತನಿಗೆ ಉತ್ತೇಜನವಿತ್ತು ವೈಜ್ಞಾನಿಕಾಸಕ್ತಿಯು ಕೆರಳುವಂತೆ ಮಾಡಿದನು.

ಚಿತ್ರ ೩: ಅಧ್ಯಾಪಕ

ತನ್ನ ೨೧ನೆಯ ವಯಸ್ಸಿನಲ್ಲಿ, ಒಂದರೆ ೧೮೪೭ರಲ್ಲಿ ಸಿಲ್ಲಿಮನ್ ಯೇಲ್ ವಿಶ್ವವಿದ್ಯಾಲಯದಲ್ಲಿ ಆನರ್ಸ್‌ನೊಂದಿಗೆ ಪದವಿ ಪಡೆದನು. ಆ ಕ್ಷಣದಿಂದಲೇ ಅವನು ಅಲ್ಲೇ ಶಾಲೆಯಲ್ಲಿ ವಿಜ್ಞಾನ ಕಲಿಸುವ ಅಧ್ಯಾಪಕನಾಗಿ ಸೇರಿಕೊಂಡನು. ಅತನ ಅಸಾಧಾರಣ ಮೇಧಾವಿ ಶಕ್ತಿಯು ಬಹಳ ಮುಂದುವರಿಯುತಿತ್ತು, ಮುಖ್ಯವಾಗಿ ರಸಾಯನ ಶಾಸ್ತ್ರದಲ್ಲಿ ಅದು ಸಂಶೋಧಕ ಪ್ರವೃತ್ತಿಯನ್ನು ತೋರಿಸುತಿತ್ತು. ಇದರಿಂದಾಗಿಯೇ ಕೆಲವು ಸಮಯದಲ್ಲೇ ಸಿಲ್ಲಿಮನ್ ಆ ಪ್ರದೇಶದ ಸುಪರಿಚಿತ ಅಧ್ಯಾಪಕನಾದನು.

ಚಿತ್ರ ೪: ಗೃಹಸ್ಥ ಜೀವನ

ಸಿಲ್ಲಿಮನ್ ಸೂಸನ್ ಫಾರ್ಬೆಸ್ ಎಂಬಾಕೆಯನ್ನು ಬಹುವಾಗಿ ಪ್ರೀತಿಸುತಿದ್ದನು. ಅವರಿಬ್ಬರ ವಿವಾಹವು ೧೮೪೦ರಲ್ಲಿ ವೈಭವದಿಂದ ನೆರವೇರಿತು. ವೈವಾಹಿಕ ಜೀವನವಾದರೂ ಸುಖಮಯವಾಗಿಯೇ ಇತ್ತು. ಏಳು ಜನ ಮಕ್ಕಳಿಗೆ ಅವರು ಜನ್ಮವಿತ್ತರು. ಸಾಂಸಾರಿಕ ಜೀವನವು ಸೌಂದರ್ಯಯುಕ್ತವಾಗಿತ್ತು, ಸರಸವಾಗಿತ್ತು, ಮಂಗಲಮಯವೂ ಆಗಿತ್ತು. ಆದುದರಿಂದಾಗಿ ಯಾವ ಹೆಚ್ಚಿನ ಕೌಟುಂಬಿಕ ಜಂಜಾಟಗಳಿಗೆ ಮನಸ್ಸು ಹರಿಸದೆ ಸಂತೃಪ್ತ ಜೀವನವನ್ನು ಬದುಕುವುದು ಸಿಲ್ಲಿಮನ್ನನಿಗೆ ಸಾಧ್ಯವಾಯಿತು.

ಚಿತ್ರ ೫. ಪೆಟ್ರೋಲಿಯಮ್

೧೮೫೪ರಲ್ಲಿ ಪೆನಿಸಿಲ್ವೇನಿಯಾದ ಜಾರ್ಜ್ ಎಚ್. ಬಿಸ್ಸೆಲ್ ಮತ್ತು ಜೊನತ್ತನ್ ಇವೆಲೆತ್‌ರವರು ಸಿಲ್ಲಿಮನ್‌ನ ಬಳಿಗೆ ಒಂದು ಜಿಗುಟಾದ ನೀಲ ಹಸುರು ಬಣ್ಣದ ವಸ್ತುವನ್ನು—ಕ್ರೂಡಾಯಿಲ್—ತಂದರು. ಈ ಪದಾರ್ಥದಿಂದ ಏನಾದರೂ ಉಪಯೋಗವಿದೆಯೆ? ಮತ್ತು ಇದನ್ನು ಯಾವುದಾದರೂ ಉಪಯುಕ್ತ ಕಾರ್ಯಗಳಿಗೆ ಬಳಸಬಹುದೇ? ಎಂದು ಪರಿಶೀಲಿಸುವಂತೆ ಕೇಳಿಕೊಂಡರು. ತಮ್ಮಲ್ಲಿ ಪರಿಶೀಲನೆಗೆ ಪ್ರತಿಫಲವಾಗಿ ನೀಡಲು ಸಾಕಷ್ಟು ಸಂಪತ್ತಿಲ್ಲವೆಂದೂ ತಿಳಿಸಿದರು. ಆಗಂತುಕರ ವಿಚಾರವು ಸಿಲ್ಲಿಮನ್ನನ ಸಹಜ ಕುತೂಹಲವನ್ನು ಕೆರಳಿಸಿತು. ಆದುದರಿಂದಲೇ ಲಾಭದ ಗೊಡವೆಯನ್ನು ಬಿಟ್ಟುಗೊಟ್ಟು ಇದರ ಪರಿಶೀಲನೆಯ ಕಾರ್ಯದಲ್ಲಿ ತಲ್ಲೀನನಾದನು.

ಚಿತ್ರ ೬: ಇತಿಹಾಸ

ಪೆನಿಸಿಲ್ವೇನಿಯಾದಲ್ಲಿ ನೆಲಸಿದ್ದ ಇಂಡಿಯಾನರು ತೋಡಾಗಿ ಹರಿಯುತಿದ್ದ ಮತ್ತು ಅಲ್ಲಲ್ಲಿ ಜಿನಗುತಿದ್ದ ಈ ಜಿಗುಟಾದ ಎಣ್ಣೆಯನ್ನು ಔಷಧಿಗಾಗಿ ಬಳಸಿಕೊಳ್ಳುತಿದ್ದರು. ಹೊಸತಾಗಿ ಆ ಪ್ರದೇಶಕ್ಕೆ ಬಂದು ನೆಲಸಿದ ವಲಸೆಗಾರರು ಮೂಗಿಗೆ ಅದ್ದುಲ ವಾಸನೆ ಬಡಿಯುತಿದ್ದ ಈ ಪದಾರ್ಥವನ್ನು ಕಂಡು ಮೂಗು ಮುರಿಯುತಿದ್ದರು. ಆದರೂ ಕೆಲವರು ಇಂದಿಯಾನರನ್ನು ಅನುಕರಿಸಿ ಔಷಧಿಯಾಗಿ ಇದನ್ನು ಬಳಸತೊಡಗಿದರು.

ಚಿತ್ರ ೭: ಮೊದಲ ಹೆಜ್ಜೆ

ಯೇಲೆ ಲೈಬ್ರೆರಿಯಲ್ಲಿನ ಎಲ್ಲ ವೈಜ್ಞಾನಿಕ ಗ್ರಂಥಗಳನ್ನೂ ಸಿಲ್ಲಿಮನ್ ಪರಿಶೀಲಿಸಿದನು. ಆದರೆ, ಅವನಿಗೆ ಅವುಗಳಲ್ಲಿ ಪೆಟ್ರೋಲಿಯಂನ ಉಲ್ಲೇಖವೆಲ್ಲಿಯೂ ಕಂಡು ಬರಲಿಲ್ಲ. ಇದರಿಂದಾಗಿ ಆವನು ದೊಡ್ಡ ಸಮಸ್ಯೆಯಲ್ಲಿ ಬಿದ್ದನು.



೭

೮

೯

೧೦

ಜನಕ
ಸಿಲ್ಲಿಮನ್

೪ ೫ ೬

ಅರಸುತಿದ್ದ ಸಮಸ್ಯೆಗೆ ಯಾವ ಪರಿಹಾರವೂ ಆತನಿಗೆ ದೊರೆಯಲಿಲ್ಲ. ಪೆಟ್ರೋಲಿಯಂನ್ನು ಉಪಯುಕ್ತ ಉದ್ದೇಶಗಳಿಗಾಗಿ ಬಳಸಿಕೊಳ್ಳುವ ಸಾಧ್ಯಾಸಾಧ್ಯತೆಗಳ ಬಗೆಗೂ ಯಾವ ಮಾಹಿತಿಯೂ ಲಭಿಸಲಿಲ್ಲ. ಹಾಗೇನಿದ್ದರೂ ಸಿಲ್ಲಿಮನ್ ಕಂಗಾಲಾಗಲಿಲ್ಲ. ಗಲಿಬಿಲಿಯಲ್ಲಿಯೇ ಆತನು ತನ್ನ ಶೋಧನೆಗಳಲ್ಲಿಯೇ ತನ್ನನ್ನು ತಾನು ಮರೆತನು.

ಚಿತ್ರ ೮: ಸಾಧನ ಸಲಕರಣೆಗಳು

ತನ್ನ ಸಂಶೋಧನೆಗೆ ಆಗ ಅಳವಡಿಸಿಕೊಳ್ಳಬೇಕಾದ ಸಂಶೋಧನ ಸಲಕರಣೆಗಳು ಅಸಮರ್ಪಕವಾದುವು ಎಂದು ಸಿಲ್ಲಿಮನ್ನನಿಗೆ ಮನವರಿಕೆಯಾಯಿತು. ತನ್ನ ಪರಿಶ್ರಮದಿಂದಲೇ ಆತ ಈ ಸಲಕರಣೆಗಳನ್ನು ಅಳವಡಿಸಿಕೊಂಡನು. ತನ್ನ ಕಾರ್ಯದಲ್ಲಿಯೇ ನಿಮಗ್ನನಾದನು. ದಿನರಾತ್ರಿ ಸಿಲ್ಲಿಮನ್ ಸ್ವಕಾರ್ಯವನ್ನು ಕರ್ತವ್ಯವೆಂದು ತಿಳಿದು ಮಾಡತೊಡಗಿದನು, ತನ್ನ ತಾನೇ ಮರೆತನು.

ಚಿತ್ರ ೯: ಪರಿಶೀಲನೆಗಳು

ತನ್ನ ಉಪಕರಣಗಳು ಸಿದ್ಧವಾದೊಡನೆಯೇ ೧೮೫೪—೫೫ರ ಚಳಿಗಾಲದಲ್ಲಿ ಸಿಲ್ಲಿಮನ್ ಪೆಟ್ರೋಲಿಯಮಿಗೆ ಸಂಬಂಧಿಸಿದ ಪ್ರಸಂಶೋಧನೆಗೆ ತೊಡಗಿದನು. ಆಗಿನ ಕಲವರು ವೈದ್ಯಕೀಯ ರಂಗದಲ್ಲಿ ಇದನ್ನು ಬಳಸುತಿದ್ದುದರಿಂದ ಇದರಲ್ಲಿ ಚಿಕಿತ್ಸಕಗುಣಗಳೇನಾದರೂ ಇವೆಯೇ ಎಂದಾತ ಮೊದಲು ಪರಿಶೀಲಿಸಿದನು. ಆದರೆ, ಯಾವ ರೋಗನಾಶಕ ಗುಣಗಳೂ ಅಂದಾತನಿಗೆ ಕಂಡುಬರಲಿಲ್ಲ. ಇಂದು ಆಧುನಿಕ ವಿಜ್ಞಾನವು ಪೆಟ್ರೋಲಿಯಂನ್ನು ಔಷಧಿಯಾಗಿ ಬಳಸಬಹುದಾದ ಬಹಳಷ್ಟು ಪ್ರಯೋಗಗಳನ್ನು ಎತ್ತಿತೋರಿಸಿದೆ. ಅಂದು ಸಿಲ್ಲಿಮನ್ನನು ಕಾಣದ ಗುಣಗಳು ಇಂದು ಅದರಲ್ಲಿ ಕಂಡಿವೆ.

ಚಿತ್ರ ೧೦: ಶೋಧಗಳು

೧೮೫೫ರ ಬೇಸಗೆಯಲ್ಲಿ ಸಿಲ್ಲಿಮನ್ ತಾನು ಕಂಡುಕೊಂಡ ಸಂಗತಿಗಳನ್ನು ಪ್ರಕಟಿಸಿದನು. ಪೆಟ್ರೋಲಿಯಮಿನ ಉಪವಸ್ತುಗಳಲ್ಲಿ ಮುಖ್ಯವಾದುವು ಪ್ರಕಾಶ ಮತ್ತು ಉಷ್ಣಕ್ಕಾಗಿ ಉಪಯೋಗಿಸುವ ಕೆರೋಸಿನ್, ಕ್ಯಾಂಡಲ್ ತಯಾರಿಕೆಯಲ್ಲಿ ಉಪಯುಕ್ತವಾದ ಲ್ಯುಬ್ರಿಕೇಟಿಂಗ್ ಎಣ್ಣೆ ಮತ್ತು ಪರಫಿನ್‌ಗಳೂ ಪೆಟ್ರೋಲಿಯಮ್‌ನ ಉಪವಸ್ತುಗಳು. ಇವು ವಾಟರ್ ಪ್ರೂಫ್ ತಯಾರಿಯಲ್ಲಿ ಮಹತ್ವಪೂರ್ಣವಾಗಿವೆ. ಗ್ಯಾಸೋಲೀನ್ ಅಂದು ಉಪಯೋಗಕಾರಕವೆಂದು ಕಂಡುಬರದಿದ್ದರೂ ಇಂದದು ಅತಿ ಪ್ರಮುಖಸ್ಥಾನವನ್ನಾಕ್ರಮಿಸಿದೆ. ಹೀಗೆ ಸಿಲ್ಲಿಮನ್ನನ ಸಂಶೋಧನೆಗಳು ಮಾನವೋಪಯೋಗಿಯಾದುವು.

ಚಿತ್ರ ೧೧: ಮೊದಲ ಬಾವಿ

ಸಿಲ್ಲಿಮನ್ನನ ಸಂಶೋಧನೆಗಳು ತೈಲೋದ್ಯಮದ ಭವಿಷ್ಯದ ಉಜ್ವಲತೆಯನ್ನು ಹೊರಗೆಡಹಿದನೇನೋ ನಿಜ. ಆದರೆ, ಬಿಸ್ಸೆಲ್ ಮತ್ತು ಆತನ ನಾಲುದಾರನು ತೈಲಕೂಪವನ್ನು ತೋಡಲು ಬಂಡವಾಳಗೂಡಿಸಲು ಬಹಳಷ್ಟು ಪ್ರಯಾಸ ಪಡಬೇಕಾಯಿತು. ಅವರ ನೌಕರನಾಗಿದ್ದ ಎಡ್ವಿನ್ ಎಲ್. ಡ್ರೇಕ್ ಎಂಬವನು ೧೮೫೯ರಲ್ಲಿ ಪೆನಿಸಿಲ್ವೇನಿಯಾದ ಟಿಟಸ್‌ವಿಲಿಯಲ್ಲಿ ತೈಲಕೂಪವನ್ನು ತೋಡಿದನು. ಇದು ಪ್ರಪಂಚದಲ್ಲಿಯೇ ಮೊದಲ ಕಲ್ಲೆಣ್ಣೆಯ ಬಾವಿಯಾಗಿತ್ತು. ಮುಂದಿನ ಕೆಲವೇ ತಿಂಗಳುಗಳಲ್ಲಿ ನೂರಾರು ಬಾವಿಗಳು ತೋಡಲ್ಪಟ್ಟವು. ತೈಲೋದ್ಯಮವು ದಿನದಿಂದ ದಿನಕ್ಕೆ ಬೆಳೆದು ಬರತೊಡಗಿತು.

ಚಿತ್ರ ೧೨: ಗ್ಯಾಸೋಲೀನ್

ಸಿಲ್ಲಿಮನ್ ಸಂಶೋಧನೆ ನಡೆಸಿದ ಕಾಲದಲ್ಲಿ ಗ್ಯಾಸೋಲೀನ್ ಯಾವ ಉಪಯೋಗಕ್ಕೂ ಬಾರದೆ ಹೋದರೂ ೧೯೦೦ರ ಹೊತ್ತಿಗೆ ಇದ್ದಲಿಗಿಂತ ಗ್ಯಾಸೋಲೀನ್ ಉತ್ತಮವಾದ ಉರುವಲಾಗಿ ಕೆಲವೊಂದು ಯಂತ್ರಗಳಲ್ಲಿ ಕೆಲಸ ಮಾಡಬಲ್ಲುದೆಂದು ಅನುಭವವಾಯಿತು. ಗ್ಯಾಸೋಲೀನ್‌ನ ಬೇಡಿಕೆ ಹೆಚ್ಚುತ್ತ ಬಂದುದರ ಪರಿಣಾಮವಾಗಿ ನಾಯಿಕೊಡೆಗಳಂತೆ ರಿಫೈನರಿಗಳು (ತೈಲ ಶುದ್ಧೀಕರಣ ಕೇಂದ್ರಗಳು) ತಲೆಯೆತ್ತತೊಡಗಿದುವು.

ಚಿತ್ರ ೧೩: ಬೆಳವಣಿಗೆ

ತೈಲೋದ್ಯಮವು ಅಮೆರಿಕೆಯಲ್ಲಿ ಬರಿಯ ಒಂದು ತೈಲಕೂಪದಿಂದ ಆರಂಭವಾಯಿತು. ಒಂದೇ ಶತಮಾನದಲ್ಲಿ ಬಾವಿಗಳ ಸಂಖ್ಯೆ ಬೆಳೆದು ನಿಂತು, ೬,೮೦,೦೦೦ಕ್ಕೆ ಏರಿತು. ಪ್ರಪಂಚದ ಪೆಟ್ರೋಲಿಯಂ ಉತ್ಪಾದನೆಯು ವಾರ್ಷಿಕ ೬೦೦ ಕೋಟಿ ಬಾರ್ಲ್‌ಗಳೆಂದು ಅಂದಾಜು ಮಾಡಿದ್ದಾರೆ. ಇದರಲ್ಲಿ ಅಮೆರಿಕೆಯೊಂದೇ ಅರ್ಧಾಂಶದಷ್ಟನ್ನು ಉತ್ಪಾದಿಸುತ್ತದೆ ಮತ್ತು ವ್ಯಯಿಸುತ್ತದೆ. ಪ್ರಪಂಚದ ವ್ಯವಹಾರಗಳಲ್ಲಿ ಪೆಟ್ರೋಲಿಯಂ ವಸ್ತುಗಳು ಇಂದು ಪ್ರಮುಖಸ್ಥಾನವನ್ನು ಪಡೆದಿವೆ.

ಚಿತ್ರ ೧೪: ಪರಿಣಾಮ

ಮಾನವನು ಕಂಡುಹಿಡಿದ ಪದಾರ್ಥಗಳಲ್ಲಿ ಎಣ್ಣೆಯು ಅತ್ಯಂತಾವಶ್ಯಕವಾದುದು. ಅದಿಲ್ಲದೆ ಎಂಜಿನ್ನುಗಳ ಸಂಚಾರವಿಲ್ಲ, ವಾಹನಗಳಿಲ್ಲ ವಿಮಾನಗಳಿಲ್ಲ. ಚಂದ್ರಲೋಕಯಾತ್ರೆಯಿಲ್ಲ, ಆರೋಗ್ಯ ಮತ್ತು ವೈದ್ಯಕೀಯ ರಂಗಗಳಲ್ಲಿಯೂ ಉದ್ಯಮಗಳಲ್ಲಿಯೂ ಪರಿಣಾಮಕಾರಿ ಪ್ರಯೋಜನಗಳಿಲ್ಲ.

ಚಿತ್ರ ೧೫: ಸಿಲ್ಲಿಮನ್ ಸ್ಮಾರಕ

೧೮೬೫ರಲ್ಲಿ ಬೆಂಜಮಿನ್ ಸಿಲ್ಲಿಮನ್ ಇಹಲೋಕ ತ್ಯಾಗಮಾಡಿದನು. ತನ್ನ ತೊಡಗಿದ ಸಂಶೋಧನೆಯ ದಾರಿಯಲ್ಲಿ ನಡೆದಾತನು ಪೂರ್ಣ ಗುರಿಯನ್ನು ಮುಟ್ಟಲಿಲ್ಲ. ಆದರೂ ಆತನು ಆರಿದಾರಿ ತನಕ ಶೋಧಿಸಿದ ವಸ್ತುಗಳು ಇಂದಿಗೂ ಬಳಕೆಯಲ್ಲಿವೆ. ಆವನ ನಂತರವೂ ಹಲವು ಸಂಶೋಧಕರು ಆತನ ದಾರಿಯಲ್ಲೇ ಮುಂದುವರಿದರು; ಕೆಲವು ವೈಲುಗಲನ್ನು ದಾಟಿದರು. ಪ್ರಕೃತಿಯು ಅದೆಂದು ಬುದ್ಧಿವಂತೆಯೆಂದು ಯಾರು ಬಲ್ಲರು?

ನಿಷ್ಣಾತ ಚತುರ ಸಂಶೋಧಕನೂ ವಿಜ್ಞಾನದ ವಿವಿಧ ರಂಗಗಳಲ್ಲಿ ದುಡಿದವನೂ ಆದ ಸಿಲ್ಲಿಮನ್ ತನ್ನ ಶೋಧನೆಗಳನ್ನು ಏಕಸ್ವಾಮ್ಯದಲ್ಲಿಡಲು ಬಯಸಲಿಲ್ಲ. ಅದರ ಫಲ ಎಲ್ಲರಿಗೂ ದೊರೆಯುವಂತೆ ಮಾಡಿದನು. ಈ ಮಹತ್ ಸಾಧನೆ ಮತ್ತು ಮಾನವ ಸೇವೆಗಾಗಿ ಜಾಗತಿಕ ತೈಲೋದ್ಯಮವೇ ಬೆಂಜಮಿನ್ ಸಿಲ್ಲಿಮನ್ನನಿಗೆ ಅಮರ ಸ್ಮಾರಕವೆಂದರೆ ಅತಿಶಯವಿಲ್ಲ.







೧೨ ೧೩ ೧೪ ೧೫

ಕನ್ನಡಿಗರಿಗೆ ವಿಜಯಾರವರ ಮಹತ್ವಾಕಾಂಕ್ಷೆಯ ಕಾಣಿಕೆ

“ಸತ್ಯ ಹರಿಶ್ಚಂದ್ರ”

ಘನವಾದ ಸತ್ಯವನ್ನು ತನ್ನ ಜೀವನದ ಉಸಿರಾಗಿಟ್ಟುಕೊಂಡು ಪ್ರಪ್ರಥಮವಾಗಿ ಆಚರಿಸಿದವನು ಪುರಾಣ ಪ್ರಸಿದ್ಧನಾದ “ಹರಿಶ್ಚಂದ್ರ ಚಕ್ರವರ್ತಿ”. ಈ ದಿವ್ಯ ಪುರುಷನ ಕಥೆಯನ್ನು ವಿಜಯಾ ಸಂಸ್ಥೆ ತೆರೆಯ ಮೇಲೆ ತಂದಿದೆ. ಎಲ್ಲಾ ವಿಧ ವಾದ ಜನಗಳಿಗೂ, ಸಮಾಜಕ್ಕೂ ತೃಪ್ತಿ ಸಂತೋಷವನ್ನುಂಟುಮಾಡುವಂತೆ ಈ ಹರಿಶ್ಚಂದ್ರನ ಚಿತ್ರಕಥೆಯನ್ನು ಶ್ರೀ ಕೆ. ವಿ. ರೆಡ್ಡಿ, ಬಿ. ಎಸ್‌ಸಿ. (ಆನರ್ಸ್.) ಸಿದ್ಧ ಗೊಳಿಸಿದ್ದಾರೆ. ಇಂಥ ಉತ್ತಮ ಚಿತ್ರ ಕಥೆಯನ್ನು ಆಬಾಲಗೋಪಾಲರಿಗೂ ಸುಲಭವಾಗಿ ಅರ್ಥವಾಗುವಂತೆ ನಿರ್ದೇಶಿಸಿದವರು ಶ್ರೀ ಕುಣಗೂರು ಕೃಷ್ಣಮೂರ್ತಿಗಳು. ಈ ಅದ್ವಿತೀಯ ಲೇಖಕರ ಸಾಹಿತ್ಯದಿಂದಲೂ ಪ್ರತಿಭಾಪೂರ್ಣ ದಿಗ್ದರ್ಶನದಿಂದಲೂ “ಸತ್ಯ ಹರಿಶ್ಚಂದ್ರ” ಸುಪುಷ್ಪದಷ್ಟವಾಗಿ ಹೊರಬಂದಿದೆ.

ಇದುವರೆವಿಗೂ ಯಾವ ಕನ್ನಡ ಚಿತ್ರಕ್ಕೂ ಆಗದಿರುವಷ್ಟು ಖರ್ಚು ಈ ಚಿತ್ರಕ್ಕಾಗಿದೆ. ಕಥೆಗೆ ಮತ್ತು ಪಾತ್ರಗಳಿಗೆ ಅನುಗುಣವಾಗಿ, ಸುಮಾರು ೩೮ ರಂಗ ಸಜ್ಜಿಕೆಗಳನ್ನು (ಸೆಟ್ಸ್)ನಿರ್ಮಿಸಿ, ಚಿತ್ರದಲ್ಲಿ ಉಪಯೋಗಿಸಿದ್ದಾರೆ. ಉಡಿಗೆ ತೊಡಿಗೆಗಳ ವಿಷಯವಾಗಿ, ಎಷ್ಟು ಹೇಳಿದರೂ ಸ್ವಲ್ಪವೇ — ಸಹಸ್ರಾರು ರೂಪಾಯಿಗಳು ಉಡುಗೆತೊಡಗೆಗಳಿಗಾಗಿ ಖರ್ಚು ಮಾಡಲ್ಪಟ್ಟಿವೆ.

ರಾಷ್ಟ್ರಾಧ್ಯಕ್ಷರಿಂದ ಪುರಸ್ಕೃತವಾದ, ಅನೇಕ ಚಿತ್ರಗಳ ನಾಯಕರಾದ ಶ್ರೀ ರಾಜಕುಮಾರ್ “ಹರಿಶ್ಚಂದ್ರ”ನ ಪಾತ್ರದಲ್ಲಿ ತಮ್ಮ ಅಪ್ರತಿಮ ಕಲಾಪ್ರತಿಭೆಯನ್ನು ತೋರಿದ್ದಾರೆ. ಉದಯಕುಮಾರ್ ವಿಶ್ವಾಮಿತ್ರನಾಗಿ, “ನಭೂತೋ ನಭವಿಷ್ಯತಿ” ಎಂದು ಮೆರೆದಿದ್ದಾರೆ. ಶ್ರೀ ಹರಿಶ್ಚಂದ್ರನ ಧರ್ಮಪತ್ನಿ ಚಂದ್ರಮತಿಯಾಗಿ ಶ್ರೀಮತಿ ಪಂಢರೀಬಾಯಿ, ಕಲಾಪ್ರಪಂಚದ ಅದ್ವಿತೀಯ ಪ್ರತಿಭಾನ್ವಿತರೆನಿಸಿಕೊಂಡಿದ್ದಾರೆ. ಜತೆಗೆ, ಸರ್ವಶ್ರೀ ಕೆ ಎಸ್. ಅಶ್ವತ್ಥ್, ಸುಬ್ಬಣ್ಣ, ದ್ವಾರಕೀಶ್, ರತ್ನಾಕರ, ಎಂ. ಪಿ. ಶಂಕರ್, ರಾಮಚಂದ್ರ ಶಾಸ್ತ್ರಿ, ಕೃಷ್ಣ ಶಾಸ್ತ್ರಿ, ಬೇಬಿ ಪದ್ಮಿನಿ ಮೊದಲಾದವರೆಲ್ಲ ತಮ್ಮ ಪಾತ್ರವನ್ನು ಉತ್ಕೃಷ್ಟ ರೀತಿಯಲ್ಲಿ ಅಭಿನಯಿಸಿದ್ದಾರೆ. ನಿಮ್ಮೆಲ್ಲರ ಮೆಚ್ಚಿನ ನಟ ನರಸಿಂಹರಾಜು, ಹರಿಶ್ಚಂದ್ರನನ್ನು, ಅವನ ಹೆಂಡತಿ, ಮಗುವನ್ನು ಅನೇಕ ಕಷ್ಟಗಳಿಗೆ ಗುರಿಪಡಿಸಿ ಕಾಡುವ ನಕ್ಷತ್ರಿಕನಾಗಿ ನಿಮ್ಮನ್ನು ಪ್ರೈಮರೆಯುವಂತೆ ಮಾಡುತ್ತಾನೆ. ಜೊತೆಗೆ, ರಮಾಬಾಯಿ ವಾಣಿಶ್ರೀ, ರಾಜಶ್ರೀ, ಮೀನಾಕುಮಾರಿಯರಿದ್ದಾರೆ. ಮೇನಕೆಯಾಗಿ ಎಲ್. ವಿಜಯಲಕ್ಷ್ಮಿ ಮಾಡಿರುವ ನಾಟ್ಯ ರಸಿಕರಿಗೆ ರಸದೌತಣ.

ಅನೇಕ ವರ್ಷಗಳಿಂದಲೂ ಅತ್ಯುತ್ತಮವಾದ ಚಿತ್ರಗಳನ್ನು ಪ್ರದರ್ಶನಕ್ಕೆ ಹಂಚುತ್ತಿದ್ದ ವಿಜಯಾ ‘ಪಿಕ್ಚರ್ಸ್ ಸರ್ಕ್ಯೂಟನವರ. ಈ ಮಹೋನ್ನತ ಶ್ರೀಮಂತಿಕೆಯ “ಸತ್ಯ ಹರಿಶ್ಚಂದ್ರ” ನನ್ನು, ಸರ್ವವಿಧದಿಂದಲೂ ಕೆಲಕ್ಷಣವಾಗಿ ಹೊರಗೆ ಬರುವಂತೆ ನೋಡಿಕೊಂಡಿದ್ದಾರೆ. ಅಲ್ಲದೆ ಮಹೋನ್ನತ ಚಿತ್ರವೊಂದನ್ನು ಕನ್ನಡಿಗರಿಗೆ ಅರ್ಪಿಸಬೇಕೆಂದಿದ್ದ ಅವರ ಮಹತ್ವಾಕಾಂಕ್ಷೆಯು, ಈ ಮೂಲಕ ರೂಪುಗೊಂಡಿದೆ. ಈ ವಿಜಯಾ ಪಿಕ್ಚರ್ ಸರ್ಕ್ಯೂಟ್ ಹಳೆ ಮೈಸೂರು ಪ್ರಾಂತ್ಯಕ್ಕೆ ಹಂಚಿಕೆದಾರರು.

ಶ್ರೀ ಪೆಂಡ್ಯಾಲ ನಾಗೇಶ್ವರರಾಯರ ಸಂಗೀತವೂ, ಶ್ರೀ ಮಾಧವ ಬುಲ್‌ಬುಲೆಯ ಛಾಯಾಗ್ರಹಣವೂ, ಶ್ರೀ ಗೋಖಲೆ ಮತ್ತು ಶ್ರೀ ಕಲಾಧರ್ ಅವರ ಕಲಾನಿರ್ದೇಶನವೂ ಮಹತ್ವಪೂರ್ಣಗಳಾಗಿ, “ಸತ್ಯ ಹರಿಶ್ಚಂದ್ರ” ಕನ್ನಡ ಚಿತ್ರ ಪ್ರಪಂಚದಲ್ಲಿ ಆಚಂದ್ರಾರ್ಕ ಕೀರ್ತಿಶಿಖರದಲ್ಲಿ ನಿಲ್ಲುತ್ತದೆಂದು ನಿಸ್ಸಂದೇಹವಾಗಿ ಹೇಳಬಹುದು.

ಈ ಚಿತ್ರದ ಉತ್ತರ ಕರ್ನಾಟಕದ ಹಂಚಿಕೆದಾರರು “ಶ್ರೀನಿವಾಸ ಪಿಕ್ಚರ್ಸ್” ಗದಗ್.

— — —

ಪಾಕ್ ಆಕ್ರಮಣದ ಕತೆ

(ಆರನೇ ಪುಟದಿಂದ)

ರು ಒಂದೂವರೆ ಮೈಲಿನಷ್ಟು ದೂರ ಆಕ್ರಮವಾಗಿ ಪ್ರವೇಶಿಸಿದ್ದುದು ಕಂಡುಬಂತು. ಸುಮಾರು ೧೮ ಮೈಲುದ್ದದ ಗಡಿ ಹೀಗೆ ಅತಿಕ್ರಮಿತವಾಗಿತ್ತು. ಇದರ ಬಗ್ಗೆ ಮಾತುಕತೆ ನಡೆಸಲು ಫೆಬ್ರವರಿ ೫ರಂದು ಒಂದು ಸಭೆ ನಡೆಯಿತು. ಭಾರತೀಯ ಅಧಿಕಾರಿಗಳ ವಿಶೇಷ ಒತ್ತಾಯದಿಂದಾಗಿಯೇ ಪಾಕ್ ಅಧಿಕಾರಿಗಳು ಸಭೆಗೆ ಬರಲೊಪ್ಪಿದರು. ಆದರೆ ಅತಿಕ್ರಮಣದ ಈ ಸಮಸ್ಯೆಯನ್ನು ಚರ್ಚಿಸಲು ಅವರು ಯಾವುದೇ ರೀತಿಯಲ್ಲಿ ಸಿದ್ಧರಿದ್ದಂತೆ ಕಂಡುಬರಲಿಲ್ಲ.

ಫೆಬ್ರವರಿ ೧೮ರಂದು ಪಾಕ್ ಪಡೆಗಳು ಕಂಜರ ಕೋಟೆಯ ಬಳಿಯ ಭಾರತೀಯ ಭೂಪ್ರದೇಶವನ್ನು ಆಕ್ರಮಿಸಿದುವು. ಸಣ್ಣ ಮೆಷಿನ್‌ಗನ್, ಸ್ಟೆನ್‌ಗನ್ ಮತ್ತು ರೈಫಲ್ ಮೊದಲಾದ ಆಧುನಿಕ ಶಸ್ತ್ರಾಸ್ತ್ರಗಳು ಅವರ ಬಳಿಯಿದ್ದುವು. ೧೮ರಂದು ಭಾರತವು ಪ್ರತಿಭಟನಾಪತ್ರವನ್ನು ಕಳಿಸಿತು. ಇದರಲ್ಲಿ ಪಾಕಿಸ್ತಾನಿ ಪಡೆಗಳು ಕೂಡಲೇ ಹಿಮ್ಮೆಟ್ಟಬೇಕೆಂದೂ ಗಡಿ ಗುರುತಿಸುವ ಕಾರ್ಯಕ್ಕೆ ಅಗ್ರಗಮನ ನೀಡಬೇಕೆಂದೂ ಸೂಚಿತವಾಗಿತ್ತು.

ಆದರೆ, ತಾ. ೩೦ರಂದು ಪಾಕಿಸ್ತಾನವು ಗಡಿ ಗುರುತಿಸುವ ಕಾರ್ಯಕ್ಕೆ ಸಂಬಂಧಿಸಿದ ಸರ್ವ ಪರಿಣತರ ಸಭೆ ನಡೆಯಬೇಕೆಂಬುವನ್ನು ನಿರಾಕರಿಸಿತು. ಸಂಧಾನದ ದಾರಿಗೆ ಪಾಕಿಸ್ತಾನವನ್ನು ತರುವ ಭಾರತದ ಪ್ರಯತ್ನ ಮುಂದೆಸಾಗುತ್ತಿದ್ದಂತೆಯೇ ಪಾಕಿಸ್ತಾನವು ಎಪ್ರಿಲ್ ೯ರಂದು ಬೆಳಗ್ಗೆ ಪೂರ್ಣ ಸೈನಿಕ ಶಕ್ತಿಯೊಂದಿಗೆ ಆಕ್ರಮಣವನ್ನೇ ನಡೆಸಿತ. ಆಕ್ರಮಣವು ಪೂರ್ವ ನಿಯೋಜಿತವೇ ಆಗಿತ್ತು.

ಇಂದಿಗಾದರೂ ಪಾಕಿಸ್ತಾನವು ನ್ಯಾಯೋಚಿತ ಸಂಧಾನಕ್ಕೆ ಒಪ್ಪುವುದಿಲ್ಲ. ಮಾತುಕತೆಗಳನ್ನು ತಿರಸ್ಕರಿಸುತ್ತದೆ. ಅಂದರೆ, ಅಧಿಕೃತ ದಾಖಲೆಗಳು ಭಾರತದ ಪರವಾಗಿಯೇ ಇರುವುದಾದರೂ ಶಕ್ತಿ ಪ್ರದರ್ಶನದಿಂದಾದರೂ ತನ್ನ ಭೂದಾಹವನ್ನು ಶಮಿಸಬೇಕೆಂದೇ ಅಯ್ಯೂಬ ಸರಕಾರದ ಉದ್ದೇಶ. ಆದರೆ, ಭೌತಿಕ ಶಕ್ತಿಯ ಮುಂದೆ ಭಾರತವು ಎಂದಿಗೂ ತಲೆಬಾಗದು. ಧರ್ಮವಿರುವಲ್ಲೇ ಜಯ. ಆ ಧರ್ಮವು ಕೆಲಕಾಲ ಮರೆಯಬಹುದು, ಸದಾಕಾಲ ವಿರಾಜಿಸುವುದಿಲ್ಲ.

——— ——

ಟೆಲಿಗ್ರಾಂ: ‘ಸುದರ್ಶನ’. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಜಿರಾಫೆಯ ಜಿಜ್ಞಾಸು ಚೈನಿ ಜನತೆ

(ಏಳನೇ ಪುಟದಿಂದ)

ಮತ-ಪಂಗಡ, ಪ್ರದೇಶ ಭಿನ್ನತೆಗಳನ್ನು ಬದಿಗೊತ್ತಿ ಬಂದಾಗ ಬೇಕಾಗಿರುತ್ತದೆ. ನಾವೆಲ್ಲರೂ ಭಾರತ ಮಾತೆಯ ಮಕ್ಕಳೇ ಇದ್ದೇವೆ.

ಇದನ್ನು ಜ್ಞಾಪಿಸಿಕೊಳ್ಳಲಿಕ್ಕಾಗಿ ಇಂದು ನರಸಿಂಹ ಜಯಂತಿ ಬಂದಿರುತ್ತದೆ. ಭಾರತಮಾತೆಗೆ ಅಪಮಾನ ಗೈದ ರಾಕ್ಷಸರ ಅವಸ್ಥೆ ಏನಾಯಿತು? ಇಂದು ಈ ಹಿರಣ್ಯಾಕ್ಷ — ಹಿರಣ್ಯಕಶಿಪು ಬೇರೆ ವೇಷ ಧರಿಸಿದ್ದಾರೆ. ಅವರನ್ನು ಕಮ್ಯೂನಿಸ್ಟರು ಮತ್ತು ಮುಸ್ಲಿಂಲೀಗಿಗಳೆಂದರೂ ತಪ್ಪು ಇಲ್ಲ. ರಾಷ್ಟ್ರೀಯ ಸ್ವಾಭಿಮಾನ ಶೂನ್ಯತೆ ಹಾಗೂ ಬಿಕ್ಕಟ್ಟೇ ಈ ರಾಕ್ಷಸನ ವೇಷವೆಂದರೂ ತಪ್ಪಿಲ್ಲ. ಇವೆಲ್ಲವೂ ಇಂದಿನ ರಾಜಕೀಯತೆಯಲ್ಲಿ ಒಂದೊಂದು ರೀತಿಯ ಪರ ಪಡೆದುಕೊಂಡಿವೆ. ಅಂತೆಯೇ ಅವುಗಳನ್ನು ನಾಶ ಮಾಡಿಬಿಡುವುದೂ ಕಷ್ಟವಾಗಿರುತ್ತದೆ.

ಆದರೂ ಅದೇನೂ ಕಷ್ಟ ಸಾಧ್ಯವಲ್ಲವೆನ್ನುತ್ತಿದೆ ಬೌದ್ಧ ಪೂರ್ಣಿಮಾ. ಗೌತಮನಿಗೆ ಜ್ಞಾನೋದಯವಾದಂತೆ, ಭಾರತೀಯರಲ್ಲಿಂದು ನಮ್ಮ ರಾಷ್ಟ್ರೀಯತೆಯ ಜ್ಞಾನೋದಯವಾಯಿತೆಂದರೆ ತೀರಿತು. ನಾವು ಯಾರ? ಇವರ ಜ್ಞಾನೋದಯವಾದಲ್ಲಿ ಚೈನಾ-ಪಾಕಿಸ್ಥಾನದ ಆಕ್ರಮಣ ಅಥವಾ ಕಮ್ಯೂನಿಸಂ ಮತ್ತು ಇಸ್ಲಾಮಿನ ಆಕ್ರಮಣ ಹಾಗೂ ಆಂಗ್ಲೇಯ ಭಾಷಾ ವ್ಯಾಮೋಹ ಅಥವಾ ಕ್ರಿಸ್ತೀಯರ ಕಿರುಕುಳ ಮುಂತಾದ ಹಾಲಾಹಲವನ್ನು ಸುಲಭವಾಗಿ ಕುಡಿದು ನಾವೂ ನೀಲಕಂಠರಾಗಬಹುದು.

———

ಕುಟುಂಬ ಯೋಜನಾ ತರಬೇತಿ ಶಿಬಿರದ ಪ್ರಾರಂಭೋತ್ಸವ

ಆರೋಗ್ಯ ಸಚಿವ ಡಾ| ನಾಗಪ್ಪ ಆಳ್ವಾರವರಿಂದ, ಕಳೆದ ತಾ. ೨೮ರಂದು, ಹೊಸಬೆಟ್ಟು ಪಂಚಾಯತಿನ ಆಶ್ರಯದಲ್ಲಿ ಏರ್ಪಡಿಸಿದ ಕುಟುಂಬ ಯೋಜನಾ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭವು ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮಂಗಳೂರು ತಾ| ಬೋ| ಅಧ್ಯಕ್ಷ ಶ್ರೀ ಬಿ. ರಾಜೀವ ಭಂಡಾರಿಯವರು ಸ್ವಾಗತಿಸಿದರು. ಪಂಚಾಯತ್ ಅಧ್ಯಕ್ಷ ಶ್ರೀ ಶ್ರೀನಿವಾಸ ಕೋಟ್ಯಾನರು ಸಚಿವರಿಗೆ ಬಿನ್ನವತ್ತಳೆಯನ್ನರ್ಪಿಸಿದರು. ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರು ಶಿಬಿರದ ಉದ್ದೇಶಗಳನ್ನು ವಿವರಿಸಿದರು. ಅಧ್ಯಕ್ಷರು ಹಾಗೂ ಡಾ| ಆಳ್ವರವರು ಕುಟುಂಬ ಯೋಜನೆಯ ಆವಶ್ಯಕತೆಯನ್ನು ವಿವರಿಸಿ ಭಾಷಣವಿತ್ತರು. ಈ ಸಂದರ್ಭದಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗ ಮತ್ತು ಶ್ರೀ ಕೆ. ವೆಂಕಟರಾಯಾಚಾರ್ಯರು ಕುಟುಂಬ ಯೋಜನೆಯ ಕುರಿತು ಮಾತನಾಡಿದರು. ಅಂತ್ಯದಲ್ಲಿ ಶ್ರೀ ಎಚ್. ನಾರಾಯಣರು ವಂದನಾರ್ಪಣೆಗೈದರು.

———

ವಜ್ರ ಮಹೋತ್ಸವದ ಸಡಗರದಲ್ಲಿ ಪ್ರಗತಿಪಥದತ್ತ ಸಾಗುತ್ತಿರುವ

"ಕೆನರಾ ಬ್ಯಾಂಕ್"

ಭಾರತದಲ್ಲೇ, ಜನಜನಿತವಾಗಿರುವ ಕೆನರಾ ಬ್ಯಾಂಕಿನ ೧೯೬೪ನೇ ಇಸವಿಗೆ ೫೯ನೇ ವರ್ಷದ ವಾರ್ಷಿಕ ವರದಿಯು ನಮ್ಮ ಕೈ ಸೇರಿದೆ. 'ಕೆನರಾ' ಎಂಬ ಹೆಸರಿನ ಸಂಸ್ಥೆಗಳು, ದಕ್ಷಿಣ ಕನ್ನಡದಲ್ಲಿ ಅಸ್ತಿತ್ವಕ್ಕೆ ಬಂದು ಇಂದು ದೇಶದಾದ್ಯಂತ ಕನ್ನಡ ಜಿಲ್ಲೆಯ ಕಂಪನ್ನು ಪಸರಿಸುತ್ತಿವೆ ಎಂದು ಹೇಳಲು ಆನಂದವಾಗುತ್ತದೆ. ೧೯೦೬ರಲ್ಲಿ ಸ್ಥಾಪಿತವಾದ ಕೆನರಾ ಬ್ಯಾಂಕು ವರದಿ ವರ್ಷದಲ್ಲಿ ಉಲ್ಲೇಖನೀಯವಾದ ಪ್ರಗತಿಯನ್ನು ಸಾಧಿಸಿ, ಸರ್ವಾಂಗೀಣ ಅಭಿವೃದ್ಧಿ ಹೊಂದಿದೆ ಎಂಬುದು ಸಂತೋಷದ ಸಂಗತಿ.

ಬ್ಯಾಂಕಿನ ತೆತ್ತ ಭಂಡವಾಳವು ಒಂದು ಕೋಟಿ ರೂಪಾಯಿ ಆಗಿದ್ದರೆ, ಕಾಯ್ದಿಟ್ಟ ನಿಧಿಯು ೧-೧೧ ಕೋಟಿ ರೂ.ಗಳಿಂದ ೧.೨೩ ಕೋಟಿ ರೂ.ಗಳಿಗೇರಿದೆ. ಇದು ಗಣನೀಯವಾದ ವಿಚಾರ. ಕಾಯ್ದಿಟ್ಟ ನಿಧಿಯು ತೆತ್ತ ಭಂಡವಾಳಕ್ಕಿಂತಲೂ ಹೆಚ್ಚಿರುವುದು ಬ್ಯಾಂಕಿನ ಭದ್ರ ಬುನಾದಿಗೆ ಸಾಕ್ಷಿ ನುಡಿಯುತ್ತಿದೆ. ಈ ವರ್ಷದ ಅಂತ್ಯಕ್ಕೆ ಬ್ಯಾಂಕಿನ ಭಂಡವಾಳವನ್ನು ಹೆಚ್ಚಿಸುವ ಇಂಗಿತವನ್ನು ಆಡಳಿತ ಮಂಡಳಿಯವರು ವ್ಯಕ್ತಪಡಿಸುತ್ತಾರೆ.

ವರದಿ ವರ್ಷದಲ್ಲಿ ಬ್ಯಾಂಕಿನ ಠೇವಣಾತಿಯು ೮೮.೨೪ ಕೋಟಿಗಳಿಗೇರಿದೆ. ಈ ಹೆಚ್ಚಳವು ಕಳೆದ ವರ್ಷಕ್ಕಿಂತ ೨೧.೭ ಶೇಕಡಾದಷ್ಟಾಗಿದೆ. ಹೆಚ್ಚುತ್ತಿರುವ ಠೇವಣಾತಿಯು ಜನತೆಗೆ ಬ್ಯಾಂಕಿನ ಮೇಲಿರುವ ಅಚಲ ವಿಶ್ವಾಸದ ದ್ಯೋತಕವಾಗಿದೆ.

ಠೇವಣಿಯಲ್ಲಿ ಗಣನೀಯವಾದ ಹೆಚ್ಚಳವಾದಂತೆ, ಹೊರಗೆ ಕೊಟ್ಟಿರುವ ಸಾಲದ ಮೊತ್ತದಲ್ಲಿಯೂ ಕಳೆದ ವರ್ಷಕ್ಕಿಂತಲೂ ೧೬.೩೨ ಕೋಟಿ ರೂ.ಗಳ ಹೆಚ್ಚಳವಾಗಿದೆ. ಈ ಸಾಲ ನೀಡುವಿಕೆಯಲ್ಲಿಯೂ ಬ್ಯಾಂಕು ದೇಶದ ಔದ್ಯಮಿಕ ಅಭಿವೃದ್ಧಿಯ ಕಡೆಗೆ ಗಮನ ಇತ್ತಿರುವುದು ಕಂಡುಬರುತ್ತದೆ. ಒಟ್ಟು ಸಾಲದ ೪೫% ಅಂಶ ಕೇವಲ ಕೈಗಾರಿಕೆಗಳಿಗಾಗಿಯೇ ಕೊಟ್ಟುದಾಗಿರುತ್ತದೆ. ದೇಶದ ಔದ್ಯಮಿಕ ಅಭಿವೃದ್ಧಿಗೆ ಬ್ಯಾಂಕು ಈ ರೀತಿ ನೆರವಾಗುತ್ತಿರುವುದು ಸಂತೋಷದ ಸಂಗತಿ.

ಬ್ಯಾಂಕು ವರದಿ ವರ್ಷದಲ್ಲಿ ಗಳಿಸಿದ ನಿವ್ವಳ ಲಾಭವೂ ೩೪.೬೬ ಲಕ್ಷಗಳಿಗೇರಿದೆ. ಈ ಲಾಭದಲ್ಲಿ ೫% ದಂತೆ ಕುಮ್ಯುಲೇಟಿವ್ ಪ್ರಿಫರೆನ್ಸ್ ಶೇರುದಾರರಿಗೂ ೧೫% ದಂತೆ ಇಕ್ವಿಟಿ ಶೇರುದಾರರಿಗೂ ಲಾಭಾಂಶ ಹಂಚಲಾಗಿದೆ. ಲಾಭಾಂಶವು ಕಳೆದ ವರ್ಷದ ದರದಲ್ಲೇ ಇದೆ.

ಬ್ಯಾಂಕಿಂಗ್ ಸೌಲಭ್ಯವನ್ನು ವಿಸ್ತರಿಸುವ ದೃಷ್ಟಿಯಿಂದ ಕೆನರಾ ಬ್ಯಾಂಕು ಈ ವರ್ಷ ತಿರುಪ್ಪೊಟ್ಟಿಯೂರ್, ಮದ್ರಾಸಿನ ಸ್ಯೆಂಟ್ ಥಾಮಸ್ ಮೌಂಟ್ ಹಾಗೂ ವಿಶಾಖಪಟ್ಟಣಗಳಲ್ಲಿ ತನ್ನ ಹೊಸ ಶಾಖೆಗಳನ್ನು ತೆರೆದಿದೆ. ಮಾತ್ರವಲ್ಲ ಪ್ರೊಲ್ಲಾಚಿ ಯೂನಿಯನ್ ಬ್ಯಾಂಕಿನ ಎಲ್ಲಾ ವ್ಯವಹಾರಗಳನ್ನು ಈ ಬ್ಯಾಂಕು ವಹಿಸಿಕೊಂಡಿದೆ. ಈ ರೀತಿ ವಿಶಾಲವಾದ ಶಾಖಾ ಸಮುದಾಯದಿಂದ ಬ್ಯಾಂಕು ದೇಶದ ಜನತೆಗೆ ಸೌಲಭ್ಯ ಒದಗಿಸುತ್ತಿದೆ ಎಂದು ತಿಳಿಸಲು ಹೆಮ್ಮೆಯೆನಿಸುತ್ತಿದೆ.

ಬ್ಯಾಂಕಿನ ಚಲಾವಣಾ ನಿಧಿಯು ೯೨.೪೮ ಕೋಟಿ ರೂ.ಗಳಿಗೇರಿದೆ. ಠೇವಣಾತಿ ಸ.ಉ. ೮೮.೨೪ ಕೋಟಿ ರೂ.ಗಳಿಗೇರಿದೆ. ಈ ವರ್ಷಟಲ್ಲಿ ಈ ಸಂಖ್ಯೆ ೧೦೦ನ್ನು ಮುಟ್ಟಿದರೆ ಆಶ್ಚರ್ಯವೇನಿಲ್ಲ.

೪೭೦೦ಕ್ಕಿಂತಲೂ ಹೆಚ್ಚು ನೌಕರರು ದುಡಿಯುತ್ತಿರುವ ಕೆನರಾ ಬ್ಯಾಂಕಿನ ಆಡಳಿತ ವರ್ಗ ಹಾಗೂ ನೌಕರರಲ್ಲಿ ಮಧುರ ಸಂಬಂಧವಿರುವುದು ಗಮನಾರ್ಹವಾದ ಅಂಶ. ಪಾಲುದಾರರ ಹಿತಾಸಕ್ತಿಯ ಜತೆಗೆ ತನ್ನ ನೌಕರರ ಹಿತವನ್ನೂ ಬ್ಯಾಂಕು ಗಮನಿಸಿ, ಅವರಿಗೆ ಸೌಲಭ್ಯ ನೀಡುತ್ತಿರುವುದು ಮೃದು ಮಧುರ ಸಂಬಂಧದ ದ್ಯೋತಕವಾಗಿದೆ.

ಹಣ ಪಡೆಯುವುದು ಮತ್ತು ನೀಡುವುದೇ ಬ್ಯಾಂಕುಗಳ ಕಾರ್ಯವಲ್ಲ. ಅವುಗಳು ಇತರ ಜನೋಪಯೋಗಿ ಕಾರ್ಯಗಳನ್ನು ಮಾಡಲು ಶಕ್ಯವಿದೆ ಎಂಬುದನ್ನು ಕೆನರಾ ಬ್ಯಾಂಕು ತನ್ನ ಹಲವಾರು ಜನೋಪಯೋಗಿ ಯೋಜನೆಗಳಿಂದ ತೋರಿಸಿಕೊಟ್ಟಿದೆ.

"ವಜ್ರಮಹೋತ್ಸವ"ದತ್ತ ಸಾಗುತ್ತಿರುವ ಕೆನರಾ ಬ್ಯಾಂಕು, ವಜ್ರಮಹೋತ್ಸವವನ್ನಾಚರಿಸುವ ಭಾರತದ ಶೆಡ್ಯೂಲ್ ಬ್ಯಾಂಕುಗಳಲ್ಲಿ ಎರಡನೆಯದಾಗಿದೆ. ದಕ್ಷವಾದ ಆಡಳಿತ ಮಂಡಳಿ ಹಾಗೂ ಅಧಿಕಾರ ವರ್ಗ, ನೌಕರರ ಸಹಕಾರ ಹಾಗೂ ಸಾಮಾಜಿಕ ಕಾರ್ಯಗಳಿಂದ ಬ್ಯಾಂಕು ಈ ರೀತಿಯ ಪ್ರಗತಿ ಸಾಧಿಸುವಂತಾಯಿತು. ಈ ಸಂದರ್ಭ ಬ್ಯಾಂಕಿನ ಚೇರ್‌ಮೇನ್‌ರಾದ ಶ್ರೀ|| ಕೆ. ಸಿ. ಜೆ. ಪ್ರಭು, ಹಾಗೂ ಜನರಲ್ ಮೇನೇಜರರಾದ ಶ್ರೀ|| ಪಿ. ಎಸ್. ನಾಯಕ್ ಹಾಗೂ ಶ್ರೀ|| ಎ. ಜಿ. ಪೈ ಇವರನ್ನು ಅಭಿನಂದಿಸಬೇಕಾಗಿದೆ—'ವಜ್ರಮಹೋತ್ಸವ"ವನ್ನಾಚರಿಸಲಿರುವ ಕೆನರಾ ಬ್ಯಾಂಕಿಗೆ ಇನ್ನೂ ಅಭಿವೃದ್ಧಿ ಪಥದತ್ತ ಮುಂದರಿಯಲಿ ಎಂದು ಹಾರೈಸುತ್ತೇವೆ

ನಚಿಕೇತ'ರ

ಹೃದಯಸ್ಪರ್ಶಿ

ನವೀನ ಕಾದಂಬರಿಗಳು

ಹಸುರು ಹಂಸ

ಬೆಲೆ: ರೂ. ಎರಡು.

ಋಣ ಯಾತ್ರೆ

ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ

ಬೆಲೆ ರೂ. 2—00

ಪ್ರತಿಗಳು ಸಿಗುವ ಸ್ಥಳ:

ನವಯುಗ ಪ್ರೆಸ್, ಉಡುಪಿ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಇದು ನೋಡಿ, ವ್ಯಾಪಾರ!

(ನಾಲ್ಕನೇ ಪುಟದಿಂದ)

'ಕೊಟ್ಟರೆ ಹತ್ತು ರೂಪಾಯಿನೂ ತಗೋತೀಯ ನೀನು, ನಾನು ಕೊಡೋದು ಒಂದೇ ಆಣೆ. ಬರುವುದಾದರೆ ಬಾ"

"ಇಲ್ಲ ಸ್ವಾಮಿ

"ಬೇಡ ಬಿಡು" ಎಂದು ಹೇಳಿ ಸ್ವಲ್ಪ ದೂರ ಹೋದೆ. ಗಾಡಿ ನನ್ನ ಬಳಿಯೇ ಬಂತು.

"ಬನ್ನಿ ಸ್ವಾಮಿ, ಕೂತ್ಕೊಳ್ಳಿ" ಎಂದ ಅದೇ ಗಾಡಿ ಸಾಬಿ. ಗಾಡಿ ಏರಿ ಮನೆ ಸೇರಿ ಸಾಬಿಗೆ ಒಂದಾಣೆ ಕೊಟ್ಟು ತಂದ ಸಾಮಾನುಗಳನ್ನೆಲ್ಲ ಅವಳ ಮುಂದೆ ಸುರಿದೆ.

"ಹೂವು ಎಷ್ಟು ತಂದ್ರಿ? ಹೇಗೆ ಮಾರು?" ಎಂದು ಅದರ ಕಟ್ಟನ್ನೇ ಬಿಚ್ಚಿದಳು.

"ಒಂದು ಮಾರು ತಂದೆ. ತುಂಬಾ ಬೆಲೆ. ಆರಾಣೆ ಕೊಟ್ಟೆ."

"ಇದು ಒಂದು ಮಾರು ಇದೆಯೊ? ಒಂದು ಮೊಳ ಕೂಡಾ ಇಲ್ಲವಲ್ರೀ' ಎಂದು ಅವಳೆಂದಾಗ ಆ ಹೂವಾಡಿಗ ಮಾಡಿದ ಮೋಸ ಪ್ರಕಾಶಕ್ಕೆ ಬಂತು. ಉಳಿದ ಪದಾರ್ಥಗಳ ಸ್ಥಿತಿ ಎಂತಿತ್ತೋ?

ಈ ವ್ಯವಹಾರ ಸುಮಾರು ಆರು ವರ್ಷಗಳ ಹಿಂದಿನದು. ಆಗಿನ ಚೌಕಾಶಿ ಈಗ ಇರುವುದಿಲ್ಲ.

ಈಗ ಮಾರ್ಕೆಟಿಗೆ ಹೋಗಿ "ಬೀನ್ಸ್ ಹೇಗೆರೀ?' ಎಂದು ಕೇಳುತ್ತೇನೆ.

'ಅರುವತ್ತು ಪೈಸೇರೀ ಕಿಲೋ."

"ಕೊಡೋದು?"

"ಕೊಡೋದೇ. ತಕ್ಕೊಳ್ಳೋದಲ್ಲ."

'ನಲ್ವತ್ತು ಪೈಸೆ ಮಾಡಿಕೊಂಡು ಕೊಡ್ತೀರಾ?"

"ಬೇಕಾದ್ರೆ ತೆಗೊಳ್ಳಿ. ಬೇಡದಿದ್ರೆ ಮುಂದೆ ಹೋಗಿ. ಸುಮ್ಮನೆ ಚೌಕಾಶಿ ಮಾಡಬೇಡಿ."

ಬಾಯಿ ಮುಚ್ಚಿಕೊಂಡು ಅರುವತ್ತು ಪೈಸೆ ಕೊಟ್ಟು ಬರುತ್ತೇನೆ. ಹೇಗಿದೆ ನೋಡಿ ಕಾಲ!

ಕಾರ್ಕಳ ತಾ. ಬೋರ್ಡಿಗೆ ನೂತನ ಕಟ್ಟಡ

ಕಳೆದ ತಾ. 26ರಂದು, ಮಂಗಳೂರು ನಗರ ಸಭಾಪತಿ ಶ್ರೀ ಜಿ. ಸೋಮಶೇಖರ ರಾವ್‌ರವರಿಂದ, ಕಾರ್ಕಳ ತಾಲೂಕು ಅಭಿವೃದ್ಧಿ ಬೋರ್ಡಿನ ನೂತನ ಕಟ್ಟಡದ ಉದ್ಘಾಟನೆಯು, ಶ್ರೀ ಕೆ ಎಸ್. ಎನ್. ಅಡಿಗರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರಂಭದಲ್ಲಿ ತಾಲೂಕು ಬೋರ್ಡಿನ ಅಧ್ಯಕ್ಷ ಶ್ರೀ ಎನ್. ಎಂ. ಅದ್ಯಂತಾಯರು ಸ್ವಾಗತಿಸಿದರು. ಶ್ರೀ ಯಂ. ವಿ. ಗೌಡರು ಸಂದೇಶಗಳನ್ನೋದಿದರು. ಅಧ್ಯಕ್ಷ ಅಡಿಗರು ಹಾಗೂ ಶ್ರೀ ಸೋಮಶೇಖರ ರಾವ್‌ರವರು ಬೋರ್ಡಿಗೆ ಶುಭಕೋರಿ ಮಾತನಾಡಿದರು. ಅಂತ್ಯದಲ್ಲಿ ತಾಲೂಕು ಬೋರ್ಡಿನ ಉಪಾಧ್ಯಕ್ಷ ಶ್ರೀ ಎಸ್. ಡಿ. ಸಾಮ್ರಾಜ್ಯ ಅವರು ವಂದನಾರ್ಪಣೆಗೈದರು.

ಉಡುಪಿ ಲಯನ್ಸ್ ಕ್ಲಬ್

ಸ್ಥಳೀಯ ಸರಕಾರೀ ಆಸ್ಪತ್ರೆಯ ಬಳಿಯ ಜಂಕ್ಷನ್‌ನಲ್ಲೊಂದು ಬಸ್ ಸ್ಟೋಪನ್ನು ರಚಿಸಿ ಅದನ್ನು ಉಡುಪಿ ನಗರ ಸಭೆಗೆ ಒಪ್ಪಿಸುವ ಸಮಾರಂಭವು ಕಳೆದ ತಾ. 29ರಂದು ಅಧ್ಯಕ್ಷ ಶ್ರೀ ಕೆ. ಎಸ್. ಕಾಮತರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಕಾಮತರು ಸ್ವಾಗತಿಸುತ್ತಾ, ಕ್ಲಬ್ ಉಡುಪಿ ಜನತೆಗೆ ಸಲ್ಲಿಸುತ್ತಿರುವ ಸೇವೆಗಳನ್ನು ವಿವರಿಸಿದರು. ಕ್ಲಬ್ಬಿನ ಉಪಾಧ್ಯಕ್ಷ ಶ್ರೀ ಯು. ಕೆ. ಕಿಣಿಯವರು ಮಾತನಾಡುತ್ತಾ ಕ್ಲಬ್ ವಿವಿಧ ರಂಗದಲ್ಲಿ ಸಲ್ಲಿಸುತ್ತಿರುವ ಸೇವೆಗಳನ್ನು ವಿವರಿಸಿದರು. ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣ್ಯೆಯವರು ನಗರ ಸಭೆಯ ಪರವಾಗಿ ಬಸ್‌ಸ್ಟೋಪನ್ನು ಸ್ವೀಕರಿಸಿದರು. ಶ್ರೀ ಎನ್. ಸೀತಾರಾಮ ಕಾಮತರು ಕ್ಲಬ್ಬಿನ ಸದ್ದಿಲ್ಲದ ಸಾರ್ವಜನಿಕ ಸೇವೆಗಳಿಗಾಗಿ ಶ್ಲಾಘಿಸಿ ಧನ್ಯವಾದ ಸಮರ್ಪಿಸಿದರು. ಶ್ರೀ ಕಾಮತರು ವಂದನಾರ್ಪಣೆ ಗೈಯುತ್ತಾ ಹೆಚ್ಚು ಹೆಚ್ಚು ಜನರು ಕ್ಲಬ್ಬಿನ ಸದಸ್ಯರಾಗಬೇಕೆಂದು ಕೇಳಿಕೊಂಡರು.

ಈ ಬಸ್ ಸ್ಟೋಪನ್ನು ಶ್ರೀ ರಮಾನಂದ ಬಾಳಿಗಾರವರು ಕಟ್ಟಿಸಿಕೊಟ್ಟಿರುತ್ತಾರೆ.

ಅಂತ್ಯದಲ್ಲಿ ಶ್ರೀ ಬಿ. ಎನ್. ಬಾಳಿಗಾರವರು ಭೋಜನ ಕೂಟವೊಂದನ್ನು ಏರ್ಪಡಿಸಿದರು. ತರುವಾಯ ಕುಮಾರಿ ಚಿತ್ರಲೇಖಾರ ನೃತ್ಯಪ್ರದರ್ಶನ ನಡೆಯಿತು. ಶ್ರೀ ಕಾಮತರು ಕಲಾವಿದೆಗೆ ಕ್ಲಬ್ಬಿನ ವತಿಯಿಂದ ಉಡುಗೊರೆಯಿತ್ತು ಸನ್ಮಾನಿಸಿದರು.

ಉಚಿತ ನೇತ್ರದಾನ ಶಿಬಿರದ ಉದ್ಘಾಟನೆ

ಕುಂದಾಪುರದಲ್ಲಿ ಪದ್ಮಶ್ರೀ ಡಾ| ಎಂ. ಸಿ. ಮೋದಿಯವರ ಉಚಿತ ನೇತ್ರದಾನ ಶಿಬಿರದ ಉದ್ಘಾಟನಾ ಸಮಾರಂಭವು ಕಳೆದ ತಾ. 1 ರಂದು, ಶ್ರೀ ಸೂರ್ಯನಾರಾಯಣ ಅಡಿಗರವರಿಂದ ನೆರವೇರಿಸಲ್ಪಟ್ಟಿತು. ಶ್ರೀ ವೈ. ಮಂಜಯ್ಯ ಶೆಟ್ಟಿ, ಎಂ. ಎಲ್. ಎ. ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಪ್ರಾರಂಭದಲ್ಲಿ ಶ್ರೀ ಎಸ್. ಎಸ್. ಕೊಳ್ಕೆಬೈಲ್, ಎಂ. ಎಲ್. ಎ.ರವರು ಸ್ವಾಗತಿಸಿದರು. ಬಳಿಕ ಶ್ರೀ ಎನ್. ಎಸ್. ಪರಮೇಶ್ವರಯ್ಯನವರು ಶಿಬಿರದ ನಿಯಮಗಳ ಕುರಿತು ತಿಳಿ ಹೇಳಿದರು. ಶ್ರೀ ಅಡಿಗರು ಉದ್ಘಾಟಿಸುತ್ತಾ, ಡಾ| ಮೋದಿಯವರಿಗೆ ಜನತೆ ಎಷ್ಟು ಚಿರಋಣಿಯಾಗಿದ್ದರೂ ಸಾಲದು ಎಂದು ಹೇಳಿದರು. ಡಾ| ಮೋದಿಯವರು ಶಸ್ತ್ರಚಿಕಿತ್ಸೆ ಪಡೆಯುವವರಿಗೆ ಮುಂಜಾಗ್ರತೆಗಳನ್ನು ಹೇಳಿ, ರೋಗಿಗಳು ತನ್ನೊಡನೆ ಸರ್ವವಿಧದಲ್ಲೂ ಸಹಕರಿಸಬೇಕೆಂದು ಕೇಳಿಕೊಂಡರು. ಅಧ್ಯಕ್ಷರೂ ನೇತ್ರದಾನ ಶಿಬಿರವು ಯಶಸ್ವಿಯಾಗುವಂತೆ ಜನತೆ ಸಹಕರಿಸಬೇಕೆಂದು ಕೇಳಿಕೊಂಡರು. ಶ್ರೀ ಎನ್ ಎಸ್. ಪರಮೇಶ್ವರಯ್ಯನವರು ಧನ್ಯವಾದಗಳನ್ನರ್ಪಿಸಿದರು.

ವಾರ್ಷಿಕೋತ್ಸವ—ಉದ್ಘಾಟನೆ

ಕಡಿರುದ್ಯಾವರ—ಇಲ್ಲಿ ತಾ. 2.5.65 ರಂದು ಸುತ್ತಬಾಗಿಲು ಪಂಚಾಯತ್ ಕಡಿರುದ್ಯಾವರ ಗ್ರಾಮದ ಹೈಯರ್ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು ತಾಲೂಕ್ ಬೋರ್ಡ್ ಅಧ್ಯಕ್ಷ ಶ್ರೀ ಟಿ ಎನ್. ಭಿಡೆ, ಅವರ ಅಧ್ಯಕ್ಷತೆಯಲ್ಲಿಯೂ, ಸದ್ರಿ ಶಾಲೆಯ ಹೊಸ ಕಟ್ಟಡದ ಉದ್ಘಾಟನೆಯು ಶ್ರೀ ಧರ್ಮಸ್ಥಳ ರತ್ನವರ್ಮ ಹೆಗ್ಗಡೆಯವರ ದಿವ್ಯ ಹಸ್ತದಿಂದಲೂ ನೆರವೇರಿತು. ಮೊದಲು ಶ್ರೀ ಹೆಗ್ಗಡೆಯವರನ್ನು ಗೌರವದೊಡನೆ ಸ್ವಾಗತಿಸಿ, ಸನ್ಮಾನಪತ್ರವನ್ನೂ ಅರ್ಪಿಸಲಾಯಿತು. ವಿದ್ವಾನ್ ಶ್ರೀ ಕೆ. ಎನ್. ಭಟ್ ಶಿರಾಡಿಪಾಲ್ ಅವರು ಸ್ವಾಗತ ಭಾಷಣ ಮಾಡಿದರು. ಸಭಾಸದರಲ್ಲಿ ಶ್ರೀ ಬಿ. ಕೆ. ವೆಂಕಟಸುಬ್ರಾವ್, ವಕೀಲ್ ಶ್ರೀ ಎಸ್ ಎನ್. ರಾವ್, ಪಂಚಾಯತ್ ಎಕ್ಸ್‌ಟೆನ್ಶನ್ ಆಫೀಸರರೇ ಮೊದಲಾದವರು ಭಾಷಣವಿತ್ತರು. ಸಭಾಧ್ಯಕ್ಷರಾದ ಶ್ರೀ ಟಿ ಎನ್. ಭಿಡೆಯವರು ಮತ್ತು ಉದ್ಘಾಟಕರಾದ ಪೂಜ್ಯ ಶ್ರೀ ಹೆಗ್ಗಡೆಯವರು ಉದ್ಬೋಧಕವಾದ ಭಾಷಣ ಮಾಡಿದರು. ಮುಖ್ಯೋಪಾಧ್ಯಾಯರಿಂದ ವರದಿವಾಚನ ಆದ ಬಳಿಕ ಬಹುಮಾನ ವಿತರಣೆಯಾಗಿ, ವಿವಿಧ ವಿನೋದಾವಳಿಗಳೊಂದಿಗೆ ಸಮಾರಂಭವು ನೆರವೇರಿತು.

ಹನಿಗತಿ

ಬಡವನ ರೊಟ್ಟಿ–ಶ್ರೀಮಂತನ ಮಿಠಾಯಿ!

ಗುರುನಾನಕ ಇವರು ಒಂದು ಹಳ್ಳಿಗೆ ಹೋದಾಗ ಒಬ್ಬ ಬಡ ಶಿಷ್ಯನಲ್ಲಿ ಇಳಿದುಕೊಂಡರು. ಅದೇ ಊರಲ್ಲಿ ಅವರಿಗೆ ಒಬ್ಬ ಶ್ರೀಮಂತ ಶಿಷ್ಯನೂ ಇದ್ದ. ಅವನೂ ಬಂದು ನಾನಕರನ್ನು ಅಗ್ರಹಪೂರ್ವಕ ಕರೆಯ ಹತ್ತಿದ. ಆದರೂ ತಾನು ಇಲ್ಲಿಂದ ಬಿಟ್ಟು ಬರುವುದಿಲ್ಲ ಎಂದು ನಾನಕರು ಸ್ಪಷ್ಟವಾಗಿ ಹೇಳಿಬಿಟ್ಟರು. ಕೊನೆಗೆ ಆ ಶ್ರೀಮಂತ ಹೇಳಿದ "ಊಟಕ್ಕಾದರೂ ನೀವು ನಮ್ಮಲ್ಲಿಗೆ ಬರಬೇಕು. ಇಂದು ನನ್ನ ಮಗನ ಮದುವೆ ಇದೆ" ಎಂದು. "ಹಾಗಾದರೆ ಊಟವನ್ನು ಇಲ್ಲಿಗೇ ಕಳಿಸಿ ಕೊಡು" ಎಂದು ನಾನಕರು ಸೂಚಿಸಿದರು.

ಊಟದ ಹೊತ್ತಾಯಿತು. ಆ ಬಡ ಶಿಷ್ಯನಾದರೋ ತನ್ನ ಯೋಗ್ಯತೆಗೆ ತಕ್ಕಂತೆ ರೊಟ್ಟಿ, ಚಟ್ನಿ ಮತ್ತು ಹಾಲು ತಂದು ನಾನಕರ ಮುಂದಿಟ್ಟ. ಅದೇ ಹೊತ್ತಿಗೆ ಆ ಶ್ರೀಮಂತ ಶಿಷ್ಯ ತರತರದ ಮಿಠಾಯಿ ಹಾಗೂ ಪಕ್ವಾನ್ನಗಳಿಂದ ತುಂಬಿದ ತಾಟು ತಂದು ಅವರ ಮುಂದೆ ಇರಿಸಿದ. ಆದರೆ ನಾನಕರು ಅದೊಂದನ್ನೂ ಮುಟ್ಟಲಿಲ್ಲ. ಬಡವರ ರೊಟ್ಟಿಯನ್ನೇ ತಿನ್ನಹತ್ತಿದರು. ಆಗ ಶ್ರೀಮಂತ ಶಿಷ್ಯ ಕೈಜೋಡಿಸಿ ದೈನ್ಯದಿಂದ ಕೇಳಿದ. 'ಗುರುಗಳೇ? ನನ್ನದೇನಾದರೂ ಅಪರಾಧವಾಗಿದ್ದರೆ ಹೇಳಿರಿ. ನೀವು ನಾನು ತಂದ ತಾಟಿನೊಳಗಿಂದ ಏನನ್ನೂ ಏಕೆ ತಿನ್ನುತ್ತ ಇಲ್ಲ?" ಎಂದು. ಆಗ ಗುರುನಾನಕರು ಒಂದು ಕೈಯಲ್ಲಿ ಬಡವನ ರೊಟ್ಟಿಯನ್ನೂ ಇನ್ನೊಂದು ಕೈಯಲ್ಲಿ ಶ್ರೀಮಂತನ ಮಿಠಾಯಿಯನ್ನೂ ಹಿಡಿದುಕೊಂಡು ಹಿಚುಕಿದರು. ಆಗ ರೊಟ್ಟಿಯೊಳಗಿಂದ ಹಾಲು, ಮಿಠಾಯಿಯೊಳಗಿಂದ ರಕ್ತವೂ ಸುರಿಯ ಹತ್ತಿತು. ಇದನ್ನು ತೋರಿಸಿ ನಾನಕರು ಕೇಳಿದರು 'ಇನ್ನಾದರೂ ತಿಳಿಯಿತೇ? ನಾನು ನಿನ್ನ ಮಿಠಾಯಿ ಯಾಕೆ ತಿನ್ನುವದಿಲ್ಲ ಎಂಬುದ ? ಅದರಲ್ಲಿ ಬಡವರಿಂದ ಹೀರಿದ ರಕ್ತ ಮತ್ತು ಅವರ ನಿಟ್ಟುಸಿರು ತುಂಬಿವೆ' ಎಂದು.

(ಮೂರನೇ ಪುಟದಿಂದ)

ಗಳಲ್ಲಿ ಅಪಪ್ರಚಾರವೆಸಗಿದ್ದ ಅಬ್ದುಲ್ಲಾ, ಅಲ್ಜೀರ್ಸ್‌ನಲ್ಲಿ ಚೌಸೀ ಪ್ರಧಾನಿಯೊಡನೆ ಕೈಕುಲುಕುವ ವರೆಗೂ ಮುಂದರಿದನು. ಭಾರತ ಸರಕಾರವು ಅವರಿಗೆ ತೋರಿದ ಸೌಜನ್ಯತೆಯನ್ನು ಸಂಪೂರ್ಣ ದುರುಪಯೋಗಗೊಳಿಸಿ, ದೇಶಕ್ಕೆ ಗಂಡಾಂತರ ಕಾರಿಯೆನಿಸುವ ಕಾರ್ಯದಲ್ಲಿ ತಲ್ಲೀನರಾದರು ಅಬ್ದುಲ್ಲಾ. ಇವನ್ನು ಭಾರತದ ರಕ್ಷಣಾ ಶಾಸನದನ್ವಯ ಬಂಧಿಸಿ ಸ್ಥಾನಬದ್ಧಗೊಳಿಸಿಟ್ಟು ಸರಕಾರ ಉತ್ತಮ ಕೆಲಸವನ್ನೇ ಮಾಡಿದೆ.

ಪಾಕ್-ಚೀನಾಗಳ ಆಕ್ರಮಣದ ಬೆದರಿಕೆ ಇರುವ ಈ ಸಮಯದಲ್ಲಿ ಇಂತಹ ಕುಹಕಿ ರಾಜಕಾರಣಿಗಳಿಂದ ವಿಪರೀತ ಪರಿಣಾಮ ಸಂಭವಿಸುವುದೆನ್ನುವುದನ್ನು ಸರಕಾರ ಚೆನ್ನಾಗಿ ಮನವರಿಕೆ ಮಾಡಿಕೊಂಡಂತೆ ಕಾಣುವುದು.

ರಾಜ್ಯ ಶಿಕ್ಷಣ ಸಮ್ಮೇಲನ ಮುಂದುವರಿಯಿತು.

ಈ ತಿಂಗಳಲ್ಲಿ ಮಣಿಪಾಲದಲ್ಲಿ ನಡೆಸಲು ಯೋಚಿಸಿದ್ದ ಮೈಸೂರು ರಾಜ್ಯ ಶಿಕ್ಷಣ ಸಮ್ಮೇಳನವನ್ನು ಅನಿವಾರ್ಯ ಕಾರಣಗಳಿಂದಾಗಿ ಇದೇ ಬರುವ ಒಕ್ಟೋಬರ್ ತಿಂಗಳಿಗೆ ಮುಂದಕ್ಕೆ ಹಾಕಲಾಗಿದೆ ಎಂದು ಸಮ್ಮೇಳನದ ಗೌರವ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಆಲಡ್ಕ ಸೇತುವೆ ಉದ್ಘಾಟನೆ

ಕಳೆದ ತಾ. ೨೪ರಂದು ಆರೋಗ್ಯ ಸಚಿವ ಡಾ| ನಾಗಪ್ಪ ಆಳ್ವರವರು ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ., ಅವರ ಅಧ್ಯಕ್ಷತೆಯಲ್ಲಿ, ಪಾಣೆಮಂಗಳೂರು ಬಳಿ ಇರುವ ಆಲಡ್ಕ ಸೇತುವೆ ಮತ್ತು ಕೂಡು ರಸ್ತೆಯ ಉದ್ಘಾಟನೆಯನ್ನು ನೆರವೇರಿಸಿದರು.

ಯಕ್ಷಗಾನ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ತಾ. 1 ರಂದು ಶ್ರೀ ಕಲ್ಲಡ್ಕ ಚೋಮ ನಾಯ್ಕರ ವತಿಯಿಂದ ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ ಅವರಿಂದ ರಚಿಸಲ್ಪಟ್ಟ "ಭೇತಾಳ ಗರ್ವಭಂಗ" ಎಂಬ ನೂತನ ಕಥಾ ಭಾಗದ ಯಕ್ಷಗಾನ ಕೂಟವು ನಡೆಸಲ್ಪಟ್ಟಿತು. ಇದರಲ್ಲಿ ಶ್ರೀಗಳಾದ ಕೀ. ವ. ಕೇಶವ, ಕಲ್ಲಡ್ಕ ಬಾಬು ರೈ, ಬಿ. ವಿ. ವಿನೋದ, ಡಾ| ರಮಾನಂದ ಬನಾರಿ, ಕುಂಬ್ಡಾಜೆ ಚತ್ತಪ್ಪ ರೈ, ಪರಮೇಶ್ವರ ಭಟ್, ಅಪ್ಪು ಪಾಟಾಳಿ, ಯಂ. ಶೀನಪ್ಪ ಗೌಡ, ಮಾಸ್ಟರ್ ಕೆ. ಸಾಂತಪ್ಪ ಮೊದಲಾದವರು ಭಾಗವಹಿಸಿದ್ದು ಕೊನೆಯಲ್ಲಿ ಶ್ರೀ ಕೆ. ಬಿ. ರೈಗಳು ಅಭಿನಂದಿಸಿದರು.

ಧರ್ಮಸ್ಥಳದಲ್ಲಿ ಅಭಿನಂದನಾ ಸಭೆ

ಕಳೆದ ತಾ. 8ರಂದು ಎಡ್ವಕೇಟ್ ಶ್ರೀ ಕೆ. ಬಿ. ಜಿನರಾಜ ಹೆಗ್ಡೆ, ಮಂಗಳೂರು ಇವರನ್ನು ಅಭಿನಂದಿಸುವ ಸಲುವಾಗಿ ವಸಂತ ಮಹಲಿನಲ್ಲಿ, ಶ್ರೀ ಜಿ. ಎನ್. ಬಿಡೆಯವರ ಅಧ್ಯಕ್ಷತೆಯಲ್ಲಿ ವಿಶೇಷ ಸಭೆಯೊಂದು ಜರಗಿತು. ಪ್ರಾರಂಭದಲ್ಲಿ ಸಂಗೀತ, ನೃತ್ಯಗಳು ಜರಗಿದ ಬಳಿಕ ಶ್ರೀ ಭಾಸ್ಕರಂ ಶೇಷಾಚಾರ್ ರವರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ವಿ. ಎಸ್. ಶ್ರೀನಿವಾಸ ರಾವ್‌ರವರು ಅಭಿನಂದನಾ ಪತ್ರವನ್ನು ಓದಿ ಅತಿಥಿಗಳಿಗರ್ಪಿಸಿದರು. ಧರ್ಮದರ್ಶಿ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು ಮಾತನಾಡುತ್ತಾ ಶ್ರೀ ಜಿನರಾಜ ಹೆಗ್ಗಡೆಯವರ ಕಾರ್ಯಗಳನ್ನು ಅಭಿನಂದಿಸಿ, ತಮ್ಮ ಆನಂದ ವ್ಯಕ್ತಪಡಿಸಿದರು. ಸಭಿಕರ ಪರವಾಗಿ ಶ್ರೀ ಜಿನರಾಜ ಶಾಸ್ತ್ರಿಗಳು ಅಭಿನಂದಿಸಿದರು. ಅಭಿನಂದನಾ ಸಮಿತಿಯ ಪರವಾಗಿ ಶ್ರೀ ಎ. ರಾಮಣ್ಣ ಶೆಟ್ಟರು ಸಹಕಾರ ನೀಡಿದವರನ್ನು ಅಭಿನಂದಿಸಿದರು.

ಶ್ರೀ ಬಿಡೆಯವರು ಮಾತನಾಡುತ್ತಾ ಧರ್ಮಸ್ಥಳದ ಜಯಕ್ಕೆ ಶ್ರೀ ಜಿನರಾಜ ಹೆಗ್ಗಡೆಯವರ ಪ್ರಯತ್ನವನ್ನೂ ಸೂರ್ಯನಾರಾಯಣರ ಪರಿಶ್ರಮವನ್ನೂ ಶ್ಲಾಘಿಸಿದರು. ಶ್ರೀ ಹೆಗ್ಗಡೆಯವರ ಆಡಳಿತೆಯನ್ನು ಮೆಚ್ಚಿ ಊರವರಿಗೆ ಕೃತಜ್ಞತೆಯನ್ನು ಸಲ್ಲಿಸಿದರು. ಶ್ರೀ ಕೆ. ಸೂರ್ಯನಾರಾಯಣ ರಾಯರು ಧನ್ಯವಾದ ಸಮರ್ಪಿಸಿದರು.

ಬೆಂಗಳೂರಿನಲ್ಲಿ ಕರ್ನಾಟಕ ನಾಟಕ ಸಭಾದ ಪ್ರಾರಂಭೋತ್ಸವ

ಮಂಗಳೂರಿನ ಕರ್ನಾಟಕ ಯಕ್ಷಗಾನ ನಾಟಕ ಸಭಾದವರ 'ಶ್ರೀ ಕೃಷ್ಣಲೀಲೆ-ಕಂಸವಧೆ' ಯಕ್ಷಗಾನ ನಾಟಕ ಪ್ರದರ್ಶನವನ್ನು ಕಳೆದ ತಾ. 8ರಂದು, ಬೆಂಗಳೂರಿನ ಮಿತ್ರ ಮಂಡಳಿಯ ಥಿಯೇಟರಿನಲ್ಲಿ ಆರೋಗ್ಯ ಮಂತ್ರಿ ಡಾ| ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಶ್ರೀ ಅ. ನ. ಕೃಷ್ಣರಾಯರು ಉದ್ಘಾಟಿಸುತ್ತಾ, ಯಕ್ಷಗಾನ ಕಲೆಯನ್ನು ಉಳಿಸಲು ಅದನ್ನು ಪ್ರೋತ್ಸಾಹಿಸುವ ಗುಣ ನಮ್ಮಲ್ಲಿ ಹೆಚ್ಚಾಗಬೇಕೆಂದರು. ಆರಂಭದಲ್ಲಿ ಪ್ರಾರ್ಥನೆ, ನೃತ್ಯವಾದ ಬಳಿಕ ವ್ಯವಸ್ಥಾಪಕ ಶ್ರೀ ಕೆ. ವಿಠಲ ಶೆಟ್ಟರು ಅತಿಥಿಗಳನ್ನು ಹೂಹಾರವನ್ನರ್ಪಿಸಿ ಸ್ವಾಗತಿಸಿದರು. ಶ್ರೀ ಎ. ಬಾಲಕೃಷ್ಣ ಶೆಟ್ಟಿ ಪೊಳಲಿಯವರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರು ವ್ಯವಸ್ಥಾಪಕರನ್ನು ಶ್ಲಾಘಿಸಿ, ಯಕ್ಷಗಾನವನ್ನು ಪ್ರೋತ್ಸಾಹಿಸುವಂತೆ ಜನತೆಯನ್ನು ಕೇಳಿಕೊಂಡರು.

'ಶ್ರೀಕೃಷ್ಣಲೀಲೆ-ಕಂಸ ವಧೆ' ಯಕ್ಷಗಾನ ನಾಟಕ ಪ್ರದರ್ಶನವು ಜನ ಮೆಚ್ಚುವಂತೆ ಪ್ರದರ್ಶಿಸಲ್ಪಟ್ಟಿತು.

ವಿದಾಯ ಸತ್ಕಾರ

ಉಡುಪಿ ಸಿಂಡಿಕೇಟ್ ಬ್ಯಾಂಕಿನ ಲೋಕಲ್ ಆಫೀಸಿನ ಮೆನೇಜರ್, ಶ್ರೀ ಜಿ. ಯು. ಪ್ರಭುಗಳಿಗೆ ಬೆಳಗಾವಿಗೆ ವರ್ಗವಾದ ಕಾರಣ 'ಭವ್ಯವಾಣಿ'ಯ ಸಂಪಾದಕ ಶ್ರೀ ಕೆ. ಎಲ್. ಭಟ್ಟರು ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ವಿದಾಯ ಕೂಟವೊಂದನ್ನು ಲೊಂಬಾರ್ಡ ವಿಹಾರದಲ್ಲಿ ಏರ್ಪಡಿಸಿದ್ದರು. ಶ್ರೀ ಯು. ಎಂ. ಮಧ್ಯಸ್ಥರು ಸ್ವಾಗತಿಸಿದ ಬಳಿಕ ಮಾನ್ಯ ಅತಿಥಿಗಳ ಕಾರ್ಯದಕ್ಷತೆಯನ್ನು ಕೊಂಡಾಡಿ ಶ್ರೀಗಳಾದ ಕು. ಶಿ. ಹರಿದಾಸ ಭಟ್, ಪಿ. ರಂಗನಾಥ ಶೆಣೈ, ಡಾ| ಮೋಹನದಾಸ ಪೈಯವರು ಮಾತನಾಡಿದರು. ಡಾ| ಮಾಧವ ಪೈಗಳು ಮಾತನಾಡುತ್ತಾ ಶ್ರೀ ಪ್ರಭುಗಳು ತಮ್ಮ ಗುಣ ವೈಶಿಷ್ಟ್ಯಗಳಿಂದಾಗಿ ಎಲ್ಲಿ ಹೋದರೂ ಯಶಸ್ವಿಯಾಗುವರೆಂದು ಹೇಳಿದರು. ಕೊನೆಯಲ್ಲಿ ಶ್ರೀ ಕೆ. ಎಲ್. ಭಟ್ಟರು ವಂದನೆಗಳನ್ನು ಅರ್ಪಿಸಿದರು.

ಎಕಾಡೆಮಿಯ ಕಾರ್ಯಗಳ ಶ್ಲಾಘನೆ

"ಡಾ| ಟಿ ಎಂ. ಎ. ಪೈಯವರ ಕಾರ್ಯ ಆಧುನಿಕ ಭಾರತದ ಪ್ರಗತಿಪರ ಮುನ್ನಡೆಗೆ ಅನುಗುಣವಾಗಿದೆ. ಇದನ್ನು ಸಾಧಿಸಿರುವ ನವೀನ ರೀತಿ ಅಪೂರ್ವವಾಗಿವೆ" ಎಂದು ಹೈದರಾಬಾದಿನ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್‌ನ ಡೈರೆಕ್ಟರ್ ಪದ್ಮಶ್ರೀ ಡಾ| ವಿ. ಕೆ. ಗೋಕಾಕ್‌ರವರು ತಾ. 30 ರಂದು ಎಕಾಡೆಮಿಯ ಸ್ಥಾಪನಾ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಉಡುಪಿಯಲ್ಲಿ ನುಡಿದರು.

ಡಾ| ಪೈಯವರ ೬೭ನೇ ಜನ್ಮದಿನದ ಸಂದರ್ಭದಲ್ಲಿ ಎರ್ನಾಕುಲಂನ ಶ್ರೀ ನೀಲಾಯುಧನ್ ನಾಯರ್, ಕಾಸರಗೋಡಿನ ಶ್ರೀ ಕೆ. ಪಿ. ಮಾಧವ ರಾವ್ ಮತ್ತು ಆಹಾರ ಕಾರ್ಪೊರೇಶನಿನ ಅಧ್ಯಕ್ಷ ಶ್ರೀ ಟಿ ಎ. ಪೈಯವರು ಭಾಷಣ ಮಾಡಿ ಅವರು ಇನ್ನೂ ಬಹಳ ಕಾಲ ಸಮಾಜಕ್ಕೆ ಸೇವೆ ಸಲ್ಲಿಸುವಂತೆ ಪರಮಾತ್ಮನು ದಯಪಾಲಿಸಲೆಂದರು.

ಹೋಟೆಲ್ ಸತ್ಕಾರದ ಪ್ರಾರಂಭೋತ್ಸವ

ಶ್ರೀ ಟಿ. ಎಸ್. ಶೆಟ್ಟಿ ಮತ್ತು ಬಿ. ಯು. ಶೆಟ್ಟಿ ಇವರ ವಿನೂತನ ಹೋಟೆಲ್ ಸತ್ಕಾರ ಎಂಬ ಬೋರ್ಡಿಂಗ್ ಮತ್ತು ಲಾಜಿಂಗಿನ ಪ್ರಾರಂಭೋತ್ಸವವನ್ನು ತಾ. ೬ರಂದು (ಕಾರ್ಪೊರೇಷನ್ ಆಫೀಸಿನ ಹತ್ತಿರ) ಆರೋಗ್ಯ ಸಚಿವ ಡಾ| ಕೆ. ನಾಗಪ್ಪ ಆಳ್ವರು ಬೆಂಗಳೂರಿನ ಕಾರ್ಪೊರೇಶನಿನ ಮೇಯರ್ ಶ್ರೀ ಕೆ. ಎಂ. ನಾಗಣ್ಣನವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಶ್ರೀ ಪಿ. ಎಸ್. ಹೆಬ್ಬಾರ (ಸಿರಿಪತಿ).

ಅವರ

ನವೀನ ಕೃತಿ ಇದೀಗ ಹೊರಬಂದಿದೆ

"ದಾರಿ ದೀಪ"

(ನೀತಿ ಕಥೆಗಳು)

(ಶ್ರೀ ಟಿ. ಎ. ಪೈಯವರ ಮುನ್ನುಡಿ)

ಬೆಲೆ: 1=50.

ನಿಮ್ಮ ಪ್ರತಿಗಾಗಿ ಉಡುಪಿಯ ಪುಸ್ತಕ ವ್ಯಾಪಾರಿಗಳಿಗೆ ಯಾ ನೇರವಾಗಿ

ಕೆಳ ವಿಳಾಸಕ್ಕೆ ಬರೆಯಿರಿ.

ಪಿ. ಎಸ್. ಹೆಬ್ಬಾರ, ವೀಣಾ ಪ್ರಕಾಶನ

ಹೆಬ್ಬಾರ್ಸ್ ಕಂಪೌಂಡು

ಕುಂಜಿಬೆಟ್ಟು, ಉಡುಪಿ, (ದ. ಕ.)

ಸಾವು ನೋವು

ತಾಯಿ ಕಲಿಯುಗದ ಶಾಪವಿದು
  ಪೂರ್ವ ಜನ್ಮದ ಕರ್ಮವಿದು
ಕಷ್ಟನಷ್ಟ ಸಂಕಟದಲಿ ಬೆಂದು
  ಸುಟ್ಟು ಸುಣ್ಣಾದೆ ತಾಯಿ ನೀನಿಂದು
                    ॥ ೧ ॥

ನೋಡಿದೆಲ್ಲೆಲ್ಲ ಪಾಪವ ಯುವು
  ಕೋಲಾಹಲದ ಹಾಹಾಕಾರವು
ಅನ್ನನೀರೆಂದು ಬಾಯ್ಬಿಡುತಿದೆ
  ಅನ್ನಸಿಗದೆ ಗೋಳಾಡುತಿದೆ ॥ ೨ ॥

ಕಪಟಿಗಳ ಗಡಿ ತಂಟೆಯು
  ಬಂದಿದೆ ವಿಷದ ಸಮಯವು
ತಾಯಿಗೆ ಗೋಳು ಬಾಳು
  ಬರದಿರಲಿ 'ಸಾವು ನೋವು' ॥ ೩ ॥

ವೀರಯೋಧರ ಮರಣವಲ್ಲಿ
  ಭಾರತಾಂಬೆಯ ರಕ್ಷಣೆಗೆ
ನೀವಿತ್ತ ದಾನ ಧನ ರಕ್ತವು
  ಕಾಪಾಡುವ ವೀರ ವಿಕ್ರಾಂತರಿಗೆ ॥ ೪ ॥

ಗುಂಡುಗಳ ಭರ್ಜರಿ ಭೋರಾಟ
  ಕರ್ಣಗಳನೇ ಸೀಳುತಿದೆ
ಅಣ್ಣ-ತಮ್ಮರ ಮರಣ ಗಡಿಗಾಗಿ
  ಹೃದಯವನೇ ಸೀಳುತಿದೆ ॥ ೫ ॥

'ತನ್ನದಲ್ಲವನು ತನ್ನದೆನ್ನುವ'
  ಮೂರ್ಖರಿಗೆ ಬುದ್ಧಿ ಪೇಳಿ
ಭಾರತಕೆ ವಿಜಯ ತಂದು
  ಹರಿಸು ಶಾಂತ ಹೊಳೆ ॥ ೬ ॥

'ಭಾರತಾಂಬೆ' ನಿನ್ನ ಪಡೆಯಲು
  ಲಕ್ಷಾದಿ ಮಕ್ಕಳ ಸಾವಾಗಿದೆ
ಆಂಗ್ಲರಿಂ ಸ್ವಾತಂತ್ರ್ಯಗಳಿಸಲು
  ರಕ್ತಕಾಲುವೆ ಹರಿದಿದೆ ॥ ೭ ॥

ಹಾಯೆಂದು ಸುಖದಿಂದಿದ್ದೆ ?
  ಮತ್ತೇಕೆ ಬಂತು ಕದನವು
ದೇವಂಗೆ ಕೇಳಿಸದೆ ಅವ್ವಾ
  ನಿನ್ನ ಕೊಂಗಿನ ಬಾಳ ಜೀವು ॥ ೮ ॥

—ಕಮಲಾತನಯ ಕೃಷ್ಣ,
ಗೋವಾ.

ಚಂದಾದಾರರಲ್ಲಿ ವಿನಂತಿ

ನವಯುಗದ ಚಂದಾ ಅವಧಿ ಮುಗಿದ ನಮ್ಮ ಚಂದಾದಾರ ಬಂಧುಗಳಿಗೆಲ್ಲಾ ಪ್ರತ್ಯಪ್ರತ್ಯೇಕವಾಗ ಬರೆದು ತಿಳಿಸಿರುತ್ತೇವೆ. ಅವರೆಲ್ಲರೂ ದಯಮಾಡಿ ತಮ್ಮ ತಮ್ಮ ಚಂದಾ ಹಣವನ್ನು ಆದಷ್ಟು ಬೇಗನೆ ಕಳುಹಿಸಿ ಕೊಡುವಂತೆ ಈ ಮೂಲಕ ಇನ್ನೊಮ್ಮೆ ವಿನಂತಿಸುತ್ತೇವೆ. ಸಕಾಲದಲ್ಲಿ ಚಂದಾ ಹಣ ಬಾರದಿದ್ದರೆ ಚಂದಾ ಅವಧಿ ಮುಗಿದವರಿಗೆಲ್ಲಾ ಮುಂದಿನ ವಾರದ ಪತ್ರಿಕೆಯನ್ನು ವಿ. ಪಿ. ದ್ವಾರಾ ಕಳುಹಿಸುತ್ತೇವೆ. ಅದನ್ನು ದಯಮಾಡಿ ಸ್ವೀಕರಿಸಿ, ಸಹಕರಿಸುವಂತೆ ಬಿನ್ನವಿಸುತ್ತೇವೆ.

ಮೆನೇಜರ್,
ನವಯುಗ.

READ &
ADVERTISE IN
NAVAYUGA WEEKLY

ವಿಚಾರ ವೀಚಿ

ಸಮಾಜ ಸುಧಾರಕ ಬಸವಣ್ಣನವರು

ಲೇಖಕ:— ಬಸವರಾಜ ಕುಂಚೂರ್

ಕರ್ನಾಟಕದ ಗತ ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ಹನ್ನೆರಡನೆ ಶತಮಾನದ ವೈಭವ, ವೈಶಿಷ್ಟ್ಯ, ಕ್ರಾಂತಿಯ ಉಸಿರು ಕಾಣದಿರಲಾರದು. ಅಧರ್ಮ, ಕ್ಷುದ್ರತೆ, ಹಿಂಸೆಗಳು ತಾಂಡವಾಡುತಿದ್ದ ಕಾಲವದು. ಧರ್ಮದ ಹೆಸರಿನಲ್ಲಿ ಪಾಪ ಬೀರುವಾದ ಹೇಯ ಕೃತ್ಯಗಳನ್ನು ಮಾಡಿ, ದಲಿತ ಜನರನ್ನು ರಸಾತಳಕ್ಕೆ ತಳ್ಳಿ ರಾಕ್ಷಸೀ ದಬ್ಬಾಳಿಕೆಯನ್ನು ಮೇಲು ಜನರೆನ್ನುವವರು. ನಡೆಸುತಿದ್ದ ಕಾಲವದು. ಧರ್ಮ, ತನ್ನ ಮೂಲ ಉದ್ದೇಶದಿಂದ ವಿಮುಖವಾಗಿ ದೂರ ದೂರ ಸರಿದು ನಿಃಸತ್ವವಾದ ಕಾಲವದು. ಹನ್ನೆರಡನೆ ಶತಮಾನ ನಿಜಕ್ಕೂ ಒಂದು ಸಂಧಿ ಕಾಲವೇ ಸರಿ...

ಜನತೆ ಯಲ್ಲಿ ಕವಿದಿದ್ದ ಕತ್ತಲಿನ ಪರದೆಯನ್ನು ಸರಿಸಲು ಜನಿಸಿದ ಯುಗಪುರುಷನೇ ಬಸವಣ್ಣ. ಆ ಶತಮಾನದ ಉಸಿರಾಗಿ ಬಾಳಿದ ಮಹಾನುಭಾವನವನು. ಅಧರ್ಮ, ಅಜ್ಞಾನ, ಮೇಲು ಕೀಳುಗಳ, ತಿರುಗಣಿಯಲ್ಲಿ ಸಿಕ್ಕು ಸಾಮಾನ್ಯ ಜನತೆ ಮಣ್ಣು ಮುಕ್ಕುತಿದ್ದಾಗ ಅವರಿಗೆ ದಾರಿ ದೀಪವಾಗಿ, ಕಲ್ಯಾಣದ ಈ ಅಣ್ಣ ಜಗದಣ್ಣನಾದದ್ದು ಆಗಲೇ. ಅಣ್ಣನವರ ಜೀವನದ ಮೂರು ಅವಸ್ಥೆಗಳು ವಿಚಿತ್ರವಾಗಿಯೂ ಕ್ರಾಂತಿಕಾರಕವಾಗಿಯೂ ಇವೆ. ಬಾಗೇವಾಡಿಯಲ್ಲಿ ಜನಿಸಿ, ಕಲ್ಯಾಣದಲ್ಲಿ ನೆಲಸಿ ಕೂಡಲಸಂಗಮದಲ್ಲಿ ಐಕ್ಯವಾದ ಅವರ ಬಾಳು ನಿಜಕ್ಕೂ ಹಿರಿದಾದದ್ದು. ಶೈವ ಬ್ರಾಹ್ಮಣರಾಗಿ ಜನಿಸಿ, ಹಿಂದೂ ಧರ್ಮಕ್ಕೆ ಹೊಸ ಮೆರಗನ್ನು ಕೊಟ್ಟು, ಹಿಂದೂ ಧರ್ಮದಲ್ಲಿನ, ಹುಳುಕುಗಳನ್ನು ಕಿತ್ತೆಸೆದು, ಒಂದು ಮಜಲು ಮುಂದೆ ಸಾಗಿ, ವೀರಶೈವಧರ್ಮವನ್ನು ಅಂಗೀಕಾರ ಮಾಡಿ, ಕ್ರಾಂತಿಯ ಬೀಜವನ್ನು ಬಿತ್ತಿ ಬಿಜ್ಜಳನಿಗೆ ಮಂತ್ರಿಯಾಗಿ, ಜನಸಾಮಾನ್ಯರ ಪ್ರತಿನಿಧಿಯಾಗಿ, ಸಮಾಜ ಸುಧಾರಕರಾಗಿ ಮಹಾಪುರುಷರ ಜೀವನ ಅಸಾಧಾರಣೆಯಿಂದ ಕೂಡಿರುತ್ತದೆಂಬುದಕ್ಕೆ ಸಾಕ್ಷಿಯಾದರು.

ಅಣ್ಣನವರು ತಮ್ಮ ಜೀವನದ ಅಲ್ಪಾವಧಿಯಲ್ಲಿಯೇ ಜಗತ್ತಿನ ಯಾವ ಮಹಾಪುರುಷರಿಗೂ ಕಡಮೆಯಿಲ್ಲದಂತಹ, ಕಾರ್ಯಗಳನ್ನು ಸಾಧಿಸಿದರು, ಮಂತ್ರಿಯಾಗಿ, ಧಾರ್ಮಿಕ ಪುರುಷನಾಗಿ, ಸಮಾಜ ಸುಧಾರಕರಾಗಿ, ಸಾಹಿತಿಯಾಗಿ, ಎಸಗಿದ ಕಾರ್ಯಗಳು ಒಂದೆರಡಲ್ಲ, ಎಲ್ಲಕ್ಕೂ ಮಿಗಿಲಾಗಿ ಅವರು ಸಮಾಜ ಸುಧಾರಕರಾಗಿ ಮಾಡಿದ ಕಾರ್ಯಗಳನ್ನು ಮಾನವ ಕುಲ ಎಂದೆಂದಿಗೂ ಮರೆಯದು. ಎಂಟುನೂರು ವರುಷಗಳ ಹಿಂದೆಯೇ ಅವರು ಧಾರ್ಮಿಕ ತತ್ವಗಳನ್ನ ಪ್ರಜಾಪ್ರಭುತ್ವದ ಮೂಸೆಯಲ್ಲಿ ಪುಟ ಕೊಟ್ಟರು; ಬಹು ದಿನದಿಂದ ಕೀಳೆಂದು ತಿಡೆಗೆಟ್ಟಿ[illegible] ಕುಲಕ್ಕೆ ಸ್ವಾತಂತ್ರ್ಯ ಕೊಟ್ಟರು. ಜಾತೀಯತೆಯನ್ನು ಸಮಾಜದಿಂದ ಹೊರ ಹಾಕಲು ಮೇಲು ಜನಾಂಗದವರನ್ನು ಕೀಳೆಂದು ಎಣಿಸಲ್ಪಟ್ಟ ಜನಾಂಗದೊಡನೆ ಸಂಬಂಧಪಡಿಸಿದರು. "ಕೊಲ್ಲುವವನೆ ಮಾದಿಗ, ಹೊಲಸು ತಿಂಬುವವನೆ ಹೊಲೆಯ" ಎಂಬ ಉದಾತ್ತ ತತ್ವವನ್ನು ಸಾರಿದರು. ಭಕ್ತಿ ಭಂಡಾರಿಯಾದ ಅವರು ನುಡಿದಂತೆ ನಡೆದು ಜನತೆಗೆ ದಾರಿ ದೀಪವಾದರು........

ಕಲ್ಯಾಣ ರಾಜ್ಯದ ಮಂತ್ರಿಯಾಗಿದ್ದ ಅವರು ಜನತೆಯ ಕಲ್ಯಾಣ ಬಯಸಿ, ಅನುಭವಮಂಟಪದಂತಹ ಮಹಾ ಸಂಸ್ಥೆಯನ್ನು ಸ್ಥಾಪಿಸಿದರು. ಈ ಮೊದಲಿನ ಧಾರ್ಮಿಕ ಮಂಟಪ, ಜಗತ್ತಿನಲ್ಲಿ ಮೊಟ್ಟಮೊದಲು ಸ್ಥಾಪಿತವಾದದ್ದು ಕರ್ನಾಟಕದಲ್ಲಿ ಬಸವಣ್ಣನಿಂದ. ಇದು ನಿಜಕ್ಕೂ ಕನ್ನಡಿಗರಾದವರು ಹೆಮ್ಮೆ ಪಡುವ ವಿಷಯ. ಅಥೆನ್ಸಿನ ಧಾರ್ಮಿಕ ಸಂಸ್ಥೆ, ಯುರೋಪಿನ ಚರ್ಚು, ಪುರಾಣ ಕಾಲದ ನಮ್ಮ ಆಶ್ರಮಗಳು, ಈ ತೆರನಾಗಿ ಮೊದಲೇ 'ಇದ್ದ'ವೆಂಬುದು ನಿಜವಾದರು, "ಅನುಭವ ಮಂಟಪದಂತಹ" ಎಲ್ಲ ತರದ ಜನರನ್ನೊಳಗೊಂಡ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಚರ್ಚೆಯನ್ನು ಮಾಡಿ ಸಮಾಜದ ಏಳಿಗೆಗಾಗಿ, ದುಡಿಯುತಿದ್ದ ಒಂದು ಮಹಾ ಸಂಸ್ಥೆ ಇರಲಿಲ್ಲವೆಂಬುದು ನಿರ್ವಿವಾದ. ಕುಮಾರ ಸ್ವಾಮೀಜಿಯವರು, ತಮ್ಮ "Buddha and Basava" ಹೊತ್ತಿಗೆಯಲ್ಲಿ ಹೇಳಿರುವಂತೆ, "One of the monumental works that Basava did, was the formation of the institution named Anubhava Mantapa the Academy of experience." ಅನುಭವಮಂಟಪ ಬರಿಯ ಚರ್ಚಾಕೂಟವಾಗಿರಲಿಲ್ಲ. ದೇಶದ ನಾನಾ ಮೂಲೆಗಳಿಂದ ಅನುಭವಿಗಳಾದ ಶಿವಶರಣರು, ಬಸವಣ್ಣನವರ ಉದಾತ್ತ ಚರಿತ್ರೆಯನ್ನು ಕೇಳಿ ಅಲ್ಲಿಗೆ ಬಂದಿದ್ದರು. ಅದೊಂದು ಶಿವಾನುಭವ ಸಂಸ್ಥೆಯಾಗಿತ್ತು. ಪಂಡಿತರೊಬ್ಬರು ಹೇಳಿರುವಂತೆ, ಅನುಭವಮಂಟಪದಲ್ಲಿ ತಲೆ ತಲೆಗಳ ಗುದ್ದಾಟ ನಡೆಯುತ್ತಿರಲಿಲ್ಲ. ಹೃದಯ ಹೃದಯಗಳ ಮಂಥನ ನಡೆಯುತಿತ್ತು.

ಮಹದೇವಿಯಕ್ಕನಂತಹ ಶಿವಶರಣೆ, ಚೆನ್ನ ಬಸವಣ್ಣನಂತಹ ಜ್ಞಾನಿ, ವೀರ ಯೋಧನಾದ ಮಡಿವಾಳ ಮಾಚಿತಂದೆ, ಏಕದೇವರ ಪೂಜೆಯ ಛಲವಾದಿಯಾದ ಅಂಬಿಗರ ಚೌಡಯ್ಯ, ಕರ್ಮಯೋಗಿಯಾದ ಸಿದ್ಧರಾಮಣ್ಣ, ಹಿರಿಯ ಕಾಯಕಜೀವಿಯಾದ ಆಯ್ದಕ್ಕಿ ಮಾರಯ್ಯ, ತಮ್ಮ ರಾಜ್ಯವನ್ನೆ ತೊರೆದು ಬಂದ ಕಾಶ್ಮೀರದ ಮೋಳಿಗೆ ಮಾರಯ್ಯ, ಪತಿಯನ್ನು ಅನುಸರಿಸಿ, ರಾಣಿ ವಾಸವನ್ನ ಬಿಟ್ಟು ಶಿವಶರಣೆಯಾದ ರಾಣಿ ಮಹದೇವಿಯಕ್ಕ. ಇವರೆಲ್ಲರೂ, ಮೇಲಾಗಿ ವೈರಾಗ್ಯ ನಿಧಿಯಾದ ಅಲ್ಲಮಪ್ರಭು, ಬಸವಣ್ಣನ ಮಹಾಮನೆಗೆ ಬಂದಿದ್ದರು. ಬಸವಣ್ಣ ಯಾರು? ಏನು? ಎಂಬುದಕ್ಕೆ ಇಷ್ಟೇ ಸಾಕು. ಅನುಭವಮಂಟಪದ ಬಗ್ಗೆ ದಿವಂಗತ ಪೂಜ್ಯ ಉತ್ತಂಗಿ ಚೆನ್ನಪ್ಪನವರ ಮಾತು ಬಹು ಸಮಂಜಸವಾಗಿದೆ. (Monumental institution in the Religious history of India)

ಸುಸಂಘಟಿತವಾದ ಸಮಾಜವನ್ನು ಕಟ್ಟಲಿಕ್ಕೆ ಬರಿಯ ಧಾರ್ಮಿಕ ಕಟ್ಟುಕಟ್ಟಳೆಗಳಲ್ಲ, ಎಂಬುದನ್ನು ಮನಗಂಡ ಅಣ್ಣನವರು, ಸಮಾಜದಲ್ಲಿ ಆರ್ಥಿಕ ಸಮಾನತೆಯನ್ನು ತರಲು ಕಾಯಕತತ್ವವನ್ನು ಬೆಸೆದರು. ದುಡಿಯದೆ ಉಣ್ಣುವುದು ಪಾಪವೆಂದು ಸಾರಿದರು. ದೈಹಿಕವಾದಂತಹ ಕೆಲಸ ಕೀಳೆಂಬ ಅಭಿಪ್ರಾಯವನ್ನು ಅಲ್ಲಗಳೆದರು. ವೃತ್ತಿಯಿಂದ ಯಾರಾವರೇನು? ಗುಣದಿಂದ ಆತನ ಅಂತಸ್ತನ್ನು ಅಳೆದರು. ಬಸವಣ್ಣನು ಕಾಯಕತತ್ವದಿಂದಾಗಿ, ಬುದ್ಧ, ಪ್ಲೆಟೋ, ಮಾರ್ಕ್ಸ್ ಇವರೆಲ್ಲರಿಗಿಂತ ಒಂದು ಹೆಜ್ಜೆ ಮುಂದೆ ಸಾಗಿದನು. ಆತನು ಉದ್ಯೋಗಕ್ಕೆ ಕೊಟ್ಟ ಗೌರವದಿಂದಾಗಿ ಚೇತನಭರಿತವಾದ ಸಮಾಜವನ್ನು ಕಟ್ಟಲು ಸಾಧ್ಯವಾಯಿತು. "ಕಾಯಕವೆ ಕೈಲಾಸವಯ್ಯ" ಎಂಬ ಕಹಳೆಯನ್ನೂದಿದ ಅವರ ಅಮರ ತತ್ವ ನೆಮ್ಮದಿ, ಸರಳತೆ, ಸಹಜತೆ ಸಮಾಜದಲ್ಲಿ ಬೇರೂರಲು ಬಹು ಫಲಕಾರಿಯಾಯಿತು.

ಬುದ್ಧ, ಮಹಾವೀರರು, ಧಾರ್ಮಿಕ ತತ್ವಗಳನ್ನು ಜನತಾ ಭಾಷೆಯಲ್ಲಿ ಉಸುರಿದಂತೆ ಬಸವಣ್ಣನವರು, ತಿಳಿಗನ್ನಡದಲ್ಲಿ ವಚನಸುಧೆಯನ್ನು ಹರಿಸಿ ಭಕ್ತಿ ಭಂಡಾರಿಯಾಗಿದ್ದ ಅವರು, ವಚನ ಭಂಡಾರಿಯೂ ಆದರು. ಕನ್ನಡ ಸಾರಸ್ವತ ಪ್ರಪಂಚದಲ್ಲಿ ಬಸವೇಶ್ವರರ ವಚನಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ಸರಳವೂ, ಸುಂದರವೂ, ಸಹಜವೂ, ಬಿಗುವಿಲ್ಲದ ವಚನಗಳು ಅನುಭವದ ಖಣಿಗಳಾಗಿವೆ; ಅಂತೆಯೇ, ಅವರ ವಚನ ಸುಧೆ ಗುರುಮನೆಯಿಂದ ಗುಡಿಸಲಿನ ವರೆಗೂ ಹರಿದಿದೆ. ಪಂಡಿತ, ಪಾಮರರ ಮನವನ್ನು ಸೆಳೆದಿವೆ.... "ಗೂಢವಾದ ಧಾರ್ಮಿಕ ತತ್ವಗಳನ್ನು ಬಹು ಸುಲಭವಾಗಿ ಆಕರ್ಷಕವಾಗಿ ಹೇಳುವ ಬಸವಣ್ಣನವರ ನುಡಿಗಳು ಅವರ ಹಿರಿಮೆಯ ಪ್ರತೀಕವಾಗಿದೆ" ಎಂದು ಹೇಳಿದ ಸ. ಸ. ಮಾಳವಾಡರ ಮಾತುಗಳು ಬಹು ಸಮಂಜಸ.

ನಮ್ಮ ನಾಡಿನಲ್ಲಿ ಆಗಿ ಹೋದ, ಮಹಾಪುರುಷನೊಬ್ಬನನ್ನು, ಯುಗ ಯೋಗಿಯನ್ನು ವಿಭೂತಿ ಪುರುಷನನ್ನು ಯಾವ ರೀತಿ ಗೌರವಿಸಿದ್ದೇವೆ? ಯಾವ ಕಣ್ಣಿನಿಂದ ನೋಡಿದ್ದೇವೆ? ಗೌರವ ಸಲ್ಲಿಸುವ ದೊಡ್ಡ ಪ್ರಟ್ಟಗಿರಲಿ, ಅಲ್ಲಸಲ್ಲದ ಹಗುರಾದ ವಿಚಾರಗಳನ್ನು ಮಾತಾಡಲು ಹಿಂಜರಿದಿದ್ದೇವೆಯೇ? ಧಾರ್ಮಿಕ ಸಮಾನತೆ, ಆರ್ಥಿಕ ಸಮಾನತೆ, ರಾಜಕೀಯ ಸಮಾನತೆ, ಸಾಮಾಜಿಕ ಸಮಾನತೆಯನ್ನು, ಮಾನವ ಜನಾಂಗಕ್ಕೆ ಕೊಡಮಾಡಿದ ಮಹಂತನೊಬ್ಬನ ಬಗೆಗೆ, ಉದಾಸೀನತೆ ತಾಳುವದು ಸರಿಯೆ?

ಬಸವಣ್ಣನಂತಹ ಒಬ್ಬ ಸುಧಾರಕ, ಪಾಶ್ಚಿಮಾತ್ಯ ರಾಷ್ಟ್ರದಲ್ಲಿ ಜನಿಸಿದ್ದರೆ, ಲೋಕ ಪುರುಷನಾಗುತಿದ್ದ. ಹೇಗಲ್ಲ, ಕನ್ನಡ ನಾಡಿನಲ್ಲಿ ಬಿಟ್ಟು ಮಹಾರಾಷ್ಟ್ರ ಅಥವಾ ತಮಿಳುನಾಡಿನಲ್ಲಿ ಜನಿಸಿದ್ದರೆ, ಭಾರತೀಯರಾದರು, ಆತನ ಪರಿಚಯವಿರುತಿತ್ತು. ಕನ್ನಡಿಗರಾದ ನಾವು ದೊಡ್ಡವರಿಗೆ ಕೊಡುವ ಗೌರವ ಇದೆ. ಇದರಿಂದಾಗಿ, ಕೃತಘ್ನರಾಗುತಿದ್ದೇವಲ್ಲದೆ ಮತ್ತಿನ್ನೇನು?

ಏಸು, ಬುದ್ಧ ಪೈಗಂಬರ, ಮಹಾವೀರ, ನಮಗೆ ಬೇಕು, ಆದರೆ! ಬಸವಣ್ಣ ಬೇಡವೆ? ಕಾಲವಿಕ್ಕೈಲ್ಲಿ, ಇನ್ನಾದರು ಮಹಾ ಪುರುಷರನ್ನ ತೆರೆದ ಹೃದಯದಿಂದ ನೋಡುವ ಸೌಜನ್ಯತೆಯನ್ನ ಕಲಿಯೋಣ.

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.

ಬೆಲೆ: ಸಾದಾ ಪ್ರತಿ ರೂ. ೧

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯ ಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."

—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಬೇಕಾಗಿದ್ದಾರೆ

ಸಾಕಷ್ಟು ಅನುಭವವುಳ್ಳ ಕಂಪೋಸಿಟರ್, ಪ್ರಿಂಟರ್ ಬೇಕಾಗಿದ್ದಾರೆ.

ಪ್ರಿಂಟಿಂಗ್ ಪ್ರೆಸ್ಸಿನ ಬೇರೆ ಬೇರೆ ವಿಭಾಗಗಳಲ್ಲಿ ತರಬೇತಿಗಾಗಿ 8ನೇ ತರಗತಿ ವರೆಗೆ ಓದಿದ ಕೆಲವು ಹುಡುಗರನ್ನು ತೆಗೆದು ಕೊಳ್ಳಲಾಗುವುದು ವಿಚಾರಿಸಿರಿ·

ನವಯುಗ ಪ್ರೆಸ್, ಉಡುಪಿ

ಗೀತಾ—ದ್ವಿತೀಯಾಧ್ಯಾಯ

(ಐದನೇ ಪುಟದಿಂದ)

ಈಗ ವಿಶ್ವದ ಎಲ್ಲಾ ಕಡೆಗಳಲ್ಲೂ ಮಾನವ ಜನಾಂಗವೂ ಇಂದ್ರಿಯ ಲಾಲಸೆಯನ್ನು ಪ್ರದರ್ಶಿಸುತ್ತಿರುವುದು. ಆದರಿಂದ ಈ ಇಪ್ಪತ್ತನೆಯ ಶತಮಾನದಲ್ಲಿ ಹಳೆಯ ಪ್ರಾಚೀನ ಗ್ರಂಥವಾಚನದಿಂದ ಏನು ಪ್ರಯೋಜನ ದೊರಕೀತು? ಎಂಬ ಪ್ರಶ್ನಾರ್ಥಕ ಮನೋಭಾವ ಎಲ್ಲರಲ್ಲೂ ಮೂಡುವುದು ಸಹಜವಾಗಿದೆ.

ಮಾನವನು ಸ್ವಭಾವತ ಕುತೂಹಲ ಉಳ್ಳವನು. ಅವನಿಗೆ ಹೊಳೆದ ಪ್ರಶ್ನೆಗಳಿಗೆ ಉತ್ತರವು ಬೇಕು. ಆಲೋಚನೆಗಳಲ್ಲಿ ಬರುವ ಪ್ರಶ್ನಭಾವನೆಗಳಿಗೆ, ಈ ಪ್ರಪಂಚದಲ್ಲಿ ಕಾಣುವ ಬಾಹ್ಯರಂಗಗಳ ವಿವಿಧ ನಿಯಮಿತ ವಿಧಿಗಳಿಗೆ, ದೃಷ್ಟಾಂತವಾಗಿ, ಮೇಲೆ ಎಸೆದ ವಸ್ತು ಕೆಳಗೆ ಬೀಳುವುದು, ಅದು ಮೇಲೇಕೆ ಹೋಗುವುದಿಲ್ಲ? ಎಲ್ಲಾ ಕಡೆಗಳಲ್ಲೂ ಇದೇ ರೀತಿ ಮೇಲೆ ಎಸೆದ ವಸ್ತು ಕೆಳಗೆ ಬೀಳುವುದೇಕೆ? ಎಂಬ ಪ್ರಶ್ನೆ ಅವನ ಮುಂದೆ ಬರುವುದು. ಇದರ ಉತ್ತರ ತಿಳಿಯಲು ಅಪೇಕ್ಷಿಸಿ ನಡೆಸಿದ ಪ್ರಯೋಗಗಳಿಂದ ಭೌತಿಕ ವಿಜ್ಞಾನವು ಬೆಳೆಯಿತು. ವಿಜ್ಞಾನದಿಂದಾಗಿ ಮಾನವನು ಬಾಹ್ಯ ಸುಖ ಸೌಕರ್ಯಗಳಿಂದ ಈ ಆಧುನಿಕ ಯುಗದಲ್ಲಿ ಹಿಂದಿನವರಿಗಿಂತ ಅಧಿಕ ಬಾಹ್ಯ ಸುಖವನ್ನು ಅನುಭವಿಸುತ್ತಿರುವನು.

ಹಾಗೆ ಮಾನವನು ತನಗೆ ಬೇಕಾದಷ್ಟು ಬಾಹ್ಯ ಸುಖ ಸೌಕರ್ಯಗಳಿದ್ದರೂ, ಅವನು ತೃಪ್ತನಾಗದೆ ಇರುವ ಸ್ಥಿತಿಯನ್ನು, ತಿಂದುಂಡು ಮೆರೆದ ಬಳಿಕ ತಿಳಿದುಕೊಳ್ಳುವನು. ಈ ಅತೃಪ್ತಿಯು ಎಲ್ಲಾ ಕಾಲದಲ್ಲೂ ಎಲ್ಲಾ ಜನರಲ್ಲೂ ಕಾಣಬರುವುದಿಲ್ಲ. ಕೆಲವೇ ಜನರಲ್ಲಿ ಮಾತ್ರ ಈ ಅತೃಪ್ತಿಯು ಬರುವುದು. ಅವರು ದಾರ್ಶನಿಕರು; ಋಷಿಗಳು ಎಂದು ಕರೆಯಲ್ಪಡುವರು. ಮಾನವನು ಬಾಹ್ಯ ಸುಖ ಸೌಕರ್ಯಗಳಿಂದ ತೃಪ್ತಿಪಡೆಯಲಾರನು ತನ್ನ ಮನದ ಇಚ್ಛೆಯ ಪೂರೈಕೆಗಳಿಂದಲೂ ತೃಪ್ತಿಗೊಳ್ಳಲಾರನು. ತನ್ನ ಯೋಚನೆಗಳಲ್ಲಿ ಮೂಡುವ ವಿಚಾರ ಪೂರಿತ ದೃಷ್ಟಿಗೆ ಬೇಕಾದ ಉತ್ತರವನ್ನು ಪ್ರಾಪಂಚಿಕ ವಸ್ತುಗಳಿಂದ, ನಾಶವಾಗುವ ವಸ್ತುಗಳಿಂದ ಪಡೆದು ತೃಪ್ತಿಪಡೆಯದೆ, ಅವನು ಅರಿಯಲು ಹವಣಿಸುವನು. ಇಂತಹವರು ಜನ ಸಮುದಾಯದಲ್ಲಿ ಕೆಲವರೇ ಇರುವರು. ಅವರು ತತ್ವಶಾಸ್ತ್ರ ಸಿದ್ಧಾಂತ ಗ್ರಂಥಗಳನ್ನು ಬರೆದಿಟ್ಟವರು. ಧರ್ಮ, ಮತ ಪ್ರಚಾರ ಮಾಡಿದವರು ಮಾನವನಿಗೆ ನೆಮ್ಮದಿಯಿಂದಬಾಳಲು, ಕೇವಲ ದೈಹಿಕ, ಮಾನಸಿಕ, ಬೌದ್ಧಿಕ ಕಾಮನೆಗಳ ತೃಪ್ತಿ ಸಾಲದು. ಅವನು ಇವುಗಳಿಂದ ತೃಪ್ತನಾಗಲಾರನು, ಎಂದು ಅವರು ತಿಳಿದು ಜೀವನವನ್ನು ಅವಲೋಕಿಸ ತೊಡಗಿದವರು. ಜೀವನ ಎಂದರೆ ಎಲ್ಲಾ ಪಶು, ಪಕ್ಷಿ, ಪ್ರಾಣಿಗಳಲ್ಲೂ ಗಿಡ, ಮರಗಳಲ್ಲೂ, ಮಾನವನಲ್ಲೂ ಪ್ರವಹಿಸುವ ಒಂದು ಚೈತನ್ಯ. ಜೀವನವನ್ನು ಸಾಧ್ಯವಾಗುವಂತೆ ಮಾಡಿದ ಚೈತನ್ಯವನ್ನು ಆ ಒಂದೇ ಶಕ್ತಿಯನ್ನು ಎಲ್ಲಾ ಕಡೆಗಳಲ್ಲೂ ಇರುವುದನ್ನು ಗುರುತಿಸಿದರು.

ಅವರು ಆ ಚೈತನ್ಯವನ್ನು (consciousness) ಅರಿಯಲು ಪ್ರಯತ್ನಿಸಿದರು. ಅವರು ಏಕೆ ಹಾಗೆ ಪ್ರಯತ್ನಿಸಿದರು ಎಂದು ಪ್ರಶ್ನಿಸಲು ಸಾಧ್ಯವಿಲ್ಲ. ವಿಜ್ಞಾನಿಗಳು ಏಕೆ ಚಂದ್ರನ ಸುತ್ತಲೂ ತಿರುಗುವ ಗ್ರಹಗಳನ್ನು ರಚಿಸಿ ವೇಲೇರಿಸಿದರು? ರಶ್ಯಾ ದೇಶದಲ್ಲಿ ಜೀವನ ಮಟ್ಟವು ಉತ್ತಮವಿಲ್ಲವೆ? ಅಷ್ಟು ಸುಧಾರಣೆ ಸಾಲದೆ? ಚಂದ್ರನ ಹಂಬದಿ ನೋಡುವಾಸೆ ಏಕೆ? ಹಾಗೆ ಇತರ ಪ್ರಾಣಿ ವರ್ಗಗಳ ವಿಷಯ ಸಂಶೋಧನೆಗಾಗಿ ಜೀವಮಾನವಿಡೀ ಶ್ರಮಿಸುವ ಸಂಶೋಧಕರಿರುವರು. ಅವರಿಗೆ ಆ ಸಂಶೋಧನೆಯಿಂದ ಹಣ ಗಳಿಸುವ ಉದ್ದೇಶವಿಲ್ಲ. ಅಥವಾ ಅದರಿಂದ ಏನು ಉಪಯೋಗವಿದೆ ಎಂದು ಕೇಳಲು ಬಾರದು. ಕೇವಲ ಅವರ ಈ ತಿಳಿಯುವ ದಾಹ (Quest) ಅರಿಯುವ ಹಂಬಲಕ್ಕಾಗಿ ಈ ಸಂಶೋಧನಾ ಬುದ್ಧಿಯಿಂದ ಈ ಪ್ರಯತ್ನ ಮಾಡುತ್ತಿರುವರು. ಹಾಗೆಯೇ ಋಷಿಗಳು ತಮ್ಮ ಸುತ್ತಲಿನ ಈ ಚೈತನ್ಯಮಯ ಜೀವನದ ಉದ್ದೇಶವೇನು? ಎಂದು ತಿಳಿಯುವ ಲವಲವಿಕೆಯಿಂದ ಹಿಮಾಲಯ ತಪ್ಪಲುಗಳಿಗೆ, ಕಾಡಿನ ಗುಹೆಗಳಿಗೆ ಹೋಗಿ ಕುಳಿತು ಜೀವನದ ಮೇಲೆ ಸಂಶೋಧನೆ ನಡೆಸಿದರು.

ಜಗತ್ತಿನಲ್ಲಿ ಎರಡು ವಿಧದ ವಸ್ತುಗಳನ್ನು ಅವರು ಕಂಡರು. ಒಂದು ಚರ, ಇನ್ನೊಂದು ಅಚರ. ಒಂದು ಬಾಹ್ಯ ಜಗತ್ತಿನೊಡನೆ ಅನುಭವವನ್ನು ಪಡೆಯುವಂತಹದು; ಮತ್ತು ಬಾಹ್ಯ ಜಗತ್ತಿನ ವಿಷಯ ತಿಳಿಯುವಂತಹದು. ಇನ್ನೊಂದು ತಿಳಿಯದೆ ಇರುವಂತಹದು. ಪಶು ಪಕ್ಷಿ, ಪ್ರಾಣಿ, ಮಾನವ ಚರ ವಸ್ತುಗಳಾದರೆ, ಕಲ್ಲು, ಮರಗಳು ಅಚರ. ಇವುಗಳಲ್ಲಿ ಬಾಹ್ಯ ಜಗತ್ತಿನ ಅನುಭವ ತಿಳಿಯುವಂತಹ ಚೈತನ್ಯ ಕಲ್ಲಿಗಿಂತ ಗಿಡ ಮರಗಳಲ್ಲಿ ಹೆಚ್ಚಿನ ವಿಕಾಸ ಪಡೆದಿವೆ ಮತ್ತು ಪ್ರಾಣಿಗಳಲ್ಲಿ ಅದಕ್ಕಿಂತ ಹೆಚ್ಚಿನ ವಿಕಾಸ, ಮತ್ತು ಈ ಅರಿವು ಅತ್ಯುಚ್ಚತರದಲ್ಲಿ ಮಾನವನಲ್ಲಿ ವಿಕಾಸವಾಗಿ ಪ್ರದರ್ಶಿತವಾಗುತ್ತಿದೆ ಎಂದು ತಿಳಿದರು.

ಅವರು ಸಂಶೋಧನೆ ನಡೆಯಿಸಿ ಮಾನವನಲ್ಲಿ ದೇಹ, ಮನ, ಬುದ್ಧಿ ಎಂಬ ಮೂರು ಭಿನ್ನ ಭಿನ್ನ ವಿಭಾಗಗಳನ್ನೊಳಗೊಂಡ ಪ್ರಕೃತಿಯ ಆವರಣಗಳೂ, ಮತ್ತು ಅವನ್ನು ಚೈತನ್ಯಮಯವಾಗಿ ಮಾಡಲು ಪ್ರಕೃತಿಗಿಂತ ಭಿನ್ನವಾದ ಒಂದು ಆತ್ಮವೆಂಬ ತತ್ವವೂ ಇದೆ ಎಂದು ತಿಳಿದರು. ಮತ್ತು ಎಲ್ಲಾ ಧರ್ಮ, ಮತ ಸಂಪ್ರದಾಯಗಳು ಮಾನವನಲ್ಲಿರುವ ಈ ದೈಹಿಕ, ಮಾನಸಿಕ, ಬೌದ್ಧಿಕ ವಿಕಾಸದಿಂದಾಗಿ, ಆತ್ಮ ತತ್ವವನ್ನು ತಿಳಿಯಲು ಬರೆದುದಾಗಿದೆ. ಮತ್ತು ಈ ವಿಕಾಸದಿಂದಾಗಿ ಮಾನವನು ಪರಿಪೂರ್ಣ ವ್ಯಕ್ತಿತ್ವವನ್ನು ಪಡೆಯಬಹುದು. ಆದರೆ ಈಗ ಧಾರ್ಮಿಕರು ಎಂದೆನಿಸಿಕೊಳ್ಳುವವರು ಆ ಧರ್ಮದಿಂದಾಗಿ ವ್ಯಕ್ತಿತ್ವ ವಿಕಾಸವನ್ನಾಗಲೀ, ಸುಖಜೀವನವನ್ನಾಗಲೀ ಬಾಳುವುದಿಲ್ಲ. ಏಕೆಂದರೆ ಧರ್ಮವನ್ನು ಕೇವಲ ಬಾಹ್ಯ ಆಚರಣೆಯಲ್ಲಿ ಮಾತ್ರ ಆಚರಿಸಿದರೆ ಅದು ನಮಗೆ ಹೆಚ್ಚಿನ ಪ್ರಯೋಜನ ಕೊಡದು. ಧರ್ಮವೆಂದರೆ ಮಾನಸಿಕ, ಬೌದ್ಧಿಕ ಮಟ್ಟಗಳಲ್ಲೂ ಕೆಲವೊಂದು ತತ್ವಗಳನ್ನು, ನಿಯಮಗಳನ್ನು ಆಚರಿಸುವುದು. ಮತ್ತು ದೈಹಿಕ, ಮಾನಸಿಕ, ಬೌದ್ಧಿಕ ಮಟ್ಟಗಳಲ್ಲಿ ಒಂದರಲ್ಲಿ ಅತಿ ಆಸಕ್ತಿ ತಳೆದರೆ, ಅದ ವ್ಯಕ್ತಿಯ ನಾಶಕ್ಕೆ ದುಃಖಕ್ಕೆ ಕಾರಣವಾಗುವುದು. ಧರ್ಮವೆಂದರೆ, ಈ ಮೂರು ಮಟ್ಟಗಳನ್ನು ನಿಯಮಿತ ಬದ್ಧವಾಗಿ, ಸಂಯಮವನಿಟ್ಟುಕೊಂಡು ಜೀವನವನ್ನು ಬಾಳುವುದು. ಹೀಗೆ ಜೀವನ ಬಾಳಿದರೆ ಬಾಳ್ವೆ ಸುಖಮಯವಾಗುವುದು ಖಂಡಿತ.

(ಮುಂದುವರಿಯುವುದು)



'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Directer of Public Instruction Madras.

ಗಡಿ ದಾಟಿಸಿ

ಬಡ ಜೀವವು ಬಡವಾಗಿದೆ
ಹಸಿವೆದ್ದಿದೆ; ಸಗನೆ—
ಮಿತಿ ಮೀರುತ ಮತಿಗೆಟ್ಟಿದೆ—
ತಿನಸಿಲ್ಲದ ಭವಣೆ.
ಅಲ್ಲಲ್ಲಿಗೆ ಹಲವಾರಿವೆ
ಆಹಾರದ ಖಾತೆ,
ಲೆಕ್ಕಣಿಕೆಯ ಪುಟ ಬೆಳೆದರು,
ಮುಗಿದಿಲ್ಲವು ಕೊರತೆ.
ಗಡಿ ಗಡಿಯಲಿ ಗರಡಿಗಳಿವೆ
ಗಡಿ ಕಾವಲಿಗಾಗಿ
ವಲಯಾಂತರವೆನ್ನುವ ಮತ
ನವ ತತ್ವದ ಬೇಡಿ!
ಸಿರಿವಂತಗೆ ಹಸಿವೆದ್ದರ,
ಹಣ ಭಾರವ ಹೊರುತೆ;
ಆಹಾರವ ಪಡೆದೊಯ್ಯುತೆ,
ಮನೆ ಬಳಿಗೆಯೆ ಬರುತೆ.
ಈ ಭಾರತ ಭೂಮಿಯ ನೆಲ,
ಪ್ರಾಂತೀಯವು ಹೌದು.
ಆದಕಾದರು ಈ ಭೇದದ,
ಗಡಿಗಾಲುವ ಕಳೆದು.
ನಮ್ಮೆಲ್ಲರ ಗಡಿ ಕೀಳುತ
ಗಡಿ ದಾಟಿಸಿ ಸಾಕು.
ಜಠರಾಗ್ನಿಯು ತಣ್ಣಾಗಿಸಿ
ಭಿನ್ನಾಂಶವ ತೊಡೆದು.
ಬರಿ ಹೊಟ್ಟೆಗೆ ಬರೆಯಿಟ್ಟಿರೆ
ಪ್ರಳಯಾಗ್ನಿಯುಜ್ವಲಿಸಿ,
ಸುಡುಗಾಡಿನ ಸುಳಿದಾಟವ
ತರ ಬಹುದದ ನಿಲಿಸಿ.

— ಅಬ್ದುಲ್ ರಹಿಮಾನ್

ಅಮೃತಬಿಂದು

ಕಾಣದಿರುವವೂ ಸುಂದರವಾಗಿ ತೋರುವದೇ ನಿಜವಾದ ಮತ್ತು ಶಾಶ್ವತವಾದ ಸೌಂದರ್ಯ.

—ಗ್ರೆವಿಲ್

o o o

ಸೌಂದರ್ಯವು ಪ್ರೇಮದ ಸಮಗ್ರತೆಲ್ಲಿದೆಯಲ್ಲದೆ ಕನ್ನಡಿಯ ಪ್ರತಿಬಿಂಬದಲ್ಲಿಲ್ಲ.

—ಠಾಗೋರ್.

o o o

ನಾಚಿಕೆಯಾದಾಗ ಕೆನ್ನೆಗೇರುವ ಕೆಂಪನ್ನು ಕಳೆದುಕೊಂಡು ಯುವತಿ ಸೌಂದರ್ಯದ ಅತೀ ಪ್ರಮುಖ್ಯ ಅಂಶವನ್ನು ಕಳಕೊಂಡಿದ್ದಾಳೆ.

—ಗ್ರೆಗರಿ.

o o o

ಪಾವಿತ್ರ್ಯ ಮತ್ತು ಗೌರವ ಎಲ್ಲಿದೆಯೆಂಬುದನ್ನು ಎತ್ತಿ ಹೇಳುವ ಸ್ಪಷ್ಟ ಸಂಕೇತವೆಂದರೆ ನಾಚಿಕೆಯಿಂದ ಕೆಂಪಡರುವ ಕೆನ್ನೆ. —ಗಟಪ್ಸೆಲ್ಡ್.

ಈ ಶರೀರವೆಂಬುದು ಮಣ್ಣು. ಅದನ್ನು ರಚಿಸಿದವನಿಗೆ ಹೆಮ್ಮೆ ತರಬೇಕಾದರೆ ಈ ಮಣ್ಣಿನ ಶರೀರ ಹೊನ್ನಿನ ಗುಣ ಪ್ರದರ್ಶಿಸಬೇಕು. —ಹುನ್ನಸ್.

o o o

ವಜ್ರ ಎಲ್ಲ ಕಲ್ಲುಗಳನ್ನೂ ಕತ್ತರಿಸಬಲ್ಲದಾದಂತೆ ಶೀಲ ಎಲ್ಲ ಗುಣಗಳನ್ನೂ ಮೀರಿ ನಿಲ್ಲಬಲ್ಲುದು. —ಬಾಟೇಲ್.

ಅಧಿಕಾರ ಜಮಾವಣೆ

(ಎರಡನೇ ಪುಟದಿಂದ)

"ಅಂಕೆ ಇಲ್ಲದ ಕಪಿ" ಎಂದು ನಾಲ್ಕು ರಪ ರಪನೆ ಬಾರಿಸಿದರು.

ನೋವನ್ನು ನೋಡದ ರಾಜನ ಕೂಗು ಇಡೀ ಶಾಲೆಯನ್ನೇ ಆವರಿಸಿತು. ಮಕ್ಕಳೆಲ್ಲರೂ ಮಿಕಿ ಮಿಕಿ ನೋಡುತ್ತಲೇ ಇದ್ದರು.

ಮಾಸ್ತರರ ಕೈ ಸಡಿಲವಾದಾಗಲೇ ಶಾಲೆಯಿಂದ ಹೊರಬಿದ್ದು ಮನೆಯತ್ತ ಓಡಿದನು.

ಮಾಸ್ತರರು ಅಲ್ಲಿಯೇ ಕುರ್ಚಿಯಲ್ಲಿ ಕುಸಿ ಕುಳಿತರು.

ಶಾಲೆ ಬಿಡುವ ಮುನ್ನವೇ ಶ್ರೀಪತಿ ರಾಯರ ಆಳು ಶಾಲೆಯ ಬಾಗಿಲಲ್ಲಿ ಕಾಣಿಸಿಕೊಂಡನು.

"ನಿಮ್ಮನ್ನು ಈಗಲೇ ಬರುವಂತೆ ಹೇಳಿದ್ದಾರೆ ರಾಯರು" ಎಂದನು.

"ಶಾಲೆ ಬಿಟ್ಟೊಡನೆ ಬರುವೆನೆಂದು ಹೇಳು."

"ಕೂಡಲೇ ಹೊರಟು ಬಿಡಿ, ಮಾಸ್ತರರೇ!"

"ಸಮಯವಾಗದೆ ಹೊರಡುವಂತಿಲ್ಲ.'

"ರಾಯರು ಹೇಳಿದಾಗ ತಡ ಮಾಡಿದರೆ ಅವರಿಗೆ ಕೋಪ ಬರುತ್ತೆ."

"ಮೊದಲು ಇಲ್ಲಿಂದ ಹೊರಟು ಹೋಗು." ಸ್ವಲ್ಪ ಗಡುಸಾಗಿಯೇ ಹೇಳಿದರು.

ಯಾರೂ ತನಗೆ ಈ ಮೊದಲು ಈ ರೀತಿ ನುಡಿದಿರಲಿಲ್ಲವೆಂದು ಆಳು ಕಾಳನಿಗೆ ಆಶ್ಚರ್ಯ ಹಾಗೂ ಅಸಮಾಧಾನವಾಯಿತು.

ಮಲ್ಲಿಗೆ ಹೂವಿನಿಂದ ಬಾಳೆ ಪಟ್ಟೆಗೆ ಬೆಲೆ ಸಿಗುವಂತೆ ರಾಯರಿಂದ ಕಾಳನಿಗೂ ಗೌರವ ಸಿಗುತಿತ್ತು.

ಈ ಮಾಸ್ತರ ಸೊಕ್ಕು ಮುರಿದೇ ತೀರಬೇಕೆಂದು ಸರಸರನೆ ಹೊರಟು ಹೋದನವನು.

ಆತನೊಡನೆ ತಾವು ದುಡುಕಿ ಮಾತನಾಡಬಾರದಿತ್ತೆಂದು ಸಹಾಯಕರು ಅಭಿಪ್ರಾಯ ಪಟ್ಟರು.

ಯಾವುದಕ್ಕೂ ಮಾತು ಬೆಳೆಸದೆ ತಮ್ಮ ಕರ್ತವ್ಯ ಪೂರೈಸಿದೊಡನೆ ರಾಯರ ಮನೆಯತ್ತ ಹೊರಟರು.

ಹೊರ ಬಾಗಿಲಲ್ಲಿಯೇ ಕಾಳನ ದರ್ಶನವಾಯಿತು. ಆತನ ಕೆಂಗಣ್ಣನ್ನು ನೋಡಿಯೂ ನೋಡದವರಂತೆ ಒಳ ನಡೆದರು.

ಉರಿಬಿಸಿಲಿನಲ್ಲಿ ಹೊರಟು ಬಂದ ಮಾಸ್ತರರನ್ನು ಉರಿ ಮೋರೆಯಿಂದಲೇ ರಾಯರು ಸ್ವಾಗತಿಸಿದರು.

ವಿಚಾರಣೆಗೊಳಪಡಿಸುವ ಅಪರಾಧಿಯಂತೆ ಕುಳಿತುಕೊಳ್ಳುವಂತೆಯೂ ಅವರು ನುಡಿಯಲಿಲ್ಲ.

"ಏನೋ ಬರಹೇಳಿದಿರಂತೆ." ಮಾಸ್ತರರೇ ಮಾತಿಗಾರಂಭಿಸಿದರು.

"ಹೌದು ಬರ ಹೇಳಿದ್ದೆ. ಆದರೆ ಈಗಲಾದರೂ ಬಂದಿರಲ್ಲ."

"ಶಾಲೆ ಬಿಟ್ಟೊಡನೆ ಮನೆಗೂ ಹೋಗದೆ ಇತ್ತ ಬಂದೆ."

"ನೀವು ಹೆಚ್ಚು ದಿನ ಇಲ್ಲಿ ಇರುವ ಆಸೆ ಕಳೆದುಕೊಂಡಂತಿದೆ. ನಾನು ಯಾರು ಎಂಬ ವಿಚಾರ ನೀವು ಈವರೆಗೂ ಅರಿತಂತಿಲ್ಲ. ಬರ ಹೇಳಿದಾಗಲೂ ಉಪೇಕ್ಷೆ ತೋರಿದಿರಿ."

"ನೀವು ಹೇಳುವ ಮಾತುಗಳೇ ಅರ್ಥವಾಗುತ್ತಿಲ್ಲ." ಸಹನೆಯಿಂದಲೇ ನುಡಿದರು.

"ಅರ್ಥವೇಗಾದೀತು? ಹುಡುಗನಿಗೆ ಹೊಡೆಯುವಾಗ ನಿಮ್ಮ ಬುದ್ಧಿ ಎಲ್ಲಿಟ್ಟಿದ್ದೀರಿ? ನಾನು ಮನಸ್ಸು ಮಾಡಿದರೆ ನಿಮ್ಮ ಕೆಲಸವನ್ನೇ ಕಿತ್ತೊಗೆಯಬಲ್ಲೆ. ಈಗಲಾದರೂ ನೀವು ಕ್ಷಮೆ ಕೇಳಿಕೊಂಡಲ್ಲಿ........"

"ಯಾರ ಕ್ಷಮೆ ಕೇಳಬೇಕು? ಯಾಕೆ ಕ್ಷಮೆ ಕೇಳಬೇಕು?" ಮಾತಿನ ಮಧ್ಯೆ ನುಡಿದರು.

"ಹುಡುಗನಿಗೆ ಹೊಡೆದ ತಪ್ಪಿಗಾಗಿ! ಬರ ಹೇಳಿದಾಕ್ಷಣವೇ ಬಾರದಿದ್ದುದಕ್ಕಾಗಿ...ನನ್ನ ಮತ್ತು ನನ್ನ ಮಗನ ..!"

"ಸಾಕು ಮಾಡಿ ರಾಯರೇ! ಕರ್ತವ್ಯ ಪಾಲಿಸಿದ ಮನುಷ್ಯನಿಗೆ ತಮ್ಮಂತವರು ನೀಡುವ ಉಡುಗೊರೆ ಇದೇ ತಾನೆ? ಅಧ್ಯಾಪಕನು ನಿಮ್ಮ ಮನೆಯ ತೊತ್ತಲ್ಲ. ನಿಮ್ಮಂತಹ ಧನವಂತರ ದಾಳಿಗಳಿಂದ ರಾಮ ರಾಜ್ಯದ ಬದಲು ರಾವಣ ರಾಜ್ಯವಾದೀತು .."

"ಇದರ ಪ್ರತಿಫಲ ನಿಮಗೆ ತೋರಿಸದಿದ್ದರೆ ನಾನು..."

ಆದರೆ ನಿಮ್ಮ ಮಗ ನಿಮ್ಮ ವಂಶದ ಕುಠಾರನಾಗಲಿರುವನು. ಅದನ್ನು ಚೆನ್ನಾಗಿ ನೆನಪಿಟ್ಟುಕೊಳ್ಳಿ. ನ್ಯಾಯ ಧರ್ಮಕ್ಕಾಗಿ ಯಾವ ಕಷ್ಟವನ್ನೂ ಸಹಿಸಬಲ್ಲೆ. ಆದರೆ ಮಾನ ಮಾರಿಕೊಂಡು ಕರ್ತವ್ಯಕ್ಕೆಂದೂ ಚ್ಯುತಿ ತರಲಾರೆ. ಒಂದಲ್ಲ ಒಂದು ದಿನ ನಿಮ್ಮ ತಪ್ಪು ನಿಮಗೆ ಅರಿವಾಗದಿರದು." ಎಂದು ಹೇಳಿ ಸರಸರನೆ ಹೊರಟು ಹೊರನಡೆದರು.

ಕ್ಷಣಕಾಲ ರಾಯರಿಗೆ ಆಘಾತವಾಯಿತು. ಯಾರೂ ಆ ವರೆಗೆ ಅವರಿಗೆ ಎದುರುವಾದಿಸಿದವರಿರಲಿಲ್ಲ.

ನಾಲ್ಕೇ ದಿನದಲ್ಲಿ ಮಾಸ್ತರರು ಯಾವ ಅನುಕೂಲತೆಯೂ ಇಲ್ಲದ ಹಳ್ಳಿಯ ಮೂಲೆಯೊಂದಕ್ಕೆ ತಮ್ಮ ಸಂಸಾರವನ್ನು ಸಾಗಿಸ ಬೇಕಾಯಿತು.

○ ○ ○

ಶಾಲೆಯಿಂದ ಹೊರಬಿದ್ದ ರಾಜ ಮತ್ತೆ ಶಾಲೆ ಒಳ ಪ್ರವೇಶಿಸಲಿಲ್ಲ. ಕೂತುಂಡರೂ ಕರಗದಷ್ಟು ಸಂಪತ್ತಿರುವಾಗ ಮತ್ತೇಕೆ ವಿದ್ಯೆ ಎಂದು ತಂದೆ ತಾಯಿಗಳೂ ಒತ್ತಾಯಿಸಲಿಲ್ಲ.

ಅಂದಿನಿಂದ ರಾಜನ ಗುಂಪು ದೊಡ್ಡದಾಗತೊಡಗಿತು. ಪೋಲಿಗುಂಪಿನ ನಾಯಕ ರಾಜನ ಹೆಸರು ಎಲ್ಲೆಡೆಯೂ ಹಬ್ಬಿತು.

ಕೆಲ ಸಮಯದಲಿಯೇ ಅಧ್ಯಕ್ಷಪದ ರಾಯರ ಕೈಬಿಟ್ಟು ಹೋಯಿತು. ದಿನ ದಿನಕ್ಕೆ ರಾಜನ ಬೇಕುಗಳು ಹೆಚ್ಚಾದುವು.

ಮಗನ ದುಂದುಗಾರಿಕೆಯಿಂದ ಖರ್ಚು ಏರತೊಡಗಿದಾಗ ಬರುವ ಹಣ ಖರ್ಚಿಗೆ ಸಾಲದಾಗಲು ಕೂಡಿಟ್ಟ ಹಣವೂ ಕರಗತೊಡಗಿತು.

"ಗಿಡವಾಗಿ ಬಗ್ಗದು ಮರವಾಗಿ ಬಗ್ಗೀತೆ?' ಎಂಬ ಗಾದೆಯಂತೆ ಪ್ರಾಯ ಬರಿತ ಮಗನನ್ನು ತಡೆಯಲು ತಂದೆ ತಾಯಿಗಳಿಂದಾಗಲಿಲ್ಲ.

ಪೆಟ್ಟಿಗೆಯಲ್ಲಿದ್ದ ಹಣವೂ ಮಾಯವಾಗತೊಡಗಿತು. ಕೇಳಿದಾಗ ಹಣ ಕೊಡದಿರಲು ಬಲಾತ್ಕಾರದಿಂದಲೇ ಕೊಂಡೊಯ್ಯತೊಡಗಿದ.

ತಂದೆ ತಾಯಿಗಳ ಕಣ್ಣೀರು ಹೇಳತೀರದು. ಆಗಾಗ ಮಾಸ್ತರರಾಡಿದ ಕೊನೆಯ ಮಾತುಗಳು ರಾಯರ ಕಿವಿಯಲ್ಲಿ ಗುಂಯ್ ಗುಟ್ಟುತಿತ್ತು.

ಮಗನನ್ನು ಅಂಕಿತದಲ್ಲಿಡಲು ಅಸಮರ್ಥರಾದ ತಂದೆತಾಯಿಗಳಿಗೆ ಕಣ್ಣೀರೇ ಆಸರೆಯಾಯಿತು.

ತಾಯಿ ಅದೇ ಕೊರಗಿನಲ್ಲಿಯೇ ಬೆಂದು ಒಂದು ದಿನ ಅಸು ನೀಗಿದಳು.

ಗಳಿಸಿದ ಸಿರಿ ಸಂಪತ್ತು ತನ್ನ ಕಣ್ಣ ಮುಂದೆಯೇ ಹಾಳಾಗಿ ಹೋಗುವುದನ್ನು ಕಂಡು ಒಂದು ದಿನ ರಾಯರೂ ಎದೆಯೊಡೆದು ಸತ್ತು ಹೋದರು.

○ ○ ○

ವಯಸ್ಸಾಗಿ ಕೆಲಸದಿಂದ ನಿವೃತ್ತಿಯೊಂದಿದ್ದ ರಾಮಣ್ಣ ಮಾಸ್ತರು ಪತ್ನಿ ಸಮೇತರಾಗಿ ಶಿವರಾತ್ರಿಯಂದು ಶಿವಾಲಯಕ್ಕೆ ತೆರಳಿದ್ದರು. ವರ್ಷ ಸಂದಿದ್ದರೂ ದೇಹ ಗಟ್ಟಿಮುಟ್ಟಾಗಿಯೇ ಇದ್ದಿತ್ತು.

ಬೀದಿಯನ್ನು ದಾಟಿ ಬಾಗಿಲಿಗೆ ಬರುವಾಗ ಭಿಕ್ಷುಕರ ತಂಡವೇ ಸಾಲು ಹಿಡಿದು ಕುಳಿತಿತ್ತು. ಗುಡಿಗೆ ಬಂದು ಹೋಗುವ ಭಕ್ತರು ಉದಾರವಾಗಿ ನೀಡುವ ಧರ್ಮವೇ ಅವರ ಜೀವನಾಧಾರವಾಗಿತ್ತು.

ದೇವಸ್ಥಾನಕ್ಕೆ ಬಂದವರಾರೂ ಧರ್ಮ ನೀಡಲು ಹಿಂದೆ ಬೀಳುತ್ತಿರಲಿಲ್ಲ.

ಆದ್ದರಿಂದ ಭಿಕ್ಷುಕರ ತಂಡವೇ ಅಲ್ಲಿ ನೆರೆದಿತ್ತು.

ಕೈಯಿಲ್ಲದವರು; ಕಾಲಿಲ್ಲದವರು; ಕಣ್ಣಿಲ್ಲದವರು; ಮುದುಕರ ; ರೋಗಗಳಿಗೆ ತುತ್ತಾದವರು; ಒಂದೇ ಎರಡೇ—ಹಲವಾರು ರೀತಿಯ ಮಾನವ ಜೀವಿಗಳು ಭಕ್ತರು ನೀಡುವ ಉದಾರ ದಾನಗಳಿಗಾಗಿ ಮುಂಜಾವಿನಿಂದ ಸಂಜೆಯವರೆಗೆ ಕಾದು ಕುಳಿತಿರುತ್ತಿದ್ದರು.

ಮಾಸ್ತರರು ಒಂದೊಂದೇ ಪೈಸೆಯನ್ನು ಕೊಡುತ್ತಾ ಮುಂದೆ ಸಾಗುತ್ತಿದ್ದರು.

ಎಲ್ಲರನ್ನೂ ದಾಟಿ ಒಳ ಹೋಗುವಾಗಲೇ "ಮಾಸ್ತರೇ.... ಮಾಸ್ತರೇ ..." ಎಂಬ ಕ್ಷೀಣ ಸ್ವರದ ಕೂಗು ಕೇಳಿಸಿತು.

ನಿಂತಲ್ಲಿಯೇ ನಿಂತು ಸುತ್ತ ವೀಕ್ಷಿಸಿದರು.

ಹೌದು ಅಲ್ಲಿಯೇ ಸಮೀಪದಲ್ಲಿ ಕುಳಿತಿದ್ದ ಬಲವಾದ ರೋಗಿಯೊಬ್ಬ ದೀನ ಸ್ವರದಿಂದಲೇ ಕೂಗುತ್ತಿದ್ದ.

"ನಾನು... ನಾನು....' ಕಣ್ಣುಗಳಿಂದ ನೀರಿಳಿಯುತಿತ್ತು, ಮಾತು ತೊದಲುತಿತ್ತು.

"ಯಾರಪ್ಪಾ ನೀನು?" ಕನಿಕರದಿಂದಲೇ ಕೇಳಿದರು.

"ನಾನು...ತಮ್ಮ....ಮಾತು....ಕೇಳದ ...ರಾಜ."

ಆ ಮಾತು ಕೇಳಿ ಸ್ತಂಭೀಭೂತರಾದರು. ಹಿಂದಿನ ತಮ್ಮ ಗತ ಜೀವನದ ದೃಶ್ಯ ಒಮ್ಮೆ ಕಣ್ಮುಂದೆ ಸುಳಿದು ಮಾಯವಾಯಿತು.

"ದೇವಾ! ಎಲ್ಲವೂ ನಿನ್ನಾಟ!" ಎಂದು ಒಂದು ರೂಪಾಯಿಯ ನೋಟು ಮುಂದೆ ಸಾಗಿದರು.

ಹಸಿವೆಯಿಂದ ಬಳಲಿದ ನಾಯಿಗೆ ಹಳಸಿದ ರೊಟ್ಟಿ ಚೂರೊಂದು ಸಿಕ್ಕಿದಾಗ ಆಗುವ ಸಂತೋಷಕ್ಕಿಂತಲೂ ಮಿಗಿಲಾದ ಆನಂದ ಆ ಒಂದು ರೂಪಾಯಿ ರಾಜನಿಗುಂಟು ಮಾಡಿತ್ತು.

— —

ಹರಿಸ್ವಾಮಿ

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ
ಮತಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ. ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

NAVAYUGA 13–5–1965
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೩-೫-೬೫ರಿಂದ ೧೯-೫-೬೫ರ ವರೆಗೆ

೧. ಮೇಷ

ನಿಮ್ಮ ಆರೋಗ್ಯವಿಂದು ಮುಂಚಿಗಿಂತ ತುಂಬಾ ಸುಧಾರಿಸಲಿದೆ. ವಿರೋಧಿ ಜನರ ಉಪಟಳವು ವಿಶೇಷವಾಗಿದ್ದರೂ ಜನತೆಯ ನೆರವುಳ್ಳ ನಿಮಗೆ ಹಿಡಿದ ಕಾರ್ಯದಲ್ಲಿ ವಿಜಯ ಧನಲಾಭಗಳು ಆಗಿಯೇ ತೀರುವವು. ಪ್ರವಾಸವು ನಿರ್ವಿಘ್ನದಿಂದ ಸಾಗಲಿದೆ. ಮಕ್ಕಳ ಆರೋಗ್ಯದತ್ತ ಸ್ವಲ್ಪ ಗಮನವಿರಲಿ. ಒಳ್ಳೆಯ ವಾಗ್ಮಿಗಳಾದ ನಿಮಗೆ ತಾ. 13, 14, 15, ಈ ದಿನಗಳಲ್ಲಿ ಗೃಹಸುಖ ಜನ ಮನ್ನಣೆಗಳು ದೊರೆಯುವವು.

೨. ವೃಷಭ

ನಿಮಗೆ ಬೇಕುಬೇಕಾದ ಸುಖಭೋಗಗಳು ದೊರೆತರೂ ಮನಸ್ಸಿಗೆ ನೆಮ್ಮದಿಯಿಲ್ಲವು. ಹಣದ ಅಡಚಣೆಯು ಯಾವಾಗಲೂ ತಪ್ಪಿದ್ದಲ್ಲ. ಯಾರ ಗೊಡವೆಗೂ ಹೋಗದೆ ನಿಮ್ಮ ದಾರಿಯಲ್ಲಿ ನೀವಿದ್ದರೂ ಕೆಲವೊಂದು ಕುಜನರು ನಿಮ್ಮನ್ನು ತಾವಾಗಿ ಕೆಣಕಿ ನಷ್ಟಕಷ್ಟಗಳಿಗೀಡುಮಾಡುವರು. ಸಂಕಟ ಬಂದಾಗ ವೆಂಕಟರಮಣನೆಂಬ ಗಾದೆಯಂತೆ ನಿಮ್ಮೆಲ್ಲ ಭಾರವನ್ನು ದೇವರ ಮೇಲೆ ವಹಿಸಿ ಸ್ವಕಾರ್ಯದಲ್ಲಿ ಮುನ್ನಡೆಯಿರಿ. ವಾರಾದಿಯ 5 ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

೩. ಮಿಥುನ

ಸರಾಗವಾಗಿ ಸಾಗತಕ್ಕ ನಿಮ್ಮ ಕಾರ್ಯಕಲಾಪಗಳಿಗೆ ಮಧ್ಯೆಮಧ್ಯೆ ಕೆಲವೊಂದು ಅಡೆತಡೆಗಳು ಪ್ರಾಪ್ತವಾಗಲಿದೆ. ಆದರೂ ಹಿಡಿದ ಕಾರ್ಯವನ್ನೆಂದಿಗೂ ಕೈಬಿಡದ ನಿಮಗೆ ಪರಿಶ್ರಮಕ್ಕೆ ತಕ್ಕ ಫಲ ಲಭಿಸುವದರಿಂದ ದಿನಗಳು ಸುಖಮಯವಾಗಲಿವೆ. ಮನೆಯಲ್ಲಿ ಮಂಗಲ ಕಾರ್ಯಗಳು ನಡೆವ ಸಂಭವವಿದೆ. ಸ್ವದೇಹದಾರೋಗ್ಯಕ್ಕೆ ಕೊಂಚ ಧಕ್ಕೆ ತಗಲೀತು. ವಾರಾಂತ್ಯದ 4 ದಿನಗಳು ಗೃಹಸುಖ ಧನಲಾಭಗಳನ್ನೀಯುವವು.

೪. ಕರ್ಕಟ

ನಿಮ್ಮ ಧನಪತಿಯಾದ ರವಿ, ಸುಖಲಾಭಪತಿಯಾದ ಶುಕ್ರ, ಭಾಗ್ಯಪತಿಯಾದ ಗುರುವು ಇವರೆಲ್ಲರೂ ನಿಮ್ಮ ಲಾಭಸ್ಥಾನದಲ್ಲಿಂದು ಸೇರಿರುವುದರಿಂದ ಇಂದು ನಿಮ್ಮ ಭಾಗ್ಯಕ್ಕೆಣೆಯಿಲ್ಲವೆಂದರೂ ತಪ್ಪಾಗದು. ನಾನಾ ದಿಶದಿಂದ ಧನಾಗಮವಾಗಲಿದೆ. ನೆನೆದ ಕಾರ್ಯಗಳು ಕೆಲವೊಂದು ವಿಘ್ನವಿಡ್ಡೂರಗಳನ್ನೆದುರಿಸಿಯಾದರೂ ಕೊನೆ ಹೊಂದುವವು. ಜನಾದರಕ್ಕೆ ಪಾತ್ರರಾದ ನಿಮಗೆ ವಾರಾಂತ್ಯದ 2 ದಿನಗಳು ಅತೀವ ಪ್ರಶಸ್ತವಿವೆ.

೫. ಸಿಂಹ

ಅಂತೂ ನಿಮ್ಮ ದುಃಖದ ದಿನಗಳಿಂದು ದೂರವಾಯಿತೆನ್ನಬಹುದು. ನಿರಾಶೆಯ ಮಡುವಿನಲ್ಲಿ ಮುಳುಗೇಳುತ್ತಿದ್ದ ನಿಮಗೆ ಅವಲಂಬನವು ದೊರೆಯಲಿದೆ. ನಿಮ್ಮ ಆರೋಗ್ಯವಿಂದು ಸುಧಾರಿಸಲಿದೆ ಪರಿಶ್ರಮದಿಂದಾದರೂ ಕೆಲವೊಂದು ಬಯಕೆಗಳು ಈಡೇರುವವು. ರಾಜಕೀಯದಲ್ಲಿ ಸ್ವಲ್ಪ ಅಹಂಕಾರಗಳು ಕಾಣಿಸುವವು. ಗೃಹತಾಪತ್ರಯಗಳಿಂದ ನೊಂದ ನಿಮಗೆ ತಾ. 13, 14, 15 ಸ್ವಲ್ಪ ಹಿತಕರವೆನಿಸುವವು.

೬. ಕನ್ಯಾ

ಸಾಹಸಿಗಳಾದ ನಿಮಗೆ ಈ ವಾರದಲ್ಲಾವ ಕುಂದುಕೊರತೆಗಳೂ ಕಾಣಿಸಲಾರವು. ವಿಶೇಷತಃ ಜನ ಮನ್ನಣೆಗಳನ್ನು ಪಡೆವಿರಿ. ನಿಮ್ಮ ಆರ್ಥಿಕ ಪರಿಸ್ಥಿತಿಯು ತುಂಬಾ ಸುಧಾರಿಸುವುದಲ್ಲದೆ ಗೃಹದಲ್ಲಿ ಸುಖ ನೆಮ್ಮದಿಗಳು ನೆಲಸುವವು. ಧನಜನ ಬೆಂಬಲವು ಸಾಕಷ್ಟಿದ್ದರೂ ಕೋರ್ಟು ಕಛೇರಿ ಮೊದಲಾದ ರಾಜಕೀಯ ರಂಗಗಳ ವ್ಯವಹಾರಗಳಲ್ಲಿ ಪೂರ್ತ ಪರಾಜಯವುಂಟಾದೀತು. ತಾ. 16, 17 ಅತೀವ ಪ್ರಶಸ್ತವಿವೆ.

೭. ತುಲಾ

ನಿಮ್ಮ ಧನಪತಿಯಾದ ಕುಜನು ಲಾಭದಲ್ಲಿದ್ದರೂ ಅನಿಷ್ಟವಾದ ಅಷ್ಟಮದಲ್ಲಿ ಸಿಂಹಿಕ ರವಿಗುರುಗಳು ತುಂಬಾ ಅನಿಷ್ಟಕಾರಿಗಳಾಗಿ ಪರಿಣಮಿಸುವುದರಿಂದ ವಿನಾಕಾರಣ ಕಲಹ ಗುರುಹಿರಿಯರ ಕೂಡೆ ಮನಸ್ತಾಪ ಗೃಹಕೃತ್ಯದಲ್ಲಿ ಅವ್ಯವಸ್ಥೆ ಇತ್ಯಾದಿಗಳು ಸದಾ ತಪ್ಪಿದ್ದಲ್ಲವು. ಹೆಂಡತಿ ಮಕ್ಕಳ ಆರೋಗ್ಯವು ಸುಧಾರಿಸಲಿದೆ ತಾ. 13, 14, 18, 19 ಈ ದಿನಗಳಲ್ಲಿ ಗೃಹಸುಖ ಕಾರ್ಯಸಿದ್ಧಿಗಳಾಗಲಿವೆ.

೮. ವೃಶ್ಚಿಕ

ದುಡಿಮೆಗೆ ತಕ್ಕ ಪ್ರತಿಫಲವನ್ನು ಅನಾಯಾಸದಿಂದ ಪಡೆವಿರಿ. ನೌಕರಿ ಜನರಿಗೆ ಉದ್ಯೋಗದಲ್ಲಿ ಭಡತಿಯ ಸಂಭವವಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಂತಸದ ಸುದ್ದಿ ಕೇಳುವ ಸುಯೋಗ. ಮನೋದೌರ್ಬಲ್ಯದಿಂದಾಗಿ ಕೆಲವೊಮ್ಮೆ ವ್ಯಾಪಾರದಲ್ಲಿ ನಷ್ಟ. ಸ್ತ್ರೀಯರ ಕೂಡೆ ವಿರೋಧಗಳೂ ಉಂಟಾದಾವು. ತಾ. 16, 17 ಈ ದಿನಗಳಲ್ಲಿ ಸುಖ ನೆಮ್ಮದಿ ಲಾಭಗಳು ಪ್ರಾಪ್ತವಾಗುವವು.

೯. ಧನು

ನಿಮ್ಮ ದೇಹಸುಖ ಪತಿಯಾದ ಗುರುವು ಶತ್ರು ಕ್ಷೇತ್ರಕ್ಕೆ ಪ್ರವೇಶಿಸಿರುವ ಕಾರಣ ದೇಹಕ್ಕೆ ಸುಖವಿರದು ಮನಸ್ಸಿಗೆ ನೆಮ್ಮದಿಯಿಲ್ಲವು. ಅನುಕೂಲನಾದ ಶನಿಯು ಭಾಗ್ಯಸ್ಥ ಕುಜನನ್ನು ನೋಡುತ್ತಿರುವುದರಿಂದ ಶ್ರವ್ಯಕ ಸಾಧ್ಯವಾದ ಕಾರ್ಯಗಳಲ್ಲೂ ಇಂಜಿನಿಯರಿಂಗ್ ವಿಭಾಗದಲ್ಲೂ ಒಳ್ಳೆಯ ಲಾಭ ಕೀರ್ತಿಗಳಿವೆ. ತಾ. 13, 14, 18, 19 ಈ ದಿನಗಳಲ್ಲಿ ಆಕಸ್ಮಿಕ ಪ್ರವಾಸ ಪ್ರಿಯ ಜನರ ಸಮಾಗಮವಾಗಲಿದೆ.

೧೦. ಮಕರ

ವ್ಯಾಪಾರ ವ್ಯವಹಾರಗಳು ನಿಮ್ಮ ನಿರೀಕ್ಷೆಯಂತೆ ಮುಂದುವರಿಯಲಿವೆ. ಪ್ರಯತ್ನಕ್ಕೆ ತಕ್ಕ ಫಲವು ಲಭಿಸಲಿರುವುದರಿಂದ ದಿನಯಾಪನೆಯು ಸುಗಮವಾಗುವದು. ವಿನಾಕಾರಣ ವಾಕ್ಕಲಹವಾಗುವ ಯೋಗವಿದೆ. ಇಲ್ಲಸಲ್ಲದ ಅಪವಾದವನ್ನು ಕಲ್ಪಿಸಿಯಾದರೂ ಅರ್ಧಾಂಗಿಯು ನಿಮ್ಮ ಕೂಡೆ ಕದನಕ್ಕೆ ಸಿದ್ಧಳಾಗುವಳು. ವಿವೇಕಿಗಳಾದರೂ ನಿಮಗೆ ರಾಜಕೀಯದಲ್ಲಿ ಪರಾಜಯವಾದೀತು. ವಾರಾದಿಯ 5 ದಿನಗಳು ಅನುಕೂಲವಾಗಿವೆ.

೧೧. ಕುಂಭ

ಗ್ರಹಗತಿಯು ತೀವ್ರ ವಕ್ರವಾಗಿರುವುದು ಮನದ ಬಯಕೆಗಳು ತಿರುಕನ ಕನಸಿನಂತಾಗಲಿವೆ. ನೌಕರಿ ವ್ಯಾಪಾರ ವ್ಯವಹಾರಗಳಲ್ಲಿ ಆಕಸ್ಮಿಕ ನಷ್ಟ ಸಂಭವಗಳುಂಟಾಗಲಿವೆ. ಬಂಧು ವಿರೋಧ ಗೃಹ ಕಲಹಗಳಿಂದಾಗಿ ಮನಸ್ಸಿಗೆ ನೆಮ್ಮದಿಯಿರದು. ವಿದ್ಯಾರ್ಥಿವೃಂದಕ್ಕೆ ಫಲಿತಾಂಶವು ಅಸ್ತವ್ಯಸ್ತವಾಗಲಿದೆ. ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯೊಂದಿರಲೆಂದು ನಿಮ್ಮ ದಾರಿಯಲ್ಲೇ ಸಾಗಿರಿ. ವಾರಾಂತ್ಯದ 4 ದಿನಗಳು ಸ್ವಲ್ಪ ಆಶಾದಾಯಿಗಳಾಗಿವೆ.

೧೨. ಮೀನ

ಬಯಕೆಯು ಸಫಲವಾಗುವದು. ಬಂಧುಮಿತ್ರರ ನೆರವಿನಿಂದಾಗಿ ದುಃಸಾಧ್ಯವಾದ ಕಾರ್ಯವನ್ನು ಸಾಧಿಸಿ ಯಶಸ್ಸನ್ನು ಪಡೆಯಲಿರುವಿರಿ. ಉತ್ತಮವಾದ ಆರ್ಥಿಕ ಪರಿಸ್ಥಿತಿಯಿಂದಾಗಿ ಸಂಸಾರ ರಥವು ಸುಗಮವಾಗಿ ಸಾಗಲಿದೆ. ಆದರೂ ಶಿವಪೂಜೆಯಲ್ಲಿ ಕರಡಿ ಬಂತೆಂಬ ಗಾದೆಯಂತೆ ಏಳೂವರೆ ಶನಿಯ ದೆಸೆಯಿಂದಾಗಿ ಅನಿರೀಕ್ಷಿತ ಅನಾಹುತಗಳು ಗಮಿಸ್ಯಾವು ವಾರಾಂತ್ಯದ 2 ದಿನಗಳು ಇಷ್ಟಸಿದ್ಧಿಪ್ರದಗಳಾಗಿವೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ.ಪ್ರತ್ಯೇಕ)
ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ,ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿ ಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?
ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರರಾಗುವಂತೆ ಮಾಡುವ ಕೃತಿ.
ಬೆಲೆ: 0-19 ಪೈಸೆ
0-30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಖಂ ಪ್ರತಿಗಳಿಗೆ ವಿಚಾರಿಸಿರಿ :-
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪] ಮೇ, ೨೦, ೭೫ [ಸಂಚಿಕೆ ೩೮

NAVAYUGA

Phone No. ಫೋನ್ ನಂಬ್ರ: 226

leading nationalist weekly

೨೦ ಪೈಸೆ

ನಾರದ ಕತೆ

ಕಣ್ಣು ತೆರೆಯಿತು

ಬರೆದವರು:
ಶ್ರೀ ಪಿ. ಕೆ. ಶೆಟ್ಟಿ, ಕರೋಪಾಡಿ.

ಶ್ರಾವಣ ಮಾಸದ ಕತ್ತಲು! ಆಕಾಶದಗಲಕ್ಕೂ ಕರಿ ಮೋಡ ಆವರಿಸಿತ್ತು. ಚಂದ್ರನುದಯಕ್ಕಿನ್ನೂ ಹೊತ್ತಿತ್ತು. ಕಣ್ಣಿಗೆ ಕಣ್ಣು ತಾಗಿಸಿದರೂ ಕಾಣಿಸದಂತಹ ಕತ್ತಲೆಯಲ್ಲಿ ನಾನೆಂತು ಮನೆ ಸೇರುವೆನೋ ಎಂಬೆಣಿಕೆ ನನ್ನನ್ನಾವರಿಸಿತು. ಬಸ್ಸಿಳಿದು ಗುಡ್ಡದ ದಾರಿಯಾಗಿ ಸುಮಾರು ಮೂರು ಮೈಲುಗಳಾಚೆ ಇರುವ ನನ್ನ ಮನೆಗೆ ನಡೆದೇ ಹೋಗಬೇಕಿತ್ತು.

ಹೀಗೆ ಆಲೋಚಿಸುತ್ತಾ, ಹೆಜ್ಜೆ ಹಾಕುತ್ತಾ ಮುಂದೆ ಸಾಗುತ್ತಿರುವಷ್ಟರಲ್ಲಿ, ದೂರದಲ್ಲಿ ಮಿಂಚೂ ಮಿನುಗತೊಡಗಿತು. ನನಗೆ ಮನೆ ಸೇರುವ ಉದ್ವೇಗ ಇಮ್ಮಡಿಸಿತು.

ಮನೆಯಲ್ಲಿ ಮುದಿ ತಾಯಿಯೂ, ನನ್ನಾಕೆಯೂ ನನ್ನ ಬರವನ್ನು ಕಾಯುತ್ತಿರಬಹುದು. ಯಾವಾಗಲೂ ಚೆನ್ನಾಗಿ ಕತ್ತಲು ಕವಿಯುವ ಮುನ್ನವೆ ನಾನು ಮನೆ ಸೇರುತ್ತಿದ್ದೆ. ಇಂದು ಅರ್ಧದಾರಿಯಲ್ಲಿ ವಾಹನ ಕೆಟ್ಟಿದುದರಿಂದ ಈ ಅವಸ್ಥೆಗೆ ಕಾರಣವಾಯಿತು.

ಕವಿದಿದ್ದ ಕಾರ್ಮೋಡ ನಿರ್ಮಿಸಿರದೆ ಒಂದೇ ಸವನೆ ಮುಸಲಧಾರೆಯಾಗಿ ಮಳೆ ಸುರಿಸತೊಡಗಿತು. ನಾನು ಸಂಪೂರ್ಣ ತೊಯ್ದು ಹೋಗುವ ಮೊದಲೇ! ದಾರಿಯ ಪಕ್ಕದಲ್ಲಿದ್ದ ಮನೆಗೆ ನುಗ್ಗಿದೆ. ಅವರು ನನಗೆ ನಿತ್ಯ ಪರಿಚಿತರು. ಬಡವರಾದುದರಿಂದ ನಾನು ಅವರ ಮನೆಗೆ ಆಗಮಿಸಿದಾಗ ಬಹಳ ಆದರದಿಂದ ನನ್ನಲ್ಲಿ ಮಾತನಾಡಿದರು. ಅವರ ಇಚ್ಛೆಯಂತೆ ಅವರ ಮನೆಯ ಮಂಚವೊಂದರಲ್ಲಿ ತುಸು ಮಂಡಿಸಿದೆ.

ಮಳೆ ಬೇಗನೆ ಬಿಡುವ ಸೂಚನೆ ಕಾಣಲಿಲ್ಲ. ಆದುದರಿಂದ ನನ್ನ ಅಂದಿನ ಪರಿಸ್ಥಿತಿಯನ್ನು ಅವರ ಮುಂದೆ ವಿವರಿಸಿದಾಗ ನನ್ನನ್ನು ಆದಷ್ಟು ಬೇಗನೆ ಕಳುಹಿಸುವುದಕ್ಕಾಗಿ ಅವರು ತುಂಬಾ ತೊಂದರೆ ಪಟ್ಟುಕೊಂಡರು. ತಮ್ಮ ಮನೆಯಲ್ಲಿದ್ದ ಒಂದೇ ಒಂದು ಟಾರ್ಚನ್ನು ನನಗೆ ಕೊಟ್ಟು ಉಪಕರಿಸಿದರು. ಅವರ ಔದಾರ್ಯಕ್ಕಾಗಿ ತುಂಬು ಮನದ ಕೃತಜ್ಞತೆಯನ್ನರ್ಪಿಸುತ್ತಾ, ನಾನು ಹೊರಡಲು ಎದ್ದು ನಿಂತೆ; ಅವರೂ ನನ್ನನ್ನು ಬೀಳ್ಕೊಟ್ಟರು.

ಎಂದಿಗಿಂತ ಬಹಳ ಹೊತ್ತು ಮೀರಿ ನಾನು ಮನೆ ಸೇರುತ್ತಿರುವೆನಾದುದರಿಂದ, ಮನೆಯಲ್ಲಿ ನನ್ನಾಕೆ ಏನು ಗ್ರಹಿಸುತ್ತಿರಬಹುದೆಂದು ನಾನು ಯೋಚಿಸತೊಡಗಿದೆ. ಮುಸ್ಸಂಜೆಯಾದೊಡನೆ ಅಂಗಳಕ್ಕಿಳಿಯಬೇಕಿದ್ದರೂ ಆಕೆಗೆ ಧೈರ್ಯ ಸಾಲದ.—ಅಂತಹ ಧೀರೆ ಆಕೆ! ತಾಯಿಯಂತೂ ಮುಪ್ಪಿನ ಮೂಲೆಗೆ ಸೇರಿದ್ದಾರೆ. ನನ್ನ ಇಂದಿನ ಪರಿಸ್ಥಿತಿಯಂತಹ ದಿನಗಳಲ್ಲಿ ಮುದುಕರು ಮನೆಯಲ್ಲಿಂಬೇಕಾದ ಔಚಿತ್ಯ ನನಗೆ ಅರಿವಾಯಿತು. ವೇದಗಳ ಅರ್ಥವಿರುವ ಹಿರಿಯರ ಗಾದೆಗಳವೆಯಲ್ಲ—"ಒಲೆಗೊಂದು ಕೊಳ್ಳಿ, ಮನೆಗೊಂದು ಮುದುಕಿ" ಎಂಬುದಾಗಿ.

ನನ್ನ ತಾಯಿಯ ಪ್ರಾಯ ತುಂಬಾ ಮೀರಿದ್ದರೂ ಮನೆಯ ಕೆಲವು ಕೆಲಸಗಳಲ್ಲಿ ಭಾಗ ತೆಗೆದುಕೊಳ್ಳದಿರುತ್ತಿರಲಿಲ್ಲ. ಸದ್ಯ ಅವರ ಸ್ಥಿತಿಯೂ ಕೆಲವು ಸಮಯದಿಂದ ಚೆನ್ನಾಗಿಲ್ಲ. ಕೆಮ್ಮೊಂದು ಕಾಡತೊಡಗಿ ಅವರ ದೈಹಿಕ ದಾರ್ಢ್ಯತೆ ಬಹಳ ಹಾಳಾಗಿದೆ. ಮನೆಯಲ್ಲಿ ಅತ್ತೆ-ಸೊಸೆಯರು 'ಅತ್ತೆ-ಸೊಸೆ'ಯಂತಿರದೆ ತಾಯಿ ಮಗಳಂತಿದ್ದಾರೆ. ಅವರ ಕಾಯಿಲೆಯ ದಿನಗಳಲ್ಲಿ ನಾನವರಿಬ್ಬರ ನಿಕಟ ಸಂಬಂಧವನ್ನು ಗುರುತಿಸಿದೆ.

ಯೋಚನೆಯ ಸುಳಿಯಲ್ಲಿ ಸಿಕ್ಕಿದ್ದ ನನಗೆ ದಾರಿ ಸಾಗಿದುದರ ಅರಿವೇ ಆಗಲಿಲ್ಲ. ಇನ್ನು ನನ್ನ ಮನೆಗುಳಿದುದು ಕೇವಲ ಕೆಲವೇ ಫರ್ಲಾಂಗುಗಳ ದೂರ. ಟಾರ್ಚಿನ ಪ್ರಕಾಶದಲ್ಲಿ ವೇಗವಾಗಿ ಸಾಗುತ್ತಿದ್ದೆ. ಬಿಡಿಸಿ ಹಿಡಿದ ಕೊಡೆಗೆ ದಾರಿಯ ಪಕ್ಕದಲ್ಲಿದ್ದ ಮರಗಳಿಂದ ನೀರ ಹನಿಗಳು ಉದುರಿ ಶಬ್ದವಾಗುತ್ತಿತ್ತು. ಚೀಲವೊಂದು ಎಡದ ಕಂಕುಳಲ್ಲಿತ್ತು. ಬಲಗೈಯ ಹೆಬ್ಬೆರಳು ಟಾರ್ಚಿನ ಗುಂಡಿಯೊತ್ತುವ ಕೆಲಸದಲ್ಲಿತ್ತು. ಮನಸ್ಸು ಮನೆ ಸೇರಿತ್ತು.

ಅದೇ ದಾರಿಯ ಬದಿಯಲ್ಲಿ ಭೀಮಾಕಾರದ ಮರವೊಂದು ತನ್ನ ವಿಶಾಲ ಕೊಂಬೆ ರೆಂಬೆಗಳನ್ನೆತ್ತಿ ಕತ್ತಲೆಯ ಗರ್ಭವನ್ನು ಸೀಳುವಂತೆ ತಲೆಯೆತ್ತಿ ನಿಂತಿದ್ದರೂ ಆಗಾಗ ದೂರದ ದಿಗಂತದಿಂದ ಜ್ವಲಿಸುತ್ತಿರುವ ಮಿಂಚು ತಾನೇನೂ ಅದರಕ್ಕಿಂತ ಕೀಳಲ್ಲವೆನ್ನುವಂತೆ ಝಗಝಗಿಸುತ್ತಿತ್ತು.

ತಕ್ಷಣವೇ ಮರದ ಬಳಿಯಿಂದ ಮಗುವೊಂದು ಕೂಗಿಕೊಂಡಿತು. ಮಗುವಿನ ತಾಯಿ ಮಗುವನ್ನು ಸಂತೈಸುವಂತೆಯೂ ಕೇಳಿಸಿತು. ನನಗೆ ದಿಗಿಲಾಯಿತು! ಕೂಡಲೇ ಅಲ್ಲಿಗೆ ನನ್ನಲ್ಲಿರುವ ಟಾರ್ಚಿನ ಬೆಳಕನ್ನು ಚೆಲ್ಲೋಣವೆಂದರೆ ಧೈರ್ಯವಿಲ್ಲ. ಅಪರಿಚಿತ ವ್ಯಕ್ತಿಗಳ ಮೇಲೆ ರಾತ್ರಿಯ ಹೊತ್ತಿನಲ್ಲಿ ಬೆಳಕು ಚೆಲ್ಲುವುದು ಅಸಭ್ಯವಾಗುತ್ತದೆ. ಅದಲ್ಲದೆ, ಹಾದಿ ಬೀದಿಗಳಲ್ಲಿ ಕುಡುಕರು ಕುಡಿದು ಸಂಚರಿಸುತ್ತಿದ್ದರಂತೂ ಪೇಚಾಟವೇ! ಅವರ ಬಾಯಿಯಿಂದ ತಪ್ಪಿಸಿಕೊಳ್ಳುವ ಮೊದಲು ಬೈಗಳ ಮಂಗಳಾರತಿಯಾಗಿಯೇ ತೀರುವುದು. ಯಾರಾದರೂ ಇರಲಿ. ನನಗದರ ಗೊಡವೆಯೇಕೆ? ಎಂದು ಎರಡು ಅಡಿ ಮುಂದುವರಿದಾಗ ಮಗು ಇನ್ನೊಮ್ಮೆ ಕೂಗಿತು. ತಾಯಿ ಮೊದಲಿನಂತೆಯೇ ಸಂತೈಸಿದಳು.

ಈ ಎಡೆಯಲ್ಲಿ ನನಗೆ ಇನ್ನೊಂದು ಯೋಚನೆ ಕಣ್ಣಮುಂದೆ ಕಟ್ಟಿಕೊಂಡಿತು. ನಮ್ಮ ಅಜ್ಜಿ ಜೀವಿಸಿರುವಾಗ ಕೆಲವು ಕತೆಗಳನ್ನು ಹೇಳುತ್ತಿದ್ದರು. ಅವುಗಳು ಕಟ್ಟು ಕತೆಗಳೆಂದು ಆಗ ನಾನು ನಗುತ್ತಿದ್ದೆ. ಭೂತ—ಪ್ರೇತಗಳ ಅಸ್ತಿತ್ವವೇ ಸುಳ್ಳು—ಎಂದು ವಾದಿಸುತ್ತಿದ್ದ ನಾನು ಈಗ ಮಾತ್ರ ಅದು ನಿಜವೆಂದು ನಂಬದಿರಲಿಲ್ಲ. ಅಜ್ಜಿ ವರ್ಣಿಸಿದ್ದ ಒಂದೊಂದೇ ಭೂತಗಳು—ಪ್ರೇತಗಳು ನನ್ನ ಮುಂದೆ ನಿಂತು ನರ್ತನವೆಸಗುವಂತೆ ಭಾಸವಾಯಿತು. ನನಗೆ ಅವುಗಳು ಅಣಕಿಸುವಂತೆಯೂ ಕಂಡಿತು. ನನ್ನ ಮೈ ಬೆವರಿತು, ಕೈಕಾಲುಗಳು ನಡುಗಲಾರಂಭಿಸಿದುವು.

ಮರದ ಕಡೆಯಿಂದ ಕೇಳಿದ ತಾಯಿ-ಮಗುವಿನ ಸ್ವರವನ್ನು ನೆನೆದು ಇದು ಕೂಡಾ ಭೂತ ಚೇಷ್ಟೆಯೇ ಇರಬೇಕೆಂದು ಶಂಕಿಸಿದೆ. ಆದರೆ ಅಲ್ಲಿಗೆ ಟಾರ್ಚಿನ ಬೆಳಕು ಚೆಲ್ಲಿ ಸಂಶಯ ನಿವಾರಿಸೋಣವೆಂದರೆ ಧೈರ್ಯದ ತುಣುಕೂ ನನ್ನಲ್ಲಿ ಇರಲಿಲ್ಲ.

ಮೈ ಬೆವತು ಉಟ್ಟ ಉಡುಪು ಒದ್ದೆಯಾಗಿತ್ತು. ಇನ್ನು ಬೇಗನೇ ಇಲ್ಲಿಂದ ಕಾಲು ಕಿತ್ತರೆ "ಬಚಾವ್" ಎಂದುಕೊಂಡು, ಟಾರ್ಚನ್ನು ಬಿಗಿಯಾದ ಮುಷ್ಟಿಯಲ್ಲಿ ಹಿಡಿದುಕೊಂಡು, ಆದಷ್ಟು ದೂರ-ದೂರ ಹೆಜ್ಜೆಯಿಡುತ್ತಾ ನಡೆಯ ತೊಡಗಿದೆ.

ಆಗ.......

"ಓ....ಬೇಕೂsss .. ದಯಮಾಡಿ ಈ ಕಡೆ ತುಸು ತೋರಿಸುತ್ತೀರಾ...?" ಎಂಬ ಮಾತು ಕೇಳಿಸಿತು. ಆ ಮರದ ಬಳಿಯಿಂದ. ನಾನು ಈ ಹಿಂದೆ ಎಷ್ಟೋ ಬಾರಿ ಕೇಳಿದ ಸ್ವರದಂತೆ ಆ ಧ್ವನಿಯಿದ್ದರೂ ಆಕೆ ಈ ಹೊತ್ತಿನಲ್ಲಿ ಇಲ್ಲಿರುವುದು ಅಸಾಧ್ಯದ ಮಾತು. ಆದರೂ ಧೈರ್ಯದಿಂದ ಆ ಕಡೆಗೆ ಟಾರ್ಚಿನ ಬೆಳಕು ಹರಿಸಿದೆ. ನನ್ನ ಗ್ರಹಿಕೆ ನಿಜವಾಯಿತು! ತನ್ನ ಸೊಂಟದಲ್ಲಿ ಮಗುವೊಂದನ್ನೆತ್ತಿಕೊಂಡು ಜಾನಕಿ ನೇರವಾಗಿ ನನ್ನ ಬಳಿಗೆ ಬಂದಳು. ಆಕೆಯ ಆಗಿನ ಸ್ಥಿತಿಯನ್ನು ನೋಡಿ ನಾನು ತುಂಬ ಮರುಕಪಟ್ಟೆ. ಬಟ್ಟೆ ಮಳೆಯಿಂದ ತೊಯ್ದು ಮೈಗೆ ಅಂಟಿಕೊಂಡಿತ್ತು. ಮಗು ಚಳಿಯಿಂದ ತತ್ತರಿಸುತ್ತಿತ್ತು— ತನ್ನ ತಾಯಿಯನ್ನ ಎರಡು ಕೈಗಳಿಂದಲೂ ತಬ್ಬಿ ಹಿಡಿದಿತ್ತು.

ಕೂಡಲೇ ಆಕೆಯ ಗುರುತು ಹತ್ತಿದ ನನ್ನ ಸ್ಥಿತಿ ಸಂಪೂರ್ಣ ಸುಧಾರಿಸಿ ಕೊಂಡಿತು. ನನ್ನ ಧ್ವನಿಯನ್ನು ಕೇಳಿ ನನ್ನ ಗುರುತು ಆಕೆಗೂ ಸಿಕ್ಕಿತು. ಆಕೆ, "ಯಾರು, ರಾಜಣ್ಣನವರಾ?" ಎಂದು ಬಳಲಿದರೂ ಉತ್ಸಾಹಗೊಂಡು ಕೇಳಿದಳು.

ನಮ್ಮ ಬಲರಾಮ ಭಟ್ಟರ ಒಕ್ಕಲು ಕಾಂತಪ್ಪನ ಕೈ ಹಿಡಿದಾಕೆಯೆ ಈಕೆ—ಈ ಜಾನಕಿ!

ಕಾಂತಪ್ಪನಿಗೆ ಇದು ಎರಡನೇ ಸಂಬಂಧ. ಮೊದಲಿನಾಕೆ ಕಾಂತಪ್ಪನ ಮನೆ ತುಂಬಿ ವರ್ಷ ಪೂರ್ತಿಯಾಗುವ ಮೊದಲೇ ತನ್ನ ತವರಿನ ದಾರಿ ಹಿಡಿದಿದ್ದಳು; ಹಾಗೆನ್ನುವುದಕ್ಕಿಂತ ಅತನೇ ಹಿಡಿಸಿದ್ದನೆನ್ನುವುದು ಎಷ್ಟೋ ವಾಸಿ. ಅಂತಹ ಭಯಂಕರ ವ್ಯಕ್ತಿ ಕಾಂತಪ್ಪ!

ಪ್ರತಿ ದಿನದ ಸಂಪಾದನೆಯ ಹೆಚ್ಚಿನ ಪಾಲು ಕುಡಿತ—ಜೂಜುಗಳಿಗಾಗಿಯೇ ವಿನಿಯೋಗವಾಗುತ್ತಿತ್ತು— ಕಾಂತಪ್ಪನಿಗೆ. ಪ್ರತಿ ದಿನವೆಂಬಂತೆ ತನ್ನ ಹೆಂಡತಿಯನ್ನು ಪೀಡಿಸಿ, ಹಿಂಸೆ ಕೊಡುತ್ತಿದ್ದ. ಎಷ್ಟು ಸಹಿಸಿದರೂ ಪ್ರಯೋಜನ ತೋರ

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ
ಹೊಸ ಬಡ್ಡಿ ದರಗಳು

		ಶೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7¾
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	....	4

ದಿ ಪಾಂಗಾಳ ನಾಯಕ್
ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಿಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.

Phone No. 226

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಭಾಗದ ಪ್ರಮಾಣದ ಹಾಳೆಯ ಒಂದೇ ಪುಟ್ಟದಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮುಂಗಡವಾರವೇ ಮುಗಿಯುವುದರಿಂದ ವಾರ್ತೆ, ರಿಪೋರ್ಟ್ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರ ವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಪ್ರಜಾರಾಜ್ಯದ ಪ್ರತಿಪಾದಕ ಅಮೆರಿಕದ ಏಳನೇ ಅಧ್ಯಕ್ಷ ಅಂದ್ರೂ ಜೇಕ್‌ಸನ್.

ನವಯುಗ

ಸಂಪುಟ ೪೪ | ಉಡುಪಿ | Vol. 44

ಸಂಚಿಕೆ ೩೮ | ೨೦—೫-೧೯೬೫ | No. 38

ಹೊಸ ಹಾದಿ ತುಳಿದ ಕಾರವಾರದ ಸಾಹಿತ್ಯ ಸಮ್ಮೇಲನ

ಕಾರವಾರದಲ್ಲಿ ಕಳೆದ ತಾರೀಕು ೧೦ರಿಂದ ಮೂರು ದಿನಗಳ ವರೆಗೆ ನಡೆದ ನಲ್ವತ್ತೊಂದನೇ ಕನ್ನಡ ಸಾಹಿತ್ಯ ಸಮ್ಮೇಲನವು ಹೊಸ ಹಾದಿಯನ್ನು ತುಳಿದು, ಯಶಸ್ವಿಯಾಗಿ ಜರಗಿತೆಂದು ಹೇಳಬಹುದು. ಈ ಬಾರಿಯ ಕನ್ನಡ ಸಾಹಿತ್ಯ ಸಮ್ಮೇಲನದ ಹೊಸತನಕ್ಕೆ ಕಾರಣಗಳು ಹಲವಾರು; ಕಾರಣ ಕರ್ತೃಗಳೂ ಹಲವರು.

ಇದುವರೆಗಿನ ಕನ್ನಡ ಸಾಹಿತ್ಯ ಸಮ್ಮೇಲನವೆಂದರೆ ಕೇವಲ ಜಾತ್ರೆಯಂತಿತ್ತು. ವಿವಿಧ ಸಾಹಿತ್ಯ ಪ್ರಕಾರಗಳ ಕುರಿತು ವಿವಿಧ ಗೋಷ್ಠಿಗಳನ್ನೇರ್ಪಡಿಸುವುದು ಈ ವರೆಗಿನ ಕ್ರಮವಾಗಿತ್ತು. ಇಂತಹ ಗೋಷ್ಠಿಗಳು ಯಾವುದೇ ಉಪಯೋಗೀ ಫಲವನ್ನು ನೀಡುತ್ತಿರಲಿಲ್ಲ ಎಂಬುದು ಸರ್ವವಿದಿತವಾದ ವಿಷಯ. ಆದರೂ ಚರ್ವಿತ ಚರ್ವಣವಂತೆ ಈ ಗೋಷ್ಠಿಗಳ ಕ್ರಮ ಮುಂದುವರಿಯುತ್ತಲೇ ಬಂದಿತ್ತು. ಆದರೆ ಈ ಬಾರಿಯ ಸಮ್ಮೇಲನ ಈ ಹಳೆಯ ಪರಂಪರೆಯನ್ನು ಬದಿಗೊತ್ತಿ ವಿವಿಧ ಸಾಹಿತ್ಯ ವಿಭಾಗಗಳ ಕುರಿತು "ಸಾಹಿತ್ಯ ಸಮೀಕ್ಷೆ" ನಡೆಸುವುದು ನಿಜವಾಗಿಯೂ ಅಭಿನಂದನೀಯ ಕಾರ್ಯ. ಕಳೆದ ಹತ್ತು ವರ್ಷಗಳಲ್ಲಿ ಕನ್ನಡದಲ್ಲಿ ಸೃಷ್ಟಿಯಾಗಿರುವ ಸಾಹಿತ್ಯವನ್ನು ಕುರಿತು ಪ್ರಮುಖರಿಂದ ಪ್ರಸ್ತಾವನೆಗಳು; ಪ್ರತಿಯೊಂದು ಪ್ರಸ್ತಾವನೆಯ ಬಗೆಗೆ ಮೂವರಿಂದ ವಿಚಾರ ಮಂಥನ ಕಾರ್ಯಕ್ರಮವು ನಿಜವಾಗಿಯೂ ಸಮ್ಮೇಲನಕ್ಕೆ ಹೊಸ ಮೆರುಗನ್ನಿತ್ತಿತು. ಈ ಬಗೆಯ ಹೊಸ ಹಾದಿ ತುಳಿದ ಸಮ್ಮೇಲನವು ಈ ದೃಷ್ಟಿಯಿಂದ ಯಶಸ್ವಿಯಾಯಿತೆನ್ನಬಹುದು.

ಕನ್ನಡ ನಾಡಿನಲ್ಲಿ ಪ್ರಚಲಿತವಿರುವ ಕೊಂಕಣಿ, ತುಳು ಹಾಗೂ ಕೊಡವ ಭಾಷೆಗಳ ಅಭಿವೃದ್ಧಿಯಾಗಬೇಕೆಂಬ ಪ್ರಜ್ಞೆಯನ್ನು ಕಾರವಾರ ಸಮ್ಮೇಲನವು ಹುಟ್ಟಿಸಿತು. ಕೊನೆಯ ದಿನ ನಡೆದ ಭಾಷಾ ಬಾಂಧವ್ಯ ಗೋಷ್ಠಿಯಲ್ಲಿ ಭಾಗವಹಿಸಿದ ತುಳು, ಕೊಂಕಣಿ, ಮತ್ತು ಕೊಡವ ಬಂಧುಗಳು ತಂತಮ್ಮ ಭಾಷೆಗಳ ಸಾಹಿತ್ಯವನ್ನು ಅವು ಕನ್ನಡದಿಂದ ಹೇಗೆ ಸ್ಫೂರ್ತಿ ಪಡೆದಿವೆ ಎಂಬುದನ್ನು ತಿಳಿಸಿದರು. ಈ ಸೋದರ ಭಾಷೆಗಳ ಅಭಿವೃದ್ಧಿಗೆ ಕನ್ನಡವು ನೆರವಾಗಬೇಕೆಂಬ ಮಹತ್ವದ ಸಂದೇಶವನ್ನು ಕಾರವಾರದ ಸಮ್ಮೇಲನ ಸಾರಿತೆಂಬುದು ಇನ್ನೊಂದು ವೈಶಿಷ್ಟ್ಯ. ಸರಕಾರವು ಈ ಉಪಭಾಷೆಗಳ ಬೆಳವಣಿಗೆಗೆ ಯೋಗ್ಯ ಅವಕಾಶ ಕಲ್ಪಿಸಬೇಕೆಂಬ ಗೊತ್ತುವಳಿಯನ್ನು ಕೂಡಾ ಸಮ್ಮೇಲನದಲ್ಲಿ ಸ್ವೀಕರಿಸಲಾಯಿತೆಂಬುದನ್ನು ನಾವಿಲ್ಲಿ ಜ್ಞಾಪಿಸಿಕೊಳ್ಳಬೇಕು. ಇದು ಕನ್ನಡಿಗರ ಹೃದಯ ವೈಶಾಲ್ಯತೆಯಲ್ಲವೆ?

ಸಾಹಿತ್ಯ ಸಮ್ಮೇಲನದಲ್ಲಿ ಸ್ವೀಕರಿಸಿದ ಗೊತ್ತುವಳಿಗಳೆಲ್ಲವೂ ಸಕಾಲಯುತವಾಗಿವೆ. ಕನ್ನಡ ಜನತೆಯ ಬಹು ಮುಖ್ಯ ಬೇಡಿಕೆಗಳು, ಆಶೆ ಆಕಾಂಕ್ಷೆಗಳನ್ನು ಅವುಗಳು ಪ್ರತಿಬಿಂಬಿಸುತ್ತವೆ. ಗೋವೆಯ ಭವಿಷ್ಯ, ಹೊರಉಳಿದ ಕನ್ನಡ ಪ್ರದೇಶ ಇವುಗಳ ಕುರಿತು ಸ್ವೀಕರಿಸಿದ ಗೊತ್ತುವಳಿಗಳಲ್ಲಿ ಹೊಸತೇನೂ ಇಲ್ಲವಾದರೂ, ಅವುಗಳು ಕನ್ನಡಿಗರ ಅಭಿಪ್ರಾಯ ಹಾಗೂ ಆಶಯಗಳನ್ನು ಸ್ಪಷ್ಟವಾಗಿ ಪುನಃ ವ್ಯಕ್ತಪಡಿಸಿದುವು.

ಕನ್ನಡದ ಹಿರಿಯ ಕವಿಗಳೂ, ವಿದ್ವಾಂಸರೂ, ಪತ್ರಿಕೋದ್ಯಮಿಗಳೂ ಆದ ಶ್ರೀ ಗೋಕಾಕ್ ರಂಗನಾಥ ಶರ್ಮರು ಸಮ್ಮೇಲನಾಧ್ಯಕ್ಷರಾಗಿ ದೊರೆತುದು ಕನ್ನಡಿಗರ ಕಳಕಳಿಯನ್ನು ಸೂಚಿಸಿತು. ಅವರು ತಮ್ಮ ಸಂಭಾವಿತತನದ ಸವಿ ನಗೆಯ ಅಧ್ಯಕ್ಷ ಭಾಷಣದಲ್ಲಿ ಕನ್ನಡ ಸಾಹಿತ್ಯದ, ಕನ್ನಡ ನಾಡಿನ ಹಾಗೂ ಕನ್ನಡಿಗರ ಹಲವು ಸಮಸ್ಯೆಗಳ, ಆವಶ್ಯಕತೆಗಳ ಕುರಿತು ವಿಶ್ಲೇಷಿಸಿದ್ದಾರೆ. ಪ್ರತಿಭೆ, ಪಾಂಡಿತ್ಯಗಳಿಂದ ತುಂಬಿದ ಅವರ ಅಧ್ಯಕ್ಷ ಭಾಷಣದಲ್ಲಿ ಅವರು ರಾಷ್ಟ್ರಭಾಷೆ, ಹೊರಉಳಿದ ಕನ್ನಡ ಪ್ರದೇಶಗಳ ವಿಲಯನ, ಮೈಸೂರಿಗೆ ಕರ್ನಾಟಕ ಎಂಬ ನಾಮಕರಣದ ಕುರಿತು ಖಂಡತುಂಡವಾದ ಅಭಿಪ್ರಾಯ ಇತ್ತಿರುವರು. ಅವರ ಸರಳತೆ, ಹಾಗೂ ಗಂಭೀರತೆಗಳು ಕಾರ್ಯಕ್ರಮಗಳ ಯಶಸ್ಸಿಗೆ ನೆರವಾದುವು. ಅವರ ಸಮಾರೋಪ ಭಾಷಣವು ಬೋಧಪ್ರದವಾಗಿತ್ತು.

ಹಲವಾರು ಕಾರ್ಯಕ್ರಮಗಳಿಗೆ ಬರಬೇಕಾಗಿದ್ದ ಕೆಲವರು ಹಿರಿಯ ಸಾಹಿತಿಗಳು ಬರಲಿಲ್ಲವೆಂಬ ನಿರಾಶೆಯು ಮುಕುಳಕ್ಕೆ ಒಪ್ಪ ಕೊಟ್ಟಿದರೂ ಸಾಹಿತಿಗಳು ಅತಿ ಹೆಚ್ಚು ಸಂಖ್ಯೆಯಲ್ಲಿ ನೆರೆದಿದ್ದರಿಂದ ಬುದ್ಧಿ ಸಂತರ್ಪಣ ವಿಶೇಷವು. ಈ ಸಮ್ಮೇಲನದ ಶುಭ ಅವಸರದಲ್ಲಿ ಕನ್ನಡ ಸಾಹಿತ್ಯ ಸಂಪತ್ತನ್ನು ಹೆಚ್ಚಿಸಿದ ಆರು ಗ್ರಂಥಗಳ ಪ್ರಕಾಶನವು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಸ್ವಾಗತ ಸಮಿತಿಗಳ ವತಿಯಿಂದ ನಡೆಯಿತು. ಇದು ನಿಜಕ್ಕೂ ಒಂದು ಅನುಕರಣೀಯ ಆದರ್ಶ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಈ ಬಾರಿ ಹೊಸ ರಕ್ತ ಹಾಗೂ ನವಚೈತನ್ಯಗಳು ಹರಿಯುತ್ತಿವೆ ಎಂಬುದನ್ನು ಇಲ್ಲಿ ನಾವು ಗಮನಿಸಬೇಕು. ಹಲವಾರು ವರ್ಷಗಳಿಂದ ಪಟ್ಟಭದ್ರವಾಗಿ ಕೆಲವೇ ವ್ಯಕ್ತಿಗಳ ಹಿಡಿತದಲ್ಲಿದ್ದ ಪರಿಷತ್ತಿನಲ್ಲಿ ಈ ಬಾರಿ ಹೊಸ ಶಕ್ತಿಗಳು ಕಾರ್ಯವೆಸಗುತ್ತಿವೆ. ಈ ಹೊಸ ಶಕ್ತಿಗಳೂ ಕೆಲಮಟ್ಟಿಗೆ ಈ ಸಮ್ಮೇಲನದ ಯಶಸ್ಸಿಗೆ ಕಾರಣವಾಗಿವೆ ಎಂದರೆ ತಪ್ಪೇನಿಲ್ಲ. ಸಾಹಿತ್ಯ ಸಮ್ಮೇಲನದಲ್ಲಿ ನಡೆದ ಸಾಹಿತ್ಯ ಸಮೀಕ್ಷೆಗಳನ್ನು ಕ್ರೋಢೀಕರಿಸಿ ಬೃಹದ್ಗ್ರಂಥವೊಂದನ್ನು ಪ್ರಕಾಶಿಸುವ ಹಾಗೂ ಕವಿ ಸಮ್ಮೇಲನದಲ್ಲಿ ಕವಿಗಳು ಓದಿದ ಕವನಗಳ ಸಂಕಲನವನ್ನು ಬೆಳಕಿಗೆ ತರುವ ನಿರ್ಧಾರವನ್ನು ಪರಿಷತ್ತು ಮಾಡಿರುವುದಕ್ಕೆ ನಾವು ಅದನ್ನು ಅಭಿನಂದಿಸುತ್ತೇವೆ.

ಮಹಾರಾಷ್ಟ್ರೀಯರ ಕಾಕದೃಷ್ಟಿಗೆ ಒಳಗಾಗಿರುವ ವಿವಾದ ಪ್ರದೇಶವೆನ್ನಿಸಿಕೊಂಡ ಕಾರವಾರದಲ್ಲಿ ಕನ್ನಡ ಸಾಹಿತ್ಯ ಸಮ್ಮೇಲನ ಜರಗಿದುದು, ಗಡಿನಾಡ ಕನ್ನಡಿಗರಲ್ಲಿ ಪ್ರಜ್ಞೆಯನ್ನು ಹುಟ್ಟಿಸಲು ನೆರವಾಗಿದೆ. ಕನ್ನಡದ ಗುಡಿಯನ್ನು ಎತ್ತಿ ಹಿಡಿದಿದೆ. ಕಾರವಾರ ಅಚ್ಚ ಕನ್ನಡ ಪ್ರದೇಶವೆಂಬುದನ್ನು ಸಾರಿದೆ. ಹೊಸ ಹಾದಿ ತುಳಿದ ಕಾರವಾರದ ಸಮ್ಮೇಲನದ ಸ್ವಾಗತ ಸಮಿತಿಯನ್ನು ಹಾಗೂ ಇತರ ಕಾರ್ಯಕರ್ತರನ್ನು ಈ ಸಂದರ್ಭ ಅಭಿನಂದಿಸುತ್ತೇವೆ.

ಪ್ರಧಾನಿಗಳ ರಶ್ಯಾ ಯಾತ್ರೆ

ಪ್ರಧಾನಿ ಲಾಲಬಹಾದ್ದೂರ್ ಶಾಸ್ತ್ರಿಯವರ ಇದೀಗ ಸೋವಿಯೆತ್ ರಶ್ಯದ ಸಂಚಾರ ಕಾರ್ಯಕ್ರಮದಲ್ಲಿರುವರು. ಜಗ

(ಹದಿನಾಲ್ಕನೇ ಪುಟ ನೋಡಿರಿ)

ವಚನ ಸುಧೆ

ಮಾತೃ ದೇವೋ ಭವ

ಪಿತೃದೇವೋ ಭವ

(ತೈತ್ತಿರೀಯ ಉಪನಿಷತ್, ೧—೧೧)

O ತಾಯಿಯ ಪೂಜೆಯನ್ನು ಮಾಡು; ತಂದೆಯ ಪೂಜೆಯನ್ನು ಮಾಡು.

OO ತಾಯಿಯು ದೇವಿ, ತಂದೆಯು ದೇವ. ಇವರನ್ನು ಸದಾ ಸನ್ಮಾನಿಸು. ತಾಯ್ತಂದೆಯವರಿಗೆ ಎಂದೂ ಅಸಮಾನ ಮಾಡಬೇಡ. ಪ್ರತಿದಿನ ಪ್ರಾತಃಕಾಲದ ಮತ್ತು ರಾತ್ರಿ ಮಲಗುವ ಸಮಯ ತಾಯ್ತಂದೆಯರಿಗೆ ನಮಸ್ಕರಿಸು. ಇದನ್ನು ಮಾಡಲು ಮರೆಯಬೇಡ.

ನೆರಸಣ್ಣನ ಸರಸ

"ಈ ವರ್ಷ ಆಹಾರ ಪರಿಸ್ಥಿತಿ ತೃಪ್ತಿಕರವಾಗಿದೆ ಎಂದು ಆಹಾರ ಮಂತ್ರಿ ಶ್ರೀ| ಸುಬ್ರಹ್ಮಣ್ಯಂ ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರಂತಲ್ಲಾ?"

"ಅಕ್ಕಿ ಕಾಳಿಗೆ ಅರುವತ್ತು ರೂಪಾಯಿ ಆದ ಈ ಕಾಲದಲ್ಲಿ ಹೀಗೆಂದವರು ಇನ್ನು ಮಳೆಗಾಲ ಬಂದಾಗ ಏನನ್ನುವರೋ?"

ಸಾಹಿತ್ಯ ಸಮೀಕ್ಷೆ

ಕನ್ನಡದ ಮಕ್ಕಳ ಸಾಹಿತ್ಯ

(ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಜಿ. ಪಿ. ರಾಜರತ್ನಂರ ಭಾಷಣದ ಸಾರ)

ಮುದ್ರಣ ಕಲೆಯು ಕರಗತವಾಗುವ ಮೊದಲ ದಿನಗಳಲ್ಲಿ 'ಮಕ್ಕಳ ಸಾಹಿತ್ಯ'ವೆಂದರೆ ದೊಡ್ಡವರು ಹೇಳಬೇಕು ಮಕ್ಕಳು ಕೇಳಬೇಕು ಎಂಬ ಸ್ಥಿತಿಯಲ್ಲಿತ್ತು. ಮುದ್ರಣ ಕಲೆಯು ಕನ್ನಡದಲ್ಲೂ ಜಾರಿಗೆ ಬಂದ ವೇಳೆ ಮಕ್ಕಳಿಗೆ ಪಠ್ಯಪುಸ್ತಕಗಳು ಬಂದುವು. ಇವುಗಳಲ್ಲಿ ಮೈಸೂರಿನ ಚ. ವಾಸುದೇವಯ್ಯನವರ ಒಂದನೇ ಬಾಲಬೋಧೆ ಹಾಗೂ ಶ್ರೀನಿವಾಸ ರಾಯರ ಎರಡನೇ ಬಾಲಬೋಧೆ ಮುಖ್ಯ. ಇವುಗಳ ಬಳಿಕ ವಿವಿಧ ತರಗತಿಗಳಿಗೆ ಮೀಸಲಾಗಿರಿಸಿದ್ದ ಪಠ್ಯಪುಸ್ತಕಗಳು ಪ್ರಕಟವಾಗಿ, ಇವುಗಳ ಮೂಲಕ ತಿಳಿಯಾದ ಪಾಠಗಳು, ಪುಟ್ಟ ಪುಟ್ಟ ವಾಕ್ಯಗಳಲ್ಲಿ ರಚನೆಯಾದ ಕತೆಗಳು, ಮಕ್ಕಳಿಗೆ ಸುಲಭವಾಗಿ ಅರ್ಥವಾಗುವ ಶ್ರವ್ಯಗುಣವುಳ್ಳ ಪದ್ಯಗಳು ಬಂದುವು. ಈ ಪಠ್ಯಪುಸ್ತಕಗಳಲ್ಲಿನ ರಚನೆಗಳಿಗೆ ಕಾರಣಕರ್ತರು ಶ್ರೀ ಎಂ. ಎಸ್. ಪುಟ್ಟಣ್ಣ ಹಾಗೂ ಎಸ್. ಜಿ. ನರಸಿಂಹಾಚಾರ್ಯರೆಂದು ತಿಳಿದು ಬಂದಿದೆ.

ಮೈಸೂರಿನಲ್ಲಿ ಈ ರೀತಿ ಪಠ್ಯಪುಸ್ತಕಗಳು ಪ್ರಕಟಗೊಂಡಂತೆ, ಧಾರವಾಡದತ್ತ ಶಾಂತ ಕವಿಗಳು, ವೆಂಕಟರಂಗೋ ಕಟ್ಟಿ, ಡೆಪ್ಯೂಟಿ ಚೆನ್ನಬಸಪ್ಪ ಇವರು ಮಕ್ಕಳಿಗೆ ಪ್ರಿಯವಾಗುವ ರಚನೆಗಳನ್ನು ಮಾಡಿದರು. ಮದರಾಸಿನ ಕಡೆ ಮ್ಯಾಕ್ಮಿಲನ್ ಪಾಠಮಾಲೆ ಬಂತು. ಈ ಹಳೆಯ ಕಾಲದ ಪುಸ್ತಕಗಳನ್ನು ಯಾರಾದರೂ ಸಂಗ್ರಹಿಸಿದರೆ ಅವರಿಗೆ ಪುಣ್ಯ ಬರುತ್ತದೆ.

ಅನಂತರ ಬಂದ ಪಂಜೆ ಮಂಗೇಶರಾಯರು ಮಕ್ಕಳಿಗೆ ಏನು ಬೇಕು, ಮಕ್ಕಳಿಗೆ ಏನು ಇಲ್ಲ ಎಂಬುದನ್ನು ಅರಿತು ಅನೇಕ ಪದ್ಯ, ಕಥೆಗಳನ್ನು ಮಕ್ಕಳಿಗಾಗಿಯೇ ಬರೆದರು. ಮಂಗಳೂರಿನಲ್ಲಿ ಬಾಲಸಾಹಿತ್ಯ ಮಂಡಲವನ್ನು ಆರಂಭಿಸಿದರು. ಅಂದಿನಿಂದ 'ಬಾಲ ಸಾಹಿತ್ಯ' ಎಂಬ ಪದ ಕನ್ನಡ ಶಬ್ದಕೋಶಕ್ಕೆ ಸೇರಿಕೊಂಡಿತು.

ಪಂಜೆಯವರ ಜೊತೆಗೆ ಹೇಳಬೇಕಾದ ಇನ್ನೊಂದು ಹೆಸರು ಎಂ. ಎನ್. ಕಾಮತರದು. ಇವರಾದರೂ ಉಪಾಧ್ಯಾಯರಾಗಿದ್ದವರು. ಸ್ವಭಾವವಶದಿಂದ ಹುಡುಗರ ಜೊತೆಗೆ ಬೆರೆಯುತ್ತಿದ್ದ ಇವರು ಮಕ್ಕಳಿಗೆ ಪದ್ಯಗಳನ್ನೂ ಕಥೆಗಳನ್ನೂ ಬರೆಯುವುದು ಅನಿವಾರ್ಯವಾಗಿತ್ತು. ಈ ಪದ್ಯ ಕತೆಗಳಿಗಿಂತ ಇವರು ಮಕ್ಕಳಿಗಾಗಿ ಬರೆದ ನಾಟಕಗಳು ಇವರ ವಿಶಿಷ್ಟವಾದ ಕೊಡುಗೆ. ಆದರೆ ಆ ನಾಟಕಗಳೆಲ್ಲಾ ಅಚ್ಚಾಗಿಲ್ಲ ಎಂಬುದು ದುರದೃಷ್ಟಕರ ವಿಷಯ.

ಪಂಜೆ ಹಾಗೂ ಕಾಮತರು ಕನ್ನಡ ಬಾಲಸಾಹಿತ್ಯದ ಪ್ರವರ್ತಕರಾದರೆ ಹೊಯ್ಸಳರು ಕನ್ನಡ ಶಿಶುಸಾಹಿತ್ಯದ ಪ್ರವರ್ತಕರು. ಹೊಯ್ಸಳರ ಪದ್ಯಗಳಷ್ಟೇ ಮುಗ್ಧವಾದುವು ಅವರ ಕಥೆಗಳು. ಅವರು ನಾಟಕಗಳನ್ನು ಬರೆದರು. ಹೊಯ್ಸಳರು ಮಕ್ಕಳಿಗಾಗಿ ಬರೆದುದೆಲ್ಲ ಅಚ್ಚಾಗಿಲ್ಲ. ಅಚ್ಚಾಗಿರುವುದಾದರೂ ಏನೂ ಕಡಿಮೆಯೆನ್ನುವಂತಿಲ್ಲ.

ಹೊಯ್ಸಳರು ಮಕ್ಕಳಿಗಾಗಿ ಬರೆಯತೊಡಗಿದ ಕಾಲಕ್ಕೆ ಅಶ್ವತ್ಥನಾರಾಯಣ ರಾಯರೆಂಬವರು "ಮಕ್ಕಳ ಪುಸ್ತಕ" ಎಂಬ ಸಚಿತ್ರ ಮಾಸ ಪತ್ರಿಕೆಯನ್ನು ಪ್ರಕಟಿಸಿದರು. ಕನ್ನಡ ಮಕ್ಕಳ ಸಾಹಿತ್ಯದ ಚರಿತ್ರೆಯಲ್ಲಿ ಈ ಪತ್ರಿಕೆಯ ಸ್ಥಾನ ದೊಡ್ಡದು. ದ. ಕೃ. ಭಾರದ್ವಾಜರೂ, ದೇವುಡು ಅವರೂ ಈ ಪತ್ರಿಕೆಯ ಸಂಪಾದಕರಾಗಿ ಶ್ರಮಿಸಿದರು. ಮಕ್ಕಳಿಗಾಗಿ ದೇವುಡುರವರು 'ನಮ್ಮ ಪುಸ್ತಕ' ಎಂಬ ಪತ್ರಿಕೆಯನ್ನು, ಹೊಯ್ಸಳರು "ಕನಕ" ಎಂಬ ಪತ್ರಿಕೆಯನ್ನು ಪ್ರಚುರಗೊಳಿಸಿದರು.

ಶಿವರಾಮ ಕಾರಂತರ "ಬಾಲ ಪ್ರಪಂಚ" ಕನ್ನಡ ಬಾಲಸಾಹಿತ್ಯಕ್ಕೆ ಒಂದು ದೊಡ್ಡ ಕೊಡುಗೆ. ಕಾರಂತರು ಮಕ್ಕಳಿಗಾಗಿ ಢಂ ಢಾ ಢೋಲು ಮೊದಲಾದ ಶಿಶುಗೀತೆಗಳನ್ನೂ, "ಗಜರಾಜ" ಮೊದಲಾದ ಕಥೆಗಳನ್ನೂ ಬರೆದಿದ್ದಾರೆ. ಅವರು ಪ್ರತಿವರ್ಷವೂ ನಡೆಸುತ್ತಿದ್ದ ಮಕ್ಕಳ ಕೂಟಗಳಲ್ಲಿ ಮಕ್ಕಳಿಂದಲೇ ಆಡಿಸುವುದಕ್ಕೋಸ್ಕರವಾಗಿ ಬರೆದ ನಾಟಕಗಳ ಸಂಖ್ಯೆ ಯಾರಿಗೆ ಜ್ಞಾಪಕ? ಕೆಲವು ವರ್ಷಗಳಾದರೂ ಅವರು ನಡೆಸಿದ "ಬಾಲವನ"ವನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ವೈಜ್ಞಾನಿಕ ವಿಷಯಗಳನ್ನು ಕುರಿತು ಮಕ್ಕಳಿಗಾಗಿ ಪುಟ್ಟ ಪುಸ್ತಕಗಳನ್ನು ಪ್ರಕಟಿಸಬೇಕೆಂದು ಕಾರಂತರ ಇತ್ತೀಚಿನ ಯೋಜನೆ.

ಕಲ್ಯಾಣಮ್ಮನವರ ಮಕ್ಕಳ ಕೂಟ "ನಮ್ಮ ಬಾವುಟ" ಎಂಬ ಮಾಸ ಪತ್ರಿಕೆಯನ್ನು ಮಕ್ಕಳಿಗಾಗಿ ಪ್ರಕಟಿಸುತ್ತಿದೆ. ಮೈಸೂರಿನ ಚಿಲ್ಡ್ರನ್ಸ್ ಬುಕ್ ಕೌನ್ಸಿಲ್ ಸಂಸ್ಥೆ "ಚಂದ" ಎಂಬ ಮಾಸ ಪತ್ರಿಕೆಯನ್ನು ತರುತ್ತಿದೆ. ಮಕ್ಕಳ ಪುಸ್ತಕ ಹಾಗೂ ನಾಟಕಗಳನ್ನು ಈ ಸಂಸ್ಥೆ ಪ್ರಕಟಿಸಿದೆ.

ಜಿ. ಪಿ. ರಾಜರತ್ನಂ ಕೂಡಾ ಮಕ್ಕಳಿಗಾಗಿ ಪದ್ಯ, ಕಥೆ ಒಂದೆರಡು ನಾಟಕಗಳನ್ನೂ ಬರೆದಿದ್ದಾರೆ. ಅವು ಬಾಲಕರಿಗೂ, ಅವರ ತಂದೆ ತಾಯಿಗಳಿಗೂ ಪ್ರಿಯವಾಗಿವೆ.

ಈಚೆಗೆ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಬದಲಾವಣೆಯಾಗಿ, ಮಕ್ಕಳ ಪುಸ್ತಕಗಳಿಗೆ ಬೇಡಿಕೆ ಬೆಳೆಯುತ್ತಿರುವುದರಿಂದ ಮಕ್ಕಳ ಪುಸ್ತಕಗಳ ಪ್ರಕಟಣೆ ಹೆಚ್ಚುತ್ತಿದೆ. ಮಕ್ಕಳ ಪುಸ್ತಕಗಳ ರಚನೆಯೂ ಪ್ರಕಟನೆಯೂ ಲಾಭದಾಯಕವಾದ ವೃತ್ತಿಯೇನೂ ಅಲ್ಲ. ಆದರೂ ನಾಡಿನ ಅನೇಕ ಕಡೆಗಳಲ್ಲಿ ಪ್ರಕಾಶಕರು ಮಕ್ಕಳ ಪುಸ್ತಕವನ್ನು ಪ್ರಕಟಿಸುವ ಭಾರವನ್ನು ವಹಿಸಿಕೊಂಡಿದ್ದಾರೆ. ಸಂಖ್ಯೆಯ ದೃಷ್ಟಿಯಿಂದ ಕಾವ್ಯಾಲಯ, ಕನ್ನಡ ಪ್ರಪಂಚ ಪ್ರಕಾಶನ, ಡಿ. ವಿ. ಕೆ. ಮೂರ್ತಿ, ಬಾಲ ಸಾಹಿತ್ಯ ಮಂಡಲ, ಶಿಶು ಸಾಹಿತ್ಯ ಸಂಘ ಇವು ಮೊದಲ ಸಾಲಿನಲ್ಲಿ ನಿಲ್ಲುತ್ತವೆಯಲ್ಲದೆ, ನಿಜವಾಗಿಯೂ ಕೆಲವು ಉತ್ತಮ ಪುಸ್ತಕಗಳನ್ನು ಪ್ರಕಟಿಸಿವೆ.

ಇತ್ತೀಚಿನ ಮಕ್ಕಳ ಪುಸ್ತಕಗಳಲ್ಲಿ ಕಥೆಗಳೇ ಬಹಳ. ಮಕ್ಕಳಿಗೆ ಕಥೆಗಳೇನೋ ಬೇಕೇ ಬೇಕು. ಆದರೆ ಅವುಗಳಲ್ಲಿಯೂ ಹೊಸತನವಿದ್ದರೆ ಒಳ್ಳೆಯದು. ಮಕ್ಕಳಿಗಾಗಿ ಬರೆದ ಪದ್ಯ ಪುಸ್ತಕಗಳ ಸಂಖ್ಯೆ ಇತ್ತೀಚೆಗೆ ತುಂಬ ಕಡಿಮೆಯಾಗಿದೆ. ಅಲ್ಲದೆ ಬಂದಿರುವ ಕೆಲವೇ ಪುಸ್ತಕಗಳಲ್ಲಿ ಉತ್ತಮವಾಗಿರುವ ಪದ್ಯಗಳೂ ಕಡಿಮೆಯೆ. ಉತ್ತಮವಾದ ಕವನಗಳ ಸಂಖ್ಯೆ ನಮ್ಮಲ್ಲಿ ಬೆಳೆಯಬೇಕು.

ನಾಟಕವೆಂದರೆ ಮಕ್ಕಳಿಗೆ ಆಸಕ್ತಿ ಹೆಚ್ಚು. ಮತ್ತೊಬ್ಬ ವ್ಯಕ್ತಿಯಂತೆ ನಟನೆ ಮಾಡುವ ನಾಟಕದ ಆಟದಲ್ಲಿ ಒಂದು ಮೋಹಕತೆ ಇದೆ. ಶ್ರೀ ಕಾಮತರಾದ ಮೇಲೆ ಮಕ್ಕಳಿಗಾಗಿ ಹೆಚ್ಚಾಗಿ ನಾಟಕಗಳನ್ನು ಬರೆದವರು ಕಡಿಮೆ. ಬಾಲಕರ ಕೈಲಿ ಆಡಿಸಿ ಆ ಬಳಿಕ ನಾಟಕಗಳನ್ನು ಪ್ರಕಟಿಸಿದರೆ ಅವುಗಳಿಂದ ಹೆಚ್ಚು ಉಪಕಾರವಾಗುತ್ತದೆ. ಈ ದೃಷ್ಟಿಯಿಂದ ಪ್ರಕಟವಾಗಿರುವ ನಾಟಕಗಳು ಕೆಲವೇ. ನಾಟಕಗಳ ಸಂಖ್ಯೆಯಲ್ಲಿ ನಾವು ಅಭಿಮಾನಪಡುವಂಥಹದೇನೂ ಇಲ್ಲ

ಜೀವನ ಕಥೆಗಳು ಮಕ್ಕಳ ಪುಸ್ತಕಗಳಲ್ಲಿ ಆ ಬಳಿಕ ಬಾಲಕ ಪ್ರಿಯವಾಗಿರುವುವು. ಧಾರವಾಡದ ರಾಗೂಶ್ರೀಯ ಪುಸ್ತಕಾಲಯವೂ, ಮನೋಜ ಪುಸ್ತಕಾಲಯವೂ ಜೀವನ ಕಥೆಯನ್ನು ಪ್ರಕಟಿಸುವುದರಲ್ಲಿ ಮೊದಲ ಸ್ಥಾನವನ್ನು ತೆಗೆದುಕೊಳ್ಳುತ್ತವೆ.

ಆದರೆ ಇಂದಿನ ಜೀವನಕ್ಕೆ ಮುಖ್ಯವಾಗಿ ಬೇಕಾಗಿರುವುದು ವೈಜ್ಞಾನಿಕ ತಿಳುವಳಿಕೆ. ಮಕ್ಕಳಲ್ಲಿ ವಿಜ್ಞಾನವನ್ನು ಪ್ರಿಯವಾದ ವಿಷಯವನ್ನಾಗಿ ಮಾಡುವುದಕ್ಕೆ ಎಷ್ಟು ಸಣ್ಣ ಸಣ್ಣ ಪುಸ್ತಕಗಳು ಬಂದರೂ ಸಾಲದು. ಈ ದಿಸೆಯಲ್ಲಿ ಪ್ರಯತ್ನವೇನೋ ನಡೆದಿದೆ. ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯು "ಮಂತ್ರ ವಿದ್ಯೆ", "ಆಕಾಶದಲ್ಲಿ ಅದ್ಭುತಗಳು", "ಸೀನೂ ವಿಜ್ಞಾನಿಯಾಗು", "ಕಡಲ ದಡದಲ್ಲಿ" ಎಂಬ ವೈಜ್ಞಾನಿಕ ಪುಸ್ತಕಗಳನ್ನು ಪ್ರಕಟಿಸಿದೆ. ಇನ್ನೂ ಇತ್ತ ಹಲವಾರು ಪ್ರಕಾಶಕರು ಕೆಲವು ಉಪಯುಕ್ತ ಪುಸ್ತಕಗಳನ್ನು ಪ್ರಕಟಿಸುವ ಸಾಹಸವನ್ನು ಮಾಡಿರುವುದು ಶ್ಲಾಘನೀಯ. ಹೀಗೆ ವಿಜ್ಞಾನದ ವಿಷಯದಲ್ಲಿಯೂ ಪುಸ್ತಕಗಳೇನೋ ಬರುತ್ತಿವೆ. ಆದರೆ ಇವುಗಳ ಸಂಖ್ಯೆ ಮತ್ತಷ್ಟು ಹೆಚ್ಚಬೇಕು.

ಕನ್ನಡ ನಾಡಿನಲ್ಲಿ ಪ್ರಕಟವಾಗುವ ಎಲ್ಲ ಪುಸ್ತಕಗಳನ್ನೂ ಒಂದು ಕಡೆ ಪಡೆಯುವುದು ಅಸಾಧ್ಯವಾಗಿದೆ. ಈ ಹಿಂದೆ ಮಾಡಿರುವ ಪ್ರಸ್ತಾವನೆಯಲ್ಲಿ ಹಿಂದಿನ ಮೈಸೂರು ವಿಭಾಗದಲ್ಲಿ ಪ್ರಕಟಗೊಂಡ ಪುಸ್ತಕಗಳಿಗೆ ಪ್ರಾಧಾನ್ಯ ದೊರಕಿದ್ದರೆ ಆಶ್ಚರ್ಯವೇನೂ ಅಲ್ಲ. ಇತರ ಕಡೆಗಳಲ್ಲಿ ಏನಾಗಿದೆ ಎಂಬುದನ್ನು ಸ್ಪಷ್ಟವಾಗಿ ಯಾರಾದರೂ ವಿವರಿಸಿದರೆ ನಾವು ಕೃತಜ್ಞರಾಗಿರಬಹುದು.

ಕನ್ನಡದಲ್ಲಿ ಪುಸ್ತಕ ಬರೆಯುವವರೆಲ್ಲರೂ ಪ್ರತಿಯೊಂದು ಪುಸ್ತಕದ ಎರಡೆರಡು ಪ್ರತಿಗಳನ್ನು ಸಾಹಿತ್ಯ ಪರಿಷತ್ತಿಗೆ ಕಳುಹಿಸುವುದರ ಮೂಲಕ ನಾಡಿನ ಪುಸ್ತಕ ಪ್ರಕಾಶನದ ಬಗ್ಗೆ ಪೂರ್ಣ ವಿವರಣೆಯನ್ನು ಪಡೆಯಲು ಸಹಾಯ ಮಾಡಬಹುದು. ಇದು ಸಾಧ್ಯವಾದರೆ ಇಂಥ ಪ್ರಸ್ತಾವನೆಯ ಕಾರ್ಯ ಸುಲಭವೂ ಹೆಚ್ಚು ಪ್ರಯೋಜನಕರವೂ ಆಗುತ್ತದೆ.

(ಮೇ ೧೦, ೧೧ ಮತ್ತು ೧೨, ೧೯೬೫ರಂದು ಕಾರವಾರದಲ್ಲಿ ಜರಗಿದ ೪೫ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಡೆದ 'ಸಾಹಿತ್ಯ ಸಮೀಕ್ಷೆ' ಕಾರ್ಯಕ್ರಮದಲ್ಲಿ 'ಮಕ್ಕಳ ಸಾಹಿತ್ಯ'ದ ಕುರಿತು ಶ್ರೀ ಜಿ. ಪಿ. ರಾಜರತ್ನಂರ ಪ್ರಸ್ತಾವನಾ ಭಾಷಣದ ಸಾರಾಂಶ).

ರಾಷ್ಟ್ರಕವಿ ಗೋವಿಂದ ಪೈ ಗ್ರಂಥ ಭಂಡಾರ

ಹಿರಿಯ ಸಾಹಿತಿ, ರಾಷ್ಟ್ರಕವಿ ಗೋವಿಂದ ಪೈಯವರು ತಮ್ಮ ಜೀವಮಾನ ಕಾಲದಲ್ಲಿ ಸಂಗ್ರಹಿಸಿದ ಸುಮಾರು ಐದು ಸಾವಿರ ಗ್ರಂಥಗಳ ಮತ್ತು ಪತ್ರಿಕೆ ಸಂಪುಟಗಳುಳ್ಳ ಅಪೂರ್ವ ಗ್ರಂಥಾಲಯವನ್ನು ದಿ| ಪೈಗಳ ಕುಟುಂಬಸ್ಥರಾದ ಶ್ರೀ ಎಂ. ಅನಂತ ಪೈ, ತುಕಾರಾಮ ಪೈ ಮತ್ತು ಡಾ| ಕೇಶವ ಪೈ ಅವರು ಉಡುಪಿಯ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿಗೆ ದಾನವಾಗಿ ಇತ್ತಿರುವರು. ಕಾಲೇಜಿನ ಅಧಿಕಾರಿಗಳು ಈ ಗ್ರಂಥಾಲಯದ ಸುತ್ತಲೂ ಒಂದು ಪ್ರಾಚ್ಯ ವಿಷಯ ಸಂಶೋಧನಾ ವಿಭಾಗವನ್ನು ತೆರೆದು ವಿದ್ವಾಂಸರಿಗೆ ಸಕಲ ನೆರವನ್ನೂ ಒದಗಿಸುವರು. ಅಲ್ಲದೇ ಪ್ರತಿ ವರ್ಷವೂ ಗೋವಿಂದ ಪೈ ಸ್ಮಾರಕ ಉಪನ್ಯಾಸವನ್ನೇರ್ಪಡಿಸುವರು ಎಂದು ತಿಳಿದು ಬರುತ್ತದೆ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: **ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.**

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಕಡಲ ತಡಿಯಿಂದ ಕಳಕಳಿಯ ಕರೆ

ಆತ್ಮ ಹನನದಿಂದ ತುತ್ತಿನ ಚೀಲ ತುಂಬದಿರಿ

ಕಾರವಾರದಲ್ಲಿ ಜರಗಿದ ನಲ್ವತ್ತೈದನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಶ್ರೀ॥ ಕಡೆಂಗೋಡ್ಲು ಶಂಕರ ಭಟ್ಟರ ಅಧ್ಯಕ್ಷ ಭಾಷಣದ ಕೆಲವಂಶವನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

"ಸಾಹಿತ್ಯಕ್ಕಿರುವ ಶಾಪಗಳಲ್ಲಿ ಜನ ಓದದೆ ಇರುವುದು ಒಂದನೆಯ ಶಾಪ. ತತ್ಕಾಲ ವೈ ಮರೆಕು ಓದಿದ್ದ, ಕೇಳಿದ ಜನರು, ವೈಯುರಿಯುವವಷ್ಟು ಸ್ವಾಸ್ಥ್ಯವನ್ನು ಹೊಂದಿದ ಮೇಲೆ, ಓದಿದುದೇಕೆ? ಕೇಳಿದುದೇಕೆ? ಎಂದು ಪಶ್ಚಾತ್ತಾಪ ಪಡುವಂತಾಗುವುದು ಎರಡನೆಯ ಶಾಪ— ಇದು ಅತಿ ಘೋರವಾದ ಶಾಪ. ಸಾಹಿತ್ಯದಲ್ಲಿ ಸಂಕ್ರಮಣ ನಿಷ್ಕ್ರಮಣಗಳು ಆಗುತ್ತವೆ; ಆಗಲೇ ಬೇಕು. ಆದರೆ ಸೌಜನ್ಯವನ್ನು ಕುಂದಿಸುವ, ನೀತಿಯನ್ನು ತುಳಿಯುವ, ಉದ್ರೇಕಗಳನ್ನು ಹೆಚ್ಚಿಸುವ, ಮಾನವ ಜನ್ಮದ ಘನತೆಯನ್ನು ಕುಗ್ಗಿಸುವ ಕೃತಿಗಳು, ವಿಕೃತಿಗಳು ಉದ್ಭವಿಸದಿರಲಿ; ನಮ್ಮ ಕನ್ನಡ ಸಾಹಿತ್ಯ ಕರ್ತೃಗಳು ಅಂಥವುಗಳನ್ನು ಉದ್ಭಾವಿಸದಿರಲಿ" ಎಂದು ಕಾರವಾರದಲ್ಲಿ ಜರಗಿದ ನಲ್ವತ್ತೈದನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು ಕನ್ನಡದ ಸಾಹಿತ್ಯ ಸೇವಕರಿಗೆ ಅಧ್ಯಕ್ಷ ಸ್ಥಾನದಿಂದ ಕಳಕಳಿಯ ಕರೆ ಇತ್ತರು.

ತಮ್ಮ ಸುದೀರ್ಘ ಭಾಷಣದಲ್ಲಿ ಅವರು ಕನ್ನಡ ಸಾಹಿತ್ಯದ ಪ್ರಗತಿಯನ್ನು ಪರಾಮರ್ಶಿಸಿದವಲ್ಲದೆ ಸಾಹಿತ್ಯದ ಇಂದಿನ ಒಲವು ನಿಲವುಗಳನ್ನು ವಿವೇಚಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಕರ್ತವ್ಯಗಳನ್ನು ತಿಳಿಯ ಹೇಳಿ, ಸರಕಾರವು ಸಾಹಿತ್ಯದ ಅಭಿವೃದ್ಧಿಗೋಸ್ಕರ ಪರಿಷತ್ತಿಗೆ ಹೇಗೆ ಸಹಾಯಕವಾಗಬೇಕೆಂಬುದನ್ನು ಸೂಚಿಸಿದರು. ಗಡಿ ವಿವಾದ, ರಾಷ್ಟ್ರ ಭಾಷೆ, ಹಾಗೂ ರಾಜ್ಯಕ್ಕೆ ಕರ್ನಾಟಕ ಎಂಬ ನಾಮಕರಣದ ಕುರಿತೂ ಅವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿ, ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಅವರ ಅಭಿಪ್ರಾಯಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಗಡಿ ವಿವಾದ ಪರಿಹಾರ

ಕೃತ್ರಿಮವಾಗಿ ಕಲ್ಪಿಸಿದ ಆಡಳಿತದ ಸೌಕರ್ಯಕ್ಕಾಗಿ, ಸೀಮೆಗಳಲ್ಲಿ ಊರಿದ ಗಡಿಕಲ್ಲುಗಳ ಅಂದ ಚೆಂದವನ್ನು ಪಾಲಿಸುವುದಕ್ಕಾಗಿ, ಜನರು ಬದುಕಬೇಕೆಂಬ ಅಪಸಿದ್ಧಾಂತವನ್ನು ಮೊದಲು ತೊಡೆದು ಹಾಕಬೇಕಾಗಿದೆ. ಲಘುತಿಕವಾದ ರಾಜಕೀಯ ಮನೋಭಾವದಿಂದಲ್ಲ, ಸಹಜವಾದ ಮಾನವೀಯತೆಯ ದೃಷ್ಟಿಯಿಂದ ಈ ವಿವಾದವನ್ನು ಪರಿಹರಿಸುವ ಯತ್ನಗಳು ನಡೆಯಬೇಕು. ಪ್ರಜೆಗಳ ಸಂತೃಪ್ತಿ ಎಲ್ಲ ಸೌಕರ್ಯಗಳಿಗಿಂತಲೂ ಮೇಲಲ್ಲವೆ?

ರಾಷ್ಟ್ರ ಭಾಷೆ.

ಭಾರತಕ್ಕೆ ಸಂಪರ್ಕ ಭಾಷೆಯೊಂದು ಬೇಕೇ ಬೇಕು. ಇಂಗ್ಲಿಷು ಆ ನೆಲೆಯಲ್ಲಿ ರುವುದು ಅಸಂಭವ. ಹಿಂದೀ ಭಕ್ತರು, ತಮ್ಮ ಆಗ್ರಹವನ್ನು ಬಿಟ್ಟು ತಮ್ಮ ಭಾಷಾ ಸಂಪತ್ತಿಯನ್ನು ವೃದ್ಧಿಪಡಿಸುವುದು, ಅದನ್ನು ಪ್ರಸಾರಗೊಳಿಸುವುದು, ಹಿಂದೀತರ ಭಾಷಾಭಿಮಾನಿಗಳನ್ನು ಒಲಿಸಿ ತಮ್ಮತ್ತ ಒಲಿಸುವುದು— ಎನ್ನುವ ವಿನಮ್ರ ಕಾರ್ಯಗಳಲ್ಲಿ ಉದ್ಯುಕ್ತರಾದರೆ, ನಾವು ನಿರೀಕ್ಷಿಸಿದುದಕ್ಕಿಂತ ಬೇಗನೆ, ಹಿಂದಿಯು ಪೂರ್ವ ಸಂಕಲ್ಪಿತ ಗೌರವ ಸ್ಥಾನವನ್ನು ಪಡೆದೀತು. ಇಲ್ಲದಿದ್ದರೆ ದುಷ್ಕರವಾಗಬಹುದು. ರಾಷ್ಟ್ರ ಭಾಷೆಯು ಐಕ್ಯದ ಸಂಜ್ಞೆ. ಐಕ್ಯವೆಂದರೆ ಹೃದಯೈಕ್ಯ, ಭಾವೈಕ್ಯ. ಅದಿಲ್ಲದಿದ್ದರೆ ಬರಿಯ ಸಂಜ್ಞೆ ಎಲ್ಲಿ? ಪ್ರಜಾತಂತ್ರದ ಗೃಹ್ಯ ಸೂತ್ರಗಳಿಗೆ ಒಪ್ಪುವಂತೆ ವಿಚಾರ ವಿಮರ್ಶೆ—ವಾದ—ಸಾಂತ್ವನಗಳ ಮೂಲಕ ಹಿಂದೀ ಪ್ರತಿಷ್ಠಿತ್ಯರ್ಥಿಸ ಬೇಕು. "ಸ್ವಯಂವರಣ" ವಿಧಿಯಿಂದ ಹಿಂದಿಯು ಅಗ್ರಪಟ್ಟವನ್ನೇರಬೇಕು. 'ರಾಕ್ಷಸ ವಿವಾಹ" ಪದ್ಧತಿಯಿಂದಲ್ಲ

ಸಂಸ್ಕೃತ-ಆಂಗ್ಲ ಭಾಷೆಗಳ ಸ್ಥಾನ.

ನಮ್ಮ ಸಾಂಸ್ಕೃತಿಕ ಸಂಬಂಧದ ಮೂಲ ಪಲ್ಲವಿಗಳಂತಿರುವ ಸಂಸ್ಕೃತ—ಆಂಗ್ಲ ಭಾಷೆಗಳ ಸ್ಥಾನ ಮಾನಗಳು ಗಾಳಿಯಲ್ಲಿ ನೇತಾಡುತ್ತಿರುವುದು ಸುಖಕರ ಸಂಗತಿಯಲ್ಲ. ಹೊಸ ವ್ಯವಸ್ಥೆಯಲ್ಲಿ ಅವುಗಳ ನೆಲೆಯ ಕೂಲಂಕುಷ ವಿಮರ್ಶೆಯು ಅನಿವಾರ್ಯವಾಗಿದೆ, ಸುಮಾರು ವರ್ಷಗಳಿಂದ ನಮ್ಮ ಬುದ್ಧಿ ಭಾವನೆಗಳಿಗೆ, ನೀತಿ ಧರ್ಮಗಳಿಗೆ, ಆಚಾರ ವಿಚಾರಗಳಿಗೆ, ಸಂಸ್ಕೃತಿ ಸಭ್ಯತೆಗಳಿಗೆ, ಪ್ರಚಂಡ ಪ್ರೇರಣೆಯನ್ನಿತ್ತು ಈಗಲೂ ರೂಪಾಂತರದಿಂದ ನಮ್ಮ ಹೃದಯವನ್ನು ಪ್ರವೇಶಿಸಿರುವ ಸಂಸ್ಕೃತವೆ ಒಂದು ದೃಷ್ಟಿಯಿಂದ ನೋಡಿದರೆ, ನಮ್ಮ ರಾಷ್ಟ್ರಭಾಷೆಯಾಗಲು ತಕ್ಕುದಾದ ಭಾಷೆ.

ಆಂಗ್ಲ ಭಾಷೆಯು ನಮ್ಮ ಮತ್ತು ಪ್ರಪಂಚದ ನಡುವೆ ಇರುವ ವಾತಾಯನ. ಇದರ ಮೂಲಕ ವಿಶ್ವಜ್ಞಾನದ ಗಾಳಿ ಬೆಳಕು ನಮ್ಮತ್ತ ಪ್ರವೇಶಿಸಬೇಕು; ನಮ್ಮದು ವಿಶ್ವದ ಕಡೆಗೆ ಹರಿಯಬೇಕು. ಅಭ್ಯಸ್ತವಾದ ವಿಶ್ವ ಭಾಷೆಯೊಂದನ್ನು ಕೇವಲ ದ್ವೇಷ ಭಾವನೆಯಿಂದ, ಹೊರ ಮಾಡಿದಲ್ಲಿ — ಜ್ಞಾನಕ್ಕೆ ನಷ್ಟವಾಗುವಲ್ಲದೆ, ಕ್ಷೇಮವಿಲ್ಲ.

ಸಾಹಿತ್ಯ ಸೃಷ್ಟಿಗೆ ಪ್ರೇರಣೆ

ಸಾಹಿತ್ಯ ನಿರ್ಮಾಣದ ಮೇಲೆ ಎರಡು ಬಗೆಯ ಬಲಾತ್ಕಾರಗಳಿರುತ್ತವೆ. ಒಂದನೆಯದು ಅಂತಃ ಪ್ರೇರಣೆಯ ಬಲಾತ್ಕಾರ. ಅದಿಲ್ಲದಿದ್ದರೆ ಉತ್ತಮ ಸಾಹಿತ್ಯ ಸೃಷ್ಟಿಯಾಗುವುದಿಲ್ಲ. ಯಾವ ಭಾವಗಳನ್ನು ಹೃದಯದಿಂದ ಹೊರಡಿಸಿ ಮಾತಿನಲ್ಲಿ ಪ್ರಕಟಿಸದೆ ಆತ್ಮಕ್ಕೆ ಶಾಂತಿ ಇಲ್ಲ; ಶರೀರಕ್ಕೆ ವಿಶ್ರಾಂತಿಯಿಲ್ಲ ಎನ್ನುವಂತಹ ಸ್ಥಿತಿ ಯಾಗುವುದೋ ಆ ಭಾವಗಳ ಗ್ರಥನದಿಂದ ಆಗುವ ಸೃಷ್ಟಿ ಉತ್ತಮ ಸೃಷ್ಟಿ. ಎರಡನೆಯದು ಬಾಹ್ಯ ಬಲಾತ್ಕಾರ. ಲಾಭಕ್ಕಾಗಿ, ಹೆಸರಿಗಾಗಿ, ಅಥವಾ ಯಾವುದಾದರೊಂದು ಪ್ರತಿಪಾದನೆಯ ಪ್ರಚಾರಕ್ಕಾಗಿ ಬರೆಯಬೇಕಾಗಿ ಬರುವುದು. ಈ ತೆರದ ನಿರ್ಮಾಣದ ಮೇಲೆ ಅಂತಃಕರಣದ ಮುದ್ರೆ ಬೀಳುವುದೆಂದು ಹೇಳಬರುವುದಿಲ್ಲ. ಸ್ವಲ್ಪಾಂಶದಲ್ಲಿ ಇರಬಹುದು; ಬಹ್ವಂಶವಿಲ್ಲ ಇಲ್ಲದಿರಬಹುದು. ತುತ್ತಿನ ಚೀಲ ತುಂಬಲೆ ಬೇಕು. ಹಾಗೆಂದು ಆತ್ಮ ಹನನದಿಂದ ತುತ್ತಿನ ಚೀಲವನು ತುಂಬಿಸಬೇಕಾಗುವಂತಹ ನೈತಿಕ ಅಧೋಗತಿಗೆ ಸಾಹಿತ್ಯ ನಿರ್ಮಾತೃ ಸರ್ವಥಾ ತನ್ನನ್ನು ತಾನೆ ತಳ್ಳಬಾರದು.

(ಹನ್ನೆರಡನೇ ಪುಟ ನೋಡಿರಿ)

ಮಣ್ಣು ಪರೀಕ್ಷಾ ಸಂಶೋಧನಾಲಯ, ಮಣಿಪಾಲ.

ಧನ, ಕನಕ, ಸೌಭಾಗ್ಯ ಎಷ್ಟಿದ್ದರೇನು?
ಆರೋಗ್ಯವಿದ್ದರೆ ತಾನೇ ಎಲ್ಲವನ್ನೂ ಅನುಭವಿಸಿ ಸುಖಿಯಾಗಬಲ್ಲ ಮಾನವ.

ಅಂತೆಯೇ

ರೈತನಿಗೆ ಏನಿದ್ದರೇನು, ಸಾರವತ್ತಾದ ಮಣ್ಣಿಲ್ಲದಲ್ಲಿ! ಫಲವತ್ತಾದ ಮಣ್ಣು ಒಳ್ಳೆಯ ಬೆಳೆ ಬೆಳೆಸಲು ಅತೀ ಅಗತ್ಯ. ವಿವಿಧ ಪ್ರದೇಶಗಳ ಮಣ್ಣಿನ ಗುಣ, ಲಕ್ಷಣ ಮತ್ತು ಸಾರಾಂಶಗಳು ವಿವಿಧವಾಗಿರುವುದು ಸಹಜವಾಗಿದೆ. ಬೇರೆ ಬೇರೆ ಬೆಳೆಗಳಿಗೆ ಅವುಗಳನ್ನು ಬೆಳೆಯುವ ಕಾಲ ಮತ್ತು ಇತರ ಸನ್ನಿವೇಶಗಳಿಗೆ ಹೊಂದಿಕೊಂಡು, ಬೆಳೆಸುವ ಪ್ರದೇಶದ ಮಣ್ಣಿಗೆ ಬೇಕಾಗುವ ಸಾರಾಂಶವನ್ನು ಭರ್ತಿಮಾಡುವುದು ರೈತನ ಮುಖ್ಯ ಕರ್ತವ್ಯ. ಇದಕ್ಕಾಗಿಯೇ ನೀವು ಪೈರು ಬೆಳೆಸುವ ಪ್ರದೇಶದ

ಮಣ್ಣನ್ನು ಪರೀಕ್ಷಿಸಿ

ಅದರ ಉಪಯೋಗವನ್ನು ಪಡೆಯಿರಿ.

ದಕ್ಷಿಣ ಕನ್ನಡ ಜಿಲ್ಲೆಯ ರೈತರ ಹಿತಕ್ಕಾಗಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನವರು ಸಿಂಡಿಕೇಟ್ ಬ್ಯಾಂಕಿನ ಕೃಷಿ ಆರ್ಥಿಕ ನೆರವಿನ ವಿಭಾಗದವರ ಸಹಾಯದಿಂದ ಮಣಿಪಾಲದಲ್ಲಿ ಮಣ್ಣು ಪರೀಕ್ಷಾ ಸಂಶೋಧನಾಲಯವನ್ನು ಸ್ಥಾಪಿಸಿ, ಒಂದು ಮಣ್ಣಿನ ಮಾದರಿಯನ್ನು ಬರೇ ರೂ. 2ರ ಖರ್ಚಿನಲ್ಲಿ ಪರೀಕ್ಷಿಸುವ ಸವಲತ್ತನ್ನು ಒದಗಿಸಿರುತ್ತಾರೆ. ಬ್ಯಾಂಕಿನ ಕೃಷಿ ಆರ್ಥಿಕ ನೆರವಿನ ವಿಭಾಗದವರು ಪರೀಕ್ಷಿಸಿದ ಮಣ್ಣಿನ ವರದಿಯನ್ನು ಆಧರಿಸಿ ಸೂಕ್ತ ಸಲಹೆಯನ್ನು ಕೊಡಲು ಒಪ್ಪಿರುತ್ತಾರೆ. ಹೆಚ್ಚಿನ ಮಾಹಿತಿಗೆ ದಕ್ಷಿಣ ಕನ್ನಡದಲ್ಲಿರುವ ನಿಮ್ಮ ಹತ್ತಿರದ ಶಾಖೆಯನ್ನು ಸಂದರ್ಶಿಸಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಚಲಾವಣಾ ನಿಧಿ: ರೂ. 70 ಕೋಟಿಗೂ ಮಿಕ್ಕಿ.

ಶಾಖೆಗಳು: 200ರಕ್ಕೂ ಮಿಕ್ಕಿವೆ.

ಕುಂದಾಪುರ ಮುನ್ಸಿಫ್ ಕೋರ್ಟನಲ್ಲಿ

R.E.P. 30/1965.

ಶ್ರೀ ದತ್ತಾತ್ರೇಯ ದೇವರ ಭಂಡಾರದ ಕಡೆಯಿಂದ ಆಡಳ್ತೆದಾರ ಶ್ರೀಧರ ರಾವ್
—ಅಮಲ್ಜಾರಿ ಅರ್ಜಿದಾರ

ಮತ್ತು

ಕೃಷ್ಣಪ್ಪ ಶೆಟ್ಟಿ, ವೆಂಕಮ್ಮ ಶೆಡ್ತಿರ ಮಗ, ಕುಂದಾಪುರ ತಾಲೂಕು ಹೆರೂರು ಗ್ರಾಮದಲ್ಲಿರುವವ — ಪ್ರತಿವಾದಿ ಎದ್ರಿ

ಮೇಲೆ ಕಾಣಿಸಿದ ಅಮಲ್ಜಾರಿಯಲ್ಲಿ ಅರ್ಜಿದಾರನು ಹಾಜರುಪಡಿಸಿದ ಬಿಸಾತ್ತಿನ ಶರ್ತಗಳನ್ನು ನಿರ್ಣಯಿಸುವಗೋಸ್ಕರ ತಾ. 18-6-65ಕ್ಕೆ ಇಟ್ಟದೆಂತಲೂ ಆ ದಿವಸ ಪ್ರತಿವಾದಿ ಎದ್ರಿಯು ಹಗಲು 10 ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ಆಕ್ಷೇಪಗಳಿದ್ದರೆ ಜಾಹೀರು ಮಾಡಿಕೊಳ್ಳತಕ್ಕದ್ದೆಂತಲೂ ಹಾಗೆ ಹಾಜರಾಗುವಲ್ಲಿ ತಪ್ಪಿದ್ರೆ ಆತನ ಪರೋಕ್ಷದಲ್ಲಿ ಮುಂದಿನ ಹುಕುಂ ಆಗುವದೆಂತಲೂ ಸಹಾ ಈ ಮೂಲಕ ಎದ್ರಿ ಪ್ರತಿವಾದಿಗೆ ತಿಳಿಸಲಾಗುತ್ತದೆ.

G. Sanjiva Rao
Vakil, Coondapoor.

ತಾ. 10-5-65.

ಶ್ರೀ ಸ್ವಾಮಿ ಚಿನ್ಮಯಾನಂದ ಮೀಮಾಂಸೆ

ಗೀತಾ-ದ್ವಿತೀಯಾಧ್ಯಾಯ

ಸಂಗ್ರಹಕರ್ತೆ:
ಶ್ರೀಮತಿ ಆನಂದಿ ಸದಾಶಿವ ರಾವ್

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಈಗ ಎಲ್ಲೆಡೆಗಳಲ್ಲೂ ಪ್ರಾಪಂಚಿಕತೆಯು ಆಸಕ್ತಿಯು ಬೆಳೆದುಹೋಗಿದೆ. ಆದರಿಂದಾಗಿ ಮಾನವನು ದುಃಖಕ್ಕೊಳಗಾಗಿದ್ದಾನೆ. ಬಾಹ್ಯ ಜಗತ್ತಿನ ಸೌಕರ್ಯಗಳಿಂದ, ವಿಜ್ಞಾನ ವಿಶೇಷ ಸಂಶೋಧನೆಗಳಿಂದ ಬಂದ ಯಂತ್ರೋಪಕರಣ, ವಿದ್ಯುಚ್ಛಕ್ತಿ, ಇತ್ಯಾದಿ ಸುತ್ತಲಿನ ವಾತಾವರಣವನ್ನು ಅತ್ಯಂತ ಸುಂದರಮಯವಾಗಿ ಪರಿವರ್ತಿಸಿದರೂ, ಮಾನವನು ಸಂತೋಷದಿಂದ ನಲಿದಾಡುತ್ತಿಲ್ಲ. ಅವನಿಗೆ ಅತ್ಯುತ್ತಮ ಭೋಜನವು ೧೦೩ ಡಿಗ್ರಿ ಜ್ವರ ಬಂದಾಗ ಇದಿರಿಸಿದಂತಾಗಿದೆ. ಹೀಗೆ ಆಗಲು ಕಾರಣ ಏನು?

ಇದನ್ನು ಕುರಿತು ಯೋಚಿಸಿದರೆ ಪ್ರಾಚೀನ ಗ್ರಂಥಗಳನ್ನು ಶಾಸ್ತ್ರಗಳನ್ನು ತೆರೆದು ನೋಡಿದರೆ, ಅವುಗಳಲ್ಲಿ ಜೀವನವನ್ನು ಉತ್ತಮವಾಗಿ, ಸುಖವಾಗಿ ಬಾಳಲು ಕೆಲವು ತತ್ವಗಳು ದೊರೆತಾವು.

ಗೀತೆ ಅಂತಹ ಒಂದು ಗ್ರಂಥ. ಅದು ಜೀವನ ಕಲೆಯನ್ನು ಬೋಧಿಸುವ ಗ್ರಂಥವಾಗಿದೆ. ಗೀತೆಯು ಮಹಾಭಾರತ ಕಾಲದಲ್ಲಿ ಒಬ್ಬ ಕೃಷ್ಣನು ಒಬ್ಬ ಅರ್ಜುನನಿಗೆ ಹೇಳಿದ ಉಪದೇಶವಾಗಿರಬಹುದು. ಆದರೆ ಆಗಿನ ಅರ್ಜುನನ ಸ್ಥಿತಿಯೂ, ನಮ್ಮ ಸ್ಥಿತಿಯೂ ಒಂದೇ ಆಗಿದೆ. ಆದರಿಂದಾಗಿ ನಾವು ಆ ಗೀತಾಭ್ಯಾಸವನ್ನು ಧೃತಿಗೆಟ್ಟ ಅರ್ಜುನನಿಗೆ ಹುರುಪನ್ನು, ಶೌರ್ಯವನ್ನು ಕೊಟ್ಟ ಉಪದೇಶ ವಾಕ್ಯಗಳನ್ನು ಓದಿ ನೋಡಿದರೆ ನಮಗೂ ನಮ್ಮ ವ್ಯವಹಾರಿಕ ಜೀವನವನ್ನು ಹಿಂದಿಗಿಂತ ಕೊಂಚ ಹೆಚ್ಚಿನ ಧೈರ್ಯಗಳಿಂದ ಇದಿರಿಸಲು ಸಾಧ್ಯವಾದೀತು.

ಅಲ್ಲದೆ ಒಬ್ಬ ಹುಡುಗನು ಅಕ್ಷರಾಭ್ಯಾಸ ಆರಂಭಿಸುವಾಗ ಅವನಿಗೆ ಕಲಿಯಲು ಏನೇನೂ ಮನಸ್ಸಿಲ್ಲದೆ ಇದ್ದರೂ, ತಾಯಿ ಅವನಿಗೆ ಅಕ್ಷರಾಭ್ಯಾಸ ಒತ್ತಾಯದಿಂದ ಮಾಡಿಸಿದಾಗ ಮೊದಲು ಏನು ಉಪದ್ರವ ಎಂದು ಅವನಿಗೆ ತೋರಿದರೂ, ಮುಂದೆ ಒಂದನೆ, ಎರಡನೆ ಪಾಠಗಳನ್ನು ಒಂದೊಂದಾಗಿಯೇ ಓದಲು ತೊಡಗಿದಾಗ ಆ ವ್ಯಾಸಂಗದ ಅಭಿರುಚಿ ಹತ್ತುವಂತೆ ತತ್ವಶಾಸ್ತ್ರ ಅಭ್ಯಾಸವು ಮೊದಲು ನೀರಸವೆಂದು ಕಂಡರೂ ಕ್ರಮೇಣ ಅದರ ವ್ಯಾಸಂಗವು ಮನಸ್ಸಿಗೆ ಸಂತೋಷವನ್ನು ಈಯ ತೊಡಗಿದಂತೆ ನಮಗೆ ಅದರ ಮೇಲಿನ ಪ್ರೇಮ, ಆಸಕ್ತಿ ಹೆಚ್ಚುವುದು.

ಸಂಯಮ ಜೀವನವನ್ನು ಧರ್ಮ ಮತ್ತು ಮತಗಳು ಪ್ರತಿಪಾದಿಸಿವೆ. ಈ ಸಂಯಮ ಜೀವನವನ್ನು ಬಾಳುವ ರೀತಿಯನ್ನು ಗೀತೆಯಲ್ಲಿ ನಿರೂಪಿಸಲಾಗಿದೆ. ಅತ್ಯುಚ್ಚ ಮಟ್ಟದ ತತ್ವಶಾಸ್ತ್ರವನ್ನು ಹೇಳತೊಡಗಿ ಶ್ರೀ ಕೃಷ್ಣನು, ವ್ಯವಹಾರಿಕ ಜೀವನದಲ್ಲಿ ಕಷ್ಟ ಪ್ರಸಂಗಗಳನ್ನು ಅತಿ ಸುಲಭವಾಗಿ ಇದಿರಿಸುವ ಬಗೆಯನ್ನು ಗೀತೆಯಲ್ಲಿ ಉದ್ದಕ್ಕೂ ಉಪದೇಶಿಸಿರುವನು.

ನಮಗೆ ಇದಿರಾದ ಕಠಿಣ ಪ್ರಸಂಗಗಳಲ್ಲಿ ನಾವು ಭಯಭೀತರಾಗಿ ಕಂಗೆಡುವುದೇ ನಮ್ಮ ಅಪಜಯಕ್ಕೆ ಕಾರಣ. ಇದೇ ರೀತಿಯ ಬೆದರಿಕೆ ಅರ್ಜುನನಿಗೆ ಕೌರವರ ಸೈನ್ಯವನ್ನು ನೋಡಿದಾಗ ಉಂಟಾಯಿತು. ಆಗ ಶ್ರೀ ಕೃಷ್ಣನು ನಿನ್ನ ವ್ಯಕ್ತಿಗತ ಜೀವನವನ್ನು ಮರೆತು ಒಂದು ಉದಾತ್ತ ಉತ್ತಮ ಧ್ಯೇಯಕ್ಕಾಗಿ ಹೋರಾಡುವೆನೆಂದು ಭಾವಿಸಿ ಯುದ್ಧ ಮಾಡು. ನಿನ್ನ ನಿಜವಾದ ವ್ಯಕ್ತಿತ್ವವು ತಾನು ಈ ದೇಹ ಮಾತ್ರವೆಂಬ ಅಭಿಮಾನದಲ್ಲಿಲ್ಲ! ಅದಕ್ಕಿಂತ ಹಿರಿದಾದ ತತ್ವದಲ್ಲಿದೆ ಎಂದು ಅರ್ಜುನನಿಗೆ ಅವನ ನಿಜ ಸ್ವರೂಪವನ್ನು ತಿಳಿಸಿದ್ದನು ಮತ್ತು ಅವನಲ್ಲಿ ಯುದ್ಧ ಮಾಡಲು ಸ್ಥೈರ್ಯ, ಶೌರ್ಯ ತುಂಬಿದನು.

ನಮ್ಮ ಅಪಜಯಗಳಿಗೆ ನಮ್ಮ ಎದೆಗುಂದುವಿಕೆ, ಕಠಿಣ ಸಮಸ್ಯೆ ಇದಿರಾದೊಡನೆ ಅದನ್ನು ಇದಿರಿಸಲಾಗದ ಹೇಡಿತನದಿಂದ ನರಗಳ ದೌರ್ಬಲ್ಯ ಕಾರಣವಾಗಿದೆ. ನಾವು ಪರಿಸ್ಥಿತಿ ಅನುಕೂಲವಾಗಿರುವ ತನಕ ಬಹಳ ಶೌರ್ಯದಿಂದ ಹೆಗ್ಗಳಿಕೆ ಕೊಚ್ಚಬಹುದು. ಆದರೆ ಪರಿಸ್ಥಿತಿ ಕೆಟ್ಟೊಡನೆ ಕಂಗಾಲಾಗುವೆವು. ಇದರ ಬದಲು ಸಮಸ್ಯೆಗಳನ್ನು ಧೈರ್ಯಗೆಡದೆ ಇದಿರಿಸಿದರೆ ನಾವು ವಿಜಯ ಹೊಂದಬಲ್ಲೆವು. ಒಂದು ವೇಳೆ ಸೋಲಾದರೂ ಅದು ನಮ್ಮ ತಪ್ಪಲ್ಲ. ಈ ವಿಷಯ ವಿಶಾಲವಾಗಿ ಗೀತೆಯಲ್ಲಿ ಚರ್ಚಿಸಲಾಗಿದೆ.

ನಾವು ಒಂದೇ ಮಟ್ಟದ ಜೀವನವನ್ನು ಅನುಭವಿಸುತ್ತಾ ಅದರಲ್ಲಿ ಆಸಕ್ತರಾಗಿರುವೆವು. ತಿರುಪೆಯವನು ಆಲಸ್ಯದಿಂದ ಕಸದ ಡಬ್ಬಿಯಲ್ಲಿ ಬಿದ್ದಿದ್ದ ಆಹಾರವನ್ನು ತಿಂದು ಹೊಟ್ಟೆ ತುಂಬಿಸಿಕೊಳ್ಳುವನು. ಅವನಿಗೆ ಕೆಲಸ ಮಾಡಲು ಬೇಕಾಗದು. ಆದರೆ ಉತ್ತಮ ಆಹಾರ ತಿನ್ನುವ ಅಭ್ಯಾಸವಿದ್ದವರಿಗೆ ಹಾಗೆ ಜೀವನ ಸಾಗಿಸುವುದೆಂದರೆ ಹಿಡಿಸದು. ಆದರಂತೆಯೆ ವಿವೇಕವು ಬರಬರುತ್ತಾ ಹೆಚ್ಚಾದಂತೆ ಉತ್ತಮ ಉದಾತ್ತ ಚಿಂತನೆ ನಡೆಸಿದಂತೆ, ನಮ್ಮ ಯೋಚನೆಗಳ ಮಟ್ಟವೂ ಏರುವುದು. ಕಾರ್ಯಗಳೂ ಉನ್ನತವಾಗುವುವು. ಉತ್ತಮ ಉದಾತ್ತ ವಿಚಾರಪರ ಮನುಷ್ಯನಿಗೆ ಅವಿವೇಕ ಕಾರ್ಯ ಮಾಡಲು ಸಾಧ್ಯವೇ ಇಲ್ಲ.

ಮಗು ಸಿಕ್ಕಿದ್ದನ್ನೆಲ್ಲಾ ಬಾಯಿಗೆ ಹಾಕಿಕೊಂಡರೆ ತಾಯಿ ಅದನ್ನು ತೆಗೆಯುವಳು. ವಿಷಯೇಂದ್ರಿಯಗಳ ಸುಖಾಪೇಕ್ಷೆ ಇದ್ದವನಿಗೆ ಮೊದಲು ಈ ನಿಯಮಿತ ಜೀವನ ಹಿಡಿಸದು. ಕೊನೆಗೆ ಅದರಿಂದ ದೊರಕುವ ಸುಖ ಶಾಂತಿಯು ಮನಸ್ಸಿಗೆ ಹಿಡಿದಾಗ ಅವನು ವಿಷಯೇಂದ್ರಿಯಗಳ ಕಡೆ ಮನಸ್ಸನ್ನು ಹೆಚ್ಚಿಗೆ ಓಡಿಸಲಾರನು.

ಹೀಗೆ ಮಾನವನ ಬುದ್ಧಿ ಮನಗಳು ಪರಿಪಕ್ವವಾಗುತ್ತಾ ಹೋಗ ಬೇಕು. ಈ ತರದ ಜೀವನವನ್ನು ಗೀತೆ ಸಮಗ್ರವಾಗಿ ತಿಳಿಸಿದೆ.

ಋಷಿಗಳು ಜೀವನವನ್ನು ಅವಲೋಕಿಸಿ ಅದರ ವಿಷಯ ಸಂಶೋಧಿಸಿದಾಗ ಅವರಿಗೆ ಗೋಚರವಾದುದು ಜಗತ್ತಿನಲ್ಲಿ ಎರಡು ವಿಧದ ವಸ್ತುಗಳು: ಒಂದು ಅನುಭವ ಪಡೆಯುವ ವಸ್ತು. ಇನ್ನೊಂದು ಅನುಭವಿಸುವ ವಸ್ತು. ಇವೆರಡರೊಳಗಿನ ಅನುಭವ ಪ್ರವಾಹ ಎಂದರೆ ಜೀವನ ಎಂದು ಅವರು ತಿಳಿದರು. ಒಂದು ಅನುಭವವಾಗಲು ಹೀಗೆ ಮೂರು ವಿಷಯಗಳ ಅಗತ್ಯವಿದೆ. ಈ ಅನುಭವಗಳ ಪ್ರವಾಹವೇ ಜೀವನ ಎಂದು ಅವರು ಅಭಿಪ್ರಾಯಕ್ಕೆ ಬಂದರು. ಹೀಗೆ ಮಾನವನು ತನ್ನ ಪಂಚೇಂದ್ರಿಯಗಳ ಮೂಲಕ ಬಾಹ್ಯ ಪ್ರಪಂಚದ ಸ್ಥೂಲ ವಸ್ತುಗಳ ಅನುಭವವನ್ನೂ, ಮನದ ಮೂಲಕ ಭಾವನೆಗಳನ್ನೂ, ಬುದ್ಧಿಯ ಮುಖಾಂತರ ವಿಚಾರಗಳ ಅನುಭವವನ್ನೂ, ಪಡೆಯುವನು. ಹೀಗೆ ಅನುಭವ ಪಡೆಯಲು ಸಾಧ್ಯವಾಗುವಂತೆ ಮಾಡುವ ಚೈತನ್ಯವೇ ಆತ್ಮ ಅದು ಈ ಮಾನವನ ದೇಹ, ಮನ, ಬುದ್ಧಿಗಳಿಂದಾಚೆಗೆ ಇರುವುದು.

ಈ ಅನುಭವ ಪ್ರವಾಹವೇ ಜೀವನ, ಈ ಅನುಭವ ಪ್ರವಾಹದಲ್ಲಿ ಬಾಹ್ಯ ವಸ್ತುಗಳನ್ನು ಅವಲೋಕಿಸುವುದು ಅದಕ್ಕೆ ತಕ್ಕ ಪ್ರತಿಕ್ರಿಯೆಯನ್ನು ಬುದ್ಧಿಯಿಂದ ವಿವೇಚಿಸಿ, ಮನದ ಮೂಲಕ ಪಂಚೇಂದ್ರಿಯಗಳಿಂದ ಮಾಡಿಸುವ ಜಾಣ್ಮೆ ಹೆಚ್ಚಿದಂತೆ ಮಾನವನು ಜೀವನದಲ್ಲಿ ಯಶಸ್ವಿಯಾಗುವನು. ಮತ್ತು ಅವನ ಮನ, ಬುದ್ಧಿಯು ಹೆಚ್ಚು ವಿಕಾಸನಗೊಂಡಿರುವುದು ಎಂಬುದಕ್ಕೆ ಈ ಜಾಣಾಕ್ಷತೆ ಸಾಕ್ಷಿಯೂ ಗಿರುವುದು. ಮನ ಮತ್ತು ಬುದ್ಧಿಯ ಸೂಕ್ಷ್ಮತೆ ಹೆಚ್ಚಿದಷ್ಟು ಈ ಪ್ರತಿಕ್ರಿಯೆಯು ಹೆಚ್ಚು ಪರಿಣಾಮಕಾರಿಯಾಗಿರುವುದು–ಅನುಭವಗಳು ಆಳವಾಗುವುವು. ಅವನ ವ್ಯಕ್ತಿತ್ವವು ವಿಕಾಸನಗೊಳ್ಳುವುದು. ಅವನು ಜೀವನದಲ್ಲಿ ಹೆಚ್ಚಿನ ಯಶಸ್ಸು ಗಳಿಸುವನು. ಹೀಗೆ ಜೀವನದಲ್ಲಿ ಹೆಚ್ಚಿನ ಯಶಸ್ಸು ಗಳಿಸಲು ಪಂಚೇಂದ್ರಿಯಗಳನ್ನು ಸಡಿಲು ಬಿಟ್ಟು ಮನವನ್ನು ಸಿಕ್ಕಿದಲ್ಲಿ ಹರಿದಾಡಲು ಬಿಟ್ಟರೆ ಸಾಧ್ಯವಿಲ್ಲ. ಅದಕ್ಕಾಗಿ ಒಂದು ನಿಯಮಿತ ಸಂತದ ಇಂದ್ರಿಯ ನಿಗ್ರಹ ಜೀವನವನ್ನು ಯಶಸ್ವಿಯಾಗಿ ಬಾಳಲು ಅಗತ್ಯವಿದೆ. ಉದಾಹರಣೆ – ವಿದ್ಯಾರ್ಥಿಯು ಶಾಲಾ ಪರೀಕ್ಷಾ ದಿನಗಳಲ್ಲಿ ಸಿನಿಮಾಕ್ಕೆ ಹೋಗದೆ, ಸರಿಯಾಗಿ ಉಣ್ಣದೆ, ರೇಡಿಯೋ ಕೇಳದೆ, ಕೇವಲ ಪಠ್ಯಪುಸ್ತಕಗಳನ್ನು ಓದುವುದರಲ್ಲಿ ತನ್ನ ಬುದ್ಧಿಯನ್ನು ಓಡಿಸುವನು. ಆದರಿಂದ ಅವನಿಗೆ ವ್ಯಾಸಂಗದಲ್ಲಿ ಏಕಾಗ್ರತೆಯಿಂದ ಇರಲು ಸಾಧ್ಯವಾಗುವುದು. ಅತ್ತಿತ್ತ ಹರಿದಾಡುತ್ತಿದ್ದ ಮನಸ್ಸಿನ ಬಯಕೆಗಳನ್ನು ನಿಗ್ರಹಿಸಿ, ಉಂಟಾದ ಶಕ್ತಿಯಿಂದ ಇತರ ವ್ಯಾಸಂಗಕ್ಕೆ ಬುದ್ಧಿಯನ್ನು ಓಡಿಸಿದರೆ ಉತ್ತಮ ಪರಿಣಾಮ ದೊರಕುವುದು.

(ಹನ್ನೊಂದನೇ ಪುಟ ನೋಡಿರಿ)

ಚಂದಾದಾರರಲ್ಲಿ ವಿನಂತಿ

ನವಯುಗದ ಚಂದಾ ಅವಧಿ ಮುಗಿದ ನಮ್ಮ ಚಂದಾದಾರ ಬಂಧುಗಳಿಗೆಲ್ಲಾ ಪ್ರತ್ಯಪ್ರತ್ಯೇಕವಾಗಿ ಬರೆದು ತಿಳಿಸಿರುತ್ತೇವೆ. ಅವರೆಲ್ಲರೂ ದಯಮಾಡಿ ತಮ್ಮ ತಮ್ಮ ಚಂದಾ ಹಣವನ್ನು ಆದಷ್ಟು ಬೇಗನೆ ಕಳುಹಿಸಿ ಕೊಡುವಂತೆ ಈ ಮೂಲಕ ಇನ್ನೊಮ್ಮೆ ವಿನಂತಿಸುತ್ತೇವೆ. ಸಕಾಲದಲ್ಲಿ ಚಂದಾ ಹಣ ಬಾರದಿದ್ದರೆ ಚಂದಾ ಅವಧಿ ಮುಗಿದವರಿಗೆಲ್ಲಾ ಮುಂದಿನ ವಾರದ ಪತ್ರಿಕೆಯನ್ನು ವಿ. ಪಿ. ದ್ವಾರಾ ಕಳುಹಿಸುತ್ತೇವೆ. ಅದನ್ನು ದಯಮಾಡಿ ಸ್ವೀಕರಿಸಿ, ಸಹಕರಿಸುವಂತೆ ಬಿನ್ನವಿಸುತ್ತೇವೆ.

ಮೆನೇಜರ್,
ನವಯುಗ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿ. ಆಫೀಸು– "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ವಿ ವೇ ಚ ನೆ

ಚೈನಾ - ಭಾರತ ಸಾಂಸ್ಕೃತಿಕ ಸಂಬಂಧ

ಬರೆದವರು: ಶ್ರೀ ಶಿವಶಂಕರ.

ಬಂಗಾಲವನ್ನಾಳಿಕೊಂಡಿದ್ದ ನವಾಬ ಸೈಫುದ್ದೀನನು ಚೈನೀ ಚಕ್ರವರ್ತಿಗೆ ಜಿರಾಫೆಯೊಂದನ್ನು ಬಹುಮಾನವನ್ನಾಗಿತ್ತಿರುವುದನ್ನು ಕಳೆದ ವಾರ ಕಂಡಿರುವೆವು; ಚೈನಕ್ಕೂ ಭಾರತಕ್ಕೂ ಆ ರೀತಿಯಲ್ಲಿ "ಕೊಡು—ತೆಗೆದುಕೊಳ್ಳು" ಸಂಬಂಧ ಹಿಂದಿನಿಂದಲೂ ಬಂದಿತ್ತು. ಅದಕ್ಕೇನೂ ಬರಗಾಲ ಇರಲಿಲ್ಲ. ಅಲ್ಲದೆ ಸಾಂಸ್ಕೃತಿಕ ಸಂಬಂಧವೂ ಬಹಳಷ್ಟಿದೆ.

ಜಗತ್ತಿನಲ್ಲೆಲ್ಲಾ ಒಂದೇ ಧರ್ಮ ಬೆಳೆಯುತ್ತಿದ್ದು, ತದನಂತರ ರಾಮಾಯಣ ಮಹಾಭಾರತ ಮುಂತಾದ ಮಹಾ ಯುದ್ಧ ಹಾಗೂ ಭೀಕರ ಕ್ಷಾಮ—ಬರಗಾಲಗಳಿಂದ ಸಂಪರ್ಕ ಕಮ್ಮಿಯಾಗಿ ಪ್ರಾದೇಶಿಕ ಪ್ರಮುಖರ ಪ್ರಭಾವ ಪ್ರವರ್ಧಿಸಲಾರಂಭವಾಯಿತು. ಚೈನಾದಲ್ಲಿ ಕನ್‌ಫ್ಯೂಷಿಯಸನ ಜನನವಾಯಿತು. ಅಲ್ಲಿನ ಜನತೆ ಅವನ ಮಾರ್ಗವನ್ನು ಅನುಸರಿಸಿದರು.

ಇತ್ತ ಭಾರತದಲ್ಲಿ ಬಹಳಷ್ಟು ಬದಲಾವಣೆ ಆಗಿರುತ್ತದೆ. ಇದೀಗ ಬೌದ್ಧ ಧರ್ಮವೂ ಜಗತ್ತಿನಾದ್ಯಂತ ಆಚರಿಸಲಾಯಿತು. ಆ ಬುದ್ಧನಿಗೆ ಜ್ಞಾನೋದಯವಾದದ್ದು ಭಾರತದಲ್ಲಿ— ಅವನ ಮತ ಪ್ರಸಾರ ನಡೆದದ್ದು ಭಾರತದಿಂದ. ಬೌದ್ಧ ಮತದ ತಂತು ಪೂರ್ವ ಗೋಲವನ್ನು ಒಂದಾಗಿ ಹೂಡಿತ್ತು. ಹಾಗೆಯೇ ಅದರಿಂದಾಗಿ ಅಪಚಾರವೂ ನಡೆದಿರುತ್ತದೆ. ಏನೇ ಇದ್ದರೂ ಆರಂಭದಲ್ಲಿ ಭಾರತದಿಂದ ಬುದ್ಧನ ಬುತ್ತಿ ಚೈನಾಕ್ಕೆ ಹೋಯಿತು.

ಚೈನಾಕ್ಕೆ ಆಗಮಿಸಿದ ಬೌದ್ಧ ಮತ ಬಹಳ ಚೆನ್ನಾಗಿ ಪ್ರಸಾರವಾಯಿತು. ಅದು ಚಕ್ರವರ್ತಿಗಳ ಗಮನವನ್ನು ಸೆಳೆದುಕೊಂಡಿತು ಮತ್ತು ಅಲ್ಲಿಯ ರಾಜ್ಯ ಮತವಾಗಿ ಗದ್ದುಗೆಯನ್ನೇರಿತು. ಬುದ್ಧನ ಬಾವುಟ ಚೈನಾದಲ್ಲಿ ಚೆನ್ನಾಗಿ ಹಾರಾಡಿತು. "ಚಕ್ರವರ್ತಿ ವು [ಕ್ರಿ. ಶ. ೨೬೫—೨೯೦] ಮತ್ತು ಮಿನ್ [ಕ್ರಿ. ಶ. ೩೧೩—೩೧೬] ಟೈನ್ ಮನೆತನ ಅಥವಾ ವಂಶದವರು ಇವರು ಬೌದ್ಧ ಮತ ಪ್ರಚಾರಕ್ಕೆ ಬಹಳ ಪ್ರಯತ್ನಿಸಿದ್ದಾರೆ. ಹಾಗೆಯೇ ಸುಂಗ್ ವಂಶದ ಮಿಂಗ್-ಟಿ [ಕ್ರಿ. ಶ. ೩೨೨—೩೨೫] ಕೂಡಾ ವಿಹಾರಗಳನ್ನು ಕಟ್ಟಿ ಕೊಟ್ಟು ಪ್ರಚಾರಕ್ಕೆ ಸಹಾಯ ಮಾಡಿದ್ದಾರೆ"ಂದು ಸರಳಾ ಶರ್ಮಾರವರು ಇತ್ತೀಚಿಗಿನ ಸಂಡೇ ಸ್ಟಾಂಡರ್ಡಿನಲ್ಲಿ ಬರೆದಿರುವರು.

ಇದು ಒಂದು ಮುಖ ಮಾತ್ರವಿದೆ. ಇದು ಸುರೂಪವಿದೆ. ಬಹಳ ಶಾಂತ ಹಾಗೂ ನಗುಮುಖವಿದೆ. ಅದರ ಇನ್ನೊಂದು ಮುಖವಿದೆ. ಅದು ಅತ್ಯಂತ ಕುರೂಪವಿದ್ದು ಭೀಕರ ಹಾಗೂ ಗಂಟುಮೋರೆಯಿದೆ. ಅಂದರೆ ಬೌದ್ಧ ಮತದ ವೇಷ ಧರಿಸಿಕೊಂಡು ಭಾರತದ ಮೇಲೆ ಆಕ್ರಮಣ ನಡೆಸಿರುವದಿದೆ. ಆಗ ನಡೆದದ್ದಾದರೂ ಏನು? ಇಲ್ಲಿದ್ದ ಬೌದ್ಧರು ಅವರಿಗೆ ಸತ್ಕಾರವನ್ನಿತ್ತರು. ಆದರಿಸಿದರು. ದೇಶಕ್ಕಿಂತ ಮತ ಮುಖ್ಯವಾಗಿ ಹೋಯಿತು! ಬಂದವನು ನಿಜವಾಗಿ ಬೌದ್ಧ ಮತದವನಾಗಿದ್ದನೇ? ಇಲ್ಲ. ಅದು ಅವನು ಹಾಕಿಕೊಂಡಿದ್ದ ಮುಖವಾಡ ಅಷ್ಟೇ. ಅವನು ತನ್ನ ಕೆಲಸ ಮುಗಿಸಿಕೊಂಡ ಮೇಲೆ ಇಲ್ಲಿದ್ದ ಬೌದ್ಧ ಮತದವರಿಗೂ ಚೆನ್ನಾಗಿ ಪಾಠ ಕಲಿಸಿದನು.

ಆದರೆ ಇಲ್ಲಿರುವ ಕಮ್ಯೂನಿಸ್ಟರು ಅದರಿಂದ ಅದಿನಿತೂ ಪಾಠ ಕಲಿತುಕೊಳ್ಳುವದಿಲ್ಲ. ತಮ್ಮ ಕೆಂಪು ಕುದುರೆಗೆ ನಾಲ್ಕೂವರೆ ಕಾಲೆಂದೇ ಅವರು ಬೊಬ್ಬೆ ಹೊಡೆಯುತ್ತಿದ್ದಾರೆ. ಅಂದು ಬೌದ್ಧ ಮತದ ಹೆಸರಿನಲ್ಲಿ ಆಕ್ರಮಣ ನಡೆದಿತ್ತು. ಇಂದು ಕಮ್ಯೂನಿಸಮಿನ ಹೆಸರಿನಿಂದ ಆಕ್ರಮಣ ನಡೆದಿರುತ್ತದೆ. ನಮ್ಮ ಪರೀಕ್ಷೆ ನಡೆದಿರುತ್ತದೆ. ಅದರಲ್ಲಿ ದಿವಂಗತ ಪ್ರಧಾನಿ ಶ್ರೀ ಜವಾಹರಲಾಲಜೀಯಂತಹವರೂ ಅನುತ್ತೀರ್ಣರಾಗಿ ಬಿಟ್ಟಿದ್ದಾರೆ!

ಆ ರೀತಿ ಭಾರತದಲ್ಲಿ ಧರ್ಮಗ್ಲಾನಿ ನಡೆದಿದ್ದಾಗ ಶ್ರೀ ಶಂಕರಾಚಾರ್ಯರ ಜನ್ಮವಾಯಿತು. ದಕ್ಷಿಣದ ತುತ್ತತುದಿಯಿಂದ ಅವರು ತಮ್ಮ ಪವಿತ್ರ ಕಾರ್ಯವನ್ನಾರಂಭಿಸಿದರು. ಅವರು ಹೋದಲ್ಲೆಲ್ಲೂ ರಾಷ್ಟ್ರೀಯತೆಯ ಅಮೃತ ಸಿಂಚನಗೈದರು. ತಮ್ಮ ಜೀವನದಲ್ಲೇ ಅದರ ಫಲವನ್ನವರು ಕಂಡರು. ಅವರು ಬದುಕಿದ್ದುದರೂ ಕೇವಲ ಮೂವತ್ತೆರಡು ವರ್ಷ. ಆದರೆ ಅವರ ಖ್ಯಾತಿ ಶಾಶ್ವತವಾಗಿರುವಂತಹದ್ದು. ರಾಷ್ಟ್ರೀಯ ಐಕ್ಯತೆಯ ದೃಷ್ಟಿಯಿಂದ ಅವರು ದೇಶದ ನಾಲ್ದೆಸೆಗಳಲ್ಲೂ ಮಠಗಳನ್ನು ಸ್ಥಾಪಿಸಿದರು. ಅದರಲ್ಲಿ ಶೃಂಗೇರಿ ಮಠವು ಕೇವಲ ಮತ ಪ್ರಚಾರದಲ್ಲಿ ಮಾತ್ರ ತೃಪ್ತಿಪಡದೆ ಎಲ್ಲೆಲ್ಲೂ ಅಧರ್ಮಿಯತೆಯ ನೃತ್ಯ ನಡೆಯುತ್ತಿದ್ದಾಗ ವಿದ್ಯಾರಣ್ಯ ಮಹಾಮುನಿಗಳು ಪುನರ್ ಹಿಂದೂ ಸಾಮ್ರಾಜ್ಯದ ಪತಾಕೆಯನ್ನೇರಿದರು. ಹೌದು. ಇಂದು ಧರ್ಮಧ್ವಜ ಹಾಗೂ ರಾಜ್ಯಗುಡಿ ಬೇರೆ ಬೇರೆಯಾಗಿರಲಿಲ್ಲ. ಅನಂತರ ಇಂತಹ ಅವಕಾಶ ಬಂದಿರುವದು ಗೊತ್ತಾಗುವದಿಲ್ಲ. ಬಂದಿರಲೂ ಬಹುದು. ಸ್ವಾತಂತ್ರ್ಯ ಸಂಗ್ರಾಮ ಸಹಸ್ರಾರು ಜನರನ್ನು ಬಲಿ ತೆಗೆದುಕೊಂಡಿತು. ಆಕ್ರಮಣಗೈದ ಮುಸಲ್ಮಾನರಾಗಲೀ, ಆಂಗ್ಲೇಯರಾಗಲೀ ಸರಕಾರ ಸ್ಥಾಪಿಸುವ ಏಕಮೇವ ಉದ್ದೇಶದಿಂದ ಇಲ್ಲಿಗೆ ಬಂದಿರಲಿಲ್ಲ. ಅವರು ಮತ ಪ್ರಚಾರಕ್ಕಾರಂಭಿಸಿದರು. ಒಬ್ಬರು ಖುರಾನ್-ಖಡ್ಗಗಳನ್ನು ಉಪಯೋಗಿಸಿದರೆ, ಇನ್ನೊಬ್ಬರು ಬಾಯಿಬಲ್-ಹೆಣ್ಣು-ಹೆಂಡ, ವಿದ್ಯೆ, ಮದ್ದು, ಉದ್ಯೋಗ ಇತ್ಯಾದಿ ಮಣ್ಣಿನೆಯ ದಾರಿಯಿಂದ ಬಹಳ ಶೀಘ್ರ ಗುರಿಯತ್ತ ಧಾವಿಸಿದರು. ಆಗ ಈ ದಿಗ್ಗಜಗಳು ಅದೇಕೋ ಒಂದು ರೀತಿಯ ಮೌನ ವ್ರತವನ್ನು ಧರಿಸಿಕೊಂಡಿದ್ದುವು. ರಾಜಕೀಯದಿಂದ ಅವರು ಬಹು ದೂರ ಉಳಿದು ಬಿಟ್ಟರು. ಅದಕ್ಕೆ ಅನೇಕಾನೇಕ ಕಾರಣಗಳಿರಬಹುದು. ಆದರೆ ಆದ್ಯ ಶಂಕರಾಚಾರ್ಯರು ರಾಷ್ಟ್ರದ ಕಾವಲಿಗಾಗಿ ಸ್ಥಾಪಿಸಿದ್ದ ನಾಲ್ಕು ಮಠಗಳು ಕೇವಲ ಕಾವಲಿಗಳಾಗಿ ಉಳಿದುವು. ಅದರ ಪರಿಣಾಮ ಇಂದು ಎಲ್ಲೆಡೆಯಲ್ಲೂ ಕಂಡು ಬರುತ್ತಿದೆ. ಆದ್ಯ ಶಂಕರಾಚಾರ್ಯರ ಹುಟ್ಟೂರೇ ಇಂದು ಗೊಂದಲದ ತವರೂರಾಗಿ ಬಿಟ್ಟಿದೆ. ಅಲ್ಲಿ ಒಂದೆಡೆ ಮಾಪಿಳ್ಳಿಸ್ಥಾನದ ಅಪಸ್ವರ ಕೇಳಬರುತ್ತಿದೆಯಾದಲ್ಲಿ ಇನ್ನೊಂದೆಡೆ ಆಸ್ತೀಯ ರಾಜ್ಯದ ಕೂಗು ಕೇಳಿಬರುತ್ತಿದೆ. ಬಡ ಭಾರತೀಯ ತುಟಿ ಪಿಟಕ್ಕೆನ್ನುವಂತಿಲ್ಲ. ಅನೇನಾದರೂ ಅವನಾಡಿದಲ್ಲಿ ಆಯಿತು ಅವನ ಅಂತ್ಯ. ಅಂತಹ ಒಂದು ಭೀಕರ ದುರ್ಘಟನೆ ನಡೆದು ಅದೆಷ್ಟು ದಿನಗಳಾದುವು? ಭಾರತದ ಪ್ರತಿನಿಧಿ ಸಭೆಯಲ್ಲೂ ಅದರ ಪ್ರತಿಧ್ವನಿ ಕೇಳಿಬಂತು. ಆದರೆ ಫಲವೇನು? ಪರಿಸ್ಥಿತಿ ಅಷ್ಟರ ವರೆಗೆ ಶೋಚನೀಯ ಸ್ಥಿತಿಗೆ ಬಂದಿಳಿದಿರುವಾಗಲಾದರೂ ಈ ಮಠಾಧಿಪತಿಗೆ ಸ್ವಲ್ಪ ಮಟ್ಟಿಗಾದರೂ ರಾಷ್ಟ್ರೀಯ ಪ್ರಜ್ಞೆ ಉಂಟಾಗಿರುವದು ಭಾರತೀಯರ ಸೌಭಾಗ್ಯವೇ ಸರಿ.

ಈ ಮಹಾನುಭಾವರು ಶಂಕರ ಜಯಂತಿಯಂದು ಕಾಲಡಿಯಲ್ಲಿ ಒಂದಾಗಿ ಸೇರಲು ಕೆಲ ಏರ್ಪಾಡಾಗಿತ್ತು. ಆದರೂ ಮೂವ್ವರು ಶಂಕರಾಚಾರ್ಯರು ಮಾತ್ರ ಅಲ್ಲಿ ಸೇರಿದ್ದರು. ಅಲ್ಲದೆ ಕಾಂಚಿ ಪೀಠಾಧಿಪತಿ ಶಂಕರಾಚಾರ್ಯರು ಅದರಲ್ಲಿ ಭಾಗವಹಿಸಿರುವದಿಲ್ಲ. ಎಲ್ಲೆಲ್ಲೋ ಇದ್ದವರೆಲ್ಲಾ ಬಂದಿದ್ದರು. ಆದರೆ ಪಕ್ಕದಲ್ಲೇ ಇದ್ದ ಪೀಠಾಧಿಪತಿಗಳು ಬರಲಿಲ್ಲ. ಅದಕ್ಕೆ ಅದೇನಾದರೂ ಕಾರಣ ಇದ್ದಿರಬಹುದು. ಆದರೂ ನಾಲ್ಕೂ ಶಂಕರಾಚಾರ್ಯರು ಹಾಗೂ ಕಾಂಚಿ ಪೀಠಾಧಿಪತಿ ಶಂಕರಾಚಾರ್ಯ ಅಲ್ಲದೆ ಈ ಐದು ಪೀಠಗಳಿಗೆ ಸಂಬಂಧಪಟ್ಟಿರುವ ಉಪಪೀಠಾಧೀಶರೆಲ್ಲರೂ ಒಂದಾಗಿ ಸೇರಿ ಇಂದಿನ ಗೊಂದಲ ಮಯ ಸನ್ನಿವೇಶದಲ್ಲಿ ಬೆಳಕು ತೋರಿಸಿಯಾರೇ? ಅವರೆಲ್ಲರ ಮಿಲನಕ್ಕಾಗಿಯೋ ಎಂಬಂತೆ ಬರುವ ಜನವರಿ ತಿಂಗಳಲ್ಲಿ ಪ್ರಯಾಗದಲ್ಲಿ ಪೂರ್ಣಕುಂಭ ಮೇಳದ ಸಮಯ ವಿಶ್ವ ಹಿಂದೂ ಪರಿಷತ್ತಿನ ಪತಿಯಿಂದ ಏರ್ಪಾಡಾಗುತ್ತಿದೆ.

ಚೈನೀ ಆಕ್ರಮಣ ಹಾಗೂ ಪಾಕಿಸ್ತಾನಿ ಆಕ್ರಮಣದ ಸಮಯ ಈ ಮಠಾಧಿಪತಿಗಳ ಮಿಲನದಿಂದ ಆಗುವದಾದರೂ ಏನು? ವಿಶ್ವ ಹಿಂದೂ ಪರಿಷತ್ತು ಕೇವಲ ಶಂಕರಾಚಾರ್ಯರ ಮಠಾಧಿಪತಿಗಳನ್ನು ಒಂದಾಗಿ ಸೇರಿಸಲು ಮಾತ್ರ ಇರುವದಿಲ್ಲ, ಅದರಲ್ಲಿ ಹಿಂದೂ ಧರ್ಮದ ಎಲ್ಲಾ ಮತದವರೂ, ಜಗತ್ತಿನ ಮೂಲೆ ಮೂಲೆಗಳಿಂದಲೂ ಬಂದು ಭಾಗವಹಿಸಲಿದ್ದಾರೆ. ಕಾಲಡಿಯಲ್ಲಿ ನಡೆದ ಮಹಾ ಸಮ್ಮೇಳನ ಇದೀಗಲೇ ಮುಕ್ತಾಯವಾಗಿರುವದರಿಂದ ಶಂಕರಾಚಾರ್ಯರುಗಳ ಹೆಸರನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿರುತ್ತದೆ. ಸರಿ. ಈ ಎಲ್ಲಾ ಧರ್ಮೋಪದೇಶಕರು ಕಲಿತು ಮಾಡುವದಾದರೂ ಏನನ್ನು? ಇತರ ಮತದವರ ಮನಸ್ಸಿನಲ್ಲಿ ಹೆದರಿಕೆಯನ್ನು ತಾನೆ? ವಿಧರ್ಮೀಯ ರಾಜ್ಯದಲ್ಲಿ ಇಂತಹ ಸಮ್ಮೇಳನ ನ್ಯಾಯ ಬದ್ಧವೇ? ಇಂತಹ ಪ್ರಶ್ನೆಗಳು ಬರುವದು ಸ್ವಾಭಾವಿಕ ಇದೆ. ಅವರಿಗೆ ಕರ್ನಾಟಕದ ಆರ್ಥಿಕ ಅಮಾತ್ಯ ಶ್ರೀ ಜತ್ತಿಯವರು ಇಟ್ಟಿಯ ಹಾಗೆಯೇ ಕರೆ ಇತ್ತಿದ್ದಾರೆ—ಬದಲಿತ್ತಿದ್ದಾರೆ. ಕ್ರಿಸ್ತ ಸಮ್ಮೇಳನಕ್ಕೆ ದಿಲ್ಲಿಯಿಂದ ಬೊಂಬಾಯಿಗೆ ರಾಷ್ಟ್ರದ ಮರ್ಯಾದೆಯನ್ನು ಗೌರವಿಸದೆ, ಗಮನಿಸದೆ, ಧಾವಿಸಲು ನಾಚಿಕೆ ಆಗುವದಿಲ್ಲ. ಆದರೆ ಹಿಂದೂಗಳೆಂದು ಒಂದೆಡೆ ಸೇರಲು ನಾಚಿಕೆಯಾಗುತ್ತದೆಂದು ಅವರು ಬೆಂಗಳೂರಿನಲ್ಲಿ ವಿಶ್ವ ಹಿಂದೂ ಪರಿಷತ್ತಿನ ಸಭೆ ನಡೆದಾಗ ಸ್ಪಷ್ಟವಾಗಿ ಹೇಳಿದ್ದಾರೆ. ಈ ವಿಷಯವನ್ನು ಇಲ್ಲಿಗೇ ನಿಲ್ಲಿಸಿ ಆಕ್ರಮಣದ ದೃಷ್ಟಿಯಿಂದ ಮಠ, ಧರ್ಮವಿಲ್ಲದ ಕುರಿತು ಇಲ್ಲಿ ಯೋಚಿಸಲಾಗಿರುತ್ತದೆ.

(ಪತ್ರ್ಯೇ ಪುಟ ನೋಡಿರಿ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಿಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ಈ ವಿಚಿತ್ರಗಳನ್ನು

ಜಗತ್ತಿನ ವೈಚಿತ್ರ್ಯಗಳಲ್ಲಿ ಕೆಲವನ್ನಾದರೂ

ಚಿತ್ರ ೧

ಜಗತ್ತಿನ ಯಾವ ಜನಾಂಗವೂ ಇನ್ನೊಂದಕ್ಕಿಂತ ಶ್ರೇಷ್ಠವಲ್ಲ ಎಂಬುದು ಶಾಸ್ತ್ರೀಯ ಸಂಶೋಧನೆಗಳಿಂದ ಕಂಡು ಬಂದಿದೆ. ತಮ್ಮ ಜನಾಂಗವೇ ಉಳಿದೆಲ್ಲವುಗಳಿಗಿಂತ ಶ್ರೇಷ್ಠ ಎಂದು ಯಾರೂ ಹೆಮ್ಮೆ ಪಡಬೇಕಾದುದಿಲ್ಲ. ಎಲ್ಲಾ ಜನಾಂಗಗಳೂ ಶ್ರೇಷ್ಠ, ನಾವೆಲ್ಲಾ ಒಂದೇ ಮಾನವ ಕುಲದವರು ಎಂಬ ಭಾವವೇ ಜಗತ್ತಿನ ಕಲ್ಯಾಣಕ್ಕೆ ತಾರಕ.

ಚಿತ್ರ ೨

ಮೊಟ್ಟೆ ಮೊದಲು ಸೃಷ್ಟಿಸಲ್ಪಟ್ಟಿತೇ ಅಥವಾ ಮರಿಯೇ? ಎಂಬ ಪ್ರಶ್ನೆಗೆ ಉತ್ತರ ಮೊಟ್ಟೆ ಮೊದಲೆಂಬುದು. ಇದು ನಿಜ. ಹಕ್ಕಿಗಳು ಹರಿದಾಡುವ ಒಂದು ಜಂತುವಿನ ಒಂದು ಅಡ್ಡ ರೂಪಾಂತರ ಎಂದು ವಿಜ್ಞಾನಿಗಳು ಒಪ್ಪಿರುತ್ತಾರೆ. ಈ ಹರಿದಾಡುವ ಜಂತು ಪ್ರಪಂಚವ ಮೊತ್ತ ಮೊದಲ ಹಕ್ಕಿ ಪುಕ್ಕ ಬಿಚ್ಚಿ ಹಾರುವ ಮಿಲಿಯಾಂತರ ವರ್ಷಗಳ ಮೊದಲೇ ಮೊಟ್ಟೆ ಇಡುತ್ತಿತ್ತೆಂದು ಎಲ್ಲರ ಅಭಿಮತ.

ಚಿತ್ರ ೩

ಹಂಗೆರಿಯು ಕಮ್ಯುನಿಸ್ಟ್ ಆಶ್ರಮಿತ ರಾಷ್ಟ್ರ. ಇಲ್ಲಿ ಸಂಗೀತ ಹಾಗೂ ನಾಟಕಗಳೂ ಸೆನ್ಸಾರಿಗೊಳಪಡಿಸಲ್ಪಟ್ಟು ಇನ್ನೆಲ್ಲಿಯೂ ಸೆನ್ಸಾರಿಗೊಳಪ್ಪಡುವುದಿಲ್ಲ. ಇದಕ್ಕೆ ಕಾರಣ ಕಮ್ಯುನಿಸ್ಟರ ಸರ್ವಾಧಿಕಾರ. ಹಂಗೇರಿಯ ಜನತೆ ಎಲ್ಲಿ ಕಮ್ಯುನಿಸಂನ ವಿರುದ್ಧ ಪ್ರತಿಭಟನೆ ಸಲ್ಲಿಸಲು ಈ ಸಂಗೀತನಾಟಕಗಳನ್ನು ಉಪಯೋಗಿಸುವರೋ ಎಂಬ ಭಯ ಅಲ್ಲಿನ ಸರಕಾರಕ್ಕೆ. ಹಾಗಾಗಿ, ಇವುಗಳ ಪ್ರದರ್ಶನದ ಮೇಲೆ ಅಧಿಕಾರದ ವಿಪರೀತ ಪ್ರಯೋಗ ನಡೆದಿದೆ.

ಚಿತ್ರ ೪

ರಶ್ಯದಲ್ಲಿ ವಾಸಿಸುತ್ತಿರುವ ಅಮೇರಿಕನರಿಗೆ, ಅಮೇರಿಕನ ಅವರ ಸಂಬಂಧಿಗಳು ಆಹಾರದ ಪ್ಯಾಕೇಜನ್ನು ಕಳುಹಿಸುತ್ತಾರೆ. ಆದರೆ ಅವುಗಳು, ಅವರ ಸಂಬಂಧಿಕರ ಕೈಗೆ ಮುಟ್ಟುವುದಿಲ್ಲ! ಇದು ಆಶ್ಚರ್ಯಕರವಲ್ಲವೇ? ಈ ಆಹಾರ ಪ್ಯಾಕೇಜುಗಳನ್ನು ವಿಳಾಸದಾರರಿಗೆ ನಿಶ್ಚಿತವಾಗಿ ತಲುಪಿಸುವುದಕ್ಕೋಸ್ಕರ ರಶ್ಯನ್ ಸರಕಾರವು ಆ ಆಹಾರ ಪ್ಯಾಕೇಜಿನಷ್ಟೇ ಬೆಲೆಯಷ್ಟು ಶುಲ್ಕವನ್ನು ವಸೂಲು ಮಾಡುತ್ತಿದೆಯಂತೆ!

ಚಿತ್ರ ೫

ಕಪ್ಪೆಗಳ ರಾಜ್ಯ ನಮ್ಮದಾದರೂ, ಜಗತ್ತಿನ ಅತಿದೊಡ್ಡ ಗಾತ್ರದ ಕಪ್ಪೆಗಳಿರುವುದು ಅಮೇರಿಕದಲ್ಲೇ, ಅಮೇರಿಕದ ಪೆರು ರಾಜ್ಯದ ಮೊಂಟೆರೋ ನದಿಯ ಪ್ರದೇಶದಲ್ಲಿರುವ ಕಪ್ಪೆಗಳು ಜಗತ್ತಿನಲ್ಲೇ ಅತಿದೊಡ್ಡ ಗಾತ್ರದವು. ಈ ಕಪ್ಪೆಗಳ ಅಳತೆ ಇಪ್ಪತ್ತನಾಲ್ಕು ಇಂಚುಗಳಷ್ಟಿದೆ ಎಂದರೆ ಆಶ್ಚರ್ಯ ಪಡಬೇಕಾಗಿಲ್ಲ. ಗಾತ್ರ ಇಷ್ಟಿದ್ದರೆ, ಇವುಗಳ ವಟಗುಟ್ಟುವ ಧ್ವನಿ ಎಷ್ಟು ದೂರದ ವರೆಗೆ ಕೇಳಿಸೀತು?

ಚಿತ್ರ ೬

ಬೇಟೆಗಾಗಿ ಬೇಟೆನಾಯಿಗಳನ್ನು ಬಳಸುವುದು ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿ. "ಸಾಲುಕಿ" ಎಂಬುದು ಕ್ಷೀಣ ಕಾಯದ ಒಂದು ಜಾತಿಯ ಬೇಟೆನಾಯಿ. ಇದು ಆಸ್ಯಾಖಂಡದ ಕೊಡುಗೆ. ಮನುಷ್ಯನಿಂದ ಬೇಟೆಗಾಗಿ ತರಬೇತಿಗೊಳಿಸಲ್ಪಟ್ಟ ನಾಯಿಯ ಜಾತಿಗಳಲ್ಲಿ ಇದೇ ಮೊದಲನೆಯದಂತೆ. ವೇಗದಲ್ಲಿ ಇದು ಚಿಂಕೆಯನ್ನು ಮೀರಿಸಬಲ್ಲುದೆಂದರೆ ಇದರ ಪ್ರಯೋಜನ ಎಷ್ಟಿರ ಬೇಡ? ಗಂಟೆಗೆ ನಲ್ವತ್ತು ಮೈಲಿಗಳಿಗಿಂತಲೂ ಅಧಿಕ ವೇಗದಲ್ಲಿ ಓಡುವ ಈ ನಾಯಿ ಬೇಟೆಗಾರರಿಗೊಂದು ವರದಾನ.

ಚಿತ್ರ ೭

ಹಿಮಾಲಯ ಪರ್ವತಾವಳಿಯು ಹಿಮಚ್ಛಾದಿತ ಪ್ರದೇಶ. ಇದು ಇರುವುದು ಸಮಶೀತೋಷ್ಣ ವಲಯದಲ್ಲಿ. ಆದರೆ ಇಲ್ಲಿನ ಹವೆ ಶೀತ ವಲಯದ ಹವೆ. ಇದಕ್ಕೆ ಕಾರಣ ಅದು ಸಮುದ್ರದ ಮಟ್ಟಕ್ಕಿಂತ ಸಾವಿರಾರು ಅಡಿಗಳಷ್ಟು ಮೇಲಿರುವುದೇ ಆಗಿದೆ. ಆದರೂ ಇಲ್ಲಿನ ಆಳವಾದ ಕಣಿವೆಗಳಲ್ಲಿ ಉಷ್ಣವಲಯದ ಸಸ್ಯಗಳು ಬೆಳೆಯುತ್ತಿವೆಯೆಂದರೆ ಇದು ಆಶ್ಚರ್ಯಕರವಲ್ಲವೆ? ಹಿಮದಿಂದ ಆವರಿಸಲ್ಪಟ್ಟ ಈ ಕಣಿವೆಗಳ ಶಿಖರದ ತಳದಲ್ಲಿ ಉಷ್ಣ ವಲಯದ ಸಸ್ಯಗಳು ಬೆಳೆಯುತ್ತಿವೆ.

ಚಿತ್ರ ೮

ಬಿರುಗಾಳಿಯು ಬೀಸುವಿಕೆಯ ದಿಕ್ಕನ್ನು ಅರಿತವರೆಷ್ಟು ಮಂದಿ? ಅವುಗಳ ಗತಿಯನ್ನು ತಿಳಿದವರೆಷ್ಟು ಮಂದಿ? ಬಿರುಗಾಳಿಯು ಭೂಮಧ್ಯ ರೇಖೆಯ ಉತ್ತರದಲ್ಲಿ ಅಂದರೆ ಉತ್ತರಾರ್ಧ ಗೋಲದಲ್ಲಿ ಗಡಿಯಾರದ ಮುಳ್ಳುಗಳ ತಿರುಗುವಿಕೆಯ ವಿರುದ್ಧ ದಿಕ್ಕಿನ ಕಡೆ ತಿರುಗಿದರೆ, ದಕ್ಷಿಣಾರ್ಧ ಗೋಲದಲ್ಲಿ ಗಡಿಯಾರದ ಮುಳ್ಳಿನ ತಿರುಗುವಿಕೆಯಂತೆ ತಿರುಗುತ್ತದೆ.

ಚಿತ್ರ ೯

ಸ್ವಯಂ ಪ್ರೇರಿತ ಸೇವೆಯಲ್ಲಿ ಅಮೇರಿಕನ್ ಮಹಿಳೆಯರು ಮುಂದಾಗಿದ್ದಾರೆ. ಅಮೇರಿಕನ್ ರೆಡ್‌ಕ್ರಾಸ್ ಸೊಸೈಟಿಯ ಅಂದಾಜು ಹೀಗಿದೆ—ಅಮೇರಿಕದಲ್ಲಿ ಇಪ್ಪತ್ತು ಮಿಲಿಯ ಮಹಿಳೆಯರು ಈ ಸ್ವಯಂ ಪ್ರೇರಿತ ಸೇವೆಗೆ ಮುಂದಾಗಿದ್ದಾರೆ. ದಾನ ಧರ್ಮ, ಲೋಕ ಕಲ್ಯಾಣ ಕಾರ್ಯಗಳಲ್ಲಿ ಇವರು ತಮ್ಮ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಸೇವೆಗೆ ಕಾನೂನು ರೀತಿಯಲ್ಲಿ ವೇತನ ಸಲ್ಲಿಸುವುದಾದರೆ, ವರ್ಷವೊಂದಕ್ಕೆ ಇವರ ಸೇವೆಗೆ ಕೊಡಬೇಕಾಗಿ ಬರುವ ವೇತನದ ಮೊತ್ತ ಎರಡು ಸಾವಿರದ ಇನ್ನೂರ ಐವತ್ತು ಮಿಲಿಯ ಡಾಲರುಗಳಷ್ಟಾಗುತ್ತದೆ! ಇದು ಗಣನೀಯವಾದ ಮೊತ್ತವಲ್ಲವೆ?

೧

೨

೪

೫

೬

೭



೮

೯

ನೀವು ಬಲ್ಲಿರಾ ?

ನಾವು ತಿಳಿಯುವುದು ಮೇಲು

ಚಿತ್ರ ೧೦

ಪ್ರಪಂಚದಲ್ಲಿರುವ ಕೀಟಗಳಲ್ಲಿ ಈಗಾಗಲೇ ಏಳ್ನೂರಐವತ್ತು ಸಾವಿರದಷ್ಟು ವರ್ಗಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಇನ್ನೂ ವರ್ಗಗಳನ್ನು ಗುರುತಿಸುವ ಕಾರ್ಯ ಭರದಿಂದ ಸಾಗಿದೆ.

ಚಿತ್ರ ೧೧

ಜಗತ್ತಿನಲ್ಲಿ ಅತಿ ದೊಡ್ಡದಾದ ಮೂಷಿಕವು ದಕ್ಷಿಣ ಅಮೇರಿಕದ "ಕಪಿಬರಾ" ಎಂಬ ಜಾತಿಯದಾಗಿದೆ, ಇದರ ಭಾರ ನೂರು ಪೌಂಡುಗಳಷ್ಟು! ನಮ್ಮೂರಿನ ಇಲಿಗಳಂತೆ, ಈ ಮೂಷಿಕಕ್ಕೆ ಬೆಕ್ಕೆಂದರೆ ಪ್ರಾಣ ಸಂಕಟ. ಕೌಗಾರ್ ಮತ್ತು ಜಾಗಾರ್ ಎಂಬ ಎರಡು ಜಾತಿಯ ಬೆಕ್ಕುಗಳು ಈ "ಕಪಿಬರಾ"ದ ವೈರಿಗಳ ಸಾಲಿನಲ್ಲಿ ಅಗ್ರ ಸ್ಥಾನ ಪಡೆಯುತ್ತವೆ.

ಚಿತ್ರ ೧೨

ಹಂಗೆರಿಯ ಸ್ವಾತಂತ್ರ್ಯ ಚಳವಳದ ಹೋರಾಟದಲ್ಲಿ ಭಾಗವಹಿಸಿದವರ ಹೆಸರನ್ನು ಸೂಚಿಸಲಿಲ್ಲವೆಂಬ ಕಾರಣಕ್ಕಾಗಿ, ಹಂಗೇರಿಯ ಏನೂರಕ್ಕೂ ವಿ. ಕ್ಕದ ಡಾಕ್ಟರರನ್ನು ಅಲ್ಲಿನ ಕಮ್ಯುನಿಸ್ಟ್ ಸರಕಾರವು ರಶ್ಯದ ಸೈಬೀರಿಯಕ್ಕೆ ಗಡಿಪಾರು ಮಾಡಿದೆಯಂತೆ! ಇದನ್ನು ನೀವು ನಂಬುವಿರಾ?

ಚಿತ್ರ ೧೩

ಸಮುದ್ರದ ತೆರೆಯು ಎಷ್ಟು ಎತ್ತರಕ್ಕೆ ಹಾರ ಬಲ್ಲುದ ? ತಜ್ಞರ ಅಭಿಪ್ರಾಯದ ಪ್ರಕಾರ ಹೆಚ್ಚೆಂದರೆ, ಅದು ಅರವತ್ತು ಅಡಿಗಳಷ್ಟು ಎತ್ತರಕ್ಕೆ ಜಿಗಿಯಬಲ್ಲುದು. ಆದರೆ, ಈ ಅಭಿಪ್ರಾಯವನ್ನು ಸುಳ್ಳಾಗಿಸುವ ಘಟನೆ ಶಾಂತ ಸಾಗರದಲ್ಲಿ ಸಾವಿರದೊಂಭೈನೂರ ಮೂವತ್ತಮೂರರ ಮೇ ಏಳರಂದು ನಡೆಯಿತು. ಅಮೇರಿಕದ ಹಡಗವೊಂದು ನೂರಹನ್ನೆರಡು ಅಡಿಗಳಷ್ಟು ಎತ್ತರಕ್ಕೆ ಹಾರಿದ ಸಮುದ್ರದ ಅಲೆಯೊಂದರ ಅನ್ವೇಷಣ ನಡೆಸಿತ್ತು.

ಚಿತ್ರ ೧೪

ಅತಿ ವೇಗದಲ್ಲಿ ಬೆಳೆಯುವ ಮರವೆಂದರೆ ಆಫ್ರಿಕದ ಉಣಂದಾದಲ್ಲಿನ 'ಯೂಕಲಿಪ್ಟಸ್ ಸೆಲಿನಾ' ಆಗಿದೆ. ಇದು ಎರಡು ವರ್ಷಗಳ ಅವಧಿಯಲ್ಲಿ ನಲ್ವತ್ತೈದು ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ! ಆದರೆ ಬಿದಿರು, ದಿನ ಒಂದಕ್ಕೆ ಹದಿನಾರು ಇಂಚುಗಳಷ್ಟು ಬೆಳೆಯುವುದೆಂದರೆ, 'ಯೂಕಲಿಪ್ಟಸ್ ಸೆಲಿನಂ'ವನ್ನು ಮೀರಿಸಿದಂತಾಗಲಿಲ್ಲವೆ? ಬಿದಿರು ನೂರಇಪ್ಪತ್ತು ಅಡಿಗಳಷ್ಟು ಎತ್ತರಕ್ಕೆ ಬೆಳೆಯ ಬಲ್ಲುದು. ಆದರೆ ಇದನ್ನು ಸಸ್ಯಶಾಸ್ತ್ರವು ಮರಗಳ ವರ್ಗದಲ್ಲಿ ಸೇರಿಸಿಲ್ಲ.

ಚಿತ್ರ. ೧೫.

ಹಂಗೇರಿಯ ಸ್ವಾತಂತ್ರ್ಯ ಹೋರಾಟದ ಯೋಧರಿಗೆ ವಿಪರೀತ ಶಿಕ್ಷೆಯನ್ನು ಅಲ್ಲಿನ ಕಮ್ಯುನಿಸ್ಟ್ ಸರಕಾರ ಈಯುತ್ತಿದೆ. ಇತ್ತೀಚೆಗೆ ಲಾಸ್‌ಜ್ಲೋ ಮಿಂಜೆಂಟಿ ಎಂಬ ರೋಮನ್ ಕೆಥೋಲಿಕ್ ಪಾದ್ರಿಯ ಜತೆ ಇನ್ನಿಬ್ಬರು ಸ್ವಾತಂತ್ರ್ಯ ಸಮರದ ಯೋಧರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಇದು ಇಪ್ಪತ್ತನೇ ಶತಮಾನದಲ್ಲೂ ನಡೆಯುವ ನರಮೇಧ!

೧೦

೧೧

೧೨

೧೩

೧೪

೧೫

ಹನಿಗತೆ

ಒಂದು ಪೆನ್ಸಿಲ್ ತುಂಡಿನ ಮಹತ್ವ

(ಲೇ: ಸೋಮೇಶ ಪುರೋಹಿತ)

ಮನುಬೇನರು ಗಾಂಧಿಯವರ ಜತೆಯಲ್ಲಿದ್ದರು. ಒಂದು ದಿನ ಗಾಂಧಿಯವರ ಬರೆಯುವ ಕಾಗದಪತ್ರ ಮೇಜಿನ ಮೇಲೆ ವ್ಯವಸ್ಥಿತ ಇರಿಸುವಾಗ ಅವರ ಪೆನ್ಸಿಲು ಬರೆದು ಬರೆದು ಸವೆದು ತೀರ ಚಿಕ್ಕದಾಗಿರುವದು ಅವಳಿಗೆ ಕಾಣಿಸಿತು. ಕೈಯಲ್ಲಿ ಹಿಡಿಯಲಿಕ್ಕೂ ಬರುವಷ್ಟಿರಲಿಲ್ಲ. ಅದರಲ್ಲಿ ಬರೆಯಲಿಕ್ಕೆ ಗಾಂಧಿಯವರಿಗೆ ಕಷ್ಟವಾಗುತ್ತಿರಬಹುದೆಂದು ಊಹಿಸಿ ಅವಳು ಅದರ ಸ್ಥಳದಲ್ಲಿ ಹೊಸದೊಂದು ಪೆನ್ಸಿಲು ಕೆತ್ತಿ ಇಟ್ಟಳು.

ಗಾಂಧಿಯವರು ಹರಿಜನ ಪತ್ರಿಕೆಗೆ ಲೇಖನ ಬರೆಯಲು ಕುಳಿತಾಗ ಮೇಜಿನ ಮೇಲೆ ತಮ್ಮ ಚಿಕ್ಕ ಪೆನ್ಸಿಲು ಇಲ್ಲದ್ದೂ ಅದರ ಸ್ಥಳದಲ್ಲಿ ಹೊಸ ಪೆನ್ಸಿಲು ಬಂದದ್ದೂ ಕಂಡರು.

ಕೂಡಲೇ ಅವರು ಮನುಬೇನಳಿಗೆ ಕರೆದು ಕೇಳಿದರು. 'ನನ್ನ ಆ ಚಿಕ್ಕ ಪೆನ್ಸಿಲ್ ಏನಾಯಿತು?' ಎಂದು.

"ಬಾಪೂಜಿ, ಅದು ತೀರಾ ಚಿಕ್ಕದಾಗಿ ಹೋಗಿತ್ತು. ಆದ್ದರಿಂದ ಅದರಿಂದ ಬರೆಯುವಾಗ ನಿಮಗೆ ಕಷ್ಟವಾಗುತ್ತಿರಬಹುದೆಂದು ಊಹಿಸಿ ಈ ಹೊಸ ಪೆನ್ಸಿಲ್ ಇರಿಸಿದ್ದೇನೆ" ಎಂದಳು ಮನುಬೇನ.

"ಬೇಡ ಬೇಡ, ಇನ್ನೂ ಆ ಪೆನ್ಸಿಲ್ ತೆಗೆದೊಗೆಯುವ ಸ್ಥಿತಿಗೆ ಮುಟ್ಟಿಲ್ಲ. ಇಂದಿಗೂ ಅದರ ಉಪಯೋಗವಾಗುತ್ತಲಿದೆ. ನಿರುಪಯೋಗಿ ಎಂದು ನೀನು ಅದನ್ನು ಬಿಸಾಡಿಲ್ಲ ತಾನೇ? ಅದನ್ನು ತೆಗೆದುಕೊಂಡು ಬಾ. ಮತ್ತು ಈ ಹೊಸ ಪೆನ್ಸಿಲನ್ನು ಜತನವಾಗಿ ಇರಿಸು ಮುಂದೆ ಇದರ ಉಪಯೋಗವಾದೀತು" ಎಂದರು ಗಾಂಧೀಜಿ.

"ಆದರೆ ಬಾಪೂಜಿ, ಅಷ್ಟು ಸಣ್ಣ ಪೆನ್ಸಿಲು ಹಿಡಿದು ಬರೆಯುವಾಗ ನಿಮಗೆ ಕಷ್ಟವಾಗುವದಿಲ್ಲವೇ?" ಕೇಳಿದಳು ಮನುಬೇನ.

"ಎಂಥ ಮಾತು ಆಡುತ್ತಿಯೇ! ಅಷ್ಟೊಂದೂ ಕಷ್ಟ ಸಹಿಸಲಿಕ್ಕಾಗದಿದ್ದರೆ ಅಹಿಂಸೆಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಬಗೆ ಏನು?" ಎಂದು ಕೇಳಿದರು ಗಾಂಧೀಜಿ.

"ಒಮ್ಮೊಮ್ಮೆ ನಿಮ್ಮ ಮಿತವ್ಯಯವು ಜಿಪುಣತನವನ್ನೂ ಮೀರುತ್ತದೆ" ಹೆದರುತ್ತ ಮನುಬೇನ ಉತ್ತರಿಸಿದಳು.

"ಲಕ್ಷಾಧೀಶನ ಮಗಳಂತೆ ನೀನು ಮಾತನಾಡುತ್ತಿದ್ದಿಯೇ? ನಿಜ ಸಂಗತಿ ಎಂದರೆ ನಾನು ದುಡಿದು ಒಂದೂ ಕಾಸನ್ನೂ ಉತ್ಪಾದಿಸುತ್ತಿಲ್ಲ. ನೀನೂ ಉತ್ಪಾದಿಸುತ್ತ ಇಲ್ಲ. ಜನರ ಬೆವರಿನ ಗಳಿಕೆಯ ಮೇಲೆಯೇ ನನ್ನದ್ದೂ ನಿನ್ನದ್ದೂ ಜೀವನ ನಡೆಯುತ್ತಲಿದೆ. ಜನರು ಎಷ್ಟೆಲ್ಲಾ ಕಷ್ಟಪಟ್ಟು ಗಳಿಸಿದ್ದನ್ನು ನಾವು ಹೀಗೆ ಖರ್ಚು ಮಾಡುತ್ತ ಹೋದರೆ ಹೇಗೆ?" ಎಂದು ಕೇಳಿದರು ಗಾಂಧೀಜಿ.

(ಹದಿಮೂರನೇ ಪುಟ ನೋಡಿರಿ)

ಚೈನಾ - ಭಾರತ ಸಾಂಸ್ಕೃತಿಕ ಸಂಬಂಧ

(ಏಳನೇ ಪುಟದಿಂದ)

ಇಂದಿನ ಭಾರತೀಯ ಜನತೆ ಬಹಳ ವಿಚಿತ್ರ ಸ್ವಭಾವದ್ದು. ರಾತ್ರಿ ಕಂಡ ಬಾವಿಯಲ್ಲಿ ಹಗಲ ಹೊತ್ತಿನಲ್ಲೇ ಅವರು ಬೀಳುವವರು. ಬಾವಿ ಕಾಣದೆ ಅಲ್ಲದೆ, ಅಹಂಭಾವ ಹಾಗೂ ಅಹಿಂಸೆಯ ಮಿಥ್ಯ ದೃಷ್ಟಿಯಿಂದಾಗಿ ಕೆಲ ದಿನಗಳ ಹಿಂದೆ ಡಿಲ್ಲಿಯಲ್ಲಿ ಭಾರತದ ರಾಜಧಾನಿಯಲ್ಲೇ ಉರ್ದು ಸಮ್ಮೇಳನ ಒಂದು ನಡೆಯಿತು. ಭಾಷಾ ದೃಷ್ಟಿಯಿಂದ ಅಥವಾ ಕೂಡುವಿಕೆಯ ದೃಷ್ಟಿಯಿಂದ ಅದರಲ್ಲೇನೂ ತಪ್ಪಿಲ್ಲದಿದ್ದರೂ ಪಾಕಿಸ್ತಾನಿ ಪ್ರಮುಖರು ಅದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಸಮ್ಮೇಳನ ಮುಕ್ತಾಯವಾಯಿತು. ವಿಷಗಾಳಿ ಹಬ್ಬಿ ಹೋಯಿತು. ಇಂದಿನ ಆಕ್ರಮಣದ ಸಮಯದಲ್ಲಿ ಅದು ಸರಿಯಲ್ಲವೆಂಬುದು ಶ್ರೀ ಸಾಮಾನ್ಯನಿಗೆ ಗೊತ್ತಾಗುತ್ತದೆ. ಆದರೂ ಕೆಲವರಿದ್ದಾರಲ್ಲಾ? ಭಾರತೀಯ ಜನ ಸಂಘದ ಧುರೀಣ ಶ್ರೀ ಅಟಲ ಬಿಹಾರಿ ವಾಜಪೇಯಿಯವರು ಈ ವಿಷಯದ ಕುರಿತು ರಾಜ್ಯಸಭೆಯಲ್ಲಿ ಪ್ರಸ್ತಾಪ ಮಾಡಿದರು. ಪ್ರಸ್ತಾಪನೆ ಸಮ್ಮೇಳನದ ಕುರಿತು ಅಲ್ಲ; ಪಾಕಿಸ್ತಾನಿ ಪ್ರಮುಖರ ಪ್ರಮುಖ ಚಟುವಟಿಕೆಗಳ ಕುರಿತು. ರಾಷ್ಟ್ರೀಯತೆ ಅಲ್ಲದೆ ಮಾನವೀಯತೆಯ ದೃಷ್ಟಿಯಿಂದ ಅದರಲ್ಲಿ ಭಾಗವಹಿಸಿದ್ದವರು ತಲೆ ಕೆಳಗೆ ಹಾಕಬೇಕಾಗಿತ್ತು, ತಪ್ಪು ಒಪ್ಪಿಕೊಳ್ಳಬೇಕಾಗಿತ್ತು. ದುರಾದೃಷ್ಟವಶಾತ್ ಹಾಗಾಗಲಿಲ್ಲ. ಅದರ ಬದಲು ಸುಮ್ಮಗಾದರೂ ಉಳಿದರೇ? ಅದೂ ಇಲ್ಲ. ಶ್ರೀ ಅಟಲ ಬಿಹಾರಿ ವಾಜಪೇಯಿಯವರತ್ತ ಮಾತಿನ ಬಾಣ ಹೊಡೆದರು. ಅದೂ ಎಂತಹದ್ದು? ಅವರು ಕೇಳಿದ ಪ್ರಶ್ನೆ ಯಾವದು? ನೇಪಾಲದ ನರೇಶರು ಭಾರತದಲ್ಲಿ ಹಿಂದೂ ಸಮ್ಮೇಳನದಲ್ಲಿ ಭಾಗವಹಿಸುವದು ಸರಿಯಾದಲ್ಲಿ ಪಾಕಿಸ್ತಾನಿ ದೂತ ಉರ್ದು ಸಮ್ಮೇಳನದಲ್ಲಿ ಭಾಗವಹಿಸುವದರಲ್ಲಿ ತಪ್ಪೇನಿದೆ? ಏನು ಬುದ್ಧಿವಂತಿಕೆಯ ಪ್ರಶ್ನೆ! ಅವರ ಮುಂದೆಸೂಳಗಿರುವದಾದರೂ ಏನು?

ರಾಷ್ಟ್ರೀಯ ಸ್ವಯಂ-ಸೇವಕ ಸಂಘದ ಉತ್ಸವದಲ್ಲಿ ಭಾಗ ವಹಿಸಲು ನೇಪಾಲ ನರೇಶ ಬರುವವರಿದ್ದರು. ಆದರೆ ಶಕುನಿ ತಂತ್ರ ವಗೈರೆಗಳಿಂದಾಗಿ ಅವರು ಬರಲಿಲ್ಲ. ಅಂದರೆ ಭಾಗ ವಹಿಸಲು ಅವರನ್ನು ಅಂದ ಬಿಟ್ಟಿರುವದಿಲ್ಲ. ಪ್ರಶ್ನಕಾರರಿಗೆ ಅದು ಚೆನ್ನಾಗಿ ಗೊತ್ತು. ಅದು ತಪ್ಪೆನ್ನುವವರು ಇದನ್ನೆಂತು ಸರಿಯೆಂದು ಹೇಳುವುದು? ಉರ್ದು ಮುಹಮ್ಮದೀಯರ ಭಾಷೆ ಏನು? ಸರಿ, ಇಂತಹ ಪ್ರಶ್ನೆಗಳು ಇಲ್ಲಿ ಬೇಡ.

ಪಾಕಿಸ್ತಾನದಂತೆ ನೇಪಾಲ ನಮ್ಮ ದೇಶದ ಮೇಲೆ ಆಕ್ರಮಣ ನಡೆಸಿರುತ್ತದೆಯೇ? ಪಾಕಿಸ್ತಾನದಂತೆ ನೇಪಾಲ ನಮಗೆ ಪಿಶಾಚಿ ಪೀಡೆ ಇದೆಯೇ? ನೇಪಾಲ ನೇಹಿಗ ನಾಡಿದೆಯೇ? ನೇಪಾಲವೂ ಆಕ್ರಮಣ ನಡೆಸಬೇಕೆಂದು ಅವರು ಬೆನ್ನು ತಟ್ಟುತ್ತಿರುವರೇ?

ವಾಸ್ತವ್ಯ ಪರಿಸ್ಥಿತಿ ಹೀಗಿರುವಾಗ ನಾಲ್ಕಿಸಗಳ ಶಂಕರಾಚಾರ್ಯರು ಒಂದಾಗಿ ನಿಂತು ಭಾರತವು ಪುನಃ ವಿಶ್ವಗುರುವಾಗಲು ಪ್ರಯತ್ನಿಸಬೇಕೆನ್ನುವಾಗ ಅದರಿಂದ ಚೈನಾ ಹಾಗೂ ಪಾಕಿಸ್ತಾನದ ಆಕ್ರಮಣವನ್ನು ತಡೆಯಲು ಸಾಧ್ಯವೇ ಎನ್ನುವ ಪ್ರಶ್ನೆಯನ್ನು ಕೆಲವರು ಕೇಳುವದರಲ್ಲೇನೂ ಆಶ್ಚರ್ಯವಿಲ್ಲ. ಅಂತಹವರ ಮೆದುಳಿನಲ್ಲಿ ಅಂತಹದ್ದೇ ಪ್ರಶ್ನೆ ಎದ್ದು ಬರುವುದು.

ಅಂತಹವರಿಗೆ ಚೈನಾದ ವೆಯಿ ಮನೆತನದ ರಾಜಾ ಶಿ—ಹು ಉತ್ತರವಿತ್ತಿದ್ದಾನೆ. ಚೈನಾದಲ್ಲಿ ಬೌದ್ಧ ಮತಪ್ರಚಾರಕ್ಕೆ ಬಂದಾಗ ಅವನೊಂದು ರಾಜಾಜ್ಞೆಯನ್ನು ಹೊರಡಿಸಿದನು. ಅದರಲ್ಲಿ ಅವನು, "ಒಂದು ವಿಷಯವು ಪೂರ್ಣವೆಂದೂ ಹಾಗೂ ದೋಷರಹಿತವೆಂದು ಕಂಡು ಬಂದಾಗ ಹಳೆಯ ಸಂಪ್ರದಾಯಗಳಿಗೇತಕ್ಕೆ ಅಂಟಿಕೊಂಡಿರಬೇಕೆ"ಂದು ಪ್ರಶ್ನೆ ಹಾಕಿರುವನು; ಮತ್ತು, "ನನ್ನ ಜನರು ಬರ್ಬರರಿದ್ದಾರೆ. (ರೂಕ್ಷರಿದ್ದಾರೆ). ಅವರೆಲ್ಲರಿಗೂ ಬುದ್ಧನನ್ನು ಆರಾಧಿಸಲು ಹಾಗೂ ಇಷ್ಟವಿದ್ದಲ್ಲಿ ಬೌದ್ಧಮತವನ್ನು ಸ್ವೀಕರಿಸಲು ಸ್ವಾತಂತ್ರ್ಯವನ್ನೀಯುತ್ತೇವೆ"ಂದು ಆಶ್ವಾಸನೆಯನ್ನಿತ್ತು ಬೆಂಬಲ ಸೂಚಿಸಿದ್ದಾನೆ. ಇದನ್ನು ಸರಳಾ ಶರ್ಮರ ಲೇಖನದಲ್ಲಿ ಕಾಣಬಹುದು.

ಇಂದಿನ ಸ್ಥಿತಿಯಾದರೂ ಹೇಗಿದೆ? ಕಮ್ಯೂನಿಸಮಿನ ಝಳದಿಂದ ಚೈನಾ ತತ್ತರಿಸುತ್ತಿದೆ. ಮಾವೋ, ಲ್ಯುಗಳ ಬಂಧನದಿಂದ ಬಿಡುಗಡೆಯಾಗಲು ಆಸೆಪಡುತ್ತಿದ್ದಾರೆ. ಅಂತಹ ಸಮಯದಲ್ಲಿ ಆಸೆಯ ಜ್ಯೋತಿಯನ್ನು ತೋರಿಸಬಲ್ಲವರ್ಯಾರು? ಭೌತಿಕವಾದದಿಂದ ಬೆಂಡಾಗಿ ಹೋಗಿದ್ದಾಗ ಯತೀಂದ್ರ ಶಂಕರನಿದ್ದನು. ದೇಶದ ಮೂಲೆ ಮೂಲೆಗಳನ್ನು ಸುತ್ತಿದನು. ಈ ಹಿಂದೂ ಧರ್ಮದ ಅಮೃತ ಸಿಂಚನದಿಂದಾಗಿಯೇ ರಾಣಾಪ್ರತಾಪ, ಶಿವಾಜಿ, ಹುಕ್ಕ ಬುಕ್ಕ ಮುಂತಾದವರ ತೇಜಸ್ಸು ಪ್ರಕಟವಾಯಿತು ಅಷ್ಟೇ ಅಲ್ಲ ವಿಕ್ರಮಾದಿತ್ಯ, ಶಾಲಿವಾಹನರೆದ್ದು ಸಿಂಹನಾದಗೈದರು, ಭಾರತೀಯ ಬಾವುಟ ಗೌರವದಿಂದ ಮೆರೆದಾಡಿತು.

ಅಂದು ಚೈನಾದಲ್ಲಿ ಬೌದ್ಧ ಮತಕ್ಕೆ ದೊರಕಿದ ರಾಜಾಶ್ರಯವಲ್ಲದಿದ್ದರೂ ಜನಾಶ್ರಯ ಒಂದು ಹಿಂದೂ ಧರ್ಮಕ್ಕೆ ಸಿಗಲಿಕ್ಕಿಲ್ಲವೇನು? ಸಿಗುವದರಲ್ಲಿ ಸಂದೇಹವೇನು? ಆದರೆ ಅದಕ್ಕಾಗಿ ಮುಂದೆ ಬರುವವರ್ಯಾರು? ಹಿಂದೂವೆಂದೊಡನೆ ಇಂದೇಕೋ ಹಿಂಜರಿಯುತ್ತಿದ್ದಾರೆ. ರಾಷ್ಟ್ರಾಧ್ಯಕ್ಷ ಶ್ರದ್ಧೆಯ ರಾಧಾಕೃಷ್ಣನ್ ಮಧುರೈ ಮೀನಾಕ್ಷಿ ದೇವಸ್ಥಾನದ ಜೀರ್ಣೋದ್ಧಾರದ ಸಮಯ ಅಭಿಷೇಕಕ್ಕೆ ಬರಲು ಹಿಂಜರಿದರು. ಝಾಕೀರ್ ಹುಸೇನ್ ಕುಂಭಕೋಣದ ಬಳಿ ಇರುವ ಗೋವಿಂದ ಗುಡಿಯಲ್ಲಿ ಹೊಸತಾಗಿ ಕಟ್ಟಿದ ಮಸೀದಿಯನ್ನು ತೆರೆಯಲು ಧಾವಿಸಿ ಬಂದರು. [ಇನ್ನು ಅಲ್ಲಿ ಕೊಟ್ಟ ಭಾಷಣ! —ಅಪೂರ್ವ. ಸಿದರ್ಮಿ ಹಿಂದುಗಳ ಮುಖಕ್ಕೆ ಮಂಗಳಾರತಿ!] ಅಸ್ತು, ಸಮ್ಮೇಳನಕ್ಕೆ ಎಲ್ಲರೂ ಧಾವಿಸಿದ್ದರು, ಹಿಂಜರಿಯುವ ಈ ಮನೋಭಾವನೆಯನ್ನು ತೊರೆದು ಪುನಃ ಸಿಂಹನಾದ ಗೈದಲ್ಲಿ ಒಂದು ಚೈನಾವಲ್ಲ ಹತ್ತು ಚೈನಾವೂ ತನ್ನ ಸ್ವಾಮಿಯನ್ನು ಗುರುತಿಸಿಕೊಂಡೀತು. ಭಾರತದ ಬಾವುಟ ಅಂದು ಬಾನೆತ್ತರದಲ್ಲಿ ಗೌರವದಿಂದ ನೆಲೆದಾಡೀತು.

ವಿಶೇಷ ದಾಖಲೆ ನಿರ್ಮಿಸಿ ವಿಜಯದ ಪಥದಲ್ಲಿ ಮುನ್ನುಗ್ಗುತ್ತಿರುವ

"ವಿಜಯಾ ಬ್ಯಾಂಕ್"

ದಕ್ಷಿಣ ಕನ್ನಡದ ಶೆಡ್ಯೂಲ್ಡ್ ಬೇಂಕುಗಳಲ್ಲಿ ಒಂದಾದ 'ವಿಜಯಾ ಬ್ಯಾಂಕ್' ಇದರ 31-12-64ಕ್ಕೆ ಅಂತ್ಯವಾಗುವ 33ನೇ ವರ್ಷದ ವಾರ್ಷಿಕ ವರದಿಯು ನಮ್ಮ ಕೈಸೇರಿದೆ. ಪ್ರಗತಿ ಸೂಚಕ ಅಂಕೆ ಸಂಖ್ಯೆಗಳನ್ನೊಳಗೊಂಡ ಈ ವರದಿಯು ಬೇಂಕಿನ ಸರ್ವಾಂಗೀಣ ಅಭಿವೃದ್ಧಿಯ ಪರಿಚಯವನ್ನು ಚೆನ್ನಾಗಿ ಮಾಡಿಕೊಡುತ್ತಿದೆ ಎಂದು ಬರೆಯಲು ತುಂಬಾ ಆನಂದವೆನಿಸುತ್ತದೆ.

ಇತ್ತೀಚಿನ ಎರಡೂವರೆ ವರ್ಷಗಳಿಂದ ಬೇಂಕು ತೀವ್ರ ಅಭಿವೃದ್ಧಿಯನ್ನು ಹೊಂದಿದೆ ಎಂದು ವರದಿಯಿಂದ ವಿದಿತವಾಗುತ್ತದೆ. ಬ್ಯಾಂಕಿನ ಭಂಡವಾಳ, ಕಾದಿಟ್ಟ ನಿಧಿ, ಠೇವಣಾತಿಗಳಲ್ಲಿ ಗಣನೀಯ ಪರಿಮಾಣದ ಹೆಚ್ಚಳವಾಗಿರುವುದು ಕಂಡು ಬರುತ್ತಿದೆ. ಭಂಡವಾಳವು 10.76 ಲಕ್ಷಗಳಾಗಿದ್ದರೆ, ಕಾದಿಟ್ಟ ನಿಧಿಯು 3,95 ಲಕ್ಷಗಳಿಗೇರಿದೆ. ಕಾದಿಟ್ಟ ನಿಧಿಯು ಭಂಡವಾಳದ ಮೊತ್ತದ ಮೂರನೇ ಒಂದಂಶದಷ್ಟಿರುವುದು ಸಮಾಧಾನಕರವಾದ ವಿಷಯ.

ಬ್ಯಾಂಕಿನ ಠೇವಣಾತಿಯ ಹೆಚ್ಚಳವು ಉಲ್ಲೇಖನೀಯವಾದ ಅಂಶವಾಗಿದೆ. 1931ರಲ್ಲಿ ಸ್ಥಾಪಿತಗೊಂಡ ಈ ಬೇಂಕಿನ ಠೇವಣಾತಿಯು 1961ರ ವರೆಗೆ 1,43,91,000 ಆಗಿತ್ತು, ಈ ವರ್ಷಾಂತ್ಯಕ್ಕೆ ಠೇವಣಾತಿಯು 2,52,09,000 ರೂ.ಗಳಿಗೇರಿದೆ, ಈ ಹೆಚ್ಚಳವು ಸೇಕಡಾ 175 ಆಗಿದೆ. ಕಳೆದ ಮೂವತ್ತು ವರ್ಷಗಳಲ್ಲಿ ಸಾಧಿಸಲಾಗದುದನ್ನು ಬರೇ ಎರಡೂವರೆ ವರ್ಷಗಳಲ್ಲಿ ಸಾಧಿಸಿದುದು ಬ್ಯಾಂಕಿನಲ್ಲಿ ನವಚೈತನ್ಯತೆಯು ಹರಿಯುತ್ತಿದೆ ಎಂಬುದನ್ನು ತೋರಿಸುತ್ತಿದೆ.

1961ರಲ್ಲಿ ಬರೇ 30,000 ರೂ.ಗಳ ಲಾಭ ಗಳಿಸಿದ ಈ ಬ್ಯಾಂಕು 1964ರಲ್ಲಿ 1,70,717.88 ರೂ-ಗಳ ಲಾಭ ಗಳಿಸಿರುವುದು ಇನ್ನೊಂದು ಮಹತ್ಸಾಧನೆ. ಪಾಲುದಾರರಿಗೆ ಕಳೆದ ಎರಡು ವರ್ಷಗಳಂತೆ ಈ ವರ್ಷವೂ 5%ದಷ್ಟು ಲಾಭ ಹಂಚಲಾಗಿದೆ.

ಚಿಕ್ಕ ಬ್ಯಾಂಕುಗಳನ್ನು ದೊಡ್ಡ ಬ್ಯಾಂಕುಗಳೊಂದಿಗೆ ವಿಲೀನಗೊಳಿಸುವ ರಿಸರ್ವ್ ಬ್ಯಾಂಕಿನ ಯೋಜನೆಯಂತೆ ವರದಿ ವರ್ಷದಲ್ಲಿ ಐದು ಚಿಕ್ಕ ಬ್ಯಾಂಕುಗಳು ಈ ಬ್ಯಾಂಕಿನೊಂದಿಗೆ ಸೇರ್ಪಡೆಗೊಳಿಸಲ್ಪಟ್ಟವು. ಈ ಐದು ಬ್ಯಾಂಕುಗಳ ಸೇರ್ಪಡೆಯಿಂದ ಬ್ಯಾಂಕಿನ ಶಾಖಾ ಸಮುದಾಯಕ್ಕೆ 19 ಶಾಖೆಗಳು ಸೇರಿಸಲ್ಪಟ್ಟವು. 1962ರಲ್ಲಿ ಕೇವಲ 21 ಶಾಖೆಗಳಿದ್ದ ಈ ಬ್ಯಾಂಕು ಈಗ 52 ಶಾಖೆಗಳ ಮೂಲಕ ಬ್ಯಾಂಕಿಂಗ್ ಸೇವೆಯನ್ನು ಸಲ್ಲಿಸುತ್ತಿದೆ. ಈ ಮುನ್ನಡೆಯು ಪ್ರಗತಿಯ ದ್ಯೋತಕವಾಗಿದೆ. ವರದಿ ವರ್ಷದಲ್ಲಿ ಬ್ಯಾಂಕು 7 ಹೊಸ ಶಾಖೆಗಳನ್ನು ತೆರೆಯಿತು. 1964ನೇ ವರ್ಷವೊಂದರಲ್ಲೇ 26 ಹೊಸ ಶಾಖೆಗಳು ತೆರೆಯಲ್ಪಟ್ಟಿರುವುದು ನಿಜವಾಗಿಯೂ ಶ್ಲಾಘನೀಯವಾದ ಅಂಶ.

ವಿಜಯಾ ಬ್ಯಾಂಕಿನ ಇತ್ತೀಚಿನ ಪ್ರಗತಿಯು ನಿಜಕ್ಕೂ ಉತ್ತೇಜನಕಾರಿಯಾಗಿದೆ. ದಕ್ಷಿಣ ಕನ್ನಡದ ಬ್ಯಾಂಕಿಂಗ್ ಸಂಸ್ಥೆಗಳಲ್ಲಿ ಹಲವು ಈಗಾಗಲೇ ದೇಶವ್ಯಾಪಿಯಾಗಿವೆ. ಅಂಥವುಗಳ ಸಾಲಿನಲ್ಲಿ ವಿಜಯ ಬೇಂಕು ಕೂಡಾ ಸದ್ಯವೇ ಸೇರದೆ ಉಳಿಯಲಾರದು. ಈ ವರ್ಷದ ಮುನ್ನಡೆಯು ಈ ಮಾತಿಗೆ ಸಾಕ್ಷಿ ನುಡಿಯುತ್ತಿದೆ. ಮುನ್ನಡೆವ ಲಕ್ಷಣ ಹಾಗೂ ಸಾಮರ್ಥ್ಯಗಳನ್ನು ಅದು ಈಗಾಗಲೇ ತೋರಿದೆ.

ಬ್ಯಾಂಕಿನ ಈ ತರದ ಮುನ್ನಡೆಗೆ ಮುಖ್ಯ ಕಾರಣಕರ್ತರು ಚೇರ್‌ಮೇನ್‌ರಾಗಿರುವ ಶ್ರೀ ಎಂ. ಸುಂದರರಾಮ ಶೆಟ್ಟರೆನ್ನಬಹುದು. ಇವರು 1962ರ ವೇಳೆಯಲ್ಲಿ ಚೇರ್‌ಮೇನ್‌ರಾದ ಬಳಿಕ ಬ್ಯಾಂಕು ಗಣನೀಯ ಪ್ರಗತಿ ಸಾಧಿಸಿದೆ ಎಂಬುದು ಅಂಕೆ ಸಂಖ್ಯೆಗಳಿಂದ ವಿದಿತವಾಗುತ್ತದೆ. ಠೇವಣಾತಿ, ಶಾಖಾ ಸಮುದಾಯ ಹಾಗೂ ಇನ್ನಿತರ ದಿಸೆಗಳಲ್ಲಿ ದಾಖಲೆಯನ್ನು ಈ ಬ್ಯಾಂಕು, ಶ್ರೀ ಶೆಟ್ಟರ ಕಾಲದಲ್ಲಿ ನಿರ್ಮಿಸಿತು.

ಶ್ರೀ ಶೆಟ್ಟರ ಜತೆಗೆ ಹೆಗಲಿಗೆ ಹೆಗಲು ಕೊಟ್ಟು ದುಡಿದ ಆಡಳಿತ ಮಂಡಳಿಯ ಸದಸ್ಯರು, ಹಾಗೂ ಕಾರ್ಯದರ್ಶಿ ಶ್ರೀ ಪಿ. ಜಯರಾಮ ಶೆಟ್ಟರು ಈ ಪ್ರಗತಿಯ ಸಾಧನೆಗೆ ನೆರವಾಗಿದ್ದಾರೆ. ನೌಕರರ ಸಹಕಾರವೂ ಸ್ಮರಿಸತಕ್ಕದು. ವಿಜಯದ ಪಥದಲ್ಲಿ ಮುನ್ನುಗ್ಗುತ್ತಿರುವ ವಿಜಯಾ ಬ್ಯಾಂಕಿನ ಈ ವಿಶೇಷ ದಾಖಲೆಗೆ ಕಾರಣರಾದ ಮೇಲಿನವರೆಲ್ಲರನ್ನೂ ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

ಸಾಧಿಸಿದುದು ಗಣನೀಯವಾದಂತೆ ಸಾಧಿಸಲಿರುವುದು ಬಹಳ ಇದೆ. ವಿಜಯಾ ಬ್ಯಾಂಕು ಹಲವು ವಿಧದ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸಲು ಯತ್ನಿಸುತ್ತಿದೆ. ಮುಂಬರುವ ವರ್ಷಗಳಲ್ಲಿ ಈ ಬ್ಯಾಂಕು ಇನ್ನಷ್ಟು ಪ್ರಗತಿ ಹೊಂದಿ, ದಕ್ಷಿಣ ಕನ್ನಡದ ಇತರ ಬ್ಯಾಂಕುಗಳ ಸಾಲಿನಲ್ಲಿ ನಿಲ್ಲುವಂತಾಗಲೆಂದು ಹಾರೈಸುತ್ತೇವೆ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ಹತು.

ಗೀತಾ-ದ್ವಿತೀಯಾಧ್ಯಾಯ

(ಆರನೇ ಪುಟದಿಂದ)

ಹೀಗೆ ಗೀತೆಯನ್ನು ಅರ್ಜುನನು, ವೀರಾಧಿ ವೀರನು ಹನ್ನೆರಡು ವರ್ಷ ಕಾಲ ಅರಣ್ಯದಲ್ಲಿರುವಾಗ ತನ್ನ ಬಯಕೆಗಳನ್ನು ಸುಪ್ತವಾಗಿರಿಸಿದುದರಿಂದ ಕೇಂದ್ರೀಕೃತ ಶಕ್ತಿ ಅವನಲ್ಲಿ ಉಂಟಾಯಿತು. ಆ ಶಕ್ತಿ ಸರಿಯಾದ ಹಾದಿಯಲ್ಲಿ ಪ್ರವಹಿಸುವಂತೆ, ಶ್ರೀಕೃಷ್ಣನು ಗೀತೋಪದೇಶ ಕುರುಕ್ಷೇತ್ರ ಯುದ್ಧಭೂಮಿಯಲ್ಲಿ ಅರ್ಜುನನಿಗೆ ಮಾಡಬೇಕಾಯಿತು.

ಪಂಚೇಂದ್ರಿಯಗಳ ಮೂಲಕ ಪರಿಚಯಗೊಂಡ ಬಾಹ್ಯಜಗತ್ತಿನ ಸ್ಥೂಲ ವಸ್ತುಗಳ ಮೇಲೆ ಸಂಶೋಧನೆ ನಡೆಸಿ ಕಂಡುಹಿಡಿದ ವಿಷಯವು ವಿಜ್ಞಾನವೆಂದಾದರೆ ಆಂತರಿಕ ಮನ, ಬುದ್ಧಿಗಳ ಮೇಲೆ ಸಂಶೋಧನೆ ನಡೆಸಿ ಸಂಗ್ರಹಿಸಿದುದು ತತ್ವಜ್ಞಾನವಾಯಿತು. ಜಗತ್ತಿಗೆ ಇವು ಎರಡೂ ಅಗತ್ಯವಿದೆ. ಇದರಲ್ಲಿ ಒಂದನ್ನು ಬಿಟ್ಟು ಇನ್ನೊಂದು ವಸ್ತು ಇದ್ದರೆ ಮಾನವನು ಸುಖವಾಗಿ ಬಾಳಲಾರನು. ಗೀತೆಯ ಕೊನೆಯಲ್ಲಿ ಶ್ರೀಕೃಷ್ಣನು ಹೀಗೆ ಹೇಳಿರುವನು. ಎಲ್ಲಿ ಅಧ್ಯಾತ್ಮಿಕ ಜ್ಞಾನವು ಇದ್ದು (ಕೃಷ್ಣನು) ಎಲ್ಲಿ ಕರ್ಮ ಮಾಡಲು ಹೊರಟ ಅರ್ಜುನನು ಇರುವನೋ ಅಲ್ಲಿ ಸರ್ವ ಸಂಪದವೂ, ವಿಜಯವೂ ಇರುವುದು. ಹಾಗೆ ಲೋಕವು ಸುಖಮಯವಾಗಲು ಅಧ್ಯಾತ್ಮಿಕ ಜ್ಞಾನವು ವಿಜ್ಞಾನದೊಡನೆ ಎಂದರೆ ಅಧ್ಯಾತ್ಮಿಕತೆಯು ಕರ್ಮೋತ್ಸಾಹದೊಡನೆ ಮಿಳಿತಗೊಂಡರೆ ಆ ರಾಷ್ಟ್ರವಾಗಲೀ, ವ್ಯಕ್ತಿಯಾಗಲೀ ಅತ್ಯುಚ್ಚ ಮಟ್ಟದ ಬಾಳ್ವೆ ಸಾಗಿಸಲು ಸಾಧ್ಯವಾದೀತು. ಆದರೆ ಒಂದರ ಅಧಿಕಾರಗಳು ಇನ್ನೊಂದರ ಅಧಿಕಾರಗಳಾದರೆ ಅಲ್ಲಿ ಕೇವಲ ದುಃಖವೇ ಉಂಟಾದೀತು. ಮತ ಧಾರ್ಮಿಕ ಮುಖಂಡರು ವಿಜ್ಞಾನವನ್ನು ಆಳಲು ಯತ್ನಿಸಿದರೆ ವಿಜ್ಞಾನಿಗಳು ಧರ್ಮ, ಮತಗಳನ್ನು ಆಳಲು ಯತ್ನಿಸಿದರೆ ಇಬ್ಬರಿಗೂ ನಷ್ಟ ಕಷ್ಟ. ಒಂದರ ವಿಚಾರ ಇನ್ನೊಬ್ಬರಿಗೆ ತಿಳಿದಿಲ್ಲ. ಇದಕ್ಕೆ ದೃಷ್ಟಾಂತವಾಗಿ, ಮಧ್ಯಯುಗದ ಕೆಲವು ಶತಮಾನಗಳು, 'Dark Ages' ಎಂದು ಹೆಸರು ಪಡೆದಿವೆ. ಮತ, ಧರ್ಮ ಮುಖಂಡರು ವಿಜ್ಞಾನಿಗಳನ್ನು ಸಂಶೋಧಕರನ್ನು ಜೀವಕೆ ಹಚ್ಚಿ ಕೊಂದಿದ್ದರು. ಆದಕ್ಕಾಗಿ ಜನತೆ ಬಂಡಾಯವೆದ್ದು ಧರ್ಮವನ್ನೇ ಬಿಸುಡಬೇಕೆಂದು ಹೊರಟಿತು. ೧೯ನೇ ಶತಮಾನದಲ್ಲಿ ಡಾರ್ವಿನ್ನನು ಜನಾಂಗದ ಉತ್ಪತ್ತಿ ವಿಷಯ ಸಂಶೋಧನೆ ನಡೆಸಿ ಮಾನವನು ಸೃಷ್ಟಿಯಿಂದಲೇ ಕ್ರಮೇಣ ವಿಕಾಸನವಾಗುತ್ತಾ ಒಂದು ಜಲ, ಚರ, ಪ್ರಾಣಿ ವರ್ಗಗಳಿಂದ ಮೊದಲಾಗಿ, ಕೋತಿ, ಕೊನೆಗೆ ಮಾನವನಾಗಿ ಪರಿವರ್ತನಗೊಂಡನೆಂದು ಸಾರಿದನು. ಆಗ ಜನರಿಗೆ ಧರ್ಮ, ನೀತಿ ಶಾಸ್ತ್ರಗಳು ಬೇಕಾಗಲಿಲ್ಲ. ದೇವರು ಮಾನವನನ್ನು ನಿರ್ಮಿಸಲಿಲ್ಲವೆಂದ ಬಳಿಕ ಈ ಪ್ರಕೃತಿಯಿಂದಲೇ ಜೀವ ಕೋಟಿ ಆರಂಭವಾಯಿತೆಂದ ಬಳಿಕ ನೀತಿ, ಧರ್ಮ ಶಾಸ್ತ್ರಗಳೇಕೆ? ಎಂದು ಜನರು ಭಾವಿಸಿದರು. ಮತ್ತು ಪ್ರಕೃತಿಯಲ್ಲಿ ೯೨ ಮೂಲಭೂತ ಧಾತುಗಳೂ, ಇವೆ ಎಂದು ವಿಜ್ಞಾನಿಗಳು ವಿಭಾಗಿಸಿದರು. ಆದರೆ ೨೦ನೇ ಶತಮಾನದಲ್ಲಿ ಈ ಎಲ್ಲಾ ಮೂಲಭೂತ ವಸ್ತುಗಳಿಗೆ ಮೂಲ ಭೂತ ವಸ್ತುವಾದ ಅಣು ಒಡೆಯಿತು. ಆದರಲ್ಲಿ ಕೇವಲ ಶಕ್ತಿಯೇ ಇದೆ ಎಂದು ತಿಳಿಯಿತು. ಆ ಶಕ್ತಿ ವೇಗವಾಗಿ ಚಲಿಸುವುದೆಂದೂ ತಿಳಿಯಿತು. ಆ ವೇಗ ಹೆಚ್ಚು ಕಡಿಮೆಯಾದಂತೆ, ಅಣುವಿನ ರಚನೆ ವ್ಯತ್ಯಾಸ ಇತ್ಯಾದಿ ತಿಳಿದು ಬಂತು.

ಪ್ರಕೃತಿಯ ಮೂಲಭೂತ ವಸ್ತು ಎನಿಸದ ಅಣು ಮಾಯವಾಗಿ ಕೇವಲ ವೇಗವಾಗಿ ತಿರುಗುವ ಶಕ್ತಿಯೇ ಆ ಪ್ರಕೃತಿಯ ಆಧಾರವೆಂದು, ವಿಜ್ಞಾನವು ನಿರ್ಧರಿಸಿತು. ಈಗ ಆ ಶಕ್ತಿಯನ್ನು ಹಾಗೆ ತಿರುಗಿಸಲು ಮತ್ತು ಜಗತ್ತಿನ ಎಲ್ಲಾ ವಸ್ತುಗಳು ಹಾಗೆ ಒಂದೇ ತರಹದಲ್ಲಿ, ವಿವಿಧ ರೀತಿಯಲ್ಲಿ ಕ್ರಮವಾಗಿ, ತಿರುಗುವಂತೆ ಪ್ರೇರೇಪಿಸುವವರು ಯಾರು? ಎಂಬ ಯೋಚನೆ ಮೊದಲಾಯಿತು. ಹಾಗಾದರೆ ಈ ಪ್ರಕೃತಿಯ ಹಿಂದೆ ಅಗೋಚರವಾದ ಒಂದು ಶಕ್ತಿ ಇದೆ ಎಂದು ಊಹಿಸಬೇಕಾಯಿತು. ಈ ಶಕ್ತಿಯ ವಿಷಯ ತಿಳಿಯಲು ಶಾಸ್ತ್ರ ಗ್ರಂಥಗಳನ್ನು ಓದಬೇಕಾಗಿದೆ. ಆ ಕೆಲಸವನ್ನು ಶಾಸ್ತ್ರ, ಮತ ಧಾರ್ಮಿಕ ಗ್ರಂಥಗಳು, ಮಹರ್ಷಿಗಳು ಮಾಡಿರುವರು.

ಈ ಶಕ್ತಿ ಇದ್ದುದರಿಂದಲೇ ಐನ್‌ಸ್ಟೀನ್ Delative theory ಬರೆದನು. ಒಂದು ಇರುವೆ ಚಲಿಸುವುದು. ಒಂದು ಕಲ್ಲು ಸ್ಥಿರವಾಗಿ ನಿಲ್ಲುವುದು. ಈ ಶಕ್ತಿಯಿಂದ ನಾವು ಬಾಹ್ಯ ಜಗತ್ತಿನ ಅನುಭವ ಪಡೆಯುವೆವು.

ಅಂತರ್, ಬಹಿರಂಗ, ಜೀವನವನ್ನು ಉತ್ತಮವಾಗಿ ಬಾಳಲು, ಬಾಳಿನಲ್ಲಿ ಯಶಸ್ವಿಯಾಗಲು, ಶ್ರೀ ಕೃಷ್ಣನು ಗೀತೆಯಲ್ಲಿ ಸಲಹೆಗಳನ್ನಿತ್ತಿರುವನು. ಇದು ಕೇವಲ ಅರ್ಜುನನಿಗೆ ಮಾತ್ರ ಬೋಧಿಸಿದುದಾಗಿಲ್ಲ. ಇಡೀ ಮಾನವ ಜನಾಂಗಕ್ಕೆ ಜೀವನವನ್ನು ಬಾಳುವ ರೀತಿಯನ್ನು ನಿರೂಪಿಸಲು ವ್ಯಾಸರು ಬರೆದುದಾಗಿದೆ. ಮಹಾಭಾರತದ ನಡುವೆ ಬಂದ ಈ ಗೀತೆಯು ಜನರಿಗೆ ಹಿಂದೆ ಮಾತ್ರವಲ್ಲ, ಇಂದೂ ಮಾರ್ಗದರ್ಶನ ನೀಡೀತು.

ಈ ಗೀತಾಭ್ಯಾಸವನ್ನು ತಿಳಿಯಲು, ಪವಿತ್ರವಾದ ಬುದ್ಧಿ ಮತ್ತು ಮನದಿಂದ ಕಲಿಯಬೇಕು. ಇಲ್ಲವಾದರೆ ನಾವು ಹೆಚ್ಚಿನ ಪ್ರಯೋಜನ ಪಡೆಯಲಾರೆವು

ಆಶಯ

ನಮ್ಮ ಕಣ್ಗಳಲಿ ಇಂದು
ವೈರಿಯನ ಕ... ತಲೆ
ಸುಟ್ಟು ಭಸ್ಮವ ಮಾಳ್ಪಶಕ್ತಿ ಬರಲಿ!
ನಮ್ಮ ಕರಗಳಲಿಂದು
ಪಾಂಚಜನ್ಯವ ಹಿಡಿದು
ಜಯಭೇರಿ ಭಾರಿಸುವ ಶಕ್ತಿ ಬರಲಿ!
ನಮ್ಮ ನರನಾಡಿಯಲಿ
ಉಕ್ಕಿ ಹರಿಯಲಿ ರಕ್ತ
ವೈರಿರಕ್ತವ ಹಿಂತು ಬಿಸಿಯೇರಲಿ!
ತಾಯಿನಾಡಿನ ವೈರಿ
ಮಣ್ಣುಮುಕ್ಕುವ ತನಕ
ವೈರಿಯನು ಕೆಡಹುವ ಧೈರ್ಯ
ಬರಲಿ!
ನಮ್ಮ ಹೃದಯದಿ ಇಂದು
ದೇಶಭಕ್ತಿಯು ಹುಟ್ಟಿ
ಮಾತೃಭೂಮಿಯ ಕರೆಗೆ
ಓಗೊಡಲಿ!
ನಮ್ಮ ಹೃದಯದ ಉಸಿರು
ಹೊರ ಸೂಸುತಿರುವನಕ
ಹೃದಯದೀ ಆಶಯವು
ಮೂಡಿಬರಲಿ!

—ಎಸ್. ಪದ್ಮನಾಭ ನಾಯಕ್,
ಉಡುಪಿ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

REP 25/1965 in S. C 131/63
Karkal D. M. C.

ನಾಭಿರಾಜ ಇಂದ್ರ —ಅರ್ಜಿದಾರ.

ಧರ್ಮರಾಜ ಕಂಬಳಿ, ಬೆಳ್ತಂಗಡಿ ತಾಲ್ಲೂಕು ಕುಕ್ಕೇಡಿ ಗ್ರಾಮದಲ್ಲಿರುವವ —ಎದ್ರಿ.

ಕೋರ್ಟು ಮುಖಾಂತರ ಎದ್ರಿಗೆ ತಿಳಿಸುವುದೇನೆಂದರೆ—

ಮೇಲ್ಕಂಡ ಅಮಲ್ದಾರಿ ಪ್ರಕಾರ ಅರ್ಜಿದಾರನಿಗೆ ಎದ್ರಿಯಿಂದ ಬರಬೇಕಾದ ಡಿಕ್ರಿ ಹಣ ವಸೂಲು ಕುರಿತು ಬೆಳ್ತಂಗಡಿ ತಾಲ್ಲೂಕು ಕುಕ್ಕೇಡಿ ಗ್ರಾಮದ ಎದ್ರಿಯ ಹಕ್ಕಿನ ಆಸ್ತಿಯನ್ನು ಜಪ್ತಿ ಪಡಿಸಿ ನಿರ್ಬಂಧಿಸಲಾಗಿದೆಯೆಂತಲೂ ಸದ್ರಿ ಅಮಲ್ದಾರಿಯನ್ನು ತಾ. 31-5-1965ಕ್ಕೆ ತನಿಕೆಗೆ ಇಟ್ಟಿರುತ್ತದೆಯೆಂತಲೂ ಈ ಮೂಲಕ ತಿಳಿಸಲಾಗಿದೆ. ಆ ಕುರಿತು ಆಕ್ಷೇಪ ಇದ್ದರೆ ಸದ್ರಿ ನ್ಯಾಯದಿನ ಪೂರ್ವಾಹ್ನ ಗಂಟೆ 11ಕ್ಕೆ ಕೋರ್ಟು ಮುಂದೆ ಸ್ವತಹಾ ಯಾ ವಕೀಲರ ದ್ವಾರಾ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಸದ್ರಿ ಅಮಲ್ದಾರಿ ಮುಂದುವರಿಸಲಾದೀತು.

N. J. Kadamba.
Advocate of Petitioner.

ಬೆಳ್ತಂಗಡಿ, 21-4-1965.

ಉಪಯುಕ್ತವಾದ ಕೆಲವು ಪುಸ್ತಕಗಳು

		ರೂ. ನ.
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ	(ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು	(ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಅನು: ಕು.ಶಿ.ಹರಿದಾಸ ಭಟ್)	2=00
ಹಿರೋಶಿಮಾದಿಂದ ಜಿನೇವ	(ಯು. ಆರ್. ಆಚಾರ್ಯ)	1=50
ಮೋಹದ ಸುಳಿಜಾಲ	(ವೀರಪ್ಪ ಯುಗಟಿ)	1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ	(ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ಏಶಿಯದ ಸಂಪತ್ತು	(ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು	(ಅನು: ಕು.ಶಿ.ಹರಿದಾಸ ಭಟ್)	1=75
ಕುಲವಿಲ್ಲದ ಹೆಣ್ಣು	(ಪಿ. ವೆಂಕೋಬಾಚಾರ್ಯ)	1=50
ಚಿತ್ರಾಂಗದೆ	(ಅನು: ಕೆ. ಕೆ. ಶೆಟ್ಟಿ)	0=60
ರವೀಂದ್ರರ ಕತೆಗಳು	(ಹನುಮಂತ ರಾವ್ ಮಾಂಜ್ರೇಕರ)	0=90
ಹಸುರು ಹಂಸ	(ನಚಿಕೇತ)	2=00
ಭಾವಾರ್ಜನೆ	(ನಚಿಕೇತ)	1=25
ಋಣ ಯಾತ್ರೆ	(ನಚಿಕೇತ)	1=50
ಗೀತೆಯ ಕೈಗನ್ನಡಿ	(ಹೊಸಕೆರೆ ಚಿದಂಬರಯ್ಯ)	1=00

ವಿವರವಾದ ಪಟ್ಟಿಗಾಗಿ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ. ಯವರ ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು—:
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ ಉಡುಪಿ.

ಆತ್ಮ ಹನನದಿಂದ ತುತ್ತಿನ ಚೀಲ ತುಂಬದಿರಿ

(ಐದನೇ ಪುಟದಿಂದ)

ಕನ್ನಡ ನುಡಿಯ ಸಂಪತ್ತು

ಗೆಲವಿನ ಭೇರಿಯನ್ನು ಮೊಳಗಿಸಿ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಬೀದಿ ಮೆರೆದ ಆದ್ಯ ಕಾವ್ಯಗಳೆಂದರೆ ಚಂಪೂ ಪ್ರಬಂಧಗಳು. ಶಬ್ದಗುಣ, ಅರ್ಥಗುಣ, ರಸಭಾವ ಸಮೃದ್ಧವಾದ ಗದ್ಯ ಪದ್ಯಗಳ ಮನೋಜ್ಞ ಮಿಶ್ರಣದಿಂದ ರಚಿತವಾದ ಚಂಪುಗಳು ಕನ್ನಡ ಸರಸ್ವತಿಯ ಕಂಠಾಭರಣಗಳಾಗಿವೆ. ಕನ್ನಡದ ಚಂಪೂವಿಗೆ ಸರಿ ಹೆಗಲಾಗಬಲ್ಲ ಚಂಪು ಬೇರಾವ ಭಾಷೆಯಲ್ಲಿದೆ?

ವಚನ ಸಾಹಿತ್ಯವು ಕನ್ನಡದ ಹೆಮ್ಮೆಯ ಒಡವೆ. ಪದ್ಯಗಂಧಿಯಾಗಿ, ಅನುಭಾವ ಪೂರ್ಣವಾಗಿ, ಭಾವೋನ್ನತವಾಗಿ, ನಾದಬೋಧ ಸುಂದರವಾದ ಗತಿಗಮಕಗಳಿಂದ ಒಪ್ಪುವ ಈ ರಚನೆಗೆ ಸರಿಯಾದುದು ಎಲ್ಲಿದೆ?

ಹೊಸ ಸಾಹಿತ್ಯದ ದಾರಿ

ಈ ಕಾಲದ ಕನ್ನಡ ಸಾಹಿತ್ಯವನ್ನು ಸಮಗ್ರವಾಗಿ ಅವಲೋಕಿಸಿದರೆ, ಕಂಡುಬರುವ ಮುಖ್ಯ ಲಕ್ಷಣಗಳಿವು: ಹಳೆಯದು ಎಂದೆನಿಸುವ ಸಂಪ್ರದಾಯವು ಕೀರ್ತಿಶೇಷವಾಗಿದೆ. ಮೂಡಿ ಬಂದ ಹೊಸತು, ತನ್ನ ಹೊಸತನವನ್ನು, ದೀರ್ಘ ಕಾಲದವರೆಗೆ ಉಳಿಸಿಕೊಳ್ಳುವುದಿಲ್ಲ. ನಮ್ಮ ಸಾಹಿತ್ಯದ ಪಾಯುಗುಣದಲ್ಲಿ ವಸ್ತುಗಳು ಬೇಗನೆ ಹಳಸುತ್ತಿವೆ. ಅನ್ಯ ಭಾಷೆಗಳ ಅಥವಾ ವಿಶ್ವ ಜನಾಂಗಳ ಸಂಪರ್ಕ ಕಾರಣದಿಂದ ಪ್ರತಿಪಾದ್ಯ ವಿಷಯಗಳು ವಿಸ್ತಾರವಾಗುತ್ತಿವೆ. ತತ್ವವಾದಗಳ ವರ್ಚಸ್ಸು, ಶುದ್ಧ ಸಾಹಿತ್ಯ ಕೃತಿಗಳಿಗೆ ಹೊಸ ಬಣ್ಣ ಕೊಡುವ ಹಾಗೆ ತೋರುತ್ತದೆ. ಹೊರ ಮೈಯಲ್ಲಿ ಸ್ವತಂತ್ರ ಮನೋಭಾವನೆ ವಿಜೃಂಭಿಸುವಂತೆ ಭಾಸವಾದರೂ ಒಮ್ಮೊಮ್ಮೆ ಒಳ ಮೈಯಲ್ಲಿ ಅನುಕರಣ ಬುದ್ಧಿಯು ಇಣಿಕಿ ನೋಡುವಂತಿದೆ. ಅರ್ಥದ ಹಿಂದೆ ಅನುಧಾವಿಸುವ ಪ್ರಯತ್ನದಲ್ಲಿ ಮುಗ್ಗರಿಸಿ ಬೀಳುವ ಪದಗಳೂ ಪದಗಳೊಂದಿಗೆ ಹೆಜ್ಜೆಯಿಡಲಾರದೆ ಹಿಂದುಳಿಯುವ ಅರ್ಥಗಳೂ ಅಪರೂಪವಲ್ಲ.

ಶ್ಲೀಲ—ಅಶ್ಲೀಲ ಸಾಹಿತ್ಯ

ಸಾಮಾನ್ಯರ ಮಾತಿನಲ್ಲಿ ಹೇಳುವುದಿದ್ದರೆ "ಅಶ್ಲೀಲ"ವೆಂದರೆ "ಭಂಡು". ಯಾವುದು ಭಂಡು? ಯಾವುದು ಅಲ್ಲ? ಎನ್ನುವುದನ್ನು ಸದಭಿರುಚಿಗೆ ಬಿಟ್ಟು ಕೊಡಬೇಕಾಗಿರುತ್ತದೆ. ರಹಸ್ಯದಲ್ಲಿ ಸಂಕೋಚ ಭಾವದಿಂದ ಓದಬೇಕಾದ ಸಾಹಿತ್ಯ ಅಶ್ಲೀಲ; ಬಹಿರಂಗವಾಗಿ ನಿಸ್ಸಂಕೋಚತೆಯಿಂದ ಓದಬಹುದಾದ ಸಾಹಿತ್ಯ ಶ್ಲೀಲ— ಎನ್ನುವ ಸ್ಥೂಲ, ಅತಿಸ್ಥೂಲ ಲಕ್ಷಣ ಕಥನದಿಂದಷ್ಟೆ ನಾವು ತೃಪ್ತಿಹೊಂದಬೇಕು. ಲೇಖಕನ ನಾಡಿಪರೀಕ್ಷೆಯ ಕ್ರಮವೊಂದಿದೆ. ಅದರ ಮೂಲಕ ಸುಲಭವಾಗಿ ಅಶ್ಲೀಲವಾದುದನ್ನು ಗುರುತಿಸಬಹುದು. "ವಾಸನೆಯನ್ನು ಕೆರಳಿಸುವ ಈ ವರ್ಣನೆ ಅಥವಾ ಸನ್ನಿವೇಶವು ಇಲ್ಲದಿರುತ್ತಿದ್ದರೆ, ಕೃತಿಯ ಸರ್ವಾಂಗ ಶೋಭೆಗೆ ಕುಂದು ಬರುತ್ತಿತ್ತೆ? ಮನೋಧರ್ಮ ದೃಷ್ಟಿಯಿಂದ ಇದು ಅವಶ್ಯವಾಗಿತ್ತೇ? ಇಂದ್ರಿಯ ಚಾಪಲ್ಯವನ್ನು ಪುರಸ್ಕರಿಸುವುದಕ್ಕಾಗಿ ಲೇಖಕನು ಹೀಗೆ ಬರೆದುದಲ್ಲವೆ?" ಪ್ರತಿಯೊಬ್ಬ ವಿಚಾರಿ ವಾಚಕನೂ ಈ ಪ್ರಶ್ನೆಗಳಿಗೆ ಉಚಿತೋತ್ತರಗಳನ್ನು ಸಂಗ್ರಹಿಸಬಲ್ಲನು. ತನ್ನಾತ್ಮದೊಡನೆ ಪ್ರಶ್ನಿಸಿ ನಿರ್ಧರಿಸಬಲ್ಲನು. ಬರೆದುದು ಸಮಾಜ ಶ್ರೇಯಸ್ಕಾಗಿ ಅಲ್ಲ—ಪ್ರೇಯಸ್ಕಾಗಿ ಎಂದು ಕಂಡುಬಂದರೆ ಆ ಅಂಶವು ಅಶ್ಲೀಲವೆಂದು ಭಾವಿಸಬೇಕು.

ಪತ್ರಿಕಾ ಪ್ರಪಂಚ

ಪತ್ರಿಕಾ ಸಾಹಿತ್ಯವನ್ನು ಕುರಿತಾಗಿ ಪ್ರಸ್ತಾಪಿಸುವಾಗ, ಸದ್ಯ, ಕಂಡು ಬರುವ ಲೋಪದೋಷಗಳನ್ನು ಹೇಳದಿರಲಾಗುವುದಿಲ್ಲ. ಪತ್ರಿಕಾ ಕರ್ತರಲ್ಲಿ ಅಭ್ಯಸ್ತವಿದ್ಯರಾಗಿರುವವರ ಸಂಖ್ಯೆ ಕಡಿಮೆ. ಲೇಖಕರಲ್ಲಿ, ವರದಿಗಾರರಲ್ಲಿ ಈ ಸಂಖ್ಯೆ ಮತ್ತೂ ಕಡಿಮೆ. ಸ್ವಭಾಷೆಯಲ್ಲಿ ಸಹ ಚೆನ್ನಾಗಿ ಶಿಕ್ಷಿತರಲ್ಲದ ಹಲವರು ಅನ್ಯ ಜೀವನೋಪಾಯವಿಲ್ಲವೆನ್ನುವ ಕಾರಣದಿಂದ ಈ ವೃತ್ತಿಗೆ ಇಳಿಯುತ್ತಾರೆ.

ಸಾಮಾನ್ಯವಾದ ಒಂದು ಆಂಗ್ಲ ದೈನಿಕವನ್ನೂ ನಮ್ಮ ದೈನಿಕವನ್ನೂ ಹೋಲಿಸಿ ನೋಡಿದಲ್ಲಿ ನಮ್ಮ ಪತ್ರಿಕಾ ಸಾಹಿತ್ಯದಲ್ಲಿರುವ ನ್ಯೂನತೆಯು ಸ್ವಯಂ ವ್ಯಕ್ತವಾಗಬಲ್ಲದು. ಮುಂಜಾವದ ಗಾಳಿ ಬೆಳಕುಗಳೊಡನೆ ಮನೆಯೊಳಗೆ ನುಗ್ಗಿ ಬರುವ ದೈನಿಕಗಳು, ಅಭಿಪ್ರಾಯವನ್ನು ಸ್ಪಷ್ಟೀಕೃತವಾಗಿ ಕೊಡಲು ಸಮರ್ಥವಾದ ಭಾಷಾಪಾಕವನ್ನು ಹೊಂದಿದಲ್ಲಿ, ಜನಸಾಮಾನ್ಯದ ಒಂದು ವರ್ಗಕ್ಕೆ ಸಾಹಿತ್ಯ ಸಂಸ್ಕಾರವನ್ನೀಯಲು ತುಂಬ ಪ್ರಯೋಜನವಾದೀತು.

ಸಂಶೋಧನಾ ಸಾಹಿತ್ಯ

ಕೆಲ ವಾಕ್ಯಗಳನ್ನು ಪೋಣಿಸಿ ಒಂದು ಲೇಖನವನ್ನು ಅಣಿಗೊಳಿಸಿದ ಮಾತ್ರದಿಂದ ಸಂಶೋಧನಾ ಸಾಹಿತ್ಯ ನಿರ್ಮಾಣವಾಗುವುದಿಲ್ಲ. ಗಾಢವಾದ ಅಭ್ಯಾಸ; ಬಹು ಶ್ರುತತ್ವ; ಏಕಾಗ್ರಮತಿ; ಆಗ್ರಹ ರಹಿತ ಮನಸ್ಸು; ಫಲಾಪೇಕ್ಷಿತೆಯಿಲ್ಲದ ಕರ್ತವ್ಯ ಬುದ್ಧಿ; ವಿಪ್ರಿಯಾಕಟುನಿಂದೆಯನ್ನು ಕೇಳುವ ಎದೆಕೆಚ್ಚು- ಇಷ್ಟು ಗುಣವಿಲ್ಲದವರಿಗೆ ಸಂಶೋಧನೆ ಸಲ್ಲದು. ಅಂಥವರ ಸಂಖ್ಯೆ ಕಡಿಮೆ; ಅವರ ಕೃತಿಗಳು ಕಡಿಮೆ. ಪ್ರಯತ್ನಿಸಿದವರು ಪ್ರಾಮಾಣಿಕವಾಗಿ ಪ್ರಯತ್ನಿಸಿ, ಮಿತವಾದ ಯಶಸ್ಸನ್ನು ಗಳಿಸಿದ್ದಾರೆ.

ಮುನ್ನೋಟ

ಕನ್ನಡವೆ ಬೋಧ ಭಾಷೆಯಾಗಬೇಕು. ಇದರ ಜತೆ ಆಂಗ್ಲ ಭಾಷೆಗೆ ಗಣನೀಯ ಸ್ಥಾನ ಇರಬೇಕು. ಆಧುನಿಕ ವಿಚಾರ—ವಿಜ್ಞಾನ—ಶಾಸ್ತ್ರ ಸಂಬಂಧವಾದ ಉತ್ತಮ ಗ್ರಂಥಗಳು ಕನ್ನಡಕ್ಕೆ ಅನುವಾದಿಸಲ್ಪಡಬೇಕು. ಪ್ರಾಚೀನ ಕವಿ ಕೃತಿಗಳು ಸುಲಭ ಬೆಲೆಗೆ ಓದುಗರಿಗೆ ದೊರೆಯುವಂತಾಗಬೇಕು. ಪಠ್ಯ ಪುಸ್ತಕಗಳ ಆಯ್ಕೆಯಲ್ಲಿ ಯೋಗ್ಯತೆಗೆ ಬೆಲೆ ದೊರೆಯಬೇಕು. ಭಾಷೆಯ ಅಶುದ್ಧ ಪ್ರಯೋಗಗಳ ಕುರಿತು ನಿರ್ಣಯ ಕೈ ಕೊಳ್ಳಬೇಕು. ಇತ್ಯಾದಿ ಆಶಯಗಳನ್ನು ಅಧ್ಯಕ್ಷರು ವ್ಯಕ್ತ ಪಡಿಸಿದರು.

ಏಕೀಕರಣ

ನಮ್ಮ ನಾಡಿಗೆ ಕರ್ನಾಟಕವೆಂಬ ನಾಮಕರಣವು ಆಗಬೇಡವೆ? ಆಗಬೇಕಾಗಿಲ್ಲ— ಎಂದರೆ, ನನ್ನ ಇದುವರೆಗಿನ ಬಾಳನ್ನು ನಿರಸನ ಮಾಡಿದಂತಾಗಬಹುದು. ಅಖಂಡ ಕರ್ನಾಟಕದ ಕಲ್ಪನೆಯ ಭವ್ಯಚಿತ್ರವು ನನ್ನ ಹೃದಯದ ಭಿತ್ತಿಯಲ್ಲಿ ಅಂಚಿತವಾಗಿದೆ. ಈ ಕನಸನ್ನು ಕಂಡು ಇದುವರೆಗೂ ಬದುಕಿದುದೂ ಆಯಿತು. ಮುಂದೆ ಬದುಕುವುದು ಮೈಸೂರಿನಲ್ಲೇ ಆಗಿದ್ದರೂ ಕನಸು ಅದೇ ಆಗಿದ್ದೀತು. ನಾಡಿನ ಹೆಸರನ್ನು ಕರ್ನಾಟಕವೆಂದು ಪರಿವರ್ತನೆಗೊಳಿಸಿದ ಮಾತ್ರದಿಂದ ಕನಸು ನನಸಾಗುವುದೆಂದು ನಾನು ಭಾವಿಸುವುದಿಲ್ಲ. ಏಕೀಭಾವವಿಲ್ಲದ ಏಕೀಕರಣವು ಸಾರ್ಥಕವಾಗುವಂತಿಲ್ಲ.

ಸಾಹಿತ್ಯ ಕ್ಷೇತ್ರದಲ್ಲಿ ಆರೋಗ್ಯಮಯ ವಾತಾವರಣವಿರಲಿ! ದೂರಗತ ಹೃದಯಗಳನ್ನು ಸಮೀಪಕ್ಕೆ ತರೋಣ. ವ್ಯಗ್ರವಾದ ಬುದ್ಧಿಗಳನ್ನು ಏಕಾಗ್ರಗೊಳಿಸೋಣ. ಶಾಂತಿವಲಯವನ್ನು ನಿರ್ಮಿಸೋಣ. ಮೈಸೂರಿನ ಭಾವ ಕರ್ನಾಟಕದಲ್ಲಿ ಪರಿಣತವಾಗಲಿ; ಅದರೊಡನೆ ತಾದಾತ್ಮ್ಯ ಹೊಂದಲಿ. ಆಗ ನಮ್ಮ ಬಯಕೆ ಕೈಗೂಡಬಹುದು. ಹಾಗಾಗದೆ, ನಮ್ಮ ರಾಜ್ಯಕ್ಕೆ ಯಾವ ನಾಮಕರಣ ಮಾಡಿದರೂ ಫಲಿತಾಂಶದಲ್ಲಿ ವ್ಯತ್ಯಾಸವಿರಲಾರದು.

ಪರಿಷತ್ತಿನ ಸ್ಥಾನಮಾನ

ಪರಿಷತ್ತಿನ ನೈತಿಕ ಬಾಧ್ಯತೆಯು ಸಾಹಿತ್ಯ ಸಂಸ್ಕೃತಿಯ ಕ್ಷೇತ್ರದಲ್ಲಿ ಸರ್ವತೋಮುಖವಾಗಿ ಇರತಕ್ಕುದಾಗಿದೆ. ವಯಃಪ್ರಬುದ್ಧ ಪ್ರಜೆಗಳ ಮತವನ್ನು ಸಂಪಾದಿಸಿ ಬೆಳೆದ ಸಂಸ್ಥೆ ಅದಲ್ಲವಾದರೂ ವಿದ್ಯಾಸಂಸ್ಕೃತಿ ಪುರಸ್ಕರ್ತರ ಸದಾಶಯದ ಆಧಾರಬಲವನ್ನು ಹೊಂದಿರುವ ಅದರ ಸ್ಥಾನಮಾನಗಳನ್ನು ಲಕ್ಷಿಸಿ, ವಿದ್ಯಾಸಂಸ್ಕೃತಿ ವಿಭಾಗದಲ್ಲಿ ತಾನು ನಿರ್ವಹಿಸುತ್ತಿರುವ ಕಾರ್ಯಭಾರಗಳಲ್ಲಿ ಕೆಲವನ್ನು, ಸರಕಾರವು ಈ ಸಂಸ್ಥೆಗೆ ಬಿಟ್ಟುಕೊಡಬಹುದು; ಅದರ ಸಹಕಾರದ ನೆರವನ್ನು ನಿರೀಕ್ಷಿಸಬಹುದು; ತನ್ನ ಆರ್ಥಿಕ ಸಹಕಾರದ ಆಶ್ವಾಸನೆಯನ್ನು ನೀಡಬಹುದು. ಪರಿಷತ್ತು ಮಾಂಸಗ್ರಂಥಿಯಂತಲ್ಲ, ಪರಿಶುದ್ಧ ರಕ್ತದಂತೆ ಅದು ಸಮಾಜ ಶರೀರದಲ್ಲಿ ತನ್ನ ಚಟುವಟಿಕೆಗಳನ್ನು ಕಾಣಿಸಬೇಕು. ಇಂತಹ ನೀತಿ ಪ್ರಜ್ಞೆಯಿಲ್ಲದೆ ಯಾವ ಸಂಸ್ಥೆಯೂ ಜನಾದರವನ್ನು ಪಡೆಯಲಾರದು.

ವಾಙ್ಮಯ ತಪಸ್ಸು

ಸಾಮಾನ್ಯ ವ್ಯವಹಾರದಲ್ಲಿ ಸ್ಪರ್ಧೆ-ಮತ್ಸರ-ದ್ವೇಷಗಳು ಇದ್ದೇ ಇರುತ್ತವೆ; ಕೆಸರಿನ ಚೆಲ್ಲಾಟ ಆಗುತ್ತಲೇ ಇರುತ್ತದೆ. ಮೈಗೆ ಅಂಟುವ ಕೊಳೆ ಭಾವಕ್ಕೆ ಅಂಟದಂತೆ, ಭಾವದ ಮೂಲಕ ಸಾಹಿತ್ಯಕ್ಕೆ ಇಳಿದು ನೂರಾರು ಬುದ್ಧಿಗಳನ್ನು ಕೆಣಕದಂತೆ ನೋಡಿಕೊಳ್ಳುವುದು ಸಾಹಿತ್ಯ ಕರ್ತೃವಿನ ಪರಮ ಕರ್ತವ್ಯ. ಇದನ್ನು ಅಲ್ಲಗಳೆಯುವ ಸಾಹಿತ್ಯಕನು ತನ್ನನ್ನು ತಾನೆ ಅಪಮಾನಿಸುತ್ತಾನೆ; ತನ್ನ ಅಸ್ತಿತ್ವದ ಆವಶ್ಯಕತೆಯನ್ನು ನಿರಸನ ಮಾಡುತ್ತಾನೆ.

ಸಾಹಿತ್ಯವು ನೆಳಲಲ್ಲ; ಅಣಕವಲ್ಲ; ಹಗರಣವಲ್ಲ. ಅದು ಬೆಳಕು; ಅದು ಚೈತನ್ಯ; ಅದು ಸತ್. ಅದರ ದುರುಪಯೋಗವು ಕ್ಷಮ್ಯವಲ್ಲ. ಸೌಜನ್ಯವನ್ನು ಕುಂದಿಸುವ, ನೀತಿಯನ್ನು ತುಳಿಯುವ, ಕೃತಿ, ವಿಕೃತಿಗಳು ಉದ್ಭವಿಸದಿರಲಿ; ನಮ್ಮ ಕನ್ನಡದ ಸಾಹಿತ್ಯಕರ್ತೃಗಳು ಅಂಥವುಗಳನ್ನು ಉದ್ಭವಿಸದಿರಲಿ - ಎನ್ನುವುದೇ ನನ್ನ ವಿನಮ್ರ ಪ್ರಾರ್ಥನೆಯಾಗಿದೆ.

— — —

ಕೃತಜ್ಞತೆ

ಶ್ರೀ ಧರ್ಮಸ್ಥಳ ವ್ಯಾಜ್ಯದಲ್ಲಿ ಹೈಕೋರ್ಟಿನ ತೀರ್ಪು ನನಗೆ ಜಯವಾಗಿ ದೊರೆತ ವಾರ್ತೆ ತಿಳಿದು ತಮ್ಮ ಹೃತ್ಪೂರ್ವಕ ಸಂತೋಷವನ್ನು ನನಗೆ ತಿಳಿಸಿದ ಸಾವಿರಾರು ಸಂಸ್ಥೆ ಹಾಗೂ ವ್ಯಕ್ತಿಗತ ಪತ್ರಗಳಿಗೆ ಕಾರಣಾಂತರದಿಂದ ಸಕಾಲದಲ್ಲಿ ಉತ್ತರ ದೊರೆಯದವರಿಗೆ, ಶ್ರೀ ಕ್ಷೇತ್ರದ ಮತ್ತು ನನ್ನ ಕುರಿತಾದ ಹಾರ್ದಿಕ ಪ್ರೀತಿ ವಿಶ್ವಾಸಗಳಿಗಾಗಿ ನಾನು ಈ ಮೂಲಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

(Sd.) **D. Ratnavarma Heggade.**

ಬೇಕಾಗಿದ್ದಾರೆ

ಸಾಕಷ್ಟು ಅನುಭವವುಳ್ಳ ಕಂಪೋಸಿಟರ್, ಪ್ರಿಂಟರ್ ಬೇಕಾಗಿದ್ದಾರೆ.

ಪ್ರಿಂಟಿಂಗ್ ಪ್ರೆಸ್ಸಿನ ಬೇರೆ ಬೇರೆ ವಿಭಾಗಗಳಲ್ಲಿ ತಂಬೇತಿಗಾಗಿ 8ನೇ ತರಗತಿ ವರೆಗೆ ಓದಿದ ಕೆಲವು ಹುಡುಗರನ್ನು ತೆಗೆದು ಕೊಳ್ಳಲಾಗುವುದು ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ

ವಿಶೇಷ ಸಮಾಚಾರ

ಅತಿಥಿ ಸತ್ಕಾರವೂ ಒಂದು ಕಲೆ

ವಿದೇಶೀಯರನ್ನು ನಿನ್ನ ಅತಿಥಿಯಂತೆ ಭಾವಿಸು ಎಂಬ ನೆಹರೂರವರ ನುಡಿಯನ್ನು ಜರ್ಮನಿಯೂ ಅನುಸರಿಸುತ್ತಿದೆ.

ಸಾಧಾರಣವಾಗಿ ವಿದೇಶಗಳಲ್ಲಿರುವವರು ಸದಾ ಒಂದು ಬಗೆಯಲ್ಲಿ ಬಳಲಿದಂತೆಯೇ ತೋರುತ್ತಿರುತ್ತಾರೆ. ಯಾಕಪ್ಪಾ ಎಂದು ಕೇಳಿದರೆ ಉತ್ತರ ಸಿದ್ಧವಿರುತ್ತದೆ. 'ಹೋಂ ಸಿಕ್'! ಹಾಗಾಗಲು ಕಾರಣ, ಆ ದೇಶದಲ್ಲಿ ಒಂದು ಬಗೆಯ ದಾಕ್ಷಿಣ್ಯದಿಂದ ನಡೆದುಕೊಳ್ಳುವಿಕೆಯಿಂದಲೇ. ಅಲ್ಲಿನ ಜನರೊಂದಿಗೆ ಕಲೆತು, ವ್ಯವಹರಿಸಿದರೆ ತನ್ನ ದೇಶ ಬಿಟ್ಟು ಬಂದ ಬೇಸರವು ಎಷ್ಟೋ ಪರಿಹಾರವಾದೀತು! ಆದರೆ, ಕಲೆಯಲು ಆ ದೇಶದ ಭಾಷೆ ತಿಳಿದಿರಬೇಕಲ್ಲವೇ? ಈ ವಿಷಯದಲ್ಲಿ ಆ ದೇಶದವರ ಕರ್ತವ್ಯವೂ ಇದೆ. ವಿದೇಶೀಯರನ್ನು ತಮ್ಮಲ್ಲೊಬ್ಬನೆಂದು ಭಾವಿಸಿ, ಅವನಿಗೆ ಆದರ ಸತ್ಕಾರಗಳನ್ನು ನೀಡಬೇಕಾದದ್ದು ಅವರ ಕರ್ತವ್ಯ. ಇದನ್ನೇ ಕೊನೆಯ ವರೆಗೂ ದಿವಂಗತ ನೆಹರೂರವರು ಪ್ರತಿಪಾದಿಸುತ್ತಿದ್ದರು.

ಮೂವತ್ತಾರು ವರ್ಷ ವಯಸ್ಸಿನ ಸಾಂಡ್ರೋ ಪಗನೆಟ್ಟಿ ಎರಡು ವರ್ಷಗಳ ಹಿಂದೆ ಇಟಲಿಯಿಂದ ಪಶ್ಚಿಮ ಜರ್ಮನಿಗೆ ಬಂದರು. ಅವರು ಜರ್ಮನಿಯ ಸಂಸ್ಥೆಯೊಂದರ ಆಹ್ವಾನದ ಮೇರೆಯೇ ಬಂದವರು. ಅವರು ಕೈಗಾರಿಕಾ ಪ್ರಮುಖ ನಗರವೊಂದರಲ್ಲಿ ನೆಲಸಿ, ತಾವು ನಿರೀಕ್ಷಿಸಿದ್ದುದನ್ನೆಲ್ಲಾ ಪಡೆದರು—ಕೆಲಸ, ಒಳ್ಳೆಯ ಸಂಬಳ, ವಸತಿ, ಉತ್ತಮ ಆಹಾರ! ಆದರೆ ಮನಸ್ಸಿಗೆ ಇಷ್ಟಾದರೆ ಆಯಿತೇ? ಅವನು ಸಮಾಜ ಜೀವಿ. ಪ್ರಾಣಿಗಳಿಗೂ ಮಾತು ಕಲಿಸಿ, ಅವುಗಳೊಂದಿಗೂ ಮಾತನಾಡುವ ಚಟ ಅವನಿಗೆ. ಅಂತಹದರಲ್ಲಿ, ಯಾರೊಬ್ಬರನ್ನು ಮಾತನಾಡಿಸದೆ, ಕಲಿಯದೆ, ಕಾಲವನ್ನು ತಳ್ಳುವುದು ಪಗನೆಟ್ಟಿಗೆ ಬಹು ಹೆಚ್ಚಿನ ಬೇಸರ ತರಿಸಿತು.

ಪಗನೆಟ್ಟಿ ವಾರಕ್ಕೆ ನಲವತ್ತು ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದರು. ಉಳಿದ ವೇಳೆಯನ್ನು ಸಿನೆಮಾ, ನಾಟಕಗಳಲ್ಲಿ ಕಳೆದರು. ನಂತರ, ಅವುಗಳಲ್ಲೂ ಬೇಸರ ಹುಟ್ಟಿದ ಮೇಲೆ ತಮ್ಮ ದೇಶೀಯರನ್ನು ಹುಡುಕಲಾರಂಭಿಸಿದರು. ಜರ್ಮನ್ನರೊಂದಿಗೂ ಬೆರೆಯಬೇಕೆಂಬ ಅವರಾಸೆ ದಿನೇ ದಿನೇ ಹೆಚ್ಚಾಗ ತೊಡಗಿತು.

ಈಗ, ಪಗನೆಟ್ಟಿ ಜರ್ಮನಿಗೆ ಬಂದು ಎರಡು ವರ್ಷಗಳಾಗಿ ಹೋದವು. ಅವರು ಬಂದಾಗ ಅನುಭವಿಸಿದ ಕಷ್ಟವನ್ನು ಅವರು ತಮ್ಮ ಸ್ವಪ್ರಯತ್ನದಿಂದ ದೂರ ಮಾಡಿಕೊಂಡಿದ್ದಾರೆ. ಈಗ ಅವರಿಗೆ ಬೇಕಾದಷ್ಟು ಜರ್ಮನ್ ಸ್ನೇಹಿತರಿದ್ದಾರೆ. ವಾರಾಂತ್ಯದ ರಜಾದಿನಗಳಲ್ಲಿ ಅವರನ್ನು ಯಾರಾದರೊಬ್ಬ ಸ್ನೇಹಿತರು ತಮ್ಮ ಮನೆಗೆ ಆಹ್ವಾನಿಸುತ್ತಲೇ ಇರುತ್ತಾರೆ. ಸಾಂಡ್ರೋ ಸಹಾ ಅವರನ್ನು ಮತ್ತೊಂದು ದಿನ ಯಾವುದಾದರೂ ಹೋಟೇಲಿಗೆ ಕರೆದೊಯ್ದು ಸತ್ಕರಿಸುತ್ತಾರೆ. ಜರ್ಮನಿಯಲ್ಲಿ ಅನುಸರಿಸಬೇಕಾದ ನಿಯಮಗಳಲ್ಲಿ ಏನಾದರೂ ತೊಂದರೆ ತೋರಿ ಬಂದರೆ, ಅದನ್ನೆಲ್ಲಿ ಪರಿಹರಿಸಿಕೊಳ್ಳಬೇಕೆಂದು ಸಾಂಡ್ರೋಗೆ ಈಗ ಚೆನ್ನಾಗಿಗೊತ್ತು. ಜರ್ಮನ್ ಭಾಷೆಯಲ್ಲಿನ "ಫಾರಂ" ಗಳನ್ನು ತುಂಬಿಸ ಬೇಕಾದರೆ ಯಾರನ್ನು ಹಿಡಿಯಬೇಕು ಎಂಬುದನ್ನು ಅವರೀಗ ಅರ್ಥಮಾಡಿಕೊಂಡಿದ್ದಾರೆ.

ಜರ್ಮನಿಗೆ ಬರುವ ವಿದೇಶೀಯರಿಗೆ ಸಹಾಯ ಮಾಡುವುದಕ್ಕಾಗಿಯೇ ಅಲ್ಲಿ ಬೇಕಾದಷ್ಟು ಸಮಾಜ ಸೇವಕರಿದ್ದಾರೆ. ಇಟಲಿ, ಗ್ರೀಸ್, ತುರ್ಕಿ ಮತ್ತು ಸ್ಪೈನ್ ಮುಂತಾದ ದೇಶಗಳಿಂದ ಬಂದಿರುವ ೮೦೦,೦೦೦ ವಿದೇಶೀಯರಿಗೂ, ಮತ್ತು ಜರ್ಮನ್ನರಿಗೂ ಸ್ನೇಹವನ್ನು ಕುದುರಿಸಿ ಸೌಹಾರ್ದವನ್ನು ಬೆಳೆಸುವ ಕಾರ್ಯವನ್ನು ಈ ಸ್ವಯಂಸೇವಕರು ಅತಿ ಚಾಕಚಕ್ಯತೆಯಿಂದ ನೆರವೇರಿಸಿಕೊಂಡು ಹೋಗುತ್ತಿದ್ದಾರೆ.

"ನಾವಾಗಿಯೇ ಆಹ್ವಾನಿಸಿದ್ದರೂ ಸರಿಯೇ, ಅವರಾಗಿಯೇ ಬಂದಿದ್ದರೂ ಸರಿಯೇ, ನಮ್ಮ ದೇಶಕ್ಕೆ ಬಂದವರಿಗೆ ಸಮಸ್ತ ಸೌಲಭ್ಯಗಳನ್ನು ದೊರಕಿಸಿ ಕೊಡುವುದು ನಮ್ಮ ಕರ್ತವ್ಯ" ಎಂದು ಅಂತರಷ್ಟ್ರೀಯ ಸಮಾಜ ಸೇವಕರ ಫೆಡರೇಷನ್ನಿನ ಮ್ಯಾನೇಜಿಂಗ್ ಡೈರೆಕ್ಟರಾದ ಆಲ್‌ಫ್ರೆಡ್ ಹೆನ್‌ಷೆಲ್ ತಿಳಿಸುತ್ತಾರೆ. ಜರ್ಮನಿಯಲ್ಲಿ ವಿದೇಶಿಯರನ್ನು ನೋಡಿಕೊಳ್ಳುವ ಅನೇಕ ಸಂಸ್ಥೆಗಳಿವೆ. ಅವುಗಳಲ್ಲಿ ಇದೂ ಸಹಾ ಒಂದು.

ಕ್ಯಾರಿಟಸ್ ಎಂಬುದು ಮತ್ತೊಂದು ಸಂಸ್ಥೆ. ವಿದೇಶೀ ಕೆಲಸಗಾರರಿಗೆ ತಂಗಲು ವಸತಿಗೃಹಗಳನ್ನು ಅದು ನಿರ್ಮಿಸಿ ಕೊಟ್ಟಿದೆ. ಚೆನ್ನಾಗಿ ತರಬೇತಿ ಪಡೆದಿರುವ ಈ ಸಂಸ್ಥೆಯ ಸದಸ್ಯರು ವಿದೇಶೀಯರನ್ನು ಅತಿ ಸ್ನೇಹಭಾವನೆಯಿಂದ ನೋಡಿಕೊಳ್ಳುತ್ತಾರೆ. "ವಿದೇಶೀಯರಿಗೆ ನಾವು ಸಹಾಯವೆಂದು ಹೆಚ್ಚಿಗೆ ಏನನ್ನೂ ಮಾಡುವುದಿಲ್ಲ. ಅವರ ಕಾಲುಗಳ ಮೇಲೆ ನಿಲ್ಲಲು ಏನು ಬೇಕೋ ಅಷ್ಟನ್ನು ಮಾಡಿಕೊಡುತ್ತೇವೆ. ನಮ್ಮ ಜನರನ್ನು ಅನ್ಯರಂತೆ ಭಾವಿಸದೆ, ಅವರು ಪೂರ್ಣವಾಗಿ ಮಿಳಿತಗೊಳ್ಳಬೇಕೆಂಬುದೊಂದೇ ನಮ್ಮ ಆಶಯ" ಎಂದು ೮೦೦೦ ವಿದೇಶೀಯರನ್ನು ನೋಡಿಕೊಳ್ಳುವ ಕ್ಯಾರಿಟಾಸ್‌ನ ಮಾರ್ಟಿನ್ ಫಷೇಲ್ ತಿಳಿಸುತ್ತಾರೆ.

ಸಮಾಜ ಸೇವಕರು ವಿದೇಶೀಯರಿಗಾಗಿ ಸಂಜೆಯವೇಳೆಗಳಲ್ಲಿ ಸಭೆಕೂಡಿಸುತ್ತಾರೆ. ಕಾಫಿ, ನೀಡಿ, ಅವರ ಕುಂದು ಕೊರತೆಗಳ ಬಗ್ಗೆ ಸಮಾಲೋಚನೆ ನಡೆಸುತ್ತಾರೆ. ಅಲ್ಲಿ ಅವರಿಗೆ ಜರ್ಮನಿಯಲ್ಲಿನ ವಿಶೇಷಗಳ, ರೀತಿ ನೀತಿಗಳ ಬಗ್ಗೆ ಪರಿಚಯ ಮಾಡಿಕೊಡಲಾಗುವುದು. ವೃತ್ತಪತ್ರಿಕೆಗಳಲ್ಲಿ ಸಂಚಿಕೆಗಳಲ್ಲಿ ಬಂದಿರುವ ಸ್ವಾರಸ್ಯದ ಸಮಾಚಾರಗಳನ್ನು ಅವರಿಗೆ ಓದಿಹೇಳಿ, ತಾವು ಬಂದಿರುವ ದೇಶದ ಜನಜೀವನವನ್ನು ಅವರು ಅರಿತುಕೊಳ್ಳಲು ಸಹಾಯ ಮಾಡಲಾಗುವುದು. ಇಂತಹ ಸಂಸ್ಥೆಗಳಿರುವುದರಿಂದ, ಅಲ್ಲಿ ವಿದೇಶೀಯರಿಗೆ ವಿದೇಶದಲ್ಲಿರುವ ಭಾವನೆ ಬರುತ್ತಿಲ್ಲವೆಂದು ಹೇಳಲಾಗುತ್ತಿದೆ. (ಯು. ಪಿ. ಎಸ್.) (ಫೋಟೋ ಇದೆ.)

'NAVAYUGA' Weekly is in the list of periodicals and Newspapers approveds for use in Secondary Schools as per proceeding Roc. No. 466 N/50 dated 2-12-1950 of the Directer of Public Instruction Madras

---

(ಒಂಭತ್ತನೇ ಪುಟದಿಂದ)

"ಬರೆಯಲಿಕ್ಕೂ ಬಾರದಷ್ಟು ಚಿಕ್ಕದಾಗಿದ್ದ ಪೆನ್ಸಿಲಿನ ಬದಲು ಹೊಸದೊಂದು ಪೆನ್ಸಿಲು ತೆಗೆದುಕೊಂಡರೆ ದುರುಪಯೋಗ ಮಾಡಿದಂತೆ ಹೇಗಾಗುತ್ತದೆ?" ಕೇಳಿದಳು ಮನುಬೇನ.

"ಮನೂ, ನಿನ್ನ ಯುಕ್ತಿವಾದ ಕೇಳಿ ನನಗೆ ತುಂಬಾ ದುಃಖವಾಗುತ್ತದೆ. ಈ ಪೆನ್ಸಿಲಿನಿಂದ ಒಂದು ಅಕ್ಷರವಾದರೂ ಬರೆಯಲಿಕ್ಕೆ ಬರುವವರಿಗೆ ಇದನ್ನು ಒಗೆಯಲಾಗದು. ನಮ್ಮ ಭಾರತ ಎಷ್ಟೊಂದು ಬಡ ದೇಶ! ಇದು ನಿನಗೆ ಗೊತ್ತೇ ಇಲ್ಲ. ಕಂಗಾಲ ದೇಶದ ನಾಗರಿಕರು ಇಂಥ ವಿಲಾಸ ಮಾಡಲಾಗದು" ಎನ್ನುತ್ತಿರುವಾಗಲೇ ಗಾಂಧೀಯವರ ಸ್ವರವು ತಾನಾಗಿ ಗಂಭೀರವಾಯಿತು.

ಮನು ಬೇನ ಸ್ತಬ್ಧಳಾದಳು. ಒಂದು ಶಬ್ದ ಕೂಡ ಮರುಮಾತಾಡುವ ಸಾಹಸ ಅವಳಿಂದ ಆಗಲಿಲ್ಲ.

ಸ್ವಲ್ಪ ತಡೆದು ಗಾಂಧಿಯವರು ಪುನಃ ಹೇಳಿದರು. "ಇಂದು ಭಾರತದಲ್ಲಿಯ ಲಕ್ಷಾಂತರ ಹಳ್ಳಿಗಳಲ್ಲಿಯ ಕೋಟ್ಯಾಂತರ ತಂದೆ ತಾಯಿಗಳ ಹತ್ತಿರ ಶಾಲೆಗೆ ಹೋಗುವ ತಮ್ಮ ಮಕ್ಕಳಿಗೆ ಒಂದು ಪೆನ್ಸಿಲಿನ ತುಂಡು ಕೊಡುವಷ್ಟು ಕೂಡಾ ಶಕ್ತಿ ಇಲ್ಲ. ಇಷ್ಟೊಂದು ಕಂಗಾಲರೂ, ಬಡವರೂ ನಾವಿದ್ದೇವೆ. ಹೋಗು, ಆ ತುಂಡು ತೆಗೆದುಕೊಂಡು ಬಾ. ಅದರಿಂದ ಬರೆದಾಗಲೇ ನನ್ನ ಮನಸ್ಸು ಶಾಂತವಾದೀತು" ಎಂದು.

ಮರುಮಾತಾಡದೆ ಮನುಬೇನ ಆ ತುಂಡು ತಂದು ಕೊಟ್ಟಳು. ಅದನ್ನು ಹಿಡಿದುಕೊಂಡು ಗಾಂಧೀಜಿ ಹೇಳಿದರು — ಸ್ವಲ್ಪ ಕಷ್ಟವಾದ ಮಾತ್ರಕ್ಕೆ ಹೆದರಿ ಇದನ್ನು ಬಿಸಾಡಲಾಗದ. ಬಿಸಾಡಿದರೆ ನಾವು ಜನತೆಗೆ ಉತ್ತರ ಕೊಡುವದು ಹೇಗೆ? ಈ ಚಿಕ್ಕ ಪೆನ್ಸಿಲು ಕೂಡ ಭಾರತದಲ್ಲಿ ಚಿನ್ನಕ್ಕೆ ಸಮಾನ. ಇದನ್ನು ಸರಿಯಾಗಿ ತಿಳಿದುಕೋ. ನಾವು ಪ್ರತಿಯೊಂದು ದುಡ್ಡನ್ನು ಯೋಚಿಸಿ ಖರ್ಚು ಮಾಡ ಹತ್ತುವವರೆಗೆ ಸ್ವತಂತ್ರ ಭಾರತಕ್ಕೆ ದಾರಿದ್ರ್ಯ ಮತ್ತು ಉಪವಾಸ ತಪ್ಪಿದ್ದೇ ಅಲ್ಲ. ಸಾಮಾನ್ಯ ಜನತೆ ಸುಖಿ ಕಾಣುವಂತೆಯೇ ಇಲ್ಲ" ಎಂದು.

(ಭೂದಾನ)

ಜೀವನ

ಜೀವನದಾಸೆ ಕರುಡಾಯಿತು
ನೋಡಲಾರೆನು
ಜೀವನ ಕಥೆ ತಿಳಿಯಾಸೆ
ಸಹಿಸದಾದೆನು
ಬ್ರಹ್ಮಬರಹ ವಿವಿಧ ರೀತಿ
ಕಾಣದಾದೆನು
ಜೀವನದಿ ಶಾಂತಿಸಿಗದೆ
ಸುಖವ ಕಾಣೆನು
ಕಷ್ಟಕಾನನ ಮುಸುಕಿದೆ
ಕೇಳು ಬಾಳ ಜೀವನದಿ
ಜನನ ಮರಣ ಕ್ರೀಡೆಯು
ನೀರತಡದಲ್ಲಿ ಸಾಗಿದೆ
ಮಡದಿ ಮಕ್ಕಳ ವಾಸದಲ್ಲಿ
ನೊಂದು ಬೆಂದು ಬಳಲಿದೆ.
ದಾನ ಧರ್ಮ ಕರ್ಮದಲ್ಲಿ
ಪುಣ್ಯತನವ ಪಡೆದೆನು

— ಕಮಲಾತನಯ ಕೃಷ್ಣ.
ಗೋವಾ.

ಅ. ಭಾ. ಕಿಶೋರ ಶಾಂತಿದಳ ಶಿಬಿರ

ತಾ. 20-5-65ರಿಂದ ತಾ. 5-6-65ರ ವರೆಗೆ ಬೆಂಗಳೂರಿನ ಕುಮಾರಕೃಪಾದಲ್ಲಿರುವ ವಲ್ಲಭ ನಿಕೇತನದಲ್ಲಿ ನಡೆಯಲಿರುವ ಎರಡನೇ ಅಖಿಲ ಭಾರತ ಕಿಶೋರ ಶಾಂತಿದಳ ಶಿಬಿರದಲ್ಲಿ ಭಾಗವಹಿಸಲು ದ. ಕ. ಜಿಲ್ಲೆಯ ಈ ಕೆಳಗಿನ ಹತ್ತು ಮಂದಿ ವಿದ್ಯಾರ್ಥಿಗಳಿಗೆ ಮಂಗಳೂರಿನ ಗಾಂಧೀ ತತ್ವ ಪ್ರಚಾರ ಕೇಂದ್ರದ ವಿನಂತಿ ಮೇರೆಗೆ ಅಖಿಲ ಭಾರತ ಶಾಂತಿ ಸೇನಾ ಮಂಡಳಿಯು ಸ್ವೀಕೃತಿ ನೀಡಿದೆ.

ಬಿ. ಯಶವಂತ ಕುಮಾರ, ಮಂಗಳೂರು; ವಿವೇಕಾನಂದ ನಾಯಕ್, ಮಂಗಳೂರು; ಪಿ. ಸಚ್ಚಿದಾನಂದ ಭಟ್ಟ, ಮಂಗಳೂರು; ಚಂದ್ರಶೇಖರ ಕೋಟಿ, ಬೆಳ್ಳಾರೆ; ಸುರೇಂದ್ರ ನಾವಡಾ ಮಂಗಳೂರು; ವಿಶ್ವನಾಥ ಆರ್. ನಾಯಕ್, ಬೆಳ್ತಂಗಡಿ; ಅಬ್ದುಲ್ ಗಫಾರ ಸಾಹೇಬ್, ಸಾಸ್ತಾನ; ಎಂ. ಪ್ರೇಮ ಕುಮಾರಿ, ಮೂಡಬಿದ್ರೆ; ಜಿ. ಬಿ. ರಾಯಸ್, ನಾವೂರು; ಅನಂತ ಪದ್ಮನಾಭ ಅಡಿಗ, ಹಂಗಾರಕಟ್ಟೆ.

ಅಖಿಲ ಭಾರತ ಕಿಶೋರ ಶಾಂತಿದಳದ ಪ್ರಥಮ ಶಿಬಿರವು ಗಾಂಧೀಜಿಯ ಸುಪ್ರಸಿದ್ಧ ಆಶ್ರಮ ಸಾಬರಮತಿಯಲ್ಲಿ ಕಳೆದ ಬೇಸಿಗೆಯಲ್ಲಿ ಜರಗಿದ್ದು ಅದರ ಎರಡನೆಯ ಕೇಂದ್ರವು ಮೈಸೂರು ರಾಜ್ಯದಲ್ಲಿ ನಡೆಯುತ್ತಿರುವುದು ಮೈಸೂರಿನ ಜನತೆಯ ಸೌಭಾಗ್ಯದ ವಿಷಯವಾಗಿದೆ. ದೇಶದ ಎಲ್ಲಾ ರಾಜ್ಯಗಳಿಂದ ಆಯ್ದ 150 ಮಂದಿ ಶಿಕ್ಷಿತ ತರುಣರು ಈ ಶಿಬಿರದಲ್ಲಿ ಭಾಗವಹಿಸಲಿದ್ದು ಶಿಬಿರಾರ್ಥಿಗಳಲ್ಲಿ 25 ಮಂದಿ ಮೈಸೂರಿನವರಾಗಿರುವರು.

ದೇಶದ ಮುಂದಿರುವ ಅನೇಕ ಕಠಿಣ ಸಮಸ್ಯೆಗಳು ಇಂದು ದೇಶದ ವಿಚಾರವಂತ ಪ್ರಜೆಗಳನ್ನು ತೀವ್ರ ಚಿಂತೆಗೊಳಗು ಮಾಡಿದೆ. ಬೆಂಗಳೂರಿನ ಶಿಬಿರದಲ್ಲಿ ಭಾಗವಹಿಸುವ ದೇಶದ ಎಲ್ಲ ಭಾಗಗಳ ಸುಶಿಕ್ಷಿತ ತರುಣರು ಸಾಮೂಹಿಕ ಜೀವನ, ವ್ಯಕ್ತಿಗತ ಸಂಪರ್ಕ, ಸಂಭಾಷಣೆಗಳು, ಚರ್ಚಾಗೋಷ್ಠಿಗಳು ಮತ್ತು ಭಾಷಣಗಳ ಮೂಲಕ ದೇಶದ ಎಲ್ಲ ಸಮಸ್ಯೆಗಳನ್ನು ಮನನ ಮಾಡಿಕೊಂಡು ಅವುಗಳ ಪರಿಹಾರೋಪಾಯದ ಪ್ರಾಮಾಣಿಕ ಪ್ರಯತ್ನ ಮಾಡಲಿರುವರು. ಹದಿನೈದು ದಿನಗಳ ತನಕ ನಡೆಯಲಿರುವ ಈ ಶಿಬಿರದಲ್ಲಿ ಭಾಷಣಕಾರರಾಗಿ ಸರ್ವೋದಯ ನಾಯಕ ಶ್ರೀ ಜಯಪ್ರಕಾಶ ನಾರಾಯಣ, ವಿಖ್ಯಾತ ವಾಗ್ಮಿಗಳಾದ ಶ್ರೀ ದಾದಾ ಧರ್ಮಾಧಿಕಾರಿ ಮತ್ತು ಸರ್ವಸೇವಾ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಮುಂತಾದವರು ಭಾಗವಹಿಸಲಿದ್ದಾರೆ ಎಂದು ಮಂಗಳೂರು ಗಾಂಧೀ ತತ್ವ ಪ್ರಚಾರ ಕೇಂದ್ರದ ಪ್ರಚಾರಕ ಶ್ರೀ ಪಿ. ಸದಾಶಿವ ಭಟ್ಟರು ತಿಳಿಸುತ್ತಾರೆ.

ಎಲ್ಲೆಲ್ಲಿ ಏನೇನು?

ಹೋಟೆಲ್ ಸುಜಾತಾ

ಮಂಗಳೂರು, ತಾ. 11ರಂದು ದ. ಕ. ಜಿಲ್ಲಾಧಿಕಾರಿ ಶ್ರೀ ಸಿ. ಎಂ. ಮುಜಾಹಿದ್‌ರವರು, ಶ್ರೀ ಕೆ. ಕೆ. ಶೆಟ್ಟಿ, ಎಂ ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ, ಮಂಗಳೂರು ನಗರದ ನೂತನವಾದ ಹೋಟೆಲ್ ಸುಜಾತದ ಉದ್ಘಾಟನೆಯನ್ನು ನೆರವೇರಿಸಿದರು. ಮ್ಹಾಲಕ ಶ್ರೀ ಬಿ. ನರಸಪ್ಪ ಸಾಲಿಯಾನರ ಪರವಾಗಿ ಶ್ರೀ ಎಸ್. ಎನ್. ಕಿಣಿಯವರು ಸ್ವಾಗತಿಸಿದರು. ಶ್ರೀಮತಿ ಮುಜಾಹಿದ್‌ರವರು ಬಹುಮಾನ ವಿತರಣೆ ಗೈದರು. ವಿಧಾನ ಸಭಾ ಸದಸ್ಯ ಶ್ರೀ ಮಟ್ಟಾರ್ ಶ್ರೀನಿವಾಸ ನ್ಯಾಕರು ಶ್ರೀ ನರಸಪ್ಪನವರ ಕಾರ್ಯ ಸಾಧನೆಯನ್ನು ವಿವರಿಸಿದರು. ಶ್ರೀ ಕೆ. ದೂಮಪ್ಪನವರು ವಂದನಾರ್ಪಣೆ ಗೈದರು. ಈ ಸಂದರ್ಭದಲ್ಲಿ ಲಘೂಪಹಾರ, ಮನರಂಜನಾ ಕಾರ್ಯಕ್ರಮಗಳೂ ನೆರವೇರಿದವು.

ಮುಲ್ಕಿ ಪಂಚಾಯತ ಆಹಾರ ಧಾನ್ಯ ವಿತರಣಾ ಕ್ರಿಯಾ ಸಮಿತಿ

ಮುಲ್ಕಿ—ಆಹಾರ ಅಭಾವದ ಪ್ರತ್ಯಕ್ಷ ವಿಷಮ ಪರಿಸ್ಥಿತಿಯನ್ನು ಪರಿಶೀಲಿಸಿ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳಲು ತಾ. 9-5-65ರಲ್ಲಿ ಸರೋಜಿನಿ ಸ್ತ್ರೀ ಶಿಶು ಸೇವಾ ಸಮಾಜದ ಸಭಾಂಗಣದಲ್ಲಿ ಮುಲ್ಕಿ ಪಂಚಾಯತ ವಲಯದ ನಾಗರಿಕ ಸಭೆಯು ಶ್ರೀ ಶ್ರೀನಿವಾಸ ಶ್ಯಾನುಭೋಗರ ಅಧ್ಯಕ್ಷತೆಯಲ್ಲಿ ಜರಗಿತು.

ವಿಧಾನ ಸಭಾ ಸದಸ್ಯ ಡಾ ಸಂಜೀವನಾಥ ಐಕಳರು ಸಭೆಯ ಉದ್ದೇಶವನ್ನು ವಿವರಿಸಿ ಜಿಲ್ಲೆಯ ಆಹಾರ ಅಭಾವವನ್ನು ನೀಗಲು ತಾವು ಕಳೆದ ಎಸೆಂಬ್ಲಿ ಅಧಿವೇಶನದಲ್ಲಿ ಮಾಡಿದ ಕಾರ್ಯವನ್ನು ವಿವರಿಸಿದರು. ತರುವಾಯ ಸಿಂಪ್ಸನ್ ಸೋನ್ಸರು ವಿಶಾಲ ತಳಹದಿಯ ಮೇಲೆ ಕ್ರಿಯಾ ಸಮಿತಿಯನ್ನು ರಚಿಸಿ ಆಹಾರ ಅಭಾವವನ್ನು ನೀಗಲು ತ್ವರಿತ ಕಾರ್ಯ-ಕ್ರಮ ಕೈಕೊಳ್ಳಬೇಕೆಂದರು. ನಂತರ ಕೆ. ಎಂ. ಜಿ. ಹುಸೇನರು ಮಾತನಾಡಿ ಸರಕಾರವನ್ನು ಎಚ್ಚರಿಸುವ ನೇರ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಸೂಚಿಸಿದರು.

ನಂತರ ನಡೆದ ಚರ್ಚೆಯಲ್ಲಿ ಇತರ ಸಭಿಕರು ಭಾಗವಹಿಸಿ, ಆಹಾರ ಧಾನ್ಯದ ಅಭಾವ ನೀಗಲು ಏಳು ಮಂದಿ ಸದಸ್ಯರುಳ್ಳ ಸಮಿತಿಯನ್ನು ರಚಿಸಬೇಕೆಂದೂ ಮತ್ತು ಅಗತ್ಯವುಳ್ಳ ಕಾರ್ಯಕ್ರಮಗಳನ್ನು ತಕ್ಷಣ ಕೈಕೊಳ್ಳುವರೆ ಈ ಸಮಿತಿಗೆ ಅಧಿಕಾರ ಕೊಡಬೇಕೆಂದೂ, ಲೆವಿ ಪದ್ಧತಿಯಿಂದ ವಸೂಲಾದ ಅಕ್ಕಿಯನ್ನು ಆಯಾಯ ವಲಯದ ಕೋ-ಒಪರೇಟಿವ್ ಸ್ಟೋರಿನಲ್ಲಿ ಬೇಸಾಯಗಾರರಲ್ಲದ ಕುಟುಂಬದವರಿಗೆ ಕೊಡಬೇಕೆಂದೂ, ಮುಲ್ಕಿ ಪಂಚಾಯತ ವಲಯದಿಂದ ಅಕ್ಕಿಯು ಹೊರಗಿನ ಊರುಗಳಿಗೆ ವ್ಯಾಪಾರ ಮತ್ತು ಲಾಭದ ಉದ್ದೇಶದಿಂದ ಹೋಗದಂತೆ, ಮುಲ್ಕಿ ನಾಗರಿಕರು ಜಾಗೃತರಾಗಬೇಕೆಂದೂ, ಅಂತರ್ ಜಿಲ್ಲಾ ಆಹಾರ ಧಾನ್ಯ ಸಾಗಾಟ ನಿಬಂಧವನ್ನು ತೆಗೆದು ಹಾಕಿ ಮುಲ್ಕಿ ಪಂಚಾಯತ ವಲಯದಲ್ಲಿ ಕಡ್ಡಾಯ ರೇಶನಿಂಗ್ ಪದ್ಧತಿಯನ್ನು ಜ್ಯಾರಿಗೆ ತರುವಂತೆ ಸರಕಾರವನ್ನು ಸರ್ವ ವಿಧದಲ್ಲಿಯೂ ಒತ್ತಾಯಿಸಬೇಕೆಂದೂ ನಿರ್ಣಯಿಸಲಾಯಿತು.

ದ. ಕ. ಜಿಲ್ಲಾ ಟಿ. ಬಿ. ಎಸೋಸಿಯೇಶನ್

ಮಂಗಳೂರು, ಉಡುಪಿಯ ಕಾಫಿ ಪ್ಲೇಂಟರ್ ಶ್ರೀ ಕೆ. ಪಿ. ರಾಮಣ್ಣ ಶೆಟ್ಟಿ ಮತ್ತು ಶ್ರೀಮತಿ ಅನುಣಿ ರಾಮಣ್ಣ ಶೆಟ್ಟಿ ದ. ಕ. ಜಿಲ್ಲಾ ಟಿ. ಬಿ ಎಸೋಸಿಯೇಶನಿಗೆ ಹೊಸತಾಗಿ ಪ್ರಮೋಟರರಾಗಿ ಸೇರಿದ್ದಾರೆ. ಉಡುಪಿಯ ವಿಧಾನ ಸಭಾ ಸದಸ್ಯ ಶ್ರೀ ಎಂ. ಮಧ್ವರಾಜ್‌ರವರೂ ಪ್ರಮೋಟರರಾಗಿ ಸೇರಿದ್ದಾರೆ. ಅಜೀವ ಸದಸ್ಯರಾಗಿ ಪದ್ಮಶ್ರೀ ಡಾ| ಟಿ. ಎಂ. ಎ ಪೈಯವರೂ, ಶ್ರೀ ಗಣೇಶ ಯು. ಪೈಯವರೂ ಸೇರಿದ್ದಾರೆ.

ರೆ| ಬಾಸಿಲ್ ಎಸ್. ಡಿಸೋಜಾರವರ ಪಟ್ಟಾಭಿಷೇಕ

ಕಳೆದ ತಾ. 11ರಂದು ಮಂಗಳೂರಿನ ಪಾದ್ರಿಗಳಾದ ರೆ| ಬಾಸಿಲ್ ಎಸ್. ಡಿಸೋಜಾರವರಿಗೆ ಮಂಗಳೂರಿನ ಬಿಶಪರೆಂದು ಪಟ್ಟಾಭಿಷೇಕ ನೆರವೇರಿತು. ರೋಸಾರಿಯೋ ಚರ್ಚಿನಲ್ಲಿ ನಡೆದ ಈ ಸಮಾರಂಭವು ರೆ| ಡಾ| ಜೇಮ್ಸ್ ರಾಬರ್ಟ ನಾಕ್ಸ ಅವರ ಹಿರಿತನದಲ್ಲಿ, ಕಲಕತ್ತಾದ ಆರ್ಚ ಬಿಶಪ್ ಡಾ| ಎ ವಿ. ಡಿಸೋಜಾ ಹಾಗೂ ಚಿಕ್ಕಮಗಳೂರಿನ ಬಿಶಪ್ ಡಾ| ಎ. ಮಥಾಯಿಸ್‌ರವರ ಸಹಾಯದಿಂದ ನೆರವೇರಿತು. ಹಲವಾರು ಬಿಶಪರುಗಳೂ, ಪಾದ್ರಿಗಳೂ ಕ್ರೈಸ್ತ ಸನ್ಯಾಸಿನಿಯರೂ ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

ಶ್ರೀ ಟಿ. ಆರ್ ಎ. ಪೈಯವರಿಗೆ ವಿದಾಯ ಸತ್ಕಾರ

ಉಡುಪಿ: ಜೀವವಿಮಾ ಕಾರ್ಪರೇಶನಿನ ಉಡುಪಿ ವಿಭಾಗದ ಸೀನಿಯರ್ ಡಿವಿಜನಲ್ ಮೇನೆಜರ್ ಶ್ರೀ ಟಿ. ಆರ್. ಎ. ಪೈಯವರಿಗೆ ಮದ್ರಾಸ್ ಜೋನಲ್ ಆಫೀಸಿನ ಡೆಪ್ಯೂಟಿ ಜೋನಲ್ ಮೆನೇಜರರಾಗಿ ವರ್ಗವಾದ ನಿಮಿತ್ತ ಉಡುಪಿ ಡಿವಿಜನಲ್ ಆಫೀಸಿನ ಆಫೀಸರರು ಹಾಗೂ ನೌಕರರು ಕಳೆದ ತಾ. 13ರಂದು ವಿದಾಯ ಕೂಟವನ್ನೇರ್ಪಡಿಸಿದ್ದರು. ಅಂದಿನ ಸಭೆಯ ಅಧ್ಯಕ್ಷ ಸ್ಥಾನವನ್ನು ಶ್ರೀ ಎಲ್. ಎಫ್. ಸಿ. ವಾಜ್ ಇವರು ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಟಿ. ವಿ. ಪಿ. ರಾಮನರು ಸ್ವಾಗತಿಸಿದರು.

ಶ್ರೀ ಪೈಯವರ ಬಹುಮುಖ ವ್ಯಕ್ತಿತ್ವ ಹಾಗೂ ಉಡುಪಿ ಡಿವಿಜನಿಗೆ ಅವರು ಸಲ್ಲಿಸಿದ ಸೇವೆಯನ್ನು ಉಲ್ಲೇಖಿಸಿ ಶ್ರೀಗಳಾದ ಎಸ್. ಕೆ. ಉಪಾಧ್ಯ, ಕೆ. ಎನ್. ಮಯ್ಯ, ಎಸ್. ಹನುಮೋಜಿ ರಾವ್, ಕೆ. ಕುಟ್ಟಿರಾಮನ್, ಚಂದ್ರಹಾಸನ್, ಎಸ್. ಎ. ಹೆಗ್ಡೆ, ಯು. ಎನ್. ಸದಾಶಿವ ರಾವ್ ಹಾಗೂ ಅನಂತ ಗಾಣಿಗಾರವರು ಮಾತನಾಡಿದರು.

ಶ್ರೀ ಪೈಗಳು ಈ ಸಂದರ್ಭ ಮಾತನಾಡುತ್ತಾ ಇಂದು, ಉಡುಪಿ ಡಿವಿಜನು ಭಾರತದಲ್ಲೇ ಉತ್ತಮ ಖ್ಯಾತಿ ಪಡೆದಿದೆ ಎಂದರು. ರಾಷ್ಟ್ರೀಕೃತ ವಿಮೋದ್ಯಮದಲ್ಲಿ ಪಾಲಿಸಿದಾರರ ಸೇವೆಯೇ ನೌಕರರ ಮುಖ್ಯ ಗುರಿಯಾಗಿರಬೇಕೆಂಬುದನ್ನು ಹೇಳಿದರು.

ಅಧ್ಯಕ್ಷ ಸ್ಥಾನದಿಂದ ಶ್ರೀ ವಾಜ್ ಅವರು ಮಾತನಾಡುತ್ತಾ ಶ್ರೀ ಪೈಗಳ ಮುಂದಾಳುತ್ವದಲ್ಲಿ ಈ ಡಿವಿಜನು ವರ್ಷದಿಂದ ವರ್ಷಕ್ಕೆ ಉತ್ತಮ ದಾಖಲೆ ನಿರ್ಮಿಸಿರುವುದನ್ನು ವಿವರಿಸಿ, ಅಖಿಲ ಭಾರತದಲ್ಲಿ ವರ್ಷದಿಂದ ವರ್ಷಕ್ಕೆ ಅಧಿಕ ಹೊಸ ವ್ಯವಹಾರವನ್ನು ಮಾಡಿದ ಐದು ಡಿವಿಜನುಗಳಲ್ಲಿ ಉಡುಪಿಯೂ ಒಂದು ಎಂಬುದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಅಂತ್ಯದಲ್ಲಿ ಶ್ರೀ ಯು. ಕೆ. ಕಿಣಿಯವರು ಧನ್ಯವಾದ ಸಮರ್ಪಿಸಿದರು.

ಶ್ರೀ ಪೈಯವರ ಸ್ಥಾನಕ್ಕೆ ಅಸನ್‌ಸೋಲಿನ ಶ್ರೀ ಪಿ. ಎಸ್. ರಾಮಚಂದ್ರ ರಾಯರು ಡಿವಿಜನಲ್ ಮೆನೇಜರರಾಗಿ ಬರುವರೆಂದು ತಿಳಿದುಬರುತ್ತದೆ.

ಪಾಂಟೀಫರ ರಾಯಭಾರಿ ಮತ್ತು ಬಿಶಪರಿಗೆ ನಗರ ಸಭೆಯ ಮಾನಪತ್ರ

ಮಂಗಳೂರಿನ ಪುರಭವನದಲ್ಲಿ ಕಳೆದ ತಾ. 11ರಂದು, ಪಾಪಲ್ ನನ್ಸಿಯೋ ದಿ ಮೋಸ್ಟ್ ರೆವರೆಂಡ್ ಡಾ| ಜೆ. ಆರ್. ನೋಕ್ಸ್ ಮತ್ತು ಮಂಗಳೂರಿನ ನೂತನ ಬಿಶಪ್ ರೆವರೆಂಡ್ ಮೊನ್ಸಿನ್ಯಾರ್ ಬಾಸಿಲ್ ಎಸ್. ಡಿಸೋಜರವರಿಗೆ ಸ್ಥಳೀಯ ನಗರಸಭೆಯು ಮಾನಪತ್ರಗಳನ್ನಿತ್ತು ಸನ್ಮಾನಿಸಿತು. ನಗರ ಸಭಾಧ್ಯಕ್ಷ ಶ್ರೀ ಜಿ. ಸೋಮಶೇಖರ ರಾಯರು ಉಭಯರನ್ನು ಹಾರಾರ್ಪಣೆಗೈದು ಸ್ವಾಗತಿಸಿ ಮಾನಪತ್ರಗಳನ್ನು ಅರ್ಪಿಸಿದರು. ಡಾ| ನೋಕ್ಸ್‌ರವರು ಉತ್ತರಿಸುತ್ತಾ ಮಂಗಳೂರು ಧಾರ್ಮಿಕ ಚಿಂತನೆಯ ನಗರದಂತೆ ಬೆಳೆಯುತ್ತಿರುವುದು ಶುಭದಾಯಕವೆಂದೂ, ನೂತನ ಬಿಶಪರು, ಸಮಾಜವು ಧಾರ್ಮಿಕ ತತ್ವದ ತಳಹದಿಯಲ್ಲೇ ಮುನ್ನಡೆಯಬೇಕೆಂದು ನುಡಿದರು.

(ಮೂರನೇ ಪುಟದಿಂದ)

...ತ್ರಿನ ಮಹಾಶಕ್ತಿಗಳೆಲ್ಲ ಬೆಂಬಲಿಸಿದ ರಶ್ಯಾ ಹಾಗೂ ಭಾರತಗಳ ಮಧುರ ಬಾಂಧವ್ಯವನ್ನು ಬಿಗಿಗೊಳಿಸುವಲ್ಲಿ ಈ ಸಂದರ್ಶನ ನೆರವಾಯಿತೆಂಬುದರಲ್ಲಿ ಅನುಮಾನವಿಲ್ಲ.

ಶಾಸ್ತ್ರಿಗಳ ಈ ಯಾತ್ರೆಯು ಹಲವಾರು ದೃಷ್ಟಿಯಿಂದ ಪ್ರಾಮುಖ್ಯವೆನಿಸಿದೆ. ರಶ್ಯಾದಲ್ಲಿ ಕ್ರುಶ್ಚೇವರ ಪತನದಿಂದ ಹೊಸ ವ್ಯಕ್ತಿಗಳು ಅಧಿಕಾರರೂಢರಾಗಿದ್ದಾರೆ. ಭಾರತದಲ್ಲೂ ಪ್ರಧಾನಿ ನೆಹರೂರವರ ನಿಧನದಿಂದ ಹೊಸ ನಾಯಕತ್ವ ಬಂದಿದೆ. ಮೇಲಾಗಿ, ಭಾರತವು ಚೀನಾ, ಪಾಕಿಸ್ತಾನಗಳ ಗೃಧ್ರ ದೃಷ್ಟಿಗೆ ಒಳಗಾದ ಕಠಿಣ ಕಾಲ ಇದಾಗಿದೆ. ಪಾಕಿಸ್ತಾನವು ಕಛ್ ಗಡಿಯಲ್ಲಿ ಆಕ್ರಮಣ ಮಾಡಿ ಯುದ್ಧ ಸನ್ನಧತೆ ಮಾಡುತ್ತಿದೆ. ಇಂತಹ ವಿಶಿಷ್ಟ ಸಮಯದಲ್ಲಿ ಭಾರತದ ನಿಲುವನ್ನು ರಶ್ಯನ್ ನಾಯಕರಿಗೆ ತಿಳಿಸಿ ಅವರಿಗೆ ಸತ್ಯಾಂಶವನ್ನು ಮನದಟ್ಟು ಮಾಡಿ ಕೊಡುವುದು ಮುಖ್ಯವೆನಿಸಿದೆ. ಈ ದಿಸೆಯಲ್ಲಿ ಪ್ರಧಾನಿಗಳ ಸಂದರ್ಶನ ಮಹತ್ವಪೂರ್ಣ. ಅಂತೆಯೇ ಭಾರತ ಅಭಿವೃದ್ಧಿಗೆ ರಶ್ಯನರ ಹೆಚ್ಚಿನ ನೆರವನ್ನು ಬಯಸುವುದೂ ಈ ಸಂದರ್ಶನದ ಫಲಶ್ರುತಿ ಎಂದು ಭಾವಿಸಿರೆ ತಪ್ಪೇನಿಲ್ಲ. ರಶ್ಯ—ಭಾರತಗಳ ಸಂಬಂಧವನ್ನು ಅಭೇದ್ಯವಾಗಿಸುವಲ್ಲಿ ಶಾಸ್ತ್ರಿಯವರ ಸಂದರ್ಶನ ನೆರವಾಯಿತೆಂದು ಹೇಳಬಹುದು. ಅಂತೂ ಇದೊಂದು ವಿಜಯಯಾತ್ರೆಯೆನ್ನಬಹುದು.

ಮುಂಡ್ಕೂರು ರಂಜೆಗುತ್ತು ದಾಸುಶೆಟ್ಟರ ನಿಧನ



ಮುಂಡ್ಕೂರು, ಮುಂಡ್ಕೂರು ರಂಜೆಗುತ್ತು ದಾಸು ಶೆಟ್ಟರು ಇದೇ ತಾ. 7-5-65ರಂದು ತಮ್ಮ 90ನೇ ವಯಸ್ಸಿನಲ್ಲಿ ವೃದ್ಧಾಪ್ಯದ ದೆಸೆಯಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ಮೃತರು ಧಾರ್ಮಿಕ ಮನೋವೃತ್ತಿಯವರೂ, ಸತ್ಯಪ್ರಿಯರೂ, ಜನಾನುರಾಗಿಗಳೂ ಆಗಿದ್ದರು. ಮೃತರಿಗೆ ಧರ್ಮಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ (ಡಾ| ಎಂ. ಡಿ. ಹೆಗ್ಡೆ) ಇರುವರು. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ,

ಮೃತರ ಬಂಧು ಬಾಂಧವರು.

ಸಿ. ಪಿ. ಸಿ. ಕಂಪೆನಿಯ ಸ್ವರ್ಣೋತ್ಸವ

ದ. ಕ. ಜಿಲ್ಲೆಯ ಸಾರಿಗೆ ರಂಗದಲ್ಲಿ ಪ್ರಪ್ರಥಮವೂ ಗಣನೀಯವೂ ಆದ ಸಿ ಪಿ. ಸಿ. ಕಂಪೆನಿಯ ಸುವರ್ಣೋತ್ಸವವು ಮಂಗಳೂರಿನ ಪುರಭವನದಲ್ಲಿ ಕೇಂದ್ರದ ರೈಲ್ವೇ ಮಂತ್ರಿ ಶ್ರೀ ಎಸ್. ಕೆ. ಪಾಟೀಲರ ಅಧ್ಯಕ್ಷತೆಯಲ್ಲಿ ತಾ. 17ರಂದು ವೈಭವದಿಂದ ನಡೆಯಿತು. ಕಂಪೆನಿಯ ಮೆನೇಜಿಂಗ್ ಡೈರೆಕ್ಟರ್ ಶ್ರೀ ವಿ. ಎಸ್. ಕುಡ್ವರು ಸ್ವಾಗತ ಭಾಷಣ ಮಾಡುತ್ತಾ ಸಿ ಪಿ. ಸಿ. ಕಂಪೆನಿಯ ಹಿರಿಮೆ ಬೆಳೆದು ಬಂದ ಬಗೆಯನ್ನು ವಿವರಿಸಿದರು. ಬಳಿಕ ಶ್ರೀ ಎಸ್. ಸಿ ನಾಯ್ಕರು ಸಂದೇಶಗಳನ್ನು ಓದಿದರು. ಸ್ಪೀಕರ್ ಶ್ರೀ ಬಿ. ವೈಕುಂಠ ಬಾಳಿಗರು ದಿ| ವಿ. ಎಸ್. ಕಾಮತರ ಭಾವಚಿತ್ರವನ್ನು ಅನಾವರಣ ಮಾಡಿ ದಿವಂಗತರು ವಿವಿಧ ರಂಗಗಳಲ್ಲಿ ಮಾಡಿದ ಸೇವೆಯನ್ನು ಪ್ರಸ್ತಾಪಿಸಿದರು. ಅನಂತರ ಆರೋಗ್ಯ ಮಂತ್ರಿ ಡಾ. ಕೆ ನಾಗಪ್ಪ ಆಳ್ವರು ಸ್ವರ್ಣೋತ್ಸವ ಸ್ಮಾರಕ ಸಂಚಿಕೆಯನ್ನು ಉದ್ಘಾಟಿಸಿ ಶ್ರೀ ವಿ. ಎಸ್. ಕುಡ್ವರು ಕಂಪೆನಿಗೆ 25 ವರ್ಷಗಳಿಂದ ಮಾಡಿದ ಸೇವೆಯನ್ನು ಕೊಂಡಾಡಿದರು. ಸಭಿಕರಲ್ಲಿ ಶ್ರೀಗಳಾದ ಜಿ. ಸೋಮಶೇಖರ ರಾವ್, ಶ್ರೀ ಕೆ. ಕೆ ಶೆಟ್ಟಿ, ಎಂ. ಎಲ್. ಸಿ., ಶ್ರೀಮತಿ ಒಕ್ಟೇವಿಯಾ ಅಲ್ಬುಕರ್ಕ್ ಇವರು ಮಾತನಾಡಿ ಕಂಪೆನಿಯ ಉನ್ನತಿಗಾಗಿ ದುಡಿದ ಶ್ರೀ ವಿ. ಎಸ್. ಕುಡ್ವರ ಸಾಧನೆಗಳನ್ನು ಪ್ರಶಂಸಿಸಿದರು. ಅಧ್ಯಕ್ಷರು ಯೋಗ್ಯತರದಲ್ಲಿ ನಡೆಯುತ್ತಿರುವ ಬಸ್ ಕಂಪೆನಿಗಳ ರಾಷ್ಟ್ರೀಕರಣ ಅನವಶ್ಯಕ ಎಂದು ಮುಂತಾಗಿ ಹೇಳಿದರು. ಅನಂತರ ಡೈರೆಕ್ಟರ್ ಶ್ರೀ ಡಿ. ಪುಟ್ಟು ಸ್ವಾಮಿಯವರು ವಂದನೆಗಳನ್ನು ಅರ್ಪಿಸಿದರು.

ಮಂಗಳೂರಲ್ಲಿ ಸ್ವಯಂಚಾಲಿತ ಟೆಲಿಫೋನ್

ಕಳೆದ ತಾ. 15ರಂದು, ಮಂಗಳೂರಲ್ಲಿ ನಿರ್ಮಿತವಾದ ನೂತನ ಸ್ವಯಂಚಾಲಿತ ಟೆಲಿಫೋನ್ ಕೇಂದ್ರವನ್ನು ಕೇಂದ್ರ ಸಂಪರ್ಕ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಶ್ರೀ ಸತ್ಯನಾರಾಯಣ ಸಿನ್ಹಾರವರು ಸ್ಪೀಕರ್ ಶ್ರೀ ಬಿ. ವೈಕುಂಠ ಬಾಳಿಗಾರವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಇದರಿಂದಾಗಿ ಬೆಳೆಯುತ್ತಿರುವ ನಗರದ ಬಹುದಿನಗಳ ಆವಶ್ಯಕತೆಯನ್ನು ಪೂರೈಸಿದಂತಾಯಿತು.

ಕೃತಜ್ಞತಾ ಸಮರ್ಪಣೆ

ನನ್ನ ಪ್ರಥಮ ಪುತ್ರಿ ಕುಮಾರಿ ವನಮಾಲಾ - ಇವಳ ವಿವಾಹ ಸಮಾರಂಭವು ಶ್ರೀ ಮಿತ್ರದಾಸ ಹೆಗ್ಡೆಯವರ ಸಹೋದರ ಚಿ| ದಿನಕರರೊಂದಿಗೆ ಇದೇ ಮೇ ತಿಂಗಳ ತಾ. 12ರಂದು ಮಂಗಳೂರಿನ ಟೌನ್ ಹಾಲ್‌ನಲ್ಲಿ ತಮ್ಮೆಲ್ಲರ ಸಹಕಾರ ಹಾಗೂ ಆಶೀರ್ವಾದದಿಂದ ವಿಜೃಂಭಣೆಯಿಂದ ನೆರವೇರಿತು.

ಈ ಶುಭ ಸಮಾರಂಭಕ್ಕೆ ಆಗಮಿಸಿ ವಧೂವರರನ್ನು ಆಶೀರ್ವದಿಸಿದಂಥವರಿಗೂ. ಉಡುಗೊರೆಯನ್ನಿತ್ತವರಿಗೂ ಶುಭಕೋರಿಕೆಯನ್ನು ಕಳುಹಿಸಿಕೊಟ್ಟಿರುವಂಥವರಿಗೂ ಪ್ರತ್ಯ-ಪ್ರತ್ಯೇಕವಾಗಿ ಕೃತಜ್ಞತೆಯನ್ನು ಸಲ್ಲಿಸುವುದು ಅಸಾಧ್ಯವಾಗಿರುವುದರಿಂದ ಈ ಮೂಲಕ ನನ್ನ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ.

ಕಾಡಬೆಟ್ಟು,
ಉಡುಪಿ.

ಇಂತು
ಬೇಳಂಜೆ ಮೋನಪ್ಪ ಹೆಗ್ಡೆ,

ವಿಚಾರಿಸಬೇಕಾದ ಪ್ರಶ್ನೆ

ಆಹಾರ ಧಾನ್ಯಗಳ ಬೆಲೆ ಏರಿಕೆಯಿಂದ ಲಾಭಗಳಿಸುವವರು ಯಾರು?

ಆಹಾರ ಧಾನ್ಯಗಳ ಬೆಲೆಯು ದಿನದಿಂದ ದಿನಕ್ಕೆ ಏರುತ್ತಿದೆ. ಧಾನ್ಯಗಳನ್ನು ಕೊಂಡು ಜೀವಿಸುವವರ ಪಾಡು ತೀರಾ ಕಳಪೆಯೆನಿಸಿದೆ. ಇವುಗಳ ಬೆಲೆಯು ಸಹ ತ್ತೋಟಿಗೆ ನಿಲುಕದಷ್ಟು ಮೇಲಕ್ಕೆ ಹೋಗುತ್ತಿದೆ. ರೈತರು ತಮ್ಮಲ್ಲಿದ್ದ ಆಹಾರ ಧಾನ್ಯಗಳನ್ನು ಮಾರಿ ಅಪಾರ ಲಾಭ ಗಳಿಸುತ್ತಿದ್ದಾರೆ ಎಂಬ ಮಾತು ಇಂದು ಕೇಳಿ ಬರುತ್ತಿದೆ.

ಕಳೆದ ವರ್ಷ ಈ ಸಮಯದಲ್ಲಿದ್ದುದಕ್ಕಿಂತ ಬೆಲೆ ಈಗ ಎರಡು ಪಾಲಷ್ಟು ಹೆಚ್ಚಿದೆ ಎನ್ನೋ ನಿಜ. ಆಹಾರ ಧಾನ್ಯಗಳ ಉತ್ಪಾದಕರಾದ ರೈತ ವರ್ಗ ಈ ಸಂದರ್ಭ ತೃಪ್ತಿಯ ನಿಟ್ಟುಸಿರು ಬಿಟ್ಟಿರಬಹುದು. ಬೆಲೆ ಏರಿಕೆಯು ಅವರ ಆರ್ಥಿಕ ಸ್ಥಿತಿಯನ್ನು ತುಸು ಮಟ್ಟಿಗೆ ಸುಧಾರಿಸಿರಬಹುದು. ಆದರೆ, ಇದರಿಂದ ರೈತರು ಹೇರಳ ಲಾಭ ಗಳಿಸಿ ಸಿರಿವಂತರಾಗುತ್ತಿದ್ದಾರೆ ಎಂಬ ಮಾತನ್ನು ನಂಬಲಿಕ್ಕಾಗುವುದಿಲ್ಲ.

ಇದಕ್ಕೆ ಕಾರಣಗಳು ಹಲವಾರು. ನಮ್ಮ ರೈತರಲ್ಲಿ ಬಹ್ವಂಶ ಜನ ಬಡವರು. ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬೆಳೆದು, ಸಾಲದಲ್ಲೇ ಸಾಯಲು ತಯಾರಾದವರು. ಹಣಕಾಸಿನ ಮಟ್ಟಿಗೆ ಅವರ ಗರ್ಜು ಹೇಳಿ ಮುಗಿಯುವುದಲ್ಲ. ಇಂತಹ ಪರಿಸ್ಥಿತಿಯಲ್ಲಿ ಅವರು, ಹಳ್ಳಿಯ ಮಾರ್ವಾಡಿಗಳಿಂದಲೇ ಸಾಹುಕಾರರಿಂದಲೇ ಸಾಲ ಪಡೆಯುವುದು ಸಂಪ್ರದಾಯ! ಮಳೆಗಾಲ ಮುಗಿದು ಬೆಳೆ ಕಟಾವಿಗೆ ಬಂದಾಗ, ಬೆಳೆದ ಬೆಳೆಯನ್ನು ಸಿಕ್ಕಿದ ಬೆಲೆಗೆ ಮಾರಿ, ಸಾಲದಿಂದ ವಿಮುಕ್ತರಾಗುವ ಹಂಬಲದ ರೈತರು ನಮ್ಮವರು! ಹಾಗಿರುವಾಗ ಅವರ ಉತ್ಪತ್ತಿಗೆ ಸರಕಾರ ನಿಗದಿಪಡಿಸಿದ ಬೆಲೆ ದೊರೆಯಲು ಸಾಧ್ಯವೆ?

ಇಂತಹ ಪರಿಸ್ಥಿತಿಯ ಸಂಪೂರ್ಣ ಲಾಭ ಪಡೆಯುವವರು ಹಳ್ಳಿಗಳಲ್ಲಿರುವ ಹಣವಂತರು, ದಲ್ಲಾಳಿಗಳು, ಮಾರವಾಡಿಗಳು, ಹಾಗೂ ವ್ಯಾಪಾರಿಗಳು, ರೈತರ ಎಲ್ಲಾ ವ್ಯವಹಾರಗಳೂ ಇವರ ಕೈ ಮುಷ್ಟಿಯೊಳಗೇನೇ ಇವೆ. ರೈತರನ್ನು ಇವರು ಸಂಪೂರ್ಣವಾಗಿ ಸುಲಿಯುತ್ತಾರೆ. ಅತನ ಉತ್ಪತ್ತಿ ಇವರ ಪಾಲಾಗಿ, ರೈತನಿಗೆ ನ್ಯಾಯ ಬೆಲೆ ಕನಸಿನ ಗಂಟಾಗಿಯೇ ಉಳಿಯುತ್ತದೆ. ಹೀಗಿರುವಾಗ ಬೆಲೆ ಏರಿಕೆಯ ಲಾಭ ಪಡೆಯುವ ಜನ ಯಾರು?

ಆಹಾರ ಧಾನ್ಯಗಳ ಬೆಲೆ ಏರಿಕೆಯಿಂದ ರೈತರ ಉತ್ಪಾದನೆ ಹೆಚ್ಚಾಗಿ, ಅವರು ಪ್ರೋತ್ಸಾಹಿಸಲ್ಪಟ್ಟು, ಹೆಚ್ಚು ಉತ್ಪಾದಿಸುತ್ತಾರೆ, ಇದರಿಂದ ದೇಶದ ಕೃಷಿ ಉತ್ಪನ್ನ ಹೆಚ್ಚಾಗುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ. ಇದು ಓದುವಾಗ, ಕೇಳುವಾಗ ಸತ್ಯ ಸಂಗತಿ ಎಂದೂ ತೋರುವುದು. ಆದರೆ ಇಂದು ನಮ್ಮ ಬಡ ಬೋರೇ ಗೌಡನಿಗೆ ಈ ಬೆಲೆ ಏರಿಕೆಯಿಂದ ಯಾವ ಲಾಭವೂ ಆಗಿಲ್ಲ. ಬಂಡವಳಗಾರರು, ಲಾಭಬಡಕ ಖೋರರು, ವ್ಯಾಪಾರಸ್ಥರು ಈ ಪರಿಸ್ಥಿತಿಯ ಲಾಭ ಪಡೆದು ಲಾಭ ದೋಚುತ್ತಿದ್ದಾರೆ. ಅತ್ತ ರೈತರ ಉದ್ಧಾರವೂ ಇಲ್ಲ; ಇತ್ತ ಮಧ್ಯಮ ಹಾಗೂ ಬಡ ವರ್ಗಕ್ಕೆ ನೆಮ್ಮದಿಯೂ ಇಲ್ಲವಾಗಿದೆ.

ಸರಕಾರ ಕೃಷಿಯ ಉತ್ಪನ್ನಗಳಿಗೆ, ಆಹಾರ ಧಾನ್ಯಗಳಿಗೆ ಬೆಲೆ ಮುನ್ನೇನೋ ನಿಗದಿ ಮಾಡಿದೆ. ಆದರೆ ಇದು ಬರೀ ಪುಸ್ತಕದಲ್ಲಿನ ಬೆಲೆಯಾಗಿ ಉಳಿದಿದೆ. ತಾನು ನಿಗದಿ ಪಡಿಸಿದ ಬೆಲೆಗೆ ಸಾಧ್ಯವಿಲ್ಲದಿದ್ದರೂ ಸ್ವಲ್ಪವಾದರೂ ಆಹಾರ ಧಾನ್ಯ ಸರಬರಾಜು ಮಾಡಲು ಸರಕಾರಕ್ಕೆ ಸಾಧ್ಯವಾಗುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಬೆಲೆ ನಿಗದಿ ಪಡಿಸಿ ಏನು ಲಾಭ ಬಂತು? ಈ ಬೆಲೆ ನಿಗದಿ ಯಾವ ಪುರುಷಾರ್ಥಕ್ಕಾಗಿ? ಎಂದು ಎಲ್ಲರೂ ಕೇಳುವಂತಾಗಿದೆ.

ಕೃಷಿ ಉತ್ಪನ್ನಗಳ ಬೆಲೆಯು ಕಳೆದ ವರ್ಷದ ಕಾಲಿನಲ್ಲಿ ಸೇಕಡಾ ೨೧.೬೭ರಷ್ಟು ಏರಿದ್ದರೆ ಕೃಷಿ ಸಾಧನಗಳ ಬೆಲೆಯು ೩೦.೨೧ ಸೇಕಡಾದಷ್ಟು ಏರಿದೆ. ಈ ಪರಿಸ್ಥಿತಿಯು ಆಭಾಸಕರವಲ್ಲವೆ? ಇದರಿಂದ ರೈತರಿಗೇನು ಪ್ರಯೋಜನವಾಯಿತು? ಅವರು ಲಾಭಗಳಿಸುವ ಮಾತಂತಿರಲಿ; ಉದ್ಯೋಗವನ್ನು ಮುಂದುವರಿಸಿಕೊಂಡು ಹೋಗುವುದೇ ದುರ್ಲಭವಾಗಿದೆ. ಸರಕಾರ ಈ ಕುರಿತು ಯೋಚಿಸುವ ಕಾಲ ಈಗ ಬಂದಿದೆ.

ರೈತರ ಸ್ಥಿತಿಗತಿಯ ಸುಧಾರಣೆಯು ಬರೀ ಕಾನೂನು ಅಥವಾ ಪುಸ್ತಕದಲ್ಲಿನ ಯೋಜನೆಗಳಿಂದ ಆಗಲು ಸಾಧ್ಯವಿಲ್ಲ. ಕಾನೂನು ಹಾಗೂ ಯೋಜನೆಗಳನ್ನು ಅಳವಡಿಸುವ ವೇಳೆ ಬರಬಹುದಾದ ಪ್ರತ್ಯಕ್ಷ ಪರಿಣಾಮಗಳನ್ನು ತಿಳಿದು, ಯೋಜನೆಗಳನ್ನು ರೂಪಿಸಬೇಕಾದುದು ಇಂದಿನ ತೀವ್ರ ಆವಶ್ಯಕತೆಯಾಗಿದೆ. ಆದರೆ, ಈ ಕುರಿತು ಸರಕಾರ ತೀವ್ರ ಆಸಕ್ತಿ ವಹಿಸಿದಂತೆ ಕಾಣುವುದಿಲ್ಲ.

ಆಹಾರಧಾನ್ಯಗಳ ಬೆಲೆ ಏರಿಕೆಯಿಂದ ಲಾಭ ಹೊಂದುತ್ತಿರುವ ವರ್ಗ ದೇಶದ ಅಭಿವೃದ್ಧಿಗೆ ಕಂಟಕಪ್ರಾಯ ಎಂಬುದನ್ನು ಸರಕಾರ ಗಮನದಲ್ಲಿಡ ಬೇಕಾದುದು ಅಗತ್ಯ. ಇಂದಿನ ದಿನದಲ್ಲಿ ಈ ಬೆಲೆ ಹೆಚ್ಚಳದ ದುಷ್ಪರಿಣಾಮಕ್ಕೆ ಜನರಲ್ಲಿ ಬಹ್ವಂಶ ಒಳಗಾಗಿದ್ದರೂ, ಒಂದು ವರ್ಗ ಈ ಪರಿಸ್ಥಿತಿಯಿಂದ ಹೇರಳ ಲಾಭ ಗಳಿಸುತ್ತಿದೆ. ಈ ಲಾಭ ಬಡಕತನಕ್ಕೆ ಸರಕಾರ ಮಟ್ಟುಗೋಲು ಹಾಕದಿದ್ದರೆ ನಮ್ಮ ಯೋಜನೆಗಳು ತಲೆಕೆಳಗಾಗುವುದೆಂಬುದಕ್ಕೆ ಸಂಶಯ ಬೇಡ.

ರಾಷ್ಟ್ರದ ಬೆನ್ನೆಲುಬಾದ ರೈತನಿಗೆ ಈ ಬೆಲೆ ಏರಿಕೆ ನೆರವಾದರೆ, ಆಗ ಯಾರೂ ಹೆಚ್ಚು ದುಃಖಪಡಬೇಕಾದ ಪ್ರಮೇಯ ಇಲ್ಲ. ಸರಕಾರ ಇದನ್ನು ಲಕ್ಷ್ಯದಲ್ಲಿಟ್ಟು ಕಾರ್ಯ ಮಾಡಿದರೆ, ಆಗ ತುಸು ಉಪಕಾರವಾದೀತು.

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ

ಋತುಭೇದ ಮೊದಲಿಲ್ಲದೆ

ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು

ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ. ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಕಣ್ಣು ತೆರೆಯಿತು

(ಎರಡನೇ ಪುಟದಿಂದ)

ದಾಗ ಈತನಿಗೆ ಕೊನೇ ನಮಸ್ಕಾರ ಹೇಳಿತವರು ಸೇರಿದ್ದಳು—ಆ ಬತ ಹುಡುಗಿ.

ಅದೇ ಕಾಂತಪ್ಪನ ಎರಡನೆ ಕಾಂತೆ, ಈ ನಿರ್ಜನ ಸ್ಥಳದಲ್ಲಿರುವುದನ್ನು ನೋಡಿ ಕಾಂತಪ್ಪನ ದೌರ್ಜನ್ಯದ ನೆನಪಾಯಿತು — ನನಗೆ. ಜಾನಕಿಯ ಸ್ಥಿತಿಯ ಕುರಿತು ನನಗೆ ಮರುಕವಾಯಿತು.

ನಾನೆಂದೆ, 'ಜಾನಕಿ, ಏನಾಯಿತು, ನೀನೇಕೆ ಈ ಹೊತ್ತಲ್ಲದ ಹೊತ್ತಿನಲ್ಲಿ ಇಲ್ಲಿ ನಿಂತಿದ್ದೀಯೆ?'

"ಏನೆಂದು ಹೇಳುವುದು ರಾಜಣ್ಣ. ಒಟ್ಟಾರೆ ನನ್ನ ಗ್ರಹಚಾರ. ಹೆಣ್ಣಾಗಿ ಹುಟ್ಟಲೇ ಬಾರದು ಎನ್ನುವುದು ಇದಕ್ಕೇ ಇರಬೇಕು. ನಮ್ಮ ಹಣೆಬರಹ ಒರೆಯಾಗಿದ್ದರೆ ಯಾರನ್ನೇನು ಹೇಳುವುದು? ಜನ್ಮವೆತ್ತಿ ಬಂದುದಕ್ಕೆ ಪಶುವಿನಂತೆ ಬದುಕಿ ಉಳಿಯಬೇಕು." ಎಂದಾಗ ಆಕೆಯ ಕಂಠ ಗದ್ಗದಿತವಾಯಿತು. ಪರಿಸ್ಥಿತಿಯ ಸಂಪೂರ್ಣ ಅರ್ಥ ತಿಳಿದ ನಾನು, "ಹಾಗಾದರೆ ನಡೆ. ನಮ್ಮ ಮನೆಗೆ ಹೋಗೋಣ. ನಾಳೆ ಬೇಕಾದ ವ್ಯವಸ್ಥೆ ನಾನು ಮಾಡುತ್ತೇನೆ, ನಡೆ" ಎಂದು ಅವಳನ್ನು ಮುಂದೆ ನಡೆಯುವಂತೆ ಹೇಳಿ ನಾನು ಹಿಂದಿನಿಂದ ಬೆಳಕು ಚೆಲ್ಲುತ್ತಾ ನಡೆದೆ, ಆಕೆ ಮಗುವನ್ನೆತ್ತಿ ನಡೆಯುವಾಗ ಎಲ್ಲಿ ಬಿದ್ದು ಬಿಡುವಳೋ ಎಂದು ನನಗೆ ಭಯವಾಗುತಿತ್ತು, ತನ್ನ ಗಂಡನಿಂದ ಚೆನ್ನಾಗಿ ಥಳಿಸಲ್ಪಟ್ಟ, ತುಂಬಿದ ಗರ್ಭವತಿಯಾದ ಆಕೆಗೆ ಶರೀರದಲ್ಲಿ ಶಕ್ತಿ ಎನ್ನುವುದು ಉಳಿದಿರಲೇ ಇಲ್ಲ. ಅಂತೂ ಅತಿ ನಿಧಾನವಾಗಿ ನಡೆದು ನಮ್ಮ ಮನೆ ತಲುಪಿದೆವು.

ಮನೆಯಲ್ಲಿ ನನಗಾಗಿ ದೀರ್ಘ ನಿರೀಕ್ಷೆ ನಡೆದಿತ್ತು. ನಮ್ಮನ್ನು ನೋಡಿದಾಗ ಮನೆಯಲ್ಲಿ ನನ್ನಾಕೆಗೆ ಎಲ್ಲಿಲ್ಲದ ಸಡಗರ. ಆಕೆಯ ಹಾಗೂ ಜಾನಕಿಯ ತವರೂರು ಒಂದೇ ಇದ್ದುದರಿಂದಲೇ ಇರಬೇಕು ಅಂತಹ ಸಡಗರ!

ನಾನು ವಸ್ತ್ರ ಕಳಚಿ ಬದಲು ವಸ್ತ್ರ ಉಟ್ಟು ನೇರ ಬಚ್ಚಲಿಗೆ ನಡೆದೆ. ಜಾನಕಿಗೆ ಬೇರೆ ವಸ್ತ್ರ ಉಡಲು ಕೊಡುವಂತೆ ಸೂಚಿಸಿದೆ, ಮೊದಲು ನಾನು ಊಟ ಮಾಡಿದೆ. ಒಳಿಕ ಅವರು ಊಟಕ್ಕೆ ಕುಳಿತರು, ನನ್ನ ಮುದಿ ತಾಯಿ ಮೊದಲೇ ಉಂಡು ನಿದ್ದೆ ಹೋಗಿದ್ದರು.

ರಾತ್ರಿ, ದೀಪವಾರಿದ ಬಳಿಕ ಜಾನಕಿ ಆ ದಿನ ಅವಳ ಗಂಡನಿಂದ ಆಕೆಗೆ ಒದಗಿದ ಕತೆಗಳನ್ನು ಹೇಳುತ್ತಿದ್ದಳು. ಕಂಠ ಪೂರ್ತಿ ಕುಡಿದು ಬಂದು ಆಕೆಯಲ್ಲಿ ಉಳಿದಿದ್ದ ಒಂದೇ ಚಿನ್ನದ ಸರವನ್ನು ಅಡವಿಡುವುದಕ್ಕಾಗಿ ಕೇಳಿದನೆಂದೂ, ಆಕೆ ಅದನ್ನು ಕೊಡಲು ತಿರಸ್ಕರಿಸಿದಾಗ ಚೆನ್ನಾಗಿ ಥಳಿಸಿದನೆಂದೂ, ಪ್ರಾಣವನ್ನಾದರೂ ಉಳಿಸಿಕೊಳ್ಳುವುದಕ್ಕಾಗಿ ಆಕೆ ಮನೆಯಿಂದ ಗುಡ್ಡೆಗೋಡಿದಳೆಂದೂ ಹೇಳಿದಳು. ಕಾಂತಪ್ಪನ ಕತೆ ಗೊತ್ತಿದ್ದ ನನಗೆ ಆ ಮಾತುಗಳನ್ನು ಕೇಳುತ್ತಿದ್ದಂತೆಯೆ ನಿದ್ದೆ ಬಂದಿತು.

○ ○ ○

ಮರುದಿನ ನಾನು ಕಾಂತಪ್ಪನನ್ನು ಭೇಟಿಯಾದಾಗ ಅವನ ಅಮಲು ಇಳಿದಿತ್ತು. ಅವನ ಹೃದಯದಲ್ಲಿ ವಿವೇಕ ಮೂಡಿ ತಾನು ಹಿಂದಿನ ದಿನ ಮಾಡಿದ ಕೃತ್ಯಕ್ಕಾಗಿ ನಾಚಿಕೆಗೊಂಡಂತಿತ್ತು — ಅವನ ಮುಖ ಭಾವ. ನಾನು ಹೋದವನೇ ಅವನನ್ನು ಉಪಾಯದಿಂದ ನುಡಿಸಿದೆ. ಅವನ ಕಣ್ಣುಗಳಿಂದ 'ಪಟ ಪಟ'ನೆ ಹನಿಗಳು ಉದುರಿದವು.

"ಇನ್ನು ಮುಂದೆ ಎಂದೂ ನಾನು ಈ ರೀತಿ ವರ್ತಿಸುವುದಿಲ್ಲ"ವೆಂದು ಆತನಿಂದಲೇ ಹೇಳಿಸಿದೆ, ಅವನನ್ನು ನನ್ನ ಮನೆಗೆ ಕರೆದೊಯ್ದು ಜಾನಕಿಯನ್ನು ಅವನ ಸಂಗಡ ಕಳುಹಿಸಿ ಕೊಟ್ಟೆ.

ಗಂಡ ಹೆಂಡಿರು ತಮ್ಮ ಮಗುವಿನೊಂದಿಗೆ ಜೊತೆಯಾಗಿ ಹೋಗುವುದನ್ನು ಅವರು ಮರೆಯಾಗುವ ತನಕ ನಿಂತು ನಾವು ನೋಡುತ್ತಿದ್ದೆವು. ಕಾಂತಪ್ಪ, ಹೆಗಲ ಮೇಲಿಂದ ಅವರ ಮಗು ನಮ್ಮೆಡೆಗೆ ನೋಡುತ್ತಾ ಕೈಯೆತ್ತಿ 'ಟಾ-ಟಾ' ಹೇಳುತ್ತಿತ್ತು.

ಹರಿಸ್ವರ

NAVAYUGA 20—5—1965

Registered with the Registrar of News Papers for India under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೨೦-೫-೬೫ರಿಂದ ೨೬-೫-೬೫ರ ವರೆಗೆ

೧. ಮೇಷ

ಶುಕ್ಲಪಕ್ಷದ ಚಂದ್ರನೋಪಾದಿಯಲ್ಲಿ ನಿಮ್ಮ ಅದೃಷ್ಟವಿಂದು ದಿನೇ ದಿನೇ ವೃದ್ಧಿ ಹೊಂದುತ್ತಲಿರುವುದು. ಉದ್ಯೋಗದಲ್ಲಿ ಯಶಸ್ಸು ವ್ಯಾಪಾರದಲ್ಲಿ ಲಾಭ ನೌಕರಿಯಲ್ಲಿ ಭಡತಿ ಮೊದಲಾದವುಗಳುಂಟಾಗುವವು. ಯಾವ ಭಾಗದಲ್ಲೂ ನಿಮಗಿಂದು ಕೊರತೆಯಿಲ್ಲವಾದರೂ ರಾಜಕೀಯ ರಂಗದಲ್ಲಿ ಪರಾಜಯ ವುಂಟಾದೀತು. ತಾ. 21ರಿಂದ 24ರ ವರೆಗಿನ ದಿನಗಳು ಸುಖಭೋಗದಾಯಿಗಳಿವೆ.

೨. ವೃಷಭ

ನಿಮ್ಮ ರಾಶ್ಯಧಿಪನಾದ ಶುಕ್ರನೋರ್ವನನ್ನುಳಿದು ಇತರ ಗ್ರಹರೆಲ್ಲರೂ ನಿಮಗಿಂದು ಪ್ರತಿಕೂಲರಾಗಿರುವುದರಿಂದ ಹೆಚ್ಚಿನ ನಿಮ್ಮ ಪರಿಶ್ರಮವು ನೀರಿನಲ್ಲಿ ಮಾಡಿದ ಹೋಮದಂತೆ ವಿಫಲವಾಗುವದು. ಅತಿ ಸಮೀಪದ ಬಂಧುಗಳ ವಿಯೋಗವಾಗಲಿದೆ. ಆರ್ಥಿಕ ಪರಿಸ್ಥಿತಿಯು ತುಂಬ ಹದಗೆಡುವುದರಿಂದ ದಿನಯಾಪನೆಯು ತುಂಬ ಕಷ್ಟವಾಗಬಹುದು. ಕಫ ರೋಗದಿಂದ ಆರೋಗ್ಯಕ್ಕೆ ಧಕ್ಕೆಯಿದೆ. ವಾರಾಂತ್ಯದ 4 ದಿನಗಳು ಇತರ ದಿನಗಳಿಂದುತ್ತಮವೆನಿಸುವವು.

೩. ಮಿಥುನ

ನಿಮ್ಮ ವ್ಯಯ ರಾಶಿಯಲ್ಲಿಂದು ಗ್ರಹಚಕ್ರಯರ ಸಮಾವೇಶವಾಗುವುದರಿಂದ ನೀವಿಂದು ಹಲವಾರು ಸಮಸ್ಯೆಗಳನ್ನೆದುರಿಸಬೇಕಾಗಿ ಬರುವದು. ಅಸುರಕ್ಷಿತ ಪ್ರವಾಸಾದಿಗಳಿಂದ ಧನ ಮತ್ತು ಆರೋಗ್ಯಕ್ಕೆ ಹಾನಿಯಿರುವದಾದರೂ ಪುಣ್ಯತೀರ್ಥಕ್ಷೇತ್ರಾದಿಗಳ ಸಂದರ್ಶನ ಲಾಭವಾಗಲಿದೆ. ಸಾಹಸಿಗಳಾದ ನೀವು ದುಃಸಾಧ್ಯವಾದ ಕಾರ್ಯವನ್ನೂ ಸುಲಭದಿಂದ ನಿರ್ವಹಿಸುವಿರಿ. ಬಂಧು ವಿರಹ ದುಃಖಕ್ಕೆರವಾಗುವ ಸಂಭವವಿದೆ. ವಾರದ ಅಧ್ಯಂತ ದಿನಗಳು ಸುಖಲಾಭದಾಯಿಗಳಾಗಿವೆ.

೪. ಕರ್ಕಟ

ಶನ್ಯಂಗಾರಕರ. ಅನಿಷ್ಟ ಸ್ಥಾನದಲ್ಲಿದ್ದು ವಿರೋಧಿ ವರ್ಗದವರಿಂದ ಹಲವಾರು ತೆರದ ವಿಘ್ನ ವಿದ್ರೋಹಗಳನ್ನೆಸಗಿಸುವರಾದರೂ ಭಾಗ್ಯಶಾಲಿಗಳಾದ ನೀವು ಅಪಾಯಗಳನ್ನು ಉಪಾಯದಿಂದ ಪಾರುಗಾಣಿಸಲಿರುವಿರಿ. ಬಂಧುಮಿತ್ರರ ನೆರವಿನಿಂದಾಗಿ ಹಿಡಿದ ಕಾರ್ಯವನ್ನು ಪೂರ್ಣಗೊಳಿಸುವಿರಿ. ಅಂತೆಯೇ ಫಲವನ್ನು ಕೂಡ ಪಡೆವಿರಿ. ಸಮಾಜದಲ್ಲಿ ಗಣನೀಯ ಸ್ಥಾನವನ್ನು ಪಡೆವ ನಿಮಗೆ ವಾರಾದಿಯ 3 ದಿನಗಳು ಸುಖಭೋಗ ಲಾಭದಾಯಿಗಳಾಗಿವೆ.

೫. ಸಿಂಹ

ನಿಮ್ಮ ಸುಖಭಾಗ್ಯ ಸ್ಥಾನಗಳನ್ನು ಪಾಪಿಗಳಾದ ಕುಜಶನಿಗಳು ಪೂರ್ಣ ದೃಷ್ಟಿಯಿಂದ ನೋಡುತ್ತಿರುವುದರಿಂದಲೂ ಅಲ್ಲದೆ ಬುಧ ಗುರು ಶುಕ್ರರು ಪ್ರತಿಕೂಲರಾಗಿರುವುದರಿಂದಲೂ ಸದ್ಯದ ದಿನಗಳು ತುಂಬ ದುಃಖದಾಯಿಗಳಾಗಿ ಪರಿಣಮಿಸಲಿವೆ. ಗುರುಹಿರಿಯರ ಕೂಡೆ ಕಲಹ ಮಿತ್ರ ಜನರ ವಿರೋಧ ಸಾಂಸಾರಿಕ ತಾಪತ್ರಯ ಇತ್ಯಾದ್ಯನಿಷ್ಟ ಪರಂಪರೆಗಳು ನಿಮ್ಮನ್ನು ನೆಮ್ಮದಿಯಿಂದಿರ ಬಿಡಲಾರವು. ಮನೋರೋಗದ ಪ್ರಾಬಲ್ಯದಿಂದಾಗಿ ದೇಹಾರೋಗ್ಯವು ಕೆಡಲಿದೆ. "ದುಃಖಸ್ಯಾನಂತರಂ ಸುಖಂ" ಎಂಬ ನ್ಯಾಯದಂತೆ ಸದ್ಯದಲ್ಲೇ ನಿಮ್ಮ ಗ್ರಹಚಾರಗಳು ದೂರವಾಗಲಿವೆ. ತಾ. 21ರಿಂದ 24ರ ವರೆಗಿನ ದಿನಗಳು ಅನುಕೂಲ

೬. ಕನ್ಯಾ

ಭಾಗ್ಯಶಾಲಿಗಳಾದ ನಿಮ್ಮ ಪ್ರತಿಯೊಂದು ಬಯಕೆಗಳೂ ನಿರೀಕ್ಷಿಸಿದಂತೆ ನಿರ್ವಿಘ್ನದಿಂದ ಗುರಿ ಸೇರಲಿವೆ. ಸ್ವಯಂ ಸಾಹಸಿಗಳಾದ ನಿಮಗೆ ಬಂಧುಮಿತ್ರರ ನೆರವೂ ಜನತೆಯ ಸಹಕಾರವೂ ಲಭಿಸುವುದರಿಂದ ಸರ್ವತ್ರ ವಿಜಯ ಸ್ಥಾನಮಾನಗಳನ್ನು ಪಡೆವಿರಿ. ನಿಮ್ಮ ಉನ್ನತಿಯಂ ಕಂಡು ನೋದರ ವರ್ಗದವರ ಕಣ್ಣು ಕೆಂಪಾಗಲಿದೆ. ವಿನಾಕಾರಣ ಉಪದ್ರವಿಸಲಿರುವರು. ರಾಜಕೀಯ ರಂಗಕ್ಕಿಂದು ಇಳಿಯದಿರಿ. ಪರಿಣಾಮವು ನೆಟ್ಟಗಾಗಲಾರದು. ವಾರಾಂತ್ಯದ 4 ದಿನಗಳು ವಿಜಯ ಸಾಧಕಗಳಾಗಿವೆ.

೭. ತುಲಾ

ತಂದೆ ಮಕ್ಕಳಲ್ಲೂ ಸ್ವಾಮಿಸೇವಕರಲ್ಲೂ ಪರಸ್ಪರ ಕಲಹ ವೈಮನಸ್ಯಗಳುಂಟಾಗಲಿವೆ. ಆದರೆ ನಿಮ್ಮ ಅರ್ಧಾಂಗಿಯಿಂದು ಭುಜಕ್ಕೆ ಭುಜ ಕೊಟ್ಟು ನಿಮ್ಮ ಸಕಲ ಕಾರ್ಯಗಳಿಗೂ ನೆರವಾಗುವಳು. ದುಡಿಮೆಗಿಂತ ದ್ವಿಗುಣ ವ್ಯಯವಾಗುವದಾದರೂ ಹಣದ ಅಡಚಣೆಯು ಕಾಣಿಸಲಾರದು. ನಿಮ್ಮ ಖರ್ಚಿಗೆ ಸಕಾಲದಲ್ಲಿ ಧನವು ತಾನಾಗಿ ನಿಮ್ಮ ಕೈ ಸೇರಲಿವೆ. ಸ್ವಂತ ಆರೋಗ್ಯದತ್ತ ಕೊಂಚ ನಿಗಾವಹಿಸಿರಿ. ಕಫವಾತ ಪ್ರಕೋಪದಿಂದಾಗಿ ಬಳಲಲಿರುವಿರಿ. ಹೊಸ ಉದ್ಯಮಾರಂಭಕ್ಕೀ ಕಾಲವು ಒಳಿಯದಲ್ಲ. ವಾರದ ಅಧ್ಯಂತ ದಿನಗಳು ಇದ್ದುದರಲ್ಲುತ್ತಮವಾಗಿವೆ.

೮. ವೃಶ್ಚಿಕ

ಅಡಿಯ ಮುಂದಿಡೆ ಸ್ವರ್ಗ ಅಡಿಯ ಹಿಂದಿಡೆ ನರಕವೆಂದಿಹನು ಸರ್ವಜ್ಞ ಕವಿಯು. ಅಂತೆಯೇ ನೀವಿಂದು ಕೈಗೊಂಡ ಉದ್ಯಮದಲ್ಲಿ ನಿಶ್ಚಿಂತೆಯಿಂದ ಮುಂದೆ ಸಾಗಿರಿ. ನಿಮ್ಮ ಬಯಕೆಯು ಪೂರ್ಣವಾಗಲಿದೆ. ಮನೋದೌರ್ಬಲ್ಯವು ನಿಮ್ಮನ್ನು ಬಹುವಾಗಿ ಕಾಡಲಿದೆ. ಕೇವಲ ನಿಮ್ಮ ವಿಷಯಾದಿಗಳಿಗೆ ಮನಸೋತು ಹೆಚ್ಚಿನ ಧನವನ್ನು ಅಪವ್ಯಯ ಮಾಡಲಿರುವಿರಿ. ಸ್ತ್ರೀವರ್ಗದವರಿಂದಾಗಿ ಕಲಹ ನಷ್ಟ ಅಪವಾದಗಳು ಸಂಭವಿಸುವಂತಿವೆ. ತಾ. 21, 22 ಅನುಕೂಲ

೯. ಧನು

ಶ್ರಮ ವಹಿಸಿ ದುಡಿಯುವಿರಿ. ಆದರೆ ನಿಮ್ಮ ದುಡಿಮೆಗೆ ತಕ್ಕ ಫಲವು ಕಾಣಿಸದು. ಆರ್ಥಿಕ ಬಿಕ್ಕಟ್ಟು ನಿಮ್ಮನ್ನು ಸದಾ ಪೀಡಿಸುತ್ತಿರುವುದು. ತಂದೆ ಮಕ್ಕಳು ಗಂಡಹೆಂಡಿರು ಪರಸ್ಪರ ಕಲಹಪ್ರಿಯರಾಗುವುದರಿಂದ ನಿಮಗಿಂದು ಸಂಸಾರದಲ್ಲಿ ಈಷತ್ತೂ ನೆಮ್ಮದಿಯಿರದು. ಶುಕ್ರನಲ್ಲ ದೈಹಿಕ ಶಕ್ತಿಯು ದಿನೇದಿನೇ ಕುಗ್ಗಲಿದೆ. ನೌಕರಿ ವರ್ಗದವರಿಗೂ ವ್ಯಾಪಾರಿ ಜನತೆಗೂ ಇಂದಿನ ದಿನಗಳು ತುಂಬ ಪ್ರತಿಕೂಲಗಳಾಗಿವೆ. ತಾ. 23, 24 ಈ ದಿನಗಳು ಉಳಿದ ದಿನಗಳಿಗಿಂತ ಉತ್ತಮವಾಗಿ ಕಾಣಬಹುದು.

೧೦. ಮಕರ

ಪ್ರತೀಕಾರಾಸಕ್ತರಾದ ನಿಮ್ಮ ಶತ್ರುವರ್ಗದಿಂದಾಗಿ ನೀವಿಂದು ಹಲವಾರು ತೊಂದರೆಗಳಿಗೆ ಸಿಲುಕಲಿರುವಿರಿ. ವಿಶೇಷತಃ ಭೂಸಂಬಂಧವಾದ ವ್ಯವಹಾರದಲ್ಲಿ ಕೋರ್ಟು ಮನೆಗೆ ತಿರುಗುವ ಪ್ರಸಂಗ ಬರುವುದಲ್ಲದೆ ನಷ್ಟಕಷ್ಟಗಳು ಪ್ರಾಪ್ತವಾದಾವು. ನಿಷ್ಕಾರಣ ಕಲಹವಾದೀತು. ಆದರೂ ಗುರುಶನಿ ಪೂರ್ಣ ದೃಷ್ಟಿಯಿಂ ಪಡೆದ ನಿಮಗೆ ಹೆಚ್ಚಿನ ತೊಂದರೆಗಳು ಸಂಭವಿಸಲಾರವು. ಆಯವ್ಯಯಗಳು ಕೂಡ ಸಮತೋಲದಲ್ಲಿ ನಿಲ್ಲುವುದರಿಂದ ಹಣದ ಬಿಕ್ಕಟ್ಟೂ ಉದ್ಭವಿಸಲಾರದು. ತಾ. 21, 22, 26 ಈ ದಿನಗಳಲ್ಲಿ ನಿಮ್ಮ ಅಭೀಷ್ಟಗಳು ಸಿದ್ಧಿಸಲಿವೆ.

೧೧. ಕುಂಭ

ನಿಮ್ಮ ಸುಖಭಾಗ್ಯಪತಿಯಾದ ಶುಕ್ರನು ಸ್ವಸ್ಥಾನದಲ್ಲಿದ್ದು ನಿಮ್ಮ ಹಿತವನ್ನು ಸಂರಕ್ಷಿಸುವನಲ್ಲದೆ ಇತರ ಎಲ್ಲಾ ಗ್ರಹರೂ ನಿಮ್ಮ ಮೇಲೆ ಆಗ್ರಹದಿಂದಿರುವ ಕಾರಣ ಸದ್ಯದ ದಿನಗಳನ್ನು ಸ್ವಲ್ಪ ಕಷ್ಟದಿಂದಲೇ ಕಳೆಯಬೇಕಾಗುವದು. ವಾತವಿಕಾರದಿಂದ ಆರೋಗ್ಯ ಆಗಾಗ ಕೆಡಲಿದೆ. ಮೇಲಿಂದ ಮೇಲೆ ಪ್ರಾಪ್ತವಾಗತಕ್ಕ ಕೌಟುಂಬಿಕ ಕಲಹ ಗೃಹತಾಪತ್ರಯಗಳಿಂದಾಗಿ ಮನಸ್ಸಿಗೆ ಸ್ವಲ್ಪವೂ ನೆಮ್ಮದಿಯಿರದು. ರಾಜಕೀಯ ರಂಗದಲ್ಲಿ ಮುಖಭಂಗವಾದೀತು. ಜಾಗ್ರತೆಯಿಂದ ವರ್ತಿಸುವವರಿಗೆ ತಾ. 20, 21 ಸ್ವಲ್ಪ ಅನುಕೂಲವಾಗಲಿವೆ.

೧೨. ಮೀನ

ಶನಿಗುರುಗಳು ಪ್ರತಿಕೂಲರಾಗಿದ್ದರೂ ಇತರ ಗ್ರಹಗಳ ಪೂರ್ಣ ಬೆಂಬಲವು ನಿಮಗಿರುವುದರಿಂದ ನೀವಿಂದು ಸುಖದಿಂದ ಕಾಲ ಕಳೆವಿರಿ. ಪ್ರಬಲರಾದ ಪ್ರತಿಪಕ್ಷಿಗಳನ್ನೂ ಪರಾಭವಗೊಳಿಸಿ ನಿಮ್ಮ ಕೀರ್ತಿಧ್ವಜವನ್ನು ಸ್ಥಾಪಿಸಲಿರುವಿರಿ. ರಾಜಕೀಯ ಕ್ಷೇತ್ರದಲ್ಲಿ ಗಣನೀಯ ಸ್ಥಾನವನ್ನು ಪಡೆಯುವ ಯೋಗವಿದೆ. ನೌಕರಿ ವ್ಯಾಪಾರಾದಿಗಳಲ್ಲಿ ದಿನೇ ದಿನೇ ಪ್ರಗತಿ ಹೊಂದತಕ್ಕ ನಿಮಗೆ ತಾ. 20, 21, 22, 26 ಈ ದಿನಗಳಲ್ಲಿ ವಿಜಯ ಕೀರ್ತಿ ಲಾಭಗಳು ಪ್ರಾಪ್ತವಾಗುವವು.

— —

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ.

S.C. No 375/64.

ಆನಂದ S. ಕಮತ್ —ವಾದಿ

ಹಿರಿಯಣ್ಣ ಶೆಟ್ಟಿ (ಹೆಂಡ್ತಿ) ಸಹಾ —ಪ್ರತಿವಾದಿರು

ವಾದಿ ಕಡೆಯಿಂದ ಈ ಮೂಲ್ಯ ಜಾಹೀರು ಮಾಡಿಕೊಳ್ಳುವದೇನೆಂದ್ರೆ—

2. ಬಾಗಮ್ಮ ಸೆಡ್ತಿ ಅಲಂದೂರು ಹಿರಿಯಣ್ಣ ಶೆಟ್ರ ಹೆಂಡ್ತಿ; 3. ಕೃಷ್ಣಪ್ಪ ಶೆಟ್ಟಿ, ಹಿರಿಯಣ್ಣ ಶೆಟ್ರ ಮಗ; 4. ಶಂಕರಿ ಶೆಡ್ತಿ, ಹಿರಿಯಣ್ಣ ಶೆಟ್ರ ಮಗಳು ಯಡ್ತರೆ ಗ್ರಾಮದಲ್ಲಿರುವವರು.

ವಾದಿಗೆ ಪ್ರತಿವಾದಿರಿಂದ ಶುಭಕೃತು ಶೋಭಕೃತು ಸಂವತ್ಸರಗಳಿಗೆ ಬರತಕ್ಕ ಮೂಲಗೇಣಿ ವಗೈರೆ 28-50 ಬರಮಾಡಿಕೊಳ್ಳುವರೆ ವಾದಿಯು ಮಾಡಿದ ದಾವೆಯು ತಾ. 14-6-65ಕ್ಕೆ ಅಖೈರಿ ತನ್ಕಿಗೆ ಯಿಡೋಣಾಗಿದೆ. ಆ ಕುರಿತು ನಿಮ್ಮದೇನಾದ್ರೂ ಉದಾಹರಣೆಯಿದ್ರೆ ಸದ್ರಿ ದಿವ್ಸ ಹೆಗ್ಗು 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿರ ಕಡೆಯಿಂದ ಈ ಮೂಲ್ಯ ತಿಳಿಯಪಡಿಸಿದೆ.

G. SANJIVA RAO,
Vakil for Pltf.

Kundapur,
Date 10-5-65.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ —
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ —
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ.ಪ್ರತ್ಯೇಕ)

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty at the Navayuga Press, Udupi, S. India.

ನವಯುಗ

ಸಂಪುಟ ೪೪] ಶ್ರೀ ಸೋ, ೨೭, ೬೫ [ಸಂಚಿಕೆ ೪೯

Phone No. 226
ಫೋನ್ ಸಂಖ್ಯೆ :

NAVAYUGA

leading nationalist weekly

೨೦
ಪೈಸೆ

ನಾರದ ಕಥೆ

ಮನೆಗೆ ಮತ್ತೆ ಮರಳಲಿಲ್ಲ

ಭಾವಾನುವಾದ:
ಶ್ರೀ||ಪ್ರೇಮಚಂದ್ರ ತಿಂಗಳಾಯ.

ಪೆತಿಕ್ ಚಕ್ರವರ್ತಿಯು ತುಂಟರ ತಂಡದ ಮುಖಂಡನೂ ಆಗಿದ್ದನು. ಒಂದು ದಿನ ಅವನ ತುಂಟು ತಲೆಯಲ್ಲಿ, ಒಂದು ಹೊಸ ಯೋಚನೆಯು ಹೊಳೆಯಿತು. ಹೊಳೆ ಕಿನಾರೆಯಲ್ಲಿ ಅರ್ಧ ಕೆತ್ತಿದ ದೋಣಿಯ ದೊಡ್ಡ ಮರದ ತೊಲೆಯೊಂದು ಇತ್ತು—'ಅದನ್ನು ಎಲ್ಲರೂ ಸೇರಿ ನೀರಿಗೆ ದೂಡಬೇಕು—ಆಗ ಆ ಮರದ ಯಜಮಾನನು ಸಿಟ್ಟುಗೊಂಡು ಓಡಿಸಿಕೊಂಡು ಬರುತ್ತಾನೆ—ಆಗ ನಾವೆಲ್ಲರೂ ಓಡಿ ಸಂತೋಷಪಡಬೇಕು" ಎಂಬುದೇ ಅವನ ತಲೆಯಲ್ಲಿ ಸುಳಿದ ಹೊಸ ವಿಚಾರ. ಇದಕ್ಕೆ ಕೂಡಲೆ ಎಲ್ಲರ ಒಪ್ಪಿಗೆಯೂ ಸಿಕ್ಕಿತು.

ಈ ತಮಾಷೆಯನ್ನು ಮಾಡಬೇಕು ಎನ್ನುವಷ್ಟರಲ್ಲೇ ಪೆತಿಕನ ತಮ್ಮ ಮೋಹನನು ಆ ತೊಲೆಯ ಮೇಲೆ ಮಲಗಿಕೊಂಡನು. ಪೆತಿಕನು ಮನಸ್ಸಿನಲ್ಲೇ ಆಲೋಚಿಸಿದನು—'ಈಗ ನಾನು ಸುಮ್ಮನಿದ್ದರೆ ತನ್ನ ತಂಡದವರ ನಗೆಗೊಳಗಾಗ ಬೇಕಾಗುತ್ತೇನೆ" ಆದುದರಿಂದ ತನ್ನ ಮಾತನ್ನು ಉಳಿಸುವುದಕ್ಕಾಗಿ ಕೂಡಲೆ ತನ್ನ ತಂಡದವರಿಗೆ ಆ ತೊಲೆಯನ್ನು ದೂಡುವಂತೆ ಆಜ್ಞಾಪಿಸಿದನು. ಮೋಹನನು ಪಕ್ಕನೆ ನೆಲಕ್ಕೆ ಹೊರಳಿದನು.

ಒಂದು...ಎರಡು....ಮೂರು ಎನ್ನುವಷ್ಟರಲ್ಲಿ ಮರವು ನೀರಿನಲ್ಲಿ ಇತ್ತು. ಅದರೊಂದಿಗೆ ಮೋಹನನ ಉದಾರ ತನವೂ ನೀರು ಪಾಲಾಯಿತು.

ಎಲ್ಲಾ ಹುಡುಗರೂ ಹರ್ಷದಿಂದ ಧ್ವನಿಗೂಡಿಸಿದರು. ಆದರೆ ಪೆತಿಕನು ಮಾತ್ರ ಸ್ವಲ್ಪ ಗಂಭೀರನಾಗಿದ್ದನು. ಯಾಕೆಂದರೆ ಮುಂದೆ ತನ್ನ ತಮ್ಮನಿಂದ ಏನಾಗುವುದೆಂಬುದನ್ನು ಅವನು ತಿಳಿದಿದ್ದನು. ಅವನು ನೆನಸಿದಂತೆಯೇ ನೆಲದಲ್ಲಿದ್ದ ಮೋಹನನು ಒಮ್ಮೆಲೇ ಪೆತಿಕನ ಬಳಿಗೋಡಿ ಬಂದು ಅವನ ಕೆನ್ನೆಗೆ ಎರಡು ಬಾರಿಸಿ, ಅಲ್ಲಿದ್ದ ಕೆಸರು ಮಣ್ಣನ್ನು ಮೈಗೆ ಹಚ್ಚಿಕೊಂಡು ಕೂಗುತ್ತಾ ಮನೆಯ ಕಡೆಗೆ ಹೊರಟನು. ನಾಟಕದ ಪ್ರಥಮಾಂಕವು ಅಲ್ಲಿಗೆ ಮುಗಿಯಿತು.

ಈಗ ಮನೆಗೆ ಹೋದರೆ ತನಗೆ ಪೆಟ್ಟು ಬೀಳುವುದು ಖಂಡಿತ ಎಂದು ಅರಿತಿದ್ದ ಪೆತಿಕನು ಮನೆಗೆ ಹೋಗದೆ, ನೀರ ಬದಿಯಲ್ಲಿ ಇರುವ ದೋಣಿಯೊಂದರ ಮೇಲೆ ಕುಳಿತು, ಹುಲ್ಲು ಕಡ್ಡಿಯನ್ನು ಕಡಿಯುತ್ತಿದ್ದನು. ಅಷ್ಟರಲ್ಲೇ ಮತ್ತೊಂದು ದಡದಿಂದ ದೋಣಿಯೊಂದು ಈಚೆ ದಡವನ್ನು ತಲುಪಿತು. ಅದರಲ್ಲಿ ಒಬ್ಬ ಮಧ್ಯ ವಯಸ್ಸಿನ, ಬಿಳಿ ಕೂದಲಿನ ವ್ಯಕ್ತಿಯು ಪೆತಿಕನ ಬಳಿಗೆ ಬಂದು "ಮಗೂ ಇಲ್ಲಿ ಚಕ್ರವರ್ತಿಯವರ ಮನೆ ಎಲ್ಲಿ?" ಎಂದು ಕೇಳಿದನು. ಅದಕ್ಕೆ ಪೆತಿಕನು ಅರ್ಧ ಮನಸ್ಸಿನಿಂದ "ಓ ಅಲ್ಲಿ" ಎಂದು ಕೈ ತೋರಿಸಿದನು. ಸರಿಯಾಗಿ ಸೂಚಿಸುವಂತೆ ಆ ವ್ಯಕ್ತಿಯು ಇನ್ನೊಮ್ಮೆ ಕೇಳಿಕೊಂಡನು. ಆಗ ಪೆತಿಕನು ಸಿಟ್ಟಿನಿಂದ "ಅಲ್ಲಿ ಹೋಗಿ ನೋಡಿ" ಎಂದು ಸುಮ್ಮನಾದನು.

ಅಷ್ಟರಲ್ಲೇ ಒಬ್ಬ ಕೆಲಸದಾಳು ಬಂದು "ತಾಯಿ ಕರೆಯುತ್ತಾರೆ ಮನೆಗೆ ಬರಬೇಕಂತೆ" ಎಂದು ಹೇಳಿದನು. ಆಗ ಪೆತಿಕನು ಅಲ್ಲಾಡದೆ ಸುಮ್ಮನಿದ್ದನು. ಕೂಡಲೆ ಆ ಕೆಲಸದಾಳು ಪೆತಿಕನನ್ನು ಎತ್ತಿಕೊಂಡು ಮನೆಯತ್ತ ಸಾಗಿದನು. ಪೆತಿಕನು ಅವನಿಂದ ತಪ್ಪಿಸಲು ಎಷ್ಟು ಕೈಕಾಲು ಬಡಿದರೂ ವ್ಯರ್ಥವಾಯಿತು.

ಪೆತಿಕನು ಮನೆಗೆ ಪ್ರವೇಶಿಸುವಷ್ಟರಲ್ಲೇ ಅವನ ತಾಯಿಯು "ಈ ದಿನವೂ ನೀನು ಮೋಹನನಿಗೆ ಹೊಡೆದೆಯೊ?" ಎಂದಳು.

"ಇಲ್ಲ ನಾನು ಹೊಡೆಯಲೇ ಇಲ್ಲ. ಯಾರು ಹೇಳಿದರು ನಿಮಗೆ!" ಎಂದು ಕೇಳಿದನು.

ಸುಳ್ಳು ಹೇಳುತ್ತೀಯ ಕತ್ತೆ?" ಎಂದು ತಾಯಿಯು ಘರ್ಜಿಸಿದಳು.

"ಅಮ್ಮ ನಾನು ನಿಜವಾಗಿಯೂ ಮೋಹನನಿಗೆ ಹೊಡೆಯಲೇ ಇಲ್ಲ. ಬೇಕಾದರೆ ಅವನೊಂದಿಗೇನೇ ಕೇಳಿ" ಎಂದನು ಸ್ವಲ್ಪ ನಿಧಾನವಾಗಿ. ಆದರೆ ಮೋಹನನು ತಾನು ಮೊದಲು ಹೇಳಿದುದನ್ನು ಸಾಧಿಸುವುದಕ್ಕಾಗಿ "ಹೌದಮ್ಮ, ನನಗೆ ಚೆನ್ನಾಗಿ ಹೊಡೆದಿದ್ದಾನೆ" ಎಂದನು.

ಇದರಿಂದ ಪೆತಿಕನು ತನ್ನ ಸಹನಾ ಶಕ್ತಿಯನ್ನು ಸಂಪೂರ್ಣವಾಗಿ ಕಳೆದುಕೊಂಡನು. ಈ ಅನ್ಯಾಯವನ್ನು ಎದುರಿಸುವುದಕ್ಕಾಗಿ ಒಮ್ಮೆಯೇ ಮೋಹನನ ಬೆನ್ನಿಗೆ ಪೆಟ್ಟಿನ ಸುರಿಮಳೆಯನ್ನು ಗೈದನು.

ಕೂಡಲೇ ತಾಯಿಯು ಪೆತಿಕನನ್ನು ದೂಡಿದಳು. ಆಗ ಪೆತಿಕನು ಸಿಟ್ಟಿನ ಭರದಲ್ಲಿ ಅವಳನ್ನು ಮೆಲ್ಲನೆ ದೂಡುತ್ತಾ ಮೋಹನನಿಗೆ ಹೊಡೆಯಲು ಪುನಃ ಮುಂದಾದನು. "ಅಯ್ಯೋ ದುಷ್ಟ, ನಿನ್ನ ಸ್ವಂತ ತಾಯಿಯನ್ನು ದೂಡುತ್ತೀಯೊ!" ಎಂದು ಬೊಬ್ಬೆ ಹೊಡೆದಳು.

ಅಷ್ಟರಲ್ಲೇ ಅಲ್ಲಿಗೆ ಆ ಬಿಳಿ ತಲೆಯ ವ್ಯಕ್ತಿಯು, ಎರಡು ಮೂರು ಕಡೆ ವಿಚಾರಿಸಿ ಹೇಗೂ ಚಕ್ರವರ್ತಿಯ ಮನೆಯನ್ನು ಪತ್ತೆ ಹಚ್ಚಿ, ಮನೆಯನ್ನು ಪ್ರವೇಶಿಸಿದನು. ಪೆತಿಕನು ಅವನನ್ನು ನೋಡಿ, ಸ್ವಲ್ಪ ತಣ್ಣಗಾದನು.

ಪೆತಿಕನ ತಾಯಿಯು ಅವನನ್ನು ನೋಡಿ, ತನ್ನ ಸಿಟ್ಟಿನ ಮುಖದಲ್ಲಿ ನಗುವನ್ನು ತಂದುಕೊಂಡಳು. ಒಮ್ಮೆಯೇ ಸಂತೋಷದಿಂದ, ಎಷ್ಟೋ ಸಮಯದ ಹಿಂದೆ ಅಗಲಿದ ತನ್ನ ಪ್ರೀತಿಯ ಏಕಮಾತ್ರ ಅಣ್ಣನ್ನು ಆದರದಿಂದ ಸ್ವಾಗತಿಸಿದಳು. 'ಏನು ಅಣ್ಣಾ? ಯಾವಾಗ ಬಂದಿರಿ? ಕುಳಿತುಕೊಳ್ಳಿ' ಎಂದು ಹೇಳುತ್ತಾ ಆತನ ಪಾದಗಳನ್ನು ಮುಟ್ಟಿ ನಮಸ್ಕರಿಸಿದಳು.

ಅವಳ ಮದುವೆಯ ಸ್ವಲ್ಪ ಸಮಯದಲ್ಲೇ, ಅವಳ ಅಣ್ಣ ರಘುವೀರನು, ಊರು ಬಿಟ್ಟು ಮುಂಬಾಯಿಯಲ್ಲಿ ವ್ಯಾಪಾರದ ಸಲುವಾಗಿ ನೆಲೆಸಿದ್ದನು. ಅಲ್ಲಿಂದ ಪುನಃ ಕಲ್ಕತ್ತೆಯನ್ನು ಸೇರಿ ವ್ಯಾಪಾರವನ್ನು ಮಾಡುತ್ತಿದ್ದನು. ತನ್ಮಧ್ಯೆ ಅವಳು ತನ್ನ ಗಂಡನನ್ನು ಕಳೆದುಕೊಂಡು, ಗಂಡನು ಬಿಟ್ಟು ಹೋಗಿದ್ದ ಕಲ್ಕತ್ತೆಯ ಹಳ್ಳಿಯ ದೊಡ್ಡ ಮನೆಯಲ್ಲಿ ನೆಲೆಸಿರುವಳೆಂದು ತಿಳಿದು ಆ ಮನೆಯನ್ನು ಹುಡುಕಿಕೊಂಡು ಬಂದಿದ್ದನು.

ಮತ್ತೆ ಕೆಲವು ದಿನ ಅಲ್ಲಿಯೇ ಹರುಷದಿಂದ ಕಳೆದನು. ಒಂದು ದಿನ ಈ ಇಬ್ಬರು ಹುಡುಗರ ವಿಷಯವಾಗಿ ಕೇಳಿದನು. ಪೆತಿಕನು ಕ್ರೂರ ಹಾಗೂ ಅವಿವೇಕಿ ಎಂದೂ, ಮೋಹನನ ಗುಣವು ಮುತ್ತಿನಂತೆ ಎಂದೂ-ಕುರಿಯಷ್ಟು ಸಾಧುವೆಂದೂ ತಿಳಿದುಕೊಂಡನು. ರಘುವೀರನು, ಪೆತಿಕನನ್ನು ಕಲ್ಕತ್ತೆಗೆ ಕರೆದು ಕೊಂಡು ಹೋಗಿ ಅಲ್ಲಿ ತನ್ನ ಮಕ್ಕಳೊಂದಿಗೆ ಶಿಕ್ಷಣವನ್ನು ಕೊಟ್ಟು ಪದವೀಧರನನ್ನಾಗಿ ಮಾಡುವ ಅನುಕೂಲತೆ ಇದೆ, ಎಂದೂ ತನ್ನ ತಂಗಿ ಹಾಗೂ ಪೆತಿಕನ ಮುಂದೆ ಹೇಳಿದನು. ಪೆತಿಕನು ಕೂಡಲೇ ಅದಕ್ಕೆ ಒಪ್ಪಿಗೆಯನ್ನು ಇತ್ತನು.

ಇವರಿಂದ ಪೆತಿಕನ ತಾಯಿಗೆ ಸ್ವಲ್ಪ ಸಂತೋಷವೇ ಆಯಿತು. ಆತನು ಮನೆಯಲ್ಲಿಯೇ ಇದ್ದರೆ ಜಗಳವು ತಪ್ಪುವಂತಿಲ್ಲ; ಅಲ್ಲದೆ ಒಂದಲ್ಲ ಒಂದು ದಿನ ಆತನು ಮೋಹನನ ತಲೆಯನ್ನು ಹೊಡೆದು ಹಾಕುವನೆಂಬ ಭಯವು ಹೋದಂತಾಯಿತು. ಅದೂ ಅಲ್ಲದೆ ಪೆತಿಕನ ಆತುರ

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6¼
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	... ...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.



Phone No. 226

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ- ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಶೀತೀಕರಣ ಯಂತ್ರ ಮತ್ತು ಏರ್ ಕಂಡಿಶನಿಂಗ್ ಯಂತ್ರಗಳ ಬಿಡಿಭಾಗಗಳನ್ನು ತಯಾರಿಸುವ ಕಾರ್ಖಾನೆಯ ಒಳಭಾಗದ ದೃಶ್ಯ. ಈ ಕಾರ್ಖಾನೆಯು ಭಾರತದ ಇಂಡಸ್ಟ್ರಿಯಲ್ ಕ್ರೆಡಿಟ್ ಎಂಡ್ ಇನ್ವೆಸ್ಟ್‌ಮೆಂಟ್ ಕಾರ್ಪೊರೇಶನಿನ ಸಹಾಯದಿಂದ ಸ್ಥಾಪಿತವಾಗಿದೆ.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೩೯	೨೭—೫—೧೯೬೫	No. 39

ಜವಾಹರೋತ್ತರ ಯುಗ

ನಮ್ಮ ನಡುವಿಂದ ನೆಚ್ಚಿನ ಜವಾಹರಲಾಲ ನೆಹರು ಅಗಲಿ ಇದೀಗ ಒಂದು ವರ್ಷ ಗತಿಸಿತು. ನೆಹರು ಯುಗ ಕಳೆದಿದೆ; ಹೊಸಯುಗವೊಂದು ಉದಯವಾಗಿದೆ; ಆದರೆ ಈ ಯುಗವನ್ನು ಹೇಗೆ ಕರೆಯಬೇಕೆಂದೇ ಅರಿಯದಾಗಿದೆ. ಸೂರ್ಯಾಸ್ತಮಾನದ ನಂತರವೂ ಬೆಂಗದಿರನ ಮಂದ ಪ್ರಕಾಶವು ಬೆಳಕು ಬೀರುವಂತೆ ನೆಹರೂತ್ತರ ಯುಗದಲ್ಲಿ ಅವರದೇ ಮಂದ ಪ್ರಕಾಶದಲ್ಲಿ ನಾವು ನಡೆಯುತ್ತಿದ್ದೇವೆಯೆಂದರೆ ತಪ್ಪಿಲ್ಲ. ಬರಿಯ ಭಾರತೀಯರು ಮಾತ್ರವಲ್ಲ, ಇಡಿಯ ಜಗತ್ತಿನ ಜನತೆಯೇ ನೆಹರುರವರ ಅಗಲಿಕೆಯಿಂದ ಅಮೂಲ್ಯ ವಸ್ತುವೊಂದನ್ನು ಕಳೆದುಕೊಂಡವರಂತಾಗಿವೆ. ಇದು ನೆಹರುರವರ ವ್ಯಕ್ತಿತ್ವದ ವೈಶಾಲ್ಯವನ್ನೂ ಪ್ರಭಾವವನ್ನೂ ವ್ಯಕ್ತಪಡಿಸುತ್ತದೆ. ಈ ತೆರದ ಮಹಾಪುರುಷನೊಬ್ಬ ನಮ್ಮ ದೇಶದಲ್ಲಿದ್ದನೆಂದ ಹೆಮ್ಮೆ ನಾವಿಂದು ಸಮಾಧಾನ ಪಡಬೇಕು. ಗತಕಾಲ ಬಯಕಾಲವಲ್ಲವೆ?

ನೆಹರೂ ನಂತರ ಕಳೆದ ರಾಜಕಾರಣಕ್ಕಿಂತಲೂ ಭಾರತದ ರಾಜಕಾರಣವು ಹಲವಾರು ಸ್ಥಿತ್ಯಂತರಗಳನ್ನು ಹೊಂದಿದೆ. ಕಾಂಗ್ರೆಸ್ ಸಂಸ್ಥೆಯಲ್ಲಿನ ಭಿನ್ನಾಭಿಪ್ರಾಯಗಳು ದಿನದಿನಕ್ಕೆ ಹೆಚ್ಚಿ ಮರಿ ಕಾಂಗ್ರೆಸ್‌ಗಳು ಜನಿಸತೊಡಗಿವೆ. ಕೇರಳದಲ್ಲಿದು ಪ್ರಕಟವಾಗಿದೆ; ಬಾಲಾರಿಷ್ಟಕ್ಕೆ ಬಲಿಯಾಗಿದೆ. ದಯಿಲ ಭಾರತದ ತಳಹದಿಯು ಒಂದು ಪ್ರಾತಿನಿಧ್ಯಕ್ಕೆ ವೈಶಾರಿಸ ಭಿನ್ನಾಭಿಪ್ರಾಯವಾದಿ ಕಾಂಗ್ರೆಸಿಗರು ಜನ್ಮ ಕೊಡಲಿದ್ದಾರೆ. ಉತ್ತರಪ್ರದೇಶ, ಒರಿಸ್ಸಾ, ಮಧ್ಯಪ್ರದೇಶಗಳಲ್ಲಿ ಕಾಂಗ್ರೆಸಿನ ಸಂಘಟನೆ ಶಿಥಿಲವಾಗಿದೆ. ಇದೇ ಶಿಥಿಲತೆಯು ಇನ್ನೂ ಮುಂದುವರಿದರೆ, ಕಾಂಗ್ರೆಸ್ ಹರಿಹಂಚಾಗಿಯೇ ಹೋಗಬಹುದು. ನೆಹರು ಹೇಳುತ್ತಿದ್ದರು: ಕಾಂಗ್ರೆಸಿನ ತತ್ವಗಳಲ್ಲಿ ವಿಶ್ವಾಸವಿಲ್ಲದವರು ಪಕ್ಷ ಬಿಟ್ಟು ಹೋಗಬಹುದು ಎಂದು. ಇಂದಿನ ನಾಯಕರೂ ಇದೇ ಪಲ್ಲವಿಯನ್ನು ಆಡುತ್ತಾರೆ. ನೆಹರು ಆಡಿದಂತೆ ನಡೆದಿದ್ದರೆ. ಆದರೆ, ಉಳಿದವರು ಹಾಗೆಯೇ ಮಾಡುತ್ತಿದ್ದಾರೆಯೆ? ಕಾಂಗ್ರೆಸ್‌ನಲ್ಲಿ ನೆಹರು ಅಭಿಪ್ರಾಯಕ್ಕೆ ಮನ್ನಣೆ ದೊರೆಯುತ್ತಿತ್ತು; ಒಂದು ಅಂತಹುದೇ ಪರಿಸ್ಥಿತಿ ಉಳಿದಿದೆಯೆಂದು ಹೇಳುವಂತಿಲ್ಲ.

ನೆಹರೂ ನಂತರವೇ ದೇಶವನ್ನು ಹಲವಾರು ಸಮಸ್ಯೆಗಳು ಕಾಡತೊಡಗಿದುವು. ಅದುವರೆಗೆ ಒಳಗಿಂದೊಳಗೆ ಹೊಗೆಯಾಡುತ್ತಿದ್ದ ಈ ಸಮಸ್ಯೆಗಳು ಅನುಕೂಲ ವಾತಾವರಣ ಪ್ರಾಪ್ತವಾದೊಡನೆಯೇ ತಲೆಯೆತ್ತಿದುವು. ಆಹಾರದ ಸಮಸ್ಯೆಯು ಜನತೆಯನ್ನು ತಲ್ಲಣಗೊಳಿಸಲು ತೊಡಗಿತು. ಇದರ ಜತೆಗೆ ಬೆಲೆಯೇರಿಕೆಯು ಗಗನವನ್ನೇ ಭೇದಿಸ ತೊಡಗಿತು. ಜನಜೀವನವೇ ದುಸ್ತರವೆನಿಸುತ್ತಿದೆ. ಆಯ-ವ್ಯಯಗಳನ್ನು ಹೊಂದಾಣಿಸುವುದೇ ಅಸಾಧ್ಯವಾಗುವ ಸಂಸ್ಥಿತಿ ಒದಗಿದೆ. ನಿಯಂತ್ರಕರ ಹಾವಳಿಯೂ ಕಡಮೆಯಾಗಿರುವುದಿಲ್ಲ. ಆಡಳಿತದಲ್ಲಿ ಬಿಗಿಯನ್ನು ಸರಿಯಾಗಿ ಕಾಣಿಸಿಕೊಳ್ಳುತ್ತಿಲ್ಲ. ಸರಕಾರದ ಅಭಿಪ್ರಾಯ ಪ್ರಕಟಣೆಯಲ್ಲಿಯೂ ಸಲವೊಮ್ಮೆ ವಿರೋಧ ವ್ಯಕ್ತಪಟ್ಟಿರುವುದೂ ಉಂಟು. ಈ ಬಗೆಯ ವಿರೋಧಾಭಾಸಗಳಿಂದ ಹೊರಗಿನವರೂ ನಗುವಂತಾಗಿದೆ. ಅಧಿಕೃತ ಭಾಷೆಯಿಂದ. ಹಿಂದಿಯನ್ನು ಕ್ರಮಶಾಃ ರಕ್ಕೆ ತರುವಲ್ಲಿ ಸರಕಾರವು ಬಹಳ ವಿರೋಧವನ್ನು ಎದುರಿಸಬೇಕಾಗಿದೆ. ನೆಹರು ಇತ್ತ ಆಶ್ವಾಸನೆಗಳಿಗೆ ಕಾಯಿದೆಬದ್ಧ ರೂಪ ನೀಡಬೇಕೆಂಬ ವಾದವೂ ಕೇಳಿಬರುತ್ತಿದೆ. ಆಂತರಿಕ ಶಾಂತಿಯನ್ನು ಈ ವಿವಾದವು ಕೆಣಕಿದ ಪ್ರಸಂಗವನ್ನು ನಾವು ಅವಲೋಕಿಸಿದರೆ, ಹಿಂದಿಯ ಅಧಿಕೃತ ಭಾಷೆಯಾಗುವ ದಿನ ಬಹುದೂರವಿದೆ ಎಂಬ ಸಂದೇಹ ಹುಟ್ಟುತ್ತದೆ.

ಗೋವೆಯು ಹತ್ತು ವರ್ಷಗಳ ಕಾಲ ಕೇಂದ್ರಾಧೀನ ಪ್ರದೇಶವಾಗಿರಬೇಕು. ಆ ಮೇಲೆ ಗೋವನ್ನರು ತಮ್ಮ ಭವಿಷ್ಯವನ್ನು ನಿರ್ಣಯಿಸಿಕೊಳ್ಳಬೇಕು—ಎಂದಿದ್ದರು ನೆಹರು. ಇಂದು ಅವರ ಮಾತಿಗೆ ಯಾರೂ ಬೆಲೆಕೊಡುತ್ತಿಲ್ಲ. ಅದರ ಬದಲು? ಮಹಾರಾಷ್ಟ್ರದ ಸಾಮಾನ್ಯ ಜನತೆ ಮಾತ್ರವಲ್ಲ, ಸರಕಾರವೂ ಗೋವೆ ತಮ್ಮ ರಾಜ್ಯದಲ್ಲಿ ಸೇರಬೇಕೆನ್ನುತ್ತಿವೆ. ಕೆಲವು ಉಚ್ಚಮಟ್ಟದ ಕಾಂಗ್ರೆಸಿಗರೂ ಈ ವಾದವನ್ನು ಬೆಂಬಲಿಸ ಹತ್ತಿದ್ದಾರೆ. ಒಬ್ಬ ನಾಯಕನು ಅಗಲಿದ ಒಂದು ವರ್ಷದೊಳಗಾಗಿ ಆತನ ಕನಸನ್ನೂ, ಅನುಯಾಯಿಗಳೂ ಆತನ ನಿರ್ಧಾರವನ್ನು ಬದಲಾಯಿಸ ಹೊರಟಿದ್ದಾರೆ. ಜವಹರರ ವಾಣಿಯ ಮಹತ್ವ ಪ್ರತಿಸುತ್ತಿರುವುದಿಲ್ಲ. ಇಂದು ಆತನ ನೀತಿಯನ್ನಾದರೂ ಅಚಲವಾಗಿ ಮುನ್ನಡೆಸಿಕೊಂಡು ಹೋಗಬೇಡವೆ?

ಜವಹರ ಯುಗದಲ್ಲಿ ಚೀನ ಮಾತ್ರ ಭಾರತವನ್ನು ಆಕ್ರಮಿಸಿತ್ತು. ಆದರೆ, ಜವಹರೋತ್ತರ ಯುಗ—ಆರಂಭದಲ್ಲೇ ಪುರುಷನೂ ಸಾಟಿಯೂ ಒಂದಾದಂತೆ ಕೆಂಪು ಚೀನ-ಪಾಕಿಸ್ತಾನಗಳು ಕೂಡಿ ಆಕ್ರಮಣ ಮಾಡತೊಡಗಿವೆ. ಕಚ್ಛರಣದಿಂದ ತೊಡಗಿ ಪಶ್ಚಿಮ ಬಂಗಾಲದವರೆಗಿನ ನಮ್ಮ ಗಡಿಯು ಇಂದು ಗಂಡಾಂತರದ ನೆನೆಗುದಿಗೆ ಬಿದ್ದಿದೆ. ಯಾವ ಕ್ಷಣದಲ್ಲಿ ಏನಾದೀತೋ ಎಂಬ ಅಂಜಿಕೆ ಮನೆಮಾಡಿದೆ. ಆಕ್ರಮಣಕಾರರನ್ನು ಹೊಡೆದಟ್ಟುವ ಶಕ್ತಿ, ಕೆಚ್ಚು ನಮ್ಮಲ್ಲಿದೆ ನಿಜ, ಶಾಂತಿ ಮಂತ್ರ ಪಠನದ ಭಾರತದ ಗೌರವವನ್ನು ಉಳಿಸಿಕೊಂಡೇ ಇಂತಹ ಕ್ರಮ ಕೈಗೊಳ್ಳಬೇಕಾಗಿದೆ. ದೇಶದ ಸಮಗ್ರತೆ, ಸಂರಕ್ಷಣೆಗಳಿಗಾಗಿ ಒಂದಾಗಿ ದುಡಿಯುವ ಧೀರೋದಾತ್ತ ಆದರ್ಶವನ್ನು ನೆಹರು ನಮ್ಮ ಮುಂದ ಇಟ್ಟಿದ್ದರು. ಅದೇ ಆದರ್ಶವನ್ನು ನಾವು ನೆಮ್ಮಿ ಹಿಡಿಯಬೇಕು.

ಜವಹರರು ಭಾರತದ ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ ತಮ್ಮ ಆಡಳಿತ ನೀತಿಯನ್ನು ರೂಪಿಸಿದ್ದರು. ಅದನ್ನು ಅಳವಡಿಸಿಕೊಂಡೂ ಇದ್ದರು. ಭಾರತಕ್ಕೆ ಅದೇ ನೀತಿಯು ತಾರಕವಾದುದರಿಂದ ಇಂದಿನ ನಾಯಕರೂ ಅದೇ ನೀತಿಯನ್ನು ಅನುಸರಿಸಿಕೊಂಡಿದ್ದಾರೆ. ಶಾಸ್ತ್ರಿ ನಾಯಕತ್ವವು ನೆಹರು ನಾಯಕತ್ವದಷ್ಟು ಪ್ರಭಾವಶಾಲಿಯೆನಿಸದಿದ್ದರೂ ಅವರ ಅಭಿಪ್ರಾಯದಂತೆ "ನೆಹರು ಉತ್ತರಾಧಿಕಾರಿಯ ಆಯ್ಕೆ ಸರಿಯಾಗಿಯೇ ಆಗಿದೆ" ಎಂದು ತೃಪ್ತಿಪಡಬೇಕಾಗಿದೆ. ಶಾಸ್ತ್ರಿಯವರಾದರೂ ನೆಹರು ತುಳಿದ ದಾರಿಯಲ್ಲೇ ಅವರು ತೋರಿದ ಬೆಳಕಿನಲ್ಲೇ ಮುನ್ನಡೆಯುವ ನಿರ್ಧಾರವನ್ನು ಮಾಡಿದ್ದಾರೆ. ಆದುದರಿಂದಲೇ ಜವಾಹರೋತ್ತರ ಯುಗವಿದು. ಇದರ ಈ ಒಂದು ವರ್ಷದ ಕಾಲದಲ್ಲಿ

(ಹದಿನಾಲ್ಕನೇ ಪುಟ ನೋಡಿರಿ)

ನಿಜವ ನುಡಿ

ಆಚಾರ್ಯ ದೇವೋ ಭವ

ಅತಿಥಿ ದೇವೋ ಭವ॥

(ತೈತ್ತಿರೀಯೋಪನಿಷತ್ ೧-೧೧)

೦ ಗುರುವನ್ನು ದೇವನೆಂದು ಭಾವಿಸು ಅತಿಥಿಯನ್ನು ದೇವನೆಂದು ತಿಳಿ.

೦೦ ಅಧ್ಯಾಪಕ, ಗುರು ಹಾಗೂ ವಿದ್ವಾಂಸ, ಸನ್ಯಾಸಿ ಸಂತ ಮೊದಲಾದ ಅತಿಥಿಗಳು ಸದಾ ಪೂಜನೀಯರು. ಇವರನ್ನು ಸತ್ಕರಿಸು. ಗುರುವಿಗೆ ಪ್ರತಿನಿತ್ಯ ವಂದಿಸು. ಅವರ ವಿಷಯದಲ್ಲಿ ದುರಾಲೋಚನೆಯನ್ನೆಂದೂ ಮಾಡಬೇಡ. ಗುರುವಿನ ಬಗ್ಗೆ ಆದರ ಭಾವವನ್ನಿಡುವುದು ವಿದ್ಯಾರ್ಥಿಯ ಪರಮ ಕರ್ತವ್ಯ.

ನರಸಣ್ಣನ ಸರಸ



'ಜಿಲ್ಲೆಯ ಆಹಾರ ಪರಿಸ್ಥಿತಿಯು ತೀರ ಗಂಭೀರವಾಗಿದ್ದು ಅದನ್ನು ಸುಧಾರಿಸಲು ಸರಕಾರವು ಯಾವ ಕ್ರಮವನ್ನೂ ಕೈಕೊಳ್ಳದಿದ್ದುದರಿಂದ ಜಿಲ್ಲೆಯ ಶಾಸಕರು, ತಾಲೂಕು ಬೋರ್ಡು ಅಧ್ಯಕ್ಷರು ರಾಜಿನಾಮೆ ನೀಡಿದ್ದಾರೆಂದು ಸುದ್ದಿ ಹರಡಿದೆ'

"ರಾಜಿನಾಮೆ ಕೊಡುವ ಬದಲು ಆಹಾರ ಮಂತ್ರಿಗಳಿಗೆ "ಅಭಿಷೇಕ" ಮಾಡಿಸುವ ಏರ್ಪಾಡು ಮಾಡುತ್ತಿದ್ದರೆ, ಪರಿಸ್ಥಿತಿ ಕಂಡಿತಕ್ಕೂ ಸುಧಾರಿಸುತ್ತಿತ್ತು!"

— ಮೂರು

ಗೇಹರಾಜ್ಯದಲ್ಲಿ

ಅಭಾವ ತಾಂಡವ ನೃತ್ಯ

"ನೋಡಿದ್ದೀನ?"

"ನೋಡ್ತಾನೇ ಇದ್ದೇನಲ್ಲಾ?"

"ಯಾರನ್ನ?"

"ಮತ್ಯಾರನ್ನ?"

"ಅಂದ್ರೆ?"

"ಅಂದ್ರೇನಿಲ್ಲ, ಇದೇ ನಿಮ್ಮ ಸಿಂಗಲೀಕ ಮುಖವನ್ನ...."

"ಸಾಕು ಕಣೇ, ನಾಲಗೆ ತುಸು ಬಿಗಿ ಹಿಡಿದು ಮಾತನಾಡೂಂದ್ರೆ...."

"ಯಾಕೆ?"

"ಮತ್ತೆ ಯಾಕೇಂತೀಯಾ?"

"ಅಲ್ಲ, ಇದ್ದದ್ದನ್ನ ಇದ್ದಂತೆ ಅನ್ನೋಕೆ ತಡೆಯಾದ್ರೂ ಯಾಕೇಂತ?"

"ಅಲ್ವೆ, ಒಂದು ಕಾಲದಲ್ಲಿ ಮಂಗಳ ಮುಖವಾಗಿದ್ದದ್ದು ಇಂದು ಸಿಂಗಳೀಕವಾಗ ಬೇಕಾದ್ರೆ...'

"ಏನೋ ಕಾರಣವಿರಬೇಕೂನ್ನಿ..."

"ಇರಬಹುದು."

"ಏನಿರಬಹುದು?"

"ಪ್ರಾಯಶಃ ನೋಡುವ ಕಣ್ಣು ಕೆಟ್ಟು ಹೋಗಿರಬಹುದು, ಅಥವಾ ನೋಡುವ ವರಾ ಗೊಬೆಯಾಗಿರಬಹುದು..."

"ಅಬ್ಬಬ್ಬಾ ನೀವೇ ಅಲ್ಲ, ಅಂದು ಕಮಲನೇತ್ರೆ, ಕುವಲಯದಳ ನಯನೆ ಹಾಗೆ ಹೀಗೇ ಅಂತ ಅಂದೋರು ಇಂದು ಮತ್ತೇನೋ ಅನ್ನಬೇಕಾದ್ರೂ ಏನೋ ಕಾರಣವಿರಬೇಕು, ಅಲ್ವೆ?"

"ಇದ್ರೂ ಇರಬಹುದೂನ್ನ, ಆದ್ರೆ....'

'ಆ ನಿಮ್ಮ ಆದ್ರೆ ಹೋದ್ರೇಂತ ಮಾತು ಹಾರ್‍ಸೋದು ಬೇಡ..."

'ಸಾಕು ಬಿಡೇ, ನಾನು ಕೇಳಿದ್ದೇನ, ನೀನು ಅಂದದ್ದೇನು?"

"ನೀವು ನೋಡಿದ್ರ್ಯಾ ಅಂದ್ರೆ, ನಾನು ಹಾಗಂದೆ. ... ಏನು? ಅಂದ್ರೆ, ಮಂಗ ಹಾಂದೆ........"

"ಅಲ್ಲೇ ನೋಡು ನೀನು ತಪ್ಪಿ ಬಿದ್ದದ್ದು..."

"ಯಾಕೆ?"

"ಅಲ್ಲಾ, ಸಮಾಚಾರ ಪತ್ರವನ್ನ ನೋಡಿದ್ಯಾ ಅಂದ್ರೆ ಮತ್ತೆ ಏನೇನೋ ಹೇಳ್ತೀಯಲ್ಲಾ?"

"ನೀನೆಲ್ಲಿ ಹಾಗ ಕೇಳಿದ್ದೀರಿ? ಬರೀ ನೋಡಿದ್ಯಾ ಅಂದ್ರೆ, ಏನನ್ನಾಂತ ಹೇಗೆ ತಿಳೀ ಬೇಕು?'

"ಅನುಮಾನದಿಂದ..."

"ಇದೆಂತದೋ ಅನುಮಾನ...."

"ಪ್ರಮಾಣಗಳಲ್ಲಿ ಅನುಮಾನವೂ ಒಂದು."

"ಅದೆಂತದಪ್ಪ ಪ್ರಮಾಣ? ಯಾವ ದೇವ್ರ ಮುಂದೆ ಮಾಡೋದು? ಯಾಕೆ ಮಾಡೋದು?"

"ದೇವ್ರ ಎದ್ರಲ್ವೆ...."

'ಮತ್ತೆ?'

'ದಿಂಡರ ಮುಂದೆ...'

'ಹಾಗೆಂದ್ರೆ?'

"ಹಾಗೆಂದ್ರೂ ಇಲ್ಲ, ಹೀಗೆಂದ್ರೂ ಇಲ್ಲ, ಕೇಳು"

"ಲಿಂಗಜ್ಞಾನಾತ್ಸಾಧ್ಯ ಸಿದ್ಧಿರನುಮಾನಮಿ ಹೋಚ್ಯತೇ...."

"ಅಯ್ಯಯ್ಯೋ, ಹೀಗೆಲ್ಲ ನೀವು ಸೂತ್ರನು ಹಿಡಿದರೆ ಹೇಗೆ ನನಗೆ...."

"ಸದ್ಯ ಇದು ಸೂತ್ರಾಂತಾದ್ರೂ ತಿಳಿದೀತಲ್ಲ? ಇನ್ನು ನೋಡು, ಸೂತ್ರಕ್ಕೆ ವ್ಯಕ್ತಿ ನಲ್ಗುರುಪಂ ಕಂಡುಂ ಅಗ್ನಿ ತಿಳಿಯವೇಳ್ಪುದಂ ತಿಳಿವುದ, ಅನುಮಾನಂ...."

"ಅದು ಸರೀನ್ರಿ..."

"ಹಾಗಾದ್ರೆ ನಿನಗೆ ಅರ್ಥವಾಯ್ತೂಂತಾಯ್ತು..."

"ಆಗದೆ ಏನಂತೆ? ಕುರೂಪವಾದನೆಲ್ಲನ್ನ ಕಂಡು, ಅದು ಕುರೂಪವಾಗಿದೆಯೆಂದು ತಿಳಿಯುವುದರಲ್ಲಿ ವಿಶೇಷವೇನಿದೆ? ಅಲ್ಲಿ ಪ್ರತ್ಯಕ್ಷವೇ ಪ್ರಮಾಣವಿರುವಾಗ ಅನುಮಾನದ ಮಾತು ಯಾಕೇಂತ?"

"ಪರ್ವಾಗಿಲ್ಲ ಕಣೇ ನೀನು. ಪ್ರತ್ಯಕ್ಷ ಅನುಮಾನಂತ ಪ್ರಮಾಣಗಳನ್ನ ಅಗ್ಲೇ ತಿಳಿದುಕೊಂಡಿದ್ದಿ. ಇನ್ನೂ ಅರು ಪ್ರಮಾಣಗಳನ್ನು ಹೇಳಲೆ?"

"ಬೇಡಿ ಮಾರಾಯ್ರೆ ಬೇಡಿ ಸದ್ಯ....'

"ಓಲ್ಲಾ, ನಿನ್ನ ಅರ್ಥವನ್ನ ಕಂಡು, ನಗು ಬರುತ್ತೆ..."

"ಯಾಕೆ?"

ಯಾಕೆಂದ್ರೆ? ನಿನ್ನ ಚಿಕ್ಕ ಬುದ್ಧಿಗೆ ಹೊಳೆದ ಅರ್ಥ ಅಪಾರ್ಥ ಮಾತ್ರವಲ್ಲ ಅನರ್ಥವೂ ಹೌದು."

"ಅಯ್ಯಪ್ಪ ದೊಡ್ಡ ಮನಸ್ಸಿನ ನೀವಾದ್ರೂ ಹೇಳಿ"

"ಕೇಳು ಹಾಗಾದ್ರೆ, ನಲ್ ಎಂದರೆ ನೆಲ್ಲ ಅಲ್ಲ, ಒಳ್ಳೆಯ, ಉಚಿತವಾದ, ಕುರುಪು ಅಂದ್ರೆ ಕುರೂಪವಲ್ಲ, ಕುರುಹು..."

"ಅಯ್ಯೋ, ಈ ಕಪ್ಪು ಕಪ್ಪು ನೆಲ್ಲನ್ನ ಕಂಡು, ಕೊಂಡು ತಿಂದು ಅದ್ರದ್ದೇ ಧ್ಯಾನ ನೋಡಿ....'

"ನನಗೂ ಹಾಗೇ ಅನ್ನಿಸ್ತು. ಸುಮ್ಮನ್ನೇ ಅನ್ನೋವ್ಳಲ್ಲಾಂತ..."

"ಅದಿರ್‍ಲಿ, ನೋಡಿ, ಇದೀಗ ಕುರೂಪ ನೆಲ್ಲಾದ್ರೂ ದೊರೆಯುತ್ತೆ. ಆದ್ರೆ ಇನ್ನು ಮುಂದೆ ಅದಕ್ಕೂ ತತ್ವಾರ ಬರುತ್ತೇಂತ ಸುದ್ದಿ...'

'ಅದ್ರ ಹಿಂದೆ ಇನ್ನೊಂದು ಸುದ್ದೀನೂ ಇದೆಯಲ್ಲಾ?"

"ಏನಂತೆ?"

'ಅದನ್ನೇ ನೋಡಿದ್ಯಾಂತಂದೆ ನಾನು?'

'ಓ ಹಾಗೆ. ಅಲ್ಲಾ, ನಿಮ್ಮ ಮನಸ್ಸಿನ ಒಳಗಿರೋದನ್ನ ನಾನು ಹೇಗೆ ತಿಳಿದುಕೊಳ್ಳ ಬೇಕು?"

"ಅದ್ಕೇ ಅಂದೆನಲ್ಲಾ ಅಗ ಅನುಮಾನದಿಂದಾಂತ....'

'ತಮ್ಮ ಹೃದಯವನ್ನು ಅರಿತುಕೊಂಡಿರೋರೇ ಇಲ್ಲದಿರುವಾಗ, ಮತ್ತೆ ಬೇರೆಯವರದನ್ನ ಕಾಣೋದೆಂತೆ?'

"ಅಯ್ಯೋ ಹುಚ್ಚಿ..."

"ಹುಚ್ಚಿ.... ಯಾಕೆ, ನಾನಂದದ್ದು ತಪ್ಪೆ?"

"ಅಲ್ಲದೇನಂತೆ? ನೋಡು, ಇಂದಿನ ದಿನಗಳಲ್ಲಿ ನಾವು ನಮ್ಮನ್ನು ತಿಳಿದಿರೋದಕ್ಕಿಂತ ಹೆಚ್ಚಾಗಿ ಬೇರೆಯವರನ್ನ ಸರಿಯಾಗಿ ತಿಳಿದಿರುತ್ತೇವೆ."

"ಹೇಗೇಂತ?'

"ಗೊತ್ತಿಲ್ವಾದ್ರೆ ಕೇಳು. ಹಾಗೆಲ್ಲ ಕೋಪಿಸ್ಕೊಂಡ್ರೆ ಹೇಗೆ? ಒಂದು ಸಾಮಾನ್ಯ ಉದಾಹರಣೆ ನಾಕ್, ಎಲ್ಲಾ ತಮ್ಮ ಕಷ್ಟದಲ್ಲೂ ಇರುವ ಸುಖವನ್ನು ಕಾಣೋದಿಲ್ಲ. ಇತರರದನ್ನೇ ನೋಡ್ತಾರೆ. ಅವರಿಗೇನು ದಾಡಿ ಅಂತಾರೆ..."

"ಹ್ಞಾಂ...ಅಲ್ರಿ, ನಿಜವಾಗಿ ತನ್ನ ಕಾನರಿತು ಇತರರನ್ನು ಅನುಮಾನದಿಂದ ತಿಳಿದುಕೊಂಡ ಭೂಪತಿ ಯಾವನಾದ್ರೂ ಇದ್ದಾನೆಯೇಂತ?'

"ಇಲ್ಲದೆ ಉಂಟೆ?"

'ಇದ್ದಾನೆಯೆ?'

"ಕೇಳು, ಇವರಂದಿಂತಿವರಿಂತೆಂದೇಂ ತಿನ
ರೆಳಸಿಂತಿವರಗೆಯ್ಮೆ ಯ್ಗಳಿಂತೆಂದವ
ರಿಂಗಿತದಿಂ ತಿಳಿದಾ ಜನನೆಂದಾಳ್ಗೆಯ್ಮೆ
ಗೊಂಬನಪ್ರತಿ ವೀರಂ ||"

'ಯಾರವನು ಅಪ್ರತಿ ವೀರ?"

"ಅವನೇ, ಮೈಸೂರಿನ ಮಹಾ ರಾಜರಾಗಿದ್ದ ಚಿಕದೇವರಾಜ..."

"ಅಲ್ರಿ, ನಿಜವಾಗಿಯೂ ಅನುಮಾನದಿಂದ ಅವನು ತಿಳಿದುಕೊಳ್ಳುತ್ತಿದ್ದನೆ?'

'ಯಾರಿಗೆ ಗೊತ್ತು? ಪದ್ಯದಲ್ಲಂತೂ ತಿಳಿದುಕೊಳ್ಳುತ್ತಾನೆ. ಇದು ಖಂಡಿತ."

"ಅಂದ್ರೆ ನಾನೂ ಮಾತಿನಲ್ಲಾದ್ರೂ ನಿಮ್ಮ ಇಂಗಿತವನ್ನ ಅರೀಬೇಕೂಂತಾಯ್ತು."

'ಅನುಮಾನದಿಂದಲೇ ಅರಿತು ಕೆಲಸ ಮಾಡಿಬಿಟ್ರೆ ಮತ್ತೆ ಕೇಳ್ಬೇಕಾ?'

"ಹ್ಞಾಂ, ನೀವು ನೋಡಿದ್ಯಾ ಅಂದಲ್ಲಿ ಸಮಾಚಾರ ಪತ್ರ ಅನ್ನೋದು ಬಿಟ್ಟಾ ಹಾರ ಅಲ್ವೆ?"

"ಹ್ಞಾಂ.... ನೋಡೋಣ ಉತ್ತರ ಹೇಳು."

'ಉತ್ತರ ಹೇಳೋದನ್ನ ನೋಡೋದೇನ್ರಿ? ಕೇಳಿ ನೀವಲ್ವೆ?"

'ಸರಿಯಪ್ಪ, ಕೇಳ್ತೀನೆ...'

"ಅಂದ್ರೆ... ಈಗ ನಿಮ್ಗೆ ಉತ್ರ ನಾನು ಹೇಳ್ಬೇಕು....?'

'ಮತ್ತೆ ಯಾರೇ ಹೇಳೋದು? ಪ್ರಶ್ನೆ ಕೇಳಿದವನೇ ಉತ್ತರವನ್ನೂ ಕೊಡಬೇಕೇನು?

"ಅದು ನಮ್ಮ ಮಕ್ಕಳ ಕಾಲಕ್ಕಿಲ್ಲ. ಸದ್ಯ ನಾನೇ ಹೇಳ್ತೇನೆ. ನೋಡಿದ್ದೇನೆ."

"ಏನನ್ನ?"

"ನಿಮ್ಮ ಸಿಂಗಳೀಕ ಮುಖವನ್ನು...."

"ಛೆ, ಮತ್ತೆ ಅದೇ ಅಬದ್ಧ ಮಾತು...."

"ಅಲ್ರಿ ನಿಮ್ಮ ಮುಖವೇಕೆ ಇಷ್ಟು ಕಪ್ಪಿಟ್ಟಿದ್ದೇಂತ?'

"ಓ, ಸರಿ ಕಣೇ, ಪಾಪ, ನಾನು ಯಾಕೆ ಹ ಗೇಂತ ಅನ್ನೀ ಗೂಂತ ಯೋಚನೆ ಮಾಡೋದು...ಹ್ಞಾಂ...ಸದ್ಯ ಹತ್ತು ದಿನದ ಪ್ರಯಾಣದಿಂದ ಸೋತು ಸುಣ್ಣಾವಾದದ್ರಿಂದ ಮುಖ ತುಸು ಕಂಗೆಟ್ಟಿರಬಹುದು....ಅದೇ ನಿನಗೆ ಹಾಗೆ ಕಂಡಿರಬೇಕು ..."

'ಅಯ್ಯೋ ಪಾಪವೇ ಎಷ್ಟು ಸೋತು ಹೋಗಿದ್ದೀರಿ?'

'ಎಷ್ಟೂಂತೇನು? ಕಾಣೋದಿಲ್ವೆ ನಿನಗೆ? ನೀನೂ ಬಾರಿ ಸೊರಗಿ ಹೋದ ಹಾಂಗೆ ಇರುವೆಯಲ್ಲಾ?"

'ಮತ್ತೆ ಏನಾಗ್ಬೇಕು ನೋಡಿ?"

"ಯಾಕೆ?"

'ಯಾಕೆಂದ್ರೆ, ಯಾಕೋ ಏನೋ ಬೇಸರ..."

'ಬೇಸರ ಯಾವುದ್ರದ್ದೂಂತ? ಓದೋಕೆ ಪತ್ರಿಕೆಗಳು ಬಂತ್ತು ಇವೆಯಲ್ಲಾ?'

"ಏನು ಓದೋದು ಮಣ್ಣು? ಓದಿದ್ದನ್ನೇ ಓದಿ ಓದಿ ಸಾಕಾಯ್ತು...'

"ಯಾಕೆ? ಬಿಸಿಬಿಸಿ ಸುದ್ದಿ ಯಿದೆಯಲ್ಲಾ?'

"ಎಲ್ಲಿಯ ಬಿಸೀರಿ? ನಿನ್ನೆ ಮಾಡಿದ್ದ ಅನ್ನವನ್ನ ಬಿಸಿ ಮಾಡಿ ಉಪತ್ತು ಬಡಸೋ ಹೋಟೇಲಿನ್ಹಾಗೆ..."

"ಆಹಾರಾಭಾವವಲ್ವೆ?"

"ಪತ್ರಿಕೆಗಳಿಗೂ ಆಹಾರಾಭಾವವೆ? ಸಂಶಯವಿದ್ದರೆ ನೋಡಿ ಕಚ್ಛ—ರಣ, ಪಾಕ್—ಭಾರತ ತಂಟೆ, ವಿಯತ

(ಹದಿನಾರನೇ ಪುಟನೋಡಿರಿ)

ನೂತನ ವಧೂವರರು



ಅತ್ರಾಡಿ ಬೀಟ್ಬೈಲು ಆನಂದ ಹೆಗ್ಗಡೆಯರ ಪ್ರಥಮ ಪುತ್ರಿ ಚಿ|| ಸೌ|| ಅಮೃತ ಕುಮಾರಿಯನ್ನು ಹಿರಿಬೀಡು ರಾಮಪ್ಪ ಬಲ್ಲಾಳರ ತೃತೀಯ ಪುತ್ರ ಚಿ|| ರತ್ನಾಕರನು ತಾ. 17-5-1965ರಂದು ಉಡುಪಿ ಶ್ರೀರಾಮಕೃಷ್ಣ ಥಿಯೇಟರಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ಪ್ರಚಲಿತ ಪ್ರಸಂಗ

ಕಮ್ಯೂನಿಸ್ಟರ ಬಣ್ಣ ಬಯಲಾಯಿತು

ಬರೆದವರು: ಶ್ರೀ ಶಿವಶಂಕರ.

ಇದೇ ಮೇ ದಿನಾಂಕ ಹತ್ತರಿಂದ ಭಾರತದಲ್ಲಿ ಭಾರೀ ಪ್ರಮಾಣದಲ್ಲಿ ಗೊಂದಲವೆಬ್ಬಿಸುವುದಾಗಿಯೂ, ಕಾಂಗ್ರೆಸಿಗಳ ಕದಗಳನ್ನೊಡೆಯುವುದಾಗಿಯೂ ಕಮ್ಯೂನಿಸ್ಟರು ಡಂಗುರ ಬಡಿದಿರುವ ವಿಷಯ ಅದಾಗಲೇ "ನವಯುಗ"ದಲ್ಲಿ ಪ್ರಕಟವಾಗಿರುತ್ತದೆ. ಆದರೆ ದಿನಾಂಕ ಹತ್ತರಂದು ಅವರು ಅದೇನೂ ಅಂತಹ ಕೈಸುಟ್ಟುಕೊಳ್ಳುವ ಕೆಲಸಕ್ಕೆ ಕೈ ಹಾಕಲಿಲ್ಲ. ಅಲ್ಲದೆ ಚೈನಾ ಕೂಡಾ ಮೇ ದಿನಾಂಕ ಹತ್ತರಂದು ದ್ವಿತೀಯ ಅಣುಗುಂಡು ಪರೀಕ್ಷೆಯನ್ನು ನಡೆಸಲಿಲ್ಲ ಕಮ್ಯೂನಿಸ್ಟರು. ಇದೇನು ಪ್ರಥಮ ಬಾರಿ ತಾವು ಗಲಾಟೆ ನಡೆಸುವುದಾಗಿ ಗಂಟೆ ಬಡೆದಿರುವದಲ್ಲ. ಹಲವಾರು ಬಾರಿ ಗಂಟೆ ಬಡೆದಿದ್ದರಾದರೂ ಸೂಕ್ತ ಸಮಯ ಒದಗಿ ಬಂದಿರದಿರುವದರಿಂದ ಕಮ್ಯೂನಿಸ್ಟ ಕಪಿ ಅಂಕೆಯ ಲಂಕೆಯನ್ನು ಸುಟ್ಟಿರುವದಿಲ್ಲ. ಅಲ್ಲದೆ ಅದೊಂದು ಕಮ್ಯೂನಿಸ್ಟರ ತಂತ್ರವಿದೆ. ತಾವು ಗಲಾಟೆ ಮಾಡುತ್ತೇವೆ, ದೊಂಬಿ ನಡೆಸುತ್ತೇವೆಂದು ಡಬ್ಬಿ ಹೊಡೆಯುತ್ತಾ ಇರುತ್ತಾರೆ ವಿನಹ ನಿಜವಾಗಿ ಹಾಗೇನೂ ಮಾಡುವುದಿಲ್ಲ. ಆದರೆ ಅದೆಷ್ಟು ದಿನಗಳ ವರೆಗೆ? 'ತೋಳ ಬಂತು' 'ತೋಳ ಬಂತು' ಎಂದು ಬೊಬ್ಬೆ ಹೊಡೆದಿರುವ ಬಾಲಕನ ಕಥೆಯಂತಾಗಬೇಕೆಂದು ಅವರು ಪ್ರಯತ್ನಿಸುತ್ತಿದ್ದಾರೆ. ತಾವು ಗಲಾಟೆ ಮಾಡುತ್ತೇವೆಂದು ಹೇಳುತ್ತ ಹಾಗೆ ಮಾಡದೆ ಇದ್ದಲ್ಲಿ ಒಂದುದಿನ ಸರಕಾರ ಹಾಗೂ ಜನತೆ ಇದನ್ನು ಗಪ್ಪುಗಾಂಕೆಯೆಂದು ಸುಮ್ಮನಿರುವಾಗ ಒಮ್ಮೆಲೆ ತೋಳನಂತೆ ಮೇಲೆ ಹಾರಲು, ಅವರು ಹಂಚಿಕೆ ಹೂಡುತ್ತಿದ್ದಾರೆ. ಆದರೆ ಸರಕಾರ ಕೂಡಾ ಇನ್ನು ಮೇಲೆ ಮೋಸ ಹೋಗಲಾರದು. ಒಂದು ವೇಳೆ ಅಭ್ಯಾಸಬಲದಂತೆ ಸರಕಾರ ಮೋಸಹೋದರೂ ಜನತೆ ಮೋಸಹೋಗದು. ಜನತೆಗಂತೂ ಕಮ್ಯೂನಿಸ್ಟರ ಬಣ್ಣ ಗೊತ್ತಾಗಿರುತ್ತದೆ.

ತಾವು ಕಾಲೂರಿರುವೆವೆಂದು ಕಮ್ಯೂನಿಸ್ಟರು ಜಂಭಕೊಚ್ಚಿಕೊಳ್ಳುತ್ತಿರುವ ಕೇರಳದಲ್ಲಿ ಒಂದು ಸಂಭವ ನಡೆಯಿತು. ಪಾಕಿಸ್ತಾನವು ರಾಣ್ ಪ್ರದೇಶದಲ್ಲಿ ನಡೆಸಿರುವ ಆಕ್ರಮಣವನ್ನು ಖಂಡಿಸಲು ಕೇರಳದ ಎರ್ನಾಕುಲಮಿನಲ್ಲಿ ಸರ್ವ ಪಕ್ಷಗಳ ಒಂದು ಸಭೆಗೆ ಏರ್ಪಾಡಾಯಿತು. ಆ ಕುರಿತು ತಿಳಿಸುವ ಒಂದು ಪತ್ರವನ್ನು ಎಲ್ಲಾ ಪಕ್ಷಗಳ ಮುಖಂಡರಿಗೆ ತೋರಿಸಲಾಯಿತು. ಅದರಲ್ಲಿ ಅವರು ಒಪ್ಪಿದಲ್ಲಿ ಸಹಿ ಹಾಕಬೇಕಾಗಿತ್ತು. ಹೆಚ್ಚಿನ ಪಕ್ಷದ ಪ್ರತಿನಿಧಿಗಳು ಅದರಲ್ಲಿ ಸಹಿ ಹಾಕಿದ್ದರು, ಸಭೆಗೆ ಅವರು ಒಪ್ಪಿದರು. ಆದರೆ ಕಮ್ಯೂನಿಸ್ಟ್ ಪಕ್ಷದವರು ಸಹಿ ಹಾಕಲು ಒಪ್ಪಲಿಲ್ಲ.

ಅದಕ್ಕೆ ಕಾರಣವೇನು? ಚೈನಾದ ಆದೇಶವೇ? ಪ್ರಪಂಚದ ಇತರ ದೇಶದಲ್ಲಿರುವ ಪತ್ರಿಕೆಗಳು ಭಾರತದ ಪರವಾಗಿ ನೈಜ ಸಂಗತಿಗಳನ್ನೇ ಅಗಲಿ ಪ್ರಕಟಿಸದಿದ್ದರೂ ನಿಷ್ಪಕ್ಷೀಯರೆಂಬುದನ್ನು ವ್ಯಕ್ತಪಡಿಸಲು ಉಪಾಯದಿಂದ ಸುದ್ದಿಗಳನ್ನು ಪ್ರಕಟಿಸಿರುವರು. ಆದರೆ ಚೈನಾದ ಪತ್ರಿಕೆಗಳು ಭಾರತವನ್ನು ಆಕ್ರಮಣಗಾರ ರಾಷ್ಟ್ರವೆಂದು ಕರೆದಿವೆ. ರಾಣ್ ಪ್ರದೇಶ ಪಾಕಿಸ್ಥಾನದ್ದೆಂದೂ ಭಾರತವೇ ಆಕ್ರಮಣ ನಡೆಸಿದೆಯೆಂದೂ ಚೈನೀ ಪತ್ರಿಕೆಗಳು ಪ್ರಕಟಿಸಿವೆ. ಹಾಗಿರುವಾಗ ಶ್ರೀ ನಂಬೂದರಿ ಪಾದರು ಆ ಪತ್ರಕ್ಕೆ ಸಹಿ ಹಾಕಲು ಒಪ್ಪಿಯಾರೇ?

ಚೈನಾ—ಪಾಕ್ ಸಂಯುಕ್ತ ಆಕ್ರಮಣದ ವಿಷಯದಲ್ಲಿ ಅದಾವ ಭಾರತೀಯರಿಗೂ ಸಂದೇಹವೇ ಇಲ್ಲ. ಕಮ್ಯೂನಿಸ್ಟ್ ಚೈನಾ ಹಲವಾರೆಡೆಗಳಲ್ಲಿ ಆಕ್ರಮಣ ನಡೆಸಿದೆಯಾದರೂ ಭಾರತವನ್ನೇ ಆಕ್ರಮಣಗಾರ ರಾಷ್ಟ್ರವೆಂದು ಕರೆದಿದೆ. ಅನಂತರ ನೇರ ತಾವಾಗಿ ಆಕ್ರಮಣ ಮಾಡುವ ಬದಲು ಪೈಶಾಚಿಕ ಪಾಕಿಸ್ಥಾನಿಗಳನ್ನು ಎತ್ತಿ ಕಟ್ಟಿದರು ಅವರಿಗೆ ಬೇಕಾದ ಸಹಾಯ—ಪ್ರೋತ್ಸಾಹಗಳನ್ನಿತ್ತರು. ಅದರಿಂದಲೂ ತೃಪ್ತರಾಗಿರಲು ಅವರಿಂದ ಸಾಧ್ಯವಾಗಲಿಲ್ಲ. ಹುಲ್ಲೂ ಮುಳ್ಳು ಏನೂ ಇರದ ಶ್ರೀ ಜವಾಹರಲಾಲರ ಭೂಪ್ರದೇಶವನ್ನಾಕ್ರಮಿಸುವಾಗ ಅವರಿಗೆ ಗಡಿಪ್ರದೇಶ ಗೊತ್ತಾಗಲಿಲ್ಲವಂತೆ. ಆ ಪ್ರದೇಶಗಳಲ್ಲಿ ಗಡಿರೇಖೆಯನ್ನು ಸ್ಪಷ್ಟವಾಗಿ ಸೂಚಿಸಿರಲಿಲ್ಲವಂತೆ. ಹೀಗೆ ಕಮ್ಯೂನಿಸ್ಟರು ಕಟ್ಟು ಕತೆಗಳನ್ನು ಸಂತೆಗೆ ತಂದರು. ದುರಾದೃಷ್ಟವಶಾತ್ ಇಲ್ಲಿಯ ಅಧಿಕಾರಸ್ಥಾನದಲ್ಲಿದ್ದ ನೇತಾ ವರ್ಗ ಕೂಡಾ ಅದಕ್ಕೆ ತಾಳ ಹಾಕಿತು. ಆದರೆ ಇಂದು ಅವರು ಮಾಡಿದ್ದೇನು?

ಭಾರತ ಟಿಬೇಟು ಗಡಿಪ್ರದೇಶದಲ್ಲಿ ಅವರು ಭಾರತದೊಳಗೆ ಬಹಳ ದೂರ ಬಂದಿದ್ದರು. ಇದು ಮಾನ ಕಣಿವೆಯಲ್ಲಿ. ಹೀಗೆ ಬಹಳದೂರ ಬಂದಾಗ ಅವರಿಗೆ ಭಾರತದ ರಕ್ಷಣಾ ಪಡೆ ಇರುವದು ಕಂಡು ಬಂತು. ದಾರಿ ತಪ್ಪಿ ಬದವರಾಗಿದ್ದಲ್ಲಿ ಅವರು ಅಲ್ಲಿಂದಲೇ ಸಾವಧಾನವಾಗಿ ಹಿಂದಕ್ಕೆ ಹೋಗುತ್ತಿದ್ದರು. ಸಾಮ್ರಾಜ್ಯ ಪಿಪಾಸಿ ಕಮ್ಯೂನಿಸ್ಟ ಚೈನೀ ಸೇನೆ ಅದಕ್ಕಾಗಿ ಅಲ್ಲಿ ಬಂದಿರಲಿಲ್ಲ. ಆದುದರಿಂದಲೇ ಅವರು ತಮ್ಮ ಪಕ್ಕನೇ ಇದ್ದ ನಿರಾಯುಧ ರಕ್ಷಣಾ ಪಡೆಯ ಮೇಲೆ ಇದ್ದಕ್ಕಿದ್ದಂತೆ ಸಿಡಿಮದ್ದಿನ ಪ್ರಯೋಗ ನಡೆಸಿದರು; ಗುಂಡುಹೊಡೆದರು. ಕೆಚ್ಚೆದೆಯ ನಮ್ಮ ರಕ್ಷಣಾ ಪಡೆ ಆದರಿಂದ ಕಂಗೆಟ್ಟು ಕೈಕಾಲು ಬಿಡಲಿಲ್ಲ. ಅವರು ಬಹಳ ಶಾಂತವಾಗಿ ಆದರೆ ಧೈರ್ಯದಿಂದ ಪರಿಸ್ಥಿತಿಯನ್ನೆದುರಿಸಿದರು. ಆಕ್ರಮಣಗಾರರನ್ನು ಹಿಂದಕ್ಕಟ್ಟಿದರು. ಶ್ರೀ ಕೃಷ್ಣಮೆನನರಂತವರು ರಕ್ಷಣಾಮಂತ್ರಿಯಾಗಿಲ್ಲದಿರುವ ಕಾರಣ ಹಾಗೂ ಕೌಲರಂತಹವರ ಸೇನೆಯ ಅಧಿಕಾರಿಯಾಗಿಲ್ಲದಿರುವ ಕಾರಣ ಆ ರಕ್ಷಣಾ ಪಡೆ ತನ್ನ ಧೈರ್ಯ—ಶಕ್ತಿಯನ್ನು ಪ್ರಕಟಪಡಿಸಲು ಸಾಧ್ಯವಾಯಿತು. ರಕ್ಷಣಾ ಪಡೆ ಆ ಪ್ರದೇಶದ ರಕ್ಷಣೆಯನ್ನು ಮಾತ್ರ ಮಾಡಿದ್ದಲ್ಲದೆ ನಮ್ಮ ಮಾನ ಕಣಿವೆಯನ್ನು ರಕ್ಷಿಸಿದ್ದು ಮಾತ್ರವಲ್ಲದೆ ಭಾರತದ ಗೌರವ ಧ್ವಜವನ್ನು ಅಲ್ಲಿ ಎತ್ತರಕ್ಕೆ ಹಾರಿಸಿದರು ಹಾಗೂ ನಮ್ಮ ಮಾನವನ್ನು ಕಾಪಾಡಿದರು.

ಈ ಪ್ರದೇಶಕ್ಕೂ ನೇಫಾ ಪ್ರದೇಶಕ್ಕೂ ಸ್ವಲ್ಪ ವ್ಯತ್ಯಾಸವಿದೆ. ಇತ್ತೀಚೆಗೆ ನೇಫಾ-ಲಡಾಖ್ ಪ್ರದೇಶಗಳಲ್ಲಿ ಗಡಿರೇಖೆ ಗುರುತಿಸಲ್ಲವಾದರೂ ಈ ಮಾನ ಕಣಿವೆಯು ಪ್ರದೇಶದಲ್ಲಿ ಹಾಗಲ್ಲ. ೧೯೩೪ರಂದು ಇ

(ಹನ್ನೆರಡನೇ ಪುಟ ನೋಡಿರಿ)

ಕಾರ್ಕಳ ಮುನ್ಸೀಫ ಕೋರ್ಟಿನಲ್ಲಿ

REP 752/1964 O.S. 22/1964

RIA 540/1964

ಸುಂದರ ಪೈ — ಅರ್ಜಿದಾರ.

ಮೋನಪ್ಪ ಪೂಜಾರಿ ಸಹಾ — ಎದುರಿ.

5 ಭೋಜ S. ಸಾಲಿಲ, ಬಂದು ಹೆಂಗ್ಸಿನ ಮಗ, ಮಂಗಳೂರು ತಾಲ್ಲೂಕು ಮೂನಂಪಾದಿ ಗ್ರಾಮದಲ್ಲಿರುವವ—5ನೇ ಎದುರಿ ಅವ ನಿಮಗೆ ಈ ಮೂಲಕ ತಿಳಿಸುವದೇನಂದರೆ—

ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಯಿರುವ ಸ್ಥಿರಾಸ್ತಿಗಳನ್ನು ಲೀಲಂಗೆ ಅಪೇಕ್ಷಿಸಿ ಅರ್ಜಿದಾರನು ದಾಖಲು ಮಾಡಿದ ಲೀಲಂ ಯಿಸ್ತಿಹಾರಿನ ಶರ್ತ ನಿರ್ಣಯಿಸುವ ಕುರಿತು ನಿಮಗೆ ಅಖೈರ ನೋಟೀಸಿನ ಬಗ್ಗೆ ಅಪ್ಲಿಕ್ಯಾಶನ್ ತಾರೀಕು 1-6-65ಕ್ಕೆ ಇಟ್ಟಿದೆ. ಆ ಕುರಿತು ನಿಮಗೆ ಆಕ್ಷೇಪ ಇದ್ದರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ನೀವು ಹಾಜರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ದೆ ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನ ಮಾಡಲ್ಪಡುವದೆಂತ ಕೋರ್ಟಿನ ಹುಕುಂ ಪ್ರಕಾರ ತಿಳಿಸಿಯದೆ.

K. S. Kamath,
Advocate for Petitioner.

ಕಾರ್ಕಳ, 17-5-65.

ನಾನು ಒಂದು ಬ್ಯಾಂಕನ್ನು ಹುಡುಕುತ್ತಿದ್ದರೆ—

ನನಗೆ ಎಲ್ಲ ಸೌಲಭ್ಯಗಳನ್ನೊದಗಿಸುವಷ್ಟು ದೊಡ್ಡದಾದ ಆದರೆ ತನ್ನ ಭಾರೀ ವಹಿವಾಟುಗಳ ನಡುವೆ ನನ್ನ ಖಾತೆಯು ಅಕ್ಕಲ್ಪವೆಂದು ತೋರಿ ಬರುವಷ್ಟು ದೊಡ್ಡದಾಗಿರದ ಒಂದು ಬ್ಯಾಂಕನ್ನು ನಾನು ಹುಡುಕುವೆ.

ಆಧುನಿಕ ವ್ಯಾಪಾರ, ವ್ಯವಹಾರಗಳಿಗೆ ನೆರವಾಗುವಂಥ ಸೌಹಾರ್ದ ಸಂಸ್ಥೆಯಾಗಿದ್ದು ತನ್ನ ಆರ್ಥಿಕ ಜೀವನದಲ್ಲಿ ಒಂದು ಸಹಾಯಕ ಪಾತ್ರವನ್ನು ವಹಿಸಿಕೊಳ್ಳಲು ಸಿದ್ಧವಾದ ಒಂದು ಬ್ಯಾಂಕನ್ನು ನಾನು ಹುಡುಕುವೆ.

ಚಲಾವಣಾ ಸಂಪತ್ತಿನಲ್ಲಿ, ವಿಶಾಲ ಅನುಭವದಲ್ಲಿ, ಪ್ರಾಮಾಣಿಕ ಸೇವೆಯಲ್ಲಿ ಮಿಗಿಲೆನಿಸಿದ್ದು, ಆದರೊಂದಿಗಿನ ವ್ಯವಹಾರವು ಸಂತೋಷದ ಸವಿನೆನಪನ್ನು ತಂದು ಕೊಡುವಂಥ ಒಂದು ಬ್ಯಾಂಕನ್ನು ನಾನು ಹುಡುಕುವೆ.

ಒಟ್ಟಿನಲ್ಲಿ ನನ್ನ ಆಯ್ಕೆ—

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

FAITHFUL FRIENDLY SB

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

200ಕ್ಕೂ ಮಿಕ್ಕಿದ ಶಾಖೆಗಳು.

ಚಲಾವಣಾ ಸಂಪತ್ತು: ರೂ. 70 ಕೋಟಿಗೂ ಮಿಕ್ಕಿದೆ.

....ವಿಶ್ವವ್ಯಾಪೀ ಬ್ಯಾಂಕಿಂಗ್ ವ್ಯವಹಾರದ ಬಗ್ಗೆ.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯು ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಶ್ರೀ ಸ್ವಾಮಿ ಚಿನ್ಮಯಾನಂದ ಮೀಮಾಂಸೆ

ಗೀತಾ-ದ್ವಿತೀಯಾಧ್ಯಾಯ

ಸಂಗ್ರಹಕರ್ತೆ:
ಶ್ರೀಮತಿ ಆನಂದಿ ಸದಾಶಿವರಾವ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಮಹಾಭಾರತ ಯುದ್ಧದ ಮೊದಲಿನ ದಿನ ಕೆಲವು ಮಾತುಗಳನ್ನು ಹೇಳಿ ಧೃತರಾಷ್ಟ್ರನು ಅರ್ಜುನನಲ್ಲಿ ತುಂಬಿದ್ದ ಶಕ್ತಿಯನ್ನು ವಿರುದ್ಧ ಹಾದಿಯಲ್ಲಿ ಕ್ರಮಿಸುವಂತೆ ಮಾಡಿದುದರ ಪರಿಣಾಮವಾಗಿ ಅವನು ಯುದ್ಧಭೂಮಿಯಲ್ಲಿ ನಿರುತ್ಸಾಹ ತಳೆದು hysterical ವ್ಯಕ್ತಿಯಂತೆ ವರ್ತಿಸಿದನು. ಆದರೆ ಅರ್ಜುನನ ಬಳಿ ಶ್ರೀಕೃಷ್ಣನು ಇದ್ದುದರಿಂದ ಆ ರೋಗ ನಿವಾರಣೆ ಮಾಡಿದನು. ಅದಕ್ಕೆ ಗೀತೆ ಔಷಧಿ. ಆ ಗೀತೆಯಿಂದ ನಮ್ಮಲ್ಲಿದ್ದ ಅರ್ಜುನನ ಸ್ಥಿತಿಯನ್ನು ನಾವು ಸುಧಾರಿಸಿಕೊಳ್ಳಬಹುದು.

ಗೀತೆಯ ಧ್ಯಾನ ಶ್ಲೋಕಗಳನ್ನು ಮಧುಸೂಧನ ಸರಸ್ವತಿ ಎಂಬವರು ಬರೆದಿರಬೇಕೆಂದು ಊಹನೆ ಇದೆ. ಮಹಾಭಾರತದ ಗೀತೆಯಲ್ಲಿ ಈ ಭಾಗವು ಇಲ್ಲ. ಗೀತಾಭ್ಯಾಸಕ್ಕೆ ತೊಡಗುವ ಮೊದಲು ವಿದ್ಯಾರ್ಥಿಗಳು ಧ್ಯಾನ ಶ್ಲೋಕಗಳನ್ನು ಹೇಳುವ ಅಭ್ಯಾಸಿಸುವ ಕ್ರಮ ಇದೆ. ಏಕೆಂದರೆ ಮನಸ್ಸು ಅತ್ತಿತ್ತ ಹರಿದಾಡಿ, ಏಕಾಗ್ರತೆ ಇಲ್ಲದೆ ಇರುವುದು. ಅದನ್ನು ಸುತ್ತಲಿನ ಎಂದರೆ ಇತರ ಸ್ಥಳಗಳಿಂದ, ಯೋಚನೆಗಳಿಂದ ತಂದು, ಒಂದೇ ಕಡೆ, ಲಕ್ಷ್ಯವನ್ನಿಟ್ಟು ಅಭ್ಯಾಸ ಮಾಡುವಂತೆ ಈ ಧ್ಯಾನ ಶ್ಲೋಕಗಳನ್ನು ಹೇಳುವುದು. ಆಗ ಮನಸ್ಸಿನಲ್ಲಿ ಭಾವನೆಯೂ ತುಂಬುವುದು.

ಓಂ ಪಾರ್ಥಾಯ ಪ್ರತಿಬೋಧಿತಾಂ
ಭಗವತಾ ನಾರಾಯಣೇನ ಸ್ವಯಂ
ವ್ಯಾಸೇನ ಗ್ರಥಿತಾಂ ಪುರಾಣ
ಮುನಿನಾ ಮಧ್ಯೇ ಮಹಾಭಾರತಂ
ಅದ್ವೈತಾಮೃತ ವರ್ಷಿಣೀಂ ಭಗ
ವತೀಂ ಅಷ್ಟಾದಶಾಧ್ಯಾಯಿನೀಂ
ಅಂಬತ್ವಾ ಮನು ಸಂದದಾಮಿ
ಭಗವದ್ಗೀತೇ ಭವದ್ವೇಷಿಣೀಂ ॥ ೧ ॥

ಶ್ರೀ ನಾರಾಯಣನೇ, ಸ್ವತಃ ದೇವರೇ ಕಲುಷಿತ ಮನಬುದ್ಧಿಯಿಂದಿದ್ದ ಮಾನವನಿಗೆ (ಪಾರ್ಥ) ಸರಿಯಾಗಿ ಅರ್ಥವಾಗುವ ತನಕ ಗೀತೆಯನ್ನು ಹೇಳಿದುದು. ಪುರಾಣಗಳನ್ನು ಬರೆದ ಮಹರ್ಷಿ ವ್ಯಾಸನು ಈ ಗೀತೆಯನ್ನು ಸಂಗ್ರಹಿಸಿ, ತನ್ನ ಅತ್ಯುತ್ತಮ ಕೃತಿ ಎನಿಸಿದ, ಐದನೇ ವೇದವೆಂದು ಹೆಸರಾದ ಮಹಾಭಾರತದ ಮಧ್ಯ ಇರಿಸಿದನು. ಆದರಿಂದ ಈ ಗೀತೆಯ ಅಮೂಲ್ಯತೆ ತಿಳಿದು ಬರುತ್ತದೆ. ಎಂದರೆ ಗೀತೆ ಅತ್ಯುತ್ತಮವಾದ ಗ್ರಂಥ. ಹದಿನೆಂಟು ಅಧ್ಯಾಯಗಳಲ್ಲಿ ಗೀತಾ ಮಾತೆಯು ಇಡೀ ವಿಶ್ವವು ಒಂದೇ ಆದಿಯಿಂದ (ಅದ್ವೈತ) ಬಂದಿದೆ ಎಂದು ಅಮೃತದಂತಹ ತತ್ವವನ್ನು ಉದ್ದಕ್ಕೂ ಮಳೆಗರೆಯುತ್ತಿರುವಳು. ಹೇ ಗೀತಾ ಮಾತೆ, ನಾನು ನಿನ್ನನ್ನು ನನ್ನ ಯೋಚನೆಗಳನ್ನು ಸದಾ ಗೀತೆಯ ವಿಚಾರಗಳನ್ನು ಓದಿಸಿ ಪೂಜಿಸುವೆನು. ಹೇ ತಾಯೇ, ನೀನು ಸಂಸಾರ ಎಂದರೆ ಈ ಪ್ರಾಪಂಚಿಕ ವಸ್ತುಗಳ ಅನಿತ್ಯತೆಯಿಂದ, ಬದಲಾಗುವ ಅನುಭವಗಳ ಜಂಜಾಟದಿಂದ ಕಂಗೆಡುತ್ತಿರುವ ನನ್ನನ್ನು ಪಾರುಮಾಡಲು ಶಕ್ತಳು.

ಗೀತೆಯನ್ನು ತಾಯಿ, ಮಾತೆ ಎಂದು ಪೂಜ್ಯ ಭಾವನೆಯಿಂದ ಕರೆದುದು ಏಕೆಂದರೆ, ತಾಯಿ, ಸದಾ ಮಕ್ಕಳ ತಪ್ಪನ್ನು ಕ್ಷಮಿಸುವವಳು. ಜೀವನವನ್ನು ಬಾಳುವ ಬಗೆಯನ್ನು ಕಲಿಸುವ ಗ್ರಂಥವನ್ನು ಮಾತೆ ಎಂದೇ ಭಾವಿಸಿ ಆ ಸೂತ್ರಗಳನ್ನು ಅನುಸರಿಸುವುದರಲ್ಲಿ ನಾವು ತಪ್ಪಿ ಬಿದ್ದರೂ, ಪುನಃ ಪುನಃ ತಪ್ಪು ತಿದ್ದಿಕೊಳ್ಳಲು ಮಾತೆಯ ಬಳಿ ಕ್ಷಮಾಯಾಚನೆ ಮಾಡಬಹುದು. ಈ ರೀತಿಯ ಭಾವನೆಯಿಂದ ಗೀತೆಯನ್ನು ಮಾತೆ ಎನ್ನಲಾಗಿದೆ.

ಮತ್ತು ಗೀತೆಯನ್ನು ಪೂಜಿಸುವುದು, ಕೇವಲ ಕರ್ಮಕಾಂಡಗಳಲ್ಲಿ ಹೇಳಿದ ಪೂಜೆಯಿಂದಲ್ಲ. ದಿನನಿತ್ಯ ಅದರಲ್ಲಿ ನಿರೂಪಿಸಿದ ತತ್ವಗಳನ್ನು ಮನನ ಮಾಡಿ, ವ್ಯವಹಾರದಲ್ಲಿ ಅದನ್ನು ಬಾಳಲು ಯತ್ನಿಸುವುದೇ ಗೀತಾ ಪೂಜೆ. ಹೀಗೆ ಪೂಜಿಸದಿದ್ದರೆ ಗೀತೆಯಲ್ಲಿ ಹೇಳಿದ ತತ್ವಗಳಿಂದ ನಮಗೇನೂ ಪ್ರಯೋಜನ ಸಿಗದು. ಅದರಿಂದ ಈ ತರಹದ ಪೂಜೆ ಗೀತಾ ಮಾತೆಗೆ ಅತ್ಯುತ್ತಮವಾಗಿದೆ. ಕೇವಲ ಬಾಹ್ಯ ಪೂಜೆಯಲ್ಲ.

ನಮೋಽಸ್ತುತೇ ವ್ಯಾಸ ವಿಶಾಲಬುದ್ಧೇ
ಫುಲ್ಲಾರವಿಂದಾಯತಪತ್ರ ನೇತ್ರ !
ಯೇನತ್ವಯಾ ಭಾರತ ತೈಲಪೂರ್ಣಃ
ಪ್ರಜ್ವಾಲಿತೋ ಜ್ಞಾನ ಮಯ
ಪ್ರದೀಪಃ ॥ ೨ ॥

ವಿಶಾಲವಾದ ಮೇಧಾವಿತನ, ಪಾಂಡಿತ್ಯವಿದ್ದ ವ್ಯಾಸಮಹರ್ಷಿಗೆ ನಮಸ್ಕಾರ. ಹಿರಿಯ ಪಾಂಡಿತ್ಯದೊಡನೆ ಅರಳಿದ ಕುಸುಮ ಕೋಮಲವಾದ ಕಮಲದ ಎಸಳುಗಳಂತೆ ಮನೋಹರವಾದ ನಾಯನಗಳಿಂದ ಕೂಡಿದ ಸುಂದರ ವ್ಯಕ್ತಿತ್ವವೂ ಇದೆ. ಮತ್ತು ಜ್ಞಾನ ಒಂದೇ ಇದ್ದ ದೀಪವನ್ನು ಎಲ್ಲಾ ಜ್ಞಾನ ಪಡೆಯಲು ಕಾರಣವಾದ ಜ್ಞಾನವೆಂಬ ದೀಪವನ್ನು, ಪ್ರತಿಯೊಂದು ವಿದ್ಯೆ, ವಿಜ್ಞಾನವನ್ನು ತಿಳಿಯಲು ಸಾಧ್ಯಮಾಡಿದ ಜ್ಞಾನವೆಂಬ ಜ್ಯೋತಿಯನ್ನು, ಭಾರತ ಸಂಸ್ಕೃತಿಯೆಂಬ (ಭಾ = ಜ್ಞಾನ, ರತ = ಮುಳುಗು; ಸಂತೋಷ ಪಡು) ತೈಲದಿಂದ ಉರಿಸಿರುವೆ. ಭಾರತೀಯ ಸಂಸ್ಕೃತಿಯೆಂದರೆ, ಜ್ಞಾನದಲ್ಲಿ ಸಂತೋಷಪಡೆಯುವುದು. ಆ ಸಂಸ್ಕೃತಿಯೆಂಬ ಎಣ್ಣೆಯಿಂದ ಆ ಜ್ಞಾನ ದೀಪವನ್ನು ಉರಿಸಿರುವೆ.

ಆರ್ಯಾವರ್ತದಲ್ಲಿ ಎಂತಹ ಪಾಂಡಿತ್ಯವಿದ್ದರೂ, ಎಂತಹ ಆಕರ್ಷಕ ವ್ಯಕ್ತಿತ್ವವಿದ್ದರೂ, ವಂದನೆಗೆ ಓರ್ವನು ಅರ್ಹನೆನಿಸಿಕೊಳ್ಳಲಾರನು. ಅವನು ಸಮಾಜಕ್ಕೆ, ಜನಾಂಗಕ್ಕೆ ಏನು ಉಪಕಾರ, ಶ್ರೇಯಸ್ಸನ್ನು ಉಂಟುಮಾಡಿರುವನು ಎಂದು ಜನರು ನೋಡುತ್ತಿದ್ದರು. ವ್ಯಾಸ ಮಹರ್ಷಿಯು ಗೀತೆಯನ್ನು ಸಂಗ್ರಹಿಸಿ, ಜ್ಞಾನ ದೀವಿಗೆಯನ್ನೇ ಉರಿಸಿರುವನು. ಈ ಜ್ಞಾನ ದೀವಿಗೆಯಿಂದಾಗಿ ಪ್ರತಿಯೊಬ್ಬ ವ್ಯಕ್ತಿಯೂ, ತನ್ನ ತನ್ನ ಕರ್ತವ್ಯದಲ್ಲಿ ಹೆಚ್ಚಿನ ಕರ್ತವ್ಯ ದಕ್ಷತೆ ತೋರಿಸಲು ಸಾಧ್ಯವಾಗುವುದು. ಉದಾ: ವಿಜ್ಞಾನಿಯು ಉತ್ತಮ ವಿಜ್ಞಾನಿ; ವೈದ್ಯನು ಉತ್ತಮ ವೈದ್ಯನು. ಹೀಗೆ ಬಾಳ್ವೆಯನ್ನು ಉತ್ತಮಗೊಳಿಸುವ ಜ್ಞಾನವನ್ನೇ ನೀಡಿರುವನು.

ಪ್ರಪನ್ನ ಪಾರಿಜಾತಾಯ ತೋತ್ರವೇ
ತ್ರೈಕ ಪಾಣಯೇ ।
ಜ್ಞಾನ ಮುದ್ರಾಯ ಕೃಷ್ಣಾಯ
ಗೀತಾಮೃತ ದುಹೇ ನಮಃ ॥ ೩ ॥

ಭಕ್ತರು ಮರೆ ಹೊಕ್ಕರೆ ಪಾರಿಜಾತ ವೃಕ್ಷದಂತೆ ಬೇಡಿದುದನ್ನು ಕೊಡುವ ಕೃಷ್ಣ. ಒಂದು ಕೈಯಲ್ಲಿ ದನಗಳನ್ನು ಅಟ್ಟಲು ಮರದ ಕೋಲನ್ನೂ, ಇನ್ನೊಂದು ಕೈಯಲ್ಲಿ ಜ್ಞಾನವನ್ನೂ ಸೂಚಿಸುವ ಮುದ್ರೆಯನ್ನೂ ಧರಿಸಿರುವ ಕೃಷ್ಣ, ನಮಗೆ ಗೀತೆಯೆಂಬ ಅಮೃತವನ್ನು ಕೊಡುವವನಿಗೆ ನಮಸ್ಕಾರ. ದನಕಾಯುವ ಗೌಡನ ಕೈಯಲ್ಲಿ ಕೋಲು ಮಾತ್ರ ಇದೆ. ಅಂತಹ ಏನೂ ಇಲ್ಲದ ಕೃಷ್ಣ; ಪ್ರಾಪಂಚಿಕ ಸೊತ್ತುಗಳೇನೂ ಇಲ್ಲದ ಕೃಷ್ಣ; ಇನ್ನೊಂದು ಕೈಯಲ್ಲಿ ಅತ್ಯುತ್ತಮ ಜ್ಞಾನವನ್ನು ಬೋಧಿಸುವ ಮುದ್ರೆ ತೋರಿಸುವಂತಹ ವ್ಯಕ್ತಿತ್ವ ಪಡೆದವನು. ಜ್ಞಾನ ಮುದ್ರೆ. ನಡುಬೆರಳಿನಿಂದ, ಕಿರುಬೆರಳಿನ ತನಕ ಮೂರು ಬೆರಳುಗಳನ್ನು ಜತೆಯಲ್ಲಿ ನೆಟ್ಟಗೆ ಹಿಡಿದು ತೋರು ಬೆರಳನ್ನು, ಹೆಬ್ಬೆಟ್ಟಿನೊಡನೆ ಸೇರಿಸಿದರೆ, ಜ್ಞಾನ ಮುದ್ರೆ. ಈ ಹೆಬ್ಬೆಟ್ಟು ಮತ್ತು ತೋರು ಬೆರಳು ಒಂದು ವರ್ತುಲವನ್ನು ಮಾಡುವುದು ಈ ವರ್ತುಲವು ಅನಂತತೆಯ ಪ್ರತೀಕವಾಗಿದೆ. ಅದಕ್ಕೆ ಆದಿಯಿಲ್ಲ ಅಂತ್ಯವಿಲ್ಲ ಅನಂತತೆಯನ್ನು ಹೀಗೆ ಮೂರು ಬೆರಳುಗಳನ್ನು ಜತೆಯಾಗಿ ನೆಟ್ಟಗೆ ಹಿಡಿದರೆ, ಎಂದರೆ ದೇಹ, ಮನ, ಬುದ್ಧಿಯನ್ನು ಸ್ಥಿರವಾಗಿ ಸಂಯಮದಲ್ಲಿ ಇರಿಸಿ, ಅದನ್ನು ಮೀರಿ ಹೋದರೆ ಅನಂತತೆಯ ಅರಿವು ಆಗುವುದು ಎಂದಾಗಿದೆ. ಇಂತಹ ಜ್ಞಾನ ತಿಳಿದವನು, ಆ ಮುದ್ರೆ ತೋರಿಸುವ ಶಕ್ತಿ ಶ್ರೀ ಕೃಷ್ಣ ಪಡೆದಿರುವನು. ಅವನಿಗೆ ವಂದನೆಗಳು.

ಮೇಲೆ ಹೇಳಿದುದು ಭಕ್ತರಿಗಾದರೆ, ಅದನ್ನು ಒಪ್ಪದ, ಪಾಂಡಿತ್ಯವರ್ಗದವರಿಗೆ, ಮೇಧಾವಿಗಳಿಗೆ ಇನ್ನೊಂದು ಅರ್ಥ ಈ ಶ್ಲೋಕದಲ್ಲಿ ಅಡಗಿದೆ. ಭಕ್ತರು, ದೇವರ ಮೇಲೆ ಇರಿಸಿದ ಅಪಾರ ಪ್ರೇಮದಿಂದ, ಬುದ್ಧಿವಂತಿಕೆಯನ್ನು ಉಪಯೋಗಿಸದೆ, ದೇವರ ಮೇಲೆ ನಂಬುಗೆ ಇರಿಸಿ, ಅದರಲ್ಲೇ ತೃಪ್ತಿ ಪಡೆಯುವರು, ಆದರೆ ಅದನ್ನು ಒಪ್ಪದವರಿಗೆ ಅಂತಹ ಪರಿಪೂರ್ಣವಾದ ನಂಬುಗೆ, ಪ್ರೇಮವಿಲ್ಲದ ಹೃದಯದವರಿಗೆ, ಅವರನ್ನು ಒಪ್ಪಿಸುವಂತಹ ಅರ್ಥ ಈ ಶ್ಲೋಕದಲ್ಲಿ ಇದೆ.

ದೇಹ, ಮನ, ಬುದ್ಧಿಗಳನ್ನು ದಾಟಿ ಮೌನವಾಗಿ ಕುಳಿತರೆ, ಕಾಣ ಸಿಗುವ ಅತ್ತಲಿನಾಚೆಗೆ ಇರುವ ಆತ್ಮ ಎಂದೂ, ಆ ಚೈತನ್ಯದಿಂದಾಗಿ, ನಾನು ಇಂದ್ರಿಯಾದಿ ಭೋಗಗಳನ್ನು ಅನುಭವಿಸುವೆನೆಂದೂ, ಅದರಿಂದಾಗಿ ಹೃದಯದಲ್ಲಿ ಉನ್ನತ ಉದಾತ್ತ ಚಿಂತನೆಯೂ ಉಂಟಾಗುವುದೆಂದೂ, ಅರ್ಥ. ಅಂತಹ ಕೃಷ್ಣನೇ ಗೀತೆಯನ್ನು ಹೇಳುವನು.

ದೇಹ, ಮನ, ಬುದ್ಧಿಯಿಂದಾಗಿ, ಅಸ್ಥಿರತೆ, ಪರಿಮಿತತನವನ್ನು ಅನುಭವಿಸುವ ಜೀವ, ಅನಂತತೆಯನ್ನು ಅನುಭವಿಸಲು, ಈ ಮೂರು, ಪ್ರಕೃತಿಯ ಆವರಣಗಳಿಂದ ಎಷ್ಟು ಬಿಡುಗಡೆಗೆ ಪ್ರಯತ್ನಿಸುವುದೋ ಅಷ್ಟು ಅಪರಿಮಿತ ಎಣೆ ಇಲ್ಲದ ಸ್ಥಿತಿಯನ್ನು ಹೊಂದುವುದು. ಆ ಆತ್ಮ ಚೈತನ್ಯದಲ್ಲಿ ಪರಿಮಿತತನ ಇಲ್ಲ.

ದೇಹ, ಮನ ಬುದ್ಧಿಯನ್ನು ಚಲಿಸುವಂತೆ ಮಾಡುವ ಒಂದು ಶಕ್ತಿ. ಅಗೋಚರ ಶಕ್ತಿ ನಮ್ಮಲ್ಲಿ ಅಡಗಿದೆ. ಆ ಶಕ್ತಿ ಚೈತನ್ಯವೇ ಕೃಷ್ಣ ಎಂದರೆ ವಿಚಾರ ಮಾಡುವವರು ಅದನ್ನು ಒಪ್ಪಲೇ ಬೇಕು. ನಾನು ಎಂಬ ವ್ಯಕ್ತಿತ್ವದ ಅರಿವು ಮಾಡಲು ಅರಿವಿಗಿಂತ ಆಚೆ ಒಂದು ಚೈತನ್ಯ ಇದೆ ಎಂದು ಎಲ್ಲರೂ ಒಪ್ಪಲೇ ಬೇಕು. ಇದರಿಂದ ತಾರ್ಕಿಕರು ಸಮಾಧಾನಗೊಳ್ಳುವರು, ಈ ಚೈತನ್ಯವೇ ಕೃಷ್ಣ. ಅವನಿಗೆ ವಂದನೆಗಳು.

(ಇನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½% ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಕಚ್ ಆಕ್ರಮಣದ ಕುರಿತು ಜಗತ್ತೇನು ಹೇಳುತ್ತಿದೆ?

ಪಾಕಿಸ್ತಾನವೇ ದುರಾಕ್ರಮಣವೆಸಗಿದೆ

ಭಾರತದ ನಿಲುಮೆಗೆ ವಿಶ್ವದಾದ್ಯಂತ ಪತ್ರಿಕೆಗಳ ಬೆಂಬಲ; ಪಾಕಿಸ್ತಾನದ ಆಕ್ರಮಣದ ಖಂಡನೆ

ಸಿಂಧ್—ಕಛ್ ಗಡಿಯಲ್ಲಿ ಪಾಕಿಸ್ತಾನವು ಭಾರತದ ನೆಲವನ್ನು ಆಕ್ರಮಣ ಮಾಡಿ, ದೇಶದ ಸ್ವಾತಂತ್ರ್ಯಕ್ಕೆ ಗಂಡಾಂತರವನ್ನು ತಂದೊಡ್ಡಿದೆ. ತಾನು ಆಕ್ರಮಣಕಾರಿಯಾಗಿದ್ದರೂ ಕೂಡಾ ಭಾರತವೇ ತನ್ನ ಗಡಿಯನ್ನು ಆಕ್ರಮಿಸಿದೆ ಎಂಬ ದಾಷ್ಟ್ಯವನ್ನು ಕೂಡಾ ಅದು ತೋರಿದೆ. ಭಾರತದ ಕುರಿತು ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಿದೆ. ವಿದೇಶಗಳಲ್ಲಿ ಸ್ವಕಪೋಲ ಕಲ್ಪಿತ ಕಥೆಗಳನ್ನು ಹುಟ್ಟಿಸಿ, ಭಾರತವೇ ಆಕ್ರಮಣಕಾರಿ ಎನ್ನುವ ಧಾಟಿಯಲ್ಲಿ ಅದು ಪ್ರಚಾರ ಗೈಯುತ್ತಿದೆ. ಮಹಾ ಶಕ್ತಿಗಳೆನ್ನಿಸಿಕೊಂಡ, ಶಾಂತಿಯುತ ಸಹ ಜೀವನದ ಅಧ್ವರ್ಯುಗಳೆನ್ನಿಸಿಕೊಂಡ ಅಮೇರಿಕ, ಬ್ರಿಟನ್‌ಗಳು ಖಂಡ ತುಂಡವಾದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ದಿಟ್ಟತನವನ್ನು ತೋರದಿದ್ದರೂ, ಭಾರತದ ನಿಲುಮೆಗೆ ವಿಶ್ವದ ಹಲವಾರು ಪತ್ರಿಕೆಗಳು ಬೆಂಬಲವನ್ನು ವ್ಯಕ್ತಪಡಿಸಿವೆ. ಸಿಂಧ್—ಕಚ್ ಗಡಿಯಲ್ಲಿ ಪಾಕಿಸ್ತಾನದ್ದೇ ದುರಾಕ್ರಮಣ, ಅದೇ ಅಪರಾಧವನ್ನೆಸಗಿದೆ ಎಂದು ಜಗತ್ತಿನಾದ್ಯಂತದ ಪತ್ರಿಕೆಗಳು ಅಭಿಪ್ರಾಯ ವ್ಯಕ್ತಪಡಿಸಿವೆ. ಕೆಲವು ಪ್ರಮುಖ ಪತ್ರಿಕೆಗಳ ಅಭಿಪ್ರಾಯವನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಪಾಕಿಸ್ತಾನವೇ ಭಾರತದ ಗಡಿಯೊಳಗೆ ನುಗ್ಗಿದೆ ಎಂದು ಸ್ವಿಸ್ ಪತ್ರಿಕೆಗಳು

ಸ್ವಿಸ್ ಪತ್ರಿಕೆ "ಲಾ ಸುಯಿಸ್ಸ್"ನಲ್ಲಿ ಅದರ ವಿದೇಶಾಂಗ ವಿಭಾಗದ ಸಂಪಾದಕ ಮಾರ್ಕ್ ಹೈಡ್‌ರವರು ತಮ್ಮ ಲೇಖನದಲ್ಲಿ "ಪಾಕಿಸ್ತಾನಿಗಳು ಭಾರತೀಯ ಗಡಿಯೊಳಗೆ ನುಗ್ಗಿ ನಸಳಿದ್ದಾರೆ ಭಾರತೀಯರು ಅವರನ್ನು ಪ್ರತಿಭಟಿಸಿ ತಡೆದಿದ್ದಾರೆ ಪಾಕಿಸ್ತಾನಿಗಳ ಬಲ ದೊಡ್ಡದೇ ಇರಬೇಕು; ಏಕೆಂದರೆ — ಅವರಲ್ಲಿ ದೊಡ್ಡ ದೊಡ್ಡ ಟ್ಯಾಂಕುಗಳು ಮತ್ತು ಶಸ್ತ್ರಾಸ್ತ್ರಗಳು ಇದ್ದುದು ಉಲ್ಲೇಖಗೊಂಡಿದೆ" ಎಂದು ತಿಳಿಸಿರುವರು.

ಮತ್ತೊಂದು ಸ್ವಿಸ್ ಪತ್ರಿಕೆ 'ದಿ ಬಂದ್'ನ ವಿದೇಶಾಂಗ ವಿಭಾಗದ ಸಂಪಾದಕ ಡಾ॥ ಜೆ. ಮೆಯಿಲ್‌ರವರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. "ಆಕ್ರಮಣದ ಅಪರಾಧಿಗಳು ಪಾಕಿಸ್ತಾನದ ಕಡೆಯಿಂದ ಬಂದವರು. ಅವರ ಅಸಾಧಾರಣ ಸೈನ್ಯ ಜಮಾವಣೆ ಅಲ್ಲಿ ನಡೆದಿದೆ" ಎಂದು ಅವರು ಹೇಳಿರುತ್ತಾರೆ.

ವಿಶ್ವದ ಶಾಂತಿಗೆ ಧಕ್ಕೆ

ಆಫ್ಟೆನ್ ಪೋಸ್ಟನ್ ಎಂಬ ನಾರ್ವೆಯ ದೇಶೀಯ ಪತ್ರಿಕೆಯು ತನ್ನ ಸಂಪಾದಕೀಯದಲ್ಲಿ "ಪಾಕಿಸ್ತಾನವು ಘರ್ಷಣೆಯನ್ನು ಆರಂಭಿಸಿ ಅಪರಾಧವೆಸಗಿದೆ" ಎಂದು ಸಾರಿ ನೇಪಾಳದ "ಸ್ವತಂತ್ರ ಸಮಾಚಾರ್ ಪತ್ರಿಕೆ" ಪಾಕಿಸ್ತಾನಿಗಳು ಕಂಜರ್ ಕೋಟೆಯಲ್ಲಿ ಸೃಷ್ಟಿಸಿದ ಭೀಕರ ಗೊಂದಲವು ವಿಶ್ವದ ಶಾಂತಿಗೆ ಧಕ್ಕೆ ಎಂಬ ಅಂಶವನ್ನು ಒತ್ತಿ ಹೇಳಿದೆ.

ಗಡಿಯು ಗೆರೆ ಖಚಿತವಾಗಿದೆ

ಸಿಂಧ್ (ಪಾಕಿಸ್ತಾನ) ಮತ್ತು ಕಚ್‌ನ ರಣ್ (ಭಾರತ)ಗಳ ನಡುವೆ ಇರುವ ಅಂತಾರಾಷ್ಟ್ರೀಯ ಗಡಿಯ ಬಗೆಗೆ ಭಾರತ ತಳೆದಿರುವ ನಿಲುವು ನೂರಕ್ಕೆ ನೂರರಷ್ಟು ಸತ್ಯವೆಂದು ವಿಶ್ವದ ವೃತ್ತ ಪತ್ರಿಕೆಗಳು ಸಮರ್ಥಿಸಿವೆ.

ಲಂಡನ್ನಿನ "ಇಕಾನಮಿಸ್ಟ್" ಪತ್ರಿಕೆಯು ತನ್ನ ಲೇಖನವೊಂದರಲ್ಲಿ ಭಾರತದ ನಿಲುವು ಪ್ರಬಲವಾದ ಬುನಾದಿಯ ಮೇಲೆ ನಿಂತಿದೆ. "ವಿಭಜನಾ ಪೂರ್ವದ ಭೂಪಟಗಳು, ಯಾವ ಭೂಪಟಗಳು ಅಧಿಕೃತವಾಗಿದ್ದುವೋ ಆ ಭೂಪಟಗಳ ಪ್ರಕಾರ ಅಧಿಕೃತವಾಗಿವೆ" ಎಂದು ಹೇಳಿದೆ. ಪಾಕಿಸ್ತಾನವು ತನ್ನ ಹಕ್ಕನ್ನು ಸ್ಥಾಪಿಸಲು ಹೋರಾಟ ನಡೆಸಿರುವ ಭಾಗವು ಕಚ್‌ನ ಆಶ್ರಿತ ಸಂಸ್ಥಾನಕ್ಕೆ ಸೇರಿದ ಭಾಗವಾಗಿದೆ. ಇದೇ ಅಂಶವನ್ನು ಭಾರತದ ಸರ್ವೆ ಇಲಾಖೆಯು ವಿಭಜನೆಯ ಪೂರ್ವದ ಭೂಪಟಗಳು ಸಾರುತ್ತವೆ. ಇಡೀ ರಣ್ ಪ್ರದೇಶವು ಕಚ್ ಸಂಸ್ಥಾನಕ್ಕೆ ಸೇರಿದ ಪ್ರದೇಶವೆಂದು ಅವುಗಳಿಂದ ಸ್ಪಷ್ಟವಾಗುತ್ತದೆ. ಕಚ್ ಸಂಸ್ಥಾನ ಭಾರತದ ಅಂಗವಾಗಿದೆ ಎಂದು ಈ ಲೇಖನ ಸಮರ್ಥನೆ ನೀಡಿದೆ.

ಕೆನ್ಯಾದ 'ಈಸ್ಟ್ ಆಫ್ರಿಕನ್ ಸ್ಟೇಂಡಾರ್ಡ್' ಪತ್ರಿಕೆಯು "ಕಚ್‌ನ ರಣ್ ಪ್ರದೇಶವು ಭಾರತಕ್ಕೆ ಸೇರಿದ ಪ್ರದೇಶವೆಂದು ಘಂಟಾಘೋಷವಾಗಿ ತನ್ನ ಸಂಪಾದಕೀಯದಲ್ಲಿ ಸಾರಿದೆ. ಸೂರ್ಯೋದಯ ಸಾಮ್ರಾಜ್ಯದಲ್ಲಿ" ಜಪಾನ್ ಟೈಮ್ಸ್' ಪತ್ರಿಕೆಯು ಈ ನಿಲುವನ್ನು ಸಮರ್ಥಿಸಿದೆ.

ಭಾರತದ ವಿರುದ್ಧ ಚೀನಾ-ಪಾಕ್‌ಗಳ ಸಂಚು

ಭಾರತದ ಗಡಿಯ ಮೇಲೆ ಪಾಕಿಸ್ತಾನಿಗಳು ನುಗ್ಗಿ ದಾಳಿ ನಡೆಸುತ್ತಿರುವ ಸಿಂಚಿಂಶವು ಬಯಲಾದಂತೆ, ವಿಶ್ವದ ಪತ್ರಿಕೆಗಳು ಚೀನಾ ಮತ್ತು ಪಾಕಿಸ್ತಾನಗಳ ನಡುವೆ ನಿಕಟ ಮೈತ್ರಿ ಏರ್ಪಟ್ಟಿರುವುದನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿವೆ. ಸ್ವಿಜರ್ಲೇಂಡಿನ 'ಬಸ್ಲೇರ್ ನಚ್‌ರಿಚ್‌ಟೆನ್' ಪತ್ರಿಕೆಯು "ಅಯ್ಯೂಬ ಖಾನರು ತನ್ನ ಚೀಣೀ ಗೆಳೆಯರಿಗೆ, ಭಾರತದ ವಿರುದ್ಧ ಸೇನೆಯನ್ನು ಜಮಾವಣೆ ಮಾಡುವುದನ್ನು ಬಿಟ್ಟರೆ ಮತ್ತಾವ ಸೇವೆಯನ್ನೂ ಸಲ್ಲಿಸಲಾರರು. ಭಾರತದ ಗಡಿಯಲ್ಲಿ ಯಾವುದೇ ಹೊಸ ರಂಗವು ಏರ್ಪಟ್ಟರೂ ಅದು ಚೀಣಾದ ವಿರುದ್ಧ ಗಡಿಯಲ್ಲಿರುವ ಮಿಲಿಟರಿ ಬಲವನ್ನು ಕುಗ್ಗಿಸುವುದು. ಅಯ್ಯೂಬರು ಮಾರ್ಚಿನಲ್ಲಿ ಚೀಣಾಕ್ಕೆ ಭೇಟಿ ಕೊಟ್ಟ ಕಾಲದಲ್ಲಿ, ಪೀಕಿಂಗ್‌ನ ಸದಾಧಿಕಾರಿಗಳು ಒಂದು ವೇಳೆ ಹೋರಾಟ ನಡೆದರೆ ಅಂತಹ ಪ್ರಸಂಗದಲ್ಲಿ, ನಾವು ನೆರವು ನೀಡುವುದಾಗಿ ಇತ್ತಿರುವ ಆಶ್ವಾಸನವನ್ನು ಈಗ ಪೂರೈಸಬೇಕಾಗಿದೆ ..." ಎಂದು ಹೇಳಿರುವರು.

ಇದು ಪೀಕಿಂಗ್‌ನ ಪಿತೂರಿ

ಲಂಡನ್ನಿನ 'ಡೈಲಿ ಟೆಲಿಗ್ರಾಫ್" ಪತ್ರಿಕೆಯು, ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ ಹೊರಗಿನ ಪ್ರಭಾವವಿಲ್ಲದ ಮಾತ್ರವಾಗಿ ಗಡಿ ಪ್ರಶ್ನೆ ಇಂತಹ ಪ್ರಮಾಣದ ಹೊಡೆದಾಟಕ್ಕೆ ಅವಕಾಶ ಕೊಡುತ್ತಿದ್ದಿಲ್ಲ ಪಾಕಿಸ್ತಾನ ಮತ್ತು ಚೀಣಾಗಳ ನಡುವೆ ಇತ್ತೀಚೆಗೆ ತೋರುತ್ತಿರುವ ಮೈತ್ರಿ ಭಾವ, ಈ ಪ್ರಭಾವವನ್ನು ತಂದಿತೆಂದು ಸ್ಪಷ್ಟವಾಗಿದೆ. ಪಾಕಿಸ್ತಾನವು ಆಕ್ರಮಣ ನಡೆಸಿದ್ದು, ಚೀಣಾದ ಪ್ರೇರಣೆ ಹಾಗೂ ಪಿತೂರಿಯಿಂದಲೇ ಎಂಬುದನ್ನು ಭಾರತವು ನಂಬುವುದು ಸಮಂಜಸವಾಗಿದೆ ಎಂದು ಹೇಳಿದೆ.

ನಾರ್ವೆಯ ದೇಶೀಯ ಪತ್ರಿಕೆ 'ಆಫ್ಟೆನ್ ಪೋಸ್ಟನ್' ತನ್ನ ಸಂಪಾದಕೀಯದಲ್ಲಿ ಚೀಣಾ ಮತ್ತು ಪಾಕಿಸ್ತಾನಗಳ ನಡುವಣ ಮೈತ್ರಿಯ ಮೇಲಿದ್ದ ಅವಕಾರವನ್ನು ಸರಿಸಿ, 'ಪಾಕಿಸ್ತಾನದ ವಿರುದ್ಧ ಯಾವುದೇ ಆಕ್ರಮಣ ನಡೆದಾಗ ತಾವು ನೆರವು ನೀಡುವುದಾಗಿ, ಚೀಣಾ ಅಯ್ಯೂಬರಿಗೆ ಭರವಸೆ ಇತ್ತಿದೆ. ಪಾಕಿಸ್ತಾನದ ಕಡೆಗೆ ತಾವು ನಿಲ್ಲುವುದಾಗಿ ತನ್ನ ಭಾವನೆಗಳನ್ನು ದೃಢೀಕರಿಸಿದೆ" ಎಂದು ಪತ್ರಿಕೆ ತಿಳಿಸಿದೆ.

ಭಾರತಕ್ಕೆ ನೈತಿಕ ಬೆಂಬಲ ಇದೆ

ವಿದೇಶಿ ಪತ್ರಿಕೆಗಳ ಅಭಿಪ್ರಾಯವು ಜಗತ್ತಿನಾದ್ಯಂತ ಭಾರತಕ್ಕಿರುವ ನೈತಿಕ ಬೆಂಬಲವೆಷ್ಟೆಂಬುದರ ಅರಿವನ್ನು ಮೂ

(ಹತ್ತನೇ ಪುಟ ನೋಡಿರಿ)

ನೂತನ ವಧೂ-ವರರು

ಡಾ। ದಿನಕರ ಹೆಗ್ಡೆ — ವನಮಾಲಾ

ಶ್ರೀ ಬೇಳಂಜೆ ಮೋನಪ್ಪ ಹೆಗ್ಗಡೆಯವರ ಪುತ್ರಿ ಕುಮಾರಿ ವನಮಾಲಾ ಇವರ ವಿವಾಹ ಸಮಾರಂಭವು ಮಂಗಳೂರಿನ ಶ್ರೀ ಬಿ. ವಿಶ್ವದಾಸ ಹೆಗ್ಡೆಯವರ ಸಹೋದರ ಡಾ। ದಿನಕರ ಹೆಗ್ಡೆಯವರೊಂದಿಗೆ ಮಂಗಳೂರಿನ ಪುರಭವನದಲ್ಲಿ ಮೇ ತಾ. 12 ರಂದು ವಿಜೃಂಭಣೆಯಿಂದ ನೆರವೇರಿತು.

ಸಿಂಡಿಕೇಟ್ ಬೇಂಕ್ ಲಿಮಿಟೆಡ್,

ಉಡ್ಪಿ ಕೆಥೋಲಿಕ್ ಸೆಂಟರ್ ಬ್ರಾಂಚ್ ಉಡುಪಿ

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಸಾಲ ಪಡೆದುಕೊಂಡು ಕ್ಲಪ್ತ ಮಾಯಿದೆಗೆ ಬಡ್ಡಿ ವಗೈರೆಗಳನ್ನು ಸಲ್ಲಿಸದೆ ಬಾಕಿ ಮಾಡಿಕೊಂಡುದರಿಂದಲೂ ಸದರಿ ಸಾಲಗಳನ್ನು ಬರಮಾಡಿಕೊಳ್ಳುವರೆ ಅವರಿಗೆ ಕ್ರಮ ಪ್ರಕಾರ ರೆಜಿಸ್ತ್ರ ನೋಟೀಸು ಕೊಟ್ಟಲ್ಲಿಯೂ ಈ ಕೆಳಗೆ ಕಾಣಿಸಿದವರು ಸದ್ರಿ ನೋಟೀಸು ತೆಗೆದುಕೊಳ್ಳುವರ ತಪ್ಪಿಸಿಕೊಂಡುದರಿಂದಲೂ ಕೆಲವರು ತೆಗೆದುಕೊಳ್ಳುವರೆ ತಿರಸ್ಕರಿಸಿದುದರಿಂದಲೂ ಮತ್ತು ಕೆಲವರು ಪಡೆಕೊಂಡು ವಸೂಲು ಕೊಡದೆ ಇರುವುದರಿಂದಲೂ ಈ ಕೆಳಗೆ ಕಾಣಿಸಿದವರಿಗೆ ಮತ್ತು ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ತಾ. 29-5-65ರ ಒಳಗೆ ಸದರಿ ನಗಗಳನ್ನು ಬಿಡಿಸಿಕೊಂಡು ಹೋಗದಿದ್ದಲ್ಲಿ 12 6 65ನೇ ಶನಿವಾರ 4 ಗಂಟೆಗೆ ಯಾ ಇಷ್ಟರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಸದ್ರಿ ನಗಗಳನ್ನು ಬ್ಯಾಂಕಿನ ಮರಾದಲ್ಲಿ ಬಹಿರಂಗವಾಗಿ ಏಲಂ ಮಾಡೋಣಲಾಗುವುದು ಈ ವಿಷಯ ಎಲ್ಲರಿಗೂ ತಿಳಿದಿರಲಿ

ಸಾಲದ ಬಂಚ್ರ ನಂಬ್ರ	ಸಾಲ ಪಡೆದ ತಾರೀಕು	ಸಾಲ ಪಡೆದವರ ಹೆಸರು ಮತ್ತು ವಿಳಾಸ	ಮೊಬಲಗು
247/62	1 5-62	ಶ್ರೀ ವಾಸುದೇವ, ಶ್ರೀ ಅನಂತ ಭಟ್ಟರ ಮಗ, P O. ಪಣಿಯಾಲ (S K)	Rs 26 00
610/63	21 6-62	ಶ್ರೀ ಕೆ. ಹರಿದಾಸ ನಾಯಕ, ಶ್ರೀ ಕೆ. ವಾಮನ ನಾಯಕರ ಮಗ, ಮರ್ಚಂಟ್, ಕೊಕ್ಕರ್ಣೆ (S K)	Rs 601 00

ಉಡುಪಿ, ತಾರೀಕು 19-5-65 (ಸಹಿ) ಮೆನೇಜರ್.

ಬೇಸಾಯಗಾರನ ಮ

ಆಧುನಿಕ

ಹೆನ್ರಿ



೧

೨

೩

ಅಮೆರಿಕದ ಡೆಟ್ರಾಯಿಟ್ ಕಾರ್ಖಾನೆ ಇವನ

ಫೋರ್ಡ್ ಮೋಟಾರುಗಳ ಹೆಸರು ಕೇಳದವರು ಯಾರು? ಇಂದು ಜಗತ್ತಿನಲ್ಲೇ ಫೋರ್ಡ್ ಸಂಸ್ಥೆ ಮೋಟಾರು ಉದ್ದಿಮೆಗೆ ಹೆಸರು ಪಡೆದಿದೆ. ಈ ಫೋರ್ಡ್ ಸಂಸ್ಥೆಯ ಸಂಸ್ಥಾಪಕನಾದ ಹೆನ್ರಿ ಫೋರ್ಡ್‌ನ ಹೆಸರೇ ಆ ಸಂಸ್ಥೆಗೂ ಇಡಲಾಗಿದೆ ಎಂದು ತಿಳಿದವರು ವಿರಳ.

ಸಾಗಾಟದ ಸೌಕರ್ಯಗಳಿಲ್ಲದಿದ್ದ ೧೮ನೇ ಶತಮಾನದ ಮಧ್ಯ ಭಾಗದಲ್ಲಿ ಹೆನ್ರಿ ಫೋರ್ಡನು ಮೋಟಾರು ಯಂತ್ರವನ್ನು ಸಂಶೋಧಿಸಿ ಜಗತ್ತಿನ ಜನತೆಗೆ ಮಹದುಪಕಾರ ಮಾಡಿದ. ಇಂದು ಫೋರ್ಡನು ಸಂಶೋಧಿಸಿದ ಯಂತ್ರದ ರೂಪಾಂತರಗಳು ಅನೇಕ ಜರಗಿ, ಸಾರಿಗೆಯ ಕ್ಷೇತ್ರದಲ್ಲಿ ಮೋಟಾರುಗಳು ಗಣನೀಯ ಸ್ಥಾನ ಪಡೆಯುವಂತಾಗಿದೆ. ಹೆನ್ರಿ ಫೋರ್ಡನ ಜೀವನ ಚರಿತ್ರೆಯು ಕುತೂಹಲಕಾರಿಯೂ ಹೌದು; ವಿಸ್ಮಯಕಾರಿಯೂ ಹೌದು; ಅದನ್ನು ಚಿತ್ರ ಮೂಲಕ ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಚಿತ್ರ ೧

ಸಾಮಾನ್ಯವರ್ಗದ ಜನತೆಗೂ ಎಟಕುವಂತಹ ಮೋಟಾರು ಯಂತ್ರದ ಅನ್ವೇಷಣೆಯನ್ನು ಮಾಡಿ ಸಾರಿಗೆಯ ಕ್ಷೇತ್ರದಲ್ಲಿ ಮಹಾ ಕ್ರಾಂತಿಯನ್ನು ಮಾಡಿ, ಜಗದ್ವಿಖ್ಯಾತ ಕೈಗಾರಿಕೋದ್ಯಮಿಗಳಲ್ಲಿ ಹೆನ್ರಿ ಫೋರ್ಡನೂ ಒಬ್ಬ. ಈತನು ಸಾರಿಗೆ ಕ್ಷೇತ್ರ ಮಾತ್ರವಲ್ಲದೆ, ಕೈಗಾರಿಕಾ ಉತ್ಪಾದನೆಯಲ್ಲಿ ಅಭಿವೃದ್ಧಿಗೆ ನೆರವಾಗಿರುತ್ತಾನೆ. ಅಮೆರಿಕದ ಕೂಲಿಗಾರರ ಜೀವನ ಮಟ್ಟವು ಉತ್ತಮಗೊಳ್ಳುವುದಕ್ಕಾಗಿ ಶ್ರಮಿಸಿದ ಕಾರ್ಮಿಕರ ಬಂಧು ಹೆನ್ರಿ ಫೋರ್ಡ್ ಈತನ ಉದಾರತೆ ಹಾಗೂ ಲೋಕೋಪಕಾರಕ ಬುದ್ಧಿಗಳಿಂದ ವಿಜ್ಞಾನ, ಶಿಕ್ಷಣ ಹಾಗೂ ಕಲೆಗಳು ತುಂಬಾ ಪ್ರಯೋಜನವನ್ನು ಹೊಂದಿವೆ ಹಾಗೂ ಅಭಿವೃದ್ಧಿಯನ್ನು ಕೂಡಾ ಪಡೆದಿವೆ.

ಚಿತ್ರ ೨

ಅಮೆರಿಕದ ಮಿಚಿಗನ್ ಪ್ರಾಂತ್ಯದ ಡಿಯರ್ ಬೋರ್ನ್ ಎಂಬ ಹಳ್ಳಿಯೊಂದರಲ್ಲಿ ೧೮೬೩ರಲ್ಲಿ ಫೋರ್ಡನು ಜನ್ಮಕ್ಕೆ ಬಂದನು. ತನ್ನ ಹಳ್ಳಿಯ ಒಂದು ಕೋಣೆಯ ಶಾಲೆಯಲ್ಲಿ ಆತ ಮೊದಲ ಕೆಲವು ವರ್ಷ ವಿದ್ಯಾಭ್ಯಾಸ ಮಾಡಿದನು. ಶಾಲಾ ಸಮಯದ ಬಳಿಕ ಹಾಗೂ ರಜಾ ದಿನಗಳಲ್ಲಿ ಆತ ತನ್ನ ತಂದೆಗೆ ಬೇಸಾಯದ ಕೆಲಸಗಳಲ್ಲಿ ಸಹಾಯ ಮಾಡುತ್ತಿದ್ದನು. ಆದರೆ ಆತನ ಬಿಡು ಸಮಯದ ಬಹ್ವಂಶ ಯಂತ್ರಗಳನ್ನು ಪರಿಶೀಲಿಸುವುದರಲ್ಲೇ ವ್ಯಯವಾಗುತ್ತಿತ್ತು. ಆತನೊಬ್ಬ 'ಹುಟ್ಟು ತಾಂತ್ರಿಕ' ಎಂಬುದಾಗಿ ಅವನ ತಾಯಿಯು ಯಾವಾಗಲೂ ಹೇಳುತ್ತಿದ್ದಳು.

ಚಿತ್ರ ೩

ಪ್ರಾಥಮಿಕ ಶಿಕ್ಷಣವನ್ನು ಬಿಟ್ಟರೆ, ಫೋರ್ಡನಿಗೆ ಮತ್ತೆ ದೊರೆತುದು ಸ್ವಂತ ವಿದ್ಯೆ ಮಾತ್ರ. ತನ್ನ ಬಾಲ್ಯದ ದಿನಗಳಲ್ಲಿ ಆತ ಗಡಿಯಾರ ರಿಪೇರಿಯ ಕೆಲಸವನ್ನು ಕಲಿತು ಮಾಡಿಕೊಂಡನು. ತನ್ನ ಹದಿನೇಳನೇ ವರ್ಷ ಪ್ರಾಯದಲ್ಲಿ ಜಗತ್ತಿನಲ್ಲೇ ಮೋಟಾರು ಉದ್ದಿಮೆಗೆ ಹೆಸರು ಪಡೆದ ಅಮೆರಿಕದ ಡೆಟ್ರಾಯಿಟ್‌ಗೆ ತೆರಳಿ, ಅಲ್ಲಿ ಮೆಕ್ಯಾನಿಕ್‌ನಾಗಿ ತರಬೇತಿಗೆ ಸೇರಿದನು. ಸಿಗುತ್ತಿದ್ದ ಸಂಬಳ ಜೀವನ ನಿರ್ವಹಣೆಕ್ಕೆ ಸಾಲದುದರಿಂದ ರಾತ್ರಿ ಹೊತ್ತು ಗಡಿಯಾರ ರಿಪೇರಿಯ ಕಾರ್ಯವನ್ನು ಮಾಡುವ ಪ್ರಸಂಗ ಆತನಿಗೆ ಬಂತು. ಆತನ ಚತುರ ಬುದ್ಧಿ ಹಾಗೂ ಶಕ್ತಿಗಳಿಂದ ಆತ ಬಹು ಬೇಗನೇ ಮೆಕ್ಯಾನಿಕ್ ಹುದ್ದೆಯಲ್ಲಿ ಪರಿಣತನಾದ.

ಚಿತ್ರ ೪

೧೮೮೮ರಲ್ಲಿ ಕೈ ತುಂಬ ಸಂಬಳ ತರುತ್ತಿದ್ದ ಮೆಕ್ಯಾನಿಕ್ ಕೆಲಸವನ್ನು ಆತ ತೊರೆದು ಡೆಟ್ರಾಯಿಟ್‌ನಿಂದ ತನ್ನ ಹುಟ್ಟೂರಿಗೆ ಬರಬೇಕಾಯಿತು. ಇದಕ್ಕೆ ಕಾರಣ ಆತನ ತಂದೆಯು ವೃದ್ಧಾಪ್ಯದಿಂದ ಮನೆಯ ಬೇಸಾಯದ ಕೆಲಸವನ್ನು ನಿರ್ವಹಿಸಲು ಅಸಮರ್ಥನಾದುದು. ಈ ವರ್ಷದಲ್ಲೇ ಆತ ತನ್ನ ಬಾಲ್ಯದ ಸಂಗಾತಿ ಹಾಗೂ ಮೆಚ್ಚಿನವಳಾಗಿದ್ದ ಕ್ಲಾರಾ ಬ್ರಿಯಾಂಟಳನ್ನು ಮದುವೆಯಾದ. ಇವರ ವಿವಾಹ ಇವರಿಗೆ ಮಾತ್ರವಲ್ಲ ಇಡೀ ಕುಟುಂಬಕ್ಕೆ ನೆಮ್ಮದಿಯನ್ನು ತಂದಿತು. ಆತನ ಮಡದಿಯು ಅವನಿಗೆ ತಕ್ಕ ಹೆಂಡತಿಯೆನಿಸಿದ್ದಳು. ಫೋರ್ಡನು ಅವಳನ್ನು 'ನಂಬಿಕೆಗೆ ಅರ್ಹಳು' ಎಂದು ಕರೆಯುತ್ತಿದ್ದ. ಇದಕ್ಕೆ ಕಾರಣ ಅವಳು ಆತನಲ್ಲಿಟ್ಟ ದೃಢವಾದ ನಂಬಿಕೆ ಹಾಗೂ ಆತನ ಯೋಜನೆಗಳಲ್ಲಿ ಆಕೆ ತೋರುತ್ತಿದ್ದ ವಿಶೇಷ ಆಸಕ್ತಿ.

ಚಿತ್ರ ೫

ದಿನದ ಬಹು ಭಾಗ ಆತ ತನ್ನ ಬೇಸಾಯದ ಕಾರ್ಯದಲ್ಲಿ ವ್ಯಯಿಸುತ್ತಿದ್ದರೂ, ಯಾಂತ್ರಿಕ ಯೋಜನೆಗಳನ್ನು ರೂಪಿಸುವುದಕ್ಕೆ ಫೋರ್ಡನು ಸಮಯವನ್ನು ವಿನಿಯೋಗಿಸುತ್ತಿದ್ದನು. ಕಡಿಮೆ ಕ್ರಯದ ಮೋಟಾರೊಂದನ್ನು ರಚಿಸಬೇಕೆಂಬ ನಿರ್ಧಾರವನ್ನು ಅವನು ಮಾಡಿ, ತನ್ನ ಬಿಡು ಸಮಯವನ್ನೆಲ್ಲಾ ಅದಕ್ಕಾಗಿ ವಿನಿಯೋಗಿಸಿದನು. ಈ ಯೋಜನೆಯಲ್ಲಿ ಆತ ಹಲವಾರು ಕಠಿಣ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅವನ ಹೆಂಡತಿಯು ಆತನಿಗೆ ಉತ್ತೇಜನವಿತ್ತು, ಆತ ತನ್ನ ಯೋಜನೆಯ ಕೈಬಿಡದಂತೆ ಅವನಲ್ಲಿ ಧೈರ್ಯವನ್ನು ತುಂಬಿದಳು.

ಚಿತ್ರ ೬

೧೮೯೧ರೊಳಗೆ ಕಡಿಮೆ ಬೆಲೆಯ ಮೋಟಾರನ್ನು ರಚಿಸುವ ಫೋರ್ಡನ ಯೋಜನೆಯು ಪೂರ್ಣವಾಗಿ, ಆತ ಅದರ ರಚನೆಗೆ ಆರಂಭಿಸುವುದಕ್ಕೆ ಸಿದ್ಧನಾದನು. ಆದರೆ ರಚನೆಗೆ ಬೇಕಾದ ಸೌಕರ್ಯಗಳು, ಬಿಡಿ ಭಾಗಗಳು, ಉಪಕರಣಗಳು ಆತ ನೆಲೆಸಿದ್ದ ಹಳ್ಳಿಯಲ್ಲಿ ದೊರೆಯಲಿಲ್ಲ. ಆದಕ್ಕಾಗಿ ಆತ ಮಡದಿ ಸಮೇತನಾಗಿ ಪುನಃ ಡೆಟ್ರಾಯಿಟ್ ನಗರಕ್ಕೆ ತೆರಳಿ ಪುನಃ ಒಬ್ಬ ಮೆಕ್ಯಾನಿಕ್‌ನಾಗಿ ಕೆಲಸಕ್ಕೆ ಸೇರಿಕೊಂಡ. ರಾತ್ರಿಹೊತ್ತು ತನ್ನ ಮನೆಯ ಭಾಗದ ಇಟ್ಟಿಗೆಯ ಕಾರ್ಖಾನೆಯಲ್ಲಿ ಕುಳಿತು ತನ್ನ ಯೋಜನೆಗೆ ಬೇಕಾಗುವ ಬಿಡಿ ಭಾಗಗಳ ರಚನೆಯಲ್ಲಿ ಆತ ತಲ್ಲೀನನಾದ.

೭



೮



೯



೧೦

...ದ್ಧಿಮೆದಾರನಾದ ಕಥೆ

...ಂಗಳ ಜನಕ

...ೋರ್ಡ್



೭ ೮ ೯

ಫೋರ್ಡ್ ಮೋಟಾರು ಕಥೆ ಹೇಳುತ್ತಿದೆ.

ಚಿತ್ರ ೭

ದಶಂಬರ ೧೮೯೩ರಲ್ಲಿ ಫೋರ್ಡನ ಮೊದಲನೆಯ ಕ್ರೂಡ್ ಗೆಸೊಲಿನ್ ಮೋಟಾರ್ ಯಂತ್ರ ಪೂರ್ಣವಾಯಿತು. ಪೈಪಿನ ಚೂರು, ಹಾಗೂ ಲೋಹದ ಚೂರುಗಳಿಂದ ರಚಿತವಾದ ಈ ಯಂತ್ರದ ಮೊದಲ ಪ್ರಯೋಗವನ್ನು ಅಡಿಗೆ ಕೋಣೆಯಲ್ಲಿ ಮಾಡಲಾಯಿತು. ಈ ಯಂತ್ರ ಅಡಿಗೆ ಕೋಣೆಯಲ್ಲಿ ಚಲಿಸಿದಾಗ, ಆ ದಂಪತಿಗಳ ಆನಂದಕ್ಕೆ ಮೇರೆ ಇಲ್ಲವಾಯಿತು. ಯಂತ್ರವು ಕಾರ್ಯವೆಸಗಿದ ಬಳಿಕ ಇನ್ನು ಅದನ್ನು ಜೋಡಿಸಿ ಕಾರನ್ನು ರಚಿಸುವುದು ಹೆಚ್ಚು ಕಷ್ಟದ ಕೆಲಸವಾಗಿರಲಿಲ್ಲ.

ಚಿತ್ರ ೮

೧೮೯೬ರಲ್ಲಿ ಮೊದಲನೆಯ ಮೋಟಾರು ಫೋರ್ಡನಿಂದ ರಚಿತವಾಯಿತು. ಮರದಿಂದ ರಚಿಸಿದ ಬೋಡಿ, ಸೈಕಲಿನ ಚಕ್ರ ಹಾಗೂ ಸೀಟು, ಚುಕ್ಕಾಣಿಕೆಯ ಹಿಡಿಕೆಯಂತಿರುವ ಸ್ಟೇರಿಂಗ್‌ಗಳಿಂದ ಈ ಮೋಟಾರು ವಿಶೇಷ ಸದ್ದು ಮಾಡಿದರೂ ಮುಂದಕ್ಕೆ ಓಡಿತು. ಈ ಮೋಟಾರನ್ನು ವರ್ಕ್‌ಶಾಪಿನಿಂದ ಹೊರಗೆ ತರುವುದಕ್ಕಾಗಿ ಫೋರ್ಡನು ಆದರ ಒಂದು ಗೋಡೆಯನ್ನೇ ಒಡೆಯಬೇಕಾಯಿತು! ರಚಿತವಾದ ಕೂಡಲೇ ಅದಕ್ಕೆ ಗಿರಾಕಿಯೂ ಬಂತು. ಫೋರ್ಡನು ಅದನ್ನು ಮಾರಿ, ಹಣಗಳಿಸಿ, ಅದಕ್ಕಿಂತ ಉತ್ತಮವಾದ ಇನ್ನೊಂದು ಮೋಟಾರು ರಚನೆಯಲ್ಲಿ ಉದ್ಯುಕ್ತನಾದ.

ಚಿತ್ರ ೯

ಇದೇ ರೀತಿ ಕೈಗಳಿಂದಲೇ ಹಲವಾರು ಮೋಟಾರು ಕಾರುಗಳನ್ನು ತಯಾರಿಸಿ ಫೋರ್ಡನು ಮಾರಿದನು. ವೇಗವು ಕಡಿಮೆಯಾಗಿರುವುದೇ ಈ ಕಾರುಗಳ ದೋಷವಾಗಿತ್ತು. ಇತರ ಮೋಟಾರು ತಾಂತ್ರಿಕರ ಸಹಕಾರದಿಂದ ಫೋರ್ಡನು ವೇಗದ ಕಾರುಗಳನ್ನು ರಚಿಸುವುದರಲ್ಲಿ ಉದ್ಯುಕ್ತನಾದ. ಎಂಭತ್ತು ಅಶ್ವಶಕ್ತಿಯುಳ್ಳ ಯಂತ್ರವನ್ನು ಹೊಂದಿದ ಆತನ '೯೯' ಕಾರು, ಇತರ ಎಲ್ಲಾ ಕಾರುಗಳನ್ನು ಹಿಂದಕ್ಕೆ ಹಾಕಿತ. ೧೯೦೪ ಜನವರಿ ೪ರಂದು, ಫೋರ್ಡನು ಈ ಕಾರಿನಲ್ಲಿ ಸ್ವತಃ ಕುಳಿತು ತಾಸಿಗೆ ೯೧.೩೭ ಮೈಲಿಗಳ ವೇಗದ ದಾಖಲೆಯನ್ನು ನಿರ್ಮಿಸಿದ.

ಚಿತ್ರ ೧೦

೧೯೦೩ರಲ್ಲಿ ಕೇವಲ ೨೮,೦೦೦ ಡಾಲರು ಭಂಡವಾಳದಿಂದ ಫೋರ್ಡನು ತನ್ನ ಮೊದಲ ಮೋಟಾರು ಕಾರಿನ ಕಾರ್ಖಾನೆಯನ್ನು ಆರಂಭಿಸಿದ. ಚಂದಕ್ಕಿಂತಲೂ ಹೆಚ್ಚು ಸೌಕರ್ಯಕ್ಕೆ ಗಮನ ಇತ್ತು ಆತ ಒಂದು ಕಾರಿನ ಮಾದರಿಯನ್ನು ರಚಿಸಿದ. ಈ ಕಾರಿನ ಉಪಯೋಗ ಹಾಗೂ ವಿಶ್ವಾಸಾರ್ಹಗುಣಗಳಿಂದ ಫೋರ್ಡನು ಅದೇ ಮಾದರಿಯ ಕಾರುಗಳನ್ನು ಅಧಿಕ ಸಂಖ್ಯೆಯಲ್ಲಿ ರಚಿಸುವಂತಾಯಿತು. ೧೯೨೫ನೇ ವರ್ಷದೊಳಗೆ ೫೦ ಮಿಲಿಯುಕ್ಕಿಂತಲೂ ಹೆಚ್ಚು ಫೋರ್ಡ್ ಕಾರುಗಳು ಮಾರಾಟವಾಗಿವೆ ಎಂದರೆ ಆದರ ಜನಪ್ರಿಯತೆಯು ಅರಿವಾದೀತು. ಈಗ ಫೋರ್ಡ್ ಕಂಪೆನಿಯಲ್ಲಿ ೧,೮೦,೦೦೦ ಕೆಲಸಗಾರರು ಕೆಲಸ ಮಾಡುತ್ತಿದ್ದಾರೆ!

ಚಿತ್ರ ೧೧

ಒಂದೊಂದೇ ಕಾರನ್ನು ರಚಿಸುವುದು ಹೆಚ್ಚು ಹೆಚ್ಚದಾಯಕವಾಗಿತ್ತು. ಅದಕ್ಕಾಗಿ ೧೯೧೩ರಲ್ಲಿ ಅಧಿಕ ಪ್ರಮಾಣದ ಉತ್ಪಾದನೆ ಹಾಗೂ ಕಡಿಮೆ ವೆಚ್ಚದ ಉದ್ದೇಶವನ್ನಿಟ್ಟುಕೊಂಡು ತನ್ನ ಮೊದಲಿನ 'ಎಸೆಂಬ್ಲಿ ಲೈನ್" ಕ್ರಮವನ್ನು ಜ್ಯಾರಿಗೆ ತಂದ. ಈ ಕ್ರಮದಿಂದ ಉತ್ಪಾದನೆ ಹೆಚ್ಚಿತಲ್ಲದೆ, ಬೆಲೆಯೂ ಕಡಿಮೆಯಾಯಿತು. ಕೆಲಸಗಾರರು ಸೂಕ್ತ ರೀತಿಯ ಕಾರ್ಯ ಮಾಡುವಂತಾಯಿತ. ಈ 'ಎಸೆಂಬ್ಲಿ ಲೈನ್" ಕ್ರಮವು ಮೋಟಾರು ಉದ್ದಿಮೆಯಲ್ಲೇ ಒಂದು ಕ್ರಾಂತಿಕಾರಿ ಹೆಜ್ಜೆಯಾಯಿತು.

ಚಿತ್ರ ೧೨

ತನ್ನ ಕಾರ್ಖಾನೆಯಲ್ಲಿ ದುಡಿಯುವ ಕಾರ್ಮಿಕರ ಸುಖಕ್ಕಾಗಿ ಫೋರ್ಡನು ಅನೇಕ ಕಾರ್ಯಗಳನ್ನು ಕೈಕೊಂಡು. ೧೯೧೪ರಲ್ಲಿ "ದಿನಕ್ಕೆ ಎಂಟು ಗಂಟೆಗಳ ಕೆಲಸಕ್ಕಾಗಿ ಕನಿಷ್ಟ ಐದು ಡಾಲರುಗಳ ಸಂಬಳ" ಎಂಬ ಪದ್ಧತಿಯನ್ನು ತನ್ನ ಕಾರ್ಖಾನೆಯಲ್ಲಿ ಅಳವಡಿಸಿ ಇತರ ಉದ್ದಿಮೆದಾರರನ್ನು ಬೆದರಿಸುವ ದಿಟ್ಟತನ ತೋರಿದ. ಈ ಸಂಬಳವು ಆಗ ಅಮೇರಿಕೆಯಲ್ಲಿದ್ದ ಸಂಬಳದ ಎರಡು ಪಾಲಾಗಿತ್ತು! ವ್ಯಾಪಾರದ ಲಾಭದಲ್ಲಿ ಫೋರ್ಡನು ಕೂಲಿಕಾರರಿಗೂ ಪಾಲನ್ನಿತ್ತನು. ಹೆಚ್ಚು ಗಳಿಸಿದರೆ, ಕೂಲಿಕಾರರು ಹೆಚ್ಚು ಕೊಂಡುಕೊಳ್ಳುವರು, ಇದರಿಂದ ವಸ್ತುಗಳಿಗೆ ಬೇಡಿಕೆ ಹೆಚ್ಚಾಗಿ, ಉತ್ಪಾದನೆ ಹೆಚ್ಚಾಗಿ, ಕಾರ್ಖಾನೆಗಳು ಬೆಳೆಯುವುವು ಎಂಬ ವಾದ ಆತನದಾಗಿತ್ತು. ಮೊತ್ತ ಮೊದಲು ಫೋರ್ಡನ ಇತರ ಉದ್ದಿಮೆಗಾರರ ಆಗ್ರಹಕ್ಕೆ ತುತ್ತಾಗಬೇಕಾದರೂ, ಕ್ರಮೇಣ ಅವರು ಫೋರ್ಡನ ತತ್ವದಲ್ಲಿರುವ ಸತ್ವವನ್ನು ಅರಿತುಕೊಂಡರು

ಚಿತ್ರ ೧೩

ಹೆನ್ರಿ ಫೋರ್ಡನು "ಶಾಂತಿ"ಯಲ್ಲಿ ಅಚಲ ವಿಶ್ವಾಸವಿರಿಸಿದ್ದ. ಮೊದಲನೆ ಹಾಗೂ ಎರಡನೆ ಜಾಗತಿಕ ಯುದ್ಧಗಳ ಕಾಲ ತನ್ನ ಕಾರ್ಖಾನೆಯಲ್ಲಿ ಯಾವುದೇ ಯುದ್ಧೋಪಕರಣಗಳ ಉತ್ಪಾದನ ಮಾಡಲು ನಿರಾಕರಿಸಿದ! ತನ್ನ ಆದಾಯದ ಬಹು ದೊಡ್ಡ ಭಾಗವನ್ನು ಆತ ಜಾಗತಿಕ ಶಾಂತಿ ಕಾರ್ಯಗಳಿಗಾಗಿ ವಿನಿಯೋಗಿಸಿದ. ಆದರೆ, ಎರಡೂ ಜಾಗತಿಕ ಯುದ್ಧಗಳಲ್ಲಿ ಅಮೇರಿಕವು ಭಾಗ ವಹಿಸಬೇಕಾದಾಗ ಆತ ದೇಶ ರಕ್ಷಣೆಗಾಗಿ ತನ್ನ ಕಾರ್ಖಾನೆಯನ್ನು ಮೀಸಲಾಗಿರಿಸಿದ

ಚಿತ್ರ ೧೪

೧೯೩೬ರಲ್ಲಿ ವಿಜ್ಞಾನ, ಶಿಕ್ಷಣ ಹಾಗೂ ಕಲೆಗಳ ಅಭಿವೃದ್ಧಿಗಾಗಿ ಫೋರ್ಡನು 'ಫೋರ್ಡ್ ಫೌಂಡೇಶನ್" ಎಂಬ ಸಂಸ್ಥೆಯನ್ನು ಸ್ಥಾಪಿಸಿದ. ಐನೂರು ಮಿಲಿಯ ಡಾಲರುಗಳ ಸೊತ್ತಿನಿಂದ ಸ್ಥಾಪಿತವಾದ ಈ ಸಂಸ್ಥೆ ವಿಜ್ಞಾನ, ಶಿಕ್ಷಣ ಹಾಗೂ

(ಮುಂದಿನ ಪುಟ ನೋಡಿರಿ)







೧೨ ೧೩ ೧೪ ೧೫

ಅನ್ನಕ್ಕಾಗಿ ಹಾಹಾಕಾರ!

ಜನತೆಯು ಕಣ್ಣು ಮುಚ್ಚುವ ಮೊದಲಾದರೂ, ಸರಕಾರ ಕಣ್ಣು ತೆರೆಯಲಿ!

ಜಿಲ್ಲೆಯ ಆಹಾರ ಪರಿಸ್ಥಿತಿಯ ಕುರಿತು ಇಂದು ಎಲ್ಲೆಡೆಗಳಲ್ಲೂ ವಿಮರ್ಶನೆಯು ಹಾಗೂ ಕಳವಳಕಾರಕ ವಾರ್ತೆಗಳೇ ಕೇಳಿ ಬರುತ್ತಿವೆ. ಬಡ ಜನತೆಯು ಬಾಳುವುದು ದುಸ್ಸಾಧ್ಯವೆನಿಸಿದೆ. ಹಲವೆಡೆ ಉದ್ರಿಕ್ತ ಜನತೆಯು ದೊಂಬಿ, ಲೂಟಿಗಳನ್ನು ಮಾಡಿದ ಸುದ್ದಿಗಳೂ ಬಂದಿವೆ. ಅಕ್ಕಿಯ ಬೆಲೆಯು ದಿನದಿಂದ ದಿನಕ್ಕೆ ಏರುತ್ತಿದೆ. ಹೆಚ್ಚಿನ ಬೆಲೆ ತೆತ್ತರೂ 'ಅಕ್ಕಿ ಇಲ್ಲ" ಎಂಬ ಮಾತೇ ಕೇಳಿ ಬರುತ್ತಿದೆ. 'ಅನ್ನದೇವರು" ಬಡವರ ಹಾಗೂ ಮಧ್ಯಮ ವರ್ಗದ ಪಾಲಿಗೆ "ದೈತ್ಯ"ನಾಗಿ ಪರಿಣಮಿಸಿದ್ದಾನೆ.

ಅಕ್ಕಿಯ ಕತೆ ಹೀಗಾದರೆ ಬಡವರ ಮನೆಯ ಬೆಳಕು 'ಚಿಮಣಿ ಎಣ್ಣೆ"ಯ ಕತೆ ಇನ್ನೊಂದು. ಪಾಕ್ ಗಡಿ ಘರ್ಷಣೆ ಹಾಗೂ ಭಾರತ ಸರಕಾರದ ಆಯಾತ ಧೋರಣೆಯು ದುರ್ಲಭವನ್ನು ಹಲವರು ಪಡೆದು, 'ಚಿಮಣಿ ಎಣ್ಣೆ ಇಲ್ಲ" ಎಂಬ ಕೂಗೆಬ್ಬಿಸಿದ್ದಾರೆ. ಲೀಟರಿಗೆ ರೂಪಾಯಿ ಒಂದೂವರೆ ರೂಪಾಯಿಗೂ ಚಿಮಣಿ ಎಣ್ಣೆಯ ಬೆಲೆ ಏರಿದೆ. ಇತರ ಜೀವನಾವಶ್ಯಕ ವಸ್ತುಗಳ ಬೆಲೆಗಳೂ ಗಣನೀಯ ಪ್ರಮಾಣದಲ್ಲಿ ಏರಿವೆ. ಈ ರೀತಿಯ ಬೆಲೆ ಹೆಚ್ಚಳ ಜನತೆಯ ಜೀವನವನ್ನೇ ಮುಪ್ಪುರಿಗೊಳಿಸುತ್ತಿದೆ.

ಇದನ್ನು ಕಂಡೂ, ಕೇಳಿಯೂ ಸರಕಾರವು ಕಣ್ಣು ಮುಚ್ಚಿ ಕುಳಿತಿದೆಯೇ? ಇಲ್ಲ. ಅದೂ ತನ್ನಿಂದಾದ ಕಾರ್ಯವನ್ನು ಮಾಡುತ್ತಿದೆ. ಆದರೆ, ಸರಕಾರದ ಯಾವ ಕಾರ್ಯಗಳೂ ಜನತೆಗೆ ಯಾವ ರೀತಿಯ ಉಪಕಾರವನ್ನೂ ಮಾಡಿಲ್ಲ. ಭಾರತ ರಕ್ಷಣಾ ಶಾಸನದನ್ವಯ ತೀವ್ರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದೆಂಬ ಬೆದರಿಕೆಯ ಮಾತುಗಳನ್ನು ಪತ್ರಿಕೆಗಳಲ್ಲಿಟ್ಟಿದುದೆಷ್ಟೋ ಅಷ್ಟೇ ಹೊರತು ಕಣ್ಣಿಗೆ ಕಾಣುವ ಯಾವ ಕಾರ್ಯವನ್ನೂ ಸರಕಾರ ಮಾಡಿದುದು ಕಾಣುವುದಿಲ್ಲ. ಕಾಳಸಂತೆ, ಭ್ರಷ್ಟಾಚಾರಗಳೊಡನೆ ಸರಕಾರದ ಹೋರಾಟ 'ಗಾಳಿಯೊಡನೆ ಗುದ್ದಾಟ'ದಂತಾಗಿದೆ.

ದಕ್ಷಿಣ ಕನ್ನಡ ಜಿಲ್ಲೆ ಪರಶುರಾಮ ಸೃಷ್ಟಿ. ಪರಶುರಾಮ ಸೃಷ್ಟಿಯ ಜನತೆ ಈಗ ಪರಮ ಸಂಕಷ್ಟ ಪಡುವಂತಾಗಿದೆ. ಸರಕಾರದ ನಿಯಂತ್ರಣ, ಅಂತರ್ಜಿಲ್ಲಾ ಸಾಗಾಟ ನಿರ್ಬಂಧಗಳಿಂದ, ಹಲವಾರು ಆಫೀಸರರು, ಅಧಿಕಾರಿಗಳು-ತುಂಬಾ ಲಾಭಗಳಿಸಿದರು. ಒಂದು ಲೋರಿ ಗಡಿದಾಟಲು ಇಂತಿಷ್ಟು ಮಾಮೂಲು, ಒಂದೇ ಪರ್ಮಿಟನ್ನು ಹಲವು ಬಾರಿ ಉಪಯೋಗಿಸಿದುದಕ್ಕೆ ಇಂತಿಷ್ಟು ಕಾಣಿಕೆ ಎಂಬ ಮಾತನ್ನು ಎಲ್ಲರೂ ಆಡುತ್ತಿದ್ದಾರೆ. ನೆರೆ ರಾಜ್ಯ ಕೇರಳಕ್ಕೆ ಇನ್ನು ಕೂಡಾ ಅಕ್ಕಿಯ ಸಾಗಾಟ ನಡೆಯುತ್ತಿದೆ. ಎಂದರೆ ಸಂಬಂಧಪಟ್ಟ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿರುವರೇ? ಎಂದು ಪ್ರಶ್ನಿಸಬೇಕಾಗಿದೆ.

ಜಿಲ್ಲೆಯ ಈ ಗೊಂದಲಮಯ ಪರಿಸ್ಥಿತಿಯ ಸ್ಪಷ್ಟ ಚಿತ್ರ ಬೆಂಗಳೂರಿನ ಮಹಾಶಯರುಗಳಿಗೆ ತಿಳಿಸಬೇಕಾದುದು ಜಿಲ್ಲಾಧಿಕಾರಿಗಳ ಕರ್ತವ್ಯ. ಅವರು ಈ ಕುರಿತು ಏನು ಮಾಡಿರುವರೆಂದು ಜನತೆಗೆ ತಿಳಿದಿಲ್ಲ. ಅವರು ಅಧಿಕಾರ ದಂಡ ಹಿಡಿದೇ ಕುಳಿತಿರುವುದಾದರೆ, ಜನತೆಯ ಪಾಲಿಗೆ ಇಂತಹ ದೌರ್ಭಾಗ್ಯ ಬೇರಾವುದೂ ಇಲ್ಲ. ಜಿಲ್ಲೆಯ ಸರ್ವಾಧಿಕಾರ ಹೊಂದಿದ ಜಿಲ್ಲಾಧಿಕಾರಿಗಳು, ಜನತೆಯ ಸಂಕಷ್ಟದಲ್ಲಿ ಸಹಾನುಭೂತಿ ತೋರಿಸುವ ಉದಾರತೆಯನ್ನಾದರೂ ತೋರಿಸಬೇಕಿತ್ತು.

ಈ ಮಧ್ಯೆ ಜಿಲ್ಲೆಯ ಕಾಂಗ್ರೆಸ್ ಶಾಸಕರೆಲ್ಲರೂ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನೀಯುವ ಇಚ್ಛೆಯನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಿಗೆ ಹಾಗೂ ಮುಖ್ಯಮಂತ್ರಿಗಳಿಗೆ ವ್ಯಕ್ತಪಡಿಸಿದ್ದಾರೆ. ಒಬ್ಬಿಬ್ಬರು ಸ್ವತಃ ಮುಖ್ಯಮಂತ್ರಿಗಳಿಗೇನೇ ಬರೆದು ಸರಕಾರ ಆಹಾರದ ವಿತರಣೆಯಲ್ಲಿ ಸಂಪೂರ್ಣ ವಿಫಲಗೊಂಡಿದೆ ಎಂದೂ ಸಾರಿದ್ದಾರೆ. ಜನತಾ ಪ್ರತಿನಿಧಿಗಳು ಮಾಡಬೇಕಾದ ಕರ್ತವ್ಯವನ್ನು ಮಾಡುವ ಆಶೆ ವ್ಯಕ್ತಪಡಿಸಿದ್ದಾರೆ. ಇದರ ಪರಿಣಾಮ ಏನೆಂಬುದನ್ನು ಕಾದು ನೋಡಬೇಕು.

ಮಧ್ಯೆ ಈ ಜಿಲ್ಲೆಗೆ ಒಂದೇ ಸವನೆ ಕೇಂದ್ರ ಹಾಗೂ ರಾಜ್ಯಮಂತ್ರಿಗಳ ಧಾಳಿಯೇ ನಡೆಯಿತು. ಭೋಜನಕೂಟದಲ್ಲಿ ಭಾಗವಹಿಸಿ 'ಎಲ್ಲಾ ಮಾಡುತ್ತೇವೆ' ಎಂದು ಅವರಾಡಿದ ಮಾತುಗಳಿಂದ ಜನತೆಯ ಹೊಟ್ಟೆ ತುಂಬುತಿದ್ದರೆ ಕಷ್ಟವಿರಲಿಲ್ಲ. ಬೆಂಗಳೂರಿನಿಂದ ಮುಖ್ಯ ಮಂತ್ರಿಗಳು ಜೂನ್ 15 ರಿಂದ ಜಿಲ್ಲೆಯ ಮುಖ್ಯ ನಗರಗಳಲ್ಲಿ ಸೀದಾ ಪದ್ಧತಿ ಆರಂಭಿಸುವ ಪ್ರಯತ್ನ ಮಾಡಲಾಗುವುದೆಂದು ಹೇಳಿದ್ದಾರೆ. ಇವರು ಪ್ರಯತ್ನ ಮಾಡುವುದರಲ್ಲೇ ಇದ್ದಾರಲ್ಲದೆ, ಜ್ಯಾರಿಗೆತರುವ ಆಲೋಚನೆಯಲ್ಲಿಲ್ಲ ಎಂದು ತೋರುತ್ತದೆ. ಇವರ ಪ್ರಯತ್ನದ ಫಲ ಜನತೆಗೆ ಸಿಗುವಾಗ ಜನತೆಯ ಅವಸ್ಥೆ ಏನಾಗುವುದೋ?

'ಪರಿಸ್ಥಿತಿ ಹಿಡಿತದಲ್ಲಿದೆ"; 'ಆಹಾರ ಪರಿಸ್ಥಿತಿ ತೃಪ್ತಿಕರ" ಎಂಬ ವಾರ್ತೆಗಳು ಪತ್ರಿಕೆಗಳ ತುಂಬಾ ತುಂಬಿವೆ. ಜನತೆಯು ಅನ್ನಕ್ಕಾಗಿ ಹಾಹಾಕಾರವೆಬ್ಬಿಸಿದರೂ ಪರಿಸ್ಥಿತಿ ಹತೋಟಿಯಲ್ಲಿದೆ ಎನ್ನುತ್ತಿದ್ದಾರೆ ನಮ್ಮ ಮಂತ್ರಿಗಳು! ಅಭಾವಕ್ಕೆ ವ್ಯಾಪಾರಿಗಳು, ಲಾಭಖೋರರು ಕಾರಣ ಎಂದು ಅವರ ಮೇಲೆ ಆಪಾದನೆ ಹೊರಿಸುತ್ತಿದ್ದಾರೆ. ಆಪಾದನೆ ಹೊರಿಸಿದರೆ ಸಾಲದು! ಅವರನ್ನು ಶಿಕ್ಷಿಸುವ ಗಂಡಸುತನ ನಮ್ಮ ಸರಕಾರಕ್ಕೆ ಬರಬೇಕು. ಇಲ್ಲದಿದ್ದರೆ ಸರಕಾರವು ಅಧಿಕಾರದಲ್ಲುಳಿಯಲು ಅರ್ಹವಾಗುವುದಿಲ್ಲ.

ಜನತೆ ಕಣ್ಣು ಮುಚ್ಚುವ ಮೊದಲೇ ಸರಕಾರ ಕಣ್ಣು ತೆರೆದು, ಈ ಭೀಕರ ಪರಿಸ್ಥಿತಿಯ ಕುರಿತು ಕಾರ್ಯ ಕೈಕೊಳ್ಳಲಿ! ತನ್ನ ತಪ್ಪು ಧೋರಣೆಗಳನ್ನು ತಿದ್ದಿಕೊಳ್ಳುವ ಸದ್ಬುದ್ಧಿಯನ್ನು ಅದಕ್ಕೆ ದೇವರು ಕೊಡಲಿ! ಇಲ್ಲದಿದ್ದರೆ ಇನ್ನು ಜನತೆಗೆ ದೇವರೇ ಗತಿ!

(ಹಿಂದಿನ ಪುಟದಿಂದ)

ಕಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿಗಾಗಿ ಸಾಲವನ್ನೀಯುತ್ತಿದೆ. ಮಾನವ ಜನಾಂಗದ ಅಭಿವೃದ್ಧಿಗಾಗಿ, ತಾನು ತನ್ನ ಆದಾಯವನ್ನು ವಿನಿಯೋಗಿಸಬೇಕೆಂಬ ಫೋರ್ಡನ ಆದರ್ಶದ ಪ್ರತೀಕ ಈ 'ಫೋರ್ಡ್ ಫೌಂಡೇಶನ್" ಸಂಸ್ಥೆಯಾಗಿದೆ. ಇದು ಮಾನವ ಜನಾಂಗಕ್ಕೆ ಫೋರ್ಡನ ಕೊಡುಗೆ.

ಚಿತ್ರ ೧೫

ಹೆನ್ರಿ ಫೋರ್ಡನ ಹೆಸರು ಇಂದು ಅಮೇರಿಕದಲ್ಲಿ ಮಾತ್ರವಲ್ಲ ಜಗತ್ತಿನಲ್ಲೇ ಆತನ ಮೂರು ಮಹತ್ಸಾಧನೆಗಳಿಗಾಗಿ ಕೊಂಡಾಡಲ್ಪಡುತ್ತಿದೆ. ಮೊದಲನೆಯದು ಆತ ಸಾಮಾನ್ಯ ವರ್ಗದ ಜನರಿಗೂ ನಿಲುಕುವ ಅಗ್ಗದರದ ಕಾರುಗಳನ್ನು ತಯಾರಿಸಿ ಸಾರಿಗೆಯ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟು ಮಾಡಿದುದು. ಎರಡನೆಯದು ಆತ ಮೋಟಾರು ಕಾರುಗಳ ಉತ್ಪಾದನಾ ಕ್ರಮದಲ್ಲಿ "ಎಸೆಂಬ್ಲಿ ಲೈನ್" ಪದ್ಧತಿಯನ್ನು ಅನುಷ್ಠಾನಕ್ಕೆ ತಂದುದು. ಮೂರನೆಯದಾಗಿ ಆತ ಅಮೇರಿಕದ ಕೂಲಿಕಾರರ ಜೀವನ ಮಟ್ಟವನ್ನು ಎತ್ತರಿಸಲು ಯತ್ನಿಸಿದುದು. ಈ ಮೂರು ಕೊಡುಗೆಗಳಿಗಾಗಿ ಆತನಿಗೆ ಅಖಿಲ ಜಗತ್ತೇ ಋಣಿಯಾಗಿದೆ.

ಪಾಕಿಸ್ತಾನವೇ ದುರಾಕ್ರಮಣವೆಸಗಿದೆ

(ಏಳನೇ ಪುಟದಿಂದ)

ಡಿಕೊಡುವುದು. ಸತ್ಯಕ್ಕೆ ಮಣಿಯುವ ಅನ್ಯಾಯಕ್ಕೆ ಬಾಗದಿರುವ ಭಾರತದ ನಿಲುವಿಗೆ ಜಗತ್ತಿನಾದ್ಯಂತದ ಶಾಂತಿ ಪ್ರೇಮಿಗಳು ಕೈಗೊಡಬೇಕು. ತನ್ನ ಸ್ವಾತಂತ್ರ್ಯ ಹಾಗೂ ಸಾರ್ವಭೌಮತೆಯ ರಕ್ಷಣೆಗೆ ಭಾರತವು ಯಾವ ತ್ಯಾಗಕ್ಕೆ ಸಿದ್ಧವಾಗಬೇಕಾದ ಕಾಲ ಈಗ ಬಂದಿದೆ. ಇದಕ್ಕೆ ಎಲ್ಲರ ಬೆಂಬಲವೂ ಇದೆ.

ನಾವೆಲ್ಲರೂ ಒಂದಾಗಿ ನಿಲ್ಲೋಣ.

ಪಾಕಿಸ್ತಾನ ಚೀನಾಗಳು ನಮ್ಮ ನೆಲವನ್ನು ಕಬಳಿಸಲು ಹೊಂಚು ಹಾಕುತ್ತಿರುವ ಈ ಸಂದಿಗ್ಧ ಸಂದರ್ಭದಲ್ಲಿ, ಭಾರತದ ಪ್ರಧಾನಿ ಲಾಲಬಹದ್ದೂರ್ ಶಾಸ್ತ್ರಿಗಳು ಲೋಕಸಭೆಯಲ್ಲಿ ಜನತೆಗಿತ್ತ ಸಂದೇಶವನ್ನು ಸ್ಮರಿಸಿಕೊಳ್ಳೋಣ. 'ನೀವು ಎಲ್ಲಿಯೇ ಇರಿ, ಯಾವುದೇ ಉದ್ಯೋಗವನ್ನೇ ಅವಲಂಬಿಸಿಕೊಂಡಿರಿ, ಮನಃಪೂರ್ವಕವಾಗಿ ದುಡಿಯಿರಿ. ನಿಮ್ಮಿಂದ ಕೈಲಾದಷ್ಟು ಉತ್ತಮ ಸೇವೆ ಸಲ್ಲಿಸಿರಿ; ದೇಶಕ್ಕಾಗಿ ನಿಸ್ವಾರ್ಥ ಸೇವೆ ಮಾಡಿರಿ. ಇಂದಿನ ಅತಿ ಮುಖ್ಯ ಅವಶ್ಯಕತೆಯೆಂದರೆ ರಾಷ್ಟ್ರೀಯ ಐಕ್ಯ— ಬರೇ ಶಬ್ದಗಳ ಐಕ್ಯವಲ್ಲ, ಹೃದಯೈಕ್ಯ. ಎಲ್ಲಾ ಭಾರತೀಯರು, ಅವರು ಯಾವುದೇ ನಂಬಿಕೆಯವರಿರಲಿ, ಪಂಥದವರಿರಲಿ, ವೃತ್ತಿಯವರಿರಲಿ ಒಂದಾಗಿ ನಿಲ್ಲಬೇಕು; ಕಷ್ಟಗಳನ್ನೆದುರಿಸಲು, ತ್ಯಾಗಗೈಯಲು ಸಿದ್ಧರಾಗಬೇಕು. ನಮ್ಮನ್ನು ಬೇರ್ಪಡಿಸುವ ಪಂಗಡಗಳನ್ನಾಗಿ ವಿಭಾಗಿಸುವ ಯಾವುದೇ ಭಾವನೆಗಳಿಗೆ ನಾವು ಅವಕಾಶ ಕೊಡದಿರೋಣ. ರಾಷ್ಟ್ರೀಯ ಶಿಸ್ತೆಂಬ ಹೊಸ ಪ್ರಜ್ಞೆಯನ್ನು ಹೊಂದಿ ನಾವು ಒಂದಾಗಿ ದುಡಿಯೋಣ; ದೇಶದ ಸ್ವಾತಂತ್ರ್ಯ ಮತ್ತು ಸಂರಕ್ಷಣೆಗಾಗಿ ನಾವು ನಮ್ಮನ್ನೇ ಮುಡಿಪಾಗಿಡುವ ಸ್ಫೂರ್ತಿಯಿಂದ ದುಡಿಯೋಣ."

ಪ್ರಧಾನಿಯವರ ಈ ಕರೆಗೆ ಓಗೊಟ್ಟು ನಾವು ಇಂದು ಸನ್ನದ್ಧರಾಗುವ ಕಾಲ ಬಂದಿದೆ. ಪ್ರಪಂಚದಾದ್ಯಂತದ ನ್ಯಾಯ, ಸತ್ಯ ಪ್ರತಿಪಾದಕರ ಬೆಂಬಲ ನಮಗಿದೆ. ಆದುದರಿಂದ ವಿಜಯವು ನಮಗೆ ಕಟ್ಟಿಟ್ಟ ಗಂಟು. ವೈರಿಯನ್ನು ಹೊರಗಟ್ಟದೆ ನಾವು ವಿಶ್ರಮಿಸುವಂತೆಯೇ ಇಲ್ಲ.

ಕೃತಜ್ಞತಾ ಸಮರ್ಪಣೆ

ನನ್ನ ಪ್ರಥಮ ಪುತ್ರಿ ಕುಮಾರಿ ಚಂದ್ರಲೇಖಾ-ಇವಳ ವಿವಾಹ ಸಮಾರಂಭವು ಶ್ರೀ ವಿ. ವೀರಣ್ಣ ಶೆಟ್ರ ಪುತ್ರ ಡಾ| ಆನಂದ ವಿ. ಶೆಟ್ಟರೊಂದಿಗೆ ಇದೇ ಮೇ ತಿಂಗಳ ತಾ. 16ರಂದು ಕುಂದಾಪುರ ಕಲಾ ಮಂದಿರದಲ್ಲಿ ತಮ್ಮೆಲ್ಲರ ಸಹಕಾರ ಹಾಗೂ ಆಶೀರ್ವಾದದಿಂದ ವಿಜೃಂಭಣೆಯಿಂದ ಜರಗಿತು.

ಈ ಶುಭ ಸಮಾರಂಭಕ್ಕೆ ಆಗಮಿಸಿ ವಧೂವರರನ್ನು ಆಶೀರ್ವದಿಸಿದವರಿಗೂ, ಉಡುಗೊರೆಯನ್ನಿತ್ತವರಿಗೂ ಶುಭಕೋರಿಕೆಯನ್ನು ಕಳುಹಿಸಿ ಕೊಟ್ಟಿರುವಂಥವರಿಗೂ ಪ್ರತ್ಯೇಕ-ಪ್ರತ್ಯೇಕವಾಗಿ ಕೃತಜ್ಞತೆಯನ್ನು ಸಲ್ಲಿಸುವುದು ಅಸಾಧ್ಯವಾಗಿರುವುದರಿಂದ ಈ ಮೂಲಕ ನನ್ನ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ.

ಕುಂದಾಪುರ

ಇಂತು
ವಿ. ಕೃಷ್ಣಪ್ಪ ಶೆಟ್ಟಿ.

In the Court of the District Judge South Kanara, Mangalore.

O. P. No. 32/1965.

In the matter of the will of Mathias D'Souza —Deceased.
Rosa Flora Pereira Bai---*Petitioner.*
To

All whom it may concern.

Notice is hereby given that the Petitioner has filed an application for grant of a probate of the will and the said application stands posted to 9-6-65. If you desire to oppose the same you must file a caveat in the above Court on or before that date.

(Sd.) S. R. HEGDE
Advocate for Petitioner

Mangalore,
Dated 21-5-65.

ಇಂದಿನ ಆವಶ್ಯಕತೆ

ಮಾತಿಗಿಂತಲೂ ಕೃತಿ ಬೇಕು

ಬರೆದವರು:
ಶ್ರೀ ಹಳೆನಾಡು ಸುಬ್ರಾಯ ಭಟ್ಟ.

ಸರ್ವಜ್ಞನ ನುಡಿಯೊಂದು ನೆನಪಾಗುತ್ತಿದೆ. "ಮಾತೇ ಸರ್ವ ಸಂಪದವು, ಮಾತೇ ಮಾಣಿಕ್ಯ ಸರ್ವಜ್ಞ" ಈ ಮಾತನ್ನು ನಮ್ಮವರಿಂದು ಅಕ್ಷರಶಃ ಪಾಲಿಸುತ್ತಿದ್ದಾರೆಂದೇ ಹೇಳಬೇಕು. ಗಾದೆಯ ಮಾತು ವೇದಕ್ಕೆ ಸಮಾನವೆಂಬುದನ್ನು ಅರಿತೇ ನಡೆಯುತ್ತಿರಬೇಕೆಂದು. ಇಲ್ಲವಾದರೆ ಇಂದು ಎಲ್ಲವನ್ನು ಮಾತಿನಿಂದಲೇ ಪೂರೈಸುತ್ತಿರಲಿಲ್ಲ. ಬರಿದಾದ ಹೊಟ್ಟೆ ಮಾತಿನಿಂದಲೇ ತುಂಬೀತೆ? ಏರಿದ ಬೆಲೆ ಮಾತಿನಿಂದಲೇ ಕುಸಿದೀತೆ? ಲಂಚಗುಳಿತನ ಮಾತಿನಿಂದಲೇ ನಿಂತೀತೆ? ಚೀನಿಯರ ದುರಾಕ್ರಮಣ ಮಾತಿನಿಂದಲೇ ಪರಿಹಾರವಾದೀತೇ? ಪಾಕಿಸ್ತಾನದ ದಿನವಹಿ ಜಗಳ ಮಾತಿನಿಂದಲೇ ನಿಂತೀತೇ?

ಎಲ್ಲವನ್ನು ನಿಧಾನವಾಗಿ ಯೋಚಿಸಿದರೆ ಮಾತಿಗಿಂತಲೂ ಕೃತಿ ಮುಖ್ಯವೆಂಬುದು ಯಾರಿಗೂ ಅರಿವಾಗದೆ ಇರಲಾರದು.

ಸಾಧಾರಣ ಎಂಟು ತಿಂಗಳುಗಳಿಂದ ಗಗನಕ್ಕೇರಿದ ಅಕ್ಕಿಯ ಬೆಲೆ ಸ್ವಲ್ಪವೂ ಇಳಿದಿಲ್ಲವೆಂಬಾಗ ಮೇಲಿನ ಮಾತು ಸಮಂಜಸವೆನಿಸೀತು.

ಇಂದು ಜನತೆ ಹಾಹಾಕಾರಿದೆ. ಅಂಗಡಿಗಳಲ್ಲಿ ಅಕ್ಕಿ ಇಲ್ಲವೆಂಬ ಬೋರ್ಡುಗಳೇ ತೂಗಾಡುವಾಗ; ಕಾಳಸಂತೆಯಲ್ಲಿ ಕೇಳಿದ ಬೆಲೆ ತೆತ್ತು ಜನತೆ ಬದುಕೀತೇ? ಎಲ್ಲೆಡೆಯೂ ನ್ಯಾಯ ಬೆಲೆಯ ಅಂಗಡಿಗಳನ್ನು ತೆರೆಯಲು ಸರಕಾರವೇಕೆ ವಿಳಂಬಿಸುತ್ತಿದೆಯೋ ಹೇಳಬರಮಾತಿಲ್ಲ.

ಪ್ರತಿಯೊಂದು ಹಳ್ಳಿಗಳಲ್ಲಿಯೂ ಇಂದು ನ್ಯಾಯ ಬೆಲೆಯ ಅಂಗಡಿಗಳ ಆವಶ್ಯಕತೆ ತುಂಬಾ ಹೆಚ್ಚಾಗಿವೆ. ಅದರ ಜೊತೆಗೆ ಇತರ ನಿತ್ಯೋಪಯೋಗಿ ವಸ್ತುಗಳೂ ಯೋಗ್ಯಬೆಲೆಗೆ ಸಿಗುವಂತೆ ಒದಗಿಸುವ ವ್ಯವಸ್ಥೆ ಸರಕಾರ ಕೈಗೊಂಡರೆ ಆಗ ಜನತೆಗೆ ನಿಜವಾಗಿಯೂ ಪ್ರಯೋಜನವಾದೀತು.

ಆಹಾರ ಸಮಸ್ಯೆಯು ದಿನೇ ದಿನೇ ಭೀಕರವಾಗುತ್ತಿರುವ ವಿಚಾರವನ್ನು ಸರಕಾರ ಗಮನಕ್ಕೆ ತಂದುಕೊಂಡು ತೀವ್ರ ಕ್ರಮ ಕೈಗೊಳ್ಳಬೇಕಾದುದಗತ್ಯವಾಗಿದೆ.

ಆಕ್ರಮಣದ ಭೀತಿ 1962ರಲ್ಲಿ ಚೀನಿಯರಿಂದ ಭಿಗಡಾಯಿಸಿದ್ದರೂ, ಪಾಕಿಸ್ತಾನಿಗಳ ಗಡಿ ಉಲ್ಲಂಘನೆ ಅದಕ್ಕಿಂತಲೂ ಮೊದಲೇ ನಡೆದಿತ್ತು. ಆದರೆ ಇನ್ನೂ ಅದರ ಪರಿಹಾರ ಮಾರ್ಗ ಹುಡುಕದೇ ಹೋದರೆ ಭಾರತದ ಭವಿಷ್ಯತ್ತಿಗೆ ಅದರಿಂದ ತೊಡಕುಂಟಾಗದೇ ಇರಲಾರದು.

ಆಡಿದ ಮಾತಿಗೆ ತಪ್ಪಿ ನಡೆಯುವ ಅಭ್ಯಾಸ, ತಪ್ಪಿನ ಹೊರೆಯನ್ನು ಭಾರತದ ಮೇಲೆ ಆಪಾದಿಸುವ ಗುಣ ಪಾಕಿಸ್ತಾನದ ಸಹಜ ...... ಾಗಿದೆ. ಅದಕ್ಕಾಗಿ ಇಂದು ಭಾರತದ ಮುಂದಣ ದಾರಿ ಶಕ್ತಿ ಪ್ರಯೋಗವೊಂದೇ ಎಂದು ಹೇಳಬೇಕಾಗಿದೆ.

ಭಾರತದ ಭವಿಷತ್ತಿನಲ್ಲಿ ಯೋಜನೆಗಳ ಆವಶ್ಯಕತೆ ತುಂಬಾ ಪ್ರಧಾನವಾದದ್ದು. ಆದರೆ ಯಾವುದೇ ಯೋಜನೆಯನ್ನು ಕಾರ್ಯಗತಗೊಳಿಸುವಾಗಲೂ ಚೆನ್ನಾಗಿ ಯೋಚಿಸಿಯೇ ಕಾರ್ಯಗತಗೊಳಿಸಬೇಕು.

ಆಯ — ವ್ಯಯವೆಂಬುದು ಎಲ್ಲಾ ವ್ಯವಹಾರಗಳಿಗೂ ಪ್ರಾಮುಖ್ಯವಾದದ್ದು. ಆದರೆ ಖಾಸಗಿ ಸಂಸ್ಥೆಗಳು ನಡೆಯಿಸುವಾಗ ಸಿಕ್ಕಿದ ಲಾಭ ಸರಕಾರ ನಡೆಯಿಸುವಾಗ ಸಿಗುವುದಿಲ್ಲವೆಂದಾದರೆ ಅದರಲ್ಲಿ ಬರುವ ನ್ಯೂನತೆಯೇನೆಂಬುದನ್ನು ತಕ್ಷಣ ಕಂಡು ಹಿಡಿಯಬೇಕಾದ್ದು ಅವಶ್ಯ. ಇಲ್ಲವಾದರೆ ನಮ್ಮ ಯೋಜನೆಯೆಲ್ಲಾ ಹಾಳಾಗಿ ಭವಿಷತ್ತಿನ ತಳಹದಿಯೇ ಹಾಳಾದೀತು.

ಸ್ವಾತಂತ್ರ್ಯಕ್ಕಿಂತಲೂ ಪೂರ್ವದಲ್ಲಿರುವ ಒಗ್ಗಟ್ಟು ಇಂದು ಶಿಥಿಲವಾಗುತ್ತಿರುವುದು ಕಂಡು ಬರುತ್ತಿದೆ. ಅದಕ್ಕೆ ಹಲವು ಪಕ್ಷಗಳ ಉದಯವೇ ಉದಾಹರಣೆಯಾಗಿದೆ. ಸರಕಾರದ ಎದುರು ವಿರೋಧ ಪಕ್ಷದ ಅಗತ್ಯವಿದೆ ಎಂಬುದೇನೋ ಸಹಜ. ಆದರೆ ನಿರ್ಬಲವಾದ ಹಲವು ಪಕ್ಷಗಳಿಂದೇನೂ ಪ್ರಯೋಜನವಾಗಲಾರದು.

ಸರಕಾರದೆದುರು ಸಮನಾಗಿ ಹೋರಾಡಿ ಜನತೆಗೆ ನ್ಯಾಯ ಸಿಗುವಂತೆ ಸಹಕರಿಸುವ ಬಲವಾದ ಒಂದೇ ಒಂದು ವಿರೋಧ ಪಕ್ಷ ಇಂದು ಬೇಕಾಗಿದೆ.

ಭ್ರಷ್ಟಾಚಾರದ ಆಪಾದನೆಯಿಂದ ಈಗಾಗಲೇ ಕೆಲವು ರಾಜ್ಯದ ಮುಖ್ಯ ಮಂತ್ರಿಗಳು ಅಧಿಕಾರ ಕಳೆದು ಕೊಂಡರು. ಇನ್ನು ಕೆಲವು ಆಪಾದನೆಗಳು ಅಲ್ಲಲ್ಲಿ ಕೇಳಿ ಬರುತ್ತಿವೆ. ಆದರೆ ರಾಜ್ಯದ ಹಿರಿಯ ಮಂತ್ರಿಗಳೇ ತಮ್ಮ ಅಧಿಕಾರದ ದುರುಪಯೋಗ ಮಾಡುವರೆಂದಾದರೆ ಉಳಿದ ಅಧಿಕಾರಿಗಳು ಪ್ರಾಮಾಣಿಕತನದಿಂದ ಕಾರ್ಯ ನಿರ್ವಹಿಸಿಯಾರೇ ಎಂಬ ಸಂದೇಹ ಜನತೆಯಲ್ಲಿ ಹುಟ್ಟದೇ ಇರಲಾರದು. ಅದಕ್ಕಾಗಿ ಮಾತಿನ ಭರವಸೆಗಿಂತಲೂ ಪ್ರಾಮಾಣಿಕತನದ ಸರಕಾರದ ಅಗತ್ಯವಿದೆ.

ಇಂದು ಸಮಸ್ಯೆಗಳು ದಿನ ದಿನಕ್ಕೆ ಹೆಚ್ಚುತ್ತಲಿವೆ. ರಾಜ್ಯ ರಾಜ್ಯಗಳಲ್ಲಿ ಮತ್ಸರ ಒಡಮೂಡ ತೊಡಗಿವೆ. ನೀರಿಗಾಗಿ, ಉದ್ಯಮಗಳಿಗಾಗಿ, ಭಾಷೆಗಾಗಿ, ಕೇಂದ್ರದ ನೆರವಿಗಾಗಿ ಹೋರಾಟ ನಡೆಯುತ್ತಲಿದೆ. ಆದರೆ ನಾವೆಲ್ಲಾ ಭಾರತೀಯರು; ಒಂದೇ ಮನೆಯವರು ಎಂಬ ವಿಶಾಲ ಭಾವನೆ ನಮ್ಮಲ್ಲಿಂದ ಒಡಮೂಡಬೇಕಾಗಿದೆ. ಅಂತರಿಕ ಜಗಳಕ್ಕೆಂದು ಅವಕಾಶವನ್ನೀಯದೆ ಎಲ್ಲರೂ ಒಮ್ಮತದಿಂದ ದೇಶದ ಅಭ್ಯುದಯದತ್ತ ಸಾಗಬೇಕಾಗಿದೆ. ಉಪದೇಶಕ್ಕಿಂತಲೂ ಕಾರ್ಯಾಚರಣೆಯೇ ಮುಖ್ಯ ಬೇಕಾಗಿದೆ.

ದೇಶದ ಆಡಳಿತೆ ಸುಭದ್ರವಾಗಿದ್ದು, ಆದರಿಂದ ಜನತೆಯ ಸೌಕರ್ಯಕ್ಕಾಗಿ ದೇಶಗಳನ್ನು ರಾಜ್ಯಗಳಾಗಿ ವಿಂಗಡಿಸಿರುವುದೇ ವಿನಹಾ ಅಂತರಿಕ ಜಗಳಕ್ಕಾಗಿಯಲ್ಲ ಎಂಬುದು ದೇಶದ ಜನರೆಲ್ಲಾ ಅರಿಯಬೇಕಾದ ಮುಖ್ಯ ವಿಚಾರವಾಗಿದೆ.

ಎಂದು ಭಾರತ ಒಡೆದು ಇಬ್ಭಾಗವಾಯಿತೋ ಅಂದಿನಿಂದಲೇ ಭಾರತಕ್ಕೊಂದು ಬಲವಾದ ಸಮಸ್ಯೆ ಉದ್ಭವಿಸಿತ್ತು. ಅದು ಇನ್ನೂ ಪರಿಹಾರವಾಗದೇ ಹಾಗೆಯೇ ಉಳಿದಿರುವಾಗ ನಮ್ಮ ನಮ್ಮಲ್ಲಿ ಸಮಸ್ಯೆಗಳನ್ನು ನಾವೇ ಕಲ್ಪಿಸಿಕೊಂಡು; ಅದಕ್ಕಾಗಿ ಅಸಹಕಾರ ಚಳುವಳಿಯನ್ನು ಹೂಡುವುದಾಗಲೀ, ಹಿಂಸಾ ಕೃತ್ಯಕ್ಕಿಳಿಯುವುದಾಗಲೀ ಸಮಂಜಸವೆನಿಸಲಾರದು.

"ನಾವೆಲ್ಲಾ ಭಾರತೀಯರು" ಎಂಬ ಒಂದೇ ಮನೋಭಾವನೆಯಿಂದ ಇಂದು ಎಲ್ಲರೂ ಸರಕಾರಕ್ಕೆ ಬೆಂಬಲವನ್ನಿತ್ತರೆ. ಖಂಡಿತವಾಗಿಯೂ ಸಮಸ್ಯೆಗಳ ಪರಿಹಾರ ಮಾರ್ಗ ಕಂಡು ಹಿಡಿಯಲು ಸುಲಭವಾದೀತು.

ಮಾತಿಗಿಂತಲೂ ಮುಂದೆ ಕೃತಿಯಲ್ಲಿ ಸರಕಾರ ಹಾಗೂ ಜನತೆ ಕಾರ್ಯ ತತ್ಪರರಾದರೆ ಖಂಡಿತವಾಗಿಯೂ ಭಾರತದ ಭಾಗ್ಯದ ಬಾಗಿಲು ತೆರೆದೀತು. ದೇಶದ ಶಕ್ತಿ ಹೆಚ್ಚೀತು.

—

ಗೀತಾ—ದ್ವಿತೀಯಾಧ್ಯಾಯ

(ಆರನೇ ಪುಟದಿಂದ)

ಸರ್ವೋಪನಿಷದೋ ಗಾವೋ
ದೋಗ್ಧಾ ಗೋಪಾಲನಂದನಃ|
ಪಾರ್ಥೋ ವತ್ಸಃ ಸುಧೀರ್ಭೋಕ್ತಾ
ದುಗ್ಧಂ ಗೀತಾಮೃತಂ ಮಹತ್ ||೪||

ಉಪನಿಷತ್ತುಗಳೆಂಬ ದನದಿಂದ, ಶ್ರೀ ಕೃಷ್ಣನು ಗೀತೆ ಎಂಬ ಹಾಲನ್ನು ಕರೆದು, ಪಂಡಿತರಿಗೆ, ಸಹೃದಯರಿಗೆ ಈಯುವನು. ಪಾರ್ಥನು ಹಾಲು ಕರೆಯುವ ಸಂದರ್ಭದಲ್ಲಿ ದನದ ಕರುವಾಗಿರುವನು. ಪಾರ್ಥನ ನೆಪದಲ್ಲಿ ಹಾಲು ಕರೆದು ಶ್ರೀ ಕೃಷ್ಣನು ಸಹೃದಯಿಗಳಿಗೆ ಅದನ್ನು ಇತ್ತಿರುವನು.

ಒಂದು ದೇಶದ ಸಂಸ್ಕೃತಿ ಎಂದರೆ ಆ ದೇಶದ ಧರ್ಮಶಾಸ್ತ್ರ ಗ್ರಂಥಗಳಲ್ಲಿ ಬರೆದ ತತ್ವಗಳಂತೆ ಬಾಳಿನಲ್ಲಿ ಜನಾಂಗವು ಬಾಳುವುದಾಗಿದೆ. ಧರ್ಮಶಾಸ್ತ್ರ ತತ್ವಗಳನ್ನು ವಾತಾವರಣ, ಸಾಮಾಜಿಕ ವ್ಯವಸ್ಥೆಗನುಸಾರವಾಗಿ ಬಾಳಿನಲ್ಲಿ ಬಾಳುತ್ತಾ ಬಂದರೆ ಜನರು ಸುಸಂಸ್ಕೃತರೆನಿಸುವರು. ಈ ತತ್ವಗಳು ಹಳೆಯ ಕಾಲದಲ್ಲಿ ಬಾಳಿದ ರೀತಿಯಲ್ಲಿ ವರ್ಗಗಳು ಹೇಳಿದಂತೆ ಬಾಳಲು ಸಾಧ್ಯವಿಲ್ಲದೆ ಇದ್ದಾಗ ನಿಷ್ಪ್ರಯೋಜಕವೆನಿಸುವುವು. ಆಗ ಆಚಾರ್ಯ ಪುರುಷರು ಆ ಧರ್ಮ ತತ್ವಗಳನ್ನು ಸಮಕಾಲೀನ ವಾತಾವರಣಕ್ಕೆ ತಕ್ಕಂತೆ ಅಳವಡಿಸಿ ಬರೆಯುವರು; ಪ್ರಸಾರಿಸುವರು. ಆಗ ಧಾರ್ಮಿಕ ತತ್ವಗಳ ಪುನರುಜ್ಜೀವನವಾಗುವುದು. ಇದು ಧಾರ್ಮಿಕ ಆಂದೋಲನವಲ್ಲ. ಕೇವಲ ಪುನರುಜ್ಜೀವನ. ಹಿಂದಿನ ಮಹಾ ತತ್ವಗಳನ್ನು ಆಧುನಿಕ ಕಾಲದ ವಾತಾವರಣಕ್ಕೆ ತಕ್ಕಂತೆ ಪ್ರಚಾರಪಡಿಸಿ ಅವನ್ನು ಜನರು ಬಾಳಿನಲ್ಲಿ ಬಾಳುವಂತೆ ಹಾದಿ ತೋರಿಸಲು ಮಹಾ ಪುರುಷರು ಜನ್ಮವೆತ್ತಿದುದನ್ನು ಚರಿತ್ರೆಯಲ್ಲಿ ಕಾಣಬಹುದು. ಹಿಂದೆ ಹಿಂದೂ ರೀತಿಯಲ್ಲಿ ಬಾಳ್ವೆ ಸಾಗಿಸುವುದು ಅಸಾಧ್ಯವೆಂದು ತೋರಿದಾಗ ಬುದ್ಧನು ಬೌದ್ಧ ಮತವನ್ನು ಪ್ರಚಾರ ಪಡಿಸಿದನು. ಬೌದ್ಧ ಮತವು ಜನ ಜೀವನಕ್ಕೆ ಸರಿ ಹೋಗದು ಎಂದಾಗ ಶಂಕರಾಚಾರ್ಯರು ಹಿಂದೂ ಧರ್ಮವನ್ನು ಪುನರ್ ಸ್ಥಾಪಿಸಿದರು. ಹೀಗೆ ಮಧ್ವರಾಮಾನುಜ ಆಚಾರ್ಯರೂ, ಇತರ ಮಹಾ ಆಚಾರ್ಯರೂ ಆಗಿಂದಾಗ್ಗೆ ಜನ್ಮವೆತ್ತಿರುವರು.

ಒಂದು ಧರ್ಮವು ಕೆಲವು ರೂಢಿ ಸಂಪ್ರದಾಯಗಳಿಂದ ಆಚರಣೆಯಲ್ಲಿ ಬಹು ಕಾಲ ಬಾಳಿ ಬಂದಂತೆ ಅದರ ಕೆಲವು ರೀತಿ ನಿಯಮಗಳು ಕಾಲದ ವ್ಯತ್ಯಾಸದಿಂದಾಗಿ ಮುಂದೆ ಸಾಗಿದ ಕಾಲಮಾನದಿಂದಾಗಿ ಅವು ಸರಿ ಹೋಗುವುದಿಲ್ಲ. ಆಗಿನ ಸಾಮಾಜಿಕ ವ್ಯವಸ್ಥೆಗಳಿಗೆ ಸರಿ ಹೋಗಲಾರವು. ಆಗ ಆ ಹಳೆಯ ಸತ್ಯಗಳನ್ನು ಹೊಸ ವಾತಾವರಣಕ್ಕೆ ತಕ್ಕಂತೆ ಪ್ರಚಾರ ಮಾಡುವ ಅವಶ್ಯಕತೆ ಇದೆ. ಹಳೆಯದರಷ್ಟೇ ಹೊಸ ಉಡುಗೆಯಲ್ಲಿ, ಹಳೆಯ ನಾಣ್ಯಗಳನ್ನು ಟಂಕಸಾಲೆಗೆ ಒಯ್ದು ಹೊಸ ನಾಣ್ಯಗಳನ್ನಾಗಿ ರೂಪಾಂತರಗೊಳಿಸಿ ಚಲಾಯಿಸುವಂತೆ, ಪುನಃ ಪ್ರಚಾರ ಮಾಡಬೇಕಾಗಿರುವುದು.

ಮಹರ್ಷಿಗಳು, ಆಚಾರ್ಯರು ಸಂಶೋಧಿಸಿ ನೋಡಿದ ಮೇಲೆ ಈ ತತ್ವಗಳು ಮಾನವನ ಜೀವನವನ್ನು ಬಾಳುವ ಬಗೆ ಸೂಚಿಸುತ್ತಿವೆ. ಇವರು ಮಾನವನ ಬಾಹ್ಯ ಸಲಕರಣೆಗಳನ್ನು ಹೆಚ್ಚಿಸುವ ಪ್ರಯತ್ನ ಮಾಡುವ ಬದಲಾಗಿ ಮಾನವನ ಅಂತರಂಗದ ವಿಕಾಸನದಿಂದ ಜೀವನದಲ್ಲಿ ಅವನು ಹೆಚ್ಚಿನ ಸುಖ ಪಡೆಯಲು ಸಾಧ್ಯವಿದೆ ಎಂದು ಅರಿತರು. ಮತ್ತು ಮಾನವನ ಈ ಅಂತರಂಗ ವಿಕಾಸತನಕ್ಕೆ ಧರ್ಮಶಾಸ್ತ್ರಗಳಲ್ಲಿ ಹೇಳಿದ ತತ್ವಗಳಂತೆ ಜೀವನವನ್ನು ಬಾಳುವುದು ಎಂದು ನಿರ್ಧರಿಸಿದರು. ಹೀಗೆ ಆಯಾ ಸಮಕಾಲೀನ ಸಾಮಾಜಿಕ ವಾತಾವರಣಗಳಿಗೆ ತಕ್ಕಂತೆ ಕಟ್ಟು ಕಟ್ಟಳೆಗಳಿಗೆ ತಕ್ಕಂತೆ, ಪ್ರಗತಿಯ ನಡಿಗೆ ಅನುಸಾರವಾಗಿ ಆ ತತ್ವಗಳನ್ನು ಬಾಳಿನಲ್ಲಿ ಬಾಳುವುದು ಹೇಗೆ ಎಂದು ನಿರೂಪಿಸಿದರು. ಆ ಕಾಲದಲ್ಲಿ ಹೇಳಿದ ಬಗೆಯಲ್ಲಿ ಬದಲು ಆಗಿರಬಹುದು. ನಮ್ಮ ವಿಜ್ಞಾನದ ಮುನ್ನಡೆಯಿಂದ ಆ ಬಗೆಯಲ್ಲಿ ವ್ಯತ್ಯಾಸ ಮಾಡಬೇಕು. ಆದರೆ ಮೂಲ ತತ್ವವೂ, ಸತ್ಯ ತತ್ವವೂ ಒಂದೇ ಆಗಿರುವುದು.

ಅದು ಮಾನವನು ಜೀವನದಲ್ಲಿ ಅತ್ಯುಚ್ಚ ಮಟ್ಟದ ಸುಖಜೀವನವನ್ನು ಹೇಗೆ ಬಾಳಬಹುದು ಎಂದಾಗಿದೆ. ಆ ಜೀವನಕ್ಕೆ ಮಾನವನ ಅಂತರಂಗ ವ್ಯಕ್ತಿತ್ವ ವಿಕಾಸನವೂ, ಅವನು ಜೀವನವನ್ನು ಗ್ರಹಿಸಲು ಉಪಯೋಗಿಸುವ ಯಂತ್ರ ಉಪಕರಣಗಳಾದ ಮನಸ್, ಬುದ್ಧಿಯನ್ನು ಸಮತೋಲನವಾಗಿರಿಸುವ ಸಾಧನೆಯೇ ಧರ್ಮ ಜೀವನವಾಗಿದೆ. ಮತ್ತು ಸ್ವಾರ್ಥ ಸಂಕುಚಿತ ಬುದ್ಧಿಯು ಎಂದಿಗೂ ಸುಖವನ್ನು ಕೊಡಲಾರದು. ಕೇವಲ ವಿಷಯಾಸಕ್ತಿಯ ಆಸೆಯಿಂದ, ಕ್ಷಣಿಕ ಸುಖಾಪೇಕ್ಷೆಯಿಂದ ಸ್ವಾರ್ಥ, ಅಧರ್ಮ ಜೀವನ ನಡೆಸಿದರೆ ಒಂದಲ್ಲ ಒಂದು ಸಮಯದಲ್ಲಿ ಅಂತಹ ಜೀವನ ಸುಖದ ಬದಲು ದುಃಖವನ್ನೇ ಕೊಡುವುದು ಎಂದು ಸಾರಿದರು.

(ಸಶೇಷ)

ಕಮ್ಯೂನಿಸ್ಟರ ಬಣ್ಣ ಬಯಲಾಯಿತು

(ಐದನೇ ಪುಟದಿಂದ)

ಲ್ಲಿ ಗಡಿರೇಖೆ ನಿಶ್ಚಯವಾಗಿರುತ್ತದೆ. ಮೂನ ಕಣಿವೆ ಭಾರತಕ್ಕೆ ಸೇರಿದ್ದೆಂಬುದನ್ನು ಚೈನಿ ಕಮ್ಯೂನಿಸ್ಟರು ಚೆನ್ನಾಗಿ ಒಪ್ಪಿಕೊಂಡಿದ್ದಾರೆ. ಯಾರು ಒಪ್ಪಿಕೊಂಡಿದ್ದರೆ ಆಕ್ರಮಣ ನಡೆಸುವವರಂಗೇನು? —ಆಕ್ರಮಣ ನಡೆಸಿದರಾಯ್ತು. ಈ ವಿಷಯವು ಚೈನೀ ಕಮ್ಯೂನಿಸ್ಟರಿಗೂ ಭಾರತದಲ್ಲಿರುವ ಕಮ್ಯೂನಿಸ್ಟರಿಗೂ ಸ್ಪಷ್ಟವಾಗಿ ಗೊತ್ತು. ಆದರೂ ಇಲ್ಲಿರುವ ಹಿತಶತ್ರು ಕಮ್ಯೂನಿಸ್ಟರು ಅದನ್ನು ಖಂಡಿಸಲಾರರು. ಅಂತೆಯೇ ರಾಣ್ ಪ್ರದೇಶದಲ್ಲಿ ಪಾಕಿಸ್ಥಾನ ನಡೆಸಿರುವ ದುರಾಕ್ರಮಣವನ್ನು ಅವರು ಖಂಡಿಸಲಾರರು. ಕಾರಣ ಪಾಕ್—ಚೈನಾ ಚಕ್ಕಂದದಾಟದಲ್ಲಿ ಪೂರ್ಣ ಒಂದಾಗಿದೆ.

ಈ ರೀತಿ ಬಣ್ಣ ಬಯಲಾದರೂ ಬಣ್ಣ ಬದಲಾಯಿಸಿ ಕೊಳ್ಳುತ್ತಿರುವ ಕಮ್ಯೂನಿಸ್ಟರನ್ನು ಯಾವ ಹೆಸರಿನಿಂದ ಕರೆಯುವುದು? ಅದಕ್ಕೆ ಮಾಜಿ ಕಮ್ಯೂನಿಸ್ಟ ಖದೀಮರೊಬ್ಬರು ಪರಿಹಾರ ಸೂಚಿಸಿದ್ದಾರೆ. ಭಾರತದ ರಾಜ್ಯಸಭೆಯಲ್ಲಿ ಒಂದು ವಾದ – ವಿವಾದ ನಡೆಯಿತು. ಭಾರತೀಯ ಜನಸಂಘದ "ತರುಣ ನೇತಾ" ಶ್ರೀ ಅಟಲ ಬಿಹಾರಿ ವಾಜಪೇಯಿಯವರು ಕಾಂಗ್ರೆಸ್ ಸದಸ್ಯ ಶ್ರೀ ಅರ್ಜುನ್ ಅರೋರರನ್ನು ಕಮ್ಯೂನಿಸ್ಟರೆಂದು ಕರೆದರು. ಶ್ರೀ ಅರ್ಜುನ್ ಅರೋರಾರಿಗೆ ಅದು ರುಚಿಸಲಿಲ್ಲ. ಅವರು ಏನೇನೋ ಯದ್ವಾತದ್ವಾ ಆಡಿದರು. ಆ ವ್ವಗಳನ್ನು ದಾಖಲೆಗಳಿಂದ ಕಿತ್ತು ಹಾಕಲಾಯಿತು. ಆದರೂ ಮಾತುಕತೆ ಅಲ್ಲಿಗೇನೆ ನಿಲ್ಲಲಿಲ್ಲ. ತಾವು ಕಮ್ಯೂನಿಸ್ಟ ಅಲ್ಲವೆಂಬುದನ್ನು ಶ್ರೀ ಅರ್ಜುನ ಅರೋರರು ತಮ್ಮ ಬಾಯಿಯಿಂದಲೇ ಹೇಳಲೆಂದು ಶ್ರೀ ಅಟಲ ಬಿಹಾರಿ ವಾಜಪೇಯಿಯವರು ಹಟಹಿಡಿದರು. ಅದು ನುಂಗಲಾರದ ತುತ್ತು. ತಾವು ಹಿಂದೆ ಕಮ್ಯೂನಿಸ್ಟ್ ಪಕ್ಷದಲ್ಲಿದ್ದುದಾಗಿಯೂ ಈ ಕಾಂಗ್ರೆಸ್ಸಿ ಗುರುತು ಪತ್ರ ತಾಗಿಸಿಕೊಂಡಿರುವುದಾಗಿ ಅವರು ಹೇಳಿದರು. ಕಾಂಗ್ರೆಸ್ಸ್ ಪಕ್ಷದೊಳಗೆ ಕಮ್ಯೂನಿಸ್ಟರು ಅದೆಂತು ಹೋರಿಮುಖದ ವ್ಯಾಘ್ರಗಳಂತಿದ್ದಾರೆಂಬುದನ್ನು "ನವಯುಗ" ಆಗಾಗ ವಾಚಕಬಂಧುಗಳಿಗೆ ತಿಳಿಸುತ್ತ ಬಂದಿದೆ. ತಮ್ಮ ಗುರುತು ಪತ್ರದ ಕುರಿತು ಶ್ರೀ ಅರ್ಜುನ ಅರೋರಾ ಹೇಳಿದರೇ ವಿನಹ ತನ್ನ ಹೃದಯದ ಬಣ್ಣದ ಕುರಿತು ತಿಳಿಸಲಿಲ್ಲ. ತಾನು ಕಮ್ಯೂನಿಸ್ಟ್ ಅಲ್ಲವೆಂದು ಅವರೇತಕ್ಕೆ ಸ್ಪಷ್ಟವಾಗಿ ಹೇಳಬಾರದಾಗಿತ್ತು? ಕಳ್ಳನ ಮನಸ್ಸು ಹುಳ್ಳ ಹುಳ್ಳಗೆನ್ನುವುದು ಇದಕ್ಕೇನೇ. ಶ್ರೀ ಅಟಲ ಬಿಹಾರಿ ವಾಜಪೇಯಿಯವರು ಆ ರೀತಿ ಒಬ್ಬರತ್ತ ಬೊಟ್ಟುಮಾಡಿ ತೋರಿಸುವುದೇ ತಡ, ಅನೇಕ ಮಂದಿ ತಮ್ಮ ಭುಜಗಳನ್ನು ಮುಟ್ಟಿ ನೋಡಿಕೊಂಡಿರಬಹುದು. ತಾನು ಕಮ್ಯೂನಿಸ್ಟ್ ಪಕ್ಷದಲ್ಲಿಲ್ಲದಿದ್ದರೂ ಕಮ್ಯೂನಿಸ್ಟ ಅಲ್ಲವೆಂಬುದನ್ನು ಶ್ರೀ ಅರ್ಜುನ ಅರೋರಾ ಸ್ಪಷ್ಟ ಪಡಿಸದಿದ್ದರೂ ಕಮ್ಯೂನಿಸ್ಟ ಪದಕ್ಕೆ ಸರಿಯಾದ ಪರ್ಯಾಯವೊಂದನ್ನು ಹೇಳಿದ್ದಾರೆ. ತನ್ನನ್ನು ಕಮ್ಯೂನಿಸ್ಟನೆಂದು ಕರೆದುದಕ್ಕೆ ಶ್ರೀ ಅಟಲ ಬಿಹಾರಿ ವಾಜಪೇಯಿಯವರನ್ನು ಅವರು ಮೋಸಗಾರ, ಸುಳ್ಳು ಹೇಳುವವ ಹಾಗೂ ದಗಲಬಾಜಿ ಎಂದರು. ಅಲ್ಲೇ ಇದ್ದ ಅವರ ಕಾಮ್ರೇಡ್ ಶ್ರೀ ಭೂಪೇಶ ಗುಪ್ತರವರು ಶ್ರೀ ಅಟಲ ಬಿಹಾರಿ ವಾಜಪೇಯಿಯವರೇನೂ ಶ್ರೀ ಅರ್ಜುನ ಅರೋರರವರಿಗೆ ಅಪಮರ್ಯಾದೆ ಮಾಡಿಲ್ಲವೆಂದು ಹೇಳಿದರು. ಶ್ರೀ ಭೂಪೇಶ ಗುಪ್ತರ ಪ್ರಕಾರ ಕಮ್ಯೂನಿಸ್ಟ್ ಪದವು ಗೌರವದ ಚಿಹ್ನೆ ಇದೆ! ಹಾಗಾದರೆ ಈ "ಗೌರವಾಂಕಿತ ಕಮ್ಯೂನಿಸ್ಟರ" ಲಕ್ಷಣಗಳೇನು?—ಮೋಸ ಮಾಡುವುದು ಸುಳ್ಳು ಹೇಳುವುದು, ದಗಲಬಾಜಿ ಮಾಡುವದು ಇತ್ಯಾದಿ. ಇಷ್ಟೇ ಅಲ್ಲವೆಂದು ಯಾರಾದರೂ ಹೇಳ ಬಹುದು ವಿನಃ ಇವಲ್ಲವೆಂದು ಯಾರಿಂದಲೂ ಹೇಳಲು ಸಾಧ್ಯವಿಲ್ಲ. ಪಾಕ್-ಚೈನಾ ಚಕ್ಕಂದದ ಈ ಕಾಲದಲ್ಲಿ ಆ ಲಕ್ಷಣಗಳಿರುವವರು ಇಲ್ಲಿರುವ ಪಾಕ್ ಪರ ಪಕ್ಷದೊಂದಿಗೆ ಒಮ್ಮತದಿಂದಿರುವದು ಸ್ವಾಭಾವಿಕ. ಅದನ್ನು ಬಹಿರಂಗಪಡಿಸಲೆಂಬಂತೆ ಶ್ರೀ ಅರ್ಜುನ ಅರೋರಾರು ಶ್ರೀ ಅಟಲ ಬಿಹಾರಿ ವಾಜಪೇಯಿಯವರನ್ನು ಮುಸ್ಲಿಂ ಲೀಗಿಯೆಂದೂ ಕರೆದರು.

ಕಮ್ಯೂನಿಸ್ಟರ ಬಣ್ಣ ಬಯಲುಗೊಳಿಸಲು ಇದೊಂದು ಉತ್ತಮ ನಿದರ್ಶನ. ಬಣ್ಣ ಬಯಲಾದಾಗ ಅದನ್ನು ಬದಲಾಯಿಸುವದರಲ್ಲಿ ಕಮ್ಯೂನಿಸ್ಟರು ಪಳಗಿದ ಕೈ ಎಂಬುದನ್ನು ಮರೆಯಲು ಸಾಧ್ಯ ಇರುವದಿಲ್ಲ

ಬನ್ನಿ ಕಾಸರ ಗೋಡಿಗೆ.

ಬನ್ನಿ ಕಾಸರ ಗೋಡಿಗೆ
ನಮ್ಮ ಕೇರಳ ನಾಡಿಗೆ! ||ಪಲ್ಲ||
ಕನ್ನಡದ ಕವಿಗಳಿರ
ಕನ್ನಡದ ಕಲಿಗಳಿರ
ಬನ್ನಿ ಕಾಸರ ಗೋಡಿಗೆ |
ನಮ್ಮ ಕೇರಳ ನಾಡಿಗೆ!||ಅನುಪಲ್ಲ||

ನಿಮ್ಮ ಮೆಚ್ಚನು
ನಿಮ್ಮ ಕೆಚ್ಚನು
ಅಲ್ಲಿ ಬಿಮ್ಮಗೆ ಪುಡಗರಿ |
ಇಲ್ಲಿ ಸುಮ್ಮಗೆ ನಡೆಯಿರಿ ||ಬನ್ನಿ||
ಯಕ್ಷ ಗಾನದ
ದಕ್ಷ ಜ್ಞಾನದ
ಪಾರ್ತಿ ಸುಬ್ಬನ ಸೀಳಿಗೆ |
ಕುಣಿವ ನೃತ್ಯದ ಸಾಲಿಗೆ ||ಬನ್ನಿ..||

ತೆಂಗು ಕಂಗಿನ
ತೋಟ ನೋಟದ
ಬಿಡದ ಒಗೆ ಬಗೆ ಕೂಡಿಕೆ |
ಬೆಡಗು ಬಿನ್ನಣ ಕಾಣಿಕೆ ||ಬನ್ನಿ..||
ಕೋಳಿ ಜೂಜಿನ
ಕಂಬ್ಳ ಮೋಜಿದೆ
ನೋಡೆ ಸ್ಪರ್ಧೆಯ ಸಾಹಸ |
ದೂಡೆ ತುಂಬಿದ ಬೇವಸ ||ಬನ್ನಿ..||

ಉಲಿವ ಪಾಡ್ದನ
ನಲಿವ ನರ್ತನ
ಬೆಳೆದ ವಿಸ್ತೃತ ಚೇತನ |
ತುಳುವ ಸಂಸ್ಕೃತಿ ಕೇತನ ||ಬನ್ನಿ..||
ಹಬ್ಬ ನಿಗುರಿದ
ಕಬ್ಬ ಚಿಗುರಿದ
"ರಾಷ್ಟ್ರ ಕವಿ"ಗಳ ಬೀಡಿಗೆ |
ಭ್ರಷ್ಟ ಕನ್ನಡ ಗೂಡಿಗೆ |||ಬನ್ನಿ..||

ಗಣಪ ಮಧುಪುರ
ಕೃಷ್ಣ ಕಣಿಪುರ
ಭಕ್ತ ವರ್ಗವ ಹರಸುವ |
ಮುಕ್ತಿ ಮಾರ್ಗಕೆ ನಡೆಸುವ ||ಬನ್ನಿ..||

ಪಿ. ಶ್ಯಾಮಭಟ್, ಪೆರಡಾಲ.

ಮಹಾವೀರ ವಿದ್ಯಾವರ್ಧಕ ಸಂಘ

ಮೂಡಬಿದರೆಯ ಶ್ರೀ ಮಹಾವೀರ ವಿದ್ಯಾವರ್ಧಕ ಸಂಘದ ಮಹಾಸಭೆಯು ಎಪ್ರಿಲ್ ತಾ. ೨೫ರಂದು ಸ್ಥಳೀಯ ಸಮಾಜ ಮಂದಿರದಲ್ಲಿ ಎಡ್ವಕೇಟ್ ಶ್ರೀ ಎಂ. ಕೆ. ದೇವರಾಜ್, ಅವರ ಅಧ್ಯಕ್ಷತೆಯಲ್ಲಿ ಜರಗಿದಾಗ ಪ್ರಚಲಿತ ವರ್ಷಕ್ಕೆ ಈ ಕೆಳಗಿನ ಕಾರ್ಯಕಾರೀ ಮಂಡಳಿಯು ಆರಿಸಲ್ಪಟ್ಟಿದೆ:

ಸರ್ವಶ್ರೀ ಎಂ. ಕೆ. ದೇವರಾಜ—ಅಧ್ಯಕ್ಷ; ಎಸ್. ಎನ್. ಮೂಡಬಿದ್ರಿ, ಡಾ| ವೈ. ಉಮಾನಾಥ ರಾವ್— ಉಪಾಧ್ಯಕ್ಷರು; ಎಸ್. ಡಿ. ಸಾಮ್ರಾಜ್ಯ— ಕೋಶಾಧ್ಯಕ್ಷ; ಜಿ. ವಾಸುದೇವ ಪೈ, ಎಂ. ಕೆ. ಅನಂತರಾಜ—ಜೊತೆ ಕಾರ್ಯದರ್ಶಿಗಳು; ಧರ್ಮಸ್ಥಳ ರತ್ನವರ್ಮ ಹೆಗ್ಡೆ, ಕೆ. ಪಾಂಡ್ಯರಾಜ ಬಲ್ಲಾಳ, ಡಾ| ಎಚ್. ಎಂ. ಸುಬ್ಬಯ್ಯ, ಡಾ| ಡಿ. ಎಂ. ಶೆಟ್ಟಿ, ಎಂ. ಎಸ್. ಪಡಿವಾಳ, ಎಂ. ಆನಂದ ಅಳ್ವ, ಎಂ. ಜಿ. ಸುಂದರ ಕುಮಾರ್, ಎ. ಸೋಮಪ್ಪ ರೈ, ಟಿ. ರಘುಚಂದ್ರ ಶೆಟ್ಟಿ, ಸದಾನಂದ ಭಟ್, ಎಸ್. ಪಿ. ಮುರಾಯರ್, ಜಿ. ಗೋಪಾಲ ಪೈ–ಸದಸ್ಯರು.

ಮಹಾವೀರ ಕಾಲೇಜಿಗೆ ಧನ ಸಹಾಯ

ಮೂಡಬಿದ್ರೆಯಲ್ಲಿ ನೂತನವಾಗಿ ಸ್ಥಾಪನೆಯಾಗಲಿರುವ ಮಹಾವೀರ ಕಾಲೇಜಿಗೆ ಕಾರ್ಕಳ ತಾಲೂಕು ಡೆವಲಪ್‌ಮೆಂಟ್ ಬೋರ್ಡಿನ ಕಡೆಯಿಂದ ರೂ. 12,900 ಸಹಾಯ ಧನ ಮಂಜೂರಾಗಿದೆಯೆಂದು ತಿಳಿದುಬಂದಿದೆ.

ಕೆನರಾ ಚೇಂಬರ್ ಆಫ್ ಎಗ್ರಿಕಲ್ಚರ್

ಮಂಗಳೂರು, ರಾಜ್ಯದ ಕೃಷಿ ಮಂತ್ರಿ ಶ್ರೀ ಜಿ. ನಾರಾಯಣ ಗೌಡರವರಿಂದ, ಕಳೆದ ತಾ. 11ರಂದು ಕೆನರಾ ಚೇಂಬರ್ ಆಫ್ ಎಗ್ರಿಕಲ್ಚರ್ ಎಂಬ ನೂತನ ಸಂಸ್ಥೆಯು ಉದ್ಘಾಟನೆಯು, ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ., ಇವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಎಸ್. ಸಿ. ಸಿ. ಬೇಂಕಿನ ಮಹಡಿಯಲ್ಲಿ ಜರಗಿತು. ಶ್ರೀ ಕೆ. ತೇಜಪ್ಪ ಶೆಟ್ಟರು ಸ್ವಾಗತಿಸಿ ಜಿಲ್ಲಾ ಕೃಷಿಕ ಮಂಡಳಿಯ ದಾರಿ, ಧೋರಣೆ, ಉದ್ದೇಶಗಳನ್ನು ವಿವರಿಸಿದರು. ಶ್ರೀ ನೆಯಂಪಳ್ಳಿ ರಾಮರಾವ್‌ರವರು ಸಂಘಟನೆಯ ಆವಶ್ಯಕತೆಯನ್ನು ವಿಸ್ತಾರವಾಗಿ ತಿಳಿಸಿದರು. ಅಧ್ಯಕ್ಷರು ಮಾತನಾಡುತ್ತಾ ಇದಿನಂತೆ ಮುಂದೆಯೂ ಆಹಾರ ದಾನ್ಯಗಳು ಕಣ್ಮರೆಯಾಗುತ್ತಿರುವುದಾದರೆ ತಾನು ಅಧಿಕಾರ ತ್ಯಜಿಸುವುದಾಗಿ ತಿಳಿಸಿದರು. ಮಾನ್ಯ ಮಂತ್ರಿಗಳು ಮಾತನಾಡುತ್ತಾ, ಸಂಸ್ಥೆಗೆ ಯಶ ಕೋರಿದರು.

ಜಿಲ್ಲೆಯಲ್ಲಿ ಸುಮಾರು ೮೦೦ ಫಾರ್ಮುಗಳನ್ನು ರಚಿಸಿ ಕಾರ್ಯ ಕೈಕೊಳ್ಳುವ ಯೋಜನೆಯನ್ನು ಚೇಂಬರ್ ಕೈಕೊಳ್ಳಲಿದೆ.

ಸಾರ್ವಜನಿಕ ಸಭೆ

ಪಣಂಬೂರು ಬೈಕಂಪಾಡಿ ಗ್ರಾಮರಕ್ಷಣಾ ಸಮಿತಿಯ ಆಶ್ರಯದಲ್ಲಿ ಶ್ರೀ ಪಿ. ವಿ. ಐತಾಳ, ಎಡ್ವೊಕೇಟ್ ಇವರ ಅಧ್ಯಕ್ಷತೆಯಲ್ಲಿ, ತಾ. ೨ರಂದು ಬೈಕಂಪಾಡಿಯಲ್ಲಿ, ಪಣಂಬೂರು, ಬೈಕಂಪಾಡಿ ಗ್ರಾಮಸ್ಥರ ಬೃಹತ್ ಸಾರ್ವಜನಿಕ ಸಭೆಯೊಂದು ಜರಗಿತು. ಗೌರವ ಕಾರ್ಯದರ್ಶಿ ಶ್ರೀ ಕೆ. ಸಿ. ಶೆಟ್ಟಿಯವರು ಸ್ವಾಗತಿಸುತ್ತಾ, ಪಾಕಿಸ್ತಾನ ಮತ್ತು ಚೀನೀಯರ ಆಕ್ರಮಣವನ್ನು ಖಂಡಿಸಿದರು. ಮಾತ್ರವಲ್ಲದೇ ಅವರನ್ನು ಹೊಡೆದೋಡಿಸುವಲ್ಲಿ ಸರಕಾರಕ್ಕೆ ಬೆಂಬಲವಾಗಿ ಸೇವೆ ಸಲ್ಲಿಸಲು ಸಮಿತಿಯ ಸುಮಾರು 500 ಮಂದಿ ಸದಸ್ಯರು ಮುಂದೆ ಬಂದಿರುವುದಾಗಿ ತಿಳಿಸಿದರು. ಅಧ್ಯಕ್ಷರ ಭಾಷಣವಾದ ಬಳಿಕ, ಸರ್ವಶ್ರೀಗಳಾದ ರಾಮರಾವ್, ಡಿ. ಎ ಆಕೇರ, ಪಿ. ಎ. ಖಾದರ್ ಮೊದಲಾದವರು ತಮ್ಮ ಭಾಷಣಗಳಲ್ಲಿ ಇನ್ನೂ ಹೆಚ್ಚಿನ 600 ಎಕ್ರೆ ಭೂಮಿ ಸ್ವಾಧೀನಪಡಿಸಲು ಸರಕಾರ ಕ್ರಮ ಕೈಕೊಂಡುದುದನ್ನು ಖಂಡಿಸಿ, ಅದು ಇನ್ನೂ ಮುಂದುವರಿಯುತ್ತಿದ್ದಲ್ಲಿ, ಯೋಜನೆಯ ಆಡಳಿತ ಕಛೇರಿಯ ಎದುರುಗಡೆ ಉಪವಾಸ ಸತ್ಯಾಗ್ರಹ ಹೂಡಲು ಪ್ರಸ್ತಾಪಿಸಿದರು. ರೈಲ್ವೇ ಸಚಿವ ಶ್ರೀ ಎಸ್. ಕೆ. ಪಾಟೀಲರು ಪಣಂಬೂರನ್ನು ಸಂದರ್ಶಿಸುವಾಗ ಅವರನ್ನು ಭೇಟಿಯಾಗಿ ಚರ್ಚಿಸುವುದೆಂದು ಸಭೆಯಲ್ಲಿ ನಿಶ್ಚಯಿಸಲಾಯಿತು.

ಉಪಯುಕ್ತವಾದ ಕೆಲವು ಪುಸ್ತಕಗಳು

		ರೂ. ನ.
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ	(ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು	(ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಅನು: ಕು.ಶಿ.ಹರಿದಾಸ ಭಟ್)	2=00
ಹಿರೋಶಿಮಾದಿಂದ ಜಿನೇವ	(ಯು. ಆರ್. ಆಚಾರ್ಯ)	1=50
ಮೋಹದ ಮಹಾಜಾಲ	(ವೀರಪ್ಪ ಯಗಟಿ)	1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ	(ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ಏಶಿಯದ ಸಂಪತ್ತು	(ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು	(ಅನು: ಕು.ಶಿ.ಹರಿದಾಸ ಭಟ್)	1=75
ಕುಲವಿಲ್ಲದ ಹೆಣ್ಣು	(ಪಿ. ವೆಂಕೋಬಾಚಾರ್ಯ)	1=50
ಚಿತ್ರಾಂಗದೆ	(ಅನು: ಕೆ. ಕೆ. ಶೆಟ್ಟಿ)	0=60
ರವೀಂದ್ರರ ಕತೆಗಳು	(ಹನುಮಂತ ರಾವ್ ಮಾಂಜ್ರೇಕರ)	0=90
ಹಸುರು ಹಂಸ	(ನಚಿಕೇತ)	2=00
ಭಾವಾರ್ಚನೆ	(ನಚಿಕೇತ)	1=25
ಋಣ ಯಾತ್ರೆ	(ನಚಿಕೇತ)	1=50
ಗೀತೆಯ ಕೈಗನ್ನಡಿ	(ಹೊಸಕೆರೆ ಚಿದಂಬರಯ್ಯ)	1=00

ವಿವರವಾದ ಪಟ್ಟಿಗಾಗಿ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: **ನವಭಾರತ ಪುಸ್ತಕ ಭಂಡಾರ, ಉಡುಪಿ.**

ಸಿ. ಪಿ. ಸಿ. ಸುವರ್ಣೋತ್ಸವ



ಸಿ. ಪಿ. ಸಿ. ಮೋಟಾರು ಸಂಸ್ಥೆಯ ಸ್ವರ್ಣ ಮಹೋತ್ಸವದ ಅಧ್ಯಕ್ಷ ಸ್ಥಾನದಿಂದ ಕೇಂದ್ರ ರೈಲ್ವೆ ಮಂತ್ರಿ ಶ್ರೀ ಎಸ್. ಕೆ. ಪಾಟೀಲರು ಭಾಷಣ ಮಾಡುತ್ತಿರುವರು. ಶ್ರೀಗಳಾದ ವಿ. ಎಸ್. ಕುಡ್ವ; ಯು. ಎಸ್. ಮಲ್ಯ, ಎಂ. ಪಿ.; ಬಿ. ವೈಕುಂಠ ಬಾಳಿಗಾ, ವಿಧಾನ ಸಭಾಧ್ಯಕ್ಷ; ಆರೋಗ್ಯ ಸಚಿವ ಡಾ। ಕೆ. ನಾಗಪ್ಪ ಆಳ್ವ; ಜಸ್ಟಿಸ್ ಕೆ. ಸದಾನಂದ ಹೆಗ್ಡೆ ಮೊದಲಾದವರನ್ನು ಮೇಲಿನ ಚಿತ್ರದಲ್ಲಿ ಕಾಣಬಹುದು.

ನಮ್ಮ - ನಮ್ಮವರು

ಶ್ರೀ॥ ಎಸ್. ಕೆ. ಪಾಟೀಲ್

ಎಸ್. ಕೆ. ಪಾಟೀಲರು ಖಂಡ ತುಂಡ ಅಭಿಪ್ರಾಯಕ್ಕೆ ಹೆಸರಾದವರು. ಅವರದು ನಿರ್ದಾಕ್ಷಿಣ್ಯ ಪ್ರವೃತ್ತಿ. ಇದ್ದುದನ್ನು ಇದ್ದಂತೆ ಹೇಳುವ ಬಿಚ್ಚು ಮನಸ್ಸು ಅವರದು. ಕಳೆದ ಮೇ ೧೭ರಂದು ಮಂಗಳೂರಿನ ಸಿ. ಪಿ. ಸಿ. ಕಂಪೆನಿಯ ಸ್ವರ್ಣೋತ್ಸವದ ಅಧ್ಯಕ್ಷ ಭಾಷಣ ಮಾಡುತ್ತಾ ಅವರು ಯೋಗ್ಯ ರೀತಿಯಲ್ಲಿ ಕಾರ್ಯವೆಸಗಿ ನಾಗರಿಕರಿಗೆ ಅತ್ಯುತ್ತಮ ಸೌಕರ್ಯಗಳನ್ನು ಒದಗಿಸಲು ಶ್ರಮಿಸುತ್ತಿರುವ ಖಾಸಗಿ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡುವುದನ್ನು ಯಾವ ಬುದ್ಧಿವಂತ ಸರಕಾರವು ಕಾರ್ಯರೂಪಕ್ಕೆ ತರದು ಎಂದು ನುಡಿದಿರುವರು. ಸಮಾಜವಾದದ ಹೆಸರಿನಲ್ಲಿ ಎಲ್ಲಾ ಉದ್ದಿಮೆಗಳನ್ನು ರಾಷ್ಟ್ರೀಕರಣ ಮಾಡುವ ಹವ್ಯಾಸ ಉತ್ತಮವಲ್ಲ ಎಂಬ ಶ್ರೀ॥ ಪಾಟೀಲರ ವಾದವನ್ನು ಎಲ್ಲರೂ ಒಪ್ಪಬೇಕು. ಅವರೆಂದಂತೆ ಸರಕಾರ ಅಂತಹ ಸಂಸ್ಥೆಗಳ ಮೇಲೆ ವಿಶೇಷ ಹತೋಟಿಯನ್ನಿಟ್ಟು ತೃಪ್ತಿಪಟ್ಟುಕೊಳ್ಳುವುದೇ ಸೂಕ್ತ. ನಮ್ಮ ಮೈಸೂರು ಸರಕಾರದಲ್ಲಂತೂ ರಸ್ತೆ ಸಾರಿಗೆ ರಾಷ್ಟ್ರೀಕರಣವು ಯಾರಿಗೂ ಸುಖವನ್ನು ಕೊಟ್ಟಿಲ್ಲ; ಸರಕಾರಕ್ಕೆ ಕೆಲವೆಡೆ ಇದರಿಂದ ನಷ್ಟವೂ ಆಗಿದೆ. ಇದನ್ನು ನಮ್ಮ ರಾಜ್ಯ ಸರಕಾರ ಯೋಚಿಸಬೇಕು.

ಶ್ರೀ॥ ಪಾಟೀಲರು ಆಹಾರ ಸಮಸ್ಯೆಯ ಕುರಿತು ಮಾತನಾಡುತ್ತಾ ತಾನು ಆಹಾರ ಮಂತ್ರಿಯಾಗಿದ್ದರೆ ಆಹಾರ ವಸ್ತುಗಳ ವಿಷಯದಲ್ಲಿ ಎಲ್ಲಾ ನಿರ್ಬಂಧಗಳನ್ನು ತೆಗೆದು ಹಾಕುತ್ತಿದ್ದೆ, ಎಂಬ ವೈಯಕ್ತಿಕ ಅಭಿಪ್ರಾಯ ವ್ಯಕ್ತಪಡಿಸಿದರು. ಅವರ ಮಾತಿನಲ್ಲಿ ಸತ್ಯವಿದೆ. ಇಂದು ಸರಕಾರದ ಮಿತಿ ಮೀರಿದ ನಿಯಂತ್ರಣ ಹತೋಟಿಗಳೇ ಆಹಾರದ ಈ ಅಭಾವಕ್ಕೆ ಹೆಚ್ಚಿನಂಶ ಕಾರಣವೆಂದರೂ ತಪ್ಪಾಗದು. ಪಾಟೀಲರು ಈ ವಿಚಾರ ಚೆನ್ನಾಗಿ ತಿಳಿದೇ ಮೇಲಿನ ಮಾತುಗಳನ್ನಾಡಿರಬೇಕು.

ದೇಶದ ಹಿರಿಯ ಮುತ್ಸದ್ದಿ ಶ್ರೀ॥ ಪಾಟೀಲರಂತಹವರ ಅಭಿಪ್ರಾಯಕ್ಕೆ ಬೆಲೆ ಕೊಟ್ಟರೆ, ನಮ್ಮ ರಾಜ್ಯ ಸರಕಾರ ಉತ್ತಮವಾದ ಕೆಲಸ ಮಾಡಿದಂತಾಗುತ್ತದೆ. ಅವರ ಜಿಲ್ಲಾ ಸುದರ್ಶನ ಬುದ್ಧಿವಂತರಿಗೆ ಸಂತೃಪ್ತಿಯನ್ನುಂಟುಮಾಡಿದೆ.



ಶ್ರೀ ವಿ. ಎಸ್. ಕುಡ್ವ

ಸಿ. ಪಿ. ಸಿ. ಕಂಪೆನಿಯು ಇಂದು ಕುಡ್ವರ ಸಿ. ಪಿ. ಸಿ. ಯಾಗಿದೆ. ಇದಕ್ಕೆ ಕಾರಣ ಶ್ರೀ ಕುಡ್ವರು ಆ ಸಂಸ್ಥೆಗೆ ಸಲ್ಲಿಸಿದ ಅಪಾರವಾದ ಸೇವೆ. ಇಂದು ನಮ್ಮ ಜಿಲ್ಲೆಯ ಸಾರಿಗೆ ಕ್ಷೇತ್ರದಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿರುವ ಸಿ. ಪಿ. ಸಿ. ಯ ಮೆನೇಜಿಂಗ್ ಡೈರೆಕ್ಟರ್ ಆಗಿ ಶ್ರೀ ಕುಡ್ವರು ಆ ಸಂಸ್ಥೆಯ ಏಳಿಗೆಗಾಗಿ ಅಹರ್ನಿಶಿ ದುಡಿದವರು. ಇಂದು ಸಿ. ಪಿ. ಸಿ. ಸ್ವರ್ಣಮಹೋತ್ಸವ ಆಚರಿಸುವ ಸುಯೋಗ ಪಡೆದಿದ್ದರೆ ಅದಕ್ಕೆ ಶ್ರೀ॥ ಕುಡ್ವರಂತಹ ದೂರದರ್ಶಿ ನೇತಾರರ ದುಡಿಮೆಯೇ ಕಾರಣ.

ಉಡುಪಿ ಕಾರ್ಯಕ್ಷೇತ್ರವಾಗಿದ್ದ ಕುಡ್ವರನ್ನು ಮಂಗಳೂರು ತನ್ನ ಬಳಿಗೆ ಕರೆಸಿಕೊಂಡಿತು. ಪ್ರಕೃತೋದ್ಯಮಿಯಾಗಿ ಮಂಗಳೂರು ಸೇರಿದ ಶ್ರೀ॥ ಕುಡ್ವರು ಇಂದು ಮಂಗಳೂರು ಮಾತ್ರವಲ್ಲ ದೇಶದಲ್ಲೇ ಮಹಾ ಉದ್ದಿಮೆದಾರರಾಗಿದ್ದಾರೆ. ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದ ಕುಡ್ವರು ಸ್ವಾತಂತ್ರ್ಯ ಹೋರಾಟದ ಕಾಲ, ಶಿಕ್ಷಣಕ್ಕೆ ತಿಲಾಂಜಲಿಯಿತ್ತು ಹೋರಾಟಕ್ಕೆ ಧುಮುಕಿದ ವ್ಯಕ್ತಿ. ದಿ॥ ಶ್ರೀ॥ ವಿ. ಎಸ್. ಕಾಮತರು ಶ್ರೀ॥ ಕುಡ್ವರಲ್ಲಿರುವ ಸಾಮರ್ಥ್ಯವನ್ನು ಗುರುತಿಸಿ, ಅವರ ತಾಂತ್ರಿಕ ಒಲವಿಗೆ ಸರಿಯಾದ ದಾರಿ ಹಾಕಿಕೊಟ್ಟರು. ಇಂದು ಕುಡ್ವರ 'ಕೆನರಾ ಸ್ಪ್ರಿಂಗ್' ದೇಶದಲ್ಲೇ ಖ್ಯಾತಿ ಹೊಂದಿದೆ.

ಶ್ರೀ॥ ಕುಡ್ವರು ಸಾಹಸಿಗರು; ಕಾರ್ಯ ಚತುರರು; ಚಾಣಾಕ್ಷರು. ಅವರ ದೂರದೃಷ್ಟಿ ಇಂದು ಸಿ. ಪಿ. ಸಿ. ಯು ಮಹಾ ಸಂಸ್ಥೆಯಾಗಿ ಬೆಳೆಯುವಂತೆ ಮಾಡಿದೆ. ರಾಜಕೀಯಕ್ಕಿಂತ ಹೆಚ್ಚು ರಚನಾತ್ಮಕ ಕಾರ್ಯಕ್ಕೆ ಮಹತ್ವ ಕೊಟ್ಟಿರುವ ಶ್ರೀ ಕುಡ್ವರು ಕಾರ್ಯ ಮಾಡಿ ತೋರಿಸಿ ನಂತರ ಹೇಳುವವರ ಸಾಲಿಗೆ ಸೇರಿದವರು. ಜಿಲ್ಲೆಯ ಈ ಸುಪುತ್ರ ದೇಶಕ್ಕೇನೇ ಭೂಷಣ.

ಡಾ। ಎಂ. ಎಸ್. ಕೋಲ್ಕೆಬೈಲ್

ದಕ್ಷಿಣ ಕನ್ನಡದಿಂದ ಹಳೆ ಮೈಸೂರಿನ ಭಾಗಕ್ಕೆ ಹೋಗಿ ನೆಲೆಸಿ ವೈದ್ಯಕೀಯ ವೃತ್ತಿಯನ್ನು ಅವಲಂಬಿಸಿದವರು ಬಹಳ ಮಂದಿ. ಅವರಲ್ಲಿ ಕಡೂರಿನ ಡಾ। ಎಂ. ಎಸ್. ಕೋಲ್ಕೆಬೈಲರೂ ಒಬ್ಬರು ತಾ

ಲಾನಾಥರ ವಿದ್ಯಾಲಯದಲ್ಲಿ ಶಿಕ್ಷಣ ಪಡೆದ ಶ್ರೀಯುತರು ಇಂದು ಕಡೂರಿನ ಸಾರ್ವಜನಿಕ ರಂಗದಲ್ಲಿ ಮುನ್ನೆ ಮಾತಾದ ವ್ಯಕ್ತಿಯಾಗಿದ್ದಾರೆ. ಕಡೂರಿನ ಹಲವಾರು ಸಂಘ ಸಂಸ್ಥೆಗಳ ಸದಸ್ಯರಾಗಿ, ವಿವಿಧ ಸಹಕಾರಿ ಸಂಸ್ಥೆಗಳ ಸದಸ್ಯರಾಗಿ, ಮುನಿಸಿಪಲ್ ಕೌನ್ಸಿಲರಾಗಿ ಸಾರ್ವಜನಿಕ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಡಾ। ಕೋಲ್ಕೆಬೈಲರು ರಾಜಕೀಯ ಸಂತ್ರಸ್ತರು. ಮೊದಲಿಂದಲೂ ಕಾಂಗ್ರೆಸಿನ ನಿಷ್ಠಾವಂತ ಕಾರ್ಯಕರ್ತರಾಗಿ ದುಡಿಯುತ್ತಿದ್ದಾರೆ. ನಿರ್ಭೀತವಾದ ಅಭಿಪ್ರಾಯ ವ್ಯಕ್ತಪಡಿಸುವ ಡಾ। ಕೋಲ್ಕೆಬೈಲರು, ಅಪಾರ ಜನಪ್ರಿಯತೆ ಗಳಿಸಿದ ಜನತೆಯ ವೈದ್ಯರು. ಸಮ್ಮ ಉದಾರತೆ ಹಾಗೂ ವೈದ್ಯಕೀಯ ಸಹಾಯದ ಮೂಲಕ ಅವರು ಜನತೆಯ ಹೃದಯವನ್ನು ಗೆದ್ದುಕೊಂಡಿದ್ದಾರೆ. ಮಲೆನಾಡಿನ ಜನತೆಗೆ ವೈದ್ಯಕೀಯ ಸವಲತ್ತನ್ನು ಒದಗಿಸುವಲ್ಲಿ ಶ್ರೀ ಕೋಲ್ಕೆಬೈಲರಂತಹರ ಪಾತ್ರ ಹಿರಿದಾದುದು. ಡಾ। ಕೋಲ್ಕೆಬೈಲರ ಸೇವೆಯ ಭಾಗ್ಯ ಪಡೆದ ಕಡೂರಿನ ಜನತೆ ಭಾಗ್ಯಶಾಲಿಯೆಂದು ಹೇಳಬಹುದು.

(ನಾಲ್ಕನೇ ಪುಟದಿಂದ)

ನಾಮ ಹೋರಾಟ, ಆಹಾರಾಭಾವ— ಇತ್ಯಾದಿ ನಾಲ್ಕಾರು ವಿಷಯಗಳನ್ನ ಬಿಟ್ರೆ ಮತ್ತೇನಿದೆ ನೋಡಿ—ಪ್ರಾಯಶಃ ಅವುಗಳಿಗೂ ಆಹಾರಾಭಾವವೇ ಇರಬೇಕು.'

"ಜನರಿಗೇನೇ ಆಹಾರಾಭಾವವಿರುವಾಗ, ಅವರಿಂದಲೇ ನಡೆಸಲ್ಪಡುವ ಪತ್ರಿಕೆಗಳಿಗೆ ಅಭಾವವಿಲ್ಲವೆ ಹೋದೀತೆ?"

"ಇರಬಹುದಪ್ಪ ...."

"ನೋಡು, ನನ್ನ ಹೊಟ್ಟೆ ಆಹಾರಾಭಾವದಿಂದ ನರಳುತ್ತಿದೆ, ಅದ್ರಿಂದ....'

"ಇರುವಾಗ ಸೀಗಿಸಿಬಿಡಿ ಬನ್ನಿ ಪಾಪ, ಮುಖ ಕೈಕಾಲು ತೊಳೀರಿ....'

"ಹ್ಞಂ. ಆಗ್ಲೀ...'

— ಗೋರಾ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧.

ಎಲ್ಲೆಲ್ಲಿ ಏನೇನು?

ಅಂತರಾಷ್ಟ್ರೀಯ ಮಕ್ಕಳ ಚಿತ್ರಕಲಾ ಸ್ಪರ್ಧೆ

ರಶ್ಯಾದ ಮಕ್ಕಳ ಪತ್ರಿಕೆ "ಯಂಗ್ ಪಯನೀರ್ ಪ್ರಾವ್ದಾ" ಮತ್ತು ವಿದೇಶಗಳೊಡನೆ ಮಿತ್ರತ್ವ ಮತ್ತು ಸಾಂಸ್ಕೃತಿಕ ಸಂಬಂಧಾಭಿವೃದ್ಧಿಯ ಮಕ್ಕಳ ವಿಭಾಗದವರು ಅಂತರಾಷ್ಟ್ರೀಯ ಮಕ್ಕಳ ಚಿತ್ರಕಲಾ ಸ್ಪರ್ಧೆಯೊಂದನ್ನೇರ್ಪಡಿಸಿರುವರು. ಚಿತ್ರಕ್ಕೆ "ನನ್ನ ದೇಶ ನನ್ನ ಮನೆ" ಎಂಬುದು ಮುಖ್ಯ ವಿಷಯವಾಗಿದೆ. ಏಳರಿಂದ ಹದಿನಾರು ವರ್ಷ ಪ್ರಾಯದೊಳಗಿನ ಮಕ್ಕಳು ಇದರಲ್ಲಿ ಭಾಗವಹಿಸಬಹುದು. ಪ್ರತಿಯೊಬ್ಬ ಮಗುವೂ ಹೆಚ್ಚೆಂದರೆ ಐದು ಪೈಂಟಿಂಗ್ ಅಥವಾ ಡ್ರಾಯಿಂಗನ್ನು ಸ್ಪರ್ಧೆಗೆ ಕಳುಹಿಸಬಹುದು.

ಪ್ರಕೃತಿಯ ದೃಶ್ಯ, ಮಗುವು ವಾಸಿಸುವ ನಗರದ ದೈನಂದಿನ ಜೀವನ, ಉತ್ಸವ, ಕ್ರೀಡೆಗಳು ಮತ್ತು ಪ್ರತಿ ದಿನ ನೋಡುವ ಇತರ ಯಾವುದೇ ದೃಶ್ಯದ ಮೇಲೆ ಚಿತ್ರ ಬರೆಯುವುದು. ಚಿತ್ರವನ್ನು ಕಳುಹಿಸಲು ಕೊನೆಯ ದಿನ ಆಗಸ್ಟ್ ಮೂವತ್ತು. ಉತ್ತಮವೆಂದು ಪರಿಗಣಿಸಲ್ಪಟ್ಟ ಚಿತ್ರಗಳಿಗೆ ಬಹುಮಾನಗಳನ್ನೂ, 200 ಚಿತ್ರಗಳಿಗೆ ವಿಶೇಷ ಬಹುಮಾನಗಳನ್ನೂ ಕೊಡಲಾಗುವುದು. ಚಿತ್ರಗಳನ್ನು "ಮಿಸ್ಟರ್ ಎಲ್. ಜುಯೆಂಗ್ಲೇ, ಕಲ್ಚರಲ್ ರಿಲೇಶನ್ಸ್ ಆಫೀಸರ್, ಯು. ಎಸ್. ಎಸ್. ಆರ್. ಕನ್ಸಲೇಟ್ ಜನರಲ್ ಇನ್ ಮದ್ರಾಸ್, ನಾಲ್ಕನೇ ಮೈನ್ ಸ್ಟ್ರೀಟ್, ಅಭಿರಾಮಪುರಂ, ಮದ್ರಾಸ್-18" ಇಲ್ಲಿಗೆ ಕಳುಹಿಸಬಹುದು.

ಸದ್ಯದ ಆಹಾರ ಪರಿಸ್ಥಿತಿ ಬೇಗನೇ ಸುಧಾರಣೆಗೊಂಡೀತೆಂದು ಶ್ರೀ ಟಿ. ಎ. ಪೈಯವರ ಭರವಸೆ

ಬಂಟ್ವಾಳ ತಾಲೂಕು ಸಹಕಾರೀ ಕೃಷಿ ಉತ್ಪಾದನಾ ಮಾರಾಟ ಸಂಘದ ಆಶ್ರಯದಲ್ಲಿನ ಒಂದು ಅಕ್ಕಿ ಮಿಲ್ಲಿನ ಶಂಕುಸ್ಥಾಪನೆ ಮಾಡುತ್ತಾ ಫುಡ್ ಕಾರ್ಪೊರೇಶನಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳು, ಜಿಲ್ಲೆಯ ಈಗಿನ ಆಹಾರ ಪರಿಸ್ಥಿತಿಯು ಬೇಗನೇ ಸುಧಾರಿಸಬಹುದು. ಇನ್ನು ಕೆಲವೇ ದಿನಗಳಲ್ಲಿ ಜಿಲ್ಲೆಗೆ ಹೊರಗಿನಿಂದ ಹೆಚ್ಚಿನ ಅಕ್ಕಿಯನ್ನು ತರಿಸಲಾಗುವುದು ಎಂದು ನುಡಿದರು. ಈ ಪರಿಸ್ಥಿತಿಯನ್ನು ಎದುರಿಸುವಲ್ಲಿ ಜನತೆಯ ಸಂಪೂರ್ಣ ಸಹಕಾರವನ್ನು ಅಪೇಕ್ಷಿಸಿದ ಶ್ರೀ ಪೈಗಳು, ಪರಿಸ್ಥಿತಿ ವಿಷಮಕ್ಕೆ ಹೋಗುವುದೆಂಬ ಸುಳ್ಳು ಹೆದರಿಕೆಯಿಂದ ಇನ್ನಷ್ಟು ಹೆಚ್ಚು ಅಕ್ಕಿ ದಾಸ್ತಾನು ಮಾಡಲು ಹೋಗಿ ಜನರು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಬಾರದು ಎಂದೂ ನುಡಿದರು.

ಇದೇ ಸಂದರ್ಭದಲ್ಲಿ ಸಂಘದ ಆಶ್ರಯದಲ್ಲಿ ಕಟ್ಟಿಸಲಾದ ಹೊಸ ಗೋದಾಮಿನ ಉದ್ಘಾಟನೆಯನ್ನು ಜಿಲ್ಲಾಧಿಕಾರಿ ಶ್ರೀ ಪಿ. ಎಂ. ಮುಣಾಹಿದ್‌ರವರು ನೆರವೇರಿಸಿದರು. ಶ್ರೀ ಪಿ. ಶ್ರೀನಿವಾಸ ರಾಯರು ಸಂಘದ ಅಧ್ಯಕ್ಷರಾಗಿದ್ದ ದಿ| ಬಿ. ಆನಂದ ರೈಯವರ ಭಾವಚಿತ್ರ ಅನಾವರಣ ಮಾಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಎಸ್. ನರ್ಸಪ್ಪಯ್ಯ, ಎಂ. ಎಲ್. ಸಿ. ಯವರು ಈಗಿನ ಆಹಾರ ಪರಿಸ್ಥಿತಿಯು ಕೇವಲ ಹಂಗಾಮಿಯಾಗಿದ್ದು ಅದು ಬೇಗನೇ ಸುಧಾರಿಸುವುದು ಎಂದು ನುಡಿದರು.

ಪ್ರಾರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಪಿ ಯರ್ ಲಕ್ಷ್ಮೀನಾರಾಯಣ ಆಳ್ವರು ಸ್ವಾಗತಿಸಿ, ಕೊನೆಯಲ್ಲಿ ಶ್ರೀ ಬಿ. ಎಲ್. ಅಹಮದ್‌ರವರು ವಂದನಾರ್ಪಣೆಗೈದರು.

ವಾರ್ಷಿಕೋತ್ಸವ

ಮರ್ಣೆ, ತಾ. 9-5-65ರಂದು ಶಾಲಾ ವಾರ್ಷಿಕೋತ್ಸವವು ಶ್ರೀ ಮಧ್ವರಾಜ್, ಎಂ. ಎಲ್. ಎ., ಇವರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ ಪಿ. ಶಿವಾಜಿ ಶೆಟ್ಟಿ, ಎಡ್ವಕೇಟ್, ಉಡುಪಿ ಇವರು ನೆಹರೂ, ಕೆನಡಿ ಫೋಟೋ ಅನಾವರಣ ಮಾಡಿದರು. ಶ್ರೀ ಎಂ. ವಾಸುದೇವ ಭಟ್ಟರು ಸ್ವಸ್ತಿವಾಚನ ಮಾಡಿದರು. ಎಕೆಡೆಮಿ ಆಫ್ ಜನರೆಲ್ ಎಜುಕೇಶನ್‌ನವರ ಉಡುಪನ್ನು ಬಡ ವಿದ್ಯಾರ್ಥಿಗಳಿಗೆ ಅಧ್ಯಕ್ಷರು ವಿತರಣೆ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಗ್ರಾಮವು ಸುತ್ತಮುತ್ತಲಿನ ಹೊಳೆಗಳಿಂದಾವೃತವಾಗಿರುವುದರಿಂದ ಸಾರಿಗೆ ಸಂಪರ್ಕವು ವೃದ್ಧಿಯಾಗುವಂತೆ ಮತ್ತು ಇಲ್ಲಿನ ಹೊಲಿಗೆ ಕೇಂದ್ರಕ್ಕೆ ಒಂದು ಮಿಶನ್ ಒದಗಿಸುವಂತೆ ಪ್ರಯತ್ನಿಸುವುದಾಗಿ ಭರವಸೆಯಿತ್ತರು. ಬಳಿಕ ಶಾಲಾ ಮಕ್ಕಳಿಂದ, ಮಹಿಳಾ ಮಂಡಳದವರಿಂದ, ಹಳೆ ವಿದ್ಯಾರ್ಥಿಗಳಿಂದ ವಿವಿಧ ವಿನೋದಾವಳಿಗಳೊಂದಿಗೆ ಸಭೆ ಮುಕ್ತಾಯವಾಯಿತು.

ಪ್ರಜಾ ಸೋಶಲಿಸ್ಟ್ ಪಾರ್ಟಿಯ ಪ್ರಚಾರಾರ್ಥ ಸಭೆ

ಉಡುಪಿ: ಉಡುಪಿಯ ಪ್ರಜಾ ಸೋಶಲಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ರಥಬೀದಿಯಲ್ಲಿ ಕಳೆದ ತಾ. 18ರಂದು ಶ್ರೀ ಆರ್. ನರಸಿಂಹ ಪಾಂಗಣ್ಣಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅಖಿಲ ಭಾರತ ಪ್ರಜಾ ಸೋಶಲಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರೇಮ್ ಭಾಸಿನ್ ಇವರು ಮುಖ್ಯ ಭಾಷಣಕಾರರಾಗಿದ್ದರು. ಮೈಸೂರು ವಿಧಾನ ಸಭೆಯಲ್ಲಿ ವಿರೋಧಿ ಪಕ್ಷದ ನಾಯಕ ಶ್ರೀ ಶಿವಪ್ಪ, ಶ್ರೀ ಅಂಜನಪ್ಪ, ಶ್ರೀ ಬಿ. ಭಾಸ್ಕರ ಶೆಟ್ಟಿ ಹಾಗೂ ಡಾ| ಸಂಜೀವನಾಥ ಐಕಳರೂ ಈ ಸಂದರ್ಭ ಮಾತನಾಡಿ ಆಹಾರ ಸಮಸ್ಯೆ ಹಾಗೂ ಇನ್ನಿತರ ಭೀಕರ ಸಮಸ್ಯೆಗಳನ್ನು ವಿವೇಚಿಸಿ, ಸರಕಾರ ಇವುಗಳನ್ನು ಪರಿಹರಿಸುವಲ್ಲಿ ವಿಫಲವಾಗಿದೆಯೆಂದರು.

ಉಡುಪಿ—ಮಣಿಪಾಲಕ್ಕೆ ನೀರು ಸರಬರಾಜು

ಉಡುಪಿ ಮತ್ತು ಮಣಿಪಾಲಗಳಿಗೆ ನೀರು ಸರಬರಾಜು ಮಾಡುವ ಯೋಜನೆಗೆ ಮೈಸೂರು ಸರಕಾರವು ೪೪ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ. ಸರಕಾರ ಉಡುಪಿ ನಗರಸಭೆ ೨೦ ಲಕ್ಷ ರೂ.ಗಳನ್ನು ಕೊಡುವರು. ಉಳಿದ ೨೨ ಲಕ್ಷ ರೂ.ಗಳನ್ನು ನಗರಸಭೆ ಸಾಲಿಯಾನ್ ಸೇಕಡಾ ೫|| ಸಲೆ ಬಡ್ಡಿಯಲ್ಲಿ ಸಾಲ ಎತ್ತಬೇಕಾಗಿದ್ದು ಅದಕ್ಕೆ ಸರಕಾರ ಭದ್ರತೆಯಾಗಿ ನಿಲ್ಲುವುದು. ಈ ಯೋಜನೆಯು ಕೈಗೊಳ್ಳಲ್ಪಟ್ಟು 1966ನೇ ಇಸವಿಯ ಅಂತ್ಯದೊಳಗೆ ಪೂರ್ಣವಾಗುವ ನಿರೀಕ್ಷೆಯಿದೆ. ಸಮೀಪದ ಸುವರ್ಣಾ ನದಿಯ ನೀರನ್ನು ಇದಕ್ಕೆ ಉಪಯೋಗಿಸಲಾಗುವುದು.

(ನಾಲ್ಕನೇ ಪುಟದಿಂದ)

ಗಲಿಬಿಲಿ—ಬೆದರಿಕೆಗಳು ತಾಂಡವವಾಡತೊಡಗಿದುವು; ಅವನ್ನು ದೂರ ಮಾಡುವಲ್ಲಿ ಶಾಸ್ತ್ರಿ ಸಂಪುಟವು ಪರಿಪೂರ್ಣ ಯಶಸ್ವಿಯಾಗಿಲ್ಲವಾದರೂ ಯಶಸ್ವಿತೆಯ ದಾರಿಯಲ್ಲಿ ಪಾದಾರ್ಪಣ ಮಾಡಿದೆಯೆಂದು ಮಾತ್ರ ಹೇಳಬಹುದು.

ಅನರ್ಥ—ಅಪಾರ್ಥ

ವಿಯೆತ್‌ನಾಮದಲ್ಲಿ ಬಾಂಬು ದಾಳಿ ನಿಲ್ಲಿಸಬೇಕೆಂದು ಅಮೇರಿಕೆಯನ್ನು ಕೇಳಿಕೊಂಡಷ್ಟರಿಂದಲೇ ಪ್ರಧಾನಿ ಶಾಸ್ತ್ರಿಯವರ ಅಮೇರಿಕನ್ ಭೆಟ್ಟಿಯನ್ನು ಅಧ್ಯಕ್ಷ ಜಾನ್ಸನ್ನರು ಮುಂದೆ ಹಾಕಿದರು. ರಶ್ಯ—ಭಾರತ ಪ್ರಧಾನಿಗಳ ಜಂಟಿ ಹೇಳಿಕೆಯಲ್ಲಿಯೂ ಇದೇ ಅರ್ಥ ಹುದುಗಿರುವುದು ಹೆಚ್ಚಿನ ಅಮೇರಿಕನ್ನರಿಗೆ ಸರಿ ತೋರಲಾರದು. ಭಾರತವು ಶಾಂತಿ ಮತ್ತು ಸಹಜೀವನದ ತತ್ವಗಳನ್ನು ಅನುಸರಿಸುತ್ತಿರುವುದರಿಂದಲೇ ಹೀಗೆ ತನ್ನ ಅಭಿಪ್ರಾಯ ವ್ಯಕ್ತಪಡಿಸಿತೆಂದು ತಿಳಿಯುವವರು ಎಷ್ಟು ಜನರಿದ್ದಾರೆ? ಭಾರತದ ವಿದೇಶ ನೀತಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ, ಯಾವ ಮನಸ್ತಾಪಕ್ಕೂ ಎಡೆಯಿಲ್ಲ; ಪೂರ್ವಗ್ರಹ ಪೀಡಿತರಾದವರಿಗೆ ಏನೂ ಹೇಳಬಾರದು.

ಕೃತಜ್ಞತಾ ಸಮರ್ಪಣೆ

ಮಹನೀಯರೇ,

ನಮ್ಮ ಪ್ರಥಮ ಪುತ್ರಿ ಹರ್ಷಿಣಿಯ ವಿವಾಹ ಸಮಾರಂಭವು ತಾರೀಕು 16-5-1965ರಂದು ಗೋಧೂಳಿ ಮುಹೂರ್ತದಲ್ಲಿ ಮಂಗಳೂರಿನ ಮುನಿಸಿಪಲ್ ಟೌನ್ ಹಾಲಿನಲ್ಲಿ ಶ್ರೀ ಕಪಂದಲೆ ಪಂ. ರಿ ಮೋನಪ್ಪ ಹೆಗ್ಡೆಯವರ ಪುತ್ರ ಡಾ| ಎಂ. ಮೋಹನದಾಸ ಹೆಗ್ಡೆಯವರೊಡನೆ ನೆರವೇರಿತು. ಈ ಸಮಾರಂಭಕ್ಕೆ ಆಗಮಿಸಿ ಉಡುಗೊರೆ ಮೊದಲಾದವುಗಳನ್ನಿತ್ತು, ಶುಭ ಸಂದೇಶಗಳನ್ನು ಕಳಿಸಿ ವಧೂವರರನ್ನು ಆಶೀರ್ವದಿಸಿದ ಸಮಸ್ತ ಹಿತಾಕಾಂಕ್ಷಿಗಳಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು

ಶ್ರೀಮತಿ ಮತ್ತು ಶ್ರೀ ಎನ್. ಮೋಹನದಾಸ ಅಡ್ಯಂತಾಯ.

ಶಾಂತಿನಿಕೇತನ ಕಾರ್ಕಳ.

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ. ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ತಿದ್ದುಪಡಿ

ತಾ. 20-5-1965ರ "ನವಯುಗ"ದ ಸಂಚಿಕೆಯಲ್ಲಿ ಪುಟ ೧೦ರಲ್ಲಿ ಪ್ರಕಟವಾದ ವಿಜಯಾ ಬ್ಯಾಂಕಿನ ಪ್ರಗತಿಯ ವಿಮರ್ಶೆಯಲ್ಲಿ ಮೂರನೆ ಪಾರಾದ 5, 6 ಮತ್ತು 7ನೇ ಗೆರೆಗಳಲ್ಲಿ ಅಚ್ಚಾದ "ಈ ವರ್ಷಾಂತ್ಯಕ್ಕೆ ಠೇವಣಾತಿಯು 2,52,09,000 ರೂ.ಗಳಿಗೇರಿದೆ" ಎಂಬುದನ್ನು "ಈ ವರ್ಷಾಂತ್ಯಕ್ಕೆ ಠೇವಣಾತಿಯು 2,62,09,000 ರೂ.ಗಳಷ್ಟು ಏರಿದೆ. ಅಂದರೆ, ಇದೀಗ ರೂ. 3-97 ಕೋಟಿಯನ್ನು ಮುಟ್ಟಿದೆ"ಯೆಂದು ತಿದ್ದಿ ಓದಿಕೊಳ್ಳಬೇಕಾಗಿ ವಿನಂತಿ. ದೋಷಪೂರ್ಣ ಮುದ್ರಣಕ್ಕಾಗಿ ವಿಷಾದಿಸುತ್ತೇವೆ. —ಸಂ. ನ

ನಚಿಕೇತ'ರ

ಹೃದಯಸ್ಪರ್ಶಿ
ನವೀನ ಕಾದಂಬರಿಗಳು

ಹಸುರು ಹಂಸ

ಬೆಲೆ: ರೂ. ಎರಡು.

ಋಣ ಯಾತ್ರೆ

ಬೆಲೆ ರೂ 1-50 ನ. ಪೈಸೆ.

ಭಾವಾರ್ಚನೆ

ಬೆಲೆ ರೂ. 2—00

ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ.

O.S. No. 20/1965

ಹರಿಯಣ್ಣ ಶೆಟ್ಟಿ —ವಾದಿ.

ಮುತ್ತಕ್ಕ ಸೆಡ್ತಿ ಸಹಾ— ಪ್ರತಿವಾದಿಗಳು.

ಸದ್ರಿ ದಾವೆಯ 3ನೇ ಪ್ರತಿವಾದಿ ಶೀನಶೆಟ್ಟಿ ಮುತ್ತಕ್ಕ ಸೆಡ್ತಿಯ ಮಗ ಕುಂದಾಪುರ ತಾಲ್ಲೂಕು ಇಡೂರು ಕುಂಜ್ಞಾಡಿಗದ್ದೆಯವರು. ಇವರಿಗೆ—

ನೀವು ಕೂಡಾ ಪ್ರತಿವಾದಿಗಳ ಮೇಲೆ ಈ ದಿನ ಹಣ ಬಡ್ಡಿ ಕೂಡಾ ರೂಪಾಯಿ 640-87 ಪೈಸೆ, ವ ಮುಂದಿನ ಬಡ್ಡಿ, ಕೋರ್ಟು ಖರ್ಚು ಬಗ್ಗೆ ಮಾಡಿದ ಮೇಲ್ಕಂಡ ವಾದಿ ದಾವಾ ನಿಮ್ಮ ಹಾಜರಾತಿಬಗ್ಗೆ ಅಟ್ಟೈರಿ ಸಾರಿ ತಾ. 14-6-65ಕ್ಕೆ ಇಟ್ಟಿದೆ. ಈ ಕುರಿತು ನಿಮ್ಮ ಆಕ್ಷೇಪ ಇದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ತಾರೀಕಿನಲ್ಲಿ ಹಗಲು 11 ಗಂಟೆಗೆ ಸ್ವತಹ ವ ವಕೀಲರ ಮುಖಾಂತರ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು. ತಿಳಿದಿರಲಿ.

(ಕೋರ್ಟು ಹುಕುಂ ಪ್ರಕಾರ)

ಎ. ರಾಜೀವ ಶೆಟ್ಟಿ.
ವಾದಿಯ ಪರ ಎಡ್ವಕೇಟ್

ಕುಂದಾಪುರ ತಾ. 22—4—65

ಮನೆಗೆ ಮತ್ತೆ ಮರಳಲಿಲ್ಲ

(ಎರಡನೇ ಪುಟದಿಂದ)

ತೆಯು ಅವಳನ್ನು ಒಪ್ಪಿಗೆ ಕೊಡುವಂತೆ ಮಾಡಿತು.

ಪೆಠಿಕನು ಕಲ್ಕತ್ತೆಗೆ ಹೋಗುವುದು ನಿಶ್ಚಯವಾದಂದಿನಿಂದ ಪ್ರತಿದಿನವೂ, ಮಾವನೊಂದಿಗೆ ಹೊರಡುವ ದಿನವನ್ನು ಕೇಳುತ್ತಿದ್ದನು. ಎಲ್ಲಿಯಾದರೂ ಬಿಟ್ಟು ಹೋಗುವರೆಂದು ನೆನೆಸಿಯೋ ಏನೋ ಎಷ್ಟೋ ರಾತ್ರಿ ನಿದ್ದೆ ಕೂಡಾ ಮಾಡುತ್ತಿರಲಿಲ್ಲ. ಹೋಗುವ ಮೊದಲ ದಿನಗಳಲ್ಲಿ ನನ್ನ ತಮ್ಮನ ಮೇಲೆ ಅವನಿಗೆ ತುಂಬಾ ಪ್ರೀತಿಯೂ ಮೂಡಿತು. ಯಾವಾಗಲೂ ಅವನಿಗೆ ಮುಟ್ಟಲು ಬಿಡದ ತನ್ನ ಗಾಳಿಪಟ, ಮೀನಿನ ಗಾಳ, ದೊಡ್ಡ ಚೂರಿ, ಗೋಳಿಗಳನ್ನು ಅವನ ವಶಕ್ಕೆ ಒಪ್ಪಿಸಿದನು

ರಘುವೀರ ಹಾಗೂ ಪೆಠಿಕರು ಕಲ್ಕತ್ತೆಯನ್ನು ಸೇರಿದ ಕೂಡಲೇ ಪೆಠಿಕನು ತನ್ನ ಅತ್ತೆಯನ್ನು ನೋಡಿದನು. ಅವಳನ್ನು ನೋಡಿದೊಡನೆಯೇ ಅವನ ಆಶಾಗೋಪುರದ ಬುಡಕ್ಕೇ ಏಟು ಬಿದ್ದಂತಾಯಿತು. ತನ್ನ ಮೂರು ಮಕ್ಕಳೇ ಅವಳಿಗೆ ಸಾಕೆನಿಸಿತ್ತು. ಈ ಹದಿನಾಲ್ಕು ವರ್ಷ ಪ್ರಾಯದ ಹಳ್ಳಿಯ ಮಂಗವು ಅವಳ ಸಂಸಾರದಲ್ಲಿ ಬೇಡವೆನಿಸಿತು.

ಈ ಅಜಾಗರೂಕತೆಯನ್ನು ಮಾಡುವ ಮೊದಲೇ ರಘುವೀರನು ಎರಡು ಭಾರಿ ಆಲೋಚಿಸಿ, ಸರಿ ಎಂದೆನಿಸಿ ಕೊಂಡಿದ್ದನು. ಈಗ ಹೆಂಡತಿಯ ವರ್ತನೆಯನ್ನು ನೋಡಿ ತುಂಬಾ ಬೇಸತ್ತನು.

ಮೊದಲೆ ಹದಿನಾಲ್ಕು ವರ್ಷದ ಹುಡುಗರೆಂದರೆ ಎಲ್ಲರಿಗೂ ತಾತ್ಸಾರ ಹೊಸ ಊರು, ಹೊಸ ಮನೆ, ಹೊಸ ಜನರನ್ನು ನೋಡಿಯೂ, ಅತ್ತೆಯ ಕ್ರೂರ ಕಣ್ಣನ್ನು ನೋಡಿಯೂ, ಪೆಠಿಕನು ಬೇಸತ್ತು ಹೋಗಿದ್ದನು.

ಸಮಯವು ಉರುಳುತ್ತಾ ಇತ್ತು. ದಿನ ಕಳೆದಂತೆ ಅವನಿಗೆ ಆ ಮನೆಯೇ ಬಂಧನದಂತೆ ಕಂಡಿತು. ಎಲ್ಲ ಯಾರೂ ನದಿಯ ದಡದಲ್ಲಿ ಸ್ವಲ್ಪ ವಾಯು ಸೇವನೆ ಮಾಡುವ ಎಂದರೆ, ಅಂತಹ ಸ್ಥಳವೇ ಅಲ್ಲಿರಲಿಲ್ಲ. ಕಲ್ಕತ್ತೆಯ ದಟ್ಟವಾದ ಒತ್ತೊತ್ತು ಇರುವ ಮನೆಗಳ ಸಾಲು ಅವನ ಮನಸ್ಸನ್ನು ಕುಗ್ಗಿಸಿತ್ತು. ಹಿಂದೆ ತನ್ನ ಒಡನಾಡಿಗಳೊಂದಿಗೆ ವಿಶಾಲವಾದ ಸ್ಥಳದಲ್ಲಿ, ಒಳ್ಳೆಯ ಗಾಳಿಯಲ್ಲಿ, ಗಾಳಿಪಟವನ್ನು ಹಾರಬಿಡುತ್ತಿದ್ದುದು, ತನ್ನ ಹಳ್ಳಿಯಲ್ಲಿ ದೈತ್ಯಾಕಾರದಲ್ಲಿ ಹರಿಯುವ ನದಿಯ ಚಿಕ್ಕ ಉಪನದಿಯಲ್ಲಿ ಮನ ಬಂದಾಗ ಮನಸ್ಸಿದಷ್ಟು ಕಾಲ ಆಟವಾಡುತ್ತಿದ್ದುದು ಇತ್ಯಾದಿಗಳು ಆತನ ನೆನಪಿಗೆ ಬಂದ, ತನ್ನ ತಾಯ್ನಾಡಿಗೆ ಹೋಗುವ ಆಶೆಯು ಬಲವಾಗುತ್ತಿತ್ತು. ತಾಯಿಯನ್ನು ಕಳೆದುಕೊಂಡ ಜನದ ಕರುವು ತಾಯಿಗಾಗಿ ಹಂಬಲಿಸುವಂತಾಯಿತು ಅವನ ಸ್ಥಿತಿ. ಒಂದು ರೀತಿಯ ಪ್ರೇಮ ಭಾವನೆಯು ಅವನನ್ನು ಮನೆಗೆ ಹೋಗಲು ಒತ್ತಾಯಿಸುವಂತಾಯಿತು.

ಶಾಲೆಗೆ ಪ್ರತಿದಿನವೂ ಹೋಗುತ್ತಿದ್ದರೂ ಇಡೀ ತರಗತಿನಲ್ಲಿಯೇ ಪೆಠಿಕನು ಅತೀ ದೊಡ್ಡ ಹುಡುಗನೆನಿಸಿಗೊಂಡನು. ಯಾವಾಗಲೂ ಮನಸ್ಸಿನಲ್ಲಿ ತವರೂರಿಗೆ ಹೋಗುವ ಅಭಿಲಾಷೆಯು ಉಕ್ಕಿ ಬರುತ್ತಿತ್ತು. ಅಲ್ಲಿಯ ಸೌಂದರ್ಯವನ್ನು ನೆನೆಸಿಕೊಂಡು ಬಾಹ್ಯ ಪ್ರಪಂಚವನ್ನೇ ಮರೆತು ಬಿಡುತ್ತಿದ್ದನು. ಪಕ್ಕನೆ ಉಪಾಧ್ಯಾಯರು ಕೇಳುವ ಪ್ರಶ್ನೆಗಳಿಂದ ಎಚ್ಚೆತ್ತು ಮೂಕನಂತೆ ನಿಲ್ಲುತ್ತಿದ್ದನು ಪಾಠದಲ್ಲಿ ಮಾತ್ರ ಹೀಗಲ್ಲ; ಆಟದಲ್ಲಿಯೂ ಔದಾಸೀನ್ಯವನ್ನು ತೋರಿಸುತ್ತಿದ್ದನು. ಮಕ್ಕಳೆಲ್ಲರೂ ಆಟವಾಡುವಾಗ ಇವನು ಮಾತ್ರ ಕಿಟಕಿಯಿಂದ ಕಲ್ಕತ್ತೆಯ ಮನೆಗಳ ಮಾಡುಗಳನ್ನು ನೋಡುತ್ತಿದ್ದನು. ಒಂದುವೇಳೆ ಆತನು ಆಟವಾಡಲು ಹೋದರೂ, ಎದೆನೋವು ಉಂಟಾಗುತ್ತಿತ್ತು.

ಒಂದು ದಿನ ಅವನು ತನ್ನ ಮನಸ್ಸನ್ನು ಗಟ್ಟಿಮಾಡಿಕೊಂಡು ಮಾವನ ಬಳಿಗೆ ಹೋಗಿ "ಮಾವ ನಾನು ಯಾವಾಗ ಊರಿಗೆಹೋಗಲಿ?" ಎಂದು ಕೇಳಿದನು.

ರಘುವೀರನು "ಏನು ಅಷ್ಟು ಅವಸರ? ರಜೆಯಲ್ಲಿ ಹೋಗುವ" ಎಂದು ಸಮಾಧಾನಿಸಿದನು. ಆದರೆ ರಜೆಯು ಸಿಕ್ಕಲು ಇನ್ನೂ ತುಂಬಾ ಸಮಯವಿತ್ತು.

ಮತ್ತೊಂದು ದಿನ ಪೆಠಿಕನು ತನ್ನ ಪಾಠ ಪುಸ್ತಕವನ್ನು ಕಳೆದುಕೊಂಡನು. ಪುಸ್ತಕವಿದ್ದೇ ಅವನಿಗೆ ಪಾಠವು ಕಷ್ಟವಾಗುತ್ತಿತ್ತು. ಈ ಪುಸ್ತಕವನ್ನು ಕಳೆದುಕೊಂಡುದರಿಂದ ಕಲಿಯಲು ಸಾಧ್ಯವಿರಲಿಲ್ಲ. ಆತನ ಉಪಾಧ್ಯಾಯರು ದಿನಾಲೂ, ಸ್ವಲ್ಪವೂ ಕರುಣೆ ಇಲ್ಲದ ರೀತಿಯಲ್ಲಿ ಬೆತ್ತದಿಂದ ಹೊಡೆಯುತ್ತಿದ್ದರು. ಅದೂ ಸಾಲದೆ ಅವಮಾನವನ್ನು ಮಾಡುತ್ತಿದ್ದರು. ಸಹಪಾಠಿಗಳು ಮಾತ್ರವಲ್ಲ ಸ್ವಂತ ಮಾವನ ಮಕ್ಕಳು ಕೂಡಾ ಅವಮಾನವನ್ನು ಮಾಡಲು ಆರಂಭ ಮಾಡಿದರು. ಕೊನೆಗೆ ಆತನು ಮೆಲ್ಲನೆ ತನ್ನ ಅತ್ತೆಯೊಂದಿಗೆ ಪುಸ್ತಕವನ್ನು ಬೇಡಿದನು.

ಕೂಡಲೇ ಅವಳು ಭೀಕರ ರೂಪ ತಾಳುತ್ತಾ, ಕೆಂಡದ ಕಣ್ಣುಗಳನ್ನು ಮಾಡುತ್ತ, ಬೈದು ಭಂಗಿಸಿ "ನಿನಗೆ ತಿಂಗಳಿಗೆ ಐದು ಪುಸ್ತಕದಂತೆ ತೆಗೆದು ಕೊಡಲು ಸಾಧ್ಯವಿಲ್ಲ, ನನ್ನ ಸಂಸಾರವೇ ನನಗೆ ದೊಡ್ಡದಾಗಿದೆ" ಎಂದು ಹೇಳಿ ಮುಗಿಸಿದಳು.

ಆ ದಿನ ಎಂದಿನಂತೆ ಶಾಲೆಯಲ್ಲಿ ಪೆಟ್ಟಿನ ಪೂಜೆ ನಡೆಯಿತು. ಮನೆಗೆ ಸಂಜೆ ಬರುವಾಗ ಸಹಿಸಲಾಗದ ತಲೆನೋವು ಅವನನ್ನು ಬಾಧಿಸುತ್ತಿತ್ತು. ಚಳಿಯಿಂದ ನಡುಗುತ್ತಿದ್ದನು. ಅವನನ್ನು ಮಲೇರಿಯಾ ಜ್ವರವು ಆಕ್ರಮಿಸಿತ್ತು. ಅತ್ತೆಯು ಅವನನ್ನು ಹೀಯಾಳಿಸಿ ಹೇಳುತ್ತಿದ್ದ "ಪೀಡೆ" ಎಂಬ ಶಬ್ದವು ಅವನ ಮನಸ್ಸನ್ನು ಕೊರೆಯುತ್ತಿತ್ತು.

ಇಡೀ ರಾತ್ರಿ ಮಳೆಯು ಭೋರ್ಗರೆಯುತ್ತಿತ್ತು. ಮರುದಿನ ಬೆಳಗ್ಗೆ ಪೆಠಿಕನ ಹಾಸಿಗೆಯು ಮಾತ್ರ ಬಿಡಿಸಿದ್ದಂತೆಯೇ ಇತ್ತು. ಆದರೆ ಪೆಠಿಕನು ಮಾತ್ರ ಅಲ್ಲಿ ಇರಲಿಲ್ಲ ನೆರೆಕರೆಗೆ ಹೋಗಿರಬಹುದೆಂದು ಹುಡುಕಿದರು ಅಲ್ಲಿಯೂ ಇಲ್ಲ. ಬೆಳಗಾದರೂ ಮಳೆಯು ನಿಂತಿರಲಿಲ್ಲ. ಆ ಮಳೆಗೆ ಹೊರಗೆ ಹೋಗಲೂ ಯಾರೂ ಒಪ್ಪಲಿಲ್ಲ ಕಡೆಗೆ ರಘುವೀರನು ಪೋಲೀಸರ ಸಹಾಯ ಪಡೆಯ ಬೇಕಾಯಿತು.

ಆ ದಿನವು ಮುಗಿದು ರಾತ್ರಿಯಾಗುವ ಹೊತ್ತಿಗೆ ಪೋಲೀಸ್ ವಾಹನವು ರಘುವೀರನ ಮನೆಯ ಮುಂದೆ ಗೇಟಿನಲ್ಲಿ ನಿಂತಿತು. ಇಬ್ಬರು ಪೋಲೀಸರು. ಪೆಠಿಕನನ್ನು ಎತ್ತಿ ಕೊಂಡು ಒಳಬಂದರು. ಆಕಾಶವೇ ತೂತು ಬಿದ್ದು ನೀರು ಸುರಿಯುವಂತೆ ಮಳೆಯು ಬರುತಿತ್ತು. ರಸ್ತೆಗಳೆಲ್ಲಾ ಸಣ್ಣಸಣ್ಣ ಹೊಳೆಗಳಾಗಿದ್ದುವು. ಪೆಠಿಕನ ದೇಹವು ತಲೆಯಿಂದ ಕಾಲಿನವರೆಗೆ ಒದ್ದೆಯಾಗಿತ್ತು. ಮೈಯಲ್ಲಿ ಮಣ್ಣು ತುಂಬಿ ಹೋಗಿತ್ತು. ರಘುವೀರನು ಪೋಲಿಸರ ಕೈಯಿಂದ ಪೆಠಿಕನನ್ನು ತೆಗೆದುಕೊಂಡು ಒಳಗೆ ನಡೆದನು. ಅವನಿಗೆ ಏನು ಮಾಡಬೇಕೆಂದು ತೋಚದಂತಾಯಿತು. ರಘುವೀರನ ಹೆಂಡತಿಯು ಇದನ್ನು ನೋಡಿ "ಈ ಹುಡುಗ ನಮಗೆ ಎಷ್ಟು ಉಪದ್ರವ ಕೊಡುತ್ತಾನೆ. ಈ ಪೀಡೆಯನ್ನು ಬೇಗನೇ ಹಿಂದೆ ಕಳುಹಿಸಿ ಕೊಡಿ" ಎಂದಳು.

ಪೆಠಿಕನು ಈ ಮಾತುಗಳನ್ನು ಕೇಳಿ "ಮಾವ, ನಾನು ಮನೆಗೆ ಹೋಗುತ್ತಿದ್ದೆ. ಆದರೆ ಅವರು ನನ್ನನ್ನು ಹಿಂದಕ್ಕೆ ಕರೆದು ತಂದರು" ಎಂದು ಹೇಳಿದನು.

ರಾತ್ರಿಯಲ್ಲಿ ಜ್ವರವು ಒಂದೇ ಸಮನೆ ಏರುತ್ತಿತ್ತು. ರಘುವೀರನು ಡಾಕ್ಟರರನ್ನು ಕರೆದು ತಂದನು. ಪೆಠಿಕನು ಮೆಲ್ಲನೆ ಕಣ್ಣು ತೆರೆದನು. ಮೇಲೆ ನೋಡಿದನು "ಮಾವ ನನಗೆ ರಜೆ ಸಿಕ್ಕೀತೇ? ಯಾವಾಗ ನಾನು ಊರಿಗೆ ಹೋಗಲಿ?" ಎಂದು ಕೇಳಿದನು.

ರಘುವೀರನು ಪೆಠಿಕನ ಬಳಿಯಲ್ಲಿಯೇ ಕುಳಿತುಕೊಂಡು, ಅವನ ಕೆಂಡದಂತೆ ಇದ್ದ ಕೈಯನ್ನು ಹಿಡಿದುಕೊಂಡು, ಇಡೀ ರಾತ್ರಿಯನ್ನು ರೋಧಿಸಿಯೇ ಕಳೆದನು. ಪುನಃ ಹುಡುಗನು ಕೂಗಿದನು "ಅಮ್ಮ...ನನಗೆ ಪೆಟ್ಟು ಹೊಡೆಯಬೇಡಮ್ಮ: ನೋವಾಗುತ್ತದೆ....ಇನ್ನು ನಾನು ಸತ್ಯವನ್ನೇ ಹೇಳುತ್ತೇನಮ್ಮ..." ಎನ್ನುತ್ತಿದ್ದನು.

ಮರುದಿನ ಪೆಠಿಕನ ಕಾಯಿಲೆಯು ಇನ್ನೂ ಉಲ್ಬಣಿಸಿತ್ತು. ಅವನ ಕಣ್ಣುಗಳು "ಯಾರನ್ನೋ ಅರಸುವಂತೆ ಅವನು ಕೋಣೆ ಇಡೀ ನೋಡುತ್ತಿದ್ದನು. ಕಡೆಗೆ ಗಸೋಕು ಗೋಡೆಗೆ ಮುಖ ಮಾಡಿದನು.

ರಘುವೀರನಿಗೆ ಇದು ಅರ್ಥವಾಯಿತು.' ಮಗೂ ಪೆಠಿಕ್ ನಿನ್ನ ತಾಯಿಗೆ ನಾನು ಕರೆ ಕಳುಹಿಸಿದ್ದೇನೆ. ಅವಳು ಈ ಹೊತ್ತು ಬರಬಹುದು" ಎಂದನು.

ಆ ದಿನವು ಅಂತ್ಯವಾಯಿತು. ರಾತ್ರಿ ಡಾಕ್ಟರರು ಪರೀಕ್ಷೆ ಮಾಡಿದರು. "ಇನ್ನು ಮದ್ದಿನ ಅಗತ್ಯವಿಲ್ಲ. ರೋಗವು ಮಿತಿ ಮೀರಿದೆ" ಎಂದರು.

ಪೆಠಿಕನು ಹಡಗಿನಲ್ಲಿ ನೀರು ಅಳತೆ ಮಾಡುವವನಂತೆ ನೀರಿನಆಳವನ್ನು ಗಟ್ಟಿಯಾಗಿ ಎಣಿಕೆ ಮಾಡುತ್ತಿದ್ದನು. ಈಗ ನಿಜಕ್ಕೂ ಅವನು ಆಳವಾದ ಸಮುದ್ರದ ಮಧ್ಯದಲ್ಲಿ ಇದ್ದಂತೆ ಇತ್ತು ಅವನ ಅವಸ್ಥೆ.

ಆ ದಿನವು ಕೊನೆಗೊಳ್ಳುವ ಮೊದಲೇ ತಾಯಿಯು ಬಿರುಗಾಳಿಯಂತೆ ಕೋಣೆಯೊಳಗೆ ಧಾವಿಸಿ ಬಂದು ಪೆಠಿಕನ ಮೇಲೆ ಎರಗಿದಳು ರೋಧಿಸುತ್ತ "ಅಯ್ಯೋ ನನ್ನ ಪ್ರೀತಿಯ ಪುತ್ರಾ" ಎಂದಳು. ರಘುವೀರನು ಅವಳನ್ನು ಸಮಾಧಾನಪಡಿಸಲು ಪ್ರಯತ್ನಿಸಿದನು.

ಪೆಠಿಕನು ಮೆಲ್ಲನೆ ಎಚ್ಚೆತ್ತು ಕಣ್ಣು ಬಿಟ್ಟು ಕೈ ಅಲ್ಲಾಡಿಸಿ "ಡಾ!" ಎಂದನು. ಅವನ ತಾಯಿಯು ಪುನಃ ರೋಧಿಸಿದಳು, "ಅಯ್ಯೋ ಪೆಠಿಕ್! ನಿನ್ನ ತಾಯಿಯನ್ನು ಬಿಟ್ಟು ಹೋಗಬೇಡ-ಹೋಗಬೇಡ" ಎಂದಳ.

ಮೆಲ್ಲನೆ ಪೆಠಿಕನು ಕಣ್ಣು ತೆರೆದು ಇಡೀ ಕೋಣೆ ಎಲ್ಲಿ ಇದ್ದವರೆಲ್ಲರನ್ನೂ ನೋಡಿದನು. ಆದರೆ ಹೆಚ್ಚು ಹೊತ್ತು ಹೀಗೆ ನೋಡಲು ಅವನಿಗೆ ಅಸಾಧ್ಯವಾಯಿತು. ಕಡೆಗೆ ಮೆಲ್ಲನೆ "ಅಮ್ಮ...ನ...ನ...ಗೆ....ರಜೆ....ಯು.. ಸಿಕ್ಕಿತು" ಎಂದು ಕಣ್ಣು ಮುಚ್ಚಿದನು. ಇಡೀ ಮನೆಯೇ ಶೋಕ ಸಾಗರದಲ್ಲಿ ಮುಳುಗಿತ್ತು.

(ಠಾಗೋರರು ಬರೆದ "ಹೋಂ ಕಮಿಂಗ್" ಎಂಬ ಕಥೆಯ ಭಾವಾನುವಾದ.)

— — —

NAVAYUGA 27—5—1965
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೨೭-೫-೬೫ರಿಂದ ೨-೬-೬೫ರ ವರೆಗೆ

೧. ಮೇಷ

ನಿಮ್ಮ ಪೌರುಷಕ್ಕೆ ತಕ್ಕುದಾಗಿ ದೈವಬಲವು ಸೇರಿರುವುದರಿಂದ ಯಾವತ್ತೂ ನಿಮ್ಮ ಕಾರ್ಯಕಲಾಪಗಳು ನಿರ್ವಿಘ್ನದಿಂದ ಪೂರ್ಣವಾಗಲಿವೆ ಮಧು ತುಂಬಿದ ಕುಸುಮಗಳನ್ನು ಮಧುಕರಗಳು ಬಂದು ಮುತ್ತುವಂತೆ ನಿಮ್ಮ ಆಪ್ತೇಷ್ಟರು ಬಂಧುಮಿತ್ರರೆಲ್ಲರೂ ತಾವಾಗಿ ಬಂದು ನಿಮ್ಮನ್ನು ಸೇರಲಿರುವರು. ಕೋರ್ಟು ಕಚೇರಿಗಳ ವ್ಯವಹಾರಗಳಲ್ಲಿ ಅಧಿಕ ವ್ಯಯವೂ ಕೆಲವೊಮ್ಮೆ ಪರಾಭವವೂ ಉಂಟಾದೀತು. ಮಕ್ಕಳ ಆರೋಗ್ಯದತ್ತ ದೃಷ್ಟಿಯಿರಲಿ. ತಾ 28, 29, 1, 2 ಈ ದಿನಗಳು ಸುಖಲಾಭ ವಿಜಯಗಳನ್ನೀಯುವವು.

೨. ವೃಷಭ

ಪರಿಸ್ಥಿತಿಯು ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಎಷ್ಟೇ ಕಷ್ಟಪಟ್ಟು ದುಡಿದರೂ ಇಷ್ಟಾರ್ಥಗಳು ಬಿಸಿಲ್ಗುದುರೆಯಂತೆ ದೂರ ದೂರ ಸರಿವವು. ಹದಗೆಟ್ಟ ಆರ್ಥಿಕ ಪರಿಸ್ಥಿತಿಯಿಂದಾಗಿ ಮರ್ಯಾದೆಯುಳಿಸಿಕೊಳ್ಳುವದು ದುಃಸಾಧ್ಯವೆನಿಸಲಿದೆ. ಕಫ ಪಿತ್ತ ದೋಷದಿಂದ ಆರೋಗ್ಯವು ಕೆಡುವದಲ್ಲದೆ ಮಾನಸಿಕ ಅಶಾಂತಿ ಹೆಚ್ಚುವದು ವಿದ್ಯೋಪಜೀವಿಗಳಿಗೀ ಕಾಲವು ತುಂಬ ತ್ರಾಸದಾಯಿಯಾಗಲಿದೆ. ತಾ. 27, 30, 31 ಈ ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

೩. ಮಿಥುನ

ನಿಮ್ಮ ವ್ಯಯಸ್ಥಾನದಲ್ಲಿ ಗ್ರಹ ಚತುಷ್ಟಯರು ಸೇರಿ ನಾನಾ ತರದ ಖರ್ಚುಗಳಿಗೆ ನಿಮ್ಮನ್ನೀಡುಮಾಡಲಿರುವರಾದರೂ ಲಾಭಪತಿಯಾದ ಕುಜನು ಉಪಚಯದಲ್ಲಿದ್ದು ಬಹುಮಟ್ಟಿಗೆ ನಿಮಗಿಂದು ನೆರವಾಗಲಿರುವನು. ಹೆಚ್ಚಿನ ನಿಮ್ಮ ಕಾರ್ಯಕಲಾಪಗಳು ಹೆರವರ ಉಪಟಳ ಹಣದ ತೊಂದರೆಯಿಂದಾಗಿ ಅರ್ಧದಲ್ಲೇ ನಿಲ್ಲಲಿವೆ. ಗೃಹದಲ್ಲಿ ವಿವಾಹಾದಿ ಮಂಗಲ ಕಾರ್ಯಗಳು ನಡೆಯುವ ಯೋಗವಿದೆ. ಬಂಧುಜನರಿಂದ ವಂಚಿತರಾದ ನಿಮಗೆ ತಾ. 27, 28, 29, 1, 2 ಈ ದಿನಗಳು ನೆಮ್ಮದಿಯನ್ನೀಯುವವು.

೪. ಕರ್ಕಟ

ಜನ್ಮಾಂಗಾರಕರ ವಿರೋಧಕ್ಕೆ ಗುರಿಯಾದ ನಿಮಗೆ ವಿನಾಕಾರಣ ಕಲಹ ಆತ್ಮೀಯರ ವಿರಹ ಪ್ರತಿಪಕ್ಷಿಗಳ ಕಿರುಕುಳಗಳು ಮೇಲಿಂದ ಮೇಲೆ ಬರಲಿದ್ದರೂ ದೈವಬಲ ಸಂಪನ್ನರಾದ ನೀವು ಅವನ್ನು ಯಶಸ್ವಿಯಾಗಿ ಎದುರಿಸಿ ಕರ್ತವ್ಯ ಪಥದಲ್ಲಿ ಮುಂದೆ ಸಾಗುವಿರಿ. ನಿಮ್ಮ ಆರ್ಥಿಕ ಪರಿಸ್ಥಿತಿಯು ತುಂಬಾ ಪ್ರಶಂಸಾರ್ಹವಿರುವದು. ಜನತೆಯ ಬೆಂಬಲವು ಸಾಕಷ್ಟಿದೆ ನಿಮಗೆ ಎಂತಹ ಕಾರ್ಯವೂ ಇಂದು ಅಶಕ್ಯವೆನಿಸದು. ತಾ. 28ರಿಂದ 31ರ ವರೆಗಿನ ದಿನಗಳು ಹೆಚ್ಚಿನ ಲಾಭ ಮತ್ತು ವಿಜಯದಾಯಿಗಳಾಗಿವೆ.

೫. ಸಿಂಹ

ಕರ್ತವ್ಯದಕ್ಷರೂ ಕಾರ್ಯಸಾಧಕರೂ ಆದ ನಿಮಗೆ ಹೆರವರ ನೆರವು ಲಭಿಸಲಾರದಾದರೂ ಹಿಡಿದ ಕಾರ್ಯಗಳಲ್ಲಿ ಕೃತಕೃತ್ಯರಾಗುವಿರಿ. ಜನ್ಮಸ್ಥ ಅಂಗಾರಕನಿಂದಾಗಿ ದೇಹಾಲಸ್ಯ ಅಪಘಾತಾದಿಗಳ ಭಯವಿದೆ. ವ್ಯಾಪಾರೀ ವರ್ಗದವರಿಗೆ ಆಕಸ್ಮಿಕ ನಷ್ಟ ವಿನಾಕಾರಣ ಕಲಹಗಳುಂಟಾಗಲಿವೆ. ಗೃಹತಾಪತ್ರಯಗಳಿಂದ ಮುಕ್ತರಾಗಿದ್ದರೂ ಆರ್ಧಾಂಗಿಯು ವಾತ ಪೀಡೆಗೆ ಸಿಲುಕಲಿರುವಳು. ವಾರಾಂತ್ಯದ 4 ದಿನಗಳಲ್ಲಿ ಕಾರ್ಯಜಯ ಧನಲಾಭಗಳುಂಟಾಗುವವು.

೬. ಕನ್ಯಾ

ವಿರೋಧಿಗಳ ಉಪಟಳವು ಹೆಚ್ಚಿರುವದಾದರೂ ಸ್ವಶಕ್ತಿಯಿಂದಲೇ ನೀವವರನ್ನು ಇದಿರಿಸಲು ಶಕ್ತರಾಗಿರುವಿರಿ. ನಿಮ್ಮ ಪ್ರಯತ್ನವು ಪೂರ್ಣ ಫಲವನ್ನೀಯುವದು. ಬಂಧುಮಿತ್ರರ ಸಹಕಾರವು ಸಾಕಷ್ಟಿದ್ದರೂ ದಾಯಾದಿಗಳ ಕಾಟದಿಂದ ರಾಜಕೀಯದಲ್ಲಿ ಪರಾಭವವುಂಟಾದೀತು. ಕಫಪಿತ್ತ ದೋಷದಿಂದ ನಿಮ್ಮ ಆರೋಗ್ಯವು ಕೆಡುವ ಸಂಭವವಿದೆ. ಹಣದ ಲೇವಾದೇವಾ ವಿಚಾರದಲ್ಲಿ ಸ್ವಜನರೊಳು ಮನಸ್ತಾಪ ಹುಟ್ಟುವದು. ತಾ. 27, 1, 2 ಈ ದಿನಗಳು ಅನುಕೂಲವಾಗಿವೆ.

೭. ತುಲಾ

ಅನಿಷ್ಟ ಸ್ಥಾನವಾದ ಅಷ್ಟಮದಲ್ಲಿಂದು ನಾಲ್ಕು ಜನ ಗ್ರಹರ ಸೇರ್ಪಡೆಯಾಗಿರುವದಾದರೂ ನೀವಿಂದು ಭಯಪಡಬೇಕಾದ ಕಾರಣವಿಲ್ಲ. ಏನೇ ಬಂದರೂ ಇದಿರಿಸಿಯೇ ಸಿದ್ಧ ಎಂಬ ದೃಢ ನಿರ್ಧಾರವುಳ್ಳ ನಿಮಗೆ ಬಾಲ್ಯಮಿತ್ರರ ನೆರವು ತುಂಬಾ ಲಭಿಸಲಿದೆ. ಆರ್ಥಿಕ ವಿಚಾರದಲ್ಲಿ ನೀವಿಂದು ನಿಶ್ಚಿಂತರಿರುವಿರಿ. ಗುರುಹಿರಿಯರ ಮತ್ತು ಸೋದರರ ವಿರೋಧಕ್ಕೆ ನೀವಿಂದು ಪಾತ್ರರಾಗುತ್ತಿರಾದರೂ ದಿನಗಳು ಸುಖದಿಂದ ಸಾಗಲಿವೆ. ವಾರಾದಿಯ 3 ದಿನಗಳಲ್ಲಿ ನಿಮ್ಮ ಬಯಕೆಯು ಪೂರ್ಣವಾಗುವುದು.

೮. ವೃಶ್ಚಿಕ

ನೀವೆಷ್ಟೇ ಚತುರರಿದ್ದರೂ ಇಂದು ಶತ್ರುಜನರ ಕಪಟ ಜಾಲಕ್ಕೆ ಸಿಲುಕಲಿರುವಿರಿ. ಆಪ್ತೇಷ್ಟರ ವಿರಹ ಸೇವಕ ವರ್ಗದವರ ಕೂಡೆ ಕಲಹವುಂಟಾದೀತು. ಪರಿಶ್ರಮಕ್ಕೆ ತಕ್ಕ ಫಲ ಲಭಿಸಿದರೂ ದೈನಂದಿನದ ಖರ್ಚುವೆಚ್ಚಗಳ ನಿರ್ವಹಣೆಗಾಗಿ ಹೆರವರ ಕೂಡೆ ಸಾಲ ಮಾಡುವ ಪ್ರಸಂಗ ಬರಲಿದೆ. ಆರೋಗ್ಯವು ತೃಪ್ತಿಕರವಿದ್ದರೂ ಗೃಹತಾಪತ್ರಯಗಳಿಂದಾಗಿ ಮನಸ್ಸಿಗೆ ನೆಮ್ಮದಿಯಿರದು. ತಾ. 28ರಿಂದ 31ರ ವರೆಗಿನ ದಿನಗಳು ಕಾರ್ಯ ವಿಜಯದಾಯಿಗಳಾಗಿವೆ.

೯. ಧನು

ಕಳೆದ ದಿನಗಳಿಗಿಂತ ನಿಮ್ಮ ಪರಿಸ್ಥಿತಿಯು ಇಂದು ಸ್ವಲ್ಪ ಸುಧಾರಿಸಲಿದೆ. ಎಂತಹ ಕಾರ್ಯವನ್ನೂ ದಕ್ಷತೆಯಿಂದ ನಿರ್ವಹಿಸುವಿರಿ. ನಿರೀಕ್ಷೆಯಂತೆ ಫಲವನ್ನು ಕೂಡ ಪಡೆಯಲಿರುವಿರಿ. ವಿದ್ಯೋಪಜೀವಿಗಳಿಗೂ ಸೇವಕ ಜನತೆಗೂ ಇಂದಿನ ಕಾಲವು ಸುಖದಿಂದ ಕಳೆವುದಾದರೂ ಕಫವಾತ ದೋಷದಿಂದ ಆರೋಗ್ಯವು ಕೆಡುವಂತಿದೆ. ಪ್ರವಾಸದಲ್ಲಿ ತೊಡಕು ತೊಂದರೆಗಳುಂಟಾಗುವವು. ವಾರಾಂತ್ಯದ 4 ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿವೆ.

೧೦. ಮಕರ

ಗೃಹದಲ್ಲಿ ಅಶಾಂತಿಯು ದಿನದಿಂದ ದಿನಕ್ಕೆ ಹೆಚ್ಚುತ್ತಲಿದೆ. ವಿರೋಧಿ ವರ್ಗದವರ ಕಿರುಕುಳವಂತೂ ಹೇಳತೀರದು. ಇದರಿಂದಾಗಿ ನಿಮ್ಮ ಮನಸ್ಸಿಗೆ ಸ್ವಲ್ಪವೂ ನೆಮ್ಮದಿಯಿಲ್ಲದಂತಾಗುವದು. ಗುರುಹಿರಿಯರ ಅನುಕಂಪ ಮಿತ್ರವರ್ಗದವರ ಸಹಕಾರ ನಿಮ್ಮ ಮೇಲೆ ಸಾಕಷ್ಟಿದ್ದರೂ ಭೂಸಂಬಂಧ ವ್ಯವಹಾರ ಮತ್ತು ರಾಜಕೀಯ ಕ್ಷೇತ್ರದಲ್ಲಿ ನಷ್ಟ ಪರಾಭವಗಳುಂಟಾಗಲಿವೆ ಪ್ರವಾಸದಲ್ಲಿ ಹಲವಾರು ತರದ ತೊಂದರೆಗಳನ್ನೆದುರಿಸಬೇಕಾಗಿ ಬರುವದು. ತಾ 27, 1, 2 ಈ ದಿನಗಳಲ್ಲಿ ಅನಿರೀಕ್ಷಿತ ಧನಲಾಭವಾಗುವದು.

೧೧. ಕುಂಭ

ಹಿಂದಿನ ವಾರಕ್ಕಿಂತ ಈ ದಿನಗಳು ಸ್ವಲ್ಪ ಅನುಕೂಲವಾಗಿ ಕಾಣಿಸಲಿವೆ. ಕೆಲವೊಂದು ಗೃಹತಾಪತ್ರಯಗಳಿಂದು ದೂರವಾಗುವವು. ಉದ್ಯೋಗದಲ್ಲಿ ಪರಿಶ್ರಮಕ್ಕೆ ತಕ್ಕ ಫಲ ಲಭಿಸೋಣದರಿಂದ ದಿನಗಳು ಸುಗಮವಾಗಿ ಸಾಗಲಿವೆ. ಬಂಧುಗಳಲ್ಲಿನ ಮನಸ್ತಾಪ ಕೊಂಚ ಹೆಚ್ಚುವಂತಿದೆ. ಮನೆಯಾಳೆಯೊಡನೆ ಕಲಹವಾದೀತು. ವಾತಪಿತ್ತ ದೋಷವು ಆಗಾಗ ಕಾಣಿಸಿಕೊಳ್ಳುವದು. ತಾ. 28, 29 ಈ ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

೧೨. ಮೀನ

ಕೃಷ್ಣಪಕ್ಷದ ಚಂದ್ರನಂತೆ ನಿಮ್ಮ ಅದೃಷ್ಟವು ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ. ನೀವಿಂದು ಶ್ರಮವಹಿಸಿ ದುಡಿಯುವಿರಿ. ನಿಮ್ಮ ಕಷ್ಟಕ್ಕೆ ತಕ್ಕ ಫಲವು ಲಭಿಸುವದು. ಆದರೆ ಬಹುಮುಖದ ಖರ್ಚುವೆಚ್ಚಗಳು ನಿಮ್ಮನ್ನು ಪೀಡಿಸುವುದರಿಂದ ದಿನಾಂತ್ಯದಲ್ಲಿಯೂ ವಾಗಲೂ ಕೈಬರಿದಾಗಿಯೇ ಉಳಿಯುವದು. ಚಿಕ್ಕಪುಟ್ಟ ವಿಷಯಗಳಿಗಾಗಿ ಮನೆಯ ಜನರೊಳು ಪರಸ್ಪರ ಮನಃಕ್ಲೇಶವುಂಟಾಗಲಿದೆ. ಜನಾನುರಾಗದಿಂದ ವಂಚಿತರಾದ ನಿಮಗೆ ತಾ 27, 30, 31 ಈ ದಿನಗಳು ಸ್ವಲ್ಪ ಅನುಕೂಲವಾಗಿ ಕಾಣುವವು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

R E P. 205/1964 in S.C 409/1961
of Karkal D.M.C.

A. ಗಿರಿಯ ಶೆಟ್ಟಿ — ಅರ್ಜಿದಾರ

ಮತ್ತು

ಜಗ್ಗು ಶೆಟ್ಟಿ—ಮೋನು ಶೆಟ್ರ ಮಗ—ಉಡುಪಿ ತಾಲೂಕು ಎಲ್ಲೂರು ಗ್ರಾಮದಲ್ಲಿರುವವ —ಎದ್ರಿ

ಇವರೊಳಗೆ

ಸದ್ರಿ ಎದ್ರಿಗೆ ಮತ್ತು ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:-

ಮೇಲ್ಕಂಡ ಅಮಲ್ಜಾರಿಯಲ್ಲಿ ಎದ್ರಿಯು ಬಿಟ್ಟು ಜಪ್ತಾದ ಸ್ಥಿರಾಸ್ತಿಗಳು ತಾರೀಕು 2-6-1965ಕ್ಕೆ ಏಲಂ ಬಗ್ಗೆ ಇಟ್ಟಿರುತ್ತದೆಂಬ ಸಂಗ್ತಿ ಈ ಮೂಲಕ ಪ್ರಕಟಪಡಿಸಿಯದೆ.

K. Balachandra Rao,
Advocate for Petitioner

Udipi, 18-4-1965.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ಡಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ ಖ.ಪ್ರತ್ಯೇಕ)

ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ

'NAVAYUGA' Weekly is in the list of periodicals and Newspapers approveds for use in Secondary Schools as per proceeding Roc No. 466 N/50 dated 2-12-1950 of the Director of Public Instruction Madras.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪] ಜೂನ್ ೩, ೬೪ [ಸಂಚಿಕೆ ೪೦

...ne No. 226
...ನ್ ನಂಬ್ರ

NAVAYUGA

leading nationalist weekly

೨೦ ಪೈಸೆ

ಕಥಾ ಪ್ರಪಂಚ

ಕಲ್ಯಾಣಿ

ಬರೆದವರು:

ಶ್ರೀ ಸ. ನಾರಾಯಣ, ಚಿತ್ರದುರ್ಗ

ತಂಗಿ ಕಾಲೇಜಿನಿಂದ ಹಿಂತಿರುಗಿ ಬರುವುದನ್ನೇ ಎದುರು ನೋಡುತ್ತಾ ಕುಳಿತಿದ್ದಳು ಪದ್ಮ. ಸಂಜೆ ಐದು ಗಂಟೆಗೆ ಸರಿಯಾಗಿ ಕಲ್ಯಾಣಿ ಮನೆಗೆ ಬಂದಳು. ತಂಗಿ ತಿಂಡಿ ತಿಂದು ಮುಗಿಸಿದ ನಂತರ ಕಾಫಿ ಕೊಡುತ್ತಾ ಪದ್ಮ "ಕಲ್ಯಾಣಿ ನಿನಗೊಂದು ಶುಭ ಸಮಾಚಾರ" ಎಂದು ನಗುತ್ತಾ ಹೇಳಿದಳು. "ಅದೇನಕ್ಕಾ ಒಳ್ಳೆ ತಮಾಷೆಯಾಗಿ ಮಾತನಾಡುತ್ತಿದ್ದೀಯಲ್ಲಾ, ನನಗೊಂದೂ ಅರ್ಥವಾಗುವ ಹಾಗೇ ಇಲ್ಲ" ಎಂದು ನಿರ್ವಿಕಾರವಾಗಿ ನುಡಿದಳು ಕಲ್ಯಾಣಿ.

"ಗೊತ್ತಾಗುತ್ತದಮ್ಮ ನಾಳೆ ಶಿವಮೊಗ್ಗ ಡಾಕ್ಟರ್ ಹೆಂಡತಿಯಾದಾಗ" ಎಂದು ಪದ್ಮ ಅಂದಾಗ "ಅದೇನಕ್ಕಾ ಅಣ್ಣಾ ನೀನು ಇಬ್ಬರೂ ಸೇರಿಕೊಂಡು ನನ್ನನ್ನು ಮನೆಬಿಟ್ಟು ಕಳುಹಿಸುವ ಸಿದ್ಧತೆಯಲ್ಲಿಯೇ ಇರುತ್ತೀರಿ, ನನ್ನನ್ನು ಕಂಡರೆ ಅಷ್ಟು ಬೇಸರವೇನಕ್ಕ ನಿನಗೆ? ನನಗೆ ಮದುವೆಯೂ ಬೇಡ, ಮನೆಯೂ ಬೇಡ ನಿಮ್ಮನ್ನು ಹೇಗಕ್ಕ ಬಿಟ್ಟಿರಲಿ?" ಎಂದು ಹೇಳುವ ವೇಳೆಗೆ ಕಲ್ಯಾಣಿಯ ಕಣ್ಣಲ್ಲಿ ನೀರು ತುಂಬಿತ್ತು.

ತಂಗಿಯ ಅಂತಃಕರಣವನ್ನು ಕಂಡಾಗ ಪದ್ಮಳಿಗೆ ಹೆಮ್ಮೆಯಾಯಿತು. ತಂಗಿಯ ಕಣ್ಣೀರನ್ನು ಒರೆಸುತ್ತಾ "ಅದಕ್ಕೆಲ್ಲಾ ಅಳಬೇಕೆ ಕಲ್ಯಾಣಿ? ಇನ್ನು ಮದುವೆಯಾದ ನಂತರ ತಾನೇ ನಿನ್ನ ಬಿಟ್ಟಿರೋದು. ನೀನು ಸುಖವಾದ ಸಂಸಾರ ನಡೆಸಬೇಕೆಂದೇ ನನ್ನ ಮತ್ತು ಅಣ್ಣನ ಆಸೆ. ನನ್ನದಂತೂ ಹೀಗಾಯಿತು, ನೀನಾದರೂ ಸುಖವಾಗಿರಮ್ಮ" ಎಂದ. ಪದ್ಮ ಮುಗಿಸುವ ವೇಳೆಗೆ ಅಕ್ಕ-ತಂಗಿಯರಿಬ್ಬರಿಗೂ ದುಃಖ ಒತ್ತರಿಸಿ ಬಂದಿತ್ತು. ಅವರಿಬ್ಬರು ಆ ಭಾವನೆಯಲ್ಲಿ ಮುಳುಗಿರುವಾಗಲೇ ಅವರ ತಂದೆ ಶ್ರೀ ಕಂಠಯ್ಯನವರು "ಏನು ಅಕ್ಕ ತಂಗಿ ಇಬ್ಬರೂ ಬಿಡಿಗ ಮನೆ ಸೇರಿಕೊಂಡು ಪ್ರಪಂಚವನ್ನೇ ಮರೆತಿರುವಂತಿದೆ" ಎನ್ನುತ್ತಲೇ ಒಳಕ್ಕೆ ಪ್ರವೇಶಿಸಿದರು. ಅಕ್ಕ-ತಂಗಿಯರಿಬ್ಬರೂ "ಏನೂ ಇಲ್ಲಣ್ಣ, ಸಿಕ್ಕದ ವಿಚಾರವಷ್ಟೆ" ಎನ್ನುತ್ತಲೇ ಕಣ್ಣೀರು ಒರಸಿಕೊಂಡು ಮೇಲೆದ್ದರು.

० ० ०

ಹೆಡ್ ಗುಮಾಸ್ತೆ ಶ್ರೀ ಕಂಠಯ್ಯನವರು ತಮ್ಮ ಸೇವೆಯ ಕಾಲಾವಧಿಯಲ್ಲಿ ನಾನಾ ಬಗೆಯ ಸಹಾಯಮಾಡಿ ಅಪಾರ ಅಭಿಮಾನಿ ಗೆಳೆಯರನ್ನು ಪಡೆದಿದ್ದರು. ಅವರ ಪರಿಚಯ, ವಿಶ್ವಾಸವನ್ನು ಗಳಿಸದ ವ್ಯಕ್ತಿಯೇ ಇಂಲಿಲ್ಲವೆಂದರೂ ಅತಿಶಯದ ಮಾತಲ್ಲ. ಚಿಕ್ಕ ವಯಸ್ಸಿನಲ್ಲಿಯೇ ತಂದೆ-ತಾಯಿಗಳನ್ನು ಕಳೆದುಕೊಂಡು ಅನಾಥರಾಗಿ ದೂರದ ಬಂಧುಗಳ ಮನೆಯಲ್ಲಿ ಸೇರಿಕೊಂಡು ಅತಿ ಪ್ರಯಾಸದಿಂದ ಪ್ರೌಢ ವಿದ್ಯಾಭ್ಯಾಸವನ್ನು ಮುಗಿಸಿ ಸರಕಾರಿ ಸೇವೆಗೆ ಪಾದಾರ್ಪಣ ಮಾಡಿದ್ದರು. ಸರಕಾರಿ ಸೇವೆಯಲ್ಲಿ ಊರೂರು ಸುತ್ತುತ್ತಿರುವಾಗ ಸಾಗರದಲ್ಲಿ ತಾಲ್ಲೋಕು ಕಛೇರಿ ಗುಮಾಸ್ತರಾಗಿರುವಾಗ ಅಲ್ಲಿಯ ವೃತ್ತಿ ಬಂಧು ಸಂಜೀವರಾಯರ ಅಳಿಯನಾಗುವ ಸುಯೋಗ ಒದಗಿತು.

ಶ್ರೀಕಂಠಯ್ಯನವರ ಪತ್ನಿ ವಿಶಾಲಾಕ್ಷಮ್ಮ ಪೂರ್ವ ಸಂಪ್ರದಾಯಗಳನ್ನು ಬಿಡದೆ ಅನುಸರಿಸುತ್ತಿದ್ದ ಕುಟುಂಬದಲ್ಲಿ ಬೆಳೆದಿದ್ದು ಸುಸಂಸ್ಕೃತರಾಗಿದ್ದರು. ಗಂಡ ಹೆಂಡಿರ ಜೋಡಿ ನೋಡಿದವರು ತಲೆದೂಗುವಂತಿತ್ತು. ಅಂತಹ ಉತ್ತಮ ಗೃಹಿಣಿಯೊಂದಿಗೆ ಬಹುಕಾಲ ಸಂಸಾರ ನಡೆಸುವ ಪುಣ್ಯ ಶ್ರೀಕಂಠಯ್ಯನವರಿಗಿರಲಿಲ್ಲ.

ಮನೆಯಲ್ಲಿ ಸಂಸಾರವನ್ನು ಸ್ವಲ್ಪವೂ ಏರುಪೇರಾಗದಂತೆ ನಿರ್ವಹಿಸಿಕೊಂಡು ಹೋಗುವ ಪತ್ನಿ, ಮುದ್ದಿನ ಎರಡು ಹೆಣ್ಣು ಮಕ್ಕಳೊಂದಿಗೆ ಶ್ರೀಕಂಠಯ್ಯನವರು ಶಿವಮೊಗ್ಗ ಕಛೇರಿಯಲ್ಲಿರುವಾಗ, ವಿಶಾಲಾಕ್ಷಮ್ಮನವರಿಗೆ ಎದೆನೋವು ಕಾಣಿಸಿಕೊಂಡು ಅದೇ ನೋವಿನಲ್ಲಿಯೇ ಕಣ್ಮುಚ್ಚಿದ್ದರು. ಶ್ರೀಕಂಠಯ್ಯನವರಿಗೆ ಪ್ರಪಂಚವೇ ತಲೆಯ ಮೇಲೆ ಕಳಚಿ ಬಿದ್ದಂತಿತ್ತು. ಮನೆಯಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಮತ್ತೊಬ್ಬರಿಲ್ಲ; ಸಮೀಪದ ಬಂಧುಮಿತ್ರರಂತೂ ಮೊದಲೇ ಇಲ್ಲ. ಜೊತೆಗೆ ಸರ್ಕಾರಿ ಕೆಲಸ ಬೇರೆ. ಇದರಲ್ಲಿ ಮುಗ್ಗಾದರು. ತಾಯಿ ಸತ್ತಾಗ ಪದ್ಮಳಿಗೆ ಹನ್ನೆರಡು ವರ್ಷ, ಕಲ್ಯಾಣಿಗೆ ಆರು ವರ್ಷ. ಹೆಣ್ಣು ಮಕ್ಕಳಿಬ್ಬರ ತಂದೆ ತಾಯಿಯಾಗಿ ಶ್ರೀಕಂಠಯ್ಯನವರು ಬೆಳೆಸಿದರು. ತಾಯಿಯ ಕೈಯಲ್ಲಿ ನುರಿತಿದ್ದ ಪದ್ಮಾ ಮನೆಯನ್ನು ಅಚ್ಚುಕಟ್ಟಾಗಿ ಇಟ್ಟು ಕೊಳ್ಳುತ್ತಿದ್ದುದಲ್ಲದೆ ಗೃಹಕಾರ್ಯದೊಂದಿಗೆ ತಂದೆ ಮತ್ತು ತಂಗಿಯ ಯೋಗ ಕ್ಷೇಮವನ್ನು ನೋಡಿಕೊಳ್ಳುತ್ತಿದ್ದಳು. ಹೀಗೆಯೆ ಅವರ ಜೀವನ ಚಕ್ರ ಮುಂದೆ ಸಾಗಿತು.

ಸೇವೆಯಿಂದ ನಿವೃತ್ತರಾಗುವ ವೇಳೆಗೆ ಶ್ರೀಕಂಠಯ್ಯನವರು ಬೆಂಗಳೂರಿನ ಜಯನಗರದಲ್ಲಿ ಒಂದು ಮನೆಕೊಂಡು ಚೆನ್ನಪಟ್ಟಣದ ಬಳಿ ಆರು ಎಕರೆ ಗದ್ದೆಯನ್ನು ಹೊಂದಿದ್ದರು. ಸೇವೆಯ ಕೊನೆಯ ಆರು ವರ್ಷವನ್ನು ಹೆಡ್‌ಗುಮಾಸ್ತೆಯಾಗಿ ಬೆಂಗಳೂರಿನ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿಯೇ ಮುಗಿಸಿದ್ದರು. ಆ ವೇಳೆಗೆ ಪದ್ಮ ಎಸ್. ಎಸ್. ಎಲ್. ಸಿ. ಪರೀಕ್ಷೆಯನ್ನು ಮುಗಿಸಿ ಮನೆಯ ಅಧಿಕಾರವನ್ನು ವಹಿಸಿಕೊಂಡಿದ್ದಳು. ಕಲ್ಯಾಣಿ ಮಾಧ್ಯಮಿಕ ಶಾಲೆಯ ನಾಲ್ಕನೆಯ ತರಗತಿಯಲ್ಲಿ ಓದುತ್ತಿದ್ದಳು.

ತಮ್ಮ ಮಕ್ಕಳನ್ನು ಕಂಡೊಡನೆಯೆ ಶ್ರೀ ಕಂಠಯ್ಯನವರಿಗೆ ಅತೀವ ವೇದನೆಯಾಗುತ್ತಿತ್ತು. ತಾಯಿಯ ಪ್ರೀತಿ, ಅನುಕಂಪ ಒಡನಾಟವನ್ನೂ ಪಡೆದಿರುವ ಸುಖ ಇವರಿಗಿಲ್ಲವಾಯಿತಲ್ಲ ಎಂದು ಹಂಬಲಿಸುತ್ತಿದ್ದರು. ಮಕ್ಕಳನ್ನೂ ಸುಖವಾದ ಸಂಸಾರದಲ್ಲಿ ಬಿಟ್ಟು ಕಣ್ಮುಚ್ಚಬೇಕೆನ್ನುವ ಆಸೆ ಅವರಿಗೆ ಬಹಳವಾಗಿತ್ತು. ಅದಕ್ಕಾಗಿಯೇ ಶ್ರೀಕಂಠಯ್ಯನವರು ತಮ್ಮ ಒಂದು ವರ್ಷ ಸೇವೆಯ ಅವಧಿ ಇರುವಾಗಲೇ ಮಿತ್ರರ ಸಹಾಯದಿಂದ ಪದ್ಮಳಿಗೆ ಗಂಡು ಹುಡುಕಿದರು. ಅವರ ಭಾವಿ ಅಳಿಯ ಮೈಸೂರಿನ ಕಂಪೆನಿಯೊಂದರಲ್ಲಿ ಮ್ಯಾನೇಜರಾಗಿದ್ದ. ಶ್ರೀಕಂಠಯ್ಯನವರ ಅವಿಶ್ರಾಂತ ದುಡಿಮೆಯಿಂದ ಪದ್ಮಳ ವಿವಾಹ ನಿರಾತಂಕವಾಗಿ ಸರಳ ರೀತಿಯಲ್ಲಿ ಶೇಷುವಿನೊಂದಿಗೆ ಮುಗಿಯಿತು.

ಶೇಷು ಪತ್ನಿ ಮತ್ತು ಮಗುವಿನೊಂದಿಗೆ ಸಂತೋಷದಿಂದಲೇ ಸಂಸಾರ ನಿರ್ವಹಿಸಿಕೊಂಡಿದ್ದ. ದುರದೃಷ್ಟದಿಂದ ದುಷ್ಟ ಗೆಳೆಯರ ಸಹವಾಸದಿಂದ ದುಶ್ಚಟಗಳ ದಾಸನಾಗಿ ಕಂಪೆನಿಯ ಹಣ ದುರ್ವಿನಿಯೋಗ ಮಾಡಿ ಹೆಂಡತಿಯ ಆಭರಣ ಅಷ್ಟು ಹಣದೊಂದಿಗೆ ಯಾರಿಗೂ ತಿಳಿಸದೆ ಪರಾರಿಯಾಗಿದ್ದ. ಈ ಆಘಾತದಿಂದ ಶ್ರೀಕಂಠಯ್ಯನವರು ಮತ್ತು ಪದ್ಮಾ ಚೇತರಿಸಿಕೊಳ್ಳಲು ಬಹುಕಾಲ ಹಿಡಿಯಬೇಕಾಯಿತು. ತಂದೆಯ ಅಲ್ಪ ವರಮಾನದಲ್ಲಿ ಸಂಸಾರ ನಿರ್ವಹಣೆಯ ಭವಣೆಯನ್ನು ಕಂಡ ಪದ್ಮ ತಂದೆಯ ಅನುಮತಿ ಪಡೆದು ಹೆಣ್ಣುಮಕ್ಕಳ ಮಾಧ್ಯಮಿಕ ಶಾಲೆಯಲ್ಲಿ ಉಪಾಧ್ಯಾಯಿನಿಯಾದಳು. ಕ್ರಮೇಣ ಶೇಷುವಿನ ನೆನಪು ಅವಳ ಹೃದಯದಿಂದ ಮರೆಯಾಯಿತು. ಶಿಕ್ಷಕ ವೃತ್ತಿ ತಂದೆ ಮತ್ತು ತಂಗಿಯ ಅಂತಃಕರಣದೊಡನಾದಲ್ಲಿ ತನ್ನ ದುಃಖವನ್ನೆಲ್ಲಾ ಮರೆತು, ಅವರ ಶಿಶ್ರೂಷೆಯಲ್ಲಿಯೇ ಸಂತೋಷ ಪಡುತ್ತಿದ್ದಳು ಪದ್ಮ.

ಕಲ್ಯಾಣಿಗೆ ಯಾವ ಬಗೆಯ ಕೊರತೆಯೂ ಇರಲಿಲ್ಲ. ಕಣ್ಣಿನಂತೆ ಭಾವಿಸಿ ನಡೆಸುವ ತಂದೆ ತಾಯಿಯಂತೆ ವಾತ್ಸಲ್ಯ ತೋರುವ ಅಕ್ಕ ಇವರಿಬ್ಬರ ಅಕ್ಕರೆಯಲ್ಲಿ ಸುಖವಾಗಿ ಬೆಳೆದಿದ್ದಳು. ದಿಟ್ಟತನದ ಯುವತಿಯಾಗಿ ಪ್ರೌಢ ವಿದ್ಯಾಭ್ಯಾಸವನ್ನು ಮುಗಿಸಿ ಕಾಲೇಜು ಸೇರಿದ್ದಳು. ಕಲ್ಯಾಣಿಯ ರೂಪ ನೋಡಲು ಎಷ್ಟು ಆಕರ್ಷಣೀಯವಾಗಿತ್ತೋ ಅಷ್ಟೇ ಮಟ್ಟಿಗೆ ಅವಳ ಗುಣ ನಡತೆಗಳು ಮೆಚ್ಚುವಂತಿತ್ತು. ಮನೆಯಲ್ಲಿ ತಂದೆ ಮತ್ತು ಅಕ್ಕನ ಕಣ್ಮಣಿಯಾಗಿದ್ದಂತೆ ಗೆಳತಿಯರ ಪ್ರೀತಿಗೂ ಪಾತ್ರಳೂ ಆಗಿದ್ದಳು. ಶ್ರೀ ಕಂಠಯ್ಯ ಮತ್ತು ಪದ್ಮ ಕಲ್ಯಾಣಿಯ ಪ್ರತಿಭೆ ಜಾಣತನಕ್ಕೆ ಹೆಮ್ಮೆ ಪಡುತ್ತಿದ್ದರು. ಅವಳ ಬಾಳು ಸುಖವಾಗಲಿ ಎನ್ನುವುದೇ ಅವರಿಬ್ಬರ ನಿತ್ಯ ಜಪವಾಗಿತ್ತು.

(ಹದಿನೈದನೇ ಪುಟ ನೋಡಿರಿ)

8%	ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು			
				ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	....	....	5½
6 ತಿಂಗಳಿಂದ	12 ತಿಂಗಳ ಕೆಳಗೆ	...	....	6
12 ತಿಂಗಳಿಂದ	24 ತಿಂಗಳ ಕೆಳಗೆ	....	....	6¼
24 ತಿಂಗಳಿಂದ	36 ತಿಂಗಳ ಕೆಳಗೆ	....	....	6½
36 ತಿಂಗಳಿಂದ	48 ತಿಂಗಳ ಕೆಳಗೆ	....	...	7
48 ತಿಂಗಳಿಂದ	60 ತಿಂಗಳ ಕೆಳಗೆ	....	....	7¼
60 ತಿಂಗಳಿಂದ	84 ತಿಂಗಳ ಕೆಳಗೆ	....	....	7½
84 ತಿಂಗಳಿಂದ	120 ತಿಂಗಳ ಕೆಳಗೆ	....	....	8
ಸೇವಿಂಗ್ಸ್ ಖಾತೆಯ ಮೇಲೆ		...	...	೪

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Phone No. 226

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಗದದ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚೀಟಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ರಿಪೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರವಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

೧೭ ವರ್ಷಕಾಲ ರಾಷ್ಟ್ರದ ಮುಖಂಡತ್ವವನ್ನು ವಹಿಸಿದ್ದ ಶ್ರೀ ನೆಹರು ನಮ್ಮನ್ನಗಲಿ ಒಂದು ವರ್ಷ ಕಳೆಯಿತು.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೪೦	೩—೬-೧೯೬೫	No. 40

ಹೊಸ ದಾಖಲೆ

ಪ್ರಪಂಚದ ಅತ್ಯುನ್ನತ ಪರ್ವತ ಶಿಖರ ಗೌರೀಶಂಕರ ಅಥವಾ ಮೌಂಟ್ ಎವರೆಸ್ಟ್ ಅಜೇಯವೆನಿಸಿದ ಕಾಲವೊಂದಿತ್ತು. ಆದರೆ ೧೯೫೩ರಲ್ಲಿ ಬ್ರಿಟಿಷ್ ಪರ್ವತಾರೋಹಿ ತಂಡದ ಜಾನ್ ಹಂಟ್ ಮತ್ತು ತೇನಸಿಂಗರು ೨೯,೦೨೮ ಅಡಿ ಎತ್ತರದ ದುರ್ಗಮ ಶಿಖರವನ್ನು ಏರಿ ಹೊಸತಾದ ದಾಖಲೆಯನ್ನು ನಿರ್ಮಿಸಿದರು. ಆ ಸುದಿನ ಮೇ ೨೯ನೆಯದಾಗಿತ್ತು. ಮುಂದೆ, ಹತ್ತು ವರ್ಷಗಳಲ್ಲಿ ಹಲವಾರು ಪ್ರಯತ್ನಗಳು ನಡೆದಿದ್ದರೂ ೧೯೫೬ರಲ್ಲಿ ಸ್ವಿಸ್ ತಂಡವು ಮಾತ್ರ ಸಫಲವಾಯಿತು. ೧೯೬೩ರಲ್ಲಿ ಅಮೆರಿಕನ್ ತಂಡವು ಮೇ ೧ರಿಂದ ಮೂರು ವಾರಗಳ ಅವಧಿಯಲ್ಲಿ ಮೂರು ಬಾರಿ ಈ ಶಿಖರವನ್ನು ಏರಿ ಮತ್ತೊಂದು ದಾಖಲೆಯನ್ನು ನಿರ್ಮಿಸಿತು. ಆದರೆ, ಈ ವರ್ಷ ಬರಿಯ ಒಂಬತ್ತು ದಿನಗಳ ಚಿಕ್ಕ ಅವಧಿಯಲ್ಲಿ ಭಾರತೀಯ ತಂಡವು ನಾಲ್ಕು ಬಾರಿ ಗೌರೀಶಂಕರ ಶಿಖರಾರೋಹಣ ಗೆಯ್ದು ಅದ್ವಿತೀಯ ದಾಖಲೆಯನ್ನೇ ಸ್ಥಾಪಿಸಿತು. ಇದು ನಮ್ಮ ಸಮಾಜಕ್ಕೆ, ಮುಖ್ಯವಾಗಿ ಭಾರತೀಯರಿಗೆ ಹೆಮ್ಮೆಯ ಸಂಗತಿ.

ಕಮಾಂಡರ್ ಎಂ. ಎಸ್. ಕೊಹಲಿಯವರ ಮಾರ್ಗದರ್ಶನದಲ್ಲಿ ೧೯ ಸದಸ್ಯರುಳ್ಳ ಭಾರತೀಯ ಪರ್ವತಾರೋಹಿ ತಂಡವು ಶಿಖರಾರೋಹಣದ ಸಾಹಸಕ್ಕೆ ಕೈ ಹಾಕಿತು. ಇವರ ಸದಸ್ಯರಲ್ಲಿ ಕೇಪ್ಟನ್ ಎ. ಎಸ್. ಚೀಮಾ ಮತ್ತು ನವಾಂಗ್ ಗೊಂಬು ಇವರು ತಾರೀಕು ೨೦ರಂದು ಪ್ರತಿಕೂಲ ಹವಾಮಾನದೊಡನೆ ಹೋರಾಡುತ್ತಲೇ ತಮ್ಮ ಗುರಿಯನ್ನು ಮುಟ್ಟಿ ಅಲ್ಲಿ ಅರ್ಧ ತಾಸು ಉಳಿದರು. ಮುಂದೆ ಎರಡೇ ದಿನಗಳಲ್ಲಿ ಅಂದರೆ, ತಾ. ೨೨ರಂದು ಇದೇ ತಂಡದ ಸೋನಮ್ ಗ್ಯಾತ್ಸೊ ಮತ್ತು ಸೋನಮ್ ವಾಂಗ್ಯಾಲರು ತಮ್ಮ ಪ್ರಯತ್ನದಲ್ಲಿ ಸಫಲರಾಗಿ ಶಿಖರದ ಮೇಲೆ ೫೦ ನಿಮಿಷಗಳ ಕಾಲವಿದ್ದರು. ತಾ. ೨೪ರಂದು ಸಿ. ಪಿ. ವೋಹ್ರಾ ಮತ್ತು ಅಂಗ್‌ಕಾಮಿ ಯವರು ಮತ್ತೆ ಎರಡು ಗಳಿಗೆ ೧೯೬೩ರ ಅಮೆರಿಕನ್ ತಂಡದ ಸಮಕಕ್ಷೆಗೆ ಭಾರತೀಯ ತಂಡವನ್ನು ತಂದು ಮುಟ್ಟಿಸಿದರು. ಪ್ರತಿಕೂಲ ಹವಾಮಾನವಿದ್ದರೂ ಭಾರತೀಯ ತಂಡವು ಅಂಜದೆ ಅಳುಕದೆ ಮೂರು ದಿನಗಳ ಕಾಲ ಕಾದು ನಾಲ್ಕನೆಯ ಬಾರಿಯೂ ತನ್ನ ಪ್ರಯತ್ನವನ್ನು ಮುಂದುವರಿಸಿ ಅದರಲ್ಲೂ ಯಶಸ್ವಿಯಾಯಿತು. ಈ ಯಶಸ್ವಿಗಳು ಕ್ಯಾಪ್ಟನ್ ಎಚ್. ಎಸ್. ಅಹ್ಲುವಾಲಿಯ, ಎಚ್. ಸಿ. ಎಸ್. ರಾವತ್ ಮತ್ತು ಸರ್ದಾರ್ ಫೂದೋರ್ಜೀಯವರಿದ್ದಾರೆ. ಹೀಗೆ ನಿರಂತರವಾಗಿ ನಾಲ್ಕು ಬಾರಿ ಎವರೆಸ್ಟ್ ಆರೋಹಣವನ್ನು ಗೆಯ್ದು ಈ ಭಾರತೀಯ ತಂಡವು ಜಾಗತಿಕ ದಾಖಲೆಯನ್ನು ಮುರಿದು ಸರ್ವತ್ರ ಸಮ್ಮಾನಿತವಾಗಿದೆ. ತಂಡದಲ್ಲಿದ್ದ ಒಟ್ಟು ೧೯ ಸದಸ್ಯರಲ್ಲಿ ೯ ಜನರು ಜಗತ್ತಿನ ಅತ್ಯುನ್ನತ ಶಿಖರವನ್ನು ಮೆಟ್ಟಿ ನಿಂತು ತಮ್ಮ ಕೆಚ್ಚನ್ನೂ ಸಾಹಸ ಶೀಲತೆಯನ್ನೂ ಮೆರೆದರು—ಇದು ಭಾರತೀಯರಿಗೆ ಗೌರವದ ಸುದ್ದಿ.

ಪರ್ವತಾರೋಹಣವೆಂಬುದು ಸುಲಭದ ಕಾರ್ಯವಲ್ಲ. ಅದು ಸಾಹಸ ಪ್ರವೃತ್ತಿಯ ದ್ಯೋತಕ. ಅದರಲ್ಲೂ ಹಿಮಾಲಯದಂತಹ ವಿಶಾಲ ಪರ್ವತದ ಉತ್ತುಂಗ ಶಿಖರವೇರುವುದೆಂದರೆ ಸಾಮಾನ್ಯ ಸಾಹಸವಲ್ಲ. ಕಡಿದಾದ ಹಿಮ ತುಂಬಿದ ದುರ್ಗಮ ಗಾಟಿಗಳನ್ನು ಏರಿ ಪ್ರಕೃತಿ-ಹವಾಮಾನಗಳೊಡನೆ ಹೋರಾಡುತ್ತಲೇ ತಮ್ಮ ಕೆಚ್ಚನ್ನು ಪ್ರದರ್ಶಿಸುವ ಕಾರ್ಯವಿದ. ಇದುವರೆಗೆ ವಿದೇಶೀ ತಂಡಗಳು ಮಾತ್ರ ಈ ಮಹಾ ಸಾಧನೆಯಲ್ಲಿ ಸಿದ್ಧಿ ಪಡೆದಿದ್ದರು. ಆದರೆ, ಈ ವರ್ಷದಲ್ಲಿ ಭಾರತೀಯರೂ ಉಳಿದವರಿಗೆ ಯಾವುದರಲ್ಲೂ ಕಡಿಮೆಯಿಲ್ಲವೆಂಬ ಸತ್ಯವು ಜಗಜ್ಜಾಹೀರಾಯಿತು. ಭಾರತೀಯರ ಧೈರ್ಯ, ಸಾಹಸ, ಪ್ರಯತ್ನಗಳಿಗೊಂದು ಜಾಗತಿಕ ನಿದರ್ಶನ ದೊರೆತಂತಾಯಿತು. ಭಾರತೀಯ ಪರ್ವತಾರೋಹಿ ತಂಡದ ಈ ಸಾಧನೆ ಬರೀ ಮಹತ್ವದ್ದಲ್ಲ, ಭಾರತೀಯ ಶಕ್ತಿ-ಸಾಮರ್ಥ್ಯ ಮತ್ತು ದೃಢ ಸಂಕಲ್ಪದ ದ್ಯೋತಕ. ಇದೇ ಬಗೆಯ ದೃಢತೆ ಮತ್ತು ಸಾಹಸಪ್ರವೃತ್ತಿಗಳು ಎಲ್ಲೆಡೆ ಪ್ರದರ್ಶಿತವಾಗಬೇಕು; ಭಾರತವು ಜಗತ್ತಿನಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಬೇಕು. ಈ ಹಾರೈಕೆಯೊಂದಿಗೆ ಶಿಖರಾರೋಹಣದಲ್ಲಿ ಯಶಸ್ವಿಯಾದ ಪರ್ವತಾರೋಹಿ ತಂಡವನ್ನು ಅಭಿನಂದಿಸುವುದು ಸಮಸ್ತ ಭಾರತೀಯರ ಆದ್ಯ ಕರ್ತವ್ಯ.

ಮುಂದೇನು?

"ಪ್ರಧಾನಿ ನೆಹರು ನಮಗೆ ಸ್ವಾತಂತ್ರ್ಯವನ್ನು ತಂದು ಕೊಟ್ಟರು; ಅದನ್ನು ಬೆಳೆಸಿಕೊಳ್ಳಲು ಕಲಿಸಿಕೊಟ್ಟರು. ನಾವಿಂದು ಪಡೆದಿರುವ ಸ್ವಾತಂತ್ರ್ಯವನ್ನು ಯಾವ ಬೆಲೆ ತೆತ್ತಾದರೂ ರಕ್ಷಿಸಿಕೊಂಡು ಬರಬೇಕು" ಎಂದು ಪ್ರಧಾನಿ ಲಾಲಬಹದ್ದೂರ ಶಾಸ್ತ್ರಿಯವರು ನೆಹರೂ ವರ್ಷಾಂತಿಕದಂದು ನಮಗೆ ಕರೆಯಿತ್ತರು. ಚೀನಾ-ಪಾಕಿಸ್ತಾನಗಳು ಕೂಡಿ ನಡೆಸುತ್ತಿರುವ ಆಕ್ರಮಣ-ಬೆದರಿಕೆಗಳು ನಮ್ಮನ್ನಿಂದು ಕಾಡುತ್ತಿವೆ. ಚೀನಾದ ಕಾರಭಾರ ಸದ್ಯ ಶಾಂತವಾಗಿದ್ದರೂ ಪಾಕಿಸ್ತಾನವು ಇದೀಗ ಗುಂಡು ಹಾರಿಸುತ್ತಲೇ ಇದೆ. ಗಡಿಯಲ್ಲಿ ಮದ್ದು ಗುಂಡು ಹಾರಿಸುವುದು ಮಾತ್ರವಲ್ಲದೆ ಭಾರತದ ಬಗ್ಗೆ ಬೇಕೆಂಬಷ್ಟು ಅಪಪ್ರಚಾರ ಮಾಡಲು ಸೊಂಟ ಕಟ್ಟಿದೆ. ಆಕ್ರಮಣಶೀಲತೆಯನ್ನು ತೋರಿಸುತ್ತಿರುವ ಅಧ್ಯಕ್ಷ ಅಯೂಬಖಾನರು ಮಾತಿನ ಗುಂಡು ಹಾರಿಸಲೂ ಸಿದ್ಧರಾಗಿದ್ದಾರೆ. ಶಾಂತ ವಿಧಾನಗಳ ಪವಿತ್ರ ನಾಮವನ್ನು ಉಚ್ಚರಿಸುತ್ತಿದ್ದರೂ ಬ್ರಿಟನ್ನಿನ ಪ್ರಧಾನಿ ಹೆರಾಲ್ಡ್ ವಿಲ್ಸನ್ನರಿಗೆ ಸಮರವಿರಾಮವೆ ತತ್ವವನ್ನು ಒಪ್ಪಿಸಿಕೊಳ್ಳಲು ಸಿದ್ಧರಿಲ್ಲ. ಬ್ರಿಟಿಷ್ ಮುತ್ಸದ್ದಿಗಳ ಮಾತಿನಲ್ಲಿ ಹೇಳುವುದಾದರೆ, ಅಯೂಬಖಾನರು ತಮ್ಮ ಸಮರವಿರಾಮ ನೀತಿಯಲ್ಲಿ ಓತಿಕ್ಯಾತನಂತೆ ಬಣ್ಣ ಬದಲಿಸುತ್ತಿದ್ದಾರೆ. ಇದರಿಂದಾಗಿಯೇ ಪ್ರಶ್ನೆ ಬಗೆಹರಿಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಇಷ್ಟಿದ್ದರೂ ಇವರು ತಾವು ಮೊದಲು ತಿಂದು ಆಡಿಸ ಮುಖಕ್ಕೆ ಕೈ ಒರೆಸಿದ ನ್ಯಾಯಾಂತೆ ನಡೆಸುತ್ತಿದ್ದಾರೆ. ಇದನ್ನರಿತ ವಿಲ್ಸನ್ ರೋಸಿ ಹೋಗಿದ್ದಾರೆಂದು ಪ್ರತೀತಿ. ಈ ದಿನಗಳಲ್ಲಿ ಭಾರತ ಸಂಸಾರವು ತಳೆದ ನಿಲುವೆ ಯಥೋಚಿತವಾದದ್ದು. ಅನಿರ್ದಿಷ್ಟಾವಧಿಯವರೆಗೂ ಸಮರವಿರಾಮದ ಸಾಧ್ಯತೆಗಳು ಕುಂದುವ ಭಯ ಇರುವುದರಿಂದ ಪರಿಸ್ಥಿತಿಯು ನೇರವಾಗಿ ನಿಲ್ಲಲಿದೆ. ಆದುದರಿಂದಲೇ ಅದು ಸ್ವರಕ್ಷತೆಯ ಪರಿಮಾಣವನ್ನು ನಿರೀಕ್ಷಿಸುತ್ತಿದೆ. ಪಾಕ್ ಕಡೆ ಆಕ್ರಮಣದಿಂದ ಬ್ರಿಟಿಷ್ ಯತ್ನವು ಫಲಪ್ರದವಾಗುವ ಲಕ್ಷಣಗಳಿಲ್ಲ. ಆದುದರಿಂದ ನಮ್ಮ ಭೂಮಿಯಿಂದ ಆಕ್ರಮಣಕಾರರನ್ನು ಹೊರಗಟ್ಟಿ ಸ್ವಾತಂತ್ರ್ಯ—ಸಮಗ್ರತೆಗಳ ಉಳಿವಿಗಾಗಿ ಸರ್ವರೀತಿಯ ಪ್ರಯತ್ನಪಡುವುದು ಅತ್ಯಗತ್ಯವಿದ್ದಿದೆ.

ವಚನ ಸುಧೆ

ಯಾನ್ಯನವದ್ಯಾನಿ ಕರ್ಮಾಣಿ
ತಾನಿ ಸೇವಿತವ್ಯಾನಿ ನೋ ಇತರಾಣಿ ||
(ತೈತ್ತಿರೀಯೋಪನಿಷತ್, ೧—೧೧)

೦ ಯಾವುದು ಒಳ್ಳೆಯ ಕೆಲಸವೋ ಅದನ್ನು ಮಾತ್ರ ಮಾಡು. ಇತರ ಕಾರ್ಯಗಳನ್ನು ಮಾಡಬೇಡ.

೦೦ ಸದಾ ಕಾಲವೂ ಸತ್ಕಾರ್ಯಗಳನ್ನು ಮಾಡಿಕೊಂಡಿರು. ದುಷ್ಕಾರ್ಯಗಳಿಂದ ದೂರವಿರು. ಒಳ್ಳೆಯ ಕೆಲಸ ಮಾಡುವುದರಿಂದ ಶ್ರೇಷ್ಠತೆಯು ಪ್ರಾಪ್ತಿಯಾಗುತ್ತದೆ. ದುಷ್ಕಾರ್ಯಸಂಗದಿಂದ ಜನ ನಿಂದೆ ಪ್ರಾಪ್ತವಾಗುತ್ತದೆ. ಆದುದರಿಂದ ಸದಾಚಾರವನ್ನೆಂದೂ ಬಿಡಬಾರದು.

ನರಸಣ್ಣನ ಸರಸ

'ಭಾರತೀಯ ಪರ್ವತಾರೋಹಿ ತಂಡದವರ ಎವರೆಸ್ಟ್ ಶಿಖರಾರೋಹಣದ ಸಂಗತಿಗೆ ಕೆಂಪು ಚೀನಾ ಮಹತ್ವವನ್ನೇ ಕೊಟ್ಟಿಲ್ಲ....'

'ಸದ್ಯ ಅದೇ ಕ್ಷೇಮವಾಯ್ತು. ಎವರೆಸ್ಟ್‌ನ ಮೇಲೆಯೂ ತನ್ನ ಹಕ್ಕು ಸ್ಥಾಪನೆ ಮಾಡಿದೆಯಲ್ಲಾ... ಮತ್ತೆ ಆಕ್ರಮಣದ ಆರೋಪ..'

ಗೇಹ ರಾಜ್ಯದಲ್ಲಿ

ಆಡಲೇಬೇಕು ಕಣ್ಣುಮುಚ್ಚಾಲೆ

"ಓ ಬಂದ್ರಾ . ಬಹಳಷ್ಟು ಹೊತ್ತಿನಿಂದ ಕಾಯುತ್ತ ಇದ್ದೆ...."

ಮತ್ತೆ ನಿನಗೆ ಕೆಲಸವಾದರೂ ಏನ.?"

"ಕಣ್ಣು ಕೂರುತ್ತೆ. ಬೇಗ ಬರ್ತಿದ್ರೆ ಹಾಯಾಗಿ ಹಾಸಿಗೆನಾದ್ರೂ ಸೇರ್ಕೊಳ್ಳ ಬಹುದಿತ್ತು.'

'ಹೌದಪ್ಪ, ಏನೋ ಒಂದರ್ಧ ತಾಸು ಲೇಟಾಯಿತೂನ್ನು. ಅದಕ್ಕೇ ಇಷ್ಟೊಂದು ರಂಪಾಟ ಮಾಡೋದೂಂದ್ರೆ..."

"ರಂಪಾಟವೆಲ್ಲೀಂದ್ರೆ? ನಿದ್ರೆ ಒರಸ್ತಿ ಇದೇಂತಂದ್ರೆ....'

"ಮಲಗಿಕೊಳ್ಳಬಹುದಿತ್ತಲ್ಲ?"

"ಹ್ಞಾಂ...."

"ಮತ್ಯಾಕೆ ಸುಮ್ಮಸುಮ್ಮನೇ ಕಾದಿದ್ದೀಯ?"

'ನೀವು ಬರ್ತೀರೀಂತ..."

'ಅದೇನಂತೆ? ಬಂದ್ಮೇಲೆ ಬೇಕಾದ್ರೆ ಎಬ್ಬಿಸ್ತಿದ್ದೆ....'

ಹೌದಪ್ಪ, ನೀವೆಲ್ಲಾ ಮಾಡ್ತೀರಿ—ಅದಿರ್ಲಿ, ಇವತ್ತಿನ ಪೇಪ್ರು ನೋಡಿದಿರಾ?"

'ನೋಡದೆ ಉಂಟೆ?"

'ಪಾಪ, ಗ್ರಹಚಾರ ಅಲ್ವೆ?"

'ಹ್ಞಾಂ...."

'ಯಾಕೆ ಹಾಗಾಯ್ತೂಂತ?"

'ಯಾಕೆ ಅಂದ್ರೆ?"

'ಹೀಗೆಲ್ಲಾ ಆಗೋದಂದ್ರೆ ಏನೂಂತ?'

'ಏನೂಂತ ಯಾರ್ಹತ್ರ ಕೇಳೋದು? ನಾವು ಆಡೋದಿಲ್ಲಾಂತ ಬಾಯ್ಮುಚ್ಚಿಕೊಳ್ಳಬಹುದು. ಆಸ್ರೆ ಕೇಳೋದಿಲ್ಲಾಂತ ಅನ್ನೋಕೆ ಆಗುತ್ಯೆ?

'ಏನ್ರೀ ಇದ ಕೇಳೋದು?'

'ಹೀಗೆಲ್ಲಾ ಆ ಪ್ರಶ್ನೆ ಇದನ್ನ..."

ಅಂದ್ರೆ?...."

'ನೀನೇ ಕೇಳ್ದಿಯಲ್ಲಾ...."

'ಅಯ್ಯೋ, ನಾನು ಕೇಳಿದ್ದೇನು? ನೀವು ಅಂದದ್ದೇನು?'

'ಒಳ್ಳೇ ಸಂಗ್ತಿಯಾಯ್ತಲ್ಲ ಈಗ? ನೀನು ಏನು ಕೇಳೋದು?"

'ಪ ಚೇತಿಯಾಯಿತ್ತಾಸ್ನಿ. ಅದೇ ನಾನು ಏನು ಹೀಗೆಲ್ಲಾ ಮಾತಾಡ್ತಾ ಇದ್ದೀರೀಂತ ಅಂದ್ಕೊಂಡಿದ್ದ."

'ಅದೆಲ್ಲಾ ಇರ್ಲಿ, ಸದ್ಯ ನಿನ್ನ ಪ್ರಶ್ನೆ ಯಾವುದಕ್ಕೆ ಸಂಬಂಧಪಟ್ಟದ್ದೂಂತ....'

'ನಾನು ಕೇಳಿದ್ದು ಆ ಗನಿ ದುರಂತದ ವಿಷಯ..."

'ಓ, ಘೋರಾ ಗನಿಯ ಕತೆ ಅಲ್ವೆ? ಪಾಪ, ಏನು ಮಾಡೋದ.? ಅವರು ಮುಂಜಾನೆ ಎದ್ದ ಗಳಿಗೆ ಸರಿಯಾಗಿಲ್ಲಲ್ಲ..."

"ಇದೆಂತಹ ಮಾತು? .ಲ್ಲ ಬಿಟ್ಟ ಹಂಗಿ ನೆಟ್ಟಾಂತಂದ ಹಾಗೆ?"

'ಯಾಕೆ? ಯಾಕೆ? ಅಲ್ವೆ ಮತ್ತೆ?"

'ವಿಧಿವಾದವನ್ನ ಬಿಟ್ಟು ಉದ್ಯಮವೇ ವಿಧಿಯೆನ್ನೋ ನೀವೂ ಈ ರೀತಿ ಅನಬೇಕಾದ್ರೆ...."

"ಹೌದು. ಉದ್ಯಮವೇ ವಿಧಿ ನಿಜ. ಆದರೆ ನೋಡು, ಉದ್ಯಮದಲ್ಲಿ ಮಾನವನ ಪಾತ್ರ ಪ್ರಧಾನ, ಅದಕ್ಕೆ ಪೂರಕವಾಗಿ ಅದೃಷ್ಟದ ಕೈವಾಡವಿದ್ದರೆ. ಆದರಲ್ಲಿ ಯಶ..."

"ಅದಿಲ್ಲವಾದರೆ?"

"ಗೊತ್ತೆಯಿದೆಯಲ್ಲ! ದೇವತಾ ಸ್ತುತಿಗಳಿದ ಚಿತ್ರರದ ಕಾವ್ಯರಚನೆಯಂತೆ.."

"ಅಂದರೆ ಜಗದು ಬಿಟ್ಟ ಕಬ್ಬಿನ ಜೊಲ್ಲಿನಂತೆ..."

'ಹ್ಞಾಂ ಸರೀನ್ನು."

"ಅದಿರ್ಲಿ, ಉದ್ಯಮದಲ್ಲಿ ತೊಡಗಿದ ಮುನ್ನೂರಕ್ಕೂ ಮಿಕ್ಕಿದ ಕಾರ್ಮಿಕರು ದುರಂತಕ್ಕೆ ಗುರಿಯಾದರಂತಲ್ಲಾ?"

'ಅದೇ ನೋಡು, ಅವರ ಗ್ರಹಚಾರ. ದೈವಲೀಲೆ.... ವಿಧಿಯ ಕೈವಾಡ...'

"ಅಂದರೆ?'

'ಮಾನವನು ಬುದ್ಧಿಶಕ್ತಿ, ಕೌಶಲ್ಯ ಪ್ರಯತ್ನ, ಸಾಹಸ ಮೊದಲಾದುವುಗಳನ್ನು ಉಪಯೋಗಿಸಿ ಉದ್ಯಮಶೀಲನಾಗುತ್ತಾನೆ. ಆದರೆ, ಆತನ ಶಕ್ತಿ ಸಾಮರ್ಥ್ಯಗಳ ಅಪರ್ಯಾಪ್ತತೆಯಿಂದಾಗಿ ಅಸಫಲನಾದಾಗ, ದುರಂತಗಳಿಗೆ ಗುರಿಯಾದಾಗ, ತನ್ನ ಶಕ್ತಿ ಸಾಮರ್ಥ್ಯಗಳಿಗೂ ಮಿಗಿಲಾದ ಶಕ್ತಿಯೊಂದಿದೆ ಎಂದು ಕಲ್ಪಿಸುತ್ತಾನೆ. ಅದನ್ನೇ ನಾವು ವಿಧಿಯೆನ್ನುತ್ತೇವೆ."

"ಅಂದರೆ, ಉದ್ಯಮವಾದಿಗಳೂ ವಿಧಿವಾದವನ್ನು ಒಪ್ಪಬೇಕಾಗುತ್ತದೆ..."

"ಅವರು ವಿಧಿವಾದವನ್ನೇ ನಂಬಿ ಸುಮ್ಮನಿರುವುದಿಲ್ಲ ..."

'ಅದು ಹೇಗೂ ಇರಲಿ ಧೋರಾ ಗನಿಗಳ ದುರಂತದಂತಹುದು ಭಾರತದಲ್ಲಿಯೇ ಇದುವರೆಗೆ ನಡೆದಿರಲಿಲ್ಲವಂತೆ ನೋಡಿ..."

"ಹ್ಞಾಂ, ಹೌದು..."

'ಈ ಬಗೆಯ ದುರಂತಕ್ಕೆ ಕಾರಣವೇನಿರಬಹುದು?'

"ಏನೂಂತ ಅನ್ನೋದು ಹೇಗೆ? ಗನಿ ಕುಸಿದು ಹೋಗುವುದುಂಟು. ಇದೆಂತಹುದೋ ಒಳಗಡೆ ಸ್ಫೋಟ ನಡೆಯಿತಂತೆ ನೋಡು"

"ಅಲ್ರಿ, ಸ್ಫೋಟ ಸಂಭವಿಸುತ್ತಿದೊಡನೆಯೇ ಪ್ರಾಣರಕ್ಷಣೆಯ ಕ್ರಮ ಕೈಗೊಳ್ಳಬಹುದಿತ್ತಲ್ಲ?"

'ಒಳ್ಳೆ ಕತೆ ಕೇಳುತ್ತೆ. ಅಲ್ಲಾ, ಗನಿಯೊಳಗಿಂದ ಹೊರ ಬರುವುದೆಂದರೆ ಅಷ್ಟು ಸುಲಭವೆನ್ನುತ್ತೀಯ? ಅದರ ಮೇಲೆ ಸ್ಫೋಟ ಎಂಬುದ ಮಂತ್ರಿಗಳ ಹಾಗೆ ಹೇಳಿ ತಡವಾಗಿ ಬರುತ್ತೆಯೆ?"

"ಅಂದ್ರೆ, ಗನಿ ಕೆಲಸಗಾರರನ್ನು ದೇವರೇ ಕಾಪಾಡಬೇಕು ..."

"ಇದು ಬರೇ ವಿಧಿವಾದ...'

"ಮತ್ತೆ ಹೇಗೆ ಅವರು ಬದುಕಬಲ್ಲರು?'

"ಉದ್ಯಮ ವಾದವು ಬದುಕುವ ವಿಧಾನಗಳನ್ನು ಕಲ್ಪಿಸಿದೆ. ಇದು ಅಯಶಸ್ವಿಯಾದಲ್ಲಿ ಮಾತ್ರ ವಿಧಿವಾದವೇ ಶರಣು...."

"ಒಳ್ಳೆ ಡಾಕ್ಟ್ರು ಹೇಳಿದ ಹಾಗೆ ಹೇಳ್ತೀರಿ...'

"ಯಾಕೆ'

"ಉಗುರಿಡೆಯಲ್ಲಿ ಆ ಮನುಷ್ಯನಿರುವುದಾದರೆ, ಈ ಇಂಜೆಕ್ಷನ್ನಿನಿಂದ ಬದುಕುತ್ತಾನೆ ಅಂತ....'

'ಪರ್ವಾಗಿಲ್ಲ ಕಣೇ, ನೀನೂ ಡಾಕ್ಟ್ರಾಗುತಿದ್ರೆ ಚೆನ್ನಾಗಿತ್ತೋ ಏನೋ..."

'ಸುರ ಪಾಯ್ತು ನಿಮ್ದೊಂದು.ಅದೆಲ್ಲಾ ಇರ್ಲಿ....ನೀವೇನೋ ಅಂದ್ರಲ್ಲಾ?"

'ಯಾವಾಗ?"

'ಅದೇ ನಾನು ಮೊದ್ಲು ಕೇಳಿದಾಗಲೇ ಅದೇನೋ ವೇದಾಂತ ಅಂದ್ರಲ್ಲಾ?'

'ವೇದಾಂತ? ವೇದಾಂತವೆಲ್ಲಿ ಬಂತೆ? ಅದ್ರ ಮೇಲೆ ವೇದಾಂತ ಬಾರಿಸೋಕೆ ನಾನೆಲ್ಲಿ ವೇದಾಂತ ಅಭ್ಯಾಸ ಮಾಡಿದ್ದೇನೆ?'

'ಅದೇ ನೋಡಿ, ಮಾತಾಡೋದಿಲ್ಲಾಂತ ಬಾಯಿ ಮುಚ್ಚೋ ವಿಷಯ...'

"ಓ....ಹಾಗೆ ಬಾ. ಆತ್ಮಾವ ವೇದಾಂತಾನೂ ಅಲ್ಲ. ಹಿರಿಯರ ಅನುಭವದ ಮಾತು...."

'ಅನುಭವವಿದ್ದಲ್ಲಿ ಅವ್ಯಕ್ತವಿದೆ ಅನ್ನುತ್ತಾರಲ್ಲ?" ವೇದಾಂತವಾದ್ರೂ ಅನುಭವ ಮುಂಟಿಸವೇ ಅಲ್ವೆ?

'ಅನೊಂದನ್ನೂ ನಾನರಿಯೆ. ಆಸ್ರೆ ನೋಡು,ಆ ಮಾತು ನೂರಕ್ಕೆ ನೂರರಷ್ಟು ನಿಜಕಡ್ಡಿ ಮುರಿದು ಬೇಕಾದ್ರೂ ಹೇಳಬಹುದು..."

"ಅದೇನು ದೊಡ್ಡದು? ಮುರಿದರೆ ಕಡ್ಡಿ ಮುರಿದೇ ಮುರಿಯುತ್ತೆ. ನಾನೂ ಬೇಕಾದ್ರೆ ಕಡ್ಡಿಮುರಿದು ಹೇಳ್ತೇನೆ, ಅದು ಸುಳ್ಳಾಂತ...."

"ಅಲ್ವೆ ಕಡ್ಡಿ ಮುರಿದು ಹೇಳುವುದೆಂದರೆ ಏನೂಂತ ತಿಳಕೊಂಡೆ?"

"ಮತ್ತಿನ್ನೇನು? ನೋಡಿ ಹೀಗೆ..."

'ಓ, ಇಲ್ಲಿಯೇ ನೀನು ಜಾರಿ ಬಿದ್ದಿರೋದು...'

'ಯಾಕೆ?'

'ಸದ್ಯ ಯಾಕೇಂತ ಕೇಳಿದಿಯಲ್ಲ? ಬದುಕಿದೆ"

'ಏನಾಯ್ತು?'

'ಅಲ್ಲಾ, ನಾನು ಜಾರಿಬಿದ್ದಿಲ್ಲಾ, ಕೂತುಕೊಂಡೇ ಇದ್ದೇನೆ ಅಂತ ಅನ್ನೋಕೆ ಹೋಗ್ಲಿಲ್ಲ ನೋಡು....'

"ಅಷ್ಟೂ ನನಗೆ ಗೊತ್ತಿಲ್ವೆ?"

"ಸದ್ಯ ಸಮಾಧಾನವಾಯ್ತು. ಹಾಗೇ ನೋಡು, ಕಡ್ಡಿ ಮುರಿದು ಹೇಳುವುದೆಂದ್ರೆ ಖಡಾಖಂಡಿತವಾಗಿ ಹೇಳುವುದು...'

'ಓ, ಹಾಗೇನೆ? ಹಾಗಾದ್ರೆ ನೀವು ಅಂದದ್ದು ಸರೀನ್ನಿ. ಅನುಭವವಿದ್ದಲ್ಲಿ ಅವ್ಯಕ್ತವೂ ಬರುತ್ತೆ.... ಅದ್ದರಿಂದ್ಲೇ ಅದು ವೇದಾಂತ....'

'ಹ್ಞಾಂ, ಒಂದು ದೃಷ್ಟಿಯಿಂದ ಅದೂ ಸರೀನ್ನು,"

'ಹೇಗೆ?'

'ವೇದ ಅಂದರೆ ಜ್ಞಾನ. ವೇದಾಂತ ಅಂದರೆ, ಪರಿಪೂರ್ಣ ಜ್ಞಾನ. ಅನುಭವದ ಕೊನೆಯುಕ್ತಿ ಕಂಡುಕೊಂಡ ಸತ್ಯ...'

"ಹ್ಞಾಂ.... ಅಲ್ರಿ, ಅದು ಯಾಕೆ ಹೀಗೇಂತ?"

'ಅದೇ, ಮತ್ತೇನು? ನಮ್ಮ ಪ್ರಧಾನಿ ಶಾಸ್ತ್ರಿಯವರಿಗೆ ರಷ್ಯದಲ್ಲಿ ಅಭೂತಪೂರ್ವ ಸ್ವಾಗತ ಸಿಕ್ಕಿತ್ತಲ್ಲ?'

"ಹ್ಞಾಂ.... ಸಿಕ್ಕಿತ್ತು....'

'ಅದ್ರ ಬಗ್ಗೆ ಕೆಂಪು ಚೀನಾದ ಪತ್ರಿಕೆಗಳು ತಮಗೆ ಕಂಡ ಹಾಗೆ ಆಡತೊಡಗಿವೆ...."

"ಏನಂತೆ?'

'ಶಾಸ್ತ್ರಿಯವರು ಚೀನೀ ವಿರೋಧಿಗಳ ದ ಆಮಂತ್ರಣ ಕೈಗೊಂಬೆಯಂತೆ. ಆದ್ದರಿಂದ್ಲೇ ಅವರಿಗೆ ಸೋವಿಯತ್ತಿನ ಭವ್ಯ ಸ್ವಾಗತವಂತೆ? ...'

'ಹ್ಞಾಂ....ಆ ಮೇಲೆ?"

'ಚೀನೀ ವಿರೋಧಿ ನೀತಿಯ ಅನುಕರಣೆಯಲ್ಲಿ ಶಾಸ್ತ್ರಿ, ನೆಹರೂ ಉತ್ತರಾಧಿಕಾರಿಯಂತೆ, ಸಮಾಜವಾದಿ ಚೀನವನ್ನು ವಿರೋಧಿಸುವಲ್ಲಿ ರಷ್ಯ ಭಾರತದೊಡನೆ ಮೈತ್ರಿ ಬೆಳೆಸುತ್ತಿದೆಯಂತೆ. ಇದಕ್ಕೆ ಕಾಶ್ಮೀರ ಸಂದರ್ಭದ ನೀತಿಯೇ ಕಾರಣವಂತೆ. ಅವರು ನೆಹರೂರೊಡನೆ ಸ್ನೇಹ ಬೆಳೆಸಿದ್ದರೆ, ಕೋಸಿಗಿನ್ ಶಾಸ್ತ್ರಿಯವರೊಡನೆ ಹಸ್ತಲಾಘವ ನೀಡುತ್ತಿದ್ದಾರಂತೆ! ಅದರ ಮೇಲೆ ಭಾರತದ ಧುರೀಣರು ಪ್ರತಿಗಾಮಿಗಳಂತೆ, ರಾಜಕೀಯ ಬೆದರುಗೊಂಬೆಯಂತೆ!'

'ಇನ್ನೇನಾದರೂ ಇದೆಯೆ?'

'ಇಲ್ಲದೆ ಏನು? ನಾಯಿ ಬೊಗಳುತ್ತ ಇರುತ್ತದೆ...."

'ಈಗ ಚೀನಾದೊಡನೆ ಪಾಕಿಸ್ತಾನವೂ ಸೇರಿದೆಯಲ್ಲ!"

"ತುಸು ಕಾಲ ಕಳೆದ ಮೇಲೆ ಇಂಡೋನೇಶ್ಯವೂ ಸೇರಿಕೊಳ್ಳಬಹುದು.... ಮತ್ತೆ...."

"ಅಲ್ರಿ, ಇವೆಲ್ಲವು ಭಾರತದ ಬಗ್ಗೆ ಯಾಕೆ ಈ ಅಭಿಪ್ರಾಯವನ್ನು ತಳೆಯುತ್ತಿವೇಂತ..."

ಹೌದು, ಭಾರತದ ಪ್ರತಿಷ್ಠೆ ಬೆಳೆಯುತ್ತಿರುವುದನ್ನು ಕಂಡು ಸಹಿಸಲಾಗದವು ಇವು. ಹೇಗಾದರೂ ಮಾಡಿ ಎಂತಾದರೂ ಮಾಡಿ ಅದನ್ನು ಅವಮಾನ ಮಾಡಬೇಕು ಎಂಬ ಗುರಿಯೇ ಅವುಗಳದ್ದು. ನಾಲ್ಕೂ ಕಡೆಯಿಂದ ಈ ಬಗೆಯ ಅಪಹೇಳನದ ಗುಲ್ಲು ಎಬ್ಬಿಸಿದರೆ, ಭಾರತದ ಬಗ್ಗೆ ಜಾಗತಿಕ ಅಭಿಪ್ರಾಯ ಪ್ರಬಲವಾಗಿ ತಮ್ಮ ಬೇಳೆಬೇಯಿಸಬಹುದೂಂತ ಈ ನಾಯಿಗಳ ಇಚ್ಛೆ. ಅದಕ್ಕಾಗಿಯೇ ಬೊಗಳುತ್ತಿವೆ ...."

"ಅಂದ್ರೆ, ಇಂದಿನ ದಿನಗಳಲ್ಲಿ ಯಾರ ಗೊಡವೆಯೂ ತನಗೆ ಬೇಡಾಂತ ಸುಮ್ಮನಿರುವುದೂ ಕಠಿಣ ಅನ್ನಿ...."

"ನಿಜಾನ್ನು ದೊಡ್ಡವರೆನಿಸಿಕೊಂಡವರಿಗೆ ಉಳಿದವರೆಲ್ಲಾ ಹದಿನಾಲ್ಕರ ಹರೆಯ

(ಹದಿಮೂರನೇ ಪುಟ ನೋಡಿ)

ಹಿಂದೀ ಪ್ರಚಾರ ಸಮಿತಿ

ಉಡುಪಿ (ರಿ)

ಕೋಳದ ಪೇಟೆ, ಉಡುಪಿ (ದ. ಕ.)

ನೋಟೀಸು.

ನಮ್ಮ ಸಮಿತಿಯ ಮಹಾಸಭೆಯು ತಾರೀಕು 13—6—1965ನೇ ಆದಿತ್ಯವಾರ ಸಂಜೆ ಗಂಟೆ 5.00ಕ್ಕೆ ಸರಿಯಾಗಿ ಸಮಿತಿಯ ಕಾರ್ಯಾಲಯದಲ್ಲಿ ಜರಗಲಿರುವುದು. ಸಮಿತಿಯ ಸದಸ್ಯರು ಸಮಯಕ್ಕೆ ಸರಿಯಾಗಿ ಹಾಜರಿರಬೇಕಾಗಿ ವಿನಂತಿ.

ಟಿ. ಎ. ಪೈ,

ಉಡುಪಿ, 25.5.1965. ಅಧ್ಯಕ್ಷ.

ಶ್ರೀ ಸ್ವಾಮಿ ಚಿನ್ಮಯಾನಂದ ಮೀಮಾಂಸೆ

ಗೀತಾ-ದ್ವಿತೀಯ ಅಧ್ಯಾಯ

ಸಂಗ್ರಹಕರ್ತೆ
ಶ್ರೀಮತಿ ಆನಂದಿ ಸದಾಶಿವ ರಾವ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಹಿಮಗಿರಿಯ ತೆತ್ತ್ವ ರಣಕಣಕ್ಕೆ ಬಂತು

ಈಗ ವಿಜ್ಞಾನಮಯ ಜಗತ್ತಿನಲ್ಲಿ ಬೇಕಾದ ಸುಖ ಸಲಕರಣೆಗಳಿವೆ. ಆದರೆ ಮಾನವನು ದುಃಖಿತನಾಗಿರುವನು. ಅವನು ಬಾಹ್ಯ ಆಡಂಬರಗಳಲ್ಲಿ ಮನಸ್ಸು ಹರಿಯಬಿಟ್ಟು, ಆಂತರಿಕ, ಮನ ಬುದ್ಧಿ ವ್ಯಕ್ತಿತ್ವವನ್ನು ಬೆಳೆಯಿಸದೆ ಇದ್ದುದೇ ಇದಕ್ಕೆ ಕಾರಣ. ವಿಜ್ಞಾನಮಯ ಸಂಶೋಧನೆಗಳು ವ್ಯಕ್ತಿಯ ಸುತ್ತಲಿನ ಪ್ರಪಂಚವನ್ನು ಸುಂದರಗೊಳಿಸುವುವು. ವಿಷಯೇಂದ್ರಿಯಗಳಿಗೆ ಪರಮಾವಧಿ ಸುಖವನ್ನು ಕೊಡುವುವು. ಆದರೆ ಅದನ್ನು ಅನುಭವಿಸುವಂತಹ ಮನ, ಬುದ್ಧಿಗೆ ಸರಿಯಾದ ಶಿಕ್ಷಣ ಕೊಡದ ಕಾರಣ ಅವನ್ನು ಅನುಭವಿಸುವ ಈ ಆಧುನಿಕ ಮಾನವನು ಶಾಂತಿಯನ್ನು ಹೊಂದುವ ಬದಲು ಇನ್ನೂ ಹೆಚ್ಚಿನ ಅಶಾಂತಿ ಪಡೆದಿರುವನು. ಸುಖಾಪೇಕ್ಷೆಯಿಂದ ಬಾಹ್ಯ ಪ್ರಪಂಚದ ಈ ನಶ್ವರವಾಗುವ ವಸ್ತುಗಳ ಮೇಲಿನ ಆಸಕ್ತಿಯಿಂದ ತನ್ನ ಆಂತರಿಕ ಉತ್ತಮ ಉದಾತ್ತ ಧ್ಯೇಯಗಳನ್ನು ಮರೆತು ಕೇವಲ ಸಂಕುಚಿತ, ಸ್ವಾರ್ಥಪರನಾಗಿ ಬೆಳೆದಿರುವನು. ಇದು ಜಗತ್ತಿನ ಎಲ್ಲಾ ದುಃಖ ಸನ್ನಿವೇಶಗಳಿಗೆ ಕಾರಣ. ಆದರಿಂದಾಗಿ ಸುಖ ಜೀವನವನ್ನು ಒಬ್ಬನು ಬಾಳಬೇಕಾದರೆ ದೇಹ, ಮನ, ಬುದ್ಧಿಗಳ ವಾತಾವರಣದಲ್ಲಿ ಒಂದು ನಿಯಮಿತ ಧಾರ್ಮಿಕ ಜೀವನ ಬಾಳಬೇಕು. ಮನಸ್ಸನ್ನು ಒಂದು ನಿಯಮಿತ ಹಾದಿಯಲ್ಲಿ ಓಡಿಸಬೇಕು. ಬುದ್ಧಿಗೆ ಒಂದು ನಿರ್ದಿಷ್ಟ ವಿಚಾರ ಬೇಕು. ಇಲ್ಲದಿದ್ದರೆ, ಮಾನವನ ಆಂತರಿಕ ವ್ಯಕ್ತಿತ್ವವು ನಷ್ಟವಾಗಿ ಕುಗ್ಗಿಹೋಗಿ, ಶಾಂತಿಗಾಣದ ಈಗಿನ ಮಾನವನಂತೆ ಕಷ್ಟಗಳಿಂದ ಕಂಗೆಟ್ಟು ಮುಂದೇನ ? ಎಂದು ದಾರಿಕಾಣದೆ ತೊಳಲಾಡುವನು. ಮನಸ್ಸಿನಲ್ಲಿ ಶಾಂತಿ ಇಲ್ಲದೆ ಕೊರಗುವನು. ಇದಿರಾದ ಸಮಸ್ಯೆಗಳನ್ನು ನಿರ್ಭಯದಿಂದ ಇದಿರಿಸಲಾರನು. ಸಾಯುದೇ ಬದುಕಿ ಜೀವವಿದ್ದ ಶವದ ಬಾಳು ಸಾಗಿಸುವಂತಾಗಿ ತೀರ ಚಟುವಟಿಕೆ ರಹಿತ ಮನಸ್ಸಿನಿಂದ ಕುಗ್ಗಿಹೋಗುವನು.

ಇಂತಹ ನಿರುತ್ಸಾಹ ಬಾಳನ್ನು ಯುವಜನಾಂಗದಲ್ಲಿ ಕಾಣಬಹುದು. ಅವರಿಗೆ ಸರಿಯಾದ ಧಾರ್ಮಿಕ ನೀತಿ ನಿಯಮಗಳನ್ನು ಬಾಳದೆ. ಅರಿಯದೆ ಈ ತರದ ನಿರುತ್ಸಾಹ ಮೂಡಿಬರಲು ಕಾರಣ. ಅದಕ್ಕೆ ಗೀತೆ ಅತ್ಯುತ್ತಮ ಔಷಧಿ.

ಒಂದು ದೇಶದಲ್ಲಾಗಲೀ, ಒಂದು ಜನಾಂಗದಲ್ಲಾಗಲಿ ಹಳೆಯ ಧಾರ್ಮಿಕ ತತ್ವಗಳು ದೇಶದ, ಜನಾಂಗದ ಪ್ರಗತಿಯ ಪಥಕ್ಕೆ ತಕ್ಕಂತೆ ಅಳವಡಿಸಿಕೊಳ್ಳುವಂತಹ ಸತ್ವ ರಹಿತವಾಗಿದ್ದರೆ, ಆ ಧರ್ಮವು ಕುಸಿದು ಬೀಳುವುದು. ಆ ಧರ್ಮ ಹೇಳಿದ ಜೀವನವನ್ನು ಪ್ರಗತಿ ಪಡೆದ ಸಮಾಜ, ಬಾಳಲು ಸಾಧ್ಯವಾಗದೆ ಇದ್ದರೆ ಜನಾಂಗವು ಧರ್ಮವನ್ನು ಕಿತ್ತು ಎಸೆಯುವುದು ಒಂದು ಗಿಡವು ಬೆಳೆದಂತೆ ಆವರಣವು ಅದಕ್ಕೆ ಕಿರಿದ ಎಂದು ತೋರಿದರೆ ಮುಂದೆ ಅದು ಆವರಣವನ್ನು ಮೀರಿ ಬೆಳೆಯುವುದು, ಆವರಣವು ನುಚ್ಚು ನೂರಾಗುವುದು. ಇದು ಗಿಡವು ಸತ್ವಪೂರಿತವಾಗಿದ್ದರೆ ಮಾತ್ರ ಸಾಧ್ಯ. ಇಲ್ಲವಾದರೆ, ಆವರಣದ ಬಲದಿಂದ ಗಿಡವೇ ಸತ್ತು ಹೋಗುವುದು. ತತ್ವಗಳು ಬಲವಾಗಿದ್ದರೆ ಕಟ್ಟಳೆಗಳನ್ನು ಮುರಿದು ಬಿಸಾಡುವುವು. ಹೊಸ ರೂಢಿಗಳನ್ನು ನಿರ್ಮಿಸುವ ಶಕ್ತಿ ಪಡೆಯುವುವು. ಇಲ್ಲವಾದರೆ ಕಟ್ಟಳೆ, ಸಂಪ್ರದಾಯಗಳು, ಬಲವಾಗಿದ್ದಲ್ಲಿ, ತತ್ವಗಳು ನಿರ್ಜೀವವಾಗುವುವು.

ಈಜಿಪ್ಟ್, ರೋಮ್ ಧರ್ಮವು ಹೀಗೆ ನೇಪಥ್ಯಕ್ಕೆ ಹೋಯಿತು. ಕ್ರೈಸ್ತ ಧರ್ಮವು ಮೇಲೆ ಬಂತು. ಕ್ರೈಸ್ತ ಧರ್ಮವು ಆಗಿನ ವಾತಾವರಣದಲ್ಲಿರುವ ಜನರಿಗೆ ಬೋಧಿಸಿದ ಧರ್ಮವಾಗಿದೆ.

ಆದರೆ ಹಿಂದೂ ಧರ್ಮವು ಸಾವಿರಾರು ವರ್ಷಗಳಿಂದ ಹರಿದು ಬಂದಿದೆ. ಅದು ಕಾಲಕಾಲಕ್ಕೆ ತಕ್ಕಂತೆ ಬದಲಾವಣೆಯಾಗುತ್ತಾ ಬಂದಿದೆ. ಹಿಂದೂ ಧರ್ಮವು ಈ ಬದಲಾವಣೆಯನ್ನು ಧರ್ಮದ ತಿರುಳು ಸತ್ವಮಯವಾಗಿದ್ದುದರಿಂದ, ಧರ್ಮವು ವಿಶಾಲ ತತ್ವಗಳನ್ನು ಪ್ರತಿಪಾದಿಸಿದುದರಿಂದ, ತನ್ನ ಸೆರಗಿನಲ್ಲಿ ಅಳವಡಿಸಿಕೊಂಡು ಸಾಮಾಜಿಕ ಪ್ರಗತಿಗೆ ತಕ್ಕಂತೆ ತನ್ನ ಸತ್ವದಲ್ಲಿ ಒಂದಿನಿತು ಕಡಿಮೆಯಾಗದೆ ಬಾಹ್ಯ ಆಚರಣೆಯಲ್ಲಿ ಮಾತ್ರ ಪರಿವರ್ತನೆಗೊಂಡಿತು. ಹೀಗೆ ಬಾಹ್ಯ ಪರಿವರ್ತನೆಯನ್ನು ಎಂತಹ ಸಾಮಾಜಿಕ ಪರಿಸ್ಥಿತಿಯಲ್ಲಿ ಮಾಡಿದರೂ ಸತ್ವಶಾಲಿಯಾದ ತಿರುಳನ್ನು ಪಡೆದ ಹಿಂದೂ ಧರ್ಮವು ಸನಾತನ ಧರ್ಮವು ಸಾವಿರಾರು ವರ್ಷಗಳಿಂದಲೂ ಹೀಗೆ ಪರಿವರ್ತನೆಗೊಳ್ಳುತ್ತ ಬಂದಿದೆ. ಇದರ ವಿಷಯವನ್ನು ನಾವು ಈಗ ಈ ಇಪ್ಪತ್ತನೆ ಶತಮಾನದಲ್ಲಿ ಈ ಕಾಲಕ್ಕನುಗುಣವಾಗಿ ತಿಳಿದು ಬೆತ್ತಿಸಿ ನಮ್ಮ ಜೀವನದಲ್ಲಿ ಆ ತತ್ವಗಳನ್ನು ಬಾಳಲು ಪ್ರಯತ್ನಿಸಬೇಕು. ಆಗ ಅಂತಹ ವ್ಯಕ್ತಿ ವಿಕಾಸನ ಹೊಂದುವುದು. ಶಾಂತಿಯು ದೊರಕುವುದು. ಜೀವನವನ್ನು ಈಗ ಬಾಳುವುದಕ್ಕಿಂತ ಕೊಂಚ ಉತ್ತಮವಾಗಿ ಬಾಳಲು ಸಾಧ್ಯವಾಗಬಹುದು. ಗೀತೆ ಈ ಜೀವನ ಕ್ರಮವನ್ನು ಬಾಳುವ ಬಗೆ ನಿರೂಪಿಸಿದೆ.

ಈಗ ಸಾಮಾಜಿಕ ಪರಿಸ್ಥಿತಿ ಹೊಂದಿ ಅಧಃಪತನವನ್ನು ಮಹಾಭಾರತ ಕಾಲದಲ್ಲೂ ಆಗಿನ ಸಾಮಾಜಿಕ ಪರಿಸ್ಥಿತಿ ಹೊಂದಿತ್ತು. ಅದ ಅರ್ಜುನನ ಸ್ಥಿತಿ ನೋಡಿ ತಿಳಿಯಬಹುದು.

ವೇದ, ಉಪನಿಷತ್ತುಗಳಲ್ಲಿ ಹೇಳಿದ ಜೀವನ ಕ್ರಮವನ್ನು ಬಾಳಿ ಸಮಯಕ್ಕೆ ಅನುಸಾರವಾಗಿ ಧಾರ್ಮಿಕ ಜೀವನವನ್ನು ಬಾಳಿದ ಜನರು ಪಾಂಡವರು. ಅವರು ವೇದ ಉಪನಿಷತ್ತುಗಳಲ್ಲಿ ಹೇಳಿದ ಧಾರ್ಮಿಕ ಜೀವನವನ್ನು, ಮಹಾಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಬಾಳಿದರೂ, ಅವರಿಗೆ ಆ ಧಾರ್ಮಿಕ ಜೀವನ ಎಂದರೇನು? ಎಂದು ತಿಳಿಸುವಂತಹ ಪಂಡಿತರು, ಸ್ಥಿರ ಬುದ್ಧಿಯವರು ಸಹೃದಯಿಗಳು ದೊರಕಲಿ . ಕೇವಲ ಹಳೆಯ ಕ್ರಮಗಳನ್ನು ಹೊಸವಾತಾವರಣದಲ್ಲಿ ಧರ್ಮ ಜೀವನದಲ್ಲಿ ಬಾಳಿದರು. ಯಜ್ಞ ಯಾಗಾದಿಗಳನ್ನು ಮಾಡಿದರು. ಹೀಗೆ ಧರ್ಮ ಜೀವನ ಬಾಳಿದರೂ, ಅವರಿಗೆ ಅವರ ಮುಂದೆ ಇದಿರಾದ ಘೋರ ಸಮಸ್ಯೆಯನ್ನು ಇದಿರಿಸಲು ಶಕ್ತಿ ಸಿಗಲಿಲ್ಲ. ಇದು ಅರ್ಜುನನ ಸ್ಥಿತಿ ಏಕೆ? ಎಲ್ಲ ಮಾನವರಿಗೂ, ಕಠಿಣ ಪ್ರಸಂಗದಲ್ಲೂ ಉಂಟಾಗುವ ಸ್ಥಿತಿ ಧಾರ್ಮಿಕ ಜೀವನ ಎಂದು ಬಾಳಿ ಅದು ನಮ್ಮ ಕಠಿಣ ಸಮಸ್ಯೆಯನ್ನು ಇದಿರಿಸಲು ಸಹಾಯ ನೀಡದೆ ಇರುವಾಗಿನ ಮನೋವೇದನಾ ಸ್ಥಿತಿ; ವಿಜ್ಞಾನ ಶದಸ್ಥಿತಿ; ಅರ್ಜುನನನ್ನು ಪ್ರತೀಕವಾಗಿರಿಸಿ ವ್ಯಾಸರು ಆಗಿನ ಸಾಮಾಜಿಕ ಸ್ಥಿತಿಯಲ್ಲಿ ಜೀವನ ಸಾಗಿಸುವವರಿಗೆ ವೇದ ಉಪನಿಷತ್ತುಗಳನ್ನು ವ್ಯವಹಾರಿಕ ಜೀವನದಲ್ಲಿ ಹೇಗೆ ಬಾಳಬೇಕೆಂದು ಗೀತೆ ರಚಿಸಿದರು. ಈ ತತ್ವವನ್ನು ತಮ್ಮ ಅಮೋಘ ಕೃತಿ ಮಹಾಭಾರತದ ನಡುವೆ ಇರಿಸಿದರು.

ಅರ್ಜುನನಿಗೆ ಆ ಉಪನಿಷತ್ ಸಂಸ್ಕೃತಿಯಲ್ಲಿ ಪೋಷಕಗೊಂಡ ಆರ್ಯರು ಮನಸ್ಸಿಗೆ ಆ ಸಂಸ್ಕೃತಿಯನ್ನು ಸರಿಯಾಗಿ ಅಭ್ಯಾಸ ಮಾಡದೆ, ಅರಿಯದೆ, ಬಾಳದೆ ಇದ್ದುದರಿಂದ ಆ ಧಾರ್ಮಿಕ ಜೀವನದಿಂದ ಜೀವನದಲ್ಲಿ ಇದಿರಾದ ಜಟಿಲ ಸಮಸ್ಯೆಯನ್ನು, ವಿಪತ್ತನ್ನು; ಇದಿರಿಸಲು ಬೇಕಾದ ವೀರ ಶೂರತ್ವವೂ, ವಿವೇ

(ಹನ್ನೆರಡನೇ ಪುಟ ನೋಡಿರಿ)

ಹಣದ ಗಿಲಿಗಿಲಿ ನಿನಾದವು
ನಿಮಗೆ ಮೆಚ್ಚಿಗೆಯಲ್ಲವೇ?

ಜೀವಮಾನದ ಮುಂದಿನ ದಿನಗಳಲ್ಲಿ ನೀವು ಸಂಪತ್ತಿನಲ್ಲಿರುವ ಕಲ್ಪನೆಯು ಎಷ್ಟೊಂದು ಆಹ್ಲಾದಕರವಾದುದು! ಅದಕ್ಕೆ ನೀವು ಮಾಡಬೇಕಾದದ್ದು ಉಳಿತಾಯದ ಯೋಜನೆ. ಪ್ರತೀ ತಿಂಗಳ ಆದಿಯಲ್ಲಿ ಸ್ವಲ್ಪ ಸ್ವಲ್ಪ ಹಣವನ್ನು ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿಸಿರಿ................ ನಿಮ್ಮ ಮಿಗಿತಾಯವು ಬೆಳೆಯುತ್ತಿರುವುದನ್ನು ಅವಲೋಕಿಸಿರಿ. ಕೆಲವು ವರ್ಷಗಳಲ್ಲಿ ನಿಮ್ಮ ಉಳಿತಾಯ ಸಂಕಲದ ನಾದ ಮಾಧುರ್ಯದಿಂದ ರೋಮಾಂಚನಗೊಳ್ಳುವಿರಿ. ಕಾರಣ, ಸುಖಕರವಾದ ಜೀವನದ ಭರವಸೆಯನ್ನು ಅದು ಧ್ವನಿಸುವುದು.

FAITHFUL SB FRIENDLY
ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು:
200ಕ್ಕೂ ಮಿಕ್ಕಿವೆ.

ಚಲಾವಣಾ ನಿಧಿ:
ರೂ. 70 ಕೋಟಿಗೂ ಮಿಕ್ಕಿದೆ.

ನಚಿಕೇತ'ರ
ಹೃದಯಸ್ಪರ್ಶಿ
ನವೀನ ಕಾದಂಬರಿಗಳು

ಹಸುರು ಹಂಸ
ಬೆಲೆ: ರೂ. ಎರಡು.

ಋಣ ಯಾತ್ರೆ
ಬೆಲೆ ರೂ 1-50 ನ. ಪೈಸೆ

ಭಾವಾರ್ಚನೆ
ಬೆಲೆ ರೂ 2-00

ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಇಂದಿನ ಪರಿಸ್ಥಿತಿಯಲ್ಲಿ

ಸ್ಫೂರ್ತಿದಾಯಕ ಶಿವಾಜಿ-ಶಂಕರ ಜಯಂತಿ

ಬರೆದವರು: ಶ್ರೀ ಶಿವಶಂಕರ.

ಇಂದಿನ ಪರಿಸ್ಥಿತಿಯ ಕುರಿತು "ನವಯುಗ" ತನ್ನ ವಾಚಕರಿಗೆ ಸ್ಪಷ್ಟವಾಗಿ, ಅಂಜದೆ, ಅಳುಕದೆ ತಿಳಿಸುತ್ತ ಬಂದಿರುತ್ತದೆ. ಇಂದಿನ ಪರಿಸ್ಥಿತಿಯನ್ನು ಮುಖ್ಯವಾಗಿ ಎರಡು ವಿಧವಾಗಿ ಗುರುತಿಸಿಕೊಳ್ಳಬಹುದು— ಒಂದು ಆಕ್ರಮಣ, ಇನ್ನೊಂದು ಒಳಗಿನ ಅವ್ಯವಸ್ಥೆ. ಈ ಎರಡರ ಕುರಿತೂ ಬಹಳಷ್ಟು ಬರೆಯಬಹುದು. ಒಳಗಿನ ಅವ್ಯವಸ್ಥೆಯ ಕುರಿತು ಈಗ ಏನೂ ಬರೆಯುವದಿಲ್ಲ. ಆಕ್ರಮಣಗಳನ್ನೆದುರಿಸುವ ದೃಷ್ಟಿಯಲ್ಲಿ ಅದನ್ನು ಮುಖ್ಯವೆಂದು ಪರಿಗಣಿಸಲಾಗುವದಿಲ್ಲ. ಆದರೆ ಅವ್ಯವಸ್ಥೆ ಬಲವಾಗಿದ್ದಲ್ಲಿ ಆಕ್ರಮಣವನ್ನೆದುರಿಸಲು ಸಾಧ್ಯ ಇಲ್ಲವೆನ್ನುವದೂ ಅಷ್ಟೇ ಸತ್ಯ. ಅವ್ಯವಸ್ಥೆಯನ್ನು ನಾವೆಲ್ಲ ಶತ್ರುವನ್ನೆದುರಿಸಿದಲ್ಲಿ ಆಕ್ರಮಣದ ರಾಹು-ಕೇತುಗಳಿಂದ ಬಿಡಿಸಿಕೊಳ್ಳಲೂ ಸಾಧ್ಯವಿದೆ. ಸಮಗದು ಮನಸ್ಸಿದೆಯೇ? ನಮ್ಮ ನಾಯಕರು ಅತ್ತ ಗಮನ ಕೊಡುತ್ತಿದ್ದಾರೆಯೇ? ಅಥವಾ ಅಧಿಕಾರ ಅಂತಸ್ತಿನಲ್ಲಿರುವಾಗಲೇ ಅಂತಿಮ ಉಸಿರನ್ನೆಳೆಯಬೇಕೆಂಬ ಏಕಮೇವ ಹಂಬಲದಿಂದ ಇದ್ದಾರೆಯೇ? ಇದನ್ನು ಜನತೆ ಇಂದು ಯೋಚಿಸಿಕೊಳ್ಳಬೇಕಾಗಿರುತ್ತದೆ.

ಇಂದಿನ ಪರಿಸ್ಥಿತಿ ಬಹಳ ಇಕ್ಕಟ್ಟಿನದ್ದೇ ಇದೆ. ನೇತಾರರಂತಲೂ ಬಹಳ ಜಾಗರೂಕತೆಯಿಂದ ವರ್ತಿಸಿಕೊಳ್ಳಬೇಕಾಗಿರುತ್ತದೆ. ಭಾರತೀಯರ ಶಕ್ತಿನ ಮೇಲೆ ಕತ್ತಿಯನ್ನಿಡಲು ಚೈನೀ ಕಮ್ಯೂನಿಸ್ಟರು ಚೆನ್ನಾಗಿ ಪ್ರಯತ್ನಿಸುತ್ತಿದ್ದಲ್ಲಿ, ಇಲ್ಲಿಯ ಕಮ್ಯೂನಿಸ್ಟರು ಅವರಿಗೆ ಪ್ರೋತ್ಸಾಹವೀಯುತ್ತಿದ್ದು ಬೆಂಬಲ ನೀಡುತ್ತಿದ್ದಾರೆ. ಭಾರತೀಯತ್ವದ ಪಂಸಮೂಷ್ಟಿ ಮಾಡಿಬಿಡಬೇಕೆಂದು ಪಾಕಿಸ್ಥಾನವು ಪಾಶವೀ ಶಕ್ತಿಯಿಂದ ಅಂಧವಾಗಿ ಕಾಲು ಕೆದರಿ ಕಾಳಗಕ್ಕೆ ಕರೆಯುತ್ತಿದೆ. ಇಲ್ಲಿಯ ಪಂಚಮ ಸ್ಥಂಭೀಯರೋ ಅವರಿಗಾಗಿ ಹಗಲಿರುಳು ಹಲವಾರು ವೇಷಗಳಿಂದ ದುಡಿಯುತ್ತಿದ್ದಾರೆ. ನಾಗಾಲೆಂಡ್, ಕೇರಳ, ಗೋವಾ, ಮುಂಬೈ, ಮಧ್ಯಪ್ರದೇಶ ಮುಂತಾದೆಡೆಗಳಲ್ಲಂತೂ ಕ್ರಿಸ್ತೀಯರ ಕಾರಸ್ಥಾನ ನಡೆಯುತ್ತಿದೆ. ಕಣ್ಣು ತೆರೆದು ನೈಜ ಪರಿಸ್ಥಿತಿಯನ್ನು ಅವಲೋಕಿಸುತ್ತಿರುವ ಭಾರತೀಯರಿಗೆ ಅದರ ಅರಿವಾಗದಿರದು. ಹೆಣ್ಣು, ಹೊನ್ನು, ಮಣ್ಣು— ಈ ಮೂವ್ವರೊಳು ಆರು ಹಿತವರು ನಿನಗೆಂದು ಹಿಂದೆ ದಾಸರು ಕೇಳಿದ್ದಲ್ಲಿ ಇಂದಿನ ರಾಷ್ಟ್ರೀಯ ದಾಸನು ಅಥವಾ ಸ್ವಯಂಸೇವಕನು ಕಮ್ಯೂನಿಸಮೋ, ಇಸ್ಲಾಮೋ, ಕ್ರಿಸ್ತೀಯ ವಾದವೋ— ಈ ಮೂರರಲ್ಲಿ ನಿನಗ್ಯಾವದು ಬೇಕೆಂದು ಪ್ರಶ್ನೆ ಕೇಳುತ್ತಿದ್ದಾನೆ. ಮುಕ್ತಿಯ ಸಾಧನೆಗೆ ಅವು ದಾಸರಿಗೆ ಅಡ್ಡವಾಗಿದ್ದಲ್ಲಿ, ತಡೆಯಾಗಿದ್ದಲ್ಲಿ, ಇವು ರಾಷ್ಟ್ರದ ರಕ್ಷಣೆಗೆ ಅಡ್ಡವಾಗಿದೆ, ತಡೆಯಾಗಿದೆ. ಮಿಥ್ಯಾ ವಾದಕ್ಕೆ ಮರುಳಾಗಿ ಭಾರತೀಯರು ಸಡಿಲು ಮನಸ್ಕರಾದಲ್ಲಿ ರೋಗ ಉಲ್ಬಣಾವಸ್ಥೆಗೆ ಹೋದ ಮೇಲೆ ಏನೂ ಮಾಡಲು ಸಾಧ್ಯವಾಗದೆ 'ದೈವಲೀಲೆ' ಅಥವಾ 'ಮೋಸ ಹೋದೆನೆ'ಂದು ಹಲುಬಿದಲ್ಲಿ ಏನೂ ಪ್ರಯೋಜನವಿಲ್ಲ.

ಅತ್ತ ನಮ್ಮ ಗಮನವನ್ನು ಸೆಳೆಯಲೆಂದೇ ಶಿವಾಜಿ ಜಯಂತಿ ಹಾಗೂ ಶಂಕರ ಜಯಂತಿಯ ಸಮಯ ಕೆಲ ಘಟನೆಗಳು ನಡೆದಿವೆ. ಭಾರತವು ಭಾರತವಾಗಿರುವವರೆಗೆ ಈ ಮಹಾಪುರುಷರನ್ನು ಮರೆಯಲಾರದು. ಆದರೂ ಹಿಂದೆಯೇ ತಿಳಿಸಿದ್ದಂತೆ, ಕೆಲವೊಮ್ಮೆ ಅತ್ಯುಚ್ಛ ಸ್ಥಾನದಲ್ಲಿರುವವರೂ ಮಿಥ್ಯಾವಾದಕ್ಕೆ ಮರುಳಾಗಿ ಏನೋ ಏನೋ ಗಡಬಡಿಸುವದುಂಟು. ದಿವಂಗತ ಶ್ರೀಮಾನ್ ಜವಾಹರಲಾಲ ನೆಹ್ರೂಜೀಯವರು ಛತ್ರಪತಿ ಶಿವಾಜಿಯನ್ನು 'ದಾರಿ ತಪ್ಪಿದ ದೇಶಭಕ್ತನೆ'ಂದು ಅದೇ ಮಿಥ್ಯಾವಾದದ ಭ್ರಮೆ ಅಥವಾ ಗುಂಗಿನಲ್ಲಿರುವಾಗ ಹೇಳಿದ್ದರು. ಆದರೆ ಆ ವೀರ ಪುರುಷನ ಪ್ರತಿಮೆಯನ್ನು ತೆರೆದಿಡಲು ಅವರು ಒಡನೆ ಒಪ್ಪಿಕೊಂಡಿದ್ದು, ಆ ದೇಶ ಭಕ್ತನ ಕುರಿತು ಪ್ರಶಂಸನೀಯವಾಗಿ ಮಾತಾಡಿದ್ದರು. ಚೈನಾ ಆಕ್ರಮಣ ನಡೆಸಿದಾಗ ಶ್ರೀ ಕೃಷ್ಣಮೆನನ್ ರಕ್ಷಣಾ ಮಂತ್ರಿಯ ಸ್ಥಾನದಿಂದ ಕೆಳಗಿಳಿದು, ಶ್ರೀ ಯಶವಂತ ಛವಾಣರು ಆ ಸ್ಥಾನಕ್ಕೆ ಹೋದಾಗ ರಾಷ್ಟ್ರೀಯರಲ್ಲಿ ಸ್ಫೂರ್ತಿ ಬರಿಸಲು ಛತ್ರಪತಿ ಶಿವಾಜಿಯ ಉದಾಹರಣೆಯನ್ನೇ ಕೊಟ್ಟಿದ್ದರು. ಇಂದು ಒಂದೆಡೆಯಿಂದ ಅಲ್ಲ ಹಲವಾರೆಡೆಗಳಿಂದ ನಾವು ಆಕ್ರಮಣವನ್ನೆದುರಿಸಬೇಕಾಗಿರುತ್ತದೆ. ಆ ಪರಿಸ್ಥಿತಿಯಲ್ಲಿ ಆ ಧೀರ ಪುರುಷನ ಜಯಂತಿ ಹೇಗೆ ಕೊಂಡಾಡಲ್ಪಟ್ಟಿತು? ಭಾರತೀಯರಲ್ಲಿ ಗೌರವ, ಅಭಿಮಾನ, ಸ್ಫೂರ್ತಿ ಬರಿಸುವ ರೀತಿಯಲ್ಲಿ ಕೊಂಡಾಡಲ್ಪಟ್ಟಿತೇ? ಈ ಒಂದೆರಡು ಘಟನೆಗಳು ನಮ್ಮ ಕಣ್ಣು ತೆರೆಯಿಸಿಯಾವು. 'ನವಯುಗ" ವಾಚಕರಿಗೆ ಮೂಲೆಗಾಂವಿನ ಹೆಸರು ಮರೆತು ಹೋಗಿರಲಿಕ್ಕಿಲ್ಲ. ಗಣೇಶೋತ್ಸವದ ಸಮಯ ಕೆಲ ಪುಂಡರು ಗಲಾಟೆ ನಡೆಸಿದುದರಿಂದ ಗಣೇಶನು ನಡುರಸ್ತೆಯಲ್ಲೇ ಇರಬೇಕಾಗಿ ಬಂದಿತ್ತೆಂಬುದು ಈಗ ಜ್ಞಾಪಕಕ್ಕೆ ಬರದಿರಲಾರದು. ಅಲ್ಲಿ ಈ ಸಲ ಶಿವಾಜಿ ಜಯಂತಿಯ ಸಮಯ ರಾದ್ಧಾಂತ ನಡೆಯಿತೆಂಬ ಸುದ್ದಿ ಬರುತ್ತಿರುವಾಗ; ಪಾಕಿಸ್ತಾನಿಗಳ ಪ್ರಭಾವ ಅಲ್ಲಿ ಹೇಗಿದೆಂಬುದರ ಸ್ಪಷ್ಟ ಚಿತ್ರ ನಮ್ಮ ಕಣ್ಮುಂದೆ ಬಂದೀತು. ಅಲ್ಲಿ ನಗರ ಕಾಂಗ್ರೆಸ್ಸ್ ಕಮಿಟಿಯ ಅಧ್ಯಕ್ಷರಾಗಿರುವವರು ಶ್ರೀ ಅಬ್ಬಾಸ್ ಅಲಿ ಖಾಜಿ. ಸ್ವತಃ ಅವರೇ ಶಿವಾಜಿ ಜಯಂತಿಯ ಸಮಯ ತುಚ್ಛ ಹಾಗೂ ಖಂಡನೀಯ ರೀತಿಯಲ್ಲಿ ವರ್ತಿಸಿದರು. ಆದರೂ ಕಾಂಗ್ರೆಸ್ಸ್ ಪಕ್ಷವಾಗಲೀ, ಸರಕಾರವಾಗಲೀ ನಗರ ಕಾಂಗ್ರೆಸ್ಸ ಕಮಿಟಿಯ ಅಧ್ಯಕ್ಷ ಶ್ರೀ ಅಬ್ಬಾಸ್ ಅಲಿ ಖಾಜಿಯವರಿಗೆ ಏನೂ ಮಾಡಿರುವದಿಲ್ಲ!

ಕೋಲಾಪುರದಲ್ಲೂ ಇದೇ ರೀತಿ ಗಲಾಟೆ ನಡೆಸಲು ಪಂಚಮಸ್ಥಂಭೀಯ ಪಾಕ್ ಹಸ್ತಕರು ಪ್ರಯತ್ನಿಸಿದ್ದರೆ ದರೂ ನಗರ ರಕ್ಷಕ ಪಡೆಯ ಚಾಣಾಕ್ಷತನದಿಂದಾಗಿ ಅವರ ಬೇಳೆ ಬೇಯದೆ ಹೋಯಿತು

ಎಲ್ಲೋ ಮೂಲೆಯಲ್ಲಿ ಏನೋ ಚಕಮಕಿ ನಡೆದಿರಬಹುದೆಂದು ಕೆಲವರು ರಂಗ ಎಳೆಯಬಹುದು. ಅದು ಅವರ ಅಭ್ಯಾಸ. ಅಂಕಹವರಿಗಾಗಿಯೇ ಎನ್ನುವಂತೆ ಈ ಎಲ್ಲಾ ಗಲಭೆಗಳನ್ನು ಮೀರಿಸುವಂತಹ ದುರ್ಘಟನೆ ನಡೆದಿರುತ್ತದೆ. ಅದು ಪೂನಾದಲ್ಲಿ. ಉತ್ಸವ ಬಹಳ ವಿಜೃಂಭಣೆಯಿಂದ ನಡೆಯುತ್ತಿತ್ತು. ಶೌಕತ್ ಅಲಿ ಎಂಬ ಪುಂಡನು ವೇದಿಕೆಯ ಮೇಲೇರಿ ಅಲ್ಲಿದ್ದ ಶಿವಾಜಿಯ ಚಿತ್ರವನ್ನು ಕಿತ್ತು ಬಿಸಾಡಿಬಿಟ್ಟನು! ಅಬ್ಬಾ! ಏನು ಪುಂಡತನ! ಹುಂಬತನ! ಅಷ್ಟಾದರೂ ನಗರ ರಕ್ಷಕ ಪಡೆ ಏನಾದರೂ ಚಟುವಟಿಕೆ ತೋರಿಸಿತೇ? ಇಲ್ಲ. ಅಷ್ಟೇ ಅಲ್ಲ, ಆ ಪುಂಡನನ್ನು ಕೆಲ ಯುವಕರು ಹಿಡಿದು ತಂದು ಕೊಟ್ಟಾಗ ಅವನನ್ನು ಸ್ವಲ್ಪ ದೂರ ಕರೆದುಕೊಂಡು ಹೋಗಿ ಬಿಟ್ಟುಬಿಟ್ಟರು— ಸಭೆ ನಡೆಯುತ್ತಿರುವಾಗ ಮುಂದಿನ ಸಾಲಿನಲ್ಲಿ ಕುಳಿತುಕೊಂಡು ಮಾತನಾಡುತ್ತಿರುವ ಹುಡುಗರನ್ನು ಸಭೆಯ ಹೊರಗಡೆ ಕೊಂಡೊಯ್ದು ಬಿಡುವಂತೆ! ಈ ಸುದ್ದಿಯನ್ನು ಪ್ರಕಟಿಸದಂತೆ ಅವರು ಬಹಳ ಜಾಗ್ರತೆ ವಹಿಸಿದರು.

ಈ ಘಟನೆಗಳು ಏನನ್ನು ಸೂಚಿಸುತ್ತವೆ? ಪಂಚಮ ಸ್ಥಂಭೀಯರು ಅಥವಾ ಪಾಕ್ ಪ್ರೇಮಿಗಳು ಛತ್ರಪತಿ ಶಿವಾಜಿ ಮಹಾರಾಜನನ್ನು ರಾಷ್ಟ್ರೀಯ ವೀರನೆಂದು ಅಥವಾ ಧೀರ ದೇಶಭಕ್ತನೆಂದು ಗೌರವಿಸಲು ಸಿದ್ಧರಿಲ್ಲ. ಅವರು, ಕಾಶ್ಮೀರವನ್ನು ಕತ್ತರಿ ಖಂಡವನ್ನಾಗಿ ನಿರ್ಮಿಸಲು ಪ್ರಯತ್ನಿಸುತ್ತಿರುವ ದೇಶದ್ರೋಹಿ ಶೇಖ್ ಅಬ್ದುಲ್ಲಾನನ್ನು ಉದಕಮಂಡಲಕ್ಕೆ ಕಳುಹಿಸಿ ಸಂಪರ್ಕದಿಂದ ದೂರವಿಟ್ಟದ್ದಕ್ಕಾಗಿ ಸಂಸತ್ತಿನಲ್ಲೂ ಭರೀ ಬೊಬ್ಬೆ ಹಾಕಲು ಸಿದ್ಧ! ಅದಕ್ಕೆ ಸಾ|| ಶ್ರೀ ಅಬಿದಾಲಿ, ಅಲ್ಲದೆ ಅಕ್ಬರಾಲಿ ಮುಂತಾದವರೂ ಅಪವಾದವಾಗಿರುವದಿಲ್ಲ! ಅಷ್ಟೇ ಅಲ್ಲ, ಎಲ್ಲಾದರೂ ಒಂದು ಮುಸ್ಲಿಂ ಲೀಗಿನ ಅಭ್ಯರ್ಥಿಗೆ ಜಯವಾದಲ್ಲಿ ಒಡನೆ ಅಲ್ಲಿ 'ಮುಸ್ಲಿಂ ಲೀಗ್ ಜಿಂದಾಬಾದಿ' ನೊಂದಿಗೆ "ಪಾಕಿಸ್ತಾನ ಜಿಂದಾಬಾದ್" ಕೇಳಿಬರುತ್ತದೆ

ಆದರೆ ಅಲ್ಲಲ್ಲಿ ಮುಸ್ಲಿಂಲೀಗಿನವರು ಹಾಗೂ "ಮುಸ್ಲಿಂ ಕಾಂಗ್ರೆಸಿಗರು"(?) ಸಭೆ ಸೇರಿ ಪಾಕಿಸ್ತಾನ ನಡೆಸಿರುವ ಆಕ್ರಮಣವನ್ನು ಖಂಡಿಸಿರುವ ಸಮಾಚಾರ ದಕ್ಷಿಣೋಲಾದರೂ ಬೆಳಕು ತೋರಿಸಬಹುದು. ಅದನ್ನು ನಾಟಕವೆನ್ನದೆ ಉಪಾಯವಿಲ್ಲ. ಅಲ್ಲಲ್ಲಿ ವ್ಯಕ್ತಿಗಳು ಅದಕ್ಕೆ ಅಪವಾದವಾಗಿರಬಹುದು. ರಾಷ್ಟ್ರವನ್ನೇ ಒಂದು ಘಟಕವನ್ನಾಗಿ ತೆಗೆದುಕೊಂಡಾಗ ಅಲ್ಲಿ ಅಪವಾದಕ್ಕೊಂದೂ ಸಿಗಲಾರದು. ಅಂತಹ ಅಪವಾದಗಳಿದ್ದಲ್ಲಿ ಅವರು ಶೇಖ್ ಅಬ್ದುಲ್ಲಾನ ವಿಶಿಷ್ಟ ರೀತಿಯ ಬಂಧನವನ್ನು ಟೀಕಿಸುತ್ತಿದ್ದರೇ? ಪಾಕಿಸ್ತಾನ ಜಿಂದಾಬಾದ್ ಘೋಷಣೆ ಹಾಕುತ್ತಾರೆಯೇ? ಅಲ್ಲದೆ ದಿನವಿಡೀ "ಪಾಕಿಸ್ತಾನ ಆಕಾಶವಾಣಿ"ಯ ಕಾರ್ಯಗಳು ತಮ್ಮ ಆಕಾಶವಾಣಿಯಲ್ಲಿ ಬರುವಂತೆ ತಿರುಗಿಸಿಟ್ಟುಕೊಳ್ಳುತ್ತಾರೆಯೇ?

ಇವೆಲ್ಲಾ ಚಿಕ್ಕ ಪುಟ್ಟ ವಿಷಯಗಳು. ಹಾಗೂ, ಯಾವುದೋ ಒಂದು ವ್ಯಕ್ತಿಗೋ ಗುಂಪಿಗೋ ಸಂಬಂಧಪಟ್ಟದ್ದೆಂದು ಕೆಲವರು ಮೂಗು ಮೇಲೆಳೆದು ಕೊಳ್ಳಬಹುದು. ಛತ್ರಪತಿ ಶಿವಾಜಿ ಒಂದು ಕೋಮಿನವರ ಮುಖಂಡನಾಗಿದ್ದಿರಬಹುದು. "ಪಾಕಿಸ್ತಾನ್ ಆಕಾಶವಾಣಿ" ಅವರ ರುಚಿಗೆ ಅನ್ವಯಿಸುವಂತಹದ್ದಿರಬಹುದು. ಅಲ್ಲಲ್ಲಿ ಪಾಕ್ ಧ್ವಜ ಹಾರಿಸುವದು, ಮಸೀದಿಯ ಮುಂದುಗಡೆ ಮೆರವಣಿಗೆ ಹೋಗುವಾಗ ತಡೆದು ಸಿಕ್ಷಿಸಿ ಕಲ್ಲೆಸೆಯುವದು, ಇತ್ಯಾದಿ ಕೆಲ ಗುಂಪಿನ ವಿಷಯ ಇರಬಹುದು. ಆದರೆ 'ಭಾರತ ಮಾತೆ' ಹಾಗೇನಿರುವದಿಲ್ಲ. ಆಕೆ ಎಲ್ಲರಿಗೂ ಮಾತೆಯೇ ಇದ್ದಾಳೆ. ನಿನ್ನೆಯ ವರೆಗೆ ಆಕೆಯ ಮಗನಾಗಿದ್ದು, ನಿನ್ನೆ ಬಲತ್ಕಾರದಿಂದ ಆಕ್ರಮಣಗಾರರ ಮತಕ್ಕೆ ಮತಾಂತರವಾದೊಡನೆ ಅವಳ ಮಗ ಅಲ್ಲದೆ ಹೋಗುತ್ತಾನೇನು? ನಡೆದ ತಪ್ಪನ್ನು ತಿಳಿದು ತಿದ್ದಿಕೊಂಡಲ್ಲಿ ಬಹಳ ಒಳ್ಳೆಯದು. ಕನಿಷ್ಟ ಪಕ್ಷ ಹಾಗೆಯೇ ಇದ್ದರಾದರೂ ಸರಿ. ಆದರೆ ಬಾಲ ಹೋದ ನರಿಯ ಆಟವನ್ನು ಆಡದಿದ್ದರೆ ಸರಿ. ಭಾರತಮಾತೆಯ ವಿಷಯದಲ್ಲಿ ಅವರು ಅದೆಂತು ನಡೆದು ಕೊಂಡಿದ್ದಾರೆ. ಮೊಹರಮ್ಮಿನ ಸಮಯ ಏನೂ ಗಲಾಟೆಯಾಗಬಾರದೆಂದು ನಗರ ರಕ್ಷಕ ಪಡೆಯವರು ಎಲ್ಲಾ ಪಕ್ಷ ಸಂಗಡಗಳ ಪ್ರಮುಖರನ್ನು ಕರೆದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಮೊಹರಂ ಪ್ರದರ್ಶಕರು ಬಂದಾಗ ಅವರಿಗೆ ಸ್ವಾಗತವೀಯಬೇಕು. ಮತ್ತು ಎಲ್ಲರೂ ಅಂಗಡಿಯೆದುರು ದೀಪ ಹಚ್ಚಿಡಬೇಕೆಂದು ನಗರ ರಕ್ಷಕರ ಪಡೆ ತಿಳಿಸಿತು. ಎಲ್ಲರೂ ಅದಕ್ಕೆ ಸೈಗುಟ್ಟಿದರು. ಆಗ ಒಬ್ಬರೆದ್ದು ಮಹಮ್ಮದೀಯರು ಮೊಹರಂ ಪ್ರದರ್ಶನ ಕಾಲದಲ್ಲಿ ಹಲವಾರು ಘೋಷಣೆಗಳನ್ನು ಹಾಕುತ್ತಿರುವದರೊಂದಿಗೆ "ಭಾರತ ಮಾತಾ-ಕೀ ಜಯ್" ಘೋಷಣೆಯನ್ನು ಹಾಕಬೇಕೆಂದು ಸೂಚಿಸಿದರು. ಒಡನೆ ಅಲ್ಲಿದ್ದ ಮುಸಲ್ಮಾನರೆಲ್ಲರೂ ಅದನ್ನು ಎದುರಿಸಿದರು. ಮತ್ತು ಯಾರೂ ಆ ವಿಷಯಕ್ಕೆ ಪ್ರೋತ್ಸಾಹ ನೀಡಲಿಲ್ಲ! ಭಾರತ ಮಾತೆ ಅವರಿಗೆ ಮಾಡಿರುವ ಅನ್ಯಾಯವಾದರೂ ಏನು?

ಈ ದೇಶ ದ್ರೋಹಿಗಳಿಗೆ ಸಹಾಯ ಮಾಡುತ್ತಿರುವವರು ರಾಷ್ಟ್ರ ದ್ರೋಹಿ ಕಮ್ಯೂನಿಸ್ಟರು. ಅವರು ಅದೆಂತು ಪಾಕಿಸ್ತಾನ್ ಹಾಗೂ ಚೈನಾ ನಡೆಸಿರುವ ಆಕ್ರಮಣವನ್ನು "ಆಕ್ರಮಣವೆಂದು ಕರೆ

(ಐವತ್ತೊಂದನೇ ಪುಟ ನೋಡಿರಿ)

ಇದನ್ನು ನಮ್ಮ ಜನ ಬಯಸಿದ್ದರೆ?

ಬಡವರು ಮರ್ಯಾದೆಯಿಂದ ಬಾಳುವುದೇ ದುರ್ಭರವೆನಿಸಿದ ಈ ಕಾಲ!

ಇದು ಸ್ವಾತಂತ್ರ್ಯದ ಫಲವೋ? ಪುರಾಕೃತ ಕರ್ಮದ ಫಲವೋ?

ಆಳುವವರು ಎಚ್ಚೆತ್ತು ನೋಡುವ ಕಾಲ ಈಗ ಬಂದಿದೆ.

ದೇಶದ ಎಲ್ಲೆಡೆಗಳಿಂದಲೂ ಕೇಳಿ ಬರುತ್ತಿರುವುದು ಇಂದು ಒಂದೇ ಕೂಗು—'ಅನ್ನ! ಅನ್ನ!'. 'ಅನ್ನದೇವರಿಗಿಂತ ಇನ್ನು ದೇವರಿ ಇಲ್ಲ' ಎಂದು ಹಿಂದೊಮ್ಮೆ ಕವಿಯೊಬ್ಬ ಹಾಡಿದ ಸೊಲ್ಲು ಸತ್ಯ ಎಂದು ಇಂದು ಮನವರಿಕೆಯಾಗುತ್ತಿದೆ. 'ಅನ್ನ ಕೊಡಿ, ಇಲ್ಲವೆ ರಾಜೀನಾಮೆ ಕೊಡಿ' ಎಂದು ಜನತೆ ಆಳುವ ವರ್ಗಕ್ಕೆ ಪಂಥಾಹ್ವಾನ ನೀಡುತ್ತಿದೆ. ನಮ್ಮ ಸರಕಾರ ಇಂದಿನ ಪರಿಸ್ಥಿತಿಯಲ್ಲಿ ಇದ್ದೂ ಇಲ್ಲದಂತಾಗಿದೆ. ಸರಕಾರದ ಯಾವ ಪರಿಹಾರ ಕಾರ್ಯಗಳೇ ಆಗಲಿ ಜನತೆಗೆ ಪರಿಹಾರವನ್ನೊದಗಿಸುವಲ್ಲಿ ಎಳ್ಳಷ್ಟೂ ಫಲಪ್ರದವಾಗಿಲ್ಲ.

ಆವಶ್ಯಕ ವಸ್ತುಗಳ ಬೆಲೆ ಗಗನ ಏರಿದೆ

ಜೀವನಾವಶ್ಯಕ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಏರುತ್ತಿರುವ ಇಂದಿನ ದಿನಗಳಲ್ಲಿ ಅವುಗಳನ್ನು ಹತೋಟಿಯಲ್ಲಿಡಲು ನಮ್ಮ ಸರಕಾರಕ್ಕೆ ಸಾಧ್ಯವಾಗಲಿಲ್ಲ. ಅಕ್ಕಿ, ಧವಸಧಾನ್ಯ, ಎಣ್ಣೆ, ಕಾಯಿಗಳ ಬೆಲೆ ಲಗಾಮಿಲ್ಲದೆ ಓಡುತ್ತಿದೆ. ಬಡ ಜನತೆ, ಮಧ್ಯಮ ವರ್ಗದ ಜನ ಮರ್ಯಾದೆಯಿಂದ ಬಾಳುವುದೇ ಕಷ್ಟವೆನಿಸಿದೆ. ಬೆಲೆ ಏರಿಕೆಯಿಂದ ಸೀಮಿತ ಆದಾಯವಿರುವ ನೌಕರ ವರ್ಗ ತತ್ತರಿಸಿ ಹೋಗಿದೆ. ಭವಿಷ್ಯದಲ್ಲಾದರೂ ಏನೂ ಶುಭ ಸೂಚನೆ ಕಾಣಬರುವುದಿಲ್ಲ. ಕೃತ್ರಿಮ ಅಭಾವ ಪರಿಸ್ಥಿತಿಯನ್ನು ನಿರ್ಮಿಸಿಯೋ, ಅಕ್ರಮ ದಾಸ್ತಾನನ್ನು ಮಾಡಿಯೋ ಅಂತೂ ಇಂದು ಎಲ್ಲೆಲ್ಲೂ ಅಭಾವದ ತಾಂಡವ ನೃತ್ಯ ಸಾಗುತ್ತಿದೆ. ಇಂದು ಜನತೆಯು ಅಂತ್ಯ ಕಾಲಕ್ಕೆ ಪರಶಿವನ ತಾಂಡವ ನೃತ್ಯದ ಮರುರೂಪವೋ ಎಂದು ಭಯಪಡುವಂತಾಗುತ್ತಿದೆ. ಬೆಲೆಗಳಿಗೆ ಸೀಮಿತ ಗತಿ ಇಲ್ಲ. ಇಂದಿನ ಬೆಲೆ ನಾಳೆಗಿಲ್ಲ. ಎಲ್ಲೆಲ್ಲೂ ಅಸ್ಥಿರತೆ; ಅಭಾವ; ಅನಿಶ್ಚಿತತೆ.

ನೆಮ್ಮದಿಯ ಬದುಕು ಬಾಳುವಂತಿಲ್ಲ

ಈ ಬೆಲೆ ಏರಿಕೆಯಿಂದ ಜನ ನೆಮ್ಮದಿಯ ಬದುಕು ಬಾಳದಂತಾಗಿದೆ. ಬದುಕುವುದಕ್ಕಾಗಿ ಜನ ಏನನ್ನೂ ಮಾಡಲು ಸಿದ್ಧರಾಗಿದ್ದಾರೆ. ಬೆಲೆ ಏರಿದಂತೆ, ಕೂಲಿಯ ಹೆಚ್ಚಳದ ಬೇಡಿಕೆ ಬರುತ್ತದೆ. ಕೆಲಸ ಮಾಡಿಸುವವರಿಗೂ ಕಷ್ಟ. ಮಾಡುವವರಿಗೂ ಕಷ್ಟ. ತನ್ನ ಆದಾಯದಿಂದ ತಿಂಗಳ ಬಜೆಟನ್ನು ಸರಿದೂಗಿಸುವೆನೆಂಬ ಧೈರ್ಯ ಇಂದು ಯಾರಿಗೂ ಇಲ್ಲವಾಗಿದೆ. ಕೃತಕವಾಗಿ ನಿರ್ಮಿಸಲ್ಪಟ್ಟ ಅಭಾವ ಪರಿಸ್ಥಿತಿಯಿಂದ ಎಲ್ಲೆಡೆಯೂ ಕಾತರ, ಕಳವಳ ತುಂಬಿದೆ. ಇಂದು ಹೀಗಾದರೆ ಮುಂದೇನು ಎಂಬ ಚಿಂತೆ ಎಲ್ಲರನ್ನೂ ಕಾಡುತ್ತಿದೆ. ನೆಮ್ಮದಿಯಿಲ್ಲ; ಶಾಂತಿಯಿಲ್ಲ. ಜನ ಹಸಿವಿನ ಬಾಧೆಯಿಂದ ಹಿಂಸಾತ್ಮಕ ಕೃತ್ಯದ ಮರೆಹೊಕ್ಕ ನಿದರ್ಶನಗಳು ಸಾಕಷ್ಟಿವೆ. ವ್ಯಕ್ತಿಯ ಜೀವಿತ ಇಂದು ಮೂರಾಬಟ್ಟೆಯಾಗಿದೆ.

ಇದು ರಾಮರಾಜ್ಯ!

ಇದು ನಮ್ಮ ರಾಮರಾಜ್ಯದ ಪರಿಸ್ಥಿತಿ. ದೇಶ ಕಲ್ಯಾಣದ ಹೊಣೆ ಹೊತ್ತ ಜನ ಇಂದು ಈ ಪರಿಸ್ಥಿತಿ ಕಂಡು ಏನು ಮಾಡುವರೋ? ಆಳುವ ಸರಕಾರ ಕೈಕಟ್ಟಿ ಕುಳಿತಿಲ್ಲವೇನೋ ನಿಜ. ಆದರೆ, ಸರಕಾರ ಈ ದಿಸೆಯಲ್ಲಿ ತೀರಾ ವಿಫಲಗೊಂಡಿದೆ ಎಂಬುದು ಸುಸ್ಪಷ್ಟ. ಇಷ್ಟು ಅವಧಿ ಕಳೆದರೂ ಬೆಲೆ ಏರಿಕೆಯನ್ನು ತಡೆಗಟ್ಟುವಲ್ಲಿ ಸರಕಾರ ಪೂರ್ಣ ಪರಾಜಯ ಹೊಂದಿದೆ. ಭ್ರಷ್ಟಾಚಾರವನ್ನು ಹೊಡೆದೋಡಿಸುವಲ್ಲಿ ಅದು ಯಶಪಡೆದಿಲ್ಲ. ಯೋಜನೆಗಳ ಫಲ ಜನತೆಗೆ ದೊರೆತಿಲ್ಲ. ಆದರೂ ರಾಮರಾಜ್ಯ ಕಟ್ಟುವ ಹೊಂಗನಸನ್ನು ಅವರು ಕಾಣುತ್ತಿದ್ದಾರೆ. ದೇಶದ ಜನತೆಗೆ ಹೊಟ್ಟೆಗೆ ಅನ್ನ ನೀಡುವಲ್ಲಿ ಅಸಫಲ ಹೊಂದಿದ ಸರಕಾರದಿಂದ ಜನತೆ ಇನ್ನೇನನ್ನು ನಿರೀಕ್ಷಿಸಬಹುದು? ಇದು ಬಾಪೂ ಕನಸು ಕಂಡ 'ರಾಮರಾಜ್ಯ'ದಲ್ಲಿ ನಡೆಯುವ ರಾವಣನ ದರಬಾರಾಗಿದೆ.

ಕಂಟ್ರೋಲ್ ಭ್ರಷ್ಟಾಚಾರಕ್ಕೊಂದು ಹೊಸ ದಾರಿ

ಬೆಲೆ ಏರಿಕೆಯನ್ನು ತಡೆಗಟ್ಟಲು ಸರಕಾರ ಕಂಟ್ರೋಲ್ ಜಾರಿಗೆ ತಂದಿತು. ಬೆಲೆ ನಿಗದಿಗೊಳಿಸಿತು. ಆಹಾರ ಸಾಗಾಟದ ಕುರಿತು ನಿರ್ಬಂಧ ಹೇರಿತು. ಇವೆಲ್ಲವುಗಳಿಂದ ಲಾಭ ಪಡೆದವರು ಸರಕಾರದ ಇಲಾಖೆಗಳಲ್ಲಿ ದುಡಿಯುವ ಜನತೆಯ ಸೇವಕರೆಂದು ಕರೆಯಲ್ಪಡುವ ಸರಕಾರಿ ನೌಕರರು. ಸರಕಾರದ ಈ ಕಂಟ್ರೋಲ್, ಪರ್ಮಿಟ್ ಪದ್ಧತಿಗಳು ಲಂಚ ಸಂವರ್ಧನೆಗೆ ನೆರವಾದುವೇ ಹೊರತು ಇನ್ನೇನೂ ಫಲ ಕೊಟ್ಟಿಲ್ಲ. ಕಾಳಸಂತೆ ಹಗಲು ಸಂತೆಯ ಗಾತ್ರಕ್ಕಿಂತಲೂ ಹೆಚ್ಚಿದೆ. ಎದುರು ಬಾಗಿಲಿನಲ್ಲಿ 'ಇಲ್ಲ' ಎಂಬ ವಸ್ತು ಹಿಂದಿನ ಬಾಗಿಲಿನಲ್ಲಿ ಹೆಚ್ಚು ಬೆಲೆಗೆ ಧಾರಾಳ ದೊರೆಯುತ್ತದೆ. ಸರಕಾರಿ ಅಧಿಕಾರಿಗಳು ಲಂಚದಲ್ಲೇ ಸ್ನಾನ ಮಾಡುತ್ತಿದ್ದಾರೆ. ಮುಳುಗಿ ಏಳುತ್ತಿದ್ದಾರೆ. ಇದನ್ನು ಕೇಳುವವರೇ ಇಲ್ಲವಾಗಿದೆ.

ದುರಭಿಮಾನಿ ಸರಕಾರಿ ಅಧಿಕಾರಿಗಳು

ಪ್ರಜಾರಾಜ್ಯದಲ್ಲಿ ದುರಭಿಮಾನಿ ಸರಕಾರಿ ಅಧಿಕಾರಿಗಳದೇ ರಾಜ್ಯವಾಗಿದೆ. ಅಧಿಕಾರ ಬಲದಿಂದ ಅವರೇನನ್ನೂ ಮಾಡಲು ಹಿಂಜರಿಯುತ್ತಿಲ್ಲ. ಜನತೆಯನ್ನು ತಿರಸ್ಕಾರದಿಂದ ಕಾಣುವ, ನಿರ್ಲಕ್ಷ್ಯದಿಂದ ತುಚ್ಛೀಕರಿಸುವ ವರೆಗೂ ಅವರ ಅಧಿಕಾರದ ಮತ್ತು ಏರಿದೆ. ಸರಕಾರಿ ನೌಕರರೊಬ್ಬ ಮಂತ್ರಿಗಳಿಗೂ ಹೆದರುವ ಸ್ಥಿತಿಯಲ್ಲ ಎಂದರೆ ನಮ್ಮದನ್ನು 'ತಗ್ಲಖ್ ರಾಜ್ಯ' ಎನ್ನದೆ ಗತ್ಯಂತರವಿಲ್ಲ. ಜನತೆಯ ಹಿತಾಸಕ್ತಿಗಳನ್ನು ಕಡೆಗಣಿಸಿ, ಅಧಿಕಾರದರ್ಪದಿಂದ ಮೆರೆಯುವ ಈ ಲಂಚಕೋರ ಅಧಿಕಾರಿಗಳನ್ನು ಕೇಳುವವರೇ ಇಲ್ಲವಾಗಿದೆ. ಸರಕಾರ ಇದ್ದೂ ಜೀವನ್ಮೃತವಾಗಿದೆ. ಜನ ಕಂಗಾಲಾಗಿದೆ. ಇದು ಸುವ್ಯವಸ್ಥಿತ ರಾಜ್ಯವೋ ಅವ್ಯವಸ್ಥಿತ ಸಾಮ್ರಾಜ್ಯವೋ ಎಂಬ ಬೃಹದಾಕಾರದ ಪ್ರಶ್ನೆ ಎಲ್ಲರೆದುರು ಮೂಡಿನಿಂತಿದೆ. ಅಸಮಾಧಾನ, ಅತೃಪ್ತಿ ಹೆಚ್ಚಿದೆ.

ಜನ ದಂಗೆ ಏಳಬಹುದು

ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಜನ ದಂಗೆ ಏಳುವುದಂತೂ ನಿಜ. ನಾಡಿನ ಹಲವೆಡೆ ಲೂಟಿ, ದರೋಡೆ ನಡೆದ ಘಟನೆಯ ನೆನಪು ಇನ್ನೂ ಮಾಸಿಲ್ಲ. ಜನ ಬೇಸತ್ತಿದೆ. ಅವರ ತಾಳ್ಮೆ ತಪ್ಪಿದೆ. ಬದುಕುವ ಮಾರ್ಗ ಕಾಣದಾಗಿದೆ. ಅನ್ಯಾಯ, ಅತ್ಯಾಚಾರ ಹೆಚ್ಚುತ್ತಿರುವುದನ್ನು ಪ್ರತಿಬಂಧಿಸುವವರೇ ಇಲ್ಲವೆಂದಾದಾಗ ಜನ ದಂಗೆ ಏಳುವ ಪರಿಸ್ಥಿತಿಯೂ ಬರಬಹುದು. ಹೊಟ್ಟೆಯ ಪ್ರಶ್ನೆಗಿಂತ ಹಿರಿಯ ಪ್ರಶ್ನೆ ಇಂದು ಬೇರೆ ಇಲ್ಲ. ಮಾನ, ಮರ್ಯಾದೆ ಸಭ್ಯತೆಗಳನ್ನು ಮಾರಿ ಜೀವಿಸಬೇಕಾದ ಕಾಲ ಈಗ ಬಂದಿದೆ. ಮರ್ಯಾದೆವಂತರಿಗೆ, ಪ್ರಾಮಾಣಿಕರಿಗೆ ಈ ನೆಲದಲ್ಲಿ ಇಂಬಿಲ್ಲ. ಅದನ್ನು ನಂಬಿದವರಿಗೆ ಗತಿ ಇಲ್ಲವಾಗಿದೆ ಈ ನಮ್ಮ ರಾಮರಾಜ್ಯದಲ್ಲಿ!

ಪೂರ್ವಾಲೋಚನೆಯಿಲ್ಲದ ಸರಕಾರೀ ಧೋರಣೆಗಳು

ನಮ್ಮ ಸರಕಾರದ ಧೋರಣೆಗಳಿಗೆ ಪೂರ್ವಾಲೋಚನೆಯೇ ಇಲ್ಲ. ದಿನಕ್ಕೊಂದು ಕಾನೂನು ಜಾರಿ ಆಗುತ್ತದೆ. ಅದರ ಮರುದಿನವೇ ಅದಕ್ಕೊಂದು ತಿದ್ದುಪಡಿ ಬರುತ್ತದೆ. ಕೆಲವೊಂದು ಕಾನೂನು ಜಾರಿಗೆ ಬರುವ ಮೊದಲೇ ರದ್ದಾಗುತ್ತದೆ. ಹೈಕೋರ್ಟಿನವರೆಗೂ ಹೋಗುತ್ತದೆ. ಸೂಕ್ತ ವಿವೇಚನೆ ಇಲ್ಲದೆ ಅಧಿಕಾರವಿದೆಯೆಂದು ಕಾನೂನು ಸೃಷ್ಟಿ. ಹೇರಾಟ ಪ್ರಭೃತಿಗಳ ಅಪಕ್ವ ಬುದ್ಧಿಯ ಫಲ ಇವು. ಪ್ರಮಾದ ಜರಗಿದ ಮೇಲೂ ಮಾಡಿದ ತಪ್ಪನ್ನು ತಿದ್ದಿಕೊಳ್ಳುವ ಸಭ್ಯತೆಯನ್ನು ದೇವರು ನಮ್ಮ ಕಾನೂನು ಮಾಡುವವರಿಗೆ ಇತ್ತಿಲ್ಲ ಎಂಬುದೇ ದುರ್ದೈವದ ಸಂಗತಿ. ತಮ್ಮ ಕಣ್ಣೆದುರೇ ತಾವು ಜಾರಿ ಮಾಡಿದ ಕಾನೂನುಗಳ ಕೊಲೆ ಆಗುವುದನ್ನು ನೋಡಿಯೂ ಕಣ್ಣು ಮುಚ್ಚಿ ಕುಳಿತಿದ್ದಾರೆ ನಮ್ಮ ಕಾನೂನುಗಳ ಸೃಷ್ಟಿಕರ್ತರು!

ಸರಕಾರ ಕೈಹಾಕಿದುದೆಲ್ಲಾ ಮಸಿ

ಸಮಾಜವಾದಿ ಮಾದರಿಯ ಸಮಾಜ ರಚನೆಯಲ್ಲಿ ಸರಕಾರ ಎಲ್ಲದರಲ್ಲೂ ಕೈಹಾಕಿತು. ಅದು ಕೈ ಹಾಕಿದುದೆಲ್ಲಾ ಮಸಿಯಾಗುತ್ತದೆ. ರಾಷ್ಟ್ರೀಕರಣ ಮೋಹದಲ್ಲಿ ಸರಕಾರ ಏನೇನೋ ಮಾಡುತ್ತಿದೆ. ನಷ್ಟ ಹೊಂದುತ್ತಿದೆ. ಆದರೂ ತಪ್ಪು ತಿದ್ದಿಕೊಳ್ಳುವ ಬುದ್ಧಿ ಅದಕ್ಕೆ ಬಂದಿಲ್ಲ. ಸಹಕಾರಿ ಚಳವಳಿ, ಪಾನ ನಿರೋಧ, ಕಡ್ಡಾಯ ವಿದ್ಯಾಭ್ಯಾಸ ಇತ್ಯಾದಿ ಯೋಜನೆಗಳೆಲ್ಲ ಒಣ ಘೋಷಣೆಗಳಾಗಿವೆ. ಆದರೂ ಪ್ರತಿ ಕ್ರೈಯ ಸಪದಿಂದ ಇವುಗಳ ಬಗ್ಗೆ ಹೇರಳ ಹಣವನ್ನು ದೇಶದ ಖಜಾನೆಯಿಂದ ವ್ಯಯಿಸಲಾಗುತ್ತದೆ. ಸರಕಾರಿ ಉದ್ದಿಮೆಗಳಲ್ಲಿ, ಯೋಜನೆಗಳಲ್ಲಿ ಕಂಟ್ರಾಕ್ಟುದಾರರ ಹಿತಾಸಕ್ತಿಗಳನ್ನಷ್ಟೆ ಕಾಯ್ದು ಕೊಳ್ಳಲಾಗುತ್ತಿದೆಯೋ ಎಂಬ ಸಂಶಯವೂ ಉಂಟಾಗುತ್ತದೆ. ಬಾರಿಬಾರಿ ಜಾರಿಬಿದ್ದ ಮೇಲೂ ಬೇಡದ ಹವ್ಯಾಸವನ್ನು ಸರಕಾರ ಬಿಡಲು ಸಿದ್ಧವಿಲ್ಲ.

(ಹತ್ತನೇ ಪುಟ ನೋಡಿರಿ)

ಕೆನರಾ ಬ್ಯಾಂಕಿನ ವತಿಯಿಂದ ಸಾಲರೂಪದ ಶಿಷ್ಯ ವೇತನಗಳು

ಭಾರತದಲ್ಲಿ ಉಚ್ಚ ತಾಂತ್ರಿಕ ಶಿಕ್ಷಣವನ್ನು ಪಡೆಯಲು ಆರ್ಥಿಕ ಸಹಾಯದ ಆವಶ್ಯಕತೆ ಇರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಾಲವನ್ನು ನೀಡಲು, ಕೆನರಾ ಬ್ಯಾಂಕ್, ತನ್ನ ಜ್ಯುಬಿಲಿ ಎಜುಕೇಶನ್ ಫಂಡಿನ ಮೂಲಕ ಸೂಕ್ತ ವ್ಯವಸ್ಥೆಯನ್ನು ಮಾಡಿದೆ.

ಅರ್ಜಿ ಫಾರ್ಮುಗಳಿಗಾಗಿ ಸೆಕ್ರೆಟರಿ, ಕೆನರಾ ಬ್ಯಾಂಕ್ ಜ್ಯುಬಿಲಿ ಎಜುಕೇಶನ್ ಫಂಡ್, ಕೆನರಾ ಬ್ಯಾಂಕ್ ಬಿಲ್ಡಿಂಗ್, 112, ಜಯಚಾಮರಾಜೇಂದ್ರ ರೋಡ್, ಬೆಂಗಳೂರು-2 ಇವರಿಗೆ ಒಂದು ರೂಪಾಯಿ ಮನಿಯಾರ್ಡರು ಮಾಡಿ ಬರೆಯಿರಿ. ಮನಿಯಾರ್ಡರು ಕೂಪನಿನಲ್ಲಿ ಅರ್ಜಿದಾರರ ಹೆಸರು ಮತ್ತು ವಿಳಾಸ ಬರೆದಿರಬೇಕು. ಈ ಕುರಿತು ಯಾವುದೇ ವಿವರ ಬೇಕಾಗಿದ್ದಲ್ಲಿ ಉತ್ತರಕ್ಕೆ ಸಾಕಷ್ಟು ಅಂಚೆಚೀಟು ಇಟ್ಟು, ಇಂಗ್ಲೀಷಿನಲ್ಲಿ ಪತ್ರ ವ್ಯವಹಾರ ಮಾಡಿರಿ.

ನಿರ್ದಿಷ್ಟಪಡಿಸಿದ ಫಾರ್ಮುಗಳಲ್ಲಿ ಅರ್ಜಿ ತಲಪಲು ಕೊನೆಯ ದಿನಾಂಕ 30-6-1965.

ಜುಲಾಯಿಯೊಳಗೆ ಆಯ್ಕೆಯು ಕೊನೆಗೊಂಡು ಆ ಬಳಿಕ ಸಾಲವು ಕೊಡಲ್ಪಡುವುದು.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ : 1906)

— ವಿದ್ಯೆಗಾಗಿ ಸದಾ ಸಹಾಯ ಹಸ್ತ ನೀಡುವ ಸಂಸ್ಥೆ —

ರಜಿಸ್ಟರ್ಡ್ ಕಛೇರಿ: ಮಂಗಳೂರು. ಆಡಳಿತ ಕಛೇರಿ: ಬೆಂಗಳೂರು.

ಪ್ರಜಾಸತ್ತೆಯ

ನೆಹರೂ ಮತ್ತು ಪ್ರಜಾ



ಶ್ರೀ ಕೆ. ಎ. ರ

ವರ್ಗಭೇದಗಳಿಂದ ಕೂಡಿದ ಯಾವುದೇ ಸಾಮಾಜಿಕ ವ್ಯವಸ್ಥೆ ಪ್ರಕೃತಿಯ ನಿಯಮಕ್ಕೆ ವಿರುದ್ಧವಾದುದು. ಮುಂಬೆ ಒಂದಲ್ಲ ಒಂದು ಸಮಯದಲ್ಲಿ ಅದು ಕುಸಿದು ಬೀಳುವುದು. ೧೯೨೯ರಲ್ಲಿ ಲಾಹೋರಿನಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಮಹಾಧಿವೇಶನದಲ್ಲಿ ಅಧ್ಯಕ್ಷ ಪೀಠದಿಂದ ಪಂಡಿತ ನೆಹರೂರವರು ಮಾತನಾಡುತ್ತ ಈ ವಿಚಾರವನ್ನು ಪ್ರಸ್ತಾಪಿಸಿದರು. ಭಾರತೀಯ ಸಮಾಜದ ಇತಿಹಾಸದ ಬಗ್ಗೆ ಪೂರ್ಣ ಪ್ರಜ್ಞೆಯಿಂದ ಕೂಡಿದ ಅವರ ವಿಚಾರಗಳು ಈ ರೀತಿ ಇದ್ದವು. ಒಂದು ಸುಭದ್ರ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವುದರಲ್ಲಿ ಭಾರತವು ವಿಶೇಷ ರೀತಿಯ ಯಶಸ್ಸನ್ನು ಗಳಿಸಿರುವುದು ನಿಜವಾದರೂ ಒಂದು ವಿಷಯದಲ್ಲಿ ಮಾತ್ರ ಅದು ಪರಾಭವಗೊಂಡಿದೆ. ಅದರ ಪರಿಣಾಮವಾಗಿಯೇ ಭಾರತ ಪತನಗೊಂಡಿತು ಮತ್ತು ಇಂದಿಗೂ ಒಂದು ಪತನಾವಸ್ಥೆಯಲ್ಲಿದೆ. ವರ್ಗಭೇದದ ಸಮಸ್ಯೆಗೆ ಪರಿಹಾರವನ್ನು ಹುಡುಕದಿದ್ದುದೇ ಅದರ ಪತನಕ್ಕೆ ಕಾರಣವಾಯಿತೆನ್ನಬಹುದು. ಭಾರತವು ಉದ್ದೇಶಪೂರ್ವಕವಾಗಿಯೇ ಈ ವಿಚಾರವನ್ನು ಉಪೇಕ್ಷಿಸಿತು ಮತ್ತು ವರ್ಗಭೇದಗಳಿಂದ ಕೂಡಿದ ಅಸಮಾನತೆಯ ತಳಹದಿಯ ಮೇಲೆಯೇ ತನ್ನ ಸಾಮಾಜಿಕ ವ್ಯವಸ್ಥೆಯನ್ನು ಅದು ರೂಪಿಸಹೋಯಿತು. ಇದರ ದುಷ್ಪರಿಣಾಮವಾಗಿಯೇ ನಮ್ಮ ಕೋಟ್ಯಂತರ ಜನ ನಿನ್ನೆ ಮೊನ್ನೆಯ ವರೆಗೆ ದಲಿತ ಜನಾಂಗವಾಗಿ ಬೆಳವಣಿಗೆಗೆ ಯಾವ ಅವಕಾಶವೂ ಇಲ್ಲದೆ ಬಾಳುವಂತಹ ಸ್ಥಿತಿ ಬಂದೊದಗಿತು.

ವರ್ಗರಹಿತ ಸಮಾಜ

ವರ್ಗಭೇದವಿಲ್ಲದ ಸಮಾಜದ ನಿರ್ಮಾಣಕ್ಕಾಗಿ ಮತ್ತು ಸಾಮಾಜಿಕ ನ್ಯಾಯ ಹಾಗೂ ಸುಭದ್ರತೆ ಇರುವಂತಹ ಸಮಾಜ ರೂಪಿಸುವ ಸಲುವಾಗಿ ನೆಹರೂರವರು ಒಂದು ಸಾಮಾಜಿಕ ಸಿದ್ಧಾಂತವನ್ನು ದೇಶದ ಮುಂದಿಟ್ಟರು. ಇದರ ಉದ್ದೇಶ ಇಡೀ ಸಾಮಾಜಿಕ ವ್ಯವಸ್ಥೆಯನ್ನು ಮೂಲತಃ ಬದಲಾವಣೆಗೆ ಒಳಪಡಿಸಿ ಇಲ್ಲಿ ಸಗೀ ವರ್ಚಸ್ಸಿಗೆ ಹಾಗೂ ವೈಯಕ್ತಿಕ ದುರಾಸೆಗೆ ಅವಕಾಶವಿಲ್ಲದಂತೆ ನೋಡಿಕೊಳ್ಳುವುದೇ ಆಗಿದೆ. ಎಂದರೆ ಭಂಡವಾಳದ ಹಿಡಿತದಿಂದ ಅವರನ್ನು ಪಾರು ಮಾಡಿ ರಾಜಕೀಯ ಹಾಗೂ ಆರ್ಥಿಕ ಅಧಿಕಾರವನ್ನು ಒಂದು ಯೋಗ್ಯ ರೀತಿಯಲ್ಲಿ ಹಂಚುವುದು ಇದರ ಗುರಿಯಾಗಿದೆ. ಎಲ್ಲರಿಗೂ ಸಮಾನಾವಕಾಶಗಳಿರುವಂತಹ ವರ್ಗರಹಿತ ಸಮಾಜ ಸ್ಥಾಪನೆಯೇ ಈ ಸಿದ್ಧಾಂತದ ಅಂತಿಮ ಗುರಿ ಎನ್ನಬಹುದು. ಆದರೆ ಈ ಎಲ್ಲ ಪರಿವರ್ತನೆ ಪ್ರಜಾಸತ್ತಾತ್ಮಕ ವಿಧಾನಗಳ ಮೂಲಕ ಶಾಂತಿಯುತವಾಗಿ ನಡೆಯಬೇಕು.

ನೆಹರೂರವರ ವಿವಿಧ ಭಾಷಣಗಳು ಹಾಗೂ ಅವರ ಆತ್ಮ ಚರಿತ್ರೆಯಲ್ಲಿ ವರ್ಗರಹಿತ ಸಮಾಜದ ಪ್ರತಿಪಾದನೆಯನ್ನು ನಾವು ಕಾಣಬಹುದಾಗಿದೆ. ಅವರ ಆತ್ಮ ಚರಿತ್ರೆಯ ಒಂದು ಅಧ್ಯಾಯದಲ್ಲಿ ಅವರು ಹೀಗೆ ಹೇಳುತ್ತಾರೆ: ಎಲ್ಲರಿಗೂ ಸಮಾನ ರೀತಿಯ ಆರ್ಥಿಕ ನ್ಯಾಯ ಹಾಗೂ ಸಮಾನಾವಕಾಶವಿರುವಂತಹ ಒಂದು ವರ್ಗರಹಿತ ಸಮಾಜವನ್ನು ಸ್ಥಾಪಿಸುವುದು ನಮ್ಮ ಅಂತಿಮ ಗುರಿಯಾಗಿದೆ. ಮಾನವ ಸಮುದಾಯವನ್ನು ಹೆಚ್ಚಿನ ಸಂಪದಭಿವೃದ್ಧಿಯ ಮಟ್ಟಕ್ಕೆ ಏರಿಸುವಂತಹ ಹಾಗೂ ಅದರ ಸಾಂಸ್ಕೃತಿಕ ಮಟ್ಟವನ್ನು ಹೆಚ್ಚಿಸುವಂತಹ ಒಂದು ವ್ಯವಸ್ಥಿತ ಆಧಾರದ ಮೇಲೆ ಸಮಾಜವನ್ನು ನಾವು ಸಂಘಟಿಸಬೇಕಾಗಿದೆ. ಇಂಥ ಈ ಸಮಾಜದಲ್ಲಿ ಪರಸ್ಪರ ಸಹಕಾರ, ಪರೋಪಕಾರ ಬುದ್ಧಿ, ಸಮಾಜ ಸೇವಾ ಶ್ರದ್ಧೆ, ಸನ್ಮಾರ್ಗದಲ್ಲಿ ನಡೆಯಬೇಕೆಂಬ ತೀವ್ರಾಸಕ್ತಿ, ಸಹೃದಯ ಆತ್ಮೀಯ ನಡವಳಿಕೆ ಮತ್ತು ಅಂತಿಮವಾಗಿ ಈ ಗುಣಗಳ ಆಧಾರದ ಮೇಲೆ ರೂಪಿತವಾಗುವಂತಹ ಒಂದು ವಿಶ್ವ ವ್ಯವಸ್ಥೆಯ ತೀವ್ರಾಪೇಕ್ಷೆ— ಇವೇ ಮೊದಲಾದ ನಿಜವಾದ ಮಾನವೀಯ ಗುಣಗಳು ಬೆಳೆಯುವುದಕ್ಕೆ ಅವಕಾಶವಿರುವಂತೆ ಸಾಮಾಜಿಕ ವ್ಯವಸ್ಥೆಯನ್ನು ನಾವು ಸಂಘಟಿಸಬೇಕಾಗಿದೆ. ನಮ್ಮ ದಾರಿಯಲ್ಲಿ ಇದಕ್ಕೆ ಅನೇಕ ಅಡ್ಡಿ ಆತಂಕಗಳು ಬರಬಹುದು. ಅವುಗಳನ್ನು ಸಾಧ್ಯವಾದಲ್ಲಿ ಮೃದುವಾಗಿ ಘರ್ಷಣೆಗೆ ಅವಕಾಶವಿಲ್ಲದಂತೆ ಬದಿಗೆ ಸರಿಸುವ ಪ್ರಯತ್ನ ನಡೆಸಬೇಕು. ಅಗತ್ಯ ಕಂಡುಬಂದಲ್ಲಿ ಬಲಪ್ರಯೋಗದ ಮೂಲಕವಾದರೂ ಸರಿಯೆ ಅವುಗಳನ್ನು ಬದಿಗೆ ಹಾಕಬೇಕು.

ವರ್ಗರಹಿತ ಸಮಾಜ ಸ್ಥಾಪನೆಗಾಗಿ ಅವರು ಮೂಲತಃ ಎರಡು ಮಾರ್ಗಗಳನ್ನು ಮುಖ್ಯವಾಗಿ ಪ್ರತಿಪಾದಿಸಿದರು. ಪ್ರಜಾಪ್ರಭುತ್ವದ ಮಾರ್ಗ ಮತ್ತು ಸಮಾಜವಾದದ ಮಾರ್ಗ. ಇವೆರಡೂ ಸೇರಿದ ಒಂದು ಮಧ್ಯಮ ಮಾರ್ಗವನ್ನು ಪ್ರಜಾಸತ್ತಾತ್ಮಕ ಸಮಾಜವಾದ ಅಥವಾ ಸಮಾಜವಾದೀ ಪ್ರಜಾಪ್ರಭುತ್ವ ಅಥವಾ ಆರ್ಥಿಕ ಪ್ರಜಾಪ್ರಭುತ್ವ ಎಂದು ಸ್ಥೂಲವಾಗಿ ವಿವರಿಸಬಹುದು. ಪ್ರಜಾಪ್ರಭುತ್ವದ ವಿಜಯದ ಮೂಲಕ ಮಾತ್ರ ನಮ್ಮ ದೇಶದಲ್ಲಿ ಸಮಾಜವಾದದ ಸ್ಥಾಪನೆ ಸಾಧ್ಯವಾಗಬೇಕು. ಸರ್ವಾಧಿಕಾರ ಅಥವಾ ಬಲಾತ್ಕಾರದ ಮೂಲಕ ಕೂಡದು. ಪ್ರಜಾಸತ್ತಾತ್ಮಕ ಸಮಾಜವಾದ ಸಿದ್ಧಾಂತದ ಪ್ರಕಾರ ಪ್ರಜಾಪ್ರಭುತ್ವದಲ್ಲಿ ವಿಧಿವತ್ತಾದ ಸಂಪ್ರದಾಯಿಕ ಸಮಾನತೆ ಸಾಧಿಸುವುದರ ಮೂಲಕ ಪರಿವರ್ತನೆಯನ್ನು ಕಾಣಬಹುದು. ಸಮಾಜವಾದದ ಗುರಿ ಸಾಧ್ಯವಾದಾಗ ನಿಜವಾದ ಸಮಾನತೆ ಅನುಭವಕ್ಕೆ ಬರುತ್ತದೆ.

ನಮ್ಮದೇ ಆದ ದಾರಿ

ಯಾವುದೇ ದೇಶದಲ್ಲಿ ಸಮಾಜವಾದವು ರೂಪುಗೊಳ್ಳಬೇಕಾದರೆ ಅಥವಾ ಯಾವುದೇ ಸಿದ್ಧಾಂತ ರೂಪುಗೊಳ್ಳಬೇಕಾದರೆ ಆಯಾ ಕಾಲಮಾನಕ್ಕೆ ಮತ್ತು ಆ ದೇಶದ ಸ್ಥಿತಿಗತಿಗಳಿಗೆ ಹೊಂದಿಕೊಂಡಂತಹ ಅದರದೇ ಆದ ಒಂದು ಮಾರ್ಗ ಅವಶ್ಯಕವಾಗುತ್ತದೆ. ದೇಶದ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಸಂಸ್ಥೆಗಳು ಈ ಮಾರ್ಗದ ಮೇಲೆ ತಮ್ಮ ಪ್ರಭಾವ ಬೀರುತ್ತವೆ. ಜಿ. ಡಿ. ಹೆಚ್. ಕೋಲ್‌ರವರು "ಸೋಷಿಯಲಿಸ್ಟ್ ವಿಚಾರದ ಒಂದು ಇತಿಹಾಸ" ಎಂಬ ತಮ್ಮ ಚಿರಸ್ಮರಣೀಯ ಗ್ರಂಥದಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿ ಹೀಗೆ ಹೇಳುತ್ತಾರೆ: ಕಾರ್ಮಿಕರು ಒಂದು ಕ್ರಾಂತಿಯ ಮೂಲಕ ಅಧಿಕಾರವನ್ನು ಗ್ರಹಿಸಿ ಈ ಕೆಲಸ ಮಾಡಬೇಕೇ ಅಥವಾ ಅವರನ್ನು ಪ್ರತಿನಿಧಿಸುವ ಹೆಸರಿನಲ್ಲಿ ಒಂದು ಪಕ್ಷ ಈ ಕಾರ್ಯ ಮಾಡಬೇಕೆ ಅಥವಾ ಸಾರ್ವತ್ರಿಕ ಮತದಾನದ ಮೂಲಕ, ಪಾರ್ಲಿಮೆಂಟರಿ ಮಾರ್ಗ ಹಿಡಿದು ಶಾಂತಿಯುತವಾಗಿ ಅಧಿಕಾರ ಕಸಿದುಕೊಂಡು ಈ ಕೆಲಸ ಮಾಡಬೇಕೆ ಎಂಬ ಪ್ರಶ್ನೆಗಳು ಮಹತ್ವವೆಯಾದರೂ, ಮಾಡಬೇಕಾಗಿರುವ ಕಾರ್ಯ ಎಷ್ಟೇ ಮುಖ್ಯವಾಗಿರಲಿ ಅವಕ್ಕೆಲ್ಲಾ ಒಂದೇ ಮಾರ್ಗ ಸೂಚಿಸುವುದು ಸಾಧ್ಯವಾಗದ ವಿಷಯ; ಎಲ್ಲ ದೇಶಗಳಿಗೂ

ನ್ಯೂಯೋರ್ಕ್ ಮತ್ತು ಮೋಸ್ಕೋಗಳಲ್ಲಿ ನೆಹರೂ ದರ್ಶನ

ದಿವಂಗತ ಪ್ರಧಾನಿ ಜವಾಹರಲಾಲ ನೆಹರೂರವರ ಜೀವನ ಮತ್ತು ಕೃತಿಗಳ ಪ್ರದರ್ಶನಗಳು ಇತ್ತೀಚೆಗೆ ನ್ಯೂಯಾರ್ಕ್ ಮೋಸ್ಕೋಗಳಲ್ಲಿ ಜರಗಿದುವು. ಅಸಂಖ್ಯಾತ ಜನರು ಈ ಪ್ರದರ್ಶನಗಳನ್ನು ವೀಕ್ಷಿಸಿ ಜಗತ್ತಿನ ಮಹಾನಾಯಕನ ಜೀವನ ಹಾಗೂ ಕೃತಿಗಳ ಪರಿಚಯ ಮಾಡಿಕೊಂಡರು.

ಮೋಸ್ಕೋದಲ್ಲಿನ ಜನತೆ ಪ್ರದರ್ಶನವನ್ನು ಬಹು ಸಂಖ್ಯೆಯಲ್ಲಿ ಸಂದರ್ಶಿಸಿದರು. ಮೋಸ್ಕೋದ ಪ್ರದರ್ಶನದ ಒಂದು ದೃಶ್ಯ.

ಕ್ರೈಕ ಕ್ರೈವಾರಿ
ತ್ರಾತ್ಮಕ ಸಮಾಜವಾದ

ಸ್ತಿ. ಎಂ. ಪಿ.

ಒಂದೇ ಸೂತ್ರ ಎಂದು ಹೇಳುವಂತಿಲ್ಲ; ಕಾರಣವಿಷ್ಟೇ; ಎಲ್ಲ ದೇಶಗಳಲ್ಲೂ ಸ್ವಯಂಡಳಿತಾಧಿಕಾರವಿರುವ ಪಾರ್ಲಿಮೆಂಟರಿ ಸಂಸ್ಥೆಗಳಿವೆ ಎನ್ನುವಂತಿಲ್ಲ ಕೆಲವು ರಾಷ್ಟ್ರಗಳಲ್ಲಿ ಈ ಸಂಸ್ಥೆಗಳಿದ್ದರೂ ಹಿಂಸೆಯ ಮೂಲಕ ಕ್ರಾಂತಿಯನ್ನು ಸಾಧಿಸಬೇಕೆಂಬ ಪ್ರಶ್ನೆಯಿಲ್ಲ. ಒಂದೇ ಪಕ್ಷದ ಸರ್ವಾಧಿಕಾರ ಇದೆ ಎನ್ನುವಂತೆಯೂ ಇಲ್ಲ.

ಭಾರತದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ನೋಡುವುದಾದರೆ ನೆಹರೂ ಅವರ ಅಭಿಪ್ರಾಯದಂತೆ ನಮ್ಮ ದೇಶದಲ್ಲಿ ಮೊದಲು ಭಾರತೀಯ ಸಮಾಜದ ಅಡಿಪಾಯವನ್ನು ಜೀವಂತಗೊಳಿಸಬೇಕಾಗಿದೆ. ಅಲ್ಲಿಯ ಕ್ರಿಯಾಶಕ್ತಿಯನ್ನು ಕೆರಳಿಸಬೇಕಾಗಿದೆ. ಆಗಲೇ ದೇಶದ ಪ್ರಗತಿ ಹೆಚ್ಚು ಬಿರುಸಾಗಿ ನಡೆಯಲು ಸಾಧ್ಯವಾದೀತು ಮತ್ತು ಪ್ರಜಾಸತ್ತಾತ್ಮಕ ಸಮಾಜವಾದದ ಮೂಲಕ ಒಂದು ವರ್ಗರಹಿತ ಸಮಾಜವನ್ನು ಸ್ಥಾಪಿಸಲು ಸಾಧ್ಯವಾದೀತು. ಅಂತಹ ಸಮಾಜ ಒಂದು ನ್ಯಾಯದ ತಳಹದಿಯ ಮೇಲೆ ನಿಂತಿರಬೇಕು ಮತ್ತು ಒಂದು ವ್ಯವಸ್ಥಿತ ಯೋಜನೆಯ ಆಧಾರದ ಮೇಲೆ ನಡೆಯಬೇಕು.

ನ್ಯಾಯಕ್ಕೆ ಚಲನೆಯಿಲ್ಲ. ಅಂದ ಮೇಲೆ ಅದರ ಸ್ಥಾನದಲ್ಲಿ ಒಂದು ಕ್ರಿಯಾಶೀಲ ಶಕ್ತಿಗೆ ಅವಕಾಶ ಕಲ್ಪಿಸಿಕೊಡುವುದು ಅಗತ್ಯವಾಗಬಹುದು. ಸಾಮಾಜಿಕ ನ್ಯಾಯದ ಹಿಂದಿರುವ ಜಡ ಅಂಶ ಆಗ ಹಿಂದಕ್ಕೆ ಹೋಗುತ್ತದೆ. ರಾಷ್ಟ್ರದ ನೀತಿಯನ್ನು ಸೂಚಿಸುವ ಸೂಚನಾತ್ಮಕ ಆ ತತ್ವಗಳು ಜಡತ್ವವನ್ನು ಹೋಗಲಾಡಿಸುವ ಮತ್ತು ಕ್ರಿಯಾಶಕ್ತಿಯನ್ನು ಕೆರಳಿಸುವ ಉದ್ದೇಶವನ್ನು ಹೊಂದಿದೆ. ಭಾರತೀಯ ನಾಗರಿಕರ "ಮೂಲಭೂತ ಹಕ್ಕುಗಳು" ಇಲ್ಲಿ ಸಾಮಾಜಿಕ ನ್ಯಾಯದ ಜಡ ಅಂಶವನ್ನು ಸೂಚಿಸುತ್ತವೆ. ನೆಹರೂ ಅವರ ಮಾತಿನಲ್ಲೇ ಹೇಳುವುದಾದರೆ ಎಲ್ಲಿಯವರೆಗೆ ಸಾಮಾಜಿಕ ನ್ಯಾಯಕ್ಕೆ ಜಡತ್ವವಿರುತ್ತದೆಯೋ ಅಲ್ಲಿಯ ವರೆಗೆ ಅದು ಪರಿವರ್ತನೆ ಹೊಂದುತ್ತಿರುವ ಸಮಾಜಕ್ಕೆ ಹೊಂದಿಕೊಳ್ಳದೇ ಹೋಗುತ್ತದೆ. ಸುಪ್ರಸಿದ್ಧ ನ್ಯಾಯವಾದಿಗಳೊಬ್ಬರಾದ ಫ್ರೀಡ್‌ಮನ್‌ರವರು ಇದೇ ಅಭಿಪ್ರಾಯವನ್ನು ತಮ್ಮ "ಪರಿವರ್ತನೆ ಹೊಂದುತ್ತಿರುವ ಸಮಾಜದಲ್ಲಿ ಶಾಸನದ ಸ್ಥಾನ" ಎಂಬ ಪುಸ್ತಕದಲ್ಲಿ ಈ ವಿಚಾರವನ್ನು ಹೀಗೆ ಪ್ರಸ್ತಾಪಿಸಿದ್ದಾರೆ. "ಶಾಸನದ ಮೂಲಕ ಯಾವತ್ತೂ ಯಾವ ಸಂದರ್ಭದಲ್ಲೂ ಸಮಾಜ ನಡೆಯುತ್ತಿದೆ ಎಂದು ಹೇಳುವುದು ದುಃಖದ ಸಂಗತಿಯಾಗುತ್ತದೆಯೇ ಹೊರತು ಸಂತೋಷದ ಸಂಗತಿಯಾಗದು. ಸಮಾಜದಲ್ಲಾಗುತ್ತಿರುವ ಕ್ರಾಂತಿಕಾರಿ ಬದಲಾವಣೆಗಳಿಗೆ ಸಾಮಾಜಿಕ ನ್ಯಾಯವು ಅಥವಾ ಶಾಸನವು ಹೊಂದಿಕೊಳ್ಳದೇ ಹೋದದ್ದು ಅದು ತುಂಬಾ ದುಃಖದ ವಿಷಯವಾಗುತ್ತದೆ.

ಯೋಗ್ಯ ಯೋಜನಾ ವ್ಯವಸ್ಥೆ

ಬಡವರು ಹೆಚ್ಚು ಹೆಚ್ಚು ಬಡವರಾಗುತ್ತಾ ಹೋಗುವ ಮತ್ತು ಶ್ರೀಮಂತರು ಹೆಚ್ಚು ಹೆಚ್ಚು ಶ್ರೀಮಂತರಾಗುತ್ತಾ ಹೋಗುವ ಒಂದು ಪ್ರವೃತ್ತಿಯನ್ನು ತಡೆಹಿಡಿದು ಬಡವರ ದಾರಿದ್ರ್ಯವನ್ನು ನಿವಾರಿಸುವ ಕಾರ್ಯಕೈಗೊಳ್ಳುವುದೇ ನೆಹರೂ ಅವರು ದೇಶದ ಮುಂದಿಟ್ಟ ಯೋಜನಾ ವ್ಯವಸ್ಥೆಯ ಗುರಿಯಾಗಿದೆ. ದೇಶದ ಸಂಪದಭಿವೃದ್ಧಿ ಬೆಳೆಯಬೇಕು. ಆದರೆ ದೇಶದ ಸಂಪತ್ತು ಶ್ರೀಮಂತರಲ್ಲೇ ಕೇಂದ್ರೀಕೃತವಾಗಬಾರದು ಎಂಬುದು ಇದರ ಉದ್ದೇಶವಾಗಿದೆ. "ಕೆಲವರ ಕೈಯಲ್ಲೇ ಆರ್ಥಿಕ ಅಧಿಕಾರವು ವಿಶೇಷವಾಗಿ ಕೇಂದ್ರೀಕರಿಸಲ್ಪಡುವುದರಿಂದ ಪ್ರಜಾಪ್ರಭುತ್ವದಲ್ಲಿ ಅಧಿಕಾರದ ಸಮತೋಲನಕ್ಕೆ ಧಕ್ಕೆ ಬರುತ್ತದೆ ಆರ್ಥಿಕ ಅವಕಾಶಗಳನ್ನು ಸಮನಾಗಿ ಹಂಚುವ ವಿಚಾರಕ್ಕೆ ಇದರಿಂದ ಧಕ್ಕೆ ಬಂದು ಹೊಸ ಸಂಘರ್ಷಗಳು ಹುಟ್ಟಿಕೊಳ್ಳುತ್ತವೆ" ಎಂದು ನೆಹರೂ ಅವರು ಈ ವಿಚಾರವನ್ನು ಪ್ರಸ್ತಾಪಿಸಿ ಅಭಿಪ್ರಾಯಪಟ್ಟಿದ್ದಾರೆ. ಅಂತಹ ಸಂಘರ್ಷಗಳು ನಡೆಯದಂತೆ ನೋಡಿಕೊಳ್ಳಬೇಕೆಂದೇ ಯೋಜನೆ ಅವಶ್ಯಕವಾಗುತ್ತದೆ. ರಾಷ್ಟ್ರೀಯ ಆರ್ಥಿಕ ಸಮಿತಿಯೊಂದನ್ನು ನೇಮಿಸಿದ ಸಂದರ್ಭದಲ್ಲಿ ಅಧ್ಯಕ್ಷ ರೂಸ್‌ವೆಲ್ಟ್‌ರು ಹೀಗೆ ಹೇಳಿದರು. ಖಾಸಗಿ ಒಡೆತನದ ಪ್ರಾಬಲ್ಯ ಹೆಚ್ಚಾಗಿ ಅದು ಪ್ರಜಾಸತ್ತಾತ್ಮಕ ಸರ್ಕಾರದ ಅಧಿಕಾರಕ್ಕೂ ಮೀರುವಂತಾದರೆ ಮತ್ತು ಅಂತಹ ಒಂದು ಪರಿಸ್ಥಿತಿಯನ್ನು ಜನ ಸಹಿಸಿಕೊಂಡು ಹೋಗುವುದಾದರೆ ಪ್ರಜಾಪ್ರಭುತ್ವ ಅಥವಾ ಅದು ಸಾರುವಂತಹ ಸ್ವಾತಂತ್ರ್ಯ ಸುರಕ್ಷಿತವೆಂದು ಹೇಳುವಂತಾಗ ವುದಿಲ್ಲ ಆರ್ಥಿಕ ಅಧಿಕಾರ ಕೆಲವರ ಕೈಯಲ್ಲೇ ಕೇಂದ್ರೀಕೃತವಾಗುವುದರಿಂದಾಗಿ ಉದ್ಭವಿಸುವಂತಹ ನಿರುದ್ಯೋಗ ಸಮಸ್ಯೆ ಹಾಗೂ ದೇಶದ ಸಂಪತ್ತು ಕೆಲವರ ಕೈಯಲ್ಲೇ ಕೊಳೆಯುವಂತಾಗುವಂತಹ ಸಮಸ್ಯೆ, ಇವು ಇಂದು ನಾವು ಕಡ್ಡಾಯವಾಗಿ ಎದುರಿಸಬೇಕಾಗಿರುವಂತಹ ಮುಖ್ಯ ಸಮಸ್ಯೆಗಳಾಗಿವೆ".

ನೆಹರೂ ಮತ್ತು ರೂಸವೆಲ್ಟ್ ಇವರ ಭಾಷೆಯಲ್ಲಿ ಸ್ವಲ್ಪ ಮಟ್ಟಿನ ಸಾಮ್ಯವನ್ನೇನೋ ನಾವು ಕಾಣಬಹುದು. ನಿಜ. ಆದರೆ ಯೋಜನೆಯ ಉದ್ದೇಶ ಕುರಿತು ಇವರಿಬ್ಬರ ದೃಷ್ಟಿ ಬೇರೆ ಬೇರೆಯಾಗಿಯೇ ಇದೆ. ಬಂಡವಾಳಶಾಹಿ ರಾಷ್ಟ್ರಗಳಲ್ಲಿ ರೂಸವೆಲ್ಟ್‌ರಂತಹ ನಾಯಕರ ಪ್ರಭಾವದಿಂದಾಗಿ ಕೆಲವು ವಿಶೇಷ ಶಾಸನಗಳು ಹುಟ್ಟಿಕೊಳ್ಳಬಹುದು ಆದರೂ ಅಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ಬಲಪಡಿಸುವಂತಹ ಒಂದು ಉದ್ದೇಶ ಕಂಡು ಬರುತ್ತದೆ. ಅದಕ್ಕೊಂದು ಯೋಗ್ಯ ರೂಪಕೊಡುವ ಮತ್ತು ತಾಂತ್ರಿಕ ಜ್ಞಾನದ ಬೆಳವಣಿಗೆಗೆ ಅವಕಾಶ ಮಾಡಿಕೊಡುವಂತಹ ಪ್ರಯತ್ನವನ್ನು ಕಾಣಬಹುದು.

ಯೋಜನೆಯ ಬಗ್ಗೆ ನೆಹರೂ ಅವರ ವಿಚಾರ ದೃಷ್ಟಿಯೇ ಬೇರೆ. ಸರ್ಕಾರದ ನಿರ್ದೇಶನದಲ್ಲಿ ಸಾರ್ವಜನಿಕ ಕೈಗಾರಿಕಾ ಸಂಸ್ಥೆಗಳು ಬೆಳೆಯಬೇಕೆಂಬುದು ಅವರ ಗುರಿ. ಇದರಿಂದಾಗಿ ಆರ್ಥಿಕ ಸೂತ್ರಗಳು ಸರ್ಕಾರದ ಕೈಯಲ್ಲಿಯೇ ಉಳಿಯುವುದಕ್ಕೆ ಸಾಧ್ಯ. ಉತ್ಪಾದನೆ ಅಧಿಕಗೊಂಡು ಅದು ಸರಿಯಾದ ರೀತಿಯಲ್ಲಿ ಹಂಚಿಕೆಯಾದರೆ ರಾಷ್ಟ್ರೀಯ ಸಂಪತ್ತು ಜನರ ಅಭ್ಯುದಯಕ್ಕಾಗಿ ವಿನಿಯೋಗವಾಗಲು ಸಾಧ್ಯವಾಗುತ್ತದೆ ಮತ್ತು ಕೆಲವರ ಕೈಯಲ್ಲೇ ಅಧಿಕಾರ ಕೇಂದ್ರೀಕೃತವಾಗುವುದು ತಪ್ಪುತ್ತದೆ ಎಂಬುವುದು ಅದರ ವಿಚಾರ.

ಸಾಮಾಜಿಕ ಸ್ವಾಮ್ಯ

ಪಂಡಿತ ನೆಹರೂ ಅವರ ತಮ್ಮ "ಭಾರತ ದರ್ಶನ"ದಲ್ಲಿ ಸಾಮಾಜಿಕ ಸ್ವಾಮ್ಯದ ಕುರಿತು ಈ ರೀತಿ ತಿಳಿಸಿದ್ದಾರೆ: "ಪ್ರಜಾಸತ್ತಾತ್ಮಕ ಅಧಿಕಾರ ಸಂಗ್ರಹಣೆಯಿಂದ ಮಾತ್ರಕ್ಕೆ ಖಾಸಗಿ ವ್ಯಕ್ತಿಗೆ ಸೊನ್ನೆಯನ್ನುವಂತಿಲ್ಲ" ಮುಖ್ಯ ಮುಖ್ಯ ಕೈಗಾರಿಕೆಗಳ ಸ್ವಾಮ್ಯವನ್ನು ಸರ್ಕಾರವೇ ಹೊಂದಿರುವುದು ಇದರ ಅರ್ಥ. ಒಂದು ಸಹಕಾರಿ ತತ್ವದ ಮೇಲೆ ಮತ್ತು ಸಾಮುದಾಯಿಕ ಹತೋಟಿಯ ತತ್ವದ ಮೇಲೆ ಭೂಮಿವ್ಯವಸ್ಥೆ ಇರಬಹುದೆಂದೂ ಇದರ ಅರ್ಥವಾಗುತ್ತದೆ. ಇಂತಹ ಒಂದು ಪ್ರಜಾಪ್ರಭುತ್ವವ್ಯವಸ್ಥೆಯಲ್ಲಿ ಯೋಜನಾ ಕಾರ್ಯ ಬಹಳ ಎಚ್ಚರಿಕೆಯಿಂದಲೂ ನಿರಂತರವಾಗಿ ನಡೆಯಬೇಕಾಗುತ್ತದೆ. ಜನರ ಅವಶ್ಯಕತೆಗಳಿಗೆ ಅನುಗುಣವಾಗಿ ಹೊಂದಿಕೆಯಿಂದ ಈ ಕಾರ್ಯ ನಡೆಯಬೇಕು.

ಸಹಕಾರಿ ಸಮಾಜವಾದ ಮತ್ತು ಸರ್ಕಾರಿ ಬಂಡವಾಳವಾದ ಇವೆ ರಡರ ಮಧ್ಯೆ ಕೆಲವರಿಗೆ ಸಾಮ್ಯ ಕಂಡು ಬರುವುದು ನಿಜ. ಇವೆರಡೂ ಒಂದೇ ಎಂದು ಅಭಿಪ್ರಾಯ ಪಡುವವರೂ ಇದ್ದಾರೆ. ಆದರೆ ಇದು ತಪ್ಪು ಎಂದು ನೆಹರೂ ಅವರು ತಿಳಿಸುತ್ತಾರೆ. ಈ ವಿಚಾರದಲ್ಲಿ ಅವರು ತ

(ಹದಿಮೂರನೇ ಪುಟ ನೋಡಿರಿ)

ನ್ಯೂಯಾರ್ಕಿನ ನಾಗರಿಕರು ಪ್ರದರ್ಶನವನ್ನು ಬಹಳ ಆಸಕ್ತಿಯಿಂದ ನಿರೀಕ್ಷಿಸುತ್ತಿರುವ ದೃಶ್ಯ

ವಿಶೇಷ ಸುದ್ದಿ

ಜರ್ಮನಿಯಲ್ಲಿ ಲವಂಗ ಮಹಾತ್ಮೆ!

ಸಾಂಬಾರ ಜಿನಸುಗಳ ರುಚಿಯನ್ನು ಜರ್ಮನರಿಗೆ ಹುಟ್ಟಿಸಿದವನು ಸಿನಿಮಾ ನಟ ದೇವಾನಂದ.

ಇಂಗೂ ಕರಬೇವೂ ಇದ್ದರೆ ಮಂಗಮ್ಮನೂ ಅಡಿಗೆ ಚೆನ್ನಾಗಿ ಮಾಡುತ್ತಾಳೆ ಎಂಬ ಗಾದೆಯೊಂದಿದೆ. ನಮ್ಮ ಅಡಿಗೆಗಳಲ್ಲಿ ಯಾವಾಗಲೂ ಸುಪ್ತ ಭಾವನೆಗಳನ್ನು ಕೆರಳಿಸುವ ವಸ್ತುಗಳಿಗೆ ವಿಶೇಷ ಪ್ರಾಧಾನ್ಯತೆಯಿದೆ. ಅಜ್ಜಮ್ಮಂದಿರಿಂದ "ಸಂಭಾರಡೆ" ಎಂದು ಕರೆಸಿಕೊಳ್ಳುವ ಸಂಭಾರ ಪೆಟ್ಟಿಗೆಗಳಿಲ್ಲದ ಮನೆಗಳೇ ನಮ್ಮಲ್ಲಿ ವಿರಳ. ಜಾಜಿಕಾಯಿ, ಜಾಪತ್ರೆ, ಲವಂಗ ಮೆಣಸು ಮುಂತಾದುವುಗಳನ್ನು ನಾವು ಸಿಹಿ, ಖಾರ ಪದಾರ್ಥಗಳಲ್ಲಿ ಸೇರಿಸುವುದು ರುಚಿ ಹೆಚ್ಚಿಸುವುದಕ್ಕೆ ಮಾತ್ರವಲ್ಲದೆ, ವಾಯುವನ್ನು ಹೊಡೆದೋಡಿಸುವ ಶಕ್ತಿ ಅವುಗಳಿಗಿದೆ ಎಂಬುದಕ್ಕಾಗಿಯೂ ಆಗಿದೆ. ಇವುಗಳಿಂದ ಕೂಡಿದ ಅಡಿಗೆಯನ್ನು ಮೆದ್ದ ಮೇಲೆ, ತಾಂಬೂಲ ಚರ್ವಣ; ಅದರಲ್ಲೂ ಏಲಕ್ಕಿ, ಲವಂಗ, ಪತ್ರೆ ಇತ್ಯಾದಿಗಳಿಗೆ ಪ್ರಮುಖಪಾತ್ರ. ನಮ್ಮ "ಶಾಖಾಹಾರಿ"ಗಳಿಗೆ ಮಾತ್ರ ಮೀಸಲಾಗಿದ್ದ ಈ ಸಂಭಾರ ಪದಾರ್ಥಗಳು, ಈಗ ಜರ್ಮನ್ "ಮಾಂಸಾಹಾರಿಗ"ಳಿಗೂ ಪ್ರಿಯವಾಗಿ ಹೋಗಿರುವ ಸುದ್ದಿ ಬಂದಿದೆ.

ಪಶ್ಚಿಮ ಜರ್ಮನಿಯ ಡಾರ್ಟ್‌ಮಂಡಿನಲ್ಲಿರುವ ಮ್ಯಾಕ್ಸ್‌ಪ್ಲಾಂಕ್ ಸಂಶೋಧನಾಗಾರವು ವೈಜ್ಞಾನಿಕ ಕ್ಷೇತ್ರಗಳಲ್ಲಿ ಅದು ನಡೆಸಿರುವ ಸಂಶೋಧನೆಗಳಿಂದ ವಿಶ್ವ ವಿಖ್ಯಾತವಾಗಿದೆ. ಆ ಸಂಸ್ಥೆ, ಒಂದು ಒದಲಾವಣೆಯಿರಲೆಂದೋ, ಏನೋ, ಮನುಷ್ಯನ ಆಹಾರದ ವಿಷಯದಲ್ಲಿಯೂ ಸಂಶೋಧನೆಗಳನ್ನು ಕೈಗೊಂಡಿತು. ಪ್ರಯೋಗಗಳ ಫಲವಾಗಿ, ಸಂಭಾರ ಪದಾರ್ಥಗಳನ್ನು ಸೇರಿಸುವುದರಿಂದ ಅಡಿಗೆ ತಿಂಡಿಗಳ ರುಚಿ ಹಲವು ಪಟ್ಟಿನಷ್ಟು ಹೆಚ್ಚುವುದು ಮಾತ್ರವಲ್ಲದೆ, ದೇಹದ ಎಷ್ಟೋ ದೋಷಗಳನ್ನು ದೂರ ಮಾಡುವ ಶಕ್ತಿಯೂ ಅವಕ್ಕಿವೆಯೆಂದು ತಿಳಿದು ಬಂದಿತು.

ಈ ಮೊದಲು ಪಶ್ಚಿಮ ಜರ್ಮನಿಯಲ್ಲಿ ಸಂಭಾರ ಪದಾರ್ಥಗಳನ್ನು ಅಷ್ಟಾಗಿ ಕೇಳುವವರೇ ಇರಲಿಲ್ಲ. ಈಗ ಎರಡು, ಮೂರು ವರ್ಷಗಳ ಹಿಂದೆ ಪ್ರಖ್ಯಾತ ನಟ ದೇವಾನಂದ್ ಬರ್ಲಿನ್ ಚಿತ್ರೋತ್ಸವದಲ್ಲಿ ತನ್ನ "ಹಮ್ ದೋನೋ"ವನ್ನು ಪ್ರದರ್ಶಿಸುವ ಸಲುವಾಗಿ ಪಶ್ಚಿಮ ಬರ್ಲಿನ್‌ಗೆ ಹೋಗಿದ್ದರು. ಆಗ ಅವರು ಅತಿಥೇಯರನ್ನೂ, ಚಿತ್ರೋತ್ಸವಕ್ಕೆ ಆಗಮಿಸಿದ ಸರ್ವ ದೇಶೀಯರನ್ನೂ, ಭೋಜನಕೂಟವೊಂದಕ್ಕೆ ಆಹ್ವಾನಿಸಿದ್ದರು. ಆ ಔತಣಕ್ಕಾಗಿ ಭಾರತದಿಂದ ವಿಶೇಷ ವಿಮಾನವೊಂದರಲ್ಲಿ ಮುಖ್ಯವಾಗಿ "ತಂದೂರಿ ಚಿಕನ್" ಮತ್ತು ಅದರೊಂದಿಗೆ ಅನೇಕ ಬಗೆಯ ಖಾರ, ಸಿಹಿ ಖಾದ್ಯ ಪದಾರ್ಥಗಳನ್ನೂ ಸಾಗಿಸಲಾಯಿತು. ಔತಣಕೂಟಕ್ಕೆ ಬಂದಿದ್ದವರಿಗೆ "ದಾಕ್ಷಿಣ್ಯ ಪಡಬೇಡಿ" ಎಂದು ಹೇಳುವ ಪ್ರಮೇಯವೇ ಇಲ್ಲದೇ ಹೋಯಿತು. ಒಬ್ಬೊಬ್ಬನೂ ಲೊಟಕೆ ಹಾಕಿಕೊಂಡು ಹೊಡೆದದ್ದೇ ಹೊಡೆದದ್ದು.

"ಇಂತಹ ಪದಾರ್ಥಗಳನ್ನು ನಮ್ಮಲ್ಲೇಕೆ ಮಾಡುವುದಿಲ್ಲ?" ಎಂಬ ಪ್ರಶ್ನೆ ಆಗ ಹುಟ್ಟಿಕೊಂಡಿತು. "ನಮ್ಮ ಒಂದೇ ತರಹ ಅಡಿಗೆ ತಿಂದು ತಲೆ ಚಿಟ್ಟು!" ಎಂದು ಗೊಣಗಲಾರಂಭಿಸಿದ ಗಂಡಂದಿರನ್ನು ತೃಪ್ತಿ ಪಡಿಸಲೋಸುಗ ಜರ್ಮನ್ ಮಹಿಳೆಯರು ಅಂಗಡಿಗಳಿಗೆ ಹೋಗಿ ಪತ್ರೆ ಲವಂಗ ಕೇಳಲಾರಂಭಿಸಿದರು. ಮುಕ್ಕಾಲು ವಾಸಿ ಅಂಗಡಿಗಳಲ್ಲಿ ಅವು ಇದ್ದರೆ ತಾನೇ ಗಿರಾಕಿಯೇ ಇಲ್ಲದ ವಸ್ತುಗಳನ್ನು ಯಾರು ತಾನೇ ಇಟ್ಟುಕೊಳ್ಳುತ್ತಾರೆ? ಆದರೆ ಒಬ್ಬೊಬ್ಬರು ಹೆಂಗಸರು ಕೇಳಿದಾಗ ಇಲ್ಲವೆಂದರು ಅಂಗಡಿ ಮಾಲೀಕರು. ಆವರೆ ದಿನವೂ, ಅವುಗಳನ್ನು ವಿಚಾರಿಸಿಕೊಂಡು ಬರುವವರ ಫೋನಿನಲ್ಲಿ ಕೇಳುವವರ ಸಂಖ್ಯೆ ಹೆಚ್ಚುತ್ತಲೇ ನಡೆದಾಗ ಅಂಗಡಿಯವರು ಕಣ್ಣು ತೆರೆದರು.

ಈಗ, ಪಶ್ಚಿಮ ಜರ್ಮನಿ ಸಂಭಾರ ಪದಾರ್ಥಗಳನ್ನು ಹೇರಳವಾಗಿ ತರಿಸಿಕೊಳ್ಳಲಾರಂಭಿಸಿದೆ. ಜರ್ಮನಿಯಿಂದ ಸಂಭಾರ ಪದಾರ್ಥ ಮೋಹ ಉಳಿದ ಯುರೋಪಿಯನ್ ದೇಶಗಳಿಗೂ ಹರಡುತ್ತಿದೆ. ಇವೆಲ್ಲವುಗಳಿಗೂ ಬೇಕಾಗುವ ಪದಾರ್ಥಗಳು ದಿನವೂ ಹ್ಯಾಂಬರ್ಗ್ ರೇವಿಗೆ ಬಂದಿಳಿಯುತ್ತಿವೆ. ಜರ್ಮನಿಯಲ್ಲಿ ಈಗ ವ್ಯಾಪಾರವಾಗುತ್ತಿರುವ ಸಂಭಾರ ಪದಾರ್ಥಗಳ 4/5ರಷ್ಟು ಇಲ್ಲಿಯೇ ಮಾರಾಟವಾಗುತ್ತದೆ. ವರ್ಷವೊಂದಕ್ಕೆ ಇಲ್ಲಿ 10 ಕೋಟಿಗಳಷ್ಟು ಸಂಭಾರ ವಸ್ತುಗಳ ವ್ಯಾಪಾರವಾಗುತ್ತಿದೆಯೆಂದು ತಿಳಿದು ಬಂದಿದೆ. ಸ್ಕ್ಯಾಂಡಿನೇವಿಯಾ, ಆಸ್ಟ್ರಿಯಾಗಳಲ್ಲಿ ಊಟದ ಭೋಗಿಗಳಿಗೇನೂ ಕಡಿಮೆಯಿಲ್ಲ. ಆ ದೇಶಗಳ ಐದು ಕೋಟಿ ಮಾರ್ಕುಗಳಷ್ಟು ವಸ್ತುಗಳನ್ನು ತರಿಸಿಕೊಳ್ಳುತ್ತಿವೆ.

ಪಶ್ಚಿಮ ಜರ್ಮನಿಯು ತನಗೆ ಬೇಕಾಗುವ ಸಂಭಾರ ವಸ್ತುಗಳನ್ನು ಬೇರೆ ಬೇರೆ ದೇಶಗಳಿಂದ ನೇರವಾಗಿ ತರಿಸಿಕೊಳ್ಳುತ್ತದೆ. ಹೀಗಾಗಿ, ಹ್ಯಾಂಬರ್ಗ್ ಬಂದರಿನಲ್ಲಿ ಮೂರು ದೇಶಗಳ ಲವಂಗ ಏಲಕ್ಕಿಗಳ ವಾಸನೆ ಮೂಗನ್ನು ಕಿತ್ತುಕೊಂಡು ಹೋಗುತ್ತದೆ. ಜರ್ಮನಿ ತರಿಸಿಕೊಳ್ಳುವ ಈ ವಸ್ತುಗಳಲ್ಲಿ ಬಹು ಹೆಚ್ಚಿನ ಭಾಗವನ್ನು ಭಾರತ ಒದಗಿಸುತ್ತದೆ. ಸುಮಾತ್ರಾ ಮುಂತಾದ ಏಷ್ಯಾ ಖಂಡದ ದ್ವೀಪಸ್ತೋಮಗಳಿಂದಲೂ ಸ್ವಲ್ಪ ಭಾಗ ಹೋಗುತ್ತದೆ. ಜೀರಿಗೆ, ಮೆಣಸು, ಲವಂಗ, ಏಲಕ್ಕಿ ಜಾಯಿಕಾಯಿ, ಜಾಪತ್ರೆ, ಲವಂಗಪಟ್ಟೆ, ಖಾರಮೆಣಸು, ಮರಾಠಿ ಮೊಗ್ಗು ಎಲ್ಲಾ ಜರ್ಮನಿಯ ಹಾದಿ ಹಿಡಿಯಲಾರಂಭಿಸಿವೆ. ಆದರೆ, ಇವುಗಳಿಗೆಲ್ಲಾ ನಾಯಕ ಸ್ಥಾನ ಮಾತ್ರ ಒಳ್ಳೆಮೆಣಸಿಗೇ ಮೀಸಲು! ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಮಾಡಿಕೊಂಡಿದೆ ಒಳ್ಳೆ ಮೆಣಸು.

ಈಗ ಭಾರತದ ತಿಂಡಿಗಳನ್ನು ಮಾಡುವ ಹೋಟೆಲುಗಳಲ್ಲಂತೂ ಜರ್ಮನ್ನರು ಸಾಲುಗಟ್ಟಿ ನುಗ್ಗುತ್ತಿರುತ್ತಾರೆ. ಸ್ಪಷ್ಟವಾಗಿ ಉಚ್ಚರಿಸಲು ಬರದಿದ್ದರೂ ಎಲ್ಲರೂ ಪೂರಿ ಸಾಗು, ಚಪಾತಿ ಕುರ್ಮಾ, ಬಿರಿಯಾನಿಗಳನ್ನು ತಟ್ಟೆ ಚಟ್ಟೆಯಾಗಿ ಹೊಡೆದದ್ದೂ ಹೊಡೆದದ್ದೇ! ಯಾರ ಬಾಯಲ್ಲಿಯೂ ಲವಂಗವೇ! ಜೈ ಲವಂಗ!!! (ಯು. ಪಿ. ಎಸ್.).

ಬಡವರು ಮರ್ಯಾದೆಯಿಂದ ಬಾಳುವುದೇ ದುರ್ಭರವೆನಿಸಿದ ಈ ಕಾಲ!

(ಏಳನೇ ಪುಟದಿಂದ)

ಬಡವ ಮತ್ತೂ ಬಡವನಾಗುತ್ತಿದ್ದಾನೆ

ಸಮಾಜವಾದಿ ಮಾದರಿಯ ಸಮಾಜ ರಚನೆಯಿಂದ ಆರಂಭಿಸಿರುವ ವಿವಿಧ ಯೋಜನೆಗಳಿಂದ ಜನತೆಯ ಜೀವನ ಮಟ್ಟ ಏರಿದೆಯೆಂಬುದಕ್ಕೆ ಯಾವ ನಿದರ್ಶನವೂ ಇಲ್ಲ. ಬಡವನು ದಿನದಿಂದ ದಿನಕ್ಕೆ ಇನ್ನೂ ಬಡವನಾಗುತ್ತಾ ಬರುತ್ತಿದ್ದಾನೆ. ಶ್ರೀಮಂತರು ಇನ್ನಷ್ಟು ಶ್ರೀಮಂತರಾಗುತ್ತಿದ್ದಾರೆ. ಸರಕಾರದ ತೆರಿಗೆ ಧೋರಣೆಯಲ್ಲೂ ಬಡ ಜನತೆಗೆ ವಿಶೇಷ ರಿಯಾಯತಿ ದೊರೆತುದು ಕಂಡು ಬರುವುದಿಲ್ಲ. ಡಿಯುವ ವರ್ಗದ, ರೈತ ವರ್ಗದ, ಮಧ್ಯಮ ವರ್ಗದ ಜನತೆಯು ಪಾಡು ತೀರಾ ಶೋಚನೀಯವಾಗಿದೆ, ಇದು ಸ್ವಾತಂತ್ರ್ಯದ ಫಲವೇ ಎಂದು ಎಲ್ಲರೂ ಕೇಳುವಂತಾಗಿದೆ. ಆಡಳಿತದಲ್ಲಿ ಬಿಗಿತ ಹಾಗೂ ಕಟ್ಟುನಿಟ್ಟಾದ ಧೋರಣೆ ಇಲ್ಲದೆ ಕೆಲವೆಡೆ ಅಂಧಾದರ್ಬಾರೇ ನಡೆಯುತ್ತಿದೆ.

ಹಾಗಾದರೆ ಇದಕ್ಕೆ ಪರಿಹಾರವೇ ಇಲ್ಲವೇ?

ಈ ಪರಿಸ್ಥಿತಿಯ ಉಚ್ಚಾಟನೆ ಸುಲಭದಿಂದಾಗುವುದಲ್ಲ. ಬೇಗನೇ ಆಗುವಂತಹುದೂ ಅಲ್ಲ. ಎಂದಿನ ವರೆಗೆ ನಮ್ಮ ಆಳುವ ವರ್ಗ ತಮ್ಮ ಹಿತಾಸಕ್ತಿಗಳನ್ನು ತೊರೆದು ಕಟ್ಟುನಿಟ್ಟಾದ ಧೋರಣೆ ಅನುಸರಿಸುವುದಿಲ್ಲವೋ ಅಂದಿನ ವರೆಗೆ ಈ ರಾಜ್ಯ, ಲಂಚ, ಪರ್ಮಿಟುಗಳ ರಾಜ್ಯವಾಗಿಯೇ ಉಳಿದೀತು. ಈ ಪರಿಸ್ಥಿತಿಯನ್ನು ಆಮೂಲಾಗ್ರವಾಗಿ ಉಚ್ಚಾಟನೆ ಮಾಡುವ ಗಂಡಸುತನ ನಮ್ಮ ಸರಕಾರಕ್ಕೆ ಬೇಕು. ಮಂತ್ರಿಗಳು ತಮ್ಮ ಸ್ಥಾನಭದ್ರತೆಯ ಕುರಿತೇ ಲೆಕ್ಕ ಹಾಕುತ್ತಿರುವರಲ್ಲದೆ ಹಳೆಯ ಜಾಡ್ಯಕ್ಕೆ ತಕ್ಕ ಚಿಕಿತ್ಸೆ ಮಾಡುವ ದಿಟ್ಟತನ ತೋರುತ್ತಿಲ್ಲ. ತಮ್ಮ ಧೋರಣೆಗಳಲ್ಲಿರುವ ದೋಷಗಳ ಕುರಿತು ಸಕ್ರಿಯವಾಗಿ ಚಿಂತನೆ ಮಾಡುವ ವಿಶಾಲ ಮನೋಭಾವ ಅವರಲ್ಲಿ ಬೆಳೆಯಬೇಕು. ಇದಕ್ಕೆ ಅಧ್ಯಕ್ಷರಾಳ್ವಿಕೆಯೋ, ಮಿಲಿಟರಿ ಶಾಸನವೇ ಬರಬೇಕಾದ ಕಾಲವೂ ಬರಬಹುದು. ಹಾಗೆಂದು ಕೆಲವರು ಆಶಿಸಿದರೂ ಅತಿಶಯವೇನಿಲ್ಲ.

ಅನ್ನದ ಪ್ರಶ್ನೆ ಮೊದಲು ಬಿಡಿಸಬೇಕು

ಇಂದಿನ ಮೊತ್ತಮೊದಲಿನ ಸಮಸ್ಯೆ ಅನ್ನದ್ದು. ಇದನ್ನು ಸರಕಾರ ಶತಪ್ರಯತ್ನ ಮಾಡಿ ಬಿಡಿಸಲಿ. ನಮ್ಮ ಯಾವ ಯೋಜನೆಗಳು ನಿಂತರೂ ಚಿಂತಿಲ್ಲ. ಈ ಹೊಟ್ಟೆಯ ಪ್ರಶ್ನೆಗೊಂದು ಪರಿಹಾರ ಹುಡುಕಲಿ. ಆಗ, ನಮ್ಮ ಸರಕಾರಕ್ಕೆ ನಮ್ಮ ಮಂತ್ರಿಗಳಿಗೆ ಭೂಮಿಗೆ ಗಂಗೆ ಇಳಿಸಿದಷ್ಟು ಪುಣ್ಯ ಬರುತ್ತದೆ

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿ ಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರನಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ

0.30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.

[illegible] ಪ್ರತಿಗಳಿಗೆ ವಿಚಾರಿಸಿರಿ:-

ನವಯುಗ ಪ್ರೆಸ್, ಉಡುಪಿ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಕವಿತಾ ವಿತಾನ:–

ಬರೀ ಒಂದು ಕಿಲೋ ಅಕ್ಕಿ!

ಅಕ್ಕಿ! ಅಕ್ಕಿ! ಬರೀ ಒಂದು ಕಿಲೋ ಅಕ್ಕಿ
ಅದಕಾಗಿ ಚೀಟಿ ಹಿಡಿದು ಸಾಲಾಗಿ ನಿಂತಿವೆ ನೋಡಿ
ನಮ್ಮ ಊರಿನ ಪಡೆ, ಇಂಡಿಯನ್ ಬ್ಯಾಟಾಲಿಯನ್
ಪಾಕಿಸ್ತಾನದ ಬೋರ್ಡರಿನಲ್ಲೂ ಇದೇ ಕ್ಯೂ
ಯಾಕಾಗಿ? ಅಂದರೆ ಅಕ್ಕಿಗಾಗಿ
ಒಂದು ಕಿಲೋ ಅಕ್ಕಿಗಾಗಿ ||

ಏ ಅಕ್ಕಿರಾಯಾ, ಏನಯ್ಯಾ ನಿನ್ನ ಪುಣ್ಯ?
ಕಣ್ಣಿಗೆ ಕಾಣಿಸದಿರುವಿಯಲ್ಲ ನೀನು ಮಹರಾಯಾ
ನಿನಗಾಗಿ ಜನ ಒಂದು ಕಾಲಲಿ ಭಗೀರಥನಂತೆ ಕ್ಯೂ ನಿಂತು
ಗಂಗಾವತರಣಕ್ಕಾಗಿ ಬಾಯ್ಬಿಡುತಿರುವರಲ್ಲಾ ||

ಇಳಿದು ಬಾ ಅಕ್ಕಿ, ಇಳಿದು ಬಾ ಗೋದಿ
ಇಳಿದು ಬಾ ಸೀಮೆ ಎಣ್ಣೆ, ಸಕ್ಕರೆ, ಜೋಳ
ಕಳ್ಳ ಸಂತೆಯ ಖದೀಮನ ಗುದಾಮಿನಿಂದ
ಲಾಭಖೋರನ ಮನೆಯ ನೆಲಮಾಳಿಗೆಯಿಂದ
ಇಳಿದು ಬಾ, ಹರಿದು ಬಾ
ನಮ್ಮ ಹಸಿವನ್ನು ತಣಿಸೆ ಬಾ
ಹೊಟ್ಟೆಯ ಬೆಂಕಿಯನಾರಿಸೆ ಬಾ ||

ಬಾ ಮಹಾರಾಯಾ, ನಿನಗಿನ್ನೂ ಬಾರದೆ ದಯ
ಎಷ್ಟು ದಿನವೆಂದು ಹಾಗೆ ಕತ್ತಲಲಿ, ನೆಲದ ಅಡಿಯಲ್ಲಿ
ಅಡಗಿ ಕುಳಿತ ಕೊಳ್ಳುವೆ ನೀನು?
ನಿನಗೂ ಗಾಳಿ ಬೆಳಕಿನ ಮೋಹವಿಲ್ಲವೆ?
ಎದ್ದು ಬಾ ಮಹಾರಾಯಾ ||

ಮಾಡಿಗೆ ಅಂಬಲಿ ತಿನ್ನಲಿಕ್ಕಾದರೂ ಸರಿಯಾಗಿ ಇಲ್ಲ
ನೀನಲ್ಲದೆ ನಮಗೆ ಬೇರೆ ಗತಿಯಿಲ್ಲ
ಒಮ್ಮೆ ಬಂದು ದರುಶನ ಕೊಡು
ಬಾಗಿಲನು ತೆರೆದು ಸೇವೆಯ ಕೊಡು ||

ನಮ್ಮ ಜನ ನಿನಗಾಗಿ ಬಾಯಿ ಬಿಡುತ್ತಿದ ಕಂಡು
ಹಲ್ಕಿರಿದು ನಗುವೆಯಾ ಗೋದಾಮಿನೊಳಗಡೆ ನಿಂದು
ಇರಲಿ ಬಿಡು, ನೀನು ಸಿಗದಿದ್ದರು ನಮಗೆ ಭಯವಿಲ್ಲ
ನಮಗಿದೆ ಫೂಡ್ ಕಾರ್ಪರೇಶನ್
ಬರುವುದಂತೆ ಟನ್‌ಗಟ್ಟಲೆ ಅಕ್ಕಿ ವೇಗನಿನಲ್ಲಿ
ಮತ್ತೆ ನಿನ್ನನ್ನು ಕೇಳುವರಾರೋ ನೀನೊಬ್ಬ ಇಲ್ಲಿ
ಅದು ಬರುವ ತನಕ ನಾವು ಬದುಕಿರ ವೆವೋ ಎನ್ನುವೆಯಾ?
ಅದಕುಪಾಯ ತಿಳಿದಿದೆ ನಮಗೆ.
ಅಕ್ಕಿಯ ಬದಲು ಹಣ್ಣು, ಹಾಲು ಸೇವಿಸಿರೆಂದು
ಅಂದಿರುವರು ಮಂತ್ರಿ ಮಹಾಶಯರು ||

ಹಾಗಾದರೂ ಬದುಕುತ್ತೇವೆ
ಇಲ್ಲವೆ ಬೋರ್ಡರಿನಲ್ಲಿ ಜವಾನರು ಸತ್ತಂತೆ ಸಾಯುತ್ತೇವೆ
ವೀರ ಸ್ವರ್ಗ ಪಡೆಯುತ್ತೇವೆ! (ಎಲ್ಲಿದೆಯೋ ಆ ವೀರ ಸ್ವರ್ಗ?)
ನೀನು ಇನ್ನೊಬ್ಬ ಕಾಮರಾಜನೆ ಆದಿಯಲ್ಲ
ಎಮ್ಮೆಲೆಗಳಿಂದ ರಾಜಿ ಕೊಡಿಸಿದಿಯಲ್ಲಾ
ಇದೆಂತಹಾ ಕಾಮರಾಜ ಪ್ಲೇನೋ ಯಾರು ಬಲ್ಲ?
ನಿನ್ನ ದೆಸೆಯಿಂದ ಮಂತ್ರಿಗಳಿಗೆ ಉಳಿಗಾಲವಿಲ್ಲ ||

ಅನ್ನಕ್ಕಾಗಿ ಅನ್ನ ಸತ್ಯಾಗ್ರಹ ಮಾಡುವ ಕಾಲ ಬಂತು
ಗೋದಾಮುಗಳನ್ನು ಜನ ಲೂಟಿ ಮಾಡುವ ವರೆಗೂ ಬಂತು
ಆದರೂ ಆಹಾರ ಪರಿಸ್ಥಿತಿ ತೃಪ್ತಿಕರ, ಪೂರ್ಣ ಹತೋಟಿ
ಬಿಡುವರೆ ಲೆಕ್ಚರ್, ಅದಕಿಲ್ಲ ಹತೋಟಿ ||

ಈ ಲೆಕ್ಚರಿನಿಂದಲೆ ಹೊಟ್ಟೆ ತುಂಬುತಿದ್ದರೆ
ಆಗ ನಿನ್ನನ್ಯಾರು ಕೇಳುತ್ತಿದ್ದರೋ?
ಸದ್ಯವೇ ಸೀದಾ ಬರುವುದಂತೆ
ಅಷ್ಟರಲ್ಲೇ ಜನ ಸೀದಾ ಹೋಗದಿದ್ದರೆ ಸಾಕು (ಮೇಲೆ)
ಮತ್ತೆ ನಾವೆಲ್ಲ ಜನ ಸೀದಾ
ಅಲ್ಲಿಯ ವರೆಗೆ ಏನಾಗುವುದೋ ಆ ದೇವರೇ ಬಲ್ಲ ||

ನಿನ್ನ ದೆಸೆಯಿಂದ ಮಂತ್ರಿಗಳಿಗೆ ಟೂರು ಮಾಡಲು ಇಲ್ಲ
ಮಾಡಿದರು, ಜನ ಕರಿ ಪತಾಕೆ ಹಿಡಿದು ಸ್ವಾಗತಿಸುವರಲ್ಲ
ಇದಕಾಗಿ ಸೂರಿನಲ್ಲತ್ತನಾಲ್ಕು ಸೆಕ್ಷನ್ ಜ್ಯಾರಿ
ಮಾಡಬೇಕಾದ ಕಾಲ ಬಂತಲ್ಲ ಮಹರಾಯಾ ||

ಸ್ಫೂರ್ತಿದಾಯಕ ಶಿವಾಜಿ–ಶಂಕರ ಜಯಂತಿ

(ಆರನೇ ಪುಟದಿಂದ)

ದಿಲ್ಲವೆನ್ನುವದನ್ನು 'ನವಯುಗ' ಆವಾಗಲೇ ಪ್ರಕಟಿಸಿರತ್ತದೆ. ಇನ್ನೊಂದೆಡೆಯಲ್ಲಿ ಅದೇ ನಂಬೂದರಿಪಾದರು ಮಾತಾಡುತ್ತ ಭಾರತಕ್ಕೆ ಚೈನಾ ಹಾಗೂ ಪಾಕಿಸ್ತಾನಗಳ ಬಳಿ ಮಾತು ಕತೆ ನಡೆಯಿಸಿ ಗಡಿ ತಂಟೆಯನ್ನು ತೀರಿಸಿಕೊಳ್ಳುವ ಯೋಗ್ಯತೆ ಇಲ್ಲವೆಂದು ತಿಳಿಸಿರುತ್ತಾರೆ. ಮತ್ತು ಎಲ್ಲಾ ವಾದ–ವಿವಾದ ಆಕ್ರಮಣ ವಗೈರೆಗಳಿಗೆ ಭಾರತವೇ ಕಾರಣವೆಂದೂ ಅವರು ಬಂಬಡ ಬಾರಿಸಿದ್ದಾರೆ.

ಶಿವಾಜಿ ಜಯಂತಿ ಉತ್ಸವದಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿ ಶ್ರೀ ವಸಂತ ನಾಯ್ಕರವರೂ, ಗೃಹ ಮಂತ್ರಿ ಬಾಳ ಸಾಹೇಬ ದೇಸಾಯಿ ಭಾಗವಹಿಸಿದ್ದರೂ ಇಂತಹ ದುರ್ಘಟನೆಗಳು ನಡೆದಿರುತ್ತವೆ! ಅಂದರೆ ಪಾಕ್ ಪ್ರೇಮಿಗಳು ಜನತೆಯ ಹೃದಯವನ್ನು ಮುಟ್ಟಿ ನೋಡಿದ್ದಾರೆ.

ಹೀಗೆಂದೊಡನೆ ಭಾರತೀಯರು ಎದೆಗೆಡಬೇಕಾಗಿರುವದಿಲ್ಲ. ಈ ವರ್ಷ ಆಚರಿಸಲ್ಪಟ್ಟ ಶಂಕರ ಜಯಂತಿ ನಮಗೆ ಉತ್ಸಾಹ ಕೊಡಬಲ್ಲದು, ಧೈರ್ಯ ಬರಿಸುವಂತಹದ್ದಿದೆ. ಹಿಂದಿನ ಸಂಚಿಕೆಯಲ್ಲಿ ತಿಳಿಸಿದಂತೆ, ಕಾಲಡಿಯಲ್ಲಿ ಮುವ್ವರು ಶಂಕರಾಚಾರ್ಯರು ಆ ಪರ್ವಕಾಲದಲ್ಲಿ ಒಂದಾಗಿ ಸೇರಿದ್ದರು. ಬದ್ರಿನಾಥದ ಶಂಕರಾಚಾರ್ಯರು ಹಾಗೂ ಕಾಮಕೋಟಿ ಪೀಠಾಧೀಶರೂ ಅದರಲ್ಲಿ ಭಾಗವಹಿಸಿರಲಿಲ್ಲ. ಆದರೂ ಇವರೆಲ್ಲರೂ ಜನವರಿ ತಿಂಗಳಲ್ಲಿ ಬರುವ ಪೂರ್ಣ ಕುಂಭ ಮೇಳದ ಸಮಯ ಜರಗಲಿರುವ ವಿಶ್ವ ಹಿಂದೂ ಪರಿಷತ್ತಿನಲ್ಲಿ ಭಾಗ ವಹಿಸುವ ನಿರೀಕ್ಷೆ ಇದೆ.

ಶಂಕರ ಜಯಂತಿ ಮಹೋತ್ಸವದ ಸಮಯ ಅದೇ ಕಾಲಡಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕೇರಳ ಪ್ರಾಂತ್ಯದವರ ಸಂಘಶಿಕ್ಷಾ ಶಿಬಿರ ನಡೆಯುತ್ತಿತ್ತು. ಮೇ ದಿನಾಂಕ ಎಂಟರಂದು ಸಾಯಂಕಾಲ ಪುರಿ ಹಾಗೂ ಶೃಂಗೇರಿ ಮಠಾಧೀಶ ಶಂಕರಾಚಾರ್ಯರುಗಳು ಸಂಘಶಿಕ್ಷಾ ಶಿಬಿರಕ್ಕೆ ಬಿಜಯಂಗೈದರು. ಅಲ್ಲಿ ಸ್ವಯಂ ಸೇವಕರಿಗೆ ಅವರಿತ್ತಿರುವ ಉಪದೇಶ ಹಾಗೂ ಉಪದೇಶ ತುಂಬಿರುವ ಧೈರ್ಯ ಮಾರ್ಗದರ್ಶನೀಯವಿದೆ. ಅವರು ನಮ್ಮ ದೇಶ ಹಾಗೂ ಧರ್ಮದ ಗತ ಭವ್ಯ ಇತಿಹಾಸ ಹಾಗೂ ಇಂದಿನ ಕರುಣಾಜನಕ ಹಾಗೂ ಭೀಕರ ದುಃಸ್ಥಿತಿಯತ್ತ ಸ್ವಯಂಸೇವಕರ ಗಮನ ಸೆಳೆದರು. ನಮ್ಮ ಪವಿತ್ರ ದೇಶ ಹಾಗೂ ಮಹಾನ್ ಧರ್ಮದ ಮೇಲಿಂದು ಹೇಗೆ ಆಕ್ರಮಣ ನಡೆಯುತ್ತಿದೆಂಬುದನ್ನು ಅವರು ಸರಳವಾಗಿ ವಿವರಿಸಿ ತಿಳಿಸಿದರು. ನಮ್ಮ ಮಾತೃಭೂಮಿಗೆ ಅಪಮಾನವಾಗಿದೆ. ನಮ್ಮ ಮಾತೃ ಭಗಿನಿಯರ ಮೇಲೆ ಬಲಾತ್ಕಾರ ನಡೆದಿರುತ್ತದೆ. ಗಡಿಯ ಉಲ್ಲಂಘನೆಯನ್ನು ಶತ್ರುಗಳು ಮಾಡಿದ್ದಾರೆ. ಸಂಸ್ಕೃತಿ, ಕಲಾಚಾರ ಹಾಗೂ ಧರ್ಮದ ಕುರಿತು ಹೀನಾಯ ಅಪಪ್ರಚಾರ ನಡೆಯುತ್ತಿದೆ. ಇಂತಹ ದುಃಸ್ಥಿತಿಯ ಸಮಯ ಉಂಡು ತಿಂದು ಮಲಗಲು ಸಾಧ್ಯವೇ? ನಾವು ದೇಶ ಹಾಗೂ ಧರ್ಮಕ್ಕಾಗಿ ನಮ್ಮನ್ನು ಅರ್ಪಿಸಿಕೊಳ್ಳಬೇಕಾಗಿಲ್ಲವೇನು? ಇಂತಹ ಕೆಲಸ ಇಂದು ಸಂಘ ಶಕ್ತಿಯಿಂದ ಮಾತ್ರ ಸಾಧ್ಯವೆಂದು ತಿಳಿಸಿದರು. ಹೌದು ಊರಿಗೆ ಉಪದೇಶ ಕೊಡುವದು ಸಾಧ್ಯ. ಬೇರೆ ವೇದಿಕೆಗಳು ಅದಕ್ಕಾಗಿ ಇರಬಹುದು. ಆದರೆ ಕರ್ಮಠರು ಹಾಗೂ ಹೇಳಿದಂತೆ ಕಾರ್ಯದಲ್ಲಿ ಮಾಡಿ ತೋರಿಸುವವರ ನಡುವೆ ಮಾತಿನ ಪ್ರವಾಹದ ಆವಶ್ಯಕತೆ ಇದೆಯೇ? ಅದನ್ನು ತಿಳಿದುಕೊಂಡಿರುವ ಆಚಾರ್ಯ ಸ್ವಾಮೀಜೀಯವರು "ನಾವು ಶಂಕರಾಚಾರ್ಯರು, ಸಮಯ ಬಂದಾಗ ಹಿಂದಕ್ಕೆ ಬೀಳುತ್ತೇವೆಂದು ಭಾವಿಸಬೇಡಿ. ಶತ್ರುವಿನಿಂದ ಗುಂಡಿನ ಸುರಿಮಳೆ ನಡೆಯುತ್ತಿರುವಾಗ ನಾವು ಜಪಮಾಲೆ ತಿರುಗಿಸುತ್ತ ಕುಳಿತುಕೊಳ್ಳುವದಿಲ್ಲ"ವೆಂದು ತಿಳಿಯಪಡಿಸಿದ್ದಾರೆ.

ಶಿವಾಜಿ ಜಯಂತಿಯ ಸಮಯ ನಡೆದಿರುವ ಅಪಮಾನಕಾರಕ ಘಟನೆಗಳನ್ನು ತೊಡೆದು ಹಾಕಲು ಧೈರ್ಯ ನೀಡುವಂತಹ ಉಪದೇಶವಿದು. ಆಕ್ರಮಣಗಾರರನ್ನು ಹೊಡೆದಟ್ಟಿ ಪುನಃ ಹಿಮಾಲಯದ ಮೇಲೆ ಭಾರತದ ಬಾವುಟವನ್ನು ಗೌರವದಿಂದ ಹಾರಾಡಿಸಲು ಶ್ರೀ ಶಂಕರಾಚಾರ್ಯರು ಆದ್ಯ ಶ್ರೀ ಶಂಕರಾಚಾರ್ಯ ಹಾಗೂ ಶ್ರೀ ವಿದ್ಯಾರಣ್ಯರ ಪಾತ್ರವನ್ನು ವಹಿಸಬಹುದೆಂಬ ಆಸೆಯ ಕುಡಿಯನ್ನು ಚಿಗುರಿಸುವಂತಹ ಉಪದೇಶವಾಕ್ಯವದು. ಶಿವಾಜಿ ಹಾಗೂ ಶಂಕರ ಜಯಂತಿಯ ಸಮಯ ನಡೆದಿರುವ ಈ ಘಟನೆಗಳನ್ನು ಬಹಳ ತಾಳ್ಮೆಯಿಂದ ಹಾಗೂ ನಿಷ್ಪಕ್ಷಪಾತ ದೃಷ್ಟಿಯಿಂದ ವಿಶ್ಲೇಷಿಸಿ ಅರಿತುಕೊಂಡಲ್ಲಿ, ರಾಷ್ಟ್ರೀಯತೆಯ ನೈಜ ಬೆಳಕನ್ನು ಕಂಡುಕೊಂಡಲ್ಲಿ ಆಂತರಿಕ ಹಿತ ಶತ್ರುಗಳನ್ನು ಬಾಹ್ಯ ಆಕ್ರಮಣಗಾರರನ್ನು ಬಹು ಸುಲಭವಾಗಿ ಎದುರಿಸಬಹುದು.

ನಿನ್ನ ಕಾಟಾಟ ನಿರ್ಬಂಧಿಸಿ ಮಾಡಿದ ಕಾನೂನು
ಲಂಚ ಖೋರರಿಗೊಂದು ದೊಡ್ಡ ಬೂನು!
ರಾತ್ರಾರಾತ್ರಿ ನಂಬರ್ ಪ್ಲೇಟಿಲ್ಲದ ಲಾರಿಯಲಿ ನಿನ್ನ ಪಯಣ
ನಿನ್ನ ತಡೆಯುವ ಬಂಟ ಲಂಚ ಪ್ರೀತನಾಗಿರುವಾಗ ನಿನಗೇತರ ಭಯ? ||
ಇದು ರಾಮರಾಜ್ಯವಲ್ಲ ನಡೆವ ರಾವಣನ ದರಬಾರು
ಪ್ರಜೆಗಳೆಲ್ಲ ಕಪಿಗಳಾದರೆಂದು ನಗುವಿಯಾ?
ನಗು, ನಗು, ಚೆನ್ನಾಗಿ ನಗು!
ಈ ಕಪಿಗಳಿಗೂ ಕಾಲ ಬಂದು ಬರುತ್ತದೆ
ರಾಮ ಪುನಃ ಹುಟ್ಟಿ ಬಂದ ಮೇಲೆ
ಆಗ ಯಾರ ಕೈ ಮೇಲಾಗ ದೋ ನೋಡೋಣ!
(ಅಲ್ಲಿಯ ವರೆಗೆ ನಾವು ಬದ ಕದ್ದರೆ)

—"ಶೃಂಗಾರಿ ತನಯ"

ಗೀತಾ-ದ್ವಿತೀಯ ಅಧ್ಯಾಯ

(ಐದನೇ ಪುಟದಿಂದ)

ಕವೂ ದೊರೆಯದೆ ಹೋಯಿತು. ಅವನಿಗೆ ಆ ತತ್ವಗಳ ಬಗ್ಗೆ ಇದ್ದ ತಪ್ಪು ತಿಳುವಳಿಕೆಯೇ ಅವನನ್ನು ನಿರ್ವಿಣ್ಣನಾಗಿ ಮಾಡಿತು.

ವ್ಯಾಸರು, ಆ ಕಾಲದ ಆರ್ಯ ಯುವಕರಿಗೆ, ಅರ್ಜುನನಿಗೆ ಶ್ರೀ ಕೃಷ್ಣನು ಉಪದೇಶಿಸಿದ ಗೀತೆಯಲ್ಲಿ ಹಿಂದಿನ ಮಹಾ ತತ್ವಗಳನ್ನು ಬೋಧಿಸಿದರು. ಜ್ಞಾನವನ್ನು ನೀಡಿದರು.

ಗೀತೆಯನ್ನು ಬೋಧಿಸಿದ ಶ್ರೀ ಕೃಷ್ಣನು, ಉಪನಿಷದ್ ತತ್ವಗಳನ್ನು ಚೆನ್ನಾಗಿ ಅರಿತು, ತನ್ನ ಜೀವನದಲ್ಲಿ ತತ್ವಗಳನ್ನು ಬಾಳಿದವನು. ಬಾಳಿದುದರಿಂದ ಅತಿ ತೀರಾ ಕೆಳ ಮಟ್ಟದ ವರ್ಗ ಜೀವನದಿಂದ ಮೇಲೆ ಬಂದು, ದನ ಕಾಯುವ ಹುಡುಗನಾಗಿದ್ದವನು, ಕುರುಕ್ಷೇತ್ರ ಯುದ್ಧ ಸಮಯದಲ್ಲಿ ರಾಜರುಗಳಿಗೆ ಸಂದರ್ಭೋಚಿತ ಸಲಹೆ ಈಯುವ ಚಾಕಚಾಕ್ಯತೆ, ಮೇಧಾವಿತನ ಪಡೆದವನು ಆಗಿದ್ದನು, ಅಂತಹ ಶ್ರೀ ಕೃಷ್ಣನು ಉಪನಿಷದ್ ಹೇಳಲು ಅರ್ಹನು ಎಂದು ವ್ಯಾಸರು ಸೂಚಿಸಿರುವರು.

ಉಪನಿಷತ್ ತತ್ವಗಳನ್ನು, ಕಾಡಿನಲ್ಲಿ ಅಥವಾ ಹಿಮಾಲಯದ ಪ್ರಶಾಂತ ವಾತಾವರಣದಲ್ಲಿ ಸರ್ವಸಂಗ ಪರಿತ್ಯಾಗಿ ಮುನಿಯು ವಿರಕ್ತ ಶಿಷ್ಯರಿಗೆ ಬೋಧಿಸುವ ತತ್ವಗಳೆಂದು ಆಗಿನ ಜನರು ನಿರ್ಧರಿಸಿದ್ದರು. ಅವರು ವ್ಯಾವಹಾರಿಕ ಜೀವನದಲ್ಲಿ ಆ ತತ್ವಗಳನ್ನು ಬಾಳಲು ಸಾಧ್ಯವಿಲ್ಲ ಎಂದು ಬಗೆದಿದ್ದರು. ಮಹಾಭಾರತ ಕತೆಯಲ್ಲಿ ವ್ಯಾಸರು ಆಗಿನ ಕಾಲದ ಜನಜೀವನದ ಒಂದು ಸಮೂಲಾಗ್ರ ನೋಟವನ್ನು ನಿರ್ಮಿಸಿರುವರು. ಅತಿ ತೀರಾ ಕೆಳವರ್ಗದ ಜನಜೀವನದಿಂದ ಹಿಡಿದು, ಅತ್ಯುಚ್ಚ ಮಟ್ಟದ ರಾಜರುಗಳ ಜೀವನ ಚಿತ್ರವನ್ನು ಯೋಚನಾಲಹರಿಗಳನ್ನು ಮಹಾಭಾರತದಲ್ಲಿ ತಿಳಿಯಬಹುದು.

ಒಂದು ಜನಾಂಗವು ಧಾರ್ಮಿಕ ತತ್ವ ನಿರೂಪಣೆಯನ್ನು ವ್ಯವಹಾರಿಕ ಜೀವನದಲ್ಲಿ ಬಾಳಲು ಅಳವಡಿಸಲು ಸಾಧ್ಯವಾಗದೆ ಕಂಗೆಟ್ಟಾಗ ಆ ಧಾರ್ಮಿಕ ತತ್ವಗಳನ್ನು ಹೊಸ ವಾತಾವರಣಕ್ಕೆ ತಕ್ಕಂತೆ ಹೊಂದಾಣಿಕೆ ಮಾಡಿಸಿ ಜನರಿಗೆ ಮಾರ್ಗದರ್ಶನ ನೀಡಲು ಮಹಾಪುರುಷರು ಜನ್ಮತಳೆಯುವರು. ವ್ಯಾಸರು ಆ ಕಾಲದ ಸಾಮಾಜಿಕ ರೀತಿ ನೀತಿಗಳಿಗೆ ಸರಿಯಾಗಿ, ಆಗಿನವರು ಬಾಳಿದ ಜೀವನದ ಹಿನ್ನಲೆಯಲ್ಲಿ, ಅರ್ಥವಾಗುವಂತೆ ಗೀತೆಯನ್ನು ಬರೆದಿರುವರು. ಆದ್ದರಿಂದ ವೇದ ಕಾಲದ ಕ್ರಿಯೆಗಳನ್ನು ಯಜ್ಞ, ಯಾಗ ಕ್ರಮಗಳನ್ನು ಅರ್ಜುನನು ಮೊದಲೇ ಅರಿತಿದ್ದುದರಿಂದ, ಕೃಷ್ಣನು ಯಜ್ಞ, ಯಾಗ ಎಂದಾಗ ಅವು ಮಾನವನ ನೈತಿಕ ವಿಕಾಸನಕ್ಕೆ ಹೇಗೆ ಸಹಾಯವಾಗುವುವೆಂದು ತಿಳಿಯದೆ ಕೇವಲ ಕರ್ಮಾಂಗಗಳೆಂದೇ ಬಗೆದನು. ಆದರೆ ಆ ತತ್ವಗಳನ್ನು ಸರಿಯಾಗಿ ನಿರೂಪಣೆ ಮಾಡದ ಪಂಡಿತರುಗಳಿಂದಾಗಿ ಅರ್ಜುನನು ಹೀಗೆ ಗಲಿಬಿಲಿಯಾದನು. ಧಾರ್ಮಿಕ ಜೀವನ ಎಂದರೆ ಬಾಹ್ಯ ಕರ್ಮಗಳಲ್ಲಿ ಮಾತ್ರವೇ ಹೊರತು ಮಾನವನ ಅಂತರ ವ್ಯಕ್ತಿತ್ವ ವಿಕಾಸನಕ್ಕೆ ಇಲ್ಲ ಎಂಬ ಅಭಿಪ್ರಾಯ ಅವನಲ್ಲಿತ್ತು. ಅದನ್ನು ಹೊಡೆದೋಡಿಸಲು ಶ್ರೀ ಕೃಷ್ಣನು ಆ ತತ್ವಗಳನ್ನು ಕುರುಕ್ಷೇತ್ರ ಯುದ್ಧ ಭೂಮಿಗೆ ಪ್ರಶಾಂತ ಹಿಮಾಲಯ ತಪ್ಪಲುಗಳಿಂದ ತರಬೇಕಾಯಿತು. ಆ ತತ್ವಗಳನ್ನು ಹಿಮಾಲಯ ತಪ್ಪಲುಗಳಲ್ಲಿ ಮಾತ್ರವಲ್ಲ, ಕುರುಕ್ಷೇತ್ರ ಯುದ್ಧಭೂಮಿಯಲ್ಲಿ ಬಾಳಲು ಸಾಧ್ಯವಿದೆ ಎಂದು ಹೇಳಬೇಕಾಯಿತು. ಅದನ್ನು ಹೇಳಿದವನು ಕೂಡಾ ಸರ್ವಸಂಗ ಪರಿತ್ಯಾಗಿಯಾಗಿರಲಿಲ್ಲ. ದೈನಂದಿನ ಜೀವನವನ್ನು ಅತಿ ಉತ್ಸಾಹದಿಂದ ಜೀವನದ ಪ್ರತಿಯೊಂದು ರಂಗಗಳಲ್ಲಿ ಅತಿ ತೀವ್ರವಾಗಿ ಬಾಳ್ವೆ ನಡೆಸಿದವನು, ಚಟುವಟಿಕೆ ಶೀಲ ವ್ಯಕ್ತಿ. ಅವನ ಜೀವನ ಅತಿ ಸುಖದ ಸುಪ್ಪತ್ತಿಗೆಯಾಗಿರಲಿಲ್ಲ. ತೀರಾ ಕೆಳಮಟ್ಟದ ವರ್ಗದಿಂದ ಮೇಲೆ ಬಂದು ರಾಜರಿಗೆ ಸಲಹೆ ಕೊಡುವ ಮೇಧಾವಿತನ ಪಡೆದ ಸಾಹಸೀ ಜೀವನ ವಾಗಿತ್ತು.

ಮತ್ತು ಉಪದೇಶವನ್ನಿತ್ತುದುದು ಅರ್ಜುನನಿಗೆ ವಿರಕ್ತ ಶಿಷ್ಯನಿಗಲ್ಲ. ಜೀವನವನ್ನು ಬಾಳುವ ಉತ್ಸಾಹವಿದ್ದವನಿಗೆ, ಉತ್ಸಾಹವಿಲ್ಲದಿರುವಾಗ, ಚೇತನ ತುಂಬಲು ಕುರುಕ್ಷೇತ್ರದಲ್ಲಿ ಇದಿರು ಸೈನ್ಯ ಸಮೂಹ ನೆರೆದಾಗ ಒಂದು ಕೈಯಲ್ಲಿ ಕುದುರೆಗಳ ಕಡಿವಾಣವನ್ನು ಹಿಡಿದುಕೊಂಡು, ಅರೆತಿರುಗಿ ಅರ್ಜುನನ ಕಡೆ ದೃಷ್ಟಿಸಿ ತನ್ನ ಅರೆದೃಷ್ಟಿಯನ್ನು ಆ ಕುದುರೆಗಳ ಮೇಲೆ ಸದಾ ಇರಿಸಿಕೊಂಡು ಶ್ರೀ ಕೃಷ್ಣನು ಚಟುವಟಿಕೆಯ ನಡುವೆ ಚಟುವಟಿಕೆಯಲ್ಲಿ ಮುಳುಗಿರುವಾಗಲೇ ಈ ಗೀತೆಯನ್ನು ಬೋಧಿಸಿದನು. ಭ್ರಮಿಷ್ಟನಾದ ಅರ್ಜುನನ ಮೋಹ, ಗೀತೆಯಿಂದ ಆಕ್ಷಣ ದೂರವಾಯಿತು. ಮತ್ತು ಅರ್ಜುನನು ವಿವೇಕವಂತನೂ, ಉತ್ಸಾಹಭರಿತನೂ ಆಗುವಂತೆ ಮಾಡಿತು. ಹಾಗಿದ್ದರೆ, ನಿಮ್ಮ ವ್ಯಾವಹಾರಿಕ ಜೀವನದಲ್ಲೂ ಗೀತೆ, ಖಂಡಿತವಾಗಿಯೂ ಪ್ರಯೋಜನಕ್ಕೆ ಬಂದೀತು.

ಉಪನಿಷತ್ ಸುಸಂಸ್ಕೃತ ಜೀವನ ನಡೆಸಿದ ಯುವಜನಾಂಗವು ಕಂಗೆಟ್ಟಾಗ, ಅವರ ಸಂಕಟ ಪರಿಹಾರ್ಥವಾಗಿ ಯುವಜನಾಂಗದ ಕರೆಗೆ ತಮ್ಮ ತತ್ವಗಳೆಂಬ ಹಾಲನ್ನು ಅತಿ ಪ್ರೇಮ ಪುರಸ್ಸರವಾಗಿ ಸುರಿಯುವುವು. ಈ ಉಪನಿಷತ್ತುಗಳೆಂಬ ದನಗಳನ್ನು ಕರೆದವನೂ ಹಾಲು ಹಿಂಡಿದವನೂ ಶ್ರೀ ಕೃಷ್ಣನು (ಗೋಪಾಲ ನಂದನ) ದನ ಕರು ಹಿಂಡಿನೊಡನೆ ಬಾಲ್ಯದಿಂದಲೂ ಆಡಿ, ಬೆಳೆದು ಅವುಗಳ ಪರಿಪೂರ್ಣ ಪರಿಚಯವಿದ್ದವನು. ಈ ದನದ ಹಾಲನ್ನು ಹಿಂಡಲು ಯೋಗ್ಯನು. ಪಾರ್ಥನೆಂಬ ಒಟ್ಟ ಕರುವನ್ನು ಮುಂದೆಯಿಟ್ಟು (ಪಾರ್ಥ—ಹೆಚ್ಚಿನ ಬುದ್ಧಿವಂತಿಕೆ ಇಲ್ಲದವನು) ಅದರ ನೆವದಿಂದ ಹಾಲನ್ನು ಹಿಂಡಿದನು. ಈ ಹಾಲನ್ನು ಕುಡಿಯುವವರು ಮೇಧಾವಿತನದಿಂದ ತಮ್ಮ ಜೀವನದಲ್ಲಿನ ಕುಂದು ಕೊರತೆಗಳನ್ನು ಉಕ್ಷಿಸಿ, ಆತ್ಮತೃಪ್ತಿಗೊಂಡು ತಮ್ಮ ಸುಧಾರಣೆಗೆ ಜೀವನವನ್ನು ವಿಶಾಲವಾಗಿಸಬೇಕೆಂಬ ಸ್ಥಿರ ಬುದ್ಧಿಯ ಸಹೃದಯಿಗಳು. ಪಾರ್ಥನು ಹಾಲನ್ನು ಕುಡಿಯಲಾರನು.

ಗೀತೆಯನ್ನು ಹಾಲಿಗೆ ಹೋಲಿಸುವುದರಲ್ಲಿ ಈ ವಿಶೇಷವಿದೆ. ಏಕೆಂದರೆ ಎಲ್ಲಾ ದೇಶ ಕಾಲಮಾನಗಳಿಗೂ ವಯೋವೃದ್ಧರಿಂದ ಹಿಡಿದು ಬಾಲಕರು, ಹಸುಳೆಗಳ ತನಕವೂ ನಿರೋಗಿ, ರೋಗಿಗಳಿಗೂ ಒಂದೇ ಒಂದು ಆಹಾರ ಪಥ್ಯವಾಗಿರುವುದೆಂದರೆ ಅದು ಹಾಲು. ಜಗತ್ತಿನ ಎಲ್ಲಾ ಕಡೆಗಳಲ್ಲೂ, ಎಲ್ಲಾ ಕಾಲಮಾನಗಳಲ್ಲೂ ಈ ಒಂದು ಆಹಾರವು ಜನರಿಗೆ ಹಿಡಿಸುವುದು. ಇತರ ಆಹಾರವು ದೇಶದ ವಿವಿಧ ಭಾಗಗಳ ಶೀತೋಷ್ಣ ಸ್ಥಿತಿಗೆ ತಕ್ಕಂತೆ ಬದಲಾಗಬಹುದು. ಆದರೆ ಹಾಲನ್ನು ಎಲ್ಲಾ ಕಡೆಗಳಲ್ಲೂ ಉಪಯೋಗಿಸುವರು. ಆದ್ದರಿಂದಾಗಿ ಗೀತೆಯನ್ನು ಈ ಹಾಲಿನ ಉಪಮೆಯಿಂದ ವಿವರಿಸಿರುವರು. ಈ ಗೀತಾ ಹಾಲು ಮಾನವ ಜನಾಂಗಕ್ಕೆ ರಾಷ್ಟ್ರ, ಜಾತಿ, ಕುಲ ಎಂಬ ಭೇದವಿಲ್ಲದೆ ಎಲ್ಲರಿಗೂ ಉಪಯೋಗಕರವಾದೀತು; ಎಂದು ಈ ಗೀತೆಯು ವಿಶ್ವ ವಿಶಾಲ ತತ್ವಗಳನ್ನು ಸೂಚಿಸುವುದಾಗಿದೆ.

IN THE COURT OF THE MUNSIF OF COONDAPOOR.

S. C. No 44/65.

Between :

Shivarama Shetty ...... *Plaintiff.*

and

1, Narayana; 2. Bacha—Children of Kaveri Hengsu.

--Defendants.

Both residing at Gulvadi village, Coondapoor Taluq.

To

The Defendants.

Please take notice that the above suit filed by the plaintiff for recovering the amounts due to him from you in respect of the promissory note executed by you stands posted to 11-6-1965 at 11 A. M. before the above Court. If you fail to appear before the above Court at 11 A. M. on that date either in person or through a pleader you will be declared ex parte and further orders will be passed in your absence.

(By order of the Court.)

(Sd.) K. RAMAPPAYYA, B.A., B.L.,
Advocate for Plaintiff.

Coondapur,
25-5-65.

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು:

● ಶಾಸ್ತ್ರೀಯ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರ ಪರೀಕ್ಷೆಯ ಪದವಿ ಪಡೆದವರಿಂದ

● ಮೆಳ್ಳೆದೃಷ್ಟಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು ● ಅತ್ಯುತ್ತಮ ಗ್ಲಾಸುಗಳು

● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ.

S. C. 110/1965.

ವಾದಿ— ಶೀನಪ್ಪ ಸಟ್ಟ

ಪ್ರತಿವಾದಿರು— 1. ನಾಣಿ; 2. ಬೇಡು; 3. ಪೈದು.

ಕುಂದಾಪುರ ತಾಲ್ಲೂಕು ವಕ್ವಾಡಿ ಗ್ರಾಮದಲ್ಲಿರುವ ದೇವಿ ಹೆಂಗ್ಸಿನ ಮಕ್ಕಳು ನಾಣಿ । ಬೇಡು । ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿರಿಂದ ವಾದಿಗೆ ಕಳೆದ ಪ್ಲವ, ಶುಭಕೃತು, ಶೋಭಕೃತು ಮತ್ತು ಕ್ರೋಧಿ ಸಂವತ್ಸರಗಳ ಒಟ್ಟು ಬರತಕ್ಕ ಬಾಲಗೇಣಿ ಗೇಣಿ ಬಾಕಿ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 7-6-1965ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಖುದ್ದು ದಿವಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

(Sd.) N. S. Parameshwariah.
Advocate for Plff.

Date 20-5-65,
Coondapoor.

READ & ADVERTISE IN NAVAYUGA WEEKLY

ನೆಹರೂ ಮತ್ತು ಪ್ರಜಾಸತ್ತಾತ್ಮಕ ಸಮಾಜವಾದ

(ಒಂಭತ್ತನೇ ಪುಟದಿಂದ)

ಪ್ಪ ಅಭಿಪ್ರಾಯಗಳನ್ನು ಮುಂದಿಡುತ್ತಾ ಕೆಲವು ಶ್ರೀಮಂತ ವರ್ಗಗಳ ಅನುಕೂಲಕ್ಕೆ ತಕ್ಕಂತೆ ಸಮಾಜವಾದದ ಮಾರ್ಗದಲ್ಲಿ ಒಂದು ಸರ್ಕಾರ ನಡೆಯುತ್ತಿರಬಹುದು. ಅವರ ದೃಷ್ಟಿಯಲ್ಲಿ ಸರ್ಕಾರಿ ವ್ಯವಸ್ಥೆಯಲ್ಲಿ ಇರುವ ಸಮಾಜವಾದವೂ ಒಂದೇ ಸರ್ಕಾರಿ ವ್ಯವಸ್ಥೆಯಲ್ಲಿರುವ ಬಂಡವಾಳವಾದವೂ ಒಂದೇ. ಆದರೆ ಆಡಳಿತ ನಡೆಸುತ್ತಿರುವವರು ಯಾರು ಎಂಬುದು ಮುಖ್ಯ ಪ್ರಶ್ನೆ.

ಲಾಭ ದೊರಕುವುದು ಯಾರಿಗೆ ಇಡೀ ಜನಸಮುದಾಯಕ್ಕೋ ಅಥವಾ ಅಧಿಕಾರ ಸೂತ್ರಗಳನ್ನು ಹೊಂದಿರುವ ಒಂದು ವಿಶಿಷ್ಟ ವರ್ಗಕ್ಕೋ ಇದರ ಆಧಾರದ ಮೇಲೆ ವ್ಯತ್ಯಾಸವನ್ನು ನಾವು ಕಂಡುಕೊಳ್ಳಬೇಕಾಗುತ್ತದೆ. "ಪ್ರೊ: ಆರ್. ಹೆಚ್. ಟಾನಿಯವರೂ ತಮ್ಮ ಒಂದು ಗ್ರಂಥದಲ್ಲಿ ಇದೇ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಸರ್ಕಾರದ ಕೈಯಲ್ಲಿ ಉತ್ಪಾದನಾ ಸಾಧನಗಳು ಇವೆ ಎಂಬ ದಷ್ಟೇ ಇಲ್ಲಿ ಮುಖ್ಯವಲ್ಲ. ಸರ್ಕಾರಿ ನಡೆಸುತ್ತಿರುವವರು ಯಾರು ಎಂಬ ಪ್ರಶ್ನೆ ಇಲ್ಲಿ ಹೆಚ್ಚು ಮುಖ್ಯವಾಗುತ್ತದೆ ಎಂದು ಅವರು ತಿಳಿಸುತ್ತಾರೆ.

ಪ್ರಜಾಪ್ರಭುತ್ವ ಬಂಡವಾಳ ಶಾಹಿ

ವಾಸ್ತವಿಕವಾಗಿ ಹೇಳುವುದಾದರೆ ಸರ್ಕಾರಿ ಬಂಡವಾಳವಾದ ಮತ್ತು ಸರ್ಕಾರಿ ಸಮಾಜವಾದ ಇವುಗಳ ಮಧ್ಯೆ ಯಾವ ಸಾಮ್ಯವೂ ಇಲ್ಲ. ಅದಕ್ಕೆ ಬದಲಾಗಿ ಬಂಡವಾಳ ಶಾಹಿ ಮತ್ತು ಪ್ರಜಾಪ್ರಭುತ್ವ ಇವುಗಳ ಮಧ್ಯೆ ಅಂತರಿಕವಾದ ಘರ್ಷಣೆ ಇದ್ದೇ ಇದೆ. ಸರ್ಕಾರಿ ಬಂಡವಾಳಶಾಹಿ ವ್ಯವಸ್ಥೆಯು ಸರ್ಕಾರಿ ಸಮಾಜವಾದಿ ವ್ಯವಸ್ಥೆಗೆ ಪರಿವರ್ತನೆ ಹೊಂದಬೇಕಾದ ಸಮಯದಲ್ಲಿ ಈ ಘರ್ಷಣೆ ಬಹಿರಂಗಕ್ಕೆ ಕಾಣಿಸಿಕೊಳ್ಳುತ್ತವೆ. ಇದು ಪ್ರಜಾಪ್ರಭುತ್ವ ತತ್ವ ಮತ್ತು ಬಂಡವಾಳ ಶಾಹಿ ತತ್ವಗಳ ಮಧ್ಯೆ ಘರ್ಷಣೆಯಾಗಿ ಅಗ ಕಾಣಿಸಿಕೊಳ್ಳುವ ಸಂಭವವಿರುತ್ತದೆ. ಇಂತಹ ಒಂದು ಪರಿಸ್ಥಿತಿಯನ್ನು ಪಂಡಿತ್ ನೆಹರೂರವರು ತಮ್ಮ "ಪ್ರಪಂಚದ ಇತಿಹಾಸದ ಇಣುಕು ನೋಟಗಳು" ಗ್ರಂಥದಲ್ಲಿ ಈ ಅಪಾಯದ ಕಡೆಗೆ ಓದುಗರ ಗಮನವನ್ನು ಸೆಳೆದಿದ್ದಾರೆ. ಪ್ರಜಾಪ್ರಭುತ್ವ ಮತ್ತು ಬಂಡವಾಳ ಶಾಹಿ ತತ್ವ ಇವುಗಳ ಮಧ್ಯೆ ಘರ್ಷಣೆ ಅಂತರಿಕವಾದುದು ಮತ್ತು ನಿರಂತರವಾದದು. ಪಾರ್ಲಿಮೆಂಟ್‌ಗಳು ಇವೇ ಮೊದಲಾದ ಸಂಸ್ಥೆಗಳ ಮರೆಯಲ್ಲಿ ಮತ್ತು ಪ್ರಚಾರದ ಮರೆಯಲ್ಲಿ ಇದು ಕಾಣದೆ ಹೋಗಬಹುದು. ಇವುಗಳ ತೆರೆ ಸರಿದಾಗ ಈ ಘರ್ಷಣೆ ಕಾಣಿಸಿಕೊಳ್ಳುತ್ತದೆ. ಅಧಿಕಾರ ಯಾರ ಕೈಯಲ್ಲಿದೆ ಎಂಬುದು ಇಲ್ಲಿಯ ಪ್ರಶ್ನೆ. ಸಂಪತ್ ಸಾಧನೆಗಳು ಯಾರ ಕೈಯಲ್ಲಿದೆ ಎಂಬುದು ಮುಖ್ಯ. ಈ ಸಂಬಂಧವಾಗಿ ನಿರ್ಣಯದ ಸಮಸ್ಯೆ ಎದುರಿಸಿ ಬಂದಾಗ ಬಂಡವಾಳ ಶಾಹಿ ವರ್ಗಗಳೆಲ್ಲಾ ಒಂದಾಗಿ ನಿಲ್ಲುತ್ತವೆ. ತಮ್ಮ ಹಿತ ರಕ್ಷಿಸಿಕೊಳ್ಳಲು ಈ ಸಂಘಟನೆ ಅವರಿಗೆ ಅವಶ್ಯಕವಾಗುತ್ತದೆ. ಪ್ರಜಾಪ್ರಭುತ್ವದ ಕವಚ ಅವರಿಗೆ ಅಗಬೇಕಾಗುವುದಿಲ್ಲ. ಸಮಾಜವಾದ ಮತ್ತು ಬಂಡವಾಳ ಶಾಹಿ ವರ್ಗಗಳ ಮಧ್ಯೆ ಘರ್ಷಣೆ ಕ್ರಮೇಣ ತುಂಬಾ ಸ್ಪಷ್ಟವಾಗಿ ಕಂಡುಬರತೊಡಗುತ್ತದೆ. ಎಲ್ಲಿಯವರೆಗೆ ಅಧಿಕಾರವನ್ನು ತಮ್ಮ ಕೈಯಲ್ಲಿರಿಸಿಕೊಳ್ಳಲು ಮತ್ತು ಕಾರ್ಮಿಕ ವರ್ಗವನ್ನು ಅದುಮಿಡಲು ಪ್ರಜಾಪ್ರಭುತ್ವ ಸಂಸ್ಥೆಗಳು ಅವಶ್ಯಕವೋ ಅಲ್ಲಿಯವರೆಗೆ ಮಾತ್ರ ಅವು ಅವರಿಗೆ ಬೇಕಾಗುತ್ತವೆ. ಅದು ಸಾಧ್ಯವಿಲ್ಲವೆಂದಾಗ ಬಂಡವಾಳಗಾರರಿಗೆ ಪ್ರಜಾಪ್ರಭುತ್ವವು ಬೇಕಾಗದು. ಬಹಿರಂಗವಾಗಿ ಹಿಂಸಾತ್ಮಕವಾದ ಹಾಗೂ ಭಯೋತ್ಪಾದಕವಾದ ಫ್ಯಾಸಿಸ್ಟ್ ಮಾರ್ಗಗಳಿಗೆ ಅವರು ಅಗ ವಾಲಿಹೋಗುತ್ತಾರೆ.

ಸುಖೀರಾಜ್ಯ

ನೆಹರೂ ಅವರ ಈ ದಿನಗಳಲ್ಲಿ ಮತ್ತೆ ಭಾಷಣಗಳಲ್ಲಿ "ಸುಖೀರಾಜ್ಯ" (ವೆಲ್‌ಫೇರ್ ಸ್ಟೇಟ್) ವೆಂಬ ಮಾತನ್ನು ಆಗಾಗ ಕೇಳುತ್ತೇವೆ. ಪ್ರಜಾಪ್ರಭುತ್ವತತ್ವದ ಚೌಕಟ್ಟಿನಲ್ಲಿ ಈ ಪದಕ್ಕಿರುವ ಅರ್ಥವೇ ಬೇರೆ. ನೆಹರೂ ದೃಷ್ಟಿಯಲ್ಲಿ ಇರುವ ಅರ್ಥವೇ ಬೇರೆ. ದಬ್ಬಾಳಿಕೆಯ ರಾಜ್ಯಕ್ಕೆ ಹೋಲಿಸಿದರೆ ಸುಖೀರಾಜ್ಯ ಎಂಬುದು ಸ್ವಾಗತಾರ್ಹವಾದದು ನಿಜ. ಆದರೆ ಬಂಡವಾಳ ಶಾಹಿಗಳ ಆಶ್ರಯದಲ್ಲಿ ಸ್ಥಾಪಿಸುವ ಸುಖೀರಾಜ್ಯವನ್ನು ಸಮಾಜವಾದದ ಆಶ್ರಯದಲ್ಲಿ ಸ್ಥಾಪಿಸುವ ಸುಖೀರಾಜ್ಯಕ್ಕೆ ಹೋಲಿಸುವಂತಿಲ್ಲ.

ಬೇವರೇಜ್ ವರದಿಯ ನಂತರ ಈ ಸುಖೀರಾಜ್ಯದ ಕಲ್ಪನೆ ಬಂತು. ಬಂಡವಾಳಶಾಹಿ ಪ್ರಜಾಪ್ರಭುತ್ವದಲ್ಲಿ ಜನರಿಗೆ (ಬಡವರಿಗೆ) ವಿದ್ಯಾಭ್ಯಾಸ ಕೊಟ್ಟು ಅವರ ಆರೋಗ್ಯ ರಕ್ಷಿಸಿ ಅವರಿಗೆ ಮನೆಮಠಗಳು ಮೊದಲಾದ ಸೌಕರ್ಯಗಳನ್ನು ಒದಗಿಸಲಾಯಿತು. ಆದರೆ ಬಡವರು ಮತ್ತು ಶ್ರೀಮಂತರ ಮಧ್ಯೆ ಇರುವಂತಹ ಅಂತರ ಕಡಿಮೆಯಾಗುವುದಿಲ್ಲ.

ಈ ವಿಚಾರವಾಗಿ ನೆಹರೂ ಅವರು ಈ ರೀತಿಯಾಗಿ ಹೇಳುತ್ತಾರೆ: ಕೆಲವು ರಾಷ್ಟ್ರಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆಯು ಸಾಮಾನ್ಯ ಜನರ ಕಲ್ಯಾಣವನ್ನು ಬಹುಮಟ್ಟಿಗೆ ಸಾಧಿಸಬಹುದು. ಆದರೆ ಇದರಲ್ಲಿ ಮೂಲತಃ ಒಂದು ದೋಷವಿರುತ್ತದೆ ಎಂಬುದನ್ನು ಗಮನಿಸಬೇಕು. ಪ್ರಜಾಪ್ರಭುತ್ವದೊಡನೆ ಸಂಬಂಧವಿರುವ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅದೆಷ್ಟೋ ಕೆಟ್ಟ ಗುಣಗಳು ಮಾಯವಾಗಿರುತ್ತವೆ ಮತ್ತು ಒಂದು ತಲೆಮಾರಿನ ಹಿಂದೆ ಇದ್ದಂತಹ ಬಂಡವಾಳಶಾಹಿ ವ್ಯವಸ್ಥೆಗೂ ಇಂದಿನದಕ್ಕೂ ವ್ಯತ್ಯಾಸವಿರುತ್ತದೆ ಎಂಬುದು ನಿಜ. ಆದರೂ ಸಮಾಜವಾದದ ವಿಚಾರವೇ ಬೇರೆ. ಅದು ಹಿಂದಿನಿಂದ ಬಂದಂತಹ ಒಂದು ವ್ಯವಸ್ಥೆಯನ್ನು ಬದಲಿಸಿ ಸಂಪತ್ತಿನ ಸಾಧನೆಗಳನ್ನು ಅದು ಬೆಳೆಸುತ್ತದೆಯಲ್ಲದೆ ವರ್ಗಭೇದಗಳನ್ನು ಕಡಿಮೆ ಮಾಡುತ್ತದೆ. ಮೂಲತಃ ಈ ವ್ಯತ್ಯಾಸವನ್ನು ನಾವು ಗಮನಿಸಬೇಕು. ಸಮಾಜವಾದವು ಒಂದು ಪದ್ಧತಿಯಷ್ಟೇ ಅಲ್ಲ, ನಮ್ಮ ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳಿಗೆ ಒಂದು ವೈಜ್ಞಾನಿಕ ದೃಷ್ಟಿಯೂ ಹೌದು.

ಮಾನವನ ಕ್ರಿಯಾ ಶಕ್ತಿ

ನೆಹರೂರವರ ಅಭಿಪ್ರಾಯದ ಪ್ರಕಾರ ಸಮಾಜವಾದಕ್ಕೆ ಒಂದು ವಿಶಿಷ್ಟವಾದ ಅರ್ಥವಿದೆ. ಮಾನವನ ಕ್ರಿಯಾಶಕ್ತಿಯನ್ನು ಅದು ಕೆರಳಿಸುತ್ತದೆ. ಮತ್ತು ಅದನ್ನು ರಚನಾತ್ಮಕ ಕಾರ್ಯಗಳಿಗಾಗಿ ವಿನಿಯೋಗಿಸುತ್ತದೆ. ಬರ್ಟ್ರ್ಯಾಂಡ್ ರಸ್ಸೆಲ್‌ರವರು ತಮ್ಮ ಒಂದು ಪುಸ್ತಕದ (ಪೊಲಿಟಿಕಲ್ ಐಡಿಯಲ್ಸ್) ಹೇಳುವಂತೆ ಸಮಾಜವಾದವನ್ನು ಸಾಧಿಸಲು 'ಕ್ರಾಂತಿಕಾರಿ ಕ್ರಿಯೆ ಅನಗತ್ಯವಾಗಬಹುದು. ಆದರೆ ಕ್ರಾಂತಿಕಾರಿಯ ವಿಚಾರ ಮಾತ್ರ ತುಂಬಾ ಅವಶ್ಯಕವಾಗುತ್ತದೆ." ಪಂಡಿತ್ ನೆಹರೂ ಅವರ ವಿಚಾರಗಳು ಇಂತಹ ಕ್ರಾಂತಿಕಾರಿ ದೃಷ್ಟಿಯನ್ನು ಒದಗಿಸುತ್ತವೆ. ಅನೇಕ ಕಾಲಮಾನಗಳ ನಂತರ ಇನ್ನೊಬ್ಬ ನೆಹರೂ ನಮಗೆ ಸಿಗಬಹುದೇನೋ. ಅವರ ಅನುಯಾಯಿಗಳಾಗಿ ನಮ್ಮ ಕರ್ತವ್ಯವೊಂದಿದೆ. ಅವರು ಆರಂಭಿಸಿದ ಸಮಾಜವಾದಿ ಅಭಿವೃದ್ಧಿಯ ಕಾರ್ಯವನ್ನು ನಾವು ಯಶಸ್ವಗೊಳಿಸಬೇಕು ಮತ್ತು ಪರಿಪೂರ್ಣವಾದ ಪ್ರಜಾಸತ್ತಾತ್ಮಕ ಸಮಾಜವಾದಿ ಭಾರತವನ್ನು ನಾವು ರಚಿಸಬೇಕು. ದಿ| ನಾಯಕರ ನೆನಪಿಗೆ ಇದಕ್ಕಿಂತ ದೊಡ್ಡ ಸ್ಮಾರಕ ಬೇರೊಂದಿಲ್ಲ. ನೆಹರೂರವರಂತಹ ಡೆಮೋಕ್ರಾಟಿಕ್ ಸೋಷಿಯಲಿಸ್ಟ್ ವಿಚಾರವಾದಿಗಳು ವಿರಳ. ಭಾರತದಲ್ಲಿ ಈ ವಿಚಾರದ ಇನ್ನೊಬ್ಬ ದೊಡ್ಡ ವ್ಯಕ್ತಿ ಜನಿಸಿಲ್ಲ.

ಆಡಲೇಬೇಕು ಕಣ್ಣು ಮುಚ್ಚಾಲೆ

(ನಾಲ್ಕನೇ ಪುಟದಿಂದ)

ದ ಹುಡುಗನಂತೆ ತೋರುತ್ತಾರೆ..."

"ಅಂದರೆ?"

"ಅತ ಮೋರೆ ಬಿಸಿದರೆ ಉದ್ಧಟತನ; ಸುಮ್ಮನುಳಿದರೆ, ಅಗೌರವ...."

'ಇದೇ ನೋಡಿ ಇ ದಿನ ಪ್ರಪಂಚ! ನಮ್ಮ ಕಣ್ಣ ಮುಂದೆ ನಡೆಯುವುದು ದರೂ ಇದೇ. ತೋಳ-ಕುರಿಮರಿಯ ಕಥೆ. ಇಲ್ಲವಾದರೆ, ಮೂಷಕ ಕಾಗೆ ಕಾರಿದ ಕಥೆ....'

'ಅದು ಸರಿಯೇ ಇವುಗಳಿಂದ ಸ್ವರಕ್ಷಣೆ ಮಾಡಿಕೊಳ್ಳುವುದು ಹೇಗೆಂತ?'

'ನೋಡಿ, ಭಾರತದ ಕಥೆ! ಅನೆ ರಿಕೆ-ಬ್ರಿಟನ್ನುಗಳು ಹೇಗೆ ಕಣ್ಣಮುಚ್ಚಾಲೆ ಆಡುತ್ತಿವೆ!"

"ಅಂದರೆ, ಇಂದಿನ ಪ್ರಪಂಚವೇ ಒಂದು ಕಣ್ಣಮುಚ್ಚಾಲೆಯ ಆಟ. ನಮಗೆ ಬೇಕಿದ್ದರೂ ಬೇಡವಾದರೂ ಆಟ ಆಡಲೇ ಬೇಕು, ಚೆನ್ನಾಗಿ ಆಡಬಲ್ಲವನೇ ಗೌರವಾನ್ವಿತ; ಆಟದಿಂದ ದೂರ ಉಳಿದವನೇ ಪಾಪಿ."

"ಹ್ಞಾ... ಅದಕ್ಕೆ, ಕೆಲವರಿಗೆ ಹೀಗೆ ಅಲ್ಲಿ ಆಡೂ ಪಕ್ಕೆ ಬರೀ ದಿಲ್ಲಿ ನೋಡಿ..."

'ಆತನನ್ನು ಎಳೆದು ತರುತ್ತಾ, ಅವರದ ರಂಗಕ್ಕೆ ಜಬರದಸ್ತಿಯಿಂದ ಆಶ್ಚರ್ಯ ಹಣ ಮಾಡಿ, ಅತ ಕೆಡವಿ ಬಿದ್ದಾಗ ಚಪ್ಪಾಳೆ ಬಡಿದು ನಗುತ್ತಾರೆ..."

'ಅದು ಸರೀನ್ನಿ. ಚೀನಾ, ಪಾಕಿಸ್ತಾನ ಇಂಡೋನೇಶ್ಯಗಳ ದಾರಿಯೊಂದಾದರೆ, ಪಾಶ್ಚಾತ್ಯರ ಮಾರ್ಗ ಬೇರೊಂದು..."

'ಯಾರದು ಏನೇ ಇರಲಿ, ನಮ್ಮದಂತೂ ತ್ರಿಶಂಕು ಸ್ವರ್ಗ ನೋಡಿ. ಇದರಿಂದ ಯಾವ ಭಗವಂತ ಪಾರ ಮಾಡುತ್ತಾನೋ ಕಾದು ನೋಡ ಬೇಕು.."

'ಅಂತೂ ಕೊನೆಗೂ ಪಥಿವ ದನೇ ಶರಣು ಎಂದಾಯಿತು....'

'ಉದ್ಯಾನವನದ ಮುಂದಿನ ಹಂತವೇ ಪಥಿವಾದ, ಧರ್ಮಾರ್ಥ ಕಾಮಗಳ ಮುಂದಿನ ಮೆಟ್ಟಿಲೇ ಮೋಕ್ಷ.."

'ನಾಕು ಈ ವಿಮಾನ ನ ಸದ್ಯ ಬೆಲ್ಲ ತೂಗುವ ಕೆಲ್ಸದಿಂದ ವಿಶ್ರಾಂತಿ ಕೊಡಿ.'

'ನಾಕಪ್ಪಾ ಅವಕ್ಕೇನಂತೆ; ಮಾಡಿದ, ..."

— ಗೋರಾ

ವಿಮಾ ನೌಕರರ ಮಹಾಸಭೆ

ಉಡುಪಿ ತಾ. 24-25 — ಅಖಿಲ ಭಾರತ ವಿಮಾ ನೌಕರರ ಸಂಘದ ವಿಭಾಗೀಯ ಘಟಕವಾದ, ಜೀವವಿಮಾ ಕಾರ್ಪೋರೇಶನಿನ ಉಡುಪಿ ವಿಭಾಗದ ನೌಕರರ ಸಂಘದ ವಾರ್ಷಿಕಾಧಿವೇಶನ ಮಹಾಸಭೆಯು, ಇಲ್ಲಿ ತಾ. 24 ಹಾಗೂ 25ರಲ್ಲಿ ಯಶಸ್ವಿಯಾಗಿ ಜರಗಿತು. ಶ್ರೀ ಬಿ. ಎಸ್. ಹೆಗ್ಡೆಯವರು ಅಧ್ಯಕ್ಷತೆ ವಹಿಸಿದ ಈ ಸಭೆಗೆ, ಶಿವಮೊಗ್ಗ, ಸಾಗರ, ದಾವಣಗೆರೆ, ಧಾರವಾಡ, ಬೆಳಗಾವಿ, ಚಿಕ್ಕೋಡಿ, ಹಾವೇರಿ, ಬಿಜಾಪುರ, ಶಿರ್ಸಿ, ಚಿಕ್ಕಮಗಳೂರು, ಮಂಗಳೂರು ಹಾಗೂ ಮಡಿಕೇರಿ ಶಾಖೆಗಳಿಂದ ಅನೇಕ ಪ್ರತಿನಿಧಿಗಳು ಆಗಮಿಸಿದ್ದರು.

ವಾರ್ಷಿಕ ವರದಿ, ವಾರ್ಷಿಕ ಲೆಕ್ಕದ ಪತ್ರಗಳ ಮಂಡನೆ ಹಾಗೂ ಸ್ವೀಕಾರವಾದ ಅನಂತರ ಸಭೆಯು ಜೀವವಿಮಾ ನೌಕರರ ಅನೇಕ ಸಮಸ್ಯೆಗಳನ್ನು ಚರ್ಚಿಸಿ ಅವುಗಳನ್ನು ಬಗೆಹರಿಸುವ ವಿಧಾನಗಳನ್ನು ಅಂಗೀಕರಿಸಿತು. ಜೀವವಿಮಾ ಕಾರ್ಪೋರೇಶನಿನ ಕೇಂದ್ರೀಕರಣ ಮತ್ತು ಯಾಂತ್ರೀಕರಣ ಯೋಜನೆಯ ಪರಿಣಾಮ, ಭಡತಿ ಧೋರಣೆಯಲ್ಲಿರುವ ದೋಷದೋಷಗಳ ನಿವಾರಣೆ, ಅಂತರ್‌ವಿಭಾಗೀಯ ವರ್ಗಾವಣೆ ಮುಂತಾದ ಅನೇಕ ಪ್ರಮುಖ ಸಮಸ್ಯೆಗಳನ್ನು ಚರ್ಚಿಸಿ ಸೂಕ್ತ ಠರಾವುಗಳನ್ನು ಅಂಗೀಕರಿಸಲಾಯಿತು. ಅನಂತರ ಜರಗಿದ ವಾರ್ಷಿಕ ಚುನಾವಣೆಯಲ್ಲಿ, ಶ್ರೀ ಸಿ. ರಾಮಚಂದ್ರ ಭಟ್ಟರನ್ನು ಅಧ್ಯಕ್ಷರಾಗಿಯೂ, ಶ್ರೀಗಳಾದ ಪಿ. ವಿ. ಪ್ರಭು ಹಾಗೂ ಕೆ. ಎಸ್. ಶರ್ಮಾ ಇವರನ್ನು ಉಪಾಧ್ಯಕ್ಷರಾಗಿಯೂ, ಶ್ರೀ ಬಿ. ಪ್ರಭಾಕರ ಕೆದಿಲಾಯರನ್ನು ಪ್ರಧಾನ ಕಾರ್ಯದರ್ಶಿಯಾಗಿಯೂ ಶ್ರೀಗಳಾದ ಯು. ಗೋಪಾಲ ಹಾಗೂ ಪಿ. ಕೆ. ವಿ. ಪಣಿಕ್ಕರ್ ಇವರನ್ನು ಜತೆಕಾರ್ಯದರ್ಶಿಗಳಾಗಿಯೂ, ಶ್ರೀ ಎಮ್. ಬಿ. ಹೆಗ್ಡೆಯವರನ್ನು ಕೋಶಾಧಿಕಾರಿಯಾಗಿಯೂ ಅವಿರೋಧವಾಗಿ ಚುನಾಯಿಸಲಾಯಿತು. ಅಲ್ಲದೆ ಹದಿನಾಲ್ಕು ಮಂದಿ ಸದಸ್ಯರುಳ್ಳ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ಈ ನೌಕರರ ಸಂಘದ ಹೋರಾಟಗಳಿಗೂ, ಸಂಘದ ಉದ್ದೇಶ ಮತ್ತು ಧೋರಣೆಗಳಲ್ಲಿ ಸಹಾನುಭೂತಿಯುಳ್ಳವರಾದ ಶ್ರೀ ಸಿ. ರಂಗನಾಥ ಶೆಣೈ, ನಗರ ಸಭಾಪತಿ, ಉಡುಪಿ; ಶ್ರೀ ಬಿ. ಭಾಸ್ಕರ ಶೆಟ್ಟಿ, ನ್ಯಾಯಾಂಗ ವಿಧಾನ ಸಭಾ ಸದಸ್ಯ, ಕಾಪು, ಶ್ರೀ ಶಿತಾರಾಮ ವಿಲಿಯಂ ಪಿಂಟೋ, ಎಡ್ವೋಕೇಟ್, ಉಡುಪಿ, ಹಾಗೂ ಶ್ರೀ ಕೆ. ಎಸ್. ಶರ್ಮಾ ಎಡ್ವೋಕೇಟ್, ಧಾರವಾಡ, ಇವರನ್ನು ಸಂಘದ ಗೌರವ ಸದಸ್ಯರನ್ನಾಗಿ ಅವಿರೋಧವಾಗಿ ಆರಿಸಲಾಯಿತು.

ಚಂದಾಹಣ ಬಾಕಿ ಇರುವವರು ದಯಮಾಡಿ ಬೇಗನೇ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

ವಿಜಯಾ ಬ್ಯಾಂಕಿನ ಮಹತ್ಸಾಧನೆ

ಮಹಾಸಭೆಯಲ್ಲಿ ಅಧ್ಯಕ್ಷರ ಭಾಷಣ

ಅಧ್ಯಕ್ಷ ಶ್ರೀ ಎಂ. ಸುಂದರ ರಾಮಶೆಟ್ಟಿ.

೧೯೬೪ನೆಯ ವರ್ಷಕ್ಕೆ ಸಂಬಂಧಪಟ್ಟ ಸಾಲಸೂಲಗಳು, ಲಾಭನಷ್ಟಗಳ ಲೆಕ್ಕಪತ್ರಗಳನ್ನು ನಿಮ್ಮ ಮುಂದಿಡಲು ನನಗೆ ಅತೀವ ಆನಂದವೆನಿಸುತ್ತದೆ. ವರದಿ ವರ್ಷದಲ್ಲಿ ದೇಶವು ನೆಹ್ರೂನ ಪ್ರಧಾನಿ. ನೆಹರೂರನ್ನು ಕಳೆದುಕೊಂಡಿತು. ಶಾಂತಿದೂತನೂ ಭಾರತದ ಗೌರವವನ್ನು ಪ್ರಪಂಚದಲ್ಲಿ ಬೆಳಗಿದವನೂ ದೇಶದ ಪ್ರಗತಿಗಾಗಿ ಹೋರಾಡಿದವನೂ ಆದ ಆತನ ಆಶಯದಂತೆ ಬಲಯುತವೂ ಅಭಿವೃದ್ಧವೂ ಆದ ಭಾರತವನ್ನು ಕಟ್ಟುವುದಕ್ಕಾಗಿ ಶ್ರಮಿಸುವುದು ನಮ್ಮ ಕರ್ತವ್ಯ.

೧೯೬೪ರಲ್ಲಿ ನಿಮ್ಮ ಬ್ಯಾಂಕು ಸರ್ವಾಂಗೀಣ ಪ್ರಗತಿ ಸಾಧಿಸಿದೆ. ಹಿಂದಿನ ವರ್ಷಕ್ಕಿಂತಲೇ ಠೇವಣಾತಿಯು ಸೇ. ೭೦ರಷ್ಟು ಹೆಚ್ಚಿದೆ. ಹೊರಗಿತ್ತ ಸಾಲದ ಮೊತ್ತವೂ ಸೇ. ೭೦ರಷ್ಟು ಏರಿದೆ. ೩೦೨೫ ಲಕ್ಷ ರೂ.ಗಳ ಠಾಯ್ದಿಟ್ಟ ನಿಧಿಯಿದೆ. ಸೇ. ೫ರಂತೆ ತೆರಿಗೆ ಸಹಿತ ಡಿವಿಡೆಂಡ್ ಕೊಡಲು ನಿಮ್ಮ ಬ್ಯಾಂಕು, ವೆಚ್ಚದ ಪರಿಮಾಣವು ಹೆಚ್ಚಾಗಿದ್ದರೂ, ಶಕ್ತವಾಗಿದೆ. ಬ್ಯಾಂಕಿನ ಒಟ್ಟು ಆಯವು ಹೆಚ್ಚಾದರೂ ಸಿಬ್ಬಂದಿಯ ವೇತನದ ವೆಚ್ಚವೂ ಹೆಚ್ಚಿದೆ. ಠೇವಣಾತಿಗಳ ಮೇಲೆ ಕೊಡುವ ಬಡ್ಡಿಯ ದರದಲ್ಲಿಯೂ ಏರಿಕೆಯಾಗಿದೆ. ಈ ವರ್ಷ ಮತ್ತೆ ಬ್ಯಾಂಕು ದರದಲ್ಲಾದ ಹೆಚ್ಚಳದಿಂದ ಇದು ಇನ್ನೂ ಹೆಚ್ಚುವುದು ಸ್ವಾಭಾವಿಕ.

ನಿಮ್ಮ ಡೈರೆಕ್ಟರರ ಬೋರ್ಡಿನ ಅನುಮತಿಯಂತೆ ನಿಮ್ಮ ಬ್ಯಾಂಕು ವರದಿ ವರ್ಷದಲ್ಲಿ ಐದು ಬ್ಯಾಂಕುಗಳನ್ನು ತನ್ನಲ್ಲಿ ವಿಲೀನಗೊಳಿಸಿ ೧೯ ಹೊಸ ಶಾಖೆಗಳನ್ನು ಪಡೆಯಿತು. ಐದು ಹೊಸ ಶಾಖೆಗಳು ಬೇರೆಯೇ ತೆರೆಯಲ್ಪಟ್ಟವು. ಹಿಂದಿನ ವರ್ಷ ೨೬ ಶಾಖೆಗಳಿದ್ದಲ್ಲಿ ಇಂದು ೫೫ ಶಾಖೆಗಳು ನಿಮ್ಮ ಬ್ಯಾಂಕಿಗಿವೆ. ಸಿದ್ದಾಪುರ ಮತ್ತು ಪಾಂಡವಪುರಗಳಲ್ಲಿ ಶಾಖೆಗಳು ತೆರೆಯಲು ಅನುಮತಿ ಬಂದಿದ್ದು ಸದ್ಯವೇ ಅವು ತೆರೆಯಲ್ಪಡುವವು. ಹೊಸತಾಗಿ ಸೇರಿಕೊಂಡ ಶಾಖೆಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿವೆ. ಇದರಿಂದಾಗಿ ನಿಮ್ಮ ಬ್ಯಾಂಕಿನ ಕಾರ್ಯಕ್ಷೇತ್ರವು ವಿಸ್ತೃತವಾಗಿದೆ.

ವಿಲೀನಗೊಂಡ ಬ್ಯಾಂಕುಗಳ ನೌಕರರು ನಿಮ್ಮ ಬ್ಯಾಂಕಿನ ನೌಕರರಂತೆಯೇ ಉತ್ತಮ ವೇತನ ಪಡೆಯುತ್ತಿದ್ದಾರೆ. ಅವರಿಗೂ ಹೊಸತಾಗಿ ಸೇರಿಸಲ್ಪಡುವವರಿಗೂ ಸೂಕ್ತ ತರಬೇತಿಯೂ ಕೊಡಲಾಗುತ್ತಿದೆ. ಹಿಂದಿನ ವರ್ಷ ೨೩೨ ಇದ್ದ ಬ್ಯಾಂಕಿನ ನೌಕರರ ಸಂಖ್ಯೆಯು ಈ ವರ್ಷ ೪೨೦ಕ್ಕೆ ಏರಿದೆ. ಮುಂದಿನ ವರ್ಷದಲ್ಲಿ ಸಿಬ್ಬಂದಿಗಾಗಿ ೧೪ ಲಕ್ಷ ರೂ. ವೆಚ್ಚವಾಗುವ ನಿರೀಕ್ಷೆಯಿದೆ. ನೌಕರ ಮತ್ತು ಆಡಳಿತವರ್ಗದ ಸಂಬಂಧವು ಉತ್ತಮವಾಗಿತ್ತು ಎಂದು ಹೇಳಲೇ ಬೇಕು.

ಗಿರಾಕಿಯ ಮನೆ ಬಾಗಿಲಲ್ಲಿ ದಿನವೊಂದಕ್ಕೆ ಕನಿಷ್ಠವೆಂದರೆ ೨೫ ಪೈಸೆಯಂತೆ ಸಂಗ್ರಹಿಸುವ ದೈನಿಕ ಉಳಿತಾಯ ಯೋಜನೆಯೊಂದನ್ನು ಬೇಗನೇ ಕಾರ್ಯರೂಪಕ್ಕೆ ನಿಮ್ಮ ಬ್ಯಾಂಕು ತರಲಿದೆ. ಇದರಿಂದ ಜನಸಾಮಾನ್ಯರಲ್ಲೂ ಮಿತವ್ಯಯ ಉಳಿತಾಯ ಪ್ರವೃತ್ತಿ ಬೆಳೆಯುವುದು ಸಾಧ್ಯವಾಗುತ್ತದೆ.

ಕೇಂದ್ರ ಸರಕಾರವು ನೇಮಿಸಿದ ಬೋನಸ್ ಕಮಿಶನ್ ತನ್ನ ವರದಿಯನ್ನು ಒಪ್ಪಿಸಿದೆ. ಇದರನ್ವಯ, ಸಂಸ್ಥೆಗೆ ಬಹಳ ಲಾಭವಾಗಲಿ, ಅಲ್ಪ ಲಾಭವಾಗಲಿ, ನಷ್ಟವೇ ಸಂಭವಿಸಲಿ, ಒಂದು ಪ್ರಮಾಣದ ಬೋನಸ್ಸನ್ನು ನೌಕರರಿಗೆ ಕೊಡಲೇಬೇಕಾಗುತ್ತದೆ. ಈ ಸಂಬಂಧದಲ್ಲಿ ಕೇಂದ್ರ ಸರಕಾರವು, ತಾನು ತಯಾರಿಸುವ ವಿಧೇಯಕದಲ್ಲಿ ನೌಕರರಿಗೂ ಸಂಸ್ಥೆಗಳಿಗೂ ನ್ಯಾಯ ದೊರಕಿಸುವುದೆಂದು ನಾನು ಆಶಿಸುತ್ತೇನೆ.

ಆಹಾರ ಬಿಕ್ಕಟ್ಟಿನ ಈ ದಿನಗಳಲ್ಲಿ ಕೃಷಿಕರಂಗಕ್ಕೆ ಹೆಚ್ಚಿನ ಆರ್ಥಿಕ ಸಹಾಯ ನೀಡುವುದು ಅಗತ್ಯ. ನಿಮ್ಮ ಬ್ಯಾಂಕು ಪ್ಲಾಂಟೇಶನ್‌ಗಳಿಗೆ ಹಲವು ವರ್ಷಗಳಿಂದಲೂ ನೆರವು ನೀಡುತ್ತಿದೆ. ಸಣ್ಣ ಬ್ಯಾಂಕುಗಳಿಗೂ ಕೃಷಿ ಸಾಲನೀಡಲು ಅನುಕೂಲವಾಗುವಂತಹ ವಾತಾವರಣವನ್ನು ಸರಕಾರವು ನಿರ್ಮಿಸುವುದು ಅಗತ್ಯ. ನಿಮ್ಮ ಬ್ಯಾಂಕೂ ಈ ದಿಸೆಯಲ್ಲಿ ಮುಂದುವರಿಯಲು ಉತ್ಸಾಹದಿಂದಿದೆ.

ಬ್ಯಾಂಕ್ ರೇಟ್ ಸೇ. ೬ಕ್ಕೇರಿದೆ. ಕನಿಷ್ಠ ಬಡ್ಡಿ ಮಿತಿಯೂ ಏರಿದೆ. ಬ್ಯಾಂಕು ಉದ್ದಿಮೆಯೇ ಮೊದಲಾದವುಗಳಿಗೆ ನೀಡುವ ಸಾಲಗಳ ಬಡ್ಡಿಯೂ ಏರಿರುವುದರಿಂದ, ಬೆಲೆಯೇರಿಕೆಯೂ ಪರಿಣಮಿಸಬಹುದು. "ಬ್ಯಾಂಕ್ ಕಾಲ್ ಮನಿ"ಯ ಬಡ್ಡಿ ದರ, ಸ್ವೀಕರಿಸುವ ಠೇವಣಾತಿಯ ಬಡ್ಡಿ ದರವೆಲ್ಲವೂ ಏರುವುದರಿಂದ ಬ್ಯಾಂಕಿನ ಗಳಿಕೆಯ ಮೇಲೆ ಪರಿಣಾಮವಾಗುವುದು; ಬಡ್ಡಿಯೇರಿಕೆಯು ಹುದುಗಿದ್ದ ಬಂಡವಾಳವನ್ನು ಹೊರ ತರುತ್ತದೆಯೆ? ಎಂಬುದು ಸಂದೇಹ. ಆಹಾರ ಸಾಮಗ್ರಿ ಮತ್ತು ಆವಶ್ಯಕ ಪದಾರ್ಥಗಳ ಬೆಲೆಯ ಮೇಲೆ ನ್ಯಾಯೋಚಿತ ಪರಿಣಾಮ ಬೀರುವಂತೆ ಬಡ್ಡಿ ದರವನ್ನು ಪುನರ್ವಿಮರ್ಶಿಸಿದರೆ ಹೇಗೆ ಎಂದೂ ಆಲೋಚಿಸುವುದೊಳ್ಳೆಯದು.

ಮುಂದಿನ ವರ್ಷದಲ್ಲಿ ಬ್ಯಾಂಕು ಇನ್ನೂ ಹಲವು ಮುಖದಲ್ಲಿ ಪ್ರಗತಿ ಸಾಧಿಸುವುದೆಂಬುದರಲ್ಲಿ ಸಂದೇಹವಿಲ್ಲ. ಡೈರೆಕ್ಟರ ಮಂಡಳಿಯ ಸಹಸದಸ್ಯರು, ಕಾರ್ಯದರ್ಶಿಯವರು ಸರ್ವವಿಧದ ಸಹಕಾರ ನೀಡಿದ್ದಾರೆ. ಅಧಿಕಾರಿಗಳೂ ನೌಕರರೂ ನೆರವಿತ್ತಿದ್ದಾರೆ. ನಮ್ಮ ಬ್ಯಾಂಕಿನ ಸಲಹೆಗಾರ ಶ್ರೀ ವಿ. ಆರ್. ಶಾನುಭೋಗರು ಮಾರ್ಗದರ್ಶನ ಮತ್ತು ಯೋಜಕ ಕಾರ್ಯ ಮಾಡಿದ್ದಾರೆ. ಇವರೆಲ್ಲರಿಗೂ ಬ್ಯಾಂಕಿನ ಪಾಲುದಾರರಿಗೆ ನಿಮಗೂ, ಗಿರಾಕಿಗಳಿಗೂ ನನ್ನ ವಿಶೇಷ ಅಭಿನಂದನೆಗಳು. ನಿಮ್ಮೆಲ್ಲರ ವಿಶ್ವಾಸ ಪ್ರೋತ್ಸಾಹಗಳು ಮುಂದೆಯೂ ದೊರೆಯುತ್ತಿರಲಿ.

– ಜೈ ಹಿಂದ್ –

(26-5-65ರಂದು ವಿಜಯ ಬ್ಯಾಂಕಿನ ಸಾಮಾನ್ಯ ಅಧಿವೇಶನದಲ್ಲಿ ಡೈರೆಕ್ಟರ ಮಂಡಳಿಯ ಅಧ್ಯಕ್ಷ ಶ್ರೀ ಎಂ. ಸುಂದರ ರಾಮ ಶೆಟ್ಟರು ಮಾಡಿದ ಭಾಷಣದ ಸಾರ.)

ವಾರ್ಷಿಕ ಮಕ್ಕಳ ಕೂಟ

ಉಡುಪಿ ಮಂಡಲ ಬ್ರಾಹ್ಮಣ ಹೋಟೆಲಿನ ೨೧ನೇ ವಾರ್ಷಿಕ ಮಕ್ಕಳ ಕೂಟ ಸಮಾರಂಭವು ಕಳೆದ ೧೭ ಮತ್ತು ೧೮ನೇ ದಿನ ಹೋಟೇಲಿನ ಬಾಲ ಕ್ರೀಡಾರಂಗದಲ್ಲಿ ನೆರವೇರಿತು. ಮೊದಲನೇ ದಿನ ಹಲವಾರು ಪಂದ್ಯಾಟಗಳು ನೆರವೇರಿದುವು. ೧೮ನೇ ತಾರೀಕಿನ ಸಮಾರಂಭವು ಶ್ರೀ ಆರ್. ವೆಂಕಟ್ರಾಮನ್‌ರವರ ಅಧ್ಯಕ್ಷತೆಯಲ್ಲಿ ಜರಗಿ, ಪಂದ್ಯಾಟಗಳಲ್ಲಿ ಗೆದ್ದ ಬಾಲಕಬಾಲಕಿಯರಿಗೆ ಬಹುಮಾನ ವಿತರಣೆಯಾಯಿತು.

ಪ್ರಾರಂಭದಲ್ಲಿ ಅತಿಥಿಗಳಿಗೆ ಲಘೂಪಹಾರವಾದ ಬಳಿಕ, ಸಂಸ್ಥಾಪಕ ಶ್ರೀ ಸೀತಾರಾಮರಾಯರು ಸ್ವಾಗತಿಸಿದರು. ಬಳಿಕ ಮಕ್ಕಳ ಕೂಟ ಸಮಿತಿಯ ಅಧ್ಯಕ್ಷ ಶ್ರೀ ರಾಮಚಂದ್ರ ಅಯ್ಯರ್‌ರವರು ಸ್ವಾಗತಿಸುತ್ತಾ, ಇಂತಹ ಸಮಾರಂಭಗಳು ಭಾವೈಕ್ಯತೆಯನ್ನು ಸಾಧಿಸುವುದು ಎಂದು ನುಡಿದು, ಇದಕ್ಕೆ ಕಾರಣರಾದ ಶ್ರೀ ಸೀತಾರಾಮರಾಯರನ್ನು ಅಭಿನಂದಿಸಿದರು.

ಅಧ್ಯಕ್ಷರು ಮಾತನಾಡಿ, ಸೀತಾರಾಮರಾಯರ ಈ ಕಾರ್ಯವನ್ನು ಬಹಳವಾಗಿ ಶ್ಲಾಘಿಸಿ, ತಮಗೆ ಇದರಲ್ಲಿ ಭಾಗವಹಿಸಲು ಸಂದರ್ಭ ಒದಗಿಸಿದುದಕ್ಕಾಗಿ ಅಭಿನಂದಿಸಿದರು. ಅಂತ್ಯದಲ್ಲಿ ಶ್ರೀ ಕೆ. ಸುಂದರರಾಜನ್ ಧನ್ಯವಾದ ಸಮರ್ಪಿಸಿದರು.

ತೀರ್ಥ ಮಂಟಪದ ಉದ್ಘಾಟನೆ

ಕಳೆದ ತಾ ೧೨ರಂದು, ಶಿವಳ್ಳಿ ಗ್ರಾಮದ ಕಕ್ಕುಂಜೆ ಮಾಣಿಕ ಬೆಟ್ಟಿನ ಅತೀ ಪ್ರಾಚೀನ ದೇವಾಲಯದ ಜೀರ್ಣೋದ್ಧಾರ ನಡೆದಿದ್ದು, ಶ್ರೀ ಮಧ್ವರಾಜ್, ಎಂ. ಎಲ್. ಎ. ರಿಂದ ಕಟ್ಟಿಸಿ ಕೊಡಲ್ಪಟ್ಟ ದೇವಸ್ಥಾನದ ಮುಂಭಾಗದ ತೀರ್ಥ ಮಂಟಪದ ಉದ್ಘಾಟನಾ ಸಮಾರಂಭವು,ಡಾ|ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಉಡುಪಿಯ ಪುತ್ತಿಗೆ ಮಠದ ವಿದ್ಯಾವಲ್ಲಭ ಶ್ರೀ ಸುಜ್ಞಾನೇಂದ್ರ ತೀರ್ಥ ಶ್ರೀ ಪಾದಂಗಳವರಿಂದ ನೆರವೇರಿತು. ಶ್ರೀ ಬಿ. ಜಗಜ್ಜೀವನದಾಸ್ ಶೆಟ್ಟರು ಸ್ವಾಗತಿಸಿದರು. ಶ್ರೀ ಸದಾಶಿವ ಶೆಟ್ಟರು ವರದಿಯನ್ನೋದಿದರು. ಅಧ್ಯಕ್ಷರು ಮಾತನಾಡುತ್ತಾ ಧರ್ಮದ ಜಾಗ್ರತಿ ದೈವಿಕ ಭಾವನೆಯಿಂದ ನಮ್ಮ ಜನರ ಕಲ್ಯಾಣ ಸಾಧ್ಯವಿರುವುದರಿಂದ ಇಂಥ ಕಾರ್ಯಗಳು ಹೆಚ್ಚು ಹೆಚ್ಚು ನಡೆಯಬೇಕೆಂದು ಹೇಳಿ ಈ ದಿಯಲ್ಲಿ ಶ್ರಮಿಸಿದ ಶ್ರೀಗಳಾದ ಮಧ್ವರಾಜ್ ಬಿ. ಎಲ್. ಎನ್. ರೈ, ಶ್ರೀಮತಿ ಲಲಿತ ರೈ ಬಿ. ಜಗಜ್ಜೀವನ ದಾಸ್ ಶೆಟ್ಟಿ ಮತ್ತು ಶ್ರೀಧರ ಕಲ್ಕೂರರನ್ನು ಅಭಿನಂದಿಸಿದರು. ಅಂತ್ಯದಲ್ಲಿ ಶ್ರೀ ಶ್ರೀಧರ ಕಲ್ಕೂರರು ಧನ್ಯವಾದ ಸಮರ್ಪಿಸಿದರು.

ಶಾಲಾ ಕಟ್ಟಡ ಉದ್ಘಾಟನೆ

ಅಲ್ತಾರು: ಉಡುಪಿ ತಾಲೂಕು ಬೋರ್ಡು ಮತ್ತು ಮಹಾಜನರ ಸಹಾಯದಿಂದ, ಶಾಲಾಭ್ಯುದಯ ಸಮಿತಿಯವರು ಅಲ್ತಾರಿನಲ್ಲಿ ಕಟ್ಟಿಸಿದ ಮಾಡುಕೆರೆ ಸರಕಾರಿ ಪ್ರಾಥಮಿಕ ಶಾಲಾ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಕಳೆದ ತಾ. 24ರಂದು ಶ್ರೀ ಎ ಮಹಾಬಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಬನ್ನಾಡಿ ಗ್ರಾಮ ಪಂಚಾಯತ್ತು ಸಭಾಪತಿ ಶ್ರೀ ವಿ. ಸದಾಶಿವ ಶೆಟ್ಟರು ಧ್ವಜ ರೋಹಣ ಗೈದು, ಶಾಲಾ ಕಟ್ಟಡವನ್ನು ಉದ್ಘಾಟಿಸಿದರು.

ಪ್ರಾರಂಭದಲ್ಲಿ ಶಾಲಾಭ್ಯುದಯ ಸಮಿತಿಯ ಅಧ್ಯಕ್ಷ ಶ್ರೀ ಎ. ತೇಜಪ್ಪ ಶೆಟ್ಟರು ಸ್ವಾಗತಿಸಿದರು. ಅನಂತರ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಭೋಜ ಶೆಟ್ಟರು ಶಾಲಾ ವರದಿ ವಾಚನಗೈದರು. ಉದ್ಘಾಟನೆಯಾದ ಬಳಿಕ ಶ್ರೀ ಎ. ನೋಣಪ್ಪ ಶೆಟ್ಟಿ, ಶ್ರೀ ಎ ಕೊರಗಪ್ಪ ಶೆಟ್ಟಿ, ಇವರು ಭಾಷಣಗೈದರು. ಅಧ್ಯಕ್ಷರ ಭಾಷಣದ ತರುವಾಯ ಮುಖ್ಯೋಪಾಧ್ಯಾಯ ಶ್ರೀ ಭೋಜ ಶೆಟ್ಟರು ಧನ ಸಹಾಯವಿತ್ತ ಹಾಗೂ ಸಕಲ ವಿಧದಿಂದ ಸಹಕರಿಸಿದ ವಿದ್ಯಾಭಿಮಾನಿಗಳನ್ನು ಅಭಿನಂದಿಸಿದರು.

ಉಡುಪಿ ನಳ್ಳಿನೀರಿನ ಯೋಜನೆಗೆ ಸಾಲ

ಕಳೆದ ತಾ. 22ರಂದು, ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ, ನಗರಸಭಾ ಸದಸ್ಯರ ಹಾಗೂ ಸಾರ್ವಜನಿಕರ ಸಭೆ ಸೇರಿ ಉಡುಪಿ ನಗರಕ್ಕೆ ನೀರು ಸರಬರಾಯಿ ಮಾಡುವ ೪೪ ಲಕ್ಷ ರೂ. ಯೋಜನೆಗೆ ಮೈಸೂರು ಸರಕಾರ ಮಂಜೂರಾತಿಯನ್ನಿತ್ತಿದ್ದು ಅದರ ೨೨ ಲಕ್ಷ ರೂ.ಗಳನ್ನು ಮೈಸೂರು ಸರಕಾರ ಸಾಲ ರೂಪದಲ್ಲಿ ನೀಡುತ್ತದೆ. ಉಳಿದ ೨೨ ಲಕ್ಷ ರೂ.ಗಳನ್ನು ಹನ್ನೆರಡು ವರ್ಷಗಳಲ್ಲಿ ಮರುಪಾವತಿ ಮಾಡುವ ಷರತ್ತಿನಲ್ಲಿ ಬಡ್ಡಿಯ ಸಾರ್ವಜನಿಕ ಸಾಲವನ್ನೆತ್ತುವದೆಂದು ನಿರ್ಧರಿಸಲಾಗಿದೆ. ಈ ಸಾರ್ವಜನಿಕ ಸಭೆಯಲ್ಲಿ ಶ್ರೀಗಳಾದ ಪಿ. ರಂಗನಾಥ ಶೆಣೈ, ಜನಾಬ್ ರಫಿಯುದ್ದೀನ್, ಅರೂರು ಲಕ್ಷ್ಮೀನಾರಾಯಣ ರಾವ್, ಎಚ್. ಎನ್. ಪೈ, ಎಂ. ಮಧ್ವರಾಜ್, ಎಂ. ಎಲ್. ಎ., ಮೊದಲಾದವರು ಮಾತನಾಡಿದರು. ಎಕಡೆಯಿಂದ ೧ ಲಕ್ಷ ರೂ. ಸಾಲ ಕೊಡಿಸುವ ಭರವಸೆಯನ್ನು ಡಾ| ಪೈಗಳಿತ್ತ ಬಳಿಕ, ಶ್ರೀ ಪಿ. ರಂಗನಾಥ ಶೆಣೈಯವರು, ಉಡುಪಿಯ ಸಾಂಗ್ಲಿ ನಾಯಕ್ ಬ್ಯಾಂಕ್, ಮಾಂಗಳೂರಿನ ವಿಜಯಾ ಬ್ಯಾಂಕ್, ಮತ್ತು ಕರ್ನಾಟಕ ಬ್ಯಾಂಕುಗಳವರು ಒಂದೊಂದು ಲಕ್ಷ ರೂ. ಕೊಡುವ ಭರವಸೆಯನ್ನಿತ್ತಿರುವರೆಂದು ತಿಳಿಸಿದರು.

ಪೆರ್ಡೂರು: ಪೆರ್ಡೂರು ಪ್ರೌಢ ಶಾಲೆಯಿಂದ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತಿದ್ದ ೨೪ ವಿದ್ಯಾರ್ಥಿಗಳೂ ತೇರ್ಗಡೆಯಾಗಿದ್ದಾರೆ.

In the Court of the Munsiff Udipi

O. S. No 41/1965

Vishvanathachaiya —Plaintiff

vs

1. Padmavathi Shedthi 2. Mahabala Shetty 3. Sitha Shedthi —Defendants

The Suit filed by the Plaintiff against the defendants is posted to 11-6-65 for the appearance of defendants 1 and 3 in this Court at 11 A. M on that date. If they fail to appear, the suit will be decided in their absence.

K. L. Aithal,
Vakil for Plaintiff.

Udipi, 31-5-65.

ಕೃತಜ್ಞತಾ ಸಮರ್ಪಣೆ

ಕಳೆದ ತಾ 26ರಂದು ಕಾರ್ಕಳ ತಾಲೂಕಿನ ಎಣ್ಣೆಹೊಳೆ ಶ್ರೀ ಮಹಾಲಕ್ಷ್ಮಿ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಜರಗಿದ ನಮ್ಮ ಪುತ್ರ ಚಿ. ರವೀಂದ್ರನ ಉಪನಯನ ಸಮಾರಂಭಕ್ಕೂ ನನ್ನ ದ್ವಿತೀಯ ಪುತ್ರ ಚಿ| ರಘುನಾಥ ಮತ್ತು ತೀರ್ಥಹಳ್ಳಿ ಕುಕ್ಕಳ ಗುಂಡು ನಾಯ್ಕರ ಪುತ್ರಿ ಸೌ| ಕಸ್ತೂರಿ ಇವರ ವಿವಾಹ ಸಮಾರಂಭಕ್ಕೂ ಆಗಮಿಸಿ ಉಡುಗೊರೆ ಮೊದಲಾದವುಗಳನ್ನಿತ್ತು, ಶುಭ ಸಂದೇಶಗಳನ್ನು ಕಳಿಸಿ ವಟು ಮತ್ತು ವಧೂವರರನ್ನು ಆಶೀರ್ವದಿಸಿದ ಸಮಸ್ತ ಹಿತಾಕಾಂಕ್ಷಿಗಳಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಶ್ರೀಮತಿ ಮತ್ತು ಶ್ರೀ ಹರಿದೇವ್ ಮಂಜರೆ

ಹಿರಿಯಡ್ಕ.

ಶ್ರೀ ಕೆ. ಕೆ. ಶೆಟ್ಟಿ,ಎಂ.ಎಲ್.ಸಿ.ಯವರ ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯು ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಕಲ್ಯಾಣಿ

ಶ್ರೀ

(ಎರಡನೇ ಪುಟದಿಂದ)

ಅಕ್ಕನಿಯ ಮನೆಯ ಮಗಳು ಕೀರ್ತಿ ಸಂಪಾದಿಸಿದರೆ ಯಾವ ತಂದೆ ಮತ್ತು ಅಕ್ಕನಿಗೆ ತಾನೆ ಸಂತೋಷವಾಗುವುದಿಲ್ಲ? ಕಲ್ಯಾಣಿ ಅಕ್ಕ ಮತ್ತು ತಂದೆಯ ಮುಂದಿನ ಮಗಳಾಗಿ ಬಿ. ಎಸ್ಸಿ. ತರಗತಿಯ ಎರಡನೆಯ ವರ್ಷದಲ್ಲಿ ಓದುತ್ತಿದ್ದಳು. ಶ್ರೀ ಕಂಠಯ್ಯನವರು ಕಲ್ಯಾಣಿಯ ರೂಪ ಗುಣಗಳಿಗೆ ತಕ್ಕ ವರನನ್ನು ಶೋಧಿಸುತ್ತಿದ್ದರು. ಅವರ ಶೋಧನೆಯ ಪರಿಣಾಮವಾಗಿ ಶಿವಮೊಗ್ಗದ ಲಾಯರ್ ಗುಂಡಣ್ಣನವರ ಮಗ ಡಾ. ಚಂದ್ರು ಕಲ್ಯಾಣಿಯನ್ನು ಮದುವೆಯಾಗಲು ಒಪ್ಪಿದ. ಇದಕ್ಕೆ ಶ್ರೀಕಂಠಯ್ಯ ಮತ್ತು ಪದ್ಮಳ ಪೂರ್ಣ ಸಮ್ಮತಿ ದೊರೆಯಿತು. ಕಲ್ಯಾಣಿ ಡಾ. ಅಯ್ಯನವರಿಗೆ ಮೊದಲಿಂದಲೂ ತನ್ನ ಅಸಮ್ಮತಿ ಸೂಚಿಸುತ್ತಲೇ ಬಂದಿದ್ದಳು. ತನ್ನನ್ನು ತಮ್ಮ ಪ್ರಾಣದಂತೆ ಸಲಹಿ ಕಾಪಾಡುತ್ತಿದ್ದ ಕಾರಣದಿಂದಲೋ ಅಥವಾ ಅವರನ್ನು ತೊರೆದು ಬೇರೆಯಾಗ ಬೇಕೆನ್ನುವ ಕೊರಗಿನಿಂದಲೋ ಅಥವಾ ಮತ್ತಾವುದೋ ಬಗೆಯ ಭೀತಿಯಿಂದಲೋ ಬೇಡವೆಂದು ನಾನಾ ಬಗೆಯಲ್ಲಿ ತಿಳಿಸುತ್ತಿದ್ದಳು.

ಶ್ರೀಕಂಠಯ್ಯ ಮತ್ತು ಪದ್ಮ ಕಲ್ಯಾಣಿಯ ಅಭಿಪ್ರಾಯವನ್ನು ಅಷ್ಟಾಗಿ ಗಮನಿಸದೆ ಮದುವೆಯಾಗುವ ಮೊದಲು ಯುವಕ ಯುವತಿಯರೆಲ್ಲರೂ ಅಸಮ್ಮತಿ ಸೂಚಿಸುವುದು ಸ್ವಾಭಾವಿಕ ಎಂದು ಭಾವಿಸಿ ಅವಳ ಅಭಿಪ್ರಾಯಕ್ಕೆ ಮನ್ನಣೆ ಕೊಡದೆ ತಮ್ಮ ಪ್ರಯತ್ನ ಮುಂದುವರಿಸಿದರು. ಪ್ರಯತ್ನ ಮತ್ತು ಸಂಧಾನ ಯಶಸ್ವಿಯಾಯಿತು. ತಂದೆ ಮತ್ತು ಅಕ್ಕನಿಗೆ ಮನನೋಯಬಾರದೆಂದು ಕಲ್ಯಾಣಿ ಒಲ್ಲದ ಮನಸ್ಸಿನಿಂದ ಮೌನ ಸಮ್ಮತಿ ಇತ್ತಳು.

ಕಲ್ಯಾಣಿ ಶುಭಮುಹೂರ್ತದಲ್ಲಿ ಡಾ. ಚಂದ್ರುವಿನ ಧರ್ಮಪತ್ನಿ ಎನಿಸಿಕೊಂಡಳು. ಭೌತಿಕವಾಗಿಯೇ ಹೊರತು ಮಾನಸಿಕವಾಗಿಯಲ್ಲ. ಶ್ರೀಕಂಠಯ್ಯ ಮತ್ತು ಪದ್ಮಳ ಸತತ ಪ್ರಯತ್ನ ಮತ್ತು ದುಡಿಮೆ ಫಲಕಾರಿಯಾಯಿತು. ಅವರ ದೃಷ್ಟಿಯಲ್ಲಿ ಕಲ್ಯಾಣಿ ದೊಡ್ಡ ಪದವೀಧರ ಡಾಕ್ಟರ ಕೈ ಹಿಡಿದಿದ್ದಳು. ಮದುವೆಯಲ್ಲಿಂತೂ ಅವರು ತೋರಿದ ಉತ್ಸಾಹ ಮತ್ತು ಶ್ರಮ ಎಂತಹವರನ್ನೂ ದಂಗು ಬಡಿಸುವಂತಿತ್ತು. ತಂಗಿಯ ಬಗೆಗೆ ಪದ್ಮ ತೋರುತ್ತಿದ್ದ ವಿಶ್ವಾಸ; ಅಂತಃಕರಣವನ್ನು ಕಂಡು "ಅಕ್ಕನಲ್ಲ, ಹೆತ್ತ ತಾಯಿ" ಎಂದು ಹೇಳುವವರೂ ಇಲ್ಲದಿರಲಿಲ್ಲ. ಶ್ರೀಕಂಠಯ್ಯ ಮತ್ತು ಪದ್ಮ ನೆಮ್ಮದಿಯ ಉಸಿರು ಬಿಟ್ಟರು. "ಕಲ್ಯಾಣಿ ದೊಡ್ಡ ಮನೆಯನ್ನು ಸೇರಿದಳು. ಡಾಕ್ಟರ ಪತ್ನಿಯಾದಳು ಅವಳ ಚಿಂತೆ ತಮಗಿಲ್ಲ ಸುಖವಾಗಿರುವಳೆಂದು". ಕಲ್ಯಾಣಿಯೂ ನಿಟ್ಟುಸಿರು ಬಿಟ್ಟಳು. "ತನ್ನ ದುರಂತ ಜೀವನ ಆರಂಭವಾಯಿತೆಂದು".

ಮದುವೆಯಾಗಿ ದೊಡ್ಡ ತನಿಯೆ(?) ಕಲ್ಯಾಣಿ ಕಾಲೇಜ ಅಭ್ಯಾಸಕ್ಕೆ ಶರಣು ಹೊಡೆದು ಕೆಲಕಾಲ ಮನೆಯಲ್ಲಿದ್ದು ನಂತರ ಶಿವಮೊಗ್ಗಕ್ಕೆ ಪತಿಯ ಮನೆಗೆ ಬಂದಳು. ಅವಳಲ್ಲಿ ನವ ಪತ್ನಿಗೆ ಇರಬೇಕಾದ ಆಶೆ ಆಕಾಂಕ್ಷೆಗಳಾವುವೂ ಇರುವಂತೆ ಕಾಣಲಿಲ್ಲ. "ಕಲ್ಯಾಣಿ ದುಃಖದಲ್ಲಿ ತೊಳಲಾಡುತ್ತಿದ್ದಾಳೆ ಯಾವುದೋ ಕೊರಗು ಅವಳನ್ನು ಕಾಡುತ್ತಿದೆ' ಎಂದು ಅಕ್ಕ ಮತ್ತು ತಂದೆ ವಿಚಾರಿಸಿ ಅವಳ ಅಂತರಂಗವನ್ನು ಅರಿಯಲು ಪ್ರಯತ್ನಿಸಿ ಸೋತರು. ಮೊದಲ ಬಾರಿ ಕಲ್ಯಾಣಿಯೊಂದಿಗೆ ಪದ್ಮ ಮತ್ತು ಶ್ರೀಕಂಠಯ್ಯ ಇಬ್ಬರೂ ಹೋಗಿ ಅವಳನ್ನು ಚಂದ್ರುವಿನ ಮನೆಯವರಿಗೊಪ್ಪಿಸಿ ಅವಳ ಸಂಗತಿಯನ್ನು ತಿಳಿಸಿ ಅವಳನ್ನು ಬಿಡಲಾಗದೆ-ಇರಲಾರದೆ ಕಣ್ಣೀರು ಒರಸಿಕೊಳ್ಳುತ್ತಾ ಹಿಂತಿರುಗಿದ್ದರು.

ಂ ಂ ಂ

ಕಲ್ಯಾಣಿ ಅಕ್ಕ ಮತ್ತು ತಂದೆಯ ಪ್ರೀತಿಯ ವಾತಾವರಣದಲ್ಲಿ ಬೆಳೆದಿದ್ದು ಪತಿಯ ಮನೆಯ ವಾತಾವರಣಕ್ಕೆ ಹೊಂದಿಕೊಳ್ಳುವುದು ಕಷ್ಟವಾಯಿತು. ಅಲ್ಲದೆ ಮನೆಯ ವಾತಾವರಣ ನಡವಳಿಕೆ ಜಿಗುಪ್ಸೆ ತರುವಂತಿತ್ತು. ಮನೆಯವರೆಲ್ಲರ ದೃಷ್ಟಿಯಲ್ಲಿ ಕಲ್ಯಾಣಿ ಹೊತ್ತಿನ ಅನ್ನಕ್ಕೆ ಬಂದಿದ್ದ ಭಿಕ್ಷುಕಿಯಂತಾಗಿದ್ದಳು. ಮನೆಯ ಒಬ್ಬೊಬ್ಬ ವ್ಯಕ್ತಿಯ ನಡತೆ ವಿಚಿತ್ರವಾಗಿತ್ತು. ಮನೆಯವರೆಲ್ಲರದೂ ಒಂದು ಬಗೆಯದಾದರೆ ಡಾ. ಚಂದ್ರು ದುಶ್ಚಟಗಳ ದಾಸ, ಮಾನವೀಯತೆಯನ್ನು ಅರಿಯದ ಪಶು ಎಂದು ತಿಳಿಯಲು ಕಲ್ಯಾಣಿಗೆ ಬಹು ದಿನ ಬೇಕಾಗಲಿಲ್ಲ. ತನ್ನ ಗೃಹಚಾರ ಮತ್ತು ದೌರ್ಭಾಗ್ಯವನ್ನು ನೆನೆದು ಬಹುವಾಗಿ ಚಿಂತಿಸಿದಳು. ಮನೆಯವರು ಯಾರೊಬ್ಬರೂ ಅವಳನ್ನು ವಿಚಾರಿಸುವ ಗೋಜಿಗ ಹೋಗುತ್ತಿರಲಿಲ್ಲ. ತನ್ನ ಊಟ ತಿಂಡಿಗಳನ್ನು ತಾನೇ ನೋಡುಕೊಳ್ಳಲು ಸಿದ್ಧವಾಗಬೇಕಾಯಿತು. ಚಂದ್ರುವಂತು ಮನೆಗೆ ಬರುವಾಗಲೇ ಕುಡಿದು ಕಣ್ಣು ಕೆಂಪಗೆ ಮಾಡಿಕೊಂಡು ಗುಡುಗಿನಂತೆ ಘರ್ಜಿಸುತ್ತಲೇ ಬರುತ್ತಿದ್ದ. ಮನೆಯವರೆಲ್ಲರ ವಿಚಿತ್ರ ವರ್ತನೆಗೆ ಕಲ್ಯಾಣಿ ತತ್ತರಿಸಿ ಹೋಗಿದ್ದಳು. ತಂದೆ ಮತ್ತು ಅಕ್ಕನನ್ನು ನೆನೆದು "ನೀವು ಭಾವಿಸಿ ಆಶೆ ಪಟ್ಟು ಕಟ್ಟಿದ ಸಂಸಾರದ ರೂಪ ಹೇಗಾಗಿದೆ" ಎಂದು ದುಃಖಿಸದ ದಿನವೇ ಇರಲಿಲ್ಲ ಕಲ್ಯಾಣಿಗೆ.

ಂ ಂ ಂ

ತನ್ನ ಗೋಳಿನ ಬಾಳ ಕಥೆಯನ್ನು ಪತ್ರದ ಮೂಲಕ ಅಕ್ಕನಿಗೆ ತಿಳಿಸುತ್ತಿದ್ದಳು ಕಲ್ಯಾಣಿ. ಪದ್ಮ ಮತ್ತು ಶ್ರೀ ಕಂಠಯ್ಯ ಇಬ್ಬರೂ ನಿಟ್ಟುಸಿರು ಬಿಟ್ಟರು. ಅದಕ್ಕಿಂತಲೂ ಹೆಚ್ಚಾಗಿ ಅವರೇನು ತಾನೇ ಮಾಡಲು ಸಾಧ್ಯ?

"ಕಲ್ಯಾಣಿಯನ್ನು ಕೆಲವು ದಿನದ ವರೆಗೆ ಕರೆದು ಕೊಂಡು ಹೋಗುವುದಾಗಿ ತಿಳಿಸಿ ಎಲ್ಲರ ಅನುಮತಿ ಪಡೆದು ಬೆಂಗಳೂರಿಗೆ ಕರೆತಂದರು. ಶ್ರೀಕಂಠಯ್ಯ. ಆಗ ಕಲ್ಯಾಣಿ ಪತಿಯ ಸಂಸಾರ ಸುಖದ ಕಥೆಯನ್ನು ಆದ್ಯಂತವಾಗಿ ವಿವರಿಸಿದಳು. ಎರಡು ತಿಂಗಳ ನಂತರ ಮತ್ತೆ ಶಿವಮೊಗ್ಗ ತಲುಪಿದಳು ಕಲ್ಯಾಣಿ. ಅಲ್ಲಿಂದ ಮೂರುನಾಲ್ಕು ತಿಂಗಳ ಅವಧಿಯನ್ನು ಕಳೆಯುವುದು ದುಸ್ತರವಾಯಿತು. ಒಂಟಿಯಾಗಿ ಕೆಲವಾರು ಕಾಡುಮೃಗಗಳ ಮಧ್ಯದಲ್ಲಿ ಸಿಲುಕಿದ ಪಶುವಿನಂತಾಯಿತು ಕಲ್ಯಾಣಿಯ ಸ್ಥಿತಿ. ಮನೆಯವರೆಲ್ಲರ ಕೋಪ-ತಾಪ-ಅಸಹ್ಯ ವರ್ತನೆ, ಮಾನವೀಯತೆಯನ್ನು ಮರೆತ ಆಚಾರ ಇವುಗಳಿಂದ ಬೇಸತ್ತು ನೋಡಿ ಯಾರಿಗೂ ತಿಳಿಸದೆ ಬೆಂಗಳೂರು ಸೇರಿದಳ.

ಕಲ್ಯಾಣಿಯನ್ನು ನಿರೀಕ್ಷಿಸದಿದ್ದ ಶ್ರೀಕಂಠಯ್ಯ ಮತ್ತು ಪದ್ಮ ಆವಾಕ್ಕಾದರು. ಮಗಳ ಬಾಯಿಯಿಂದ ವಿಷಾದ ಜೀವನ ಸಂಗತಿಗಳನ್ನು ತಿಳಿದು "ಇನ್ನು ಮುಂದೆ ಹೋಗಲೇ ಬೇಡ; ನೀನು ಮಗಳಲ್ಲ ಮಗ" ಎಂದು ಹೇಳಿ ಸಮಾಧಾನ ಪಡಿಸಿದರು. ಒಂದು ವಾರದ ನಂತರ ಡಾ. ಚಂದ್ರು ಮತ್ತು ಅವನ ತಂದೆ ಲಾಯರ್ ಗುಂಡೂರಾಯರು ಮನೆಯ ಬಾಗಿಲಲ್ಲಿ ಕಾರು ಸಹಿತ ಹಾಜರಾದರು. ಕಲ್ಯಾಣಿ ಇಲ್ಲಿಗೆ ಬಂದಿರಬಹುದೆಂದು ಊಹಿಸಿ ಮತ್ತೆ ಅವಳನ್ನು ಕರೆದೊಯ್ಯಲು ತಂದೆ ಮತ್ತು ಮಗ ಇಬ್ಬರೂ ಬಂದಿದ್ದರು.

ಕುಶಲ ಪ್ರಶ್ನೆ. ಸಂಸಾರದ ಮಾತುಕತೆಗಳು ಮುಗಿದ ನಂತರ 'ಕಲ್ಯಾಣಿಯನ್ನು ಕರೆದೊಯ್ಯಲು ಬಂದಿರುವುದಾಗಿ" ತಿಳಿಸಿದರು ಡಾ. ಚಂದ್ರು ಮತ್ತು ಅವನ ತಂದೆ. ಗುಂಡೂರಾಯರು 'ಹಿಂದಿನದನ್ನೆಲ್ಲಾ ಮರೆತು ಬಿಡಿ ಹುಡುಗ ಬುದ್ಧಿ ಇಲ್ಲದೆ ತಪ್ಪಾಗಿ ಭಾವಿಸಿದೆ' ಎಂದು ಕ್ಷಮಾಪಣೆ ಬೇಡಿದರು. ಕಲ್ಯಾಣಿಗೆ ಹೋಗುವ ಇಚ್ಛೆಯೂ ಇರಲಿಲ್ಲ. ಶ್ರೀಕಂಠಯ್ಯ ಮತ್ತು ಪದ್ಮಳಿಗೆ ಕಳುಹಿಸುವ ಆಸೆಯೂ ಇರಲಿಲ್ಲ. ಅವರ ಬಲಾತ್ಕಾರಕ್ಕೆ ಮತ್ತು ಲೋಕದ ಬಾಯಿಗ ಅಂಜಿ ಕಲ್ಯಾಣಿಯನ್ನು ಕಳುಹಿಸಲು ನಿಶ್ಚಯಿಸಿದರು. ಕಲ್ಯಾಣಿ ಅತ್ತಲೇ 'ನನಗೆ ಮತ್ತೆ ಆ ನರಕ ಸಂದರ್ಶನ" ಬೇಡವೆಂದು ತಿಳಿಸಿದಳು.

ಪದ್ಮ ತಂಗಿಯನ್ನು ಒಪ್ಪಿಸುವ ವೇಳೆಗ ಸಾಕಾಯಿತು. "ನೋಡು ಕಲ್ಯಾಣಿ ಹೆಣ್ಣಿನ ಜೀವನ ಬಹು ಸೂಕ್ಷ್ಮವಾದದ್ದು. ಎತ್ತ ಹೋಗಿದರೂ ತಪ್ಪು, ನಾವು ಒಂದು ಹೆಜ್ಜೆಯೂ ತಪ್ಪಾಗಿಡದೆ ಇದ್ದರೆ ಸರಿ. ಒಂದು ವೇಳೆ ಮುಗ್ಗರಿಸಿದರೆ ನಾವೇ ದುಃಖವನ್ನು ಆಹ್ವಾನಿಸಿದಂತೆ. ಹೆಣ್ಣಿನ ಬಾಳು ಪತಿಯೊಂದಿಗೆ. ಅವನ ಕಷ್ಟಸುಖದೊಂದಿಗೆ ಅದೇ ಅವಳ ಸ್ವರ್ಗ—ಸಾಮ್ರಾಜ್ಯ. ಒಂದು ವೇಳೆ ತಪ್ಪಿದ್ದರೂ ಪರಮೇಶ್ವರನ ರೂ ಸರಿದೂಗಿಸಿಕೊಂಡು ಹೋಗ ವ ಹೊಣೆ ನಿನ್ನದು. ಹುಟ್ಟಿದ ಮನೆ ಸೇರಿದ ಮನೆಯ ಕೀರ್ತಿ ಉಳಿಸುವ ಕರ್ತವ್ಯ ನಿನ್ನದು" ಎಂದು ಉಪದೇಶಿಸಿದ್ದಳು ಪದ್ಮ. ಮರುಮಾತನಾಡದೆ ಅಕ್ಕನ ಮಾತಿಗೆ ಬೆಲೆ ಇತ್ತು ಕಾರಿನಲ್ಲಿ ಕುಳಿತಳು ಕಲ್ಯಾಣಿ. ಕಾರು ಶಿವಮೊಗ್ಗದ ಕಡೆಗೆ ಪ್ರಯಾಣ ಮಾಡಿತು

ಂ ಂ ಂ

ಶಿವಮೊಗ್ಗ ತಲುಪಿದ ನಂತರ ಪತಿಯ ಮನೆಯಲ್ಲಿ ಕಲ್ಯಾಣಿ ಅನುಭವಿಸಿದ ಸಂಕಟ ಅಷ್ಟಿಷ್ಟಲ್ಲ. ಡಾ. ಚಂದ್ರುವಿನ ದ್ವೇಷ ವರ್ತನೆಗೆ ಕಲ್ಯಾಣಿ ಕಣ್ಣೀರು ಸುರಿಸಬೇಕಾಯಿತು. ಒಂದು ರಾತ್ರಿ ವಿಷಪಾನ ಸೇವನೆಯಲ್ಲಿ ಲೋಕವನ್ನೇ ಮರೆತಿದ್ದ ಡಾ. ಚಂದ್ರು ಕಲ್ಯಾಣಿಯನ್ನು ಚಿಕಿತ್ಸೆಗೆ ಗುರಿಪಡಿಸಿದ. ಅವಳಿಗೆ ಕಾತರಾ ಜೀವಳು ತವರು ಜೀವನಕ್ಕೆ ಹೋಲಿಕೆಯಿಲ್ಲದೆ ತಮ್ಮ ಸಂಸಾರದ ಬಗ್ಗೆ ಆರೋಪ ಹೊರಿಸಿ ಬೆಂಗಳೂರಿನಲ್ಲಿ ತನ್ನ ಕಸಬಿಗೆ ಕಳಂಕ ಹಚ್ಚಿರುವಳು ಎಂಬುದಾಗಿತ್ತು. ಅವನ ರಾಕ್ಷಸ ವರ್ತನೆಗೆ ಕಲ್ಯಾಣಿಯ ಸೂಕ್ಷ್ಮ ಹೃದಯ ಒಡೆದು ಹೋಯಿತು. ಜ್ವರದಿಂದ ಹಾಸಿಗೆ ಹಿಡಿದು ನರಳಿದಳು.

ಂ ಂ ಂ

ಶಿವಮೊಗ್ಗದಿಂದ ಡಾ. ಚಂದ್ರು ಕೊಟ್ಟ ತಂತಿಯನ್ನು ನೋಡಿ ಶ್ರೀಕಂಠಯ್ಯ

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ

ಋತುಭೇದ ಮೊದಲಿಲ್ಲದೆ

ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು

ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ. ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ



NAVAYUGA 3-6-1965

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೩-೬-೬೫ರಿಂದ ೯-೬-೬೫ರ ವರೆಗೆ

೧. ಮೇಷ

ಸುಖಮಯವಾದ ಸಂಸಾರದಲ್ಲಿ ನಿಶ್ಚಿಂತೆಯಿಂದ ಕಾಲ ಕಳೆವ ನಿಮಗೆ ದಿನಗಳು ಕಳೆದುದೇ ತಿಳಿಯುತ್ತಿಲ್ಲವು. ನಿಮ್ಮ ಯಾವತ್ತೂ ವ್ಯವಹಾರಗಳು ನಿರಾತಂಕವಾಗಿ ಸಾಗಲಿವೆ. ಆದರೆ ರಾಜಕೀಯಕ್ಕೆ ಮಾತ್ರ ಇಂದು ಪ್ರವೇಶಿಸದಿರಿ. ಉದ್ಯೋಗದಲ್ಲಿ ಪ್ರಗತಿ ವ್ಯಾಪಾರದಲ್ಲಿ ಲಾಭ ಸಮಾಜದಲ್ಲಿ ಸ್ಥಾನಮಾನಗಳೂ ಲಭಿಸುವವು. ಮಕ್ಕಳ ಆರೋಗ್ಯದತ್ತ ನಿಗವಿರಲಿ. ವಾರಾಂತ್ಯದ 2 ದಿನಗಳಲ್ಲಿ ಆಕಸ್ಮಿಕ ಧನಲಾಭವಾದೀತು

೨. ವೃಷಭ

ತೋರುಪಿಕೆಗೆ ಹೊರಗಿನವರಿಗೆ ನಿಮಗೇನೂ ಕೊರತೆಯಿಲ್ಲವೆಂದು ಕಂಡುಬರುವದಾದರೂ ಒಳಗಿನ ಗುಟ್ಟು ಶಿವನೇ ಬಲ್ಲ ಎಂಬ ಗಾದೆಯಂತೆ ಅಂತರಂಗದ ದುಃಖವು ಹೇಳಲಳವಲ್ಲ. ಪರಕೀಯರ ಮಾತಂತಿರಲಿ ನಿಮ್ಮ ಆತ್ಮೀಯರೆಂಬವರೇ ನಿಮ್ಮ ಮೇಲಿಂದು ಎರಡೆಂಟೆಣಿಸಲಿರುವರು. ವ್ಯರ್ಥ ಪರಿಶ್ರಮದಿಂದಾಗಿ ನೊಂದ ನಿಮಗೆ ಮಿತ್ರ ಜನರು ಸಕಾಲದಲ್ಲಿ ನೆರವಾಗುವರು. ಸ್ವಂತ ಆರೋಗ್ಯದತ್ತ ಸ್ವಲ್ಪ ಗಮನವಿರಲಿ. ತಾ. 3, 4 ಇವುಗಳಲ್ಲಿ ಅನುಕೂಲವಾಗಿವೆ.

೩. ಮಿಥುನ

ದೇಹ ಮತ್ತು ಸುಖಸ್ಥಾನಪತಿಯಾದ ಬುಧನು ವ್ಯಯಸ್ಥಾನಕ್ಕೆ ಬಂದಿಹನು. ಸಾಲದ್ದಕ್ಕೆ ರವಿಗುರುಗಳೂ ಅವನೊಂದಿಗೆ ಸೇರಿಹರು. ಅಂದ ಮೇಲೆ ಇಂದು ನಿಮ್ಮ ಆಯಕ್ಕಿಂತ ದ್ವಿಗುಣ ವ್ಯಯವಾಗುವದಲ್ಲದೆ ದೇಹಾಲಸ್ಯ ಮಾನಸಿಕ ಚಿಂತೆಗಳು ಹಿಂದಿಗಿಂತ ಅಧಿಕವಾಗಲಿವೆ. ಎಂತಹ ತೊಂದರೆಗಳು ಬಂದರೂ ಹಿಡಿದ ಕಾರ್ಯವನ್ನು ಬಿಡಲಾರಿರಿ. ಪ್ರಬಲರಾದ ವಿರೋಧಿಗಳನ್ನೂ ಒಂದೊಮ್ಮೆಗೆ ಪರಾಭವಗೊಳಿಸುವಿರಿ. ಸದಾಚಾರ ಸತ್ಯಪೋಷಕರಾದ ನಿಮಗೆ ತಾ. 5, 6, 7 ಈ ದಿನಗಳು ಆದಾಯವನ್ನು ತರಲಿವೆ.

೪. ಕರ್ಕಟ

ದೈವಬಲ ಸಂಪನ್ನರಾದ ನಿಮಗೆ ಯಾವ ಭಾಗದಲ್ಲೂ ಕುಂದುಕೊರತೆಗಳಿರಲಾರವು. ಎಂತಹ ಅಪಾಯವನ್ನೂ ಉಪಾಯದಿಂದ ಪಾರುಗಾಣಿಸುವಿರಿ. ಕೆಲವೊಮ್ಮೆ ಶತ್ರು ಜನರು ಕೂಡ ತಮ್ಮ ಕ್ಷುದ್ರ ವೈರಭಾವವಂ ತ್ಯಜಿಸಿ ನಿಮ್ಮೊಂದಿಗೆ ಸಹಕರಿಸುವರು. ನಾಲಗೆಯನ್ನು ಆದಷ್ಟು ಹಿಡಿತದಲ್ಲಿಟ್ಟುಕೊಳ್ಳಿರಿ. ಕೆಲವೊಮ್ಮೆ ನಿಮ್ಮ ವಾಗ್ಬಾಣಗಳು ಎಂತಹ ಸಹನಶೀಲನನ್ನೂ ಕೆರಳಿಸಲಿರುವದು. ಆಕಸ್ಮಿಕವಾಗಿ ಆಪ್ತಜನರ ವಿಯೋಗವುಂಟಾದೀತು. ತಾ. 3, 4, 8, 9ರಲ್ಲಿ ನಿಮ್ಮ ಸಂಕಲ್ಪಗಳು ಕೈಗೂಡುವವು.

೫. ಸಿಂಹ

ಒಳ್ಳೇ ಉದ್ಯಮಶೀಲರಾದ ನಿಮಗೆ ಇಂದಿನ ದಿನಗಳು ಸುಖಮಯವಾಗಲಿವೆ. ಯಾರೊಬ್ಬರ ತಂಟೆಗೂ ನೀವಿಂದು ಹೋಗದೆ ನಿಮ್ಮ ನಿಮ್ಮ ಉದ್ಯಮದಲ್ಲಿ ಸರಾಗವಾಗಿ ಮುಂದರಿವಿರಿ. ನಿರೀಕ್ಷೆಯಂತೆ ಫಲವು ಲಭಿಸಲಿದೆ. ಆದರೆ ಸೇವಕ ಜನರಿಗೂ ಶ್ರಮಜೀವೀ ವರ್ಗಕ್ಕೂ ಮೇಲಿಂದ ಮೇಲೆ ಆಪದ ಸರ್ಥಗಳು ಬರಲಿವೆ. ಕೆಲವೊಮ್ಮೆ ಗುರುಹಿರಿಯರ ಕೂಡ ವಿರೋಧ ಬೆಳೆಸುವಿರಿ. ವಾಹನಾದಿಗಳಲ್ಲಿನ ಪ್ರವಾಸವು ಅಪಘಾತಕ್ಕೀಡು ಮಾಡೀತು. ಆ ಭಾಗದಲ್ಲಿ ತುಂಬ ಜಾಗರೂಕರಾಗಿರಿ. ತಾ. 5, 6 ಇತರ ದಿನಗಳಿಗಿಂತ ಉತ್ತಮ.

೬. ಕನ್ಯಾ

ಸಾಹಸಿಗಳೂ ಕರ್ತವ್ಯ ದಕ್ಷರೂ ಆದ ನಿಮಗೆ ಯಾವ ಕಾರ್ಯದಲ್ಲೂ ಸೋಲುಂಟಾಗದು. ಸುರಗುರುವಿನ ದೃಷ್ಟಿಯೆಂಬ ವಜ್ರಕವಚವು ನಿಮ್ಮನ್ನು ಎಂತಹ ವಿಪತ್ತಿನಿಂದಲೂ ಪಾರುಗಾಣಿಸಲಿರುವದು. ನೌಕರಿ ವರ್ಗದವರು ತಂತಮ್ಮ ಉದ್ಯಮದಲ್ಲಿ ಭಡತಿಹೊಂದುವರು. ಜೀವೆಷ್ಟೆ ಮಿತಭಾಷಿಗಳಾಗಿದ್ದರೂ ವಾಕ್ಕಲಹದಿಂದ ಬೇರೆ ತಪ್ಪಲಾರದು. ಪಿತ್ತದೋಷದಿಂದ ನಿದ್ರಾಭಾವ ದುಃಸ್ವಪ್ನಾದಿಗಳು ಕಾಣಿಸಿಕೊಳ್ಳಲಿವೆ. ತಾ. 3, 4, 8, 9 ಈ ದಿನಗಳಲ್ಲಿ ನಿಮ್ಮ ಬಯಕೆಯು ನೆರವೇರಲಿದೆ.

೭. ತುಲಾ

ನಿಮ್ಮ ಆರೋಗ್ಯವಿಂದು ಬಹುಮಟ್ಟಿಗೆ ಸುಧಾರಿಸಲಿದೆ. ಧನಭಾಗ್ಯಪರ ಕೃಪೆಗೆ ಪಾತ್ರರಾದ ನಿಮಗೆ ಈ ವಾರದಲ್ಲಿ ನಿರೀಕ್ಷೆಗೂ ಮಿಕ್ಕಿ ಲಾಭವಾಗಲಿದೆ. ಕೈಬಿಟ್ಟು ಹೋದ ವಸ್ತು ಒಡವೆಗಳೂ ಕೂಡ ಪುನಃ ಲಭಿಸುವವು. ಎಂತಹ ಪ್ರಬಲ ಪ್ರತಿಪಕ್ಷಿಯೂ ಕೂಡ ಇಂದು ನಿಮಗೆ ಶರಣು ಬರಲಿರುವನು. ಗೃಹತಾಪತ್ರಯಗಳಿಂದ ಮುಕ್ತರಾಗಿದ್ದರೂ ಸೋದರ ವರ್ಗದವರು ನಿಮ್ಮನ್ನು ನೆಮ್ಮದಿಯಿಂದಿರಲು ಬಿಡಲಾರರು. ವಾರಾದಿಯ 4 ದಿನಗಳಲ್ಲಿ ಕಾರ್ಯಸಿದ್ಧಿ ಧನಲಾಭಗಳಾಗಲಿವೆ.

೮. ವೃಶ್ಚಿಕ

ಹೆದರಿದ ಹರಿಣದಂತೆ ನಿಮ್ಮ ಮನಸ್ಸು ಬಹಳ ಚಪಲವಿರುವುದರಿಂದಾಗಿ ನೀವಿಂದು ಹೊಸ ಕಾರ್ಯವನ್ನು ಆರಂಭಿಸದಿದ್ದರೂ ಹಿಡಿದ ಕಾರ್ಯವನ್ನು ಪೂರ್ತಿ ಮಾಡುವಿರಿ. ಖರ್ಚಿಗೆ ತಕ್ಕುದಾಗಿ ಆದಾಯವೂ ಇರುವುದರಿಂದ ಹಣದ ಚಿಂತೆ ನಿಮಗಿರದು. ಕೆಲವೊಮ್ಮೆ ಸಾಂಸರಿಕ ದೋಷದಿಂದಾಗಿ ವ್ಯರ್ಥ ಖರ್ಚಿಗೆ ಗುರಿಯಾಗುವ ಸಂಭವವಿದೆ. ಅಧಾರಿಂಗಿಯ ಆರೋಗ್ಯಕ್ಕೆ ಹಾನಿಯುಂಟಾದೀತು. ವ್ಯವಹಾರ ಚತುರರಾದ ನಿಮಗೆ ವಾರಾಂತ್ಯದ 5 ದಿನಗಳು ಅನುಕೂಲವಾಗಿವೆ.

೯. ಧನು

ಕಷ್ಟಪಟ್ಟು ದುಡಿಯುವಿರಿ. ನಿಮ್ಮ ಪರಿಶ್ರಮವು ಸಾರ್ಥಕವಾಗಲಿದೆ. ಸ್ವಜನರಿಂದ ವಂಚಿತರಾದ ನಿಮಗೆ ವ್ಯಾಪಾರದಲ್ಲಿ ನಷ್ಟವುಂಟಾದೀತು ಅಧಿಕಾರಿ ವರ್ಗದವರಿಂದ ಆಗಾಗ ತಂಟೆ ತಕರಾರುಗಳು ಬರಲಿವೆ. ಆಪ್ತೀಯರ ವಿಯೋಗ ವಿರೋಧಗಳೂ ಕಂಡುಬಂದಾವು ಸ್ತ್ರೀ ನಿಮಿತ್ತವಾದ ವ್ಯವಹಾರದಿಂದಾಗಿ ಧನಹಾನಿ ಅಪವಾದಕ್ಕೂ ಕೂಡ ಸಿಲುಕಲಿರುವಿರಿ. ರಾಜಕೀಯ ರಂಗಕ್ಕೆ ಸಧ್ಯ ಪ್ರವೇಶಿಸದಿರಿ. ಗೃಹ ತಾಪತ್ರಯಗಳಿಂದ ಮುಕ್ತರಾದ ನಿಮಗೆ ವಾರಾಂತ್ಯದ 2 ದಿನಗಳು ಇಷ್ಟಪ್ರದಗಳಿವೆ.

೧೦. ಮಕರ

ಸುರಗುರುಗಳೋರ್ವರನ್ನುಳಿದು ಇತರ ಗ್ರಹಮಂಡಲವೇ ನಿಮಗಿಂದು ಪ್ರತಿಕೂಲವಾಗಿರುವುದರಿಂದ ಇಂದಿನ ನಿಮ್ಮ ಬಯಕೆಗಳು ತಿರುಕನ ಕನಸಿನಂತಾಗುವವು. ಸುಖಲಾಭಪತಿಯಾದ ಅಂಗಾರಕನು ಅಷ್ಟಮದಲ್ಲಿದ್ದು ನಾನಾ ತರದ ಖರ್ಚುವೆಚ್ಚಗಳಿಗೆ ನಿಮ್ಮನ್ನು ಗುರಿಮಾಡಲಿರುವನು. ಮನೋದೌರ್ಬಲ್ಯದಿಂದ ಬಳಲುತ್ತಿರುವ ನಿಮ್ಮನ್ನು ಹೆಂಡತಿ ಮಕ್ಕಳೂ ತಿರಸ್ಕಾರ ದೃಷ್ಟಿಯಿಂದ ನೋಡುವರು. ಗುರ್ವನುಗ್ರಹದಿಂದಾಗಿ ವಾರಾದಿಯ 2 ದಿನಗಳು ಸುಖದಾಯಿಗಳಾಗಿವೆ.

೧೧. ಕುಂಭ

ನಿಮ್ಮ ಪರಿಶ್ರಮವಿಂದು ನೀರಿನಲ್ಲಿ ಮಾಡಿದ ಹೋಮದಂತೆ ವಿಫಲವಾದೀತು. ಹೆರವರ ಮಾತಂತಿರಲಿ, ನಿಮ್ಮ ಆತ್ಮೀಯರೆಂಬವರೇ ಇಂದು ನಿಮ್ಮನ್ನು ಪೇಚಿನಲ್ಲಿ ಸಿಕ್ಕಿಸಲಿರುವರು. ಕೋರ್ಟುಕಛೇರಿಗಳಲ್ಲಿ ಪ್ರತಿಪಕ್ಷೀಯರ ಕೈಯೇ ಮೇಲಾಗಲಿದೆ. ಅನಿರೀಕ್ಷಿತ ಪ್ರವಾಸವು ಪುಣ್ಯ ತೀರ್ಥಕ್ಷೇತ್ರಗಳ ಸಂದರ್ಶನಕ್ಕೆ ಕಾರಣವಾಗುವದು. ಕುಟುಂಬದಲ್ಲಿ ಪರಸ್ಪರ ವೈಮನಸ್ಸು ತಲೆದೋರಲಿದೆ. ವಾರಾದಿಯ 4 ದಿನಗಳು ಉಳಿದ ದಿನಗಳಿಗಿಂತ ಉತ್ತಮವಾಗಿವೆ.

೧೨. ಮೀನ

ಏಳೂವರೆ ಶನಿಯ ಕಾಟದಿಂದ ಸದಾ ಪೀಡಿತರಾದ ನಿಮಗೆ ಸಂಸಾರದಲ್ಲೂ ಸುಖ ನೆಮ್ಮದಿ ಇರಲೊಲ್ಲದು. ಆದರೂ ನಿಮ್ಮ ಕರ್ತವ್ಯ ದಕ್ಷತೆಯು ಅದ್ವಿತೀಯವಿರುವದು. ವ್ಯವಹಾರ ಚತುರರಾದ ನಿಮಗೆ ಹೆರವರ ನೆರವು ಇಲ್ಲವಾದರೂ ಕೋರ್ಟು ವ್ಯವಹಾರ ಮತ್ತು ರಾಜಕೀಯ ಕಾರ್ಯಗಳಲ್ಲಿ ವಿಜಯವು ಸುಲಭ ಸಾಧ್ಯವಿದೆ. ನೌಕರಿ ಜನರಿಗೆ ಸ್ಥಾನ ಚಲನೆಯಾದೀತು. ವಾರಾಂತ್ಯದ 5 ದಿನಗಳಲ್ಲಿ ಗೃಹಸುಖ ಕಾರ್ಯಲಾಭ ವಿಜಯಗಳನ್ನು ಪಡೆವಿರಿ.

ಮತ್ತು ಪದ್ಮ ಗಾಭರಿಯಾದರು. ಅವರಿಗೆ ದಿಕ್ಕೇ ತೋಚದಂತಾಯಿತು. ಅನುಮಾನವೇ ಉಳಿಯಲಿಲ್ಲ. ಇಬ್ಬರಿಗೂ "ಕಲ್ಯಾಣಿ ಆಪತ್ತಿನಲ್ಲಿದ್ದಾಳೆ" ಎಂದು ನಿರ್ಧರಿಸಿ ಬಾಡಿಗೆ ಕಾರಿನಲ್ಲಿ ಇಬ್ಬರೂ ಹೊರಟು ಶಿವಮೊಗ್ಗ ತಲುಪಿದರು. ಮನೆಯಲ್ಲಿ ಸ್ಮಶಾನ ಶಾಂತಿ ಆವರಿಸಿತ್ತು. ಯಾರೊಬ್ಬರೂ ಮಾತನಾಡುವ ಸ್ಥಿತಿಯಲ್ಲಿಯೇ ಇರಲಿಲ್ಲ. ಕೋಣೆಯಲ್ಲಿ ಮಂಚದ ಮೇಲೆ ಕಲ್ಯಾಣಿ ನಿಶ್ಚಲವಾಗಿ ಮಲಗಿದ್ದಳು. ಅಕ್ಕ ಮತ್ತು ತಂದೆ ಇಬ್ಬರೂ ಬರುವ ವೇಳೆಗೆ ಫಾಲಿಡಾಲಿನ ಕ್ರೂರ ವಿಷ ಕಲ್ಯಾಣಿಯ ಪ್ರಾಣವನ್ನು ಸೆಳೆದಿತ್ತು. ಮನೆಯಲ್ಲಿ ಶ್ರೀಕಂಠಯ್ಯ ಮತ್ತು ಪದ್ಮ ಕಂಡುದು ಶವಪ್ರಾಯಮತಿಯ ಕಲ್ಯಾಣಿಯನ್ನಲ್ಲ ಅವಳ ನಿರ್ಜೀವ ಪತ್ರವನ್ನು. "ನರಕಯಾತನೆಯ ಬಾಳನ್ನು ಅನುಭವಿಸಲಾರೆ, ಸುಖವಾಗಿ ಬದುಕಲೆಂದು ನೀವು ಬಯಸಿದರೆ ಬದುಕುವ ಯೋಗ ನನಗಿಲ್ಲ. ನನ್ನ ಸಾವಿಗಾಗಿ ದುಃಖಿಸಬೇಡಿ. ನನ್ನನ್ನು ಮರೆತು ಬಿಡಿ" ಎನ್ನುವ ಅವಳ ಪತ್ರದ ಸಾಲುಗಳು ಅವಳ ದುರಂತ ಜೀವನದ ಗುರುತಾಗಿದ್ದವು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅವಶ್ಯಕವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ ಎರಡೂವರೆ (ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ. ಎರಡು (ಟ.ಖ.ಪ್ರತ್ಯೇಕ)

ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' Weekly is in the list of periodicals and Newspapers approveds for use in Secondary Schools as per proceeding Roc. No. 466 N/50 dated 2-12-1950 of the Director of Public Instruction Madras.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪ | ಜೂನ್ ೧೦, ೬೫ | ಸಂಚಿಕೆ ೪೧

Phone No.
ಫೋನ್ ಸಂಖ್ಯೆ : 226

NAVAYUGA

leading nationalist weekly

೨೦
ಪೈಸೆ

ಕಥಾ ಪ್ರಪಂಚ

ಚಿರವಿರಹಿ

ಬರೆದವರು
ಡಾ। ಕೆ. ಎಂ. ಬಲ್ಲಾಳ್, ಕುಂಜಾರ್‌ಗಿರಿ.

ಬರ ಸಿಡಿಲು! ಎಂದೆಂದಿಗೂ ಬಾಳಿನಲ್ಲಿ ಚೇತರಿಸಿಕೊಳ್ಳಲಾಗದ ಬರ ಸಿಡಿಲು ವೆಂಕಟಕೃಷ್ಣರನ್ನು ಝರ್ಝರಿತರನ್ನಾಗಿ ಮಾಡಿತ್ತು. ಐವತ್ತೊಂಬತ್ತರ ಹರಯದ ಹಂತದಲ್ಲಿದ್ದಾಗ ಹಾರಿ ಬಂದ ಸಿಡಿಲು ಅವರಲ್ಲಿ ಪುತ್ರ ಶೋಕದ ಅಗಾಧ ದುಃಖಾನಲದ ಜ್ವಾಲೆಯನ್ನೇ ಹೊತ್ತಿಸಿ ಉರುಬಿಸಿತ್ತು. ರಾಮಮೂರ್ತಿ, ಅವರ ಎರಡನೇ ಮಗ ಬಳ್ಳಾರಿಯಲ್ಲಿ ಡಾಕ್ಟರು ಕಲಿಯುತ್ತಿದ್ದ, ಅದೂ ಕೊನೆಯ ವರ್ಷದಲ್ಲಿ. ಆಕಸ್ಮಿಕವಾಗಿ ಬಂದೆರಗಿದ್ದ ಕರಾಳ ಮೃತ್ಯು ರಾಮಮೂರ್ತಿಯನ್ನು ತನ್ನ ಶೀತಲ ಹಸ್ತದಿಂದ ಬಾಚಿ ನೊಣೆದು ನುಂಗಿ, ತಂದೆ ತಾಯ್ಗಳ ವೃದ್ಧಾಪ್ಯದಲ್ಲಿ ಎಂದೆಂದೂ ಮಾಯದ ಚಿರವ್ರಣವನ್ನುಂಟು ಮಾಡಿತ್ತು.

ರಾಮಮೂರ್ತಿ ಶೈಶವಾವಸ್ಥೆಯಲ್ಲೇ ತನ್ನ ಮೇಧಾಶಕ್ತಿಯನ್ನು ಮೆರೆಯ ತೊಡಗಿದ್ದ. ವಿದ್ಯೆಗೆ ಸರಿಯಾದ ಗುಣ ನಡತೆ ಬಾಲಕನಾಗಿದ್ದಾಗಲೇ ಮಾಡಿ ಬಂದಿತ್ತು. ಹೊತ್ತುಗಳೆಯದೆ, ಸದಾ ವ್ಯಾಸಂಗ ಭರಿತನಾಗುತ್ತಿದ್ದ ರಾಮಮೂರ್ತಿ, ತನ್ನಣ್ಣ—ತಂದೆಯಂತೇ ತಾನೂ ವೈದ್ಯಕೀಯ ವರ್ತುಲದಲ್ಲಿ ಕೈಯೂಡಿಸಬೇಕೆಂಬ ಹೆಬ್ಬಯಕೆಯನ್ನು ಅಪರೋಕ್ಷವಾಗಿ ಕೆಲವೊಮ್ಮೆ ಪ್ರಕಟಿಸುತ್ತಿದ್ದ. ಡಾಕ್ಟರ್ ವೆಂಕಟಕೃಷ್ಣರಿಗೂ ಅವನ ಉತ್ಸಾಹ; ಚಾಕಚಕ್ಯತೆ; ಸೌಜನ್ಯ; ಮೇಧಾಶಕ್ತಿ ಕಂಡು, ಅದೇ ಯೋಚನೆಯಲ್ಲಿದ್ದರೂ, ಅದನ್ನು ಬಾಯಿ ಬಿಟ್ಟು ಪ್ರಕಟಿಸದೆ, ಅವನಿಗೆ ತುಂಬು ಬೆಂಬಲ ಪ್ರೋತ್ಸಾಹವೀಯುತ್ತಿದ್ದರು. ರಾಮಮೂರ್ತಿಗೆ ಓದು ಅಭ್ಯಾಸವಾಗಿತ್ತು. ಅದರಲ್ಲಿ ಕಿಂಚಿತ್ತಾದರೂ ಔದಾಸೀನ್ಯ ತಾಳುತ್ತಿರಲಿಲ್ಲ. ಸತತ ಪರಿಶ್ರಮದಿಂದ ತರಗತಿಯ ಎಲ್ಲಾ ಪಾಠಗಳಲ್ಲೂ ರಾಮಮೂರ್ತಿ ಹೆಚ್ಚಿನ ಸಂಖ್ಯೆಯ ಮಾರ್ಕುಗಳಿಸಿ, ಉತ್ತೀರ್ಣನಾಗುತ್ತಲೇ ಇದ್ದ. ಒಂದು ವರ್ಷವಾದರೂ 'ದಮ್ಮಿ' ಹೊಡೆವ ಹಾಗಾಗದ ರಾಮಮೂರ್ತಿಯ ವಿದ್ಯಾ ಪ್ರಗತಿ, ಅವನ ಶಿಕ್ಷಕರಿಗೂ ಮಾತಾಪಿತರಿಗೂ ಹೆಮ್ಮೆಯ ಮಾತಾಗಿತ್ತು. ಇಷ್ಟು ಬುದ್ಧಿವಂತ ವಿದ್ಯಾರ್ಥಿಯಾಗಿದ್ದರೂ ರಾಮಮೂರ್ತಿಗೆ ಅಹಂಭಾವ; ಮಾತ್ಸರ್ಯವಿರಲಿಲ್ಲ. ಸರ್ವರೊಂದಿಗೂ ಸಮಾನ ಮಮತೆಯ ಮಲ್ಲಿಗೆಯನ್ನು ಹರಿಸಿ ಹಾಸುಹೊಕ್ಕಾಗಿದ್ದ ರಾಮಮೂರ್ತಿ ಎಲ್ಲರ ಹೃದಯಕ್ಕೂ ಅಚ್ಚುಮೆಚ್ಚಿನವನಾಗಿದ್ದ.

ಕಾಲೇಜು ಮುಗಿಸಿದ ರಾಮಮೂರ್ತಿಯ ತನ್ನ ವೈದ್ಯಕೀಯ ವೃತ್ತಿಯ ಹಂಬಲವನ್ನು ಒಮ್ಮೆ ವೆಂಕಟಕೃಷ್ಣರಲ್ಲಿ ಸಂದರ್ಭೋಚಿತವಾಗಿ ನಿವೇದಿಸಿಕೊಂಡ: "ರೋಗಿ ಬಯಸಿದ್ದೂ ಹಾಲು, ವೈದ್ಯ ವಿತ್ತದ್ದೂ ಹಾಲೆಂಬಂತೆ" ವೆಂಕಟಕೃಷ್ಣರು ಸಂತಸದಿಂದ ಸಹಿ ಹಾಕಿದರು; ರಾಮಮೂರ್ತಿ ಆನಂದ ತುಂದಿಲನಾಗಿ, ತಂದೆಯನ್ನು ಹೃತ್ಪೂರ್ವಕವಾಗಿ ಕೊಂಡಾಡಿದ; ತಾಯಿ ಇಂದಿರಮ್ಮ ಸಹಾ ಮಗನ ಹೆಬ್ಬಯಕೆಯ ಅಗ್ನಿಗೆ ಆಜ್ಯ ಹೊಯ್ದು ಆಶೀರ್ವದಿಸಿದರು. ಅಂದೇ ಬಳ್ಳಾರಿಗೆ ರಾಮಮೂರ್ತಿ ತೆರಳಿ ಅಲ್ಲಿಯ ವೈದ್ಯಕೀಯ ಕಾಲೇಜನ್ನು ಸೇರಿಕೊಂಡ. ಕಾಲೇಜಿನ ವಿದ್ಯಾರ್ಥಿ ಗಡಣ; ಅಧ್ಯಾಪಕ ವೃಂದದಲ್ಲಿ ಕೆಲವೇ ದಿನದೊಳಗೆ ರಾಮಮೂರ್ತಿ ಪ್ರೀತಿ ಸಂಪಾದಿಸಿಕೊಂಡ—ತನ್ನ ನಲ್ನಗೆ, ನಲ್ಮಾತು; ಮೃದು ಹೃದಯ; ಮೇಧಾಶಕ್ತಿಯಿಂದ. ಹಾಸ್ಟೇಲಿನಲ್ಲಿ ರಾಮಮೂರ್ತಿ ಎಲ್ಲರ ಸ್ನೇಹಮಯ ಜೀವಿಯಾಗಿದ್ದ. ಅಭ್ಯಾಸ; ಪ್ರಾತ್ಯಕ್ಷಿಕ ವಿವೇಚನೆ; ಸತತ ಪರಿಶ್ರಮ ಅವನ ರಕ್ತಗತವಾಗಿತ್ತು. ವೈದ್ಯಕೀಯ ಪರೀಕ್ಷೆ ಪ್ರತಿ ವರ್ಷವೂ ಬರುತಿತ್ತು—ಹೋಗುತಿತ್ತು. ರಾಮಮೂರ್ತಿ ಪ್ರತೀ ಸಾರಿಯೂ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾಗುತ್ತಿದ್ದ—ತನ್ನ ಆಳವಾದ ವ್ಯಾಸಂಗದಿಂದ ಕಾಲೇಜಿನ ಪ್ರಾಧ್ಯಾಪಕರು, ಈ ವಿದ್ಯಾರ್ಥಿಯ ಉಜ್ವಲ ಭವಿತವ್ಯದ ಸುಳಿಛಾಯೆ ಕಂಡು ಸಂತೋಷಿಸುತ್ತಿದ್ದರು; ವೈದ್ಯವೃತ್ತಿಯ ಪ್ರಾತ್ಯಕ್ಷಿಕ ಅನುಭವದಿಂದ ಪರಿಪಕ್ವನಾಗಿದ್ದ ರಾಮಮೂರ್ತಿ ಆಗ್ಗಾಗ್ಗೆ ಶಸ್ತ್ರಕ್ರಿಯೆ; ಹೆರಿಗೆಯನ್ನು ಲೀಲಾಜಾಲವಾಗಿ, ಧೈರ್ಯದಿಂದ ಗೈಯುತ್ತಿದ್ದುದನ್ನು ಕಣ್ಣಾರೆ ಕಾಣುತ್ತಿದ್ದ ಡಾಕ್ಟರುಗಳು ಮೂಕರಾಗುತ್ತಿದ್ದರು—ಅನಿರ್ವಚನೀಯ ಸುಮ್ಮಾನದಿಂದ ಹೃದಯ ಹಿರಿದಾಗಿ, ಮಾತು ಮಾಯವಾಗಿ, 'ಬೆರಳು ತೋರಿಸಿದರೆ, ಹಸ್ತ ನುಂಗುವ' ಹಾಗಿದ್ದ ರಾಮಮೂರ್ತಿ, ಪ್ರತೀ ವರ್ಷ ಪ್ರತೀ ಪಾಠಗಳಲ್ಲಿ ಪಾಸಾಗಿದ್ದುದು ಮಾತ್ರವಲ್ಲ ಪ್ರಥಮ ಹಂತವನ್ನು ಏರುತ್ತಿದ್ದ. ಕೊನೆಯ ವರುಷದ ಪರೀಕ್ಷೆಯಲ್ಲಿ ಜಯಭೇರಿ ಹೊಡೆದು, ಪ್ರಥಮ ಸ್ಥಾನ ಪಡೆದ ರಾಮಮೂರ್ತಿಗೆ ಕಾಲೇಜಿನಿಂದ ವಿವಿಧ ಪಾರಿತೋಷಕಗಳು ಲಭ್ಯವಾದು, ಅವನ ಉತ್ಸಾಹಕ್ಕೆ ಗಾಳಿ ಹಾಕಿತ್ತು.

ಅಭ್ಯಾಸ ಭರದಿಂದ ಸಾಗುತಿತ್ತು. ಆದರೆ, ವಿಧಿ ಮಾತ್ರ ಗಹಗಹಿಸಿ ನಗುತಿತ್ತು; ಇನ್ನು ಕೆಲವು ಗಳಿಗೆಯೊಳಗೆ ಅವನ ಆತ್ಮ ಪ್ರಣತಿಯ ತೈಲ ವಾರಿ, ಜ್ಯೋತಿ ನಂದುವ ಸಲುವಾಗಿಯೇ ಏನೋ ಅಪ್ರತಿಮ ಬುದ್ಧಿ ಕೌಶಲ್ಯ; ಅಗಣಿತ ಸೌಶೀಲ್ಯ ಆಕರ್ಷಕ ಸೌಜನ್ಯ; ನಿರುಪಮ ಸೌಂದರ್ಯ, ಒಮ್ಮೆಲೇ ಉಕ್ಕಿ ಪ್ರಜ್ವಲ್ಯಮಾನವಾದ ದೀಪಿಗೆಯಂತೆ ಪ್ರಕಾಶಿಸಲಾರಂಭಿಸಿತು. ನಂದುವ ದೀಪ, ದೊಡ್ಡದಾಗಿ ಉರಿದು ಮಾಯವಾಗುವಂತೆ "ಮೂರ್ತೀ....ಆರೋಗ್ಯ ಹಾಳು ಮಾಡಿಕೋ ಬೇಡ, ಓದಿ, ಓದಿ ಮರುಳಾದ ಕೂಚುಭಟ್ಟನಾಗಬೇಡ, ಕಣೋ" ಎಂದು ರಾಮಮೂರ್ತಿಯ ಓರಗೆಯ ಆತ್ಮೀಯ ಕೆಳೆಯ ಅರಗಂಜಿ ಆಗ್ಗಾಗ್ಗೆ ಎಚ್ಚರಿಸಿದಾಗ, ರಾಮಮೂರ್ತಿ ಮುಗುಳ್ನಕ್ಕು ಸುಮ್ಮನಾಗುತ್ತಿದ್ದ. ಕ್ಲಾಸಿನಲ್ಲಿ ಪಾಠ, ಲೆಕ್ಚರ್ ನಡೆಯುತ್ತಿದ್ದಾಗ, ಅದೆಷ್ಟೋ ಗಹನ ವಿಚಾರಗಳು ಪ್ರಾಧ್ಯಾಪಕರಿಗೂ ಅರಿವಾಗದೆ ತಬ್ಬಿಬ್ಬಾದಾಗ, ರಾಮಮೂರ್ತಿ, ಕರ್ಮ ಯೋಗಿ, ದೈವಿಕಾಂಶವುಳ್ಳ ಮಹಾತ್ಮನಂತೆ, ಉತ್ತರಿಸಿ ಸಮಸ್ಯೆಯ ಶೃಂಖಲೆ ಬಿಡಿಸುತ್ತಿದ್ದ. ಗುರುವಿಗಿಂತ ಶಿಷ್ಯ ಪ್ರತಿಭಾವಂತನಾಗಿದ್ದ—ಸಾವಿನ ಕರಿನೆಳಲು ಬಲೆ ಬೀಸುತ್ತಿದ್ದಾಗ. ವಾರ್ಷಿಕ ಪರೀಕ್ಷೆ ಧಾವಿಸಿ ಬರುತಿತ್ತು. ವಿದ್ಯಾರ್ಥಿಗಳ ಸಿದ್ಧತೆ ಭರಾಟೆಯಿಂದ ಸಾಗುತಿತ್ತು. ರಾಮಮೂರ್ತಿಗೆ ಈ ಭಾರಿಯೂ ಪ್ರಥಮ ಶ್ರೇಣಿಯಲ್ಲಿ ಪಾಸಾಗಬೇಕೆಂಬ ಹಿರಿದಾಸೆ ವೀಚಿಯಂತೆ ಹೃದಯಾಬ್ಧಿಯಲ್ಲಿ ಸುಯ್ಯುತಿತ್ತು. ಅಧ್ಯಾಪಕರಿಗೂ, ವಿದ್ಯಾರ್ಥಿಗಳಿಗೂ, ರಾಮಮೂರ್ತಿಯ ವಿಜಯದ ಬಗ್ಗೆ ತುಂಬು ಭರವಸೆ ಇತ್ತು.

ರಾಮಮೂರ್ತಿಯ ಅಭ್ಯಾಸ ಅವ್ಯಾಹತವಾಗಿ ಸಾಗುತಿತ್ತು. ಹೊತ್ತು ಹೊತ್ತಿಗೆ ಊಟ ಕಾಫಿಗಳ ಚಿಂತೆ ಇರಲಿಲ್ಲ; ಸ್ನಾನದ ಗೊಡವೆ ಇರಲಿಲ್ಲ; ಗಡ್ಡ ಮೀಸೆಗಳು ಹುಲುಸಾಗಿ ಬೆಳೆಯುತ್ತಿದ್ದುವು; ರಾತ್ರಿ—ಹಗಲು ಓದ; ಪ್ರಾತ್ಯಕ್ಷಿಕ ಅಭ್ಯಾಸ ನಿರರ್ಗಳವಾಗಿ ಸಾಗಿದ್ದುವು. ನಿದ್ರೆ ಇಲ್ಲದೆ ಕಣ್ಣುಗಳು ಕೆಂಪಡರಿದ್ದುವು; ಆಲಸ್ಯ ಬಳಿ ಸುಳಿಯುತ್ತಿರಲಿಲ್ಲ.

ಓದು—ಅಭ್ಯಾಸ—ಸತತ ವ್ಯಾಸಂಗ!

ಅದೊಂದು ದಿನ ಮಧ್ಯಾಹ್ನ. ರಾಮಮೂರ್ತಿಯ ಮೈ ಕೆಂಡದಂತೆ ಕಾಯುತ್ತಿತ್ತು. ತಲೆ ಕಾವೇರಿದ ಕಾವಲಿಯಾಗಿತ್ತು. ಆಪಾದಮಸ್ತಕ ಅಸಾಧ್ಯ ನೋವು, ಕಾವುಗಳಿಂದ ಹಣ್ಣಾಗಿತ್ತು. ಅರಗಂಜಿಗೆ ರಾಮಮೂರ್ತಿಯನ್ನು ನೋಡಿ ಗಾಬರಿಯಾಗಿತ್ತು; ಜ್ವರ ಮಾಪಕ ಯಂತ್ರದಿಂದ, ಬಲವಂತವಾಗಿ ಅರಗಂಜಿ ಜ್ವರ ನೋಡಿದ; ಜ್ವರ ಉಲ್ಬಣಿಸಿತ್ತು. ಅರಗಂಜಿಯ ಒತ್ತಾಯದಿಂದ ರಾಮಮೂರ್ತಿ ಔಷಧಿ ತೆಗೆದುಕೊಂಡನೇ ಹೊರತು, ವ್ಯಾಸಂಗ ಬಿಡಲಿಲ್ಲ. "ಈ ಸಾರಿ ಫಸ್ಟ್ ಕ್ಲಾಸ್ ಪಾಸಾಗಲೇ ಬೇಕು"—ಹಠ ಯೋಗಿಯ ಛಲ ರಾಮಮೂರ್ತಿಯ ಹೃದಯದಲ್ಲಿ ದಾಂಗುಡಿಯಿಟ್ಟು ಮರವಾಗಿತ್ತು. ಓದಿನ ಓಟ ಉಚ್ಛ್ರಂಖಲವಾಗಿ ಓಡುತಿತ್ತು. ಪರೀಕ್ಷೆ ಸನಿಹಕ್ಕೆ ಬರುತಿತ್ತು. ದಿನಗಳು ಸಾಗುತ್ತಲೇ ಇದ್ದುವು.

ಪರೀಕ್ಷೆಗೆ ನಾಲ್ಕೇ ದಿನಗಳು ಉಳಿದುವು. ಒಂದು ದಿನ ಬೆಳಗ್ಗಿನ ಜಾವ, ರಾಮಮೂರ್ತಿ ಗಟ್ಟಿಯಾಗಿ ಉರುಹೊಡೆಯುತ್ತಿದ್ದ—ದೇಹದ ರಕ್ತ ಪರಿಚಲನೆಯ ವಿಷಯದಲ್ಲಿ; ಒಮ್ಮೆ ಜೋರಾಗಿ ಕೆಮ್ಮಿದ; ವಾಕರಿಸಿದ; ಪಕ್ಕದ ರೂಮಿನಿಂದ ಅರಗಂಜಿ ಓಡೋಡಿ ಬಂದ. ರಾಮಮೂರ್ತಿ ವಾಕರಿಸುತ್ತಲೇ ಇದ್ದ. ಹಣೆ ಮುಟ್ಟಿನೋಡಿದ ಅರಗಂಜಿ. ತೀರಾ ವಿಹ್ವಲನಾದ; ಜ್ವರ ಕಾಯುತಿತ್ತು; ರಾಮಮೂರ್ತಿ ವಾಂತಿಮಾಡಿದ ರಕ್ತ ಮಿಶ್ರಿತ ವಾಂತಿ ಕಾರಿ, ರಾಮಮೂರ್ತಿ ದೊಪ್ಪನೆ ಉರುಳಿದ. ಮೂಗಿನಿಂದಲೂ ರಕ್ತ ಸ್ರಾವವಾಗುತಿತ್ತು. ಪ್ರಜ್ಞಾವಿಹೀನನಾಗಿದ್ದನಾತ.

ಆಸ್ಪತ್ರೆಗೆ ರಾಮಮೂರ್ತಿಯನ್ನು ಸೇರಿಸಿದರು. ಆಸ್ಪತ್ರೆಯ ಡಾಕ್ಟರೆಲ್ಲಾ ಸೇರಿದರು—ತಮ್ಮ ಶಿಷ್ಯನನ್ನು ಜವರಾಯನಿಂದ ತಪ್ಪಿಸಲು. ಅರಗಂಜಿ ವೆಂಕಟಕೃಷ್ಣರಿಗೆ ತಾರು ಬಿಟ್ಟು ಬಂದ. ವೆಂಕಟಕೃಷ್ಣರಿಗೆ ಆಕಾಶವೇ ತಲೆ ಮೇಲೆ ಉರುಳಿದಂತಾಯ್ತು; ನಿಂತ ಕಾಲಲ್ಲಿ ಬಳ್ಳಾರಿಗೆ ಹೊರಟರವರು. ಇಂದಿರಮ್ಮನ ರೋದನ ಹೃದಯ ವಿದ್ರಾವಕವಾಯಿತು. ಗಾಬರಿಯಿಂದ ಎಲ್ಲರೂ ಮಂಕಾಗಿದ್ದರು—ಎಲ್ಲರಿಗೂ ಅಚ್ಚರಿ! ಗಾಬರಿ! ಕಳವಳ!

ವೆಂಕಟಕೃಷ್ಣನವರು ಆಸ್ಪತ್ರೆಗೆ ಹೋದಾಗ ರಾಮಮೂರ್ತಿಯ ಪರಿಸ್ಥಿತಿ ತೀರಾ ವಿಷಣ್ಣವಾಗಿತ್ತು, ವಿಷಾದವಾಗಿತ್ತು. ಮೃತ್ಯು ಶಯ್ಯೆಯಲ್ಲಿ ಮಲಗಿದ್ದ ಮಮತೆಯ ಮಗನು ಪಡುವ ಯಮಯಾತನೆ ಕಂಡು ತಂದೆಯ ಹೃದಯ ವಿದೀರ್ಣವಾಗಿತ್ತು. ಡಾಕ್ಟರು, ವಿದ್ಯಾರ್ಥಿಗಳು ಶಕ್ತಿಮೀರಿ ಪ್ರಯತ್ನಿಸುತ್ತಿದ್ದರು—ತಮ್ಮವನನ್ನು ಉಳಿಸಲು. ಆದರೆ, ವಿಧಿಯ ಕೆಕ್ಕರ ನೋಟದೆದುರು ಮುದಡು ಮಾನವನ ಪ್ರಯತ್ನ ನಿಷ್ಫಲವಾಗುತ್ತಲೇ ಇತ್ತು; ಎಲ್ಲರ ಕಂಗಳಲ್ಲೂ ಅಶ್ರು ತಡಗಲಿನಂತೆ ಹರಿಯುತ್ತಿತ್ತು. ಜ್ವರದ ಕಾವಿನೀದ ಪ್ರಲಾಪಿಸುತ್ತಿದ್ದ ರಾಮಮೂರ್ತಿಗೆ ಇಹಲೋಕದ ಪ್ರಜ್ಞೆ ಇರಲಿಲ್ಲ; ರಕ್ತಧಾರೆ ಮೂಗು ಬಾಯಿಗಳಿಂದ ಹರಿಯುತ್ತಿತ್ತು; ರಕ್ತ ಸಿಕ್ತವಾಗಿದ್ದ ಮಂಚದ ಸುತ್ತಲೂ ನೆರೆದಿದ್ದ ಡಾಕ್ಟರು, ವಿದ್ಯಾರ್ಥಿಗಳು ಕಾಲ ಬಂಜೆಗಳಾಗಿದ್ದರು. ಪ್ರಯತ್ನ ನೀರ ಮೇಲಣ ಬುದ್ಬುದವಾಗುತಿತ್ತು. ಉತ್ಕ್ರಮಣಾವಸ್ಥೆಯ ಅವರ್ಣನೀಯ ಯಾತನೆ, ವೇದನೆಗಳಿಂದ ರಾಮಮೂರ್ತಿ ಕೈ ಕಾಲು ಎತ್ತಿ ಎತ್ತಿ ಬಿಸುಟುತ್ತಿದ್ದ; "ಅಪ್ಪಾ.... ನನ್ನ ರಕ್ಷಿಸಿ... ಕಂಗಿ.... ಉಮಾ .. ಅಮ್ಮಾ..."—ಕ್ಷೀಣ ವಿದೀರ್ಣ ಸ್ವರವನ್ನು ಕುಂಠಿಸಿತು ಉಕ್ಕಿ ಬಂದ ಮಹಾಪೂರ ರಕ್ತಧಾರೆ, ಬಾಯಿಂದ.

ವೆಂಕಟಕೃಷ್ಣನವರು ಶಿಲಾವಿಗ್ರಹದ ಪಡಿನೆಳಲಾಗಿ, ಕಂಬನಿಗರೆಯುತ್ತಿದ್ದರು—ಮೂಕ ಪಶುವಿನಂತೆ. ಬಿಕ್ಕಲಾರಂಭವಾಯ್ತು. ಎಲ್ಲರ ಆಸೆಯೂ ಪೂರ್ತಿಗೊಂಡಿತು; "ಅಮ್ಮಾ... ಅಪ್ಪಾ...."..... ಉಗ್ಗಡಿಸಿ ಕರೆದ ರಾಮಮೂರ್ತಿಯ ಗೋಣು ಬದಿಗೆ ಬಿತ್ತು; ಕಣ್ಣು ಅರೆ ಮುಚ್ಚಿತು; ದೇಹ ಸ್ತಬ್ಧವಾಯ್ತು: "ಅಯ್ಯೋ.... ಹೋದಿಯಾ..."—ವೆಂಕಟಕೃಷ್ಣನವರು ಬವಳಿ ಬಂದು ನೆಲಕ್ಕೊರಗಿದರು.

ಪಂಜರದ ಹಕ್ಕಿ ಬಂಧನವಿಮುಕ್ತವಾಗಿ

(ಹದಿನೈದನೇ ಪುಟನೋಡಿರಿ)

ಟೆಲಿಗ್ರಾಂ: 'ಸುದರ್ಶನ'. ಸ್ಥಾಪಿತ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

Phone No. 226

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಫೋಟೋ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ದಿ ಇಂಡಸ್ಟ್ರಿಯಲ್ ಕ್ರೆಡಿಟ್ ಎಂಡ್ ಇನ್ವೆಸ್ಟ್‌ಮೆಂಟ್ ಕಾರ್ಪೊರೇಶನ್ ಆಫ್ ಇಂಡಿಯಾವು ಕಾಗದ, ಎಲ್ಯೂಮಿನಿಯಂ ಮತ್ತು ವಿದ್ಯುದುಪಕರಣಗಳ ತಯಾರಿಕೆಗೆಂದು ಮೈಸೂರು, ಮದ್ರಾಸು ಮತ್ತು ಗುಜರಾತ ರಾಜ್ಯಗಳಿಗೆ ಆರ್ಥಿಕ ನೆರವು ನೀಡಿದೆ. ಈ ನೆರವಿನಿಂದ ಕಟ್ಟಿದ ಒಂದು ಕಾರಖಾನೆಯ ಒಳದೃಶ್ಯವಿದು.

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೪೧	೧೦—೬—೧೯೬೫	No. 41

ಕಾಮನ್‌ವೆಲ್ತ್ ಪರಿಷತ್ತು

ಇನ್ನು ಕೆಲವೇ ದಿನಗಳಲ್ಲಿ ಜರಗಲಿರುವ ಕಾಮನ್‌ವೆಲ್ತ್ ಪ್ರಧಾನಿಗಳ ಪರಿಷತ್ತು ಭಾರತೀಯ ಹಾಗೂ ಜಾಗತಿಕ ದೃಷ್ಟಿಯಲ್ಲಿ ಕೆಲವು ವಿಚಾರಗಳ ಮಟ್ಟಿಗಾದರೂ ಅತಿ ಮುಖ್ಯದ್ದೆಂದೇ ಹೇಳಬೇಕು. ಕಳೆದ ವರ್ಷ ಪ್ರಧಾನಿಯಾಗಿ ಐಕ್ಯ ಹೊಂದಿದ ಪಂಡಿತ ನೆಹರೂರವರ ಉತ್ತರಾಧಿಕಾರಿ ಲಾಲಬಹದೂರ ಶಾಸ್ತ್ರಿಯವರು ತಮ್ಮ ಅನಾರೋಗ್ಯದ ನಿಮಿತ್ತ ಆ ಸಮ್ಮೇಳನದಲ್ಲಿ ಭಾಗವಹಿಸದೆ ತನ್ನ ಪ್ರತಿನಿಧಿಗಳನ್ನು ಕಳಿಸಬೇಕಾಗಿ ಬಂದಿತ್ತು. ನೆಹರೂ ಉತ್ತರಾಧಿಕಾರಿಯನ್ನು ಕಾಣಬೇಕು, ಅವರ ಸಂಗಡ ಮಾತನಾಡಬೇಕು ಎಂದು ಮುಂತಾಗಿ ಹಂಬಲಿಸಿದ್ದ ಕೆಲವು ಕಾಮನ್‌ವೆಲ್ತ್ ರಾಷ್ಟ್ರಗಳ ವರಿಷ್ಠರಿಗೆ ಆಗ ನಿರಾಶೆಯಾಗಿತ್ತು. ಏಕೆಂದರೆ, ಲಾಲಬಹದೂರರು ವಿದೇಶ ಯಾತ್ರೆ ಮಾಡಿದ್ದೇ ಬಹಳ ಕಡಿಮೆ; ಅದೂ ಪ್ರಧಾನಿಯಾಗುವುದಕ್ಕೆ ಮೊದಲು ಅವರು ಹೊರಗೆ ಹೋದವರೇ ಅಲ್ಲ. ಆದುದರಿಂದ, ಮೊತ್ತಮೊದಲ ಬಾರಿಗೆ ಲಾಲಬಹದೂರರು ಈ ಬಾರಿಯ ಕಾಮನ್‌ವೆಲ್ತ್ ಪ್ರಧಾನಿ ಪರಿಷತ್ತಿನಲ್ಲಿ ಪಾತ್ರವಹಿಸುವುದರಿಂದ, ಅವರ ವ್ಯಕ್ತಿತ್ವದ ಪ್ರಭಾವವು ಇತರರ ಮೇಲೆ ಬೀಳುವುದು ಸ್ವಾಭಾವಿಕ.

ಕೆನಡಾ ಸಂದರ್ಶನಾರ್ಥ ಹೊರಟವರು ಅಲ್ಲಿಂದಲೇ ಲಂಡನ್ನಿನಲ್ಲಿ ಇಳಿಯುವ ಭಾರತೀಯ ಪ್ರಧಾನಿಗಳು ಪರಿಷತ್ತಿನಲ್ಲಿ ಕೆಲವು ಸಮಸ್ಯೆಗಳನ್ನು ಎದುರಿಸಬೇಕಾಗಬಹುದು. ಕಳೆದ ಬಾರಿ ಪರಿಷತ್ತಿನ ಕೊನೆಗೆ ಹೊಂಟ ಹೇಳಿಕೆಯಲ್ಲಿ ಕಾಶ್ಮೀರವೂ ತಲೆ ಹಾಕಿತ್ತು. ಅದಕ್ಕೆ ಮೊದಲು ಪ್ರಧಾನಿ ನೆಹರೂರವರು, ಇಂತಹ ಸಂಬಂಧವಿಲ್ಲದೆ ವಿಚಾರಗಳ ಪ್ರಸ್ತಾಪವನ್ನು ತಡೆ ಹಿಡಿಯುತ್ತಿದ್ದರೆಂದೂ, ಈಗ ಭಾರತೀಯ ಪ್ರಭಾವವು ಕಡಿಮೆಯಾಗಿ ಪಾಕ್ ಮೇಲುಗೈಯಾಯಿತೆಂದೂ ದೂರಿದವರಿದ್ದರು. ಸಭೆಯ ಹೊರಗೆ ಈ ವಿಷಯವು ಪ್ರಸ್ತಾಪವಾದುದರಿಂದ ಇದಕ್ಕೆ ನಾವು ಜವಾಬ್ದಾರರಲ್ಲವೆಂದು ಪ್ರತಿನಿಧಿ ಟಿಟಿಕೆ ಸ್ವರಕ್ಷಣೆ ಮಾಡಿಕೊಳ್ಳಲು ಪ್ರಯತ್ನಿಸಿದರಾದರೂ ಇದು ಭಿನ್ನಾಭಿಪ್ರಾಯಗಳಿಗೆ ಸಮಾಧಾನವನ್ನು ತಂದಿಲ್ಲವೆಂಬೇ ಹೇಳಬೇಕು. ಈ ವರ್ಷ ಸ್ವಯಂ ಶಾಸ್ತ್ರಿಯವರೇ ಪ್ರತ್ಯಕ್ಷವಿರುವುದರಿಂದ ಇಂತಹ ಕುಹಕ ಪ್ರಯತ್ನವು ನಡೆಯಲಾರದೆಂದು ನಂಬಬಹುದು.

ಕಾಮನ್‌ವೆಲ್ತ್ ಪರಿಷತ್ತು ಸದಸ್ಯ ರಾಷ್ಟ್ರಗಳ ಸಾಮಾನ್ಯ ಸಮಸ್ಯೆಗಳನ್ನು ಚರ್ಚಿಸಿ, ಅವುಗಳ ಪರಿಹಾರಕ್ಕೆ ಸೂಕ್ತ ವಿಧಾನಗಳನ್ನು ಅರಸುವ ಪ್ರಯತ್ನ ಮಾಡುವುದು. ಸದಸ್ಯ ರಾಷ್ಟ್ರಗಳ ನಡುವೆ ಉತ್ತಮ ಸಂಬಂಧವನ್ನು ಬೆಳೆಯಿಸಿಕೊಳ್ಳಲು ನೆರವಾಗುವುದು. ಅದು ಬಿಟ್ಟು ಎರಡು ಸದಸ್ಯ ರಾಷ್ಟ್ರಗಳ ನಡುವಣ ತಂಟೆಗಳನ್ನು ಪರಿಹರಿಸಲು ಅಥವಾ ಅವುಗಳನ್ನು ಎತ್ತಿ ಚರ್ಚಿಸಲು ಇಲ್ಲವೇ ಒಂದು ಸದಸ್ಯ ರಾಷ್ಟ್ರದ ವಿಚಾರ ಪ್ರಚಾರ ಮಾಡಲು ತಕ್ಕ ವೇದಿಕೆಯಲ್ಲ. ಕಳೆದ ಬಾರಿ ಪಾಕ್ ಪತ್ರಾಯದಿಂದ ಕಾಶ್ಮೀರದ ವಿಚಾರ ಚುಟುಕಿನಲ್ಲಿ ತಲೆಯೆತ್ತಿತ್ತು. ಈ ಸಲವಾದರೂ 'ಕಚ್ಛರಣ'ದ ತಂಟೆಯನ್ನೂ ಅದರೊಂದಿಗೆ ಬೆಸೆದ. ಭಾರತ-ಪಾಕಿಸ್ತಾನದ ಗಡಿತಂಟೆಯನ್ನು ಒಂದಾಗಿ ನಿರ್ಧರಿಸುವ ವಿಚಾರವನ್ನು ಪರಿಷತ್ತಿನ ಮುಂದಿಡಲು ಪಾಕಿಸ್ತಾನವು ಪ್ರಯತ್ನ ಮಾಡಬಹುದು. ಬ್ರಿಟಿಷ್ ಪ್ರಧಾನಿ ಹೆರಾಲ್ಡ್ ವಿಲ್ಸನರು ಕಚ್ಛರಣ ತಂಟೆಯ ಪರಿಹಾರ ಕಾರ್ಯದಲ್ಲಿ ಕಳಕಳಿಯ ಆಸಕ್ತಿ ತಳೆದಿರುವುದನ್ನು ನಾವು ಗಮನಿಸಿದರೆ, ಇದರ ಸಾಧ್ಯತೆಯಿದೆಯೆಂದೂ ಅನಿಸಬಹುದು. ಆದರೆ, ಪ್ರಧಾನಿ ಶಾಸ್ತ್ರಿಯವರು ಒಂದಕ್ಕಿಂತ ಹೆಚ್ಚು ಸಾರಿ ಕಚ್ಛತಂಟೆಯನ್ನು ಇತರ ಗಡಿ ವಿವಾದಗಳೊಂದಿಗೆ ಸೇರಿಸುವುದನ್ನು ಬಲವಾಗಿ ವಿರೋಧಿಸಿದ್ದಾರೆ. ಏಕೆಂದರೆ, ಬ್ರಿಟಿಷ ಭಾರತದ ಸಿಂಧ—ಗುಜರಾತ ಗಡಿಯೇ ಈ ಪ್ರದೇಶದ ಪಾಕ್-ಭಾರತ ಗಡಿಯೆಂದು ಭಾರತದ ಖಚಿತಾಭಿಪ್ರಾಯ. ಇಲ್ಲಿ ಸಮಂಜಸ ವಿರಾಮವಾಗಬೇಕಾದಲ್ಲಿ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುವುದೇ ಭಾರತದ ಶರ್ತ. ಇದು ಇತರರಿಗೆ ಸರಿತೋರಿದರೂ ಭಾರತ ವಿರೋಧಿ ಪಾಕಿಸ್ತಾನಕ್ಕೆ ಸರಿ ಕಾಣುವುದಿಲ್ಲ. ಈ ಕಾರಣದಿಂದಲೇ ವಿಲ್ಸನರ ಸಂಧಾನ ಪ್ರಯತ್ನ ಅಫಲವಾಗಿದೆಯೆಂಬುದು ಜಗಜ್ಜಾಹಿತ ವಿಷಯ. ಹಾಗಿದ್ದರೂ ತಂಟೆಯ ಪರಿಹಾರದ ಬಗ್ಗೆ ಮಾತುಕತೆಗಳ ಕಾಮನ್‌ವೆಲ್ತ್ ಪರಿಷತ್ತಿನ ವೇಳೆ ಮುಂದುವರಿಯುವ ನಿರೀಕ್ಷೆಯಿದೆಯೆಂಬ ವರದಿಯು ಕಳವಳಕ್ಕೆ ಕಾರಣವಾಗಿದೆ. ಪ್ರಧಾನಿ ಶಾಸ್ತ್ರಿಯವರು ಈ ಸಂಬಂಧದಲ್ಲಿ ದೃಢವಾದ ನಿಲುವೆಯನ್ನು ತೊಟ್ಟಿದ್ದಾರೆ. ಇಂತಹ ಯಾವುದೇ ಪ್ರಸ್ತಾಪ ಬಂದಲ್ಲಿ ತಾವು ಬಲವಾಗಿ ವಿರೋಧಿಸುವುದಾಗಿ ಅವರು ಭರವಸೆ ನೀಡಿದ್ದಾರೆ. ಇದು ಸ್ತುತ್ಯಾರ್ಹ.

ಇದರ ನಡುವೆ ಮತ್ತೊಂದು ಸುದ್ದಿಯಿದೆ. ಕಾಶ್ಮೀರದಲ್ಲಿನ ಸಮರವಿರಾಮ ಗಡಿಯನ್ನು ಉಲ್ಲಂಘಿಸಿದ ಭಾರತೀಯರನ್ನು ಕೊಂದು ಅವರ ತಲೆಯನ್ನು ಕುರುಹಾಗಿ ತಂದೊಪ್ಪಿಸಿದಾಗ ತಲೆಯೊಂದಕ್ಕೆ ರೂ. ೫೦೦ರಂತೆ ಬಹುಮಾನ ನೀಡುವುದಾಗಿ ರಜಾಕಾರ ಸಂಘವು ಘೋಷಿಸಿದೆಯಂತೆ. ಸಮರವಿರಾಮ ರೇಖೆಯನ್ನು ಮೀರಿ ಬರುವವರಾರು ಎಂಬುದಕ್ಕೆ ಸಂಯುಕ್ತರಾಷ್ಟ್ರ ಸಂಘಟ ನಿರೀಕ್ಷಕರ ವರದಿಯೇ ಸಾಕ್ಷಿ. ಅಪರಾಧಿಗಳು ತಮ್ಮ ಅಪರಾಧವನ್ನು ಮುಚ್ಚಿಡುವುದಕ್ಕಾಗಿ ಮತ್ತು ನಿರೀಹ ಭಾರತೀಯರ ಕಗ್ಗೊಲೆಗಾಗಿ ಇಂತಹ ರಾಕ್ಷಸೀ ಕೃತ್ಯಕ್ಕೆಗೊಳ್ಳಲು ಹಿಂಜರಿಯಲಿಲ್ಲ. ಇದಕ್ಕೆ ಸೂಕ್ತ ಕ್ರಮವನ್ನು ನಾವೂ ರೂಪಿಸಿಕೊಳ್ಳಲೇಬೇಕು. ಚೀನೀ ಪ್ರಧಾನಮಂತ್ರಿ ಚೌ—ಎನ್—ಲಾಯರ ಆಕಸ್ಮಿಕ ಪಾಕ್ ಸಂದರ್ಶನಕ್ಕೂ ಕಾಮನ್‌ವೆಲ್ತ್ ಪ್ರಧಾನಿ ಪರಿಷತ್ತಿಗೂ ನಿಗೂಢವಾದ ಸಂಬಂಧವಿದ್ದರೂ ಇರಬಹುದು. ಇವೆಲ್ಲ ಹೀಗಿರುವಾಗ, ವಿಲ್ಸನರು ಸಂಧಾನ ಯತ್ನವನ್ನು ಮುಂದುವರಿಸುವುದು ಸಂಭಾವ್ಯವೆಂದೂ ತಾನು ಶಾಸ್ತ್ರಿ ಮತ್ತು 'ಅಯ್ಯೂಬ ಖಾನರೊಡನೆ ಖಾಸಗಿಯಾಗಿ ವಿಚಾರ ವಿನಿಮಯ ಮಾಡುವನೆಂದೂ ಮತ್ತೊಂದು ವಾರ್ತೆ ಹರಡಿದೆ. ಇದನ್ನು ನಿಸ್ಸಂಗತಿ ಪಡಬಹುದು. ಶಾಸ್ತ್ರಿಯವರು ಈ ಸಂಬಂಧದಲ್ಲಿ ಈಗ ತಳೆದಿರುವ ದೃಢ ನೀತಿಯು ಎಲ್ಲೆಲ್ಲಿಯೂ ಪ್ರಶಂಸಿಸಲ್ಪಟ್ಟಿದೆ. ಇದೇ ನೀತಿಯನ್ನು ಅವರು ಮುಂದಿನ ಮಾತುಕತೆಯ ಸಂದರ್ಭದಲ್ಲಿಯೂ ತಳೆಯಬೇಕು. ಪತ್ರಾಯ, ದಬ್ಬಾಳಿಕೆ, ಬೆದರಿಕೆ

(ಹದಿನಾಲ್ಕನೇ ಪುಟ ನೋಡಿರಿ)

ವಚನ ಸುಧೆ

ಋತಂ ವದಿಷ್ಯಾಮಿ।
ಸತ್ಯಂ ವದಿಷ್ಯಾಮಿ॥

(ತೈತ್ತಿರೀಯೋಪನಿಷತ್ ೧-೧೧)

§ ಸರಿಯಾದುದನ್ನೇ ನುಡಿಯುತ್ತೇನೆ. ಸತ್ಯವಾದುದನ್ನೇ ಆಡುತ್ತೇನೆ.

§§ ಹೇಳಿದೊಡನೆಯೇ ತಿಳಿದುದನ್ನು ಸರಿಯಾಗಿ ಸರಳವಾಗಿ ಹೇಳಬೇಕು. ಅದರಲ್ಲಿ ವಂಚನೆ ಕಪಟಗಳಿಗೆ ಆಸ್ಪದ ನೀಡಬಾರದು. ಸತ್ಯವಾದುವ ನಿಯಮವನ್ನು ಉತ್ತಮ ರೀತಿಯಿಂದ ಪರಿಪಾಲಿಸಬೇಕು. ಎಂತಹ ಆಪತ್ತು ಬಂದರೂ ಸತ್ಯವಚನದಿಂದ ದೂರವಿರಬಾರದು.

ನೆರಸಣ್ಣನ ಸರಸ

"ರಾಯ್ರೇ, ಪುರಾರಿಗಳು ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲೂಕನ್ನೇ ಕೇಳ್ತಾ ಇದ್ದಾರಂತೆ! ಅಷ್ಟಲ್ಲದೆ ನಾಲ್ಕು ಸರ್ಕಾರಗಳಲ್ಲಿ ಮೂರರ ಮೇಲೆ ಅಧಿಕಾರ ತಮ್ಮದೆಂದು ವಾದಿಸ್ತಾರಂತೆ! ಏನು ಕತೆಯಿದು?"

"ಸರಿಹೋಯ್ತು ಬಿಡು, ಕಾಸರಗೋಡು ತಾಲೂಕನ್ನು ನಾವು ಕೇಳುತ್ತಿಲ್ವೆ? ಚಂದ್ರಗಿರಿ ಹೊಳೆಯ ಉತ್ತರ ಭಾಗವನ್ನು ಅಧಿಕಾರವಾಣಿಯಿಂದ ಕೇಳೋದಿಲ್ವೆ?"

ಗೇಹ ರಾಜ್ಯದಲ್ಲಿ

ಸಾಯುವವನಿಗೊಂದು ಇಂಜೆಕ್ಷನ್

"ಬೇಷ್ ಬೇಷ್..."

"ಓಯ್, ಏನಿದು? ಪೇಪ್ರು ಕೈಲಿ ಹಿಡುಕೊಂಡೇ ತಲೆದೂಗೋ ಸಂಗ್ತಿ?"

"ಅಲ್ವೆ, ಇದೇ ನೋಡು, ಅಗ್ದಿ ಚಲೋ ಸಂಗ್ತಿ...."

'ಅದು ಗೊತ್ತಾಗುತ್ತೆ. ಚಲೋದಲ್ಲಿದ್ರೆ ನೀವ್ಯಾಕೆ ತಲೆತೂಗುತ್ತಿದ್ರಿ? ಅದ್ರೆ ವಿಷಯವೇನೂಂತ?"

"ವಿಷಯ? ಅದೇ ಭಾರಿ ದೊಡ್ಡ ಸಂಗ್ತಿ."

"ಅದು ಗೊತ್ತಾಯ್ತು ಬಿಡಿ...."

'ಹೇಗೆ?"

"ಅಗ್ದಿ ಅಂದೆನಲ್ಲಾ?"

"ಹ್ಞಾಂ.... ಅದಕ್ಕೇ ಉನ್ಮಾದದಿಂದ...."

'ಸಾಕು ಬಿಡೀಂದ್ರೆ.... ಅಲ್ಲಾ ಅಂತಹ ಉನ್ಮಾದಾವಸ್ಥೆಗೇರೋಕೆ ಕಾರಣವಾದ್ದೂ ಏನಂತೆ? ಏನು, ಆಹಾರಮಂತ್ರಿ ಖಾತೆಯನ್ನು ವಹಿಸಿಕೊಳ್ಳೋದಕ್ಕೆ ಯಾರೂ ಸಿಗಲಿಲ್ವೆ ನಿಮ್ಮ ನಿಜಲಿಂಗಪ್ಪನವರಿಗೆ?"

"ಅಲ್ವೆ, ಮಂತ್ರಿ ಖಾತೆ ಯಾರು ವಹಿಸಿಕೊಂಡ್ರೆ ಏನಂತೆ? ಬೆಳೆಯೋರು, ಬೇಳೇ ಹೆಚ್ಚಾಗದೆ ಯಾರು ಬಂದ್ರೂ ಏನು ಮಾಡೋದಾದ್ರೂ ಏನಂತೆ?"

"ಅದು ಸರೀನ್ನಿ. ಅದ್ರೂ ಹೇಳ್ತಿದ್ರಲ್ಲಾ, ಅದಕ್ಕೆ ಪ್ರತ್ಯೇಕ ಮಂತ್ರಿಯನ್ನು ನೇಮಿಸ್ತೇವೇಂತ."

"ನೇಮಿಸ್ಯಾರು ಬಿಡು. ಯಾರಾದ್ರೂ ಒಬ್ರು ಬರ್ತಾರೇನ್ನು..."

"ಅದು ನಂಗೊತ್ತಿಲ್ವೆ? ತಾ ಹುಟ್ಟಿಂಬವ ಹೊದ್ರೆ ಉಮಿ ಮುಕ್ಕುವವ ಬರ್ತ..."

"ಏ, ಸಾಕುಮಾಡೇ ನಿಂದು ಮಾತು. ಭಾರೀ ಉದ್ದವಾಗಿ ಬೆಳೆದಿದೆ ನೋಡು ನಾಲಿಗೆ...."

"ಹೌದಪ್ಪ, ನಮ್ಮ ನಾಲಿಗೆ ಮಾತ್ರ ಬೆಳೆಯೋದು ಉದ್ದ... ನಿಮ್ಮ ನಾಲಿಗೆ ಹನುಮಂತನ ಬಾಲವಾಗ್ತಾ ಇದೇಂತ ಮಾತ್ರ ತಿಳಿಯೋದಿಲ್ಲ....?"

"ಅಂದ್ರೆ ನಾನೂನೂ ನಿನ್ನ ಹಾಗೇ ಮಾತಾಡ್ತೇನೇಂತ ನೀನನ್ನೋದು?"

"ಒಳ್ಳೇ ತಮಾಷೆಯಾಯ್ತಲ್ಲ ಇದು!"

"ಯಾಕೆ ಏನಾಯ್ತು?"

"ಆಗೋದೇನು ಮಣ್ಣು...."

"ಸರಿ ಮತ್ತೆ, ಮಳೆ ಹೇಗೂ ಸುರಿಯೋದಕ್ಕೆ ಆರಂಭವಾಗಿದೆ....'

'ಇನ್ನೂ ಆರಂಭವಾಗಬಾರ್ದೂಂತ್ಲೇ ನೀವನ್ನೋದು?'

"ಛೆ, ಛೆ, ಶಾಂತಂ ಪಾಪಂ. ಅಲ್ವೆ, ಮಳೆ ಬಾರ್ದೂಂತ ಅಂದ್ರೆ, ಮುಂದೆ ತಿನ್ನೋದಾದ್ರೂ ಏನೂಂತ?"

'ಮತ್ತೆ ಮಳೆ ಬರುತ್ತೇಂತ ದಾರ್ತೀರಲ್ಲಾ?"

'ನಾನೆಲ್ಲಿ ದಾರಿದ್ದೆ?"

"ಮತ್ತೇನು, ಅದನ್ನ ಹೊಗ್ಳಿದ್ದಿ?"

"ಅಯ್ಯೋ, ನೀನೊಂದು ಮೊದ್ದು...."

"ಹೌದೌದು, ನಾನು ಮೊದ್ದು, ನೀವು...?"

"ನಿನ್ನ ನಾ ಹಾಗಂದೆ. ನನ್ನ ನೀ ಹೇಗಂತೀಯ?'

'ಹೇಳ್ಲೇ ಬೇಕೇನು?'

'ಉಸುರುತಿದ್ದರೆ, ಕರ್ಣ ರಸಾಯನವಾಗುತಿತ್ತು...."

"ಓ, ರಸಾಯನ ಅನ್ನುತ್ಲೂ ನೆನಪಿಗೆ ಬಂತು..."

'ಏನದು?'

"ಮತ್ತೇನಿಲ್ಲಾ.... ಮಾವಿನ ರಸಾಯನ ಒಂದ್ಸಾರಿ ಮಾಡಬೇಕಲ್ಲಾ...."

'ಭಾರಿ ದೊಡ್ಡ ಬಯಕೆಯಿದು...."

"ಹಾಗೇನಿಲ್ಲಾ, ಈ ವರ್ಷ ತಿನ್ನಿಲ್ಲಾಂತ...."

'ಹ್ಞಾಂ....ಅಂತೂ ಬಂತು ಐದು ರೂಪಾಯಿಗೊಂದು ಕತ್ತರಿ....! ಅಲ್ಲಾ, ಈ ತುಟ್ಟಿಯ ಕಾಲದಲ್ಲೂ ನಾಲಿಗೆ ಬಿಗಿ ಹಿಡಿಯೋಕೆ ಆಗೋದಿಲ್ಲಾಂತಂದ್ರೆ...."

"ಹೌದು, ನಾವೆಲ್ಲಾ ನಾಲಗೆ ಬಿಗಿ ಹಿಡೀಬೇಕು, ಏಕೆಂದ್ರೆ ಭಾರಿ ಉದ್ದವಾಗಿದೆ...."

"ಬಹಳ ಉದ್ದವಿಲ್ವೆ....'

"ಮತ್ತೆ...."

'ಒಂದಂಗುಲದಷ್ಟು ಮಾತ್ರ....'

'ನಿಮ್ದು....?'

'ಹ್ಞಾಂ...ಹಾಗೇನ್ನು....'

"ಹಾಗಾದ್ರೆ ಸರ್ಯಾಗಿಲ್ರಿ. ಮೊದ್ದು—ಪೆದ್ದು ಎರಡಕ್ಕೂ ಸಮಾನತೆ ಯಿದೇಂತಾಯ್ತು..."

"ಇಲ್ದೆ ಮತ್ತೆ? ಮದುವೆಯಾಗೋಕೆ ಮೊದ್ಲು ಜಾತಕ ತೋರ್ಸ್ಸಿ ಸಮಾನತೆಯಿದೆಯೇ ಇಲ್ವೇಂತ ನೋಡದಿದ್ರೂ ಆ ದಿನ ಎಲ್ರೂ ಅಂದಿದ್ರು...."

"ಏನೂಂತ?"

"ಮತ್ತೇನು? ಸುಬ್ರಹ್ಮಣ್ಯಕ್ಕೆ ಹೋದ್ರೂ ಇಂತಹ ಜೋಡಿ ಸಿಗಲಾರದೂಂತ...."

"ಅದು ಸರೀನ್ನಿ. ಅದಕ್ಕೇ ಅಲ್ವೆ ನೀವು ಹಿಂದೆ ಬಂದು ನಮ್ಮೂರಿಗೆ ಪಾದಾರ್ಪಣ ಮಾಡಿದ್ದು?"

'ಹ್ಞಾಂ....ಇರ್ಲಿ ಇರ್ಲಿ. ನೋಡು ಕೈ ಹಿಡಿದ ಗಂಡಾಂತ ಒಂದು ಮಾತು ಹೇಳ್ತೀನೆ. ಸುಂಸುಮ್ನೇ ನಾಲಿಗೆ ಹೊರಚಾಚ ಬೇಡ...."

"ಮತ್ತೆ ನೀವು ಕೂತಲ್ಲೇ ಬೇಷ್ ಬೇಷ್ ಅಂತ ಗರಬಡೆದವರಂತೆ ಗೊಣಗಿಕೊಂಡ್ರೆ..."

"ಏನೋ ಆನಂದವಾಯ್ತು....'

'ಅದೇ ಯಾಕೇಂತ ಕೇಳಿದ್ನಲ್ಲಾ ಆಗ಼್ಲೇ....'

"ಓ, ಅಂದ್ರೆ ಈಗ ನಿನ್ಗೆ ಯಾಕೇಂತ ಅನ್ಬೇಕು...."

"ಹೌದು...ನಾನೂ ತಿಳ್ಕೋತ್ತೇನೆ...'

"ಅಲ್ವೆ, ಒಲೆ ಮುಂದೆ ಕೊಳವಿ ಊದೋಳು ತಿಳ್ಕೊಂಡು ಮಾಡೋಬಾದ್ರೂ ಏನೂಂತ?"

"ಸಾಕು ಬಿಡೀಂದ್ರೆ...ನಾನು ಹೆಚ್ಚು ಕಲೀಲಿಲ್ಲಾಂತ ತಾನೇ ನಿಮ್ಗೆ ಅಸಮಾಧಾನ? ಯಾಕೆ ಮತ್ತೆ ನನ್ನ ಕೈಹಿಡಿದದ್ದು? ಹಿಡೀಬೇಕಿತ್ತು ಯಾರಾದ್ರೂ ಗೇಜುವೇಟನ್ನು...."

"ಅಯ್ಯೋ ಕರ್ಮವೆ! ನಾನು ಎಲ್ಲಿ ಹಾಗಂದೆನೆ? ಸುಂಸುಮ್ನೆ ಒಂದನ್ನು ಒಂದೂವರೆಯಂತ ಅಂದ್ಕೊಂಡು....'

"ಅಷ್ಟೂ ಹೆಡ್ಡಿಯಲ್ರಿ ನಾನು...."

"ಅದು ನನ್ಗೂ ಗೊತ್ತು. ಅದದ್ರಿಂದ್ಲೇ ಮದುವೆಯಾದೇನ್ನು...'

"ಇನ್ನು ಅನ್ನೋದೇನು? ಲೋಕಕ್ಕೇ ಗೊತ್ತು... ಅದೆಲ್ಲಾ ಇರ್ಲಿ, ಸಂತೋಷಪಡೋ ಸಂಗ್ತಿ ಏನಿದೇಂತ...ನೋಡು...'

"ನಿಂಬ್ಲಾಯಚಿ ಮತದಿಂದ ಸೋಲು ತಪ್ಪಿತು... ಅಲ್ರಿ, ಎಂತಹ ಸೋಲು? ಯಾರಿಗೆ?"

"ಓದು ಅಂದೆನಲ್ಲಾ...."

"ಇರ್ಲಿ, ನೇನೇ ಓದಿ ಹೇಳಿ..."

"ಒಳ್ಳೆ ಗಡಸ-ಗಾರ್ತಿ ಕಣೆ ನೀನು..."

"ಯಾಕೆ?"

'ಯಾಕೇಂದ್ರೆ, ಮತ್ತೆ ಓದು ಅಂದ್ರೆ ನೀವೇ ಓದಿ ಹೇಳೀಂತಿ....ಇನ್ನು..."

'ಅಲ್ರಿ, ಒಲೀ ಮುಂದೆ ಕೂತು ಕೊಳವಿ ಊದಿ ಊದಿ ಕಣ್ಣಗಳೆಲ್ಲಾ ಊದಿ ಹೋಗಿವೆಯೆಂದ್ರೆ...."

"ಹ್ಞಾಂ ಸರ್ಯಾಗಿಲ್ವೆ ನೀನು? ನನ್ನ ನಾಣ್ಯವನ್ನ ನನ್ನ ಕೈಗೇ ಹಾಕಿಬಿಟ್ಟೆ...."

"ತಿಳಿದವ್ರೂ ಓದೋಕೆ ಇಷ್ಟೊಂದು ಹಿಂಜರಿದರೆಂದ್ರೆ, ಮತ್ತೆ ತಿಳೀದವ್ರ ಗತಿಯೇನೂಂತ...."

'ಓ, ಒಳ್ಳೇ ಸರ್ಟಿಫಿಕೇಟು ಕೊಡ್ತೀಯಾ.... ಹ್ಞಾಂ ಸರಿ ಹಾಗಾದ್ರೆ ಕೇಳು ನೋಡೋಣ. ಅಥ್ವಾ ಬೇಡ ಕಣೆ. ಬಾಯಲ್ಲೇ ಹೇಳಿಬಿಡ್ತೇನೆ ಆಗದೆ?"

'ಕೋಳಿಯೊಡನೆ ಕೇಳಿ ಮಸಾಲೆ ಕಡಿಯುತ್ತಾರೆಯೆ?"

"ಅಂದ್ರೆ..."

"ಅಂದ್ರೂ ಇಲ್ಲ, ಇಂದ್ರೂ ಇಲ್ಲ. ದೇವರ ಮರ್ಜಿ ಹೇಗೋ ಹಾಗೆ ಅಗ್ಲಿ—"

'ನಿನ್ನ ದೇವ್ರಾದ್ರೂ ಯಾರೂಂತ....'

"ಅಲ್ರಿ, ಮೊನ್ನೆ ಒಬ್ಬ ಹೇಳ್ತಿದ್ದ...."

"ಏನಂತೆ?"

"ನೋಡಿ, ಈ ಲೋಕದಲ್ಲಿ ನಡೆಯುತ್ತಿರೋ ಅನ್ಯಾಯ—ಅತ್ಯಾಚಾರಗಳನ್ನ ಕಾಣಲಾರದೆ ದೇವ್ರು ಕಲ್ಲಾಗಿ ಕೂತಿದ್ದಾರೆ. ಮಂದಿರಗಳಲ್ಲಿರೋದು ದೇವರಲ್ಲ. ಅವರ ಹೆಣಾಂತ...."

"ಓಹೋ, ಹಾಗೋ? ಇರಲಿ. ದೊಡ್ಡ ತತ್ವಜ್ಞಾನಿಯಿರಬಹುದು. ಹಿಮಾಲಯದ ತಪ್ಪಲಲ್ಲಿ ತಪಸ್ಸು ಮಾಡಿ ಹಿಂದೆ ಬಂದ ಮಹಾಯೋಗೀಶ್ವರರಿರಬಹುದು....'

'ಹ್ಹ ಹ್ಹ..ಹ್ಹ.... ಒಂದು ಮಾತು ನಿಜ. ಯೋಗೀಶ್ವರರಲ್ಲವಾದ್ರೂ ಜೋಗೀಶ್ವರರು...'

"ಯಾವ ಈಶ್ವರರೇ ಇರಲಿ. ಅವನಲ್ಲೂ ಈಶ್ವರನಿದ್ದಾನೆ ನೋಡು...."

'ಅಂದ್ರೆ?'

'ಕೇಳು: ಗೀತಾಚಾರ್ಯ ಹೇಳಿದ್ದಾನೆ....'

"ಯಾವ ಆಚಾರ್ಯನವ?"

"ಅಯ್ಯೋ ನೀನೊಂದು....ಗೀತಾಚಾರ್ಯ ಅಂದ್ರೆ ಗೀತೆಯನ್ನು ಹೇಳಿದವನು...."

"ಗೀತೆಯನ್ನು, ನಾನೂ ನೀವೂ ಎಲ್ರೂ ಹೇಳ್ತೇವಲ್ಲ? ಹಾಗಾದ್ರೆ...."

"ಛೆ ಛೆ ಛೆ__ ಹಾಗಲ್ಲ ಅದು. ನಾನು ನೀನೂ ಅನ್ನೋದು ಸಿನೆಮಾ ಗೀತ, ನಟ್ಯಗೀತ, ಭಾವಗೀತ ಇತ್ಯಾದಿ ಇತ್ಯಾದಿ ವರ್ಗ ಘನಗಳು. ಇದು ಹಾಗಲ್ಲ. ನೀನು ಭಗವದ್ಗೀತೆಯ ಹೆಸ್ರು ಕೇಳಿಲ್ವೆ?'

"ಅಯ್ಯೋ, ಇಲ್ಲದೆ ಉಂಟೆ? ಅವನ್ನು ಭಗವಾನ್ ಶ್ರೀಕೃಷ್ಣ ಪರಮಾತ್ಮನೇ ತನ್ನ ಅಪ್ಪಟ ಶಿಷ್ಯ ಪಾರ್ಥನಿಗೆ ಬೋಧಿಸಿದ ನಲ್ಲಾ..."

"ಹೌದು ಹೌದು, ಅತನನ್ನೇ ಗೀತಾಚಾರ್ಯ ಅನ್ನೋದು. ಆತ ನುಡಿದದ್ದು ಗೀತಾ, ನಾವು ನುಡಿಯೋದು ಗೀತ ಮಾತ್ರ...ತಿಳಿಯಿತೆ?"

"ಹ್ಞಾಂ....ಏನಂದಿದ್ದಾನೆ, ಎಲ್ಲಿ ಅಂದಿದ್ದಾನೆ?'

"ತನ್ನ ಅಮರ ಕೃತಿ ವಿಶ್ವೋಪನಿಷತ್ತು....'

(ಹದಿಮೂರನೇ ಪುಟ ನೋಡಿರಿ)

ಮದುವೆಯ ಮಮತೆಯ ಕರೆಯೋಲೆ

ನಮ್ಮ ತಮ್ಮ ಚಿ| ಸದಾಶಿವನು ಉಳ್ಳೂರು ಸಂಪಿಗೆ ಅಡಿ ತೇಜಪ್ಪ ಶೆಟ್ರ ದ್ವಿತೀಯ ಪುತ್ರಿ ಚಿ। ಸೌ ಸಂಜೀವಿಯನ್ನೂ ನಮ್ಮ ಸಹೋದರ ಚಿ| ಸಂಜೀವನು ಪಂದು ಬೆಟ್ಟುಲಕ್ಷ್ಮಣ ಶೆಟ್ರ ಪ್ರಥಮ ಪುತ್ರಿ ಚಿ। ಸೌ। ಸಂಜೀನಿಯನ್ನೂ, ನಮ್ಮ ತಂಗಿ ಲಲಿತಳನ್ನು ಹೇರೂರು ದೊಡ್ಡಮನೆ ಅಣ್ಣಪ್ಪ ಶೆಟ್ರ ಪ್ರಥಮ ಪುತ್ರ ಚಿ| ಬಾಲಕೃಷ್ಣನೂ ಇದೇ ತಾ. 14-6-65ನೇ ಸೋಮವಾರ ಬೆಳಗ್ಗೆ ಗಂಟೆ 8-54ಕ್ಕೆ ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿವಾಹ ಮಾಡಿಕೊಳ್ಳುವುದಾಗಿ ನಿಶ್ಚಯಿಸಿರುತ್ತದೆ. ನಮ್ಮ ಇಷ್ಟ ಮಿತ್ರರಿಗೆಲ್ಲಾ ಆಮಂತ್ರಣ ಪತ್ರಿಕೆಗಳನ್ನು ಕಳುಹಿಸಿರುತ್ತೇವೆ. ಆಮಂತ್ರಣ ಪತ್ರಿಕೆಗಳು ಒಂದುವೇಳೆ ಸಕಾಲದಲ್ಲಿ ತಲುಪದಿದ್ದರೆ, ಇದನ್ನೇ ಆಮಂತ್ರಣ ಪತ್ರವೆಂದು ಭಾವಿಸಿ ಎಲ್ಲರೂ ಈ ವಿವಾಹ ಸಮಾರಂಭಕ್ಕೆ ದಯಮಾಡಿಸಿ ವಧೂವರರನ್ನು ಆಶೀರ್ವಚಿಸಬೇಕಾಗಿ ಅಪೇಕ್ಷಿಸುವ,

ತಮ್ಮ ಆಗಮನಾಭಿಲಾಷಿಗಳು

ಡಾ। ಯು. ಕೃಷ್ಣ, ಡಾ। ಯು. ಶಿವರಾಮ್, ಡಾ। ಯು. ಚಂದ್ರಶೇಖರ

ಮುನಿಯಾಲ್. ತುದೂರ್. ಕುದುಮುಲ್ಲಿಗೆ.

ವಿಚಾರ ವೀಚಿ

ವ್ಯಾಪಾರೋದ್ಯಮ

ಬರೆದವರು
ಶ್ರೀ ಎಸ್. ಪದ್ಮನಾಭ ನಾಯಕ್.

ಸಂಸ್ಕೃತದಲ್ಲಿ ಒಂದೆಡೆ—ಏನಕೇನ ಪ್ರಕಾರೇಣ ಪ್ರಸಿದ್ಧೋ ಪುರುಷೋ ಭವೇತ್ ಎಂದು ಹೇಳಿದ್ದರೆ ಇನ್ನೊಂದೆಡೆ—ಉದ್ಯೋಗಂ ಪುರುಷ ಲಕ್ಷಣಂ, ಎಂದು ಹೇಳಿದ್ದಿದೆ. ಒಂದನೆಯದಾಗಿ ಏನೇ ಆಗಲಿ ಎಂತೇ ಆಗಲಿ ಯಾವುದೇ ಪ್ರಕಾರವಾಗಲಿ ಪ್ರಸಿದ್ಧನಾಗುವ ಇಚ್ಛೆಯನ್ನು ವ್ಯಕ್ತಪಡಿಸುವುದಾದಲ್ಲಿ ಎರಡನೆಯದರಲ್ಲಿ ಉದ್ಯೋಗವೆಂಬುದೇ ಮಾನವನ ಲಕ್ಷಣ ಎತ್ತಿ ತೋರಿಸುತ್ತದೆ.

ನಾವು ಸಾಧಾರಣವಾಗಿ ಮಾತು ಮಾತಿಗೆ ಹೇಳುವುದುಂಟು—

"ಏನು ನನಗೆ ಬೇರೆ ವ್ಯಾಪಾರವಿಲ್ಲ (ಉದ್ಯೋಗವಿಲ್ಲ)ವೆಂದೆಣಿಸಿಕೊಂಡಿರೋ?"

"ನಿನ್ನ ವ್ಯಾಪಾರೀ ಬುದ್ಧಿ ತೋರಿಸುವುದು ಬೇಡ."

"ನಿನ್ನ ವ್ಯಾಪಾರ ನಿನಗೇ ಇರಲಿ. ನಾನು ಮಧ್ಯೆ ಪ್ರವೇಶಿಸುವುದಿಲ್ಲ."

"ನಿನ್ನ ವ್ಯಾಪಾರ ಆಗಬಹುದು. ನೀನು ನನ್ನನ್ನು ಹೀಗೂ ಮಾಡ್ತಿ ಎಂದು ಎಣಿಸಿರಲಿಲ್ಲ"

"ನನ್ನ ವ್ಯಾಪಾರ ಭೇಷ್ ಆಯ್ತು!"

—ಇನ್ನು ಏನೇನೊ ಹೇಳುವಾಗ ಅಲ್ಲಲ್ಲಿ ನಾವು "ವ್ಯಾಪಾರ" ಶಬ್ದ ಪ್ರಯೋಗ ಮಾಡುತ್ತಿರುತ್ತೇವೆ. ಅಂದಲ್ಲಿ ಈ ವ್ಯಾಪಾರಿ ಶಬ್ದದ ಹಿಂದೆ ಕೆಲವೊಮ್ಮೆ ಗಹನವಾದ ವಿಚಾರ ಅಡಗಿರುತ್ತದೆ.

ಒಬ್ಬ ಸೋಮಾರಿ, ಒಂದು ನಿಷ್ಪ್ರಯೋಜಕ ಕೆಲಸ, ನಷ್ಟವೇ ಸಂಭವಿಸುವ ಒಂದು ವ್ಯಾಪಾರ, ಇವುಗಳ ಸಂಪರ್ಕ ಒದಗಿ ಬರುವಾಗ ನಾವು ಹೇಳುವುದಿಲ್ಲವೆ?—"ಏನು ನನಗೆ ಬೇರೆ ವ್ಯಾಪಾರವಿಲ್ಲವೆಂದೆಣಿಸಿ ಕೊಂಡಿರೋ?"

ಅಂದರೆ ವ್ಯಾಪಾರ ಇಲ್ಲದವನು ಅಲಸಿಗ, ಸೋಮಾರಿ ಎಂದರ್ಥವಾಯಿತು. ವ್ಯಾಪಾರೀ ಮನೋಭಾವವು ಬುದ್ಧಿವಂತನನ್ನು ಹೋಲಿಸಿದಂತಾಯಿತು.

ಒಬ್ಬ ಮಿತ್ರ, ಇನ್ನೊಬ್ಬ ಮಿತ್ರನೊಡನೆ ತನ್ನ ಮೆಚ್ಚಿನ ವಸ್ತುವೊಂದನ್ನು ಕೇಳಿದ ಎಂದು ಭಾವಿಸುವ. ಇಲ್ಲಿ ಕೇಳಿದಾಗ ಕೊಡ ಮಾತ, ಸ್ವಲ್ಪ ಕೊಡುವಾಗ ತಡವರಿಸುತ್ತಾನೆ. ಆದರೂ ಕೊಡಲಾರೆ ಎನ್ನಲಾರ. ಆಗವನು ಹೇಳುತ್ತಾನೆ—"ನಿನ್ನೆ ಮಂಗಳೂರಿಗೆ ಹೋಗಿದ್ದೆ. ಇದಕ್ಕಾಗಿ ಹತ್ತು ರೂಪಾಯಿ ಕೊಟ್ಟೆ ನನ್ನ ಎಲ್ಲಾ ಕೆಲಸ ಕೆಟ್ಟು ಹೋಯ್ತು. ಇದೊಂದು ಕೊಳ್ಳದಿದ್ದರೆ ನನ್ನೆಷ್ಟೋ ಕೆಲಸವಾಗುತ್ತಿದ್ದುವು. ಆದರೂ ನಿನಗಾಗಿ ೧೦ ರೂಗೆ ಕೊಡುತ್ತೇನೆ..."

ಕೊಳ್ಳುವಾತ ಹೇಳ್ತಾನೆ— "ಅದೆಲ್ಲಾ ಇರಲಿ. ನಿನ್ನ ವ್ಯಾಪಾರೀ ಬುದ್ಧಿ ನನಗೆ ತೋರಿಸುವುದು ಬೇಡ" ಹೀಗೆ ಮಾತು ಸಾಗಿ ಕೊನೆಗೆ ಅವನಿಗೆ ಸಿಗುತ್ತದೆ ಅನ್ನಿ.

ಇಲ್ಲಿಯು ವ್ಯಾಪಾರ ಶಬ್ದ ಬಳಕೆಯಲ್ಲಿ ಲೋಭ ಎತ್ತಿ ಕಾಣುತ್ತದೆ. ಮನುಷ್ಯನು ಲೋಭಿಯಾಗ ಕೂಡದು ಎಂಬ ತತ್ತ್ವ ಎತ್ತಿ ತೋರಿಸುತ್ತದೆ.

ಒಬ್ಬಾತ ತುಂಬಾ "ಸಂಕಷ್ಟದಲ್ಲಿದ್ದಾನೆ" ಆದರೆ ಅವನ ಸಂಕಷ್ಟ ಬಗೆ ಹರಿಯುವಂತಿಲ್ಲ. ಅವನು ತನ್ನ ಸಂಕಷ್ಟಗಳನ್ನು ಕುರಿತು ಹತ್ತು ಜನರೊಡನೆ ಹೇಳುವನು ಕೆಲವೊಮ್ಮೆ ಒಂದೆರಡು ಜನ ಅವನ ಸಂಕಷ್ಟದಲ್ಲಿ ಪಾಲ್ಗೊಳ್ಳುವರು. ಬಗೆಹರಿಸಲು ಪ್ರಯತ್ನಿಸುವರು. ಸಾಧ್ಯವಾಗದಿದ್ದರೆ ಕೊನೆಗೆ ಹೇಳುವರು—"ನಿನ್ನ ವ್ಯಾಪಾರ ನಿನಗೇ ಇರಲಿ ನಾನು ಮಧ್ಯೆ ಪ್ರವೇಶಿಸುವುದಿಲ್ಲ."

ಇಲ್ಲಿ ವ್ಯಾಪಾರವೆಂಬುದು ಅಸಾಧ್ಯವಾದ ಕೆಲಸ. ಅದನ್ನು ಬಗೆಹರಿಸುವಂತೆಯೇ ಇಲ್ಲ. ಮತ್ತು ಕಷ್ಟಕರವಾದದ್ದು ಎಂದರ್ಥ ಕೊಡುತ್ತದೆ.

ಒಬ್ಬ ವಾಗ್ದಾನವಿತ್ತಿದ. ಕೊನೆಗೂ ಆ ವಾಗ್ದಾನವನ್ನು ನೆರವೇರಿಸಿಲ್ಲ ಎಂದಿಟ್ಟುಕೊಳ್ಳುವ. ಆಗ ನಾವು ಹೇಳುತ್ತೇವೆ—"ನಿನ್ನ ವ್ಯಾಪಾರ ಆಗಬಹುದು"

ಹೌದು. ಇಲ್ಲಿ ವಾಗ್ದಾನ ಮುರಿಯುವದನ್ನು ವ್ಯಾಪಾರ ಎಂದು ಸ್ವೀಕರಿಸಿದಂತಾಗುತ್ತದೆ.

ನೀವು ಏನೋ ಮಹತ್ತ್ವದ ಕೆಲಸ ಮಾಡುತ್ತೀರಿ ಎಂದು ಭಾವಿಸಿಕೊಳ್ಳಿ. ಅಂದರೆ ಅದು ನಿಮ್ಮ ಮನಸ್ಸಿಗೆ ಮಾತ್ರ ಮಹತ್ತ್ವದ್ದು ಎಂದು ಇರುತ್ತದೆ. ಆದರೇನೊ-ಅರ್ಥದಲ್ಲಿ ಅದು ಮಹತ್ವವಿದ್ದಲ್ಲ, ಆದಕ್ಕಾಗಿ ಪಟ್ಟ ಶ್ರಮ ವ್ಯರ್ಥ, ಮಾಡಿದ ಖರ್ಚು ನಷ್ಟ ಎಂದು ತಿಳಿಯುತ್ತದೆ. ಆಗ ನೀವು ನಿಮ್ಮಷ್ಟಕ್ಕೆ ನಿಮ್ಮ ಮಿತ್ರರು ಎಲ್ಲಿಯಾದರೂ ಸಿಕ್ಕಿದರೆ ಹೇಳುವಿರಿ— "ನನ್ನ ವ್ಯಾಪಾರ ಭೇಷ್ ಆಯ್ತಲ್ಲ!"

ಇಲ್ಲಿ ವ್ಯಾಪಾರ ಶಬ್ದ ಬಳಕೆಯು ಮೋಸವನ್ನೂ ಮೂಢನಂಬಿಕೆಯನ್ನೂ ವ್ಯಕ್ತಗೊಳಿಸುತ್ತದೆ.

ಇಷ್ಟೆಲ್ಲಾ ನಾನು ಉದಹರಿಸಿದ ಕೆಲವು ಮಾತುಗಳ ಹಿಂದೆ ಇರುವ ಅರ್ಥವಾಗಿದೆ. ಇನ್ನೂ ಎಷ್ಟೋ ಮಾತುಗಳಲ್ಲಿ ನಾವು ಶಬ್ದ ಪ್ರಯೋಗ ಮಾಡಿ ನಮ್ಮ ಸುಖ ಕಷ್ಟಗಳನ್ನು ಇನ್ನೊಬ್ಬರೊಡನೆ ಹೇಳಿಕೊಳ್ಳುತ್ತೇವೆ.

ಹಾಗಾದರೆ ಈ ವ್ಯಾಪಾರ ಎಂಥದು! ಇದರ ಉದ್ಭವ ಎಲ್ಲಿ? ಅಂತ್ಯ ಎಲ್ಲಿ? ಇದು ಬೆಳೆಯುವುದು ಹೇಗೆ? ಉಳಿಯುವುದು ಹೇಗೆ?

ಜನ್ಮಕ್ಕೆ ಬಂದ ಪ್ರತಿ ಒಬ್ಬನು ವ್ಯಾಪಾರಿಯೇ ಆಗಿರುವನು. ಇದಕ್ಕೆ ಒಂದಿಷ್ಟೂ ಸಂಶಯ ಬೇಡ. ಒಂದು ಅಂಗಡಿ ತೆರೆದು ಕಾಲ ಮೇಲೆ ಕಾಲು ಹಾಕಿ ಕೂತು ತಕ್ಕಡಿ ತೂಗಿದ ಮಾತ್ರಕ್ಕೆ ಒಬ್ಬ ವ್ಯಾಪಾರಿ ಆಗಲಾರನು. ಹತ್ತು ಜನರ ಸ್ನೇಹ, ನೂರು ಜನರ ಒಲವು ಇದ್ದರೇನೆ ಆತ ನಿಜವಾದ ವ್ಯಾಪಾರಿ.

ಪಂಚಕಜ್ಜಾಯದಲ್ಲಿ ಐದು ಪದಾರ್ಥಗಳು ಸರಿಯಾಗಿ ಸೇರಿದರೆ ಮಾತ್ರ ಪಂಚಕಜ್ಜಾಯ ರುಚಿಕರವಾಗಿರುತ್ತದೆ. ಅಂತೆಯೇ ವ್ಯಾಪಾರಿಯಲ್ಲಿ ಎಲ್ಲಾ ಗುಣಗಳು ಮಿಶ್ರವಾಗಿದ್ದು ಒಂದೇ ಪ್ರಕಾರವಾಗಿ ಮುಂದುವರೆಯುತ್ತಿದ್ದಲ್ಲಿ ಆತ ಜನಪ್ರಿಯನಾಗುತ್ತಾನೆ; ಆತನ ವ್ಯಾಪಾರ ಅಭಿವೃದ್ಧಿಗೊಳ್ಳುತ್ತದೆ, ಕೈತುಂಬಾ ಹಣ ಸಿಗುತ್ತದೆ, ಮನಸ್ಸಿಗೂ ನೆಮ್ಮದಿ ಸಿಗುತ್ತದೆ.

ವ್ಯಾಪಾರದಲ್ಲಿ ಲಾಭ ನಷ್ಟಕ್ಕೆ ಪ್ರಾಧಾನ್ಯ ಕೊಡುವುದು ಇತ್ತೀಚೆ ನಡೆದು ಬಂದ ಹವ್ಯಾಸ. ಆದರೆ ನಿಜವಾದ ವ್ಯಾಪಾರಿ ಲಾಭ ನಷ್ಟದ ಮಾತೆತ್ತುವುದಿಲ್ಲ. ವ್ಯಾಪಾರವೆಂಬುದು ಲಾಭಕ್ಕಾಗಿ ಮಾಡುವುದಲ್ಲವಾಗಲಿ, ನಷ್ಟಕ್ಕೆಂದಾಗಲಿ ಹೇಳಿದ್ದರೂ ಅಪ್ರತ್ಯಕ್ಷವಾಗಿ ನಮಗೆ ಲಾಭ ಒದಗುತ್ತದೆ, ಕೀರ್ತಿ ಸಿದ್ಧಿಸುತ್ತದೆ, ಗೌರವ ಒದಗಿ ಬರುತ್ತವೆ. ಅದೇ ಒಂದು ಲಾಭ.

ವ್ಯಾಪಾರದಲ್ಲಿ ಮುಖ್ಯವಾಗಿ ಸಮೀಪದ ಹತ್ತು ಜನರ ಒಲವು. ಅವರ ಒಲವು ಸಿಕ್ಕಿತೆಂದರೆ —

"ನೋಡಯ್ಯ, ಆತ ಎಷ್ಟು ಸದ್ಗುಣವಂತ ಆದರೂ ಆತನಿಗೆ! ಮನೆಯ ತಾಪತ್ರಯ ಬಹಳ" ಎಂಬ ಅನುಕಂಪವು ಸಮೀಪವರ್ತಿಯವರಿಂದ ಮೂಡುವುದು ಸಹಜವಾಗಿದೆ. ಇದು ಬೆಳೆದಂತೆಲ್ಲ ಸಮಾಜದಲ್ಲಿ ಒಂದು ಗಣ್ಯ ಸ್ಥಾನ ಸಿದ್ಧಿಸುತ್ತದೆ. ಹಾಗಾದರೆ ಹತ್ತು ಜನರ ಸ್ನೇಹಗಳಿಸುವುದು ಹೇಗೆ? ಎಂಬುದೇ ಮುಖ್ಯ.

ನಮ್ಮಲ್ಲಿ ಒಬ್ಬ ಹಲವಾರು ವರ್ಷದಿಂದ ಇದ್ದ. ಆದರೆ ಆತನು ಇದ್ದಾನೊ ಇಲ್ಲವೊ ಎಂದು ಯಾರಿಗೂ ತಿಳಿದಿರಲಿಲ್ಲ. ಒಮ್ಮೆಂದೊಮ್ಮೆಗೆ ಆತನ ಹೆಸರು ಊರು ತುಂಬಾ ಪ್ರಸಿದ್ಧಿಯಾಯಿತು. ಈಗ ಎಲ್ಲರೂ ಆತನನ್ನೇ ನೋಡಿ ಪಾಪ ಇಲ್ಲ ಕಣೊ ನಿನ್ನೆವರೆಗೂ ಆತ ನಮ್ಮ ಮುಂದೆ ಪಾಪರಿ ಆಗಿ (ನಿಜವಾಗಿ ನೋಡಿದರೂ ಆತ ಪಾಪರಿ ಆಗಿಲ್ಲದ್ದರೂ) ಇಂದು ನೋಡು —" ಎಂದು ಉದ್ಗರಿಸುತ್ತಿದ್ದಾರೆ. ಯಾಕೆಂದರೆ ಇಂತವನು ವ್ಯಾಪಾರಿ!

ವ್ಯಾಪಾರದಲ್ಲಿ ಚಂಚಲ ಸ್ವಭಾವವಿರಬಾರದು. ತಾನು ಹಿಡಿದ ಕೆಲಸವನ್ನು ಮುಗಿಸಿಯೇ ಬಿಡುವೆನು ಎಂಬ ಆತ್ಮವಿಶ್ವಾಸವಿರಬೇಕು. ಮುಖದಲ್ಲಿ ಮುಗುಳು ನಗೆ ಸದಾ ಇರಬೇಕು. ಹಿರಿಯರಲ್ಲಿ ಗೌರವಬೇಕು. ವಿದ್ಯೆಯಲ್ಲಿ ಹಿರಿಯರಾದವರನ್ನೂ ಗೌರವಿಸಬೇಕು. ಸ್ನೇಹಿತರಿಗಾಗಿ ನಾವು ಎಂತಹ ಕಷ್ಟ ಬಂದರೂ ಸಹಿಸಿಕೊಂಡಿರಬೇಕು, ಅಂದಾಗಲೇ ಹತ್ತು ಜನರ ಸ್ನೇಹ ಲಭಿಸಿದಂತೆಯೆ.

ಇಲ್ಲಿ ನಾವು ಹತ್ತು ಜನರ ಸ್ನೇಹ ಸಿಕ್ಕಿತು ಎಂದು ಸ್ವೇಚ್ಛೆಯಾಗಿರುವುದೂ ಸಲ್ಲದು. ಇಲ್ಲಿ ಲೋಭಬೇಕು. ಹಣವನ್ನು ದುಂದು ವೆಚ್ಚಗಳಿಗೆ ವಿನಿಯೋಗಿಸಬಾರದು.

ಕಾಲಕ್ರಮೇಣ ನೂರು ಜನರ ಒಲವು ಸಿಕ್ಕಿದ ನಂತರ ನೀವೊಂದು ಯಾವುದಾದರೂ ಅಂಗಡಿ ತೆರೆದು ಕೂತುಕೊಳ್ಳುವಿರಿ ಎನ್ನೋಣ. ಪೈಪೋಟಿ ಮಾಡುವಾಗ ಸ್ಪರ್ಧೆ ಮಾಡದೆ ಯೋಗ್ಯ ಧಾರಣೆಯಲ್ಲಿ ವಹಿವಾಟು ನಡೆಸುವಿರಿ. ಎಂದಾದ ಮೇಲೆ ನೀನೆ ಆ ಪೇಟೆಯ ರಾಜ!

ವ್ಯಾಪಾರ ಮಾಡುವಾಗ ಲಾಭ,ನಷ್ಟ,

(ಹನ್ನೆರಡನೇ ಪುಟ ನೋಡಿರಿ)

ದಿ ಸಿಂಡಿಕೇಟ್ ಲೋನ್ ಸ್ಕಾಲರ್‌ಶಿಪ್ ಎಂಡ್ ಎಜ್ಯುಕೇಶನ್ ಫಂಡ್, ಮಣಿಪಾಲ.

ವಿಶೇಷ ಯೋಗ್ಯತೆ ಇದ್ದು, ಮುಖ್ಯವಾಗಿ ತಾಂತ್ರಿಕ ವಿಷಯಗಳನ್ನಾರಿಸಿ ವಿಶ್ವವಿದ್ಯಾಲಯ ತರಗತಿಗಳಿಗೆ ಸೇರಲಿಚ್ಛಿಸುವ ವಿದ್ಯಾರ್ಥಿಗಳ ಅವಶ್ಯಕತೆಯನ್ನು ಪೂರೈಸಲು ಈ ಫಂಡು ಕೆಲವು ವಿದ್ಯಾರ್ಥಿವೇತನಗಳನ್ನು ಸಾಲರೂಪದಲ್ಲಿ ಕೊಡುವುದು.

ಜಾತಿ, ಮತ ಭೇದವಿಲ್ಲದೆ ಶೇಕಡಾ 60ಕ್ಕಿಂತ ಹೆಚ್ಚು ಮಾರ್ಕು ಗಳಿಸಿದ ವಿದ್ಯಾರ್ಥಿಗಳೆಲ್ಲರೂ ಈ ಸಾಲವನ್ನು ಪಡೆಯಲು ಅರ್ಹರು. ಸಾಮಾನ್ಯವಾಗಿ ಒಬ್ಬ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ರೂ. 500/- ರ ವರೆಗೆ ಸಾಲವೇತನ ಕೊಡಲಾಗುವುದು. ಈ ಸಾಲದ ಹಣವನ್ನು ಶೇಕಡಾ 4ರ ಬಡ್ಡಿಯಲ್ಲಿ, ಸುಲಭ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗುವುದು. ಹೆಚ್ಚಿನ ವಿವರಗಳನ್ನು ತಿಳಿಯಲಪೇಕ್ಷಿಸುವವರು ಈ ಕೆಳಗೆ ಕಾಣಿಸಿದವರೊಡನೆ ಪತ್ರವ್ಯವಹಾರ ಮಾಡಬಹುದು.

ಹೆಚ್ಚಿನ ಮಾಹಿತಿಗೆ ಬರೆಯಿರಿ:...

ಕಾರ್ಯದರ್ಶಿ, ದಿ ಸಿಂಡಿಕೇಟ್ ಲೋನ್ ಸ್ಕಾಲರ್‌ಶಿಪ್ ಎಂಡ್ ಎಜ್ಯುಕೇಶನ್ ಫಂಡ್, ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್,
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು:- ಮಣಿಪಾಲ. (ಮೈಸೂರು ರಾಜ್ಯ)

ಶಾಖೆಗಳು: 200ಕ್ಕೂ ಮಿಕ್ಕಿ.
ಚಲಾವಣಾ ನಿಧಿ: ರೂ. 70 ಕೋಟಿಗೂ ಮಿಕ್ಕಿ.

ಚೈನಾದಲ್ಲಿ ಬೌದ್ಧಮತ ಪ್ರಚಾರ

ಬರೆದವರು: ಶ್ರೀ ಶಿವಶಂಕರ.

ಚೈನಾದಲ್ಲಿ ಮೊತ್ತಮೊದಲ ಬಾರಿಗೆ ಬೌದ್ಧಮತ ಪ್ರಚಾರ ಕಾರ್ಯಾರಂಭ ಹೇಗಾಯಿತು, ಅಲ್ಲಿಯ ರಾಜರು ಅದೆಂತು ಪ್ರೋತ್ಸಾಹವನ್ನಿತ್ತಿದ್ದರೆಂಬುದನ್ನು ಹಿಂದಿನ ಸಂಚಿಕೆಯಲ್ಲಿ ಕಂಡಿರುವೆವು. ಕ್ರಿಸ್ತ ಮತವೂ ಇಲ್ಲಿ ಪ್ರಚಾರಕ್ಕೆ ಬಂದಿತ್ತು. ಅಲ್ಲದೆ ಮಹಮ್ಮದೀಯ ಮತವೂ ಬಂದಿತ್ತು. ಆದರೆ ವ್ಯತ್ಯಾಸವಿಷ್ಟೆ. ಎಲ್ಲೆಲ್ಲೂ ಈ ಎರಡು ಮತ ಪ್ರಚಾರಕರು ಬಹಳಷ್ಟು ಅಡೆತಡೆಗಳನ್ನೆದುರಿಸಬೇಕಾಗಿ ಬಂದಿತು. ಕೆಲವರು ಜೀವನ ಬಲಿದಾನ ಮಾಡಬೇಕಾಗಿ ಬಂದಿತ್ತು. ಕ್ರೈಸ್ತ ಮತ ಪ್ರಸಾರಕರು ಒಂದು ಕೈಯಲ್ಲಿ ಬಾಯಿಬಲ ಇನ್ನೊಂದು ಕೈಯಲ್ಲಿ ತ್ರಾಸನ್ನು ತೆಗೆದುಕೊಂಡು ಹೊರಟರು—ಮತ ವ್ಯಾಪಾರಕ್ಕೆ ಹೊರಟರು. ತಾವು ಕಾಲೂರಿದ ಸ್ಥಳವನ್ನು ತಮ್ಮದಾಗಿ ಮಾಡಿಕೊಂಡರು. ಅದಕ್ಕಾಗಿ ರಕ್ತ ಹರಿಯಿಸಲೂ ಅವರು ಹೇಸಿರುವುದಿಲ್ಲ. ಹಲವಾರು ಕೋಟಿ ರೂಪಾಯಿಗಳಿಂದ ಅವರು ಕ್ರೈಸ್ತ ಮತ ಪ್ರಚಾರ ಮಾಡಿದರು. ಅದಕ್ಕಾಗಿ ಶಾಲೆ-ಕಲಾಶಾಲೆಗಳನ್ನು ತೆರೆದರಲ್ಲದೆ, ಆಸ್ಪತ್ರೆಗಳನ್ನು ತೆರೆದರು. ಹಲವಾರು ರೀತಿಯ ಆಕರ್ಷಣೆಗಳಿಂದ ತಮ್ಮ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸಿದರು.

ಇಂತಹ ನುಣ್ಣನೆಯ ರೀತಿ ಮರಳು ನಾಡಿನ ಜನರಿಗೆ ರುಚಿಸಲಿಲ್ಲ. ಅವರು ಒಂದು ಕೈಯ್ಯಲ್ಲಿ ಖುರಾನ್, ಇನ್ನೊಂದು ಕೈಯ್ಯಲ್ಲಿ ಖಡ್ಗ ತೆಗೆದುಕೊಂಡು ಹೊರಟರು. ರಕ್ತ ನದಿಗಳನ್ನೇ ಹರಿಸಿದರು; ಧಾರ್ಮಿಕ ವರ್ಗವನ್ನು ಬಿಡಲಿಲ್ಲ; ಭಸ್ಮೀಭೂತಗೊಳಿಸಿದರು.

ಎಲ್ಲಿ ಕ್ರೈಸ್ತ ಮತ ಹೋಯಿತೋ, ಎಲ್ಲಿ ಮಹಮ್ಮದೀಯ ಮತ ಹೋಯಿತೋ ಆ ಸ್ಥಳಗಳು ಅವರಿಗೆ ಅಧೀನವಾಗುತ್ತವೆ. ಸಾಮ್ರಾಜ್ಯಲಾಲಸಿಗಳು ಹೋದಲ್ಲೆಲ್ಲಾ ತಮ್ಮ ಅಧಿಕಾರ ಬಾವುಟವನ್ನೇ ಹಾರಾಡಿಸಿದರು. ಅವರಿಗೆ ಮತ ಪ್ರಸಾರ ಕಾರ್ಯವೆಂದರೆ, ಚಿರಳೆಗೆ ಮೊಸೆ ಹೊಗಿಸುವ ಕೆಲಸವಿದ್ದಂತೆ. ಮೊಸೆ ಒಳ ಹೋದರೆ ಸಾಕು. ಚಿರಳೆ ತಾನೇ ತಾನಾಗಿ ಒಳ ಹೋಗುತ್ತದೆ. ಅಂತೆಯೇ ಮತ ಮುಂದೆ ಹೋದರೆ ಸಾಕು. ಸಾಮ್ರಾಜ್ಯಲಾಲಸಿ ಚಿರಳೆ ತಾನೇ ತಾನಾಗಿ ಅಲ್ಲಿ ಬರುತ್ತದೆ. ಬ್ರಿಟಿಷರು, ಪೋರ್ತುಗೀಸರು, ಫ್ರೆಂಚರು ಅಥವಾ ಡಚ್ಚರು ಮಾಡಿದ್ದಾದರೂ ಅಷ್ಟೆ. ಇತ್ತ ಮೊಗಲರು, ಯವನರು, ಹೂಣರು, ಮಾಡಿದ್ದಾದರೂ ಏನು? ಆಕ್ರಮಣ - ನಗ್ನ ಆಕ್ರಮಣ.

ಚೈನಾಕ್ಕೆ ಬೌದ್ಧಮತ ಆ ರೀತಿ ಹೋಗಲೇ ಇಲ್ಲ. ತಮ್ಮ ದೇವರನ್ನು ಬಿಟ್ಟಲ್ಲಿ ಅನ್ಯ ದೇವರೇ ಇಲ್ಲವೆಂದು ಬೌದ್ಧಮತ ಸಾರಿರುವುದೇ ಇಲ್ಲ. ಅವರು ದೇವರಿಗೆ ಅಷ್ಟು ದೊಡ್ಡ ಸ್ಥಾನವನ್ನಿತ್ತಿರುವದಿಲ್ಲ.

ಈ ಎಲ್ಲಾ ದೃಷ್ಟಿಗಳಿಂದ ನೋಡುವಾಗ ಬೌದ್ಧ ಮತ ತೀರಾ ಭಿನ್ನವಾಗಿರುವದನ್ನು ಕಾಣಬಹುದು. ಅದರಿಂದಲೇ ಚೈನಾದಂತಹ ರಾಷ್ಟ್ರಗಳೂ ಬೌದ್ಧ ಮತವನ್ನು 'ಬಾ' ಎಂದು ಕರೆದುವು. ಸಂಘಮಿತ್ರೆಯಂತಹ ಸರಳ ಸ್ತ್ರೀ ಕೂಡಾ ಸಾಗರದಾಚೆ ಹೋಗಿ ಮತ ಪ್ರಚಾರ ಮಾಡಲು ಸಾಧ್ಯವಾಯಿತು; ಪ್ರಚಾರಕ್ಕೆ ಬಂದ ಸ್ವಲ್ಪ ಸಮಯದಲ್ಲೇ ಅದು ಚೈನೀ ಜನತೆಯ ಹೃದಯವನ್ನು ಸೂರೆಗೊಂಡಿತು. ಅವರ ಕಲೆ ಸಂಸ್ಕೃತಿಗಳಲ್ಲಿ ಅದರ ಸಮ್ಮಿಲನವಾಯಿತು. ಅದರಲ್ಲಿ ಹ್ಯಾಯಿ ಎಂಬವನು 'ಬಿಳಿ ಕಮಲ ಪಂಥ'ವನ್ನೆ ಸ್ಥಾಪಿಸಿದನೆಂದು ಸರಳಾ ಶರ್ಮರವರು ಸಂಡೇ ಸ್ಟೆಂಡರ್ಡಿನಲ್ಲಿ ಸೂಚಿಸಿರುವರು.

ಬೌದ್ಧಮತದಲ್ಲಿ ಮುಖ್ಯವಾಗಿ ಎರಡು ವಿಧ— ಮೊದಲನೆಯದ್ದು: ಮಹಾಯಾನ ಮತ್ತೊಂದು ಹೀನಯಾನ. ಚೈನಾದಲ್ಲಿ ಪ್ರಸಾರವಾದದ್ದು ಮಹಾಯಾನ. ಅದನ್ನು ಅಲ್ಲಿ ಬೋಧಿಸಿದವರು ಬೋಧಿಧರ್ಮನು.

ಮಹಾಯಾನಕ್ಕೆ ಚೈನಾದಲ್ಲಿ ಮಹಾಸ್ವಾಗತ ಸಿಕ್ಕಿತ್ತಾದರೂ ಸ್ವಲ್ಪ ಘರ್ಷಣೆಯೂ ನಡೆದಿತ್ತು. ಅದನ್ನು ಪಂಡಿತರು ಸ್ವಲ್ಪ ಮಟ್ಟಿಗೆ ಎದುರಿಸಿದರು. ಆದರೂ ಅದಾಗಲೇ ಬೌದ್ಧಮತ ರಾಜಾಶ್ರಯವನ್ನು ಪಡೆದಿತ್ತು. ಅದುದರಿಂದ ಪಂಡಿತರಿಗೆ ಅದೇನೂ ಮಾಡಲು ಸಾಧ್ಯವಾಗಲಿಲ್ಲ. ಅಲ್ಲದೆ ಘರ್ಷಣೆಯಾದರೂ ಕತ್ತಿ-ಕೋವಿಗಳ ಘರ್ಷಣೆ ಇರಲಿಲ್ಲ; ಕೇವಲ ನಾಲಗೆಯ ಘರ್ಷಣೆ. ಸಮರ್ಪಕ ಉತ್ತರ ಸಿಕ್ಕಿದಲ್ಲಿ ಅವರು ಸುಮ್ಮಗಾಗ ಬೇಕಾಗುತ್ತದೆ. ಅವರಲ್ಲಿ ಯಾರಾದರೂ ವಾಮಪಂಥಿಗಳಿದ್ದಲ್ಲಿ ಅವರ ವಿಷಯ ಬೇರೆ ರಾಜಮನೆತನದವ ಬೌದ್ಧ ಮತಕ್ಕೆ ಬಾರೀ ಪ್ರೋತ್ಸಾಹವನ್ನಿತ್ತು ಬೆಳೆಸಿದವರು ಟಾಂಗ್ ವಂಶಜರು. ಅನಂತರ ಫಾಹಿಯಾನ್ ಮತ್ತು ಹುಯೆನ್‌ತ್ಸಾಂಗ್ ಭಾರತಕ್ಕೆ ಯಾತ್ರಾರ್ಥಿ—ವಿದ್ಯಾರ್ಥಿಗಳಾಗಿ ಬಂದು ಜ್ಞಾನ ಭಾಂಡಾರವನ್ನು ತೆಗೆದುಕೊಂಡು ಹೋಗಿರುವರು.

ಬೌದ್ಧ ಮತವನ್ನು 'ಬಾ' 'ಬಾ' ಎಂದು ಕರೆದು ಸಿಂಹಾಸನದಲ್ಲಿ ಆಶ್ರಯವಿತ್ತು ಸತ್ಕರಿಸಿದ್ದಂತೆ, ಮತದ ಮರೆಯಲ್ಲಿ ರಕ್ತ ನದಿಯನ್ನು ಹರಿಯಿಸಿದವರೂ ಇದ್ದಾರೆ. ಅದರಲ್ಲಿ ಕುಬ್ಲಾಯಿ ಖಾನನೊಬ್ಬನು. ಇವನು ಮತದ ವೇಷವನ್ನು ಹಾಕಿಕೊಂಡು ತನ್ನ ಸಿಂಹಾಸನವನ್ನು ಭದ್ರ ಮಾಡಿಕೊಂಡದ್ದು ಮಾತ್ರವಲ್ಲದೆ ವಾಮಪಂಥಿಗಳ ರಕ್ತದಿಂದ ಸಿಂಹಾಸನವನ್ನು ಕೆಂಪಾಗಿಸಿ ಬಿಟ್ಟಿದ್ದನು. ಇಂದು ಅಲ್ಲಿ ಕಮ್ಯೂನಿಸ್ಟರು ಮಾಡುತ್ತಿರುವದಾದರೂ ಏನನ್ನು? ಅದೇ ಕುಬ್ಲಾಯ್ ಖಾನನ ಕಾಲಡಿಯನ್ನೇ ಅವರು ಅನುಸರಿಸುತ್ತಿದ್ದಾರೆ.

ಸಂಡೇ ಸ್ಟೆಂಡರ್ಡಿನಲ್ಲಿ ಸರಳಾ ಶರ್ಮರವರು ಸೂಚಿಸಿರುವ ಮೇಲಿನ ವಿಷಯಗಳಿಂದ ನಾವೊಂದು ನಿಶ್ಚಯಕ್ಕೆ ಬರಬಹುದು ವಿಶ್ವದಲ್ಲಿ ಭಾರತಕ್ಕೆ ಒಂದು ವಿಶಿಷ್ಟಸ್ಥಾನವಿದೆ. ಭಾರತವು ವಿಶ್ವಕ್ಕೆ ಧರ್ಮಗುರುವಾಗಿದೆ. ಅಂತೆಯೇ ಚೈನಾದಲ್ಲಿ ಮತೀಯ ಕ್ರಾಂತಿಯುಂಟಾಗಿದ್ದಾಗ ಬೌದ್ಧಮತ ಅಲ್ಲಿ ಮತೀಯ ದೀಪವನ್ನು ಬೆಳಗಿಸಿತು. ಛಿನ್ನ ವಿಚ್ಛಿನ್ನವಾಗುತ್ತಿದ್ದ ಚೈನಾವನ್ನು ಬೌದ್ಧಮತವು ತನ್ನ ಮತೀಯ ದಾರದಿಂದ ಪೋಣಿಸಿತು. ಚೈನಾವು ಭಾರತಕ್ಕೆ ಕೃತಜ್ಞವಾಗಿತ್ತು.

ಆದರೆ ನಾವಿಂದು ಕಾಣುತ್ತಿರುವದಾದರೂ ಏನನ್ನು? ಚೈನಾವಿಂದು ಕೃತಜ್ಞವಾಗಿಲ್ಲ, ಕೃತಘ್ನವಾಗಿದೆ. ಇದಕ್ಕೇನು ಕಾರಣ? ಭಾರವನ್ನೆಲ್ಲಾ ಚೈನಾದ ತಲೆಯ ಮೇಲೆ ಹಾಕಿಬಿಡೋಣವೆ? ಅದರಲ್ಲಿ ನಮ್ಮದೇನೂ ತಪ್ಪಿಲ್ಲವೆ?

"ಹಿಂದಿ ಚೀನಿ ಭಾಯಿ ಭಾಯಿ" ಯೆಂದು ಚೌ-ಎನ್-ಲೈ ಚೆನ್ನಾಗಿ ಅಂದಿನ ನಮ್ಮ ಪ್ರಧಾನಿ ಜವಾಹರಲಾಲರನ್ನು ಆಲಂಗಿಸಿದಾಗ ತಾನು ಮೋಸಹೋದೆನೆಂದು ನಮ್ಮ ಪ್ರಧಾನಿಯವರು ಪಶ್ಚಾತ್ತಾಪಪಟ್ಟರು. ಇಂತಹ ಪ್ರಮೇಯಕ್ಕೆ ಅಲ್ಲಿ ಅವಕಾಶವೇ ಇದ್ದಿರಲಿಲ್ಲ. ಉಗ್ರದೇಶಭಕ್ತರು ಅಂದೇ ಅವರನ್ನು ಎಚ್ಚರಿಸಿದ್ದರು. ದುರಾದೃಷ್ಟವಶಾತ್ ಜವಾಹರ್‌ಲಾಲಜೀ ಅದನ್ನರಿತು ಕೊಳ್ಳಲಿಲ್ಲ. ಆಲಿಂಗನದಲ್ಲಿ ಮೋಸ ಹೋದರು. ತನ್ನ ವೈರಿಯು ತನ್ನನ್ನು ಆಲಂಗಿಸಿಕೊಂಡಾಗ ಆ ಸುಖದಲ್ಲಿ ಶಿವಾಜಿ ಮಹಾರಾಜ ಮೈಮರೆತ್ತಿದ್ದರೇನು? ಅವನು ಆಗಲೇ ತನ್ನ ವೈರಿಯ ಇತಿಶ್ರೀ ಮಾಡಿಬಿಟ್ಟನು. ಆದರೆ ಇಂದು ಅವನನ್ನು 'ಜಾತೀಯವಾದಿ' ಅಥವಾ ದಾರಿಗೆಟ್ಟ ದೇಶಭಕ್ತನೆಂದು ಕೆಲವರು ಕರೆಯುತ್ತಾರೆ. ಆಲಿಂಗನದಲ್ಲಿ ಮೈಮರೆತು ಮೋಸ ಹೋಗಿ ಆಕ್ರಮಣಕ್ಕೆ ದೇಶವನ್ನು ಬಿಟ್ಟುಕೊಟ್ಟವರು ದೇಶಭಕ್ತರೋ ಅಥವಾ ಮುನ್ನೆಚ್ಚರಿಕೆಯಿಂದಲೇ ಪವಿತ್ರ ಭಾರತದ ಮಾನ-ಸಂಸ್ಕೃತಿಗಾಗಿ ಹೋರಾಡಿದ ಶಿವಾಜಿ ದೇಶಭಕ್ತನೇ? [ಚರ್ಚೆಗೆ ಇಲ್ಲಿ ಅವಕಾಶವಿಲ್ಲ.] ಏನೇ ಇರಲಿ. ನಾವು ಮೈಮರೆತಿದ್ದು ಮಿಥ್ಯಾವಾದದ ಗುಂಗಿನಲ್ಲಿದ್ದುದರಿಂದ ನಮ್ಮ ಮೇಲೆ ಬಹಳ ಸುಲಭವಾಗಿ ಆಕ್ರಮಣ ನಡೆಯಿತು.

ವಿಶ್ವದಲ್ಲಿ ನಮಗಿರುವ ವಿಶಿಷ್ಟಸ್ಥಾನದ ಪಾವಿತ್ರ್ಯ ಹಾಗೂ ಗೌರವವನ್ನು ನಾವು ಕಾಪಾಡಿಕೊಳ್ಳದಿರುವುದರಿಂದ ನಮ್ಮ ಮೇಲಿಂದು ಆಕ್ರಮಣ ನಡೆದಿರುತ್ತದೆ. ನಾವಿಂದು ನಮ್ಮದು ಮತರಹಿತ ರಾಷ್ಟ್ರ ಅಥವಾ 'ಧರ್ಮಾತೀತ ದೇಶ' ಮುಂತಾಗಿ

(ಹನ್ನೊಂದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ
ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಒಳಗೆ	5½
6 ತಿಂಗಳಿಂದ	12 ತಿಂಗಳ ಒಳಗೆ	6
12 ತಿಂಗಳಿಂದ	24 ತಿಂಗಳ ಒಳಗೆ	6½
24 ತಿಂಗಳಿಂದ	36 ತಿಂಗಳ ಒಳಗೆ	6¾
36 ತಿಂಗಳಿಂದ	48 ತಿಂಗಳ ಒಳಗೆ	7
48 ತಿಂಗಳಿಂದ	60 ತಿಂಗಳ ಒಳಗೆ	7¼
60 ತಿಂಗಳಿಂದ	84 ತಿಂಗಳ ಒಳಗೆ	7½
84 ತಿಂಗಳಿಂದ	120 ತಿಂಗಳ ಒಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	... ...	4

ದಿ ಕೆನರಾ ಬ್ಯಾಂಕ್ / ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.



ಶ್ರೀ ಸ್ವಾಮಿ ಚಿನ್ಮಯಾನಂದ ಮೀಮಾಂಸೆ

ಗೀತಾ-ದ್ವಿತೀಯ ಅಧ್ಯಾಯ

ಸಂಗ್ರಹಕರ್ತೆ
ಶ್ರೀಮತಿ ಆನಂದಿ ಸದಾಶಿವ ರಾವ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ವಸುದೇವ ಸುತಂ ದೇವಂ ಕಂಸ
ಚಾಣೂರ ಮರ್ದನಮ್ ||
ದೇವಕೀ ಪರಮಾನಂದಂ ಕೃಷ್ಣಂ
ವಂದೇ ಜಗದ್ಗುರುಮ್ || ೫ ||

ಭಕ್ತರಿಗೆ ಶ್ರೀಕೃಷ್ಣನು ಪ್ರಿಯದೇವ. ವಸುದೇವನ ಮಗ ವಾಸುದೇವನು; ಕಂಸನನ್ನು ಅವನ ಅನುಯಾಯಿಗಳನ್ನು ಕೊಂದವನೂ, ದೇವಕಿಯ ಆಹ್ಲಾದಕರನೂ, ಇಡೀ ಜಗತ್ತಿನ ಹಿರಿಯ ಗುರುವಾದ ಶ್ರೀಕೃಷ್ಣನಿಗೆ ವಂದನೆಗಳು.

ವೇದಾಂತಿಗಳಿಗೆ ಶ್ರೀ ಕೃಷ್ಣನು ಋತುಗಳನ್ನು ನಿರ್ಮಿಸಿದ ಕಾಲದ ಅಧಿದೇವತೆಯೂ, ಬುದ್ಧಿವಂತಿಕೆಯನ್ನು ಬೆಳಗಿಸುವ ಚೈತನ್ಯನೆಂದೂ, ಹೃದಯದೊಳಗಿನ 'ಅಹಂ' ಭಾವದ ವಿನಾಶ ಮಾಡುವನೆಂದೂ, ಪ್ರಕೃತಿ ಸೂಕ್ಷ್ಮ ತತ್ವವಾದ ದೇಹ, ಮನ, ಬುದ್ಧಿಯ ಆಚೆಗಿನ ಈ ಮೂರು ಆವರಣದಿಂದ ಒಡಗೂಡಿದ ಪಂಚೇಂದ್ರಿಯಗಳಿಗೂ, ಮದ ಬುದ್ಧಿಗಳಿಗೂ ಆಹ್ಲಾದವನ್ನೀಯುವ ಆತ್ಮನೆಂದೂ, ಮತ್ತೆ ಯಾವ ವಿಷಯವನ್ನಾಗಲೀ ಒಬ್ಬರಿಂದ ಒಬ್ಬರಿಗೆ ಹೇಳಿ ಕೊಡುವಾಗ ಅವರೀರ್ವರೂ ಜೀವಂತವಾಗಿರಬೇಕು. ಅದಕ್ಕೆ ಕಾರಣವಾದ ಸತ್ಯ ತತ್ವದಿಂದ ಚೈತನ್ಯನೆಂದೂ, ಯಾವ ವಿದ್ಯೆಯನ್ನಾಗಲೀ ಒಬ್ಬರಿಂದ ಇನ್ನೊಬ್ಬರು ಕಲಿಯುವಾಗ ಈ ಸತ್ಯ ತತ್ವ ಇಬ್ಬರಲ್ಲೂ ಇರಬೇಕು. ಮತ್ತು ಈ ಸತ್ಯ ತತ್ವದ ಮಾಧ್ಯಮದ ಮೇಲೆ ಈ ಜ್ಞಾನದ ವಿನಿಮಯವಾಗಬೇಕು. ಅದರಿಂದ ಈ ಸತ್ಯ ತತ್ವವಾದ ಶ್ರೀಕೃಷ್ಣನು ಇಡೀ ಜಗತ್ತಿನ ಗುರುವೆಂದೂ, ಈ ಗುರು ಇಲ್ಲದೆ ಒಂದೇ ಒಂದು ವಿಷಯ ಒಬ್ಬನಿಂದ ಇನ್ನೊಬ್ಬನಿಗೆ ತಿಳಿಯಲಾರದು. ಉಪದೇಶ ಪಡೆಯಲು ಸಾಧ್ಯವಿಲ್ಲ ಎಂದಾಗಿದೆ.

ಭೀಷ್ಮ ದ್ರೋಣ ತಟಾ ಜಯದ್ರಥ
ಜಲಾ ಗಾಂಧಾರ ನೀಲೋತ್ಪಲಾ ||
ಶಲ್ಯ ಗ್ರಾಹವತೀ ಕೃಪೇಣ ವಹನೀ,
ಕರ್ಣೇನ ವೇಲಾಕುಲಾ ||
ಅಶ್ವತ್ಥಾಮ ವಿಕರ್ಣ ಘೋರ ಮಕ
ರಾ ದುರ್ಯೋಧನಾ ವರ್ತಿನೀ ||
ಸೋತ್ತೀರ್ಣಾ ಖಲು ಪಾಂಡವೈ ರಣ
ನದೀ ಕೈವರ್ತಕ ಕೇಶವಃ ||೬||

ಸಂಸ್ಕೃತ ಭಾಷೆಯಲ್ಲಿ ಕೆಲವೇ ಶಬ್ದಗಳಲ್ಲಿ ವಿಶಾಲವಾದ ಅರ್ಥವನ್ನು ಸೂಚಿಸಲು ಸಾಧ್ಯವಿದೆ ಎಂದು ಈ ಮೇಲಿನ ಶ್ಲೋಕದಲ್ಲಿ ಕಾಣಬರುವುದು. ಇಡೀ ಮಹಾಭಾರತದ ಕತೆಯನ್ನು ಈ ಪುಟ್ಟ ಶ್ಲೋಕದಲ್ಲಿ ವಿವರಿಸಲಾಗಿದೆ. ಈ ಒಂದು ಶ್ಲೋಕದಿಂದ ಒಂದು ಲಕ್ಷ ಚರಣಗಳನ್ನು ಬರೆಯುವಷ್ಟರ ಮಟ್ಟಿಗೆ ವಿಸ್ತಾರವಾ 'ಗ್ರಂಥವು ಈ ಒಂದು ಶ್ಲೋಕದಲ್ಲಿ ಅಡಗಿದೆ.

ಕುರುಕ್ಷೇತ್ರ ಯುದ್ಧವನ್ನು ಒಂದು ನದಿಗೆ ಇಲ್ಲಿ ಕವಿ ಹೋಲಿಸಿರುವನು. ಆ ಯುದ್ಧ ನದಿಯ ಭೀಕರ ಚಿತ್ರವನ್ನು ಹೀಗೆ ಕಣ್ಮುಂದೆ ಚಿತ್ರಿಸಿರುವನು. ಯುದ್ಧ ನದಿಯ ಎರಡು ದಂಡೆಗಳು ಭೀಷ್ಮ ದ್ರೋಣರು ಅವರ ಶೌರ್ಯ ಸಾಹಸಗಳಿಂದಾಗಿ ನದಿಯ ದಂಡೆಗಳು ಅಚಲವಾಗಿ ನಿಲ್ಲುವಂತಹವು. ನದಿಯು ಬಲಯುತವಾಗಿದೆ, ಮತ್ತೆ ಆ ವೀರರ ಶೌರ್ಯ ಸಾಹಸಗಳು ನದಿಯ ಪ್ರವಾಹ ಹರಿಯುವ ದಿಕ್ಕನ್ನು ಇಟ್ಟು ಮಾಡುವುವು. ಜಯದ್ರಥನು ಆ ನದಿಯ ನೀರು. ಕೌರವರ ಸೇನಾಧಿಕಾರಿ ಜಯದ್ರಥನು. ಅವನನ್ನು ನದಿಯ ನೀರಿಗೆ ಹೋಲಿಸಿ ಅವನು ಎಲ್ಲಾ ಕಡೆಯಲ್ಲೂ ನೀರಿನಂತೆ ಇರುವವನು ಎಂದು ವಿವರಿಸಿರುವರು. ಜಯದ್ರಥನು ಎರಡು ದಡಗಳಾದ ಭೀಷ್ಮ ದ್ರೋಣರನ್ನು ಒಂದೆ ಗೂಡಿಸಲು ಚೌಕಚಕ್ಯತೆ ಪಡೆದವನು. ಗಾಂಧಾರನು, ಕೌರವರ ಭಾವನು, ಕರಿ ಬಂಡೆಗಳಂತೆ ವೈರಿಗಳನ್ನು ಇದಿರಿಸುವವನು. ಮತ್ತು ನದಿಯ ವೇಗವನ್ನು ಸೂಚಿಸುವವನು. ನದಿಯ ವೇಗವನ್ನು ಬಂಡೆಗಳು ಇದಿರಿದ್ದರೆ ಮಾತ್ರ ಅಳೆಯಲು ಸಾಧ್ಯ. ಶಲ್ಯನು ನೀರಿನಲ್ಲಿರುವ ಭಯಂಕರ ಮೀನು. ಅದು ಎಚ್ಚರಿಸದೆ ವೈರಿಗಳನ್ನು ನಾಶಗೊಳಿಸುವಂತಹದು. ಕೃಪನು ನೀರಿನ ಸೆಳೆತವೂ, ಕರ್ಣನು ದೊಡ್ಡ ತೆರೆಯಂಗಿ ಲವೂ, ಅಶ್ವತ್ಥಾಮ ಮತ್ತು ವಿಕರ್ಣ ಎಂಬವರು ಭಯಂಕರ ಮೊಸಳೆಗಳೂ, ದುರ್ಯೋಧನನು ನೀರಿನ ಸುಳಿಯೂ ಎಂದು ಯುದ್ಧ ನದಿಯನ್ನು ವಿವರಿಸಲಾಗಿದೆ. ಈ ಯುದ್ಧ ನದಿಯನ್ನು ಪಾಂಡವರು ದಾಟಬೇಕು, ಅವರು ಈ ಯುದ್ಧ ನದಿಯನ್ನು ಶ್ರೀ ಕೃಷ್ಣನು ಅಂಬಿಗನಾದುದರಿಂದ ಸುರಕ್ಷಿತವಾಗಿ ದಾಟಿ ವಿಜಯಿಯಾದರು!

ಈ ಉಪಮೆಯಿಂದ ಗ್ರಹಿಸುವುದೇನೆಂದರೆ ಈ ಸಂಸಾರವೆಂಬ ಭಯಂಕರ ನದಿಯಲ್ಲಿ ನಾವು ಗೀತೆ ಎಂಬ ಜೀವನದ ತತ್ವದಲ್ಲಿ ತಿಳಿಕೊಂಡರೆ, ಆ ತತ್ವದ ಪ್ರತೀಕವಾದ ಶ್ರೀ ಕೃಷ್ಣನು ನಮ್ಮನ್ನು ದಾಟಿಸುವನು. ಇಲ್ಲವಾದರೆ ನಾವು ರಣ ನದಿಯನ್ನು ದಾಟಲಾರೆವು. ಪಾಂಡವರು ಅತಿ ಭಯಂಕರವಾದ ಭೀಕರ ನದಿಯನ್ನು ದಾಟಿದರೆಂದ ಬಳಿಕ ನಮಗೆ ಅಷ್ಟು ಭಯಂಕರವಲ್ಲದ ನದಿಯಾದ ನಮ್ಮ ಸಂಸಾರವೆಂಬ ನದಿಯನ್ನು ದಾಟಲು ಸಾಧ್ಯವಿದೆ.

ಪಾರಾಶರ್ಯವಚಃ ಸರೋಜ ಮಮಲಂ
ಗೀತಾರ್ಥ ಗಂಧೋತ್ಕಟಂ ।
ನಾನಾಖ್ಯಾನಕ ಕೇಸರಂ ಹರಿಕಥಾ
ಸಂಬೋಧನಾ ಬೋಧಿತಮ್ ||
ಲೋಕೇ ಸಜ್ಜನ ಷಟ್ಪದೈರಹರಹ
ಪೇಪೀಯ ಮಾನಂ ಮುದಾ ||
ಭೂಯಾದ್ ಭಾರತ ಪಂಕಜಂ ಕಲಿ
ಮಲ ಪ್ರಧ್ವಂಸಿ ನಃ ಶ್ರೇಯಸೇ||೭||

ಪರಾಶರ ಮುನಿಯ ಮಗನಾದ ವ್ಯಾಸರು ಅತ್ಯುತ್ತಮ ಭಾಷಾ ನೈಪುಣ್ಯತೆ ಮತ್ತು ಪಾಂಡಿತ್ಯದೊಡನೆ ಕೂಡಿದ ವಾಕ್ ಸರಸ್ಸಿನಲ್ಲಿ ಭಾರತವೆಂಬ ಕಮಲದ ಹೂವು ಅರಳಿತು. ಗೀತೆಯ ಅರ್ಥವು ಅದರ ಸುಗಂಧ ಎಂದರೆ ಭಾರತವಿಡೀ ಗೀತೆಯ ತತ್ವವನ್ನೇ ಸಾರುತ್ತಿರುವದು. ಅದರಲ್ಲಿ ಇದ್ದ ನಾನಾ ಉಪಕತೆಗಳು ಕಮಲದ ಎಸಳುಗಳು. ಮತ್ತು ಆ ಭಾರತದ ತತ್ತ್ವ ಸುಪ್ತವಾಗಿ ಕಣ್ಣಿಗೆ ಮರೆಯಾಗಿ ಕಾಣುವುದು ಶ್ರೀ ಹರಿಯ ಲೀಲಾ ಚಮತ್ಕಾರವೇ. ಲೋಕದ ಉತ್ತಮ ಪುರುಷರು ತಮ್ಮ ಪಂಚೇಂದ್ರಿಯ ಮತು ಮನಗಳೆಂಬ ಅಂಗಗಳಿಂದ ಎಂದರೆ ಏಕಾಗ್ರತೆಯಿಂದ ಓದಿ ತಿಳಿದು ಸಂತೋಷಪಡುವರು. ಇದನ್ನು ಕಮಲದ ಹೂವಿಗೆ, ಸುವಾಸನೆಯಿಂದ ಆಕರ್ಷಿತವಾಗುವ ತುಂಬಿ ತನ್ನ ಆರು ಕಾಲುಗಳಿಂದ ಜೇನನ್ನು ಉಂಟುವ ಉಪಮೆ ಕೊಡಲಾಗಿದೆ. ಹೀಗೆ ಅದರ ಸವಿಯನ್ನು ಉಂಡು ಪುನಃ ಪುನಃ ಸವಿಯಲು ಇಚ್ಛಿಸುವವರು ಮಹಾಭಾರತವನ್ನು ಓದುವರು. ಓದಿ ತಮ್ಮ ಪ್ರಾಪಂಚಿಕತೆ ಎಂಬ ಕಲ್ಮಶವನ್ನು ಮನದಿಂದ ದೂರ ಮಾಡಿಕೊಳ್ಳುವರು. ಶ್ರೇಯಸ್ಸನ್ನು ಪಡೆಯುವರು.

ಮೂಕಂ ಕರೋತಿ ವಾಚಾಲಂ ಪಂಗುಂ
ಲಂಘಯತೇ ಗಿರಿಮ್ ||
ಯತ್ಕೃಪಾ ತಮಹಂ ವಂದೇ
ಪರಮಾನಂದ ಮಾಧವಮ್ || ೮ ||

ಶ್ರೀಕೃಷ್ಣನಿಗೆ ಇನ್ನೊಮ್ಮೆ ವಂದನೆ ಸಲ್ಲಿಸುವೆವು. ಶ್ರೀಕೃಷ್ಣನು ಪರಮಾನಂದನು. ಅವನಿಂದ ಮೇಲಿನ ಆನಂದವಿಲ್ಲ. ಅವನ ಕೃಪೆಯಿಂದ ಮೂಕರೂ ಚೆನ್ನಾಗಿ ಮಾತನಾಡಬಲ್ಲರು. ಹೆಳವರು ಪರ್ವತಗಳನ್ನು ದಾಟ ಬಲ್ಲರು. ಇದು ಭಕ್ತರ ಪ್ರಾರ್ಥನೆ, ವಿಚಾರ ಪ್ರಚೋದಕರು, ಇದನ್ನು ಒಪ್ಪಲಾರರು, ಭಕ್ತಿಯಿಂದ ನಾವು ಹೃದಯದ ಪ್ರೇಮದಿಂದ ಒಂದು ಆದರ್ಶದಲ್ಲಿ ಒಂದು ಪರಿಪೂರ್ಣತೆಯಲ್ಲಿ ಹೆಚ್ಚಿನ ವಿಚಾರ ಪ್ರಶ್ನೆ ಮಾಡಲಾರೆವು. ಆದರೆ ವಿಶಾಲವಾದ ಪ್ರೇಮ, ಎಲ್ಲವನ್ನು ಮರೆಯುವಂತಹ ಅಪಾರ ಭಕ್ತಿ ಹೃದಯದಲ್ಲಿ ಇಲ್ಲದಿದ್ದರೆ ವಚನವನ್ನು ಪ್ರಶ್ನಿಸುವುದು ಸಹಜ. ಅಂತಹವರಿಗೆ ಉತ್ತರವಾದ ಅರ್ಥ ಈ ಶ್ಲೋಕದಲ್ಲಿ ಇದೆ.

ಶ್ರೀಕೃಷ್ಣನೆಂದರೆ ನಮ್ಮ ಆತ್ಮ ಚೈತನ್ಯನು. ಆತ್ಮದ ಕೃಪೆಗೆ ಪಾತ್ರವಾದಂತೆ ನಮಗೆ ಹೊಸ ಹೊಸ ವಿಚಾರಗಳು ಯೋಚನೆಯಲ್ಲಿ ಬರ ತೊಡಗುವುವು.

ಉದಾ: ಸಿದ್ಧಾರ್ಥನೊಡನೆ ಮಹಾತ್ಮಾ ಬುದ್ಧನನ್ನು ಹೋಲಿಸಿದರೆ ದೈವೀ ಕಳೆ ಮೂಡಿದ ಬುದ್ಧನು, ಸಿದ್ಧಾರ್ಥನಿಗಿಂತ ಹೆಚ್ಚಿನ ವಾಕ್ ಧುರಿ ಪ್ರದರ್ಶಿಸಿದನು ಎನ್ನಬೇಕು. ನರೇಂದ್ರನು, ವಿವೇಕಾನಂದನಾದ ಬಳಿಕ, ಅವನು ಕಾಲೇಜು ವಿದ್ಯಾರ್ಥಿಗೆ ಹೊಳೆಯುವ ವಿಚಾರಧಾರೆಗಳಿಂದ ಹೆಚ್ಚಿನ ವಿಚಾರ ಮಾಡತೊಡಗಿದನು, ಅಥವಾ, ವಿವೇಕಾನಂದನೊಡನೆ ಹೋಲಿಸುವಾಗ, ನರೇಂದ್ರನು ತೀರಾ ಸಾಮಾನ್ಯ ತರಹದ ಯುವಕನು, ಹೀಗೆ ನಮ್ಮ ಆತ್ಮ ಸಂತೃಪ್ತಿಗೊಂಡಾಗ, ನಮ್ಮಲ್ಲಿ ವಿಚಾರ ಧಾರೆಗಳು ಹರಿಯ ತೊಡಗುವುವು. ನಾವು ಹಿಂದೆ ಕಂಡುದನ್ನೇ ಹೆಚ್ಚಿನ ಅರ್ಥದಲ್ಲಿ ಸ್ಪಷ್ಟವಾಗಿ ನೋಡ ತೊಡಗುವೆವು.

ನಾವೆಲ್ಲರೂ ಹೃದಯದಲ್ಲಿ ಹೆಳವರೇ. ನಮ್ಮ ಬುದ್ಧಿ ಮತ್ತು ಹೃದಯವು ಒಂದೇ ತರಹವಾಗಿಲ್ಲ. ಒಂದು ಬಾರಿ ಹೃದಯ, ಒಂದು ಬಾರಿ ಬುದ್ಧಿ ಉದ್ದ ಗಿಡ್ಡವಾಗ ತೊಡಗುವುದು. ಒಮ್ಮೊಮ್ಮೆ ನಾವು ಮನಸ್ಸಿನಲ್ಲಿದ್ದ ಭಾವನಾವಶರಾಗುವೆವು. ಒಮ್ಮೊಮ್ಮೆ ಬುದ್ಧಿಯಿಂದ ವಿವೇಚಿಸಿ, ವಿವೇಕಕ್ಕೆ ಪ್ರಾಧಾನ್ಯತೆ ಕೊಟ್ಟು ಹೃದಯದ ಕರೆಯನ್ನು ಮನ್ನಿಸಲಾರೆವು. ಆದರೆ ಆತ್ಮಜ್ಞಾನಿಗೆ ಈ ತರಹದ ವ್ಯತ್ಯಾಸ ಅಂತರಾಳದಲ್ಲಿ ಆಗಲಾರದು. ಅವನ ಬುದ್ಧಿ ಮತ್ತು ಮನ ಸಮತೋಲನವಾಗಿ ಇರುವುದು. ಆದರಿಂದಾಗಿ ಅವನು ಎಂತಹ ಕಠಿಣ ಸಮಸ್ಯೆಯನ್ನು ಇದಿರಿಸಲು ಶಕ್ತನಾಗುವನು ವಿಷಪಾನವನ್ನು ಕೂಡಾ ಅವನು ಸಂತೋಷದಿಂದಲೇ ಮಾಡುವನು. ಸಾವಿಗೆ ಹೆದರುವಷ್ಟು ಮಾನವರು ಬೇರಾವುದಕ್ಕೂ ಹೆದರುವುದಿಲ್ಲ. ಅದನ್ನೇ ಆತ ಜಯಿಸಲು ಸಾಧ್ಯವಾಗುವುದು. ಜ್ಞಾನಿಯ ಹೃದಯ ಮತ್ತು ವಿವೇಕದ

(ಹತ್ತನೇ ಪುಟ ನೋಡಿರಿ)

Navayuga Enterprise Limited

Registered Office: Palukote, Udipi

NOTICE

The register of members and Share transfer books of the Company will remain closed from 15th June to 10th July, 1965 (both days inclusive.)

(By order of the Board)

Udipi,
Dated 17-5-1965.

K. Honnayya Shetty,
Managing Director.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ರೈಲು ಪ್ರವಾಸಿಗಳ

ಜಾರ್ಜ್ ವೆ

೪೮ ವರ್ಷಗಳಲ್ಲಿ ೪೦೦ ಪೇ

೧

ವಿಜ್ಞಾನವು ಮಾನವ ಸಮಾಜಕ್ಕೆ ಒದಗಿಸಿದ ಯಾವುದೇ ಸುಖ ಸಾಧನವೂ ಆರಂಭ ಕಾಲದಲ್ಲಿ ಈಗಿನಷ್ಟು ಆರಾಮ ಕೊಡುತ್ತಿರಲಿಲ್ಲ. ಮೊದ ಮೊದಲಿಗೆ ಹಲವಾರು ಅಡ್ಡಿ ಆತಂಕಗಳು ಇಣಿಕಿ ನೋಡುತ್ತಿದ್ದವು ಆದರೆ, ಮನುಷ್ಯ ಬುದ್ಧಿಯ ನಿರಂತರ ಹೋರಾಟ ಮತ್ತು ಪರಿಶ್ರಮಗಳ ಪರಿಣಾಮವಾಗಿ ಹೊಸ ಹೊಸ ಸಂಶೋಧನೆಗಳು ನಡೆದುವು. ಆತಂಕಗಳನ್ನು ನೀಗಿಸಬಲ್ಲ ವಿಧಾನಗಳೂ ಗೋಚರವಾದುವು ಇಂದಿಗಾದರೂ ವಿಜ್ಞಾನದ ಪ್ರತಿ ರಂಗದಲ್ಲೂ ಈ ಬಗೆಯ ಶೋಧನೆಗಳು ನಡೆಯುತ್ತಲೇ ಇವೆ.

ರೈಲು ಪ್ರಯಾಣವೆಂದು ಸಾಮಾನ್ಯ ವಿಷಯವಾಗಿದೆ. ಕೆಲವು ದಶಕಗಳಿಗೆ ಮೊದಲು ಇದು ಈಗಿನಷ್ಟು ಸುಖಮಯವಾಗಿರಲಿಲ್ಲ. ಅಪಘಾತಗಳ ಭಯ ಹೆಜ್ಜೆ ಹೆಜ್ಜೆಗೂ ಪೀಡಿಸುತ್ತಿತ್ತು. ಅನೇಕಾನೇಕ ಅಸಾಮಾನ್ಯ ದುರ್ಘಟನೆಗಳನ್ನು ತಡೆಯಬಹುದಾದ ಸಂಶೋಧನೆಯನ್ನು ಮಾಡಿ, ಅದನ್ನು ರೂಢಿಗೆ ತಂದ ವಿಜ್ಞಾನಿಯೇ ಜಾರ್ಜ್ ವೆಸ್ಟಿಂಗ್ ಹೌಸ್.

ಚಿತ್ರ ೧: ಜಾರ್ಜ್ ವೆಸ್ಟಿಂಗ್ ಹೌಸ್

ಏರ್ ಬ್ರೇಕ್‌ನ್ನು ಸಂಶೋಧಿಸಿ ರೇಲ್ವೆ ಉದ್ಯಮದಲ್ಲಿ ಕ್ರಾಂತಿ ಯೆಬ್ಬಿಸಿದ ಜಾರ್ಜ್ ವೆಸ್ಟಿಂಗ್ ಹೌಸ್ ಅಮೇರಿಕೆಯ ಪ್ರತಿಭಾಶಾಲಿ ಇಂಜನಿಯರ್. ಈತನು ೧೮೪೬ರಲ್ಲಿ ಅನುಕೂಲವಾದ ವಾತಾವರಣದಲ್ಲಿಯೇ ಜನಿಸಿದನು. ತನ್ನ ಸಹವಾಸಿ ಜನತೆಗಾಗಿಯೇ ತನ್ನ ಜೀವಮಾನವನ್ನು ಮುಡಿಪಿಟ್ಟ ಜನ ಸೇವಕನೀತ. ಈ ಮಹನೀಯನ ಸ್ಥೂಲ ಪರಿಚಯವನ್ನು ಇಲ್ಲಿ ಮಾಡಿಕೊಡಬಹುದು.

೨

ಚಿತ್ರ ೨: ಎಳೆತನ

ವೆಸ್ಟಿಂಗ್ ಹೌಸ್‌ನ ತಂದೆಯೂ ಒಬ್ಬ ಕುಶಲ ಕರ್ಮಚರ. ರೈತರಿಗೆ ಉಪಯುಕ್ತವಾದ ಹಾರೆ, ಗುದ್ದಲಿ ಮೊದಲಾದುವನ್ನು ತಯಾರಿಸಿ ಪೂರೈಸುವವ. ತನ್ನ ಅಂಗಡಿಯಲ್ಲೂ ಆತನು ಹಲವಾರು ಯಂತ್ರ ಮತ್ತು ಯಂತ್ರೋಪಕರಣಗಳನ್ನು ಕೂಡಿಡುತ್ತಿದ್ದ. ಇದರಿಂದ ಬಾಲಕ ವೆಸ್ಟಿಂಗ್ ಹೌಸ್‌ನಿಗೆ ಎಳವೆಯಲ್ಲೇ ಯಂತ್ರ ತಂತ್ರಗಳಲ್ಲಿ ಕುತೂಹಲ ಕೆರಳಿತು. ಸಮ ಪ್ರಾಯದವರೊಡನೆ ಇತರ ಹುಡುಗರು ಆಡುತ್ತಿರುವಾಗ, ಆಟದಲ್ಲಿಯೇ ಮೈಮರೆಯುತ್ತಿರುತ್ತಿರುವಾಗ, ಎಳೆಯ ವೆಸ್ಟಿಂಗ್ ಹೌಸ್ ತನ್ನ ತಂದೆ ಅಂಗಡಿಯಲ್ಲಿ ಬಹು ಕಾಲ ಕಳೆಯುತ್ತಿದ್ದ; ಯಂತ್ರಗಳನ್ನು ಪರಿಶೀಲಿಸುವುದರಲ್ಲಿಯೂ ಯಾಂತ್ರಿಕತತ್ವಗಳನ್ನು ಅಳವಡಿಸಿಕೊಳ್ಳುವುದರಲ್ಲಿಯೂ ತನ್ನ ತಾನೇ ಮರೆಯುತ್ತಿದ್ದ.

ಚಿತ್ರ ೩: ಶಿಕ್ಷಣ

ಹದಿನೆಂಟನೆಯ ವಯಸ್ಸಿನಲ್ಲಿ ವೆಸ್ಟಿಂಗ್ ಹೌಸ್ ನ್ಯೂಯಾರ್ಕ್‌ನ ಯೂನಿಯನ್ ಕಾಲೇಜಿನಲ್ಲಿ ಸೇರಿಕೊಂಡನು. ಆತನ ಮನಸ್ಸು ಶಿಕ್ಷಣದತ್ತ ಹರಿಯುವುದಕ್ಕಿಂತ ಸಲೀಸಾಗಿ ಸಂಶೋಧನೆಗಳತ್ತ ಹರಿಯುತಿತ್ತು. ಆದುದರಿಂದಲೇ ಆತ ಕಲಿಯುವುದರಲ್ಲಿ ದಡ್ಡನೆನಿಸಿದ್ದನು. ಒಂದೊಮ್ಮೆ ತನ್ನ ಕಾಲೇಜಿನ ಅಧ್ಯಕ್ಷರೊಡನೆ ಗದರಿಸಿಯೇ ನುಡಿದ: 'ಶಿಕ್ಷಣದತ್ತ ಗಮನ ಹರಿಸಲು ನನಗೆ ಅವಕಾಶವಿರುತ್ತಿದ್ದರೆ, ನಿಮ್ಮ ಕಾಲೇಜನ್ನು ಪ್ರೀತಿಸುತ್ತಿದ್ದೆ..' ಇದರಿಂದ ಕೋಪಗೊಂಡ ಅಧ್ಯಕ್ಷರು ವೆಸ್ಟಿಂಗ್ ಹೌಸ್

೩

ನನ್ನು ಕಾಲೇಜಿನಿಂದಲೇ ಹೊರದೂಡಿದರು.

ಚಿತ್ರ ೪. ಅವಶ್ಯಕತೆ

೧೮೬೦ರ ಸುಮಾರಿಗೆ ಅಮೇರಿಕೆಯಲ್ಲಿ ರೇಲು ದಾರಿಗಳು ತೀವ್ರಗತಿಯಲ್ಲಿ ವಿಸ್ತಾರಗೊಳ್ಳುತಿದ್ದುವು. ಅವು ಜನಪ್ರಿಯವಾಗುತ್ತಲೂ ಬರುತಿದ್ದುವು. ಆದರೆ, ಬ್ರೇಕ್ ಪದ್ಧತಿಯು ಪರ್ಯಾಪ್ತವಿರದಿದ್ದ ಕಾರಣ, ರೇಲು ಅಪಘಾತಗಳ ಸಂಖ್ಯೆಯೂ ಹೆಚ್ಚುತ್ತ ಬರುತಿತ್ತು. ರೇಲ್ವೆಯಿಂದ ಜನತೆಗಾಗುವ ಕಲ್ಯಾಣವನ್ನೂ ಅದರ ದುಸ್ಥಿತಿಯನ್ನೂ ಗಮನಿಸಿದ ವೆಸ್ಟಿಂಗ್ ಹೌಸ್‌ನ ಗಮನ ಬ್ರೇಕ್ ಪದ್ಧತಿಯನ್ನು ಸುಧಾರಿಸುವತ್ತ ಹರಿಯಿತು ಅನಾಹುತ—ಅಪಘಾತಗಳನ್ನು ತಡೆಯಬಲ್ಲ ಬ್ರೇಕ್ ಪದ್ಧತಿಯನ್ನು ತಾನು ಸಂಶೋಧಿಸಬೇಕು ಎಂದು ವೆಸ್ಟಿಂಗ್ ಹೌಸ್ ನಿರ್ಧಾರ ಮಾಡಿಕೊಂಡನು.

ಚಿತ್ರ ೫: ಪ್ರಯೋಗಗಳು

ಯಾವ ಸಾಧನೋಪಕರಣಗಳೂ ಇಲ್ಲದ ಅಂಗಡಿಯಲ್ಲಿಯೇ ವೆಸ್ಟಿಂಗ್ ಹೌಸ್ ತನ್ನ ಪ್ರಯೋಗಕ್ಕೆ ಕೈ ಹಾಕಿದನು. ಮೊದಲಿಗೆ ಉಗಿಯ ಸಹಾಯದಿಂದ ಬ್ರೇಕುಗಳನ್ನು ನಡೆಸುವ ಪದ್ಧತಿಯನ್ನಾತ ಕಂಡುಹಿಡಿದನು. ಇತರ ಹಲವಾರು ಸಂಶೋಧಕರೂ ಈ ಸಂಬಂಧದಲ್ಲಿ ಪ್ರಯೋಗ ಮಾಡಿದ್ದರು; ಆದರ ಅವರಿಗೆ ಯಶಲಭಿಸಲಿಲ್ಲ. ಕೆಲವು ತಿಂಗಳುಗಳ ನಂತರ ವೆಸ್ಟಿಂಗ್ ಹೌಸನೂ ತನ್ನ ಪ್ರಯೋಗಗಳು ಯಶಸ್ವಿಯಾಗಲಿಲ್ಲವೆಂದು ಒಪ್ಪಿಕೊಳ್ಳಲೇ ಬೇಕಾಯ್ತು. ಇಂಜಿನಿನಿಂದ ಕಾರುಗಳತ್ತ ಹರಿಯುವ ಉಗಿಯ ಒತ್ತಡವನ್ನು ತಡೆ ಹಿಡಿಯುವಲ್ಲಿ ಆತನು ಅಸಮರ್ಥನಾಗಿದ್ದನು. ಆದುದರಿಂದ ಆತನು ಮಾಡಿದ ಪರಿಶ್ರಮವೂ ಆರಿಸಿದ ಬ್ರೇಕ್ ವಿಧಾನವೂ ನಿರುಪಯುಕ್ತವಾದುವು.

ಚಿತ್ರ ೬: ದೀರ್ಘಾಲೋಚನೆ

೧೮೬೬ನೆ ಇಸವಿಯ ಒಂದು ದಿನ. ಆತನೊಂದು ಚಿತ್ರಪಟವನ್ನು ಕಂಡನು. ಅದು ಬಹುಕಾಲದಿಂದ ಆತನ ತಲೆಯ ಮೇಲೆ ಸವಾರಿಮಾಡುತ್ತಿದ್ದ "ಬ್ರೇಕ್ ಪದ್ಧತಿ"ಯ ಸಮಸ್ಯೆಯ ಯೋಜನೆಯನ್ನೇ ಬದಲಿಸಿತು. ಸ್ವಿಜರ್ಲೆಂಡದ ಸುರಂಗ ತೋಡುವವನು ಬಂಡೆಯನ್ನು ಕಡಿಯಲು ಅಮುಕುವ ಏರ್‌ಡ್ರಿಲ್ಲನ್ನು ಉಪಯೋಗಿಸುತಿದ್ದ ಚಿತ್ರವದು ಇದನ್ನು ಕಂಡ ವೆಸ್ಟಿಂಗ್ ಹೌಸನ ಮನಸ್ಸಿನಲ್ಲಿ ತಕ್ಷಣವೇ ಒಂದು ಯೋಜನೆ ಮೂಡಿತು. ರೇಲ್ವೆಗೂ ಅಮುಕುವ ಬ್ರೇಕ್ ಪದ್ಧತಿಯನ್ನು ಯಾಕೆ ಅಳವಡಿಸಿಕೊಳ್ಳಬಾರದು? ಆ ಕ್ಷಣದಿಂದಲೇ ಆತ ತನ್ನ ಬುದ್ಧಿಗೆ ಹೊಳೆದ ಹೊಸ ಆಲೋಚನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ತಲ್ಲೀನನಾದ. ವೆಸ್ಟಿಂಗ್ ಹೌಸ್ ಸಫಲತೆಯ ದಾರಿಯಲ್ಲೇ ನಡೆದ

ಚಿತ್ರ ೭: ಯಶಸ್ಸು

೧೮೬೯ರಲ್ಲಿ, ಅಂದರೆ ತನ್ನ ೨೨ನೆಯ ವಯಸ್ಸಿನಲ್ಲಿ ವೆಸ್ಟಿಂಗ್ ಹೌಸನು ಏರ್ ಬ್ರೇಕಿಗೆ ಸಂಬಧಿಸಿದ ಸಂಶೋಧನೆಗಳನ್ನು ಪೂರ್ತಿಗೊಳಿಸಿದನು ಇನ್ನೀಗ ಅದನ್ನು ಪರಿಶೀಲಿಸಬೇಕು. ಯಾತನಾಮಯ ಕ್ಷಣಗಳು ಆಗ ಎದುರಿಸಬೇಕಿತ್ತು! ಆದರೆ ಅಪಾಯಕ್ಕೆ ನಾಂದಿಯಾದ ಈ ಬ್ರೇಕ್ ಪರಿಶೀಲನೆಗೆ ರೇಲ್ವೆ ದಾರಿಯನ್ನು ಯಾರು ತರವು ಮಾಡಿಕೊಡುತ್ತಾರೆ? ಹಲವಾರು ಕಡೆಯಲ್ಲಿ ಜೋಲುಮೋರೆ ಹಾಕಿಕೊಂಡ ವೆಸ್ಟಿಂಗ್ ಹೌಸನಿಗೆ ಕೊನೆಗೊಂದು ದಾರಿಯು ದೊರೆಯಿತು. ಇಷ್ಟಾಗಬೇಕಾದರೆ, ಆತನಿಗೆ ಸಾಕು



೭



೮

೯

೧೦

ಶ್ವಾಸ ತುಂಬಿದ

ಗ್ ಹೌಸ್

ದ ಮಾನವ ಹಿತಸಾಧಕ.





ನಾಶವಾಗಿ ಹೋಯಿತು. ಪರಿಶೀಲನೆಯಲ್ಲಿ ಈ ಬ್ರೇಕು ಪದ್ಧತಿಯು ಯಶಸ್ವಿಯೂ ಆಯಿತು. ಕುದುರೆಯ ಮೇಲಿಂದ ಉರುಳಿ ಬಿದ್ದವನೊಬ್ಬನ ಮೇಲೆ ಹಾದು ಹೋಗಲಿದ್ದ ರೇಲ್ವೆ ಗಾಡಿಯನ್ನು ತಡೆದು ನಿಲ್ಲಿಸುವಲ್ಲಿ ಈ ಬ್ರೇಕು ಸಮರ್ಥವಾಯಿತು.

ಚಿತ್ರ ೮: ಸಿಗ್ನಲ್‌ಗಳು

ವೆಸ್ಟಿಂಗ್ ಹೌಸನು ಕಂಡು ಹಿಡಿದ ಏರ್ ಬ್ರೇಕ್ ಪದ್ಧತಿಯನ್ನು ಅಮೇರಿಕದ ಎಲ್ಲ ರೇಲ್ವೆಗಳೂ ಅಳವಡಿಸಿಕೊಂಡವು. ಪ್ರಪಂಚದ ಇತರೆಡೆಯಲ್ಲೂ ಇದು ಪ್ರಚಾರಕ್ಕೆ ಬಂದಿತು. ಇಂದಿಗೆ ಬ್ರೇಕ ಪದ್ಧತಿಯಲ್ಲಿ ಬಹಳಷ್ಟು ಸುಧಾರಣೆಗಳಾಗಿರುವುವಾದರೂ ಮೂಲ ತತ್ವವು ವೆಸ್ಟಿಂಗ್ ಹೌಸನದೇ ಆಗಿರುವುದು. ತನ್ನ ಸಂಶೋಧನೆಯಿಂದ ರೇಲ್ವೆ ದುರ್ಘಟನೆಗಳು ಕಡಿಮೆಯಾಗುತ್ತ ಬರುತ್ತಿದ್ದುದನ್ನು ಕಂಡ ಆತ ಪ್ರಸನ್ನನಾದ. ಇನ್ನೂ ನಡೆಯುತ್ತಿದ್ದ ಅಪಘಾತಗಳನ್ನು ತಡೆಯುವುದು ಸಾಧ್ಯವಿಲ್ಲವೇ ಎಂದಾತ ಯೋಚಿಸತೊಡಗಿದ; ಸಿಗ್ನಲ್‌ಗಳ ಶೋಧನೆಯಲ್ಲಿ ಆತ ನಿಮಗ್ನನಾದ.

ಚಿತ್ರ ೯: ಅರಸುತಿದ್ದ ಮನಸ್ಸು

ತನ್ನ ಹೊಸ ಉದ್ಯಮದಲ್ಲಿಯೂ ಆತ ೧೮೮೦ರಲ್ಲಿ ಅಂದರೆ, ೩೪ನೆಯ ವಯಸ್ಸಿನಲ್ಲಿ ಯಶಗಳಿಸಿದ. ಆದರೆ, ಇಷ್ಟರಿಂದಲೇ ವೆಸ್ಟಿಂಗ್ ಹೌಸ್ ತೃಪ್ತನಾಗಲಿಲ್ಲ. ತನ್ನ ಸುತ್ತು ಮುತ್ತಲಿರುವ ಜನತೆಯ ಸ್ಥಿತಿಗತಿಗಳನ್ನು ಉತ್ತಮಗೊಳಿಸುವುದು ಹೇಗೆ ಎಂದಾತನ ಮನಸ್ಸು ಯೋಚಿಸುತ್ತಿತ್ತು. ಅದಕ್ಕಾಗಿ ಹೊಸ ವಿಧಾನಗಳನ್ನು ಚಿಂತಿಸುತ್ತಿತ್ತು. ತನ್ನ ಸಂಶೋಧನೆಗಳು ಅಪಾರ ಸಂಪತ್ತನ್ನು ಒದಗಿಸಿ ಕೊಡಬಹುದಾಗಿದ್ದರೂ ಆ ಬಗ್ಗೆ ವೆಸ್ಟಿಂಗ್ ಹೌಸ್ ವಿಶೇಷ ಲಕ್ಷ್ಯವಹಿಸಲಿಲ್ಲ.

ಚಿತ್ರ ೧೦: ಸಹಜ ಅನಿಲ

೧೮೮೦ರ ಸುತ್ತಲಲ್ಲಿ ಮೇಣಬತ್ತಿ ಮತ್ತು

೭

ಕೆರೋಸಿನ್ ಎಣ್ಣೆಯ ಲ್ಯಾಂಪುಗಳೇ ದೀಪದ ಮುಖ್ಯ ಸಾಧನಗಳಾಗಿದ್ದವು. ತಾನು ಇರುತ್ತಿದ್ದ ಪಿಟ್ಸ್‌ಬರ್ಗ್-ಪೆನ್ಸಿಲ್ವೇನಿಯಾ ಪ್ರದೇಶದಲ್ಲಿ ದೊರೆಯುತ್ತಿದ್ದ ಸಹಜಾನಿಲವು ಪ್ರಕಾಶ ಕೊಡುವ ಉತ್ತಮ ಸಾಧನವಾಗಬಹುದೆಂದು ವೆಸ್ಟಿಂಗ್ ಹೌಸ್ ತಿಳಿದಿದ್ದ. ಅವನೊಂದು ಗ್ಯಾಸ್ ಬಾವಿಯನ್ನು ತೋಡಿಸಿ ತನ್ನ ಮನೆಯನ್ನು ಅದರ ಸಹಾಯದಿಂದ ಬೆಳಗಿದ. ಕೆಲವೇ ಸಮಯದಲ್ಲಿ ಆತನು ಹಲವಾರು ಈ ಬಗೆಯ ಬಾವಿಗಳನ್ನು ತೋಡಿ, ಇಡಿಯ ಪಿಟ್ಸ್‌ಬರ್ಗ ನಗರವನ್ನೇ ಬೆಳಗಿಸಿದ.

ಚಿತ್ರ ೧೧: ವಿದ್ಯುಚ್ಛಕ್ತಿ

ಗ್ಯಾಸಿನಿಂದ ಬೆಳಕು ಮೂಡಿಸಿ ಯಶ ಗಳಿಸಿದ ವೆಸ್ಟಿಂಗ್ ಹೌಸನ ದೃಷ್ಟಿ ಆಲ್ಟರ್‌ನೇಟಿಂಗ್ ಕರೆಂಟ್ ವಿದ್ಯುಚ್ಛಕ್ತಿಯತ್ತ ಹರಿಯಿತು. ಇಷ್ಟರಲ್ಲಿ ಅಮೇರಿಕನ್ ಸಂಶೋಧಕ ಥಾಮಸ್ ಆಲ್ವಾ ಎಡಿಸನ್ನನು ಇಲೆಕ್ಟ್ರಿಕ್ ಬಲ್ಬನ್ನು ತಯಾರಿಸಿ ವಿದ್ಯುತ್ತನ್ನು ದೀಪವಾಗಿ ಬಳಸುವಲ್ಲಿ ಸಾಕಷ್ಟು ಮುಂದುವರಿದಿದ್ದನು. ಆತನು ಡೈರೆಕ್ಟ ಕರೆಂಟ ತತ್ವದಲ್ಲಿ ವಿಶ್ವಾಸವಿಟ್ಟಿದ್ದನು. ಆದರೆ, ವೆಸ್ಟಿಂಗ್ ಹೌಸ್ ಎಡಿಸನನ ತತ್ವವನ್ನು ಒಪ್ಪದೆ ಆಲ್ಟರ್‌ನೇಟ್ ಪದ್ಧತಿಯೇ ಈ ದಿಸೆಯಲ್ಲಿ ಬಹಳ ಉಪಯುಕ್ತವೆಂದು ನಂಬಿದ್ದನು.

ಚಿತ್ರ ೧೨: ಮಾರಾಟ

೧೮೮೬ರಲ್ಲಿ ವೆಸ್ಟಿಂಗ್ ಹೌಸ್ ಜನತೆಗೆ ಆಲ್ಟರ್‌ನೇಟಿವ್ ಕರೆಂಟೇ ಡೈರೆಕ್ಟ ಕರೆಂಟಿಗಿಂತ ಉತ್ತಮವೆಂದು ತಿಳಿಸಿ ಹೇಳುವಲ್ಲಿ ಯಶಸ್ವಿಯಾದನು. ಅವನು ವಿದ್ಯುತ್ ಇಸ್ತ್ರಿ ಪೆಟ್ಟಿಗೆ

೫

ಯನ್ನೂ 'ಸ್ಟವ್ವನ್ನೂ ತಯಾರಿಸಿದನು. ಅವನ್ನು ಅವರ ಮುಂದೆ ಪ್ರದರ್ಶಿಸಿದನು. ಈ ಬಗೆಯ ಪ್ರಯೋಗವು ಡೈರೆಕ್ಟ್ ಸಿಸ್ಟಮ್‌ನಲ್ಲಿ ಇನ್ನೂ ಫಲಕಾರಿಯಾಗಿಲ್ಲ. ಈ ಪ್ರದರ್ಶನವು ಜನತೆಯ ಮೇಲೆ ಸಾಕಷ್ಟು ಪರಿಣಾಮ ಬೀರಿದರೂ ಎಡಿಸನ್ ಹಿತಾಸಕ್ತಿಯವರಿಂದ ಪ್ರಬಲ ಪ್ರತಿಭಟನೆಯನ್ನು ಎದುರಿಸಬೇಕಾಯಿತು.

ಚಿತ್ರ ೧೩: ವಿಜಯ

೧೮೯೩ರಲ್ಲಿ ಕೊಲಂಬಿಯಾ ಪ್ರದರ್ಶನದ ವೇಳೆ ಆಲ್ಟರ್‌ನೇಟಿವ್ ಕರೆಂಟ್ ಪದ್ಧತಿಯಿಂದ ಪ್ರದರ್ಶನ ಮಂಟಪವನ್ನು ಬೆಳಗಿಸುವ ಕರ್ತವ್ಯ ವೆಸ್ಟಿಂಗ್ ಹೌಸನ ಪಾಲಿಗೆ ಬಂದಿತು. ಇದರಿಂದಲೇ ಆತ ತನ್ನ ಪರಿಶ್ರಮದಲ್ಲಿ ಜಯಶ್ರೀಯನ್ನು ವರಿಸಿದನೆನ್ನಬಹುದು. ಹಲವಾರೆಡೆಯಿಂದ ಆತನಿಗೆ ಕರೆ ಬಂದು ನಯಾಗರಾ ಜಲಪಾತದಲ್ಲಿ ವಿದ್ಯುತ್ ಕಾರಖಾನೆಗೂ ಆತನ ಅವಶ್ಯಕತೆ ಬಿತ್ತು. ಇಂದಿಗೆ ನೇ. ೯೭ರಷ್ಟು ಇಲೆಕ್ಟ್ರಿಕ್ ಕರೆಂಟು ಆಲ್ಟರ್‌ನೇಟಿವ್ ಪ್ರಣಾಳಿಕೆಗೊಳಪಟ್ಟಿದೆ.

ಚಿತ್ರ ೧೪: ಸಾಧನೆಗಳು

ತನ್ನ ೪೮ ವರ್ಷಗಳ ಕಾರ್ಯತತ್ಪರತೆಯಲ್ಲಿ ಸುಮಾರು ೪೦೦ ಮಾನವ ಹಿತಸಾಧನಗಳನ್ನು ವೆಸ್ಟಿಂಗ್ ಹೌಸ್ ಸಾಧಿಸಿದನು. ಏರ್ ಬ್ರೇಕ್ ಮತ್ತು ಸಿಗ್ನಲ್ ಪ್ರಣಾಲಿಗಳು ರೇಲ್ವೆ ವಿಭಾಗದಲ್ಲಿ ಮಹತ್ವದ ಪಾತ್ರ ವಹಿಸಿದವು, ಪ್ರಪಂಚದ ಎಲ್ಲೆಡೆಯ ಜನತೆಯೂ ಆಲ್ಟರ್‌ನೇಟಿವ್ ಕರೆಂಟ್ ಪ್ರಣಾಲಿಯ ಸುಖವನ್ನನುಭವಿಸುತ್ತಲಿದೆ.

ಚಿತ್ರ ೧೫: ಪರಿಪೂರ್ಣ ಜೀವನ

೧೯೧೪ರಲ್ಲಿ ತನ್ನ ೬೮ನೆಯ ವಯಸ್ಸಿನಲ್ಲಿ ಜಾರ್ಜ ವೆಸ್ಟಿಂಗ್ ಹೌಸ್ ಇಹ

೬

ಲೋಕ ತ್ಯಾಗ ಮಾಡಿದ. ಅಂದಿಗೆ ಮಾನವ ಹಿತ ಸಾಧಕನೊಬ್ಬನ ಕಣ್ಮರೆಯಾಯಿತು. ಆತನ ಜೀವನದ ಉದ್ದೇಶವಿದಾಗಿತ್ತು "ತನ್ನ ಸಹವಾಸಿಗಳ ಉದ್ಧಾರ ಮತ್ತು ಸುಖಕ್ಕಾಗಿ ಏನನ್ನಾದರೂ ಕಾಣಿಕೆಯಾಗಿ ಅರ್ಪಿಸಬೇಕು"– ಈ ಗುರಿಯನ್ನು ಆತ ಸಾಧಿಸಿದ. ಆತನ ಪರಿಶ್ರಮದ ಫಲವನ್ನು ಇಂದು ಜಗತ್ತಿನ ಮೂಲೆಮೂಲೆಯ ಜನರೂ ಅನುಭವಿಸುತ್ತಿದ್ದಾರೆ. ಜಗತ್ತಿಗೆ ಜಗತ್ತೇ ಆತನನ್ನು ಹೊಗಳುತ್ತಿದೆ.

ಅಮೃತ ಬಿಂದು

ಎಲ್ಲಾ ದೇವರು ದಿಂಡರುಗಳಿಗಿಂತಾ ನನ್ನ ಆತ್ಮಕ್ಕೆ ನಾನು ಹೆಚ್ಚು ಹೆದರುತ್ತೇನೆ. ಏಕೆಂದರೆ ನನ್ನ ಆತ್ಮದಲ್ಲೇ ದೇವರ ದೇವನಿದ್ದಾನೆ.

ಲೂಥರ್

o o o

ಆನಂದದ ಉಪಯುಕ್ತತೆ ಅದನ್ನು ಜೀರ್ಣಿಸಿಕೊಳ್ಳುವ ಶಕ್ತಿಯನ್ನುಳ್ಳಂತೆ ಜ್ಞಾನದ ಸಂಪನ್ನತೆ ಚಿಂತನೆಯಲ್ಲಿದೆ

ಎಡ್ವರ್ಡ್ಸ್

o o o

ಜೀವನದ ಸುಖ ಆನಂದಗಳು ಬರಲಿ ಅಥವಾ ಬಾರದಿರಲಿ, ಅವುಗಳಿಲ್ಲದೆ ಜೀವಿಸುವ ಸಿದ್ಧತೆ ಮಾಡಿಕೊಳ್ಳಬೇಕು.

ಜಾರ್ಜ ಇಲಿಯೆಟ್

o o o

ತನ್ನಲ್ಲಿರುವದರಿಂದ ತೃಪ್ತಿಪಡೆಯದವನು ತಾನು ಬಯಸುವುದನ್ನು ಹೊಂದಿ ತೃಪ್ತಿಯುಳ್ಳವನಾಗಲಾರ

ಅನಾಮಿಕ

೧

೧೨



೧೩



೧೪

೧೫

ನೀವು ಯೋಚಿಸಿದ್ದೀರಾ?

ಬ್ರಹ್ಮಚಾರಿಗೆ ಒಂದು ಚಿಂತೆ, ಉಳಿದವರಿಗೆ?

ಮದುವೆಯಾದ ಮೇಲಿನ ಆನಂದಾನುಭವಕ್ಕಿಂತ ಮದುವೆಯಾಗುವಾಗಿನ ಆನಂದವೇ ಹೆಚ್ಚು.

ತಿಳುವಳಿಕೆ ಮೂಡಿದ ಮೇಲೆ ಮದುವೆ ಮಾಡಬೇಕು ಎನ್ನುತ್ತಾರೆ ಹಿರಿಯರು. ಆದರೆ, ನಿಜವಾದ ತಿಳುವಳಿಕೆ ಮೂಡಿತೆಂದರೆ ಆತ ಮದುವೆಯಾಗುವುದೇ ಇಲ್ಲ. ಇದು ಭರತ ವಾಕ್ಯ. ಮದುವೆಯೆಂಬ ಮೂರಕ್ಷರದ ಪದದಲ್ಲಿ ಅಂತಹ ಮಹಾ ಶಕ್ತಿ ಅಡಗಿದೆ. ಆಗದಿರುವವರಿಗೆ ಅಯ್ಯೋ ಆಗಲಿಲ್ಲವಲ್ಲಾ ಎನ್ನುವವರು ಆಗಿ ಹೋಯಿತೆಂದರೆ, ಮರುಗುತ್ತಾರೆ. ಉಗುಳಲಾಗದ ಬಿಸಿತುಪ್ಪದಂತಹ ಸಮಸ್ಯೆಯಿದು. ಇದರ ಪರಿಹಾರ ಹೇಗೋ ಯಾರೂ ಅರಿಯರು. ಲೋಕದ ಎಲ್ಲಾ ದೇಶಗಳಲ್ಲಿಯೂ ಇದೇ ಪ್ರಶ್ನೆ ಪಡಿದನಿಗೊಡುತ್ತದೆ.

"ನಿಮ್ಮ ಮಗನಿಗೆ ಮದುವೆಯಾಯಿತೆ?

' ಇಲ್ಲಾ, ಸ್ವಲ್ಪ ಹುಚ್ಚು......"

' ಸರಿಯಾದ ಹೆಣ್ಣು ಹುಡುಕಿ ಮದುವೆ ಮಾಡಿ ಮಾಡಿ......?

'ಮದುವೆಯಾಗದು ಹುಚ್ಚುಬಿಡದು."

-ಈ ಬಗೆಯ ಮಾತುಗಳು ಎಲ್ಲೆಲ್ಲೂ ಕೇಳಿ ಬರುತ್ತಲೇ ಇರುತ್ತದೆ. ಇದನ್ನೆಲ್ಲಾ ನಿಜವೆಂದೇ ಇಟ್ಟುಕೊಂಡರೆ, ಆ ಹುಚ್ಚು ಹುಡುಗನಿಗಿಂತ ಅದೃಷ್ಟವಂತರು ಮತ್ತಾರೂ ಇಲ್ಲವೆನ್ನಲೇಬೇಕು. ಮದುವೆಯಾಗಿ ಬಾಳನ್ನೆಲ್ಲಾ ಬವಣೆಗೊಳಿಸುವುದಕ್ಕೆ ಆತನಿಗೆ ಹುಚ್ಚು ಅಡ್ಡವಾಗಿ ನಿಂತಿದೆ. ಈ ಹುಚ್ಚನ್ನೇ ನಾವು ಸೂಕ್ಷ್ಮವಾಗಿ ನೋಡಿದರೆ ಆಗ ನಮಗೆ ತಿಳಿಯುವುದು, ಅದು ಹುಚ್ಚಲ್ಲ; ಪೂರ್ವಜನ್ಮದಲ್ಲಿ ಗೆಯ್ದ ತಪೋ ಸಿದ್ಧಿ! ಎಂದು.

ಇದೀಗ ಕಠೋರ ಸತ್ಯ. ಸರ್ವದೇಶಗಳಲ್ಲೂ ಇದು ಸತ್ಯಸ್ಪರ್ಶದಲ್ಲಿ ಸರಿಬರುತ್ತದೆ. ಕೆಲವರು ಆನ್ನುವುದುಂಟು: 'ಮಾನವ ಮಹಾಸುಖಿಯಾಗಿ ಬದುಕ ಬೇಕಾದರೆ, ಅವನಿಗೆ ಮದುವೆಯಾಗಲೇಬೇಕು." ಇದರಲ್ಲಿ ಸತ್ಯಾಂಶವಿದೆಯೇ? ಪರಿಶೀಲಿಸ ಹೊರಟ ದೇಶ, ಪಶ್ಚಿಮ ಜರ್ಮನಿ, ಹೀಗೆ ಹೇಳುತ್ತದೆ.

"ಅಯ್ಯಾ, ನೀನು ಸುಖವಾಗಿದ್ದೀಯ? ಇಲ್ಲವೆಂದು ನಿನಗನಿಸುವುದಾದರೆ, ಮದುವೆಯಾಗುವ ಸಂದರ್ಭ ಮದುವೆಯಾಗುವುದರಿಂದಲೇ ಸುಖ ದೊರೆಯುವುದೆಂದು ನೀನು ಅಂದುಕೊಂಡಿದ್ದೀಯಾ?"—ಈ ಪ್ರಶ್ನೆಯನ್ನು ಅಲ್ಲಿ ಸಾರ್ವಜನಿಕರ ಮುಂದೆ ಇಡುತ್ತಾರೆ; ಇದಕ್ಕೆ ಬಂದ ಉತ್ತರಗಳು ರೋಚಕವಿವೆ.

೧೯೪೯ರಲ್ಲಿ ನೂರರಲ್ಲಿ ೪೫ ಜನರು ಯಾವುದೇ ಉತ್ತರವನ್ನು ಹೇಳಲು ಅಶಕ್ತರಾದರು. ಉಳಿದವರು ಅಂತಿದ್ದರು "ಹೌದು, ಮದುವೆಯಾದಾಗಲೇ ನಾವು ಪೂರ್ತಿ ಸುಖಿಗಳಾಗುತ್ತೇವೆ.

ಹದಿನೈದು ವರ್ಷಗಳ ನಂತರ, ೧೯೬೪ರಲ್ಲಿ ಮತ್ತೆ ಅದೇ ಪ್ರಶ್ನೆಯನ್ನು ಕೇಳಲಾಯಿತು. ಈ ಸಂದರ್ಭದಲ್ಲಿ ಬಂದ ಉತ್ತರ ಹಿಂದಿನದನ್ನು ತಲೆಕೆಳಗು ಮಾಡಿಬಿಟ್ಟಿತು. "ಮದುವೆಯಲ್ಲಿಯೇ ಮಹದಾನಂದವಡಗಿದೆಯೆನ್ನುವುದರ ಸಂಖ್ಯೆ ಹೆಚ್ಚತೊಡಗಿದೆ.—ಎಂದು ಹೇಳುವವರು ಕಡಿಮೆಯಾಗಿದ್ದಾರೆ. ನೂರರಲ್ಲಿ ೪೯ ಜನರು ಮಾತ್ರ ಮದುವೆ ಬೇಕು ಎಂದು ತಿಳಿಸಿದ್ದರು. ಗಂಡಸರಿಗೆ ಮಾತ್ರ ಪ್ರಶ್ನೆ ಕೇಳದರೆ, ನಿಜವಾದ ಲೋಕಮತವಾಗದೆಂದು ಹೆಂಗಳೆಯರಿಗೂ ಇದೇ ಪ್ರಶ್ನೆಯನ್ನು ಕೇಳಲಾಯಿತು. 'ಸುಖಜೀವನಕ್ಕೆ ಮದುವೆಯು ಮುನ್ನಾಳೆ ಹಾಕುತ್ತದೆ ಎಂದು ಹೇಳುವುದು ಸಾಧ್ಯವಿಲ್ಲ? ಎಂದರು ಸೇ. ೬೬ ಹೆಂಗಳೆಯರು. 'ಆನಂದ ಜೀವನ 'ಅವರು' ಇಲ್ಲದೇ ಸಾಧ್ಯವೇ ಇಲ್ಲ' ಎಂದರು ಸೇ. ೪೦ರಷ್ಟು. ಉಳಿದವರು ಏನೆಂದರು ಗೊತ್ತೆ? 'ನೀವು ಕೇಳುತ್ತಿರುವುದು ಮಹಾತೊಡಕಿನ ಪ್ರಶ್ನೆ. ಇಂಥದ್ದೆಲ್ಲಾ ಕೇಳದರೆ ನಾವು ಉತ್ತರಿಸುವುದು ಹೇಗೆ?'

ಮದುವೆಯಾಗುವುದರಿಂದ ಸುಖವಿಲ್ಲವೆನ್ನುವ ಹಿರಿಯರೇ ತಮ್ಮ ಮಕ್ಕಳಿಗೆ ಮದುವೆಯಾಗಬೇಕೆಂದು ಹಠ ಹಿಡಿಯುತ್ತಾರೆ. ಮದುವೆ ಅಗತ್ಯವಿಲ್ಲವೆನ್ನುವವರಲ್ಲಿ ನೂರಕ್ಕೆ ೬೩ ಜನ ಮದುವೆಯಾಗಿಯೇ ಆಗುತ್ತಾರೆ. ಇವರ ಪ್ರಮಾಣವು ದಿನ ದಿನವೂ ಹೆಚ್ಚುತ್ತಲೇ ಹೋಗುತ್ತದೆ ಮದುವೆಯಾಗುವ ಹರೆಯವು ಹೆಚ್ಚಿದರೂ ಮದುವೆ ಮಾತ್ರ ನಿಲ್ಲುವುದಿಲ್ಲ. ಪ್ರತಿ ಗಂಡಿಗೂ ಒಬ್ಬ ಹೆಣ್ಣನ್ನು, ಪ್ರತಿ ಹೆಣ್ಣಿಗೂ ಒಬ್ಬ ಗಂಡನ್ನು ದೇವರು ಸೃಷ್ಟಿಸಿಯೇ ಇದ್ದಾನೆ ಎನ್ನುವುದು ಲೋಕದ ಖಚಿತಾಭಿಪ್ರಾಯ.

ಪಶ್ಚಿಮ ಜರ್ಮನಿಯಲ್ಲಿಯೂ ಇಂದು ಈ ಮತಕ್ಕೆ ಹೆಚ್ಚಿನ ಪುರಸ್ಕಾರ ದೊರೆಯ ತೊಡಗಿದೆ. ೧೯೬೧ರಲ್ಲಿ ಅಲ್ಲಿನ ಗಂಡಸರಲ್ಲಿ ಸೇ. ೧೩ರಷ್ಟು ಅವಿವಾಹಿತರಾಗಿ ಬ್ರಹ್ಮಚರ್ಯವನ್ನು ಪಾಲಿಸುತಿದ್ದರೂ. ಈ ಸಂಖ್ಯೆಯಾಗ ಸೇ. ಮೂರೂ ವರೆಗೆ ಇಳಿದಿದೆಯೆನ್ನುವಾಗ ಮದುವೆಯಲ್ಲಿ ಸುಖವಿಲ್ಲವೆನ್ನುವುದು ಹೇಗೆ? ಮದುವೆಯು ಆಕರ್ಷಣೆ ಹಾಗಿದೆ. ಕೆಸರು ಕೆಸರು ಎಂದು ಇನ್ನೊಬ್ಬರಿಗೆ ತೋರಿಸುತ್ತ ತಾನೇ ಅದರಲ್ಲಿ ಬಿದ್ದು ನರಳುವವರೇ ಹೆಚ್ಚು! ಬ್ರಹ್ಮಚಾರಿಗೂ ಮಗು ಹುಟ್ಟುತ್ತದೆಯೆನ್ನುವಾಗ ಗಂಡು— ಹೆಣ್ಣುಗಳ ನಡುವಣ ಆಕರ್ಷಕ ಶಕ್ತಿಯು ಎಷ್ಟು ಪ್ರಭಾವಶಾಲಿಯೆಂಬುದರ ಮನವರಿಕೆಯಾಗುವುದು.

— — —

ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್.ಸಿ.ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಗೀತಾ-ದ್ವಿತೀಯ ಅಧ್ಯಾಯ

(ಏಳನೇ ಪುಟದಿಂದ)

ಸಮಶೀಲನದಿಂದ. ಎಂತಹ ಸಮಸ್ಯೆಗಳನ್ನು ಬಿಟ್ಟದಷ್ಟು ಹಿರಿದಾದ ಸಮಸ್ಯೆಗಳನ್ನು ಸುಲಭವಾಗಿ ದಾಟುವನು, ಅವನಿಗೆ ಅಂತಹ ದೃಢ ವಿಶ್ವಾಸ ಇದೆ.

ಯಂ ಬ್ರಹ್ಮಾ ವರುಣೇಂದ್ರ ರುದ್ರ ಮ
ರುತಃ ಸ್ತುನ್ವಂತಿ ದಿವ್ಯೈಃ ಸ್ತವೈಃ ||
ವೇದೈಃ ಸಾಂಗ ಪದಕ್ರಮೋಪನಿಷ ದೈ
ರ್ಗಾಯಂತಿ ಯಂ ಸಾಮಗಃ||
ಧ್ಯಾನಾವಸ್ಥಿತ ತದ್ಗತೇನ ಮನಸಾ
ಪಶ್ಯಂತಿಯಂ ಯೋಗಿನೋ
ಯಸ್ಯಾಂತಂ ನ ವಿದುಃ ಸುರಾಸುರಗಣೋ
ದೇವಾಯ ತಸ್ಮೈ ನಮಃ ||೯||

ಬ್ರಹ್ಮ, ವರುಣ, ಇಂದ್ರ, ರುದ್ರ, ಮರುತ ಇತ್ಯಾದಿ ವೇದಕಾಲದ ದೇವರುಗಳು, ತಮ್ಮ ಪವಿತ್ರವಾದ ಮಂತ್ರಗಳಿಂದ ಸ್ತುತಿಸುವ ದೇವನಿಗೆ ನಮಸ್ಕಾರ. ಈ ದೇವರುಗಳೆಲ್ಲವೂ ಪ್ರಕೃತಿಯ ಒಂದೊಂದು ವಿಭಾಗದ ಅಧಿದೇವತೆಗಳು. ಈ ದೇವತೆಗಳು ಯಾರಿಂದ ಶಕ್ತಿ ಪಡೆದಿರುವವೋ ಆ ಅನಂತ ಶಕ್ತಿಯ ದೇವನಿಗೆ ವಂದನೆಗಳು. ಸಾಮವೇದವು ವೇದಗಳಲ್ಲೆಲ್ಲಾ ಅತ್ಯಂತ ಕಠಿಣವಾಗಿರುವುದು. ಅದನ್ನು ಕಲಿಯಲು ೧೪ ವರ್ಷಗಳ ತನಕ ಉತ್ತಮ ಕಂಠವಿದ್ದವನು, ಮೇಧಾವಿತನ ಪಾಂಡಿತ್ಯ ಪಡೆದವರು ಅಭ್ಯಾಸಿಸಬೇಕು. ಅಂತಹ ವೇದ ಗಾನ ಮಾಡಿ ಯಾವ ದೇವನನ್ನು ಸ್ತುತಿಸುವರೋ ಆ ದೇವನಿಗೆ ವಂದನೆಗಳು. ಮತ್ತು ಇನ್ನೂ ಸಾಮಾನ್ಯರಿಗಿಂತ ಮೇಲ್ಮಟ್ಟದಲ್ಲಿರುವ ಯೋಗಿಗಳು, ಗುಹೆಗಳಲ್ಲಿ ಕುಳಿತು ಧ್ಯಾನ ಮಾಡುತ್ತಿರುವಾಗ, ತಮ್ಮ ಮನವನ್ನು ಯಾರಲ್ಲಿ ಐಕ್ಯತೆಗೊಳಿಸುವರೋ ಆ ದೇವನಿಗೆ ವಂದನೆಗಳು. ಹಾಗೆ ದೇವತೆಗಳ, ದೇವರಿಗೆ ನನ್ನ ವಂದನೆಗಳು, ಈ ಶ್ಲೋಕವನ್ನು ಜಾತಿ, ಮತ, ಧರ್ಮ ಬೇಧವಿಲ್ಲದೆ ಎಲ್ಲಿಯೂ, ಯಾರಿಗೂ ಹೇಳಬಹುದು. ಈ ಶ್ಲೋಕದಿಂದ ಪ್ರಾಚೀನ ಮಹರ್ಷಿಗಳ ವಿಶ್ವ, ವಿಶಾಲ ಹೃದಯವನ್ನು ನಾವು ತಿಳಿದುಕೊಳ್ಳಬಹುದು. ವೇದ ಕಾಲದಲ್ಲಿ ರಾಮ, ಕೃಷ್ಣ ಎಂಬ ಪುರಾಣ ದೇವರು ಇರಲಿಲ್ಲ ಆಗಿನವರಿಗೆ, ಇಂದ್ರ ವರುಣ, ಇತ್ಯಾದಿ ಜಲ, ವಾಯು ಇತ್ಯಾದಿ ಪ್ರಕೃತಿಯ ಅಧಿದೇವತೆಗಳನ್ನು ಆರ್ಯರು ಪೂಜಿಸುತಿದ್ದರು. ಗೀತೆಯ ಕಾಲದಲ್ಲಿ ಈ ದೇವತೆಗಳ ಹೆಸರು ಎಲ್ಲರಿಗೂ ತಿಳಿದಿತ್ತು. ವರುಣ ಎಂದರೆ ಜಲದ ಅಧಿದೇವತೆ. ಮರುತನು ವಾಯುವಿನ ಅಧಿದೇವತೆ. ಬ್ರಹ್ಮನು ಲೋಕವನ್ನು ಸೃಷ್ಟಿಸುವವನು; ಇಂದ್ರನು ದೇವತೆಗಳ ಒಡೆಯನು. ದೇವ ಎಂದರೆ, ನಾವು ನೋಡುವಂತೆ ಮಾಡುವ ಚೈತನ್ಯದ ಅಧಿದೇವತೆ. ದೇವ ಎಂದರೆ ಕೇವಲ ದೇವರುಗಳು ಎಂದಾಗಿಲ್ಲ.

ಮಹಾಭಾರತ ಕಾಲದಲ್ಲಿ ಧಾರ್ಮಿಕ, ಅಧಾರ್ಮಿಕ ಪಂಗಡಗಳೊಳಗಿನ ತಿಕ್ಕಾಟದಲ್ಲಿ ಧಾರ್ಮಿಕರಾದ ಪಾಂಡವರು, ಅಧಾರ್ಮಿಕ; ರಾಕ್ಷಸೀ ಪ್ರವೃತ್ತಕರಾದ ಕೌರವರೊಡನೆ ಯುದ್ಧ ಹೂಡಿದರು. ಧೃತರಾಷ್ಟ್ರನು ಹುಟ್ಟು ಕುರುಡನು. ಮಹಾಭಾರತ ಯುದ್ಧವನ್ನು ನಿಲ್ಲಿಸಲು ಶಕ್ತನಾದ ಒಬ್ಬನೇ ವ್ಯಕ್ತಿ ಧೃತರಾಷ್ಟ್ರನು, ಆದರೆ ಅಂಧನಾದ ಧೃತರಾಷ್ಟ್ರನು ವಿವೇಕದಿಂದ ವರ್ತಿಸಲಿಲ್ಲ. ಮಕ್ಕಳ ಮೇಲಿನ ಮೋಹದಿಂದ ಅನುಪಮ ಧರ್ಮಮಾರ್ಗದಲ್ಲಿ ನಡೆಯಲು ಹಿಂಜರಿದನು.

ಶ್ರೀಕೃಷ್ಣನು ಸಂಧಿಗಾಗಿ ಪ್ರಯತ್ನಿಸಿದನು. ಪಾಂಡವರು ಅರ್ಧ ರಾಜ್ಯವನ್ನು ಕೇಳಲು ದುರ್ಯೋಧನನು ಕೊಡಲೊಪ್ಪಲಿಲ್ಲ. ಕೊನೆಗೆ ಅರ್ಧ ರಾಜ್ಯವಲ್ಲ, ಐದು ಊರುಗಳು, ಐದು ಗ್ರಾಮಗಳು, ಕಟ್ಟಕಡೆಗೆ ಒಂದೇ ಗ್ರಾಮ, ಐದು ಜನ ಪಾಂಡವರಿಗೆ ಇರಲು ಸ್ಥಳ ಮಾತ್ರ ಕೇಳಿದರು. ದುರ್ಯೋಧನನು ಕೊಡಲೊಪ್ಪದೆ, ಇರಲು, ಯುದ್ಧ ಹೂಡಿ, ತಮ್ಮ ರಾಜ್ಯವನ್ನು ಏಕೆ ಇಡೀ ರಾಜ್ಯವನ್ನು ಪಡೆಯಿರಿ ಎಂದುದಕ್ಕೆ, ಯುದ್ಧಕ್ಕೆ ಎರಡೂ ಕಡೆಯವರು ಸನ್ನಾಹ ಮಾಡಿದರು.

———

ವಿವಾಹ ಸಮಾರಂಭದ ಮಮತೆಯ ಕರೆಯೋಲೆ

ನಮ್ಮ ಸಹೋದರ ಡಾ। ಯು. ಕರುಣಾಕರ ಶೆಟ್ಟಿ (ಭದ್ರಾವತಿ)ಯ ವಿವಾಹ ಸಮಾರಂಭವು ಶ್ರೀ ಮುತ್ತೂರು ಮಹಾಬಲ ಹೆಗ್ಡೇರ ಪ್ರಥಮ ಪುತ್ರಿ ಕುಮಾರಿ ವಸಂತಿಯೊಡನೆ ತಾ. 17-6-65 ನೇ ಗುರುವಾರ ಮಧ್ಯಾಹ್ನ 12-30ಗಂಟೆಗೆ ಉಡುಪಿ ಕಲ್ಪನಾ ಥಿಯೇಟರಿನಲ್ಲಿ ಜರಗಲಿರುವುದು. ಈ ಸಂಬಂಧ ನಮ್ಮ ಇಷ್ಟ ಮಿತ್ರರಿಗೆಲ್ಲಾ ವಿವಾಹ ಪತ್ರಿಕೆಗಳನ್ನು ಪ್ರತ್ಯೇಕ ಕಳಿಸಿರುತ್ತೇವೆ. ಒಂದು ವೇಳೆ ಆಮಂತ್ರಣ ಪತ್ರಿಕೆ ಸಕಾಲದಲ್ಲಿ ಸಿಗದಿದ್ದರೆ ಇದೇ ಆಮಂತ್ರಣವೆಂದು ತಿಳಿದು ದಯಮಾಡಿ ಎಲ್ಲರೂ ಚಿತ್ತೈಸಿ ವಧೂವರರನ್ನು ಆಶೀರ್ವಸಿ ಈ ಶುಭಕಾರ್ಯವನ್ನು ನೆರವೇರಿಸಿ ಕೊಡಬೇಕಾಗಿ ಅಪೇಕ್ಷಿಸುತ್ತೇವೆ.

ಡಾ। ಯು. ಕೃಷ್ಣ,	ಡಾ। ಯು. ಶಿವರಾಮ,	ಡಾ। ಯು. ಚಂದ್ರಶೇಖರ,
ಮಣಿಪಾಲ್.	ಉಡುಪಿ.	ಉಡುಪಿಲ್ಲಿಗೆ.

ನಿಮಗೂ ತಿಳಿದಿರಲಿ

ಪೃಥ್ವಿಯು ಹೇಗೆ ಶಾಂತವಾಯ್ತು?

ತಿಳಿಸಿದವರು
"ಮಾಣಿಕ," ತಿವ್ನಾಪುರ

ಪ್ರಾಚೀನ ಕಾಲದ ಮಾತಿದು.

ಅಸಹ್ಯ ಅಂತರ್ದಾಹದ ಕಾರಣ ಒಂದು ಅತಿ ವಿಶಾಲ ಮತ್ತು ಅತಿ ತೇಜೋಮಯ ಗೋಲದ ತುಂಡು ತುಂಡುಗಳಾದುವು.

ಒಂದು ತುಂಡು ಬಹಳ ದೂರ, ಬಹಳ ದೂರ ಹೋಗಿ ಬಿತ್ತು. ಭಗವಂತನಿಗೆ ಆ ತುಂಡಿನ ಮೇಲೆ ಹೊಸ ಸೃಷ್ಟಿ ನಿರ್ಮಾಣ ಮಾಡುವ ಇಚ್ಛೆಯಾಯ್ತು! ಅವನು ಅದನ್ನು ನೀರಿನಲ್ಲಿ ಹಾಕಿಬಿಟ್ಟನು. ಅದರ ಬಾಹ್ಯ ಅಂಶ ತಂಪಾಗಿ ಹೋಯಿತು. ಭಗವಂತ ಅದನ್ನು ನೆಟ್ಟಗೆಯಿಂದ ಪೃಥ್ವಿ ಎಂದು ಹೆಸರಿಸಿದ!

ದೇವರು ಪೃಥ್ವಿಗೆ ಹೇಳಿದರು—ಯಾಕೆ, ಉದಾಸದಿಂದ ಕುಳಿತಿರುವೆ? ಸ್ವಲ್ಪ ನಗಲಾರೆ?"

ಪೃಥ್ವಿ ಹೇಳಿದಳು—"ನಗು ಎನ್ನುವದರಿಂದ ನಗೆ ಬರುವುದಿಲ್ಲ. ನನ್ನ ಹೃದಯಾಂತರಾಳದಲ್ಲಿ ಎಂತಹ ಜ್ವಾಲೆಗಳು ಧಗಧಗಿಸುತ್ತಿವೆ! ಅವುಗಳು ಶಾಂತವಾಗದ ಹೊರತು......

ಅವೇ ಭೀಷಣ ಅಗ್ನಿಯ ಕಾರಣ ಪೃಥ್ವಿ ಗಡಗಡನೆ ಕಂಪಿಸಹತ್ತಿತು. ಆ ಭೂಕಂಪ ನೋಡಿ ದೇವರು ಚಕಿತನಾದ.

ಬಹಳ ಹೊತ್ತಿನ ಮೇಲೆ ವಿಚಾರ ಮಾಡಿ ಮಾಡಿ, ಅವನು ಪೃಥ್ವಿಗೆ ಹೇಳಿದ—"ನಿನ್ನ ಅಂತರದಾಹ ಶಾಂತ ಮಾಡಲು ಒಂದು ಹೊಸ ಪ್ರಾಣಿಯನ್ನು ನಿರ್ಮಾಣ ಮಾಡುತಿದ್ದೇನೆ. ಅದರ ಹೆಸರು ಮಾನವ.

ಮಾನವನ ನಿರ್ಮಾಣವಾಯ್ತು. ಮತ್ತೆ ಅವನು ಪೃಥ್ವಿಯ ಮೇಲೆ ಆಡಹತ್ತಿದ. ಮಣ್ಣಿನಿಂದ ತುಂಬಿದ ತೆಗ್ಗು ದಿನ್ನೆಗಳನ್ನು ಸರಿಪಡಿಸಿ, ಪೃಥ್ವಿಯನ್ನು ಹಣ್ಣು ಹೂಗಳಿಂದ ಶೋಭಿಸಲು ಅವನು ಹಗಲು ರಾತ್ರಿ ಅವಿಶ್ರಾಂತ ಪರಿಶ್ರಮ ಪಟ್ಟನು. ಶ್ರಮದ ಕಾರಣ, ಮನುಷ್ಯ ಶರೀರದಿಂದ ಹೊರಡುವ ಬೆವರಿನ ಧಾರೆಯಿಂದ ಪೃಥ್ವಿ ತಂಪಾಯ್ತು. ನೋಡು ನೋಡುತ್ತಲೆ, ಆ ಸಮಯ ಹಸಿರು ಪಸರಿಸಿತು. ಲತೆಗಳು ಬಳುಕ ಹತ್ತಿದವು. ವೃಕ್ಷ ಎತ್ತರ ಎತ್ತರಕ್ಕೆ ಚಾಚಿ, ಆಕಾಶವನ್ನು ಸ್ಪರ್ಶಿಸಲು ಹವಣಿಸುತಿದ್ದವು.

ಹೊಲಗಳು ಸುವರ್ಣ ಪೈರುಗಳಿಂದ ಕಳಕಳಿಸಹತ್ತಿದವು. ಅವು ಅಲಂಕಾರದಿಂದ ಸುಸಜ್ಜಿತ ಬಾಲಕರನ್ನು ಹೋಲುತಿದ್ದವು.

ಬೆಳೆಗಳು ತಮ್ಮ ಶೋಭೆಯೊಂದಿಗೆ ಮೇಲಕ್ಕೆದ್ದವು— ಯೌವನದಲ್ಲಿ ಪದಾರ್ಪಣ ಮಾಡುವ ಮೋಹಕ ರಮಣಿಯರಂತೆ.

ನಗರಗಳು ವಿಸ್ತಾರಿಸುವದು ತ್ವರಿತವಾಯಿತು— ಅದು ಪರಾಕ್ರಮಿ ಪುರುಷನ ಮಹತ್ವಾಕಾಂಕ್ಷೆಯನ್ನು ಹೋಲುತಿತ್ತು.

ಪೃಥ್ವಿಯ ಅಭಿನವ ಸ್ವರೂಪ ಕಂಡು ದೇವರ ಮನಸ್ಸು, ಮಾನವನ ಪ್ರತಿ ಅಭಿಮಾನ ತಳೆಯಿತು; ಅವರು ಪೃಥ್ವಿಯನ್ನು ಕೇಳಿದರು—"ಈಗಾದರೂ ನಿನ್ನ ಹೃದಯ ಶಾಂತವಾಯಿತಲ್ಲವೇ?"

ಪೃಥ್ವಿಯು ಯಾವ ಉತ್ತರ ಕೊಡಲಿಲ್ಲ. ಮನಸ್ಸನ್ನು ಎಷ್ಟು ತಡೆದರೂ ಅವಳ ಒಂದು ದೀರ್ಘ ಉಸಿರು ಹೊರಹೊಮ್ಮಿತು. ಮನುಷ್ಯರೆಲ್ಲಾ ಕೂಗಾಡಿದರು— "ಜ್ವಾಲಾಮುಖಿಯು ವಿಸ್ಫೋಟವಾಯಿತು ನೋಡಿರಿ, ..ಹೋ....

ದೇವರು ಕ್ರೋಧಿತನಾಗಿ ಹೇಳಿದ, ಈ ಅಸಂತುಷ್ಟ ಪೃಥ್ವಿ ಎಂದೂ ಶಾಂತವಾಗಲಿಕ್ಕಿಲ್ಲ. ಅದಕ್ಕಾಗಿ ನಾನು ಹೊಸ ಪ್ರಾಣಿಯನ್ನು ನಿರ್ಮಾಣ ಮಾಡಿಯಾಯಿತು. ಅವನು ಜಾದೂಗಾರನಂತೆ, ಈ ಪೃಥ್ವಿಯ ಸರ್ವ ರೂಪ ಬದಲಿಸಿದ, ಅವನ್ನು ತನ್ನ ಬೆವರು ಸುರಿಸಿ ಅಭಿನವ ಸೌಂದರ್ಯ ಸೃಜಿಸಿದ. ಇಷ್ಟಾದರೂ ಇವಳು ಅಳುವದು ಇನ್ನೂ ಇದ್ದೇ ಇದೆ!"

ಅವನು ಕ್ರೋಧಿತನಾಗಿ ನಿಶ್ಚಯ ಮಾಡಿದ "ಈಗ ನಾನು ಪೃಥ್ವಿಗೆ ಒಂದು ಮಾತನ್ನೂ ಹಿಟ್ಟ ಎನ್ನಲಾರೆ."

ಇತ್ತ ಪೃಥ್ವಿ ಮೇಲೆ ಎಲ್ಲಾ ಜಾಗೃತೆಯಾಗಿ ಬೆಳೆಯುತಿತ್ತು—ಧನ, ಧಾನ್ಯ, ಕನಕ, ನಗರ, ಮನುಷ್ಯ ಮತ್ತು ದುಃಖ ಕೂಡ!

ಸತತ ಹೆಚ್ಚುವ ವೈಭವದ ಕಾರಣ ಮನುಷ್ಯನಲ್ಲಿ ಈರ್ಷೆ—ದ್ವೇಷ, ಬೆಳೆಯಿತು. ಬೇರೆಯವರನ್ನು ಗುಲಾಮರನ್ನಾಗಿಸಿ ಅವನಿಂದ ತನ್ನ ಸುಖ ಹೆಚ್ಚಿಸುವ ಇಚ್ಛೆಯೂ ಪ್ರಬಲವಾಯಿತು. ಮನುಷ್ಯರಲ್ಲಿ ತಮ್ಮ ತಮ್ಮೊಳಗೆ ತಂಟೆ-ತಕರಾರುಗಳು ಪ್ರಾರಂಭವಾದುವು. ನೋಡು—ನೋಡುತಿದ್ದಂತೆ ಸಣ್ಣ ಜಗಳಗಳು ಮಹಾಯುದ್ಧಗಳಾಗಿ ಪರಿಣಮಿಸಿದವು!

ಪೃಥ್ವಿ ಮೇಲೆ ರಕ್ತದ ಕಾಲುವೆ ಹರಿಯಿತು.

ದೇವರು ಯೋಚಿಸಿದ, ಮನುಷ್ಯನ ಈ ರಕ್ತ ಪ್ರವಾಹದಿಂದ ಪೃಥ್ವಿಯು ಶಾಂತಳಾಗುವಳೆಂದು. ತಮ್ಮ ಮೌನ ತ್ಯಾಗ ಮಾಡಿ ನಗುತ್ತಾ—ನುಡಿದ— "ಮನುಷ್ಯನ ಬೆವರಿನಿಂದ ನಿನ್ನ ಅಗ್ನಿ ಶಾಂತವಾಗಲಿಲ್ಲ, ಈಗ ಅವನ ರಕ್ತ ಪ್ರವಾಹದಿಂದ....

ಅವಳು ಇನ್ನಷ್ಟು ಅಸಂತುಷ್ಟಳಾಗಿದ್ದಳು.

ದೇವರು ಸಂತಪ್ತನಾಗಿ ಹೇಳಿದ— "ಆದರೆ ನಿನ್ನ ಅಗ್ನಿ ಎಂದೂ ಶಾಂತವಾಗುವದಿಲ್ಲ. ರಕ್ತಕ್ಕೆ ಸಮಾನವಾದ ವಸ್ತು ಮನುಷ್ಯನಲ್ಲಿ ಇನ್ನೊಂದಿಲ್ಲ." ಕ್ರೋಧಿತನಾಗಿ ದೇವರು ಸ್ವರ್ಗದಲ್ಲಿ ಹೋಗಿ ನಿದ್ರಿಸಿದನು.

ಬಹಳ ಸಮಯ ಕಳೆದು ಹೋಯಿತು.

ಒಂದು ದಿನ ಭಗವಂತನಿಗೆ ಶಯನಾಗರದಿಂದ ಒಂದು ಮಧುರಗೀತೆ ಕೇಳಿಸಿತು. ಅದು ಅವನಿಗೆ ಚಿರಪರಿಚಿತವಿತ್ತು. ಪೃಥ್ವಿ ಹಾಡುತಿದ್ದಳು. ಅವನ ಆಶ್ಚರ್ಯಕ್ಕೆ ಎಲ್ಲೆ ಇರಲಿಲ್ಲ. ಅವನಿಗೆ ವಿಶ್ವಾಸವಾಗಿ ಬಿಟ್ಟಿತ್ತು, ಪೃಥ್ವಿಯು ಅಳುವಿನ ಸ್ಪಂದ ಹೊರತು ಆಕೆಯ ಮತ್ತೆ ಯಾವ ಸ್ವರವೂ ಎಂದೆಂದೂ ಕೇಳಿಸದೆಂದು.

ಭಗವಂತ ಓಡುತ್ತಾ ಬಂದ. ಸ್ವರ್ಗದ ಸೀಮೆಯಿಂದ ಆ ಸುಮಧುರ ಗಾನ ಕೇಳಿಸುತಿತ್ತು. ಎಷ್ಟು ಶಾಂತ ಹಾಗು ಮಧುರವಾಗಿತ್ತು ಆ ಸ್ವರ!

ದುಃಖಿ ಮನುಷ್ಯನ ಕಂಠದಿಂದ ಇಂತಹ ಸ್ವರ ಹುಟ್ಟುವದೆ? ಅಸಂಭವ! ಅಗ್ನಿಯಲ್ಲಿ ಕೆಲವೊಮ್ಮೆ ಹೂ ಕೂಡ ಅರಳುವದೆ? ಮುಗ್ಧ ಬಾಲಕನ ಸ್ಥಿತಿ ಭಗವಂತನದಾಗಿತ್ತು. ಅಧೀರವಾಗಿ ಅವನು ಓಡುತ್ತಾ ಬಂದ. ಪೃಥ್ವಿಗೆ ಕೇಳಿದ. "ಇದೆಲ್ಲಾ ಏನು ನಡೆಯುತ್ತಿರುವದು? ನಗುವದು....ಹಾಡುವದು....

ಹಾಡು! ಏನು ಹೃದಯದಲ್ಲಿ ಪ್ರಜ್ವಲಿತ ಅಗ್ನಿಯು ಇದ್ದು ಈ ಸುಮಧುರ ಹಾಡು ಹೇಗೆ ಬರುವದು!"

"ಆ ಅಗ್ನಿ ಶಾಂತವಾಗಿ ಬಿಟ್ಟಿದೆ ಪ್ರಭು!" ಪೃಥ್ವಿಯ ಉತ್ತರ.

"ಶಾಂತವಾಗಿ ಬಿಟ್ಟಿತೆ? ಯಾರು ಶಾಂತ ಮಾಡಿದರು?"

"ಆ ಮನುಷ್ಯ!"

"ಹೇಗೆ?!"

"ಅವನ ಅಂತಃಕರಣದಲ್ಲಿ ಜಾಗೃತವಾದ ಬಂಧುಭಾವದಿಂದ! ಈ ಭಾವನೆಯ ಕಾರಣ ಅವನ ಕಣ್ಣಿನಿಂದ ಧಾರಾಕಾರವಾಗಿ ಹರಿಯುವ ಕಣ್ಣೀರಿನಿಂದ!"

(ಗುಜರಾತಿಯಿಂದ)

ಚೈನಾದಲ್ಲಿ ಬೌದ್ಧಮತ ಪ್ರಚಾರ

(ಆರನೇ ಪುಟದಿಂದ)

ಹೇಳುತ್ತಿದ್ದೇವೆ. ಪಿನಸ ಇದು "ಭಾರತ"ವೆಂಬುದನ್ನು ಮರೆತಿದ್ದೇವೆ. ಮತ್ತು ಅದನ್ನು ಬಾಮೀ ಜನಾಂಗದ ಹೃದಯ ಸಿಂಹಾಸನದಿಂದ ಕಳ್ಳಿಹಾಕಲು ಪ್ರಯತ್ನ ನಡೆಸಲಾಗುತ್ತಿದೆ. ಜಗತ್ತಿಗೆ ಧರ್ಮದೀಪವನ್ನು ತೋರಿಸುವ ವಿಶಿಷ್ಟ ಜವಾಬ್ದಾರಿ ನಮ್ಮ ಮೇಲಿದೆ. ಆದುದರಿಂದಲೇ ನಾವು ಭಾರತೀಯರಿದ್ದೇವೆ. ಅದನ್ನು ಮರೆತು ಕಡೆಗಣಿಸಿ, ರಾತ್ರಿ ಕಂಡ ಬಾನಿನಲ್ಲಿ ನಮ್ಮೊಳಗೆ ನಾವು ಕಚ್ಚಾಡಿಕೊಳ್ಳಲಾರಂಭಿಸಿದಾಗಲೆಲ್ಲಾ ನಮ್ಮ ಮೇಲೆ ಆಕ್ರಮಣ ನಡೆದಿರುತ್ತದೆ. ಇದನ್ನು ಮರೆತು, ಹಗಲು ಹೊತ್ತಿನಲ್ಲಿ ಬೀಳುತ್ತಿದ್ದೇವೆ.

ಕಮ್ಯೂನಿಸಮ್ಮಿನ ಕಪಿ ಮುಷ್ಟಿಗೆ ಚೈನಾ ತುತ್ತಾದಾಗ ನಾವು ಸರಿಯಾಗಿ ವರ್ತಿಸಿ ಜ್ಞಾನದೀಪವನ್ನು ತೋರಿಸುತ್ತಿದ್ದಲ್ಲಿ ಇಂದಿನ ಕಷ್ಟನಷ್ಟಗಳಿಗೆ ನಾವು ತುತ್ತಾಗಬೇಕಾಗಿರಲಿಲ್ಲ. ಚೆಲ್ಲಿಹೋದ ಹಾಲಿಗಾಗಿ ಅತ್ತೇನು ಫಲ? ಈಗಲಾದರೂ ಎಚ್ಚೆತ್ತೆದ್ದು ತಪ್ಪನ್ನರಿತು, ಧೈರ್ಯದಿಂದ ಸನ್ಮಾರ್ಗದಲ್ಲಿ ನೈಜರೀತಿಯಲ್ಲಿ ದಿಟ್ಟ ಹೆಜ್ಜೆಯಿಟ್ಟಲ್ಲಿ ಧರ್ಮಕ್ಕೆ ಜಯವಾಗುವದರಲ್ಲಿ ಸಂದೇಹವೇ ಇಲ್ಲ.

ನಚಿಕೇತ'ರ

ಹೃದಯಸ್ಪರ್ಶಿ

ನವೀನ ಕಾದಂಬರಿಗಳು

ಹಸುರು ಹಂಸ

ಬೆಲೆ: ರೂ. ಎರಡು

ಋಣ ಯಾತ್ರೆ

ಬೆಲೆ ರೂ 1-50 ನ. ಪೈಸೆ.

ಭಾವಾರ್ಚನೆ

ಬೆಲೆ ರೂ. 2—00

ಪ್ರತಿಗಳು ಸಿಗುವ ಸ್ಥಳ:

ನವಯುಗ ಪ್ರೆಸ್, ಉಡುಪಿ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3

READ & ADVERTISE IN NAVAYUGA WEEKLY

ಗೀತಾ-ದ್ವಿತೀಯ ಅಧ್ಯಾಯ

ನೀವು ಯೋಚಿಸಿದ್ದೀರಾ?

ಬಹಚಾರಿಗೆ ಒಂದು ಹೆಂಡತಿ, ಉಳಿದವರಿಗೆ?

ಮದುವೆಯಾದ ಮೇಲಿನ ಆನಂದಕ್ಕಿಂತ ಮದುವೆಯಾಗುವಾಗಿನ [illegible]

[illegible]

ಚಾರಿಗೆ ಒಂದು ಹೆಂಡತಿ [illegible] ಮದುವೆ [illegible]

"ನೀವು ಮಗನಿಗೆ ಮದುವೆಯಾಯಿತೆ?" [illegible]

[illegible]

ಏನು ಮಾಡಲಿ......? [illegible]

[illegible]

"ಅಯ್ಯೋ ನೀನು ಸುಖವಾಗಿದ್ದೀಯಾ? ಇಲ್ಲವೆಂದು ಚಿಂತಿಸುವುದಾದರೆ, ಮದುವೆಯಾಗುವ ಸಂದರ್ಭ ಮದುವೆ [illegible]

[illegible] ದಿನ ದಿನವೂ ಹೆಚ್ಚುತ್ತಲೇ ಹೋಗುತ್ತದೆ. ಮದುವೆಯಾದವನ ಚಿಂತೆಯು ಹೆಚ್ಚಿದ [illegible] ಮದುವೆ ಮಾತ್ರ ನಿಲ್ಲುವುದಿಲ್ಲ. ಪ್ರತಿ ಗಂಡಿಗೂ ಒಬ್ಬ ಹೆಣ್ಣು, ಪ್ರತಿ ಹೆಣ್ಣಿಗೂ [illegible]

[illegible] ಆಕರ್ಷಕ ಶಕ್ತಿಯು ಎಷ್ಟು ಸ್ವಭಾವ [illegible] ಮದುವೆಯಾಗುವುದು.

[illegible]

[illegible] ಮಾನುಷ ಚೈತನ್ಯದ ಅಧಿದೇವತೆ. ದೇವ ಎಂದರೆ ಕೇವಲ ದೇವರುಗಳು ಎಂದಲ್ಲ.

ಮಹಾಭಾರತ ಕಾಲದಲ್ಲಿ ಧಾರ್ಮಿಕ, ಅಧಾರ್ಮಿಕ ಸಂಗತಿಗಳೊಳಗಿನ [illegible] ಧಾರ್ಮಿಕರಾದ ಪಾಂಡವರು, ಅಧಾರ್ಮಿಕ [illegible] ಕೌರವರೊಡನೆ ಯುದ್ಧ ಹೂಡಿದರು. [illegible] ಮಹಾಭಾರತದ ಯುದ್ಧವನ್ನು [illegible] ಒಬ್ಬನೇ ವ್ಯಕ್ತಿ ಧೃತರಾಷ್ಟ್ರನು. ಆದರೆ [illegible] ಧೃತರಾಷ್ಟ್ರನು ನಿವೇಕದಿಂದ ವರ್ತಿಸಲಿಲ್ಲ. [illegible] ಮೋಹದಿಂದ [illegible] ಧರ್ಮ ಮಾರ್ಗದಲ್ಲಿ ನಡೆಯಲು ಹಿಂಜರಿದನು.

ಶ್ರೀಕೃಷ್ಣನು ಸಂಧಿಗಾಗಿ ಪ್ರಯತ್ನಿಸಿದನು. ಪಾಂಡವರು ಅರ್ಧ ರಾಜ್ಯವನ್ನು ಕೇಳಲು ದುರ್ಯೋಧನನು ಕೊಡಲೊಪ್ಪಲಿಲ್ಲ. ಕೊನೆಗೆ ಅರ್ಧ ರಾಜ್ಯವಲ್ಲ, ಐದು ಊರುಗಳು, ಐದು ಗ್ರಾಮಗಳು, ಕಟ್ಟಕಡೆಗೆ ಒಂದೇ ಗ್ರಾಮ, ಐದು ಜನ ಪಾಂಡವರಿಗೆ ಇರಲು ಸ್ಥಳ ಮಾತ್ರ ಕೇಳಿದರೂ ದುರ್ಯೋಧನನು ಕೊಡಲೊಪ್ಪದೆ, ಇರಲು [illegible] [illegible]

[illegible]

ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಯವರ ನವಕಾಲ [illegible] ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡತಿ ಗಂಡನಾದರೆ?	0=25
ಪುರುಷ ಪಥ	0=25
ಸನ್ಯಾಸಿಯು ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=60
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ವಿವಾಹ ಸಮಾರಂಭಕ್ಕೆ ಮಮತೆಯ ಕರೆಯೋಲೆ

ನಮ್ಮ ಸಹೋದರ ಡಾ॥ ಯು. ಕರುಣಾಕರ ಶೆಟ್ಟಿ (ಭದ್ರಾವತಿ)ಯ ವಿವಾಹ ಸಮಾರಂಭವು ಶ್ರೀ ಮುತ್ತೂರು ಮಹಾಬಲ ಶೆಟ್ಟಿಯವರ ಸುಪುತ್ರಿ ಚಿ॥ ಸೌ॥ ವಸಂತಿಯೊಡನೆ ತಾ. 17-6-65 ನೇ ಗುರುವಾರ ಮಧ್ಯಾಹ್ನ 12-30 ಗಂಟೆಗೆ ಉಡುಪಿ ಕಲ್ಪನಾ ಥಿಯೇಟರಿನಲ್ಲಿ ಜರಗಲಿರುವುದು. ಈ ಸಂಬಂಧ ನಮ್ಮ ಇಷ್ಟ ಮಿತ್ರರಿಗೆಲ್ಲಾ ವಿವಾಹ ಪತ್ರಿಕೆಗಳನ್ನು ಪ್ರತ್ಯೇಕ ಕಳಿಸಿರುತ್ತೇವೆ. ಒಂದು ವೇಳೆ ಆಮಂತ್ರಣ ಪತ್ರಿಕೆ ಸಕಾಲದಲ್ಲಿ ಸಿಗದಿದ್ದರೆ ಇದೇ ಆಮಂತ್ರಣವೆಂದು ತಿಳಿದು ದಯಮಾಡಿ ಎಲ್ಲರೂ ಆಗಮಿಸಿ ವಧೂವರರನ್ನು ಆಶೀರ್ವದಿಸಿ ಈ ಶುಭಕಾರ್ಯವನ್ನು ನೆರವೇರಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ.

ಡಾ॥ ಯು. ಕೃಷ್ಣ, ಡಾ॥ ಯು. ಶಿವರಾಮ, ಡಾ॥ ಯು. ಚಂದ್ರಶೇಖರ
[illegible]

ಚಿತ್ರ
[illegible]

ನವಯುಗ, [illegible]

[illegible]

(ಗ ಜೆಂತ ಬಂದ)

[illegible]

(ಅರಿತ್ತ ಖುಟಿಡಿಂದ)

[illegible]

ಬೆಲೆ ರೂ 1-60 ನ ಪೈಸೆ

ಪ್ರತಿಗಳು [illegible] 2-00

ನವಯುಗ ಪ್ರೆಸ್, ಉಡುಪಿ

ಉಡುಪಿ

ಸುಭದ್ರತೆ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಸಜ್ಜಿತವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½% ನಿಂದ 8% ವರೆಗಿನ ಬಡ್ಡಿ ದರ

ಸೇವಿಂಗ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್"
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು—1

READ & ADVERTISE IN NAVAYUGA WEEKLY.

ಪುಸ್ತಕಾವಲೋಕನ

ಸಾಹಿತ್ಯ ಸುಧೆ (ಪ್ರಬಂಧ ಸಂಕಲನ)— ಸಂಪಾದಕರು. ಶ್ರೀ ರಾಘವೇಂದ್ರ ಕಟ್ಟಿ, ಎಂ. ಎ., ಬಿ. ಇಡಿ. ಪ್ರಕಾಶಕರು: ಕನ್ನಡ ಸಾಹಿತ್ಯ ಸಂಘ, ರಂಗಂಪೇಟೆ (ಸುರಪುರ). ಪುಟಗಳು, ೧೬೪. ಬೆಲೆ ರೂ. ೨=೦೦.

೨೪ ವೈವಿಧ್ಯಪೂರ್ಣ ಪ್ರಬಂಧಗಳ ಸಂಕಲನವೇ ಸಾಹಿತ್ಯ ಸುಧೆ ಇಲ್ಲಿನ ಪ್ರಬಂಧಗಳನ್ನು ಐತಿಹಾಸಿಕ, ತಾತ್ವಿಕ, ಮತ್ತು ವೈಜ್ಞಾನಿಕಗಳೆಂದು ವಿಂಗಡಿಸಬಹುದು. ಐತಿಹಾಸಿಕ ಪ್ರಬಂಧಗಳು ಕನ್ನಡ ನಾಡಿನ, ನಾಡಿಗರ ಕೀರ್ತಿ—ಕೆಚ್ಚುಗಳ ಬಗೆಗೆ ಹೆಚ್ಚಿನ ವಿಚಾರವನ್ನು ಮಾಡಿವೆ. ಇತಿಹಾಸ ಗರ್ಭದಲ್ಲಿ ಅಡಗಿದ್ದ ಹಲವಾರು ಕನ್ನಡದ ಸಂಗತಿಗಳನ್ನು ಗ್ರಂಥ—ಶಾಸನಾಧರಗಳಿಂದ ಬೆಳಕಿಗೆ ತರುವ ಸಾಹಸವನ್ನು ವಿದ್ವನ್ಮಣಿ ಲೇಖಕರು ಮಾಡಿದ್ದಾರೆ. ವಿಮರ್ಶಾತ್ಮಕ ಪ್ರಬಂಧಗಳು ಸಾಹಿತ್ಯಕರ ಬ್ರಹ್ಮಾನಂದವನ್ನು ವಿಶ್ಲೇಷಿಸುತ್ತದೆ. ಅರಿಸ್ಟಾಟಲನ ವರೆಗೂ ಇದರ ಗಾಳಿ ಹಬ್ಬುತ್ತದೆ. ಧರ್ಮ, ಶಿಸ್ತು, ನಾಗರಿಕ ಮೊದಲಾದ ತಾತ್ವಿಕ ವಿಚಾರಗಳ ಪ್ರಬಂಧಗಳು ಇಂದಿನ ಜನಕ್ಕೆ ದಾರಿದೀಪವಾಗುತ್ತವೆ. ಬ್ರಹ್ಮಾನಂದ-ಸಾಹಿತ್ಯಗಳಲ್ಲಿಯೇ ಮೈಮರೆತವರಿಗೆ "ರೇಡಿಯೋ ಐಸೋಟೋಪುಗಳು' ತಾವಿರುವುದು ವೈಜ್ಞಾನಿಕ ಯುಗದಲ್ಲಿ ಎಂಬುದನ್ನು ತೋರಿಸಿಕೊಡುತ್ತದೆ.

ಇಲ್ಲಿರುವ ಎಲ್ಲ ಪ್ರಬಂಧಗಳೂ ವಿದ್ವಾಂಸರೂ ಅಭ್ಯಾಸಶೀಲರೂ ಆದ ಹಳೆಯ-ಹೊಸ ಸಾಹಿತ್ಯಕರಿಂದ ಬರೆಯಲ್ಪಟ್ಟವು ಮಾಡಿವಂತಿಕೆಯಿಂದ ದೂರವಾಗಿವೆ. ಪ್ರತಿಯೊಂದರಲ್ಲಿಯೂ ಹೊಸತನವಿದೆ. ಸಂಪಾದಕರು ಈ ದಿಸೆಯಲ್ಲಿ ತುಂಬ ಶ್ರಮಪಟ್ಟಿದ್ದಾರೆ. ಪ್ರಬಂಧಗಳಲ್ಲಿ ಕಾಣುವ ಸರಳ ಸುಂದರವಾದ ಭಾಷೆ ಯೆಲ್ಲರನ್ನೂ ಮರುಳುಗೊಳಿಸುತ್ತದೆ. ಇಂತಹ ಅಧ್ಯಯನಪೂರ್ಣ ಪ್ರಬಂಧ ಸಂಕಲನವನ್ನು ಹೊರತಂದ ಸುರಪುರದ ಕನ್ನಡ ಸಾಹಿತ್ಯ ಸಂಘದ ಕಾರ್ಯದರ್ಶಿ ಎಂ. ಆರ್. ಬುದ್ಧಿವಂತ ಶೆಟ್ಟರು ಸಾಹಿತ್ಯ ರಂಗಕ್ಕೊಂದು ಅಪೂರ್ವ ಕಾಣಿಕೆಯನ್ನು ನೀಡಿದ್ದಾರೆ. ಅಮೇರಿಕೆ- ಯುರೋಪು ಮೊದಲಾದ ವಿಖಂಡಗಳ ಮೇಲೆ ತಾಸುಗಟ್ಟಲೆ ಉಪನ್ಯಾಸ ಮಾಡುವ ಯೋಗ್ಯತೆಯನ್ನು ನಾವು ಗಳಿಸಿಕೊಂಡಿದ್ದೇವೆ; ನಮ್ಮ ಕನ್ನಡ ನಾಡಿನ ಬಗ್ಗೆ ಎಷ್ಟನ್ನು ಅರಿತಿದ್ದೇವೆ? ಈ ಅಪೂರ್ವ ಸಂಕಲನ ಕನ್ನಡಿಗರಿಗೆ ಕನ್ನಡ ನಾಡು—ನುಡಿ—ನಡೆಯ ಬಗ್ಗೆ ಕೆಲವಾದರೂ ವಿಚಾರವನ್ನು ಒದಗಿಸಬಲ್ಲುದು; ಅಭ್ಯಾಸ ಪಿಪಾಸುಗಳಿಗೆ ಉಚಿತ ಆಹಾರವೆನಿಸಬಲ್ಲುದು. ಸಾಹಿತ್ಯ ಸುಧೆಯ ಮೊದಲ ಗುಟುಕನ್ನು ಪದ್ಮಶ್ರೀ ವಿ. ಕೃ. ಗೋಕಾಕರು ಕುಡಿದು ತೃಪ್ತಿ ಹೊಂದಿದ್ದಾರೆ.

ಕತ್ತೆಯ ಉತ್ತರ ರಾಮಾಯಣ: ಮೂಲ ಲೇಖಕರು: ಶ್ರೀ ಕೃಷ್ಣ ಚಂದ್ರ. ಅನುವಾದಕರು: ಜಿ. ಜಿ. ಹೆಗಡೆ. ಪ್ರಕಾಶಕರ : ಮ. ಗೋವಿಂದರಾವ್, ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಪುಟಗಳು: ೧೭೭. ಬೆಲೆ. ರೂ. ೩=೦೦.

ಕತ್ತೆಯ ಆತ್ಮಕಥೆಯು ಉತ್ತರ ರಾಮಾಯಣವಿದು. ಬರಾಬಂಕಿಯ ಆ ಕತ್ತೆ ವಿಲಕ್ಷಣವಾದುದು. ಪರಿಶ್ರಮ ಹಾಗೂ ನಿಷ್ಠೆಯ ಪ್ರತೀಕವದು. ಆದುದರಿಂದಲೇ ಅದು ಆತ್ಮಜ್ಞಾನದ ಮಾತನ್ನಾಡುತ್ತದೆ; ಎಲ್ಲೆಲ್ಲೂ ತಿರಸ್ಕೃತವಾಗುತ್ತದೆ. ಪೂರ್ವದಲ್ಲಿ ಕತ್ತೆ ಸರಕಾರಿ ಹಾಗೂ ಅದರ ಅತಿ ನಿಕಟ ಸುತ್ತಿನಲ್ಲೇ ತಿರುಗಾಡಿ ನೊಂದಿದ್ದರೆ, ಉತ್ತರ ರಾಮಾಯಣದಲ್ಲಿ ಅದು ಕಳ್ಳಭಟ್ಟಿ ತಯಾರಕರು, ಸೌಳಿಗರು, ಓ. ಸಿ ಆಟಗಾರರು, ಕುದುರೆ ಜೂಜುಗಾರರು, ವಿಜ್ಞಾನಿ, ಬ್ಯಾಂಕರ್, ಹೀಗೆ ಎಲ್ಲರ ಸಹವಾಸವನ್ನೂ ಮಾಡಿ ಕೊಟ್ಟ ಕೊನೆಗೆ ಚಲಚಿತ್ರ ಪ್ರಪಂಚದಲ್ಲಿ ಕೈಲಾಸವನ್ನೇ ಕಾಣಬೇಕಾಗುತ್ತದೆ. ಕತ್ತೆಯು ಉತ್ತಮ ಧ್ಯೇಯವನ್ನಿಟ್ಟು ನಿಷ್ಠೆಯಿಂದ ಪರಿಶ್ರಮಿಸಿದರೂ ಬದಲಾಗಿ ಅದಕ್ಕೆ ದೊರೆತುದು ಎಲುವು ಮುರಿತ ಮಾತ್ರ. ಹಾಗಾಗಿ ಇವರೆಲ್ಲರ ಸಹವಾಸದಿಂದ ರೋಸಿ ನೊಂದ ಕತ್ತೆ ಕೊನೆಗೆ ರೈತ ದಂಪತಿಗಳ ದಯಾರ್ದ್ರ ಹೃದಯದಿಂದ ಆಕರ್ಷಿತವಾಗಿ ಅವರೊಡನೆಯೇ ಇದ್ದು ತನ್ನ ಜೀವನ ಸಾರ್ಥಕಪಡಿಸುತ್ತದೆ.

ಮೊದಲು ಆಗಿನ ಕತ್ತೆಯಾಗಿ ನಿಷ್ಠಾಪೂರ್ತಿಯಾಗಿ ಪರಿಶ್ರಮಿಸುತ್ತಿದ್ದ ಕತ್ತೆ ಕೊನೆಯಲ್ಲಿ ಕಾಯ ಕಷ್ಟದಲ್ಲೇ ಅಮರತ್ವವನ್ನು ಕಂಡುಕೊಳ್ಳುವ ರೈತರನ್ನೇ ಮೆಚ್ಚುವುದು ಸ್ವಾಭಾವಿಕ. ಸಾಕಷ್ಟು ಪ್ರತಿಫಲ ದೊರೆಯದೆ ಹೋದರೂ ಕಾಯಕದಲ್ಲಿ ಕೈಲಾಸ ಕಾಣುವ ವರ್ಗ ಇಂದಿರುವುದಾದರೆ ಅದು ರೈತವರ್ಗ ಮಾತ್ರ. ಕತ್ತೆಗೂ ಈ ವರ್ಗಕ್ಕೂ ನಮ್ಮ ಭಾರತದಲ್ಲಿ ಅನತಿದೂರದ ನಂಟುತನವಿದೆಯಲ್ಲವೆ?

ಕತ್ತೆಯು ಸಹವಾಸವನ್ನು ಬಯಸಿ ಬಂದ ಹಲವಾರು ಜನರು ಇಂದಿನ ಸ್ವತಂತ್ರತೆಯಲ್ಲೇ ಸುಖ ಕಾಣುವ ವರ್ಗದ ಪ್ರತೀಕ. ತಾವು ಮಾತ್ರ ಬುದ್ಧಿವಂತರು, ಇತರರೆಲ್ಲರೂ ಮೊದ್ದುಗಳೆಂದು ಸ್ವವಾದವನ್ನೇ ಸ್ವಾರ್ಥಸಾಧನೆಗಾಗಿ ಬಿಗಿ ಹಿಡಿಯುವವರ ಸಂಕೇತಗಳು. ಇವರೆಲ್ಲರ ಚಿತ್ರಣ ಸಾಮಾಜಿಕ ದರ್ಶನವನ್ನು ವಿಡಂಬನಾತ್ಮಕವಾಗಿ ನಮಗೆ ಮಾಡಿಕೊಡುತ್ತದೆ; ಬುದ್ಧಿಜೀವಿಗಳಿಗೆ ಚಿಂತನೆಯ ವಿಷಯವನ್ನು ತೇಲು ಬುದ್ಧಿಯವರಿಗೆ ನಗೆಯ ವಿಷಯವನ್ನೂ ಒದಗಿಸುತ್ತದೆ.

ಇದು ವಿಡಂಬನಾತ್ಮಕ ಕಾದಂಬರಿ—ಅಲ್ಲ, ಕಥೆ. ಇಂತಹ ಕೃತಿಗಳಿಂದ ಸಮಾಜದ ಡೊಂಕುಗಳನ್ನು ತಿದ್ದುವುದು ಸಾಧ್ಯವಾದೀತೆ? ಇದಕ್ಕೆ ಉತ್ತರ ಹೇಳುವುದು ಕಠಿಣ ಸಾಹಿತ್ಯಿಕ ಸಮಾಜದ ಡೊಂಕುಗಳನ್ನು ಎತ್ತಿ ತೋರಿಸಬಲ್ಲ, ಅವುಗಳ ನಿವಾರಣೆಗೆ ತನ್ನದೇ ಆದ ಪರಿಹಾರವನ್ನೂ ಸೂಚಿಸಬಲ್ಲ ಆದರೆ, ಅದರಿಂದಲೇ ಲೋಕ ಕಲ್ಯಾಣವಾಗುವುದೆಂದು ಹೇಳುವಂತಿಲ್ಲ. ಹಾಗಿದ್ದರೂ ಇಂತಹುದೇ ಹತ್ತಾರು ಬಾಯಿಗಳ ನಿಂದೆಗೆ ಗುರಿಯಾದಾಗ ಸಮಾಜ ತನ್ನ ತಾನು ತಿದ್ದಿಕೊಳ್ಳುವಂತಹ ಪ್ರಮೇಯ ತಾನಾಗಿಯೇ ನಿರ್ಮಾಣವಾದರೂ ಆಗ ಬಹುದು. ಕಡಿಮೆ ಪಕ್ಷ ಬುದ್ಧಿ ಜೀವಿಗಳಾದರೂ ತಪ್ಪದಾರಿ ತುಳಿಯಲಾರರು.

ಶ್ರೀ ಕೃಷ್ಣಚಂದ್ರರ ಉತ್ತಮ ಕೃತಿಯನ್ನು ಅನುವಾದಿಸಿದ ಶ್ರೀ ಹೆಗ್ಡೆಯವರು ತಮ್ಮ ಕರ್ತವ್ಯವನ್ನು ಯಶಸ್ವಿಯಾಗಿಯೇ ನಿರ್ವಹಿಸಿದ್ದಾರೆ. ಕನ್ನಡಿಗರಿಗೆ ಈ ಬಗೆಯ ಉತ್ತಮ ಸಾಹಿತ್ಯವನ್ನೊದಗಿಸಿದ ಪ್ರಕಾಶಕರು ಅಭಿನಂದನಾರ್ಹರು.

ಶೃಂಗಾರ ವಾಹಿನಿ: ಲೇಖಕರು ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್. ಪ್ರಕಾಶಕರು: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ. ಕ. ಪುಟಗಳು: ೪೭. ಬೆಲೆ:೦=೭೫.

ತ್ರಿಭಾಷಾ ಪಂಡಿತರಾದ ಶಿರಾಡಿಪಾಲರು ತಮ್ಮ ಪ್ರೇಮವಾಹಿನಿಯೇ ಮೊದಲಾದ ಹಲವು ಕೃತಿಗಳಿಂದಲೂ ಲೇಖನಗಳಿಂದಲೂ ಹೆಸರಾಗಿದ್ದಾರೆ. ಅವರ ಈ "ಶೃಂಗಾರ ವಾಹಿನಿ"ಯು ಶೃಂಗಾರವನ್ನೇ ಪ್ರಧಾನವಾಗಿಟ್ಟುಕೊಂಡಿರುವ ಐದು ಕೃತಿಗಳ ಸಂಕಲನ

'ಶೃಂಗಾರ ಪಂಚಕವು' ಎಂಬುದು ಶೃಂಗಾರ ರಸಾಧಿಕ್ಯವನ್ನು ಪ್ರತಿಪಾದಿಸುವ ಐದು ವೃತ್ತ ಸಮೂಹ, ಸ್ವತಂತ್ರ ಕೃತಿ. ರಾಷ್ಟ್ರಕವಿ ಮೈಥಿಲೀ ಶರಣಗುಪ್ತರ "ಪಂಚವಟಿ" ಅತ್ಯುತ್ತಮ ಖಂಡ ಕಾವ್ಯ. ಇದರಲ್ಲಿನ ಕಾಮಿನಿ—ರಾಮಾನುಜ ಸಂವಾದವು ಉಜ್ವಲವಾದುದು; ತರ್ಕಪೂರ್ಣವೂ ಜೀವಂತವೂ ಆದ ದು. ಕಾಮವು ಖಂಡ ಪ್ರೇಮವು ಅಖಂಡ ಎಂಬುದನ್ನಿದು ಪ್ರತಿಪಾದಿಸುತ್ತದೆ. ಕಾಮಿನಿಯಲ್ಲಿ ಮಾತ್ರ ರತಿಯಿರುವುದರಿಂದ ಪರಿಗ್ರಾಹ್ಯವಾದ "ರಸಾಭಾಸ"ಕ್ಕೆ ಇದೊಂದು ಶ್ರೇಷ್ಠ ಉದಾಹರಣೆ, ಕಾಲಿದಾಸ ಮಹಾಕವಿಯ ಶಾಕುಂತಲ ನಾಟಕದ" "ದುಷ್ಯಂತ—ಶಕುಂತಲಾ ಸಂವಾದವು ಶೃಂಗಾರ ರಸಭರಿತವಾದುದು. ಉಭಯತ್ರ ಅನುರಾಗವಿರುವ ಪರಿಪೂರ್ಣ ಶೃಂಗಾರವಿದು. ನಾಲ್ಕನೆಯದಾದ "ರಂಭಾಶುಕ ಸಂವಾದ"ದ ರಂಭೆಯು ಅತೃಪ್ತ ಕಾಮವಾಸನೆಯ ಹೆಣ್ಣಾದರೆ ಶುಕನು ನಿರ್ಜಿತೇಂದ್ರಿಯನು. ಆದುದರಿಂದ ಇಲ್ಲಿ ರಸವಿಲ್ಲ, ರಸಾಭಾಸವಿದೆ ಕೊನೆಯದು ರಾಧಾಮೋಹನ ಸಂವಾದ' ರಾಧೆ ಮೋಹನನಿಗೆ ಆತ್ಮ ಸಮರ್ಪಣೆ ಮಾಡುತ್ತಾಳೆ ಇಲ್ಲಿನ ಪ್ರೇಮವು ಪವಿತ್ರವಾದರೂ ಆಲಂಬನವು ಅನುಚಿತವಿದೆ' ಎಂಬ ಮುನ್ನುಡಿಗಾರ ಶ್ರೀ ಸುಬ್ಬರಾಯ ಶರ್ಮರ ಅಭಿಮತವನ್ನು ಒಪ್ಪಲೇ ಬೇಕು.

ಕೃತಿಗೆ ಶ್ರೀ ಶರ್ಮರು ಮುನ್ನುಡಿಯ ತಿಲಕವನ್ನಿಟ್ಟು, ವಿಮರ್ಶಾತ್ಮಕ ವಿವೇಚನೆಯನ್ನು ಮಾಡಿದ ಮೇಲೆ ಇತರ ವಿಮರ್ಶೆಗಳು ಸಪ್ಪೆಯಾಗಿಯೇ ಕಾಣಿಸಬಹುದು. ಆದುದರಿಂದ ಇಲ್ಲಿ ಹೆಚ್ಚು ಬರೆಯುವುದು ಅನಗತ್ಯ. ಶ್ರೀ ಶಿರಾಡಿಪಾಲರ ಅನುವಾದ ಕ್ರಮವು ತೃಪ್ತಿಕರವಾಗಿದೆ. ಶ್ರೀಯುತರಿಂದ ಇನ್ನೂ ಉತ್ತಮ ಕೃತಿಗಳನ್ನು ನಾವು ನಿರೀಕ್ಷಿಸುವುದು ಅನ್ಯಾಯವಾಗದು.

— ಸಾ ವಾಚಸ್ಪತಿ.

ವ್ಯಾಪಾರೋದ್ಯಮ

(ಐದನೇ ಪುಟದಿಂದ)

ಮೋಸ, ಲೋಭ, ಕ್ರೋಧ ಅಹಂಕಾರ ಬರುವುದು ಸಹಜವಾದುದು. ಆದರೂ ಅದನ್ನು ಗಿರಾಕಿಗಳ ಮೇಲೆ ಪ್ರಯೋಗಿಸದೆ ಸ್ವಂತ ತನ್ನ ಮೇಲೆ ಪ್ರಯೋಗಿಸಿಕೊಳ್ಳಬೇಕು. ಅಂತಹ ವ್ಯಕ್ತಿಗಳು ವಿರಳ.

ವ್ಯಾಪಾರಕ್ಕೆ ನಾವು ಹೆಚ್ಚಾಗಿ ಒಂದು ಉಪಮೆ ಕೊಡುವುದುಂಟು. "ವೇಶ್ಯೆಯಂತೆ ಇರಬೇಕು." ಅಂದರೆ ವೇಶ್ಯೆ ವ್ಯಾಪಾರದಲ್ಲಿ ಪ್ರವೀಣಳೇ ಎಂಬ ಪ್ರಶ್ನೆ ಬರುವುದು ಸಹಜ. ಇದು ನೂರಕ್ಕೆ ನೂರು ಸತ್ಯ. ಅವಳ ನಯವಾದ ನುಡಿಗಳು, ಮುಗುಳು ನಗೆ ಅಂದವಾದ ಉಡುಗೆ ತೊಡುಗೆ, ಹೆಚ್ಚೇಕೆ ಅವಳು ತನ್ನ ಗಿರಾಕಿಯ ಬರವಿಗಾಗಿ ಕಾದು ಕುಳಿತುಕೊಳ್ಳುವ ಮೋಡಿ ಅವಳ ವ್ಯಾಪಾರದ ಗುಟ್ಟು.

ಅಂದರೆ 'ನಾವು 'ವ್ಯಾಪಾರದಲ್ಲಿ ಅನೈತಿಕವಾಗಿ 'ಆಚರಿಸಬೇಕೆಂದು ಅರ್ಥವಲ್ಲ. ವೇಶ್ಯೆಯಲ್ಲಿರುವ ಆ ಕೆಲವು ಒಳ್ಳೆಯ ಗುಣಗಳನ್ನು ನಾವು ವ್ಯಾಪಾರದಲ್ಲಿ ಬಳಕೆಗೆ ತರಬೇಕೆಂದು ಸೂಚಿಸುತ್ತದೆ. ನಾಲ್ಕು ಜನರೊಡನೆ ಉತ್ತಮನೆನಿಸಿಕೊಳ್ಳಬೇಕಾದರೆ ನಾಲ್ಕು ವರ್ಷಗಳು ಬೇಕಾದರೆ ಸಾವಿರಾರು ಜನರಿಂದ ಕೆಟ್ಟ ಹೆಸರು ಬರಲು ಒಂದು ಸೆಕೆಂಡು ಸಾಕು. ಆದುದರಿಂದ ನಾವು ಒಳ್ಳೆಯ ದಾದರೆ ಜಗವು ಒಳ್ಳೆಯದು ಎಂಬ ಉದಾತ್ತ ಧ್ಯೇಯದಿಂದ ವ್ಯಾಪಾರೋದ್ಯಮವನ್ನು ಬೆಳೆಸಿ ಉಳಿಸಿಕೊಂಡಲ್ಲಿ ನಮಗೂ ಕ್ಷೇಮ ಊರಿಗೂ ಕ್ಷೇಮ.



ವಿಚಾರಣೀಯ ಪ್ರಶ್ನೆ

ಕಡ್ಡಾಯ ಬೋನಸ್ ವಿಧೇಯಕವು ಔದ್ಯಮಿಕ ಶಾಂತಿಯನ್ನು ತರಬಲ್ಲುದೆ?

ರಾಷ್ಟ್ರಪತಿಗಳು ಕಳೆದ ಮೇ ೨೯ರಂದು ಕಾರ್ಮಿಕರಿಗೆ ಕಡ್ಡಾಯವಾಗಿ ಬೋನಸ್ಸನ್ನು ಕೊಡಬೇಕೆನ್ನುವ ವಿಶೇಷಾಜ್ಞೆಯೊಂದಕ್ಕೆ ಸಹಿ ಹಾಕಿರುವರು. ಈ ಕಡ್ಡಾಯ ಬೋನಸ್ ವಿಧೇಯಕವು ರಾಷ್ಟ್ರದಲ್ಲಿ ಔದ್ಯಮಿಕ ಶಾಂತಿಯನ್ನು ಕಾಯ್ದುಕೊಳ್ಳುವಲ್ಲಿ ಬಹುಮಟ್ಟಿಗೆ ಸಹಾಯವಾದೀತೆಂಬ ಭರವಸೆಯನ್ನು ಕೇಂದ್ರಸರಕಾರವು ಹೊಂದಿದೆ. ಆದರೆ, ನಿಜವಾಗಿಯೂ ಈ ಕಡ್ಡಾಯ ಬೋನಸ್ ವಿಧೇಯಕವು ಕೂಲಿಕಾರ ಮಾಲಕರೊಳಗಣ ವಿವಾದವನ್ನು ಕೊನೆಗೊಳಿಸುವಲ್ಲಿ ಸಹಾಯಕವಾದೀತೇ ಎಂಬುದು ಇಂದು ಎಲ್ಲರೂ ಯೋಚಿಸಬೇಕಾದ ಪ್ರಶ್ನೆ.

ಸರಕಾರವೇನೋ ಈ ವಿಧೇಯಕದಿಂದ ಕಾರ್ಮಿಕರಿಗೆ ಮಹತ್ವದ ಸೌಲಭ್ಯವನ್ನು ಕೊಟ್ಟಿಗುತ್ತದೆಂದು ಭಾವಿಸಿರಬಹುದು. ಆದರೆ ಭಾರತದ ಕಾರ್ಮಿಕ ಸಂಘಗಳ ಮುಂದಾಳುಗಳಲ್ಲಿ ಪ್ರಮುಖರಾದ ಶ್ರೀಗಳಾದ ಎಸ್.ಎ. ಡಾಂಗೆ ಹಾಗೂ ಜಾರ್ಜ್ ಫೆರ್ನಾಂಡಿಸರೇ ಮೊದಲಾದವರು ಈ ವಿಧೇಯಕದಿಂದ ಕಾರ್ಮಿಕರಿಗೆ ಹೆಚ್ಚಿನಪ್ರಯೋಜನವಾಗುವುದಿಲ್ಲ ಎಂದು ದೂರಿದ್ದಾರೆ. ಕಾರ್ಮಿಕರು ತಮ್ಮ ನ್ಯಾಯವಾದ ಕೇಳಿಕೆಗಳಿಗೋಸ್ಕರ ಚಳವಳಿ ನಡೆಸಬೇಕಾಗಿ ಬರಬಹುದೆಂಬ ಬೆದರಿಕೆಯನ್ನು ಅವರು ಹಾಕಿದ್ದಾರೆ! ಇದು ನಮ್ಮ ಸರಕಾರಕ್ಕೆ ದೊರೆತ ಪುರಸ್ಕಾರ!

ಯಾರು ಕಾರ್ಮಿಕರ ಜತೆಯಲ್ಲಿ ದನಿಗೂಡಿಸುದಿಲ್ಲವೋ ಅವರು ಬಂಡವಾಳಶಾಹಿಗಳು ಕಾರ್ಮಿಕ ವಿರೋಧಿಗಳು ಎನ್ನುವ ಕಾಲ ಇದ. ಕಾರ್ಮಿಕ ವರ್ಗದ ಏಳಿಗೆಯಾಗಬೇಕೆನ್ನುವುದರಲ್ಲಿ ಯಾರ ಅಡ್ಡಿಯೂ ಇಲ್ಲ. ಆದರೆ ಈ ಏಳಿಗೆಯು ಸಮಾಜದ ಇತರ ವರ್ಗದ ಮೇಲೆ ದುಷ್ಪರಿಣಾಮ ಮಾಡಿ ಆಗುವುದನ್ನು ಯಾರೂ ಬಯಸುವುದಿಲ್ಲ. ಸರಕಾರವಾದರೂ ಈ ದಿಸೆಯಲ್ಲಿ ಮಾಲಕವರ್ಗದ ಹಿತದ ಕಡೆಗೆ ವಿಶೇಷ ಗಮನ ಇರಿಸಿದಂತೆ ಕಾಣುವುದಿಲ್ಲ. ಸಂಸ್ಥೆಗೆ ಲಾಭವಾಗಲೀ, ನಷ್ಟವಾಗಲೀ ವೇತನದ ಸೇ.ನಾಲ್ಕರಷ್ಟು ಅಥವಾ ರೂ. ನಲ್ವತ್ತು ಇವುಗಳಲ್ಲಿ ಯಾವುದು ಹೆಚ್ಚೋ ಅದನ್ನು ಬೋನಸ್ ರೂಪದಲ್ಲಿ ಕೊಡಲೇಬೇಕೆನ್ನುತ್ತದೆ ಈ ಶಾಸನ! ಈ ತತ್ವವನ್ನು ಏನೆಂದು ಕರೆಯಬೇಕೊ ತಿಳಿಯುವುದಿಲ್ಲ. ಸಂಸ್ಥೆಗೆ ಲಾಭವಾದರೆ ಆ ಲಾಭದಲ್ಲಿ ಕಾರ್ಮಿಕರಿಗೆ ಪಾಲು ದೊರೆಯಬೇಕು ಎಂಬ ಹೇಳಿಕೆಯನ್ನು ಎಲ್ಲರೂ ಒಪ್ಪಿದ್ದಾರೆ. ಆದರೆ ಸಂಸ್ಥೆಗೆ ನಷ್ಟವಾದರೂ ಬೋನಸ್ ಕೊಟ್ಟೇ ತೀರಬೇಕೆನ್ನುವ ಶಾಸನವು ಸ್ಪುಟ್ನಿಕ್ ಯುಗಕ್ಕೆ ಭಾರತದ ಕೊಡುಗೆಯಾಗಿರಬಹುದೆ?

ಕಾರ್ಮಿಕರು ಈ ವಿಧೇಯಕದ ಬೋನಸು ಅಥವಾ ಈಗ ಅವರು ಪಡೆಯುತ್ತಿರುವ ಬೋನಸು ಇವುಗಳಲ್ಲಿ ಯಾವುದು ಹೆಚ್ಚೋ ಅದನ್ನು ಸ್ವೀಕರಿಸಬಹುದು. ಇವುಗಳಲ್ಲಿ ಒಂದನ್ನಾದರೂ ಸ್ವೀಕರಿಸಲೇ ಬೇಕೆನ್ನುವ ಕಡ್ಡಾಯವೇನೂ ಇಲ್ಲ. ನಮ್ಮ ಕಾರ್ಮಿಕ ಮುಂದಾಳುಗಳು ತಮ್ಮ ಅನುಯಾಯಿಗಳಿಗೆ 'ಹೆಚ್ಚು ಕೇಳಿರಿ' ಎಂಬ ಉಪದೇಶವನ್ನೇ ನೀಡುತ್ತಿರುವರು 'ಅದಕ್ಕಾಗಿ ಹೋರಾಡಿರಿ' ಎಂದೂ ಹುರಿದುಂಬಿಸುತ್ತಿರುವರು. ಈಗ ಈ ಕಾಯಿದೆಯು ಈ 'ಹೋರಾಡಿರಿ'ಎಂಬ ಉಪದೇಶಕ್ಕೆ ಮತ್ತು ಪ್ರೋತ್ಸಾಹ ನೀಡುತ್ತದೆ. ಅಂತೂ ಹೆಚ್ಚು ಬೇಡಿಕೆಗೆ ನಮ್ಮ ಸರಕಾರವೇ ದಾರಿ ಹಾಕಿ ಕೊಟ್ಟಂತಾಯಿತು.

ಮಾಲಕರು ಬೋನಸನ್ನು, ಯಾವ ದರ ಹೆಚ್ಚೋ ಆ ದರದಲ್ಲಿ ಕೊಟ್ಟೇ ಬಿಡಬೇಕೆಂದು ಶಾಸನವು ವಿಧಿಸುತ್ತದೆ. ಆದರೆ ಕಾರ್ಮಿಕರು ಮಾತ್ರ ಈ ಬೋನಸಿನಿಂದ ತೃಪ್ತರಾಗಬೇಕೆಂದೇನೂ ಈ ಶಾಸನ ಹೇಳುವುದಿಲ್ಲ. ಅವರು ಹೆಚ್ಚು ಬೋನಸಿಗೆ ಚಳವಳ ಹೂಡಬಹುದು; ಮುಷ್ಕರ ನಡೆಸಬಹುದು. ಇದು ಔದ್ಯಮಿಕ ರಂಗದಲ್ಲಿ ಶಾಂತಿ ಕಾಯ್ದುಕೊಳ್ಳಲು ನಮ್ಮ ಸರಕಾರ ಮಾಡಿದ ಕಾಯಿದೆಯ ಸ್ವರೂಪ!

ಕೂಲಿಕಾರರು ಹೆಚ್ಚು ಕೊಡಿ ಎಂದು ಕೇಳಲು ಸ್ವತಂತ್ರರಿರುವಂತೆ ಇನ್ನು ಮಾಡಿ ಕೊಟ್ಟಿರುವ ಈ ಕಾಯಿದೆಯಿಂದ ಇನ್ನು ಮುಂದಕ್ಕೆ ವಾದ ವಿವಾದಗಳು ಏಳುವುದಿಲ್ಲ ಎನ್ನುವುದಕ್ಕೆ ಏನು ಭರವಸೆ ಇದೆ? ಕೂಲಿಕಾರ ನಾಯಕರು ಈಗಾಗಲೇ ಈ ಕುರಿತು ಆಕ್ರೋಶ ತಾಳಿರತ್ತಾರೆ. ಹೀಗಿರುವಾಗ ಸರಕಾರದ ಈ ಬೋನಸ್ ಕ್ಯಾದೆ ಸಾಧಿಸುವ ಪುರುಷಾರ್ಥವಾದರೂ ಏನು?

ಈ ಕ್ಯಾದೆಯಿಂದ ಈ ವರೆಗೆ ಬೋನಸ್ ಸೌಲಭ್ಯ ಪಡೆಯದಿರುವ ನಲ್ವತ್ತೈದು ಲಕ್ಷ ಕಾರ್ಮಿಕರಿಗೆ ತಲಾ ರೂ. 40 ರಂತೆ ಕನಿಷ್ಟ ಪಕ್ಷ ಹದಿನೆಂಟು ಕೋಟಿ ರೂಪಾಯಿ ಬೋನಸ್ ರೂಪದಲ್ಲಿ ತೆರಬೇಕಾಗುವುದು. ಸರಿಯಾದ ಅಂಕೆಸಂಖ್ಯೆ ಎಷ್ಟೆಂದು ಈ ವರೆಗೆ ತಿಳಿಯದಿದ್ದರೂ ಅದು 50 ಕೋಟಿ ರೂಪಾಯಿಗಳಿಗೂ ಮಿಕ್ಕಬಹುದು. ಈ ಬೋನಸ್ ಹಣವು ಸಂಸ್ಥೆಯ ವ್ಯಯದ ಖಾತೆಗೆ ಅಂಗೀಕರಿಸಲ್ಪಡುವದು. ಆಗ ಸಂಸ್ಥೆಯ ನೆಟ್ ಲಾಭವು ತಾನಾಗಿಯೇ ತಗ್ಗಿ, ಸರಕಾರಕ್ಕೆ ದೊರೆಯುವ ತೆರಿಗೆಯಲ್ಲಿ ಕಡಿತವಾಗುವುದು. ಆಗ ಈ ನಷ್ಟವನ್ನು ತುಂಬಿಕೊಡಬೇಕಾದವರು ಜನ ತೆರಿಗೆದಾರರೇ ಅಲ್ಲವೆ? ಲಾಭ ಗಳಿಸದಿರುವ ಸಂಸ್ಥೆಗಳೂ ಈ ಬೋನಸ್ ಕೊಡಬೇಕೆನ್ನುವುದು ಆರ್ಥಿಕ ತತ್ವಕ್ಕೇನೇ ವಿರೋಧವಾದುದಲ್ಲವೆ?

— — —

'NAVAYUGA' Weekly is in the list of periodicals and Newspapers approveds for use in Secondary Schools as per proceeding Roc. No. 466 N/50 dated 2-12-1950 of the Directer of Public Instruction Madras.

ಸಾಯುವವನಿಗೊಂದು ಇಂಜೆಕ್ಷನ್

(ನಾಲ್ಕನೇ ಪುಟದಿಂದ)

'ನೋಡಿ, ನಿಮ್ಮ ಬೆಡಗಿನ ಬಿನ್ನಣದ ಮಾತೆಲ್ಲ ಬೇಡ. ನೇರವಾಗಿ ನುಡಿಯೋದಿದ್ರೆ, ಹಾಯಾಗಿ ಕೇಳ್ತೇನೆ....'

"ನುಡೀಬೇಕಂತೆ ನಾನು, ಕೇಳ್ತಾರಂತೆ ಅವ್ರು....ಅಲ್ವೆ, ಏನಂದಿ, ವೀಣೆ ನುಡಿಸ್ಬೇಕೂಂತ್ಲೆ...?"

"ಅಯ್ಯೋ, ನೀವೊಂದು...ಅಲ್ಲಿ ಹೇಳೋದಿದ್ರೆ ತಿಳಿಯಾಗಿ ಹೇಳೀಂದೆ..."

'ಹಾಗೆ.... ನೋಡು, ಗೀತೆ ವಿಚಾರ ಏನಾದ್ರೂ ನುಡೀಬೇಕು ಅನ್ನುವಾಗ ಅದರ ಹಾಗೇ ಉತ್ತಮೋತ್ತಮ ಭಾವನೆಗಳು ಬರುತ್ತವೆ...'

'ಅದೆಲ್ಲಾ ಇರ್ಲಿ, ಆ ಗೀತಾಚಾರ್ಯ ಏನಂದಿದ್ದಾರೆ ಹೇಳಿ ...'

"ಓ, ಇದು ಆಜ್ಞೆ, ವಿನಂತಿಯಲ್ಲ... ಹ್ಞಾಂ.. ಈಶ್ವರಃ ಸರ್ವ ಭೂತಾನಾಂ ಹೃದ್ದೇಶೇ ಅರ್ಜುನತಿಷ್ಠತಿ ಅಂದ್ರೆ ಎಲೈ ಅರ್ಜುನ, ಈಶ್ವರನು ಎಲ್ಲ ಪ್ರಾಣಿಗಳ ಹೃದಯ ಪ್ರದೇಶದಲ್ಲೂ ವಾಸವಿದ್ದಾನೆ...'

'ಹ್ಞಾಂ... ಇರಬಹುದೂನ್ನಿ. ಬೂದಿ ಮುಚ್ಚಿದ ಕೆಂಡದಂತೆ! ಇಲ್ವಾದ್ರೆ ಕಂಬ ಸೀಳಿ ಹೊರಗೆ ನರಹರಿ ಬರೋದಾದ್ರೂ ಹೇಗೆ? ಈಗ ಸಮಾಚಾರವನ್ನ ಹೇಳಿಬಿಟ್ರೆ....ಮಳೆ ಬರೋ ಲಕ್ಷಣಾನೂ ಇದೆ..."

"ಅರ್ಥವಾಯ್ತು ಬಿಡು. ನೋಡು, ಇಂಗ್ಲೆಂಡಿನಲ್ಲಿ ಯಾವ ಪಕ್ಷದ ಸರಕಾರ ಇದೆ?"

"ಇಂಗ್ಲೆಂಡಿನಲ್ಲಿ....ಓ, ಅದು ನೋಡಿ, ನಮಗೆ ಸ್ವಾತಂತ್ರ್ಯ ಕೊಟ್ಟದ್ದು...."

'ಹ್ಞಾಂ...ಅದೇ ಕೂಲಿಗಾರ ಪಕ್ಷನ್ನು...'

'ಹೌದು, ಹೌದು.... ಅದೇ... ಏನಾಯ್ತು?

'ಕಾಮನ್ಸ ಸಭೆಯಲ್ಲಿ ಅದಕ್ಕೆ ಬೆರಳೆಣಿಕೆಯ ಬಹುಮತವಿರುವುದರಿಂದ ಬೆಕ್ಕಿನ ತಲೀ ಮೇಲಿನ ದೀಪದಂತಿದೆ. ಮೊನ್ನೆ ಒಂದು ಸಂದರ್ಭದಲ್ಲಿ ಮತಗಣನೆಯ ಪ್ರಸಂಗ ಬಂತಂತೆ. ಉಭಯ ಪಕ್ಷಗಳಿಗೂ ಸಮಾನ ಮತಗಳು ದೊರೆತವಂತೆ. ಕನ್ಸರ್ವೇಟಿವ್ ಪಕ್ಷದವರು ರಾಜಿ ಕೊಡಿರಿ ರಾಜಿ ಕೊಡಿರಿ ಅಂತ ಕೂಗಾಡಿದರಂತೆ...."

"ಪಾಪ, ಹಾಗೆ ಆಗಬಾರದಿತ್ತು ನೋಡಿ. ಏನಂತೆ, ರಾಜಿ ಕೊಟ್ಟೇ ಬಿಟ್ಟರೆ?"

"ಮಾಗೀಲಿಲ್ಲ ನೋಡು. ...ಸಭೆಯ ಅಧ್ಯಕ್ಷ ಪೀಠದಲ್ಲಿ ಒಬ್ಬ ಕನ್ಸರ್ವೇಟಿವ್ ಪಕ್ಷದ ಸದಸ್ಯರೇ ಇದ್ದರಂತೆ. ಅವರು ಸರಕಾರದ ಪಕ್ಷಕ್ಕೆ ಮತವಿತ್ತುದರಿಂದಾಗಿ..."

"ಏನಂದ್ರಿ? ಹೀಗೂ ಉಂಟೆ?'

"ಉಂಟು ಅಂತಲೇ ಅಲ್ಲಿ ಪ್ರಜಾಸತ್ತೆ ಬದುಕಿರೋದು...

'ಅಲ್ರಿ, ಅವನನ್ನ ಮುಂದೆ ಆತನ ಪಕ್ಷದವರು ಏನು ಮಾಡಿ ಯಾರು?"

'ಏನೂ ಮಾಡೊಲ್ಲ ಬಿಡು. ಏಕೆಂದ್ರೆ ಉರುಳುತ್ತಿರುವ ಸರಕಾರಕ್ಕೆ ಒಂದು ಬಾರಿ ಜೀವದಾನ ಮಾಡಿ ಸರಿಯಾಗಿ ಆಡಳಿತೆ ನಡೆಸುವ ಒಂದು ಚಾನ್ಸ್ ಕೊಟ್ಟದ್ದಕ್ಕೆ ಸಾಯುವವನಿಗೆ ಇಂಜೆಕ್ಷನ್ ಕೊಟ್ಟದ್ದಕ್ಕೆ ಯಾರೂ ಏನೂ ಅನ್ನಲಾರರು.'

"ಆದ್ರೆ, ನಮ್ಮಲ್ಲಿ....'

"ನಮ್ಮಲ್ಲಿ? ಗೊತ್ತೇ ಇದೆ.. "

'ಶಿಸ್ತುಭಂಗ, ತೀವ್ರ ಕ್ರಮ, ಬಹಿಷ್ಕಾರ, ಬೆದರಿಕೆ, ಕೊನೆಗೆ ಪ್ರಾಣಾಪಹರಣ....ಇತ್ಯಾದಿ...."

"ಹ್ಞಾಂ, ಇರಬಹುದೂನ್ರಿ. ಆದ್ರೆ, ನಮ್ಮಲ್ಲಿ ವಿರೋಧಿ ಪಕ್ಷದ ಅಧ್ಯಕ್ಷ ಸರಕಾರಿ ಪಕ್ಷಕ್ಕೆ ಮತ ಕೊಡಲಾರನೆನಿಸುತ್ತದೆ. ಏಕೆಂದ್ರೆ ಸರಕಾರವನ್ನುರುಳಿಸೋದೇ ನಮ್ಮದ್ರ ಉದ್ದೇಶವಲ್ವೇ?"

"ಅಗ್ಲಪ್ಪ, ದೇವರ ದಯದಿಂದಾದ್ರೂ, ಕೂಲಿಗಾರರ ಪಕ್ಷ ಒಮ್ಮೆಗೆ ಬದುಕಿತಲ್ಲ?"

"ಅಲ್ವೆ, ನಿನಗೇಕಿಷ್ಟು ಮಮತೆ ಅದ್ರ ಮೇಲೆ?"

"ಏನಾದ್ರೂ ಸ್ವಾತಂತ್ರ್ಯ ಕೊಟ್ಟವ್ರು ನೋಡಿ...."

"ಭಾರತೀಯ ನಾರಿಯು ಮಾಡಿದ ಉಪಕಾರಕ್ಕೆ ಆ ಜೀವ ಕೃತಜ್ಞಳಾಗಿರುವಳೆಂಬುದು ಸುಳ್ಳಲ್ಲ ..."

"ಹ್ಞಾಂ ... ತಿಳಿಯಿತು, ನಿಮ್ಮ ಪೀಠಿಕೆ ಸಾಕೇಂತ. ನಡೀರಿ, ಹೋಗಿ ಸರಿಯಾಗಿ ಕಾಲು ಕೈ ತೊಳೀರಿ. ಮತ್ತೆ ನಂಜಿ ತಿನ್ನುತ್ತೇಂತ ದೂರ ಬೇಡಿ...."

"ಅಷ್ಟಪ್ಪ, ಇಂಗಿತಜ್ಞೆಯೆಂದ್ರೆ ನೀನೇ ಕಣೇ."

'ಸಾಕು ಸಾಕು, ಬೇಗ ಬಂದ್ಬಿಡಿ ಮತ್ತೆ....'

'ಬಾರ್ದೆ ಉಂಟೆ?'

— ಗೋರಾ

— —

ಡ್ರಗಿಸ್ಟ್ ಮತ್ತು ಕೆಮಿಸ್ಟರ ರಾಜ್ಯಮಟ್ಟದ ಸಮ್ಮೇಳನ

ಮಂಗಳೂರಿನ ಪುರಭವನದಲ್ಲಿ ಕಳೆದ ತಾ. ೩೦ರಂದು ಡಾ| ಎಂ. ಡಿ. ಅಡಪರವರ ಅಧ್ಯಕ್ಷತೆಯಲ್ಲಿ ಜರಗಿದ ಡ್ರಗಿಸ್ಟ ಮತ್ತು ಕೆಮಿಸ್ಟರ ರಾಜ್ಯಮಟ್ಟದ ಸಮ್ಮೇಳನದ ಉದ್ಘಾಟನೆಯನ್ನು ಆರೋಗ್ಯ ಮಂತ್ರಿ ಡಾ| ನಾಗಪ್ಪ ಆಳ್ವರು ನೆರವೇರಿಸಿದರು. ಶ್ರೀಮತಿ ಲೀಲಾ ಬಾಳಿಗರಿಂದ ಪ್ರಾರ್ಥನೆಯಾದ ಬಳಿಕ, ದ. ಕ. ಜಿಲ್ಲಾ ಕೆಮಿಸ್ಟ್ ಮತ್ತು ಡ್ರಗಿಸ್ಟ್ ಅಸೋಸಿಯೇಶನ್ನಿನ ಅಧ್ಯಕ್ಷ ಶ್ರೀ ಯು. ಪಿ. ಶೆಣೈಯವರು ಸ್ವಾಗತಿಸಿದರು. ಮೈಸೂರು ರಾಜ್ಯದ ಬೆಂಗಳೂರಿನಲ್ಲಿ ಡ್ರಗ್ ಕಂಟ್ರೋಲರ್ ಶ್ರೀ ಕೆ. ಎನ್. ಶ್ಯಾನುಭೋಗರು ಸಮ್ಮೇಳನದ ನೆನಪು ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ರಾಜ್ಯಮಟ್ಟದ ಸಂಘದ ನಿಯೋಜಿತ ಅಧ್ಯಕ್ಷ ಅಧಿಕಾರ ಪದವಿಯಿಂದ ಬಿಡುಗಡೆ ಹೊಂದುವ ಡಾ| ಎಂ. ಎ. ನರಸಿಂಹಾಚಾರ್ಯರವರು ಸಾಧಿಸಿದ ಪ್ರಗತಿಗಳನ್ನು ಪ್ರಶಂಶಿಸಿದರು. ಆ ಮೇಲೆ ಅಸೋಸಿಯೇಶನ್ ಡಾ| ಆಚಾರ್ಯರವರಿಗೆ ಅರ್ಪಿಸಿದ ಮಾನಪತ್ರಕ್ಕೆ ಉತ್ತರವೀಯುತ್ತಾ ತನಗೆ ತೋರಿದ ಆದರಕ್ಕಾಗಿ ಕೃತಜ್ಞತೆಯನ್ನರ್ಪಿಸಿದರು. ಔಷಧಿಗಳ ಪೂರೈಕೆ ದಿಸೆಯ ಕುರಿತಾಗಿ ಶ್ರೀ ಎಸ್. ರಾವ್‌ರವರು ಮಾತನಾಡಿದರು. ಅಧ್ಯಕ್ಷರು ಮಾತನಾಡುತ್ತಾ ಉತ್ತಮ ದರ್ಜೆಯ ಔಷಧಿಗಳ ಪ್ರಾಮುಖ್ಯತೆಯನ್ನು ವಿವರಿಸಿ, ಅಸೋಸಿಯೇಶನಿಗೆ ಶುಭ ಕೋರಿದರು. ಮಾನ್ಯ ಸಚಿವರು ಉದ್ಘಾಟಿಸುತ್ತಾ, ನಕಲಿ ಔಷಧಿಗಳ ಹಾವಳಿ ತಡೆಯಲು ಅಸೋಸಿಯೇಶನ್ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿ, ಸಂಪೂರ್ಣ ಸಹಕರಿಸಬೇಕೆಂದು ಕೇಳಿಕೊಂಡರು. ಸಮ್ಮೇಳನಕ್ಕೆ ಶುಭಕೋರಿ ಬಂದ ಸಂದೇಶಗಳನ್ನು ಶ್ರೀ ಎನ್. ಸೀತಾರಾಮ ಕಾಮತರು ಓದಿದರು. ವಂದನಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಎಲ್ಲೆಲ್ಲಿ ಏನೇನು?

ಕಸ್ತೂರ ಬಾ ಮೆಡಿಕಲ್ ಕಾಲೇಜಿನ ಉತ್ತಮ ಫಲಿತಾಂಶ

ಮಣಿಪಾಲ, ಜೂನ್ ೪—ಇಲ್ಲಿಯ ಕಸ್ತೂರ ಬಾ ಮೆಡಿಕಲ್ ಕಾಲೇಜಿನಿಂದ ಕಳೆದ ಏಪ್ರಿಲ್ ತಿಂಗಳಲ್ಲಿ ನಡೆದ ಕರ್ನಾಟಕ ವಿಶ್ವವಿದ್ಯಾಲಯದ ಬಿ.ಎಸ್‌ಸಿ. ಪ್ರಥಮ ಭಾಗದ ಪರೀಕ್ಷೆಗೆ ಕುಳಿತಿದ್ದ ೧೪೫ ಮಂದಿಯ ಪೈಕಿ ೧೨೬ ಮಂದಿ ತೇರ್ಗಡೆಯಾಗಿದ್ದು, ಶೇ. ೯೩.೬ರಷ್ಟು ಫಲಿತಾಂಶ ಬಂದಿದೆ. ಇಬ್ಬರು ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲೂ, ೪೮ ಮಂದಿ ದ್ವಿತೀಯ ದರ್ಜೆಯಲ್ಲೂ ಉತ್ತೀರ್ಣರಾಗಿದ್ದಾರೆ. ಒಂಭತ್ತು ಮಂದಿಯ ಫಲಿತಾಂಶವನ್ನು ತಡೆಹಿಡಿಯಲಾಗಿದೆ.

ಈ ಹಿಂದೆ ಕೂಡಾ ವಿಶ್ವವಿದ್ಯಾನಿಲಯ ಪರೀಕ್ಷೆಗಳಲ್ಲಿ ಈ ಕಾಲೇಜಿನ ಫಲಿತಾಂಶ ಉತ್ತಮವಾಗಿತ್ತು. ೧೯೬೪ರಲ್ಲಿ ಪ್ರಥಮ ಹತ್ತು ರ್‍ಯಾಂಕುಗಳ ಪೈಕಿ ಒಂಭತ್ತು ಸ್ಥಾನಗಳು ಈ ಕಾಲೇಜಿಗೆ ದೊರಕಿದ್ದವು. ೧೯೬೪ರಲ್ಲಿ ಶೇ. ೮೮ರಷ್ಟು ಫಲಿತಾಂಶ ಬಂದಿತ್ತು.

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯ, ಮೈಸೂರು-೨

ಮೇಲ್ಕಂಡ ವಿದ್ಯಾರ್ಥಿ ನಿಲಯವು ತಾ. 1-7-65ರಿಂದ ಆರಂಭವಾಗುವುದು. ಸೇರಲಿಚ್ಛಿಸುವ ವಿದ್ಯಾರ್ಥಿಗಳು ಗೊತ್ತಾದ ಫಾರಂನ್ನು ಕಾರ್ಯದರ್ಶಿಗಳಿಂದ ಪಡೆದು 28-6-65ರ ಒಳಗಾಗಿ ಕಾರ್ಯದರ್ಶಿಗಳಿಗೆ ಅರ್ಜಿ ಕಳುಹಿಸತಕ್ಕದ್ದು—ಎ. ರಾಮಣ್ಣ, ಕಾರ್ಯದರ್ಶಿ.

(ಮೂರನೇ ಪುಟದಿಂದ)

ಮೊದಲಾದ ಆಮೂಲಾಗ್ರ ವಿಧಾನಗಳ ಮುಂದೆ ಫಲಿತಗ್ಗಿಸ ಬರುವಂತಾಗಬಾರದು; ಹಾಗೆ ಆಗದು.

ನೆಹರೂ ಭರವಸೆ

ನೆಹರೂರವರು ದಾಕ್ಷಿಣಾತ್ಯರಿಗಿತ್ತ ಭರವಸೆಗೆ ಕಾಯಿದೆ ರೂಪವನ್ನು ಕೊಡಲು ಅಧಿಕೃತ ಭಾಷಾ ಕಾಯಿದೆಗೆ ತಕ್ಕ ತಿದ್ದುಪಡಿಯಾಗುವ ನಿರೀಕ್ಷೆಯಿದೆ ಕಾಂಗ್ರೆಸ್ಸು ಈ ಬಗ್ಗೆ ಗೊತ್ತುವಳಿಯನ್ನು ಸ್ವೀಕರಿಸಿದೆ. ಇದರಂತೆ, ಇಂಗ್ಲಿಷ್ ಭಾಷೆಯ ಉಪಯೋಗವು ಮುಂದೆಯೂ ನಡೆಯುವುದು. ಯೂನಿಯನ್ ಸರ್ವಿಸ್ ಕಮಿಶನ್ ಪರೀಕ್ಷೆಗಳು ಪ್ರಾದೇಶಿಕ ಭಾಷೆಗಳಲ್ಲಿಯೂ ನಡೆಯುವುದು. ದಕ್ಷಿಣದ ರಾಜ್ಯಗಳ ಜನತೆಯ ಆಶೋತ್ತರಗಳನ್ನು ಈಡೇರಿಸುವುದಕ್ಕಾಗಿ ಈ ಬಗೆಯ ತಿದ್ದುಪಡಿಗೆ ಕಾಂಗ್ರೆಸ್ ಒಪ್ಪಿತು; ತ್ರಿಭಾಷಾ ಸೂತ್ರವನ್ನು ಇಡಿಯ ದೇಶದಲ್ಲಿ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುವುದರ ಬಗ್ಗೆಯೂ ವಚನ ಮಾಡಿತು, ನಿಜ. ದಕ್ಷಿಣದ ರಾಜ್ಯಗಳು ಪ್ರಾದೇಶಿಕ ಭಾಷೆ, ಇಂಗ್ಲಿಷ್‌ಗಳೊಡನೆ ಹಿಂದಿಯನ್ನೂ ಕಲಿಯಲು ಮುಂದೆ ಬಂದಂತೆ ಉತ್ತರದ ರಾಜ್ಯಗಳು ದಕ್ಷಿಣದ ಒಂದು ಭಾಷೆಯನ್ನೂ ಕಲಿಯಲು ಮುಂದೆ ಬರಬೇಕು. ಕೇವಲ ಸರದ ವರತೃಪ್ತಿಗೆಂದು ಸೂತ್ರವನ್ನು ಒಪ್ಪಿದಂತೆ ಮಾಡಿ ಮುಂದೆ ಸುಮ್ಮನಾದರೆ ಪ್ರಯೋಜನವಿಲ್ಲ. ಭಾಷಾ ಬಾಂಧವ್ಯ ಬೆಳೆದರೆ ಮಾತ್ರ ಹಿಂದಿಯ ಬಗ್ಗೆ ಅಧಿಕ ಜನಾನುರಾಗವು ದಕ್ಷಿಣದಲ್ಲಿ ಬೆಳೆಯುವುದು; ಏಕೆಂದರೆ, ಇಲ್ಲಿನ ಜನತೆ ಹಿಂದಿಯನ್ನು ಕಲಿಯಲಾರೆವೆಂದು ಎಂದೂ ಹೇಳುವುದಿಲ್ಲ

ಹರಿಕಥಾ ಕಾಲಕ್ಷೇಪ

ಕಡಿರುದ್ಯಾವರ, ತಾ. 25-5-65ರಂದು ಪಂಚಾಯತ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಗ್ರಾಮಸ್ಥರ ಕೂಡುವಿಕೆಯಿಂದ ಸೇರಿದ ಮಹಾಸಭೆಯಲ್ಲಿ ಪಂಡಿತ್ ಲಕ್ಷ್ಮಣ ದೇವ ವಿದ್ಯಾರ್ಥಿಯವರಿಂದ "ಗರುಡ ಗರ್ವಭಂಗ" ಎಂಬ ಪೌರಾಣಿಕ ಹರಿಕಥಾ ಕಾಲಕ್ಷೇಪವು ಶ್ರೀ ಕೆ. ಎನ್. ಭಟ್ ಶಿರಾಡಿಪಾಲ್‌ರವರ ಹಿಮ್ಮೇಳದಿಂದ ಯಶಸ್ವಿಯಾಗಿ ನೆರವೇರಿತು. ಮುಖ್ಯೋಪಾಧ್ಯಾಯ ಯು. ವಿ. ನಾಯಕರು ಧನ್ಯವಾದಗಳನ್ನಿತ್ತರು.

ವಾರ್ಷಿಕೋತ್ಸವ

ಉಡುಪಿ, ಮೇ, 30—ಹಿಂದೀ ಪ್ರಚಾರ ಸಮಿತಿ, ಉಡುಪಿ (ರಿಜಿಸ್ಟರ್ಡ್) ಇದರ ವಾರ್ಷಿಕೋತ್ಸವ ಮತ್ತು ಪ್ರಮಾಣ ಪತ್ರ ವಿತರಣೋತ್ಸವವು ಶ್ರೀ ಆರೂರು ಲಕ್ಷ್ಮೀನಾರಾಯಣ ರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಮಿತಿಯ ಕೋಶಾಧ್ಯಕ್ಷ ಶ್ರೀ ಎ. ಜೆ. ಅಲ್ಸೆಯವರು ಸ್ವಾಗತಿಸಿದರು. ಸಮಿತಿಯ ಕಾರ್ಯಕಲಾಪಗಳ ವರದಿಯನ್ನು ಜತೆ ಕಾರ್ಯದರ್ಶಿ ಕುಮಾರಿ ಯು. ಚಂದ್ರಭಾಗಿಯವರು ಓದಿದರು.

ಬಳಿಕ ಹಿಂದೀ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣಪತ್ರಗಳನ್ನು ಸಿಂಡಿಕೇಟು ಬ್ಯಾಂಕಿನ ಚೀಫ್ ಆಫೀಸರ್, ಶ್ರೀ ಕೆ. ಕೆ. ಪೈಯವರು ವಿತರಣೆ ಮಾಡಿದರು. ಅಲ್ಲದೆ ಅತ್ಯುತ್ತಮ ಗುಣಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ಪುಸ್ತಕಗಳನ್ನೂ ಕೊಡಲಾಯಿತು.

ಶ್ರೀ ಕೆ. ಕೆ. ಪೈಗಳು ಆ ಬಳಿಕ ಭಾಷಣ ಮಾಡುತ್ತಾ ಹೆಚ್ಚು ಹೆಚ್ಚು ಜನರು ಹಿಂದೀ ಅಭ್ಯಾಸಕ್ಕೆ ಆಸಕ್ತಿ ತೋರಿಸುತ್ತಿರುವುದರ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಭಾರತದ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಹಿಂದಿಯ ಪ್ರಚಾರವನ್ನು ದೇಶದಲ್ಲಿ ಕೈಕೊಳ್ಳಲಾಯಿತೆಂದೂ ಈಗ ಅದರ ಪ್ರಚಾರವು ತುಂಬ ತೃಪ್ತಿಕರವಾಗಿ ಮುಂದುವರಿಯುತ್ತಿದೆ ಎಂದೂ ಹೇಳಿ ಎಲ್ಲರೂ ಹಿಂದೀ ಕಲಿಯುವಂತಾಗಲೆಂದು ಹಾರೈಸಿ ಪ್ರಮಾಣಪತ್ರಗಳನ್ನೂ ಬಹುಮಾನಗಳನ್ನೂ ಪಡೆದವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಉಡುಪಿಯ ಜನರು ಹಿಂದಿಯ ಕುರಿತು ತೋರುತ್ತಿರುವ ಆಸಕ್ತಿಯನ್ನು ಶ್ಲಾಘಿಸಿದರು. ಇನ್ನೂ ಹೆಚ್ಚು ಮಂದಿ ಮುಂದೆ ಬಂದು ಹಿಂದೀ ಪ್ರಚಾರ ಸಮಿತಿ ಒದಗಿಸುತ್ತಿರುವ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಹಿಂದಿಯನ್ನು ಅಭ್ಯಾಸಮಾಡಬೇಕೆಂದು ಕೇಳಿಕೊಂಡರು. ಮನರಂಜನಾ ಕಾರ್ಯಕ್ರಮಗಳಾದ ಬಳಿಕ ಗೌರವ ಕಾರ್ಯದರ್ಶಿ ಶ್ರೀ ಸಿ. ಮಹಾಬಲ ನಾಯಕರು ವಂದನಾರ್ಪಣೆ ಮಾಡಿದರು.

ಗಂಜಿಮಠದಲ್ಲಿ ಡಾ। ನಾಗಪ್ಪ ಆಳ್ವ

ಕಳೆದ ತಾ. 27ರಂದು ಗಂಜಿಮಠದಲ್ಲಿ ನಿರ್ಮಿಸಿರುವ ವೈದ್ಯಶಾಲೆಯ ಕಟ್ಟಡವನ್ನು ಉದ್ಘಾಟಿಸುತ್ತಾ, ಸಮಾಜಘಾತುಕರನ್ನು ಪತ್ತೆಹಚ್ಚಿ ತಕ್ಕ ಶಿಕ್ಷೆಯನ್ನು ವಿಧಿಸಲು ವ್ಯವಸ್ಥೆ ಮಾಡಲಾಗಿದೆಯೆಂದು, ಆರೋಗ್ಯ ಸಚಿವ ಡಾ। ನಾಗಪ್ಪ ಆಳ್ವರು ನುಡಿದರು. ಶೀಘ್ರವಾಗಿ ಕಟ್ಟಡದ ಕೆಲಸವನ್ನು ಪೂರೈಸಿದುದಕ್ಕಾಗಿ ಅವರು ಶ್ರೀ ಎಸ್. ಶಾಮರಾಜುರವರನ್ನು ಪ್ರಶಂಸಿಸಿದರು.

ಪ್ರಾರಂಭದಲ್ಲಿ ಮಂಗಳೂರು ತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಬಿ. ರಾಜೀವ ಭಂಡಾರಿಯವರು ಸಚಿವರನ್ನು ಸ್ವಾಗತಿಸಿದರು. ಮುಳಲಿ ಟೌನ್ ಪಂಚಾಯತ್ ಅಧ್ಯಕ್ಷ ಶ್ರೀ ಕೃಷ್ಣ ನಾಯಕರು ಸಚಿವರಿಗೆ ಮನವಿ ಪತ್ರವನ್ನರ್ಪಿಸಿದರು. ಕೊನೆಯಲ್ಲಿ ಅಭಿವೃದ್ಧಿ ಮಂಡಳಿಯ ಸದಸ್ಯ ಶ್ರೀಮತಿಯವರು ವಂದನಾರ್ಪಣೆಗೈದರು.

ಶೇಕಡಾ ಫಲಿತಾಂಶ

ಎಪ್ರಿಲ್ 1965ರಲ್ಲಿ ಜರಗಿದ ಎಸ್. ಎಸ್. ಎಲ್. ಸಿ. ಪಬ್ಲಿಕ್ ಪರೀಕ್ಷೆಯಲ್ಲಿ ಸೈಂಟ್ ಲೋರೆನ್ಸ್ ಹೈಸ್ಕೂಲಿನ 46 ವಿದ್ಯಾರ್ಥಿಗಳಲ್ಲಿ 46 ವಿದ್ಯಾರ್ಥಿಗಳೂ ಪಾಸಾಗಿ ಶಾಲೆಗೆ ಶೇಕಡಾ 100ರ ಫಲಿತಾಂಶವನ್ನು ಗಳಿಸಿರುತ್ತಾರೆ. 1963 ಮತ್ತು 1964 ಇಸವಿಗಳಲ್ಲಿ ಕೂಡಾ ಈ ಶಾಲೆಗೆ ಇದೇ ಪರೀಕ್ಷೆಯಲ್ಲಿ ಶೇಕಡಾ 100ರ ಫಲಿತಾಂಶ ದೊರಕಿರುತ್ತದೆ.

ಶ್ರೀ ವಿಶ್ವಕರ್ಮ ಮಹಾವ್ರತ

ಮಂಗಳೂರು—ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದಲ್ಲಿ ಸ್ಥಳೀಯ ಶ್ರೀ ವಿಶ್ವಕರ್ಮ ಸಂಸ್ಕೃತಿ ಸಂವರ್ಧಿನೀ ಸಭಾ ವತಿಯಿಂದ ಶ್ರೀ ವಿಶ್ವಕರ್ಮ ಮಹಾವ್ರತ ಕಥಾ ಪೂಜೆಯು ತಾ. 30-5-65ರಂದು ವಿಜೃಂಭಣೆಯಿಂದ ಜರಗಿತು. ಬ್ರಹ್ಮಶ್ರೀ ವೇ। ಜನಾರ್ದನಾಚಾರ್ಯರು ವೇದೋಕ್ತವಾದ ಈ ವ್ರತ ಕಥೆಯನ್ನು ಅರ್ಥ ಸಹಿತವಾಗಿ ಪ್ರವಚನಗೈದರು. ಪೂಜಾಂತ್ಯದಲ್ಲಿ ಸ್ಥಳೀಯ 'ವಿಶ್ವಕರ್ಮ' ಪತ್ರಿಕಾ ಸಂಪಾದಕ ಶ್ರೀ ಬಿ. ಹರಿಶ್ಚಂದ್ರಾಚಾರ್ಯರು ಈ ಮಹಾ ವ್ರತದ ವೈಶಿಷ್ಟ್ಯವನ್ನು ವರ್ಣಿಸಿ ಭಾಷಣವಿತ್ತರು.

ಕಟಪಾಡಿ: ಶ್ರೀ ವಿಶ್ವಕರ್ಮೇಶ್ವರ ದೇವಸ್ಥಾನದಲ್ಲಿ ಶ್ರೀ ವಿಶ್ವಕರ್ಮ ಮಹಾವ್ರತಾಚರಣೆಯು ತಾ. 30-5-65ರಲ್ಲು ಸ್ಥಳೀಯ ಭಜಕ ವೃಂದದವರಿಂದ ದೇವಳದ ಅರ್ಚಕ ಬ್ರಹ್ಮಶ್ರೀ ವೇ। ನಾರಾಯಣಾಚಾರ್ಯರ ಅಧ್ಯಕ್ಷತ್ವದಲ್ಲಿ ವಿದ್ಯುಕ್ತವಾಗಿ ಜರಗಿತು.

ಶ್ರೀ ಕೃಷ್ಣಾಪುರ ಶ್ರೀಗಳವರ ಜನ್ಮೋತ್ಸವ

ಕಳೆದ ತಾ. 31ರಂದು ಉಡುಪಿಯ ಶ್ರೀ ಕೃಷ್ಣಾಪುರ ಮಠದ ಶ್ರೀಮದ್ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರ ಹುಟ್ಟು ಹಬ್ಬವು ಮಠದಲ್ಲಿ ವಿಶೇಷ ಪೂಜೆ ಸಮಾರಾಧನೆಗಳೊಂದಿಗೆ ವೈಭವದಿಂದ ಆಚರಿಸಲ್ಪಟ್ಟಿತು. ತಾ. 31 ಮತ್ತು ಜೂನ್ 1ರಂದು ರಾತ್ರೆ ಶ್ರೀ ವಿದ್ಯಾರತ್ನ ತೀರ್ಥ ಕೃಪಾಪೋಷಿತ ಯುವಕ ಮಂಡಳಿಯವರು ಕ್ರಮವಾಗಿ 'ಭಾಮಾ ಪರಿಣಯ' ಮತ್ತು "ವರದಕ್ಷಿಣೆ" ನಾಟಕಗಳನ್ನು ಮಠದ ಶ್ರೀ ಕೃಷ್ಣ ಸಭಾಮಂಟಪದಲ್ಲಿ ಅಭಿನಯಿಸಿದರು. ಕೊನೆಯ ದಿನ ನಾಟಕದ ಅಂತ್ಯದಲ್ಲಿ ಶ್ರೀ ಬನ್ನಂಜೆ ರಾಮಾಚಾರ್ಯರು ಧನ್ಯವಾದ ಸಮರ್ಪಿಸಿದರು.

ಯಕ್ಷಗಾನ ಸಂಘದ ವಾರ್ಷಿಕೋತ್ಸವ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ವಾರ್ಷಿಕೋತ್ಸವವು ತಾ. 27-5-65ರಂದು ಜರಗಿತು. ಸಮಾರಂಭದ ಅಂಗವಾಗಿ ಆರಂಭದಲ್ಲಿ "ಸೂರ್ಯಕಾಂತಿ ಕಲ್ಯಾಣ" ಎಂಬ ಯಕ್ಷಗಾನ ತಾಳಮದ್ದಳೆಯೂ ವಿಶೇಷ ರಂಗಸಜ್ಜಿಕೆಯಿಂದ "ಶ್ರೀ ಕೃಷ್ಣ ವಿಜಯ" ಎಂಬ ಯಕ್ಷಗಾನ ಪೌರಾಣಿಕ ನಾಟಕವೂ ಪ್ರದರ್ಶಿಸಲ್ಪಟ್ಟವು.

ಡಾ. ರಮಾನಂದ ಬನಾರಿಯವರು ಆರಂಭದಲ್ಲಿ ಸ್ವಾಗತಿಸಿದ್ದು ಕೊನೆಯಲ್ಲಿ ಶ್ರೀ ಕುಂಬ್ಡಾಜೆ ಜತ್ತಪ್ಪ ರೈಗಳು ಧನ್ಯವಾದವಿತ್ತರು.

ಹೆಬ್ರಿ ಭುಜಂಗ ಬಲ್ಲಾಳರ ನಿಧನ

ಹಬ್ರಿಯ ಪ್ರಸಿದ್ಧ ಸಮಾಜ ಸೇವಾ ಧುರೀಣರೂ, ಹೆಬ್ರಿಯ ಸರ್ವತೋಮುಖ ಅಭಿವೃದ್ಧಿಗೆ ಕಾರಣಕರ್ತರೂ, ಜನಪ್ರಿಯ ಮುಂದಾಳುಗಳೂ, ವಕೀಲರೂ, ಜನಾದರಣೀಯ ವ್ಯಕ್ತಿಗಳೂ ಆಗಿದ್ದ ಶ್ರೀ ಎಚ್. ಭುಜಂಗ ಬಲ್ಲಾಳರು ಕಳೆದ ತಾ. ೧ರಂದು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಪಡುತ್ತೇವೆ.

ಶ್ರೀ ಬಲ್ಲಾಳರು ಗ್ರಾಮೀಣ ಪ್ರದೇಶವಾದ ಹೆಬ್ರಿಯ ಪ್ರಸ್ತುತ ರೂಪಕ್ಕೆ ಶ್ರಮಿಸಿದವರಲ್ಲಿ ಅಗ್ರಗಣ್ಯರು. ಅವರು ಜಿಲ್ಲಾ ಬೋರ್ಡು ಸದಸ್ಯರಾಗಿ, ಹೆಬ್ರಿ ಪಂಚಾಯತ್ ಕೋರ್ಟಿನ ಅಧ್ಯಕ್ಷರಾಗಿ ಅಪಾರ ಸೇವೆ ಸಲ್ಲಿಸಿದವರು. ನಿಧನದ ವೇಳೆ ಇವರು ಕಾರ್ಕಳ ತಾಲೂಕು ಬೋರ್ಡು ಸದಸ್ಯರೂ ಹೆಬ್ರಿ ಪಂಚಾಯತ್ ಅಧ್ಯಕ್ಷರೂ ಆಗಿದ್ದರು.

ಇವರ ನಿಸ್ವಾರ್ಥ ಸಾರ್ವಜನಿಕ ಸೇವೆಯನ್ನು ಮೆಚ್ಚಿ ಸರಕಾರವು ಅವರಿಗೆ ಹದಿಮೂರು ಪ್ರಶಸ್ತಿಪತ್ರಗಳನ್ನೂ, ನಾಲ್ಕು ಪಾರಿತೋಷಕಗಳನ್ನಿತ್ತು ಗೌರವಿಸಿತ್ತು. ಶ್ರೀಯುತರ ಶವವನ್ನು ಘೋರಮೆರವಣಿಗೆಯಿಂದ ಅವರ ಮನೆತನಕ ಒಯ್ಯಲಾಯಿತಲ್ಲದೆ, ಹೆಬ್ರಿಯ ನಾಗರಿಕರು ಹರತಾಳವನ್ನಾಚರಿಸಿ ತಮ್ಮ ಶ್ರದ್ಧಾಂಜಲಿಯನ್ನರ್ಪಿಸಿದರು. ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ನವಯುಗ ಪ್ರಾರ್ಥಿಸುತ್ತದೆ.

ಪಣಂಬೂರು-ಬೈಕಂಪಾಡಿ ಗ್ರಾಮಸ್ಥರ ಅನಿಶ್ಚಿತಾವಧಿಯ ಅನ್ನ ಸತ್ಯಾಗ್ರಹ

ಪಣಂಬೂರು: ಪಣಂಬೂರು ಬಂದರು ರಚನೆಗೆ ಇಷ್ಟರಲ್ಲಿಯೇ ಸ್ವಾಧೀನಪಡಿಸಿಕೊಂಡ ೧೨೦೦ ಎಕ್ರೆ ಜಾಗವಲ್ಲದೆ ಇನ್ನೂ ಹೆಚ್ಚಿಗೆ ಸ್ವಾಧೀನಪಡಿಸಬೇಕೆಂದಿರುವ ೧೫೦೦ ಎಕ್ರೆ ಜಾಗ ಸ್ವಾಧೀನತೆಯ ವಿರುದ್ಧ ಪ್ರತಿಭಟನಾರ್ಥವಾಗಿ ಪಣಂಬೂರು ಬೈಕಂಪಾಡಿ ಗ್ರಾಮ ರಕ್ಷಣಾ ಸಮಿತಿಯವರು ತಾ. ೧-೬-೬೫ನೇ ಮಂಗಳವಾರದಿಂದ ಪ್ರತಿ ದಿನ ಐದು ಜನರ ತಂಡದಂತೆ ಅನ್ನಸತ್ಯಾಗ್ರಹ ಆರಂಭಿಸಿರುವರು. ತಮ್ಮ ಪ್ರಜಾಸತ್ತಾತ್ಮಕವಾದ ಶಾಂತ ಹೋರಾಟಕ್ಕೆ ಸಂಬಂಧಪಟ್ಟವರಿಂದ ಇನ್ನೂ ಯಾವುದೇ ಪ್ರತಿಕ್ರಿಯೆ ಕಂಡುಬಾರದುದರಿಂದ ಈ ಕಾರ್ಯಕ್ರಮ ಕೈಕೊಳ್ಳಲಾಗಿದೆ.

ಈ ವರೆಗೆ ನಡೆದ ಸತ್ಯಾಗ್ರಹದಲ್ಲಿ ಸರ್ವಶ್ರೀ ಕೆ. ಸಿ. ಶೆಟ್ಟಿ, ಟಿ. ವಿ. ಐತಾಳ್, ಡಾ। ಸಂಜೀವನಾಥ ಐಕಳ, ಡಿ. ಎ. ಶರೀರ, ಯೋಗೀಶ್ವರ ಐತಾಳ್ ಮೊದಲಾದ ಪ್ರಮುಖರೂ ಭಾಗವಹಿಸಿದ್ದರು.

ಬಂದರದ ಮುಖ್ಯ ಆಡಳಿತ ಕಛೇರಿಯ ಎದುರು ನಡೆಯುತ್ತಿರುವ ಈ ಸತ್ಯಾಗ್ರಹ ಶಿಬಿರಕ್ಕೆ ದಿನಂಪ್ರತಿ ನೂರಾರು ಜನರು ಸಹಾನುಭೂತಿ ತೋರುವರೆ ನೆರೆಯುತ್ತಾರೆಂದು ತಿಳಿದು ಬಂದಿದೆ. ಕೇಳಿಕೆ ಈಡೇರುವ ತನಕ ಅನ್ನಸತ್ಯಾಗ್ರಹ ಮುಂದುವರಿಸುವ ನಿರ್ಧಾರವನ್ನು ಗ್ರಾಮರಕ್ಷಣಾ ಸಮಿತಿಯು ಮಾಡಿದೆ.

ಪಿ.ಯು.ಸಿ. ಪರೀಕ್ಷೆಯಲ್ಲಿ ಎಂ.ಜಿ.ಎಂ. ಕಾಲೇಜು ವಿದ್ಯಾರ್ಥಿಗೆ ಸರ್ವ ಪ್ರಥಮ ಸ್ಥಾನ

ಉಡುಪಿ, ಕಳೆದ ಮಾರ್ಚ್ ತಿಂಗಳಲ್ಲಿ ಜರಗಿದ ಮೈಸೂರು ಯುನಿವರ್ಸಿಟಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಎಂ.ಜಿ.ಎಂ. ಕಾಲೇಜಿನ ವಿದ್ಯಾರ್ಥಿ ಶ್ರೀ ಗುರುರಾಜ ಶೇಷಗಿರಿರಾಯರು ಶೇ. 86ರಷ್ಟಕ್ಕಿಂತಲೂ ಅಧಿಕ ಗುಣಗಳನ್ನು ಪಡೆದು ವಿಶ್ವವಿದ್ಯಾಲಯಕ್ಕೇ ಪ್ರಥಮ ಸ್ಥಾನ ಪಡೆದು ಕಾಲೇಜಿಗೂ, ಜಿಲ್ಲೆಗೂ ಕೀರ್ತಿಯನ್ನು ತಂದಿರುವರು.

ಬಿ. ಕಾಂ, ಬಿ.ಎಸ್‌ಸಿ. ಮತ್ತು ಬಿ.ಎ.ಯ ವಿವಿಧ ಪರೀಕ್ಷೆಗಳಲ್ಲಿಯೂ ಈ ಕಾಲೇಜಿನ ಕೆಲವು ವಿದ್ಯಾರ್ಥಿಗಳು ರ್‍ಯಾಂಕುಗಳನ್ನು ಪಡೆದಿರುತ್ತಾರೆ. ಪಿ. ಯು. ಸಿ., ಬಿ. ಎ., ಬಿ.ಎಸ್‌ಸಿ., ಮತ್ತು ಬಿ. ಕಾಂ. ಪರೀಕ್ಷೆಗಳ ಫಲಿತಾಂಶವು ಅನುಕ್ರಮವಾಗಿ ಶೇಕಡಾ 45, 100, 87·2 ಮತ್ತು 57 ಆಗಿದೆ. ಬಿ. ಎ. ಪರೀಕ್ಷೆಯಲ್ಲಿ ನೂರು ಶೇಕಡಾ ಫಲಿತಾಂಶ ಗಳಿಸಿದುದು ಒಂದು ವಿಶೇಷ ದಾಖಲೆಯಾಗಿದೆ.

ಬಿ. ಎಸ್. ಸಿ. ಪರೀಕ್ಷೆಯಲ್ಲಿ ಐದನೇ ಸ್ಥಾನ ಗಳಿಸಿದ ಶ್ರೀ ಎಸ್. ರಮೇಶ ರಾಯರಿಗೆ ರಾಷ್ಟ್ರೀಯ ವಿದ್ಯಾರ್ಥಿ ವೇತನವು ಕೊಡಲ್ಪಡುವುದೆಂದು ತಿಳಿದುಬರುತ್ತದೆ.

ಉತ್ತಮ ಫಲಿತಾಂಶ ಗಳಿಸಿದ ಎಂ. ಜಿ. ಎಂ.ನ ಅಧ್ಯಾಪಕವರ್ಗವನ್ನೂ ವಿದ್ಯಾರ್ಥಿಗಳನ್ನೂ ಈ ಸಂದರ್ಭ ಅಭಿನಂದಿಸುತ್ತೇವೆ.

ಮಂಗಳೂರಿಗೆ ಜೂನಿಯರ್ ತಾಂತ್ರಿಕ ಶಾಲೆ

1965-66 ಅಕಾಡೆಮಿಕ್ ವರುಷದಲ್ಲಿ 60 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುವ ಮೂರು ಜೂನಿಯರ್ ತಾಂತ್ರಿಕ ಶಾಲೆಗಳನ್ನು ಸ್ಥಾಪಿಸಲು ಮೈಸೂರು ಸರಕಾರವು ನಿರ್ಧರಿಸಿದೆ. ಅದರಲ್ಲಿ ಎರಡು ಶಾಲೆಗಳು ಮಂಗಳೂರು ಮತ್ತು ಬಳ್ಳಾರಿಗಳಲ್ಲಿ ಸ್ಥಾಪಿಸಲ್ಪಡುವುವು ಎಂದು ತಿಳಿದುಬಂದಿದೆ. ಈ ನಗರದಲ್ಲಿ ಪ್ರಸ್ತುತ ಇರುವ ಪೋಲಿಟೆಕ್ನಿಕ್ ಕಟ್ಟಡ ಮತ್ತು ವರ್ಕ್‌ಶಾಪ್‌ಗಳನ್ನೇ ಈ ಶಾಲೆಗಳಿಗೆ ಬಳಸಲಾಗುವುದು.

ಜನವಾಣಿ

ದುರಾಕ್ರಮಣಕ್ಕೆ ತಲೆಬಾಗುವ ದುರ್ಗತಿ ಬಾರದಿರಲಿ

ಲೇಖಕರು: ಶ್ರೀ ಬಿ. ಕೃಷ್ಣ ಭಟ್, ಬಿ. ಎ., ಬೆಂಗಳೂರು.

ರಾಷ್ಟ್ರದಾದ್ಯಂತ ಮೂಲೆ ಮೂಲೆಗಳಲ್ಲಿಯೂ ರಣ ಕಹಳೆ ಮೊಳಗಲಿ; ನಲುವತ್ತೈದು ಕೋಟಿ ಭಾರತೀಯರೂ ಭಾರತದ ಅಜೇಯ ಶಕ್ತಿಯಾಗಿ ಬೆಳಗಲಿ; ರಾಷ್ಟ್ರವಿರೋಧ ಶಕ್ತಿಗಳು ನಾಶಗೊಂಡು ಪ್ರತಿಯೊಬ್ಬ ಭಾರತೀಯನಲ್ಲೂ ರಾಷ್ಟ್ರೀಯತೆಯು ತುಂಬಿ, ಭಾರತದ ಸ್ಥಾನ, ಮಾನ, ಘನತೆ, ಗೌರವ, ಸಮಗ್ರತೆಗಳು ಕಾಪಾಡಲ್ಪಡಲಿ. ಬದುಕುವುದಿದ್ದರೆ ಗೌರವಯುತವಾಗಿ ಬದುಕುವ; ಮಡಿಯುವುದಿದ್ದರೆ ಧೀರರಾಗಿ ಮಡಿಯುವ. ಅಂಜುಬುರುಕುತನ ಸಲ್ಲದು; ಭಾರತ ಜನತೆ ಹೇಡಿತನವನ್ನೆಂದಿಗೂ ಒಪ್ಪಲಾರರು.

ಭಾರತವು ದೇಶದಲ್ಲಿ ಮತ್ತು ವಿದೇಶಗಳಲ್ಲಿ ಶಾಂತಿಯನ್ನು ಬಯಸುತ್ತಿದೆ; ಶಾಂತಿಗಾಗಿ ಶ್ರಮಿಸುತ್ತಿದೆ. ಶಾಂತಿಯು ದುರ್ಬಲತೆಯ ಲಕ್ಷಣವಲ್ಲ. ಅದು ನೈತಿಕ ಬಲದ ಲಕ್ಷಣವಲ್ಲ. ಅದು ನೈತಿಕ ಬಲದ ಲಕ್ಷಣ; ಮಾನವನ ಮಾನವೀಯತೆಯ ಕುರುಹು.

ಭಾರತದ ನೆಲವನ್ನು ಕಬಳಿಸಲು ಹವಣಿಸುತ್ತಿರುವ ಯಾವನೇ ಆಗಲಿ, ಯಾವ ರಾಷ್ಟ್ರವೇ ಆಗಲಿ, ಅಂತಹ ದುರಾಕ್ರಮಣಗಾರರನ್ನು ಭಾರತದ ನೆಲದಿಂದ ಹೊಡೆದೋಡಿಸಿ, ಭಾರತದ ಸಮಗ್ರತೆಯನ್ನು ಕಾಪಾಡುವಂತಹ ಹಿರಿಯ ಜವಾಬ್ದಾರಿಯು ಪ್ರತಿಯೊರ್ವ ಭಾರತೀಯನಿಗೂ ಸೇರಿದೆ.

ಭಾರತ ನೆಲದ ಮೇಲೆ ಆಕ್ರಮಣ ನಡೆದಿದೆ. ಈ ಆಕ್ರಮಣವು ಗಳಲರಿಂದಲೂ ನಡೆಯುತ್ತಲೇ ಇದೆ. ಈ ದೆಸೆಯಿಂದ ಭಾರತದ ನೆಲವಾದ ಕಾಶ್ಮೀರದ ಮೂರನೇ ಒಂದು ಭಾಗವನ್ನು ಪಾಕಿಸ್ತಾನಕ್ಕೆ "ಆಜಾದ್ ಕಾಶ್ಮೀರ"ದ ರೂಪದಲ್ಲಿ ದಾನವಿತ್ತಂತಾಯಿತು; ಹನ್ನೆರಡು ಸಾವಿರ ಚದರ ಮೈಲಿ ವಿಸ್ತೀರ್ಣವುಳ್ಳ ಬೆರುಬರಿ ಭೂಭಾಗವನ್ನು ಪಾಕಿಸ್ತಾನಕ್ಕೆ ಉಡುಗೊರೆಯಾಗಿ ಕೊಟ್ಟಂತಾಯಿತು; "ಭಾಯಿ ಭಾಯಿ" ಚೈನಾವು ಉತ್ತರದ ಗಡಿ ವಲಯಗಳಲ್ಲಿ ಭಾರತದ ಅನೇಕ ಮೈಲಿ ಭೂಭಾಗವನ್ನು ಕಬಳಿಸಿಕೊಂಡಿದೆ. ಪಾಕಿಸ್ತಾನವು ಭಾರತದ ಭೂಭಾಗವಾದ ಕಾಶ್ಮೀರ ೨೦೦೦ ಚದರ ಮೈಲಿಯಷ್ಟು ನೆಲವನ್ನು ಉಡುಗೊರೆಯಾಗಿ ಕೊಟ್ಟು ಚೈನಾದ ಮೈತ್ರಿ ಸಂಪಾದಿಸಿಕೊಂಡಿದೆ. ಇಷ್ಟು ಮಾತ್ರವಲ್ಲದೆ ಭೂಗತ ನಾಗಾ ಮಂಡಳಿಯವರ ಮತ್ತು ಶೇಕ್ ಅಬ್ದುಲ್ಲರ ಭಾರತ ವಿರೋಧ ಚಟುವಟಿಕೆಗಳಿಗೆ ಪಾಕ್ — ಚೈನಾಗಳು ಒಳಗೊಳಗೇ ಸಹಕಾರ ಪ್ರೋತ್ಸಾಹ ನೀಡುತ್ತಿದ್ದು, ಗುಪ್ತವಾಗಿ ಶಸ್ತ್ರಾಸ್ತ್ರಗಳನ್ನು ಕೂಡಾ ಒದಗಿಸುತ್ತಿದ್ದಾರೆ. ಭಾರತದ ಕಮ್ಯೂನಿಸ್ಟ್ ಎಡಪಕ್ಷೀಯರಿಗಂತೂ ಚೈನಾವು ಧಾತ್ರವಾಗಿದೆ.

ಈಗ ಕಚ್ ನ ರಣ್ ಪಾಕಿಸ್ತಾನಕ್ಕೆ ಸೇರಿದ್ದೆಂದು ಅದನ್ನು ಪಡೆಯಲು ಪಾಕಿಸ್ತಾನ ಬಲಾತ್ಕಾರಕ್ಕೆ ಇಳಿದಿದೆ; ಭಾರತದ ನೆಲದ ಮೇಲೆ ಆಕ್ರಮಣ ಗೈದಿದೆ. ಈ ವರ್ಷ ಪ್ರಾರಂಭದಲ್ಲೇ ಪಾಕಿಸ್ತಾನವು ಕಚ್‌ನ ರಣವನ್ನು ಕಬಳಿಸಲು ಉತ್ಕಟೇಚ್ಛೆ ತಾಳಿತ್ತು. ಜನವರಿ ೧೫ರಂದು ಸೀಮೋಲ್ಲಂಘನೆ ಮಾಡಿ ಭಾರತದ ಮಣ್ಣಿಗೆ ಕಾಲಿರಿಸಿತು; ಫೆಬ್ರವರಿ ೧೦ರಂದು ಕಂಜರ್ ಕೋಟೆಯನ್ನು ವಶಪಡಿಸಿಕೊಂಡಿತು; ಎಪ್ರಿಲ್ ಒಂಭತ್ತರಂದು ಮತ್ತೆ ಆಕ್ರಮಣ ಮುಂದುವರಿಸಿ ಸರ್ದಾರ್ ಪೋಸ್ಟಿನ ಮೇಲೆ ಹಲ್ಲೆ ನಡೆಸಿತು; ಎಪ್ರಿಲ್ ೨೪ರಂದು ಕಂಜರ್ ಕೋಟೆ-ಸಿಂಧ್ ಸೀಮಾ ಪ್ರದೇಶ ಸರ್ದಾರ್, ಚಡ್‌ಬೆಟ್, ಬಿಯಾರ್ ಬೆಟ್ ಪ್ರದೇಶಗಳಲ್ಲಿ ಧಾಳಿ ನಡೆಸಿತು. ಈ ಧಾಳಿಯಲ್ಲಿ ಅಮೇರಿಕದ ಶಸ್ತ್ರಾಸ್ತ್ರಗಳನ್ನೂ ಬಳಸಿತು ಎಪ್ರಿಲ್ ೨೬ರಂದು ಈ ದುರಾಕ್ರಮಣವು ತೀರಾ ಯುದ್ಧ ಸನ್ನಿವೇಶಕ್ಕೆ ಎಡೆಮಾಡಿಕೊಟ್ಟಿತು.

ಪಶ್ಚಿಮ ಪಾಕಿಸ್ತಾನ ಯುದ್ಧಸಿದ್ಧತೆಯಿಂದ ನಿಂತಿದೆ; ಪೂರ್ವ ಪಾಕಿಸ್ತಾನದಲ್ಲಂತೂ ಇಂತಹ ಪೂರ್ವ ಸಿದ್ಧತೆಗಳು ನಡೆಯುತ್ತಲೇ ಇವೆ. ಬಂಗಾಳ, ಅಸ್ಸಾಂ ಸಮೀಪವಿರುವ ಗಡಿ ಪ್ರದೇಶಗಳ ಜನರನ್ನು ಪಾಕ್ ಸರಕಾರವು ಬೇರೆಡೆಗೆ ಸಾಗಿಸಿ ಅಲ್ಲಿ ಸೈನ್ಯ ಜಮಾವಣೆ ಮಾಡುತ್ತಿದೆ. ಅಸ್ಸಾಮಿನ ತ್ರಿಪುರಾ ಪಾಕಿಸ್ತಾನದ ಕಣ್ಣು ಕುಕ್ಕತೊಡಗಿದೆ.

ಪಾಕಿಸ್ತಾನದ ಈ ದುಸ್ಸಾಹಸಕ್ಕೆ ಧೈರ್ಯವಾದರೂ ಎಲ್ಲಿಂದ ಬಂತು?

ಪಾಕಿಸ್ತಾನವು 'ಸೀಟೋ', 'ಸೆಂಟೋ' ಗಳ ಸದಸ್ಯತ್ವವನ್ನು ಪಡೆದು ಈ ಸದಸ್ಯತನದ ಅಧಿಕಾರವನ್ನು ಭಾರತದ ವಿರುದ್ಧ ಚಲಾಯಿಸಲು ಹವಣಿಸುತ್ತಿದೆ. ಸಂದರ್ಭ ಬಂದಾಗ ಚೀನದ ನೆರವಂತೂ ಇದ್ದೇ ಇದೆ. ಅಮೇರಿಕವು ಈಗಾಗಲೇ ಸಾಕಷ್ಟು ಶಸ್ತ್ರಾಸ್ತ್ರಗಳನ್ನಿತ್ತಿದೆ. ಈ ಶಸ್ತ್ರಾಸ್ತ್ರ ಸರಬರಾಜಿನ ಉದ್ದೇಶ ಬೇರೆ ಇದ್ದರೂ ಪಾಕಿಸ್ತಾನ ಅವುಗಳನ್ನೆಂದೂ ಉಪಯೋಗಿಸುತ್ತಿರುವುದು ಭಾರತದೆದುರು.

ಪಾಕಿಸ್ತಾನವು ತನ್ನೆಲ್ಲಾ ಕುತಂತ್ರಗಳಿಂದ ಜಗತ್ತಿನಲ್ಲಿ ತನ್ನ ಪ್ರತಿಷ್ಠೆಯನ್ನು ಸ್ಥಾಪಿಸಲು ಒದ್ದಾಡುತ್ತಿದೆ. ಭಾರತವನ್ನು ಕಾಡಿಸುವುದೊಂದೇ ತನ್ನ ಗುರಿಯಾಗಿಟ್ಟುಕೊಂಡು ಅದಕ್ಕಾಗಿ ಸರ್ವ ಸಿದ್ಧತೆಗಳನ್ನೂ ಮಾಡುತ್ತಾ ಬಂದಿದೆ. ಚೀನವು ಭಾರತದ ಶತ್ರು ನಿಜ. ಆದರೆ ಜಗತ್ತಿನಲ್ಲೇ ಭಾರತದ ಪ್ರಥಮ ಶತ್ರು ಪಾಕಿಸ್ತಾನವಾಗಿದೆ. ಇಂದೀಗ ಈ ಶತ್ರುದ್ವಯರು ಭಾರತದ ಮೇಲೆ ಆಕ್ರಮಣ ನಡೆಸಿ, ಭಾರತದ ನೆಲವನ್ನು ಕಬಳಿಸಿಕೊಂಡಿದ್ದಾರೆ.

ಅಮೇರಿಕವು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡುವ ವಿಚಾರದಲ್ಲಿ ಭಾರತಕ್ಕಿದ್ದ ವಾಗ್ದಾನವನ್ನು ಪಾಕಿಸ್ತಾನ ಮಣ್ಣುಗೂಡಿಸಿ ಕಮ್ಯೂನಿಸ್ಟ್ ದುರಾಕ್ರಮಣದ ವಿರುದ್ಧ ಉಪಯೋಗಿಸಲೆಂದು ಸರಬರಾಜು ಮಾಡಿದ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಭಾರತದ ಮೇಲೆ ಉಪಯೋಗಿಸುತ್ತಿದೆ. ಹೀಗಿದ್ದರೂ ಅಮೇರಿಕವು ಪಾಕಿಸ್ತಾನ ಭಾರತದ ಮೇಲೆ ಆಕ್ರಮಣ ನಡೆಸಿದೆ ಎಂದು ಒಪ್ಪಲು ತಯಾರಿಲ್ಲ.

''ನಾವು ಮ್ಯೂಚಿಯಲ್ ನೆರವಿನಡಿ ಅಮೇರಿಕದಿಂದ ಶಸ್ತ್ರಾಸ್ತ್ರಗಳನ್ನು ಪಡೆದಿಲ್ಲ. ಅವುಗಳನ್ನು ನಮ್ಮ ಶತ್ರುವೆಂದು ತಿಳಿದ ಭಾರತದ ಮೇಲೆ ಉಪಯೋಗಿಸಿಯೇ ಉಪಯೋಗಿಸುತ್ತೇವೆ"—ಎಂದು ಸರ್ವಾಧಿಕಾರಿ ಅಯೂಬರು ಗುಡುಗುತ್ತಲೇ ಇದ್ದಾರೆ. ಕಚ್-ರಣ್ ಪ್ರದೇಶದಲ್ಲಿ ಅಮೇರಿಕನ್ ಟ್ಯಾಂಕುಗಳನ್ನು ಬಳಸಿಯೂ ಮೊದಲು ಇಲ್ಲವೆಂದಿದ್ದ ಪಾಕ್ ಸರಕಾರವು ಸ್ಪಷ್ಟವಾದ ಪುರಾವೆ ಸಿಕ್ಕಿದ ಬಳಿಕ (ಪೈಲಟ್ ಆಫೀಸರ್ ಟರ್ಬೀರರವರು ತೆಗೆದ ಫೋಟೋಗಳಿಂದ) ವಿಧಿ ಇಲ್ಲದೆ "ಹೌದು, ಉಪಯೋಗಿಸಿದ್ದೇವೆ! ತಪ್ಪೇನು?" ಎಂದ. ಅಮೇರಿಕಾದಿಂದ ದಾನವಾಗಿ ಬಂದ ಶೌರ್ಯದಿಂದ ನುಡಿಯುತ್ತಿದೆ. ಇದರಿಂದ ಅಮೇರಿಕವು ಈ ಪಾಕ್ ದುರಾಕ್ರಮಣದ ಬೆಂಗಾವಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

''ನಾವು ಕೊಟ್ಟ- ಕೊಡುತ್ತಿರುವ ಶಸ್ತ್ರಾಸ್ತ್ರಗಳನ್ನು ಶಾಂತಿಯುತ ಭಾರತದ ಮೇಲೆ ಬಳಸ ಕೂಡದು" ಎಂದು ಪಾಕ್ ಆಕ್ರಮಣಗಾರರಿಗೆ ಬುದ್ಧಿ ಹೇಳುವಷ್ಟು ನೈತಿಕ ಧೈರ್ಯ ಸಹ ಅಮೇರಿಕನ್ ಆಡಳಿತಗಾರರಿಗೆ ಇಲ್ಲದಾಯಿತು. ವಿಟ್‌ನಾಂನಲ್ಲಿ ತಮ್ಮ ಕಾರ್ಯಾಚರಣೆಗೆ ಎಲ್ಲರ ಮೆಚ್ಚುಗೆಯನ್ನು ಕೋರುತ್ತಿರುವ ಅಮೇರಿಕ ಪಾಕಿಸ್ತಾನದ ಮೂಲಕ ಭಾರತದ ಮೇಲಣ ಆಕ್ರಮಕ್ಕೆ ಕಾರಣವಾಗಿದೆ.

ಬ್ರಿಟನ್ ಆದರೋ ಪಾಕಿಸ್ತಾನಕ್ಕೆ ಬುದ್ಧಿ ಹೇಳುವಷ್ಟು ಧೈರ್ಯ ತಾಳಿಲ್ಲ. ಬ್ರಿಟನ್ ಹಿಂದಿನ ತನ್ನ ವಿಭಜಿಸಿ ಆಳುವ ನೀತಿಯನ್ನೇ ಅನುಸರಿಸುತ್ತಿದೆ. ದುರಾಕ್ರಮಣಗಾರ ಪಾಕಿಸ್ತಾನದೊಡನೆ ಆಕ್ರಮಣಕ್ಕೊಳಗಾದ ಭಾರತ ಶಾಂತಿ ಸಂಧಾನ, ಪರಸ್ಪರ ಹೊಂದಾಣಿಕೆಗಳನ್ನು ಮಾಡಿಕೊಳ್ಳಬೇಕೆಂದು ಭಾರತಕ್ಕೆ ಬುದ್ಧಿ ಹೇಳಲು ಹೊರಟಿದ್ದಾರೆ ಈ ಬ್ರಿಟಿಷ್ ಮಹಾಶಯರು.

ಪಶ್ಚಿಮದ ಕಡೆ ಹೀಗಾದರೆ, ಪೂರ್ವದ ಕಡೆಯೂ ಪಾಕಿಸ್ತಾನಕ್ಕೆ ಬೆಂಬಲ ಸಿಕ್ಕಿದೆ. ಪಾಕಿಸ್ತಾನದ "ಗಳಸ್ಯ ಕಂಠಸ್ಯ" ಕಮ್ಯೂನಿಸ್ಟ್ ಚೈನಾವು ಪ್ರತ್ಯಕ್ಷವಾಗಿಯೇ ಪಾಕಿಸ್ತಾನದ ಅಯೂಬರ ಭುಜ ತಟ್ಟಿ, "ಭಲಾ, ಶಹಭಾಷ್" ಎಂದಿದೆ. ಕಚ್‌ನಲ್ಲಿ ಭಾರತವೇ ಆಕ್ರಮಣ ನಡೆಸಿತೆಂದು ಪೀಕಿಂಗ್ ಸರಕಾರ ಘೋಷಿಸಿದೆ. "ವಿಸ್ತರಣಾ ಕೃತ್ಯದಲ್ಲಿ ತೊಡಗಿದ್ದ ಭಾರತದ ವಿರುದ್ಧ ಪಾಕಿಸ್ತಾನ ಆತ್ಮ ರಕ್ಷಣೆ ಮಾಡಿಕೊಳ್ಳಬೇಕಾಗಿದೆ"—ಎಂದು ಸಮರ್ಥಿಸಿದೆ. ಅಮೇರಿಕ-ಚೈನಾಗಳು ಪರಸ್ಪರ ಬದ್ಧ ವೈರಿಗಳಾಗಿದ್ದರೂ ಪಾಕಿಸ್ತಾನಕ್ಕೆ ಭಾರತ ವಿರೋಧ ಕೃತ್ಯಗಳಿಗೆ ಸಹಕರಿಸುವುದರಲ್ಲಿ ಒಂದಾಗಿವೆ.

ಭಾರತವೇ ಪಾಕಿಸ್ತಾನದ ಮೇಲೆರಗಿದೆಯೋ, ಪಾಕಿಸ್ತಾನವೇ ಭಾರತದ ಮೇಲೆ ದುರಾಕ್ರಮಣ ನೆಸಗಿದೆಯೋ ಎಂಬ ಬಗ್ಗೆ ವಿದೇಶೀ ಪಲಯು ಮತ್ತು ಪತ್ರಿಕೆಗಳು ಸರಿಯಾದ ಅಭಿಪ್ರಾಯ ನೀಡುವುದರಲ್ಲಿಯೂ ಸಂಕೋಚ ತಾಳಿವೆ. ಕೆಲವು ರಾಷ್ಟ್ರಗಳು, ಕೆಲವು ಪತ್ರಿಕೆಗಳು ಭಾರತಕ್ಕೆ ಬುದ್ಧಿವಾದ, ಸಲಹೆ ನೀಡುವ ಕೆಲಸವನ್ನು ಮಾಡಿವೆ!

ಚೈನಾ—ಪಾಕಿಸ್ತಾನಗಳು ಭಾರತದ ಮೇಲೆ ಧಾಳಿ ಮಾಡಿದುವೆನ್ನುವುದು ಮುಖ್ಯವಲ್ಲ. ಈ ಕಳೆದ ಹದಿನೆಂಟು ವರ್ಷಗಳಿಂದಲೂ ಈ ಆಕ್ರಮಣಗಳು ಯಾವುದೇ ಕ್ಷಣದಲ್ಲಿ ಸಂಭವನೀಯವೆಂದು ಎದುರ ನಿರೀಕ್ಷೆಯೂ ಇದ್ದೇ ಇತ್ತು.

ಆದರೆ ಭಾರತವು ತಲೆ ತಗ್ಗಿಸುವಂತಹ ವಿಷಯವೆಂದರೆ ನಮ್ಮಿಂದ ಚೈನಾ—ಪಾಕಿಸ್ತಾನೀ ಆಕ್ರಮಣಗಳನ್ನು ಹಿಮ್ಮೆಟ್ಟಿಸಿ, ಹೊಡೆದೋಡಿಸಲಿಕ್ಕಾಗಲಿಲ್ಲ. ಹೇಳಿಕೊಳ್ಳುವ ಸಮಾಧಾನ—ಸಮರ್ಥನೆಗಳು ಏನೇ ಇದ್ದರೂ, ಅವುಗಳಿಂದ ಯಾರೂ ಸಂತುಷ್ಟರಾಗುವುದಿಲ್ಲ. ನಮ್ಮ ಮುಖಕ್ಕೆ ಮಸಿ ಬಳಿದಿರುವುದು ನಮಗೆ ಕಾಣದಿದ್ದರೂ, ಹೊರಗಿನವರಿಗೆ ಕಂಡೇ ಕಾಣುತ್ತದೆ.

ವೈರಿಯು ಬಂದು ಮೈಮೇಲೆ ಬಿದ್ದಾಗಲೂ ನಾವು ನಮ್ಮ ಶೌರ್ಯವನ್ನು ತೋರಿಸುವುದಿಲ್ಲವಾದರೆ, ನಮ್ಮ ಶೌರ್ಯವನ್ನು ಮತ್ಯಾವ ಸಂದರ್ಭದಲ್ಲಿ ತೋರಿಸುತ್ತೇವೆ? ಈ ಅಂಜುಬುರುಕುತನವನ್ನು ಸಾಗುಮಾಡಿ ಶೌರ್ಯದ ಖಡ್ಗವನ್ನು ಝಳಪಿಸಬೇಕು.

ಚೈನಾದಂತಹ ದೈತ್ಯ ರಾಷ್ಟ್ರವನ್ನು ಬಿಟ್ಟರೂ, ಪಾಕಿಸ್ತಾನದಂತಹ ಸಣ್ಣ ಶಕ್ತಿಯು ನಮ್ಮ ಮೇಲೆ ಕೈಚಳಕ ತೋರಿಸಿ ಪಾರಾಗಿ ಹೋಗಬಲ್ಲುದೆಂದರೆ, ಭಾರತದ ಸ್ಥಾನ, ಮಾನ, ಘನತೆ, ಗೌರವಗಳಿಗೆ ಆಫ್ರೋ—ಏಷ್ಯನ್ ವರ್ತುಲದಲ್ಲಿ ಧಕ್ಕೆ ಬಂದು ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಭಾರತದ ಪ್ರತಿಷ್ಠೆಗೆ ಭಂಗ ಉಂಟಾಗುತ್ತಿದ್ದು, ನಮ್ಮ ಮಿತ್ರರೆಂದೆನಿಸಿಕೊಂಡಿದ್ದ ರಾಷ್ಟ್ರಗಳು ಒಂದೊಂದಾಗಿಯೇ ದೂರ ಸರಿಯುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಈಗ ಭಾರತ ಎದ್ದು ನಿಲ್ಲಬೇಕಾಗಿದೆ. ಜಡತ್ವವನ್ನು ತೊಲಗಿಸಿ, ನಾಡ ರಕ್ಷಣೆಗಾಗಿ ಟೊಂಕ ಕಟ್ಟಬೇಕಾಗಿದೆ. ಶತ್ರುಗಳನ್ನೋಡಿಸುವುದರಲ್ಲಿ ಜನತೆಯೂ ತೊಟ್ಟ ಪಣ, ತೋರಿಸಿದ ಒಗ್ಗಟ್ಟು, ಮಾಡಿದ ನಿರ್ಧಾರಗಳಿಗೆ ಸರಕಾರವು ಒತ್ತುಕೊಟ್ಟು ವೀರಾವೇಶದಿಂದ ಪಾಕ್—ಚೈನಾಗಳನ್ನು ಭಾರತದ ನೆಲದಿಂದ ಹೊಡೆದಟ್ಟಬೇಕು. "ಬಾಳುವುದಿದ್ದರೆ ಗೌರವಯುತವಾಗಿ ಬಾಳುವ, ಮಡಿಯುವುದಿದ್ದರೆ ಧೀರರಾಗಿ ಮಡಿದು ವೀರ ಸ್ವರ್ಗ ಪಡೆಯುವ."

— — —

ಚಿರವಿರಹಿ

(ಎರಡನೆ ಪುಟದಿಂದ)

ತ್ತು! ವಿದ್ಯಾರ್ಥಿಗಳ ಗೋಳು ನೋಟಕರ ಕರುಳು ಕಡಿವಂತಿತ್ತು. ನಂದಿಯ ಮೊಗದಲ್ಲಿ ದುಮ್ಮಾನದ ಕಪ್ಪೊಗೆ ಬಟ್ಟವಾಗಿ ಕವಿಯುತ್ತಿತ್ತು. ಆಸ್ಪತ್ರೆಯ ಸ್ಟ್ರೆಚರಿನಲ್ಲಿ ರಾಮುವಿನ ಶರೀರ ಕಳೇವರವನ್ನು ಆಸ್ಪತ್ರೆಗೆ ಸಾಗಿಸಲಾಯ್ತು. ವೆಂಕಟಕೃಷ್ಣನವರು ಉಪಚಾರದಿಂದ ಚೇತರಿಸಿದ್ದರೂ, ಜೀವಶವವಾಗಿದ್ದರು. ಪುಷ್ಪಮಾಲೆಗಳಿಂದ ಅಲಂಕೃತನಾದ ರಾಮು

NAVAYUGA 10-6-1965
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೦-೬-೬೫ರಿಂದ ೧೬-೬-೬೫ರ ವರೆಗೆ

೧. ಮೇಷ

ಸ್ವಕರ್ತವ್ಯ ಲೋಪದಿಂದಾಗಿ ಅಧಿಕಾರಿ ವರ್ಗದವರು ನಿಮ್ಮ ಮೇಲೆ ಮುಗಿದು ಬೀಳಲಿರುವರು. ಶತ್ರುಜನರ ಕೀಟಲೆಯಿಂದಾಗಿ ಮನಸ್ಸಿಗೆ ನೆಮ್ಮದಿಯಿರದು. ಕುಟುಂಬದಲ್ಲಿ ತಂಟೆತಕರಾರುಗಳು ಉದ್ಭವಿಸಲಿವೆ. ಇಷ್ಟಾದರೂ ನಿಮ್ಮ ಆರ್ಥಿಕ ಪರಿಸ್ಥಿತಿಯು ಉತ್ತಮವಿರುವುದರಿಂದ ದಿನಗಳು ಸುಗಮವಾಗಿ ಸಾಗಲಿವೆ. ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆವಿರಿ. ವಾರಾದಿಯ 2 ದಿನಗಳಲ್ಲಿ ನಿಮ್ಮ ಆಶಾಕಾಂಕ್ಷೆಗಳು ನಿರ್ವಿಘ್ನದಿಂದ ನೆರವೇರಲಿವೆ.

೨. ವೃಷಭ

ನಿಮ್ಮ ಗೃಹತಾಪತ್ರಯಗಳು ಇಂದು ಬಹು ಕೀಳ ಕಡಿಮೆಯಾಗಲಿವೆ. ಮಾತ್ರವಲ್ಲ ಆರ್ಥಿಕ ಪರಿಸ್ಥಿತಿಯೂ ತುಂಬ ಸುಧಾರಿಸಲಿದೆ. ಅದರೇನು ನಿಮ್ಮ ಆರೋಗ್ಯ ಮಾತ್ರ ಚೆನ್ನಾಗಿರದು. ಕಫ ಪಿತ್ತ ಪ್ರಕೋಪವು ಆಗಾಗ ಕಾಣಿಸಿಕೊಳ್ಳಲಿದೆ. ಉದರ ಶೂಲೆ ಅಜೀರ್ಣ ರೋಗಗಳೂ ಪ್ರಾಪ್ತವಾದಾವು. ಆತ್ಮೀಯರ ವಿರಹ ಆಕಸ್ಮಿಕ ಪ್ರವಾಸಗಳಿಂದ ದುಃಖ ನಷ್ಟಗಳೀಡಾದ ನಿಮಗೆ ವಾರಾದಿಯ 4 ದಿನಗಳಲ್ಲಿ ಗೃಹಸುಖ ಸ್ತ್ರೀ ಧನಲಾಭದ ಸಂಭವವಿದೆ.

೩. ಮಿಥುನ

ಎಂತೆಂತಹ ಎಡರುತೊಡರುಗಳು ಬಂದರೂ ಲೆಕ್ಕಿಸದೆ ಕರ್ತವ್ಯ ಮಾರ್ಗದಲ್ಲಿ ಮುಂದುವರಿವ ನಿಮಗೆ ಹೊರಗಿನ ನೆರವು ಅಷ್ಟೊಂದು ಲಭಿಸಲಾರದು. ದುಡಿಮೆಯ ಬಹ್ವಂಶವನ್ನು ಸದ್ವಿನಿಯೋಗ ಮಾಡುವಿರಿ. ಗೃಹಕೃತ್ಯದಲ್ಲಿ ಅವ್ಯವಸ್ಥೆಯು ತಲೆದೋರಿದರೂ ನಿಮ್ಮ ಸ್ವಂತ ಉಪಭೋಗಗಳಿಗೆ ಕೊರತೆಯುಂಟಾಗದು. ನೀಚ ಜನತೆಯಿಂದಲೂ ಸ್ವಪುತ್ರರಿಂದಲೂ ಧನಲಾಭವಾಗುವ ಸಂಭವವಿದೆ. ವಾರಾಂತ್ಯದ 5 ದಿನಗಳಲ್ಲಿ ಕಾರ್ಯಸಿದ್ಧಿ ಧನಲಾಭ ಶತ್ರುವಿಜಯವನ್ನು ಸಂಪಾದಿಸುವಿರಿ.

೪. ಕರ್ಕಟ

ನಿಮ್ಮ ಧನಪತಿಯಾದ ರವಿಯೂ ಭಾಗ್ಯಪತಿಯಾದ ಗುರುವೂ ಲಾಭಸ್ಥಾನದಲ್ಲಿದ್ದು ಪುತ್ರ ಮತ್ತು ಕಳತ್ರ ಸ್ಥಾನಗಳನ್ನು ವಿಶೇಷ ದೃಷ್ಟಿಯಿಂದ ನೋಡುತ್ತಿರುವ ಕಾರಣ ಮಕ್ಕಳಿಂದಲೂ ಅರ್ಧಾಂಗಿಯ ಮುಖಾಂತರವೂ ಧನಲಾಭವಾಗುವ ಸಂಭವವಿದೆ. ವಿನಾ ಕಾರಣ ವಾಕ್ಕಲಹ ಶತ್ರುಜನರ ಕೀಟಲೆಗಳಿಗೆ ಗುರಿಯಾದ ನಿಮಗೆ ವಾರಾಂತ್ಯದ 3 ದಿನಗಳಲ್ಲಿ ಸುಖ ನೆಮ್ಮದಿಗಳುಂಟಾಗುವವು.

೫. ಸಿಂಹ

ನಿಮ್ಮ ಧನಲಾಭಪತಿಯಾದ ಬುಧನು ಮಿತ್ರನಾದ ಶುಕ್ರನಿಂದ ಕೂಡಿಕೊಂಡು ಲಾಭಸ್ಥಾನದಲ್ಲಿರುವುದರಿಂದಲೂ ಉದ್ಯಮದಲ್ಲಿ ಬೃಹಸ್ಪತಿ ಸೇರಿರುವುದರಿಂದಲೂ ನೀವಿಂದು ಉದ್ಯಮದಲ್ಲಿ ಸಾಕಷ್ಟು ಸಂಪತ್ತನ್ನು ಸಂಪಾದಿಸುವಿರಿ. ಸಂಕಲ್ಪಗಳೆಲ್ಲವೂ ನಿರಾತಂಕವಾಗಿ ನೆರವೇರುವವು. ಆದರೆ ಜನ್ಮದಲ್ಲಿ ಕುಜನಿದ್ದು ನಿಮ್ಮ ಸುಖಸ್ಥಾನವನ್ನು ಶನ್ಯಂಗಾರಕರು ವಿಶೇಷ ದೃಷ್ಟಿಯಿಂದ ನೋಡುತ್ತಿರುವ ಕಾರಣ ಅನಾರೋಗ್ಯ ವಿಶೇಷತಃ ಮನೋರೋಗಗಳಿಗೆ ಗುರಿಯಾಗಲಿರುವಿರಿ. ವಾರಾದಿಯ 2 ದಿನಗಳು ಇದ್ದುದರಲ್ಲಿ ಕ್ಷೇಮಕರಗಳಾಗಿವೆ.

೬. ಕನ್ಯಾ

ಎಂತಹ ತೊಡಕು ತೊಂದರೆಗಳು ಬಂದರೂ ಹಿಡಿದ ಕಾರ್ಯವನ್ನು ಕೈಬಿಡಲಾರಿರಿ. ನೌಕರಿ ವ್ಯವಹಾರಾದಿ ಉದ್ಯಮಗಳಲ್ಲಿ ಕೀರ್ತಿ ಲಾಭಗಳು ನಿರೀಕ್ಷೆಗಿಂತಲೂ ಅಧಿಕವಾಗಿ ಪ್ರಾಪ್ತವಾಗಲಿವೆ. ಜನತೆಯಿಂದ ಸ್ಥಾನಮಾನಗಳನ್ನು ಪಡೆವಿರಿ. ಆದರೆ ರಾಜಕೀಯರಂಗದಲ್ಲಿ ಕೆಲವೊಂದು ನಷ್ಟ ಪರಾಜಯಗಳುಂಟಾದಾವು. ವ್ಯಾಪಾರೀ ವರ್ಗಕ್ಕೆ ಅನಿರೀಕ್ಷಿತ ನಷ್ಟದ ಯೋಗವಿದೆ. ತಾ. 12, 13 ಈ ದಿನಗಳಲ್ಲಿ ಧನಸುಖಭೋಗಗಳ ಪ್ರಾಪ್ತಿಯಿದೆ.

೭. ತುಲಾ

ಹಲವಾರು ತೆರದ ತೊಡಕು ತೊಂದರೆಗಳನ್ನು ನೀವಿಂದು ಎದುರಿಸಬೇಕಾಗಿ ಬರಲಿದೆ. ಮಧುವಿಲ್ಲದ ಕುಸುಮಗಳನ್ನು ಮಧುಕರಗಳು ದೂರೀಕರಿಸುವಂತೆ ಬಂಧುಮಿತ್ರರಿಂದಲೂ ದೂರವಾಗುವಿರಿ. ಆದರೂ ನಿಮ್ಮ ಅರ್ಧಾಂಗಿಯು ನಿಮ್ಮನ್ನು ನೆರಳಿನಂತೆ ಅನುಸರಿಸಿ ಬರಲಿರುವಳು. ಆರ್ಥಿಕ ವಿಚಾರದಲ್ಲಿ ನಿಶ್ಚಿಂತರಿರುವಿರಿ. ತಾ. 10, 11, 14, 15, 16 ಈ ದಿನಗಳಲ್ಲಿ ನಿಮ್ಮ ಬಯಕೆಗಳು ಈಡೇರುವ ಲಕ್ಷಣಗಳಿವೆ.

೮. ವೃಶ್ಚಿಕ

ಹೆಚ್ಚಿನ ನಿಮ್ಮ ಆಶಾಕಾಂಕ್ಷೆಗಳು ಯಾವೊಂದೂ ತೆರದ ಅಡೆತಡೆಗಳಿಲ್ಲದೆ ನಿರಾತಂಕವಾಗಿ ಪೂರ್ಣವಾಗಲಿವೆ. ಉದ್ಯಮ ವ್ಯಾಪಾರಾದಿಗಳಲ್ಲೂ ನೌಕರಿ ವ್ಯವಹಾರಗಳಲ್ಲೂ ನೀವಿಂದು ಅದ್ವಿತೀಯ ಕೀರ್ತಿ ಲಾಭಗಳನ್ನು ಗಳಿಸಲಿರುವಿರಿ. ಆದರೂ ನಿಮ್ಮ ಸುಖಸ್ಥಾನದಲ್ಲಿಹ ಶನಿಯು ನಿಮ್ಮ ರಾಶಿಯನ್ನು ವಿಶೇಷತಃ ನೋಡುವುದರಿಂದ ವಾತ ಪ್ರಕೋಪಕ್ಕೆ ಗುರಿಯಾಗುವ ಸಂಭವವಿದೆ. ಮನಸ್ಸಿಗೂ ಶಾಂತಿಯಿರದು. ತಾ. 12, 13 ಈ ದಿನಗಳು ಉಳಿದ ದಿನಗಳಿಗಿಂತ ಲೇಸು.

೯. ಧನು

ದಿನದಿಂದ ದಿನಕ್ಕೆ ಪರಿಸ್ಥಿತಿಯು ಹದಗೆಡುತ್ತಿದೆ. ದೇಹಾಲಸ್ಯ ಮನೋರೋಗಗಳು ಆಗಾಗ ಪೀಡಿಸುತ್ತಲೇ ಇರುವವು. ಕಾಲದ್ದಕ್ಕೆ ಸಾಂಸಾರಿಕ ತಾಪತ್ರಯಗಳು ನಿಮ್ಮನ್ನು ನೆಮ್ಮದಿಯಿಂದಿರಗೊಡಲೊಲ್ಲವು. ವಿನಾಕಾರಣ ಕಲಹ ನಿಷ್ಠುರಗಳಿಗೆ ಗುರಿಯಾಗುವಿರಿ. ನೀವೆಷ್ಟೇ ಚತುರರಿದ್ದರೂ ಇಂದು ಪ್ರತಿಪಕ್ಷಿಗಳಿಂದ ಪರಾಭವ ಹೊಂದಲಿರುವಿರಿ. ಅರ್ಥಪತಿಯ ಅನುಗ್ರಹದಿಂದಾಗಿ ನಿಮಗಿಂದು ಹಣದ ತೊಂದರೆಯು ಕಾಣದು. ತಾ. 10, 11, 14, 15, 16ರಲ್ಲಿ ಸುಖಭೋಗಗಳನ್ನು ಪಡೆವಿರಿ.

೧೦. ಮಕರ

ಸಮುದ್ರದಲೆಗಳಂತೆ ವಿಪತ್ಪರಂಪರೆಗಳು ಮೇಲಿಂದ ಮೇಲೆ ಬರಲಿವೆ. ಪ್ರತೀಕಾರಾಸಕ್ತರಾದ ಶತ್ರುಜನರಿಂದಾಗಿ ನಿಮ್ಮ ಧನಮಾನಾದಿಗಳಿಗೆ ಹೆಚ್ಚಿನ ಹಾನಿ ಸಂಭವಿಸೀತು. ಚರ್ಮರೋಗಗಳಿಗೂ ಆಕಸ್ಮಿಕ ಅಪಘಾತಾದಿಗಳಿಗೂ ಸಿಲುಕುವ ಸಂಭವವಿದೆ. ಅದರೊಂದು ಸಂತಸವೇನೆಂದರೆ ಸುರಗುರುವಿನ ಅನುಗ್ರಹವೆಂಬ ಕವಚವು ನಿಮ್ಮನ್ನು ಅಪಾಯದಿಂದ ಪಾರುಮಾಡಲಿರುವುದು. ವಾರಾದಿಯ 4 ದಿನಗಳು ಅನುಕೂಲ.

೧೧. ಕುಂಭ

ಪರಿಸ್ಥಿತಿಯು ದಿನದಿಂದ ದಿನಕ್ಕೆ ಕೃಷ್ಣಪಕ್ಷದ ಚಂದ್ರನಂತೆ ಹ್ರಾಸವಾಗುತ್ತಾ ಬರುತ್ತಿದೆ. ಶುಕ್ರಾಚಾರ್ಯರೋರ್ವರನ್ನುಳಿದು ಇತರ ಎಲ್ಲಾ ಗ್ರಹರ ಪ್ರಕೋಪಕ್ಕೆ ಪಾತ್ರರಾದ ನಿಮಗೆ ಸುಖವೆಂಬುದು ಕನಸಿನಲ್ಲೂ ಕೂಡ ದುರ್ಲಭವೆಂದರೆ ತಪ್ಪಾಗದು. ಯಾರನ್ನು ನೀವು ಆತ್ಮೀಯರೆಂದು ತಿಳಿದಿರುವಿರೋ ಅವರೇ ನಿಮಗಿಂದು ಕೈಕೊಡಲಿರುವರು. ಹೆಚ್ಚೇಕೆ ಕೈಹಿಡಿದ ಅರ್ಧಾಂಗಿ ಪಡೆದ ಮಕ್ಕಳೂ ಕೂಡ ಇಂದು ನಿಮ್ಮನ್ನು ವಿರೋಧಿಸುವರೆಂದ ಮೇಲೆ ಹೆರವರನ್ನೇಕೆ ಹಳಿಯಬೇಕು. ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯೊಂದಿರಲಿ. ವಾರಾಂತ್ಯದ 5 ದಿನಗಳು ಹೆಚ್ಚಿನ ಕಷ್ಟದಾಯಿಗಳಾಗಲಾರವು.

೧೨. ಮೀನ

ಭಾಗ್ಯಶಾಲಿಗಳಾದ ನಿಮ್ಮನ್ನು ಏಳೂವರೆ ಶನಿಯು ಇಂದು ಏನೂ ಮಾಡಲಾರನು. ಎಂತಹ ತೊಂದರೆ ಬಂದರೂ ಅದರ ಪರಿವೆಯಿಲ್ಲದೆ ಸ್ವಕಾರ್ಯದಲ್ಲೇ ಆಸಕ್ತರಾದ ನಿಮಗೆ ನಿರೀಕ್ಷಿಸಿದ ಫಲವು ಪ್ರಾಪ್ತವಾದೀತು. ಗೃಹತಾಪತ್ರಯಗಳಿಂದ ಮುಕ್ತರಾಗಿ ಸುಖ ನೆಮ್ಮದಿಯಿಂದ ಕಾಲ ಕಳೆವಿರಿ. ನಿಮ್ಮ ಆರ್ಥಿಕ ಪರಿಸ್ಥಿತಿಯು ಹಿಂದಿಗಿಂತ ಎಷ್ಟೋ ಸುಧಾರಿಸಲಿದೆ. ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಪೂರ್ಣವಾಗುವವು.

ಮೂರ್ತಿಯನ್ನು ತಬ್ಬಿ ಮಮ್ಮಲ ಮರುಗುತ್ತಿದ್ದರು ವೆಂಕಟಕೃಷ್ಣ. ಅವರ ಅಳು ಕಾನನ ರೋದನವಾಗಿತ್ತು!

ಪ್ರಿನ್ಸಿಪಾಲರ ಅಣತಿಯಂತೆ ಶವ ಊರಿಗೆ ಕಾರಿನಲ್ಲಿ ತರಲ್ಪಟ್ಟಿತು. ವಿದ್ಯಾರ್ಥಿಗಳು ತಮ್ಮವನ ಅಂತಿಮ ದರ್ಶನ ಪಡೆದು ಕಳಿಸಿದರು. ಮನೆಯ ಮುಂದಣ ಗದ್ದೆಯಲ್ಲಿ ರಾಜನ ಮೂರ್ತಿಯ ಪಾರ್ಥಿವ ಕಾಯ ಅಗ್ನಿ ನಾರಾಯಣಗರ್ಪಿತವಾಯಿತು. ಇಂದಿರಮ್ಮ ಸತ್ತ ಹಾಗಾಗಿದ್ದರು. ಮಂದಿಯ ಸಾಂತ್ವನ ವಚನ ನಿಷ್ಪ್ರಯೋಜನವಾಗಿತ್ತು. ಉರಿಯುವ ಕನ್ನಲಗೆ ಜಗದ ನಿಸ್ಸಾರವನ್ನು ಸಾರಿ ಹೇಳುವಂತಿತ್ತು "ಜಾತಸ್ಯ ಮರಣಂ ಧ್ರುವಂ" ಎಂದು. ಅರ್ಧ ತಾಸಲ್ಲಿ ರಾಜಮೂರ್ತಿಯ ಶರೀರ ಕಾಷ್ಠ ಕಣ್ಣಿಗೆ ಅಗೋಚರವಾಗಿ ಭಸ್ಮೀಭೂತವಾಯ್ತು. ಭ್ರಮಿಷ್ಠರಾದ ಇಂದಿರಮ್ಮ ಅಳುತ್ತಿದ್ದರು. ಅಳುವೇ ಅವರ ಸರ್ವಸ್ವವಾಗಿತ್ತು. ನೆಟ್ಟ ಸಸಿ ಫಲ ಬರುವಾಗ ಬಲವಾದ ಬರ ಸಿಡಿಲು ಬಡಿದಿತ್ತು. ಕೈಗೆ ಬಂದ ತುತ್ತು ಬಾಯಿಗೆ ಬರುವ ಮೊದಲೇ ವಿಧಿಯ ವಿಕಟಾಟ್ಟಹಾಸ ತನ್ನ ಲೀಲೆ ತೋರಿಸಿತ್ತು.—ಎಲ್ಲರ ಬಾಯಿಗೂ ಮಣ್ಣು ಹಾಕಿ.

ವೃದ್ಧಾಪ್ಯದಿಂದ ಗಳಿತವಾಗಿದ್ದ ವೆಂಕಟಕೃಷ್ಣ – ಇಂದಿರಮ್ಮ ಚಿರವಿರಹಿಗಳಾಗುವುದು ದೈವ ಸಂಕೇತವಾಗಿತ್ತು. ಪುತ್ರ ಶೋಕ ಅವರ ಬಾಳಿಗೊಂದು ವರ ಶಾಪವಾಗಿತ್ತು. ಅವರ ಆಶಾ ಸೌಧ ಧೂಳೀಧೂಸರಿತವಾಗಿ ನಿತ್ಯ ಅವಶೇಷವಾಗಿ ಉಳಿಯುವ ಕಂಡವಾಗಿತ್ತು!

ಚಿರವಿರಹ ಮಾತ್ರ ಅವರದ್ದಾಯಿತು!

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ –
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ –
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ ಎರಡೂವರೆ (ಟ.ಖ. ಪ್ರತ್ಯೇಕ)
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಸುಲಭದಲ್ಲಿ ಪತ್ರಲೇಖನ
LETTER WRITING MADE EASY
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ: ರೂ 1-25 (ಟ.ಖ. ಪ್ರತ್ಯೇಕ)
ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಮನೆ ಮದ್ದು
ಬರೆದವರು: ಡಾ|| ಕೊರಡ್ಕಲ್ ವೆಂಕಟ್ರಾವ್, ಬೆಳ್ಮಣ್ಣು, ದ. ಕ.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ. ಎರಡು (ಟ.ಖ. ಪ್ರತ್ಯೇಕ)
— ಪ್ರತಿಗಳಿಗೆ ಬರೆಯಿರಿ —
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ [illegible]]. ಜುಲೈ [illegible] [ಸಂಚಿಕೆ [illegible]

Phone No. ಫೋನ್ ನಂಬರು: 226

NAVAYUGA

leading nationalist weekly

೨೦ ಪೈಸೆ

NAVAYUGA 10—6—1965
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೦-೬-೬೫ರಿಂದ ೧೬-೬-೬೫ರ ವರೆಗೆ

೧. ಮೇಷ

ಸ್ವಕರ್ತವ್ಯ ಲೋಪದಿಂದಾಗಿ ಅಧಿಕಾರಿ ವರ್ಗದವರು ನಿಮ್ಮ ಮೇಲೆ ಮುಗಿದು ಬೀಳಲಿರುವರು. ಶತ್ರುಜನರ ಕಾಟಲೆಯಿಂದಾಗಿ ಮನಸ್ಸಿಗೆ ನೆಮ್ಮದಿಯಿರದು. ಕುಟುಂಬದಲ್ಲಿ ಕಂಟಕಕಾರಿಗಳು ಉದ್ಭವಿಸಲಿವೆ. ಇಷ್ಟಾದರೂ ನಿಮ್ಮ ಆರ್ಥಿಕ ಪರಿಸ್ಥಿತಿಯು ಉತ್ತಮವಿರುವುದರಿಂದ ದಿನಗಳು ಸುಗಮವಾಗಿ ಸಾಗಲಿವೆ. ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆವಿರಿ. ವಾರಾದಿಯ 4 ದಿನಗಳಲ್ಲಿ ನಿಮ್ಮ ಆಕಾಂಕ್ಷೆಗಳು ನಿರ್ವಿಘ್ನದಿಂದ ನೆರವೇರಲಿವೆ.

೨. ವೃಷಭ

ನಿಮ್ಮ ಗೃಹತಾಪತ್ರಯಗಳು ಇಂದು ಬಹುಕಾಲ ಕಡಿಮೆಯಾಗಲಿವೆ. ಮಾತ್ರವಲ್ಲ ಆರ್ಥಿಕ ಪರಿಸ್ಥಿತಿಯೂ ತುಂಬ ಸುಧಾರಿಸಲಿದೆ. ಆದರೇನು ನಿಮ್ಮ ಆರೋಗ್ಯ ಮಾತ್ರ ಚೆನ್ನಾಗಿರದು. ಕಫ ಪಿತ್ಥ ಪ್ರಕೋಪವು ಆಗಾಗ ಕಾಣಿಸಿಕೊಳ್ಳಲಿದೆ. ಉದರ ಶೂಲೆ ಅಜೀರ್ಣ ರೋಗಗಳೂ ಪ್ರಾಪ್ತವಾದಾವು. ಆತ್ಮೀಯರ ವಿರಹ ಆಕಸ್ಮಿಕ ಪ್ರವಾಸಗಳಿಂದ ದುಃಖ ನಷ್ಟಗಳಿಗೀಡಾದ ನಿಮಗೆ ವಾರಾದಿಯ 4 ದಿನಗಳಲ್ಲಿ ಗೃಹಸುಖ ಸ್ತ್ರೀ ಧನಲಾಭದ ಸಂಭವವಿದೆ.

೩. ಮಿಥುನ

ಎಂತೆಂತಹ ಎಡರುತೊಡರುಗಳು ಬಂದರೂ ಲೆಕ್ಕಿಸದೆ ಕರ್ತವ್ಯ ಮಾರ್ಗದಲ್ಲಿ ಮುಂದುವರಿವ ನಿಮಗೆ ಹೊರವರ ನೆರವು ಈಸಲೂ ಲಭಿಸಲಾರದು. ದುಡಿಮೆಯ ಬಹ್ವಂಶವನ್ನು ಸದ್ವಿನಿಯೋಗ ಮಾಡುವಿರಿ. ಗೃಹಕೃತ್ಯದಲ್ಲಿ ಅವ್ಯವಸ್ಥೆಯು ತಲೆದೋರಿದರೂ ನಿಮ್ಮ ಸ್ವಂತ ಉಪಭೋಗಗಳಿಗೆ ಕೊರತೆಯುಂಟಾಗದು. ನೀಚ ಜನತೆಯಿಂದಲೂ ಸ್ತ್ರೀ ಪುತ್ರರಿಂದಲೂ ಧನಲಾಭವಾಗುವ ಸಂಭವವಿದೆ. ವಾರಾಂತ್ಯದ 5 ದಿನಗಳಲ್ಲಿ ಕಾರ್ಯಸಿದ್ಧಿ ಧನಲಾಭ ಶತ್ರು ವಿಜಯವನ್ನು ಸಂಪಾದಿಸುವಿರಿ.

೪. ಕರ್ಕಟ

ನಿಮ್ಮ ಧನಪತಿಯಾದ ರವಿಯೂ ಭಾಗ್ಯಪತಿಯಾದ ಗುರುವೂ ಲಾಭಸ್ಥಾನದಲ್ಲಿದ್ದು ಪುತ್ರ ಮತ್ತು ಕಳತ್ರ ಸ್ಥಾನಗಳನ್ನು ವಿಶೇಷ ದೃಷ್ಟಿಯಿಂದ ನೋಡುತ್ತಿರುವ ಕಾರಣ ಮಕ್ಕಳಿಂದಲೂ ಅರ್ಧಾಂಗಿಯು ಮುಖಾಂತರವೂ ಧನಲಾಭವಾಗುವ ಸಂಭವವಿದೆ. ವಿನಾಕಾರಣ ವಾಕ್ಕಲಹ ಶತ್ರುಜನರ ಕಾಟಲೆಗಳಿಗೆ ಗುರಿಯಾದ ನಿಮಗೆ ವಾರಾಂತ್ಯದ 3 ದಿನಗಳಲ್ಲಿ ಸುಖ ನೆಮ್ಮದಿಗಳುಂಟಾಗುವವು.

೫. ಸಿಂಹ

ನಿಮ್ಮ ಧನಲಾಭಪತಿಯಾದ ಬುಧನು ಮಿತ್ರನಾದ ಶುಕ್ರನಿಂದ ಕೂಡಿಕೊಂಡು ಲಾಭಸ್ಥಾನದಲ್ಲಿರುವುದರಿಂದಲೂ ಉದ್ಯಮದಲ್ಲಿ ಬೃಹಸ್ಪತಿ ಸೇರಿರುವುದರಿಂದಲೂ ನೀವಿಂದು ಸಮುದ್ಯಮದಲ್ಲಿ ಸಾಕಷ್ಟು ಸಂಪತ್ತನ್ನು ಸಂಪಾದಿಸುವಿರಿ. ಸಂಕಲ್ಪಗಳೆಲ್ಲವೂ ನಿರಾತಂಕವಾಗಿ ನೆರವೇರುವವು. ಆದರೆ ಜನ್ಮದಲ್ಲಿ ಕುಜನಿದ್ದು ನಿಮ್ಮ ಸುಖಸ್ಥಾನವನ್ನು ಶನ್ಯಂಗಾರಕರು ವಿಶೇಷ ದೃಷ್ಟಿಯಿಂದ ನೋಡುತ್ತಿರುವ ಕಾರಣ ಅನಾರೋಗ್ಯ ವಿಶೇಷತಃ ಮನೋರೋಗಗಳಿಗೆ ಗುರಿಯಾಗಲಿರುವಿರಿ. ವಾರಾದಿಯ 2 ದಿನಗಳು ಇದ್ದುದರಲ್ಲಿ ಕ್ಷೇಮಕರಗಳಾಗಿವೆ.

೬. ಕನ್ಯಾ

ಎಂತಹ ತೊಡಕು ತೊಂದರೆಗಳು ಬಂದರೂ ಹಿಡಿದ ಕಾರ್ಯವನ್ನು ಕೈಬಿಡಲಾರಿರಿ. ನೌಕರಿ ವ್ಯವಹಾರಾದಿ ಉದ್ಯಮಗಳಲ್ಲಿ ಕೀರ್ತಿ ಲಾಭಗಳು ನಿರೀಕ್ಷೆಗಿಂತಲೂ ಅಧಿಕವಾಗಿ ಪ್ರಾಪ್ತವಾಗಲಿವೆ. ಜನತೆಯಿಂದ ಸ್ಥಾನಮಾನಗಳನ್ನು ಪಡೆವಿರಿ. ಆದರೆ ರಾಜಕೀಯರಂಗದಲ್ಲಿ ಕೆಲವೊಂದು ನಷ್ಟ ಪರಾಜಯಗಳುಂಟಾದಾವು. ವ್ಯಾಪಾರೀ ವರ್ಗಕ್ಕೆ ಅನಿರೀಕ್ಷಿತ ನಷ್ಟದ ಯೋಗವಿದೆ. ತಾ. 12, 13 ಈ ದಿನಗಳಲ್ಲಿ ಧನಸುಖಭೋಗಗಳ ಪ್ರಾಪ್ತಿಯಿದೆ.

೭. ತುಲಾ

ಹಲವಾರು ತೆರದ ತೊಡಕು ತೊಂದರೆಗಳನ್ನು ನೀವಿಂದು ಇದಿರಿಸಬೇಕಾಗಿ ಬರಲಿದೆ. ಮಧುವಿಲ್ಲದ ಕುಸುಮಗಳನ್ನು ಮಧುಕರಗಳು ದೂರೀಕರಿಸುವಂತೆ ಬಂಧುಮಿತ್ರರಿಂದಲೂ ದೂರವಾಗುವಿರಿ. ಆದರೂ ನಿಮ್ಮ ಅರ್ಧಾಂಗಿಯು ನಿಮ್ಮನ್ನು ನೆರಳಿನಂತೆ ಅನುಸರಿಸಿ ಬರಲಿರುವಳು. ಆರ್ಥಿಕ ವಿಚಾರದಲ್ಲಿ ನಿಶ್ಚಿಂತರಿರುವಿರಿ. ತಾ. 10, 11, 14, 15, 16 ಈ ದಿನಗಳಲ್ಲಿ ನಿಮ್ಮ ಜಯಕೆಗಳು ಈಡೇರುವ ಲಕ್ಷಣಗಳಿವೆ.

೮. ವೃಶ್ಚಿಕ

ಹೆಚ್ಚಿನ ನಿಮ್ಮ ಆಕಾಂಕ್ಷೆಗಳು ಯಾವೊಂದೂ ತೆರದ ಅಡೆತಡೆಗಳಿಲ್ಲದೆ ನಿರಾತಂಕವಾಗಿ ಪೂರ್ಣವಾಗಲಿವೆ. ಉದ್ಯಮ ವ್ಯಾಪಾರಾದಿಗಳಲ್ಲೂ ನೌಕರಿ ವ್ಯವಹಾರಗಳಲ್ಲೂ ನೀವಿಂದು ಅದ್ವಿತೀಯ ಕೀರ್ತಿ ಲಾಭಗಳನ್ನು ಗಳಿಸಲಿರುವಿರಿ. ಆದರೂ ನಿಮ್ಮ ಸುಖಸ್ಥಾನದಲ್ಲಿಹ ಶನಿಯು ನಿಮ್ಮ ರಾಶಿಯನ್ನು ವಿಶೇಷತಃ ನೋಡುವುದರಿಂದ ವಾತ ಪ್ರಕೋಪಕ್ಕೆ ಗುರಿಯಾಗುವ ಸಂಭವವಿದೆ. ಮನಸ್ಸಿಗೂ ಶಾಂತಿಯಿರದು. ತಾ. 12, 13 ಈ ದಿನಗಳು ಉಳಿದ ದಿನಗಳಿಗಿಂತ ಲೇಸು.

೯. ಧನು

ದಿನದಿಂದ ದಿನಕ್ಕೆ ಪರಿಸ್ಥಿತಿಯು ಹದಗೆಡುತ್ತಿದೆ. ದೇಹಾಲಸ್ಯ ಮನೋರೋಗಗಳು ಆಗಾಗ ಪೀಡಿಸುತ್ತಲೇ ಇರುವವು. ಕಾಲಕ್ಕೆ ಸಾಂಸಾರಿಕ ತಾಪತ್ರಯಗಳು ನಿಮ್ಮನ್ನು ನೆಮ್ಮದಿಯಿಂದಿರಗೊಡಲೊಲ್ಲವು. ವಿನಾಕಾರಣ ಕಲಹ ನಿಷ್ಠುರಗಳಿಗೆ ಗುರಿಯಾಗುವಿರಿ. ನೀವೆಷ್ಟೇ ಚತುರರಿದ್ದರೂ ಇಂದು ಪ್ರತಿಪಕ್ಷಿಗಳಿಂದ ಪರಾಭವ ಹೊಂದಲಿರುವಿರಿ. ಅರ್ಧಪತಿಯ ಅನುಗ್ರಹದಿಂದಾಗಿ ನಿಮಗಿಂದು ಹಣದ ತೊಂದರೆಯು ಕಾಣದು. ತಾ. 10, 11, 14, 15, 16ರಲ್ಲಿ ಸುಖಭೋಗಗಳನ್ನು ಪಡೆವಿರಿ.

೧೦. ಮಕರ

ಸಮುದ್ರದಲೆಗಳಂತೆ ವಿಪತ್ಪರಂಪರೆಗಳು ಮೇಲಿಂದ ಮೇಲೆ ಬರಲಿವೆ. ಪ್ರತೀಕಾರಾಸಕ್ತರಾದ ಶತ್ರುಜನರಿಂದಾಗಿ ನಿಮ್ಮ ಧನಮಾನಾದಿಗಳಿಗೆ ಹೆಚ್ಚಿನ ಹಾನಿ ಸಂಭವಿಸೀತು. ಚರ್ಮರೋಗಗಳಿಗೂ ಆಕಸ್ಮಿಕ ಅಪಘಾತಾದಿಗಳಿಗೂ ಸಿಲುಕುವ ಸಂಭವವಿದೆ. ಆದರೊಂದು ಸಂತಸವೇನೆಂದರೆ ಸುರಗುರುವಿನ ಅನುಗ್ರಹವೆಂಬ ಕವಚವು ನಿಮ್ಮನ್ನು ಅಪಾಯದಿಂದ ಪಾರುಮಾಡಲಿರುವುದು. ವಾರಾದಿಯ 4 ದಿನಗಳು ಅನುಕೂಲ.

೧೧. ಕುಂಭ

ಪರಿಸ್ಥಿತಿಯು ದಿನದಿಂದ ದಿನಕ್ಕೆ ಕೃಷ್ಣಪಕ್ಷದ ಚಂದ್ರನಂತೆ ಹ್ರಾಸವಾಗುತ್ತಾ ಬರುತ್ತಿದೆ. ಶುಕ್ರಾಚಾರ್ಯರೊರ್ವರನ್ನುಳಿದು ಇತರ ಎಲ್ಲಾ ಗ್ರಹರ ಪ್ರಕೋಪಕ್ಕೆ ಪಾತ್ರರಾದ ನಿಮಗೆ ಸುಖವೆಂಬುದು ಕನಸಿನಲ್ಲೂ ಕೂಡ ದುರ್ಲಭವೆಂದರೆ ತಪ್ಪಾಗದು. ಯಾರನ್ನು ನೀವು ಆತ್ಮೀಯರೆಂದು ತಿಳಿದಿರುವಿರೋ ಅವರೇ ನಿಮಗಿಂದು ಕೈಕೊಡಲಿರುವರು. ಹೆಚ್ಚೇಕೆ ಕೈಹಿಡಿದ ಅರ್ಧಾಂಗಿ ಪಡೆದ ಮಕ್ಕಳೂ ಕೂಡ ಇಂದು ನಿಮ್ಮನ್ನು ವಿರೋಧಿಸುವರಿಂದ ಮೇಲೆ ಹೊರವರನ್ನೇಕೆ ಹಳಿಯಬೇಕು. ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯೊಂದಿರಲಿ. ವಾರಾಂತ್ಯದ 5 ದಿನಗಳು ಹೆಚ್ಚಿನ ಕಷ್ಟದಾಯಗಳಾಗಲಾರವು.

೧೨. ಮೀನ

ಭಾಗ್ಯಶಾಲಿಗಳಾದ ನಿಮ್ಮನ್ನು ಏಳೂವರೆ ಶನಿಯು ಇಂದು ಏನೂ ಮಾಡಲಾರನು. ಎಂತಹ ತೊಂದರೆ ಬಂದರೂ ಅದರ ಪರಿವೆಯಿಲ್ಲದೆ ಸ್ವಕಾರ್ಯದಲ್ಲೇ ಆಸಕ್ತರಾದ ನಿಮಗೆ ನಿರೀಕ್ಷಿಸಿದ ಫಲವು ಪ್ರಾಪ್ತವಾದೀತು. ಗೃಹತಾಪತ್ರಯಗಳಿಂದ ಮುಕ್ತರಾಗಿ ಸುಖ ನೆಮ್ಮದಿಯಿಂದ ಕಾಲ ಕಳೆವಿರಿ. ನಿಮ್ಮ ಆರ್ಥಿಕ ಪರಿಸ್ಥಿತಿಯು ಹಿಂದಿಗಿಂತ ಎಷ್ಟೋ ಸುಧಾರಿಸಲಿದೆ. ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಪೂರ್ಣವಾಗುವವು.

ಮೂರ್ತಿಯನ್ನು ತಬ್ಬಿ ಮಮ್ಮಲ ಮರುಗುತ್ತಿದ್ದರು ವೆಂಕಟಕೃಷ್ಣ. ಅವರ ಅಲುಕಾಣನ ರೋದನವಾಗಿತ್ತು!

ಪ್ರಿನ್ಸಿಪಾಲರ ಅಣತಿಯಂತೆ ಶವ ಊರಿಗೆ ಕಾರಿನಲ್ಲಿ ತರಲ್ಪಟ್ಟಿತು. ವಿದ್ಯಾರ್ಥಿಗಳು ತಮ್ಮವನ ಅಂತಿಮ ದರ್ಶನ ಪಡೆದು ಕಳಿಸಿದರು. ಮನೆಯ ಮುಂದಣ ಗದ್ದೆಯಲ್ಲಿ ರಾಮಮೂರ್ತಿಯ ಪಾರ್ಥಿವ ಕಾಯ ಅಗ್ನಿ ನಾರಾಯಣಗರ್ಪಿತವಾಯಿತು. ಇಂದಿರಮ್ಮ ಸತ್ತು ಹಾಗಿಗಿದ್ದರು. ಮಂದಿಯ ಸಾಂತ್ವನ ವಚನ ನಿಷ್ಪ್ರಯೋಜನವಾಗಿತ್ತು. ಉರಿಯುವ ಕೆನ್ನಾಲಗೆ ಜಗದ ನಿಸ್ಸಾರವನ್ನು ಸಾರಿ ಹೇಳುವಂತಿತ್ತು "ಜಾತಸ್ಯ ಮರಣಂ ಧ್ರುವಂ" ಎಂದು. ಅರ್ಧ ತಾಸಿನಲ್ಲಿ ರಾಮಮೂರ್ತಿಯ ಶರೀರ ಸಹಾ ಕಣ್ಣಿಗೆ ಅಗೋಚರವಾಗಿ ಭಸ್ಮೀಭೂತವಾಯಿತು. ಭ್ರಮಿಷ್ಟರಾದ ಇಂದಿರಮ್ಮ ಅಳುತ್ತಿದ್ದರು. ಅಳುವೇ ಅವರ ಸರ್ವಸ್ವವಾಗಿತ್ತು. ನಟ್ಟ ಸಸಿ ಫಲ ಬರುವಾಗ ಬಲವಾದ ಬರ ಸಿಡಿಲು ಬಡಿದಿತ್ತು. ಕೈಗೆ ಬಂದ ತುತ್ತು ಬಾಯಿಗೆ ಬರುವ ಮೊದಲೇ ವಿಧಿಯ ವಿಕಟಾಟ್ಟಹಾಸ ತನ್ನ ಲೀಲೆ ತೋರಿಸಿತ್ತು.—ಎಲ್ಲಾ ಬಾಯಿಗೂ ಮಣ್ಣು ಹಾಕಿ.

ವೃದ್ಧಾಪ್ಯದಿಂದ ಗಳಿತವಾಗಿದ್ದ ವೆಂಕಟಕೃಷ್ಣ—ಇಂದಿರಮ್ಮ ಚಿರವಿರಹಿಗಳಾಗುವುದು ದೈವ ಸಂಕೇತವಾಗಿತ್ತು. ಪುತ್ರಶೋಕ ಅವರ ಬಾಳಿಗೊಂಡು ವರ ಶಾಪವಾಗಿತ್ತು. ಅವರ ಆಶಾ ಸೌಧ ಧೂಳೀಧೂಸರಿತವಾಗಿ ನಿತ್ಯ ಅವಶೇಷವಾಗಿ ಉರಿಯುವ ಕೆಂಡವಾಗಿತ್ತು!

ಚಿರವಿರಹ ಮಾತ್ರ ಅವರದ್ದಾಯಿತು!

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾ। ಕೊಳಕ್ಕಲ್ ವೆಂಕಟ್ರಾವ್, ಬೆಳ್ಮಣ್ಣು, ದ. ಕ.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ರಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಂಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ.ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪] [illegible] [ಸಂಚಿಕೆ [illegible]



NAVAYUGA

leading nationalist weekly

Phone No.
ಫೋನ್ ನಂಬ್ರ : 226

೧೦
ಪೈಸೆ

NAVAYUGA 10–6–1965
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೦-೬-೬೫ರಿಂದ ೧೬-೬-೬೫ರ ವರೆಗೆ

೧. ಮೇಷ

ಸ್ವಕರ್ತವ್ಯ ಲೋಪದಿಂದಾಗಿ ಅಧಿಕಾರಿ ವರ್ಗದವರು ನಿಮ್ಮ ಮೇಲೆ ಮುಗಿದು ಬೀಳಲಿರುವರು. ಶತ್ರುಜನರ ಕಿರುಕುಳದಿಂದಾಗಿ ಮನಸ್ಸಿಗೆ ನೆಮ್ಮದಿಯಿರದು. ಕುಟುಂಬದಲ್ಲಿ ತಂಟೆತಕರಾರುಗಳು ಉದ್ಭವಿಸಲಿವೆ. ಇಷ್ಟಾದರೂ ನಿಮ್ಮ ಆರ್ಥಿಕ ಪರಿಸ್ಥಿತಿಯು ಉತ್ತಮವಿರುವುದರಿಂದ ದಿನಗಳು ಸುಗಮವಾಗಿ ಸಾಗಲಿವೆ. ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆವಿರಿ. ವಾರಾದಿಯ 2 ದಿನಗಳಲ್ಲಿ ನಿಮ್ಮ ಆಶಾಕಾಂಕ್ಷೆಗಳು ನಿರ್ವಿಘ್ನದಿಂದ ನೆರವೇರಲಿವೆ.

೨. ವೃಷಭ

ನಿಮ್ಮ ಗೃಹತಾಪತ್ರಯಗಳು ಇಂದು ಬಹು ಶೀಘ್ರ ಕಡಿಮೆಯಾಗಲಿವೆ. ಮಾತ್ರವಲ್ಲ ಆರ್ಥಿಕ ಪರಿಸ್ಥಿತಿಯೂ ತುಂಬ ಸುಧಾರಿಸಲಿದೆ. ಆದರೇನು ನಿಮ್ಮ ಆರೋಗ್ಯ ಮಾತ್ರ ಚೆನ್ನಾಗಿರದು. ಕಫ ಪಿತ್ಥ ಪ್ರಕೋಪವು ಆಗಾಗ ಕಾಣಿಸಿಕೊಳ್ಳಲಿದೆ. ಉದರ ಶೂಲೆ ಅಜೀರ್ಣ ರೋಗಗಳೂ ಪ್ರಾಪ್ತವಾದಾವು. ಆತ್ಮೀಯರ ವಿರಹ ಆಕಸ್ಮಿಕ ಪ್ರವಾಸಗಳಿಂದ ದುಃಖ ನಷ್ಟಗಳಿಗೀಡಾದ ನಿಮಗೆ ವಾರಾದಿಯ 4 ದಿನಗಳಲ್ಲಿ ಗೃಹಸುಖ ಸ್ತ್ರೀ ಧನಲಾಭದ ಸಂಭವವಿದೆ.

೩. ಮಿಥುನ

ಎಂತೆಂತಹ ಎಡರುತೊಡರುಗಳು ಬಂದರೂ ಲೆಕ್ಕಿಸದೆ ಕರ್ತವ್ಯ ಮಾರ್ಗದಲ್ಲಿ ಮುಂದುವರಿವ ನಿಮಗೆ ಹೊರಗಿನ ನೆರವು ಈಗಿನ ತ್ತಾ ಲಭಿಸಲಾರದು. ದುಡಿಮೆಯ ಬಹ್ವಂಶವನ್ನು ಸದ್ವಿನಿಯೋಗ ಮಾಡುವಿರಿ. ಗೃಹಕೃತ್ಯದಲ್ಲಿ ಅವ್ಯವಸ್ಥೆಯು ತಲೆದೋರಿದರೂ ನಿಮ್ಮ ಸ್ವಂತ ಉಪಭೋಗಗಳಿಗೆ ಕೊರತೆಯುಂಟಾಗದು. ನೀಚ ಜನತೆಯಿಂದಲೂ ಸ್ವಪುತ್ರರಿಂದಲೂ ಧನಲಾಭವಾಗುವ ಸಂಭವವಿದೆ. ವಾರಾಂತ್ಯದ 5 ದಿನಗಳಲ್ಲಿ ಕಾರ್ಯಸಿದ್ಧಿ ಧನಲಾಭ ಶತ್ರು ವಿಜಯವನ್ನು ಸಂಪಾದಿಸುವಿರಿ.

೪. ಕರ್ಕಟ

ನಿಮ್ಮ ಧನಪತಿಯಾದ ರವಿಯೂ ಭಾಗ್ಯಪತಿಯಾದ ಗುರುವೂ ಲಾಭಸ್ಥಾನದಲ್ಲಿದ್ದು ಪುತ್ರ ಮತ್ತು ಕಳತ್ರ ಸ್ಥಾನಗಳನ್ನು ವಿಶೇಷ ದೃಷ್ಟಿಯಿಂದ ನೋಡುತ್ತಿರುವ ಕಾರಣ ಮಕ್ಕಳಿಂದಲೂ ಅರ್ಧಾಂಗಿಯ ಮುಖಾಂತರವೂ ಧನಲಾಭವಾಗುವ ಸಂಭವವಿದೆ. ವಿನಾಕಾರಣ ವಾಕ್ಕಲಹ ಶತ್ರುಜನರ ಕಿರುಕುಳಗಳಿಗೆ ಗುರಿಯಾದ ನಿಮಗೆ ವಾರಾಂತ್ಯದ 3 ದಿನಗಳಲ್ಲಿ ಸುಖ ನೆಮ್ಮದಿಗಳುಂಟಾಗುವವು.

೫. ಸಿಂಹ

ನಿಮ್ಮ ಧನಲಾಭಪತಿಯಾದ ಬುಧನು ಮಿತ್ರನಾದ ಶುಕ್ರನಿಂದ ಕೂಡಿಕೊಂಡು ಲಾಭಸ್ಥಾನದಲ್ಲಿರುವುದರಿಂದಲೂ ಉದ್ಯಮದಲ್ಲಿ ಬೃಹಸ್ಪತಿ ಸೇರಿರುವುದರಿಂದಲೂ ನೀವಿಂದು ಸದುದ್ಯಮದಲ್ಲಿ ಸಾಕಷ್ಟು ಸಂಪತ್ತನ್ನು ಸಂಪಾದಿಸುವಿರಿ. ಸಂಕಲ್ಪಗಳೆಲ್ಲವೂ ನಿರಾತಂಕವಾಗಿ ನೆರವೇರುವವು. ಆದರೆ ಜನ್ಮದಲ್ಲಿ ಕುಜನಿದ್ದು ನಿಮ್ಮ ಸುಖಸ್ಥಾನವನ್ನು ಶನ್ಯಂಗಾರಕರು ವಿಶೇಷ ದೃಷ್ಟಿಯಿಂದ ನೋಡುತ್ತಿರುವ ಕಾರಣ ಅನಾರೋಗ್ಯ ವಿಶೇಷತಃ ಮನೋರೋಗಗಳಿಗೆ ಗುರಿಯಾಗಲಿರುವಿರಿ. ವಾರಾದಿಯ 2 ದಿನಗಳು ಇದ್ದುದರಲ್ಲಿ ಕ್ಷೇಮಕರಗಳಾಗಿವೆ.

೬. ಕನ್ಯಾ

ಎಂತಹ ತೊಡಕು ತೊಂದರೆಗಳು ಬಂದರೂ ಹಿಡಿದ ಕಾರ್ಯವನ್ನು ಕೈಬಿಡಲಾರಿರಿ. ನೌಕರಿ ವ್ಯವಹಾರಾದಿ ಉದ್ಯಮಗಳಲ್ಲಿ ಕೀರ್ತಿ ಲಾಭಗಳು ನಿರೀಕ್ಷೆಗಿಂತಲೂ ಅಧಿಕವಾಗಿ ಪ್ರಾಪ್ತವಾಗಲಿವೆ. ಜನತೆಯಿಂದ ಸ್ಥಾನಮಾನಗಳನ್ನು ಪಡೆವಿರಿ. ಆದರೆ ರಾಜಕೀಯರಂಗದಲ್ಲಿ ಕೆಲವೊಂದು ನಷ್ಟ ಪರಾಜಯಗಳುಂಟಾದಾವು. ವ್ಯಾಪಾರೀ ವರ್ಗಕ್ಕೆ ಅನಿರೀಕ್ಷಿತ ನಷ್ಟದ ಯೋಗವಿದೆ. ತಾ. 12, 13 ಈ ದಿನಗಳಲ್ಲಿ ಧನಸುಖಭೋಗಗಳ ಪ್ರಾಪ್ತಿಯಿದೆ.

೭. ತುಲಾ

ಹಲವಾರು ತೆರದ ತೊಡಕು ತೊಂದರೆಗಳನ್ನು ನೀವಿಂದು ಇದಿರಿಸಬೇಕಾಗಿ ಬರಲಿದೆ. ಮಿಥ್ಯಾಪವಾದ ಕುಸುಮ ಗಳನ್ನು ಮಧುಕರಗಳು ದೂರೀಕರಿಸುವಂತೆ ಬಂಧುಮಿತ್ರರಿಂದಲೂ ದೂರವಾಗುವಿರಿ. ಆದರೂ ನಿಮ್ಮ ಅರ್ಧಾಂಗಿಯು ನಿಮ್ಮನ್ನು ನೆರಳಿನಂತೆ ಅನುಸರಿಸಿ ಬರಲಿರುವಳು. ಆರ್ಥಿಕ ವಿಚಾರದಲ್ಲಿ ನಿಶ್ಚಿಂತರಿರುವಿರಿ. ತಾ. 10, 11, 14, 15, 16 ಈ ದಿನಗಳಲ್ಲಿ ನಿಮ್ಮ ಬಯಕೆಗಳು ಈಡೇರುವ ಲಕ್ಷಣಗಳಿವೆ.

೮. ವೃಶ್ಚಿಕ

ಹೆಚ್ಚಿನ ನಿಮ್ಮ ಆಶಾಕಾಂಕ್ಷೆಗಳು ಯಾವೊಂದೂ ತೆರದ ಅಡೆತಡೆಗಳಿಲ್ಲದೆ ನಿರಾತಂಕವಾಗಿ ಪೂರ್ಣವಾಗಲಿವೆ. ಉದ್ಯಮ ವ್ಯಾಪಾರಾದಿಗಳಲ್ಲೂ ನೌಕರಿ ವ್ಯವಹಾರಗಳಲ್ಲೂ ನೀವಿಂದು ಅದ್ವಿತೀಯ ಕೀರ್ತಿ ಲಾಭಗಳನ್ನು ಗಳಿಸಲಿರುವಿರಿ. ಆದರೂ ನಿಮ್ಮ ಸುಖಸ್ಥಾನದಲ್ಲಿಹ ಶನಿಯು ನಿಮ್ಮ ರಾಶಿಯನ್ನು ವಿಶೇಷತಃ ನೋಡುವುದರಿಂದ ವಾತ ಪ್ರಕೋಪಕ್ಕೆ ಗುರಿಯಾಗುವ ಸಂಭವವಿದೆ. ಮನಸ್ಸಿಗೂ ಶಾಂತಿಯಿರದು. ತಾ. 12, 13 ಈ ದಿನಗಳು ಉಳಿದ ದಿನಗಳಿಗಿಂತ ಲೇಸು.

೯. ಧನು

ದಿನದಿಂದ ದಿನಕ್ಕೆ ಪರಿಸ್ಥಿತಿಯು ಹದಗೆಡುತ್ತಿದೆ. ದೇಹಾಲಸ್ಯ ಮನೋರೋಗಗಳು ಆಗಾಗ ಪೀಡಿಸುತ್ತಲೇ ಇರುವವು. ಕಾಲದ್ದಕ್ಕೆ ಸಾಂಸಾರಿಕ ತಾಪತ್ರಯಗಳು ನಿಮ್ಮನ್ನು ನೆಮ್ಮದಿಯಿಂದಿರಗೊಡಲೊಲ್ಲವು. ವಿನಾಕಾರಣ ಕಲಹ ನಿಷ್ಠುರಗಳಿಗೆ ಗುರಿಯಾಗುವಿರಿ. ನೀವೆಷ್ಟೇ ಚತುರರಿದ್ದರೂ ಇಂದು ಪ್ರತಿಪಕ್ಷಿಗಳಿಂದ ಪರಾಭವ ಹೊಂದಲಿರುವಿರಿ. ಅರ್ಥಪತಿಯ ಅನುಗ್ರಹದಿಂದಾಗಿ ನಿಮಗಿಂದು ಹಣದ ತೊಂದರೆಯು ಕಾಣದು. ತಾ. 10, 11, 14, 15, 16ರಲ್ಲಿ ಸುಖಭೋಗಗಳನ್ನು ಪಡೆವಿರಿ.

೧೦. ಮಕರ

ಸಮುದ್ರದಲೆಗಳಂತೆ ವಿಪತ್ಪರಂಪರೆಗಳು ಮೇಲಿಂದ ಮೇಲೆ ಬರಲಿವೆ. ಪ್ರತೀಕಾರಾಸಕ್ತರಾದ ಶತ್ರುಜನರಿಂದಾಗಿ ನಿಮ್ಮ ಧನ ಮಾನಾದಿಗಳಿಗೆ ಹೆಚ್ಚಿನ ಹಾನಿ ಸಂಭವಿಸೀತು. ಚರ್ಮರೋಗಗಳಿಗೂ ಆಕಸ್ಮಿಕ ಅಪಘಾತಾದಿಗಳಿಗೂ ಸಿಲುಕುವ ಸಂಭವವಿದೆ. ಆದರೊಂದು ಸಂತಸವೇನೆಂದರೆ ಸುರಗುರುವಿನ ಅನುಗ್ರಹವೆಂಬ ಕವಚವು ನಿಮ್ಮನ್ನು ಅಪಾಯದಿಂದ ಪಾರುಮಾಡಲಿರುವುದು. ವಾರಾದಿಯ 4 ದಿನಗಳು ಅನುಕೂಲ.

೧೧. ಕುಂಭ

ಪರಿಸ್ಥಿತಿಯು ದಿನದಿಂದ ದಿನಕ್ಕೆ ಕೃಷ್ಣಪಕ್ಷದ ಚಂದ್ರನಂತೆ ಹ್ರಾಸವಾಗುತ್ತಾ ಬರುತ್ತಿದೆ. ಶುಕ್ರಾಚಾರ್ಯರೋರ್ವರನ್ನು ಬಿಡು ಇತರ ಎಲ್ಲಾ ಗ್ರಹರು ಪ್ರಕೋಪಕ್ಕೆ ಪಾತ್ರರಾದ ನಿಮಗೆ ಸುಖವೆಂಬುದು ಕನಸಿನಲ್ಲೂ ಕೂಡ ದುರ್ಲಭವೆಂದರೆ ತಪ್ಪಾಗದು. ಯಾರನ್ನು ನೀವು ಆತ್ಮೀಯರೆಂದು ತಿಳಿದಿರುವಿರೋ ಅವರೇ ನಿಮಗಿಂದು ಕೈಕೊಡಲಿರುವರು. ಹೆಚ್ಚೇಕೆ ಕೈಹಿಡಿದ ಅರ್ಧಾಂಗಿ ಪಡೆದ ಮಕ್ಕಳೂ ಕೂಡ ಇಂದು ನಿಮ್ಮನ್ನು ವಿರೋಧಿಸುವರೆಂದ ಮೇಲೆ ಹೆರವರನ್ನೇಕೆ ಹಳಿಯಬೇಕು. ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯೊಂದಿರಲಿ. ವಾರಾಂತ್ಯದ 5 ದಿನಗಳು ಹೆಚ್ಚಿನ ಕಷ್ಟದಾಯಿಗಳಾಗಲಾರವು.

೧೨. ಮೀನ

ಭಾಗ್ಯಶಾಲಿಗಳಾದ ನಿಮ್ಮನ್ನು ಪಳೂವರೆ ಶನಿಯು ಇಂದು ಏನೂ ಮಾಡಲಾರನು. ಎಂತಹ ತೊಂದರೆ ಬಂದರೂ ಅದರ ಪರಿವೆಯಿಲ್ಲದೆ ಸ್ವಕಾರ್ಯದಲ್ಲೇ ಆಸಕ್ತರಾದ ನಿಮಗೆ ನಿರೀಕ್ಷಿಸಿದ ಫಲವು ಪ್ರಾಪ್ತವಾದೀತು. ಗೃಹತಾಪತ್ರಯಗಳಿಂದ ಮುಕ್ತರಾಗಿ ಸುಖ ನೆಮ್ಮದಿಯಿಂದ ಕಾಲ ಕಳೆವಿರಿ. ನಿಮ್ಮ ಆರ್ಥಿಕ ಪರಿಸ್ಥಿತಿಯು ಹಿಂದಿಗಿಂತ ಎಷ್ಟೋ ಸುಧಾರಿಸಲಿದೆ. ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಪೂರ್ಣವಾಗುವವು.

ಮಾರ್ತಿಯನ್ನು ತಬ್ಬಿ ಮಮ್ಮಲ ಮರುಗುತ್ತಿದ್ದರು ವೆಂಕಟಕೃಷ್ಣ. ಅವರ ಆಲಾಪನೆ ರೋದನವಾಗಿತ್ತು!

ಪ್ರಿನ್ಸಿಪಾಲರ ಅಣತಿಯಂತೆ ಶವ ಊರಿಗೆ ಕಾರಿನಲ್ಲಿ ತರಲ್ಪಟ್ಟಿತು. ವಿದ್ಯಾರ್ಥಿಗಳು ತಮ್ಮವನ ಅಂತಿಮ ದರ್ಶನ ಪಡೆದು ಕಳಿಸಿದರು. ಮನೆಯ ಮುಂದಣ ಗದ್ದೆಯಲ್ಲಿ ರಾಮವರ್ತಿಯ ಪಾರ್ಥಿವ ಕಾಯ ಅಗ್ನಿನಾರಾಯಣಗರ್ಪಿತವಾಯಿತು. ಇಂದಿರಮ್ಮ ಸತ್ತ ಹಾಗೇ ಇದ್ದರು. ಮಂದಿಯ ಸಾಂತ್ವನ ವಚನ ನಿಷ್ಪ್ರಯೋಜನವಾಗಿತ್ತು. ಉರಿಯುವ ಕೆನ್ನಾಲಗೆ ಜಗದ ನಿಸ್ಸಾರವನ್ನು ಸಾರಿ ಹೇಳುವಂತಿತ್ತು "ಜಾತಸ್ಯ ಮರಣಂ ಧ್ರುವಂ" ಎಂದು. ಅರ್ಧ ತಾಸಲ್ಲಿ ರಾಮಮೂರ್ತಿಯ ಶರೀರ ಸಹಾ ಕಣ್ಣಿಗೆ ಅಗೋಚರವಾಗಿ ಭಸ್ಮೀಭೂತವಾಯ್ತು. ಭ್ರಮಿಷ್ಠರಾದ ಇಂದಿರಮ್ಮ ಅಳುತ್ತಿದ್ದರು. ಅಳುವೇ ಅವರ ಸರ್ವಸ್ವವಾಗಿತ್ತು. ನೆಟ್ಟ ಸಸಿ ಫಲ ಬರುವಾಗ ಬಲವಾದ ಬರ ಸಿಡಿಲು ಬಡಿದಿತ್ತು. ಕೈಗೆ ಬಂದ ತುತ್ತು ಬಾಯಿಗೆ ಬರುವ ಮೊದಲೇ ವಿಧಿಯ ವಿಕಟಾಟ್ಟಹಾಸ ತನ್ನ ಲೀಲೆ ತೋರಿಸಿತ್ತು.—ಎಲ್ಲರ ಬಾಯಿಗೂ ಮಣ್ಣು ಹಾಕಿ.

ವೃದ್ಧಾಪ್ಯದಿಂದ ಗಳಿತವಾಗಿದ್ದ ವೆಂಕಟಕೃಷ್ಣ—ಇಂದಿರಮ್ಮ ಚಿರವಿರಹಿಗಳಾಗುವುದು ದೈವ ಸಂಕೇತವಾಗಿತ್ತು. ಪುತ್ರಶೋಕ ಅವರ ಬಾಳಿಗೊಂದು ವರ ಶಾಪವಾಗಿತ್ತು. ಅವರ ಆಶಾ ಸೌಧ ಧೂಳೀಧೂಸರಿತವಾಗಿ ನಿತ್ಯ ಅವಶೇಷವಾಗಿ ಉರಿಯುವ ಕೆಂಡವಾಗಿತ್ತು!

ಚಿರವಿರಹ ಮಾತ್ರ ಅವರದ್ದಾಯಿತು!

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ ಎರಡೂವರೆ (ಟ ಖ ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಬೆಳ್ಮಣ್ಣು, ದ. ಕ.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ. ಎರಡು (ಟ.ಖ.ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ನವಯುಗ



NAVAYUGA

Phone No. 226
ಫೋನ್ ಸಂಖ್ಯೆ: 226

leading nationalist weekly

೨೦ ಪೈಸೆ

ಕಥಾ ಪ್ರಪಂಚ

ಇವಳೀಗ ಗೆಳತಿ

ಬರೆದವರು
ಶ್ರೀ ಸ. ನಾರಾಯಣ, ಚಿತ್ರದುರ್ಗ,

— ೧ —

ಗದ್ದಲ! ಅದರಲ್ಲಿಯೂ ಮದುವೆಯ ಮನೆಯ ಗದ್ದಲ!!

"ಅಯ್ಯೋ! ರಾಮ ಬೇಡಪ್ಪ ಈ ಗಲಾಟೆ...ಕಿವಿ ಕೊರೆದು ಹೋಗುತ್ತದೆ" ಒಂದುಕಡೆ ಹಿರಿಯರ ಶಾಸ್ತ್ರವಿಧಿಗಳ ಸಂಭಾಷಣೆ....ಇನ್ನೊಂದು ಕಡೆ ಬೀಗರ ಟೀಕೆಯ ಸುರಿಮಳೆ....ಮತ್ತೊಂದು ಕಡೆ ಚಿಕ್ಕ ಮಕ್ಕಳ ಸಾಮೂಹಿಕ ವಿವಿಧ ಗಾನ....ಅವುಗಳನ್ನು ತಡೆಯಲು ತಾಯಿಯರ ಸಾಹಸ...ಮತ್ತೊಂದು ಕಡೆ ಬಂದು ಹೋಗುವವರ ಸಂಖ್ಯೆಗಂತೂ ಮಿತಿಯೇ ಇಲ್ಲ....ಎಲ್ಲರಲ್ಲಿಯೂ ಸಂಭ್ರಮ ತುಂಬಿ ತುಳುಕಿದೆ.

ಇಪ್ಪತ್ತಾರು ಇಪ್ಪತ್ತೆಂಟರ ತರುಣನೊಬ್ಬ ತನ್ನ ಸಹಜ ಹಾಸ್ಯ ಶೈಲಿಯಲ್ಲಿ ಮದುವೆಮನೆಯಲ್ಲಿ ನೆರೆದಿದ್ದವರನ್ನೆಲ್ಲಾ ನಗೆಗಡಲಿನಲ್ಲಿ ಮುಳುಗಿಸಿ ಚಟುವಟಿಕೆಯಿಂದ ಪ್ರತಿ ಸ್ಥಳದಲ್ಲಿಯೂ ಹಾಜರಾಗಿರುತ್ತಿದ್ದ. ಅವನೊಡನೆ ಮಾತನಾಡಲು ಹಿರಿಯರು ಸಿದ್ಧವಾಗಿರುವುದು ಹಾಗಿರಲಿ ಮದುವೆಮನೆಯಲ್ಲಿ ನೆರೆದಿದ್ದ ಹತ್ತು ಹದಿನೈದು ಹುಡುಗರ ಗುಂಪೇ ಅವನನ್ನು ಹಿಂಬಾಲಿಸುತ್ತಿತ್ತು.

ಕಿರಿಯರೊಂದಿಗೆ ಕಲೆತು ನಗುತ್ತಾ ಬರುತ್ತಿದ್ದ ಯುವಕನೆಡೆಗೆ ಬೆರಳು ಮಾಡಿ ತೋರಿಸಿ ಪದ್ಮ ಗೆಳತಿಯನ್ನು ಕೇಳಿದಳು —"ಅವರು ಯಾರು ಗೊತ್ತೇನೇ ಜಯ." ಜಯ ಏನೂ ಅರಿಯದವಳಂತೆ "ನನಗೇನಮ್ಮ ಗೊತ್ತು?" ಎಂದಳು.

ಪದ್ಮ ನಗುತ್ತಾ "ನೀನೊಂದು ಪೆದ್ದು ಕಣೆ ಜಯ, ಅವರು ಈ ಮನೆಯಲ್ಲಿಯೇ ಹೆಸರುವಾಸಿಯಾಗಿದ್ದಾರೆ....ನೀನು ನನಗೆ ಏನೂ ಗೊತ್ತಿಲ್ಲ ಅನ್ನುತ್ತೀಯಲ್ಲ?"

"ಅವರು ಯಾರೋ ನನಗೇನಮ್ಮ ಗೊತ್ತು"

"ನಿನ್ನ ಗಂಡ ಕಣೆ, ಅಯ್ಯೋ" ಎಂದು ಗೆಳತಿಯ ಕೆನ್ನೆ ಹಿಡಿದಳು ಪದ್ಮ.

ಜಯಳ ಕೆನ್ನೆ ಟೊಮೇಟೋ ಹಣ್ಣಿನ ಬಣ್ಣಕ್ಕೆ ತಿರುಗಿತ್ತು.

ಅದೇ ವೇಳೆಗೆ ಅಲ್ಲಿಗೆ ಬಂದ ಜಯನ ತಾಯಿ "ಏನೋ ಇಲ್ಲಿ ನೀವಿಬ್ಬರೂ ಸೇರಿಕೊಂಡು ಏನೋ ಪಿತೂರಿ ನಡೆಸುತ್ತಿದ್ದೀರಿ....ಕೆಲಸ ಮಾಡುವವರು ಯಾರೂ ಇಲ್ಲ ಎಂದರೆ ನೀವು ಇಲ್ಲಿದ್ದೀರಾ ಬನ್ನಿ ಬನ್ನಿ..." ಎಂದು ಕರೆದಳು.

ಗೆಳತಿಯರಿಬ್ಬರೂ ನಗುತ್ತಾ ಅವರನ್ನು ಹಿಂಬಾಲಿಸಿದರು. ಮದುವೆಗೆ ಬಂದಿದ್ದ ಹಿರಿಯ ಬಂಧುಗಳೊಬ್ಬರೊಂದಿಗೆ ಯುವಕ ಕುಶಲ ಸಂಭಾಷಣೆಯಲ್ಲಿ ತೊಡಗಿದ್ದ. ಅವನನ್ನು ಹುಡುಕಿಕೊಂಡು ಬಂದ ಅವನ ತಾಯಿ "ಇಲ್ಲೇ ಇದ್ದೀ ಏನೋ ಸುಂದ್ರು? ಮನೆಯನ್ನೆಲ್ಲಾ ಹುಡುಕಿದೆನಲ್ಲೋ" ಎಂದರು.

ಸುಂದರ ತಾಯಿಯ ಮಾತಿಗೆ ನಗುತ್ತಾ "ನಾನೇನು ಅಂಟಿಗಾಲಿಡುವ ಮಗುವೇನಮ್ಮ ತಪ್ಪಿಸಿಕೊಳ್ಳುವುದಕ್ಕೆ...? ಅದೇನಮ್ಮ ನನ್ನನ್ನು ಹುಡುಕಿಕೊಂಡು ಬಂದ ಸಮಾಚಾರ?" ಎಂದು ಕೇಳಿದ.

"ಬಾರಪ್ಪ ಹೇಳುತ್ತೇನೆ' ಎಂದು ಕೋಣೆಗೆ ಕರೆದುಕೊಂಡು ಹೋದಳು ಅವನ ತಾಯಿ.

ಕೋಣೆಯಲ್ಲಿ ಮಹಿಳೆಯರ ಸಂಖ್ಯೆಯೇ ಹೆಚ್ಚಾಗಿದ್ದುದರಿಂದ ಸುಂದರ ಹಿಂದುಳಿದು ಬಾಗಿಲಲ್ಲಿಯೇ ನಿಂತ. ಅವನ ತಾಯಿ ನಗುತ್ತಾ 'ಮದುವೆಯಾಗುವ ಹೆಣ್ಣಿಗಿಂತಲೂ ಹೆಚ್ಚಾಗಿ ನಾಚುತ್ತೀಯಲ್ಲೋ ಬಾರೋ ಒಳಕ್ಕೆ" ಎಂದರು.

ಸುಂದರ ಮೆಲ್ಲಗೆ ಕೋಣೆಯೊಳಕ್ಕೆ ಅಡಿ ಇರಿಸಿದ, ಅಲ್ಲಿ ಸೇರಿದ್ದ ಹೆಂಗಳೆಯರ ದೃಷ್ಟಿಯೆಲ್ಲ ಅವನ ಕಡೆಗೆ ಹರಿಯಿತು. ಸುಂದರ ಹೆಣ್ಣಿಗಿಂತಲೂ ಹೆಚ್ಚಾಗಿಯೇ ನಾಚಿದ್ದ. ಕೋಣೆಯಲ್ಲಿದ್ದ ಓರ್ವ ಕನ್ಯೆಯಂತೂ ಬಾಗಿಸಿದ ಕತ್ತನ್ನು ಮೇಲೆತ್ತಿರಲಿಲ್ಲ.

ಸುಂದರನ ತಾಯಿ ತಾವಾಗಿಯೇ "ಇವನೇ ಕಣ್ರಮ್ಮ ನನ್ನ ಮಗ ಸುಂದ್ರು" ಎಂದರು. ಸುಂದರನಿಗೆ ಹಿಡಿದಿದ್ದ ನಾಚಿಕೆ ಚಟ್ಟೋಡಿತು. ಕತ್ತೆತ್ತಿ ಎಲ್ಲರನ್ನೂ ಒಂದು ಬಾರಿ ದಿಟ್ಟಿಸಿ "ಅಯ್ತೇನಮ್ಮ ಪ್ರದರ್ಶನ?' ಎಂದು ಹಿಂದೆ ಸರಿದ.

"ನಿನ್ನ ಮುಖ ನೋಡಬೇಕಾದವಳೇ ನೋಡದೆ ಮುಖ ಮುಚ್ಚಿ ಕುಳಿತುಕೊಂಡಿದ್ದಳು ಅವಳು ಸ್ವಲ್ಪ ನೋಡಲಿ ತಾಳೋ...ನಿನ್ನ ಅವಸರ ಗೊತ್ತಿದೆ" ಎಂದರು ಸುಂದರನ ತಾಯಿ.

'ಹಣೇಬರಹ" ಎಂದುಕೊಂಡ ಸುಂದರ.

"ಈ ಹುಡುಗಿ ಯಾರು ಗೊತ್ತೇನೋ?" ಎಂದು ಮಗನನ್ನು ಪ್ರಶ್ನಿಸಿದ ಸುಂದರನ ತಾಯಿ ಅಲ್ಲಿಯೇ ನಾಚಿ ನಿಂತಿದ್ದ ಜಯನ ಕಡೆಗೆ ಬೆರಳು ಮಾಡಿ ತೋರಿಸಿದರು.

'ನನಗೇನಮ್ಮ ಗೊತ್ತು?"

'ಹಾಗಾದರೆ ನಿನಗೇನು ಗೊತ್ತು?"

"ನನಗೇನು ಗೊತ್ತು, ಯಾರೋ'?

"ಅವಳು ನಿನ್ನ ಹೆಂಡ್ತಿ ಕಣೋ" ಎಂದಳು ಅವನ ತಾಯಿ.

ಎಲ್ಲರೂ ಮೆದುವಾಗಿ ನಕ್ಕರು. ಸುಂದರ ಮಾಯವಾಗಿದ್ದ.

ಸುಂದರನ ತಾಯಿ ಭಾಗಮ್ಮನವರು ತಮ್ಮ ಮಗನೊಂದಿಗೆ ಬಂಧುಗಳೊಬ್ಬರ ವಿವಾಹಕ್ಕೆ ಬೆಂಗಳೂರಿಗೆ ಬಂದಿದ್ದರು. ವಿವಾಹದ ಸಲುವಾಗಿ ಅವರ ಸಮೀಪದ ಬಂಧುಗಳೂ ಬಂದಿದ್ದರು. ಅವರ ಪೈಕಿ ಜಯ ಮತ್ತು ಅವರ ಮನೆಯವರು ಮುಖ್ಯರಾದವರು. ಪದ್ಮ ಅವರೆಲ್ಲರ ಬಂಧುವಾಗಿರದಿದ್ದರೂ ಚಿರಪರಿಚಿತಳಾಗಿದ್ದುದರಿಂದ ಮದುವೆಯ ಮನೆಗೆ ಬಂದಿದ್ದಳು.

ಸುಂದರ ಮೈಸೂರಿನ ಕಾಲೇಜೊಂದರಲ್ಲಿ ಪ್ರಾಧ್ಯಾಪಕನಾಗಿದ್ದು ಅವನಿಗೆ ಕೈತುಂಬ ಸಂಬಳವೂ ಬರುತ್ತಿತ್ತು. ಉತ್ತಮ ಪ್ರಾಧ್ಯಾಪಕ ಎನ್ನುವ ಕೀರ್ತಿಯನ್ನು ಪಡೆದಿದ್ದ, ಮಗನಿಗೆ ತಕ್ಕ ಹೆಣ್ಣನ್ನು ಹುಡುಕುತ್ತಿದ್ದರು ನಾಗಮ್ಮ. ಅವರ ಮನಸ್ಸಿಗೆ ಒಪ್ಪುವಂತಹ ಯಾವ ಕನ್ಯೆಯೂ ಅವರ ಕಣ್ಣಿಗೆ ಗೋಚರವಾಗಿರಲಿಲ್ಲ.

ಸುಂದರನಿಗೆ ಅವನ ತಂದೆ ತಾಯಿಗಳು ಯೋಚಿಸಿಯೇ ಹೆಸರಿಟ್ಟಿದ್ದರು. ಅವನ ಹೆಸರು ಅವನ ರೂಪಿಗೆ ಅನ್ವರ್ಥನಾಮವೇ ಆಗಿತ್ತು. ಎಲ್ಲರೂ ಒಂದು ಬಾರಿ ನೋಡಿ ಮೆಚ್ಚುವಂತಹ ಆಕರ್ಷಣೀಯ ವ್ಯಕ್ತಿತ್ವ ಆತನದು. ಸೃಷ್ಟಿಕರ್ತ ಹೆಣ್ಣಿಗೆ ಕೊಡಬೇಕಾಗಿದ್ದ ರೂಪವನ್ನು ಗಂಡಿಗೇ ಕರುಣಿಸಿದ್ದ.

— ೨ —

ಸುಂದರ ಬರುತ್ತಿರುವುದನ್ನು ಗಮನಿಸಿದ ಪದ್ಮ "ಜಯ, ನೋಡೇ ಇಲ್ಲಿ...." ಎಂದಳು. ಜಯ ಗೆಳತಿಯನ್ನೇ ದಿಟ್ಟಿಸಿ ನೋಡಿ "ಸದ್ಯ ಸುಮ್ಮನಿರು ಮಹರಾಯತಿ" ಎಂದಳು; ಸುಂದರ ಎತ್ತಲೋ ಕಣ್ಮರೆಯಾಗಿದ್ದ.

"ಜಯ, ಅವರು ಯಾರು ಅಂತ ಗೊತ್ತಾಯ್ತೇನೋ"

"ಇಲ್ಲ ಕಣೆ ಮಹಾತಾಯಿ"

"ನಮ್ಮ ಕಾಲೇಜು ಲೆಕ್ಚರರ್ ಕಣೆ."

"ಸರೀನಮ್ಮ...."

"ಅದೇಕೆ? ಹಾಗೆ ನಿಟ್ಟುಸಿರು ಬಿಡುತ್ತಿಯ?'

"ನೀನೆಲ್ಲ ಅವರ ಪಾಠ ಕೇಳುತ್ತೀರೋ ಅಥವಾ ಅವರ ವದನಾರವಿಂದವನ್ನೇ ವೀಕ್ಷಿಸುತ್ತಾ ಮೈಮರೆತಿರುತ್ತೀರೋ?"

'ಪರವಾಗಿಲ್ಲ ಜಯ....? ಕಾಲೇಜು ಮೆಟ್ಟಿಲು ಹತ್ತದೆ ಹೋದರೂ ಕಾದಂಬರಿಗಳ ಸಾಲುಗಳನ್ನು ಕಂಠಪಾಠ ಮಾಡಿದ್ದೀಯ?" ಎಂದು ಗೆಳತಿಯ ಬೆನ್ನುತಟ್ಟಿದಳು ಪದ್ಮ.

"ಅವರನ್ನು ನೋಡುತ್ತಿದ್ದರೆ ಏನನಿಸುತ್ತದೆ ಗೊತ್ತೆ ಜಯ.?"

"ಏನನಿಸುತ್ತದೆ?'

"..............."

"ಇನ್ನೇನಮ್ಮ ಅನಿಸುತ್ತದೆ, ಅವರನ್ನು ಮದುವೆ ಮಾಡಿಕೊಳ್ಳಬೇಕು ಅನಿಸುತ್ತದೆ... ಸಂಕೋಚವೇಕಮ್ಮ ಅವರು ಗುರು ನೀನು ಶಿಷ್ಯೆ.... ನಿಮ್ಮ ತಂದೆಗೆ ಹೇಳಿಬಿಡು ನಾಳೆಯೇ ಓಲಗ ಬಾರಿಸಿಬಿಡುತ್ತಾರೆ" "ಎಂದಳು ಜಯ, ಪದ್ಮ ಗೆಳತಿಯ ಮೂಗು ಹಿಡಿದು "ಏನೇ ಅಂದದ್ದು?" ಎಂದು ಕೇಳಿದಳು. ಅಲ್ಲಿಗೆ ಬಂದ ನಾಗಮ್ಮ "ಇದೇನೇ, ನನ್ನ ತಾಯಿಯಿರಾ

(ಹದಿನೈದನೇ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7¾
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಿಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.



Phone No. 226

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಸಮುದ್ರದ ಆಳದಿಂದ ಇನ್ನೂರು ಕಿಲೋಗ್ರಾಮ್‌ಗಿಂತ ಹೆಚ್ಚು ಭಾರವುಳ್ಳ ವಸ್ತುಗಳನ್ನೂ ಎತ್ತಬಲ್ಲ ಅಮೆರಿಕನ್ ನೌಕಾದಳದ ಯಂತ್ರವಿದು. ೧೯೬೦ರಲ್ಲಿ ಶಾಂತಸಾಗರದ ಗುವಮ್ ದ್ವೀಪದ ಬಳಿ ೩೫,೮೦೦ ಅಡಿ ಆಳದಿಂದ ಬಂಡೆಯನ್ನು ಎತ್ತಿ ಅದ್ವಿತೀಯ ದಾಖಲೆಯನ್ನು ನಿರ್ಮಿಸಿದೆ ಇದು.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೪೨	೧೭—೬—೧೯೬೫	No. 42

ನಸ್ಸೇರರ ಪ್ರಯತ್ನ

ಪ್ರಧಾನಿ ಲಾಲಬಹದೂರ ಶಾಸ್ತ್ರಿಯವರು ತಮ್ಮ ಕೆನಡಾ ಸಂದರ್ಶನದ ಕಾರ್ಯಕ್ರಮದ ಮಧ್ಯೆ ಕೈರೋದಲ್ಲಿ ತಂಗಿದರು. ಸಂಯುಕ್ತ ಅರಬ ಗಣರಾಷ್ಟ್ರದ ಅಧ್ಯಕ್ಷ ನಸ್ಸೇರರು ಅವರಿಗೆ ಹೃತ್ಪೂರ್ವಕವಾದ ಸ್ವಾಗತ ನೀಡಿದರು. ಉಭಯ ಮುತ್ಸದ್ದಿಗಳ ನಡುವೆ ಬಿಚ್ಚು ಮನಸ್ಸಿನ ಮಾತುಕತೆ ನಡೆಯಿತು. ಪರಸ್ಪರ ಹಿತ ಸಕ್ತಿಗೆ ಸಂಬಂಧಿಸಿದ ವಿಚಾರಗಳಲ್ಲದೆ ಮುಖ್ಯವಾಗಿ ಮುಂಬರುವ ಅಲ್ಜೀರ್ ಸಮ್ಮೇಳನ ಮತ್ತು ಭಾರತ-ಚೀನಾ ಹಾಗೂ ಭಾರತ ಪಾಕಿಸ್ತಾನಗಳ ಗಡಿತಂಟೆಯೂ ಮಾತುಕತೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಅಲ್ಜೀರ್ಸಿನ ತಟಸ್ಥ ರಾಷ್ಟ್ರಗಳ ಆಫ್ರೋಏಷ್ಯಾ ಪರಿಷತ್ತಿನಲ್ಲಿ ಕೆಂಪು ಚೀನಾವು ತನ್ನ ಸ್ವಾರ್ಥ ಸಾಧಿಸುವ ವೇದಿಕೆಯೊಂದನ್ನು ನಿರ್ಮಿಸಲು ಬಹಳಷ್ಟು ಜಾಲ ನೇಯಿತು. ಪ್ರಧಾನಿ ಚೌ-ಎನ್-ಲಾಯ್ ಅವರು ಆಕಸ್ಮಿಕವಾಗಿ ಮತ್ತೆ ಆಫ್ರಿಕನ್ ರಾಷ್ಟ್ರಗಳ ಭೆಟ್ಟಿ ಮಾಡ ಹೊರಟಿರುವುದು ಇದಕ್ಕೆ ಮತ್ತೊಂದು ನಿದರ್ಶನ. ಆಫ್ರಿಕೆಯಲ್ಲಿ ಕ್ರಾಂತಿಯೇಳಲು ತಕ್ಕ ವಾತಾವರಣವುಂಟಾಗಿದೆ ಎಂದು ಸ್ಪಷ್ಟವಾಗಿ ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಅವರ ವಾಂಛಿತವೇನೆಂದು ಯಾರಾದರೂ ಹೇಳಬಹುದು. ಆದರೆ, ಇದೀಗ ಬಂದಿರುವ ವರದಿಗಳಂತೆ ಲಾಯರ ಪ್ರಭಾವ ಆಫ್ರಿಕೆಯಲ್ಲಿ ಮಾತ್ರವಲ್ಲ ಏಶ್ಯದಲ್ಲೂ ಕಡಿಮೆಯಾಗುತ್ತ ಬರುತ್ತಿದೆ— ಇದು ಸಂತಸದ ಸುದ್ದಿ. ಅಲ್ಜೀರ್ಸ್ ಸಮ್ಮೇಳನಕ್ಕೆ ರಶ್ಯ ಮತ್ತು ಮಲೇಶ್ಯಗಳನ್ನು ಆಮಂತ್ರಿಸುವ ಬಗ್ಗೆ ತೀವ್ರ ಭಿನ್ನಾಭಿಪ್ರಾಯವಿದೆ. ರಶ್ಯದ ಆಗಮನವನ್ನು ಚೀನಾ ಒಪ್ಪುವುದಿಲ್ಲ; ಮಲೇಶ್ಯಕ್ಕೆ ಆಮಂತ್ರಣ ನೀಡಬಾರದೆಂದು ಇಂಡೋನೇಶ್ಯ ವಾದಿಸುತ್ತಿದೆ. ಇವರಿಬ್ಬರಿಗೂ ಬೆರಳೆಣಿಕೆಯ ಸಮರ್ಥಕರೂ ಇದ್ದಾರೆ. ಆದೇನೇ ಇದ್ದರೂ ಶಾಸ್ತ್ರಿ ಮಾತುಕತೆಯ ನಂತರ ಇವೆರಡೂ ರಾಷ್ಟ್ರಗಳ ಪ್ರವೇಶದ ಬಗ್ಗೆ ಅನುಕೂಲ ಭಿಪ್ರಾಯ ಹೆಚ್ಚಿದೆಯೆಂದ ಅಧ್ಯಕ್ಷ ನಸ್ಸೇರರ ಉದ್ಗಾರವು ಅರ್ಥಪೂರ್ಣವಾಗಿದೆಯೆಂದು ನಿಜವಾಗಿಯೂ ನಂಬಬಹುದು.

ಭಾರತದ ಗಡಿಯಲ್ಲಿ ಕೆಂಪು ಚೀನಾವು ಭಾರಿ ಆಕ್ರಮಣವನ್ನು ನಡೆಸಿದ ಸಮಯದಲ್ಲಿ ಕೊಲಂಬೋ ರಾಷ್ಟ್ರಗಳು ಸಂಧಾನಕ್ಕಾಗಿ ಪ್ರಯತ್ನಿಸಿ ಒಂದು ಸೂತ್ರವನ್ನು ರೂಪಿಸಿದುವು. ಸಿಂಹಳದ ಅಂದಿನ ಪ್ರಧಾನಿ ಸಿರಿಮಾವೋ ಭಂಡಾರ ನಾಯಿಕೆಯವರು ಇದರ ಅಧ್ವರ್ಯುತನವನ್ನು ವಹಿಸಿದ್ದರಾದರೂ ಭಾರತವು ಆ ಸೂತ್ರವನ್ನು ಇದ್ದಕ್ಕಿದ್ದಂತೆ ಒಪ್ಪಿರುವುದಕ್ಕೆ ಸಂಯುಕ್ತ ಅರಬ ರಾಜ್ಯದ ನಸ್ಸೇರರೂ ಕಾರಣೀಭೂತರಾಗಿದ್ದಾರೆ. ಅವರೂ ಇತರರೂ ಇದೆಷ್ಟು ಪ್ರಯತ್ನಿಸಿದರೂ ಕೆಂಪು ಚೀನಾದಿಂದ ಅದಕ್ಕೆ ಒಪ್ಪಿಗೆ ಪಡೆದುಕೊಳ್ಳುವುದು ಸಾಧ್ಯವಾಗುವುದಿಲ್ಲ. ಅಂದಿನಿಂದ ಇಂದಿನವರೆಗೂ ಭಾರತವು ತನ್ನ ನೀತಿಯನ್ನೇ ಬಿಗಿಯಾಗಿ ಹಿಡಿದುಕೊಂಡಿದೆ ಆದರೆ, ಕೆಂಪು ಚೀನಾವು ಅದನ್ನು ಪ್ರಾರಂಭದಲ್ಲಿ ಒಪ್ಪಿದರೂ ಮುಂದೆ ತಿರಸ್ಕರಿಸಿ ನಿಶ್ಶರ್ತ ಮಾತುಕತೆಯ ಮಾತನ್ನು ಮುಂದಿಟ್ಟಿದೆ. ಹೀಗಾಗಿ ತಂಟೆಯು ಇನ್ನೂ ತಂಟೆಯಾಗಿಯೇ ಉಳಿದಿದೆ. ಸಂಧಾನದ ಮಾರ್ಗವನ್ನು ಚೀನಾ ಸಂಪೂರ್ಣವಾಗಿ ಮುಚ್ಚಿದೆ. ಇದರ ಜತೆಗೆ ಪಾಕಿಸ್ತಾನವೂ ಭಾರತವನ್ನು ಕೆಣಕುವಂತೆ ಪ್ರಚೋದನೆಯನ್ನು ನೀಡುತ್ತಿದೆ. ತಾನೂ ಗಡಿಗುಂಟ ಸೈನಿಕ ಬಲವನ್ನು ಕಲೆ ಹಾಕುತ್ತಿದೆ; ಪರಿಸ್ಥಿತಿಯನ್ನು ಮತ್ತಷ್ಟು ಕೆಡಿಸುತ್ತ ಬರಲು ಏನೇನು ಮಾಡಬೇಕೋ ಅವೆಲ್ಲವನ್ನೂ ಮಾಡುತ್ತಿದೆ ಇಂಡೋನೇಶ್ಯವನ್ನೂ ಬಗಲಿಗೆ ಹಾಕಿಕೊಂಡು ತನ್ನ ಬೇಳೆ ಬೇಯಿಸಿಕೊಳ್ಳಲು ಉಹೆಚ್ಚುತ್ತಿದೆ. ತಾನು ಶಾಂತಿಪ್ರಿಯ ರಾಷ್ಟ್ರವೆಂದೂ ಭಾರತವು ಬಂಡವಾಳಶಾಹಿಯ ಕೈಗೊಂಬೆಯೆಂದೂ ಅದು ವರ್ಣಿಸುತ್ತಿದೆ. ಅದೇ ರೀತಿಯಲ್ಲಿ ಪಾಕಿಸ್ತಾನ ಕೂಡಾ ಅನ್ಯಾಯವಾಗಿ ಭಾರತದ ಗಡಿಯನ್ನು ಉಲ್ಲಂಘಿಸುತ್ತಿದೆ ಎಲ್ಲೆಂದರಲ್ಲಿ ತನ್ನ ಚಟವನ್ನು ಅವ್ಯಾಹತವಾಗಿ ಪೂರಯಿಸಿಕೊಳ್ಳುತ್ತ ಭಾರತದ ಮೇಲೆಯೇ ದೋಷಾರೋಪಣೆ ಮಾಡುತ್ತಿದೆ. ಉಭಯತರ ಗೌರವಯುತವಾದ ಸಂಧಾನದ ಸೂತ್ರಗಳನ್ನು ಅದು ತಿರಸ್ಕರಿಸುತ್ತಾ ಬಂದಿದೆ. ಬ್ರಿಟನ್ ಪ್ರಧಾನಿ ಹೆರಾಲ್ಡ್ ವಿಲ್ಸನರ ಸಲಹೆಗಳನ್ನು ಅದು ಅಲ್ಲಗಳೆದಿದೆ ಕಚ್ಚರಣ-ಗಡಿತಂಟೆಯನ್ನು [illegible] ಜೋಡಿಸಿ ತನ್ನ ಸ್ವಾರ್ಥ ಸಾಧನೆಗೆ ಅವಕಾಶ ಕಲ್ಪಿಸಲು ಹವಣಿಸುತ್ತಿದೆ. ತನ್ನ ಆಪ್ತ [illegible] ಆದೇಶ—ಸಹಾಯಗಳಿಗನ್ವಯವಾಗಿ ಗಡಿಯಲ್ಲಿ ಸೇನೆಯನ್ನು ಕೂಡಿಸುತ್ತ ಶಾಂತಿ—ಸುವ್ಯವಸ್ಥೆಗಳಿಗೆ ಭಂಗ ಮಾಡುತ್ತಿದೆ.

ಚೀನಾ - ಪಾಕಿಸ್ತಾನಗಳ ಕುಟಿಲ ನೀತಿಯ ಮುಂದೆ ಭಾರತವೆಂದಿಗೂ ಶರಣಾಗತವಾಗಲಾರದು, ಎಂಬುದೀಗ ಜಗಜ್ಜಾಹೀರಾಗಿದೆ. 'ನಾವು ಹೋರಾಡುವೆವು; ದೇಶದ ಸಮಗ್ರತೆಯನ್ನು ಸಂರಕ್ಷಿಸುವೆವು' ಎಂದು ಎಲ್ಲ ಭಾರತೀಯರೂ ದೃಢ ಸಂಕಲ್ಪ ಮಾಡಿದ್ದಾರೆ. ಇದೇ ದೃಢತೆಯಿಂದಾಗಿ ಶಾಸ್ತ್ರಿಯವರ ನೀತಿಯ ಬಗ್ಗೆ ಎಲ್ಲರೂ ತಲೆದೂಗತೊಡಗಿದ್ದಾರೆ. ಕೆನಡಾದ ಪ್ರಧಾನಿ ಪಿಯರ್ಸನ್ನರು ಅವರನ್ನು ಮಹಾತ್ಮಾ ಗಾಂಧಿ ಮತ್ತು ಪಂಡಿತ ನೆಹರೂರವರಿಗೆ ಸಮರ್ಥ ಉತ್ತರಾಧಿಕಾರಿ ಎಂದು ಉದ್ಗರಿಸಿರುವುದೂ ಯಥಾರ್ಥವೆನಿಸಿದೆ. ಇಂತಹ ವಿಲಕ್ಷಣ ಸಂದರ್ಭದಲ್ಲಿ ನಸ್ಸೇರರು ಮುಂದೆ ಬಂದು ಗಡಿತಂಟೆಯ ಪರಿಹಾರ ಕಾರ್ಯದಲ್ಲಿ ಉತ್ಸಾಹ ತೋರ ಹತ್ತಿದ್ದಾರೆ. ಬಹು ದಿನಗಳಿಂದ ನನೆಗುದಿಗೆ ಬಿದ್ದಿರುವ ವಿರಸಕ್ಕೆ ಹೇತುವಾದ ಈ ತಂಟೆ ದೂರವಾಗಬೇಕೆಂದು ಭಾರತವೂ ಬಯಸುತ್ತದೆ. ಸಂಧಾನದ ಬಾಗಿಲುಗಳನ್ನು ಅದು ಸದಾಕಾಲವು ತೆರೆದಿಟ್ಟಿದೆ; ಮುಚ್ಚಿದವರು ಎದುರಾಳಿಗಳು. ಅಲ್ಜೀರ್ಸ್ ಸಮ್ಮೇಳನದ ವೇಳೆ ಪ್ರಧಾನಿ ಶಾಸ್ತ್ರಿ ಮತ್ತು ಪ್ರಧಾನಿ ಲಾಯರ ಹಾಗೂ ಶಾಸ್ತ್ರಿ-ಅಯ್ಯೂಬರ ಭೆಟ್ಟಿ ಮಾಡಿಸುವ ಮತ್ತು ಆಗ ತಂಟೆ ಪರಿಹಾರಕ್ಕಾಗಿ ಪ್ರಯತ್ನಿಸುವ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸುವಲ್ಲಿ ನಸ್ಸೇರರು ಮುಂದಾಗಿದ್ದಾರೆ. ತನ್ನ ನ್ಯಾಯವಾದ ನೀತಿಗೆ ಕಲಂಕ ತಟ್ಟದಂತೆ ಯಾರೊಡನೆ ಬೇಕಾದರೂ ಮಾತುಕತೆ ನಡೆಸಲು ಭಾರತವು ಸಿದ್ಧವಾಗಬಹುದು. ಆದರೆ ಭಾರತದ ಘನತೆಗಾಗಿಯೇ ಮರುಗುತ್ತಿರುವ ಚೀನ—ಪಾಕಿಸ್ತಾನಗಳು ಇದಕ್ಕೆ ಸಿದ್ಧರಾದಾರೆ?

ವಚನ ಸುಧೆ

ಜಿಹ್ವಾ ಮೇ ಮಧುಮತ್ತಮಾ ।
ಕರ್ಣಾಭ್ಯಾಂ ಭೂರಿ ವಿಶ್ರುವಮ್॥
(ತೈತ್ತಿರೀಯೋಪನಿಷತ್, ೧.೪)

O ನನ್ನ ನಾಲಗೆಯು ಅತ್ಯಂತ ರುಚಿಯುತವಾಗಲಿ; ಕಿವಿಗಳಿಂದ ಬಹಳಷ್ಟು ಕೇಳುವಂತಾಗಲಿ.

OO ಭಾಷೆಯಲ್ಲಿ ಸ್ವಾದವನ್ನು ತುಂಬಬೇಕು. ಕಠೋರ ಭಾಷಣವನ್ನು ಮಾಡುವುದು ಉಚಿತವಲ್ಲ. ಸದುಪದೇಶವನ್ನು ಕೇಳಬೇಕು. ದುರ್ವಚನಗಳನ್ನು ಆಲಿಸುವುದು ಬಹಳ ಕೆಡುಕು.

ಬಿಸಿ ತುಪ್ಪ

ಯು. ಪಿ. ಎಸ್. ಸಿ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸಂವಿಧಾನ ಮಾನ್ಯಿತ ೧೪ ಭಾಷೆಗಳಲ್ಲಿಯೂ ಏರ್ಪಡಿಸುವುದು, ರಾಜ್ಯದ ಜನಸಂಖ್ಯೆಗನುಸಾರ ಸೀಟುಗಳನ್ನು ಹಂಚುವುದು—ಭಾಷಾ ಪ್ರಶ್ನೆಯ

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ

"ಅಂತೂ ಅನಿರ್ಬಂಧ ರೇಶನಿಂಗ್ ಜಾರಿಯಾಗುತ್ತೇಂತ ಕಾಯ್ತು..."

"ಪೇಟೆಯಲ್ಲೂ ಅಕ್ಕಿ ಸಿಗುತ್ತೇಂತ ಕಾಯ್ತು ....ದೇವ್ರು ಕೊಡುವಾಗ ಎತ್ತಿಯೆತ್ತಿಯೇ ಕೊಡುತ್ತಾನೆ. ಕೊಡದಾಗ ಮಾತ್ರ..."

ಗೇಹ ರಾಜ್ಯದಲ್ಲಿ

ಯುದ್ಧದಾಚರತಿ ಶ್ರೇಷ್ಠಃ.......

"ಸ್ವಲ್ಪ ಇಲ್ಲಿ ಕೇಳೀಂದ್ರೆ...."

"ಹ್ಞಾಂ..."

"ಹ್ಞಾನಂದ್ರೆ ಹೇಗೆ? ತುಸು ಕಿವಿಗೊಟ್ರೆ...."

"ಸಾಕು ಸಾಕೂಂದೆ..."

"ಏನ್ರಿ ಅದು ಸಾಕೂಂತ ಕಣ್ಣು ಏರ್ಸೋದು?"

"ಏನೆಂದೆ? ಕಣ್ಣು ಏರ್ಸೋದೆ? ಹ್ಞ..."

"ಅಲ್ರಿ, ಈ ನಿಮ್ಮ ವಿಕಾರಗೊಂಡಿರೋ ಕಂಗಳನ್ನ ಕಂಡ್ರೆ ನುಂಗ್ಲಿಕ್ಕೆ ಬರೋ...."

"ಹೌದೌದು, ಯಮನಲ್ವೆ? ಯಮ!'

"ಏನೋಪ್ಪ.... ಅಲ್ರಿ, ಯಾಕೆ ಈ ಬಗೆಯ ಉಗ್ರನರಸಿಂಹನ ಅವತಾರಾಂತ?"

"ಸರಿ ಸರಿ. ನಿನ್ನಂತಹ ಹೆಣ್ಣು ಹಿರಣ್ಯಕಶಿಪುವನ್ನ ದಾರಿಗೆ ತರಬೇಕೆಂದ್ರೆ ಹಾಗೆ ಆಗದೇ ಸಾಧ್ಯವುಂಟೆ?"

'ಸರಿಯಪ್ಪಾ, ಏನ್ಮಾಡ್ತೀರಿ? ಎದೇನಾ ಸೀಳಿ ಬಿಡ್ತೀರಾ? ಬನ್ನಿ, ನಿಮ್ಮ ನಿಶಿತ ನಖಗಳನ ಮಸೆದು ಮುಂದಕೆ....'

"ಮತ್ತೆ ನಿನ್ನ ಏನುಮಾಡಬೇಕೆ? ನಿನ್ನಮಾತನ್ನ ಕೇಳಿದ್ರೆ..."

"ಯಾಕೆ ಬಾಯಲ್ಲಿ ಮಾತ್ರ ವೀರತ್ವ ತೋರಿಸ್ತೀರಿ? ಬನ್ನಿ ಮುಂದಕ್ಕೆ. ಏನು ಮಾಡಬೇಕೆಂದು ನೀವು ಬಯಸ್ತೀರೋ ಹಾಗೆ ಮಾಡಿಬಿಡಿ..."

"ಅದನ್ನ ನೀನು ನನ್ಗೆ ಹೇಳ್ಬೇಕೇನು?"

"ನಿಮ್ಗೆ ಹೇಳೋಕೆ ನಾನ್ಯಾಕರವಳು? ಅದ್ರೂ, ಅದಕ್ಕೆ ಎದ್ರು ಮಾತಾಡೋಲ್ಲಾಂತ ಅಂದೆ ಮಾತ್ರ...."

"ಹ್ಞಾಂ... ಅಂದ್ಯೆ, ನೀನು ಎದ್ರು ಆಡೋಲ್ಲ?"

"ಆಡೋಮಾತನ್ನ ಮುಂದುಗಡೇಲೇ ಅನ್ತೇನೆ...."

'ಅದ್ರಿಂದ್ಲೇ ನೀನು ಕಿವಿಗೊಡೋಕೆ ಹೇಳಿದಿಯಲ್ವೆ?'

'ಓ, ತಿಳೀತು ಬಿಡಿ ಈಗ, ನಿಮ್ಮ ರೌದ್ರಾವತಾರಕ್ಕೆ ಏನು ಕಾರಣಾಂತ....'

'ಎಲ್ಲಾ ತಿಳಿಯುತ್ತೆ ನಿನಗೆ. ತಿಳೀದೇ ಮತ್ತೇನು? ಏನಂತೆ? ಏನಾದ್ರು ಹುಚ್ಚು ಗಿಚ್ಚು ಹಿಡಿದಿದೇಯೆ?'

'ಹುಚ್ಚು? ಯಾರಿಗೆ?'

'ಮತ್ಯಾರಿಗೆ? ನಿನಗೆ?

'ಯಾಕೆ? ಏನಾಯ್ತು?'

'ಸಾಕಾಯ್ತು ಬಿಡು. ಎಲ್ಲಾ ಗೊತ್ತಿದ್ದೂ ಏನೂ ಗೊತ್ತಿಲ್ಲದವಳಾಗೆ ನಟನೆ ಮಾಡ್ತೀಯಲ್ಲ!'

'ನಟನೆ ಮಾಡೋಕೆ ನಾನೆಲ್ಲಿ ನಾಟ್ಯ ಕಲ್ತಿದೇನೆ?

'ಹೌದು, ಇನ್ನು ಅದೂ ಒಂದು ಬಾಕಿ. ನಾಟ್ಯ ಕಲೀದೇನೇ ಭರತನನ್ನ ಮೀರಿಸೋಳು ಇನ್ನು...?

"ಅದೆಲ್ಲಾ ಇರ್ಲಿ, ಏನಾಯ್ತು ಈಗ?"

"ಆಗೋದೇನು ಮತ್ತೆ? ಕೈಹಿಡಿದ ಗಂಡನ ಕಿವಿ ಹಿಡಿಯೋಕೂ ಹಿಂಜರಿವುದಿಲ್ಲಾಂತಂದ್ರೆ...."

"ಯಾವಾಗ್ರಿ, ನಾನು ಕಿವಿಹಿಡಿಯೋಕೆ ಬಂದವಳು?"

"ಮತ್ಯಾಕೆ ಕಿವಿಗೊಡಿ ಅಂದಿಯಲ್ಲಾ?"

'ಓ....ಸರ್ಯಾಗಿಲ್ರಿ ನೀವು....ನಾನು ಕಿವಿಗೊಟ್ಟು ಆಲಿಸಿ ಅಂದ್ರೆ..."

"ಹೌದಪ್ಪ, ಮೊದ್ಲು ನಿನ್ನ ಕೈಗೆ ನನ್ನ ಕಿವಿಕೊಡಬೇಕು, ಆ ಮೇಲೆ ನೀನು ನನ್ನ ಆರ್ತನಾದವನ್ನು ಆಲಿಸಬೇಕು..."

'ಶ್ಶ್ಯೋ....ಹಾಗೆಲ್ಲಾ ಬಾಯ್ಗೆ ಬಂದಂತೆ ಅಂದ್ಕೊಳ್ಳ ಬೇಡ್ರಿ. ಯಾರಾದ್ರೂ ಕೇಳಿದ್ರೆ ಏನು ಹೇಳಿಯಾರೂಂತಾದ್ರೂ ಪರಿವೆ ಬೇಡ್ವೆ?"

"ಅನ್ನೋರು ಏನು ಬೇಕಾದ್ರೂ ಅನ್ಲಿ. ಆದದ್ದು ಏನೂಂತ ನಮ್ಗೆ ಗೊತ್ತಿಲ್ವೆ?

"ಅಲ್ರಿ, ಈಗ ಆದದ್ದಾದ್ರೂ ಏನೂಂತ?"

'ಮತ್ತಿನ್ನೇನು ಆಗ ಬೇಕೆ? ಕಿವೀನ ನನ್ನ ಕೈಗೆ ಕೊಡಿ ಅಂದಿಯಲ್ಲಾ....'

"ಅಯ್ಯೋ, ನಿಮ್ಮ ತಲೆ! ಅಲ್ರಿ, ನಾನು ಹೇಳೋ ಮಾತನ್ನಕೇಳೀಂತಂದ್ರೆ..."

"ಅಹಾ.... ಹಾಗೇನು? ಸುಂಸುಮ್ನೆ ನಿನ್ನಲ್ಲಿ ತಪ್ಪನ್ನ ಹುಡುಕಿದೆನಲ್ವೆ! ಹ್ಞಾಂ ...ಸರಿ. ಇಗೋ, ಮಾಡಿದ ತಪ್ಪಿಗೆ ನಾನೇ ಕಿವಿ ಹಿಂಡಿ..."

"ಅಯ್ಯೋ, ಯಾಕ್ರಿ ನನ್ನ ಕಿವಿ ಹಿಡೀತೀರಿ?"

'ಮತ್ತಿನ್ನೇನು ಮಾಡಬೇಕೆ?"

"ಅಲ್ಲ, ತಪ್ಪು ಮಾಡಿದೋರು ನೀವು, ಶಿಕ್ಷೆ ಅನುಭವಿಸೋಕೆ ನಾನು...."

"ಅದೆ. ಧರ್ಮವೇ ನೋಡು...."

"ಹ್ಯಾಗೆ?"

"ಹ್ಯಾಗಂದ್ರೆ?....ಕೇಳು, ಸೀತೆಯನ್ನ ಕದ್ದು, ರಾಮನಿಗೆ ದ್ರೋಹ ಬಗೆದು ಅಪರಾಧಮಾಡಿದವ ರಾವಣ...."

"ಹೌದು, ಆದದ್ದರಿಂದ್ಲೇ ಅವನು ಸತ್ತ...."

'ಅವ್ನು ಸತ್ತ ನಿಜ. ಆದ್ರೆ ಅವನ ಹೆಂಡ್ತಿ ವೈಧವ್ಯವನ್ನ...'

"ಹ್ಞಾಂ...ಅದಕ್ಕೇನು ಮಾಡೋದು? ಅದು ಆಕೆಯ ಪ್ರಾರಬ್ಧ ಕರ್ಮ..."

'ನಿನಗೂ ಹಾಗೆಯೇ...'

"ಏನು?"

"ಮತ್ತಿನ್ನೇನು? ಪ್ರಾರಬ್ಧ ಕರ್ಮ.."

'ಹೌದಪ್ಪ ಹೆಂಡಂದಿರು ಇರೋದೇ ಗಂಡಂದಿರ ಪಾಪದ ಫಲ ಅನುಭವಿಸೋದಕ್ಕೆ...'

'ಮತ್ಯಾಕೆ ಅವಳಿಗೆ ಅರ್ಧಾಂಗೀಂತ ಹೆಸ್ರು?'

"ಅದಕ್ಕೇ ತಪ್ಪುಮಾಡೋದಕ್ಕೆ ನೀವು, ದಂಡನೆಗೆ ಗುರಿಯಾಗೋಕೆ ನಾನು.... ಇನ್ನೆಷ್ಟು ಸಮಯ ಹೀಗೇ ಇರಬೇಕೂಂತ?"

"ಅರ್ಧಾಂಗಿಯಾಗಿರೋ ತನಕ .... ಹ್ಞಾಂ....ಅದೆಲ್ಲಾ ಇರ್ಲಿ. ಏನಂತೆ? ಏನು ಹೇಳೋದಕ್ಕೆ ಹೊರಟಿದ್ದೀಯೋ?"

"ಹೊರಡಿಗೋದೆಲ್ಲಿ?"

'ಮತ್ತೇನೋ ಹೇಳ್ಬೇಕೂಂದೆಯಲ್ಲಾ?"

"ಹೌದು ನೋಡ್ರಿ....ನಮ್ಮ ವಿಜಯಲಕ್ಷ್ಮಿ..."

"ವಿಜಯ ಲಕ್ಷ್ಮಿಯೆ? ಯಾರವಳು? ನಮ್ಮ ಶ್ಯಾನುಭಾಗರ ಮಗಳೆ...."

"ಅದಕ್ಕೇ ಅನ್ನೋದು ನಿಮ್ಗೆ ತಲೆಯಿಲ್ಲಾಂತ....?"

'ಅಲ್ವೆ? ಮತ್ಯಾರೇ ಆಕೆ?"

"ಅಯ್ಯೋ, ಅದೂ ಗೊತ್ತಿಲ್ವೆ? ನಮ್ಮ ನೆಹರೂರವರ ತಂಗಿ..."

"ಓ, ಅವ್ರ ಹ್ಞಾಂ....ಸರಿ. ಏನಂತೆ? ಯಾಕೆ ಅವರ ಮಾತೀಗ?"

"ಅವ್ರ ಅದೆಷ್ಟು ಒಳ್ಳೆಯವರೆಂದ್ರೆ....!

"ಯಾಕೆ? ಏನಾಯ್ತು? ಕೈಗೆ ಬಂದಿರೋ ಮಂತ್ರಿ ಪದವಿಯನ್ನ ತೃಣ ಸಮಾನ ಮಾಡಿದರೆ?"

"ಏನಂತೀರಾ ನೀವು? ಅವರಿಗೆಲ್ಲಿ ಮಂತ್ರಿ ಪದ ಕೊಟ್ಟಿದ್ದಾರೆ?"

'ಕೊಟ್ಟಿದ್ದಲ್ವೆ.... ಕೊಡುತ್ತಾರೇಂತ ಸುದ್ದಿಯಿತ್ತು. ವಿದೇಶ ವ್ಯವಹಾರಗಳನ್ನು ಆಕೆಯ ಕೈಗಳಿಗೆ ಕೊಡುತ್ತಾರೇಂತ ಗಾಳಿ ಸುದ್ದಿ ಇತ್ತು...."

"ನಿಮ್ಮ ಸುದ್ದಿಗಳನ್ನೆಲ್ಲಾ ನಂಬಿದ್ರೆ ...."

"ಅದಕ್ಕೆ ಅಂದಿರೋದು ನೋಡು.... ತಲೆ ಬುಡ ಇಲ್ಲದ ಸುದ್ದಿಗಳನ್ನು ಹರಡಿಸಬಾರದೂಂತ...."

'ಇದೇನು ಸುದ್ದಿಗಿದ್ದಿಯೇನೂ ಅಲ್ಲ ನೋಡಿ...."

'ಹೌದಪ್ಪ ನಿನ್ನ ಬಾಯಿಂದ ಬರೋದೆಲ್ಲಾ ಸುದ್ದಿಯಲ್ಲ; ಅದು ವೇದವಾಕ್ಯ ..."

'ನಿಮಗೆ ವಿಶ್ವಾಸವಿಲ್ಲವಾದ್ರೆ ಬೇಡ..'

"ಆಯ್ತಪ್ಪ, ಹೇಳು, ಹೇಳು ನೀನು ಸೊಟ್ಟಗೆ ಮುಖ ಮಾಡಿಕೊಂಡು ಹೋದ್ರೆ ಪ್ರಯೋಜನವೇನು?"

"ಅಷ್ಟು ಕಷ್ಟದಿಂದೇನೂ ನೀವು ಕೇಳೋದುಬೇಡ...."

'ಇಲ್ಲ ಕಣೇ... ಅಯ್ಯೋ ಇವಳ್ಳೆ, ಏ, ಬಾರೋ ಇಲ್ಲಿ....'

"ಏನು?"

"ಹೇಳಮ್ಮ, ನಿಂಗೆ ಏನೇನು ಹೇಳ್ಬೇಕೂಂತಿದೆಯೋ ಅದನ್ನೆಲ್ಲಾ ಹೇಳು ...."

'ಹೌದು, ಕೋಣದ ಮುಂದೆ ಕಿನ್ನರಿ ಬಾರಿಸೂಂತಲ್ವೆ? ನೀವನ್ನೋದು?'

"ಅಯ್ಯೋ, ನೀನೇ, ಹೀಗೆಲ್ಲಾ ಹಠ ಮಾಡಿದ್ರೆ ಹೇಗೇಂತ? ಏನೋ ತಮಾಷೆಗೇಂತ ನಾಲ್ಕು ಮಾತು ಆಡಿದ್ರೆ ಅದಕ್ಕೂ ಸಿಟ್ಟಾಗೋದೆ? ನೋಡು ನಿನ್ನ ಮುಖವನ್ನು.... ಕಾದು ಕೆಂಪೇರಿದೆ ...ಭತ್ತ ಹಾಕಿದ್ರೆ ಅರಳು...."

"ಸಾಕು ನಿಮ್ಮದು. ತಮಾಷೇ ತಮಾಷೇಂತ ನನ್ನ ರೇಗಿಸೋದು ಮತ್ತೆ ಗೋಳು ಹೊಯ್ಕೊಳ್ಳೋದು ಬೇರೆ....ಯಾವಾಗ್ಲೂ ನಿಮ್ಮ ಮಾತನ್ನು ನಾಯಿ ಹಾಗೆ ಕೇಳ್ತಾ ಬಂದಿದ್ದೇನೆ, ಈವತ್ತೊಂದು ನಾನು ಕೇಳೀಂತಂದ್ರೆ ಆದ್ದೆ ರಾಮಾಯಣ ಅಲ್ವೆ?"

"ಇಲ್ಲಿ ಬಾರೇ.... ನೋಡೋಣ ಮುಖಾರವಿಂದ... ಪಾಪ, ಅರಳಿದ ಕೆಂಪು ಸಂಪಿಗೆಯಂತಿದೆ ಕಣೆ..."

'ಹೌದು, ಅದ್ರಲ್ಲೂ ನಿಮ್ಮದು ತಮಾಷೆ...'

"ಅದೆಲ್ಲಾ ಇರ್ಲಿ, ಏನು ನೀನು ಅನ್ನೋದು?"

'ಏನೂ ಇಲ್ಲ....ಬಿಡಿ ನೋಡೋಣ....

"ಊಹ್ಞಾಂ....ಹೇಳದೆ ಬಿಡೋಲ್ಲ ವಿಜಯ ಲಕ್ಷ್ಮಿ ಪಂಡಿತ ಅಂದೆಯಲ್ಲಾ? ಏನಾಯ್ತು ಅವರಿಗೆ?'

'ಆಗೋದು ನಿಮಗೆ...ಅಲ್ಲಾ, ಅವ್ರ ಸುದ್ದಿ ಒಂದು ಹೇಳೋಣಾಂತಂದ್ರೆ....'

"ಹೇಳು ಕೇಳೋಣ..."

'ಖಂಡಿತಕ್ಕೂ!'

'ಹ್ಞಾ......'

'ಹಾಗಾದ್ರೆ ಕೇಳಿ......'

"ಕಿವಿಗೊಡೋದು ಬೇಡ್ವೆ?'

"ಸುರುವಾಯ್ತು ಮತ್ತೆ ಪುನಃ....'

"ಇಲ್ಲ ಕಣೇ ಇಲ್ಲ, ಏನು ಕಥೆ?"

'ನೋಡಿ, ಅವ್ರ ತನ್ನನ್ನು ಆರಿಸಿದ ಜನರ ಮಧ್ಯದಲ್ಲೇ ಒಂದು ಗುಡಿಸಲು ಕಟ್ಟಿ ಇರ್ತಾರಂತೆ....'

"ಯಾಕಂತೆ? ರಾಜಭವನದಲ್ಲಿ ಆನಂದವಾಗಿ ಬದುಕಿದ ಜೀವ ಅದು...."

"ಅದಕ್ಕೇ ನೋಡಿ ಇದು ಭಾರಿ ಸುದ್ದಿ...."

"ಹೌದೌದು ಭಾರಿ ಭಾರಿ ಸುದ್ದಿ.... ಇರ್ಲಿ...ಯಾಕೆ ಹಾಗೆ ಮಾಡ್ತಾರಂತೆ?"

"ತನ್ನನ್ನು ಲೋಕ ಸಭೆಗೆ ಆರಿಸಿದ ಮತದಾರರ ನಡುವೇನೇ ಇರಬೇಕು, ಅವರ ಸುಖಕಷ್ಟಗಳನ್ನು ಬೇಕು ಬೇಡಗಳನ್ನು ತಿಳಿದುಕೊಂಡು ಅವನ್ನು ಸರಕಾರದ ಗಮನಕ್ಕೆ ತಂದು ಸರಿಮಾಡಬೇಕು ಎಂಬ ಯೋಚನೆಯಿಂದ...."

"ಹ್ಞಾ....ಒಳ್ಳೆಯ ಯೋಚನೆ. ಆದ್ರೆ, ಅವರೊಬ್ರು ಮಾತ್ರ ಮಾಡಿದ್ರೇನು ಪ್ರಯೋಜನ?'

"ಅವರ ಮಾದರಿಯನ್ನು ಉಳಿದವರೂ ಅನುಸರಿಸಬಾರದೇಕೆ?"

"ಬಾರದ್ದೂಂತೇನು ಇಲ್ಲ ನೋಡು. ಸಾಮಾನ್ಯವಾಗಿ ಅವ್ರೆಲ್ಲಾ ನಗರಗಳನ್ನೇ ಮೆಚ್ಕೋರು..."

"ಅದ್ರಿಂದ್ಲೇ ಹಳ್ಳಿಯಲ್ಲಿ ಗುಡಿಸಲಲ್ಲಿ ಇರಲು ನಿರ್ಧರಿಸಿದ್ದಾರೆ ನೋಡಿ ಅವರು. ಅದಕ್ಕೇ ಅನ್ನೋದು ನೆಹರೂರ ತಂಗೀಂತ..."

"ಹ್ಞಾಂ....ಸರಿಯಾಯ್ತು ನು....ಇದಕ್ಕೆ ಮೊದ್ಲು ಅವ್ರ ತಂಗಿಯಾಗಿರ್ಲಿಲ್ಲ.... ಇಲ್ಲ ಕಣೇ ಇಲ್ಲ....ಸರಿ ಅವ್ರ ಮನೆ ಹಳ್ಳಿಯಲ್ಲಿರುತ್ತೆ....ದೀಪ, ನೀರು ... ?'

"ಅದು ಇದ್ದೇ ಇರುತ್ತೇನ್ರಿ. ಅಲ್ಲದೆ ಟೆಲಿಫೋನ್ ಸೌಕರ್ಯವೂ ಇರುತ್ತಂತೆ...'

"ದೂರ ದರ್ಶಕವೂ ಇರಬಹುದು...'

"ಸಾಕು ಸುಮ್ನಿರೀಂದ್ರೆ...ಅವೆಲ್ಲಾ ಆಧುನಿಕ ವ್ಯವಹಾರ ಸೌಕರ್ಯಗಳಿಲ್ಲದೆ ಹೋದರೆ ಇಂದಿನ ಪ್ರಪಂಚ ಹೇಗೆ ನಡೆಯುತ್ತೆ?"

(ಹದಿಮೂರನೇ ಪುಟ ನೋಡಿರಿ)

ಕುಂದಾಪುರ ಮುನ್ಸೀಫ್ ಕೋರ್ಟಿನಲ್ಲಿ

S. C. No. 95/65

ವಾದಿ: ಲಕ್ಷ್ಮಿನಾರಾಯಣಯ್ಯ.

ಪ್ರದಿ: ಲಕ್ಷ್ಮಣ ಆಚಾರಿ.

ಈ ಮೂಲಕ ಪ್ರತಿವಾದಿಗೆ ತಿಳಿಯಿಸುವುದೇನೆಂದ್ರೆ—

ವಾದಿಯು ತನಗೆ ನಿನ್ನಿಂದ ಬರತಕ್ಕ ಡಿ/ನೋಟಿನ ಸಾಲದ ಆ್ಯವೇಜಿನ ಬಗ್ಗೆ ನಿನ್ನ ಮೇಲೆ ದಾವೆ ದಾಖಲು ಮಾಡಿರುತ್ತಾನೆ. ಸದ್ರಿ ದಾವೆ ತಾ. 5-7-65ಕ್ಕೆ ತನಿಖೆಗೆ ಇದೆ. ಆ ದಿವಸ ಕೋರ್ಟು ಮುಂದೆ ಹಾಜರಾಗದೆ ಇದ್ದಲ್ಲಿ ನಿನ್ನನ್ನು *ex parte* ಮಾಡಿ ತೈಪೇಸು ಪ್ರಕಾರ ಡಿಕ್ರಿ ಆಗುತ್ತದೆ ತಿಳಿದಿರಲಿ.

ಹುಕುಂ ಪ್ರಕಾರ

G. V. Aithal.

Advocate for Plaintiff.

ಶ್ರೀ ಸ್ವಾಮಿ ಚಿನ್ಮಯಾನಂದ ಮೀಮಾಂಸೆ

ಗೀತಾ-ದ್ವಿತೀಯ ಅಧ್ಯಾಯ

ಸಂಗ್ರಹಕರ್ತೆ
ಶ್ರೀಮತಿ ಆನಂದಿ ಸದಾಶಿವ ರಾವ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಯುದ್ಧ ತಡೆಯಲು ಸಂಜಯನ ಅಂತಿಮ ಯತ್ನ

ಶ್ರೀಕೃಷ್ಣನು ಯುದ್ಧವನ್ನು ಮಾಡುವ ಸಮಯದಲ್ಲಿ ಪಾಂಡವರ ನೆರವಿಗೆ ನಿಂತನು. ಪಾಂಡವರು ಅರಣ್ಯವಾಸ ಮಾಡುತ್ತಿರುವಾಗ ಅವರೊಡನೆ ಇದ್ದು ಅರ್ಜುನನನ್ನು ಅವಲೋಕಿಸುತ್ತಿದ್ದನು. ಆಗ ಅರ್ಜುನನಲ್ಲಿ ಸುಪ್ತವಾದ ಬಯಕೆಗಳಿಂದ ಉಂಟಾದ ಶಕ್ತಿ ವಿನಿಯೋಗಕ್ಕೆ ಅವನನ್ನು ತಪಶ್ಚರ್ಯೆಗಾಗಿ ಹೋಗಲು ಹೇಳಿ, ದೇವತೆಗಳಿಂದ ಆಯುಧಗಳನ್ನು ಪಡೆಯುವಂತೆ ಮಾಡಿದ್ದನು. ಹೀಗೆ ಅವಲೋಕಿಸುತ್ತಾ ಇದ್ದ ಶ್ರೀಕೃಷ್ಣನು ಅರ್ಜುನನು ಕುರುಕ್ಷೇತ್ರ ಭೂಮಿಯಲ್ಲಿ ಹತಾಶನಾದಾಗ ಏಕೆ ಹೀಗೆ ಅವನು ವಿಷಾದಗೊಂಡನು ಎಂದು ತಕ್ಷಣ ತಿಳಿದುಕೊಂಡನು. ಅದರಿಂದಾಗಿ ಅರ್ಜುನನ ರೋಗದ ಕಾರಣ ತಿಳಿದನು. ರೋಗದ ಕಾರಣ ತಿಳಿಯುವುದು ಚಿಕಿತ್ಸೆಯಲ್ಲಿ ಶೇಕಡಾ ಮುಕ್ಕಾಲು ಪಾಲು ಅಂಶವಾಗಿದೆ. ಅದರಿಂದಾಗಿ ಶ್ರೀಕೃಷ್ಣನು ಅರ್ಜುನನನ್ನು ಮೊದಲು ಮಾತನಾಡಲು ಬಿಟ್ಟು ಅವನು ತೀರಾ ನಿರ್ವಿಣ್ಣನಾದ ಬಳಿಕ, ದಿಕ್ಕು ತೋಚದೆ ಕೊನೆಗೆ ತನ್ನನ್ನು ಶರಣಾಗತನಾಗಿ ದಾರಿ ತೋರು ಎಂದು ಬೇಡಿದಾಗ, ಗೀತೋಪದೇಶ ಮಾಡಿದನು.

ಅರ್ಜುನನಿಗೆ ಮೊದಲು ತಾನು ಏನು ಹೇಳುತ್ತಿರುವೆನೆಂದು ತಿಳಿಯದೆ ಇದ್ದು ಕೊನೆಗೆ ತನ್ನ ಪರಿಸ್ಥಿತಿಯ ಅರಿವು ಆದಂತೆ ತನ್ನ ವಿವೇಕವು ನಷ್ಟವಾಗಿದೆ ಎಂದು ತಿಳಿದಂತೆ ಶ್ರೀಕೃಷ್ಣನನ್ನು ದಾರಿ ತೋರು ಎಂದು ಬೇಡುವಂತಾಯಿತು. ಇಂತಹ ಸ್ಥಿತಿಯಲ್ಲಿ ಗೀತೆ ದಿವ್ಯೌಷಧ, ಇದಿರಾದ ಘೋರ ಜಟಿಲ ಪರಿಸ್ಥಿತಿಯನ್ನು ಧಾರ್ಮಿಕ ಜೀವನದಲ್ಲಿ ಬಾಳಿ ಬಂದ ತತ್ವಗಳಿಂದ ಉತ್ಸಾಹದಿಂದ, ಇದಿರಿಸಲು, ಹೇಳುವ ಹಿತೋಪದೇಶವೇ ಗೀತೆ. ಆ ಬಾಳಿ ಬಂದ ತತ್ವಗಳು ಉಪನಿಷದ್ ತತ್ವಗಳು. ವ್ಯಾಸರ ಗ್ರಂಥರಚನಾ ಕೌಶಲ್ಯದಿಂದಾಗಿ ಓದುಗರಿಗೆ ಒಂದು ಸನ್ನಿವೇಶವು, ಬೇಸರ ಬರುವಂತಾಗುವ ಸಮಯದಲ್ಲಿ ಆ ಸನ್ನಿವೇಶವನ್ನು ಬದಲಾಯಿಸುವಂತಹ ನಾಟಕೀಯ ಕ್ರಮವು ಈ ಗೀತೆಯಲ್ಲಿ ಇರುವುದನ್ನು ತಿಳಿಯಬಹುದು.

ಒಂದು ಬಾರಿ ಕುರುಕ್ಷೇತ್ರದ ಯುದ್ಧ ಭೂಮಿಯ ರೌದ್ರತೆ, ಅದು ಓದುಗರಿಗೆ ಬೇಸರ ಜುಗುಪ್ಸೆ ತರುವ ಸಮಯಕ್ಕೆ ತಕ್ಷಣ ಓದುಗರನ್ನು ಹಸ್ತಿನಾಪುರದ ಧೃತರಾಷ್ಟ್ರನ ಶಾಂತವಾದ ರಾಜಗೃಹದ ಕೋಣೆ, ಅಲ್ಲಿ ಪ್ರಶಾಂತ ವಾತಾವರಣ, ಗದ್ದಲವಿಲ್ಲ. ಸಂಜಯನು ಅಂಧನಾದ ರಾಜನಬಳಿ ಕುಳಿತು ಯುದ್ಧ ಭೂಮಿಯಲ್ಲಿ ನಡೆಯುವ ಸಂಗತಿಗಳನ್ನು ಆಡುವ ಮಾತುಗಳನ್ನು ನೋಡಿ, ಕೇಳಿ ಅದನ್ನು ಧೃತರಾಷ್ಟ್ರನಿಗೆ ಹೇಳುವನು. ಸಂಜಯನು ಕೌರವರ ಪಕ್ಷದಲ್ಲಿದ್ದರೂ, ಅವನಿಗೆ ಪಾಂಡವರ ಮೇಲೆ ಮಮತೆ ಆದರಿಂದಾಗಿ ಕೌರವರ ಪಾಳ್ಯದಲ್ಲಿದ್ದರೂ, ಪಾಂಡವರ ಪಕ್ಷಪಾತಿಯಾದವನು ವರದಿ ಒಪ್ಪಿಸುವನು. ಮಾತಿನಲ್ಲಿಯೇ ಅವನು ಪಾಂಡವರ ಪಕ್ಷಪಾತಿಯೆಂದು ಸೂಚ್ಯವಾಗುವುದು. ಅವನು, ಧೃತರಾಷ್ಟ್ರನಿಗೆ ಯುದ್ಧವನ್ನು ನಿಲ್ಲಿಸಬೇಕೆಂಬ ಸಲಹೆಗಳನ್ನು ಸೂಚ್ಯವಾಗಿ ಕೊಡುವನು. ಆದರೆ ಅಂಧನಾದ ಧೃತರಾಷ್ಟ್ರನು ಇದಕ್ಕೆ ಒಪ್ಪಲಿಲ್ಲ. ಕೊನೆ ತನಕ ಮಕ್ಕಳ ಮೇಲಿನ ಮೋಹದಿಂದ ಕುರುಡನಾಗಿಯೇ ಇದ್ದನು

ಸಂಜಯನು ಧೃತರಾಷ್ಟ್ರನಿಗೆ ಯುದ್ಧ ಭೂಮಿಯನ್ನು ವರ್ಣಿಸಿ ಹೇಳಿದನು. ಎರಡು ಸೈನ್ಯಗಳ ನಡುವೆ ಶ್ರೀ ಕೃಷ್ಣನು ರಥವನ್ನು ಓಡಿಸಿದಾಗ ಅರ್ಜುನನು ಕೌರವರ ಸೇನೆಯನ್ನು, ತನ್ನ ಪಂಗಡದ ಸೈನ್ಯವನ್ನು ನೋಡಿ, ಅಲ್ಲಿ ಸೇರಿದಿದ್ದ ಎಲ್ಲಾ ವೀರರನ್ನು ನೋಡಿ ಎದೆಗುಂದಿದನು. ಹಾಗೆ ಆಗಲು ಕಾರಣ ಏನೆಂದರೆ, ಹಿಂದಿನ ದಿನ ಧೃತರಾಷ್ಟ್ರನು, ಅರ್ಜುನನನ್ನು ತನ್ನ ಬಳಿಗೆ ಸಂಜಯನ ಮುಖಾಂತರ ಕರೆ ಕಳುಹಿಸಿ, ಒಂದೆಡನೆ, ಅವನ ಮನಸ್ಸಿಕ್ಕೆ ಹೊಸ ವಿಚಾರಗಳನ್ನು ತುಂಬಿಸಿದ್ದನು. ಗುರುಹಿರಿಯರು ಪೂಜಾರ್ಹರು, ಒಡಹುಟ್ಟಿದವರು ಸೋದರರು ಎಲ್ಲರನ್ನು ಕೊಂದು ನೀವು ರಾಜ್ಯ ಆಳಬೇಕು. ಅವರ ರಕ್ತದಲ್ಲಿ ಅದ್ದಿದ ಕೈಯಲ್ಲಿ ಉಣ್ಣಬೇಕೆಂದು ಇತ್ಯಾದಿ ಬೋಧಿಸಿದನು. ಧೃತರಾಷ್ಟ್ರನು ಅತ್ಯುತ್ತಮ ಮನೋವಿಜ್ಞಾನಿ. ಅರ್ಜುನನಲ್ಲಿ ಸುಪ್ತವಾಗಿದ್ದ ಶೌರ್ಯ, ವೀರತ್ವಗಳನ್ನು ಯುದ್ಧಕಾಲದಲ್ಲಿ ಸರಿಯಾದ ಹಾದಿಯಲ್ಲಿ ಪ್ರವಹಿಸದಂತೆ ಇತರ ಹೊಸ ವಿಚಾರಗಳನ್ನು ಅವನ ತಲೆಗೆ ಹಾಕಿ, ಅವನ ಶಕ್ತಿ ಸಾಮರ್ಥ್ಯಗಳು ಕುಂದುವಂತೆ ನೋಡಿದನು. ಸರಿಯಾದ ಹಾದಿಯಲ್ಲಿ ಅವನ ಕಾರ್ಯವು ಕಾರ್ಯೋನ್ಮುಖವಾಗುವುದರ ಬದಲು, ತಪ್ಪುದಾರಿ ಹಿಡಿದು ಹೋಯಿತು. ಅವನು ಯುದ್ಧ ಭೂಮಿಯಲ್ಲಿ ಗುರುಹಿರಿಯರನ್ನು ಸೋದರರನ್ನು ನೋಡಿದೊಡನೆ, ಧೃತರಾಷ್ಟ್ರನು ಹಿಂದಿನ ದಿನ ಹೇಳಿದ ಒಂದೊಂದೇ ಮಾತುಗಳು ನೆನಪಿಗೆ ಬಂದುವು. ಅವನ ವೀರ, ಶೂರತ್ವವು ನಷ್ಟವಾಗಿ ಹೋಯಿತು. ಸುಪ್ತವಾಗಿದ್ದ ಕೇಂದ್ರೀಕೃತ ಶಕ್ತಿಯು ದಿಕ್ಕು ಬದಲಾಯಿಸಿ ಹರಿಯಿತು. ಇದರಿಂದ ನಿರುತ್ಸಾಹದಿಂದ ಎದೆಗುಂದಿದನು. ಶ್ರೀ ಕೃಷ್ಣನಿಗೆ ಅರ್ಜುನನು ಹತಾಶನಾದಾಗ ಹೀಗಾಗಲು ಕಾರಣವೇನೆಂದು ತಿಳಿಯಿತು. ಅವನು ಅರ್ಜುನನು ಸಂಪೂರ್ಣ ಭ್ರಮಿಷ್ಟನಾಗಲಿ ಎಂದು ಅವನನ್ನೇ ಮಾತನಾಡಲು ಬಿಟ್ಟನು. ಒಂದು ಬಾರಿ ಅರ್ಜುನನು ಬುದ್ಧಿ ಭ್ರಮಣನಂತೆ ವರ್ತಿಸಿ ಹೇಳಬೇಕಾದುದನ್ನೆಲ್ಲಾ ಹೇಳಿದ ಬಳಿಕ ಮೌನ ವಹಿಸಿದನು.

ಸಂಜಯನ ಹೀಗೆ ಶೋಚನೀಯ ಅವಸ್ಥೆಗೊಂಡ ಅರ್ಜುನನಚಿತ್ರವನ್ನು ವೃದ್ಧ, ಅಂಧ ಧೃತರಾಷ್ಟ್ರನ ಮುಂದೆ ಚೆನ್ನಾಗಿ ಬಿಡಿಸಲು ಪ್ರಯತ್ನಿಸುವನು. ಏಕೆಂದರೆ ಅಂಧರಿಗೆ ಒಂದು ವಿಷಯವನ್ನು ಕಣ್ಣಿದ್ದವರಿಗೆ ತಿಳಿಯ ಹೇಳುವಂತೆ ಹೇಳಲು ಸಾಧ್ಯವಿಲ್ಲ. ಉದಾ:- ಅಲ್ಲಿ ಹೂ, ಬಳಿ ಇದೆ ಎಂದರೆ ಅವರಿಗೆ ಅರ್ಥವಾಗದು. ಅಲ್ಲಿ ಹೂ ಬೆಣ್ಣೆಯಂತೆ ನುಣ್ಣಗಿದೆ ಎಂದರೆ ಕುರುಡರಿಗೆ ಅದರ ನುಣುಪು ತಿಳಿಯುವುದು. ಮತ್ತು, ಅದರ ಬಣ್ಣವು ಸೂರ್ಯನಂತೆ ಇದೆ ಎಂದರೆ, ಅವರಿಗೆ ಬೆಳಕು ಇರುವಾಗ ಪ್ರಕಾಶದ ಅರಿವು ಆಗುವುದರಿಂದ ಅದರ ಬಣ್ಣವನ್ನು ಹಾಗೆ ಊಹಿಸಿ ಕೊಳ್ಳಬಹುದು.

ಹೀಗೆ ಸಂಜಯನು, ಧೃತರಾಷ್ಟ್ರನಿಗೆ ಕುರುಕ್ಷೇತ್ರ ಯುದ್ಧ ಭೂಮಿಯನ್ನು ಬಹು ಚೆನ್ನಾಗಿ ದಪ್ಪವಾದ ಕೆತ್ತಿದ ಅಕ್ಷರಗಳಂತೆ ವಿವರಿಸುವನು.

ಸಂಜಯನು ಹೇಳಿದುದು

ತಂ ತಥಾ ಕೃಪಯಾವಿಷ್ಟಮಶ್ರುಪೂರ್ಣಾಕುಲೇಕ್ಷಣಮ್।
ವಿಷೀದಂತಮಿದಂ ವಾಕ್ಯಮುವಾಚ
ಮಧುಸೂದನಃ ॥ ೧ ॥

ಅರ್ಜುನನು ಹೀಗೆ ಮರುಕ ಗುಣದಿಂದ ಆವೇಶಭರಿತನಾಗಿ ಕಣ್ಣುಗಳಲ್ಲಿ ನೀರು ಸುರಿಸುತ್ತಾ ಬಹಳ ಸಂಕಟ ಪಡುತ್ತಿರುವಾಗ ಶ್ರೀ ಕೃಷ್ಣನು ಹೀಗೆ ಹೇಳಿದನು

ಶ್ರೀ ಭಗವಾನ್ ಉವಾಚ

ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸ
ಮುಪಸ್ಥಿತಮ್।
ಅನಾರ್ಯಜುಷ್ಟಮಸ್ವರ್ಗ್ಯಮಕೀ
ರ್ತಿಕರಮರ್ಜುನ ॥ ೨ ॥

ಅರ್ಜುನನೇ ಇದು ನಿನಗೆ ಯೋಗ್ಯವಲ್ಲ. ಈ ತಪ್ಪು ಅಭಿಪ್ರಾಯ ನಿನ್ನಲ್ಲಿ ಹೇಗೆ ಬೇರೂರಿತು? ನೀನು ಅನಾರ್ಯನಂತೆ ವರ್ತಿಸುವೆ. ಆರ್ಯ ಯುವಕರು ತಮ್ಮ ಇದಿರಾದ ಸಮಸ್ಯೆಗಳಿಗೆ ಹೆದರುವುದಿಲ್ಲ. ಆರ್ಯರಂತೆ ಶೌರ್ಯ ಪ್ರಕಟಿಸುವ ಬದಲು ಅಳುತ್ತಿರುವೆ. ಸೇನೆಯನ್ನು ನೋಡಿ ವಿರೋತ್ಸಾಹ ತಾಳುವ ಬದಲು ಶೋಕದಿಂದ

(ಹನ್ನೆರಡನೇ ಪುಟ ನೋಡಿರಿ)

ಗಿರಾಕಿಗಳ ಸೇವೆಯಲ್ಲಿ ಚ್ಯುತಿ ಇಲ್ಲ

ಆಡಳಿತ ವರ್ಗ ಮತ್ತು ಕೆಲ ನೌಕರರೊಳಗಿನ ಭಿನ್ನಾಭಿಪ್ರಾಯಗಳೇನೇ ಇದ್ದರೂ, ಸಾರ್ವಜನಿಕ ಸೇವೆಯನ್ನು ಯಾವ ತಡೆಯೂ ಇಲ್ಲದೆ ಎಂದಿನಂತೆಯೇ ನಿರ್ವಹಿಸುತ್ತೇವೆ ಎಂಬುದಾಗಿ ಈ ಮೂಲಕ ಸಾರ್ವಜನಿಕರಿಗೆ ಭರವಸೆ ನೀಡುತ್ತೇವೆ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 203
ಚಲಾವಣಾ ನಿಧಿ: 70 ಕೋಟಿಗೂ ಮಿಕ್ಕಿ.

...... ತೃಪ್ತಿ ಹೊಂದಿದ ಗಿರಾಕಿಯೇ ನಮ್ಮ ಅಮೂಲ್ಯ ಆಸ್ತಿ ......

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಸಾಮಾನ್ಯ ರೋಗಗಳು
ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರವಾಸ ಕಥನ

ಕನ್ನಡ ಜಿಲ್ಲೆಯ ಕುದುರೆಮುಖ

ಮಾಡಿದವರು
ಶ್ರೀ ಎಂ. ಬಿ. ಶರ್ಮಾ, ಪುತ್ತೂರು.

ಅತ್ಯುನ್ನತ ಶಿಖರ ಎವರೆಸ್ಟ್ ಆರೋಹಣದ ಕಥೆಯ ಮುಂದೆ ಕುದುರೆ ಮುಖಾರೋಹಣದ ಕಥೆ ಅಲ್ಪವಾಗಿ ತೋರಬಹುದು. ಆದರೆ, ಸಾಹಸ ಪ್ರವೃತ್ತಿಯೇನೂ ಕಡಿಮೆಯದಾಗದು. ಶ್ರೀ ಶರ್ಮಾರು ತಮ್ಮ ಪ್ರವಾಸ ಕಥನವನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಇಲ್ಲಿ ನಿರೂಪಿಸಿದ್ದಾರೆ.

ದಕ್ಷಿಣ ಕನ್ನಡಾ ಜಿಲ್ಲೆಯ ತಾಲೋಕುಗಳ ಪೈಕಿ ಬೆಳ್ತಂಗಡಿ ತಾಲೋಕು ಮುಖ್ಯ ಸ್ಥಳವಾದ, ಬೆಳ್ತಂಗಡಿ ಪೇಟೆಯಿಂದ ಚಾರ್ಮಾಡಿ ರಸ್ತೆಯಲ್ಲಿ ಫರ್ಲಾಂಗ್ ಹೋದಾಗ, ಎಡಕ್ಕೆ "ಕಿಲ್ಲೂರು" ಎಂಬ ಹೆಸರಿನ ರಸ್ತೆ ೧೦ ಮೈಲು ಉದ್ದವಾಗಿದೆ; ಇಲ್ಲಿ ಕಿಲ್ಲೂರು ಹೊಳೆಯು ಪೂರ್ವದಿಂದ ಪಶ್ಚಿಮಕ್ಕೆ ಹರಿಯುತ್ತಿರುವುದರಿಂದ, ರಸ್ತೆ ತುಂಡಾಗುತ್ತದೆ. ಇಲ್ಲಿಯ ತನಕ ವಾಹನಗಳೆಲ್ಲಾ ಸರಾಗವಾಗಿ ಚಲಿಸುತ್ತವೆ. ಹೊಳೆಯ ಆಚೆ ಬದಿ ದೊಡ್ಡ ಭಂಡಸಾಲೆ ಇದ್ದು ಈ ಪೂರ ಹಳ್ಳಿಯವರಿಗೆ ಪ್ರತಿ ಸಾಮಾನು ಮತ್ತು ಉಡಿಗೆ ತೊಡಿಗೆಗಳನ್ನು ವಿತರಣೆ ಮಾಡಿಕೊಂಡು, ಹಳ್ಳಿಯವರು ಬೆಳೆಸಿದ ಪ್ರತಿ ಸಾಮಾನು ಚಿಲ್ಲರೆಯಾಗಿಯೂ, ರಖಂ ಶರವಾಗಿಯೂ ತೆಕ್ಕೊಂಡು ಮಂಗಳೂರಿಗೆ ಸಾಗಿಸುತ್ತಾರೆ. ಈ ಭಂಡಸಾಲೆಯ ಈಶಾನ್ಯ ಬದಿಗೆ ಕಾಣುವ ದೊಡ್ಡದಾದ ಮನೆಯೇ ಈ ಅಂಗಡಿಯ ಯಜಮಾನರಾದ ಬಿ. ಕೆ. ನಾರಾಯಣ ರಾಯರ ಮನೆ. ಈ ಮನೆಗೆ ಆಗಮಿಸಿದ್ದ ಯಾವ ಅತಿಥಿಗಳಿಗೂ ಊಟ, ಉಪಹಾರಗಳು ದೊರಕುತ್ತವೆ.

ಇವರ ಮನೆಯಿಂದ ಕುದುರೆ ಮುಖದ ಶಿಖರಕ್ಕೆ ಬರೇ ೧೭ ಮೈಲು ಮಾತ್ರ. ಪೂರಾ ಒಳದಾರಿ ಹೊರತು ಯಾವ ವಾಹನವನ್ನೂ ಉಪಯೋಗಿಸಲು ಸಾಧ್ಯವಿಲ್ಲ. ಆದರೆ ಸೃಷ್ಟಿ ಸೌಂದರ್ಯವನ್ನು ನೋಡಿ ಮನಸ್ಸು ತೃಪ್ತಿ ಪಡೆಯಬೇಕಾದರೆ ಈ ದಾರಿಯೇ ಉತ್ತಮ. ಸಾಧಾರಣ ೬೫ ವರ್ಷ ಪ್ರಾಯದ ವ್ಯಕ್ತಿಯೊಂದು, ೧೩—೧೪ ವರ್ಷ ಪ್ರಾಯದ ಬಾಲಕನೊಬ್ಬ ಕೂಡಾ ನಾವು ೧೨ ಜನರು ಕಿಲ್ಲೂರು ಮನೆಯಿಂದ ಹೊರಟು (ಬೆಳಿಗ್ಗೆ ೭-೩೦ಕ್ಕೆ) ಮುಂದೆ ಸಾಗುತ್ತಾ, ಕಯರ್ಾಲು, ಕಾಂಜಿನ, ಕೂರ್ಮಂಡ, ಪಾತಳೆ, ಕುತ್ಲೊಳ್ಳಿ, ಕಾಲಾಜೆ, ಮೊದಲಾದ ಊರುಗಳನ್ನು ನೋಡಿಕೊಂಡು ದಾರಿಯಲ್ಲಿ ಸಿಗುವ ಮಾವು—ಧಾರಾಳವಾಗಿ ಪಕ್ವವಾಗಿರುವ ಪೇರಳೆ ಹಣ್ಣು ಬೇಕಾದಷ್ಟು ತಿಂದುಕೊಂಡು, ಈ ದಟ್ಟವಾದ ಕಾಡಿನಲ್ಲಿ, ಬಿಸಿಲಿನ ಆಯಾಸವಿಲ್ಲದೆ, ಮುಂದೆ ಘಾಟಿ ಹತ್ತಲು ಪ್ರಾರಂಭಿಸಿ ೨ ಮೈಲು ಹೋದಾಗ "ಗುಂಡಲಪಾದೆ" ಎಂಬ ವಿಶಾಲವಾದ ಹಾಸು ಪಾದೆಕಲ್ಲು ಇದ್ದು. ಅಲ್ಲಿ ಆಯಾಸ ಪರಿಹಾರಕ್ಕಾಗಿ ಕೂತು ಕೆಳಗಿನ ಬಯಲು ಪ್ರದೇಶದ ಅಂದ ಚಂದದ ಸೊಬಗನ್ನೂ ಬಂಗಾಡಿ ಊರಿನೊಳಗೆ ಅಂಕುಡೊಂಕಾಗಿ ಹರಿದು ಹೋಗುವ ನೇತ್ರಾವತಿ ಹೊಳೆಯ ದೃಶ್ಯವನ್ನೂ ನೋಡಿದಲ್ಲಿ ಯಾವ ಆಯಾಸವೂ ಆರಿ ಹೋಗುತ್ತೆ.

ಸಾಮಾನ್ಯ ಇಲ್ಲಿಗೆ ಕಿಲ್ಲೂರಿಂದ ೬ ಮೈಲು ಎಂತ ತಿಳಿಯಬಹುದು. ಇಲ್ಲಿಂದ ಮುಂದೆ ಹತ್ತಿ ಹೋಗುತ್ತಾ ಇರುವಾಗ ವಿವಿಧ ಮೋಪಿನ ಮರಗಳನ್ನೂ, ಅವುಗಳ ಉದ್ದ ತೋರವನ್ನೂ ನೋಡಲು ಯಾರಾದರೂ ಆತುರ ಪಡೆಯಲೇ ಬೇಕು. ಊರೊಳಗೆ ಇಂಥ ಮರಗಳನ್ನು ನೋಡಲು ಸಾಧ್ಯವೇ ಇಲ್ಲ. ಅತಿ ತೋರ ಉದ್ದದ ಮರಗಳನ್ನು ಕಡಿದು ಕೊಯ್ಯುತ್ತಿದ್ದರು. ಕಡಿದ. ಕೊಯ್ಯಲು ಸಾಧ್ಯವಿಲ್ಲದೆ ಬಿಟ್ಟ ತುಂಡುಗಳೆಂದರೆ, ತುಂಡು ಒಂದೊಂದರಲ್ಲಿ ೨-೩ ಲೋರಿ ಸಾಧೆ ಮಾಡಬಹುದು. ಆದರೆ ಯಾವ ರೀತಿಯಿಂದಲೂ ಅದನ್ನು ತರಲು ಅಸಾಧ್ಯ.

೪ ಮೈಲು ಉದ್ದಕ್ಕೂ ಹರಡಿದ ಈ ಅರಣ್ಯ ಸಂಪತ್ತು ಎಷ್ಟಿದೆ ಎಂತ ಹೇಳಲು ಸಾಧ್ಯವಿಲ್ಲ. ಇದನ್ನು ದಾಟಿ ಬೋಳು ಗುಡ್ಡದಲ್ಲಿ ಪ್ರಯಾಣಿಸಲು ಪ್ರಾರಂಭವಾಗಿ ೭ ಸುತ್ತು ತಿರುಗಿ ತಿರುಗಿ ಹತ್ತಿ ಕಣಿವೆಯ ಮೂಲಕ ಪರ್ವತದ ಇನ್ನೊಂದು ಮಗ್ಗುಲನ್ನು ಸೇರಿ, ಸ್ವಲ್ಪ ವಿಶಾಲ ಮೈದಾನು ಸ್ಥಳವನ್ನು ಮುಟ್ಟುತ್ತದೆ. ಇದಕ್ಕೆ ಸೇವಳ ಎನ್ನುತ್ತಾರೆ.

ಇಲ್ಲಿ ೨ ಕೆಥೊಲಿಕ್ ಜಾತಿಯವರು ಸಣ್ಣ ನಮೂನೆಯ ಹಂಚಿನ ಮನೆ ಮಾಡಿಕೊಂಡು; ಮನೆಯ ಸುತ್ತುಮುತ್ತು ಬೈಹುಲ್ಲು ಹಾಕಿದ ಮಾಡಿನ ಹಟ್ಟಿಗಳನ್ನು ಕಟ್ಟಿಕೊಂಡಿದ್ದಾರೆ. ೩—೪ ಹಟ್ಟಿಗಳಲ್ಲಿ ಸಾಧಾರಣ ೨೫೦ ಗಾಡಿ ಎತ್ತುಗಳನ್ನು ನಮ್ಮ ಕೆಳಪೂರಿನವರು ಸಾಕಲು ಅಲ್ಲಿ ಮಾಡಿ ಬರುತ್ತಾರೆ. ನಮ್ಮೂರಲ್ಲಿ ಆಗೋಸ್ತು, ಸಪ್ಟಂಬರಗಳಲ್ಲಿ ಕೂಡಾ ಅತಿ ವಿರಳವಾಗಿರುವ ಹಸಿ ಹುಲ್ಲು ಅಲ್ಲಿ ಈ ಎಪ್ರಿಲ್ ತಿಂಗಳಲ್ಲಿದೆ. ಈ ಸಾಕಣೆಯಿಂದ ತುಂಬಾ ಹಣ ಸಂಪಾದಿಸುತ್ತಾರೆ. ಒಂದೊಂದು ಮನೆಗೆ ೬—೭ ಮುಡಿ ಗದ್ದೆಗಳು ಇವೆ. ಕೊಳಕೆಯ ಪೈರು ಕೆಲವು ಗದ್ದೆಗಳಲ್ಲಿದ್ದು; ಒಂದು ಫೀಟು ಗಾತ್ರದ ತೆನೆಯಿಂದ ಗದ್ದೆಯ ಪೈರು ಕಂಗೊಳಿಸುತ್ತಿತ್ತು. ತರಕಾರಿ, ನಿಂಬೆ, ಮೆಣಸು, ವಗೈರೆ ಇತರ ಕೃಷಿಗಳನ್ನು ಮಾಡಿಕೊಂಡು ಬಹಳ ಅಲ್ಪ ಶ್ರಮದಲ್ಲಿ ಸುಖ ಜೀವನವನ್ನು ಅವರು ಬಾಳುತ್ತಾರೆ. ಆದರೆ ಇವರ ಮಕ್ಕಳ ವಿದ್ಯಾಭ್ಯಾಸಕ್ಕೆ ಯಾ ಇವರ ಅನಾರೋಗ್ಯದ ಮಟ್ಟಿಗೆ, ಅಥವಾ ಇವರಿಗೆ ಬೇಕಾದ ಸಾಮಾನು ತಕ್ಕೊಳ್ಳಲಿಕ್ಕೆ, ವಾ, ಇವರ ಸೊತ್ತುಗಳ ವಿಕ್ರಿತಕ್ಕೆ, ೮—೯ ಮೈಲು ದೂರದ ಹಳ್ಳಿಯ ಪೇಟೆಯಾಗಿರುವ "ಸಂಸೆ"ಯನ್ನು ಸೇರಬೇಕು. ಇಲ್ಲವಾದರೆ ೧೭ ಮೈಲು ದೂರದ ಕಿಲ್ಲೂರು—ಬಂಗಾಡಿಯ ಅಂಗಡಿಗಳನ್ನೇ, ಆಸ್ಪತ್ರೆ, ಶಾಲೆಗಳನ್ನೇ ಹೊಂದಬೇಕು.

ನಮ್ಮಂಥ ಕುದುರೆ ಮುಖದ ಯಾತ್ರಿಕರಿಗೆ ಯಾವ ಸಾಮಾನು ಬೇಕಾದರೂ ಕೊಟ್ಟು ಇವರು ಸಹಕರಿಸುತ್ತಾರೆ. ಅಡಿಗೆ ಮಾಡಲು ಪಾತ್ರೆ ಅಕ್ಕಿ—ಮಸಾಲೆ—ತರಕಾರಿ ಸಂಬಾರ ಸಾಮಾನು ಹಾಲು ಮಜ್ಜಿಗೆ ವಗೈರೆ ಕೊಟ್ಟು ನಮ್ಮನ್ನು ಅತಿ ಪ್ರೀತಿಯಿಂದ ಬೀಳ್ಕೊಡುವರು. ನಾವು ಇಲ್ಲಿಗೆ ಮುಟ್ಟುವಾಗ ೨ ಗಂಟೆಯಾಗಿತ್ತು. ಶರೀರವು ಬಳಲಿದ್ದರೂ, ಈ ರಮಣೀಯ ನೋಟಗಳನ್ನು ಕಂಡು ಯಾವ ಬೇಸರವೂ ತೋರದೆ ಅಂಗಗಳು ಹುರುಪಾಗಿಯೇ ಇದ್ದುವು. ಕಿಲ್ಲೂರಲ್ಲಿ ನಮಗೆ ಕೊಟ್ಟ ಊಟ ಉಪಹಾರ ಸಾಮಾನುಗಳು ನಮ್ಮಲ್ಲಿದ್ದರೂ ಪಾತ್ರೆಯ ಸಹಾಯ ಇವರಿಂದ ಪಡೆದು ಕಾಫಿ, ತಯಾರಿಸಿ ಉಪಹಾರ ತೀರಿಸಿಕೊಂಡು ಇವರ ಕೃಷಿಗಳನ್ನೆಲ್ಲಾ ನೋಡಿಕೊಂಡು ೩—೩೦ ಸಂಜೆಗೆ ಹೊರಟೆವು.

ಇಲ್ಲಿಂದ ಕುದುರೆ ಮುಖದ ತುದಿಗೆ ಐದೇ ಮೈಲು. ಬೋಳು ಗುಡ್ಡೆ ತಿರುಗಿ ತಿರುಗಿ ಬೆಟ್ಟ ಹತ್ತುವದೊಂದೇ ಕೆಲಸ. ಆದರೆ ಹತ್ತುವಾಗ ಎಡ ಬಲಕ್ಕೆ ಎಂತೆಂಥ ಕಣಿವೆ ಪರ್ವತ ರಾಶಿಗಳು, ಮೇಯುತ್ತಿರುವ ದನಗಳ ಗುಂಪು; ಅವಸರ ಅವಸರವಾಗಿ ಇದೆಲ್ಲಾ ನೋಡಿಕೊಂಡ; ಸೂರ್ಯಾಸ್ತಮಾನ ನೋಡುವ ಆತುರದಿಂದ ತಾನು ಮುಂದೆ ನಾನು ಮುಂದೆ ಎಂದು ಓಡಿಕೊಂಡು ಶಿಬಿರಕ್ಕೆ ಸಮೀಪಿಸಿದೆವು. ಇಲ್ಲಿ ಜರಿದು ಬಿದ್ದು ಕೊಂಡಿದ್ದ ಕೆಳ ಬಂಗ್ಲೆಯನ್ನು ಸುಮಾರು ಅರ್ಧ ಮೈಲು ದೂರದಲ್ಲಿ ಕಂಡೆವು. ಬರೇ ಗೋಡೆ, ಮುರಿದು ಬಿದ್ದ ಪಕ್ಕಾಸು ಮೋಪುಗಳು ಕಾಣುತ್ತಿದ್ದುವು. ಸಮೀಪ ಹೋದರೆ ಹೊತ್ತಾಗುತ್ತದೆಂಬ ಆತುರದಿಂದ ಮುಂದೊತ್ತಿದಾಗ ದಾರಿ ಮಗ್ಗುಲಲ್ಲಿ ಸುಮಾರು ಶಿಖರದಿಂದ ಮುಕ್ಕಾಲು ಮೈಲು ಕೆಳಗೆ ಮೇಲ್ಬಂಗ್ಲೆಯು ಕಣ್ಣಿಗೆ ಬಿತ್ತು; ಇದು ಸಾಧಾರಣ ೬೦—೭೦ ಕೋಲು ಉದ್ದ, ೧೮—೧೨ ಕೋಲು ಅಗಲದ ಕಟ್ಟಡ. ಸಂಪೂರ್ಣ ಜರಿದು ಬಿದ್ದು ಮೋಪುಗಳು ತುಂಡು ತುಂಡಾಗಿ ಬಿದ್ದುಕೊಂಡು ಹಂಚುಗಳು ಉಪಯೋಗಿಸುವಂಥಾದ್ದು ತುಂಬಾ ಇತ್ತು. ಇಟ್ಟಿಗೆಯ ಅತಿ ನಾಜೂಕಾದ ಕಂಬಗಳಿಂದ ಅಲಂಕೃತ ಜಗಲಿ. ಗೋಡೆ ಸುಮಾರು ೧ ಕೋಲು ದಪ್ಪವಾಗಿತ್ತು. ಸರಿಯಾಗಿ ಈ ಕಟ್ಟಡ ವಿರುತ್ತಿದ್ದರೆ ನಮ್ಮಂಥ ಪ್ರಯಾಣಿಕರಿಗೆ ತುಂಬಾ ಉಪಕಾರವಿತ್ತು. ಮಂಗಳೂರು ಹಂಚು ಆ ಶಿಖರಕ್ಕೆ ಮುಟ್ಟಿ ಇಂಥ ಕಟ್ಟಡ ರಚಿಸಲು ಎಷ್ಟು ಖರ್ಚಾದೀತೆಂತ ನೋಡಿದವರಿಗೇ ಗೊತ್ತು. ಈ ಕಟ್ಟಡದ ಪೂರಾ ನಾಶವಾಗಲು ಬಿಟ್ಟದ್ದು ಬಹಳ ಅನ್ಯಾಯ. ಸರಕಾರದ ಅಜಾಗರೂಕತನ. ಈ ಬಂಗ್ಲೆಯ ಸುಮಾರು ೧೦—೧೫ ಮಾರು ದೂರದಲ್ಲಿ ತುಂಗಾ ನದಿಯು ಹರಿಯುತ್ತಿದ್ದಾಳೆ. ಹೋದವರಿಗೆ ಅಡಿಗೆ ಮಾಡಲು ತುಂಬಾ ಅನುಕೂಲವಾಗಿದೆ. ರಾತ್ರಿ ಮಲಗಲು ವಿಶಾಲ ಬಂಡೆ ಕಲ್ಲುಗಳಿವೆ. ದಟ್ಟವಾದ ಕಾಡಿನ ಮಧ್ಯದಿಂದ, ಬಂಡೆಗಳ ಎಡೆಗಳಿಂದ, ಹರಿದುಕೊಂಡು ದುಮುಕಿಕೊಂಡು ಮುಂದೆ ಸಾಗುತ್ತಿದ್ದಾಳೆ, ತುಂಗೆ. ಇವಳನ್ನು ಮುಟ್ಟುವಾಗ ಶೀತವು ತಲೆಗೇರುತ್ತದೆ. ಬಾಯಿಗೆ ಹಾಕಿದರೆ ಹಲ್ಲು ಕಳಚಿದಂತಾಗುತ್ತದೆ. ಸ್ನಾನಮಾಡಿದ ಶರೀರ ಮರದ ತುಂಡಿನಂತಾಗುತ್ತದೋ ಎಂಬ ಭೀತಿ ಮಾಡುತ್ತದೆ. ಹಿಂದೊಮ್ಮೆ ನಾನು ಹರಿದ್ವಾರ, ಹೃಷಿಕೇಶ ವಗೈರೆ ಉತ್ತರದೇಶ ಯಾತ್ರೆ ಮಾಡಿದಾಗ ಗಂಗಾ ನದಿಯಲ್ಲಿ ಮಧ್ಯಾಹ್ನ ಸಮಯ ಸ್ನಾನ ಮಾಡುವಾಗ ಯಾವತರ ಶೀತ ತಲೆಗೇರುತಿತ್ತೋ; ಅದು ಜ್ಞಾಪಕಕ್ಕೆ ಬಂತು.

ಅಂತು ಶಿಖರದ ತುದಿಯನ್ನು ಸಂಜೆ ೫-೩೦ಕ್ಕೆ ಮುಟ್ಟಿದೆವು. ಹಿಮವು ನಮ್ಮನ್ನು ಕುಟ್ಟಿಕೊಂಡು ಓಡುವ ಆದವೇ ಅಂದ. ದೂರದರ್ಶನಕ್ಕೆ ಸ್ವಲ್ಪ ತಡೆಮಾಡಿತು. ಅರ್ಧಗಂಟೆಯ ನಂತರ ಹಿಮವು ದೂರಸರಿದು ನೋಡಲು ಅಂದವಾಗಿ ಕಾಣಿಸಲಾರಂಭಿಸಿತು. ೪-೫ ಪರ್ಲಾಂಗು

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½% ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಶ್ರೀ ಕೆ.ಕೆ. ಶೆಟ್ಟಿ, ಎಂ.ಎಲ್.ಸಿ.ಯವರ ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ನಾವು ತಲೆಯೆತ್ತ ಬೇಡವೆ?

ಏಸು ದಿನಗಳ ಪರ್ಯಂತವೀ ಪರಿಹಾಸ್ಯ

ಬರೆದವರು: ಶ್ರೀ ಶಿವಶಂಕರ.

ಚೈನಾದ ರಾಜಾಶ್ರಯ ಈಗಲೂ ಕೆಲ ಪಂಡಿತರನ್ನು ಬಿಟ್ಟುಳಿದ ಸರಳ ಜನಕೋಟಿಯು ಬೌದ್ಧಮತವನ್ನು 'ಬಾ' 'ಬಾ' ಎಂದು ಕರೆದಿರುವದನ್ನು ಹಿಂದಿನ ಸಂಚಿಕೆಯಲ್ಲಿ ಕಂಡಿರುವೆವು. ಆದರೆ ನೈಜ ಪರಿಶೋಧಕನಿಗೆ ಅಥವಾ ಜಿಜ್ಞಾಸುವಿಗೆ ಚೈನಾದಲ್ಲಿ ಬೌದ್ಧಮತ ಮಾತ್ರ ಪ್ರಸಾರ ಹೊಂದಿರುವದಲ್ಲ, ಅದರೊಂದಿಗೆ ಭಾರತೀಯ ಸಂಸ್ಕೃತಿ, ಕಲಾಚಾರ, ವೈದ್ಯಕೀಯ ವಾಸ್ತುಶಿಲ್ಪಕಲೆಯೂ ಪುನಃ ಅಲ್ಲಿ ಪ್ರಸಾರವಾಗಿರುವದು ಕಂಡು ಬರತ್ತದೆ. ವೆಯಿ ರಾಜಮನೆತನದವರು ಭಾರತೀಯ ವಾಸ್ತುಶಿಲ್ಪಶಾಸ್ತ್ರಜ್ಞರಿಗೆ, ಕಲಾಕಾರರಿಗೆ ಚಿತ್ರಕಾರರಿಗೆ ಆಮಂತ್ರಣವಿತ್ತಿರುವದು, ಗೌರವಿಸಿರುವದು ಚರಿತ್ರಾರ್ಹವಿದೆ.

ಚೈನಾದಲ್ಲಿರುವ ಕೆಲ ದೇವಸ್ಥಾನಗಳಿಗೆ ಹೋದಲ್ಲಿ ಅವು ಭಾರತದಲ್ಲಿರುವ ದೇವಸ್ಥಾನಗಳಂತಿರುವದನ್ನು ಕಾಣಬಹುದು ಆದರೆ ಕಮ್ಯೂನಿಸ್ಟ ಕಪಿಮುಷ್ಟಿಗೆ ಚೈನಾ ತುತ್ತಾದಂದಿನಿಂದ ಏಕತೆಯು ದೂರವಾಗಿ ವ್ಯತ್ಯಾಸವೇ ವರ್ಧಿಸುತ್ತಿದೆ. ಅವು ಒಂದು ಹಿಂದಿನ ದೇಗುಲಗಳಂತಿಲ್ಲ; ಕಮ್ಯೂನಿಸ್ಟರ ಕಾರಸ್ಥಾನಗಳಿವೆ. ಕಮ್ಯೂನಿಸ್ಟರ ಕಾರಸ್ಥಾನಕ್ಕೂ ಭಾರತದ ದೇವಸ್ಥಾನಕ್ಕೂ ಏನಾದರೂ ಸಂಬಧವಿರಲು ಸಾಧ್ಯವೇನು? ಇಲ್ಲಿರುವ ಕಮ್ಯೂನಿಸ್ಟರಿಂದಲೇ ಇಲ್ಲಿನ ದೇವಸ್ಥಾನ, ಮಂದಿರ, ಇಗರ್ಜಿ, ಮಸೀದಿಗಳನ್ನು ಮೋಸದ ಕಾರಸ್ಥಾನಗಳನ್ನಾಗಿ ಪರಿವರ್ತಿಸಲು ಬಹಳಷ್ಟು ಪ್ರಯತ್ನಿಸುತ್ತಿದ್ದಾರೆ. ಅವನ್ನು ಚುನಾವಣೆಯ ಕಾಲದಲ್ಲಿ ಸಂಭವವಾಗಿ ಕಾಣಬಹುದು. ದೇವಾಲಯವು ಅಂಧಶ್ರದ್ಧೆಯ, ಮೂಢನಂಬಿಕೆಯ ಆಲಯವೆಂದು ಧ್ವನಿವಾಹಕ ಒಡೆದು ಹೋಗುವಂತೆ ಬೊಬ್ಬಿಡುವ ಕಮ್ಯೂನಿಸ್ಟ ಖಿಲೀಮರು ಚುನಾವಣೆಯ ಕಾಲದಲ್ಲಿ ಇಗರ್ಜಿಗೋ ಮಸೀದಿಗೋ ಮಂದಿರಕ್ಕೋ ಹೋಗುವುದನ್ನು ಕಾಣಬಹುದು. ಆದರಲ್ಲಿ ಅವರ ಮುಖಂಡರೇ ಮುಖ್ಯಸ್ಥಾನವನ್ನು ಪಡೆಯುತ್ತಾರೆ. ಈ ಸಲದ ಚುನಾವಣೆಯ ಸಮಯದಲ್ಲಿ ಶ್ರೀ ಶಂಕರ ನಂಬೂದರಿಪಾಡರು ಮಾಡಿದ್ದೇನು? ಮಸೀದಿಗೆ ಭೇಟಿ ವಗೈರೆ ಇತ್ಯಾದಿ ಇವರು ನಡೆಸುವ ಇನ್ನೊಂದು ರಾಜಕೀಯ ತಂತ್ರವೆಂದರೆ ದೇವಸ್ಥಾನ-ಮಂದಿರಗಳಿಗೆ ಭೇಟಿ ಇತ್ತಾಗ ಗೋವಧೆಯ ನಿರೋಧಾಂದೋಲನಕ್ಕೆ ಪ್ರಬಲ ಸಮರ್ಥರಂತೆ ಭಾಷಣ ಬಿಗಿಯುತ್ತಾರೆ. ಹಾಗೆಯೇ ಇಗರ್ಜಿ—ಮಸೀದಿಗೆ ಹೋದಾಗ ಗೋವಧಾ ನಿರೋಧ ಕಾನೂನು ತಡೆಯ ಬೇಕಾಗಿದ್ದಲ್ಲಿ ಕಮ್ಯೂನಿಸ್ಟರಿಗೇ ಮತಗಳನ್ನೀಯಬೇಕೆಂದು ಮಾತು ಬಿಗಿಯುತ್ತಾರೆ. ಈ ರೀತಿ ದ್ವಿಮುಖ ಧೋರಣೆಯನ್ನನುಸರಿಸುತ್ತಾರೆ. ಆದುದರಿಂದ ಹಿಂದೆ ವೆಯಿ ರಾಜಮನೆತನದವರು ಇಲ್ಲಿಯ ಶಿಲ್ಪಿಗಳನ್ನು, ಕಲಾಕಾರರನ್ನು ಆಮಂತ್ರಿಸಿದ್ದಲ್ಲಿ, ಬಂದಲ್ಲಿ ಆಳ್ವಿಕೆಯ ಆಸನಾಧೀಶರಾಗಿರುವ ಕಮ್ಯೂನಿಸ್ಟರು ಇಲ್ಲಿಯ ದೇಶ ಘಾತುಕ ಕಮ್ಯೂನಿಸ್ಟರಿಗೆ ಆಮಂತ್ರಣವನ್ನೀಯುತ್ತಿದ್ದಾರೆ! ಇಲ್ಲಿಯ ಕಮ್ಯೂನಿಸ್ಟರಾದರೋ ಅವರ ಹಿಂದುಗಡೆ ಒಂದಿನಿತೂ ಸ್ವಾಭಿಮಾನ, ಗೌರವ, ನಾಚಿಗೆ ವಗೈರೆ ಇಲ್ಲದೆ ಓಡುತ್ತಿದ್ದಾರೆ!

ಇದು ಕಲೆ, ಸಂಗೀತ, ಭೇಷಜ, ಇತ್ಯಾದಿಗೆ ಮಾತ್ರ ಮೀಸಲಲ್ಲ. ಚೈನಾದ ಕಣಕಣದಲ್ಲೂ ಭಾರತೀಯತೆಯನ್ನು ನಾವು ಕಾಣಬಹುದು. ಆದರೆ ಇಂದದು ಚೈನೀಯರ ರಕ್ತದಿಂದ ಕೆಂಪಾಗಿರುತ್ತದೆ. ಹಿಂದೆ, ಅವರು ಗೊಂದಲ, ಕಳವಳದಿಂದ ಮತ್ತಳಸುತ್ತಿದ್ದಾಗ ಅವರಿಗೆ ದೀಪ ತೋರಿಸಲು ಭಾರತದಲ್ಲಿ ಬೌದ್ಧ ಮತವಿತ್ತು. ಆದರೆ ಇಂದೇನಿದೆ? ಏನಿದೆ? ಇದು ಬಹಳ ಮುಖ್ಯ ಪ್ರಶ್ನೆ. ಪ್ರತಿಯೋರ್ವ ಪ್ರಜೆಯೂ ಕೇಳಿಕೊಳ್ಳಬೇಕಾಗಿರುವ ಪ್ರಶ್ನೆ. ಕಮ್ಯೂನಿಸ್ಟ ಕಪಿಯನ್ನು ಅಂಕೆಯಲ್ಲಿಟ್ಟುಕೊಳ್ಳಬಲ್ಲ ಭಾರತೀಯರು, ರೂ ಇಲ್ಲಿ ಇಲ್ಲವೇನು? ಕಮ್ಯೂನಿಸ್ಟರರಿಗೆ ಅಂಕುಶವನ್ನು ಹಾಕಬಲ್ಲ ಭಾರತೀಯರೂ ಭಾರತದಲ್ಲಿ ಇಲ್ಲವೇನು? ಇದ್ದಲ್ಲಿ ಮತ್ತೇಕೆ ಈ ದುರ್ದೆಸೆ? ಕಮ್ಯೂನಿಸ್ಟ ಚೈನಾವು ಇಂಚು—ಮೀಟರು ಲೆಕ್ಕದಲ್ಲಿಲ್ಲ, ಕಿಲೋಮೀಟರುಗಳ ಸಂಖ್ಯೆಯಲ್ಲಿ ಭಾರತದ ನೆಲವನ್ನು ನುಂಗಿ ಕುಳಿತುಕೊಂಡಿದೆ, ಈ ಕಮ್ಯೂನಿಸ್ಟ ಕಾಳಿಂಗವನ್ನು ಮರ್ದಿಸಬಲ್ಲ ಮಾಧವನ್ಯಾರೂ ಈಗ ಭಾರತದಲ್ಲಿ ಇಲ್ಲವೇನು?

ನಾವು ಇಂದು ಚೈನಾವನ್ನು ಮಾತ್ರ ಎದುರಿಸಬೇಕಾಗಿರುವದಲ್ಲ, ಒಳಗೆನೇ ಇರುವ ಕಮ್ಯೂನಿಸ್ಟರನ್ನೂ ಎದುರಿಸಬೇಕಾಗಿರುತ್ತದೆ ಅಥವಾ ಹತ್ತಿಕ್ಕ ಬೇಕಾಗಿರುತ್ತದೆ. ಇನ್ನೊಂದೆಡೆ ಪಾಕಿಸ್ಥಾನದ ಕಿರುಕುಳವನ್ನು ಎದುರಿಸಬೇಕಾಗಿರುತ್ತದೆ. ಹಾಗೆಯೇ ಇಲ್ಲೇ ಇರುವ ಪಾಕಿಸ್ಥಾನ ಪ್ರಿಯರನ್ನೂ ಜಾಗರೂಕತೆಯಿಂದ ನೋಡಿಕೊಳ್ಳಬೇಕಾಗಿರುತ್ತದೆ. ಮತ್ತೆ ನಾಗಾಲೇಂಡ್, ಮಿಝೊಲೇಂಡ್, ಗೋವಾಲೇಂಡ್ ಮುಂತಾದ ಲೇಂಡ್‌ಗಳಿಗಾಗಿ ಲವಲವಿಕೆ ತೋರಿಸುತ್ತಿರುವವರ ಕಿರುಕುಳವನ್ನು ಹತ್ತಿಕ್ಕಬೇಕಾಗಿರುತ್ತದೆ. ಅಲ್ಲದೆ ಒಳಗಿಂದೊಳಗೆ ಇರುವ ದಾರಿದ್ರ್ಯಕನ, ಲಂಚಾವತಾರ, ಭಿನ್ನತೆ ವಗೈರೆಗಳನ್ನು ಎದುರಿಸಬೇಕಾಗಿರುತ್ತದೆ. ಇದೆಲ್ಲಾ ಸಾಧ್ಯವೇನು?

ಕೆಲ ದಿನಗಳ ಹಿಂದೆ ದಿಹಲಿಯಲ್ಲಿ ಒಂದು ಸಾರ್ವಜನಿಕ ಸಭೆ ನಡೆದಿತ್ತು. ಅದರಲ್ಲಿ, ವೀರಾವೇಶದಿಂದ ಮಾತಾಡುವ ಭಾರತದ ರಕ್ಷಣಾ ಮಂತ್ರಿ ಶ್ರೀ ಯಶವಂತರವರು ಭಾಗವಹಿಸಿದ್ದರು. ಅದು ಪ್ರತಾಪ ಜಯಂತಿಯಂದು. ಮಹಾರಾಣಾ ಪ್ರತಾಪಸಿಂಹ! ಯಾವ ಪುರುಷ ಸಿಂಹನ ನಾಮೋಚ್ಚಾರಣೆ ಗೈದೊಡನೆಯೇ ಕ್ಷತ್ರಿಯರ ರೋಮಾಂಚನವಾಗುತ್ತದೋ, ಹೃದಯ ಹಿಗ್ಗುತ್ತದೋ ಆ ವೀರಗುವರ ಭಾರತ ಮಾತೆಯ ವೀರ ಸುಪುತ್ರನ ಜನ್ಮದಿನವಂದು, ತಿನ್ನಲು ರೊಟ್ಟಿಯಿಲ್ಲದಿದ್ದರೂ, ಇರಲು ಮನೆಯಿಲ್ಲದಿದ್ದರೂ, ಮಲಗಲು ಚಾಪೆ ಇಲ್ಲದಿದ್ದರೂ-ತನಗೆ ಮಾತ್ರವಲ್ಲ, ತನ್ನ ಚಿಕ್ಕಪುಟ್ಟ ಮಗುವಿಗೆ— ಸ್ವಾಭಿಮಾನ ಶೂನ್ಯನಾಗದ ಪುರುಷ ಸಿಂಹ ರಾಣಾಪ್ರತಾಪ ತನ್ನ ಮಗುವಿನ 'ಅಪ್ಪಾ! ಹಸಿವು, ದಾಹ!' ಕರುಳು ಕತ್ತರಿಸುವ ಆಕ್ರಂದನಕ್ಕೆ ಮರುಗಿ ಅವನು ಅಕಬರನೊಂದಿಗೆ ಸಂಧಾನ-ಒಪ್ಪಂದ ಮಾಡಿಕೊಳ್ಳುತ್ತಿದ್ದಲ್ಲಿ ನಾವಿಂದು ತಲೆ ತಗ್ಗಿಸಿ ನಿಲ್ಲಬೇಕಾಗುತ್ತಿತ್ತು. ನಮ್ಮ ರಾಷ್ಟ್ರದ ಗೌರವ ಕೇತುವನ್ನಾತ ಬಾನೆತ್ತರಕ್ಕೆ ಎತ್ತಿ ಹಿಡಿದಿದ್ದ.... ಅವರ ಜಯಂತಿಯನ್ನು ಭಾರತೀಯರು ಕೊಂಡಾಡಲೇಬೇಕು. ಈಗಿನ ಪರಿಸ್ಥಿತಿಯಲ್ಲಿ ರಕ್ಷಣಾ ಮಂತ್ರಿಯವರು ಆದರಲ್ಲಿ ಅಗ್ರಸ್ಥಾನ ವಹಿಸಬೇಕಾಗುತ್ತದೆ ಕನಿಷ್ಟ ಪಕ್ಷ ಸಾರ್ವಜನಿಕ ಸಭೆಯಲ್ಲಿ ಮಾತಾಡುವದರಲ್ಲಾದರೂ ಭಾಗವಹಿಸಿದ್ದಾರಲ್ಲಾ! ಅದುವೆ ಸಂತೋಷದ ಸಂಗತಿ. ಗೋವಾವನ್ನು ಮಹಾರಾಷ್ಟ್ರದಲ್ಲಿ ವಿಲಿನೀಕರಣಗೊಳಿಸುವುದರಲ್ಲೇ ಅವರ ಹೆಚ್ಚಿನ ಸಮಯ ಕಳೆದು ಹೋಗತ್ತದೋ, ಏನೋ? ಪೂರ್ಣ ಕಾಶ್ಮೀರವನ್ನು ಭಾರತದೊಂದಿಗೆ ಸೇರಿಸುವ ವಿಚಾರ ಅವರ ಮುಂದಿಲ್ಲ, ಕಚ್ಛನಿಂದ ಆಕ್ರಮಣಗಾರರನ್ನೋಡಿಸುವ ವಿಷಯ ಅವರ ಮುಂದಿಲ್ಲ, ನೇಫಾ—ಲಢಾಖ್ ಹಾಗೂ ಇತರ ಹಿಮಾಲಯದ ತಪ್ಪಲಿನಿಂದ ಚೈನೀ ಆಕ್ರಮಣಗಾರರನ್ನು ಹೊಡೆದಟ್ಟುವ ಕುರಿತು ವೀರಾವೇಶದ ಮಾತು ಅವರ ಬಾಯಿಯಿಂದ ಬರುವದಿಲ್ಲ. ಗೋವೆಯ ವಿಲಿನೀಕರಣದ ಮಾತು ಮಾತ್ರ ಸರಾಗವಾಗಿ ಬರುತ್ತಿದೆ! ಅಂತಹ ಸಮಯದಲ್ಲಿ ಧೈರ್ಯಮೇರು ರಾಣಾಪ್ರತಾಪನ ನಾಮೋಚ್ಚಾರಣೆಗಾದರೂ ಅವರಿಗೆ ಸಮಯ ಸಿಕ್ಕುವದು ಭಾರತೀಯರ ಭಾಗ್ಯವೇ ಸರಿ!

ಹೀಗೆ ದೇಶ ಆಕ್ರಮಣಕ್ಕೊಳಗಾಗಿರುವಾಗ, ಆ ದೇಶದ ರಕ್ಷಣಾ ಮಂತ್ರಿಯವರು ತನ್ನ ಸ್ಥಾನ ಭದ್ರತೆಯ ಮೇಲೆಯೇ ಗೃಧ್ರ ದೃಷ್ಟಿ ಇಟ್ಟುಕೊಂಡಿರುವಾಗ, ಜನತೆಯಾದರೂ ಹೇಗಿದೆ? ಮಹಾರಾಣಾ ಪ್ರತಾಪ ಸಿಂಹನ ವಂಶಜರು ತಾವೆಂದು ಎದೆ ಮುಟ್ಟಿ ಅವರಿಂದು ಹೇಳಿಕೊಳ್ಳ ಬಲ್ಲರೇ? ಯಾಕೋ, ಅವರ ಮನಸ್ಸು ಅಳುಕುತ್ತಿದೆ, ಅಂಜುತ್ತಿದೆ. ಆದಕ್ಕೆ ಕಾರಣವೇನು? 'ನವಯುಗ'ವು ಹಿಂದೆಯೇ ಧೈರ್ಯದಿಂದ ಸ್ಪಷ್ಟವಾಗಿ ತಿಳಿಸಿರುವಂತೆ ಮಿಥ್ಯ ರಾಷ್ಟ್ರೀಯತೆಯು ಭ್ರಮೆಯೇ ಇದೆ.

ಆಡಳಿತ ಲಗಾಮನ್ನು ಹಿಡಿದುಕೊಂಡಿರುವ ನೇತಾ ವರ್ಗವು ದೇಶ—ಧರ್ಮ ರಕ್ಷಣೆಯತ್ತ ಅಷ್ಟು ಗಮನ ಕೊಡದೆ ತಮ್ಮ ಸ್ಥಾನ ಭದ್ರತೆಯ ಕುರಿತೇ ಅಧಿಕ ಗಮನ ಕೊಡುತ್ತಿದ್ದಾರೆ. ಭಾರತ ಬಡವಾದರೂ ಪರವಾ ಇಲ್ಲ ತಾವು ಸ್ಥಾನಕ್ಕೆ ಅಂಟಿಕೊಂಡಿದ್ದರೆ ಸಾಕು. ಭಾರತಕ್ಕೆನೇ ಸೇರುವ ಗೋವೆ ಮಹಾರಾಷ್ಟ್ರದಲ್ಲಿ ಸೇರುವದು ಬಲು ಮುಖ್ಯ, ಪಾಕಿಸ್ತಾನಿಗಳ ವಶದಲ್ಲಿರುವ ಕಾಶ್ಮೀರವು ಇತರ ಕಾಶ್ಮೀರದೊಂದಿಗೆ ಅಥವಾ ಭಾರತದೊಂದಿಗೆ ಹಾಗೆನೇ ಆಕ್ರಮಣಕ್ಕೊಳಗಾಗಿರುವ ಇತರ ಪ್ರದೇಶಗಳು ಭಾರತಕ್ಕೆ ಪುನಃ ಸೇರುವದು ಅಷ್ಟು ಮುಖ್ಯವಲ್ಲ!

ಜನತೆಗಾದರೋ ಹಿತ್ತಲ ಗಿಡ ಮದ್ದಲ್ಲ. ಅವರಿಗೆ ಭಾರತೀಯತೆ-ಅಂದರೆ ಜಾತೀಯತೆಯಾಗಿ ಬಿಟ್ಟದೆ. ಪರರ ಗಾನದಿಂದ ಜೀವ ಪದವಿಯನ್ನು ಪಡೆಯಲು ಸಾಧ್ಯವೆಂದು ಅವರು ಭಾವಿಸಿಕೊಂಡಿದ್ದಾರೆ.

ಕಾಶ್ಮೀರ ಪ್ರತ್ಯೇಕವಾಗಿರ ಬೇಕೆನ್ನುವವರಿಗೆ ಬಿಸಿಲಿನ ಕಾಲದಲ್ಲಿ ಉದಕಮಂಡಲದಲ್ಲಿ ಸ್ವರ್ಗವಾಸ! ಸರಕಾರ ಹಾಗೆ ಮಾಡುತ್ತಿದೆ. ಜನತೆ ಅದನ್ನು ಸರಿ ಎನ್ನುತ್ತಿದೆ! ಇಂತಹ ಕಥೆ ಹೇಳಬಹುದಿದೆ.

ರಾಣಾಪ್ರತಾಪನ ಹೆಸರನ್ನೇ ತೆಗೆದುಕೊಳ್ಳೋಣ, ಇತಿಹಾಸದಲ್ಲಿ ಅಕ್ಬರನನ್ನು ಮಹಾತ್ಮಾ ಎಂದು ಹೇಳಲಾಗಿದೆ, 'ಮಹಾತ್ಮ'ನನ್ನು ಎದುರಿಸಿದವನನ್ನು ರಾಷ್ಟ್ರೀಯ ಮಹಾವೀರನೆಂದು ಇಂದಿನ ರಕ್ಷಣ ಮಂತ್ರಿಯವರು ಹೇಳುತ್ತಿದ್ದಾರೆ. ಇದರಲ್ಲಿ ಯಾವದು ಸರಿ? ಯಾರು ನೈಜ ರಾಷ್ಟ್ರೀಯ ಮಹಾಪುರುಷ? ನಮ್ಮ ಧಮನಿ ಅಭಿದಮನಿಗಳಲ್ಲಿ ಓಡುತ್ತಿರುವ ರಕ್ತ ಯಾವುದು?

ಹೀಗೆ ನಮ್ಮ ನೇತಾ ವರ್ಗ ಜನತೆಯನ್ನು ಕೇವಲ ಭ್ರಮೆಯ ಲೋಕದಲ್ಲಿ ನಡೆಸುತ್ತಿದೆ. ಅದರಲ್ಲೂ ಆಕ್ರಮಣದ ಬಿರುಗಾಳಿ ಎದ್ದಿರುವಾಗ ಭಾರತವೆಂಬ ಹಡಗನ್ನು ನೇತಾ ವರ್ಗ ಹೇಗೆ ಮುನ್ನಡೆಸುತ್ತಿದೆ? ಎಲ್ಲಿಲ್ಲೋ ಕಂಡು ಬರುತ್ತಿರುವ ಮಿಂಚನ್ನೇ ಅದು ದೀಪಸ್ಥಂಭವೆಂದು ಭಾವಿಸಿಕೊಂಡಿದ್ದು, ಅತ್ತ ಭಾರತವನ್ನು ಒಯ್ಯುತ್ತಿದೆ. ಎಲ್ಲಿಲ್ಲೋ ಕೇಳಬರುತ್ತಿರುವ ಗುಡುಗುಗಳ ಶಬ್ದವನ್ನು ಕೇಳಿ ಅವೇ ತಮ್ಮ ಜಯಜಯಕಾರ ಹಾಗೂ ಸ್ವಾಗತವೆಂದು ಭಾವಿಸಿಕೊಂಡಿದ್ದು, ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುತ್ತಿದೆ.

ನಾವು ಈ ರೀತಿ ಭ್ರಮೆಯ ಲೋಕದಲ್ಲಿರುವಾಗ ಚೈನೀ ಕಮ್ಯೂನಿಸ್ಟರೂ ಪಾಕಿಸ್ತಾನಿಗಳೂ ಆಕ್ರಮಣ ನಡೆಸುವದರಲ್ಲೇನಾದರೂ ಆಶ್ಚರ್ಯವಿದೆಯೇ? ಹಿಂದೆ ಭಾರತವನ್ನು ಯಾರು ಗುರುವೆಂದು ಭಾವಿಸಿ ಇಲ್ಲಿನ ಮತೀಯ ಮುಂದಾಳುಗಳಿಗೆ ಮಹಾ ಸ್ವಾಗತವೀಯುತ್ತಿದ್ದರೋ, ಅವರೇ ನಮ್ಮ ಇಂದಿನ ದೀನಾವಸ್ಥೆಯನ್ನು ಕಂಡು ಆಕ್ರಮಣ ನಡೆಸಿದ್ದಾರೆ. ಅದನ್ನು ಅರಿತು ಕಾಲಕ್ಕೆ ತಕ್ಕಂತೆ ನಾವು ಎದ್ದು ನಿಲ್ಲದಿದ್ದಲ್ಲಿ ನಮ್ಮ ಅಧಃಪತನ ತಥಃಸಿದ್ಧ. ಅದರಲ್ಲಿ ಸಂದೇಹವಿಲ್ಲ.

ಹಾಗಿದ್ದರೂ ಕೆಲವೊಮ್ಮೆ ಆಶಾದೀಪ ಕಂಡು ಬರುವುದುಂಟು. ಮಹಾ ರಾಣಾ ಪ್ರತಾಪ ಜಯಂತಿಯ ಸಮಯ ಮಾತಾಡಿದ್ದ ರಕ್ಷಣಾ ಮಂತ್ರಿಯವರು, ಅಗತ್ಯಬಿದ್ದಲ್ಲಿ ಶಕ್ತಿಯನ್ನುಪಯೋಗಿಸಲೂ ಭಾರತ ಹಿಂಜರಿಯದೆಂದಿದ್ದಾರೆ. ಪ್ರತಾಪನ ನಾಮೋಚ್ಚಾರಣೆಯಿಂದ ಸ್ಫುರಿಸಿದ ಉದ್ರೇಕ ಇದಲಾಂದ. ಅದೇ ದಾಟಿಯಲ್ಲಿ ಪ್ರಧಾನಿ ಶ್ರೀ ಲಾಲಬಹದೂರ ಶಾಸ್ತ್ರೀಯವರೂ ಮಾತಾಡಿದ್ದಾರೆ. ಅದನ್ನು ಕೇಳುವಾಗ ಒಂದು ಪ್ರಶ್ನೆ ಎದ್ದು ಬರುತ್ತದೆ. ಹಿಮಾಲಯದ ತುದಿಯಲ್ಲಿ ಭಾರತದ ಧ್ವಜನನ್ನು ಪರ್ವತಾರೋಹಿಗಳು ನೆಟ್ಟಿರುವಂತೆ, ಆಕ್ರಮಣಗಾರರನ್ನು ಹೊಡೆದಟ್ಟಿ ಆ ಪ್ರದೇಶದಲ್ಲಿ ನಮ್ಮ ಧ್ವಜವನ್ನು ನಮ್ಮ ಸೈನಿಕರು ಎಂದು ಹಾರಿಸುವರು? ಈ ರೀತಿಯ ಪರಿಹಾಸ್ಯ ಅದೆಷ್ಟು ದಿನಗಳ ತನಕ ನಡೆದೀತು?

ಪೋಲಿಯೆ
ಜೋನಸ

ಜಗತ್ತಿನಿಂದಲೇ ಮಹಾ
ಲಸಿಕೆ ತಯ

೧

೨

೩

ಪೋಲಿಯೋ ಒಂದು ಮಹಾ ರೋಗ. ಇದಕ್ಕೆ ತುತ್ತಾಗಿ ಸಾವಿರಾರು ಮಂದಿ ಪ್ರತಿ ವರ್ಷವೂ ಅಸುನೀಗುತ್ತಿದ್ದಾರೆ. ಈ ಮಹಾಮಾರಿಯ ಪೀಡೆಯು ತೊಡಗಿದುದು ಇಂದು ನಿನ್ನೆಯದಲ್ಲ. ಬಹು ವರ್ಷಗಳಿಗೆ ಮೊದಲೇ, ಅಂದರೆ, ಸಾವಿರಾರು ವರ್ಷಗಳ ಹಿಂದೆಯೇ ಇದರ ಕಾಟ ಪ್ರಾರಂಭವಾಗಿತ್ತು. ಇಂತಹ ಪಿಡುಗನ್ನು ದೂರ ಮಾಡುವ, ಪ್ರತಿಬಂಧಿಸುವ ಉಪಾಯಗಳನ್ನು ಅರಸುವ ಪ್ರಯತ್ನಗಳು ಹಲವು ನಡೆದಿದ್ದರೂ, ಅವು ಯಶಸ್ವಿಯಾಗಲಿಲ್ಲ. ಮಾನವ ಬುದ್ಧಿಯ ಹೋರಾಟದಿಂದ ವೈಜ್ಞಾನಿಕ ಪ್ರವೃತ್ತಿ ಬೆಳೆಯುತ್ತ ಬಂದಂತೆ ಈ ಕಡೆಗೆ ಅತಿ ಹೆಚ್ಚು ಗಮನ ಹರಿಸಲು ಆರಂಭಿಸಿದರೇನೋ ನಿಜ. ಆದರೆ, ಆತ ತನ್ನ ಪ್ರಯತ್ನದಲ್ಲಿ ಯಶಗಳಿಸಿದುದು ಕೇವಲ ಇತ್ತೀಚೆಗೆ. ಬರಿಯ ಹನ್ನೆರಡು ವರ್ಷಗಳ ಹಿಂದೆ ಅಮೆರಿಕೆಯ ಡಾ| ಜೋನಸ್ ಇ. ಸಾಕ್ ಪೋಲಿಯೋ ರೋಗಕ್ಕೆ ಸೂಕ್ತವಾದ ಪರಿಣಾಮಕಾರಿಯಾದ ಲಸಿಕೆಯೊಂದನ್ನು ಸಂಶೋಧಿಸಿ ಮಾನವ ಸಮಾಜಕ್ಕೆ ವರದಾನವೊಂದನ್ನು ನೀಡಿದ ಕೀರ್ತಿಯನ್ನು ಗಳಿಸಿದರು.

ಚಿತ್ರ ೧. ಡಾ| ಜೋನಸ್ ಇ. ಸಾಕ್

ಅಮೇರಿಕೆಯ ನ್ಯೂಯಾರ್ಕಿನ ಉಡುಗೆ ತೊಡುಗೆಯ ಕೆಲಸಗಾರನ ಮಗ ಡಾ| ಜೋನಸ್ ಇ. ಸಾಕ್ ಇಂದು ೪೯ರ ಗಡಿಯನ್ನು ದಾಟಿ ೫೦ರ ಹರೆಯದತ್ತ ಸರಿಯುತಿದ್ದಾರೆ. ರೋಗನಿಧಾನಕ್ಕೆ ಸಂಬಂಧಿಸಿದ ಜಾಗತಿಕ ಸಮುದಾಯದಲ್ಲಿ ಅವರು ಹೊಸತೊಂದು ಮೈಲುಗಲ್ಲನ್ನು ಮುಟ್ಟಿ ಯಶಗಳಿಸಿದವರು. ಇವರ ಸಂಶೋಧನೆಯಿಂದ ತಯಾರಾದ ಲಸಿಕೆಯು ಪೋಲಿಯೋ ವ್ಯಾಧಿಯ ಪೀಡೆಯನ್ನು ನೂರಕ್ಕೆ ತೊಂಬತ್ತು ಅಂಶಗಳಷ್ಟು ತಡೆಹಿಡಿಯುವ ಸಾಮರ್ಥ್ಯವನ್ನು ಹೊಂದಿದೆ—ಇದು ಪ್ರಯೋಗಸಿದ್ಧವಾಗಿದೆ. ಹುಡುಗರಿಂದ ತೊಡಗಿ ಹಿರಿಯರವರೆಗೂ ಆಹುತಿ ತೆಗೆದುಕೊಳ್ಳುತ್ತಿದ್ದ ಈ ರೋಗವನ್ನು ಪ್ರತಿಬಂಧಿಸುವ ಏಕಮಾತ್ರ ಸಾಧನವೆನಿಸಿದೆ ಈ ನವಸಂಶೋಧಿತ ಲಸಿಕೆ.

ಚಿತ್ರ ೨: ಕೌಟುಂಬಿಕ ಹಿನ್ನೆಲೆ

ಸಾಕ್ ಕುಟುಂಬವು ಹೊಲಿಗೆಗಾರರ ಕುಟುಂಬವಾಗಿದೆ. ಜೋನಸನು ಮಹಾ ಮೇಧಾವಿ. ಆತನಲ್ಲಿ ಸುಪ್ತವಾಗಿದ್ದ ಧೀಶಕ್ತಿಯನ್ನು ಹೆತ್ತವರು ಆರಂಭದಲ್ಲೇ ಕಂಡುಕೊಂಡಿದ್ದರು. ತಮ್ಮ ಅಲ್ಪ ಶಕ್ತಿಗೆ ನಿಲುಕುವಷ್ಟು ಅವರು ಅದರ ಬೆಳವಣಿಗೆಗೆ ನೆರವು ನೀಡಿದರು; ಉತ್ತೇಜನವಿತ್ತರು. ಈತನು ಡೇನಿಯಲ್ ಬಿ. ಮತ್ತು ಡೋರಾ ಸಾಕರ ಮೂವರು ಗಂಡು ಹುಡುಗರಲ್ಲಿ ಹಿರಿಯವನು. ಈತನ ಜನ್ಮವಾದುದು ಪ್ರಥಮ ಜಾಗತಿಕ ಸಮರದ ಆರಂಭ ಕಾಲ, ಅಂದರೆ, ೧೯೧೪ನೆಯ ಇಸವಿಯಲ್ಲಿ. ಜೋನಸ್‌ನ ತಂದೆಯು ಪರಿಮಿತವಾದ ವೇತನದ ಮೇಲೆ ನೌಕರಿ ಮಾಡುತ್ತಿದ್ದನು. ಹೀಗಾಗಿ ಕುಟುಂಬ ಪೋಷಣೆಯೇ ಆತನಿಗೆ ಕಷ್ಟಸಾಧ್ಯವೆನಿಸುತಿತ್ತು. ಹಾಗಿದ್ದರೂ ಮಗನ ಬುದ್ಧಿವಂತಿಕೆಯ ಬೆಳವಣಿಗೆಯ ಕಾರ್ಯದಲ್ಲಿ ತನ್ನ ಕರ್ತವ್ಯವನ್ನಾತ ಮರೆಯಲಿಲ್ಲ.

ಚಿತ್ರ ೩: ತಾರುಣ್ಯ

ಹುಡುಗನಾಗಿರುವಾಗಲೇ ಜೋನಸ್‌ನ ಪ್ರತಿಭೆ ಹೊರಪಡುತಿತ್ತು. ಬೆಳೆಯುವ ಗುಣ ಮೊಳೆಯಲ್ಲಿಯೇ ತೋರುತ್ತದೆ ಎಂಬ ಮಾತನ್ನು ಸತ್ಯ ಸಿದ್ಧಮಾಡಿ ತೋರಿಸಿದವರಲ್ಲಿ ಈತನೂ ಒಬ್ಬ. ಇವನು ಅತ್ಯಧಿಕ ಮೇಧಾವಿಯಾಗಿದ್ದನು, ಇವನ ಜ್ಞಾನದಾಹವಾದರೂ ಅನುಪಮ. ಇದನ್ನು ಮನಗಂಡ ಶಾಲೆಯ ಅಧಿಕಾರಿಗಳಿಗೆ ತಲೆನೋವೇ ಆಯಿತು. ಇದರಿಂದಾಗಿ ವಿಶೇಷ ಬುದ್ಧಿವಂತರಿಗಾಗಿಯೇ ಮೀಸಲಾಗಿರುವ ಪಾರ ಶಾಲೆಗೆ ಈತನನ್ನು ವರ್ಗಾಯಿಸುವುದು ಆವನ ಅಧ್ಯಾಪಕರಿಗೆ ಅನಿವಾರ್ಯವೇ ಆಯಿತು. ವಿದ್ಯಾರ್ಥಿ ಬಾಲಕ ಜೋನಸ್‌ನ ಬಗ್ಗೆ ಆತನ ಅಧ್ಯಾಪಕರು ಹೀಗೆ ಉದ್ಗರಿಸುತಿದ್ದರು: "ಪ್ರತಿಯೊಂದನ್ನೂ ಓದಿ ಅದನ್ನು ಕರಗತ ಮಾಡಿಕೊಳ್ಳಬಲ್ಲ ತರುಣ; ಶಾಲೆಯ ಕೆಲಸಗಳಲ್ಲಿ ಪರಿಪೂರ್ಣತೆಯನ್ನು ರಕ್ಷಿಸಿಕೊಂಡು ಬರುವ ಆದರ್ಶ ವಿದ್ಯಾರ್ಥಿ ಮತ್ತು ಉತ್ತಮವಾದ ಸ್ಥಾನವನ್ನೇ ಪಡೆಯುತ್ತ ಬರುವ ಮಹಾಮೇಧಾವಿ"- ಗುರು ಮುಖದಿಂದಲೇ ಇಂತಹ ಪ್ರಶಂಸೆ ಆತನಿಗೆ ದೊರೆಯಬೇಕಾದರೆ, ಆತನ ಬುದ್ಧಿ ಮತ್ತೆ ಎಷ್ಟಿರಬೇಡ?

ಚಿತ್ರ ೪: ವಿದ್ಯಾಭ್ಯಾಸ

೧೯೩೪ರಲ್ಲಿ ಅಂದರೆ, ತನ್ನ ೨೦ನೆಯ ವಯಸ್ಸಿನಲ್ಲಿಯೇ ನ್ಯೂಯಾರ್ಕ್ ನಗರ ಕಾಲೇಜಿನಿಂದ ಸಾಯನ್ಸಿನಲ್ಲಿ ಬ್ಯಾಚುಲರ್ ಪದವಿಯನ್ನು ಪಡೆದ. ಮುಂದೆ ೧೯೩೯ರಲ್ಲಿ ನ್ಯೂಯಾರ್ಕ್ ವಿಶ್ವವಿದ್ಯಾಲಯದಲ್ಲಿ ಮೆಡಿಸಿನ್‌ನಲ್ಲಿ ಡಾಕ್ಟರ್ ಪದವಿ ಹೊಂದಿದ. ಜೋನಸ್‌ನ ವಿದ್ಯಾಭ್ಯಾಸಾವಧಿಯೂ ಸುಖಮಯವಾಗಿರಲಿಲ್ಲ. ತನ್ನ ಅಲ್ಪಾದಾಯದಿಂದ ಆತನ ತಂದೆ ಮಗನ ಶಿಕ್ಷಣದ ಹೊರೆ ಹೊರುವುದು ಕಷ್ಟವಾಗಿತ್ತು. ಅದಕ್ಕಾಗಿಯೇ ಜೋನಸ್ ಬೇಸಿಗೆಯ ಅವಧಿಯಲ್ಲಿ ದುಡಿಯುತಿದ್ದ. ಕೆಲವು ಕಾಲ ಶಾಲಾ ಸಮಯಾನಂತರ ಲೆಬೊರೆಟರಿ ಟೆಕ್ನಿಸಿಯನ್ ಆಗಿಯೂ ದುಡಿದು ಗಳಿಸುತಿದ್ದ. ಹೀಗೆ ಅಪರಿಮಿತ ಕಷ್ಟ ಮತ್ತು ಪರಿಶ್ರಮ ಹಾಗೂ ಸ್ವಾರ್ಜನೆಯಿಂದಲೇ ಆವನು ತನ್ನ ಶಿಕ್ಷಣವನ್ನು ಮುಗಿಸಿದ.

ಚಿತ್ರ ೫: ವಿವಾಹ

ಪರಿಶ್ರಮ ಶೀಲನಾದ ಸಾಕ್ ಪ್ರಣಯ ಬಂಧನದಿಂದ ದೂರವಾಗಿರಲಿಲ್ಲ. ಆತನಿಗೆ ಡೋನಾ ಲಿಂಡಸೆ ಎಂಬಾಕೆಯಲ್ಲಿ ಗಾಢಾನುರಾಗವಂಕುರಿಸಿತ್ತು. ಈಕೆ ಒಬ್ಬ ಸಾಮಾಜಿಕ ಕಾರ್ಯಕರ್ತೆಯಾಗಿದ್ದಳು. ೧೯೩೯ರಲ್ಲಿ ವೈದ್ಯಕೀಯ ಪದವಿ ಪಡೆದ ಕೂಡಲೇ ಜೋನಸ್ ಆಕೆಯನ್ನು ಮದುವೆಯಾದ. ಇಂದು ಈ ದಂಪತಿಗಳಿಗೆ ಮೂವರು ಮಕ್ಕಳಿದ್ದಾರೆ. ತನಗಿರುವ ಅಲ್ಪ ಬಿಡುವು ಸಮಯದಲ್ಲಿ ಸಾಕ್ ಇವರೊಂದಿಗೆ ವಿನೋದವಾಗಿ ನಡೆದು ಕೊಳ್ಳುತ್ತಾನೆ. ಜೀವನದ ಸುಖಗಳಲ್ಲಿ ಒಂದಾದ ಸಾಂಸಾರಿಕ ಸುಖಾನುಭವವನ್ನು ಮಾಡಿಕೊಳ್ಳುತ್ತಾನೆ. ತನ್ನ ತಾನೇ ಮರೆಯುತ್ತಾನೆ.

ಚಿತ್ರ ೬: ಅಂತರನುಭವ

ವೈದ್ಯಕೀಯ ಪದವಿಯನ್ನು ಗಳಿಸಿದ ಬಳಿಕ ಒಂದಲ್ಪಕಾಲ ಆತ ಜೀವಾಣು ವಿಜ್ಞಾನಿಯಾಗಿ ಕೆಲಸ ಮಾಡಿದ. ತನ್ನ ಪ್ರಯೋಗ ಶಾಲೆಯೆಂದರೆ ಆತನಿಗೆ ಪಂಚಪ್ರಾಣ. ಆದರೆ, ತನ್ನ ವೈದಕೀಯ ಅಭ್ಯಾಸವನ್ನು ಪರಿಪೂರ್ಣಗೊಳಿಸವೆ ಹೋದರೆ ನಿರರ್ಥಕವೆಂದು ತಿಳಿದ ಆತನು ಆಸ್ಪತ್ರೆಯೊಂದರಲ್ಲಿ ಎರಡು ವರ್ಷಗಳ ಕಾಲ ಅನುಭವ ಪಡೆದನು. ಆತನ ಸಹಾನುಭವಿಗಳು ಬಿಡುವಿನ ವೇಳೆ

೭

೮

೯

೧೦

ವಿಚಿತ್ರ

ಇ. ಸಾಕ್

ಪೋಲಿಯೋವನ್ನೋಡಿಸುವ ಮಹಾಸಾಧಕ

೭

೮

೯

ಯನ್ನು ಮಾನಸಿಕ ವಿನೋದದಿಂದ ಕಳೆಯುತ್ತಿದ್ದರು. ಆದರೆ, ಜೋನಸ್ ಸಾಕ್ ಈ ಬಗೆಯ ವಿನೋದಗಳಿಂದ ಆಕರ್ಷಿತನಾಗಲಿಲ್ಲ. ಅವನ ಮೊತ್ತ ಮೊದಲ ಆಕರ್ಷಣೆಯೆಂದರೆ ಪ್ರಯೋಗ ಶಾಲೆ. ಒಂದಿಷ್ಟು ಬಿಡು ಸಮಯ ದೊರೆತರೆ ಸಾಕು, ನೆಟ್ಟನೆ ಪ್ರಯೋಗಾಲಯಕ್ಕೆ ತೆರಳಿ ಅಲ್ಲಿಯೇ ತಲೆಕಂಡು ಮಾಡಿಕೊಳ್ಳುತ್ತಿದ್ದ!

ಚಿತ್ರ ೭ ಮಿಚಿಗನ್ ವಿಶ್ವವಿದ್ಯಾಲಯ

ಪ್ರಯೋಗಾಲಯದಲ್ಲಿಯೇ ತನ್ನೆಲ್ಲಾ ಸಮಯ ಕಳೆಯಬೇಕೆಂದು ಭಾವಿಸಿದ್ದ ಸಾಕ್ ೧೯೪೨ಕ್ಕೆ ಮೊದಲ ಹಾಗೆ ಮಾಡಲು ಅಸಮರ್ಥನಾದ. ಆ ವರ್ಷದಿಂದ ಆತ ಲೆಬೊರೆಟರಿಯಲ್ಲೇ ಉಳಿಯತೊಡಗಿದ. ಮಿಚಿಗನ್ ವಿಶ್ವವಿದ್ಯಾಲಯದಲ್ಲಿ—ಸಂಶೋಧಕನಾಗಿ ಆತ ಸೇರಿಕೊಂಡ. ಇನ್‌ಫ್ಲುಯೆಂಜಾ ರೋಗವನ್ನು ಪ್ರತಿಬಂಧಿಸಬಲ್ಲ ಲಸಿಕೆಯೊಂದನ್ನು ಕಂಡು ಹಿಡಿಯುವ ಕಾರ್ಯವು ಈತನ ಪಾಲಿಗೆ ಬಂತು. ಜೋನಸ್ ಸಾಕನ ಅಪ್ರತಿಮ ಕಾರ್ಯಕೌಶಲ್ಯದಿಂದ ಈ ಸಂಶೋಧಯ ಕಾರ್ಯದಲ್ಲಿ ಸಫಲತೆ ಮೂಡಿ ಬರುವುದೆಂದು ಎಲ್ಲರೂ ನಂಬಿದ್ದರು.

ಚಿತ್ರ ೮ ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯ

ಐದು ವರ್ಷಗಳು ಗತಿಸಿದ ತರುವಾಯ, ೧೯೪೭ರಲ್ಲಿ ಜೋನಸ್ ಸಾಕನು ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ವೀರಸ್ ರಿಸರ್ಚ್ ಲೆಬೊರೆಟರಿಯ ಡೈರೆಕ್ಟರ್ ಎಂದು ನೇಮಿತನಾದನು. ಇಲ್ಲಿ ಈತನು ತನ್ನ ಮೊದಲಿನ ಕೆಲಸ—ಇನ್‌ಫ್ಲುಯೆಂಜಾ ಲಸಿಕೆಯ ಸಿದ್ಧತೆ—ಯನ್ನು ಮುಂದುವರಿಸುತ್ತ ಬಂದನೆಂದರೂ ಪೋಲಿಯೋ (ಮಿಲಿತೀಸ್‌ನ) ಪ್ರತಿಬಂಧಕೋಪಾಯದ ಸಂಶೋಧನೆಯಿಂದ ಅಧಿಕಾಧಿಕವಾಗಿ ಆಕರ್ಷಿತನಾದನು. ಆದರಲ್ಲೇ ಆಸಕ್ತನಾದನ. ಇಲ್ಲಿ ಈತನು ಅಹೋರಾತ್ರಿ ಪರಿಶ್ರಮಿಸಿ ಹಲವಾರು ಪ್ರಯತ್ನಗಳನ್ನು ಮಾಡಿದನು; ಆದರೆ, ಒಂದೂ ಸಫಲವಾಗಲಿಲ್ಲ.

ಚಿತ್ರ ೯: ಪೋಲಿಯೋ

ಜಾಗತಿಕ ಪಿಡುಗುಗಳನ್ನು ಗಣಿಸುವಾಗ ಪೋಲಿಯೋದ ಸ್ಥಾನವನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಅಮೆರಿಕೆಯ ಈಶಾನ್ಯ ಭಾಗದಲ್ಲಿ ಇದು ಮೊತ್ತಮೊದಲಿಗೆ ೧೮೯೪ರಲ್ಲಿ ತಲೆಯೆತ್ತಿತು. ಅಂದಿನಿಂದಲೇ ಇದು ಹಲವಾರು ಜನರನ್ನು ಕಾಡುತ್ತಲೇ ಇತ್ತು, ಕೆಲವರಿಗೆ ಪ್ರಾಣಾಪಾಯವನ್ನೂ ತಂದೊಪ್ಪಿಸಿತ್ತು. ೧೯೫೨ರ ಹೊತ್ತಿನಲ್ಲಿ ಪೋಲಿಯೋ ರೋಗಕ್ಕೆ ತುತ್ತಾದವರ ಸಂಖ್ಯೆ ೫೭ ಸಾವಿರವಿದ್ದರೆ, ಪ್ರಾಣಕ್ಕೆರವಾದವರು ಇದರಲ್ಲಿ ೩,೩೦೦. ಇದನ್ನು ಹೀಗೆಯೇ ಬೆಳೆಯಗೊಡುವುದು ಅಪಾಯಕಾರಿಯೆಂದು ಎಲ್ಲರೂ ಹೇಳುತ್ತಿದ್ದರಾದರೂ ಇದರ ಆಕ್ರಮಣವನ್ನು ತಡೆಯುವ ಮಂತ್ರವನ್ನು ಮಾತ್ರ ಯಾರೂ ಚಿಂತಿಸಿರಲಿಲ್ಲ

ಚಿತ್ರ ೧೦: ಸಮಸ್ಯೆ

ಡಾ| ಸಾಕ್‌ರವರು ಮಾನವತೆಯನ್ನು ಪ್ರೀತಿಸುವವರು. ಪ್ರಾಣಾಪಾಯವನ್ನು ತಂದೀಯಬಲ್ಲ ರೋಗನಿವಾರಣೆಯತ್ತ ಅವರ ಗಮನ ಹರಿದುದು ಸ್ವಾಭಾವಿಕ. ಆದುದರಿಂದಲೇ ಅವರು ಇನ್‌ಫ್ಲುಯೆಂಜಾ ನಿರೋಧಕ ಲಸಿಕೆಯ ಸಂಶೋಧನಾ ಕಾರ್ಯಕ್ಕೆ ಅಲ್ಲಿಯೇ ಕೈಮುಗಿದರು. ಪೋಲಿಯೋ ಪ್ರತಿಬಂಧ ಸಾಧ್ಯವಿಲ್ಲವೇ? ಎಂದವರು ಯೋಚಿಸಿದರು. ತನ್ನ ಗುರಿಯನ್ನೇ ಬದಲಾಯಿಸಿ, ಪೋಲಿಯೋ ಸಮಸ್ಯೆಯ ಮೇಲೆಯೇ ದಾಳಿ ಮಾಡಿದರು. ಎಲ್ಲ ಬಗೆಯ ಪೋಲಿಯೋ ರೋಗವನ್ನು ತಡೆಯಬಲ್ಲಂತಹ ಪರಿಣಾಮಕಾರಿ ಲಸಿಕೆಯೊಂದರ ಸಂಶೋಧನೆಯೇ ಅವರ ಬಾಳಿನ ಗುರಿಯಾಯಿತು! ಆದರೆ, ಪೋಲಿಯೋ ರೋಗದಲ್ಲಿ ಅದೆಷ್ಟು ಬಗೆಗಳಿವೆ? ಯಾರಿಗೆ ತಾನೇ ಗೊತ್ತು? ಇದಕ್ಕೆ ಉತ್ತರವನ್ನರಸುವುದು ಸುಲಭಸಾಧ್ಯವಿರಲಿಲ್ಲ. ಅಷ್ಟು ಮಾತ್ರವಲ್ಲ, ಈ ಉತ್ತರ ದೊರೆಯಬೇಕೆಂದರೆ ಸಾಕಷ್ಟು ಸಮಯಾವಕಾಶ ಮತ್ತು ಸಾಂಪತ್ತಿಕ ಬಲ ಅತ್ಯಗತ್ಯವಾಗಿತ್ತು.

ಚಿತ್ರ ೧೧ ಸರ್ವೆ

ತನ್ನ ಪ್ರಯೋಗಗಳಿಗೆ ಆರ್ಥಿಕ ನೆರವನ್ನು ನೀಡುವ ಉದಾರಿಗಳು ಜೋನಸ್‌ಗೆ ಅತ್ಯಗತ್ಯವಾಗಿದ್ದರು. ಇನ ಫಾಂಟೆಲ್ ಪರಾಲಿಸಿಸ್‌ನ ನೇಶನಲ್ ಫೌಂಡೇಶನ್ ಒಂದು ಸಂಸ್ಥೆ. ಇದು ಸಾರ್ವಜನಿಕರ ಸಹಾಯ ದೇಣಿಗೆಗಳಿಂದಲೇ ನಡೆಯುವಂತಹುದು. ಪೋಲಿಯೋ ಸಂಬಂಧದ ಪ್ರತಿಬಂಧಕ ಲಸಿಕೆಯ ತಯಾರಿಯಲ್ಲಿ ತಾನು ಸಹಕಾರ ನೀಡುವುದಾಗಿ ಈ ಸಂಸ್ಥೆ ಜೋನಸ್ ಸಾಕನಿಗೆ ವಿಶ್ವಾಸವಿತ್ತಿತು. ಪೋಲಿಯೋದ ವಿವಿಧ ಬಗೆಗಳನ್ನು ಸಂಶೋಧಿಸುವುದಕ್ಕೂ ಇದು ನೆರವಿತ್ತಿತು. ಇದರಿಂದ ಸಾಕ್‌ನ ಉತ್ಸಾಹ ಇಮ್ಮಡಿಯಾಯಿತು. ಆತನೂ ಮತ್ತಿತರ ಕೆಲ ವೈಜ್ಞಾನಿಕರೂ ಅದೇ ಕ್ಷಣದಿಂದ ತಮ್ಮ ಕಾರ್ಯವನ್ನು ಮುಂದುವರಿಸಿದರು. ಪೋಲಿಯೋ ರೋಗಿಗಳನ್ನು ನಾನಾ ಬಗೆಯಾಗಿ ಇವರು ಪರಿಶೀಲಿಸಿದರ. ಮೂರು ವರ್ಷಗಳ ಸತತೋದ್ಯೋಗ—ಸಾಹಸಗಳ ಪರಿಣಾಮವಾಗಿ ಮೂರು ಬಗೆಯ ಪೋಲಿಯೋ ರೋಗವಿರುವುದೆಂದು ಕಂಡು ಹಿಡಿದರ.

ಚಿತ್ರ ೧೨: ಸಂಧಾಹ್ವಾನ

ಮೂರು ಬಗೆಯಾಗಿರುವ ಪೋಲಿಯೋ ಇವೆಯೆಂದು ಅರಿಸಿದ ನಂತರ ಡಾ| ಸಾಕ್ ಮತ್ತವರ ಸಹಕಾರಿಗಳು ಈ ಮೂರು ವಿಧದ ಪೋಲಿಯೋವನ್ನು ನಿರೋಧಿಸಬಲ್ಲ ಒಂದು ಲಸಿಕೆಯನ್ನು ತಯಾರಿಸಬೇಕೆಂದು ಬಯಸಿದರು. ತಮ್ಮ ಗಹನವಾದ ಸಂಶೋಧನಾ ಕಾರ್ಯದಲ್ಲಿಯೇ ಅವರು ೧೯೫೧ರಲ್ಲಿ ಮುಳುಗಿದರು. ಬಹಳ ಆಳಕ್ಕೆ ಮುಳುಗಿದರೆ ಮಾತ್ರ ರತ್ನ ಸಿಗುವುದಂತೆ. ಡಾ| ಸಾಕ್ ಮತ್ತವರ ಸಂಗಾತಿಗಳು ಸಂಶೋಧನಾ ಸಾಗರದಲ್ಲಿ ಬಹಳ ಆಳಕ್ಕೆ ಧುಮುಕಿದರು, ಕೊಟ್ಟಕೊನೆಗೆ ಅವರು ಸಫಲರಾದರು. ತಮ್ಮ ಹಿಂದಿನ ಅಸಫಲ ಪ್ರಯತ್ನಗಳ ಹಂತಕ್ಕಿಂತ ಬಹುದೂರ ಆಕ್ರಮಿಸಿ ಅವರು ಯಶಸ್ವಿಯಾದರು, ಸಮಸ್ಯೆಗೆ ಸಮಾಧಾನಕರವಾದ ಪರಿಹಾರವನ್ನು ಕಂಡ ಹಿಡಿದರು. ಯುರೇಕಾ ಎಂದು ಕೂಗಿಯೇ ಬಿಟ್ಟರು.

ಚಿತ್ರ ೧೩—ದುಡಿಮೆ

ಡಾ| ಸಾಕ್ ತಮ್ಮ ಪ್ರಯತ್ನದಲ್ಲಿ ಸುಮ್ಮಸುಮ್ಮಗೆ ಸಫಲರಾಗಲಿಲ್ಲ. ಅವರು ಪ್ರತಿ ನಿತ್ಯವೂ ೧೬ ತಾಸು ದುಡಿದರು, ವಾರದ ಆರು ದಿನವೂ ಕಾರ್ಯತತ್ಪರರಾದರು. ಕೆಲವೊಮ್ಮೆ ಆದಿತ್ಯವಾರದ ದಿನ ಕೂಡ ತನ್ನ ಸಂಶೋಧನೆಯಲ್ಲೇ ವ್ಯಮರೆತರು ಒಮ್ಮೊಮ್ಮೆ ತನ್ನ ಮಕ್ಕಳ—ಮಡದಿಯರ ನಡುವಿರ ಪರಾದರೂ ಅವರ

(ಹದಿಮೂರನೇ ಪುಟ ನೋಡಿರಿ)

೧೦

೧೧

೧೨

೧೩

ನೀವೂ ಓದಿ ನಕ್ಕುಬಿಡಿರಿ

ಬಾಪೂ ಮತ್ತು ವಿನೋದ

ಸಂಗ್ರಹಕಾರರು
ಶ್ರೀ ಬೇಕಲ್ ನರಸಿಂಗ ರಾವ್.

ಇಂಗ್ಲೀಷಿನಲ್ಲಿ ಒಂದು ಗಾದೆಯಿದೆ—"ನೀನು ನಕ್ಕರೆ ಜಗವೆ ನಿನ್ನೊಡನೆ ನಗುವುದು, ಅತ್ತರೆ ನೀನೊಬ್ಬನೆ ಅಳಬೇಕಾಗುವುದು."

ಕಷ್ಟದ ಮಧ್ಯದಲ್ಲೂ ನಗುತ್ತಿರುವ ವ್ಯಕ್ತಿಗಳಲ್ಲಿ ಗಾಂಧಿಯೂ ಒಬ್ಬರು. ಬಾಪೂಜಿಯವರು ತಮ್ಮ ಜೀವನದಲ್ಲಿ ಗಳಿಸಿದ ಸಹಜ ಪ್ರಸನ್ನತೆಯ ಬಲದಿಂದ ತಮ್ಮ ಆಸುಪಾಸಿನಲ್ಲೂ ವಿನೋದದ ಮಳೆಗರೆಯುತಿದ್ದರು.

ಬಾಪೂಜಿಯವರ ಜೀವನವು ಸಾಮಾನ್ಯದ್ದಾಗಿರಲಿಲ್ಲ. ತಮ್ಮ ಜೀವನದಲ್ಲಿ ನೂರಾರು ಏರುಪೇರುಗಳನ್ನವರು ಕಂಡಿದ್ದರು. ಕರುಣಾ ಪ್ರಸಂಗಗಳಿಗೂ ಅವರ ಜೀವನದಲ್ಲಿ ಸ್ಥಾನವಿತ್ತು. ತಮ್ಮ ಜೀವನದಲ್ಲಿ ಅಸಂಖ್ಯ ಅಸಹ್ಯ ಕಷ್ಟವನ್ನನುಭವಿಸಬೇಕಾದರೂ ಅವರ ಮುಖದಲ್ಲಿ ಸದಾ ಚಿರಪರಿಚಿತ ಮುಗುಳ್ನಗೆಯು ಕಾಣ ಬರುತಿತ್ತು.

ಬಾಪೂ ನಗುತ್ತಲೆ ಪವಿತ್ರ ವಿನೋದದ ದರ್ಶನವು ನಮಗಾಗುತಿತ್ತು. ಬಾಪೂರವರ ವಿನೋದವು ಆನಂದಮಯವೂ, ಸ್ನೇಹಮಯವೂ ಆಗಿದ್ದು ಪವಿತ್ರ ಭಾವನೆಯಿಂದ ತುಂಬಿರುತಿತ್ತು. ಅವರ ವ್ಯಂಗ್ಯದಲ್ಲಿ ಕಟು ವಚನಗಳಿಗೆ, ಹೃದಯ ಘಾತ ಮಾಡುವ ಮಾತಿಗೆ ಸ್ಥಾನವೇ ಇರುತ್ತಿರಲಿಲ್ಲ. ಗಾಂಧೀಜಿಯವರೇ ಒಮ್ಮೆ ಹೇಳಿದ್ದರು—"ನನ್ನಲ್ಲಿದ್ದ ವಿನೋದದ ಪ್ರವೃತ್ತಿಯಿಂದ ನಾನು ನನ್ನೆಲ್ಲ ಕಷ್ಟವನ್ನು ಮರೆಯುತಿದ್ದೆ. ಈ ಪ್ರವೃತ್ತಿ ನನ್ನಲ್ಲಿ ಮನೆ ಮಾಡದಿದ್ದಲ್ಲಿ ನಾನೆಂದೋ ಹುಚ್ಚನಾಗುತಿದ್ದೆ" ಈ ಮಾತು ಅಕ್ಷರಶಃ ಸತ್ಯವಿತ್ತು. ಎಷ್ಟೇ ಯೋಚನೆಗಳಿರಲಿ, ಎಷ್ಟೇ ದುಃಖವಿರಲಿ, ಸಂಕಟದ ಮಹಾಪರ್ವತವೇ ಬಂದು ಬೀಳಲಿ, ಬಾಪೂ ಸದೈವ ವಿನೋದದ ಚಟಿಕೆಯೊಂದನ್ನು ಹಾರಿಸಿ ಮುಂದಕ್ಕಡಿಯಿಡುತಿದ್ದರು.

ಬಾಪೂವಿನ ಸೇವಾಗ್ರಾಮದಲ್ಲಿ ತರ-ತರದ ವ್ಯಕ್ತಿಗಳು ಒಂದಾಗುತಿದ್ದರು. ಒಂದೆಡೆ ಪ್ರೊಫೆಸರ್ ಭನಸಾಲಿಯವರಂತಹ ದಪ್ಪ ದೇಹದ ಸಾಧುಗಳಿದ್ದರೆ ಇನ್ನೊಂದೆಡೆ ರೋಗಿಗಳ ಸಾಲೇ ನಿಂತಿರುತಿತ್ತು. ತರತರದ ವಿಚಾರವನ್ನು ನಂಬುವ ವ್ಯಕ್ತಿಗಳು ಅಲ್ಲಿ ಇರುತಿದ್ದರು. ಒಂದು ಬಾರಿ ಸರದಾರ ಪಟೇಲರೆಂದರು— "ಬಾಪೂ, ನೀವು ನಿಮ್ಮ ನಾಲ್ಕೆಸೆಗಳಲ್ಲೂ ಶಿವದೇವರ ಬಳಗವನ್ನೇ ಹೊಂದಿದ್ದೀರಲ್ಲ! "ಕಿಲಕಿಲ-ನೆನಗುತ್ತಾ ಗಾಂಧೀಜಿಯವರೆಂದರು—"ಸರಿಯೇ ಹೇಳುತ್ತೀರಲ್ಲ ನೋಡಿ ಮತ್ತೆ, ಈ ಆಶ್ರಮದಲ್ಲಿ ಹಾವು-ಚೇಳುಗಳಿಗೂ ಏನೂ ಕೊರತೆಯಿಲ್ಲ."

ಹಲವಾರು ವರ್ಷ ಹಿಂದಿನ ಮಾತು. ಡಿಲ್ಲಿಯಲ್ಲಿ ಸಂಜೆಯ ಪ್ರಾರ್ಥನೆ ಮುಗಿಯುವಾಗುತ್ತಲೆ ಒಬ್ಬ ಬಾಲಿಕೆಯು ಒಂದು ರೂಪಾಯಿಯನ್ನು ಅವರ ಕೈಯಲ್ಲಿಟ್ಟು ಹಸ್ತಾಕ್ಷರವನ್ನು ಬೇಡಿದಳು. ಬಾಪೂಜಿಯವರು ಹಸ್ತಾಕ್ಷರವನ್ನು ಬರೆದರು, ಬಾಲಿಕೆಯು ಇನ್ನೂ ಏನಾದರೂ ಬರೆಯುವಂತೆ ಆಗ್ರಹಪಡಿಸಿದಳು. ಬಾಪೂ ಕೇಳಿದರು—"ಹೇಳು, ಏನು ಬರೆಯಲಿ?"

"ತಮಗೆ ಇಷ್ಟವಿದ್ದುದನ್ನು ಬರೆಯಿರಿ."

ಬಾಪು ಅವಳೊಡನೆ ಕೇಳಿದರು—"ನಿನ್ನ ತಂದೆಗೇನು ಕೆಲಸ?"

ಅವಳೆಂದಳು—"ತಂಬಾಕುವಿನ ವ್ಯಾಪಾರ."

ಬಾಪೂ ಕೂಡಲೆ ಬರೆದರು—"ತಂಬಾಕು ಸೇವನೆ ಒಳ್ಳೆಯದಲ್ಲ."

೦ ೦ ೦

ಬಾಪೂ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಇಂಗ್ಲೆಂಡಿಗೆ ಹೋಗುತಿದ್ದರು. ಒಬ್ಬ ಕಿಲಾಡಿ ಇಂಗ್ಲೀಷರವನು ಬಾಪೂರವರನ್ನು ಬಾಧೆ ಪಡಿಸಲು ನಿಶ್ಚಯಿಸಿದನು. ಆತನು ಬಾಪೂರವರ ವಿರುದ್ಧ ಲೇಖನಗಳನ್ನು ಸಮಾಚಾರ ಪತ್ರಗಳಲ್ಲಿ ಪ್ರಕಟಿಸುತಿದ್ದನು. ಆದರೆ ಈ ಲೇಖನಗಳನ್ನು ಲೆಕ್ಕಿಸದ ಬಾಪೂ ಅದಕ್ಕೇನು ಉತ್ತರ ಕೊಡಲಿಲ್ಲ.

ಅಂದಿನಿಂದ ಆ ಇಂಗ್ಲೀಷರವನು ಬಾಪೂ ವಿರುದ್ಧ ಲೇಖಗಳ ಪತ್ರಿಕೆಯನ್ನು ಬಾಪೂರವರಿಗೆ ತಲುಪಿಸತೊಡಗಿದನು. ೨-೩ ದಿನಗಳ ವರೆಗೆ ಬಾಪೂ ಅದನ್ನೋದಿದರು, ಅದರಲ್ಲೇನೂ ಸಾರವಿಲ್ಲದುದರಿಂದ ಅದನ್ನೋದುವುದನ್ನು ಬಿಟ್ಟರು. ಒಂದು ದಿನ ೧೨ ಪುಟ ಬರೆದ ಗಾಂಧೀವಿರೋಧ ಲೇಖನಗಳನ್ನೂ ಬೈಗಳಿಂದ ತುಂಬಿದ ಪತ್ರಗಳನ್ನೂ ಆತನು ಬಾಪೂಗೆ ಕೊಟ್ಟನು. ಬಾಪೂ ಆ ಕಾಗದವನ್ನು ಕೈಗೆತ್ತಿ ಪಿನ್‌ನಲ್ಲಿ ಜೋಡಿಸಿದ ಇತರ ಪತ್ರಿಕೆಯೊಂದಿಗೆ ಓದದೆನೇ ವೇಸ್ಟ್ ಪೇಪರ್ ಬಾಸ್ಕೆಟಿಗೆ ಒಗೆದರು.

ಇಂಗ್ಲೀಷಿನವನು ಕಿಡಿಕಿಡಿಯಾಗಿ ಬಾಪೂರೊಡನೆಂದನು—"ಪತ್ರಗಳಲ್ಲಿ ಕೆಲವು ಮಹತ್ವದ ವಿಚಾರವಿದೆ. ತಾವು ಓದಿ ನೋಡಿ."

ಪತ್ರವನ್ನು ಚುಚ್ಚಿಟ್ಟ ಪಿನ್ನನ್ನು ನೋಡುತ್ತಾ ಬಾಪೂ ಎಂದರು—"ಮಹತ್ವದ ವಸ್ತುವನ್ನ ನಾನು ತೆಗೆದಿಟ್ಟಿದ್ದೇನೆ; ಬಾಕಿ ವಸ್ತುಗಳನ್ನು ಯೋಗ್ಯವಾದ ಸ್ಥಾನದಲ್ಲೇ ಇರಿಸಿದ್ದೇನೆ."

೦ ೦ ೦

ಒಂದೊಮ್ಮೆ ಗ್ರಾಮ-ಸೇವಾ-ವಿದ್ಯಾಲಯದ ಸುಮಾರ ೪೦ ವಿದ್ಯಾರ್ಥಿಗಳು ಪ್ರಾತಃಕಾಲದಲ್ಲಿ ಗಾಂಧಿಯವರನ್ನು ಸಂಧಿಸಲು ಬಂದರು. ಬಾಪು ಎಲ್ಲರನ್ನೂ ಕುಳ್ಳಿರಿಸಿ ಅವರೊಡನೆ ಸಂಭಾಷಿಸ ತೊಡಗಿದರು. ಮಧ್ಯದಲ್ಲಿ ವಿದ್ಯಾರ್ಥಿಗಳವರೊಡನೆ ಹೇಳಿದರು—

"ನೋಡಿ ತಮ್ಮಂದಿರೆ, ಇಂದು ನೀವೆಲ್ಲ ನನ್ನ ಅತಿಥಿಗಳು. ಆದರೆ ನಾನೊಬ್ಬ ಬಡ ಮನುಷ್ಯನಿದ್ದೇನೆ. ನಿಮಗೆ ನಾನು ಹೇಗೆ ಸತ್ಕರಿಸಲಿ? ತಿನಿಸಲೂ ನನ್ನೊಡನೆ ಏನೂ ಇಲ್ಲ. ಹಾಂ, ನನ್ನೊಡನಿರುವ ಒಂದು ವಸ್ತುವಿನಿಂದ ನೀವೆಲ್ಲರೂ ಹೊಟ್ಟೆ ತುಂಬಬಲ್ಲಿರಿ."

ಅನಂತರ ಹತ್ತಿರವೇ ಇದ್ದ ಬಾವಿಯೆಡೆ ಬೊಟ್ಟು ಮಾಡಿ ಮುಗುಳ್ನಗುತ್ತಾ ಹೇಳಿದರು—"ಈ ಬಾವಿಯ ನೀರು ಬಹಳ ಸಿಹಿಯಿದೆ; ನೀವು ಹೊಟ್ಟೆ ತುಂಬ ಕುಡಿಯಬಹುದು."

೦ ೦ ೦

ಎರವಾಡ ಜೈಲಿನ ಮಾತು. ಅಸ್ಪೃಶ್ಯರಿಗೋಸ್ಕರ ಬಾಪೂ ಮೊದ—ಮೊದಲು ದೀರ್ಘ ಉಪವಾಸ ಕೈಗೊಂಡಿದ್ದರು. ದೇಶದ ಎಲ್ಲಾ ಮುಖಂಡರೂ ಬಾಪೂಜಿಯವರ ಈ ಉಪವಾಸದಿಂದ ಚಿಂತಿತರಾಗಿದ್ದರು. ಅವರೆಲ್ಲರೂ ಗಾಂಧಿಯಿದ್ದ ಸ್ಥಳವನ್ನು ತಲುಪಿದರು. ಮಾಲವೀಯ, ರವೀಂದ್ರನಾಥ ಠಾಕೂರ, ಸರೋಜಿನಿ ನಾಯ್ಡು ಮೊದಲಾದ ನಾಯಕರು ಅಲ್ಲಿದ್ದರು. ಇವರೆಲ್ಲರ ಪ್ರಯತ್ನದಿಂದ ವ್ರತ ಸಮಾಪ್ತಿಯಾಗುವ ಸಮಯ ಸನ್ನಿಹಿತವಾಯಿತು. ಈಗ ಎಲ್ಲರೂ ಹರ್ಷಗೊಂಡಿದ್ದರು. ಎರವಾಡಾ ಜೈಲಿನ ಮಾವಿನ ಮರದ ಕೆಳಗೆ ಸಮಾರಂಭದ ಎಲ್ಲಾ ವ್ಯವಸ್ಥೆ ಮಾಡಲಾಯಿತು. ಎಲ್ಲವನ್ನು ಶೃಂಗರಿಸಲಾಗಿತ್ತು. ಕ್ಲಪ್ತ ಸಮಯಕ್ಕೆ ಬಾಪೂ ಬಂದರು. ಮೊದಲೇ ತಯಾರಿಸಿದ್ದ ಮುಸುಂಬಿಯ ರಸ ಕುಡಿದು ಬಾಪೂ ಉಪವಾಸ ಮುರಿದರು.

ಬಾಪೂರವರ ಇಕ್ಕೆಡೆಗಳಲ್ಲೂ ಇತರ ನಾಯಕರಿದ್ದರು. ಸರೋಜಿನಿ ನಾಯ್ಡುರವರು ಬಾಪೂರವರೊಡನೆ ವ್ಯಂಗ್ಯವಾಗಿ ಹೇಳಿದರು—"ಬಾಪೂ! ಇಂದು ನೀವು ನಮ್ಮ ಗುಂಪಿನಲ್ಲಿ ನಲ್ಲಿ ಮದುಮಗನಂತೆ ಶೋಭಿಸುತ್ತಿದ್ದೀರಿ."

ತಮ್ಮ ಸಾತ್ವಿಕ ವಿನೋದದೊಂದಿಗೆ ನಗುತ್ತಾ ಬಾಪೂ ಎಂದರು "ಹಾಂ, ಯಾಕಾಗಬಾರದು? ನಿನ್ನಂತಹ ವಧುವೇ ಇರುವಾಗ!" ಈ ಮಧುರ ವಿನೋದದಿಂದ ಅವರ ಆನಂದವು ಎರಡು ಪಾಲು ಹೆಚ್ಚಾಯಿತು.

೦ ೦ ೦

ಒಂದು ಬಾರಿ ರಾಜಾಜಿ ಗಾಂಧಿಯವರನ್ನು ಸಂಧಿಸಲು ಸೇವಾಗ್ರಾಮಕ್ಕೆ ಬಂದರು. ಅವರು ವಾರ್ಧಾದ ಬಜಾಜವಾಡಿಯಲ್ಲಿ ತಂಗಿದ್ದು ಆಗಾಗ ಸೇವಾಗ್ರಾಮಕ್ಕೆ ಆಗಮಿಸಿ ಗಾಂಧೀಜಿಯವರನ್ನು ಸಂಧಿಸುತಿದ್ದರು. ದೇಶದ ಗಹನವಾದ ಸಮಸ್ಯೆಯ ಕುರಿತು ವಿಚಾರ ವಿನಿಮಯ ಜರಗುತಿತ್ತು. ಆದರೆ ಮಾತಾಡುವ ಸಮಸ್ಯೆಯು ಯಾವ ಕುರಿತು ಎಂದು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಯುತ್ತಿರಲಿಲ್ಲ.

ಒಬ್ಬ ಸಾಹಸೀ ಪ್ರತಿನಿಧಿಯು ಬಾಪೂರೊಡನೆ ನೇರವಾಗಿ ಪ್ರಶ್ನಿಸಿದರು—"ಬಾಪೂಜಿ, ರಾಜಾಜಿ ಮದ್ರಾಸಿನಿಂದೇಕೆ ಬಂದರು."

"ಅವರಿಗೆ ಬರ ಬೇಕೆಂದೇ ಬಂದರು" ಎಂದು ಗಾಂಧೀಜಿಯವರು ಉತ್ತರ ಕೊಟ್ಟರು.

ಪುನಃ ಆ ಪ್ರತಿನಿಧಿಯು ಪ್ರಶ್ನಿಸಿದನು—"ಯಾವ ವಿಚಾರದ ಕುರಿತು, ನೀವು ಅವರೊಡನೆ ಸಂಭಾಷಿಸಿದಿರಿ?"

ಬಾಪೂ ಹೇಳಿದರು—"ಒಳ್ಳೆ ಮನುಷ್ಯ! ನನ್ನ ಮಗನ ಮಾವ ಆತನೆಂದೂ ನಿಮಗೆ ಗೊತ್ತಿಲ್ಲವೆ? ನಾನವರ ಮಗಳ ಮಾವನಲ್ಲವೇ? ನಾನವರ ಬೀಗ, ಅವರು ನನ್ನ ಬೀಗ, ಹಾಗಿರುವಾಗ, ಅಷ್ಟೊಂದು ಸಂಬಂಧವಿರುವಾಗ, ಮಾತುಕತೆ ನಡೆಯುವುದರಲ್ಲೇನು ಕೊರತೆ?"

ನಿರಾಶನಾಗಿ ಆ ಪ್ರತಿನಿಧಿ ಹೊರಟೇ ಬಿಟ್ಟ.

೦ ೦ ೦

ಒಂದೊಮ್ಮೆ ಬಾಪೂ ತಮ್ಮ ಮಂಡಲಿಯೊಂದಿಗೆ ರವೀಂದ್ರನಾಥರ ಶಾಂತಿನಿಕೇತನಕ್ಕೆ ತೆರಳಿದ್ದರು. ಅವರಿಗೆ ಅಲ್ಲಿ ಉತ್ಸಾಹೋಲ್ಲಾಸ ಪೂರ್ಣ ಸ್ವಾಗತ ದೊರೆಯಿತು. ಅಲ್ಲಿ ಅವರು ಉಳಕೊಳ್ಳಲು ಏರ್ಪಾಡು ಮಾಡಿದ್ದರು. ಶಾಂತಿನಿಕೇತನದ ಕಲಾವಿದ ಶ್ರೀ ನಂದಲಾಲ ಬೋಸನು ಪುಷ್ಪ-ಪತ್ರಗಳಿಂದ ಕೋಣೆಯನ್ನು ಅಂದವಾಗಿ ಶೃಂಗರಿಸಿದ್ದನು. ಬಾಪೂ ಆ ಕೋಣೆಯನ್ನು ತಲುಪಿ ಶೃಂಗಾರವನ್ನು ಕಂಡೊಡನೆ ನಗುತ್ತಾ ಕವೀಂದ್ರ ರವೀಂದ್ರರೊಡನೆಂದರು—"ಅರೆ! ಈ ಮುದುಕನಿಗೋಸ್ಕರ ಈ ಶೃಂಗರಿಸಿದ—ಕೋಣೆಯೋ? ಇದು ವಧು-ಗೃಹವೋ?"

ರವೀಂದ್ರರಾದರೋ ಕವಿಗಳಿದ್ದರು; ಉತ್ತರವಾಗಿ ಅವರೆಂದರು—"ಇದು ಕವಿಯ ನಿವಾಸಸ್ಥಾನವೆಂದು ತಾವು ಮರೆತಿರಾ?"

ಗಾಂಧೀಜಿಯವರು ಇನ್ನೂ ಜೋರಾಗಿ ನಗುತ್ತಾ ಕೇಳಿದರು—"ಒಳ್ಳೆಯದು, ಆದರೆ ವಧುವೆಲ್ಲಿ?"

ಕೂಡಲೆ ಕವಿ ಉತ್ತರ ಕೊಟ್ಟರು—"ನಮ್ಮ ಹೃದಯದ ಚಿರಯುವತಿ ರಾಣಿ 'ಶಾಂತಿನಿಕೇತನ'ವು ತಮ್ಮನ್ನು ಸ್ವಾಗತಿಸುತ್ತಿದೆ."

"ಆದರೆ, ನಿಜವಾಗಿ ಹೇಳುವುದಾದರೆ ಒಬ್ಬ ಮುದುಕನಿಗೆ ಇದು ರುಚಿಸದು."

ಆದರೆ ಸೋಲನ್ನೊಪ್ಪದ ರವೀಂದ್ರರೆಂದರು— "ರಾಣೀ ಶಾಂತಿನಿಕೇತನವು ಸದಾ ಸತ್ಯದ ಪೂಜೆ ಮಾಡಿದೆ."

"ಒಳ್ಳೇ ಮಾತು!" ಎಂದು ಬಾಪೂ ಕೋಣೆಯನ್ನು ಪ್ರವೇಶಿಸಿದರು. ರವೀಂದ್ರರು ಬೀಳ್ಕೊಂಡರು;

ಕೋಣೆಯನ್ನು ಸಾಕಷ್ಟು ಅಲಂಕರಿಸಿದ್ದರೂ ಬಾಪೂವಿನ ದೃಷ್ಟಿಗೆ ಆ ಸ್ಥಳವು ತೀರ ಸಣ್ಣದಾಗಿ ಕಂಡಿತು. ಆದುದರಿಂದ ಬಾಪೂ ಕೋಣೆಯ ಶೃಂಗಾರವನ್ನು ಖಾಲಿ ಮಾಡಿಯೇ ಅಧಿಕ ಸ್ಥಳದ ವ್ಯವಸ್ಥೆ ಮಾಡಿದರು.

ಪ್ರಾತಃ ಕಾಲದಲ್ಲಿ ರವೀಂದ್ರರು ಕೋಣೆಯ ಶೃಂಗಾರವು ನಷ್ಟ-ಭ್ರಷ್ಟವಾದುದನ್ನು ಕಂಡು ಗಾಂಧೀಜಿಯವರನ್ನು ಕೇಳಿದರು- "ಈ 'ವಧೂ-ಗೃಹ'ದ ಅವಸ್ಥೆ ಹೀಗೇಕಾಯಿತು? ವರನಂತೂ ಇಲ್ಲೇ ಇದ್ದಾನಲ್ಲ, ವಧುವು ಓಡಿಹೋದಳೆ!"

ಬಾಪೂ ನಗುತ್ತ ಉತ್ತರಕೊಟ್ಟರು- "ನಾನು ಮೊದಲೇ ತಿಳಿಸಿಲ್ಲವೆ, ಮುದಿವರನನ್ನು ಅವಳು ಬಯಸಲಾರಳೆಂದು" ಕೊಂಚ ಹೊತ್ತಿನವರೆಗೆ ಗಾಂಧೀಜಿಯವರೂ ರವೀಂದ್ರರೂ ನಗುತ್ತಾ ನಿಂತರು.

ಇಂದು ಬಾಪೂರವರೂ ಇಲ್ಲ, ಅವರ ವಿನೋದವೂ ಇಲ್ಲ. ಆದರೂ ಅವರ ನೆನಪು ನಮ್ಮನ್ನು ಬಿಟ್ಟು ತೊಲಗದು. ಬಾಪೂ ವಿನಂತೆ ಮಧುರ, ಸಾತ್ವಿಕ ವಿನೋದವೆಲ್ಲಿ ದೊರಕೀತು?

ನವಯುಗ, ೧೭-೬-೧೯೬೫

ಕನ್ನಡ ಜಿಲ್ಲೆಯ ಕುದುರೆಮುಖ

(ಆರನೇ ಪುಟದಿಂದ)

ನೀಳವಾಗಿ ಪೂರ್ವಪಶ್ಚಿಮಕ್ಕೆ ಚಾಚಿಕೊಂಡಿದ್ದ ಶಿಖರದ ಪಶುಭಾಗವನ್ನು ಸೇರಿದೆವು. ರವಿಯು ಸಮುದ್ರದೊಳಗೆ ಅವಿತುಕೊಳ್ಳಲು ಅಣಿಯಾಗುತ್ತಿರುವ ಸಮಯ ಏನು ಗಂಭೀರ ದರ್ಶನ! ಅಲಂಕೃತವಾದ ಆನಂದ! ಸುಕೃತ ಫಲದಿಂದ ಈ ಸೊಬಗನ್ನು ನೋಡಲು ದೊರೆಯಬೇಕು. ಈಕ್ಷಿಸುತ್ತಿದ್ದ ಹಾಗೆ ಲವಣ ಸಾಗರದಲ್ಲಿ ಲಾವಣ್ಯದಿಂದ ರಾರಾಜಿಸುತ್ತಾ ಅರ್ಧ ಕಾಣುತ್ತಿದ್ದನು ದಿವಾಕರನು. ದೊಡ್ಡ ಕೊಪ್ಪರಿಗೆಯೋಪಾದಿಯಲ್ಲಿದ್ದ ಪವಿತ್ರ ಬಿಂಬ ಮಾಯವಾಗುತ್ತಾ ಆಗುತ್ತಾ ಸಂಪೂರ್ಣ ಜಲಾಧಿವಾಸ. ಆದರೆ ಪ್ರಕಾಶದ ಪ್ರಭಾವ ಇನ್ನೂ ಕುಂದಿಲ್ಲ. ಅಂತು ಸಾಧಾರಣ 21 ಗಂಟೆಯಾಗುವಾಗ ಎಲ್ಲವೂ ಮಾಯವಾಯಿತು. ಕಗ್ಗತ್ತಲು ಕವಿಯಿತು. ಗಾಳಿಯ ಚರ, ಛಳಿಯ ಪ್ರತಾಪ. ವಿದ್ಯುತ್ತಿನ ಬೆಳಕಿನಿಂದ ಶೋಭಾಯಮಾನವಾಗಿ ಧರ್ಮಸ್ಥಳ, ಉಜ್ರೆ, ಬೆಳ್ತಂಗಡಿ ಒಟ್ಟಾಳ ಮೊದಲಾದ ಊರಗಳು ಕಾಣಿಸುತ್ತಿದ್ದವು. ಚಾರ್ಮಾಡಿಯಿಂದ ಇಳಿದು ಬಂದು ಮುಂದೆ ಸಾಗುತ್ತಿರುವ ಲೋರಿ, ಬಸ್ಸುಗಳ ಲೈಟಿನಂದ ಬಹಳವಾಗಿ ಶೋಭಿಸುತಿತ್ತು. ರಾತ್ರಿ ಗಂಟೆ ೮ಕ್ಕೆ ಮುಟ್ಟಿದ್ದು ಗೊತ್ತೇ ಇಲ್ಲ. ಉದರ ಜ್ವಾಲೆ ತಣಿಸಲು ಗಂಜಿ ತಯಾರಿಕೆಗೆ ೩ ೪ ಪಲ್ಲಂಗು ಕೆಳಗಿಳಿದು ಸಲಕರಣೆ ತಯಾರಿಸಿದೆವು. ೨-೩ ಜನರು ಛಳಿ ನಿವಾರಣೆಗಾಗಿ ಯಜ್ಞ ತಯಾರಿಸಿದರು. ಬಾಕಿಯವರು ಗಂಜಿ, ಪಲ್ಯ, ಚಟ್ನಿ ಸಂಗ್ರಹ ತಯಾರಿಸಿದ್ದು; ಯಜ್ಞದ ಸುತ್ತ ಕಟ್ಟಿ ಛಲೋದಾಗಿ ಸಂತೋಷದಿಂದ ಊಟ ಪೂರೈಸಲಾಯಿತು. ರಾತ್ರಿ ಆದ ಹಾಗೇ ಛಳಿಯ ಬರವೂ ಹೆಚ್ಚಿತು. ಈ ಯಾಗಕ್ಕೆ ಸುತ್ತ ಕಟ್ಟಿ ಎಲ್ಲರೂ ಮಲಗಿದರು. ಆದರೆ ಭಯಂಕರ ಕರೆಗಾಳಿ, ಇತ್ತ ಬೆನ್ನಿಗೆ ಕಲ್ಲಿನ ಒತ್ತಾಟ, ಪ್ರಾಣಿಗಳು ಬಂದು ಏನು ಮಾಡುತ್ತಾವೋ ಎಂಬ ಹೆದರಿಕೆ ಕೆಲವರಿಗೆ, ಅಂತು ಇಂತು ಇಷ್ಟು ಬಳಲಿದ ದೇಹವಾದರೂ ಹಿತಕರವಾದ ನಿದ್ರೆಯು ಯಾರನ್ನು ಮುಟ್ಟಲಿಲ್ಲ. ಒಟ್ಟಾರೆ ಬೆಳಗಾಯಿತು. ನಾನೊಬ್ಬ ಮಾತ್ರ ತುದಿಗೆ ಹೋದೆ. ಕಲ್ಲಿನ ಮೇಲೆ ಕೂತು ಉದಯಾದಿತ್ಯನನ್ನು ನಿರೀಕ್ಷಿಸುತ್ತಿರುವಾಗ ಹಿಮವು ಬಹಳ ಭರದಿಂದ ಬಂದು ಮುಖಕ್ಕೆ ಹೊಡೆಯುತಿತ್ತು. ಅಂತು ಗರ್ವದಿಂದಲೂ ಧೈರ್ಯದಿಂದಲೂ ಗಟ್ಟಿಯಾಗಿ ಬಂಡೆಯ ಮೇಲೆ ಕೂತಿರುವಾಗ ಮೇವಿಗೆ ಹೋದ ೭ ಗಂಡು ಜಿಂಕೆಗಳು ಸಾಲಾಗಿ ಬಂದುವು. ಇಷ್ಟು ಧೈರ್ಯಗೆಡದೆ ನಾನು ಕುಳಿತ ೩-೪ ಮಾರ. ದೂರದಲ್ಲಿ ನನ್ನನ್ನೇ ನೋಡಿಕೊಂಡು ಕಾಡಿನ ಒಳಗೆ ಹೋದವು. ಉದ್ದಕೋಡು, ಪುಷ್ಟಿಕರವಾದ ದೇಹ, ಯಾವ ತರದ ಭಯವಿಲ್ಲದೆ ಸುಖಕರವಾದ ಜೀವನದಿಂದ ಬೆಳೆದ ಪ್ರಾಣಿಗಳು ಅವು.

ಹಿಮದ ಉಪದ್ರವದಿಂದ ರವಿಯ ಆಗಮನವನ್ನು ನೋಡಲು ಅಷ್ಟು ಆನಂದವಾಗಲಿಲ್ಲ. ಕೆಲವು ಹೊತ್ತಿನ ಮೇಲೆ ಕೆಲವರು ನನ್ನನ್ನು ನೋಡಲು-ವ-ಇನ್ನಿತರ ವಿಶೇಷ ತಿಳಿಯಲು ಬಂದರು. ತೆಂಕು ಬದಿ ಭಯಂಕರವಾದ ಜರಿ. ಬದಿಗೆ ೪-೬ ಮಾರ. ದೂರದಲ್ಲೇ ನೋಡಬೇಕು. ಬದಿಗೆ ಬರುವಾಗ ಕೆಳಗಿಂದ ಎಳೆದಂತೆ ನಮಗೆ ಕಾಣುತ್ತದೆ. ಎಲ್ಲಾ ನೋಡಿ ಸಾಧಾರಣ ೮ ಗಂಟೆಗೆ ನಮ್ಮ ಕೂಟ ಸೇರಿದೆವು. ಗಂಜಿ ತಯಾರಿಸಿದ್ದರು. ನಾನು ಕೂಡಾ ೩ ಜನರು ಕೆಳಗೆ ಬಂದು ತುಂಗಾನದಿಯಲ್ಲಿ ಅತಿ ಗರ್ವದಿಂದ ಸ್ನಾನ ನಿತ್ಯಾಹ್ನಿಕಗಳನ್ನು ಮುಗಿಸಿಕೊಂಡು, ಹೋಗಿ ಯಜ್ಞದಲ್ಲಿ ಇಡೀ ಶರೀರವನ್ನೇ ಕಾಸಿಕೊಂಡು ಊಟವನ್ನು ಎಲ್ಲರೂ ಪೂರೈಸಿಕೊಂಡು ೯ ಗಂಟೆಗೆ ಹಿಂದೆ ಹೊರಟೆವು.

ಆದರೆ ಪ್ರತಿಯೊಬ್ಬರೂ ಹುರುಪುದಾರರಾಗಿದ್ದರು. ಆದರಿಂದಾಗಿ ಸುತ್ತಾಗಿ ಹತ್ತಿದ್ದ ಸಾಧಾರಣ ೨ ಮೈಲಿ ದಾರಿಯನ್ನು ಒರೆ ಮುಕ್ಕಾಲು ಮೈಲಿಯಲ್ಲಿ ಸೇರಿದೆವು. ಭಯಂಕರವಾದ ಪರ್ವತಗಳನ್ನು ನೆಟ್ಟಗೆ ಇಳಿದು ಧೈರ್ಯ ಕೆಡದೆ ಒಬ್ಬರನ್ನೊಬ್ಬರು ಹಿಂಬಾಲಿಸಿಕೊಂಡು ಬಂದದ್ದೇ ಈ ಸಮಯಕ್ಕೆ ಕಾರಣ. ಮಧ್ಯಾಹ್ನ ಘಂಟೆ ೧೧ಕ್ಕೆ ಹೇವಳವನ್ನು ಸುರಕ್ಷಿತವಾಗಿ ತಲುಪಿದೆವು. ಅಲ್ಲಿ ಉಪಹಾರ ತೀರಿಸಿಕೊಂಡು, ವಿಶ್ರಮಿಸಿ, ೧ ಘಂಟೆಗೆ ಹೊರಟು ನೆಟ್ಟಗೆ ಇಳಿದು ಹಾದಿಯನ್ನು ಸಮೀಪದಿಂದ ಮುಗಿಸಿ ಪರ್ವತದ ಹೊರಮುಗ್ಗುಲನ್ನು ಸೇರಿದೆವು. ದಾಹವಾದರೆ ಅಲ್ಲಲ್ಲಿ ಒಳ್ಳೇ ನೀರು ದಾರಿಯಲ್ಲಿ ಸಿಗುವುದರಿಂದ ದಾಹ ಶಮನಕ್ಕೆ ಏನೂ ತೊಂದ್ರೆ ಇಲ್ಲ. ಹೊರ ಮುಗ್ಗುಲನ್ನು ಸೇರಿ ಸುಮಾರು ಒಂದು ಮೈಲಿ ಬಂದು ನಿಜವಾದ ಹಾದಿಯನ್ನು ಬಿಟ್ಟು ಕಾಡಿನಲ್ಲಿ ನಾವೇ ಹಾದಿಮಾಡಿಕೊಂಡು ಅತಿ ಕಂತವಾಗಿ ಇಳಿಯುತ್ತ ಹಲವು ಕಡೆ ಜಾರಿಕೊಂಡು, ಬಿದ್ದು ಕೊಂಡು, ಹ್ಯಾಗೋ ಕಷ್ಟಪಟ್ಟು ರಸ್ತೆಯನ್ನು ಸೇರಿದೆವು.

ಈ ರಸ್ತೆ ಕೂಪಿನವರು ಮಾಡಿಸಿದ ಹೊಸತಾದ ರಸ್ತೆ. ಇಳಿಯುವಾಗ ಚಾರ್ಮಾಡಿ, ಆಗುಂಬೆ ಗಾಟಿಯನ್ನು ಸೋಲಿಸುವಂಥ ರಸ್ತೆಯಾಗಿದೆ. ಜೀಪ್ ಹೊರತು ಕಾರುಗಳು ಹೋಗಲು ಸಾಧ್ಯವೇ ಇಲ್ಲ. ನೀಳ ಹಾಕಿದ ಸ್ಲೀಪರು ರಾಶಿ ರಾಶಿ ಬಿದ್ದುಕೊಂಡಿತು. ಸಾಧಾರಣದವಾದ ಲೋರಿಗಳು ಆ ರಸ್ತೆಯಿಂದ ಹೊತ್ತು ರಾಜ ರಸ್ತೆ ಮುಟ್ಟಿದ ನಂತರವೇ ಫೈಜರ್. ರಸ್ತೆ ಉದ್ದಕ್ಕೂ ಬರುವಾಗ ಕೂಪಿನ ಕೆಲಸದವರ ಮನೆ. ಥರ್ಬೆ ಹುಲ್ಲು ಹಾಕಿದ ಕುಟೀರಗಳು ತುಂಬಾ ಇವೆ. ರಸ್ತೆಯಲ್ಲಿ ಪ್ರಯಾಣಿಸುವವರು ಹೊರತು ಅನ್ಯರೊಬ್ಬರನ್ನೂ ಕಾಣೆವು. ಕನ್ನಡ ಜಿಲ್ಲೆಯ ಪುತ್ತೂರು ತಾಲೋಕು, ಬಂಟ್ವಾಳ ತಾಲೋಕುಗಳಲ್ಲಿ ಸುಳ್ಯಮಲೆ, ಬಳ್ಳಮಲೆ, ಕೊಡ್ಯಮಲೆ, ಆನೆಗುಂಡಿ, ಪಂಜಿಗುಂಡಿ, ಇಂಥ ಕಾಡುಗಳಲ್ಲಿ ಕೂಡಾ ಇಲ್ಲಿನಷ್ಟು ತೋರ ಉದ್ದದ ಮರಗಳು ಇರುವದು ಅತಿ ವಿರಳ. ಮಾತ್ರವಲ್ಲ ಬೆತ್ತಗಳೂ ಇದರಲ್ಲಿ ತುಂಬಾ ಇವೆ. ಪಂಜಿಬೆತ್ತ, ಸಾರೊಳುಬೆತ್ತ, ಒಂಟಿಬೆತ್ತ, ಎಂಬ ಕೆಲವು ಬೆತ್ತಗಳು ಹೇರಳವಿವೆ

ಮಳೆಯಾಳಿಗಳು ಸುಮಾರು ೨೫೦—೩೦೦ ಜನರು ಕೂಪಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಸಪ್ಲೈಗಾಗಿ ಸ್ಟೋರುಗಳು ಕೂಡಾ ಇವೆ. ಅಕ್ಕಿ—ವ—ಇನ್ನಿತರ ಸಾಮಾನುಗಳು ಇದರಿಂದ ಅವರೀಗೆ ಸಿಗುತ್ತದೆ.

ನಾವು ಎಷ್ಟು ನಡೆದರೂ ರಸ್ತೆಯ ಮೂಲಸ್ಥಾನ ಸಿಗಲಿಲ್ಲ. ಸಂಜೆ ಗಂಟೆ ೫ ಆಯಿತು. ಎಲ್ಲರಿಗೂ ಆಯಾಸವಾಗ ಹತ್ತಿತು. ಮಳೆಯ ಮೋಡ ಮೇಲೇರುತ್ತಾ ಬಂತು. ನಾವಿದ್ದ ೧೨ ಜನರಲ್ಲಿ ಕೊಡೆಯಿದ್ದವು ೩ ಮಾತ್ರ; ಕಂಗೆಡುವ ಕಾಲ. ಮಳೆ ಕುಟ್ಟಿದರೆ ನನೆಯದೆ ಬೇರೆ ಏನು ಮಾಡಲೂ ಸಾಧ್ಯವಿಲ್ಲ. ಓಡಿ ಓಡಿ ನಡೆದರೂ ರಸ್ತೆಯ ಮೂಲ ನಾಸ್ತಿ. ಕೆಲಸದವರಲ್ಲಿ ವಿಚಾರಿಸಿದಾಗ ೨-೩ ಮೈಲು ದೂರ ಎನ್ನುತ್ತಾರೆ. ಒಂದು ಘಂಟೆ ನಡೆದು ಪುನಃ ಕೇಳುವಾಗ ಮತ್ತೆ ೨-೩ ಮೈಲು ಇದೆ ಎಂದು ಗುಣು ಗುಟ್ಟುವರು. ಕಡೆಗೆ ರಸ್ತೆ ಬಿಟ್ಟು ಅಂದಾಜಿನ ಮೇಲೆ ಒಂದು ಸಣ್ಣ ಅಡ್ಡದಾರಿ ಹಿಡಿಯಬೇಕಾಯಿತು. ಹಾಗೆ ಮುಕ್ಕಾಲು ಮೈಲು ಹೋದಾಗ ಒಂದು ಮನೆ ಸಿಕ್ಕಿತು. ಅವನ ಕೊಟ್ಟಿಗೆ ಸೇರುವದೊಂದೇ ತಡ ಮಳೆ ಬಂದೇ ಬಿಟ್ಟಿತು. ಈ ಮನೆಯವರು ತುಂಬಾ ದಯಾಳುವಾದ್ದರಿಂದ ನಮಗೆ ೧೦-೨೦ ಸೌತೆಕಾಯಿ ತಿನ್ನಲು ಕೊಟ್ಟರು. ಹಸಿವೆಯಿಂದ ಬಳಲಿದ್ದ ನಮಗೆ ಬಹಳ ಸಂತೋಷವಾಯಿತು. ಈ ಫಲಹಾರ ಮುಗಿದಾಗ ಮಳೆಯೂ ಬಿಟ್ಟಿತು. ಪ್ರಯಾಣ ಮುಂದರಿಸಿ ಘಂಟೆ ೭||ಗೆ ಕಿಲ್ಲೂರು ಮನೆಯನ್ನು ಸೇರಿದೆವು. ಅಲ್ಲಿ ವಿಚಾರಿಸಿದಾಗ ರಸ್ತೆಯಿಂದ ಬರುತ್ತಿದ್ದರೆ ೩ ೪ ಮೈಲು ದೂರವಿತ್ತು. ಈ ದಾರಿಯಲ್ಲಿ ೧|| ಮೈಲಲ್ಲಿ ಪ್ರಯಾಣ ಮುಗಿಯಿತು ಎಂದರು.

ಬೆಳ್ತಂಗಡಿಯಿಂದ ಕಿಲ್ಲೂರು ರಸ್ತೆಯಲ್ಲಿ ೯|| ಮೈಲು ಬರುವಾಗ "ಶ್ರವಣಗುಂಡ" ಎಂಬ ಜೈನರ ಪ್ರಸಿದ್ಧ ಜಾಗ ಇದೆ. ಒಂದೆರಡು ಗುಡಿಗಳು ಇವೆ. ಶ್ರವಣ ಗುಂಡದಿಂದ ಸಾಧಾರಣ ೧೪ ಮೈಲು, ರಸ್ತೆ, ಅಲ್ಲಿಂದ ಕಾಲು ದಾರಿ. ೪ ಮೈಲು ಹೇವಳಕ್ಕೆ ಅಲ್ಲಿಂದ ೫ ಮೈಲು ಕುದುರೆ ಮುಖದ ತಲೆಗೆ. ಅಂತೂ ೨೩ ಮೈಲು. ಈ ಮೇಲಿನ ೧೪ ಮೈಲು ಜೀಪಿನಲ್ಲಿ ಪ್ರಯಾಣಿಸಿದರೆ, ಉಳಿದ ೯ ಮೈಲು ಮಾತ್ರ ನಡಿಯುವ ಸಮಸ್ಯೆ.

ಬೆಳ್ತಂಗಡಿಯಿಂದ ಇದೇ ಕಿಲ್ಲೂರು ರಸ್ತೆಯಲ್ಲಿ ೫ ಮೈಲು ಪ್ರಯಾಣಿಸಿದಾಗ (ಮುರ ಎಂಬಲ್ಲಿ) ಕೈಕಂಬ ಹಾಕಿದ ಎಡ ರಸ್ತೆಯಿಂದ ಎರಡೂವರೆ ಮೂರು ಮೈಲು ಹೋದಾಗ ಶಾಸ್ತ್ರೀಳ ಬಂಗ್ಲೆಯು ಸಿಗುತ್ತದೆ. ಇಲ್ಲಿಯ ತನಕ ವಾಹನ ಪ್ರಯೋಗಿಸಿಕೊಂಡು, ಮುಂದೆ ಕಾಲು ನಡಿಗೆಯಿಂದ ಪರ್ವತ ಏರಲು ಪ್ರಾರಂಭಿಸಿದರೆ ೪—೫ ಮೈಲು ದೂರದಲ್ಲಿ ಗುಂಡಲ ಪಾದೆ ಸಿಗುತ್ತದೆ. ಬೆಳ್ತಂಗಡಿಯಿಂದ ಸಾಧಾರಣ ಅಂದಾಜು ಈ ಹಾದಿಯಲ್ಲಿ ೨೫-೨೬ ಮೈಲು ಎಂತ ಎಣಿಸಬಹುದು.

ಹೇವಳಕ್ಕೆ ಹೋಗಲು ೨—೩ ಮೈಲು ಈಚೆಗೆ ಕನ್ನಡ ಜಿಲ್ಲೆಯ ಗಡಿ ಸಿಗುತ್ತದೆ. ಗಡಿ ದಾಟಿ ಚಿಕ್ಕಮಗಳೂರು ಡಿಸ್ಟ್ರಿಕ್ಟ್‌ಗೊಳಪಡುತ್ತದೆಯಾಗಿ ಹೇವಳದವರಿಂದ ತಿಳಿದೆವು. ಹೇವಳದಿಂದ ೩—೪ ಮೈಲು ದೂರದಲ್ಲಿ "ಸೋಮಾವತಿ ಅಥವಾ ಗಂಗಾಮೂಲ"ವೆಂಬ ತೀರ್ಥ ಸ್ನಾನಕ್ಕಾಗಿ ತುಂಬಾ ಜನರು ಸೇರುತ್ತಾರೆ.

ನಮ್ಮ ಈ ಪ್ರಯಾಣವನ್ನು ಸುಸೂತ್ರವಾಗಿ ನಡೆಸಿಕೊಟ್ಟ ಆ ಪರಮಾತ್ಮನಿಗೆ ಅನಂತ ವಂದನೆಗಳನ್ನರ್ಪಿಸಿ. ಸತ್ಯ-ಧರ್ಮ—ನೀತಿಯಿಂದ ನಡಿಯುವ ನಮ್ಮವರನ್ನು ಆ ಭಗವಂತನು ರಕ್ಷಿಸಲೆಂತ ಪ್ರಾರ್ಥಿಸುತ್ತೇನೆ.

'NAVAYUGA' Weekly is in the list of periodicals and Newspapers approveds for use in Secondary Schools as per proceeding Roc. No. 466 N/50 dated 2-12-1950 of the Directer of Public Instruction Madras.

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ
ಋತುಭೇದ ವೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ. ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಗೀತಾ-ದ್ವಿತೀಯ ಅಧ್ಯಾಯ

(ಐದನೇ ಪುಟದಿಂದ)

ಕಂಗೆಟ್ಟು ಹಿಮಾಲಯಕ್ಕೆ ತಪಸ್ಸಿಗೆ ಹೋಗುವ ಯೋಚನೆ ನಡೆಸುವೆ. ಇದು ನಿನಗೆ ಯೋಗ್ಯವಲ್ಲ. ಇದು ನಿನಗೆ ಇಲ್ಲಿಯೂ, ಮುಂದಯೂ, ನೀನು ಸತ್ತ ಬಳಿಕವೂ ಅಪಕೀರ್ತಿ ತರುವುದು. ಇಲ್ಲಿ ನಿನ್ನನ್ನು ಹೇಡಿ ಎನ್ನುವರು ಯುದ್ಧಕ್ಕೆ ಬೆದರಿ ಓಡಿ ಹೋದನು ಎನ್ನುವರು. ನೀನು ಸತ್ತ ಬಳಿಕವೂ ಅರ್ಜುನ ಎಂಬ ಒಬ್ಬ ವೀರನಿದ್ದನು.ಅವನ ವೀರತ್ವವು ಯುದ್ಧವಾರಂಭವಾಗುವ ತನಕ ಮಾತ್ರವಾಯಿತು ಎನ್ನುವರು. ನನ್ನನ್ನು ಸಾಕಿ ಸಲಹಿದ ಸಮಾಜವು, ಸೈನ್ಯವು ವೀರನೆಂದು ಹೊಗಳಿರುವಾಗ, ಸಾಮಾಜಿಕ ವಿಪ್ಲವಗಳಲ್ಲಿ ಅದನ್ನು ಇದಿರಿಸಲಾಗದೆ ನನಗೆ ಈಗ ವಿರಾಮ ಬೇಕೆಂದರೆ, ಜನರು ಏನು ಹೇಳಿಯಾರು?

ಕ್ಲೈಬ್ಯಂ ಮಾ ಸ್ಮಗಮಃ ಪಾರ್ಥ ನೈ
ತತ್ತ್ವಯ್ಯುಪಪದ್ಯತೇ ।
ಕ್ಷುದ್ರಂ ಹೃದಯದೌರ್ಬಲ್ಯಂ ತ್ಯ
ಕ್ತ್ವೋತ್ತಿಷ್ಠ ಪರಂತಪ ||೩||

ವೈರಿಗಳನ್ನು ನಾಶಪಡಿಸುವ ಅರ್ಜುನನೇ ಹೀಗೆ ಇಂತಹ ದೋಷವು ನಿನ್ನಲ್ಲಿ ಹೇಗೆ ಮೂಡಿತು? ಇಂತಹ ಮನಸ್ಸಿನ ದುರ್ಬಲತೆ, ತೀರಾ ಕೀಳು ಮಟ್ಟದ್ದು ನಿನ್ನಂತಹವರಿಗಲ್ಲ. ನಿನ್ನನ್ನು ನೋಡಿದರೆ ಗಂಡಸಿನಂತೆ ಕಂಡರೂ, ಹೆಂಗಸಿನಂತೆ ಅಳುತ್ತಿರುವೆ. ನಿನ್ನ ನಡವಳಿಕೆ ಸಂಶಯ ಬರುವಂತಿದೆ, ಎಂದು ಶ್ರೀ ಕೃಷ್ಣನು ಚುಚ್ಚಿ ನುಡಿದನು. ವೀರರಿಗೆ ಅವರ ಶೌರ್ಯೋತ್ಸಾಹಗಳು ಮೇಲೆ ಬರಲು ಅವರನ್ನು ಕೊಂಚ ಚುಚ್ಚಿ ಮಾತನಾಡಬೇಕು. ಅದೂ ಶ್ರೀಕೃಷ್ಣನು ಅವನ ರಥದ ಚಾಲಕನು. ರಾಜನಾಗಿ ಮೆರೆದ ಅರ್ಜುನನಿಗೆ ರಥದ ಚಾಲಕನಾಗಿ ಕುಳಿತ ಶ್ರೀಕೃಷ್ಣನ ಮಾತಿನಿಂದ ಮನಸ್ಸಿಗೆ ತುಂಬಾ ನೋವಾಯಿತು. ಆ ನಿಂದೆಯ ಮಾತುಗಳನ್ನು ಕೇಳಿ, ತನ್ನ ದುಸ್ಥಿತಿಯ ಕಾರಣವನ್ನು ವಿವರಿಸತೊಡಗುವನು. ತನ್ನ ವೀರ, ಶೂರ ಗುಣಗಳಲ್ಲಿ ದೋಷವಿಲ್ಲ. ಕೇವಲ ತನ್ನ ಮನಸ್ಥಿತಿಯ ಗಲಿಬಿಲಿಯಿಂದ ತನಗೆ ಹೀಗಾಗಿದ ಎಂದು ವಿವರಿಸುವನು.

ಅರ್ಜುನ ಉವಾಚ -

ಕಥಂ ಭೀಷ್ಮಮಹಂ ಸಂಖ್ಯೇ ದ್ರೋ
ಣಂ ಚ ಮಧುಸೂದನ।
ಇಷುಭಿಃ ಪ್ರತಿಯೋತ್ಸ್ಯಾಮಿ ಪೂ
ಜಾರ್ಹಾವರಿಸೂದನ||೪||

ಈ ಭೀಷ್ಮ, ದ್ರೋಣ ಗುರುವರ್ಯರು, ಪಿತಾಮಹರು ನನ್ನಿಂದ ಪೂಜೆಗೆ ಅರ್ಹರು. ಅವರನ್ನೆಲ್ಲಾ ಕೊಲ್ಲುವುದಕ್ಕಿಂತ ಭಿಕ್ಷಾಟನೆ ಲೇಸು. ಮತ್ತು ಅವರನ್ನು ಕೊಂದು ನಾವು ಕಲುಷಿತ ಕೈಗಳಿಂದ ಉಂಡು ರಾಜ್ಯವನ್ನು ಹೇಗೆ ಆಳಲಿ?

ಗುರೂನಹತ್ವಾ ಹಿ ಮಹಾನು
ಭಾವಾನ್ ಶ್ರೇಯೋ
ಭೋಕ್ತುಂ ಭೈಕ್ಷ್ಯಮಪೀಹ
ಲೋಕೇ ।
ಹತ್ವಾರ್ಥಕಾಮಾಂಸ್ತು ಗುರೂನಿ
ಹೈವ ।
ಭುಂಜೀಯ ಭೋಗಾನ್
ರುಧಿರಪ್ರದಿಗ್ಧಾನ್ || ೫ ||

ಅರ್ಜುನನು ತನ್ನ ನಡತೆಯನ್ನು ಸಮರ್ಥಿಸಲು ಹಲವು ಕಾರಣಗಳನ್ನು ಕೊಡುವನು. ನಾನು ಹೇಡಿತನದಿಂದ ಯುದ್ಧಕ್ಕೆ ಹಿಂಜರಿದುದಲ್ಲ, ಎರಡು ಸೈನ್ಯಗಳು ಯುದ್ಧಕ್ಕೆ ಸನ್ನದ್ಧವಾಗಿ, ಯುದ್ಧ ಭೂಮಿಯಲ್ಲಿ ನಿಂತಿರುವಾಗ, ಅರ್ಜುನನು ತನ್ನ ಸಂಬಂಧವನ್ನು ಆ ವೈರಿ ಪಕ್ಷದವರೊಡನೆ ಕಲ್ಪಿಸಿಕೊಂಡು ಯುದ್ಧಕ್ಕೆ ಹಿಂಜರಿದುದು ತಪ್ಪು ಎಂದೂ, ಅವನು ಅದನ್ನು ಸಮರ್ಥಿಸಲು, ಅಂತಹ ಹಿರಿಯ ವ್ಯಕ್ತಿಗಳನ್ನು ಗಳನ್ನು, ಮಹಾ ಪುರುಷರನ್ನು ಕೊಂದು ರಾಜ್ಯವನ್ನು ದೊರಕಿಸಿಕೊಂಡು ರಕ್ತದಿಂದ ಕಲುಷಿತಗೊಂಡ ಕೈಗಳಿಂದ ಉಣ್ಣುವುದು ಹೇಗೆ? ಅದಕ್ಕಿಂತ ಭಿಕ್ಷೆ ಬೇಡುವುದು ಉತ್ತಮ ಎಂದು ಹೇಳುವನು. ಯುದ್ಧ ಕಾಲದಲ್ಲಿ ವೈರಿಯಾಗಿ ಇದಿರು ನಿಂತವನು, ತೀರಾ ಆಪ್ತ ಬಂಧುವಾಗಿದ್ದರೂ ಅವನನ್ನು ರಾಷ್ಟ್ರದ ರಕ್ಷಣೆ ಕರ್ತವ್ಯದಲ್ಲಿ ಕೊಲ್ಲಲೇ ಬೇಕಾಗುವುದು. ಆ ಸಮಯದಲ್ಲಿ ವ್ಯಕ್ತಿಗತ ಸಂಬಂಧ ಹಿರಿಯ ಆದರ್ಶ ಅಥವಾ ರಾಷ್ಟ್ರದ ರಕ್ಷಣೆಯಲ್ಲಿ ಲೆಕ್ಕಿಸಲು ಸಾಧ್ಯವಿಲ್ಲ. ವ್ಯಕ್ತಿಗಳು ರಾಷ್ಟ್ರದೊಡನೆ, ಸಂಗಡದೊಡನೆ ಸಮರಸವಾಗಿ ತಮ್ಮ ವ್ಯಕ್ತಿಶಃ ಅಭಿಪ್ರಾಯಗಳನ್ನು ಬದಿಗೊತ್ತಬೇಕು. ಈ ಅಭಿಪ್ರಾಯವನ್ನು ಸೂಚಿಸಲು, ವ್ಯಾಸರು, ಇಂತಹ ಸನ್ನಿವೇಶವನ್ನು ರಚಿಸಿರುವರು

ಆಗಲೂ ಶ್ರೀಕೃಷ್ಣನು ಮೌನವಹಿಸಿದುದನ್ನು ನೋಡಿ ಅರ್ಜುನನು ಮಾತನ್ನು ಮುಂದುವರಿಸುವನು.

ನ ಚೈತದ್ವಿದ್ಮಃ ಕತರನ್ನೋ
ಗರೀಯೋ ಯದ್ವಾ ಜಯೇಮ
ಯದಿ ವಾ ನೋ ಜಯೇಯುಃ ।
ಯಾನೇವ ಹತ್ವಾ ನ ಜಿಜೀವಿಷಾಮ
ಸ್ತೇಽವಸ್ಥಿತಾಃ ।
ಪ್ರಮುಖೇ ಧಾರ್ತರಾಷ್ಟ್ರಾಃ || ೬ ||

ನನಗೆ ಯಾವುದು ಉತ್ತಮವೆಂದು ತಿಳಿಯುವುದಿಲ್ಲ. ನಾವು ಅವರನ್ನು ಗೆಲ್ಲುವುದೋ, ಅವರಿಂದ ನಾವು ಗೆಲ್ಲಲ್ಪಡುವುದೋ? ಕೌರವರು ಇದಿರು ನಿಂತಿರುವರು. ಅವರನ್ನು ಕೊಂದ ಬಳಿಕ ನಮಗೆ ಬದುಕಬೇಕೆಂಬ ಇಚ್ಛೆ ಇಲ್ಲ.

ಅರ್ಜುನನು ತನ್ನ ಸಂಶಯವನ್ನು ಹೊರಗೆಡಹುವನು. ಅವನ ಸಂಪೂರ್ಣ ಮತಿಭ್ರಮಣೆಯು ಇಲ್ಲಿ ವ್ಯಕ್ತವಾಗುತ್ತಿದೆ. ಏನು ಮಾಡಬೇಕೆಂದು ಅವನಿಗೆ ತಿಳಿಯದ ಪರಿಸ್ಥಿತಿ. ಅದರಿಂದ ಅವನು ಹೀಗೆ ಮಾತನಾಡಿರುವನು.

ಕಾರ್ಪಣ್ಯದೋಷೋಪಹತಸ್ವಭಾ
ವಃ ಪೃಚ್ಛಾಮಿ ತ್ವಾಂ
ಧರ್ಮಸಂಮೂಢಚೇತಾಃ
ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ
ತನ್ಮೇ ಶಿಷ್ಯಸ್ತೇಽಹಂ
ಶಾಧಿ ಮಾಂ ತ್ವಾಂ ಪ್ರಪನ್ನಮ್ ||೭||

ನನ್ನ ಮನಸ್ಸು ಈಗ ಮರುಕದಿಂದ ಆವೃತವಾಗಿದೆ. ನನ್ನ ವಿಚಾರ ಶಕ್ತಿಯು ನಷ್ಟವಾಗಿದೆ. ನನ್ನ ಕರ್ತವ್ಯವೇನೆಂದು ನನಗೆ ತಿಳಿದಿಲ್ಲ. ಆದ್ದರಿಂದ ನನಗೆ ಯಾವುದು ಒಳ್ಳೆಯದು ಅದನ್ನು ಹೇಳು ನಾನು ನಿನ್ನ ಶಿಷ್ಯನು. ನಿನ್ನನ್ನು ಮರೆಹೊಕ್ಕಿದವನಿಗೆ ಏನು ಮಾಡಬೇಕೆಂದು ನೀನು ಸಲಹೆ ಕೊಡು.

ಅರ್ಜುನನು ಈ ಶ್ಲೋಕದಲ್ಲಿ ಸಂಪೂರ್ಣವಾಗಿ ಶ್ರೀ ಕೃಷ್ಣನ ಶರಣಾಗತಿ ಹೊಂದವನು. ಅವನಿಗೆ ಏನು ಮಾಡಬೇಕೆಂದು ತಿಳಿಯದೆ ಇದ್ದು, ಕೃಷ್ಣನೊಡನೆ ದಯಮಾಡಿ ನನಗೆ ವಿವೇಕದ ದಾರಿಯನ್ನು ತೋರು ಎನ್ನುವನು. ನಿನ್ನ ಶಿಷ್ಯನೆಂದು ವಿನೀತಭಾವದಿಂದ ದಾರಿ ತೋರಬೇಕೆಂದು ಕೇಳಿಕೊಳ್ಳುವನು. ಮತ್ತು ನೀನು ಹೇಳಿದಂತೆ ಮಾಡಲು ನಾನು ಸಿದ್ಧನು ಎಂದು ತನ್ನ ಸಂಪೂರ್ಣ ಶರಣತ್ವವನ್ನು ಹೇಳುವನು. ಶಿಷ್ಯ ಭಾವದಿಂದ ಮರೆಹೊಕ್ಕಿದವರನ್ನು, ಗುರುವು ಖಂಡಿತಕ್ಕೂ ಸಂಶಯದಿಂದ ದೂರಮಾಡುವನು.

ನಹಿ ಪ್ರಪಶ್ಯಾಮಿ ಮಮಾಪನುದ್ಯಾ
ದ್ ಯಚ್ಛೋಕ
ಮುಚ್ಛೋಷಣಮಿಂದ್ರಿಯಾಣಾಂ ।
ಅವಾಪ್ಯ ಭೂಮಾವಸಪತ್ನ
ಮೃದ್ಧಂ ರಾಜ್ಯಂ
ಸುರಾಣಾಮಪಿ ಚಾಧಿಪತ್ಯಮ್|| ೮ ||

ಈ ಲೋಕದಲ್ಲಿ ಹಗೆಗಳಿಲ್ಲದಂತಹ ಮತ್ತು ಬೇಕಾದದ್ದೆಲ್ಲ ಇರುವ ಚಕ್ರವರ್ತಿ ಪದವಿಯೂ, ದೇವತೆಗಳ ಮೇಲಿನ ಅಧಿಕಾರವೂ ದೊರೆತರೂ ತನ್ನ ಇಂದ್ರಿಯಗಳನ್ನೆಲ್ಲಾ ಸೊರಗಿಸುವಂತಹ ಈ ದುಃಖವು ಹೋದೀತು ಎಂದು ನನಗೆ ಕಾಣುವುದಿಲ್ಲ. ಆದುದರಿಂದ ನೀನು ನನಗೆ ದಾರಿ ತೋರು ನಿನ್ನಲ್ಲಿ ಶಿಷ್ಯನಂತೆ ಮರೆಹೊಕ್ಕಿರುವನು. ಏನು ಮಾಡಬೇಕೆಂದು ಹೇಳಿದರೂ ನಾನು ಮಾಡಲು ಸಿದ್ಧನಾಗಿರುವೆನು.

ಅರ್ಜುನನು ಇಲ್ಲಿ ತನ್ನ ಪ್ರಾಪಂಚಿಕ ಆಸಕ್ತಿಗಳಿಂದ ತನಗೆ ಎಂದಿಗೂ ಸಂತೋಷ ಸಿಗದು ಎಂದೂ, ತನ್ನ ಮನಸ್ಸಿಗೆ ಅವುಗಳಿಂದ ಸಂತೋಷ ದೊರಕದೆಂದೂ ಅರಿತು, ಅದಕ್ಕಿಂತ ಭಿನ್ನವಾದ ವಸ್ತುವು ಮನಕ್ಕೆ ಹಿತವನ್ನು ಉಂಟುಮಾಡುವುದು ಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದನೆಂದೂ ತಿಳಿಯಬಹುದು. ಇಂತಹ ಪರಿಸ್ಥಿತಿಯನ್ನು ವ್ಯಾಸರು. ಹೀಗೆ ಚಿತ್ರಿಸಿರುವರು.

ಸಂಜಯನು ಹೇಳಿದುದು

ಏವಮುಕ್ತ್ವಾ ಹೃಷೀಕೇಶಂ ಗುಡಾ
ಕೇಶಃ ಪರಂತಪಃ ।
ನ ಯೋತ್ಸ್ಯ ಇತಿ ಗೋವಿಂದ ಮು
ಕ್ತ್ವಾ ತೂಷ್ಣೀಂ ಬಭೂವ ಹ ||೯||

ಹೀಗೆ ಅರ್ಜುನನು (ಗುಡಾಕೇಶ — ಒಂದು ಕೆಲಸಕ್ಕೆ ತೊಡಗಿದನೆಂದರೆ ನಿದ್ರೆ ಕೂಡಾ ಮಾಡದೆ ಸಾಹಸೀ ಪ್ರವೃತ್ತಿ ಪ್ರದರ್ಶಿಸುವವನು) ಶ್ರೀಕೃಷ್ಣನ (ಹೃಷೀಕೇಶ — ತಲೆ ಕೂದಲನ್ನು ಕುರುಕ್ಷೇತ್ರದ ಯುದ್ಧ ಭೂಮಿಗೆ ಹೋದಾಗ ಕತ್ತರಿಸಿಕೊಂಡವನೆಂದೂ, ಅಥವಾ ಇಂದ್ರಿಯಗಳ ಒಡೆಯ; ಮನ) ಮರೆ ಹೊಕ್ಕನು. ನಾನಿನ್ನು ಯುದ್ಧ ಮಾಡಲಾರೆ ಎಂದು ಮೌನ ತಾಳಿದನು. ಒಂದು ಪರಿಸ್ಥಿತಿಯಲ್ಲಿ ದಿಕ್ಕು ತೋಚದೆ, ದೈಹಿಕ, ಮಾನಸಿಕ ವಿಪ್ಲವಗಳಿಂದಾಗಿ, ಏನು ಮಾಡಲು ಸಾಧ್ಯವಾಗದಂತಹ ಅವಸ್ಥೆಗೆ ತೂಷ್ಣೀಂ ಭಾವ ಎನ್ನುವರು. ಹೀಗೆ ಅರ್ಜುನನು ಆ ಭಾವದಿಂದ ಸುಮ್ಮನಾದನು.

ಸಂಜಯನು ಧೃತರಾಷ್ಟ್ರನಿಗೆ ಇನ್ನಾದರೂ ಯುದ್ಧವನ್ನು ನಿಲ್ಲಿಸಬೇಕೆಂಬ ಸೂಚನೆ ಕೊಡಬಹುದು ಎಂದು ಸೂಚಿಸುವಂತೆ ಹೀಗೆ ಮಾತನಾಡಿದುದು. ಅರ್ಜುನನು, ಶ್ರೀಕೃಷ್ಣನ ಮರೆಹೊಕ್ಕಿರುವನು, ಎಂದು ಸೂಚಿಸಿದನು.

—ಸತೀಶ.

ಉಪಯುಕ್ತವಾದ ಕೆಲವು ಪುಸ್ತಕಗಳು

	ರೂ. ನ.
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ (ಅನು: ಕು. ಶಿ ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು (ಅನು: ಕೆ ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು. ಕು.ಶಿ.ಹರಿದಾಸ ಭಟ್)	2=00
ಹಿರೋಶಿಮಾದಿಂದ ಜಿನೇವ (ಯು. ಆರ ಆಚಾರ್ಯ)	1=50
ಮೋಹದ ಮಹಾಜಾಲ (ವೀರಪ್ಪ ಯಗಟಿ)	1=75
ಭಾರತೀಯ ಮಹಾಪುರುಷರು (ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ (ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ ವಾಷಿಂಗ್ಟನ್ (ಅನು ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು (ಅನು: ಕು.ಶಿ.ಹರಿದಾಸ ಭಟ್)	1=75
ಕುಲವಿಲ್ಲದ ಹೆಣ್ಣು (ಪಿ. ವೆಂಕೋಬಾಚಾರ್ಯ)	1=50
ಚಿತ್ರಾಂಗದೆ (ಅನು. ಕೆ. ಕೆ. ಶೆಟ್ಟಿ)	0=60
ರವೀಂದ್ರರ ಕತೆಗಳು (ಹನುಮಂತ ರಾವ್ ಮಾಂಜ್ರೇಕರ)	0=90
ಹಸುರು ಹಂಸ (ನಚಿಕೇತ)	2=00
ಭಾವಾರ್ಚನೆ (ನಚಿಕೇತ)	1=25
ಋಣ ಯಾತ್ರೆ (ನಚಿಕೇತ)	1=50
ಗೀತೆಯ ಕೈಗನ್ನಡಿ (ಹೊಸಕೆರೆ ಚಿದಂಬರಯ್ಯ)	1=00

ವಿವರವಾದ ಪಟ್ಟಿಗಾಗಿ ಬರೆಯಿರಿ.

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

ಕೃಷಿಕ ರಂಗ

ಇನ್ನೇನು, ಮಳೆ ಸುರಿದಿದೆ!

ಜೂನ್ ತಿಂಗಳೆಂದರೆ ಬಿತ್ತನೆಯ ತಿಂಗಳು. ವರ್ಷದ ಮುಖ್ಯ ಬೆಳೆಗೆ ಬಿತ್ತುವ ಕಾಲ. ಈ ಬೆಳೆಯನ್ನು ಅಲಕ್ಷಿಸದೆ ಬಿತ್ತನೆಗೆ ಸುಧಾರಿತ ಬೀಜಗಳನ್ನೇ ಉಪಯೋಗಿಸುವುದು ರೈತರ ಮೊದಲ ಕರ್ತವ್ಯ. ಸ್ಥಳೀಯ ಬಿತ್ತನೆಯ ಬೀಜಗಳಿಗಿಂತ ಸುಧಾರಿತ ಬೀಜಗಳು ಸೇ. ೧೫ರಿಂದ ೩೦ರಷ್ಟು ಅಧಿಕ ಫಸಲನ್ನು ನೀಡುತ್ತವೆ. ಇದಕ್ಕಾಗಿ ಹೆಚ್ಚೇನೂ ವೆಚ್ಚ ತಗಲುವುದಿಲ್ಲ. ಈ ಸಂಬಂಧದಲ್ಲಿ ಅವಶ್ಯಕ ವಿವರಗಳನ್ನು, ಯಾವ ಕ್ಷೇತ್ರಕ್ಕೆ ಯಾವ ತಳಿಯ ಬೀಜ ಸರಿ ಹೋಗುವುದೆಂಬುದನ್ನು ನಿಮಗೆ ಸಮೀಪದಲ್ಲಿರುವ ವಿಸ್ತರಣಾಧಿಕಾರಿಗಳಿಂದ ತಿಳಿದುಕೊಳ್ಳಿ.

ಭತ್ತ ಬೆಳೆಯುವವರು ಜಪಾನಿ ಮಾದರಿಯನ್ನು ಅನುಸರಿಸಿದರೆ, ಉತ್ತಮ ಫಸಲು ದೊರೆಯುವುದು. ಅಗೆಯು ಕೆಟ್ಟು ಹೋಗದಂತೆ ತೀವ್ರ ಎಚ್ಚರಿಕೆಯನ್ನು ವಹಿಸಿ, ಅಗತ್ಯ ಬಿದ್ದರೆ, ಕ್ರಿಮಿನಾಶಕಗಳನ್ನು ಉಪಯೋಗಿಸುವುದು ಒಳ್ಳೆಯದು. ನಾಟುವುದಕ್ಕೆ ಮೊದಲು ಗದ್ದೆಯನ್ನು ಚೆನ್ನಾಗಿ ಉತ್ತು, ಸಾರವತ್ತಾದ ಗೊಬ್ಬರಾದಿಗಳನ್ನು ಹಾಕಿ ಮಣ್ಣನ್ನು ಹದ ಮಾಡಿಕೊಳ್ಳುವುದು ಮುಖ್ಯವಾದುದು. ಸಾರವು ನೀರಿನೊಡನೆ ಹರಿದು ಹೋಗದಂತೆಯೂ ಎಚ್ಚರಿಕೆ ವಹಿಸುವುದೂ ಅಷ್ಟೇ ಅಗತ್ಯವಾದುದು.

ರಾಗಿಯನ್ನು ನಾಲ್ಕು ರೀತಿಯಲ್ಲಿ ಬಿತ್ತುತ್ತಾರೆ. ಕೂರಿಗೆ ಬಿತ್ತನೆ, ನಾಟಿ, ಪಗಡೆ ಸಾಲು ಮತ್ತು ಚೆಲ್ಲು ಬಿತ್ತನೆ. ಇವುಗಳಲ್ಲಿ ಬಿತ್ತನೆ ಮಾಡುವುದು ಉತ್ತಮವಾದುದು. ಅನುಕೂಲವಿಲ್ಲದಲ್ಲಿ ಕೂರಿಗೆಯ ಬಿತ್ತನೆ ಒಳ್ಳೆಯದು. ಚೆಲ್ಲು ಬಿತ್ತನೆ ಲಾಭದಾಯಕವಾದುದಲ್ಲ. ರಾಗಿಯನ್ನು ನಾಟಿ ಮಾಡುವಾಗ ಈ ಅಂಶಗಳನ್ನು ಗಮನಿಸಬೇಕು: ಸಾಲಿನಿಂದ ಸಾಲಿಗೆ ೧೦ ಅಂಗುಲದಿಂದ ೧೨ ಅಂಗುಲ ಮತ್ತು ಪೈರುಗಳ ನಡುವೆ ೪—೬ ಅಂಗುಲ ಅಂತರವಿರಬೇಕು. ಒಂದೊಂದು ಗುಣಿಯಲ್ಲಿ ೨—೩ ಸಸಿಗಳು ಮಾತ್ರವಿರಬೇಕು. ಬಿತ್ತನೆಯ ಬೀಜವನ್ನು ಸೆರಸಾನ್ ಇತ್ಯಾದಿ ಔಷಧಿಗಳಲ್ಲಿ ಹೊರಳಿಸಿ ಸಿದ್ಧಪಡಿಸಬೇಕು. ಜಿಂಕ್ ಸಲ್ಫೇಟ್ ಪ್ರಯೋಗದಿಂದ ರಾಗಿಯ ಉತ್ಪತ್ತಿ ಸೇ. ೧೦—೧೫ರಷ್ಟು ಹೆಚ್ಚಾಗುವುದು. ಮುಕ್ಕಾಲು ಪಾಲು ನೀರಿಗೆ ಒಂದು ತೊಲ ಜಿಂಕ್ ಸಲ್ಫೇಟ್ ಕರಗಿಸಿ ಇದರಿಂದ ಎರಡು ರಾತಲು ರಾಗಿಬೀಜವನ್ನು ಸಿದ್ಧಗೊಳಿಸಬೇಕು.

ಸಸಿಗಳ ಬೆಳವಣಿಗೆಗೆ ಅಗತ್ಯವಾದ ಅನೇಕ ಆಹಾರಾಂಶಗಳ ಪೈಕಿ ಸಾರಜನಕವು ಅತ್ಯಂತ ಮುಖ್ಯವಾದುದು. ಈ ಸಾರಜನಕವನ್ನೊಳಗೊಂಡ ರಾಸಾಯನಿಕ ಗೊಬ್ಬರಗಳು ಅನೇಕವಿವೆ. ಭತ್ತವು ತನಗೆ ಬೇಕಾದ ಸಾರಜನಕವನ್ನು ಅಮೋನಿಯಾ ಹಾಗು ನೈಟ್ರೇಟ್‌ಗಳಿಂದ ಎಳೆದುಕೊಳ್ಳುವುದು. ಇವೆರಡೂ ಅಡಕವಾಗಿರುವ ರಾಸಾಯನಿಕ ಗೊಬ್ಬರವೇ 'ಕ್ಯಾಲ್ಸಿಯಂ ಅಮೋನಿಯಂ ನೈಟ್ರೇಟ್'? ಇದರಲ್ಲಿ ಸೇ. ೨೦.೫ರಷ್ಟು ಸಾರಜನಕವಿದೆ. ಗೊಬ್ಬರದ ನೈಟ್ರೇಟ್ ಭಾಗವು ಪೈರಿನ ಬೆಳವಣಿಗೆಗೆ ಸಾರಜನಕವನ್ನು ಉಚಿತ ಪ್ರಮಾಣದಲ್ಲಿ ಒದಗಿಸುವುದು. ಅಮೋನಿಯಾ ಭಾಗವು ಮಣ್ಣಿನಲ್ಲಿ ಬೆರೆತು ಬೆಳೆದ ಪೈರಿನ ಸಾರಜನಕದ ಬೇಡಿಕೆಯನ್ನು ಪೂರಯಿಸುವುದು. ಕ್ಯಾಲ್ಸಿಯಂ ಅಮೋನಿಯಂ ನೈಟ್ರೇಟ್ ಗೊಬ್ಬರವು ಎಲ್ಲಾ ಬೆಳೆಗಳಿಗೂ ಉಪಯುಕ್ತವಾದುದು. ಅಮೋನಿಯಂ ಸಲ್ಫೇಟನ್ನು ಉಪಯೋಗಿಸುವುದರಿಂದ ದೊರೆಯುವಷ್ಟು ಫಸಲು ಈ ಗೊಬ್ಬರದಿಂದಲೂ ದೊರೆಯುತ್ತದೆ. ಈಗ ಅಮೋನಿಯಂ ಸಲ್ಫೇಟು ದುರ್ಲಭವಿರುವುದರಿಂದ ಅದರ ಬದಲು ಕ್ಯಾಲ್ಸಿಯಂ ಅಮೋನಿಯಂ ನೈಟ್ರೇಟನ್ನು ಉಪಯೋಗಿಸಿ ಲಾಭ ಪಡೆಯಬಹುದು.

ಬೋರಾಕ್ಸಿನ ರೂಪದಲ್ಲಿ ಬೋರಾನನ್ನು ಎಕ್ರೆಗೆ ೧೦ ಪೌಂಡಿನಲ್ಲಿ ನೆಲಕಡಲೆ ಬೆಳೆಗೆ ಕೊಡುವುದರಿಂದ ಫಸಲು ಸೇ. ೨೦—೩೦ರಷ್ಟು ಹೆಚ್ಚುವುದು. ಇದರಿಂದ ಎಕ್ರೆಗೆ ರೂ. ೬—೭ ರೂಪಾಯಿ ಹೆಚ್ಚು ವೆಚ್ಚ ತಗಲಬಹುದು. ಆದುದರಿಂದ ಇದರ ಬಳಕೆಯಿಂದ ಅಧಿಕ ಲಾಭವಾಗುವುದು.

ಮೇ ತಿಂಗಳಲ್ಲಿ ಈರುಳ್ಳಿ ಬಿತ್ತನೆ ಮುಗಿಸದಿದ್ದವರು ಜೂನ್ ಮೂರನೆಯ ವಾರದೊಳಗಾಗಿ ಮುಗಿಸಬಹುದು. ಜಮೀನನ್ನು ಚೆನ್ನಾಗಿ ಅಗತೆ ಮಾಡಿ ಸಿದ್ಧಗೊಳಿಸಬೇಕು. ಸಣ್ಣ ಪ್ರಮಾಣದ ಬಿತ್ತನೆಯಾದರೆ ೯ ಅಂಗುಲದಿಂದ ೧ ಅಡಿ ಆಳಕ್ಕೆ ಅಗತೆ ಮಾಡಿದರೆ ಸಾಕು. ಹೆಂಟೆ ಹೊಡೆದು ಬೇರು ಕಳೆ, ಕಸಗಳನ್ನು ತೆಗೆದು ಹಾಕಿ ಮಣ್ಣನ್ನು ಸ್ವಚ್ಛಗೊಳಿಸಬೇಕು. ಎಕ್ರೆಗೆ ೧೦ ಗಾಡಿಯಂತೆ ದನದ ಗೊಬ್ಬರ ಸೇರಿಸಬೇಕು. ಬೀಜದ ಗೆಡ್ಡೆಗಳನ್ನು ಮಡಿಗಳಲ್ಲಿ. ೪—೫ ಅಂಗಲ ಅಂತರದಲ್ಲಿ ನಡಬೇಕು.

ಹತ್ತಿಯ ಗಿಡಗಳಲ್ಲಿ ಎಲೆ ಸುರುಳಿ ಸುತ್ತುವ ಹುಳ ಬೀಳಬಹುದು. ಮೈಸೂರು, ಬೆಂಗಳೂರ, ಬಳ್ಳಾರಿ, ಶಿವಮೊಗ್ಗ, ಹಾಸನ, ಧಾರವಾಡ, ರಾಯಚೂರು, ಗುಲ್ಬರ್ಗಾ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಈ ಹುಳ ವ್ಯಾಪಿಸಿದೆ. ಹುಳ ಎಲೆಯನ್ನು ತಿಂದು ಅದನ್ನು ಸುರುಳಿ ಸುತ್ತುತ್ತವಾದ್ದರಿಂದ ಇದಕ್ಕೆ ಎಲೆಸುರುಳಿ ಸುತ್ತುವ ಹುಳವೆಂದು ಹೆಸರು. ಇಂತಹ ಹುಳ ಬಿದ್ದ ಎಲೆಗಳು ಕಂಡ ತಕ್ಷಣ ಸೇಕಡ ೫ರಂತೆ ಬಿ. ಎಚ್. ಸಿ. ಪುಡಿಯನ್ನು ಎಲೆಗಳ ಮೇಲೆ ಎರಚಬೇಕು. ಎಲೆಯು ಬಹ್ವಂಶವೇ ಸುತ್ತಿಕೊಂಡಿದ್ದರೆ, ಅದನ್ನು ಕಿತ್ತು ಬಿಡಬೇಕು.

ಮಳೆಯುಗಾಲ ಪ್ರಾರಂಭವಾದಲ್ಲಿ ಉತ್ತಮವಾದ ತರಕಾರಿ ತೋಟವನ್ನು ಎಬ್ಬಿಸಬಹುದು. ಬೀಜಗಳನ್ನು ಶಾಸ್ತ್ರೋಕ್ತವಾಗಿ ಬಿತ್ತಿದರೆ ಅವು ಮೊಳಕೆ ಬಂದು ಗಿಡವಾಗುತ್ತವೆ. ಉತ್ತಮವಾದ ಗೊಬ್ಬರವನ್ನು ಅವುಗಳ ಬುಡಕ್ಕಿಟ್ಟು ಮಣ್ಣು ಮುಚ್ಚಿ ಬಿಡುವುದರಿಂದ ಗಿಡಗಳು ಹುಲುಸಾಗಿ ಬೆಳೆಯುವುದು ಸಾಧ್ಯವಾಗುತ್ತದೆ. ಇವುಗಳಿಗೂ ಹುಳ ಬೀಳದಂತೆ ಜಾಗರೂಕತೆ ಅವಶ್ಯ.

ತೆಂಗು—ಕಂಗು— ಬಾಳೆಯ ತೋಟಗಳಿಗೆ ಇನ್ನು ನೀರು ಹೊಯ್ಯುವ ಅಗತ್ಯವಿಲ್ಲ. ಸಾಮಾನ್ಯವಾಗಿ ಕೊಯಿಲಾಗದ ಮರಗಳಿಂದ ಫಸಲನ್ನು ಇಷ್ಟರಲ್ಲಿಯೇ ಕೀಳುವುದು ಉತ್ತಮ. ಹುಳಬಾಧೆಗೆ ಮರಗಿಡಗಳು ಗುರಿಯಾಗದಂತೆ ಮಾತ್ರ ಎಚ್ಚರಿಕೆ ವಹಿಸಲೇಬೇಕು.

(ಒಂಭತ್ತನೇ ಪುಟದಿಂದ)

ಮನಸ್ಸು ಮಾತ್ರ ಪ್ರಯೋಗ ಶಾಲೆಯಲ್ಲೇ ಇರುತಿತ್ತು. ಅಂತೂ ನಾಲ್ಕು ವರ್ಷಗಳ ಅವಿರತ ಪರಿಶ್ರಮದ ಫಲವಾಗಿ ೧೯೫೩ರಲ್ಲಿ ಪ್ರಾಣಿಗಳಿಗೆ ಅಂಟುವ ಪೋಲಿಯೋ ರೋಗವನ್ನು ಪ್ರತಿಬಂಧಿಸುವ ಉಪಾಯವನ್ನವರು ಕಂಡುಕೊಂಡರು. ಮುಂದೊಂದು ಪ್ರಶ್ನೆ ಎದ್ದು ನಿಂತಿತ್ತು. ಮಾನವ ಸಮಾಜದ ಪೋಲಿಯೋ ಪ್ರತಿಬಂಧ ಹೇಗಾದೀತು?

ಚಿತ್ರ ೧೪: ಯಶಸ್ಸು

ತನ್ನ ಮತ್ತು ತನ್ನ ಕುಟುಂಬದವರಲ್ಲಿಯೇ ಚುಚ್ಚಿಕೊಂಡು ಡಾ| ಸಾಕ್ ತಾನು ತಯಾರಿಸಿದ ಲಸಿಕೆಯ ಪೋಲಿಯೋ ಪ್ರತಿಬಂಧಕ ಶಕ್ತಿಯನ್ನು ಕಂಡುಕೊಂಡರು. ಇದರ ಚುಚ್ಚುವಿಕೆಯಿಂದ ಯಾವ ಕೆಟ್ಟ ಪರಿಣಾಮವಾಗಲಿಲ್ಲ. ಇದರಿಂದ ತುಸು ಧೈರ್ಯಗೊಂಡ ಸಾಕ್ ೫,೦೦೦ ಮಕ್ಕಳಿಗೆ ಈ ಲಸಿಕೆಯನ್ನು ಚುಚ್ಚಿದರು. ೧೯೫೪ರಲ್ಲಿ ಲಕ್ಷಾಂತರ ಮಕ್ಕಳಿಗೆ ಸಾಮೂಹಿಕವಾಗಿ ಪೋಲಿಯೋ ಪ್ರತಿಬಂಧಕ ಲಸಿಕೆಯ ಪ್ರಯೋಜಕವಾಯಿತು. ಇಂದಿನ ದಿನಗಳಲ್ಲಿ ಸುಮಾರು ಏಳು ಕೋಟಿಯಷ್ಟು ಅಮೆರಿಕನ್ನರು ಈ ಲಸಿಕೆಯನ್ನು ಚುಚ್ಚಿಸಿಕೊಂಡಿದ್ದಾರೆ. ಹೀಗೆ ಚುಚ್ಚಿಸಿಕೊಂಡವರಲ್ಲಿ ಆಬಾಲ ವೃದ್ಧರಿದ್ದಾರೆ. ಲಸಿಕೆಯನ್ನು ಚುಚ್ಚಿಸಿಕೊಂಡವರಲ್ಲಿ ನೂರಕ್ಕೆ ೯೦ರಷ್ಟು ಮಂದಿಗೆ ಇದರಿಂದ ಗುಣ ಸಿಕ್ಕಿರುತ್ತದೆ.

ಚಿತ್ರ ೧೫: ಭವಿಷ್ಯ

ಡಾ| ಜೋನಸ್ ಸಾಕ್‌ರವರ ಈ ಅದ್ಭುತ ಲಸಿಕೆಯ ಬಳಕೆಯಿಂದು ಹೆಚ್ಚಾಗಿದೆ. ಆದರೆ, ಇದರ ಸಂಶೋಧನೆಯಿಂದ ಸಾಕ್ ಆರ್ಥಿಕವಾಗಿ ಯಾವ ಲಾಭವನ್ನೂ ಪಡೆದಿರುವುದಿಲ್ಲ. ಇಡಿಯ ಜಗತ್ತಿಗೆ ತನ್ನ ಸಂಶೋಧನೆಯ ಫಲವನ್ನು ದಾನವೆರೆದಿದ್ದಾರೆ. ಕರಾಳ ಪೋಲಿಯೋವನ್ನು ಪ್ರಪಂಚದಿಂದಲೇ ತೊಡೆದೋಡಿಸುವಲ್ಲಿ ಇದೀಗ ಈ ಸಮರ್ಥವಾಗಿದೆ. ತನ್ನೀ ಅಮೋಘ ಸಂಶೋಧನಾನಂತರ ಡಾ| ಸಾಕ್ ಸುಮ್ಮನುಳಿದಿದ್ದಾರೆಯೆ? ಇಲ್ಲ ಮಾನವನನ್ನು ನಾನಾ ವಿಧವಾಗಿ ಕಾಡುತ್ತಿರುವ ಮತ್ತೊಂದು ಪಿಡುಗು ಕ್ಯಾನ್ಸರ್‌ನ ವಿರುದ್ಧವಾದ ಲಸಿಕೆ ತಯಾರಿಸುವುದು ಸಾಧ್ಯವಿದೆಯೇ ಎಂದವರು ತಲೆಕಡುಮಾಡುತಿದ್ದಾರೆ. ಅವರ ಶ್ರಮ ಸಫಲವಾಗಲಿ.

ಯುದ್ಧದಾಚರತಿ ಶ್ರೇಷ್ಠಃ....

(ನಾಲ್ಕನೇ ಪುಟದಿಂದ)

"ಸರಿಯೇ..'

"ನೀವು ಏನು ಬೇಕಾದ್ರೂ ಅಂದ್ಕೊಳ್ಳಿ. ನನಗೆ ಅವರ ಮಾತೇ ನ್ಯಾಯವಾಗಿದೇಂತ ಅನ್ನಿಸ್ತದೆ. ನಿಮಗೆ?"

'ನನ್ಗೂ ಹಾಗೆಯೇ ಅನ್ನು...."

'ಖಂಡಿತಕ್ಕೂ...'

"ಖಂಡಿತಕ್ಕೂ....'

"ಮತ್ಯಾಕೆ ಆಗ ಮುಖ ಮುದುರಿಸಿದ್ರಿ?"

"ಇಲ್ವೆ, ಹಾಗೇನೂ ಮಾಡಿಲ್ಲ...."

"ಸುಳ್ಳು ಹೇಳಬೇಡಿ ಮತ್ತೆ...'

"ಇಲ್ಲ ಕಣೇ, ನೂರಕ್ಕೆ ನೂರು ಸತ್ಯ ....ಇಗೋ...ಸಾಕ್ಷಿಗೂ ಸತ್ಯ..."

"ಛೆ, ಬಿಡೀಂದ್ರೆ....ನಾನ ಆಚೆ ಹೋಗ್ತೇನೆ....'

"ಹೇಗೆ ಹೋಗ್ತಿಯೋ ನೋಡೋಣ....'

'....ಹ್ಞಾಂ...... ನೋಡಿ, ನೋಡಿ ಹೀಗೆ..'

'ಅಬ್ಬಾ ಗಾಟಿ ಹುಡುಗಿಯೆ!?'

"ನೀವ್ರೂ ಸೋಟಿ ಹುಡುಗನೆ?'

"ಪರ್ವಾಗಿಲ್ವೆ ನೀನು..."

'ಮತ್ತೆ ನೀವು?'

'ನಾನೂನೂ....'

"ಸರಿ ಹೋಯ್ತು ಜೋಡಿ... ಬನ್ನಿ ಹೀಗೆ."

"ಬಂದೆ...ಆಜ್ಞಾನುವರ್ತಿಯಾದೆ.."

"ನೋಡಿ, ವಿಜಯ ಒಬ್ರು ಸರೀ ದಾರಿ ತುಳಿಯತೊಡಗಿದ್ದರಿಂದ ನಾವು ಗೆದ್ದುಕೊಂಡೆವು.."

"ಯಾಕೆ? ಹೇಗೆ?"

"ಹೇಗೇಂದ್ರೆ?, ಯುದ್ಧದಾಚರತೀಯ ಶ್ರೇಷ್ಠ ತತ್ತದೇವೇತರೋ ಜನಾಃ ಅಲ್ವೆ.."

"ಹ್ಞಾ, ಸರಿಹೋಯ್ತು ಈಗ...."

"ಸರಿಹೋಯ್ತಲ್ಲಾ, ಇನ್ನಾದ್ರೂ ಬನ್ನಿ ಊಟಿ...."

"ಬಂದೆ, ಬಂದೆ..."

ಗೋರಾ.

ಕುಂದಾಪುರ ಮುನ್ಸೀಫ್ ಕೋರ್ಟಿನಲ್ಲಿ.

O.S. 139/64. R.I.A. 92/1965.

ಅರ್ಜಿದಾರಳು: ಗಿರಿಜಮ್ಮ.

ಎದುರು: 1. ಕೃಷ್ಣ ಆಚಾರಿ.
2. ರಾಮ ಆಚಾರಿ.
3. ವಾಗ್ದೇವಿ ಅಮ್ಮ.

ಕುಂದಾಪುರ ತಾಲ್ಲೂಕು ಕೋಟೇಶ್ವರ ಗ್ರಾಮದಲ್ಲಿರುವವರು. ಬಡಾಮನೆ ಶ್ರೀನಿವಾಸ ಆಚಾರರ ಮಗ ರಾಮ ಆಚಾರಿ 1 ಸದ್ರಿ ಶ್ರೀನಿವಾಸ ಆಚಾರರ ವಿಧವೆ ವಾಗ್ದೇವಿ ಅಮ್ಮ 1 ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸದ್ರಿ ವ್ಯವಹರಣೆಯಲ್ಲಿ ಡಿಕ್ರಿ ವಿಧಿ ಪ್ರಕಾರ ಬರತಕ್ಕ ಹಣಗಳನ್ನು ಬರಮಾಡಿಕೊಳ್ಳುವರೆ ಸದ್ರಿ ಪ್ರಿಲಿಮಿನರಿ ಡಿಕ್ರಿಯ ಮೇರೆಗೆ ಫೈನಲ್ ಡಿಕ್ರಿ ಕೊಡಿಸಬೇಕೆಂತ ಅರ್ಜಿದಾರಳು ದಾಖಲ್ಲು ಮಾಡಿದ ಮೇಲಿನ ಅರ್ಜಿಯು ತಾ. 30-6-1965ಕ್ಕೆ ತನ್ನಿಗೆ ಇಟ್ಟಿರುವುದರಿಂದ ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

(Sd.) N. S. Parameshwariah,
Advocate for Petr.

Date 20—5—65,
Coondapoor.

ನಮ್ಮ-ನಮ್ಮವರು

ಶ್ರೀ ಸಿ. ಸುಬ್ರಹ್ಮಣ್ಯಂ

ಮೈಸೂರು ರಾಜ್ಯದಲ್ಲಿ ಆಹಾರಧಾನ್ಯಗಳ ಅಂತರ್ಜಿಲ್ಲಾ ಸಾಗಾಟ ನಿರ್ಬಂಧವನ್ನು ರದ್ದುಗೊಳಿಸುವ ದಿಟ್ಟತನದ ಹೆಜ್ಜೆಯನ್ನ ಕೇಂದ್ರ ಆಹಾರ ಮಂತ್ರಿ ಶ್ರೀ ಸುಬ್ರಹ್ಮಣ್ಯಂರು ಇಟ್ಟಿರುತ್ತಾರೆ. ರಾಜ್ಯದ ಎಲ್ಲೆಡೆಗಳಲ್ಲಿ ಉಂಟಾಗಿದ್ದ ಭೀಕರ ಅಭಾವ ಪರಿಸ್ಥಿತಿಗೆ ಈ ನಿರ್ಬಂಧವೇ ಹೇತು ಎಂಬ ಅಭಿಪ್ರಾಯವನ್ನು ಹಲವು ಮಂದಿ ವ್ಯಕ್ತಪಡಿಸಿರುವುದರಿಂದ ಈ ನಿರ್ಧಾರವನ್ನು ಕೈಕೊಳ್ಳಲಾಯಿತು. ಈ ನಿರ್ಧಾರವು ನಿಜಕ್ಕೂ ಸ್ವಾಗತಾರ್ಹವಾದುದು. ಇದರ ಪರಿಣಾಮ ತಕ್ಕ ಮಟ್ಟಿಗೆ ಶುಭಕರವಾಗಿಯೇ ಪರಿಣಮಿಸಿದೆ ಎಂಬುದಂತೂ ಸ್ಪಷ್ಟ.

ದೇಶದ ಆಹಾರ ಪರಿಸ್ಥಿತಿ ಮುಂದಿನ ವರ್ಷದಲ್ಲಿ ಬಹು ಮಟ್ಟಿಗೆ ಸುಧಾರಿಸಿ, ಇನ್ನು ಕೆಲವೇ ವರ್ಷಗಳಲ್ಲಿ ಆಕ್ಕಿಯನ್ನ ಆಮದು ಮಾಡಿಸಿರುವ ಪರಿಸ್ಥಿತಿಯೂ ಬರಬಹುದು ಎಂಬ ಧೈರ್ಯದ ಮಾತುಗಳನ್ನು ಮಾನ್ಯ ಮಂತ್ರಿಗಳು ಆಡಿರುತ್ತಾರೆ. ಅಂಕೆ ಸಂಖ್ಯೆಗಳ ಆಧಾರದ ಮೇಲಿನ ಈ ಹೇಳಿಕೆಯಲ್ಲಿ ಸತ್ಯಾಂಶ ಇರಬಹುದು. ಆದರೆ ಈ ಪರಿಸ್ಥಿತಿ ಬರುವುದೆಂದೋ ಎಂಬ ಸಂಶಯ ಎಲ್ಲೆಡೆಯಲ್ಲೂ ಸುಳಿದು ಸುತ್ತುತ್ತಿದೆ.

ಶ್ರೀ ಸುಬ್ರಹ್ಮಣ್ಯಂ ಈ ವರೆಗೆ ಯಾವ ಟೀಕೆ ಟಿಪ್ಪಣಿಗಳಿಗೂ ಮಣಿಯದೆ ದಿಟ್ಟತನದಿಂದ ಆಹಾರ ಸಮಸ್ಯೆಯನ್ನು ಇದಿರಿಸುತ್ತಿದ್ದಾರೆ. ಈ ಸಮಸ್ಯೆಯನ್ನು ಕೊನೆಗೊಳಿಸುವ ದೃಢನಿರ್ಧಾರ ಹಾಗೂ ಅಚಲ ವಿಶ್ವಾಸ ಅವರ ರಲ್ಲಿರುವುದರಿಂದಲೇ ಅವರಿನ್ನೂ ಆ ಸ್ಥಾನಕ್ಕೆ ಅಂಟಿಕೊಂಡಿದ್ದಾರೆ. ಸಮರ್ಥನೆನಿಸಿಕೊಂಡ ಅವರಿಂದ ಆಹಾರ ಸಮಸ್ಯೆ ಇಂದಿಗಾಗ್ಯೂ ಪರಿಹಾರವಾದೀತು, ಸ್ವಲ್ಪ ಕಾಲ ಕಾದು ನೋಡುವ ತಾಳ್ಮೆ ಜನತೆಯಲ್ಲಿ ಇರಬೇಕಾದುದಷ್ಟೇ ಇಂದಿನ ಅವಶ್ಯತೆ ಎನಿಸಿದೆ. ಶ್ರೀ ಸುಬ್ರಹ್ಮಣ್ಯಂ ತನ್ನ ಹುದ್ದೆಗೆ ಗೌರವ ತರುವ ಕಾರ್ಯ ಮಾಡುವರೆಂಬುದಂತೂ ನಿಶ್ಚಯ.

ಡಾ|| ವೈ. ಆರ್. ಶೆಟ್ಟಿ.

ಗ್ರಾಮೀಣ ಪ್ರದೇಶಗಳಲ್ಲಿನ ಜನತೆಗೆ ವೈದ್ಯಕೀಯ ಸೌಲಭ್ಯಗಳನ್ನೊದಗಿಸಲು ನಮ್ಮ ಡಾಕ್ಟರರುಗಳು ಹಳ್ಳಿಗಳಿಗೆ ಹೋಗಿ ಸೇವೆ ಸಲ್ಲಿಸಬೇಕೆಂದು ಸ್ವಾತಂತ್ರ್ಯೋತ್ಸವ ದಿನಗಳಲ್ಲಿ ನಮ್ಮ ನಾಯಕರು ಪದೇ ಪದೇ ಹೇಳುತ್ತಿದ್ದಾರೆ. ಅವರ ಈ ಉಪದೇಶದಿಂದ ಪ್ರಭಾವಿತರಾದವರೆಷ್ಟು ಮಂದಿಯೋ ಹೇಳಬರುವುದಿಲ್ಲ. ಆದರೆ ಈ ಉಪದೇಶದ ಹೊಳೆ ಹರಿಯುವ ಮೊದಲೇ, ಈ ಮಾತನ್ನು ಸ್ವತಃ ಮನಗಂಡು ಉಡುಪಿ ತಾಲೂಕಿನ ಗ್ರಾಮವಾದ ಶಿರ್ವದಲ್ಲಿ ವೈದ್ಯಕೀಯ ವೃತ್ತಿ ಅವಲಂಬಿಸಿದವರ ಡಾ| ವೈ. ಆರ್. ಶೆಟ್ಟಿ ಅವರ.

ಎಂ. ಬಿ. ಬಿ. ಎಸ್. ಪದವೀಧರರಾದ ಶೆಟ್ಟರು ಇಂದು ಸರಕಾರಿ ನೌಕರಿಯಲ್ಲೋ, ಪಟ್ಟಣಗಳಲ್ಲೋ ಇದ್ದಿದ್ದರೆ ಹೇರಳ ಧನ ಸಂಪಾದನೆಯನ್ನೂ ಉತ್ತಮ ಪ್ರಾಕ್ಟೀಸನ್ನೂ ಮಾಡಬಹುದಿತ್ತು. ಆದರೆ ಶ್ರೀ ಶೆಟ್ಟರ ಔದಾರ್ಯ ಅವರನ್ನು ಶಿರ್ವಕ್ಕೆ ಸೆಳೆದೊಯ್ದಿತು. ಇಂದಿಗೆ ಹದಿನೆಂಟು ವರ್ಷಗಳಿಂದ ಅವರು ಶಿರ್ವ ಗ್ರಾಮದ ಆಸುಪಾಸಿನ ಜನತೆಗೆ ತಮ್ಮ ಸೇವೆ ಸಲ್ಲಿಸುತ್ತಿದ್ದಾರೆ.

ಮದ್ರಾಸು ಸರಕಾರದ ವೈದ್ಯಕೀಯ ಇಲಾಖೆಯಲ್ಲಿ ದುಡಿದ ಶೆಟ್ಟರು, 1943 ರಲ್ಲಿ ತಮ್ಮ ಹುದ್ದೆಗೆ ರಾಜಿ ಇತ್ತು, ಮಿಲಿಟರಿ ಸರ್ವಿಸಿಗೆ ಸೇರಿದರು. ಎರಡನೆ ಜಾಗತಿಕ ಯುದ್ಧದ ಕಾಲದಲ್ಲಿ ಅವರು ಮಿಲಿಟರಿ ಸೇವೆಯಲ್ಲಿ ಲಕ್ನೋ, ಜಲಂಧರ್, ಪೂನಾ, ಫೈಜಾಬಾದ್ ಮೊದಲಾದ ಕಡೆಗಳಲ್ಲಿ ದುಡಿದು ಅಪಾರ ಅನುಭವ ಗಳಿಸಿದವರು. 1947ರಲ್ಲಿ ತನ್ನ ಉತ್ತಮ ಹುದ್ದೆಗೆ ರಾಜಿ ಇತ್ತು ಶಿರ್ವದಂತಹ ಹಳ್ಳಿಯಲ್ಲಿ ವೈದ್ಯಕೀಯ ವೃತ್ತಿ ಅವಲಂಬಿಸಿದರು.

ಇಂದು ಶಿರ್ವದಲ್ಲಿ ಹೊಸ ಚೈತನ್ಯ ಹುಟ್ಟಿದೆ. ಗ್ರಾಮೀಣ ಜನತೆಗೆ ವೈದ್ಯಕೀಯ ಸವಲತ್ತು ಒದಗಿಸುವ ಉದ್ದೇಶದಿಂದ ಆರಂಭವಾದ ಮೆಡಿಕಲ್ ರಿಲೀಫ್ ಎಸೋಸಿಯೇಶನ್ ಇಂದು ಶಿರ್ವದಲ್ಲಿ ಪವಾಡಗಳನ್ನೇ ನಿರ್ಮಿಸಿದೆ. ಇತ್ತೀಚೆಗೆ ಈ ಎಸೋಸಿಯೇಶನಿನ ಆಶ್ರಯದಲ್ಲಿ ಶಿರ್ವದಲ್ಲೊಂದು ಟಿ. ಬಿ. ವಾರ್ಡಿನ ಸ್ಥಾಪನೆಯೂ ಆಯಿತು. ಶ್ರೀ ಶೆಟ್ಟರು ಈ ಎಸೋಸಿಯೇಶನಿನ ಅಧ್ಯಕ್ಷರೆಂಬುದನ್ನು ನಾವು ಈ ಕಾಲ ಸ್ಮರಿಸಬೇಕು.

ಶ್ರೀ ಶೆಟ್ಟರು ನಿಗರ್ವಿಗಳು; ಸರಳ ಗುಣದವರು; ಸಾರ್ವಜನಿಕ ಸೇವಾಸಕ್ತರು; ಸದ್ದಿಲ್ಲದೆ ದುಡಿಯುವವರು. ಶಿರ್ವದ ಹತ್ತು ಹಲವು ಸಂಸ್ಥೆಗಳಲ್ಲಿ ಅವರು ವಿವಿಧ ಪದಾಧಿಕಾರಿಗಳಾಗಿ ದುಡಿದವರು; ದುಡಿಯುತ್ತಿರುವವರು. ರಿಕ್ರಿಯೇಶನ್ ಕ್ಲಬ್ಬಿನ ಅಧ್ಯಕ್ಷರಾಗಿದ್ದಾರೆ. ಬಂಟರ ಯಾನೆ ನಾಡವರ ಸಂಘದಿಂದ ನಡೆಸಲ್ಪಡುವ ಶಾಲೆಗಳ ಕರೆಸ್ಪೋಂಡೆಂಟರಾಗಿ, ಅದ್ಯಾರ್ ಎಜುಕೇಶನ್ ಕೌನ್ಸಿಲಿನ ಸದಸ್ಯರಾಗಿ ಅವರು ಸೇವೆ ಸಲ್ಲಿಸಿದ್ದಾರೆ.

ಶಿರ್ವ ಲೋಕಲ್ ಫಂಡ್ ಆಸ್ಪತ್ರೆಯ ಗೌರವ ಸರ್ಜನರಾಗಿ ಇಂದೂ ಅವರು ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಶೆಟ್ಟರಂತಹ ಡಾಕ್ಟರರುಗಳು ನಮ್ಮ ತರುಣ ಪೀಳಿಗೆಯ ಡಾಕ್ಟರರುಗಳಿಗೆ ಮೇಲ್ಪಂಕ್ತಿ. ಅವರ ಸೇವಾ ಸೌಲಭ್ಯ ಶಿರ್ವದ ಮತ್ತು ಆಸುಪಾಸಿನ ಜನತೆಗೆ ಇನ್ನೂ ಹೆಚ್ಚಾಗಿ ಲಭಿಸಲೆಂದು ಹಾರೈಸುತ್ತೇವೆ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O.P. No. 24/1965

1. ಕೃಷ್ಣಿ ಮರಕಾಲ್ತಿ—ಪಪ್ಪು ತಂಡೇಲರ ವಿಧವೆ.
2. ನಾರಾಯಣ P. ಸುವರ್ಣ—ಪಪ್ಪು ತಂಡೇಲರ ಮಗ—ಉಡುಪಿ ತಾಲೂಕು ಕೊಡವೂರು ಗ್ರಾಮದ ಮಲ್ಪೆ—ಅರ್ಜಿದಾರರು.

ಯಾವೂಲ್ಲಾ ಸಮಸ್ತ ಜನರಿಗೆ ತಿಳಿಯಪಡಿಸುವುದೇನಂದರೆ—

ಮೇಲ್ಕಂಡ 1ನೆ ಅರ್ಜಿದಾರಳ ಗಂಡ 2ನೆ ಅರ್ಜಿದಾರನ ತಂದೆ ತಾ. 26-2-1965ರಲ್ಲಿ ಸ್ವರ್ಗಸ್ಥರಾದ ಪಪ್ಪು ತಂಡೇಲರ ಮಯ್ಯೂರಿನ್ನು ಬ್ಯಾಂಕ್ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ Ltd. ಮಲ್ಪೆ ಬ್ರಾಂಚಿನಲ್ಲಿ ಡಿಪೋಜಿಟು ಇರುವ ಆಯಿವಜು ವಸೂಲು ಮಾಡುವರೆ ತಾವು ವಾರೀಸುದಾರರು ಯಾ ಹಕ್ಕುದಾರರೆಂತ್ಲೂ—ಆ ಕುರಿತು 2ನೆ ಅರ್ಜಿದಾರನ ಹೆಸರಿಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಕೊಟ್ಟ ಸದ್ರಿ ಅರ್ಜಿಯು ತಾ. 7-7-1965ಕ್ಕೆ ವಿಚಾರಣೆಗಿಯದೆ. ಆ ಕ್ಷೇಪ ಹೇಳತಕ್ಕವರು ಮುದ್ದತ್ತು ಸದ್ರಿ ದಿವಸ ಮೇಲ್ಕಂಡ ಕೋರ್ಟಿನ ಮುಂದೆ 11 ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದೆಂಬುದಾಗಿ ಯಾವೂಲ್ಲಾ ಸಮಸ್ತ ಜನರಿಗೆ ತಿಳಿಸಲಾಗಿಯದೆ.

N. V. KAMATH,
Advocate for Petitioners,
ಉಡುಪಿ, 11.6.65.

(ಮೂರನೇ ಪುಟದಿಂದ)

ಪರಿಹಾರಕ್ಕೆ ಕಾರಣವಾಗಬಹುದೆಂಬ ಅಭಿಪ್ರಾಯವೊಂದಿದ್ದರೂ ಇದು ಅವ್ಯವಹಾರ್ಯವೆಂದೂ ಹೇಳುವವರಿದ್ದರು. ಕಾಂಗ್ರೆಸ್ ಕಾರ್ಯಕಾರಿಣಿಯು ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಶನ್ ಪರೀಕ್ಷೆಗಳನ್ನು ಎಲ್ಲಾ ಮಾನ್ಯ ಭಾಷೆಗಳಲ್ಲಿಯೂ ನಡೆಸಲು ತನ್ನ ಅನುಮತಿಯನ್ನು ನೀಡಿದೆ. ಕೇಂದ್ರ ಗೃಹ ಮಂತ್ರಿ ಶಾಖೆಯು ಇದರಿಂದ ಗೊಂದಲಕ್ಕೆ ಗುರಿಯಾಗಿದೆ. ವಿಶ್ವವಿದ್ಯಾಲಯಗಳಲ್ಲಿ ಪದವಿ ಮತ್ತು ಪದವ್ಯೋತ್ತರ ವರ್ಗಗಳಲ್ಲಿ ಪ್ರಾದೇಶಿಕ ಭಾಷೆಗಳು ಶಿಕ್ಷಣ ಭಾಷೆಯೆನಿಸದ ಹೊರತು ಈ ಗೊತ್ತುವಳಿಯನ್ನು ಕಾರ್ಯರೂಪಕ್ಕೆ ತರುವುದು ಸಾಧ್ಯವಿಲ್ಲವೆಂದೊಂದು ಅಭಿಪ್ರಾಯ. ಹಾಗೆಯೇ ಕನ್ನಡದಲ್ಲಿ ಪರೀಕ್ಷೆ ಉತ್ತೀರ್ಣನಾದ ಅಭ್ಯರ್ಥಿಯನ್ನು ಭಾರತದ ಇತರೆಡೆಗೆ ಕಳುಹುವುದು ಸಾಧ್ಯವಾದೀತೇ ಎನ್ನುವುದು ಒಂದು ಸಂದೇಹ. ಇಂತಹ ಕೃತಿಗಳಿಂದ ರಾಷ್ಟ್ರೀಯ ಐಕ್ಯ ಸ್ಥಾಪನೆಗೆ ಬದಲು ಸಮಗ್ರತೆ, ಸಾಮಂಜಸ್ಯಗಳು ಶಿಥಿಲಗೊಳ್ಳಲಾರವೇ ಎಂಬ ಭಯ ಮತ್ತೆ ಕೆಲವರಿಗೆ ಉಳಿದ ಈ ತೆರದ ಬಿಸಿ ತುಪ್ಪದ ಗುಟುಕನ್ನು ಕಾಂಗ್ರೆಸ್ ಹೇಗೆ ಜಗಿಸಿಕೊಳ್ಳುವುದೆಂದು ನಿರೀಕ್ಷಿಸಿ ನೋಡಬೇಕಷ್ಟೆ.

ಹಿಂದಿ ಪ್ರಚಾರ ಸಮಿತಿಯ ವಾರ್ಷಿಕೋತ್ಸವ

ಉಡುಪಿಯ ಹಿಂದಿ ಪ್ರಚಾರ ಸಮಿತಿಯ ಹನ್ನೆರಡನೆಯ ವಾರ್ಷಿಕೋತ್ಸವ ಹಾಗೂ ಪ್ರಮಾಣಪತ್ರ ವಿತರಣಾ ಸಮಾರಂಭವು ಕಳೆದ ತಾ. 8ರಂದು ಶ್ರೀ ಅನೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಕೋಶಾಧ್ಯಕ್ಷ ಶ್ರೀ ಎ. ಜಿ. ಆಚಾರ್ಯರವರು ಸ್ವಾಗತಿಸಿದ ಬಳಿಕ ಕಾರ್ಯದರ್ಶಿ ಕುಮಾರಿ ಯ. ಚಂದ್ರಭಾಗಿಯವರು ವರದಿಯನ್ನೋದಿದರು. ಬಳಿಕ ಶ್ರೀ ಕೆ. ಕೆ. ಪೈಗಳು ಹಿಂದೀ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣಪತ್ರಗಳನ್ನೂ ಮೊದಲಿನ ಮೂರು ಸ್ಥಾನಗಳನ್ನು ಪಡೆದವರಿಗೆ ಬಹುಮಾನಗಳನ್ನೂ ಇತ್ತರು. ಅಧ್ಯಕ್ಷರು ಮಾತನಾಡುತ್ತಾ, ಹಿಂದಿಯನ್ನು ಇನ್ನೂ ಹೆಚ್ಚು ಮುಂದೆ ಅಭ್ಯಸಿಸಬೇಕೆಂದು ನುಡಿದರು. ತರುವಾಯ ಸಮಿತಿಯ ಸದಸ್ಯರುಗಳಿಂದ "ಅಪರಾಧಿ ಕೌನ್" ಮತ್ತು "ಬೀಡಿಗೆ ಮುನ್" ಎಂಬೆರಡು ನಾಟಕಗಳ ಅಭಿನಯವಾಯಿತು. ಅಂತ್ಯದಲ್ಲಿ ಗೌರವ ಕಾರ್ಯದರ್ಶಿ ಶ್ರೀ ಮಹಾಬಲ ನಾಯಕರು ಧನ್ಯವಾದ ಸಮರ್ಪಿಸಿದರು.

ಎಸ್. ಎಸ್. ಕೆ. ವಿದ್ಯಾವರ್ಧಕ ಸಂಘ ಗದಗ.

ನಮ್ಮ ಸಂಘದಿಂದ ಲೋನ್ ಸ್ಕಾಲರ್‌ಶಿಪ್ ಪಡೆಯ ಬಯಸುವ ನಮ್ಮ ಸಮಾಜದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸಂಘದಿಂದ ನಿರ್ದಿಷ್ಟಪಡಿಸಿದ ಅರ್ಜಿ ಫಾರ್ಮುಗಳನ್ನು ತುಂಬಿ ಗೌರವ ಕಾರ್ಯದರ್ಶಿಗಳ ಕಡೆ ದಿನಾಂಕ ೧೦-೭-೧೯೬೫ರೊಳಗಾಗಿ ಕಳಿಸತಕ್ಕದ್ದು. ಅರ್ಜಿ ಫಾರ್ಮುಗಳನ್ನು ಪ್ರತ್ಯಕ್ಷ ಇಲ್ಲವೆ ಪತ್ರದ್ವಾರ ಗೌರವ ಕಾರ್ಯದರ್ಶಿಗಳಿಂದ ಪಡೆಯಬಹುದು ಎಂದು ಸದ್ರಿ ಸಂಘದ ಗೌರವ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮಣಿಪಾಲ, ಜೂನ್ ೯—ಅಗುಂಬೆಯ ಆಗುಂಬೆ ವಿದ್ಯಾಸಂಸ್ಥೆಗೆ ಮಣಿಪಾಲ ಎಕಾಡೆಮಿಯ ಸಹಾಯದೊಂದಿಗೆ ಈ ವರ್ಷ ಒಂದು ಪ್ರಾಥಶಾಲೆಯನ್ನು ಆರಂಭಿಸುವುದಕ್ಕೆ ಅನುಮತಿ ಸಿಕ್ಕಿದೆ.

ಈ ಶಾಲೆಯನ್ನು ಜೂನ್ ೨೮ರಂದು ಮಣಿಪಾಲದ ಎಕಾಡೆಮಿ ಆಫ್ ಜನರಲ್ ಎಜುಕೇಶನಿನ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಯವರು ಉದ್ಘಾಟಿಸುತ್ತಾರೆ.

ಉಡುಪಿ ಮತ್ತು ಮಣಿಪಾಲದ ನಿವಾಸಿಗರಿಗೆ ಉಚಿತವಾಗಿ ಟಾಕು ಹಾಕುವುದಕ್ಕಾಗಿ ಸ್ಥಳೀಯ ವೈದ್ಯರುಗಳಿಗೆ ಉಡುಪಿ ರೋಟರಿ ಕ್ಲಬ್ ತಾ. 8ರಂದು ಶೀತಜ್ವರ ನಿರೋಧಕ ಟಾಕು ಔಷಧಿಯನ್ನು ವಿತರಣೆ ಮಾಡಿತು.

ವಂದನಾರ್ಪಣೆ

ನಾನು ಕಳೆದ ವಾರದಲ್ಲಿ ಶ್ರೀ ಸದಾಶಿವ ರಾಯರೊಂದಿಗೆ ನವಯುಗದ ಪ್ರಚಾರಾರ್ಥವಾಗಿ ಸಂಚಾರ ಕೈಕೊಂಡಾಗ ಧಾರವಾಡದಲ್ಲಿ ಶ್ರೀ ಭಗವಾನ್‌ದಾಸಶೆಟ್ಟಿ, ಶ್ರೀ ಕೆ. ರಂಗರಾವ್, ಶ್ರೀ ನಾರಾಯಣ ಶೆಟ್ಟಿ, ಗದಗದಲ್ಲಿ ಶ್ರೀಗಳಾದ ಪಿ. ಎಸ್. ಹೆಗ್ಡೆ, ವೆಂಕಟಗಿರಿರಾವ್, ಎಂ. ಬಿ. ಶೆಟ್ಟಿ, ಬಿ. ಸುಬ್ಬಣ್ಣ ಶೆಟ್ಟಿ, ಹುಬ್ಬಳ್ಳಿಯಲ್ಲಿ ಶ್ರೀಗಳಾದ ಕೆ. ಗೋಪಾಲ ಹೆಗ್ಡೆ, ಕೆ. ಸದಾನಂದ ಶೆಟ್ಟಿ, ಪ್ರೊ| ಕೆ. ಶೇಷಗಿರಿರಾವ್, ಬಿ. ಶಂಕರನಾರಾಯಣ ಭಟ್, ಎ. ಶಂಕರ್ ರಾವ್, ಬಂಕಾಪುರದಲ್ಲಿ ಕೆ. ನಾರಾಯಣಭಟ್, ಹಾವೇರಿಯಲ್ಲಿ ಪದ್ಮನಾಭ ಹೆಬ್ಬಾರ್, ಹರಿಹರದಲ್ಲಿ ಡಾ| ಆರ್. ಎಸ್. ಪೆರೋಡಿ ಮೊದಲಾದವರು ಸಹಕರಿಸಿ ಪ್ರೋತ್ಸಾಹಿಸಿರುತ್ತಾರೆ. ಇವರೆಲ್ಲರಿಗೂ ಹೃತ್ಪೂರ್ವಕ ವಂದನೆಗಳು. ಅಲ್ಲದೆ ನವಯುಗದ ಪರಿಷ್ಕರಣಕ್ಕಾಗಿ ಪ್ರೋತ್ಸಾಹಿಸಿದ ಶ್ರೀಗಳಾದ ಬಿ. ಶಂಕರಯ್ಯ ಹೆಗ್ಡೆ, ಹುಬ್ಬಳ್ಳಿ, ಕೆ. ಆನಂದ ಶೆಟ್ಟಿ, ಹುಬ್ಬಳ್ಳಿ, ವಾಸು ಶೆಟ್ಟಿ, ಹುಬ್ಬಳ್ಳಿ ಇವರಿಗೆ ನಾವು ಆಭಾರಿಗಳಾಗಿದ್ದೇವೆ. ಅಲ್ಲದೆ ಚಂದಾದಾರರಾಗಿ ಪ್ರೋತ್ಸಾಹಿಸಿದ ಮಹನೀಯರಿಗೆಲ್ಲಾ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕೆ. ಹೊನ್ನಯ್ಯ ಶೆಟ್ಟಿ,
ಸಂಚಾಲಕ-ಸಂಪಾದಕ.

ಇವಳೀಗ ಗೆಳತಿ

(ಎರಡನೇ ಪುಟದಿಂದ)

ನೀವೇ ಕಾಳಗಕ್ಕೆ ನಿಂತಿದ್ದೀರಿ!" ಎಂದು ನಕ್ಕರು.

"ಹೇಳಲೇನೇ ಪದ್ಮ, ನಿನ್ನ ಬಂಡವಾಳಾನ?" ಎಂದು ಅಣಕಿಸಿದಳು ಜಯ. ಪದ್ಮ ಗೋಗರೆಯುತ್ತಾ "ನಿನ್ನ ದಮ್ಮಯ್ಯ ಜಯ ಅಷ್ಟು ಉಪಕಾರ ಮಾಡಬೇಡ" ಎಂದು ಕೈ ಮುಗಿದಳು.

"ಏನಮ್ಮಾ ಅದು ನಿಮ್ಮ ಆಟ ಎಂದು ಪ್ರಶ್ನಿಸಿದಳು ನಾಗಮ್ಮ.

ಪದ್ಮ ಜಯ ಇಬ್ಬರೂ ನಗುತ್ತಾ ಓಡಿ ಹೋದರು. ನಾಗಮ್ಮನವರಿಗೆ ಯಾವುದೂ ಅರ್ಥವಾಗಲಿಲ್ಲ. "ಹುಚ್ಚು ಹುಡುಗರು" ಎಂದು ಕೊಂಡರು.

— ೩ —

ಪದ್ಮ ಸುಂದರನನ್ನು ಕಂಡ ಮೊದಲೇ ಮಾರುಹೋಗಿದ್ದರು. ಅವನ ಸರಳ ಸ್ವಭಾವ; ರೂಪ ಅವಳನ್ನು ಬಹಳವಾಗಿ ಆಕರ್ಷಿಸಿದ್ದವು. ತನ್ನ ಹೃದಯದ ಗುಟ್ಟನ್ನು ಬಯಲಿಗೆ ತರಲು ಪ್ರಯತ್ನಿಸದೆಯೂ ಇರಲಿಲ್ಲ ಪದ್ಮ. ಆದರೆ ಸುಂದರ ಅದನ್ನು ಅಪಾರ್ಥಮಾಡಿಕೊಂಡಿರಲಿಲ್ಲ. ಪದ್ಮ ಮೊದಲು ಸುಂದರನನ್ನು ಒಲಿಸಿಕೊಳ್ಳಲು ಜಲ ಒಗೆಯ ಪ್ರಯತ್ನ ಮಾಡಿದಳು. ಯಾವ ಪ್ರಯೋಜನವೂ ಆಗಲಿಲ್ಲ ಅವನ ನಡತೆ, ಸ್ವಭಾವ ಬದಲಾಗದೆ ಎಂದಿನಂತೆ ಎಲ್ಲರಂತೆ ವರ್ತಿಸುವಂತೆಯೇ ವರ್ತಿಸುತ್ತಿದ್ದ.

ಮಗಳ ಮನೋಗತವನ್ನು ಅವಳ ತಾಯಿ ತಂದೆ ಅರಿತಿದ್ದರು. ಸಿರಿಯ ಮಡಿಲಲ್ಲೇ ಬೆಳೆದಿರುವ ಅವರಿಗೆ ಸುಂದರನನ್ನು ಬೇಡಿಕೆಯನ್ನು ನಿರಾಕರಿಸಲಾರ ಎಂಬ ಭಾವನೆಯಿತ್ತು.

ಮದುವೆಯ ಮನೆಯಲ್ಲಿಯೇ ಸುಂದರ ಹಾಗೂ ಅವನ ತಾಯಿಯೊಂದಿಗೆ ಪದ್ಮಾಳ ವಿಷಯವನ್ನು ಪ್ರಸ್ತಾಪ ಮಾಡುವುದೆಂದು ಅವಳ ತಂದೆ ತಾಯಿಯರು ನಿರ್ಧರಿಸಿದ್ದರು.

ಗೆಳತಿಯರಿಬ್ಬರ ಮನೋಗತವನ್ನು ಅರಿಯುವ ಪ್ರಯತ್ನವನ್ನು ನಡೆಸಿರಲಿಲ್ಲ ಸುಂದರ. ಇಬ್ಬರೂ ಅವನನ್ನು ಮನಸಾರ ಒಪ್ಪಿದ್ದರು.

ಜಯಳ ತಾಯಿ ಮೊದಲೇ ಮಗಳನ್ನು ಸುಂದರನಿಗೆ ಕೊಡಲು ನಿರ್ಧರಿಸಿದ್ದ ಸಂಗತಿಯನ್ನು ಬೆಳಕಿಗೆ ತಂದರು.

ಪದ್ಮಳ ಮನೋನಿರ್ಧಾರ ಬದಲಾಯಿತ. ಗೆಳತಿಯ ಸುಖದ ಕಡೆಗೆ ಅವಳ ಗಮನ ಹರಿಯಿತು.

"ಜಯ...."

"ಏನೇ ಪದ್ಮ"

'ಒಂದು ವಿಷಯ ಕೇಳ್ತೀನೆ, ನಿಜ ಹೇಳುತ್ತೀಯೋ?'

'ಹೂ ಅಪ್ಪಣೆ ಆಗಲಿ...'

'ಅವರನ್ನು ಒಂದು ವೇಳೆ ನಾನು ಮದುವೆಯಾದರೆ ನಿನಗೆ ಬೇಸರವಿಲ್ಲವಷ್ಟೆ?'

'ಪದ್ಮ ನಾನು ನೀನು ಗೆಳತಿಯರು. ಒಡ ಹುಟ್ಟಿದ ಅಕ್ಕ ತಂಗಿಯರಾಗದಿದ್ದರೂ ನಿನ್ನ ಬಗ್ಗೆ ತಂಗಿ ಎನ್ನುವ ಅಭಿಮಾನವಿದೆ. ನಿನ್ನ ಸುಖಕ್ಕಿಂತಲೂ ನಾನು ಹೆಚ್ಚೇನೂ ಬಯಸುವುದಿಲ್ಲ.'

"ನಿಮ್ಮ ತಾಯಿ..."

"ನಮ್ಮ ತಾಯಿ ಹಳೆಯ ಕಾಲದವರು. ಅವರಿಗೇನು ಗೊತ್ತು ಈ ವಿಷಯಗಳೆಲ್ಲ? ಅದರಲ್ಲಿಯೂ ನನ್ನಂತಹ ಬಡ ಹೆಣ್ಣು ಕಟ್ಟಿಕೊಂಡು ಅವರು ಪಡುವ ಸುಖವೂ ಅಷ್ಟರಲ್ಲಿಯೇ ಇದೆ....ನಾನೇ ಅವರ ಕಾಲು ಹಿಡಿದು ಒಪ್ಪಿಸುತ್ತೇನೆ."

"ಪದ್ಮ ಅಷ್ಟು ಸಾಹಸ ಮಾಡಬೇಡ ಜಯ, ನಿನ್ನ ದಮ್ಮಯ್ಯ. ಸುಮ್ಮನಿರು.

"ಅದೇಕೆ ಪದ್ಮ....?"

"ನೀನು ಗೆದ್ದೆ ಜಯ...ನಿನ್ನಂತಹ ಗೆಳತಿಯನ್ನು ಪಡೆಯುವುದಕ್ಕೆ ಪುಣ್ಯ ಮಾಡಿದ್ದೆ. ನನ್ನ ಜೀವನ ಯಾವುದಾದರೂ ಒಂದು ನೆಲೆ ಗಡಿಗೆ ಬರುತ್ತದೆ.. ಅವರ ಕೈ ಹಿಡಿಯಲು ನನಗಿಂತಲೂ ನೀನೇ ಯೋಗ್ಯಳು. ಇನ್ನು ಮುಂದೆ ನೀವಿಬ್ಬರೂ ನನಗೆ ಅಣ್ಣ ಅತ್ತಿಗೆ.. ಈ ಸಂಗತಿಯನ್ನು ಯಾರಿಗೂ ತಿಳಿಸಬೇಡ" ಎಂದು ಬೇಡಿದಳು ಪದ್ಮ.

ಜಯ ಗೆಳತಿಯನ್ನು ಅಪ್ಪಿಕೊಂಡಳು.

ಮಗಳ ಬದಲಾದ ಮನೋಭಿಪ್ರಾಯವನ್ನು ಅರಿಯುವ ಮುಂಚೆಯೇ ಪದ್ಮಳ ತಂದೆ ತಾಯಿಯರು ನಾಗಮ್ಮನವರೊಂದಿಗೆ ಪ್ರಸ್ತಾಪವೆತ್ತಿದ್ದರು. ಜಯಳ ತಾಯಿಗೆ ಗರ ಬಡಿದಂತಾಯಿತು. ನಾಗಮ್ಮ ಯಾವುದನ್ನೂ ನಿರೀಕ್ಷಿಸಿರಲಿಲ್ಲ.

ಸುಂದರ ತಾಯಿಯ ಬಳಿಗೆ ಬಂದು ನಿಂತ.

ಪದ್ಮಳ ತಂದೆ ತಮ್ಮ ಸಿರಿವಂತಿಕೆಯ ಠೀವಿಯಲ್ಲಿಯೇ "ನಿಮಗೆ ನನ್ನ ಮಗಳನ್ನು ಕೊಟ್ಟು ಮದುವೆ ಮಾಡುವ ವಿಚಾರವಿದೆ' ಅಂದರು.

ಸುಂದರ ಗಂಭೀರ ಭಾವದಿಂದಲೇ ಉತ್ತರಿಸಿದ: "ನನ್ನ ಮದುವೆ ಆಗಿದೆ" ಎಂದ.

ಎಲ್ಲರೂ ತಬ್ಬಿಬ್ಬಾಗಿ ಅವನ ಮುಖವನ್ನೇ ನೋಡಿದರು.

ನಾಗಮ್ಮ ಭಯಚಕಿತರಾಗಿ "ಎಲ್ಲೋ....ಯಾವಾಗಲೋ?" ಎಂದರು.

"ನೀನೇ ಮಾಡಿಸಿದೆಯಲ್ಲಮ್ಮ ಇವಳೊಂದಿಗೆ" ಎಂದು ಜಯನ ಕಡೆ ಬೆರಳು ತೋರಿಸಿದ ಸುಂದರ.

ಯಾರಿಗೂ ನಗು ತಡೆಯಲಾಗಲಿಲ್ಲ.

ಪದ್ಮ ಗೆಳತಿಯನ್ನು ಚಿವಿದು ಮುಗುಳ್ನಕ್ಕಳಷ್ಟೇ.

— — —

.... ಜೀವನ ....

ಹಿಡಿಯುವೆನು ಹೆದ್ದಾರಿ
ಸಾಗುವೆನು ಬಹುದೂರ
ಮೈಲ ಗಲ್ಲೊಂದೊಂದ
ದಾಟಿ ದಾಟಿ!

ನಡೆ ನಡೆದು ಹೋದವರ
ದಾರಿಯಲಿ ನಡೆಯುವೆನು
ಅವರ ಹಾದಿಯ ಗುರುತು
ನೋಡಿ ನೋಡಿ!

ತರುಲತೆಯ ಗಿರಿಸೊಂಪು
ಎಳೆವಳಿರು ಬಲು ಕೆಂಪು
ಮಿಗೆ ಸುಮನಗಳ ಕಂಪು
ಹೀರಿ ಹೀರಿ!

ಸಿಕ್ಕಾಗ ಫಲತಿಂದು
ಸಿಗದಾಗ ಜಲ ಕುಡಿದು
ಸುಖದುಃಖ ರಸವರಿದು
ಬಾಳಿ ಬಾಳಿ!

ಸಾಧು ಪ್ರಾಣಿಯ ಕಂಡು
ಕ್ರೂರ ಪ್ರಾಣಿಯ ಕಂಡು
ಬಾಳ್ ಸರ್ವ ಮುಖವುಂಡು
ಸಹಿಸಿ ಸಹಿಸಿ!

ಮಳೆಗಾಲದಲಿ ನೆನೆದು
ಚಳಿಗಾಲದಲಿ ನಡುಗಿ
ವೈಶಾಖದಲಿ ಬೆಂದು
ನೊಂದು ನೊಂದು!

ವಸಂತ ರಾಜನು ಬರಲು
ನಿಸರ್ಗ ಚೆಲ್ವನು ತರಲು
ಸೃಷ್ಟಿ ಗೀತೆಯ ರಚಿಸಿ
ಹಾಡಿ ಹಾಡಿ!

ಹಳ್ಳಕೊಳ್ಳವ ದಾಟಿ
ಗುಡ್ಡಗುಹೆಯನು ದಾಟಿ
ಸಪ್ತಸಾಗರ ದಾಟಿ
ಈಸಿ ಈಸಿ!

ಸೇರುವೆನು ನಮ್ಮವರ
ಪುರ ಸೇರಿ ನಿಂತವರ
ಹಾದಿ ಅನುಭವವೆಲ್ಲ
ಹೇಳಿ ಹೇಳಿ!

ಶಿವನ ಮಂದಿರ ಸೇರಿ
ಶಿವನೆದುರು ಮಡಿಯುವೆನು
ಹೃದಯ ಜ್ಯೋತಿಯನಲ್ಲಿ
ಬೆಳಗಿ ಬೆಳಗಿ!

—ಶ್ರೀ ಪಾಟೀಲ ಪುಂಡಲೀಕ ಗುರುಗಳು.

ಅಮೃತ ಬಿಂದು

ನಿರಾಸೆಗೊಳ್ಳುವವನು ತನ್ನ ತನದ ಚಿಕ್ಕ ಅಳತೆಗೋಲಿನಿಂದ ಅನಂತ ಭಗವಂತನನ್ನು ಅಳೆಯಲು ಹೊರಟವನು. ತನ್ನ ಸಂಕುಚಿತ ಮನಸಿನ ಹೆದರಿಕೆಗೆ ಭಗವಂತನ ವಿಶಾಲ ಚಿತ್ತವನ್ನು ಬಲಿಕೊಡುವನು.

0 0 0

ಪ್ರೀತಿ, ವಿಶ್ವಾಸ, ಸದ್ಬಯಕೆಗಳಿಲ್ಲದವನು ಸದಾ ನಿರಾಶನೇ ಆಗುತ್ತಾನೆ. ನಿರಾಸೆಗೆ ಸಿದ್ಧೌಷಧವೆಂದರೆ ಪ್ರೀತಿ, ವಿಶ್ವಾಸ, ಸದ್ಬಯಕೆಗಳು.

0 0 0

ಸದಾಸೆ ಭಗವಂತನ ದಯೆಯ ಮೇಲಿನ ವಿಶ್ವಾಸದ ಕುರುಹು. ನಿರಾಸೆ ಭಗವಂತನ ರಕ್ಷಕ ಶಕ್ತಿಯನ್ನರಿಯದ ಕೃತಘ್ನತೆ.

0 0 0

ಜೀವನವೆಂಬುದು ಜೀವಂತವಿರುವವರೆಗಿನ ಸತತ ಹೋರಾಟ. ಅದರಲ್ಲಿ ನಿರಾಸೆಹೊಂದುವವನು ಜೀವನದ ಹೋರಾಟದಲ್ಲಿ ಸೋಲುವುದು ನಿಶ್ಚಯ.

0 0 0

ಬೆಳಕಿಗಾಗಿ ದೀಪದ ಜ್ವಾಲೆಗೆ ನಾವು ಕೃತಜ್ಞರಾಗಬೇಕಾದರೂ, ಜ್ವಾಲೆಯನ್ನುಸಹನೆಯಿಂದ ಎತ್ತಿ ಹಿಡಿದ ದೀಪದ ಬಟ್ಟಲನ್ನು ಮರೆಯಲಾಗದು.

0 0 0

ಪವಿತ್ರ ಹೃದಯವು ಭಕ್ತಿಯ ದೇವಾಲಯ. ಅಲ್ಲಿ ಆತ್ಮಸನ್ಯಾಸಿಯು ಪವಿತ್ರ ತ್ಯಾಗ ಬಲಿದಾನಗಳಿಂದ ಪರಮಾತ್ಮನನ್ನು ಸಂಧಿಸುತ್ತಾನೆ.

0 0 0

ಸಂಕಷ್ಟವೆಂಬ ಮಣ್ಣಿನಲ್ಲಿ ಮಾತ್ರ ಮಾನವನ ಗುಣ, ಸಂಸ್ಕಾರಗಳು ಹುಲುಸಾಗಿ ಬೆಳೆಯುತ್ತವೆ. ಕಷ್ಟಪಡುವವನಲ್ಲಿ ನಿಜವಾದ ಗುಣ, ಸಂಸ್ಕಾರಗಳು ಎಷ್ಟೆಂದರೂ ಹೆಚ್ಚು.

0 0 0

ಮನುಷ್ಯನು ಮನುಷ್ಯನಾಗುವುದು ಅನುಕೂಲತೆಗಳಿಂದಲ್ಲ; ಅನಾನುಕೂಲತೆಗಳಿಂದ. ಇತರರ ಸೇವೆಯಿಂದಲ್ಲ; ತನ್ನ ಪರಿಶ್ರಮದಿಂದ. ಇತರ ಮೆಚ್ಚುವಿಕೆಯಿಂದಲ್ಲ; ಚುಚ್ಚುವಿಕೆಯಿಂದ.

0 0 0

ನಿಜವಾದ ಘನತೆ ಅಧಿಕಾರ, ಸಂಪತ್ತು, ಸೌಂದರ್ಯಗಳಿಂದ ಹೆಚ್ಚುವುದೂ ಇಲ್ಲ; ಬಡವರ, ನಿರ್ಗತಿಕರ ಸಹವಾಸದಿಂದ ಕುಗ್ಗುವುದೂ ಇಲ್ಲ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (I = 50)

ರೂ. 1 [illegible] ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

NAVAYUGA 17—6—1965
Registered with the Registrar of News Papers for India under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೭-೬-೬೫ರಿಂದ ೨೩-೬-೬೫ರ ವರೆಗೆ

೧. ಮೇಷ

ಕರ್ತವ್ಯದಕ್ಷರೂ ಕಾರ್ಯಸಾಧಕರೂ ಆದ ನಿಮಗೆ ಸದ್ಯದ ದಿನಗಳು ಅನುಕೂಲವಾಗಿಯೇ ಇರುವವು. ಧನ ಜನ ಬೆಂಬಲವು ಸಾಕಷ್ಟಿರುವುದರಿಂದ ನಿಮ್ಮ ಸಂಕಲ್ಪಗಳೆಂದು ವಿಫಲವಾಗಲಾರವು. ಆದರೆ ನಿಮ್ಮ ಮನೋದೌರ್ಬಲ್ಯದಿಂದಾಗಿ ಆಪ್ತಜನರೊಳು ಕೆಲವೊಮ್ಮೆ ಅವಿಶ್ವಾಸ ಹುಟ್ಟಲಿದೆ. ಆತ್ಮಸಾಕ್ಷಿಗೆ ವಿರೋಧವಾದ ಕೃತಿಯನ್ನೆಸಗಿ ಕೊನೆಗೆ ಪಶ್ಚಾತ್ತಾಪ ಪಡುವಿರಿ. ವಾರಾದಿಯ 4 ದಿನಗಳು ಇಷ್ಟಸಾಧಕಗಳಾಗಿವೆ.

೨. ವೃಷಭ

ವಿಪಕ್ಷೀಯರ ಕಾಟವಧಿಕವಾಗುವುದರಿಂದ ನಿಮ್ಮ ಹೆಚ್ಚಿನ ವ್ಯವಹಾರಗಳು ಅರ್ಧದಲ್ಲಿ ತಡೆದು ನಿಲ್ಲಲಿವೆ. ದುಡ್ಡಿದ್ದವನೇ ದೊಡ್ಡಪ್ಪ ಎಂಬ ಗಾದೆಯ ಮಾತು ಇಂದು ನಿಮ್ಮ ಅನುಭವಕ್ಕೆ ಬರಲಿದೆ. ಕೆಲವೊಂದು ಕುಹಕಿ ಜನರ ವಂಚನೆಗೆ ಸಿಲುಕಿ ಇದ್ದ ಅಲ್ಪಸ್ವಲ್ಪ ಧನವನ್ನೂ ಕಳಕೊಳ್ಳಲಿರುವಿರಿ. ನೌಕರ ಜನರಿಗೂ ವ್ಯಾಪಾರೀವರ್ಗಕ್ಕೂ ಪ್ರಯತ್ನಕ್ಕೆ ತಕ್ಕ ಫಲ ದೊರೆಯಲಿದೆ. ಬಾಲ್ಯಮಿತ್ರರ ನೆರವು ಸಕಾಲದಲ್ಲಿ ದೊರೆವ ಕಾರಣ ದಿನಯಾಪನೆಯು ಹೆಚ್ಚಿನ ಕಷ್ಟಕರವಾಗದು. ತಾ. 19ರಿಂದ 23ರ ವರೆಗಿನ ದಿನಗಳಲ್ಲಿ ಮಿತ್ರರ ಸಮಾಗಮ ಧನಸುಖಗಳ ಪ್ರಾಪ್ತಿಯೂ ಇದೆ.

೩. ಮಿಥುನ

ಹೆರವರ ಮಾತಿಗೆ ನೀವೆಂದೂ ಕಿವಿಗೊಡಲಾರಿರಿ. ನಿಮ್ಮ ಮನಸ್ಸಿಗೆ ಸರಿದೋರಿದ ದಾರಿಯಲ್ಲಿ ಮುಂದರಿವಿರಿ. ಹೆಚ್ಚಿನಂಶ ನಿಮ್ಮ ಸಂಕಲ್ಪಗಳು ಸಿದ್ಧಿಸುವವು. ಹಣದ ಬಿಕ್ಕಟ್ಟು ನಿಮಗಿಂದು ಕಾಣಿಸಲಾರದು. ಚಿಕ್ಕಪುಟ್ಟ ಗೃಹಕಲಹ ಗುರುಹಿರಿಯರ ಕೂಡೆ ಮನಸ್ತಾಪಗಳೂ ಹುಟ್ಟಲಿವೆ. ಅನಿರೀಕ್ಷಿತ ಪ್ರವಾಸದಿಂದಾಗಿ ಆರೋಗ್ಯಕ್ಕೂ ಕೆಡುಕಿದೆ. ವಾರಾಂತ್ಯದ 3 ದಿನಗಳು ಅನುಕೂಲವಾಗಿದೆ.

೪. ಕರ್ಕಟ

ನಿಮ್ಮ ಅದೃಷ್ಟವಿಂದು ಸಾಕಷ್ಟು ಪ್ರಬಲವಾಗಿರುವುದರಿಂದ ವಿರೋಧಿಗಳ ಪೀಡೆಯು ನಿಮ್ಮ ಮೇಲೆ ಏನೂ ಪರಿಣಾಮ ಮಾಡಲಾರದು. ನಿಮ್ಮ ನಿರೀಕ್ಷೆಗಿಂತಲೂ ಹೆಚ್ಚಿನ ಧನಧಾನ್ಯಾದಿಗಳು ಲಭಿಸಲಿವೆ. ಆದರೊಂದು ವಿಚಾರ. ನೀವೆಷ್ಟೇ ದುಡಿದರೂ ದಿನಾಂತ್ಯದಲ್ಲಿ ಕೈ ಬರಿದಾಗಿಯೇ ಉಳಿಯುವದು. ಸಂಸಾರದಲ್ಲಿ ಪರಸ್ಪರ ಬಿಕ್ಕಟ್ಟು ತಲೆದೋರಲಿದೆ. ವ್ಯವಹಾರ ಚತುರರಾದ ನಿಮಗೆ ವಾರಾದಿಯ 2 ದಿನಗಳಲ್ಲಿ ಧನಮಾನಾದಿಗಳು ಲಭಿಸುವವು.

೫. ಸಿಂಹ

ಮನೋದೌರ್ಬಲ್ಯದಿಂದಾಗಿ ನೀನಿಂದು ಕಾರ್ಯರಂಗದಲ್ಲಿ ಮುಂದರಿಯಲು ಹಿಂಜರಿಯುವಿರಿ. ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕವೆಂಬ ಗಾದೆಯ ಮಾತನ್ನು ನೆನಪಿಗೆ ತನ್ನಿರಿ. ಅಂತೆಯೇ ಕೆಲಸದಲ್ಲಿ ಮುಂದೆ ಸಾಗಿರಿ. ನಿಮ್ಮ ಪರಿಶ್ರಮವು ಈಷತ್ತೂ ವಿಫಲವಾಗದು. ಗೃಹಸುಖ ಸಂಪನ್ನರಾದ ನಿಮಗೆ ದಿನಗಳು ಸುಗಮವಾಗಿ ಸಾಗಲಿವೆ. ಪ್ರವಾಸಕ್ಕೀ ಕಾಲವು ವಿಹಿತವಲ್ಲ. ಶ್ರಮಜೀವಿಗಳಿಗೆ ದಿನಯಾಪನೆಯು ದುಸ್ತರವಾದೀತು. ವಾರಾದಿಯ 4 ದಿನಗಳಲ್ಲಿ ನಿಮ್ಮ ಬಯಕೆಗಳು ಸಿದ್ಧಿಸುವವು.

೬. ಕನ್ಯಾ

ಮೇಲಿಂದ ಮೇಲೆ ವಿಘ್ನ ವಿಡ್ಡೂರಗಳು ಬಂದರೂ ನೀವು ಹಿಡಿದ ಕಾರ್ಯವನ್ನು ಮಧ್ಯದಲ್ಲಿ ಕೈ ಬಿಡಲಾರಿರಿ. ಪ್ರಬಲರಾದ ಶತ್ರುವರ್ಗವನ್ನೂ ಪರಾಭವಗೊಳಿಸುವ ಶಕ್ತಿಯುಕ್ತಿ ಸಂಪನ್ನರಾದ ನಿಮಗೆ ಸಮಾಜದಲ್ಲೂ ಸ್ಥಾನಮಾನಗಳು ಪ್ರಾಪ್ತವಾಗುವವು. ಸೋದರರೊಳಗಿನ ಕಲಹದಿಂದಲೂ ಹಣದ ಲೇವಾದೇವಿಯಿಂದುದ್ಭವಿಸಿದ ಮನಸ್ತಾಪದಿಂದಲೂ ಚಂಚಲಿತರಾದ ನಿಮಗೆ ವಾರಾಂತ್ಯದ 6 ದಿನಗಳಲ್ಲಿ ಸಾಕಷ್ಟು ಧನಮಾನಾದಿಗಳ ಲಾಭದಿಂದ ನೆಮ್ಮದಿ ದೊರಕೀತು.

೭. ತುಲಾ

ಜನವೃಂದವೇ ನಿಮಗಿಂದು ವಿರೋಧವಾಗಿ ನಿಂತರೂ ನಿಮ್ಮ ಛಲವನ್ನು ನೀವೆಂದೂ ಬಿಡಲಾರಿರಿ. ಲಾಭನಷ್ಟಗಳ ಕಡೆಗೆ ನಿಮ್ಮ ದೃಷ್ಟಿಯಿಲ್ಲವು. ಆದರೂ ಸದ್ಯ ನಿಮ್ಮ ಖರ್ಚುವೆಚ್ಚಗಳಿಗೆ ಸಾಕಾಗುವಷ್ಟು ಧನವನ್ನು ಸ್ವಯಂ ಸಂಗ್ರಹಿಸಲು ಶಕ್ತರಾದ ನಿಮಗೆ ಮಹಾಕ್ರೂರ ವಿರೋಧ ಕುಟುಂಬದಲ್ಲಿ ಕಲಹಗಳು ಪ್ರಾಪ್ತವಾಗಲಿವೆ. ಅನಿರೀಕ್ಷಿತವಾಗಿ ಸ್ತ್ರೀಧನ ಪ್ರಾಪ್ತಿಯ ಯೋಗವಿದೆ. ವಾರಾಂತ್ಯದ 2 ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿವೆ.

೮. ವೃಶ್ಚಿಕ

ಗಾಳಿಗೆದುರಾಗಿಟ್ಟ ದೀಪದಂತೆ ಇಂದು ನಿಮ್ಮ ಮನಸ್ಸು ಅತೀವ ಚಂಚಲವಾಗಲಿದೆ. ದೇಹದಲ್ಲಿ ಶಕ್ತಿ ಉತ್ಸಾಹಗಳು ಕಂಡುಬರಲಾರವು. ಆದರೂ ದೈವವು ನಿಮಗೆ ಸಾಕಷ್ಟು ಅನುಕೂಲವಾಗಿರುವುದರಿಂದ ನಿಮ್ಮ ಉದ್ಯೋಗ ವ್ಯವಹಾರಗಳಲ್ಲಿ ನಿರೀಕ್ಷಿಸಿದ ಫಲವು ದೊರೆಯಲಿದೆ. ಕುಶಲ ಕಲಾ ಜೀವಿಗಳಿಗೂ ಕಾರ್ಮಿಕವರ್ಗಕ್ಕೂ ಇಂದಿನ ದಿನಗಳು ಅನುಕೂಲವಾಗಿ ನಿಲ್ಲುವವು. ತಾ. 17, 18 ಅತೀವ ಪ್ರಶಸ್ತವಾಗಿವೆ.

೯. ಧನು

ಹೆಚ್ಚಿನ ನಿಮ್ಮ ಪರಿಶ್ರಮವು ನೀರಲ್ಲಿ ಗೈದ ಹೋಮದಂತೆ ವ್ಯರ್ಥವಾಗುವದು. ಕಫಪಿತ್ಥ ದೋಷದಿಂದ ಆರೋಗ್ಯಕ್ಕೆ ಹಾನಿಯಿದೆ. ದುಡಿದ ಅಲ್ಪಸ್ವಲ್ಪ ಧನವು ಅಪವ್ಯಯವಾಗುವುದರಿಂದಲೂ ಸಂಸಾರದಲ್ಲಿ ನೆಮ್ಮದಿಯಿಲ್ಲದಿರುವುದರಿಂದಲೂ ಸದಾ ಚಿಂತಾಕ್ರಾಂತರಾದ ನಿಮಗೆ ಸೋದರ ವರ್ಗದವರಿಂದ ಸಾಕಷ್ಟು ನೆರವು ದೊರೆಯಲಿದೆ. ಸ್ತ್ರೀಜನರಿಂದ ಅಪವಾದ ಕೇಳುವ ಸಂಭವವಿದೆ. ತಾ. 19, 20 ಇದ್ದುದರಲ್ಲುತ್ತಮ.

೧೦. ಮಕರ

ಪ್ರತೀಕಾರಾಸಕ್ತರಾದ ಶತ್ರುಜನರ ಕಾಟದಿಂದ ನಿಮ್ಮ ಹೆಚ್ಚಿನ ಬಯಕೆಗಳು ವಿಫಲವಾಗುವವು. ಮಾತನಾಡಿದವರೊಡನೆ ಕಲಹ ನಿಷ್ಠುರಗಳಾಗಲಿವೆ. ಸೇವಕವರ್ಗದವರಿಗೂ ಶ್ರಮಜೀವಿಗಳಿಗೂ ಮೇಲಿಂದ ಮೇಲೆ ಬರತಕ್ಕ ಆಕಸ್ಮಿಕ ಖರ್ಚುವೆಚ್ಚಗಳನ್ನು ನಿರ್ವಹಿಸಲು ಸಾಲ ಮಾಡಬೇಕಾದ ಪರಿಸ್ಥಿತಿ ಬರಲಿದೆ. ವಿದ್ಯೋಪಜೀವೀ ನೌಕರವರ್ಗದವರು ಅಧಿಕಾರಿಗಳ ಕೃಪೆಗೆ ಪಾತ್ರರಾಗಿ ಭಡತಿ ಹೊಂದುವರು. ಸಕಾಲದಲ್ಲಿ ಬಂಧುಗಳ ನೆರವು ಲಭಿಸುವುದರಿಂದ ದಿನಯಾಪನೆಯು ದುಸ್ತರವಾಗದು. ತಾ. 17, 18, 22, 23 ಈ ದಿನಗಳು ಅನುಕೂಲವಾಗಿವೆ.

೧೧. ಕುಂಭ

ದೈವಬಲ ವಿಮುಖರಾದ ನಿಮಗೆ ಸದ್ಯದ ದಿನಗಳು ಬಹಳ ಕಷ್ಟದಾಯಿಗಳಾಗಿ ಪರಿಣಮಿಸಲಿವೆ. ಸ್ವಯಂ ಅಸಮರ್ಥರಾದ ನಿಮಗೆ ಯಾರೊಬ್ಬರ ನೆರವೂ ಲಭಿಸಲಾರದು. ವಾತಪಿತ್ಥ ಪ್ರಕೋಪದಿಂದಾಗಿ ದೇಹಾರೋಗ್ಯ ಕೆಡುವದಲ್ಲದೆ ನಿಮ್ಮ ಧೈರ್ಯಸಾಹಸಗಳೂ ಮಾಯವಾಗಲಿವೆ. ಸಂಸಾರದಲ್ಲಿನ ಅವ್ಯವಸ್ಥೆಯಿಂದಾಗಿ ಸನ್ಯಾಸಿಯಾಗಿದ್ದರೆ ಎಷ್ಟೋ ಲೇಸಾಗಿತ್ತು ಎಂದು ಕೆಲವೊಮ್ಮೆ ಕಾಣಿಸಬಹುದು. ತಾ. 19, 20 ಈ ಎರಡು ದಿನಗಳು ಸ್ವಲ್ಪ ಆಶಾದಾಯಿಗಳಾಗಿವೆ.

೧೨. ಮೀನ

ಸ್ವಯಂ ಸಮರ್ಥರಾದ ನಿಮಗೆ ದೈವವೂ ಅನುಕೂಲವಾಗಿರುವುದರಿಂದ ನಿಮ್ಮ ಸಂಕಲ್ಪಗಳೆಂದು ಅನಾಯಾಸದಿಂದ ಕಾರ್ಯರೂಪಕ್ಕೆ ಬರಲಿವೆ. ನೆನೆದಂತೆ ಸಕಲ ಕಾರ್ಯಗಳೂ ಸಾಧಿಸುವವು. ತತ್ರಾಪಿ ರಾಜಕೀಯ ರಂಗದಲ್ಲೂ ಕೋರ್ಟು ಕಛೇರಿ ವ್ಯವಹಾರದಲ್ಲೂ ನೀವಿಂದು ವಿಜಯವಂ ಪಡೆವಿರಿ. ನೌಕರವರ್ಗದವರಿಗೆ ಸ್ಥಾನಪಲ್ಲಟವಾದೀತು. ನಿಶ್ಚಿಂತರೂ ನಿರಾಮಯರೂ ಆದ ನಿಮಗೆ ತಾ. 17, 18, 22, 23 ಈ ದಿನಗಳು ಸರ್ವಾಭೀಷ್ಟಪ್ರದಗಳಾಗಿವೆ.

ನಚಿಕೇತ'ರ
ಹೃದಯಸ್ಪರ್ಶಿ
ನವೀನ ಕಾದಂಬರಿಗಳು

ಹಸುರು ಹಂಸ
ಬೆಲೆ: ರೂ. ಎರಡು.

ಮಧು ಯಾತ್ರೆ
ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ
ಬೆಲೆ ರೂ. 2—00

ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ
LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾ| ಕೊರಡ್ಕಲ್ ವೆಂಕಟ್ರಾವ್, ಬೆಳ್ಮಣ್ಣು, ದ. ಕ.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆಂಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ.ಪ್ರತ್ಯೇಕ)
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?
ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರನಾಗುವಂತೆ ಮಾಡುವ ಕೃತಿ.
ಬೆಲೆ: 0-19 ಪೈಸೆ.
0.30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಖಂ ಪ್ರತಿಗಳಿಗೆ ವಿಚಾರಿಸಿರಿ :-
ನವಯುಗ ಪ್ರೆಸ್, ಉಡುಪಿ

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪] ಜೂನ್ ೨೪, ೬೫ [ಸಂಚಿಕೆ ೪೩



Phone No. 226
ಫೋನ್ ಸಂಖ್ಯೆ:

leading nationalist weekly

ನಕ್ಕು ನಗಿಸುವ ಏಕಾಂಕಿ

ಹಸುರು ಸೀರೆ

ಬರೆದವರು: ಶ್ರೀಮತಿ ರತ್ನಮ್ಮ ಸುಂದರ ರಾವ್.

ಪಾತ್ರಗಳು:

ರಾಮಣ್ಣ—ಮನೆಯ ಯಜಮಾನ.

ಶಾರದ—ರಾಮಣ್ಣನ ಪತ್ನಿ.

ರಘು—ಶಾರದಳ ತಮ್ಮ.

ರಮೇಶ—ರಘುವಿನ ಮಿತ್ರ.

●

(ಬಾಗಿಲು ತಟ್ಟುವ ಶಬ್ದ)

ಶಾರದ— ಬಂದೇ…ಬಂದೇ…. (ಬಾಗಿಲು ತೆರೆಯುವಳು) ಓಹೋ, ಬಾ ರಘು, ಬಾ. ಏನು ಸಮಾಚಾರ…. ಇದೇನು ನಿನ್ನ ವೇಷ …?

ರಘು— ಅಹುದು, ಇದೊಂದು ಹೊಸ ವೇಷ… ನಾನು ಬೆಳಗ್ಗೆ ತಾನೇ ಊರಿಗೆ ಬಂದೆ….

ಶಾರದ— ಊರಿಗೆ ಬಂದೇ… ಯಾವೂರಿಗೆ ಹೋಗಿದ್ಯೋ…

ರಘು— ನಮ್ಮ ಆಫೀಸ್ನೋರೆಲ್ಲಾ ಸೇರ್ಕೊಂಡು ಒಂದು ಸ್ಪೆಷಲ್ ಬಸ್ ಮಾಡ್ಕೊಂಡು ತಿರುಪತಿಗೆ ಹೋಗಿದ್ವಿ. ನನ್ನ ತಲೆಯೇ ಸಾಕ್ಷಿ ಇದೆಯಲ್ಲಾ…ತಿರುಪತಿಗೆ ಹೋಗಿ ಬಂದಿದ್ದಕ್ಕೆ…. ನಿನ್ನೆ ಬೆಳಗ್ಗೆ ಹೊರಟಿದ್ದು—ಇವತ್ತು ಬೆಳಗ್ಗೆ ವಾಪಸ್—ಹಾಗೇ ಸ್ವಲ್ಪ ಪ್ರಸಾದ ಕೊಟ್ಟು ಹೋಗೋಣಾಂತ ಬಂದೆ.

ಶಾರದ— ಓಹೋ ಹಾಗೋ……, ಹೋಗ್ಲಿ ಬಿಡು…. ನೀನು ಚಿಕ್ಕ ಹುಡುಗನಾಗಿದ್ದಾಗ ಅಮ್ಮ ಹರಕೆ ಕಟ್ಟಿಕೊಂಡಿದ್ಲು ತಿರುಪತಿಗೆ ಬಂದು ಮುಡಿ ಕೊಡ್ತೀನೇಂತ…. ನೀನೇ ಹೋಗಿ ಹರಕೆ ತೀರಿಸಿಕೊಂಡು ಬಂದಿದ್ದೀಯಲ್ಲಾ……. ಬಹಳ ಸಂತೋಷ…

ರಘು— ಮಕ್ಕಾಲು ಪಾಲು ಅದೇ ಉದ್ದೇಶ…. ನಾನು ತಿರುಪತಿಗೆ ಹೋಗಿದ್ದು…. ಹೂ—ತೊಗೊ ಪ್ರಸಾದ ತಂದಿದೀನಿ……. ಇದೇನಕ್ಕ…. ಯಾವುದೋ ಹೊಸ ಸೀರೆ ಬೇರೆ ನೋಡ್ತಾ ಕೂತಿದ್ಯಲ್ಲಾ… ಹೊಸದಾಗಿ ತಂದ್ರೇನು ನಮ್ಮ ಭಾವಯ್ಯ…

ಶಾರದ— ಅಯ್ಯೋ ನಂದಲ್ಲಪ್ಪ, ಎದುರು ಮನೆ ಸಾವಿತ್ರಮ್ಮಂದು. ನಿಮ್ಮ ಭಾವನಿಗೆ ತೋರಿಸಿ ಇದೇ ತರಹದ್ದು ನಾನೂ ಒಂದು ಸೀರೆ ತರಿಸಿಕೊಳ್ಳೋಣಾಂತ….

ರಘು— ಸಂತೋಷ ಅಕ್ಕ, ತರಿಸಿ ಉಡ್ಕೊ….

ಶಾರದ— ಆಶೆಯೇನೋ ಇದೆ. ಆದ್ರೆ ಅವರೆಲ್ಲಿ ತಂದುಕೊಡ್ತಾರೆ ಹೇಳು—ಹಸುರು ಸೀರೆ—ಅದ್ರಲ್ಲೂ—ಆ ಬಣ್ಣ ಕಂಡ್ರೇ ಅವರಿಗಾಗೋಲ್ಲ.

ರಘು— ಭಾವಯ್ಯ —ಯಾಕೆ ತಂದು ಕೊಡ್ಬೇಕು—? ಸೀರೆ ತೊಗೋತೀನೀಂತ ನೀನೇ ದುಡ್ಡು ಕೇಳಿ ಇಸ್ಕೊಂಡು ಬೇಕಾದಂತ ಸೀರೆ ತೊಗೋಬಹುದಲ್ಲಾ….?

ಶಾರದ— ಅವರು ಹಾಗೆಲ್ಲ ಕೊಡೊಲ್ಲ…. ಸೀರೆ ತೊಗೋಬೇಕಾದ್ರೆ—ತಾವು ಜೊತೇಲೇ ಬಂದು ಕೊಡಿಸ್ತಾರೆ….ಅದೂ ಹಸುರು ಬಣ್ಣದ್ದೊಂದು ಬಿಟ್ಟು….

ರಘು— ಇನ್ನೇನಾದ್ರೂ ನೆಪ ಹೇಳಿ ದುಡ್ಡು ವಸೂಲ್ಮಾಡು ಭಾವಯ್ಯನ ಹತ್ರ.

ಶಾರದ— ಅವರೇ ದುಡ್ಡು ಬಿಚ್ಚೋದು…. ಜಿಪುಣಾಗ್ರೇಸರ ಚಕ್ರವರ್ತಿಗಳು…. ಅದೇ ಯಾರಾದ್ರೂ ಸ್ವಾಮಿಗಳು ಬಂದ್ರಾಂದ್ರೆ… ಹೇಳೋಕ್ಕೇ ಸಾಧ್ಯವಿಲ್ಲ…. ಅವರ ಸಂಭ್ರಮ, ಅವರ ಪಾದ ಪೂಜೆ ಏನು… ಸಮಾರಾಧನೆ ಏನು…. ಕಾಣಿಕೆ ಏನು… ಲೆಕ್ಕವೇ ಇಲ್ಲ…

ರಘು— ಅದೇನು…. ಭಾವಯ್ಯನಿಗೆ ಹಸುರು ಸೀರೆ ಮೇಲೆ ಅಷ್ಟು ದ್ವೇಷ…?

ಶಾರದ—ಅದೇನು ಕಾರಣವೋ ನನಗಂತೂ ಗೊತ್ತಿಲ್ಲಪ್ಪ…ಹಸುರು ಸೀರೇಂದ್ರೆ ಉರಿದುರಿದು ಬೀಳ್ತಾರೆ. ನಿನಗೂ ಹೊಸ್ದಾಗಿ ಕೆಲ್ಸ ಸಿಕ್ಕಿದೆ—ಅದರ ಜ್ಞಾಪಕಾರ್ಥವಾಗಿ ನೀನಾದ್ರೂ ಒಂದು ಹಸುರು ಸೀರೆ ತೆಗೆಸಿಕೊಟ್ರೆ — ಸಂತೋಷವಾಗಿ ಉಟ್ಕೋತೇನೆ…

ರಘು— ನಾನು ತೆಗೆಸಿಕೋಡೋದು ಬೇರೆ ವಿಷಯ…ಅದಿರ್ಲಿ, ಮೊದಲ್ನೇ ತಿಂಗಳ ಸಂಬಳ ಬಂದ ಕೂಡಲೇ ಅಮ್ಮ ರಂಪಾಟ ಮಾಡಿ ತಿರುಪತಿಗೆ, ಕಳುಹಿಸಿಬಿಟ್ಲು, ಎರಡನೇ ತಿಂಗಳ ಸಂಬ್ಳ ಬಂದ ಕೂಡ್ಲೆ ನಿನಗೊಂದು —ಅಮ್ಮಂಗೊಂದು ಸೀರೆ—ನಾನು ಮೊದಲೇ ಲೆಕ್ಕ ಹಾಕಿಟ್ಕೊಂಡಿದೀನಕ್ಕಾ—ಅದು ಹಾಗಿರಲಿ, ಹಸುರು ಬಣ್ಣ ದ್ವೇಷಿಯಾದ ನಮ್ಮ ಭಾವಯ್ಯನಿಂದಲೇ—ನಿನಗೊಂದು ಹಸುರು ಸೀರೆ ಕೊಡಿಸ್ಬೇಕೂಂತ ನನ್ನ ಹಠ.

ಶಾರದ— ನಿನಗೆಲ್ಲೋ ಭ್ರಾಂತು…. ನಿಮ್ಮ ಭಾವಯ್ಯ ಬಡಪಟ್ಟಿಗೆ ಕಾಸು ಬಿಚ್ಚೋ ಆಸಾಮಿ ಅಲ್ಲ

ರಘು— ಮತ್ತೆ—ಆ ಸ್ವಾಮಿಗಳು ಬಂದ್ರು. ಈ ವಾರದ ಸ್ವಾಮಿಗಳು ಬಂದ್ರು. ಅವರ ಪಾದ ಪೂಜೆ. ಇವರ ಭಿಕ್ಷೆ. ಅಂತ ನೂರಾರೂ ರೂಪಾಯಿ. ಖರ್ಚು ಮಾಡ್ತಾರ್ತ್ನೆ!

ಶಾರದ — ಅದು ನಿಜ….ಸ್ವಾಮಿಗಳೂಂದ್ರೆ ಸಾಕು ಹಿಂದೆ ಮುಂದೆ ಆಲೋಚನೆಯೇ ಇಲ್ಲ…ಅವರು ಹೇಳಿದ ಹಾಗೆ ಕುಣಿಯೋಕೆ ಸಿದ್ಧ….ನಿಮ್ಮ ಭಾವಯ್ಯ.

ರಘು— ಹೌದೇನು? ಅಂತೂ ನಮ್ಮ ಭಾವಯ್ಯಂಗೆ ಸ್ವಾಮಿಗಳ ಹುಚ್ಚೇ ಹುಚ್ಚೂನ್ನು ಹಾಗಾದ್ರೆ…

ಶಾರದ— ಇನ್ನೇನು ಮತ್ತೆ…?

ರಘು— ನಾನಿನ್ನು ಹೊರಡ್ತೇನಕ್ಕಾ..

ಶಾರದ— ತಾಳೋ ರಘು ಒಂದ್ಲೋಟ ಕಾಫ್ರಿನಾದ್ರೂ ಕುಡ್ಕೊಂಡು ಹೋಗೋವಂತೆ. ಸೀರೆ ಕೊಡಿಸ್ತೀನೀಂತ ಆಸೆ ಬೇರೆ ತೋರ್ಸಿದ್ದಿ. ಏನೂ ಕೊಡದೆ ಸುಮ್ನೆ ಹ್ಯಾಗೆ ಕಳಿಸ್ಲೋದು ನಿನ್ನ?

ರಘು— ಕೊಡಮ್ಮ ಕೊಡು …ಕಾಫಿಗೇನು ನಾನು ಲೆಕ್ಕವೇ ಇಟ್ಟಿಲ್ಲ. ಮಧ್ಯೇ ಮಧ್ಯೇ ಕಾಫಿಂಸಮಾರ್ಪಯಾಮಿ ಅಂತ….

ಶಾರದ— ಹಿಡಿ….ತೊಗೋ….

ರಘು— ಹೂಂ……ನಾನಿನ್ನು ಹೊರಡ್ತೇನೆ….

○ ○ ○

ಎರಡನೆಯ ದೃಶ್ಯ

ರಾಮಣ್ಣ— ಶಾರದಾ….ಶಾರದಾ….

ಶಾರದ— ಇದೇನೂಂದ್ರೆ….ಮನೇಗೆ ಬರ್ತಾನೇ ಕೂಗ್ಕೊಂಡೇ ಬರ್ತೀದೀರಲ್ಲ? ಒಳಗೆ ಬಂದು ನಿಧಾನವಾಗಿ ಹೇಳಿ..ಏನು ವಿಷಯಾಂತ—ಅದ್ಯಾಕೆ ಅಷ್ಟು ಅವಸರ —ಧಾವಂತ….

ರಾಮಣ್ಣ— ಏನಿಲ್ಲ….ಆಫೀಸ್ನಿಂದ ಬರ್ತಾ ರಮೇಶ ಸಿಕ್ಕಿದ್ದ…

ಶಾರದ— ಯಾವ ರಮೇಶ…ನಮ್ಮ ರಘು ಸ್ನೇಹಿತನೇ…?

ರಾಮಣ್ಣ— ಹೂ; ಹೌದು, ಅವನೇ.

ಶಾರದ— ಏನಂತೆ ಸಮಾಚಾರ?

ರಾಮಣ್ಣ— ಅವರ ಮನೆಗೆ ಸ್ವಾಮಿಗಳನ್ನ ಕರೆಸಿದಾನಂತೆ…

ಶಾರದ— ಏನು ರಮೇಶನ ಮನೆಗೇ!

ರಾಮಣ್ಣ— ಹೂ ಹೌದು, ಈಗೇನ್ಮಾಡೋದು?

ಶಾರದ— ಅದಕ್ಕೇನ್ಮಾಡೋದೂಂತ ಗೊತ್ತೇ ಇದೆ. ನಮ್ಮ ಮನೆಗೂ ಕರೆಸಿ, ಪಾದ ಪೂಜೆ ಮಾಡಿ, ಅದಕ್ಕಾಗಿ ಅಷ್ಟು ಯೋಚನೆ ನಾನೊಬ್ಬ ಇದೀನಲ್ಲ..ನೀವು ಹೇಳ್ದಾಗೆ ಕುಣ್ಕೋಕ್ಕೆ.

ರಾಮಣ್ಣ— ನಾನು ಹೇಳ್ದ ಹಾಗೆ ನೀನು ಕುಣೀತಿ—ಅದು ಗೊತ್ತು—ಈಗ ಅದಲ್ಲ ಪ್ರಶ್ನೆ….

ಶಾರದ— ಮತ್ತಿನ್ನೇನು….ಭಿಕ್ಷೆ ಇಟ್ಕೋತೀರೇನು? ಕರೆಸಿ—ನಾನೂ ಕೈಲಾಗೋ ವರ್ಗೂ ದುಡೀತೀನಿ

ರಾಮಣ್ಣ— ಅದ್ಯಾಕೆ ನಿನ್ಗೆ ಸ್ವಾಮಿಗಳೂಂದ್ರೆ ಅಷ್ಟು ತಾತ್ಸಾರಾಂತ? ಮಾಡೊ ಕೆಲ್ಸ ಮಾಡ್ತಿ. ಕಷ್ಟಪಟ್ಟು ದುಡೀತಿ—ಹೀಗೆ ಬೇಜಾರು ಮಾಡ್ಕೊಳ್ಳೋದು ಯಾಕೆ? ಮಾಡೋ ಕೆಲಸ ಸಂತೋಷದಿಂದ ಮಾಡಿದ್ರೆ ಸಾರ್ಥಕ—ಅದಕ್ಕೆ ತಕ್ಕ ಫಲವೂ ದೊರೆಯುತ್ತೆ.

ಶಾರದ— ಫಲವೇ? ದೊರೆಯುತ್ತೆ ಫಲ. ಇದುವರೆಗೂ ನಮ್ಮ ಮನೇಲಿ ಎಷ್ಟು ಜನ ಸ್ವಾಮಿಗಳಿಗೆ ಪಾದಪೂಜೆ ಆಯ್ತು? ಎಷ್ಟು ಸ್ವಾಮಿಗಳಿಗೆ ಭಿಕ್ಷೆಕ್ಕೆ ಏರ್ಪಾಡಾಗಿತ್ತು? ಆದ್ರೆ ನಾನು ಬಯಸಿದ ಫಲ ಒಂದೇ ಒಂದು ಹಸುರು ಸೀರೆ…. ಇದುವರೆಗೂ ಸಿಕ್ಕಿಲ್ಲ. ಅದ್ರಿಂದ ನಾನು ಹೇಳೋದು ಕೇಳಿ. ಇನ್ನು ಮೇಲೆ ನಮ್ಮ ಮನೆಗೆ ಯಾವ ಸ್ವಾಮಿಗಳ್ನೂ ಕರೆಸಬೇಡಿ. ನಾನು ಖಂಡಿತ ಆ ಜವಾಬ್ದಾರಿ ತೊಗೋಳೊಲ್ಲ. ಬೇಕಾದ್ರೆ ನೀವೊಬ್ರೆ ಆ ಸ್ವಾಮಿಗಳು ಎಲ್ಲಿದ್ದಾರೋ ಅಲ್ಲೇ ಹೋಗಿ ಪಾದಪೂಜೆ—ಗೀದಪೂಜೆ ಎಲ್ಲಾ ಮಾಡ್ಕೊಳ್ಳಿ.

ರಾಮಣ್ಣ— ನಿನ್ನ ಬಿಟ್ಟು ನಾನೊಬ್ನೆ ಪಾದಪೂಜೆ ಮಾಡಿದ್ರೆ, ಫಲ ಸಿಕ್ಕುತ್ತೆ? ಅದಿರ್ಲಿ, ಈಗ ಏನಂತೀಯೋ ನನಗೆ ಬಂದಿರೋ ಯೋಚ್ನೆ….

ಶಾರದ— ಏನೂಂತ….ನಿಮಗೆ ಬಂದಿರೋ ಯೋಚ್ನೆ…

ರಾಮಣ್ಣ— ಆ ರಮೇಶನ ಮನೆಗೆ ಬಂದಿದಾರಲ್ಲ ಆ ಸ್ವಾಮಿಗಳು. ಅವರು ನಾಳೆ ಮಧ್ಯಾಹ್ನವೇ ಈ ಊರು ಬಿಟ್ಟು ಹೊರಟು ಬಿಡ್ತಾರಂತೆ…

ಶಾರದ— ಓ ಹಾಗೇನು? ಒಳ್ಳೇದೇ ಆಯ್ತು.

ರಾಮಣ್ಣ— ಅಯ್ಯೋ ಏನ್ಹೇಳ್ಲೀ ನಿನ್ನ ಮಂದ ಬುದ್ಧಿಗೆ? ಸ್ವಾಮಿಗಳು ಬಂದಿದಾರೆ. ಮನೆಗೆ ಕರೆದು ಪಾದ ಪೂಜೆ ಮಾಡ್ಲಿಲ್ಲಾಂತ ನಾನು ಯೋಚ್ನೆ ಮಾಡ್ತಿದ್ರೆ—ಅವರು ಹೊರಟು ಬಿಟ್ರೆ ಒಳ್ಳೇದೇ ಆಯ್ತೂಂತ ಹೇಳ್ತಾ ಇದ್ದೀಯಲ್ಲ….?

ಶಾರದ— ನಾನು ಆಗ್ಲೇ ಹೇಳ್ಲಿಲ್ವೆ? ಆ ರಮೇಶನ ಮನೆಗೇ ಹೋಗಿ ಪಾದ ಪೂಜೆ ಬೇಕಾದ್ರೆ ಮಾಡ್ಕೊಂಡು ಬನ್ನಿ ಮನೇಲಿ ಮಾತ್ರ ಸಾಧ್ಯವಿಲ್ಲ….

ರಾಮಣ್ಣ… ಅದೂ ವಿಚಾರಿಸಿಗೊಂಡು ಬಂದಾಯ್ತು— ನಾಳೆ ಬೆಳಗ್ಗೆ ನಾವೇ ಅಲ್ಲಿಗೆ ಹೋಗಿ ಪಾದ ಪೂಜೆ ಮಾಡ್ಕೊಂಡು ಬರೋದೂಂತ. ಈ ಸಲ ನಿನ್ನಿಷ್ಟದಂತೇ ಆಗಲಿ—ತಿಳೀತೇ? ಈ ಸ್ವಾಮಿಗಳ ಪದ್ಧತಿ……ಎಲ್ಲಾ ಹೊಸ ಮಾದರಿ.

ಶಾರದ— ಹೊಸ ಮಾದರಿ! ಅದೇನು ಹೇಳಿ?

ರಾಮಣ್ಣ—ಅದೇ ಹೇಳ್ತೀನಿ ಕೇಳು … ನಾವು ಇಲ್ಲಿಂದ ಹೋಗೋವಾಗ ಐದು ಕಾಯಿ, ಬಾಳೆಹಣ್ಣು, ಹೂವು, ಪೂಜೆ ಸಾಮಾನುಗಳು—ಇಷ್ಟನ್ನು ತೊಗೊಂಡು ಹೋಗೋದು. ಜೊತೆಗೆ ಒಂದು ಸೀರೆ, ಒಂದು ಜೊತೆ ಪಂಚೆ…

ಶಾರದ…. ಅಯ್ಯೋ, ಸ್ವಾಮಿಗಳಿಗ್ಯಾಕೇಂದ್ರೆ, ಸೀರೆ…ಪಂಚೆ…

ರಾಮಣ್ಣ— ಅವರಿಗಲ್ವೇ ಹುಚ್ಚಿ…. ಆ ಸೀರೆ ಪಂಚೇನ—ಅವರು ಕೈಯಿಂದ ಮುಟ್ಟಿ ಆಶೀರ್ವಾದ ಮಾಡಿ ಕೊಡ್ತಾರಂತೆ…. ನಾವು ಆ ಹೊಸ ಬಟ್ಟೆನ ಉಟ್ಟುಕೊಂಡೇ ಪಾದ ಪೂಜೆ ಮಾಡ್ಬೇಕಂತೆ.

ಶಾರದ— ಓ ಹಾಗೇನು?

ರಾಮಣ್ಣ— ಹೂ ಅವರೇ ಹೇಳಿದಾರೆ, ಮುತ್ತೈದೆ ಸಾವಿತ್ರೀಗೆ ಒಳ್ಳೆ ಹಸುರು

(ಹದಿನೈದನೇ ಪುಟ ನೋಡಿರಿ)

Phone No. 226.

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಠಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಭೂಯಾತ್ರೆಯ ಉಡುಪಿನಲ್ಲಿ ಗಗನಯಾತ್ರೆ ಮಾಡುವುದು ಸಾಧ್ಯವಿಲ್ಲ. ಆದುದರಿಂದಲೇ ಶರೀರ ರಕ್ಷಕವಾದ ವಿಚಿತ್ರ ವೇಶ ಭೂಷಣಗಳು ಗಗನಯಾತ್ರಿಗ ಅತ್ಯಗತ್ಯ. ಈ ಬಗೆಯ ಉಡುಪನ್ನು ತೊಟ್ಟ ಗಗನಯಾತ್ರಿ ಹೇಗೆ ಕಾಣುತ್ತಾನೆ!

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೪೩	೨೪—೬—೧೯೬೫	No. 43

ಆಹಾರ ಚದುರಂಗ

ಸಾಂಪತ್ತಿಕ ಪರಿಸ್ಥಿತಿಯು ಕಳವಳಕ್ಕೆ ಈಡಾಗುವಂತಿದ್ದರೂ ಅರ್ಥ ಶಾಖೆಯನ್ನು ಸಮರ್ಥ ರೀತಿಯಲ್ಲಿ ನಡೆಸಿಕೊಂಡು ಬಂದ ಮಾನ್ಯ ಬಿ. ಡಿ. ಜತ್ತಿಯವರು ಇದೀಗ ಆಹಾರ ಶಾಖೆಯನ್ನು ವಹಿಸಿಕೊಂಡಿದ್ದಾರೆ. ಆಹಾರ ಶಾಖೆಯು ಕೇಂದ್ರದಲ್ಲೂ ರಾಜ್ಯಗಳಲ್ಲೂ ಹಲವಾರು ಸಶಕ್ತರನ್ನು ಆಹುತಿ ತೆಗೆದುಕೊಂಡಿತ್ತು. ಭಾರತದಂತಹ ದೇಶದಲ್ಲಿ ಇದ ಸರ್ವೇ ಸಾಧಾರಣ ಮಾತು. ಇದನ್ನು ನಿರ್ವಹಿಸಲು ಅಶಕ್ತರಾಗಿ ಸೋತು ಹೋದ ಅನೇಕ ಹಿರಿಯರು ರಾಜ್ಯಪಾಲರಿಗೋ ಮತ್ತಿತರ ಪದವಿಗಳಿಗೋ ಶರಣು ಹೋಗಬೇಕಾಗಿ ಬಂದಿತ್ತು. ಮಾನ್ಯ ಎಂ. ವಿ. ಕೃಷ್ಣಪ್ಪನವರ ಸಲಹೆಯಂತೆ ಆಹಾರ ಮಂತ್ರಿ ಶಾಖೆಗೆ ಪೂರ್ಣಾವಧಿಯ ಮಂತ್ರಿಯನ್ನು ನೇಮಿಸುವ ಬಗ್ಗೆ ಮುಖ್ಯಮಂತ್ರಿಯವರು ಪರಿಶೀಲನೆ ನಡೆಸುತ್ತಿರುವಾಗಲೇ ಮಾನ್ಯ ಜತ್ತಿಯವರು ತನಗೆ ಕರೆ ಬಂದರೆ ತಾನು ಅದನ್ನು ವಹಿಸಲು ಹಿಂಜರಿಯುವುದಿಲ್ಲವೆಂದು ಗಂಟಾಘೋಷವಾಗಿಯೇ ನುಡಿದಿದ್ದರು. ಅದೇ ಸಮಯದಲ್ಲಿ ಇತರ ಅನೇಕರ ಹೆಸರುಗಳು ಮುಂದೆ ಬಂದರೂ ಜತ್ತಿಯವರ ಕೊರಳಿಗೆ ಈ ಹಾರ ಬಿತ್ತು. ಇದನ್ನವರು ಸಂತೋಷದಿಂದಲೇ ಧರಿಸಿಕೊಂಡಿದ್ದಾರೆ.

ಸರಕಾರಿ ವರದಿಗಳನ್ನು ನಂಬುವುದಾದರೆ ಆಹಾರದ ಉತ್ಪಾದನೆಯೇನೂ ರಾಜ್ಯದಲ್ಲಿ ಕಡಿಮೆಯಾಗಿರುವುದಿಲ್ಲ. ಆದರೆ, ಆದರ ಪೂರೈಕೆಯಲ್ಲಿರುವ ಲೋಪದೋಷಗಳೇ ಇಂದು ತಲೆದೋರಿರುವ ಅಭಾವ ಸ್ಥಿತಿಗೆ ಕಾರಣವೆನ್ನಬೇಕು. ಚಿಕ್ಕ ರೈತರಲ್ಲಿ ಮಿಗಿತೆಯಿರುವುದೂ ಅಲ್ಪ ಪ್ರಮಾಣದಲ್ಲಿ; ಹೀಗೆ ಅಲ್ಪ ಧಾನ್ಯದ ಉಳಿತಾಯಗಾರರೂ ತಮ್ಮತಮ್ಮ ಅವಶ್ಯಕತೆಗಳಿಗಾಗಿ ಆಗಲೇ ಅದನ್ನು ಮಾರಿಬಿಟ್ಟಿದ್ದಾರೆ. ದೊಡ್ಡ ರೈತರು, ಕುಳಗಳನ್ನು ದಾಸ್ತಾನು ಮಾಡುವಷ್ಟು ಸಾಂಪತ್ತಿಕ ಸ್ಥಿತಿ ಉತ್ತಮವಾಗಿರುವವರು ಮತ್ತೆ ಕೆಲವು ವರ್ತಕರು ಧಾನ್ಯಸಂಗ್ರಹ ಮಾಡಿಕೊಂಡಿದ್ದಾರೆ. ಇದು ನಂಬತಕ್ಕ ಮಾತು. ಹೀಗೆ ಸಂಗ್ರಹ ಮಾಡಿದವರಿಗೆ ಈ ಮೊದಲೇ ಸರಕಾರವು ಒಂದಲ್ಲ, ಹಲವು ಬಾರಿ ತೀವ್ರ ಎಚ್ಚರಿಕೆಯನ್ನೂ ಕೊಟ್ಟಿತ್ತು. ಆದರೆ, ಅದರಿಂದ ಪರಿಣಾಮಕಾರಿಯಾಗಲಿಲ್ಲ ಎಂಬುದು ಅನುಭವ ವೇದ್ಯ. ಇದೀಗ ಜತ್ತಿಯವರು ವರ್ತಕರ ಸಭೆಯಲ್ಲಿ ಮಾತನಾಡುತ್ತ ಇಂತಹುದೇ ಮತ್ತೊಂದು ಎಚ್ಚರಿಕೆ ನೀಡಿದ್ದಾರೆ. ತಮ್ಮಲ್ಲಿರುವ ಸಂಗ್ರಹದಲ್ಲಿ ಅರ್ಧಾಂಶವನ್ನು ರೈತರು ಸರಕಾರಕ್ಕೆ ಕೊಡಬೇಕು; ಇದಕ್ಕೆ ಹದಿನೈದು ದಿನ ವಾಯಿದೆ; ತಪ್ಪಿದರೆ, ಸಂಪೂರ್ಣ ಸಂಗ್ರಹವನ್ನೇ ವಶಪಡಿಸಿಕೊಳ್ಳಲಾಗುವುದು—ಇದೇ ಆ ಎಚ್ಚರಿಕೆ. ಸ್ವಾಭಾವಿಕವಾಗಿ ಇಂತಹ ಎಚ್ಚರಿಕೆಯು ಸಂಗ್ರಹಕಾರರಲ್ಲಿ ಜಾಗ್ರತ ಮನೋವೃತ್ತಿಯನ್ನು ಹುಟ್ಟಿಸಬೇಕು ಇದನ್ನು ನಾವು ನಿರೀಕ್ಷಿಸಬಹುದೆ?

ಸಂಗ್ರಹದ ಅರ್ಧಾಂಶವೆಂದರೆಷ್ಟು ಎಂಬುದರ ಸ್ಪಷ್ಟ ವಿವರಣೆಯಿಲ್ಲವಾದರೂ ತಮ್ಮ ಆವಶ್ಯಕತೆಗಿಂತ ಹೆಚ್ಚಿನದು ಎಂದು ತಿಳಿಯಬಹುದು. ಹೀಗಾದಲ್ಲಿ ಸಂಗ್ರಹಕಾರರಿಗೆ ಯಾವ ಬಗೆಯಲ್ಲಿಯೂ ಅನ್ಯಾಯವಾಗುವುದಿಲ್ಲ. ರೈತರು ಸರಕಾರಕ್ಕೆ ಧಾನ್ಯಗಳನ್ನು ಒದಗಿಸಿಕೊಟ್ಟರೆ ಮಾತ್ರ ಅದು ಜನತೆಗೆ ಪೂರೈಸಬಹುದು; ಇಲ್ಲದ ಆಹಾರವನ್ನು ಯಾರಾದರೂ ಹೇಗೆ ತಾನೇ ನೀಡಬಹುದು? ಆದುದರಿಂದ ಮಾನ್ಯ ಮಂತ್ರಿಯವರ ಈ ಎಚ್ಚರಿಕೆಯ ಕೋರಿಕೆಯನ್ನು ಮನ್ನಿಸಿ ಜನತೆಯ ಹೊಟ್ಟೆಯನ್ನು ತಣ್ಣಗಿರಿಸುವಲ್ಲಿ ಸಂಗ್ರಹಕಾರರು ಸಹಕರಿಸುವರೆಂದು ಆಶಿಸಬಹುದು. ಅದೇ ರೀತಿಯಲ್ಲಿ ವರ್ತಕ ವರ್ಗದವರ ಸಹಕಾರ ಸಮಸ್ಯಾ ಪರಿಹಾರದಲ್ಲಿ ಅನಗತ್ಯವೆಂದು ನಂಬಿದ ಜತ್ತಿಯವರ ನಂಬಿಕೆಯನ್ನು ಸಂಬಂಧಿಸಿದವರು ಈಡೇರಿಸುವುದು ಅವಶ್ಯವಿದೆ. ಧಾನ್ಯ ಸಂಗ್ರಹ ಮತ್ತು ವಿತರಣಾಕ್ರಮದಲ್ಲಿ ಲೋಪದೋಷಗಳು ತುಂಬಿರುವುದು ಅಭಾವಕ್ಕೆ ಕಾರಣವೆಂಬುದನ್ನು ಮನಗಂಡು ಅದನ್ನು ಸರಿಪಡಿಸುವತ್ತ ಹೊಸ ಮಂತ್ರಿಗಳು ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕು. ಸರಕಾರಿ ಅಧಿಕಾರಿಗಳಲ್ಲಿ ಹಾಗೂ ನೌಕರ ವರ್ಗದಲ್ಲಿ ಹೆಚ್ಚುತ್ತಿರುವ ಅತೃಪ್ತಿ ಹಾಗೂ ಅಶಕ್ತತೆಗಳಿಂದಾಗಿ ಪ್ರತಿ ಕೆಲಸವೂ ಕುಂಟುತ್ತಲೇ ಸಾಗುತ್ತಿರುವುದನ್ನು ನಾವು ಕಾಣಬಹುದು. ಬುದ್ಧಿವಂತರನ್ನು ಮಾತ್ರ ಸರಕಾರಿ ನೌಕರಿಗೆ ಸೇರಿಸಿ, ಅವರಿಂದ ಸಮರ್ಥ ರೀತಿಯಲ್ಲಿ ಕಾರ್ಯ ಸಾಧಿಸುವ ಪರಿಪಾಠವನ್ನು ನಾವು ಯಾವಾಗಲೋ ಬಿಟ್ಟುಕೊಟ್ಟಿದ್ದೇವೆ. ಮೇಧಾವಿಗಳು ದವರು ಇಂತಹ ನೌಕರಿಗೆ ಬರುವುದನ್ನೇ ನಿಲ್ಲಿಸಿದ್ದಾರೆ. ಯೋಗ್ಯರಾದವರನ್ನು ಸರಕಾರಿ ನೌಕರಿಗೆ ಆಕರ್ಷಿಸುವ ಬಗ್ಗೆ ತೀವ್ರ ಕ್ರಮ ಕೈಗೊಳ್ಳದೆ ಹೋದರೆ, ಈಗಾಗಲೇ ಶಿಥಿಲವಾದ ಆಡಳಿತಯಂತ್ರ ಮತ್ತಷ್ಟು ಸಡಿಲಾಗಿ ಹೋದೀತು, ಹೋಗುತ್ತದೆ. ಯಂತ್ರವು ಸಂಪೂರ್ಣ ಕೆಟ್ಟ ಮೇಲೆ ತಲೆ ಹೊಡೆದುಕೊಳ್ಳುವುದರಿಂದ ಪ್ರಯೋಜನವಿಲ್ಲವಾದುದರಿಂದ ಈಗಿಂದೀಗಲೇ ಎದ್ದೇಳಬೇಕು.

ವಚನ ಸುಧೆ

ನ ಬಿಭೇತಿ ಕದಾಚನೇತಿ॥
(ತೈತ್ತಿರೀಯೋಪನಿಷತ್, ೨—೪)

O ಧರ್ಮಾತ್ಮನು ಹೀಗೆ ಎಂದೂ ಹೆದರುವುದಿಲ್ಲ.

OO ತನ್ನ ಧರ್ಮ ನಿಯಮಗಳಿಗೆ ಅನುಕೂಲವಾಗಿ ನಡೆಯುವವನು ಯಾರಿಗೂ ಹೆದರಬೇಕಾಗಿಲ್ಲ. ದುಷ್ಕಾರ್ಯ ನಿರತನಾದವನು ಸದಾ ಅಂಜುತ್ತಾನೆ. ಸತ್ಕಾರ್ಯ ಪ್ರವೃತ್ತನು ನಿರ್ಭಯನಿರುತ್ತಾನೆ. ಆದುದರಿಂದ ಪ್ರತಿಯೊಬ್ಬನೂ ಸತ್ಕಾರ್ಯ ನಿರತನಾಗಿ ನಿರ್ಭೀತನಾಗಿರಬೇಕು.

ತನ್ನ ಶಾಖೆಯಲ್ಲಿರುವ ಅಸ್ಥಮರ್ಥ ಅಧಿಕಾರಿಗಳನ್ನು ಬೇರೆ ಬೇರೆ ಶಾಖೆಗಳಿಗೆ ವರ್ಗಾಯಿಸಿ ದಕ್ಷರಾದವರನ್ನು ಮಾತ್ರವೇ ಇರಿಸಿಕೊಳ್ಳುವ ಇರಾದೆ ಜತ್ತಿಯವರದು. ಈ ಕ್ರಮದಿಂದ ಆಹಾರ ಶಾಖೆಯು ಕಾರ್ಯಕ್ಷಮತೆ ಹೆಚ್ಚಬಹುದೆಂದು ನಿರೀಕ್ಷಿಸಿದರೂ ಉಳಿದ ಶಾಖೆಗಳ ಪಾಡು ನಾಯಿಪಾಡಾಗಲಾರದೆ? ಆದರೆ, ಆಹಾರವು ಆವಶ್ಯಕ ಶಾಖೆ ಆದರಿಂದಾಗಿ ಚದುರಂಗವಾಡುವುದು ಎಂದಿಗೂ ತರವಲ್ಲ; ಈ ಒಂದು ಕಾರಣದಿಂದ ಜತ್ತಿಯವರ ನಿಯೋಜಿತ ಕ್ರಮವನ್ನು ನಾವು ಸ್ವಾಗತಿಸುತ್ತೇವೆ. ಜತೆಗೆ ಇಡಿಯ ಸರಕಾರದ ಯಂತ್ರದಲ್ಲಿಯೇ ಹೊಸ ಚಾಲನೆ ಉಂಟಾಗುವಂತೆ, ಅಧಿಕಾರಿಗಳಲ್ಲಿ, ನೌಕರರಲ್ಲಿ ತಾವು ಜನಸೇವಕರು ಎಂಬ ಭಾವನೆಯು ಹುಟ್ಟುವಂತೆ ಮಾಡಲು ಶಕ್ತಿಮೀರಿ ಪ್ರಯತ್ನಿಸಬೇಕೆಂದೂ ವಿನಂತಿಸುತ್ತೇವೆ. ಒಳಿದ ಒಂದು ಆಹಾರ ಮಂತ್ರಿ ಶಾಖೆಯನ್ನು ಯಶಸ್ವಿಯಾಗಿ ನಿರ್ವಹಿಸಲ್ಲ ಸಾಮರ್ಥ್ಯ ಜತ್ತಿಯವರಲ್ಲಿದೆ; ಪರಿಸ್ಥಿತಿಯನ್ನು ಇವರು ತಿಳಿಗೊಳಿಸಿದರೆಂದರೆ, ಜತ್ತಿಯವರ ಟೊಪ್ಪಿಗೆಗೆ ನವಿಲುಗರಿಯೇರಿಸಿದಂತಾಗುವುದು.

ಇದಾವ ಸಿಡಿಲು?

ಇದೇ ಸಮಯದಲ್ಲಿ ಅಲ್ಜೀರ್ಸ್‌ನಲ್ಲಿ ಆಫ್ರೋ ಏಶ್ಯಾ ರಾಷ್ಟ್ರಗಳ ಸಮ್ಮೇಳನವೊಂದು ಜರುಗಲಿದೆ. ಇದರಲ್ಲಿ ಭಾಗವಹಿಸುವ ದೇಶಗಳ ಸಿದ್ಧತೆಯೂ ತಯಾರಾಗುತ್ತಿದೆ. ಬೇರೆ ಬೇರೆ ದೇಶಗಳನ್ನು ಪ್ರತಿನಿಧಿಸುವ ನಿಯೋಗದ ಸದಸ್ಯರ ಯಾದಿ ಸಿದ್ಧವಾಗಿ, ಇನ್ನೇನು ಅವರು ಹೊರಡಲಿದ್ದರು. ಆದರೆ, ತಾ. ೧೯ರಲ್ಲಿ ಅಲ್ಜೀರ್ಸ್‌ನಲ್ಲಾದ ಸೈನಿಕ ಕ್ರಾಂತಿಯು ದಿಸೆಯಿಂದಾಗಿ ಹೊರಟವರೂ ತುಸು ನಿಧಾನ ಮಾಡ ತೊಡಗಿದ್ದಾರೆ.

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ

"ಸಹಕಾರಿ ಚಳವಳಿ ಬಹುಮುಖವಾಗಿ ಅಭಿವೃದ್ಧಿ ಹೊಂದಬೇಕಂತೆ ನೋಡಿ...."

'ಅದು ಸರಿ ಕಣೋ ಈಗ ಸಾಧಿಸಿರೋ ಅಭಿವೃದ್ಧಿಯಿಂದ ಬೆರಳೆಣಿಕೆಯ ಜನ ಮಾತ್ರ ಅಭಿವೃದ್ಧಿ ಹೊಂದಿದ್ದಾರೆ, ಉಳಿದವರೂ ಅಭಿವೃದ್ಧಿಯಾಗಬೇಕಾದರೆ, ಮುಖ ಮುಂಬಿ ವೃದ್ಧಿಯಾಗಲೇ ಬೇಕು ...'

ಗೇಹ ರಾಜ್ಯದಲ್ಲಿ

ಕರ್ಮ ಸಂಕರದ ಕೆನ್ನಾಲಗೆ

"ಹೌದೂಂದ್ರೆ...."

'ಹೌದು...."

"ಎಂಥದು?"

"ನನಗೇನು ಗೊತ್ತು?

"ಮತ್ತೆ ಹೌದು ಎಂದ್ರಲ್ಲಾ?"

'ಹೌದು...."

"ಅದೇ ಎಂಥದೂಂತ?"

"ಎಂಥದೂಂದ್ರೆ?"

'ಎಂಥದು?"

"ಅದು ನನಗೂ ಗೊತ್ತು ....'

"ಹೇಳಿ ಹಾಗಾದ್ರೆ...'

"ಏನು?'

"ನನಗೂ ಗೊತ್ತು ಅಂದ್ರಲ್ಲಾ?"

"ಹೌದು...'

"ಸಾಕು ಬಿಡೀಂದ್ರೆ, ಏನು ಕೇಳಿದ್ರೂ ಹೌದೂಂತ ತಲೆಯಾಡಿಸ್ತಾರೆ. ಕೇಳಿದ್ರೆ ಮಾತ್ರ...."

"ತಲೆಯಾಡಿಸೋದು ಯಾರೆ? ಯಾಕೆ ಆಡಿಸ್ತಾರೆ?"

'ಮತ್ತೆ ಹೌದೂಂದ್ರೆ ಅಂದ್ರೆ ಹೌದು ಅನ್ನೀರಲ್ಲಾ? ಅಲ್ವೇಂದ್ರೆ ಅಲ್ಲ ಅನ್ನುತ್ತೀರಾ?'

'ಮತ್ತೇನು ಹೇಳ್ಬೇಕು? ಅಜ್ಞೆಯಾಗಲಿ. ಹೌದೂಂದ್ರೆ ಅಲ್ಲ; ಅಲ್ಲಾಂದ್ರೆ ಹೌದು ಅನ್ಬೇಕೂಂತ ತಾನೇ ನೀನನ್ನೋದು? ಸರಿಯಾಯ್ತು ಬಿಡು. ಇನ್ಮುಂದೆ ಹಾಗೇ ಹೇಳ್ತೀನಿ..."

"ಅಲ್ರಿ ಇದೇನು ಒಂದೇ ಉಸ್ರಲ್ಲಿ ಏನೇನೆಲ್ಲಾ ಅಂದು ಬಿಟ್ರಲ್ಲಾ?"

"ಹೌದು ಕಣೇ, ಅಂದೇ ಬಿಟ್ಟೆ..."

"ಛೀ, ಹೋಗೀಂದ್ರೆ ಎಲ್ಲಾದ್ರೂ..."

'ಈ ಮಳೆ ಸುರೀತಿರೋವಾಗ ಹೋಗೋದಾದ್ರೂ ಎಲ್ಲಿಗೇಂತ? ಅದ್ರಮೇಲೆ...'

"ಮೇಲೂ ಇಲ್ಲ; ಕೆಳಗೂ ಇಲ್ಲ. ಮಳೆ ಸುರಿದ್ರೆ ಏನಂತೆ? ಕೊಡೆ ಇದೆಯಲ್ಲಾ....'

'ಇದೇನ್ನು. ಅದ್ರೆ ಅದೂನೂ ನಮ್ಮೂರಿನ ಕಾಂಕ್ರೀಟು ಮಾಡಿನ ಹಾಗೇ ನೀರನ್ನ ಹೀರಿ ಒಳಗಡೆ ಪ್ರೋಕ್ಷಣೆ ಮಾಡಿಸ್ತದೆ..."

"ಅಯ್ಯೋ, ಏನಂತೀರಿ? ಕಳೆದ ವರ್ಷ ಒಂಭತ್ತೂವರೆ ಕೊಟ್ಟು ತೊಗೊಂಡದ್ದು ಈಗ್ಲೇ ಇನ್ನೂ ವರ್ಷ ಒಂದು ದಾಟಿಲ್ಲ..'

"ಅದು ಸರಿಕಣೇ. ನಮ್ಮ ಕೈಗೆ ಬಂದು ವರ್ಷಾಂತಿಕವಾಗ್ಲಿಲ್ಲ. ಆದ್ರೂ...."

"ಆದ್ರೆ ಏನು? ಹೇಳಿ ಬಿಡಿ..."

"ಅಲ್ವೆ, ಅಂಗ್ಡಿಯಲ್ಲಿ ತಯಾರ್ಮಾಡಿ ಎಷ್ಟು ಮಳೆಗಾಲ ಸಂದಿತೋ ಯಾರಿಗೆ ಗೊತ್ತು?"

"ಅದು ಸರೀನ್ನಿ. ಒಂದೊಂದು ಕೊಡೆ ಯಾರೋ ಸಂಪ್ನೋನೇ ನಂಕೊಡೆಯ ವಿಷ್ಯ ಮರ್ತು ಕೋಗುತ್ತೇನ್ನುವಾಗ..."

'ಪಾಪ, ಸಾವಿರ ಕೊಡೆ ಯ.ಜಮಾನನ ಗತಿಯೇನಪ್ಪಂತ ಅಲ್ವೆ?'

"ಹ್ಞೂಂ. ಹಾಗೆಯೇ ಅನ್ನಿ. ಕೊಡೆ ಅನ್ನುತ್ಲೂ ನೆನಪಾಯ್ತು ನೋಡಿ, ನಮ್ಮ ದಿನೇ ಶೂ ಇವತ್ತು ಪಾಪ, ನನೆದುಕೊಂಡೇ ಬಂದು ಬಿಟ್ಟ......"

'ಅಯ್ಯೋ ದೇವರೆ, ಏಕೆ ಏನಾಯ್ತು? ಕೊಡೆ ಬಿಸಾಡಿ ಹೊಯ್ತೋ ಹೇಗೆ?'

'ಹಾಗೇನಿಲ್ಲ ಕಂಡ್ರಿ....'

'ಬದುಕಿದೆ ಸದ್ಯಕ್ಕೆ....'

'ಯಾಕೆ?'

'ಯಾಕಂದ್ರೆ?... ಸಾಯ್ಲಿಕ್ಕೆ ದಿನಾ ಬಲ್ಲಿಲ್ಲ, ಅದ್ರಿಂದ....ತಿಳಿಯಿತೆ?'

'ಅಯ್ಯೊ, ಯಾಕೆ ರೇಗಾಡ್ತೀರಾ?....'

'ಮತ್ತೆನ್ನು ಮಾಡ್ಬೇಕಾದ್ರೂ ಏನೂಂತ? ದಿನಾ ಬಾರ್ದೆ ಇರೋವಾಗ ಸಾಯೋದಾದ್ರೂ ಹೇಗೆ ಹೇಳು......'

'ಯಾರ್ರಿ ಹಾಗಂದವ್ರು?'

"ಮತ್ಯಾರು? ನೀನೇ ಯಾಕೆ ಬದುಕಿದ್ರೀಂತ ಕೇಳೋವಾಗ ಬೇರ್ಯಾರು ಯಾಕೆ ಕೇಳಬೇಕು? ಆದ್ರೆ ನೋಡು, ದಿನ ಕೂಡಿಬಾರದೆ ಯಾರೂ ಸಾಯೊಲ್ಲ......'

"ಖಂಡಿತಕ್ಕೂ?'

"ನೂರು ನೂರು ಬಾರಿಗೂ. ನೋಡು ಚಂದ್ರಹಾಸನ ಕತೆ ಗೊತ್ತಿಲ್ವೆ?"

"ಗೊತ್ತಿಲ್ದೆ ಏನಂತೆ? ಅವನನ್ನೇ ನೋಡಿ ಆ ದುಬುದ್ಧಿ ಅನೇಕ ಬಾರಿ ಕೊಲ್ಲೋಕೆ ಯತ್ನ ಮಾಡಿ ಸೋತದ್ದು..."

"ಸದ್ಯ ಅಷ್ಟಾದ್ರೂ ತಿಳೀತು ನೋಡು. ಯಾವ ಕಾರಣದಿಂದ ಆ ಚಂದ್ರಹಾಸನು ಬದುಕುಳಿದನೋ ಅದೇ ಕಾರಣದಿಂದ ನಾನೂನೂ...."

'ಅಲ್ರಿ, ಅವನನ್ನ ಕೊಲ್ಲೋಕೆ ತಂತ್ರ ಮಾಡಿದ, ಆಗ್ಲಿಲ್ಲ...'

"ಹೌದೇ, ಹಾಗೇ ನನ್ನನ್ನ ಕೊಲ್ಲಬೇಕೆಂದೂ ಪ್ರಯತ್ನ ಮಾಡಿದ್ರು; ಇನ್ನೂ ನೂ ಮಾಡ್ತಾನೇ ಇರ್‍ತಾರೆ...'

"ಯಾರ್ರಿ ಅಂಥವರು?"

'ಯಾರೂಂದ್ರೆ ನೀನು... ಮತ್ಯಾರು? ....'

"ಅಯ್ಯೋ... ಶಾಂತಂ ಪಾಪಂ...."

"ಯಾಕೆ? ಮೂರ್ಛೆ ತಪ್ಪಿಬಿಟ್ಟಿತೆ? ಇಲ್ಲ ಕಣೇ... ಇಲ್ಲ...ಹೀಗೇ ಹೇಳ್ದೆ...."

'ಅಲ್ರಿ, ನೀವು ಹೀಗೆಲ್ಲಾ ಅನ್ನೋವಾಗ ನನ್ನ ಪ್ರಾಣ ಹೋಗುತ್ತೆ ...'

'ಬೇಡಕಣೇ... ಯಾಕೆ ಬದುಕಿದೇಂತ ನೀನು ಕೇಳಿದಾಗ ನಾನು ತಮಾಷೆಗೆ ಹಾಗಂದ್ರೆ....'

'ಹೌದು, ನೀವು ಮಾತ್ರ ತಮಾಷೆ ಮಾಡಬಹುದ; ನಾವು ಮಾತ್ರ ಮಾಡಬಾರದು....'

'ನೋಡು ಲೋಕದಲ್ಲಿ ಒಂದೊಂದು ಜಾತಿಗೆ ಒಂದೊಂದು ಉದ್ಯೋಗ....'

"ಅದೆಲ್ಲಾ ಕೃತ ತ್ರೇತಾಯುಗದಲ್ಲಾಯ್ತು ಈ ಕಲಿಯುಗದಲ್ಲಿ ಅದ್ಯಾವದೂ ಇಲ್ಲ...'

'ಇದೆಯಪ್ಪ, ಇದೆ, ನೋಡು ಹೇಳ್ತೀನೆ?"

"ನೋಡೋದೇನನ್ನ? ಕೇಳ್ತೀನೆ....'

"ಹ್ಞೂಂ, ಹಾಗೇ ಮಾಡು...."

"ಹರಿಯುವ ನೀರಿಗೆ ದೊಡ್ಡೆರಾಯನ ಅಪ್ಪಣೆಯಾಕೆ?'

"ಅಲ್ವೆ, ನೀರು ಹರಿಯುತ್ತೇಂತ ಹೇಗೆ ಗೊತ್ತಾಗ್ಬೇಕೂಂತ?"

'ಅದಿರ್ಲಿ ಆಚೆ..."

"ಇರ್ಲಿ ಇರ್ಲಿ. ಯಾರು ಬೇಡಾಂತಾರೆ!"

"ಮತ್ತೆ ಶುರು ಮಾಡಿದ್ರಲ್ಲಾ ತಮಾಷೇನ....'

'ಎಲ್ಲಿ ತಮಾಷೆ? ನೀನು ಏನೋ ಅಂದಿ; ನಾನೂ ಅಂದೇನ್ನು...."

'ಏನೋ ಹೇಳ್ತೀನೆ ಅಂದ್ರಲ್ಲಾ...."

"ಅಂದದ್ದು ಹೌದು; ಆದ್ರೆ ಏನೂಂತ ನೆನಪಿಲ್ಲ ನೋಡು...."

"ಅದು ಯಾವಾಗ್ಲೂ ಹಾಗೇನೆ? ಅಲ್ಲಾ, ಹೊತ್ತಿಗೆ ಬಾರದ ಹೊನ್ನು ಮತ್ತೆಲ್ಲಿದ್ದರೇನು ಅಂತಾರಲ್ಲಾ?"

"ಅಂತಾರೆ, ಅಂತಾಗೆ. ಅನ್ನದೆ ಉಳಿದಾರೆ? ಆದರೆ, ಹೊತ್ತಲ್ಲದ ಹೊತ್ನಲ್ಲಿ ಬಂದ್ರೂ ಹೊನ್ನನ್ನ ಯಾರೂ ಬಂದು ಓಡಿಸೋದಿಲ್ಲ ಎಂಬುದನ್ನ ಮರೀಬೇಡ."

'ಆದಕ್ಕೆ ಏನು ಮಾಡೋದ? ಇಂದಿನ ಕಾಲವೇ ಹಾಗೆ. ಈಗಲಾದರೂ ಎಲ್ಲ ಕಲಿಕಾಲ....'

'ಹೌದಪ್ಪ, ನೀವೆಲ್ಲ ಹುಟ್ಟಿರೋದು ದ್ವಾಪರ ಯುಗದಲ್ಲಿ. ಒಳ್ಳೇ ಅತ್ತೆ ಮಾತಾಡಿದ ಹಾಗೆ ಅಂತ್ರಿಯಲ್ಲಾ...'

"ಯಾಕೆ?'

"ಕೇಳು. ಅತ್ತೆಯರು ಹುಟ್ಟಿದೋದು ಕೃತ ಯುಗದಲ್ಲ. ಅವರ ಸೊಸೆಯಂದಿರು ಜನ್ಮಕ್ಕೆ ಬರೋದು ಮಾತ್ರ ಕಲಿಯುಗದ ಕೊನೆಯ ಪಾದದಲ್ಲಿ...'

'ಹ್ಞೂಂ, ಅರ್ಥವಾಯ್ತು ಬಿಡಿ. ನಾನೂ ಹೇಳ್ತೀನೆ: ಗಂಡಂದಿರು ಹುಟ್ಟಿರೋದು ಕೃತದಲ್ಲಿ ಹೆಂಡಂದಿರು ಕಲಿಯಲ್ಲಿ..."

'ಅದೀಗ ಸರಿಯಾಯ್ತು....'

'ಏನು?'

'ಕೃತಕಲಿ...'

'ಅಂದರೆ...?'

'ಕೃತಕಲಿ ಎಂದರೆ, ಕೃತವನ್ನು ಕಲಿ ಎಂದೊಂದು ಅರ್ಥ. ಅಂದರೆ ಕೃತವೂಡುವುದನ್ನು ಕಲಿ. ಕೆಲಸ ಮಾಡುವುದನು ಕಲಿ. ಸುಮ್ಮಸುಮ್ಮಗೆ ಹರಟೆಕೊಚ್ಚಿ ಹೊತ್ತು ಕಳೆಯಬೇಡ. ಕೆಲಸಮಾಡು; ಪರಿಶ್ರಮ ಮಾಡುವುದನ್ನು ಕಲಿತುಕೊಳ್ಳು; ದುಡಿಮೆಯೇ ದೇವರು...'

"ಮುಗಿಯಿತೆ? ಇನ್ನೇನಾದರೂ ಇದೆಯೇ'

'ಇಲ್ಲದೆ ಉಂಟೇ?"

'ಹೊರಡಲಿ ವ್ಯಾಖ್ಯಾನ ಹಾಗಾದ್ರೆ....

'ಅದುದರಿಂದ ಮೈಮುರಿದು ದುಡಿದು ಹೊಟ್ಟೆ ಹೊರೆದು ಕೊಳ್ಳು..."

'ಇದು ಒಂದರ್ಥ ಅಂದ್ರಿ. ಬೇರೆ....'

"ಆದೂ ಇದೆ. ಕೃತದಿಂದ ಕಲಿ. ಅಂದರೆ, ಹಿಂದೆ ಮಾಡಿದ ಅನುಭವದಿಂದ ಪಾಠ ಕಲಿತುಕೊಂಡು ಮುಂದುವರೆ..."

"ಬೇರೇನಾದರೂ...."

'ಕೃತಕ್ಕೆ ಕಲಿ.... ಯಾರಾದರೂ, ಅಪ್ಪ ಅಥವಾ ನಾವ, ಮಾಡಿಟ್ಟ ಗಂಟು ಇದ್ದರೆ, ಅದನ್ನು ಕರಗಿಸಿ ನೀರು ಮಾಡುವ ಮಹಾ ಮೇಧಾವಿ...."

"ಆ ಮೇಲೆ?"

"ಕೃತದ ಕಲಿ. ತಾನು ಮಾಡಿಟ್ಟದ್ದನ್ನು ತನಗಾಗದವರು ತಿನ್ನ ಬಂದರೆ, ಅವರಿಗೆ ನೀಡುವ ಆದರದ ಬಿರುದು....'

"ಮತ್ತೆ?"

"ಕೃತವಲ್ಲಿ ಕಲಿ...ಪಾಯಸದಲ್ಲಿ ಪಾಪಾಸು ಬಿದ್ದ ಹಾಗೆ....'

"ಇನ್ನೇನಾದರೂ?'

"ಕೃತದ ದೆಸೆಯಿಂದ ಕಲಿ. ಅಂದರೆ, ತಾನೂ ಹಾಕಿದ ಉರುಳಿಗೆ ತಾನೇ ತಪ್ಪಿ ಸಿಕ್ಕಿ ಬಿದ್ದು ಒದ್ದಾಡುವವ...'

'ಮುಂದೇನಾದರೂ?"

"ಕೃತದ ದೆಸೆಯಿಂದ ಕಲಿಯಾದವನು ಯಾರೋ ಅವನು—ದೈಹಿಕ ಪರಿಶ್ರಮದಿಂದ ಅಥವಾ ಪುರಾಕೃತ ಪುಣ್ಯಫಲದಿಂದ ಕಲಿಯೆನಿಸಿದವನು...."

"ಇನ್ನೂ ಬತ್ತಳಿಕೆಯಲ್ಲಿ ಇರಬಹುದೂನ್ನಿ...."

'ಅನ್ನಿ ಏಕೆ, ಇದೆ. ನೀನು ಕೇಳೋದೊಂದೇ ತಡ...."

"ಅಲ್ಲಿ ಈಗ ನಾನಂದದ್ದಕ್ಕೂ ನೀವಂದದ್ದಕ್ಕೂ ಸಂಬಂಧ?"

"ನನಗೂ ನಿನಗೂ ಇರುವಂತಹದ್ದೇ ......'

"ಅಂದ್ರೆ?"

"ಅಂದ್ರೆ ಏನು, ಗಂಡ ಮತ್ತು ಹೆಂಡಂದಿರು ಒಟ್ಟು ಸೇರುವುದೆಂದರೆ, ಹಾಗೇನೇ. ಒಂದೊಂದು ವ್ಯಾಖ್ಯಾನವೂ ಇದಕ್ಕೆ ಸರಿಹೊಂದುವುದು."

"ಅದು ಹಾಗಿರ್ಲಿ. ನೋಡಿ. ಏನೋ

(ಹದಿಮೂರನೇ ಪುಟ ನೋಡಿರಿ)

ಬಾಲಾಶ್ರಮದ ಹಾವಳಿಯ ಕತೆಯೇ?
ವೇಶ್ಯಾಪುತ್ರಿಯ ಮಾನಾಪಹಾರದ ಚಿತ್ರವೇ?
ಯಾವುದು?

ಸನ್ಯಾಸಿಯ ಸೋಗಿನಲ್ಲಿ!

ಸನ್ಯಾಸದ ಹೆಸರಿನಲ್ಲಿ ವಿನ್ಯಾಸವೇ?
ವೇಶ್ಯಾಪುತ್ರಿಯರಿಗೆ ನೀತಿಯ ಜೀವನ ನಡೆಸುವ ಹಕ್ಕಿಲ್ಲವೇ?
ಈ ಪ್ರಶ್ನೆಗಳಿಗೆ ತಕ್ಕ ಉತ್ತರ ಬೇಕೆಂದಿದ್ದರೆ

ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಇವರ
ಈ ವಿಷಾದಾಂತ ಕಾದಂಬರಿಯನ್ನೋದಿರಿ.
ಬೆಲೆ: 0—75 ಪೈಸೆ ಮಾತ್ರ. ಟ. ಖ. ಪ್ರತ್ಯೇಕ.

ಸಿಗುವ ಸ್ಥಳಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

ವಿ ವೇ ಚ ನೆ

ಓಂಕಾರ ಅಥವಾ ಪ್ರಣವ

ಮಾಡಿದವರು
ಶ್ರೀ ಉ. ಬೈ. ಭಾಸ್ಕರಾಚಾರ್ಯ.

"ಓಂ ತತ್‌ಸತ್" ಎಂಬ ತ್ರಿವಿಧ ನಿರ್ದೇಶಗಳಿಂದ ಪರಮಾತ್ಮನ, ಸರ್ವವ್ಯಾಪಿಯಾಗಿದ್ದಾನೆ. ಈ ತ್ರಿವಿಧ ನಿರ್ದೇಶಗಳಲ್ಲಿ 'ಓಂ' ಎಂಬುದು ಒಂದು ಗುಪ್ತ ಸಂಕೇತ. ಆದರಿಂದ ಯಾವ ಲೌಕಿಕ ಅರ್ಥವೂ ಉಪಲಬ್ಧವಾಗದು. ಆದುದರಿಂದ ಆ ಪರಮಾತ್ಮನ ಅದ್ವೈತ ಸ್ವರೂಪವನ್ನು ನಿರ್ದೇಶಿಸಲು ಇದೊಂದು ಅತ್ಯುತ್ತಮ ಚಿಹ್ನೆಯಾಗಿರುವುದು. ಈ ಕಾರಣ ಬ್ರಹ್ಮರ್ಷಿಗಳು ಓಂಕಾರವನ್ನು ಉಚ್ಚ ಸ್ವರದಲ್ಲಿ ಘೋಷಿಸುತ್ತಾ ಯಜ್ಞಯಾಗಾದಿ ಸರ್ವ ವೇದೋಕ್ತ ಕರ್ಮಗಳನ್ನು ಪ್ರಾರಂಭಿಸಿರುವರು. ತತ್ = ಅದು, ಸತ್ = ಸತ್ಯವು. ಆದದರಿಂದ ಓಂ = ಓಂಕಾರ + ತತ್ = ಅದು + ಸತ್ = ಸತ್ಯವು—ಎಂದು ಗ್ರಾಹ್ಯವಾಗುವುದು.

"ಓಂ" ಅಕ್ಷರವೇ ಎಲ್ಲ ವೇದಗಳ ಸಾರ. ಓಂಕಾರದ ಸ್ಪಷ್ಟೀಕರಣ ದೃಷ್ಟಿಯಿಂದಲೇ ಓಂಕಾರ ಮಂತ್ರವನ್ನು ಸ್ಮರಿಸಿ "ಶಾಂತಿ" ಶಬ್ದವನ್ನು ಮೂರಾವರ್ತಿ ಉಚ್ಚರಿಸುವ ಉದ್ದೇಶವಿರುತ್ತದೆ. 'ಓಂ' ಎಂಬುದು—ಅ + ಉ + ಮ್—ಎಂಬ ಮೂರು ಮಾತ್ರೆಗಳ ಸಮೂಹವು. ಅ = ಪೃಥ್ವಿ + ಉ = ಅಂತರಿಕ್ಷ + ಮ = ದ್ಯುಲೋಕ. ಈ ಮೂರು ಮಾತ್ರೆಗಳಿಗೆ ಭಿನ್ನಭಿನ್ನ ಅರ್ಥವಿರುವುದಾದರೂ, ಕೊನೆಗೆ ಅಕಾರದಿಂದ ಉತ್ಪತ್ತಿ, ಉಕಾರದಿಂದ ಸ್ಥಿತಿ, ಮಕಾರದಿಂದ ಉತ್ಕ್ರಾಂತಿ ಸಂಭವಿಸುತ್ತದೆ. "ಓಂ" ಎಂಬ ಶಬ್ದವು ಅ + ಉ + ಮ್—ಎಂಬ ಮೂರು ಮಾತ್ರೆಗಳ ಸಮೂಹವಾಗಿರುವುದಾದರೂ 'ಓಂ'ನಲ್ಲಿ ಅವಕ್ಕಿಂತ ಹೆಚ್ಚು ಅರ್ಥವಿದೆ. ಹಾಗೆಯೇ ಓಂಕಾರವು, ಸೃಷ್ಟಿ, ಸ್ಥಿತಿ, ಉತ್ಕ್ರಾಂತಿಗಳೆಂಬ ಮೂರು ಅವಸ್ಥೆಗಳಿಗೂ ಅತೀತವಾದುದು. ಓಂಕಾರವು ಶಬ್ದಮಾತ್ರವಾಗಿರುವುದಾದರೂ ಅದರ ಉಪಾಸನೆಯು ಪರಬ್ರಹ್ಮ ಪ್ರಾಪ್ತಿಗೆ ಸಾಧನ. ಓಂಕಾರವೇ ಪರಬ್ರಹ್ಮವು.

ಶ್ಲೋ|| ಓಮಿತ್ಯೇಕಂ ಪರಂ ಬ್ರಹ್ಮ|
ಸರ್ವ ತತ್ವೇಸು ಗ್ರಾಹಕಂ|
ಆಬ್ರಹ್ಮ ಸ್ತಂಭ ಪರ್ಯಂತಂ|
ಸರ್ವಾನು ಗ್ರಹಕಾರಕಂ||
(ಪದ್ಮಪುರಾಣ.)

ಓಂಕಾರ ಸಂಸ್ಕೃತ ಶಬ್ದವನ್ನು ಬರೆಯುವಾಗ ತಾರಕ, ದಂಡ, ಕುಂಡಲ, ಅರ್ಧ ಚಂದ್ರ, ಬಿಂದು—ಎಂಬ ಐದು ವಿಭಾಗಗಳನ್ನು ಕಾಣಬಹುದು.

ಶ್ಲೋ|| ಪ್ರಥಮಂ ತಾರಕಾ ಕಾರಂ|
ದ್ವಿತೀಯಂ ದಂಡಮುಚ್ಯತೇ||
ತೃತೀಯಂ ಕುಂಡಲಾಕಾರಂ|
ಚತುರ್ಥ ಮರ್ಧಚಂದ್ರಕಂ||
ಪಂಚಮಂ ಬಿಂದು ಸಂಯುಕ್ತಂ|
ಪ್ರಣವೇ ಬ್ರಹ್ಮಪಂಚಕಂ||
(ಪದ್ಮ ಪುರಾಣ.)

ಈ ಪ್ರಕಾರ, ತಾರಕಾಕಾರ, ದಂಡಾಕಾರ, ಕುಂಡಲಾಕಾರ, ಅರ್ಧಚಂದ್ರಾಕಾರ, ಬಿಂದು ಆಕಾರ—ಇವುಗಳ ಸಮೂಹವೇ ಪಂಚಬ್ರಹ್ಮ ಸಮೂಹವು. ಅದೇ ಪ್ರಣವವು—ಓಂಕಾರವು.

ಶ್ಲೋ|| ತಾರಕಂ ಸದ್ಯೋಜಾತಾಯ|
ವಾಮದೇವಾಯ ದಂಡಕಂ||
ಕುಂಡಲ್ಯಂ ತತ್ಪುರುಷಂ|
ಈಶಾನಂ ಚಾರ್ಧ ಚಂದ್ರಕಂ||
ಅಘೋರೇ ಭ್ಯೋ ಬಿಂದುಮಿತಿ|
ಪ್ರಣವಃ ಪಂಚ ವಕ್ತ್ರಕಃ (ಪದ್ಮ ಪು.)

ತಾರಕವೇ ಸದ್ಯೋಜಾತ, ದಂಡವೇ ವಾಮದೇವ, ಕುಂಡಲವೇ ತತ್ಪುರುಷ, ಅರ್ಧಚಂದ್ರವೇ ಈಶಾನ, ಬಿಂದುವೇ ಅಘೋರ—ಎಂಬ ಆ ಪರಬ್ರಹ್ಮನ ಪಂಚಮುಖಗಳು. ಇದೇ ಪ್ರಣವದ ವ್ಯಕ್ತ ಸ್ವರೂಪವು. "ಓಂ" ಶಬ್ದದ ಐದು ವಿಭಾಗಗಳು ಐದು ಪ್ರಕಾರವಾಗಿರುವುದಾದರೂ ಇವುಗಳ ಸಮಾವೇಶದಿಂದ ಒಂದು ವಿಶಿಷ್ಟ ಸ್ವರೂಪ ಜ್ಞಾನವು ಭಾಸವಾಗುತ್ತದೆ. ಅರ್ಥಾತ್ ಈ ಭಿನ್ನ ಭಿನ್ನ ವಿಭಾಗಗಳಿಗಿಂತ ಇವುಗಳ ಸಮಾವೇಶದಿಂದಾಗುವ "ಓಂ"ಕಾರವು-ಇವುಗಳಿಗೆ ಅತೀತವಾಗಿರುತ್ತದೆ. ಇದೇ ಸರ್ವತತ್ವೇಸು ಗ್ರಾಹಕ, ಸರ್ವಾನುಗ್ರಹಕಾರಕವಾದ ಅದ್ವಿತೀಯ—ಅದ್ವೈತ ವಸ್ತುವಾಗಿರುತ್ತದೆ. ಇದೇ ಸರ್ವ ಜಗತ್ತಿನ ಉತ್ಪತ್ತಿ ಸ್ಥಿತಿ, ಉತ್ಕ್ರಾಂತಿಗಳಿಗೆ ಕಾರಣ ಭೂತವು. ಆದುದರಿಂದ ಇದೇ ಪರಾತ್ಪರ ವಸ್ತು ಇದೇ ಪರಬ್ರಹ್ಮವು, ಇದೇ ಆತ್ಮವೂ, ಪ್ರಾಣವೂ, ಸರ್ವಸ್ವವೂ ಎಂದು ತಿಳಿಯಬೇಕು. ಇದರ ಉಪಾಸನೆಯಿಂದಲೇ ಸಚ್ಚಿದಾನಂದ ಪದವಿಯು ಪ್ರಾಪ್ತವಾಗಬಲ್ಲದು.

ಶ್ಲೋ|| ನಿರ್ಗುಣಂ ಸಗುಣಂ ಚೇತಿ|
ದ್ವಿವಿಧಂ ವಿಶ್ವಕರ್ಮಣಃ|
ಮೂರ್ತಿಬೇದಂ ಮಹದ್ಗೂಢಂ|
ಸರ್ವೇಷಾಂ ಸಂಶಯಾವಹಂ||
ರೂಪಂ ಭವತಿ ತತ್ಪ್ರಾಪ್ತೌ|
ಸಗುಣಂ ನಿರ್ಗುಣಾಯುತ||
(ಮೂಲಸ್ತಂಭ)

ಸರ್ವರಿಗೂ ಸಂಶಯ ಜನಕವಾದ ಆ ಪರಬ್ರಹ್ಮನ ವಿಶಿಷ್ಟವಾದ, ರಹಸ್ಯವಾದ ಮೂರ್ತಿಭೇದವು "ನಿರ್ಗುಣ—ಸಗುಣ" ಎಂಬ ಎರಡು ವಿಧವಾಗಿದೆ. ಆತನ ನಿರ್ಗುಣ ಸ್ವರೂಪದಿಂದ ಸಗುಣ (ಆಕಾರ ವಿಶಿಷ್ಟವಾದ) ಸ್ವರೂಪವು ಸಂಭವಿಸುತ್ತದೆ.

ಏಕದಾ ಆ ನಿರ್ಗುಣ ತತ್ವ ಸ್ವರೂಪಕ್ಕೆ "ಅಹಂ ಬಹುಸ್ಯಾಮಿ" ತಾನು ಬಹುವಾಗಬೇಕೆಂಬ ಇಚ್ಛೆಯುಂಟಾಗಿ ಪ್ರಪಂಚ ಸೃಷ್ಟ್ಯಾದಿಗಳಿಗೆ ಹೇತು ಭೂತವಾದ, ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನವೆಂಬ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ, ಊರ್ಧ್ವ ಮುಖಗಳು ಉದ್ಭವಿಸಿದುವು. ಆಗಲೇ ನಿರ್ಗುಣ ತತ್ವವು ಸಾಕಾರಗೊಂಡು ವಿರಾಟ್ಪುರುಷ ನೆನಸಿಕೊಂಡು, ಇದೇ ವಿಶ್ವಕರ್ಮ, ಬ್ರಹ್ಮಣಸ್ಪತಿ, ಜಗತ್ಸ್ರಷ್ಟಾ ಇತ್ಯಾದ್ಯನೇಕ ಅಭಿಧಾನಗಳಿಂದ ಪ್ರಸಿದ್ಧವಾಯಿತು. ಈತನೇ ಸೃಷ್ಟಿ ಕಾಲದಲ್ಲಿ ಬ್ರಹ್ಮನೆಂತಲೂ, ಸ್ಥಿತಿ ಕಾಲದಲ್ಲಿ ವಿಷ್ಣುವೆಂತಲೂ, ಉತ್ಕ್ರಾಂತಿ ಕಾಲದಲ್ಲಿ ರುದ್ರನೆಂತಲೂ ಕರೆಯಲ್ಪಡುವನು. ಕಲ್ಪಾಂತ್ಯದಲ್ಲಿ ಆ ವಿಶ್ವಕರ್ಮನು ತಾನೊಬ್ಬನೇ ಇರುತ್ತಾನೆ.

ಜಗತ್ಕರ್ತನಾದ ವಿಶ್ವಕರ್ಮನು ಜಗತ್ತನ್ನು ಉತ್ಪಾದನೆ ಮಾಡುವ ಇಚ್ಛೆಯಿಂದ ತನ್ನ ಶರೀರಾರ್ಧದಲ್ಲಿ ಶಕ್ತಿ ಸ್ವರೂಪವುಳ್ಳವನಾದನು. ಆ ಶಕ್ತಿಯು ಐದು ಬಗೆಯಾಗಿ—ಒಂದನೆಯು ಆದಿಶಕ್ತಿ, ಎರಡನೆಯು ಇಚ್ಛಾ ಶಕ್ತಿ, ಮೂರನೆಯು ಕ್ರಿಯಾಶಕ್ತಿ, ನಾಲ್ಕನೆಯು ಮಾಯಾ ಶಕ್ತಿ ಐದನೆಯು ಜ್ಞಾನಶಕ್ತಿ ಎಂಬುದಾಗಿ ಸದ್ಯೋಜಾತಾದಿ ಪಂಚಬ್ರಹ್ಮರಲ್ಲಿ ಕೂಡಿಕೊಂಡಿವೆ.

ಇಂಥ ವಿಶಿಷ್ಟ ಸ್ವರೂಪವನ್ನು ಶ್ವೇತಾಶ್ವತರೋಪನಿಷತ್ತು ಹೀಗೆ ವ್ಯಕ್ತಪಡಿಸಿದೆ:—

ಶ್ರು|| ತ್ವಂ ಸ್ತ್ರೀ ತ್ವಂಪು ಮಾನಸಿ|
ತ್ವಂ ಕುಮಾರ ಉತವಾ ಕುಮಾರೀ
ತ್ವಂ ಜೀರ್ಣೋ ದಂಡೇನವಂಚಸಿ|
ತ್ವಂ ಜಾತೋ ಭವಸಿ ವಿಶ್ವತೋಮುಖ||

ನೀನೇ ಹೆಂಗಸು, ನೀನೇ ಗಂಡಸು, ನೀನೇ ಕುಮಾರ, ನೀನೇ ಕುಮಾರಿ, ಕೋಲನ್ನು ಹಿಡಿದುಕೊಂಡು ತತ್ತರಿಸುತ್ತಾ ನಡೆಯುವ ಮುದುಕನೂ ನೀನೆ. ವಿವಿಧ ರೂಪಗಳನ್ನು ತಳೆದು ಕಾಣಿಸಿಕೊಳ್ಳುವಾತನೂ ನೀನೆ.

ವಿರಾಟ್ ವಿಶ್ವಕರ್ಮನ ಮೂಲ ಪ್ರಕೃತಿಯೆಂದೆನಿಸುವ ಶಕ್ತಿಯನ್ನು ಕಂಡಾಗಲೇ ವ್ಯವಹಾರ ಸ್ವರೂಪೀ ಕಾಲ ಕರ್ಮಗಳೂ, ಸತ್ವ ರಜಸ್ತಮೋ ಗುಣಗಳೂ ಉಂಟಾಗಿ ಅವು ಪಂಚೀಕೃತವಾಗಿ ಸೃಷ್ಟಿ ಸಾಧನಕ್ಕೆ ಕಾರಣವಾದವು. ಇವನ್ನು ಪಂಚ ಬ್ರಹ್ಮೋಪನಿಷತ್ತು ಈ ಕೆಳಗಿನಂತೆ ವ್ಯಕ್ತಪಡಿಸಿಯದೆ:—

ವಿರಾಟ್ ವಿಶ್ವಕರ್ಮ| ಸ್ವರಾಟ್
ವಿಶ್ವಕರ್ಮ| ಸಾಮ್ರಾಟ್ ವಿಶ್ವಕರ್ಮ

ಇತ್ಯಾದಿ ಶ್ರುತಿವಾಕ್ಯಾನುಸಾರವಾಗಿ ಪರಬ್ರಹ್ಮ ವಿಶ್ವಕರ್ಮನಿಂದಲೇ ಸರ್ವದೇವತೆಗಳೂ, ಗಂಧರ್ವಾದಿಗಳೂ, ಸಂಪೂರ್ಣಾಕಾಶವೂ ಆಕಾಶದಿಂದ ವಾಯುವೂ, ವಾಯುವಿನಿಂದ, ಅಗ್ನಿಯೂ ಅಗ್ನಿಯಿಂದ ಜಲವೂ, ಜಲದಿಂದ ಪೃಥ್ವಿಯೂ, ಪೃಥ್ವಿಯಿಂದ ಔಷಧಿಗಳೂ, ಔಷಧಿಯಿಂದ ಬೀಜವೂ, ಬೀಜದಿಂದ ಅಖಿಲ ಸಸ್ಯಗಳೂ,

(ಹನ್ನೆರಡನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	... ...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ

0.30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಿಯಾಯ್ತಿ ಪ್ರತಿಗಳಿಗೆ ವಿಚಾರಿಸಿರಿ:.

ನವಯುಗ ಪ್ರೆಸ್, ಉಡುಪಿ

ನಮ್ಮ ನಾಯಕರ ಮನೋವೃತ್ತಿ

ಮೇನಕೆ ಬೇಕು – ಮಗು ಬೇಡ

ಬರೆದವರು: ಶ್ರೀ ಶಿವಶಂಕರ.

- ಮುನಿಪುಂಗವ ವಿಶ್ವಾಮಿತ್ರರು ಮೇನಕೆಯ ಮೋಹಜಾಲದಲ್ಲಿ ಸಿಕ್ಕಿ ಬಿದ್ದರು. ಆಕೆಯನ್ನು ಬಿಟ್ಟಿರಲು ಅವರಿಂದಾಗುತ್ತಿರಲಿಲ್ಲ. ಆದರೆ ಆಕೆ ಮಗುವಿಗೆ ಜನ್ಮವಿತ್ತೊಡನೆ ಅವರು ಕಣ್ಣು ಮುಚ್ಚಿಕೊಂಡರು..........ಇಂದೂ ಅಲ್ಲಲ್ಲಿ ಇಂತಹ ಚಿತ್ರಗಳನ್ನು ಕಾಣಬಹುದು.

ನಮಗೆ ಸುಖ—ಆನಂದ, ಭೋಗ ಎಲ್ಲಾ ಬೇಕು. ಆದರೆ ಅದರ ಫಲ ಮಾತ್ರ ನಮಗೆ ಬೇಕಾಗಿರುವುದಿಲ್ಲ. ಇದು ಕುಟುಂಬ 'ನಿಯಂತ್ರಣ'ದ ಹೆಸರಿನ ಮರೆಯಲ್ಲಿ ಭೋಗ ಮಾರ್ಗದ ಕಂಟಕಗಳನ್ನು ತೊಡೆದು, ಹಾಕುತ್ತಿರುವವರಿಗಾಗಿ ಸೂಚಿಸಿರುವದಲ್ಲ—ನಮ್ಮ ರಾಜಕೀಯಸ್ಥರಿಗಾಗಿ ಇದೆ.

ಹಿಂದಿಗಿಂತಲೂ ಇಂದು ಅತ್ಯುತ್ಸಾಹದಿಂದ ರಕ್ಷಣಾ ಮಂತ್ರಿ ಸ್ಥಾನದಲ್ಲಿರುವವರು ಛತ್ರಪತಿ ಶಿವಾಜಿ ಮಹಾರಾಜಾ, ಮಹಾರಾಣಾ ಪ್ರತಾಪಸಿಂಹ ಮುಂತಾದ ಅತ್ಯುತ್ತಮ ರಾಷ್ಟ್ರೀಯ ವೀರರ ಅಥವಾ ಪುರುಷಸಿಂಹರ ಜನ್ಮದಿನೋತ್ಸವದಲ್ಲಿ ಭಾಗವಹಿಸಿದ್ದಾರೆ; ಅಲ್ಲದೇ, ಆಕ್ರಮಣಗಾರರನ್ನು ಹೊಡೆದಟ್ಟಲು ಶಕ್ತಿಯನ್ನು ಪಯೋಗಿಸಲೂ ಹಿಂಜರಿಯುವುದಿಲ್ಲವೆಂದು ಘೋಷಿಸಿದ್ದಾರೆ. ಹೆಚ್ಚಾಗಿ ಬೊಗಳುವ ನಾಯಿ ಕಚ್ಚುವುದಿಲ್ಲವಂತೆ, ಕಚ್ಚುವ ಕುನ್ನಿ ಬೊಗಳುವುದಿಲ್ಲವಂತೆ. ಶ್ರೀ ಯಶವಂತ ಚೌಹಾನರ ಘೋಷಣೆ ಈ ಗಾದೆಮಾತಿನಂತಾಗದಿದ್ದರೆ ಸಾಕು. ಕೈಲಾಗದ ಚಿಕ್ಕ ಹುಡುಗ-ಹುಡುಗಿಯರೂ ಹಾಗೆ ಹೇಳುವದುಂಟು. ಬಲಶಾಲಿಯೂ ತುಂಟಲಮಾರಿ ಅದೇನಾದರೂ ಬೈದಲ್ಲಿ 'ಇನ್ನೊಮ್ಮೆ ಬೈದರೆ ಜಾಗ್ರತೆ'ನೋಡೆನ್ನುವರು. ಅವನು ಇನ್ನೊಮ್ಮೆ ಹೇಳುತ್ತ ಮುಂದೆ ಬಂದಲ್ಲಿ"ಬೈ ನಿನ್ನಷ್ಟಕ್ಕೆನೇ ಬೈ, ಆದರೆ ಮೈಗಿಯ ಮುಟ್ಟಿದರೆ ಜೋಕೆ" ಎನ್ನುವರು. ಅವನು ಮೈ ಮುಟ್ಟುವದರೊಟ್ಟಿಗೆ ಚೆನ್ನಾಗಿ ಬಾರಿಸಿಯೇ ಬಿಡುತ್ತಾನೆ. ಆಗ "ಇನ್ನೊಮ್ಮೆ ಹೊಡೆದರೆ ತೀರಿತು, ನಿನ್ನನ್ನು ಮಣ್ಣುಮುಕ್ಕಿಸುತ್ತೇನೆ"ನ್ನುವರು. ಅವನು ಇನ್ನು ಒಮ್ಮೆ ಅಲ್ಲ. ಹಲವಾರು ಬಾರಿ ಬಾರಿಸಿದರೂ ಕೈಲಾಗದವನು ಹಾಗೆಯೇ ರೇಗಳನ್ನು ಹೇಳುತ್ತಿರುತ್ತಾನೆ. ನಮ್ಮ ರಕ್ಷಣಾಮಂತ್ರಿಯವರ ಮಾತು ಅಂತಹ ಮಕ್ಕಳ ಮಾತಾಗದಿರಲಿ.

ಅದೇಲ್ಲಿ ಎಲ್ಲಾ ತಪ್ಪು ಆ ಯಶವಂತರದ್ದೇ ಎನ್ನಲು ಸಾಧ್ಯಇರುವುದಿಲ್ಲ. ಶ್ರೀ ಕೃಷ್ಣಮೆನನರು ರಕ್ಷಣಾಮಂತ್ರಿಯವರಾಗಿದ್ದಾಗಲೇ ಚೈನದಿಂದ ಭಾರೀ ಆಕ್ರಮಣ ನಡೆದಿತ್ತು. ಅದಕ್ಕಿಂತಲೂ ಹಿಂದೆಯೇ ಕಾಶ್ಮೀರದ ಮೇಲೆ ಆಕ್ರಮಣ ನಡೆದಿತ್ತು. ಇಂದು ಅದೇ ರೋಗ ಉಲ್ಬಣಿಸಿದೆ. ಅದಕ್ಕೆ ಈಗವಾದರೂ ಸರಿಯಾದ ಔಷಧಿಯನ್ನು ಕೊಡದಿದ್ದಲ್ಲಿ ಮತ್ತೆ ಅತ್ತೆಸೂ ಪ್ರಯೋಜನ ಇರುವದಿಲ್ಲ.

ಕಮ್ಯೂನಿಸ್ಟ್ ಚೈನಾ ಆಕ್ರಮಣ ನಡೆಸಿದಾಗ ಹಾಗೂ ಪಾಕಿಸ್ಥಾನ ಪ್ರೇತಕೃತ ನಡೆಸಿದಾಗ ಅವೆಲ್ಲಾ ಭಾರತ ಸರಕಾರಕ್ಕೆ ಗೊತ್ತಿಲ್ಲವೇನು? ಗೊತ್ತಿರಲಿಲ್ಲವಾದಲ್ಲಿ ರಹಸ್ಯ ರಕ್ಷಕ ವಿಭಾಗ ಇರುವದರ ಪ್ರಯೋಜನವೇನು? ಅಧಿಕಾರ ರೂಢ ಪಕ್ಷಕ್ಕೆದುರಾಗಿ ಯಾರೇನು ಬರೆಯುತ್ತಾರೆ, ಮಾತಾಡುತ್ತಾರೆಂಬುದನ್ನು ನೋಡುತ್ತ ವರದಿ ಮಾಡುವದೇ ರಹಸ್ಯ ರಕ್ಷಕ ವಿಭಾಗದ ಕೆಲಸವೇನು? ಸರಕಾರಕ್ಕೆ ಗೊತ್ತಿದ್ದಲ್ಲಿ ಮತ್ತೇಕೆ ಅದು ಬಿಟ್ಟುಕೊಟ್ಟಿತು? ಇದಕ್ಕೆ ಎರಡು—ಮೂರು ಉತ್ತರಗಳಿವೆ. ಮೊದಲನೆಯದಾಗಿ ಶತ್ರು ಅಥವಾ ಆಕ್ರಮಣಗಾರನು ಬಲಶಾಲಿ ಇದ್ದಾನೆ. ಅವನನ್ನು ಎದುರಿಸುವದು ಸುಲಭ ಸಾಧ್ಯವಲ್ಲ. ಆದುದರಿಂದ ಒಂದಿಷ್ಟು ಬಿಟ್ಟುಕೊಟ್ಟು ಸಂಧಾನ ನಡೆಸಿ ಶಾಂತಿಯಿಂದಿರುವದು ಸರಕಾರದ ಯೋಚನೆ ಇರಬಹುದು. ಎರಡನೆಯದಾಗಿ ನಮ್ಮದು ಶಾಂತಿ ಪ್ರಿಯ ರಾಷ್ಟ್ರ. ಅಂದರೆ ನಾವು ಯಾರೊಂದಿಗೂ ಜಗಳವಾಡದೆ, ಸಮಸ್ಯೆಗಳನ್ನು ಸಂಧಾನ—ಮಾತುಕತೆಗಳ ಮೂಲಕ ಬಗೆಹರಿಸುವವರು. ಈ ಎರಡು ಕಾರಣ ಸ್ವಲ್ಪ ಮಟ್ಟಿಗೆ ನಿಜವೇ ಇರಬಹುದು. ಆದರೆ ಇವುಗಳೊಂದಿಗೆ ಇನ್ನೂ ಒಂದು ಕಾರಣವಿದೆ. ಅದುವೇ, ವಿಶ್ವಾಮಿತ್ರರಿಗೆ ಮೇನಕೆ ಬೇಕು, ಮಗು ಬೇಕಾಗಿಲ್ಲ. ಅಧಿಕಾರದ ರುಚಿ ಕಂಡಿರುವ ಪಕ್ಷಕ್ಕೆ ಸತತ ಸಿಂಹಾಸನಕ್ಕೆ ಅಂಟಿಕೊಂಡಿರಲು ಮನಸ್ಸಾಗುವದರಲ್ಲಿ ಆಶ್ಚರ್ಯವಿರುವದಿಲ್ಲ. ಸಿಂಹಾಸನಕ್ಕಾಗಿ ರಕ್ತ ಸಿಂಚನವಾಗಿರುವದೂ ಹೊಸ ವಿಷಯವಲ್ಲ. ಹಿಂದಿನಿಂದ ಅದು ನಡೆದುಕೊಂಡು ಬಂದಿದೆ. ಕಾಂಗ್ರೆಸ್ಸ್ ಪಕ್ಷವು ಅದಕ್ಕೆ ಅಪವಾದವಾಗಿರುವದಾದರೂ ಅದೆಂತು? ಅದು ಕಾಂಗ್ರೆಸ್ಸಿನ ಹಣೆಬರಹ ಮಾತ್ರವಲ್ಲ, ಎಲ್ಲಾ ರಾಜಕೀಯ ಪಕ್ಷಗಳ ಹಣೆಬರಹವೂ ಅಷ್ಟೇ.

ಇಂದು ಅಧಿಕಾರ ಅಂಕುಶ ಕಾಂಗ್ರೆಸ್ಸಿನ ಕೈಯ್ಯಲ್ಲಿರುವದರಿಂದ ಆರೋಪಗಳ ಹೊರೆಯನ್ನು ಅದು ಹೊತ್ತುಕೊಳ್ಳಬೇಕಾಗಿದೆ. ಕಾಂಗ್ರೆಸ್ಸಿನ ಬದಲು ಬೇರಿನ್ನಾವ ಪಕ್ಷವಾದರೂ ಆ ಸ್ಥಾನದಲ್ಲಿರುತ್ತಿದ್ದರೂ ಆರೋಪಗಳ ಹೊರೆ ಹೊರಲೇ ಬೇಕಾಗುತ್ತಿತ್ತು. ಅಧಿಕಾರದ ರುಚಿ ಕಂಡ ಮೇಲೆ ಅದಕ್ಕೆ ಅಂಟಿಕೊಂಡಿರಲು ಕಾಂಗ್ರೆಸ್ಸ್ ಕಾರಸ್ಥಾನ ನಡೆಸುವದರಲ್ಲೇನೂ ಆಶ್ಚರ್ಯವಿಲ್ಲ. ಆದುದರಿಂದ ಅದು ಆಕ್ರಮಣವನ್ನು ಸ್ವಲ್ಪ ಮಟ್ಟಿಗೆಸ್ವಾಗತಿಸುತ್ತದೆನ್ನಬಹುದು. ಯಾಕೆಂದರೆ ಅಂತಹ ಗಂಡಾಂತರ ಅಥವಾ ಅಪಾಯದ ಲಕ್ಷಣಗಳೆದ್ದಲ್ಲಿ ಜನತೆಯ ಗಮನವನ್ನು ಅತ್ತ ಹರಿಸಿ, ಹೊಗೆಯ ಮರೆಯಲ್ಲಿ ಅದು ತನ್ನ ಕಾರಸ್ಥಾನವನ್ನು ಭರದಿಂದ ಮುನ್ನಡೆಸಬಹುದು. ತಾವಾದರೋ ಆಕ್ರಮಣವನ್ನು ಶಾಂತಿ – ಸಂಧಾನ—ಮಾತುಕತೆಗಳ ಮೂಲಕವೇ ಬಗೆ ಹರಿಸುವದಾಗಿಯೂ, ಇತರ ಪಕ್ಷಗಳ್ಯಾವದಾದರೂ ಅಧಿಕಾರದ ಆಸನದಲ್ಲಿರುತ್ತಿದ್ದಲ್ಲಿ ಅನ್ನು ಭಾರೀ ಜಗಳವಾಡಿ ದೇಶಕ್ಕೆ ಹಾನಿಯನ್ನುಂಟು ಮಾಡುತ್ತಿದ್ದವೆಂದು ಪ್ರಚಾರ ನಡೆಸಲು ಕಾಂಗ್ರೆಸ್ಸಿಗೆ ಅದೊಂದು ಸಾಧನ. ಇಲ್ಲಿ ಆಕ್ರಮಣ ಕೇವಲ ಒಂದು ಉದಾಹರಣೆ ಅಷ್ಟೆ. ಯಾವ ವಿಷಯವೇ ಆಗಲಿ, ಕಾಂಗ್ರೆಸ್ಸಿಗರಿಗೆ ಸ್ವಲ್ಪ ಮಟ್ಟಿಗೆ ಅದು ಬೇಕೇ ಬೇಕು. ಇಲ್ಲದಿದ್ದಲ್ಲಿ ಶ್ರೀ ಕಾಮರಾಜನನ್ನು ಅಂಕೆಯೊಳಗೆ ಇಟ್ಟುಕೊಳ್ಳುವದಾದರೂ ಹೇಗೆ? ಇದೂ ಒಂದು ಅಭಿಪ್ರಾಯ.

ಕಾಂಗ್ರೆಸ್ಸಿಗರಿಗೆ ಆಕ್ರಮಣದ ಮೇನಕೆ ಬೇಕಾದರೂ, ಆಕ್ರಮಣಗಾರರಿಗೆ ದಿಲ್ಲಿ ಸಿಂಹಾಸನವನ್ನು ಬಿಟ್ಟುಕೊಡುವ ಮಗು ಬೇಕಾಗಿರುವುದಿಲ್ಲ. ಈ ಮೇನಕೆಯ ಮೂಲಕ ಅವರು ಜನತೆಯ ಗಮನವನ್ನು ತಮ್ಮತ್ತ ಸೆಳೆದುಕೊಳ್ಳಲು ಇಚ್ಛಿಸುತ್ತಾರೆಯೇ ವಿನಃ ದಿಲ್ಲಿ ಗದ್ದುಗೆಯನ್ನು ಬಿಟ್ಟುಕೊಡಲು ಆಶಿಸುವದಿಲ್ಲ. ಅವರು "ತೋಳ ಬಂದಿದೆ' ತೋಳ ಬಂದಿದೆ"ನ್ನುವಂತೆ "ಆಕ್ರಮಣ ನಡೆಯುತ್ತಿದೆ" "ಆಕ್ರಮಣ ನಡೆಯುತ್ತಿದೆ"ನ್ನುತ್ತ ಆಟವಾಡಲು ಇಚ್ಛಿಸುತ್ತಾರೆ.

ಆಕ್ರಮಣದ ವಿಷಯದಲ್ಲಿ ಮಾತ್ರ ಹಾಗಲ್ಲ. ಪ್ರತಿಯೊಂದು ವಿಷಯದಲ್ಲೂ ಅಷ್ಟೆ. ಸಮಸ್ಯೆಯು ಮೇನಕೆಯತ್ತ ಬೆರಳು ತೋರಿಸಿ ಕಾಂಗ್ರೆಸ್ ಸರಕಾರ ಗದ್ದುಗೆಯಲ್ಲಿರಲು ಪ್ರಯತ್ನಿಸುತ್ತಿದೆ. ಆ ಮೇನಕೆ ಅದಕ್ಕೆ ಬೇಕೇ ಬೇಕು. ಸಮಸ್ಯೆಯ ಫಲ ಹಾಗೂ ನಿವಾರಣೆಯೆಂಬ ಮಗ ಅವರಿಗೆ ಬೇಕಾಗಿಲ್ಲ! ಇದನ್ನು ಬೇರೆ ಬೇರೆ ಮುಂದಾಳುಗಳು ಬೇರೆ ಬೇರೆ ಮಾತಿನಲ್ಲಿ ಹೇಳುತ್ತಿದ್ದಾರೆ. ರಾಷ್ಟ್ರದ ಗೌರವ ೧೯೪೭ರಲ್ಲಿ ಇದ್ದುದಕ್ಕಿಂತ ಹೀನ ಸ್ಥಿತಿಗೆ ಬಂದಿರುತ್ತದೆಂದು ಶ್ರೀ ರಾಜಗೋಪಾಲಾಚಾರಿಯವರು ಹೇಳುತ್ತಿದ್ದಾರೆ. ಯಾವ ಸಮಸ್ಯೆಯೂ ಬಗೆಹರಿದಿಲ್ಲವೆನ್ನುತ್ತಾರೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ. ಇವರಿಬ್ಬರೂ ಉನ್ನತಾಧಿಕಾರದಲ್ಲಿದ್ದುದರಿಂದ ಅವರ ಹೆಸರನ್ನಿಲ್ಲಿ ಸೂಚಿಸಲಾಗಿರುತ್ತದೆ. ಇವರ ಮಾತಿನ ಹಿಂದುಗಡೆ ಮರ್ಮವೇನಾದರೂ ಇರಬಹುದು. ಪುನಃ ತಾವು ಅಧಿಕಾರ ಅಟ್ಟವನ್ನೇರಿದಲ್ಲಿ ಎಲ್ಲವೂ ಸರಿಯಾಗುತ್ತದೆಂದು ಅವರು ಸೂಕ್ಷ್ಮವಾಗಿ ತಿಳಿಸಬಹುದು. ಏನೇ ಇರಲಿ, ಒಂದು ವಿಷಯ ಮಾತ್ರ ಇದರಿಂದ ಸ್ಪಷ್ಟವಾಗುತ್ತದೆ. ಸಮಸ್ಯೆಗಳೆಂಬ ಮೇನಕೆಯ ಹಿಂದುಗಡೆ ಕಾಂಗ್ರೆಸ್ಸ್ ಸರಕಾರ ಓಡುತ್ತಿದೆ.

ಸಮೀಪದ ದಿನಗಳಲ್ಲಿ ತಂಪಿನ ಉದಕ ಮಂಡಲದಲ್ಲಿ ರಾಜಭೋಗ ಪಡೆಯುತ್ತಿರುವ ಶೇಖ್ ಅಬ್ದುಲ್ಲಾನ ವಿಷಯವೂ ಅಷ್ಟೇ. ಶೇಖ್ ಅಬ್ದುಲ್ಲಾನನ್ನು ಪಂಡಿತ ಜವಾಹರಲಾಲ ನೆಹರೂಜೀ ಪ್ರೀತಿಯಿಂದ ಕಾಣುತ್ತಿದ್ದರು. ಅವನು ಕಾಶ್ಮೀರವನ್ನು ಪ್ರತ್ಯೇಕ ದೇಶವನ್ನಾಗಲು ಪ್ರಯತ್ನಿಸಿದಾಗ, ಪಂಡಿತ ಜವಾಹರಲಾಲಜೀಯವರ ಮಂತ್ರಿಮಂಡಲದಲ್ಲಿದ್ದು ರಾಜಿನಾಮೆ ಇತ್ತಿದ್ದ ಶ್ಯಾಮ ಪ್ರಸಾದ ಮುಖರ್ಜಿಯವರು ಅತ್ತ ಧಾವಿಸಿದರು. ಹುಲಿಯ ಗವಿಯೊಳಗೆ ಮುದ್ದಾದ ಆಡಿನ ಮರಿ ಹೋದ ಹಾಗೆ ಆಯ್ತು! ಭಾರತೀಯ ಜನತೆಯ ಪ್ರತಿನಿಧಿಯಾಗಿ ಹೋಗಿದ್ದ ಶ್ಯಾಮ ಪ್ರಸಾದ ಮುಖರ್ಜಿಯವರನ್ನು ಶೇಖ್ ಅಬ್ದುಲ್ಲಾ ಬಂಧಿಸಿ ಕತ್ತಲ ಮನೆಯಲ್ಲಿಟ್ಟನು. ಬಹಳ ವಿಚಿತ್ರ ರೀತಿಯಲ್ಲಿ ಹಾಗೂ ಬಹಳ ರಹಸ್ಯವಾಗಿ ಅವರ ಅಂತ್ಯವಾಯಿತು! ಅದು ಕೊಲೆಯೇ? ಕೊಲೆಯಾದಲ್ಲಿ ಕೊಲೆಪಾತಕರ್ಯಾರು? ವಿಚಾರಣೆ ಏನೂ ನಡೆಸಿರುವದಿಲ್ಲ. ಖಾಲಿಪೋಲಿ ಖೈದಿಯೋರ್ವನು ಸತ್ತುಹೋದಲ್ಲೂ ವಿಚಾರಣೆಯ ನಾಟಕ ನಡೆಯುತ್ತದಾದರೂ ಭಾರತೀಯ ಜನತೆಯ ಪ್ರತಿನಿಧಿಯೋರ್ವನ ಆಕಸ್ಮಿಕ ಹಾಗೂ ಸಂದೇಹಾಸ್ಪದ ರೀತಿಯ ಮರಣದ ಕುರಿತು ವಿಚಾರಣೆ ಏನೂ ಇಲ್ಲ! ಅದೇ ಶೇಖ್ ಅಬ್ದುಲ್ಲಾ ತನಂತರ ತಾನೂ ಬಂಧಿತನಾಗಬೇಕಾಯಿತು; ಆದರೆ ಅವನಿಗೆ ರಾಜಭೋಗ! ವಿಚಾರಣೆ, ತನಿಖೆ ಏನೂ ಇಲ್ಲ

(ಹನ್ನೊಂದನೇ ಪುಟ ನೋಡಿರಿ)

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು
ಹನ್ನೆರಡು ಕಥೆಗಳ ಸಂಕಲನ

ಬರೆದವರು
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ. ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಶ್ರೀ ಸ್ವಾಮಿ ಚಿನ್ಮಯಾನಂದ ಮೀಮಾಂಸೆ

ಗೀತಾ-ದ್ವಿತೀಯ ಅಧ್ಯಾಯ

ಸಂಗ್ರಹಕರ್ತೆ
ಶ್ರೀಮತಿ ಆನಂದಿ ಸದಾಶಿವ ರಾವ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಆತ್ಮಕ್ಕೆ ಎಂದೆಂದಿಗೂ ನಾಶವಿಲ್ಲ

ತಮುವಾಚ ಹೃಷೀಕೇಶಃ |
ಪ್ರಹಸನ್ನಿವ ಭಾರತ |
ಸೇನಯೋರುಭಯೋರ್ಮಧ್ಯೇ |
ವಿಷೀದಂತಮಿದಂ ವಚಃ || ೧೦ ||

ಹೀಗೆ ಎರಡು ಸೈನ್ಯಗಳ ಮಧ್ಯೆ, ದಾರಿಗಾಣದೆ ತನ್ನ ಮರೆ ಹೊಕ್ಕಿದ ಅರ್ಜುನನನ್ನು ನೋಡಿ ಮುಗುಳ್ನಗುತ್ತಾ ಶ್ರೀಕೃಷ್ಣನು ಹೀಗೆ ನುಡಿದನು.

ಅಶೋಚ್ಯಾನನ್ವಶೋಚಸ್ತ್ವಂ |
ಪ್ರಜ್ಞಾವಾದಾಂಶ್ಚ ಭಾಷಸೇ |
ಗತಾಸೂನಗತಾಸೂಂಶ್ಚ |
ನಾನುಶೋಚಂತಿ ಪಂಡಿತಾಃ || ೧೧ ||

ನೀನು, ಯಾರಿಗಾಗಿ ಅಳಬೇಕೆಂದಿಲ್ಲವೋ ಸಂಕಟಪಡಬೇಕೆಂದಿಲ್ಲವೋ ಅವರಿಗಾಗಿ ಕೊರಗುತ್ತಿರುವೆ. ಆದರೂ ಭಾರೀ ಬುದ್ಧಿವಂತಿಕೆಯ, ವಿವೇಕದ ಮಾತುಗಳನ್ನು ಆಡುತ್ತಿರುವೆ. ವಿವೇಕಿಗಳು ಜೀವಂತವಿದ್ದವರಿಗಾಗಿಯೂ ಸತ್ತವರಿಗಾಗಿಯೂ ಅಳುವುದಿಲ್ಲ, ಕೊರಗುವುದಿಲ್ಲ.

ಅರ್ಜುನನು ಅತ್ಯಂತ ಶೋಚನೀಯ ಅವಸ್ಥೆಯಲ್ಲಿ ಪರಿತಪಿಸುತ್ತಿರುವಾಗ ಶ್ರೀಕೃಷ್ಣನು ಅವನನ್ನು ಸಮಾಧಾನಗೊಳಿಸಲು ಜ್ಞಾನವನ್ನೇ ಹೇಳಬೇಕಾಯಿತು. ಜೀವ ಎಂಬ ಭ್ರಮೆಯಿಂದ ಈ ಮೋಹಪರವಶತೆ ಉಂಟಾಗಿ, ಅರ್ಜುನನು ತನ್ನ ಬಂಧುಗಳೊಡನೆ ಯುದ್ಧ ಮಾಡಬೇಕಾಗುವುದೆಂದು ದಿಗ್ಮೂಢನಾಗಿರುವಾಗ ಅವನಿಗೆ ನಿಜ ಸ್ವರೂಪವನ್ನೇ ತಿಳಿಸಬೇಕಾಯಿತು. ಶ್ರೀಕೃಷ್ಣನು ಇಲ್ಲಿ ಮಾನವನ ಆತ್ಮಸ್ವರೂಪವನ್ನೇ, ಆತ್ಮಜ್ಞಾನವನ್ನೇ ಅರ್ಜುನನಿಗೆ ಹೇಳಲು ತೊಡಗುವನು. ಗಾಬರಿಯಿಂದ ಕಂಗಾಲಾದವನಿಗೆ ಬುದ್ಧಿ ಶಮನವಾಗಲು ಉತ್ತಮವಾದ ಒಂದು ಕಾರಣವನ್ನೇ ಹೇಳಬೇಕು. ಮೊದಲು ಅವನಿಗೆ ಭೀತಿ ತೊಲಗುವಂತೆ ಮಾಡಬೇಕು. ಅದಕ್ಕಾಗಿ ಕೃಷ್ಣನು ಅಷ್ಟರ ತನಕ ಅರ್ಜುನ ಯೋಚಿಸದ ವಿಚಾರಗಳನ್ನೇ ಹೇಳತೊಡಗುವನು:

ಶಂಕರಾಚಾರ್ಯರು ಗೀತೆಯ ಭಾಷ್ಯವನ್ನು ಇಲ್ಲಿಂದ ಆರಂಭಿಸಿರುವರು. ಇಲ್ಲಿಂದ ಜ್ಞಾನಯೋಗವನ್ನು ಕೃಷ್ಣನು ಹೇಳತೊಡಗುವನು. ಇದು ಉಪನಿಷತ್ತಿನ ತತ್ವಗಳು.

ನ ತ್ವೇವಾಹಂ ಜಾತು ನಾಸಂ |
ನತ್ವಂ ನೇಮೇ ಜನಾಧಿಪಾಃ |
ನ ಚೈವನ ಭವಿಷ್ಯಾಮಃ |
ಸರ್ವೇ ವಯಮತಃ ಪರಮ್ || ೧೨ ||

ನಾನಾಗಲೀ, ನೀನಾಗಲಿ, ಈ ಅರಸರುಗಳಾಗಲೀ, ಹಿಂದೆ ಇಲ್ಲದವರಲ್ಲ. ಮುಂದೆ ಇರದವರಲ್ಲ. ಯಾವಾಗಲೂ ಇರುವವರಲ್ಲೂ, ನಾವೆಲ್ಲರೂ ಇರುವವರೇ.

ಶ್ರೀಕೃಷ್ಣನು ಇಲ್ಲಿ ಆತ್ಮನು ಅವಿನಾಶಿ ಎಂದೂ, ಮೃತ್ಯು ಹೊಂದಿದೊಡನೆ, ಒಬ್ಬನು ನಾಶಹೊಂದುವುದಿಲ್ಲವೆಂಬ, ಅವನಿಗೆ ಪುನರ್ಜನ್ಮ ಇದೆ ಎಂಬ ನಂಬುಗೆಯನ್ನು, ಅರ್ಜುನನಿಗೆ ತಿಳಿಯ ಹೇಳಿದನು. ಈ ಪುನರ್ಜನ್ಮ ತತ್ವವು ಕೇವಲ ಹಿಂದೂ ಧರ್ಮದವರು ಮಾತ್ರವಲ್ಲ! ವಿಶ್ವದ ಎಲ್ಲಾ ಭಾಗಗಳ ದಾರ್ಶನಿಕರು, ತತ್ವಜ್ಞರು ಒಪ್ಪಿರುವರು. ಇದರಿಂದ ಎಂದಿಗೂ ನಾಶವಿಲ್ಲದ ಜೀವತ್ವವನ್ನು ಪಡೆದ ಎಲ್ಲಾ ಮಾನವರೂ, ಎಂದಿಗೂ ನಾಶಹೊಂದಲಾರರು.

ದೇಹಿನೋಽಸ್ಮಿನ್ಯಥಾ ದೇಹೇ |
ಕೌಮಾರಂ ಯೌವನಂ ಜರಾ |
ತಥಾ ದೇಹಾಂತರ ಪ್ರಾಪ್ತಿ ಧೀರ |
ಸ್ತತ್ರನ ಮುಹ್ಯತಿ || ೧೩ ||

ದೇಹಕ್ಕೆ ಬಾಲ್ಯ, ಕೌಮಾರ, ಯೌವನ, ಮುಪ್ಪು ಬರುವಂತೆ, ಈ ಬದಲಾವಣೆಯು ಇನ್ನೊಂದು ರೀತಿ ದೇಹಾವಸಾನವು. ಒಂದು ದೇಹ ಹೋದೊಡನೆ ಇನ್ನೊಂದು ದೇಹ ಬರುವುದು. ಇದು ಕೇವಲ ಬದಲಾವಣೆಯೇ ಹೊರತು ಬೇರೇನಿಲ್ಲ.

ದೇಹಕ್ಕೆ ಮಾತ್ರ ಬಾಲ್ಯ ಯೌವನ, ಮುಪ್ಪು ಎಂಬ ಬದಲಾವಣೆ ಬರುವುದೇ ಹೊರತು ಜೀವಕ್ಕಲ್ಲ. ಹಾಗೆಯೇ ಈ ಬದಲಾವಣೆಗಳನ್ನು ಗಮನಿಸಿದ ಜೀವವು ಮೃತ್ಯುವಿನಿಂದ ಭಯಪಡಬೇಕೆಂದಿಲ್ಲ ಅದೂ ಜೀವಕ್ಕೆ ಆಗುವ ಒಂದು ಅನುಭವ, ಮತ್ತು ಬದಲಾವಣೆ. ಆದರಿಂದ ವಿವೇಕಿಗಳು ಮೃತ್ಯುವಿನಿಂದ ಭಯ ಪಡುವುದಿಲ್ಲ. ಹೀಗೆ ಶ್ರೀಕೃಷ್ಣನು ಅರ್ಜುನನನ್ನು ಸಮಾಧಾನಗೊಳಿಸಲು ನುಡಿದು ಮುಂದುವರಿಸುತ್ತಾ, ಬಾಲ್ಯ, ಯೌವನ, ವೃದ್ಧಾಪ್ಯವು ಈ ದೇಹಕ್ಕೆ ಪ್ರಾಪ್ತವಾಗಿರುವುವು. ಈ ಮೂರು ಅವಸ್ಥೆಗಳನ್ನು ನಾವು ತಿಳಿಯುವೆವು. ಆದರೆ ಎಂದು ಬಾಲ್ಯವು ಕಳೆದು ಯೌವನ ಕಾಲಿರಿಸಿತು, ಯೌವನ ಕಳೆದು ಮುಪ್ಪು ಕಾಲಿರಿಸಿತು ಎಂದು ಹೇಳಲು ಸಾಧ್ಯವಿಲ್ಲ. ಒಂದು ಗಿಡ ಎಂದು ಮರವಾಯಿತು ಎಂದು ಹೇಳಲು ಸಾಧ್ಯವಿಲ್ಲ. ಆದರೆ ಈ ಬದಲಾವಣೆಗಳನ್ನು ನಾನು ಗಮನಿಸುವೆನು. ಈ ಅವಲೋಕಿಸುವ ವ್ಯಕ್ತಿ ನಾನು. ಈ 'ನಾನು' ಇದು ದೇಹವನ್ನು ಮರಣ ಕಾಲದಲ್ಲಿ ಬಿಟ್ಟು ಹೋಗುವುದು. ಈ ಬಾಲ್ಯ, ಯೌವನ, ಮುಪ್ಪು ಇರುವುದು ದೇಹದ ಬದಲಾವಣೆಗಳಲ್ಲಿ ಹೊರತು ನನ್ನ ವ್ಯಕ್ತಿತ್ವಕ್ಕಿಲ್ಲ. ಈ ವ್ಯಕ್ತಿತ್ವವು ಮರಣದ ಬಳಿಕವೂ ಈ ಸ್ಥೂಲ ದೇಹದಿಂದ ಬಿಡುಗಡೆ ಹೊಂದಿದ ಬಳಿಕವೂ ಇದೆ.

ಆದರಿಂದ ಪಂಡಿತರು, ವಿವೇಕಿಗಳು, ಮೃತ್ಯುವಿನಿಂದ ಗಿ ಮರುಗುವುದಿಲ್ಲ

ಎಲೆ ಕುಂತೀ ಪುತ್ರನೇ, (ಅರ್ಜುನನನ್ನು ಹುರಿದುಂಬಿಸಲು ಹೇಳಿದುದು, ತನ್ನ ಮತ್ತು ಅವನ ಬಾಂಧವ್ಯ ಸೂಚಕಾರ್ಥವಾಗಿ).

ಮಾತ್ರಾ ಸ್ಪರ್ಶಾಸ್ತು ಕೌಂತೇಯ |
ಶೀತೋಷ್ಣ ಸುಖ ದುಃಖದಾಃ |
ಆಗಮಾಪಾಯಿನೋಽನಿತ್ಯಾ
ಸ್ತಾಂ ಸ್ತಿತಿಕ್ಷಸ್ವ ಭಾರತ || ೧೪ ||

ಆದರಿಂದ ಕುಂತೀ ಪುತ್ರನೇ ಈ ದೇಹದಲ್ಲಿ ಶೀತ, ಉಷ್ಣವನ್ನು, ಮನಸ್ಸಿನಿಂದ ಬುದ್ಧಿಯಿಂದ ಸುಖದುಃಖಗಳನ್ನು, ಬಹಳ ತಾಳ್ಮೆಯಿಂದ ಧೃತಿಗೆಡದೆ ಅನುಭವಿಸಬೇಕು. ಏಕೆಂದರೆ ಈ ಬದಲಾಗುವ ಜಗತ್ತಿನಲ್ಲಿ ಸ್ಥಿರವಾದ ಅನುಭವಗಳೆಂದು ಇಲ್ಲ. ಒಂದರ ಹಿಂದೆ ಒಂದು ಅನುಭವ ಬಂದೇ ಇರುವುವು. ಆದರಿಂದ ಯಾವುದೂ ಸ್ಥಿರವಲ್ಲ ಎಂಬ ಒಂದೇ ಯೋಚನೆಯಿಂದ ದೃಢ ನಿರ್ಧಾರ ತಳೆದು, ಸಮಬುದ್ಧಿಯನ್ನಾಗಲೀ ಧೃತಿಗೆಡದೆ ಅನುಭವಿಸಬೇಕು.

ನಾವು ಲೋಕದೊಡನೆ ವ್ಯವಹಾರವನ್ನು ಇಟ್ಟುಕೊಂಡ ರೀತಿಯಲ್ಲಿ ನಮ್ಮ ಸುಖದುಃಖಗಳು ಇವೆ. ನಾವು ಹೇಗೆ ವ್ಯವಹರಿಸುವೆವು ಮತ್ತು ನಾವು ಒಂದು ಸನ್ನಿವೇಶವನ್ನು ಹೇಗೆ ಅನುಭವಿಸುವೆವು ಎಂದು ಅದರ ರೀತಿಯ ಮೇಲೆ ನಮ್ಮ ಸುಖದುಃಖಗಳು ಹೊಂದಿಕೊಂಡಿವೆ. ಒಂದು ಸುಖಮಯ ಸನ್ನಿವೇಶವೂ ನನ್ನ ಮನಸ್ಸಿನ ಪರಿಣಾಮದಿಂದ ದುಃಖವಾಗಿ ಪರಿಣಮಿಸಿತು.

ಕತೆ:— ನೆರೆ ಹೊರೆಯವನ ಮಗಳ ಮದುವೆ, ನಾನು ನನ್ನ ಮಗಳಿಗೆ ಇಚ್ಛಿಸಿದ ಒಬ್ಬ ವರನೊಡನೆ ನಡೆಯಿತು, ಆ ಸಂತೋಷ ಸಮಾರಂಭ ನನಗೆ ದುಃಖದಾಯಕವಾಗಿ ಪರಿಣಮಿಸಿತು.

ಲೋಕದಲ್ಲಿರುವ ಸನ್ನಿವೇಶಗಳು, ಸಂದರ್ಭಗಳು ನನಗೆ ಸುಖದುಃಖಗಳನ್ನು ಕೊಡಲಾರವು. ಅದು ನನ್ನನ್ನೂ, ನನ್ನಲ್ಲಿದ್ದ ಬುದ್ಧಿ ಮನಗಳ ಮೇಲೆ ಹೊಂದಿಕೊಂಡಿದೆ; ನಾನು ಅದನ್ನು ಅನುಭವಿಸುವ ರೀತಿಯನ್ನು ಹೊಂದಿಕೊಂಡಿದೆ.

ಎಂತಹ ಸನ್ನಿವೇಶಗಳೂ, ಅನುಭವಗಳೂ ಸ್ಥಿರವಾಗಿರಲಾರವು. ಅವು ಬದಲಾವಣೆ ಹೊಂದುತ್ತಾ ಹೋಗುವುವು. ಈ ಜಗತ್ತಿನಲ್ಲಿ ಒಂದೇ ಒಂದು ಸ್ಥಿರವಾಗಿಲ್ಲ. ಒಂದು ಅಳಿದು ಹೋದ, ಇನ್ನೊಂದು ಅದರ ಸ್ಥಾನದಲ್ಲಿ ಬರುವುದು. ಈ ಬದಲಾವಣೆ ಹೊಂದುವ, ಪರಿವರ್ತನೆ ಹೊಂದುವ ಜಗತ್ತಿನ ಎಲ್ಲಾ ಅನುಭವ

(ಹತ್ತನೇ ಪುಟ ನೋಡಿರಿ)

ಯಶಸ್ಸಿನ ಮುನ್ನಡೆಯಲ್ಲಿ
ಮತ್ತೊಂದು ಹೆಜ್ಜೆ......

ಸಿಂಡಿಕೇಟ್ ಬ್ಯಾಂಕ್

ಕಲ್ಕತ್ತಾ ನಗರಕ್ಕೆ ಪದಾರ್ಪಣ ಮಾಡಿರುವುದು.

ಸಿಂಡಿಕೇಟ್ ಬ್ಯಾಂಕಿನ ಶಾಖೆಯೊಂದು,
12/2 ಕ್ಲೈವ್ ರೋ,
ಕಲ್ಕತಾ—1

ಎಂಬಲ್ಲಿ ಇದೇ ತಾರೀಕು 17, ಜೂನ್ 1965ರಂದು ತೆರೆಯಲ್ಪಟ್ಟಿದೆಯೆಂದು ತಿಳಿಸಲು ತುಂಬಾ ಸಂತೋಷ ಪಡುತ್ತೇವೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 204

ಚಲಾವಣಾ ಸಂಪತ್ತು: ರೂ. 70 ಕೋಟಿಗೂ ಮಿಕ್ಕಿದೆ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ|| ಕೆ. ಎಲ್. ವಿಠಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ — ನವಭಾರತ ಪುಸ್ತಕ ಭಂಡಾರ, ಉಡುಪಿ.

ಕರ್ತವ್ಯ ಬು...

ಅಮೆರಿಕನ್ ...

ಈತನೀಗ ವಿಶ್ವವಿ...

೧

೨



೩

ಚಿತ್ರ ೧: ಗೋಪಾಲಕ

ಅಮೇರಿಕೆಯ ಗೋಪಾಲಕನು ಇತರೆಡೆಯ ಗೋವಳನಂತಿಲ್ಲ. ಆತನು ಪುಸ್ತಕ, ಚಲಚ್ಚಿತ್ರ ಮತ್ತು ಟೆಲಿವಿಜನ್ ಮೊದಲಾದುವುಗಳ ಮೂಲಕ ಇಡಿಯ ಜಗತ್ತಿನಲ್ಲಿಯೇ ಸುಪ್ರಸಿದ್ಧನಾಗಿದ್ದಾನೆ. ಈ ಮಾಧ್ಯಮಗಳ ಮೂಲಕ ಅಮೆರಿಕನ್ ಗೋಪಾಲನ ವ್ಯಕ್ತಿತ್ವದ ಮೇಲೆ ಅತಿಶಯವಾದ ಕಳೆಯು ಬಂದಿದೆ ಎಂದು ಹೇಳಬಹುದು. ಆದರೂ ಆತನು ಪರಿಶ್ರಮಶೀಲನಾಗಿದ್ದಾನೆ; ಅಮೆರಿಕೆಯ ಸಂಯುಕ್ತ ಸಂಸ್ಥಾನಗಳ ಪಶ್ಚಿಮ ಭಾಗದಲ್ಲಿ ಹೊಸತೊಂದು ಜೀವ ಕಳೆಯನ್ನು ಬೀರಲು ಸಮರ್ಥನಾಗಿದ್ದಾನೆ; ಇಂದು ಈ ಗೋಪಾಲನಿಲ್ಲವೆ ಹೋದರೆ ಅಮೆರಿಕೆಯ ಪಶುಗಳ ಹಿಂಡು ಅನಾಥವಾಗುವ ಸಂದರ್ಭವೇ ಹೆಚ್ಚು ಎಂಬುದು ಅಷ್ಟೇ ಸತ್ಯವಾದುದು. ಆದುದರಿಂದಲೇ ಈ ಗೋಪಾಲನಿಗೆ ಎಲ್ಲಿಲ್ಲದ ಮಹತ್ವ ಬಂದಿದೆ.

ಚಿತ್ರ ೨: ಆರಂಭ

ಅಮೇರಿಕೆಯ ಇತಿಹಾಸದಲ್ಲಿ ೧೯ನೆಯ ಶತಮಾನವು ಉಲ್ಲೇಖಾರ್ಹವಾದುದು. ಈ ಅವಧಿಯಲ್ಲಿಯೇ ಅಲ್ಲಿ ಪಶು ಸಂಗೋಪನೆಯನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳಲು ಆರಂಭವಾಯಿತು. ಇದೇ ಸಮಯದಲ್ಲಿ ಅಮೇರಿಕನ್ ಗೋಪಾಲನು ಬೆಳಕಿಗೆ ಬರತೊಡಗಿದನು. ಕನ್ಸಾಸ್ ಮತ್ತು ಟೆಕ್ಸಾಸ್ ರಾಜ್ಯಗಳಲ್ಲಿ ಮೊತ್ತಮೊದಲಿಗೆ ಸಾಮೂಹಿಕ ಪಶು ಸಂಗೋಪನೆಯು ಆರಂಭವಾಯಿತು. ಆಗ ಬೇಲಿಗಳಿಲ್ಲದ ವಿಶಾಲ ಹುಲ್ಲುಗಾವಲುಗಳಲ್ಲಿ ಪಶುಗಳನ್ನು ಮೇಯಿಸಿಡುವ ಪರಿಪಾಠವಿತ್ತು. ಆದರೆ ಇದು ಬಹಳ ಕಷ್ಟಪ್ರದವಾಗಿತ್ತು. ಆ ಸಮಯದಲ್ಲಿಯೇ ಗೋಪಾಲಕನ ಆಗತ್ಯ ಹೆಚ್ಚಿತು; ಮಹತ್ವವೂ ಬೆಳೆಯಿತು. ಅಂದಿನಿಂದ ಇಂದಿನವರೆಗೂ ಅಮೇರಿಕನ್ ಗೋಪಾಲನು ವಿಸ್ತೃತ ಹುಲ್ಲು ಮೈದಾನುಗಳಲ್ಲಿ ಸ್ವಚ್ಛಂದವಾಗಿ ಮೇಯುತ್ತ ವಿಹರಿಸುತ್ತ ತಿರುಗುತ್ತಿರುವ ಪಶುಗಳ ಮೇಲ್ವಿಚಾರಣೆಯನ್ನು ತೆಗೆದುಕೊಳ್ಳುತ್ತಿದ್ದಾನೆ.

ಚಿತ್ರ ೩: ಪಶುಗಳ ದೇಶ

ಇದು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ನಕ್ಷೆ. ಗುರುತು ಹಾಕಿರುವ ಪ್ರದೇಶವು ಪಶು ಸಂಗೋಪನೆಯು ಬೆಳೆದು ಬಂದು ವ್ಯವಹಾರದಲ್ಲಿ ಪ್ರಮುಖಪಾತ್ರ ವಹಿಸಿರುವ ಪ್ರದೇಶಗಳು. ಈ ಭೂಭಾಗದ ಬಹ್ವಂಶವು ಅರೆ ಒಣಗಿದ ಭೂಮಿ. ಇಲ್ಲಿ ಹುಲ್ಲು ಮಾತ್ರ ಬೆಳೆಯುತ್ತದೆ; ಯಾವುದೇ ರೂಪದ ಧಾನ್ಯವನ್ನು ಉತ್ಪಾದಿಸಿಕೊಳ್ಳಲು ಈ ಭೂಮಿಯು ನಿರುಪಯುಕ್ತವಾಗಿದೆ. ಆದುದರಿಂದಲೇ ಇಲ್ಲಿ ಪಶುಪಾಲನೆಯೇ ಪ್ರಮುಖ ವೃತ್ತಿಯೆನಿಸಿದೆ. ಅಮೆರಿಕೆಯಲ್ಲಿ ಇದೀಗ ೧೦೦ ಮಿಲಿಯ ಜಾನುವಾರುಗಳಿವೆಯೆಂದು ಅಂದಾಜು ಮಾಡಿದ್ದಾರೆ. ಔದ್ಯಮಿಕವಾಗಿ ಉನ್ನತಿ ಹೊಂದಿದ ಅಮೆರಿಕೆಯಲ್ಲಿ ಪಶು ಸಂಗೋಪನೆಗೂ ಅಗ್ರಸ್ಥಾನವಿದೆಯೆಂಬುದು ಇದರಿಂದಲೇ ತಿಳಿಯುತ್ತದೆ.

ಚಿತ್ರ ೪: ದೊಡ್ಡಿಯ ಜೀವನ

ಪಶುಗಳನ್ನು ಸಾಕುವ ದೊಡ್ಡಿಯು ಸರ್ವಸಾಮಾನ್ಯವಾಗಿ ನಗರ ಇಲ್ಲವೆ ಪಟ್ಟಣಗಳಿಂದ ದೂರವಾಗಿದೆ. ಇವುಗಳ ನಡುವೆ ಸಂಬಂಧ ಕಲ್ಪಿಸುವುದೂ ಬಹುಪಾಲು ಅಸಾಧ್ಯವಾಗಿದೆ. ಆದುದರಿಂದಲೇ ಪಶುಗಳ ದೊಡ್ಡಿಯು ಸ್ವಾಭಾವಿಕವಾಗಿ ಸ್ವಯಂಪೂರ್ಣವಾಗಿರ ಬೇಕಾಗುತ್ತದೆ. ಪಶುಗಳ ಹಟ್ಟಿಯು ಇದರ ಕೇಂದ್ರ. ಪಶುಪಾಲಕರ ವಸತಿಗಾಗಿ ಮನೆಗಳೂ ಹತ್ತಿರವಿರುತ್ತವೆ. ಗೋಪಾಲಕರ ಕುದುರೆಗಳನ್ನು ಕಟ್ಟಲು ಅಶ್ವಶಾಲೆಯೂ ಇರುತ್ತದೆ. ಪಶುಗಳಿಗೆ ಆವಶ್ಯವೆನಿಸುವ ಮೇವಿನ ಭಂಡಾರಗಳು, ಜನೋಪಯೋಗಿ ವಸ್ತುಗಳು— ಹೀಗೆ ಎಲ್ಲವೂ ಅಲ್ಲಿಯೇ ಇರಬೇಕಾಗುತ್ತದೆ. ಈ ಬಗೆಯಲ್ಲಿ ದೊಡ್ಡಿಯೊಂದು ಪುಟ್ಟ ಪಟ್ಟಣವೇ ಅಥವಾ ಸ್ವಯಂಪೂರ್ಣ ಹಳ್ಳಿಯೆಂದರೂ ತಪ್ಪಾಗಲಾರದು.

ಚಿತ್ರ ೫: ಹೆಂಗುದುರೆಗಳು

ಗೋಪಾಲಕನಿಗೆ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಬಹಳಷ್ಟು ನೆರವಾಗುವುದೆಂದರೆ ಹೆಂಗುದುರೆಗಳು ಅಥವಾ ಕುದುರೆಗಳು. ಇವು ಬಹಳಷ್ಟು ಶಕ್ತಿಯುತವಾಗಿವೆ. ಏಕೆಂದರೆ, ಅವು ಪ್ರತಿದಿನವೂ ಬಹಳಷ್ಟು ದೂರ ಓಡಬೇಕಾಗುತ್ತದೆ. ಕರುಗಳನ್ನು ಕಟ್ಟುವುದಕ್ಕೂ, ಪಶುಗಳು ನಡೆದಲ್ಲಿ ಓಡುವುದಕ್ಕೂ ಅಗತ್ಯವಾದ ತರಬೇತಿಯನ್ನು ಇವು ಪಡೆದಿರುತ್ತವೆ. ತನ್ನ ಜೀವದಂತೆ ಗೋಪಾಲಕನು ಇವನ್ನು ಪ್ರೀತಿಸುತ್ತಾನೆ; ರಕ್ಷಿಸಿಕೊಳ್ಳುತ್ತಾನೆ. ತಾನು ಉಣ್ಣುವುದಕ್ಕೆ, ಕುಡಿಯುದಕ್ಕೆ ಮೊದಲೇ ಆತನು ತನ್ನ ಕುದುರೆಗೆ ಉಣಿಸುತ್ತಾನೆ; ಕುಡಿಸುತ್ತಾನೆ. ಈ ಕಾರಣದಿಂದಾಗಿಯೇ ಅವು ತಮ್ಮ ಯಜಮಾನನ ಆಶಯವನ್ನು ಮುಂದಾಗಿ ಅರಿತುಕೊಂಡು ಆತನ ಕೈಸನ್ನೆಗಳಿಗೆ ತಕ್ಕಂತೆ ಕೆಲಸ ಮಾಡುತ್ತವೆ.

ಚಿತ್ರ ೬: ಸಾಧನೋಪಕರಣಗಳು

ತನ್ನ ಕೆಲಸವನ್ನು ಮಾಡಲು ಅನುಕೂಲವಾಗುವಂತೆ ಗೋಪಾಲಕನು ವಿಶಿಷ್ಟ ಪ್ರಕಾರದ ಉಡುಗೆತೊಡುಗೆಗಳನ್ನು ಉಪಯೋಗಿಸುತ್ತಾನೆ. ಅವನು ಅಗಲಂಚಿನ ಹ್ಯಾಟನ್ನು (ಟೊಪ್ಪಿಗೆ) ಧರಿಸುತ್ತಾನೆ. ಇದರಿಂದ ಉರಿಯುವ ಬಿಸಿಲಿನ ಬೇಗೆಯನ್ನಾತ ತಡೆದುಕೊಳ್ಳಬಲ್ಲನು. ಬೀಸುವ ಗಾಳಿಯಿಂದ ರಕ್ಷಿಸಿಕೊಳ್ಳಲು ಆತ ಚರ್ಮದ ಚಡ್ಡಿಗಳನ್ನು ತೊಡುತ್ತಾನೆ. ಕುದುರೆಯ ಮೇಲೆ ಸವಾರಿ ಮಾಡುವಾಗ ಕಾಲುಗಳನ್ನು ಜೀನಿನ ಮೇಲೆ ಆದರಿಸಲು ಅನುಕೂಲವಾಗುವಂತೆ ದಪ್ಪ ಹಿಮ್ಮಡಿಯ ಬೂಟುಗಳನ್ನು ಆತ ಮೆಟ್ಟುತ್ತಾನೆ. ಇಂದು ಆತನು ಹಿಡಿದಿರುವ ಕೋವಿಯು ವನ್ಯ ಮೃಗಗಳಿಂದ ರಕ್ಷಣೆ ಪಡೆಯುವುದಕ್ಕೆ ಮಾತ್ರವಿರುತ್ತದೆ.

ಚಿತ್ರ ೭: ವಿಶಾಲ ಪ್ರೈಯರೀ

ಅಮೇರಿಕನ್ ಗೋಪಾಲನ ಲೀಲಾಭೂಮಿಯೆಂದರೆ ಸುವಿಸ್ತೃತವಾದ ಪ್ರೈಯರೀ ಮೈದಾನ. ಇಲ್ಲಿಯೇ ಆತನು ದಿನದ ಬಹು ಭಾಗವನ್ನು ಕಳೆಯುತ್ತಾನೆ. ಇಲ್ಲಿಯೇ ಪಶುಗಳ ಹಿಂಡು ಯಥೇಚ್ಛವಾಗಿ ಮೇಯುತ್ತಿರುತ್ತವೆ. ಇಲ್ಲಿಯೇ ಗೋಪಾಲ ತನ್ನ ಶಿಬಿರವನ್ನು ಸ್ಥಾಪಿಸುತ್ತಾನೆ; ಹಿಂಡು ಮುಂದುವರಿದಂತೆ ಆತನೂ ಆತನ ಡೇರೆಯೂ ಮುಂದುವರಿಯುತ್ತಾರೆ. ಹೊಸ ಹುಲ್ಲು ಕಾಣುವತ್ತ ಪಶುಗಳು ಮುನ್ನಡೆಯುತ್ತಿರುತ್ತವೆ. ಗೋಪಾಲಕನೇನೂ ಹುಲ್ಲು ಮೇಯಲಾರನಷ್ಟೆ? ಅದಕ್ಕಾಗಿ ಆತನ ಬಳಿಯೊಂದು ಸಂಚಾರಿ ಗಾಡಿಯಿದೆ, ಇದರಲ್ಲಿ ಆತ ತನ್ನ ಆಹಾರ ತಯಾರಿಸುತ್ತಾನೆ; ಉಣ್ಣುತ್ತಾನೆ. ರಾತ್ರಿಯ ಹೊತ್ತು ಆವನಿಗೆ ಮಲಗಲು ಹಾಸಿಗೆ ಎಲ್ಲಿಂದ ಬರಬೇಕು? ಅನಂತ ತಾರೆಗಳ ಕೆಳಗಡೆ ಕುದುರೆಯ ಚೆನ್ನ ಜೀನನ್ನೇ ತಲೆದಿಂಬಾಗಿರಿಸಿ ಆತ ಹಚ್ಚನೆಯ ಹುಲ್ಲ ಮೇಲೆ ಪ್ರಕೃತಿ ಮಾತೆಯ ತೊಡೆಗೂಸಿ

೭



೮

೯



೧೦

ಕರ್ಮಚಾರ

ಗೋಪಾಲಕ

...ಗುತ್ತ ಬರುತಿದ್ದಾನೆ



೮



೫



೭

ನಂತೆ ಮಲಗುತ್ತಾನೆ

ಚಿತ್ರ ೮: ಪ್ರಸಿದ್ಧ ವ್ಯಕ್ತಿಗಳು

ಪಶ್ಚಿಮ ಅಮೇರಿಕೆಯು ವಿಶ್ವವಿಖ್ಯಾತರಾದ ಹಲವು ಪ್ರಸಿದ್ಧ ವ್ಯಕ್ತಿಗಳಿಗೆ ಜನ್ಮವಿತ್ತಿದೆ. ಇವರಲ್ಲಿ ಬಫೆಲೋ ಬಿಲ್ ಕೋಡಿ. ಒಬ್ಬರು ಈ ಬೇಟೆಗಾರ ಮತ್ತು ಸ್ಕಾಟು ತನ್ನ ವೈಲ್ಡ್ ವೆಸ್ಟ್ ಶೋವಿನೊಂದಿಗೆ ಇಡೀ ಜಗತ್ತನ್ನೇ ಸಂಚರಿಸಿದರು. ಬಾಟ್ ಮಾಸ್ಟರ್ ಸನ್ ಮತ್ತು ವಿಟ್ ಇಂಥವರೂ ಜನರಷ್ಟೇ ಕೀರ್ತಿಶಾಲಿಗಳು. ಇವರ ಸಂಚಾರವು ಪುಸ್ತಕಗಳಲ್ಲಿ, ಚಲಚ್ಚಿತ್ರಗಳಲ್ಲಿ, ಟೆಲಿವಿಜನ್ ಮತ್ತು ರೇಡಿಯೋಗಳಲ್ಲಿ ಅಂಕಿತಲ್ಪಟ್ಟಿದೆ ಜಾಣ್ ಪ್ರಸಿದ್ಧವಾಗಿದೆ.

ಚಿತ್ರ ೯ ದಿ ಪೋನಿ ಎಕ್ಸ್‌ಪ್ರೆಸ್

ಎಕ್ಸ್‌ಪ್ರೆಸ್ ಗಾಡಿಯು ವಿಚಾರ ನಿಮಗೆ ಗೊತ್ತಿದೆ. ಆದರೆ, ಎಕ್ಸ್‌ಪ್ರೆಸ್ ಕುದುರೆಯ ಕತೆ ಕೇಳಿದರೆ ಆಶ್ಚರ್ಯ ಪಡುವಿರಿ. ೧೮೬೦ರಲ್ಲಿ ಅಮೆರಿಕೆಯ ಚರಿತ್ರೆಯಲ್ಲಿಯೇ ವಿಲಕ್ಷಣ ಘಟನೆಯೊಂದು ನಡೆಯಿತು ಮಿಸ್ಸೂರಿಯ ಟೆಲಿಗ್ರಾಫ್ ಲೈನಿನ ಕೊನೆಯಿಂದ ದಾರಿಯಿಲ್ಲದ ಕೆಲಿಫೋರ್ನಿಯಾದ ಕೊನೆಗೆ ಅಂಚೆಯನ್ನು ಕೊಂಡೊಯ್ಯಲು ಎಕ್ಸ್‌ಪ್ರೆಸ್ ಕುದರೆಗಳು ಬಳಕೆಗೆ ಬಂದುವು ಇದನ್ನೇ ದಿ ಪೋನಿ ಎಕ್ಸ್‌ಪ್ರೆಸ್ ಎನ್ನುತ್ತಾರೆ ಕೀರ್ತಿವಂತೆ ರಾಲ್ಫ್ ವೈಲ್ಡ್ ಬಿಲ್, ಹಿಕೊಕ್ ಮೊದಲಾದ, ಗಡಿಪ್ರದೇಶದಲ್ಲಿನ ಪೋನಿ ಎಕ್ಸ್‌ಪ್ರೆಸ್‌ನ ಸುವ್ಯವಸ್ಥೆಗೆ ಕಾರಣೀಭೂತರಾದವರ ಜೀವತಾವಧಿಯೂ ಇದಾಗಿತ್ತು

ಚಿತ್ರ ೧೦ ದುಷ್ಟ ಮಾನವರು

ಪಶ್ಚಿಮ ಅಮೆರಿಕೆಯಂತಹ ಪ್ರದೇಶದಲ್ಲಿ ನ್ಯಾಯ ಮತ್ತು ಸುವ್ಯವಸ್ಥೆಗಳಿಗಿಂತಲೂ ಅಭಿವೃದ್ಧಿ ಕಾರ್ಯಗಳು ತ್ವರಿತಗತಿಯಲ್ಲಿ ಮುಂದುವರಿಯುವುದು ಅಶ್ಯಗತ್ಯವಿತ್ತು. ಇಂತಹ ವಾತಾವರಣ ಅಂದು ಇದ್ದುದರಿಂದಲೇ ೨೧ರ ವಯಸ್ಸಿನಲ್ಲಿಯೇ ೨೧ ಜನರನ್ನು ಗುಂಡಿಕ್ಕಿಕೊಂದ ಬಳಿಕ ಗಂಡಿಗಾಹುತಿಯಾಗಿ ಮಡಿದ ಬಿಲ್ಲಿ ದಿಕಿಡ್, ಬ್ಲ್ಯಾಕ್ ದರೋಡೆಗಾರ ಡಲ್ಟನ್ಸ್ ಸಹೋದರರು ಮೊದಲಾದ ವಿಲಕ್ಷಣ ವ್ಯಕ್ತಿಗಳು ತಮ್ಮ ಕೈವಾಡ ತೋರಿಸುತ್ತಿದ್ದರು. ಇವರೆಲ್ಲರ ನೆನಪು ಇಂದಿಗೂ ಉಳಿಯುವಂತಾಗಿದೆ.

ಚಿತ್ರ ೧೧ ಸಂಚಾರಾಭ್ಯಾಸ

ಪಶುಸಂಗೋಪನೆಯು ಬೃಹದ್ರೂಪವನ್ನು ತಾಳಿದ ಮೊದಲಲ್ಲಿ ದೊಡ್ಡಿಗಳಿರುವ ಸ್ಥಳದಲ್ಲಿ ರೈಲ್ವೆ ದಾರಿಗಳಿರಲಿಲ್ಲ. ಸಮೀಪದ ರೇಲ್ವೆ ನಿಲ್ದಾಣಗಳಿಗೆ ಪಶುಗಳನ್ನು ತರುವುದೆಂದರೆ ಬಹಳಷ್ಟು ಪ್ರಯಾಸದ ಮಾತಾಗಿತ್ತು ಏಕೆಂದರೆ, ಅವನ್ನು ಅಟ್ಟಿಕೊಂಡೇ ಬರಬೇಕಾಗಿತ್ತು ಕೆಲವು ಮ್ಮೆ ರೇಲ್ವೆ ನಿಲ್ದಾಣವು ನೂರಾರು ಮೈಲು ದೂರದಲ್ಲಿರುತಿತ್ತು ಈ ಬಗೆಯ ಸಂಚಾರವು ಗೋಪಾಲಕರಿಗೆ ಭಯದಾಯಕವಾದ ಭೀಕರ ಪ್ರಸಂಗವೆನಿಸುತಿತ್ತು ಆದರೂ ಅವರು ಧೈರ್ಯಗುಂದುತ್ತಿರಲಿಲ್ಲ. ಪ್ರಕೃತಿ ಸಹಜವಾದ ಎಂಟೆದೆಯಿಂದಲೇ ಅವರು ಬೀಸುತ್ತಿರುವ ಚಳಿಗಳಿ, ಹಾರುತ್ತಿರುವ ದೂಳು ಮತ್ತು ಉರಿಯುತ್ತಿರುವ ಬಿಸಿಲನ್ನು ಕಡೆಗಣಿಸಿ ತಮ್ಮ ಕಾರ್ಯಮಗ್ನರಾಗುತಿದ್ದರು. ಎಲ್ಲೆಲ್ಲಿಂದಲೋ ಪಶುಗಳನ್ನು ಅಟ್ಟಿಕೊಂಡು ಬರುವ ಅಭ್ಯಾಸ ಅವರಿಗೆ ರಕ್ತಗತವಾಗಿ ಬಿಡುತಿತ್ತು

ಚಿತ್ರ ೧೨ ರೇಲುದಾರಿ

ರೇಲುದಾರಿಗಳು ಏಕಪ್ರಕಾರವಾಗಿ ವಿಸ್ತರಿಸುತ್ತ ಹೋದಂತ ಪಶುವಟ್ಟುವ ಪದ್ಧತಿಯು ಹ್ರಾಸವಾಗುತ್ತ ಬಂದಿತು ಒಂದೂರಿನಿಂದ ಇನ್ನೊಂದೂರಿಗೆ ಅವು ಹೆಚ್ಚು ಆರೋಗ್ಯವಾಗಿ ಸ್ಥಳಾಂತರಗೊಳ್ಳುವುದು ಸಾಧ್ಯವಾಯಿತು. ಈ ಬಗೆಯ ಸೌಲಭ್ಯ ದೊರೆತುದರಿಂದಾಗಿ ಅನೇಕ ಉತ್ತಮ ತಳಿಯ ಪಶುಗಳನ್ನು ಅಭಿವೃದ್ಧಿಗೊಳಿಸುವುದು ಸಾಧ್ಯವಾಯಿತು. ಏಕೆಂದರೆ, ಅವನ್ನು ಒಯ್ಯುವ ಪರಿಶ್ರಮವು ಬೇಕಷ್ಟು ಹಗುರವಾಯಿತು ಈ ಕಾರಣದಿಂದಲೇ ಇಂದು ಅಮೆರಿಕೆಯಲ್ಲಿ ಉತ್ತಮೋತ್ತಮ ಜಾತಿಯ ಪಶುಗಳು ಅಧಿಕ ಸಂಖ್ಯೆಯಲ್ಲಿವೆ. ಅವುಗಳಿಗೆ ಹುಲ್ಲೇ ಮುಖ್ಯ ಆಹಾರವಾದರೂ ಪೌಷ್ಟಿಕ ಆಹಾರಾಂಶಗಳ ಪೂರಯ್ಕೆಯನ್ನು ಮಾಡುವುದೂ ಇಂದು ಸಾಧ್ಯವೆನಿಸಿದೆ.

ಚಿತ್ರ ೧೩ ರೋಡಿಯೊ

ಮೊದಲ ದಿನಗಳಲ್ಲಿ ಗೋಪಾಲಕರ ಮ್ಮ ದಿನದ ಪರಿಶ್ರಮ ಸಹಿತ ಕೆಲಸದ ಬಳಿಕ ವಿನೋದಕ್ಕಾಗಿ ಒಡಾಡುತಿದ್ದರು ಕುದರೆ ಓಡಿಸಿಯಾರು ಪ್ರಥಮರಾಗಿ ಗುರಿ ಸೇರುತ್ತಾರೋ ಅವರು ಗೆದ್ದವರೆಂದು ತಿಳಿಯುತ್ತಿದ್ದರು, ಆನಂದಿಸುತ್ತಿದ್ದರು. ಈ ಆಟದಿಂದಲೇ ಇಂದು ಪ್ರಸಿದ್ಧವಾದ ರೋಡಿಓ ಎಂಬ ಓಟದ ಸ್ಪರ್ಧೆಯು ಹುಟ್ಟಿಕೊಂಡಿದೆ ಒಂದು ಗೋಪಾಲಕರು ಅನುಸರಿಸುತಿದ್ದ ಆಟದ ಕ್ರಮವನ್ನೇ ಇದೂ ಅನುಸರಿಸುತ್ತಿದೆ.

ಚಿತ್ರ ೧೪ ಇಂದಿನ ದೊಡ್ಡಿಗಳು

ಹಿಂದಿನಂತೆಯೇ ಇಂದಿಗೂ ಪಶುಗಳು ಹಿಂಡು ಹಿಂಡಾಗಿಯೇ ಸಾಕಲ್ಪಡುವವು. ಆದರೂ ಅಂದು-ಇಂದುಗಳ ಮಧ್ಯೆ ಬಹಳಷ್ಟು ಅಂತರವಿದೆ. ಎಂದರೆ, ಇಂದಿನ ದೊಡ್ಡಿಗಳಿಗೆ ಸಕಲ ವಿಧದ ಆಧುನಿಕ ಸಾಧನೋಪಕರಣಗಳು ಲಭ್ಯವಿವೆ. ಹೆಚ್ಚಿನೆಡೆಗಳಲ್ಲಿ ಜೀಪು ಮತ್ತು ಟ್ರಕ್ಕುಗಳ ಬಳಕೆಯಲ್ಲಿವೆ ಪಶುಗಳ ಮೇಲ್ವಿಚಾರಣೆಯನ್ನು ಚಿಕ್ಕ ವಿಮಾನಗಳಲ್ಲಿ ಕುಳಿತು ವೀಕ್ಷಿಸುತ್ತ ಮಾಡುತ್ತಾರೆ. ಮೇಲಿನ ಹೊಸ ಧಂಡಾರ ಶೋಧನೆಯಲ್ಲಿ ವಿಮಾನಗಳು ಪ್ರಮುಖ ಪಾತ್ರ ವಹಿಸುತ್ತವೆ. ಹಿಂದಿನ ಪ್ರಧಾನ ಕೇಂದ್ರ ಹಾಗೂ ಸಂಚಾರಿ ಉಪ ಕೇಂದ್ರಗಳ ನಡುವೆ ರೇಡಿಯೋ ಮೂಲಕ ವ್ಯವಹಾರ ನಡೆಸುವ ಅನುಕೂಲತೆಯೂ ಇದೆ. ಎಂದರೆ, ನಮ್ಮ ದೇಶದಲ್ಲಿ ಮಾನವರಿಗೂ ದುರ್ಲಭವಾಗಿರುವ ಸೌಕರ್ಯಗಳನ್ನು ಅಮೆರಿಕೆಯ ಪಶುಗಳು ಪಡೆಯುತ್ತಿವೆಯೆಂದರೆ, ಸರಿಯಾದೀತು ಹೈನಾಭಿವೃದ್ಧಿಯಾಗಲು ಇದೂ ಕಾರಣವಾಗಿದೆ.

ಚಿತ್ರ ೧೫ ಇಂದಿನ ಗೋಪಾಲ

ಪಶುಗಾವಲಿನಲ್ಲಿ ಅಂದಿನ ಗೋಪಾಲರು ಆಧುನಿಕ ಸೌಲಭ್ಯಗಳಿಲ್ಲದೇನೇ ಪ್ರಮುಖ ಪಾತ್ರ ಪಡೆದಿದ್ದರು. ಆಧುನಿಕ ಸೌಕರ್ಯಗಳನ್ನು ಪಡೆಯುತ್ತಿರುವ ಇಂದಿನ ಗೋಪಾಲನ ಸ್ಥಾನಮಾನಗಳೇನೂ ಕಡಿಮೆಯಾಗಿರುವುದಿಲ್ಲ. ಆತನು ತನ್ನ ವ್ಯಕ್ತಿತ್ವವನ್ನು ಉಳಿಸಿಕೊಂಡೇ ಬಂದಿದ್ದಾನೆ ಪಶುಪಾಲನೆಯಲ್ಲಿ ಆತನೂ ಆತನ ಕುದುರೆಯೂ ಹಿಂದಿನಂತೆಯೇ ಅಗ್ರಗಣ್ಯ ಸೇವೆ ಸಲ್ಲಿಸುತಿದ್ದಾರೆ. ತನ್ನ ಶ್ರಮಪ್ರದವಾದ ಕರ್ತವ್ಯ ಪಾಲನೆಯನ್ನು ಎಳ್ಳಷ್ಟೂ ದೋಷವಿಲ್ಲದಂತೆ ಆತನಿಂದಿಗೂ ನಡೆಸುತಿದ್ದಾನೆ ಮಾಡುವ ಕೆಲಸದಲ್ಲಿ ಪೂರ್ಣ ಆಸಕ್ತಿಯಿರುವುದರಿಂದಲೇ ಆತನಿನ್ನೂ ಪ್ರಸನ್ನನಾಗಿದ್ದಾನೆ. ನಮ್ಮ ಭಾರತದಲ್ಲಿಯೂ ಈ ತೆರದ ಪ್ರಗತಿ ಮಾಡಲು ಇನ್ನೆಷ್ಟು ಶತಕಗಳು ಬೇಕಾದಾವು?



೧೨

೧೩



೧೪



೧೫

ಗೀತಾ-ದ್ವಿತೀಯ ಅಧ್ಯಾಯ

(ಏಳನೇ ಪುಟದಿಂದ)

ಗಳೂ, ಸುಖ, ದುಃಖ ಸನ್ನಿವೇಶಗಳೂ, ಹೀಗೆ ಬದಲಾಗುತ್ತಾ ಇರುವಾಗ ವಿವೇಕಿಯು ಸುಖದಿಂದ ಹಿಗ್ಗಲಾರನು. ಅದು ತಕ್ಷಣ ಕಳೆದು ಹೋಗುವುದು. ಹೊಸ ಸನ್ನಿವೇಶ ಪ್ರಾರಂಭವಾಗಿ ಆ ಸಂತೋಷ ಮಾಯವಾಗಿ, ಬದಲು, ದುಃಖ ಸನ್ನಿವೇಶವು ಬಂದೀತು.

ದುಃಖದ ಪ್ರಸಂಗಗಳು ಬಂದರೂ, ವಿವೇಕಿಯು ಅಳುವುದಿಲ್ಲ. ಅದು ಕೂಡಾ ನಿಲ್ಲಲಾರದು. ಹಾದು ಹೋಗುವುದು ನಿಜ. ದುಃಖದ ಹಿಂದೆ ಸುಖ ಬಂದೀತು. ಆದರಿಂದ ಈ ಸುಖ ದುಃಖಗಳನ್ನು ಸಹಿಸಿಕೊಳ್ಳಬೇಕು. ಹೇಗೆ?

ಯಂ ಹಿ ನ ವ್ಯಥಯಂ-
ತ್ಯೇತೇ ಪುರುಷಂ ಪುರುಷರ್ಷಭ|
ಸಮ ದುಃಖ ಸುಖಂ ಧೀರಂ
ಸೋಽಮೃತತ್ವಾಯ ಕಲ್ಪತೇ ||೧೫||

ಮಾನವರಲ್ಲಿ ಶ್ರೇಷ್ಠನಾದವನೇ, ಯಾರು ಸುಖ ದುಃಖಗಳನ್ನು ಸ್ಥಿತಚಿತ್ತನಾಗಿ ಅನುಭವಿಸುವನೋ ಅವನೇ, ನಿಜಕ್ಕೂ ಉತ್ತಮನು. ಅವನು ಅನಂತತ್ವ ಪಡೆಯಲು ಅರ್ಹತೆ ಪಡೆದಿರುವನು.

ಸುಖ ದುಃಖಗಳು ಸ್ಥಿರವಾಗಿ ನಿಲ್ಲಲಾರವು ಎಂದು ಅವುಗಳಿಂದ ಕದಲದೆ ಶಾಂತಚಿತ್ತನಾಗಿಯೇ ಅವುಗಳನ್ನು ಸಹಿಸುವಂತಹ ಧೀರ ಮನಸ್ಸಿನವನೇ ಅತ್ಯುತ್ತಮನು. ಇದನ್ನೇ ಉಪನಿಷತ್ ತತ್ವಗಳಲ್ಲಿ ಹೇಳಲಾಗಿದೆ. ಅಮೃತತ್ವ ಪಡೆಯಲು ಸಾಧಿಸುವವನು ಈ ಸುಖದುಃಖಗಳನ್ನು ಲೆಕ್ಕಿಸದೆ ಧೀರನಾಗಿ, ಬಾಳುವೆ ನಡೆಗಿಸಬೇಕು. ಹೀಗೆ ಸಾಧಿಸಿದವನೇ ಈ ಅನಂತತ್ವ ಅಥವಾ ಅಮರತ್ವ ಪಡೆಯಲು ಯೋಗ್ಯನಾಗಿರುವನು. ಉಪನಿಷತ್ತಿನಲ್ಲಿ ಹೇಳಿದ ಅಮರತ್ವವು ದೇಹಕ್ಕೆ ಸಂಬಂಧಿಸಿದುದಲ್ಲ. ಇದು ಗೀತೆಯಲ್ಲಿಯೂ ಸ್ಪಷ್ಟವಾಗಿರುವುದು. ಈ ಅಮರತ್ವದ ಅನುಭವ, ಮನಸ್ಸು, ಬುದ್ಧಿಗಳನ್ನು ಸಮತೋಲನವಾಗಿರಿಸಿದರೇ ದೊರಕುವುದು. ಎಂದು ಸೂಚಿಸಲು, ಬಾಹ್ಯ ಸನ್ನಿವೇಶಗಳಿಂದ ಬಂದಿನಿಕೂ ಕದಲದೆ, ಸ್ಥಿರಚಿತ್ತದಿಂದ ಬಾಳು ಕಲಿತಾತ, ಈ ಅಮರತ್ವದ ಅನುಭವವನ್ನು ಪಡೆಯಬಹುದು. ಹಾಗೆ ಜೀವನ ಬಾಳುವವನೇ ಈ ಅಮರತ್ವಕ್ಕೆ ಅರ್ಹನೆನಿಸುವನು.

ನಾಸತೋ ವಿದ್ಯತೇ ಭಾವೋ
ನ ಭಾವೋ ವಿದ್ಯತೇ ಸತಃ |
ಉಭಯೋರಪಿ ದೃಷ್ಟೋಽನ್ತಸ್ತ್ವ-
ನಯೋಸ್ತತ್ತ್ವದರ್ಶಿಭಿಃ ||೧೬||

ನಾಶ ಹೊಂದುವ ವಸ್ತುವಿಗೆ ನಾಶ ಹೊಂದದ ಸ್ಥಿತಿ ಇಲ್ಲ. ಅವಿನಾಶಿಯಾದ ವಸ್ತು ಎಂದಿಗೂ ಇಲ್ಲ ಎಂದಿಲ್ಲ. ಈ ಎರಡರ ತತ್ವತೆಯನ್ನು ಜ್ಞಾನಿ ಅರಿತವನು.

ಯಾವುದು ಸತ್, ಯಾವುದು ಅಸತ್ ಎಂದು ತಿಳಿದವ ವಿಜ್ಞಾನಿ. ಸಾಂಖ್ಯ ತತ್ವದ ಮೇಲೆ ನಾಶವಾಗುವ ವಸ್ತು ಅಸತ್; ಮತ್ತು ನಾಶವಾಗದ ವಸ್ತು ಸತ್. ನಮ್ಮ ಇಂದ್ರಿಯಾದಿ ವಸ್ತುಗಳು, ಬಾಹ್ಯ ಸ್ಥೂಲ ವಸ್ತುಗಳು, ಬದಲಾವಣೆ ಹೊಂದುವುವು, ನಾಶ ಹೊಂದುವುವು. ದೇಹ, ಮನಸ್ಸು, ಬುದ್ಧಿಗಳು ಬಾಲ್ಯದಿಂದ ವೃದ್ಧಾಪ್ಯದ ತನಕ ಬದಲಾಗುತ್ತಾ ಹೋಗುವುವು. ಅವು ನಾಶವಾಗುವುವು. ಆದರೆ ಈ ಬದಲಾವಣೆಯನ್ನು ಈಕ್ಷಿಸುವ 'ನಾನು' ಮಾತ್ರ ಒಂದೇ ತರಹ ಇರುವುದು. ಅದು ಸತ್. ನಾಶ ಹೊಂದಲಾರದು. ಅದು ಮಾತ್ರ ಸತ್, ಎಂದು ತಿಳಿ. ಸ್ಥೂಲ ದೇಹದಿಂದ ಈ 'ನಾನು' ಬಿಡುಗಡೆ ಹೊಂದುವುದೇ ಮರಣ. ಆದರೆ ಮರಣದ ಬಳಿಕವೂ ಈ 'ನಾನು' ಎಂಬ ವ್ಯಕ್ತಿಗೆ ಸೂಕ್ಷ್ಮ ಶರೀರವು ದೊರಕುವುದು. ಅನುಭವ ವಿಶೇಷಗಳನ್ನು ಈ ದೇಹದಲ್ಲಿರುವಾಗ ಗ್ರಹಿಸಿದುದನ್ನು, ಇಚ್ಛಿಸಿದ ಬಯಕೆಗಳನ್ನು, ಮಾಡಿದ ಕರ್ಮಾನುಸಾರವಾಗಿ ಅನುಭವಿಸಲು ಇನ್ನೊಂದು ಉಪಕರಣ ದೊರೆಯುವುದು. ಆದರಿಂದ ಈ ನಾನು ಎಂಬ ವ್ಯಕ್ತಿತ್ವವು ಹಿಂದೆಯೂ ಇತ್ತು. ಇಂದೂ ಇದೆ. ಮುಂದೆಯೂ ಇರುವುದು ಖಂಡಿತ, ಆದಕ್ಕಾಗಿ ಈಗ ಕಾಣುವ ಈ ಶರೀರದಲ್ಲಿ ಮಾತ್ರವೇ ಈ ರಾಜರು, ಸೋದರರನ್ನು ನೋಡಿ ಅವರು ನಾಶ ಹೊಂದುವರೆಂದು ಭ್ರಮಿಸಬೇಡ

ಅವಿನಾಶಿ ತು ತದ್ವಿದ್ಧಿ
ಯೇನ ಸರ್ವಮಿದಂ ತತಮ್ ।
ವಿನಾಶಮವ್ಯಯಸ್ಯಾಸ್ಯ ।
ನ ಕಶ್ಚಿತ್ಕರ್ತುಮರ್ಹತಿ ||೧೭||

ಅವಿನಾಶಿಯಾದ ಈ ಆತ್ಮದಿಂದ ಎಲ್ಲವೂ ಇದೆ. ಇದನ್ನು ಯಾರಿಂದಲೂ ಕೊಲ್ಲಲು, ನಾಶಪಡಿಸಲು ಸಾಧ್ಯವಿಲ್ಲ.

ಮರಣ ಕಾಲದಲ್ಲಿ ಶರೀರ ಮಾತ್ರ ಬಿದ್ದು ಹೋಗುವುದು ಹೊರತು, "ಈ ನಾನು" ಎಂಬ ವ್ಯಕ್ತಿತ್ವವು ಎಲ್ಲಿಗೂ ಹೋಗುವುದಿಲ್ಲ. ಆದರಿಂದಾಗಿ ಇವರು ಸಾಯುವರು. ನಾನು ಕೊಲ್ಲುವೆನು ಎಂದು ಮರುಗಬೇಡ. ಹೀಗೆ ತಿಳಿದವನು ಜ್ಞಾನಿಯು.

ಈ ಸತ್, ಅಸತ್ ಎಲ್ಲಾ ಒಂದೇ ವಸ್ತುವಿನಿಂದ ಬಂದಿದೆ. ಇವೆರಡನ್ನು ತಿಳಿದವನೇ ಜ್ಞಾನಿ. ಆದರಿಂದಾಗಿ ನೀನು ಈ ಅವಿನಾಶಿಯಾದ "ನಾನು" ಎಂಬ ಆತ್ಮವನ್ನು ಕೊಲ್ಲಲು ಸಾಧ್ಯವಿಲ್ಲ. ಮತ್ತು ಅದು ಸಾಯುವುದು ಕೂಡಾ ಇಲ್ಲ. ಈ ಅವಿನಾಶಿಯಾದ ಆತ್ಮ ಎಲ್ಲರಲ್ಲೂ ಒಂದೇ ಆಗಿದೆ; ಅದನ್ನು ನಾಶ ಮಾಡಲು ಬೇರರಿಗೂ ಸಾಧ್ಯವಿಲ್ಲ. ಏಕೆಂದರೆ ಅವನು ಹಿಂದೆ ಇದ್ದನು; ಎಂದರೆ ಹುಟ್ಟು ಇಲ್ಲದವನು. ಎಲ್ಲವನ್ನೂ ಅದು ಆವರಿಸಿಕೊಂಡಿದೆ. ಅದಕ್ಕೆ ಎಂದಿಗೂ, ಯಾವಾಗಲೂ ನಾಶವಿಲ್ಲ.

ಅಂತವಂತ ಇಮೇ ದೇಹಾಃ|
ನಿತ್ಯಸ್ಯೋಕ್ತಾಃ ಶರೀರಿಣಃ||
ಅನಾಶಿನೋಽಪ್ರಮೇಯಸ್ಯ|
ತಸ್ಮಾದ್ಯುಧ್ಯಸ್ವ ಭಾರತ ||೧೮||

ಈ ದೇಹಕ್ಕೆ ಎಂದಿಗೂ ನಾಶ ತಪ್ಪದು. ಆತ್ಮವು ಮಾತ್ರ ನಾಶವಾಗದು. ಆದುದರಿಂದ ನೀನು ಯುದ್ಧ ಮಾಡು, ಓ ಭಾರತನೇ, ಎಂದು ಶ್ರೀ ಕೃಷ್ಣನು ಅರ್ಜುನನನ್ನು ಹುರಿದುಂಬಿಸಲು ಹೇಳಿದುದು. ಭರತ ವಂಶದವನು ಭಾರತ ಎಂದು. ಈ ಅಸತ್ ವಸ್ತುವಾದ ದೇಹ, ಇಂದ್ರಿಯಗಳೆಲ್ಲವೂ ಒಂದಲ್ಲ ಒಂದು ದಿನ ನಾಶವಾಗತಕ್ಕದ್ದೇ. ನಾಶವಾಗದೆ ಇರುವುದು ಆತ್ಮ ಮಾತ್ರ. ಅದು ಎಂದಿಗೂ ನಾಶವಾಗುವುದಿಲ್ಲ. ಆತ್ಮವು ಇಂದ್ರಿಯಗಳಿಗೆ ಅಗೋಚರವಾಗಿರುವುದು. ಅದು ಎಂದೆಂದಿಗೂ ಇರತಕ್ಕದ್ದು.

ಯ ಏನಂ ವೇತ್ತಿ ಹಂತಾರಂ|
ಯಶ್ಚೈನಂ ಮನ್ಯತೇ ಹತಮ್।
ಉಭೌ ತೌ ನ ವಿಜಾನೀತೋ|
ನಾಯಂ ಹಂತಿ ನ ಹನ್ಯತೇ ||೧೯||

ಯಾರು ಇವನನ್ನು ಕೊಲ್ಲುವೆನೆಂದು ತಿಳಿಯುತ್ತಾನೋ, ಯಾರು ಸಾಯುವೆನೆಂದು ಎಣಿಸಿಕೊಳ್ಳುವನೋ, ಇಬ್ಬರಿಗೂ, ಏನೂ ತಿಳಿವಿಲ್ಲ. ಇವನನ್ನು ಕೊಲ್ಲಲು ಸಾಧ್ಯವಿಲ್ಲ, ಮತ್ತು ಸಾಯುವುದೂ ಇಲ್ಲ.

ನ ಜಾಯತೇ ಮ್ರಿಯತೇ ವಾ ಕದಾ-
ಚಿನ್ನಾಯಂ ಭೂತ್ವಾ ಭವಿತಾ ವಾ ನ
ಭೂಯಃ|
ಅಜೋ ನಿತ್ಯಃ ಶಾಶ್ವತೋಽಯಂ
ಪುರಾಣೋ ನ ಹನ್ಯತೇ ಹನ್ಯಮಾನೇ
ಶರೀರೇ||೨೦||

ಈ ಆತ್ಮಕ್ಕೆ ಹುಟ್ಟು ಇಲ್ಲ. ಸಾವು ಇಲ್ಲ. ಇದು ಸತ್ಯ. ಹುಟ್ಟು ಸಾವು ಆದರಲ್ಲಿ ನಡೆಯುವುದು. ಆದರೆ ಅದಕ್ಕೆ ಹುಟ್ಟು ಸಾವು ತಾಗಲಾರದು. ಹುಟ್ಟು ಸಾವು ತಾಗಲಾರದು. ಹುಟ್ಟು ಸಾವು ದೇಹಕ್ಕೆ ಮಾತ್ರವೇ ಆಗಿದೆ.

ದೇಹಕ್ಕೆ ಬದಲಾವಣೆ ಉಂಟಾಗುವುದು. ಆದರಿಂದ ದುಃಖವು ಆಗುವುದು. ಆರು ವಿಧದ ಬದಲಾವಣೆ ದೇಹಕ್ಕೆ ಇದೆ. ಹುಟ್ಟು, ಇರುವಿಕೆ, ಬೆಳೆಯುವಿಕೆ, ಜೀರ್ಣವಾಗುವುದು, ರೋಗ, ಮೃತ್ಯು. ಇವೆಲ್ಲಾ ಎಲ್ಲಾ ದೇಹಕ್ಕೆ ಬರುವಂತಹದು. ಆದರೆ ಆತ್ಮಕ್ಕೆ ಇದೊಂದು ಇಲ್ಲ. ಏಕೆಂದರೆ ಆತ್ಮಕ್ಕೆ ಹುಟ್ಟು ಇಲ್ಲ. ಆದರಿಂದ ಅದಕ್ಕೆ ಬದಲಾವಣೆಗಳೇ ಇಲ್ಲ. ಇದು ಎಂದೆಂದಿಗೂ, ಪ್ರಾಚೀನವಾಗಿಯೇ ಇರುವುದು ದೇಹವು ಸತ್ತು ಹೋದರೆ ಅದು ಸತ್ತು ಹೋಗುದಿಲ್ಲ.

ವೇದಾವಿನಾಶಿನಂ ನಿತ್ಯಂ|
ಯ ಏನಮಜಮವ್ಯಯಮ್|
ಕಥಂ ಸ ಪುರುಷಃ ಪಾರ್ಥ।
ಕಂ ಘಾತಯತಿ ಹಂತಿ ಕಮ್ ||೨೧||

ಯಾರು ಈ ಆತ್ಮಕ್ಕೆ ನಾಶವಿಲ್ಲ, ಅದು ನಿತ್ಯ ಸತ್ಯ; ಹುಟ್ಟು ಇಲ್ಲದುದು, ನಾಶಪಡಿಸಲಾಗದುದು, ಎಂದು ತಿಳಿದವರೋ ಅವರು ಓ ಪಾರ್ಥ, ಇತರರನ್ನು ಕೊಲ್ಲುವರೆಂದೂ, ಇತರರಿಂದ ಕೊಲ್ಲಿಸಲ್ಪಡುವರೆಂದೂ ತಿಳಿಯುವುದಿಲ್ಲ. ಅವರೇ ಜ್ಞಾನಿಗಳು.

ಆತ್ಮದ ವಿಚಾರ ಹೇಳಿ ಎಂದರೆ ಆತ್ಮದ ಕುರಿತು ಸೂಚಿಸಿ, ಶ್ರೀ ಕೃಷ್ಣನು ಆತ್ಮವನ್ನು ತಿಳಿದವನು, ಜೀವನದಲ್ಲಿ ಎಂದಿಗೂ ದುಃಖ ಪೀಡಿತನಾಗಲಾರನು. ಎನ್ನುವನು. ಆತ್ಮವನ್ನು ತಿಳಿದ ಬಳಿಕ 'ನಾನು' ಎಂಬ 'ಅಹಂ'ನ್ನು ಹೇಗೆ ಒಬ್ಬನು ಇಟ್ಟುಕೊಳ್ಳಲು ಸಾಧ್ಯ? ಮತ್ತು ಆತ್ಮದ ಅವಿನಾಶತೆಯನ್ನು ಪುನಃ ಹೇಳಲಾಗಿದೆ. ಆದರಿಂದ ಇತರರನ್ನು ನಾನು ಕೊಲ್ಲುವೆನೆಂದು ಒಬ್ಬನು, ಎಂದರೆ ಜ್ಞಾನಿಯು ಹೇಗೆ ಹೇಳಿಕೊಳ್ಳುವನು? ಅಥವಾ, ಇತರರಿಂದ ನಾನ, ಕೊಲ್ಲುವಂತೆ ಪ್ರೇರೇಪಿಸುವೆನು ಎಂದು ಹೇಳಬಹುದು?

ಸಶೇಷ

ಉಪಯುಕ್ತವಾದ ಕೆಲವು ಪುಸ್ತಕಗಳು

		ರೂ. ನ.
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ	(ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು	(ಅನು: ಕೆ. ಬಿ ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಅನು: ಕು.ಶಿ.ಹರಿದಾಸ ಭಟ್)	2=00
ಹಿರೋಶಿಮಾದಿಂದ ಜಿನೇವ	(ಯು. ಆರ್. ಆಚಾರ್ಯ)	1=50
ಮೋಹದ ಮಹಾಜಾಲ	(ವೀರಪ್ಪ ಯಗಟಿ)	1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ	(ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ಏಶಿಯದ ಸಂಪತ್ತು	(ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು	(ಅನು: ಕು.ಶಿ.ಹರಿದಾಸ ಭಟ್)	1=75
ಕುಲವಿಲ್ಲದ ಹೆಣ್ಣು	(ಪಿ. ವೆಂಕೋಬಾಚಾರ್ಯ)	1=50
ಚಿತ್ರಾಂಗದೆ	(ಅನು: ಕೆ. ಕೆ. ಶೆಟ್ಟಿ)	0=60
ರವೀಂದ್ರರ ಕತೆಗಳು	(ಹನುಮಂತ ರಾವ್ ಮಾಂಜ್ರೇಕರ)	0=90
ಹಸುರು ಹಂಸ	(ನಚಿಕೇತ)	2=00
ಭಾವಾರ್ಚನೆ	(ನಚಿಕೇತ)	1=25
ಋಣ ಯಾತ್ರೆ	(ನಚಿಕೇತ)	1=50
ಗೀತೆಯ ಕೈಗನ್ನಡಿ	(ಹೊಸಕೆರೆ ಚಿದಂಬರಯ್ಯ)	1=00

ವಿವರವಾದ ಕೆಟಲಾಗಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: **ನವಭಾರತ ಪುಸ್ತಕ ಭಂಡಾರ, ಉಡುಪಿ.**

READ & ADVERTISE IN

NAVAYUGA WEEKLY

ಅಭಿಪ್ರಾಯ

ನೆಹರೂ ಮತ್ತು ಸಮಾಜವಾದ

ಲೇಖಕರು: ಪ್ರೊ|| ಹಿರೇನ್ ಮುಖರ್ಜಿ, ಪಾರ್ಲಿಮೆಂಟ್ ಸದಸ್ಯರು;

ಲಾಹೋರಿನಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷ ಪೀಠದಿಂದ ಮಾತನಾಡುತ್ತಿದ್ದ ಜವಾಹರಲಾಲ್ ನೆಹರೂರವರು ತಾವು "ಓರ್ವ ಸಮಾಜವಾದಿ ಮತ್ತು ಪ್ರಜಾಪ್ರಭುತ್ವವಾದಿ" ಎಂದು ಹೇಳಿ ಕೊಂಡಿದ್ದರು. ೧೯೨೯–೩೦ರ ಸಮಯದಲ್ಲಿ ಭಾರತದಲ್ಲಿ ಪಡಗರದ ವಾತಾವರಣವಿದ್ದ ಕಾರಣ ನೆಹರೂರವರ ಹೇಳಿಕೆಯು ಆಶ್ಚರ್ಯಕರವಾಗಿ ಕಂಡು ಬರಲಿಲ್ಲ. ಆರು ವರ್ಷಗಳ ತರುವಾಯ ಲಖನೌದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ನೆಹರೂರವರು ಸಮಾಜವಾದವನ್ನು ಕುರಿತು ಮಾತನಾಡುತ್ತಾ "ಪ್ರಪಂಚದ ಸಮಸ್ಯೆಗಳು ಮತ್ತು ಭಾರತದ ಸಮಸ್ಯೆಗಳ ಪರಿಹಾರಕ್ಕೆ ಸಮಾಜವಾದವು ತಾರಕ ಮಂತ್ರವೆಂದು ಸಾರಿದ್ದರು. ಸಮಾಜವಾದದ ಬಗ್ಗೆ ತಾವು ಅಸ್ಪಷ್ಟವಾದ ಹಾಗೂ ಮಾನವೀಯತೆಯ ಕಲ್ಪನೆಯನ್ನು ಹೊಂದಿಲ್ಲವೆಂದೂ ತಾವು ಅದನ್ನು ವೈಜ್ಞಾನಿಕ ಹಾಗೂ ಆರ್ಥಿಕ ದೃಷ್ಟಿಯಿಂದ ಕಾಣುತ್ತಿರುವುದಾಗಿಯೂ ಹೇಳಿದರು. ಮರು ವರ್ಷ ಅವರು ಫೈಜ್‌ಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಮಾತನಾಡುತ್ತಾ "ಭಾರತದ ಜನಸಾಮಾನ್ಯರ ಕಷ್ಟ ಕಾರ್ಪಣ್ಯಗಳನ್ನು ನಾನು ಕಂಡಿದ್ದೇನೆ. ಈಗ ಹೊತ್ತಿರುವ ಸಹಿಸಲಸದಳವಾದ ಹೊರೆಗಳಿಂದ ತಮ್ಮನ್ನು ಪಾರುಮಾಡಬೇಕೆಂದು ಅವರ ಕಣ್ಣುಗಳು ಸೂಚಿಸುವುದನ್ನು ನಾನು ಕಂಡಿದ್ದೇನೆ. ನನ್ನ ಸಮಸ್ಯೆಯಾದರೂ ಇದೇ ಆಗಿದೆ. ಉಳಿದವೆಲ್ಲ ಗೌಣ" ಎಂದು ಹೇಳಿದ್ದರು. ಆ ಮಾತುಗಳನ್ನು ಮರೆಯುವಂತೆಯೇ ಇಲ್ಲ.

ವ್ಯಕ್ತಿ ಸ್ವಾತಂತ್ರ್ಯವಾದಿ

ಭಾರತಕ್ಕೆ ಸ್ವಾತಂತ್ರ್ಯ ಬರುವ ಪೂರ್ವದಲ್ಲಿಯೇ ಹಾಗೂ ಭಾರತದ ಪ್ರಧಾನ ಪ್ರಧಾನಿಯಾಗಿ ಅಧಿಕಾರಗಳನ್ನು ವಹಿಸಿಕೊಳ್ಳುವುದಕ್ಕೆ ಪೂರ್ವದಲ್ಲಿಯೇ ಜವಾಹರಲಾಲ ನೆಹರೂರವರು ಸಮಾಜವಾದದ ಕಾರಣ ಆಕ್ಷೇಪಣೆಗೆ ಒಳಗಾಗಿದ್ದರು. ಅವರು ಸಮಾಜವಾದದ ಬಗ್ಗೆ ಅಸ್ಪಷ್ಟವಾಗಿದ್ದಾರೆಂದು ಟೀಕೆಗೊಳಗಾಗಿದ್ದರು. ಆಗ ಅವರು ಟೀಕೆಗಳಿಗಿತ್ತ ಉತ್ತರ ಈ ರೀತಿ ಇತ್ತು: "ನಾನು ಸಮಾಜವಾದಿಯೇ ಅಥವಾ ವ್ಯಕ್ತಿ ಸ್ವಾತಂತ್ರ್ಯವಾದಿಯೇ? ಈ ಎರಡು ಶಬ್ದಗಳಲ್ಲಿ ವಿರೋಧದ ಅರ್ಥವಿದೆಯೇ? ನಾನು ಸ್ವಭಾವತಃ ಮತ್ತು ಸಾಧನೆಯ ಮೂಲಕ ವ್ಯಕ್ತಿ ಸ್ವಾತಂತ್ರ್ಯವಾದಿ ಮತ್ತು ಬೌದ್ಧಿಕವಾಗಿ ಸಮಾಜವಾದಿ. ಸಮಾಜವಾದವು ವ್ಯಕ್ತಿತ್ವವನ್ನು ಅಳಿಸಿಬಿಡುವುದಿಲ್ಲ ಅಥವಾ ತುಳಿದು ಹಾಕುವುದಿಲ್ಲವೆಂದು ನಾನು ನಂಬಿದ್ದೇನೆ. ವ್ಯಕ್ತಿತ್ವವು ಅಸಂಖ್ಯಾತ ವ್ಯಕ್ತಿಗಳನ್ನು ಆರ್ಥಿಕ ಹಾಗೂ ಸಾಂಸ್ಕೃತಿಕ ಬಂಧನದಿಂದ ವಿಮುಕ್ತಗೊಳಿಸುವ ಕಾರಣ ನಾನು ವ್ಯಕ್ತಿ ಸ್ವಾತಂತ್ರ್ಯವಾದದತ್ತ ಆಕರ್ಷಿತನಾಗಿದ್ದೇನೆ."

ಸಭ್ಯ ಹಾಗೂ ತುಂಬಾ ಸೂಕ್ಷ್ಮಮತಿಯಾದ ಹಾಗೂ ಉದ್ಧಟತನ ಮತ್ತು ಹಠಮಾರಿತನಗಳಿಂದ ನೊಂದುಕೊಂಡ, ಸಮಾಜವಾದದ ಗುರಿಯತ್ತ ಭಾರತವು ತ್ವರಿತವಾಗಿ ಸಾಗಲು ಒರಟುತನದ ಹೋರಾಟ ವಿಧಾನಕ್ಕೆ ಒಗ್ಗದ ವ್ಯಕ್ತಿಯದನಿಯಿದು.

ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿ ಅವರು ಈ ವಿಷಯವನ್ನು ಬಲಾತ್ಕಾರವಾಗಿ ಮುಂದಿಡಲು ಸಿದ್ಧರಿರಲಿಲ್ಲ. ಏಕೆಂದರೆ ಹೀಗೆ ಬಲಾತ್ಕಾರವಾಗಿ ಈ ವಿಷಯವನ್ನು ಮುಂದಿಟ್ಟರೆ, ರಾಷ್ಟ್ರೀಯ ಚಳವಳಿಗೆ ಧಕ್ಕೆಯುಂಟಾಗಬಹುದೆಂದು ಅವರು ಹೆದರಿದ್ದರು. ಸ್ವಾತಂತ್ರ್ಯ ಬಂದನಂತರ ಅಗತ್ಯವಾದ ಉಗ್ರಕ್ರಮಗಳನ್ನು ತೆಗೆದುಕೊಳ್ಳಲು ಹಿಂದೇಟು ಹಾಕುತ್ತಿದ್ದರವರು. ನಯವಾದ ವಿಧಾನಗಳಿಂದ ಸಮಸ್ಯೆಗಳನ್ನು ಬಗೆಹರಿಸಲು ಯತ್ನಿಸುತ್ತಿದ್ದರವರು. ಅಪ್ರಯುಕ್ತ ಪರಿಣಾಮಕಾರಿಯಾಗದಿದ್ದರೂ ಕೂಡ ಅದನ್ನು ಸಮರ್ಥಿಸಿಕೊಳ್ಳುತ್ತಿದ್ದರವರು.

ಮೂರನೆಯ ದಶಕದಲ್ಲಂತೂ ಜವಾಹರಲಾಲರವರು ಸಧಾರಣಾವಾದವನ್ನು ಖಂಡಿಸಲು ಹೇಸಲಿಲ್ಲ. ಈಗ ರೂಢಿಯಲ್ಲಿರುವ ಪದ್ಧತಿಗಳಿಂದ ಸಂಪೂರ್ಣವಾಗಿ ವಿಮೋಚನೆಗೊಳ್ಳಬೇಕೆಂದೂ ಅವರು ಹೇಳಿದ್ದರು. ತಾವು ಕಮ್ಯೂನಿಸ್ಟರಲ್ಲವೆಂದೂ ತಾವು ಸ್ವಲ್ಪಮಟ್ಟಿಗೆ ೧೯ನೆಯ ಶತಮಾನಕ್ಕೆ ಸೇರಿದವರೆಂದೂ ಅವರೇ ಹೇಳಿಕೊಂಡಿದ್ದಾರೆ. ನಮ್ಮ ವಿಚಿತ್ರ ಸಮಸ್ಯೆಗಳ ಬಗ್ಗೆ ರಾಷ್ಟ್ರೀಯನಾಯಕರಾಗಿ ಅವರು ತುಂಬಾ ಎಚ್ಚರದಿಂದಿರಬೇಕಾಯಿತು. ಒಮ್ಮೆ ಮಾರ್ಕ್ಸ್‌ವಾದವನ್ನು ಅವರು ಪ್ರಶಂಸಿಸುತ್ತಾ "ನಾವೀಗ ಎದುರಿಸಬೇಕಾಗಿರುವುದು ಸಮತಾವಾದವನ್ನಲ್ಲ. ಕೋಮುವಾರು ಭೂತವನ್ನು" ಎಂದು ಹೇಳಿದ್ದುಂಟು.

ಜವಾಹರಲಾಲರು ಉಳಿದ ಯಶಸ್ವಿ ಕ್ರಾಂತಿಕಾರಿಗಳಂತೆ ನಿರ್ದಯದಿಂದ ವರ್ತಿಸಲಿಲ್ಲ. ಜನರು ತಾವಾಗಿಯೇ ಜವಾಹರಲಾಲರಿಗೆ ಬೃಹತ್ ಜಂಟಲು ನೀಡಿದಾಗಲೂ ಸಹ ಅವರು ಅದನ್ನು ದುರುಪಯೋಗಪಡಿಸಲಿಲ್ಲ.

(ಆಕಾಶವಾಣಿ ಸೌಜನ್ಯದಿಂದ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ಮೇನಕೆ ಬೇಕು–ಮಗು ಬೇಡ

(ಆರನೇ ಪುಟದಿಂದ)

ದೆ ಅವನ ಬಿಡುಗಡೆಯೂ ಆಯಿತು. ಮತ್ತೆ ಬಂಧಿಸಿದ್ದಾದರೂ ಏತಕ್ಕೆ? ಪ್ರಚಾರ ಮಾಡಲಿಕ್ಕಾಗಿ ಏನು? ಅನ್ಯ ದೇಶಗಳಿಗೆ ಹೋಗಲು ಅವರಿಗೆ ಅನುಮತಿ, ಸಹಾಯ ಎಲ್ಲಾ ಸಿಕ್ಕಿತು. ಅಲ್ಲಿ ಹೋಗಿ ಅವನು ವಿಷಕಾರಿ ಬಂದನು. ಪುನಃ ಅವನನ್ನು ಬಂಧಿಸಿದರು. ಅವನನ್ನು ತಂಪಿನ ಉದಕಮಂಡಲದಲ್ಲಿ ಕೊಂಡೊಯ್ದಿಟ್ಟರು. ಅಲ್ಲಿ ಆದರೂ ಅವನಿಗೇನು ಕಮ್ಮಿ? ಎಲ್ಲಾ ಸಿಗುತ್ತದೆ. ಅಷ್ಟೇ ಅಲ್ಲ; ಅವನನ್ನು ಕಾಯಲು ಅಥವಾ—ಅದಕ್ಕಿಂತಲೂ ಅವನ ರಕ್ಷಣೆಗೆ ಮತ್ತು ಸಹಾಯಕ್ಕಾಗಿ ಇರುವವರು ಮುಸ್ಲಿಮರೇ ಇದ್ದಾರೆ. ಅದಕ್ಕಾಗಿ ಅವರನ್ನು ಅಲ್ಲಿಗೆ ಕಳುಹಿಸಲಾಗಿರುತ್ತದೆ. ಮುಸ್ಲಿಮೇತರರ ಮೇಲೆ ಕಾಂಗ್ರೆಸ್ ಸರಕಾರಕ್ಕೆ ನಂಬಿಕೆ ಇಲ್ಲವೇನು? ಶೇಖ್ ಅಬ್ದುಲ್ಲಾನಿಗಾಗಿ ಇರುವ ಕಾನ್‌ಸ್ಟೇಬಲ್ ಹಾಗೂ ಡಿ. ಎಸ್. ಸಿ. ಮುಸ್ಲಿಮರಿದ್ದಾರೆ. ಇದೇಕೆ ಹೀಗೆ? ಮಹಾನ್ ದೇಶಭಕ್ತ,–ದೇಶ ವಿಭಜನೆಗಾಗಿ ಹೋರಾಡುತ್ತಿರುವ ದೇಶ ಘಾತುಕ, ಸ್ವಾರ್ಥಿಗೆ ಸಿಗುತ್ತಿರುವ ರಾಜಭೋಗ ಎಂತಹದ್ದು? ಶೇಖ್ ಅಬ್ದುಲ್ಲಾನ ಹಿಂದುಗಡೆ ಇರುವ ಮುಹಮ್ಮದೀಯರ ಮತಗಳ ಮೇನಕೆ ಕಾಂಗ್ರೆಸ್ಸಿಗೆ ಬೇಕು. ಆದರೆ ಅದರ ಫಲದ ಶಿಶು ಅವರಿಗೆ ಬೇಕಾಗಿಲ್ಲ!

ಛತ್ರಪತಿ ಶಿವಾಜಿ ಮಹಾರಾಜಾ, ಮಹಾರಾಣಾ ಪ್ರತಾಪಸಿಂಹರ ಜನ್ಮದಿನೋತ್ಸವದ ಮೇನಕೆ ಮಾತ್ರ ಬೇಕು ರಕ್ಷಣಾ ಮಂತ್ರಿಯವರಿಗೆ ಹಾಗೂ ಅಧಿಕಾರ ರೂಢ ಪಕ್ಷಕ್ಕೆ. ಆದರೆ ಆ ಮಹಾ ವೀರಪುರುಷರು ತಾಯಿಯ ಕೈಗಳ ಬಂಧನವನ್ನು ಕಡಿದೆಗೆದು ಗೌರವಪೂರ್ಣ ಸ್ವರಾಜ್ಯ ತಥಾ ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಿದರೋ ಆ ಕಾರ್ಯವೆಂಬ ಶಿಶು ಮಾತ್ರ ಬೇಕಾಗಿಲ್ಲ ಅವರಿಗೆ. ಆದರೆ ಆ ಶಿಶುವಿಗೂ ಓರ್ವ ಕಣ್ವನ ಹಾಗೆ ಸಿಗುತ್ತಾನೆ. ಅದನ್ನು ಕಾಪಾಡುತ್ತಾನೆ ಅನಂತರ ಇದ್ದೇ ಇದೆಯಲ್ಲಾ—ಮೊಗ್ಗು ಅರಳುವಾಗ ಎಲ್ಲೆಲ್ಲಿಯೋ ಇರುವ ತುಂಬಿ ಓಡಿ ಬರುವುದು. ಮತ್ತೆ ಇನ್ನೋರ್ವ ಮಹಾಪುರುಷನ ಉದಯ..............

ಇತಿಹಾಸದ ಚಕ್ರ ಸುತ್ತುತ್ತಿರುತ್ತದೆ, ಅಷ್ಟೆ. ಅದನ್ನು ವಿಧಿ, ಭಾಗ್ಯ, ಮಾಯೆ.... ಏನು ಬೇಕಾದರೂ ಹೇಳಬಹುದು, ಫಲಿತಾಂಶ ಒಂದೇ.

ಜಿಲ್ಲಾಧಿಕಾರಿಗಳ ಪತ್ರಿಕಾಗೋಷ್ಠಿ

ಜಿಲ್ಲಾಧಿಕಾರಿ ಶ್ರೀ ಪಿ. ಎಂ. ಮುಜಾಹಿದ್‌ರವರು ಕಳೆದ ತಾ. 8ರಂದು, ಮಂಗಳೂರಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ಅಂತರ್ ಜಿಲ್ಲಾ ಆಹಾರಧಾನ್ಯ ಸಾಗಾಣಿಕೆ ನಿಷೇಧಾಜ್ಞೆಯನ್ನು ಮೈಸೂರು ಸರಕಾರವು ವಜಾಗೊಳಿಸಿದುದರೊಂದಿಗೆ ಅಕ್ಕಿಯ ಅಧಿಕೃತ ಬೆಲೆ ನಿಷ್ಕರ್ಷಣಾ ಪದ್ಧತಿಯನ್ನೂ ವಜಾಗೊಳಿಸಿದುದರಿಂದ, ನಮ್ಮ ಜಿಲ್ಲೆಗೆ ಶಿವಮೊಗ್ಗಾ ಮತ್ತು ಮಡಿಕೇರಿಗಳಿಂದ ಅಕ್ಕಿಯು ಬರತೊಡಗಿದ ಕಾರಣ ಆಹಾರ ಪರಿಸ್ಥಿತಿಯು ಸುಧಾರಿಸುತ್ತಿದೆ. ಜೊತೆಗೆ ಅಕ್ಕಿಯ ಬೆಲೆ ಧಾರಣೆಯು ತೀವ್ರವಾಗಿ ಇಳಿಯುತ್ತಿದೆ ಎಂದು ನುಡಿದರು. ಅಲ್ಲದೇ, ನಮ್ಮ ಜಿಲ್ಲೆಯಿಂದ ಇತರ ರಾಜ್ಯಗಳಿಗೆ ಅಕ್ಕಿಯ ಕಳ್ಳ ಸಾಗಾಟಿಕೆ ನಡೆಯದಂತೆ ಜಾಗ್ರತೆ ವಹಿಸಿದೆ ಎಂದೂ ಸ್ಪಷ್ಟೀಕರಿಸಿದರು.

ಅಂಗೀಕೃತ ಪ್ರೌಢ ಶಾಲೆಗಳ ಸಂಘ, ಮೈಸೂರು

ಮೇಲ್ಕಂಡ ಸಂಘದ ಸಕಲ ಸದಸ್ಯರ ಸಭೆಯು 9—6—65ರಂದು ಸೇರಿ ಮುಂದಿನ ಸಾಲಿಗೆ ಈ ಕೆಳಗಿನ ಅಧಿಕಾರಿಗಳನ್ನು ಚುನಾಯಿಸಿತು.

ಶ್ರೀ ಟಿ. ವೆಂಕಟರಮಣಯ್ಯ (ಅಧ್ಯಕ್ಷ), ಶ್ರೀ ಎ. ರಾಮಣ್ಣ (ಉಪಾಧ್ಯಕ್ಷ), ಶ್ರೀ ಬಿ. ಎ. ಬಸವಯ್ಯ (ಕಾರ್ಯದರ್ಶಿ).

ಕಡೆಂಗೋಡ್ಲುರವರಿಗೆ ಸನ್ಮಾನ

ಬದಿಯಡ್ಕದಲ್ಲಿ ಪಂಚಾಯತ್ ಬೋರ್ಡಿನ ಆಶ್ರಯದಲ್ಲಿ 45ನೇಯ ಕನ್ನಡ ಸಾಹಿತ್ಯ ಸಮ್ಮೇಲನಾಧ್ಯಕ್ಷ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರನ್ನು ಶ್ರೀ ಖಂಡಿಗೆ ಶಾಮಭಟ್ಟರ ಅಧ್ಯಕ್ಷತೆಯಲ್ಲಿ ಸನ್ಮಾನಿಸಲಾಯಿತು. ಪ್ರಾರಂಭದಲ್ಲಿ ಶ್ರೀ ಕಯ್ಯಾರ ಕಿಞ್ಞಣ್ಣ ರೈಯವರು ಅತಿಥಿಗಳನ್ನು ಸ್ವಾಗತಿಸಿದರು. ಈ ಕವಿ ಸಮ್ಮೇಳನದಲ್ಲಿ ಹಲವಾರು ಕವಿಗಳು ತಂತಮ್ಮ ಕವಿತೆಗಳನ್ನೋದಿದರು. ಶ್ರೀ ಎಸ್. ಎಲ್. ಎನ್. ವಿ. ಶರ್ಮರು ಕವಿಗಳ ಪರಿಚಯ ಮಾಡಿದ್ದರು. ಹಾಗೂ ಬಿ. ಕಮಲಾಕ್ಷ ಪೈಗಳು ಸ್ವಾಗತ ಭಾಷಣ ಮಾಡಿದರು. ಅಂತ್ಯದಲ್ಲಿ ಶ್ರೀ ಎಂ. ಅಣ್ಣಯ್ಯ ಶೆಟ್ಟರು ಧನ್ಯವಾದವಿತ್ತರು.

ಆರೋಗ್ಯವೇ ಭಾಗ್ಯ

ಸುತ್ತಬಾಗಿಲು, ಪಂಚಾಯತ್ ಜೂನಿಯರ್ ಎಲಿಮೆಂಟರಿ ಶಾಲೆ, ಕಡಿನುಮ್ಯಾನರ್, ಇದನ್ನು ಡಾ| ಯು. ರಾಮಯ್ಯನವರು ಸಂದರ್ಶಿಸಿ—ಹಳ್ಳಿಯ ಅಭಿವೃದ್ಧಿಯಲ್ಲಿ ಶಾಲಾ ಮಕ್ಕಳ ಪಾತ್ರದ ಕುರಿತು ವಿಸ್ತರಿಸಿ, ಭಾಷಣವಿತ್ತರಲ್ಲದೆ, ಶಾಲಾ ಬಾಲಕರು ಹಲ್ಲು, ಉಗುರು, ಕೈಕಾಲುಗಳು, ಆಹಾರ ಇತ್ಯಾದಿ ವೈಯಕ್ತಿಕ ಶುಚಿತ್ವದತ್ತ ಗಮನಹರಿಸಬೇಕಾದ ಸೂಚನೆಗಳನ್ನಿತ್ತು — ಹೆತ್ತವರೂ, ಉಪಾಧ್ಯಾಯರೂ, ವಿದ್ಯಾರ್ಥಿಗಳೂ ಆರೋಗ್ಯಕ್ಕೆ ಪ್ರಮುಖ ಸ್ಥಾನವನ್ನೀಯಬೇಕೆಂದೂ, ತನ್ನ ಮತ್ತು ನೆರೆಕರೆಯ ಸಾರ್ವತ್ರಿಕ ಆರೋಗ್ಯಾಭಿವೃದ್ಧಿಯೇ ಹಳ್ಳಿಯ ಉನ್ನತಿಯ ಬುನಾದಿಯಾಗಿದೆ ಎಂದೂ ಉಪದೇಶಿಸಿದರು. ಭಜನೆ, ಸಿಹಿತಿಂಡಿ ಹಂಚೋಣ, ಭಾಷಣಗಳಾದ ಮೇಲೆ ಶಾಲಾ ಮುಖ್ಯಮಂತ್ರಿ ಗೋವಿಂದ ನಾಯ್ಕರು ಧನ್ಯವಾದಗಳನ್ನರ್ಪಿಸಿದರು.

ಓಂಕಾರ ಅಥವಾ ಪ್ರಣವ

(ಐದನೇ ಪುಟದಿಂದ)

ಸಸ್ಯದಿಂದ ಧಾನ್ಯವೂ, ಧಾನ್ಯದಿಂದ ಅನ್ನವೂ, ಅನ್ನದಿಂದ ರಸವೂ, ರಸದಿಂದ ಸರ್ವ ಜಂತುಗಳ ರೇತಸ್ಸು, ಶುಕ್ರ, ಶೋಣಿತವೂ, ಆದರಿಂದ ಪಿಂಡವೂ, ಪಿಂಡದಿಂದ ಸ್ಥಾವರ ಜಂಗಮಾದಿಗಳೂ ಮುಂತಾದ ಸಮಸ್ತವೂ ಉಂಟಾದುವು. ಇವೆಲ್ಲದರಲ್ಲೂ ಸಚ್ಚಿದಾನಂದ ಸ್ವರೂಪನಾದ ವಿಶ್ವಕರ್ಮನೇ ಪ್ರತಿಷ್ಠಿತನಾಗಿರುವನು. ಆತನ ಪಂಚ ಮುಖಗಳಿಂದಲೇ ಮನು, ಮಯ, ತ್ವಷ್ಟ, ಶಿಲ್ಪಿ, ವಿಶ್ವಜ್ಞರೂ, ಸರ್ವಗೋತ್ರ ಮೂಲ ಪುರುಷರಾದ ಸಾನಗ, ಸನಾತನ, ಅಹಭೂನ, ಪ್ರತ್ನ, ಸುಪರ್ಣರೆಂಬ ಬ್ರಹ್ಮರ್ಷಿಗಳೂ ಉದ್ಭವಿಸಿದರು.

ಶ್ರು॥ ಪೂರ್ಣಮದಃ ಪೂರ್ಣಮಿದಂ।
ಪೂರ್ಣಾತ್ಪೂರ್ಣ ಮುದಚ್ಯತೇ।
ಪೂರ್ಣಸ್ಯ ಪೂರ್ಣ ಮಾದಾಯ।
ಪೂರ್ಣಮೇ ವಾ ವಶಿಷ್ಯತೇ॥
ಓಂ ಶಾಂತಿಃ ಶಾಂತಿಃ ಶಾಂತಿಃ॥
(ಬೃಹದಾರಣ್ಯಕೋಪನಿಷತ್)

ಆ ವಿಶ್ವಕರ್ಮನು ಪೂರ್ಣನು. ಆತನಿಂದ ನಿರ್ಮಿತವಾದ ಈ ವಿಶ್ವವೆಲ್ಲವೂ ಪೂರ್ಣವು. ವ್ಯಕ್ತವಾದ ವಿಶ್ವವು ಅವ್ಯಕ್ತವಾದ ಆ ವಿಶ್ವಕರ್ಮನಿಂದ ಉತ್ಪನ್ನವಾದರೂ, ಆತನು ಕುಗ್ಗುವುದಿಲ್ಲ. ಪೂರ್ಣವಾಗಿಯೇ ಉಳಿಯುವನು. ಈ ದರ್ಶನವಾಯಿತೆಂದರೆ ಅಶಾಂತಿಗೆ ಸ್ಥಾನವಿರದು.

ಶ್ರು॥ ಏಷದೇವೋ ವಿಶ್ವಕರ್ಮಾ ಮಹಾತ್ಮಾ ಸದಾಜನಾನಾಗ್ಂ ಹೃದಯೇ ಸನ್ನಿವಿಷ್ಟಃ।
ಹೃದಾಮನೀಷಾ ಮನಸಾಭಿಕ್ಲಪ್ತೋ ಯ ಏನಂ ವಿದುರ ಮೃತಾಸ್ತೇ ಭವಂತಿ॥ (ಶ್ವೇತಾಶ್ವತರೋಪನಿಷತ್)

ಆ ವಿಶ್ವಕರ್ಮನು ಸಕಲ ಜೀವಂತಿಗಳ ಹೃದಯದಲ್ಲೂ ಸದಾಕಾಲವೂ ವಿರಾಜಮಾನನಾಗಿರುತ್ತಾನೆ. ಯಾರು ಆತನನ್ನು ಶುದ್ಧವಾದ ಮನಸ್ಸಿನಿಂದ ತನ್ನಲ್ಲಿಯೇ ತಿಳಿಯುತ್ತಾರೋ, ಅವರು ಪೂರ್ಣ ಶಾಂತಿ, ಪೂರ್ಣಾನಂದವನ್ನು ಹೊಂದುತ್ತಾರೆ; "ಏಷದೇವೋ ವಿಶ್ವಕರ್ಮಾ ಮಹಾತ್ಮಾ" ಈ ಶ್ರುತಿವಾಕ್ಯದ "ವಿಶ್ವಕರ್ಮಾ ಮಹಾತ್ಮಾ" ಶಬ್ದ ವಿವೇಚನೆಯಿಂದ "ಆತ್ಮ" ಶಬ್ದದ ಬೃಹತ್ ಸ್ವರೂಪವು ಭಾಸವಾಗುತ್ತದೆ. ಮಹಾ + ಆತ್ಮ = ಮಹಾತ್ಮ ಸಾಧನೆಯ ದೃಷ್ಟಿಯಿಂದ ಆತ್ಮವು, "ಬಾಹ್ಯಾತ್ಮ, ಅಂತರಾತ್ಮ, ಪರಮಾತ್ಮ" ಎಂಬ ಮೂರು ವಿಧವಾಗಿ ವಿವೇಚಿಸಲ್ಪಡುತ್ತದೆ. "ಪರಮಾತ್ಮ"ವೇ ಆತ್ಮದ ಪರಿಪೂರ್ಣ ಸ್ವರೂಪ. ಇದೇ ಪರಮಶಾಂತಿಯು ಲಭಿಸುವ ಮೂಲ. ಇದೇ ಆತ್ಮ ಸಾಧನೆಯ ಗುರಿ. ಇದೇ "ವಿಶ್ವಕರ್ಮ ಆತ್ಮ". ಇದೇ ಅದ್ವಿತೀಯವು. ಆದುದರಿಂದ ಶ್ರುತಿಯು ಈ ಪರಿಪೂರ್ಣ ಅದ್ವೈತ ತತ್ವವನ್ನು "ವಿಶ್ವಕರ್ಮ" ಎಂಬ ಅಭಿಧಾನದಿಂದ ಪ್ರಸಿದ್ಧಗೊಳಿಸಿರುವುದು ಅರ್ಥಪೂರ್ಣವಾಗಿದೆ. ಈ ಬೃಹತ್ ಜ್ಞಾನವು ಸಾಧಕನಿಗೆ ದೊರೆತ ಮೇಲೆ ಆತನು ವಿಶ್ವದ ಕರ್ಮಚಕ್ರದಲ್ಲಿ ಪುನಃ ಸಿಲುಕಲಾರನು. ಅರ್ಥಾತ್ ಆ ಸಾಧಕನು, ಅವಿಚ್ಛಿನ್ನವಾದ, ಅಪರೋಕ್ಷವಾದ, ಅದ್ವೈತ ಪದವಿಯನ್ನು ಹೊಂದುವುದು ನಿಶ್ಚಯ. ಈ ಮಹೋನ್ನತ ತತ್ವದ ಭಾವವನ್ನೇ ಶ್ರೀ ಕೃಷ್ಣನು ಗೀತೆಯ ೧೮ನೇ ಅಧ್ಯಾಯದಲ್ಲಿ:—

ಶ್ಲೋ॥ ಈಶ್ವರಃ ಸರ್ವಭೂತಾನಾಂ।
ಹೃದ್ದೇಶೇಽರ್ಜುನ ತಿಷ್ಠತಿ।
ಭ್ರಾಮಯನ್ಸರ್ವ ಭೂತಾನಿ।
ಯಂತ್ರಾರೂಢಾನಿ ಮಾಯಯಾ॥
ತಮೇವಶರಣಂ ಗಚ್ಛ
ಸರ್ವಭಾವೇನ ಭಾರತ।
ತತ್ಪ್ರಸಾದಾತ್ಪರಾಂ ಶಾಂತಿಂ।
ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಂ॥

"ಎಲೈ ಅರ್ಜುನಾ! ಈಶ್ವರನು (ಮಹಾನ್ ಆತ್ಮನಾದ ವಿಶ್ವಕರ್ಮನು) ಸರ್ವಪ್ರಾಣಿಗಳ ಹೃದಯ ಪ್ರದೇಶದಲ್ಲಿ ನೆಲೆಸಿದ್ದಾನೆ. ತನ್ನ ಮಾಯೆಯಿಂದ ಯಂತ್ರದೋಣಿಯಲ್ಲಿ ಆರೂಢನಾಗಿದ್ದಾನೆ. ಆತನನ್ನು ಸರ್ವ ಭಾವದಿಂದಲೂ ಶರಣು ಹೋಗು. ಆತನ ಪ್ರಸಾದದಿಂದ ನಿನಗೆ ಶಾಶ್ವತವಾದ ಸ್ಥಾನ, ಪೂರ್ಣ ಶಾಂತಿಯು ಪ್ರಾಪ್ತಿಯಾಗುತ್ತದೆ" ಎಂದು ಬೋಧಿಸಿರುತ್ತಾನೆ. ಈ ವಿಚಾರವು ಗಮನೀಯವಾಗಿದೆ. ಈ ಬೃಹತ್ ದರ್ಶನ ಲಾಭವನ್ನು ಪಡೆದ ಸಪ್ತರ್ಷಿಗಳ ಕುರಿತು ಋಗ್ವೇದ ವಿಶ್ವಕರ್ಮ ಸೂಕ್ತದಲ್ಲಿ—

ಶ್ರು॥ ವಿಶ್ವಕರ್ಮಾ ವಿಮನಾ ಆದ್ವಿಹಾಯಾ ಧಾತಾ ವಿಧಾತಾ ಪರಮೋತ ಸಂದೃಕ್।
ತೇಷಾ ಮಿಷ್ಟಾನಿ ಸಮಿಷಾ ಮದಂತಿ ಯತ್ರ ಸಪ್ತರ್ಷಿಸ್ಪರ ಏಕಮಾಹುಃ॥
(ಋಗ್ವೇದ)

ಸೃಷ್ಟಿ, ಸ್ಥಿತಿ, ಲಯಾದಿ ಸರ್ವರೂಪಗಳೂ ಯಾವನವೋ. ಆ ವಿಶ್ವಕರ್ಮನು ಮನಸ್ಸಂಕಲ್ಪ ಮಾತ್ರದಿಂದ ಸರ್ವ ಜಗತ್ತಿನ ಉತ್ಪಾದಕನೂ, ರಕ್ಷಕನೂ, ಸಂಹಾರಕರ್ತನೂ ಆಗಿ ಸರ್ವದ್ರಷ್ಟನೂ, ಸರ್ವಜ್ಞನೂ ಆಗಿರುತ್ತಾನೆ. ಆತನಿಂದಲೇ ಉತ್ಪನ್ನರಾದ ಸಪ್ತರ್ಷಿಗಳೂ ಆತನಂತೆ ಸರ್ವಜ್ಞರಾಗಿ, ಸೃಷ್ಟಿಗೆ ಪೂರ್ವವೂ ಅನಂತರವೂ ಆ ವಿಶ್ವಕರ್ಮನೊಬ್ಬನೇ ಸತ್ಯವೆಂದು ತಿಳಿದಿರುತ್ತಾರಲ್ಲದೆ. ಈ ವಿಶ್ವದ ಸರ್ವವನ್ನೂ ವಿಶ್ವಕರ್ಮರೂಪವನ್ನಾಗಿ ಕಾಣುತ್ತ ಆನಂದ ಮಗ್ನಾವಸ್ಥೆಯಲ್ಲಿರುತ್ತಾರೆ—ಎಂದು ಪ್ರಸಿದ್ಧಗೊಳಿಸಲಾಗಿದೆ.

ಶ್ರು॥ ಕಿಂ ಸ್ವಿದಾಸೀದಧಿಷ್ಠಾನ ಮಾರಂಭಣಂ ಕತಮತ್ಸಿತ್ ಕಥಾಸೀತ್।
ಯತೋಭೂಮಿಂ ಜನಯನ್ ವಿಶ್ವಕರ್ಮಾ ವಿದ್ಯಾಮೌರ್ಣೋನ್ಮಹಿನಾ ವಿಶ್ವಚಕ್ಷಾಃ॥
(ಋಗ್ವೇದ—ವಿಶ್ವಕರ್ಮ ಸೂಕ್ತ.)

ಈ ಶ್ರುತಿ ಮಂತ್ರದಲ್ಲಿ ವಿಶ್ವಸೃಷ್ಟಿಯ ಕುರಿತು ಪ್ರಶ್ನೆಯೂ ಉತ್ತರವೂ ಅಡಕವಾಗಿದೆ. ಪ್ರಶ್ನೆ ಆದಿಯಲ್ಲಿ ಜಗತ್ತು ಏನಾಗಿತ್ತು? ಹೇಗಿತ್ತು? ಕಾರಣವೇನು? ಉತ್ತರ ಈ ಸಕಲ ಭುವನ ಬ್ರಹ್ಮಾಂಡಗಳೂ ಸಮರ್ಥನಾದ ವಿಶ್ವಕರ್ಮನಿಂದಲೇ ನಿರ್ಮಾಣವಾಗಿವೆ. ಜಗತ್ಸೃಷ್ಟಿ ಕ್ರಮವು ವಿಶ್ವಕರ್ಮನಿಂದ ಹೇಗಾಯಿತೆಂಬ ರಹಸ್ಯವನ್ನು ವಿಶ್ವಕರ್ಮ ಸೂಕ್ತಮಂತ್ರಗಳು (ಋಗ್ವೇದ-೧೦ನೇ ಮಂಡಲ ೮೧, ೮೨ನೇ ಸೂಕ್ತಗಳು) ಹೃದಯಂಗಮವಾಗಿ ವರ್ಣಿಸುತ್ತೇವೆ.

ಶ್ರು॥ ಯ ಏಕೋ ವರ್ಣೋ ಬಹುಧಾ ಶಕ್ತಿ ಯೋಗಾತ್
ವರ್ಣಾನನೇ ಕಾನ್ನಿಹಿತಾರ್ಥೋ ದಧಾತಿ।
ವಿಚೈತಿ ಚಾಂತೇ ವಿಶ್ವಮಾದೌಸವೇವಃ
ಸನೋ ಬುದ್ಧ್ಯಾ ಶುಭಯಾ ಸಂಯುನಕ್ತು॥ (ಶ್ವೇತಾಃ ಉಪ)

ಯಾರು ಏಕಮಾತ್ರನೋ, ಸ್ವತಃ ಗುಣ ರೂಪರಹಿತನಾದರೂ, ಸ್ವಶಕ್ತಿಯ ಮೂಲಕ ತನ್ನ ಅಚಿಂತ್ಯ ಉದ್ದೇಶಕ್ಕಾಗಿ ಅನೇಕ ರೂಪಗಳನ್ನು ಸೃಷ್ಟಿಸಿರುವನೋ, ಕಲ್ಪಾಂತ್ಯದಲ್ಲಿ ಇಡೀ ವಿಶ್ವವನ್ನು ತನ್ನಲ್ಲಿಯೇ ಲಯ ಮಾಡಿಕೊಳ್ಳುವನೋ ಅಂತಹ ಭಗವಂತನೇ ವಿಶ್ವಕರ್ಮನು. ಆತನು ನಮಗೆ ಶ್ರೇಯಸ್ಕರವಾದ ಬುದ್ಧಿಯನ್ನು ಅನುಗ್ರಹಿಸಲಿ.

ವಿಶ್ವಕರ್ಮನ ವಿವಿಧ ಅವತಾರಗಳನ್ನು ಶಿಲ್ಪ ಶಾಸ್ತ್ರವು ಪ್ರಸಿದ್ಧಪಡಿಸಿಯದೆ: ಆತನು ಪರಬ್ರಹ್ಮಾ, ಜಗದ್ಗುರು ಪರಂಜ್ಯೋತಿ, ಮುನೀಶ್ವರ, ಸ್ಥಪತಿ, ಪುನ ಶ್ಶಿವ, ವಿಷ್ಣು ಪ್ರಜಾಪತಿ, ಸೂರ್ಯ, ಶಿಲ್ಪಕ, ಯಜ್ಞಕಾರ, ವಿಚಕ್ಷಣ, ದೇವಾಚಾರ್ಯ, ದೇಶಿಕ, ಸುರ ಶ್ರೇಷ್ಠ, ಜಗದ್ಗುರು, ಜಗನ್ನಾಥ, ಕಶ್ಯಪ, ವಿಶ್ವಜ್ಞ, ವಿಶ್ವ ನಿರ್ಮಾಣ ಬಂಧುರ, ಪಂಚಭೂತಮಯ ದೇವ, ಸರ್ವ ಜೀವದಯಾಪರ, ದೇವ ದೇವ ಮಹಾ ದೇವ. ಅಂದರೆ ಸಮಸ್ತ ದೇವತಾ ಸ್ವರೂಪಗಳೂ ವಿಶ್ವಕರ್ಮ ಪರಬ್ರಹ್ಮನವೇ ಆಗಿರುವುದನ್ನು ಕಾಣಬಹುದಾಗಿದೆ.

ಶ್ಲೋ॥ ಕಾಯೇನವಾಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾತ್ಮನಾವಾ ಪ್ರಕೃತೇಸ್ವಭಾವಾತ್।
ಕರೋಮಿ ಯದ್ಯತ್ ಸಕಲಂ ಪರಸ್ಮೈ
ಶ್ರೀ ವಿಶ್ವಕರ್ಮೇತಿ ಸಮರ್ಪಯಾಮಿ॥

ಇಂಥಾ ಸಚ್ಚಿದಾನಂದ ಮೂರ್ತಿ, ಓಂಕಾರ (ಪ್ರಣವ) ಸ್ವರೂಪಿ ಶ್ರೀ ವಿಶ್ವಕರ್ಮನಿಗೆ ನನ್ನ ದೇಹ, ಮಾತು, ಮನಸ್ಸು, ಇಂದ್ರಿಯ, ಬುದ್ಧಿ, ಪ್ರಕೃತಿ ಸ್ವಭಾವ—ಇವುಗಳ ಮೂಲಕ ಮಾಡುವದೆಲ್ಲವನ್ನೂ ಅರ್ಪಿಸುತ್ತೇನೆ.

॥ ಓಂ ತತ್ಸತ್ ॥

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S.C. No. 25/1965

ಸಿಂಡಿಕೇಟ್ ಬೇಂಕ್ ಲಿಮಿಟೆಡ್ ಮಣಿಪಾಲ —ವಾದಿ.

ಮತ್ತು

ಮುದ್ದಪ್ಪ ಕೂಡಾ —ಪ್ರತಿವಾದಿದು.

2ನೇ ಪ್ರತಿವಾದಿ; ಪಕೀರ ಪೂಜಾರಿ, ಅಪ್ಪು ಪೂಜಾರಿ ಮಗ—ಅಂಬ್ಲಪಾಡಿ ಗ್ರಾಮದ ಕಪ್ಪೆಟ್ಟು ಗರಡಿ ಬಳಿ.

3ನೇ ಪ್ರತಿವಾದಿ: A. ಕೃಷ್ಣಪ್ಪ, ಗುರುವ ಪೂಜಾರಿ ಮಗ ಅಂಬ್ಲಪಾಡಿ ಗ್ರಾಮದ ಕಪ್ಪೆಟ್ಟು.

ಸದ್ರಿ ಪ್ರತಿವಾದಿರಿಗೆ ತಿಳಿಯಪಡಿಸುವುದೇನಂದ್ರೆ—

ವಾದಿಗೆ ಬರಾ ದಿವಾಂದು ನೋಟಿಸ ಅ್ಯವೇಜಿಗೆ ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 28-6-65ಕ್ಕೆ ನಿಂತು ನೋಟೀಸಿನ ಬಗ್ಗೆ ಯಿಟ್ಟಿದೆ. ಆ ಕುರಿತು ನಿಮಗೇನಾದರೂ ಉದಾಹರಿಸುವಂತಾದ್ದಿದ್ದರೆ ಆ ದಿವ್ಸ ಬೆಳ್ಗೆ 11 ಗಂಟೆಗೆ ಸರಿಯಾಗಿ ಈ ಕೋರ್ಟು ಮುಂದೆ ಬಂದು ಹಾಜ್ರಾಗಿ ಜ್ವಾಬೀತು ಮಾಡಿಕೊಳ್ಳತಕ್ಕದ್ದು.

(By order of the Court)

Sri M. Damodhar Kamath
Advocate for Plaintiff.

Udipi, 21-5-65.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೆ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

'NAVAYUGA' Weekly is in the list of periodicals and Newspapers approveds for use in Secondary Schools as per proceeding Roc. No. 466 N/50 dated 2-12-1950 of the Director of Public Instruction Madras.

ಒಂದು ತುಲನೆ

ಗಂಡು ಮತ್ತು ಹೆಣ್ಣು

ಲೇ: ದಾದಾ ಧರ್ಮಾಧಿಕಾರಿ.

ನಮ್ಮ ಸಮಾಜದಲ್ಲಿಂದು ಹೆಣ್ಣು ಮಕ್ಕಳ ಗುಣಗಳಿಗೆ ಬೆಲೆಯಿಲ್ಲ; ರೂಪಕ್ಕೇ ಮಹತ್ವ ಕೊಡಲಾಗುತ್ತದೆ! ಗಂಡು ಮಕ್ಕಳಲ್ಲಿ ಮಾತ್ರ ಗುಣಗಳಿಗೇ ಪ್ರಾಧಾನ್ಯ. ಆದರೆ ರೂಪವು ಕ್ಷಣಭಂಗುರವಾದದ್ದು! ಕ್ಷಣಜೀವಿಯಾದದ್ದು. ಆದ ಕಾರಣ ರೂಪವನ್ನು ನೋಡಿಯೇ ಕೂಡಿಬಂದ ವಿವಾಹಗಳು ಪವಿತ್ರವೂ ಇರುತ್ತಿರುವುದಿಲ್ಲ. ಶಾಶ್ವತವೂ ಆಗುತ್ತಿರುವುದಿಲ್ಲ.

ಹಿಂದಿನ ಸ್ತ್ರೀಯರು ದಾಸಿಯರಾಗಿದ್ದರು. ಇಂದಿನ ಸ್ತ್ರೀಯರು ಪಾಶರಗಿತ್ತಿಯರಾಗಿದ್ದಾರೆ. ಆಟಿಕೆಗಳಾಗಿದ್ದಾರೆ. ನಾಲ್ಕು ಕಡೆ ತಿರುಗುತ್ತಾರೆ ಆದ್ದರಿಂದ ಅವರ ಸಂರಕ್ಷಣೆಯ ಸಮಸ್ಯೆ ಇನ್ನಷ್ಟು ಜಟಿಲವಾಗಿದೆ.

ಈಗ ಎಲ್ಲಿ ನೋಡಿದಲ್ಲಿ ಸಮಸ್ಯೆ, ಕಾಲೇಜಿನಲ್ಲಿ ಸಮಸ್ಯೆ. ಸಿನೇಮಾ ಗೃಹದಲ್ಲಿ ಸಮಸ್ಯೆ. ಜಾತ್ರೆಯಲ್ಲಿ ಸಮಸ್ಯೆ. ಲೋಕಸಭೆಯಲ್ಲಿ ಸಮಸ್ಯೆ, ನಗರಸಭೆಯಲ್ಲಿ ಸಮಸ್ಯೆ! ಸ್ತ್ರೀಯರು ಸಮಸ್ಯೆಯೇ ಸಮಸ್ಯೆಯಾಗಿಬಿಟ್ಟದ್ದಾರೆ!

ಭೀತಿ ಇರುವಲ್ಲಿ ನೀತಿ ಇರದು. ಭಯ ಇರುವಲ್ಲಿ ಸದಾಚಾರ ನಡೆಯದು. ಸ್ವತಂತ್ರತೆಯೊಡನೆ ಪವಿತ್ರತೆಯೂ ಇರುವಂತಾಗಬೇಕು. ಪರರಕ್ಷಿತರಾದವರಲ್ಲಿ ಪವಿತ್ರತೆ ಎಂಬ ಕಲ್ಪನೆಯೇ ಸುಳ್ಳು ದುರ್ಬಲತೆ ಇರುವಲ್ಲಿ ಸ್ವಾತಂತ್ರ್ಯ ಇರುವುದು ಅಸಂಭವ.

ಸ್ತ್ರೀಯರಲ್ಲಿ ಪರಸ್ಪರ ಮಿತ್ರತೆಯ ಭಾವನೆ, ಪುರುಷರಿಗಿಂತ ಕಡಿಮೆ. ಇರುತ್ತದೆ. ಪುರುಷನು ತನ್ನ ಕುಟುಂಬವನ್ನೇ ಮರೆತು ತನ್ನ ಮಿತ್ರನ ಸಲುವಾಗಿ ತನ್ನ ಜೀವವನ್ನೂ ಕೊಡಬಹುದು. ಆದರೆ ಒಬ್ಬ ಹೆಂಗಸು ತನ್ನ ಕುಟುಂಬವನ್ನು ಮರೆತು ತನ್ನ ಒಬ್ಬ ಗೆಳತಿಯ ಬಗ್ಗೆ ತನ್ನ ಜೀವವನ್ನು ತೊರೆದ ಉದಾಹರಣೆ ಇತಿಹಾಸದಲ್ಲೂ ದೊರೆಯುವುದಿಲ್ಲ. ಆದ್ದರಿಂದಲೇ ಮಹಿಳಾ ಸಂಸ್ಥೆಗಳಲ್ಲಿ ಜೀವಂತತನ ಕಡಿಮೆ.

ಧರ್ಮ ಶಾಸ್ತ್ರ ಹೇಳುತ್ತದೆ– "ಗೃಹಿಣೀ ಗೃಹಮುಚ್ಯತೆ" ಅರ್ಥಾತ ಹೆಂಡತಿಯ ಹೆಸರೇ ಮನೆ ಎಂದು. ಹಲವು ಭಾಷೆಗಳಲ್ಲಿ ಹೆಂಡತಿಗೆ ಕುಟುಂಬ ಎಂತಲೂ ಹೇಳುತ್ತಾರೆ. ಹೆಂಡತಿಯೇ ಗೃಹಿಣಿ. ಆದ್ದರಿಂದಲೇ ಕುಟುಂಬಿನಿಯ ಕ್ಷೇತ್ರ ಕುಟುಂಬದ ಒಳಗೇ ಪರಿಮಿತ. ಕುಟುಂಬವನ್ನೇ ತನ್ನ ಕ್ಷೇತ್ರವನ್ನಾಗಿ ಇರಿಸಿಕೊಂಡವಳ ಸಂಪರ್ಕವು ಸಹ ಹೆಚ್ಚಾಗಿ ಸಂಬಂಧಿಕರ ಮಟ್ಟಿಗೆ ಮಾತ್ರ ಪರಿಮಿತವಾಗಿರುತ್ತದೆ. ಆದರಿಂದ ಹೆಂಗಸರ ಜೀವನದಲ್ಲಿ ಸಂಬಂಧಕಷ್ಟೇ ಸ್ಥಾನವಿದೆ. ಮೈತ್ರಿಗೆ ಸ್ಥಾನವಿಲ್ಲ. ಅವಳಿಗೆ ಸಂಬಂಧ ಮುಖ್ಯ; ಸಖ್ಯಗೌಣ ಪುರುಷರು ತಮ್ಮ ಮಿತ್ರನ ಬಗ್ಗೆ ತಮ್ಮ ಸಂಪತ್ತು, ಪ್ರಾಣ, ಮನೆ ಎಲ್ಲವನ್ನೂ ತ್ಯಜಿಸಲು ಸಿದ್ಧರಾಗುತ್ತಾರೆ. ಮಿತ್ರನಿಗಾಗಿ ಹೆಂಡತಿಯನ್ನೂ ಸಹ ತ್ಯಜಿಸಿ ಹೋಗಿಬಿಡುತ್ತಾರೆ. ಆದರೆ ತಮ್ಮ ಸಖಿಯ ಬಗ್ಗೆ ಹೆಂಗಸರು ತಮ್ಮ ಪ್ರಾಣ ತೆತ್ತದ್ದು. ಗಂಡಂದಿರ ಆಭರಣ ಕೊಟ್ಟದ್ದು ಲೋಕಸಾಹಿತ್ಯದ ಕಥೆಗಳಲ್ಲಿ ಕೂಡ ಕಂಡ ಬರುವುದಿಲ್ಲ.

ಒಬ್ಬ ಆಧುನಿಕ ಹೆಣ್ಣುಮಗಳನ್ನು ಕೇಳಲಾಯಿತು—"ನೀನು ಮದುವೆ ಯಾಕೆ ಆಗಿಲ್ಲ! ಗಂಡನನ್ನೇಕೆ ಮಾಡಿಕೊಂಡಿಲ್ಲ?" ಎಂದು.

ಆಕೆ ಉತ್ತರ ಕೊಟ್ಟಳು – "ಗಂಡನ ಆವಶ್ಯಕತೆ ಏನಿದೆ? ನನ್ನ ಹತ್ತರ ಒಂದು ನಾಯಿ ಇದೆ. ಏನೊಂದು ವಸ್ತು ತಿನ್ನಲಿಕ್ಕೆ ಕೊಟ್ಟರೂ ಗುರುಗುಡುತ್ತಲೇ ತಿನ್ನುತ್ತದೆ! ಒಂದು ಗಿಳಿ ಇದೆ. ಅದರ ಬಾಯಿಯಿಂದ ಎಂದು ನೋಡಿದರೂ ಬೈಗಳೇ ಹೊರಬೀಳುತ್ತದೆ! ಒಂದು ಒಲೆ ಇದೆ— ಅದರೊಳಗಿಂದ ಹೊಗೆಯೂ ಹೊರಡುತ್ತದೆ, ಬೂದಿಯೂ ಬೀಳುತ್ತದೆ! ಒಂದು ಗಂಡು ಬೆಕ್ಕು ಇದೆ ಅದು ಇಡೀ ರಾತ್ರಿ ಹೊರಗೇ ತಿರುಗಾಡುತ್ತಿರುತ್ತದೆ! ಎಂದು.

ಗಂಡಂದಿರ ಆಧುನಿಕ ಜೀವನದ ಚಿತ್ರವನ್ನೇ ಅವಳು ಮುಂದಿಟ್ಟಳು. ಗಂಡಂದಿರ ಏನೇನು ಮಾಡುತ್ತಾರೆಂಬುದು. ಊಟಕ್ಕೆ ಕೂತಾಗಲೆಲ್ಲ ಗುರುಗುಟ್ಟುವದು, ಮಾತುಮಾತಿಗೆ ಹೆಂಡತಿಗೆ ಬೈಯುವದು ಹಗಲೆಲ್ಲ ಸಿಗರೇಟು ಬಾಯಿಯಲ್ಲಿ ಹಿಡಿದುಕೊಂಡು ಹೊಗೆಬಿಡುವದು, ಬೂದಿ ಕೆಡಹುವುದು, ಇಡೀ ರಾತ್ರಿ ಮನೆಗೆ ಬಾರದೆ ಹೊರಗೇ ತಿರುಗಾಡುತ್ತಿರುವದು. ಇಷ್ಟೆಲ್ಲ ಲಕ್ಷಣಯುಕ್ತ ಗಂಡನ ಆವಶ್ಯಕತೆಯೇ ತಮಗೆ ಇಲ್ಲ ಎಂದು ಲಾಕ್ಷಣಿಕವಾಗಿ ಅವಳು ಉತ್ತರ ಕೊಟ್ಟಳು. ಇಂದಿನ ಹೆಣ್ಣು ಗಂಡಿನ ಪ್ರಶ್ನೆ ಇಲ್ಲಿಗೆ ತಲುಪಿದೆ. —ಭೂದಾನ

ನಮ್ಮ - ನಮ್ಮವರು

ಬ. ನ. ಸುಂದರ ರಾಯರು

ಕನ್ನಡದ ಸುಪ್ರಸಿದ್ಧ ಸಾಹಿತಿಗಳಲ್ಲಿ ಅನೇಕರು ಸಾಹಿತ್ಯವನ್ನು ತಮ್ಮ ವಿರಾಮ ಕಾಲದ ಉದ್ಯೋಗವನ್ನಾಗಿ ಮಾಡಿಕೊಂಡವರು. ಜೀವನ ನಿರ್ವಹಣೆಗಾಗಿ ನಿರ್ವಾಹವಿಲ್ಲದೆ ಉದ್ಯೋಗಕ್ಕೆ ಗಂಟು ಬಿದ್ದು. ತಮ್ಮ ಬಿಡುವಿನ ವೇಳೆ ಸಾಹಿತ್ಯ ಸೇವೆ ಮಾಡುತ್ತಿರುವ ಕನ್ನಡ ಸಾಹಿತಿಗಳ ಸಾಲಿನಲ್ಲಿ ಶ್ರೀ|| ಬ. ನ. ಸುಂದರರಾಯರೂ ಸೇರುತ್ತಾರೆ.

ಕತ್ತಲೆ ಕಳೆಯಲು ವಿದ್ಯುತ್ ಬೆಳಕನ್ನು ನೀಡುವ ವಿದ್ಯುತ್ ಇಲಾಖೆಯಲ್ಲಿ ದುಡಿಯುತ್ತಿರುವ ಶ್ರೀ|| ಸುಂದರರಾಯರು ಕನ್ನಡಿಗರ ಮನಸ್ಸಿನ ಕತ್ತಲನ್ನು ಕಳೆಯಲು ಸಾಹಿತ್ಯದ ಮೂಲಕ ಯತ್ನಿಸುತ್ತಿದ್ದಾರೆ! ಎಳವೆಯಲ್ಲೇ ಸಾಹಿತ್ಯದತ್ತ ಒಲವು ಹರಿಯಿಸಿದ ಇವರು, ಹಲವಾರು ಪುಸ್ತಕಗಳನ್ನು ಬರೆದಿರುತ್ತಾರೆ. ಕನ್ನಡ ನಾಡಿನ ಓದುಗರಿಗೆ ಚಿರಪರಿಚಿತರಾಗಿದ್ದಾರೆ.

ಶ್ರೀ ಸುಂದರ ರಾಯರು ಉತ್ತಮ ವಾಗ್ಮಿಗಳು. ಸರಕಾರಿ ಉದ್ಯೋಗದಲ್ಲಿರುವಾಗ, ಸುಮಾರು ಹತ್ತು ವರ್ಷ ಕಾಲದಲ್ಲಿ ಇವರು ಸರಕಾರದ ಉಪನ್ಯಾಸಕರಾಗಿ ದೇಶದಾದ್ಯಂತ ಸಂಚರಿಸಿ ಅಪಾರ ಅನುಭವ ಗಳಿಸಿರುತ್ತಾರೆ. ಸದಾ ಚಟುವಟಿಕೆಯುಳ್ಳವರಾದ ಶ್ರೀ ಸುಂದರ ರಾಯರು ಕಿರಿಯ ಲೇಖಕರಿಗೆ ಯೋಗ್ಯ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ.

ಶ್ರೀ ಸುಂದರ ರಾಯರಲ್ಲಿ ಉತ್ಸಾಹ ಬಹಳ ಇದೆ. ಪ್ರತಿಭೆಯ ಜತೆಗೆ ಇತರರಲ್ಲಿನ ಪ್ರತಿಭೆಯನ್ನು ಗುರುತಿಸುವ ಗುಣ ಅವರಲ್ಲಿದೆ. ಒಳ್ಳೆಯದನ್ನು ಕಂಡು ಮೆಚ್ಚುಗೆ ಸೂಚಿಸುವ ವಿಶಾಲತೆಯ ಹೃದಯ ಅವರದು. ಸೇರಿದ ಊರನ್ನೇ ತನ್ನದನ್ನಾಗಿಸಿಕೊಂಡು, ಆ ಊರನ್ನೇ ತನ್ನ ರನ್ನಾಗಿಸಿಕೊಳ್ಳುವ ಕಲೆ ಅವರಿಗೆ ಕರಗತವಾಗಿದೆ.

ಈ ವರೆಗೆ ಮಂಗಳೂರಿನ ವಿದ್ಯುತ್ ಇಲಾಖೆಯಲ್ಲಿ ದುಡಿಯುತ್ತಿದ್ದ ಶ್ರೀ|| ರಾಯರಿಗೆ ಈಗ ಮಡಿಕೇರಿಗೆ ವರ್ಗವಾಗಿದೆ. ಅವರು ದಕ್ಷಿಣ ಕನ್ನಡಿಗರಿಗೆ ಈಗಾಗಲೇ ಚಿರಪರಿಚಿತರಾಗಿದ್ದಾರೆ. ದಕ್ಷಿಣ ಕನ್ನಡದ ಹಲವಾರು ಸ್ಥಳ ಊರುಗಳ ಸಂದರ್ಶನವನ್ನು ಮಾಡುತ್ತಾರೆ ಬತ್ತದ ಅವರ ಉತ್ಸಾಹದ ಸೇವೆ ಅವರಿಗೆ ದೇವರಿತ್ತ ವರದಾನ!

ಶ್ರೀ| ಸುಂದರ ರಾಯರ ಸಾಹಿತ್ಯ ಸೇವೆ ಇತ್ತೀಚೆಗೆ ತರುಣರನಡೆದ ಕನ್ನಡ ಸಾಹಿತ್ಯದ ಬೆಲೆಯನ್ನು ಹೆಚ್ಚಿಸುವ ಕೃತಿಗಳು ಅವರಿಂದ ಮೂಡಲಿ ಎಂದು ಹಾರೈಸುತ್ತೇವೆ.

— — —

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O. P. 8/65,

ಗಣಪತಿ ಭಟ್ಟ ಕೂಡಾ —ಅರ್ಜಿದಾರರು

ಗೌರಮ್ಮ – ಯದ್ರಿ

ಅರ್ಜಿದಾರರು ಮೃತ ರಾಮಭಟ್ಟರ ಬಾಬ್ತು ಬರತಕ್ಕ ಆಸ್ತಿ ಮೇಲಿನ ಸಾಲಿ ಬಗ್ಗೆ 1ನೇ ಅರ್ಜಿದಾರನ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡ್ಬೇಕೆಂತ ವಗೈರೆ ಮಾಡಿದ ಮೇಲ್ತೋರುವ ಅರ್ಜಿಯು ತಾ. 6-7-66ಕ್ಕೆ ಈ ಕೋರ್ಟಿನಲ್ಲಿ ಇಟ್ಟಿರುವದರಿಂದ ಆ ದಿವಸ ಬೆಳಿಗ್ಗೆ 11 ಘಂಟೆಗೆ ಆಕ್ಷೇಪವಿದ್ದವರು ಈ ಕೋರ್ಟಿನ ಮುಂದೆ ಹಾಜರಾಗಿ ವಕೀಲ್ ದ್ವಾರ ಆಕ್ಷೇಪಿಸದಿದ್ದರೆ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

(By order of the Court)

A. Ammu Shetty,

Advocate for Petitioner.

ಪುತ್ತೂರು, 10-6-66

ಕರ್ಮ ಸಂಕರದ ಕೆನ್ನಾಲಗೆ

(ನಾಲ್ಕನೇ ಪುಟದಿಂದ)

ಹೇಳ್ತೇನೆ; ನೆನಪು ಮಾಡ್ತೇನೆ ಅಂದ್ರಲ್ಲಾ...."

'ಅಂದಿದ್ದೆನೇ? ತಪ್ಪಾಗಾದ್ಮೆ, ನೆನಪು ಮಾಡ್ತೇನೆ..'

'ಅಯ್ತು?'

"ಹ್ಞಾಂ... ಯಾವ ವಿಚಾರದಲ್ಲಿ?"

'....ನೋಡಿ, ಅದೇ. ಒಂದೊಂದು ಜಾತಿಯವರ ಕೆಲ್ಸ ...'

"ಅದು ಅದೇ. ಅವರವರ ಕೆಲ್ಸ ಅವರವ್ರು ಮಾಡೋದು. ಅದ್ರೆ ನೋಡು, ಈಗ ತಮ್ಮ ಕೆಲ್ಸ ಹಾಗೇನೇ ಬಿಟ್ಟು ಬೇರೆಯವ್ರು ಕೆಲ್ಸ ಶುರು ಮಾಡೋರ ಸಂಖ್ಯೇನೇ ಹೆಚ್ಚಾಗ್ತಾ ಬರುತ್ತಿದೆ ಅಣೇ ..."

'ಇದನ್ನೇ ನೋಡಿ ಗೀತೆಯಲ್ಲಿ ವರ್ಣಸಂಕರ ಅಂದದ್ದು ...'

'ವರ್ಣ ಸಂಕರವಲ್ವೆ ಇದು, ಕರ್ಮ ಸಂಕರ....ಅದ್ರಲ್ಲೂ ನಮ್ಮ ಕರ್ಮ ...'

'ಯಾವ ಶಂಕರನೇ ಇರಲಿ. ಅದ್ರೆ ಇದ್ರಿಂದ ನಮ್ಮದಿ ಮಾತ್ರ ಇಲ್ಲ....'

'ಹಾಗೆಂದ್ರೆ ಆಗುತ್ಯೆ? ಈಗ ನೋಡು, ಇದು ಕಲಿಯುಗವಲ್ಲ; ಅದ ಮುಗಿದು ಬಿಟ್ಟು ಹೊಸ ಸಂಕರ ಯುಗ ಆರಂಭವಾಗಿದೆ .."

"ಅಂದ್ರೆ?"

"ಕೇಳು ಕಲಿಯುಗದ ಕಲಿಗಳೀಗ ಸಂಕರ ಯುಗದಲ್ಲಿ ಸಖಿ ಕಾಣ್ತಾರೆ...."

"ಅಂದರೇ ಹೇಳೋದನ್ನ ಸರೀಯಾಗಿ ಅಂದು ಬಿಡಬಾರದೆ?"

ಮತ್ತೇನು ಮಾಡೋದೇ ನಾನು?"

ತುಸ ಬಿಡಿಸಿ ಹೇಳೀಂದ್ರೆ .'

"ಹ್ಞಾಂ. ನೀನೊಂದು ಜಾತಿ ಕೇಳು. ನೆಲ್ಲಿನಲ್ಲಿ ಕಲ್ಲು ಸಂಕರ, ತುಪ್ಪದಲ್ಲಿ ಎಣ್ಣೆ ಸಂಕರ ಅಲ್ಲ, ಸಂಕೀರ್ಣ...."

"ಓ, ಅದೆಯ? ಅದೆಲ್ಲಾ ಗೊತ್ತು ನನಗೆ—ನೀವು ಅನ್ನೋವಾಗ ಏನೂಂತ ತಿಳ್ಕೊಂಡೆ..."

'ಈಗ ಏನೂ ಇಲ್ಲಾಂತ ಗೊತ್ತಾಯ್ತಾ?'

"ಗೊತ್ತಾಯ್ತು ಬಿಡಿ. '

"ಬಿಡೋದೇನು? ಇನ್ನು ಕಲಿತಿದ್ದೆಯಲ್ಲಾ?'

"ಮತ್ತೇನು ಮಾಡಬೇಕೂಂತ?"

"ಗೊತ್ತಾಯ್ತೂಂತಂದೆ ...'

'ಓ, ಹಾಗೋ, ಸರೀಂದ್ರೆ....ಹಾಗೆ ಉದರದಲ್ಲಿ ಸಂಕೀರ್ಣತೆ ಕಾಣುತ್ತಿರಬೇಕ. ಬನ್ನಿ .. ಹೋಗಿ...."

'ಏನೇ ಇದು, ಬನ್ನಿ ಅಂದ ಬಾಯಲ್ಲೇ ಹೋಗಿ ಅಂತೀಯಲ್ಲಾ...."

"ನಾಕಂದ್ರೆ ..ನೋಡಿ ಅಲ್ಲೇ ಮೆಟ್ಲ ಬದಿ ತಂಬಿಗೆಯಲ್ಲಿದೆ ನೀರು. ಬೇಗ ರಡಿಯಾಗಿ ಬನ್ನಿ..."

'ಬಾರದ ಊಟ?"

"ಇದ ನನಗ್ಗ ಗೊತ್ತು .."

"ಕೃತಾಂಜಲಿ...."

— ಗೋರಾ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಜನ ಮತ.

ಇದು ಭೂಷಣ ತರುವ ಕಾರ್ಯವಲ್ಲ

ಸಿಂಡಿಕೇಟ್ ಬ್ಯಾಂಕಿನ ನೌಕರ ವರ್ಗದವರು ತಮ್ಮ 'ಕೇಳಿಕೆಗಳು' ಈಡೇರುವುದರ ಸಲುವಾಗಿ ಚಳುವಳಿಯನ್ನು ಹೂಡಿದ್ದಾರೆ. ಅವರ ಕೇಳಿಕೆಗಳೇನೇ ಇರಲಿ; ಈ ಕೇಳಿಕೆಗಳ ಈಡೇರಿಕೆಗೆ ನೌಕರವರ್ಗ ಕೈಕೊಂಡ ಮಾರ್ಗ ಮಾತ್ರ ಮೆಚ್ಚುವಂತಹುದಲ್ಲ. ವಿದ್ಯಾವಂತರ ಸಾಲಿಗೆ ಸೇರಿರುವ ಈ ನೌಕರರು ಬ್ಯಾಂಕಿನ ಹಲವು ಶಾಖೆಗಳಲ್ಲಿ ಶಿಸ್ತಿನ ಎಲ್ಲೆಯನ್ನು ಮೀರಿ ವರ್ತಿಸುತ್ತಿದ್ದಾರೆ ಎಂಬುದು ನಿಜಕ್ಕೂ ಶೋಚನೀಯ ಸಂಗತಿ. 'ಮತಪ್ರದರ್ಶನ'ದ ನೆಪದಲ್ಲಿ ಬ್ಯಾಂಕಿನ ಕಟ್ಟಡದೊಳಗೇ ಕೂಗಾಟ ನಡೆಸುವುದನ್ನು ಯಾರೂ ಸಹಿಸಲಾರರು. ವಿದ್ಯಾವಂತರಾದ ಈ ನೌಕರರು ತಮ್ಮ ಕೇಳಿಕೆಗಳು ಈಡೇರುವುದರ ಸಲುವಾಗಿ ಅನಾಗರಿಕ ಕ್ರಮಗಳನ್ನು ಕೈಕೊಂಡಿರುವುದು ನೌಕರರ ಸಂಘಕ್ಕೆ ಭೂಷಣವಲ್ಲ.

ಮಾಲಕ ನೌಕರರೊಳಗಣ ಭಿನ್ನಾಭಿಪ್ರಾಯಗಳ ಇತ್ಯರ್ಥಕ್ಕೆ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಹಲವಾರು ದಾರಿಗಳಿವೆ. ಬರೇ ಕೂಗಾಟ, ಬೊಬ್ಬಾಟ, ಬೆದರಿಕೆಗಳಿಂದಲೇ ಇನ್ನೂ ಕಾರ್ಯಸಾಧನೆ ಮಾಡಿಕೊಳ್ಳುವುದು ಶಿಸ್ತುಬದ್ಧ ಕ್ರಮವಲ್ಲ. ಬ್ಯಾಂಕಿನ ಗ್ರಾಹಕರ ಹಿತಾಸಕ್ತಿಯನ್ನು ಕಡೆಗಣಿಸಿ, ಅವರು ಬ್ಯಾಂಕಿಗೆ ಬಂದಾಗ ಅವರ ಮೇಲೆ ಒತ್ತಾಯ ಹೇರಿ, ಅವರನ್ನು ನಿರ್ಲಕ್ಷಿಸಿ, ತಮ್ಮ ಪ್ರತಿಭಟನೆ ವ್ಯಕ್ತಪಡಿಸುವುದಾದರೆ ಇದನ್ನು ನಾಗರಿಕ ವರ್ತನೆ ಎಂದು ಯಾರೂ ಕರೆಯಲಾರ.

ತಮ್ಮ ಕೇಳಿಕೆಗಳು ಈಡೇರಲಿಲ್ಲ ಎಂಬ ಮಾತ್ರಕ್ಕಾಗಿ ವ್ಯಕ್ತಿಗತ ಆರೋಪಗಳನ್ನು ಹೊರಿಸುವುದು, ಗುಂಪುಕಟ್ಟಿ ಅಧಿಕಾರಿಗಳನ್ನು ಸುತ್ತುವರಿಯುವುದು, ನಿಂದ್ಯಾಸ್ಪದ ಮಾತುಗಳನ್ನು ಅಧಿಕಾರಿಗಳ ಕುರಿತು ಆಡುವುದು ವಿವೇಕವಂತರ ಕಾರ್ಯವಲ್ಲ. ಈ ರೀತಿಯ ವರ್ತನೆಯಿಂದಲೇ ಕಾರ್ಯಸಾಧನೆ ಆಗುವಂತಿದ್ದರೆ, ಆಗ ನಮ್ಮ ದೇಶದಲ್ಲಿ 'ಗೂಂಡಾಗಿರಿ'ಯೇ ಬದುಕುತ್ತಿದೆ ಎನ್ನದೆ ಗತ್ಯಂತರವಿಲ್ಲ.

ಸಾರ್ವಜನಿಕರು ನೌಕರರ ಈ ತೆರದ ವರ್ತನೆಯಿಂದ ರೋಸಿ ಹೋಗಿದ್ದಾರೆ. ಬ್ಯಾಂಕಿನ ಗ್ರಾಹಕರನ್ನು ಕಡೆಗಣಿಸುವಷ್ಟರ ವರೆಗೂ ನೌಕರರ ದಾಷ್ಟ್ಯ ಮಿತಿ ಮೀರಿದೆಯೆಂದರೆ ಇದಕ್ಕೆ ಮುಟ್ಟುಗೋಲು ಹಾಕಲೇಬೇಕು. ಶಿಸ್ತುಬದ್ಧ ನಿಯಮಾವಳಿಯ ಕುರಿತು ಉಪನ್ಯಾಸ ಬಿಗಿಯುವ ನೌಕರರ ಸಂಘ ತನ್ನ ಸದಸ್ಯರ ವರ್ತನೆಯನ್ನು ತಿದ್ದುವಲ್ಲಿ ಮುಂದಾಗಬೇಕು.

'ಉಂಡವನಿಗೆ ಹಸಿವು ಹೆಚ್ಚು; ಮಿಂದವನಿಗೆ ಮೈಲಿಗೆ ಹೆಚ್ಚು" ಎಂಬ ಗಾದೆ ಮಾತೊಂದಿದೆ. ಬ್ಯಾಂಕಿನ ನೌಕರರು ಇಂದು ಪಡೆಯುತ್ತಿರುವ ಸೌಲಭ್ಯಗಳು ದೇಶದ ಬರೇ ಅಲ್ಪಾಂಶ ನೌಕರ ವರ್ಗಕ್ಕೆ ಲಭಿಸುತ್ತಿವೆ. ಹಾಗಿರುವಾಗ "ಇನ್ನೂ ಕೊಡಿ" ಎಂದು ಅವರು ಕೇಳುತ್ತಿದ್ದಾರೆ 'ಕೇಳಬಾರದು' ಎಂದು ಯಾರೂ ಅನ್ನುವುದಿಲ್ಲ. ಆದರೆ ಕೇಳುವುದಕ್ಕೆ ಒಂದು ಕ್ರಮ ಬೇಡವೆ?

ತಮ್ಮಲ್ಲಿ ಸಂಖ್ಯಾಬಲವಿದೆಯೆಂದು ನೌಕರರ ಯೂನಿಯನುಗಳು ಈ ರೀತಿಯ ವರ್ತನೆ ನಡೆಸಿದರೆ ದೇಶದಲ್ಲಿ ಸಂಸ್ಥೆಗಳನ್ನು ನಡೆಸುವುದೇ ಕಷ್ಟವಾದೀತು. ಸಿಂಡಿಕೇಟ್ ಬ್ಯಾಂಕಿನ ಹಲವಾರು ಶಾಖೆಗಳಲ್ಲಿ ನೌಕರರು, ಚಳವಳದ ನೆಪದಲ್ಲಿ ಬ್ಯಾಂಕಿನ ಹಿತಾಸಕ್ತಿಗೆ ಆತಂಕವನ್ನೊಡ್ಡುವ, ಗ್ರಾಹಕರಿಗೆ ತೊಂದರೆಯನ್ನುಂಟು ಮಾಡುವ, ನಾಗರಿಕರಿಗೆ ಅಸಮಾಧಾನವನ್ನುಂಟು ಮಾಡುವ ಕಾರ್ಯದಲ್ಲಿ ಮಗ್ನರಾಗಿಲ್ಲವೆ? ಇದಕ್ಕೆ ಯೂನಿಯನಿನ ಮುಖಂಡರು ಏನನ್ನುತ್ತಾರೆ?

ಚಳವಳದ ನೆಪದಲ್ಲಿ ಬ್ಯಾಂಕಿನೊಳಗೆ ಬೊಬ್ಬಾಟ, ಕಿರುಚಾಟ ನಡೆಸುವುದು ಯಾವ ಮಾರ್ಗ? ಮೆನೇಜರರನ್ನು ಅವಾಚ್ಯ ಹಾಗೂ ನಿಂದನೀಯ ಶಬ್ದಗಳನ್ನುಪಯೋಗಿಸಿ ಬಯ್ಯುವುದು ನ್ಯಾಯವಾದ ಮಾರ್ಗವೆ? ಬಲವಿದೆಯೆಂದು ಶಿಸ್ತಿನ ಎಲ್ಲೆ ಮೀರಿ ವರ್ತಿಸಿದರೆ, ಅದನ್ನು ನ್ಯಾಯವಾದಿಗಳೂ ಮೆಚ್ಚಲಾರರು. ನೌಕರರ ಸಂಘ ಈ ಕುರಿತು ವಿವೇಕಯುತ ವಿವೇಚನೆ ನಡೆಸಲಿ.

ತಮ್ಮ ಕೇಳಿಕೆಗಳು ನ್ಯಾಯಬದ್ಧವಾದುವು ಎಂದು ಹೇಳಿಕೊಳ್ಳುವ ನೌಕರರ ಸಂಘ ತನ್ನ ಸದಸ್ಯರು ನ್ಯಾಯ ಮಾರ್ಗದಲ್ಲಿ ವರ್ತಿಸುವಂತೆ ಮೊದಲು ನೋಡಿಕೊಳ್ಳಲಿ; ಮಾತುಕತೆ, ವಿಚಾರ ವಿನಿಮಯಗಳಿಂದಲೇ ಸಮಸ್ಯೆಯ ಪರಿಹಾರವಾದೀತಲ್ಲದೆ, ಈ ರೀತಿಯ ಚಳವಳದಿಂದಲ್ಲ.

— ಬ್ಯಾಂಕಿನ ಗ್ರಾಹಕರಲ್ಲೊಬ್ಬ

(ಮೂರನೇ ಪುಟದಿಂದ)

ರೆ. ಅಲ್ಲಿನ ಬೆನ್‌ಬೆಲ್ಲಾ ಸರಕಾರವನ್ನು ಉರುಳಿಸಿ ಸೈನಿಕಾಧಿಕಾರವು ಘೋಷಿತವಾಗಿದೆ. ಈ ಬಗೆಯ ಕ್ರಾಂತಿಯು ಅಲ್ಲಿನ ಮಟ್ಟಿಗೆ ಸಾಮಾನ್ಯವೆಂದು ಹೇಳುವವರಿರಬಹುದು; ಆದರೆ, ಜಾಗತಿಕ ಪ್ರಸಿದ್ಧವಾದ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ನಡೆದ ಈ ಕ್ರಾಂತಿಯ ಹಿನ್ನೆಲೆ ಏನೆಂಬುದಿನ್ನೂ ಅರಿವಾಗಿಲ್ಲ. ಸೈನಿಕಾಧಿಕಾರವು ನಿಯೋಜಿತ ಸಮ್ಮೇಳನವನ್ನು ನಡೆಸುವುದೆಂದೂ ಅದಕ್ಕೆ ಯಾವ ರೀತಿಯಲ್ಲೂ ವ್ಯತಿರೇಕವಾಗಲಾರದೆಂದೂ ಘೋಷಿಸಿದೆಯೇನೋ ನಿಜ. ಆದೇನಿದ್ದರೂ ಅನಿರೀಕ್ಷಿತ ಸೈನಿಕ ಕ್ರಾಂತಿಯ ಹಿನ್ನೆಲೆ ನಾಳೆಷ್ಟು ವಿಸ್ತೃತವಿರಲೇ ಬೇಕು. ಹಾಗಾಗಿ ಈ ಸಮ್ಮೇಳನದ ಕಾರ್ಯಕಲಾಪಗಳು ಹೇಗಾದಾವು ಎಂಬ ಭೀತಿ ಎಲ್ಲರಲ್ಲೂ ಉಳಿದಿದೆ. ಬಾಂಬಿಡಲು ಹೊಡೆಯಿತೇ ಎನ್ನುವವರೂ ಇದ್ದಾರೆ.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ.

F. R. A. 22/64.

ಅನಂತಪ್ರಭು ಕೆದಿಲಾಯ — ಅಪೀಲುವಾದಿ

ಮತ್ತು

ಪದ್ಮ ಗೌಡ ಕೂಡಾ — ಎದ್ರಿ

೨ನೇ ಎದ್ರಿ ಧರ್ಮಪ್ಪ ಗೌಡರಿಗೆ, ಮಂಜಪ್ಪ ಗೌಡರ ಮಗ, ಮೂಡಿಗೆರೆ ತಾಲೂಕಿನ ಮಾವಿನಕೆರೆ ಗ್ರಾಮ, ಪೋಸ್ಟು ಕಳಸ.

ಅಪೀಲು ವಾದಿಯು ಎದ್ರಿರ ಮೇಲೆ ಮಾಡಿದ ಅಪೀಲಿನ ವಾಯಿದೆ 30-6-65ಕ್ಕೆ ಇಟ್ಟಿರುವುದರಿಂದ ನಿಮಗೆ ಆಕ್ಷೇಪಗಳೇನಾದರೂ ಇದ್ದರೆ ಆ ದಿನ 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ಮುಂದರಿಸಲಾದೀತು ಎಂತ ಈ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಯದೆ.

K. RAMACHANDRA SHENOY,
Advocate for Appellant.

Puttur, 11-6-65.

ಎಲ್ಲೆಲ್ಲಿ ಏನೇನು?

ಶ್ರೀ ಡಯಾನಾ ಫೆರ್ನಾಂಡಿಸರ ವಿದೇಶ ಪ್ರಯಾಣ

ಒಲಂಪಿಯಾ–ಲಂಡನಿನಲ್ಲಿ ಜರಗುವ ಇಂಟರ್ ಪ್ಲಾಸ್ ಪ್ರದರ್ಶನದಲ್ಲಿ ಭಾಗವಹಿಸಲು ಪ್ಲಾಸ್ಟಿಕ್ಸ್ ಕೌನ್ಸಿಲಿನ ಪರವಾಗಿ ಶ್ರೀ ಡಯಾನಾ ಫೆರ್ನಾಂಡಿಸರು ಇದೇ ತಾ. 16ರಂದು ವಿಮಾನ ಮೂಲಕ ಲಂಡನಿಗೆ ತೆರಳಿದ್ದಾರೆ. ಶ್ರೀಯುತರು ಉಡುಪಿಯ ಶ್ರೀಮತಿ ಮತ್ತು ಶ್ರೀಯುತ ರೋಕ್ಕಿ ಫೆರ್ನಾಂಡಿಸರ ಪುತ್ರರಿದ್ದು ಇದೀಗ ಐದನೇ ಬಾರಿ ವಿದೇಶಕ್ಕೆ ತೆರಳುವುದಾಗಿದೆ.

ರಾಜೀನಾಮೆ

ಶಿರ್ವ ಮೆಡಿಕಲ್ ರಿಲೀಫ್ ಎಸೋಸಿಯೇಶನಿನ ಕಾರ್ಯದರ್ಶಿ ಡಾ| ಕೆ. ಆರ್. ವೆಂಕಟಕೃಷ್ಣರವರು ಅನಾರೋಗ್ಯ ಮತ್ತು ಬಾರ್ಕೂರಿನ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟ ಕಾರಣಗಳಿಗಾಗಿ, ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ಇತ್ತಿರುವರು. ತಾ. 1—5—65 ರಂದು ಡಾ। ವೈ. ಆರ್. ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿದ ಆಡಳಿತ ಮಂಡಳಿಯ ಸಭೆಯಲ್ಲಿ ಡಾ| ಕೆ. ಆರ್. ವೆಂಕಟಕೃಷ್ಣರವರ ನಿಸ್ವಾರ್ಥ ಸೇವೆಯನ್ನು ಸ್ಮರಿಸಿ ಸದ್ರಿಯವರ ರಾಜೀನಾಮೆಯನ್ನು ಸ್ವೀಕರಿಸಲಾಯಿತು. ಜತೆ ಕಾರ್ಯದರ್ಶಿ ಶ್ರೀ ಕೆ. ವಾಸುದೇವ ಶೆಟ್ರು ತತ್ಕಾಲಿಕವಾಗಿ ಕಾರ್ಯದರ್ಶಿಗಳಾಗಿ ಅಧಿಕಾರ ಸ್ವೀಕರಿಸಿರುವರು.

ಲೋಕ ಸೇವಾ ಹೈಸ್ಕೂಲು

ದ. ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೂ, ಮೈಸೂರು ವಿಧಾನ ಪರಿಷತ್ತಿನ ಸದಸ್ಯರೂ ಆದ ಶ್ರೀ ಕೆ. ಕೆ. ಶೆಟ್ಟರೂ ಮೈಸೂರು ವಿಧಾನ ಪರಿಷತ್ತಿನ ಸದಸ್ಯ ಶ್ರೀ ಎಸ್. ಮುಕುಂದರಾಯರೂ ತಾ. 14—6—65ರಂದು ಲೋಕಸೇವಾ ವೃಂದಕ್ಕೆ ಭೇಟಿಯಿತ್ತು ಲೋಕಸೇವಾ ಹೈಸ್ಕೂಲು ಮತ್ತು ಲೋ. ಸೇ. ಹಾ. ಎ. ಶಾಲೆಗಳ ವಿದ್ಯಾರ್ಥಿಗಳನ್ನು ಕುರಿತು ಉಪನ್ಯಾಸವಿತ್ತರು.

ಆರಂಭದಲ್ಲಿ ಶ್ರೀ ಯಮ್. ನಾರಾಯಣ ಭಟ್ಟರು ಅತಿಥಿಗಳ ಪರಿಚಯ ಮಾಡಿಕೊಟ್ಟು ಸ್ವಾಗತಿಸಿದರು.

ಶ್ರೀ ಯಸ್. ಮುಕುಂದರಾಯರು ಮಾತನಾಡುತ್ತಾ—"ಈ ದಿನದ ಪ್ರಾರ್ಥನೆಯಲ್ಲಿ ಕವಿ ಮಯ್ಯರಂತರು ರಚಿಸಿದ ಹಾಡನ್ನು ಹಾಡಿದರು. ಅದರಲ್ಲಿ, ಸತ್ತರು ಸುಂಸಿ ಗುಡಿ ಕಟ್ಟಿದೆವು ಎಂದರು. ಇಂತಹ ಹಾಡು ಹಾಡುವ ಸೌಲಭ್ಯ ನಮ್ಮ ವಿದ್ಯಾಭ್ಯಾಸದ ಕಾಲದಲ್ಲಿರಲಿಲ್ಲ. ಇಂದು ಅದು ನಿಮಗಿದೆ. ನೀವು ಸ್ವತಂತ್ರ ಭಾರತದ ಪ್ರಜೆಗಳು. ನಮ್ಮ ದೇಶ ಸ್ವತಂತ್ರವಾಗಿ, ಜಾತಿಮತಗಳ ಭೇದವಿಲ್ಲದೆ ಎಲ್ಲರೂ ಸಮತಾ ಭಾವದಿಂದ ಬಾಳುವಂತಾಗಬೇಕು" ಎಂದು ಹೇಳಿದರು.

ಶ್ರೀ ಕೆ. ಕೆ. ಶೆಟ್ಟರು ಮಾತನಾಡುತ್ತಾ— "ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸೈನಿಕ ಆದನ್ನು ಕಟ್ಟುವ ಕಾರ್ಯದಲ್ಲಿ ಸಹಭಾಗಿ. ಆದರೆ ಅದರ ಫಲವುಣ್ಣುವುದು ಅವನಲ್ಲ. ಇತರರು. ಅಂತಹ ಪುಣ್ಯಶಾಲಿಗಳ ಸಾಲಿಗೆ ಸೇರಿದವರು ಗಾಂಧೀಜಿಯವರು. ಅವರು ನುಡಿದರು; ಮಡಿದರು. ಆದ ಕಾರಣ ನಮ್ಮ ದೇಶ, ನಮ್ಮ ಜನಾಂಗದವರು, ಮಕ್ಕಳು, ಮೊಮ್ಮಕ್ಕಳೆಲ್ಲ ನವೀನ ರಾಷ್ಟ್ರವನ್ನು ಕಟ್ಟಿ ತಲೆಯೆತ್ತಿ ನಿಲ್ಲಬೇಕು. ನಮ್ಮ ದೇಶದ ಮುಂದಿನ ಭವಿಷ್ಯ ಎಲ್ಲಾ ಚಿಕ್ಕ ಮಕ್ಕಳಾದ ನಿಮ್ಮನ್ನು ಹೊಂದಿಕೊಂಡಿದೆ. ಒಂದು ದೇಶದ ಹಿರಿಮೆ, ಅಲ್ಲಿಯ ಜನ ಯಾವ ರೀತಿಯ ರಾಷ್ಟ್ರಾಭಿಮಾನ ಗೌರವಗಳಿಂದ ಕೂಡಿಕೊಂಡಿರುತ್ತಾರೆ ಎಂಬುದನ್ನು ಹೊಂದಿಕೊಂಡಿದೆ" ಎಂದು ಹೇಳಿದರು. ಅವರು ಮತ್ತೂ ಮುಂದುವರಿಯುತ್ತಾ—ವಿದ್ಯೆಗೆ ಬರಿಯ ಕಟ್ಟಡ ಮುಖ್ಯವಲ್ಲ. ವಿದ್ಯಾರ್ಥಿಗಳ ಶೀಲ, ನಡತೆ; ಅದು ಮುಖ್ಯ. ಇಂತಹ ಉದಾತ್ತ ಧ್ಯೇಯದ ಒಳ್ಳೆಯ ತಾತ್ವಿಕ ವಾತಾವರಣವಲ್ಲ. ಯೋಗ್ಯ ಶಿಕ್ಷಣವನ್ನು ಹೊಂದಿ ಹೆಚ್ಚಿನ ಉನ್ನತಿಯನ್ನು ಸಾಧಿಸಬೇಕು" ಎಂಬುದಾಗಿ ನುಡಿದು ಸಂಸ್ಥೆಗೆ ಶುಭಕೋರಿದರು.

ಕೊನೆಗೆ ಸಂಸ್ಥೆಯ ಕಾರ್ಯದರ್ಶಿ ಶ್ರೀ ಯು. ಗಂಗಾಧರ ಭಟ್ಟರಿಂದ ಧನ್ಯವಾದಾರ್ಪಣೆಯಾಗಿ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

ಕಲ್ಕತ್ತದಲ್ಲಿ ಸಿಂಡಿಕೇಟ್ ಬ್ಯಾಂಕಿನ ಹೊಸ ಶಾಖೆ

ದೇಶದ ಪ್ರಮುಖ ಬ್ಯಾಂಕಿಂಗ್ ಸಂಸ್ಥೆಗಳಲ್ಲಿ ಒಂದಾದ ಸಿಂಡಿಕೇಟ್ ಬ್ಯಾಂಕಿನ ಹೊಸ ಶಾಖೆಯೊಂದು ಕಲ್ಕತ್ತದಲ್ಲಿ ಕಳೆದ ತಾ. 17ರಂದು ತೆರೆಯಲ್ಪಟ್ಟಿತು. ಪಶ್ಚಿಮ ಬಂಗಾಲದಲ್ಲಿ ಇದು ಸಿಂಡಿಕೇಟ್ ಬ್ಯಾಂಕಿನ ಪ್ರಪ್ರಥಮ ಶಾಖೆಯಾಗಿದೆ. ಈ ಶಾಖೆಯು ವಿದೇಶ ವಿನಿಮಯದ ಸಹಿತ ಎಲ್ಲಾ ವಿಧದ ಬ್ಯಾಂಕಿಂಗ್ ವ್ಯವಹಾರಗಳನ್ನೂ ನಡೆಸುವುದು.

ಹೊಸ ಶಾಖೆಯ ಆರಂಭೋತ್ಸವವು ಬಹಳ ವೈಭವಯುಕ್ತವಾಗಿ ಜರಗಿತೆಂದು ತಿಳಿದು ಬರುತ್ತದೆ.

ಈ ಶಾಖೆಯು ತೆರೆಯುವಿಕೆಯಿಂದ ಸಿಂಡಿಕೇಟ್ ಬ್ಯಾಂಕಿನ 200ಕ್ಕೂ ಮಿಕ್ಕಿದ ಶಾಖಾ ಸಮುದಾಯಕ್ಕೆ ಇನ್ನೊಂದು ಸಂಖ್ಯೆ ಸೇರಿದಂತಾಯಿತು. ಹೊಸ ಶಾಖೆಗೆ ನಾವು ನಮ್ಮ ಶುಭಾಕಾಂಕ್ಷೆಗಳನ್ನು ಸಲ್ಲಿಸುತ್ತೇವೆ.

ಶ್ರೀ ಬಿ. ಸಿ. ಆಳ್ವರಿಗೆ ಭಡ್ತಿ

ಮಂಗಳೂರಿನ ವಿದ್ಯುತ್ ಖಾತೆಯ ಎಕ್ಸಿಕ್ಯೂಟಿವ್ ಇಂಜಿನಿಯರರಾಗಿದ್ದ ಶ್ರೀ ಬಿ. ಸಿ. ಆಳ್ವರವರು ಭಡ್ತಿ ಹೊಂದಿ ಜೋಗ್‌ಗೆ ವರ್ಗಾಯಿಸಲ್ಪಟ್ಟಿದ್ದಾರೆ. ಪ್ರಕೃತ ಎಸಿಸ್ಟೆಂಟ್ ಇಂಜಿನಿಯರ್ ಆಗಿದ್ದ ಶ್ರೀ ಶಂಕರ್‌ರಾಯರು ಹಂಗಾಮಿಯಾಗಿ ಎಕ್ಸಿಕ್ಯೂಟಿವ್ ಇಂಜಿನಿಯರರ ಕಾರ್ಯ ನಿರ್ವಹಿಸುತ್ತಿದ್ದಾರೆಂದು ತಿಳಿದು ಬಂದಿದೆ.

ಧರ್ಮಸ್ಥಳದಲ್ಲಿ ನಾಟಕ ಪ್ರದರ್ಶನ

ಸ್ಥಳೀಯ ವಸಂತ ಮಹಾಲಿನಲ್ಲಿ, ಕಳೆದ ತಾ. 13ನೇ ತಾರೀಕಿನಂದು, ಧರ್ಮಸ್ಥಳ ಶ್ರೀ ಮಂಜುನಾಥ ಸ್ವಾಮಿಯವರ ಸನ್ನಿಧಿಯಲ್ಲಿ, ಸೇವಾರೂಪವಾಗಿ "ಮೋಹಪಾಶ" ಎಂಬ ನಾಟಕವನ್ನು ಮಂಗಳೂರಿನ ಯುವಕ ಕಲಾವಿದರು ಶ್ರೀ ರತ್ನವರ್ಮ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಅಭಿನಯಿಸಿದರು. ಪ್ರಾರಂಭದಲ್ಲಿ ಶ್ರೀ ಕೆ. ಬಾಲಕೃಷ್ಣರಾಯರು ಸ್ವಾಗತಿಸಿದ ಬಳಿಕ, ಅಧ್ಯಕ್ಷರು ಮಾತನಾಡುತ್ತಾ ಕಲಾವಿದರನ್ನು ಆಶೀರ್ವದಿಸಿದರು.

ಇಸ್ಲಾಂ ಸಂಘದ ಸಭೆ

ದೇಲಂಪಾಡಿ ಗ್ರಾಮದ "ಊಜಂಪಾಡಿ ಜಮಾಯತ್ ಮದರಸ್" ನಲ್ಲಿ ತಾ. 13—6—65ರಂದು "ಊಜಂಪಾಡಿ ತಕ್ ಬಿಯತ್ತಿಲ್ ಇಸ್ಲಾಮ್ ಸಂಘ"ದ ಸಭೆಯು ಜನಾಬ್ ಕಾಸರಗೋಡು ಆಬೂಬಕ್ಕರ್ ಮೌಲವಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಜನಾಬ್ ಪಳ್ಳಂಗೋಡು ಇಬ್ರಾಹಿಂ ಮೌಲವಿಯವರು ಮದರಸ್‌ನ ಅಭಿವೃದ್ಧಿಯ ಬಗ್ಗೆ ತಕ್ಕ ಸಲಹೆಗಳನ್ನಿತ್ತರು.

ಹಸುರು ಸೀರೆ

(ಎರಡನೇ ಪುಟದಿಂದ)

ಸೀರೆ ತನ್ನಿ...ನೀವು ಲಕ್ಷಣವಾಗಿ ಜರತಾರಿ ಪಂಚೆ ಉಟ್ಕೊಳ್ಳಿ— ಐದು ತೆಂಗಿನ ಕಾಯಿ—ಹಣ್ಣು—ಪೂಜೆ ಸಾಮಾನು— ಇಷ್ಟೇ ಸಾಕು—ನೀವು ಖರ್ಚು ಮಾಡ್ಬೇಕೂಂತಿದ್ರಲ್ಲ—ಅದ್ನೇ ಕಾಣಿಕೆ ಕೊಟ್ಬಿಡಿ—ಅದಕ್ಕೂ ಇಷ್ಟೇಂತ ಲೆಕ್ಕ ಇಲ್ಲ. ನಿಮ್ಮ ಯೋಗ್ಯತೆ—ಇದ್ದಷ್ಟು ಅಂತ.

ಶಾರದ— ಇದೇನೋ ನಿಜವಾಗಿ ಹೊಸ ಮಾದರೀನೇ....ನಡೀರಿ ನಾಳೆ ಬೆಳಗ್ಗೆ ಹೋಗಿ ಪಾದಪೂಜೆ ಮಾಡಿಕೊಂಡು ಬಂದ್ಬಿಡೋಣ...ನೀವು ಸ್ವಾಮಿಗಳ್ನ ನೋಡಿದ್ರಾ?

ರಾಮಣ್ಣ— ಓಹೋ ನೋಡಿದ್ದೆ, ಅವರ್ಹತ್ರನೇ ಇಷ್ಟೆಲ್ಲ ಮಾತಾಡ್ಕೊಂಡು ಬಂದೆ—ಅವ್ರೂ ತಿಳ್ಕೊಂಡಿದಾರೆ. ಕಣೇ ಈ ಕಾಲ ಬಹಳ ಸೂಕ್ಷ್ಮ, ನಾಜೋಕೂಂತ—ಕಾಲ ಬಂದ ಹಾಗೆ ನಾವೂ ಹೋಗ್ಬೇಕೂಂತ ಹೇಳಿದ್ರು....

ಶಾರದ— ನೀವು ಹೇಳೋದು ನೋಡಿದ್ರೆ ಅವರು ದೊಡ್ಡ ಮಹಾತ್ಮರಿದ್ದ ಹಾಗೇ ತೋರುತ್ತೆ—ಬೆಳಗ್ಗೆ ಖಂಡಿತ ಹೋಗೋಣ ಹಾಗಾದ್ರೆ—ಸಾಮಾನೆಲ್ಲ ಈಗ್ಲೆ ತಂದು ಬಿಟ್ರೆ ಸರಿ....

ರಾಮಣ್ಣ— ನಾನೂ ಅದಕ್ಕೇ ಬೇಗ್ಬಂದೆ— ನಡಿ ಹೋಗೋಣ — ಚಿಕ್ಕ ಪೇಟೆ ಮಾರ್ಕೆಟ್ ಎಲ್ಲಾ ಸುತ್ಕೊಂಡು ಬರ್ಬೇಕಲ್ಲಾ...ಇನ್ನು ಎಷ್ಟು ಹೊತ್ತಾಗುತ್ತೋ?

o o o

ಮೂರನೆಯ ದೃಶ್ಯ

ರಮೇಶ— ಬನ್ನಿ, ಬನ್ನಿ — ರಾಮಣ್ಣೋರೇ...ಬನ್ನಿ ಶಾರದಮ್ಮ ...

ಶಾರದ— ಏನೋ ರಮೇಶ, ಮನೇಲಿ ಯಾರೂ ಇದ್ದ ಹಾಗೇ ಕಾಣೊಲ್ಲ...

ರಮೇಶ— ಹೌದು ಶಾರದಮ್ಮ—ನಮ್ಮಮ್ಮ, ಅಪ್ಪ — ಎಲ್ರೂ ಮದುವೆಗೆ ಹೋಗಿದ್ದಾರೆ. ನಾಡಿದ್ದು ಬರ್ತಾರೆ.

ಶಾರದ— ಮತ್ತೆ—ನೀನೊಬ್ನೆ ಇರೋವಾಗ—ಸ್ವಾಮಿಗಳನ್ನ ಬೇರೆ ಕರೆಸಿದ್ದಿ....

ರಮೇಶ—ಅವರಿಂದ ನನಗೇನು ತೊಂದ್ರೆ ಇಲ್ಲ—ನಿನ್ನೆ ಬಂದ್ರು—ಇವತ್ತು ಹೊರಟು ಹೋಗ್ತಾರೆ...ಇವತ್ತು ಏಕಾದಶಿ ಬೇರೆ...ಸ್ವಲ್ಪ ಹಾಲು ಹಣ್ಣು ಒದಗಿಸಿ ಬಿಟ್ರೆ ಸರಿ....ಸ್ವಾಮಿಗಳು ಬಂದ್ಮೇಲೆ ನಾವು ಅಷ್ಟೂ ಮಾಡದಿದ್ರೆ ಹೇಗೆ ಹೇಳಿ...ನಿಮ್ಮಂಥಾವರು ನೂರಾರು ರೂಪಾಯಿ ಖರ್ಚು ಮಾಡ್ತೀರಿ, ನಮಗೆ ಅಷ್ಟು ಶಕ್ತಿ ಇಲ್ಲ—ಕೈಲಾದಷ್ಟೇ ಮಾಡೋದು....

ಶಾರದ— ನಿನಗೂ ಎಲ್ಲೋ ನಮ್ಮ ನೆರೆಯೋರ ಗಾಳಿ ಸ್ವಲ್ಪ ಸ್ವಲ್ಪ ಬೀಸ್ತಾ ಇದೇಂತ ಕಾಣುತ್ತೆ.

ರಮೇಶ— ಬೀಸಲಿ, ಬೀಸಲಿ. ನಾನೂ ಸಹ ನಿಮಗೆ ತಿಳಿಸೋದೋ ಬೇಡ್ವೋಂತ ಯೋಚ್ನೆ ಮಾಡ್ತಾ ಇದ್ದೆ. ಆ ಮೇಲೆ ಏನಾದ್ರೂ ನಮ್ಮನೆಗೆ ಸ್ವಾಮಿಗಳು ಬಂದು ಒಂದು ದಿನ ಇದ್ದು ಹೋದ್ರು—ಅನ್ನೋ ವಿಷಯ ತಿಳಿದ್ರೆ ರಾಮಣ್ಣೋರು ಸುಮ್ನೆ ಬಿಡೋಲ್ಲಾಂತ ಒಂದು ಮಾತು ತಿಳಿಸ್ದೆ.

ಶಾರದ—ತಿಳಿಸಿದ್ದು ಒಳ್ಳೇದೇ ಆಯ್ತು. ಈ ಸ್ವಾಮಿಗಳೂ ಏನೋ ಹೊಸ ತರಹವಾಗಿದ್ದಾರೆ. ಇದು ವರೆಗೂ ನಾವು ನೋಡಿದ ಸ್ವಾಮಿಗಳ ಹಾಗಿಲ್ಲ...

ರಮೇಶ — ಹೌದು, ಹೌದು.....ಈ ಸ್ವಾಮಿಗಳು ಬಹಳ ಸೂಕ್ಷ್ಮ, ಮಠದ ಹೆಸರು ಹೇಳ್ಕೊಂಡು ದುಡ್ಡುಗಿಡ್ಡು ಮಾಡ್ಕೊಳ್ಳೋರಲ್ಲ......ತಾವಾಯ್ತು ತಮ್ಮ ವ್ಯಾಸಂಗವಾಯ್ತು. ಭಕ್ತಾದಿಗಳು ಎಷ್ಟು ಕೊಟ್ರೆ ಅಷ್ಟಕ್ಕೇ ತೃಪ್ತಿಪಟ್ಕೋತಾರೆ....

ರಾಮಣ್ಣ— ಹೂ, ಮಾತು ಸಾಕು...ಪಾದಪೂಜೆಗೆ ಎಲ್ಲಾ ಅಣಿಮಾಡಿ... ಇನ್ನು...ಹೊತ್ತಾಗಿ ಹೋಯ್ತು....

ಶಾರದ.... ಇದೋ ಬಂದೆ...ಎಲ್ಲಾ ತೆಗೆದಿಟ್ಟೇನೆ...

ರಮೇಶ...ತಟ್ಟೆಗಿಟ್ಟೆ ಬೇಕಾದ್ರೆ ನಮ್ಮನೇದೇ ತೊಗೊಳ್ಳಿ ಶಾರದಮ್ಮ.... ಒಳಗಿದೆ—

ಶಾರದ— ಹೂ ತೊಗೆಂಡು-ಎಲ್ಲಾ ಸಿದ್ಧಮಾಡ್ತೀನಿ....

ರಾಮಣ್ಣ— ಹಣ್ಣು ಕಾಯೆಲ್ಲ-ಒಂದು ತಟ್ಟೇಲಿಡು, ಸೀರೆ ಪಂಚೆನಾ ಬೇರೆ ತಟ್ಟೇಲಿಡು. ಕಾಣಿಕೆಗೆ ಹಾಕೊ ದುಡು ಬೇರೆ ಚಿಕ್ಕ ತಟ್ಟೇಲಿಡು....

ಶಾರದ— ಹೂ ಎಲ್ಲ ಇಟ್ಟೆ....

ರಮೇಶ— ಹೂ ಬನ್ನಿ ಬನ್ನಿ-ಮಹಡಿ ಮೇಲಿನ ರೂಮಿನಲ್ಲಿದ್ದಾರೆ....ಸ್ವಾಮಿಗಳು...ಹೋಗೋಣ ...

ರಾಮಣ್ಣ - ನಡಿ.... ನಡಿ....

ರಮೇಶ— ಹೂ ಬನ್ನಿ...ಈ ರೂಮಿನಲ್ಲೇ ಸ್ವಾಮಿಗಳಿರೋದು....ಬನ್ನಿ...ಒಳಗೆ....

ರಾಮಣ್ಣ— ರೂಂ-ನಲ್ಲಿ ಕಿಟಕಿಗಳನ್ನೆಲ್ಲ ಯಾಕೋ ಹಾಕ್ಬಿಟ್ಟಿದ್ದೀ ರಮೇಶ ಬೆಳಕೇ...ಸಾಲ್ದು...ಸ್ವಲ್ಪ ತೆಗೀಬಾರ್ದೇ?

ರಮೇಶ— ಸ್ವಾಮಿಗಳಿಗೆ ಒಂದು ತರಹ ಹವ ಬದಲಾವಣೆ ಯಾದಂತಾಗಿ ಸ್ವಲ್ಪ ಶೀತವಾಗಿದೆ....ಅದಕ್ಕೆ ತೆಗೆಯೋದು ಬೇಡ...

ರಾಮಣ್ಣ— ಹೋಗ್ಲಿ ದೀಪವಾದ್ರೂ ಹಾಕೂ...

ರಮೇಶ -- ಹೂ ದೀಪಹಾಕುತ್ತೇನೆ.. ಅದಕ್ಕೇನು ಪರವಾಗಿಲ್ಲ....

ರಾಮಣ್ಣ— ಈ ದೀಪವೋ ಒಳ್ಳೇ ಬುಡ್ಡಿದೀಪ ಇದ್ದಹಾಗಿದೆ.... ಹತ್ತು ಕ್ಯಾಂಡಲ್ ಬಲ್ಬು....

ಶಾರದ— ಹೇಗಿದ್ರೂ ಇರಲಿ ಬಿಡೀಂದ್ರೆ ಕೆಲಸ ಮುಖ್ಯ...ಸ್ವಾಮಿಗಳು ನೋಡೀಂದ್ರೆ... ಕೃಷ್ಣಾಜಿನದ ಮೇಲೆ ಧ್ಯಾನ ಮಾಡ್ತಾ ಕೂತಿರೋದು ನೋಡಿದ್ರೆ... ಎಷ್ಟು ಸಂತೋಷವಾಗುತ್ತೆ ... ಎಷ್ಟು ಕಳೆ... ಏನುಕತೆ....

ರಮೇಶ – (ಸ್ವಾಮಿಗಳ ಸಮೀಪಕ್ಕೆ ಹೋಗಿ ಅವರನ್ನು ಕುರಿತು) ಪಾದಪೂಜೆ ಮಾಡೋಕ್ಕೆ ಬಂದಿದ್ದಾರೆ...

ಸ್ವಾಮಿಗಳು— (ನಿಧಾನವಾಗಿ) ಹೂ.... ನಿಮಗೆ ಗೊತ್ತಿಲ್ಲ... ಎಲ್ಲಾ....

ರಮೇಶ— ಸೀರೆ ಪಂಚೆ ತಂದಿದ್ದಾರೆ ತಾವು ಆಶೀರ್ವಾದ ಮಾಡಿ ಕೊಟ್ಬಿಡಿ... ಅವರು ಅದನ್ನು ಉಟ್ಕೊಂಡು ಸಿದ್ಧವಾಗೋ ಹೊತ್ತಿಗೆ ಶಾಸ್ತ್ರಿಗಳೂ ಬರ್ತಾರೆ... ಆ ಮೇಲೆ ಪಾದಪೂಜೆ ಮಾಡಿಸ್ತಾರೆ...

ಸ್ವಾಮಿಗಳು:— ಆಗಬಹುದು....

ರಾಮಣ್ಣ:— ಎಲ್ಲೀ ಆ ತಟ್ಟೆ....ಸೀರೆ ಪಂಚೆ ಇಟ್ಟಿರೋದು—ಕೊಡಿಲ್ಲಿ...

ರಮೇಶ.— ಅಲ್ಲಿಡಿ-ರಾಮಣ್ಣೋರೆ... ಸ್ವಾಮಿಗಳು ಆಶೀರ್ವಾದ ಮಾಡಿಕೊಡ್ತಾರೆ...

ರಾಮಣ್ಣ:— ಹೂ.. ಇಟ್ಟೆ...

ಸ್ವಾಮಿಗಳು:— ಹಿಡಿಯಿರಿ... ಅಕ್ಷತೆ....

ರಮೇಶ: -- ಹೂ ಇದನ್ನು ತೊಗೊಂಡ್ಹೋಗಿ ನೀವು ಉಟ್ಕೊಂಡು ಬಂದ್ಬಿಡಿ....

ರಾಮಣ್ಣ, ಶಾರದಮ್ಮ:—ಆಗಲಿ...

(ಒಂದೆರಡು ನಿಮಿಷದ ನಂತರ)

ಶಾರದಮ್ಮ:— ಪುರೋಹಿತರು ಎಲ್ಲಿ ಬರಲೇ ಇಲ್ವಲ್ಲಾ? .... ಪಾದಪೂಜೆಗೆ ಹೊತ್ತಾಗುತ್ತೆ...

ರಾಮಣ್ಣ:— ನಾನೇನೋ ರೆಡಿಯಾಗಿ ಬಂದೆ....

ಶಾರದಮ್ಮ:— ನಾನಾಗ್ಲೇ ರೆಡಿಯಾಗ್ಬಿಟ್ಟೆ...ನಿಮಗಿಂತ ಮುಂಚೆ....

ರಮೇಶ:—ನಮ್ಮ ಸ್ವಾಮಿಗಳ ದರ್ಶನ ಮಾತ್ರದಿಂದಲೇ ಭಕ್ತಾದಿಗಳ ಇಷ್ಟಾರ್ಥ ಸಿದ್ಧಿಸುತ್ತದೆ.

ರಾಮಣ್ಣ:- ಅಲ್ವೇ... ಸ್ವಾಮಿಗಳಂದ್ರೆ ಮಹಾತ್ಮರಪ್ಪ...ಅವರೆಲ್ಲಿ ...ನಾವೆಲ್ಲಿ..

ಸ್ವಾಮಿಗಳು:—ನಿಮ್ಮ ಇಷ್ಟಾರ್ಥ ಸಿದ್ಧಿಸ್ತೇನಮ್ಮ....ಹಸುರು ಸೀರೆ....ಹಂಬಲು ತೀರ್ತು ತಾನೇ.

ರಾಮಣ್ಣ: – ಶಾರದ (ಆಶ್ಚರ್ಯವಾಗಿ) ಇ...

ಸ್ವಾಮಿಗಳು:—ಇನ್ನೂ ನನ್ನ ಗುರ್ತು ಸಿಕ್ಕಲಿಲ್ವೇನಕ್ಕ...

ರಾಮಣ್ಣ—ಶಾರದೆ—ಇದೇನು ರಘೂನೇ....

(ರಮೇಶ-ರಘು ಜೋರಾಗಿ ನಗುವರು)

ರಾಮಣ್ಣ—ಸಕತ್ರೋ ನಿಮ್ಮ ಹುಡುಗಾಟ— ಯಾಕ್ರೋ ಮತಿಮಾರ್ತು....ಇದೇನೋ ನಿನ್ನ ವೇಷ ರಘು? ಇದಕ್ಕೋಸ್ಕರ ತಲೆ ಬೇರೆ ಬೋಳಿಸ್ಕೊಂಡ್ಯಾ?

ರಘು:—ನಾನು ನಿನ್ನೆ ಕಾಶೀ ತಿರುಪತಿಯಿಂದ ಬಂದೆ ಭಾವಯ್ಯ. ನಿನ್ನೆ ಬಂದು ಅಕ್ಕನಿಗೆ ಹೇಳಿ ಪ್ರಸಾದ ಕೊಟ್ಬಂದ್ನಲ್ಲಾ—

ಶಾರದ:— ಇವರೇನೋ ಮನೇಗೆ ಬಂದೋರೇ ಸ್ವಾಮಿಗಳ ಸದ್ದಿ ತೆಕ್ಕೊಂಡೇ ಒಂದ್ರಪ್ಪಾ—ನನಗೂ ನೀನು ತಿರುಪತಿಗೆ ಹೋಗ್ಬಂದ ವಿಷಯ ಹೇಳೋದೇ ಮರೆತ್ಹೋಯ್ತು.

ರಾಮಣ್ಣ:— ಅಲ್ವೇ, ನಾನು ಹಸುರು ಸೀರೆ ತಂದ್ಕೊಡೋಲ್ಲಾ—ಅಂತ ಇಷ್ಟೆಲ್ಲ ನಾಟ್ಕ ಮಾಡ್ಸಿದ್ದೀಯಾ—ನಿನ್ನ ತಮ್ಮನ ಕೈಲಿ?

ಶಾರದ:— ನನಗೊಂದೂ ಗೊತ್ತಿಲ್ಲಾಂದ್ರೆ... ಇವನು ನಿನ್ನೆ ಪ್ರಸಾದ ಕೊಟ್ಟು ಒಂದ್ಲೋಟ ಕಾಫಿ ಕುಡ್ಕೊಂಡು ಹೊರಟ್ಹೋದ ಅಷ್ಟೇ. ಮತ್ತೆಂದಕ್ಕೆ ನನಗೇನೂ ಗೊತ್ತಿಲ್ಲ....

ರಘು:—ಇದ್ರಲ್ಲಿ ಅಕ್ಕಂದೇನೂ ತಪ್ಪಿಲ್ಲ ಭಾವಯ್ಯ...ನಿನ್ನೆ ನಾನು ನಿಮ್ಮ ಮನೆಗೆ ಬಂದಾಗ ಅಕ್ಕ ಎದುರು ಮನೆಯೋರ್ದು ಯಾವ್ದೋ ಸೀರೆ ನೋಡ್ತಾ ಇದ್ಳು. ಆಗ—ನಾನು ಭಾವಯ್ಯ ತಂದ್ಕೊಟ್ಟಿದ್ದೇ ಸೀರೆ—ಅಂತ ಕೇಳ್ದೆ, ಅದಕ್ಕವಳು ನಿಮ್ಮ ಭಾವಯ್ಯ ಎಲ್ತಂದುಕೊಡ್ತಾರಪ್ಪ—ಅದ್ರಲ್ಲೂ ಹಸುರು ಸೀರೆ....ಯಾರಾದ್ರು ಸ್ವಾಮಿಗಳು ಬಂದ್ರಾಂದ್ರೆ ನೂರಾರು ರೂಪಾಯಿ ಖರ್ಚು ಮಾಡ್ತಾರೆ. ಬೇಕಾದ್ರೆ — ಅಂದ್ಲು, ನಾನು ಹಸುರು ಸೀರೆ ಮೇಲೆ ಅವಳಿಗಿದ್ದ ಮಮತೆ ನೋಡಿ —ಭಾವಯ್ಯನಿಂದ್ಲೇ ಹಸುರು ಸೀರೆ ಕೊಡಿಸ್ಬೇಕೂಂತ—ಈ ನಾಟ್ಕ ಮಾಡ್ದೆ...

ರಾಮಣ್ಣ— ನನಗಂತೂ ಸಿಟ್ಟು ನೆತ್ತಿಗೇರ್ತಾ ಇದೆ....ಎಲ್ಲಿ ಆ ಸೀರೆ ..ವಾಪಸ್ ಕೊಟ್ಟು ಬಂದು ಬಿಡ್ತೇನೆ....

ಶಾರದ— ನಾನು ಉಟ್ಕೊಂಡ್ಬಿಟ್ಟಿದ್ದೇನಲ್ಲಾ....ಹೋಗ್ಲಿ ಬಿಡಿ...ನಿಮಗೂ ಜರ್ತಾರೀ ಪಂಚೆ ಸಿಕ್ತಲ್ಲಾ....

ರಾಮಣ್ಣ— ಹೂ ಸಿಕ್ತು - ನಿನ್ನ ತಮ್ಮ ತಿರುಪತಿಗೆ ಹೋಗಿ ತಲೆ ಬೋಳಿಸ್ಕೊಂಡ್ಬಂದ—ನನಗೇ ಇಲ್ಲೇ ಸುಣ್ಣಗೆ ಮಾಡ್ದ—ನಿಂತ ಘಳಿಗೇಲಿ ನೂರೈವತ್ತು ರೂಪಾಯಿ ಖರ್ಚು—ಸಾಲದ್ದಕ್ಕೆ ಈ ರಮೇಶ ಬೇರೆ—ಹಾಗಲ ಕಾಯಿಗೆ ಬೇವಿನ ಕಾಯಿ ಸಾಕ್ಷಿ ಅನ್ನೋ ಹಾಗೆ....ಆ ರಘು ಹಾಕಿದ ತಾಳಕ್ಕೆ ತಕ್ಕ ಹಾಗೆ ಕುಣ್ಕೊಂಡ ..

ಶಾರದ– (ನಗುತ್ತಾ) ಅದು ಸರಿ... ಈ ಕಾವಿ ಬಟ್ಟೆ ಎಲ್ಲಿ ತಂದ್ಯೋ ಈ ವೇಷಕ್ಕೆ?

ರಘು – ಹೋದ ವಾರ ನಮ್ಮ ಕಾಲೇಜ್ನಲ್ಲಿ ನಾಟ್ಕ ಆಯ್ತಕ್ಕ ಅಲ್ವಾ ನನಗೇ ಸನ್ಯಾಸಿ ಪಾತ್ರ. ಅದಕ್ಕೆ ಹೊಂದಿಸ್ಕೊಂಡಿದ್ದೆ—ಈ ಸನ್ಯಾಸಿ ಡ್ರೆಸ್—ಅದಿನ್ನೂ ನನ್ಹತ್ರನೇ ಇತ್ತು. ಮಾಡ್ದೆ—ಇನ್ನೊಂದು ನಾಟಕ...

ರಮೇಶ— (ನಗುತ್ತಾ) ಸ್ವಾಮಿಗಳಿಗೋಸ್ಕರ ಏಕಾದಶೀ ಫಲಾಹಾರಕ್ಕೆ

NAVAYUGA 24-6-1965
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೨೪-೬-೬೫ರಿಂದ ೩೦-೬-೬೫ರ ವರೆಗೆ

೧ ಮೇಷ

ನಿಮ್ಮ ಅದೃಷ್ಟದ ಕದವಿಂದು ತೆರೆದಿಹುದು. ಗ್ರಹಮಂಡಲವೇ ಇಂದು ನಿಮ್ಮ ಮೇಲೆ ಕೃಪೆ ದೋರಿಸುದಾದ ಕಾರಣ ಗಾಳಿ ಬಂದಾಗ ತೂರಿಕೊಂಡದ್ದೇ ಬಂತೆಂಬ ಗಾದೆಯಂತೆ ನಿಮ್ಮ ಆಕಾಂಕ್ಷೆಗಳನ್ನು ಪೂರ್ತಿಗೊಳಿಸಲು ಕಾರ್ಯರಂಗದಲ್ಲಿ ಧೈರ್ಯದಿಂದ ಮುಂದೆ ಸಾಗಿರಿ. ಏನೊಂದೂ ಅಡೆತಡೆಗಳಿಲ್ಲದೆ ನೀವು ನಿಮ್ಮ ಗುರಿಯನ್ನು ಸೇರಲಿರುವಿರಿ. ತಾ. 24, 26, 29, 30 ಈ ದಿನಗಳು ತುಂಬ ಪ್ರಶಸ್ತವಾಗಿವೆ.

೨. ವೃಷಭ

ನಿಮ್ಮ ರಾಶ್ಯಧಿಪನಾದ ಶುಕ್ರನೋರ್ವನನ್ನುಳಿದು ಇತರ ಗ್ರಹರೆಲ್ಲರೂ ನಿಮ್ಮ ಮೇಲೆ ಮುನಿದಿರುವ ಕಾರಣ ನಿಮ್ಮ ದೇಹಾರೋಗ್ಯವೊಂದನ್ನುಳಿದು ಇತರ ಯಾವ ಭಾಗದಲ್ಲೂ ನಿಮಗೆ ಸುಖವಿಲ್ಲವು. ಗೃಹತಾಪತ್ರಯ ಶತ್ರುಜನರ ಪೀಡೆ ಆರ್ಥಿಕ ದುರವಸ್ಥೆಗಳಿಂದಾಗಿ ಮನಸ್ಸಿಗೆ ಉಪಶಮ ನೆಮ್ಮದಿಯಿರಲೊಲ್ಲದು. ಆಪ್ತ ಮಿತ್ರರೊಳು ಮನಸ್ತಾಪವುಂಟಾಗಲಿದೆ. ಅಧಿಕಾರಿ ವರ್ಗದವರ ಕಾಟಕ್ಕೆ ಸಿಲುಕಿದ ನಿಮಗೆ ತಾ. 26, 27, 28 ಈ ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿಹವು.

೩. ಮಿಥುನ

ಪರಿಶ್ರಮಕ್ಕೆ ತಕ್ಕ ಫಲ ಸಿಗದಿದ್ದರೂ ಅನುದಿನದ ಖರ್ಚುವೆಚ್ಚಗಳಿಗಾಗಿ ನೀವಾರ ಮುಖವನ್ನೂ ಕಾಣಬೇಕಾಗಿ ಬರದು. ದುಡಿಮೆಯಲ್ಲಿನ ಹೆಚ್ಚಿನಂಶವನ್ನು ಸದ್ವಿನಿಯೋಗ ಮಾಡುವಿರಿ. ಪ್ರವಾಸದಲ್ಲಿ ಕಷ್ಟನಷ್ಟಗಳುಂಟಾದಾವು. ಕುಜನರ ಮಾಯಾಜಾಲಕ್ಕೆ ಸಿಲುಕಿ ವ್ಯರ್ಥ ನಷ್ಟ ಅಪವಾದಗಳನ್ನು ಕೇಳುವಿರಿ. ಪೈತ್ತಿಕ ದೋಷದಿಂದಾಗಿ ಆರೋಗ್ಯಕ್ಕೆ ಹಾನಿಯಿದೆ. ತಾ. 24, 25, 29, 30 ಈ ದಿನಗಳಲ್ಲಿ ಧನಲಾಭ ಗೃಹಸುಖಗಳು ದೊರೆವವು.

೪. ಕರ್ಕಟಿ

ನಿಮ್ಮ ಶ್ರಮವಿಂದು ಸಾರ್ಥಕವಾಗಲಿದೆ. ಸ್ವಯಂಶಕ್ತರಾದ ನಿಮಗೆ ಜನತೆಯ ಸಹಕಾರವು ಚೆನ್ನಾಗಿರುವುದರಿಂದ ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆವಿರಿ. ನಿಮ್ಮ ಆರ್ಥಿಕ ಪರಿಸ್ಥಿತಿಯು ಇಂದು ಸುಧಾರಿಸುವುದಲ್ಲದೆ ಕೈಬಿಟ್ಟು ಹೋದ ಕೆಲವೊಂದು ವಸ್ತುಒಡವೆಗಳೂ ಪುನಃ ಲಭಿಸಲಿವೆ. ಆಪ್ತಜನರ ಆಕಸ್ಮಿಕ ವಿಯೋಗವುಂಟಾಗಲಿದೆ. ತಾ. 24ರಿಂದ 28ರ ವರೆಗಿನ ದಿನಗಳು ವಿಜಯ ಲಾಭದಾಯಿಗಳಾಗಿವೆ.

೫. ಸಿಂಹ

ಧನಲಾಭಪತಿಯಾದ ಬುಧನು ವ್ಯಯಸ್ಥಾನಕ್ಕೆ ಬಂದಿಹ ಕಾರಣ ನಿಮ್ಮ ಇಂದಿನ ದುಡಿಮೆಯಲ್ಲದೆ ಹಿಂದೆ ಸಂಗ್ರಹಿಸಿಟ್ಟ ಧನವೂ ಕೂಡ ವ್ಯಯವಾಗಲಿದೆ. ಸೋದರರೊಳು ಮತ್ತು ಬಂಧುಜನತೆಯೊಳು ಮನಸ್ತಾಪವುಂಟಾದೀತು. ವಿನಾಕಾರಣ ವಾಕ್ಕಲಹವಾಗಲಿದೆ. ರಾಜಕೀಯರಂಗದಲ್ಲಿ ನಿರೀಕ್ಷೆಗಿಂತಲೂ ಅಧಿಕ ವ್ಯಯವಾಗುವುದಲ್ಲದೆ ಪರಾಭವವೂ ಉಂಟಾದೀತು. ವಾರಾಂತ್ಯದ ೩ ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

೬. ಕನ್ಯಾ

ಜನ್ಮರಾಶಿಗತನಾದ ಅಂಗಾರಕನೋರ್ವನನ್ನುಳಿದು ಇತರರೆಲ್ಲರ ಕೃಪೆಗೆ ಪಾತ್ರರಾಗಿರುವ ನಿಮಗೆ ಸರ್ವತ್ರ ವಿಜಯ ಶುಭಗಳೇ ಪ್ರಾಪ್ತವಾಗಲಿವೆ. ಪ್ರಬಲರಾದ ವಿರೋಧಿಗಳೂ ಕೂಡ ಮೃಗರಾಜನಂ ಕಂಡ ಹರಿಣಗಳಂತೆ ಮಾಯವಾಗುವರು. ವ್ಯವಹಾರ ಚತುರರೂ ಕಾರ್ಯಸಾಧಕರೂ ಆದ ನಿಮಗೆ ರಾಜಕೀಯೇತರ ಚಟುವಟಿಕೆಗಳಲ್ಲಿ ಕೀರ್ತಿ, ಸ್ಥಾನಮಾನಗಳು ಲಭಿಸುವವು. ವಾರಾಂತ್ಯದ 2 ದಿನಗಳು ಅನುಕೂಲವಾಗಿವೆ.

೭. ತುಲಾ

ಕಾಲಚಕ್ರವು ತೀರಾ ಪ್ರತಿಕೂಲವಾಗಿರುವುದು. ಎರೆಹುಳಗಳೂ ಕೂಡ ಸರ್ಪಗಳಂತೆ ಕಾಣಿಸಲಿವೆ. ಕಫವಾತ ದೋಷದಿಂದ ಆರೋಗ್ಯವು ಕೆಡುವುದಲ್ಲದೆ ಎಷ್ಟೇ ಮಿತಭಾಷಿಯಾಗಿದ್ದರೂ ಕೂಡ ಕಲಹವು ಅನಿವಾರ್ಯವಾದೀತು. ಆಯಕ್ಕಿಂತ ದ್ವಿಗುಣ ವ್ಯಯವಾಗುವುದರಿಂದ ಅನುದಿನದ ಖರ್ಚುವೆಚ್ಚಗಳಿಗಾಗಿ ಪರರ ಕೂಡೆ ಸಾಲ ಮಾಡುವ ಪ್ರಸಂಗ ಬರಲಿದೆ. ತಾ. 24, 25 ಮಾತ್ರ ಇತರ ದಿನಗಳಿಗಿಂತ ಸ್ವಲ್ಪ ಉತ್ತಮವಾಗಿ ಕಾಣಿಸೀತು.

೮. ವೃಶ್ಚಿಕ

ಮನೋದೌರ್ಬಲ್ಯವನ್ನು ಬದಿಗೊತ್ತಿ ಕಾರ್ಯಕ್ಷೇತ್ರದಲ್ಲಿ ಧೈರ್ಯದಿಂದ ಮುನ್ನಡೆಯಿರಿ. ನಿಮ್ಮ ಆಶಾಕಾಂಕ್ಷೆಗಳು ಸಫಲವಾಗಲಿವೆ. ಮಾತ್ರವಲ್ಲ ಬಹುಮುಖದಿಂದಲೂ ಧನಾಗಮನವಾದೀತು. ವ್ಯವಹಾರ ಚತುರರಾದ ನಿಮಗೆ ಜನತೆಯು ತಾನಾಗಿ ಬಂದು ನೆರವಾಗಲಿದೆ. ಕೆಲವೊಂದು ಚಿಕ್ಕಪುಟ್ಟ ಗೃಹತಾಪತ್ರಯಗಳು ಮನೋನೆಮ್ಮದಿಗೆ ಭಂಗ ತರಲಿವೆ. ವಾರಾದಿಯ 4 ದಿನಗಳು ಸುಖಶಾಂತಿಯಿಂದ ಕಳೆಯಲಿವೆ

೯. ಧನು

ನಿಮ್ಮ ರಾಶ್ಯಾಧಿಪನಾದ ಬೃಹಸ್ಪತಿಯು ರೋಗಸ್ಥಾನದಲ್ಲಿ ಶತ್ರುಕ್ಷೇತ್ರಗತನಾಗಿರುವುದರಿಂದ ಕಫಸಂಬಂಧವಾದ ಕಾಹಿಲೆಗೆ ಅವಕಾಶವಿದೆ. ನಿಮ್ಮ ಉದ್ಯೋಗವು ನಿರಾತಂಕವಾಗಿ ಸಾಗುವದು. ಶತ್ರುಪೀಡೆಯಿಂದ ಮುಕ್ತರಾದ ನಿಮಗೆ ನಿರೀಕ್ಷೆಗೂ ಮಿಕ್ಕಿ ಫಲಲಾಭವಾಗಲಿದೆ. ದ್ಯೂತಪ್ರಿಯರಿಗೆ ಆಕಸ್ಮಿಕ ಧನಲಾಭದ ಯೋಗವಿದೆ. ವಾರಾಂತ್ಯದ ೩ ದಿನಗಳು ನಿಮ್ಮ ಬಯಕೆಗಳನ್ನು ಈಡೇರಿಸಲಿದೆ.

೧೦. ಮಕರ

ನಿಮ್ಮ ಧನಪತಿಯಾದ ಶನಿಯು ಧನಸ್ಥಾನದಲ್ಲಿದ್ದು ಗುರುವಿನ ಪೂರ್ಣದೃಷ್ಟಿಯು ನಿಮ್ಮ ಮೇಲಿರುವುದರಿಂದ ಅನಿಷ್ಟ ಗ್ರಹಗಳಿಂದಾಗತಕ್ಕ ಪೀಡೆಗಳು ಬಹುತೇಕ ದೂರವಾಗಲಿವೆ. ಆದರೂ ಸ್ತ್ರೀಜನರಿಂದಾಗಿ ಕಲಹ ಅವಮಾನ ಅಪವಾದಾದಿಗಳು ಸಂಭವಿಸುವವು. ವ್ಯಾಪಾರೀ ಜನತೆಗೆ ಅನಿರೀಕ್ಷಿತ ನಷ್ಟವುಂಟಾದೀತು. ಶ್ರಮಜೀವಿಗಳಿಗೀ ಕಾಲವು ಪ್ರತಿಕೂಲವಿದೆ. ತಾ. 29, 30 ಈ ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿವೆ.

೧೧. ಕುಂಭ

ಗಂಡಸ್ಯೋ ಪರಿವೀನಕಃ ಸಂವೃತ್ತಃ ಎಂಬ ಗಾದೆಯಂತೆ ಸ್ವಜನರಿಂದಲೂ ಬಂಧುವರ್ಗದವರಿಂದಲೂ ಮನಸ್ತಾಪದಿಂದ ದೂರೀಕೃತರಾದ ನಿಮಗೆ ಇಂದು ವಿಶೇಷತಃ ಶತ್ರುಜನರಿಂದ ನಾನಾ ತರದ ಪೀಡೆಗಳು ಬರಲಿವೆ. ನಿಮ್ಮ ಧನಮಾನಗಳಿಗೆ ಹಾನಿ ಸಂಭವಿಸುವದು. ರಾಜಕೀಯದಲ್ಲಿ ಪರಾಜಿತರಾಗುವಿರಲ್ಲದೆ ಹೆಚ್ಚಿನ ನಷ್ಟಕ್ಕೊಳಗಾಗುವಿರಿ. ವಾರಾದಿಯ 2 ದಿನಗಳಲ್ಲಿ ಮೃಷ್ಟಾನ್ನ ಭೋಜನ ಭೋಗಗಳನ್ನು ಪಡೆವಿರಿ.

೧೨. ಮೀನ

ಗ್ರೀಷ್ಮರ್ತುವಿನ ದಿನಗಳ ಜಲದಂತೆ ನಿಮ್ಮ ಅದೃಷ್ಟವು ದಿನದಿಂದ ದಿನಕ್ಕೆ ಬತ್ತುತ್ತಾ ಬರುತ್ತಿದೆ. ಸಾಲದ್ದಕ್ಕೆ ಏಳೂವರೆ ಶನಿಯ ಕಾಟ ಬೇರೆ. ವೃಥಾ ಪರಿಶ್ರಮವೇ ವಿನಹಾ ಫಲವೇನೂ ಕಾಣರೊಲ್ಲದು. ಕಾಸು ಇಲ್ಲದ ನರ ಕಲ್ಲಿಗೆ ಸಮವೆಂಬ ಗಾದೆಯಂತೆ ಜನತೆಯ ತಿರಸ್ಕಾರಕ್ಕೆರವಾಗುವಿರಿ. ತಾ. 26, 27, 28 ಈ ದಿನಗಳಲ್ಲಿ ಕಿಂಚಿತ್ ಸುಖನೆಮ್ಮದಿಗಳನ್ನು ಕಾಣಲಿರುವಿರಿ.

ಹಾಲು ಹಣ್ಣು ರೆಡಿಯಾಗಿದೆ- ನೀವೂ ಜೊತೆಗೆ ಫಲಾಹಾರ ಸ್ವೀಕರಿಸಬೇಕು— ದಯವಿಟ್ಟು.

ರಾಮಣ್ಣ— ನನಗೇನು ಮಂಕು ಮುಚ್ಕೊಂಡಿತ್ತೋಂತ.. ಆ ರಮೇಶ ಹೇಳಿದಾಗ—ನಾನೂ ಹಿಂದೆ ಮುಂದೆ ಆಲೋಚನೆ ಮಾಡ್ದೆ—ನಂಬಿ ಬಿಟ್ನಲ್ಲಾ—ಬೆಳ್ಳಗಿರೋದೆಲ್ಲ ಹಾಲೂ ಅಂತ ಅಂದ ಹಾಗೆ—ಇದಕ್ಕೇ ಇರ್ಬೇಕೂ ಕಿಟಕಿ ತೆಗೆರೀ—ಅಂದ್ರೆ ಸ್ವಾಮಿಗಳಿಗೆ—ಶೀತ—ವಾತ ಅಂದ್ಕೊಂಡು ಕಿಟಕಿ ಕೂಡಾ ತೆಗೀಲಿಲ್ಲ. ದೀಪಾ ಹಾಕ್ರೋ ಅಂದ್ರೆ—ಬೇಕಂತ ಹತ್ತು ಕ್ಯಾಂಡಲ್ ಬಲ್ಬ್ ಹಾಕಿ – ಕಣ್ಣೇ ಸರಿಯಾಗಿ ಕಾಣ್ದಾ ಹಾಗೆ ಮಾಡಿದಾರೆ... ಅದಲ್ದೆ —ಇವನು ತಿರ.ಪತಿ ವೇಷ ನನಗೆ ಹೇಗೆ ತಿಳೀಬೇಕೂಂತ .. ಹೂ.... ಅಂತೂ ಹಾಕಿದ್ರು ಇವ್ರೆಲ್ಲ ಸೇರಿ... ನನಗೆ ಚೆನ್ನಾಗಿ ಟೋಪೀನ....

ಶಾರದ— ಹೋಗ್ಲಿ ಬಿಡೀಂದ್ರೆ.... ಇಷ್ಟರಲ್ಲೇ ನಾಲ್ಕು ಮುಗ್ಸಿದಾನಲ್ಲಾ–ಸಂತರ್ಪಣೆ-ಊಟ- ಅಂದ್ಕೊಂಡು ಹೆಚ್ಗೆ ಖರ್ಚು ಮಾಡಿಸ್ದೆ.?....ಸೀರೆ ಪಂಚೆ ತಾನೇ- ನಾವೇ ಉಟ್ಕೊತೀವಿ-ಅಷ್ಟೆ.

ರಾಮಣ್ಣ— ಅದೂ ಸರಿ—ಅಂತ ಇಟ್ಕೊ....

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ —
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ —
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಬೆಳ್ಮಣ್ಣು, ದ. ಕ.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ.ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್.ಸಿ.ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0-60

ಪ್ರತಿಗಳು ಸಿಗುವ ಸ್ಥಳಗಳು:–
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

Edited, Printed & Published by K. H. Shetty at the Navayuga Press, Udipi, S. India,

ನವಯುಗ

ಸಂಪುಟ ೪೪]   ಜುಲೈ ೧, ೬೫   [ಸಂಚಿಕೆ ೪೪



Phone No.
ಫೋನ್ ನಂಬ್ರ: 226

leading nationalist weekly

೨೦
ಪೈಸೆ

ಕಥಾ ಪ್ರಪಂಚ

ಇವಳು ಮಾನವಳಲ್ಲ, ದೇವತೆ

೧

ಮೂಲ: ಆಚಾರ್ಯ ಚತುರಸೇನ.
ಅನು: ಶಿವಮುಂಜೆ ಪರಾರಿ, ಮುಂಬಯಿ.

"ಅಪ್ಪಾಜೀ, ಕಿಲ್ಲೆಯ ಬಗ್ಗೆ ಚಿಂತಿಸ ಬೇಡಿರಿ" ಎಂದು ಅಭಿಮಾನದ ನಗು ನಗುತ್ತಾ ನುಡಿದಳು ರಾಜಕುಮಾರಿ. "ಕಿಲ್ಲೆಯ ಒಂದು ಕಲ್ಲು ಇನ್ನೊಂದು ಕಲ್ಲಿಗೆ ತಾಗಿ ಇದ್ದಷ್ಟು ಹೊತ್ತು ನಾನು ಕಿಲ್ಲೆಯ ರಕ್ಷಣೆ ಮಾಡುತ್ತೇನೆ. ಅದೆಷ್ಟೇ ವೀರತನದಿಂದ ಬೇಕಾದರೆ ಅಲ್ಲಾವುದ್ದೀನನು ಆಕ್ರಮಣಗೈಯಲಿ, ತಾವು ತುಸುವೂ ಚಿಂತಿಸುವ ಆಗತ್ಯವಿಲ್ಲ. ನಿಶ್ಚಿಂತರಾಗಿರಿ. ನಿರ್ಭಯರಾಗಿ ನೀವು ಶತ್ರುವಿನೊಡನೆ ಯುದ್ಧಗೈಯಿರಿ."

ಜೈಸಲ್ ಮೇರದ ರಾಣಾರ ದುರ್ಗಾಧಿಪತಿ ಮಹಾರಾವ್ ರತ್ನಸಿಂಹನ ಕನ್ಯೆಯಾಕೆ. ಗಂಡು ವೇಷದೊಡನೆ ಬಲಿಷ್ಟ ಅರಬೀ ಕುದುರೆಯ ಮೇಲೆ ಆಕೆ ಕುಳಿತಿದ್ದಳು. ಸೊಂಟದಲ್ಲಿ ಎರಡು ಖಡ್ಗಗಳು ತೂಗುತ್ತಿದ್ದುವು. ಬಿಗಿದಿದ್ದ ದುಪ್ಪಟೆಯುಳ್ಳೊಂದು ಈಟಿ. ಬೆನ್ನ ಹಿಂದೆ ಬಾಣಗಳಿಂದ ತುಂಬಿದ ಬತ್ತಳಿಕೆ. ಕೈಯಲ್ಲಿ ಬಿಲ್ಲು. ಒಂದು ಕ್ಷಣವೂ ಸ್ಥಿರವಾಗಿ ನಿಲ್ಲಲೊಲ್ಲದ ಚಪಲ ಕುದುರೆಯ ಕಡಿವಾಣವನ್ನಾಕೆ ಬಲಪೂರ್ವಕಗಾಗಿ ಹಿಡಿದೆಳೆಯುತ್ತಿದ್ದಳು.

ಬಲಿಷ್ಟವಾದ ಕವಚವನ್ನು ತೊಟ್ಟು ಭಯಂಕರವಾದ ಆನೆಯೊಂದರ ಮೇಲಿದ್ದ ಅಂಬಾರಿಯಲ್ಲಿ ಕುಳಿತು ಶತ್ರು ದಮನಕ್ಕಾಗಿ ಪ್ರಸ್ಥಾನಗೈಯಲು ರಾಣಾ ರತ್ನಸಿಂಹನು ಹೊರಟು ನಿಂತಿದ್ದನು. ಮುಂದುಗಡೆ ಸಹಸ್ರಾರು ರಜಪೂತ ತರುಣರು ಬಿಚ್ಚುಗತ್ತಿಯನ್ನು ಹಿಡಿದುಕೊಂಡು ನಿಂತಿದ್ದರು. ಅವರ ಕುದುರೆಗಳು ಉತ್ಸಾಹದಿಂದ ಕೆನೆಯುತ್ತಿದ್ದುವು. ಅವರ ಕೈಯಲ್ಲಿದ್ದ ಕತ್ತಿಗಳು ಹೊಳೆಯುತ್ತಿದ್ದುವು.

ತನ್ನ ಪ್ರೀತಿಯ ಮಗಳ ಹೆಗಲನ್ನು ತಟ್ಟುತ್ತಾ ರತ್ನಸಿಂಹ—"ಶಹಭಾಸ್ ಮಗಳೇ, ಇಂತಹ ಉತ್ತರವನ್ನೇ ನಾನು ನಿನ್ನಿಂದ ಬಯಸಿದ್ದೆ. ಒಬ್ಬ ಹೆಣ್ಣಿನಂತೆ ನಾನು ನಿನ್ನನ್ನು ಸಾಕಿ ಸಲಹಲಿಲ್ಲ. ಒಬ್ಬ ಗಂಡಿಗೆ ಕೊಡಬೇಕಾದ ಶಿಕ್ಷಣವೆಲ್ಲವನ್ನೂ ನಿನಗೆ ಕೊಟ್ಟು ಗಂಡೆಂದು ತಿಳಿದು ಸಾಕಿದ್ದೇನೆ. ದುರ್ಗವನ್ನು ನಿನ್ನ ವಶಕ್ಕಿತ್ತು ನಾನು ಸಂಪೂರ್ಣವಾಗಿ ನಿಶ್ಚಿಂತನಾಗಿರುವೆನು. ಆದರೂ ಎಚ್ಚರವಾಗಿರು. ಶತ್ರು ಕೇವಲ ವೀರನಷ್ಟೇ ಅಲ್ಲ, ಧೂರ್ತನೂ ಮೋಸಗಾರನೂ ಆಗಿದ್ದಾನೆ!"

ಬಾಲಿಕೆ ವಕ್ರದೃಷ್ಟಿಯಿಂದ ತಂದೆಯನ್ನು ನೋಡಿ ನಕ್ಕು ಬಿಟ್ಟಳು. "ಅಪ್ಪಾಜೀ ನಿಶ್ಚಿಂತರಾಗಿ ನೀವು ಪ್ರಸ್ಥಾನಗೈಯಬಹುದು. ಕಿಲ್ಲೆಯ ಕೂದಲು ಕೊಂಕಲಾರದು."

ಸೂರ್ಯನ ಎಳೆ ಬಿಸಿಲಿನಲ್ಲಿ ಹೊಳೆಯುತ್ತಿದ್ದ ತನ್ನ ಕಿಲ್ಲೆಯ ಗುಂಟಿಜನಗಳತ್ತ ಒಮ್ಮೆ ತೀವ್ರ ದೃಷ್ಟಿ ಬೀರಿ ರತ್ನಸಿಂಹ ಆನೆಯನ್ನು ಮುಂದು ನಡೆಸಿದನು. ಗಗನ ಬೀಥಿ ಜಯ ನಿನಾದದಿಂದ ಭೂಮಿ ಆಕಾಶಗಳೆರಡೂ ಕಂಪನಗೊಂಡವು. ಒಂದು ವಿಶಾಲಕಾಯ ಸೈನ್ಯ ಹೆಬ್ಬಾವಿನಂತೆ ಕಿಲ್ಲೆಯ ಮಹಾದ್ವಾರದಿಂದ ಹೊರಬಿದ್ದು ಪರ್ವತ ಶ್ರೇಣಿಯಲ್ಲಿ ವಿಲೀನವಾಯ್ತು. ಆ ಬಳಿಕ ಘೋರ ಚೀತ್ಕಾರದೊಂದಿಗೆ ಮಹಾದ್ವಾರದ ಬಾಗಿಲು ಮುಚ್ಚಿಕೊಂಡಿತು.

ಚಕ್ರಾಕಾರವಾಗಿ ಶತ್ರು ಸೈನ್ಯ ದುರ್ಗವನ್ನು ಮುತ್ತಿ ಕುಳಿತಿತ್ತು. ಕಿಲ್ಲೆಯ ಹೊರಗಿನಿಂದ ಬರುವ ಸಮಸ್ತ ವಸ್ತುಗಳೂ ನಿಂತು ಬಿಟ್ಟಿದುವು. ಪ್ರತಿದಿನ ಯವನ ದಳ ಗುಂಡು ಮತ್ತು ಬಾಣಗಳ ಮಳೆಗರೆಯುತಿತ್ತು. ಜೈಸಲ ಮೇರದ ಅಜೇಯ ದುರ್ಗ ಅಭಿಮಾನದಿಂದ ಉನ್ನತ ಮಸ್ತಕದೊಂದಿಗೆ ಹಾಗೇ ನಿಂತಿತ್ತು. ಈ ದುರ್ಗವನ್ನು ಸುಲಿಯುವುದು ತಮಾಷೆಯ ವಿಷಯವಲ್ಲ ಎಂಬುದು ಯವನರಿಗೂ ಮನದಟ್ಟಾಗಿ ಬಿಟ್ಟಿತು. ದುರ್ಗ ರಕ್ಷಣೆ ರಾಜನಂದಿನಿ ನಿರ್ಭಯವಾಗಿ ಕಿಲ್ಲೆಯಲ್ಲಿ ಕುಳಿತು ಶತ್ರುಗಳಿಗೆ ಚಳ್ಳಂಗಾಯಿ ತಿನಿಸುತ್ತಿದ್ದಳು. ಜೀವನ ಮೃತ್ಯುಗಳೆರಡನ್ನೂ ಆಟವೆಂದು ತಿಳಿದಿದ್ದ ಹಳೆಯ ಹಲವಾರು ರಜಪೂತ ವೀರರು ಆಕೆಯ ಅಧೀನತೆಯಲ್ಲಿದ್ದರು. ಕೆಲವೊಮ್ಮೆ ರಾಜನಂದಿನಿ ರತ್ನಾವತಿ ತನ್ನ ಸಖಿಯರೊಂದಿಗೆ ಕಿಲ್ಲೆಯ ಯಾವುದಾದರೊಂದು ಬುರುಜಿನ ಮೇಲೇರಿ ಶತ್ರುಸೈನ್ಯದ ಮೇಲೆ ಬಾಣವರ್ಷಗೈದು 'ತ್ರಾಹಿ ತ್ರಾಹಿ' ಎನಿಸಿಬಿಡುತ್ತಿದ್ದಳು.—"ನಾನು ಸ್ತ್ರೀ ಎಂಬುದು ನಿಜ ಆದರೆ ಅಬಲೆಯಲ್ಲ. ಗಂಡಿನಲ್ಲಿರಬೇಕಾದ ಧೈರ್ಯ ಸಾಹಸಗಳು ನನ್ನಲ್ಲಿವೆ. ನನ್ನ ಸಖಿಯರು ಕೂಡಾ ಅಷ್ಟೇ ನೋಡಲಿಕ್ಕಷ್ಟೇ ಸ್ತ್ರೀಯರು—ಈ ಯವನರು ನಮ್ಮನ್ನೇನಂತ ತಿಳಿದಿದ್ದಾರೆ?" ಎನ್ನುತ್ತಿದ್ದಳು ಆಕೆ.

ಅವಳ ಮಾತುಗಳನ್ನು ಕೇಳಿ ಸಖಿಯರು ಗಟ್ಟಿಯಾಗಿ ನಕ್ಕು ಬಿಡುತ್ತಿದ್ದರು. ಪ್ರಬಲ ಯವನ ದಳದಿಂದ ಆಕ್ರಾಂತ ದುರ್ಗದಲ್ಲಿ ಕುಳಿತು ಕೊಳ್ಳುವುದು ಅವಳಿಗೊಂದು ವಿನೋದವಾಗಿತ್ತು.

ಇಂದಿನ ಯವನ ಸೇನಾಧಿ ಪತಿ ಮಲ್ಲಿಕ ಕಾಫರ್ ಜಾತಿಯಿಂದ ಗುಲಾಮ. ಬಹುದೃಢತೆಯಿಂದ ಬಹಳಷ್ಟು ಶಾಂತಿ ಸಹನೆಗಳಿಂದ ರಾಜಕುಮಾರಿಯ ಚತುರತೆಯನ್ನು ಸಹಿಸುತ್ತಿದ್ದನು. ಕಿಲ್ಲೆಯಲ್ಲಿ ಆಹಾರ ಸಾಮಗ್ರಿ ಮುಗಿಯುತ್ತಲೇ ದುರ್ಗ ತನ್ನಿಂದ ತಾನೇ ಅನಾಯಾಸವಾಗಿ ತನ್ನ ಕೈ ಸೇರುವುದು ಎಂದಾತನು ನಿಶ್ಚಯಿಸಿದ್ದನು. ಆದರೂ ಅವನು ಆಗಾಗ ದುರ್ಗವನ್ನು ಆಕ್ರಮಣ ಗೈಯುತ್ತಲೇ ಇದ್ದನು. ಪರಂತು, ಕಿಲ್ಲೆಯ ಭಯಂಕರ ಗೋಡೆಗಳಿಗೆ ಯಾವ ಆಘಾತಗೈಯಲೂ ಅವನು ಸಮರ್ಥನಾಗಿರಲಿಲ್ಲ. ರಾಜಕುಮಾರಿ ಕಿಲ್ಲೆಯ ಮೇಲೆ ಬಂದಾಗಲೆಲ್ಲಾ—"ಈ ಧೂರ್ತ ಗಿಡುಗಗಳು ಸುಮ್ಮ ಸುಮ್ಮನೆ ಗುಂಡು ಹಾರಿಸಿ ನನ್ನ ಕಿಲ್ಲೆಯನ್ನು ಕೊಳಕು ಮಾಡುತ್ತವೆ. ಇದರಿಂದೇನು ಲಾಭವಾದೀತು?" ಎಂದು ವಿನೋದ ಮಾಡುತ್ತಿದ್ದಳು.

ಒಮ್ಮೆ ಯವನದಳ ಬಹು ಪ್ರಬಲ ಆಕ್ರಮಣಗೈಯಿತು. ಆ ದುರ್ಗದ ಮೇಲೆ ರಾಜಕುಮಾರಿ ಮೌನವಾಗಿ ಕುಳಿತ್ತಿದ್ದಳು. ಶತ್ರು ಪಡೆಯ ಸೈನಿಕರು ಕಿಲ್ಲೆಯ ಗೋಡೆಯ ಅರ್ಧದಷ್ಟು ಮೇಲೇರಿದಾಗ ನಾಲ್ಕು ಕಡೆಗಳಿಂದ ಗುಂಡು ಕಲ್ಲುಗಳ ಮತ್ತು ಕುದಿಯುವ ಎಣ್ಣೆಗಳ ಮಳೆ ಸುರಿಯುತ್ತಿತ್ತು. ಶತ್ರು ಸೇನೆ ಛಿನ್ನ ಭಿನ್ನವಾಯಿತು. ಜನರ ಮುಖ ಊದಿ ಹೋಗಿತ್ತು. ಹಲವಾರು ಮಂದಿಯಂತೂ ಜಜ್ಜಿ ಹೋಗಿದ್ದರು. ಕಸಸ್ರಾರು ಮಂದಿ 'ತೋಬಾ ತೋಬಾ' ಎನ್ನುತ್ತಾ ಬದುಕಿ ಉಳಿದರೆ ಬೇಡಿ ತಿಂದೇವು ಎಂದು ಕೊಂಡು ಓಡಿ ಹೋದರು. ಪ್ರಾಚೀರದ ತಪಕ ಮುಟ್ಟಿದ್ದವರು ರುಂಡ ಮುಂಡಗಳನ್ನು ಬೇರೆ ಬೇರೆ ಮಾಡಿಕೊಂಡೇ ಬಿದ್ದರು.

ಸೂರ್ಯಾಸ್ತವಾಗಲಿತ್ತು. ಪಶ್ಚಿಮ ದಿಕ್ಕು ರಕ್ತವರ್ಣ ತಾಳಿತ್ತು. ರಾಜಕುಮಾರಿ ತುಸು ಚಿಂತಿತಭಾವದಿಂದ ದೂರದ ಪರ್ವತ ಶ್ರೇಣಿಯ ಹಿಂದೆ ಮುಳುಗ ಹೊರಟ ಅರುಣನನ್ನು ನಿರುಕಿಸುತ್ತಿದ್ದಳು. ಕಳೆದ ನಾಲ್ಕು ದಿನಗಳಿಂದ ಅವಳಿಗೆ ಅವಳ ತಂದೆಯಿಂದ ಯಾವ ಸಂದೇಶವೂ ಬಂದಿರಲಿಲ್ಲ. ತಂದೆಗೆ ಎಂತಹ ಸಹಾಯ ಬೇಕಾದೀತು ಎಂದು ಆಕೆ ಚಿಂತಿಸುತ್ತಿದ್ದಳು. ಒಂದು ಬುರುಜಿನ ಕೆಳಗೆ ಆಕೆ ಕುಳಿತುಬಿಟ್ಟಳು. ಮೆಲ್ಲ ಮೆಲ್ಲನೆ ಅಂಧಕಾರ ಹೆಚ್ಚುತಿತ್ತು. ಅವಳು ನೋಡುತ್ತಿದ್ದಳು. ಕಪ್ಪು ಮೂರ್ತಿಯೊಂದು ಪರ್ವತ ಶ್ರೇಣಿಗಳೆಡೆಯಿಂದ ಕಿರು ಕಾಲ್ದಾರಿಯ ಮೂಲಕ ಕಿಲ್ಲೆಯೆಡೆಗೆ ಬರುತ್ತಿತ್ತು. ಪ್ರಾಯಶಃ ತಂದೆಯವರ ಸಂದೇಶವಾಹಕನಾಗಿರಬೇಕೆಂದು ಆಕೆ ಉತ್ಸುಕತೆಯಿಂದ ಅವನತ್ತಲೇ ನೋಡ ತೊಡಗಿದಳು. ಅವನ ಗುಪ್ತದ್ವಾರದತ್ತ ತಿರುಗುವುದನ್ನು ಬಿಟ್ಟು ಸಿಂಹದ್ವಾರದತ್ತ ತಿರುಗುವುದನ್ನು ಕಂಡು ಆಕೆಗೆ ಆಶ್ಚರ್ಯವೂ ಆಯಿತು. ಸಂದೇಹವೂ ಆಯ್ತು. ಆವನು ಶತ್ರು ಎಂಬುದು ನಿಸ್ಸಂದೇಹವಾಯ್ತು. ರಾಜಕುಮಾರಿ ತಕ್ಷಣ ಎದ್ದು ನಿಂತಳು. ಅನಾಯಾಸವಾಗಿಯೇ ತೀಕ್ಷ್ಣ ಬಾಣವೊಂದು ಅವಳ ಬಿಗಿಮುಷ್ಟಿಯನ್ನು ಸೇರಿತು. ಆ ಕಪ್ಪು ಮೂರ್ತಿ ಸಿಂಹದ್ವಾರ ಮುಟ್ಟುವಷ್ಟರಲ್ಲಿ ಆಕೆಯೂ ಸಿಂಹ ದ್ವಾರದ ಮೇಲ್ಗಡೆಯ ಬುರುಜಿನಲ್ಲಿ ಬಂದು ನಿಂತಳು. ಆ ಮೂರ್ತಿ ಬೆನ್ನ ಮೇಲಿದ್ದ ಗಂಟನ್ನು ಕೆಳಗಿಟ್ಟು ಕಿಲ್ಲೆಯ ಮೇಲೇರುವ ಉಪಾಯ ಯೋಚಿಸಲಾರಂಭಿಸಿತು. ೧

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

			ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	....	5½
6 ತಿಂಗಳಿಂದ	12 ತಿಂಗಳ ಕೆಳಗೆ	....	6
12 ತಿಂಗಳಿಂದ	24 ತಿಂಗಳ ಕೆಳಗೆ	....	6½
24 ತಿಂಗಳಿಂದ	36 ತಿಂಗಳ ಕೆಳಗೆ	....	6¾
36 ತಿಂಗಳಿಂದ	48 ತಿಂಗಳ ಕೆಳಗೆ	....	7
48 ತಿಂಗಳಿಂದ	60 ತಿಂಗಳ ಕೆಳಗೆ	....	7¼
60 ತಿಂಗಳಿಂದ	84 ತಿಂಗಳ ಕೆಳಗೆ	....	7¾
84 ತಿಂಗಳಿಂದ	120 ತಿಂಗಳ ಕೆಳಗೆ	....	8
ಸೇವಿಂಗ್ಸ್ ಖಾತೆಯ ಮೇಲೆ		... ...	4

ದಿ ಕೆನರಾ...

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ

ಎಲ್ಲಾ ತರದ ಸಿದಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ
ಪಾಕೆಟ್ ಡಾಕ್ಟರ್
ಅಮೃತಾಂಜನ ಲಿ. ಬೊಂಬಾಯಿ, ಮದರಾಸು, ಕಲ್ಕತ್ತಾ

Phone No. 226.

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2·00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಹಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಲೇಖನ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಅಮೇರಿಕದ ಪ್ರಖ್ಯಾತ ಕುಸ್ತಿಗಾರರಿಬ್ಬರು— ಶ್ರೀ ಮತ್ತು ಶ್ರೀಮತಿ ಅಬೀ ಮತ್ತು ಮ್ಯಾರಿಯಲ್ ಗ್ರೋಸ್‌ಫೆಲ್ಡ್. ಇವರು ೧೯೬೪ರ ಒಲಿಂಪಿಕ್ ಪಂದ್ಯಾಟಗಳಲ್ಲಿ ಭಾಗವಹಿಸಿದ್ದರು.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೪೪	೧—೨—೧೯೬೫	No. 44

ವಚನ ಸುಧೆ

ಅನ್ನಂ ನ ನಿಂದ್ಯಾತ್ ತದ್ವ್ರತಮ್ ||

(ತೈತ್ತಿರಿಯೋಪನಿಷತ್, ೩—೭.)

೦ ಅನ್ನವನ್ನು ನಿಂದಿಸಬೇಡ, ಅದುವೇ ವ್ರತ.

೦೦ ಎಂದೆಂದೂ ಅನ್ನವನ್ನು ನಿಂದಿಸಬಾರದು. ಏಕೆಂದರೆ, ಅದು ಪವಿತ್ರವಾದುದು ಮತ್ತು ಪೂಜ್ಯವಾದುದು. ಅನ್ನವನ್ನು ನಿಂದಿಸುತ್ತ ಅದನ್ನು ಉಣ್ಣುವವನು ರೋಗಿಯೂ ಗುತ್ತಾನೆ. ಅದನ್ನು ಪ್ರೇಮದಿಂದ ಸೇವಿಸುವವನ ಶರೀರ ಪುಷ್ಟಿಯೂ ಗುತ್ತದೆ. ಆದುದರಿಂದ ಆರೋಗ್ಯ ರಕ್ಷಣೆಗಾಗಿ ಅನ್ನವನ್ನು ನಿಂದಿಸುವುದು ಉಚಿತವಲ್ಲ.

ಆತ್ಮ ವಿಶ್ವಾಸ

ಸ್ವತಂತ್ರ ಭಾರತವು ಪ್ರಜಾಪ್ರಭುತ್ವದ ತಳಹದಿಯಲ್ಲಿಯೇ ಸುಭದ್ರವಾಗಿ ನಿಂತು, ತನ್ನ ಸರ್ವತೋಮುಖ ಅಭಿವೃದ್ಧಿಯನ್ನು ಮಾಡಿಕೊಳ್ಳಬಲ್ಲದು ಎಂಬ ಆತ್ಮವಿಶ್ವಾಸವು ನಮ್ಮ ಹಿಂದಿನ ಪ್ರಧಾನಿ ಜವಾಹರಲಾಲರಲ್ಲಿತ್ತು. ಏಕೆಂದರೆ, ಅವರೆಂದಿಗೂ ನಿರಾಶಾವಾದಿಯಾಗಿರಲಿಲ್ಲ. ಅಂತಹ ಭಾರತ ರತ್ನ ನೆಹರೂರವರ ಉತ್ತರಾಧಿಕಾರಿಯಾಗಿ ಬಂದ ಇಂದಿನ ಪ್ರಧಾನಿ ಲಾಲಬಹದೂರ ಶಾಸ್ತ್ರಿಯವರೂ ಅಂತಹುದೇ ಆತ್ಮ ವಿಶ್ವಾಸವನ್ನು ತಾಳಿದ್ದಾರೆ ಇದು ಭಾರತೀಯರಿಗೆ ಹೆಮ್ಮೆಯ ಸಂಗತಿ. ಇತ್ತೀಚೆಗೆ ಕಾಮನ್‌ವೆಲ್ತ್ ಪ್ರಧಾನಿ ಪರಿಷತ್ತಿನಲ್ಲಿ ಭಾಗವಹಿಸಲು ತೆರಳಿದ್ದ ಅವರು ಲಂಡನ್ನಿನಲ್ಲಿ ಭಾರತೀಯ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತ ಇನ್ನು ಹದಿನೈದು ವರ್ಷಗಳಲ್ಲಿ ಭಾರತವು ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸುವುದು ಎಂದು ಉದ್ಗರಿಸಿದುದು ಎಲ್ಲರ ಗಮನವನ್ನೂ ಆಕರ್ಷಿಸಿದೆ.

ಭಾರತವು ರಾಜಕೀಯವಾಗಿ ಸ್ವತಂತ್ರಗೊಂಡು ೧೮ ವರ್ಷಗಳು ಕಳೆಯುತ್ತ ಬಂದುವು. ಈ ಅವಧಿಯಲ್ಲಿ ಪ್ರಾರಂಭದ ೧೭ ವರ್ಷಗಳ ಕಾಲ ಒಬ್ಬನೇ ಒಬ್ಬ ಜವಾಹರಲಾಲರು ತಮ್ಮ ಜನತೆಯ ಅಗತ್ಯ—ಅಪೇಕ್ಷೆಗಳನ್ನು ಮನಗಂಡು ಅವಕ್ಕನುಗುಣವಾಗಿಯೇ ಸರಕಾರದ ನೀತಿಯನ್ನು ರೂಪಿಸಿ ದೇಶವು ಪ್ರಗತಿ ಪಥದಲ್ಲಿ ಸಾಗುವಂತೆ ತೀವ್ರ ಎಚ್ಚರಿಕೆ ವಹಿಸಿದ್ದರು. ದೇಶದ ಸರ್ವ ಪ್ರಕಾರದ ಉನ್ನತಿಯನ್ನು ಸಾಧಿಸಲು ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿ, ಅಡಚಣೆ ವಿಘ್ನವಿಡಂಬನೆಗಳಿಗೆ ಮಣಿಯದೆ ಅವನ್ನು ಕಾರ್ಯರೂಪಕ್ಕಿಳಿಸಿದರು. ಅವರು ಹುಟ್ಟಿದ ದಾರಿಯನ್ನೇ ಲಾಲಬಹದೂರರೂ ತುಳಿಯುತಿದ್ದಾರೆ. ಅವರಂತೆಯೇ ಇವರೂ ಆತ್ಮ ವಿಶ್ವಾಸವನ್ನು ಪ್ರದರ್ಶಿಸುತ್ತಾರೆ. ಇಲ್ಲಿ ಒಂದು ವಿಷಯವನ್ನು ನೆನಪಿಸಿಕೊಳ್ಳಬೇಕು. ನಮ್ಮ ಸರಕಾರವು ತನ್ನ ಪಂಚವಾರ್ಷಿಕ ಯೋಜನೆಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಹೊರದೇಶಗಳಿಂದ ದೊಡ್ಡ ಪ್ರಮಾಣದಲ್ಲಿಯೇ ಆರ್ಥಿಕ ಸಹಾಯವನ್ನು ಪಡೆಯುತ್ತಿದೆ. ಯೋಜನೆಗಳ ಆಕಾರವು ಬೆಳೆಯುತ್ತ ಬಂದಂತೆ ಇಂತಹ ಸಹಾಯಧನದ ಮೊತ್ತವೂ ಹೆಚ್ಚುತ್ತ ಬಂದಿದೆ. ಇದರ ಪರಿಣಾಮವಾಗಿ ದೇಶವನ್ನು ಕಾಂಗ್ರೆಸ್ ಸರಕಾರವು ಡಾಲರ್‌ಗಳಿಗೆ ಮಾರುತ್ತಿದೆ ಎಂದೂ ಅತಿ ಪ್ರಸರಣ—ಬೆಲೆಯೇರಿಕೆಗಳಿಗೆ ಕಾರಣವಾಗಿದೆಯೆಂದೂ ಕೆಲವು ರಾಜಕೀಯ ಹಿತಾಸಕ್ತಿಗಳು ದೂರುತ್ತಿವೆ. ಇದಕ್ಕಾಗಿ, ದೇಶದ ಆಂತರಿಕ ಸಾಧನ ಸಂಪತ್ತಿಗನುವಾಗುವಂತೆ 'ಯೋಜನೆಗಳನ್ನು ಬದಲಾಯಿಸಿರಿ" ಎಂಬ ಒಂದು ಬಗೆಯ ಆಂದೋಲನವೂ ನಡೆಯತೊಡಗಿದೆ. ಆದರೂ, ಇತರರಿಂದ ಸಹಾಯವನ್ನು ಪಡೆಯುವುದು ಅನಭಿವೃದ್ಧ ದೇಶದ ಪುನಾರಚನೆಯಲ್ಲಿ ಉಚಿತವಾದುದೇ. ಹಾಗೆಯೇ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಕೊರತೆ ಧನದ ವಿನಿಯೋಗ—ಬೆಲೆಯೇರಿಕೆಗಳೂ ತಕ್ಕಮಟ್ಟಿಗೆ ಸ್ವಾಭಾವಿಕವೇ. ಅಂದರೆ, ಇವುಗಳ ಮೇಲೆ ಹತೋಟಿಯನ್ನಿಡುವುದು ತಪ್ಪು ಎಂದಭಿಪ್ರಾಯವಲ್ಲ. ಸರಕಾರವು ಅತೀವ ಎಚ್ಚರಿಕೆಯನ್ನು ವಹಿಸಿ ಅತಿ ಪ್ರಸರಣ—ಬೆಲೆಯೇರಿಕೆಯ ಪ್ರಶ್ನೆಯತ್ತ ಲಕ್ಷ್ಯ ಹರಿಸಿದೆ. ಈ ದಿಸೆಯಲ್ಲಿ ಈಗಾಗಲೇ ಕೆಲವು ಕ್ರಮಗಳನ್ನು ಕೈಗೊಂಡಿದ್ದು ಮುಂದೆಯೂ ಅವಶ್ಯವೆನಿಸುವ ಕ್ರಮ ವಹಿಸುವುದೆಂದು ನಂಬಬಹುದು.

ವಿದೇಶಗಳಿಂದ ಭಾರತವೊಂದೇ ಸಹಾಯ ಪಡೆದದಲ್ಲ. ಅಥವಾ ಭಾರತವು ಯಾವುದೇ ಶರ್ತಗಳ ಮೇಲೆ ಸಹಾಯ ಪಡೆದುದಿಲ್ಲ. ಯಾವುದೇ ಬಗೆಯ ರಾಜಕೀಯ ಶಕ್ತಿ ಕೂಟಗಳ ನಡುವೆ ಸಿಕ್ಕಿಕೊಂಡಿರುವುದಿಲ್ಲ. ಆರ್ಥಿಕ ನೆರವು ನೀಡಲು ಮುಂದೆ ಬಂದವರಿಂದ ಅದು ನಿಶ್ಶರ್ತವಾಗಿ ಸಹಾಯ ಪಡೆಯುತ್ತಿದೆ. ಕೇವಲ ಇಷ್ಟರಿಂದಲೇ ನಾವು ಗಾಬರಿಪಡುವುದು ಅನಗತ್ಯ ಮತ್ತು ಅನಪೇಕ್ಷಣೀಯ. ಪಡೆದಿರುವ ನೆರವಿನ ಮೊತ್ತವನ್ನು ಸರಿಯಾಗಿ ಬಳಸಿಕೊಳ್ಳುವಲ್ಲಿ ನಾವೇನೂ ಹಿಂದಿರುವುದಿಲ್ಲ. ದೇಶವನ್ನು ಸಂದರ್ಶಿಸಿದ ವಿದೇಶೀ ಮಿತ್ರರು ಇದನ್ನು ಮುಕ್ತಕಂಠದಿಂದ ಪ್ರಶಂಸಿಸುತ್ತಾರೆ. ತಾನು ಪಡೆದ ಸಹಾಯಧನವನ್ನು ಸರಿಯಾಗಿ ಬಳಸಿಕೊಂಡಿರುವ ದೇಶವೆಂದರೆ ಭಾರತವೊಂದೇ ಎಂದು ಅಮೇರಿಕನ್ ರಾಯಭಾರಿಗಳೂ ಹಿಂದೊಮ್ಮೆ ಉದ್ಗಾರವೆತ್ತಿದ್ದಾರೆ. ನಮ್ಮ ಸರಕಾರದ ಮೇಲೆ ವಿದೇಶೀಯರು ಭರವಸೆಯನ್ನಿಟ್ಟಿದ್ದರೂ ನಮಗೆ ಮಾತ್ರ ಅಪನಂಬಿಕೆ ಮೂಡುತ್ತಿರುವುದು ಶೋಚನೀಯ. ನಾವು ಇದುವರೆಗೆ ಕಾರ್ಯರೂಪಕ್ಕೆ ತಂದಿರುವ ಮೂರು ಪಂಚವಾರ್ಷಿಕ ಯೋಜನೆಗಳು ದೇಶವನ್ನು ಅಭಿವೃದ್ಧಿಗೊಳಿಸಿವೆ. ಅಣುಶಕ್ತಿ ಕೇಂದ್ರ, ಉಕ್ಕಿನ ಕಾರಖಾನೆಗಳು ಜಲವಿದ್ಯುದ್ಯೋಜನೆಗಳು, ವಿವಿಧ ಯಂತ್ರೋಪಕರಣ ಕಾರಖಾನೆಗಳು — ನೀರಾವರಿ ಯೋಜನೆಗಳು — ಇವನ್ನು ನಾವೆಂತು ಮರೆಯಬಲ್ಲೆವು? ಇದೇ ಗತಿಯಲ್ಲಿ ನಾವು ಮುಂದಿನ ಹದಿನೈದು ವರ್ಷಗಳ ಕಾಲ ಸಾಗಿದೆವೆಂದರೆ, ನಾವು ಯೋಜನೆಗಳಲ್ಲಿ ತೊಡಗಿಸಿದ ಬಂಡವಾಳವು ಉತ್ಪತ್ತಿಯನ್ನು ನೀಡಲಿದ್ದು, ನಮ್ಮ ವಿದೇಶೀ ಸಾಲಗಳೂ ತೀರ ತೊಡಗುವುವು. ಇದನ್ನು ನಾವು ಗಮನಿಸುವುದಾದರೆ, ಪ್ರಧಾನಿ ಶಾಸ್ತ್ರಿಯವರು ಇಟ್ಟುಕೊಂಡ ಆತ್ಮ ವಿಶ್ವಾಸವು ಮಹತ್ವಾಕಾಂಕ್ಷೆಯಿಂದ ದೂಷಿತವಾಗಿರುವುದಿಲ್ಲವೆಂದೇ ಹೇಳಬೇಕು. ಹಾಗಿದ್ದರೂ ಆಹಾರ ಸಮಸ್ಯೆಯ ಪರಿಹಾರದ ಬಗ್ಗೆ ನಾವು ತೀವ್ರ ಗಮನ ಕೊಡಬೇಕು. ಇದೊಂದೇ ನಮ್ಮಿತರ ಹಲವಾರು ಸಮಸ್ಯೆಗಳಿಗೆ ಉತ್ತರ ಹೇಳಬಲ್ಲುದು. ಮುಂದಿನ ಯೋಜನೆಗಳಲ್ಲಿ ಈ ಕಡೆಗೆ ಅವಶ್ಯಕ ಲಕ್ಷ್ಯ ಪೂರೈಸಿ ಪ್ರಜೆಯ ಮೂಲಭೂತ ಅವಶ್ಯಕತೆಗಳಾದ ಅಶನ, ವಸನ, ವಸತಿ, ಶಿಕ್ಷಣಗಳನ್ನು ಒದಗಿಸಿಕೊಡುವಲ್ಲಿ ಯಶಸ್ವಿ ದೊರೆಯಲೆಂದು ಆಶಿಸುತ್ತೇವೆ.

ಚಲ್ಲಾಟಕ್ಕೆ ಮಿತಿಯೆ?

ಪಾಕಿಸ್ತಾನದ ಸಂಬಂಧವು ಕಮ್ಯುನಿಸ್ಟ್ ಚೀನಾದೊಡನೆ ಹೆಚ್ಚುತ್ತ ಬರುತ್ತಿರುವುದು ಭಾರತಕ್ಕೆ ಮಾತ್ರವಲ್ಲ, ಪಾಶ್ಚಾತ್ಯ ರಾಷ್ಟ್ರಗಳಿಗೂ ಕಳವಳಕಾರಕವಾಗಿದೆಯೆಂದು ವರದಿಯಾಗಿದೆ. ಇತ್ತೀಚೆಗಿನ ಒಂದೆರಡು ವರ್ಷಗಳಿಂದ ಕೆಂಪು

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ



"ನಿನ್ನ ಈ ಚೀಲಗಳ ಪಟ್ಟಿಯನ್ನು ಕಾಣುವಾಗ, ಬಜೆಟಿನ ಗಾತ್ರವನ್ನು ಚೌಕವಾಗಿ ಪರಿವರ್ತಿಸಿದಂತಿದೆ. ಇದನ್ನು ಪೂರೈಸುವುದು ಹೇಗೆ ತನಿಸಾರ್ಸ್!"

"ಬೇಡಿಕೆ ಪೂರೈಸದಿದ್ದರೆ, ಮುಂದಿನ ನಮ್ಮ ದಾರಿ ಸ್ಪಷ್ಟವಾಗಿದೆ....."

ಗೇಹ ರಾಜ್ಯದಲ್ಲಿ

ಎಲ್ಲವೂ ಪರಿಸ್ಥಿತಿ ವಶವಲ್ಲ?

"ಓಹೋ, ಇದೇನಿದು....?"

"..........."

"ಏಯ್, ಸ್ವಲ್ಪ ಇಲ್ಲಿ ನೋಡೇ...."

"..........."

'ಅಯ್ಯೋ ದೇವರೇ... ಏನಿದು ಗ್ರಹಚಾರಾಂತ."

'..........,"

'ಸ್ವಲ್ಪ ಇಲ್ಲಿ ಕೇಳವ್ವಾ, ಇಲ್ಲಿ...."

"ಹ್ಞಾಂ.......ಯಾರು? ಏನು ಬೇಕಾಗಿತ್ತು?"

"ಯಾರಂತೆ? ಏನು ಬೇಕಾಗಿತ್ತಂತೆ. ಹ್ಞಾಂ ನಿನ್ನಜ್ಜ ಬಂದಿದ್ದಾನೆ...."

"ಯಾರು? ಓ, ನೀವೇ.. ?'

'ಹೌದೌದು, ನಾನು ನಾನೇ....'

"ಅಲ್ಲ, ಯಾಕೆ ಇವತ್ತು ಬರುವಾಗ್ಲೇ ಸೊಟ್ಟ ಮೋರೆ ಮಾಡ್ಕೊಂಡಿದೀರಾ?"

'ಸೊಟ್ಟ ಮೋರೆಯಂತೆ ಸೊಟ್ಟದು.... ಇರ್ಲಿ, ನಾನು ಬಂದು ಅದೆಷ್ಟು ಅರಚಿಕೊಂಡ್ರೂ ಧ್ಯಾನ ಭಂಗವಾಗಿಲ್ಲ ನೋಡು ನಿನ್ಗೆ... ....'

'ಅದಕ್ಕೆಂದೇ ಉರಿದಿರೋದೇನು?'

'ಉರಿಯೋದು ಉರುವಲು...'

'ಪಾಪ, ಮುಖ ಭಾರೀ ಕೆಂಪಡರಿ ಹೋಗಿದೆ ಅಲ್ವೆ?'

'ಹ್ಞಾ...ದಾರಿ ನಡೆದು ಬೇಸತ್ತು...'

'ಅಯ್ಯೋ ಪಾಪವೆ! ಈ ಜಡಿಮಳೆಯ ದಿನವೇ ಇಷ್ಟು ಆಯಾಸವಾದ್ರೆ ಇನ್ನು ಬೇಸಗೆಯ ದಿನಗಳಲ್ಲೋ....'

'ಮಳೆ ಜಡಿಯಾದ್ರೂ ಉರಿ ಇನ್ನೂ ಶಾಂತವಾಗಿಲ್ಲ ನೋಡು....'

'ಬಿಸಿಲ ಉರಿ ಶಾಂತವಾಗ್ತಾ ಬಂದ್ರೂ ಹೊಟ್ಟೆಯುರಿ ಹಾಗೇನೇ ಇದೇನ್ನಿ....'

'ಹ್ಞಾ, ಅದೂನೂ ಹೌದು....'

"ಅಲ್ರಿ, ಏನು, ಭಾರೀ ಉದಾಸೀನವಾಗಿದ್ದೀರಿ? ಅಲ್ವೆ ಮುಖ ಉರಿವ ಕಾವಲಿಯಂತೆ..."

"ಕಾವಲಿ ಇದ್ರೆ ದೋಸೆ ಹೊಯ್ದ್ಬೇ ಬಿಡೋದು....'

"ದೋಸೆಗೆ ಬಂದ ಬೇಡ್ವೆ?

"ಇಗೋ ಗೋದಿ ಹಿಟ್ಟು ತಂದಿದ್ದೇನೆ..."

'ಅಯ್ಯಬ್ಬ, ಇಷ್ಟು ದಿನ ಹೇಳಿ ಹೇಳಿ ಸಾಕಾಯ್ತು ನನಗೆ, ಇಂದಾದ್ರೂ ತಂದಿರಲ್ಲ?'

"ಮತ್ತೆ ಮಾಡೋದಾದ್ರೂ ಏನು?'

'ಏನು, ಅಕ್ಕಿ ತರ್ಲಿಲ್ವೆ?"

"ತರ್ತೀನೆ, ಇಂದಲ್ಲ ನಾಳೆ...'

'ಹ್ಞಾಂ, ತಿಂಗಳ ಅಷ್ಟೆರಿಗೆ ನೀವು ಯಾವಾಗ಼್ಲೂ ಹೀಗೇನೆ."

"ನಾನೂಂತೇನೆ, ಎಲ್ರೂ ಒಂದೇನ್ನು. ಬಂದಿರೋ ನಾಲ್ಕು ಕಾಸು ಆಗ಼್ಲೇ ಕೈಜಾರಿ ಹೋಗಿರ್ತದೆ...."

"ನಿಮ್ಗೆ ನಾನೇನು ಹೇಳ್ಲಿ? ಕೈಗೆ ಬಂದದ್ದನ್ನೆಲ್ಲಾ ನಾಲ್ಕೈದು ದಿನಗಳಲ್ಲೇ ಖುಷಿ ಮಾಡಿದ್ರೆ ಮತ್ತೆ ಆಗೋದೇನು?"

"ಆಗೋದೇನು, ಗೊತ್ತೇ ಇದೆ...."

"ಯಾರೋ ಅಂದಿದ್ದಾರೆ ನೋಡಿ, ಸಾವಿರದ ವರೆಗೆ ಸಾಲ, ಆ ಮೇಲೆ ಲೆಕ್ಕಾಂತ..."

'ಅಂದಿರೋದು ನಿಜ... ಅಲ್ವೆ. ಇಡಿ ಮುಳುಗಿದವನಿಗೆ ಚಳಿಯೇನು? ಒಮ್ಮೆ ಹೆರವರ ಮುಂದೆ ಕೈ ಚಾಚಿದವನಿಗೆ ಮುಂದೇಕೆ ದಾಕ್ಷಿಣ್ಯ?'

"ಅದೂ ಹೌದು, ಆದರೆ, ಇಂದೇಕೆ ಹೀಗಾಗಿದ್ದೀರಿ?"

"ಇಂದು ಎಂದೇನು? ಅಲ್ವೆ, ಏನಾಗಿದೆ ಈವತ್ತು?'

"ಆಗೋದೇನು? ಗೊತ್ತಾಗೊಲ್ವೆ ನಿಮಗೆ?"

"ಹ್ಞಾಂ... ಏನೋ ತುಸು ನೆಮ್ಮದಿಯಿಲ್ಲ...."

'ಅಯ್ಯೋ, ಇದೇನೂಂದ್ರೆ.. ನಸೆದು ಒಂದ್ರಾ ಮತ್ತೆ?'

"ನನೇಲಿಲ್ಲಾ, ನನೇಲಿಲ್ಲಾ....ಕೊಡೆಯೇನೂ ಇತ್ತೂನ್ನು...."

"ಹ್ಞಾಂ...ಅದೊಂದು ಕೊಡೆ....ಮಳೆ ಸುರಿಯುದಿರೋವಾಗ ನೀರೇ ಒಳಗೆ ಬರೋಲ್ಲ.. ಈಗಿನ ಕಾಲದ ಅರಿವೆಯೇ ಹಾಗೆ...."

"ನೋಡ್ನು. ಹಿಂದಿನ ಕಾಲದ ಅರಿವೆಯಂತೆ ಆಗಿನ ಕಾಲ್ದ ಅರಿವೆ. ಇಂದಿನದು ಇಂದಿನವರಂತೆ ..."

'ಅಂದ್ರೆ?'

"ಅಂದ್ರೆ, ಏನ? ಹಿಂದಿನ ಕಾಲದವರ ಮಂಡೆ ಭಾರಿ ಗಟ್ಟಿ...ಅದ್ರಿಂದ್ಲೇ ಅವರು ಹಿಡಿಯೋ ಕೊಡೇ ಅರಿವೆ ಗಟ್ಟಿ..."

"ಅಯ್ಯೋ ಅವ್ರು ಎಲ್ಲಿ ಕೊಡೇ ಹಿಡೀತಿದ್ರು?"

'ಅದೇ ಅಂದೆನಲ್ಲಾ, ಕಂಬಳಿ, ಗೊರಬು, ಇನ್ನು ಓಲೆಕೊಡೆ ಅಂದ್ರೆ ಬಹಳ ಹೆಚ್ಚಾಯ್ತು...'

'ಹಾಗೆ ಅನ್ನಿ ...'

'ನೋಡು, ಕಂಬಳಿ ಮಲ್ಟಿ ಪರ್ಪಸ್..'

'ಅಂದ್ರೆ....'

'ಚಳಿಗೂ ಆಗುತ್ತೆ, ಮಳೆಗೂ ಆಗುತ್ತೆ. ಕೆಲಸ ಮಾಡೋಕೆ ಸಲೀಸು ಆಗುತ್ತೆ.... ಗೊರಬು ಹಿಡಿಯೋ ಭಾರ ಇಲ್ಲ. ಮಳೆ ಬಂದತ್ತ ಜಡಿದು ಬಿಟ್ರೆ. ಮತ್ತೆ ರೈನ್ ಕೋಟೇ ಬೇಡ ... ಇನ್ನು, ಫೇಶನ್ ದಾರರಿಗೆ ಬೇಕಾದ್ರೆ ಓಲೆಗರಿಕೊಡೆಯುತ್ತು. ಕಲ್ಲ ಬರಿ ಸುರಿದ್ರೂ ಒಳಗೆ ನೀರು ಬರೋಲ್ಲ .."

'ಹ್ಞಾ...ಇಂದಿನವ್ರದ್ದೆಲ್ಲಾ ತೆಳ್ಳಗೆ ಅಂತ್ಲೇ ಅವರು ಹಿಡಿಯೋ ಕೊಡೆನೂ ತೆಳ್ಳಗೆ....'

'ಭಾರವಾದ್ರೆ ಹೊರೋಕೆ ಕೂಡದು ನೋಡು..ಅದ್ರಲ್ಲೂ ಈ ಮಳೆಗಾಲದಲ್ಲಿ ಹೇಗೆ? ನೀನೇ ಹೇಳು. ಬರಿಗೈ ಬೀಸಿಕೊಂಡು ರಪರಪನೆ ಹೋಗೋದ. ಫೇಶನ್ ಆಗಿರೋವಾಗ...ನನೆಯುತ್ತಿಲ್ಲಾಂತ ನೋಡುವವರಿಗೆ ತೋರ್ಸಿಕೊಡೋದೇ ಫೇಶನ್ ಇರುವಾಗ ಇನ್ನೇನ., ಅಂಗೈಯಗಲದ ಕೊಡೇನೂ ಬರುತ್ತೆ....'

"ಬರ್ಲಿ, ಬರ್ಲಿ, ನಮಗೇನಂತೆ? ಸ್ವಲ್ಪ ಇತ್ತ ಬನ್ನಿ. ತಲೆ ಎಷ್ಟು ಒದ್ದೆಯಾಗಿದೆಯೋ...ಅಯ್ಯೋ, ಪೂರಾ ಪೂರಾ ಒದ್ದೆ! ಒರ್ಸ್ತೇನೆ...."

"ಅಯ್ತಿಲ್ಲ ನಿನ್ನ ಸೇವೆ?"

"ಪಾಪ, ಅದ್ಕೇ ಇರ್ಬೇಕು, ಬಂದವ್ರೇ ಕೂಗಿಕೊಂಡದ್ದು...."

"ಹ್ಞಾಂ...ಅದ್ಕೇ ಇರ್ಬೇಕು..."

'ಇರ್ಲಿ, ಈಗ ಸದ್ಯ ಬಟ್ಟೆ ಬದ್ಲಾಯಿಸಿಕೊಳ್ಳಿ. ನೋಡಿ ಒಳಗಡೆ ಸರಿಗೆಯಲ್ಲಿ ಆರೋಕೆ ಹಾಕಿದೆ....ಅದೆಲ್ಲಿ ಆರುತ್ತೆಂತೀರಿ? ಆದ್ರೂ ಇದಕ್ಕಿಂತ ವಾಸಿ. ಈ ಹಾಳು ಮಳೆಗಾಲದಲ್ಲಿ ಬಟ್ಟೆ ಒಣಗೋದೂ ಇಲ್ಲ....'

"ಅಲ್ವೆ, ನೋಡಿದೀಯ?"

"ಏನು?'

'ಅದೇ, ನೋಡು, ನನಗೆ ನಿನಗೆ ಎರಡೆರಡು ಬಟ್ಟೆಯಾದ್ರೂ ಇದೆ. ಇನ್ನೂ ಒಂದು ಬೇಕೂಂತಿದ್ರೆ ಯಾರಾದ್ರೂ ಅಂಗಡಿಯವ್ರು ಕೈಗಡಾನೂ ಕೊಟ್ಟಾರೂನ್ನು. ಆದ್ರೆ....'

"ಏನು? ಕಡ ತಂದ್ರೆ ಮತ್ತೆ ಹಿಂದೆ ಕೊಡೋದು ಬೇಡ್ವೆ?'

"ಬೇಡಾಂತ ಯಾರಂತಾರೆ? ಯಾವಾಗಾದ್ರೂ ತಪ್ಪದೆ ಮುಟ್ಟಿಸಿದ್ರೆ ಸರಿ. ಆದ್ರೆ ನೋಡು, ಒಂದು ಬಟ್ಟೆನೂ ಇಡಿ ಇಲ್ದಿದ್ದವ್ರು ಎಲ್ಲಿಲ್ಲ? ಬೇಡ, ನಮ್ಮೂರಲ್ಲೇ ಇಲ್ವೆ?"

"ಇದ್ದಾರು, ಇಲ್ದೆ ಏನಂತೆ....'

"ಇಂತಹ ಕೊಡೇನೂ ಇಲ್ದಿದ್ದವ್ರು....'

'ಇದ್ದಾರೆ...'

'ಇಂತಹ ಮನೆ ಇಲ್ದಿದ್ದವ್ರು...'

"ಅಯ್ಯೋ ಏನಂತೀರಾ? ಮನೆ ಮಠ ಇಲ್ದಿದ್ದವ್ರು ಅದೆಷ್ಟೋ ಜನ ಅಂಗಡಿ ಬಾಗ್ಲಲ್ಲಿ ಬಿದ್ದಿದ್ದಾರೆ ನೋಡಿ...."

'ಹಾಗಾದ್ರೆ, ಅವರಿಗೆ ಹೇಗಾಗ್ಬೇಕೊಂತ?'

'ಅದಕ್ಕೇ, ಯಾರೋ ಒಬ್ಬ ಆಂಗ್ಲರವ ಅಂದಿದ್ದ ನೋಡಿ, ಭಾರತವೆಂದರೆ, ಸಾಧುಗಳು, ಅರೆ ನಗ್ನರ, ಅರೆ ಹೊಟ್ಟೆ ಉಂಬವರ ದೇಶಾಂತ....'

'ಅಂದವ ಯಾರೇ ಆದ್ರೂ ಅತ ಅಂದಿರೋದು ನಿಜಾನ್ನು. ಈವತ್ತಿನ ದಿನ ಸಾಧುಗಳ ಸ್ಥಾನವನ್ನು ಸಾಧು ವೇಷಧಾರಿಗಳು ಆಕ್ರಮಿಸಿದ್ದಾರೆ ಅಷ್ಟೆ...."

'ಅಲ್ರಿ, ಹೀಗೆಲ್ಲಾ ಇದ್ರೆ....'

'ಇದ್ರೆ ಏನಂತೆ? ಹಿಂದೊಮ್ಮೆ ಪಂಡಿತ ನೆಹರೂರವರು ಎಲ್ಲಿಯೋ ಭಾಷಣಕ್ಕೆ ಹೋಗಿದ್ರಂತೆ. ಗಾಡಿ ಇಳಿಯುತ್ಲೇ ಒಬ್ಬ ಭಿಕ್ಷುಕ ಕೈ ಚಾಚಿದನಂತೆ. ಅವ್ರು ಗದರಿಸಿ ಆಚೆಗೆ ಕಳಿಸಿದ್ರಂತೆ ...'

'ಹೌದೇ ಮತ್ತೆ ದಯಾಮೂರ್ತಿ ನೆಹರೂ ಅಂತೀರಲ್ಲಾ ...?'

'ಮುಂಗತೆಯನ್ನು ಕೇಳಿ. ಅದೇ ದಿನ ಅವ್ರು ತಮ್ಮ ಲೆಕ್ಚರಿನಲ್ಲಿ ನನ್ನ ಭಾರತದಲ್ಲಿ ಭಿಕ್ಷುಕರೆಂಬವರೇ ಇಲ್ಲ; (ಅವರಿರುವುದು ಬ್ರಿಟಿಷ್ ಭಾರತದಲ್ಲಿ)ಅಂತ ಗುಡುಗಿದ್ರಂತೆ...'

'ಕಿಕ್ಕಿರಿದ ಜನಸ್ತೋಮ ಕಿವಿ ಕಿವುಡಾಗುವಂತೆ ಕರತಾಡನ ಮಾಡಿದ್ರಂತೆ....'

'ಹ್ಞಾ ಹೌದು, ಹೌದು.'

'ಮುಂದೆ ಭಾರತ ಸ್ವತಂತ್ರ್ಯವಾಯ್ತು ಮುಂದಿನ ಹದಿನೇಳು ವರ್ಷ ಅದೇ ಗುಡುಗಿನ ನೆಹರೂಜಿ ರಾಜ್ಯ ಸೂತ್ರ ಹಿಡಿದರು; ದೇಶೋದ್ಧಾರಕ್ಕಾಗಿ ತನುಮನ ಧನಗಳಿಂದ ಹೋರಾಡಿದರು, ದುಡಿದರು; ಯಶಪಡೆದರು...."

"ಆದರೂ ಭಿಕ್ಷುಕರ ಸಂಖ್ಯೆ ಬೆಳೆಯುತ್ತಲೇ ಇತ್ತು.......ಇಂದಿಗೂ ಬೆಳೆಯುತ್ತಿದೆ..."

"ಅದಕ್ಕೇನು ಮಾಡೋದ್ರಿ? ಅವರವರ ಪುರಾಕೃತ ಕರ್ಮ...'

"ಇದನ್ನು ನೆಹರೂಜಿ ಒಪ್ಪುತ್ತಿರಲಿಲ್ಲ. ಭಿಕ್ಷೆ ಬೇಡುವುದು ಮಾನವತೆಗೊಂದು ಅವಮಾನ; ಅದನ್ನು ತಡೆಯಬೇಕು ಅನ್ನುತ್ತಿದ್ದರವರು.'

"ಆದ್ರೂ ನೋಡಿ, ಬೇಡುವವರ ಮಕ್ಕಳು ಬೇಡಲೇಬೇಕು ಅನ್ನುತ್ತಾರಲ್ಲಾ?'

"ಅದನ್ನೇ ಅಂಧಶ್ರದ್ಧೆ ಅಂದಿರೋದು. ಇಂತಹ ಗೊಡ್ಡು ಸಿದ್ಧಾಂತವಾದವು ಭಾರತ ಬಿಟ್ಟು ಹೋದ ದಿನವೇ ಇಲ್ಲಿ ರಾಮರಾಜ್ಯ..."

'ಎಲ್ಲಾ ಕನಸಿನ ಮಂಡಿಗೆ ಯಾಯ್ತು. ಅಲ್ರಿ, ಅಂತಹ ದಿನ ಬಂದೀತೆ ಎಂದಾದ್ರೂ?'

'ಬಾರದೆ ಉಳದೀತೆ? ಇಂದಲ್ಲ ನಾಳೆ ಬಂದೇ ಬರುತ್ತೆ. ನಮ್ಮ ನೈತಿಕ ಮಟ್ಟ ಉನ್ನತವಾದಾಗ ಹಾಗೆ ಆಗಿಯೇ ಆಗುತ್ತೆ....'

"ಅಂದ್ರೆ ನಮ್ಮ ನೈತಿಕ ಮಟ್ಟ ಏರಿದ್ರೆ ಆರ್ಥಿಕ ಮಟ್ಟಾನೂ ಏರುತ್ತೆ?...."

'ಕೂಡಿ ತಿನ್ನೋ ಬುದ್ಧಿ ಬೆಳೆಯುತ್ತೆ .... ಸಂಪತ್ತು ಹಂಚಿ ಹೋಗುತ್ತೆ...ರಾಮರಾಜ್ಯವಾಗುತ್ತೆ...'

'ಏನಾಗುತ್ತೋ... ಹೌದ್ರಿ ಇಂದು ಒಂದು ಸಂಗ್ತಿ ನಾನೂ ನೋಡಿದೆ ..'

'ಏನು?"

'ಹೀಗೇ ದಾರಿ ಹೋಗ್ತಾ ಇದ್ದೆ. ಬೀದೀ ಒಳಿಯಲ್ಲಿ ದೇವಸ್ಥಾನದ ಉಪ್ಪರಿಗೆ ಮೆಟ್ಲಿಂದ ಎಬ್ಬಾಕೆಯನ್ನ ನಾಲ್ಕು ಜನ ಎಳೆದು ಹೊರ ಹಾಕ್ತಾ ಇದ್ರು..."

'ಯಾಕಂತೆ?'

'ಅದೆಲ್ಲಾ ನನಗೇನು ಗೊತ್ತು? ಹೊರಗೆ ಧೋಧೋ ಮಳೆ ಸುರೀತಾ ಇತ್ತು. ಆಕೆ ಅನ್ನು ತಿದ್ಕು, ಚಳಿಯಾಗುತ್ತೆ, ಕೊಡೆಯಿಲ್ಲ ಮಳೆ ಬಿಟ್ಕೊಡನೆಯೇ ಹೋಗ್ತೀನೆ ಅಂತ. ಅವ್ರು ಆಗೋಲ್ಲ ಹೋಗ್ತೀಯೋ, ಹೊರಗೆ ಹಾಕ್ಬೇಕೋ ಅಂತ ಕೂಗಾಡ್ತಾನೇ ರಟ್ಟೆ ಹಿಡಿದು ಎಳೆಯುತ್ಲೇ ಇದ್ರು....'

'ಯಾರವ್ವ?'

'ಯಾರೋ ಪಾಪ, ಭಿಕ್ಷುಕಳಿರಬೇಕು

(ಹದಿನಾಲ್ಕನೇ ಪುಟ ನೋಡಿರಿ)

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ ಸ್ವಾಮಿ ಚಿನ್ಮಯಾನಂದ ಮೀಮಾಂಸೆ

ಗೀತಾ-ದ್ವಿತೀಯ ಅಧ್ಯಾಯ

ಸಂಗ್ರಹಕರ್ತೆ
ಶ್ರೀಮತಿ ಆನಂದಿ ಸದಾಶಿವ ರಾವ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಕರ್ತವ್ಯ ಪಾಲನೆಯಿಂದ ಹಿಂಜರಿಯಬಾರದು

ಆತ್ಮದ ಅವಿನಾಶತೆಯನ್ನು ವಿವರಿಸುತ್ತಾ,

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ
ತಥಾ ಶರೀರಾಣಿ ವಿಹಾಯ ಜೀರ್ಣಾ |
ನ್ಯನ್ಯಾನಿ ಸಂಯಾತಿ ನವಾನಿ ದೇಹೀ ||೨೨||

ಉಪಯೋಗಿಸಿ ಜೀರ್ಣವಾದ ಬಟ್ಟೆಯನ್ನು ಬಿಸುಡುವಂತೆ ಈ ದೇಹವನ್ನು ಅದರ ಕಾಲ ಮುಗಿದೊಡನೆ ತ್ಯಜಿಸಿ, ಆತ್ಮನು ಹೋಗುವನು. ಹೊಸ ಬಟ್ಟೆ ಧರಿಸುವಂತೆ ಹೊಸ ಶರೀರವನ್ನು ತನ್ನ ಇಚ್ಛೆಯ ಮೇರೆಗೆ ಪಡೆಯುವನು.

ಹೀಗೆ ಶ್ರೀ ಕೃಷ್ಣನು ಅರ್ಜುನನಿಗೆ ಮೃತ್ಯುವಿನ ಭಯವನ್ನು ಹೋಗಲಾಡಿಸಲು ಮೃತ್ಯು ಎಂದರೆ ಏನೆಂದು ಹೇಳಿದುದಾಗಿದೆ. ಮೃತ್ಯುವಿನಿಂದಾಗಿ, ದೇಹ ಮಾತ್ರ ಬಿದ್ದು ಹೋಗುವುದು ಹೊರತು ಅದರಿಂದ ಆತ್ಮಕ್ಕೆ ಏನೂ ಆಗಲಾರದು. ಹಳೆಯ ವಸ್ತ್ರವು ಹೋದೊಡನೆ, ಹೊಸ ಬಟ್ಟೆ ಉಡುವಂತೆ, ಹೊಸ ದೇಹವು ದೊರಕುವುದು ಎಂದು ಹೇಳಿರುವನು.

ಈ ಉಪಮೆ ಎಲ್ಲಾ ಕಾಲದ ಜನರಿಗೂ ಅರ್ಥವಾಗುವಂತೆ ಇದೆ.

ನೈನಂ ಛಿಂದಂತಿ ಶಸ್ತ್ರಾಣಿ|
ನೈನಂ ದಹತಿ ಪಾವಕಃ|
ನ ಚೈನಂ ಕ್ಲೇದಯಂತ್ಯಾಪೋ|
ನ ಶೋಷಯತಿ ಮಾರುತಃ ||೨೩||

ಮತ್ತು ಆತ್ಮದ ಅವಿನಾಶತೆಯನ್ನು ವಿವರಿಸುತ್ತಾ, ಶ್ರೀಕೃಷ್ಣನು ಅದರ ವಿವರಣೆ ಹೀಗೆ ಹೇಳಿರುವನು.

ಆತ್ಮವನ್ನು ಆಯುಧಗಳು ತುಂಡು ಮಾಡಲಾರವು. ಬೆಂಕಿಯು ಸುಡಲಾರದು. ನೀರು ನನೆಯಿಸುವುದಿಲ್ಲ. ಗಾಳಿಯು ಒಣಗಿಸುವುದಿಲ್ಲ. ಆತ್ಮ ತತ್ವವನ್ನು ಕೇವಲ, ಕೆಲವು ಅನುಭವವಿದ್ದ ವರ್ಣನೆಯಿಂದ ಸೂಚಿಸಬಹುದು ಹೊರತು ಅದನ್ನು ಸಂಪೂರ್ಣವಾಗಿ ಇದೇ, ಹೀಗೇ, ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಆತ್ಮ ತತ್ವದಿಂದಾಗಿ ಎಲ್ಲಾ ಇಂದ್ರಿಯಗಳ ಕಾರ್ಯವು ನಡೆಯುವುದರಿಂದ ಇಂದ್ರಿಯಗಳ ಮುಖಾಂತರ ತತ್ವವನ್ನು ತಿಳಿಯಲು ಸಾಧ್ಯವಿಲ್ಲ. ಅದರಿಂದಾಗಿ ಕೆಲವು ವಸ್ತುಗಳನ್ನು ತೆಗೆದುಕೊಂಡು ಅದನ್ನು ಸೂಚಿಸಿದುದಾಗಿದೆ. ಆಯುಧಗಳು ಕಡಿಯಲಾರವು ಎಂದರೆ, ಅದು ಅತ್ಯಂತ ಸೂಕ್ಷ್ಮವಾಗಿರುವುದರಿಂದ ಸ್ಥೂಲ ವಸ್ತುವಾದ ಆಯುಧವು ಅದನ್ನು ಕಡಿಯಲು ಸಾಧ್ಯವಿಲ್ಲ. ಒಂದು ಖಡ್ಗದಿಂದ ಆಕಾಶವನ್ನು ತುಂಡು ಮಾಡಲು ಸಾಧ್ಯವಿಲ್ಲ. ಹಾಗೆಯೇ ಆತ್ಮವು ಅತಿ ಸೂಕ್ಷ್ಮವಾದುದರಿಂದ ಹಾಗೆ ಮಾಡಲು ದೊರಕದ ವಸ್ತುವಾಗಿದೆ. ಬೆಂಕಿಯು ಉರಿಸಲಾರದು. ಬೆಂಕಿಯು ಇತರ ವಸ್ತುಗಳನ್ನು ಉರಿಸುವುದು. ಆದರೆ ಈ ಆತ್ಮ ತತ್ವದ ಮುಖಾಂತರ ಬೆಂಕಿಗೆ ಉರಿಯುವಿಕೆ ಸಾಧ್ಯವಾಗಿರುವಾಗ ಅದನ್ನೇ ಅದು ಉರಿಸಲಾರದು. ಆಕಾಶವನ್ನು ಬೆಂಕಿ ಉರಿಸಿಬಿಡಲು ಸಾಧ್ಯವಿದೆಯೆ? ಇಲ್ಲ. ಆಕಾಶದಲ್ಲಿ ಬೆಂಕಿಯು ಉರಿಯುವುದು. ಹಾಗಿರುವಾಗ ಆತ್ಮ ತತ್ವವನ್ನು ಬೆಂಕಿ ಉರಿಸಲಾರದು. ನೀರು ನನೆಯಿಸಲಾರದು ಎಂದರೆ ನೀರು ಒಂದ ವಸ್ತುವನ್ನು ಒದ್ದೆ ಮಾಡಲು ಆ ವಸ್ತುವಿನೆಡೆಯಲ್ಲಿ ಜಾಗ ಎಂದರೆ ಆಕಾಶ ಇರಬೇಕು. ಆ ಸ್ಥಳವಿಲ್ಲದೆ ಇದ್ದರೆ ಒಂದು ವಸ್ತು ಒದ್ದೆಯಾಗದು. ಆತ್ಮ ತತ್ವದಲ್ಲಿ ಬೇರೆ ಏನೂ ಇರದಿರುವಾಗ, ಅದು ಒಂದೇ ಒಂದಾಗಿ ಎಲ್ಲಾ ಕಡೆಯಲ್ಲಿ ಇರುವಾಗ, ಆ ವಸ್ತುವನ್ನು ನೀರು ನನೆಯಿಸದು. ಗಾಳಿಯು ಒಣಗಿಸದು. ಎಂದರೆ ಗಾಳಿಯು ಒಂದು ವಸ್ತುವಿನಲ್ಲಿ ನೀರು ಇದ್ದರೆ, ಮಾತ್ರ ಅದು ಒಣಗಿಸುವುದು. ಈ ಆತ್ಮತತ್ವದಲ್ಲಿ ಅಂತಹದೇನೂ ಇಲ್ಲದಿರುವಾಗ ಗಾಳಿಯು ಅದನ್ನು ಒಣಗಿಸಲಾರದು.

ಇನ್ನೂ ಮುಂದುವರಿಸುತ್ತಾ,

ಅಚ್ಛೇದ್ಯೋಽಯ ಮದಾಹ್ಯೋಽಯ|
ಮಕ್ಲೇದ್ಯೋಽಶೋಷ್ಯ ಏವಚ|
ನಿತ್ಯಃ ಸರ್ವಗತಃ ಸ್ಥಾಣುರಚ|
ಲೋಽಯಂ ಸನಾತನಃ ||೨೪||

ಹಿಂದಿನ ಶ್ಲೋಕದಲ್ಲಿ ಹೇಳಿದುದನ್ನೇ ಇನ್ನೊಂದು ರೀತಿ ಹೇಳಿರುವನು. ಕತ್ತರಿಸಲಾಗದ, ಉರಿಸಲಾಗದ, ನನೆಯದ, ಒಣಗದ ಈ ಆತ್ಮ ತತ್ವವು, ನಿತ್ಯ ಸತ್ಯವಾಗಿ, ಎಲ್ಲಾ ಕಡೆಗಳಲ್ಲೂ, ಸ್ಥಿರವಾಗಿ, ಅಲ್ಲಾಡದೆ, ಹಿಂದಿನಿಂದಲೂ ಇದೆ. ಈ ಆತ್ಮ ತತ್ವವು ನಿತ್ಯ ಸತ್ಯವಾಗಿದೆ, ಎಂದೂ, ಅದು ಅನಂತವಾಗಿರುವುದು. ಎಂದರೆ ಎಲ್ಲಾ ಕಡೆಗಳಲ್ಲೂ ಹಬ್ಬಿಕೊಂಡಿರುವುದು, ಆದರಿಂದ ಅದು ಇಲ್ಲದ ಕಡೆ ಇಲ್ಲ. ಅದು ಎಲ್ಲಾ ಕಡೆ ಹಬ್ಬಿಕೊಂಡಿದೆ ಎಂದರೆ ಅದರ ಹೊರತು ಬೇರೊಂದು ವಸ್ತು ಇಲ್ಲ, ಎಂಬರ್ಥವೂ ಆಗಿದೆ.

ನಿತ್ಯಸತ್ಯವಾಗಿರುವ ವಸ್ತು, ಎಲ್ಲಾ ಕಡೆ ಹಬ್ಬಿಕೊಂಡಿರುವ ವಸ್ತುವಾದ ಈ ಆತ್ಮ ತತ್ವವು ಈ ಸತ್ಯ ತತ್ವವು ಸ್ಥಿರವಾಗಿರಲೇ ಬೇಕು ಅದಲ್ಲದೆ ಬೇರೊಂದು ವಸ್ತುವಿಲ್ಲದ ಬಳಿಕ ಅದು ಚಲಿಸಲು ಸಾಧ್ಯವಿಲ್ಲ, ಅಲ್ಲಾಡಲು ಸಾಧ್ಯವಿಲ್ಲ. ಮತ್ತು ಅದು ಒಂದೇ ಅತೀ ಪ್ರಾಚೀನವಾದುದೂ. ಸಾವಿರಾರು ವರ್ಷಗಳ ಹಿಂದೆ ಸತ್ಯವನ್ನು ತಿಳಿದ ಮಹರ್ಷಿಗಳೂ, ಈಗ ಸತ್ಯವನ್ನು ಅರಿತ ದಾರ್ಶನಿಕರೂ, ಒಂದೇ ಸತ್ಯ ತತ್ವವನ್ನು ಕಂಡು ಹಿಡಿದರು. ಅದು ಆಗ ಒಂದು ಬೇರೆಯಾಗಿರಲಿಲ್ಲ. ಈಗ ಒಂದು ಬೇರೆಯಾಗಲಿಲ್ಲ. ಈಗ ಒಂದು ಬೇರೆಯಾಗಿಲ್ಲ. ಇನ್ನು ಮುಂದೆಯೂ ಅದು ಬೇರೆಯಾಗಲಾಗದು?

ಅವ್ಯಕ್ತೋಽಯಮಚಿಂತ್ಯೋಽಯ|
ಮವಿಕಾರ್ಯೋಽಯಮುಚ್ಯತೇ|
ತಸ್ಮಾದೇವಂ ವಿದಿತ್ವೈನಂ|
ನಾನುಶೋಚಿತುಮರ್ಹಸಿ ||೨೫||

ಈ ಆತ್ಮತತ್ವವು ಅವ್ಯಕ್ತವಾಗಿರುವುದು, ಆಲೋಚನೆಗೆ ನಿಲುಕದು, ಪರಿವರ್ತನೆಗೆ ಒಳಗಾಗದು. ಆದ್ದರಿಂದ ಇದನ್ನು ತಿಳಿದ ನೀನು ಶೋಕಿಸಬಾರದು.

ಒಂದು ವಸ್ತುವನ್ನು ವ್ಯಕ್ತವಾಗಿರುವುದು ಎನ್ನಬೇಕಾದರೆ ಅದು ನಮ್ಮ ಇಂದ್ರಿಯಗಳಿಗೆ ಗೋಚರಿಸಬೇಕು. ಅದು ಗೋಚರಿಸದೆ ಇದ್ದರೆ ಆ ವಸ್ತು ಅವ್ಯಕ್ತವಾಗಿರುವುದು ಎನ್ನಬೇಕು. ಪೃಥ್ವಿಯಿಂದ ಸೂಕ್ಷ್ಮ ತತ್ವಗಳಾಗಿ ಬರುವ ಇತರ ಭೂತಗಳಲ್ಲಿ ಆಕಾಶವು ನಮ್ಮ ಇಂದ್ರಿಯಗಳಿಗೆ ತನ್ನ ಸೂಕ್ಷ್ಮತೆಯಿಂದ ಅವ್ಯಕ್ತವಾಗಿದೆ ಎನ್ನಬಹುದು. ಹಾಗಿರುವಾಗ ಈ ಆತ್ಮ ತತ್ವವು ಅತಿ ಸೂಕ್ಷ್ಮವಾಗಿರುವುದರಿಂದ ನಮ್ಮ ಇಂದ್ರಿಯಗಳಿಗೆ ವ್ಯಕ್ತವಾಗದು. ಅದು ಅವ್ಯಕ್ತ.

ಒಂದು ಮರವು ಅದರ ಬೀಜದೊಳಗೆ ಅವ್ಯಕ್ತವಾಗಿದೆ ಎನ್ನುವರು.

ಆಲೋಚನೆಗೆ ನಿಲುಕದು, ಎಂದರೆ ನಮ್ಮ ಇಂದ್ರಿಯಗಳಿಗೆ ಗೋಚರಿಸದ ಈ ಆತ್ಮ ತತ್ವವು ಮನ ಬುದ್ಧಿಗೆ ಹೊಳೆಯದು ಎಂದು ಸೂಚಿಸಲಾಗಿದೆ. ಏಕೆಂದರೆ, ಈ ಮನ ಬುದ್ಧಿ ಚಲಿಸುವಂತೆ ಮಾಡುವುದೇ ಆತ್ಮ ತತ್ವ ಎಂದ ಬಳಿಕ, ಮನ ಬುದ್ಧಿಯಿಂದ ಆತ್ಮ ತತ್ವವನ್ನು ತಿಳಿಯಲು ಸಾಧ್ಯವಿಲ್ಲ.

ಪರಿವರ್ತನೆ ಹೊಂದದು ಎಂದರೆ, ಅದಕ್ಕೆ ರೂಪವಿಲ್ಲ ಎಂಬರ್ಥ. ಆದ್ದರಿಂದ ಈ ಆತ್ಮ ತತ್ವವನ್ನು ತಿಳಿದ ಅರ್ಜುನನೇ ನೀನು ಶೋಕಿಸಬೇಡ. ಅದಕ್ಕೆ ಎಂದಿಗೂ ನಾಶವಿಲ್ಲ.

ಅಥ ಚೈನಂ ನಿತ್ಯ ಜಾತಂ|
ನಿತ್ಯಂ ವಾ ಮನ್ಯಸೇ ಮೃತಮ್|
ತಥಾಪಿ ತ್ವಂ ಮಹಾಬಾಹೋ|
ನೈವಂ ಶೋಚಿತುಮರ್ಹಸಿ ||೨೬||

ಒಂದು ವೇಳೆ ಆತ್ಮನಲ್ಲಿ ಯಾವಾಗಲೂ ಹುಟ್ಟುವನೆಂದೂ, ಅಥವಾ ಯಾವಾಗಲೂ ಸಾಯುವವನೆಂದೂ ನೀನ ತಿಳಿಯುವುದಾದರೂ, ಅರ್ಜುನ, ನೀನು ಹೀಗೆ ವ್ಯಥೆ ಪಡಬಾರದು.

ಶ್ರೀ ಕೃಷ್ಣನು, ಅರ್ಜುನನು ಯುದ್ಧ ಮಾಡಲೇ ಬೇಕು ಎಂದು ತನ್ನ ಮಾತನ್ನು ಸಮರ್ಥಿಸಲು ಮೊದಲು ಆತ್ಮ ತತ್ವ ಜ್ಞಾನವನ್ನು ಹೇಳಿದ ಬಳಿಕ ಅದು ಅರ್ಜುನನಿಗೆ ಅರ್ಥವಾಗಲಿಲ್ಲ ಎಂದು ತಿಳಿದೊಡನೆ, ಕೇವಲ ಪ್ರಾಪಂಚಿಕರೂ ಅರ್ಥ ಮಾಡುವಂತಹ ಮಾತನ್ನೇ ಹೇಳತೊಡಗುವನು. ಒಂದು ವೇಳೆ ಆತ್ಮವನ್ನು

(ಹನ್ನೆರಡನೇ ಪುಟ ನೋಡಿರಿ)

ನಿಮ್ಮ ಒಳಿತಿಗಾಗಿ
ಉಳಿತಾಯದ
ಮತ್ತೊಂದು ಆಕರ್ಷಕ ಯೋಜನೆ.......

"ಕ್ಯುಮುಲೇಟಿವ್ ಡಿಪಾಸಿಟ್"

(ಸಂಚಯಿತ ಠೇವಣಿ)

ರೂಪಾಯಿ 10/. ಅಥವಾ ಅದೇ ಗುಣಕದ ಹೆಚ್ಚಳದಿಂದ
ನೀವು ಠೇವಣಿಯನ್ನು ಇಡಬಹುದು.

ನಮೂದಿಸಿದ ಅವಧಿ	ತಿಂಗಳಿಗೆ ರೂ. 10/- ರಂತೆ ಒಟ್ಟು ಜಮೆಯಾದ ಮೊತ್ತ	ಅವಧಿಯ ಕೊನೆಯಲ್ಲಿ ಬಡ್ಡಿ ಸಮೇತ ಮರಳಿ ಪಡೆಯುವ ಮೊತ್ತ
ತಿಂಗಳು	ರೂಪಾಯಿ	ರೂಪಾಯಿ
12	120 - 00	123 - 50
24	240 - 00	254 - 50
36	360 - 00	393 - 50
48	480 - 00	539 - 00
60	600 - 00	700 - 00

ಅವಧಿಯ ಮುಂಚೆಯೇ ಬಡ್ಡಿ ಸಹಿತ ಠೇವಣಿ ವಾಪಸಾತಿಗೆ
ಈ ಯೋಜನೆಯಲ್ಲಿ ಅವಕಾಶವಿದೆ.
ಹೆಚ್ಚಿನ ವಿವರಗಳಿಗೆ ನಮ್ಮ ಯಾವ ಶಾಖೆಯಲ್ಲಿಯೂ ವಿಚಾರಿಸಬಹುದು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 200ಕ್ಕೂ ಮಿಕ್ಕಿ.

ಸಾಧನ ಸಂಪತ್ತು: ರೂ. 70 ಕೋಟಿಗೂ ಮಿಕ್ಕಿದೆ.

ಒಂದು ವಿಡಂಬನೆ

ಹೊಟ್ಟೆ ಸಣ್ಣದಾಗಲಿ

ಬರೆದವರು: ಶ್ರೀ ಎಂ. ರಂಗರಾವ್, ಮದ್ರಾಸು.

"ಅನ್ನದಿಂದ ಬಂದ ಕಾಮ ನಿನ್ನದೇನೆಲೋ?" ಅಂತ ದಾಸವರ್ಯರು ಅಂದೇ ಹಾಡಿ ಹಾಡಿ ಕೇಳಿದ್ದರು. ಏನೋ ಅಂತ ಇದ್ದೆ, ಅದು ಎಷ್ಟು ಸತ್ಯ ಅಂತ ೧೯೬೪ರ ನೆಯ ಉತ್ತರಾರ್ಧದಲ್ಲಿ ಗೊತ್ತಾಯಿತು. ಆದರ ಝಳ ರೇಷನ್ನಿನ ಕಮ್ಮಿನ ರೂಪದಲ್ಲಿ ಕುಟುಂಬ ಕಾರ್ಡು ಎಂಬ ಹೆಸರಿನಲ್ಲಿ ನಮ್ಮನ್ನೆಲ್ಲ ಸಾಧ್ಯವಾದಷ್ಟು ಜೋಪಾನದಿಂದ ಕಾಪಾಡುತಿದ್ದಾನೆ.

ಸಣ್ಣವನಾಗಿದ್ದಾಗ ನಾನು ಊಟ ಮಾಡುತಿದ್ದಾಗ ತಾಯಿ ಹೇಳುತಿದ್ದಳು: "ಒಂದನ್ನ ಚೆಲ್ಲಬಾರದು. ಚೆಲ್ಲಿದ್ದನ್ನು ಹೆಕ್ಕಿಕೊ. ಒಂದನ್ನ ಚೆಲ್ಲಿದರೆ ಒಂದು ಹೊತ್ತು ಉಪವಾಸ ಹಾಕೀತು" ಅಂತ. ಅದು ಹೆದರಿಕೆ ಹುಟ್ಟಿಸುವ ಮಾತಾದ್ದರಿಂದಲೇ ಅಂತ ಕಾಣುತ್ತೆ, ಇನ್ನೂ ನೆನಪಿನಲ್ಲಿದೆ. ನನ್ನಪ್ಪನಾದರೋ ಅನ್ನ ಚೆಲ್ಲೋದಿರಲಿ, ಅಕ್ಕೀಕಾಳು ನಾಲ್ಕಾರು ಕೆಳಗೆ ಚೆಲ್ಲಿದರೂ ಕೂಡ ಹೆಕ್ಕಿಕೊಳ್ಳುತ್ತಿದ್ದರು. ಬೆಂಚಿಯ ಅಡಿಗೋ ಮಂಚದ ಮೂಲೆಗೋ ಎರಡು ಅಕ್ಕೀಕಾಳು ಓಡಿದ್ದನ್ನು ನೋಡಿದರೆಂದರೆ ತೀರಿತು. ಅವನ್ನು ಹುಡುಕಿ ಹೆಕ್ಕಿಯೇ ಬೇರೆ ಕೆಲಸ ಮಾಡುವವರು ನನ್ನಪ್ಪ.

"ಹೋಗ್ಲಿ ಬಿಡೀ, ಇರುವೆಗಾಯಿತು. ಇಲ್ಲವೇ ಗುಬ್ಬಿ ಹೆಕ್ಕಿಕೊಳ್ಳುತ್ತೆ" ಅಂತ ನನ್ನ ತಾಯಿ ಹೇಳಿದರೆ, "ಅದು ನಿಜಾನ್ನು. ಹಾಗಂತ ಅಕ್ಕೀನ ನಾವು ಉದಾಸೀನ ಮಾಡಿದರೆ, ಧಾನ್ಯ ಲಕ್ಷ್ಮಿಗೆ ಸಿಟ್ಟು ಬಂದೀತು. ಇರುವೆನೋ ಆಗಲಿ, ಗುಬ್ಬಿನೇ ಆಗಲಿ ನಾವಾಗಿ ಲಕ್ಷ್ಯಗೊಟ್ಟು ಹಾಕಿದರೆ ಮಾತ್ರ ನಿನ್ನ ಮಾತು ಸರಿ. ಅನ್ನಾದ್ ಭವಂತಿ ಭೂತಾನಿ ಅಂತ ಗೀತಾವಾಕ್ಯ ಕಣೇ. ಒಂದೊಂದು ಅಕ್ಕಿಯಲ್ಲಿ ಒಂದೊಂದು ಜೀವಾತ್ಮ ಅಡಗಿದ್ದೀತು. ಅದಕ್ಕೇ ಒಂದಕ್ಕಿಯನ್ನಾದರೂ ಅಲಕ್ಷ್ಯ ಮಾಡಬಾರದೂ ಅನ್ನೋದು" ಅಂತ ತಿಳಿ ಹೇಳುತಿದ್ದರು ಅಪ್ಪ.

ಇದು ನಲುವತ್ತು ವರ್ಷಗಳ ಹಿಂದಿನ ಮಾತು. ಆಗ ಅಕ್ಕಿ ಈಗಿನ ದುಡ್ಡಿನ ಹಾಗೆ ಚಲಾವಣೆಯಲ್ಲಿತ್ತು. ಕೂಲಿಗಳಿಗೆಲ್ಲ ಅಕ್ಕಿಯನ್ನೇ ಅಳೆದು ಕೊಡುತ್ತಿದ್ದರು. ಒಂದು ಅಪ್ಪಟ ಬೆಳ್ಳಿಯ ರೂಪಾಯಿಗೆ ಐದಾರು ಸೇರು ಅಕ್ಕಿ ಸಿಗುತ್ತಿತ್ತು. ಅಂದರೆ ಈಗಿನವರಿಗೆ ಕತೆ ಅಂತ ಕಂಡೀತು

ಬೇಕಾದರೆ ಹಿರಿಯರನ್ನು ಕೇಳಿ ನೋಡಿ. ಆಗ ಧಾನ್ಯಲಕ್ಷ್ಮಿ ಹೇಗೆ ಸಮೃದ್ಧಳಾಗಿದ್ದಳೂಂತ. ಅದು ನಿಜ ರೈತರ ರಾಜ್ಯ. ಧನಿಒಕ್ಕಲುಗಳೊಳಗೆ ಅನ್ಯೋನ್ಯತೆಯಿತ್ತು. ದುಡಿಮೆಯಲ್ಲಿಯೂ ಮೇಲ್ತನಿಖೆ ನಡೆಸುವುದರಲ್ಲಿಯೂ ಶ್ರದ್ಧೆಯಿತ್ತು. ಆ ಶ್ರದ್ಧೆ ಧನಿಯಿಂದ ಕೂಲಿಯಾಳಿನ ವರೆಗೆ ಶಾಖೋಪಶಾಖೆಗಳಾಗಿ ಹರಿಯುತ್ತ ವ್ಯವಸಾಯ ಸಾಗಿತ್ತು.

ಅಂಥಾ ದೊಡ್ಡ ಮೊದಲನೆಯ ಪ್ರಪಂಚ ಮಹಾಯುದ್ಧ ಬಂದಾಗ ಕೂಡಾ ಬೆಲೆಯೇರಿಕೆ ಬಂದಿತ್ತು. ಯಾವುದಕ್ಕಂತೀರಿ? ಅಕ್ಕಿಗೆ ಮಾತ್ರ. ಒಂದು ಮುಡಿಗೆ ಒಂದು ಪವನು ಅಂತ ಬೆಲೆಯೇರಿತಯ್ಯ. ಅದೇ ಆಗ ಎಲ್ಲರ ಬಾಯಿಯಲ್ಲಿಯೂ ಆಶ್ಚರ್ಯದ ಮಾತು. ಪವನು ಅಂದರೆ ಏನೂಂತ ಅಂದುಕೊಂಡಿರೊ? ಒಂದು ಸವರಿನ್—೧೫ ರೂಪಾಯಿ ಸ್ವಾಮಿ!

ಆಗ ನಗರದಲ್ಲಿ ಕೂಡಾ ಅನಾಗರಿಕತೆಯ ಯುದ್ಧಕಾಲ. ಅನಾಗರಿಕತೆಯೊಳಗಿನ ಕೆಲ ಹಿತ್ಕೃತ್ತಿನ ಸುಳಿಗಾಳಿಯೆಂದು ಯಾರ ತಲೆಗೂ ಬೀಸಿರಲಿಲ್ಲ. ಅಂತೆಯೇ ಅಕ್ಕಿಗೂ ಬೇರೆ ವಸ್ತುಗಳಿಗೂ ಸಂಬಂಧ ಕೂಡಲಿಲ್ಲ. ಅಕ್ಕಿಗೇ ಬೆಲೆಯೇರಿತ್ತು. ಅದೂ ಮರುವರ್ಷದಲ್ಲೇ ಹದಕ್ಕೆಬಂತು ಕ್ರಮವಾಗಿ ತಗ್ಗಿತು.

ಏರಿದ್ದು ತಗುವುದೆಂಬುದು ನಾಗರೀಕತೆಯ ಸ್ವಭಾವಕ್ಕೆ ವಿರುದ್ಧವಲ್ಲವೇ? ಈಗ ಹಾಗಾದೀತೆ? ಆಗುವೆನೆಂದರೂ ಬಿಟ್ಟಾರೆ?

ಂ ಂ

ಅವೆಲ್ಲ ಹಿಂದಿನ ಕುರುಡುಗಾಲದ ಮಾತು. ಕೂಪಮಂಡೂಕದಂತಹ ಜನತೆಯ ಕಾಲವದು. ಆ ಮೇಲೆ ಜನತೆಯ ತಲೆಗೆ ದೂರದೂರದಿಂದ ನಾಗರಿಕತೆಯ ಸೊಗಸಿನ ಗಾಳಿ ಬೀಸುತ್ತ ಬಂದಂತೆ, ಜನತೆ ಎಚ್ಚೆತ್ತು ಕೊಂಡಂತೆ ಅಕ್ಕಿಯೊಂದಿಗೆ ಇತರ ವಸ್ತುಗಳ ಸಂಬಂಧವೂ ಹೊಂದಿ ಸಂಕಲೆಯಾಯಿತು. ಅದೇ ಒಗ್ಗಟ್ಟು ಅನ್ನುತ್ತಾರಲ್ಲ, ಹಾಗೆ. ಎಲ್ಲವೂ ಒಗ್ಗಟ್ಟಾಗಿಯೇ ಏರತೊಡಗಿದುವು. ಬಜೆಟು ಬರುತ್ತೆ ಅಂತ ಗೊತ್ತಾಗುವಾಗಲೇ ಬೆಲೆಯೇರಿಸುವಷ್ಟು ಮುಂದಾಲೋಚನೆಯ ಗುಣ ಈ ಒಗ್ಗಟ್ಟಿಗೆ ಅಂಟಿತು. ಮಾತ್ರವಲ್ಲ, ಅಕ್ಕಿಗಿಂತ ಕೆಳಗಿನ ಸ್ಥಾನಗಳ ಬೇಳೆಕಾಳುಗಳು ಕೂಡಾ ಅಕ್ಕಿಯನ್ನು ಮೀರಿಸಿ ಸಲ್ಲುವಷ್ಟು ಸಮರ್ಥವಾದುವು. ಇದಲ್ಲವೇ ಅಭಿವೃದ್ಧಿಗೇರುವ ಲಕ್ಷಣ?

ದೇಶವೀಗ ವಿವಿಧ ಮುಖಗಳಿಂದಲೂ ಅಭಿವೃದ್ಧಿಗೇರುತ್ತಿದೆ. ರೈತರಾಜ್ಯದಂತಿದ್ದದ್ದೆಲ್ಲಾ ನಾಗರಿಕ ರಾಜ್ಯವೆನಿಸುತ್ತದೆ. ರೈತರೆಲ್ಲಾ ನಾಗರಿಕರಾಗುತ್ತಿದ್ದಾರೆ. ಧನಿ ಒಕ್ಕಲಿಗನಾದ. ಒಕ್ಕಲು ಧನಿಯಾದ. ಕೂಲಿ ನಾಲಿ ಬಿಟ್ಟಿ ಬೇಗಾರಿಗಳೆಲ್ಲಾ ಮಾಯವಾದುವು. ಮದುವೆಗೊಂದು ಚಪ್ಪರ ಹಾಕಲಿಕ್ಕೂ ಈಗ ಆಳುಗಳು ಸಿಗುವುದಿಲ್ಲ. ಕೂಲಿ ಕೊಡುವೆನೆಂದರೂ ಆಳಿಲ್ಲ. ಅಸಲು ಕೂಲಿ ಎಂಬುದೇ ಒಂದು ಹೀನ ಶಬ್ದವೆನಿಸಿದ ಹಾಗಾಗಿದೆ. ಎಲ್ಲವೂ ಕಂಪೆನಿ, ಸಂಘ,ಸಂಸ್ಥೆ, ಕಂಟ್ರಾಕ್ಟುಗಳೇ. ಚಪ್ಪರದ ಕಂಟ್ರಾಕ್ಟು, ಮಂಟಪದ ಕಂಟ್ರಾಕ್ಟು, ಪಾಲಗದ ಕಂಟ್ರಾಕ್ಟು ಅಂತ. ಪಾಲಗದವರು ರೂಪಾಯಿ ತಕ್ಕ ರಾಗ ಊದಿ ಊಟ ಕೂಡಾ ಮಾಡದೆ ಹೋಗಿಬಿಡುತ್ತಾರೆ, ಎಲ್ಲಿಯೂ ಹಣಕ್ಕೆ ತಕ್ಕ ರೂಪು ತೋರಿಸಿ ಮಾಯ ಮಾಡುವ ಜಾಣತನಗಳೇ. ಅದೇ ಈಗಿನವರಿಗೆ ಬೇಕು. ಶ್ರದ್ಧೆ ಆಸಕ್ತಿ ಎಲ್ಲಬೇಕು? ಯಾರಿಗೆ ಬೇಕು? ಹಿಂದಿನ ಕಾಲದಲ್ಲಿಯಂತೆ ಮದುವೆಯ ಭರ್ಜರಿ ಭಕ್ಷ್ಯ ಭೋಜ್ಯಗಳ ಊಟಕೂಡ ಈಗ ಅವಲಕ್ಷಣವೆನಿಸಿದೆ. ಬಹಳ ನಾಜೂಕಾದ ಡಿನ್ನರಿನ ರೂಪದಲ್ಲಿ ಹತ್ತಾರು ಬಗೆಯ ಹೆಸರು ಗೊತ್ತಿಲ್ಲದ ಪದಾರ್ಥಗಳನ್ನು ಬಾಯಿಗೆಸೆದುಕೊಂಡು ಏಳುವುದೇ ಈಗ ಮದುವೆಯ ಗೌರವದ ಭೋಜನ.

ಅಂಥ ಒಂದು ಭಾರಿ ಮದುವೆಯ ಡಿನ್ನರ ಪಾರ್ಟಿಗೆ ನನ್ನೊಂದಿಗೆ ಬಂದಿದ್ದ ತಿಪ್ಪಾ ಭಟ್ಟರು, ಡಿನ್ನರು ಮುಗಿದು ಮನೆಗೆಬಂದಮೇಲೆ ಹೊಟ್ಟೆತುಂಬ ಊಟಮಾಡಿಕೊಂಡರು. ಆದರೆ ನನಗೆ ಆ ಡಿನ್ನರಿನಿಂದಲೇ ಹೊಟ್ಟೆತುಂಬಿತ್ತೂನ್ನಿ.

ಂ ಂ ಂ

"ಸಮುಹೂರ್ತೇ ಸಾವಧಾನಾ"ಗಳಂತಹ ವೈಭೋಗಗಳಿಂದ ಏನು ಪ್ರಯೋಜನ? ಸುಮ್ಮನೆ ಸಮಯ ಹಾಳು ಮಾಡಬಹುದೆ? ಎಲ್ಲವೂ ಬೇಗ ಬೇಗನೇ ಆಗಿ ಮುಗಿಯಬೇಕು. ಬೇಗ, ಅವಸರ ಆತುರಗಳಲ್ಲಿ ಒಬ್ಬರನ್ನೊಬ್ಬರು ಓವರ್‌ಟೇಕ್ ಮಾಡುವುದೇ ಈಗಿನ ಫ್ಯಾಷನ್. ಸತ್ತವರು ಹೋದರು, ಬದುಕಿದವರು ಜಾರಿದರು.

ಒಂದಕ್ಕೀತ ಒಂದು ಅವಸರದ ಸಾಧನಾನ್ವೇಷಣೆಯೂ ಅತ್ಯವಸರವಾಗಿ ನಡೆಯುತ್ತಿದೆ. ಸೈಕಲ್ ಮೋಟಾರು ರೈಲು ಏರೋಪ್ಲೇನುಗಳೆಲ್ಲಾ ನಿಧಾನದ ಸಾಧನಗಳಾಗಿ ಕಾಣಿಸುತ್ತಿವೆ. ಸ್ಪುಟ್ನಿಕ್, ರಾಕೆಟ್ಟುಗಳು ಬರಲಿವೆ. ಒಟ್ಟು ವೇಗ ಹೆಚ್ಚಿಸುವ ಗಡಿಬಿಡಿ ನಡೆಯುತ್ತಿದೆ.

ಇವಲ್ಲಿ ಏನು? ಏಕೆ?—ಅಭಿವೃದ್ಧಿ, ಉನ್ನತಿ, ಏರಿಕೆ.

ಪ್ರಪಂಚ ಹೀಗೆ ಮುಂದುವರಿಯುತ್ತಿರುವಾಗ, ಹೊಟ್ಟೆ, ಹಸಿವೆ, ಅಡಿಗೆ, ಊಟಾ ಅಂತ ಹಿಂದುಳಿಯುವಂತಹ, ಗೋಳ್ದನಿಯನ್ನೆಬ್ಬಿಸುವುದು ಎಷ್ಟೊಂದು ನಾಚಿಕಗೇಡು!

ಇಂತಹ ಗೋಳ್ದನಿಯನ್ನು ಎಬ್ಬಿಸುವವರು ಬೇಕಾದಷ್ಟು ಇದ್ದಾರೆ, ಒಬ್ಬರೇ, ಇಬ್ಬರೇ ಕೆಲವರೆ? ಸಾರ್ವಜನಿಕರೆಂಬ ಸಂಖ್ಯೆಯಷ್ಟೇ ಇದ್ದಾರನ್ನಿ. ಹೀಗೆ ಗೋಳಾಡುವವರೆಲ್ಲ ಮರ್ಯಾದೆಯಿಲ್ಲದವರೂ

(ಹನ್ನೊಂದನೇ ಪುಟ ನೋಡಿರಿ)

ಸಿಂಡಿಕೇಟ್ ಬೇಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: ಮಣಿಪಾಲ. :: ಬ್ರಾಂಚ್ ಆಫೀಸು: ಕಲ್ಯಾಣಪುರ

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲದ ಅಸಲು ಮತ್ತು ಅದರ ಮೇಲಣ ಬಡ್ಡಿಯನ್ನು ವಸೂಲು ಕೊಡದೆ ಇದ್ದುದರಿಂದ ಸದ್ರಿಯವರ ಸಾಲವನ್ನು ಬರಮಾಡಿಕೊಳ್ಳುವರೆ ರಜಿಸ್ಟ್ರಿ ನೋಟಿಸು ಕೊಟ್ಟಲ್ಲಿಯೂ, ನೋಟಿಸು ಪಡಕೊಂಡು ಪಾವತಿ ಕೂಡದೆ ಇರುವುದರಿಂದಲೂ ನೋಟಿಸು ಇನ್‌ಕಾರ್ ಮಾಡಿ ವಾಪಾಸು ಮಾಡಿರುವುದರಿಂದಲೂ, ಇನ್ನು ಕೆಲವರು ಮೃತಪಟ್ಟಿರುವುದರಿಂದಲೂ, ಈ ಮೂಲಕ ತಿಳಿಸುವುದೇನೆಂದರೆ ಸದ್ರಿಯವರ ಸದ್ರಿ ಸಾಲದ ಅಸಲು ಬಡ್ಡಿ ಇತರ ಖರ್ಚುಗಳನ್ನು ಪಾವತಿ ಮಾಡಿ ಚಿನ್ನಾಭರಣಗಳನ್ನು ತಾ. 8—7—65ರ ಒಳಗೆ ಬಿಡಿಸಿಕೊಳ್ಳದೆ ಇದ್ದಲ್ಲಿ ಸದ್ರಿ ಈಡಿಟ್ಟ ನಗಗಳನ್ನು ತಾ. 10—7—65ರಂದು ಶನಿವಾರ ಘಂಟೆ 2ಕ್ಕೆ ಸರಿಯಾಗಿ ಯಾ ನಮಗೆ ಯುಕ್ತ ಕಂಡ ಯಾವುದೇ ಇತರ ದಿನಗಳಲ್ಲಿ ಪುನಃ ನೋಟಿಸು ಕೊಡದೇನೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂನಲ್ಲಿ ಹುಟ್ಟಿಬಂದ ಐವೇಜು ಸಾಲದ ಮೊಬಲಗಿಗೆ ಕಡಿಮೆ ಆದಲ್ಲಿ ಸಂಬಂಧಪಟ್ಟವರ ದೇಹ ಜವಾಬ್ದಾರಿಯಿಂದ ಬೇಂಕಿನ ಐವೇಜು ವಸೂಲು ಮಾಡಲಾದೀತು ಎಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಸಾಲದ ನಂಬ್ರ	ಸಾಲ ಪಡೆದ ತಾರೀಕು	ಹೆಸರು ಮತ್ತು ವಿಳಾಸ	ಮೊಬಲಗು
1204/62	29.10.62	ಶ್ರೀಮತಿ ಲಲಿತಾ ಬಾಯಿ, w/o ರಮಾನಂದ ಶೇಟ್, ಸಂತೆಕಟ್ಟೆ, ಕಲ್ಯಾಣಪುರ ಪೋಸ್ಟ್.	218–00
250/63	11. 6.63	ಶ್ರೀ ಎಚ್. ಸದಾಶಿವ ಶೆಟ್ಟಿ, N/o ಮಹಾಬಲ ಶೆಟ್ಟಿ, ಕೆಮ್ಮಣ್ಣು, ಪೋಸ್ಟ್ ಕೆಮ್ಮಣ್ಣು.	45–00
126/64	21. 2.64	ಶ್ರೀ ಫ್ರ್ಯಾಂಕ್ ಪಿರೇರಾ, S/o ಡಿ.ಪಿ.ಪಿರೇರಾ, ಸಂತೆಕಟ್ಟೆ, ಕಲ್ಯಾಣಪುರ ಪೋಸ್ಟ್.	40–00
302/64	19. 6.64	ಶ್ರೀ ಲಾಯಿಸ್ ಡಿಸೋಜ, S/o ಡಿಯೋಗ್ ಡಿಸೋಜ, ಪೆರಂಪಳ್ಳಿ, ಪೋಸ್ಟ್ ಶಿವಳ್ಳಿ.	60–00

Branch: Kallianpur.

L. J. Suares,
Manager.

ಶ್ರೀ ಕೆ. ಕೆ. ಶೆಟ್ಟಿ,ಎಂ.ಎಲ್.ಸಿ.ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
"ನವಭಾರತ ಬುಕ್ ಡಿಪೊ, ಉಡುಪಿ.

ನಮಗೇನು ಬೇಕು?

ಆರಣ್ಯರೋದನವಲ್ಲ, ವಿದ್ಯಾರಣ್ಯ

ಬರೆದವರು: ಶ್ರೀ ಶಿವಶಂಕರ, ಮದ್ರಾಸು.

ಹಿಂದೂವೆನ್ನಲು ಹಿಂಜರಿಯುತ್ತಿದ್ದ ಕಾಲ; ಮುಸ್ಲಿಮರ ಮುಂದೆ ನಿಲ್ಲಲು ಹೆದರುತ್ತಿದ್ದ ಕಾಲವದು. ಹಿಂದೂ ಹಿಂಬಾಲಕನಾಗಿರಲೇ ಹುಟ್ಟಿದವ, ಮಹಮ್ಮದೀಯನು ಮಹದಾಡಳಿತ ನಡೆಸಲಿಕ್ಕೆಂದೇ ಹುಟ್ಟಿದವ... ಇಂತಹ ಭ್ರಾಂತಿ ಬೇರೂರಿ ಬಿಟ್ಟಿದ್ದ ಕಾಲವದು. ಅಂತಹ ಭೀಕರ ಹಾಗೂ ದಯನೀಯ ಸ್ಥಿತಿಯಲ್ಲಿ ಸ್ವಾಮಿಜೀ ವಿದ್ಯಾರಣ್ಯರವರು ತಲೆಯೆತ್ತಿ ನಿಂತು, ಹಿಂದೂ ಅಂತಹವನಲ್ಲ, ಅವನು ಆಕ್ರಮಣ ನಡೆಸಲಿಕ್ಕಾಗಿ ಹುಟ್ಟಿದವನಲ್ಲವೆಂಬುದು ನಿಜವಾದರೂ ಅತನು ಧಾರಕನೂತೆಯ. ಸುರುಕ್ತಸಿದ್ಧಾಂತವೆಂಬುದನ್ನು ಆಕ್ರಮಣಗಾರರಿಗೆ ತಿಳಿಯಪಡಿಸಿದರು. ಭಾರತದಲ್ಲಿ ಪುನಃ ನೈಜ ಹಿಂದೂ ಸಾಮ್ರಾಜ್ಯದ ಸ್ಥಾಪನೆಯೂ ಆಯಿತು.

ಹಿಂದೂ ಸಾಮ್ರಾಜ್ಯವೆಂದೊಡನೆ ಅಧಿಕಾರ ಪಟ್ಟದಲ್ಲಿ ಆಸೀನರಾಗಿರುವವರು ಅದೆಂತು ಹಿಂದಕ್ಕೆ ನೋಡುತ್ತಾರೆಂಬುದನ್ನು ಕಳೆದ ವಾರದ "ನವಯುಗ" ಸ್ಪಷ್ಟವಾಗಿ ಸೂಚಿಸಿರುತ್ತದೆ. ಸರ್ವ ಶ್ರೀ ಲಾಲಬಹದೂರ ಶಾಸ್ತ್ರೀಯವರಿಗೆ ಅಥವಾ ಗುಲ್ಜಾರೀಲಾಲ ನಂದಾಜೀಯವರಿಗೆ ಹಿಂದೂವೆಂದ ಎಲ್ಲರೆದುರಿಗೆ ಹೇಳಲು ಎದೆ ಢಕ್ಕೆ ಢಕ್ಕೆ ಎನ್ನಬಹುದು. ಆದರೂ ಅದು ಸತ್ಯವಿದೆ. ಜೀವಂತವಾಗಿದ್ದಾಗ ಭಾರತದ ಪ್ರಧಾನಿಯೊಬ್ಬರು ಹಿಂದೂ ಶಬ್ದದ ಕುರಿತು ಕೆಲವೊಮ್ಮೆ ಹೀನಗಳೆದುದುಂಟು. ಆದರೆ ಅವರು ನಿರ್ವಾಣರಾದ ಪ್ರಥಮ ವರ್ಷದ ಸಮಯದಲ್ಲಿ ಅವರ ಪುತ್ರಿ, ಇಂದಿರಾ ಗಾಂಧೀಜಿಯವರು ತಾನು ಕಂಡ ಹಿಂದೂಗಳಲ್ಲಿ ಪಂ| ಜವಾಹರಲಾಲ ನೆಹರೂಜೀಯವರೇ ಅತ್ಯುತ್ತಮ ಹಿಂದೂ, ಅವರು, ಹಿಂದೂವಾಗಿದ್ದರೆಂದು ಹಿಂಜರಿಯದೆ ಹೇಳಿದ್ದಾರೆ. ಅಂದರೆ ಹಿಂದೂ ಪದಕ್ಕು ಈ ರಾಷ್ಟ್ರ ಅಥವಾ ದೇಶಕ್ಕು ವಿಂಗಡಿಸಲಾಗದಂತಹ ಸಂಬಂಧವಿದೆಯೆಂಬುದು ಸ್ಪಷ್ಟವಾಗುತ್ತದೆ.

ಹಿಂದೂ ಕಮ್ಯೂನಿಸ್ಟನಾಗಿ ದೇಶದ್ರೋಹಿಯಾದರೂ ಕೂಡಾ ಅವನ ಹೃದಯಾಂತರಾಳದಲ್ಲಿ ಹಿಂದೂತ್ವದ ಕಿಡಿ ಪ್ರಜ್ವಲಿಸುತ್ತಿರುತ್ತದೆ. ಕಮ್ಯೂನಿಸಮಿನ ಕತ್ತಲೆಯಿಂದ ಅದನ್ನು ಪೂರ್ಣವಾಗಿ ಆವರಿಸಿಬಿಡಲು ಸಾಧ್ಯ ಇರುವದಿಲ್ಲ. ಶ್ರೀ ಶಂಕರನಂಬೂದರಿಪಾಡರು ಕಮ್ಯೂನಿಸ್ಟರ ಮುಂದಾಳುವಿದ್ದಾರೆ. ಅವರು ಇತ್ತೀಚೆಗೆ ತಿರುವನಂತಪುರದಲ್ಲಿ ಒಂದು ಮನೆ ಕಟ್ಟಿಸಿದರು. ಕೆಲಸವೆಲ್ಲ ಮುಗಿದ ಮೇಲೆ ಮತ್ತೆ ಆಗಬೇಕಾದದ್ದು ಗೃಹ ಪ್ರವೇಶ. ಅದು ಶಾಸ್ತ್ರೋಕ್ತವಾಗಿ ನಡೆಯಿತು. ಅಂದು ಬ್ರಾಹ್ಮಣರು ಬಂದರು, ಮಂತ್ರ ಹೇಳಿದರು, ಗೃಹಪ್ರವೇಶ ಸಾಂಗವಾಗಿ ನೆರವೇರಿತು. ಕಮ್ಯೂನಿಸ್ಟರಿಗೆ ಇದೆಲ್ಲಾ ಅಂಧ ಶ್ರದ್ಧೆಯಲ್ಲವೇ? "ಅಂಧ ಶ್ರದ್ಧೆ" ಅನ್ನುವದು ಅನ್ಯರಿಗೆ ಆಡಲಿಕ್ಕಾಗಿಯೇ ಇದೆಯೋ ಏನೋ? ಪ್ರಗತಿ ಪರರ ಪ್ರಜಾಪತಿ ಎಂದು ಪ್ರಶಂಸಿಸಲ್ಪಡುತ್ತಿದ್ದ ಸ್ವರ್ಗೀಯ ಜವಾಹರ ಲಾಲಜೀಯವರ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಇಂತಹ ವಿಷಯವೆಲ್ಲಾ ಅವರಿಗೆ ಅಂಧ ಶ್ರದ್ಧೆ ಹಾಗೂ ಗೊಡ್ಡು ನಂಬಿಕೆಗಳಾಗಿದ್ದವು. ಆದರೆ ತಮ್ಮ ಪ್ರೀತಿಯ ಪಕ್ಷಿ ಪರಲೋಕವನ್ನೈದಿದ್ದಾಗ ಆ ಮಹಾತ್ಮರ ಚಿತಾ ಭಸ್ಮವನ್ನವರು ಪವಿತ್ರ ಜಲದಲ್ಲಿ ಬಿಡುತ್ತ ಹೇಳಿದ್ದಾದರೂ ಏನು?

ಇತರ ವಿಷಯದಲ್ಲಿ ಹಾಗೆ ಇರುವುದಿಲ್ಲ ವಿವೇಕಾನಂದ ಶಿಲೆಯಂತಹ ಸಾಗರಗರ್ಭದಲ್ಲಿರುವ ಬಂಡೆಯ ವಿಷಯದಲ್ಲಿ ನಾವು ನೋಡಿರುವೆವು. ಗೂಂಡಾಗಳು ಪೋಲೀಸರೊಡನೆಯೂ ಕಾದಾಡಲಿಲ್ಲವೇನು? ಸರಕಾರವನ್ನು ಎದುರಿಸುವ ಧೈರ್ಯ ಅವರಿಗಿದೆಯೋ, ಏನೋ! ದಕ್ಷಿಣದ ತುದಿಯಲ್ಲಿ ಹೀಗೆ ನಡೆದಿದೆಯಾದಲ್ಲಿ ಉತ್ತರದ ತುದಿಯಲ್ಲಿ ನಡೆಯುತ್ತಿರುವುದಾದರೂ ಏನು? ಎಲ್ಲೆಲ್ಲೂ ವಿಧರ್ಮಿಯರು ಹಬ್ಬಿಸಿದ್ದ ಅಂಧಕಾರ ಆವರಿಸಿಕೊಂಡಿದ್ದಾಗ ಭಾರತಮಾತೆಯ ಕಾಲಡಿಯಿಂದ ಎದ್ದವರು ಧರ್ಮಧ್ವಜವನ್ನು ಹಾರಾಡಿಸುತ್ತ ಭಾರತಾಂಬೆಯ ಮುಕುಟಮಣಿ ಕಾಶ್ಮೀರಕ್ಕೆ ಹೋಗಿದ್ದರು. ಅಲ್ಲಿಯ ಪರ್ವತವೊಂದು ಅವರನ್ನಾಕರ್ಷಿಸಿತು. ಆ ಪರ್ವತದ ಹೆಸರು ಗೋಪದಾರಿ. ಅದರ ಮೇಲೆ ಅವರು ಒಂದು ಶಿವಲಿಂಗವನ್ನು ಪ್ರತಿಷ್ಠಾಪಿಸಿ ಮಂದಿರವನ್ನು ಕಟ್ಟಿಸಿದರು. ಮಂದಿರವು ಕೇವಲ ಬ್ರಾಹ್ಮಣರಿಗೆ ಭೋಜನಾಲಯವಾಗಿರಲಿಲ್ಲ. ಅದು ಧರ್ಮದ ದೀಪಸ್ತಂಭವಾಗಿತ್ತು. ಆ ಪರ್ವತದ ಮೇಲಿನಿಂದಲೇ ಶ್ರೀ ಶಂಕರಾಚಾರ್ಯರು ಧರ್ಮ ದೀಪವನ್ನು ಬೆಳಗಿದ್ದರು ಅಂತಹ ಸ್ಥಳದ ಮೇಲೆ ಮತಾಂಧರ ವಕ್ರದೃಷ್ಟಿ ಬೀಳುವದರಲ್ಲೇನೂ ಆಶ್ಚರ್ಯವಿರುವುದಿಲ್ಲ. ಅಂತೆಯೇ ಶೇಖ್ ಅಬ್ದುಲ್ಲಾನ ಅನುಸಾರಕರ ಗೃಧ್ರ ದೃಷ್ಟಿ ಆ ಮಂದಿರದ ಮೇಲೆ ಬಿದ್ದಿರುತ್ತದೆ. ಅದನ್ನು ಕೆಡವಲು ಅವರು ಅನೇಕ ಬಾರಿ ಪ್ರಯತ್ನ ನಡೆಸಿದ್ದರು ಅಲ್ಲದೆ ಈಗಲೂ ಪ್ರಯತ್ನಿಸುತ್ತಿದ್ದಾರೆ. ಅದಕ್ಕೆ ಬೇಕಾದ ಯೋಜನೆಗಳನ್ನು ಅವರು ತಯಾರಿಸುತ್ತಿದ್ದಾರೆ. ಶ್ರೀ ಶಂಕರಾಚಾರ್ಯರು ಆ ಪರ್ವತದ ಮೇಲಿನಿಂದ ಅಂಧಕಾರವನ್ನು ಕಳೆದು ವೇಗ ಧರ್ಮದೀಪವನ್ನು ಬೆಳಗಿಸಿದುದರಿಂದ ಅನಂತರದ ಜನತೆ ಅದನ್ನು ಶಂಕರ ಪರ್ವತವೆಂದೇ ಕರೆಯಲಾರಂಭಿಸಿತು ಅದನ್ನು ಗೋಪದಾರಿ ಅಥವಾ ಶಂಕರ ಪರ್ವತವೆಂದು ಕರೆಯಲು ಶೇಖ್ ಅಬ್ದುಲ್ಲಾನ ಅನುಸಾರಕರು ಸಿದ್ಧರಾಗಿದ್ದಾರೆಯೇ? ಖಂಡಿತವಾಗಿ ಇಲ್ಲ. ಮಂದಿರದ ಧರ್ಮಕರ್ತರು ಈಗ ರಾಜ್ಯ ಸರಕಾರದ ಮೊರೆಹೊಕ್ಕಿದ್ದಾರೆ. ಅದರ ಫಲಿತಾಂಶ ಅದೇನಾಗುತ್ತದೋ, ಕಾದು ನೋಡಬೇಕು.

ಇದು ಕಡಲ ಕರೆ ಅಥವಾ ಪರ್ವತ ಪ್ರದೇಶಗಳ ವಿಷಯಗಳಿಗೇನೇ ಸೀಮಿತವಾಗಿರುವುದಿಲ್ಲ. ಹಾಗೆಯೇ ಮತೀಯ ಉತ್ಸವಗಳ ವಿಷಯಗಳಿಗೂ ಸೀಮಿತವಾಗಿರುವುದಿಲ್ಲ. ಅವರಿಗೆ ಅದ್ಯಾವ ನೆವನ ಸಿಕ್ಕಿದರೂ ಸಾಕು. ಮಹಾರಾಷ್ಟ್ರ ಅಥವಾ ಬೊಂಬಾಯಿ ಸರಕಾರವು ಶಿವಾಜಿ ಶಿಕ್ಷಣಾ ಸಂಸ್ಥೆಯವರಿಗೆ ಶಾಲೆ ಕಟ್ಟಲಿಕ್ಕೆಂದು ಸ್ಥಳವನ್ನು ಬಿಟ್ಟುಕೊಟ್ಟಿತ್ತು. ಸ್ವಲ್ಪಸಮಯದ ನಂತರ ಭೂಮಿ ಪೂಜೆಯ ಕಾರ್ಯವೂ ಮುಗಿಯಿತು. ಅನಂತರ ಕಟ್ಟಡ ಕಟ್ಟಲಿಕ್ಕಾರಂಭಿಸಿದಾಗ ಬಡ ಶ್ರಮಿಕರ ಮೇಲೆ ನಾಲ್ದೆಸೆಗಳಿಂದಲೂ ಪಾಷಾಣ ವರ್ಷಕ್ಕಾರಂಭವಾಯಿತು. ಜೀವದಾಸೆಯಿಂದ ಅವರು ದಿಕ್ಕು ತೋಚಿದತ್ತ ಓಡಬೇಕಾಯಿತು. ಅನಂತರ ಸಂಬಂಧಪಟ್ಟ ಗಣ್ಯ ವ್ಯಕ್ತಿಗಳು ವಿಚಾರಿಸಿ ನೋಡಿದಾಗ ಆ ಸ್ಥಳವು ಮಹಮ್ಮದೀಯರ ಸ್ಮಶಾನವೆಂದೂ, ಅದನ್ನು ಕಾಪಾಡಲಿಕ್ಕಾಗಿ ಮುಸ್ಲಿಮರು ಕಲ್ಲು ತೂರಿದರೆಂದು ತಿಳಿದು ಬಂತು. ನಿಜವಾಗಿ ಆ ಸ್ಥಳವು ಸ್ಮಶಾನವಾಗಿದ್ದಲ್ಲಿ ಅದನ್ನು ಸರಕಾರವು ಯಾವುದಾದರೊಂದು ಸಂಸ್ಥೆಗೆ ಬಿಟ್ಟು ಕೊಟ್ಟೀತೆ? ಅದೇನೂ ಭೂದಾನ ಇರುವುದಿಲ್ಲ-ಗುಡ್ಡ ಬೆಟ್ಟಗಳನ್ನು ಬಿಟ್ಟು ಕೊಡಲಿಕ್ಕೆ! ಸರಕಾರ ಸ್ಥಳ ಬಿಟ್ಟುಕೊಟ್ಟು, ಕಟ್ಟಡ ಕಟ್ಟಲು ಆರಂಭಿಸಿದ ವರೆಗೆ ಸ್ವಲ್ಪ ಸಮಯ ತಾಗಿರಲೇ ಬೇಕು ಈ ನಡುವೆ ಅಲ್ಲಿ ಹೆಣಹೂಳುವಂತಹ ಕೆಲಸ ನಡೆದಿರಲೇ ಇಲ್ಲ. ಆ ಊರಿನಲ್ಲಿ ಯಾವ ಮಹಮ್ಮದೀಯನೂ ಆ ಸಮಯದಲ್ಲಿ ಸತ್ತಿದ್ದೇ ಇಲ್ಲವೇನು? ಹಾಯಲಿ. ಅದೂ ಬೇಡ. ಕಲ್ಲು ತೂರಾಟಕ್ಕಿಂತ ಬೇರೆ ಮಾರ್ಗವೇ ಅವರಿಗೆ ಗೊತ್ತಿಲ್ಲವೇನು? ಸರಕಾರಕ್ಕೆ ಸವಾಲು ಹಾಕಲೂ ಸಾಹಸ ಅವರಿಗಿದೆ.

ಕರ್ಣಾಟಕದಲ್ಲೂ ನೆಲಕ್ಕೆ ಸಂಬಂಧಪಟ್ಟ ವ್ಯತಿರಿಕ್ತ ಘಟನೆಯೊಂದು ನಡೆದಿತ್ತು. ಅದು ಹುಬ್ಬಳ್ಳಿಯಲ್ಲಿ ನಡೆದದ್ದು, ಚುನಾವಣಾ ಒಡಂಬಡಿಕೆಗನುಸಾರವಾಗಿ ಊರ ನಡುವೆ ಇರುವ ಮೈದಾನವನ್ನು ಸರಕಾರವು ಮಹಮ್ಮದೀಯರಿಗೆ ಬಿಟ್ಟುಕೊಟ್ಟಿತು ಆಗ ಅಲ್ಲಿನ ಜನತೆ ಆ ರೀತಿ ಕಲ್ಲು ತೂರಾಟಕ್ಕೆ ಆರಂಭಿಸಲಿಲ್ಲ; ನ್ಯಾಯಖಾತೆಯ ಮೊರೆ ಹೊಕ್ಕಿತು.. ಮಹಮ್ಮದೀಯರಿಗೆ ಆ ದಾರಿ ಗೊತ್ತಿಲ್ಲವೇನು? ಹಿಂದೂ ನ್ಯಾಯಾಧೀಶರ ಬಳಿ ಅವರು ದೂರು ಕೊಂಡೊಯ್ಯಲು ಸಿದ್ಧರಿಲ್ಲವೇನು? ಭಾರತದ ಅತ್ಯುಚ್ಚ ಪ್ರತಿನಿಧಿ ಸಭೆಯಲ್ಲೂ ಒಂದು ಘಟನೆ ನಡೆದು, ಮಹಮ್ಮದೀಯ ಸದಸ್ಯರು ಸಭಾಪತಿಗಳಿಗೆ ಮಣಿಯ ಬೇಕಾಗಿಲ್ಲವೆಂಬ ತೀರ್ಪನ್ನು ಪಡೆದಿರುವರು. ಸಂಪತ್ತಿನಲ್ಲಿ ಸಭಾಪತಿಗಳಿರುವಾಗ ಒಳ ಪ್ರವೇಶಿಸುವ ಪ್ರತಿನಿಧಿಗಳು, ಸಭಾಪತಿಯವರಿಗೆ ಗೌರವ ಪ್ರಕಟಿಸಲು ಮಣಿಯಬೇಕು. ಮುಸ್ಲಿಂ ಸದಸ್ಯರು ಅದಕ್ಕೆ ವಿರುದ್ಧವಾಗಿ ಬಂದಾಗ ಕೆಲವರು ಆ ಕುರಿತು ಪ್ರಶ್ನೆ ಹಾಕಿದರು. ತಮ್ಮ ಮತೀಯ ಭಾವನೆಗೆ ಅದು ವಿರೋಧವಾಗಿರುವದರಿಂದ ತಾವು ಮಣಿಯುವದಿಲ್ಲವೆಂದು ಅವರು ಖಂಡಾತುಂಡವಾಗಿ ಹೇಳಿದರು ಪಾಪ! ಸಭಾಪತಿಗಳು ಮಾಡುವದಾದರೂ ಏನು? 'ಸರಿ' ಎಂದರು. ಈ ರೀತಿ ಅವರು ಮಹಮ್ಮದೀಯರ ನ್ಯಾಯಾಧೀಶರ ಬಳಿ ಬಗ್ಗಲು ಸಿದ್ಧರಿಲ್ಲವೆಂದು ಕಾಣುತ್ತದೆ. ದುರ್ದೈವವಶಾತ್ ಅವರ ಶಿಲಾಯುಗದ ವರ್ತನೆಗೆ ವಿಜಯವೇ ಸಿಗುತ್ತಿದೆ!

ಶೇಖ್ ಅಬ್ದುಲ್ಲಾನ ಅನುಸಾರಕರು ತಾವು ಹಿಂದೂಗಳು ಅಥವಾ ಭಾರತೀಯರು ಅಥವಾ ಇಂಡಿಯನರೆಂದು ಹೇಳಿಕೊಳ್ಳಲು ಒಪ್ಪುವದಿಲ್ಲ. ಅದೆಂತಹ ಮೌಲ್ಯದ ವ್ಯವಹಾರವೇ ಇರಲಿ; ಅವರು ಕಾಶ್ಮೀರಿ ಮುಸ್ಲಿಮರೆಂದೇ ರಾಷ್ಟ್ರೀಯತೆಯನ್ನು ವ್ಯಕ್ತಪಡಿಸುತ್ತಾರೆ ತಾವು ಮಾತ್ರ ಆ ರೀತಿ ವ್ಯಕ್ತಪಡಿಸುತ್ತಿರುವದಲ್ಲದೆ ಇತರರಿಂದಲೂ ಅದನ್ನೇ ಅಪೇಕ್ಷಿಸುತ್ತಾರೆ. 'ಗೋವಾ' ಹಿಂದೀ ಚಲಚಿತ್ರ ಕಾಶ್ಮೀರದಲ್ಲಿ ಪ್ರದರ್ಶನಕ್ಕೆ ಬಂದಾಗ ಪ್ರದರ್ಶನಾಲಯದ ಮೇಲೆ ಬಿರುಸಿನ ಕಲ್ಲು ತೂರಾಟ ನಡೆಯಿತು! ಅದಕ್ಕೆ ಕಾರಣವೇನು? ಹಿಂದೀ ವಿರೋಧಿಸಿ ಅಲ್ಲ; ಅಥವಾ ಗೋವೆಯನ್ನೆದುರಿಸಿ ಅಲ್ಲ ಆ ಚಲಚಿತ್ರದಲ್ಲಿ ಒಂದೆಡೆ ಒಂದು ಹಾಡು ಬರುತ್ತವೆ —ನೇಫಾ ಹಮಾರಾಹೈ, ಕಾಶ್ಮೀರ್ ಹಮಾರಾ ಹೈ! [ನೇಫಾ ನಮ್ಮದು, ಕಾಶ್ಮೀರ್ ನಮ್ಮದಿದೆ.] ಅದನ್ನೂ ಶೇಖ್ ಅಬ್ದುಲ್ಲಾನ ಅನುಸಾರಕರಿಗೆ ಸಹಿಸಿಕೊಳ್ಳಲಿಕ್ಕಾಗಲಿಲ್ಲ. ಅವರು ಶಿಲಾಯುಗದ ಜನರಂತೆ ವರ್ತಿಸಿದರು. ವಿಚಿತ್ರವಾಗಿ ಅದಕ್ಕೆ ಜಯವೂ ಆಯಿತು! ಆ ದೃಶ್ಯಕ್ಕೆ ಕತ್ತರಿ ಪ್ರಯೋಗ ನಡೆಯಿತು! ಇಂತಹ ಘಟನೆಗಳು ನಡೆದಲ್ಲಿ ಅವರಿಗೆ ಬೆನ್ನುತಟ್ಟಿ ಪ್ರಚೋದಿಸಿದಂತಾಗುವದಿಲ್ಲವೇ? ಈ ಘಟನೆಗಳೆದುರಾಗಿ ಮಾತಾಡಲು ನಮ್ಮ ಉಪ-ಅಧ್ಯಕ್ಷರಿಗೆ ಡಾ| ಝಾಕೀರ ಹುಸೇನರಿಗೆ— ಸಮಯವೇ ಇಲ್ಲವೆಂದು ಕಾಣುತ್ತದೆ. ಅವರಿಗೆ ದಿಲ್ಲಿಯಿಂದ ಇಸ್ರಾಯಿಲಿಗೆ ಹಾರಾಡಿ ಬರಲು ಸಮಯವಿದೆ! ಅಲ್ಲದೆ, ಮಹಮ್ಮದೀಯರು ಇಲ್ಲಿಯ ಪಾಕಿಸ್ತಾನದನ್ನು ಮರೆಯದೆ, ನೈಜ ಇಸ್ಲಾಮಿನ ಪ್ರಸಾರಕ್ಕಾಗಿ ಹೊಸ ಮಸೀದಿಯ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ತನ್ನ ಮತೀಯರಿಗೆ ತಿಳಿಸಲು ಅವರಿಗೆ ಸಮಯವಿದೆ!

ಶೇಖ್ ಅಬ್ದುಲ್ಲಾನ ಅನುಸಾರಕರ ವಿಷಯಕ್ಕೆ ಅಥವಾ ಹೇಳಿ ಕೇಳಿ ಮದಾಂಧ ಗೂಂಡಾಗಳ ವಿಷಯಕ್ಕಷ್ಟೇ ಅದು ಸೀಮಿತವಾಗಿರುವದಲ್ಲ. ಈಗಿನ ಭೀಕರ ಹಾಗೂ ಭಯಾನಕ ಪರಿಸ್ಥಿತಿಯಲ್ಲಿ ಕಾಶ್ಮೀರದ ಅವಶ್ಯಕತೆ ಆಕ್ರಮಣಗಾರರಿಗೆ ಅದೆಂತಿರಬಹುದು ಇಲ್ಲಿನ ಪಂಚಮ ಸ್ತಂಭೀಯರಿಗೆ ಚೆನ್ನಾಗಿ ಗೊತ್ತು ಹಾಗೆಯೇ ಅಸ್ಸಾಂ ಕೂಡಾ ಇದೆ. ಹಿಂದೆ ಪಾಕಿಸ್ತಾನ ಹಾಗೂ ಕಮ್ಯೂನಿಸ್ಟ್ ಚೈನಾವು ಅದೆಂತು ಇಲ್ಲಿಯ ಮತಾಂಧ ಮಹಮ್ಮದೀಯ ಹಾಗೂ ದೇಶದ್ರೋಹಿ ಕಮ್ಯೂನಿಸ್ಟರ ಸಹಾಯದಿಂದ ಆಕ್ರಮಣ ನಡೆಸಲು ಪ್ರಯತ್ನಿಸಿತ್ತೆಂಬುದು ಭಾರತೀಯರಿಗೆ ಜ್ಞಾಪಕವಿರದಿರಲಾರದು. ಅದನ್ನು ಮರೆತು ಬಿಡಲು ಸಾಧ್ಯವೇನ? ಆ ರೀತಿ ಅಲ್ಲಿ ನಡೆದಿತ್ತು.

ಪಾಕಿಸ್ತಾನವು ಹಿಟ್ಲರನ ಹೆಜ್ಜೆಯಲ್ಲಿ ಮುನ್ನಡೆಯುತ್ತಿದೆಂಬುದು ಭಾರತೀಯರಿಗೆ ಚೆನ್ನಾಗಿ ಗೊತ್ತು. ಗಡಿ ಪ್ರದೇಶದಲ್ಲಿ ಪಾಕಿಸ್ತಾನವು ತನ್ನ ಪ್ರಜೆಗಳನ್ನು ವಾಸಿಸಲು ಪ್ರೋತ್ಸಾಹಿಸುತ್ತದೆ. ಅವರ ಸಂಖ್ಯೆ ಅಲ್ಲಿ ಅಧಿಕವಾಯಿತೆಂದರೆ ಅದನ್ನು

(ಹತ್ತನೇ ಪುಟ ನೋಡಿರಿ)

ಶ್ರಮಿಕ ವಗ

ಜಾನ್ ಎ

೪೦ ವರ್ಷಗಳ ಅವಿರತ

ಮ



೧

೨

೩

ಚಿತ್ರ ೧—ಲೂಯಿಸ್

ಯುನೈಟೆಡ್ ಮೈನ್ ವರ್ಕರ್ಸ್ ಯೂನಿಯನ್ನಿನಲ್ಲಿ ೪೦ ವರ್ಷಗಳಷ್ಟು ಸುದೀರ್ಘ ಕಾಲ ಅದರ ಅಧ್ಯಕ್ಷರಾಗಿದ್ದು ಪ್ರಭಾವಿ ಪುರುಷರೆನಿಸಿದ ಅಮೆರಿಕೆಯ ಸಂಯುಕ್ತ ಸಂಸ್ಥಾನಗಳ ಜಾನ್ ಎಲ್. ಲೂಯಿಸರು ಕೆಲವು ವರ್ಷಗಳಿಗೆ ಮೊದಲು ತಮ್ಮ ಪದದಿಂದ ನಿವೃತ್ತಿ ಹೊಂದಿದರು. ಅವರು ಅಧಿಕಾರದಲ್ಲಿದ್ದಾಗ ತೋರಿಸಿದ ಚಟುವಟಿಕೆಗಳಿಂದ ತಾನು ನೌಕರರ ಸಂಘಟನೆಯಲ್ಲಿ, ಸಂಘಟನಾ ಕಾರ್ಯದಲ್ಲಿಯೂ ಕುಶಲಹಸ್ತರೆಂಬುದನ್ನು ತೋರಿಸಿಕೊಟ್ಟರು. ಮಾತ್ರವಲ್ಲದೆ, ಅವರ ಸಾಧನೆ ಸಿದ್ಧಿಗಳು ಅಮೆರಿಕೆಯ ನಾಗರಿಕರು ಅನುಭವಿಸುವ ಸ್ವಾತಂತ್ರ್ಯ ಸುಖವನ್ನು ಜಾಹೀರು ಮಾಡುವುವು.

ಚಿತ್ರ ೨- ತಂದೆ

ಅಯೋವಾದ ಲುಕಾಸ್ ನಗರದಲ್ಲಿ ಲೂಯಿಸರು ೧೮೮೦ರಲ್ಲಿ ಜನಿಸಿದರು. ಅವರ ತಂದೆ ಥಾಮಸರು ಕಡಿಮೆ ವೇತನ ಪಡೆಯುತ್ತಿದ್ದ ಗನಿಕೆಲಸಗಾರರು. ಆದರೆ ಗನಿಯ ಕೆಲಸಗಾರರಿಗೆ ಸಹಾಯಕವೆನಿಸುವ ಮಜೂರರ ಯೂನಿಯನ್‌ಗಳಿಗೆ ಇವರು ಶಕ್ತಿಮೀರಿ ಸಹಾಯ ಮಾಡುತ್ತಿದ್ದರು. ಆಗಿನ ಸಮಯದಲ್ಲಿ ಯೂನಿಯನ್ ಚಟುವಟಿಕೆಗಳಲ್ಲಿ ಭಾಗವಹಿಸುವುದು ಅಪರಾಧವೆನಿಸುತ್ತಿತ್ತು. ಭಾಗವಹಿಸಿದ ನೌಕರರು ಕೆಲವೊಮ್ಮೆ ತನ್ನ ನೌಕರರಿಗೆ ಎರವಾಗಬೇಕಾಗುತ್ತಿತ್ತು. ಆದರೆ, ಇಂದು ಅಂತಹ ಪರಿಸ್ಥಿತಿಯಿರುವುದಿಲ್ಲ. ಯೂನಿಯನ್ ಚಟುವಟಿಕೆಗಳಲ್ಲಿ ಪಾತ್ರವಹಿಸುವುದು ಇಂದು ಶ್ರಮಿಕ ವರ್ಗದ ಮೂಲಭೂತ ಅಧಿಕಾರವೆಂಬ ಸ್ಥಾನವನ್ನು ಗಳಿಸಿದೆ. ಆದರೆ, ಅಂದಿನ ದಿನಗಳ ಕಾಯದೆ—ಕಟ್ಟಳೆಗಳಂತೆ ಹಿರಿಯ ಲೂಯಿಸರು ಕೆಲವೊಮ್ಮೆ ನೌಕರಿಯನ್ನು ಕಳೆದುಕೊಂಡದ್ದೂ ಉಂಟು.

ಚಿತ್ರ ೩-ದುಡಿಮೆ

ಬಾಲಕ ಲೂಯಿಸನಿಗೆ ಶಿಕ್ಷಣ ಪಡೆಯಬೇಕೆಂಬ ಆಸಕ್ತಿ ಅಪಾರವಿತ್ತು. ಆದರೆ, ಪರಿಸ್ಥಿತಿಯು ಆತನಿಗೆ ಅನುಕೂಲವಿರಲಿಲ್ಲ. ಆತನ ತಂದೆಯ ಆದಾಯವು ತೀರ ಪರಿಮಿತವಾಗಿತ್ತು; ಅಥವಾ ಕೆಲವೊಮ್ಮೆ ಉತ್ಪಾದನೆಯೇ ಇಲ್ಲವೆನಿಸುತ್ತಿತ್ತು. ಇಂತಹ ಪ್ರತಿಕೂಲ ವಾತಾವರಣದಲ್ಲಿ ಕಿರಿಯ ಲೂಯಿಸನ ಆಸೆ ಗಗನಕುಸುಮವಾಗಿಯೇ ಉಳಿಯಿತು. ಕುಟುಂಬ ಪೋಷಣೆಗಾಗಿ ತನ್ನ ತಂದೆಗೆ ಸಹಾಯಕನಾಗುವುದು ಆತನ ಪಾಲಿಗೆ ಬಂತು; ಅದಕ್ಕಾಗಿಯೇ ಎಳೆಯ ಲೂಯಿಸರು ತನ್ನ ತಂದೆಯೊಂದಿಗೆ ಗನಿಗಳಲ್ಲಿ ದುಡಿಯ ಹೋಗುತ್ತಿದ್ದರು. ತನ್ನ ಹದಿನೈದನೆಯ ಹುಟ್ಟು ಹಬ್ಬಕ್ಕೆ ಮೊದಲೇ ಅಂದರೆ, ೧೮೯೫ನೆ ಇಸವಿಯ ಸಮಯದಲ್ಲಿಯೇ, ಲೂಯಿಸ್ ವಾರವೊಂದರಲ್ಲಿ ೬೦ ತಾಸುಗಳ ಕಾಲ ಇದ್ದಿಲ ಗನಿಗಳಲ್ಲಿ ಅಗೆಯಬೇಕಾಗಿತ್ತು.

ಚಿತ್ರ ೪—ಉದ್ಯೋಗಗಳು

ಲೂಯಿಸ್ ಆರಂಭದಿಂದಲೂ ಪರಿಶ್ರಮ ಜೀವಿ; ಉತ್ಸಾಹಿ. ಆದುದರಿಂದಲೇ ಗನಿಗಳಲ್ಲಿ ಮೈಮುರಿಯುವಂತೆ ದುಡಿದು ಸುಸ್ತಾಗಿದ್ದರೂ ಅವರಿಗೆ ಬಿಡುವಿನ ಅವಕಾಶ ದೊರೆಯುತ್ತಿತ್ತು. ಇದನ್ನು ಕಾಡು ಹರಟೆಯಲ್ಲಿ ಹಾಳು ಮಾಡದೆ ಅವರು ಇತರ ಉದ್ಯೋಗಗಳನ್ನು ಮಾಡುವಲ್ಲಿ ಉಪಯೋಗಿಸುತ್ತಿದ್ದರು. ಹಲವು ಬಗೆಯ ಚಟುವಟಿಕೆಗಳಲ್ಲಿ ಅವರು ಭಾಗಿಯಾಗುತ್ತಿದ್ದರು. ಬೇಸ್‌ಬಾಲ್ ಟೀಮೊಂದನ್ನು ಕಟ್ಟಿಕೊಂಡು ಅವರು ಕ್ರೀಡೆಗಳಲ್ಲಿ ಆಸಕ್ತಿಯನ್ನು ಕೆರಳಿಸಿದರು. ತರ್ಕಸಭೆಯೊಂದರ ಹಿನ್ನೆಲೆಯಲ್ಲಿ ನಿಂತು ಅದನ್ನು ಯಶಸ್ವಿಯಾಗಿ ನಡೆಸುತ್ತಿದ್ದರು. ಈ ತರ್ಕಸಭೆಯು ಅವರಿಗೆ ಮುಂದಕ್ಕೆ ಬಹಳಷ್ಟು ನೆರವಾಯಿತು. ತನ್ನ ಭವಿಷ್ಯ ಜೀವನದಲ್ಲಿ ಅವರು ಶ್ರಮಿಕ ಮುಂದಾಳುವೆನಿಸಿದಾಗ ಅತ್ಯಗತ್ಯವೆನಿಸಿದ ವಾಕ್ ಶಕ್ತಿಯನ್ನೂ ವಾಕ್ ಪಟುತ್ವವನ್ನೂ ಈ ತರ್ಕಸಭೆಯು ಅವರಿಗೆ ನೀಡಿತೆನ್ನಬಹುದು.

ಚಿತ್ರ ೫—ಅಲೆಯುವ ಭೂತ

ತಂದೆಯಂತೆ ಮಗ-ಎಂಬ ಗಾದೆಯ ಮಾತು ಲೂಯಿಸರ ಮಟ್ಟಿಗೆ ನೂರರಲ್ಲಿ ನೂರರಷ್ಟು ಸತ್ಯ. ಹಿರಿಯ ಲೂಯಿಸರಂತೆಯೇ ಈ ಕಿರಿಯ ಲೂಯಿಸರೂ ಶ್ರಮಿಕ ವರ್ಗದ ಉದ್ಧಾರದಲ್ಲಿ ಅತ್ಯಂತಾಸಕ್ತಿಯನ್ನು ಹೊಂದಿದ್ದರು; ಮತ್ತು ಅದಕ್ಕಾಗಿಯೇ ದುಡಿದರು. ತನ್ನ ೨೧ನೆಯ ಚಿಕ್ಕ ಪ್ರಾಯದಲ್ಲಿಯೇ ಅವರು ತನ್ನ ಬಾಹ್ಯ ವಿಚಾರ ದೃಷ್ಟಿಯನ್ನು ಬಹಳಷ್ಟು ವಿಸ್ತರಿಸಿದರು. ಅದೇ ಸಮಯದಲ್ಲಿ ಅವರು ಅಯೋವಾವನ್ನು ತ್ಯಜಿಸಿದರು; ಅಮೆರಿಕೆಯ ವಿವಿಧ ಪ್ರದೇಶಗಳನ್ನು ಸಂಚರಿಸಿದರು. ಆಗವರು ಕೂಲಿನಾಲೆಗಳನ್ನು ಮಾಡುತ್ತಿದ್ದರು; ಕೆಲವೊಮ್ಮೆ ಗನಿ ಕೆಲಸಕ್ಕೂ ಹೋಗುತ್ತಿದ್ದರು ಈ ಅಲೆತದಿಂದಾಗಿ ಅವರಿಗೆ ಶ್ರಮವರ್ಗದ ಕಾರ್ಯ ಸಿದ್ಧಾಂತಗಳಿಗೂ ನೈಜ ಪರಿಸ್ಥಿತಿಗೂ ಇರುವ ಬೃಹದಂತರವು ಮನವರಿಕೆಯಾಯಿತು

ಚಿತ್ರ ೬—ಸಂಘಟನೆ

ಹೀಗೆ ತನ್ನ ಸಂಚಾರಾವಧಿಯಲ್ಲಿ ತಾನು ಕಂಡುಕೊಂಡ ವಿಶಾಲಾನುಭವದೊಡನೆ ಲೂಯಿಸರು ಅಯೋವಾಕ್ಕೆ ಮರಳಿ ಬಂದರು ಶ್ರಮಿಕ ವರ್ಗಕ್ಕೆ ನೆರವು ನೀಡುವ ದೃಢ ಸಂಕಲ್ಪವನ್ನು ಮಾಡಿದರು. ಯುನೈಟೆಡ್ ಮೈನ್ ವರ್ಕರ್ಸ್ ಯೂನಿಯನ್ನನ್ನು ಅವರು ಸೇರಿದರು. ಕೆಲವೇ ಸಮಯದಲ್ಲಿ ಅವರು ಯೂನಿಯನ್ನಿನ ಪ್ರಭಾವಿ ಸದಸ್ಯರೆನಿಸಿದರು. ಗನಿಕೆಲಸಗಾರರ ಹಿತವನ್ನು ಬಯಸಿ ಅವರು ಹಗಲಿರುಳು ಮೈಮುರಿದು ದುಡಿದರು. ಅವರ ತೀವ್ರ ಮುನ್ನಡೆ ಹಾಗೂ ಪ್ರಶಂಸನೀಯ ಸಾರ್ವಜನಿಕ ಭಾಷಣಶಕ್ತಿಗಳಿಂದಾಗಿ ತೀವ್ರವಾಗಿ ಅವರು ಯೂನಿಯನ್ನಿನಲ್ಲಿ ಉಚ್ಚಪದವನ್ನು ಪಡೆಯುವುದು ಸಾಧ್ಯವಾಯಿತು.

ಚಿತ್ರ ೭-ಮದುವೆ

೧೯೦೭ರಲ್ಲಿ ಲೂಯಿಸರು ಮಿಂನ್ಸ್ ಎಡಿತ್ ಬೆಲ್ ಎಂಬಾಕೆಯನ್ನು ವಿವಾಹವಾದರು. ಈಕೆಯಾದರೋ ಶಾಲೆಯೊಂದರ ಅಧ್ಯಾಪಿಕೆ. ಇವರಿಬ್ಬರೂ ಎಳೆಹರೆಯದ ಪ್ರೇಮಿಗಳಾಗಿದ್ದರು. ಲೂಯಿಸರು ಶಾಲೆಯನ್ನು ಬಿಟ್ಟ ಬಳಿಕ ಈಕೆಯೇ ಅವರಿಗೆ ಶಿಕ್ಷಣವನ್ನೂ ತುಸು ಮಟ್ಟಿಗೆ ಕೊಡುತ್ತಿದ್ದಳು. ತಾನು ೧೯೩೭ರಲ್ಲಿ ಮೃತ್ಯುಮುಖವಾಗುವವರೆಗೂ ಈಕೆಯು ಲೂಯಿಸರಿಗೆ ಸರ್ವಪ್ರಕಾರದ ಸಹಕಾರವನ್ನು ನೀಡುತ್ತಿದ್ದಳು; ಪ್ರತಿಕಾರ್ಯದಲ್ಲೂ ನೆರವಾಗುತ್ತಿದ್ದಳು. ಇದಕ್ಕಾಗಿ ತನ್ನ ಇಷ್ಟಗಳನ್ನು ಅದುಮಿ ಹಿಡಿಯುತ್ತಿದ್ದಳು.

ಚಿತ್ರ ೮—ನಾಯಕ ಮಣಿ

೧೯೨೦ ಎಂಬುದು ಜಾನ್ ಎಲ್. ಲೂಯಿಸರ ಜೀವಮಾನದಲ್ಲೊಂದು ಮಹತ್ವದ ವರ್ಷ. ಅದೇ ವರ್ಷ ಅವರು ಯುನೈಟೆಡ್ ಮೈನ್ ವರ್ಕರ್ಸ್ ಯೂನಿಯನ್ನಿ

೭

೮

೯

೧೦

ಹಿತಸಾಧಕ

ಲೂಯಿಸ್

ಹೋರಾಟದಿಂದ ಯಶಗಳಿಸಿದ ಪುರುಷ

ನ ಅಧ್ಯಕ್ಷರಾಗಿ ಆಯ್ಕೆ ಹೊಂದಿದರು. ಅನಂತರ ಅವರು ಗನಿ ಕೆಲಸಗಾರರ ದುಡಿಮೆಯ ರೀತಿ-ರಿವಾಜುಗಳಲ್ಲಿ ಸುಧಾರಣೆಯನ್ನು ಮಾಡಲು ಪ್ರಯತ್ನಿಸಿದರು. ಸ್ವಯಂ ಲೂಯಿಸರು ಶ್ರಮಿಕ ವರ್ಗದವರ ಕಷ್ಟ ಕಾರ್ಪಣ್ಯಗಳನ್ನು ಅರಿತಿದ್ದರು. ಅವನ್ನು ದೂರ ಮಾಡಲು ಅವರು ಕೈಗೊಳ್ಳುತ್ತಿದ್ದ ಕ್ರಮಗಳಾದರೂ ಉಚಿತವೆನಿಸುತ್ತಿದ್ದವು, ಮತ್ತು ಸ್ವಾಭಾವಿಕವಾಗಿದ್ದವು. ಕೆಲಸಗಾರರ ತೊಂದರೆಗಳನ್ನು ಅರಿತುಕೊಳ್ಳುವಲ್ಲಿ ತಾವೇ ಮುಂದಾಗುತ್ತಿದ್ದರು. ಅವರೊಡನೆ ನೇರವಾದ ಸಂಪರ್ಕ ಏರಿಸಿಕೊಳ್ಳುತ್ತಿದ್ದರು.

ಚಿತ್ರ ೯— ತಂತ್ರ

ಸಾಧ್ಯವೆನಿಸಿದ ಸಂದರ್ಭಗಳಲ್ಲೆಲ್ಲ ಲೂಯಿಸರು ದುಡಿಮೆಗಾರರ ಕೆಲಸದ ನಿಯಮಗಳನ್ನು ಸುಧಾರಿಸುವಲ್ಲಿಯೂ ಗನಿ ಕೂಲಿಗಳಿಗೆ ಹೆಚ್ಚಿನ ಲಾಭ ದೊರೆಯುವಂತೆಯೂ ಪ್ರಯತ್ನ ನಡೆಸುತ್ತಿದ್ದರು. ಸಂಧಾನದ ಮಾತುಕತೆಗಳು ವಿಫಲವಾದರೆ, ನ್ಯಾಯೋಚಿತ ರೀತಿಯಲ್ಲಿ ಸಂಪು ಹೂಡಲು ಅವರು ಹಿಂಜರಿಯುತ್ತಿರಲಿಲ್ಲ. ಕೆಲವೊಮ್ಮೆ ಮುಷ್ಕರಗಳು ತಟ್ಟೆಯವೆನಿಸುತ್ತಿದ್ದವು. ಆದರೆ, ಇವುಗಳ ಪರಿಣಾಮ ಮಾತ್ರ ಹಿತಕಾರಿಯಾಗುತ್ತಿದ್ದವು ಕೂಲಿಗಾರರಿಗೆ ಕಡಿಮೆ ಅವಧಿಯ ಕೆಲಸ, ಉತ್ತಮ ವೇತನ ಮತ್ತು ಸುಧಾರಿಸಿದ ಸೇವಾನಿಯಮಗಳು ಕಾಲಕ್ರಮದಲ್ಲಿ ಅನುಷ್ಠಾನಕ್ಕೆ ಬಂದವು.

ಚಿತ್ರ ೧೦— ಹೊಸರಂಗಗಳು

೧೯೩೫ರ ಹೊತ್ತಿಗೆ ಲೂಯಿಸರು ಗನಿಕೆಲಸಗಾರರೆಲ್ಲರ ಮೆಚ್ಚುಗೆಗೆ ಪಾತ್ರರಾದರು. ಗನಿಗೂಲಿಗಳು ಸುಸಂಘಟಿತರಾಗಿದ್ದರು ಅವರ ಹಿತಸಾಧನೆಯಲ್ಲಿ ಲೂಯಿಸರು ಯಶಗಳಿಸಿದ್ದರು. ಇದಾದ ಮೇಲೆ ಆಟಮೋಬೈಲ್ ಮೊದ

೪

ಲಾದ ಅಧಿಕ ಸಂಖ್ಯಾತ ದುಡಿಮೆಗಾರರ ರಂಗದತ್ತ ಲೂಯಿಸರ ಗಮನ ಹರಿದುದು ಸಹಜ ಸ್ವಾಭಾವಿಕ. ಗನಿಗಾರರ ಕೆಲಸ ಯೂನಿಯನ್ ಅಮೆರಿಕನ್ ಲೇಬರ್ ಫೆಡರೇಶನಿನ ಅಂಗವಾಗಿದ್ದು ಅದು ಲೂಯಿಸರ ಸಲಹೆಗಳನ್ನು ಒಪ್ಪಿಕೊಳ್ಳದೆ ಹೋದುದರಿಂದ ಲೂಯಿಸರು ಹೊಸರಂಗದಲ್ಲಿ ಪಾದಾರ್ಪಣ ಮಾಡಲು ಸುಲಭ ಸಾಧ್ಯವಾಗಲಿಲ್ಲ.

ಚಿತ್ರ ೧೧— ಸಿ ಐ ಓ

೧೯೩೬ರಲ್ಲಿ ಲೂಯಿಸರ ಬೆಂಬಲಕ್ಕೆ ಮತ್ತೆ ಒಂಬತ್ತು ಯೂನಿಯನ್ ನಾಯಕರು ಮುಂದೆ ಬಂದರು. ಎ ಎಫ್ ಎಲ್‌ನ ಒಳಗಡೆಯೇ ಔದ್ಯಮಿಕ ಸಂಘಟನೆಯ ಬಗ್ಗೆ ಒಂದು ಸಮಿತಿಯನ್ನು ಏರ್ಪಡಿಸಲು ಪ್ರಯತ್ನಿಸಿದರು. ಇಬ್ಬಗೆಯ ಸಂಘಟನೆಯ ಕ್ರಮವನ್ನು ಮುರಿದುಹಾಕುವ ಧ್ಯೇಯ ಅವರದು. ಬಹು ಸಮಯದ ಪ್ರಯತ್ನದ ಪರಿಣಾಮವಾಗಿ ಅವರು ೧೯೩೮ರಲ್ಲಿ ಸಂಘಟಿತವಲ್ಲದವನ್ನು ಸಂಘಟಿಸುವ ಸಲುವಾಗಿ ಕಾಂಗ್ರೆಸ್ ಆಫ್ ಇಂಡಸ್ಟ್ರಿಯಲ್ ಓರ್ಗಾನಿಸೇಷನ್-ಎಂಬ ದೊಂದು (ಸಿ. ಐ ಓ.) ಸಂಸ್ಥೆಗೆ ಜನ್ಮವಿತ್ತರು.

ಚಿತ್ರ ೧೨— ಹೋರಾಟ

ಹಲವಾರು ಉದ್ದಿಮೆಗಳ ಯಜಮಾನರು ತಮ್ಮ ನೌಕರರ ಸಂಘಟನೆಯನ್ನು ಬಯಸುತ್ತಿರಲಿಲ್ಲವಾದುದರಿಂದ ಮೊದಲ ಕೆಲವು ವರ್ಷಗಳನ್ನು ಲೂಯಿಸರು ಕಣ್ಣಿಗೆ ಎಣ್ಣೆ ಸುರಿದುಕೊಂಡೇ ಕಳೆಯಬೇಕಾಯ್ತು. ಇದರಿಂದಲೇ ಲೂಯಿಸ್ ಅಧೀರರಾಗಲಿಲ್ಲ ತನ್ನ ಸತತೋದ್ಯೋಗದಿಂದ, ಅದಮ್ಯ ಉತ್ಸಾಹದಿಂದ ಮತ್ತು ನಿರಂತರ

೫

ಪರಿಶ್ರಮದಿಂದ ಉಕ್ಕು, ಆಟಮೊಬೈಲ್, ರಬ್ಬರ್, ಬಟ್ಟೆ ಗಿರಣಿ, ಪೆಟ್ರೋಲಿಯಂ, ಗ್ಲಾಸ್ ಮೊದಲಾದ ದೊಡ್ಡ ಪ್ರಮಾಣದ ಉದ್ಯಮ ರಂಗಗಳಲ್ಲಿ ನೌಕರರನ್ನು ಸಂಘಟಿಸಲು ಅವರು ಶಕ್ತರಾದರು, ತನ್ನ ಗುರಿಯನ್ನೂ ಅವರು ಮುಟ್ಟಿದರು.

ಚಿತ್ರ ೧೩— ಸ್ವತಂತ್ರ ಸಂಸ್ಥೆ

೧೯೪೦ರಲ್ಲಿ ಲೂಯಿಸರಿಗೂ ಸಿ ಐ ಓ ಗೂ ನಡುವೆ ವಿರಸವುಂಟಾಯಿತು. ಆ ವರ್ಷ ನಡೆಯಲಿದ್ದ ಅಮೇರಿಕನ್ ಅಧ್ಯಕ್ಷ ಚುನಾವಣೆಯಲ್ಲಿ ಲೂಯಿಸರು ವೆನ್‌ಡೆಲ್ ವಿಲ್ಕಿಯವರಿಗೆ ಬೆಂಬಲ ನೀಡುವಂತೆ ಸಿ ಐ ಓ ವಿನ ಸದಸ್ಯರ ಮನವೊಲಿಸಲೆತ್ನಿಸಿ ವಿಫಲರಾದರು. ಆದರಿಂದಾಗಿಯೇ ತನ್ನ ಗನಿಗೂಲಿಗಳ ಯೂನಿಯನ್ನನ್ನು ಅವರು ಸಿ ಐ ಓ ನಿಂದ ಪ್ರತ್ಯೇಕಿಸಿ ಅದನ್ನು ಸ್ವತಂತ್ರವಾಗಿಯೇ ಇಟ್ಟುಕೊಂಡರು. ಅಂದಿನಿಂದ ಇಂದಿನ ವರೆಗೂ ಗನಿಗೆಲಸಗಾರರ ಯೂನಿಯನ್ ಸ್ವತಂತ್ರವಾಗಿಯೇ ಉಳಿದು ಬಂದಿದೆ. ಎ ಎಫ್ ಎಲ್ ಮತ್ತು ಸಿ ಐ ಓಗಳಂತೆಯೇ ಇಂಟರ್ ನೇಶನಲ್ ಕಾನ್‌ಫೆಡರೇಶನ್ ಆಫ್ ಫ್ರೀ ಟ್ರೇಡ್ ಯೂನಿಯನ್ಸ್‌ನ ಒಂದು ಸದಸ್ಯ ಸಂಸ್ಥೆಯಾಗಿ ಪರಿಣಮಿಸಿದೆ.

ಚಿತ್ರ ೧೪— ಆರೋಗ್ಯ— ಹಿತಸಾಧನೆ

ಲೂಯಿಸರು ತಮ್ಮ ಅಧಿಕಾರಾವಧಿಯಲ್ಲಿ ಸಾಧಿಸಿದ ಮಹಾಕಾರ್ಯವೆಂದರೆ, ಗನಿ ಕೆಲಸಗಾರರಿಗಾಗಿ ಒಂದು ಆಸ್ಪತ್ರೆಯ ನಿರ್ಮಾಣ ಮಾಡಿದುದು, ವೈದ್ಯಕೀಯ ಮತ್ತು ನಿವೃತ್ತಿಯೋಜನೆಗಳು. ಗನಿ ಒಪರೇಟರ್‌ಗಳಿಂದ ಆರ್ಥಿಕ ಸಹಾಯ ಪಡೆಯುತ್ತಿರುವ ಈ ಯೋಜ

೬

ನೆಗಳು ಗನಿಯ ಕೆಲಸಗಾರರಿಗೆ ಮಾತ್ರವಲ್ಲ, ಅವರ ಕುಟುಂಬಗಳಿಗೂ ಅನ್ವಯಿಸಲ್ಪಡುವುವು. ವೈದ್ಯಕೀಯ ಗಮನ ಮಾತ್ರವಲ್ಲದೆ ಪ್ರತಿ ಸದಸ್ಯನೂ ಮಾಸಿಕ ಒಂದು ನೂರು ಡಾಲರ್ ನಿವೃತ್ತಿ ವೇತನ ಪಡೆಯುತ್ತಾನೆ. ಮತ್ತು ಸಾಮಾಜಿಕ ಭದ್ರತಾ ವೆಚ್ಚವನ್ನೂ ಗಳಿಸುತ್ತಾನೆ.

ಚಿತ್ರ ೧೫— ಸಾಧನೆ

ಜಾನ್ ಎಲ್. ಲೂಯಿಸರು ನಿವೃತ್ತರಾದುದರಿಂದ ಶ್ರಮಿಕರಂಗದಲ್ಲಿ ಮಹಾವ್ಯಕ್ತಿಯೊಬ್ಬನು ನಿವೃತ್ತನಾದಂತಾಯಿತು. ೪೦ ವರ್ಷಗಳ ಸತತ ಹೋರಾಟದ ಪರಿಣಾಮವಾಗಿ ಲೂಯಿಸರು ಗನಿಕೆಲಸಗಾರರಿಗೆ ಬಹು ದೊಡ್ಡ ಉಪಕಾರವನ್ನು ಮಾಡಿದ್ದಾರೆ. ಮೊದಲಿಗೆ ದಿನದ ಎಂಟು ತಾಸುಗಳ ದುಡಿಮೆಗೆ ೨½ ಡಾಲರ್ ಪಡೆಯುತ್ತಿದ್ದ ಗನಿ ಕೆಲಸಗಾರರು ಈಗ ಆರೂವರೆ ತಾಸುಗಳ ದುಡಿಮೆಗೆ ೨೪ ಡಾಲರ್‌ಗಳನ್ನು ಪಡೆಯುತ್ತಾರೆ ಮಾತ್ರವಲ್ಲ, ಉತ್ತಮ ಸೇವಾ ನಿಯಮಗಳನ್ನೂ ಹೊಂದಿದ್ದಾರೆ. ಮಾತನಾಡಲು ಎಂದಿಗೂ ಅಂಜದ, ಮಾನವನ ಅಧಿಕಾರಕ್ಕಾಗಿ ಹೋರಾಟವನ್ನೆಂದಿಗೂ ನಿಲ್ಲಿಸದ ಮಹಾನ್ ವ್ಯಕ್ತಿಯೆಂದು ಲೂಯಿಸ್ ಅಜರಾಮರನಾಗಿದ್ದಾನೆ

ವಿಜ್ಞಾನದ ಅವಶ್ಯಕತೆ

ನೂರೊಂದು ನುಡಿಮುತ್ತುಗಳಿದ್ದರೂ
ನಾಡು
ಬೇರೆಯಾಗದು ಬೀಡು ಭವದ ಈ
ಕಾಡು
ಬೀಡು ಬೀಡಿಗೆ ಬೇಕು ಭವದ ವಿಜ್ಞಾನ
ನೋಡಿ ನಡೆಯಲು ಬೇಕು ಜಗದ
ಜನಮಾನ

—ಕೆ. ಪ. ಗಾಂವಕಾರ ಅಂಕೋಲಾ

೧೨

೧೩

೧೪

೧೫

ಸಂಸ್ಮರಣೆ

ಗೋವಿಂದ ಪೈಗಳ ಸಮಕ್ಷಮದಲ್ಲಿ ೧

ಬರೆದವರು: ಶ್ರೀ ಯು. ವಾಸುದೇವ ನಾಯಕ್.

ಉದಾತ್ತ ಸಾಹಿತ್ಯ ನಿರ್ಮಾಣವೇ ಕವಿಯ ಗುರಿ

ಜೀವನದಲ್ಲಿ ಒಬ್ಬೊಬ್ಬನಿಗೆ ಒಂದೊಂದು ಆಶೆಯುದಿಸಿದಾಗ, ಆಶೆಯ ಒತ್ತಡದಿಂದ ಆತನಲ್ಲಿ ಆತುರ—ಕಾತುರಗಳು ಉಂಟಾಗುತ್ತವೆ. ಶ್ರೀಮಾನ್ ಗೋವಿಂದ ಪೈಗಳವರು ಶ್ರೀ ಧರ್ಮಸ್ಥಳದಲ್ಲಿ ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನವನ್ನಲಂಕರಿಸಿ, ಕನ್ನಡದ ಅಚ್ಚ ಅಭಿಮಾನಧನರಾಗಿ, ತಮ್ಮ ಅನುಭವ ಸಮುದ್ರದಿಂದ ನುಡಿಮುತ್ತುಗಳನ್ನು ಸುರಿಸಿ, ಕನ್ನಡಮ್ಮನ ಕೀರ್ತಿ ಧ್ವಜವನ್ನು ಎತ್ತಿ ಹಿಡಿದಂದೇ ಅವರೊಡನೈಕ್ಯವಾಗಿರುವ, ಸರಸ್ವತೀ ಸಾಮ್ರಾಜ್ಯದಿಂದ ತುಸು ತಿಳುವಳಿಕೆಯನ್ನು ಪಡೆದು ನನಗೂ ಕವಿಯಾಗಬೇಕು— ಕವಿ ಸಾಮ್ರಾಟರಿಂದ ಆಶೀರ್ವಾದ ಪಡೆಯಬೇಕೆಂಬಾಸೆ ಬಲವಾಗಿ ಮೂಡಿತು.

ಆಶೆಯು ಕಾರಣಾಂತರಗಳಿಂದ ಬಹುಕಾಲ ಫಲಿಸಲಿಲ್ಲ. ಕೊನೆಗೆ ೧೯೬೦ನೇ ದಶಂಬರ ೧೯ರಲ್ಲಿ ಮಂಜೇಶ್ವರವನ್ನು ಸೇರಿ ಕವಿವರೇಣ್ಯರನ್ನು ಅವರ ನಿವಾಸದಲ್ಲೇ ಭೇಟಿಯಾದೆ. ಅಂದಿನ ಆನಂದ—ಆಶೆಯು ಈಡೇರಿದ ಬಗ್ಗೆ ಉಕ್ಕೇರಿದ ಆತ್ಮಾನಂದ ವರ್ಣನಾತೀತ— ಅವರ ಮನೆಯೇನೋ ದೊಡ್ಡದು. ಸುತ್ತಲೂ ವಿಶಾಲವಾದ ಆವಾರ. ತಟ್ಟೆಗಳನ್ನಿಳಿಸಿದ್ದ ಮನೆಯಲ್ಲಿ ನಿಶ್ಶಬ್ದ ವಾತಾವರಣ ಹರಡಿತ್ತು. ಇದೇನು ಯಾರೂ ಕಾಣುವುದಿಲ್ಲವೆಂದು ಭಾವಿಸಿ ತುಸು ನಿಂತು ದೃಷ್ಟಿ ಹರಿಸಿದ ಕೆಲವೇ ಕ್ಷಣಗಳಲ್ಲಿ ಮಹಡಿಯ ಮೇಲಿನಿಂದ ತೀಕ್ಷ್ಣ ನೋಟವನ್ನು ಹೊರ ಹೊಮ್ಮುತ್ತಾ, ಕಣ್ಣು ಮುಸಿಗಳಂತೆ ಕಂಗೊಳಿಸುವ ಪೂಜ್ಯ ಗೋವಿಂದ ಪೈಗಳು ಕೆಳಗಿಳಿದು ಬಂದು ಕೈಸನ್ನೆಯಿಂದ ಯಾರು ನೀನು? ಎಂಬಂತೆ ಬೆರಳೆತ್ತಿ ಪ್ರಶ್ನಿಸಿದರು.

ಅವರ ಬರವನ್ನೇ ಕಾದಿದ್ದ ನಾನು, ನನ್ನ ರಚನೆಯಾದ ಲಲಿತಭಜನ ಗೀತಾಂಜಲಿ—ಅಮರಗಾನ— ಪತ್ರೆದಾರಿ— ಯಕ್ಷಗಾನ ಮುಂತಾದ ಕೃತಿಗಳನ್ನು ಅವರ ಕೈಗಿತ್ತು ವಿನಯದಿಂದ ವಂದಿಸಿದೆ.

"ಹೋ! ನೀವೋ? ಕುಳಿತುಕೊಳ್ಳಿ ಕ್ಷೇಮವೇ? ಆಗಾಗ ಪತ್ರ ಬರೆಯುತಿದ್ದಿರಿ ಮುಖ ಪರಿಚಯವಿಲ್ಲ. ಇತ್ತೀಚೆಗೆ ಉದಯವಾಗಿರುವ ಬರಹಗಾರರು ತುಂಬಾ—" ಇಂಬಿ ಎಂದು ನಸುನಕ್ಕು ಅಲ್ಲೇ ಕುಳಿತರು.

ಆ ಮೇಲೆ ಒಳಗಿಂದ ಬಂದ ಮತ್ತೊರ್ವ ವೃದ್ಧರಿಗೆ ಬೆರಳಸನ್ನೆಯಿಂದ ತಿಳಿಸಿದ ಪ್ರಕಾರ, ಕಾಫಿ ತಿಂಡಿಗಳು ನನಗಾಗಿಯೇ ಬಂದುವು. ಅವನ್ನು ಆದರದಿಂದ ನಾನು ತೆಗೆದುಕೊಳ್ಳುವಾಗ, ನನ್ನ ರಚನೆಗಳೆಲ್ಲವನ್ನೂ ಸೂಕ್ಷ್ಮದೃಷ್ಟಿಯಿಂದ ಅವಲೋಕಿಸಿ ನನ್ನೆಡೆಗೆ ನೋಡುತ್ತಾ,

"ಇರಲಿ, ಚೆನ್ನಾಗಿ ಮಾಡಿದ್ದೀರಿ. ನೀವು ಉಜಿರೆಯ ಬಳಿಯಿರುವ ಶ್ರೀ ಸೂರ್ಯ ಸದಾಶಿವ ಕ್ಷೇತ್ರದ ಕುರಿತು ಬರೆದ ವಿಚಾರವೇನಾಯಿತು?" ಎಂದರು.

"ಅದಕ್ಕಾಗಿಯೇ ಬಂದವನಿದ್ದೇನೆ." "ಕನ್ನಡ ನಾಡಿನ ಇತಿಹಾಸ ಸಂಶೋಧಕ" ಎಂಬ ಬಿರುದನ್ನೇ ತಾವು ಗಳಿಸಿದ್ದೀರಿ. ಕನ್ನಡ ನಾಡೇ ತಮಗೆ ಗೌರವ ಸಲ್ಲಿಸುತ್ತದೆ. ತಮ್ಮ ಸಂಗ್ರಹದಲ್ಲಿ ಜಮಾಲಗಡ ಅರ್ಥಾತ್ ನರಸಿಂಹಗಡದ ರಾಜ್ಯಭಾರದ ಕಾಲದ ಆಡಳಿತೆಯ ಅಭಿವೃದ್ಧಿಯ ಸಂಕೇತಗಳನ್ನು ತಿಳಿದರೆ— ಆಕೃತಿಗೆ ಸ್ವಲ್ಪ ಆಧಾರ ಸಿಗಬಹುದು ಎಂದು ಭಾವಿಸಿ ಬಂದಿರುವೆ" ಎಂದೆ.

"ಸರಿ ಸರಿ—ನರಸಿಂಹವರ್ಮ—ಬಲ್ಲಾಳ ದುರ್ಗದ ರಾಜ—ಇವರ ರಾಜ್ಯಭಾರದ ಕಾಲದಲ್ಲಿ ಬಂಗಾಡಿಯ ಸುತ್ತಮುತ್ತಲೂ ತುಂಬಾ ಜನಸಂದಣಿಯಿದ್ದು, ಜನರು ಕೃಷಿ, ವಾಣಿಜ್ಯ, ಸಂಸ್ಕೃತಿಪೂರ್ಣರಾಗಿ ಶೋಭಿಸುತ್ತಿದ್ದಿರಬೇಕು. ಆಗ ಅಲ್ಲಲ್ಲಿ ಧಾರ್ಮಿಕ ಕ್ಷೇತ್ರಗಳ ಸ್ಥಾಪನೆಯಾಗಿರಬೇಕು. ಆ ಸೂರ್ಯ ಸದಾಶಿವ ಕ್ಷೇತ್ರವೂ ಆಗಿನ ಕಾಲದ ಕುರುಹುಗಳಲ್ಲಿ ಒಂದು ಎಂಬುದು ನನ್ನ ಊಹೆ. ಈ ಹಿಂದೆ ನಾನು ತಿಳಿಸಿದ ವಿವರಗಳಿಗಿಂತ ಹೆಚ್ಚಿಗೇನೂ ಇಲ್ಲ" ಎಂದರು.

"ಹಾಗಾದರೆ—ಹಾಗೆಯೇ ಮುಂದರಿಸಲೇ" ಎಂದೆ. ಆಗಬಹುದು ಎಂದು ತಲೆಯಾಡಿಸಿದರು.

ಆ ಮೇಲೆ ನಾನು ಹೊಸದಾಗಿ ತಯಾರಿಸಿದ ಇಂದ್ರಜಿತು ವಿಜಯ ವೆಂಬ ಯಕ್ಷಗಾನ ಪ್ರಸಂಗದ ಹಸ್ತಪ್ರತಿಯನ್ನು ಸ್ವಲ್ಪ ನೋಡಬೇಕೆಂದು ಕೇಳಿಕೊಂಡೆ.

ಕೆಲವು ಪದ್ಯಗಳನ್ನು ಓದಿಹೇಳಲು ಹೇಳಿದರು. ಪದ್ಯಗಳನ್ನು ಓದಿದಾಗ ಕೇಳಿ—"ಕವಿತೆಗಳು ಚೆನ್ನಾಗಿವೆ. ಆದರೆ ಒಂದು ವಿಷಯ ತಿಳಿಸುತ್ತೇನೆ. ಬೇಸರವಿದೆಯೋ?" ಎಂದರು.

"ಬೇಸರವಾಗುವ ವೃತ್ತಾಂತ ತಾವು ಹೇಳಲಿಕ್ಕಿಲ್ಲ. ವ್ಯಕ್ತಿಶಃ ಬೇಸರವಾಗುವ ಸಂಭವವಿದ್ದರೂ, ಸಾಮಾಜಿಕ ಸಾಹಿತ್ಯಕ್ಕೆ ಸಂಶೋಧನಾಗುವ ಧ್ಯೇಯದಿಂದಲೇ ತಾವು ಸಲಹೆ ನೀಡುವವರಿದ್ದೀರಿ. ನಾನು ಯಾವಾಗಲೂ ತಮಗೆ ವಿಧೇಯನು" ನಾನಂದೆ.

"ಹಾಗಾದರೆ" "ರಾಕ್ಷಸರು ವೀರರೇನೋ ಸರಿ. ಆ ವೀರತ್ವವು ಸ್ವಾರ್ಥಪರವೂ, ದೇವತಾ ವಿರೋಧವೂ, ಸಾಧುಗಳಿಗೆ ಸಹನಾತೀತವೂ, ವಿಶ್ವಧರ್ಮಕ್ಕೆ ಬಾಧಕವೂ ಆಗಿದ್ದು ಅನಗತ್ಯವಾಗಿದೆ. ಯಾವ ಪೌರುಷವು ವಿಶ್ವಜನಾಂಗಕ್ಕೆ ಸುಖ ಶಾಂತಿಯನ್ನು ಕೊಡಲು ಅಸಮರ್ಥವಾಗಿರುವುದೋ ಆ ಪೌರುಷವನ್ನು ಹೀನಾಯವೆಂದು ಕಡೆಗಣಿಸಬೇಕಾದುದು ಧಾರ್ಮಿಕವಾಗಿ ಅಗತ್ಯ. ಯಾವ ಪೌರುಷವು ಶಾಂತಿ, ಸುಖಗಳನ್ನೀಯುವುದೋ ಅದನ್ನೇ ಕವಿಗಳು ಆಯ್ದು ಪುರಸ್ಕರಿಸಿ ಪ್ರಚಾರ ಪಡಿಸಬೇಕು. ಆದುದರಿಂದಲೇ ರಾಕ್ಷಸೀಯ ಪೌರುಷ ಹೀನ, ದೇವಾಯ ಪೌರುಷ ಮಾನ್ಯ. ಭಗವಂತನ ದೃಷ್ಟಿಕೋನದಿಂದ ಸೃಷ್ಟಿಗಳೆಲ್ಲವೂ ವೈವಿಧ್ಯಪೂರ್ಣವಾಗಿದ್ದರೂ, ಲೌಕಿಕವಾಗಿ ನಾವು ಅದಕ್ಕೆ ಸ್ಥಾನಮಾನಗಳನ್ನು ಕೊಡುವಾಗ— ಸಾಮಾನ್ಯರೂ — ಅಸಾಮಾನ್ಯರೂ ಬಹುಕಾಲ ಆದರಿಸಿ—ಆಚರಿಸುವ ಉತ್ತಮ ಉದಾತ್ತ ಸಾಹಿತ್ಯವನ್ನೇ ನಿರ್ಮಿಸಲು ಜಾಗರೂಕರಾಗಬೇಕು" ಎಂದರು.

"ಹಾಗಾದರೆ— ಈ ಪ್ರಸಂಗದ ಬಗ್ಗೆ ನನಗೇನು ಅಭಿಪ್ರಾಯ ನೀಡಲಿರಿ.ವಿರಿ?" ಎಂದೆ—

"ತಾಮಸವನ್ನು ಹೊಗಳುವುದು—ಸಾರ್ವಜನಿಕ ಹಿತದೃಷ್ಟಿಯಿಂದ ತುಂಬಾ ಅಪಾಯ. ಜನಾಂಗದ ಅಭಿವೃದ್ಧಿಯ ಮುಖವನ್ನೇ ತಿರುಗಿಸಿದಂತಾಗುತ್ತದೆ. ಆದುದರಿಂದ ಕವಿಯಾದವನು ಮುಂದರಿಸುವುದು ಭೂಷಣವೆನಿಸಲಾರದು" ಎಂದರು.

"ಆ ವಿಷಯವನ್ನು ಅಲ್ಲಿಗೇ ಬಿಡುತ್ತೇನೆ" ಎಂದು ನಾನಂದೆ.

"ಹಾಗೆಯೇ ಮಾಡಿರಿ. ನನ್ನ ಅಭಿಪ್ರಾಯ ಯಾವಾಗಲೂ ಹಾಗೆ. ನಾನು ಸ್ವಲ್ಪ ಕಟುವಾದಿ. ಇದ್ದ ಹಾಗೆ ಹೇಳುವವನು ನಾನು. ಕೆಲವರಿಗೆ ಅದು ಆಗುವುದಿಲ್ಲ. ಆಗಲಿ—ಬಿಡಲಿ—ನಾನಂತೂ ಸ್ಪಷ್ಟವಾದಿ" ಎಂದರು.

ನಾನು ಸುಮ್ಮನಿದ್ದೆ.

"ಈಗ ನೋಡಿ. ಕಾಸರಗೋಡು ಕನ್ನಡ ಮಾತಾಡುವ ಬಹು ಜನಭಾಗ ಪ್ರದೇಶ. ಅದನ್ನು ಕೇರಳಕ್ಕೆ ಸೇರಿಸಿರುದು ಯಾವ ನ್ಯಾಯ? ಕನ್ನಡ ದೇವಿಯ ಪ್ರಧಾನಾಂಗವನ್ನೇ ಕತ್ತುಬಿಟ್ಟು ಅನ್ಯಾಯ ಮಾಡಿದ್ದಾರೆ. ಈ ಕುರಿತು ನಾನು ಸ್ಪಷ್ಟವಾಗಿ ಹೇಳಿಯೇ ಬಿಟ್ಟದ್ದೇನೆ."

"ಹಾಗಾದರೆ ಬೇಗನೇ ಕೇರಳದಿಂದ ಕಾಸರಗೋಡು ಬಿಡುಗಡೆಯಾಗಬಹುದೇ?"

"ಆಗಲೇ ಬೇಕು. ಆಗದಿರಲು ಸಾಧ್ಯವೇ ಇಲ್ಲ. ಒಂದು ತಾಯಿಯ ಮಕ್ಕಳು—ಬೇರೆಯವರ ಕುಟಿಲತೆಯಿಂದ ಸ್ವಲ್ಪ ಕಾಲ ಅಗಲಿರಬಹುದು— ಒಂದು ಹೊಳೆಯ ನೀರು ಬೇರೆ ಕ್ಷಣಿಕ ಆಘಾತಗಳಿಂದ ಇಬ್ಭಾಗವಾಗಬಹುದು. ಆದರೆ, ಮೂಲ ಧರ್ಮಕ್ಕನುಸಾರವಾಗಿ ಒಂದಾಗಲೇ ಬೇಕು. ಅದು ಪ್ರಕೃತಿಯ ಪ್ರಧಾನ ಗುಣ. ಯಾರೂ ಈ ಹಕ್ಕನ್ನು ತಡೆಯಲಾರರು." ಎಂದರು.

"ಹೊತ್ತು ಮಧ್ಯಾಹ್ನವಾಗುತ್ತಾ ಬಂತು. ನನಗೆ ಮಂಗಳೂರಲ್ಲಿ ಕೆಲಸವಿದೆ. ನನಗೆ ಅಪ್ಪಣೆ ದಯಪಾಲಿಸುವಿರಾ?" ಎಂದು ಕೇಳಿದ್ದಕ್ಕೆ,

"ಆಗಲಿ - ಹೋಗಿ ಬನ್ನಿರಿ. ನಿಮಗೆ ಶುಭವಾಗಲಿ" ಎಂದರು.

ಅವರಿಗೆ ಪುನಃ ವಂದಿಸಿ, ಹರ್ಷಭರಿತನಾಗಿ ಆ ರಸಋಷಿಗಳ ಅದ್ಭುತ ಪಾಂಡಿತ್ಯಕ್ಕೆ ಬೆರಗುಗೊಂಡು ಅದನ್ನೇ ಮೆಲುಕು ಹಾಕುತ್ತಾ, ರೈಲು ನಿಲ್ದಾಣಕ್ಕೆ ಧಾವಿಸಿದೆ. ಮಂಗಳೂರನ್ನು ಸೇರಿದುದೇ ತಿಳಿಯಲಿಲ್ಲ.

ಇಂದಿಗೂ ಅವರ ಮಾತುಗಳು ನನ್ನ ಹೃದಯದಲ್ಲಿ ಮಾರ್ದನಿಗೊಡುತ್ತಿವೆ.

ಅಂಥ ಪ್ರಗಾಢ ಪಂಡಿತರನ್ನು ಪಡೆದ ನಮ್ಮ ಕನ್ನಡ ನಾಡು ಧನ್ಯ. ಅವರ ಆತ್ಮವು ಅನುರಾಗಲಿ— ಅವರ ಅನುರಾಗಣೆಯು ನಮಗೆ ಕೈದೀವಿಗೆಯಾಗಿ ಮುನ್ನಡೆಸಿ ಭಾಷಾ ಸೇವಕರನ್ನಾಗಿ ಮಾಡಲಿ ಇದೇ ನನ್ನ ಪ್ರಾರ್ಥನೆ.

ಅರಣ್ಯರೋದನವಲ್ಲ, ವಿದ್ಯಾರಣ್ಯ

(೫ನೇ ಪುಟದಿಂದ)

ಸುಲಭವಾಗಿ ಪಾಕಿಸ್ತಾನಕ್ಕೆ ಸೇರಿಸಿಕೊಳ್ಳಲು ಸಾಧ್ಯವೆಂಬುದು ಆಯೂಬಖಾನನಿಗೆ ಗೊತ್ತು. ಅವರು ಶ್ರೀ ಹಟ ಅಥವಾ ಸಿಲ್ಹೆಟ್ ಪ್ರದೇಶವನ್ನು ಆಸೇ ನಾಮಾರ್ಜನೆಯಿಂದ ಗಟ್ಟಿಸಿಕೊಂಡಿದ್ದಾರೆ. ಆದುದರಿಂದಲೇ ಅವರು ಭಾರತ ಸರಕಾರಕ್ಕೆ ಸಕಾಲಕ್ಕೆ ಎಚ್ಚರಿಕೆಯ ನ್ನಿತ್ತಿದ್ದರು. ಗಡಿ ಪ್ರದೇಶದ ಹತ್ತು ಮೈಲು ದೂರದವರೆಗಿರುವ ಮಹಮ್ಮದೀಯರನ್ನು ಅಲ್ಲಿಂದ ಕರೆದು ಒಳಪ್ರದೇಶದಲ್ಲಿ ಅವರಿಗೆ ವ್ಯವಸ್ಥೆ ಮಾಡಿಕೊಡಬೇಕೆಂದೂ ಮತ್ತು ಭಾರತೀಯ ಪ್ರಜೆಗಳಲ್ಲದವರನ್ನು ಹಿಂದಕ್ಕಟ್ಟಿಬಿಡಬೇಕೆಂಬ ಸಲಹೆಗೆ ಕಾಂಗ್ರೆಸ್ಸ್ ಕಿವಿಗೊಡಲಿಲ್ಲ. ಇನ್ನೇನು, ಪೂರ್ಣ ಅಸ್ಸಾಂ ಕಮ್ಯೂನಿಸ್ಟ್ ಚೈನಿ ಕಪಿಮುಷ್ಟಿಗೆ ಸಿಕ್ಕಿಕೊಂಡಿತೆಂದು ಭಾವಿಸುವಷ್ಟರ ವರೆಗೂ ನಮ್ಮ ದುಸ್ಥಿತಿ ದಯನೀಯವಾಯಿತು. ಹಿರಿಯರ ಪುಣ್ಯ ಪ್ರಭಾವದಿಂದೆಂಬಂತೆ ಅಷ್ಟರವರೆಗೆ ನಮ್ಮ ಪತನ ನಡೆಯಲಿಲ್ಲ. ನಮ್ಮ ಧೀರ ಸೈನಿಕರು ಕಾದಾಡಿ ಭಾರತದ ಗೌರವ ಧ್ವಜವನ್ನು ಎತ್ತಿ ಹಿಡಿದರು. ಆದಾದ ಮೇಲಾದರೂ ಕಾಂಗ್ರೆಸ್ ಸರಕಾರ ಹಾಗೂ ಇತರ ರಾಜಕೀಯ ಪಕ್ಷಗಳು ಎಚ್ಚೆತ್ತೇಳ ಬೇಕಾಗಿತ್ತು. ಸರ್ವ ಶ್ರೀ ರಾಮ ಸುಭಾನ ಸಿಂಗ್, ಹನುಮಂತಯ್ಯ ಹಾಗೂ ಮಹಾವೀರ ತ್ಯಾಗಿಯವರು ತಮ್ಮ ಕಾಂಗ್ರೆಸ್ ಕುಂಭಕರ್ಣನನ್ನು ಎಬ್ಬಿಸಲು ಪ್ರಯತ್ನಿಸಿದರು. ಈಗ ಅವರು ಅಷ್ಟು ಜೋರವಾಗಿರುವುದಿಲ್ಲ. ಸುಬಗ ಹಾಗೂ ಮಹಾ ವೀರರುಗಳ ಅವಸ್ಥೆಯೇ ಹೀಗಾದ ಮೇಲೆ ಇತರರ ಕಳವಳದ ಕಥೆ ಹೇಗಿರಬಹುದು? ಸ್ವಲ್ಪ ಯೋಚಿಸಿಕೊಳ್ಳೋಣ.

ಶಾಂತಿ ದಳದ ಕಾರ್ಯಕರ್ತರಿಗೆ ಗೌರವ

ಮಣಿಪಾಲ, ಜೂನ್ ೧೬—ಇತ್ತೀಚೆಗೆ ಬಂದಿರುವ ಅಮೇರಿಕದ ಶಾಂತಿ ದಳದ ಕಾರ್ಯಕರ್ತರಾದ ಕುಮಾರಿ ನಾನ್ಸಿ ಮತ್ತು ಶ್ರೀ ವಾಲ್ಟರರವರನ್ನು ನಿನ್ನೆ ಇಲ್ಲಿ ಸೇರಿದ್ದ ರೋಟರಿ ಕ್ಲಬ್ ಸಭೆಯಲ್ಲಿ ಗೌರವಿಸಲಾಯಿತು. ಶ್ರೀ ರಮೇಶ ಪೈಯವರು ಅವರಿಬ್ಬರನ್ನೂ ಸಭೆಗೆ ಪರಿಚಯ ಮಾಡಿಕೊಡುತ್ತಾ ಕುಮಾರಿ ನಾನ್ಸಿಯವರು ಸ್ಥಳೀಯ ಪ್ರಾಥಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುವುದಕ್ಕಾಗಿಯೂ ಶ್ರೀ ವಾಲ್ಟರವರು ಕೋಳಿ ಸಾಕಣೆ ಕೇಂದ್ರವನ್ನು ನಡೆಸುವುದರಲ್ಲಿ ಸಹಾಯ ಮಾಡುವುದಕ್ಕಾಗಿಯೂ ಆಗಮಿಸಿದ್ದಾರೆಂದರು.

ಪೂನಾದ ಯುದ್ಧೋಪಕರಣ ಅಧ್ಯಯನಾ ಸಂಸ್ಥೆಯ ಸೀನಿಯರ್ ವೈಜ್ಞಾನಿಕ ಅಧಿಕಾರಿ ಶ್ರೀ ವಿ. ಎಸ್. ಹೆಗ್ಡೆಯವರು ಕ್ಷಿಪಣಿಗಳ ಬಗ್ಗೆ ಭಾಷಣ ಮಾಡಿದರು.

ಒಂದು ವರ್ಷ ಶಿಕ್ಷಕರ ಕಾಲೇಜಿನಲ್ಲಿ ತರಬೇತಿ ಪಡೆಯುವುದಕ್ಕಾಗಿ ಅಸ್ಟ್ರೇಲಿಯಾದ ಆರೇಂಜಾ ರೋಟರಿ ಕ್ಲಬ್ ಕೊಟ್ಟಿರುವ ವಿದ್ಯಾರ್ಥಿ ವೇತನಕ್ಕಾಗಿ ಉಡುಪಿಯ ಶವರ್ಮರಾದ ಶ್ರೀ ಸುರೇಂದ್ರರವರನ್ನು ಆರಿಸಲಾಗಿದೆ ಎಂದು ಕಾರ್ಯದರ್ಶಿ ಶ್ರೀ ಎನ್. ಎಸ್. ಪ್ರಭುರವರು ಪ್ರಕಟಿಸಿದರು. ಕ್ಲಬ್ಬಿನ ಅಧ್ಯಕ್ಷ ಡಾ। ಎ. ಕೃಷ್ಣರಾವ್‌ರವರು ಅಧ್ಯಕ್ಷತೆ ವಹಿಸಿದ್ದರು.

ಹೊಟ್ಟೆ ಸಣ್ಣದಾಗಲಿ

(ಆರನೇ ಪುಟದಿಂದ)

ಅಲ್ಲ ಮತ್ತೆ. ಹೌದು, ಒಬ್ಬಿಬ್ಬರು ಗೋಳಾಡುವುದಾದರೆ ಮಾತ್ರ ನಾಚಿಕೆಯ ವಿಷಯ. ಗೋಳಾಡುವುದರಲ್ಲೂ ಐಕ್ಯಮತ್ಯವಿದ್ದರೆ ತೀರಿತು. ಅವರೊಂದಿಗೆ ಅನೇಕರು ಸೇರಿ ಗೋಳಾಡುತ್ತಿದ್ದರೆ, ನಾಚಿಗೆಯೆಲ್ಲಾ ಮಾಯವಾಗಿ ಅದೊಂದು ಗೌರವ ಪ್ರಶ್ನೆಯಾಗಿ ಮಹಾ ಮೇಧಾವಿಗಳು ತಲೆ ಕೆರೆದುಕೊಳ್ಳುವಂತಾಗಿಬಿಡುತ್ತದೆ. ಅದೇ ೧೯೬೪ರ ಅಂತ್ಯಭಾಗದಲ್ಲಿ ದೇಶದಲ್ಲೆಲ್ಲಾ ಆಹಾರ ಸಮಸ್ಯೆಯು ಹಾಹಾಕಾರವು ದಿಕ್ಕು ಮುಟ್ಟುವಂತೆ ಕೇಳಿಸಿದಾಗ, ಹಸಿವೆಯು ಗೊಡವೆಯನ್ನು ಬಿಟ್ಟು ಅಭಿವೃದ್ಧಿಗೇರಲು ಜನತೆ ಇನ್ನೂ ಅಭ್ಯಾಸಿತರಾಗಿಲ್ಲ, ಸಿದ್ಧರಾಗಿಲ್ಲವೆಂದೇ ಹೇಳಬೇಕಾಯಿತು. ಉಪಾಯವಿಲ್ಲ.

○ ○ ○

ಮೊದಲಿನ ಕಾಲದಲ್ಲಿ ಅಡಿಗೆ ಎಂಬುದೊಂದು ಬಹು ಮುಖ್ಯವಾದ ಹೊತ್ತು ತಿನ್ನುವ ಕೆಲಸವಾಗಿತ್ತು. ಆಗ ಹೋಟೆಲುಗಳು ಕಡಮೆ. ಈಗ ಎಲ್ಲಿ ನೋಡಿದರೂ ಹೋಟೇಲುಗಳಾಗಿವೆ. ಅದೇ ಹೇಳಿದೆನಲ್ಲ ಸಂಘ, ಸಂಸ್ಥೆ ಅಂತ. ಊಟದ—ಅಥವಾ ನಮ್ಮ ಹೊಟ್ಟೆಯ ಹೊಣೆಯನ್ನು ಹೊತ್ತವರ ಸಂಘವೇ ಹೋಟೆಲುಗಳು. ಟಿಫಿನಿಗೂ ಹೋಟೆಲು, ಊಟಕ್ಕೂ ಹೋಟೆಲು. ಹೋಟೆಲಿನಲ್ಲಿ ಹಾಕಿದ್ದು ತಿಂದು ಬಂದರೆ ಹೊಟ್ಟೆ ತುಂಬಿದ ತೃಪ್ತಿ. ಹೊಟ್ಟೆಯೂ ಚಿರುಟಿ ಮುದುಡಿ ಚಿಕ್ಕದಾಗುತ್ತಾ ಬಂತಲ್ಲ. ಮೊದಲಿನ ಹಾಗೆ ಬೊಜ್ಜದ ಊಟ ಮಾಡುವ ಆರೋಗ್ಯದ ಹೊಟ್ಟೆಯ ಬ್ರಾಹ್ಮಣರು ಈಗಿದ್ದಾರೆಯೆ? ಕೆಲವರಂತೂ ಮನೆಯ ಅಡಿಗೇ ತಿಂಡಿಗಳನ್ನು ಹೋಟೆಲಿನಷ್ಟು ರುಚಿಯಾಗಿಲ್ಲವೆಂದು ಹಳಿಯುವುದನ್ನು ತುಂಬಾ ಕೇಳಿದ್ದೇನೆ.

ಹೀಗೆ ಊಟ ತಿಂಡಿಗಳಲ್ಲಿ ಸ್ವಂತ ಪ್ರಯತ್ನ ಕುಂಠಿಸುತ್ತ ಹೋಯ್ತು. ದುಡ್ಡಿನ ಮೇಲೆಯೇ ಜನರ ಜೀವನವಾಯ್ತು. ಎಲ್ಲಿ ನೋಡಿದರೂ ದುಡ್ಡು—ಧನಲಕ್ಷ್ಮಿಯ ಪ್ರಭಾವ. ಹಾಗಾದರೆ ಒಂದು ಕೈ ನೋಡಿ ಬಿಡುವಾ ಅಂತಲೇ ಧಾನ್ಯಲಕ್ಷ್ಮಿಯೂ ಸ್ಪರ್ಧೆಗಿಳಿದು ಬಿಟ್ಟಳು. ಬಿಟ್ಟಾಳೇ ಮತ್ತೆ. ೧೯೬೪ನೇ ವರ್ಷದ ಉತ್ತರಾರ್ಧದ ಒಂದಾನೊಂದು ದಿನ ಇದ್ದಕ್ಕಿದ್ದ ಹಾಗೆ ಮಾಯವಾಗಿ ಬಿಟ್ಟಳು ಧಾನ್ಯ ಲಕ್ಷ್ಮಿ ಅನ್ನಪೂರ್ಣೆ.

ಜನರೆಲ್ಲ ಪರದಾಡಿದರು. ಊರಿಲ್ಲಾ ಅಡಿಮೇಲಾಯಿತು. ರಾತ್ರೀ ಹಗಲೂ ಕ್ಯೂಗಳ ಉದ್ದುದ್ದದ ಸಾಲು. ಪತ್ರಿಕಾ ಫೋಟೋಗ್ರಾಫರರಿಗೆ ಅಪೂರ್ವ ದೃಶ್ಯಾನ್ನಿ. ಎಲ್ಲೋ ಏನೋ ಕೊಡುತ್ತಾರಂತೆ ಅಂದರೆ, ಅಕ್ಕಿ ಕೊಡುತ್ತಾರಂತೆ ಎಂಬರ್ಥ ಬರುವಷ್ಟು ಭ್ರಮೆ ಹರಡಿತು. ಎಲ್ಲೆಲ್ಲಿಯೂ ಉಪವಾಸ ಭೂತದ ಭಯ ಹರಡಿತು. ಊರಾಳುವವರು ಭಾರೀ ಭಾರೀ ಹಾರಾಟ ನಡೆಸಿದರು. ಕಾರಣ ಹುಡುಕಿದರು. ವ್ಯಾಪಾರಿಗಳೇ ಕಾರಣವೆಂದರು ಕೆಲವರು; ಒಕ್ಕಲಿಗ ಅಂದರು ಕೆಲವರು; ಅಂತಾರಾಷ್ಟ್ರೀಯ ವ್ಯವಹಾರಾ ಅಂತ ರಾಷ್ಟ್ರೀಯ ವ್ಯವಹಾರಾ ಅಂತ ಇನ್ನೂ ಒಳಗೊಳಗೆ ಆಳವಾಗಿ ನೋಡಿದ ಬುದ್ಧಿವಂತ ಮುತ್ಸದ್ದಿಗಳು ಹೇಳಿದರು. ಆದರಲ್ಲಿ ಯಾವುದೋ ಒಂದು ಖಂಡಿತ ನಿಜಾ ಅಂತ ನನ್ನ ಮತ.

ಅಂತೂ ಅನ್ನ ಲಕ್ಷ್ಮಿ ಮಾಯವಾಗುತ್ತಲೇ ಅವಳ ಪ್ರಭಾವ ಸ್ಪಷ್ಟವಾದುದು ಇನ್ನಷ್ಟು ನಿಜ

ಜನತೆ ಸ್ಪುಟ್ನಿಕ್ ತರಹ ಮೇಲೆ ಮೇಲೆ ಅಭಿವೃದ್ಧಿಗೇರಿದರೂ ಕೂಡ ಮೂಲಾಧಾರವಾದ ಅನ್ನದ ವಿಷಯದಲ್ಲಿ ಇನ್ನೂ ಕೆಳಗೇ ಇರುವರೆಂದಾಯಿತು, ಅನ್ನ ಬೇಕು, ಆಹಾರಬೇಕು; ದುಡ್ಡಲ್ಲ. ಮನುಷ್ಯರು ಅಭಿವೃದ್ಧಿಯ ಮಾರ್ಗದಲ್ಲಿ ಎಷ್ಟೇ ಮುಂದುವರಿದಿದ್ದರೂ, ಮಾರ್ಕೆಟ್ಟಿದ್ದರೂ ಅನ್ನ ಬಿಟ್ಟಿರಲು ಸಾಧ್ಯವಿಲ್ಲ. ಸರಿಯಾದ ಊಟ ಬೇಡದಿದ್ದರೂ, ಊಟವಿಲ್ಲವೆಂಬ ಭಯವನ್ನು ಸಹಿಸಲಾರರು. ಮೂಲಾಧಾರವ ತತ್ವದಲ್ಲಿಯೇ ಅಡಗಿರುವಂಥಾದ್ದು ಅನ್ನ. ಉಳಿದೆಲ್ಲ ಅಭಿವೃದ್ಧಿಗಳ ಮಟ್ಟಕ್ಕೆ, ಆಹಾರದ ಅಭಿವೃದ್ಧಿಯೂ ಏರಬೇಕಾದರೆ, ಆಹಾರದ ವಸ್ತುಗಳು ಹೆಚ್ಚುವುದಕ್ಕಿಂತ, ಹೊಟ್ಟೆಯ ನಾಜೂಕುತನವೇ ಲೇಸು. ಹೊಟ್ಟೆಯನ್ನು ಸಣ್ಣ ಸಣ್ಣದಾಗಿಸಿಕೊಳ್ಳಲು 'ರೇಷನ್' ಒಳ್ಳೆಯ ಉಪಾಯವಾಗಿದೆ ರೇಷನ್ ಕೋಟಾ. ಅಕ್ಕಿ ಸಿಕ್ಕಲೇ ಬಾರದು. ಹೀಗಾದರೆ ಮುಂದೆ ಯಾವುದೋ ಒಂದು ಆಹಾರದ ಗುಳಿಗೆ ನುಂಗಿ ಹೊಟ್ಟೆ ತುಂಬಿಸಿಕೊಳ್ಳಬಹುದು. ಹೊಟ್ಟೆಯ ಚಿಂತೆಯೇ ಇಲ್ಲದೆ ದೇಶವನ್ನು ಅಭಿವೃದ್ಧಿಗೇರಿಸಬಹುದು. ಎಲ್ಲಿ ಬೇಕಾದರೂ ಹಾರಾಡಬಹುದು ಹಗುರಾಗಿ.

— — —

— ಜಲಧಾರೆ —

೧

ನೊರೆ ಗೆಜ್ಜೆಗಳ ಕಾಲ ನೀರೆ
ಬಂದಿಳಿದಳದೊ!
ಸರಸರನೆ ಹೆಜ್ಜೆಯಿಟ್ಟು,
ಝುಣ ಝುಣತ್ಕಾರದಲಿ, ನಾದ ರಸ
ಧಾರೆಯಲಿ,
ಸುರಸ ಸಂಗೀತ ಹೊತ್ತು.

೨

ನಿರಿಗೆಗಳ ಚಾಂಚಲ್ಯ ಕ್ಷಣದಕ್ಷ,
ಕಣದಲ್ಲಿ
ಬದಲು ಬದಲಾಗುತಿರಲು,
ಅರಸಿಕನು ಮರವಟ್ಟು, ಮನನೆಟ್ಟು
ನೋಡ ಬೇ—
ಕವಳೊಮ್ಮೆ ನಡೆದು ಬರಲು.

೩

ಮೃದು ಮಧುರ ಸೌಂದರ್ಯ
ಮನಮೆಚ್ಚಿ ಕಾಡಿತ್ತು,
ಅಲೆಯಲೆ ನಗೆಯು ಸುಳಿಗೆ.
ಮುದದಿ ತನು ವಿಶ್ರಾಂತ ಮಾಗಿ
ನಡೆತಂದಿತ್ತು;
ನಿಮಿರಿತಾ ತಂಪು ಕಚಗುಳಿಗೆ!

೪

ನವಿರಾದ ಸ್ಪರ್ಶದಲಿ ಸಗ್ಗ
ಸೊಗವಡಗಿತ್ತು;
ಧರೆಗಿಳಿದ ಅವ್ಯಾಕ ಧಾರೆ.
ಭಾವದುದ್ರೇಕದಲಿ ನೋಟದೊಳ್
ಕಣ್ಣಿಡಲು
ಕಣ್ಮಣಿಯು ತುಂಬ ಮೋರೆ!

೫

ಮಂದ ಗಮನದ ನೀರೆ, ನಲಿದು
ಓಡೋಡುತಿರೆ
ಮನದಲ್ಲಿ ಬಣ್ಣ ಚಿತ್ರ!
ಬಳುಕಿ ಬಾಗುವ ನಡುವು, ಮತ್ತೆ
ಸಿಡುಕಿನ ಸೆಳವು,
ಏನಿದೀ ಪ್ರಕೃತಿ ವೈಚಿತ್ರ್ಯ?

೬

ತಿಳಿನೀಲ ರಾಶಿಯಲಿ ಪಳ್ಳಗೊಳ್ಳಲು,
ಅಲ್ಲಿ
ನಾ ಕಾಣೆನವಳ ಬೇರೆ,
ಗಳಿಗೆ ಗಳಿಗೆಗೆ ನವಿಗೆ, ಬೆಳ್ನೊರೆಯು
ಜರಿಯುತಾಗೆ.
ನಿಲ್ಲೆ! ನೀರೆ "ಜಲಧಾರೆ"!

— ಯಸ್. ಕೃಷ್ಣಮಾಚಾರಿ,
ಮಂಗಳೂರು.

ಅಮೃತ ಬಿಂದು

ಅಧರ್ಮದ ಕೆಲಸವನ್ನು ನಾನು ಸಹಿಸಲಾರೆ. ನ್ಯಾಯ ಬದ್ಧ ಕೆಲಸವಾದರೆ ಧೈರ್ಯವಾಗಿ ಮಾಡಿ ಮುಗಿಸು. ಅನ್ಯಾಯವಾದ್ದಾದರೆ ಅದರ ಗೋಜಿಗೆ ಹೋಗದಿರು.

—ಗಿಲ್‌ಪಿನ್

○ ○ ○

ಪಿಶಾಚಿಗಳಿವೆಯೆಂದ ಕೆಲವರು ನಂಬುತ್ತಾರೆ. ಪಿಶಾಚಿಗಳಲ್ಲಿ ಯೂ ಇಲ್ಲದಿರಲಿ ಆಪನಂಬಿಕೆ ಎಂಬ ಪಿಶಾಚಿಗೆ ಮಿಗಿಲಾದ್ದು ಬೇರೊಂದಿಲ್ಲ.

—ವ್ರೈಡ್

○ ○ ○

ದೃಢ ನಿರ್ಧಾರ ಮತ್ತು ಕರ್ತವ್ಯನಿಷ್ಠೆ ಇಲ್ಲದವರ ಆತ್ಮವು ಸದ್ಗುಣಗಳ ಸ್ಮಶಾನವಾಗುಳಿಯುವುದು.

—ಅನಾಮಿಕ

○ ○ ○

ಯೋಗ್ಯ ಮತ್ತು ಪರಿಣಾಮಕಾರಕ ಜೀವನ ಸಾಧನೆಯನ್ನು ಗಣಿಸಬೇಕಲ್ಲದೆ ಬದುಕಿದ ವರ್ಷಗಳನ್ನಲ್ಲ.

—ಶೆರಿಡನ್

○ ○ ○

• ಸೋಲಿನ ಶಾಲೆಯಲ್ಲಿ ಸತ್ಯದ ಪಾಠ ಕಲಿಸುವು ಪಡೆಯುವುದು.

—ಬೀಚರ್.

○ ○ ○

ನಯ ವರ್ತನೆ ಮತ್ತು ನಾಚಿಕೆಯ ಕಲ್ಪದೆ ಕಳೆದು ಕೊಂಡ ಯುವತಿಯು ಕಾಪುರುಷನ ಕೈ ಗೊಂಬೆಯಾಗುತ್ತಾಳೆ.

— ಮಿಸೆಸ್ ಸ್ಟೋವ್

○ ○ ○

ನ್ಯಾಯಬದ್ಧ ಸಂಪಾದನ, ಕ್ರಮಬದ್ಧ ನಿರ್ವಹಣೆ, ಸಂತೋಷದ ವಿತರಣೆ, ಆತ್ಮತೃಪ್ತಿಯ ನೆಲೆಮನೆ ಇವೇ ಬುದ್ಧಿವಂತನ ಗುಣಗಳು.

—ಅನಾಮಿಕ.

ಮನುಷ್ಯನ ಆಸೆಯು ಮಿತಿ ಇಲ್ಲದ್ದಾದರೆ ಅತನ ಕೇಡೂ ಅಂತ್ಯವಿಲ್ಲದುದಾಗುವುದು. ಆಸೆಯು ಮನುಷ್ಯನಿಗೆ ಶಾಂತಿ ಇಲ್ಲ; ನೀತಿಯು ಮನುಷ್ಯನಿಗೆ ಭ್ರಾಂತಿ ಇಲ್ಲ.

—ಬಾಲ್ಗಿಲ್

○ ○ ○

ನಿರಾಶೆಯೆಂಬುದು ನರಕದ ಹೆದ್ದಾರಿ. ಆನಂದವೆಂಬುದು ಸ್ವರ್ಗದ ಹೈವಾರಿ.

—ಡೊನ್ನೆ.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

0-30 ಪೈಸೆ ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.

ರಖಂ ಪ್ರತಿಗಳಿಗೆ ವಿಚಾರಿಸಿರಿ :-

ನವಯುಗ ಪ್ರೆಸ್, ಉಡುಪಿ

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

READ &
ADVERTISE IN
NAVAYUGA WEEKLY

ಇನ್ನೊಂದು

ಗೀತಾ - ದ್ವಿತೀಯ ಅಧ್ಯಾಯ

(ಐದನೇ ಪುಟದಿಂದ)

ನೀನು ಅವಿನಾಶಿ ಎಂದು ಒಪ್ಪದಿದ್ದರೂ, ಅದು ಸಾಯುವುದು, ಹುಟ್ಟುವುದು ಎಂದು ತಿಳಿದರೂ, ಎಂದಾದರೂ ಸಾಯಲೇ ಬೇಕಾಗಿರುವುದರಿಂದ ಸಾವು ಈಗಲೇ ಬರುವುದು ಎಂದು ನೀನು ಭಯಪಡಬೇಕೆಂದಿಲ್ಲ. ಏಕೆಂದರೆ ಸಾವು ತಪ್ಪದು ಎಂದು ನೀನು ತಿಳಿದಿರುವಿ ಆದರಿಂದ ನೀನು ಯುದ್ಧ ಮಾಡಲೇ ಬೇಕು. ವ್ಯಥೆ ಪಡಲು ಏನೂ ಕಾರಣವಿಲ್ಲ.

ಜಾತಸ್ಯ ಹಿ ಧ್ರುವೋ ಮೃತ್ಯುಃ ।
ಧ್ರುವಂ ಜನ್ಮ ಮೃತಸ್ಯ ಚ ।
ತಸ್ಮಾದ ಪರಿಹಾರ್ಯೇಽರ್ಥೇ|
ನ ತ್ವಂ ಶೋಚಿತು ಮರ್ಹಸಿ || ೨೭ ||

ಹುಟ್ಟಿದವನಿಗೆ ಸಾವು ನಿಶ್ಚಯ. ಹಾಗೆಯೇ ಸತ್ತವನು ಪುನಃ ಹುಟ್ಟುವುದು ಖಂಡಿತ. ಅದ್ದರಿಂದ ಆಗಲೇ ಬೇಕಾದುದರ ಮೇಲೆ ನೀನು ಶೋಕಿಸಬೇಡ.

ಇಲ್ಲಿ ಶ್ರೀಕೃಷ್ಣನು ಪ್ರಾಪಂಚಿಕರು ಹೇಳುವ ಮಾತುಗಳನ್ನೇ ಹೇಳುವನು. ಪ್ರಾಪಂಚಿಕರೂ, ಹುಟ್ಟು ಸಾವು ಇದೆ ಎಂದು ಒಪ್ಪುವರು. ಹೀಗೆ ಜೀವನದ ಒಂದು ನಿಯಮವೆನಿಸಿದ ಹುಟ್ಟು ಸಾವಿಗಾಗಿ ವಿವೇಕಿಯು ಅಳಬಾರದು.

ಅವ್ಯಕ್ತಾದೀನಿ ಭೂತಾನಿ ।
ವ್ಯಕ್ತಮಧ್ಯಾನಿ ಭಾರತ ।
ಅವ್ಯಕ್ತ ನಿಧನಾನ್ಯೇವ ।
ತತ್ರ ಕಾ ಪರಿದೇವನಾ || ೨೮ ||

ಜೀವಿಗಳು ಮೊದಲು ಅವ್ಯಕ್ತ ಅವಸ್ಥೆಯಲ್ಲಿ ಇರುವರು. ಕೆಲವು ಕಾಲ ಜನ್ಮವೆತ್ತಿ ವ್ಯಕ್ತರಾಗಿದ್ದು ಸತ್ತೊಡನೆ ಪುನಃ ಅವ್ಯಕ್ತ ಅವಸ್ಥೆ ಪಡೆಯುವರು; ಅದರಿಂದ ಇದರಲ್ಲಿ ದುಃಖಪಡಲೇನಿದೆ?

ಇಲ್ಲಿಂದ ಶ್ರೀಕೃಷ್ಣನು ಸಾಮಾನ್ಯ ಮಾನವರು ಆಡುವ ಮಾತುಗಳನ್ನೇ ತನ್ನ ವಾದವನ್ನು ಸಮರ್ಥಿಸಲು ಉಪಯೋಗಿಸುವನು. ಮಗು ಹುಟ್ಟುವ ಮೊದಲು ಅದು ಅವ್ಯಕ್ತ ಅವಸ್ಥೆಯಲ್ಲಿ ಇದ್ದು, ಹುಟ್ಟಿದ ಬಳಿಕ ಅದು ಕೆಲವು ಕಾಲ ವ್ಯಕ್ತವಾಗಿದ್ದು, ಬೆಳೆದು, ಜೀವನ ಸಾಗಿಸಿ, ವೃದ್ಧಾಪ್ಯವಾದಾಗ ತೀರಿದೊಡನೆ, ಅದರ ಶರೀರವು, ಪುನಃ ಅವ್ಯಕ್ತ ಅವಸ್ಥೆಯನ್ನು ತಲುಪುವುದು ಹಾಗೆ ಬಾಹ್ಯ ಪ್ರಪಂಚದ ವಸ್ತುಗಳು ಕಾರ್ಯದಿಂದ ಪ್ರೇರಿತವಾದ ಕಾರಣವಾಗಿದೆ. ಕಾರಣವು ವ್ಯಕ್ತವಾಗಿರುವಾಗ ಕಾರ್ಯವು ಅವ್ಯಕ್ತ. ಹಾಗೆ ಈಗ ವ್ಯಕ್ತವಾಗಿದ್ದ ಜಗತ್ತು ಹಿಂದೆ, ಅದರ ಕಾರ್ಯರೂಪದಲ್ಲಿ ಅವ್ಯಕ್ತವಾಗಿತ್ತು. ಕೆಲವು ಕಾಲ ವ್ಯಕ್ತವಾದ್ದು ಅದು ಪುನಃ ಅವ್ಯಕ್ತ ಅವಸ್ಥೆಯನ್ನು ತಲುಪುವುದು.

ಹಾಗಿದ್ದರೂ, ಈ ವ್ಯಕ್ತ, ಅವ್ಯಕ್ತ ಅವಸ್ಥೆಗಳು ನಡೆಯುವ ಅನಂತ ಸತ್ಯ, ಆತ್ಮತತ್ತ್ವವು ಅಗೋಚರವಾಗಿ ಇರುವುದರಿಂದ, ಅದನ್ನು ಸಾಮಾನ್ಯ ಜನತೆ ಗ್ರಹಿಸಲಾರರು ಎಂದೂ ಶ್ರೀಕೃಷ್ಣನು ಮುಂದಿನ ಶ್ಲೋಕದಲ್ಲಿ ವಿವರಿಸುವನು.

ಆಶ್ಚರ್ಯವತ್ಪಶ್ಯತಿ ಕಶ್ಚಿದೇನ । ಮಾ
ಶ್ಚರ್ಯವದ್ವದತಿ ತಥೈವ ಚಾನ್ಯಃ ।
ಆಶ್ಚರ್ಯವಚ್ಚೈನಮನ್ಯಃ ಶೃಣೋ
ತಿ ಶ್ರುತ್ವಾಪ್ಯೇನಂ ವೇದ ನ ಚೈವ
ಕಶ್ಚಿತ್ ||೨೯||

ಒಬ್ಬನು ಇದನ್ನು ಆಶ್ಚರ್ಯದಿಂದ ನೋಡುವನು. ಒಬ್ಬನು ಇದನ್ನು ಆಶ್ಚರ್ಯಚಕಿತನಾಗಿ ಮಾತನಾಡುವನು. ಒಬ್ಬನು ಅದನ್ನು ಆಶ್ಚರ್ಯದಿಂದ ಕೇಳುವನು. ಆದರೂ ಇದನ್ನು ಕೇಳಿದರೂ, ಯಾರೂ ಇದನ್ನು ಅರ್ಥ ಮಾಡಿಕೊಳ್ಳಲಾರರು.

ಈ ಸತ್ಯ ತತ್ತ್ವವು ಅನಂತ, ನಿತ್ಯ ನಿರಂತರ ಸಚ್ಚಿದಾನಂದ ಎಂದು ತಿಳಿದರೂ, ಈ ತತ್ತ್ವವನ್ನು ಅರಿಯದ, ಪರಿಮಿತಿ ಇದ್ದ ಜೀವಿಗಳಿಗೆ ನಿಜವಾಗಿಯೂ ಇದು ಅನುಭವಕ್ಕೆ ಸಿಗದ . ಪಾಪಿಯು, ಮಹಾತ್ಮನಿಂತ ಬಹಳ ದೂರ ಇರುವನು. ಅವನಿಗೆ ಅವನಲ್ಲಿ ಈ ಅನಂತ ಸತ್ಯ ತತ್ತ್ವವಿದೆ ಎಂದು ತಿಳಿಯಲು ಅಸಾಧ್ಯ. ಅದನ್ನು ಅರಿತ ಮಹಾತ್ಮನು ದೇವನು.

ದೇಹ, ಮನ, ಬುದ್ಧಿಗೆ ನಿಲುಕದ ಆತ್ಮ ತತ್ತ್ವವು ಯೋಗದಿಂದ, ಮಹಾತ್ಮನು ತಿಳಿಯಲು ಶಕ್ತನಾದರೆ, ಅನುಭವ ಪಡೆಯುವ ಸಮಯದಲ್ಲಿ, ಈ ದೇಹ, ಮನ, ಬುದ್ಧಿಯಿಂದಾಚೆಗಿನ ಆತ್ಮ ತತ್ತ್ವವು ಅವನಿಗೆ ಆಶ್ಚರ್ಯವನ್ನುಂಟು ಮಾಡುವುದು. ಅತಿ ಆಶ್ಚರ್ಯ, ಅಪರಿಮಿತ ಆನಂದವಾಗುವುದು. ಆಶ್ಚರ್ಯ ಭಾವವು ಉಂಟಾದಾಗ ಒಬ್ಬನು ತನ್ನ ಇರವನ್ನು ಮರೆತುಬಿಡುವನು. ಆದಕ್ಕಾಗಿ ಋಷಿಗಳು ಈ ಶಬ್ದವನ್ನು ಬಳಸಿರುವರು. ಆತ್ಮ ತತ್ತ್ವವನ್ನು ತಿಳಿದವರು, ದೇಹ, ಮನ, ಬುದ್ಧಿ ಮರೆತು ಅದರಲ್ಲಿ ಲೀನರಾಗಿ ಬಿಡುವರು. ಕೆಲವೇ ಜನರು ಆತ್ಮ ತತ್ತ್ವವನ್ನು ಆಶ್ಚರ್ಯದಿಂದ ನೋಡುವರು. ಹಾಗೆ ತಿಳಿದವರಲ್ಲಿ ಕೆಲವರೇ ಅವರ ವಿಷಯವಾಗಿ ತಿಳಿದು ಮಾತನಾಡಲು ಸಮರ್ಥರಾಗುವರು. ಹಾಗೆ ಕೆಲವರೆ, ಕ್ರಿಸ್ತ, ಬುದ್ಧರು ಜನ್ಮವೆತ್ತಿರುವರು.

ಅಂತಹ ಮಹಾತ್ಮರು ಜನ್ಮವೆತ್ತಿ ಅದರ ವಿಷಯ ತಿಳಿಸಿ ಹೇಳಿದರು ಜನರು ಅದನ್ನು ಕೇಳಲು ಹಾತೊರೆಯುವುದಿಲ್ಲ. ಕೆಲವರೇ ಅವರನ್ನು ಕೇಳಲು ಹೋಗುವರು.

ಅವರಲ್ಲಿ ಅತಿ ಆಶ್ಚರ್ಯವೆಂದರೆ, ಆ ಸತ್ಯ ತತ್ತ್ವದ ವಿಚಾರ ಕೇಳಿದರೂ, ಅದನ್ನು ತಿಳಿಯಲು ಎಲ್ಲರಿಗೂ ಸಾಧ್ಯವಾಗುವುದಿಲ್ಲ.

ಇದು ಸಾಧಕರನ್ನು ನಿರುತ್ಸಾಹಗೊಳಿಸಲು ಹೇಳಿದುದಲ್ಲ. ಯೋಗ್ಯ ಉಪಾಸನೆ ಮಾಡಿ ಶ್ರವಣ ಮಾಡುವಂತೆಯೂ, ಕೇಳಿದುದನ್ನು, ಮನನ ಮಾಡುವಂತೆಯೂ ಈ ಅನಂತ ಸಚ್ಚಿದಾನಂದ ಸತ್ಯವನ್ನು ತಟ್ಟನೆ ಗ್ರಹಿಸಲು ಸುಲಭ ಸಾಧ್ಯವಲ್ಲ ವೆಂದು ಹೇಳಿದುದಾಗಿದೆ.

ದೇಹಿ ನಿತ್ಯಮವಧ್ಯೋಽಯಂ|
ದೇಹೇ ಸರ್ವಸ್ಯ ಭಾರತ|
ತಸ್ಮಾತ್ಸರ್ವಾಣಿ ಭೂತಾನಿ|
ನ ತ್ವಂ ಶೋಚಿತು ಮರ್ಹಸಿ ||೩೦||

ಈ ಅವಿನಾಶಿಯಾದ ಆತ್ಮವು ಪ್ರತಿಯೊಂದು ಜೀವಿಗಳಲ್ಲಿ ಇದೆ. ಓ ಭಾರತನೇ, ಅದ್ದರಿಂದ ನೀನು ಯಾರಿಗಾಗಿಯೂ ಶೋಕಿಸ ಬೇಕೆಂದಿಲ್ಲ.

ಅತಿ ಸೂಕ್ಷ್ಮ ತತ್ತ್ವವಾದ ಆತ್ಮವು ಪ್ರತಿಯೊಂದು ಜೀವಿಯಲ್ಲಿದೆ. ನಾಶಹೊಂದುವುದು. ಆತ್ಮವನ್ನು ಸುತ್ತುವರಿದಿರುವ ದೇಹ, ಪಂಚಭೂತಗಳಿಂದ ಮಾಡಲ್ಪಟ್ಟ ದೇಹಮಾತ್ರ. ಆತ್ಮದ ಅವಿನಾಶತೆಯನ್ನು ಸಂಯಾಗಿ ಅರ್ಜುನನಿಗೆ ಮನದಟ್ಟು ಮಾಡಲು ಶ್ರೀ ಕೃಷ್ಣನು ಹಿಂದಿನ ಶ್ಲೋಕಗಳಲ್ಲಿ ಅದರ ವಿವರಣೆ ಕೊಟ್ಟುದು. ಅದ್ದರಿಂದ ಅರ್ಜುನಾ ನೀನು ಯುದ್ಧ ಮಾಡಲು ಹಿಂಜರಿಯಬೇಡ ಎಂದು ಸಲಹೆ ಕೊಡುವನು. ಆದರಿಂದಾಗಿ ನಿನಗೆ ಮೋಹವಾಗಲೀ ಆಸಕ್ತಿಯಾಗಲೀ ಇರಕೂಡದು ಎಂದು ಹೇಳಿ ಶ್ರೀ ಕೃಷ್ಣನು ಇನ್ನೂ ಮುಂದುವರಿಸುತ್ತಾ.

ಸ್ವಧರ್ಮ ಮಪಿಚಾವೇಕ್ಷ್ಯ|
ನವಿಕಂ ಪಿತುಮರ್ಹಸಿ|
ಧರ್ಮ್ಯಾದ್ಧಿ ಯುದ್ಧಾ ಚ್ಛ್ರೇಯೋ|
ನ್ಯ ತ್ಕ್ಷತ್ರಿಯಸ್ಯ ನ ವಿದ್ಯತೇ||೩೧||

ಅಲ್ಲದೆ ನಿನ್ನ ಕರ್ತವ್ಯವನ್ನು ಯೋಚಿಸಿದರೆ, ನೀನು ಯುದ್ಧ ಮಾಡಲೇ ಬೇಕು. ಏಕೆಂದರೆ ಕ್ಷತ್ರಿಯನಾದ ನಿನಗೆ ಧರ್ಮವೆನಿಸಿದ ಯುದ್ಧಕ್ಕಿಂತ ನಿನಗೆ ಮಿಗಿಲಾದುದು ಬೇರೆ ಕರ್ತವ್ಯವಿಲ್ಲ.

ಕ್ಷತ್ರಿಯರು ಯುದ್ಧ ಭೂಮಿಯಲ್ಲಿ ಅವರ ಸ್ವಧರ್ಮವೆನಿಸಿದ ಯುದ್ಧ ಮಾಡಬೇಕಾಗಿತ್ತು. ಸ್ವಧರ್ಮ ಎಂದರೆ ಅವರ ಮನೋಭಾವಗಳ ಸ್ವಭಾವ. ಅರ್ಜುನನು ಮನ ಬುದ್ಧಿಗಳಲ್ಲಿ ಸುಮ್ಮನೆ ಕುಳಿತು ಧ್ಯಾನ ಮಾಡುವಂತಹ ಸ್ವಭಾವ ಪಡೆದವನಲ್ಲ. ಆದರಿಂದ ಅವನ ಸ್ವಭಾವಕ್ಕೆ ಸಹಜವೆನಿಸಿದ ಗುಣಗಳನ್ನು ಅನುಸರಿಸಬೇಕೆಂದು ಶ್ರೀ ಕೃಷ್ಣನು ಕ್ಷತ್ರಿಯ ಬುದ್ಧಿ ಪಡೆದ ಅರ್ಜುನನಿಗೆ ಯುದ್ಧ ಮಾಡು ಎಂದುದು.

ಅಜ್ಞಾನನಿಗೆ ಆ ಸಮಯದಲ್ಲಿ ಕೆಲವು ವಿಚಾರಗಳ ರಕ್ಷಣೆಗಾಗಿ, ಜನತೆಗಾಗಿ ಅದನ್ನು ಪ್ರತಿಕೂಲವಾಗಿಸುವವರೊಡನೆ ಹೋರಾಡುವ ಸಂದರ್ಭ ಬಂದಿತ್ತು. ಆಗ ಅವನ ಕರ್ತವ್ಯ ತನ್ನ ಜನತೆಗಾಗಿ ಹೋರಾಡುವುದು. ಅದು ಅವನಿಗೆ ತಿಳಿದಿತ್ತು. ಮತ್ತು ಅದಕ್ಕೆ ತಕ್ಕ ಸ್ವಭಾವವನ್ನು ಅವನು ಪಡೆದೂ ಇದ್ದನು. ಅದ್ದರಿಂದ ಅರ್ಜುನನಿಗೆ ಅವನ ಕರ್ತವ್ಯ ನಿರ್ವಹಿಸುವುದಕ್ಕಿಂತ ಉತ್ತಮವಾದ ದಾರಿ ಇರಲಿಲ್ಲ. ಮತ್ತು

ಯದೃಚ್ಛಯಾ ಚೋಪಪನ್ನಂ|
ಸ್ವರ್ಗ ದ್ವಾರಮ ಪಾವೃತಮ್|
ಸುಖಿನಃ ಕ್ಷತ್ರಿಯಾಃ ಪಾರ್ಥ|
ಲಭಂತೇ ಯುದ್ಧ ಮೀದೃಶಮ್||೩೨||

ಓ ಪಾರ್ಥಾ, ಈ ಯುದ್ಧದಲ್ಲಿ ಭಾಗವಹಿಸಲು ಸಂದರ್ಭ ದೊರೆತ ಕ್ಷತ್ರಿಯರು ನಿಜವಾಗಿಯೂ ಪುಣ್ಯಶಾಲಿಗಳು. ಈಗ ಸ್ವರ್ಗದ ಬಾಗಿಲೇ ತೆರೆದು ಇದೆ.

ಕ್ಷತ್ರಿಯರು ಯುದ್ಧಭೂಮಿಯಲ್ಲಿ ಹೋರಾಡುತ್ತಾ ಮಡಿದರೆ ಅವರಿಗೆ ವೀರ ಸ್ವರ್ಗ ದೊರಕುವುದೆಂದು ಒಂದು ನಂಬಿಕೆಯಿದೆ. ಹಾಗೆ ಕೃಷ್ಣನು ಅರ್ಜುನನಿಗೆ ಕ್ಷತ್ರಿಯನಾದ ನಿನ್ನ ಸ್ವಧರ್ಮವಾದ ಯುದ್ಧಮಾಡುವ ಪ್ರಸಂಗವು ನಿನಗೆ ತಾನಾಗಿಯೇ ಈಗ ಒದಗಿ ಬಂದಿರುವುದು. ನೀನೇ ಅದನ್ನು ತನ್ನ ಮೇಲೆ ಹೊರಿಸಿಕೊಂಡಿಲ್ಲ ಎಂದ ಬಳಿಕ ನಿನ್ನ ಸ್ವಧರ್ಮವಾದ ಈ ಯುದ್ಧವನ್ನು ಮಾಡು ಹಾಗೆ ಮಾಡದೆ ನೀನು ತಪಸ್ಸಿಗೆ ಹೋದರೆ ನಿನಗೆ ಅಲ್ಲಿ ತಪಸ್ಸು ಮಾಡಲು ಸಾಧ್ಯವಾಗದು. ನಿನಗೆ ಈ ಉತ್ತಮ ಸಂದರ್ಭವು ಒದಗಿ ಬಂದಿದೆ. ನೀನು ಯುದ್ಧದಲ್ಲಿ ಹೋರಾಡುತ್ತಾ ಮಡಿದರೆ ಸ್ವರ್ಗ ಸೇರುವಿ. ಕ್ಷತ್ರಿಯನಿಗೆ ಈ ಯುದ್ಧ ನಿಮಿತ್ತ ಸ್ವರ್ಗದ್ವಾರವೇ ತೆರೆಯಲ್ಪಟ್ಟಿದೆ. ಸತ್ತರೆ ಸ್ವರ್ಗಕ್ಕೆ ಹೋಗುವಿ. ಯೋಧರು ಯುದ್ಧ ಮಾಡುವಾಗ ತಮ್ಮ ಆಶ್ರಿತರ ಸಂರಕ್ಷಣೆಗಾಗಿ ಪ್ರಾಣವನ್ನು ತ್ಯಜಿಸುವರು. ಹಾಗೆ ಆ ತ್ಯಾಗ ಮಾಡುವ ಬಯಕೆಯಿಂದ ಮನ ಬುದ್ಧಿಗಳ ಪರಿಪಕ್ವತೆಯಿಂದಾಗಿ ಅವರು ಅದಕ್ಕೆ ತಕ್ಕಂತೆ ಸಂತೋಷವನ್ನು ಅನುಭವಿಸಲು ಅವರಿಗೆ ಸ್ವರ್ಗಸುಖವೇ ದೊರಕುವುದು. —ಸಶೇಷ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿ ಜಯ ಬ್ಯಾಂಕ್ ಲಿಮಿಟೆಡ್,

ಹೆ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಕುಂದಾಪುರ ಮು. ಕೋರ್ಟಿನಲ್ಲಿ

S. C. 67/65

ವಾದಿಯು: ಲಕ್ಷ್ಮಿದೇವಿ ಅಮ್ಮ ಕೂಡಾ
ಪ್ರತಿವಾದಿಯು: ನಾರಾಯಣ ಉಡ್ಪ ಕೂಡಾ

ಉಡುಪಿ ತಾಲ್ಕು ಕಾಡೂರು ಗ್ರಾಮದಲ್ಲಿರುವ ಮಂಜುನಾಥ ಉಡ್ಪರ ಮಕ್ಕಳು 2ನೇ ಪ್ರತಿವಾದಿ ಸೀತಾರಾಮ ಉಡ್ಪ1 ಮತ್ತು 3ನೇ ಪ್ರತಿವಾದಿ ಪರಮೇಶ್ವರ ಉಡ್ಪ 1 ಕೂಡಾ 7 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲಣ ದಾವೆಯು ಪ್ರತಿವಾದಿಯಿಂದ ವಾದಿಗೆ ಬರಾ ಬಾಲಗೇಣಿ ಗೇಣಿ ಬಾಕಿ ಬಗ್ಗೆ ವಾದಿಯು ಮಾಡಿದ ಮೇಲಣ ದಾವೆ ತಾ. 15-7-65ಕ್ಕೆ ತಪ್ಸಿಗೆ ಇಟ್ಟಿರುತ್ತದೆಂಬ ಸಂಗತಿ ಈ ಮೂಲಕ ತಿಳಿಸಿಯದೆ. ಆ ದಿನ ನೀವು ಸ್ವತಃ ಅಥವ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಮೇಲಣ ದಾವೆಯಲ್ಲಿ ಉದಾಹರಣೆ ದಾಖಲು ಮಾಡಲು ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಡಿಕ್ರಿ ಮಾಡಲಾಗುವುದೆಂಬ ಸಂಗತಿ ಈ ಮೂಲಕ ತಿಳಿಯಪಡಿಸಿದೆ.

(By order of the Court)

(*Sd.*) A. Narayan Rao.
Advocate for Plaintiffs

ಕುಂದಾಪುರ, 15—6—1965.

ಭಾರತ ಸರಕಾರ, ಕರ್ನಾಟಕ ರಾಜ್ಯ ಸರಕಾರ, ಜಿಲ್ಲೆಯ ಪಾರ್ಲಿಮೆಂಟ್ ಸದಸ್ಯರು. ಪತ್ರಿಕಾ ಸಂಪಾದಕರು ಮತ್ತು ಮಹಾಜನರಲ್ಲಿ

ನಮ್ರ ವಿನಂತಿ

ಕಳೆದ 17 ವರ್ಷಗಳಿಂದ ತಾವು ಕಲ್ಯಾಣ ರಾಜ್ಯ ಸ್ಥಾಪಿಸುತ್ತೇವೆಂದು ಹೇಳುತ್ತ ಕಾಂಗ್ರೆಸ್ ಸರಕಾರ 'ಕಲಿ' ರಾಜ್ಯ ಸ್ಥಾಪನೆಗೆ ಭದ್ರ ಬುನಾದಿ ಹಾಕಿದೆ. ಇವರ ಈ ಧೋರಣೆಯಿಂದ ಜನರು ಆಹಾರಕ್ಕಾಗಿ ಪಡುವ ಕಷ್ಟವನ್ನು ಹೇಳತೀರದು. ನಿತ್ಯೋಪಯೋಗಿ ವಸ್ತುಗಳ ಬೆಲೆಯು ದಿನದಿಂದ ದಿನಕ್ಕೆ ಗಗನಕ್ಕೇರುತ್ತಿದೆ. ಇದ್ದ ಆಹಾರ ಧಾನ್ಯಗಳೂ ಮಾರುಕಟ್ಟೆಯಿಂದ ಮಾಯವಾಗಿ ಕಾಳಸಂತೆಯನ್ನು ಸೇರಿವೆ. ಇದರಿಂದಾಗಿ ಜನರು ಹಿಂಸೆಗೊಳಗಾಗಿದ್ದಾರೆ.

ಪ್ರತಿಯೊಂದಕ್ಕೂ ಕಂಟ್ರೋಲು-ಕೋಟಾ-ಲೈಸನ್ಸ್-ಪರ್ಮಿಟು ವಿಧಿಸಿ ಜನರ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಗಿ ಆಹಾರ ವಿತರಣೆಯಲ್ಲಿ ವಲಯ ದಿಗ್ಬಂಧನ ಹಾಕಿ ಬೆಲೆ ಏರುವಂತೆ ಮಾಡಿದ್ದಾರೆ. ಜನಸಾಮಾನ್ಯರನ್ನು ಭಾದಿಸುತ್ತಿರುವ ಸಮಸ್ಯೆಯೆಂದರೆ ಹಣದುಬ್ಬರ. ಯೋಜನೆಗಳನ್ನು ನೆರವೇರಿಸುವ ನೆಪದಲ್ಲಿ ಲೆಕ್ಕವಿಲ್ಲದಷ್ಟು ಕರೆನ್ಸಿ ನೋಟುಗಳನ್ನು ಮುದ್ರಿಸಿ ತೊಗ್ಲಕ್ ರಾಜ್ಯಭಾರ ಮಾಡುತ್ತಿರುವ ಈ ಮಂತ್ರಿಗಳು ರಾಜಿನಾಮೆ ಕೊಡಬೇಕು.

ಈ ಕೋಟಾ-ಕಂಟ್ರೋಲ್-ಲೈಸನ್ಸ್-ಪರ್ಮಿಟ್-ಪದ್ಧತಿಯನ್ನು ರಾಷ್ಟ್ರಾಧ್ಯಕ್ಷರು ಕೂಡಲೇ ರದ್ದುಮಾಡಿ ತಿಂಗಳಿಗೆ ರೂಪಾಯಿ 250ಕ್ಕಿಂತ ಕಡಿಮೆ ಉತ್ಪತ್ತಿಯಿರುವ ಬಡಜನರ ಮೇಲೆ ಹೊರಿಸಲಾದ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ತೆರಿಗೆಗಳನು ಕೂಡಲೇ ರದ್ದುಮಾಡಬೇಕು. ಮದ್ಯಪಾನ ನಿಷೇಧ ಬಿನ್ನ ನಿಯಂತ್ರಣಗಳಂಥ ಅನ್ಯಾಯದ ಕಾನೂನುಗಳನ್ನು ತೆಗೆದುಹಾಕಬೇಕು. ವ್ಯಾಪಾರ-ವ್ಯವಹಾರಗಳನ್ನು ನಿರ್ಬಂಧಿಸದೇ ಆ ವೃತ್ತಿಯಲ್ಲಿದ್ದವರೇ ಸ್ವತಂತ್ರವಾಗಿ ಮಾಡುವಂತೆ ಆಗಬೇಕು.

ಕನ್ನಡಿಗರಿಗಿಂತಲೂ ತುಳುವರು ಅಧಿಕ ಸಂಖ್ಯೆಯಲ್ಲಿ ಇರುವ ಕಾಸರಗೋಡು ತಾಲೂಕನ್ನು ಕೇರಳಕ್ಕೆ ಸೇರಿಸಿ 14 ಲಕ್ಷ ಜನ ಸಂಖ್ಯೆಯ ತುಳು ನಾಡಿನ ಇಬ್ಭಾಗವಾಗಿದೆ. ಇದರಿಂದಾಗಿ ತುಳುವರಾದ ನಮ್ಮ ಭಾಷೆ, ಸಂಸ್ಕೃತಿಗಳನ್ನು ಕಳೆದುಕೊಂಡು ಅಭಿಮಾನ ಶೂನ್ಯರಾಗಿ ಬಾಳುವ ಪ್ರಸಂಗ ಬಂದೊದಗಿದೆ. ಈ ಅನ್ಯಾಯವನ್ನು ಪರಿಹರಿಸಿ ಕಾಸರಗೋಡು ತಾಲೋಕನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿಸಿ 'ತುಳುನಾಡು ಜಿಲ್ಲೆ' ಎಂದು ನಾಮಕರಣವಾಗಬೇಕು. ಆಗ ಮಾತ್ರ ತುಳು ಭಾಷೆ, ಸಾಹಿತ್ಯ, ಲಿಪಿ ಅಭಿವೃದ್ಧಿಯಾಗುವುದು. ತುಳು ಭಾಷೆಯಂತೆ ಕೊಂಕಣಿ-ಕೊಡವ ಭಾಷೆಗೂ ಮಾನ್ಯತೆಯನ್ನು ಸರಕಾರ ಕೊಡಬೇಕು. ಪ್ರಾಥಮಿಕ ಶಿಕ್ಷಣ ಈ ಭಾಷೆ ಆಡುವ ಮಕ್ಕಳಿಗೆ ಅದರಲ್ಲೇ ದೊರೆಯಬೇಕು.

ಸಾವಿರಾರು ವರ್ಷಗಳಿಂದ ನಡೆದು ಬಂದ ತುಳುವರ ಸ್ತ್ರೀ ಮೂಲವಾದ ಪದ್ಧತಿಯ ಸಮಾಜವನ್ನು ಸರಕಾರ ನಾಶಮಾಡಿ ನಮ್ಮ ಸಂಸ್ಕೃತಿಯ ಮೂಲವನ್ನೇ ನಾಶಮಾಡಿದೆ. ಆಂಗ್ಲರು 1820ರಿಂದ ಈಸ್ಟ್ ಇಂಡಿಯಾ ಕಂಪೆನಿ ಸರಕಾರದ ಕಾಲದಿಂದಲೂ ದೇಶದ ಗ್ರಾಮಗಳ ನೆಮ್ಮದಿ-ರಕ್ಷಣೆಗೆ ನೇಮಿಸಲ್ಪಟ್ಟು ಉಪಯುಕ್ತ ಕೆಲಸ ಮಾಡುತ್ತಿರುವ ಪಟೇಲ ಶ್ಯಾನುಭಾಗರುಗಳ ನೇಮಕವನ್ನು ರದ್ದುಮಾಡಿ, ಪಂಚಾಯತ್‌ಗಳನ್ನು ಸೃಷ್ಟಿಸಿ, ಗ್ರಾಮ ಗ್ರಾಮಗಳಲ್ಲಿ ಪಕ್ಷ ರಾಜಕೀಯ ಜಗಳವನ್ನು ಹಬ್ಬಿಸಿ ಗ್ರಾಮಾಂತರ ಜನರ ನೆಮ್ಮದಿಯನ್ನು ಸರಕಾರ ಕೆಡಿಸಿದೆ. ಈ ಅಕ್ರಮ ಕಾನೂನು ರದ್ದಾಗಿ ಹಿಂದಿನಂತೆಯೇ ಗ್ರಾಮಾಡಳಿತೆ ನಡೆಯಬೇಕು.

ರೈತರೇ ಕಷ್ಟಪಟ್ಟು ಹಸನು ಮಾಡಿದ ಭೂಮಿಗೆ ಇತಿಮಿತಿಯಿಲ್ಲದ ಭೂಕಂದಾಯ ಹೇರಿ ಅವನು ಕೃಷಿಗೆ ವಿಮುಖನಾಗುವಂತೆ ಮಾಡಿದೆ. ಸರಕಾರದ ಹಿಂದೆ ಸೆಟ್ಲಮೆಂಟ್ ಕಾಲದಲ್ಲಿ ನಿಗದಿ ಮಾಡಿದ ಭೂಕಂದಾಯದಂತೆಯೇ ಮುಂದಕ್ಕೂ ವಸೂಲು ಮಾಡಬೇಕು. ಏರಿಸಿದ ಕಂದಾಯ ದರವನ್ನು ಕೂಡಲೇ ಹಿಂತೆಗೆಯಬೇಕು.

ಈ ಮೇಲೆ ಹೇಳಿದ ಅನ್ಯಾಯವನ್ನು ಪರಿಹರಿಸುವಂತೆ ಸರಕಾರ, ಜನತಾ ನಾಯಕರನ್ನು ಒತ್ತಾಯಿಸಲು ಆಮರಣ ಉಪವಾಸ ಮಾಡಲು ನಿರ್ಧರಿಸಿದ್ದೇನೆ. ಅದಕ್ಕೂ ಮೊದಲು ಈ ಪತ್ರವನ್ನು ಸಂಬಂಧಪಟ್ಟವರಿಗೆ ಕಳುಹಿಸಿ ಅವರ ಮನವೊಲಿಸಲು ಪ್ರಯತ್ನಿಸುವುದು ನನ್ನ ಮೊದಲ ಕರ್ತವ್ಯ. ಅದರಿಂದ ನನ್ನ ಉದ್ದೇಶ ಫಲಿಸದಿದ್ದರೆ ನನ್ನ ಆಮರಣ ಉಪವಾಸದ ನಿರ್ಧಾರವನ್ನು ಕಾರ್ಯರೂಪಕ್ಕಿಳಿಸುತ್ತೇನೆ.

ನಾನು ಕಳೆದ ಮೂರು ದಶಕಗಳಿಂದ ಕಾಂಗ್ರೆಸ್ಸಿಗನಾಗಿ ದುಡಿದು 1931-32 ರಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜೈಲುವಾಸವನ್ನು ಅನುಭವಿಸಿರುತ್ತೇನೆ. ಈಗ ನಾನು ವೃದ್ಧಾಪ್ಯದ ಜೀವನವನ್ನು ಹೆಂಡತಿ-ಮಕ್ಕಳು-ಮೊಮ್ಮಕ್ಕಳೊಂದಿಗೆ ಸುಖವಾಗಿ-ಸಂತೋಷದಿಂದ ಕಳೆಯುತ್ತಿದ್ದೇನೆ. ನನಗೆ ವಯಕ್ತಿಕವಾಗಿ ಯಾವುದೇ ಕೊರತೆಯಿಲ್ಲ ಆದರೆ ಜನ ಸಾಮಾನ್ಯರ ಗೋಳನ್ನು ಕಂಡು ನನ್ನ ಮನಸ್ಸು ಕರಗಿದೆ.

ಅನುಂಜೆಗುತ್ತು

ಎನ್. ಎ. ಶೀನಪ್ಪ ಹೆಗ್ಡೆ.

"ಪೊಳಲಿ ಹೌಸ್"

ಗೋರಿಗುಡ್ಡೆ ಮಂಗಳೂರು-2.

ಸ್ವಾಮಿ ಚಿನ್ಮಯಾನಂದಜಿ

ಶ್ರೀ ಸ್ವಾಮಿ ಚಿನ್ಮಯಾನಂದ ಜೀಯವರು ಈಗ ವಿಶ್ವ ಪರ್ಯಟನದಲ್ಲಿರುವರು. ಕಳೆದ ಮಾರ್ಚಿ ತಿಂಗಳ ಏಳನೇ ತಾರೀಕಿನಂದು ಕಲ್ಕತ್ತಾದಿಂದ ವಿಮಾನ ಮೂಲಕ ಪ್ರಯಾಣ ಮಾಡಿದ ಶ್ರೀ ಸ್ವಾಮೀಜಿಯವರು ಪೂರ್ವಾಭಿಮುಖವಾಗಿ ವಿಶ್ವ ಪ್ರದಕ್ಷಿಣೆ ಮಾಡಿ ಜೂನ್ ತಿಂಗಳ ಇಪ್ಪತ್ತೇಳನೇ ತಾರೀಕಿನಂದು ಮುಂಬಯಿಗೆ ಮರಳಿದರು.

ಅವರು ಬ್ಯಾಂಗ್‌ಕೋಕ್, ಹಾಂಗ್‌ಕೋಂಗ್ ನಗರಗಳನ್ನು ಜಪಾನು ಫಿಲಿಪೈನ್ಸ್ ದ್ವೀಪಗಳನ್ನು, ಅಮೇರಿಕಾದ ಪ್ರಮುಖ ನಗರಗಳನ್ನ ಹಾದು, ಅಂಟ್ಲಾಂಟದಿಂದ ಲಂಡನ್‌ಗೆ ಪ್ರಯಾಣ ಬೆಳಸಿ, ಅಲ್ಲಿಂದ ಪಶ್ಚಿಮ ಯುರೋಪಿನ ಮುಖ್ಯ ಪಟ್ಟಣಗಳನ್ನು ಸಂದರ್ಶಿಸಿ ಇಟಲಿ, ರೋಮ್ ದೇಶಗಳನ್ನು ದಾಟಿ, ಗ್ರೀಸ್ ಮಧ್ಯ ಪೂರ್ವ ರಾಷ್ಟ್ರಗಳನ್ನು, ನೋಡಿ, ಬೀರುಟ್‌ನ ಮಾರ್ಗವಾಗಿ ಮುಂಬಾಯಿ ತಲುಪಿದರು.

ಸ್ವಾಮೀಜಿಯ ವಿದೇಶ ಯಾತ್ರೆ ಜಯಪ್ರದವಾಗಲೆಂದು ಹಾರೈಸಿ ಮುಂಬಯಿಯಲ್ಲಿ ಸೇರಿದ್ದ ಬ್ರಹತ್ ಸಭೆಯಲ್ಲಿ ಜನತೆಯ ಪ್ರೇಮಾದರಗಳಿಗೆ, ಸ್ಫೂರ್ತಿಯುತ ಕರೆಯನ್ನಿತ್ತು ಹರಸಿ ಬೀಳ್ಕೊಳ್ಳುವಾಗ ಸ್ವಾಮೀಜಿಯವರು, ತನ್ನ ವಿದೇಶ ಯಾತ್ರೆಯ ಬಗ್ಗೆ ಹೀಗೆ ನುಡಿದಿರುವರು.

"ಭಾರತದ ಉಪನಿಷತ್ತು ಮತ್ತು ಸಂಸ್ಕೃತಿಯಲ್ಲಿ ಅಳವಡಿಸಲಾದ ತತ್ವಗಳನ್ನು ಶ್ರುತಿಮಾತೆಯ ನಮ್ರ ಸೇವಕನಾಗಿ ಪ್ರಚಾರಪಡಿಸಲು ವಿದೇಶಯಾತ್ರೆ ಕೈಗೊಂಡಿರುವುದೂ ಅಲ್ಲದೆ, ತಾನು ಸಂದರ್ಶಿಸುವ ರಾಷ್ಟ್ರಗಳಲ್ಲಿನ ಜನರ ಧರ್ಮ ಸಂಸ್ಕೃತಿ ಮತ್ತು ನಾಗರಿಕತೆಯನ್ನು ಅಭ್ಯಸಿಸಿ ಅರಿಯಲು ಕೂಡಾ ಹೊರಟಿರುವೆನು."

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ

ಮತುಭೇದ ಮೊದಲಿಲ್ಲದೆ

ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು

ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ. ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಸುಭಾಷಿತಗಳು

ಸಂಗ್ರಾಹಕರು:— "ಸರಸ್ವತಿ ಸುತ"

ಬೆಳ್ಳಾರೆ. ನೀನು ಈ ವಿಶ್ವದಲ್ಲಿ ಮಾನವನಾಗಿ ಹುಟ್ಟಿ ಬಂದ ಮೇಲೆ ಏನಾದರೂ ಮಹತ್ಕಾರ್ಯವನ್ನು ಸಾಧಿಸಿ ಹೋಗು. ಇಲ್ಲದಿದ್ದರೆ ನೀನು ಕಲ್ಲಿಗೂ ಮರಕ್ಕೂ ಸಮಾನ.

—ಸ್ವಾಮಿ ವಿವೇಕಾನಂದ.

ಒಂದು ತಪ್ಪನ್ನು ಅಲ್ಲಗಳೆದಾಗ ಅಲ್ಲಿ ಎರಡು ತಪ್ಪುಗಳು ಉಂಟಾಗುವುದು.

—ಥೋಮಸ್ ಫುಲ್ಲರ್.

ಅತ್ಯುತ್ತಮ ಕವಿತೆ ಅನುಭವದ ಆಳದಿಂದಲೂ ಕವಿಯ ಧ್ಯಾನದಿಂದಲೂ ಆವೇಶಪೂರ್ವಕವಾಗಿ ಹೊರಹೊಮ್ಮಿಬರಬೇಕು.

— ಕು. ವೆಂ. ಪು.

ದೇವರು ತೊಂಬತ್ತೊಂಬತ್ತು ಮಂದಿ ಸರ್ವಜ್ಞರನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ ಮಾಡಿದ ತಪ್ಪಿಗಾಗಿ ಪಶ್ಚಾತ್ತಾಪ ಪಡುವ ಒಬ್ಬನೇ ಒಬ್ಬ ವ್ಯಕ್ತಿಯನ್ನು ಪ್ರೀತಿಸುತ್ತಾನೆ.

—ಏಸುಕ್ರಿಸ್ತ.

ದೇವರು ಒಬ್ಬನೇ. ದಯೆಯೇ ಧರ್ಮದ ಮೂಲ.

—ಭಗವಾನ್ ಬುದ್ಧ.

ಸ್ವರ್ಗ ನರಕಗಳು ಪ್ರಾಯವನ್ನು ಹೊಂದಿಕೊಂಡಿಲ್ಲ. ಆತನ ಪಾಪ ಪುಣ್ಯವನ್ನ ಹೊಂದಿಕೊಂಡಿದೆ.

—ಪಿ. ಸೀ. ರೇ.

ಎಲ್ಲಾ ಪುಸ್ತಕಗಳನ್ನು ಓದಿದರೆ ಏನೂ ಪ್ರಯೋಜನವಿಲ್ಲ. ಅದರ ಸಾರ ತಿಳಿಯುವುದೇ ಮುಖ್ಯ.

—ದ. ರಾ. ಬೇಂದ್ರೆ.

ಕಬ್ಬಿಣ ಗಟ್ಟಿ. ಹಿತ್ತಾಳೆ ಮೆದು. ಅದು ಎರಡೂ ಸಂಯೋಜನವಾದರೆ ಪ್ರಯೋಜನಕ್ಕೆ ಬಾರದ ವಸ್ತು. ಹಾಗೆಯೇ ಕಠಿಣ ಹೃದಯ, ಮೆದು ಮನಸ್ಸು ಕೂಡಿದರೆ ಏನೂ ಪ್ರಯೋಜನವಾಗಲಿಕ್ಕಿಲ್ಲ.

—ವಿನ್‌ಸ್ಟನ್.

ದೇವರು ಎಲ್ಲರಿಗೂ ಬುದ್ಧಿ ಒಂದೇ ತರಹ ಕೊಟ್ಟಿದ್ದಾನೆ. ಅದನ್ನು ಉಪಯೋಗಿಸುವುದು ಮಾನವನನ್ನು ಹೊಂದಿಕೊಂಡಿದೆ.

—ಜನರಲ್ ನಾಯಕ.

ಸಮಗಾರನು ಚಿಕ್ಕದ ಕೆಲಸ ಮಾಡುತ್ತಾನೆಂದು ಹೀನೈಸಬೇಡ; ಆತನು ಮಾಡುವ ಕೆಲಸವನ್ನು ನಿನ್ನಿಂದ ಮಾಡಲು ಸಾಧ್ಯವಿಲ್ಲ.

—ಕೆ. ವೆಂಕಟಾಚಾರ್ಯ.

ಬಾಲಕೃಷ್ಣರಾಯರಿಗೆ ಸನ್ಮಾನ

ಮಂಗಳೂರಿನ ಬಾಲ ಕಲಾನಿಲಯದವರು, ಗಣಪತಿ ಹೈಸ್ಕೂಲಿನಲ್ಲಿ ಶ್ರೀ ಪಿ. ಶ್ರೀಧರರಾಯರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ ಸಮಾರಂಭವೊಂದರಲ್ಲಿ ಜಿಲ್ಲೆಯ ಹಿರಿಯ ಯಕ್ಷಗಾನ ಕಲಾವಿದರಾದ ಎಡ್ವೋಕೇಟ್ ಶ್ರೀ ಕೆ. ಬಾಲಕೃಷ್ಣರಾಯರನ್ನು, ಅವರ ಷಷ್ಟ್ಯಬ್ದಿ ಪೂರ್ತಿಯ ಪ್ರಯುಕ್ತ, ಮಾನಪತ್ರ ಅರ್ಪಿಸಿ ಸನ್ಮಾನಿಸಿದರು. ಪ್ರಾರಂಭದಲ್ಲಿ ನಿಲಯದ ಅಧ್ಯಕ್ಷ ಶ್ರೀ ವೈ. ಉಮೇಶರಾಯರು ಸ್ವಾಗತಿಸಿದರು. ಬಳಿಕ ವಿವಿಧ ಸಂಘಸಂಸ್ಥೆಗಳ ಪರವಾಗಿ ಮಾನ್ಯ ಅತಿಥಿಗಳಿಗೆ ಹಾರಾರ್ಪಣೆಯಾಯಿತು. ಶ್ರೀ ಬಾಲಕೃಷ್ಣರಾಯರು ಮಾತನಾಡುತ್ತಾ, ಕಲಾವಿದರ ಪರದಾಟವನ್ನು ವಿವರಿಸಿ, ಮಂಗಳೂರಿನಲ್ಲಿ ಒಂದು ಆಕಾಶವಾಣಿ ನಿಲಯ ಹಾಗೂ ಕಲಾಶಾಲೆಯ ಸ್ಥಾಪನೆಯೇ ಅದಕ್ಕೆ ಪರಿಹಾರವೆಂದು ನುಡಿದರು. ಅಂತ್ಯದಲ್ಲಿ ಶ್ರೀ ಅನಂತಪದ್ಮನಾಭರಾವ್‌ರವರು ವಂದನಾರ್ಪಣೆಗೈದರು.

ಎಲ್ಲವೂ ಪರಿಸ್ಥಿತಿ ವಶವಲ್ವೆ?

(ನಾಲ್ಕನೇ ಪುಟದಿಂದ)

ಆ ವೃಶ್ಯ ನೋಡುಕ್ಲೇ ನನಗೆ ಪಾಪ ಅನಿಸ್ತು...."

'ಯೋಗಿ ಕೂಡೆ ಹಿಡಿದು ಎಲ್ಲಿಗೆ ಬೇಕೋ ಅಲ್ಲಿಗೆ ಬಿಟ್ಟು ಬರಬಹುದಿತ್ತಲ್ಲಾ."

ಅಯ್ಯೋ, ಅದ್ಯಾವ ಪರದೇಶಿಯೋ ಮತ್ತೆ? ವಾರಿಯಲ್ಲಿ ಹೋಗೋ ಮಾರಿಯನ್ನ ಬಳಿಗೆ ಕರೆದ್ರೆ ಮತ್ತದು ಬೆನ್ನು ಬಿಡದ ಬೇತಾಳನಾದ್ರೆ....?

'ಅದೇನು ಬೇಕಾದ್ರೂ ಇಲ್ಲಿ. ಒಂದು ಮಾತು ಹೇಳ್ತೇನೆ. ಕೇಳ್ತೀಯೋ?"

"ಹೂಂ...'

"ಜನ್ಮದಿಂದ ಯಾರೂ ಭಿಕ್ಷುಕರಾಗುವುದಿಲ್ಲ, ಶ್ರೀಮಂತನಾಗುವುದಿಲ್ಲ...ನೌಕರನಾಗುವುದಿಲ್ಲ, ಸ್ವಾಮಿಯೂ ಆಗುವುದಿಲ್ಲ..."

"ಅದು ಸರೀನ್ರಿ. ಎಲ್ಲವೂ ಅವರವರ ಹಣೆಬರಹ....ಪೂರ್ವಕರ್ಮದ ಫಲ...."

'ಛೆ ...ಛೆ...ಅಲ್ಲ, ಅಲ್ಲ..."

'ಮತ್ತೆ?'

'ಪರಿಸ್ಥಿತಿವಶದಿಂದ ಆತ ಏನೇನೋ ಆಗುತ್ತಾನೆ..."

'ಪರಿಸ್ಥಿತಿವಶದಿಂದ...."

'ನಾವು ಹೀಗೆ ಪರಿಸ್ಥಿತಿಗಳಿಗನುಸಾರವಾಗಿ ನಗು, ಅಳು, ಸಿಟ್ಟು ಇತ್ಯಾದಿ ಭಾವಗಳನ್ನು ವ್ಯಕ್ತಪಡಿಸುತ್ತೇವೆಯೋ ಹಾಗೇ ಮಾನವನು ಪರಿಸ್ಥಿತಿವಶನಾಗಿ ಏನೇನೋ ಆಗುತ್ತಾನೆ....'

'ಹ್ಞಾಂ....ಸಾಕು ಇವತ್ತಿಗೆ. ಮಳೆಗಾಲಕ್ಕೆ ಹೊಟ್ಟೆ ಹಸಿವು ಹೆಚ್ಚಂತೆ... ಅದೂ ಪರಿಸ್ಥಿತಿವಶ..."

'ನಿನ್ನೊಡನೆ ಮಾತಾಡ್ತಾ ಕೂತ್ರೆ ಹಸಿವೂ ಇಲ್ಲ....'

"ಹ್ಞಾಂ....ಸಾಕು ನಿಮ್ಮ ಪ್ರಶಂಸೆ. ಬಿಸಿ ಬಿಸಿ ಗಂಜಿ ಹಾಕ್ತೇನೆ. ಬೇಗ ಕೈಕಾಲು ತೊಳ್ಕೊಂಡು ಬನ್ನಿ...'

'ಗಂಜಿಯೇ ಒಳ್ಳೆಯದು, ಹಿತಕರವಾಗಿರುತ್ತೆ. ಅಲ್ವೆ?'

'ಅನ್ನಂ ನನಿಂದ್ಯಾತ್ ತದ್ವ್ರತಮ್..'

'ಪಂಡ್ತಗಿಲ್ಳೆ ನೀನು...."

—ಗೋರಾ.

(ಮೂರನೇ ಪುಟದಿಂದ)

ಚೀನಾದ ಲಾಯರಿಗೆ ಪಾಕ್ ಆಯ್ಯೂಬ ಖಾನರು ಬಲವಾಗಿ ಹಸ್ತಲಾಘವ ನೀಡತೊಡಗಿದ್ದಾರೆ. ಉಭಯ ನಾಯಕರ ಭೆಟ್ಟಿ—ವಿಚಾರವಿನಿಮಯಗಳೂ ಭರದಿಂದಲೇ ಸಾಗತೊಡಗಿವೆ. ಇಂತಹ ಸಂಬಂಧದಿಂದ ಅಮೇರಿಕೆಗಾಗಲಿ ವ್ಯಥೆಯೂ ಗಿಡೆಯೆಂದೂ ಅದು ಕರಾಚಿಗೆ ಎಚ್ಚರಿಕೆಯನ್ನು ನೀಡಿದೆಯೆಂದೂ ಇದನ್ನು ಅದು ಕಡೆಗಣಿಸಿದರೆ ತಾನು ನೀಡುವ ಸಹಾಯದಲ್ಲಿ ಕಡಿತ ಮಾಡುವುದು ಅನಿವಾರ್ಯವಾಗಬಹುದೆಂದೂ ವಿದೇಶಾಂಗ ಕಾರ್ಯದರ್ಶಿ ಟಾಪ್ಲೆಟ್ ಹೇಳಿದ್ದಾರೆ. ಆದರೆ ಭಾರತದ ವಿರುದ್ಧ ಪಾಕಿಸ್ತಾನವು ಅಮೇರಿಕೆಯು ನೀಡಿದ್ದ ಸೈನಿಕ ಸಾಧನಗಳನ್ನು ಶರ್ತಗಳಿಗೆ ವಿರುದ್ಧ ಬಳಸಿದುದಕ್ಕೆ ಪರೋಕ್ಷವಾಗಿ ಸೈಗುಟ್ಟಿರುವಾಗ, ಲಾಯರ್ ಚಲ್ಲಾಟಕ್ಕೆ ಯಾವ ಪ್ರತಿಕ್ರಿಯೆಯನ್ನು ಪಾಕಿನ ವಿರುದ್ಧ ಅಮೇರಿಕ ಕೈಗೊಳ್ಳಬಹುದು?

ಎಲ್ಲೆಲ್ಲಿ ಏನೇನು?

ನೂತನ ಕ್ಲಿನಿಕ್

ಡಾ| ಕೆ. ಎಂ. ಬಲ್ಲಾಳರ ನೂತನ "ಗೋಕುಲ ಕ್ಲಿನಿಕ್" ತಾ. 19ರಂದು ಉಡುಪಿಯ ಕಿನ್ನಿಮೂಲ್ಕಿಯಲ್ಲಿ ಶ್ರೀ ಕೆ. ಶಾಳಪ್ಪ ಶೆಟ್ಟಿ, ತಾಲೂಕು ಬೋರ್ಡ್ ಮೆಂಬರ್ ಇವರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ನಾರಾಯಣ ಶೆಟ್ಟಿ, ಮೆನೇಜರ್, ಶ್ರೀ ಮಂಜುನಾಥ ಮೋಟಾರ್ ಸರ್ವಿಸ್, ಇವರು ದಿ| ಗೋಕುಲ ಬಲ್ಲಾಳರ ಭಾವಚಿತ್ರವನ್ನು ಅನಾವರಣ ಮಾಡಿದರು. ಸ್ಥಳೀಯ ಪ್ರತಿಷ್ಠಿತರು ಸಮಾರಂಭದಲ್ಲಿ ಭಾಗವಹಿಸಿದ್ದರು. ಲಘು ಉಪಹಾರದೊಂದಿಗೆ ಸಮಾರಂಭವು ಯಶಸ್ವಿಯಾಗಿ ಜರುಗಿತು.

ಹೊಸ ಸಂತಾನ ನಿರೋಧ ವಿಧಾನ

ಈ ವರೆಗೆ ಕಂಡುಹಿಡಿದಿರುವ ಗರ್ಭ ನಿರೋಧಕ ವಿಧಾನಗಳಲ್ಲಿ ಅಚ್ಚ ಹೊಸದೂ, ಪರಿಣಾಮಕಾರಿಯೂ ಆದ ಇಂಟ್ರಾ-ಯೂಟ್ರೈನ್ ಕಾಂಟ್ರಾಸೆಪ್ಟಿವ್ ಡಿವೈಜ್ ಈಗ ಮಣಿಪಾಲದ ಕಸ್ತೂರಬಾ ಹೆರಿಗೆ ಆಸ್ಪತ್ರೆಯಲ್ಲಿ ಸಿಕ್ಕುತ್ತದೆ. ಅದನ್ನು ಬಹಳ ಸುಲಭ ಕ್ರಮದಿಂದ ಬಳಸಬಹುದು ಅಥವಾ ತೆಗೆಯಬಹುದು. ವಿವಾಹಿತ ಮಹಿಳೆಯರು ಇದರ ಬಗ್ಗೆ ಉಚಿತ ಸಲಹೆ ಮತ್ತು ಸಹಾಯವನ್ನು ಮಣಿಪಾಲದ ಕಸ್ತೂರಬಾ ಹೆರಿಗೆ ಆಸ್ಪತ್ರೆಯ ವೈದ್ಯಾಧಿಕಾರಿ ಡಾ| ಎ. ಪದ್ಮನಾಭರಾವ್‌ರವರಿಂದ ಪಡೆಯಬಹುದಾಗಿದೆ.

ವಿದಾಯ ಕೂಟ

ಶಿರ್ವ, ಕಳೆದ ಎಂಟು ವರ್ಷಗಳಿಂದ ಸ್ಥಳೀಯ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳಾಗಿ ಸೇವೆ ಸಲ್ಲಿಸಿ ಜನಪ್ರಿಯರಾಗಿದ್ದ ಡಾ| ಕೆ. ಆರ್. ವೆಂಕಟಕೃಷ್ಣನವರಿಗೆ ಇಲ್ಲಿಂದ ಬಾರ್ಕೂರಿಗೆ ವರ್ಗವಾದ ನಿಮಿತ್ತ ಅವರನ್ನು ಬೀಳ್ಕೊಡುವರೆ ಸಿಬ್ಬಂದಿ ಆಸ್ಪತ್ರೆಯ ನೌಕರವರ್ಗದವರು ವೆರಿ ರೆವರೆಂಡ್ ಫಾದರ್ ಗೊನ್ಸಾಲ್ವಿಸ್‌ರವರ ಅಧ್ಯಕ್ಷತೆಯಲ್ಲಿ ಶಿರ್ವ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ, ತಾ. 19-6-65ರಲ್ಲಿ ಸಮಾರಂಭವೊಂದನ್ನು ಜರಗಿಸಿದರು. ಆರಂಭದಲ್ಲಿ ನೌಕರವರ್ಗದ ಪರಿಯಿಂದ ಶ್ರೀ ಕೆ. ಆರ್. ಹೆಗ್ಡೆಯವರು ನೆರೆದ ಮಹನೀಯರನ್ನು ಸ್ವಾಗತಿಸಿ ಮುಖ್ಯ ಅತಿಥಿಗಳಾದ ಡಾ| ಕೆ. ಆರ್. ವೆಂಕಟಕೃಷ್ಣನವರಿಗೆ ಆಸ್ಪತ್ರೆಯ ಸಿಬ್ಬಂದಿಯ ಪರವಾಗಿ ಮಾನಪತ್ರವನ್ನು ಅರ್ಪಿಸಿದರು. ಸಭಿಕರ ಪರವಾಗಿ ಡಾ| ವೈ. ಆರ್. ಶೆಟ್ಟಿ, ಶ್ರೀ ಬಿ. ಜಯರಾಮ ಶೆಟ್ಟಿ, ಕೆ. ಯಂ. ಹೊಳ್ಳ, ಡಾ| ಯು. ಕೆ. ಆಚಾರ್, ಶ್ರೀ ಸಿ. ಡಿ. ಸೋಜ, ಶ್ರೀ ಕೆ. ಆರ್. ಹೆಗ್ಡೆಯವರು ಭಾಷಣ ಮಾಡುತ್ತಾ ಡಾ| ವೆಂಕಟಕೃಷ್ಣನವರ ಸೇವೆಯನ್ನು ಶ್ಲಾಘಿಸಿ ಅವರನ್ನು ಅಭಿನಂದಿಸಿದರು. ಡಾ| ವೆಂಕಟಕೃಷ್ಣನವರು ತನಗಿತ್ತ ಸತ್ಕಾರಕ್ಕಾಗಿ ಆಸ್ಪತ್ರೆಯ ನೌಕರವರ್ಗದವರಿಗೆ ಕೃತಜ್ಞತೆಗಳನ್ನು ಅರ್ಪಿಸಿದರು. ಅಧ್ಯಕ್ಷರ ಭಾಷಣವಾದ ಬಳಿಕ ಶ್ರೀ ಕೆ. ಆರ್. ಹೆಗ್ಡೆಯವರು ಧನ್ಯವಾದ ಅರ್ಪಿಸಿದರು.

ಯೋಗ್ಯತಾ ಪತ್ರ ವಿತರಣೆ

ಉಡುಪಿ ತಾಲೂಕು ಅಭಿವೃದ್ಧಿ ಸಮಿತಿಯ ಪರಿಯಿಂದ 1963-64ನೇ ವರ್ಷದ ಬಗ್ಗೆ ಉತ್ತಮ ಸೇವೆ ಸಲ್ಲಿಸಿದ ಶಾಲಾಭಿವೃದ್ಧಿ ಸಮಿತಿಗೂ, ಅಧ್ಯಾಪಕರಿಗೂ ಯೋಗ್ಯತಾ ಪತ್ರ ವಿತರಣಾ ಕಾರ್ಯಕ್ರಮವನ್ನು ತಾ. 19ರಂದು ಉಡುಪಿ ಯು. ಬಿ. ಯಂ. ಸಿ. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿದ ಉಡುಪಿ ಅಧ್ಯಾಪಕ ಕೇಂದ್ರ ಸಭೆಯಲ್ಲಿ ಶ್ರೀ ಜಿ. ವಿ. ಸಿದ್ದೇಶ್ವರ, ಸಹಾಯಕ ವಿದ್ಯಾಧಿಕಾರಿ, ಉಡುಪಿ ವಿಭಾಗ ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು. ಪ್ರಾರಂಭದಲ್ಲಿ ಉಡುಪಿ ರೇಂಜಿನ ಪರೀಕ್ಷಾಧಿಕಾರಿ ಶ್ರೀ ನರಸಿಂಹಯ್ಯನವರು ಅತಿಥಿಗಳನ್ನು ಸ್ವಾಗತಿಸಿ ಪಾರಿತೋಷಕ ಗೈದರು. ಲಘು ಉಪಹಾರದೊಡನೆ ಶ್ರೀಮಾನ್ ಎ. ಜೆ. ಅಲ್ಸೆಯವರು ನಿಯೋಜಿತ ಭಾಷಣ ಮಾಡಿದರು. ಪ್ರಚಲಿತ ವರ್ಷದಲ್ಲಿ ಉತ್ತಮ ಸೇವೆಗೈದ ಬಗ್ಗೆ ಶಾಲಾಭಿವೃದ್ಧಿ ಸಮಿತಿಗಳಲ್ಲಿ ಪಡುಬಿದ್ರೆ ಶಾಲಾ ಸಮಿತಿಗೆ ಶೀಲ್ಡನ್ನೂ, ಉಡುಪಿ ತಾಲೂಕಿನ ಅಧ್ಯಾಪಕರಲ್ಲಿ 7 ಮಂದಿ ಅಧ್ಯಾಪಕರಿಗೂ, ಇಬ್ಬರು ಅಧ್ಯಾಪಕಿಯರಿಗೂ ಯೋಗ್ಯತಾ ಪತ್ರವನ್ನು ಅಧ್ಯಕ್ಷರು ವಿತರಣೆ ಗೈದರು. ಅಧ್ಯಾಪಕರ ಪರವಾಗಿ ಶ್ರೀ ಪರಮೇಶ್ವರ ಮೈಯ್ಯರು ಮಾತಾಡಿದರು. ಬಳಿಕ ಅಧ್ಯಕ್ಷರು ಅಧ್ಯಾಪಕರ ಸೇವೆಯನ್ನು ಪ್ರಶಂಸಿಸಿ ಮಾತಾಡಿದರು. ಕೊನೆಗೆ ಶ್ರೀ ಸುಶೀಲೇಂದ್ರ ಆಚಾರ್, ಸಹಾಯಕ ಪರೀಕ್ಷಾಧಿಕಾರಿಗಳು ಧನ್ಯವಾದ ಸಮರ್ಪಣೆ ಗೈದರು.

ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ವಿಶೇಷ ಮಹಾಸಭೆ

ಉಡುಪಿ—ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ವಿಶೇಷ ಮಹಾಸಭೆಯು ತಾ. 20-6-65ರಂದು ಉದ್ದಿ ಬೋರ್ಡ್ ಹೈಸ್ಕೂಲಿನ ಜನತಾ ಭವನದಲ್ಲಿ ಸಂಘದ ಅಧ್ಯಕ್ಷ ಶ್ರೀ ಯಂ. ಮಧ್ವರಾಜ, ಎಂ. ಎಲ್. ಎ., ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಮೆನೇಜರರು ಆಗಮಿಸಿದ್ದರು.

ಸಂಘದ ಕಾರ್ಯದರ್ಶಿ ಶ್ರೀ ಕುರುಕಾಲು ಗಣಪಯ್ಯ ಶೆಟ್ಟರು ತಮ್ಮ ಸ್ವಾಗತ ಭಾಷಣದಲ್ಲಿ ಖಾಸಗಿ ಶಾಲೆಗಳನ್ನು ಸರಕಾರಕ್ಕೆ ಬಿಟ್ಟುಕೊಡುವ ಕುರಿತು ಇಲಾಖಾಧಿಕಾರಿಗಳಿಂದ ಇತ್ತೀಚೆಗೆ ಬಂದ ಸರ್ಕ್ಯುಲಾರಿನ ಕುರಿತು ವಿವರಿಸಿ, ಈ ಬಗ್ಗೆ ಯೋಗ್ಯ ನಿರ್ಣಯವನ್ನು ಕೈಕೊಳ್ಳಬೇಕಾಗಿದೆ ಎಂದರು. ತಮ್ಮ ಆಡಳಿತದಲ್ಲಿರುವ ಶಾಲೆಗಳನ್ನು ಸರಕಾರಕ್ಕೆ ಬಿಟ್ಟುಕೊಡಲು ತಾವು ಸಿದ್ಧರಿಲ್ಲವೆಂದು ಲೋರ್ಡ್ ಬಿಶೋಪರಿಂದ ಕಾರ್ಯದರ್ಶಿಗಳಿಗೆ ಬಂದ ಪತ್ರವನ್ನು ಸಭೆಯಲ್ಲಿ ಓದಿ ಹೇಳಲಾಯ್ತು.

ನಂತರ ನಡೆದ ವಿಚಾರಗೋಷ್ಠಿಯಲ್ಲಿ ಶ್ರೀಗಳಾದ ಎ. ಜೆ. ಅಲ್ಸೆ, ರೆ| ಫಾ| ದಿ. ಡಿ'ಸೋಜ, ಬನ್ನಾಡಿ ಸುಬ್ಬಣ್ಣ ಹೆಗ್ಡೆ, ಬಿ. ನಾರಾಯಣ ಹೆಗ್ಡೆ, ಕೆ. ಕೆ. ಕಲ್ಕೂರ, ಕೆ. ರಮೇಶರಾವ್, ಯಂ. ಯಲ್. ಕಲ್ಕೂರ, ಯಂ. ಅಚ್ಚಣ್ಣ ಶೆಟ್ಟಿ, ಆರ್. ಯಸ್. ಜತನ್ನ, ರಾಜೀವ ಕೋಟ್ಯಾನ್ ಮೊದಲಾದವರು ಭಾಗವಹಿಸಿದರು. ಶ್ರೀ ಬಿ. ವೆಂಕಟ್ರಾಯರು ಮಾತನಾಡುತ್ತಾ ಮೆನೇಜರರು ಆಡಳಿತೆಯನ್ನು ಬಿಟ್ಟುಕೊಡುವ ಪಕ್ಷದಲ್ಲಿ ಅಧ್ಯಾಪಕರ ಸರ್ವಿಸಿಗೆ ಭದ್ರತೆ ದೊರೆಯಬೇಕೆಂದರು. ನಂತರ ಈ ವರೆಗೆ ಸಂಘದ ಉಪಾಧ್ಯಕ್ಷರಾಗಿದ್ದ ರೆ| ಫಾ| ದಿ. ಯಸ್. ಡಿಸೋಜರು ಮಂಗಳೂರಿನ ಲೋರ್ಡ್ ಬಿಶೋಪರಾಗಿ ಪಟ್ಟಾಭಿಷಿಕ್ತರಾದ ಬಗ್ಗೆ ಅವರನ್ನು ಅಭಿನಂದಿಸುವ, ಖಾಸಗಿ ಶಾಲೆಗಳ ಹಸ್ತಾಂತರದ ಕುರಿತು ಸರಕಾರದಿಂದ ಬಂದ ಸರ್ಕ್ಯುಲಾರು ಒಂದೊಂದು ತಾಲೂಕಿಗೆ ಒಂದೊಂದು ವಿಧವಾಗಿದ್ದುದರಿಂದ ಅದರ ಮೂಲ ಪ್ರತಿಯನ್ನು ಈ ಸಂಘಕ್ಕೆ ಕೂಡಲೇ ಕಳುಹಿಸಿಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವ, ಆರ್ಥಿಕ ಮತ್ತಿತರ ಅನುಕೂಲತೆಗಳಿದ್ದು ಶಾಲೆಗಳನ್ನು ತಾವೇ ನಡೆಸುತ್ತೇವೆಂದು ತಿಳಿಸುವ ಮೆನೇಜರರ ಆಡಳಿತೆಯ ಹಕ್ಕನ್ನು ಊರ್ಜಿತವಿಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವುದಲ್ಲದೆ ಅಂಥವರ ರಕ್ಷಣೆಗೆ ಪೂರ್ಣ ಬೆಂಬಲ ನೀಡಬೇಕೆನ್ನುವ, ಖಾಸಗಿ ಶಾಲೆಗಳನ್ನು ಈ ವರೆಗೆ ನಡೆಸಿ ನಾಲಕೂಲಗಳಿಗೆ ಒಳಗಾಗಿ ಕೈಸೋತು, ಈಗ ಸರಕಾರಕ್ಕೆ ಬಿಟ್ಟುಕೊಡಲು ಸಿದ್ಧರಿರುವ ಮೆನೇಜರರಿಗೆ ಯೋಗ್ಯ ಪರಿಹಾರ ದೊರೆಯಬೇಕು. ಇಲ್ಲವೆ ಅವರ ಶಾಲಾ ಕಟ್ಟಡ ಮತ್ತು ಉಪಕರಣಗಳಿಗೆ ಯೋಗ್ಯ ಬಾಡಿಗೆ ದೊರೆಯಬೇಕು, ಮತ್ತು ಹಾಲಿ ಅಧ್ಯಾಪಕರ ಎಲ್ಲಾ ಸರ್ವಿಸ್ ಕಂಡಿಶನುಗಳನ್ನು ಊರ್ಜಿತವಿರಿಸಿ ಅವರಿಗೆ ಉದ್ಯೋಗ ಭದ್ರತೆ ದೊರೆಯಬೇಕೆನ್ನುವ ನಿರ್ಣಯಗಳಾದುವು.

ಶ್ರೀ ಯಂ. ಮಧ್ವರಾಜರು ತಮ್ಮ ಅಧ್ಯಕ್ಷ ಭಾಷಣದಲ್ಲಿ ತಾನು ಈ ಕುರಿತು ಸರಕಾರದೊಡನೆ ಚರ್ಚಿಸಿ ಆಡಳಿತೆದಾರರ ನ್ಯಾಯವಾದ ಬೇಡಿಕೆಗಳು ಈಡೇರುವಂತೆ ಶಕ್ತ್ಯಾನುಸಾರ ಪ್ರಯತ್ನವನ್ನು ಮಾಡುತ್ತೇನಾಗಿ ಭರವಸೆ ಇತ್ತ ಬಳಿಕ ಕಾರ್ಯದರ್ಶಿಯವರಿಂದ ಧನ್ಯವಾದಾರ್ಪಣೆಯಾಗಿ ಅಧ್ಯಕ್ಷರು ಏರ್ಪಡಿಸಿದ ಔತಣಕೂಟದೊಂದಿಗೆ ಸಭೆಯು ಮುಕ್ತಾಯವಾಯಿತು.

"ಕನ್ನಡ ತಾಯಿ" ಸಾಹಿತ್ಯ ಸ್ಪರ್ಧೆ ೧೦೦ ರೂ. ಪುರಸ್ಕಾರ

ಬೆಳಗಾವಿಯ "ಕನ್ನಡ ತಾಯಿ" ವಾರಪತ್ರಿಕೆಯ ಪ್ರಥಮ ವಾರ್ಷಿಕ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸುವದಕ್ಕಾಗಿ ಕನ್ನಡ ನಾಡಿನ ತರುಣ ಲೇಖಕರಿಂದ ಕಥೆ-ಕವನಗಳನ್ನು ಆಮಂತ್ರಿಸಲಾಗಿದ್ದು ಒಳ್ಳೆಯ ನೂರು ಲೇಖನಗಳಿಗೆ ಒಟ್ಟು ೧೦೦ ರೂ. ಪುರಸ್ಕಾರವನ್ನು ಹಂಚಲಾಗುವುದು.

ಲೇಖಕರು ಕಾಗದದ ಒಂದೇ ಬದಿಯಲ್ಲಿ ತಮ್ಮ ಕಥೆ-ಕವನಗಳನ್ನು ಸುಂದರವಾಗಿ ಬರೆದು ಕಳಿಸಬೇಕಾಗಿ ಕೋರಿಕೆ. ವಿವರಗಳಿಗೆ "ಕನ್ನಡ ತಾಯಿ" ವಾರಪತ್ರಿಕೆ ಬೆಳಗಾವಿ.

ದ. ಕ. ಜಿಲ್ಲೆಯ ಹೊಸ ಜಿಲ್ಲಾಧಿಕಾರಿ

ಚಿಕ್ಕಮಗಳೂರು ಜಿಲ್ಲೆಯ ಡೆಪ್ಯುಟಿ ಕಮಿಶನರ್ ಶ್ರೀ ಎಚ್. ಎಲ್. ನಾಗೇಗೌಡರನ್ನು ದಕ್ಷಿಣ ಕನ್ನಡದ ಡೆಪ್ಯುಟಿ ಕಮಿಶನರ್ ಆಗಿ ನೇಮಿಸಲಾಗಿದೆ.

ಸರಕಾರದ ಆರ್ಥಿಕ ಶಾಖೆಯಲ್ಲಿ ಡೆಪ್ಯುಟಿ ಸೆಕ್ರೆಟರಿಗಳಾಗಿದ್ದ ಶ್ರೀ ಸಿದ್ಧಯ್ಯ ಪುರಾಣಿಕರನ್ನು ಕೊಡಗು ಜಿಲ್ಲೆಯ ಡೆಪ್ಯುಟಿ ಕಮಿಶನರ್ ಆಗಿ ನೇಮಕ ಮಾಡಲಾಗಿದೆ.

'ಮರಡಿ ಗುಡ್ಡೆ'

ನಾ ಹೊರಟೆ 'ವಾಕಿಂಗ್"ಗೆಂದು
ಉಡುಪನ್ನು ಧರಿಸಿದ್ದೆ; ರಸ್ತೆಯಲಿ
ಇಳಿದಿದ್ದೆ—
ಎದುರಲ್ಲಿ ಬರುತಿದ್ದ ನನ್ನ ಮಿತ್ರ!
ಕೈಯನ್ನು ಕುಲುಕುತ್ತ; ಮುಗುಳು ನಗೆ
ಬೀರುತ್ತ
ಕೇಳಿದೆನು ಅವನಲ್ಲಿ—
"ಇಂದೆಲ್ಲಿ ಕಳೆಯುವುದು ಈ
ಸಂಜೆಯನ್ನ....?"
"ತೊರೆದು ಬಿಡು ಯೋಚನೆಯ
'ಮರಡಿ ಗುಡ್ಡೆ"ಯ ಹೆಸರು
ಕೇಳಿಲ್ಲವೇ....?
ಯಾಕಿನ್ನು ಚಿಂತೆ,...? ನಡೆ ನನ್ನ ಕೂಡೆ!"
—ಮಿತ್ರನಾಡಿದ ಮಾತು.
ಕೇಳಿದ್ದೆ ನಾನು
'ಮರಡಿಗುಡ್ಡೆ" ಹೌದು! ಅದೇ ಗುಡ್ಡೆ
ಕೊಳ್ಳೆಗಾಲದ 'ಮರಡಿ ಗುಡ್ಡೆ"
ಸೆಟೆದು ನಿಂತಿರುವುದು—ಇದು ಅಲ್ಲಿ
ಪಟ್ಟಣದ ಹೃದಯದಲ್ಲಿ-ಕೊಳ್ಳೆಗಾಲದಲ್ಲಿ
ಅಲ್ಲಿ ನಾ ಕುಳಿತಿದ್ದೆ; ಕುಳಿತು ನಾ
ಯೋಚಿಸಿದೆ—
'ಇದುವೆ ಎನ್ನೆದೆಯ ತಣಿಪ ತಾಣ!'
'ರೊಂಯ್, ರೊಂಯ್'ಗಾಳಿ-ಬೀಸುತಿದೆ
ಜೋರಾಗಿ
ನಿಮಿರೇಳಿಸುತ್ತಿದೆ— ತಂಪಾದ ಗಾಳಿ
ಗಿಡಮರಗಳ ಗುಂಪು; ಮನೆ, ಮಠಗಳ
ಸಾಲು;
ಉದ್ದಕ್ಕೆ ಚಾಚಿರುವ ಕೆಂಪು ರಸ್ತೆ;
ಅಲ್ಲಲ್ಲಿ 'ಡಾಮರು" ಹಾಕಿದ್ದ ಕಪ್ಪು
ಮಾರ್ಗ;
ಓಡಾಡುವುದು ಕಾರು, ಬಸ್ಸುಗಳ ಸಾಲು
—ಕುಳಿತಲ್ಲೆ ಕಾಣುವುದು
ಕೊಳ್ಳೆಗಾಲದ ಆಗು ಹೋಗು; ರಮ್ಯ
ಪ್ರಕೃತಿ ಸೌಂದರ್ಯ!

—ಕಾ. ರಾ. ಸಾರಂಗ,
ಕಾಸರಗೋಡು

ಇವಳು ಮಾನವಳಲ್ಲ, ದೇವತೆ

(ಎರಡನೇ ಪುಟದಿಂದ)

ಜಕುಮಾರಿಯು ಬಾಣ ಧನುಸ್ಸನ್ನೇರಿತು. ಕೂಡಲೇ ಆಕೆ ಗರ್ಜಿಸಿದಳು— "ಅಲ್ಲೇ ನಿಲ್ಲು! ಯಾರು ನೀನು?"

ಕಾಲ ರೂಪಿ ವ್ಯಕ್ತಿ ರಾಜಕುಮಾರಿಯನ್ನು ಕಂಡು ಬೆಚ್ಚಿಬಿದ್ದನು. ಭಯಭೀತ ಸ್ವರದಲ್ಲಿ ಆತ— "ಕಿಲ್ಲೆಯೊಳಗೆ ಬರಗೊಡಿರಿ. ಒಂದು ಅವಶ್ಯಕ ಸಂದೇಶವಿದೆ" ಎಂದನು.

"ಸಂದೇಶವೇನಿದೆಯೋ ಅದನ್ನು ಅಲ್ಲಿಂದಲೇ ಹೇಳು."

"ಬಹಳೇ ಗೌಪ್ಯ ವಿಷಯ."

"ಪರವಾಗಿಲ್ಲ ಹೇಳು."

"ಕಿಲ್ಲೆಯೊಳಗೆ ಬಂದು ಹೇಳುತ್ತೇನೆ."

"ಅದಕ್ಕಿಂತ ಮೊದಲು ಈ ಬಾಣ ನಿನ್ನ ಹೃದಯ ಹೊಕ್ಕೀತು.'

"ಮಹಾರಾಣಾ ವಿಪತ್ತಿನಲ್ಲಿದ್ದಾರೆ; ನಾನವರ ಚಾರ."

'ಪತ್ರವಿದ್ದರೆ ಮೇಲಕ್ಕೆ ಬಿಸಾಡು."

"ಇಲ್ಲ. ಬಾಯಿಂದಲೇ ಹೇಳಬೇಕಾಗಿದೆ.'

"ಹಾಗಾದರೆ ಬೇಗ ಹೇಳು.'

"ಇಲ್ಲಿಂದ ಹೇಳಲಾರೆ

'ಹಾಗಾದರೆ ತಗೋ', ರಾಜಕುಮಾರಿ ಬಾಣವನ್ನೆಸೆದಳು. ಆವನ ಹೃದಯವನ್ನು ಹಾದು ಹೊರಗೆ ಬಂತು. ರಾಜಕುಮಾರಿ ಗಟ್ಟಿಯಾಗಿ ಸಿಳ್ಳು ಹೊಡೆದಳು. ಇಬ್ಬರು ಸೈನಿಕರು ಓಡಿಬಂದರು. ರಾಜನಂದಿನಿಯ ಆಜ್ಞೆಯಂತೆ ಹಗ್ಗದ ಸಹಾಯದಿಂದ ಕಿಲ್ಲೆಯ ಕೆಳಗಿಳಿದು ಮೃತ ವ್ಯಕ್ತಿಯನ್ನವರು ಪರೀಕ್ಷಿಸಿದರು —ಅವನು ಮುಸಲ್ಮಾನನಾಗಿದ್ದನು. ಗಂಟಿನಲ್ಲಿ ತನ್ನೊಬ್ಬ ಯುವಕನಿದ್ದ. ರಾಜಕುಮಾರಿ ಗಹಗಹಿಸಿ ನಕ್ಕುಬಿಟ್ಟಳು. ಆನಂತರ ಆಕೆ ಪ್ರತಿಯೊಂದು ಬುರುಜಿಗೂ ಹೋಗಿ ಪಹರೆಯನ್ನು ನಿರೀಕ್ಷಣೆಗೈದಳು. ಪಶ್ಚಿಮ ದ್ವಾರದ ಬಳಿ ಆಕೆ ಮುಂದುವರಿದಳು, ದ್ವಾರ ರಕ್ಷಕ ದ್ವಾರದಲ್ಲಿರಲಿಲ್ಲ. "ಇಲ್ಲಿಯ ಕಾವಲುಗಾರನಾರು?" ರಾಜಕುಮಾರಿ ಗರ್ಜಿಸಿದಳು.

ವಯೋವೃದ್ಧ ಸೈನಿಕನೊಬ್ಬ ಮರೆಯಿಂದ ಮುಂದೆ ಬಂದು ರಾಜಕುಮಾರಿಗೆ ಮುಜರೆ ಮಾಡಿದನು. ಮೆಲ್ಲನೆ ಮುಂದುವರಿದು ಆತ ರಾಜಕುಮಾರಿಯ ಕಿವಿಯಲ್ಲಿ ಏನೋ ಹೇಳಿದ.

'ಹಾಂ, ಹಾಗೇನು? ಹಾಗಾದರೆ ಒಳ್ಳೆ ಲಂಚ ಕೂಡಾ ನಿಮಗೆ ಸಿಗಬಹುದು,' ಎಂದನ್ನುತ್ತಾ ನಕ್ಕಳು ಆಕೆ.

"ಹೌದು ಮಗೂ" ಎಂದು ಮುಗುಳ್ನಕ್ಕ ವೃದ್ಧ ಕಂಕುಳಡಿಯಿಂದ ಮೆಲ್ಲನೆ ಗಂಟೊಂದನ್ನು ತೆಗೆದು ಆತ ರಾಜನಂದಿನಿಗೆ ತೋರಿಸುತ್ತಾ—"ನೋಡು, ಇಷ್ಟು ಚಿನ್ನ ಈಗಾಗಲೇ ಸಿಕ್ಕಿದೆ" ಎಂದನು.

ಒಳ್ಳೆದು, ಬಾಬಾಜೀ, ಅವರ ಇಚ್ಛಾನುಸಾರವಾಗಿಯೇ ಮಧ್ಯರಾತ್ರಿಗೆ ನೀನು ಬಾಗಿಲು ತೆರೆದು ಬಿಡು ಅವರು ಮೂರ್ಖರು ಎಂದು ಸಿದ್ಧಮಾಡಿ ತೋರಿಸುತ್ತೇನೆ." ಎನ್ನುತ್ತಾ ನಕ್ಕಳು ರಾಜಕುಮಾರಿ. ವೃದ್ಧನೂ ತಲೆಯಲ್ಲಾಡಿಸಿ ನಗುತ್ತಾ ಅಲ್ಲಿಂದ ಹೊರಟು ಹೋದನು.

ಮಧ್ಯರಾತ್ರಿ ಸಂದಿತು. ಸುಮಾರು ಎರಡು ಗಂಟೆಯ ಹೊತ್ತು. ಬೆಳದಿಂಗಳು ಬಹುಶುಭ್ರವಾಗಿ ಹರಡಿತ್ತು. ಕೆಲವು ಮಂದಿ ಗಿಡಮರಗಳ ಮರೆಯಿಂದ ಬಹಳಷ್ಟು ಎಚ್ಚರಿಕೆಯಿಂದ ದುರ್ಗದತ್ತ ಮುಂದುವರಿಯುತ್ತಿದ್ದರು. ಮಲಿಕಕಾಫರ್ ಅವರ ಸರದಾರನಾಗಿದ್ದ. ಅವನ ಹಿಂದೆ ಆರಿಸಿದ ನೂರು ಮಂದಿ ಚತುರರಾದ ಸೈನಿಕರಿದ್ದರು. ಸಂಕೇತ ಸಿಗುತ್ತಲೇ ದ್ವಾರ ಪಾಲಕ ತನ್ನ ಪ್ರತಿಜ್ಞೆಯನ್ನು ಪೂರ್ಣಗೈದನು. ವಿಶಾಲಕಾಯ ದ್ವಾರ ತೆರೆಯಿತು. ನೂರು ಮಂದಿ ಮೌನವಾಗಿಯೇ ದುರ್ಗವನ್ನು ಹೊಕ್ಕರು. ಇಲ್ಲಿ ವರೆಗೆ ಎಲ್ಲವೂ ಸರಿಯಾಯ್ತು ಎಂದು ಮಂದ ಸ್ವರದಲ್ಲಿ ಅಂದು "ಗುಪ್ತ ಮಾರ್ಗದ ಮೂಲಕ ನಮ್ಮನ್ನು ದುರ್ಗದೊಳಗಿನ ಮಹಲುಗಳತ್ತ ಕರೆದು ಕೊಂಡು ಹೋಗುವ ಹಾಗೆ ಮಾಡುವುದಾಗಿ ನೀನು ಪ್ರತಿಜ್ಞೆ ಗೈದಿದ್ದ" ಎಂದ ಮಲ್ಲಿಕ ಕಾಫರ್.

"ನನ್ನ ಪ್ರತಿಜ್ಞೆ ಸುಳ್ಳಾಗಲಾರದು. ಮಾತುಕೊಟ್ಟು ನಾನು ತಪ್ಪಲಾರೆ, ಆದರೆ ನನ್ನ ಬಾಕಿ ಚಿನ್ನ ಮೊದಲು ಕೊಡಬೇಕು" ಎಂದ ರಜಪೂತ ಸೈನಿಕ.

"ತಗೋ."ಯವನ ಸೇನಾಧಿಪತಿ ಚಿನ್ನದ ಮೊಹರುಗಳುಳ್ಳ ಚೀಲವನ್ನು ಆ ಸೈನಿಕನ ಕೈಗಿತ್ತನು. ಮಹಾದ್ವಾರವನ್ನು ಮುಚ್ಚಿ ಬೀಗ ಹಾಕಿ ಮೌನವಾಗಿಯೇ ರಜಪೂತ ಸೈನಿಕ ಪ್ರಾಚೀರ ಬಾಯೆಯತ್ತ ಹೊರಟನು. ಮುಂದೆ ಮುಂದೆ ಹೋಗಿ ಆನಂತರ ತಿರುತಿರುಗುತ್ತಾ ಎಲ್ಲೋ ಆತ ನರಿಯಂತೆ ಮಾಯವಾದ. ಯವನ ಸೈನಿಕರು ಚಕ್ರವ್ಯೂಹದಲ್ಲಿ ಸಿಕ್ಕು ಬಿಟ್ಟಿದ್ದರು. ಹಿಂದು ಮುಂದಿನ ಮಾರ್ಗಗಳೊಂದೂ ಅವರಿಗೆ ಕಾಣದೆ ತಳಮಳಿಸಿದ್ದರು. ವಾಸ್ತವದಲ್ಲಿ ಅವರೆಲ್ಲರೂ ಸೆರೆಸಿಕ್ಕು ಬಿದ್ದರು. ತಮ್ಮ ಮೂರ್ಖತೆಗಾಗಿ ಪಶ್ಚಾತ್ತಾಪಪಡುತ್ತಿದ್ದರು. ಮಲಿಕಕಾಫರ ಹಲ್ಲು ಕಡಿಯುತ್ತಿದ್ದ. ಇಷ್ಟೊಂದು ಯವನ ಇಲಿಗಳನ್ನು ಒಮ್ಮೆಲೇ ಪಂಜರದಲ್ಲಿ ಹಿಡಿದು ಬಿಟ್ಟು ರಾಜಕುಮಾರಿ ತನ್ನ ಸಖಿಯರೊಡನೆ ನಗುತ್ತಿದ್ದಳು.

ಯವನ ಸೈನ್ಯದ ಆಕ್ರಮಣ ದುರ್ಬೋಧ್ಯವಾಗಿತ್ತು. ಕಿಲ್ಲೆಯೊಳಗೆ ಖಾದ್ಯ ಸಾಮಗ್ರಿ ದಿನೇ ದಿನೇ ಕಡಿಮೆಯಾಗುತ್ತಿತ್ತು. ಈ ಅಭಾವದಿಂದಾಗಿ ಆಗಮನ ನಿರ್ಗಮನಗಳೆರಡೂ ತಟಸ್ಥವಾಗಿದ್ದುವು. ರಜಪೂತರು ಹಸಿವೆಯಿಂದ ಕಂಗಾಲಾಗಿದ್ದರು. ರಾಜಕುಮಾರಿಯ ಶರೀರವು ಬಿಳುಪೇರಿತ್ತು, ಅವಳ ಅಂಗಾಂಗಗಳು ಶಿಥಿಲವಾಗಿದ್ದುವು. ಆದರೆ ಕಣ್ಣುಗಳ ತೇಜ ಯಥಾವತ್ತಾಗಿತ್ತು. ರಾಜಕುಮಾರಿಗೆ ಕೈದಿಗಳ ಭೋಜನದ ಚಿಂತೆಯಾಗಿತ್ತು. ಕಿಲ್ಲೆಯೊಳಗಿದ್ದ ಪ್ರತಿಯೊಬ್ಬ ವ್ಯಕ್ತಿ ರಾಜಕುಮಾರಿಯನ್ನು ದೇವಿಯಂತೆ ಪೂಜಿಸುತ್ತಿದ್ದ.

ಒಂದು ದಿನ ಆಕೆ ಕಾಫರನ ಬಳಿ ಹೋದಳು. "ಯವನಸೇನಾಪತಿ, ನಿನ್ನೊಂದಿಗೆ ಸ್ವಲ್ಪ ಪರಾಮರ್ಶೆಗೈಯಲಿದೆ; ವಿವಶಳಾಗಿದ್ದೇನೆ. ದುರ್ಗದಲ್ಲಿ ಆಹಾರ ಸಾಮಗ್ರಿ ಕಡಿಮೆಯಾಗುತ್ತಿದೆ. ನಿಮ್ಮಂತಹ ಅತಿಥಿಗಳ ಸೇವೆಯನ್ನು ನಾನು ಹೇಗೆ ಮಾಡಬೇಕೋ ತಿಳಿಯದಾಗಿದೆ. ತುಂಬಾ ಸಂಕೋಚವಾಗುತ್ತಿದೆ. ನಾಳೆಯಿಂದ ನಾವು ಒಂದು ಮುದ್ದೆ ಅನ್ನ ಉಣ್ಣುತ್ತೇವೆ. ಆದರೆ ದುರ್ಗದಲ್ಲಿರುವ ದವಸವೆಲ್ಲಾ ಮುಗಿಯುವ ತನಕ ನಿಮಗೆ ಎರಡು ಹಿಡಿ ಅನ್ನ ಕೊಡಲಾಗುವುದು. ಮುಂದೆ ದೈವೇಚ್ಛೆ!"

ಮಲ್ಲಿಕ ಕಾಫರನ ಕಣ್ಣಾಲಿಗಳು ತುಂಬಿಕೊಂಡವು. ಅವನು ಗದ್ಗದ ಸ್ವರದಲ್ಲಿ— "ರಾಜಕುಮಾರಿ, ನೀವು ಇಪ್ಪತ್ತು ಕಿಲ್ಲೆಗಳನ್ನೇ ಸಂರಕ್ಷಿಸಬಲ್ಲಿರಿ ಎಂದು ನನಗೆ ನಂಬುಗೆ ಇದೆ.

"ಹೌದು. ಆದರೆ ಇಪ್ಪತ್ತು ಕಿಲ್ಲೆಗಳ ಇರುತ್ತಿದ್ದವಷ್ಟೇ?" ರಾಜಕುಮಾರಿ ಅಲ್ಲಿಂದ ಹೊರಟು ಹೋದಳು.

ಆನಂತರ ಹದಿನೆಂಟು ವಾರಗಳು ಕಳೆದುವು.

ಅಲ್ಲಾವುದ್ದೀನನ ಗುಪ್ತಚಾರ ಬಂದು ಸುಲ್ತಾನನಿಗೆ ಕುರ್ನೀಸ್ ಮಾಡಿದನು.

'ರಾಜಕುಮಾರಿ ರತ್ನವತಿ ಕಿಲ್ಲೆಯನ್ನು ಬಿಡಲು ತಯಾರಾಗಿದ್ದಾಳೇನು?" ಅಲ್ಲಾವುದ್ದೀನನ ಸ್ವರ ಆಶಂಕಿತವಾಗಿತ್ತು.

"ಇಲ್ಲ ಖುದಾವಂದ್. ಯಾವುದೋ ವಿಷಯದಿಂದ ಆಹಾರ ಸಾಮಗ್ರಿಗಳು ಕಿಲ್ಲೆಗೆ ಮುಟ್ಟಿವೆ. ಇನ್ನು ಒಂಬತ್ತು ತಿಂಗಳು ನಾವಲ್ಲಿ ಕುಳಿತರೂ ದುರ್ಗಜೈವಶವಾಗಲಾರದು. ಅಲ್ಲದೆ ಅಲ್ಲಿಯ ಯಾವ ಕೆರೆಯಲ್ಲೂ ನೀರಿಲ್ಲ."

"ಇನ್ನೇನು ವಿಶೇಷ?"

"ಮಹಾರಾವ್ ರತ್ನಸಿಂಹ ಸುಲ್ತಾನರ ಸೇನೆಯನ್ನು ಮಾಳವದ ತನಕ ಹಿಮ್ಮೆಟ್ಟಿಸಿದ್ದಾನೆ."

ಹತಪ್ರಭನಾದ ಅಲ್ಲಾವುದ್ದೀನ ಮಹಾರಾವನೊಡನೆ ಸಂಧಿಯ ಪ್ರಸ್ತಾಪಗೈದನು.

ಮಂಗಲಕಲಶ ಶೃಂಗರಿಸಲ್ಪಟ್ಟಿತ್ತು; ದುರ್ಗದಲ್ಲಿ ಪ್ರತಿಯೊಬ್ಬ ವೀರನಿಗೆ ಪುರಸ್ಕಾರ ಕೊಡಲ್ಪಡುತ್ತಿತ್ತು. ಮಲಿಕ ಕಾಫರ್ ರತ್ನಸಿಂಹನ ಬಗಲಲ್ಲಿ ಕುಳಿತಿದ್ದ—"ಖಾನ್ ಸಾಹೇಬ್, ನನ್ನ ಅನುಪಸ್ಥಿತಿಯಲ್ಲಿ ಈ ಕಿಲ್ಲೆಯೊಳಗೆ ತಮಗೆ ಸಾಕಷ್ಟು ತೊಂದರೆಗಳಾಗಿರಬಹುದು. ಅದಕ್ಕಾಗಿ ನಾನು ಕ್ಷಮೆಯಾಚಿಸುತ್ತೇನೆ. ಯುದ್ಧ ನಿಯಮವೇ ಕಠಿಣವಾಗಿರುತ್ತದೆ. ನಿಮಗೇನೂ ತಿಳಿಯದುದಲ್ಲ. ಅಲ್ಲದೆ ಕಿಲ್ಲೆಯ ಮೇಲೆ ಭಯಾನಕ ಆಪತ್ತು ಕವಿದಿತ್ತು; ಹುಡುಗಿಯೊಬ್ಬಳೇ ಇದ್ದಳು ಆದರೂ ಸಾಧ್ಯವಿದ್ದುದನ್ನೆಲ್ಲಾ ಆಕೆ ಮಾಡಿದ್ದಾಳೆ." ಎಂದ ಮಹಾರಾವ್.

"ಮಹಾರಾಜ್", ರಾಜಕುಮಾರಿ ರೂಪಸಿಯಳು, ಅವಳು ಮಾನವಳಲ್ಲ ದೇವತೆ. ಅವಳ ಉಪಕಾರವನ್ನು ನಾನು ಜೀವನವಿಡೀ ಮರೆಯಲಾರೆ' ಎಂದು ಕಣ್ಣಲ್ಲಿ ನೀರು ತಂದುಕೊಂಡ ಮಲ್ಲಿಕ ಕಾಫರ್.

ಬಹುಮೂಲ್ಯವಾದ ಅಂಗರೇಖೆಯೊಂದನ್ನು ಉಪಹಾರವಾಗಿತ್ತು ಸ್ನೇಹ ವೀಳ್ಯವನ್ನಿತ್ತು ಮಹಾರಾವ್ ಆವನನ್ನು ಬೀಳ್ಕೊಂಡ.

ದುರ್ಗದೆಳಗೆ ಸಂತೋಷದ ಕಹಳೆ ಮೊಳಗುತ್ತಿತ್ತು.

— — —

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11-ಬಿ ಗನ್‌ಬೋ ಸ್ಟ್ರೀಟ್, ಮುಂಬೈ—1.

ನಮ್ಮ ವೈಶಿಷ್ಟ್ಯಗಳು:

- ● ಶಾಸ್ತ್ರೀಯ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರಪರೀಕ್ಷೆಯ ಪದವಿ ಪಡೆದವರಿಂದ
- ● ಮುಳ್ಳುದೃಷ್ಟಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು= ● ಅತ್ಯುತ್ತಮ ಗ್ಲಾಸುಗಳು ● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

NAVAYUGA 1—7—1985
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಆಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧-೭-೮೫ರಿಂದ ೭-೭-೮೫ರ ವರೆಗೆ

೧ ಮೇಷ

ಸಕಲ ಸಂಪತ್ಸಮೃದ್ಧಿಯಿಂದೊಡಗೂಡಿದ ನಿಮಗೆ ಇಂದಿನ ದಿನಗಳು ಕಳೆದುದೇ ತಿಳಿಯಲೊಲ್ಲದು. ಯಾವತ್ತೂ ನಿಮ್ಮ ಬಯಕೆಗಳು ನಿರ್ವಿಘ್ನದಿಂದ ಆಚರದಲ್ಲೇ ಫಲಿಸಲಿರುವವು. ಶತ್ರುಜನ ವೃಂದಕ್ಕೆ ಸಿಂಹಸ್ವರೂಪರಾಗಿರುವ ನೀವು ಸಕಲ ಜನ ಮನ್ನಣೆಯನ್ನು ಪಡೆವಿರಿ. ನಿಶ್ಚಿಂತರೂ ನಿರಾಮಯರೂ ಆದ ನಿಮಗೆ ವಾರಾಂತ್ಯದ 3 ದಿನಗಳು ಸರ್ವಸುಖಗಳನ್ನೀಯುವವು.

೨. ವೃಷಭ

ನಿಮ್ಮ ಧನಲಾಭಪತಿಗಳು ಶತ್ರುಕ್ಷೇತ್ರಗತರಾಗಿರುವುದರಿಂದ ನಿಮ್ಮ ಆರ್ಥಿಕ ಪರಿಸ್ಥಿತಿಯು ತೀರ ಕೆಳಮಟ್ಟಕ್ಕೆ ಬಂದಿದೆ. ವಿರೋಧಿಗಳ ಕಾಟವು ದಿನದಿಂದ ದಿನಕ್ಕೆ ಹೆಚ್ಚುವದು. ಆತ್ಮೀಯರ ವಿರಸ ಗೃಹತಾಪತ್ರಯಗಳಿಂದ ನಿಮ್ಮ ಮನಸ್ಸಿಗೆ ಸ್ವಲ್ಪವೂ ನೆಮ್ಮದಿಯಿರದು. ಕಫದೋಷವು ಆಗಾಗ ಕಾಣಿಸಿಕೊಳ್ಳಲಿದೆ. ಅತೀವ ಕಷ್ಟದಿಂದ ದಿನಗಳೆವ ನಿಮಗೆ ತಾ. 1, 2, 7 ಇದ್ದುದರಲ್ಲಿ ಉತ್ತಮವಾಗಿ ಕಾಣಿಸುವದು.

೩. ಮಿಥುನ

ಯಾವ ಕಾರ್ಯವನ್ನೂ ಮಾಡಲು ನಿಮ್ಮಲ್ಲಿಂದು ಉತ್ಸಾಹವಿಲ್ಲವು. ವಿಶೇಷತಃ ಮನೋರೋಗದಿಂದ ಬಳಲುವಿರಿ. ಮಾಡಿದ ಕಾರ್ಯಕ್ಕೂ ತಕ್ಕ ಪ್ರತಿಫಲವು ಸಿಗದೆ ಹಣದ ಬಿಕ್ಕಟ್ಟಿನಿಂದಾಗಿ ಮುಂದೇನು ಮಾಡಲೆಂಬ ಚಿಂತೆಯೇ ನಿಮ್ಮನ್ನು ಪೀಡಿಸಲಿರುವದು. ಅನಿರೀಕ್ಷಿತ ಪ್ರವಾಸಗಳೊದಗಿ ಹೆಚ್ಚಿನ ಕಷ್ಟನಷ್ಟಗಳಿಗೀಡುಮಾಡಲಿದೆ. ಇದೇ ಸಂಧಿಯಿಂದರಿತು ನಿಮ್ಮ ಪ್ರತಿಪಕ್ಷಿಗಳು ಸಾಕಷ್ಟು ಪೀಡೆಯನ್ನುಂಟುಮಾಡಲಿರುವರು. ತಾ. 3, 4 ಹೆಚ್ಚಿನ ದೋಷಕಾರಿಗಳಾಗಲಾರವು.

೪. ಕರ್ಕಟ

ಸಾಹಸಿಗಳಾದ ನಿಮಗೆ ದೈವವೂ ಅನುಕೂಲವಾಗಿರುವುದರಿಂದ ಎಂತಹ ಮಹತ್ಕಾರ್ಯವನ್ನೂ ಕೂಡ ಅನಾಯಾಸದಿಂದ ಸಾಧಿಸುವಿರಿ. ನಿರೀಕ್ಷಿಸಿದ ಫಲವು ಕೂಡ ಪ್ರಾಪ್ತವಾಗುವುದರಿಂದ ದಿನಗಳು ಸುಗಮವಾಗಲಿವೆ. ಆತ್ಮೀಯರ ವಿಯೋಗವುಂಟಾಗಲಿದೆ. ಸಂಸಾರದಲ್ಲಿ ಚಿಕ್ಕಪುಟ್ಟ ಕಲಹಗಳೂ ಸಂಭವಿಸುವವು. ವ್ಯವಹಾರ ಚತುರರಾದ ನಿಮಗೆ ತಾ. 1, 2, 5, 6, ಈ ದಿನಗಳಲ್ಲಿ ಗೃಹಸುಖ ಧನಲಾಭಗಳು ಲಭಿಸುವವು.

೫. ಸಿಂಹ

ವ್ಯವಹಾರ ಚತುರರಾದ ನಿಮ್ಮ ಕಾರ್ಯಕಲಾಪಗಳು ಏನೊಂದೂ ತೊಡಕು ತೊಂದರೆಗಳಿಲ್ಲದೆ ಕೊನೆಹೊಂದುವವಾದರೂ ನೀವು ನಿರೀಕ್ಷಿಸಿದಂತೆ ಫಲವನ್ನು ಮಾತ್ರ ಕೊಡಲಾರವು. ಸ್ವಾತಂತ್ರ್ಯಪ್ರಿಯಳಾದ ಅರ್ಧಾಂಗಿಯು ಕೂಡ ಮಾತಿಗೆ ಮಾತು ಬೆಳೆದು ಕಲಹದಲ್ಲಿ ಪರ್ಯವಸಾನಹೊಂದಲಿದೆ. ರಾಜಕೀಯೇತರ ಚಟುವಟಿಕೆಗಳಲ್ಲಿ ನಿಮ್ಮೆಣಿಕೆಯು ವಿಫಲವಾಗದು. ತಾ. 3, 4, 7 ಈ ದಿನಗಳಲ್ಲಿ ಮೃಷ್ಟಾನ್ನ ಭೋಜನ ಮನಶ್ಶಾಂತಿ ಲಭಿಸೀತು.

೬. ಕನ್ಯಾ

ಸುದೈವಿಗಳಾದ ನಿಮ್ಮ ಎಲ್ಲಾ ಚಟುವಟಿಕೆಗಳೂ ನಿರೀಕ್ಷೆಗಿಂತಲೂ ಅಧಿಕ ಫಲವನ್ನೀಯಲಿವೆ. ಎಂತಹ ದುಸ್ಸಾಧ್ಯವಾದ ಕಾರ್ಯವೇ ಇರಲಿ ನೀವು ಯಾರ ಸಹಕಾರವನ್ನೂ ಯಾಚಿಸದೆ ಸ್ವಯಂ ನಿರ್ವಹಿಸಲು ಶಕ್ತರಿರುವಿರಿ. ನಿಮ್ಮ ಕರ್ತೃತ್ವ ಶಕ್ತಿಯು ಶತ್ರು ಹೃದಯವನ್ನೂ ಕೂಡ ಬೆರಗುಗೊಳಿಸೀತು. ಸ್ವಂತ ದೇಹಾರೋಗ್ಯದತ್ತ ಸ್ವಲ್ಪ ನಿಗಾ ವಹಿಸಿರಿ. ತಾ. 1, 2, 5, 6 ಈ ದಿನಗಳಲ್ಲಿ ಕಾರ್ಯಸಿದ್ಧಿ ಧನಲಾಭ ಭೋಗಗಳನ್ನು ಪಡೆವಿರಿ.

೭. ತುಲಾ

ಎಷ್ಟೇ ಪ್ರಾಮಾಣಿಕತೆಯಿಂದ ವರ್ತಿಸಿದರೂ ನೀವಿಂದು ಅಧಿಕಾರಿಗಳ ಬಾಯಿಗೆ ಬೀಳಲಿರುವಿರಿ. ಗುರುಹಿರಿಯರ ಕೂಡೆ ಮನಸ್ತಾಪವುಂಟಾಗಲಿದೆ. ನಿತ್ಯ ಜೀವನದ ಮೂಲಗಳ ತುಷ್ಟಿಯು ಈ ಕಾಲದಲ್ಲಿ ನಿಮ್ಮ ದುಡಿಮೆಯು ಸಮುದ್ರಕ್ಕೆ ಇಂಗು ಕದಡಿದಂತಾದೀತು. ಎಷ್ಟೇ ಮಿತಭಾಷಿಯಾದ್ದರೂ ಕೂಡ ಜನತೆಯು ಕಾಲ್ಕೆರೆದು ನಿಮ್ಮ ಕೂಡೆ ಜಗಳಕ್ಕೆ ನಿಲ್ಲುವರು. ಅತೀವ ಕಷ್ಟದಿಂದ ಕಾಲಯಾಪನೆ ಮಾಡತಕ್ಕ ನಿಮಗೆ ತಾ. 5, 6ರಲ್ಲಿ ಆಕಸ್ಮಿಕ ಖರ್ಚು ದೇಹಾಲಸ್ಯಗಳು ಕಂಡುಬರಲಿವೆ.

೮. ವೃಶ್ಚಿಕ

ಸದ್ಯ ಗುರ್ವಂಗಾರಕರ ಅನುಗ್ರಹದಿಂದ ನಿಮ್ಮ ಸಂಸಾರರಥವು ಸುಗಮವಾಗಿ ಸಾಗಲಿದೆ. ಸಮಾಜದಲ್ಲಿ ಸ್ಥಾನಮಾನಗಳೂ ವಾದವಿವಾದಗಳಲ್ಲಿ ವಿಜಯವೂ ಲಭಿಸೀತು. ಕೈ ಕೆಸರಾದರೆ ಬಾಯಿ ಮೊಸರಾದೀತೆಂಬ ಗಾದೆಯಂತೆ ಕೆಲಸಕ್ಕೆ ತಕ್ಕ ಫಲವು ದೊರೆವುದರಿಂದಾಗಿ ನಿಶ್ಚಿಂತೆಯಿಂದ ಕಾಲ ಕಳೆವಿರಿ. ನಿಮ್ಮ ಮನೋದೌರ್ಬಲ್ಯದ ಪರಿಣಾಮವಾಗಿ ದುಡಿಮೆಯಲ್ಲಿನ ಬಹ್ವಂಶ ಅಪವ್ಯಯವಾಗುವದು. ತಾ. 3ರಿಂದ 6ರ ವರೆಗಿನ ದಿನಗಳು ಅನುಕೂಲವಾಗಿವೆ.

೯. ಧನು

ಸಾಧಿಸಿದರೆ ಸಬಳ ನುಂಗಬಹುದೆಂಬ ಗಾದೆಯಂತೆ ನೀವಿಂದು ಮನಮಾಡಿದರೆ ಯಾವ ಕೆಲಸವೂ ನಿಮಗೆ ಅಶಕ್ಯವೆನಿಸದು. ಯಾರ ಹೊಗಳಿಕೆಯನ್ನೂ ತೆಗಳಿಕೆಯನ್ನೂ ನೀವು ಗಣನೆಗೆ ತರುವದಿಲ್ಲ. ಮನಸ್ಸಿಗೆ ಸರಿದೋರಿದುದನ್ನು ಮಾಡಿಯೇ ತೀರುವಿರಿ. ಇದರಿಂದಾಗಿ ಕೆಲವರು ಆತ್ಮೀಯರ ವಿರೋಧಕ್ಕೆ ಗುರಿಯಾದೀರಿ. ಕಾರ್ಯದಕ್ಷರಾದ ನಿಮಗೆ ತಾ 5, 6, 7ರಂದು ವಿಶೇಷ ಧನಾಗಮ ವಿಜಯಗಳು ಲಭಿಸುವವು.

೧೦. ಮಕರ

ಬಹುಮಟ್ಟಿಗೆ ನೀವಿಂದು ಶತ್ರುಗಳ ಕಾಟದಿಂದ ಮುಕ್ತರಾದಿರೆನ್ನಬಹುದು. ಅಷ್ಟೇಷ್ಟರ ಸಹಕಾರದಿಂದಾಗಿ ಕೆಲವೊಂದು ನಿಮ್ಮ ಬಯಕೆಗಳು ಈಡೇರಲಿವೆ. ಆದರೆ ನಿಮ್ಮ ಗೃಹಕೃತ್ಯದ ಅವ್ಯವಸ್ಥೆಯಿಂದಾಗಿ ಪರಸ್ಪರ ಬಿಕ್ಕಟ್ಟು ತಲೆದೋರಲಿದೆ. ವ್ಯಾಪಾರೀ ಜನತೆಗೆ ಅನಿರೀಕ್ಷಿತ ನಷ್ಟವಾಗುವಂತಿದೆ. ತಾ. 1, 2, 7 ಈ ದಿನಗಳು ಇತರ ದಿನಗಳಿಗಿಂತ ಉತ್ತಮವಿರುವವು.

೧೧. ಕುಂಭ

ಕಾಲವು ತೀರ ವಕ್ರವಾಗಿರುವುದು. ಯಾರು ನಿಮ್ಮ ಹಿತಚಿಂತಕರೆಂದು ನೀವೆಣಿಸಿರುವಿರೋ ಅವರೇ ನಿಮ್ಮ ಮೇಲೆ ಎರಡೆಂಟು ಬಗೆಯಲಿರುವರು. ಅಲ್ಲದೆ ನೀವಿಂದು ಅನೇಕ ಸಮಸ್ಯೆಗಳನ್ನೆದುರಿಸಬೇಕಾಗಿ ಬರುವದು. ಏಕಾಂಗಿಗಳಾದ ನೀವು ಶತ್ರುಜನರ ಬಲೆಗೆ ಸಿಕ್ಕು ನಷ್ಟಕಷ್ಟಗಳನ್ನೆದುರಿಸಲಿರುವಿರಿ. ವಿಷಕ್ರಿಮಿನ್ಯಾಯದಿಂದ ದಿನಗಳೆವ ನಿಮಗೆ ವಾರಾದಿಯ 4 ದಿನಗಳು ಹೆಚ್ಚಿನ ದೋಷಕಾರಿಗಳಲ್ಲ.

೧೨. ಮೀನ

ದುರ್ದೈವವೇ ಮೂರ್ತಿಮತ್ತಾಗಿ ಬಂದು ನಿಮ್ಮನ್ನು ಕಾಡುತಿಹುದೆಂದರೂ ಅತಿಶಯೋಕ್ತಿಯೆನಿಸದು. ಶುಕ್ರೇತರ ಗ್ರಹರ ಮುನಿಸಿಗೆ ಗುರಿಯಾಗಿರುವ ನಿಮಗೆ ಸರ್ವತ್ರ ಅಪಮಾನ ತಿರಸ್ಕಾರಗಳು ಲಭಿಸುವವು. ಆರ್ಥಿಕ ದುರವಸ್ಥೆಗೆ ಸಿಲುಕಿದ ನಿಮಗೆ ತಾ. 3ರಿಂದ 6ರ ವರೆಗಿನ ದಿನಗಳು ಸಾಕಷ್ಟು ಅನುಕೂಲವಾಗಿವೆ.

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಸುಲಭವಾಗಿ ಕಲಿಯಬಹುದಾದ
ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭವಾಗಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.

—ಸಾದಾ ಪ್ರತಿ 2:00. ಉತ್ತಮ ಪ್ರತಿ 2:50.

ಪುಸ್ತಕದ ಬೆಲೆಯೊಂದಿಗೆ 25 ಪೈಸೆ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೊಲೇಜ್ ಬುಕ್ ಕಂಪೆನಿ, ಇಂಡಿಯನ್ ಇಂದಸ್ಟ್ರಿಯಲ್ಸ್ & ಏಜನ್ಸೀಸ್
ಶ್ರೀನಿವಾಸ್ ಬ್ರದರ್ಸ್, ಪುತ್ತೂರಲ್ಲಿ ಪ್ಯೊಪ್ಯುಲರ್ ನ್ಯೂಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Directer of Public Instruction Madras

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪] ಜುಲೈ ೮, ೬೫ [ಸಂಚಿಕೆ ೪೫



Phone No. 226
ಫೋನ್ ನಂಬರು 226

NAVAYUGA

leading nationalist weekly

೨೦ ಪೈಸೆ

ಕಥಾ ಪ್ರಪಂಚ

"ಎಲ್ಲಿರುವೆ ತಂದೆ ಬಾರೋ"

ಬರೆದವರು
ಶ್ರೀ ಕೆ. ನಾರಾಯಣಾಚಾರ್, ಶಿರೋಮಣಿ, ವಿದ್ವಾನ್, ಕಣ್ವತೀರ್ಥ.

ರೈಲು ಬಂಡಿಯು ಚಲಿಸಲು ಆರಂಭಿಸಿದಾಗ ಕಠೋರವಾದ ಸಿಳ್ಳಿನ ಶಬ್ದವು ಸ್ಟೇಶನಿನ ಪ್ಲೇಟ್‌ಫೋರ್ಮನ್ನು ಆವರಿಸಿತು. ಕಂಪಾರ್ಟ್‌ಮೆಂಟಿನೊಳಗೆ ಇದ್ದ ಜಾಗವನ್ನೆಲ್ಲಾ ತರಕಾರಿ ಬುಟ್ಟಿಗಳು ಆಕ್ರಮಿಸಿದ್ದವು. ನಾನು ಹೇಗಾದರೂ ದಾರಿ ಮಾಡಿಕೊಂಡು ಹೋಗಿ ಒಂದು ಸೀಟನ್ನು ಹಿಡಿದೆನು. ಒಳಗೆ ಗಾಳಿಯೇನೂ ಇರಲಿಲ್ಲ. ಆದರೆ ಬಂಡಿಯು ವೇಗವಾಗಿ ಚಲಿಸತೊಡಗಿದಾಗ ತಂಪಾದ ಗಾಳಿಯು ಒಳಗೆ ನುಗ್ಗಿ ಬರುತ್ತಿತ್ತು.

ನಾನು ಸುತ್ತಲೂ ನೋಡಿದೆನು. ಹೆಚ್ಚಿನ ಯಾತ್ರಿಕರು ಅನಂತರದ ಸ್ಟೇಷನಿಗೆ ಹೋಗುವ ತರಕಾರಿ ಮಾರಾಟಗಾರರಾಗಿದ್ದರು. ಅವರ ನಿರಂತರವಾದ ಹರಟೆ, ಹಳ್ಳಿಯ ಪರಿಹಾಸ್ಯ ಮತ್ತು ಗಟ್ಟಿಯಾದ ನಗೆ ಬಂಡಿಯೊಳಗೆ ತುಂಬಿಕೊಂಡಿತ್ತು. ನನ್ನ ಹಿಂದುಗಡೆಯಲ್ಲಿ ಗಂಡ ಹೆಂಡತಿಬ್ಬರು, ಅವರ ಇಬ್ಬರು ಮಕ್ಕಳೂ ಕುಳಿತು ಕೊಂಡಿದ್ದರು. ಗಂಡನು ದೃಢಕಾಯನೂ, ಪುಷ್ಟಿಯುಳ್ಳವನೂ ಆಗಿದ್ದನು. ಆದರೆ ಬಡ ರೀತಿಯ ಉಡುಪು ಧರಿಸಿದ್ದನು. ಒಬ್ಬ ಕೂಲಿಯವನು ಅಥವಾ ಕಾರ್ಖಾನೆಯ ಕೆಲಸಗಾರನಾಗಿರಬೇಕೆಂದು ಸ್ಪಷ್ಟವಾಗುತ್ತಿತ್ತು. ನನ್ನ ಎದುರಿಗೆ ಒಬ್ಬ ದೊಡ್ಡ ಹೊಟ್ಟೆಯ ಶ್ರೀಮಂತನು ಶುದ್ಧ ಬಿಳೀ ಸೂಪರ್‌ಫೈನ್ ಧೋತಿಯನ್ನುಟ್ಟು ಸಿಲ್ಕಿನ ಶರ್ಟನ್ನು ಧರಿಸಿ ಕುಳಿತುಕೊಂಡಿದ್ದನು. ಅವನ ಕೊರಳ ಸುತ್ತಲೂ ಒಂದು ಬಂಗಾರದ ಚೈನು ಇತ್ತು. ಬೆರಳುಗಳಲ್ಲಿ ವಜ್ರದ ಉಂಗುರಗಳು ಥಳ ಥಳ ಹೊಳೆಯುತ್ತಿದ್ದವು. ಅವನು ಹಣ ಸಾಲ ಕೊಡುವ ಒಬ್ಬ ಶ್ರೀಮಂತ ಅಥವಾ ಕಮಿಶನ್ ಏಜೆಂಟನಾಗಿರಬೇಕೆಂದೂ ಕಂಡು ಬರುತ್ತಿತ್ತು.

ಬಂಡಿಯು ವೇಗವಾಗಿ ಹೋಗುತ್ತಿತ್ತು. ಆಗ ಅಕಸ್ಮಾತ್ತಾಗಿ ನನ್ನ ಪ್ರೀತಿಯ ಹಾಡನ್ನು ಹಾಡುತ್ತಿರುವ ಒಂದು ಇಂಪಾದ ಧ್ವನಿಯು ಕೇಳಿಸಿತು. ನಾನು ಆಶ್ಚರ್ಯದಿಂದ ಸುತ್ತಲೂ ನೋಡಿದೆನು. ನನ್ನ ಸಹಯಾತ್ರಿಕರಲ್ಲಿ ಯಾರಲ್ಲಿ ರೇಡಿಯೋ ಇದೆ? ತರಕಾರಿ ಮಾರಾಟಗಾರರು ಈಗ ಬಹಳ ಲಾಭ ಮಾಡುತ್ತಿದ್ದಾರೆ. ಅವರಲ್ಲಿ ಯಾರಾದರೊಬ್ಬರಲ್ಲಿ ರೇಡಿಯೋ ಇದ್ದರೆ ಅದು ಕಾಲೋಚಿತವೆಂದೇ ನನಗೆ ಕಂಡಿತು. ಏಕೆ? ಒಬ್ಬ ಬಿಕ್ಷುಕನ ಹೆಗಲ ಮೇಲೆ ಒಂದು ರೇಡಿಯೋ ನೇತಾಡುತ್ತಿದ್ದರೆ. ಅದು ಕೂಡ ಈಗ ನನಗೆ ಆಶ್ಚರ್ಯವೆನಿಸುತ್ತಿರಲಿಲ್ಲ.

ಆದರೆ ನಾನು ಕೇಳಿದ ಹಾಡು ರೇಡಿಯೋದಿಂದ ಬಂದುದಲ್ಲ. ಅದೊಬ್ಬ ಭಿಕ್ಷುಕ ಹಾಡುತ್ತಾ ಮೆಲ್ಲಗೆ ನಮ್ಮ ಕಡೆಗೆ ಬರುತ್ತಿದ್ದ. ಅವನು ಹಾಡುವ ಧಾಟಿ ಮತ್ತು ಅವನ ಮಧುರವಾದ ಕಂಠವು ಸುಪ್ರಸಿದ್ಧ ಸಂಗೀತ ಕಲಾಕೋವಿದರಾದ ಬಿಡಾರಂ ಕೃಷ್ಣಪ್ಪನವರ ಸಂಪೂರ್ಣ ಅನುಕರಣೆಯಾಗಿತ್ತು. ಕಂಬಿಗಳ ಮೇಲೆ ಹೊರಳಾಡುವ ಚಕ್ರಗಳ ಕಟಕಟ ಧ್ವನಿ, ಕಂಪಾರ್ಟ್‌ಮೆಂಟಿನ ಅಲುಗಾಡುವ ಶಬ್ದ, ಮತ್ತು ತರಕಾರಿ ಮಾರಾಟಗಾರರ ಬೊಬ್ಬೆಯ ಮಾತುಗಳು ಇವುಗಳ ಹಿಂದಿನಿಂದ ಥಕ್ಕನೆ ಭಿಕ್ಷುಕನ ಬಾಯಿಯಿಂದ ಹೊರಟ ಈ ಇಂಪಾದ ಸ್ವರವು ಅದು ರೇಡಿಯೋ ಸಂಗೀತವೆಂಬ ಕಲ್ಪನೆಯನ್ನು ನನಗೆ ಉಂಟುಮಾಡಿತು.

ಆ ತರಕಾರಿ ಬುಟ್ಟಿಗಳ ಮೂಲಕ ದಾರಿಮಾಡಿಕೊಂಡು ಮೆಲ್ಲಗೆ ಬರುತ್ತಿದ್ದ ಆ ಭಿಕ್ಷುಕನನ್ನು ನಾನು ಆಶ್ಚರ್ಯದಿಂದ ನೋಡಿದೆನು. ಜನರು ಒಂದೆರಡು ಪೈಸೆ ಕೊಡಬಹುದೆಂಬ ಆಶೆಯಿಂದ ಅವನು ಆಗಾಗ್ಗೆ ಕೈ ನೀಡುತ್ತಿದ್ದನು. ಆದರೆ ಪೈಸೆಗಳು ಮುಂದೆ ಬರುತ್ತಿರಲಿಲ್ಲ. ಅಷ್ಟು ಇಂಪಾಗಿ ಹಾಡಬಲ್ಲವನಾಗಿದ್ದರೂ ಅವನಿಗೆ ಭಿಕ್ಷೆ ಬೇಡುವ ಸ್ಥಿತಿಯು ಬಂದಿದೆಯೆಂದು ನಾನು ಅವನ ಮೇಲೆ ಕನಿಕರಪಟ್ಟೆನು.

ಭಿಕ್ಷುಕನು ನನ್ನ ಸೀಟಿನ ಸಮೀಪಕ್ಕೆ ಬರುತ್ತಿದ್ದನು. ನನ್ನ ಎದುರಿಗಿದ್ದ ಆ ಶ್ರೀಮಂತನಾಗಿ ಕಾಣುವ ಮನುಷ್ಯನ ಮುಂದೆ ಅವನು ಕೈನೀಡಿದನು.

"ತೊಲಗು" ಎಂದು ಆ ಮನುಷ್ಯನು ವಜ್ರದ ಉಂಗುರಗಳಿಂದ ಹೊಳೆಯುವ ಬೆರಳುಗಳುಳ್ಳ ತನ್ನ ಕೊಬ್ಬಿದ ಕೈಯನ್ನು ಅಲ್ಲಾಡಿಸಿ ಗಟ್ಟಿಯಾಗಿ ಕೂಗಿದನು. ಆ ಮೇಲೆ ಅವನು ಪ್ರಾಪಂಚಿಕ ಸ್ಥಿತಿಯನ್ನು ಚೆನ್ನಾಗಿ ಬಲ್ಲವನಂತೆ ನನ್ನ ಕಡೆಗೆ ತಿರುಗಿ ನೋಡಿ ಹೇಳಿದನು—'ಈ ಜನರನ್ನು ಎಂದೂ ನಂಬಬಾರದು. ಇವರೆಲ್ಲಾ ಸುಮ್ಮನೆ ನಟನೆ ಮಾಡುವವರು. ಮತ್ತೇನೂ ಅಲ್ಲ. ಇವನು ಅರೆ ಕುರುಡನಾಗಿ ನಟಿಸುತ್ತಾನೆ. ಆದರೆ ಇವನೊಬ್ಬ ದೊಡ್ಡ ಕಳ್ಳ ಅಥವಾ ಕಿಸೆಗಳ್ಳನಾಗಿ ಸಿಕ್ಕಿ ಬಿದ್ದರೆ ನನಗೇನೂ ಆಶ್ಚರ್ಯವಾಗಲಾರದು. ನಾವು ಸ್ವಲ್ಪ ಅಜಾಗ್ರತೆ ಮಾಡಿದರೆ ಸಾಕು. ಅವರು ನಮ್ಮ ಪರ್ಸನ್ನು ಅಥವಾ ಜೇಬಿನದನ್ನಾದರೂ ಎತ್ತಿಕೊಂಡು ಹೋಗುವರು."

ಆ ಸಂಗೀತವು ನಿಂತಿತು. ಭಿಕ್ಷುಕನು ಆಕ್ಷೇಪಿಸಿದನು—'ಸ್ವಾಮಿ! ನಾನೊಬ್ಬ ಭಿಕ್ಷುಕ, ನಿಜ. ಭಿಕ್ಷುಕರು ಕೊಡುವವನಾರು? ಕೊಡದವನಾರು? ಎಂದು ತಿಳಿಯಲಾರರು. ನೀವು ನನಗೆ ಒಂದು ಪೈಸೆಯನ್ನೂ ಕೊಡದಿರಬಹುದು. ಆದರೆ ದುಷ್ಟ ಕಳ್ಳ ಎಂದು ನೀವು ನನ್ನನ್ನು ಬೈಯುವುದು ಸರಿಯಲ್ಲ.'

"ಫಟಿಂಗ!" ತಿರುಗಿ ಆ ಶ್ರೀಮಂತನು ಕೂಗಿದನು. "ನೀಚ, ನೀನು ಬಡ ಭಿಕ್ಷುಕ, ಕಳ್ಳ, ನನಗೆ ಉತ್ತರ ಕೊಡುವೆಯಾ? ನಾನು ನಿನ್ನನ್ನು ಪೋಲೀಸರಿಗೆ ಒಪ್ಪಿಸುವೆನು. ಅಧಮ, ಏನೆಂದು ತಿಳಿದಿದ್ದಿ?" ಅವನ ಕೋಪವು ಕ್ರಮೇಣ ಹೆಚ್ಚು ಹೆಚ್ಚಾಗತೊಡಗಿತು. ಮುಖ ವಿಕಾರವಾಯಿತು. ಎದ್ದು ನಿಂತ ಆ ಭಿಕ್ಷುಕನ ಕೊರಳು ಹಿಡಿಯಲು ಕೈ ನೀಡಿದನು. ಆದರೆ ಬೇರೆ ಇಬ್ಬರು ಆ ಭಿಕ್ಷುಕನನ್ನು ದೂರಕ್ಕೆ ಎಳೆದು, ಆ ದೊಡ್ಡ ಮನುಷ್ಯರಿಗೆ ಎದುರಾಡುವಷ್ಟು ದುಡುಕಿದುದಕ್ಕೆ ಅವನನ್ನು ಬೈದರು. ಆ ದೊಡ್ಡ ಮನುಷ್ಯನೂ ತನ್ನ ಸ್ವಾಭಿಮಾನವು ಉಳಿಯಿತೆಂದು ತಿಳಿದು ಸಿಟ್ಟಿನ ಮುಖ ಮಾಡಿಕೊಂಡು ಕುಳಿತನು. ಆದರೆ ಈ ಹೋರಾಟವನ್ನು ಕಂಡ ಬೇರೆ ಯಾತ್ರಿಕರು ಟೀಕಿಸಲು ಶುರು ಮಾಡಿದರು. ಆ ವಜ್ರದ ಉಂಗುರ ಧರಿಸಿದ ಮನುಷ್ಯನ ಕುರಿತು ಅವರಾಡಿದ ಕೆಟ್ಟ ಮಾತುಗಳು ನನ್ನೆದುರಿಗಿದ್ದ ಅವನ ಕಿವಿಗಳಿಗೆ ಕಠೋರವೆನಿಸಿದವು. ಆದರೆ ಅವನು ತನ್ನ ನಾಲಿಗೆಯನ್ನು ಬಿಗಿ ಹಿಡಿದು ಹೇಗಾದರೂ ತನ್ನ ಕೋಪವನ್ನು ತಡೆಹಿಡಿದನು. ಏಕೆಂದರೆ ಅವನೇನಾದರೂ ಒಂದು ಮಾತು ಹೇಳಿದ್ದರೆ ಭಿಕ್ಷುಕನ ಮೇಲೆ ಸಹಾನುಭೂತಿ ತೋರಿಸಿದ ಇತರರೂ, ಅಪಹಾಸ್ಯಕರವಾದ ನಗೆ, ಕಠೋರವಾದ ಟೀಕೆ ಮತ್ತು ಬೈಗಳ ಸುರಿಮಳೆಗೇ ಪ್ರಾರಂಭಿಸುತ್ತಿದ್ದರು.

ನಾನು ಆ ಭಿಕ್ಷುಕನಿಗೆ ಏನಾದರೂ ಕೊಡಬೇಕೆಂದು ಆಲೋಚಿಸಿದೆನು. ಆದರೆ ನನ್ನಲ್ಲಿ ಬರೇ ಒಂದು ರೂಪಾಯಿಯ ನೋಟು ಇತ್ತು. ಅದನ್ನು ಕೊಟ್ಟು ಬಿಡಲು ಸಾಧ್ಯವಿರಲಿಲ್ಲ. ಏಕೆಂದರೆ ಮನೆಗೆ ಹೋಗಿ ಮುಟ್ಟಲು ಬಸ್ಸಿಗೆ ಸ್ವಲ್ಪ ಚಿಲ್ಲರೆ ಹಣ ಬೇಕಾಗಿತ್ತು. ಆದ್ದರಿಂದ ನಾನು ಬೇರೆ ಕಡೆ ತಿರುಗಿ ಗೌರವಭಾವವನ್ನುಳಿಸಿಕೊಳ್ಳಲು ಯತ್ನಿಸಿದೆನು.

ಭಿಕ್ಷುಕನು ನನ್ನ ಹಿಂದುಗಡೆ ಬೇರೆ ಸೀಟಿನ ಕಡೆಗೆ ಹೋಗಿ ತಿರುಗಿ "ಎಲ್ಲಿರುವೆ ತಂದೆ ಬಾರೋ" ಎಂದು ಹಾಡುತ್ತಿದ್ದನು.

ಮಧುರವಾದ ರಾಗವು ಮುಂದರಿಯಿತು. ನನ್ನ ಹಿಂದುಗಡೆ ಇರುವ ಮನುಷ್ಯನ ಮುಂದೆ ಭಿಕ್ಷುಕನು ಕೈ ನೀಡಿದನು.

"ನಿನ್ನ ಹೆಸರೇನು?" ಎಂದು ಆ ಮನುಷ್ಯನು ಕೇಳಿದನು.

"ರಾಮಪ್ಪ" ಎಂದ ಭಿಕ್ಷುಕನು ಉತ್ತರ ಕೊಟ್ಟನು.

"ನೀನು ಬಹು ಚೆನ್ನಾಗಿ ಹಾಡುತ್ತೀ. ನೀನೆಲ್ಲಿ ಸಂಗೀತವನ್ನು ಕಲಿತೆ?"

"ನಾನು ಬರೇ ಗ್ರಾಮಫೋನ್‌ಗಳನ್ನು ಕೇಳಿ ಕಲಿತುಕೊಂಡೆನು."

"ನೀನು ಹಾಡುವ ಕ್ರಮವು ಬಿಡಾರಂ ಕೃಷ್ಣಪ್ಪನವರ ಹಾಗೆಯೇ ಇದೆ." ಆ ಮೇಲೆ ಅವನು ಮಕ್ಕಳ ಕಡೆಗೆ ತಿರುಗಿ ಹೇಳಿದನು. "ಹುಡುಗರೇ, ನೋಡಿ. ಬಹು ಚೆನ್ನಾಗಿ ಹಾಡಬಲ್ಲ ಈ ಭಿಕ್ಷುಕನಿಗೆ ಏನಾದರೂ ಕೊಡಬೇಕೆಂದು ನಾನು ಬಯಸುತ್ತೇನೆ. ನಾನು ನಿಮಗೆ ಐಸ್‌ಕ್ಯಾಂಡಿ ತೆಗೆ

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7¾
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	....	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.



Phone No. 226.

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಹಾಳೆಯ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚೀಟಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ನೋಟೀಸ್ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ರವಾನಿಸುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಮರಳುಗಾಡು ಕಚ್ಛ ರಣದಲ್ಲಿ ನಮ್ಮ ಯೋಧರಿಗೆ ಕುಡಿಯುವ ನೀರಿನ ಪೂರೈಕೆಯೇ ಒಂದು ಸಮಸ್ಯೆ. ಇದನ್ನು ಎದುರಿಸಿಯೂ ಅವರು ಆಕ್ರಮಣಗಾರರನ್ನು ಗಡಿಯಾಚೆ ಅಟ್ಟಿಬಿಟ್ಟರು.

ನವಯುಗ

ಸಂಪುಟ ೪೪ | ಉಡುಪಿ | Vol.44

ಸಂಚಿಕೆ ೪೫ | ೮—೭—೧೯೬೫ | No. 45

ಖಾದಿ ಉಳಿಯಬೇಕು

ಪುಟ್ಟ ಮಕ್ಕಳೊಡನೆ ಬಾಪೂಜಿ ಚರ್ಕ ನೂಲುತ್ತಿದ್ದಾಗ ಖಾದಿ ಎಂದರೇನೆಂದು ಪ್ರಶ್ನಿಸಿದರಂತೆ. ಆಗ ಒಬ್ಬಾಕೆ ಹುಡುಗಿ ಎದ್ದು ನಿಂತು ಖಾದಿ ಅಂದರೆ ಒರಟು ಬಟ್ಟೆ ಅಂದಳಂತೆ. ಉಕ್ಕಿ ಬರುತಿದ್ದ ನಗುವನ್ನು ತಡೆಹಿಡಿದು ಗಾಂಧೀಜಿ ಖಾದಿಯ ಬಗ್ಗೆ ಉದ್ದ ಉಪನ್ಯಾಸವನ್ನೇ ನೀಡಿರಬಹುದು. ಅಂತೂ ಆ ಮಕ್ಕಳಿಗೆ ಖಾದಿಯ ನಿಜವಾದ ಅರ್ಥವನ್ನು ಮಂದಟ್ಟು ಮಾಡಿದರು. ಕೈಯಿಂದಲೇ ನೂತು, ಕೈ ಮಗ್ಗದಲ್ಲಿಯೇ ನೇಯ್ದ ಬಟ್ಟೆಯೇ ಖಾದಿ. ಅದು ಹತ್ತಿಯದಿರಬಹುದು, ರೇಷ್ಮೆಯದಿರಬಹುದು ಅಥವಾ ಉಣ್ಣೆಯದೋ ಮತ್ತಾವುದೋ ಇರಬಹುದು. ಯಂತ್ರಗಳ ಬಾಯಿಗೆ ಬೀಳದೆ ಮನುಷ್ಯನ ಕೈಯಿಂದಲೇ ಸಿದ್ಧವಾದರೆ ಸರಿ. ಖಾದಿ ಗ್ರಾಮೋದ್ಧಾರದ ಮುಖ್ಯ ಸಾಧನವಾಗಿ ಬೆಳೆದು ಬಂತು. ಸ್ವಾತಂತ್ರ್ಯ ಸಂಗ್ರಾಮದ ವೇಳೆ ಇದರ ಪಾತ್ರ ಅಗ್ರಗಣ್ಯವಾಯಿತು. ವೀರ ಸ್ವಾತಂತ್ರ್ಯ ಯೋಧರ ಸಮವಸ್ತ್ರವಾಯಿತು. ಸ್ವದೇಶಿ ಪ್ರಸಾರ-ವಿದೇಶಿ ಬಹಿಷ್ಕಾರದ ಚಳುವಳಿಯಲ್ಲಿ ಖಾದಿಯು ಪ್ರಧಾನಾಂಗವಾಯಿತು. "ಖಾದಿಯು ಸ್ವಾತಂತ್ರ್ಯ ವೀರರ ಸಮವಸ್ತ್ರವಾಯಿತು. ಸ್ವತಂತ್ರ್ಯವನ್ನು ಪಡೆವ ತೀವ್ರ ವೇದನೆ ನಮ್ಮ ಹಂಬಲದ ಸಂಕೇತವಾಯಿತು" ಎಂದು ದಿ| ಪ್ರಧಾನಿ ಭಾರತ ರತ್ನ ಪಂಡಿತ ಜವಾಹರಲಾಲರೂ ಉದ್ಗರಿಸಿದ್ದರು. ಹೀಗೆ 'ಖಾದಿ'ಯು ಸ್ವದೇಶಿಯಲ್ಲಿ ಅಗ್ರಗಣ್ಯ ಸ್ಥಾನ ಪಡೆಯಿತು.

ಆದರೆ, ಸ್ವಾತಂತ್ರ್ಯ ಪ್ರಾಪ್ತವಾದ ಬಳಿಕ ಇತರ ಹಲವು ರಂಗಗಳಲ್ಲಿ ಆದಂತೆಯೇ ಖಾದಿಯ ಮೇಲಣ ಅಭಿಮಾನವು ಕಡಿಮೆಯಾಯಿತು. ಗಾಂಧಿ ಟೋಪಿಗಳು ತಲೆಯಿಂದ ಮಾಯವಾಗುತ್ತ ಬಂದಂತೆಯೇ ಮೈಯಿಂದ ಖಾದಿಯೂ ಹಾರಿ ಹೋಗುತ್ತ ಬಂತು. ಇಂದು ಇದನ್ನು ಬಳಸುವವರ ಸಂಖ್ಯೆ ತೀರ ಕಡಿಮೆ; ಸಡುಹರೆಯದ ಮಾಟಿನವರು ಕೆಲವರು ಮಾತ್ರ ಉಪಯೋಗಿಸುತ್ತಿದ್ದಾರೆ. ಅಂದರೆ, ನವಯುವಕರು ಧರಿಸಿದರೂ ಅರೆಮನಸ್ಸಿನಿಂದ ಧರಿಸುತ್ತಿದ್ದಾರೆ. ಖಾದಿಯ ಹುಂಡಿಗಳನ್ನು ಕೊಳ್ಳಲೇ ಬೇಕಾಗಿ ಬಂದವರು ಕೂಡ ನೂರು ಬಗೆ ... ದಿಯುವಂಗಿ ತಾಗಿಸುವ ಯೋಚನೆಯನ್ನೇ ಮಾಡುತ್ತಾರೆ. ಇದೇಕೆ ಹೀಗೆ? ಖಾದಿಯ ಬಗೆಗೆ ಜನತೆಯಲ್ಲಿ, ಮುಖ್ಯವಾಗಿ ಎಳೆಯರಲ್ಲಿ ಯಾವ ಪವಿತ್ರ ಕಲ್ಪನೆಯೂ ಇಲ್ಲದಿರುವುದೇ ಇದಕ್ಕೆ ಕಾರಣವಾಗಿದೆ. ಈಗಿನ ಖಾದಿಯಲ್ಲಿ ಗುಣವೂ ಕಡಿಮೆಯಾಗಿದೆಯೆಂಬ ದೂರೂ ಅಲ್ಲಲ್ಲಿ ಕೇಳಿ ಬರುತ್ತಿದೆ. ಅದೇನೇ ಇದ್ದರೂ ರಾಜ್ಯದಲ್ಲಿ ಖಾದಿಮಂಡಳವಿದೆ. ಅದು ಬೇರೆ ಬೇರೆ ಕೇಂದ್ರಗಳಲ್ಲಿ ಬಟ್ಟೆಯನ್ನು ತಯಾರಿಸುತ್ತಿದೆ. ರಾಜ್ಯ ಸರಕಾರವು ಈ ಗ್ರಾಮೋದ್ಯೋಗಕ್ಕೆ ಆರ್ಥಿಕ ಸಹಾಯವನ್ನು ನೀಡುತ್ತಿದೆ. ಇಂತಹ ಸಮಯದಲ್ಲೇ ಕೆಲವು ಖಾದಿಕೇಂದ್ರಗಳನ್ನು ಮುಚ್ಚಿ ಬಿಡುವುದಾಗಿ ಖಾದಿಬೋರ್ಡು ನಿರ್ಧರಿಸಿ ಅದನ್ನು ಅನುಷ್ಠಾನಕ್ಕೆ ತರತೊಡಗಿದೆ. ಈ ಬಗೆಯ ನಿರ್ಧಾರಕ್ಕೆ ಏನು ಕಾರಣವೆಂದು ತಿಳಿಯುವುದಿಲ್ಲ. ತಯಾರಾದ ಬಟ್ಟೆಗಳಿಗೆ ಬೇಡಿಕೆಯು ಕಡಿಮೆಯಾಗುತ್ತಿರುವುದು ಒಂದು ಕಾರಣವಿರಬಹುದು; ಹಾಗಿದ್ದರೂ ಅದನ್ನು ಜನಪ್ರಿಯಗೊಳಿಸುವ ವಿಧಾನವನ್ನು ಕೈಗೊಳ್ಳಬೇಕಲ್ಲದೆ ಖಾದಿಯ ಉತ್ಪಾದನೆಯನ್ನೇ ತಡೆಹಿಡಿಯುವುದು ನ್ಯಾಯವಲ್ಲ. ಈ ಕೇಂದ್ರಗಳಲ್ಲಿ ದುಡಿಯುತಿದ್ದ ನೌಕರರನ್ನು ನಡು ನೀರಿನಲ್ಲಿ ಕೈಬಿಡುವುದು ಸಮಂಜಸವಲ್ಲ. ಖಾದಿ ಉತ್ಪಾದನೆ ಮತ್ತು ಮಾರಾಟದಲ್ಲಿ ಹಾನಿಯಾಗುತ್ತಿದೆಯೆಂಬುದೊಂದು ಕಾರಣವಿರಬಹುದಾದರೂ ಈ ಬಗೆಯ ಹಾನಿಯನ್ನು ತುಂಬಿಕೊಳಲೆಂದೇ ರಾಜ್ಯ ಸರಕಾರವು ಸಹಾಯ ಧನ ನೀಡುವುದು. ಹಾಗಿದ್ದರೂ ಇತ್ತೀಚಿನ ಕೆಲವು ವರ್ಷಗಳಿಂದ ರಾಜ್ಯದ ಖಾದಿ ಬೋರ್ಡಿನ ಆರೋಗ್ಯವು ನೆಮ್ಮದಿಯಲ್ಲಿಲ್ಲ. ಲಕ್ಷಾಂತರ ರೂಪಾಯಿಗಳ ವ್ಯವಹಾರದ ಬಗ್ಗೆ ಸರಿಯಾದ ಲೆಕ್ಕಪತ್ರಗಳೇ ಇಲ್ಲವೆಂಬ ದೂರು ಹರಡಿತ್ತು. ಸಮಯ ಸಮಯದಲ್ಲಿ ಲೆಕ್ಕಪತ್ರಗಳು ತಪಾಸಣೆಯಾಗದಿದ್ದುದೇ ಈ ಬಗೆಯ ದುರ್ವ್ಯಯ ಪ್ರಸಂಗಗಳಿಗೆ ಕಾರಣವೆನ್ನಬಹುದಾದರೂ ತಪಾಸಣೆ ನಡೆಯದದು ಅಸಂಭವವೇ ಆಗಿದೆ.

ಖಾದಿಯನ್ನು ವ್ಯಾಪಾರದ ದೃಷ್ಟಿಯಿಂದ ಉತ್ಪಾದಿಸುವುದು ಮತ್ತು ಮಾರುವುದು ಇಂದು ಸಾಧ್ಯವಾಗದ ಮಾತು. ಆದರೂ ರಾಷ್ಟ್ರಪಿತನು ಭಾರತೀಯರಿಗೆ ಸ್ವದೇಶ ಪ್ರೇಮ ಪ್ರದರ್ಶನಕ್ಕೆ ತೋರಿದ ಮಾರ್ಗವಿದು. ದೇಶಭಕ್ತಿಯ ಪ್ರತೀಕವಿದು. ಗ್ರಾಮರಾಜ್ಯ ಭಾರತವನ್ನು ಕಟ್ಟುವ ನಮ್ಮ ಅಭಿಲಾಷೆಯ ಸಂಕೇತವಿದು. ಒರಿಟಿ ಸರಕಾರಿ ನೌಕರರ ಸಮವಸ್ತ್ರಗಳಿಗಾಗಲಿ, ಶಾಲಾ ವಿದ್ಯಾರ್ಥಿನಿಯರಿಗೆ ದಾನವೀಯುವ ಸರಕಾರಿ ಬಟ್ಟೆಬರೆಗಳ ರೂಪದಲ್ಲಾಗಲೀ ಉಳಿಯಲು ಖಾದಿ ಉಳಿಯಬೇಕಾಗಿಲ್ಲ. ಅದು ಕುಶಲ ವೃತ್ತಿಗಾರರಿಗೆ ಅನ್ನವೀಯುವ ಸಾಧನವಾಗಿ, ಸ್ವದೇಶ ಪ್ರೇಮದ ಪ್ರತೀಕವಾಗಿ, ದೇಶಭಕ್ತಿಯ ಹಂಬಲವಾಗಿ ಉಳಿದು ಬರಬೇಕು. ಅನ್ಯಾಯ, ಅನಾಚಾರ, ಮೋಸ ವಂಚನೆಗಳಿಗೆ ಖಾದಿ ಬೋರ್ಡು ಅವಕಾಶ ನೀಡಬಾರದು; ಸ್ವತಂತ್ರಭಾರತದ ಸಂಕೇತವಾಗಿ ಅದು ಬೆಳೆದು ಬರಬೇಕು. ಇದಕ್ಕಾಗಿ ರಾಜ್ಯಸರಕಾರ,-ಖಾದಿಬೋರ್ಡು ಮತ್ತು ಜನತೆ ಒಂದಾಗಿ ಸಹಕರಿಸಬೇಕು.

ವಚನ ಸುಧೆ

ಮಿತ್ರಸ್ಯಾಹಂ ಚಕ್ಷುಷಾ
ಸರ್ವಾಣಿ ಭೂತಾನಿ ಸಮೀಕ್ಷೇ||
(ಯಜುರ್ವೇದ ೩೬ - ೧೮)

೦ ನಾನು ಮಿತ್ರನ ದೃಷ್ಟಿಯಿಂದ ಎಲ್ಲ ಪ್ರಾಣಿಗಳನ್ನೂ ನೋಡುತ್ತೇನೆ.

೦೦ ಎಲ್ಲ ಪ್ರಾಣಿಗಳನ್ನು ಪ್ರೇಮ ದೃಷ್ಟಿಯಿಂದ ನೋಡಬೇಕು. ಅವುಗಳ ಹಿತ ಸಾಧಿಸಬೇಕು. ಅವುಗಳಿಗೆ ಕಷ್ಟ ಕೊಡುವುದು ಮಾನವನಿಗೆ ಉಚಿತವಲ್ಲ. ಎಲ್ಲವುಗಳೊಡನೆಯೂ ಪ್ರೇಮ ವ್ಯವಹಾರ ಮಾಡಬೇಕು. ಯಾವುದನ್ನಾದರೂ ದ್ವೇಷಿಸಬಾರದು.

ಲಾಯರ ಪರಾಜಯ

ಆಫ್ರೇಸ್ಯ ತಟಸ್ಥ ರಾಷ್ಟ್ರಗಳ ಪರಿಷತ್ತು ಕೂಡ ಬೇಕಾಗಿದ್ದ ಅಲ್ಜೀರ್ಸಿನಲ್ಲಿ ನಡೆದ ಸೈನಿಕ ಕ್ರಾಂತಿಯ ಪರಿಣಾಮವಾಗಿ ಪರಿಷತ್ತು ನಡೆಯಲಿಲ್ಲ. ಕೊನೆಯ ಗಳಿಗೆಯ ವರೆಗೂ ಸೈನಿಕಾಧಿಕಾರಿಗಳು ಸಮ್ಮೇಳನ ಕೂಡಿಸುವ ಆಶಯವನ್ನಿಟ್ಟುಕೊಂಡಿದ್ದರೂ ಅದು ನಿರಾಸೆಯಲ್ಲೇ ಪರ್ಯವಸಾನ ಹೊಂದ ಬೇಕಾಯಿತು. ಅಲ್ಲಿ ನಡೆದ ಅನಿರೀಕ್ಷಿತ ಕ್ರಾಂತಿಗೇನು ಕಾರಣವೆಂಬುದಿನ್ನೂ ರಹಸ್ಯವಾಗಿಯೇ ಇದೆ. ಆದುದರಿಂದ ಹೊಸ ಸರಕಾರದ ಧ್ಯೇಯ—ನಡಾವಳಿಗಳನ್ನು ಕೂಲಂಕಷವಾಗಿ ಅರಿತುಕೊಳ್ಳದೆ ಪರಿಷತ್ತಿನಲ್ಲಿ ಭಾಗವಹಿಸುವುದು ಉಚಿತವಲ್ಲವೆಂಬ ಭಾವನೆ ಬರಿಯ ಕಾಮನ್‌ವೆಲ್ತಿನ ರಾಷ್ಟ್ರಗಳಲ್ಲಿ ಮಾತ್ರವಲ್ಲ, ಉಳಿದವರಲ್ಲಿಯೂ ಇತ್ತು. ಕೆಂಪು ಚೀನಾದ ಲಾಯರು ಅಲ್ಜೀರ್ಸಿನ ವೇದಿಕೆಯ ಮೇಲೆ ನಿಂತು ತನ್ನ ವಿಜಯೋನ್ಮಾದದ ಗೀತೆಯನ್ನು ಹಾಡುವ ಆತುರವಿಟ್ಟುಕೊಂಡಿದ್ದರು. ಇದೀಗ ಅವರ ಮಾನಭಂಗವೂ ಆಯಿತು. ಪ್ರತೀಕಾರಾಗ್ರಹ ಮುಂದಿನ ದಾರಿಯಾವುದೆಂದು ಪ್ರತೀಕ್ಷಿಸಬೇಕಾಗಿದೆ.

— —

ನರಸಣ್ಣನ ಸರಸ



"ಸ್ವಯಂ ನಿರ್ಣಯಾಧಿಕಾರದ ಬೇಡಿಕೆಯು ಆತ್ಮಘಾತವೆಂದು ಉಪದೇಶಿಸಿದರಂತೆ ನಂದಾಜಿ ಕಾಶ್ಮೀರಿಗಳಿಗೆ__"

'ಆತ್ಮಘಾತದ ದಾರಿ ಹಿಡಿದ ಶೇಖಬ್ದುಲ್ಲಾ ಸ್ವರ್ಗ ಸುಖ ಅನುಭವಿಸುತ್ತಿದ್ದಾನಲ್ಲಾ ಸ್ವಾಮಿ....'

ಗೇಹ ರಾಜ್ಯದಲ್ಲಿ

ಆಶುಭಸ್ಯ ಕಾಲಹರಣಂ

"ಕೊನೆಗೂ ಆಯ್ತೂಂತಾಯ್ತು....'

"ಹಾದು...."

"ಏನಾಯ್ತು?"

"ಆಯ್ತೂಂತ ಅಂದೋಳು ನೀನು. ಮತ್ತೆ ಏನೂಂತ ಅನ್ನೋಕೆ ನಾನು ಯಾಕೆ ಬೇಕು?"

'ಅಲ್ರಿ, ಹೌದೂಂತ ತಲೆದೂಗಿದವ್ರು ನೀವಲ್ವೆ?'

'ನೀನು ಆಯ್ತೂಂದಿ, ನಾನು ಹೌದೂಂದೆ. ಇದ್ರಲ್ಲಿ ನನ್ನ ತಪ್ಪೇನು?'

"ಮತ್ತೆ ಹೌದೂಂತ ಅಂದ್ರಲ್ಲಾ? ತಿಳಿದಿಲ್ಲಾಂತಾದ್ರೆ ಯಾಕೆ ಹೌದೂಂತ ಅನ್ನ ಬೇಕಿತ್ತು?"

"ಇನ್ನೇನನ್ಬೇಕಿತ್ತು?"

"ಗೊತ್ತಿಲ್ಲಾಂತಿದ್ರೆ ಇಲ್ಲಾಂತ..."

'ಒಳ್ಳೆ ಬುದ್ಧಿವಂತಿಯೇ ನೀನು. ಅಲ್ಲಾ ಆಯ್ತೂಂತಾದ ಮೇಲೆ ನಾನು ಇಲ್ಲಾಂತಂದ ಮಾತ್ರಕ್ಕೆ ಅದು ಆಗದೆ ಹೋದಂತಾಯ್ತೆ?'

"ಯಾಕೆ ಆಗಬಾರದು? ನೋಡಿ, ಮೊನ್ನೆ ಮೊನ್ನೇ ಒಬ್ರು ಹೇಳಿದ್ರಂತೆ ನನ್ನ ಲೆಕ್ಕಕ್ಕೆ ನಮ್ಮೂರಲ್ಲಿ ಆಸ್ಪತ್ರೆಯೇ ಇಲ್ಲಾಂತ. ನಿಜ ಹೇಳೋದಾದ್ರೆ ಎರಡು ವರ್ಷವಾಯ್ತಂತೆ ಉದ್ಘಾಟನೆಯಾಗಿ..."

"ಮತ್ಯಾಕೆ ಆ ಮಹಾಶಯರು ಹಾಗಂದ್ರು?"

'ಅಲ್ರಿ, ಆಸ್ಪತ್ರೆಯಲ್ಲಿ ಏನೇನಿರಬೇಕು?'

"ಚತುರಂಗ ಬಲ...."

"ಅಂದ್ರೆ?"

"ಹಸ್ತಿರಥಾಶ್ವಪದಾತಿಗಳು...."

"ಹಾಗಂದ್ರೆ ಏನೂಂದ್ರೆ?"

"ಏನೂಂತಂದ್ರೆ? ಹಸ್ತಿ ಅಂದರೆ ಆನೆ, ರಥ ಅಂದರೆ ತೇರು, ಅಶ್ವಾ ಅಂದ್ರೆ ಕುದುರೆ ಮತ್ತು ಪದಾತಿ ಅಂದ್ರೆ ಕಾಲಾಳುಗಳು...'

'ಮುಗಿಯಿತೆ? ಇನ್ನೇನಾದರೂ ಇದೆಯೋ?'

'ಚತುರಂಗ ಅಂದ್ರೆ ಅಷ್ಟೆ....'

ಈಗ ಹೇಳಿ ನೋಡೋಣ, ಆಸ್ಪತ್ರೆಯ ಚತುರಂಗಗಳು ಯಾವ್ಯಾವೂಂತ....'

ಹಕ್ಕ... ಅದನ್ನೂ ನಾನೇ ಹೇಳಬೇಕು?'

'ಎಲ್ಲಾ ಗೊತ್ತೂಂತ ರಾಪು ಮಾತ್ರ ಕೊಚ್ಚಿದ್ರೆ ಏನು ಪ್ರಯೋಜನ? ಈಗ ಹೇಳಿ ಎಲ್ಲಾವನ್ನ.

'ಅಂದ್ರೆ, ನಾನೂನೂ ನಿನ್ನ ಹಾಗೇನೇ ಏನೇನೋ ಅನ್ನ ಬೇಕ್ಕೂಂತಾಯ್ತು....'

'ನನ್ನ ಹಾಗೆ ಯಾಕೆ ಅನ್ನುತ್ತೀರಾ? ನೀವನ್ನೋ ಹಾಗೇನೇ ಅಂದುಬಿಡಿ.'

'ಅಂದ್ರೆ ನಾನೇ ಹೇಳಬೇಕು....'

"ಮತ್ತೆ ಇದುವರೆಗೆ ಹೇಳಿದ್ದಾದ್ರೂ ಏನು?"

"ಹೇಳಿದವ್ರಿಗೇನೇ ಗೊತ್ತು...."

"ಅದೆಲ್ಲಾ ಎಲ್ಲಿ. ಹೇಳೋದಿದ್ರೆ ಹೇಳಿಬಿಡಿ...."

ಹ್ಞಾಂ....ವೈದ್ಯ, ಭವನ, ಔಷಧಿ, ಮತ್ತು ಗ್ರಾಹಕ..."

"ಹಾಗಾದ್ರೆ ಸರೀನ್ನಿ. ಏಕೆಂದರೆ ನಮ್ಮ ಒಂದು ಪಂಚವಾರ್ಷಿಕ ಯೋಜನೆ ಮುಗಿದು ಮತ್ತೊಂದು ಶುರುಮಾಡುವುದರೊಳಗೆ ಈ ಚತುರಂಗ ಸೇನೆ ಊರಿಗಿದ್ರೆ ಊರವರ ಪುಣ್ಯಾಂತ...."

ಯಾಕೆ ಹಾಗಂತೀಯ?"

"ಯಾಕೇಂದ್ರೆ? ನೋಡಿ ನಮ್ಮ ರಾಜ್ಯದ ದುಃಸ್ಥಿತಿ. ಸರಕಾರಿ ಆಸ್ಪತ್ರೆಗಳಿಗೆ ಡಾಕ್ಟರರುಗಳೇ ಸಿಗೋಲ್ಲಾಂತೆ. ಅದೂ ಸರೀನ್ನ."

"ಯಾಕೆ?"

"ಖಾಸಗಿಯಾಗಿ ಪ್ರಾಕ್ಟೀಸು ಮಾಡಿದ್ರೆ ಸಾವಿರ ಎರಡುಸಾವಿರ ಗಳಿಸಬಹುದಲ್ಲಾ...."

"ಡಿಸ್ಪೆಂಸರಿ ಇಡೋಕೆ ಬಂಡವಾಳ?"

"ಅದಕ್ಕೇನ್ರಿ ಕೊರತೆ? ಎಂ ಬಿ ಬಿ ಎಸ್ ಅಂದೊಡನೆ ಐವತ್ತು ಸಾವಿರ ಡಿಸ್ಪೆಂಸರಿ ಬಂಡವಾಳ ಉಚಿತ ಉಡುಗೊರೆಯಾಗಿ ಸಿಗುತ್ತೆ...."

ಏನು ಸಿಗುತ್ತೊ? "ನನಗಂತೂ ಸಿಕ್ಕಿಲ್ಲ ನೋಡು..."

'ನಿಮ್ಗೇನು ಎಂಬಿಬಿಎಸ್ ಆಗಿದೆಯೆ?'

'ನಾನೇನೂ ಬೇಕೂಂತ ಮಾಡಿಕೊಳ್ಳಿಲ್ಲಾನ್ನು. ಅವ್ರೆ ಜನ್ರೆಲ್ಲಾ ಈ ಪದವಿಯನ್ನ ಕೊರಳಿಗೆ ಕಟ್ಟಿದ್ರು....'

'ಹಾಗೆಂದ್ರೆ?'

'ನಾನು ಕೊಡೊಲ್ಲಾ ಅನ್ನಬಹುದ; ತೊಗೊಲ್ಲಾಂತ ಹೇಗೆ ಅನ್ನೋದು?'

"ಅಲ್ರಿ, ಪದವಿ ಗಿದವಿಯೆಲ್ಲಾ ಕಾಲೇಜಿಗೆ ಹೋಗದೆ ಅಭ್ಯಾಸ ಮಾಡದೆ ಇರೋರಿಗೆ ಕೊಡ್ತಾರೆಯೆ?'

"ಹಾಗಂದ್ರೆ? ಗೌರವ ಪದವಿ ಕೊಡ್ತಾರಲ್ಲಾ...."

"ಅಲ್ರಿ, ವೈದ್ಯಕೀಯ ಅನುಭವ ಎಳ್ಳಷ್ಟೂ ಇಲ್ಲದವ್ರಿಗೆ ಅಂತ ಪದವಿ ಕೊಡೋದೆಂದ್ರೇನು?'

"ಏನೂಂತ ಅವರ ಹತ್ರಾನೇ ಕೇಳಬೇಕು.'

'ಅಂದ್ರೆ, ನಿಮಗೆ ಕೂತಲ್ಲಿಗೇನೇ ಬಿರುದು ಸಿಕ್ತ್ರನ್ನು....'

"ನನಗೆಲ್ಲಿ ಸಿಗುತ್ತೆ? ಊರವರು ಸಿಕ್ಕಿದೇಂತ ಹೇಳ್ತಾ ಇದ್ದಾರೆ...."

'ಏನೋಪ್ಪ, ಅಂತೂ ಕೊನೆಗೂ ನನಗೊಂದೂ ಅರ್ಥವಾಗೋಲ್ಲ. ..'

"ಹೋಗ್ಲಿ ಕಣೆ, ಅದೊಂದು ಅರ್ಥವಾಗದೆ ಇದ್ದದ್ರಿಂದ ಯಾವ ಅರಮನೇನೂ ಕೆಡವಿ ಬಿಡೋಲ್ಲ."

"ಒಂದು ವೇಳೆ ಬಿತ್ತೂನ್ನಿ; ನಮಗದರಿಂದ ಏನು?'

'ಒಳ್ಳೇ ಮಾಂಕಾಯ್ತು ನೀನು. ನಿನ್ನಂತವರು ತುಂಬಿದ್ರಿಂದ್ಲೇ ಲೋಕ ಕೆಟ್ಟಿರೋದು."

'ಯಾಕೆ?"

'ಅಲ್ವೆ, ನೋಡು, ಈ ಲೋಕ ಯಾರಿಗೆ ತಾನೇ ಸುಖವಿತ್ತಿದೆ?"

"ಅದು ನಂಗೊತ್ತಿಲ್ಲ. ಆದ್ರೆ, ಈ ಲೋಕದಲ್ಲಿರೋದೆಲ್ಲಾ ದುಃಖಗಳು..."

"ಯಾಕೆ ಹಾಗಂತೀಯ?"

'ಮತ್ತಿನ್ನೇನನ್ನಬೇಕು? ಈ ಪ್ರಪಂಚದಲ್ಲಿ ಮೋಸ, ವಂಚನೆ, ಕಪಟ, ಇತ್ಯಾದಿ ಇತ್ಯಾದಿಗಳು ಸ್ವಾರ್ಥ ಸಾಧನೆಗಾಗಿ ಬಳಸಲ್ಪಡುವಾಗ, ಮನುಷ್ಯ ಮನುಷ್ಯನನ್ನೇ ನುಂಗುತ್ತಿರುವಾಗ ಸುಖವಿರುವುದಾದರೂ ಎಲ್ಲಿ?'

'ಇಲ್ಲೇ ನೀನು ಜಾರಿಬಿದ್ದೆ ನೋಡು. ಪರಮಾತ್ಮನ ಸೃಷ್ಟಿ ಯಾವಾಗಲೂ ಸತ್. ಅದನ್ನು ಉಪಯೋಗಿಸದೆ, ಮಾನವನು ಆಸತ್ತಿನ ಮರೆ ಹೊಕ್ಕರೆ, ಈ ಲೋಕವನ್ನು ಯಾಕೆ ಹಳಿಯ ಬೇಕು? ಲೋಕದಲ್ಲಿರುವವರನ್ನು, ನನ್ನ ನಿನ್ನಂಥವರನ್ನು ನಿಂದಿಸಬೇಕು...'

'ಅಲ್ರಿ, ನಮ್ಮನ್ನ ನಾವೇ ನಿಂದಿಸಿಕೊಂಡ್ರೆ ಪ್ರಯೋಜನವಾದ್ರೂ ಏನಂತೆ?'

'ಬರೆ ಜರೆದರೆ ಏನೂ ಇಲ್ಲ. ಆದ್ರೆ ತಿಳುವಳಿಕೆಯಿಂದ ಮನುಷ್ಯ ಸರಿದಾರಿಗೆ ಬರಬಲ್ಲ.'

'ಕೊನೆಗೂ ನೀವನ್ನೋದು, ಅದೇ ಇಂದಿನ ಮಾನವನಿಗೆ ತಿಳುವಳಿಕೆ ಕಡಮೆ ಅಂತ. ಆದ್ರೆ ನೋಡಿ, ಇಂದಿನವರ ಪ್ರಜ್ಞೆ ಬಹಳ ದೂರದ ವರೆಗೆ ಕೆಲಸಮಾಡುತ್ತದೆ. ಹಾಗಿರುವಾಗ...'

ಇಲ್ಲ ಅಂದವರು ಯಾರು? ಆದರೆ ಅಂತಹ ಪ್ರಜ್ಞೆ ಲೋಕ ಕಲ್ಯಾಣದ ಹಾದಿಯನ್ನು ಬಿಟ್ಟು ಹೋದರೆ, ಅದರಿಂದ ವಿಶ್ವಶಾಂತಿ ಹೇಗಾದೀತು?'

'ಭಾರಿ ಮಂತ್ರಿಗಳ ಹಾಗೆ ಮಾತಾಡ್ತೀರಿ...'

"ಇರಬಹುದು, ನಾನೂ ಯಾಕೆ ಮಂತ್ರಿಯಾಗಬಾರದು?

"ಆಗಿ ಆಗಿ, ಯಾರು ಬೇಡಾಂತಾರೆ? ಶಾಂತಿ ಮಂತ್ರ ಪಠಿಸುವ ಭಾರತಕ್ಕೆ ನಿಮ್ಮಂತವರೇ ಮಂತ್ರಿಯಾಗಬೇಕು. ಆದ್ರೆ, ನಾನು ಮಾತ್ರ ತವರು ಮನೆ ಸೇರುತ್ತೇನೆ..."

"ಯಾಕೆ? ಮಂತ್ರಿಯ ಮಡದಿಯಾಗಿ ಸಭೆಸಮಾರಂಭಗಳಲ್ಲಿ ಪಕ್ಕದಲ್ಲಿ ಕುಳಿತು ಹೂಮಾಲೆ ಹಾಕಿಸಿಕೊಳ್ಳೋದು...."

"ಅಯ್ಯೋ, ಅಂದು ನೀವು ಹಾಕಿದ್ದೀರಲ್ಲಾ!

"ಹ್ಞಾಂ, ಅಂದ ನಾನು ಹಾಕಿದ್ದೇನೆ. ಇದು ಹಾಗಲ್ಲ...."

(ಹದಿಮೂರನೇ ಪುಟ ನೋಡಿರಿ)

Phone: 19

ರಜತೋತ್ಸವದ ಶುಭಾಶಯಗಳು!

— ನೆಲ್ಲಿ ಪ್ರಕಾಶ್ —

ಮನೋಹರ ಕೆಫೆ

ಶಿವಮೊಗ್ಗಾ.

ಇಂದಿಗೆ 25 ವರ್ಷಗಳ ಹಿಂದೆ

ಇದೇ ಮಿಥುನಮಾಸ ಕೃಷ್ಣಪಕ್ಷದ ತ್ರಯೋದಶಿಯಂದು ಮನೋಹರ ಕೆಫೆಯನ್ನು ಸ್ಥಾಪಿಸಿ, ಊಟ ಉಪಹಾರ ಮತ್ತು ವಸತಿ ಗೃಹಗಳ ಸೌಕರ್ಯವನ್ನು ಉಚ್ಚಮಟ್ಟದಲ್ಲಿ ನೆರವೇರಿಸಿಕೊಂಡು ಬರಲು ಸಹಕರಿಸಿ ಪ್ರೋತ್ಸಾಹಿಸಿದ ನಮ್ಮ ಎಲ್ಲಾ ಗ್ರಾಹಕರನ್ನೂ ಈ ಶುಭಸಂದರ್ಭದಲ್ಲಿ ಸ್ಮರಿಸುತ್ತೇವೆ.

ಅಲ್ಲದೆ—

ಇನ್ನೂ ಹೆಚ್ಚಿನ ಸೇವೆ ಸೌಲಭ್ಯಗಳನ್ನೊದಗಿಸಲು

25 ವರುಷಗಳ ನಂತರ ಇಂದು ಹೊಸ ಹೆಜ್ಜೆ! ನೂತನವಾಗಿ ನಿರ್ಮಿಸಿದ "ಏಯರ್ ಕಂಡೀಶನ್ಡ್" ರೂಮುಗಳು— ಬಾತ್ ರೂಮ್ ಲಗ್ತಿದೆ— ನಯನ ಮನೋಹರ ರೂಫ್ ಗಾರ್ಡನ್ಸ್‌ಗಳು, ಶುಕ್ರವಾರ ಸ್ಪೆಶಲ್ ಊಟಗಳ ಸೌಕರ್ಯ ಇತ್ಯಾದಿ ಸದಾ ಸಿದ್ಧವಿದೆ.

NELLI PRAKASH

MANOHAR CAFE

RESTAURANT, BOARDING & LODGING

NEHRU ROAD, : SHIMOGA.

Prop: P. K. JANARDHANA NELLI.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

S. C. 33/1965.

ಅಣ್ಣ ಪಡಿವಾಳ — ವಾದಿ.

ಅಂತಪ್ಪ ಪಾಂಡಿ ಸಹಾ ಪ್ರತಿವಾದಿ.

೨ನೇ ಪ್ರತಿವಾದಿ ಗುಮ್ಮಣ್ಣ ಪಾಂಡಿ, ಪಿಲತ್ತಬೆಟ್ಟು ಗ್ರಾಮ ವಾಸಸ್ಥ, ಪೋಸ್ಟ್ ಪೂಂಜಾಲಕಟ್ಟೆ.

ವಾದಿಯು ಪ್ರತಿವಾದಿರ ಮೇಲೆ ಮಾಡಿದ ದಾವೆಯು, ಎರಡನೇ ಪ್ರತಿವಾದಿಯು ಹಾಜರಾತಿಗೆ ತಾ. 9-7-65ಕ್ಕೆ ಇಟ್ಟಿದೆ. ಆ ದಿನ್ನ ಎರಡನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತರವಾಗಲೀ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಮ್ಮೆ ಮಾಡಿ ಏಕಪಕ್ಷವಾಗಿ ತೀರ್ಮಾನಿಸಲಾಗುವುದು, ಎಂದು ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಕೊಡಲಾಗಿದೆ.

N. J. KADAMBA,
Advocate for Plaintiff.

ಬೆಳ್ತಂಗಡಿ, 24-6-65.

ವಿ ವೇ ಚ ನೆ

ಆದಿಯಿಂದಲೂ ಬಂದ ನಾಟಕ ಕಲೆ

ಮಾಡಿದವರು: ಶ್ರೀ ಬಿ. ಎ. ಶೆಟ್ಟಿ, ಬೆಂಇನ್ನಿಮಾರ್.

ನಾಟಕ ಕಲೆಯೆಂಬುದು ಒಂದು ನೈಜವಾದ ಕಲೆ. ಇದರಿಂದಲೇ ಮಾನವನ ಸಂಸ್ಕೃತಿ ಸುಧಾರಣೆ ಸಾಧ್ಯ. ಆ ಕಾರಣದಿಂದಲೇ ಭಾರತೀಯರು ನಾಟಕ ಕಲೆಗೆ ಅಗ್ರಸ್ಥಾನವಿತ್ತಿದ್ದಾರೆ. ಕಾವ್ಯಗಳಲ್ಲಿ ನಾಟಕವು ರಮ್ಯವೆಂದು ಹೊಗಳಿದ್ದಾರೆ. ಋಗ್ವೇದ, ಅಥರ್ವವೇದಗಳಲ್ಲಿ ನಾಟಕದ ಹೋಲಿಕೆಗಳು ಹಲವಾರು ಕಾಣುತ್ತಿವೆ. ಊರ್ವಶಿ—ಪುರೂರವ ಸಂಭಾಷಣೆ ಇಲ್ಲವೆ ಯಮ-ಯಮಿ ಸಂವಾದವನ್ನು ಓದುವಾಗ ಅವುಗಳಲ್ಲಿ ನಾಟಕೀಯತೆ ಹಾಸು ಹೊಕ್ಕಾಗಿದ್ದಂತೆ ಕಾಣುತ್ತಿವೆ

ಸಾಹಿತ್ಯಗಳೆಲ್ಲಾ ಪದ್ಯರೂಪವಾಗಿಯೇ ಹುಟ್ಟಿದುವು. ಪದ್ಯಗಳಿಗೂ ಅಭಿನಯಕ್ಕೂ ನಿಕಟ ಸಂಬಂಧವಿದೆ. ಪದ್ಯಗಳನ್ನು ಹಾಡುವಾಗ ಅಭಿನಯಗಳು ತನ್ನಿಂತಾನಾಗಿಯೇ ಹೊರಹೊಮ್ಮುವುದು. ಯಜ್ಞಯಾಗಗಳಲ್ಲಿ ಕ್ರಮಬದ್ಧವಾದ ಹಸ್ತವಿಕ್ಷೇಪ, ಪ್ರಾರ್ಥನಾಮಂತ್ರ ಸಾಂಕೇತಿಕವಾದ ಚೇಷ್ಟೆಗಳು ಇವನ್ನೆಲ್ಲಾ ನೋಡಿದರೆ ಧಾರ್ಮಿಕ ನಾಟಕಗಳಂತೆಯೇ ಕಾಣುತ್ತಿವೆ. ಆರೋಹಣ ಅವರೋಹಣಗಳಂತೆ ಉದಾತ್ತ ಅನುದಾತ್ತವೇ ಮೊದಲಾದ ಸ್ವರ ಯೋಜನೆಯಿಂದ ವೇದ ಮಂತ್ರಗಳು ಉಚ್ಚರಿಸಲ್ಪಡುವಾಗ, ಯಾಗಾದಿ ಕ್ರಿಯೆಗಳಲ್ಲಿ ಪುರೋಹಿತ ವರ್ಗವು ಭಾಗವಹಿಸುತ್ತಿರುವಾಗ ನಾಟಕದ ರೀತಿ ನೀತಿಗಳು ಸ್ಮರಣೆ ಬಾರದೆ ಇರಲಾರವು.

ವೇದಾಂತಕ್ಕೆ ಪ್ರಾಶಸ್ತ್ಯ ಬಂದು ಪೂಜಾದಿಗಳಿಗೆ ಪ್ರಥಮ ಸ್ಥಾನ ದೊರೆತಾಗ, ಪ್ರಾಚೀನವಾದ ವೈದಿಕ ಕರ್ಮಗಳೊಡನೆಯೇ ಅನುಕರಣೆ ಅಥವಾ ನಟನೆಗೆ ಪ್ರಮುಖ ಸ್ಥಾನ ದೊರೆಯಿತು. ನೃತ್ಯವು ಪೂಜೆಯ ಒಂದಂಗವಾಗಿ ರೂಢಿಗೆ ಬಂತು ಕೃಷ್ಣ, ಗೋಪಿಕೆಯರ ಜೀವನ, ಅರ್ಜುನನ ಸಾಹಸ, ರಾವಣನ ಅದ್ಭುತ ಕಾರ್ಯ ಹಾಗೂ ಇತರ ಅನೇಕ ಕಥೆಗಳು ನಾಟಕರೂಪದಲ್ಲಿ ಅಭಿನಯಿಸಲ್ಪಡುತ್ತಿದ್ದುವು.

ಸಾವಿರಾರು ವರ್ಷಗಳ ಹಿಂದೆಯೇ ಭಾರತೀಯ ನಾಟ್ಯಶಾಸ್ತ್ರವು ಬರೆಯಲ್ಪಟ್ಟಿದೆ. ಇದು ನಾಟ್ಯ ಹಾಗೂ ನಾಟಕ ಕಲೆಯ ವಿಶ್ವಕೋಶವೇ ಆಗಿದೆ. ಇದು ಗದ್ಯ—ಪದ್ಯಾತ್ಮಕವಾಗಿದ್ದು ಪುರಾಣಗಳ ಸಾಲಿಗೆ ಸೇರುವಂತಿದೆ. ಸ್ವರ್ಗವೇ ನಾಟಕದ ರಂಗಭೂಮಿ. ಇಂದ್ರನ ಇಚ್ಛೆಯಂತೆ ಬ್ರಹ್ಮನೇ ನಾಟ್ಯವನ್ನು ಪಂಚಮ ವೇದವಾಗಿ ಸೃಷ್ಟಿಸಿದನು. ಉದ್ಧತವಾದ ತಾಂಡವ ನೃತ್ಯವನ್ನು ಕಲಿಸಿದವನು ಶಿವನು. ನಟಿಯರಿಗೆ ಮೃದುವಾದ ಲಾಸ್ಯ ನೃತ್ಯವನ್ನು ಕಲಿಸಿದವಳು ಪಾರ್ವತಿ. ದೇವತೆಗಳು ಅಸುರರನ್ನು ಜಯಿಸಿದ ಕಥಾವಸ್ತುವಿನ ಮೇಲೆ ನಾಟಕವು ಹೆಣೆಯಲಾಗುತ್ತಿತ್ತು. ಸೂತ್ರಧಾರನಾದ ಬ್ರಹ್ಮನು ಕಳವಳಗೊಂಡನು. ಅಸುರರನ್ನು ಉಪಟಳ ಕೊಡಬಾರದೆಂದು ಒತ್ತಾಯಿಸಿದನು. ಅಂದಿನಿಂದ ನಾಟಕದಲ್ಲಿ ಸತ್ಯ ಹಾಗೂ ಜನಜೀವನ ಚಿತ್ರಣದ ಉಗಮವಾಯ್ತು. ನಶ್ವರ ಜೀವಿಗಳಾದ ಬಡಮಾನವರ ಜೀವನಕ್ಕೂ ನಾಟಕದಲ್ಲಿ ಅವಕಾಶ ದೊರೆಯಿತು. ಧರ್ಮ, ಜ್ಞಾನ, ಪುಣ್ಯ, ಸದ್ಗುಣ ಇತ್ಯಾದಿಗಳೆಲ್ಲಾ ನಾಟಕದಿಂದ ವ್ಯಕ್ತವಾಗಬೇಕು. ಉತ್ತಮ ನಿದರ್ಶನಗಳಿಂದ ಜನತೆಯನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುವುದಕ್ಕೆ ನಾಟಕವು ಪೋಷಕವಾಗಿರಬೇಕು. ಇತ್ಯಾದಿಯಾಗಿ ನಾಟಕದ ಉದ್ದೇಶಗಳೆಲ್ಲಾ ಸೂಚಿಸಲ್ಪಟ್ಟಿವೆ.

ನಾಟಕದ ಉದ್ದೇಶವು ಉದಾತ್ತವಾಗಿದ್ದರೆ ಸಾಲದು, ಅಂತಹ ಉದ್ದೇಶವನ್ನು ಸಾಧಿಸುವ ನಟವರ್ಗವೂ ಅಷ್ಟೇ ಯೋಗ್ಯತೆಯಿಂದ ಕೂಡಿರಬೇಕು. ಇದರಿಂದ ಪ್ರಾಚೀನ ಕಾಲದಲ್ಲಿ ನಟರು ಕೇವಲ ನಾಟ್ಯಕಲಾ ಪ್ರವೀಣರು ಮಾತ್ರವಲ್ಲ ಸರ್ವಶಾಸ್ತ್ರ ಪಾರಂಗತರೂ ಮಹಾವಿದ್ವಾಂಸರೂ ಆಗಿದ್ದರು. ಕವಿಗಳ ಮತ್ತು ಸಾರ್ವಭೌಮರ ಗೆಳೆಯರಾಗಿದ್ದರು. ಹೀಗೆ ರಾಜಾಶ್ರಯವು ದೊರಕಿ ನಟವರ್ಗವು ನಾಟಕಕಲೆಯನ್ನು ಅತ್ಯುತ್ತಮ ಸ್ಥಿತಿಗೆ ಮುಟ್ಟಿಸಲು ಅವಕಾಶವಿತ್ತು.

ಭಾರತೀಯರು ನಾಟ್ಯ ಶಾಸ್ತ್ರದಲ್ಲಿ ನಾಟಕಶಾಲೆಯನ್ನು ಕಟ್ಟುವ ಕ್ರಮ, ಅಭಿನಯ, ಅಂಗವಿನ್ಯಾಸ, ಭಂಗಿ ಅಲಂಕಾರ, ವಸ್ತ್ರಭೂಷಣ, ಪಾತ್ರಕ್ಕೆ ಅನುರೂಪವಾದ ಭಾಷೆ, ನಟರ ಯೋಗ್ಯತೆ, ಸಭ್ಯರ ಲಕ್ಷಣ, ಇತ್ಯಾದಿಗಳೆಲ್ಲಾ ಹೇಳಲ್ಪಟ್ಟಿವೆ. ಆಗಿನ ಕಾಲದಲ್ಲಿ ನಟರಂತೆ ನಾಟಕವನ್ನು ನೋಡುವವರೂ ಪಂಡಿತರು, ಮಾಂಡಲೀಕರೇ ಮೊದಲಾದ ನಿರ್ದಿಷ್ಟ ಯೋಗ್ಯತೆಯುಳ್ಳವರೇ ಆಗಿದ್ದರು, ಅಂದರೆ ಸಾಮಾನ್ಯ ಜನರಿಗೆ ನಾಟಕಗಳನ್ನು ನೋಡುವ ಅವಕಾಶವಿದ್ದಿಲ್ಲವೆಂದು ತಿಳಿಯಬಾರದು. ಅವರಿಗೂ ತಕ್ಕುದಾದ ನಾಟಕಗಳು ಅಭಿನಯಿಸಲ್ಪಡುತ್ತಿದ್ದುವು. ದೇವಾಲಯಗಳ ಸಮೀಪದಲ್ಲಿ ವಸಂತೋತ್ಸವ ಹಬ್ಬದೂಟ ಇತ್ಯಾದಿಗಳಲ್ಲಿ ಸೀತಾಪಹರಣ, ಕೃಷ್ಣಲೀಲೆ ಇತ್ಯಾದಿಗಳನ್ನು ನಾಟಕ, ನಾಟ್ಯ, ಗೀತೆಗಳ ಮೂಲಕ ಪ್ರದರ್ಶಿಸುವುದು ರೂಢಿಯಾಗಿತ್ತು.

ನಾಟಕ, ಪ್ರಕರಣ, ಬಾಣ, ಪ್ರಹಸನ ಇತ್ಯಾದಿ ರೂಪಕಗಳಲ್ಲಿ ನಾಟಕವೇ ಪ್ರಮುಖವಾದುದು. ಇದರಲ್ಲಿ ಶೃಂಗಾರ ರಸಕ್ಕೆ ಪ್ರಾಶಸ್ತ್ಯ ಹೆಚ್ಚು. ಉದಾತ್ತ ಭಾವನೆಗಳಿಂದ ಕೂಡಿದ ಧೀರೋದಾತ್ತನೇ ಇದರಲ್ಲಿ ನಾಯಕನಾಗಿರಬೇಕು. ಪ್ರಕರಣದ ನಾಯಕನು ಬ್ರಾಹ್ಮಣ ಇಲ್ಲವೇ ಮಂತ್ರಿ ಅಥವಾ ಸಾರ್ಥವಾಹನಾಗಬೇಕು. ಬಾಣದಲ್ಲಿ ಒಬ್ಬನೇ ನಟನಿದ್ದರೆ ಸಾಕು. ಸ್ವರ ಬದಲಾವಣೆ, ಹಾವಭಾವಗಳಿಂದ ಒಬ್ಬನೇ ಬೇರೆ ಬೇರೆ ಪಾತ್ರಗಳನ್ನು ವಹಿಸುವನು. ಈ ಎಲ್ಲಾ ರೂಪಕಗಳೂ ಸಮಾಜದ ರೂಢ ವ್ಯಕ್ತಿಗಳ ಗುಣನಡತೆಗಳನ್ನು ಚಿತ್ರಿಸಿ ಸಮಾಜ ಸುಧಾರಣೆಯನ್ನೇ ಗುರಿಯಾಗಿಟ್ಟು ಕೊಂಡಂತೆ ಕಾಣುತ್ತಿವೆ. ರೂಪಕಗಳಲ್ಲಿ ನಟ ನಟಿಯರು ಹಾವಭಾವ ವಿಲಾಸಗಳಿಂದ ಹೊರ ಹೊಮ್ಮಿಸುವ ಭಾವನೆಗಳು ಸಹೃದಯರ ಹೃದಯದಲ್ಲಿ ಆಚ್ಚೊತ್ತಿ, ಅವರನ್ನು ರಸದ ಚಿಲುಮೆಯಲ್ಲಿ ಮುಳುಗಿಸುತ್ತವೆ. ತಮ್ಮನ್ನು ತಾವು ಮರೆಯುವಂತೆ ಮಾಡುತ್ತವೆ.

ಶಾಸ್ತ್ರೀಯವಾಗಿ ಹೇಳುವುದಿದ್ದರೆ ನಾಟಕವೆಂದರೆ ಅದಕ್ಕೆ ಬೇಕು ನಾಂದಿ. ನಾಂದಿಯೊಡನೆ ಸಂಗೀತ ನೃತ್ಯಗಳೂ ನಡೆಯುತ್ತಿದ್ದುವು. ಆ ಮೇಲೆ ಪ್ರಸ್ತಾವನೆ. ಇದರಲ್ಲಿ ಸೂತ್ರಧಾರನು ಪ್ರಧಾನ ನಟಿಯನ್ನು ಇಲ್ಲವೆ ತನ್ನ ಸಹಾಯಕರಲ್ಲಿ ಒಬ್ಬರನ್ನು ಕರೆದು ಮಾತಾಡುವನು. ನಾಟಕ ಬರೆದವನ ಹೆಸರು, ನಾಟಕದ ಹೆಸರು ನಾಟಕವಾಡಬೇಕಾದ ಸಂದರ್ಭ ಇತ್ಯಾದಿಗಳನ್ನು ಸಭ್ಯರಿಗೆ ತಿಳಿಸುವುದೇ ಇದರ ಉದ್ದೇಶವಾಗಿದೆ.

ನಾಟಕದಲ್ಲಿ ಸೂತ್ರಧಾರನೆ ಸರ್ವಾಧಿಕಾರಿ ಅವನಿಗೆ ತಿಳಿಯದ ವಿಷಯವಿಲ್ಲ ಅರಿಯದ ಭಾಷೆಯಿಲ್ಲ. ನಾಟಕ ಕಲೆಯಲ್ಲಿ ಪರಿಣತ ಮಾತ್ರ ಸಾಲದು. ಗ್ರಹಗಳು, ರಾಶಿಚಕ್ರ, ಪ್ರಾಚೀನ ಇತಿಹಾಸ, ರಾಜವಂಶ ಇತ್ಯಾದಿಗಳೆಲ್ಲಾ ಸೂತ್ರಧಾರನ ನಾಲಿಗೆ ತುದಿಯಲ್ಲಿರಬೇಕು, ಮಾತಿನ ಚಮತ್ಕೃತಿಯಲ್ಲಿ ಅಗ್ರಗಣ್ಯನಾಗಿರಬೇಕು, ದೈಹಿಕ ಶಕ್ತಿ ಮಾನಸಿಕ ಶಕ್ತಿಗಳಲ್ಲಿ ಇತರರು ಗಣಿಸದವನಾಗಿರಬೇಕು. ನಟರನ್ನು ತನ್ನ ಅಂಕೆಯಲ್ಲಿಟ್ಟು ನಾಟಕವನ್ನು ಜನಮನೋರಂಜನೆಯೊಡನೆ ಸಮಾಜ ಸುಧಾರಣೆಯ ಸಾಧನವಾಗಿಸುವ ಸರ್ವ ಶಕ್ತಿಯೂ ಇವನಲ್ಲಿರಬೇಕು. ಇವೆಲ್ಲಾ ನಮ್ಮ ಪ್ರಾಚೀನ ನಾಟಕಗಳಲ್ಲಿ ಅನುಸರಿಸಲ್ಪಡುತ್ತಿದ್ದ ಸಂಪ್ರದಾಯಗಳು. ಅಶ್ವಘೋಷ, ಭಾಸ, ಶೂದ್ರಕ, ವಿಶಾಖದತ್ತ ಕಾಳಿದಾಸ, ಶ್ರೀ ಹರ್ಷ, ಭವಭೂತಿ, ಆನಂದ ವರ್ಧನ ಇವರೆಲ್ಲಾ ಶಾಸ್ತ್ರೀಯವಾದ ಹಾದಿಯಲ್ಲೇ ಮುಂದೆ ಸಾಗಿದವರು. ನಾಟಕಗಳಿಗೆ ಸಾಹಿತ್ಯ ಸಾಮ್ರಾಜ್ಯದಲ್ಲಿ ಅಗ್ರಸ್ಥಾನವನ್ನು ತಂದವರು.

ನಮ್ಮ ದೇಶದಲ್ಲಿ ನಾಟಕಗಳ ಅವನತಿಗೆ ಪರದೇಶೀಯರು ಭಾರತವನ್ನು ಆಕ್ರಮಿಸಿದಾಗಲೇ ಪ್ರಾರಂಭವಾಗಿದೆ. ಮೊಗಲರ ಮತ್ತು ಮುಸಲ್ಮಾನರ ಆಡಳಿತದ ಕಾಲದಲ್ಲಿ ನಾಟಕ ಕಲೆಗೂ ಕ್ಷೀಣಾವಸ್ಥೆ ಬಂದಿತು. ರಾಜರ ಆಶ್ರಯವನ್ನು ಕಳೆದುಕೊಂಡ ನಾಟಕಕಲೆಯು ಹಳ್ಳಿಗಳ ಮೂಲೆಗಳಲ್ಲಿ ಜೀವಹಿಡಿದುಕೊಂಡು ಬಾಳಬೇಕಾಯಿತು. ರಾಜ—ಶ್ರೀಮಂತರ ಪೋಷಣೆಗಾಗಿ ಮಧ್ಯಮವರ್ಗದ ಜನರ ಸೊತ್ತಾಗಿ ದೇವಾಲಯಗಳಲ್ಲೋ ಮೈದಾನಗಳಲ್ಲೋ ಪ್ರದರ್ಶನಗೊಳ್ಳಬೇಕಾಯಿತು. ನಮ್ಮ ಪ್ರಾಂತ್ಯವನ್ನು ಕುರಿತು ಹೇಳುವುದಿದ್ದರೆ

(ಹನ್ನೆರಡನೇ ಪುಟ ನೋಡಿ)

ಕೃಷಿ, ಕೈಗಾರಿಕೆ, ವ್ಯಾಪಾರೋದ್ಯಮ ಮತ್ತು ರಾಷ್ಟ್ರಾಭಿವೃದ್ಧಿಯ ಅವಶ್ಯಕತೆಗಳಿಗಾಗಿ ಸಜ್ಜಾಗಿ, ನಿಮ್ಮ ಸೇವೆಗೆ ಸಿದ್ಧವಾಗಿರುವ ಈ ಬ್ಯಾಂಕು

ಸಿಂಡಿಕೇಟ್ ಬ್ಯಾಂಕು ತನ್ನ 200ಕ್ಕೂ ಮಿಕ್ಕಿದ ಶಾಖೆಗಳ ಜಾಲರಿಯನ್ನು ದೇಶದಾದ್ಯಂತವೂ ಪಟ್ಟಿ ಪ್ರಮುಖ ಕೇಂದ್ರಗಳನ್ನು ಆವರಿಸಿದೆ. ಅದನ್ನು ಪ್ರತಿನಿಧೀಕರಿಸುವ ವಿಶ್ವವ್ಯಾಪೀ ವ್ಯವಸ್ಥೆ ಇದೆ. ಅದು ದಕ್ಷಿಣವಾಗಿರಲಿ, ತಮಿಳುನಾಡು ಆಗಿರಲಿ, ಅಥವಾ ಕೇತೋಹಾರಿಯಾದ ಮಲಬಾರು ಕರಾವಳಿ ಆಗಿರಲಿ, ಇಲ್ಲವೇ ಆಂಧ್ರ, ಮೈಸೂರು, ಮಹಾರಾಷ್ಟ್ರ ಕಲ್ಕತ್ತ, ದಿಲ್ಲಿ ಆದರೂ ಸರಿಯೆ, ಸಿಂಡಿಕೇಟಿನ ಶಾಖೆಯೊಂದು ಅಲ್ಲಿ ನಿಮ್ಮ ಸೇವೆಗೆ ಸಿದ್ಧವಾಗಿದೆ. ನೀವೊಬ್ಬ ಕೈಗಾರಿಕೋದ್ಯಮಿಯಾಗಿರಬಹುದು. ಆಯಾತ, ನಿರ್ಯಾತ ಅಥವಾ ಆಂತರಿಕ ವ್ಯಾಪಾರಿಯಾಗಿರಬಹುದು. ನೀವೊಬ್ಬ ಸಾಗಾಟಗಾರರು, ಕಂಟ್ರಾಕ್ಟರರು, ವಿದ್ಯಾರ್ಥಿ ಅಥವಾ ಕೃಷಿಕರಾಗಿದ್ದರೂ ಸರಿ, ನಿಮಗೆ ಅಗತ್ಯವುಳ್ಳ ಬ್ಯಾಂಕಿಂಗ್ ಸೌಕರ್ಯವನ್ನು ಠೇವಣಾತಿ, ಸಾಲ ವ್ಯವಸ್ಥೆ, ವಿದೇಶ ವಿನಿಮಯ, ಬಿಲ್ ಕಲೆಕ್ಷನ್, ಎಕ್ಸಿಕ್ಯೂಟಿವ್ ಟ್ರಸ್ಟಿ ಮತ್ತು ಸೇಫ್ ಕಸ್ಟಡಿ ಇತ್ಯಾದಿ ಯಾವುದೇ ತರದ ಆವಶ್ಯಕತೆಯನ್ನು ಸಿಂಡಿಕೇಟ್ ಪೂರೈಸಬಲ್ಲದು. ಸಮರ್ಥ ಆಡಳಿತ ವ್ಯವಸ್ಥೆಯ ಬಗ್ಗೆ 40 ವರುಷಗಳ ಅನುಭವ ಮತ್ತು ನಿಮಗೆ ಪೂರ್ಣ ತೃಪ್ತಿಯನ್ನೀಯುವ ನಮ್ಮ ಉತ್ಕಟೇಚ್ಛೆ ಇವುಗಳು ಯಾವ ಸಮಯದಲ್ಲೂ ನಿಮ್ಮ ಸೇವೆಗೆ ಸಿದ್ಧವಾಗಿವೆ.

ಸಿಂಡಿಕೇಟ್ ಬ್ಯಾಂಕ್—ನಿಮ್ಮನ್ನು ಸದಾ ಆದರದಿಂದ ಸ್ವಾಗತಿಸುವ ನಿಮ್ಮದೇ ಸಂಸ್ಥೆಯಾಗಿದೆ.

FAITHFUL FRIENDLY SB

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

— ಅತ್ಯುತ್ತಮ ಬ್ಯಾಂಕಿಂಗ್ ಸೇವೆ —

ಜನತಾ ವಿದ್ಯಾರಣ್ಯರ ನಡುವಿಂದ

ವೀರ ಹುಕ್ಕ ಬುಕ್ಕರು ಎದ್ದು ಬರಲಿ

ಬರೆದವರು ಶ್ರೀ ಶಿವಶಂಕರ.

'ನಿರಾಶ್ರಿತರ ನಿವಾಸ ವ್ಯವಸ್ಥೆಗಾಗಿ ಪಾಕಿಸ್ಥಾನದಿಂದ ನೆಲವನ್ನು ಕೇಳಬೇಕೆಂದು ಹೇಳುತ್ತಿದ್ದ ಮಹಾವೀರ ತ್ಯಾಗಿಯವರು ತಮ್ಮ ವೀರೋಕ್ತಿಯ ತ್ಯಾಗ ಮಾಡಿದರು. ಪಾಕಿಸ್ಥಾನದಿಂದ ಪ್ರದೇಶವನ್ನು ಕೇಳುವ ಪೌರುಷೋಕ್ತಿ ಹಾಗಿರಲಿ, ನಮ್ಮ ಪಾಲಿಗೆ ಉಳಿದಿರುವ ಪ್ರದೇಶದಲ್ಲಿ ಬಲಾತ್ಕಾರ ಹಾಗೂ ತಲೆಮರೆಸಿಕೊಂಡು ಬಂದು ತಂಗಿರುವ ಪರಕೀಯರನ್ನು ಆಚೆ ಕಳುಹಿಸಲೂ ನಮ್ಮಿಂದಾಗಲಿಲ್ಲ. ಜನತೆಯ ಕಣ್ಣು ತೊಡೆಯಲಿಕ್ಕೆಂದೋ ಏನೋ ಅಸ್ಸಾಂ ಪ್ರದೇಶದಿಂದ ಕೆಲ ಪಾಕಿಸ್ಥಾನಿಗಳನ್ನು ಒಮ್ಮೆ ಹಿಂದಕ್ಕಟ್ಟುವ ಯೋಜನೆಯನ್ನು ಹಾಕಲಾಯಿತು. ಅದರಂತೆ ಕೇವಲ ಕೆಲವರನ್ನು ಕಳುಹಿಸಿದುದೇ ತಡ; ಪಾಕಿಸ್ಥಾನ ಕೆಂಡ ಕಾರಿತು. ಆಗ ಪ್ರಧಾನಿಯಾಗಿದ್ದ ಜವಾಹರಲಾಲಜೀಯವರು ಒಡನೆ ಯೋಜನೆಯನ್ನು ಕಸದ ಬುಟ್ಟಿಗೆಸೆದುಬಿಟ್ಟರು. ಅಲ್ಲಿಗೇನೇ ಆ ಯೋಜನೆ ನಿಂತಿತು. ಅಸ್ಸಾಂ ಗಡಿ ಪ್ರದೇಶವು ಒಂದೇ ಪ್ರವೇಶವಿರುವ ಛತ್ರವಾಯಿತು. ಪಾಕಿಸ್ಥಾನದಿಂದ ಪ್ರವಾಹ ಇಲ್ಲಿ ಬಂದು ನೆಲಸಬಹುದು, ಅವರನ್ನು ಹಿಂದಕ್ಕೆ ಕಳುಹಿಸಬಾರದು! ಹೀಗಿದ್ದರೂ ಸರಕಾರ ಅದೃಷ್ಟವಶಾತ್ ಆಗೊಮ್ಮೆ ಈಗೊಮ್ಮೆ ಕಣ್ಣು ತೆರೆಯುವುದುಂಟು. ಆದರಂತೆ ಈಗ ಇನ್ನೊಂದು ರೀತಿಯ ಕಾರ್ಯಾಚರಣೆಗಾರಂಭಿಸಿದ್ದಾರೆ. ಗಡಿ ಪ್ರದೇಶದಲ್ಲಿ ಒಂದು ಮೈಲಿನೊಳಗಿರುವ ಮಾನವರೆಲ್ಲರನ್ನೂ ಎಬ್ಬಿಸಿ ಅದನ್ನು ಖಾಲಿ ಪ್ರದೇಶವನ್ನಾಗಿ ಮಾಡಬೇಕೆಂದು ಕಾಂಗ್ರೆಸ್ ಯೋಚಿಸಿತು. ಅನಂತರ ಒಂದು ಮೈಲಿನೊಳಗಿರುವ ಮುಹಮ್ಮದೀಯರನ್ನು ಎಬ್ಬಿಸಬೇಕೆಂದು ನಿರ್ಣಯಿಸಿಕೊಂಡಿತು. ಈ ನಿರ್ಣಯ ಬಹಳ ತಡವಾಗಿ ಬಂದಪ್ಪಿದೆ. ಅದಾಗಲೇ ಬಹಳ ಪ್ರಮಾಣದಲ್ಲಿ ಮುಹಮ್ಮದೀಯರಲ್ಲಿ ತಂಗಿದ್ದು, ಹಿಂದೆಯೇ ಅಲ್ಲಿದ್ದ ಮುಸ್ಲಿಮರು ಅವರಿಗೆ ಅತ್ಯುತ್ತಮ ಸ್ವಾಗತವನ್ನಿತ್ತಿರುವರು. ಹಾಗಿದ್ದರೂ ಈ ನಿರ್ಣಯದ ಕುರಿತು ಕೇಳಿ ಬಂದದ್ದೇ ತಡ, ಅಸ್ಸಾಮಿನ ಮುಹಮ್ಮದೀಯರು ಬೆಂಕಿ ಕಾರಲಾರಂಭಿಸಿರುವರು.

ಅಸ್ಸಾಮಿನ ವಿಧಾನ ಸಭೆಯಲ್ಲಿ ಹದಿನೈದು ಮುಹಮ್ಮದೀಯ ಸದಸ್ಯರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಿದ್ದಾರೆ. ಪಾಕಿಸ್ಥಾನದಿಂದ ಬಂದು ಅಸ್ಸಾಂ ಗಡಿ ಪ್ರದೇಶದಲ್ಲಿ ತಂಗಿರುವ ಮುಸ್ಲಿಮರನ್ನು ಹಿಂದಕ್ಕೆ ಕಳುಹಿಸುವದನ್ನು ವಿರೋಧಿಸಿ ಆ ಹದಿನೈದು ಸದಸ್ಯರಲ್ಲಿ ಹದಿಮೂರು ಸದಸ್ಯರು, ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡುವದಾಗಿ ಬೆದರಿಕೆ ಹಾಕಿದ್ದಾರೆ. ಇನ್ನುಳಿದ ಇಬ್ಬರು ಮಂತ್ರಿಗಳಾಗಿದ್ದಾರೆ, ಅಲ್ಲದೆ ಮುಖ್ಯ ಖಾತೆಗಳು ಅವರ ಕೈಯ್ಯಲ್ಲಿವೆ. ಶ್ರೀ ಛಾಲಿಹಾರವರು ನಾಮ ಮಾತ್ರ ಅಸ್ಸಾಮಿನ ಮುಖ್ಯಮಂತ್ರಿಯೆಂಬುದು ರಾಜಕೀಯಸ್ಥರಿಗೆ ತಿಳಿದಿರುವ ರಹಸ್ಯವಿದೆ. ನಿಜವಾಗಿ ಅಲ್ಲಿ ಅಧಿಕಾರ ಚಲಾಯಿಸುತ್ತಿರುವರು, ಶ್ರೀ ಫಕ್ರುದ್ದೀನ್ ಅಲಿ ಅಹಮ್ಮದ್, ಇವರ ಕೈಯ್ಯಲ್ಲಿರುವದು ಅರ್ಥಿಕ ಖಾತೆ! ಶ್ರೀ ಛಾಲಿಹಾರವರ ದೇಹಪರಿಸ್ಥಿತಿ ಚೆನ್ನಾಗಿರದ ಕಾರಣ ಹಾಗೂ ಅವರು ಹೆಚ್ಚಿನ ಸಮಯವನ್ನು ನಾಗಾಸಂಧಾನಕ್ಕಾಗಿ ಕಳೆಯುತ್ತಿರುವುದರಿಂದ ಶ್ರೀ ಫಕ್ರುದ್ದೀನವರಿಗೆ ಯಾವ ಅಂಕೆಯೂ ಈಗ ಇರುವದಿಲ್ಲ. ಹದಿಮೂರು ಜನರು ಕಾಂಗ್ರೆಸ್ಸಿಗೆ ತಿಲಾಂಜಲಿ ಕೊಡುತ್ತೇವೆಂದಾಗ ಫಕ್ರುದ್ದೀನ್ ತುಟಿ ಪಿಟಕ್ಕೆನ್ನಲಿಲ್ಲ. ಒಳಗಿಂದೊಳಗೆ ಅವರ ಕೈವಾಡ ಅದರಲ್ಲಿ ಇದ್ದೇ ಇದೆ. ಅಷ್ಟರಲ್ಲೇ ಈ ಕಥೆ ಮುಗಿಯುತ್ತಿದ್ದಲ್ಲಿ ಕಾಂಗ್ರೆಸ್ಸಿಗೂ ದೇಶಕ್ಕೂ ಒಳ್ಳೆಯದಿತ್ತು. ನಿಜವಾಗಿ ಅದು ಅಲ್ಲೇ ನಿಲ್ಲಲಿಲ್ಲ.

ಭಾರತದ ಗೃಹ ಮಂತ್ರಿ ಶ್ರೀ ಗುಲ್ಜಾರೀಲಾಲ ನಂದಾರವರು ಅಸ್ಸಾಮಿಗೆ ಭೇಟಿ ಕೊಟ್ಟಾಗ ಅವರಿಗೆ ಅತ್ಯಾಶ್ಚರ್ಯವಾಯಿತು ಆದರೆ ಅದರಿಂದ ಪ್ರಯೋಜನವೇನೂ ಆಗಲಿಲ್ಲ. ಅಥವಾ ಅದಕ್ಕಿಂತಲೂ ಪಂಚಮ ಸ್ಥಂಭೀಯರಿಗೆ ಬಹಳ ಪ್ರಯೋಜನವಾಯಿತು. ಹಿಂದೆ ಸ್ವ| ಜವಾಹರಲಾಲ ನೆಹ್ರೂಜೀಯವರು ನಾಗಾ ಬೆಟ್ಟಗಳಿಗೆ ಹೋಗಿದ್ದಾಗ ಬಂಡೆದ್ದ ಆಲ್ಲಿಯ ನಾಗಾಗಳು ಅವರಿಗೆ ಆಶ್ಚರ್ಯ ಬರಿಸುವ ರೀತಿಯಲ್ಲಿ ಕಪ್ಪು ಬಟ್ಟೆ ತೋರಿಸುತ್ತ ಸಭಾತ್ಯಾಗ ಮಾಡಿದ್ದರು. ಹಾಗೆಯೇ, ಶ್ರೀ ಗುಲ್ಜಾರೀಲಾಲಜೀಯವರು ಅಸ್ಸಾಮಿನಲ್ಲಿ ಅಂತಹದ್ದೇ ಚಿತ್ರವನ್ನು ಕಂಡರು. ಅವರು ಹೋದಲ್ಲೆಲ್ಲಾ ಮುಸ್ಲಿಮರು ಬಂದು ಅವರನ್ನು ಮುತ್ತುತ್ತಿದ್ದರು; ಯೋಜನೆಯನ್ನು ಬದಲಾಯಿಸಿರೆಂದ ಅವರು ಒಕ್ಕೊರಲಿನಿಂದ ಕೇಳಿಕೊಂಡರು. 'ಆಯಿತು, ನೋಡೋಣ'—ನಂದಾಜೀ ನುಡಿದರು! ಕಾಂಗ್ರೆಸ್ ಸರಕಾರಕ್ಕೆ ಅದೇ ಒಂದು ಗೊತ್ತೇನು? ಗುಂಡಾಗಿರಿಗೆ ತುಂಬಿ ಸುವದೊಂದೇ ಅವರಿಗೆ ಗೊತ್ತೇನು?

ಭಾರತೀಯ ಜನ ಸಂಘ ಕೇಂದ್ರ ಸರಕಾರದ ಬಳಿ ಕೇಳಿದ್ದಾದರೂ ಏನು?—ಗಡಿ ಪ್ರದೇಶದಲ್ಲಿ ಹತ್ತು ಮೈಲಿನ ವರೆಗಿರುವ ಮುಹಮ್ಮದೀಯರನ್ನಲ್ಲಿಂದೆಬ್ಬಿಸಿ ಒಳ ಪ್ರದೇಶದಲ್ಲಿ ಅವರಿಗೆ ವ್ಯವಸ್ಥೆ ಮಾಡಿಕೊಟ್ಟು, ಆ ಸ್ಥಳದಲ್ಲಿ 'ನಿರಾಶ್ರಿತ'ರಿಗೆ ನಿವಾಸ ಸ್ಥಾನ ನಿರ್ಮಿಸಿಕೊಡಬೇಕು, ಮತ್ತು ಗಡಿ ಪ್ರದೇಶದ ಸಬಲ ಜನರಿಗೆ ಶಸ್ತ್ರ ವಿದ್ಯೆಯನ್ನು ಹೇಳಿ ಕೊಡಬೇಕೆಂದು. ಕಾಂಗ್ರೆಸ್ ಸರಕಾರ ಮೊದಲು ಯೋಚಿಸಿದ್ದೇನು?—ಮುಹಮ್ಮದೀಯರನ್ನು ಮಾತ್ರ ಹೇಗೆ ಎಬ್ಬಿಸುವದು? ನಿಧರ್ಮೀಯ ಕಲ್ಪನೆಗನುಸಾರವಾಗಿ ನಿವಾಸಿಗಳೆಲ್ಲರನ್ನು ಅಲ್ಲಿಂದ ಎಬ್ಬಿಸಿ ಬಿಡುವದೆಂದು. ಇದರಿಂದ ಯಾರಿಗೆ ಪ್ರಯೋಜನ?—ಪಾಕಿಸ್ಥಾನಿಗಳಿಗೆ ಕಾಂಗ್ರೆಸ್ ಸರಕಾರದ ಎರಡನೆಯ ಆಲೋಚನೆ ಯಾವುದು?—ಗಡಿ ಪ್ರದೇಶದಲ್ಲಿ ಬಂದು ತಂಗಿರುವ ಪಾಕಿಸ್ಥಾನಿಗಳನ್ನು ಪಾಕಿಸ್ಥಾನಕ್ಕೆ ಕಳುಹಿಸಿ ಬಿಡುವದು. ಅಬ್ಬಾ! ಅದಕ್ಕೆ ಕಂಡುಬಂದ ಪ್ರತಿಕ್ರಿಯೆ! ಈ ರೀತಿ ದೇಶದೊಳಗೆನೇ ನಾವು ಕೈ ತೋರಿಸಿ ಅಪಶಕುನ ಹೇಳಿಸಿಕೊಳ್ಳುತ್ತಿದ್ದೇವೆ.

ಕಾಂಗ್ರೆಸ್ ಸರಕಾರ ಭ್ರಮೆಯೆಂಬ ಮೃಗ ಮರೀಚಿಕೆಯ ಹಿಂದುಗಡೆ ಬಹಳ ವೇಗದಿಂದ ಓಡುತ್ತಿದೆ. ಪಾಕಿಸ್ಥಾನಕ್ಕೆ ಒಂದಿಷ್ಟು ಕೋಪ ಬರಿಸಲೂ ಅದಕ್ಕೆ ಒಂದಿನಿತೂ ಇಷ್ಟವಿಲ್ಲ. ಗಡಿ ಪ್ರದೇಶದಲ್ಲಿ ತಂಗುತ್ತಿರುವ ಮುಹಮ್ಮದೀಯರನ್ನು ಹಿಂದಕ್ಕಟ್ಟುವ ಮಾತು ಹಾಗಿರಲಿ. ದೇಶದೊಳಗೆ ಅಲ್ಲಲ್ಲಿ ಸುತ್ತಾಡಿಕೊಂಡು ಮುಖ್ಯ ವಿಷಯಗಳನ್ನು ಪಾಕಿಸ್ಥಾನಕ್ಕೆ ಅಡೆತಡೆ ಇಲ್ಲದೆ ತಿಳಿಸುತ್ತಿರುವ ಗೂಢಚಾರರಿಗೆ ಕಾಂಗ್ರೆಸ್ ಸರಕಾರ ಏನು ಮಾಡುತ್ತಿದೆ?

ಮೇ ತಿಂಗಳ ಅಂತ್ಯದಲ್ಲಿ ಪಂಜಾಬಿನ ಪೋಲೀಸರು ಇಬ್ಬರು ಪಾಕಿಸ್ಥಾನಿಗಳನ್ನು ಸೆರೆ ಹಿಡಿದರು. ಪಾಕಿಸ್ಥಾನಿಗಳು ಬಿಯಾಸ್ ಸೇತುವೆಯ ಚಿತ್ರ ತೆಗೆಯುತ್ತಿದ್ದರು. ಆದರ ಚಿತ್ರ ತೆಗೆಯಲು ಅನುಮತಿ ಇಲ್ಲದೆ ಯಾರಿಗೂ ಬಿಡುವದಿಲ್ಲ. ಈ ಪಾಕಿಸ್ಥಾನಿಗಳು ತಾವು ಅಫಘಾನ ರಾಯಭಾರಿ ಕಛೇರಿಯ ದೊಡ್ಡ ಅಧಿಕಾರಿಗಳೆಂದು ದೊಡ್ಡ ಸುಳ್ಳು ಹೇಳಿ, ಸಿಬ್ಬಂದಿಯನ್ನು ಸುಮ್ಮಗಾಗಿಸಿದರು. ಅಷ್ಟು ಹೊತ್ತಿನಲ್ಲಿ ಅಲ್ಲಿಗೆ ಆಗಮಿಸಿದ ಪೋಲೀಸ್ ಅಧಿಕಾರಿಗಳು ಅವರನ್ನು ಬಂಧಿಸಿದರು. ಅವರು ಅಫಘಾನ್ ರಾಯಭಾರಿ ಕಛೇರಿಯ ಅಧಿಕಾರಿಗಳಿರದೆ ಪಾಕಿಸ್ಥಾನದ ರಹಸ್ಯ ಚಾರರಿದ್ದರು. ಅವರು ಪಾಕಿಸ್ಥಾನದ ರಾಯಭಾರಿ ಕಛೇರಿಯ ಉದ್ಯೋಗಸ್ಥರು. ಅವರನ್ನು ಶೋಧಿಸಿದಾಗ ಬಹಳಷ್ಟು ರಹಸ್ಯ ಪತ್ರಗಳು ದೊರಕಿದುವು. ಅಷ್ಟು ಹೊತ್ತಿಗೆ ಅದೇನೋ ನಡೆಯಿತು! ಪಂಜಾಬ್ ಸರಕಾರಕ್ಕೆ ಪರಮಾಶ್ಚರ್ಯವಾಯಿತು. ದಿಲ್ಲಿ ದೇವತೆಗಳಿಂದ ಅಪ್ಪಣೆ ಬಂದಿದೆ, ಕೈದಿಗಳನ್ನು ಒಡನೆ ಬಿಟ್ಟು ಬಿಡಬೇಕೆಂದು ಪಾಪ! ಅವರು ಮಾಡುವುದಾದರೂ ಏನು? ಹಾಗೆಯೇ ಆಯಿತು!

ಇಲ್ಲಿ ನಮ್ಮ ಕಣ್ಣೆದುರಿಗೆ ನಡೆಯುತ್ತಿರುವದಾದರೂ ಏನು? ಸ್ವರ್ಗ ಸುಖವನ್ನನುಭವಿಸುತ್ತಿರುವ ವಿಷರ್ಪ ಶೇಖ್ ಅಬ್ದುಲ್ಲಾನನ್ನು ವಿದೇಶಿಗಳು ಬಂದು ಕಂಡು ಮಾತಾಡುತ್ತಾರೆ. ಶೇಖ್ ಅಬ್ದುಲ್ಲಾನ ಬಳಿ ಯಾರೂ ಮಾತಾಡದಂತೆ ನೋಡಿಕೊಳ್ಳಲು ಇಬ್ಬರು ಮಹಮ್ಮದೀಯ ಪೋಲೀಸ ಅಧಿಕಾರಿಗಳನ್ನು ಇಟ್ಟಿರುವ ವಿಷಯ ಹಿಂದಿನ 'ನವಯುಗ'ದಲ್ಲಿ ಪ್ರಕಟವಾಗಿರುತ್ತದೆ ವಿದೇಶಿಗಳಿಗೆ ತಮ್ಮ ಕೆಲಸವಾದ ಮೇಲೆ ಸಿಗುವ ಶಿಕ್ಷೆಯಾದರೂ ಏನು? ಇಲ್ಲಿಂದ ಹೊರಗೆ ಅವರ ದೇಶಕ್ಕೇನೇ ಕಳುಹಿಸಿ ಬಿಡುತ್ತಾರೆ. ಹಾಗೆ ತಪ್ಪಿಸಿಕೊಂಡು ಹೋದ ಕಾರ್ಕೋಟಕ ಅಲ್ಲಿಂದಲೇ ಬುಸುಗುಟ್ಟುತ್ತದೆ. ಇತ್ತ ಶೇಖ್ ಅಬ್ದುಲ್ಲಾನತ್ತ ಏನಾದರೂ ಎಚ್ಚರಿಕೆ ವಹಿಸಲಾಗುತ್ತಿದೆಯೇ? ಇಲ್ಲವೆಂದರೂ ತಪ್ಪಾಗಲಿಕ್ಕಿಲ್ಲ. ಅಷ್ಟೇ ಅಲ್ಲ, ವಿದೇಶಿಗಳು ವಿಮಾನ ಮೂಲಕ ಲಂಗುಲಗಾಮಿಲ್ಲದೆ ಭಾರತದಲ್ಲಿ ಬಂದಿಳಿಯುತ್ತಾರೆ, ಹೋಗುತ್ತಾರೆ. ಒಂದು ದಿನ ಶೇಖ್ ಅಬ್ದುಲ್ಲಾನನ್ನು ಹಿಡಿದುಕೊಂಡು ಹೋದರೆ, ಯಾರಿಗಾದರೂ ಆಶ್ಚರ್ಯವಾದೀತೇ?

ಪರಿಸ್ಥಿತಿ ಹೀಗಿದೆಯಾದರೂ ನಮ್ಮ ಅರಣ್ಯರೋಧನ ತಪ್ಪಿರುವುದಿಲ್ಲ. ಒಳ ವಿಷಯದಲ್ಲೂ ಹಾಗೆನೇ "ಹಿಂದೂ" ಎಂದೊಡನೇ, ಮುಂದಿನ ಸಾಲಿನಲ್ಲಿರುವವರು ಹಿಂದಿನ ಸಾಲಿಗೆ ಬಂದು ಬಿಡುತ್ತಾರೆ ಸಮಯ ಒಳ್ಳೆಯದಿದ್ದಲ್ಲಿ "ಹಿಂದೂ"ವೆಂದು ವೇದಿಕೆಯ ಮೇಲೆ ಹಾರಲೂ ಅವರು ಹಿಂಜರಿಯುವದಿಲ್ಲವೆಂಬುದೂ ನೈಜ ವಿಷಯವಿದೆ. "ಕಮ್ಯೂನಲ"(ನನ್ನತನವಲ್ಲ) ವಿಷಯದಲ್ಲಿ ಅವರು ಮೂಗು ಒರೆಸಿಕೊಳ್ಳುತ್ತಿದ್ದಾರೆ. ಭಾಷೆಯ ವಿಷಯದಲ್ಲಿ ರಶ್ಯಾದವರು ನಮ್ಮ ರಾಷ್ಟ್ರಭಾಷೆ ಹಾಗೂ ಪ್ರಥ ನಿಯುಮರಿಗೆ ಅದೆಂತು ಛೀಮಾರಿ ಹಾಕಿದ್ದರೆಂಬುದು ಆರಿ ಹೋಗದ ಹುಣ್ಣು ಇದ ಅಂತಹದೇ ಜಾಡ್ಯ ಜನತೆಯ ಹೃದಯದಲ್ಲಿರುವದನ್ನು ನಾವು ಗುರುತಿಸಬಹುದು. ಅದೇನೂ ಕಷ್ಟದ ಕೆಲಸವಲ್ಲ.

ಹಿಂದೂಮುಸಲ್ಮಾನರವು ದ್ವೀಪಾಂತರಕ್ಕೆ ಇಂಡೋನೇಶ್ಯಾಕ್ಕೆ ಸೇರಿದ್ದೆಂದು ಸಾರುತ್ತಿರುವ ಅಲ್ಲಿನ ಅಧ್ಯಕ್ಷ ಶ್ರೀ ಸುಕರ್ಣರವರು ಭಾರತಕ್ಕೆ ಬಂದಿದ್ದಾಗ ನಡೆದ ಘಟನೆಯಿದು. 'ಸುಕರ್ಣ' ಪದ ಸಂಸ್ಕೃತ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು– "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಶ್ರೀ ಸ್ವಾಮಿ ಚಿನ್ಮಯಾನಂದ ಮೀಮಾಂಸೆ

ಗೀತಾ-ದ್ವಿತೀಯ ಅಧ್ಯಾಯ

ಸಂಗ್ರಹಕರ್ತೆ
ಶ್ರೀಮತಿ ಆನಂದಿ ಸದಾಶಿವ ರಾವ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಬುದ್ಧಿಯೋಗವನ್ನು ಮರೆಹೋಗು

ಅಥ ಚೇತ್ತ್ವಮಿಮಂ ಧರ್ಮ್ಯಂ |
ಸಂಗ್ರಾಮಂ ನ ಕರಿಷ್ಯಸಿ |
ತತಃ ಸ್ವಧರ್ಮಂ ಕೀರ್ತಿಂ ಚ |
ಹಿತ್ವಾ ಪಾಪಮವಾಪ್ಸ್ಯಸಿ || ೩೩ ||

ಹೀಗೆ ಒದಗಿ ಬಂದ ಈ ಧರ್ಮಯುದ್ಧವನ್ನು ನೀನು ಮಾಡದೆ ಹೋದರೆ, ನೀನು ಕರ್ತವ್ಯ ಚ್ಯುತನಾಗಿ, ಅಪಯಶಸ್ಸಿಗೆ ಕಾರಣನಾಗಿ, ಪಾಪಿಷ್ಠನಾಗುವೆ. ನೀನು ಎಲ್ಲಿ ಹೋದರೂ, ಏನ ಮಾಡಿದರೂ, ಯುದ್ಧ ಮಾಡಲಿಲ್ಲ ಎಂಬ ಕೊರಗು ನಿನ್ನನ್ನು ಪೀಡಿಸುವುದು.

ಪಾಪ — ಈ ಶಬ್ದವನ್ನು ಭಾರೀ ತಪ್ಪು ಅಭಿಪ್ರಾಯದಲ್ಲಿ ಈಗ ಉಪಯೋಗಿಸಲ್ಪಟ್ಟಿದೆ. ಪಾಪ ಎಂದರೆ ಒಬ್ಬನು ದೇಹ, ಮನ, ಬುದ್ಧಿಯ ಮಟ್ಟದಲ್ಲಿ ಒಂದು ಕಾರ್ಯ, ಯೋಚನೆ, ವಿಚಾರ ಮಾಡಿದರೆ ಅದರಿಂದ ಮನದಲ್ಲಿ ವಿಕ್ಷೇಪವು ಉಂಟಾದರೆ, ಎಂದರೆ ಆ ಕೃತ್ಯದಿಂದಾಗಿ ಒಂದು ಪ್ರತಿಕ್ರಿಯೆಯು ಪರಿಣಾಮವು ಮನದಲ್ಲಿ ಉಂಟಾದರೆ ಅದು ಪಾಪ ಎಂದು ಪರಿಗಣಿಸಲ್ಪಡುವುದು. ಒಬ್ಬನಿಗೆ ಪಾಪ ಎಂದಾಗುವುದು ಇನ್ನೊಬ್ಬನಿಗೆ ಪಾಪ ಆಗಬೇಕೆಂದಿಲ್ಲ. ಅದು ಅವರವರ ಮನೋಬುದ್ಧಿಯ ಬೆಳವಣಿಗೆಯಲ್ಲಿ ಸೂಕ್ಷ್ಮತೆ ಪಡೆದಿರುವುದು.

ಉದಾ — ಬಹಳ ಹಸಿವಾದಾಗ ಒಬ್ಬನು ಮಗುವನ್ನು ನೋಡಿ ನುಗ್ಗುವನು, ಇನ್ನೊಬ್ಬ ಸುಸಂಸ್ಕೃತನಿಗೆ ಅದು ಅನಾಗರಿಕ ವರ್ತನೆ ಎಂದು ತೋರುವುದು, ಆದರೆ ನೋಡಿ ನುಗ್ಗುವವನಿಗೆ ಅದು ಸರಿಯಾದ ಕೃತ್ಯವಾಗಿದೆ. ಇತರರ ಕಷ್ಟಗಳನ್ನು ವೇದನೆಗಳನ್ನು ಅರಿಯುವ ಮನೋಭಾವ ಸೂಕ್ಷ್ಮತೆಯ ಬೆಳವಣಿಗೆಯು ಶೂಕ ಮಾಡಲು ಸಾಧನವಾದೀತು.

ಅರ್ಜುನನಿಗೆ ಯುದ್ಧ ಮಾಡದೆ ನೀನು ಹೊರಟು ಹೋದರೆ ಈ ನಿನ್ನ ಕೃತ್ಯವು ಎಂದಿಗೂ ನಿಶ್ಚಿಂತೆಯಿಂದ ನಿನ್ನನ್ನು ಇರಲು ಬಿಡಲಾರದು. ಎಂದು ಶ್ರೀಕೃಷ್ಣನು ಹೇಳಿದುದು.

ಅಕೀರ್ತಿಂ ಚಾಪಿ ಭೂತಾನಿ|
ಕಥಯಿಷ್ಯಂತಿ ತೇವ್ಯಯಾಮ್ |
ಸಂಭಾವಿತಸ್ಯ ಚಾಕೀರ್ತಿ|
ರ್ಮರಣಾದತಿರಿಚ್ಯತೇ || ೩೪ ||

ಜನರು ಕೂಡಾ ನಿನ್ನ ಅಪಯಶಸ್ಸನ್ನು ಪದೇ ಪದೇ ಹೇಳುವರು. ಕೀರ್ತಿಗಳಿಸಿದವರಿಗೆ ಅಪಕೀರ್ತಿ ಯಾ ಅಗೌರವವು ಮರಣ ಸದೃಶವಾಗಿರುವುದು. ಏಕೆ, ಅದು ಮೃತ್ಯುವಿಗಿಂತಲೂ ಹೆಚ್ಚಿನ ದುಃಖದಾಯಕವಾಗುವುದು

ಕೀರ್ತಿ, ಪ್ರತಿಷ್ಠೆಗಳಿಸಿದ ವೀರನಾದ ಅರ್ಜುನನಿಗೆ ಶ್ರೀಕೃಷ್ಣನು, ಸಾಮಾನ್ಯವಾದ ಜನರ ತಿಳುವಳಿಕೆಗೆ ದೊರಕುವ ವಿಷಯಗಳನ್ನೇ ಹೇಳುವನು. ಅದು ತನ್ನ ಗೆಳೆಯನಿಗೆ ಅರ್ಥವಾಗುವುದು ಎಂದು ತಿಳಿದೊಡನೆ ಅದೇ ವಿಚಾರವನ್ನು ಮುಂದುವರಿಸಿರುವನು.

ಯುದ್ಧ ಮಾಡಬೇಕಾದ ಸಂದರ್ಭದಲ್ಲಿ ಯುದ್ಧ ಮಾಡದೇ ಹೋದಲ್ಲಿ ಅಪಕೀರ್ತಿ ತಟ್ಟುವುದು ಎಂದು ಯಾರಿಗೂ ತಿಳಿಯಬಹುದು. ಅದನ್ನು ಶ್ರೀಕೃಷ್ಣನು ಹೇಳಿ, ಈಗಿನವರು ಮಾತ್ರವಲ್ಲದೆ ಮುಂದಿನ ಪೀಳಿಗೆಯವರು ಕೂಡಾ ನಿನ್ನ ಹೇಡಿತನವನ್ನು ಹಳಿಯುವರು. ಅದು ನೀನು ಸತ್ತ ಬಳಿಕವೂ ಮುಗಿಯದೆ ಹೋಗುವ ಪ್ರಸಂಗ ಬಂದೀತು. ಅರ್ಜುನನೆಂಬ ಒಬ್ಬ ವೀರಾಧಿವೀರ ಭಾರತದೇಶದ ರಾಜಕುಟುಂಬದಲ್ಲಿದ್ದನು. ಅವನು ಭಾರೀ ವೀರ, ಪರಾಕ್ರಮಿ. ಆದರೆ ಅವನ ಗಾಯಕವೆಲ್ಲಾ ಯುದ್ಧ ಆರಂಭವಾಗುವ ತನಕ, ಯುದ್ಧ ಇದಿರಾದಾಗ ಅವನು ನಾನು ಯುದ್ಧ ಮಾಡಲಾರೆ ಎಂದು ರಣರಂಗ ಬಿಟ್ಟು ಹೋದನು— ಎಂದು ನೀನು ಅಪಕೀರ್ತಿ ಪಡೆಯುವೆ. ಹೀಗೆ ಶ್ರೀಕೃಷ್ಣನು ವೀರನಾದ ಅರ್ಜುನನಿಗೆ ನಿನ್ನ ವರ್ತನೆಯು ಹೇಡಿತನ ವ್ಯಕ್ತಪಡಿಸುತ್ತದೆ. ಎಂದು ಜನರು ತಿಳಿಯುವರು ಎಂದು ಹೇಳಿರುವನು.

ಭಯಾದ್ರಣಾದುಪರತಂ|
ಮಂಸ್ಯಂತೇ ತ್ವಾಂ ಮಹಾರಥಾಃ|
ಯೇಷಾಂ ಚ ತ್ವಂ ಬಹುಮತೋ|
ಭೂತ್ವಾ ಯಾಸ್ಯಸಿ ಲಾಘವಮ್ ||೩೫||

ಈ ಮಹಾರಥರೆಂದೆನ್ನಿಸಿಕೊಂಡ ಭೀಷ್ಮ ದ್ರೋಣರು ಕೂಡಾ ಅರ್ಜುನನು ವೀರಾಗ್ರೇಸರನೆಂಬ ಅಭಿಮಾನವನ್ನಿಟ್ಟುಕೊಂಡಿದ್ದುದು ತಪ್ಪಾಯಿತು, ಅವನು ಹೇಡಿತನದಿಂದ ಯುದ್ಧಕ್ಕೆ ಹಿಂಜರಿದನೆಂದು ಭಾವಿಸುವರು, ಅವರು ನಿನ್ನ ಮೇಲೆ ಇರಿಸಿದ ಅಭಿಮಾನ ತಕ್ಷಣ ಮಾಯವಾಗುವುದು. ಹಿಂದೆ ನೀನು ಬಹಳ ಪರಾಕ್ರಮಿ ಎಂದು ಅವರು ಎಣಿಸಿದವರು ನಿನ್ನನ್ನು ತುಚ್ಛನೆಂದು ತಿಳಿಯುವರು.

ಹೀಗೆ ಶ್ರೀ ಕೃಷ್ಣನು ಸಾಮಾನ್ಯರ ವಾದವನ್ನೇ ಆಡುತ್ತಾ, ಮಹಾರಥರೆಂದೆನ್ನಿಸಿಕೊಂಡ ಭೀಷ್ಮ ದ್ರೋಣರ ಪ್ರತಿಕ್ರಿಯೆಯನ್ನು ಅರ್ಜುನನಿಗೆ ತಿಳಿಸುವನು. ಏಕೆಂದರೆ ಯಾವ ವೀರನಿಗೂ ಅವನ ಸರಿಸಮಾನ ವೀರರು ಹೀಗೆ ಹಾಸ್ಯ ಮಾಡುವುದನ್ನು ಸಹಿಸಲು ಸಾಧ್ಯವಿಲ್ಲ. ಅದನ್ನು ಕೂಡಾ ಅರ್ಜುನನಿಗೆ ತಿಳಿಸುವನು. ಅಲ್ಲದೆ—

ಅವಾಚ್ಯ ವಾದಾಂಶ್ಚ ಬಹೂನ್ |
ವದಿಷ್ಯಂತಿ ತವಾಹಿತಾಃ|
ನಿಂದಂತಸ್ತವ ಸಾಮರ್ಥ್ಯಂ|
ತತೋ ದುಃಖತರಂ ನು ಕಿಮ್ ||೩೬||

ಮಹಾರಥರಲ್ಲದೆ ಸಾಮಾನ್ಯ ಯೋಧರು ಕೂಡಾ, ನಿನ್ನನ್ನು ಹೀಗೆ ನಿಂದಿಸುವರು. ನನಗೆ ಆ ಮಾತುಗಳನ್ನು ಕೇಳಲು ಸಾಧ್ಯವಿಲ್ಲ. ಅಂತಹ ಅವಾಚ್ಯ ಶಬ್ದಗಳಿಂದ ನಿನ್ನ ವಿಷಯ ಮಾತಾಡುವರು.

ಕೃಷ್ಣನು ಅರ್ಜುನನಲ್ಲಿ ವೀರೋತ್ಸಾಹ ತುಂಬುವಂತೆ ವ್ಯಾವಹಾರಿಕತೆಯ ಅರಿವನ್ನು ಉಂಟುಮಾಡಲು ಪ್ರಯತ್ನಿಸುವನು. ತತ್ವ ವೇದಾಂತದ ಮಾತುಗಳನ್ನು ಬಿಟ್ಟು ದೈನದಿಂದ ವಾಸ್ತವಿಕ, ಜೀವನದ ಪ್ರಸಂಗಗಳನ್ನು ವಿವರಿಸಿ ಹೇಳಿ ಅವನ ಭಯವನ್ನು ಹೋಗಲಾಡಿಸಲು ಪ್ರಯತ್ನಿಸಿದನು.

ಸಾಮಾನ್ಯ ಯೋಧರು ಕೂಡಾ ಹೀಗೆ ನಿನ್ನನ್ನ ನಿಂದಿಸುವಾಗ ನನಗೆ ಭಾರೀ ದುಃಖವಾಗುವುದು. ನೀನು ನನ್ನ ಮಿತ್ರನಲ್ಲವೆ?

ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ|
ಜಿತ್ವಾ ವಾ ಭೋಕ್ಷ್ಯಸೇ ಮಹೀಮ್|
ತಸ್ಮಾದುತ್ತಿಷ್ಠ ಕೌಂತೇಯ|
ಯುದ್ಧಾಯ ಕೃತ ನಿಶ್ಚಯಃ || ೩೭ ||

ನೀನು ಯುದ್ಧ ಮಾಡಿ ಸತ್ತರೆ ಸ್ವರ್ಗ ಸೇರುವಿ. ಒಂದು ವೇಳೆ ಸಾಯದೆ ಹೋದರೆ ಈ ರಾಜ್ಯವನ್ನು ಆಳುವಿ. ಆದರಿಂದ ನೀನು ಯುದ್ಧ ಮಾಡುವೆ ಎಂಬ ದೃಢ ನಿಶ್ಚಯದಿಂದ ಎದ್ದು ನಿಲ್ಲು.

ಅರ್ಜುನನಿಗೆ ಇಲ್ಲಿಂದ ಯುದ್ಧ ಮಾಡದೆ ಹೋಗಲು ಸಾಧ್ಯವಿಲ್ಲ. ಎಂದು ತಿಳಿಸಲು ಶ್ರೀ ಕೃಷ್ಣನು ಕುಳಿತಿದ್ದ ಅರ್ಜುನನನ್ನು ಎದ್ದು ನಿಲ್ಲು ಎಂದು ಹೇಳುವಾಗ ಅದರ ಜತೆ ಯುದ್ಧ ಮಾಡುವೆ ಎಂಬ ದೃಢ ನಿಶ್ಚಯ ಮಾಡಿಯೇ ಎದ್ದು ನಿಲ್ಲು ಎಂದು ಹೇಳಿರುವನು.

ಯುದ್ಧ ಮಾಡುವಾಗ ನಿನಗೆ ಗಾಬರಿ ಇದ್ದರೆ, ಗಲಿಬಿಲಿಯಾದರೆ ಹೇಗೆ ನಿನ್ನ ಮನಸ್ಥಿತಿ ಇಟ್ಟುಕೊಳ್ಳಬೇಕೆಂದು ನಾನು ಹೇಳುವೆನು. ಎಂದು ಉತ್ಸಾಹ ತುಂಬಿದನು.

ಸುಖದುಃಖೇ ಸಮೇ ಕೃತ್ವಾ|
ಲಾಭಾಲಾಭೌ ಜಯಾಜಯೌ|
ತತೋ ಯುದ್ಧಾಯ ಯುಜ್ಯಸ್ವ||
ನೈವಂ ಪಾಪಮವಾಪ್ಸ್ಯಸಿ || ೩೮ ||

ಸುಖ ದುಃಖ, ಲಾಭ ನಷ್ಟ, ಜಯಾಪಜಯ ಈ ಮೂರು. ದೇಹ, ಮನ, ಬುದ್ಧಿಯ ಮಟ್ಟದಲ್ಲಿ ನಾವು ತಿಳಿದುಕೊಳ್ಳಬೇಕು. ಈ ಮೂರರ ಮೇಲೆ ಏನೊಂದೂ ಪರಿಣಾಮವಾಗದ ರೀತಿ ನೀನು ಮನಸ್ಸನ್ನು ನಿಲ್ಲಿಸಿ, ಒಂದು ಕೆಲಸ ಮಾಡಬೇಕು ಇದಕ್ಕೆ ಕರ್ಮಯೋಗ ಎಂದು ಹೆಸರು.

ಏಷಾ ತೇ ಭಿಹಿತಾ ಸಾಂಖ್ಯೇ|
ಬುದ್ಧಿ ಯೋಗೇ ತ್ವಿಮಾಂ ಶೃಣು|
ಬುದ್ಧ್ಯಾ ಯುಕ್ತೋ ಯಯಾ
ಪಾರ್ಥ |
ಕರ್ಮಬಂಧಂ ಪ್ರಹಾಸ್ಯಸಿ || ೩೯ ||

ಕರ್ಮಯೋಗಕ್ಕೆ ಶ್ರೀಕೃಷ್ಣನು ಹೊಸತೊಂದು ಹೆಸರನ್ನು ಇಟ್ಟು ಬುದ್ಧಿಯೋಗ ಎಂದು ಕರೆದಿರುವನು. ಹಿಂದೆ ಯಾವ ಶಾಸ್ತ್ರ ಗ್ರಂಥಗಳಲ್ಲಿಯೂ ಈ ಬುದ್ಧಿಯೋಗ ಎಂದು ಯೋಗವನ್ನು ಕರೆದಿಲ್ಲ. ಮೊದಲು ಜ್ಞಾನವನ್ನು ತತ್ವಶಾಸ್ತ್ರ ವೇದಾಂತಗಳ ಮುಖಾಂತರ ಅರ್ಜುನನಿಗೆ ತಿಳಿಸಿ ಆತ್ಮಕ್ಕೆ ಸಾವಿಲ್ಲ, ನೀನು ಇತರರನ್ನು ಕೊಲ್ಲುವಿ ಅಥವಾ ಇತರರು ನಿನ್ನನ್ನು ಕೊಲ್ಲುವರು ಎಂದು ಅಜ್ಞಾನದಿಂದ ಶೋಕಿಸುತ್ತಿರುವಿ. ಹಾಗಲ್ಲ. ನಿನಗೂ, ಇತರರಿಗೂ ಯಾರಿಗೂ ಸಾವಿಲ್ಲ ಎಂದು ಅತ್ಯುಚ್ಚ ಮಟ್ಟದ ಜ್ಞಾನವನ್ನು ವಿವರಿಸಿ ಹೇಳಿದ ಬಳಿಕ, ಅದು ಅರ್ಜುನನಿಗೆ ಕೊಂಚ ಮನಸ್ಸಿಗೆ ವಿಶ್ವಾಸ ಬರುವಂತೆ ಮಾಡಿದರೂ, ಆ ತತ್ವಗಳನ್ನು ಆತ ಗ್ರಹಿಸದ ಕಾರಣ ಅವನ ವಿಷಾದ ಪೂರಿತ ಮನ ಬುದ್ಧಿಗೆ ಆ ಗೂಢ ತತ್ವಗಳನ್ನು ಗ್ರಹಿಸಲು ಸಾಧ್ಯವಾಗದ ಕಾರಣ ಶ್ರೀಕೃಷ್ಣನು ಅದಕ್ಕಿಂತ ಕೆಳಮಟ್ಟದ ದೈನಂದಿನ ವ್ಯವಹಾರಿಕ ಜೀವನವನ್ನು ಸಾಮಾನ್ಯ ಜನರು ನೋಡುವಂತೆ, ತಿಳಿಯುವಂತೆ, ವಿವರಿಸುವನು, ಹುಟ್ಟಿದವನಿಗೆ ಸಾವು ಖಚಿತ. ಇದನ್ನು ಎಲ್ಲರೂ ತಿಳಿದಿರುವರು. ಹುಟ್ಟಿದವನು ಸಾಯುವನೆಂದ ಬಳಿಕ ಒಂದಲ್ಲ ಒಂದು ದಿನ ಈ ದೇಹವನ್ನು ಬಿಟ್ಟು ಹೋಗಬೇಕೆಂದ ಬಳಿಕ ಈಗ ಸನ್ನಿಹಿತವಾದ ಮೃತ್ಯುವಿಗೇಕೆ ಅಂಜುವೆ? ಎಂದೂ ಅರ್ಜುನನಿಗೆ ಮನದಟ್ಟಾದಾಗ, ಅವನ ಇದಿರಾದ ಸಮಸ್ಯೆಯನ್ನು ಅವನೇ ಸ್ವತಃ ಯೋಚಿಸುವಂತೆ, ಆಗಿನ ಪರಿಸ್ಥಿತಿಯನ್ನು ವಿವರಿಸುವನು.

ಈಗ ಯುದ್ಧ ಮಾಡದೆ ಹೋದರೆ ರಣಾಂಗಣದಿಂದ ಓಡಿ ಹೋದರೆ ಸಾಮಾನ್ಯ ಜನರು ನಿನ್ನ ಕೃತ್ಯದಿಂದ ಏನು ತಿಳಿಯುವರು, ಅದರಿಂದ ನಿನಗೆ ಬರುವ ಅಪಕೀರ್ತಿ ಎಂದೆಂದಿಗೂ ಮರೆಯಲಾಗದ ಅಪಹಾಸ್ಯ ಇತ್ಯಾದಿ, ಇತರರು ನಿನ್ನ ಮೇಲಿನ ಅಭಿಮಾನವನ್ನು ಹೇಗೆ ತ್ಯಜಿಸುವರು ಇತ್ಯಾದಿ. ಅರ್ಜುನನ ಮನಮುಟ್ಟುವಂತೆ ಶ್ರೀಕೃಷ್ಣನು ವಿವರಿಸುವನು.

ಮತ್ತು ಈಗ ಯುದ್ಧ ಮಾಡಲೇಬೇಕೆಂಬ ದೃಢ ನಿಶ್ಚಯದಿಂದ ಎದ್ದು ನಿಲ್ಲು. ಎಂದು ಬೋಧಿಸುವನು. ಅರ್ಜುನನಿಗೆ ಇದು ಅರ್ಥವಾಯಿತು. ಆದರೆ ಆತನ ಗಲಿಬಿಲಿ ಹೊಂದಿದ ಮನಸ್ಸಿನ ಸಮತೋಲನೆ ಪುನಃ ಬರುವಂತೆ ಮಾಡಲು, ಈ ಎಲ್ಲಾ ಕಾರಣಗಳನ್ನು ಯುದ್ಧ ಮಾಡಲೇಬೇಕೆಂದು ಕೊಟ್ಟು, ಯುದ್ಧ ಮಾಡುವಾಗ ಹೇಗೆ ಮನಸ್ಸಿನ ಶಾಂತ ಸ್ಥಿತಿಯನ್ನು ಕಳೆದುಕೊಳ್ಳದೆ ಮಾಡಬಹುದೆಂದೂ ಅದರಿಂದ ಯಾವ ಪಾಪವೂ, ವಿಕ್ಷೇಪವೂ ಆಗದಂತೆ, ಯುದ್ಧದಲ್ಲಿ ಭಾಗವಹಿಸಬಹುದೆಂದೂ ಶ್ರೀಕೃಷ್ಣನು ಹಿಂದಿನ ತತ್ವಗಳಿಗೆ ಹೊಸತೊಂದು ರೂಪವನ್ನು ಕೊಟ್ಟು, ಆ ಕಾಲಕ್ಕೆ, ಆ ಸನ್ನಿವೇಶಕ್ಕೆ ತಕ್ಕಂತೆ ಬುದ್ಧಿಯೋಗವೆಂದು ಒಂದು ಸಾಧನೆಯನ್ನು ಹೇಳಿದನು.

ಬುದ್ಧಿಯೋಗ — ಈ ಬುದ್ಧಿಯೋಗದಲ್ಲಿ ಮನ ಬುದ್ಧಿಯು ಏಕಮುಖವಾಗಿ ಕೆಲಸ ಮಾಡಬೇಕಾಗಿದೆ. ಇದು ಎಷ್ಟರ ಮಟ್ಟಿಗೆ ಏಕಮುಖವಾಗಿರುವುದೋ, ಮನಸ್ಸು ಬಾಹ್ಯ ಪ್ರಪಂಚದ ಸನ್ನಿವೇಶಗಳಿಗೆ ವಿವೇಕವಾಣಿ ಉಸುರಿದಂತೆ ಪ್ರತಿಕ್ರಿಯೆ ತೋರುವುದೋ, ಅಷ್ಟರ ಮಟ್ಟಿಗೆ ಒಬ್ಬನು ವಿವೇಕಶಾಲಿ ಎಂದೆನ್ನಿಸಿಕೊಳ್ಳುವನು. ಈ ವಿವೇಕ ಬುದ್ಧಿಯು ಸಿಟ್ಟು ಅಥವಾ ಶೋಕದಿಂದ ನಷ್ಟವಾಗಿ, ಮನಕ್ಕೆ ಒಂದು ಕಡಿವಾಣ ಇಥವಾ ಗುರಿ ಇಲ್ಲದೆ ಪ್ರವಹಿಸಿದಾಗ, ಒಬ್ಬನಿಗೆ ಮತಿ ಭ್ರಷ್ಟತೆ ಉಂಟಾಗುವುದು. ಆಗ ಅವನಿಗೆ ತನು ಆ ಫಳ

(ಹತ್ತನೇ ಪುಟ ನೋಡಿರಿ)

ಜನತಾ ವಿದ್ಯಾರಣ್ಯರ ನಡುವಿಂದ

ವೀರ ಹುಕ್ಕ ಬುಕ್ಕರು ಎದ್ದು ಬರಲಿ

ಬರೆದವರು: ಶ್ರೀ ಶಿವಶಂಕರ.

'ನಿರಾಶ್ರಿತರ ನಿವಾಸ ವ್ಯವಸ್ಥೆಗಾಗಿ ಪಾಕಿಸ್ಥಾನದಿಂದ ನೆಲವನ್ನು ಕೇಳಬೇಕೆಂದು ಹೇಳುತ್ತಿದ್ದ ಮಹಾವೀರ ತ್ಯಾಗಿಯವರು ತಮ್ಮ ವೀರೋಕ್ತಿಯ ತ್ಯಾಗ ಮಾಡಿದರು. ಪಾಕಿಸ್ಥಾನದಿಂದ ಪ್ರದೇಶವನ್ನು ಕೇಳುವ ಪೌರುಷೋಕ್ತಿ ಹಾಗಿರಲಿ, ನಮ್ಮ ಪಾಲಿಗೆ ಉಳಿದಿರುವ ಪ್ರದೇಶದಲ್ಲಿ ಬಲಾತ್ಕಾರ ಹಾಗೂ ತಲೆಮರೆಸಿಕೊಂಡು ಬಂದು ತಂಗಿರುವ ಪರಕೀಯರನ್ನು ಆಚೆ ಕಳುಹಿಸಲೂ ನಮ್ಮಿಂದಾಗಲಿಲ್ಲ. ಜನತೆಯ ಕಣ್ಣು ತೊಡೆಯಲಿಕ್ಕೆಂದೋ ಏನೋ ಅಸ್ಸಾಂ ಪ್ರದೇಶದಿಂದ ಕೆಲ ಪಾಕಿಸ್ಥಾನಿಗಳನ್ನು ಒಮ್ಮೆ ಹಿಂದಕ್ಕಟ್ಟುವ ಯೋಜನೆಯನ್ನು ಹಾಕಲಾಯಿತು. ಅದರಂತೆ ಕೇವಲ ಕೆಲವರನ್ನು ಕಳುಹಿಸಿದುದೇ ತಡ; ಪಾಕಿಸ್ಥಾನ ಕೆಂಡ ಕಾರಿತು. ಆಗ ಪ್ರಧಾನಿಯಾಗಿದ್ದ ಜವಾಹರಲಾಲಜೀಯವರು ಒಡನೆ ಯೋಜನೆಯನ್ನು ಕಸದ ಬುಟ್ಟಿಗೆಸೆದುಬಿಟ್ಟರು. ಅಲ್ಲಿಗೇನೇ ಆ ಯೋಜನೆ ನಿಂತಿತ. ಅಸ್ಸಾಂ ಗಡಿ ಪ್ರದೇಶವು ಒಂದೇ ಪ್ರವೇಶವಿರುವ ಗುಸ್ತೆಯಾಯಿತು. ಪಾಕಿಸ್ಥಾನದಿಂದ ಪ್ರವಾಹ ಅಲ್ಲಿ ಬಂದು ನೆಲಸಬಹುದು, ಅವರನ್ನು ಹಿಂದಕ್ಕೆ ಕಳುಹಿಸಬಾರದು! ಹೀಗಿದ್ದರೂ ಸರಕಾರ ಅದೃಷ್ಟವಶಾತ್ ಆಗೊಮ್ಮೆ ಈಗೊಮ್ಮೆ ಕಣ್ಣು ತೆರೆಯುವುದುಂಟು. ಅದರಂತೆ ಈಗ ಇನ್ನೊಂದು ರೀತಿಯ ಕಾರ್ಯಾಚರಣೆಗಾರಂಭಿಸಿದ್ದಾರೆ. ಗಡಿ ಪ್ರದೇಶದಲ್ಲಿ ಒಂದು ಮೈಲಿನೊಳಗಿರುವ ಮಾನವರೆಲ್ಲರನ್ನೂ ಎಬ್ಬಿಸಿ ಅದನ್ನು ಖಾಲಿ ಪ್ರದೇಶವನ್ನಾಗಿ ಮಾಡಬೇಕೆಂದು ಕಾಂಗ್ರೆಸ್ ಯೋಚಿಸಿತು. ಅನಂತರ ಒಂದು ಮೈಲಿನೊಳಗಿರುವ ಮುಹಮ್ಮದೀಯರನ್ನು ಎಬ್ಬಿಸಬೇಕೆಂದು ನಿರ್ಣಯಿಸಿಕೊಂಡಿತು. ಈ ನಿರ್ಣಯ ಬಹಳ ತಡವಾಗಿ ಬಂದದ್ದಿದೆ. ಅದಾಗಲೇ ಭಾರೀ ಪ್ರಮಾಣದಲ್ಲಿ ಮುಹಮ್ಮದೀಯರಲ್ಲಿ ತಂಗಿದ್ದು, ಹಿಂದೆಯೇ ಅಲ್ಲಿದ್ದ ಮುಸ್ಲಿಮರು ಅವರಿಗೆ ಆತ್ಮೀಯ ಸ್ವಾಗತವನ್ನಿತ್ತಿರುವರು. ಹಾಗಿದ್ದರೂ ಈ ನಿರ್ಣಯದ ಕುರಿತು ಕೇಳಿ ಬಂದದ್ದೇ ತಡ, ಅಸ್ಸಾಮಿನ ಮುಹಮ್ಮದೀಯರು ಬೆಂಕಿ ಕಾರಲಾರಂಭಿಸಿರುವರು.

ಅಸ್ಸಾಮಿನ ವಿಧಾನ ಸಭೆಯಲ್ಲಿ ಹದಿನೈದು ಮುಹಮ್ಮದೀಯ ಸದಸ್ಯರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಿದ್ದಾರೆ. ಪಾಕಿಸ್ಥಾನದಿಂದ ಬಂದು ಅಸ್ಸಾಂ ಗಡಿ ಪ್ರದೇಶದಲ್ಲಿ ತಂಗಿರುವ ಮುಸ್ಲಿಮರನ್ನು ಹಿಂದಕ್ಕೆ ಕಳುಹಿಸುವದನ್ನು ವಿರೋಧಿಸಿ ಆ ಹದಿನೈದು ಸದಸ್ಯರಲ್ಲಿ ಹದಿಮೂರು ಸದಸ್ಯರು, ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡುವದಾಗಿ ಬೆದರಿಕೆ ಹಾಕಿದ್ದಾರೆ. ಇನ್ನುಳಿದ ಇಬ್ಬರು ಮಂತ್ರಿಗಳಾಗಿದ್ದಾರೆ, ಅಲ್ಲದೆ ಮುಖ್ಯ ಖಾತೆಗಳು ಅವರ ಕೈಯಲ್ಲಿವೆ. ಶ್ರೀ ಛಾಲಿಹಾರವರು ನಾಮಮಾತ್ರ ಅಸ್ಸಾಮಿನ ಮುಖ್ಯಮಂತ್ರಿಯೆಂಬುದು ರಾಜಕೀಯಸ್ಥರಿಗೆ ತಿಳಿದಿರುವ ರಹಸ್ಯವಿದೆ. ನಿಜವಾಗಿ ಅಲ್ಲಿ ಅಧಿಕಾರ ಚಲಾಯಿಸುತ್ತಿರುವರು ಶ್ರೀ ಫಕ್ರುದ್ದೀನ್ ಅಲಿ ಅಹಮ್ಮದ್, ಇವರ ಕೈಯಲ್ಲಿರುವದು ಅರ್ಥಿಕ ಖಾತೆ! ಶ್ರೀ ಛಾಲಿಹಾರವರ ದೇಹಪರಿಸ್ಥಿತಿ ಚೆನ್ನಾಗಿರದ ಕಾರಣ ಹಾಗೂ ಅವರು ಹೆಚ್ಚಿನ ಸಮಯವನ್ನು ನಾಗಾಸಂಧಾನಕ್ಕಾಗಿ ಕಳೆಯುತ್ತಿರುವುದರಿಂದ ಶ್ರೀ ಫಕ್ರುದ್ದೀನವರಿಗೆ ಯಾವ ಅಂಕೆಯೂ ಈಗ ಇರುವದಿಲ್ಲ. ಹದಿಮೂರು ಜನರು ಕಾಂಗ್ರೆಸ್ಸಿಗೆ ತಿಲಾಂಜಲಿ ಕೊಡುತ್ತೇವೆಂದಾಗ ಫಕ್ರುದ್ದೀನ್ ತುಟಿ ಪಿಟಿಕ್ಕೆನ್ನಲಿಲ್ಲ. ಒಳಗಿಂದೊಳಗೆ ಅವರ ಕೈವಾಡ ಅದರಲ್ಲಿ ಇದ್ದೇ ಇದೆ. ಅಷ್ಟರಲ್ಲೇ ಆ ಕಥೆ ಮುಗಿಯುತ್ತಿದ್ದಲ್ಲಿ ಕಾಂಗ್ರೆಸ್ಸಿಗೂ ದೇಶಕ್ಕೂ ಒಳ್ಳೆಯದಿತ್ತು. ನಿಜವಾಗಿ ಅದು ಅಲ್ಲೇ ನಿಲ್ಲಲಿಲ್ಲ.

ಭಾರತದ ಗೃಹ ಮಂತ್ರಿ ಶ್ರೀ ಗುಲ್ಜಾರೀಲಾಲ ನಂದಾರವರು ಅಸ್ಸಾಮಿಗೆ ಭೇಟಿ ಕೊಟ್ಟಾಗ ಅವರಿಗೆ ಅತ್ಯಾಶ್ಚರ್ಯವಾಯಿತು. ಆದರೆ ಅದರಿಂದ ಪ್ರಯೋಜನವೇನೂ ಆಗಲಿಲ್ಲ. ಅಥವಾ ಅದಕ್ಕಿಂತಲೂ ಪಂಚಮಸ್ಥಂಭೀಯರಿಗೆ ಬಹಳ ಪ್ರಯೋಜನವಾಯಿತು. ಹಿಂದೆ ಸ್ವ। ಜವಾಹರಲಾಲ ನೆಹ್ರೂಜೀಯವರು ನಾಗಾ ಬೆಟ್ಟಗಳಿಗೆ ಹೋಗಿದ್ದಾಗ ಬಂಡೆದ್ದ ಅಲ್ಲಿಯ ನಾಗಾಗಳು ಅವರಿಗೆ ಆಶ್ಚರ್ಯ ಬರಿಸುವ ರೀತಿಯಲ್ಲಿ ಕಪ್ಪು ಬಟ್ಟೆ ತೋರಿಸುತ್ತ ಸಭಾತ್ಯಾಗ ಮಾಡಿದ್ದರು. ಹಾಗೆಯೇ, ಶ್ರೀ ಗುಲ್ಜಾರೀಲಾಲಜೀಯವರು ಅಸ್ಸಾಮಿನಲ್ಲಿ ಅಂತಹದ್ದೇ ಚಿತ್ರವನ್ನು ಕಂಡರು. ಅವರು ಹೋದಲ್ಲೆಲ್ಲಾ ಮುಸ್ಲಿಮರು ಬಂದು ಅವರನ್ನು ಮುತ್ತುತ್ತಿದ್ದರು; ಯೋಜನೆಯನ್ನು ಬದಲಾಯಿಸಿರೆಂದ. ಅವರು ಒಕ್ಕೊರಲಿನಿಂದ ಕೇಳಿಕೊಂಡರು, 'ಆಯಿತು, ನೋಡುವಾ"—ನಂದಾಜೀ ನುಡಿದರು! ಕಾಂಗ್ರೆಸ್ ಸರಕಾರಕ್ಕೆ ಅದೇ ಒಂದು ಗೊತ್ತೇನು? ಗುಂಡಾಗಿರಿಗೆ ತುಂಬಿ ಸಮದೊಂದೇ ಅವರಿಗೆ ಗೊತ್ತೇನು?

ಭಾರತೀಯ ಜನ ಸಂಘ ಕೇಂದ್ರ ಸರಕಾರದ ಬಳಿ ಕೇಳಿದ್ದಾದರೂ ಏನು?—ಗಡಿ ಪ್ರದೇಶದಲ್ಲಿ ಹತ್ತು ಮೈಲಿನ ವರೆಗಿರುವ ಮುಹಮ್ಮದೀಯರನ್ನಲ್ಲಿಂದೆಬ್ಬಿಸಿ ಒಳ ಪ್ರದೇಶದಲ್ಲಿ ಅವರಿಗೆ ವ್ಯವಸ್ಥೆ ಮಾಡಿಕೊಟ್ಟು, ಆ ಸ್ಥಳದಲ್ಲಿ 'ನಿರಾಶ್ರಿತ'ರಿಗೆ ನಿವಾಸ ಸ್ಥಾನ ನಿರ್ಮಿಸಿಕೊಡಬೇಕು, ಮತ್ತು ಗಡಿ ಪ್ರದೇಶದ ಸಬಲ ಜನರಿಗೆ ಶಸ್ತ್ರ ವಿದ್ಯೆಯನ್ನು ಹೇಳಿ ಕೊಡಬೇಕೆಂದು. ಕಾಂಗ್ರೆಸ್ ಸರಕಾರ ಮೊದಲು ಯೋಚಿಸಿದ್ದೇನು?—ಮುಹಮ್ಮದೀಯರನ್ನು ಮಾತ್ರ ಹೇಗೆ ಎಬ್ಬಿಸುವದು? ನಿಧರ್ಮೀಯ ಕಲ್ಪನೆಗನುಸಾರವಾಗಿ ನಿವಾಸಿಗಳೆಲ್ಲರನ್ನು ಅಲ್ಲಿಂದ ಎಬ್ಬಿಸಿ ಬಿಡುವದೆಂದು. ಇದರಿಂದ ಯಾರಿಗೆ ಪ್ರಯೋಜನ?— ಪಾಕಿಸ್ಥಾನಿಗಳಿಗೆ ಕಾಂಗ್ರೆಸ್ ಸರಕಾರದ ಎರಡನೆಯ ಆಲೋಚನೆ ಯಾವುದು?— ಗಡಿ ಪ್ರದೇಶದಲ್ಲಿ ಬಂದು ತಂಗಿರುವ ಪಾಕಿಸ್ಥಾನಿಗಳನ್ನು ಪಾಕಿಸ್ಥಾನಕ್ಕೆ ಕಳುಹಿಸಿ ಬಿಡುವದು. ಅಬ್ಬಾ! ಅದಕ್ಕೆ ಕಂಡುಬಂದ ಪ್ರತಿಕ್ರಿಯೆ! ಈ ರೀತಿ ದೇಶದೊಳಗೆನೇ ನಾವು ಕೈ ತೋರಿಸಿ ಅಪಶಕುನ ಹೇಳಿಸಿಕೊಳ್ಳುತ್ತಿದ್ದೇವೆ.

ಕಾಂಗ್ರೆಸ್ ಸರಕಾರ ಭ್ರಮೆಯೆಂಬ ಮೃಗ ಮರೀಚಿಕೆಯ ಹಿಂದುಗಡೆ ಬಹಳ ವೇಗದಿಂದ ಓಡುತ್ತಿದೆ. ಪಾಕಿಸ್ಥಾನಕ್ಕೆ ಒಂದಿಷ್ಟು ಕೋಪ ಬಂದಲೂ ಅದಕ್ಕೆ ಒಂದಿನಿತೂ ಇಷ್ಟವಿಲ್ಲ. ಗಡಿ ಪ್ರದೇಶದಲ್ಲಿ ತಂಗುತ್ತಿರುವ ಮುಹಮ್ಮದೀಯರನ್ನು ಹಿಂದಕ್ಕಟ್ಟುವ ಮಾತು ಹಾಗಿರಲಿ. ದೇಶದೊಳಗೆ ಅಲ್ಲಲ್ಲಿ ಸುತ್ತಾಡಿಕೊಂಡು ಮುಖ್ಯ ವಿಷಯಗಳನ್ನು ಪಾಕಿಸ್ಥಾನಕ್ಕೆ ಅಡೆತಡೆ ಇಲ್ಲದೆ ತಿಳಿಸುತ್ತಿರುವ ಗೂಢಚಾರರಿಗೆ ಕಾಂಗ್ರೆಸ್ ಸರಕಾರ ಏನು ಮಾಡುತ್ತಿದೆ?

ಮೇ ತಿಂಗಳ ಅಂತ್ಯದಲ್ಲಿ ಪಂಜಾಬಿನ ಪೋಲೀಸರು ಇಬ್ಬರು ಪಾಕಿಸ್ಥಾನಿಗಳನ್ನು ಸೆರೆ ಹಿಡಿದರು. ಪಾಕಿಸ್ಥಾನಿಗಳು ಬಿಯಾಸ್ ಸೇತುವೆಯ ಚಿತ್ರ ತೆಗೆಯುತ್ತಿದ್ದರು. ಆದರ ಚಿತ್ರ ತೆಗೆಯಲು ಅನುಮತಿ ಇಲ್ಲದೆ ಯಾರಿಗೂ ಬಿಡುವದಿಲ್ಲ. ಈ ಪಾಕಿಸ್ಥಾನಿಗಳು ತಾವು ಅಫಘಾನ ರಾಯಭಾರಿ ಕಛೇರಿಯ ದೊಡ್ಡ ಅಧಿಕಾರಿಗಳೆಂದು ದೊಡ್ಡ ಸುಳ್ಳು ಹೇಳಿ, ಸಿಬ್ಬಂದಿಯನ್ನು ಮರುಳುಗೊಳಿಸಿದರು. ಅಷ್ಟು ಹೊತ್ತಿನಲ್ಲಿ ಅಲ್ಲಿಗೆ ಆಗಮಿಸಿದ ಪೋಲೀಸ್ ಅಧಿಕಾರಿಗಳು ಅವರನ್ನು ಬಂಧಿಸಿದರು. ಅವರು ಅಫಘಾನ್ ರಾಯಭಾರಿ ಕಛೇರಿಯ ಅಧಿಕಾರಿಗಳಿರದೆ ಪಾಕಿಸ್ಥಾನದ ರಹಸ್ಯಚಾರರಿದ್ದರು. ಅವರು ಪಾಕಿಸ್ಥಾನದ ರಾಯಭಾರಿ ಕಛೇರಿಯ ಉದ್ಯೋಗಸ್ಥರು. ಅವರನ್ನು ಶೋಧಿಸಿದಾಗ ಬಹಳಷ್ಟು ರಹಸ್ಯ ಪತ್ರಗಳು ದೊರಕಿದುವು. ಅಷ್ಟು ಹೊತ್ತಿಗೆ ಅದೇನೋ ನಡೆಯಿತು! ಪಂಜಾಬ ಸರಕಾರಕ್ಕೆ ಪರಮಾಶ್ಚರ್ಯವಾಯಿತು. ದಿಲ್ಲಿ ದೇವತೆಗಳಿಂದ ಅಪ್ಪಣೆ ಬಂದಿದೆ. ಕೈದಿಗಳನ್ನು ಒಡನೆ ಬಿಟ್ಟು ಬಿಡಬೇಕೆಂದು ಪಾಪ! ಅವರು ಮಾಡುವುದಾದರೂ ಏನು? ಹಾಗೆಯೇ ಆಯಿತು!

ಇಲ್ಲಿ ನಮ್ಮ ಕಣ್ಣೆದುರಿಗೆ ನಡೆಯುತ್ತಿರುವದಾದರೂ ಏನು? ಸ್ವರ್ಗ ಸುಖವನ್ನನು ಭವಿಸುತ್ತಿರುವ ವಿಸರ್ಪ ಶೇಖ್ ಅಬ್ದುಲ್ಲಾನನ್ನು ವಿದೇಶಿಗಳು ಬಂದು ಕಂಡು ಮಾತಾಡುತ್ತಾರೆ ಶೇಖ್ ಅಬ್ದುಲ್ಲನ ಬಳಿ ಯಾರೂ ಮಾತಾಡದಂತೆ ನೋಡಿಕೊಳ್ಳಲು ಇಬ್ಬರು ಮಹಮ್ಮದೀಯ ಪೋಲೀಸ ಅಧಿಕಾರಿಗಳನ್ನು ಇಟ್ಟಿರುವ ವಿಷಯ ಹಿಂದಿನ 'ನವಯುಗ'ದಲ್ಲಿ ಪ್ರಕಟವಾಗಿರುತ್ತದೆ ವಿದೇಶಿಗಳಿಗೆ ತಮ್ಮ ಕೆಲಸವಾದ ಮೇಲೆ ಸಿಗುವ ಶಿಕ್ಷೆಯಾದರೂ ಏನು? ಇಲ್ಲಿಂದ ಹೊರಗೆ ಅವರ ದೇಶಕ್ಕೇನೇ ಕಳುಹಿಸಿ ಬಿಡತ್ತಾರೆ. ಹಾಗೆ ತಪ್ಪಿಸಿಕೊಂಡು ಹೋದ ಕಾಕೋರ್ಟಿಕ ಅಲ್ಲಿಂದಲೇ ಬುಸುಗುಟ್ಟುತ್ತದೆ. ಇತ್ತ ಶೇಖ್ ಅಬ್ದುಲ್ಲಾನತ್ತ ಏನಾದರೂ ಎಚ್ಚರಿಕೆ ವಹಿಸಲಾಗುತ್ತಿದೆಯೇ? ಇಲ್ಲವೆಂದರೂ ತಪ್ಪಾಗಲಿಕ್ಕಿಲ್ಲ. ಅಷ್ಟೇ ಅಲ್ಲ, ವಿದೇಶಿಗಳು ವಿಮಾನ ಮೂಲಕ ಲಂಗುಲಗಾಮಿಲ್ಲದೆ ಭಾರತದಲ್ಲಿ ಬಂದಿಳಿಯುತ್ತಾರೆ, ಹೋಗುತ್ತಾರೆ. ಒಂದು ದಿನ ಶೇಖ್ ಅಬ್ದುಲ್ಲಾನನ್ನು ಹಿಡಿದುಕೊಂಡು ಹೋದರೆ, ಯಾರಿಗಾದರೂ ಆಶ್ಚರ್ಯವಾದೀತೇ?

ಪರಿಸ್ಥಿತಿ ಹೀಗಿದೆಯಾದರೂ ನಮ್ಮ ಅರಣ್ಯರೋಧನ ತಪ್ಪಿರುವುದಿಲ್ಲ. ಒಳ ವಿಷಯದಲ್ಲೂ ಹಾಗೆನೇ. "ಹಿಂದೂ" ಎಂದೊಡನೇ, ಮುಂದಿನ ಸಾಲಿನಲ್ಲಿರುವವರು ಹಿಂದಿನ ಸಾಲಿಗೆ ಬಂದು ಬಿಡುತ್ತಾರೆ. ಸಮಯ ಒಳ್ಳೆಯದಿದ್ದಲ್ಲಿ "ಹಿಂದೂ"ವೆಂದು ವೇದಿಕೆಯ ಮೇಲೆ ಹಾರಲೂ ಅವರು ಹಿಂಜರಿಯುವದಿಲ್ಲವೆಂಬುದೂ ನೈಜ ವಿಷಯವಿದೆ. "ನಮ್ಮತನ"(ನನ್ನತನವಲ್ಲ) ವಿಷಯದಲ್ಲಿ ಅವರು ಮೂಗು ಒರಸಿಕೊಳ್ಳುತ್ತಿದ್ದಾರೆ. ಭಾಷೆಯ ವಿಷಯದಲ್ಲಿ ರಶ್ಯಾದವರು ನಮ್ಮ ರಾಷ್ಟ್ರಭಾರಿ ಹಾಗೂ ಪ್ರಧಾನಿಯವರಿಗೆ ಅದೆಂತು ಛೀಮಾರಿ ಹಾಕಿದ್ದರೆಂಬುದು ಆರಿ ಹೋಗದ ಹುಣ್ಣು ಇದೆ. ಅಂತಹದೇ ಜಾಡ್ಯ ಜನತೆಯ ಹೃದಯದಲ್ಲಿರುವದನ್ನು ನಾವು ಗುರುತಿಸಬಹುದು. ಅದೇನೂ ಕಷ್ಟದ ಕೆಲಸವಲ್ಲ.

ಹಿಂದೂಮಹಾಸಾಗರವು ದ್ವೀಪಾಂತರಕ್ಕೆ ಇಂಡೋನೇಷ್ಯಾಕ್ಕೆ ಸೇರಿದ್ದೆಂದು ಸಾರುತ್ತಿರುವ ಅಲ್ಲಿನ ಅಧ್ಯಕ್ಷ ಶ್ರೀ ಸುಕರ್ಣರವರು ಭಾರತಕ್ಕೆ ಬಂದಿದ್ದಾಗ ನಡೆದ ಘಟನೆಯಿದು. 'ಸುಕರ್ಣ' ಪದ ಸಂಸ್ಕೃತ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ದಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಶ್ರೀ ಸ್ವಾಮಿ ಚಿನ್ಮಯಾನಂದ ಮೀಮಾಂಸೆ

ಗೀತಾ-ದ್ವಿತೀಯ ಅಧ್ಯಾಯ

ಸಂಗ್ರಹಕರ್ತೆ
ಶ್ರೀಮತಿ ಆನಂದಿ ಸದಾಶಿವ ರಾವ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಬುದ್ಧಿಯೋಗವನ್ನು ಮರೆಹೋಗು

ಅಥ ಚೇತ್ತ್ವಮಿಮಂ ಧರ್ಮ್ಯಂ |
ಸಂಗ್ರಾಮಂ ನ ಕರಿಷ್ಯಸಿ |
ತತಃ ಸ್ವಧರ್ಮಂ ಕೀರ್ತಿಂ ಚ |
ಹಿತ್ವಾ ಪಾಪಮವಾಪ್ಸ್ಯಸಿ || ೩೩ ||

ಹೀಗೆ ಒದಗಿ ಬಂದ ಈ ಧರ್ಮ ಯುದ್ಧವನ್ನು ನೀನು ಮಾಡದೆ ಹೋದರೆ, ನೀನು ಕರ್ತವ್ಯ ಚ್ಯುತನಾಗಿ, ಅಪಯಶಸ್ಸಿಗೆ ಕಾರಣನಾಗಿ, ಪಾಪಿಷ್ಟನಾಗುವೆ. ನೀನು ಎಲ್ಲಿ ಹೋದರೂ, ಏನ ಮಾಡಿದರೂ, ಯುದ್ಧ ಮಾಡಲಿಲ್ಲ ಎಂಬ ಕೊರಗು ನಿನ್ನನ್ನು ಪೀಡಿಸುವುದು

ಪಾಪ — ಈ ಶಬ್ದವನ್ನು ಭಾರೀ ತಪ್ಪು ಅಭಿಪ್ರಾಯದಲ್ಲಿ ಈಗ ಉಪಯೋಗಿಸಲ್ಪಟ್ಟಿದೆ. ಪಾಪ ಎಂದರೆ ಒಬ್ಬನ ದೇಹ, ಮನ, ಬುದ್ಧಿ ಈ ಮಟ್ಟದಲ್ಲಿ ಒಂದು ಕಾರ್ಯ, ಯೋಚನೆ, ವಿಚಾರ ಮಾಡಿದರೆ ಅದರಿಂದ ಮನದಲ್ಲಿ ವಿಕ್ಷೇಪವು ಉಂಟಾದರೆ, ಎಂದರೆ ಆ ಕೃತ್ಯದಿಂದಾಗಿ ಒಂದು ಪ್ರತಿಕ್ರಿಯೆಯು ಪರಿಣಾಮವು ಮನದಲ್ಲಿ ಉಂಟಾದರೆ ಅದು ಪಾಪ ಎಂದು ಪರಿಗಣಿಸಲ್ಪಡುವುದು. ಒಬ್ಬನಿಗೆ ಪಾಪ ಎಂದಾಗುವುದು ಇನ್ನೊಬ್ಬನಿಗೆ ಪಾಪ ಆಗಬೇಕೆಂದಿಲ್ಲ. ಅದು ಅವರವರ ಮನೋಬುದ್ಧಿಯ ಬೆಳವಣಿಗೆಯಲ್ಲಿ ಸೂಕ್ಷ್ಮತೆ ಪಡೆದಿರುವುದು.

ಉದಾ — ಬಸ್ಸು ಹತ್ತುವಾಗ ಒಬ್ಬನು ಮಗುವನ್ನು ನೂಕಿ ನುಗ್ಗುವನು, ಇನ್ನೊಬ್ಬ ಸುಸಂಸ್ಕೃತನಿಗೆ ಅದು ಅನಾಗರಿಕ ವರ್ತನೆ ಎಂದು ತೋರುವುದು, ಆದರೆ ನೂಕಿ ನುಗ್ಗುವವನಿಗೆ ಅದು ಸರಿಯಾದ ಕೃತ್ಯವಾಗಿದೆ. ಇತರರ ಕಷ್ಟಗಳನ್ನು ವೇದನೆಗಳನ್ನು ಅರಿಯುವ ಮನೋಭಾವ ಸೂಕ್ಷ್ಮತೆಯು ಬೆಳವಣಿಗೆಯು ಆತನ ಮೇಲೆ ಮಾಡಲು ಸಾಧನವಾದೀತು.

ಅರ್ಜುನನಿಗೆ ಯುದ್ಧ ಮಾಡದೆ ನೀನು ಹೊರಟು ಹೋದರೆ ಈ ನಿನ್ನ ಕೃತ್ಯವು ಎಂದಿಗೂ ನಿಶ್ಚಿಂತೆಯಿಂದ ನಿನ್ನನ್ನು ಇರಲು ಬಿಡಲಾರದು. ಎಂದು ಶ್ರೀಕೃಷ್ಣನು ಹೇಳಿದುದು.

ಅಕೀರ್ತಿಂ ಚಾಪಿ ಭೂತಾನಿ
ಕಥಯಿಷ್ಯಂತಿ ತೇಽವ್ಯಯಾಮ್ |
ಸಂಭಾವಿತಸ್ಯ ಚಾಕೀರ್ತಿ-
ರ್ಮರಣಾದತಿರಿಚ್ಯತೇ || ೩೪ ||

ಜನರು ಕೂಡಾ ನಿನ್ನ ಅಪಯಶಸ್ಸನ್ನು ಪದೇ ಪದೇ ಹೇಳುವರು. ಕೀರ್ತಿಗಳಿಸಿದವರಿಗೆ ಅಪಕೀರ್ತಿ ಯಾ ಅಗೌರವವು ಮರಣ ಸದೃಶವಾಗಿರುವುದು. ಏಕೆ, ಅದು ಮೃತ್ಯುವಿಗಿಂತಲೂ ಹೆಚ್ಚಿನ ದುಃಖದಾಯಕವಾಗುವುದು

ಕೀರ್ತಿ, ಪ್ರತಿಷ್ಠೆಗಳಿಸಿದ ವೀರನಾದ ಅರ್ಜುನನಿಗೆ ಶ್ರೀಕೃಷ್ಣನು, ಸಾಮಾನ್ಯವಾದ ಜನರ ತಿಳುವಳಿಕೆಗೆ ದೊರಕುವ ವಿಷಯಗಳನ್ನೇ ಹೇಳುವನು. ಅದು ತನ್ನ ಗೆಳೆಯನಿಗೆ ಅರ್ಥವಾಗುವುದು ಎಂದು ತಿಳಿದೊಡನೆ ಅದೇ ವಿಚಾರವನ್ನು ಮುಂದುವರಿಸಿರುವನು.

ಯುದ್ಧ ಮಾಡಬೇಕಾದ ಸಂದರ್ಭದಲ್ಲಿ ಯುದ್ಧ ಮಾಡದೇ ಹೋದಲ್ಲಿ ಅಪಕೀರ್ತಿ ಕಟ್ಟುವುದು ಎಂದು ಯಾರಿಗೂ ತಿಳಿಯಬಹುದು. ಅದನ್ನು ಶ್ರೀಕೃಷ್ಣನು ಹೇಳಿ, ಈಗಿನವರು ಮಾತ್ರವಲ್ಲದೆ ಮುಂದಿನ ಪೀಳಿಗೆಯವರು ಕೂಡಾ ನಿನ್ನ ಹೇಡಿತನವನ್ನು ಹಳಿಯುವರು. ಅದು ನೀನು ಸತ್ತ ಬಳಿಕವೂ ಮುಗಿಯದೆ ಹೋಗುವ ಪ್ರಸಂಗ ಬಂದೀತು. ಅರ್ಜುನನೆಂಬ ಒಬ್ಬ ವೀರಾಧಿವೀರ ಭಾರತದೇಶದ ರಾಜಕುಟುಂಬದಲ್ಲಿದ್ದನು. ಅವನು ಭಾರೀ ವೀರ ಪರಾಕ್ರಮಿ. ಆದರೆ ಅವನ ಗಾಯಕವೆಲ್ಲಾ ಯುದ್ಧ ಆರಂಭವಾಗುವ ತನಕ, ಯುದ್ಧ ಇದಿರಾದಾಗ ಅವನು ನಾನು ಯುದ್ಧ ಮಾಡಲಾರೆ ಎಂದು ರಣರಂಗ ಬಿಟ್ಟು ಹೋದನು— ಎಂದು ನೀನು ಅಪಕೀರ್ತಿ ಪಡೆಯುವೆ. ಹೀಗೆ ಶ್ರೀಕೃಷ್ಣನು ವೀರನಾದ ಅರ್ಜುನನಿಗೆ ನಿನ್ನ ವರ್ತನೆಯು ಹೇಡಿತನ ವ್ಯಕ್ತಪಡಿಸುತ್ತದೆ. ಎಂದು ಜನರು ತಿಳಿಯುವರು ಎಂದು ಹೇಳಿರುವನು

ಭಯಾದ್ರಣಾದುಪರತಂ |
ಮಂಸ್ಯಂತೇ ತ್ವಾಂ ಮಹಾರಥಾಃ |
ಯೇಷಾಂ ಚ ತ್ವಂ ಬಹುಮತೋ |
ಭೂತ್ವಾ ಯಾಸ್ಯಸಿ ಲಾಘವಮ್ || ೩೫ ||

ಈ ಮಹಾರಥರೆಂದೆನ್ನಿಸಿಕೊಂಡ ಭೀಷ್ಮ ದ್ರೋಣರು ಕೂಡಾ ಅರ್ಜುನನು ವೀರಾಗ್ರೇಸರನೆಂಬ ಅಭಿಮಾನವನ್ನಿಟ್ಟುಕೊಂಡಿದ್ದುದು ತಪ್ಪಾಯಿತು, ಅವನು ಹೇಡಿತನದಿಂದ ಯುದ್ಧಕ್ಕೆ ಹಿಂಜರಿದನೆಂದು ಭಾವಿಸುವರು, ಅವರು ನಿನ್ನ ಮೇಲೆ ಇರಿಸಿದ ಅಭಿಮಾನ ತಕ್ಷಣ ಮಾಯವಾಗುವುದು. ಹಿಂದೆ ನೀನು ಬಹಳ ಪರಾಕ್ರಮಿ ಎಂದು ಅವರು ಎಣಿಸಿದವರು ನಿನ್ನನ್ನು ತುಚ್ಛನೆಂದು ತಿಳಿಯುವರು

ಹೀಗೆ ಶ್ರೀ ಕೃಷ್ಣನು ಸಾಮಾನ್ಯರ ವಾದವನ್ನೇ ಆಡುತ್ತಾ, ಮಹಾರಥರೆಂದೆನ್ನಿಸಿಕೊಂಡ ಭೀಷ್ಮ ದ್ರೋಣರ ಪ್ರತಿಕ್ರಿಯೆಯನ್ನು ಅರ್ಜುನನಿಗೆ ತಿಳಿಸುವನು. ಏಕೆಂದರೆ ಯಾವ ವೀರನಿಗೂ ಅವನ ಸರಿಸಮಾನ ವೀರರು ಹೀಗೆ ಹಾಸ್ಯ ಮಾಡುವುದನ್ನು ಸಹಿಸಲು ಸಾಧ್ಯವಿಲ್ಲ. ಅದನ್ನು ಕೂಡಾ ಅರ್ಜುನನಿಗೆ ತಿಳಿಸುವನು. ಅಲ್ಲದೆ—

ಅವಾಚ್ಯವಾದಾಂಶ್ಚ ಬಹೂನ್ |
ವದಿಷ್ಯಂತಿ ತವಾಹಿತಾಃ |
ನಿಂದಂತಸ್ತವ ಸಾಮರ್ಥ್ಯಂ |
ತತೋ ದುಃಖತರಂ ನು ಕಿಮ್ || ೩೬ ||

ಮಹಾರಥರಲ್ಲದೆ ಸಾಮಾನ್ಯ ಯೋಧರು ಕೂಡಾ, ನಿನ್ನನ್ನು ಹೀಗೆ ನಿಂದಿಸುವರು. ನನಗೆ ಆ ಮಾತುಗಳನ್ನು ಕೇಳಲು ಸಾಧ್ಯವಿಲ್ಲ. ಅಂತಹ ಅವಾಚ್ಯ ಶಬ್ದಗಳಿಂದ ನಿನ್ನ ವಿಷಯ ಮಾತಾಡುವರು.

ಕೃಷ್ಣನು ಅರ್ಜುನನಲ್ಲಿ ವೀರೋತ್ಸಾಹ ತುಂಬುವಂತೆ ವ್ಯಾವಹಾರಿಕತೆಯ ಅರಿವನ್ನು ಉಂಟುಮಾಡಲು ಪ್ರಯತ್ನಿಸುವನು. ತತ್ವ ವೇದಾಂತದ ಮಾತುಗಳನ್ನು ಬಿಟ್ಟು ದೈನದಿಂದ ವಾಸ್ತವಿಕ, ಜೀವನದ ಪ್ರಸಂಗಗಳನ್ನು ವಿವರಿಸಿ ಹೇಳಿ ಅವನ ಭಯವನ್ನು ಹೋಗಲಾಡಿಸಲು ಪ್ರಯತ್ನಿಸಿದನು.

ಸಾಮಾನ್ಯ ಯೋಧರು ಕೂಡಾ ಹೀಗೆ ನಿನ್ನನ್ನು ನಿಂದಿಸುವಾಗ ನನಗೆ ಭಾರೀ ದುಃಖವಾಗುವುದು. ನೀನು ನನ್ನ ಮಿತ್ರನಲ್ಲವೆ?

ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ |
ಜಿತ್ವಾ ವಾ ಭೋಕ್ಷ್ಯಸೇ ಮಹೀಮ್ |
ತಸ್ಮಾದುತ್ತಿಷ್ಠ ಕೌಂತೇಯ |
ಯುದ್ಧಾಯ ಕೃತನಿಶ್ಚಯಃ || ೩೭ ||

ನೀನು ಯುದ್ಧ ಮಾಡಿ ಸತ್ತರೆ ಸ್ವರ್ಗ ಸೇರುವಿ. ಒಂದು ವೇಳೆ ಸಾಯದೆ ಹೋದರೆ ಈ ರಾಜ್ಯವನ್ನು ಆಳುವಿ ಆದರಿಂದ ನೀನು ಯುದ್ಧ ಮಾಡುವೆ ಎಂಬ ದೃಢ ನಿಶ್ಚಯದಿಂದ ಎದ್ದು ನಿಲ್ಲು.

ಅರ್ಜುನನಿಗೆ ಇಲ್ಲಿಂದ ಯುದ್ಧ ಮಾಡದೆ ಹೋಗಲು ಸಾಧ್ಯವಿಲ್ಲ. ಎಂದು ತಿಳಿಸಲು ಶ್ರೀ ಕೃಷ್ಣನು ಕುಳಿತಿದ್ದ ಅರ್ಜುನನನ್ನು ಎದ್ದು ನಿಲ್ಲು ಎಂದು ಹೇಳುವಾಗ ಅದರ ಜತೆ ಯುದ್ಧ ಮಾಡುವೆ ಎಂಬ ದೃಢ ನಿಶ್ಚಯ ಮಾಡಿಯೇ ಎದ್ದು ನಿಲ್ಲು ಎಂದು ಹೇಳಿರುವನು.

ಯುದ್ಧ ಮಾಡುವಾಗ ನಿನಗೆ ಗಾಬರಿ ಇದ್ದರೆ, ಗಲಿಬಿಲಿಯಾದರೆ ಹೇಗೆ ನಿನ್ನ ಮನಸ್ಥಿತಿ ಇಟ್ಟುಕೊಳ್ಳಬೇಕೆಂದು ನಾನು ಹೇಳುವೆನು ಎಂದು ಉತ್ಸಾಹ ತುಂಬಿದನು.

ಸುಖದುಃಖೇ ಸಮೇ ಕೃತ್ವಾ |
ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ |
ನೈವಂ ಪಾಪಮವಾಪ್ಸ್ಯಸಿ || ೩೮ ||

ಸುಖ ದುಃಖ, ಲಾಭ ನಷ್ಟ, ಜಯ ಅಪಜಯ ಈ ಮೂರು. ದೇಹ, ಮನ, ಬುದ್ಧಿಯ ಮಟ್ಟದಲ್ಲಿ ನಾವು ತಿಳಿದುಕೊಳ್ಳಬೇಕು ಈ ಮೂರರ ಮೇಲೆ ಏನೊಂದೂ ಪರಿಣಾಮವಾಗದ ರೀತಿ ನೀನು ಮನಸ್ಸನ್ನು ನಿಲ್ಲಿಸಿ, ಒಂದು ಕೆಲಸ ಮಾಡಬೇಕು ಇದಕ್ಕೆ ಕರ್ಮಯೋಗ ಎಂದು ಹೆಸರು.

ಏಷಾ ತೇಽಭಿಹಿತಾ ಸಾಂಖ್ಯೇ |
ಬುದ್ಧಿರ್ಯೋಗೇ ತ್ವಿಮಾಂ ಶೃಣು |
ಬುದ್ಧ್ಯಾ ಯುಕ್ತೋ ಯಯಾ
ಪಾರ್ಥ |
ಕರ್ಮಬಂಧಂ ಪ್ರಹಾಸ್ಯಸಿ || ೩೯ ||

ಕರ್ಮಯೋಗಕ್ಕೆ ಶ್ರೀಕೃಷ್ಣನು ಹೊಸತೊಂದು ಹೆಸರನ್ನು ಇಟ್ಟು ಬುದ್ಧಿಯೋಗ ಎಂದು ಕರೆದಿರುವನು. ಹಿಂದೆ ಯಾವ ಶಾಸ್ತ್ರ ಗ್ರಂಥಗಳಲ್ಲಿಯೂ ಈ ಬುದ್ಧಿಯೋಗ ಎಂದು ಯೋಗವನ್ನು ಕರೆದಿಲ್ಲ. ಮೊದಲು ಜ್ಞಾನವನ್ನು ತತ್ವಶಾಸ್ತ್ರ ವೇದಾಂತಗಳ ಮುಖಾಂತರ ಅರ್ಜುನನಿಗೆ ತಿಳಿಸಿ ಆತ್ಮಕ್ಕೆ ಸಾವಿಲ್ಲ. ನೀನು ಇತರರನ್ನು ಕೊಲ್ಲುವಿ ಅಥವಾ ಇತರರು ನಿನ್ನನ್ನು ಕೊಲ್ಲುವರು ಎಂದು ಅಜ್ಞಾನದಿಂದ ಶೋಕಿಸುತ್ತಿರುವಿ. ಹಾಗಲ್ಲ, ನಿನಗೂ, ಇತರರಿಗೂ ಯಾರಿಗೂ ಸಾವಿಲ್ಲ ಎಂದು ಅತ್ಯುಚ್ಚ ಮಟ್ಟದ ಜ್ಞಾನವನ್ನು ವಿವರಿಸಿ ಹೇಳಿದ ಬಳಿಕ, ಅದು ಅರ್ಜುನನಿಗೆ ಕೊಂಚ ಮನಸ್ಸಿಗೆ ವಿಶ್ವಾಸ ಬರುವಂತೆ ಮಾಡಿದರೂ, ಆ ತತ್ವಗಳನ್ನು ಆತ ಗ್ರಹಿಸದ ಕಾರಣ ಅವನ ವಿಷಾದ ಪೂರಿತ ಮನ ಬುದ್ಧಿಗೆ ಆ ಗೂಢ ತತ್ವಗಳನ್ನು ಗ್ರಹಿಸಲು ಸಾಧ್ಯವಾಗದ ಕಾರಣ ಶ್ರೀಕೃಷ್ಣನು ಅದಕ್ಕಿಂತ ಕೆಳಮಟ್ಟದ ದೈನಂದಿನ ವ್ಯವಹಾರಿಕ ಜೀವನವನ್ನು ಸಾಮಾನ್ಯ ಜನರು ನೋಡುವಂತೆ, ತಿಳಿಯುವಂತೆ, ವಿವರಿಸುವನು, ಹುಟ್ಟಿದವನಿಗೆ ಸಾವು ಖಂಡಿತಾ. ಇದನ್ನು ಎಲ್ಲರೂ ತಿಳಿದಿರುವರು. ಹುಟ್ಟಿದವನು ಸಾಯುವನೆಂದ ಬಳಿಕ ಒಂದಲ್ಲ ಒಂದು ದಿನ ಈ ದೇಹವನ್ನು ಬಿಟ್ಟು ಹೋಗಬೇಕೆಂದ ಬಳಿಕ ಈಗ ಸನ್ನಿಹಿತವಾದ ಮೃತ್ಯುವಿಗೇಕೆ ಅಂಜುವೆ? ಎಂದೂ ಅರ್ಜುನನಿಗೆ ಮನದಟ್ಟಾದಾಗ, ಅವನ ಇದಿರಾದ ಸಮಸ್ಯೆಯನ್ನು ಅವನೇ ಸ್ವತಃ ಯೋಚಿಸುವಂತೆ, ಆಗಿನ ಪರಿಸ್ಥಿತಿಯನ್ನು ವಿವರಿಸುವನು.

ಈಗ ಯುದ್ಧ ಮಾಡದೆ ಹೋದರೆ ರಣಾಂಗಣದಿಂದ ಓಡಿ ಹೋದರೆ ಸಾಮಾನ್ಯ ಜನರು ನಿನ್ನ ಕೃತ್ಯದಿಂದ ಏನು ತಿಳಿಯುವರು, ಅದರಿಂದ ನಿನಗೆ ಬರುವ ಅಪಕೀರ್ತಿ ಎಂದೆಂದಿಗೂ ಮರೆಯಲಾಗದ ಅಪಹಾಸ್ಯ ಇತ್ಯಾದಿ, ಇತರರು ನಿನ್ನ ಮೇಲಿನ ಅಭಿಮಾನವನ್ನು ಹೇಗೆ ತ್ಯಜಿಸುವರು ಇತ್ಯಾದಿ. ಅರ್ಜುನನ ಮನ ಚುಚ್ಚುವಂತೆ ಶ್ರೀಕೃಷ್ಣನು ವಿವರಿಸುವನು.

ಮತ್ತು ಈಗ ಯುದ್ಧ ಮಾಡಲೇಬೇಕೆಂಬ ದೃಢ ನಿಶ್ಚಯದಿಂದ ಎದ್ದು ನಿಲ್ಲು. ಎಂದು ಬೋಧಿಸುವನು. ಅರ್ಜುನನಿಗೆ ಇದು ಅರ್ಥವಾಯಿತು. ಆದರೆ ಅವನ ಗಲಿಬಿಲಿಗೊಂಡಿದ್ದ ಮನಸ್ಸಿನ ಸಮತೋಲನ ಪುನಃ ಬರುವಂತೆ ಮಾಡಲು, ಈ ಎಲ್ಲಾ ಕಾರಣಗಳನ್ನು ಯುದ್ಧ ಮಾಡಲೇಬೇಕೆಂದು ಕೊಟ್ಟು, ಯುದ್ಧ ಮಾಡುವಾಗ ಹೇಗೆ ಮನಸ್ಸಿನ ಶಾಂತ ಸ್ಥಿತಿಯನ್ನು ಕಳೆದುಕೊಳ್ಳದೆ ಮಾಡಬಹುದೆಂದೂ ಅದರಿಂದ ಯಾವ ಪಾಪವೂ, ವಿಕ್ಷೇಪವೂ ಆಗದಂತೆ, ಯುದ್ಧದಲ್ಲಿ ಭಾಗವಹಿಸಬಹುದೆಂದೂ ಶ್ರೀಕೃಷ್ಣನು ಹಿಂದಿನ ತತ್ವಗಳಿಗೆ ಹೊಸತೊಂದು ರೂಪವನ್ನು ಕೊಟ್ಟು ಆ ಕಾಲಕ್ಕೆ, ಆ ಸನ್ನಿವೇಶಕ್ಕೆ ತಕ್ಕಂತೆ ಬುದ್ಧಿಯೋಗವೆಂದು ಒಂದು ಸಾಧನೆಯನ್ನು ಹೇಳಿದನು.

ಬುದ್ಧಿಯೋಗ — ಈ ಬುದ್ಧಿಯೋಗದಲ್ಲಿ ಮನ ಬುದ್ಧಿಯು ಏಕಮುಖವಾಗಿ ಕೆಲಸ ಮಾಡಬೇಕಾಗಿದೆ. ಇದು ಎಷ್ಟರ ಮಟ್ಟಿಗೆ ಏಕಮುಖವಾಗಿರುವುದೋ, ಮನಸ್ಸು ಬಾಹ್ಯ ಪ್ರಪಂಚದ ಸನ್ನಿವೇಶಗಳಿಗೆ ವಿವೇಕವಾಣಿ ಅನುಸರಿಸುವಂತೆ ಪ್ರತಿಕ್ರಿಯೆ ತೋರುವುದೋ, ಅಷ್ಟರ ಮಟ್ಟಿಗೆ ಒಬ್ಬನು ವಿವೇಕಶಾಲಿ ಎಂದೆನ್ನಿಸಿಕೊಳ್ಳುವನು. ಈ ವಿವೇಕ ಬುದ್ಧಿಯು ಸಿಟ್ಟು ಅಥವಾ ಶೋಕದಿಂದ ನಷ್ಟವಾಗಿ, ಮನಕ್ಕೆ ಒಂದು ಕಡಿವಾಣ ಇಲ್ಲದ ಕುದುರೆಯಂತೆ ಪ್ರವಹಿಸಿದಾಗ, ಒಬ್ಬನಿಗೆ ಮತಿ ಭ್ರಷ್ಟತೆ ಉಂಟಾಗುವುದು. ಆಗ ಅವನಿಗೆ ತಾನು ಆ ಫಲ

(ಪತ್ತನೇ ಪುಟ ನೋಡಿರಿ)

ಕರ್ತವ್ಯನಿಷ್ಠ

ಮಾತೃಭೂಮಿ ರಕ್ಷಣೆ

ಲಾಲ್ ಬಹಾದೂರ್ ಶಾಸ್ತ್ರಿಯವರು

ಜಗತ್ತಿನ ಗಮನವನ್ನು ತನ್ನತ್ತ ಸೆಳೆದುಕೊಂಡ ಕಚ್ಛ ರಣದಲ್ಲಿ ಭಾರತ—ಪಾಕಿಸ್ತಾನಗಳ ನಡುವೆ ಸಮರವಿರಾಮ ಒಡಂಬಡಿಕೆಯೊಂದು ಕಳೆದ ತಿಂಗಳ ೩೦ರಂದು ಆಯಿತು. ಇದರ ಪರಿಣಾಮವಾಗಿ ಆ ಪ್ರದೇಶದಲ್ಲಿ ಗುಂಡುಗಳ ಚಕಮಕಿ ಮತ್ತು ಉಂಟಾಗಿದ್ದ ಉದ್ವಿಗ್ನ ಪರಿಸ್ಥಿತಿಗಳು ಇನ್ನು ಮುಂದೆ ತಲೆದೋರಲಾರವು. ಭಾರತದ ಪ್ರಧಾನಿ ಲಾಲ ಬಹದೂರ ಶಾಸ್ತ್ರಿಯವರು ಈ ಸಂಬಂಧದ ಯಾವುದೇ ಒಡಂಬಡಿಕೆಯಾಗಬೇಕಾಗಿದ್ದಲ್ಲಿ ಜನವರಿ ೧, ೧೯೬೫ರಲ್ಲಿದ್ದ ಪರಿಸ್ಥಿತಿಯನ್ನು ಕಾಯ್ದುಕೊಂಡು ಬರಬೇಕು ಎಂದಿದ್ದರು. ಈ ಹೇಳಿಕೆಯು ಕೊನೆಗಾದರೂ ಕಾರ್ಯರೂಪಕ್ಕೆ ಬಂದಿತು. ಈ ದಿಸೆಯಲ್ಲಿ ಬ್ರಿಟನ್ನಿನ ಪ್ರಧಾನಿ ಹೆರಾಲ್ಡ್ ವಿಲ್ಸನರು ನಡೆಸಿದ ಪಾತ್ರವು ಮಹತ್ವಪೂರ್ಣವಾದುದು. ಕಳಕಳಿಯ ಪ್ರಯತ್ನಗಳಿಗಾಗಿ ಭಾರತೀಯರೂ ಪಾಕಿಸ್ತಾನಿಗಳೂ ಕೃತಜ್ಞರಾಗಿರಬೇಕು.

ಈಗ ಆಗಿರುವ ಒಡಂಬಡಿಕೆಯು ಸಮಗ್ರ ಭಾರತ–ಪಾಕ್ ಗಡಿಯುದ್ದಕ್ಕೂ ಹುಟ್ಟಿರುವ ತ್ವೇಷ ಶಮನ ಮಾಡುವಲ್ಲಿ ಸಹಾಯಕವಾಗುವ ನಿರೀಕ್ಷೆಯಿದೆ. ಈ ತ್ವೇಷಮಯ ವಾತಾವರಣವು ದೂರವಾಯಿತೆಂದರೆ, ಉಭಯ ರಾಷ್ಟ್ರಗಳ ನಡುವಿರುವ ಇನ್ನಿತರ ಸಮಸ್ಯೆಗಳನ್ನು ಮಾತುಕತೆಯ ಮೂಲಕವೇ ಬಗೆಹರಿಸಲು ಅನುಕೂಲ ಪರಿಸ್ಥಿತಿಯನ್ನು ನಿರ್ಮಿಸುವುದು ಸಾಧ್ಯವಾಗಬಹುದು.

ಯುದ್ಧವಿರಾಮವು ಜಾರಿಗೆ ಬಂದ ನಂತರ ಕಚ್ಛ—ಸಿಂಧಗಳ ನಡುವಣ ಗಡಿಯನ್ನು ಗುರುತಿಸುವ ಬಗ್ಗೆ ಮಾತುಕತೆಗಳು ನಡೆಯುವುವು. ಗಡಿಯ ಇಕ್ಕೆಡೆಗಳಲ್ಲಿರುವ ಎಲ್ಲ ಸೈನ್ಯವನ್ನೂ ಹಿಂತೆಗೆದುಕೊಳ್ಳಲಾಗುತ್ತಿದೆ. ಅನಂತರ ಭಾರತೀಯ ಪೋಲೀಸರು ಬಾಡಬೆಟ್ ಠಾಣೆಗೆ ಮರಳುವರು. ೧೯೬೫ರ ಜನವರಿ ೧ರಂದು ತಾವು ಗಸ್ತಿ ನಡೆಸುತ್ತಿದ್ದ ಸ್ಥಳಗಳಿಗೆ ಭಾರತ-ಪಾಕಿಸ್ಥಾನಗಳ ಪೋಲೀಸರು ತೆರಳಿ ತಮ್ಮ ಕಾರ್ಯವನ್ನು ಮಾಡಬಹುದು. ನಡೆದ ಒಪ್ಪಂದವನ್ನು ಕಾಗದದ ಮೇಲಿಂದ ಕಾರ್ಯರೂಪಕ್ಕಿಳಿಸಲು, ಎದುರಾಗಬಹುದಾದ ಸಮಸ್ಯೆಗಳನ್ನು ಪರಿಶೀಲಿಸಲು ಭಾರತ ಮತ್ತು ಪಾಕಿಸ್ತಾನಗಳ ಅಧಿಕಾರಿಗಳು ಯುದ್ಧವಿರಾಮ ಪುನಃ ಜಾರಿಗೆ ಬಂದೊಡನೆಯೇ ಹಾಗೂ ಅನಂತರ ಆಗಾಗ ಸಭೆ ಸೇರುವರು. ಸಮರ ವಿರಾಮವು ಜಾರಿಗೆ ಬಂದು ಒಂದು ತಿಂಗಳೊಳಗೆ ತಾವು ಮುಂದಿಟ್ಟ ಬೇಡಿಕೆಗಳ ಹಿನ್ನೆಲೆಯಲ್ಲಿ ಗಡಿ ಬಗೆ ಒಪ್ಪಂದಕ್ಕೆ ಬರಲು ಮತ್ತು ಗಡಿ ಗುರುತಿಸುವ ಬಗ್ಗೆ ವ್ಯವಸ್ಥೆಗಳನ್ನು ಮಾಡಲು ಉಭಯ ಸರಕಾರಗಳ ಮಂತ್ರಿಗಳು ಸಭೆಸೇರುತ್ತಾರೆ. ಯುದ್ಧಸ್ತಂಭನದ ಎರಡು ತಿಂಗಳೊಳಗೆ ಉಭಯ ಸರಕಾರಗಳ ಮಂತ್ರಿಗಳಲ್ಲಿ ಯಾವುದೇ ಒಪ್ಪಂದವು ಸಾಧ್ಯವಾಗದ ಪಕ್ಷದಲ್ಲಿ ಉಭಯತರರು ೧೯೫೯ರ ಒಡಂಬಡಿಕೆಯಲ್ಲಿ ಯೋಜಿಸಿದ್ದಂತೆ ಗಡಿಗುರುತಿಸುವ ವಿಷಯವನ್ನು ನ್ಯಾಯ ಮಂಡಳವೊಂದರ ಪರಿಶೀಲನೆಗೆ ಒಪ್ಪಿಸಬೇಕಾಗುವುದು. ಈ ಕಾರ್ಯಕ್ಕಾಗಿ ಎರಡೂ ರಾಷ್ಟ್ರಗಳ ನಾಗರಿಕರಲ್ಲದ ಮೂವರು ಸದಸ್ಯರುಳ್ಳ ನ್ಯಾಯ ಮಂಡಳವೊಂದನ್ನು ಮುಂದಿನ ಎರಡು ತಿಂಗಳುಗಳೊಳಗೆ ನೇಮಿಸಲಾಗುವುದು. ಈ ಸದಸ್ಯರಲ್ಲಿ ಭಾರತ ಮತ್ತು ಪಾಕಿಸ್ತಾನಗಳು ಬೇರೆ ಬೇರೆಯಾಗಿ ನಾಮಕರಣ ಮಾಡಿದ ಒಬ್ಬೊಬ್ಬ ಸದಸ್ಯರೂ ಇಕ್ಕಡೆಯವರೂ ಒಪ್ಪುವ ಮತ್ತೊಬ್ಬ ಸದಸ್ಯನೂ ಇರುವರು. ಮಂಡಳದ ಅಧ್ಯಕ್ಷನು ಯಾರಾಗಬೇಕೆಂಬುದನ್ನು ಒಪ್ಪಿಕೊಳ್ಳಲು ಉಭಯ ಸರಕಾರಗಳಿಗೆ ಯುದ್ಧವಿರಾಮ ಜಾರಿಯಲ್ಲಿ ಬಂದ ಮೂರು ತಿಂಗಳುಗಳೊಳಗೆ ಸಾಧ್ಯವಾಗದಿದ್ದರೆ, ಅಧ್ಯಕ್ಷನನ್ನು ನಾಮಕರಣ ಮಾಡುವಂತೆ ಸಂಯುಕ್ತ ರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿಯನ್ನು ಕೇಳಿಕೊಳ್ಳುವುವು.

ನ್ಯಾಯ ಮಂಡಳದ ನಿರ್ಣಯವು ಉಭಯ ಸರಕಾರಗಳಿಗೂ ಬಂಧನಕಾರಿಯಾಗುವುದು. ಅದರ ನಿರ್ಣಯವನ್ನು ಸಾಧ್ಯವಾದಷ್ಟು ಬೇಗನೇ ಕಾರ್ಯಗತಗೊಳಿಸಬೇಕು. ಕಾರ್ಯಗತಗೊಳಿಸುವಲ್ಲಿ ಏನಾದರೂ ತೊಂದರೆಗಳು ಎದ್ದು ಬಂದರೆ; ಅದನ್ನು ನ್ಯಾಯ ಮಂಡಳದ ಪರಿಶೀಲನೆಗೆ ಒಪ್ಪಿಸಬೇಕಾಗುವುದು. ಆದ್ದರಿಂದ ಮಂಡಳದ ನಿರ್ಣಯ ಸಂಪೂರ್ಣವಾಗಿ ಕಾರ್ಯಗತವಾಗುವ ವರೆಗೂ ಅದು ಅಸ್ತಿತ್ವದಲ್ಲಿರುವುದು.

ಈಗ ನಡೆದ ಒಪ್ಪಂದದನ್ವಯ ಪಾಕಿಸ್ತಾನವು ತನ್ನ ಸೈನ್ಯವನ್ನು ಕಚ್ಛ—ಸಿಂಧಗಳ ಅಂತರರಾಷ್ಟ್ರೀಯ ಗಡಿಯಾಚೆಗಿನ ವರೆಗೂ ಹಿಂತೆಗೆದುಕೊಳ್ಳುವುದು. ಭಾರತವು ತನಗೆ ನಿಸ್ಸಂಕೋಚವೆನಿಸುವ ಪ್ರದೇಶದ ವರೆಗೆ ತನ್ನ ಸೇನೆಯನ್ನು ಹಿಂತೆಗೆದುಕೊಳ್ಳುವದು. ಕಚ್ಛ ರಣದಲ್ಲಿ ಕಾವಲು ನಡೆಸುವ ತನ್ನ ಹಕ್ಕನ್ನು ಭಾರತವು ಉಳಿಸಿಕೊಂಡಿದೆ. ಪಾಕಿಸ್ತಾನವು ಕಾಂಜರಕೋಟದಿಂದ ತನ್ನ ಸೈನ್ಯ ಪಡೆಗಳನ್ನು ಹಿಂತೆಗೆದುಕೊಳ್ಳಲು ಒಪ್ಪಿಕೊಂಡಿದೆ. ಒಪ್ಪಂದದ ಶರ್ತದನ್ವಯ ಭಾರತೀಯ ಪೋಲೀಸ ಕಾವಲು ಪಡೆಗಳು ಕಾಂಜರಕೋಟದ ವರೆಗೆ ಅಂದರೆ, ಗಡಿಯವರೆಗೂ ಹೋಗಬಲ್ಲವು. ಈ ವರ್ಷದ ಆರಂಭದ ಕಚ್ಛ ರಣದಲ್ಲಿ ಭಾರತೀಯ ಪೋಲೀಸ್ ಠಾಣೆಗಳಿದ್ದುದರಿಂದ ಮುಂದೆಯೂ ಅವು ಅಲ್ಲಿ ಉಳಿಯುವುವು. ಡಿಂಗ—ಸಾರಿ ಮಾರ್ಗಪ್ರದೇಶವನ್ನು ಕಾವಲು ನಡೆಸುವ ಹಕ್ಕು ಭಾರತಕ್ಕೆ ಮುಂದೆಯೂ ಉಳಿಯುವುದು. ಪಾಕಿಸ್ತಾನವೂ ಆ ಮಾರ್ಗವನ್ನು ಕಾವಲು ನಡೆಸಿತ್ತೆಂಬುದಕ್ಕೆ ಸಾಕಷ್ಟು ಪುರಾವೆಗಳಿರುವುದರಿಂದ ಅದೂ ಅಲ್ಲಿ ಕಾವಲು ನಡೆಸುತ್ತಿರುವುದು. ಆದರೆ, ಪಾಕಿಸ್ತಾನವು ಅಲ್ಲಿ ತನ್ನ ಠಾಣೆಯನ್ನು ಸ್ಥಾಪಿಸಲಾರದು. ಈ ಮಾರ್ಗವು ಕಾಂಜರಕೋಟೆಯ ಬಳಿ ಹಾದು ಹೋಗುವುದು. ಇಲ್ಲಿಯ ೨೦ ಚದರ ಮೈಲು ಭೂಭಾಗವು ವರ್ಷದ ಬಹು ಕಾಲ ನೀರಿನಲ್ಲಿ ಮುಳುಗಿರುವುದು.

ಭಾರತ ಪಾಕ್ ಸೈನಿಕರು ಪರಸ್ಪರರನ್ನು ಸಂಧಿಸಿದಾಗ ಕಾಲ್ದಳದ ಸದಾಚಾರವನ್ನು ಪಾಲಿಸಬೇಕು. ಒಡಂಬಡಿಕೆಯಂತೆ ಉಭಯ ಸರಕಾರಗಳೂ ತಂತಮ್ಮ ಸೇನೆಯನ್ನು ಹಿಂತೆಗೆದುಕೊಳ್ಳಲು ಈಗಾಗಲೇ ತೊಡಗಿವೆ.

ಪಾಕಿಸ್ತಾನವು ಯಾವುದರ ಮೇಲಿನ ಮೋಹದಿಂದ ಈ ಪ್ರದೇಶದಲ್ಲಿ ಆಕ್ರಮಣವನ್ನು ತೊಡಗಿತು ಎಂಬುದು ದೊಡ್ಡ ಪ್ರಶ್ನೆ. ಭಾರತವು ಎಡಹಾಯ್ದು ಸಕಲ ವಿಘ್ನ ವಿಡಂಬರಗಳನ್ನು ಕೆಚ್ಚೆದೆಯಿಂದ ಎದುರಿಸಿ ಪ್ರಗತಿಪಥಗಾಮಿಯಾಗುತ್ತಿರುವುದು, ಏಶ್ಯಾದ ನಾಯಕತ್ವವನ್ನು ವಹಿಸಲು ಸಮರ್ಥವಾಗುತ್ತಿರುವುದು ಕೆಂಪು ಚೀನಾದ ಕಣ್ಣು ಕುಕ್ಕಿತು. ಎಂತಲೇ ಅದು ಉತ್ತರದ ಗಡಿಯಲ್ಲಿ ಭಾರಿ ಪ್ರಮಾಣದ ಆಕ್ರಮಣಕ್ಕೆ ತೊಡಗಿತು. ತನ್ನ ಕುತಂತ್ರಗಳ ಮುಂದೆ ಭಾರತವು ತಲೆಕೆಳಗಿಸುವಂತಿಲ್ಲವೆಂಬುದು ಬಹಿರಂಗವಾದೊಡನೆಯೇ ಸಮರ ವಿರಾಮ ಘೋಷಿಸಿತು. ಹಾಗಿದ್ದರೂ ವಿವಾದ ಪರಿಹಾರಕ್ಕೆ ನೇರ ಮಾತುಕತೆಗಳೇ ಸಾಧನವೆಂದು ನಂಬಿದ ಮಿತ್ರ ರಾಷ್ಟ್ರಗಳು ನೀಡಿದ ಸಲಹೆಯನ್ನು ಅದಿನ್ನೂ ಮನ್ನಿಸದೆ, ರಾಮಧ್ಯಾನ ಮಾಡುತ್ತಲೇ ಕತ್ತಿ ಹಿರಿಯುವಂತಹ ಕಾರ್ಯದಲ್ಲಿ ಉದ್ಯುಕ್ತವಾಗಿದೆ. ಚೀನಾದೊಡನೆ ಪಾಕಿಸ್ತಾನದ ಮೈತ್ರಿಯು ಹೆಚ್ಚುತ್ತ ಬಂದಂತೆ, ಭಾರತದ ಮೇಲೆ ಪೂರ್ವಗ್ರಹವಿರುವ ಪಾಕಿಸ್ತಾನದ ಕಿವಿಯಲ್ಲಿ ಚಾ ಆಕ್ರಮಣದ ಮಂತ್ರೋಪದೇಶ ಮಾಡಿದಂತೆ ತೋರುತ್ತದೆ. ಆದುದರಿಂದ, ಭಾರತದ ಗಡಿಯುದ್ದಕ್ಕೂ ಅಶಾಂತತೆಯನ್ನು ಹಬ್ಬಿಸಿ ದೇಶದ ಪ್ರಗತಿಗೆ ಮುಟ್ಟುಗೋಲು ಹಾಕುವ ದುರಾಶಯದಿಂದ ಅಯೂಬಖಾನರು ಆಕ್ರಮಣಕ್ಕೆ ಮುಂದಾದರು. ಆದರೆ ತನ್ನ ಚೀನಾದೊಂದಿಗಿನ ಸ್ನೇಹ ಸಂವರ್ಧನೆ ಮತ್ತು ಭಾರತದ ಮೇಲಣ ಆಕ್ರಮಣಗಳು ಪಾಶ್ಚಾತ್ಯ ಮಿತ್ರರಲ್ಲಿ ಅಸಮಾಧಾನವನ್ನುಂಟು ಮಾಡಿದ್ದರಿಂದ ತನ್ನ ಬೇಳೆಯನ್ನು ಬೇಯಿಸಿಕೊಳ್ಳುವುದಕ್ಕಾಗಿ ಪಾಕ್ ಅಧ್ಯಕ್ಷ ಅಯೂಬಖಾನರು ಕೊನೆಗೂ

ಕಚ್ಛ ಗಡಿಯಲ್ಲಿ ಅಪ್ರಚೋದಿತ ಆಕ್ರಮಣ ಮಾಡಿದ ಪಾಕಿಸ್ತಾನಿ ಸೇನೆಗಳ ಆಯುಧಗಳನ್ನು ಸಿದ್ಧಗೊಳಿಸುತ್ತಿದ್ದ ದೃ

ಚ್ಛ ರಣದಲ್ಲಿ ಭಾರತೀಯ ಯೋಧ

ಅಯೂಬ ಖಾನ್

ಣ ಪಣವಿಟ್ಟು ಹೋರಾಡುತ್ತಾನೆ

ನ್ಯಾಯದ ಮುಂದೆ ತಲೆ ತಗ್ಗಿಸಿ ಒಳ್ಳೆಯ ಕೆಲಸ ಮಾಡಿದರ.

ಕಚ್ಛರಣದಲ್ಲಿ ಮಾಡಿದ ಆಕ್ರಮಣದ ಉದ್ದೇಶ ಬರಿಯ ಕಿರುಕುಳ ಕೊಡುವುದು. ಅಲ್ಲಿಯ ಭೂಭಾಗದಿಂದ ಮತ್ತಾವ ಬಗೆಯ ಲಾಭವೂ ಇರುವುದಿಲ್ಲ. ಈ ಪ್ರದೇಶವು ಉತ್ತರ ಗುಜರಾತದಲ್ಲಿದೆ. ಇದರ ವಿಸ್ತೀರ್ಣ ೯,೦೦೦ ಚದರ ಮೈಲುಗಳಷ್ಟು. ಇದೇನೂ ಸಸ್ಯ ಶ್ಯಾಮಲವಾದ ನೆಲವಲ್ಲ; ಸಸ್ಯಗಳಿಲ್ಲ ಬೆಳೆಯುವುದೂ ಇಲ್ಲ. ಈ ಪ್ರದೇಶವೊಂದು ವಿಶಾಲವಾದ ಮರುಭೂಮಿ. ಪಶ್ಚಿಮ ಪಾಕಿಸ್ತಾನದ ಸಿಂಧ ಪ್ರಾಂತದ ಗಡಿಗೆ ಇದು ಹೊಂದಿಕೊಂಡಿದೆ. ವರ್ಷದಲ್ಲಿ ದಶಂಬರದಿಂದ ಮೇ ವರೆಗಿನ ಆರು ತಿಂಗಳುಗಳ ಕಾಲ ಇದು ಒಣಗಿರುತ್ತದೆ; ಉಳಿದವಧಿಯಲ್ಲಿ ಇದು ಸಮುದ್ರದಿಂದ ಉಕ್ಕಿ ಬಂದ ನೀರಿನಡಿಯಲ್ಲಿ ಮುಳುಗಿ ಹೋಗುತ್ತದೆ. ಅಲ್ಲಲ್ಲಿ, ಜವುಗು ಪ್ರದೇಶಗಳಲ್ಲಿ ಬೆಳೆಯುವ ಸಸ್ಯಗಳು, ವಿಶಾಲವಾದ ಧೂಳು ಮತ್ತು ಮರಳುಗಳು ಕಂಡು ಬರುವುದೇ ಈ ಪ್ರದೇಶದ ಒಂದು ವೈಶಿಷ್ಟ್ಯ. ಪ್ರಾಕೃತಿಕವಾಗಿ ಕಚ್ಛ ರಣದ ಹವಾಮಾನ, ಭೂಸ್ಥಿತಿಗಳು ಜನವಾಸಕ್ಕೆ ಏನೇನೂ ಉಪಯುಕ್ತವಿಲ್ಲ; ಅದೊಂದು ನೀರಸವಾದ ಭೂಭಾಗ.

ಹೋರಾಡಲು ನಮ್ಮ ಯೋಧರು

ಅದೇನೇ ಇರಲಿ, ಕಚ್ಛರಣ ನಮ್ಮ ಪವಿತ್ರ ಮಾತೃಭೂಮಿಯ ಅವಿಭಾಜ್ಯ ಅಂಗ; ಅದು ನಮ್ಮದು. ಇಂತಹ ನಮ್ಮ ಭೂಭಾಗವನ್ನು ಕಬಳಿಸುವ ಸಂಚನ್ನು ಪಾಕಿಸ್ತಾನವು ಹೂಡಿತು. ಈ ಭಾಗವು ತನಗೆ ಸೇರಿದ್ದೆಂಬ ಪಾಕಿಸ್ತಾನದ ವಾದಗಳು, ಅದು ಹೇಳುತ್ತಿರುವ ಕಾರಣಗಳು ಏಕಪಕ್ಷೀಯವಾಗಿವೆ; ಅನ್ಯಾಯಯುತವಾಗಿವೆ; ನಿರಾಧಾರವಾಗಿವೆ. ಕಚ್ಛ ಮತ್ತು ಸಿಂಧಗಳ ಗಡಿಯಲ್ಲಿ ಯಾವ ಗೊಂದಲಕ್ಕೂ ಅವಕಾಶವಿರುವುದಿಲ್ಲ; ಅದು ಸುಸ್ಪಷ್ಟವಿದೆ. ಅನೇಕ ಸಲ ಈ ಸಂಗತಿಯನ್ನು ಸ್ಪಷ್ಟಗೊಳಿಸಲಾಗಿದೆ. ವಸ್ತುಸ್ಥಿತಿಯನ್ನು ನಿರ್ವಿಕಲ್ಪ ಮನೋವೃತ್ತಿಯಿಂದ ವೀಕ್ಷಿಸುವಾಗ ಯಾವುದೇ ವಿವಾದಗಳಿಗೆ ಇಲ್ಲಿ ಆಸ್ಪದವೇ ಉಳಿಯುವುದಿಲ್ಲ. ಪರರ ಭೂಮಿಯನ್ನು ಕಬಳಿಸುವ ದುರಾಸೆ ಮತ್ತು ಪ್ರಾದೇಶಿಕ ವಿಸ್ತರಣಾದಾಹ ಹಾಗೂ ಪರಕೀಯ ಪ್ರಚೋದನೆಯಿಂದ ಪಾಕಿಸ್ತಾನವು ನಮ್ಮದಾದ ಈ ಭೂಪ್ರದೇಶದ ಮೇಲೆ ತನ್ನ ಹಕ್ಕನ್ನು ಅನ್ಯಾಯವಾಗಿ ಸ್ಥಾಪಿಸ ಹೊರಟಿದೆ. ಈ ಗಡಿಪ್ರದೇಶಕ್ಕೆ ಸಂಬಂಧಿಸಿದ ಅಧಿಕೃತ ವಿವರಗಳು ಮತ್ತು ಭೂಪಟಗಳನ್ನು ಸರ್ವೇತಜ್ಞರ ಪರಿಶೀಲನೆಗಾಗಿ ಒಪ್ಪಿಸಬೇಕೆಂಬ ಸೂಚನೆಯನ್ನು ಪಾಕಿಸ್ತಾನವು ಮೊದಲಿಗೆ ತಿರಸ್ಕರಿಸಿದುದು ಇದರ ಕುಹಕವನ್ನು ಬಹಿರಂಗ ಪಡಿಸುತ್ತದೆ.

ಭಾರತವು ಯುದ್ಧವನ್ನು ಬಯಸುವುದಿಲ್ಲ. ಯಾವುದೇ ಬಗೆಯ ವಿವಾದಗಳನ್ನು ನೇರ ಮಾತುಕತೆಗಳ ಮೂಲಕ ಬಗೆಹರಿಸುವುದು ಸಾಧ್ಯ ಎಂದು ದೃಢವಾಗಿ ನಂಬಿದ ದೇಶವದು. ಆದುದರಿಂದಲೇ, ಪಾಕ್ ವಾದವೇನೇ ಇದ್ದರೂ ವಾಸ್ತವಿಕ ಸಂಗತಿಗಳನ್ನೇ ಆಧಾರವಾಗಿಟ್ಟುಕೊಂಡು ಮಾತುಕತೆಗಳ ಮೂಲಕ ಈ ಸಮಸ್ಯೆಯನ್ನು ಇತ್ಯರ್ಥಗೊಳಿಸುವಂತೆ ಭಾರತವು ಪಾಕಿಸ್ತಾನದ ಮನವೊಲಿಸಲು ಯತ್ನಿಸುತ್ತಿದ್ದಂತೆಯೇ ಪಾಕಿಸ್ತಾನವು ಕಚ್ ರಣದಲ್ಲಿ ಹಠಾತ್ತನೆ ಆಕ್ರಮಣ ಮಾಡಿತು. ಭಾರತದ ಕಡೆಯಿಂದ ಇಂತಹ ದುಷ್ಕೃತ್ಯಕ್ಕೆ ಯಾವುದೇ ಬಗೆಯ ಪ್ರಚೋದನೆಯಿರಲಿಲ್ಲವೆಂಬುದನ್ನು ಮರೆಯಬಾರದು. ಪಾಕ್ ಬಗೆದಿರುವ ಈ ದ್ರೋಹಕ್ಕೆ ಬೇರೆ ಯಾವ ನಿದರ್ಶನಗಳೂ ಬೇಕಿಲ್ಲ. ತನ್ನ ವಾದವನ್ನು ಸಮರ್ಥಿಸಿಕೊಳ್ಳಲು ಯಾವುದೇ ಸಾಕ್ಷ್ಯಾಂಶಗಳು ಅದಕ್ಕೆ ದೊರೆಯಲಿಲ್ಲ. ಆದುದರಿಂದಲೇ ತನ್ನ ಮಹತ್ವಾಕಾಂಕ್ಷೆಯನ್ನು ಸಾಧಿಸಿಕೊಳ್ಳುವ ಉದ್ದೇಶದಿಂದ ಅದು ಮತ್ತಾವ ವಿಧಾನವನ್ನೂ ಹಿಡಿಯದೆ ಭೀಕರ ಆಕ್ರಮಣವನ್ನೇ ಅಪ್ಪಿಕೊಳ್ಳಬೇಕಾಯಿತು.

೧೯೬೫ರ ಎಪ್ರಿಲ್ ೯ರಂದು ಬೆಳಗ್ಗೆ ಪಾಕಿಸ್ತಾನದ ೫೧ ಇನ್‌ಫೇಂಟ್ರಿ ಬ್ರಿಗೇಡ್ ಗಡಿಯಿಂದ ತೀರ ಪಶ್ಚಿಮಕ್ಕೆ ಭಾರತದ ಪ್ರದೇಶದಲ್ಲಿರುವ ಸರ್ದಾರ್ ಠಾಣ್ಯದ ಮೇಲೆ ಧಾಳಿ ನಡೆಸಿತು. ಈ ಪ್ರದೇಶದಲ್ಲಿನ ಕಾರ್ಯಾಚರಣೆಯ ಹೊಣೆಯನ್ನು ಭಾರತೀಯ ಸೇನೆಗಳಿಗೆ ವಹಿಸಿ ಕೊಡಲಾಯಿತು. ಮಾತೃಭೂಮಿಯ ಸ್ವರಕ್ಷಣೆಗೆಂದೇ ಸೇನೆಯಿರುವುದು. ಇದನ್ನು ಚೆನ್ನಾಗಿ ಅರಿತುಕೊಂಡ ನಮ್ಮ ಯೋಧರು ಪಾಕಿಸ್ತಾನ ಸೈನಿಕರನ್ನು ಹಿಮ್ಮೆಟ್ಟಿಸಿ ಎಪ್ರಿಲ್ ೧೦ರಂದು ಸರ್ದಾರ್ ಠಾಣ್ಯವನ್ನು ಮರಳಿ ವಶಪಡಿಸಿಕೊಂಡರು. ಪಾಕಿಸ್ತಾನಿ ಸೈನಿಕರಿಂದ ದೊರೆತ ಕಾಗದಪತ್ರಗಳು ಮತ್ತು ಇನ್ನಿತರ ಸಾಧನ ಸಾಮಗ್ರಿಗಳು ಪಾಕಿಸ್ತಾನವು ಮೂರ್ತಿಂಗಳಿಗೆ ಹಿಂದೆಯೇ ಭಾರತದ ಮೇಲೆ ಯಾವ ಪ್ರಚೋದನೆಯೂ ಇಲ್ಲದೆ ಆಕ್ರಮಣ ನಡೆಸಲು ಸಂಪೂರ್ಣ ಸಿದ್ಧತೆಯನ್ನು ನಡೆಸಿದೆಯೆಂಬುದು ಗೊತ್ತಾಗಿದೆ. ಇದಕ್ಕೆ ಪಾಕಿನ ಭಾರತ ದ್ವೇಷ ಭಾವನೆ, ಕೆಂಪು ಚೀನಾದ ಸ್ನೇಹ ಹಸ್ತ ಮತ್ತು ಕಾಶ್ಮೀರವನ್ನು ನುಂಗಿ ಹಾಕುವ ಪಾಕ್ ಮನೋವೃತ್ತಿಯೇ ಪ್ರೇರಕವೆಂಬುದು ಸ್ಪಷ್ಟವಾಗುವುದು.

ಪ್ರಥಮ ಚುಂಬನದಲ್ಲೇ ದಂತಭಗ್ನಗೊಂಡರೂ ಪಾಕ್ ಬುದ್ಧಿ ಕಲಿಯಲಿಲ್ಲ. ಅದು ಮತ್ತೆ ಎಪ್ರಿಲ್ ೨೪ರಂದು ಕಚ್-ಸಿಂಧ್ ಗಡಿ ವಿಭಾಗದ ಕೆಲವು ಕಡೆಗಳಲ್ಲಿ ತನ್ನ ಆಕ್ರಮಣವನ್ನು ಬಲಗೊಳಿಸಿತು. ಈ ಸಂದರ್ಭದಲ್ಲಿಯೇ ಪಾಕಿಸ್ತಾನವು ಕಮ್ಯುನಿಸ್ಟ್ ಆಕ್ರಮಣದ ವಿರುದ್ಧ ನೀಡಿದ ಸೈನಿಕ ಸಾಧನಗಳನ್ನು ಸ್ವೇಚ್ಛೆಯಿಂದ ಬಳಸಿತು. ಅಮೆರಿಕೆಯು ಮಿಲಿಟರಿ ನೆರವಿನ ಅಂಗವಾಗಿ ನೀಡಿದ ಪ್ಯಾಟನ್ ಟ್ಯಾಂಕುಗಳನ್ನು ಅದು ಉಪಯೋಗಿಸಿತು. ಅದೇ ದಿನ ಪಾಕಿಸ್ತಾನವು ತನ್ನ ಸೇನೆಗೆ ಸಾಮೂಹಿಕ ಕಾರ್ಯಾಚರಣೆಗೆ ಆಜ್ಞೆ ನೀಡಿತು.

೧೯೬೫ರ ಎಪ್ರಿಲ್ ೨೬ರಂದು ಪಾಕಿಸ್ತಾನಿ ಸೈನಿಕರು ಮತ್ತೊಮ್ಮೆ ಭಾರತದ ಮೇಲೆ ಧಾಳಿ ಮಾಡಿದರು. ಈ ಬಾರಿ ಬಿಯಾರ್‌ಬೆಟ್ ಮೇಲೆ ನಡೆದ ಧಾಳಿಯಲ್ಲಿ ಆಕ್ರಮಣಕಾರರ ಬಲವು ಒಂದು ಬ್ರಿಗೇಡಿನಷ್ಟಿತ್ತು. ಈ ಧಾಳಿಯಲ್ಲಿಯೂ ಪಾಕ್ ಸೈನಿಕರು ಅಮೆರಿಕನ್ ಟ್ಯಾಂಕುಗಳನ್ನು ಉಪಯೋಗಿಸಿದ್ದರು. ನಮ್ಮ ವೀರಯೋಧರು ಈ ಅನ್ಯಾಯಿ ಆಕ್ರಮಣಕಾರರನ್ನು ಪರಾಕ್ರಮದಿಂದ ಎದುರಿಸಿದರು. ಈ ಒಂದು ಕದನದಲ್ಲಿಯೇ ಆರು ಪಾಕ್ ಪಡೆಯ ಟ್ಯಾಂಕುಗಳು ನಾಶವಾದುವು. ಕಚ್—ರಾಣ ಪ್ರದೇಶವು ಜನವಸತಿಗೆ ನಿರುಪಯುಕ್ತ ನೇಫಾ ಗಡಿ ಪ್ರದೇಶದಂತೆಯೇ ಈ ಭಾಗದಲ್ಲಿಯೂ ಸೈನಿಕರು ಅನೇಕ ತರದ ಕಷ್ಟಗಳನ್ನು ಅನುಭವಿಸಲು ಸಿದ್ಧರಾಗಬೇಕಾಗುತ್ತದೆ ಎಷ್ಟೇ ತೊಂದರೆಗಳಿದ್ದರೂ ನಮ್ಮ ವೀರಯೋಧರು ಪಾಕ್ ಅಪ್ರಚೋದಿತ ಆಕ್ರಮಣವನ್ನು ಸರ್ವಶಕ್ತಿಯಿಂದ ಎದುರಿಸಿದರು; ಹಿಮ್ಮೆಟ್ಟಿಸಿದರು.

ಭಾರತೀಯ ಯೋಧರು ಮಾತೃಭೂಸಂರಕ್ಷಣೆಯ ಹೊಣೆಗಾರಿಕೆಯನ್ನು ಹೊತ್ತವರು; ಅದನ್ನು ಸರಿಯಾಗಿ ಅರಿತುಕೊಂಡವರು, ಮತ್ತು ಸಮುಚಿತವಾಗಿ ನಿರ್ವಹಿಸುವ ಕರ್ತೃತ್ವಶಕ್ತಿ, ವೀರ್ಯ ಮತ್ತು ಸಾಹಸವುಳ್ಳವರು. ಈ ವೀರಯೋಧರ ಕರ್ತವ್ಯನಿಷ್ಠೆಯನ್ನು ಸಮಗ್ರ ಭಾರತೀಯರು ಅರಿತುಕೊಂಡಿದ್ದಾರೆ; ಅವರಿಗೆ ಬೆಂಬಲವಾಗಿದ್ದಾರೆ. ಭಾರತೀಯ ಯೋಧರಿಗೆ ಮಾತೃಭೂರಕ್ಷಣೆಯೇ ಗುರಿಯಾದರೆ, ಭಾರತೀಯ ಜನತೆಗೆ ಯೋಧ ಹಿತರಕ್ಷಣೆ ಮುಖ್ಯ ಗುರಿಗಳಲ್ಲಿ ಒಂದು. ಕಚ್‌ನ ನಿವಾಸಿಗರು ಭೂರಕ್ಷಕ ಯೋಧರಿಗೆ ಎರಡು ಮಣ ಸಿಹಿತಿಂಡಿಯನ್ನು ಹಂಚಿದರು. ಯೋಧರಿಗಾಗಿ ರಕ್ತದಾನ ಮಾಡ ಬಯಸುವರ ಸಂಖ್ಯೆಯೂ ಧಾರಾಳವಾಗಿದೆ. ಯೋಧನೇ ತಮ್ಮ ಸಂರಕ್ಷಕನೆಂಬುದು ಅವರಿಗೆ ಚೆನ್ನಾಗಿ ತಿಳಿದಿದೆ.

ಬಹಳಷ್ಟು ಸಾವುನೋವು ಗಳಿಸಿದ ಬಳಿಕ ಪಾಕಿಸ್ತಾನವೀಗ ಕಚ್-ಸಿಂಧ್ ಗಡಿಯಲ್ಲಿ ಸಮರ ವಿರಾಮಕ್ಕೆ ಒಪ್ಪಿಕೊಂಡಿದೆ. ಭಾರತ—ಪಾಕ್ ಗಡಿಯು ಬಹಳ ಉದ್ದವಿದೆ. ಪಾಕಿಸ್ತಾನವು ಗಡಿಯುದ್ದಕ್ಕೂ ಅಲ್ಲಲ್ಲಿ ಕಿರುಕುಳ ಕೊಡುತ್ತಲೇ ಇದೆ. ಕೆಂಪು ಚೀನಾದ ಕಿರುಕುಳವೂ ಇದೆ. ಇವೆಲ್ಲವೂ ಬಗೆಹರಿದು ಗಡಿಯಲ್ಲಿ ಶಾಂತಿಯು ಸ್ಥಾಪನೆಯಾಗುವ ತನಕ ಭಾರತೀಯ ಯೋಧ ಕಣ್ಣಿನಲ್ಲಿ ಎಣ್ಣೆ ಹಾಕಿ ಕಾಯುತ್ತಿರಬೇಕಾಗಿದೆ. ಆತನ ತನ್ನ ಕರ್ತವ್ಯ ಪಾಲಿಸುತ್ತಾನೆ; ಜನತೆಯೂ ತನ್ನ ಕರ್ತವ್ಯವನ್ನು ಪೂರೈಸುತ್ತದೆ; ಭಾರತ ಸರ್ವಸಂಪನ್ನವಾಗುತ್ತದೆ.

— — —

ಭೂ ಸುಧಾರಣೆ

"ಸ್ಟಾಂಡರ್ಡ್" ಎಕರೆ ಎಂಬುದರ ವಿವರಣೆ

ಭೂ ಸುಧಾರಣೆ ಶಾಸನದ ಎರಡನೇ ಸೆಕ್ಷನ್ (೩) ೩೦ರಲ್ಲಿ ಸ್ಟಾಂಡರ್ಡ್ ಎಕರೆ (ಪ್ರಮಾಣಿತ ಎಕರೆ) ಎಂಬುದನ್ನು ಹೀಗೆ ವಿವರಿಸಿದ್ದಾರೆ.

ಪ್ರಮಾಣಿತ ಎಕರೆ ಅಂದರೆ ಮೊದಲನೇ ದರ್ಜೆಯ ಒಂದು ಎಕರೆ ಜಮೀನು ಅಥವಾ ಅದಕ್ಕೆ ಸಮಾನವಾಗಿರುವ ಇತರ ದರ್ಜೆಗಳ ಜಮೀನು ಎಂದರ್ಥ. ಈ ದರ್ಜೆವಾರು ಜಮೀನುಗಳನ್ನು ಶಾಸನದ ಒಂದನೇ ಪಟ್ಟಿಯ 'ಎ' ಭಾಗದಲ್ಲಿ (ಶೆಡ್ಯೂಲ್) ವಿವರಣೆ ಮಾಡಲಾಗಿದೆ. ಮತ್ತು ಅವುಗಳನ್ನು ನಿರ್ಧರಿಸುವ ತಪಶೀಲನ್ನು ಅದೇ ಪಟ್ಟಿಯ 'ಬಿ' ವಿಭಾಗದಲ್ಲಿ ನಮೂದಿಸಲಾಗಿದೆ.

ಮೊದಲನೇ ದರ್ಜೆ

ನೀರಾವರಿಯು ಖಾತ್ರಿಯಾದ ಸೌಲಭ್ಯವಿರುವ ತರಿ ಅಥವಾ ಬಾಗಾಯತ ಜಮೀನಾಗಿದ್ದು ಸಾಲಿಯಾನ ಎರಡು ಬೆಳೆ ಭತ್ತವನ್ನು ಬೆಳೆಯಲು ಸಾಧ್ಯವಿರುವ ಜಮೀನು ಮೊದಲನೇ ದರ್ಜೆಯ ಜಮೀನು. ಇಂತಹ ಒಂದು ಎಕರೆಯೇ (ಸ್ಟಾಂಡರ್ಡ್) ಪ್ರಮಾಣಿತ ಎಕರೆ.

ಎರಡನೇ ದರ್ಜೆ

ಮೊದಲನೇ ದರ್ಜೆಗೆ ಸೇರದೇ ಇರುವ ಇತರ ತರಿ ಅಥವಾ ಬಾಗಾಯತ ಜಮೀನಾಗಿದ್ದು ನಾಲಾ ನೀರಾವರಿಯು ಖಾತ್ರಿಯಾದ ಸೌಲಭ್ಯದಿಂದ ಕೂಡಿರುವ ಮತ್ತು ಸಾಲಿಯಾನ ಒಂದೇ ಬೆಳೆ ಬತ್ತವನ್ನು ಬೆಳೆಯಲು ಸಾಧ್ಯವಿರುವ ಜಮೀನು ಎರಡನೇ ದರ್ಜೆಯ ಜಮೀನು. ಮೊದಲನೇ ದರ್ಜೆಯ ಒಂದು ಎಕರೆಗೆ ಎರಡನೇ ದರ್ಜೆಯ ಒಂದು ಮತ್ತು ಮೂರರ ಒಂದಂಶ ಎಕರೆ ಜಮೀನಾಗುತ್ತದೆ.

ಮೂರನೆ ದರ್ಜೆ

ಮೊದಲನೆ ಮತ್ತು ಎರಡನೆ ದರ್ಜೆಗೆ ಸೇರದೆ ಇರುವ, ಮತ್ತು ಕೆರೆಗಳಿಂದ ನೀರು ಹಾಯಿಸುವ ಸೌಲಭ್ಯದಿಂದ ಕೂಡಿರುವ ತರಿ ಅಥವಾ ಬಾಗಾಯತ ಜಮೀನು ಮೂರನೇ ದರ್ಜೆಯ ಜಮೀನಾಗುತ್ತದೆ. ಒಂದು ಪ್ರಮಾಣಿತ ಮೊದಲ ದರ್ಜೆಯ ಎಕರೆಗೆ ಈ ಜಮೀನು ಎಕರೆ ಮತ್ತು ಮೂರನೇ ಎರಡಂಶ ಜಮೀನಾಗುತ್ತದೆ.

ನಾಲ್ಕನೆ ದರ್ಜೆ

ಮೇಲಿನ ಮೂರು ದರ್ಜೆಗಳಲ್ಲಿ ಸೇರದ ಇರುವಂತಹ ತರಿ ಅಥವಾ ಬಾಗಾಯತ ಜಮೀನಾಗಿದ್ದು (೧) ಮಳೆ ನೀರಿನಿಂದಾಗಲಿ (೨) ಕೆರೆಗಳು-ನಾಲೆಗಳು, ಅಥವಾ ಇತರ ಜಲಮೂಲಗಳಿಂದ ಒಸರುವ ನೀರಿನಿಂದಾಗಲಿ (೩) ನದಿ ಅಥವಾ ನಾಲೆಯಿಂದ ವಿದ್ಯುಚ್ಛಕ್ತಿ ಅಥವಾ ಯಾಂತ್ರಿಕ ಶಕ್ತಿಯಿಂದ ಎತ್ತುವ ನೀರಿನಿಂದಾಗಲಿ ಬೆಳೆಯಾಗುವಂತಹ ಜಮೀನು ನಾಲ್ಕನೇ ದರ್ಜೆಯಲ್ಲಿ ಸೇರುತ್ತದೆ. ಇದು ಒಂದು ಪ್ರಮಾಣಿತ ಪ್ರಥಮ ದರ್ಜೆ ಎಕರೆಗೆ ಎರಡು ಎಕರೆಗಳಾಗುತ್ತದೆ.

ಐದನೇ ದರ್ಜೆ

ಮೇಲಿನ ದರ್ಜೆಗಳಿಗೆ ಸೇರದೇ ಇರುವ ಮತ್ತು ಸಾಲಿಯಾನ ಸರಾಸರಿ ಮಳೆ ೩೫ ಅಂಗುಲಗಳಿಗಿಂತ ಹೆಚ್ಚಾಗಿ ಇರುವಂತ ಪ್ರದೇಶಗಳ ಕುಷ್ಕಿ ಅಥವಾ ಬಾಗಾಯತ ಜಮೀನು ಅಥವಾ ಸ್ವಲ್ಪ ನೀರಾವರಿ ಇರುವ ಕುಷ್ಕಿ ಅಥವಾ ಬಾಗಾಯತ ಅಂದರೆ ಕುಷ್ಕಿ ತರಿ ಅಥವಾ ಕುಷ್ಕಿ ಬಾಗಾಯತು. ಈ ಜಮೀನುಗಳು ಐದನೇ ದರ್ಜೆಗೆ ಸೇರುತ್ತವೆ. ಒಂದು ಪ್ರಮಾಣಿತ ಎಕರೆಗೆ ಐದನೇ ದರ್ಜೆಯ ನಾಲ್ಕು ಎಕರೆಗಳು ಸಮನಾಗುತ್ತವೆ.

ಆರನೇ ದರ್ಜೆ

ಮೇಲಿನ ಯಾವ ದರ್ಜೆಗೂ ಸೇರದೇ ಇರುವ ಮತ್ತು ಸಾಲಿಯಾನ ಸರಾಸರಿ ಮಳೆ ೨೫ ಅಂಗುಲಗಳಿಗೆ ಹೆಚ್ಚಾಗಿಯೂ ೩೫ ಅಂಗುಲಕ್ಕೆ ಕಡಿಮೆಯಾಗಿಯೂ ಇರುವ ಕುಷ್ಕಿ ಮತ್ತು ಬಾಗಾಯತ ದರ್ಜೆ ಜಮೀನು ಒಂದು ಪ್ರಮಾಣಿತ ಪ್ರಥಮ ಎಕರೆಗೆ ಆರನೇ ದರ್ಜೆಯ ಆರು ಎಕರೆಗೆ ಸಮ.

ಏಳನೇ ದರ್ಜೆ

ಮೇಲಿನ ಯಾವ ದರ್ಜೆಗೂ ಸೇರದೇ ಇರುವ ಮತ್ತು ೨೫ ಅಂಗುಲ ಸಾಲಿಯಾನ ಸರಾಸರಿಗಿಂತ ಕಡಿಮೆ ಮಳೆ ಇರುವ ಪ್ರದೇಶದ ಕುಷ್ಕಿ ಅಥವಾ ಬಾಗಾಯತ ಜಮೀನು. ಇದೂ ಅಲ್ಲದೆ ೭೫ ಅಂಗುಲಕ್ಕಿಂತಲೂ ಜಾಸ್ತಿ ಮಳೆ ಇರುವ ಪ್ರದೇಶದಲ್ಲಿ ಸಾಗುವಳಿಗೆ ಸಾಧ್ಯವಿಲ್ಲದಂತಹ ಕುಷ್ಕಿ ಜಮೀನು. ಇದೂ ಸಹ ಏಳನೇ ದರ್ಜೆಯಲ್ಲಿ ಸೇರತಕ್ಕದ್ದು. ಒಂದು ಪ್ರಮಾಣಿತ ಪ್ರಥಮ ದರ್ಜೆ ಎಕರೆಗೆ ಏಳನೇ ದರ್ಜೆಯ ಎಂಟು ಎಕರೆ ಸಮವಾಗುತ್ತದೆ.

ಸಾಲಿಯಾನ ಸರಾಸರಿ ಮಳೆ ಲೆಕ್ಕವನ್ನು ಹಿಡಿಯುವಾಗ ೧೯೬೫ನೇ ಇಸವಿ ಜುಲೈ ಒಂದನೇ ತಾರೀಕಿಗೆ ಪೂರ್ವ (ನಿಶ್ಚಿತ ದಿನಕ್ಕೆ ಪೂರ್ವ) ಆಯಾ ಪ್ರದೇಶಕ್ಕೆ ೨೫ ವರ್ಷಗಳ ಸರಾಸರಿ ಮಳೆ ಲೆಕ್ಕವನ್ನು ಹಿಡಿಯತಕ್ಕದ್ದು.

ಮೊದಲನೇ ದರ್ಜೆಯ ಒಂದು ಪ್ರಮಾಣಿತ ಎಕರೆಗೆ—

ಎರಡನೇ ದರ್ಜೆಯ ೧ ಮತ್ತು ೩ನೇ ಒಂದಂಶ ಎಕರೆ ಸಮವಾಗುತ್ತದೆ.

ಮೂರನೇ ದರ್ಜೆಯ ೧ ಮತ್ತು ೩ನೇ ಎರಡಂಶ ಎಕರೆ ಸಮವಾಗುತ್ತದೆ.

ನಾಲ್ಕನೇ ದರ್ಜೆಯ ಎರಡು ಎಕರೆ ಸಮವಾಗುತ್ತದೆ.

ಐದನೇ ದರ್ಜೆಯ ನಾಲ್ಕು ಎಕರೆ ಸಮವಾಗುತ್ತದೆ.

ಆರನೇ ದರ್ಜೆಯ ಆರು ಎಕರೆ ಸಮವಾಗುತ್ತದೆ.

ಏಳನೇ ದರ್ಜೆಯ ಎಂಟು ಎಕರೆ ಸಮವಾಗುತ್ತದೆ.

ಒಂದು ಉದಾಹರಣೆ

ಒಳನಾಡಿನಲ್ಲಿ ಸರಾಸರಿ ೭೫ ಅಂಗುಲ ಮಳೆಗೆ ಜಾಸ್ತಿ ಇರುವ ಪ್ರದೇಶದಲ್ಲಿ ಒಬ್ಬನಿಗೆ ಕೆರೆ ಆಶ್ರಯದ ೧೦ ಎಕರೆ ಬಾಗಾಯತ ಮತ್ತು ಮಳೆ ಆಶ್ರಯದ ೨೦ ಎಕರೆ ತರಿ ಮತ್ತು ೧೨೦ ಎಕರೆ ಕುಷ್ಕಿ ಜಮೀನಿದೆ. ಇವನಿಗೆ ಎಷ್ಟು ಪ್ರಮಾಣಿತ ಎಕರೆ ಲೆಕ್ಕವಾಗುತ್ತದೆ?

೧. ೧೨೦ ಎಕರೆ ಕುಷ್ಕಿ ಇದು ೭ನೇ ದರ್ಜೆಯಲ್ಲಿದೆ. ೧೨೦ನ್ನು ೮ರಿಂದ ಭಾಗಿಸಬೇಕು. ಅಂದರೆ ೧೫ ಪ್ರಮಾಣಿತ ಎಕರೆಗಳಾಗುವುವು.

೨. ೨೦ ಎಕರೆ ತರಿ ಮಳೆ ಆಶ್ರಯವಾದುದರಿಂದ ನಾಲ್ಕನೇ ದರ್ಜೆಯಲ್ಲಿ ಬರುತ್ತದೆಯಾದ್ದರಿಂದ ೨೦ರ ೪ ಭಾಗ ಅಂದರೆ ೫ ಪ್ರಮಾಣಿತ ಎಕರೆ.

೩. ೧೦ ಎಕರೆ ಬಾಗಾಯತ ಕೆರೆ ಆಶ್ರಯ ಇರುವುದರಿಂದ ಮೂರನೇ ದರ್ಜೆಯಲ್ಲಿ ಬರುತ್ತದೆ. ೧೦ರ ೧೫ ಭಾಗ ಎಂದರೆ ೭ ಪ್ರಮಾಣಿತ ಎಕರೆ.

ಹೀಗೆ ೧೫—೫—೭ ಒಟ್ಟು ೨೭ ಪ್ರಮಾಣಿತ ಎಕರೆಗಳಾಗುತ್ತವೆ. ಇದೇ ರೀತಿ ಆಯಾ ಜಮೀನುಗಳಿಗೆ ಲೆಕ್ಕ ಕಂಡುಹಿಡಿಯಬೇಕು.

ಗೀತಾ - ದ್ವಿತೀಯ ಅಧ್ಯಾಯ

(ಏಳನೇ ಪುಟದಿಂದ)

ಗೆಯಲ್ಲಿ ಏನು ಮಾಡಿದೆನೆಂದು, ತಿಳಿಯದು. ಇದರಿಂದಾಗಿ ಈ ಮನ ಬುದ್ಧಿಯ ಐಕ್ಯತೆ, ಜತೆಯಾಗಿ ಅವು ಕೆಲಸ ಮಾಡುವ ಒಂದು ಯೋಗವನ್ನು ಎಂದರೆ ಮನಸ್ಸು ಬುದ್ಧಿಯೊಡನೆ ಆದಷ್ಟು ಕೂಡಿಕೊಳ್ಳುವ ಒಂದು ಸಾಧನ ಮಾರ್ಗವನ್ನು ಅನುಕರಿಸುತ್ತಾ ದೈನಂದಿನ ವ್ಯವಹಾರಗಳಲ್ಲಿ ವರ್ತಿಸಬೇಕು. ಇದರಿಂದಾಗಿ ಮನಸ್ಸು ವಿಕ್ಷೇಪಗೊಳ್ಳದೆ ಶಾಂತ ಸ್ಥಿತಿ ಪಡೆಯಲು ಸಾಧ್ಯವಾಗುವುದು. ಇಲ್ಲವಾದರೆ ಮನ ಬುದ್ಧಿಯ ನಡುವೆ ವಿಕ್ಷೇಪವು ತಲೆದೋರಿ ನಮ್ಮ ವಿವೇಕ ಭ್ರಷ್ಟತೆ ಉಂಟಾಗುವುದು. ಈ ಯೋಗವು ಅತ್ಯಂತ ಪರಿಣಾಮಕಾರಿಯಾಗುವುದು. ನಾವು ನಮ್ಮ ಆಶಾಪೂರಿತ ಬಯಕೆಗಳಿಂದ ಕೆಲಸ ಮಾಡುವುದನ್ನು ನಿಲ್ಲಿಸಿದಾಗ, ನಮ್ಮ ಆಶಾಪೂರಿತ ಬಯಕೆಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸಿದರೆ ಅದರಿಂದಾಗಿ ನಮ್ಮ ವಿವೇಕವು ನಷ್ಟವಾಗುವುದು. ಆಗ ಮನಸ್ಸಿಗೆ ಕಡಿವಾಣ ಇಲ್ಲ.

ಉದಾ:— ರಣರಂಗದಲ್ಲಿ ಒಬ್ಬ ಸೈನ್ಯಾಧಿಕಾರಿಯು ವೈರಿಗಳನ್ನು ಅವನ ಸ್ವಂತ ಇಚ್ಛೆಯನ್ನು ಪೂರೈಸಲು ಕೊಲ್ಲುವುದಿಲ್ಲ. ದೇಶದ ಜನತೆಯ ರಕ್ಷಣೆಗಾಗಿ ಈ ಕೊಲೆ ಮಾಡುವನು. ಆದರೆ ನಾಗರಿಕರ ನಡುವೆ ಒಬ್ಬ ದರೋಡೆಕೋರನು ತನ್ನ ಸುಖಕ್ಕಾಗಿ ಇತರರನ್ನು ನಾಶ ಮಾಡತೊಡಗಿದರೆ ಅವನು ಕೊಲೆಗಡುಕನು. ಅವನಿಂದ ಸಮಾಜಕ್ಕೆ ಹಾನಿ. ಸೈನ್ಯಾಧಿಕಾರಿಯ ಮನದಲ್ಲಿ ಕೊಲೆಗಡುಕತನದ ಸಂಸ್ಕಾರ ಲೇಪವಾಗಿರುವುದಿಲ್ಲ. ಆದರೆ ದರೋಡೆಗಾರನ ಹೃದಯದಲ್ಲಿ ಈ ಕುಸಂಸ್ಕಾರದಲೇ ಪವಿರುವುದು.

ಈ ರೀತಿ ನೀನು ಬುದ್ಧಿಯೋಗದಲ್ಲಿ ನಿರತನಾದರೆ, ಅದರಿಂದಾಗಿ ನಿನ್ನ ಕರ್ಮಬಂಧನವು ತೊಲಗಿ ಹೋಗುವುದು.

ಹೇಗೆಂದರೆ ಬುದ್ಧಿ ಯೋಗದಿಂದಾಗಿ ನಿನ್ನ ಮನದಲ್ಲಿ ಕರ್ಮದಿಂದ ವಾಸನಾ ಸಂಚಿತಗೊಳ್ಳುವುದಿಲ್ಲ. ಆಗ ಕರ್ಮ ಬಂಧನವು ತಾನಾಗಿಯೇ ಕಳಚಿಬೀಳುವುದು. ಒಂದು ಕೆಲಸವನ್ನು ಫಲಾಪೇಕ್ಷೆಯಿಂದ ಮಾಡಿದರೆ, ಆ ಕೆಲಸದಿಂದ, ಮನಬುದ್ಧಿಗಳ ಮೇಲೆ ಲೇಪವಾಗುವುದು. ಹಾಗೆ ಮಾಡದೆ ಮನ ಬುದ್ಧಿಯನ್ನು ಒಮ್ಮುಖಗೊಳಿಸಿ, ಕರ್ಮ ಮಾಡಿದರೆ ಆದರಿಂದ ಮನದ ವಿಕ್ಷೇಪವು ಉಂಟಾಗದು. ಹೀಗೆ ಮನ ಬುದ್ಧಿಯನ್ನು ಐಕ್ಯ ಮಾಡಲು ಯೋಗ ಎಂಬ ಶಬ್ದವನ್ನು ಬಳಸಿದೆ.

ಈ ರೀತಿ ನೀನು ದಿನದ ಸ್ವಲ್ಪ ಸಮಯವಾದರೂ, ಅತ್ಯಂತ ಅಪೂರ್ವ ಶಾಂತ ಸ್ಥಿತಿ ಮನಸ್ಸಿನಲ್ಲಿ ಉಂಟಾಗುವುದು.

ನೇಹಾಭಿಕ್ರಮ ನಾಶೋಸ್ತಿ |
ಪ್ರತ್ಯವಾಯೋ ನ ವಿದ್ಯತೇ |
ಸ್ವಲ್ಪ ಮಪ್ಯಸ್ಯ ಧರ್ಮಸ್ಯ |
ತ್ರಾಯತೇ ಮಹತೋ ಭಯಾತ್ ||೪೦||

ಇದರಲ್ಲಿ ಪ್ರಯತ್ನ ಮಾಡಿದುದು ಕೂಡಾ ನಾಶ ಹೊಂದುವುದಿಲ್ಲ. ಇದರಿಂದ ಎಂದಿಗೂ ನಾಶವಿಲ್ಲ. ಇದನ್ನು ಸ್ವಲ್ಪ ಪ್ರಯತ್ನಿಸಿದರೆ, ಈ ಯೋಗವು ಒಬ್ಬರನ್ನ ಮೃತ್ಯುವಿನ ಭಯದಿಂದ ರಕ್ಷಿಸುವುದು.

ಇದರಲ್ಲಿ, ಹಳೆಯ ಕರ್ಮಕಾಂಡಗಳಲ್ಲಿ ಹೇಳಿದ ತೊಡಕುಗಳಿಲ್ಲ. ಇದರಿಂದ ಕರ್ಮಕಾಂಡಗಳನ್ನು ಮಾಡಿದುದರಿಂದ ಏಕಾಗ್ರತೆ ದೊರಕುವುದು, ಅನಿತಷ್ಟು ಕಷ್ಟಪಡದೆ ಆ ಗುಣ ವಿಶೇಷವು ಇದರಿಂದ ನಿನಗೆ ದೊರಕುವುದು.

ವೇದ ಕಾಲದಲ್ಲಿ 'ಕರ್ಮ' ಎಂದರೆ ಕೇವಲ ಯಜ್ಞಯಾಗಾದಿಗಳನ್ನು ಮಾತ್ರ ಕರೆಯಲು ಉಪಯೋಗಿಸುವ ಶಬ್ದವಾಗಿತ್ತು. ವ್ಯಾಸರು ಆ ಶಬ್ದವನ್ನು ಹೆಚ್ಚು ವಿಶಾಲ ಅರ್ಥದಲ್ಲಿ ಬಳಸಲು, ಮಾನವನ ಪ್ರತಿಯೊಂದು ಕರ್ಮವನ್ನು ಯಜ್ಞ ಯಾಗಾದಿಗಳು ಎಂದು ಅರ್ಥಮಾಡಿ ಶ್ರೀಕೃಷ್ಣನು ಅರ್ಜುನನಿಗೆ ಹೇಳುವಂತೆ ಬರೆದಿರುವರು, ಅದಕ್ಕಾಗಿ ಆ ಯಜ್ಞಯಾಗಾದಿಗಳಲ್ಲಿ ಇದ್ದ ಕಷ್ಟವು ಈ ಬುದ್ಧಿಯೋಗದಲ್ಲಿ ಇಲ್ಲ. ಮತ್ತು ಬುದ್ಧಿಯೋಗದಿಂದ ಒಬ್ಬನು ತನ್ನ ದೈನಂದಿನ ವ್ಯವಹಾರಗಳನ್ನು ನಡೆಸಿದರೆ ಆ ಯಜ್ಞಯಾಗಾದಿಗಳಿಂದ ದೊರಕುವ ಏಕಾಗ್ರತೆ ದೊರಕುವುದು ಎಂದು ಸೂಚಿಸಿರುವರು.

ಕರ್ಮಕಾಂಡಗಳಲ್ಲಿರುವ ಎರಡು ಕೊರತೆಗಳು:—

ಕ್ರಮಗಳನ್ನು ಸರಿಯಾಗಿ ಅನುಸರಿಸದೇ ಇದ್ದರೆ ಅದರಿಂದಾಗಿ ಫಲವು ನಷ್ಟಹೊಂದುವ ಸಂಭವವಿದೆ. ಉದಾ— ಬೆಳೆ ಬೆಳಸುವುದು. ಧಾನ್ಯ ದೊರಕಲು ಕ್ರಮವಾಗಿ ರೈತ ಬೆಳೆಸಬೇಕು. ಇಲ್ಲವಾದರೆ ಕಣಜದಲ್ಲಿ ಧಾನ್ಯ ತುಂಬಲಾರದು.

ಇನ್ನೊಂದು ಅತ್ಯಂತ ಅಪಾಯ ಸಂಭವಿಸುವ ಸಂದರ್ಭವೂ ಇದೆ. ಉದಾಹರಣೆ— ಎಣ್ಣೆ ಬಾಣಲೆಯನ್ನು ಒಲೆಯ ಮೇಲೆ ಇಟ್ಟು ಹೊರಹೋದರೆ ಸಮಯಕ್ಕೆ ಸನ್ನಿವೇಶಗಳಿಗೆ ತಕ್ಕಂತೆ ಕೆಲಸಮಾಡದಿದ್ದರೆ, ಇಡೀ ಮನೆಗೆ ಬೆಂಕಿ ಹಿಡಿದೀತು. ಈ ಬುದ್ಧಿಯೋಗದಲ್ಲಿ ಇಂತಹ ಅಪಾಯ ಸೂಚಕ ಸನ್ನಿವೇಶಗಳು ಒದಗಲಾರವು.

ವ್ಯವಸಾಯಾತ್ಮಿಕಾ ಬುದ್ಧಿ |
ರೇಕೇಹ ಕುರುನಂದನ |
ಬಹುಶಾಖಾಹ್ಯನಂತಾಶ್ಚ |
ಬುದ್ಧಯೋಽವ್ಯವಸಾಯಿನಾಮ್ ||೪೧||

ಕುರುಕುಲನಂದನನೇ, ಏಕಾಗ್ರತೆ ಹೊಂದಿದ ಬುದ್ಧಿ ದೃಢತೆ ಇರಬೇಕು. ದೃಢ ನಿಶ್ಚಯವಿಲ್ಲದಿರುವ ಮನಸ್ಸು ನಾನಾಭಿಲಾಷೆಗಳಿಂದ ಕೂಡಿರುವುದು.

—ಸಶೇಷ.

ವೀರ ಹುಕ್ಕ ಬುಕ್ಕರು ಎದ್ದು ಬರಲಿ

(ಆರನೇ ಪುಟದಿಂದ)

ಶಬ್ದವಾದರೂ ದ್ವೀಪಾಂತರದಲ್ಲಿ ಇಂದು ಇಸ್ಲಾಂ ಧ್ವಜ ಹಾರಿಸಿರುತ್ತದೆ. [ಬಲಿ ದ್ವೀಪವನ್ನು ಬಿಟ್ಟುಳಿದ ಹೆಚ್ಚಿನ ಪ್ರದೇಶದಲ್ಲಿ] ಸುಕರ್ಣ ಮುಸ್ಲಿಮರಿದ್ದರೂ ಕಮ್ಯೂನಿಸಂ ಪ್ರಿಯರೆಂಬುದು ಜಗತ್ತಿಗೆ ತಿಳಿದಿರುವ ವಿಷಯ. ಅವರೆದುರಿನಲ್ಲಿ ‹ನಾವು ಹಿಂದೂಗಳೆಂದು ಹೇಗೆ ಹೇಳಿಕೊಳ್ಳುವದು! ದಿಲ್ಲಿಯಲ್ಲಿರುವ ಶ್ರೀ ರಾಮಕೃಷ್ಣಾಶ್ರಮದವರು ಶ್ರೀ ವಿವೇಕಾನಂದರ ಕೃತಿಸಮುಚ್ಚಯವೊಂದನ್ನಿತ್ತರು. ಸುಕರ್ಣ ಅದನ್ನು ಅತ್ತಿತ್ತ ತಿರುಗಿಸಿದರು. ಬೇಕಾದ ಭಾಗ ಅವರಿಗೆ ಕಂಡು ಬರಲಿಲ್ಲ. ಅನಂತರದ ಹೆಜ್ಜೆ— "ಹಿಂದೂತ್ವದ ರಕ್ಷಣೆಯಲ್ಲಿ" ಎಲ್ಲಿದೆಯೆಂದು ಕೇಳಿಯೇ ಬಿಟ್ಟರು. ಶ್ರೀ ರಾಮಕೃಷ್ಣಾಶ್ರಮದವರು ಉದ್ದೇಶಪೂರ್ವಕವಾಗಿಯೇ ಆ ಕೃತಿಯನ್ನು ಬಿಟ್ಟು ಬಿಟ್ಟಿದ್ದರು. ಶ್ರೀ ಸುಕರ್ಣರಿಗೆ ಉತ್ತರ ಹೇಗೆ ಕೊಟ್ಟಾರು? ಈ ರೀತಿ ಇದೆ— ನಮ್ಮ "ಹಿಂದೂತ್ವದ ರಕ್ಷಣೆ."

ಇನ್ನೂ ಕೆಲವರು ಅಷ್ಟರಲ್ಲೇ ತೃಪ್ತಿಪಟ್ಟಿರುವದಿಲ್ಲ. ಅವರು ಜಯಚಂದನನ್ನು ಮೀರಲಿಕ್ಕೆ ಪ್ರಯತ್ನಿಸುತ್ತಿದ್ದಾರೆ. ಅದುವೇ ಸ್ವತಂತ್ರ ಪಾರ್ಟಿ ಹಾಗೂ ದ್ರಾವಿಡ ಮುನ್ನೇತ್ರ ಕಳಗವಿನ ಮೈತ್ರಿ. ಶ್ರೀ ರಾಜಾಜಿಯವರು ಈ ಪಥದಲ್ಲಿ ಬಹಳಷ್ಟು ಪ್ರಗತಿ ಹೊಂದಿದ್ದಾರೆ. ಕಾಂಗ್ರೆಸ್ಸಿನ ಕಳೇಬರದ ಸಂಹಾರಕ್ಕಾಗಿ ಈ ಆಚಾರ್ಯರು ಅದ್ಯಾವ ಹದ್ದಿನೊಡನೆಯೂ ಸ್ನೇಹ ಬೆಳೆಸಿಕೊಳ್ಳಲೂ ಹೇಸುವದಿಲ್ಲ. ಭಾರತದ ಸರ್ವನಾಶಕ್ಕಾಗಿಯೇ ಇರುವದು— ಕಮ್ಯೂನಿಸ್ಟ್ ಪಕ್ಷ, ಮುಸ್ಲಿಂ ಲೀಗು, ದ್ರಾವಿಡ ಮುನ್ನೇತ್ರ ಕಳಗಂ. ಮೊದಲನೆಯದು ದೇಶವನ್ನು ಜಾಗತಿಕ ಕಮ್ಯೂನಿಸವಿನ ಸಂಕೋಲೆಯಲ್ಲಿ ಬಂಧಿಸಲಿಕ್ಕಾಗಿ ಇರುವುದು. ಎರಡನೆಯದ್ದು ಹಾಗೇನೇ, ಅದಕ್ಕಿಂತಲೂ ಒಂದಡಿ ಮುಂದರಿದು ಇಸ್ಲಾಮಿನ ಪತಾಕೆಯನ್ನು ಹಾರಾಡಿಸಲಿಕ್ಕಾಗಿ ಇದೆ. ಮೂರನೆಯದ್ದು ಒಳಗಿಂದೊಳಗೆನೇ ಇರುವ ಹುಣ್ಣು. ಇವೆಲ್ಲವನ್ನೂ ಕಾಂಗ್ರೆಸ್ಸಿನ ಕೊಳೆಯುತ್ತಿರುವ ಕಳೇಬರದತ್ತ ಶ್ರೀ ರಾಜಾಜೀ ಛೂ ಬಿಡುತ್ತಿದ್ದಾರೆ.

ಹೀಗಿರುವಾಗ ನಮ್ಮ ಅರಣ್ಯರೋಧನ ಅಥವಾ ಕಳವಳದ ಕಥೆಯನ್ನು ಕೇಳುವವರ್‍ಯಾರು? ಪಾಕಿಸ್ಥಾನಕ್ಕೆ ಮಣಿಯಬೇಕೆಂದು ಅಮೇರಿಕಾ ಹಾಗೂ ಬ್ರಿಟನ್ ನಮ್ಮ ಮೇಲೆ ಒತ್ತಡ ಹಾಕುತ್ತಿದೆ. ಮೈತ್ರಿ ಹೆಸರಿನಲ್ಲಿ ಚೈನಾಕ್ಕೆ ಬಲಿಯಾಗಲು ರಷ್ಯಾ ಬಹಳ ನಾಜೂಕಾಗಿ ನಮ್ಮನ್ನು ತಳ್ಳುತ್ತಿದೆ. ಇಂತಹ ದುಸ್ಥಿತಿಯಲ್ಲಿ ಅರಣ್ಯರೋಧನ ಅಥವಾ ಕಳವಳದ ಕಥೆ ಬೇಕಾಗಿರುವುದಲ್ಲ– ವಿದ್ಯಾರಣ್ಯರ ವೀರಗಾಥೆ ಬೇಕಾಗಿರುವುದು.

ಭಾರತೀಯ ಜನತೆಯು ಇಂದಿನ ಘಟನೆಯಲ್ಲಿ ರಾಷ್ಟ್ರೀಯತೆಯ ದಿವ್ಯ ಜ್ಯೋತಿಯನ್ನು ಬೆಳಗಿಸುವ ಕಾರ್ಯ ಸರಕಾರದ್ದಾದರೂ ಅದು ಹಿಂದಕ್ಕೆ ಸರಿದಿರುವುದರಿಂದ ಜನತೆಯೇ ಮುಂದಕ್ಕೆ ಬರಬೇಕಾಗಿರುತ್ತದೆ. ಜನತಾ ವಿದ್ಯಾರಣ್ಯ [illegible] ಹುಕ್ಕಬುಕ್ಕರನ್ನು ಪ್ರೋತ್ಸಾಹಿಸಬೇಕಾಗುತ್ತದೆ. ಆಗ ಅದ್ಯಾರಿಂದಲೂ ಗೆಲ್ಲಲಾಗದಂತಹ ಹಿಂದೂ ರಾಷ್ಟ್ರ ಜಗತ್ತಿನಲ್ಲಿ ತಲೆಯೆತ್ತಿ ವೈಭವದಿಂದ ಮೆರೆದಾಡುವುದರಲ್ಲಿ ಸಂದೇಹವಿಲ್ಲ.

ಕೃಷಿ ಸಮಸ್ಯೆ

"ಬೆಳೆಗಳ ಮೇಲೆ ನೈಟ್ರೋಜಿನ್ ಪವಾಡ"

ಲೇಖಕ— ಡಾ. ಎಂ. ಎಸ್. ರಾಂಧವ.

ನಮ್ಮ ಆಹಾರ ಸಮಸ್ಯೆಗೆ ಕಾರಣ ಮಿತಿಯಿಲ್ಲದೆ ಬೆಳೆಯುತ್ತಿರುವ ಜನಸಂಖ್ಯೆ. ಸ್ವಾತಂತ್ರ್ಯ ಬಂದಮೇಲೆ ನಮ್ಮ ಜನಸಂಖ್ಯೆ ೧೧ ಕೋಟಿಗಿಂತ ಹೆಚ್ಚಿದೆ. ಆಧುನಿಕ ಔಷಧಿಗಳು ಹಾಗೂ ಆಂಟಿಬಯೋಟಿಕ್ಸ್ ಮರಣ ಸಂಖ್ಯೆಯನ್ನು ಕಡಿಮೆಮಾಡಿದೆ

ಒಂದು ಕಿಲೋ ನೈಟ್ರೋಜನ್ ಹಾಕಿದರೆ—ಜಮೀನಿನಿಂದ ೧೫ ಕಿಲೋಗಳಷ್ಟು ಹೆಚ್ಚು ಧಾನ್ಯವನ್ನು ಬೆಳೆಸಬಹುದು ಅವಶ್ಯಕತೆಯಿದ್ದಷ್ಟು ಪಾಸ್‌ಫರಸ್ ಮತ್ತು ಪೊಟೇಶಿಯಂ ಉಪಯೋಗಿಸಿದರೆ ಇನ್ನೂ ಹೆಚ್ಚಾಗಿ ಬೆಳೆಯಬಹುದು ಆಹಾರ ಧಾನ್ಯವನ್ನು ಬೆಳೆಯುವುದಕ್ಕೋಸ್ಕರವಾಗಿ ೧೦ ಲಕ್ಷ ಟನ್ನು ನೈಟ್ರೋಜನ್ನನ್ನು ಉಪಯೋಗಿಸಿದರೆ ಭಾರತದಲ್ಲಿರುವ ಆಹಾರ ಸಮಸ್ಯೆಯನ್ನೇ ನಿವಾರಿಸಬಹುದು. ಸಾವಿರಾರು ವರ್ಷಗಳಿಂದ ಒಂದೇ ಸಮನೆ ವ್ಯವಸಾಯ ಮಾಡಿ, ಮಾಡಿ ಭಾರತದ ಭೂಮಿಯು ನೈಟ್ರೋಜನ್ ಇಲ್ಲದೆ ಬರಗೆಟ್ಟಿದೆ ಆದರೂ ಎನ್. ಪಿ. ಕೆ. (ನೈಟ್ರೋಜನ್, ಪಾಸ್‌ಫರಸ್, ಪೊಟೇಶಿಯಂ) ಉಪಯೋಗಿಸಿದರೆ ೩-೪ ಪಟ್ಟು ಹೆಚ್ಚು ಬೆಳೆಯಬಹುದು. ಇದೇ ಪ್ಯಾಕೇಜ್ ಕಾರ್ಯಕ್ರಮದಿಂದ ಕಲಿತ ಪಾಠ. ಒಬ್ಬ ಸಾಮಾನ್ಯ ರೈತ ಒಂದು ಎಕರೆಗೆ ಆರು ಮಣ ಗೋಧಿಯನ್ನೂ, ನುರಿತವನು ೧೪ ಮಣ ಗೋಧಿಯನ್ನೂ ಬೆಳೆಸುತ್ತಾನೆ. ಪ್ಯಾಕೇಜ್ ಪದ್ಧತಿಯನ್ನ ಅನುಸರಿಸಿ, ಅಂದರೆ ಸುಧಾರಿತ ಬೀಜ ಮತ್ತು ರಸಾಯನಿಕ ಗೊಬ್ಬರ ಉಪಯೋಗಿಸಿದರೆ ಒಂದು ಎಕರೆಗೆ ೩೦ ಮಣ ಗೋಧಿ ಆಗುತ್ತದೆ ಲೂದಿಯಾನಾ, ಪಂಜಾಬ್ ಪ್ರದೇಶದಲ್ಲಿ ಒಂದು ಎಕರೆಗೆ ೪೦ ಮಣ ಗೋಧಿ ಕೂಡ ಆಗಿದೆ. (ಬತ್ತದ ಕತೆಯೂ ಹೀಗೆಯೇ.)

ಭಾರತದ ಬೇಸಾಯದ ವಿದ್ಯಾರ್ಥಿಗಳು ನಮ್ಮಲ್ಲಿ ಎಕರೆಗೆ ಅತೀ ಕಡಿಮೆ ಬೆಳೆಯಾಗುತ್ತಿರುವುದನ್ನು ಕುರಿತು ಪ್ರಸ್ತಾಪಿಸುತ್ತಲೇ ಇದ್ದಾರೆ. ಜಪಾನ್ ರೈತರು ನಮ್ಮ ರೈತರಿಗಿಂತ ಹೆಚ್ಚಾಗಿ ಬೆಳೆಯುತ್ತಾರೆ. ಅವರು ನಮ್ಮ ರೈತರ ಗಳಿಗಿಂತ ಹೆಚ್ಚು ಕಷ್ಟಸಹಿಷ್ಣುಗಳೂ ಅಲ್ಲ, ವಿದ್ಯಾವಂತರೂ ಅಲ್ಲ. ಆದರೆ ಜಪಾನಿನ ಪ್ರತಿಯೊಂದು ಒಕ್ಕಲಿಗೂ ಸರಾಸರಿ ೧೫ ಕಿಲೋದಂತೆ ೧೫ ಲಕ್ಷ ಟನ್ನು ನೈಟ್ರೋಜನ್ ಗೊಬ್ಬರ ಉತ್ಪಾದಿಸುತ್ತಿದೆ. ನಮ್ಮ ದೇಶದಲ್ಲೂ ಕೂಡ ಪ್ರತಿಯೊಂದು ಒಕ್ಕಲಿಗೂ ೧೫ ಕಿಲೋ ಗೊಬ್ಬರ ದೊರಕಿದರೆ ನಮ್ಮ ರೈತರೂ ಕೂಡ ಇತರ ದೇಶದವರಂತೆಯೇ ಹೆಚ್ಚಾಗಿ ಬೆಳೆಯಬಲ್ಲರು. ಈ ಸಮಸ್ಯೆಗೆ ಪರಿಹಾರ ಎನ್. ಪಿ. ಕೆ. ನಮ್ಮ ಆಹಾರ ಧಾನ್ಯದ ಬೆಳೆಗೆ ಬೇಕಾಗುವಷ್ಟು ಎನ್. ಪಿ. ಕೆ.ಯನ್ನು ಎಷ್ಟು ಬೇಗ ಪಡೆದರೆ ಅಷ್ಟು ಉತ್ತಮವಾಗಿದೆ.

ಮಾತಿಗೆ ಪ್ರತಿಮಾತು

"ವಾಣಿ ಶರಣ", ಯೇತಡ್ಕ.

ಒಂದು ದಿನ ಪ್ರೀತಿಯಲಿ ನನ್ನತಿಥಿಯು ಕೇಳಿದೆನು
ಚಂದ ನಿಮಗಾವೂರೆಂದೂ—
ನಮ್ಮೂರು ಮಂಗ್ಳೂರೋ ನಿಮ್ಮೂರು ಬೆಂಗ್ಳೂರೋ
ಚಂದ ನಿಮಗಾವೂರೆಂದೂ

ನಮ್ಮೂರು ಚೆಂದವೋ, ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇಕೇ? —
ನಮ್ಮೂರ ಬಸ್ಸಿನಲಿ ನಿಮ್ಮೂರ ಮಾರ್ಗದೊಳ್ ಬಂದಿರುವ
ಅನುಭವ ಹೇಳಬೇಕೇ? —

ನಮ್ಮೂರು ಚೆಂದವೋ ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇಕೆ— ? ಎನ್ ಗೆಳೆಯ
ಸುಮ್ಮನಿರು ಎಂದನಾತ.

ಬೆಂಗ್ಳೂರ ರಸ್ತೆಯೊಳ್ ವಾಹನದಿ ಕುಳಿತಿರಲು
ಆಗುವದು ಮನಸ್ಸಿಗಾನಂದ;
ಕೆಂಪು ಮಿಶ್ರಿತ ನೀಲಿ ಬಣ್ಣದೊಳ್ ಹೊತ್ತಿರುವ ಬಲ್ಬುಗಳು
ರಸ್ತೆಯಂಚಿನೊಳ್ ಬೆಳಕ ನೀಡಿ;
ಸಂತಸದಿ ನಮ್ಮೂರ ದಂಪತಿಗಳು ಬರುತಿರಲು
ನಿಮ್ಮೂರ ಸಮುದ್ರವ ನೋಡಲಾಗಿ
ಬೆಂಗ್ಳೂರಿಗಿಂತಲೂ ಮಂಗ್ಳೂರೆ ಸುಖವೆಂದು
ನಿಶ್ಚಿಸಿತು ಮನಸ್ಸು ಕೂಗಿ—

ನಮ್ಮೂರು ಚೆಂದವೋ, ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇಕೇ? ಎನ್ ಗೆಳೆಯ
ಸುಮ್ಮನಿರು ಎಂದನಾತ

ನಿಮ್ಮೂರ ರಸ್ತೆಯಲಿ ನಮ್ಮೂರ ಬಸ್ಸುಗಳು
ಓಡುವವು ಗಾಡಿಯಂತೆ,
ಕೊಟ್ಟೆ ಬಟ್ಟೆಗಳೆಲ್ಲ ಕೆಸರಿನಲಿ ತುಂಬಿತ್ತು—
ನಿಮ್ಮೂರ ಸೇರಿದಾಗ;
ಬಸ್ ಸ್ಟೇಂಡಿಗೆ ಬಂದು; ನೀವು ನನ್ನನು ಕಂಡು
ವಿವರಗಳ ಕೇಳಿದಾಗ
ಪ್ರಯಾಣದಾಯಾಸ ಮೀರಿ, ಹೋಟೇಲೊಂದರ ಸೇರಿ
ಒಂದು ಕಾಫಿ ಕುಡಿದಾಗ

ನಮ್ಮೂರು ಚೆಂದವೋ ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇಕೇ? ಎನ್ ಗೆಳೆಯ
ಸುಮ್ಮನಿರು ಎಂದನಾತ.

(ಕೆ. ಯಸ್. ನರಸಿಂಹ ಸ್ವಾಮಿ ಅವರ ಕ್ಷಮೆ ಕೋರಿ)

ಆತ್ಮಕಥನ

ಇಂದಿನ ಆಶೆ ಚಂದ್ರಲೋಕ ಯಾತ್ರೆ

ಬರೆದವರು
ಶ್ರೀ ಜೇಮ್ಸ್ ಎ. ಮೆಕ್‌ಡಿವಿಟ್.

ನನ್ನ ಇಂದಿನ ಅಪೇಕ್ಷೆ ಚಂದ್ರಗ್ರಹ ಯಾತ್ರೆ.

ಅಟ್ಲಾಂಟಿಕ್ ಸಾಗರದಲ್ಲಿ ನಾವು ಇಳಿದಾಗ, ನಮ್ಮ ಅಂದಿನ ಸಾಧನೆಯನ್ನು ಮೀರಿಸಬಲ್ಲ ಸಾಧನೆ ಎಂದರೆ ಚಂದ್ರಗ್ರಹ ಯಾತ್ರೆಯೇ ಎಂದು ಭಾವಿಸಿದೆ. ನನಗೆ ವಹಿಸಿಕೊಟ್ಟಿದ್ದ ಕಾರ್ಯವನ್ನು ನಾವು ಯಶಸ್ವಿಯಾಗಿ ನಿರ್ವಹಿಸಿ ಮುಗಿಸಿದ್ದ ಆ ಸಂದರ್ಭ ಮಹತ್ತರವಾದುದು.

"ಮಾತಿ ಮುಗಿಸಿದೆವು ಎಡ್" ಎಂದೇನೋ ನಾನು ಆಗ ನುಡಿದಂತೆ ನೆನಪು. ಫ್ರಾಗ್‌ಮೆನ್ನುಗಳ ಸುಂದರ ದೃಶ್ಯ ಇನ್ನೂ ನನ್ನ ಸ್ಮರಣೆಯಲ್ಲಿದೆ.

ಉಡಾವಣೆಯ ಬೆಳಿಗ್ಗೆ ರಾಕೆಟ್ಟಿನಂತೆಯೇ ನಾವೂ ನಮ್ಮ ಕಾರ್ಯಗಳನ್ನು ನಿರ್ವಹಿಸುವೆವೆಂಬ ವಿಶ್ವಾಸ ನಮಗಿತ್ತು.

ಉಡಾವಣೆಯ ಸಮಯದಲ್ಲಿ ನಮ್ಮನ್ನು ಮೇಲಕ್ಕೇರಿಸಿದ ರಾಕೆಟ್ಟಿನ ಆ ಕಾರ್ಯ ನಮಗೆ ರೋಮಾಂಚವನ್ನು ಉಂಟುಮಾಡಿತು.

ಮೊಟ್ಟ ಮೊದಲ ದೊಡ್ಡ ಕ್ರಮವೆಂದರೆ ರಾಕೆಟ್ಟಿನ ಸಾಮೀಪ್ಯವನ್ನು ಸಾಧಿಸುವ ಪ್ರಯತ್ನ. ಆ ಕಾರ್ಯಕ್ಕೆ ತಕ್ಕ ಉಪಕರಣಗಳು ನಮ್ಮಲ್ಲಿದ್ದವು. ಇಂಧನವನ್ನು ಪ್ರತ್ಯೇಕವಾಗಿ ತೆಗೆದಿಡಲಾಗಿತ್ತು. ಸಾಮೀಪ್ಯ ಸಾಧ್ಯವಾಗಲಿಲ್ಲ. ಆದರೆ ಸಾಮೀಪ್ಯ ಹಾಗೂ ಕೂಡಿಕೆ ತಂತ್ರಗಳ ವಿಷಯದಲ್ಲಿ ಹೆಚ್ಚಿನ ತಿಳುವಳಿಕೆ ಲಭಿಸಿತೆಂಬ ಭಾವನೆ ನನ್ನದು.

ಅನಂತರದ್ದು ಯಾನದ ಹೊರಗಿನ ಚಟುವಟಿಕೆಗೆ ಸಂಬಂಧಿಸಿದ ಹೆಚ್ಚಿನ ಪ್ರಯೋಗ "ಈ. ವಿ. ಎ." ಎಂಬ ಸಾಂಕೇತಿಕ ಹೆಸರಿನಲ್ಲಿ ಇದು ಈಗ ಎಲ್ಲರಿಗೂ ಪರಿಚಿತವಾಗಿದೆ.

ನಮ್ಮಿಬ್ಬರಲ್ಲಿ ಯಾರಿಗೂ ಹೆದರಿಕೆಯಾಗಲಿ ಕಳವಳವಾಗಲಿ ಉಂಟಾಗಲಿಲ್ಲ. ಈ ಚಟುವಟಿಕೆಗಳನ್ನು ಶಾಂತಚಿತ್ತದಿಂದ, ಎಚ್ಚರಿಕೆಯಿಂದ, ಯೋಜನಾನುಸಾರವಾಗಿ ನಿರ್ವಹಿಸಬೇಕಾಗಿದೆಯೆಂಬುದನ್ನು ನಾವು ಖಚಿತವಾಗಿ ಬಲ್ಲವರಾಗಿದ್ದೆವು. ಎಲ್ಲವೂ ಹದಗೆಟ್ಟು ಹೋಗುವ ಒತ್ತಡದ ಉಡುಪುಗಳಾಗಲಿ, ಯಾನದೊಂದಿಗೆ ಕೂಡಿಕೊಂಡ "ಹೊಕ್ಕಳ ಬಳ್ಳಿ"ಯಾಗಲಿ ಸಂಪೂರ್ಣವಾಗಿ ಕೆಲಸ ಮಾಡದೆ ಹೋದುವ ಅಥವಾ ಎಡೆನಷ್ಟಿದ್ದ ೧೨ ನಿಮಿಷಗಳ ಅವಧಿಯ ಕುತ್ತರ್ ಸರಬರಾಜಿನ ಆಮ್ಲಜನಕ ಮುಗಿದು ಹೋಗುವ ಮುನ್ನ ವಾಪಸ್ಸು ಹೋಗಲು ಆಗದೆ ಹೋಗುವ—ದೂರದ ಸಂಭವವೂ ಇತ್ತು.

"ಈ. ವಿ. ಎ.' ಅನಂತರ ಸುದೀರ್ಘವಾದ ಯಾತ್ರೆಗೆ ಸನ್ನದ್ಧರಾದೆವು. ಈ ಯಾತ್ರೆ ನನಗಿಂತ ಭೂಮಿಯ ಮೇಲಿನ ಜನರಿಗೆ ಹೆಚ್ಚು ದೂರದ್ದಾಗಿ ಭಾಸವಾಗಿರಬಹುದು.

ಅನಂತರದ ಮೂರು ದಿನಗಳ ಕಾಲ ನಾವು ಸುಮಾರು ಹನ್ನೆರಡು ಪ್ರಯೋಗಗಳನ್ನು ನಡೆಸಿದೆವು. ಅವುಗಳಲ್ಲಿ ಕೆಲವು, ನಮ್ಮ ಸುತ್ತಲ ರೇಡಿಯೋಪನ್ನಿನ ಅಳತೆಯಂತಹ ಶುದ್ಧ ವಿಧಾನದವು; ಮತ್ತೆ ಕೆಲವು ರಕ್ತದ ಒತ್ತಡ, ಶಾಖ, ಹೃದಯ ಬಡಿತದ ದರಗಳಿಂದ ಹಿಡಿದು ದೀರ್ಘಾವಧಿಯ ತೂಕರಾಹಿತ್ಯದಿಂದ ನಮ್ಮ ಎಲುಬುಗಳ ನೆಣದ ಮೇಲಾಗುವ ಪರಿಣಾಮದ ಜಟಿಲ ಅಳತೆಗಳ ವರೆಗಿನ ವೈದ್ಯಕ್ಕೆ ಸಂಬಂಧಪಟ್ಟವು.

ಪ್ರಯೋಗವೊಂದರಲ್ಲಿ ಅಮೇರಿಕದ ಮೇಲೆ ಹಾದು ಹೋಗುವಾಗ ವಿವರವಾದ ಛಾಯಾಚಿತ್ರಗಳನ್ನು ತೆಗೆದುಕೊಳ್ಳಬೇಕಿತ್ತು. ಭೂಮಿಯ ಒಳ್ಳೆಯ ಸ್ಟೀರಿಯೋಸ್ಕೊಪಿಕ ದೃಶ್ಯಗಳನ್ನು, ಸಾಧ್ಯವಿದ್ದ ಕೆಳಗಿನ ಹವಾಮಾನದ ಚಿತ್ರಗಳನ್ನೂ ಆರಿಸಿದೆವು.

ಫ್ಲಾರಿಡಾಕ್ಕೆ ಸಮೀಪದಲ್ಲಿ ಚಿತ್ತಾಕರ್ಷಕವಾದ ಮೋಡದ ವಿನ್ಯಾಸಗಳಿದ್ದವು. ಹವಾ ವಿಜ್ಞಾನಿಗಳು ಅನೇಕ ವರ್ಷಗಳಿಂದ ಈ ವಿಷಯಗಳನ್ನು ಪ್ರಸ್ತಾಪಿಸುತ್ತಾ ಅವುಗಳ ನಕ್ಷೆಗಳನ್ನು ರೇಖಿಸುತ್ತ ಬಂದಿದ್ದರು. ಮೊಟ್ಟಮೊದಲ ಬಾರಿಗೆ ನಾವು ಅವುಗಳ ಛಾಯಾಚಿತ್ರಗಳನ್ನು ತೆಗೆದುಕೊಂಡೆವು.

ನಿದ್ರೆಯಂತಹ ಕೆಲವು ಸಮಸ್ಯೆಗಳೂ ಇದ್ದವು. ಸಾಧ್ಯವಿದ್ದಷ್ಟು ನಿರಾಂತಕವಾಗಿರಲು ಪ್ರಯತ್ನಿಸಿದೆ. ಉಡುಪು, ಗಗನಯಾನ ಹಾಗೂ ತೂಕರಾಹಿತ್ಯದ ಪರಿಣಾಮಗಳಿಗೆಲ್ಲ ಮೈಯೊಡ್ಡಿದೆ. ಕೈಗಳು ಒತ್ತುಗುಂಡಿಗಳಿಗೆ ತಾಕದಿರಲೆಂದು, ಅವುಗಳನ್ನು ಕಟ್ಟಿ ನಿದ್ರಿಸಿದೆ. ಆದರೆ ಅವು ಸಾಮಾನ್ಯವಾಗಿ ಅಬಾಧಿತವಾಗಿ ತೇಲುತ್ತಿದ್ದವು.

ಸರಿ ಸುಮಾರು ನಿಶ್ಚೇಷ್ಟಿತನಾಗಿರುವಂತೆ ಆಯಿತೇ ಹೊರತು, ಗಾಢ ನಿದ್ರೆ ಬರಲಿಲ್ಲ.

ನಮ್ಮ ನಿಯೋಗವನ್ನು ಮುಗಿಸುವ ಆಸಕ್ತಿ ನಮ್ಮಲ್ಲಿರಲಿಲ್ಲ. ಹಾರಾಟವನ್ನು ಮುಂದುವರಿಸುವ ನಿರ್ಧಾರವನ್ನು ಡೈರೆಕ್ಟರ್ ಕೈಗೊಂಡಿದ್ದರೆ ನಮ್ಮಿಬ್ಬರಿಂದಲೂ ಒಡನೆಯೇ ಸಮ್ಮತಿ ಲಭಿಸುತ್ತಿತ್ತು. ಮೂಲ ಯೋಜನೆಯಂತೆ ನಾಲ್ಕು ದಿನಗಳ ಕಾಲ ಯಾತ್ರೆ ನಡೆಸಬೇಕಾಗಿತ್ತು. ಅಂತೆ ನಾವು ಮರುಪ್ರವೇಶಕ್ಕೆ ಸನ್ನದ್ಧರಾಗತೊಡಗಿದೆವು.

ಉಡಾವಣೆಯ ಕಾಲದಲ್ಲಿ ಕಿಟಕಿಯಾಚೆಗೆ ನೋಡುವ ಕಾಲಾವಕಾಶ ನನಗೆ ದೊರೆತಿರಲಿಲ್ಲ. ಆದರೆ ಮರು ಪ್ರವೇಶದ ಕಾಲದಲ್ಲಿ ಕಣ್ಣುಗಳು ಕಿಟಕಿಗೆ ಅಂಟಿಕೊಂಡಿದ್ದವು.

ಭೂ ಸ್ಪರ್ಶ ಹಾಗೂ ನಮಗೆ ವಹಿಸಿಕೊಟ್ಟ ಕಾರ್ಯವನ್ನು ನಾವು ಯಶಸ್ವಿಯಾಗಿ ನಿರ್ವಹಿಸಿದ್ದೇವೆಂಬ ಅರಿವು ಉಂಟಾದ ಆ ಸಂದರ್ಭ ಅತ್ಯಂತ ಮಹತ್ವಪೂರ್ಣ.

(ಕಾಪಿರೈಟ್ 1964 ವರ್ಲ್ಡ್ ಬುಕ್ ಎನ್‌ಸೈಕ್ಲೋಪಿಡಿಯ ಸೈನ್ಸ್ ಸರ್ವಿಸ್).

ಆದಿಯಿಂದಲೂ ಬಂದ ನಾಟಕ ಕಲೆ

(ಐದನೇ ಪುಟದಿಂದ)

ಸುಮಾರು ೧೯ನೆಯ ಶತಮಾನದ ಕೊನೆಯ ಭಾಗದ ವರೆಗೆ ನಾಟಕಗಳಿಗೆ ಪ್ರೋತ್ಸಾಹ ಇದ್ದಂತೆ ಕಾಣುವುದಿಲ್ಲ. ಸಾವಿರದ ಎಂಟುನೂರ ಎಪ್ಪತ್ತೈದನೆ ಇಸವಿಯಲ್ಲಿ ಮದ್ರಾಸಿನಲ್ಲಿ 'ಯುರೋಪಿಯನ್ ಎಮೆಚ್ಯೂರ್ ಡ್ರಮಿಟಿಕ್ ಸೊಸೈಟಿ'ಯು ಪ್ರಾರಂಭವಾಗಿ ನಮ್ಮ ಸಂಸ್ಥಾನದಲ್ಲಿ ನಾಟಕ ಕಲೆಯ ಹೊಸ ಯುಗವೇ ಪ್ರಾರಂಭವಾದಂತಾಯಿತು. ಆ ಮೇಲೆ ನಾಟಕಕಲೆಯನ್ನು ತಮ್ಮ ವೃತ್ತಿಯಾಗಿ ಅಭ್ಯಸಿಸುವವರು, ಬಿಡುವಿದ್ದಾಗ ವಿನೋದಕ್ಕಾಗಿ ಅಭ್ಯಾಸ ಮಾಡುವವರೂ ಮುಂದೆ ಬರತೊಡಗಿದರು. ಇವರ ಅಭ್ಯಾಸ ಸಾಮಾಗ್ರಿ ಸಲಕರಣೆಗಳೆಲ್ಲಾ ಒಂದೇ ಬಗೆಯವು. ಆದರೆ ಉದ್ದೇಶ ಮಾತ್ರ ಬೇರೆ ಬೇರೆಯಾಗಿದೆ. ಕಸಬುದಾರರಿಗಿಂತಲೂ ವಿನೋದಕ್ಕಾಗಿ ಅಭಿನಯಿಸುವ ಗೆಳೆಯರ ಗುಂಪಿನವರು ಅನೇಕ ವಿಷಯಗಳಲ್ಲಿ ಯಶಸ್ವಿಯಾಗಿಸಬಲ್ಲರು, ಏಕೆಂದರೆ ಇವರಿಗೆ ಸ್ವತಂತ್ರವಾಗಿ ತಮ್ಮ ನಿಪುಣತೆಯನ್ನು ವ್ಯಕ್ತಪಡಿಸಲು ಅವಕಾಶವಿದೆ. ಹೀಗೆ ಸುಮಾರು ಒಂಭತ್ತು ದಶಕಗಳಿಂದ ಈ ಎರಡು ಬಗೆಯ ನಟವರ್ಗದವರೂ ನಾಟಕ ಕಲೆಯನ್ನು ಬದುಕಿಸಿ ಉಳಿಸಿದ್ದಾರೆ. ಆದರೆ ನಾಟಕಗಳ ಅಭಿವೃದ್ಧಿಗೆ ಇರುವ ಕೊಡಕುಗಳು ಒಂದಲ್ಲ ಎರಡಲ್ಲ; ಹಲವಾರು. ಚಲನ ಚಿತ್ರಗಳು ರೂಢಿಗೆ ಬಂದಂತೆ ನಾಟಕಗಳ ಕಡೆಗೆ ಜನರ ಆದರವು ಕಡಿಮೆಯಾಯಿತು. ಪತ್ರಿಕೆಗಳೂ ನಾಟಕಗಳಿಗಿಂತ ಚಲನ ಚಿತ್ರಗಳಿಗೇ ಹೆಚ್ಚಿನ ಪ್ರಾಧಾನ್ಯ ಕೊಡುತ್ತಿವೆ. ನಾಟಕಶಾಲೆಗಳ ಸ್ಥಾನದಲ್ಲಿ ಚಲನ ಚಿತ್ರಮಂದಿರಗಳು ತಲೆಯೆತ್ತಿವೆ. ಅಲ್ಲದೆ ನಾಟಕದ ವ್ಯವಸ್ಥಾಪಕರಿಗೆ ವಿನೋದಾವಳಿಗಳ ತೆರಿಗೆಯೆಂದರೆ ಒಂದು ದುಃಸ್ವಪ್ನದಂತೆಯೇ ಆಗಿದೆ.

ನಾಟಕಗಳ ಉದ್ದೇಶವನ್ನು ಹೇಳುವುದಾದರೆ ಕಾವ್ಯಗಳ ಉದ್ದೇಶಕ್ಕಿಂತ ಬೇರೆಯಲ್ಲ. ಯಶಸ್ಸು, ಅರ್ಥಸಂಪಾದನೆ, ವ್ಯವಹಾರಜ್ಞಾನ, ಅಮಂಗಲ ಪರಿಹಾರ, ಆನಂದ ಸದುಪದೇಶ ಇವೆಲ್ಲಾ ಕಾವ್ಯಗಳಂತೆ ನಾಟಕಗಳಲ್ಲೂ ಪ್ರತಿಬಿಂಬಿತವಾಗುತ್ತಿವೆ. ಅನುಕೂಲೆಯೂ ಪ್ರೇಮಪಾತ್ರಳೂ ಆದ ಪತ್ನಿಯು ತನ್ನ ಗಂಡನನ್ನು ನಗುಮೊಗದಿಂದ ಸನ್ಮಾರ್ಗದಲ್ಲಿ ನಡೆಯುವಂತೆ ಉಪದೇಶಿಸುತ್ತಾಳೆ. ಹಾಗೆಯೇ ನಾಟಕವೂ ಜನರಿಗೆ ಮನೋರಂಜನೆಯ ಮೂಲಕ ಧಾರ್ಮಿಕ, ನೈತಿಕ, ರಾಜಕೀಯ, ಸಾಮಾಜಿಕವೇ ಮೊದಲಾದ ಅನೇಕ ವಿಷಯಗಳನ್ನು ಪ್ರತ್ಯಕ್ಷವಾಗಿ ತೋರಿಸುವುದು.

ಸಂಗೀತ, ನೃತ್ಯ, ಅಭಿನಯ, ಸಂಭಾಷಣೆ, ಇತ್ಯಾದಿಗಳಿಂದ ಭಿನ್ನಭಿನ್ನವಾದ ಅಭಿರುಚಿಯುಳ್ಳ ಜನತೆಗೆ ಆನಂದದಾಯಕವೆಂದರೆ ನಾಟಕ. ಆದ ಕಾರಣ ಸಮಾಜಸೇವೆಯಲ್ಲಿ ನಾಟಕಕ್ಕೆ ಹೆಚ್ಚಿನ ಅನುಕೂಲವಿದೆ. ವಯಸ್ಕರ ಶಿಕ್ಷಣ, ವಿದ್ಯಾಭ್ಯಾಸ ನೀತಿಬೋಧೆ, ಧರ್ಮಪ್ರಚಾರ ಇವಕ್ಕೆಲ್ಲಾ ನಾಟಕವೂ ಮುಖ್ಯ ಸಾಧನವಾಗಿದೆ. ಇಷ್ಟೇ ಅಲ್ಲ ಜೈಲುಗಳಲ್ಲಿ ಜಿಗುಪ್ಸೆಯಿಂದಿರುವ ಕೈದಿಗಳ ಸುಧಾರಣೆಯೂ ನಾಟಕಗಳಿಂದಸಾಧ್ಯ.

ಇಂತಹ ಕಲೆಗಳಿಗೆ ಸರಕಾರದ ಸಹಾಯವಿಲ್ಲದೆ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಪರಾಶ್ರಯವು ಒಳ್ಳೆಯದಾಗಲಿ ಕೆಟ್ಟದಾಗಲಿ, ಶತಮಾನಗಳಿಂದ ಕಲೆಗಳೆಲ್ಲಾ ರಾಜಾಶ್ರಯದಿಂದಲೇ ಬದುಕಿ ಬಾಳಿದವು. ಪ್ರಾಚೀನ ಕಾಲದಲ್ಲಿ ರಾಜರು ತಮ್ಮ ಅರಮನೆಗಳನ್ನು ರಾಜನಾಟಕ ಶಾಲೆಗಳಾಗಿ ಉಪಯೋಗಿಸಲು ಅನುಮತಿ ಕೊಡುತ್ತಿದ್ದರು. ಚೋಳ ರಾಜರು ಸುಂದರವಾದ ಶಿವ ದೇವಾಲಯಗಳನ್ನು ತಮ್ಮ ಹೆಸರಿನಲ್ಲಿ ನಾಟಕ ಮಂಡಳಿಗಳನ್ನು ಅಭಿವೃದ್ಧಿಸಿದರು. ಇವುಗಳು ರಾಜನಾಟಕ, ಅಥವಾ ರಾಜಶೇಖರ ವಿಲಾಸ ಎಂಬ ಹೆಸರಿನಿಂದ ರಾಜರ ಪರಾಕ್ರಮಾದಿಗಳನ್ನು ನಾಟಕವಾಡುತ್ತಿದ್ದವು.

ನಮ್ಮ ಪ್ರಾಂತ್ಯದಲ್ಲಿ ಕೇವಲ ಸಂದರ್ಭವಿಲ್ಲದ ಹಾಡುಗಳಿಂದ ಅಥವಾ ಅರ್ಥವಿಲ್ಲದೆ ತೋರಿಸುವ ಶರೀರ ವಿಕ್ಷೇಪಗಳಿಂದ ಜನರಲ್ಲಿ ಉತ್ಸಾಹ ಹುಟ್ಟಿಸಲು ರಂಗಭೂಮಿಯ ಮೇಲೆ ಒಂದು ಬಗೆಯ ಕೋಲಾಹಲವೇ ನಡೆಯುವುದುಂಟು. ಯಕ್ಷಗಾನವು ಕೂಡಾ ಜನಮೆಚ್ಚುಗೆಯನ್ನು ಸಾಧಿಸಲು ನಾಟಕೀಯತೆಗೆ ಬದಲಾವಣೆಗೊಂಡಿತು. ಇದನ್ನು ಪ್ರಥಮತಃ ಸಾಧಿಸಿದವರು "ಕರ್ನಾಟಕ ಯಕ್ಷಗಾನ ನಾಟಕ ಸಭಾ ಮಂಗಳೂರು" ಇವರು.

ಕನ್ನಡ ರಂಗಭೂಮಿಯು ಅತ್ಯುತ್ತಮ ರೀತಿಯಿಂದ ಮುಂದುವರಿದಿದೆಯೆಂಬುದಕ್ಕೆ ಸಂದೇಹವಿಲ್ಲ. ಮೊತ್ತಮೊದಲು ಇದಕ್ಕೆ ಮೈಸೂರು ರಾಜರೇ ಹೆಚ್ಚಿನ ಪ್ರೋತ್ಸಾಹವಿತ್ತವರು, ತಮಿಳು ರಂಗಭೂಮಿಯೂ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ಮಲೆಯಾಳದಲ್ಲಿ ನಾಟಕಗಳಿಗಿಂತಲೂ ಕಥಕ್ಕಳಿಗೆ ಪ್ರಾಶಸ್ತ್ಯ ಹೆಚ್ಚಿದೆ. ತೆಲುಗು ರಂಗಭೂಮಿಯು ಬೇಗನೆ ಅಭಿವೃದ್ಧಿ ಹೊಂದಿದೆಯೆಂಬ ಹೇಳಿಕೆಯಿದೆ. ಆದುದರಿಂದ ಕಲಾಸೇವೆಗೆ ನಮ್ಮ ಸರಕಾರವೂ ಸಾರ್ವಜನಿಕರೂ ಇನ್ನಷ್ಟು ಹೆಚ್ಚು ಪ್ರೋತ್ಸಾಹವಿತ್ತು ಸಹಕರಿಸಿ, ದೇಶೀಯ ಜನರ ಸಂಸ್ಕೃತಿ ಸುಧಾರಣೆಯ ಪ್ರತೀಕವೆನಿಸಿದ ನಾಟಕವು ಪ್ರಗತಿಪಥದಲ್ಲಿ ಸಾಗುವಂತಾಗಲಿ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೆ

ಸದಾ ಉಪಯೋಗಿಸಿರಿ.

ತಯಾರಕರು.. ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಅಶುಭಸ್ಯ ಕಾಲಹರಣಂ

(ನಾಲ್ಕನೇ ಪುಟದಿಂದ)

"ಬ್ಯಾಡ್ರಿ, ನನಗೆ ಒಂದೂ ಬೇಡ...."

"ಇಲ್ಲ ಕಣೇ..."

"ನೋಡಿ ಹಾಗೆಲ್ಲಾ ಆಗೋಕೆ ನಿನ್ಗೆ ಸೀಟು ಸಿಗಬೇಕಲ್ಲಾ? ಅಂಗಡಿಯಲ್ಲಿ ಹತ್ತು ರೂಪಾಯಿ ಕಡ ಸಿಗದವ್ರು ನೀವು...."

"ಹತ್ತೇ ಏಕೆ, ನೂರು ಬೇಕಾದ್ರೂ...."

"ಚುನಾವಣೆ ಅಂದ್ರೆ ಅಷ್ಟು ಸುಲಭ ದಲ್ಲಾಗುತ್ತೆ? ಅದ್ರ ಮೇಲೆ ನೀವು ಬೀದಿ ಎಂಬಿಬಿಎಸ್ ಬೇರೆ. ನಿಮಗ್ಯಾರು ಸೀಟು ಕೊಡ್ತಾರೆ? ನಾಲ್ಕು ಜನ ನಾಲ್ಕು ದಿನ ನೂರಜ್ಜಿ ಹಾಕಿದ್ರೆ ಸರಿ; ನಿಮ್ಮ ಸೀಟು, ಮಂತ್ರಿಪದವಿ ಮತ್ತೇನೋ, ಎಲ್ಲಾ ಒಡ್ಡ ಸರ್ವೇಶ ಹಿಂತೆ ಮಸಣದ ದೀಕ್ಷೆ....ಅದ್ರಿಂದ ಬೇಡ್ರಿ ನಿಮಗೆ..."

"ನೋಡು, ನಾನು ಹೀಗೇ ಯೋಚ್ನೆ ಮಾಡ್ತಾ ಇದ್ದೆ. ನಮ್ಮ ಹಾಸನ—ಮಂಗಳೂರು ರೈಲು ದಾರಿಯ ಕೆಲಸ ಆರಂಭವಾಯ್ತು ನೋಡು..."

"ಏನಂತೆ ಆರಂಭವಾಯ್ತಂತೆ? ಅಥವಾ ಆಗೋದಿದ್ರೂ ಇದೆ ಅಂತೆಯೆ?"

'ಯಾರು ಹೋಗಿ ನೋಡಿದ್ದಾರೆ? ಮೊನ್ನೆ ಮೊದಲಾಯ್ತು, ನಿಜಲಿಂಗಪ್ಪ—ರಾಮಸುಬ್ಬಗರು ಒಂದಿದ್ರೂಂತ ಓದಿದ.'

'ಓಹೋ, ಆ ಸುದ್ದಿಯನ್ನ ಓದಿ ಬಿಟ್ಟು ಮಂತ್ರಿ ಯಾಗೋ ಯೋಚನೆ ಮಾಡ್ತಾ ಇದ್ರಾ?'

'ಅಲ್ಲಾ ಬಹು ವರ್ಷಗಳಿಂದಲೂ ಕನಸಿನ ಮಂಡಿಗೆಯಾಗಿಯೇ ಉಳಿದಿದ್ದ ಈ ರೈಲು ಮಾರ್ಗದ ದರ್ಶನವಾಯ್ತಲ್ಲ.'

"ಆಗಿದೆ ಎಲ್ಲಿ? ಕನಸಿನಲ್ಲಿ ಇದೆ, ಅಷ್ಟೇ...."

"ಅಲ್ರಿ, ಕೆಲಸ ಆರಂಭವಾದ ಮೇಲೆ ಆಗದೆ ಇರತ್ತೆ?"

'ಸಾಗ ತ್ತೇನು. ಇರುವೆ ನಡಿಗೆ ಹಾಗೆ?"

"ಅಂದ್ರೆ ?"

'ಮಂಗಳೂರು ಬಂದರ ಪೂರ್ಣವಾಗೋ ಹೊತ್ತಿಗೆ ಈ ರೈಲ್ವೆ ಮಾರ್ಗವಿದ್ದದ ಮೋಟಾರ್ ಗೇಜ ರೈಲುದಾರಿಯೂ ಕೊನೆಗೊಳ್ಳುತ್ತೆ... ಸುಮಾರು ಎರಡು ಪಂಚ ವಾರ್ಷಿಕ ಯೋಜನೆಯ ಯೋಜನೆ ಯಿಂದ...."

'ಅದ್ಕೇ ನೀವು ಮಂತ್ರಿಯಾಗಿ ನಾಳ್ಕೇ ದಿನದಲ್ಲಿ ಇದನ್ನ ಮಾಡಿಸಿ ಬಿಡೋ ವಿಚಾರವೆ?'

"ಇದೂಂತೇನು? ಕೇಳು ರಮಣಿ, ಹಾಸನ ಮಂಗಳೂರು ರೈಲ್ವೆ ಎರಡು ವರ್ಷಗಳಲ್ಲಿ, ಹುಬ್ಬಳ್ಳಿ ಕಾರವಾರ ರೈಲ್ವೆ ಮತ್ತೆ ಮೂರು ವರ್ಷಗಳಲ್ಲಿ ಕಾರವಾರ ಮಂಗಳೂರು ರೈಲ್ವೆ ಮುಂದಿನ ಐದು ವರ್ಷಗಳಲ್ಲಿ...."

"ಅಂದ್ರೆ ಎರಡು ಟರ್ಮ್ ನಿಮ್ಮನ್ನ ಮಂತ್ರಿ ಮಾಡಬೇಕು...."

"ಜನರಿಗೆ ಬೇಕಾದರೆ ಮಾಡಲಿ. ಬೇಡವಾದರೆ ಬಿಡಲಿ. ಜನಸೇವಕಾಃ ಸಚಿವಾಃ"

"ನೇಕರೇನೋ ಹೌದು. ಜನ ತೆತ್ತ ಕರಗಳಿಂದಲೇ ಅವ್ರು ಬದುಕೋದಲ್ವೆ? ಅಲ್ರಿ, ಮಂತ್ರಿ ಪಟ್ಟಾಂತಂದ್ರೆ ಸಾಮಾನ್ಯ. ಅದರ ಗಾಳಿ ಒಮ್ಮೆ ತಾಗಿದ್ರೆ ಮತ್ತೆ ವಿಲಿವಿಲಿ ಒದ್ದಾಡಿಸ್ತದೇಂತಾರಲ್ಲ ?"

"ಇಲ್ಲ, ಇಲ್ಲ. ಒಬ್ಬ ವ್ಯಕ್ತಿ ಹತ್ತು ವರ್ಷಗಳಿಗೆ ಹೆಚ್ಚುಕಾಲ ಮಂತ್ರಿಯಾಗಿರೋದನ್ನ ನಾನು ಒಪ್ಪೋಲ್ಲ."

"ಏಕೆಂದರೆ, ಆ ವೇಳೆ ಅಷ್ಟು ಚುನಾವಣೆ ಸೋತು ಹೋಗಿ ಇರ್ತಾನೆ..."

"ಅಂತಹ ಭೀತಿಯೇನೂ ಇಲ್ಲ. ಒಂದು ವೇಳೆ. ಹಾಗೇನಾದ್ರೂ ಆದ್ರೆ, ಅದು ಪ್ರತಿಸ್ಪರ್ಧಿಗಳು ಅನ್ಯಾಯದ ದಾರಿ ತುಳಿದುದರಿಂದ. ಹಾಗಿದ್ದರೂ ಮಂತ್ರಿಯಾದವನು ಹತ್ತು ವರ್ಷಾನಂತರ ಅರಾಮ ಪಡೆದು ಗವರ್ನರನೋ ರಾಯಭಾರಿಯೋ ಆಗಿ ನಿವೃತ್ತಿ ವೇತನ ಪಡೆಯುತ್ತಿರಬೇಕು."

"ನಿಮ್ಮಂತವರು ನೀವೊಬ್ರೇ ಅದ್ರೆ ಒಂದು. ನಾಲ್ಕು ಜನ ಇದ್ದಿದ್ದರೆ, ನಮ್ಮದು ಒಂದು ಪಕ್ಷ ಕಟ್ಟಿಕೊಳ್ಳಬಹುದಿತ್ತು. ಆದ್ರೆ ಏನು ಮಾಡೋಣ! ನೀವು ಅನಾಥರಾಗಿ ಬಿಟ್ರಿ...."

"ಇಲ್ಲ ಇಲ್ಲ, ಎಲ್ಲರಿಗೂ ನಾಥ ವಿಶ್ವನಾಥನಿರುವಾಗ ನಾವು ಯಾರನ್ನ ಅನಾಥರನ್ನಬಲ್ಲೆವು? ಬಿಡು ಬೇಸರ. ನಾಳೆ ಮಳೆಗಾಲ ಕಳೆದ ಮೇಲಾದ್ರೂ...."

'ಮಳೆಗಾಲ ಕಳೆಯುತ್ತೇನೋ ಮತ್ತೆ ನೋಡಿ, ಈಗ ಮಳೆಗಾಲ—ಸೆಖೆಗಾಲ ಎಲ್ಲಾ ಒಂದೇ ಆಗಿ ಬಿಟ್ಟಿದೆ....'

'ನಿಮ್ಮ ಈ ಕಲಿ ಮೋರೆಯನ್ನು ನೋಡಿ ಹೊಟ್ಟೆಯೇ ಹಾಗಾಗಿದ್ದು "

'ನಿಜವ್ಯಾಗಿ ಸಿಕ್ಕಿದ್ದ ನಿನಗೆ ಇವತ್ತು. ಅದ್ಕೇ ಕೊನೆಗೆ ನನ್ನ ಹೊಟ್ಟೆ ಹಸಿತ್ತೇರಿ.'

'ಹಾಗೇನಿಲ್ಲ ನೀರೇ, ಹಣೆ ಕೊಟ್ಟಿದ್ದನ್ನ ಪಡೆಯಬೇಕು ಇದು ."

'ಮನಸ್ಸು ಹಗುರ ಮಂತ್ರಿಯಾದಾಗ. ಇನ್ನ ಆಗ ಬೇಕಾದ್ದೂ ಏನು?'

'ಏನು? ಎಲ್ಲವನ್ನೂ ಮುಗಿಸಿ ಬಿಟ್ರಿಯಾ ಮತ್ತೆ?"

"ನೀವು ಬೇಗ ಮಂತ್ರಿಯಾಗುವವರು. ನಿಮಗೆಲ್ಲಾ ಇನ್ನು ನಮ್ಮ ಕೈಯ ಅಡುಗೆ ಹೇಗೆ ರುಚಿಸಬಹುದು?'

"ಓಹೋ, ಇದೇ ಹೆದರಿಕೆಯಿಂದ ತವರು ಮನೆದಾರಿ ಹಿಡಿಯೋ ವಿಚಾರ ಮಾಡಿದ್ದೇನು?"

"ಅಯ್ಯೋ, ನಿಮಗೂ ಹೆದರಬೇಕೇ!"

"ಹೆದರೋ ಅಸಾಮಿಯಿದಲ್ಲಾಂತ ನಂಗೊತ್ತಿಲ್ವೆ? ಆದ್ರೂ...."

"ಆದ್ರೂ ಇಲ್ಲ, ಹೋದ್ರೂ ಇಲ್ಲ. ನನ್ನ ಗಂಡ ಮಂತ್ರಿಯಾದ್ಮೇಲೆ ನನ್ನ ಗುರ್ತಿಸ್ತಿರುತ್ತೆ? ಅದ್ಕೆಂದೇ ಮಾಜಿ ಮಂತ್ರಿಯಾಗಿ ಮನೇ ದಾರಿ ಹಿಡಿಯುವವರನ್ನು ಸ್ವಾಗತಿಸೋಕೆ ದೂರದಲ್ಲೇ ನಿಂತಿರ್ತೇನೆಂದೆ."

"ಯಾವುದಕ್ಕೂ ಇನ್ನೂ ವರ್ಷ ಎರಡು ಇದೆಯಲ್ಲಾ? ಅಷ್ಟರೊಳಗೆ..."

"ಎರಡು ಮಳೆಗಾಲ ಕಳೆಯುತ್ತೆ...."

"ಯಾರಿಗೆ ಗೊತ್ತು ಏನಾಗುತ್ತೋ? ಬಹು ಭವಿಷ್ಯದ ದಿನದ ಗತಿಯರಿವು ಯಾರಿಗಿದೆ?"

"ಅದ್ರೂ, ಭವಿತವ್ಯವು ಭದ್ರವಾಗಿದೇಂತ ಬೊಂಡ್ನ ಬಾರ್ಸುತ್ತಿದ್ರೇನೇ ಸಮಾಧಾನವಲ್ವೆ? ಹ್ಞಾಂ... ಅದ್ಕೇ ಅನ್ನುತ್ತೇನೆ. ಮಾವಿನರ ಸಾಯಸದ ಪರಿಮಳ ಮೂಗಿಗೆ ಬಡಿಯುತ್ತಾ ಇದೆ...."

'ನಾಲಿಗೆಯೂ ಅದರ ಸವಿಯನ್ನು ನೋಡಲು ಉತ್ಸುಕವಾಗಿದೆ...."

'ನಾಲಿಗೆಯೂ ಅದರ ಸವಿಯನ್ನು ನೋಡಲು ಉತ್ಸುಕವಾಗಿದೆ ..'

'ನೀರು ತುಂಬಿದ ತಂಬಿಗೆ ತನ್ಮ ಹಸ್ತ ಸ್ಪರ್ಶವನ್ನೇ ನಿರೀಕ್ಷಿಸುತ್ತಿದೆ....'

"ಉತ್ಸಾಹಪೂರ್ಣ ಭಾಷಣದಿಂದ ಅಂಗಾಂಗಗಳು ಉತ್ತೇಜಿತವಾಗಿ ಕಾರ್ಯಶೀಲವಾಗ ತೊಡಗಿವೆ...."

'ಅಂತಿರುವಾಗ ವಿಲಂಬವೇಕೆ?'

"ಶುಭಸ್ಯ ಶೀಘ್ರಂ...."

"ಅಶುಭಸ್ಯ ಕಾಲಹರಣಂ...."

'ಸರಿಯೇ, ಚುನಾವಣೆ ನಿಲ್ಲೋಕೆ ಮುಂಚೆ ಸಾಕಷ್ಟು ಕಾಲಹರಣ ಮಾಡೋಣ. ಸದ್ಯ ಉದರವಹ್ನಿಗೆ ಚಿಕಿತ್ಸೆ ಶೀಘ್ರ ಮಾಡೋಣ ..'

"ಕೊನೆಗೂ ಆ ಮುಹೂರ್ತ ಬಂತಾಯ್ತು....'

'ಮತ್ತೆ, ಆಗಲೇ ಉಂಟೆ"

—ಗೋರಾ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S 29/65

V. V. ಉಪಾಧ್ಯಾಯ—ಟಿನರ್ —ವಾದಿ.

ಪೇರಪ್ಪ ಪೂಜಾರಿ ವಗೈರಾ —ಪ್ರತಿವಾದಿ.

2ನೇ ಪ್ರತಿವಾದಿ ಅಪ್ಪಯ್ಯ ಪೂಜಾರಿ, ನಾಗಿಲ ಹೆಗ್ಗಿನ ಮನೆ, ಕೊತ್ತಾಡಿ ಗ್ರಾಮದ ಪುನ್ನೆ ಜಾಲು ಎಂಬಲ್ಲಿರುವವರಿಗೆ—

ವಾದಿಯು ಪ್ರತಿವಾದಿರ ಮೇಲೆ ಚಾಲಗೇಣಿ ಬಾಬಾ ರೂ. 1071-40ಕ್ಕೆ ಮಾಡಿದ ದಾವೆಯು ತಾ. 19.7.1965ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಈ ಕುರಿತು ಆಕ್ಷೇಪವಿದ್ದರೆ ಸದ್ರಿ ವ್ಯಾಧಿ ದಿನ ಪೂರ್ವಾಹ್ನ ಗಂಟೆ 11ಕ್ಕೆ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ದ್ವಾರ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಸದ್ರಿ ದಾವೆಯಲ್ಲಿ ನಿಮ್ಮನ್ನು ಗೈರುಹಾಜರಿ ಮಾಡಿ ಮುಂದಿನ ಕಕ್ಷಿಯಿಂದ ತೀರ್ಮಾನಿಸಲಾಗುವುದು, ಎಂಬುದಾಗಿ ಕೋರ್ಟಿನ ಹುಕುಂ ಪ್ರಕಾರ ಮಾಡಿದ ನೋಟೀಸು.

(*Sd.*) N. J. Kadamba,
Advocate for Plaintiff.

ಬೆಳ್ತಂಗಡಿ, 30-6-1965.

XIನೇ ತರಗತಿಯ ಉದ್ಘಾಟನಾ ಸಮಾರಂಭ

ಸುರತ್ಕಲ್—ಸ್ಥಳೀಯ ವಿದ್ಯಾದಾಯಿನೀ ಹೈಸ್ಕೂಲಿನಲ್ಲಿ ಹೊಸ XI (P.U.C.) ತರಗತಿಯ ಉದ್ಘಾಟನಾ ಸಮಾರಂಭವು ಹಿಂದೂ ವಿದ್ಯಾದಾಯಿನೀ ಸಂಘದ ಅಧ್ಯಕ್ಷ ಶ್ರೀ ಕೆ. ಆರ್. ಆಚಾರ್, ಎಂ.ಎಲ್.ಸಿ., ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಶಾಲಾ ಆಡಳಿತ ಮಂಡಳಿಯವರು, ಶಾಲಾ ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಊರ ಪ್ರಮುಖರು ಇದ್ದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ನೆರೆದು ಫಲಪೂಜಾದಿಗಳನ್ನು ಸಮರ್ಪಿಸಿ ಪ್ರಾರ್ಥನೆ ಸಲ್ಲಿಸಿದರು. ಆ ಬಳಿಕ ಶಾಲಾ ಪ್ರಾರ್ಥನಾ ಮಂದಿರದಲ್ಲಿ ಸಭೆಯು ಪ್ರಾರಂಭವಾಯಿತು. ಪ್ರಾರ್ಥನೆಯಾದ ಬಳಿಕ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಯಂ. ವಾಸುದೇವರಾವ್‌ರು ಪ್ರಾಸ್ತಾವಿಕ ಭಾಷಣ ಮಾಡಿ, ಶುಭ ಸಂದೇಶಗಳನ್ನು ಓದಿದರು. ಶ್ರೀ ಯಸ್. ಮುಕುಂದರಾವ್, ಎಂ.ಎಲ್.ಸಿ ಇವರು XIನೇ ತರಗತಿಯ ಉದ್ಘಾಟನೆಯ ಅಂಗವಾಗಿ ಜ್ಯೋತಿಯನ್ನು ಬೆಳಗಿಸಿ—ಜ್ಯೋತಿಯ ಪ್ರಭೆಯು ಹೇಗೆ ಪ್ರಕಾಶಿಸುವುದೋ ಅದೇ ರೀತಿ ಶಾಲಾ ಫಲಿತಾಂಶವೂ ಉತ್ತಮವಾಗಿ ಕೀರ್ತಿ ತರಲೆಂದು ಹಾರೈಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲಾ ಇತಿಹಾಸವನ್ನು ಸಂಕ್ಷಿಪ್ತವಾಗಿ ತಿಳಿಸಿ ಊರ ಮಹನೀಯರು ಈ ಶಾಲೆಗೆ ಧನ ಸಹಾಯ ನೀಡಬೇಕೆಂದು ಕೋರಿದರು. ಬಳಿಕ ಧನ್ಯವಾದಾರ್ಪಣೆ ಮತ್ತು ರಾಷ್ಟ್ರಗೀತೆಯೊಂದಿಗೆ ಈ ಶಾಲಾಭ್ಯುದಯ ಕಾರ್ಯಕ್ರಮವು ಕೊನೆಗೊಂಡಿತು.

ಇಲ್ಲಿ XIನೆಯ ತರಗತಿಯಲ್ಲಿ P.C.M ಮತ್ತು H.E.G. ವಿಭಾಗಗಳಿದ್ದು ತಾ. 1.7.65ರಿಂದಲೇ ಪಾಠ ಪ್ರವಚನಗಳು ಪ್ರಾರಂಭವಾಗಿವೆ.

ಕಲ್ಯಾಣಪುರದಲ್ಲಿ ಡಾ। ಪೈಗಳಿಗೆ ಸತ್ಕಾರ

ಸಿಂಡಿಕೇಟ್ ಬ್ಯಾಂಕಿನ ಹೊಸ ಶಾಖೆಯ ಉದ್ಘಾಟನೆಗಾಗಿ ಕಲ್ಯಾಣಪುರಕ್ಕೆ ಆಗಮಿಸಿದ ಬ್ಯಾಂಕಿನ ಚೇರ್ಮನ್ ಡಾ। ಟಿ. ಎಂ. ಎ. ಪೈಗಳ ಗೌರವಾರ್ಥವಾಗಿ ಸ್ಥಳೀಯ ಸಾರಸ್ವತ ಸಮಾಜವು, ತ್ಯಾಗರಾಜ ಸಭಾಭವನದಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿತು.

ಆರಂಭದಲ್ಲಿ ಶ್ರೀಮತಿ ಪದ್ಮಿನಿ ನಗರಕಟ್ಟೆಯವರಿಂದ ಭಕ್ತಿ ಸಂಗೀತವಾದ ಬಳಿಕ ಸಾರಸ್ವತ ಸಮಾಜದ ಅಧ್ಯಕ್ಷ ಶ್ರೀ ಜಿ. ಎಸ್. ಮುಂಡ್ಕೂರ್ ಮತ್ತು ಕೆ. ರಾಮ ಪೈಯವರು ಸ್ವಾಗತಿಸಿ ಡಾ। ಪೈಗಳ ಪರಿಚಯ ಮಾಡಿದರು. ಮುಖ್ಯ ಅತಿಥಿಗಳ ಸಂದರ್ಭೋಚಿತ ಭಾಷಣವಾದ ಬಳಿಕ ಔತಣಕೂಟದೊಂದಿಗೆ ಸಭಾಂತ್ಯವಾಯಿತು.

ಉಡುಪಿ ಲಯನ್ಸ್ ಕ್ಲಬ್ಬಿನ ಸಭೆ

ಉಡುಪಿ ಪಾಂಗಾಳ ನಾಯಕ್ ಬೇಂಕಿನ ಮಾಳಿಗೆಯಲ್ಲಿ, ಉಡುಪಿ ಲಯನ್ಸ್ ಕ್ಲಬ್ಬಿನ ಸಭೆಯು, ಅದರ ಅಧ್ಯಕ್ಷ ಶ್ರೀ ಕೆ. ಎಸ್. ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಕ್ಲಬ್ಬಿನ ಮಾಜಿ ಗವರ್ನರ್ ಡಾ। ಟಿ. ಪಿ. ವೆಂಕಟೇಶನ್‌ರವರು ಮುಖ್ಯ ಅತಿಥಿಗಳಾಗಿದ್ದರು. ಶ್ರೀ ಕಾಮತರು ಉಡುಪಿ ಲಯನ್ಸ್ ಕ್ಲಬ್ಬಿನ ಸಮಾಜ ಸೇವೆಗಳನ್ನು ವಿವರಿಸಿ, ಮಾಜಿ ಗವರ್ನರರ ಪರಿಚಯ ಮಾಡಿಕೊಟ್ಟರು. ಶ್ರೀ ಟಿ. ಪಿ. ವೆಂಕಟೇಶನ್‌ರವರು ಮಾತನಾಡುತ್ತಾ ಪರಸ್ಪರ ಸಹಕರಿಸಿಕೊಂಡು ಕಾರ್ಯವೆಸಗಬೇಕೆಂದು ಹೇಳಿದರು. ಅಲ್ಲದೇ ಲಯನ್ಸ್ ಕ್ಲಬ್ ಬೇರೆ ಬೇರೆ ದೇಶಗಳಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ವಿವರಿಸಿದರು. ಮುಂದಿನ ಅಧ್ಯಕ್ಷ ಶ್ರೀ ಯು. ಕೆ. ಶಿವಯ್ಯನವರು ಗೋವಾ ಲಯನ್ಸ್ ಕ್ಲಬ್ಬಿನವರು ಕಳುಹಿಸಿಕೊಟ್ಟರುವ ಪತ್ರಿಕೆಯನ್ನು ಸಭೆಯ ಮುಂದಿಟ್ಟರು. ಕೊನೆಯಲ್ಲಿ ಶ್ರೀ ಕೆ. ಎಸ್. ಕಾಮತರು ವಂದನಾರ್ಪಣೆಗೈದರು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

REP 250/64 (O. S. 45/63.)

Between

ಬೈಕಾಡಿ ಹಸನ್ ಸಾಹೇಬ್—ಅರ್ಜಿದಾರ.

ಮತ್ತು

ಸಕಿನಾಬಿ ಕೂಡಾ —ಎದ್ರುರು.

ನೋಟೀಸು

ಉಡುಪಿ ತಾಲೂಕು ಕೊಡವೂರು ಗ್ರಾಮದ ಮಲ್ಪೆಯಲ್ಲಿರುವ ಸುಕ್ರಿ ಮೈದಿನ್ ಸಾಹೇಬರ ಮಕ್ಕಳು ಸಕಿನಾಬಿ ಮತ್ತು ಸುಕ್ರಿ ಅಬ್ದುಲ್ ರಹಿಮಾನ್ ಸಾಹೇಬ್ ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—ನಿಮ್ಮ ಹಕ್ಕಿನ ಸ್ಥಿರಾಸ್ತಿ ಏಲಂನ ನಿರ್ಣಯದ ಬಗ್ಗೆ ತಾ. 16-7-1965ಕ್ಕೆ ಇಡಲ್ಪಟ್ಟಿದೆ. ಆ ಬಗ್ಗೆ ನಿಮ್ಮ ಆಕ್ಷೇಪ ಏನಾದರೂ ಇದ್ದರೆ ಆ ದಿವಸ ಈ ಕೋರ್ಟಿನ ಮುಂದೆ ಬೆಳಗ್ಗೆ 11 ಗಂಟೆಗೆ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ಇಲ್ಲದಿದ್ದರೆ ತೀರ್ಪು ಮಾಡಲಾಗುತ್ತದೆ.

P. N. Krishnamoorthy Rao,
B.A., LL.B.,
Advocate, Udipi.

Udipi, S.K.,
Dated 2.7-65.

ಚಂದಾದಾರರಲ್ಲಿ ವಿನಂತಿ.

ಇದೇ ಬರುವ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 44ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 45ನೇ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರ್ಯ ಮನಿಯಾರ್ಡರು ದ್ವಾರಾಯೂ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಮೇನೇಜರ್

ನವಯುಗ, ಉಡುಪಿ.

ಎಲ್ಲೆಲ್ಲಿ ಏನೇನು?

ಸತ್ಕಾರ ಕೂಟ

ಮಂಗಳೂರು ಜೂ. 28, ವಿದೇಶ ಪ್ರಯಾಣವನ್ನು ಕೈಕೊಳ್ಳಲಿರುವ ಶಂಕರ್ ವಿಟ್ಠಲ್ ಮೋಟಾರ್ ಕಂಪೆನಿಯ ವರ್ಕ್ಸ್ ಮೆನೇಜರ್, ಶ್ರೀ ಎ. ಶ್ರೀಪತಿರಾವ್ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಎ. ಲೀಲಾ ಶ್ರೀಪತಿ ರಾವ್‌ರನ್ನು ಗೌರವಿಸಲು ಸತ್ಕಾರ ಕೂಟವೊಂದು ಶಂಕರ್ ವಿಟ್ಠಲ್ ಮೋಟಾರ್ ಕಂಪೆನಿ, ಅರಸಿಂದ ಮೋಟಾರ್ಸ್, ಯುನೈಟೆಡ್ ಟ್ರೇಡಿಂಗ್ ಕೊಪೊರೇಶನ್ ಮತ್ತು ಕೆನರಾ ಪೋಟಾರ್ ಟ್ರಾನ್ಸ್‌ಪೋರ್ಟ್ ಇತ್ಯಾದಿ ಸಹ ಸಂಸ್ಥೆಗಳ ಅಧಿಕಾರಿ ಹಾಗೂ ನೌಕರ ವರ್ಗದವರು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಕಂಪೆನಿಯ ಪ್ರಧಾನ ಕಚೇರಿಯ ವಠಾರದಲ್ಲಿ ಜರಗಿಸಿದರು.

ಶ್ರೀಯುತ ರಾಯರು ಅವರ ಮತ್ತು ಧರ್ಮಪತ್ನಿಯ ಪರವಾಗಿ ವಿದೇಶ ಪ್ರವಾಸದ ಕುರಿತು ಮಾತಾಡುತ್ತಾ ಸಂಚಾರದ ಉದ್ದೇಶ, ಭೇಟಿ ಕೊಡಲಿರುವ ಸ್ಥಳ, ಅದರಿಂದ ಪ್ರಯೋಜನ ಇತ್ಯಾದಿ ಕುರಿತು ವಿವರಣೆಯಿತ್ತರು. ಶ್ರೀ ಅಡಿಗರು ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಕಂಪೆನಿಯ ನೌಕರರಲ್ಲೂ, ಅಧಿಕಾರಿಗಳಲ್ಲೂ "ಮಾನವತೆ", "ಸಹಕಾರ ಭಾವನೆ" ಎನ್ನುವುದು ಇದೆ. ಇದನ್ನು ಈ ದಿನ ತಾನು ಕಂಡುದಾಗಿಯೂ, ಮೋಟಾರ್ ಕಂಪೆನಿಗಳಲ್ಲಿ ಶಂಕರ್ ವಿಟ್ಠಲ್ ಮೋಟಾರ್ ಕಂಪೆನಿ ಒಂದು ಮಾದರಿಯೆಂದೂ, ಇದಕ್ಕೆ ಕಾರಣ ಶ್ರೀಯುತ ರಾಯರ ವಿಶಾಲ ಗುಣವಂತಲೂ, ವಿದೇಶ ಪ್ರಯಾಣದಿಂದ ಅಪಾರ ವಿಚಾರಗಳನ್ನು ಅರಿತು ತನ್ನ ಉದ್ದಿಮೆಯನ್ನು ಇಲ್ಲಿ ಮತ್ತಷ್ಟು ಸುಧಾರಣೆಯಿಂದ ನಡೆಸಬೇಕಾಗಿಯೂ, ಅವರ ಸಂಚಾರ ಸುಖಮಯವಾಗಲೆಂದೂ, ಆಶಿಸಿ ಮಾತನಾಡಿದರು. ಅತಿಥಿಗಳಾಗಿ ಆಗಮಿಸಿದವರಲ್ಲಿ ಡಾ| ಎ. ಎಫ್. ಕೊಯಿಲೋ, ನಯಂಪಳ್ಳಿ ರಾಮರಾಯರು ದಂಪತಿಗಳಿಗೆ ವಿದೇಶ ಪ್ರವಾಸವು ಸುಖಮಯವಾಗಲೆಂದು ಬಯಸಿ ಮಾತನಾಡಿದರು.

ಕೊನೆಯಲ್ಲಿ ಕಂಪೆನಿಯ ಶ್ರೀ ಪಿ. ಯಸ್. ಚಡಗರು ಧನ್ಯವಾದ ಸಮರ್ಪಿಸಿದರು.

ಉಡುಪಿ ನಳ್ಳಿನೀರು ಯೋಜನೆ ಡಿಶೆಂಬರು ಕಾಲ ಪೂರ್ತಿ ಜಮಾ

ಉಡುಪಿ ನಳ್ಳಿ ನೀರಿನ ಯೋಜನೆಗಾಗಿ ನಗರ ಸಭೆಯು ಇಪ್ಪತ್ತೆರಡು ಲಕ್ಷ ರೂಪಾಯಿಗಳ ಡಿಶೆಂಬರು ಸಾಲಪತ್ರಿದ್ದು ಅದು ಕಳೆದ 29ರಂದು ಪೂರ್ತಿಯಾಗಿ ವಸೂಲಾಗಿರುವುದು. ಸಿಂಡಿಕೇಟ್ ಬೇಂಕು, ಹನ್ನೆರಡುವರೆ ಲಕ್ಷ, ಕರ್ನಾಟಕ ಬೇಂಕು ಮೂರು ಲಕ್ಷ, ಕೆನರಾ ಬೇಂಕು ಎರಡು ಲಕ್ಷ, ಪಾಂಗಾಳ ನ್ಯಾಕ್ ಬೇಂಕು, ವಿಜಯ ಬೇಂಕು, ಕೊರ್ಪರೇಶನ್ ಬೇಂಕ್ ಮತ್ತು ಎಕಾಡೆಮಿ ಆಫ್ ಜನರಲ್ ಎಜುಕೇಶನ್ ತಲಾ ಒಂದೊಂದು ಲಕ್ಷ ರೂಪಾಯಿಗಳು ಜಯಲಕ್ಷ್ಮೀ ಬೇಂಕು ಐವತ್ತು ಸಾವಿರ ರೂಪಾಯಿಗಳನ್ನು ಒದಗಿಸಿವೆ ಎಂದು ತಿಳಿದುಬಂದಿದೆ.

ಯಕ್ಷಗಾನ "ಪುಷ್ಪವೇಣಿ ಕಲ್ಯಾಣ"

ನೇಲಂಪಾಡಿ ಬನಾರಿ ಶ್ರೀ ಗೋಪಾಲ ಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ದಿನಾಂಕ 26ರಂದು ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ ಅವರಿಂದ ರಚಿಸಲ್ಪಟ್ಟ "ಪುಷ್ಪವೇಣಿ ಕಲ್ಯಾಣ" ಎಂಬ ನೂತನ ಕಥಾಭಾಗದ ಯಕ್ಷಗಾನ ತಾಳಮದ್ದಳೆಯು ನಡೆಸಲ್ಪಟ್ಟಿತು.

ಶ್ರೀ ಕೆ ಲಕ್ಷ್ಮಣ—ಅವರ ವತಿಯಿಂದ ಜರಗಿದ ಈ ಕಾರ್ಯಕ್ರಮದಲ್ಲಿ ಶ್ರೀಗಳಾದ ಕೀ. ನ. ಕೇಶವ. ಕೆ. ಎ. ಭಂಡಾರಿ, ಡಾ| ರಘುನಂದ ಬನಾರಿ, ಎಂ. ಬಿ., ಬಿ. ಎಸ್., ವೇಷಧಾರಿ ಗುಡ್ಡಪ್ಪ ಗೌಡ, ಮುಗಿಯೂರು ನಾರಾಯಣ ರೈ, ಬಿ. ಶ್ರೀಧರ, ಕಲ್ಲಡ್ಕ ಬಾಬು ರೈ, ಮಾಸ್ತರ್ ಸಾಂತಪ್ಪ ಮೊದಲಾದವರು ಭಾಗವಹಿಸಿದರು. ಶ್ರೀ ಬಿ. ವಿ. ವಿನೋದ—ಅವರು ಕೊನೆಯಲ್ಲಿ ಧನ್ಯವಾದವಿತ್ತರು.

ಸತ್ಕಾರ ಕೂಟ

ಸಿರಿಯಡ್ಕ ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ನಾಲ್ಕು ವರ್ಷ ಸೇವೆ ಸಲ್ಲಿಸಿ ಈಗ ಫಲಿಮಾರಿಗೆ ವರ್ಗವಾಗಿರುವ ಶ್ರೀ ಕೆ. ಎಂ. ಭಂಡಾರಿಯವರನ್ನು ಬೀಳ್ಕೊಡುವ ಹಾಗೂ, ಹೊಸದಾಗಿ ಬಂದಿರುವ ಶ್ರೀ ಗೋಪಾಲಕೃಷ್ಣ ಕೆದಿಲಾಯರನ್ನು ಸತ್ಕರಿಸುವ ಸಮಾರಂಭವು ಹೈಸ್ಕೂಲಿನ ಶಾಲಾ ವಠಾರದಲ್ಲಿ ಇತ್ತೀಚೆಗೆ ಶ್ರೀ ಬಿ. ಸಚ್ಚಿದಾನಂದ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಡಾ| ಚಂದಯ್ಯ ಹೆಗ್ಡೆಯವರು ಸ್ವಾಗತಿಸಿ ಅತಿಥಿಗಳಿಗೆ ಮಾನಪತ್ರ ಅರ್ಪಿಸಿದರು. ಸಭಿಕರ ಪರವಾಗಿ ಶ್ರೀ ಸೀತಾನದಿ ಗಣಪಯ್ಯ ಶೆಟ್ರು, ಮತ್ತು ಶ್ರೀ ಸುರೇಶ ಪೈಗಳು ಮಾತನಾಡಿದರು. ಶ್ರೀ ಎಂ. ಮಧ್ವರಾಜರು ಮುಖ್ಯೋಪಾಧ್ಯಾಯರ ಸೇವೆಯನ್ನು ಶ್ಲಾಘಿಸಿದರಲ್ಲದೆ ಶ್ರೀ ಕೆದಿಲಾಯರನ್ನು ಸ್ವಾಗತಿಸಿದರು. ಅತಿಥಿಗಳ ಭಾಷಣವಾದ ಬಳಿಕ ಶ್ರೀ ವಿಠಲ ಭಂಡಾರ್ಕಾರ್‌ರವರು ಧನ್ಯವಾದ ಸಮರ್ಪಿಸಿದರು.

ಹಾವನೂರಲ್ಲಿರುವ ಶ್ರೀ ವಾದಿರಾಜರ ವೃಂದಾವನ

ಮಾಧ್ವ ಯತಿವರರಲ್ಲಿ ಸೋದೆ ಮಠದ ಶ್ರೀ ವಾದಿರಾಜ ಸ್ವಾಮಿಗಳು ಅಗ್ರಗಣ್ಯರು. ತುಳುನಾಡಿನಲ್ಲಿ ಜನ್ಮವೆತ್ತಿದ ಅವರು ಶ್ರೀ ವ್ಯಾಸರಾಯ, ಪುರಂದರದಾಸರ ಸಮಕಾಲೀನರು. ಕನಕದಾಸರಿಗೆ ಗುರುಸ್ವರೂಪರು. ತಮ್ಮ ಅಮಾನುಷ ಬುದ್ಧಿ, ವಿದ್ಯಾಬಲದಿಂದಲೂ, ದೀರ್ಘಕಾಲದ ತಪಸ್ಸಿನಿಂದಲೂ ಅಖಿಲ ಭಾರತ ಕೀರ್ತಿಯನ್ನು ಸಂಪಾದಿಸಿದವರು. ಉಡುಪಿಯ ಅಷ್ಟಮಠಗಳಿಗೆ ಪರ್ಯಾಯವೇ ಮುಂತಾದ ಹೊಸ ಸಂಪ್ರದಾಯಗಳನ್ನು ಹಾಕಿದರು. ಧರ್ಮಸ್ಥಳದ ಮಂಜುನಾಥನ ಪ್ರತಿಷ್ಠಾಪನೆಗೆ ಇವರೇ ಕಾರಣರು.

ಈ ಮಹಾಮಹಿಮರು ಭಕ್ತರ ಅಭೀಷ್ಟಗಳನ್ನು ಯಥೇಚ್ಛವಾಗಿ ಈಡೇರಿಸಿ, ಸಜೀವಿಯಾಗಿ ಸೋದೆಯಲ್ಲಿ ವೃಂದಾವನಸ್ಥರಾದರಷ್ಟೆ. ಅವರ ಮೃತ್ತಿಕಾ ವೃಂದಾವನಗಳು ಇತರತ್ರ ಇದ್ದುದು ನಾಲ್ಕೈದು ಮಾತ್ರ. ತುಂಗಭದ್ರಾ ತೀರದ ಹಾವನೂರ ಕ್ಷೇತ್ರವು (ಧಾರವಾಡ ಜಿಲ್ಲೆ) ಈ ವಿಷಯದಲ್ಲಿ ಪುಣ್ಯ ಮಾಡಿದೆ. ೨೦೦ ವರ್ಷಗಳಷ್ಟು ಪುರಾತನವಾದ ಇಲ್ಲಿಯ ಮಠದಲ್ಲಿ ಶ್ರೀ ವಾದಿರಾಜರ ಪುಣ್ಯತಿಥಿಯನ್ನು ಪ್ರತಿ ವರ್ಷ ವೈಭವದಿಂದ ಆಚರಿಸಲಾಗುತ್ತಿದೆ.

ಸದ್ಯ ಮಠದ ಮಣ್ಣಿನ ಕಟ್ಟಡವು ಜೀರ್ಣವಾಗಿದ್ದು ಅದರ ಪುನರುತ್ಥಾನವನ್ನು ಕೈಕೊಂಡಿದ್ದಿದೆ. ಶ್ರೀ ಗುರುವಾದಿರಾಜರ ದರ್ಶನ, ಸೇವೆಗಳಿಗಾಗಿ ಬರುವವರಿಗೆ ಅನುಕೂಲತೆಗಳನ್ನು ಒದಗಿಸಬೇಕಾಗಿದೆ. ಕಟ್ಟಡದ ಕೆಲಸವು ಭಕ್ತಜನರ ಉದಾರ ನೆರವಿನಿಂದ, ಈ ದೀವಳಿಗೆಯಷ್ಟರಲ್ಲಿ ಮುಗಿಯುವುದೆಂಬ ನಿರೀಕ್ಷೆಯಿದೆ. ಕಾರಣ ಶ್ರದ್ಧಾವಂತರು ತಮ್ಮ ಯಥಾಶಕ್ತಿ ಸಹಾಯವನ್ನು ಮಠದ ಅರ್ಚಕ ಶ್ರೀ ನರಸಿಂಹಾಚಾರ್ಯ ಗಲಗಲಿ ಇವರಿಗೆ ಕಳಿಸಿ, ಶ್ರೀ ವಾದಿರಾಜರ ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥನೆ.

ಬೆಳ್ಮಣ್ಣರೆಯಲ್ಲಿ XIನೇ ಕ್ಲಾಸಿನ ಪ್ರಾರಂಭೋತ್ಸವ

ಕಳೆದ ತಾ. 24ರಂದು ಶ್ರೀ ಬಿ. ಕಿಟ್ಟಣ್ಣ ರೈಯವರ ಅಧ್ಯಕ್ಷತೆಯಲ್ಲಿ, ಬೆಳ್ಮಣ್ಣರೆ ಹಾಯರ್ ಸೆಕೆಂಡರಿ ಶಾಲಾ ಸಮಿತಿಯ ಸದಸ್ಯರ, ಊರವರ ಮತ್ತು ಅಧ್ಯಾಪಕರ ಕೂಡುವಿಕೆಯಿಂದ XIನೇ ಕ್ಲಾಸಿನ ಪ್ರಾರಂಭೋತ್ಸವವು ನೆರವೇರಿತು. ಇದಕ್ಕಾಗಿ ಶ್ರಮಿಸಿದ ಶ್ರೀ ಎಸ್. ಸುಬ್ಬಯ್ಯ ನಾಯಕ್, ಎಂ. ಎಲ್. ಎ. ಇವರನ್ನು ಈ ಸಮಾರಂಭದಲ್ಲಿ ಪ್ರಶಂಸಿಸಲಾಯಿತು.

ಮೂರು ವಿಭಾಗಗಳನ್ನು ತೆರೆಯುವ ಅನುಮತಿಗಾಗಿ ಸರಕಾರವನ್ನು ಕೇಳಿಕೊಂಡರೂ, ಬರೇ ಒಂದು ವಿಭಾಗದ ತೆರೆಯುವಿಕೆಯು ಸಾಧ್ಯವಾದುದಕ್ಕೆ ವಿಷಾದ ವ್ಯಕ್ತಪಡಿಸಿ, ಮುಂದಿನ ವರುಷ ಎರಡು ವಿಜ್ಞಾನ ವಿಭಾಗಗಳನ್ನು ತೆರೆಯುವಂತಾಗಲೆಂದು ಹಾರೈಸಿ, ಶಾಲಾ ಮುಖ್ಯೋಪಾಧ್ಯಾಯ ಶ್ರೀ ಮಾರಪ್ಪ ಶೆಟ್ಟರು ಧನ್ಯವಾದ ಸಮರ್ಪಿಸಿದರು.

ಬೆಳ್ಮಣ್ಣರೆಯಲ್ಲಿ ಹಾ। ಸೆ। ಶಾಲೆಯ ಉದ್ಘಾಟನೆ

ತಾ. 3ರಂದು ಬೆಳ್ಮಣ್ಣರೆ ಹಾ। ಸೆ। ಶಾಲೆಯ ಸಾಂಪ್ರದಾಯಿಕ ಉದ್ಘಾಟನಾ ಸಮಾರಂಭವು ವಿದ್ಯಾಮಂತ್ರಿ ಎಸ್. ಆರ್. ಕಂಠಿಯವರಿಂದ ಸ್ಪೀಕರ್ ಶ್ರೀ ಬಿ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಹೆ। ಮಾ। ಶ್ರೀ ಮಾರಪ್ಪ ಶೆಟ್ಟರು ಸ್ವಾಗತಿಸಿ ವರದಿಯನ್ನೊಪ್ಪಿಸಿದರು. ಶ್ರೀ ಬಿ. ಕಿಟ್ಟಣ್ಣ ರೈಗಳು ಶ್ರೀ ಕಂಠಿಯವರಿಗೂ ಶ್ರೀ ಬಾಳಿಗರಿಗೂ ಮಾನಪತ್ರವನ್ನರ್ಪಿಸಿದರು. ಶ್ರೀಗಳಾದ ಎ. ಶಂಕರ ಆಳ್ವ, ಎಂ. ಪಿ., ಸುಬ್ಬಯ್ಯ ನಾಯ್ಕ, ಎಂ. ಎಲ್. ಎ., ಎಸ್. ಸುಬ್ರಹ್ಮಣ್ಯ ಗೌಡ, ತಾ। ಬೋ। ಅಧ್ಯಕ್ಷ ಇವರು ಭಾಷಣವಿತ್ತರು.

ಮಂತ್ರಿಗಳು ಉದ್ಘಾಟನಾ ಭಾಷಣದಲ್ಲಿ ದಕ್ಷಿಣ ಕನ್ನಡದ ಪ್ರಗತಿಯನ್ನು ಕೊಂಡಾಡಿ, ಮಂಗಳೂರಲ್ಲಿ ವಿಶ್ವವಿದ್ಯಾನಿಲಯವೊಂದು ಸ್ಥಾಪನೆಯಾಗುವಂತಾಗಲೆಂದರು. ಶ್ರೀ ಬಾಳಿಗರು ಅಧ್ಯಕ್ಷ ಭಾಷಣದಲ್ಲಿ ಹೆಚ್ಚೆಚ್ಚು ಹೈಸ್ಕೂಲುಗಳಿಗೆ ಮಂಜೂರಾತಿ ಕೊಡಬೇಕೆಂದೂ ರಾಜ್ಯದ ಇತರ ಕಡೆಗಳಂತೆ ದ. ಕ. ದ ಹೈಸ್ಕೂಲುಗಳ ದಾಖಲಾತಿಯಲ್ಲಿ ಇಲ್ಲಿ ಇನ್ನೂ ಕೆಲವು ಕಾಲೇಜುಗಳಾಗಬೇಕೆಂದೂ ಹೇಳಿದರು. ಶ್ರೀ ಬಿ. ನಾರಾಯಣ ಶೇಕರು ಧನ್ಯವಾದಗಳನ್ನರ್ಪಿಸಿದರು.

ಶ್ರೀ ಮೋನಪ್ಪ ಸೇರ್ವೆಗಾರರ ನಿಧನ

ಬ್ರಹ್ಮಾವರ, ಕಳೆದ ತಾ. 24ರಂದು ಕುಮ್ರಗೋಡು ಪಟೇಲರೂ ಪ್ರಸಿದ್ಧ ಬಂಟ ಮನೆತನಕ್ಕೆ ಸೇರಿದವರೂ ಆದ ಬ್ರಹ್ಮಾವರ ಶ್ರೀ ಮೋನಪ್ಪ ಸೇರ್ವೆಗಾರರು ತಮ್ಮ 70ನೇ ವಯಸ್ಸಿನಲ್ಲಿ ಮೃತರಾದರು. ಇವರು ಹಲವು ವರುಷಗಳ ಕಾಲ ವಿಜಯ ಬ್ಯಾಂಕಿನ ಡೈರೆಕ್ಟರರೂ ಬ್ರಹ್ಮಾವರ ಶಾಖೆಯ ಸಲಹಾ ಮಂಡಳಿಯ ಅಧ್ಯಕ್ಷರೂ ಆಗಿದ್ದರಲ್ಲದೆ ಚಾಂತಾರು ಪಂಚಾಯ್ತು ಕೋರ್ಟಿನ ಪ್ರೆಸಿಡೆಂಟರಾಗಿಯೂ ಹಂದಾಡಿ ಪಂಚಾಯ್ತು ಬೋರ್ಡಿನ ಚೆಯರ್‌ಮೆನರಾಗಿಯೂ ದೀರ್ಘಕಾಲ ಸೇವೆ ಸಲ್ಲಿಸಿದ್ದರು

ಸತ್ಕಾರ ಕೂಟ

ಶಿರ್ವ, ಸ್ಥಳೀಯ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಮೆಡಿಕಲ್ ಆಫೀಸರಾಗಿದ್ದು, ಬಾರ್ಕೂರಿಗೆ ವರ್ಗಾಯಿಸಲ್ಪಟ್ಟ, ಡಾ| ಕೆ. ಆರ್. ವೆಂಕಟಕೃಷ್ಣರವರನ್ನು ಸತ್ಕರಿಸಿ ಗೌರವಿಸುವರೆ, ಸ್ಥಳೀಯ ಮೆಡಿಕಲ್ ರಿಲೀಫ್ ಎಸೋಸಿಯೇಶನಿನ ವತಿಯಿಂದ ತಾ. 4.7.65ರಂದು, ಡಾ। ವೈ. ಆರ್. ಶೆಟ್ರಿ ಅಧ್ಯಕ್ಷತೆಯಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಲಾಗಿತ್ತು. ಶ್ರೀ ಎಲ್. ಮೆಂಡೊನ್ಸರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಬಿ. ಜಯರಾಮ ಶೆಟ್ಟಿ, ಕೆ. ರಘುರಾಮ ಹೆಗ್ಡೆ, ಎಸ್. ಎನ್. ಸೀತಾರಾಮ ಹೆಗ್ಡೆ, ಚಾರ್ಲ್ಸ್ ಡಿಸೋಜ, ಡಾ| ಯು. ಕೆ. ಆಚಾರ್‌ರವರು ಭಾಷಣವಿತ್ತು ಡಾ| ಕೆ. ಆರ್. ವೆಂಕಟಕೃಷ್ಣರವರು ಮೆಡಿಕಲ್ ಆಫೀಸರ್ ಆಗಿ ಮತ್ತು ಮೆಡಿಕಲ್ ರಿಲೀಫ್ ಎಸೋಸಿಯೇಶನಿನ ಕಾರ್ಯದರ್ಶಿಗಳಾಗಿ ಸಲ್ಲಿಸಿದ ನಿಸ್ವಾರ್ಥ ಸೇವೆಯನ್ನು ಕೊಂಡಾಡಿ ಅವರಿಗೆ ಶುಭ ಕೋರಿದರು. ಮುಖ್ಯ ಅತಿಥಿಗಳು ಭಾಷಣವೀಯುತ್ತ ಜನತಾ ಸೇವೆಗೈಯಲು ಜನರ ಸಹಕಾರದಿಂದ ಮಾತ್ರ ಸಾಧ್ಯವಾಯಿತೆಂದು ತಿಳಿಸಿ, ಸತ್ಕಾರ ಕೂಟ ಏರ್ಪಡಿಸಿದುದಕ್ಕೆ ಕೃತಜ್ಞತೆಯನ್ನು ಸೂಚಿಸಿದರು. ಹೊಸ ಮೆಡಿಕಲ್ ಆಫೀಸರಾದ ಡಾ| (ಶ್ರೀಮತಿ) ಎಸ್. ಕೆ. ನಂಬಿಯಾರರು ತನ್ನ ಕೈಲಾದ ಸೇವೆಯನ್ನು ಸಲ್ಲಿಸುವುದಾಗಿ ಆಶ್ವಾಸನೆ ಇತ್ತು ಜನರ ಸಹಕಾರ ಕೋರಿದರು. ಅಧ್ಯಕ್ಷರ ಸಮಯೋಚಿತ ಭಾಷಣಾನಂತರ ಶ್ರೀ ಕೆ. ಎಂ. ಹೊಳ್ಳರು ಧನ್ಯವಾದವಿತ್ತರು.

ಪೆನ್ಶನರ ಮಹಾಸಭೆ

ತಾ. 1—7 65ರಲ್ಲಿ ನಿಶ್ಚಯಿಸಿದಂತೆ ತಾ. 11.7.65ನೇ ಭಾನುವಾರ ಬೆಳಿಗ್ಗೆ 10ಕ್ಕೆ ಉಡುಪಿ ಮುನ್ಸಿಪಾಲ್ ಬೇಸಿಕ್ ಗಾಂಧಿ ಮೆಮೋರಿಯಲ್ ಶಾಲೆಯಲ್ಲಿ (ಆಸ್ಪತ್ರೆ ಬಳಿ) ಉಡುಪಿ ಪೆನ್ಶನ್ ಪಡೆಯುವವರ ಮಹಾಸಭೆ ಜರಗಿಸುವುದಾಗಿ ನಿರ್ಣಯಿಸಲಾಗಿದೆ ಎಂದು ಮುನ್ಸಿಪಲ್ ಕೌನ್ಸಿಲರ್ ಶ್ರೀ ಎಂ. ಗೋಪಾಲಕೃಷ್ಣ ಅವರು ತಿಳಿಸುತ್ತಾರೆ.

ಮಡದಿ ತವರಿನಲ್ಲಿದ್ದಾಗ!

ನಿಲಯ ಸೇರಿದೆ ನಿಂತು ನೋಡಿದೆ
ಬೆಕ್ಕು ಮರುಗಿ ಒದರಿತು.
ಇರುವೆ ಹಿಂಡು ಸಾಲುಗೊಂಡು
ತಮ್ಮ ಪಯಣ ಬೆಳೆಸಿತು
ಮೇಲೆ ನೋಡಿದೆ ಇಲಿಯು ಓಡಿತು
ಬಲದಿ ಕುಳಿತು ಹೊರಳಿತು
ಯಾರು ಬೇಕು ಹೇಳು ಎನ್ನುತ
ಕಣ್ಣು ಪಿಳಿಕಿಸಿ ನೋಡಿತು
ಅಡಿಗೆ ಮನೆಯು ತಾಟು ತಂಬಿಗೆ
ಸಂಪು ಹೂಡಿ ಬಿದ್ದಿವೆ!
ಮೂಲೆ ಮೂಲೆಗು ಜೇಡಬಲೆಗಳು
ಮನದ ನೆಮ್ಮದಿ ಕೆಡಿಸಿವೆ!
ಮಾಡಿನಲ್ಲಿಯು ಟುಮ್ಮಿಸಿಕ್ಸ
ಮೌನ ತಾಳಿ ಕುಳಿತಿದೆ!
ಜಗುಲಿ ಮೇಲಿನ ಬೆಳ್ಳಿದೇವರು
ಹುಡಿಯ ಸ್ನಾನ ಮಾಡಿದೆ!
ಹಲ್ಲಿ ನುಡಿಯುತ ತಾಳ ಹಾಕಲು
ಸೊಳ್ಳೆಯೊಂದು ಹಾಡಿತು
ಮರುಳನೆನ್ನುತ ಕೆನ್ನೆ ಕಚ್ಚಿ—
ಮಡದಿ ನೆನಪು ಮಾಡಿತು
ಕಿಡಿಕಿಯಲ್ಲಿ ಗಾಳಿ ಸುಳಿಯಿತು
ನನಗೆ ಪ್ರಶ್ನೆ ಹಾಕಿತು
'ನಾನು ಹೋಗುವೆ ಏನು ಹೇಳಲಿ?'
ಎಂಬ ಭಾವದಿ ಸಳಿಯಿತು.
ಎತ್ತ ನೋಡಲಿ ಪ್ರಶ್ನೆ ಸುರಿಮಳೆ
ಏನು ಹೇಳಲಿ ಉತ್ತರ?
ಹೃದಯ ವೀಂಟೆಕು ವಿರಹಗೀತೆಯ
ಹೇಗೆ ಸಹಿಸಲಿ ಆತುರ!

—ಪಾಟೀಲ ಪುಂಡಲೀಕ-
ಗುರುಗಳು ಹಿರೇಬಾಗೇವಾಡಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

"ಎಲ್ಲಿರುವೆ ತಂದೆ ಬಾರೋ"

(ಎರಡನೇ ಪುಟದಿಂದ)

ದು ಕೊಡುವೆನೆಂದು ಮಾತು ಕೊಟ್ಟಿದ್ದೆ. ಐಸ್‌ಕ್ರೀಂಡಿಗಾಗಿ ತೆಗೆದಿಟ್ಟ 6 ಪೈಸೆಗಳನ್ನು ಈ ಬಡ ಭಿಕ್ಷುಕನಿಗೆ ಕೊಟ್ಟರೆ ನೀವೇನು ಹೇಳುತ್ತೀರಿ? ನಿಮ್ಮ ಒಪ್ಪಿಗೆ ಇದೆಯೇ?"

ಹುಡುಗರೆಲ್ಲಾ ಒಟ್ಟಾಗಿ "ಅಪ್ಪಾ ಆಗಬಹುದು, ಕೊಡಿರಿ. "ಎಂದು ಹೇಳಿದರು. ತಂದೆಗೆ ಸಂತೋಷವಾಯಿತು. ಅವರು ನಗೆಯೊಡನೆ 2ಪೈಸೆಯ ಮೂರು ನಾಣ್ಯಗಳನ್ನು ತೆಗೆದು ಆ ಭಿಕ್ಷುಕನಿಗೆ ಕೊಟ್ಟನು. ಭಿಕ್ಷುಕನು ಕೃತಜ್ಞತೆಯಿಂದ ನಮಸ್ಕರಿಸಿ "ನಿಮಗೂ ಈ ಹುಡುಗರಿಗೂ ದೇವರು ಒಳ್ಳೇದು ಮಾಡಲಿ" ಎಂದು ಹೇಳುತ್ತಾ ಅಲ್ಲಿಂದ ಹೊರಟು ತಿರುಗಿ ಹಾಡಲು ಶುರುಮಾಡಿದನು.

ಆ ಮೇಲೆ ರೈಲು ಬಂಡಿಯು ಮೆಲ್ಲಗೆ ಹೋಗತೊಡಗಿತು. ನನ್ನ ಕಣ್ಣೆದುರಿಗೆ ಆ ನಂತರದ ಸ್ಟೇಶನಿನ ಪ್ಲೇಟ್‌ಫಾರ್ಮು ಓಡಿ ಹೋಗುವಂತೆ ಕಂಡಿತು. ಭಿಕ್ಷುಕನು ಹಾಡುವುದನ್ನು ಕೂಡಲೇ ನಿಲ್ಲಿಸಿದನು ಬಂಡಿಯು ಇನ್ನೂ ಪೂರ್ಣವಾಗಿ ನಿಂತಿರಲಿಲ್ಲ. ಅಷ್ಟರೊಳಗೆ ಜನರೆಲ್ಲಾ ಇಳಿಯತೊಡಗಿದರು. ನಾನು ಕೆಳಗಿಳಿದು ಬುಕ್ ಸ್ಟಾಲಿಗೆ ಹೋಗಿ ಒಂದು ಫಿಲ್ಮ್ ಪತ್ರಿಕೆಯನ್ನು ಕೊಂಡು ಕೊಂಡೆನು. ಮನೆಗೆ ಹೋಗಿ ಮುಟ್ಟಲಿಕ್ಕೆ ಬೇಕಾದ ಬಸ್ ಚಾರ್ಜಿನ ಚಿಲ್ಲರೆ ಹಣವನ್ನು ಪೊಕೇಟಿನೊಳಗೆ ಹಾಕಿ— ಆ ಭಿಕ್ಷುಕ ರಾಮಪ್ಪನಿಗಾಗಿ ಅತ್ತಿತ್ತ ನೋಡಿದೆನು. ಅವನು ಬೇರೊಂದು ಕಂಪಾರ್ಟ್‌ಮೆಂಟಿಗೆ ಹೋಗುವ ಯತ್ನದಲ್ಲಿದ್ದನು. "ರಾಮಪ್ಪ" ಎಂದು ಕರೆದೆನು. ಅವನು ನನ್ನ ಕಡೆ ತಿರುಗಿ ಮುಖದಲ್ಲಿ ಆಶ್ಚರ್ಯದ ಸೂಚನೆಯಿಂದ ನನ್ನನ್ನು ನೋಡಿದನು. "ನಿನ್ನದು ಅತಿ ಚಲೋದಾದ ಸಂಗೀತ. ಇಗೋ, ತೆಗೆದುಕೋ" ಎಂದು ನಾನು ಹೇಳಿದೆನು. ಅವನು ಸಹಜವಾಗಿಯೇ ಕೈನೀಡಿದನು. ನಾನು ಚಿಲ್ಲರೆ ನಾಣ್ಯಗಳನ್ನು ಅವನ ಕೈಯೊಳಗೆ ಹಾಕಿ ಹೊರದಾರಿಯ ಕಡೆಗೆ ಬೇಗನೆ ಹೊರಟೆನು.

ತಿರುಗಿ ವಿಸಿಲ್ ಕೂಗಿತು. ಬಂಡಿಯು ಚಲಿಸತೊಡಗಿತು. ಭಿಕ್ಷುಕನು ಒಳಗೆ ಹೋದನು. ನಾನು ಸೇತುವೆಯ ಮೇಲೆ ಆಗ ಹೋಗುತಿದ್ದೆನು ಕೆಳಗೆ ಬಂಡಿಯು ಹೋಗುತ್ತಿದ್ದಾಗ ಚಕ್ರಗಳ ಕಟಕಟ ಶಬ್ದಗಳ ಸಂಗಡ ಪ್ರತಿಧ್ವನಿಸುವ ಮತ್ತು ಭಾವೋದ್ರೇಕವುಂಟುಮಾಡುವ "ಎಲ್ಲರುವೆ ತಂದೆಬಾರೋ" ಎಂಬ ಅವನ ಮೃದು ಮಧುರವಾದ ಕಂಠ ಧ್ವನಿಯು ಕೇಳಿಸುತಿತ್ತು.

ಅಮೃತ ಬಿಂದು

ಶೀಲವೆಂಬುದು ಬಿಳಿ ಕಾಗದದಂತೆ. ಅದರಲ್ಲಿ ಒಮ್ಮೆ ಕಪ್ಪು ಬಿತ್ತೆಂದರೆ ಅದನ್ನು ಒರಸಿ ತೆಗೆಯಲಾಗುವುದಿಲ್ಲ.

ಜೆ. ಜಾನ್ಸ್

o o o

ಸತ್ಯನಿಷ್ಠೆ ಜೀವನದ ತಳಗಲ್ಲು. ಅದನ್ನು ಚಿಕ್ಕಂದಿನಲ್ಲೇ ಅಭ್ಯಾಸ ಮಾಡದಿದ್ದರೆ ನಂತರ ಸಾಧಿಸುವುದು ಸಾಧ್ಯವಿಲ್ಲ.

ಜೆ. ಡೋವಿನ್

o o o

ದಯಾಪೂರಿತನೇ ಜ್ಞಾನಿಯೂ ಕೂಡ ಇತರರನ್ನು ಪ್ರೀತಿಸಿದವ, ಜ್ಞಾನಿಯಾಗಲಾರ. ದಯೆಯೇ ಪ್ರೀತಿಯ ತಳಹದಿ.

ಹೋಮರ್

o o o

ನಿಜ ಪ್ರೇಮದ ಸಂಪತ್ತಿದ್ದವರಿಗೆ ಮಾತ್ರ ಶೀಲದ ಪಾವಿತ್ರ್ಯದ ಅರಿವಿರುತ್ತದೆ.

ಟಾಗೋರ್

o o o

ಪ್ರತಿಯೊಂದು ಮನುಷ್ಯನು ಕಷ್ಟ ಭಾಗವನ್ನು ಬಿಟ್ಟು ಬೆಳಕಿನ ಮುಖವನ್ನು ನೋಡುವ ನಿರ್ಧಾರ ಸಾವಿರ ಸಂಪಾದನೆಯ ಶಕ್ತಿಗಿಂಥಾ ಹಿರಿದು.

ಜಾನ್ಸನ್

o o o

ನಗುಮುಖ, ಸವಿನುಡಿ ಇರುವವನ ಕಷ್ಟವೂ ಕೂಡ, ಎಣ್ಣೆ ನೀಡಿದ ಗಾಲಿಯಂತೆ, ಕರ್ಕಶ ಧ್ವನಿಗೊಡದೆ ಸರಾಗ ಸಾಗುತ್ತದೆ.

ಅನಾಮಿಕ

o o o

ನಿಷ್ಕಲ್ಮಷ ಹೃದಯದವನಿಗೆ ಅಲ್ಪದರಲ್ಲೇ ತೃಪ್ತಿಯೂ, ಸ್ವಲ್ಪದರಲ್ಲೇ ಶಾಂತಿಯೂ ದೊರೆಯುವದು.

ಥಾಮಸ್ ಕೆಂಪಿಸ್

o o o

ಹೃದಯದಲ್ಲಿರುವ ಆತ್ಮಸಾಕ್ಷಿಯೆಂಬ ಕಿರುಹಣತೆಯ ಬೆಳಕು ನಂದದಂತೆ ಎಚ್ಚರವಿರಲಿ.

ವಾಶಿಂಗ್‌ಟನ್

— — —

ಸತ್ಯ ಸಂಗತಿ

ಕೋತಿ ಮೇಲೆ ತುಂಬಾ ಪ್ರೀತಿ!

ಭಾರತದ ಮಂಗ ಮತ್ತು ಜರ್ಮನ್ ಮಕ್ಕಳ ಸ್ನೇಹಬಂಧನ!

'ಲೇಯ್...ಅತ್ತೆ ಮನೆಗೆ ಹೋಗ್ತಿಯೇನೇ?' ಎಂದು ಕೋತಿ ಆಡಿಸುವವನು ಕೇಳುತ್ತಾನೆ, ಕೋತಿ ತಲೆಯಲ್ಲಾಡಿಸುತ್ತದೆ. 'ತವರು ಮನೆಗೆ ಹೋಗ್ತೀಯಾ?' ಎಂದು ಅವನು ಮತ್ತೊಂದು ಪ್ರಶ್ನೆ ಹಾಕುತ್ತಾನೆ. ಕೆಳಗಿಟ್ಟಿದ್ದ ಗಂಟನ್ನು ತಲೆಯ ಮೇಲೆ ಇಟ್ಟುಕೊಂಡು ಕೋತಿಯು ಹೊರಡಲು ಧಾವಂತ ಪಡುತ್ತದೆ. ಸುತ್ತಲೂ ನಿಂತಿರುವ ಹುಡುಗರು ಬಿದ್ದು ಬಿದ್ದು ನಗುತ್ತಾರೆ. 'ಇಲ್ಲಿ ನೇರಿರೋ ಹುಡುಗ್ರೆಲ್ಲ ಒಂದ್ಸಾರಿ ಜೋರಾಗಿ ಕೈತಟ್ಟಿ!" ಎನ್ನುತ್ತಾನೆ ಕೋತಿ ಸೂತ್ರಧಾರ. ಪುಟ್ಟ ಪುಟ್ಟ ಕೈಗಳಲ್ಲಿ ತಟ್ಟಿದ ಚಪ್ಪಾಳೆಯೇ ಆಕಾಶ ಮುಟ್ಟುವಷ್ಟು ಜೋರಾಗಿರುತ್ತದೆ. ಕೋತಿಯ ಆಟ ನೋಡುವಾಗ ಹುಡುಗರಿಗೆ ಅಷ್ಟು ಸಂತಸ. ಕೋತಿಗೆ ಭಾರತದ ಮಕ್ಕಳಂತೆಯೇ ಜರ್ಮನಿಯ ಮಕ್ಕಳೂ 'ಮನ್ನಣೆ' ನೀಡುತ್ತಾರೆ.

ಈಗ ಭಾರತದ ಕೋತಿಗಳನ್ನು ಅನೇಕ ಜರ್ಮನ್ ಮನೆಗಳಲ್ಲಿ ಕಾಣಬಹುದು. ಅದನ್ನು ಕಂಡರೆ ಅಲ್ಲಿನ ಹುಡುಗರಿಗೆ ಇರುವ ಅಭಿಮಾನವು ಅಸ್ಟಿಷ್ಟಲ್ಲ. ಬಾಲದ ಕೋತಿ, ಚುಕ್ಕಿಯ ಆಮೆ, ಮೊಸಳೆಯ ಮರಿ, ನಾನಾ ಬಗೆಯ ಸರ್ಪಗಳು ಮುಂತಾದುವಕ್ಕೆಲ್ಲಾ ಅಲ್ಲಿ ಈಚೆಗೆ ಗಿರಾಕಿ ಹೆಚ್ಚುತ್ತಿದೆ, ತತ್ಫಲವಾಗಿ ಆಮದೂ ಹೆಚ್ಚುತ್ತಿದೆ. ಪ್ರಾಯಶಃ ದೇಶ ಸುಭಿಕ್ಷವಾಗ ತೊಡಗಿದ್ದರಿಂದ, ಜನರಿಗೆ ಇವುಗಳ ಮೇಲೆಲ್ಲಾ ಹಾರಲು ಹೆಚ್ಚು ದುಡ್ಡಿದೆಯೋ, ಏನೋ ಅಥವಾ ಇವುಗಳನ್ನು ತರಿಸಿಕೊಳ್ಳಲಿದ್ದ ತೊಂದರೆಗಳು ಎಷ್ಟೋ ಕಡಿಮೆಯಾಗಿದೆಯೆಂದೋ, ಏನೋ, ಅಂತೂ ಜರ್ಮನಿಯಲ್ಲಿ ಇವುಗಳನ್ನು ಈಚೆಗೆ ಹೆಚ್ಚಾಗಿ ಕಾಣಬಹುದು.

ಪ್ರಾಣಿಗಳನ್ನು ಕಂಡರೆ ಇರುವಷ್ಟೇ ಅಭಿಮಾನವು ಅಲ್ಲಿ ಪಕ್ಷಿಗಳನ್ನು ಕಂಡರೂ ಇದೆ. ಮೊದಲು, ಕೆಲ ಬಗೆಯ ಕಾಡು ಜಾತಿಯ ಹಾಡುವ ಹಕ್ಕಿಗಳ ಮೇಲೆ ಮಾತ್ರ ಇದ್ದ ಅಭಿಮಾನವು, ಈಚೆಗೆ ಭಾರತ, ಹಾಗೂ ಆಫ್ರಿಕಾದ ಹಕ್ಕಿಗಳ ಮೇಲೂ ತಂಗಿದೆ. ಸ್ಥಳೀಯ ಹಕ್ಕಿಗಳನ್ನು ಸಾಕುವುದಕ್ಕಿಂತ ಇವುಗಳನ್ನು ಸಾಕುವುದು ಸುಲಭವೆಂದು ಹೇಳಲಾಗಿದೆ.

ಹಿಂದಿನ ಕಾಲದಲ್ಲಿ, ಆಮೆ ಸಾಕುವವನಿಗೆ ಅತುಳೈಶ್ವರ್ಯ ಇರಬೇಕು ಎಂದು ಹೇಳಲಾಗುತ್ತಿತ್ತು. ಈಗ ಭಾರತದ, ದಕ್ಷಿಣ ಅಮೇರಿಕಾದ ಚುಕ್ಕಿ ಆಮೆಗಳನ್ನು ಅಗ್ಗದ ಬೆಲೆಗೆ ಕೊಳ್ಳಬಹುದಾಗಿರುವುದರಿಂದ, ಈಗ ಇವುಗಳನ್ನು ಅನೇಕ ಮನೆಗಳಲ್ಲಿ ಕಾಣಬಹುದು.

10—15 ಅಂಗುಲ ಉದ್ದದ ಮೊಸಳೆ ಮರಿ ಅಲ್ಲಿನ ಮನೆಗಳಲ್ಲಿ ಸರ್ವಸಾಧಾರಣ, 25 ಮಾರ್ಕುಗಳಿಗೆ ದೊರಕುವ ಮೊಸಳೆ ಮರಿ ಬೆಳೆದು ಬಿಟ್ಟಿತೆಂದರೆ, ಅದನ್ನು ಪ್ರಾಣಿ ಸಂಗ್ರಹಾಲಕ್ಕೆ ಕೊಟ್ಟು ಬಿಡಲಾಗುವುದು. ಅಲ್ಲಿ ಹಾವುಗಳ ಮಾರಾಟ ವಿಚಿತ್ರ ರೀತಿಯದಾಗಿದೆ. ಜರ್ಮನಿಯಲ್ಲಿ ಅವುಗಳನ್ನು ಗಾಜಿನಪೆಟ್ಟಿಗೆಯಲ್ಲಿ ಅಳತೆಮಾಡಿ ಮಾರಲಾಗುವುದು, ಕಾಳಿಂಗ ಹಾಗೂ ಹೆಬ್ಬಾವುಗಳಿಗಂತೂ ವಿಶೇಷ ಮಾರುಕಟ್ಟೆಯಿದೆ ನಾಯಿಗೆ ಡಿಮಾಂಡಿಗಿಂತ ಹೆಚ್ಚು; ಕೋತಿಗಳಿಗೆ, ಜರ್ಮನಿಯಲ್ಲಿ ಕೋತಿಗೆ 80ರಿಂದ 100 ಮಾರ್ಕುಗಳಾಗುತ್ತವೆ. ಈ ಪ್ರಾಣಿಗಳನ್ನೆಲ್ಲಾ ಬೆಳೆಸಲು ಬೇಕಾದ ಸೌಲಭ್ಯಗಳೂ ಅಲ್ಲಿ ಈಗ ಹೆಚ್ಚಾಗಿದೆ.

ಅಂತೂ, ಭಾರತದ ಮಂಗನ ಬಾಲ ಜರ್ಮನಿಯ ವರೆಗೆ ಬೆಳೆದಿದೆ ಎಂದು ಇದರಿಂದ ತಿಳಿಯಬಹುದಾಗಿದೆ!

———

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು

ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ. ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

In the Court of the Munsiff Udipi

R.I.A. 42/65 in O.S No. 395/62.

Baikadi Hasan Saheb and others —Petitioners.

Vs.

Sanjiva Hegde and others —Resp(t)s

Whereas the petitioners had filed the above application to implead Puttamma Shedthi, daughter of Chikkamma Shedthi, residing at Kammachi of Karkal Taluk, as supplemental 4th defendant, she is directed to appear before the Court at 11 a. m. on 21—7—1965 and file her objections if any, failing which the matter will be decided in her absence.

K. L. AITHAL,

Vakil for Petitioners.

28-6-65.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

NAVAYUGA 8—7—1965
Registered with the Registrar of News Papers for India under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೮-೭-೬೫ರಿಂದ ೧೪-೭-೬೫ರ ವರೆಗೆ

೧ ಮೇಷ

"ಸುಖಾಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ"ವೆಂಬ ಗಾದೆಯ ಮಾತು ನೆನಪಿರಲಿ. ಇಂದು ನಿಮ್ಮ ಭವಿತವ್ಯವು ಸುದೈವದ ಪರಮಾವಧಿಯನ್ನು ಮುಟ್ಟಿಸುದು. ಮುಂದಿನ ದಾರಿಯನ್ನು ನೀವು ಇಂದೇ ಕಂಡುಕೊಳ್ಳಬೇಕಾಗಿದೆ. ಸ್ವಯಂಶಕ್ತರಾದ ನಿಮಗೆ ಹೆರವರ ನೆರವೂ ಸಾಕಷ್ಟಿರೋಣದರಿಂದ ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಕಾರ್ಯವು ಸಿದ್ಧಿಸಲಿರುವವು.

೨. ವೃಷಭ

ಹಲವಾರು ತೆರದ ತೊಡಕು ತೊಂದರೆಗಳನ್ನು ನೀವಿಂದು ಎದುರಿಸಬೇಕಾಗಿ ಬರಲಿದೆ. ಆತ್ಮೀಯರ ವಂಚನೆಗೆ ಸಿಲುಕಿದ ನಿಮಗೆ ಮನೋರೋಗವಧಿಕವಾದೀತು. ಉದ್ಯೋಗ ವ್ಯವಹಾರಗಳಲ್ಲಿ ನಷ್ಟ ನಿರಾಶೆಯು ಹೆಚ್ಚಲಿದೆ. ವಿಶೇಷತಃ ರಾಜಕೀಯದಲ್ಲಿ ವಿಪಕ್ಷೀಯರಿಂದ ಪರಾಜಿತರಾಗುವಿರಿ. ಸ್ವಂತ ಆರೋಗ್ಯದ ಬಗ್ಗೆಗೆ ಏನೂ ತೊಂದರೆಯೆನಿಸದು. ವಾರಾದಿಯ 3 ದಿನಗಳು ಹೆಚ್ಚಿನ ದೋಷಕಾರಿಗಳಲ್ಲ.

೩. ಮಿಥುನ

ಆರಕ್ಕೆ ಹೆಚ್ಚದು ಮೂರಕ್ಕೆ ಕುಂದದೆಂಬ ಗಾದೆಯಂತೆ ಇಂದು ನಿಮ್ಮ ಪರಿಸ್ಥಿತಿಯಿಹುದು. ಪರಿಶ್ರಮಕ್ಕೆ ತಕ್ಕ ಫಲ ಲಭಿಸುವುದರಿಂದ ದಿನಯಾಪನೆಯು ದುಸ್ತರವಾಗದು. ಬಹ್ವಂಶ ಹಣವನ್ನು ಸದ್ವಿನಿಯೋಗ ಮಾಡುವಿರಿ. ದುರ್ಜನರ ಸಹವಾಸದಿಂದಾಗಿ ಜನಾಪವಾದಕ್ಕೆ ಸಿಲುಕುವ ಸಂಭವವಿದೆ. ಆಕಸ್ಮಿಕ ಪ್ರವಾಸವು ಗಂಟು ಬಿದ್ದೀತು. ತಾ. 9ರಿಂದ 13ರ ವರೆಗಿನ ದಿನಗಳು ಅನುಕೂಲವಾಗಿವೆ.

೪ ಕರ್ಕಟ

ಎಂತಹ ವಿಘ್ನವಿಪ್ಲವಗಳು ಬಂದರೂ ನೀವಿಂದು ನಿಮ್ಮ ಉದ್ಯಮ ವ್ಯವಹಾರಗಳನ್ನು ಮುಂದೆ ಸಾಗಿಸುವಿರಿ. ಮಾತ್ರವಲ್ಲ ನಿಮ್ಮ ಚಳೆಯೂ ಕೂಡ ಸಫಲವಾಗಲಿದೆ. ಜನತೆಯಿಂದ ಗೌರವಾದರಗಳನ್ನು ಪಡೆಯಲಿರುವಿರಿ. ಗೃಹತಾಪತ್ರಯವೊಂದು ಮಾತ್ರ ಸದಾ ನಿಮ್ಮ ಮನೋನೆಮ್ಮದಿಗೆ ಭಂಗ ತರಲಿದೆ. ವಾರಾಂತ್ಯದ 3 ದಿನಗಳು ನಿಮ್ಮ ಇಷ್ಟಾರ್ಥಗಳನ್ನು ಕೊನೆ ಹಾಯಿಸುವವು.

೫. ಸಿಂಹ

ಕೆಲಸವನ್ನೇನೋ ಮಾಡುವಿರಿ. ಆದರೆ ನಿಮ್ಮ ಕೆಲಸಕ್ಕೆ ಸದೃಶವಾದ ಫಲ ಸಿಗದ್ದರಿಂದ ಅನುದಿನದ ವ್ಯವಹಾರಗಳಿಗೆ ಕಷ್ಟವಾದೀತು. ಮೇಲಧಿಕಾರಿವರ ಕೂಡೆ ಕಲಹವಾಗುವದು. ಅಧಿಕಾರಿ ವರ್ಗದವರ ಪೀಡೆಯು ದಿನದಿಂದ ದಿನಕ್ಕೆ ಹೆಚ್ಚಲಿದೆ. ಪಿತ್ತೋಷ್ಣ ದೋಷದಿಂದಾಗಿ ಆರೋಗ್ಯವು ಕೆಡುವಂತಿದೆ. ಆಯಾಧಿಕ ವ್ಯಯ ಮಾಡುವ ನೀವಿಂದು ಸಾಲಿಗರ ಸೆಳೆತಕ್ಕೆ ಸಿಲುಕಲಿರುವಿರಿ. ತಾ. 8, 14 ಹೆಚ್ಚಿನ ದೋಷಕಾರಿಗಳಲ್ಲ.

೬. ಕನ್ಯಾ

ಬುದ್ಧಿವಿಗಳಾದ ನಿಮ್ಮ ಸಂಕಲ್ಪ ಮನೋರಥಗಳು ಏನೊಂದೂ ಅಡೆತಡೆಗಳಿಲ್ಲದೆ ಕಾರ್ಯರೂಪಕ್ಕೆ ಬರಲಿದೆ. ಧೈರ್ಯದಿಂದ ಕಾರ್ಯರಂಗದಲ್ಲಿ ಮುಂದರಿಯುವಿರಿ. ಬಂಧುಮಿತ್ರರು ತಾವಾಗಿ ಬಂದು ನಿಮಗೆ ನೆರವಾಗಲಿರುವರು. ಯಾವ ಭಾಗದಲ್ಲೂ ನಿಮಗಿಂದು ಕುಂದುಕೊರತೆಗಳು ಕಾಣಿಸಲಾರವಾದರೂ ಆರೋಗ್ಯದ ಬಗ್ಗೆಗೆ ಸ್ವಲ್ಪ ಜಾಗ್ರತರಾಗಿರಿ. ತಾ. 9, 10, 11 ಈ ದಿನಗಳಲ್ಲಿ ವಿಜಯ, ಲಾಭ ಗೃಹಸುಖಗಳು ಲಭಿಸುವವು.

೭. ತುಲಾ

ಸಹನೆಯಿಂದ ನೀವಿಂದು ದಿನಗಳೆಯಿರಿ. ಸದ್ಯಕ್ಕೇ ನಿಮ್ಮ ಅದೃಷ್ಟವು ಉತ್ತಮವಾಗಲಿದೆ. ಸ್ವಂತ ಆರೋಗ್ಯದತ್ತ ಹೆಚ್ಚಿನ ಗಮನ ಕೊಡಿರಿ. ಯಾರೊಬ್ಬರ ಮೇಲೂ ವಿಶ್ವಾಸವಿಟ್ಟು ಇಂದು ಕೆಲಸ ಮಾಡಲಾಗದು. ಆತ್ಮೀಯರೇ ನಿಮ್ಮನ್ನಿಂದು ವಂಚಿಸಲಿರುವರು. ಗೃಹತಾಪತ್ರಯಗಳು ಕೊಂಚ ಕಡಿಮೆಯೆನಿಸಿದರೂ ಉದ್ಯೋಗ ವ್ಯಾಪಾರ ವ್ಯವಹಾರಾದಿಗಳಲ್ಲಿ ಹಾನಿ ಹೆಚ್ಚಲಿದೆ. ತಾ. 8, 12, 13 ಇತರ ದಿನಗಳಿಗಿಂತ ಲೇಸು.

೮. ವೃಶ್ಚಿಕ

ಮರಳಿ ಯತ್ನವ ಮಾಡು ಎಂಬ ಗಾದೆಯಂತೆ ಮೇಲಿಂದ ಮೇಲೆ ಯತ್ನಿಸಿರಿ. ನಿಮ್ಮ ಬಯಕೆಯು ಈಡೇರಲಿದೆ. ಆರ್ಥಿಕ ಬಿಕ್ಕಟ್ಟಿನಿಂದ ನೀವಿಂದು ಮುಕ್ತರಾಗುವಿರಿ. ಆದರೆ ಮನೆಯಲ್ಲಿ ಮಾತ್ರ ನೆಮ್ಮದಿಯಿರದು. ಅರ್ಧಾಂಗಿಯ ಕೂಡೆ ಕಲಹವಾಗಲಿದೆ. ಸೋದರರ ಕೂಡೆ ಮನಸ್ತಾಪವುಂಟಾದೀತು. ನಿರೋಗಿಗಳಾದ ನಿಮಗೆ ತಾ. 9, 10, 11, 14 ಈ ದಿನಗಳಲ್ಲಿ ಮೃಷ್ಟಾನ್ನ ಭೋಜನ ಕಾರ್ಯಸಿದ್ಧಿ ವಿಜಯಗಳು ಲಭಿಸುವವು.

೯. ಧನು

ದಿನೇ ದಿನೇ ನಿಮ್ಮ ಅದೃಷ್ಟವು ಉತ್ತಮಗೊಳ್ಳುತ್ತಿಹುದು. ಆದ ಕಾರಣ ನೀವಿಂದು ಆಲಸಿಗರಾಗದೆ ಸ್ವಕಾರ್ಯದಲ್ಲಿ ಮುಂದರಿಯಿರಿ. ಸ್ವಲ್ಪ ಕಾಲಾವಕಾಶದಿಂದ ಫಲವು ಸಿದ್ಧಿಯಾಗಲಿದೆ. ಕಷ್ಟಸಹಿಷ್ಣುಗಳಾದ ಸೇವಕವೃಂದಕ್ಕೆ ಈ ಕಾಲವು ತುಂಬ ಅನುಕೂಲವಾಗಿಹುದು. ಸುಖಸಂತಸದಿಂದ ದಿನ ಕಳೆಯಲಿರುವರು. ಇಷ್ಟಿದ್ದರೂ ನಿಮ್ಮ ದೇಹ ಮನಸ್ಸುಗಳಿಗೆ ಸುಖ ನೆಮ್ಮದಿಯಿರಲೊಲ್ಲದು. ತಾ. 8, 12, 13 ಈ ದಿನಗಳಲ್ಲಿ ನಾನಾ ವಿಧದಿಂದ ಧನಾಗಮ ಮಿತ್ರ ಸಮಾಗಮವೂ ಆಗಲಿದೆ.

೧೦. ಮಕರ

ಸುರಗುರುಗಳ ಪೂರ್ಣದೃಷ್ಟಿ ನಿಮ್ಮ ಮೇಲಿದ್ದರೂ ಇತರ ಗ್ರಹರೆಲ್ಲರೂ ಪ್ರತಿಕೂಲರಾಗಿರುವುದರಿಂದ ನಿಮಗಿಂದು ನೆಮ್ಮದಿಯಿಂದ ಕಾಲ ಸಾಗದು. ಜನತೆಯ ಸಹಕಾರವು ಸಾಕಷ್ಟಿದ್ದರೂ ನಿಮ್ಮ ಕಾರ್ಯಗಳು ವಿಘ್ನವಿಪ್ಲವಗಳಿಂದಾಗಿ ಅರ್ಧದಲ್ಲೇ ನಿಲ್ಲುವವು. ಹಣದ ಬಿಕ್ಕಟ್ಟಿನಿಂದಾಗಿ ಮರ್ಯಾದೆಯಿಂದ ದಿನಗಳೆಯಲು ಕಷ್ಟವಾಗುವದು. ಆದರೂ ಗುರುದೃಷ್ಟಿಯೊಂದು ನಿಮಗೆ ರಕ್ಷಾಕವಚದಂತಿರುವುದರಿಂದ ತಾ. 8, 9, 10, 11, 14 ಈ ದಿನಗಳು ಅನುಕೂಲವಾಗಿ ಪರಿಣಮಿಸುವವು.

೧೧. ಕುಂಭ

ಮೇಲಿಂದ ಮೇಲೆ ಬರತಕ್ಕ ತೊಡಕು ತೊಂದರೆಗಳಿಂದಾಗಿ ನೀವಿಂದು ಇತಿಕರ್ತವ್ಯತಾ ಮೂಢರಾಗಿ ಉದಾಸೀನವಂ ತಳೆವಿರಿ. ವಿರೋಧಿವರ್ಗದವರು ಇದೇ ಸುಸಮಯ ಪ್ರತೀಕಾರಕ್ಕೆಳಸುವರು. ಆತ್ಮೀಯರ ವಿಯೋಗ ಸ್ವಜನರ ವಿರೋಧಗಳಿಗೆರವಾದ ನಿಮಗೆ ಆರೋಗ್ಯವೂ ಸರಿಯಿರಲಾರದು. ಮುಂದಿನ ಕಲ್ಯಾಣದ ದೃಷ್ಟಿಯಿಂದ ನೀವಿಂದು ದಿನಗಳೆಯಬೇಕಾಗಿದೆ. ತಾ. 9ರಿಂದ 13ರ ವರೆಗಿನ ದಿನಗಳು ಹೆಚ್ಚಿನ ಕಷ್ಟದಾಯಿಗಳಾಗಲಾರವು.

೧೨. ಮೀನ

ಗುರುವಿನ ಮೇಲೊಂದು ದೊಕ್ಕೆ ಎದ್ದಂತೆ ಇಂದು ಆಪತ್ತಿನ ಮೇಲೆ ವಿಪತ್ತುಗಳು ಮೇಲಿಂದ ಮೇಲೆ ಬರಲಿವೆ. ಆರ್ಥಿಕ ದುರವಸ್ಥೆಯಿಂದ ಕಂಗಾಲಾದ ನಿಮಗೆ ಶತ್ರುಜನರ ಕಾಟವು ವಿಶೇಷವಾದೀತು. ಮಾತ್ರವಲ್ಲ, ಕೈಹಿಡಿದ ಅರ್ಧಾಂಗಿ ಹುಟ್ಟಿದ ಮಕ್ಕಳೂ ಕೂಡ ನಿಮ್ಮ ಕೂಡೆ ಕಲಹಪ್ರಿಯರಾಗುವದರಿಂದ ಮೇಲೆ ಇಂದಿನ ದಿನಗಳು ಬಹಳ ಕಷ್ಟಕ್ಕೆ ಬರಲಿವೆ. ವಾರಾಂತ್ಯದ 3 ದಿನಗಳು ಇದ್ದುದರಲ್ಲಿ ಉತ್ತಮವೆನ್ನಬಹುದು.

ಕಪಟ ನಾಟಕ

ಕಾಗದದ ನಾವೆಯಲಿ
ಸಾಗರವ ದಾಟುವರೆ?
ಮಾಯಾ ಪ್ರಪಂಚದಲಿ
ಬೀಳದೆ ಬಾಳುವರೆ

ಎತ್ತೆತ್ತ ನೋಡಿದರು
ಸತ್ತುಹೂ ಮಾಯೆಯು
ಸಂಸಾರವೆಂಬುದೀ
ಮಾಯೆಯ ಛಾಯೆಯು

ಕಪಟ ವೇಷಗಳೆಲ್ಲ
ಕಾದಿಹವು ಕ್ಷಣಕ್ಷಣಕೆ
ನಾವೆಯೊಡೆಯನು ಪಾಪ
ಸೋತನೀ ಆಟಕ್ಕೆ.

ಪುರ. ಸ್ವಾರ್ಥಗಳಲಿಂದು
ತಿರುಳೆಂಬುದ ಳಿದಿಲ್ಲ
ಅರ್ಥ ಕಾಮಗಳೆದುರು
ಧರ್ಮದಾ ಸುಳಿವಿಲ್ಲ.

ದೇವರನು ಸುಡುತಲಿದೆ
ಉರಿವ ಬಡತನದಗ್ನಿ
ಗಾಸಿ ಹೊಂದಿಹ ನರನ
ಧಮನಿ ಹೋಯಿತು ಬತ್ತಿ.

ಗಗನವನು ಏರುತಿಹ
ರಾಜಕಾರಣಿ ಇವನು
ಅಂಜಿದಾತನ ಶಿರವ
ಕಡಿಯದಲೆ ಬಿಡನು.

ಬುದ್ಧಿವಂತರು ಎಂದು
ಉದುದ್ದ ಕೊಚ್ಚುವರು.
ಬುದ್ಧಿಹೀನರ ಮೇಲೆ
ಅಪಹಾಸ್ಯ ಮಾಡುವರು.

ಬೆವರ ಸುರಿಸುತ ದುಡಿವ
ಬಡಜನರ ಗತಿಯೇನು?
ಬಾಳ ಹೋರಾಟಕ್ಕೆ ತಾ
ಕೊಡಲಿರುವ ಬೆಲೆ ಏನು?

—'ಮಟ್ಪಾಡಿ'

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ —

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾ। ಕೊರಡ್ಕಲ್ ವೆಂಕಟ್ರಾವ್, ಬೆಳ್ತಣ್ಣು, ದ. ಕ.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆಂಗಿ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ.ಪ್ರತ್ಯೇಕ)
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ.

READ &
ADVERTISE IN
NAVAYUGA WEEKLY

Edited, Printed & Publishea by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೮೪] ಜುಲೈ ೧೫, ೬೫ [ಸಂಚಿಕೆ ೪೬.



Phone No. 226
ಫೋನ್ ಸಂಖ್ಯೆ:

leading nationalist weekly

೨೦
ಪೈಸೆ

ಕಥಾ ಪ್ರಪಂಚ

ಮೀನು ಮರಳಿ ನೀರಿಗಿಳಿದಾಗ

ಬರೆದವರು: ಶ್ರೀ ವಿ. ವಿ. ಗೂಳೂರ್.

ಮೀನು ತಾನಾಗಿಯೇ ಭೂಮಿಯ ಮೇಲೆ ವಾಸಿಸಲು ಬಯಸೀತೆ? ಮದುವೆಯಾದ ಹೊಸದರಲ್ಲಿ ಗಂಡನ ಜತೆ ನಲಿದಾಡಿಕೊಂಡಿರಬೇಕೆಂದು ಆಸೆಯಿತ್ತೇ ವಿನಃ ನಾನೇನು ಈ ಹಾಳು ಕೆಲಸಕ್ಕೆ ಸೇರಿಕೊಳ್ಳಬೇಕೆಂದು ಬಯಸಿದ್ದೆನೆ? ಹತ್ತರಿಂದ ಐದರ ವರೆವಿಗೂ ಕಾರಾಗೃಹ ವಾಸಿಯಾಗಿರಲು ಮದುವೆಯಾದ ಹೊಸದರಲ್ಲಿ ಯಾವ ಹೆಣ್ಣು ಬಯಸೀತ? ತನ್ನ ಸ್ವಂತ ಮನೆಯ ಸಾಮ್ರಾಜ್ಯವನ್ನು ಒಪ್ಪವಾಗಿ, ಓರಣವಾಗಿ ಇಡುವುದರಲ್ಲಿ ಒಂದು ಕವಿತೆಯನ್ನೇ ಬರೆದಷ್ಟು ಸಂತೋಷವನ್ನು ಕಾಣುತ್ತಾಳೆ ಹೆಣ್ಣು. ಅದು ಬಿಟ್ಟು ಈ ಹಾಳು ಸತ್ತ ಕಾಗದಗಳ ಜೊತೆ ಸರಸ ಯಾರಿಗೆ ಬೇಕಿತ್ತು?

ನನಗೆ ಆ ಗಂಡಸರುಗಳ ಮಧ್ಯೆ ಕುಳಿತು ಕೆಲಸ ಮಾಡಲು ನಾಚಿಕೆ. ಅಲ್ಲದೆ ದುಡಿದು ಸುಸ್ತಾಗಿ ಮನೆಗೆ 'ಅವರು' ಬಂದರೆ ನಾನೆಲ್ಲೋ ಆಫೀಸಿನಲ್ಲಿರುವುದೇ? ಮನೆಯಲ್ಲಿ ಹಣಕಾಸಿನ ಮುಗ್ಗಟ್ಟು ನಿಜ, ಆದರೆ ಅದಕ್ಕಾಗಿ ನಾನು ಕೆಲಸಕ್ಕೆ ಸೇರಿದರೆ ಎಲ್ಲಾ ಕಷ್ಟಗಳು ಪರಿಹಾರವಾದಾವೆ?

ಹುಟ್ಟಿಸಿದ ದೇವರು ಹುಲ್ಲು ಮೇಯಿಸಿಯಾನೆ? ಅನ್ನವನ್ನು ಹುಟ್ಟಿಸಿದ ಮೇಲೆಯೇ ಅಲ್ಲವೆ ದೇವರು ಜೀವಿಯನ್ನು ಹುಟ್ಟಿಸುವುದು? ಹೇಗೋ ಮನೆಯ ಕತೆ ಕಳೆಯುತ್ತದೆ. ಅದಕ್ಕೆ ಇವಳು ಗಂಡು ಬೀರಿಯಂತೆ ದುಡಿಯಬೇಕೇಕೆ?

ಎನ್ನುವುದು ನಮ್ಮತ್ತೆಯವರ ವಾದ. ಅಲ್ಲದೆ ಇಂತಹ ಕೆಲಸ ಮಾಡಿ ನಮ್ಮಜ್ಜಿಯ ಕಾಲದಿಂದಲೂ ರೂಢಿಯಿಲ್ಲ. ಒಮ್ಮೆಗೆ ನಾನು ಕೆಲಸಕ್ಕೆ ಸೇರಬೇಕೆಂದರೆ ಪ್ರಯಾಸವಾಯಿತು. ಮಾವನವರ ಸಾವಿನಿಂದ ನಮ್ಮ ಮನೆಯ ಪರಿಸ್ಥಿತಿ ಬಹಳ ಚಿಂತಾಜನಕವಾಯಿತು. ನಾನೂ ಅನೇಕ ರೀತಿ ಯೋಚಿಸಿದೆ. ನನ್ನ ಯಜಮಾನರ ಸಂಬಳದಿಂದ ಏನೂ ಸಾಗುವುದಿಲ್ಲ. ಯಾರಾದರೂ ಒಬ್ಬರು ದುಡಿಯಬೇಕು. ಮನೆಯಲ್ಲಿ ಯಾರಿದ್ದಾರೆ ದುಡಿಯುವುದಕ್ಕೆ? ನನ್ನ ಮೈದುನ, ನಾದಿನಿಯರು ಇನ್ನೂ ಚಿಕ್ಕವರು. ನಮ್ಮತ್ತೆಯನ್ನು ದುಡಿಯಿರಿ ಎಂದು ಹೇಳಲಾಗುತ್ತದೆಯೆ? ಕಡೆಗೆ ನಾನು ಒಪ್ಪಲೇ ಬೇಕಾಯಿತು.

ನಾನು ಎರಡನೇ ದರ್ಜೆಯ ಗುಮಾಸ್ತಳಾಗಿ ಸೇರಿ ಆಫೀಸಿಗೆ ಹೋದ ದಿವಸವನ್ನು ಜ್ಞಾಪಿಸಿಕೊಂಡರೆ ಈಗಲೂ ನಗು ಬರುತ್ತದೆ. ಮನೆಯಲ್ಲಿಯೇ ಆಟವಾಡಿಕೊಂಡಿದ್ದ ಮುದ್ದಿನಿಂದ ಬೆಳೆದ ಮಗುವನ್ನು ಸ್ಕೂಲಿಗೆ ಕಳುಹಿಸಿದರೆ ಹೇಗೋ ಹಾಗಾಯಿತು ನನ್ನ ಪರಿಸ್ಥಿತಿ. ಅವರು ನನ್ನನ್ನು ಆಫೀಸಿನಲ್ಲಿ ಬಿಟ್ಟು ಹೋದ ಕ್ಷಣ ದುಃಖ ಒತ್ತರಿಸಿ ಬಂತು. ಅಷ್ಟೊಂದು ಜನಗಳ ಮಧ್ಯೆ ನಾನು ಏಕಾಂಗಿಯಾಗಿದ್ದೆ; ಅಶೋಕ ವನದಲ್ಲಿನ ಸೀತೆಯಂತೆ. ಆಗಿನ ದಿವಸಗಳ ನೆನಪು ಈಗಲೂ ನಗು ಬರಿಸುತ್ತದೆ. ದಿನಾಲು "ಅವರು" ನನ್ನನ್ನು ಆಫೀಸಿನಲ್ಲಿ ಬಿಟ್ಟು ಹೋಗುತ್ತಿದ್ದರು ಮತ್ತೆ ಆಫೀಸಿನಿಂದ ಹಿಂದಿರುಗುವಾಗ ಕರೆದುಕೊಂಡು ಬರುತ್ತಿದ್ದರು. ಒಂಬತ್ತು ಗಂಟೆಗೆಲ್ಲಾ ಅತ್ತೆಯವರು ಎಲೆ ಹಾಕಿ ಊಟಕ್ಕೆ ಎಬ್ಬಿಸುತ್ತಿದ್ದರು.

ಆ ಉಪಚಾರಗಳೆಲ್ಲಾ ಈಗ ಏನಾದವು? ಬೇಗಿನ ಹೊತ್ತು ಅನ್ನ ಕಟ್ಟಿಗಿಂತ ಉತ್ತಮ ಆಹಾರವನ್ನು ಊಟಮಾಡಿದುದೇ ಮರೆತು ಹೋಗಿದೆ. ಅಂಬಲಿ, ಬೇಳೆಯ ಮೇಲಿನ ನೀರನ್ನೇ ದಿವ್ಯವಾದ ಆಹಾರ ಎಂದು ತಿಳಿಯ ಬೇಕಾಗಿದೆ. ಇವರ ಜೊತೆಗೆ ಅತ್ತೆ ಹಾಗು 'ಅವರ' ಸಿಡುಗುಟ್ಟಾಟ ಬೇರೆ. ನಾನು ಆಗಲೇ ಹೇಳಿದಂತೆ ನಾನೇನು ನನ್ನ ಇಚ್ಛೆಯಂತೆ ಕೆಲಸಕ್ಕೆ ಸೇರಲಿಲ್ಲ. ಅವರ ಇಚ್ಛೆ ಹಾಗೂ ಪರಿಸ್ಥಿತಿಯ ಒತ್ತಡಗಳಿಂದ ಸೇರಬೇಕಾಯಿತು. ಅದಕ್ಕೆ ಅವರೇ ಕಾರಣರು. ಈಗ ಅವರಿಗೆ ನನ್ನಲ್ಲಿ ಏನೋ ಒಂದು ರೀತಿಯ ಅಪನಂಬಿಕೆ. ನಾನೇನು ಮಾಡಿದೆ? ನಾನೇನು ಬದಲಾಗಿದ್ದೇನೆ? ದಿನ ಕ್ರಮೇಣ ಕೆಲಸ ಒಗ್ಗಿ ಹೋಯಿತು. ಈಗ ನನಗೆ ಮನೆಯಲ್ಲಿ ಕಾಲ ಕಳೆಯಲು ಬೇಸರವಾಗುತ್ತದೆ. ಆ ಆಫೀಸಿನಲ್ಲಿರುವ ಜನಗಳೇನು ಹುಲಿಗಳೇ ನನ್ನನ್ನು ತಿನ್ನುವುದಕ್ಕೆ? ನಾನು ಮೊನ್ನೆ ನನ್ನ ಆಫೀಸಿನ ಜೊತೆಯ ಗುಮಾಸ್ತನೊಂದಿಗೆ ಮಾತಾಡುತ್ತಾ ನಿಂತಿದ್ದೆ, ಅದನ್ನು ಅವರು ನೋಡಿದರು ಅದು ಅವರ ದೃಷ್ಟಿಯಲ್ಲಿ ಮಹಾಪರಾಧ. ನನಗೇನು ಅಣ್ಣ ತಮ್ಮಂದಿರಿಲ್ಲವೆ? ಆ ಕ್ಲರ್ಕ್‌ಗೇನು ಅಕ್ಕ ತಂಗಿಯರಿಲ್ಲವೆ? ಒಂದೇ ಆಫೀಸಿನಲ್ಲಿ ಕೆಲಸ ಮಾಡುವವರ ಜತೆ ಒಂದು ಮಾತಾಡಬಾರದೆ? ಎಲ್ಲೋ ಹಳೆಯ ಕಾಲದ ಗೊಡ್ಡು ಅನ್ನುವುದಿಲ್ಲವೆ? ಮೊದಲು ಮೊದಲು ನಾನೂ ಆಫೀಸಿನಲ್ಲಿ ಹಾಗೆಯೇ ಇದ್ದೆ. ಆಗ ಸಹೋದ್ಯೋಗಿಗಳೆಲ್ಲಾ ಇಟ್ಟಿದ್ದ ಹೆಸರು 'ಮುಟ್ಟಿದರೆ ಮುನಿ.' ಅದನ್ನು ಅಳಿಸಲು ಎಷ್ಟು ಕಷ್ಟಪಟ್ಟೆ ಅವರಿಗೇನು ಗೊತ್ತಾಗಬೇಕು?

ಇನ್ನು ನಮ್ಮತ್ತೆಯವರಿಗೆ ನನ್ನಲ್ಲಿರುವ ವಿಶ್ವಾಸವೋ? ಮೊದಲೇ ನಾನು ಕೆಲಸಕ್ಕೆ ಸೇರಿದುದು ಅವರಿಗೆ ಇಷ್ಟವಿಲ್ಲ. ಆಗ ನಾನೂ ಅವರ ತಾಳಕ್ಕೆ ಮೇಳ ಹಾಕುತ್ತಿದ್ದೆ. ಆದರೆ ನಮ್ಮ ಯಜಮಾನರಿಗೆ ಆಗ ಹಣ ಬೇಕಿತ್ತು. ಆದಕ್ಕಾಗಿ ಬಲವಂತವಾಗಿ ಸೇರಿಸಿದರು. ಆಗ ನನಗೆ ಕೆಲಸದಲ್ಲಿ ಸ್ವಲ್ಪ ಆಸಕ್ತಿ ಹುಟ್ಟಿತು. ಸ್ನೇಹಿತೆಯರ ಜೊತೆಯಲ್ಲಿ ಸ್ವಲ್ಪ ಸಂತೋಷದಿಂದಿರಲು ಪ್ರಾರಂಭಿಸಿದೆ. ಅದನ್ನು ನೋಡಿ ಸಹಿಸಲು ಇವರುಗಳಿಗೆ ಆಗುತ್ತಿಲ್ಲ. ನನ್ನ ಸ್ನೇಹಿತೆಯರನ್ನು ಕಂಡರಂತೂ ನಮ್ಮತ್ತೆ ಇಲ್ಲಿ ಹಾರಿ ಅಲ್ಲಿ ಬೀಳುತ್ತಾರೆ.

ರೀಟಾ—ಅವಳಿರುವುದೇ ಹಾಗೆ. ಅವಳೇನು ಬ್ರಾಹ್ಮಣಳೇ? ಅವಳು ಬಾಬ್ ಕಟ್ ಮಾಡಿಸಿಕೊಂಡಿದ್ದಾಳೆ ಅದರಲ್ಲಿ ತಪ್ಪೇನು ಅವಳಿಗೆ ಚೆನ್ನಾಗಿಯೇ ಕಾಣುತ್ತದೆ. ಅವಳು ಲಂಗವನ್ನು ಹಾಕಿಕೊಳ್ಳುತ್ತಾಳೆ ಅದು ಅವಳ ಇಷ್ಟ. ಅವಳು ಮನೆಗೆ ಬಂದರೆ, ನಮ್ಮತ್ತೆ ಯಾಕೆ ಹಾಗೆ ಸಿಡಿಮಿಡಿಗುಟ್ಟಬೇಕು? ಅವಳೇನು ಇವರ ದೇವರ ಪೂಜೆಗೆ ಅಡ್ಡಿ ಮಾಡಿದಳೇ? ಇವರ ಧರ್ಮದ ವಿಷಯವಾಗಿ ಮಾತಾಡಿದಳೇ? ಅವಳ ಪಾಡಿಗೆ ಅವಳು ಒಂದು ಆಫೀಸ್ ರೂಮ್‌ನಲ್ಲಿ ಕುಳಿತಿದ್ದು ಹೋಗುತ್ತಾಳೆ. ಅವಳ ವಿಚಾರಸರಣಿ ಕೆಲವು ಸಲ ಸರಿಎನ್ನಿಸುತ್ತದೆ.

"ಹೆಣ್ಣು ಮಕ್ಕಳನ್ನು ಹೆರುವ ಯಂತ್ರವೆ? ಸದಾ ಗಂಡ, ಮಕ್ಕಳು, ಕಸಮುಸರೆ ಇವುಗಳಲ್ಲಿಯೇ ಅವಳು ಸ್ವರ್ಗವನ್ನು ಕಾಣಬೇಕೆ? ಅವಳೂ ಗಂಡಿನಂತೆ ಸಮಾಜದಲ್ಲಿ ಬೆರೆತರೆ ತಪ್ಪೇನು?" ಇದು ರೀಟಾಳ ವಾದ. ಹಿಂದೆ ನನಗೆ ಈ ವಾದ ಹಿಡಿಸದಿದ್ದರೂ ಈಗ ಅದರಲ್ಲೂ ಸತ್ಯತೆ ಇದೆ ಅನ್ನಿಸುತ್ತದೆ.

ನನ್ನ ಇನ್ನೊಬ್ಬ ಸ್ನೇಹಿತೆ ಆಂಡಾಳ್. ಅವಳ ಎರಡು ಜಡೆ ನೋಡಿದರೆ ಎಲ್ಲಿಲ್ಲದ ಸಿಟ್ಟು ನಮ್ಮತ್ತೆಗೆ. "ಒಳ್ಳೆ ಕತ್ತೆಯ ಹಾಗೆ ಬೆಳೆದಿದ್ದಾಳೆ. ಇನ್ನೂ ಎರಡು ಜಡೆ ಹಾಕ್ಕೊಳ್ತಾಳೆ ಒಳ್ಳೆ ಮಕ್ಕಳ ಹಾಗೆ. ಮದ್ವೆ ಮಾಡಿದ್ರೆ ನಾಲ್ಕು ಮಕ್ಕಳಾಗೊ ವಯಸ್ಸು" ಹೀಗೆಲ್ಲಾ ಬಡಬಡಿಸುತ್ತಾರೆ. ದೇವರು ಕೊಡಲಿನ ಭಾಗ್ಯ ಕೊಡದಿದ್ದರೆ (ಅವರೇ ಹಾಗೆ ಮಾಡಿಸಿಕೊಂಡರೆ)ಯಾರೇನು ಮಾಡಲಾದೀತು? ಆ ಹುಡುಗಿಯು ಲಕ್ಷಣವಾಗಿ ಎರಡು ಜಡೆ ಹಾಕಿ ಕೊಂಡರೆ ತಪ್ಪೇನು? ಅವಳು ಮನೆಗೆ ಬಂದರೆ ಅಟ್ಟಕ್ಕೆ ಹಾರಿ ನೆಲಕ್ಕೆ ಬೀಳುತ್ತಾರೆ. ಈಗಿನ ಕಾಲದ ಹುಡುಗಿಯರೇ ಹಾಗೆ. ಸ್ವಲ್ಪ ಫ್ಯಾಶನ್ ಜಾಸ್ತಿ. ನನಗೇ ಕೆಲವು ಸಲ ಅವರ ಫ್ಯಾಶನ್ ಜಾಸ್ತಿ ಅನ್ನಿಸುತ್ತದೆ. ಆದರೆ ಫ್ಯಾಶನ್ ಜಾಸ್ತಿ ಎಂದು ಅವರನ್ನು ಜತೆಗೆ ಸೇರಿಸದೇ ಓಡಿಸುವುದಕ್ಕಾಗುತ್ತದೆಯೆ! ●

ಕೆಲಸವನ್ನೆ ಬಿಟ್ಟು ಬಿಡೆಂದು ಅವರ ಹಠ. ಮೊದಲು ಕೆಲಸಕ್ಕೆ ಸೇರಿಸಿದವರ್ಯಾರು? ಈಗ ನಾನು ಹಣದ ವಿಷಯದಲ್ಲಿ ಸ್ವತಂತ್ರಳಾದ ಮೇಲೆ ಅವರಿಗೆ ಹೊಟ್ಟೆಯುರಿ. ನಾನು ಕೆಲಸಕ್ಕೆ ಸೇರುವ ಮೊದಲ ಅವರಿಗೆ ದುಡ್ಡಿನ ಅವಶ್ಯಕತೆ ಇತ್ತು. ಆದರೆ ಇವತ್ತು ಸ್ವಲ್ಪ ಕಡಿಮೆ ಆಗಿದೆ. ಎಷ್ಟೇ ಆದರೂ ಇಂಜನಿಯರಿಂಗ್ ಡಿಪಾರ್ಟ್‌ಮೆಂಟಲ್ಲವೆ? ನಾನು ಎಷ್ಟೋ ಸಲ ಹೇಳಿದ್ದೇನೆ, 'ಆ ಎಂಜಲು ಕಾಸಿಗೆಲ್ಲಾ ಕೈ ಒಡ್ಡಬೇಡಿ' ಎಂದು ಅದು ಅವರಿಗೆಲ್ಲಿಯ ಲಕ್ಷ್ಯ. ಕೆಟ್ಟ ಕೆಲಸಗಳೆಲ್ಲಾ ಮಾಡುವಾಗ ಚೆನ್ನಾಗಿಯೇ ಇರುತ್ತವೆ. ಬಾಯಿ ಕೆಟ್ಟಾಗ ತಿನ್ನಲು ಕಡಲೇ ಕಾಯಿ ರುಚಿಯಾಗಿಯೇ ಇರುತ್ತದೆ. ತಿಂದ ಮೇಲೆ ತಾನೇ ಗೊತ್ತಾಗುವುದು ಅದರ ಪರಿಣಾಮ. ಅವರು ಅದನ್ನು ಯೋಚಿಸದೆ ಸುಮ್ಮನೆ ನನ್ನನ್ನು ಕೆಲಸದಿಂದ ಬಿಡಿಸಲು ಆತುರರಾಗಿದ್ದಾರೆ.

ಗಂಡಸು ತನ್ನ ಏಕೈಕ ಅಜೇಯ ಶಕ್ತಿ ಹೆಣ್ಣೆಂದು ಬಹಳ ಹಿಂದಿನಿಂದ ತಿಳಿದಂತೆ ಕಾಣುತ್ತದೆ. ಅದಕ್ಕಾಗಿಯೇ ಅವಳನ್ನು ತುಳಿಯುತ್ತಾ ಬಂದಿದ್ದಾನೆ. ಹೆಣ್ಣನ್ನು ತಾಯಿ ದೇವಿ ಎಂದೆಲ್ಲಾ ಪೂಜಿಸಿ ದೂರವಿಟ್ಟ ಕಾಲ

(ಹದಿನೈದನೇ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	$5\frac{1}{2}$
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	$6\frac{1}{4}$
24 ತಿಂಗಳಿಂದ	36 ತಿಂಗಳ ಕೆಳಗೆ	$6\frac{3}{4}$
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	$7\frac{1}{4}$
60 ತಿಂಗಳಿಂದ	84 ತಿಂಗಳ ಕೆಳಗೆ	$7\frac{1}{2}$
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ		4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Phone No. 226.

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿಂದು ಮುಂದಿನ ಕೂಡಿರಬೇಕು. ಕಾಗದದ ಒಂದೇ ಮಗ್ಗುಲಲ್ಲಿ ಬದಿ ಅಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅದನ್ನು ಪೋಸ್ಟ್ ಕಾರ್ಡಿನಲ್ಲಿ ಸ್ಪಷ್ಟವಾಗಿ ಬರೆದು ಕಳಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಲೇಖನ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ.

ಸೇವಾ ಕಾಗದದ ಕಾರಖಾನೆ ಮೇಲಿನ ನೋಟ.

ಎಡ: ಒಣಗಿಸುವ ವಿಭಾಗದ ಕಾಗದ ತಯಾರಿಸುವ ಯಂತ್ರ

ಬಲ: ನೀರು ತಿಳಿಸುವ ಯಂತ್ರ.

ಕೆಳಗಿನ ಸಾಲು

ಎಡ: ದಲ್ಪು ತಯಾರಿಸುವ ವಿಭಾಗ.

ಬಲ: ಹುಲ್ಲನ್ನು ಕಾಸ್ಟಿಕ್ ಸೋಡಾದೊಂದಿಗೆ ಬೇಯಿಸುವ ವಿಭಾಗ.

ನವಯುಗ

ಸಂಪುಟ ೪೪ | ಉಡುಪಿ : Vol.44

ಸಂಚಿಕೆ ೪೬ | ೧೫—೭—೧೯೬೫ : No. 46

ಭಾರತದ ನೈತಿಕ ವಿಜಯ

ಭಾರತ ಪಾಕಿಸ್ತಾನಗಳ ನಡುವೆ ಆದ ಗಡಿ ಒಡಂಬಡಿಕೆಯೊಂದು 'ಮಹತ್ವಪೂರ್ಣ ಘಟನೆ'ಯೆಂದೇ ಹೇಳಬೇಕು. ಬ್ರಿಟಿಷ ಪ್ರಧಾನಿಯವರ ಪ್ರಯತ್ನಗಳು ಕೊನೆಗೂ ಯಶಗಳಿಸಿದುವು. ಕಾಮನ್‌ವೆಲ್ತ್ ರಾಷ್ಟ್ರಗಳು ಪರಸ್ಪರ ಹೋರಾಡುತ್ತಿರುವುದು ಸಲ್ಲದೆಂದು ಭಾವಿಸಿದ ಅವರು ಸಂಧಾನದ ಪ್ರಯತ್ನಕ್ಕೆ ತೊಡಗಿದರು. ಕಚ್ಛ-ರಣದ ಗಡಿಯ ಸಂಬಂಧದಲ್ಲಿ ಸ್ನೇಹಮಯವಾದ ವಾತಾವರಣದಲ್ಲಿಯೇ ಒಡಂಬಡಿಕೆಯನ್ನು ಮಾಡುವ ಬಗ್ಗೆ ದಾರಿಯನ್ನು ಸ್ವಚ್ಛಗೊಳಿಸಲಾಯಿತು. ಉಭಯ ಸೇನೆಗಳೂ ಹೋರಾಟಕ್ಕೆ ಮೊದಲಿದ್ದಲ್ಲಿಗೆ ಹಿಂತೆರಳುವ ಕಾರ್ಯವೂ ಮುಗಿಯಿತು. ಅಧಿಕಾರಿ ಮಟ್ಟದಲ್ಲಿ ಪ್ರಾರಂಭವಾಗಬೇಕಾದ ಮಾತುಕತೆಗೆ ಮೊದಲು ಸಭೆಯು ಪಾಕಿಸ್ತಾನದಲ್ಲಿಯೇ ಕೂಡುವುದೆಂದೂ ನಿಶ್ಚಿತವಾಗಿದೆ. ಈಗ ಇಕ್ಕಡೆಯವರೂ ತಮ್ಮ ತಯಾರಿಯಲ್ಲಿ ತೊಡಗಿದ್ದಾರೆ.

ಕಚ್ಛ ಸಂಬಂಧದ ಒಡಂಬಡಿಕೆಯು ಭಾರತಕ್ಕೆ ಅಪಮಾನಕಾರಕವೆಂದು ಹೇಳುವವರಿದ್ದಾರೆ. ಆದರೆ ಅಪಮಾನವಾಗುವಂತಹ ಯಾವ ಶರ್ತಗಳೂ ಒಡಂಬಡಿಕೆಯಲ್ಲಿರುವುದಿಲ್ಲ. ಗುಂಡನ್ನು ಸಜ್ಜುಗೊಳಿಸಿ ಶತ್ರುವಿನ ಆಗಮನವನ್ನು ಎದುರು ನೋಡುತ್ತ ಇದನ್ನು ಸಮಯ ಕಾಪ್ರಬಹುದು? ವೈರಿಗಳು ಹೇಳುವುದಿಲ್ಲ. ಆಕ್ರಮಣದಿಂದ ಸ್ವರಕ್ಷಣೆ ಮಾಡಿಕೊಳ್ಳುವಲ್ಲಿ ಇದನ್ನು ಎಚ್ಚರಿಕೆಯಿದ್ದರೂ ಸಾಲದು. ಅಂದರೆ, ಇದರ ಕೈಯಲ್ಲಿ ಹದರಿ ಭಾರತವು ಒಪ್ಪಂದಕ್ಕೆ ಸಹಿ ಹಾಕಿತು ಎಂದರ್ಥವಲ್ಲ. ನೆರೆಯ ರಾಷ್ಟ್ರಗಳೊಡನೆ ಸ್ನೇಹದಿಂದಿರಬೇಕೆಂಬ ದೇಶದ ನಮ್ಮ ಆಶಯ. ಒರಿಯ ಸ್ನೇಹಕ್ಕಾಗಿ ದೇಶವನ್ನು ಬಲಿಗೊಡುವ ಹೀನಕೃತ್ಯವನ್ನು ಮಾತ್ರ ನಾವೆಂದೂ ನೂಡಲಾರೆವು. ಈಗ ನಡೆದ ಒಡಂಬಡಿಕೆಯು ನೇರ ಮಾತುಕತೆಗಳಿಗೆ ಬಾಗಿಲನ್ನು ತೆರೆಯಿತೇ ಹೊರತು, ಕಚ್ಛ-ರಣದಲ್ಲಿ ಪಾಕಿಸ್ತಾನಕ್ಕೆ ಪಾಲು ಕೊಟ್ಟಿರುವುದಿಲ್ಲವೆಂಬುದನ್ನು ಗಮನಿಸಬೇಕು. ಮಾತುಕತೆಯ ವೇಳೆಯಲ್ಲಿ ಯಾರಿಗೆ ಎಷ್ಟು ಭೂಮಿ ಬೇಕು ಎಂದು ಕೇಳಿ ಹಂಚುವ ಕಾರ್ಯವೂ ಇಲ್ಲ. ಒತ್ತಾಯಕ್ಕೆ, ಬಲಾತ್ಕಾರಕ್ಕೆ ಅಥವಾ ಸೈನಿಕ ಶಕ್ತಿಗೆ ತಲೆತಗ್ಗಿಸುವಂತೆಯೂ ಇಲ್ಲ. ಎರಡು ದೇಶಗಳ ನಡುವಿರುವ ಸೀಮೆಯನ್ನು ಸರಿಯಾಗಿ ಪರಿಶೀಲಿಸಿ ಅದನ್ನು ಗುರುತಿಸುವುದಷ್ಟೇ ಟ್ರಿಬ್ಯುನಲಿನ ಕೆಲಸ. ಸಿಂಧ ಕಚ್ಛಗಳ ಗಡಿ ಭಾರತದ ವಿಭಜನೆಗೆ ಸಾಕಷ್ಟು ಮೊದಲೇ ಗೊತ್ತುಪಡಿಸಿರುವುದರಿಂದ ಅದರಲ್ಲಿ ಯಾವುದೇ ವಿವಾದಕ್ಕೆ ಅವಕಾಶವಿರುವುದಿಲ್ಲ. ಆದುದರಿಂದ, ಸಂಧಾನದ ಮಾತುಕತೆಗೆ ಒಪ್ಪಿದ ಭಾರತವು ತನ್ನ ನೀತಿಗನುಸಾರವಾಗಿಯೇ ನಡೆದಿದೆ. ಇದು ಗೌರವ ತರಬಲ್ಲುದೇ ಹೊರತು ಅಗೌರವವನ್ನಲ್ಲ.

ಬ್ರಿಟಿಷ್ ಪ್ರಧಾನಿಯಿಂದ ಬಹಳ ದಿನ ಮೊದಲೇ ಬಂದಿದ್ದ ಸಂಧಾನದ ಪ್ರಸ್ತಾಪವನ್ನು ತಿರಸ್ಕರಿಸುತ್ತ ಬಂದುದು ಪಾಕಿಸ್ತಾನ. ಅದು ಕಚ್ಛ-ರಣದ ಸೀಮೆಯೊಡನೆ ಸಮಗ್ರ ಪಾಕ್-ಭಾರತ (ಕಾಶ್ಮೀರ ಕೂಡ) ಗಡಿಯನ್ನೂ ಗಂಟು ಹಾಕುವ ಪ್ರಯತ್ನ ಮಾಡುತ್ತಲೇ ಇತ್ತು. ಮಾತ್ರವಲ್ಲ, ಉಭಯತರರಲ್ಲಿರುವ ಇನ್ನೂ ಕೆಲವು ಸಮಸ್ಯೆಗಳನ್ನೂ ಕೂಡಿಸಿ ಪ್ರಸಂಗವನ್ನು ಭೀಕರಾಕಾರಕ್ಕೆ ತರುವ ಇರಾದೆಯೂ ಅದಕ್ಕಿತ್ತು. ಆದರೆ, ಭಾರತವು ಈ ಬಗೆಯ ಬೆದರಿಕೆಗೆ ಮುಂದೆ ಬಗ್ಗಲಿಲ್ಲ. ಬರಿಯ ಕಚ್ಛ-ರಣ ಗಡಿಯ ಸಂಬಂಧದಲ್ಲಿ ವಿಲ್ಸನ್ ಸೂಚನೆಯಂತೆ ಸಮರ ವಿರಾಮಕ್ಕೆ ಒಪ್ಪಿತು; ಗಡಿಯಲ್ಲಿ ೧೯೬೫ರ ಜನವರಿ ಒಂದರಂದು ಇದ್ದ ಪರಿಸ್ಥಿತಿಯನ್ನು ಉಳಿಸಿಕೊಳ್ಳಬೇಕೆಂದು ಹೇಳಿತು. ಪಾಕ್ ಮೊದಲಿಗೆ ಒಪ್ಪಿಕೊಳ್ಳದಿದ್ದರೂ ಮುಂದೆ ಒಪ್ಪಿಕೊಂಡಿತು. ಅಂದರೆ, ಭಾರತದ ದೃಢನೀತಿ ಗೆದ್ದಿತು. ಇದರಿಂದ ಭಾರತದ ಗೌರವ ಹೆಚ್ಚಾಗಲಿಲ್ಲವೆ? ಪ್ರಧಾನಿ ಶಾಸ್ತ್ರಿಯವರು ನಿಜಕ್ಕೂ ಈ ದಿಸೆಯಲ್ಲಿ ಯಶಗಳಿಸಿದ್ದಾರೆ; ದೇಶದ ನೀತಿಯನ್ನು ನೆಮ್ಮಿ ಹಿಡಿದಿದ್ದಾರೆ. ಇದು ಭಾರತದ ನೈತಿಕ ವಿಜಯವೆನ್ನಲೇ ಬೇಕು.

ರಾಷ್ಟ್ರಪತಿ ಡಾ| ರಾಧಾಕೃಷ್ಣನ್‌ರು ಇತ್ತೀಚೆಗೆ ಮಾತನಾಡುತ್ತ ಕಮ್ಯೂನಿಸ್ಟ್ ಚೀನಾ ಮತ್ತು ಪಾಕಿಸ್ತಾನಗಳೊಡನೆ ಒಡಂಬಡಿಕೆಯನ್ನು ಮಾಡಿಕೊಳ್ಳುವ ಅಗತ್ಯವನ್ನು ಪ್ರಸ್ತಾಪಿಸಿದರು. ದೇಶದ ಅಭಿವೃದ್ಧಿಗಾಗಿ ಈ ಬಗೆಯ ಒಪ್ಪಂದ ಅಗತ್ಯವೆಂದವರ ಅಭಿಪ್ರಾಯ. ಇದು ನಿಜ. ಆದರೆ, ಅಭಿವೃದ್ಧಿಗಾಗಿ ಒಡಂಬಡಿಕೆ ಮಾಡುವುದೆಂದರೆ, ದೇಶದ ಭೂಭಾಗವನ್ನು ದಾನಮಾಡುವುದಲ್ಲ. ಆಕ್ರಮಣಕ್ಕೆ ಗುರಿಯಾಗುವುದಲ್ಲ. ಸಂದರ್ಭ ಒದಗಿದಾಗ ಈ ಎರಡು ದೇಶಗಳೊಡನೆ ಸ್ನೇಹ ಸಂಬಂಧವನ್ನು ಬೆಳೆಸಬೇಕು; ವಿವಾದಗಳಿಗೆ ಅವಕಾಶಕೊಡಬಾರದು ಎಂದು ಇದರರ್ಥ. ದಿ| ಪ್ರಧಾನಿ ಜವಾಹರಲಾಲರೂ ಇದೇ ಅಭಿಪ್ರಾಯದಿಂದ ಚೀನಾದೊಡನೆ ಪಂಚಶೀಲ ತತ್ವದಂತೆ ಅನಾಕ್ರಮಣ ಒಡಂಬಡಿಕೆ ಮಾಡಿಕೊಂಡರು. ಆದರೆ, ಕೆಂಪು ಚೀನಾ ಸ್ನೇಹಕ್ಕೆ ದ್ರೋಹ ಬಗೆಯಿತು. ಇಂದಿನದಾದರೂ ಭಾರತ-ಚೀನಾ ಗಡಿ ವಿವಾದ ಪರಿಹಾರಕ್ಕೆ ಕೊಲಂಬೊ ರಾಷ್ಟ್ರಗಳ ಮಂಡಿಸಿದ ಸಲಹೆಗಳು ಚೀನಾದ ಮುಂದಿವೆ. ಅದನ್ನದು ಒಪ್ಪಿಕೊಂಡರೆ ಇಷ್ಟರಲ್ಲೇ ಕಚ್ಛರಣದ ಬಗ್ಗೆ ಪ್ರಗತಿಯಾದಂತೆಯೇ ಅದೂ ಪರಿಹಾರವಾಗಬಹುದು. ಪ್ರಧಾನಿ ಶಾಸ್ತ್ರಿಯವರು ಪಾಕಿಸ್ತಾನಕ್ಕೆ ಅನಾಕ್ರಮಣ ಒಡಂಬಡಿಕೆ ಮಾಡಿಕೊಳ್ಳುವಂತೆ ಕರೆಯಿತ್ತಿದ್ದಾರೆ. ಹಿಂದೆ ನೆಹರು ನೀಡಿದ್ದ ಈ ಕೊಡುಗೆಯನ್ನು ಅದು ಉದಾಸೀನದಿಂದ ತಿರಸ್ಕರಿಸಿದ್ದರು. ಈಗ ಅದರ ಭಾರತದೊಡನೆ ಈ ಬಗೆಯ ಒಡಂಬಡಿಕೆ ಮಾಡಿಕೊಳ್ಳಲು ಮುಂದೆ ಬಂದರೆ, ಉಭಯತರರಿಗೂ ನೆಮ್ಮದಿಯಾಗುವುದು. ರಾಷ್ಟ್ರಪತಿ ರಾಧಾಕೃಷ್ಣನ್‌ರ ಮಾತು ನ್ಯಾಯೋಚಿತವಾದುದೇ. ಭಾರತ ಸರಕಾರವೂ ಅದು ತಳೆದಿರುವ ನಿಲುವು ಇದಕ್ಕೆ ವ್ಯತಿರಿಕ್ತವಾಗಿರುವುದಿಲ್ಲ. ಆದರೆ, ಒಂದ ಕೈ ಬೀಸಿದರೆ, ಸಪ್ಪಳವಾಗುವುದು ಇಲ್ಲ.

ಕರ್ನಾಟಕ-ಮಹಾರಾಷ್ಟ್ರ

ಕರ್ನಾಟಕ-ಮಹಾರಾಷ್ಟ್ರಗಳ ಗಡಿಯ ವಿವಾದದತ್ತ ಪ್ರಧಾನಿ ಶಾಸ್ತ್ರಿಯವರು ಶೀಘ್ರದಲ್ಲೇ ಗಮನ ಹರಿಸುವರೆಂದು ದಟ್ಟವಾದ ವದಂತಿ ಹಬ್ಬಿದೆ. ಮಹಾರಾಷ್ಟ್ರೀಯರು ತಮ್ಮ ಸಾಧನೆಯನ್ನು ನಿರಂತರವಾಗಿ ಮುಂದುವರಿಸುತ್ತಲೇ ಇದ್ದಾರೆ. ಗೋವೆಯ ಸೂತ್ರಧಾರರಿಂದ ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷವು ತಮ್ಮನ್ನು ಅಧಿಕಾರ ಗದ್ದುಗೆಗೇರಿಸಿದ ಗೋವನ್ನರು ಗೋವೆಯು ಮಹಾರಾಷ್ಟ್ರದಲ್ಲಿ ವಿಲೀನವಾಗಬೇಕೆಂಬ ಅಭಿಪ್ರಾಯ ಪ್ರಕಟಿಸಿದ್ದಾರೆಂದು ಹೇಳಲಾಗಿದೆ ... ಮಹಾರಾಷ್ಟ್ರ ಸರಕಾ

(ಹದಿನಾಲ್ಕನೇ ಪುಟ ನೋಡಿರಿ)

ವಚನ ಸುಧೆ

ಅಭಯಂ ಮಿತ್ರಾದಭಯ ಮಮಿತ್ರಾತ್॥

(ಅಥರ್ವ ವೇದ, ೧೯-೧೫-೬)

೦ ಮಿತ್ರನಿಂದ ನಿರ್ಭಯತೆ ಪ್ರಾಪ್ತವಾಗಲಿ; ಶತ್ರುವಿನಿಂದ ಕೂಡ ನಿರ್ಭಯತೆ ಪ್ರಾಪ್ತವಾಗಲಿ.

೦೦ ಮಿತ್ರರಿಗೆ ನಾವೆಂತು ಹೆದರುವುದಿಲ್ಲವೋ ಅಂತೆಯೇ ಶತ್ರುವಿಗೂ ಅಂಜದಿರಬೇಕು. ಮನಸ್ಸಿನಲ್ಲಿ ಧೈರ್ಯ ತಂದುಕೊಳ್ಳುವುದರಿಂದ ಬಲ ಹೆಚ್ಚುವುದು; ಧಾರ್ಮಿಕನು ನಿರ್ಭಯನು. ತನ್ನ ಆಚರಣೆಯನ್ನು ಧರ್ಮಕ್ಕನುಕೂಲಗೊಳಿಸುವುದು, ಪರಮಾತ್ಮನನ್ನು ಉಪಾಸಿಸುವುದು, ಸತ್ಯ ಮತ್ತು ಪ್ರೇಮಗಳಿಂದ ತನ್ನ ಮನಸ್ಸನ್ನು ನಿರ್ಭಯಗೊಳಿಸುವುದೇ ಮಾನವ ಧರ್ಮ.

ನರಸಣ್ಣನ ಸರಸ



"ಹೀಗೇ ನಾಲ್ಕು ನಕ್ಷತ್ರ ದಿನ ಕಾದರೆ ಸರಕಾರವೇ ನಮ್ಮ ಕೈಯಲ್ಲಿ ಬರುತ್ತೆ...."

ಗೇಹ ರಾಜ್ಯದಲ್ಲಿ

ಕಾಲಕ್ಕೆ ತಕ್ಕ ಕೋಲ

"ಕೇಳಿದ್ಯೇನೆ?'

"ಏನಂತೆ?'

"ಅಲ್ಲಾ, ಯಾವಾಗ್ಲೂ ಹೌದೂಂತ ಅನ್ನೋಳು ಇವತ್ತು ಏನು ಅಜ್ಞಾನಿಯಂತೆ ಏಕೆ ತೋರ್ಸ್ಕೊಂಡೇಂತ?"

"ಅಲ್ರಿ, ನಾನು ಕೇಳಿರ್ತೇನೆ ನೂರಾರು ಸಂಗ್ತಿ. ನೀವು ಎತ್ತೋದು ಯಾವುದೂಂತ ಜೇಗ್ ನನ್ಗೆ ಗೊತ್ತಾಗ್ಬೇಕು?'

"ಅಲ್ವೆ, ದೊಡ್ಡ ರಾಜಕೀಯ ಸ್ತ್ರೀಯಂತೆ ಮಾತಾಡೋಕೆ ಕಲಿತು ಬಿಟ್ಟೆಯಲ್ಲ?'

"ಯಾಕೆ? ಏನಾಯ್ತು?'

"ಆಗೋದೇನು ಮತ್ತೆ? ಇಂತಹ ವಿಷಯ ಕೇಳಿದ್ಯಾ ಅಂತ ಅಂದ್ರೆ ಹೌದೂಂತ ಅನ್ನೋದಿಲ್ವೆ ನೀನು?"

"ಹಾಗಂದ್ರೂ ಅದ್ರಲ್ಲಿ ತಪ್ಪೇನು?"

'ಅದ್ಕೇ ಅಂದದ್ದು, ದೊಡ್ಡ ರಾಜಕಾರಣಿ ಅಂತ."

"ರಾಜಕಾರಣಿಯಂತೆ! ಅಲ್ಲ, ರಾಜಕಾರಣಿಯಾಗಿ ಸಾಧಿಸೋ ಪುರುಷಾರ್ಥ ಅಷ್ಟರಲ್ಲೇ ಇದೆ."

"ಏನನ್ತೀಯಾ ನೀನು?. ನಿನ್ನಂತವರಿಗೆ ಬೇರೆ ಪುರುಷಾರ್ಥವಾದ್ರೂ ಏಕೆ? ನಿನ್ನ ತಾಳಕ್ಕೆ ರಾಗಕ್ಕೆ ಸರಿಯಾಗಿ ಕುಣಿಯೋ ಗಂಡನೆಂಬೋ ಮಂಗಣ್ಣ ಸಿಕ್ಕಿದರೆ ಸಾಕೂನ್ನ ..."

"ಪಾಪ, ನಿಮ್ಮ ದುರವಸ್ಥೆಯೆ!"

"ಸದ್ಯ ಅಷ್ಟಾದ್ರೂ ಅನುಕಂಪವಿದೆಯಲ್ಲಾ!"

'ಅನುಕಂಪವಿಲ್ದೆ ಏನಂತೆ?'

'ಅದ್ರೆ ಒಂದು ನೋಡು, ಬರಿಯ ಅನುಕಂಪವಿದ್ರೆ ಅದ್ರಿಂದೇನು ಪ್ರಯೋಜನ?'

"ಅಷ್ಟಾದ್ರೂ ಇದೇಂತ ಕೃತಜ್ಞರಾಗಿರ ಬೇಡ್ವೆ?"

"ಯಾರು, ನಾನು ನಿನಗೆ ಕೃತಜ್ಞನಾಗಿರಬೇಕೆ?"

'ನಾನು ನಿಮ್ಮ ಮೇಲೆ ಅನುಕಂಪ ಬೀರ್ತೀನೆ ಅಂದ ಮೇಲೆ ಅಷ್ಟಾದ್ರೂ ಆಗದಿದ್ರೆ ......'

'ಕೇಳು ನಿಜವಾಗಿ ನೀನೇ ನನ್ಗೆ ಕೃತಜ್ಞಳಲ್ಲ ದಾಸೀನುದಾಸಿಯಾಗಿರಬೇಕು..'

'ಹ್ಹ ಹ್ಹ........'

'ಅಲ್ವೆ, ಯಾಕದು ನಗು?'

'ಅಲ್ಲ, ಮತ್ತೆ ದಾಸೀನುದಾಸಿ ಅಂತೀರಲ್ಲಾ? ರಾವ ನಿಘಂಟುವಿನಿಂದ ಅದ್ದಿ ಅಣಿ ಮುತ್ತು ಆದೂಂತ.......'

'ಓಹೋ ಅಷ್ಟೇನೆಯೆ? ದಾಸಾನುದಾಸನ ಸ್ತ್ರೀ ಅಕ...'

'ಅಂದ್ರೆ ನೀವು?'

'ಹ್ಞಾಂ....ಹಾಗೇನೇ ನೋಡು....'

'ಅದು ಸರೀನ್ನಿ....ಗಾಡಿಯ ಕೋರಗಳೆರಡೂ ಅದೇತರ ಇದ್ರೆ ಮುಂದೆ ಹೋಗ ಬಹುದೂನ್ನಿ..."

'ಹ್ಞಾಂ...."

"ಅಂತೂ ನನ್ನನ್ನ ರಾಜಕಾರಣಿ ಅಂತ ಅಟ್ಟದ ಮೇಲೇರಿಸಿ ಈಗ ತಿಪ್ಪೆಗೆಸೆದ್ರಿ.."

ಅಯ್ಯೋ, ರಾಜಕಾರಣಿಗಳೆಲ್ಲ, ದಾಸಾನುದಾಸರೇ ನೋಡು...,

'ಹೇಗೆ?"

'ಅದೂ ಗೊತ್ತಿಲ್ವೆ? ಜನತೆಯೇ ಜನಾರ್ದನ. ಜನಸೇವಕರೇ ರಾಜಕಾರಣಿಗಳು...."

"ಅಂದ್ರೆ ರಾಜಕಾರಣಿಗಳು ಜನಸೇವೆಯನ್ನ ಮಾಡಿಯೇ ಜನಾರ್ದನನನ್ನು ತೃಪ್ತಿಗೊಳಿಸಬಲ್ಲರು "

"ಮತ್ತಿನ್ನೇನು? ಜನರ ದಾಸಾನುದಾಸರು ಅವರ; ಜನಾರ್ದನನಿಗೆ ತೀರ ಹತ್ತಿರದವರು.'

"ಅದ್ರೆ ನೋಡಿ, ಈಗ ಅವರು ಅವ್ರೆಲ್ಲಾ ಜನಸೇವೆ ಮಾಡುವುದನ್ನು ಕಡಿಮೆ ಮಾಡ್ತಾ ಇದ್ದಾರಂತಲ್ಲಾ ...ಅದೂ ಸರಿ. ಸೇವೆ ಮಾಡೋದ್ರಲ್ಲೂ ನಾ ಮುಂದೆ ನಾ ಮುಂದೇಂಬ ಪೈಪೋಟಿಯು ನಡುವೆ ಅವರಿಗೆ ಬಿಡುವಾದ್ರೂ ಎಲ್ಲಿದೆ ಸೇವೆ ಮಾಡೋಕೆ?'

'ಮರುಳೆ, ಮೊದಲು ಸ್ವಾರ್ಥ, ಅನಂತರ ಪರಾರ್ಥವಲ್ಲವೆ?'

'ಅಂದರೆ?'

'ಮೊದಲು ತನ್ನ ಸೇವೆ ತಾನು ಮಾಡಿಕೊಂಡು ಅನಂತರ ಪರ ಸೇವೆಗೆ ತೊಡಗಬೇಕು?

"ಒಳ್ಳೆ ಕತೆ ಹೇಳ್ತಿರಿ ನೀವು...?"

'ಏನ?'

'ಮತ್ತೆ ಜನಸೇವೆಗೂ ಸೋಗು ಯಾಕೆ?,

'ನೋಡು, ವಿವರಿಸಿ ಹೇಳ್ತೀನೆ-ಜನ ಜನಾರ್ಧನನಾದರೆ, ರಾಜಕಾರಣಿ ಪೂಜಾರಿ. ಪೂಜಾರಿಗೆ ಜನಾರ್ಧನನ ಪೂಜೆಮಾಡಿ ಆತನನ್ನು ಪ್ರಸನ್ನೀಕರಿಸ ಬೇಕೆಂಬ ಇರಾದೆಗಿಂತಲೂ ದೇವರ ಹೆಸರಲ್ಲಿ ತನ್ನ ತನ್ನವರ ಹೊಟ್ಟೆ ಹೊರೆದು ಕೊಳ್ಳುವುದು ಹೇಗೇಂತ ಚಿಂತೆ. ಅದಕ್ಕಾಗಿ ಕೆಲವೊಮ್ಮೆ ಜಗಳಾಡಿದರೂ ಅದರಲ್ಲಿ ದೋಷವೇನಂತೆ?'

'ಅದೆಲ್ಲ ಇರ್ಲಿ...ನಮಗೇನಂತೆ?'

"ಯಾಕೆ ಹೇಳಿದೆ ಅಂದ್ರೆ, ಈಗ ಒಂದು ಸಂಗ್ತಿ ನಡೆದಿದೆ ನೋಡು ..."

'ಏನಂತೆ?'

"ಕ್ಷೌರಿಕರು ಇದ್ದಾರೆ ನೋಡು..."

"ಎಲ್ಲಿ?"

ಎಲ್ಲಿ ಅಂದ್ರೆ? ಅವರವರ ಮನೆಗಳಲ್ಲಿ.."

'ಹೌದು....'

"ಹೌದಂತೆ, ಮತ್ತವರು ಬೇರೆಯವ್ರ ಮನೇಲಿರ್ತಾರೆಯೆ.?"

"ಏನಾಯ್ತೀಗ? ಯಾಕೆ ಕೋಪ ಬರುತ್ತೆ?'

'ಅಲ್ಲ, ಮತ್ತೆ ಎಲ್ಲಿರ್ತಾರೇಂತ ಅಂತೀಯಲ್ಲಾ?'

'ಹೌದು, ಇರ್ತಾರೆ ಅಂದ್ರಿ, ಎಲ್ಲೀಂತ ತಿಳ್ಕೊಳ್ಳೋದು ಬೇಡವೆ?'

"ಆಯ್ತಲ್ಲ. ಮತ್ತೆ ಕೇಳೋದಾದ್ರೆ ಕೇಳು..."

"ಹ್ಞಾಂ.. ನೀವು ಹೇಳ್ತೀನೆ ಅಂದಾಗ ಬೇಡ ಅನ್ನೋಕೆ ನಾನೆಷ್ಟರವಳು?...'

"ನೋಡು, ನೀನು ಹೀಗೆಲ್ಲಾ ನನ್ನ ಉದ್ಧಾರಕ್ಕೆ ಕೇಳೋದು ಬೇಡಾಂದೆ.'

"ಆಯ್ತಪ್ಪ, ನಿಮ್ಮ ಉದ್ಧಾರಕ್ಕಲ್ಲ, ನನ್ನ ಉದ್ಧಾರಕ್ಕೇ ಕೇಳ್ತೆನೆ....'

'ಹಾಗೆ ಬಾ ಮತ್ತೆ ದಾರಿಗೆ... ನೋಡು, ಆ ಬಾರ್ಬರರು ತಮಗೆ ಪಾರ್ಲಿಮೆಂಟನಲ್ಲಿ ಪ್ರಾತಿನಿಧ್ಯ ಕೊಡ ಬೇಕೂಂತ ಮನವಿ ಅರ್ಪಿಸಿದ್ದಾರಂತೆ...'

"ಅದು ನ್ಯಾಯವೇ ಅನ್ನಿ. ನಿಮ್ಮ ಟೋಪಿಯೊಳಗಣ ತೂತುಗಳಿಗೆಲ್ಲಾ ಪ್ರಾತಿನಿಧ್ಯ ಕೊಡುವಾಗ...'

'ಏ, ಭಾರಿ ಉದ್ಧಟವಾಯಿತೇ ನಿನ್ನ ನಾಲಗೆ...."

'ಅಲ್ಲ, ಇದ್ದದ್ದನ್ನ ಇದ್ದ ಹಾಗೇ ಅಂದ್ರೆ ಯಾಕೆ ಸುಮ್ಮನೆ ರೇಗಾಡ್ತೀರಾ?'

'ಅಲ್ಲ, ಟೋಪಿಗೂ ತೂತಿದೆ, ಕೋಟಿಗೂ ಇದೆ........ಎಲ್ರ ಮನೇ ದೋಸೇನೂ ತೂತೇ ..."

"ತೂತು ಬಿಡ್ರೆ ಇದ್ದೇ ಇರ್ತ್ತೇನ್ನಿ....'

'ಮತ್ಯಾಕೆ ಟೋಪಿ ತೂತನ್ನೇ ಎತ್ತಿ ಹೇಳ್ತಿ?'

'ಇಲ್ಲ ಮಾರಾಯ್ರೆ, ನಿಂಗೆ ಅನಿಷ್ಟವಾದ್ರೆ ತುಟಿ ಬಿಚ್ಚೋದಿಲ್ಲ. ನಿಮ್ಗೆ ಏನೇನ ಬೇಕು ಎಲ್ಲ ಅಂದು ಬಿಡಿ..."

'ಅಂದ್ರೆ ಕೋಣನ ಮುಂದೆ ಕಿನ್ನರಿ ಬಾರ್ಸಿದಂತ ಅಲ್ವೆ? ಅಬ್ಬಾ...."

'ಮತ್ತೆ ನಾನು ಏನು ಮಾಡಬೇಕೂಂತ? ಮಾತಾಡಿದ್ರೂ ತಪ್ಪು.... ಇಲ್ದಿದ್ರೂ ತಪ್ಪು ......"

"ಅಯ್ಯೋ, ಯಾಕೆ ಗಂಗಾ ಭಾಗೀರಥೀ ಪ್ರಸನ್ನವಾದಳು? ನಾನೇನು ಅನ್ನಬಾರದ್ದನ್ನ ಅಂದೆ .."

'..............'

"ಯಾಕಮ್ಮಾ... ಇಲ್ವೆ, ಪಾಪ, ಅಳಬೇಡ ಕಣೇ. ಇಗೊ ಕಣ್ಣೀರು ಒರಸಿದೆ .... ನೋಡೋಣ ಒಂದು ಬಾರಿ ನಿನ್ನ ಅಳುಮೊಗವನ್ನ..."

'ಸಾಕು ಸುಮ್ಮನಿರೀಂದ್ರೆ...."

'ಹ್ಞಾ, ಹಾಗೆ....ಯಾವಾಗ್ಲೂ...."

'ಮತ್ಯಾಕೆ ನೀನು ನನ್ಮೇಲೆ ಸುಂಳುನ್ನ ಸಿಟ್ಟು ಮಾಡೋದು? ಮಾತಿಗೆ ಮಾತಾಡಿದ್ರೂ ತಪ್ಪು, ಸುಮ್ಮನಿದ್ರೂ....'

'ಇಲ್ಲವಮ್ಮಾ, ಏನೂ ಚಿಂತೆ ಬೇಡ. ತಪ್ಪಿದ್ರೂ ಮಾತಾಡ್ತಾನೇ ಇರು. ಏನು?'

"ಮತ್ತೆ ನಿಮಗೆ ಪಿತ್ತ ನೆತ್ತಿಗೇರಿದ್ರೆ, ...'

"ಅದಕ್ಯಾಕಂತೆ ಚಿಂತೆ? ಏರಿದ್ರೆ ಮತ್ತೆ ಇಳಿಯುತ್ತೆ...."

"ಅದು ಹೌದೂನ್ನಿ... ಇರ್ಲಿ; ಆ ಬಾರ್ಬರರ ಕತೆಯೇನಾಯ್ತು?"

"ಹೌದು, ಅವರಿಗೆ ಪ್ರಾತಿನಿಧ್ಯ ಕೊಡಬೇಕಂತೆ... ಅಲ್ಲ, ಹೀಗೆ.... ಒಂದೊಂದು ಕೋಮಿನವರಿಗೂ ಪ್ರಾತಿನಿಧ್ಯ ಕೊಡುತ್ತ ಹೋದರೆ...."

'ನೀವು ಏನೇ ಹೇಳಿ, ನಾನನ್ನೋದಾದ್ರೆ ಖಂಡಿತಕ್ಕೂ ಕೊಡಬೇಕು ..'

'ಯಾಕೆ?'

'ಅವರು ಬಹಳ ಗತವೈಭವವಿದ್ದವರು. ರಾಜ ಕ್ಷೌರಿಕನೆಂಬವನ ಸ್ಥಾನಮಾನ ರಾಜ ಪುರೋಹಿತರಿಗಿಂತಲೂ ಹೆಚ್ಚಿತ್ತು ನೋಡಿ....'

"ಹೇಗೆ?"

'ಪುರೋಹಿತ ರಾಜನಿಗೆ ಅರ್ಥವಾಗದ ಮಂತ್ರ'ಗಳನ್ನು ವಟಗುಡುತ್ತಾ ಇದ್ದರೆ ಕ್ಷೌರಿಕ ಅವನಿಗೆ ಅರ್ಥವಾಗುವಂತೆ ಕಿವಿಯೂದುತ್ತ ಇದ್ದ. ಅದ್ದರಿಂದಲೇ ಅವರು ವೈಭವದಿಂದ ಇದ್ದರು. ಇಂದು ಮಾತ್ರ ಅವರ ಸ್ಥಿತಿ ಜಮಲಾಬಾದು ಕೋಟೆಯಾಗಿದೆ....,

"ಯಾಕೆ?'

"ರಾಜ ಮಹಾರಾಜರು ಇಲ್ಲವಾದರು. ರಾಜ ಪುರೋಹಿತನೊಡನೆ ಈತನಿಗೂ ಅರ್ಧಚಂದ್ರವಾಯಿತು. ಅದೂ ಅಲ್ಲದೆ ಈ ಕಲಿಯುಗದಲ್ಲಿ ವರ್ಣಸಂಕರವಾಗಿ ಎಲ್ಲರೂ ಕ್ಷೌರಿಕರಾಗಿ ಬಿಟ್ಟಿದ್ದಾರೆ..."

'ಹ್ಞಾಂ, ನಾನೂನೂ ಅನ್ನು..."

'ಅಲ್ಲ, ಲೋಕವೇ ಹಾಗಿರುವಾಗ ಅದರಿಂದ ನೀವೊಬ್ರು ಹೇಗೆ ಬೇರೆಯಾದೀರಿ? ಕಾಲಕ್ಕೆ ತಕ್ಕ ಕೋಲ ಕಟ್ಟ ಬೇಕಲ್ಲವೆ?'

"ಅದಕ್ಕೇ ಅಂದದ್ದು ನೀನು ಅಲ್ವೆ? ಪ್ರಾತಿನಿಧ್ಯ ನೀಡದೆ ಹೋದರೆ, ಅವರು ಸಂಪಿಗೆ ತೊಡಗಿದರೆ ಪಾಪ. ಜನ ಜನಾರ್ಧನನ ಗತಿಯೇನೂಂತ?"

"ಅದು ಹೌದ್ರಿ, ಸಂಪಿನ ಯುಗವಿದು. ಕೂತದ್ದು, ನಿಂತದ್ದು ತಪ್ಪು ಎಂದು ಮುಷ್ಕರವೇಕೋ ಇಂದಿನ ಕಾಲದಲ್ಲಿ ಸರಿಯಾದ ಪ್ರಾತಿನಿಧ್ಯ ಕೊಡದೆ ಹೋದರೆ, ಕ್ಷೌರಿಕರೆಲ್ಲಾ ಸಂಪಿಗೆ ನಿಂತರೆ ಗತಿಯೇನೂಂತ?'

"ಅದ್ಕೇ ಅಂದದ್ದು ನೀನು, ಅವರ ಬೇಡಿಕೆ ನ್ಯಾಯೋಚಿತವಂತ?"

'ಹೌದ್ರಿ, ಈಗ ಮತ್ತೇನು ಮಾಡೋದಕ್ಕೂ ಇಲ್ಲ. ಜನರಿದ್ದಲ್ಲಿಯೇ ಜನಾರ್ಧನ ಇರ್ತಾನೆ. ಆದದ್ರಿಂದ, ನಾಲ್ಕು ಜನ ಏನು ಹೇಳ್ತಾರೆ, ಅದನ್ನ ಒಪ್ಪಿಕೊಳ್ಳಲೇ ಬೇಕಾಗುತ್ತೆ."

"ಹ್ಞಾ, ನೀನು ಏನೆಂದೂ ನಾನೆ ಕೇಳಿಕೊಂಡು ಒಪ್ಪಿಕೊಳ್ಳೋದಿಲ್ವೆ ಹಾಗೆ..."

"ಹೌದಾದು........ ಒಪ್ಪಿಕೊಳ್ಳೋರು ನೀವು..."

"ಕೇಳು ನೀನು, ಕಾಲಕ್ಕೆ ತಕ್ಕ ಕೋಲ ಕಟ್ಟ..."

"ಓ, ಪರ್ವಾಗಿಲ್ರಿ ನೀವು....ಸಾಕು, ಬನ್ನಿ... ಇವತ್ತು ಮಾತ್ರ ಕೊಡಪಾನದ ಕುತ್ತಿಗೆಗೇ ಕೈ ಹಾಕಬೇಕು. ಬೇಗ ಬನ್ನಿ ಮತ್ತೆ, ಗೋದಿ ಹಿಟ್ಟಿನ ದೋಸೆ ಮಾಡಿದ್ದೇನೆ..."

"ಓ, ಪರ್ವಾಗಿಲ್ಲ........ ಕಾಲಕ್ಕೆ ತಕ ಕೋಲ"

'ಹ್ಹ...ಹ್ಹ....ಹ್ಹ..."

—ಗೋರಾ

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ

0.30 ಪೈಸೆ ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳುಹಬಹುದು.
ರಿಯಾಯಿತಿ ಪ್ರತಿಗಳಿಗೆ ಬರೆಯಿರಿ.

ನವಯುಗ ಪ್ರೆಸ್, ಉಡುಪಿ

ಶ್ರೀ ಸ್ವಾಮಿ ಚಿನ್ಮಯಾನಂದ ಮೀಮಾಂಸೆ

ಗೀತಾ-ದ್ವಿತೀಯ ಅಧ್ಯಾಯ

ಸಂಗ್ರಹಕರ್ತೆ
ಶ್ರೀಮತಿ ಆನಂದಿ ಸದಾಶಿವ ರಾವ್.
(ಕಳೆದ ಸಂಚಿಕೆಯಿಂದ ಮುಂದುವರಿದುದು)

ಕರ್ಮಯೋಗದಲ್ಲಿ ನಿರತನಾದವನು ಏಕಾಗ್ರತೆ ಹೊಂದಿದ ಮನದಿಂದ ದೃಢ ನಿಶ್ಚಯವುಳ್ಳವನಾಗಿ ಕೆಲಸ ಮಾಡುವವನಾಗುವನು. ಅವನಿಗೆ ಆತ್ಮ ಸಾಕ್ಷಾತ್ಕಾರವಾಗಲು ಸಾಧ್ಯವಿದೆ ಎಂದು ಶ್ರೀ ಕೃಷ್ಣನು ವಿವರಿಸತೊಡಗುವನು. ಮತ್ತು ಕೇವಲ ಕರ್ಮಕಾಂಡಗಳಲ್ಲಿ ಹೇಳಿದ ಯಜ್ಞಯಾಗಾದಿಗಳಾದ ಬಾಹ್ಯ ಆಚರಣೆಯನ್ನು ಕುರಿತು ಶ್ರೀ ಕೃಷ್ಣನು ಹಾಸ್ಯ ಮಾಡುವನು.

ಅರ್ಜುನನ ಕಾಲದಲ್ಲಿ ಕರ್ಮಯೋಗ ಎಂದರೆ ಕರ್ಮಕಾಂಡಗಳಲ್ಲಿ ಹೇಳಿದ ಯಜ್ಞಯಾಗಾದಿಗಳೆಂದು ಜನರಲ್ಲಿ ತಿಳುವಳಿಕೆಯಾಗಿತ್ತು. ಶ್ರೀ ಕೃಷ್ಣನು ಕರ್ಮಯೋಗವೆಂದರೆ ಅದು ಅಲ್ಲವೆಂದೂ, ಕರ್ಮಯೋಗದ ಗುರಿಯನ್ನು ವಿವರಿಸಿ, ಆಗಿನ ಜನರಲ್ಲಿ ಗುರಿಯನ್ನು ಸಾಧನೆ ಸುತ್ತು ಮರೆತು ಬಿಡುವಂತಾಗಿದೆ ಎಂದೂ ವಿವರಿಸುವನು. ಶ್ರೀ ಕೃಷ್ಣನ ಮೇರೆಗೆ ಕರ್ಮಯೋಗ ಎಂದರೆ ಏಕಾಗ್ರತೆ ಪಡೆಯಲು ಮಾಡುವ ಸಾಧನೆಯಾಗಿದೆ. ಕೇವಲ ಬಾಹ್ಯ ಕರ್ಮಗಳಿಂದ ಅದನ್ನು ಪಡೆಯಲು ಸಾಧ್ಯವಿಲ್ಲವೆಂದೂ, ಯಜ್ಞಯಾಗಾದಿಗಳನ್ನು ನಾನಾ ಅಪೇಕ್ಷೆಗಳಿಂದ ಮಾಡುವವರಿಗೆ ಅದು ದೊರಕಲಾರದೆಂದೂ ಹೇಳಿರುವನು.

ಕರ್ಮಯೋಗ ಎಂದರೆ, ನಿನ್ನ ಕಣ್ಣ ಮುಂದೆ ಒಂದು ಗುರಿಯನ್ನು ಇಡಬೇಕು. ಅದರ ಅರಿವಿಲ್ಲದೆ ಇದ್ದರೆ ಜೀವನದಲ್ಲಿ ಉತ್ಸಾಹ ಮೂಡಿ ಬರಲಾರದು. ಒಂದು ಗುರಿಯನ್ನು ಕಣ್ಮುಂದೆ ಇಟ್ಟು ಸದಾ ಅದಕ್ಕಾಗಿ ಶ್ರಮಿಸಿದರೇ ನಿನ್ನ ಬುದ್ಧಿ ಮನವು ಏಕಾಗ್ರತೆ ಪಡೆಯುವದು. ನೂರಾರು ಬಯಕೆ, ಗುರಿ, ಇಟ್ಟ ಮನಸ್ಸಿಗೆ ಏಕಾಗ್ರತೆ ಬರಲಾರದ, ಮತ್ತು ಅಭಿಲಾಷೆಗಳಿಂದ ಮಾಡುವ ಕರ್ಮಕಾಂಡಗಳಿಂದ ನಿನಗೆ ಎಂದಿಗೂ ಶಾಂತಿ ದೊರಕಲಾರದು. ನೂರಾರು ಬಯಕೆಗಳಿಂದ ನೂರಾರು ದೇವತೆಗಳ ಒಳ ಪ್ರಾರ್ಥಿಸಿ ಮುಡಿಪು, ಹರಕೆಗಳನ್ನು ನೀಡುತ್ತಾ ಇದ್ದವರಿಗೆ ಒಂದಲ್ಲಿದ್ದರೆ ಒಂದು ಬಯಕೆ ತಲೆದೋರುತ್ತಾ ಇರುವುದು. ಅವರಿಗೆಲ್ಲಿಂದ ಶಾಂತಿ?

ಯಾಮಿಮಾಂ ಪುಷ್ಪಿತಾಂ ವಾಚಂ।
ಪ್ರವದಂತ್ಯವಿಪಶ್ಚಿತಃ।
ವೇದವಾದರತಾಃ ಪಾರ್ಥ।
ನಾನ್ಯದಸ್ತೀತಿ ವಾದಿನಃ ॥೪೨॥

ವೇದಗಳಲ್ಲಿ ಹೇಳಿದ ಮಾತಿಗಿಂತ ಮೇಲಿನ ಮಾತು ಬೇರೆ ಇಲ್ಲ ಎಂಬುದು ಬಹು ಚೆನ್ನಾಗಿ ವಾಗ್ವಾದ ಮಾಡುವ ವಿದ್ವಾಂಸರಿಗೆ ನಿಜವಾಗಿಯೂ ತಿಳಿದಿಲ್ಲ. ಕರ್ಮಕಾಂಡಗಳಿಂದ ಮೇಲಿನ ಮಾತು ಇನ್ನಿಲ್ಲ ಎನ್ನುವವರು ಏನೂ ತಿಳಿದಿಲ್ಲ.

ಕಾಮಾತ್ಮಾನಃ ಸ್ವರ್ಗಪರಾ।
ಜನ್ಮಕರ್ಮ ಫಲ ಪ್ರದಾಂ।
ಕ್ರಿಯಾ ವಿಶೇಷ ಬಹುಲಾಂ।
ಭೋಗೈಶ್ವರ್ಯಗತಿಂ ಪ್ರತಿ ॥ ೪೩ ॥

ನಾನಾ ಬಯಕೆಗಳಿಂದ ತುಂಬಿದ್ದವರು ಸ್ವರ್ಗವು ತಮ್ಮ ಗುರಿ ಎಂದು ಬಹು ಚೆನ್ನಾಗಿ ಮಾತಾಡುವ ವಿದ್ವಾಂಸರು. ಇವರು ಸ್ವರ್ಗವು ಗುರಿಯಾಗಿದ್ದು ಅದು ದೊರಕುವುದು ಹೇಳಿದ ಮಾತುಗಳಂತೆ ಕರ್ಮಗಳಿಗನುಸಾರವಾಗಿ, ಹೊಸಹೊಸ ಜನ್ಮವು ಲಭಿಸುವುದು. ಅಂತಹ ಸ್ವರ್ಗ ಅಥವಾ ಸ್ಥಾನಮಾನಗಳು ಬೇಕೆಂದು ಇದ್ದವರು ಆಚರಿಸಲು ತಕ್ಕ ಯೋಗ್ಯ ಯಾಗ್ಯ ಕರ್ಮಗಳು, ವೇದಗಳಲ್ಲಿ ಹೇಳಿದ ಯಜ್ಞ ಯಾಗಾದಿ, ಪೂಜೆಗಳೂ ಇವೆ.

ಭೋಗೈಶ್ವರ್ಯ ಪ್ರಸಕ್ತಾನಾಂ।
ತಯಾಪಹೃತ ಚೇತಸಾಮ್।
ವ್ಯವಸಾಯಾತ್ಮಿಕಾ ಬುದ್ಧಿಃ।
ಸಮಾಧೌ ನ ವಿಧೀಯತೇ॥೪೪॥

ಯಾರು ಈ ಸುಖ ಮತ್ತು ಅಧಿಕಾರ ಇಚ್ಛಿಸುವರೋ, ಯಾರು ಈ ಮಾತುಗಳಿಂದ ಆಕರ್ಷಿತರಾಗುವರೋ, ಅವರು ಸ್ಥಿರ ಬುದ್ಧಿಯುವರಲ್ಲ ಅವರು ದೃಢ ನಿಶ್ಚಯವುಳ್ಳವರಲ್ಲ. ಮತ್ತು ಅವರು ಸ್ಥಿರಚಿತ್ತ ಬುದ್ಧಿಯಿಂದ ಧ್ಯಾನ ಮತ್ತು ಸಮಾಧಿಗೆ ಅರ್ಹತೆ ಪಡೆದವರಲ್ಲ.

ಇಲ್ಲಿ ಶ್ರೀ ಕೃಷ್ಣನೆ ಮುಖಾಂತರ ವ್ಯಾಸರ, ಆಗಾಲದಲ್ಲಿ ಕರ್ಮಕಾಂಡಗಳ ಕ್ರಿಯೆಗಳನ್ನು ಕೇವಲ ಬಾಹ್ಯಾಚರಣೆಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟು ಆಚರಿಸುವುದನ್ನು ಖಂಡಿಸಿರುವರು. ನಾನಾ ವಿಧದ ಬಯಕೆಗಳಿಂದ ವಿವಿಧ ಬಾಹ್ಯಕರ್ಮಗಳನ್ನು ಮಾಡಿ, ನಾನಾ ದೇವತೆಗಳ ತೃಪ್ತಿಗೆ ಯಜ್ಞಗಳನ್ನು ಆಚರಿಸುವವರನ್ನು, ಮೂಲ ಉದ್ದೇಶವನ್ನು ಮರೆತು ಬಿಟ್ಟುದಕ್ಕೆ ಖಂಡಿಸಿರುವರು. ಈ ಯಜ್ಞಯಾಗಾದಿಗಳನ್ನು ಏಕಾಗ್ರತೆ ಪಡೆಯಲು ಹಿಂದಿನವರು ಇಟ್ಟರೂ ಕ್ರಮೇಣ ಜನರು ಅದರ ಮೂಲ ಉದ್ದೇಶವನ್ನು ಮರೆತು, ಕೇವಲ ಆ ವಿಧಿಯಿಂದಲೇ ನಿರತರಾಗಿ ಅದರಲ್ಲಿ ತೃಪ್ತಿಗೊಂಡು, ಗುರಿಯನ್ನು ಕಲಬೆರಕೆ ನಾನಾ ಅಭಿಲಾಷೆಗಳಿಂದ ತೊಳಲಾಡುವಂತಾಗುವುದನ್ನು ನೋಡಿ ವ್ಯಾಸರು, ಅವರ ಮುಖಾಂತರ ಪ್ರಚಾರ ಭಾವ ದೃಷ್ಟಿ ಮುಖಾಂತರ ಮಾಡಿದರು.

ಆದಕ್ಕಾಗಿ ಕರ್ಮಕಾಂಡಗಳನ್ನು ಅಭಿಲಾಷೆಗಳಿಂದ ಅನುಸರಿಸುವವರನ್ನು ಹೀಗೆ ಹಾಸ್ಯ ಮಾಡಿದ ದಾಗಿ, ಅಭಿಲಾಷೆಗಳಿದ್ದವರು ತಮಗೆ ದೊರೆತ ಸ್ವರ್ಗ ಇತರ ಅಧಿಕಾರ ಸ್ಥಾನಗಳನ್ನು ಬಿಟ್ಟು ಪುನಃ ಮರಳಿ ಬರಬೇಕೆಂದೂ, ಮತ್ತೆ ಮತ್ತೆ ಜನ್ಮವೆತ್ತಬೇಕೆಂದೂ ತಿಳಿಸಲಾಗಿದೆ.

ಈ ಅಭಿಲಾಷೆಗಳು ಅಲ್ಪ ಮಟ್ಟದ್ದು. ಕರ್ಮಗಳಿಂದ ಈ ಕಾಮನೆಗಳನ್ನು, ಸಂತೋಷ, ಅಧಿಕಾರಗಳನ್ನು ಪಡೆದು ಅದನ್ನ ಅನುಭವಿಸಿ ಮುಗಿದೊಡನೆ ಪುನಃ ನೀನು ಈ ಮೃತ್ಯು ಲೋಕಕ್ಕೆ ಮರಳಿ ಬರಬೇಕಾಗುವುದು, ಈ ಸಂತೋಷ, ಅಧಿಕಾರಗಳು ಕ್ಷಣಿಕ. ಅದಕ್ಕಿಂತ ಹಿರಿದಾದ ಈ ಶಾಂತಿ ಸುಖವನ್ನು ಕೊಡುವ ಯೋಗ ಇದಾಗಿದೆ, ಇದರಿಂದ ಫಲಾಪೇಕ್ಷೆ ಇಲ್ಲದೆ ಈ ಯೋಗದಲ್ಲಿ ನಿರತನಾಗಿ, ನಿನ್ನ ಮುಂದಿದ್ದ ಸಮಸ್ಯೆಗಳನ್ನು ಇದಿರಿಸು. ಫಲಾಪೇಕ್ಷೆಯಿಂದ ನಿನ್ನ ವಿವೇಕ ಬುದ್ಧಿಯೂ ನಷ್ಟವಾಗುವ ಸಂಭವವಿದೆ.

ತ್ರೈಗುಣ್ಯ ವಿಷಯಾ ವೇದಾ।
ನಿಸ್ತ್ರೈಗುಣ್ಯೋ ಭವಾರ್ಜುನ।
ನಿರ್ದ್ವಂದ್ವೋ ನಿತ್ಯ ಸತ್ವಸ್ಥೋ।
ನಿರ್ಯೋಗ ಕ್ಷೇಮ ಆತ್ಮವಾನ್
॥ ೪೫ ॥

ವೇದಗಳ, ಮೂರು ಗುಣಗಳ ವಿಷಯವನ್ನೇ ಹೇಳುವುವು ಎಂದರೆ ವೇದಗಳ ಕರ್ಮಕಾಂಡಗಳನ್ನು ಪ್ರತಿಪಾದಿಸುವುವು. ಓ ಅರ್ಜುನಾ, ನೀನು ದ್ವಂದ್ವ ಗುಣಗಳಿಂದ ಮುಕ್ತನಾಗು. ಸತ್ವಗುಣದಲ್ಲಿ ಸದಾ ನಿರತನಾಗು. ಎಲ್ಲಾ ವಸ್ತುಗಳ ಇಚ್ಛೆಯನ್ನು ತ್ಯಜಿಸಿದವನಾಗಿ ನೀನು ಆತ್ಮನ ತೃಪ್ತಿ ಪಡೆ.

ಹೇ ಅರ್ಜುನನೇ, ಈ ನಾಶವಾಗುವ ವಸ್ತುಗಳ ಆಶಯಿಂದ ಕರ್ಮ ಮಾಡುವ ಸ್ಥಿತಿಗಿಂತ ಆಚೆಗಿನ, ಅದಕ್ಕಿಂತ ಹಿರಿಯ, ಎಣೆ ಇಲ್ಲದ, ನಾಶವಿಲ್ಲದ, ಸದಾ, ಶಾಶ್ವತವಾಗಿರುವ ಸ್ಥಿತಿಯನ್ನು ಇಚ್ಛಿಸು. ಎಲ್ಲರೂ ಒಂದು ವಸ್ತುವನ್ನು ಬಯಸುವರು. ಅದಕ್ಕೆ ಯೋಗವೆಂದೂ, ದೊರಕಿಸಿಕೊಂಡ ಬಳಿಕ ಇಟ್ಟುಕೊಳ್ಳಬೇಕೆಂಬುದು ಸಂಬಂಧವು. ಅದಕ್ಕೆ ಕ್ಷೇಮವೆಂದೂ ಹೇಳುವರು. ಈ ಎರಡು ಯೋಗ ಮತ್ತು ಕ್ಷೇಮವನ್ನು ಬಿಟ್ಟು ನೀನು ಶಾಶ್ವತವಾದ ಎಣೆ ಇಲ್ಲದ, ಅನಂತವಾದ ವಸ್ತು ಶಾಂತಿಯನ್ನು ಪಡೆ. ಎಂದರೆ ಈ ಸಂಪತ್ತು ಇದ್ದ ವಸ್ತುಗಳನ್ನು ತ್ಯಜಿಸಿ, ಎಂದೆಂದಿಗೂ ಇರುವ ಆತ್ಮವನ್ನು ಪಡೆ. ಒಂದು ವಸ್ತುವನ್ನು ಬಯಸುವುದರಿಂದಲೂ, ಅದನ್ನು ಇರಿಸಿಕೊಳ್ಳಬೇಕೆಂಬ ಹಂಬಲದಿಂದಲೂ, ಎಂದಿಗೂ ಮನಶ್ಶಾಂತಿ ಇರದು. ಈ ಎರಡನ್ನು ತ್ಯಜಿಸಿದೊಡನೆ ಶಾಂತಿ ತಾನಾಗಿ ಒದಗುವುದು.

ಯಾವಾನರ್ಥ ಉದಪಾನೇ।
ಸರ್ವತಃ ಸಂಪ್ಲುತೋದಕೇ।
ತಾವಾನ್ಸರ್ವೇಷು ವೇದೇಷು
ಬ್ರಾಹ್ಮಣಸ್ಯ ವಿಜಾನತಃ ॥ ೪೬ ॥

ಆತ್ಮನನ್ನು ಅರಿತ ಬ್ರಾಹ್ಮಣ (ಎಂದರೆ ಬ್ರಹ್ಮನ್—ಆತ್ಮನನ್ನು ತಿಳಿದವನು) ನಿಗೆ ವೇದಗಳು ಎಷ್ಟು ಮಟ್ಟಿಗೆ ಉಪಯೋಗವಾಗುವುವು. ಎಂದರೆ, ನೀರೆಲ್ಲಾ ಬಿದ್ದ ಪ್ರದೇಶದಲ್ಲಿ, ಬಾವಿಯ ನೀರಿನ ಉಪಯೋಗ ಎಷ್ಟೋ ಅಷ್ಟು ಮಾತ್ರ.

ಕರ್ಮಕಾಂಡಗಳಲ್ಲಿ ಅಥವಾ ಜಪತಪಗಳಲ್ಲಿ, ದೇವಸ್ಥಾನ ಸಂದರ್ಶನ, ಪೂಜೆ ಇತ್ಯಾದಿಗಳನ್ನು ಮಾಡುವಾಗ ದೊರಕುವ ಸಮಾಧಾನ ಚಿತ್ತವು ಕೇವಲ ಕ್ಷಣಿಕ. ನೀನು ಬೇಕಾದಾಗ ಬಾವಿ ಬಳಿ ಕೊಡ ಹಿಡಿದುಕೊಂಡು ಹೋಗುವಂತೆ

(ಹನ್ನೆರಡನೇ ಪುಟ ನೋಡಿರಿ)

ನಿಮ್ಮ ಒಳಿತಿಗಾಗಿ
ಉಳಿತಾಯದ
ಮತ್ತೊಂದು ಆಕರ್ಷಕ ಯೋಜನೆ.......

"ಕ್ಯುಮುಲೇಟಿವ್ ಡಿಪಾಸಿಟ್"

(ಸಂಚಯಿತ ಠೇವಣಿ)

ರೂಪಾಯಿ ೧೦ ಅಥವಾ ಅದೇ ಗುಣಕದ ಹೆಚ್ಚಳದಿಂದ ನೀವು ಠೇವಣಿಯನ್ನು ಇಡಬಹುದು.

ನಮೂದಿಸಿದ ಅವಧಿ	ತಿಂಗಳಿಗೆ ರೂ. 10/- ರಂತೆ ಒಟ್ಟು ಜಮೆಯಾದ ಮೊತ್ತ	ಅವಧಿಯ ಕೊನೆಯಲ್ಲಿ ಬಡ್ಡಿ ಸಮೇತ ಮರಳಿ ಪಡೆಯುವ ಮೊತ್ತ
ತಿಂಗಳು	ರೂಪಾಯಿ	ರೂಪಾಯಿ
12	120 - 00	123 - 50
24	240 - 00	254 - 50
36	360 - 00	393 - 50
48	480 - 00	539 - 60
60	600 - 00	700 - 00

ಅವಧಿಯ ಮುಂಚೆಯೇ ಬಡ್ಡಿ ಸಹಿತ ಠೇವಣಿ ವಾಪಸಾತಿಗೆ ಈ ಯೋಜನೆಯಲ್ಲಿ ಅವಕಾಶವಿದೆ.
ಹೆಚ್ಚಿನ ವಿವರಗಳಿಗೆ ನಮ್ಮ ಯಾವ ಶಾಖೆಯಲ್ಲಾದ್ರೂ ವಿಚಾರಿಸಬಹುದು.

FAITHFUL SB FRIENDLY
ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಜಿಸ್ಟರ್ಡ್ ಆಫೀಸು: ಮಣಿಪಾಲ,

ಶಾಖೆಗಳು: 204
ಸಾಧನ ಸಂಪತ್ತು: ರೂ. 70 ಕೋಟಿಗೂ ಮಿಕ್ಕಿದೆ

ಕಣ್ಣೀರಿನ ಕಥೆಯೇಕೆ?

ವಂದೇ ಮಾತರಂ ಎನ್ನಿರಿ

ಬರೆದವರು: ಶ್ರೀ ಶಿವಶಂಕರ

'ಶಾಂತಿ' ಸಂಧಾನಗಳ ಹೆಸರಿನ ಮೇಲೆ ಭಾರತದ ಪ್ರಚಲಿತ ಪ್ರಧಾನಿಯವರು ಏನೇನು ವರ್ತಿಸುತ್ತಿದ್ದಾರೆಂಬುದನ್ನು ಹಿಂದಿನ ಸಂಚಿಕೆಗಳಲ್ಲಿ ನೋಡಿರುವೆವು. ದೇಶದೊಳಗಿನ ಪರಿಸ್ಥಿತಿಯನ್ನು ಹೊರಗಿನ ಒತ್ತಡ ಹಾಗೂ ಆಕ್ರಮಣವನ್ನು ಅವರೆಂತು ಎದುರಿಸುತ್ತಿದ್ದಾರೆಂಬುದನ್ನು ನೋಡಿರುವೆವು. ದಿವಂಗತ ಜವಾಹರಲಾಲಜೀ ಇಷ್ಟು ದುಡುಕುತ್ತಿರಲಿಲ್ಲ. ಅದನ್ನೇ ಇನ್ನೊಂದು ರೀತಿಯಲ್ಲಿ ಹೇಳುವದಾದಲ್ಲಿ ಯಾವೊಂದು ಸಮಸ್ಯೆಯನ್ನು ಬಗೆಹರಿಸದೆ ಹಾಗೆನೇ ಇನ್ನಿಕ್ಕಿದ್ದಂತೆ ಬಿಟ್ಟು ಹೋಗಿದ್ದಾರೆ. ಈಗ ಆ ಲಾಲಬಹದೂರಜೀಯವರು ಬಹಳ ಕಷ್ಟಪಡಬೇಕಾಗಿರುತ್ತದೆ. ಅವರಿಗಾದರೋ ಸ್ವತಂತ್ರವಾಗಿ ಸಂಚರಿಸಲೂ ಸಾಧ್ಯ ಇರುವುದಿಲ್ಲ. ಹಿಂದಿನ ದಾರಿಯಲ್ಲಿ ಸಾಗಲೂ ಇಷ್ಟವಿಲ್ಲ. ಹೀಗಾಗಿ ಅವರ ತೊಳಲುತ್ತಿದ್ದಾರೆ. ಸ್ವತಂತ್ರವಾಗಿ ಸಂಚರಿಸಿದಲ್ಲಿ ದಿವಂಗತ ಜವಾಹರಲಾಲಜೀಯವರ ಕಾಲಡಿಯಲ್ಲೇ ನಡೆಯುವದಿಲ್ಲವೆಂದು ಕಮ್ಯೂನಿಸ್ಟರು ಟೀಕೆ ಹಾಕುತ್ತಾರೆ. ಪುನಃ ಅತ್ತ ತಿರುಗಿದಲ್ಲಿ ಆ ರಸ್ತೆಯಲ್ಲಿ ಹೋಗಲು ಅವರ ಮನಸ್ಸು ಒಪ್ಪುವುದಿಲ್ಲ. ಆದವರಿಂದ ಸಾಧ್ಯವೂ ಇಲ್ಲ. ಅದಕ್ಕೆ ಹಲವಾರು ಕಾರಣಗಳಿವೆ.

ಹಾಗಿದ್ದರೂ ಕೆಲವು ಸಲ ಕೈತೋರಿಸಿ ಅಪಶಕುನ ಹೇಳಿಸಿಕೊಂಡಿದ್ದಾರವರು. ಶ್ರೀ ಲಂಕೆಯ ವಿಷಯದಲ್ಲಿ ಅದು ಸ್ಪಷ್ಟವಾಗಿದೆ. ಅಂದಿನ ಪ್ರಧಾನಿ ಪಂಡಿತ ಜವಾಹರಲಾಲಜೀ ಆ ಸಮಸ್ಯೆಯನ್ನು ಸಂಪೂರ್ಣ ತೀರಿಸದೆ ಹಾಗೆಯೇ ಬಿಟ್ಟಿದ್ದರು. ಆದರೆ ಶ್ರೀಮತಿ ಭಂಡಾರ ನಾಯಕೆಯವರು ಹೇಳಿದೊಡನೆ ಶ್ರೀ ಲಾಲಬಹದೂರ ಶಾಸ್ತ್ರೀಜಿಯವರು ಬಹಳ ಸುಲಭವಾಗಿ ಒಪ್ಪಿಕೊಂಡರು. ಅದರ ಪರಿಣಾಮವೇನು? ಶ್ರೀ ಲಂಕೆಯನ್ನು ಸಿರಿಯ ಬೀಡನ್ನಾಗಿ ಮಾಡಿರುವ ಭಾರತೀಯರಿಗೆ ಅರ್ಧಚಂದ್ರಪ್ರಯೋಗ. ನಿನ್ನೆ ಮೊನ್ನೆಯ ವರೆಗೆ ನಮ್ಮದೇ ಭೂಭಾಗವಾಗಿದ್ದು ಬ್ರಿಟಿಷರ ಒಡೆದು — ಆಳುವ ತಂತ್ರದ ಫಲವಾಗಿ ನಮ್ಮಿಂದ ದೂರವಾಗಿರುವ ಸಿಲೋನಿನಿಂದ ಅಲ್ಲಿರುವ ಭಾರತೀಯರು ಓಡಿಬರಬೇಕಾಗುತ್ತದೆ. ಸಿಂಹಳೀಯರು ಅವರಿಗೆ ಏನೂ ಆಗಬೇಕಾಗಿಲ್ಲ! ಅಥವಾ, ಸಿಂಹಳೀಯರಿಗೆ ಇತರ ಭಾರತೀಯರು ಏನೂ ಆಗಬೇಕಾಗಿಲ್ಲ! ಇದನ್ನು ನಾವು ಅವರಿಗೆ ಸ್ಪಷ್ಟವಾಗಿ ಹೇಳಲಿಲ್ಲ. ಹಿರಿಯಣ್ಣ ಚಿಕ್ಕತಮ್ಮನಿಗೆ ಸ್ಪಷ್ಟವಾಗಿ ಸೂಚಿಸಬೇಕಿತ್ತು. ಅದರ ಬದಲು ಅವರು ಒಡೆಯುತ್ತೇವೆಂದರು ನಮ್ಮ ಪ್ರಧಾನಿಯವರು ಬೆನ್ನು ತೋರಿಸಲಿಕ್ಕೆ ಹೇಳಿದರು. ಅದರಿಂದ ಯಾರಿಗೆ ಲಾಭ? ಇದನ್ನು ನಾವು ಒಂದು ಸಂಧಾನ ಚತುರತೆಯೆಂದು ಕೊಂಡಾಡುತ್ತೇವೆ. ದೈವವಶಾತ್ ಪ್ರಯೋಗಗಳು ಅದಿನ್ನೂ ನಡೆದಿರುವದಿಲ್ಲ. ನಾವು ಹಿರಿಯಣ್ಣನೆಂಬ ಜವಾಬ್ದಾರಿಯ ಸ್ಥಿತಿಯನ್ನು ಕಳೆದುಕೊಳ್ಳುತ್ತಿದ್ದೇವೆ ಮತ್ತು ಅವರ ಬಳಿ ನಮ್ಮ ಕಣ್ಣೀರ ಕಥೆಯನ್ನು ಹೇಳುತ್ತಿದ್ದೇವೆ.

ಸಿಂಹಳ ಹಾಗೆ ಸಿಡಿದು ಹೋಯಿತು. ಬ್ರಹ್ಮ ಪ್ರದೇಶದ ಪರಿಸ್ಥಿತಿಯಾದರೂ ಏನು? ೧೯೩೭ರ ವರೆಗೂ ಅದು ಭಾರತದ ಒಂದು ಪ್ರಾಂತ್ಯವಾಗಿತ್ತು. ಅಖಂಡ ಭಾರತದ ಅಸ್ತಿತ್ವದ ಇತಿಶ್ರೀ ಮಾಡಿ ಬಿಡಬೇಕೆಂದು ಪಣತೊಟ್ಟಿದ್ದ ಆಂಗ್ಲೇಯರು ಬ್ರಹ್ಮಪ್ರದೇಶವನ್ನು ಬೇರ್ಪಡಿಸಿದರು. ಭಾರತವನ್ನು ಬಿಟ್ಟು ಹೋದಂತೆ ಬ್ರಹ್ಮಪ್ರದೇಶವನ್ನು ಬ್ರಿಟಿಷರು ಬಿಟ್ಟುಹೋಗಲೇಬೇಕಾಯಿತು. ಅನಂತರ ಅಲ್ಲಿ ಕಮ್ಯೂನಿಸಮ್ಮಿನ ಕಾಟಲೆ ಅಧಿಕವಾಯಿತು. ಕಮ್ಯೂನಿಸಮ್ಮಿನ ಕಪಿಮುಷ್ಟಿಗೊಳಗಾದ ವೇಳೆ ಭಾರತದತ್ತ ಅದು ಕಲ್ಲು ತೂರಿಯಲಾರಂಭಿಸಿರುತ್ತದೆ. ಅದಕ್ಕೆ ಚೈನೀ ಕಮ್ಯೂನಿಸ್ಟರ ಸಂಪೂರ್ಣ ಸಹಾಯಕ್ಕೆ ಸಿದ್ಧವಾಗಿದೆ. ಅಲ್ಲಿಂದಲೂ ಉಳಿದ ಭಾರತೀಯರು ನಿರ್ಗತಿಕರಾಗಿ ಭಾರತಕ್ಕೆ ಬರುತ್ತಿದ್ದಾರೆ. ಅತ್ತ ನಮ್ಮ ದಿಲ್ಲಿ ದೇವತೆಗಳ ಗಮನ ಹರಿಸಿದ್ದಾರೆಯೇ? ಭಾರತೀಯರ ಮಾನಾಪಮಾನದತ್ತ ಅವರಿಗೆ ಲಕ್ಷ್ಯವಿದೆಯೇ?

ಪಾಕಿಸ್ಥಾನದ ಪೀಡೆಗೆ ಯಾರು ಕಾರಣ? ಇತರರನ್ನು ಹಳಿದೇನು ಫಲ? ಮಾತೃ ಭೂಮಿಯ ವಿಭಜನೆ ಸಾಧ್ಯವೇ ಇಲ್ಲವೆಂದು ಧೈರ್ಯದಿಂದ ಹೇಳುತ್ತಿದ್ದಲ್ಲಿ ಸ್ವಾತಂತ್ರ್ಯ ಪಡೆದುಕೊಳ್ಳಲು ಒಂದೆರಡು ದಿನ ಹೆಚ್ಚು ಕಡಿಮೆಯಾಗಬಹುದಿತ್ತು, ಅಷ್ಟೇ. ಅನಿಷ್ಟದ ಆ ಪಾಕಿಸ್ತಾನ ರಾತ್ರಿಯಂದು ಯೂನಿಯನ್ ಜ್ಯಾಕ್ ಕೆಳಗಿಳಿಯದೆ, ಅದರಂಗಿ ಮೇಲೇರದೆ ಇದ್ದಿರಬಹುದು. ಆದರೆ ಬ್ರಿಟಿಷರ ಬೂಟುಗಾಲು ನಡುಗಲಾರಂಭವಾಗಿತ್ತು. ಅವನ್ನು ಜಸ್ಟೀಸ್ ಪಾರ್ಟಿಯವರಾಗಲೀ ಇತರ ಆಂಗ್ಲ ವ್ಯಾಮೋಹಿಗಳಾಗಲೀ ಹಿಡಿದುಕೊಂಡಿದ್ದರೂ ಬ್ರಿಟಿಷರ ಆಳ್ವಿಕೆಗೆ ಅರ್ಧಚಂದ್ರಪ್ರಯೋಗ ಆಗುತ್ತಿತ್ತು. ಆದಕಾರಣ ಕ್ರಾಂತಿ ಹಾಗೂ ಶಾಂತಿ, ಸಂಧಾನ ಹಾಗೂ ಸಮರಗಳನ್ನ ಸಮರಸವಾಗಿ ಸಮ್ಮಿಲನಗೊಳಿಸಿ ಹೋರಾಡಬಲ್ಲ ರಾಷ್ಟ್ರೀಯ ಸ್ವಯಂ ಸೇನೆ ಸಿದ್ಧವಾಗುತ್ತಿತ್ತು. ಆದರೆ ಅಮಾವಾಸ್ಯೆಯ ಕತ್ತಲೆಯ ಹಿನ್ನೆಲೆಯಲ್ಲಿ ಘೋರ ಪಾಪಕೃತ್ಯ ನಡೆಯಿತು. ದೇಶವಿಭಜನೆಯ ಫಲವನ್ನು ಇಂದಿನ ಪೀಳಿಗೆ ಅಲ್ಲದೆ ಮುಂದಿನ ಪೀಳಿಗೆ ಅನುಭವಿಸಬೇಕಾಗಿರುತ್ತದೆ. ಅದಕ್ಕೆಂದು ಕೊನೆಯೇ? ಪಾಕಿಸ್ತಾನವಾದರೋ ಕಂಜರ ಕೋಟೆಯತ್ತ ಮಾತ್ರ ಕಣ್ಣಿಟ್ಟಿರುವದಲ್ಲ, ಕೆಂಪು ಕೋಟೆಯತ್ತವೇ ಕಣ್ಣಿಟ್ಟಿದೆ. ನಾವೇನು ಮಾಡುತ್ತಿದ್ದೇವೆ?

ಕಮ್ಯೂನಿಸಮ್ಮಿನ ಕಡು ಭೀಕರ ಜಾಡ್ಯಕ್ಕೆ ತುತ್ತಾಗಿರುವ ಚೈನಾವೂ ಭಾರತದತ್ತ ದೃಷ್ಟಿ ಹಾಯಿಸಿರುತ್ತದೆ. ಹುರಿಸುವಿಕೆಯ ಜಾಡ್ಯಕ್ಕೊಳಗಾದ ನಾಯಿ ಒಂದೆಡೆ ಕೂರುವಂತಿಲ್ಲವಂತೆ. ಹಾಗೇನೆ, ಕಮ್ಯೂನಿಸಂ ಕಪಿಮುಷ್ಟಿಗೊಳಗಾದ ರಾಷ್ಟ್ರಗಳ ಕರುಣಾಜನಕ ದುಸ್ಥಿತಿ ಇದೆ.

ಶ್ರೀ ಲಂಕೆ, ಬ್ರಹ್ಮಪ್ರದೇಶ ಅಥವಾ ಪಾಕೀಸ್ತಾನದಷ್ಟು ದೂರ ಏಕೆ ಹೋಗುವುದು? ಇಲ್ಲೇ ನಮ್ಮ ಕಾಲಡಿಯಲ್ಲೇ, ನಮ್ಮ ಕಣ್ಣೆದುರಲ್ಲೇ, ನಮ್ಮ ಮೂಗಿನಡಿಯಲ್ಲೇ, ನಮ್ಮ ಮುಷ್ಟಿಯೊಳಗೇನೇ ಏನು ನಡೆಯುತ್ತಿದೆ? ಮುಸ್ಲಿಂ ಲೀಗ್ ಕ್ರಿಶ್ಚಿಯನ್ ಕಾನ್‌ಫರೆನ್ಸ್, ದ್ರಾವಿಡ ಮುನ್ನೇಟ್ರ ಕಳಗಂ ಅಥವಾ ಜಾರ್ಕಂಡ ಪಾರ್ಟಿಗಳು ಎಡೆಬಿಡದೆ ಭಿನ್ನತೆಯ ವಿಷಬೀಜವನ್ನು ಬಿತ್ತುತ್ತಿವೆ. ಅದಕ್ಕೆ ಸಹಾಯ ಮಾಡಲು, ಧ್ವನಿಗೂಡಿಸಲು ಅಲ್ಲದೆ, ಅಂತರಾಷ್ಟ್ರೀಯ ವಲಯದಲ್ಲಿ ಪ್ರಚಾರ ಸಿಗುವಂತಾಗಲು ಅನ್ಯದೇಶೀಯರು ಬಂದು ಪ್ರಚಾರ ಮಾಡುತ್ತಿದ್ದಾರೆ. ತಾನು ಭಾರತೀಯನಲ್ಲವೆಂದು ಅಣ್ಣಾದೊರೈ ಅನ್ನಬಹುದು, ಶೇಖ್ ಅಬ್ದುಲ್ಲಾ ಅನ್ನಬಹುದು. ಅವರಿಗೆ ಸರಕಾರವು ನೈಜ ಮಾವನ ಮನೆಯಲ್ಲಿ ಮಹಾಸ್ವಾಗತವನ್ನೀಯುತ್ತದೆ. ಭಾರತವೆಂಬ ರಾಷ್ಟ್ರವೇ ಇರಲಿಲ್ಲ ಹಾಗೂ ಭಾರತೀಯರೆಂಬ ರಾಷ್ಟ್ರೀಯರೇ ಇರಲಿಲ್ಲವೆಂದು ಸ್ವತಂತ್ರ ಪಾರ್ಟಿ ಸರಾಗವಾಗಿ ಕೂಗಾಡಬಹುದು. ಅದಕ್ಕೆ ಅಡೆತಡೆಯೇ ಇಲ್ಲ. ಆದರೆ ಇದೊಂದು ರಾಷ್ಟ್ರ ಹಾಗೂ ಇಲ್ಲಿ ರಾಷ್ಟ್ರೀಯರು ಇದ್ದೇ ಇದ್ದಾರೆನ್ನುವವರೂ ಅಧಿಕ ಸಂಖ್ಯೆಯಲ್ಲಿ ಇದ್ದಾರೆ. ಆದರೆ ಅವರು ಪಡುತ್ತಿರುವ ಕಷ್ಟ ಹೇಳತೀರದು. ವಿದ್ರೋಹಿಗಳಿಗಾದರೋ ಸಹಾಯಮಾಡಲು ವಿದೇಶಿಯರಿದ್ದಾರೆ. ಸ್ವದೇಶ ಬಾಂಧವರಿಗೆ ಸಹಾಯ ಮಾಡಲು ಆವ್ಯಾರಿದ್ದಾರೆ? ಭಾರತೀಯರು ಇದನ್ನೊಂದು ತಿಳಿದುಕೊಳ್ಳುವರೊ! ದ್ರಾವಿಡರೆಂಬವರು ಆರ್ಯರೆಂಬವರಿಗಿಂತ ಭಿನ್ನ ಜನರಿದ್ದು, ಆರ್ಯರು ಆಕ್ರಮಣ ನಡೆಸಿದವರೆನ್ನುವದನ್ನು ಒಡೆದು ಆಳುವ ತಂತ್ರದ ಮೇಧಾವಿ ಬ್ರಿಟಿಷರು ಎಡೆಬಿಡದೆ ಹೇಳುತ್ತಿದ್ದರು. ಅದನ್ನು ನಾವು ಬಾಲಕರಾಗಿದ್ದಾಗ ನಮಗೆ ಹೇಳುತ್ತಿದ್ದರು. ನಾವು ಅಂದು ವಿದ್ಯೆ ಇಲ್ಲದೆ ಕಲಿತೆವು. ಇಂದು ಅದು ತಪ್ಪು, ಬ್ರಿಟಿಷರ ಆಟವೆಂದು ಅರಿತುಕೊಂಡ ಮೇಲಾದರೂ ಎಚ್ಚತ್ತಿದ್ದೇವೆಯೇ? ಇನ್ನೂ ಇಲ್ಲ. ನಮ್ಮ ಬಾಲಕರಿಗೂ ಅದನ್ನೇ ಹೇಳಿಕೊಡುತ್ತಿದ್ದೇವೆ. ಆ ಆಟ ಅಲ್ಲಿಗೇನೇ ಅಂತ್ಯವಾಗಿರುವುದಿಲ್ಲ. ನಾನಾ ರೂಪಗಳನ್ನು ತಳೆದು ನಾನಾ ರಂಗಗಳಲ್ಲಿ ನಾನಾ ಸಮಯದಲ್ಲಿ ಕಾಣಿಸಿಕೊಳ್ಳುತ್ತಿದೆ. ನಾಗಾಗಳ ಉದಾಹರಣೆ ಕಣ್ಣೆದುರಿಗೇನೇ ಇದೆ. ವಿದೇಶಿ ಮತಪ್ರಚಾರಕ ಸ್ಕಾಟ್ ಮಹಾಶಯ ಸರಾಗವಾಗಿ ಸಂಚರಿಸಿ ವಿಷಬೀಜವನ್ನು ಮನಸ್ಸು ಬಂದಂತೆ ಬಿತ್ತಿದ. ಅವನಿಗೆ ಸಹಾಯ ಮಾಡಲು ಅನೇಕ ವಿದೇಶಿ ಮತ ಪ್ರಚಾರಕರಂತೂ ನುಸುಳಿಯಾಗಿದ್ದಲ್ಲಿ ತೀರಿತು. ನುಸುಳಿಯಿಂದಾಗಿ ಮಹಾನ್ ಸಾಮ್ರಾಜ್ಯಗಳು ಮಣ್ಣಿನಡಿಗೆ ಹೋಗಿಲ್ಲವೇನು? ಇದೀಗ ಕುಮಾರಿ ಮರ್ಜೋರಿ ಸ್ಯಾಕ್ಸ್ ಹೆಸರು ಕೇಳಿ ಬರುತ್ತಿದೆ. ಈಕೆ ಇನ್ನು ಒಂದು ಹೆಜ್ಜೆ ಮುಂದೆ ಹೋಗಿದ್ದಾಳೆ. ನಾಗಾ ಮಂಗೋಲಿಯನರಿಗೂ, ಚೈನೀ ಜನರಿಗೂ ಉಳಿದ ಭಾರತೀಯರಿಗೂ ಸಂಬಂಧವೇ ಇಲ್ಲವೆಂದೂ, ಅದರ ಬದಲು, ನಾಗಾಯರಿಗೂ ಮಲಯದವರಿಗೂ ಸಂಬಂಧವಿದೆಯೆಂದಾಕೆ ಸಂಕೋಚವಿಲ್ಲದೆ ಸಾರುತ್ತಿದ್ದಾಳೆ. ಇದರ ಅರ್ಥವೇನು? ಮೊದಲನೆಯದಾಗಿ ನಾಗಾಜನರು ಅನ್ಯರಾಷ್ಟ್ರೀಯರಿರುವುದರಿಂದ ಅವರ ಮೇಲೆ ಭಾರತಸರಕಾರದ ಆಡಳಿತ ಲಗಾಮು ಪರಿಣಾಮ ಬೀರಲು ಸಾಧ್ಯವಿಲ್ಲ. ಎರಡನೆಯದಾಗಿ, ಭಾರತ ಒಂದು ದೇಶವಲ್ಲ. ಅಲ್ಲಿ ರಾಷ್ಟ್ರೀಯರೆನ್ನುವವರಾರೂ ಇಲ್ಲವೇ ಇಲ್ಲ. ಇಂತಹ ಭಿನ್ನ ಭಿನ್ನ ಭೂಭಾಗಗಳ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್

ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಪ್ರಕಟಣೆ.

ಉಡುಪಿ ತಾಲ್ಲೂಕು ಕಾಡೂರು ಗ್ರಾಮದ ಕಣತ್ರಬೆಟ್ಟುನಲ್ಲಿರುವ ಮಹಾಬಲ ಶೆಟ್ರ ಹೆಂಡ್ತಿ ಮಾರಮ್ಮ ಶೆಡ್ತಿಯು ಈ ಮೂಲಕ ಜಾಹೀರು ಪಡಿಸುವುದೇನೆಂದರೆ— ನನ್ನ ತಂದೆ ಕುಂದಾಪುರ ತಾಲ್ಲೂಕು ಬೆಳೂರು ಗ್ರಾಮದ ಮೂಡುಬೆಟ್ಟು ಅಂಕಯ್ಯ ಶೆಟ್ರ ಅಳಿಯ ಪುಟ್ಟಯ್ಯ ಶೆಟ್ರಿಗೆ ಈಗ ವೃದ್ಧಾಪ್ಯದ ದೆಸೆಯಿಂದಲೂ ಕಿವಿ ಸರಿಯಾಗಿ ಕೇಳದೆಯಿರುವುದರಿಂದಲೂ ವಿವೇಚನಾ ಶಕ್ತಿಯು ಕಡಿಮೆಯಾಗುತ್ತಾ ಬಂದಿರುತ್ತದೆ. ಆದುದರಿಂದ ಸದ್ರಿಯವರ ಪ್ರಕೃತದ ದೇಹಸ್ಥಿತಿಯನ್ನು ದುರುಪಯೋಗಿಸಿ ಸದ್ರಿಯವರ ಬಾಬ್ತು ಸ್ಥಿರಚರ ಸೊತ್ತುಗಳನ್ನು ಕ್ರಯ, ದಾನ, ವಿಕ್ರಯ, ಪರಾಧೀನ ವಗೈರೆಗಳನ್ನು ಯಾರಾದರೂ ಮಾಡಿಸಿಕೊಂಡಲ್ಲಿ ಅದು ಸಿಂಧುವಾಗತಕ್ಕದ್ದಲ್ಲವೆಂತ ಈ ಮೂಲಕ ಸರ್ವರಿಗೂ ತಿಳಿಸುತ್ತೇನೆ.

ಕಾಡೂರು, 6-7-1965. ○ ಈ ಎಡ ಹೆಬ್ಬೆಟ್ಟಿನ ಗುರುತು ಮಾರಮ್ಮ ಶೆಡ್ತಿಯವದ್ದಾಗಿದೆ.

ವನ ಮಹೋತ್ಸವದ ಜುಲೈ ತಿಂಗಳು

ಬಿತ್ತನೆ, ರಕ್ಷಣೆ ಎರಡರಲ್ಲೂ ರೈತರು ಎಚ್ಚರಿಕೆ ವಹಿಸಬೇಕು

ಜುಲೈ ತಿಂಗಳು-ಮುಂಗಾರು ಮೋಡಗಳು ಹೊತ್ತು ತಂದ ಮಳೆಯಿಂದ ಭೂಮಿ ಮತ್ತೆ ಹಸುರಾಗಿದೆ. ಕೆರೆ ಕುಂಟೆಗಳೆಲ್ಲಾ ತುಂಬಿವೆ. ಎಣಿಲು ಇಲ್ಲವೆ ಕಾರ್ತಿ ಬೆಳೆಗೆ ಉತ್ತು ಬಿತ್ತಿ ಹೊಸ ಚಟುವಟಿಕೆಗಳು ಮುಕ್ತಾಯ ಹಂತದಲ್ಲಿವೆ. ರೈತ ಬಾಂಧವರು ಈಗ ಎದೆಷ್ಟು ನಿಷ್ಠೆಯಿಂದ ದುಡಿಯುತ್ತಾರೆಯೋ ಅಷ್ಟೇ ಅವರಿಗೂ ದೇಶಕ್ಕೂ ಹಿತ.

ಭತ್ತದ ಗದ್ದೆ

ಸುಧಾರಿತ ತಳಿಯ ಗಿಡಗಳನ್ನೇ ನಿಮ್ಮ ಗದ್ದೆಯಲ್ಲಿ ನಾಟಿ. ಎಕ್ರೆಗೆ ೪೦ ರಾತಲು ಭತ್ತದ ಬೀಜದೊಡನೆ ಎರಡು ರಾತಲು ಸೆಣಬಿನ ಬೀಜವನ್ನು ಮಿಶ್ರಮಾಡಿ ಬಿತ್ತಿರಿ. ಒಂದು ಎಕ್ರೆಗೆ ೫ ಗಾಡಿ ಹಸಿರೆಲೆ ಅಥವಾ ಕಂಪೋಸ್ಟು ಗೊಬ್ಬರ ಹಾಗೂ ರಾಸಾಯನಿಕ ಗೊಬ್ಬರವನ್ನು ಎರಡು ಕಂತುಗಳಲ್ಲಿ ಕೊಡಬೇಕು. ಪ್ರತಿಕಂತಿನಲ್ಲಿ ೭೫ ಪೌಂಡು ಅಮೋನಿಯ ಸಲ್ಫೇಟು ಅಥವಾ ೩೦ ಪೌಂಡು ಯೂರಿಯಾ ಅಥವಾ ೫೮ ರಾತಲು ಅಮೋನಿಯಂ ಸಲ್ಫೇಟ್ ನೈಟ್ರೇಟ್ ಮತ್ತು ಸಾಧಾರಣ ಕೆಲವು ಮೂಳೆಗೊಬ್ಬರವನ್ನು ಕೊಡಬೇಕು. ಮೂಳೆಗೊಬ್ಬರವನ್ನು ಒಂದೇ ಸಾರಿ ಹಾಕಬೇಕು.

ಭತ್ತದ ರಕ್ಷಣೆ

ಕೊಡಿಟ್ಟ ಭತ್ತಕ್ಕೆ ಹಲವು ಬಗೆ ಕೀಟಗಳು ಅಲ್ಲಲ್ಲಿ ಹರಡಿವೆ. ಈಗಿನಿಂದಲೇ ಎಚ್ಚರಿಕೆ ವಹಿಸದೆ ಹೋದರೆ, ಸಂಗ್ರಹಿಸಿದ ಕಾಳು ಪೂರ್ಣ ಹುಳುವಿನ ಪಾಲಾಗಬಹುದು. ಕಾಳುಗಳಿಗೆ ಹುಳ ತಗಲುವುದಕ್ಕೆ ಅವುಗಳಲ್ಲಿ ತೇವವಿರುವುದೇ ಕಾರಣ. ಬಿಸಿಲು ಬಂದಾಗ ಕೊಡಿಟ್ಟ ಭತ್ತವನ್ನು ಒಣಗಿಸಿರಿ; ಅದನ್ನು ಗಂಜಕ್ಕನ್ನ ಬೇರ್ಪಡಿಸಿರಿ. ಭತ್ತ ಸಂಗ್ರಹಿಸುವ ಉಗ್ರಾಣವನ್ನು ಸರಿಯಾಗಿ ಶುಭ್ರಗೊಳಿಸಿರಿ. ನೆಲ ಗೋಡೆ ಮತ್ತು ಮೇಲ್ಛಾವಣಿಗಳಿಗೆ ಸೇ. ೧೦ರ ಬಿ. ಹೆಚ್. ಸಿ. ಪುಡಿ ಎಣ್ಣೆ ತೆಳುವಾಗಿ ಹರಡಿರಿ. ಒಳಗಡೆ ಬಿರುಕುಗಳಿದ್ದರೆ ಸಿಮೆಂಟಿನಿಂದ ಮುಚ್ಚಿರಿ. ಪ್ರತಿನೂರು ಪೌಂಡು ಭತ್ತಕ್ಕೆ ನಾಲ್ಕು ಔನ್ಸು ಬಿ. ಹೆಚ್. ಸಿ ಪುಡಿಯನ್ನು ಮಿಶ್ರಿಸಬಹುದು. ಕಾಳುಗಳನ್ನು ಸಂಗ್ರಹಿಸುವಾಗ ಅವನ್ನು ಸರಿಯಾಗಿ ಒಣಗುವಂತೆ ನೋಡಿಕೊಂಡು, ಮುಂದವುಗಳಿಗೆ ಹುಳಬೀಳುವ ಪ್ರಸಂಗ ಬಾರದಂತೆ ನೋಡಿಕೊಳ್ಳಿ.

ರಾಗಿ

ಹೈಬ್ರಿಡ್ ರಾಗಿಯನ್ನು ಈಗಲೇ ಬಿತ್ತಬೇಕು. ಇದನ್ನು ಚೆಲ್ಲಿ ಬಿತ್ತುವುದಕ್ಕಿಂತ ಮತ್ತು ಕೂರಿಗೆ ಬಿತ್ತನೆಗಿಂತ ನಾಟಿ ಬೆಳೆಸುವುದೇ ಲಾಭದಾಯಕ. ರಾಗಿಯ ಕಾಳು ಸಣ್ಣದಾಗಿರುವುದರಿಂದ ಮಿಶ್ರಣವಾಗದಂತೆ ಎಚ್ಚರಿಕೆ ವಹಿಸಿ; ಕಾಳುಗಳನ್ನು ಉಪ್ಪುನೀರಿನಲ್ಲಿ ಭಾರವಾದವುಗಳನ್ನೇ ಬಿತ್ತನೆಗೆ ಬಳಸಿರಿ.

ಜೋಳ

ಜೋಳವೇ ಮುಖ್ಯ ಬೆಳೆಯಾಗಿರುವ ಪ್ರದೇಶ ಕೆಲವು. ಗೊಬ್ಬರ ಕೊಟ್ಟಷ್ಟು ಜೋಳ ಹುಲುಸಾಗುವುದು, ಉತ್ತಮ ತಳಿಯ ಕಾಳನ್ನು ಆರಿಸಿ ೧೬ ಪೌಂಡು ಬೀಜಕ್ಕೆ ೧ ಔನ್ಸು ಗಂಧಕದ ಪುಡಿ ಬೆರಸಿ ಬಿತ್ತನೆಗೆ ಸಿದ್ಧಪಡಿಸಿರಿ. ಎಕ್ರೆಗೆ ೪ ಪೌಂಡು ಬೀಜ ಸಾಕಾಗುವುದು. ೧೫ ಇಂಚು-೧೮ ಇಂಚು ಅಂತರದಲ್ಲಿ ಬಿತ್ತುವುದು ಒಳ್ಳೆಯದು. ಪ್ರತಿ ಎಕ್ರೆಗೆ ೫ ಗಾಡಿ ಹಟ್ಟಿ ದನದ ಗೊಬ್ಬರ ಬೇಕು. ಇದಲ್ಲದೆ ೧೪ ಪೌಂಡು ಸಾರಜನಕ, ಅಮೋನಿಯಂ ಸಲ್ಫೇಟು ರೂಪದಲ್ಲಿ ಕೊಡಬೇಕು ೧೫೫ ರಾತಲು ಅಮೋನಿಯಂ ಸಲ್ಫೇಟು ಮತ್ತು ೮೦ ರಾತಲು ಸಿಂಗಲ್ ಸೂಪರ್ ಫಾಸ್ಫೇಟನ್ನು ಎರಡು ಹಂತಗಳಲ್ಲಿ, ಒಮ್ಮೆ ಬಿತ್ತನೆಯೊಂದಿಗೆ, ಮತ್ತೊಮ್ಮೆ ಚಿಗುರೆಯೊಡೆದ ಮೇಲೆ, ಕೊಟ್ಟರೆ ಮುಂಗಾರಿ ಫಸಲಿಗೆ ಬಹಳ ಒಳ್ಳೆಯದು. ಗೊಬ್ಬರವನ್ನು ಸಸಿಗಳ ಇಕ್ಕಡೆಗಳಲ್ಲೂ ಕ್ರಮವಾಗಿ ಇಡುತ್ತ ಹೋಗಬೇಕು.

ಹತ್ತಿಗೆ ಬೀಳುವ ಕೀಟಗಳು

ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಜುಲೈ-ಆಗಸ್ಟ್ ತಿಂಗಳುಗಳಲ್ಲಿ ಹತ್ತಿಗಿಡಗಳಿಗೆ ಕಾಯಿ ಕೊರೆಯುವ ಹುಳ ಬಿದ್ದು ಎಲೆಯನ್ನೂ ಕಾಯನ್ನೂ ಕೊರೆದು ನಾಶಪಡಿಸುತ್ತವೆ. ಒಣಗಿರುವ ಎಳೆಯ ರೆಂಬೆಗಳನ್ನು, ಹುಳದ ಬಾಧೆಗೆ ಬಿದ್ದ ಕಾಯಿಗಳನ್ನು ಕಿತ್ತು ಹಾಕಿರಿ. ಸೇ. ೫ರಂತೆ ಬಿ. ಎಚ್. ಸಿ. ಪುಡಿಯನ್ನು ಎಲೆ-ಕಾಯಿಗಳ ಮೇಲೆ ಎರಚಿರಿ.

ಹೇನು ಇನ್ನೊಂದು ನಾಶಮಾಡುವ ಜಂತು. ಇದರ ಕಾಟ ಜೂನಿನಲ್ಲಿ ತೊಡಗಿ ಆಗಸ್ಟದ ವರೆಗೂ ಮುಂದುವರಿಯುತ್ತದೆ. ಮೈಸೂರು, ಹಾಸನ, ಬೆಳಗಾವಿ, ಚಿತ್ರದುರ್ಗ, ಚಿಕ್ಕಮಗಳೂರು, ಧಾರವಾಡ, ಬಿದರೆ, ರಾಯಚೂರು ಜಿಲ್ಲೆಗಳಲ್ಲಿ ಇದರ ಪ್ರಭಾವ ಹೆಚ್ಚು. ಇದಕ್ಕೂ ನಿವಾರಣೆಯನ್ನು ಮೇಲಿನ ರೀತಿಯಲ್ಲೇ ಮಾಡಿಕೊಳ್ಳಬಹುದು. ಜೊತೆಗೆ ಸೇ. ೦.೫ ಫಾಲಿಡಾಲನ್ನೂ ಸಿಂಪಡಿಸಿದರೆ ಎಲ್ಲವೂ ಸರಿಹೋಗುವುದು.

ವನಮಹೋತ್ಸವ

೧೯೫೦ರಿಂದ ಜುಲೈ ತಿಂಗಳಲ್ಲಿ ಸಸಿ ನೆಡುವ ಸಪ್ತಾಹವು ಅನೂಚಾನವಾಗಿ ನಡೆದು ಬರುತ್ತಿದೆ. ಮೊತ್ತ ಮೊದಲ ಸಪ್ತಾಹ ನಡೆದಾಗ ದಿ| ಪ್ರಧಾನಿ ನೆಹರೂರವರು ಚರಿತ್ರಾರ್ಹ ಕೆಂಪುಕೋಟೆಯಲ್ಲಿ ಮಂದಾರದ ಗಿಡಗಳನ್ನು ನೆಟ್ಟರು. ಆಗ ಅವರು, 'ಮರಗಳನ್ನು ಕಡಿಯುವ ಬಗ್ಗೆ ಒಂದು ಕಾನೂನನ್ನು ಜ್ಯಾರಿಗೆ ತರುವುದು ಆಗತ್ಯವೆಂದು ನನಗನಿಸುತ್ತದೆ. ಮನುಷ್ಯನು ಮರವೊಂದನ್ನು ಕಡಿಯುವವರು ಆ ಮರದ ಸ್ಥಾನದಲ್ಲಿ ಬೇರೊಂದು ಸಸಿಯನ್ನು ನೆಟ್ಟು ನಷ್ಟವನ್ನು ಭರ್ತಿ ಮಾಡಬೇಕು. ಬೆಳೆಯುತ್ತಿರುವ ಮರಗಳೇ ಪ್ರಗತಿಪರ ರಾಷ್ಟ್ರದ ಜೀವಂತ ಸಾಕ್ಷಿಗಳು" ಎಂದು ನುಡಿದರು. ರಾಷ್ಟ್ರಪಿತ ಬಾಪೂಜಿಯವರು ಪ್ರಾರ್ಥನಾ ನಂತರದ ಒಂದು ಸಭೆಯಲ್ಲಿ ಭಾಷಣ ಮಾಡುವಾಗ ದೆಹಲಿಯಲ್ಲಿನ ಸಸಿ ನೆಡುವ ಸಪ್ತಾಹದ ಬಗ್ಗೆ ಹೀಗೆ ಪ್ರಸ್ತಾಪಿಸಿದ್ದರು— 'ಸಸಿ ನೆಡುವ ವಿಚಾರವನ್ನು ಹೊರಗೆಡಹಿದ ವ್ಯಕ್ತಿಗಳು ಕೇವಲ ಮೋಜಿಗಾಗಿ ಹೊರಗೆಡಹಲಿಲ್ಲ. ಅಲ್ಲದೆ ಸಸಿ ನೆಡುವ ಸಂಪ್ರದಾಯವನ್ನು ಎಲ್ಲರೂ ಅನುಸರಿಸಿ ರಾಷ್ಟ್ರ ಸಂಪತ್ತನ್ನು ಅಧಿಕಗೊಳಿಸಲೆತ್ನಿಸುವುದೆಂದೇ ಅಲ್ಲದೆ, ಹೆಚ್ಚಿನ ಮಳೆ ಪ್ರಮಾಣವನ್ನು ನಿರೀಕ್ಷಿಸಬಹುದೆಂಬುದು ಆ ವಿಚಾರವನ್ನು ಹೊರತಂದವರ ಉದ್ದೇಶ."

ವನಸಂಪತ್ತು ಅಪಾರ ಸಂಪತ್ತು. ಅದನ್ನು ಬೆಳೆಯೆಂದು ನಾವು ಭಾವಿಸುವುದಾದರೆ, ಹಣದ ಬೆಳೆ. ರಾಷ್ಟ್ರದ ಬೆಳವಣಿಗೆಯಲ್ಲಿ ಪ್ರಾಕೃತಿಕ ಸಂಪತ್ತಿನ ಸ್ಥಾನ ಗಣನೀಯವಾದುದು. ಅರಣ್ಯ ಸಂಪತ್ತಿನ ಮೂಲ್ಯವೂ ಅತ್ಯಧಿಕವಾದುದು. ಇಂತಹ ಕಾಡುಗಳು ನಾನಾ ಕಾರಣದಿಂದ ನಾಶವಾಗುತ್ತ ಬರುತ್ತಿರುವಾಗ ಹೊಸ ಹೊಸ ಕಾಡುಗಳು ಏಳುವುದೂ ಅಗತ್ಯ. ಅದಕ್ಕಾಗಿಯೇ ಆಚರಿಸಲಾಗುತ್ತಿದೆ ವನಮಹೋತ್ಸವ. ಸಾಂಪ್ರದಾಯಿಕ ಆಚರಣೆಗಿಂತ ಪರಿಣಾಮಕಾರಿ ಆಚರಣೆಯು ನಮಗಿಂದು ಬೇಕಾಗಿದೆ. ಅವಕಾಶವಿದ್ದಷ್ಟು ಅಧಿಕ ಸಸಿಗಳನ್ನು ನೆಟ್ಟು ಮನೆಗೂ ದೇಶಕ್ಕೂ ಹಿತವೆಣಿಸಬೇಕು. ನೆಟ್ಟ ಸಸಿಗಳನ್ನು ಸರಿಯಾಗಿ ರಕ್ಷಿಸಿಕೊಂಡು ಬರಬೇಕು.

NAVAYUGA

Announcement

You are aware that the INDEPENDENCE SPECIAL of your favourite Weeekly 'NAVAYUGA' has over the years earned a reputation for the sumptuous fare it offers to its extensive readership spread over nineteen districts of Mysore State.

The 'Special' will be issued as usual on August 15th this year to mark the 18th Anniversary of our Independence. To commemorate the occasion it will contain essays and skits by noted authors and journalists of Karnataka and pictures and sketches narrating the steady progress of this country in various spheres of national life including social, economic, religious and educational.

August 15th is an auspicious day and the 'Navayuga Independence Special' a fitting medium to convey the message of your goods to hundreds of homes in the State. Kindly send in your advertisement material on or before August 5th, 1965.

ADVT. MANAGER.
NAVAYUGA, UDIPI- S. K.

ಚಂದಾದಾರರಲ್ಲಿ ವಿನಂತಿ.

ಇದೇ ಬರುವ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 44ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 45ನೇ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರಿತ ಮನಿಯಾರ್ಡರು ದ್ವಾರಾ ಅಥವಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಮೇನೇಜರ್
ನವಯುಗ, ಉಡುಪಿ.

ಪ್ರಕೃತಿ ಶಕ್ತಿಯ

ಹವಾಮಾನ ವಿಜ್ಞ

ಭಾರತದ ಪಾತ್ರ

ಮಾನವನು ಪ್ರಜ್ಞಾವಂತನೆನಿಸಿದಂದಿನಿಂದಲೇ ಆತನು ಸಿಡಿಲು, ಮಿಂಚು, ಬಿರುಗಾಳಿಗಳ ಅನುಭವ ಮಾಡಿಕೊಳ್ಳುತ್ತ ಬಂದಿದ್ದಾನೆ. ಪ್ರಕೃತಿಯ ಸಹಜ ಶಕ್ತಿಗಳಾದ ಇವುಗಳಿಗೆ ಜನ ಬೇರೆ ಬೇರೆ ಅರ್ಥಗಳನ್ನು ಕಟ್ಟುತ್ತಲೇ ಬಂದಿದ್ದಾರೆ. ಮುಖ್ಯವಾಗಿ ಅಸ್ಸಾಮದ ಜನರ ಕತೆಗಳು ವಿಲಕ್ಷಣವಾಗಿಯೇ ಇವೆ. ಸಿಡಿಲು ಹಕ್ಕಿಗಳು ರೆಕ್ಕೆ ಬಡಿದಾಗ ಸಿಡಿಲೂ ಅವುಗಳ ಕಣ್ಣುಗಳಿಂದ ಮಿಂಚೂ ಹುಟ್ಟುವುದೆಂದು ಒಂದು ಕತೆ ಹೇಳುತ್ತದೆ. ಭಾರತದಲ್ಲಿ ಪ್ರಚಲಿತವಿರುವ ಕತೆಯು ಇನ್ನೂ ಸಾಹಸಮಯವಾದುದು. ಆರ್ಯರಾಜ ಸುದಾಸನ ರಾಜ್ಯವನ್ನು ತಮೋಸುರನು ಆಕ್ರಮಿಸಿದನಂತೆ. ಆಗ ಸುದಾಸನು ದೇವೇಂದ್ರನ ಮರೆಹೋಗಲು ಆತನು ತಮೋಸುರ ನಾಶಕ್ಕೆ ಹೊರಟು ಬಂದನಂತೆ. ಆತನ ರಥದ ಗಾಲಿಗಳ ಗುಡುಗುಡು ಸದ್ದೇ ಗುಡುಗಾಯಿತು; ಜಳಪಿಸಿದ ವಜ್ರಾಯುಧದ ಬೆಳಕೇ ಮಿಂಚಾಯಿತು; ಸಹಾಯಕನಾಗಿ ಬಂದ ವಾಯುವೇ ಬಿರುಗಾಳಿಯಾಯಿತು. ಅಂದಿನಿಂದಿಂದಿನ ತನಕವೂ ವರ್ಷಂಪ್ರತಿ ತಮೋಸುರನ ಹಾವಳಿ ಇದ್ದೇ ಇದೆ; ಆಗ ಇಂದ್ರನು ತಮ್ಮ ಸಹಾಯಕ್ಕಾಗಿ ಧಾವಿಸಿ ಬರುತ್ತಾನೆ ಎಂಬ ಕಲ್ಪನೆಯೊಂದಿದೆ.

ಇಂದಿನ ಮಾನವನೂ ಪ್ರಕೃತಿಯ ಈ ಶಕ್ತಿಗಳ ಬಗ್ಗೆ ಆಸಕ್ತಿ ತಳೆದಿದ್ದಾನೆ. ಆದರೆ, ಅವನದು ಕಲ್ಪನೆಯ ಮೇಲೆ ಕಟ್ಟಿದ ಗೋಪುರವಲ್ಲ. ಬಿರುಗಾಳಿಯ ಮುನ್ಸೂಚನೆ ಇಂದು ಆತನಿಗೆ ಅತ್ಯಗತ್ಯ. ವ್ಯವಸಾಯದಲ್ಲಿ, ಅಟಿಪಾತಗಳಲ್ಲಿ ಮತ್ತು ಭವನ ನಿರ್ಮಾಣ ಕಾರ್ಯದಲ್ಲಿ ಈ ತರಹದ ಮುನ್ಸೂಚನೆಯಿಂದ ತುಂಬ ಪ್ರಯೋಜನಗಳಿವೆ.

ವಿಮಾನ ಸಂಚಾರವಿಂದು ಮನೆಮಾತಾಗಿದೆ. ಅವಶ್ಯವೆನಿಸಿದಾಗ ಚಂಡಮಾರುತಗಳಿಗೆದುರಾಗಿಯೂ ವಿಮಾನ ಹಾರಲೇ ಬೇಕಾಗುತ್ತದೆ. ಆದುದರಿಂದ ಬಿರುಗಾಳಿಗಳ ಸ್ಥಾನ ನಿರ್ದೇಶ, ಗಾತ್ರ ಹಾಗೂ ಸಾಂದ್ರತೆಗಳನ್ನು ಕುರಿತು ಸಮರ್ಪಕವಾದ ಜ್ಞಾನವು ವೈಮಾನಿಕರ ಜಕೋಟಿ ನೆಲೆಗಳಿಗೆ ಅತ್ಯಗತ್ಯ. ಸಮರ್ಪಕವಾದ ಬಿರುಗಾಳಿಗಳ ಮುನ್ಸೂಚನೆಯಿಂದ ಹೆಚ್ಚಿನ ಪ್ರಯೋಜನವಿಲ್ಲವಾದರೂ ಜನಸಾಮಾನ್ಯರಿಗೆ ಅದರಿಂದಲೂ ಲಾಭವಿದೆ, ಹಾಗೆಯೇ ಮಳೆಯ ಮುನ್ಸೂಚನೆಗಳು ಸರಿಯಾಗಿ ದೊರಕಿತೆಂದರೆ ಯಾತ್ರಿಕರಿಗೂ ರೈತರಿಗೂ ಅದೆಷ್ಟು ಉಪಯುಕ್ತ!

ಆದರೆ, ಹವಾಮಾನದ ಮುನ್ಸೂಚನೆಗಳನ್ನು ನಿಖರವಾಗಿ ತಿಳಿಯುವುದು ಹೇಗೆ? ಇದಕ್ಕನುಕೂಲವಾದ ಯಾವುದೇ ಸಾಧನವಿದೆಯೆ?. ಇದೀಗ ಹವಾಮಾನವನ್ನು ಪರಿಶೀಲಿಸುವುದಕ್ಕಾಗಿಯೇ ತಯಾರಾಗಿದೆ ರಡಾರ್ ಯಂತ್ರ. ಇದರ ಸಹಾಯದಿಂದ ವಿವರವಾದ ಮುನ್ಸೂಚನೆಗಳನ್ನು ಪಡೆಯುವುದು ಸಾಧ್ಯ. ಅದು ಬಿರುಗಾಳಿಗಳ ಸ್ಥಳದ ನಕ್ಷೆಗಳನ್ನು ಸಿದ್ಧಪಡಿಸುತ್ತದೆ; ಸಾಂದ್ರತೆಯನ್ನು ಸೂಚಿಸುತ್ತದೆ. ಬಿರುಗಾಳಿಗಳ ಬೆಳವಣಿಗೆಗೆ ಹಾಗೂ ಚಲನವಲನಗಳನ್ನು ಕುರಿತು ತಿಳುವಳಿಕೆ ಪರಿಮಿತವಾಗಿರುವುದರಿಂದ ಮುನ್ಸೂಚಕರು ರಡಾರಿನ ಚೈತನ್ಯದ ಪೂರ್ಣಪ್ರಯೋಜನವನ್ನು ಪಡೆಯಲಾರದಾಗಿದ್ದಾರೆ.

೧೯೪೬—೪೭ರಲ್ಲಿ ಅಮೆರಿಕೆಯ ಹವಾಮಾನ ಶಾಖೆಯವರೂ ಕೇಂದ್ರ ಸರಕಾರದ ಇತರ ಪ್ರಾತಿನಿಧ್ಯಗಳೂ ಜತೆಗೂಡಿ ಒಂದು ಪ್ರಾಜೆಕ್ಟ ತಯಾರಿಸಿದರು. ಇದರಲ್ಲಿ ಸಂಗ್ರಹಿತವಾದ ಅಂಕೆ-ಅಂಶಗಳ ಸಹಾಯದಿಂದ ಬಿರುಗಾಳಿಗಳೆಂದರೆ ಸಾಮಾನ್ಯವಾಗಿ ಸೆಲ್‌ಗಳ ರಾಶಿ ಎಂಬುವುದಾಗಿ ಚಿಕಾಗೊ ವಿಶ್ವವಿದ್ಯಾಲಯದ ವಿಜ್ಞಾನಿಗಳು ಸ್ಪಷ್ಟಪಡಿಸಿರುವರು. ಈ ಸೆಲ್ಲುಗಳ ವಿಸ್ತಾರವೆಷ್ಟು? ಸಾಮಾನ್ಯವಾಗಿ ಒಂದು ಮೈಲಿನಿಂದ ತೊಡಗಿ ಕೆಲವು ಮೈಲುದ್ದದ ವ್ಯಾಸ ಇವಕ್ಕಿರುತ್ತವೆ! ಇವು ಮೇಲೇಳುವುದುಂಟು, ಕೆಳಗಿಳಿಯುವುದೂ ಉಂಟು! ಒಂದು ಸೆಲ್ ಸುಮಾರು ಅರ್ಧ ತಾಸಿನಿಂದ ಒಂದು ತಾಸಿನ ತನಕ ಜೀವಂತವಿರುವುದು.

ಬಿರುಗಾಳಿಗಳ ಚಲನವಲನಗಳನ್ನು ಕೊಲರೆಡೊವಿನ ಬೋಲ್ಡರ್‌ನಲ್ಲಿ ವಾತಾವರಣ ಸಂಶೋಧನಾ ರಾಷ್ಟ್ರೀಯ ಕೇಂದ್ರದಲ್ಲಿ ಇತ್ತೀಚೆಗೆ ಪರಿಶೀಲಿಸಲಾಯಿತು. ಅಮೇರಿಕೆಯ ವಿಶಾಲ ಮೈದಾನ ಪ್ರದೇಶದಲ್ಲಿ ಅನೇಕ ಸೆಲ್ಲುಗಳ ಬಿರುಗಾಳಿಗಳನ್ನು ಅಧ್ಯಯನ ಮಾಡುವಾಗ ಬಿರುಗಾಳಿಯ ಚಲನೆಯ ಮೇಲೆ ಪರಿಣಾಮವನ್ನುಂಟು ಮಾಡುವ ಅತೀ ಮುಖ್ಯಾಂಶಗಳಲ್ಲಿ ಸೆಲ್ಲುಗಳ ಬೆಳವಣಿಗೆಯ ಹಾಗೂ ನಿಪಾತದ ವಿಧಾನವೊಂದೆಂಬುದು ತಿಳಿದು ಬಂತು.

ಉದಾಹರಣೆಗೆ ಅಂತಹ ಬಿರುಗಾಳಿಯನ್ನು ಮೇಲಿನಿಂದ ಅದರ ಚಲನೆಯ ದಿಕ್ಕಿನಲ್ಲಿ ವೀಕ್ಷಿಸಿದಾಗ ಇರುವ ಸೆಲ್ಲುಗಳ ಬಲಭಾಗದಲ್ಲಿ ಹೊಸ ಸೆಲ್ಲುಗಳು ರೂಪುಗೊಳ್ಳುತ್ತಿರುವುದೂ ಹಳೆಯ ಸೆಲ್ಲುಗಳು ಎಡಭಾಗದ ಕಡೆಗೆ ನಿಪಾತವಾಗುತ್ತಿರುವುದೂ ಕಂಡು ಬರುವುದು. ಪ್ರತ್ಯೇಕವಾದ ಏಕಸೆಲ್ಲುಗಳು ಇಡಿಯ ಬಿರುಗಾಳಿಯೊಡನೆ ಸ್ವಲ್ಪಮಟ್ಟಿಗೆ ಬಲ ತುದಿಗೆ ಹೊರಳಿ ಮುಂದಕ್ಕೆ ಸಾಗುತ್ತಿರುವುವು.

ಸಾಮಾನ್ಯವಾಗಿ ಹೊಸ ಸೆಲ್ಲುಗಳ ಬೆಳವಣಿಗೆ ಇರುವ ಬಿರುಗಾಳಿಯ ಬಲಗಡೆಯ ಮುಂಬದಿಯ ತುದಿಯಲ್ಲಿ ನಡೆಯುತ್ತದೆಂದು ಅಮೇರಿಕೆ ಮತ್ತು ಬ್ರಿಟಿಷ್ ವಿಜ್ಞಾನಿಗಳು ೧೯೬೦ರಲ್ಲಿ ನಡೆಸಿದ ರಡಾರ್ ಪರಿಶೀಲನೆಯಿಂದ ವ್ಯಕ್ತಪಟ್ಟಿತು. ಬಲಗಡೆಯಲ್ಲಿ ಹೊಸ ಸೆಲ್ಲುಗಳು ಸೇರಿದಾಗ ವೇಗ ಹೆಚ್ಚಿದಷ್ಟು ಬಿರುಗಾಳಿಯ ಚಲನೆ ಪ್ರತ್ಯೇಕ ಸೆಲ್ಲಿನ ಚಲನೆಯ ಬಲಕ್ಕೆ ಸರಿಯುವುದೂ ಹೆಚ್ಚುವುದು. ಈ ಬಗೆಯ ವ್ಯವಸ್ಥೆಯನ್ನು ನಿರೂಪಿಸುವ ಪ್ರಮೇಯವನ್ನು ೧೯೫೮ರಲ್ಲಿ ಡಾ|| ನ್ಯೂಟನ್ ಹಾಗೂ ಅವರ ಪತ್ನಿ ಹ್ಯಾರಿಯಟ್ ಮುಂದಿಟ್ಟರು. ಈ ಪ್ರಮೇಯದಲ್ಲಿ ನಾನಾ ಎತ್ತರದಲ್ಲಿ ಗಾಳಿಯ ದಿಕ್ಕುಗಳನ್ನು ವೇಗವನ್ನು ಬಿರುಗಾಳಿಯ ಗಾತ್ರಗಳನ್ನು, ಇತರ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿತ್ತು. ಬಿರುಗಾಳಿ ದೊಡ್ಡದಿದ್ದಷ್ಟು ಅದು ಗಾಳಿಯ ಹಾದಿಯ ಬಲಕ್ಕೆ ಹೆಚ್ಚು ದೂರವಾಗುವುದು.

ಇದೇ ಬಿರುಗಾಳಿಯ ರಚನೆಯನ್ನು ವಿವರಿಸುವ ಮೊತ್ತಮೊದಲ ಪ್ರಮೇಯ. ಆದರೆ ಇದು ಬಿರುಗಾಳಿಯ ಚಲನವಲನಗಳ ವ್ಯಾವಹಾರಿಕ ಮುನ್ಸೂಚನೆಯನ್ನು ನೀಡಲಾರದೆಂದು ಆಗ ನಂಬಲಾಗಿತ್ತು. ಈ ಮುನ್ಸೂಚನೆಯನ್ನು ಉತ್ತಮಪಡಿಸುವ ಪ್ರಯತ್ನವಾಗಿ ತೇವದ ಸರಬರಾಜು ಹಾಗೂ ಬೇಡಿಕೆಗಳ ಮೊತ್ತದ ದೃಷ್ಟಿಯಿಂದ ಬಿರುಗಾಳಿಗಳನ್ನು ಪರಿಶೀಲಿಸಲಾಯಿತು.

ಬಹುಕಾಲ ತೇವ ಸಂಗ್ರಹಿತವಾಗಿರುವ ಕೆಳಮಟ್ಟದಲ್ಲಿರುವ ವಾತಾವರಣದಲ್ಲಿ ಚಲಿಸುವಾಗ ಬಿರುಗಾಳಿಯು ನೀರಿನ ಆವಿಯನ್ನು ಮೇಲಕ್ಕೆ ಗುಡಿಸುವುದು. ಒಂದಷ್ಟು ನೀರು ಮಳೆಯಾಗಿ ಬೀಳುವುದು. ಮಳೆ ಬಿದ್ದದ್ದರಿಂದ ಸಮತೂಕದ ಸಾಧನೆಗೆ ತೇವವಿರುವ ಸಲುವಾಗಿ ಬಿರುಗಾಳಿಗಳು ಕೆಳಮಟ್ಟದಲ್ಲಿ ನಿರ್ದಿಷ್ಟ ವೇಗದಲ್ಲಿ ಚಲಿಸಬೇಕಾಗುವುದು. ಬಿರುಗಾಳಿಯು ದೊಡ್ಡದಿದ್ದಷ್ಟು ವೇಗದ ಪ್ರಮಾಣವೂ ಹೆಚ್ಚ ಬೇಕಾಗುವುದ. ಗಾಳಿಯ ಸರಾಸರಿ ದಿಕ್ಕಿನ ಬಲಕ್ಕೆ ಸರಿದಷ್ಟೂ ಬಿರುಗಾಳಿಯ ವೇಗ ಹೆಚ್ಚುವುದು; ಎಡಕ್ಕೆ ಸರಿದಷ್ಟೂ ವೇಗ ಕಮ್ಮಿಯಾಗುವುದು.

ಈ ಪರಿಶೀಲನೆಯಿಂದ ಡಾ|| ನ್ಯೂಟನ್ ಮತ್ತವರ ಸಹೋದ್ಯೋಗಿಗಳು ಸರಳವಾದ ಸೂತ್ರವೊಂದನ್ನು ಕಂಡುಹಿಡಿದರು. ಇದು ಬಿರುಗಾಳಿಗಳ ಚಲನವಲನಗಳನ್ನು ಸರಿಯಾಗಿ ವಿವರಿಸುತ್ತದೆ. ನಿಸರ್ಗದಲ್ಲಿ ಅವರ ಮುನ್ಸೂಚನೆಗಳಿಗಿಂತ ಸಾಕಷ್ಟು ಬಿನ್ನವಾದ ಘಟನೆಗಳು ಸಂಭವಿಸಿವೆ. ಆದರೆ, ಸಾಕಷ್ಟು ಸಂಖ್ಯೆಯಲ್ಲಿ ಬಿರುಗಾಳಿಗಳನ್ನು ಪರಿಶೀಲಿಸಿದ ಮೇಲೆ ಈ ಸೂತ್ರವನ್ನು ಉತ್ತಮಪಡಿಸಬಹುದೆಂಬ ನಿರೀಕ್ಷೆ ಅವರಿಗಿದೆ. ಇನ್ನೂ ಪರಿಷ್ಕೃತವಾಗಬೇಕಾಗಿರುವ ಈ ಸೂತ್ರ ಸಮೀಪಗತ ಬಿರುಗಾಳಿಗಳ ಮುನ್ಸೂಚನೆಗೆ ಅವಲಂಬನೀಯ ವ್ಯವಸ್ಥೆಯನ್ನು ರೂಪಿಸುವ ಹಾದಿಯಲ್ಲಿ ಇಟ್ಟ ಒಂದು ಹೆಜ್ಜೆ ಎನ್ನಬಹುದು.

ಈ ಬಿರುಗಾಳಿಗಳ ಒಳ ಅರಿವಿಗೆ ನಮ್ಮ ವೈಜ್ಞಾನಿಕ ಮುನ್ಸೂಚಕರು ಸಿಡಿಲ ಹಕ್ಕಿಗಳನ್ನು ಕರೆಯುವ ಆಸೆಯನ್ನು ಹೊಂದಿದ್ದರೆ ಆಶ್ಚರ್ಯವಿಲ್ಲ. ಅದೇನಾದರೂ ಇರಲಿ, ಎಲ್ಲೋ ದೂರದಲ್ಲಿ ಕೇಳಿ ಬಂದ ಸಿಡಿಲಿನ ನೆಲೆಯನ್ನು ಗುರುತಿಸುವ ಹಾದಿಯಲ್ಲಿ ಅವರು ಮುಂದುವರಿದಿದ್ದಾರೆ ಎನ್ನುವುದು ಖಂಡಿತ.

ಹವಾಮಾನ ಪರಿಶೀಲನೆಗಾಗಿ ಹಾರಿಸಲಾಗುವ ಬೆಲೂನ್ ಹಾರಾಟಕ್ಕೆ ಸಿದ್ಧವಾಗಿದೆ. ನವದೆಹಲಿ ಪ್ರದರ್ಶನದಲ್ಲಿನ ಪ್ರದರ್ಶಿಕೆಯಿದು.

ಸಂಶೋಧನೆ

ನದ ಬೆಳವಣಿಗೆ

ಕಡಿಮೆಯಿಲ್ಲ

ಭಾರತವು ಹವಾಮಾನ ವಿಜ್ಞಾನ ಕ್ಷೇತ್ರದಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದೆ ಎನ್ನುವುದಕ್ಕೆ ಅನೇಕ ನಿದರ್ಶನಗಳಿವೆ. ಆಧುನಿಕ ಸಂಪರ್ಕ ಸಾಧನಗಳಿಂದ ಹವಾಮಾನಕ್ಕೆ ಸಂಬಂಧಿಸಿದ ವಿವರಗಳ ಸಂಗ್ರಹಣೆ ಮತ್ತು ವಿನಿಮಯ ಉತ್ತರ ಗೋಳಾರ್ಧದಲ್ಲಿ, ಹವಾಮಾನ ವಿಶ್ಲೇಷಣಾ ಕೇಂದ್ರದ ಸ್ಥಾಪನೆ, ಪೂನಾದ ಉಷ್ಣವಲಯದ ಹವಾಮಾನ ವಿಜ್ಞಾನ ಸಂಸ್ಥೆ ಮತ್ತು ಮುಂಬೈನ ಅಂತಾರಾಷ್ಟ್ರೀಯ ಹವಾಮಾನ ವಿಜ್ಞಾನ ಕೇಂದ್ರದ ಕಾರ್ಯವಿಧಾನ ಇವು ಹವಾಮಾನ ವಿಜ್ಞಾನ ಕ್ಷೇತ್ರದಲ್ಲಿ ಭಾರತವು ತಳೆದಿರುವ ತೀವ್ರ ಆಸಕ್ತಿಯನ್ನು ವ್ಯಕ್ತಗೊಳಿಸುತ್ತವೆ.

ಹವಾಮಾನಕ್ಕೆ ಸಂಬಂಧಪಟ್ಟಂತೆ ಸಂಶೋಧನೆಗಳನ್ನು ನಡೆಸುವ ಕೃತಕ ಉಪಗ್ರಹಗಳು ಮತ್ತು ರಾಕೆಟ್‌ಗಳ ಪ್ರಯೋಗದಿಂದ ಈ ಕ್ಷೇತ್ರದಲ್ಲಿ ನೂತನ ಯುಗವು ಆರಂಭವಾಗಿದೆ. ಇದು ಹವಾಮಾನ ವಿಜ್ಞಾನದ ಗಮನಾರ್ಹ ಅಭಿವೃದ್ಧಿಗೆ ಕಾರಣವಾಗಲಿದೆ. ಭಾರತದ ಹವಾಮಾನ ವಿಜ್ಞಾನ ಸಂಬಂಧವಾದ ವಿಭಾಗವು ಈ ಹೊಸ ಕ್ಷೇತ್ರದಲ್ಲಿನ ಬದಲಾವಣೆಗಳನ್ನು ಅಧಿಕ ಕುತೂಹಲದಿಂದ ಗಮನಿಸುತ್ತಿದೆ. ಅಂತರಿಕ್ಷ ಸಂಶೋಧನಾ ಸಂಬಂಧವಾದ ಭಾರತದ ರಾಷ್ಟ್ರೀಯ ಸಮಿತಿಯ ಸಹಯೋಗ ಪಡೆದು ತಿರುವನಂತಪುರದ ಬಳಿಯಲ್ಲಿನ ಥುಂಬಾದಿಂದ ಹವಾಮಾನ ಸಂಶೋಧನಾ ರಾಕೆಟ್ಟುಗಳ ಪ್ರಯೋಗವನ್ನು ಆರಂಭಿಸಿದೆ. ಹವಾಮಾನ ಸಂಶೋಧನೆಯ ಉಪಗ್ರಹಗಳು ನೋಡದ ಆವರಣಕ್ಕೆ ಸಂಬಂಧಿಸಿದಂತೆ ಒದಗಿಸಿರುವ ಮಾಹಿತಿಯು ಹವಾಮಾನ ವಿಶ್ಲೇಷಣಾ ಕಾರ್ಯದಲ್ಲಿ ಅತ್ಯಂತ ಪ್ರಯೋಜನಕಾರಿಯಾಗಿ ಪರಿಣಮಿಸಿದೆ.

ಹವೆಯು ಸ್ವರೂಪದಲ್ಲಿ ವಿಶ್ವವ್ಯಾಪಿಯಾಗಿದ್ದು ವಿಶ್ವದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಚಲಿಸುತ್ತದೆ. ಅದಕ್ಕೆ ಯಾವುದೇ ರಾಜಕೀಯ ಗಡಿಗಳಿಲ್ಲ. ವಾತಾವರಣವು ವಿಶ್ವದ ಸುತ್ತಲಿನ ಒಂದು ನಿರಂತರ ವಲಯವಾಗಿದೆ. ಹವೆಯ ಚಲನೆ ಮತ್ತು ಹವೆಯಲ್ಲಿನ ವಿವಿಧ ಗುಣಧರ್ಮಗಳನ್ನು ವಸ್ತುಗಳೊಂದಿಗೆ ಪರಸ್ಪರ ಕ್ರಿಯೆಯಿಂದಾಗಿ ಹವಾಮಾನವು ರೂಪುಗೊಳ್ಳುತ್ತದೆ. ಹವಾಮಾನದ ವಿಶಿಷ್ಟ ಗುಣಧರ್ಮವೂ ಈ ಕ್ರಿಯೆಯಿಂದಲೇ ನಿರ್ಧರಿಸಲ್ಪಡುತ್ತದೆ. ಯಾವುದೇ ವಿಶಿಷ್ಟ ಹವಾಮಾನವು ಒಂದು ರಾಷ್ಟ್ರದ ಗಡಿಗಳಿಗೆ ಸೀಮಿತವಾಗಿರುವುದಿಲ್ಲ. ಈ ಕಾರಣದಿಂದಲೇ ವಿಶ್ವದ ರಾಷ್ಟ್ರಗಳು ಹವಾಮಾನಕ್ಕೆ ಸಂಬಂಧಿಸಿದಂತೆ ಅಗತ್ಯವಾದ ಮಾಹಿತಿಯನ್ನು ಸಂಗ್ರಹಿಸುವುದು, ಇಂತಹ ಮಾಹಿತಿಯ ವಿನಿಮಯ ಮತ್ತು ಅಂತರಾಷ್ಟ್ರೀಯ ಇನ್ನೇ ಮೊದಲಾದ ಕೆಲಸ-ಕಾರ್ಯಗಳಲ್ಲಿ ಅತ್ಯಧಿಕ ಪ್ರಮಾಣದ ಅಂತರಾಷ್ಟ್ರೀಯ ಸಹಕಾರ ಅಗತ್ಯವೆನ್ನುವುದನ್ನು ಮನವರಿಕೆ ಮಾಡಿಕೊಂಡಿರುತ್ತವೆ.

ಹವಾಮಾನಕ್ಕೆ ಸಂಬಂಧಿಸಿದಂತೆ ಸಂಗ್ರಹಿಸಿದ ಈ ವಿವರಗಳನ್ನು ಹವಾಮಾನದ ನಕ್ಷೆಗಳ ಮೇಲೆ ಗುರುತಿಸಿ ರಾಷ್ಟ್ರೀಯ ಹಿತದೃಷ್ಟಿಯಿಂದ ಈ ವಿವರಗಳನ್ನು ಅಧ್ಯಯನ ಮಾಡಲಾಗಿದೆ.

ಅಂತರಾಷ್ಟ್ರೀಯ ಹವಾಮಾನ ವಿಜ್ಞಾನ ಸಂಸ್ಥೆಯು ೧೮೭೮ರಲ್ಲಿ ಸ್ಥಾಪನೆಗೊಂಡಿತು. ಭಾರತವು ಸಹ ಈ ಸಂಸ್ಥೆಯ ಸಂಸ್ಥಾಪಕ ರಾಷ್ಟ್ರಗಳಲ್ಲೊಂದು. ಅಂತರಾಷ್ಟ್ರೀಯ ಹವಾಮಾನ ವಿಜ್ಞಾನ ಸಂಸ್ಥೆಯ ಅನೇಕ ಸಮಿತಿಗಳಲ್ಲಿ ಕಾರ್ಯ ನಿರ್ವಹಿಸಲು ಭಾರತಕ್ಕೆ ಒಂದಲ್ಲ ಅನೇಕ ಸಲ ಆಹ್ವಾನ ಬಂದಿದೆ. ಹವಾಮಾನ ವೀಕ್ಷಣಾಲಯಗಳಲ್ಲಿ ಸಂಪರ್ಕ ಕಲ್ಪಿಸುವ ಮೂಲಕ ಭಾರತವು ಭಾರತೀಯ ಹವಾಮಾನ ವಿಜ್ಞಾನ ಸಂಸ್ಥೆ, ಆಸ್ಟ್ರೇಲಿಯ ಮತ್ತು ಯುರೋಪಿನ ಹವಾಮಾನ ವಿಜ್ಞಾನ ಸಂಸ್ಥೆಗಳ ನಡುವೆ ಸಮನ್ವಯ ಕಲ್ಪಿಸಿದೆ. ಇದು ಅಂತರಾಷ್ಟ್ರೀಯ ಸಹಕಾರದ ವಿಷಯದಲ್ಲಿ ಭಾರತವು ತಳೆದಿರುವ ಆಸಕ್ತಿಯನ್ನು ವ್ಯಕ್ತಪಡಿಸುತ್ತದೆ. ೧೯೫೧ರಲ್ಲಿ ವಿಶ್ವ ಹವಾಮಾನ ಸಂಸ್ಥೆಯು ವಿಶ್ವ ಸಂಸ್ಥೆಯ ಒಂದು ವಿಶಿಷ್ಟ ಸಂಸ್ಥೆಯೊಂದು ಮನ್ನಣೆ ಪಡೆದಿದೆ. ಈ ಸಂಸ್ಥೆಯು ಅಸ್ತಿತ್ವದಲ್ಲಿ ಬಂದಿತು. ಈ ಸಂಸ್ಥೆಯು ಹುಟ್ಟಿನೊಂದಿಗೆ ಅಂತರಾಷ್ಟ್ರೀಯ ಹವಾಮಾನ ವಿಜ್ಞಾನ ಸಂಶೋಧನಾ ಕ್ಷೇತ್ರದಲ್ಲಿ ಭಾರತದ ಮಹತ್ವ ಇನ್ನಷ್ಟು ಹೆಚ್ಚಿದಲ್ಲದೆ ಭಾರತವೂ ಈ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ತಳೆಯಿತು.

ಹವಾಮಾನ ವಿಜ್ಞಾನವು ಕಳೆದ ೩೦ ವರ್ಷಗಳಲ್ಲಿ ತ್ವರಿತವಾಗಿ ಅಭಿವೃದ್ಧಿ ಹೊಂದಿದೆ. ಮಾನವ ಜೀವನದ ಸರ್ವ ರಂಗಗಳಲ್ಲಿಯೂ ಹವಾಮಾನ ವಿಜ್ಞಾನವು ಪಡೆದಿರುವ ಮಹತ್ವದ ಸ್ಥಾನ, ಯಾವುದೇ ಒಂದು ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ಅದು ನಿರ್ವಹಿಸುತ್ತಿರುವ ಮಹತ್ವದ ಪಾತ್ರ ಇವುಗಳನ್ನು ಗಮನಿಸಿ ಇದು ಕೃಷಿಯಿಂದು ರಾಷ್ಟ್ರವು ಹವಾಮಾನ ವಿಜ್ಞಾನ ಸೇವಾ ವಿಭಾಗದ ಸ್ಥಾಪನೆಗಾಗಿ ಕಾತರವಾಗಿದೆ.

ಅನೇಕ ರಾಷ್ಟ್ರ ನಿರ್ಮಾಣ ಕಾರ್ಯ ಚಟುವಟಿಕೆಗಳಲ್ಲಿ ಹವಾಮಾನ ವಿಜ್ಞಾನವು ನಿರ್ವಹಿಸುತ್ತಿರುವ ಪಾತ್ರ ಅತ್ಯಂತ ಮಹತ್ವಪೂರ್ಣವಾಗಿದೆ. ಹವಾಮಾನ ಸಂಬಂಧವಾದ ಮುನ್ಸೂಚನೆಗಳು, ಮುನ್ನೆಚ್ಚರಿಕೆಗಳು ವಿಮಾನ ಸಾರಿಗೆಯಲ್ಲಿ ಸುರಕ್ಷತೆಯ ದೃಷ್ಟಿಯಿಂದ ಅಗತ್ಯವಾಗಿವೆ. ಭೂ, ಜಲ, ವಾಯು ಮಾರ್ಗಗಳಲ್ಲಿನ ಸಾರಿಗೆಯ ಸುರಕ್ಷತೆಯು ಹವಾಮಾನ ವಿಜ್ಞಾನವನ್ನೇ ಅವಲಂಬಿಸಿದೆ. ನೀರಾವರಿ ಕಾರ್ಯ ಯೋಜನೆಗಳ, ವೈದ್ಯಕೀಯ, ಸಾರ್ವಜನಿಕ ಆರೋಗ್ಯ, ನೆರೆಹಾವಳಿ, ಕ್ಷಾಮ ಪರಿಸ್ಥಿತಿ, ಬೇಸಾಯ ಹಾಗೂ ಆಹಾರೋತ್ಪಾದನೆ ಇವೆಲ್ಲಾ ಹವಾಮಾನದ ಸ್ಥಿತಿಗತಿಗಳನ್ನೇ ಅವಲಂಬಿಸಿವೆ. ಭಾರತದ ಆರ್ಥಿಕ ವ್ಯವಸ್ಥೆಯು ಬೇಸಾಯವನ್ನು ಮತ್ತು ಆಹಾರಧಾನ್ಯಗಳನ್ನೇ ಅವಲಂಬಿಸಿದೆ. ಹವಾಮಾನ ವಿಜ್ಞಾನ ವಿಭಾಗದವರು ರೈತರಿಗೆ ಹವಾಮಾನಕ್ಕೆ ಸಂಬಂಧಿಸಿದಂತೆ ನೀಡುವ ಮುನ್ಸೂಚನೆಗಳು ಅತ್ಯಂತ ಪ್ರಯೋಜನಕಾರಿಯಾಗಿ ಪರಿಣಮಿಸಿವೆ.

ಉತ್ತರ ಗೋಳಾರ್ಧಕ್ಕೆ ಸಂಬಂಧಿಸಿದಂತೆ ಹವಾಮಾನದ ಪರಿಸ್ಥಿತಿಯನ್ನು ಗುರುತಿಸಿದ ಚಿತ್ರವಿದು. ಇದನ್ನು ನವದೆಹಲಿಯಲ್ಲಿ ಏರ್ಪಟ್ಟ ಹವಾಮಾನ ಪರಿಶೀಲನಾ ದಿನದ ಪ್ರದರ್ಶನದಲ್ಲಿ ಪ್ರದರ್ಶಿಸಲಾಯಿತು.

ವ್ಯವಸಾಯಕ್ಕೆ ಕಾಗದದ ಚಾಪೆಗಳು

ಹಣ್ಣು ತರಕಾರಿ ಬೀಜಗಳನ್ನು ಕೈಗಳಿಂದಲೇ ನೆಡುವುದರಲ್ಲಿ ಅನೇಕ ತೊಂದರೆಗಳಿವೆ. ಸ್ವಲ್ಪ ಸೂಕ್ಷ್ಮವಾಗಿರುವವುಗಳಂತೂ ಹಾಳಾಗುವುವು; ಕೆಲವು ಒಂದರೊಡನೊಂದು ಅಂಟಿಕೊಂಡಿರುವುದರಿಂದ, ಮೊಳಕೆ ಒಂದು ಮೇಲೆ ಬೇರೆ ಮಾಡಬೇಕಾಗಿ ಬರುವುದು. ಕೆಲವು ವೇಳೆ, ಸರಿಯಾಗಿ ನಡದೇ ಇರುವುದರಿಂದ ಮೊಳಕೆಯು ಮೇಲಕ್ಕೆ ಬರುವ ಬೇಗ ಒಣಗಿಹೋಗುವುದು. ಈ ತೊಂದರೆಗಳನ್ನೆಲ್ಲಾ ನೀಗಿಸಲು ಜಿ. ಹಚ್. ಉಡ್ಸ್ ಎಂಬ ಡಚ್ ಸಂಸ್ಥೆಯು ಹೊಸ ಮಾರ್ಗವೊಂದನ್ನು ಕಂಡುಹಿಡಿದಿದೆ. ಇದಕ್ಕಾಗಿ ಎರಡು ಪದರಗಳುಳ್ಳ ಚಾಪೆಯಂತಹ ಸಾಧನವನ್ನು ಉಪಯೋಗಿಸಲಾಗುವುದು. ಇದರ ನಡುವೆ ನಾಲ್ಕಿಂತಹ ಎಳೆಗಳಿರುತ್ತವೆ. ಇದರೊಂದಿಗೆ ಕೆಲಸಮಾಡುವ ಯಂತ್ರದ ಸಹಾಯದಿಂದ ಬೀಜಗಳನ್ನು ಈ ಎಳೆಗಳ ಮಧ್ಯೆ ಸೇರಿಸಲಾಗುವುದು. ನಂತರ ಇದನ್ನು ನೆಲದ ಮೇಲಿಟ್ಟು ಅಮುಕಲಾಗುವುದು. ಪಕ್ಷಿ, ಕಳೆ ರೋಗಗಳಿದ್ದರೂ ಅವು ಅತ್ಯಂತ ತ್ವರಿತವಾಗಿ ಬೆಳೆಯುವುದರಿಂದ ಅವು ಹಕ್ಕಿ, ಕಳೆ ಮುಂತಾದವುಗಳಿಂದ ಬೀಜಗಳನ್ನು ರಕ್ಷಿಸುವುವು. ವಿನಹಾ ಇದರಿಂದ ಅವುಗಳಿಗೆ ತೊಂದರೆಯೇನೂ ಇಲ್ಲ.

ನಚಿಕೇತರ

ಹೃದಯಸ್ಪರ್ಶಿ

ನವೀನ ಕಾದಂಬರಿಗಳು

ಋಣ ಯಾತ್ರೆ

ಬೆಲೆ ರೂ. 1-50 ನ ಪೈಸ

ಭಾವಾರ್ಚನೆ

ಬೆಲೆ ರೂ 2—00

ಪ್ರತಿಗಳು ಸಿಗುವ ಸ್ಥಳ.

ನವಯುಗ ಪ್ರೆಸ್, ಉಡುಪಿ

ಶಿವ ಬೇರೆಯಲ್ಲ, ವಿಷ್ಣು ಬೇರೆಯಲ್ಲ

ಏಕದೇವತ್ವದ ಪ್ರತೀಕ ಹರಿಹರ

ಹರಿಹರ ಮೂರ್ತಿಯ ಮೃದು ಮಂದಹಾಸದ ಮುಂದೆ ಯಾರಾದರೂ ತಲೆ ತಗ್ಗಿಸ ಬೇಕು.

ಬರೆದವರು—ಶ್ರೀ ಸ. ನಾರಾಯಣ.

ಹರಿಹರ ಚಿತ್ರದುರ್ಗ ಜಿಲ್ಲೆಯಲ್ಲಿ ತುಂಗಭದ್ರಾ ನದಿಯ ತೀರದಲ್ಲಿರುವ ಚಿಕ್ಕ ಪಟ್ಟಣ. ಮೇಲಾಗಿ ತಾಲ್ಲೋಕಿನ ಮುಖ್ಯ ಸ್ಥಳ. ರೈಲು ಮತ್ತು ಬಸ್ಸಿನ ಮೂಲಕ ಪ್ರಯಾಣ ಮಾಡಬಹುದು; ರಾಷ್ಟ್ರೀಯ ಹೆದ್ದಾರಿಯೂ ಹಾದುಹೋಗಿದೆ. ಕಿರ್ಲೋಸ್ಕರ್ ಬಂಧುಗಳ ಕೈಗಾರಿಕೋದ್ಯಮದ ಮೂಲಕವೂ ಸಾಕಷ್ಟು ಕೀರ್ತಿ ಪಡೆದಿದೆ.

ತುಂಗಭದ್ರೆಯ ತೀರದಲ್ಲಿಯೇ ಹರಿಹರೇಶ್ವರ ದೇವಾಲಯವಿದೆ. ಹರಿಹರೇಶ್ವರನ ಭವ್ಯ ದೇಗುಲವಿರುವ ಕಾರಣದಿಂದಲೇ ಈ ಊರಿಗೆ 'ಹರಿಹರ' ಎಂಬ ಹೆಸರು ಬಂದಿದೆ ಎಂಬುದು ಅರಿತ ವಿಷಯ.

ಹರಿ (ವಿಷ್ಣು) ಹರ (ಶಿವ) ಇಬ್ಬರಲ್ಲಿಯೂ ಭೇದಭಾವವನ್ನೂ ಕಲ್ಪಿಸಿ ಹರಿ ಹೆಚ್ಚು ಹರ ಹೆಚ್ಚು ಎಂದು ಹೊಡೆದಾಡುವ ಜನತೆಗೆ ಹರಿಹರ ಬೇರೆಯಲ್ಲ ಒಬ್ಬನು ಎಂಬ ಸಂಗತಿಯನ್ನ ಮೂಲಮೂರ್ತಿ ಪ್ರತಿಪಾದಿಸುತ್ತದೆ.

ಜಾತಿ, ಮತ, ಜನಾಂಗ, ದೇವರು, ಧರ್ಮ, ವಿಷಯಗಳಲ್ಲಿ ಮೇಲು ಕೀಳು, ಉತ್ತಮ — ಅಧಮ ಎಂಬ ಭಾವನೆ ತಮ್ಮ ವಿವೇಕ ಶೂನ್ಯವಾಗಿ ವರ್ತಿಸುವ ಜನತೆಯ ಮನದ ಕೊಳೆಯನ್ನು ಕಳೆಯಲು ಪರಮ ಪಾವನೆ ಗಂಗೆಯೂ ಅಶಕ್ತಳು. ದೇವನೊಬ್ಬ, ಆದರೆ ದೇವರ ಇಬ್ಬರು ಭಕ್ತರು ತಮ್ಮ ಪ್ರತಿಷ್ಠೆ ಪ್ರದರ್ಶಿಸಲು, ದೇವರ ಗುಂಪುಕಟ್ಟಿ, ಬಡಿದಾಡಿದರು. ಆದರೆ ನಮ್ಮ ಪೂರ್ವಿಕರು ನೀಡಿದ ಸಂದೇಶವಿಷ್ಟೆ:— ದೇವನೊಬ್ಬ. ಧರ್ಮವನ್ನು ಆಚರಿಸಿ. ಎಂದು. ಹರಿಹರದ ದೇವಮಂದಿರದಲ್ಲಿರುವ ಹರಿಹರೇಶ್ವರ ಮೂರ್ತಿ ಹರಿಹರರ ಭೇದವನ್ನ ತೊಡೆಯಲು ಪ್ರಯತ್ನಿಸಿದೆ.

ಹರಿಹರೇಶ್ವರ ದೇವಾಲಯ ನದಿ ತೀರದಲ್ಲಿದೆ. ಪಟ್ಟಣದ ಮಧ್ಯದಲ್ಲದೆ. ದೇವಾಲಯವನ್ನು ಪ್ರವೇಶಿಸುವ ಮುಂಚೆ ಕಾಣುವ ಮಹಾದ್ವಾರ ಭವ್ಯವಾಗಿದೆ. ಆದರೆ ದೇವಾಲಯದ ಸುತ್ತಮುತ್ತಲಿರುವ ಅವ್ಯವಸ್ಥಿತ ಮನೆಗಳ ಸಾಲು, ಕೊಳೆ ಎಲ್ಲೆಲ್ಲೂ ಬೇಸರ ತರುವಂತಿವೆ. ಈ ದಿಸೆಯಲ್ಲಿ ಸ್ಥಳೀಯ ಪುರಸಭೆಯವರು, ವಿಲಾಸಿಗಳು ಸೂಕ್ತ ಕ್ರಮ ಕೈಗೊಳ್ಳುವುದು ಅಗತ್ಯ.

ಹರಿಹರೇಶ್ವರ ದೇವಾಲಯ ಮಾತ್ರವಲ್ಲದೆ ಪಕ್ಕದ ಲಕ್ಷ್ಮೀ ದೇವಾಲಯ ಮೊದಲಾದ ಅನೇಕ ಚಿಕ್ಕ ದೇವ ಮಂದಿರಗಳು ಇವೆ. ಶಿಲಾ ಶಾಸನಗಳ ಆಧಾರದ ಪ್ರಕಾರ ಕ್ರಿ. ಶ. ೧೧೦೦ರಕ್ಕೂ ಹೂರ್ವದ ಸಂಗತಿ ತಿಳಿದು ಬರುತ್ತದೆ. ದೇವರ ಹಾಗೂ ದೇವಾಲಯದ ಕಥೆ ಇತಿಹಾಸ ಪ್ರಸಿದ್ಧವಾದದ್ದು.

ಉಚ್ಚಂಗಿಯನ್ನಾಳಿದ ಪ್ರಮುಖ ಪ್ರಾಂತ್ಯ ದೊರೆಗಳಾದ ವೀರ ಪಾಂಡ್ಯ, ವಿಜಯ ಪಾಂಡ್ಯ, ಕಾಲಚೂರ್ಯ ಬಿಜ್ಜಳ, ಹೊಯಸಳ ಅರಸರು, ಯಾದವ ಕನ್ನಡ ಮತ್ತು ವಿಜಯನಗರದ ಅರಸರು ದೇವಾಲಯಕ್ಕೆ ಮತ್ತು ಸ್ಥಳೀಯ ಬ್ರಾಹ್ಮಣ ಕುಟುಂಬಗಳಿಗೆ ವಿಶೇಷ ದಾನ-ದತ್ತಿಗಳನ್ನ ದಯಪಾಲಿಸಿದರೆಂದು ಶಾಸನಗಳ ಮೂಲಕ ತಿಳಿದು ಬರುತ್ತದೆ.

ಕಿ. ಶ. ೧೧೨೪ರ ಶಾಸನ ಒಂದರ ಪ್ರಕಾರ ದೊರೆ ಜಯಸಿಂಹನ ದಂಡಾಧಿಕಾರಿ ಸೆಂಮ್ಮಡಿಯು ಕಟ್ಟಿಸಿದ ಹರಿಹರೇಶ್ವರ ದೇವಾಲಯವು ಸ್ಥಿರವಾಗಿ ಉಳಿಯದೆ ಉರುಳುತ್ತದೆ. ಈ ಕಾರಣದಿಂದ ಎರಡನೆಯ ನರಸಿಂಹ ಬಲ್ಲಾಳನ ದಂಡಾಧಿಕಾರಿ ಪೊಲಾಳ್ವ ದಂಡನಾಯಕ ಇಂದಿನ ಪೂರ್ಣ ದೇವಾಲಯವನ್ನು ಹೊಸತಾಗಿ ಕಟ್ಟಿಸಿ ೧೧೩ ಚಿನ್ನದ ಕಲಶಗಳನ್ನ ಸ್ಥಾಪಿಸಿದನೆಂದು ಗೊತ್ತಾಗುತ್ತದೆ.

ದೊರೆ ನರಸಿಂಹ ಬಲ್ಲಾಳ ದೇವಾಲಯದ ಅಭಿವೃದ್ಧಿಗೆ, ದೇವರ ಸೇವೆಗೆ ಸಾಕಷ್ಟು ಕಾಣಿಕೆ (ಹಣ, ಭೂಮಿ) ಯನ್ನು ಸಲ್ಲಿಸಿದನೆಂದೂ ಗೊತ್ತಾಗುವುದು. ಕ್ರಿ. ಶ. ೧೨೬೮ರಲ್ಲಿ ಮತ್ತೊಬ್ಬ ಹೊಯಸಳ ದಣ್ಣಾಯಕ ಸೋಮನಾಥ ಮಹಾದ್ವಾರ ಮತ್ತು ಪ್ರಾಕಾರವನ್ನು ಕಟ್ಟಿಸಿ ಕಳಶಗಳನ್ನ ಸ್ಥಾಪಿಸಿದನೆಂದು ಶಾಸನಗಳ ಮೂಲಕ ತಿಳಿಯಬಹುದಾಗಿದೆ. (ಸೋಮನಾಥಪುರದ ದೇವಾಲಯದ ನಿರ್ಮಾಣಕ್ಕೆ ಕಾರಣ ಈ ದಣ್ಣಾಯಕ ಸೋಮನಾಥ ಎಂಬುದು ಸ್ಮರಣೀಯ).

ಮುಸಲ್ಮಾನರ ಧಾಳಿಯಿಂದ ದೇವಾಲಯ ಮತ್ತು ದೇವರು ಸಾಕಷ್ಟು ಶೋಷಣೆಗೆ ಒಳಗಾಗಲೇ ಬೇಕಾಗುತ್ತದೆ. ಅದೇ ಸಂದರ್ಭದಲ್ಲಿ ಮೂಲ ಮೂರ್ತಿಯ ಸ್ಥಾನಪಲ್ಲಟವಾಗುತ್ತದೆ. ಕೆಲಕಾಲ ಚಿಕ್ಕ ಮೂರ್ತಿ ಪೂಜಾದಿಗಳು ನಡೆಯುತ್ತಿತ್ತು. ಅನಂತರ ಇತ್ತೀಚೆಗೆ ಅಂದರೆ ಮರಾಠರ ಕಾಲದಲ್ಲಿ ಮೂಲ ಮೂರ್ತಿಯನ್ನು ಹುಡುಕಿ ಯಥಾ ಸ್ಥಾನದಲ್ಲಿ ಪ್ರತಿಷ್ಠಾಪಿಸಲಾಗಿದೆ. ಮತ್ತೆ ಅಂದಿನಿಂದಲೂ ಏಕಪ್ರಕಾರವಾಗಿ ಪೂಜಾದಿಗಳು ನಡೆಯುತ್ತಾ ಬಂದಿವೆ.

ಗರ್ಭ ಗೃಹದಲ್ಲಿರುವ ಹರಿಹರೇಶ್ವರನ ಮೂಲ ಶಿಲಾಮೂರ್ತಿ ಪುರುಷ ಪ್ರಮಾಣಕ್ಕಿಂತಲೂ ಹಿರಿದಾಗಿದೆ. ಮೂರ್ತಿಯ ಮುಖದಲ್ಲಿ ಮುಗ್ಧತೆ, ಶಾಂತಿ, ತೇಜಸ್ಸು ತುಂಬಿ ತುಳುಕಿದೆ. ಶಿಲ್ಪಿ ಕೆತ್ತನೆಯಲ್ಲಿ ತನ್ನ ಜಾಣ್ಮೆಯನ್ನು ಪ್ರದರ್ಶಿಸಿದ್ದಾನೆ. ಶಿವ ಮತ್ತು ವಿಷ್ಣುವಿನ ಅರ್ಧಾರ್ಧ ರೂಪವನ್ನು ಇಲ್ಲಿ ನೋಡಬಹುದು. ಅಡಿಯಿಂದ ಮುಡಿಯ ವರೆಗೆ ಬಲದ ಅರ್ಧ ಭಾಗ ಶಿವನ ರೂಪ; ಎಡದ ಅರ್ಧ ಭಾಗ ವಿಷ್ಣು ರೂಪ. ಬಲಭಾಗದ ತಲೆಯಲ್ಲಿ ಜಡೆ, ಕೈಗಳಲ್ಲಿ ಒಂದು ಅಭಯ ಹಸ್ತ, ಮತ್ತೊಂದರಲ್ಲಿ ತ್ರಿಶೂಲ. ಎಡದ ಅರ್ಧ ಭಾಗದ ತಲೆಯಲ್ಲಿ ಕಿರೀಟ, ಒಂದು ಕೈಯಲ್ಲಿ ಸಂಹಾರ ಚಕ್ರ ಮತ್ತೊಂದು ಕೈಯಲ್ಲಿ ಶಂಖ. ಹರಿಹರೇಶ್ವರನ ಪಾದಗಳು ಗೋಚರಿಸುವುದಿಲ್ಲ. (ನದಿಯ ಮಧ್ಯೆ ಮಂಟಪದಲ್ಲಿವೆ ಎಂದು ಹೇಳುತ್ತಾರೆ.)

ಮೂಲಮೂರ್ತಿಯ ಹಿಂಬದಿಯಲ್ಲಿ ಸಾಮಾನ್ಯವಾಗಿ ಚಾಲುಕ್ಯ ಮತ್ತು ಹೊಯಸಳ ಶಿಲ್ಪಿ ಸಂಪ್ರದಾಯಗಳ ಪ್ರಕಾರ ಕಾಣ ಬರುವ ತೋರಣ ಕಾಣ ಬರುವುದಿಲ್ಲ.

ಹರಿಹರೇಶ್ವರ ಮೂರ್ತಿಯ ಅಂದವಾಗಲಿ, ದೇವಾಲಯದ ಅಂದವಾಗಲಿ ಕೆಟ್ಟಿಲ್ಲ. ದೇವಾಲಯ ಸಾಕಷ್ಟು ಭವ್ಯವಾಗಿಯೇ ಇದೆ. ಅಂದಿನ ಕುಶಲ ಶಿಲ್ಪಕಲೆಯ ವೈಖರಿಯನ್ನು ದೇವಾಲಯದ ಹೊರ ಒಳ ಆವರಣ, ಜಾಲಂದ್ರಗಳಲ್ಲಿ ಕಾಣಬಹುದು. ದೇವಾಲಯದ ಪ್ರಾಕಾರವೂ ಸಾಕಷ್ಟು ದೊಡ್ಡದಾಗಿಯೇ ಇದೆ.

ನವರಂಗ, ಗರ್ಭಗೃಹ, ಮಂಟಪ ಸಾಕಷ್ಟು ವಿಶಾಲವಾಗಿ ಅಂದವಾಗಿ ಇದೆ. ಬೇಲೂರು, ಹಳೇಬೀಡು, ಸೋಮನಾಥ ಪುರಗಳ ಮಟ್ಟದ ಶಿಲ್ಪಕಲಾಕೌಶಲ್ಯ ಭವ್ಯತೆ. ಮನೋಹರ ಭಾವನೆ ಮೂಡದಿದ್ದರೂ ದೇವಾಲಯದ ಅಂದಕ್ಕೆ— ಭವ್ಯತೆಗೆ ಕುಂದೊದಗಿಲ್ಲ. ಒಮ್ಮೆ ನೋಡಲು ಬಂದವನ ಮನಸನ್ನು ಸೆಳೆಯುವ ಮಟ್ಟದ ಆಕರ್ಷಣೆ ಈ ದೇವಾಲಯದಲ್ಲಿದೆ.

"ಹರಿಹರ ಇಬ್ಬರಲ್ಲಿಯೂ ವ್ಯತ್ಯಾಸ ಕಾಣದೆ ಹರಿಹರರಿಬ್ಬರೂ ಒಂದೇ' ಎಂದು ಜನಮನಕ್ಕೆ ಭವ್ಯ ಸಂದೇಶವನ್ನು ನೀಡುತ್ತಿದೆ ಹರಿಹರ ದೇವಾಲಯ ಮತ್ತು ಹರಿಹರೇಶ್ವರ ಮೂರ್ತಿ.

ಹರಿಹರ ಮೂರ್ತಿಯ ಭವ್ಯ ದೇಗುಲ— ಐಕ್ಯೈಕಿಕ ಭಾವನೆ ಈ ಕ್ಷೇತ್ರದಲ್ಲಿ ಮಾತ್ರವೆಂದು ಹೆಮ್ಮೆ ಪಟ್ಟುಕೊಳ್ಳಬಹುದು. ಸಮಸ್ತ ಧರ್ಮಗಳನ್ನೇ ತನ್ನಲ್ಲಿ ಅಡಗಿಸಿಕೊಂಡು ಬೆಳವಣಿಗೆಗೆ ಕಾರಣವಾದ ಕನ್ನಡ ನಾಡಿನಲ್ಲಿ ಹರಿ-ಹರರ ಬಗ್ಗೆ ಬಿನ್ನ ಭಾವನೆ ತಾಳುವುದು ಸರಿಯಲ್ಲ. ದೇವನೊಬ್ಬ. ಅವನು ಶಿವನಾಗಲಿ ಕೇಶವನಾಗಲಿ. ಎಂಬ ಭಾವನೆ ನಮ್ಮ ಪೂರ್ವಿಕರದು. ಅದನ್ನರಿತೇ ಹರಿಹರ ಒಬ್ಬನೆಂದೇ ಪೂಜಿಸಿದರು.

ಕಲೆ, ಸಂಸ್ಕೃತಿ, ಸಾಹಿತ್ಯ, ಜ್ಞಾನ, ನಾಗರಿಕ ಭಾವನೆಗಳಾದಿಗಳಲ್ಲಿ ಮುನ್ನಡೆದವರ ಕನ್ನಡ ನಾಡಜನತೆ. ಅವರಿಗೆ ಅಲ್ಪತನದ ಕಡೆಗೆ ಗಮನ ಎಂದೂ ಹರಿಯದು. ಅವರ ಹೃದಯ ಸಾಗರದಷ್ಟು ವಿಶಾಲ. ಆ ಕಾರಣದಿಂದಲೇ ಬೇಲೂರು ಹಳೇಬೀಡು ಸೋಮನಾಥಪುರ, ಐಹೊಳೆ, ಪಟ್ಟದ ಕಲ್ಲು, ಶೃಂಗೇರಿ, ಹಂಪೆ, ಹರಿಹರದ ಭವ್ಯದೇವಾಲಯಗಳ ಶಿಲ್ಪಕಲೆ ಅಚ್ಚಳಿಯದೆ ಉಳಿದಿರುವುದು. ಬೌದ್ಧ, ಜೈನ, ವೀರಶೈವಾದಿ ಹಲವು ಮತಗಳು ಕನ್ನಡ ತಾಯಿಯ ಕೃಪಾಶ್ರಯದಲ್ಲಿ ಮೆರೆದಿವೆ, ಬಾಳಿವೆ, ಬೆಳಗಿವೆ. ಕನ್ನಡ ನಾಡಿನ ಭವ್ಯ ಆದರ್ಶ ಪರಂಪರೆ ಅಜರಾಮರ. ಶ್ರವಣಬೆಳಗೊಳ ಚಂದ್ರಗಿರಿಯ ಮೇಲೆ ನಿಂತ ಗೊಮ್ಮಟೇಶ್ವರನ ಎತ್ತರ, ವಿಶಾಲತೆ, ಮುಗ್ಧ ಸೌಂದರ್ಯ ಮಾರು ಮಂದಹಾಸ ಎಲ್ಲವೂ ಕನ್ನಡಿಗರ ಹೃದಯದ ಪ್ರತೀಕ. ನಮ್ಮ ಪೂರ್ವಿಕರು ನೂರಾರು ವರ್ಷಗಳ ಹಿಂದೆ ರಚಿಸಿಟ್ಟ ಶಿಲ್ಪ ಕಲೆ, ಸಂಸ್ಕೃತಿಯ ಮಟ್ಟಕ್ಕೆ ತಕ್ಕ ಪ್ರತಿ ಕೃತಿ ಕೊಡಲು ನಾವು ಶಕ್ತರಾಗಿಲ್ಲ; ಅಂದಿನದನ್ನ ಉಳಿಸಿಕೊಳ್ಳುವ ಯೋಜನೆಯೂ ನಮಗಿಲ್ಲ.

ಶ್ರೀ ಕ್ಷೇತ್ರ ಬಪ್ಪನಾಡು, ಮೂಲ್ಕಿ

"ಬಪ್ಪನಾಡಿಗೆ ಡೋಲು ಬಡಿಯಲು ಹೋಗು" ಎಂಬ ಜನಜನಿತವಾದ ರೂಢಿ ಮಾತಿನಿಂದ ಬಪ್ಪನಾಡು ಕ್ಷೇತ್ರದ ಹೆಸರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆಲ್ಲಾ ಪರಿಚಿತವಾಗಿದೆ. ಏನೂ ಕೈಲಾಗದವರಿಗೆ ಹೇಳುವ ಮಾತಿದು. ಅಂದರೆ, ಬಪ್ಪನಾಡಿಗೆ ಹೋಗಿ ಸೇವೆ ಸಲ್ಲಿಸಿದಲ್ಲಿ ಶ್ರೇಯಸ್ಸಾಗುವುದು ಎಂಬುದು ಈ ಮಾತಿನ ಇಂಗಿತವಿರಬೇಕು. ಹಳೇಗಾಲದಲ್ಲಿ ಬಪ್ಪನಾಡು ಜಾತ್ರೆಗೆ ಹಲವಾರು ಕಡೆಗಳಿಂದ ನೂರಾರು ಮಂದಿ ಡೋಲು ಸೇವೆಗೆ ಬರುತ್ತಿದ್ದುದು ಈ ಕಾರಣದಿಂದಲೇ ಇರಬೇಕು.

ಬಪ್ಪನಾಡು ಕ್ಷೇತ್ರಕ್ಕೆ ಸಮ್ಮಂದಪಟ್ಟ ಇನ್ನೊಂದು ಐತಿಹ್ಯವಿದೆ. ಸುಮಾರು ಎಂಟ್ನೂರು ವರ್ಷಗಳ ಹಿಂದೆ ಬಪ್ಪಬ್ಯಾರಿಯೆಂಬ ಮುಸಲ್ಮಾನ್ ವರ್ತಕನ ಹಾಯಿ ದೋಣಿಯು ಪ್ರಸ್ತುತ ಈ ದೇವಸ್ಥಾನ ಇರುವ ಸ್ಥಳದಲ್ಲಿ, ಹರಿಯುತ್ತಿದ್ದ ಹೊಳೆಯಲ್ಲಿ ಸಾವಿರಾರು ವರ್ಷಗಳಿಂದ ಜಲಂತರ್ಗತವಾದ ಶ್ರೀ ದೇವಿಯ ಬಿಂಬಕ್ಕೆ ತಗಲಿ ತುಂದರೆಗೀಡಾಯಿತು. ಆದರೆ ಅಲ್ಲಿ ನೆಲೆನಿಂತಿದ್ದ ಶ್ರೀದೇವಿಯ ಸ್ವಪ್ನದ ಸಾಕ್ಷಾತ್ಕಾರದ ಅನುಗ್ರಹದಿಂದ ಮುಂದಕ್ಕೆ ಹೋಗಿ, ಅಪಾರ ಲಾಭ ಗಳಿಸಲು ಸಾಧ್ಯವಾದುದನ್ನು ಮನಗಂಡು, ಅಗಿನ ಅರಸರ ಮೂಲಕ ದೇವಿಗೆ ಗುಡಿಯನ್ನು ಕಟ್ಟಿಸಲು ಕಾರಣೀಭೂತನಾದನು.

ನಂತರದ ಕಾಲದಲ್ಲಿ ಈ ಕ್ಷೇತ್ರದ ಅಪಾರ ಕೀರ್ತಿಯು ಎಲ್ಲೆಡೆಯಲ್ಲೂ ಹಬ್ಬಿ, ಪರಪ್ರದೇಶಗಳಿಂದಲೂ ಶ್ರದ್ಧಾಯುಕ್ತ ಭಕ್ತ ಸಮೋಹಗಳು ಅನುಗಾಲ ಬರಲಾರಂಭಿಸಿದರು. ಅನೇಕರು ಪುತ್ರ ಸೌಭಾಗ್ಯವನ್ನು ಮತ್ತು ಹಲವರು ರೋಗ ನಿವಾರಣೆಯನ್ನು ಬಯಸಿ ಶ್ರೀ ದೇವಿಯ ಅನುಗ್ರಹದಿಂದ ಸಫಲರಾದರು. ತದ್ರೀತಿಯ ವಿಶೇಷ ಪವಾಡಗಳು ಈ ಕ್ಷೇತ್ರದಲ್ಲಿ ಜರಗಿದವು.

ಈ ಕ್ಷೇತ್ರದ ಆಗುಹೋಗುಗಳನ್ನು ಮೇಲತನ್ನಿಂದ ಕಾಯುತಿದ್ದ ಶಕ್ತಿಯೇ ಕ್ಷೇತ್ರಪಾಲನು. ಈ ಕ್ಷೇತ್ರದ ಏಳಿಗೆಯನ್ನು ಸಾಧಿಸಿದ ಈತನು ಅಪಚಾರ ಅನಾಚಾರಗಳಿಗೆ ತೊಡಗುವವರಿಗೆ ಮಾರಕ ಶಕ್ತಿಯೂ ಆಗಿದ್ದನು. ಅದನ್ನು ಸಹಿಸದ ಹಲವರು ಮಾಮಾಚಾರದಿಂದ ಈತನ ಶಕ್ತಿಯನ್ನು ದಿಗ್ಬಂಧಿಸಿದರು. ಪರಿಣಾಮವಾಗಿ ಕ್ಷೇತ್ರದ ಕಲಾಚಾನವು ಕ್ರಮೇಣ ಕಡಿಮೆಯಾಗುತ್ತಾ ಬಂತು.

ಇತ್ತೀಚೆ. ಈ ಕ್ಷೇತ್ರದ ಕಲಾವನತಿಗೆ ಕಾರಣವೇನೆಂದು ತಿಳಿಯಲು ವಿದ್ವಾಂಸರಾದ ಜೋತಿಷ್ಯರಲ್ಲಿ ಅಷ್ಟ ಮಂಗಲ ಪ್ರಶ್ನೆಯನ್ನು ಇಡಲಾದಾಗ ಈ ಸಂಗತಿಯು ಬೆಳಕಿಗೆ ಬಂತು. ಕ್ಷೇತ್ರಪಾಲನನ್ನು ದಿಗ್ಬಂಧನದಿಂದ ಬಿಡುಗಡೆಗೊಳಿಸಿದಲ್ಲಿ, ಈ ಸ್ಥಳದ ಶಕ್ತಿಯನ್ನು ಪುನರುತ್ಥಾನಗೊಳಿಸುವ ಕೆಲಸದಲ್ಲಿ ಮಹತ್ವದ ಅಂಶ ಸಾಧಿಸಿದಂತಾಗುವುದು ಎಂಬುದಾಗಿ ತಿಳಿದು ಬಂತು. ಇದರೊಂದಿಗೆ ಅಷ್ಟಬಂಧ, ಬ್ರಹ್ಮ ಕಲಶ, ಸಂತರ್ಪಣೆ ಇತ್ಯಾದಿ ಧಾರ್ಮಿಕ ವಿಧಿಯುಕ್ತ ಕಾರ್ಯಗಳಾಗ ಬೇಕು. ಅಲ್ಲದೆ, ಶ್ರೀ ದೇವಿಯ ಅಲಂಕಾರ ಮತ್ತು ಇತರ ಉಪಕರಣಗಳು, ದೇವಸ್ಥಾನಕ್ಕೆ ಶುದ್ಧ ನೀರಿನ ಪೂರೈಕೆ, ಇದಿರುಗಡೆ ದೀಪಸ್ತಂಭ ನಿರ್ಮಾಣ, ಅಗ್ರಶಾಲೆ ದುರುಸ್ತಿ, ಇತ್ಯಾದಿ ಎಲ್ಲಾ ಕಾರ್ಯಕ್ರಮಗಳಿಗೆ ಸುಮಾರು ಒಂದು ಲಕ್ಷ ರೂಪಾಯಿ ಖರ್ಚು ಬರಬಹುದೆಂದು ಅಂದಾಜು ಮಾಡಲಾಗಿದೆ.

ವಿಶಾಲವಾಗಿ ಹಬ್ಬಿರುವ ಈ ಕ್ಷೇತ್ರದ ಭಕ್ತ ಸಮುದಾಯಕ್ಕೆ ಈ ಮೊತ್ತವು ಅಲ್ಪವೇ ಸರಿ. ಈ ಕ್ಷೇತ್ರದ ಕಳೆಯು ಮುಂಚಿನಂತೆಯೇ ಉಜ್ವಲವಾಗಿ ಬೆಳಗಿ ಭಕ್ತವೃಂದಕ್ಕೆ ಶ್ರೀ ದೇವಿಯ ಅನುಗ್ರಹವು ಧಾರಾಳವಾಗಿ ದೊರಕಲಿ. ಜನತೆಗೆ ಮಂಗಲವನ್ನುಂಟು ಮಾಡುವಂತಹ ಈ ಕೆಲಸವನ್ನು ಸಾಂಗವಾಗಿ ನೆರವೇರಿಸುವುದಕ್ಕೆ ಮಾಡಲು ನಿಷ್ಠಾವಂತರು ಮುಂದೆ ಬರಬೇಕು, ಧನ ಸಂಗ್ರಹ ಕಾರ್ಯದಲ್ಲಿ ಯಥಾಶಕ್ತಿ ನೆರವಾಗಬೇಕು ಎಂದು ಸಾರ್ವಜನಿಕರಲ್ಲಿ ಜೀರ್ಣೋದ್ಧಾರ ಸಮಿತಿಯು ವಿನಂತಿಸುತ್ತದೆ. ಹಣ ಕಳಿಸುವ ವಿಳಾಸ. ಕೋಶಾಧಿಕಾರಿ, ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರ ಜೀರ್ಣೋದ್ಧಾರ ಸಮಿತಿ, ಮುಲ್ಕಿ (ದ. ಕ.)

ಕೆನಡಾದ ಮಹಿಳೆಗೆ

ನಮ್ಮ ದೇಶದ ಮೇಲೆ ಅನುಕಂಪ, ನಮಗೆ?

ಲೇಖಕರು: ಶ್ರೀ ಬಸವರಾಜ ಕುಂಚೂರು

"ಸಕ್ಕರೆಯುಂಟೋ ನಿಮ್ಮಲ್ಲಿ?"

"ಉಂಟು ಬನ್ನಿ ಕುಳಿತುಕೊಳ್ಳಿ"

"ಎಷ್ಟು ಕೊಡುತ್ತೀರಿ?"

"ನಿಮಗೆಷ್ಟು ಬೇಕಾದರೂ ಕೊಡುತ್ತೇವೆ."

"ಛೆ, ಹಾಗೆ ಬೇಡ, ರೇಷನ್ ಪ್ರಕಾರ ಬರುವದನ್ನ ಮಾತ್ರ ಕೊಡಿರಿ."

"ಇಲ್ಲ, ಹಾಗೇನಿಲ್ಲ, ನೀವು ತೆಗೆದುಕೊಳ್ಳಬಹುದು."

"ಬೇಡ ನಮಗೆ ಸಕ್ಕರೆಯಿಲ್ಲದ ಕಾಫಿ ಕುಡಿಯುವ ರೂಢಿ ಇದೆ, ಜರ್ಮನಿಯಲ್ಲಿ ಯುದ್ಧ ಕಾಲದಲ್ಲಿ ಇದೇ ಪರಿಸ್ಥಿತಿ ಇತ್ತು."

ಹೀಗೆ ಹೇಳಿದ ಆ ಪ್ರಜ್ಞಾವಂತ ಮಹಿಳೆ ಸುರತ್ಕಲ್ ಇಂಜನಿಯರಿಂಗ್ ಕಾಲೇಜಿನಲ್ಲಿ ಸಂದರ್ಶಕ ಪ್ರೊಫೆಸರ್ ಆಗಿರುವ ಕೆನಡಾದ ಕ್ರಿಶ್ಚನರ ಪತ್ನಿಯವರು. ಅವರು ಎಷ್ಟೇ ಸಕ್ಕರೆ ತೆಗೆದುಕೊಳ್ಳಲಿ, ಬಿಡಲಿ, ಆ ಪ್ರಶ್ನೆ ಬೇರೆ? ನೋಡಲಿಕ್ಕೆ ಇದೊಂದು ಸಣ್ಣ ವಿಷಯ. ಆದರೆ ನಮ್ಮಲ್ಲಿ ಹೆಣ್ಣು ಮಕ್ಕಳು ಹೋಗಲಿ, ಬಹು ವಿದ್ಯಾವಂತರೆಂದೆನಿಸಿಕೊಂಡ ಮಹನೀಯರಿಗಾದರು ದೇಶದ ಸ್ಥಿತಿಗತಿ ಆಗು, ಹೋಗುಗಳ ಮೇಲೆ ಪ್ರಜ್ಞೆ ಎಷ್ಟರ ಮಟ್ಟಿಗೆ ಇದೆ? ಸರಕಾರದ ನೀತಿ ನಿಯಮಗಳ ಬಗ್ಗೆ ಎಷ್ಟು ಗೌರವವಿದೆ? ಪರಕೀಯರಿಂದ ಕೂಡಲೆ, ಅನೇಕ ನಮ್ಮ ಮಧ್ಯಮ ವರ್ಗ ಜನರು ನಾಗರಿಕರೆಂದು ತಿಳಿಯುತ್ತಾರೆ; ಅವರ ಕಣ್ಣಿಗೆ ಕಾಣುವದು ಬರಿ ಫ್ಯಾಷನ್ ಒಂದು ಮಾತ್ರ. ಅವರಲ್ಲಿರುವ ದೇಶದ ಮೇಲಿನ ಅಭಿಮಾನ ಪ್ರಾಮಾಣಿಕ ಬುದ್ಧಿ ಇವುಗಳಲ್ಲಿ ಸ್ವಲ್ಪವಾದರು ಇದ್ದಿದ್ದರೆ, ನಮ್ಮ ದೇಶ ಇಷ್ಟು ಹಿಂದೆ ಉಳಿಯುತ್ತಿರಲಿಲ್ಲ.

ಒಂದು ಕಾಲದಲ್ಲಿ ದಯೆ, ಅನುಕಂಪ, ಪ್ರಾಮಾಣಿಕ ಬುದ್ಧಿ, ತ್ಯಾಗ, ಶೌರ್ಯಕ್ಕೆ ಹೆಸರಾದ ಭಾರತ, ಇಂದು ಪರಕೀಯರಿಂದ ಎರವಲು ಪಡೆಯುವ ಹೊತ್ತು ಬಂದಿದೆ.

ದೇಶ ಹಾಳಾದರು ಚಿಂತೆ ಇಲ್ಲ ಬಡಜನರ ಜೀವಂತ ಸಮಾಧಿಯನ್ನ ಕಟ್ಟಿದರು ಚಿಂತೆ ಇಲ್ಲ, ಲಾಭವೇ ನಮ್ಮ ಮಂತ್ರ, ಕಲ್ಲು ಮಣ್ಣು ಬೆರಸಿ ಅಕ್ಕಿಯನ್ನ ಮಾರುವದೇ ನಮ್ಮ ಉದ್ಯೋಗ ಎನ್ನುತ್ತಾರೆ ಹೆಚ್ಚಿನ ವ್ಯಾಪಾರಸ್ಥರು.

ದೇಶ ಹಾಳಾದರೇನು? ಕೋಶ ಬರಿದಾದರೇನು? ನಮ್ಮ ಸಂಬಳ ಹೆಚ್ಚಾಗಬೇಕು ಎನ್ನುತ್ತಾರೆ ನೌಕರರು. ಸಾಲಿಗೆಯೇ ನನ್ನ ಕಾಯಕ ಎನ್ನುತ್ತಾನೆ ರಾಜಕಾರಣಿ. ಪರೀಕ್ಷೆಗಾಗಿ ಪಾಠ ಏಕೆ ಮಾಡಲಿಲ್ಲ, ಮಾಸ್ತರನನ್ನೆ ಒಂದು ಕೈ ನೋಡುತ್ತೇನೆ ಎನ್ನುತ್ತಾನೆ ವಿದ್ಯಾರ್ಥಿ. ಇಂದಿನ ದಿನ ಮಾನಕ್ಕೆ ಒಗ್ಗಿಕೊಳ್ಳುವ ಶಕ್ತಿ ಇಲ್ಲದೆ ಗಗನಕ್ಕೇರಿದ ಬೆಲೆಗಳಿಗೆ ಬೆಪ್ಪನಾಗಿ ನಿರ್ವಿಣ್ಣನಾಗಿದ್ದಾನೆ ಶ್ರೀ ಸಾಮಾನ್ಯ.

ಹಾಗಾದರೆ ದೇಶದ ಚಿಂತನೆ ಮಾಡುವರಾರು? ನಮಗೆ ತಿಳಿಯದಿದ್ದರೂ, ಬೇರೆಯವರಿಂದ ಒಳಿತನ್ನ ಕಲಿಯುವ ಸಂಯಮ ಸಹಿತ ಜನತೆಯಲ್ಲಿ ಉಳಿದಿಲ್ಲ. ದೇಶ ಯಾರದೋ ಅನ್ನುವ ರೀತಿಯಲ್ಲಿ ನಡೆದುಕೊಳ್ಳುತ್ತೇವೆ. ನಮ್ಮ ಮನೆಯ ಕಂಬವನ್ನ ನಾವೇ ಕಡಿಯುತಿದ್ದೇವೆ, ಬಿದ್ದರೆ ಗತಿ ಏನಾದೀತು? ಎಂಬ ಅರಿವಿಲ್ಲದೆ.

ಜನತೆಯು ಕಂಗಾಲಾಗುವ ಸ್ಥಿತಿಗೆ ಕಾರಣಗಳೇನೇ ಇರಲಿ, ನಮ್ಮಲ್ಲಿ ದೇಶದ ಬಗ್ಗೆ ಅಭಿಮಾನವಿರುವವರು ವಿರಳ ಎನ್ನುವದು ಬಹು ಸತ್ಯ. ಯುದ್ಧದಲ್ಲಿ ಬೆಂದು ಬೆಂಡಾದ ಜರ್ಮನ್, ಜಪಾನ್ ಇಂದು, ಎಷ್ಟು ಬಲಿಷ್ಠವಾಗಿವೆ ಎಂಬುದು ತಿಳಿದ ಮಾತು, ಅದಕ್ಕೆ ಕಾರಣವಿಷ್ಟೆ, ಅಲ್ಲಿರುವ ಪಂಡಿತ, ಗಂಡು ಹೆಣ್ಣಿನ ಶ್ರಮ, ದೇಶದ ಮೇಲಿನ ಅಭಿಮಾನ. ದೇಶ ಪರಾಕ್ರಮಣಕ್ಕೆ ಒಳಗಾಗಿ ಕತ್ತರಿಸುತ್ತಿದ್ದರು ಸಕ್ಕರೆಯನ್ನು ಕದ್ದು ತಂದಾದರು, ಲಾಡು ಜಿಲೇಬಿ ಮಾಡಲೇ ಬೇಕು. ಇದು ನಮ್ಮ ದೇಶದ ದೊಡ್ಡವರೆನ್ನುವರು ಪಾಲಿಸುವ ನೀತಿ, ನಿಯಮ.

ಸದಾಚಾರ ಎನ್ನುವದು ಪೇಟೆಯಲ್ಲಿ ಸಿಗುವ ಸಾಮಾನಲ್ಲ ಅದನ್ನು ನಾವೇ ನಮ್ಮಿಂದ ಪಡೆಯಬೇಕು. ಜಾಗ್ರತೆ ಜನತೆಯಲ್ಲಿ ಮೂಡಿ ಬರಲೇ ಬೇಕು. ಕೆನಡಾದ ಹೆಣ್ಣುಮಗಳಿಗೆ ಹಿಂದುಸ್ಥಾನದ ಸ್ಥಿತಿಗತಿ, ರೀತಿ, ನೀತಿಗಳು ಗೊತ್ತಿವೆ ಆದರೆ, ಭಾರತೀಯರಾದ ನಮಗೆ ಗೊತ್ತಿಲ್ಲ.

ದೇಶದ ಅಭಿವೃದ್ಧಿ ಸಂರಕ್ಷಣೆಗಾಗಿ ನಾವು ಯಾವ ತ್ಯಾಗವನ್ನಾದರು ಮಾಡಲು ಮುಂದಾಗಬೇಕು. ದೇಶದ ಪ್ರತಿಯೊಂದು ಮನೆಯು ಮಿತವ್ಯಯಕ್ಕೆ ಮನೆಯಾಗಬೇಕು. ದೇಶ ತನ್ನಿಂದ ತಾನೇ ಬೆಳೆಯುವುದಿಲ್ಲ ಜನತೆಯ ಸಹಾಯ, ಸಹಾನುಭೂತಿ, ಅಭಿಮಾನ, ಗೌರವ ಬೇಕು. ಗಂಡು ಹೆಣ್ಣು ಎಲ್ಲರೂ, ಕಲಹ ಕರಿಸಿ ದುಡಿಯಬೇಕು. ದುಡಿಮೆ ಪ್ರಾಮಾಣಿಕ ಬುದ್ಧಿ, ನಮ್ಮ ದೇಶದ ಏಳ್ಗೆಗೆ

ಕಾರ್ಕಳ ಮುನ್ಸಿಫ ಕೋರ್ಟಿನಲ್ಲಿ

O S. 60/1966.

S. V. D. ಪುಲ್ಕ — ವಾದಿ.

ಕಮಲಾಕ್ಷ ಉಪೇಂದ್ರ ಶೆಣೈ, ಉಪೇಂದ್ರ ಶೆಣೈರ ಮಗ, ಕಾರ್ಕಳ ತಾಲ್ಲೂಕು ಬೆಳ್ಮಣ್ಣು ಗ್ರಾಮದಲ್ಲಿರುವವ — ಪ್ರತಿವಾದಿ.

ಸದ್ರಿ ಪ್ರತಿವಾದಿ ಆದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ—

ವಾದಿ ಜವುಳಿ ಅಂಗಡಿಯಲ್ಲಿ ನೀವು ಮಾಡಿದ ಲೇವಾದೇವಿ ಬಾಬ್ತು ವಾದಿಗೆ ನಿಂದಿಂದ ಬರತಕ್ಕ ರೂ. 598-41ನ್ನು ಬರಮಾಡಿಕೊಳ್ಳುವರೆ ನಿಮ್ಮ ಮೇಲೆ ವಾದಿಯು ದಾಖಲ್ಲು ಮಾಡಿದ ಸದ್ರಿ ದಾವೆಯು ತಾ. 19-7-65ಕ್ಕೆ ನಿಮಗೆ ಅಕ್ಬರ ನೋಟಿಸಿಗೆ ಇಟ್ಟಿದೆ. ಆಕ್ಷೇಪ ಇದ್ದರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗಿ ಉಗ್ರಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath.
Advocate for Plaintiff.

ಕಾರ್ಕಳ, 6-7-65.

ವಂದೇ ಮಾತರಂ ಎನ್ನಿರಿ

(ಆರನೇ ಪುಟದಿಂದ)

ಸೇರ್ಪಡೆಯೇ ಇಂಡಿಯಾ ಹಾಗೂ ದ್ರಾವಿಡ, ಆರ್ಯ, ಮಂಗೋಲಿಯನರು, ಚೈನೀಯರುವಗೈರೆಗಳು ಸೇರಿ ಇಂದಿನ ಇಂಡಿಯಾ ನಿರಾಗಿದ್ದು ಇಂಗ್ಲೀಷರ ಕೃಪೆಯಿಂದಾಗಿ ಒಂದು ರಾಷ್ಟ್ರದ ರೂಪವನ್ನು ಪಡೆದು, ರಾಷ್ಟ್ರೀಯತೆಯ ಅಚ್ಚಿಗೆ ಒಳಗಾಗುತ್ತಿದ್ದಾರೆ! ಅದನ್ನಾಡಲು ಆಕೆಗೆ ಅದೆಷ್ಟು ಧೈರ್ಯ! ಅವಳಿಗೆ ಎಲ್ಲೆಲ್ಲೂ ಅಧಂಬರ ಪೂರ್ಣ ಸ್ವಾಗತ ಸಿಗುತ್ತದೆ! ಅದೇ ನಾಗಾಗಳೂ ಭಾರತೀಯರೇ ಇದ್ದಾರೆ. ಅಲ್ಲಿ ನಾವು ಶಾಲೆ ತೆರೆಯುತ್ತೇವೆಂದು ಹೋಗುವ ಭಾರತೀಯರಿಗೆ ತಡೆ! ಆಗಲಿ, ಆರ್ಯ ಸಮಾಜವೇ ಆಗಲಿ, ಶ್ರೀ ರಾಮ ಸಂಸ್ಥೆ ಸರಕಾರದ ಕೃಪಾದೃಷ್ಟಿಗೆ ಒಳಗಾಗದು!

ಅಸ್ಸಾಮಿನ ವಿದ್ರೋಹಿಗಳಿಗೆ ಅದೆಷ್ಟು ಧೈರ್ಯ! ಪರದೇಶಿಕ ಹಸ್ತಕರನ್ನು ಹಿಂದಿಕ್ಕಿಟ್ಟದಲ್ಲಿ ಇವರಿಗೆ ಕಸಿವಿಸಿಯಾಗುತ್ತದೆ, ಕಣ್ಣೀರ ಕೋಡಿ ಹರಿಯುತ್ತದೆ. ಮಾತಿನ ಮಳೆ ಬರುತ್ತದೆ! ಹಿಂದಿನ ಸಂಚಿಕೆಯಲ್ಲಿ ಈ ವಿಷಯ ಪ್ರಕಟವಾಗುತ್ತಿದೆ ಅಸ್ಸಾಮಿನ ಕೃಷಿಮಂತ್ರಿ ಮೊನುಲ್ ಹಕ್ ರವರೂ ಮಾತಿನ ಹಕ್ಕನ್ನು ಕಳೆದುಕೊಂಡಿರುವುದಿಲ್ಲ. ಕಾಂಗ್ರೆಸ್ ಅದೇನು ಮಾಡಿತು? ಹಾಗೇನೂ ನಡೆದಿಲ್ಲವೆಂದು ಪತ್ರಿಕೆಗಳ ಮೂಲಕ ಪ್ರಚಾರಮಾಡಿತು. ಮರುದಿನವೇ ಮತ್ತೊಂದು ಸುದ್ದಿ! ಮತಾಂಧರ ವಿಚಾರಣೆಗೆ ಒಂದು ಸಮಿತಿ ಸಿದ್ಧವಾಗಿದೆಯೆಂದು ಆದರೆ. ನಂತರ? ಅದೇ ಚಿಕ್ಕಮಕ್ಕಳಾಟ. ಕಾಂಗ್ರೆಸ್ಸಿನ ಮಾತಿನ ಪ್ರವಾಹ ದಿಕ್ಕು ಬದಲಾಯಿಸಿತು. ಬಂಡುಗಾರರ ಮುಸ್ಲಿಂ ಸದಸ್ಯರ ಬೆದರಿಕೆಗೆ ಕಾಂಗ್ರೆಸ್ ಮಣಿಯಿತು.

ಅತ್ತ ಅಕಾಲಿಗಳು ತಮಗೂ ಭಾರತೀಯರಿಗೂ ಸಂಬಂಧವೇ ಇಲ್ಲವೆಂದು ಬಂಬಡ ಬಾರಿಸುತ್ತಿದ್ದಾರೆ. ಪಾಕಿಸ್ತಾನದೊಡನೆ ಸೇರಿಯಾದರೂ ಅಕಾಲಿಸ್ಥಾನ ಪಡೆಯುತ್ತೇವೆಂದೂ ಕೆಲವರು ಕಿರಚಾಡುತ್ತಿದ್ದಾರೆ.

ಒಳಗಿನ ಪರಿಸ್ಥಿತಿ ಹೀಗಿದೆ. ಇವೆಲ್ಲವುಗಳಿಗೂ ಆಸರೆ ಕೊಡುತ್ತಿರುವ ಭಾರತದ ಪ್ರಧಾನಿಯವರು ಪರರಾಷ್ಟ್ರಗಳ ಬಳಿ ನಮ್ಮ ಕಣ್ಣೀರಿನ ಕಥೆಯನ್ನು ಹೇಳುತ್ತಿದ್ದಾರೆ. ಪರರಾಷ್ಟ್ರಗಳ ಬಳಿ ಪರಿತಪಿಸುವ ಬದಲು ನಾವು ನಮ್ಮತ್ತವೇ ಸಿಂಹಾವಲೋಕನ ಮಾಡಬೇಕಾಗುತ್ತದೆ, ಅದಕ್ಕಾಗಿಯೇ ವ್ಯಾಸ ಪೌರ್ಣಿಮೆಯ ಪರ್ವಕಾಲ ಬಂದಿದೆ. ಅಖಿಲ ಜಗತ್ತು ತನ್ನ ಗುರು ಭಾರತಕ್ಕೆ ಕಾಣಿಕೆಯನ್ನರ್ಪಿಸುತ್ತಿದ್ದ ಮಹಾದಿನವದು. ಶಿಷ್ಯರು ಗುರುವಿಗೆ ದಕ್ಷಿಣೆಯನ್ನರ್ಪಿಸುವ ಶುಭದಿನವದು. ನಾವೂ ನಮ್ಮ ಪಾಲಿನ ಗುರುದಕ್ಷಿಣೆಯನು ಅರ್ಪಿಸುತ್ತ ಪುನಃ ಭಾರತವನ್ನು ಆ ಸ್ಥಾನಕ್ಕೆ ತರಲು ಪ್ರಯತ್ನಿಸುವದು ಬೇಡವೇ? ವಂದೇ ಮಾತರಂ ಅನ್ನುವದು ಬೇಡವೇ?

ಜೀವನ... 'ಮುಗ್ಗಗಳು' ಎಷ್ಟೇ ಜಟಿಲವಿರಲಿ, ನಾವು ಮನಸ್ಸು ಮಾಡಿದಲ್ಲಿ ಬಗೆಹರಿಸಬಹುದು. ಕಲ್ಪಿತದ ಕಂಟಕಗಳಾಗಿರುವ ನಮ್ಮ ಮನಸ್ಸುಗಳನ್ನ ತೊಳೆದುಕೊಳ್ಳೋಣ ಧಗಾ ದ್ವೇಷ, ವಂಚನೆ, ಕೃತ್ರಿಮತನ, ಹಿಂಸೆ, ಅಸತ್ಯದಿಂದ ದೂರ ಸರಿಯೋಣ.

— — —

ಸುಭಾಷಿತಗಳು

ಸಂಗ್ರಹಕರು.— "ಸರಸ್ವತೀಸುತ" ಬೆಳ್ಳಾರೆ.

ಪರಸ್ತ್ರೀಯ ಉದರದಲ್ಲಿ ಆಶಿಸದಿರು. ಅದು ನಿನಗೆ ಸಕ್ಕದಷ್ಟು ಅಪಾಯಕರ. —ಸಿ. ಪಿ. ರಾಮನ್.

ಜೀವನವೆಂಬುದು ಒಂದು ನೌಕೆ. ಅದಕ್ಕೆ ಸಿಕ್ಕುವ ತೆರೆಗಳೇ ಸುಖದುಃಖಗಳು. — ಎಸ್. ಆರ್. ಕಂಠಿ.

ದುಡ್ಡಿನ ಬೆಲೆ ಗೆಳೆಯನಲ್ಲಿ ಸಾಲ ಕೇಳಲು ಹೋದಾಗ ತಿಳಿದೀತು. —ಕು ವೆಂ. ಪು.

ಪ್ರಾಣಿ ಪಕ್ಷಿಗಳನ್ನು ನಂಬು ಮಾನವನನ್ನು ನಂಬದಿರು.— ದ.ರಾ.ಬೇಂದ್ರೆ.

ಬೇಕಿಯಿಂದ ಅಪಕಾರ ಉಪಕಾರವೂ ಇದೆ. — ಪಿ. ಸಿ. ರೇ

ದುಡ್ಡನ್ನು ನಂಬದಿರು. ದುಡ್ಡಿನ ಬೆಲೆಯನ್ನು ನಂಬು. —ಕೆ. ವೆಂಕಟಾಚಾರ್ಯ.

ಅಕ್ಕಿಯಿಲ್ಲದ ಬರಗಾಲದಲ್ಲಿ ಮಾನವನನ್ನು ಮಾನವನೇ ತಿನ್ನುವ ಸಮಯ ಬಂದೀತು. —ಬರ್ನಾರ್ಡ್ ಶಾ.

ಸ್ವಪರ ಅರಿತುಕೊಂಡು ಗೆಳೆತನ ಮಾಡು. ಬಣ್ಣದ ಮಾತುಗಳನ್ನಾಡಿ ನಿನ್ನನ್ನು ಮೋಸಗೊಳಿಸಲು ಅನೇಕರು ಯತ್ನಿಸಬಹುದು. — ಕೆ. ಎಸ್. ಸ್ಯಾಮುವೆಲ್.

ಹತ್ತು ಜನ ಬಲ್ಲವರು ಕೂಡಿದರೆ ಒಂದು ಸಾಮ್ರಾಜ್ಯ ಕಟ್ಟಬಹುದು. ಹತ್ತು ಜನ ಕಳ್ಳರು ಕೂಡಿದರೆ ಪ್ರಪಂಚವನ್ನೇ ಆಳಿಸಲು ಮಾಡಬಹುದು. — ವಿವೇಕಾನಂದ.

ನಿಂದಕರು ಪಶ್ಚಾತ್ತಾಪ ಪಡುವುದೇ ಅವರಿಗೆ ಕಠಿಣ ಶಿಕ್ಷೆ.—ಒ. ಟಿ. ಜೋಸೆಫ್.

ನೀನು ಒಂದು ಕೆಲಸಕ್ಕೆ ಸೇರಿದರೆ ಅದು ಒಳ್ಳೆಯದಲ್ಲವೆಂದು ಮತ್ತೊಂದಕ್ಕೆ ಹಾರದಿರು. ಪ್ರತಿಯೊಂದು ಕೆಲಸದಲ್ಲೂ ಕಷ್ಟವಿದೆ. — ವ ಹರ್ಷ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Directer of Public Instruction Madras.

ವೈಷ್ಣವ ಶಿರೋಮಣಿ

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ

0-30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.

ರಖಂ ಪ್ರತಿಗಳಿಗೆ ವಿಚಾರಿಸಿರಿ:-

ನವಯುಗ ಪ್ರೆಸ್, ಉಡುಪಿ

ಗೀತಾ — ದ್ವಿತೀಯ ಅಧ್ಯಾಯ

(ಐದನೇ ಪುಟದಿಂದ)

ನಾವು ಈ ಸಮಾಧಿಯ ಚಿತ್ರವನ್ನು ಅನುಭವಿಸಲು ದೇವಾಲಯಕ್ಕೆ ಹೋಗುವೆವು. ಜಪ, ಪೂಜೆ ಇತ್ಯಾದಿ ಮಾಡುವೆವು. ಆದರೆ ಬ್ರಹ್ಮನ್ನರಿತ ಜ್ಞಾನಿಗೆ ಈ ಕರ್ಮಗಳ ಅವಶ್ಯಕತೆ ಇಲ್ಲ ಏಕೆಂದರೆ ಅವನು ನೆರೆ ತುಂಬಿ ಎಲ್ಲೆಲ್ಲೂ ನೀರು ಹರಿದಾಗದಂತೆ ಸದಾ ನೀರು ತುಂಬಿಕೊಂಡೇ ಇರುವಂತೆ, ಸದಾ ಶಾಂತಿಯನ್ನು ಅನುಭವಿಸುತ್ತಾ ಇರುವನು.

ಕರ್ಮಣ್ಯೇವಾಧಿಕಾರಸ್ತೇ।
ಮಾಫಲೇಷು ಕದಾಚನ।
ಮಾಕರ್ಮಫಲಹೇತುರ್ಭೂ।
ರ್ಮಾತೇ ಸಂಗೋ
ಸ್ತ್ವಕರ್ಮಣಿ ॥ ೪೭ ॥

ನಿನ್ನ ಅಧಿಕಾರ ಕೆಲಸಮಾಡಲು ಮಾತ್ರ. ಫಲದ ಮೇಲೆ ಇಲ್ಲ ಆದರ ಫಲದ ಮೇಲಿನ ಆಸಕ್ತಿಯೇ ನಿನ್ನ ಗುರಿಯಾಗದಿರಲಿ. ಮತ್ತು ಕೆಲಸಮಾಡದೆ ಇರುವ ಆಸಕ್ತಿಯೂ ನಿನ್ನಲ್ಲಿ ಇರದಿರಲಿ.

ಮೊದಲಿನ ಎರಡು ಶ್ಲೋಕಗಳಲ್ಲಿ ಶ್ರೀಕೃಷ್ಣನು ಅತ್ಯುತ್ತಮವಾದ ಗುರಿಯು ಮಾನವನು ತಲುಪಬೇಕಾದುದು, ವೇದಗಳಿಂದ ಆಚೆ ಇಹೆಯೆಂದು ಸ್ಪಷ್ಟಪಡಿಸಿರುವನು. ಕರ್ಮಗಳಿಂದ, ಕರ್ಮಗಳನ್ನು ಮಾಡುತ್ತಾ ಮಾನವನು ತನ್ನ ನಿಜ ಸ್ವರೂಪವನ್ನು ತಿಳಿಯಬೇಕೆನ್ನುವನು.

ಈ ಶ್ಲೋಕವನ್ನು ಬಹು ತಪ್ಪಾಗಿ ತಿಳಿದುಕೊಂಡುದರಿಂದ ನಮ್ಮ ಹಿಂದೂ ಜನಾಂಗವು ಸತ್ವಹೀನವಾಗಿ ಅಧೋಗತಿಯನ್ನು ಮುಟ್ಟಿದೆ. ಇದು ಪ್ರತಿಯೊಬ್ಬರೂ ಅವರವರ ಕರ್ತವ್ಯವನ್ನು ಮಾಡಲೇ ಬೇಕೆಂಬ ಕರೆಯಾಗಿದೆ. ಕರ್ತವ್ಯವನ್ನು ಯಾವ ಫಲಾಪೇಕ್ಷೆ ಇಲ್ಲದೆ, ಸೇವೆ ಎಂದೇ ಭಾವಿಸಿ ಮಾಡತಕ್ಕದು. ಹಾಗೆ ಮಾಡಿದರೆ ಕೆಲಸವು ಅತ್ಯುತ್ತಮವಾಗುವುದು, ಫಲಾಸಕ್ತಿಯಿಂದ ಮತ್ತು ನಿರೀಕ್ಷಿಸಿದ ಫಲ ದೊರೆಯುವುದೋ ಇಲ್ಲವೋ ಎಂಬ ಯೋಚನೆಗಳಿಂದ ಕೂಡಿ ಒಂದು ಕೆಲಸಕ್ಕೆ ನಿರತರಾದರೆ, ಆ ಕೆಲಸ ಉತ್ತಮವಾಗಿ ನಡೆಯಲಾರದು. ನಮ್ಮ ಯೋಚನಾ ಲಹರಿಗಳಿಂದ ನಾವು ಮಾಡುವ ಕೆಲಸ ಹಾಳಾಗುವುದು. ಕೆಲಸದ್ದೆ ನಮ್ಮ ಸಂಪೂರ್ಣ ಗಮನವನ್ನು ಇಡಲಾಗುವುದಿಲ್ಲ. ಇದರಿಂದಾಗಿ ನಮ್ಮ ಸಂಪೂರ್ಣ ಶಕ್ತಿ, ಪ್ರತಿಭೆ ಆ ಕೆಲಸದಲ್ಲಿ ಬಳಸಲಾಗದು. ಹೀಗಾಗಿ ನಾವು ಹೆಚ್ಚಿನ ಕೆಲಸದಲ್ಲಿ ವಿಫಲರಾಗುವೆವು. ಇದಕ್ಕೆ ನಮ್ಮ ಕೆಲಸದಲ್ಲಿ ನಾವು ತೋರುವ, ಹಾಕುವ ಶ್ರಮದ ಕೊರತೆಯೇ ಕಾರಣ.

ನಿನಗೆ ಕೆಲಸ ಮಾಡಲು ಅಧಿಕಾರವಿದೆ, ಆದರೆ ಫಲದ ಮೇಲೆ ಇಲ್ಲ—ಎಂದು ಇಲ್ಲಿ ಹೇಳಿರುವ. ಏಕೆಂದರೆ ಉತ್ತಮವಾದ ಕೆಲಸಕ್ಕೆ ಉತ್ತಮವಾದ ಫಲ ಖಂಡಿತಾ ದೊರಕುವುದು. ಆದರೆ ಅದರ ಯೋಚನೆ ಮಾಡುತ್ತಾ ಕುಳಿತುಕೊಳ್ಳಬೇಡ—ಎಂಬ ಆದೇಶವಾಗಿದೆ. ಮತ್ತು ಒಂದು ಕೆಲಸವನ್ನಾಗಲೀ ಒಂದು ವಸ್ತುವನ್ನಾಗಲೀ, ನಾವು ಪಡೆದಾಗ ಅದರಿಂದ ಸಂತೋಷ ಪಡೆಯಲು ನಮಗೆ ಅದರಲ್ಲಿ ಆಸಕ್ತಿ ಇರಕೂಡದು. ನೀವು ಒಂದು ಚಿತ್ರ ಬರೆಯಲು ತೊಡಗಿದರೆ ನೀವು ಚಿತ್ರ ಬರೆಯುವ ಬದಲೇ ಚಿತ್ರವು ನಿಮ್ಮನ್ನು ಬರೆಯ ತೊಡಗಿದರೆ, ನಿಮ್ಮ ಸ್ಥಿತಿ ಯೋಚಿಸಿರಿ. ಹಾಗಾಗ ಕೂಡದು. ನಾವೇ ಕೆಲಸದ ಅಧಿಕಾರಸ್ಥರಾಗಬೇಕು. ಅದರ ಮೇಲೆ ವ್ಯಾಮೋಹ ಇರಕೂಡದು. ಆಗ ನಿಜವಾಗಿ ನಾವು ನಮ್ಮ ಕೆಲಸದಲ್ಲಿ ಸಂತೋಷಪಡಬಹುದು.

ಯೋಗಸ್ಥಃ ಕುರು ಕರ್ಮಾಣಿ।
ಸಂಗಂ ತ್ಯಕ್ತ್ವಾ ಧನಂಜಯ।
ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ।
ಸಮತ್ವಂ ಯೋಗ ಉಚ್ಯತೇ ॥ ೪೮ ॥

ಓ ಧನಂಜಯನೇ, ಹೀಗೆ ಕಾರ್ಯನಿರತನಾಗ! ಯೋಗದಲ್ಲಿದ್ದು ವ್ಯಾಮೋಹವನ್ನು ತ್ಯಜಿಸಿ, ಜಯಾಪಜಯಗಳಲ್ಲಿ ಸಮತೋಲನ ಮನಬುದ್ಧಿಯುಕ್ತನಾಗಿ, ಕರ್ತವ್ಯ ಮಾಡು. ಮನದ ಈ ಸಮಸ್ಥಿತಿಯೇ ಯೋಗವಾಗಿರುವುದು.

ಮೇಲೆ ಹೇಳಿದಂತೆ ಕರ್ತವ್ಯ ನಿರತನಾಗಲು, ಮನ, ಬುದ್ಧಿಯನ್ನು ಒಮ್ಮತವಾಗಿರಿಸಿ, ಅದಕ್ಕೆ ತಕ್ಕಂತೆ ಬಾಹ್ಯ ಕರ್ಮಗಳನ್ನು ಮಾಡತಕ್ಕದು. ನಾವು ಒಂದು ತತ್ವವನ್ನು ಒಪ್ಪಿದರೆ, ಮನದಲ್ಲಿ ಅದನ್ನು ಅಂಗೀಕರಿಸಿದರೆ ನಮ್ಮ ಕರ್ಮಗಳಲ್ಲಿ ಅದನ್ನು ತೋರಬೇಕು. ಅದರ ಬದಲು ಕೇವಲ ತತ್ವಗಳನ್ನು ಒಪ್ಪಿ ಅದಕ್ಕೆ ವಿರುದ್ಧವಾದ ಕರ್ಮಗಳನ್ನು ಮಾಡಿದರೆ ನಮ್ಮನ್ನು ನಾವೇ ಮೋಸಗೊಳಿಸುವಂತಾಗುವುದು ಇದರಿಂದ ವ್ಯಕ್ತಿಯ ವಿಕಾಸವೂ ಇಲ್ಲ. ರಾಷ್ಟ್ರದ ಬೆಳವಣಿಗೆಯೂ ಇಲ್ಲ. ಆದೇ ಪಾಶ್ಚಾತ್ಯ ದೇಶಗಳಲ್ಲಿ ಪ್ರಾಪಂಚಿಕ ವಸ್ತುಗಳ ಅಪರಿಮಿತ ಪ್ರಗತಿಯೂ, ಅವರ ನಾಶ ಹೊಂದಿದ ನಗರಗಳ ಪುನಾರಚನೆಯೂ, ತೀವ್ರವಾಗಿ ನಡೆಯಿತು. ಅವರು ಕೇವಲ ತಮ್ಮ ಸ್ವಾರ್ಥಕ್ಕೆ ಶ್ರಮಿಸದೆ, ನಾಡಿಗಾಗಿ ತಮ್ಮ ಜೀವನವನ್ನು, ಶ್ರಮವನ್ನು, ಧನವನ್ನು ಅರ್ಪಿಸಲು ಮುಂದಾದುದೇ ಇದಕ್ಕೆ ಕಾರಣ. ಅವರು ಯೋಗವನ್ನು ತಿಳಿಯದ ಯೋಗ ನಿರತರಾಗಿರುವರು. ಪ್ರಾಪಂಚಿಕ ಪ್ರಗತಿಯನ್ನು ಆ ಯೋಗದ ಉದ್ದೇಶವನ್ನು ಸಾಧಿಸಿರುವರು ಆದರೆ ನಮ್ಮ 'ಯೋಗ' ತಿಳಿದು ನಾವು ಅದನ್ನು ಕಾರ್ಯತಃ ತರಲು ಯತ್ನಿಸಲಾರೆವು. ಇದಕ್ಕೆ ಆಲಸ್ಯವೇ ಕಾರಣ ನಾವು ಒಂದು ತತ್ವವನ್ನು ಅಂಗೀಕರಿಸಿದರೆ ಅದರಂತೆ ನಡೆಯಲು ಸಿದ್ಧರಿಲ್ಲ. ಆದರಿಂದಾಗಿ ಇಂದಿನ ನಮ್ಮ ಜನಾಂಗದ ಅವನತಿಯನ್ನು ಕಾಣಬಹುದು. ಪ್ರತಿಯೊಬ್ಬರಿಗೂ ಅತಿ ಸುಲಭವಾಗಿ ಅತೀ ಹೆಚ್ಚಿನ ಹಣದ ಸಂಪಾದನೆಯ ಆಗತ್ಯವಿದೆ. ತನ್ನ ಕುಟುಂಬದ, ತನ್ನ ಮನೆಯ ವಿಷಯದಲ್ಲಿ ಮಾತ್ರ ಅವರಿಗೆ ಚಿಂತನೆ. ಈ ತರಹದ ಸ್ವಭಾವವು ಅತೀ ಉಚ್ಚ ಅಧಿಕಾರಿಯಿಂದ ಹಿಡಿದು ಕೆಳವರ್ಗದ ಜನರವರೆಗೂ ಇರುವುದರಿಂದ ನಮ್ಮ ನಾಡಿನ ಅವಸ್ಥೆ ಹೀಗಿದೆ. ಹಾಗಾದ ಕಾರಣ ನಾವು ದುಡಿದುದಕ್ಕೆ ಪ್ರತಿಫಲವಾಗಿ ನಮಗೆ ಫಲವು ಖಂಡಿತಕ್ಕೂ ದೊರಕುವುದು. ನಾವು ಹಳೆಯುವರ ಚಿಂತೆ, ಭವಿಷ್ಯದ ಕಾತರತೆಯಲ್ಲಿ ವರ್ತಮಾನ ಕಾಲವನ್ನು ಹಾಳು ಮಾಡುತ್ತಿರುವೆವು.

ಮನ ಮತ್ತು ಬುದ್ಧಿಯನ್ನು ಏಕಾಗ್ರಗೊಳಿಸಿ ತನ್ನ ಸ್ವಾರ್ಥ ಚಿಂತನೆ ಬಿಟ್ಟು ಕರ್ತವ್ಯ ನಿರ್ವಹಿಸ ತೊಡಗಿದರೆ ಖಂಡಿತವಾಗಿ ಯಶಸ್ಸು ದೊರಕುವುದು.

ಹೇ ಕುರುಕುಲದಲ್ಲಿ ಹುಟ್ಟಿದವನೇ, ಐಶ್ವರ್ಯವನ್ನು ಗಳಿಸಲು ಅರ್ಹತೆ ಪಡೆದವನೇ (ಧನಂಜಯ) ನೀನು ಹೀಗೆ ಕೆಲಸದಲ್ಲಿ, ಯೋಗದಲ್ಲಿ ನಿರತನಾಗು. ಆಗ ನಿನಗೆ ಉತ್ತಮ ಫಲ ದೊರಕುವುದು. ಕೆಲಸದಲ್ಲಿ ಮುಂದೆ ಬರುವ ಸಿದ್ಧಿಗಳನ್ನಾಗಲೀ, ಅಸಿದ್ಧಿಗಳನ್ನಾಗಲೀ, ಯೋಚಿಸಿ, ತನ್ನ ಶಕ್ತಿಯನ್ನು ವ್ಯಯಿಸಬೇಡ. ಮನಸ್ಸನ್ನು ಸಮತೋಲನವಾಗಿರಿಸಿ ನಿರ್ಭಯತೆಯಿಂದ ಯೋಗದಲ್ಲಿ ನಿಲ್ಲು.

ದೂರೇಣಹ್ಯವರಂ ಕರ್ಮ।
ಬುದ್ಧಿಯೋಗಾದ್ಧನಂಜಯ।
ಬುದ್ಧೌ ಶರಣಮನ್ವಿಚ್ಛ।
ಕೃಪಣಾಃ ಫಲಹೇತವಃ ॥ ೪೯ ॥

ಮತ್ತು ಹೇ ಧನಂಜಯನೇ ಈ ರೀತಿಯ ಯೋಗದಲ್ಲಿ ನಿರತನಾದವನಿಗಿಂತ ಫಲಾಪೇಕ್ಷೆಯಿಂದ ಕೆಲಸ ಮಾಡುವವನ ತೀರಾ ನಿಕೃಷ್ಟನು ಏಕೆಂದರೆ ಅವನಿಗೆ ಸುಖ ಶಾಂತಿಯು ಮಾತ್ರ ತಿಳಿದಿಲ್ಲ. ಫಲಾಪೇಕ್ಷೆಯಿಂದಾಗಿ ಒಂದು ಕೆಲಸ ಮಾಡುವಾಗ ಶಾಂತಿ ದೊರಕದು. ಅದರಿಂದ ದೊರಕುವ ಸುಖ ಅಲ್ಪ. ಅದರ ಬದಲು ಈ ವಿವೇಕದ ಶರಣತೆ ಹೊಂದಿ ಕೆಲಸ ಮಾಡಿದರೆ ಅದರಿಂದ ದೊರಕುವ ಫಲ ಅತ್ಯುಚ್ಚ. ಇದನ್ನು ತಿಳಿದು ನೀನು ಬುದ್ಧಿಯೋಗದಲ್ಲಿ ಕರ್ಮವನ್ನು ಮಾಡು.

ಬುದ್ಧಿಯೋಗದಿಂದಾಗಿ ನಿನ್ನ ಸ್ವಾರ್ಥ ಮತ್ತು 'ಅಹಂ' ನಿಂದ ಉಂಟಾಗುವ ಅಶಾಂತಿ ಮತ್ತು ಕಳವಳವು ಇಲ್ಲವೆ, ನೀನು ಮನವನ್ನು ಹತೋಟಿಯಲ್ಲಿರಿಸಿಕೊಳ್ಳಲು ಸಾಧ್ಯವಾಗುವುದು. ಹತೋಟಿಯಲ್ಲಿರಿಸಿದ ಮನದಿಂದಾಗಿ ನೀನು, ಕೆಲಸವನ್ನು ಹೆಚ್ಚಿನ ಚಾಕಚಕ್ಯತೆಯಿಂದ ಮಾಡುವಂತಾಗುವುದು. ನಮ್ಮಲ್ಲಿರುವ ಶಕ್ತಿಯ ಹೆಚ್ಚಿನಂಶ ಫಲಾಪೇಕ್ಷೆಯಿಂದ ಮತ್ತು ಏನಾಗುವುದೋ ಎಂಬ ಭೀತಿಯಿಂದ ನಷ್ಟವಾಗಿ ಹೋಗುವುದು. ಅದರಿಂದಾಗಿ ಕೆಲಸವು ಉತ್ತಮವಾಗುವುದಿಲ್ಲ. ಕೆಲಸವು ಉತ್ತಮವಾಗಲು ನಿನಗೆ ಸದಾ ಶಾಂತಿ ಇರಲಿ, ನೀನು ಫಲಾಪೇಕ್ಷೆಯನ್ನು ಯೋಚಿಸದೆ, ಭವಿತವ್ಯದ ಭಯವಿಲ್ಲದೆ, ಬುದ್ಧಿಯೋಗದಲ್ಲಿ ಎಂದರೆ ವಿವೇಕಪೂರಿತ ಮನದಿಂದ ವಿವೇಕವಾಣಿಯಿಂದ ಹತೋಟಿಯಲ್ಲಿರಿಸಿದ ಮನದಿಂದ ಒಂದು ತತ್ವವನ್ನು ಒಂದು ಗುರಿಯನ್ನು ಕಣ್ಮುಂದೆ ಇಟ್ಟು, ಅದನ್ನು ಪಡೆಯಲು ತಕ್ಕಂತೆ ಸದಾ ದುಡಿಯುವವನಾಗು. ಆಗ ನಿನಗೆ ಕೆಲಸದಿಂದ ಸಂತೋಷವು ದೊರಕುವುದು. ಹಿಂದಿನ ಮಹಾ ಪುರುಷರು, ಮಹಾತ್ಮರು, ಎಲ್ಲಾ ತಮ್ಮ ದೈನಂದಿನ ಜೀವನವನ್ನು ಹೀಗೆ ಸದಾ ಸಂತೋಷದಿಂದ ಮಾಡುತ್ತಿದ್ದರು. ಅವರು ಬುದ್ಧಿಯೋಗದಲ್ಲಿ ಕರ್ಮ ಮಾಡುತ್ತಿದ್ದರು ಅವರಿಗೆ ಅದರಿಂದ ದೊರಕುವ ಫಲಗಳ ಮೇಲೆ ಆಸೆ ಇರಲಿಲ್ಲ. ಅವರಿಗೆ ಅದರಿಂದ ಹೆಚ್ಚಿನ ಗಮನವನ್ನು ಕೆಲಸದ ಮೇಲೆ ಇಡಲು ಆಗುತ್ತಿತ್ತು. ಅದರಿಂದಾಗಿ ಆ ಕೆಲಸದಲ್ಲಿ ಸಂತೋಷ ಪಡೆಯುತ್ತಿದ್ದರು. ಸಂತೋಷದಿಂದ ಮಾಡಿದ ಅವರ ಕಾರ್ಯಗಳು ಎಲ್ಲವೂ ನವಚೇತನ ಸ್ಫೂರ್ತಿಯುತ ಕಾರ್ಯವಾಗಿತ್ತು. ಇದನ್ನು ನಾವು ಎಲ್ಲಾ ಮಹಾತ್ಮರುಗಳ, ಸತ್ಪುರುಷರ ಜೀವನದಲ್ಲಿ ನೋಡಬಹುದು. ಮಹಾತ್ಮರುಗಳ ಜೀವನ ಚರಿತ್ರೆ ಓದಿದರೆ ಅವರು ಹೇಗೆ ಸನ್ನಿವೇಶ, ಸಂದರ್ಭಗಳಲ್ಲಿ ವ್ಯವಹರಿಸಿ ಬಂದ ಸಮಸ್ಯೆಗಳನ್ನು ಎದುರಿಸಿ ಕರ್ಮಯೋಗಿಗಳಾಗುತ್ತಿದ್ದರೆಂದು, ತಿಳಿಯಬಹುದು ಒದಲಾಗಿ ಆ ಸತ್ಪುರುಷರ ಜೀವನ ಮಟ್ಟ ಹೇಗಿತ್ತು, ಅವರ ಬಾಹ್ಯ ಸುಖ ಸೌಕರ್ಯಗಳು ಹೇಗಿದ್ದುವು, ಅವರು ಏನು ಉಣ್ಣುತ್ತಿದ್ದರು, ಉಡುತ್ತಿದ್ದರು, ಅವರ ಹಣಕಾಸಿನ ಸ್ಥಿತಿ ಹೇಗಿತ್ತು? ಎಂದು ನಾವು ತಿಳಿಯಲಪೇಕ್ಷಿಸುವುದಿಲ್ಲ. ಅವರ ಜೀವನ ಚರಿತ್ರೆಗಳಲ್ಲಿ ಅದನ್ನು ಬರೆಯುವುದಿಲ್ಲ. ಒಂದು ಕಾರ್ಯದಲ್ಲಿ ನಾವು ನಮ್ಮನ್ನು ಮರೆತಲ್ಲಿ ಆ ಕೆಲಸದ ಮೌಲ್ಯ ಹೆಚ್ಚುವುದು. ಅದರಿಂದಾಗಿ ನೀನು ಹೀಗೆ ಕೆಲಸ ಮಾಡು.

— ಸತೀಶ.

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯ ಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ—
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ದಂತ ವೈದ್ಯರಿಗೆ ಗಿರಾಕಿ ಕಮ್ಮಿಯಾದೀತು!

ಫ್ಲೋರಿನ್ ಮಿಶ್ರಿತ ಕುಡಿಯುವ ನೀರಿನಿಂದ ದಂತ ರಕ್ಷಣೆ!

(ಡಾ। ಜೋಹಾನ್ ಮಾಕ್ನರ್)

ಸಾಧಾರಣವಾಗಿ ಇಲಿಗಳ, ಇಲ್ಲವೇ ಇಬ್ಬರ ಮೇಲೆ ಪ್ರಯೋಗಗಳನ್ನು ನಡೆಸುವುದುಂಟು. ಆದರೆ, ಪಶ್ಚಿಮ ಜರ್ಮನಿಯ ಒಂದು ಸಣ್ಣ ಊರಿನ 5000 ಪ್ರಜೆಗಳೂ ಕಳೆದ 12 ವರ್ಷಗಳಿಂದಲೂ ಒಂದು ಪ್ರಯೋಗದಲ್ಲಿ ಭಾಗವಹಿಸಿದ್ದಾರೆಂಬ ವಿಷಯವು ತಿಳಿದು ಬಂದಿದೆ. ಕಾಸ್ಸೆಲ್ ನಗರದ ಬಳಿಯಿರುವ ವಾಲರ್‌ಷಾಸೆನ್ ಎಂಬ ಊರಿನಲ್ಲೇ ಈ ಪ್ರಯೋಗವು ನಡೆಯಿತು. ಈ ಊರಿನ ಜನರು ಕುಡಿಯುವ ನೀರಿಗೆ ಈ 12 ವರ್ಷಗಳಿಂದ ಅಲ್ಪ ಪ್ರಮಾಣದಲ್ಲಿ ಫ್ಲೋರಿನ್‌ನನ್ನು ಸೇರಿಸಿಕೊಂಡು ಬರಲಾಗುತ್ತಿದೆ. ಒಂದು ಲೀಟರ್ ನೀರಿಗೆ ಒಂದು ಮಿಲ್ಲಿಗ್ರಾಂ ಫ್ಲೋರಿನ್ನಿನಂತೆ ಸೇರಿಸಲಾಗುವುದು.

ಹಲ್ಲುಗಳು ಕೆಡವುದನ್ನು ಫ್ಲೋರಿನ್ ತಡೆಯುವುದು ಎಂಬ ವಿಷಯ ಕೆಲ ವರ್ಷಗಳ ಹಿಂದೆಯೇ ಕಂಡು ಹಿಡಿಯಲ್ಪಟ್ಟಿತು. ಹಲ್ಲುಗಳಲ್ಲಿ ಕೇರೀಸ್ (caries) ಎಂಬ ರೋಗವು ಕಾಣಿಸಿಕೊಂಡಿತೆಂದರೆ, ಆರಂಭದಲ್ಲಿ ಹಲ್ಲುಗಳ ಕವಚದಂತಿರುವ ಎನಾಮಲ್ಲನ್ನು ನಾಶ ಮಾಡುವುದಲ್ಲದೆ, ಕೊನೆಗೆ ಇಡೀ ಹಲ್ಲುಗಳನ್ನೇ ಹಾಳುಮಾಡಿಬಿಡುವುದು. ಈ ರೋಗವು ಕಳೆದ ದಶಕದಲ್ಲಿ ವಿಪರೀತವಾಗಿ ವ್ಯಾಪಿಸಿದೆ. ಈಚಿನ ಸಂಶೋಧನೆಗಳಿಂದ, ನಾಗರಿಕ ದೇಶಗಳಲ್ಲಿನ ಪ್ರಜೆಗಳಲ್ಲಿ 90% ಮಂದಿ ಈ ರೋಗದಿಂದ ನರಳುತ್ತಿದ್ದಾರೆಂದು ತಿಳಿದು ಬಂದಿದೆ. ಹಲ್ಲುಜ್ಜುವ ಪೇಸ್ಟಿನಲ್ಲಿ ಸೇರಿಸಲಾಗುವ ತೀರಾ ಅತ್ಯಲ್ಪ ಪ್ರಮಾಣದ ಫ್ಲೋರಿನ್ನಿನಿಂದ ಈ ವ್ಯಾಧಿಯನ್ನು ತಡೆಯಲು ಸಾಧ್ಯವಿಲ್ಲವೆಂದೇ, ಕುಡಿಯುವ ನೀರಿನಲ್ಲಿ ಫ್ಲೋರಿನ್ನನ್ನು ಸೇರಿಸಲು ತೀರ್ಮಾನಿಸಲಾಯಿತು. ಟೂತ್ ಪೇಸ್ಟನ್ನು ಉಪಯೋಗಿಸುವವರು, ಉಪಯೋಗಿಸದವರು ಹೀಗೆ ಎಲ್ಲರೂ ನೀರನ್ನು ಕುಡಿಯಲೇ ಬೇಕಾಗಿರುವುದರಿಂದ ಈ ಮೂಲಕ ಎಲ್ಲರಿಗೂ ರಕ್ಷಣೆಯನ್ನು ಒದಗಿಸಲಾಗುತ್ತಿದೆ. ಹನ್ನೆರಡು ವರ್ಷಗಳ ಪರೀಕ್ಷೆ ಕ್ರಮಗೆ ಪೂರ್ಣ ತೃಪ್ತಿಯ ಫಲಿತಾಂಶಗಳನ್ನು ನೀಡಿದೆಯೆಂದು ಕಾಸ್ಸೆಲ್ ತಜ್ಞರು ಅಭಿಪ್ರಾಯ ಪಡುತ್ತಿದ್ದಾರೆ. ವಾಲರ್‌ಷಾಸೆನ್ ನಗರದ ಒಂದು ಬಡಾವಣೆಯ 400 ಮಕ್ಕಳ ಮೇಲೆ ಈ ಪ್ರಯೋಗವನ್ನು ನಡೆಸಿದ ಮೇಲೆ, 24% ಮಕ್ಕಳು ಕೇರೀಸ್‌ನಿಂದ ವಿಮೋಚನೆಯನ್ನು ಪಡೆದರೆಂದು ತಿಳಿದು ಬಂದಿದೆ. ಹೀಗೆ, ನೀರಿನಲ್ಲಿ ಸೇರುವ ಫ್ಲೋರಿನ್ ಬಹು ಕಡಿಮೆ ಪ್ರಮಾಣದಲ್ಲಿರುವುದರಿಂದ, ದೇಹಕ್ಕೆ ಯಾವ ರೀತಿಯ ಕೆಡುಕೂ ಉಂಟಾಗುವುದಿಲ್ಲವೆಂದು ಹೇಳಲಾಗಿದೆ.

ಈಗ ವಾಲರ್‌ಷಾಸೆನ್‌ನಲ್ಲಿ ನಡೆಯುತ್ತಿರುವ ಸಂಶೋಧನೆ 15 ವರ್ಷಗಳ ಅವಧಿಯದು. 1953ರಲ್ಲಿ ಆರಂಭಿಸಲ್ಪಟ್ಟ ಇದು 1968ರಲ್ಲಿ ಮುಗಿಯುವುದು. ಆಗ ಸಂಶೋಧನಾ ಸಮಿತಿಯು ನೀಡುವ ವರದಿಯ ಮೇಲೆ, ಈ ಪದ್ಧತಿಯನ್ನು ದೇಶಾದ್ಯಂತ ಕೈಗೊಳ್ಳುವುದೋ ಬಿಡುವುದೋ ಎಂಬುದನ್ನು ನಿರ್ಧರಿಸಲಾಗುವುದು.

ಮಣಿಪಾಲ್ ಕೋಲೇಜ್ ಆಫ್ ಎಜುಕೇಶನಿನ ಉದ್ಘಾಟನೆ – ಉಡುಪಿ, ತಾ| 15, ಮಣಿಪಾಲದ ಎಕಾಡೆಮಿ ಆಫ್ ಜನರಲ್ ಎಜುಕೇಶನಿನವರು ಆರಂಭಿಸಿರುವ ಮಣಿಪಾಲ್ ಕೋಲೇಜ್ ಆಫ್ ಎಜುಕೇಶನಿನ ಉದ್ಘಾಟನಾ ಸಮಾರಂಭವು ಉಡುಪಿ ಲಾ ಕೋಲೇಜಿನ ಕಟ್ಟಡದಲ್ಲಿ ಮೈಸೂರು ಯುನಿವರ್ಸಿಟಿಯ ವೈಸ್ ಚಾನ್ಸಲರ್ ಡಾ| ಕೆ. ಎಲ್. ಶ್ರೀಮಾಲಿಯವರಿಂದ ಶ್ರೀ. ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಎಕಾಡೆಮಿಯ ಅಧ್ಯಕ್ಷ ಡಾ| ಟಿ. ಎಂ. ಎ. ಪೈಯವರು ಆರಂಭದಲ್ಲಿ ಸ್ವಾಗತಿಸುತ್ತ ಉತ್ತಮ ಉಪಾಧ್ಯಾಯರನ್ನು ತರಬೇತಿಗೊಳಿಸುವುದೇ ಈ ಕಾಲೇಜಿನ ಉದ್ದೇಶವೆಂದರು. ಡಾ| ಶ್ರೀಮಾಲಿಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಬೇರೆ ಬೇರೆ ದೇಶಗಳಲ್ಲಿ ಶಿಕ್ಷಣ ಪದ್ಧತಿಯು ಬೇರೆ ಬೇರೆಯಾಗಿದೆಯೆಂದೂ ಆಯಾಯ ದೇಶಕ್ಕೆ ತಕ್ಕ ಶಿಕ್ಷಣ ಪದ್ಧತಿಯನ್ನು ಆಯಾಯ ದೇಶದವರೇ ರೂಪಿಸಿಕೊಳ್ಳಬೇಕಾಗಿದೆಯೆಂದೂ ಉಪಾಧ್ಯಾಯರು ಸಮಾಜದೊಡನೆ ಬೆರೆತು ಅದರ ಅವಶ್ಯಕತೆಗಳನ್ನು ತಿಳಿದುಕೊಳ್ಳಬೇಕೆಂದೂ ಹೇಳಿ ಕಾಲೇಜಿಗೆ ಶುಭ ಕೋರಿದರು. ಅಧ್ಯಕ್ಷ ಶ್ರೀ ಅಡಿಗರು ಮಾತನಾಡುತ್ತ ಇಂದಿನ ಶಿಕ್ಷಣ ಮಟ್ಟವನ್ನು ಸುಧಾರಿಸುವ ಕಡೆಗೆ ವಿದ್ಯಾಪರಿಣತರು ಗಮನವೀಯಬೇಕೆಂದೂ ಹೇಳಿ ಡಾ| ಪೈ ಮತ್ತು ಡಾ| ಶ್ರೀಮಾಲಿಯವರು ಶಿಕ್ಷಣ ರಂಗದಲ್ಲಿ ಮಾಡುತ್ತಿರುವ ಕಾರ್ಯವನ್ನು ಶ್ಲಾಘಿಸಿದರು. ಅಂತ್ಯದಲ್ಲಿ ಪ್ರಿನ್ಸಿಪಾಲ್ ಶ್ರೀ ಬಿ. ಎಸ್. ಅಂಚನರು ಧನ್ಯವಾದಗಳನ್ನರ್ಪಿಸಿದರು.

ಮಳೆ ಇಲ್ಲದೆ ವ್ಯವಸಾಯಗಾರರು ಕಂಗೆಟ್ಟಿದ್ದಾರೆ.

ಈ ವರ್ಷ ಮಳೆ ಬರಲು ಆರಂಭವಾದದ್ದೆ ವಿಳಂಬವಾಗಿ. ಯಾವ ನಕ್ಷತ್ರದಲ್ಲೂ ಚೆನ್ನಾಗಿ ಮಳೆ ಬಿದ್ದಿಲ್ಲ. ಆರ್ದ್ರಾ ನಕ್ಷತ್ರದ ಕೊನೆಯ ಭಾಗದಲ್ಲಿ ಮಳೆ ಚೆನ್ನಾಗಿದ್ದರೂ ಪುನರ್ವಸುವಿನಲ್ಲಿ ಈ ವರೆಗೆ ಮಳೆಯೇ ಇಲ್ಲವಾಗಿದೆ. ಇನ್ನೂ ಎಷ್ಟೋ ಕಡೆ ವ್ಯವಸಾಯ ಬಾಕಿ ಉಳಿದಿದೆ. ನೆಟ್ಟ ಬೆಟ್ಟುಗದ್ದೆಗಳು ಒಣಗಿ ಹೋಗಿವೆ. ವ್ಯವಸಾಯಗಾರರು ತುಂಬಾ ಕಂಗಾಲಾಗಿದ್ದಾರೆ.

ಬಿಕೋಪರಿಗೆ ಮಾನಪತ್ರ.

ಹೊಸದಾಗಿ ಪಟ್ಟಾಭಿಷಿಕ್ತರಾದ ಮಂಗಳೂರಿನ ಬಿಶೋಪರಾದ ರೈಟ್ ರೆ| ಡಾ| ಬೆಸಿಲ್ ಎಸ್. ಡಿ. ಸೋಜರಿಗೆ ಉಡುಪಿ ನಗರ ಸಭೆಯವರು ತಾ. 12ರಂದು ಮುನ್ಸಿಪಲ್ ಮಹಾತ್ಮಾ ಗಾಂಧಿ ಬೇಸಿಕ್ ಶಾಲಾ ಕಟ್ಟಡದಲ್ಲಿ ಮಾನಪತ್ರವಿತ್ತು ಗೌರವಿಸಿದರು. ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರು ಮಾನಪತ್ರವನ್ನೋದಿ ಅರ್ಪಿಸಿದರು. ಅತಿಥಿಗಳು ಉತ್ತರಿಸುತ್ತ ಉಡುಪಿಯ ಪ್ರಸಿದ್ಧಿ, ಇಲ್ಲಿಯ ಜನರ ಕಾರ್ಯ ಪಟುತ್ವವನ್ನು ಪ್ರಶಂಸಿಸಿ, ಜಾತಿಮತ ಭೇದವಿಲ್ಲದೆ ಜನರು ಕೂಡಿ ನಡೆಯುವ ವಿಶಾಲ ಮನೋಭಾವವನ್ನು ಕೊಂಡಾಡಿದರಲ್ಲದೆ ತಾನು ತನ್ನ ಸ್ಥಾನದ ಸದುಪಯೋಗ ಮಾಡಲು ದುಡಿವೆನೆಂದರು. ಅಂತ್ಯದಲ್ಲಿ ಶ್ರೀ ಯು. ಎಂ. ಮಧ್ವಸ್ಥರು ಧನ್ಯವಾದಗಳನ್ನರ್ಪಿಸಿದರು.

ಪರ್ಕಳ ಹೈಸ್ಕೂಲಿನ ಪ್ರವೇಶ ಸಮಾರಂಭ

ಪರ್ಕಳ, ತಾ. 7, ಪರ್ಕಳ ಎಜುಕೇಶನ್ ಸೊಸೈಟಿಯವರು ಎಕಾಡೆಮಿ ಆಫ್ ಜನರಲ್ ಎಜುಕೇಶನಿನ ಆಶ್ರಯದಲ್ಲಿ ನೂತನವಾಗಿ ಕಟ್ಟಿಸಿದ ಪರ್ಕಳ ಹೈಸ್ಕೂಲಿನ ಕಟ್ಟಡದ ಪ್ರವೇಶ ಸಮಾರಂಭವು ಡಾ. ಟಿ. ಎಂ. ಎ. ಪೈಗಳವರಿಂದ ಶ್ರೀ ಎಂ. ಮಧ್ವರಾಜ, ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಚೇರ್ಮನ್ ಶ್ರೀ ಬಿ. ವಿಟ್ಠಲ ಹೆಗ್ಡೆ ಮೊದಲಾದವರು ಅತಿಥಿಗಳನ್ನು ಸ್ವಾಗತಿಸಿದರು. ಶಾಲಾ ವ್ಯವಸ್ಥಾಪಕ ಶ್ರೀ ಟಿ. ರಮೇಶ ಪೈಗಳು ಸ್ವಾಗತ ಭಾಷಣ ಮಾಡಿದರು. ಎಂ. ಜಿ. ಎಂ. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ. ಕು. ಶಿ. ಹರಿದಾಸ ಭಟ್ಟರು ದಿ| ಪಂ| ಜವಾಹರಲಾಲರ ಭಾವಚಿತ್ರವನ್ನು ಅನಾವರಣ ಮಾಡಿದರು. ಉದ್ಘಾಟಕರ ಮತ್ತು ಅಧ್ಯಕ್ಷರ ಭಾಷಣಗಳಾದ ಬಳಿಕ ಸೊಸೈಟಿಯ ಅಧ್ಯಕ್ಷ ಶ್ರೀ ಕಬಿಯಾಡಿ ಶ್ರೀನಿವಾಸ ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು.

ವಿದಾಯ ಸತ್ಕಾರ.

ಸುಪರಿಂಟೆಂಡೆಂಟರಿಗೆ ಇಂಜಿನಿಯರಾಗಿ ಜೋಗಿಗೆ ವರ್ಗವಾಗಿ ಹೋಗುತ್ತಿರುವ ಶ್ರೀ ಬಿ. ಸಿ. ಆಳ್ವರನ್ನು ಬೀಳ್ಕೊಡುವ ಸಮಾರಂಭವು ಕೆ. ಎಂ. ಸಿ. ಹಾಲಿನಲ್ಲಿ ಶ್ರೀ ಡಿ. ಶಂಕರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಚ್. ವಿ. ಸುಬ್ಬರಾಯರು ಅತಿಥಿಗಳನ್ನು ಸ್ವಾಗತಿಸಿದ ಬಳಿಕ ಹಲವರು ಮಾತನಾಡಿ ಶ್ರೀ ಆಳ್ವರ ಗುಣಗಾನಮಾಡಿದರು.

ಶ್ರೀ ಬಿ. ಸಿ. ಆಳ್ವರು ಮಾತನಾಡುತ್ತಾ ಎರಡುವರೆ ವರುಷಗಳ ಕಾಲ ತನ್ನನ್ನು ಆದರಿಸಿ, ಸಹಭಾಗಿಗಳಾಗಿ ದುಡಿದ ಮಂಗಳೂರಿಗರನ್ನು ಅಭಿನಂದಿಸಿದರು. ಕೊನೆಯಲ್ಲಿ ಶ್ರೀ ಎಚ್. ವಿ. ಶ್ರೀನಿವಾಸಯ್ಯನವರು ವಂದನಾರ್ಪಣೆಗೈದರು.



ಜನಮತ

'ಸಿಂಡಿಕೇಟ್ ಬ್ಯಾಂಕ್ ಮತ್ತು ನೌಕರರು.'

ನಾನು ಹಲವಾರು ವರ್ಷಗಳಿಂದ ಸಿಂಡಿಕೇಟ್ ಬ್ಯಾಂಕಿನ ಪ್ರಗತಿಯನ್ನು ಬಹಳ ಹತ್ತಿರದಿಂದ ನಿರೀಕ್ಷಿಸುತ್ತಿದ್ದೇನೆ. ಮತ್ತು ದರ ಬೆಳವಣಿಗೆಗಾಗಿ ಸಂತೋಷಪಟ್ಟಿದ್ದೇನೆ. ನಮ್ಮ ದೇಶದ ಬ್ಯಾಂಕುಗಳಲ್ಲಿ ಅತೀ ಪ್ರಗತಿಪರ ಧೋರಣೆ ಮತ್ತು ನವೀನ ಯೋಜನೆಗಳಿಗೆ ಹೆಸರಾದ ಈ ಬ್ಯಾಂಕು, ಇಂದು ಆಂತರಿಕ ತೊಡಕಿನಿಂದ ಕಷ್ಟಪಡುತ್ತಿದೆ. ನೌಕರರ ಕೇಳಿಕೆಗಳನ್ನು ಈಡೇರಿಸುವುದರಲ್ಲಿ ಪ್ರಥಮವಾದ ಈ ಬ್ಯಾಂಕು ಇಂದು ಅದೇ ನೌಕರರ ಬೈಗಳನ್ನು ಕೇಳುತ್ತಿದೆ. ಪ್ರತಿಯೊಂದಕ್ಕೂ ನ್ಯಾಯಾಲಯ, ಲೇಬರ್ ಕೋರ್ಟುಗಳಿರುವಾಗ, ಈ ವಿದ್ಯಾವಂತ ಬ್ಯಾಂಕ್ ನೌಕರರು, ತಮ್ಮ ಮೇಲಾಧಿಕಾರಿಗಳ ಹೆಸರೆತ್ತಿ ವೈಯಕ್ತಿಕ ಬಯ್ಯುತ್ತಿರುವಾಗಲೂ ಕದಲದ ಬ್ಯಾಂಕ್ ಅಧಿಕಾರಿಗಳ ಮನೋಸ್ಥೈರ್ಯಕ್ಕೆ ಆಶ್ಚರ್ಯಪಟ್ಟಿದ್ದೇನೆ. ಪ್ರತಿಯೊಂದು ಬ್ಯಾಂಕುಗಳಲ್ಲಿ ಆ ವರವರ ಜಾತಿಯವರೇ ತುಂಬಿರುವಾಗ ಈ 'ಸಿಂಡಿಕೇಟ್ ಬ್ಯಾಂಕಿ'ನಲ್ಲಿ ಹೆಚ್ಚಿನ ಮಂದಿ ಪರ ಜಾತಿಯವರೇ ಇದ್ದಾರೆ. ಮತ್ತು ಬ್ಯಾಂಕ್ ನೌಕರರ ಮಕ್ಕಳಿಗೆ, ಪೇಟೆಯಿಂದ ಹಿಡಿದು ಮೆನೇಜರರ ವರೆಗೆ ಬ್ಯಾಂಕಿನವರೇ ಧರ್ಮಾರ್ಥ ವಿದ್ಯೆ ಕೊಡುತ್ತಾರೆ. ಈ ಕ್ರಮ ಭಾರತದ ಯಾವ ಬ್ಯಾಂಕಿನಲ್ಲೂ ಇಲ್ಲ. ಎಷ್ಟೋ ಮಂದಿ ಮೆಟ್ರಿಕ್ಯುಲೇಶನ್ ಆದವರು ಬೇಕಷ್ಟು ಕಾಲೇಜ್ ಡಿಗ್ರಿಯನ್ನು ಪಡೆದಿದ್ದಾರೆ. ಸಾಲ ಮತ್ತು ಸಹಾಯದ ರೂಪದಿಂದ ಸಾವಿರಾರು ಜನರ ಜೀವನವೇ ಬದಲಾದದ್ದನ್ನು ನೋಡಿದ್ದೇನೆ. ಅದಲ್ಲದೆ

(ಮೂರನೇ ಪುಟದಿಂದ)

ರದ ಬೆಂಬಲವೂ, ಕೇಂದ್ರದ ಚವಾನರ ಅನುಕಂಪವೂ ಅವರಿಗಿದೆ. ಕಾರವಾರ ತಾಲೂಕನ್ನು ಕೇಳುತ್ತಿರುವ ಮಹಾರಾಷ್ಟ್ರೀಯರು ಗೋವೆಯನ್ನೂ, ಬೆಳಗಾಂವಿ, ಕಾರವಾರಗಳನ್ನೂ ನುಂಗುವ ಹಂಚಿಕೆಯುಳ್ಳವರಾಗಿದ್ದಾರೆ. ಗೋವೆಯ ಬಗ್ಗಿನ ಬೇಡಿಕೆಯನ್ನು ಸಮರ್ಥಿಸಲೆಂದೇ ಅವರಿಗೆ ಕಾರವಾರವೂ ಬೇಕಾಗಿದೆ. ಅದೇನೇ ಇದ್ದರೂ ಕರ್ನಾಟಕ ಸರಕಾರವು ಇದಕ್ಕೆಲ್ಲ ಸೊಪ್ಪು ಹಾಕಬಾರದು. ತಾನು ಮೊದಲೇ ಸ್ಪಷ್ಟಪಡಿಸಿದಂತೆ, ಗಡಿಯ ಪುನರ್ಪರಿಶೀಲನೆಗೆಂದೂ ಒಪ್ಪಬಾರದು; ಬದಲು ಚಿಕ್ಕ ಪ್ರಮಾಣದ ಹೊಂದಾಣಿಕೆಗೆ ಮಾತ್ರ ಒಪ್ಪಬೇಕು.

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

S. C. 582/1962.

ಶ್ರೀನಿವಾಸ ಭಟ್ಟ — ವಾದಿ.

ಮತ್ತು

ಮಥುರಾ ಯಾನೆ ಆನಂದಿ ಬಾಯಿ ಕೂಡಾ — ಪ್ರತಿವಾದಿಯರು.

ಇವರೊಳಗೆ

7ನೇ ಪ್ರತಿವಾದಿ— P. V ನಾಯಕ್— ಪಾಂಡುರಂಗ ನಾಯಕರ ಮಗ— ಹಾಲಿ ಬೊಂಬಾಯಿ ಶಹಾರದಲ್ಲಿರುವವರು — ಇವರಿಗೆ—

ವಾದಿಗೆ ನೀವು ವಗೈರೆಯಿಂದ ಬರಬೇಕಾದ ವಸೂಲಿಗೆ ಬಾಕಿ ಬಗ್ಗೆ ಮಾಡಿದ ಮೊಕದ್ದಮೆಯ ತಾರೀಕು 19 7-1965ಕ್ಕೆ ಇಟ್ಟಿದೆ— ಉತ್ತರಿಸುವ ಉದ್ದೇಶವಿದ್ದರೆ ಆ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದ್ದು — ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು.

K. Balachandra Kao,
Advocate for Plaintiff.

Udipi, 10—7—1965.

ಎಲ್ಲೆಲ್ಲಿ ಏನೇನು?

ಉಜಿರೆಯಲ್ಲಿ ಹನ್ನೊಂದನೆ ತರಗತಿ

ಕಳೆದ ತಾ. 5ರಂದು ಉಜಿರೆಯ ಶ್ರೀ ಧ. ಮಂ. ಹೈಸ್ಕೂಲಿನ ಹನ್ನೊಂದನೆಯ ತರಗತಿಯ ಉದ್ಘಾಟನಾ ಸಮಾರಂಭವು ವಿದ್ಯಾಮಂತ್ರಿ ಶ್ರೀ ಎಸ್. ಆರ್. ಕಂಠಿಯವರಿಂದ, ಸ್ಪೀಕರ್ ಶ್ರೀ ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ನೆರವೇರಿತು.

ಧರ್ಮಸ್ಥಳದ ಶ್ರೀ ರತ್ನವರ್ಮ ಹೆಗ್ಗಡೆಯವರು ಸ್ವಾಗತಿಸಿದರು. ಶ್ರೀ ಕಂಠಿಯವರು ಹೈಸ್ಕೂಲಿಗೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಹಾಯರ್ ಸೆಕೆಂಡರೀ ಸ್ಕೂಲ್ ಎಂಬ ನೂತನ ನಾಮಕರಣವನ್ನು ಘೋಷಿಸಿ, ಹನ್ನೊಂದನೆಯ ತರಗತಿಯನ್ನು ಉದ್ಘಾಟಿಸುತ್ತಾ, ಗ್ರಾಮಾಂತರ ಪ್ರದೇಶಗಳಲ್ಲಿ ಈ ರೀತಿ ಪಿ. ಯು. ಸಿ. ಮಟ್ಟದ ವಿದ್ಯಾ ಸೌಕರ್ಯವನ್ನು ತೆರೆಯುವುದರಿಂದ, ಕುಸಿಯುತ್ತಿರುವ ಶಿಕ್ಷಣ ಮಟ್ಟವನ್ನೂ, ವಿದ್ಯಾರ್ಥಿಗಳಲ್ಲಿನ ಶೀಲದ ಮಟ್ಟವನ್ನೂ ಎತ್ತರಿಸಲು ಕಾರಣವಾಗುವುದು' ಎಂದು ನುಡಿದರು.

ಶ್ರೀ ರತ್ನವರ್ಮ ಹೆಗ್ಗಡೆಯವರು ಶಾಲೆಗೆ ನೂತನವಾಗಿ ಕಟ್ಟಿಸಿಕೊಟ್ಟಿರುವ ಕಲಾಮಂಟಪದ ಪ್ರವೇಶೋತ್ಸವವನ್ನು ಬೆಳ್ತಂಗಡಿ ತಾ

ಈಗಾಗಲೇ ಅವರ ವಿವಾದವು ಕೋರ್ಟಿನಲ್ಲಿರುವಾಗ, ಈ ರೀತಿ ವಿದ್ಯಾವಂತ ನೌಕರರು ತಮ್ಮ ಅಸಭ್ಯ ವರ್ತನೆಯನ್ನು ಜನರಿಗೇನೆ ತೋರಿಸುವರೆಂದೇ ತಿಳಿಯಲಾರದು. ನೌಕರರ ಈ ರೀತಿಯ ವಿನಾಶಕಾರೀ ಮನೋವೃತ್ತಿ ಬೆಳೆಯುತ್ತಾ ಹೋದರೆ, ಇನ್ನು ಮುಂದೆ ಬಾಳಿಗೀ ವಲಯದಲ್ಲಿ ಪ್ರಗತಿ ಕುಂಠಿತವಾದೀತು. ಬ್ಯಾಂಕಿಗಾಗಿಯೋ 'ದೇಶಾಯಿ ಎವಾರ್ಡಿದೆ.' ಬ್ಯಾಂಕಿನ ಆಡಳಿತ ಮಂಡಲಿಯೂ, ನೌಕರರೂ ಎಲ್ಲರೂ ವಿದ್ಯಾವಂತರೇ ಆಗಿರುತ್ತಾರೆ. ಹಾಗಿರುವಾಗ, ಸರಕಾರ ಹಾಕಿಕೊಟ್ಟ ನೀತಿ, ನಿಯಮವನ್ನು ಉಲ್ಲಂಗಿಸುವುದು ಯಾರಿಗೂ ಸಾಧ್ಯವಿಲ್ಲ. ವಿದ್ಯಾವಂತರ ಬಾಡೇ ಈ ರೀತಿಯ ಬೈಗಳಿಂದ ಅಂಕಿತವಾಗುವಾಗ, ಅವಿದ್ಯಾವಂತ ಕೂಲಿಗಾರರನ್ನು ನಾವು ದೂರಿ ಏನು ಪ್ರಯೋಜನ? ಅತ್ಯುತ್ತಮ 'ಟೆರಿಲಿನ್' ವಸ್ತ್ರವನ್ನು ಧರಿಸುವ ಸುಂದರ ತರುಣರ ಬಾಯಲ್ಲಿ ಬರುವ ಅಶ್ಲೀಲ ಶಬ್ದಗಳ ಜೋಡಣೆಯನ್ನು ನೋಡಿದಾಗ, ನಾನು ತುಂಬಾ ವಿಷಾದ ಪಟ್ಟಿದ್ದೇನೆ. ಪ್ರಗತಿಯಿಂದ ಪ್ರಗತಿಗೆ ಹಾರುತ್ತಿರುವ ಸಿಂಡಿಕೇಟ ಬ್ಯಾಂಕಿನ ಶ್ರೇಯಸ್ಸಿಗೆ ಎಂದೆಂದೂ ಕುಂದು ಬರಬಾರದಿರಲೆಂದು ಆಶಿಸುತ್ತೇನೆ.

—ಬ್ಯಾಂಕ್ ಗಿರಾಕಿ.

"ಬ್ಯಾಂಕ್ ನೌಕರರು!!"

ಇತ್ತೀಚೆಗೆ ಸಿಂಡಿಕೇಟ್ ಬ್ಯಾಂಕಿನ ಕೆಲವು ನೌಕರರು ತಮ್ಮ ಕೇಳಿಕೆಗಳ ಸಂಬಂಧವಾಗಿ ಜರುಗಿಸಿದ ಪ್ರದರ್ಶನಗಳನ್ನು ನೋಡುವಾಗ ವಿದ್ಯಾವಂತರೆನ್ನಿಸುವವರು ಹೀಗೆ ನಡೆಯಲು ಸಾಧ್ಯವೇ ಎಂದೆನ್ನಿಸುತ್ತದೆ. ತಮ್ಮ ಕೇಳಿಕೆಗಳು ನಿಜವಿದ್ದರೂ, ನ್ಯಾಯವಾದ ಮತ್ತು ಸುಬದ್ಧವಾದ ಬೇರೆ ವಿಧಾನಗಳೇ ಇಲ್ಲವೇ ಎಂದು ಪ್ರಶ್ನಿಸಬೇಕಾಗುವುದು.

ಎರಡನೆಯದಾಗಿ, ಬೇರಾವ ಕ್ಷೇತ್ರದ ಕೆಲಸಗಾರರಿಗಿಂತ ಬೇಂಕು ನೌಕರರ ಪರಿಸ್ಥಿತಿಯು ಹೆಚ್ಚು ಉತ್ತಮವಾಗಿಯೇ ಇದ್ದಾಗಿದೆ. ಅವರು ತಮ್ಮ ಕೇಳಿಕೆಗಳ ತೀರ್ಮಾನಕ್ಕಾಗಿ ಸ್ವಲ್ಪ ತಾಳ್ಮೆಯಿಂದ ಸಮಯ ಕಾಯುವುದು ಸಾಧ್ಯವಿದೆ. ಹೀಗಿರುವಾಗ ಇಂಥವರೇ ಶಿಸ್ತುಗೇಡಿತನದ ಪ್ರದರ್ಶನ ಮಾಡುವುದು ಅಚ್ಚರಿಯಲ್ಲವೆ.

ಸಿಂಡಿಕೇಟು ಬ್ಯಾಂಕು ಪ್ರಗತಿಪರ ಧೋರಣೆಗೆ ಹೆಸರಾಗಿದೆ. ಅವರು ತಮ್ಮ ಕೆಲಸಗಾರರ ಹಿತಾಸಕ್ತಿಗಳನ್ನು ದುರ್ಲಕ್ಷಿಸಲಾರರೆಂದು ಅಪೇಕ್ಷಿಸಬಹುದಾಗಿದೆ. ಅವರು ಯೋಗ್ಯ ವಿಚಾರ ವಿನಿಮಯ ನಡೆಸುವರೆಂಬುದನ್ನು ಖಚಿತವಾಗಿ ನಂಬಬಹುದು. ಹೀಗಿರುವಾಗ ಇಂತಹ ದುಸ್ಸಾಧನೆಯ ಪ್ರದರ್ಶನವೇಕೆ?

— ಬೇಂಕು ವ್ಯವಹಾರಸ್ಥ.

ಲೂಕು ಬೋರ್ಡ್ ಅಧ್ಯಕ್ಷ ಶ್ರೀ ಜಿ. ಎನ್. ಭಿಡೆಯವರು ಜರಗಿಸಿದರು. ಶ್ರೀ ಮುಕುಂದ ರಾವ್, ಎಂ. ಎಲ್. ಸಿ ಇವರು ಮಾತನಾಡುತ್ತಾ, ಶ್ರೀ ಕ್ಷೇತ್ರದಿಂದ ಇಲ್ಲಿ ಕಾಲೇಜು ತೆರೆಯುವಂತಾಗಲಿ ಎಂದು ಹಾರೈಸಿದರು. ಮಲೆನಾಡಿನ ಜನತೆಯ ಶೈಕ್ಷಣಿಕ ಸೌಕರ್ಯಕ್ಕಾಗಿ ಶ್ರಮಿಸುತ್ತಿರುವ ಶ್ರೀ ಹೆಗ್ಗಡೆಯವರನ್ನು ಶ್ರೀ ವೆಂಕಟ ಸುಬ್ಬರಾಯರು ಅಭಿನಂದಿಸಿದರು ಕೊನೆಯಲ್ಲಿ ಶ್ರೀ ಆರ್. ಎನ್. ಭಿಡೆಯವರು ಧನ್ಯವಾದಾರ್ಪಣೆ ಗೈದರು.

ಲೋಕ ಸೇವಾ ಹೈಸ್ಕೂಲು

ಅಳಿಕೆ, ಜೂ 5 ಲೋಕ ಸೇವಾ ಹೈಸ್ಕೂಲಿನ ಶಾಲಾ ಸರಕಾರಕ್ಕೆ ಗುಪ್ತ ಮತದಾನ ನಡೆದು ಶ್ರೀ ಕೆ. ಮಧುಸೂದನ ಭಟ್ ಮುಖ್ಯಮಂತ್ರಿಯಾಗಿ ಆಯ್ಕೆಗೊಂಡರು. ತಾ. 2-7-65ರಂದು ಶ್ರೀ ಮಡಿಯಾಲ ನಾರಾಯಣ ಭಟ್ಟರು ಪಾರ್ಲಿಮೆಂಟಿಗೆ ಆಯ್ಕೆಯಾದ ಸ್ಪೀಕರ್ ಪ್ರಿಯರ್. ಮುಖ್ಯಮಂತ್ರಿ ಮತ್ತಿತರ ಸಚಿವರಿಗೆ ಪ್ರತಿಜ್ಞಾ ಸ್ವೀಕಾರ ಮಾಡಿಸಿ ಪಾರ್ಲಿಮೆಂಟನ್ನು ವಿಧಿವತ್ತಾಗಿ ಉದ್ಘಾಟಿಸಿದರು.

ಅಳಿಕೆ ತಾ. 6 —ಮಂಗಳೂರಿನ ಗಾಂಧೀ ತತ್ವ ಪ್ರಚಾರಕರಾದ ಶ್ರೀ ಪಿ. ಸದಾಶಿವ ಭಟ್ಟರು ಶ್ರೀ ಯನ್. ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಲೋಕಸೇವಾ ಹೈಸ್ಕೂಲಿನ ಚರ್ಚಾ ಸಭೆಯನ್ನು ತಾ. 6-7-65ರಂದು ಉದ್ಘಾಟಿಸಿದರು. ಶ್ರೀಯುತರು ತಮ್ಮ ಭಾಷಣದಲ್ಲಿ ಮಾತುಗಾರಿಕೆಯ ಮಹತ್ವವನ್ನೂ, ಅದನ್ನು ಕರಗತ ಮಾಡಿಕೊಳ್ಳಬೇಕಾದ ಪ್ರಾಮುಖ್ಯತೆಯನ್ನೂ ಒತ್ತಿ ಹೇಳಿದರು. ಮಾತ್ರವಲ್ಲದೆ ಗಾಂಧೀ ಸ್ಮಾರಕ ನಿಧಿಯ ಉದ್ದೇಶಗಳನ್ನೂ ಅದರ ಕಾರ್ಯಕಲಾಪಗಳನ್ನೂ ವಿದ್ಯಾರ್ಥಿಗಳಿಗೆ ತಿಳಿಯ ಹೇಳಿ, ಗಾಂಧೀಜೀಯವರ ದಿವ್ಯ ಸಂದೇಶಗಳನ್ನು ಸಾರುವ ತತ್ವ ಪ್ರಚಾರಕರಾಗಬೇಕೆಂದು ಕರೆಕೊಟ್ಟರು. ಅಧ್ಯಕ್ಷರ ಭಾಷಣದ ನಂತರ ಶಾಲಾ ನಾಯಕ ಕುಮಾರ ಮಧುಸೂದನನಿಂದ ವಂದನಾರ್ಪಣೆಯಾಗಿ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

ಮೊಗವೀರ ವ್ಯವಸ್ಥಾಪಕ ಮಂಡಳಿಯ ವಾರ್ಷಿಕ ಸಾಮಾನ್ಯ ಸಭೆ

ಮುಂಬಯಿ, ಮಂಡಳಿಯ 62ನೇ ವಾರ್ಷಿಕ ಸಾಮಾನ್ಯ ಸಭೆಯು ತಾ 20_6_65 ರಂದು ಮಂಡಳಿಯ ಆಫೀಸಿನಲ್ಲಿ ಮಂಡಳಿಯ ಅಧ್ಯಕ್ಷರಾದ ಶ್ರೀ ಎಸ. ಕೆ. ಪಡುಬಿದ್ರಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಧಾನ ಕಾರ್ಯದರ್ಶಿ ಶ್ರೀ ಯಚ್. ಕೆ. ಪುತ್ರನರು ಸಭಿಕರನ್ನು ಸ್ವಾಗತಿಸಿದರು. ಅಧ್ಯಕ್ಷರು ವರದಿ ವರ್ಷದಲ್ಲಿ ಮೃತರಾದ ಮಂಡಳಿಯ ಸದಸ್ಯರ ಆತ್ಮಗಳಿಗೆ ಚಿರಶಾಂತಿಯನ್ನು ಕೋರುವ ಗೊತ್ತುವಳಿಯನ್ನು ಮಂಡಿಸಲು, ಸರ್ವರ ಮೌನ ಪ್ರಾರ್ಥನೆಯೊಂದಿಗೆ ಅದನ್ನು ಪಾಸು ಮಾಡಲಾಯಿತು. ಮುದ್ರಿತ ವರದಿಯಲ್ಲಿದ್ದ ಲೋಪದೋಷಗಳನ್ನು ಪ್ರಧಾನ ಕಾರ್ಯದರ್ಶಿಯವರು ಸಭಿಕರ ಅವಗಾಹನೆಗೆ ತಂದ ಬಳಿಕ, ಅಧ್ಯಕ್ಷರು ಮಂಡಳಿಯು ಕಳೆದ 63 ವರ್ಷಗಳಲ್ಲಿ ಸಾಧಿಸಿರುವ ಪ್ರಗತಿಯ ಸ್ಥೂಲ ಪರಿಚಯ ಮಾಡುತ್ತಾ, 31-3-65ಕ್ಕೆ ಅಂತ್ಯವಾಗುವ ಮಂಡಳಿಯ ಆಯ—ವ್ಯಯ ಮತ್ತು ಆಸ್ತಿ ಪ, ಸೊತ್ತುಗಳ ಪಟ್ಟಿಯನ್ನು ಹಾಗೂ 62ನೇ ವಾರ್ಷಿಕ ವರದಿಯನ್ನೂ ಮಂಜೂರುಗೊಳಿಸುವ ಬಗ್ಗೆ ಸೂಚಿಸಲಾಗಿ, ಶ್ರೀ ಯಚ್. ಯಸ್. ಕುಂದರರ ಅನುಮೋದನೆಯೊಂದಿಗೆ ಸರ್ವಾನುಮತವಾಯಿತು. ಅನಂತರ ಮುಂದಿನ ವರ್ಷಕ್ಕೆ (1965—66) ಶ್ರೀ ಆರ್ ಕೆ. ತಾರದ, ಚಾರ್ಟರ್ಡ್ ಎಕೌಂಟೆಂಟು, ಇವರನ್ನೇ ಮಂಡಳಿಯ ಲೆಕ್ಕ ಪರಿಶೋಧಕರನ್ನಾಗಿ ನೇಮಿಸಲಾಯಿತು. ಮಂಡಳಿಯ ವಿದ್ಯಾನಿಧಿಗೆ ಧನ ಸಂಗ್ರಹಿಸಲು ನೆರವಾದವರಿಗೆ ಉಪಕಾರ ಸ್ಮರಿಸುವ [illegible] ಪಾಸು ಮಾಡಲಾಯಿತು.

ಸಭಿಕರಲ್ಲಿ ಶ್ರೀಗಳಾದ ಬಿ. ಎಸ್. ಸಾಲ್ಯಾನ್, ಬಿ ಎ, ಕರ್ಕೇರ, ಯಂ ಕೆ. ಕೋಟ್ಯಾನ್, ಪಿ. ಕೆ. ಪುತ್ರನ್, ಕೆ. [illegible] ಕರ್ಕೇರ, ಲಿಂಗಪ್ಪ ಕಾಂಚನ್ ಮತ್ತು [illegible] ಮೊದಲಾದವರು ಮಂಡಳಿಯ ಮುಂದಿನ ವೃದ್ಧಿಯ ಬಗ್ಗೆ ಸಲಹೆ ಸೂಚನೆಗಳನ್ನು ಮಾಡಿದ ಬಳಿಕ ಜೊತೆ ಕಾರ್ಯದರ್ಶಿ ಶ್ರೀ ಗೋವಿಂದ [illegible] ವಂದನಾರ್ಪಣೆ ಮಾಡಿದರು.

ಮಹಾವೀರ ಕಾಲೇಜು ಉದ್ಘಾಟನಾ ಸಮಾರಂಭ

ಮೂಡಬಿದ್ರೆ, ಎಂ. [illegible] ಎಜ್ಯುಕೇಶನ [illegible] ಮೂಡಬಿದ್ರೆಯಲ್ಲಿ ತೆರೆಯಲ್ಪಟ್ಟ ಮಹಾವೀರ ಕಾಲೇಜಿನ ಉದ್ಘಾಟನಾ ಸಮಾರಂಭವು ತಾ 9ರಂದು ಸಮಾಜ ಮಂದಿರದಲ್ಲಿ ಪುಣೆ [illegible] ಅಧ್ಯಕ್ಷ ಶ್ರೀ ಟಿ. ಎ. ಪೈಯವರಿಂದ, ಡಾ. ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ ಎ. ಪೈಗಳು ಉದ್ಘಾಟಿಸುತ್ತಾ [illegible] ಇಲ್ಲದೆ [illegible] ಹೊಂದಲಾರದು [illegible] ಮಾನವತೆಯ [illegible] ಮಹಾವೀರ [illegible] ಈ ಕಾಲೇಜು ಮಹಾವೀರರ [illegible] ಕಾರಣವಾಗಲಿ ಎಂದು ಹಾರೈಸಿದರು.

ಪ್ರಾರಂಭದಲ್ಲಿ [illegible] ಮಹಾವೀರ ವಿದ್ಯಾವರ್ಧಕ ಸಂಘದ [illegible] ಶ್ರೀ ಎಂ. ಕೆ. [illegible] ಅಲ್ಲದೆ, ಕಾಲೇಜಿನ ಸ್ಥಾಪನೆಗೆ [illegible] ಮಾಡಿದರು. ಸಂಘದ [illegible] ಕಾರ್ಯದರ್ಶಿ ಶ್ರೀ ಜಿ. ವಾಸುದೇವ [illegible] ಸಹಾಯ ಮಾಡಿದ [illegible] ಹೇಳಿದರು.

ಡಾ| ಶಿವರಾಮ [illegible] ಡಾ. ಶಿ. ಜಿನರಾಜ [illegible] ದೇವ [illegible] ಶ್ರೀಮಂತರು ಭಾಷಣ [illegible] ಶುಭ ಕೋರಿದ [illegible] ಮೂಡಬಿದಿರೆ [illegible] ಗಳನ್ನು [illegible] ಯಲ್ಲಿ ಶ್ರೀ [illegible] ಎಲ್ ಎ. [illegible] ವಂದನಾರ್ಪಣೆಗೈದರು.

ಶ್ರೀ ಆರ್ ಎನ್. [illegible] ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಿಸಲ್ಪಟ್ಟವರು

ಬೆಳ್ತಂಗಡಿ ಮುನ್ಸೀಫ್ ಕೋರ್ಟಿನಲ್ಲಿ

R. E. P. 35/65.

in O. S. 583/55

ಕೊರಪೊಳು ಯಾನೆ ಉಮ್ಮು ಹೆಂಗಸು— ಅರ್ಜಿದಾರಳು.

and

ಚೆನ್ನಮ್ಮ ಹೆಂಗಸು— ಎದುರು

1. ಚೆಲುವಮ್ಮ, ಕುಂಞಹೆಂಗ್ಸಿನ ಮಗಳು
2. ಚಂದ್ರಪೂಜಾರಿ } ಚೆಲುವಮ್ಮಹೆಂಗ್ಸಿ
3. ಕಾಂತಪ್ಪ ಪೂಜಾರಿ } ನ ಮಕ್ಕಳು.

ಗಡಾಯಿ ಗ್ರಾಮದ ಕೊಡ್ಡಂಕ್ರೋಡಿ ಎಂಬಲ್ಲಿರುವವರಿಗೆ.

ಅರ್ಜಿದಾರಳು ನಿಮ್ಮ ಮೇಲೆ ಬರಾ ಐವೇಜಿಗೆ ತೆಗೆದ ಅಮಲ್ದಾರಿಯು ನಿಮ್ಮ ಹಾಜರಾತಿಗೆ ತಾ. 22-7-1965ಕ್ಕೆ ಇಟ್ಟಿದೆ. ಆ ದಿವಸ ನೀವು ಸ್ವತಹಾ ಯಾ ವಕೀಲರ ದ್ವಾರವಾಗಲೀ ಹಾಜರಾಗತಕ್ಕದ್ದು. ಇಲ್ಲವಾದಲ್ಲಿ ನಿಮ್ಮನ್ನು ಶಿಕ್ಷೆ ಮಾಡಿ ಮುಂದಿನ ತನ್ನಿಯಿಂದ ತೀರ್ಮಾನಿಸಲಾಗುವದು. ಎಂದು ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಯದೆ.

(Sd) ಯನ್. ಜಿ. ಕದಂಬ

Advocate for Petitioner.

ಬೆಳ್ತಂಗಡಿ 3-7-1965

ಸ್ವಾತಂತ್ರ್ಯ ದಿನೋತ್ಸವ ವಿಶೇಷ ಸಂಚಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಸಹಕರಿಸಿರಿ.